# ನವಯುಗ

| | | | |
|---|---|---|---|
| 1) | 6- 9- 1956. | 12 | |
| 2) | 13- 9- 1956- | 12 | |
| 3) | 20- 9- 1956 - | 12 | |
| 4) | 27- 9- 1956 - | 12 | |
| 5) | 4- 10- 1956 – | 12 | |
| 6) | 11- 10- 1956 – | 12 | |
| 7) | 18- 10- 1956 – | 12 | |
| 8) | 25- 10- 1956 – | 12 | |
| 9) | 1- 11- 1956. | 32 | ನವರಾಜ್ಯ ದಿನ ಸಂಚಿಕೆ. |
| 10) | 8- 11- 1956 - | 12 | |
| 11) | 15- 11- 1956 - | 12 | |
| 12) | 22- 11- 1956 – | 12 | |
| 13) | 29- 11- 1956 – | 12 | |
| 14) | 6- 12- 1956 – | 12 | |
| 15) | 13- 12- 1956 – | 12 | |
| 16) | 20- 12- 1956 – | 12 | |
| 17) | 27- 12- 1956 -- | 12 | |
| 18) | 3- 1- 1957. | 12 | |
| 19) | 10- 1- 1957 – | 12 | |
| 20) | 17- 1- 1957 – | 12 | |
| | | 260 | |

| | | | |
|---|---|---|---|
| 41) | 20- 6- 1957 | 12 | |
| 42) | 27- 6- 1957 | 12 | |
| 43) | 4- 7- 1957 | 12 | |
| 44) | 11- 7- 1957 | 12 | |
| 45) | 18- 7- 1957 | 12 | |
| 46) | 25- 7- 1957 | 12 | |
| 47) | 1- 8- 1957 | 12 | |
| 48) | 8- 8- 1957 | 12 | |
| 9) | 15- 8- 1957 | 32 | స్వాతంత్ర్యోత్సవ సంచిక |
| 0) | 22-8- 1957 | 12 | |
| 51) | 29- 8- 1957 | 12 | |
| | | 152 | |

1) 260
2) 256
3) 152

668

| REGD. NO. M. 3618 |

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬
VOL. 36

6—9—1956

ಸಂಚಿಕೆ ೧
NO. 1

## ನಿಮಗಿದು ತಿಳಿದಿರಲಿ

# ಕಾಸರಗೋಡು ಹೋಯಿತು!

**ಮೊದಲು ನಂಬಿಸಿ ಹಿಂದಿನಿಂದ ವಂಚನೆ ನಡೆಸಿದ ಕತೆ**

ಕೊನೆಗೂ ಕಾಸರಗೋಡು ತಾಲೂಕು ಕೇರಳಕ್ಕೆ ಸೇರುವಂತಾಯಿತು. ಆ ತಾಲೂಕಿನ ಎರಡು ಲಕ್ಷ ಕನ್ನಡಿಗರ ಸಂಪತ್ತು ನಾಳೆ ಉದಯಿಸಲಿರುವ ಕರ್ನಾಟಕಕ್ಕೆ ಲಭ್ಯವಿಲ್ಲದಾಯಿತು. ದಕ್ಷಿಣಕನ್ನಡವು ರಾಜ್ಯಗಳ ಪುನಾರಚನೆಯ ನೆಪದಲ್ಲಿ ಇಬ್ಭಾಗವಾಗಿ ಒಡೆದು ಹೋಯಿತು.

ರಾಜ್ಯ ಸಭೆಯಲ್ಲಿ ಕನ್ನಡಿಗರ ಹಕ್ಕಿನ ಮುಖ್ಯ ಕಾಸರಗೋಡುತಾಲೂಕನ್ನು ಉಳಿಸಲು ತಿದ್ದುಪಡಿಗಳನ್ನು ಮಂಡಿಸುವ ಮೂಲಕ ಅಂತಿಮ ಪ್ರಯತ್ನಗಳನ್ನು ನಡೆಸಲಾಯಿತು. ಆದರೆ ಸರಕಾರದ ನಿಲುಮೆಯು ಬದಲಾಗದ ದೆಸೆಯಿಂದ ಪ್ರಯತ್ನಗಳೇನೂ ಫಲಿಸಲಿಲ್ಲ. ಕಾಸರಗೋಡಿನ ಕನ್ನಡಿಗರಿಂದ ಬಂದಿದ್ದ ೧೫೫ ತಂತಿಗಳನ್ನು ರಾಜ್ಯಸಭೆಯ ಕಾರ್ಯಕಲಾಪಗಳಲ್ಲಿ ದಾಖಲುಮಾಡಿದ್ದೆಷ್ಟೋ ಅಷ್ಟೇ ಲಾಭವಾಯಿತು.

ಗಡಿ ಸಮಿತಿಗಳನ್ನು ನೇಮಿಸಬೇಕೆಂಬ ತಿದ್ದುಪಡಿ ಸಹ ನಿರಾಕೃತವಾಗಿದೆ. ಗಡಿ ತಂಟೆಗಳನ್ನು ವಲಯ ಸಮಿತಿಗಳೇ ನೋಡಿಕೊಳ್ಳುತ್ತವೆ ಎನ್ನಲಾಗಿದೆ ಆದರೆ, ಭಾವಿ 'ಮೈಸೂರು ರಾಜ್ಯವು ಮೊದಲು ಸೂಚಿಸಿದ್ದಂತೆ ದಕ್ಷಿಣ ವಲಯದಲ್ಲಿ ಸೇರದೆ, ಬೃಹತ್ತರ ಮುಂಬಯಿಯೊಡನೆ ಪಶ್ಚಿಮ ವಲಯದಲ್ಲಿ ಸೇರುವುದರಿಂದ, ದಕ್ಷಿಣ ವಲಯದಲ್ಲಿರುವ ಕೇರಳದೊಡನೆ ವಲಯ ಮಂಡಳಗಳ ಮಟ್ಟದಲ್ಲಿಯಾದರೂ ಸಂಧಾನದ ಮಾತುಕತೆ ಪುನಃ ನಡೆಯುವುದು ಕಷ್ಟ.

ಮಾತುಕತೆಯನ್ನು ನಡೆಸಬಹುದು ಎಂದಿಟ್ಟುಕೊಂಡರೂ ಕೇರಳ ಸರಕಾರಕ್ಕೆ ಇಂತಹ ಸಂಧಾನ ಇಷ್ಟವಿಲ್ಲದಿದ್ದರೆ, ವಲಯ ಮಂಡಳದಿಂದ ಯಾವದೇ ಕೆಲಸ ವಾಗಲಾರದು. ಕೇರಳದ ಜನರು ಈಗ ಕಾಸರಗೋಡಿನ ಕುರಿತು ವಹಿಸಿರುವ ನಿಲುಮೆಯನ್ನು ನೋಡಿದರೆ ಸಂಧಾನದ ಎಲ್ಲ ಬಾಗಿಲುಗಳನ್ನೂ ಪೂರ್ಣ ಮುಚ್ಚಿಟ್ಟಹಾಗಾಗಿದೆ ಎನ್ನುವುದು ನಿಶ್ಚಯ.

ಕನ್ನಡಿಗರದಾದ ಕಾಸರಗೋಡು ಹೀಗೆ ಕೈಬಿಟ್ಟುದರ ಹಿಂದೆ ಶೋಚನೀಯವಾದ ಘಟನಾವಳಿ ಇದೆ. ಮುಖ್ಯ ಕಾಸರಗೋಡು ತಾಲೂಕನ್ನು ಕರ್ನಾಟಕಕ್ಕೆ ವರ್ಗಾಯಿಸಬೇಕೆಂದು ತಾನು ಮಂಡಿಸಿದ ತಿದ್ದುಪಡಿಯು ತಿರಸ್ಕೃತವಾದ ಬಳಿಕ, ಕಾಂಗ್ರೆಸಿನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟ ಶ್ರೀ ಬಿ. ಶಿವರಾಯರು ಒಂದು ಹೇಳಿಕೆಯಲ್ಲಿ ಈ ಕತೆಯನ್ನು ಹೃದಯ ಕರಗುವಂತೆ ನಿರೂಪಿಸಿದ್ದಾರೆ.

ಪ್ರಜಾಪ್ರಭುತ್ವದ ಗೋರಿಯನ್ನು ಭಾರತ ಸರಕಾರವು ಕಾಸರಗೋಡು ತಾಲೂಕಿನ ವಿಷಯದಲ್ಲಿ ಕಟ್ಟಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಅದು ಹಟಮಾರಿ ವರ್ತನೆಯನ್ನು ಅನಾವಶ್ಯಕವಾಗಿ ಹಿಡಿಯಿತೆಂಬುದೂ ಸ್ಪಷ್ಟವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ರಾಜ್ಯಗಳ ಪುನಾರಚನೆಗೆ ನೇರವಾಗಿ ಸಂಬಂಧಿಸಿದ ಎಲ್ಲ ಹೊಣೆಗಾರ ವ್ಯಕ್ತಿಗಳು ಕಾಸರಗೋಡಿನ ಎರಡು ಲಕ್ಷ ಕನ್ನಡಿಗರನ್ನು ನಂಬಿಸಿ ಕೊರಳು ಕೊಯ್ದರೆನ್ನುವುದು ಸಂದೇಹಾತೀತವಾಗಿ ಗೋಚರಿಸುತ್ತದೆ.

ತಾನು ರಾಜೀನಾಮೆಯನ್ನಿತ್ತುದು ತನ್ನ ಅಪೇಕ್ಷೆಗೆ ವಿರುದ್ಧವಾಗಿ ನಿರ್ಣಯವೊಂದನ್ನು ಕೈಗೊಳ್ಳಲಾಯಿತೆಂದಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತದ ನಿರ್ಧಾರವೇ ಮನ್ನಿಸಲ್ಪಡಬೇಕು; ಮತ್ತು ಅಲ್ಪ ಸಂಖ್ಯಾಕ ವರ್ಗವು ಅದಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸಬೇಕೆನ್ನುವುದು ತನಗೂ ಒಪ್ಪಿಗೆ. ಆದರೆ, ಕಾಸರಗೋಡು ತಾಲೂಕಿನ ಕನ್ನಡಿಗರ ಭವಿಷ್ಯದ ಮಟ್ಟಿಗೆ ಪ್ರಜಾಸತ್ತಾತ್ಮಕ ಮಾರ್ಗವನ್ನು ಸಂಪೂರ್ಣ ಕಡೆಗಣಿಸಲಾಯಿತೆಂಬುದೇ ತನ್ನ ರಾಜೀನಾಮೆಯ ಗುಟ್ಟು ಎನ್ನುತ್ತಾರೆ ಶ್ರೀ ಶಿವರಾಯರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಆರಿಸಲಾದ ೧೧ ಮಂದಿ ಶಾಸನ ಸಭಾ ಸದಸ್ಯರೂ ೩ ಮಂದಿ ಸಂಸತ್ತಿನ ಸದಸ್ಯರೂ ಕಾಂಗ್ರೆಸಿನ ಪ್ರಬಲ ಪ್ರತಿಪಕ್ಷವಾಗಿದ್ದ ಪ್ರಜಾ ಸಮಾಜವಾದಿ ಪಕ್ಷವನ್ನೊಳಗೊಂಡು ಎಲ್ಲ ರಾಜಕೀಯ ಗುಂಪುಗಳೂ ೨೬ ಗ್ರಾಮ ಪಂಚಾಯತುಗಳಲ್ಲಿ ೩೪ ಪಂಚಾಯತುಗಳೂ ಜಿಲ್ಲಾ ಬೋರ್ಡಿನ ಸಭೆಯೂ—ಹೀಗೆ ಪ್ರಾತಿನಿಧಿಕವಾದ ಜನಾಭಿಪ್ರಾಯವೆಲ್ಲವೂ—ಕಾಸರಗೋಡಿನ ಕನ್ನಡಿಗರ ನಿಲುಮೆಗೆ ಪ್ರಚಂಡ ಅನುಮೋದನೆ ಕೊಡುತ್ತಿದ್ದುದನ್ನು ಸರಕಾರವಾಗಲೀ ಸಂಸತ್ತಾಗಲೀ ಲೆಕ್ಕಿಸಲಿಲ್ಲ ಎಂದು ಶಿವರಾಯರು ವಿವರಿಸಿದ್ದಾರೆ.

ಕೇರಳ ಮತ್ತು ಕರ್ನಾಟಕಗಳ ಗಡಿಯನ್ನು ಚಂದ್ರಗಿರಿ ಹೊಳೆಯಾಗಿಡಬೇಕೆನ್ನುವ ಸೂಚನೆಯನ್ನು ಮೊದಲು ನೀಡಿದವರು ರಾಜ್ಯಗಳ ಪುನಾರಚನೆಯ ಆಯೋಗದಲ್ಲಿ ಸದಸ್ಯರಾಗಿದ್ದ ಸರ್ದಾರ ಪಣಿಕ್ಕರರೆಂದು ಶ್ರೀ ಶಿವರಾಯರು ಪುನಃ ನೆನಪು ಮಾಡಿಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಮಹನೀಯರೆಲ್ಲರೂ ಈ ಸಲಹೆಯನ್ನು ಒಪ್ಪಿಕೊಂಡರು. ಆದರೆ ಪಣಿಕ್ಕರರೂ ಸಹ ಸಹಿ ಹಾಕಿದ್ದ ವರದಿಯು ಇದಕ್ಕೆ ವ್ಯತಿರಿಕ್ತವಾಯಿತು— ಏಕೆಂದು ಪಣಿಕ್ಕರರಿಗೇ ಗೊತ್ತು!

ಕಳೆದ ನವಂಬರ ತಿಂಗಳಲ್ಲಿ ತಾನು ಗೃಹಮಂತ್ರಿ ಪಂಡಿತ ಪಂತರನ್ನು ಭೇಟಿಮಾಡಿ ಕಾಸರಗೋಡಿನ ಕನ್ನಡಿಗರ ನಿಲುಮೆಯನ್ನು ನಿವೇದಿಸಿಕೊಂಡಾಗ ಸರಕಾರಿ ನಿರ್ಧಾರದಲ್ಲಿ ಸೂಕ್ತ ಬದಲಾವಣೆ ಮಾಡುವ ಉಚಿತ ಭರವಸೆ ದೊರೆಯಿತು. ಆಗ ಮತ್ತು ಅನಂತರ ಅನೇಕ ಸಲ ಗೃಹಮಂತ್ರಿಗಳು ತನಗೆ ಎಲ್ಲವೂ ಮರುಪರಿಶೀಲನೆಯಾಗಿದೆಯೆಂದೂ ಕಾಸರಗೋಡಿನ ಕನ್ನಡಿಗರದು ನ್ಯಾಯಬದ್ಧವಾದ ಕೇಳಿಕೆಯಾಗಿದೆಯೆಂದೂ ಕೇರಳದ ಅಭಿಪ್ರಾಯವು ಈ ತಿದ್ದುಪಡಿಗೆ ಗಂಭೀರ ವಿರೋಧವನ್ನು ವ್ಯಕ್ತಪಡಿಸಲಿಕ್ಕಿಲ್ಲವೆಂದೂ ಹೇಳಿದ್ದರು—ಎನ್ನುತ್ತಾರೆ ಶ್ರೀ ಶಿವರಾಯರು. ಜನವರಿಯಲ್ಲಿ ಪ್ರಕಟವಾದ ಸರಕಾರದ ಪ್ರಥಮ ನಿರ್ಧಾರವು ಇದಕ್ಕೆ ಅನುಗುಣವಾಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದು.

ಆದರೆ ಹಿಂದಿನಿಂದ ಇದನ್ನು ಬದಲಾಯಿಸಲಾಯಿತು. ಮದ್ರಾಸಿನ ಸಚಿವ ಸಂಪುಟವು ಗುಡಲೂರು ತಾಲೂಕನ್ನು ಕೇರಳಕ್ಕೆ ವರ್ಗಾಯಿಸಲು ವಿರೋಧ ಸೂಚಿಸಿದುದರಿಂದ, ಭರವಸೆಗಳ ಮೂಲಕ ನಂಬಿಸಿದ್ದ ಕಾಸರಗೋಡಿನ ಕನ್ನಡಿಗರಿಗೆ ವಂಚನೆಯನ್ನು ಮಾಡಲಾಯಿತು. ಇದನ್ನು ಶ್ರೀ ಶಿವರಾಯರೂ ಇತರ ಮಿತ್ರರೂ ಪ್ರತಿಭಟಿಸಿ ಗೃಹಮಂತ್ರಿಗಳಿಗೆ ನಿವೇದನೆ ಮಾಡಿಕೊಂಡಾಗ ಸಂಯುಕ್ತ ಪರಿಶೀಲಕ ಸಮಿತಿಯಲ್ಲಿ ಈ ವಿಷಯವನ್ನೆತ್ತಿ ತಿದ್ದುಪಡಿ ಮಾಡಬಹುದೆಂಬ ಆಶ್ವಾಸನೆ ಸಿಕ್ಕಿತು.

ಸಂಯುಕ್ತ ಪರಿಶೀಲಕ ಸಮಿತಿಯಲ್ಲಿ ತಾನು ಸೇರಬಯಸಿದೆನೆಂದೂ ಇದಕ್ಕೆ ತಾತ್ಕಾಲಿಕವಾಗಿ ಒಪ್ಪಲಾಯಿತೆಂದೂ ಆದರೆ ಈ ಸಮಿತಿಯ ಸದಸ್ಯರ ಹೆಸರನ್ನು ವಿಧ್ಯುಕ್ತವಾಗಿ ಪ್ರಕಟಿಸುವುದಕ್ಕೆ ತುಸುವೇ ಮುಂಚೆ ತನನ್ನು ಸಮಿತಿಯಲ್ಲಿ ಸೇರಿಸಲು ಗೃಹಮಂತ್ರಿಗಳು ಅನುಕೂಲರಿಲ್ಲವೆಂದು ತಿಳಿದು ಬಂತೆಂದೂ ಶ್ರೀ ಶಿವರಾಯರು ಹೇಳುತ್ತಾರೆ. ತನ್ನ ಆರೋಗ್ಯ ಒಳ್ಳೆಯದಿಲ್ಲವೆಂಬ ಕಾರಣವನ್ನು ಕೊಡಲಾಯಿತೆಂದೂ ಕಾಸರಗೋಡಿನ ಕುರಿತು ಗೃಹ ಮಂತ್ರಿಗಳೇ ಪರಿಶೀಲಕ ಸಮಿತಿಯ ಮುಂದೆ ಕನ್ನಡಿಗರ ನಿಲುಮೆಯನ್ನು ಮಂಡಿಸುವರೆಂದೂ ಕಾಸರಗೋಡಿನ ಬಗ್ಗೆ ವಿಶೇಷ ಚಿಂತೆಗೇನೂ ಅವಕಾಶವಿಲ್ಲವೆಂದೂ ತನ್ನನ್ನು ನಂಬಿಸಲಾಯಿತು ಎನ್ನುತ್ತಾ ಶಿವರಾಯರು ತಾನಿದನ್ನೆಲ್ಲ ಹಿಂದಿನ ಭರವಸೆಗಳ ದೃಢೀಕರಣವೆಂದು ಭಾವಿಸಿದುದಾಗಿ ತಿಳಿಸುತ್ತಾರೆ.

ಸಂಯುಕ್ತ ಪರಿಶೀಲಕ ಸಮಿತಿಯ ಕಾರ್ಯಕಲಾಪ ನಡೆದಾಗ ಮಾತ್ರ ಇಷ್ಟರವರೆಗೆ ಕನ್ನಡಿಗರ ಉತ್ತಮ ಸ್ನೇಹಿತರಂತಿದ್ದ ಗೃಹಮಂತ್ರಿ ಪಂಡಿತ ಪಂತರು .

(೧೧ನೇ ಪುಟ ನೋಡಿರಿ)

## ನಿಮ್ಮ ಬೇಂಕರರನ್ನು ಹೇಗೆ ಆರಿಸುವಿರಿ?

ನಿಮ್ಮ ಬೇಂಕು ಭದ್ರ ಮತ್ತು ಸುರಕ್ಷಿತವಾಗಿರಬೇಕು, ಮಾತ್ರವಲ್ಲ ಅದರ ನೌಕರವರ್ಗವೂ ಕ್ಷಿಪ್ರ ಮತ್ತು ವಿನಯಶೀಲ ಕಾರ್ಯಪ್ರವೃತ್ತಿಯವರಾಗಿರಬೇಕು.

ಎಲ್ಲಕ್ಕಿಂತಲೂ, ನಿಮಗೆ ಅವಶ್ಯಕತೆಯಿರುವಾಗ, ಬೇಂಕು ನಿಮ್ಮ ಸಹಾಯಕ್ಕೊದಗಬೇಕು,

ನೀವು ಉಳಿತಾಯ ಮಾಡಲು ಶಕ್ತರಾದಾಗ, ನಿಮ್ಮ ಠೇವಣಾತಿ ಪಡೆಯುವುದು ಮಾತ್ರ ಬೇಂಕಿನ ಕೆಲಸವಲ್ಲ. ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಬೇಂಕಿನ ಸಹಕಾರವು ಅಗತ್ಯ ಬಿದ್ದಲ್ಲಿ ನಿಮಗೆ ಸಹಾಯ ಮಾಡಲು ಬೇಂಕು ಪ್ರಯತ್ನಿಸಬೇಕು.

ಮೇಲಿನ ತತ್ವಗಳನ್ನು ನಾವು ಕಳೆದ 25 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯಾಚರಣೆಗಿಳಿಸಿದ್ದೇವೆ.

### ದಿ ವಿಜಯ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು—3.

(ಸ್ಥಾಪನೆ—1931)

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ- ರೂ. 11 ಲಕ್ಷಕ್ಕೂ ಮಿಕ್ಕಿವೆ.

## ಬೆಳಕಿನೆಡೆಗೆ ಹೋಗೋಣ

# ಕಲಿಯುಗದ ಗೀತಾಚಾರ್ಯ

**ವಿವೇಕಾನಂದರು "ಜನತೆಯೇ ಜನಾರ್ಧನ" ಎಂದು ಬಾಳಿದರು**

"ಏಳಿರಿ ಎದ್ದೇಳಿರಿ ಎಚ್ಚರಗೊಳ್ಳಿರಿ; ಗುರಿಯನ್ನು ಮುಟ್ಟುವ ತನಕ ನಿಲ್ಲಬೇಡಿರಿ" ಎಂಬ ಸ್ವಾಮಿ ವಿವೇಕಾನಂದರ ಅಮೃತ ವಾಣಿಯು ನಮಗೆ ಗೀತಾಚಾರ್ಯ ಶ್ರೀ ಕೃಷ್ಣನ ನೆನಪನ್ನು ತಂದು ಕೊಡುತ್ತದೆ.

ಭವ್ಯ ಭಾರತದ ನವಜ್ಯೋತಿ ವಿವೇಕಾನಂದರು ಏಕೈಕ ಆಚಾರ್ಯ ಶಿರೋಮಣಿಯಾಗಿ ಕೀರ್ತಿಯ ಉತ್ತುಂಗ ಶಿಖರದ ಮೇಲೆ ರತ್ನದಂತೆ ಬೆಳಗಿ ಕಲಿಯುಗದ ಗೀತಾಚಾರ್ಯನಾಗಿ ಲೋಕಕ್ಕೆ ನವಚೇತನವನ್ನಿತ್ತು ಕಣ್ಮರೆಯಾಗಿದ್ದಾರೆ. ಎಲ್ಲೆಲ್ಲಿಯೂ ಅಜ್ಞಾನ, ದಾರಿದ್ರ್ಯಗಳು ತುಂಬಿ ಜನರು ಕಂಗೆಟ್ಟು ಮುಂಗಾಣದಿರುವ ಕಾಲದಲ್ಲಿ ಸ್ವಾಮಿಜಿಯವರ ಅಮರ ಸಂದೇಶವು ಜನತೆಯನ್ನು ಎಚ್ಚರಿಸಿ ಕಾರ್ಯಪಥದೆಡೆಗೆ ಸಾಗಿಸಿತು.

ಬಂಧು ಮಿತ್ರರನ್ನು ಗುರು ಹಿರಿಯರನ್ನು ನೋಡಿ 'ನನಗೆ ಈ ಹಿಂಸೆಯಿಂದ ದೊರಕುವ ರಾಜ್ಯಬೇಡ' ಎಂದು ಕಂಬನಿ ಸುರಿಸಿ ಆಯುಧವನ್ನು ಕೆಳಗಿರಿಸಿದ ಅರ್ಜುನನನ್ನು ಉದ್ದೇಶಿಸಿ ಶ್ರೀಕೃಷ್ಣನು "ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ" ಎಂದುಸುರಿ, ಪರಮ ಪವಿತ್ರ ಗೀತೆಯನ್ನು ಬೋಧಿಸಿದನು; ಮತ್ತು ಅಚಲ ನಿರ್ಧಾರ ಕೈಗೊಂಡಿದ್ದ ಅರ್ಜುನನನ್ನು ಕಾರ್ಯರಂಗಕ್ಕಿಳಿಸಿದನು.

ಆತನ ಆ ನುಡಿಮುತ್ತುಗಳೇ ಗೀತೆಯ ಜೀವಾಳ. ಆತನೇ "ಗೀತಾಚಾರ್ಯ." ತೇಜೋಮೂರ್ತಿ, ಅಮಿತ ಪರಾಕ್ರಮಿ, ಅಚಲ ನಿರ್ಧಾರಿ, ಮಹಾಮಹಿಮ ಅರ್ಜುನನು ನಿರಪೇಕ್ಷಾಭಾವದಿಂದ ಕಂಬನಿ ತುಂಬಿದ ಮನದಿಂದ ಎತ್ತಿದ ಆಯುಧವನ್ನು ಕೆಳಗಿಟ್ಟಾಗ ಆತನನ್ನು ಎಚ್ಚರಿಸಿ ಹಿಡಿದೆತ್ತಿ ನಿಲ್ಲಿಸಿದ ಗೀತೆಯ ನುಡಿಗಳೆಂತಿರಬೇಡ? ಅದರ ಮಹಾಶಕ್ತಿಯೆಷ್ಟಿರಬೇಡ? ಅದೊಂದು ವಿಷಯವೇ ಸಾಕು, ಗೀತೆಯ ಪಾವಿತ್ರ್ಯ, ಮಹತ್ವವನ್ನು ಸಾರಲು.

ಸ್ವಾಮಿ ವಿವೇಕಾನಂದರು ನುಡಿದ ಪ್ರತಿಯೊಂದು ನುಡಿಯೂ ಉಚ್ಚರಿಸಿದ ಅಕ್ಷರ ಅಕ್ಷರವೂ—ಗೀತೆಯ ಒಡಲಿಂದ ಎದ್ದು ಬಂದವುಗಳಾಗಿವೆ. ಅವತಾರೀ ಶ್ರೀಕೃಷ್ಣನೇ ಅವರೆಂದರೆ ತಪ್ಪಾಗಲಾರದು.

ಧೃತಿಗೆಟ್ಟ ಭಾರತದ ಜನತೆಗೆ "ನೀನೇ ನಿನ್ನ ದಾರಿಯಲ್ಲಿ ಹೋಗು; ನಿನ್ನ ಕಾರ್ಯವನ್ನು ಪೂರೈಸು. 'ಏಕೆ?' 'ಏನು?' ಎಂದು ಪ್ರಶ್ನಿಸುವ ಅಧಿಕಾರ ನಿನಗಿಲ್ಲ. ಅದರಿಂದ ಬರುವ ಯಾವ ಫಲವೇ ಇರಲಿ, ಅದರಲ್ಲಿ ನಿನಗೆ ಹಕ್ಕಿಲ್ಲ..... ಧೈರ್ಯವನ್ನು ತೊರೆಯದೆ ಮುಂದೆ ಸಾಗು. ಕೆಲವರು ನಿನ್ನನ್ನು ಹುಚ್ಚನೆನ್ನಬಹುದು. ಕೆಲವರು ಚಂಚಲನೆನ್ನಬಹುದು. ಅನೇಕರು ಪರಮ ದ್ರೋಹಿ ಎನ್ನಬಹುದು. ಹಲವರು ಜ್ಞಾನಿಯೆನ್ನಬಹುದು. ನೀನು ಯಾವುದಕ್ಕೂ ಕಿವಿಗೊಡದೆ, ನಿನ್ನ ಧ್ಯೇಯದ ದಾರಿಯಲ್ಲಿ ನಡೆದು ನಿನ್ನ ಕಾರ್ಯವನ್ನು ಸಾಧಿಸು" ಎಂಬ ಶ್ರೀಕೃಷ್ಣನ ಗೀತೆಯ ನುಡಿಗಳೇ ವಿವೇಕಾನಂದರ ಬಾಯಿಯಲ್ಲಿ ಪ್ರತಿಧ್ವನಿಸುತ್ತಿದ್ದುವು.

ಸರಳ, ಸುಂದರ ಭಾಷೆಯಲ್ಲೂ, ಭಾವದಲ್ಲೂ ಅವರು ನುಡಿದ ಮಾತಿನ ಮುತ್ತುಗಳು ನಿರ್ಮಲ ಪುಷ್ಕರಿಣಿಯಲ್ಲಿ ಹರಿದು ಬಂದ ನಿರ್ಮಲ ಒರತೆಯಂತಿವೆ. ಆ ಮಾತಿನ ಭಾವಾಕರ್ಷಣೆಯೇ ಹೃದಯದಲ್ಲಿ ನವಿರೇಳಿಸುವಂತಹದು! ಇನ್ನೊಮ್ಮೆ ಕೇಳಬೇಕೆನ್ನಿಸುವಂತಹದು! ಅಂಧನಿಗೂ ಬೆಳಕನ್ನು ತೋರುವಂತಹದು.

ಪರಮಾತ್ಮನ ಸಾನ್ನಿಧ್ಯವನ್ನು ಮನುಷ್ಯನು ಅಚಲ ವಿಶ್ವಾಸ, ಭಕ್ತಿ, ದೃಢ ಹೃದಯದಿಂದ ಹೇಗೆ ಸಾಧಿಸಲು ಸಾಧ್ಯವೆಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವನಷ್ಟೆ! ಸ್ವಾಮಿ ವಿವೇಕಾನಂದರು 'ನೀನೇ ಜನತೆ; ಜನತೆಯೇ ನೀನು. ದೇವರೇ ಜನರು ಜನರೇ ದೇವರು. ಅವರ ಸೇವೆಯೇ ದೇವರ ಸೇವೆ. ದೈವತ್ವವೆಂಬುದು ವೈಕುಂಠದಲ್ಲೇ ಮಲಗಿಲ್ಲ. ಪ್ರತಿಯೊಬ್ಬನ ಹೃದಯ ಮಂದಿರದಲ್ಲಿದೆ. ಆ ದೈವತ್ವವನ್ನು ಪೂಜಿಸು; ಸಾಧಿಸು; ಪರಮಾತ್ಮನನ್ನು ಹೊಂದು.' ಎಂಬುದಾಗಿ ಕಲಿಯುಗಕ್ಕೆ ಒಪ್ಪುವಂತೆ ಶ್ರೀಕೃಷ್ಣನ ಮಾತುಗಳಿಗೆಲ್ಲ ಒಪ್ಪವಿತ್ತಿದ್ದಾರೆ.

ಧೃಢಕಾಯದ ಉಜ್ವಲ ಮೂರ್ತಿ ವಿವೇಕಾನಂದರು ಭಾರತದ ಕಣ್ಮಣಿಯಾಗಿದ್ದರು. ಇಡೀ ವಿಶ್ವದ ಅಮೃತ ಕಿರಣವಾಗಿದ್ದರು. ಮನುಷ್ಯನಾಗಿ ಹುಟ್ಟಿ, ಮನುಷ್ಯನಂತೆ ಅತಿಯಾದ ಚೆಲ್ಲಾಟವಾಡಿ ಮಹತ್ಕಾರ್ಯಗಳನ್ನೆಸಗಿ 'ಏನು ನನ್ನನ್ನು ದೇವರು—ದೇವರೆನ್ನುತ್ತಿರುವಿರಿ? ಅದು ನನ್ನಲ್ಲೆಲ್ಲಿದೆ? ಹೇಗೆ ಕಂಡಿರಿ? ಅಂತಹ ಕಾರ್ಯಗಳನ್ನು ನಾನೇನು ಮಾಡಿರುವೆನು? ಸಾಧಿಸಿದರೆ ಮನುಷ್ಯನಿಂದ ಆಗದ ಕಾರ್ಯವಾವುದೂ ಇಲ್ಲ. ಮನುಷ್ಯನು ಮಾಡುವಂತಹದೇ ಅಲ್ಲದೆ ಬೇರೇನೂ ನಾನು ಮಾಡಿಲ್ಲ, ಅದ್ಭುತ ಆಶ್ಚರ್ಯವಾದುದೇನೂ ಅದರಲ್ಲಿಲ್ಲ' ಎಂಬುದಾಗಿ ಶ್ರೀಕೃಷ್ಣನು ತನ್ನ ಭಕ್ತರ ಉದ್ಗಾರಿಗಳ ಸಂಬಂಧದಲ್ಲಿ ಹೇಳಿದ್ದನಲ್ಲವೆ? ಅದೇ ರೀತಿಯಲ್ಲಿ ಮನುಷ್ಯಜನ್ಮ ತಳೆದು ಬಾಲ್ಯದಲ್ಲಿ ವಿಶುದ್ಧ ಮನೋಭಾವ ಉಳ್ಳವನಾಗಿ ಮನುಷ್ಯನಂತೆಯೇ ಬೆಳೆದು, ಮನುಷ್ಯತ್ವ ದೈವತ್ವಗಳೇನೆಂದು ಸಾಧಿಸಿ ಬೋಧಿಸಿದವರು ವಿವೇಕಾನಂದರು.

ಅವರು ಬಹುಬೇಗನೆ ಕಣ್ಮರೆಯಾದರು! ಹೌದು! ಅವರೂ ಮನುಷ್ಯರೇ. ಅವರಿಗೂ ಮಾನವನದೇ ಆಯುಷ್ಯವಲ್ಲವೆ? ಆದರೆ ಆ ಅಲ್ಪಾವಧಿಯಲ್ಲಿ ಎಂತಹ ಪ್ರತಿಭೆಯನ್ನವರು ಪಡೆದಿದ್ದರು!

"ನಿನ್ನ ಸ್ನೇಹಿತರು, ಸಹೋದರರು ಬಂಧುಗಳು ಎಂದು ಕೊರಗಬೇಡ. ಲೌಕಿಕವಾಗಿ ಕಾಣುವವರವರು. ಪಾಪ, ಪುಣ್ಯಫಲಗಳನ್ನು ಸ್ಮರಿಸಿ 'ಹೀಗೆ ಮಾಡಬೇಕಲ್ಲಾ" ಎನ್ನಬೇಡ; ಅದು ನಿನ್ನಲ್ಲಿಲ್ಲ. ನಿನ್ನ ಕರ್ಮ ಯಾವುದೋ ಅದನ್ನು ಮಾತ್ರ ಹಿಂಜರಿಯದೆ ಮಾಡು. ವ್ಯರ್ಥ ದುಃಖಿಸಿ ಕಾಲಹರಣ ಮಾಡಬೇಡ. 'ನಾನು ಮಾಡಿದೆ' ಎಂಬ ಅಹಂಕಾರ ಬೇಡ; ಅದಕ್ಕೆ ಅರ್ಥವಿಲ್ಲ. ಮಾಡುವವನು ನೀನು; ಕರ್ತೃ ನಾನು. ಹುಂ ಎದ್ದೇಳು' ಎಂಬುದು ಅರ್ಜುನನಿಗಾಗಿ ನುಡಿದ ಶ್ರೀಕೃಷ್ಣನ ನುಡಿ.

'ದೇವರು ದೇವರೆಂದು ಬೊಬ್ಬಿಡುತ್ತಿರುವಿರಿ! ದೇವರನ್ನು ಪೂಜಿಸಲು ಧನ ಕನಕಗಳ ರಾಶಿಯನ್ನೇ ಒಡ್ಡುತ್ತಿರುವಿರಿ. ದೇವರೆದುರು ಗಂಟೆ ಬಾರಿಸಬೇಕಾದರೆ ಎಲ್ಲಿ, ಹೇಗೆ ಬಾರಿಸಬೇಕು? ಎಷ್ಟು ಹೊತ್ತು ಬಾರಿಸಬೇಕು? ಎಡಬದಿಯಲ್ಲಿಯೋ ಬಲಬದಿಯಲ್ಲಿಯೋ ಎಂದು ಯೋಚಿಸಿ ಸಂಶಯ ವ್ಯಕ್ತಪಡಿಸಿ ಬಳಲುವಿರಿ. ದೇವರಿದುರು ನೈವೇದ್ಯವನ್ನು ಎಷ್ಟು ಹೊತ್ತು ಇಡಬೇಕು? ಒಂದು ಥಾಳಿಗೆ ಸಾಕೋ ಎರಡು ಥಾಳಿಗೆ ಬೇಕೋ ಎಂದು ವಿಮರ್ಶಿಸಿ ಚರ್ಚೆಗಾರಂಭಿಸಿ ದೈವತ್ವಕ್ಕೆ ಅಪಮಾನವೆಸಗುವಿರಿ. ಕ್ಷಣ ಕ್ಷಣಕ್ಕೂ 'ದೇವರು ಈಗ ಸ್ನಾನಮಾಡುತ್ತಾನೆ; ಈಗ ಊಟಮಾಡುತ್ತಾನೆ; ಈಗ ಅಪರಾಧಗಳ ವಿಚಾರಣೆ ಮಾಡುತ್ತಾನೆ' ಎನ್ನುತ್ತಿರುವಿರಿ, ಆದರೆ ನಿಜವಾಗಿಯೂ ಪ್ರತ್ಯಕ್ಷವಾಗಿ ಕಾಣುತ್ತಿರುವ, ಕಣ್ಣು, ಕೈಕಾಲುಗಳಿರುವ ದೇವರು, ಅಂಗಾಂಗಗಳಲ್ಲಿಯೂ ಬಲವಿಲ್ಲದಿರುವ ದೇವರು ನಮ್ಮೆದುರು ಬಡಪಾಯಿಯಾಗಿ ಕೊಳೆಕೊಚ್ಚೆಯಲ್ಲಿ ಜೀವನ ಸಾಗಿಸುತ್ತಾ ಕೊರಗಿ ಕೊರಗಿ ಹಸಿವೆಯಿಂದ ಪ್ರಾಣ ನೀಗುತ್ತಿದ್ದಾನೆ" ಹೀಗೆ ಶ್ರೀ ಕೃಷ್ಣನ ಮಾತು ಇಂದಿನ ಭಾರತದ ಜನತೆಗಾಗಿ ಸ್ವಾಮಿಜಿಯವರ ಬಾಯಿಯಲ್ಲಿ ಪರಿವರ್ತಿತವಾಗಿ ಬಂದಿದೆ. ಜನಜೀವನದ ಮಹಾ ಸಮಸ್ಯೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ಹೊಕ್ಕು ನೋಡಿ, ಅನುಭವಿಸಿ, ವಿಮರ್ಶಿಸಿ, ವಿವರಿಸಿ ಅವರು ಪರಿಹಾರ ನೀಡಿದ್ದಾರೆ. ಅವರು ಜನತೆಗಾಗಿ ಹಂಬಲಿಸುತ್ತಿದ್ದರು. ಜನತೆಯಲ್ಲಿ ಅವರಿಗೆ ಅಪಾರ ಪ್ರೇಮವಿತ್ತು.

"ಭಾರತಾಂಬೆಯೇ, ಲೋಕಮಾತೆಯೇ, ನಿನ್ನುದರದಲ್ಲಿ ನನಗೆ ಜನ್ಮವಿತ್ತೆ, ಆದರೆ ಮಾತ್ರ! ಇಂದೆನಗೆ ಶಕ್ತಿಯನ್ನು ಕೊಡು. ನಿನ್ನ ಅನಾಥ ಮಕ್ಕಳನ್ನು ಕಾಪಾಡು. ಅವರಿಗೆ ನನ್ನಿಂದ ಏನು ಮಾಡಲು ಸಾಧ್ಯವೋ ಅದಕ್ಕಾಗಿ ಶಕ್ತಿಯನ್ನು ನೀಡು," ಎಂದವರು ಭಾರತಾಂಬೆಯಲ್ಲಿ ಮೊರೆಯಿಡುತ್ತಿದ್ದರು. ಭಾರತಾಂಬೆಯೊಡನೆ ಭಾರತಾಂಬೆಯ ಮಕ್ಕಳಿಗಾಗಿ ಕೊರಗಿ ಪ್ರಾರ್ಥಿಸುತ್ತಿದ್ದರು. ಜನರ ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆಗಳನ್ನು ನೋಡಿ ದುಃಖಿಸಿ ತನ್ನಲ್ಲಿ ತಾನೇ ಉರಿದೇಳುತ್ತಿದ್ದರು. ಭಾರತವು ನಂದನವನವಾಗಬೇಕೆಂದು ಅವರು ಬಯಸಿದ್ದರು. ತೊಳಲಾಡುತ್ತಿರುವ ಬರಡು ಜೀವಿಗಳಿಗೆ ಅಮೃತ ಸೇಚನೆಯಿಂದ ನವಶಕ್ತಿ ನೀಡಿದ್ದರು.

(೧೧ನೇ ಪುಟ ನೋಡಿರಿ)

ಝಂಡುರವರ "ಕೇಸರಿ ಜೀವನ"
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್--3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956
THE CANARA BANKING CORPORATION LIMITED
H. Office: UDIPI (S.India).

## ಇತಿಹಾಸದ ಪುಟಗಳಿಂದ

# ಭಾರತದಲ್ಲಿ ರಶ್ಯದ ಯಾತ್ರಿಕರು

**ಹದಿನೈದನೇ ಶತಮಾನದಿಂದ ರೂಪುಗೊಂಡ ಸ್ನೇಹ.**

ಅನೇಕ ಶತಮಾನಗಳಿಂದ ರಶಿಯನ್ ಜನತೆಯು, ಭಾರತ ದೇಶದ ಜನತೆಗಳ ವಿಷಯವಾಗಿಯೂ ಮತ್ತು ಅವರ ಪುರಾತನ ಸಂಸ್ಕೃತಿಯ ಬಗ್ಗೆಯೂ ಉತ್ಸಾಹಪೂರ್ಣವಾದ ಆಸಕ್ತಿಯನ್ನೂ ಮತ್ತು ತುಂಬಾ ಸದ್ಭಾವನೆಯನ್ನೂ ತೋರಿಸಿದೆ

ಭಾರತ ದೇಶಕ್ಕೆ ಮೊದಲನೆಯ ರಶಿಯನ್ ರಾಯಭಾರಿ—ಅನಧಿಕೃತವಾಗಿದ್ದರೂ ಕೂಡ—ತ್ವೇರ್ ನಗರದ ವ್ಯಾಪಾರಿ ಅಫನಾಸಿ ನಿಕೀಟಿನ್‌ರವರಾಗಿದ್ದರು. ಅಪಾರವಾದ ತೊಂದರೆಗಳನ್ನು ದಾಟಿ, ಕಾಕಸಸ್, ಪರ್ಶಿಯಾ, ಮತ್ತು ಹಿಂದೂ ಮಹಾಸಾಗರದ ಮೇಲೆ ತಾವು ಸಂಚರಿಸಿದ ದೀರ್ಘ ಮಾರ್ಗದಲ್ಲಿ ಅನೇಕ ಸಾಹಸ ಕಾರ್ಯಗಳ ಅನುಭವವನ್ನು ಪಡೆದು, ಅವರು ೧೪೬೯ರ ಮೇ ತಿಂಗಳಲ್ಲಿ ಭಾರತದ ಭೂಮಿಯಲ್ಲಿ ಬಂದಿಳಿದರು. ಆ ದೇಶವನ್ನು ಸಂದರ್ಶಿಸಿದ ಮೊದಲ ಐರೋಪ್ಯರಲ್ಲಿ ಅವರು ಒಬ್ಬರಾಗಿದ್ದರು. ತನ್ನ ಆರು ವರ್ಷಗಳ ಪರ್ಯಟನೆಯನ್ನು "ಮೂರು ಕಡಲುಗಳಾಚೆಯ ಪ್ರಯಾಣ" ವೆಂಬ ತಮ್ಮ ಪುಸ್ತಕದಲ್ಲಿ ಅವರು ವಿವರಿಸಿದರು. ೧೫ನೆಯ ಶತಮಾನದ ದ್ವಿತೀಯಾರ್ಧ ಕಾಲಾವಧಿಯ ಭಾರತ ದೇಶದ ಇತಿಹಾಸವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಈ ಪುಸ್ತಕವು ಈಗಲೂ ಅಮೂಲ್ಯ ಆಧಾರವಾಗಿ ಉಪಯೋಗಿಸಲಾಗುತ್ತದೆ.

೧೭ನೆಯ ಶತಮಾನದಲ್ಲಿ ಭಾರತ ದೇಶದೊಡನೆ ವ್ಯಾಪಾರ, ದೌತ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಸ್ಥಾಪಿಸಲು ರಶಿಯಾ ದೇಶದ ಸಕ್ರಿಯ ಪ್ರಯತ್ನಗಳು ವಿಶೇಷತಃ ಪುನಃ ಪುನಃ ಆಗಾಗ್ಗೆ ನಡೆದುವು. ೧೬೯೬ರಲ್ಲಿ ಎಸ್. ಮಾಲೆಂಕಿಯವರ ನೇತೃತ್ವದಲ್ಲಿ ನಿಕೀಟಿನ್‌ರವರ ಮಾರ್ಗವನ್ನು ಅನುಸರಿಸಿ ಪ್ರಯಾಣವನ್ನು ಕೈಗೊಂಡ ರಶಿಯನ್ ರಾಯಭಾರಿಗಳು ಭಾರತ ದೇಶವನ್ನು ತಲುಪುವುದರಲ್ಲಿ ವಿಜಯವನ್ನು ಸಾಧಿಸಿದರು. ಮಹತ್ತರ ಮೊಗಲ್ ರಾಜವಂಶದ ಔರಂಗಜೇಬ್ ಚಕ್ರವರ್ತಿಯಿಂದ ಈ ರಾಯಭಾರಿಗಳು ಆದರದ ಸ್ವಾಗತವನ್ನು ಪಡೆದರು; ಅವರಿಗೆ ಮಹತ್ವಪೂರ್ಣವಾದ ವ್ಯಾಪಾರದ ಸವಲತ್ತುಗಳು ನೀಡಲ್ಪಟ್ಟುವು. ಅವರು ಭಾರತ ದೇಶದಲ್ಲಿ ನಾಲ್ಕು ವರ್ಷಗಳ ಕಾಲ ತಂಗಿದ್ದರು. ಆ ಕಾಲಾವಧಿಯಲ್ಲಿ ಈ ರಶಿಯನ್ ಯಾತ್ರಿಕರು ಅನೇಕ ನಗರಗಳನ್ನು—ದೆಹಲಿಯನ್ನೂ, ಮಧ್ಯಕಾಲೀನ ಭಾರತೀಯ ವಾಸ್ತುಶಿಲ್ಪದ ಮಣಿಯಂತಿರುವ ಆಗ್ರಾ ನಗರವನ್ನೂ ಒಳಗೊಂಡು—ಸಂದರ್ಶಿಸಿದರು. ಈ ರೀತಿಯಾಗಿ ೧೮ನೆಯ ಶತಮಾನದ ಅಂತ್ಯದಲ್ಲಿ, ರಶಿಯಾ ಮತ್ತು ಭಾರತ ದೇಶಗಳ ನಡುವೆ ನೇರವಾದ ದೌತ್ಯ ಮತ್ತು ವ್ಯಾಪಾರಸಂಬಂಧಗಳು ಸ್ಥಾಪಿಸಲ್ಪಟ್ಟಿದ್ದುವು.

೧೭೬೩–೬೪ರಲ್ಲಿ ಎಸ್. ಪೊಲುಬೊಯಾರಿನೋವ ಎಂಬವರು ತಾನು ಭಾರತ ದೇಶದಲ್ಲಿ ತಂಗಿದ್ದ ವಿಷಯವಾಗಿ ಬರೆದಿಟ್ಟಿದ್ದ ಟಿಪ್ಪಣಿಗಳು ಕೆಲವು ತಿಂಗಳುಗಳ ಹಿಂದೆ ಕಂಡುಹಿಡಿಯಲ್ಪಟ್ಟುವು. ಅವರು ಒಂದು ಬ್ರಿಟಿಷ್ ಯುದ್ಧ ನೌಕೆಯ ಮೇಲೆ ಪ್ರಯಾಣ ಮಾಡಿ ಭಾರತ ದೇಶಕ್ಕೆ ಬಂದಿದ್ದರು. ಬ್ರಿಟನ್ನಿನಿಂದ ದಕ್ಷಿಣ ಮಾರ್ಗಾಭಿಮುಖವಾಗಿ ಆಫ್ರಿಕಾ ಖಂಡವನ್ನು ಸುತ್ತುಗಟ್ಟಿಕೊಂಡು ಬಂದ ರಶಿಯನ್ನರಲ್ಲಿ ಅವರೇ ಮೊದಲಿಗರಾಗಿದ್ದರು. ಈ ಅನ್ವೇಷಣಶೀಲ ನಾವಿಕರು ತಾವು ನಿರೀಕ್ಷಿಸಿದುದನ್ನೆಲ್ಲ ಬರೆಯಿಡಲು ಒಂದು ದಿನಚರಿಯನ್ನಿಟ್ಟುಕೊಂಡಿದ್ದರು. ಬೊಂಬಾಯಿಯ ದೊಡ್ಡ ಬಂದರಿನ ವಿಷಯವಾಗಿಯೂ, ಭಾರತೀಯ ಜನಜೀವನದ ರೀತಿಯ ಮತ್ತು ಆ ಚಿರಸ್ಮರಣೀಯ ಹಾರಗಳ ವಿಷಯವಾಗಿಯೂ, ಅವರು ವಿಶೇಷತಃ ವಿವರಣಾತ್ಮಕವಾದ ವರದಿಯನ್ನು ಕೊಟ್ಟಿದ್ದಾರೆ.

೧೭೭೪ರಲ್ಲಿ ಪದಾತಿ ದಳದ ಸಾರ್ಜೆಂಟರಾಗಿದ್ದ ಎಫ್. ಎಸ್. ಎಫ್ರೆಮೋವ್ ಎಂಬವರು ಓರೆನ್‌ಬರ್ಗ್ ಬಯಲು ಪ್ರದೇಶದ ಗಡಿ ಭಾಗಗಳಲ್ಲಿ ಸೇನೆಯ ಕೆಲಸದಲ್ಲಿ ತೊಡಗಿದ್ದಾಗ ಬಂಧನಕ್ಕೀಡಾಗಿ, ಸೆರೆಯಾಳಾಗಿ ಬುಖಾರಾ ನಗರಕ್ಕೆ ಕಳಿಸಲ್ಪಟ್ಟರು. ಆದರೆ ಕೆಲವು ವರ್ಷಗಳ ತರುವಾಯ ಅವರು ಬುಖಾರಾ ರಾಯಭಾರಿಯ ಛದ್ಮವೇಷದಲ್ಲಿ ತಪ್ಪಿಸಿಕೊಂಡು ಘೆರ್ಘಾನಾ ಪ್ರಾಂತ್ಯಕ್ಕೆ ಹೋದರು. ಅಲ್ಲಿಂದ ಅತ್ಯಂತ ಹತ್ತಿರದ ಮಾರ್ಗದ ಮೂಲಕ ತನ್ನ ಸ್ವದೇಶಕ್ಕೆ ವಾಪಸು ಹೋಗಲು ಸಾಧ್ಯವಿಲ್ಲದೆ ಹೋದುದರಿಂದ, ಅತ್ಯಂತ ಕಷ್ಟಕರವಾದ ಪ್ರಯಾಣವನ್ನು ಭಾರತ ದೇಶಕ್ಕೆ ಎಫ್ರೆಮೋವ್ ಕೈಗೊಂಡರು. ಮಧ್ಯ ಏಶಿಯದಿಂದ ಹೊರಟು ಕರಾಕೋರಂ ಮತ್ತು ಪಶ್ಚಿಮ ಹಿಮಾಲಯದ ಪರ್ವತ ಶ್ರೇಣಿಗಳನ್ನು ದಾಟಿ ಭಾರತ ದೇಶಕ್ಕೆ ಪ್ರಯಾಣವನ್ನು ನಡೆಸಿದ ಐರೋಪ್ಯರಲ್ಲಿ ಇವರು ಮೊದಲನೆಯವರಾಗಿದ್ದರು.

ಎಫ್ರೆಮೋವ್ ಕಾಶ್ಮೀರಕ್ಕೂ, ದೆಹಲಿ ಮತ್ತು ಇತರ ನಗರಗಳಿಗೂ ಹೋಗಿದ್ದರ. ಗಂಗಾನದಿಯ ಮೂಲಕ ಪ್ರಯಾಣ ಮಾಡಿ, ಕಟ್ಟ ಕಡೆಗೆ ಕಲಕತ್ತೆಯಲ್ಲಿ ಜಹಜ ಹತ್ತಿ, ಬ್ರಿಟನ್ ಮಾರ್ಗವಾಗಿ – ಪೊಲುಬೊಯಾರಿನೋವ್ ಬಂದಿದ್ದ ಮಾರ್ಗದ ಮೂಲಕವೇ; ಆದರೆ ಅದರ ಎದುರು ದಿಶೆಗೆ—೧೭೮೨ರಲ್ಲಿ ಅವರ ರಶಿಯಾ ದೇಶಕ್ಕೆ ಹಿಂದಿರುಗಿದರು. "ಒಂಭತ್ತು ವರ್ಷಗಳ ಪರ್ಯಟನೆಗಳು" ಎಂಬ ತನ್ನ ಪುಸ್ತಕದಲ್ಲಿ ಎಫ್ರೆಮೋವ್‌ರವರು, ಪ್ರಾಚ್ಯಖಂಡದಲ್ಲಿ ತಾವು ಎದುರಿಸಿದ ಸಾಹಸಗಳನ್ನು ಬಣ್ಣಿಸಿದ್ದಾರೆ.

ಗೆರಾಸಿಮ್ ಲೆಬೆದೇವ್‌ರವರೊಬ್ಬ ಅಸಾಧಾರಣ ವ್ಯಕ್ತಿಯಾಗಿದ್ದರು. ಅವರು ಅನೇಕ ಪ್ರತಿಭಾಸಂಪನ್ನ ಕಲೆಗಳನ್ನರಿತಿದ್ದ ಮೇಧಾವಿಯೂ ಆಗಿದ್ದರು. ಭಾರತದೇಶದಲ್ಲಿ ಅವರು ದೀರ್ಘ ಕಾಲದವರೆಗೆ ಇದ್ದುದರಿಂದ ಅದು ರಶಿಯಾ-ಭಾರತ ದೇಶಗಳ ಸಂಬಂಧಗಳ ಅಭಿವೃದ್ಧಿಗೆ ವಿಶೇಷ ಫಲದಾಯಕವಾಯಿತು. ಅವರು ಗಣ್ಯರಾದ ಸಂಗೀತಜ್ಞರಾಗಿದ್ದು, ಪಶ್ಚಿಮ ಯುರೋಪಿನಲ್ಲಿ ಜಯಪ್ರದವಾದ ಪರ್ಯಟನೆಯ ತರುವಾಯ ೧೭೮೫ರಲ್ಲಿ ಭಾರತದೇಶಕ್ಕೆ ಬಂದು ತಲಪಿದರು. ಭಾರತದೇಶದಲ್ಲಿಯೂ ಕೂಡ ಅವರು ಮಹತ್ತರವಾದ ಯಶಸ್ಸನ್ನು ಗಳಿಸಿದರು. ಮದರಾಸಿನಲ್ಲಿಯೂ ಮತ್ತು ಆ ಮೇಲೆ ಕಲಕತ್ತದಲ್ಲಿಯೂ ಅವರು ಸಂಗೀತ ಕಚೇರಿಗಳನ್ನು ನಡೆಸಿದರು. ಕಲಕತ್ತೆಯಲ್ಲಿ ಪ್ರಸಿದ್ಧವಾದ ಬಂಗಾಳೀ ನಾಟಕದ ನಾಟಕ ಮಂದಿರವನ್ನು ಅವರು ತೆರೆದರು.

ಭಾರತೀಯ ಜನತೆಯ ಅನೇಕ ಭಾಷೆಗಳನ್ನು ಕಲಿತುಕೊಂಡು ಈ ರಶಿಯನ್ ಕಲಾವಿದರು ಈ ನಾಟಕ ಮಂಡಲಿಗೋಸ್ಕರವಾಗಿ ಯುರೋಪಿನ ಲೇಖಕರ ಅನೇಕ ನಾಟಕ ಕೃತಿಗಳನ್ನು ಭಾಷಾಂತರಿಸಿದರು. ಭಾರತದೇಶದಲ್ಲಿ ಅವರು ೧೨ ವರ್ಷಗಳ ಕಾಲ ನೆಲಸಿದ್ದರು. ಕಲಾಕ್ಷೇತ್ರದಲ್ಲಿ ಮಾತ್ರವಷ್ಟೇ ತೊಡಗಿರದೆ ಈ ಅವಧಿಯಲ್ಲಿ ಅವರು ಈ ದೇಶದ ಇತಿಹಾಸವನ್ನೂ, ತತ್ವಶಾಸ್ತ್ರವನ್ನೂ ಮತ್ತು ಪುರಾತನ ಭಾರತೀಯ ಭಾಷೆಗಳನ್ನೂ ಕೂಡ ಅಭ್ಯಾಸಮಾಡಿದರು ಯುರೋಪಿಗೆ ಅವರು ಮರಳಿಬಂದ ತರುವಾಯ, ಭಾರತದೇಶದ ವ್ಯಾಕರಣ ಶಾಸ್ತ್ರದ ಮೇಲೆಯೂ ಮತ್ತು ಭಾರತೀಯ ಸಂಸ್ಕೃತಿಯ ವಿಷಯವಾಗಿಯೂ ಅನೇಕ ಪುಸ್ತಕ ಕೃತಿಗಳನ್ನು ಅವರು ಪ್ರಕಟಿಸಿದರು. ಸೈಂಟ್‌ಪೀಟರ್ಸ್‌ಬರ್ಗ್ ನಗರದಲ್ಲಿ ಪುರಾತನ ಭಾರತೀಯ ಮುದ್ರಾಕ್ಷರಗಳ ಒಂದು ಅಚ್ಚುಕೂಟವನ್ನು ಲೆಬೆದೇವ್‌ರವರು ಸ್ಥಾಪಿಸಿದರು ಮತ್ತು ಭಾರತದೇಶದ ವಿಚಾರಗಳ ಕುರಿತು ಅಧ್ಯಯನದ ಸಲುವಾಗಿ ದೃಢವಾದ ತಳಹದಿಯನ್ನು ಹಾಕಿದರು.

ಭಾರತದೇಶವನ್ನು ಸಂದರ್ಶಿಸಿದ ರಶಿಯನ್ ಯಾತ್ರಿಕರ ಸಂಖ್ಯೆಯು ೧೯ನೆಯ ಶತಮಾನದಲ್ಲಿ ಇನ್ನೂ ಹೆಚ್ಚಾಯಿತು. ಆ ಶತಮಾನದ ಆರನೆಯ ದಶಕದಲ್ಲಿ ಪ್ರಾಚ್ಯಖಂಡದ ಬಗ್ಗೆ ವ್ಯಾಸಂಗ ನಿರತರಾಗಿದ್ದ ಪ್ರತಿಭಾವಂತ ಲೇಖಕರೂ, ಚಿತ್ರಕಾರರೂ ಆಗಿದ್ದ ಎ. ಸಾಲ್ಟಿಯ್‌ಕೋವ್‌ರವರು ಭಾರತದೇಶಕ್ಕೆ ಎರಡು ಸಲ ಭೇಟಿಯನ್ನಿತ್ತರು. ಸಾಲ್ಟಿಯ್‌ಕೋವ್‌ರವರ ಪುಸ್ತಕಗಳಿಂದ ಕಾರ್ಲ್ ಮಾರ್ಕ್ಸ್‌ರವರು ಅನೇಕ ಬಾರಿ ವಿಷಯಗಳನ್ನು ಎತ್ತಿಹೇಳಿದ್ದಾರೆ.

(೧೦ನೇ ಪುಟ ನೋಡಿರಿ)



## ರಾಷ್ಟ್ರೀಕೃತ ವಿಮೋದ್ಯಮ

# ಸರಕಾರದಿಂದ ನೇಮಿತವಾದ ಕೋರ್ಪೊರೇಶನು

### ಪಾಲಿಸಿದಾರರಿಗೆ ಭರವಸೆ

ಭಾರತದ ಜೀವವಿಮಾ ಇತಿಹಾಸದಲ್ಲಿ ೧೯೫೬ನೇ ಸೆಪ್ಟೆಂಬರ್ ಒಂದನೆಯ ತಾರೀಖು ಮುಖ್ಯವಾದ ದಿನವಾಯಿತು. ಏಕೆಂದರೆ ಅಂದು, ಭಾರತದ ಜೀವವಿಮಾ ಕಾರ್ಪೊರೇಷನ್ ತನ್ನ ಸೇವಾ ಕೆಲಸವನ್ನು ಆರಂಭಿಸಿತು.

ವಿಶ್ವದ ಜೀವವಿಮಾ ಕ್ಷೇತ್ರಗಳಲ್ಲಿ ಕೈಗೊಂಡಿರುವ ವಿಧಾನಗಳಲ್ಲೆಲ್ಲಾ ಇದು ಅದ್ವಿತೀಯವೆನಿಸಿದೆ. ಏಕೆಂದರೆ, ಜೀವವಿಮೆಯ ಇಡೀ ವ್ಯವಹಾರವು ಒಂದೇ ಒಂದು ಕಾರ್ಪೊರೇಷನ್ ಮೂಲಕ ಕೇವಲ ಕೆಲವೇ ರಾಷ್ಟ್ರಗಳಲ್ಲಿ ನಡೆಯುತ್ತಿದೆ.

ಭಾರತಕ್ಕೆ ಚಿರಂತನ ಉಪಯೋಗ ದೊರೆಯುವ ಹಾದಿಯಲ್ಲಿ ಇದೊಂದು ಮಹತ್ತರವಾದ ಹೆಜ್ಜೆಯೆನ್ನಬಹುದು. ಇದಕ್ಕಾಗಿ ದೇಶದ ಎಲ್ಲಾ ದರ್ಜೆಯ ವಿಮಾ ಕೆಲಸಗಾರರು ಪೂರ್ಣ ನಿಷ್ಠೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸುವುದು ಆಗತ್ಯ.

೧೯೫೬ನೇ ಜನವರಿ ೧೯ರಂದು ಸರಕಾರದವರು ಜೀವವಿಮಾ (ಜರೂರಾತಿ ನಿಯಮ) ವಿಶೇಷಾಜ್ಞೆಯನ್ನು ಹೊರಡಿಸಿ, ಎಲ್ಲಾ ಜೀವವಿಮಾ ಕಂಪೆನಿಗಳನ್ನು ಸರಕಾರದ ಆಡಳಿತಕ್ಕೆ ಅಧೀನಪಡಿಸಲಾಯಿತು.

ಹೀಗೆ ಭಾರತ ಸರಕಾರದವರು ೨೪೦ ವಿಮಾ ಕಂಪನಿಗಳ ಹಾಗೂ ಸುಮಾರು ೭೦ ಪ್ರಾವಿಡೆಂಡ್ ಸಂಸ್ಥೆಗಳ ತಾತ್ಕಾಲಿಕ ಆಡಳಿತವನ್ನು ವಹಿಸಿಕೊಂಡರು. ಈ ವ್ಯವಹಾರದಲ್ಲಿ ೧೨೫೦ ಕೋಟಿ ರೂಪಾಯಿಗಳು ತೊಡಗಿದ್ದುವು; ಒಟ್ಟು ೩೮೦ ಕೋಟಿ ರೂಪಾಯಿಗಳ ನಿಧಿಯಿದ್ದಿತು.

ಈ ಕಂಪೆನಿಗಳ ಆಡಳಿತವನ್ನು ದಕ್ಷತೆಯಿಂದ ನಡೆಸುವ ಜವಾಬ್ದಾರಿ ಸರಕಾರದ ಪಾಲಿಗೆ ಬಂದಿತು. ವಿಶೇಷಾಜ್ಞೆಯ ಪ್ರಕಾರ ಜೀವವಿಮಾ ಕಂಪೆನಿಗಳ ಆಡಳಿತವಷ್ಟೇ ಸರಕಾರದ ಅಧೀನವಾಯಿತು; ಕಂಪೆನಿಗಳ ಸ್ವಾಮ್ಯವಲ್ಲ. ಆದ್ದರಿಂದ ಈ ಕಂಪೆನಿಗಳನ್ನು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿ ಮುಂದುವರಿಸುವುದು ಆಗತ್ಯವೆನ್ನಿಸಿತು.

ಈ ಉದ್ದೇಶದಿಂದಾಗಿ, ಸರಕಾರದ ಪರವಾಗಿ ಆಡಳಿತವನ್ನು ನಡೆಸಲು 'ಕಸ್ಟೋಡಿಯನ್ನ'ರನ್ನು ನೇಮಿಸಲಾಯಿತು. ಕೆಲವು ಕಂಪೆನಿಗಳು ದಿವಾಳಿತೆಗೆ ಹೋಗುವ ಸ್ಥಿತಿಯಲ್ಲಿದ್ದವು. ಅವುಗಳ 'ಕ್ಲೈಂ'ಗಳನ್ನು ಯಾವ ಆಧಾರದ ಮೇಲೆ ಬಗೆಹರಿಸಬೇಕೆಂಬುದನ್ನು ಆಲೋಚಿಸಬೇಕಾಯಿತು. ಇತರ ಕಂಪೆನಿಗಳ ಲೇಣಿ ದೇಣಿಗಳನ್ನೂ ಪರಿಶೀಲಿಸಬೇಕಾಯಿತು. ಈ ಮಧ್ಯಂತರ ಕಾಲದಲ್ಲಿ ಇಂತಹ ಕ್ಲಿಷ್ಟತಮ ಕೆಲಸಗಳನ್ನು ಸಮರ್ಪಕವಾದ ರೀತಿಯಲ್ಲಿ ನಡೆಸಲಾಗಿದೆ ಎಂಬುದು ಸಂತೋಷದ ವಿಷಯ.

ಅನಂತರ ಪಾರ್ಲಿಮೆಂಟಿನಲ್ಲಿ ವಿಶೇಷಾಜ್ಞೆಯನ್ನು ಸಮಾಲೋಚಿಸಿ, ಸರಕಾರದವರು ಕೈಗೊಂಡಿರುವ ಕ್ರಮವು ಸರಿಯಾಗಿದೆಯೆಂದು ಅಭಿಪ್ರಾಯವಿತ್ತು ಅದನ್ನು ಸಮರ್ಥನೆ ಮಾಡಲಾಯಿತು. ಆದಾದ ಮೇಲೆ, ಜೀವವಿಮಾ ಕಾರ್ಪೊರೇಷನ್ ಮಸೂದೆಯು, ಕಾನೂನಾಗಿ ರೂಪುಗೊಂಡು, ವಿಶೇಷಾಜ್ಞೆಯ ಸ್ಥಾನವನ್ನು ಪಡೆದು ಜಾರಿಗೆ ಬಂದಿತು.

ಪಾರ್ಲಿಮೆಂಟಿನವರು ಅನುಮೋದಿಸಿದ ಜೀವವಿಮಾ ಕಾರ್ಪೊರೇಷನ್ನಿನ ಕಾನೂನನ್ನು ಅನುಷ್ಠಾನಕ್ಕೆ ತರುವುದು ಸರಕಾರದ ಮುಂದಿನ ಕೆಲಸವಾಯಿತು. ಸರಕಾರದವರು ನಿಶ್ಚಯಗೊಳಿಸಿರುವ ದಿನದಂದು ಈ ಕಾರ್ಪೊರೇಶನ್ ಸ್ಥಾಪನೆಯಾಗಬೇಕೆಂದು ಈ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿತ್ತು.

ಅದರಂತೆ ಇದೇ ಸಪ್ಟೆಂಬರ್ ೧ನೆಯ ತಾರೀಖು ಜೀವವಿಮಾ ಕಾರ್ಪೊರೇಶನ್ ಸ್ಥಾಪನೆಯಾಯಿತು. ಈ ಅವಧಿಯಲ್ಲಿ ಕಾರ್ಪೊರೇಷನ್ನಿನ ಪ್ರಾದೇಶಿಕ ಕಛೇರಿ ಇತ್ಯಾದಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಿ ನಿರ್ಧಾರಗಳನ್ನು ಕೈಗೊಳ್ಳಲಾಯಿತು

ಜೀವ ವಿಮಾ ಕಾರ್ಪೊರೇಶನಿನ ಕಾನೂನಿನಲ್ಲಿಯೇ ಐದು ಪ್ರಾದೇಶಿಕ ಕಾರ್ಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಇವು ಮುಂಬೈ, ಕಲ್ಕತ್ತಾ, ಮದರಾಸು, ದೆಹಲಿ ಮತ್ತು ಕಾನ್ಪುರಗಳಲ್ಲಿರುವುವು. ಇವುಗಳ ಅಧೀನ ವಿಭಾಗ ಕಛೇರಿಗಳನ್ನು ಎಲ್ಲೆಲ್ಲಿ ತೆರೆಯಬೇಕು ಎಂಬ ವಿಷಯವನ್ನು ಬಹಳ ಎಚ್ಚರಿಕೆಯಿಂದ ವಿಚಾರ ಮಾಡಲಾಯಿತು. ಏಕೆಂದರೆ, ಅವುಗಳ ಕಾರ್ಯ ವಿಮಾ ಕಂಪೆನಿಗಳ ಪ್ರಧಾನ ಕಛೇರಿಗಳ ಕಾರ್ಯಕಲಾಪಗಳ ರೀತಿಯಲ್ಲಿಯೇ ಇರುವುದು.

ಆರಂಭದಲ್ಲಿ ದೇಶದಾದ್ಯಂತ ೩೩ ವಿಭಾಗ ಕಛೇರಿಗಳಿರುವುವು. [ಕರ್ನಾಟಕದಲ್ಲಿ ಉಡುಪಿ ಮತ್ತು ಬೆಂಗಳೂರು ಈ ನಗರಗಳಲ್ಲಿ ಒಂದೊಂದು ವಿಭಾಗ ಕಾರ್ಯಾಲಯವನ್ನು ತೆರೆಯಲಾಗಿದೆ— ಸಂ. ನ.] ಅವುಗಳ ಅಧೀನದಲ್ಲಿ ಹಳೆಯ ೧೮೦ ಜೀವ ವಿಮಾ ಕಂಪೆನಿಗಳು ಇರುವುವು. ವಿಮಾ ಪಾಲಿಸಿದಾರರು ಎಲ್ಲಿ ವಾಸಿಸುತ್ತಿದ್ದರೂ, ಈ ಕಾರ್ಪೊರೇಷನ್ನಿನ ಯಾವುದಾದರೊಂದು ವಿಭಾಗ ಕಛೇರಿಗೆ ಅತಿ ದೂರದಲ್ಲಿರದಂತೆ ಈ ಕಛೇರಿಗಳನ್ನು ವ್ಯವಸ್ಥೆ ಮಾಡಲಾಗಿದೆ. ಈ ವ್ಯವಸ್ಥೆಯಿಂದ ಪಾಲಿಸಿದಾರರಿಗೆ, ವಿಳಂಬರಹಿತವಾದ, ಸಮರ್ಪಕವಾದ ಸೇವೆ ದೊರೆಯುವುದೆಂದು ಆಶಿಸಲಾಗಿದೆ.

ಈ ಕಛೇರಿಗಳನ್ನು ಸ್ಥಾಪಿಸುವ ಮುನ್ನ ಅಗತ್ಯವಾದ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ, ಈ ಕಛೇರಿಗಳಿಗೆ ಸಂಬಂಧಪಟ್ಟ ನಿಯಮಗಳನ್ನು ರಚಿಸಲಾಗಿದೆ. ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಲೆಖ್ಖಪತ್ರಗಳ ವಿಧಾನವನ್ನು ಸಿದ್ಧಗೊಳಿಸಲಾಗಿದೆ. ಉಳಿದ ನಮೂನೆಗಳನ್ನು ಪರಿಷ್ಕರಿಸಲಾಗಿದೆ.

ಈಗ ಸುಮಾರು ೫೦ ಲಕ್ಷ ಪಾಲಿಸಿಗಳು ಚಾಲ್ತಿಯಲ್ಲಿವೆ. ಇಲ್ಲಿಯವರೆವಿಗೂ ವಿಮಾ ಸಂಸ್ಥೆಗಳ ಕಾರ್ಯವು ಕೇಂದ್ರೀಕೃತವಾಗಿತ್ತು. ಎಲ್ಲ ಕೆಲಸವನ್ನೂ ಪ್ರಧಾನ ಕಚೇರಿಗಳಲ್ಲಿಯೇ ನಿರ್ವಹಿಸಲಾಗುತ್ತಿತ್ತು. ಶಾಖೆಗಳು ಹೊಸದಾಗಿ ವ್ಯವಹಾರ ತರುವ ಕಾರ್ಯದಲ್ಲಿ ನಿರತವಾಗಿದ್ದವು.

ಈ ಹಿಂದೆಯೇ ತಿಳಿಸಿದಂತೆ, ಇನ್ನು ಮುಂದೆ ವಿಭಾಗ ಕಾರ್ಯಾಲಯಗಳು, ಪಾಲಿಸಿಗಳ ವಿಚಾರದಲ್ಲಿ ಸೇವೆ ಸಲ್ಲಿಸುವುದು ಸರಕಾರದ ಉದ್ದೇಶವಾಗಿದೆ. ಆದ್ದರಿಂದ ಇದುವರೆಗೆ ೩೫೦ ಚಿಲ್ಲರೆ ವಿಮಾ ಸಂಸ್ಥೆಗಳಿಗೆ ಸೇರಿದ್ದ ದಾಖಲೆ ಪತ್ರಗಳಲ್ಲಿ ಪ್ರತಿಯೊಂದನ್ನೂ ಆಯಾ ವಿಭಾಗದ ಪ್ರಕಾರ ವಿಂಗಡಿಸುವ ಮಹತ್ಕಾರ್ಯವನ್ನು ಎಸಗಬೇಕಾಯಿತು. ಪ್ರತಿಯೊಂದು ಖಾತೆಯನ್ನೂ ಪ್ರತಿಯೊಂದು ರಜಿಸ್ಟರನ್ನೂ ಪರಿಶೀಲಿಸಿ ಪಾಲಿಸಿದಾರರು ವಾಸಿಸುವ ಪ್ರದೇಶಗಳಲ್ಲಿರುವ ವಿಭಾಗ ಕಾರ್ಯಾಲಯಗಳ ಪ್ರಕಾರ ನೂತನ ಖಾತೆಗಳನ್ನೂ, ರಿಜಿಸ್ಟರುಗಳನ್ನೂ ಸಿದ್ಧಗೊಳಿಸಬೇಕಾಯಿತು.

ಈ ಕಾರ್ಯಕ್ಕೆ ಕೆಲವು ತಿಂಗಳು ಬೇಕಾಯಿತು. ವಿಭಾಗಗಳಿಗೆ ಸಂಬಂಧಪಟ್ಟ ವಿಚಾರದಲ್ಲಿ ನಿರತರಾಗಿರುವ ಉದ್ಯೋಗಿಗಳೊಂದಿಗೆ ಖಾತೆಗಳನ್ನು ವರ್ಗಾಯಿಸಲಾಗುವುದು. ಹಿಂದಿನ ವಿಮಾ ಸಂಸ್ಥೆಗಳ ಪ್ರಧಾನ ಕಾರ್ಯಾಲಯಗಳನ್ನು ಸೂಕ್ತ ರೀತಿಯಲ್ಲಿ ಒಟ್ಟುಗೂಡಿಸಿ "ಸರ್ವೀಸ್ ಯೂನಿಟ್"ಗಳನ್ನಾಗಿ ವ್ಯವಸ್ಥೆಗೊಳಿಸಲಾಗುವುದು. ಪಾಲಿಸಿದಾರರಿಗೆ ಪೂರ್ಣ ಸೇವೆ ಸಲ್ಲಿಸುವ ಬಗ್ಗೆ ಏರ್ಪಾಟುಗಳನ್ನು ಆದಷ್ಟು ಜಾಗ್ರತೆಯಾಗಿ ವಿಭಾಗ ಕಾರ್ಯಾಲಯಗಳಿಗೆ ಇವು ವಹಿಸಿಕೊಡುವುವೆಂದು ಆಶಿಸಲಾಗಿದೆ.

ಹೊಸ ವ್ಯವಹಾರದ ವಿಚಾರದಲ್ಲಿ, ವಿಭಾಗ ಕಚೇರಿಗಳು ಪ್ರಾರಂಭದಿಂದಲೇ


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಬಿ. ಎಂ. ಎ.


## TENDER NOTICE.

Sealed tenders are invited by the undersigned from the registered contractors up to 4 P. M. on 8—9—56 (Saturday) for the works shown below. (To be executed at the temple)

The tenders should be sent in sealed cover, accompanied by a chalan in token of having remitted the prescribed Earnest Money Deposit into the temple treasury. Intending tenderers can peruse the estimate in the office of the undersigned during the office hours on any working day. Tenderers, or their authorised agents may be present in the office of the undersigned at 4—15 P. M. on 8—9—1956 when the tenders will be opened. The undersigned reserves to himself the right of rejecting any tender, without assigning reasons therefor.

| Name of work. | Amount of estimate | Earnest money deposit. |
|---|---|---|
| 1) Constructing quarters for the Teachers of Sri Ananthapadmanabha Temple Aided Ele. School. Perdoor, Udipi Tq. S.K (Wood work not included) | Rs. 1730/- | Rs. 50/- |
| 2) Painting to the Copper roof of the Temple (Eastern Hebbagilu & Valaga Mantapam) | Rs. 500/- | Rs. 20/- |

Perdoor.
Date: 24-8-1956.

K. B. Shetty.
*Executive Officer.*
Sri Ananthapadmanabha Temple
Perdoor, Udipi Tq., S. Kanara.

## ರಾಷ್ಟ್ರೀಕೃತ ವಿಮೋದ್ಯಮ

ಸೇವೆ ಸಲ್ಲಿಸಲು ತೊಡಗುವುವು. ಆದ್ದರಿಂದ ಕೆಲವು ಉದ್ಯೋಗಿಗಳನ್ನು ನಗರಗಳಿಂದ ವಿಭಾಗ ಕೇಂದ್ರಗಳಿಗೆ ವರ್ಗಾಯಿಸಬೇಕಾಗಿದೆ. ಕೆಲವು ಉದ್ಯೋಗಿಗಳು ಈಗಾಗಲೇ ಸಂಬಂಧಪಟ್ಟ ಸ್ಥಳಗಳಿಗೆ ತೆರಳಿದ್ದಾರೆ. ಉಳಿದವರು ವಿಕೇಂದ್ರೀಕರಣವು ಪೂರ್ಣಗೊಂಡ ಬಳಿಕ ತೆರಳುವರು

ಉದ್ಯೋಗಿಗಳಿಗೆ ಸಂಬಂಧಿಸಿದ ಸಮಸ್ಯೆಯು ಜಟಿಲವಾಗಿದೆ. ಪೂರ್ಣ ಕಾಲದ ಉದ್ಯೋಗಿಗಳ ಸಂಖ್ಯೆ ಸುಮಾರು ೨೭ ಸಹಸ್ರದಷ್ಟಿದೆ. ಇವರಲ್ಲಿ ಅಧಿಕಮಂದಿ ಮುಂಬೈ, ಕಲ್ಕತ್ತಾ, ಮದರಾಸ್ ಹಾಗೂ ದೆಹಲಿ ನಗರಗಳಲ್ಲಿ ಕೆಲಸಮಾಡುತ್ತಿರುವರು.

ಉತ್ತರ ಪ್ರದೇಶ ಹಾಗೂ ನಿಯೋಜಿತ ಮಧ್ಯಪ್ರದೇಶಗಳನ್ನೊಳಗೊಂಡ ಕೇಂದ್ರ ಪ್ರದೇಶದಲ್ಲಿ ಕೇವಲ ಕೆಲವೇ ಪ್ರಧಾನ ಕಾರ್ಯಾಲಯಗಳಿದ್ದವು. ಈ ಕ್ಷೇತ್ರದಲ್ಲಿ ಪ್ರಧಾನ ಕಾರ್ಯಾಲಯಗಳಲ್ಲಿ ತರಬೇತಿಪಡೆದ ಸಿಬ್ಬಂದಿಯವರ ಸಂಖ್ಯೆ ಅತ್ಯಲ್ಪ. ಆದರೆ ಇಡೀ ರಾಷ್ಟ್ರದ ವ್ಯವಹಾರದಲ್ಲಿ ಅರ್ಧಕ್ಕೂ ಹೆಚ್ಚಿನದನ್ನು ನಿರ್ವಹಿಸುತ್ತಿರುವ ಮುಂಬೈನಲ್ಲಿ ಹೊಸ ಪರಿಸ್ಥಿತಿಯ ಪ್ರಕಾರ ಉದ್ಯೋಗಿಗಳು ಹೆಚ್ಚುವರಿಯಾಗಿರುವರು. ಆದ್ದರಿಂದ ಮುಂಬೈನಿಂದ ಕೇಂದ್ರ ಕ್ಷೇತ್ರಕ್ಕೆ ಉದ್ಯೋಗಿಗಳನ್ನು ವರ್ಗಾಯಿಸುವುದು ಅನಿವಾರ್ಯವಾಗಿ ಪರಿಣಮಿಸಿದೆ.

ವಿಭಾಗ ಹಾಗೂ ಶಾಖಾ ಕಾರ್ಯಾಲಯಗಳಿಗೆ ಸ್ಥಳಾವಕಾಶವನ್ನು ಒದಗಿಸುವುದೊಂದು ಸಮಸ್ಯೆಯಾಗಿ ಪರಿಣಮಿಸಿತು. ಈ ತೊಂದರೆಯನ್ನು ವಿಶೇಷ ಜಾಗ್ರತೆ ವಹಿಸಿ ನಿವಾರಿಸಲಾಗಿದೆ; ಮತ್ತು ಕಾರ್ಪೊರೇಶನಿನ ಕಾರ್ಯಾರಂಭಕ್ಕೆ ಸ್ಥಳಾಭಾವವು ಆತಂಕವಾಗದಂತೆ ನೋಡಿಕೊಳ್ಳಲಾಗಿದೆ.

ವಿವಿಧ ವಿಮಾ ಸಂಸ್ಥೆಗಳಲ್ಲಿ ವಿವಿಧ ವೇತನಗಳನ್ನು ಪಡೆಯುತ್ತಿರುವ ಉದ್ಯೋಗಿಗಳನ್ನು ಒಂದು 'ಕೇಡರ್'ಗೆ ಅನ್ವಯಿಸುವ ಸಂಬಂಧವಾದ ವಿಚಾರವು ಕಠಿಣ ಸಮಸ್ಯೆಯಾಗಿ ಪರಿಣಮಿಸಿದೆ. ಎಲ್ಲ ರೀತಿಯಲ್ಲಿಯೂ ನ್ಯಾಯೋಚಿತವಾಗಿ ವರ್ತಿಸುವುದು ಸರಕಾರದ ಗುರಿಯಾಗಿದೆ. 'ಅಧಿಕಾರ ಜ್ಯೇಷ್ಠತೆ ಪಟ್ಟಿ"ಗಳನ್ನು ಸಿದ್ಧಗೊಳಿಸುವ ವಿಚಾರವನ್ನು ಕೆಲವು ಸ್ವತಂತ್ರ ಸಮಿತಿಗಳಿಗೆ ಒಪ್ಪಿಸಲಾಗಿದೆ.

ಕಾರ್ಪೊರೇಷನ್ನಿನ ಉದ್ಯೋಗಿಗಳಿಗೆ ಒಂದು ಮನವಿ ಮಾಡಿಕೊಳ್ಳಬೇಕಾಗಿದೆ. ಅದೇನೆಂದರೆ, ಉದ್ಯೋಗಿಗಳ ಕಾರ್ಯನಿಷ್ಠೆ ಹಾಗೂ ಸಹಕಾರದ ಮೇಲೆಯೇ ಕಾರ್ಪೊರೇಷನ್ನಿನ ಪ್ರಗತಿಯು ಅವಲಂಬಿಸಿದೆ. ಈ ರೀತಿಯ ಕ್ರಾಂತಿಕಾರಿ ಕ್ರಮ ಕೈಗೊಂಡಾಗ ಕಾರ್ಪೊರೇಷನ್ನಿನಂತಹ ಅಗಾಧವಾದ ಸಂಸ್ಥೆಯಲ್ಲಿ ಕೆಲಸಮಾಡುವ ಕೆಲವು ಉದ್ಯೋಗಿಗಳಿಗೆ ಧಕ್ಕೆಯುಂಟಾಗುವುದು ಅನಿವಾರ್ಯ. ಅನಾನುಕೂಲಗಳನ್ನು ಆದಷ್ಟು ಕಡಿಮೆ ಮಾಡುವ ವಿಚಾರದಲ್ಲಿ ಸರ್ವ ಪ್ರಯತ್ನಮಾಡಲಾಗುವುದು.

ವಿವಿಧ ವಿಮಾ ಸಂಸ್ಥೆಗಳಲ್ಲಿ ವಿವಿಧ ರೀತಿಯ ಸಂಬಳ ಸಾರಿಗೆಗಳಿವೆ. ಅವುಗಳನ್ನು ಸಮನ್ವಯಗೊಳಿಸದೆ ಗತ್ಯಂತರವಿಲ್ಲ. ಇಂದಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ಏಕ ರೀತಿಯ ಸಂಬಳ ಸಾರಿಗೆಗಳನ್ನು ಜ್ಯಾರಿಗೆ ತರುವುದು ಪರಮಾವಶ್ಯಕವಾಗಿ ಪರಿಣಮಿಸಿದೆ.

ಪಾಲಿಸಿದಾರರಿಗೆ ಸೇವೆ ಸಲ್ಲಿಸುವುದು ಜೀವ ವಿಮೆಯ ಉದ್ದೇಶವಾಗಿದೆ. ಪಾಲಿಸಿಯೊಂದನ್ನು ಕೊಡುವುದರಿಂದ ಮಾತ್ರ ಪಾಲಿಸಿದಾರರಿಗೆ ಸೇವೆ ಸಲ್ಲಿಸಿದಂತಾಗುವುದಿಲ್ಲ. ಪಾಲಿಸಿಯೊಂದನ್ನು ಕೊಡುವುದು ಸೇವೆ ಸಲ್ಲಿಸುವ ಕಾರ್ಯದ ಪ್ರಾರಂಭ ಮಾತ್ರ.

“ಯೋಗಕ್ಷೇಮಂ ವಹಾಮ್ಯಹಂ” ಎಂಬ ಗೀತಾ ವಾಕ್ಯವನ್ನು (೯—೨೨) ಕಾರ್ಪೊರೇಷನ್ ಆದರ್ಶವಾಗಿ ಹೊಂದಿರುವುದು ಯಥೋಚಿತವಾಗಿದೆ.

ಕಾರ್ಪೊರೇಷನ್ನಿನ ಉದ್ಯೋಗಿಗಳ ಪ್ರಯತ್ನಗಳನ್ನು ಭಾರತದಲ್ಲಿಯೂ ಹಾಗೂ ವಿದೇಶಗಳಲ್ಲಿಯೂ ಜನರು ತೀವ್ರಾಸಕ್ತಿಯಿಂದ ವೀಕ್ಷಿಸುತ್ತಿರುವರು. ಇಲ್ಲಿಯವರೆವಿಗೂ ಪ್ರಯತ್ನಿಸದೇ ಇದ್ದಂತಹ ಕ್ಷೇತ್ರವೊಂದರಲ್ಲಿ ಈ ರೀತಿಯ ಸಮಾಜವಾದಿ ಸ್ವರೂಪದ ಪ್ರಯೋಗವೊಂದನ್ನು ನಡೆಸುವಾಗ ಕೆಲವು ಸ್ಥಳಗಳಲ್ಲಿ ಸದ್ಭಾವನೆಗಳೂ ಮತ್ತೆ ಕೆಲವು ಸ್ಥಳಗಳಲ್ಲಿ ವ್ಯತಿರಿಕ್ತ ಭಾವನೆಗಳೂ ತಲೆದೋರಬಹುದು.

ಮಹಾಜನರಲ್ಲಿಯೂ ವಿಶೇಷವಾಗಿ ವಿನಂತಿಮಾಡಿಕೊಳ್ಳಬೇಕಾಗಿದೆ. ಕಾರ್ಪೊರೇಷನ್ ಕೊಡುವ ಎಲ್ಲ ಪಾಲಿಸಿಗಳೂ ಹಣ ವಾಪತಿಯ ವಿಚಾರದಲ್ಲಿ ಕೇಂದ್ರ ಸರ್ಕಾರದ ಭರವಸೆಯನ್ನು ಪಡೆದಿರುವುವು. ಅವರ ಹಿತಾಸಕ್ತಿಗಳು ನೂರಕ್ಕೆ ನೂರರಷ್ಟು ಸುಭದ್ರವಾಗಿವೆ. ಸುಭದ್ರತೆಯು ವಿಮಾ ಸಂಸ್ಥೆಯ ದೃಷ್ಟಿಯಿಂದ ಮುಖ್ಯಾಂಶವಾದಾಗ್ಯೂ ಎಲ್ಲ ವರ್ಗದವರ ಅಗತ್ಯಗಳನ್ನು ಪೂರೈಸುವ ವಿಚಾರದಲ್ಲಿ ಕಾರ್ಪೊರೇಷನ್ ಪ್ರಗತಿಪರ ದೃಷ್ಟಿಕೋಣವನ್ನು ಹೊಂದಿರಬೇಕಾಗುವುದು.

ಈ ಗುರಿಯ ಸಾಧನೆಗೆ ಅನೇಕ ಸಂಸ್ಥೆಗಳನ್ನು ವಿಲೀನಗೊಳಿಸುವುದೊಂದು ಕಠಿಣವಾದ ಕೆಲಸ. ಈ ಸಂದಿಗ್ಧ ಕಾಲದಲ್ಲಿ ಮಹಾಜನರು ಯಾವ ರೀತಿಯಲ್ಲಿಯಾದರೂ ತೊಂದರೆಗಳನ್ನು ಅನುಭವಿಸಿದ್ದಾದರೆ ಅವರು ಸರಕಾರವನ್ನು ಮನ್ನಿಸುವಷ್ಟು ಔದಾರ್ಯವನ್ನು ತೋರಿಸಬೇಕಾಗಿದೆ.

ಕಾರ್ಪೊರೇಶನ್ ಟೀಕೆಗಳನ್ನು ಸ್ವಾಗತಿಸುವುದಲ್ಲದೆ ತನ್ನ ಅನೇಕ ಸಮಸ್ಯೆಗಳ ವಿಚಾರದಲ್ಲಿ ತಿಳಿವಳಿಕೆ ಹಾಗೂ ಸಹಾನುಭೂತಿಗಳನ್ನೂ ಅಪೇಕ್ಷಿಸುವುದು. ಕಾರ್ಪೊರೇಶನ್ ಅಗಾಧಕಾರ್ಯವೊಂದನ್ನು ಕೈಗೊಂಡಿದೆ. ಇದರ ಯಶಸ್ಸು ಕಾರ್ಪೊರೇಷನ್ನಿನ ಪ್ರಯತ್ನಗಳು ಹಾಗೂ ಮಹಾಜನರ ಬೆಂಬಲಗಳನ್ನು ಅವಲಂಬಿಸಿರುವುದು.

ಕಾರ್ಪೊರೇಷನ್ನಿನಲ್ಲಿ ವಿಮೆ ಮಾಡುವುದರಿಂದ ಮಹಾಜನರು ನಮ್ಮ ಪಂಚವಾರ್ಷಿಕ ಯೋಜನೆಗಳ ಸಫಲತೆಗೆ ಸಹಾಯ ಮಾಡಿದಂತಾಗುವುದು. ನಿಮಗೆ ನೀವೇ ಸಹಾಯ ಪಡೆಯುವ ಮಾರ್ಗದಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿಯೂ ನೀವು ನೆರವಿತ್ತಂತಾಗುವುದು. ನಮ್ಮಲ್ಲಿ ಒಪ್ಪವಾದ ಆಡಳಿತ ವ್ಯವಸ್ಥೆ ಇದೆ. ನಾವು ಇದನ್ನು ರಚನಾತ್ಮಕ ಹಾಗೂ ರಾಷ್ಟ್ರ ನಿರ್ಮಾಣ ಮಾರ್ಗಗಳಲ್ಲಿ ವಿನಿಯೋಗಿಸಬೇಕು.

[ಮಂತ್ರಿ ಶ್ರೀ ಎಂ. ಸಿ. ಶಹಾರ ಲೇಖನದಿಂದ]

---

### ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P No. 275/1956.
in O. S. No. 362/1955.

ವೆಂಕಮ್ಮ ಹೆಂಗ್ಸು, ಬೆಳ್ಳಿಪ್ಪಾಡಿ ಕೋರಗಪ್ಪ ಯಾನೆ ವೆಂಕಪ್ಪ ರೈಗಳ ಪತ್ನಿ, ಪುತ್ತೂರು ಕಸಬಾ ಗ್ರಾಮ,

—ಅರ್ಜಿದಾರಳು. ವಾದಿಳು.

ಮತ್ತು

ಚೆನ್ನಯ ಹೆಂಗ್ಸು, ತೊಟ್ಲ ಬೆಯ್ಯಕ್ಕ ಹೆಂಗ್ಸಿನ ಮಗಳು ಕುಟುಂಬದ ಯಜಮಾನ್ತಿ ವ ಆಡಳ್ತೆದಾರ್ತಿ, ಪುತ್ತೂರು ತಾಲೂಕು ಆರ್ಯಾಪು ಗ್ರಾಮ,—ಎದ್ರಿಳು, ಪ್ರತಿವಾದಿಳು.

ಪ್ರತಿವಾದಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದ್ರೆ. ವಾದಿ ಅರ್ಜಿದಾರಳು ನಿಮ್ಮ ಮೇಲೆ ಕುಟುಂಬದ ಯಜಮಾನ್ತಿ ವ ಆಡಳ್ತೆದಾರ್ತಿ ನೆಲೆಯಲ್ಲಿ ಪಡೆದ ಮೇಲಿನ ಡಿಕ್ರಿ ಮೇಲೆ ಅರ್ಜಿದಾರಳು ಅಮ್ಲುಜ್ಯಾರಿ ನಡ್ಸಿ, ಅದರಲ್ಲಿ ನಿಮ್ಮ ಕುಟುಂಬದ ಬಾಬ್ತು ಕೆಳಗೆ ಕಾಣ್ಸಿದ ಸ್ಥಿರಾಸ್ತಿಯನ್ನು ಜಪ್ತಿ ಪಡ್ಸಿದ ಕುರಿತು, ಅದಕ್ಕೆ ನಿಮಗೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ಆಕ್ಷೇಪಣೆಗಳನ್ನು ತಾ. 19-9-56ರಲ್ಲಿ ನೀವು ಸ್ವತಹ ವ ವಕೀಲರ ದ್ವಾರ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು.

#### ಜಪ್ತಿಯ ಆಸ್ತಿ ವಿವರ

ಆರ್ಯಾಪು ಗ್ರಾಮದ ಬಾಬ್ತು.

| ಸರ್ವೆ ಸ. ಡಿ. ನಂ. | ಕಿಸಂ. | ವಿಸ್ತೀರ್ಣ |
|---|---|---|
| 120—4 | ನಂಜ | 1—11 |
| 6— | ಡಿ. | 2—80 |
| 3— | ಡಿ. | 8—86 |
| 5— | ಡಿ. | 0—89 |
| 120—6 | ನಂಜ | 0—21 |
| 10— | ಡಿ. | 0—15 |
| 1— | ಬಾ. | 1—77 |
| 8— | ಪುಂಜ | 0—69 |
| 2— | ಡಿ. | 1—27 |
| 121—2 | ಬಾ. | 0—30 |

ವಗೈರೆ ಸರ್ವಾದಿ ಆಸ್ತಿಯಾಗಿರುತ್ತದೆ.

(Sd.) C. S. Shastry,
Vakil for Petitioner.

ಪುತ್ತೂರು, 27—8—56.

---


## ಕುಟುಂಬ ಯೋಜನೆ

ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಭದ್ರವಾದರೆನೇ ನಿಮ್ಮ ಕುಟುಂಬಯೋಜನೆ ಪರಿಪೂರ್ಣವಾಗುವುದು. ಕುಟುಂಬದ ಒಬ್ಬರ ಅಭ್ಯುದಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ. ನಿಮ್ಮ ಮಡದಿ, ಮಕ್ಕಳ ಪ್ರತಿಯೊಬ್ಬರ ಹೆಸರಲ್ಲಿ ಒಂದೊಂದು **‘ಕ್ಯುಮುಲಟಿವ್ ಡಿಪೋಜಿಟ್’** ಲೆಕ್ಕ ತೆರೆದು ಅವರು ಕ್ರಮವಾಗಿ ಉಳಿಸುವಂತೆ ಮಾಡಿರಿ. ಇದಕ್ಕೆ ದೊಡ್ಡ ಮೊಬಲಗು ಬೇಕಾಗಿಲ್ಲ; ಕ್ರಮಬದ್ಧವಾಗಿ ನಿಶ್ಚಿತ ಹಣವನ್ನು ಉಳಿಸುವುದೇ ಮುಖ್ಯ.

ಆದುದರಿಂದ ಈ ಯೋಜನೆಯನ್ನು ಅಂಗೀಕರಿಸಿ ಕುಟುಂಬದೊಂದಿಗೆ ಕುಟುಂಬಯೋಜನೆಯನ್ನು ನೆರವೇರಿಸಿರಿ.

ಒಟ್ಟು ಆರ್ಥಿಕ ಆಸರೆ ರೂ. **9.5** ಕೋಟಿ.

**ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್**

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.


---

## ಇಲ್ಲಿದೆ ಸ್ವಾರಸ್ಯ

### ಕಾರಣ

ವಿದೇಶದ ಪ್ರವಾಸಿಯೊಬ್ಬ ಆ ದೇಶದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿ ಒಂದು ಕ್ರಾಂತಿ ಸಂಭವಿಸಿತು. ಆ ಪ್ರವಾಸಿ ಸ್ಥಳೀಯ ನಾಗರಿಕನೊಬ್ಬನನ್ನು “ನಿಮ್ಮ ದೇಶದಲ್ಲಿ ಮೇಲಿಂದ ಮೇಲೆ ಕ್ರಾಂತಿ ಸಂಭವಿಸುತ್ತಿರುವುದರ ಕಾರಣವೇನು?” ಎಂದು ಕೇಳಿದ.

“ಗೊತ್ತೇ ಇದೆಯಲ್ಲ—ನಮ್ಮಲ್ಲಿ ಇನ್ನೂ ಎಲ್ಲ ಮಹತ್ವಾಕಾಂಕ್ಷಿಗಳೂ ರಾಷ್ಟ್ರಾಧ್ಯಕ್ಷರಾಗಿಲ್ಲ!” ಎಂಬುದೇ ಸ್ಥಳೀಯ ನಾಗರಿಕನಿತ್ತ ವಿವರಣೆ!

೦ ೦

### ಪ್ರಾಮಾಣಿಕ ಅಭಿಪ್ರಾಯ

ಚುನಾವಣೆಯ ಭಾಷಣ ನಡೆಯುವುದೆಂದು ಪ್ರಕಟಿಸಿದ್ದರು. ಅಲ್ಲಿಗೆ ಹೊರಟ ಒಬ್ಬ ಪ್ರತಿಪಕ್ಷದ ಕೆಲಸಗಾರನನ್ನು ನಿಲ್ಲಿಸಿ ಯಾರೋ ಕೇಳಿದರು—“ನೀವು ಮೊದಲೇ ದುರಭಿಪ್ರಾಯಪಟ್ಟುಕೊಂಡಿರುವಾಗ, ಆ ಪಕ್ಷದವರ ವ್ಯಾಖ್ಯಾನದ ಮಹತ್ವ ನಿಮಗೇನು ತಿಳಿದೀತು?”

“ಇಲ್ಲವಲ್ಲ— ನಾನು ಆ ಭಾಷಣಕಾರ ಹೇಳುವುದೆಲ್ಲ ಸುಳ್ಳು ಎಂಬ ಪ್ರಾಮಾಣಿಕ ಅಭಿಪ್ರಾಯವನ್ನಿಟ್ಟುಕೊಂಡೇ ಹೋಗುತ್ತಿದ್ದೇನೆ; ದುರಭಿಪ್ರಾಯವಿಲ್ಲ!”

೦ ೦

### ಪ್ರಸಂಗಾವಧಾನ

ಮೋಟಾರು ಇಳಿಜಾರಿನಲ್ಲಿ ವೇಗವಾಗಿ ಓಡುತ್ತಿದ್ದಾಗ ಡ್ರೈವರ ಬ್ರೇಕು ಹಾಕಲು ನೋಡಿದ; ಆದರೆ ಬ್ರೇಕು ಹತ್ತಲಿಲ್ಲ. “ಅಯ್ಯೋ, ಈಗ ಮಾಡುವುದೇನು? ಬ್ರೇಕೇ ಹತ್ತಬೊಲ್ಲದು!” ಎಂದು ಆತ ಚಡಪಡಿಸಿದ.

ಒಳಗಿದ್ದ ಪ್ರಯಾಣಿಕ ಈ ಬಾಡಿಗೆ ಕಾರಿನಾತನಿಗೆ “ಬ್ರೇಕು ಹತ್ತದಿದ್ದರೆ ಹಾಳಾಗಿ ಹೋಗಲಿ— ಮೀಟಾರು ಕೆಲಸ ಮಾಡುವುದನ್ನಾದರೂ ನಿಲ್ಲಿಸಿಬಿಡು. ಸುಮ್ಮನೆ ದಂಡ ಕೊಡುವುದಾದರೂ ತಪ್ಪೀತು” ಎಂದು ಪ್ರಸಂಗಾವಧಾನತೆಯಿಂದ ನುಡಿದ.

೦ ೦

### ಬುದ್ಧಿವಾದ

ನೆರೆಮನೆಯ ಹೆಂಗಸು ರಾಮರಾಯನ ಮಗನ ವಿಷಯ ದೂರಿಕೊಂಡು “ನಿಮ್ಮ ಹುಡುಗನಿಗೆ ಇನ್ನಾದರೂ ನನ್ನ ಮಾತುಗಳನ್ನು ಅಣಕಿಸಿ ಹೇಳಬಾರದೆಂದು ಬುದ್ಧಿ ಹೇಳಿರಿ” ಎಂದು ಪ್ರಾರ್ಥಿಸಿದಳು.

ಅದಕ್ಕೆ ರಾಮರಾಯರಿಂದ “ಎಷ್ಟೋ ಸಲ ನಾನು ಹೇಳಿಯಾಗಿದೆ, ಮೂರ್ಖರ ಹಾಗೆ ಮಾಡಬೇಡ ಎಂದು ಬುದ್ಧಿ ಹೇಳಿ ನಾನು ಸೋತಿದ್ದೇನೆ” ಎಂದರು—ಸಮಾಧಾನ ಬಂತು.

**NAVAYUGA**

Popular Kannada Weekly

*Founder:—*

**A. B. SHETTY**, *M. L. A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೭-೯-'೫೬ | ೧ |


## ಲೋಕ ಸಹಾಯಕ ಸೇನೆ

ಸಂಸತ್ತಿನ ಲೋಕಸಭೆಯು ಕಳೆದ ೨೮ನೇ ದಿನಾಂಕ "ಸರ್ವಾನುಮತ"ದಿಂದ ಲೋಕ ಸಹಾಯಕ ಸೇನೆಯ ರಚನೆಗೆ ಅವಕಾಶ ಮಾಡಿಕೊಡುವ ಮಸೂದೆಗೆ ಒಪ್ಪಿಗೆಯನ್ನಿತ್ತಿದೆ. ೧೮ರಿಂದ ೪೦ ವರ್ಷಗಳೊಳಗಿನ ಪುರುಷರಿಗೆ ಸೈನಿಕ ಶಿಕ್ಷಣವನ್ನು ಕೊಡುವುದಕ್ಕೆ ಮಸೂದೆಯು ಉದ್ದೇಶಿಸಿದೆ. ಪ್ರತಿ ವರ್ಷವೂ ಒಂದು ಲಕ್ಷ ಪುರುಷರಿಗೆ ಸುಮಾರು ಒಂದು ತಿಂಗಳ ವರೆಗೆ ಸೈನಿಕ ಚಟುವಟಿಕೆಗಳಲ್ಲಿ ತರಬೇತಿಯನ್ನು ಕೊಡಲಾಗುವುದು; ಈ ತರಬೇತಿಯನ್ನು ಕೊಡುವ ಸೇನಾಧಿಕಾರಿಗಳು ತರಬೇತಿಗಾಗಿ ಬಂದ ಸಾಮಾನ್ಯ ನಾಗರಿಕರನ್ನು ಸಹಾನುಭೂತಿಯಿಂದಲೂ ಸ್ನೇಹ ಸೌಜನ್ಯಗಳಿಂದಲೂ ನಡೆಸಿಕೊಳ್ಳುವಂತೆ ನೋಡಲಾಗುವುದು; ಈ ಬಗೆಯ ತರಬೇತಿಯು ಐಚ್ಛಿಕವಾಗಿದ್ದು ಸ್ವಂತ ಅಪೇಕ್ಷೆ ಮತ್ತು ಉತ್ಸಾಹದಿಂದ ಮುಂಬಂದವರಿಗಷ್ಟೇ ಸೈನಿಕ ಶಿಕ್ಷಣ ವನ್ನೀಯಲಾಗುವುದು, ಹೊರತು, ಸರಕಾರವು ಒತ್ತಾಯಪೂರ್ವಕ ಇಂತಹ ತರಬೇತಿಯನ್ನು ಕೊಡಲು ಉದ್ದೇಶಿಸಿಲ್ಲ —ಎಂದು ಮುಂತಾಗಿ ಸಂರಕ್ಷಣಾ ಮಂತ್ರಿಗಳಾದ ಡಾ. ಕೈಲಾಸನಾಥ ಕಟಜೂರವರು ವಿವರಿಸಿದರು. ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರೂ ಸರಕಾರದ ಈ ಕ್ರಮವನ್ನು ಹೃತ್ಪೂರ್ವಕ ಸ್ವಾಗತಿಸಿದ್ದಾರೆ. ಪಂಡಿತ ಠಾಕೂರದಾಸ ಭಾರ್ಗವರು ಯುರೋಪಿನ ಚಿಕ್ಕ ರಾಷ್ಟ್ರವಾದ ಸ್ವಿಜರಲೇಂಡಿನ ನಿದರ್ಶನವನ್ನು ಎತ್ತಿ ಹೇಳುತ್ತಾ ಅಲ್ಲಿ ಯಾವಾಗ ಬೇಕೆಂದರೆ ಆಗ, ಕೇವಲ ಕೆಲ ತಾಸುಗಳ ಅವಧಿಯೊಳಗೆ, ಐದು ಲಕ್ಷದಷ್ಟು ಸೈನಿಕ ತರಬೇತಿಯನ್ನು ಹೊಂದಿದ ಸ್ತ್ರೀ ಪುರುಷರನ್ನು ಒಟ್ಟು ಸೇರಿಸಿ ಗಂಡಾಂತರ ಕಾಲದಲ್ಲಿ ದೇಶದ ರಕ್ಷಣೆ ಮತ್ತಿತರ ಅವಸರದ ಕಾರ್ಯಗಳಿಗೆ ಅವರ ಸಹಾಯವನ್ನು ಪಡೆಯುವ ವ್ಯವಸ್ಥೆ ಇದೆ ಎಂದರು; ಭಾರತದಲ್ಲಿಯಾದರೂ ಸೈನಿಕ ಶಿಕ್ಷಣ ಕೊಡುವ ಕಾರ್ಯಕ್ರಮವನ್ನು ಇದೇ ರೀತಿಯಲ್ಲಿ ಸಂಘಟಿಸಬೇಕೆಂದೂ ತುರ್ತಿನ ವೇಳೆ ಒಂದು ಕೋಟಿ ಪುರುಷರು ಸೈನಿಕ ಸಮವಸ್ತ್ರವನ್ನು ತೊಟ್ಟು ದೇಶಕ್ಕಾಗಿ ಹೋರಾಡಲು ಸಿದ್ಧರಿರುವಂತೆ ಮಾಡಲು ಸರಕಾರವು ಪ್ರಯತ್ನಶೀಲವಾಗಬೇಕೆಂದೂ ಅವರು ಸಲಹೆಯನ್ನಿತ್ತರು. ಡಾ. ಸುರೇಶ್ಚಂದ್ರ ಎಂಬ ಇನ್ನೊಬ್ಬ ಸದಸ್ಯರು ಈ ಮಸೂದೆಯು ಸೈನಿಕ ಶಿಕ್ಷಣವನ್ನು ಕೊಡುತ್ತಿದೆ ಎನ್ನುವುದಕ್ಕಿಂತಲೂ ತರುಣರಲ್ಲಿ ಶಿಸ್ತನ್ನುಂಟುಮಾಡುವುದಕ್ಕೆ ವಿಶೇಷ ಸಹಕಾರವನ್ನು ಕೊಡುವುದೆಂಬುದೇ ಯೋಗ್ಯವಾದ ವಿಚಾರ ಎಂದರು; ಹಿಟ್ಲರನ ಜರ್ಮನಿಯಲ್ಲಿ ತರುಣರೇ ರಾಷ್ಟ್ರದ ಜೀವಾಳವಾಗಿದ್ದರು; ಅವರು ಅತ್ಯುತ್ತಮ ಸಿಗಳೂ ಧೈರ್ಯವುಳ್ಳವರೂ ಶಿಸ್ತನ್ನು ಹೊಂದಿದವರೂ ಆಗಿದ್ದರು—ಎಂಬುದಾಗಿ ಅವರು ನೆನಪಿಗೆ ತಂದು ಕೊಟ್ಟರು. ಅನೇಕ ಸದಸ್ಯರು ತರಬೇತಿಯನ್ನು ಹೊಂದಲು ಅರ್ಹರಾದ ಪುರುಷರ ವಯೋಮಿತಿಯನ್ನು ೧೮ರಿಂದ ೫೦ ವರ್ಷಕ್ಕೆ ಏರಿಸಲು ಸೂಚಿಸಿದರು–ಮಹಿಳಾ ಸದಸ್ಯೆಯರು ಪುರುಷರಿಗೆ ಮಾತ್ರ ಈ ಬಗೆಯ ಸೈನಿಕ ಶಿಕ್ಷಣ ಕೊಟ್ಟರೆ ಸಾಲದು; ಸ್ತ್ರೀಯರಿಗೂ ಈ ತರಬೇತಿಯನ್ನು ಹೊಂದಿ ದೇಶ ಸೇವೆ ಮಾಡಲು ಅವಕಾಶವಿರಬೇಕು ಎಂದು ಬಲವಾಗಿ ವಾದಿಸಿದರು. ಹೀಗೆ ಈ ಮಸೂದೆಗೆ ವಿಶೇಷವಾದ ಅನುಮೋದನೆಯು ಲೋಕ ಸಭೆಯಲ್ಲಿ ದೊರಕಿಯಿತು. ಭಾರತವು ದುರ್ಬಲವಾದ ರಾಷ್ಟ್ರವಾಗಬಾರದು; ಶಿಸ್ತಿನ ನಡವಳಿಕೆ ಎಂದರೆ ಏನೆಂದು ತಿಳಿದಿರದ ಹುಂಬರಬೀಡಾಗಬಾರದು—ಎಂದೆನ್ನುವವರೆಲ್ಲರೂ ನಮ್ಮ ನಾಗರಿಕರಿಗೆ ಸೈನಿಕ ತರಬೇತಿಯನ್ನು ಕೊಡುವ ಉಪಕ್ರಮವನ್ನು ನಿಶ್ಚಯವಾಗಿಯೂ ಸ್ವಾಗತಿಸುವರೆಂದು ಹೇಳಬಹುದು. ಭಾರತದ ನಿವೃತ್ತ ಸೇನಾಪತಿಗಳೂ ಕನ್ನಡ ನಾಡಿನ ಶ್ರೇಷ್ಠ ಸುಪುತ್ರರೂ ಆದ ಜ. ಕರಿಯಪ್ಪನವರು ಕಡ್ಡಾಯದ ಸೈನಿಕ ಶಿಕ್ಷಣವನ್ನು ೪೫ ವರ್ಷ ವಯಸ್ಸಿನೊಳಗಿನ ಎಲ್ಲ ನಾಗರಿಕರಿಗೆ ಕೊಡುವುದು ಅತ್ಯಂತ ಅಪೇಕ್ಷಣೀಯವಾದ ವಿಚಾರ ಎಂದಿದ್ದಾರೆ. ದೇಶದಲ್ಲಿಂದು ಅನೈಕ್ಯ, ಅವಿಧೇಯತೆಗಳೇ ತುಂಬಿದ್ದು ಸಂಘಶಕ್ತಿಯು ಅಭಾವವಿದೆ; ಪರಸ್ಪರ ಸಹಕರಿಸಿ ನಡೆಯುವ ಬುದ್ಧಿ ಇಲ್ಲ; ಒಮ್ಮತದಿಂದ ಕೆಲಸ ಮಾಡುವ ಹುಮ್ಮಸ್ಸಿಲ್ಲ. ಇದೆಲ್ಲ ನಿವಾರಣೆಯಾಗಬೇಕಾದರೆ ನಮ್ಮ ಪ್ರತಿಯೊಂದು ಶಾಲೆಯಲ್ಲಿಯೂ ಸೈನಿಕ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ಕೊಡುವುದು ಇಷ್ಟವಾಗಿದೆ. ಸರಕಾರದವರೇ ಇಂತಹ ಶಿಕ್ಷಣವನ್ನು ಕೊಡಲು ವ್ಯವಸ್ಥೆ ಮಾಡಬೇಕೆಂದಿಲ್ಲ; ನಿವೃತ್ತ ಸೈನಿಕರೂ ಸೇನಾಧಿಕಾರಿಗಳೂ ಸೈನಿಕ ತರಬೇತಿ ಕೊಡುವ ಶಿಕ್ಷಕರಾಗಿ ಕೆಲಸ ಮಾಡಬಹುದು ಎಂದು ಕರಿಯಪ್ಪನವರ ಅಭಿಪ್ರಾಯ. ಶಿಸ್ತು, ವಿಧೇಯತೆ ಮತ್ತು ಸಾಮೂಹಿಕ ಸೌಹಾರ್ದ ಭಾವನೆಯನ್ನು ಪೋಷಿಸಲು ಕಡ್ಡಾಯವಾದ ಸೈನಿಕ ಶಿಕ್ಷಣವು ಅವಶ್ಯಕವೆಂದು ಅವರು ಕಂಠೋಕ್ತವಾಗಿ ಹೇಳಿದ್ದಾರೆ. ಸೈನಿಕ ಶಿಕ್ಷಣದ ಉಪಯುಕ್ತತೆಯನ್ನು ಇದರಿಂದ ಮನಗಾಣಬಹುದಾಗಿದೆ. ಸದ್ಯಕ್ಕೆ ಒತ್ತಾಯವನ್ನು ಸರಕಾರವು ಹೊರಿಸಬೇಕೆಂದಿಲ್ಲ — ಸ್ವೇಚ್ಛೆಯಿಂದಲೇ ತರಬೇತಿಗಾಗಿ ಮುಂಬಂದ ಪುರುಷರಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆ ಮಾಡಿರುವುದೇ ಸಾಕು. ಹೀಗೆ ತರಬೇತಿ ಹೊಂದಿದವರ ಸಂಖ್ಯೆ ಹೆಚ್ಚಿಕೊಂಡಂತೆ ಅವರ ಸಂಪರ್ಕದಿಂದ ಉಳಿದ ನಾಗರಿಕರಲ್ಲಿಯೂ ಇಂತಹ ತರಬೇತಿ ಪಡೆಯುವ ಹುಮ್ಮಸ್ಸು ಹುಟ್ಟಬಹುದು; ಹುಟ್ಟುವುದು ಖಂಡಿತವೆಂದೇ ನಮ್ಮ ವಿಶ್ವಾಸ. ಅದಕ್ಕೆ ಕೆಲವು ವರ್ಷಗಳ ಅವಧಿಬೇಕಾಗಬಹುದೆಂಬುದು ನಿಜ-ಆಗ ಕಡ್ಡಾಯದ ಶಿಕ್ಷಣಕ್ಕೆ ಏರ್ಪಾಡು ಮಾಡಬಹುದು; ಕರಿಯಪ್ಪನವರು ಹೇಳಿದಂತೆ ಶಾಲೆಗಳಲ್ಲಿಯೇ ಇಂತಹ ಶಿಕ್ಷಣಕ್ಕೆ ವ್ಯವಸ್ಥೆಯನ್ನು ಏರ್ಪಡಿಸಲೂ ಬಹುದು. ಇದು ನಮ್ಮ ಅಭಿಪ್ರಾಯ.

# ರಶ್ಯದಿಂದ ಅಣ್ವಸ್ತ್ರಗಳ ಸ್ಫೋಟ

## ಕಳೆದ ಒಂದು ವಾರದೊಳಗೆ ಮೂರು ಸಲ ನಡೆಯಿತು

ರಶ್ಯವು ಕಳೆದ ಕೆಲವು ದಿನಗಳಲ್ಲಿ ಮೂರು ಬಾರಿ ಸೈಬೀರಿಯ ಪ್ರದೇಶದಲ್ಲಿ ಅಣ್ವಸ್ತ್ರಗಳ ಸ್ಫೋಟನವನ್ನು ಪ್ರಯೋಗಾರ್ಥವಾಗಿ ನಡೆಸಿದೆ ಎಂದು ತಿಳಿದು ಬರುತ್ತದೆ. ಈ ಸುದ್ದಿಯನ್ನು ಮೊದಲು ಜಗತ್ತಿಗೆ ಬಿತ್ತರಿಸಿದ್ದು ಅಮೇರಿಕ; ಹಿಂದಿನಿಂದ ರಶ್ಯದ ಸರಕಾರವೂ ಅಧಿಕೃತವಾಗಿ ಈ ವರ್ತಮಾನವನ್ನು ಪುಷ್ಟೀಕರಿಸಿದೆ.

### ಸುಯೇಜಿನ ತಂಟೆ

ಸುಯೇಜಿನ ಕಾಲುವೆ ತಂಟೆಯ ಸಂಬಂಧದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವೇನೆಂಬುದನ್ನು ಐಗುಪ್ತದ ಅಧ್ಯಕ್ಷ ನಾಸೇರರಿಗೆ ನಿವೇದಿಸಲು ಆಸ್ಟ್ರೇಲಿಯದ ಪ್ರಧಾನಿ ಮೆಂಜಿಸರ ಅಧ್ಯಕ್ಷತೆಯಲ್ಲಿ ಐದು ರಾಷ್ಟ್ರಗಳ ಸಮಿತಿಯೊಂದು ನೇಮಕವಾಗಿದ್ದಿತು. ಈ ಸಮಿತಿಯು ಈಗ ಕೈರೊವಿಗೆ ಬಂದಿದ್ದು, ನಾಸೇರರೊಡನೆ ಮಾತುಕತೆಯನ್ನು ಪ್ರಾರಂಭಿಸಿದೆ.

### ಭಾರತದ ವಿನಂತಿ

ಐಗುಪ್ತವು ಇಂತಹ ಸಮಿತಿಯನ್ನು ಬರಮಾಡಿಕೊಂಡೀತೆ ಎಂಬ ಸಂಶಯ ಮೊದಲು ಇದ್ದಿತು. ಏಕೆಂದರೆ ಹಾಗೆ ಸಮಿತಿಯನ್ನು ಬರಮಾಡಿಕೊಂಡರೆ ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವನ್ನು ಪರೋಕ್ಷವಾಗಿ ಬೆಂಬಲಿಸಿದಂತಾಗದೆ ಎಂದು ನಿರೀಕ್ಷಕರು ಭಾವಿಸಿದ್ದರು. ಆದರೆ ಭಾರತವು ಶಾಂತಿ ಮತ್ತು ಸಂಧಾನದ ಮೂಲಕವೇ ಈ ವಿವಾದ ಬಗೆಹರಿಯುವುದು ವಿಹಿತವೆಂದು ನಾಸೇರರಿಗೆ ಸಹ ಬೋಧಿಸಿದುದರಿಂದ ಅವರು ಸಮಿತಿಯೊಡನೆ ಸಮಾಲೋಚಿಸಲು ಒಪ್ಪಿಕೊಂಡರು.

### ಚೀನೀ ಪ್ರಧಾನರ ಸಂದರ್ಶನ

ಬರ್ಮಾ ಮತ್ತು ಚೀನಗಳ ಗಡಿಯಲ್ಲಿ ದಟ್ಟವಾದ ಅರಣ್ಯಗಳಿದ್ದು ಅಲ್ಲಿ ಮೇರೆಯನ್ನು ಖಚಿತವಾಗಿ ನಿರ್ಧರಿಸಿಲ್ಲ. ಇದರ ದುರುಪಯೋಗ ಪಡೆದು ಕೆಂಪು ಚೀನದ ನಾಗರಿಕರು ಬರ್ಮದ ಪ್ರದೇಶವನ್ನು ಆಕ್ರಮಿಸಿರುವರೆಂದು ಬರ್ಮಾ ಆರೋಪ ಮಾಡಿದ್ದಿತು; ಮತ್ತು ಕೆಂಪು ಚೀನವು ತನ್ನ ನಾಗರಿಕರನ್ನು ಹಿಂದೆ ಕರೆಸಿಕೊಂಡು ಈ ತಂಟೆಯನ್ನು ಬಗೆಹರಿಸುವಂತೆ ಮಾಡುವಲ್ಲಿ ಭಾರತದ ಸಹಕಾರವನ್ನು ಸಹ ಯಾಚಿಸಿದ್ದಿತು. ಈಗ ಕೆಂಪು ಚೀನದ ಪ್ರಧಾನಿ ಚೂ-ಎನ್-ಲ್ಯಾ ಇದೇ ದಶಂಬರ ತಿಂಗಳಲ್ಲಿ ರಂಗೂನಿಗೆ ಬರುವರೆಂದೂ ಈ ಸಂದರ್ಭವನ್ನು ಹೊಸ ದಿಹಲಿಗೆ ಸಂದರ್ಶನ ನೀಡಲಿಕ್ಕೆ ಕೂಡ ಉಪಯೋಗಿಸುವರೆಂದೂ ವರದಿಯಾಗಿದೆ.

### ಗೇಣಿ ನಿರ್ಣಯ ಮಸೂದೆ

ಮದ್ರಾಸಿನ ಕೃಷಿ ಮಂತ್ರಿಗಳಾದ ಶ್ರೀ ಭಕ್ತವತ್ಸಲಮ್‌ರವರು ಗೇಣಿ ನಿರ್ಣಯ ಮಸೂದೆಯು ಭೂಮಾಲಿಕರ ನಾಶ ಮಾಡಲಿಕ್ಕಾಗಿಯೇ ತರಲ್ಪಟ್ಟಿದೆ ಎಂದು ಭೂಮಾಲಿಕರು ಭಯಪಡಬಾರದು ಎಂದಿದ್ದಾರೆ. ಜಮೀನುದಾರಿ ನಿರ್ಮೂಲನ ಶಾಸನದಿಂದ ಭೂಮಾಲಿಕರಿಗೆ ಹೇಗೆ ಹಾನಿಗಿಂತ ಅಧಿಕ ಲಾಭವಾಯಿತೋ ಅದೇ ಪ್ರಕಾರ ಈ ಶಾಸನದಿಂದಲೂ ಪ್ರಯೋಜನವೇ ಹೆಚ್ಚಿಗೆ ಸಿಗುತ್ತದೆ ಎಂದವರು ತಿಳಿಸಿದ್ದಾರೆ. ಇದೇ ತಿಂಗಳ ಮೂರನೇ ವಾರದಲ್ಲಿ ಮಸೂದೆಯ ಚರ್ಚೆಯಾರಂಭವಾದೀತೆಂದು ಹೇಳಲಾಗಿದೆ. ಅದು ರಾಜ್ಯಗಳ ಪುನಾರಚನೆಗೆ ಮೊದಲೇ ಅಂಗೀಕಾರವಾಗುವುದೇ ಏನೆಂದು ಖಚಿತವಾಗಿ ತಿಳಿದು ಬಂದಿಲ್ಲ.

### ಸೇತುವೆ ಮುರಿದು ದುರಂತ

ಹೈದರಾಬಾದು ರಾಜ್ಯದ ಮೆಹಬೂಬ ನಗರದ ಬಳಿ ರೈಲೊಂದು ಸೇತುವೆಯನ್ನು ದಾಟುತ್ತಿದ್ದಾಗ ಸೇತುವೆಯು ಮುರಿದು ಬಿದ್ದ ಪರಿಣಾಮವಾಗಿ ಸುಮಾರು ೧೧೬ ಮಂದಿ ಮಡಿದರಲ್ಲದೆ ಅನೇಕರು ಜಖಂಗೊಂಡರು. ಹತ್ತಿರದ ಜಲಾಶಯವೊಂದು ಒಡೆದು ಕೆಳಗಿನ ನದಿಯಲ್ಲಿ ನೀರು ಒಮ್ಮೆಲೆ ಏರಿದುದರಿಂದ ಸೇತುವೆ ಮುರಿಯಿತು ಎಂದು ರೈಲ್ವೆಯ ಉಪಮಂತ್ರಿ ಶ್ರೀ ಅಲಗೇಶನ್ನರು ವಿವರಣೆ ಕೊಟ್ಟಿದ್ದಾರೆ. ವಿಧ್ಯುಕ್ತ ವಿಚಾರಣೆಯು ಈಗ ಪ್ರಾರಂಭವಾಗಿದೆಯಲ್ಲದೆ, ದುರಂತದಿಂದ ಹಾನಿಗೀಡಾದವರಿಗೆ ತುರ್ತಿನ ಪರಿಹಾರ ಕೊಡುವ ವ್ಯವಸ್ಥೆಯೂ ಪ್ರಾರಂಭವಾಗಿದೆ.

### ರಾಜ್ಯ ಘಟನೆಗೆ ತಿದ್ದುಪಡಿ

ರಾಜ್ಯಗಳ ಪುನಾರಚನೆಯ ಮಸೂದೆಗೆ ರಾಷ್ಟ್ರಾಧ್ಯಕ್ಷರ ಸಮ್ಮತಿ ದೊರೆತಿದೆ. ಪುನಾರಚನೆಯನ್ನು ಕಾರ್ಯಾಚರಣೆಯಲ್ಲಿಳಿಸಲು ಘಟನೆಗೆ ತಿದ್ದುಪಡಿಯಾಗಬೇಕಾಗಿದ್ದು ಲೋಕ ಸಭೆಯು ಇದಕ್ಕಾಗಿ ಮಂಡಿಸಿದ ಮಸೂದೆಯ ಪರ್ಯಾಲೋಚನೆಯನ್ನು ಪ್ರಾರಂಭಿಸಿದೆ. ಕಾಸರಗೋಡಿನ ಬಗ್ಗೆ ಮಾಡಲಾದ ತೀರ್ಮಾನವನ್ನು ತಗಲಾದರೂ ಬದಲಾಯಿಸಬೇಕೆಂಬ ಉದ್ದೇಶದಿಂದ ಶ್ರೀ ಬಿ. ಶಿವರಾಯರು ಸೂಕ್ತ ತಿದ್ದುಪಡಿಯ ನೋಟೀಸನ್ನು ಕೊಟ್ಟಿದ್ದಾರೆಂದು ವರದಿಗಳು ಹೇಳುತ್ತವೆ. ನಮ್ಮ ಸಂಚಿಕೆ ಓದುಗರ ಕೈಗೆ ಸೇರುವದರೊಳಗೆ ಈ ತಿದ್ದುಪಡಿಗಳ ಗತಿಯು ಸ್ಪಷ್ಟವಾಗಬಹುದು.

### ಢೇಬರರ ಉಪದೇಶ

ರಾಜ್ಯಗಳ ಪುನಾರಚನೆಯ ಪ್ರಶ್ನೆಯಿಂದಾಗಿ ಉದ್ಭೂತವಾದ ಆಂದೋಲನದ ಮನೋಭಾವವು ಕಾಂಗ್ರೆಸಿನ ಶಕ್ತಿಯನ್ನು ಕುಗ್ಗಿಸಿದೆಯೆಂದು ಶ್ರೀ ಢೇಬರರು ಹೇಳಿದ್ದಾರೆ. ಕಾಂಗ್ರೆಸಿನ ಸದಸ್ಯರಲ್ಲಿಯೇ ಒಳಗಿಂದೊಳಗೆ ವೈಮನಸ್ಸು ಮತ್ತು ವಿರೋಧಗಳು ಎದ್ದಿವೆಯೆಂದೂ ಇದು ಪಕ್ಷಕ್ಕಾಗಲೀ ರಾಷ್ಟ್ರಕ್ಕಾಗಲೀ ಪ್ರಯೋಜನಕಾರಿಯಾದುದಲ್ಲವೆಂದೂ ಅವರು ಹೇಳಿದ್ದಾರೆ. ಕಾಂಗ್ರೆಸಿಗರು ಈ ಪರಿಸ್ಥಿತಿಂ

# ಉಡುಪಿ ವಾರ್ತೆ

**ಎಮ್. ಜಿ. ಎಮ್. ಕಾಲೇಜಿನ ಲ್ಲಿಯ** — ಅರ್ಥಶಾಸ್ತ್ರ ಸಂಘವನ್ನು ಕಳೆದ ತಾ. 27ರಲ್ಲಿ ವಿದ್ಯುತ್ ಇಲಾಖೆಯ ನಿವೃತ್ತ ಚೀಫ್ ಎಂಜಿನಿಯರ್ ಶ್ರೀ ಕೆ. ವಾಸುದೇವ ಕಾರಂತರು ಉದ್ಘಾಟಿಸಿ ದ. ಕ. ಜಿಲ್ಲೆಯ ಕೈಗಾರಿಕೆಗಳ ಕುರಿತು ಭಾಷಣವಿತ್ತರು. ಎಚ್. ಸುಂದರರಾಯರು ಸಭಾಧ್ಯಕ್ಷತೆವಹಿಸಿದ್ದರು. ಉಪಾಧ್ಯಕ್ಷ ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಪುರಾಣಿಕರು ವಂದನೆಗಳನ್ನರ್ಪಿಸಿದರು.

**ವಿಟ್ಠಲ ಕಾಮತ್ ಮೆಮೋರಿಯಲ್ ಬಿಲ್ಡಿಂಗ್ ಉದ್ಘಾಟನೆ**— ಭಾರತ ಸೇವಕ ಸಮಾಜದ ನೆರವಿನಲ್ಲಿ ಅಜ್ಜರಕಾಡಿನ ಮೈದಾನದಲ್ಲಿ ಲೈಬ್ರೆರಿ ಮತ್ತು ವಾಚನಾಲಯಕ್ಕಾಗಿ ಕಟ್ಟಿಸಲಾದ ಶ್ರೀ ವಿಠಲ ಕಾಮತ್ ಮೆಮೋರಿಯಲ್ ಕಟ್ಟೋಣವನ್ನು ತಾ. ೨ರಲ್ಲಿ ಜಿಲ್ಲಾ ನ್ಯಾಯಾಧೀಶ ಶ್ರೀ ಎಮ್. ರಾಧಾಕೃಷ್ಣ ಕಿಣಿಯವರು ಉದ್ಘಾಟಿಸಿದರು. ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಡಿ. ನೊರೋನ್ಹಾ, ಅವರು ಸಭಾಧ್ಯಕ್ಷತೆ ವಹಿಸಿದ್ದರು.

ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಮುಖ್ಯ ಅತಿಥಿಗಳಿಗೆ ಪುಷ್ಪಮಾಲಿಕೆಗಳನ್ನಿತ್ತು ಸಂದೇಶಗಳನ್ನೋದಿದರು. ಭಾರತ ಸೇವಕ ಸಮಾಜದ ಜಿಲ್ಲಾ ಕಮಿಶನರ್ ಶ್ರೀ ಟಿ. ಎ. ಪೈ, ಎಮ್. ಎಲ್ ಎ. ಅವರು ಸ್ವಾಗತ ಭಾಷಣಮಾಡುತ್ತಾ ಕಟ್ಟಡದ ಇತಿಹಾಸವನ್ನು ತಿಳಿಸಿ ಕಾಮತರ ಸ್ಮಾರಕದ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಕೊಬ್ಬಿಕಾರ್ ಪದ್ಮನಾಭ ಪೈಗಳು ದಿವಂಗತ ಕಾಮತರ ತೈಲ ಚಿತ್ರವನ್ನು ಅನಾವರಣಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾವ್ ಮತ್ತು ಡಾ. ಟಿ. ಎಮ್. ಎ. ಪೈಗಳು ದಿವಂಗತರ ಕಾರ್ಯದಕ್ಷತೆ, ಧೈರ್ಯ, ಸೇವಾ ಪರತೆಯನ್ನು ವಿವರಿಸಿ ಭಾಷಣಮಾಡಿದರು. ಉದ್ಘಾಟಕರೂ ಸಭಾಧ್ಯಕ್ಷರೂ ದಿವಂಗತರ ಹಿರಿಮೆಯನ್ನು ಪ್ರಸ್ತಾಪಿಸಿ ಅವರ ಸ್ಮಾರಕಾರ್ಥವಾಗಿ ಕಟ್ಟಿಸಿದ ಕಟ್ಟಡವು ಅತ್ಯಂತ ಉಪಯುಕ್ತ ಕಾರಿಯಾಗಲೆಂದು ಬಯಸಿದರು. ಶ್ರೀ ಎ. ಜೆ. ಆಳ್ವೆಯವರು ವಂದನೆಗಳನ್ನರ್ಪಿಸಿದರು. ಇಂದೇ ಸಂದರ್ಭದಲ್ಲಿ ಕಟ್ಟಡವನ್ನು ತ್ವರಿತ ಪರ್ವದಲ್ಲಿ ನಾಜೂಕಾಗಿ ಕಟ್ಟಿಸಿದ್ದ ಕಂಟ್ರಾಕ್ಟರು ಶ್ರೀ ಮುಕೇಶ ಹೆಗ್ಡೆಯವರಿಗೆ ಪಾರಿತೋಷ ಕೊಡಲಾಯಿತು.

**ನಿಷೇಧ ಸಭೆ**— ಉಡುಪಿ ಇಲೆಕ್ಟ್ರಿಕ್ ಇಂಜಿನು ಮೊದಲಾದುವನ್ನು ಮದ್ರಾಸು ಸರಕಾರವು ಇಲ್ಲಿಂದ ಒಯ್ಯುವ ಧೋರಣೆಯನ್ನು ನಿಷೇಧಿಸುವ ಸಭೆಯು ತಾ. 1ರಲ್ಲಿ ರಥಬೀದಿಯಲ್ಲಿ ಶ್ರೀ ಬೇಳಂಜೆ ಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಎಸ್. ನಾಯಕ್ ಮೊದಲಾದವರು ಭಾಷಣವಿತ್ತರು.

**ವಿದಾಯ ಸತ್ಕಾರ**— 'ನವಯುಗ' ಸಂಪಾದಕೀಯ ವಿಭಾಗದಲ್ಲಿ ಹೆಚ್ಚಿನ ಸಹಕಾರ ನೀಡುತ್ತಿದ್ದ ಶ್ರೀ ಕುಮಾರ ಸ್ವಾಮಿಯವರಿಗೆ ಇದೇ ತಾ. 2ರಂದು ನವಯುಗ ಪ್ರೆಸ್ಸಿನಲ್ಲಿ ವಿದಾಯಸತ್ಕಾರಕೀಯುವ ಸಮಾರಂಭ ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಸಭಾಧ್ಯಕ್ಷತೆವಹಿಸಿದ್ದರು.

ಆರಂಭದಲ್ಲಿ ಶ್ರೀ ಗಂಗಾಧರ ಶೇಕರಿಂದ ಪ್ರಾರ್ಥನೆಯಾಯಿತು. "ನವಯುಗ"ದ ಸಂಪಾದಕರಾದ ಶ್ರೀ ಕೆ. ಎಚ್. ಸೆಟ್ಟರು ಸ್ವಾಗತ ಭಾಷಣಮಾಡುತ್ತಾ, ಶ್ರೀ ಕುಮಾರ ಸ್ವಾಮಿಯವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿದರು. ಶ್ರೀಗಳಾದ ಕು. ಶಿ. ಹರಿದಾಸ ಭಟ್, ಎ. ಜೆ. ಆಳ್ವೆ, ಎಸ್. ಎಸ್. ಪಡಕರ್ಣಿಕರು ಶ್ರೀ ಕುಮಾರ ಸ್ವಾಮಿಯವರು ಸಾಹಿತ್ಯಕ್ಷೇತ್ರದಲ್ಲಿ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಭಾಷಣವಿತ್ತರು. ಡಾ. ಟಿ. ಎಮ್. ಎ. ಪೈಗಳು ಮುಖ್ಯ ಅತಿಥಿಗೆ ಕೈಗಡಿಯಾರವೊಂದನ್ನು ಪತ್ರಿಕಾ ಸಂಪಾದಕರ ಪರವಾಗಿ ಪಾರಿತೋಷವಾಗಿ ಕೊಡುತ್ತಾ ಕೆಲವೊಂದು ಹಿತೋಕ್ತಿಗಳನ್ನು ಹೇಳಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಪತ್ರಿಕೋದ್ಯಮದ ಉಚ್ಚ ಸಂಪ್ರದಾಯಗಳನ್ನು ಒಳ್ಳೆಯ ಸಂಪಾದನ ಕಾರ್ಯದ ಮೂಲಕ ಕಾಯ್ದುಕೊಂಡುಬಂದು "ನವಯುಗ"ವು ತನ್ನ ಸ್ಥಾನಮಾನಗಳನ್ನು ರಕ್ಷಿಸಿಕೊಂಡು 35 ವರ್ಷಗಳಿಂದ ಒಂದೇ ಸವನೆ ಸಾಹಿತ್ಯಸೇವೆ ಮಾಡುತ್ತ ಬಂದಿರುವುದು ಅತ್ಯಭಿನಂದನೀಯವೆಂದರು. ಶ್ರೀ ಕುಮಾರ ಸ್ವಾಮಿಯವರು ತಮಗಿತ್ತ ವಿದಾಯ ಸತ್ಕಾರಕ್ಕಾಗಿ ಆಭಾರ ಸೂಚಿಸಿದರು. ಶ್ರೀ ಯು. ಎಸ್. ಭಟ್ಟರು ಧನ್ಯವಾದಗಳನ್ನಿತ್ತರು.

**ಯುವಕ ಕಾಂಗ್ರೆಸ್ ಸಭೆಯು** ತಾ. 1ರಲ್ಲು ಶ್ರೀ. ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯ ವಿದ್ಯುತ್ ಯಂತ್ರ ಸಾಗಾಟದ ಮದ್ರಾಸು ಸರಕಾರದ ಧೋರಣೆಯ ಕುರಿತು ಶ್ರೀ ಪೈಗಳು ಮಾತನಾಡುತ್ತಾ, ಅದು ಅನಪೇಕ್ಷಿತವೆಂದರು.

**ವಾರ್ಷಿಕೋತ್ಸವ**— ಉಡುಪಿ ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾ ಸಭೆಯು ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರ್ಷಕ್ಕೆ ಶ್ರೀಗಳಾದ ಟಿ ಎ. ಪೈ, (ಅಧ್ಯಕ್ಷ), ಶ್ರೀಗಳಾದ ಕೊಬ್ಬಿಕಾರ್ ಜನಾರ್ದನ ಪೈ, ರೋಟಿ ಫೆರ್ನಾಂಡೀಸ್, ಬಿ. ಎಸ್. ಸೆಟ್ಟಿ, ಸಿ. ಸುರೇಂದ್ರ ನಾಯಕ್ (ಉಪಾಧ್ಯಕ್ಷರು), ಬಿ. ಎಸ್. ಲೂವಿಸ್ (ಪ್ರಧಾನ ಕಾರ್ಯದರ್ಶಿ), ಕೊಬ್ಬಿಕಾರ್ ಪದ್ಮನಾಭ ಪೈ (ಖಜಾಂಚಿ), ಬೆನದಿಕ್ಟ್ ಫೆರ್ನಾಂಡೀಸ್ ಮತ್ತು ಪದ್ಮನಾಭ ಶೇಟ್ ರ್‍ಯಾಕರ್ (ಸಹಾಯಕ ಕಾರ್ಯದರ್ಶಿ)ಗಳಾಗಿ ಆರಿಸಲ್ಪಟ್ಟರು.

ಸಂಘದ ವಾರ್ಷಿಕೋತ್ಸವವು ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಎಮ್. ಜಿ. ಎಮ್. ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಯೊಬ್ಬನಿಗೆ ರೂ 50/- ಸಹಾಯ ಧನ ಮತ್ತು ಈ ಹೈಸ್ಕೂಲಲ್ಲಿರುವ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಬ್ಬರಿಗೆ ಪರೀಕ್ಷಾ ಫೀಸು ಕೊಡಬೇಕೆಂದೂ ತೀರ್ಮಾನವಾಯಿತು. ಈ ಉತ್ಸವ ಸಂದರ್ಭದಲ್ಲಿ ಶಾಲಾ ಹಳೆ ವಿದ್ಯಾರ್ಥಿ ಶ್ರೀ ಕೆ. ಶಿವರಾಯರನ್ನು ಈ ಶಾಲೆಯ ಕಿರಿಯ ವಿದ್ಯಾರ್ಥಿಯು ಗೌರವಿಸುವ ಕಾರ್ಯಕ್ರಮ ನಡೆಯಿತು. ರಾತ್ರಿ ಸಹ ಭೋಜನವಿತ್ತು.

**ಸಂಸ್ಕೃತ ಕಾಲೇಜು ವರ್ಧಂತಿ** — ಸ್ಥಳೀಯ ಸಂಸ್ಕೃತಕಾಲೇಜಿನ ವರ್ಧಂತ್ಯುತ್ಸವವು ತಾ 23ರಲ್ಲು ಶ್ರೀ ಅನಂತೇಶ್ವರ ದೇವಾಲಯದಲ್ಲಿ ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು ವ್ಯಾಸಪೂಜೆ ಮಾಡಿ ಕಾಲೇಜು ಪಂಡಿತರಿಗೂ ವಿದ್ಯಾರ್ಥಿಗಳಿಗೂ ವಸ್ತ್ರದಾನ ಮಾಡಿದರು.

ಮರುದಿನ ತಾ 24ರಲ್ಲು ಕಾಲೇಜು ಹಾಲಿನಲ್ಲಿ ವರ್ಧಂತಿ ಉತ್ಸವದ ಅಂಗವಾದ ಸಭೆಯು ಮಂಗಳೂರು ನಗರಸಭೆಯ ಚೇರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ಪ್ರಿನ್ಸಿಪಾಲ್ ಶ್ರೀ ಕಾಲಗಿ ಶೇಷಾಚಾರ್ಯರು ಕಾಲೇಜಿನ ಪ್ರಗತಿಪರ ವರದಿಯನ್ನೋದಿದರು. ಕ್ರಿಶ್ಚಿಯನ್ ಹೈಸ್ಕೂಲಿನ ಹಿಂದೀ ಪಂಡಿತ ಶ್ರೀ ಪಿ. ಮುಖ್ಯಪ್ರಾಣ ತಂತ್ರಿಗಳು ಸ್ವಸ್ತಿವಾಚನಮಾಡಿದರು. ಅದಕ್ಕೆ ಶ್ರೀಗಳಾದ ಎಚ್. ರಘುಪತಿ ಅಡಿಗ ಮತ್ತು ಯು. ಬಿ. ಗುರುರಾಜಾಚಾರ್ಯರು ಉತ್ತರವಿತ್ತರು. ಪಾರಿತೋಷವಿತರಣೆ ಅಧ್ಯಕ್ಷರಭಾಷಣವಾಗಿ ಸಮಾರಂಭ ಕೊನೆಗೊಂಡಿತು.

**ಅಂಚೆ ಮತ್ತು ತಂತಿ**— ಮೂರನೆ ವರ್ಗದ ನೌಕರರ ಸಂಘದ ಉಡುಪಿ ಶಾಖೆಯ ಸಭೆಯು ಕಳೆದ ತಾ. 27ರಲ್ಲಿ ಉಡುಪಿ ಪ್ರಧಾನ ಟಪ್ಪಾಲು ಕಟ್ಟೆಯಲ್ಲಿ ಶ್ರೀ ಜಿ. ಶ್ರೀನಿವಾಸ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ. ಪಿ ಆಚಾರ್ಯರು ಮಾತನಾಡುತ್ತಾ ಸರಕಾರಿ ನೌಕರರಿಗೆ ನ್ಯಾಯವಾದ ವೇತನ ಕ್ರಮವನ್ನು ನಿರ್ಧರಿಸುವುದಕ್ಕೆ ಒಂದೇ ವೇತನ ಸಮಿತಿಯನ್ನು ಸರಕಾರ ರಚಿಸಬೇಕೆಂದರು.

**ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ**—ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬವು ಕಳೆದ ತಾ 28ರಲ್ಲು ಶ್ರೀ ಬನ್ನಂಜೆ ರಾಮಾಚಾರ್ಯ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಕೃಷ್ಣ ತಂತ್ರಿ, ಟಿ. ಶೀನಪ್ಪ ಹೆಗ್ಡೆ, ಶ್ರೀ ಎ. ನರಸಿಂಹಯ್ಯ, ಪಿ. ಜಿ. ನಾಯಕ್ ಮೊದಲಾದವರ ಭಾಷಣಗಳಾದುವು.

**ಶ್ರೀಕೃಷ್ಣಮಠದಲ್ಲಿ**— ಪರ್ಯಾಯ ಅದಮಾರುಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ನಾಯಕತ್ವದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ವಿಟ್ಲಪಿಂಡಿ ಮಹೋತ್ಸವವು ಕಳೆದ ತಾ 28 ಮತ್ತು 29 ರಲ್ಲು ಸಾಂಗವಾಗಿ ಜರುಗಿತು. ತಾ 29ರಲ್ಲು ವಸಂತ ಮಹಲಿನಲ್ಲಿ ಪೈಥಿಕ ಧರ್ಮಪೀಠ ಸಂಘ ಮತ್ತು ಕಲಾವೃಂದದ ಕೂಡುವಿಕೆಯಿಂದ ಶ್ರೀಕೃಷ್ಣ ಜಯಂತಿ ಉಪನ್ಯಾಸಗಳಾದುವು. ಪರ್ಯಾಯ ಅದಮಾರು ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು. ಕಾಣಿಯೂರು ಮಠದ ಚಿಕ್ಕ ಪೀಠಾಂಕಿತ ಸ್ವಾಮಿಗಳವರು ಪೂರ್ವಪೀಠಿಕಾ ಉಪನ್ಯಾಸವಿತ್ತರು.

**ನಗರ ಸಭೆಯು**—ಕಳೆದ ತಾ. 25ರಲ್ಲು ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಅಜ್ಜರಕಾಡು ಭುಜಂಗ ಪಾರ್ಕಿನಲ್ಲಿ ಇನ್ನು ಕೆಲವು ಅಭಿವೃದ್ಧಿ ಕಾರ್ಯಗಳನ್ನೆಸಗುವರೆ ರೂ. 2330 ತಾವು ಕೊಡುವೆವಾಗಿಯೂ ಆ ಬಗ್ಗೆ ನಗರ ಸಭೆಯ ಒಪ್ಪಿಗೆಯನ್ನಪೇಕ್ಷಿಸಿ ಬರೆದ ಮದ್ರಾಸಿನ ಡಾ. ಯು. ಎಲ್. ನಾರಾಯಣರಾಯರ ಪತ್ರಕ್ಕೆ ಮನ್ನಣೆ ಕೊಟ್ಟು ಅವರನ್ನು ಅಭಿನಂದಿಸಲಾಯಿತು. ಸ್ವಾತಂತ್ರ್ಯದಿನಾಚರಣೆ ಸ್ಮಾರಕ ನಿಧಿಯ ಬಡ್ಡಿಯಿಂದ ಶಿಷ್ಯವೇತನಕ್ಕಾಗಿ ನಗರ ಕ್ಷೇತ್ರದ ಹೈಸ್ಕೂಲುಗಳಲ್ಲಿ ಗುಣ ನಡತೆಯುಳ್ಳ ಬಡ ವಿದ್ಯಾರ್ಥಿಯ ಆಯ್ಕೆ ಬಗ್ಗೆ ಸ್ಥಳೀಯ ಹೈಸ್ಕೂಲುಗಳ ಶ್ರೀಗಳಾದ ಬಿ. ಅನಂತಕೃಷ್ಣ ಸಾಮಗ, ಎಸ್. ಎನ್. ಮಸ್ಕರೇನ್ಸ್, ಯು. ಶಿವರಾವ್ ಮತ್ತು ಶ್ರೀಮತಿ ಎಲ್. ಜೆ. ಭಂಡಾರಿ ಅವರುಗಳ ಕಮಿಟಿಯೊಂದು ರಚಿಸಲ್ಪಟ್ಟಿತು.

**ಉಡುಪಿ ಮೋಟಾರ್ ಮಜೂರರ ಸಭೆಯು**— ಕಳೆದ ತಾ. 31ರಲ್ಲಿ ಜರಗಿ ಸಂಘದ ಘಟನೆಯು ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಯಿತು. ಬಳಿಕ ಆಡಳಿತ ಕಮಿಟಿಗೆ ಶ್ರೀಗಳಾದ ಪಿ. ಶೀನ ನಾಯ್ಕ (ಅಧ್ಯಕ್ಷ), ಕೆ. ಬಿ. ಬಂಗೇರ (ಉಪಾಧ್ಯಕ್ಷ), ಡೇವಿಡ್ ಕರ್ಕೇರ (ಕಾರ್ಯದರ್ಶಿ), ಮುದ್ದಯ್ಯ (ಜತೆಕಾರ್ಯದರ್ಶಿ), ತೌಡ ಸೆಟ್ಟಿಗಾರ (ಖಜಾಂಚಿ) ರನ್ನೊಳಗೊಂಡ 12 ಮಂದಿ ಆರಿಸಲ್ಪಟ್ಟರು. ಸಂಘಕ್ಕೆ 'ಮೋಟಾರು ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್' ಎಂದು ಹೆಸರಿಡಲಾಯಿತು.

**ಸಾರ್ವಜನಿಕ ಸಭೆ**— ಸ್ಥಳೀಯ ಕಮ್ಯೂನಿಸ್ಟ್ ಪಾರ್ಟಿ ಮತ್ತು ಮಜೂರ ಸಂಘಗಳ ಆಶ್ರಯದಲ್ಲಿ ತಾ. 3 ರಲ್ಲಿ ರಥಬೀದಿಯಲ್ಲಿ ಶ್ರೀ ದೇವಿದಾಸ್ ಕರ್ಕಡರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿ ಮಾಲ್ಕಿ ರೈತ ಸತ್ಯಾಗ್ರಹಕ್ಕೆ ಸಂಬಂಧಿಸಿದ ಹಾಗೂ ಉಡುಪಿ ಇಲೆಕ್ಟ್ರಿಕ್ ಪವರ್ ಹೌಸಿನ ಜನರೇಟರುಗಳನ್ನು ತಮಿಳು ನಾಡಿಗೆ ಸಾಗಿಸಬಾರದೆನ್ನುವ ನಿರ್ಣಯಗಳಾದುವು. ಶ್ರೀಗಳಾದ ಪಿ. ಶೀನ ನಾಯ್ಕ, ಜೆ. ಕೋಟ್ಯಾನ್ ಮತ್ತು ಕೆ. ದಾಸ ಸೇರಿಗಾರರು ಭಾಷಣವಿತ್ತರು.

**ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ**— ಕಳೆದ ತಾ. 11ರಲ್ಲಿ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಧೀಂದ್ರತೀರ್ಥ ಶ್ರೀ ಪಾದಂಗಳವರ ಆಶೀರ್ವಚನದಿಂದ ಭಜನಾ ಸಪ್ತಾಹವು ಏಳು ದಿವಸ ಬಹಳ ವಿಜೃಂಭಣೆಯಿಂದ ಜರಗಿತು. ತಾ. 15-8-1956ರಲ್ಲು ವಾಸುದೇವ ಜೋಗಳೆ ಶ್ಯಾನುಭಾಗರ ರಂಗಪೂಜೆಗೆ $5\frac{1}{2}$ ಸಾವಿರ ಜನಕ್ಕಿಂತಲೂ ಮೀರಿ ಜನರು ಬಂದು ರಂಗಪೂಜೆಯು ಬಹಳ ಆಕರ್ಷಣೀಯವಾಗಿತ್ತು. ತಾ. 17-8-1956ರಲ್ಲು ದಿವಂಗತ ಶ್ರೀ ನರಸಿಂಹ ಕುಡ್ವರ ಸ್ಮಾರಕವಾಗಿ ಅವರ ಸುಪುತ್ರ ಶ್ರೀ ರತ್ನಾಕರ ಕುಡ್ವರು ಸದ್ರಿ ದೇವಸ್ಥಾನದ ಸರೋವರದ ಕಟ್ಟಡಕ್ಕೆ ಮಾಡಿಸಿಕೊಟ್ಟ ವಿದ್ಯುದ್ದೀಪಗಳ ಉದ್ಘಾಟನೆಯನ್ನು ಶ್ರೀ ಸುಧೀಂದ್ರತೀರ್ಥ ಶ್ರೀ ಪಾದಂಗಳವರು ಮಾಡುತ್ತಾ ಶ್ರೀ ಕುಡ್ವರ ಸೇವೆಯನ್ನು ಪ್ರಶಂಸಿಸಿ ಹರಸಿದರು. ಇದೇ ಸಂದರ್ಭದಲ್ಲಿ ಡಾ. ಎಸ್. ಆರ್. ಪೈಗಳು ಕುಡ್ವರ ಮನೆತನದಿಂದ ದೇವಸ್ಥಾನ ಪ್ರಾರಂಭವಾದಂದಿನಿಂದ ಈ ತನಕ ಮಾಡಿದ ಸೇವೆಯನ್ನು ವಿವರಿಸಿದರು. ತಾ. 18-8-56 ರಲ್ಲಿ ಸಪ್ತಾಹದ ಮಹಾ ಸಮಾರಾಧನೆಯು ಸುಮಾರು ಆರು ಸಾವಿರ ಜನಸಂತರ್ಪಣೆಯಿಂದ ಮುಕ್ತಾಯವಾಯಿತು. ಶ್ರೀ ಸುಧೀಂದ್ರ ಸ್ವಾಮೀಜಿಯವರು ಉಡುಪಿಯಲ್ಲಿ ಈ ವರ್ಷ ಚಾತುರ್ಮಾಸ್ಯವ್ರತ ಪ್ರಾರಂಭಿಸಿರುವುದರಿಂದ ಭಜನೆಸಪ್ತಾಹಕ್ಕೆ ತಲಚೇರಿ, ಕೊಚ್ಚಿ, ಕಾಸರಗೋಡು, ಬಂಟ್ವಾಳ, ಮಂಗಳೂರು, ಕುಂದಾಪುರ ಮುಂತಾದ ಹಲವು ಕಡೆಗಳಿಂದ ಭಜನಾ ಮಂಡಳಿಯವರು ಬಂದು ತಮ್ಮ ಸೇವೆಯನ್ನು ಸಲ್ಲಿಸಿರುವರು.

## 36ನೆ ವರ್ಷ

'ನವಯುಗ'ವು ತನ್ನ 35 ವರುಷಗಳ ಜೀವನವನ್ನು ಕಷ್ಟ-ನಿಷ್ಟುರ, ಎಡರು-ತೊಡರುಗಳಿಂದ ಸಾಗಿಸಿ ಇದೀಗ 36ನೆ ವರ್ಷದಲ್ಲಿ ಪಾದಾರ್ಪಣೆ ಮಾಡಿ ಈ ಸಂಚಿಕೆಯನ್ನು ವಾಚಕರ ಮುಂದಿರಿಸಿದೆ. ಸಂದು ಹೋದ ವರ್ಷಗಳಲ್ಲಿ 'ನವಯುಗ'ವು ಬಡವರ-ಬಲ್ಲಿದರ, ಹೆಚ್ಚೇಕೆ ಸರ್ವರ ಮಾನಸಿಕ ಅಭಿರುಚಿಗೊಪ್ಪುವಂತಹ ಲೇಖನ, ಸುದ್ದಿ ಸಮಾಚಾರಗಳನ್ನು ಪ್ರಕಟಿಸಿ ಪತ್ರಿಕೋದ್ಯಮದ ಉಚ್ಚ ಮಟ್ಟವನ್ನು ಕಾದುಕೊಂಡು ಬಂದಿದೆ. ಮುಂದೆಯೂ ಅದೇ ದೃಷ್ಟಿಕೋಣವನ್ನಿಟ್ಟುಕೊಂಡು 'ನವಯುಗ'ವು ಜನತಾ ಪತ್ರಿಕೆಯಾಗಿ ಸೇವೆ ಸಲ್ಲಿಸುವ ಹಂಬಲದಲ್ಲಿದೆ. ಈ ಸಂದರ್ಭದಲ್ಲಿ, ನಮ್ಮ ಚಂದಾದಾರರಿಗೆ, ಜಾಹೀರಾತುದಾರರಿಗೆ, ಸರ್ವ ಹಿತೈಷಿಗಳಿಗೆ ಅವರ ಸಹಕಾರಕ್ಕಾಗಿ ಆಭಾರ ಸಲ್ಲಿಸುತ್ತೇವೆ. ಮುಂದಕ್ಕೆ ಕೂಡ ಸರ್ವರೂ ಸಹಕಾರವಿತ್ತು ನೆರವಾಗಬೇಕೆಂದು ಕೋರುತ್ತೇವೆ.

ಚಂದಾ ಹಣ ಬಾಕಿಇರುವವರೆಲ್ಲರೂ ಈಗಲಾದರೂ ಅದನ್ನು ಸಲಾಯಿಸಿ ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುತ್ತೇವೆ.

---

...ನ್ನು ಸುಧಾರಿಸಲು ಸರ್ವ ಪ್ರಯತ್ನ ಮಾಡಬೇಕೆಂಬುದೇ ಅವರು ಮಾಡಿಕೊಂಡಿರುವ ಬಿನ್ನಹ.

### ಅರ್ಥಸಚಿವರಾಗಿ ಟಿ. ಟಿ.

ಶ್ರೀ ಸಿ. ಡಿ ದೇಶಮುಖರ ರಾಜೀನಾಮೆಯಿಂದ ತೆರವಾಗಿದ್ದ ಕೇಂದ್ರ ಅರ್ಥಸಚಿವ ಸ್ಥಾನಕ್ಕೆ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರನ್ನು ನೇಮಿಸಲಾಗಿದೆ. ಇವರು ಕೈಗಾರಿಕೆಗಳ ಮಂತ್ರಿಯಾಗಿದ್ದರು. ಕೈಗಾರಿಕೆಯ ಖಾತೆಯನ್ನೀಗ ಗೃಹಮಂತ್ರಿ ಪಂತರು ಗೃಹ ಖಾತೆಯೊಂದಿಗೆ ನೋಡಿಕೊಳ್ಳುವರು. ಶ್ರೀ ದೇಶಮುಖರು ವಿಶ್ವವಿದ್ಯಾನಿಲಯಗಳಿಗೆ ಗ್ರಾಂಟನ್ನೀಯುವ ಸಮಿತಿಯ ಅಧ್ಯಕ್ಷರಾಗಿ ಹೊಸ ಹುದ್ದೆ ಸ್ವೀಕರಿಸಿದ್ದಾರೆ. ಈ ಹುದ್ದೆಗೆ ಮೂರು ಸಾವಿರ ರೂಪಾಯಿಗಳ ಮಾಸಿಕ ವೇತನವಿದ್ದರೂ ತಾನು ಹೆಸರಿಗಷ್ಟೇ ಎಂಬಂತೆ ಒಂದು ರೂಪಾಯಿಯನ್ನು ಮಾತ್ರ ವೇತನವಾಗಿ ಪಡೆಯುವೆನೆಂದಿದ್ದಾರೆ.

---


# ಮಕ್ಕಳ ಮಗ್ಗಿಪುಸ್ತಕ

0—1—0

**ನವಯುಗ ಪ್ರೆಸ್, ಉಡುಪಿ.**

# ಎಲ್ಲೆಲ್ಲಿ ಏನೇನು?

**ಜಿಲ್ಲಾ ಯೋಜನಾ ಮಂಡಳಿಯ ಸಭೆಯು—** ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಕಳೆದ ತಾ. 28 ಮತ್ತು 29ರಲ್ಲಿ ಜರಗಿ ದ್ವಿತೀಯ ಪಂಚವಾರ್ಷಿಕ ಕಾಲದಲ್ಲಿ ಜಿಲ್ಲೆಯಲ್ಲಾಗಬೇಕಾದ ಅಭಿವೃದ್ಧಿಯ ಯೋಜನೆಯನ್ನು ತಯಾರಿಸಲಾಯಿತು. ಜಿಲ್ಲೆಗೆ ಸಂಬಂಧಿಸಿದ ಔದ್ಯೋಗಿಕ ಶೈಕ್ಷಣಿಕ, ಸಾರ್ವಜನಿಕ ಆರೋಗ್ಯ, ಕೃಷಿ, ನೀರಾವರಿ, ಪಶುಪಾಲನೆ, ಸಮಾಜ ಕಲ್ಯಾಣ, ಸಾರಿಗೆ, ವಿದ್ಯುತ್ ಪೂರೈಕೆ ಮೀನುಗಾರಿಕೆ ಮೊದಲಾದ ವಿಚಾರಗಳಲ್ಲಿ ಸವಿಸ್ತಾರವಾದ ಯೋಜನೆಯನ್ನು ಸಿದ್ಧಗೊಳಿಸಿ ಒಪ್ಪಿಗೆಗಾಗಿ ಸರಕಾರಕ್ಕೆ ಕಳುಹಿಸಿಕೊಡುವ ನಿರ್ಣಯವಾಯಿತು.

ಮಂಗಳೂರು ನಗರದ ಹೊರ ವಲಯಕ್ಕೆ ಬಂದಿರುವ ವಿದ್ಯುಚ್ಛಕ್ತಿಯನ್ನು ಮಂಗಳೂರು ನಗರದೊಳಗಿನ ನಾಗರಿಕರಿಗೂ ಕೂಡಲೇ ಒದಗಿಸಬೇಕೆಂದು ಮತ್ತು ಜಿಲ್ಲೆಗಾಗಿ ಮಂಜೂರಾಗಿರುವ ವಿದ್ಯುತ್ ವಿಸ್ತರಣಾ ಯೋಜನೆಗೆ ಬೇಕಾದ ಸಾಧನ ಸಲಕರಣಗಳನ್ನೊದಗಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಎರಡು ಅಧಿಕಾರೇತರ ಠರಾವುಗಳನ್ನು ಶ್ರೀ ಟಿ. ಎ. ಪೈಗಳು ಸೂಚಿಸಿದುದನ್ನು ಶ್ರೀ ವಿ. ಎಸ್. ಕುಡ್ವರು ಅನುಮೋದಿಸಿದರು. ಮೊದಲ ದಿನ ಮತ್ತು ಎರಡನೇ ದಿವಸದ ಸಭೆಗಳಿಗೆ ಶ್ರೀಗಳಾದ ಎಚ್. ನರಸಿಂಹ ಮತ್ತು ಎಮ್. ಜಿ. ರಾಜಾರಾಮರು ಅನುಕ್ರಮವಾಗಿ ಅಧ್ಯಕ್ಷತೆ ವಹಿಸಿದ್ದರು.

**ಜನ್ಮದಿನೋತ್ಸವ: —** ಶ್ರೀ ನಾರಾಯಣ ಗುರುಸ್ವಾಮಿಯವರ 102ನೇ ಜನ್ಮದಿನೋತ್ಸವವು ಕಳೆದ ತಾ 22ರಲ್ಲು ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಜರಗಿತು. ಬಿಲ್ಲವ ಯೂನಿಯನ್ನಿನ ಅಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರ ನಿವಾಸದಿಂದ ಗುರುಸ್ವಾಮಿಯವರ ಭಾವಚಿತ್ರದೊಂದಿಗೆ ಮೆರವಣಿಗೆ ಹೊರಟು ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬಂದು ತಲ್ಪಿತು. ಅಲ್ಲಿ ಶ್ರೀಗಳಾದ ಬಿ. ಆರ್. ಕರ್ಕೇರ, ಎ. ಕೆ. ಸೇವಕ ಮೊದಲಾದವರು ಭಾಷಣವಿತ್ತರು. ಶ್ರೀ ಎಮ್. ಬಾರೆಪ್ಪನವರು ಧನ್ಯವಾದಗಳನ್ನಿತ್ತರು. ಬಳಿಕ ಪೂಜೆ, ಮಂಗಳಾರತಿಗಳಾಗಿ ಸಭೆಯು ಮುಕ್ತಾಯಗೊಂಡಿತು.

**ಚರ್ಚಾಗೋಷ್ಠಿ—** ಕಳೆದ ತಾ 30ರಂದು ರಾತ್ರಿ ಮಂಗಳೂರು ರೋಟರಿ ಕ್ಲಬ್ಬಿನ ಸಭೆಯು ಪೋರ್ಟ್ ಟ್ರಸ್ಟಿನ ಉಪಾಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ "ಮಂಗಳೂರು ಬಂದರದ ಅಭಿವೃದ್ಧಿ" ಎಂಬ ವಿಷಯದ ಮೇಲೆ ಚರ್ಚಾಗೋಷ್ಠಿ ನಡೆಯಿತು. ಮಂಗಳೂರು ಬಂದರವನ್ನು ಸರ್ವ ಋತು ಬಂದರವನ್ನಾಗಿ ಅಭಿವೃದ್ಧಿಗೊಳಿಸಬೇಕೆಂಬ ಪೂನಾ ಸಂಶೋಧನಾ ಕೇಂದ್ರವು ಒಪ್ಪಿಸಿದ ವರದಿಯನ್ನು ಮುದ್ರಾಸು ಸರಕಾರವು ಕೂಡಲೇ ಕೇಂದ್ರ ಸರಕಾರದ ಮಂಜೂರಾತಿಗಾಗಿ ಕಳುಹಿಸುವ ಕ್ರಮ ಕೈಕೊಳ್ಳಬೇಕಾದ ಆವಶ್ಯಕತೆಯನ್ನು ಶ್ರೀ ಕುಡ್ವರು ಒತ್ತಿ ಹೇಳಿದರು. ಪೋರ್ಟ್ ಆಫೀಸರ್ ಶ್ರೀ ಎಮ್. ಎಲ್. ಅದ್ವಾನಿಯವರು ಕಾಲೋಚಿತ ಮಾತುಗಳನ್ನಾಡಿದರು. ಪೋರ್ಟ್ ಟ್ರಸ್ಟಿನ ಮೆಂಬರರು ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ಎಸ್. ದಾಮೋದರ ನಾಯಕ್, ದೇವಿದಾಸ್ ಗಿರ್ಧಾರಿಲಾಲ್ ಚಂದ್ರಾನಾ, ಕೆ. ಎಸ್. ಭಂಡಾರ್ಕರ್ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

## ಬ್ರಹ್ಮಾವರದಲ್ಲಿ ಹೆರಿಗೆ ಕೇಂದ್ರ ಉದ್ಘಾಟನೆ

ಮುದ್ರಾಸಿನ ಆರೋಗ್ಯಮಂತ್ರಿ ಮಾನ್ಯ ಶ್ರೀ ಎ. ಬಿ. ಸೆಟ್ಟರು ಬ್ರಹ್ಮಾವರದಲ್ಲಿ ಹೊಸತಾಗಿ ಆರಂಭಿಸಿದ ಹೆರಿಗೆ ಕೇಂದ್ರವನ್ನು ತಾ. 3ರಂದು ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ವಾರಂಬಳ್ಳಿ ಪಂಚಾಯತಬೋರ್ಡ್ ಕಡೆಯಿಂದ ಶ್ರೀ ಕೃಷ್ಣ ಕಿಣಿಯವರು ಸ್ವಾಗತಭಾಷಣಮಾಡಿದರು. ಬೋರ್ಡಿನ ಉಪಾಧ್ಯಕ್ಷ ಶ್ರೀ ಹಿರಿಯಣ್ಣ ಸೆಟ್ಟರು ಮಂತ್ರಿಗಳಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ಮಾನ್ಯಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ದ. ಕ. ಜಿಲ್ಲೆಯಲ್ಲಿ 68 ಹೆರಿಗೆ ಕೇಂದ್ರಗಳಿವೆ. ಈ ವರ್ಷ ಒಂಭತ್ತು ಹೊಸ ಕೇಂದ್ರಗಳನ್ನು ತೆರೆಯಲಾಗುವುದು. ತರಬೇತಿಹೊಂದಿದ ಸೂಲಗಿತ್ತಿಯರ ಸಹಾಯ ಪಡೆಕೊಳ್ಳದಿದ್ದಲ್ಲಿ ಗರ್ಭಿಣಿಯರಿಗೆ ಹಾಗೂ ಹುಟ್ಟುವ ಮಕ್ಕಳಿಗೆ ಬಾಧಕಗಳುಂಟಾಗುವುದು ಆದುದರಿಂದ ಈ ಕೇಂದ್ರದ ಉಪಯೋಗವನ್ನು ಜನರು ಅಗತ್ಯವಾಗಿ ಪಡೆಯಬೇಕು. ಕೇಂದ್ರದಲ್ಲಿ ಪೂರೈಕೆಯಾಗುವ ಹಾಲು ಮತ್ತು ವಿಟಮಿನ್ ಮಾತ್ರೆಗಳು ಮತ್ತು ಶಾರ್ಕ್ ಲಿವರ್ ಆಯಿಲಿನಿಂದ ಈ ಭಾಗದ ಗರ್ಭಿಣಿಯರ ಮತ್ತು ಮಕ್ಕಳ ಆರೋಗ್ಯ ಅಭಿವೃದ್ಧಿಯಾಗಲೆಂದು ಹಾರೈಸಿದರು. ಸಂತತಿ ನಿಯಂತ್ರಣ ಯೋಜನೆಗೂ ಜನರ ಸಹಕಾರವನ್ನು ಅಪೇಕ್ಷಿಸಿದರು. ಶ್ರೀ ಪೈಗಳು ತಮ್ಮ ಭಾಷಣದಲ್ಲಿ, ಇಂದು ಮೆಡಿಕಲ್ ಕಾಲೇಜಿನ ತಜ್ಞ ಡಾಕ್ಟರಿಂದ ಜನತೆಯು ಸುಲಭವಾಗಿ ಚಿಕಿತ್ಸಾ ಸೌಕರ್ಯಗಳನ್ನು ಪಡೆಯಬಹುದಾಗಿದೆ ಎಂದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ, ಶ್ರೀಗಳಾದ ಎ. ಜೆ. ಆಳ್ವ, ಬಿ ವೆಂಕಟರಾವ್ ಮೊದಲಾದವರು ಮಾತನಾಡಿದರು. ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಶಿವರಾಮ ಸೆಟ್ಟರು ಧನ್ಯವಾದಗಳನ್ನಿತ್ತರು.

## ಕುಂಬಳೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆ.

ಮಾನ್ಯ ಶ್ರೀ ಎ. ಬಿ. ಸೆಟ್ಟರು ತಾ. 1ರಲ್ಲು ಬೆಳಿಗ್ಗೆ ಮಂಗಳೂರಿಂದ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಜಿಲ್ಲಾ ವೈದ್ಯಾಧಿಕಾರಿ ಡಾ. ಎ. ತಿಮ್ಮಪ್ಪಯ್ಯ, ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ ಮೊದಲಾದವರೊಂದಿಗೆ ಕುಂಬಳೆಗೆ ಆಗಮಿಸಿದರು. ಸ್ಥಳೀಯ ಸಮಾಜಮಂದಿರದಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರವನ್ನು ಮಾನ್ಯ ಮಂತ್ರಿಗಳು ಉದ್ಘಾಟಿಸುತ್ತಾ, ಈ ಪ್ರದೇಶವು ಕರ್ನಾಟಕದಲ್ಲೇ ಉಳಿಯಬೇಕೆಂದು ಪ್ರಯತ್ನಿಸಲಾಗಿದ್ದರೂ ಅನಿವಾರ್ಯವಾಗಿ ಕೇರಳ ಪ್ರಾಂತ್ಯಕ್ಕೆ ಇದೀ ಕಾಸರಗೋಡು ತಾಲೂಕು ವರ್ಗಾಯಿಸಲ್ಪಟ್ಟಿದೆ. ಇದರಿಂದಾಗಿ ಇಲ್ಲಿ ತುಂಬಾ ಅಸಮಾಧಾನ ಉಂಟಾಗಿರುವುದೆಂದು ನನಗೆ ತಿಳಿದೇ ಇದೆ. ಆದರೆ, ಎಲ್ಲರೂ ಭಾರತದ ಪ್ರಜೆಗಳೆಂಬ ಮನೋಭಾವನೆಯಿಂದ ದೇಶದ ಅಭಿವೃದ್ಧಿಗಾಗಿ ದುಡಿಯಬೇಕು.

ಉಳಿದ ಕನ್ನಡ ಭಾಗಗಳ ಸಹಾನುಭೂತಿ ಸಹಕಾರ ನಿಮಗೆ ಸದಾ ಸಿಕ್ಕುವುದೆಂಬ ಅಭಯವನ್ನು ನೀಡುತ್ತೇನೆ ಎಂದರು.

ರೋಗವನ್ನು ಮಾತ್ರ ಗುಣಪಡಿಸಿಕೊಂಡರೆ ಸಾಲದು. ರೋಗದ ಕಾರಣವನ್ನು ತಿಳಿದು ಅದು ಬಾರದಂತೆ ತಡೆಯುವುದು ಅವಶ್ಯ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ದ. ಕ. ಜಿಲ್ಲೆಯ ಸಮೂಹವಿಕಾಸ ಯೋಜನಾ ಕೇಂದ್ರವಾದ ಬೆಳ್ತಂಗಡಿ, ಬಜಪೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ. ದ್ವಿತೀಯ ಯೋಜನಾವಧಿಯಲ್ಲಿ 140 ಕೇಂದ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಮದ್ರಾಸು ಸರಕಾರ ನಿಶ್ಚಯಿಸಿದೆ. ಅದರಂತೆ ಕುಂಬಳೆ ಮತ್ತು ಬೈಂದೂರು ಕೇಂದ್ರಗಳಲ್ಲೀಗ ಈ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಹೇಳಿದರು. ಶ್ರೀ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಐ. ಸಿ. ಭಂಡಾರಿಗಳು ಸ್ವಾಗತಭಾಷಣ ಮಾಡಿದರು. ಶ್ರೀ ಕೆ. ಕಣ್ಣಪ್ಪನವರು ವಂದನೆಗಳನ್ನರ್ಪಿಸಿದರು.

**ಕುಂದಾಪುರ—** ಕುಂದಾಪುರ ತಾಲೂಕಿನ ಪಂಚಾಯತ ಅಧ್ಯಕ್ಷರುಗಳ ಸಭೆಯೊಂದು ಕಳೆದ ತಾ. 25ರಲ್ಲು ಡಿಪ್ಯುಟಿ ಪಂಚಾಯತ ಆಫೀಸರ್ ಶ್ರೀ ಕೆ. ಅಣ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಳಾವರ ಪಂಚಾಯತ ಅಧ್ಯಕ್ಷ ಶ್ರೀ ಕಾಪು ಸಂಜೀವ ಸೆಟ್ಟರು ಸ್ಥಳೀಯ ಲ್ಯಾಬ್ರರಿ ಅಧಿಕಾರ ಸಮಿತಿಗೆ ಈ ತಾಲೂಕಿನ ಪಂಚಾಯತುಗಳ ಪ್ರತಿನಿಧಿಯಾಗಿ ಆರಿಸಲ್ಪಟ್ಟರು.

**ಬೈಂದೂರು—** ಸ್ಥಳೀಯ ಶ್ರೀ ಸೇನೇಶ್ವರ ದೇವಸ್ಥಾನಕ್ಕೆ ಡಿಪ್ಯುಟಿ ಹರಿಜನ ಸೇವಕ ಶ್ರೀ ಡಿ. ಬಿ. ಅಂತಯ್ಯ ಸೆಟ್ಟರ ನೇತೃತ್ವದಲ್ಲಿ ಶ್ರೀ ಸುಬ್ಬಣ್ಣ ಸೆಟ್ಟಿ ಮೊದಲಾದವರ ಕೂಡುವಿಕೆಯಿಂದ ಹರಿಜನರು ಪ್ರವೇಶಮಾಡಿ ಗಂಧ ಪ್ರಸಾದ ಸ್ವೀಕರಿಸಿದರು.

**ಪೆರ್ಡೂರು—** ಶ್ರೀ ಅನಂತಪದ್ಮನಾಭ ದೇವಸ್ಥಾನ ಕಳೆದ ತಾ. 16ರಲ್ಲು ಹರಿಜನರ ಪ್ರವೇಶವಾಯಿತು. ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಕೆ. ಭೋಜರಾಜ ಸೆಟ್ಟರು ಹರಿಜನರಿಗೆ ಸ್ವಾಗತವಿತ್ತು ಉಪಾಹಾರಕೊಟ್ಟು ಸತ್ಕರಿಸಿದರು.

**ಉದಿಯಾವರ—** ಪಿತ್ರೋಡಿಯಲ್ಲಿ ಕಳೆದ ತಾ 26ರಲ್ಲು, ಜನರ ಶ್ರಮದಾನದಿಂದ ನಿರ್ಮಿಸಲಾದ ಹೊಸ ರಸ್ತೆಯನ್ನು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸೂರ್ಯನಾರಾಯಣರಾಯರು ಉದ್ಘಾಟಿಸಿದರು. ಶ್ರೀ ಸಧಿಯ ಸಾಹುಕಾರರ ಖರ್ಚಿನಿಂದ ತೆರೆಯಲಾದ ಅಗ್ಗ ಬೆಲೆಯ ಅಕ್ಕಿಯಂಗಡಿಯನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಪ್ರಾರಂಭಿಸಿದರು. ಉದ್ಯಾವರ ಪಂಚಾಯತ ಅಧ್ಯಕ್ಷ ಶ್ರೀ ಯು. ಭಾಸ್ಕರ ಸೆಟ್ಟಿ ಮತ್ತು ಶ್ರೀ ಎ. ಜೆ. ಆಳ್ವರವರು ಮಾತನಾಡಿದರು. ಆರಂಭದಲ್ಲಿ ಶ್ರೀ ಯು. ಆನಂದ ಮೆಂಡನ್‌ರವರು ಸ್ವಾಗತ ಭಾಷಣಮಾಡಿದರು.

**ಅಲೆವೂರು** — ಉಡುಪಿ ಭಾರತ ಸೇವಕ ಸಮಾಜದ ನೇತೃತ್ವದಲ್ಲಿ ಜನ್ಮವೆತ್ತಿದ ಕೃಷಿಕರ ಪರಸ್ಪರ ಸಹಾಯಾರ್ಥ ಸಂಘವೊಂದನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಉದ್ಘಾಟಿಸಿದರು.

ಈ ಜನತಾ ಸಂಘದ ಮೂಲಕ ಕೃಷಿಕರಿಗೆ ನಿಬಡ್ಡಿಯಿಂದ ಅಲ್ಪಾವಧಿಯ ಸಾಲ ಅಕ್ಕಿ, ಬೀಜ, ಗೊಬ್ಬರ ಮುಂತಾದ ಸಲಕರಣೆಗಳನ್ನು ಒದಗಿಸಲಾಗುವುದೆಂದು ತಿಳಿಯಬರುತ್ತದೆ.

**ಕುಂಬಳೆ—** ಮಾಜಿ ಜಿಲ್ಲಾಬೋರ್ಡ್ ಸದಸ್ಯರೂ ಜನಹಿತ ಸೇವಾನಿರತರೂ ಸಿರಿವಂತ ಮನೆತನದವರೂ ಆಗಿದ್ದ ಶ್ರೀ ಬಂಬ್ರಾಣ ಗುಡ್ಡಪ್ಪ ರೈಗಳು ಕಳೆದ ತಾ. 27ರಂದು ಕುಂಟ್ಯಾಜೆ ಮನೆಯಲ್ಲಿ ತಮ್ಮ 65ನೇ ಪ್ರಾಯದಲ್ಲಿ ನಿಧನರಾದರೆನ್ನಲು ವಿಷಾದವಾಗುತ್ತದೆ

**ಕೊಳಂಬೆ—** ಇಲ್ಲಿಯ ಕಿರಿಯ ಬುನಾದಿ ಶಾಲೆಯಲ್ಲಿ ಕಳೆದ ತಾ. 28ರಲ್ಲು ಶ್ರೀ. ಬಿ. ಕೆ. ಮಾಧವರಾಯರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಮಾರಂಭವು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

**ಬನ್ನಂಜೆ—** ಸ್ಥಳೀಯ ಬ್ರಹ್ಮಶ್ರೀ ಗುರು ನಾರಾಯಣ ಸ್ವಾಮಿ ಭಜನಾ ಮಂದಿರದಲ್ಲಿ ಕಳೆದ ತಾ. 22ರಲ್ಲಿ ಶ್ರೀ ನಾರಾಯಣ ಗುರುಗಳ 102ನೇ ಜನ್ಮ ದಿನಾಚರಣೆಯು ಪೂಜಾ ಭಜನಾದಿ ಕಾರ್ಯಕ್ರಮಗಳಿಂದ ಸಾಂಗವಾಯಿತು.

**ಮೂಡಬಿದಿರೆ —** ಶ್ರೀ ಸರಸ್ವತಿ ಸೇವಾ ಸಂಘದ ಕಾರ್ಯಕಾರಿ ಸಮಿತಿಯ ನೂತನ ಸದಸ್ಯರ ಸಭೆಯು ಜರಗಿ ಶ್ರೀಗಳಾದ ಜಿ. ವಾಸುದೇವ ಪೈ, ವಿಠಲ ಶೆಣೈ, ಕೆ. ಕಾಂತ ರೈ ಮತ್ತು ಯು. ದೇವದಾಸ ಪೈಗಳು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು. ಎಂದಿನಂತೆ ಈ ವರ್ಷವೂ ಮುಂದಿನ ತಿಂಗಳ ತಾ 8ರಿಂದ 14ರ ತನಕ ಸಾಹಿತ್ಯೋತ್ಸವ ಜರಗಿಸಬೇಕೆಂದು ನಿಶ್ಚಯಿಸಲಾಯಿತು.

## ನಿಧನವಾರ್ತೆ

ಉಡುಪಿಯ ಡಿಪ್ಯುಟಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿದ್ದ ಶ್ರೀ ಬಾಡ್ಯ ಗೋಪಾಲಕೃಷ್ಣರಾಯರು ಇದೇ ತಾ. 1ರಲ್ಲು ಹೃದಯಸ್ತಂಭನದಿಂದ ದೈವಾಧೀನರಾದುದು ವಿಷಾದಕರವಿದೆ. ದಿವಂಗತರು ನಿಷ್ಪಕ್ಷಪಾತಿ ಆಫೀಸರರೆಂದು ಹೆಸರುಗಳಿಸಿದ್ದರು.

ಬೊಂಬಾಯಿಯ ಸೆಟ್ಟೀಸ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್-ಇದರ ಮೆನೇಜಿಂಗ್ ಡೈರೆಕ್ಟರ್ ಶ್ರೀ ಜಿ. ಸಂಜೀವ ಸೆಟ್ಟರ ತಾಯಿ ಶ್ರೀಮತಿ ಮುತ್ತಕ್ಕ ಸೆಡ್ತಿಯವರು ಕಳೆದ ತಾ. 20ರಲ್ಲಿ ಪೆರ್ಡೂರಿನ ತಮ್ಮ ಸ್ವಗೃಹದಲ್ಲಿ ಪರಲೋಕವಾಸಿಗಳಾದರು. ಶ್ರೀಮತಿಯವರು ಗುಣ ಹಿರಿಯರು, ದೇವರಲ್ಲಿ ಅನನ್ಯ ಭಕ್ತಿಯುಳ್ಳವರೂ ಉದಾರ ದಾನಿಗಳೂ ಆಗಿದ್ದರು

ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ ಮತ್ತು ಕಾರ್ಕಳ ವಕೀಲ್ ಶ್ರೀ ಮಹಾಬಲ ಹೆಗ್ಡೇರ ಮಾವ ಕೆದಿಂಜೆ ಪಡಾರಿ ಶ್ರೀ ನಾಗಪ್ಪ ಹೆಗ್ಡೇರು ಕಳೆದ ತಾ. 24ರಲ್ಲು ಸ್ವರ್ಗಸ್ಥರಾದರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿ। ಕಿಲ್ಲೆಯವರ ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಒಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾ ಪತ್ರ ಬೆಲೆ 2-0-0

ಭಾರತದ ಕರ್ಣ

ಭಾರತದ ಕರ್ಣನ ಪಾತ್ರವನ್ನು ವರ್ಣಿಸು ಪುಸ್ತಕ. ಬೆಲೆ 0-6-0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ। ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ ಉಡುಪಿ

## ಆನೆಕಾಲು ರೋಗ ನಿರೋಧ

# ಮಂಗಳೂರಲ್ಲಿ ಮಂತ್ರಿ ಎ. ಬಿ. ಶೆಟ್ಟರಿಂದ ಕಾರ್ಯಕ್ರಮದ ಆರಂಭೋತ್ಸವ

ಗವರ್ನ್‌ಮೆಂಟ್ ಕಾಲೇಜು ಸಭಾಭವನದಲ್ಲಿ ಇದೇ ತಾ. 1ರಲ್ಲಿ ಸಂಜೆ ನಗರ ಸಭೆಯ ಆಶ್ರಯದಲ್ಲಿ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಮದ್ರಾಸಿನ ಆರೋಗ್ಯ ಮಂತ್ರಿ ನಮ್ಮ ಶ್ರೀ ಎ. ಬಿ. ಶೆಟ್ಟರು ಆನೆಕಾಲು ರೋಗನಿರೋಧ ಕಾರ್ಯಕ್ರಮದ ಆರಂಭೋತ್ಸವವನ್ನು ನೆರವೇರಿಸುತ್ತಾ, ನಾವು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಇಲ್ಲಿ ಆನೆಕಾಲು ರೋಗನಿರೋಧ ಕಾರ್ಯಕ್ರಮವನ್ನಾರಂಭಿಸುತ್ತಿದ್ದೇವೆ. ಈ ಭಯಾನಕ ರೋಗನಿವಾರಣೆಯಲ್ಲಿ ನಾವು ಜಯಪ್ರದವಾದರೆ, ನಮ್ಮ ಕಾರ್ಯವು ಇತಿಹಾಸದಲ್ಲಿ ದಾಖಲೆಯಾಗ್ಗಲಿದೆ, ಅದರ ಸಲುವಾಗಿ ಸರ್ವರೂ ಈ ಜನಹಿತ ಕಾರ್ಯದಲ್ಲಿ ಅಧಿಕಾರಿಗಳಿಗೆ ಸಹಕಾರ, ಬೆಂಬಲ ನೀಡಬೇಕು.

ಈ ರೋಗದ ಹಾವಳಿ ತಡೆಗಟ್ಟಲು ಜನರಲ್ಲಿ ಎಷ್ಟು ಉತ್ಸಾಹವಿದೆ ಎಂಬುದಕ್ಕೆ ಇಂದು ಇಲ್ಲಿ ಕಿಕ್ಕಿರಿದು ನೆರೆದ ಜನಸಮುದಾಯವೇ ಸಾಕ್ಷಿ 1954ರಲ್ಲಿ ಭಾರತ ಮಲೇರಿಯಾ ಇನ್ಸ್‌ಟ್ಯೂಟಿನ ಅಧಿಕಾರಿಯೊಬ್ಬರು ಈ ನಗರದಲ್ಲಿ ನಡೆಸಿದ ಪಂಶೀಲನೆಯಲ್ಲಿ, ಸ್ವಲ್ಪ ಹೆಚ್ಚು ಕಡಿಮೆ, ನಗರದ ಎಲ್ಲೆಡೆಗಳಲ್ಲೂ ಈ ರೋಗ ವ್ಯಾಪಿಸಿಕೊಂಡಿದೆಯೆಂದೂ, ಗಂಡಸರಿಗಿಂತ ಹೆಂಗಸರೇ ಇದಕ್ಕೆ ಬಲಿಯಾಗುತ್ತಿರುವರೆಂದೂ, ಒಟ್ಟು ಜನಸಂಖ್ಯೆಯಲ್ಲಿ ನೇಕಡಾ 25 ಮಂದಿಯ ರಕ್ತದಲ್ಲಿ ಈ ರೋಗಾಣು ಇದೆ ಎಂದೂ ತಿಳಿದುಬಂತು. ಆನೆಕಾಲು ರೋಗವನ್ನು ಶಾಶ್ವತವಾಗಿ ನಿವಾರಿಸುವರೆ ಮೂರು ವಿವಿಧ ಕಾರ್ಯಕ್ರಮಗಳಿವೆ. ಪ್ರಥಮವಾಗಿ ನಗರವಾಸಿಗಳೆಲ್ಲರಿಗೂ ಹೈಟ್ರಾಜಿಯನ್ ಮಾತ್ರೆಯನ್ನು ಹಂಚಿ, ರಕ್ತದಲ್ಲಿ ಬೆರೆತಿರುವ ರೋಗಾಣುಗಳನ್ನು ನಾಶಮಾಡುವುದು ಎರಡನೆಯದಾಗಿ ಕೊಳಚೆ ಪ್ರದೇಶಗಳಲ್ಲಿ, ಏರೋನೆಕ್ಸ್ ಎಮಲ್ಸನ್ ಎಂಬ ದ್ರಾವಕವನ್ನು ಸಿಂಪಡಿಸಿ ಈ ರೋಗ ಪ್ರಚಾರಮಾಡುವ ಸೊಳ್ಳೆಗಳ ಬೆಳವಣಿಗೆಯನ್ನು ತಡೆಗಟ್ಟುವುದು ಮೂರನೆಯದಾಗಿ, ಡಯಿಡ್ರಿನ್ ಎಂಬ ದ್ರಾವಕವನ್ನು ಪ್ರತಿಯೊಂದು ಮನೆಗೂ ಚಿಮುಕಿಸಿ, ಆ ಸೊಳ್ಳೆಗಳನ್ನು ನಾಶಮಾಡುವುದು. ಈ ಮಹಾ ಕಾರ್ಯಕ್ಕೆ ಪತ್ರಿಕಾ ಕರ್ತರು ಆದಷ್ಟು ಹೆಚ್ಚಿಗೆ ಪ್ರಚಾರಕೊಟ್ಟು, ಅಧಿಕಾರಿಗಳು, ಸಂಘ ಸಂಸ್ಥೆಗಳು ಇಲಾಖೆಯವರಿಗೆ ಸಹಕಾರವನ್ನಿತ್ತು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಬೇಕು. ಇಲಾಖೆಯವರು ಕೊಡುವ ಹೈಟ್ರಾಜಿಯನ್ ಮಾತ್ರೆಯನ್ನು ಪ್ರತಿಯೊಬ್ಬರೂ ದೇವರ ಪ್ರಸಾದವೆಂದು ಸ್ವೀಕರಿಸಬೇಕು ಎಂದರು. ಸಭಾಧ್ಯಕ್ಷ ಕೆ. ಸೂರ್ಯನಾರಾಯಣ ಅಡಿಗರು ತಮ್ಮ ಸಮಾರೋಪ ಭಾಷಣದಲ್ಲಿ, ಮಂಗಳೂರಿನ ನಳ್ಳಿನೀರು ಯೋಜನೆ, ಸರಕಾರಿ ಆಸ್ಪತ್ರೆಯ ವಿಸ್ತರಣೆ, ಆನೆಕಾಲು ರೋಗನಿರೋಧ ಕಾರ್ಯಕ್ರಮದ ಆರಂಭ ಇತ್ಯಾದಿ ಕಾರ್ಯಗಳನ್ನು ಮಾನ್ಯ ಮಂತ್ರಿ ಶ್ರೀ ಶೆಟ್ಟರು ಒದಗಿಸಿಕೊಟ್ಟಿದ್ದಾರೆ. ಆ ಬಗ್ಗೆ ನಾವು ಅವರಿಗೆ ಋಣಿಗಳು ಎಂದು ಹೇಳಿದರು.

ನಂತರ ಮದ್ರಾಸು ರಾಜ್ಯದ ಪಬ್ಲಿಕ್ ಹೆಲ್ತ್ ಡೈರೆಕ್ಟರ್ ಡಾ. ರಾಜಗೋಪಾಲನ್ನರು ವರದಿಯನ್ನೋದಿದರು. ಇಂಡಿಯನ್ ಮಲೇರಿಯಾ ಇನ್ಸ್‌ಟ್ಯೂಟಿನ ಅಸಿಸ್ಟಂಟ್ ಡೈರೆಕ್ಟರ್ ಡಾ. ಸಿ. ಪಿ. ನಾಯರರು ಕಾಲೋಚಿತ ಮಾತುಗಳನ್ನಾಡಿದರು. ಮಾನ್ಯ ಮಂತ್ರಿಗಳು ನಂತರ ಹೈಟ್ರಾಜಿಯನ್ ಮಾತ್ರೆಯನ್ನು ಪ್ರಥಮತ ತಾವು ಸೇವಿಸಿ, ಸಭೆಯಲ್ಲಿದ್ದ ಹಲವರಿಗೆ ವಿತರಣೆಮಾಡಿದರು. ಬಳಿಕ ಆನೆಕಾಲು ರೋಗನಿರೋಧ ಕಾರ್ಯಕ್ರಮದ ಸಾಕ್ಷಿ ಚಿತ್ರದ ಪ್ರದರ್ಶನವಾಗಿ ಡಾ. ಸುಬ್ರಹ್ಮಣ್ಯಂರಿಂದ ಧನ್ಯವಾದ ಸಲ್ಲಿಸಲ್ಪಟ್ಟಿತು.

---

### ಉಡ್ಪಿ ಡಿ. ಮು. ಕೋರ್ಟಿನಲ್ಲಿ
### O. S. No. 245/1956.

Dr. ಕರುಣಾಕರ ಹೆಗ್ಗಡೆ . ವಾದಿ.

ಮತ್ತು

ಬೆನದಿಕ್ತ ಕ್ಯಾಬಿ ಪ್ರೇರಾ - ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗಲಿಕ್ಕೆ ವ್ಯಾಜ್ಯದ ನೊಟೀಸು ತಾ. 12-9-56ಕ್ಕೆ ಇಟ್ಟಿರುವದ್ರಿಂದ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವದನ್ನು ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.

Udipi, 23—8—56.

---

# ಗೋವಿಜಯ
### (ಗೋವಿನ ಕಥೆ)

ಶ್ರೀ. ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತ, ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

---

## ವೈದ್ಯಕೀಯ ಪ್ರದರ್ಶನದ ಉದ್ಘಾಟನೆ

ಮಂಗಳೂರು : ವೆನ್‌ಲೋಕ್ ಆಸ್ಪತ್ರೆ ಮತ್ತು ಲೇಡಿಗೋಷನ್ ಆಸ್ಪತ್ರೆಗಳ ಆಸ್ಪತ್ರೆ ದಿನಾಚರಣೆಯ ವೈದ್ಯಕೀಯ ಪ್ರದರ್ಶನವನ್ನು ತಾ. 1ರಂದು ಸಂಜೆ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಉದ್ಘಾಟಿಸುತ್ತಾ, ಇಂತಹ ಪ್ರದರ್ಶನಗಳನ್ನೇರ್ಪಡಿಸಿ, ಸಾರ್ವಜನಿಕರಿಗೆ, ಸ್ವಾಸ್ಥ್ಯ ಪಾಲನೆಯ ಅರಿವನ್ನು ಮಾಡಿಕೊಡುವುದು ಅಗತ್ಯ. ಇದರಿಂದ ಜನರಿಗೆ ತಮ್ಮ ಆರೋಗ್ಯ ಪರೀಕ್ಷೆಮಾಡಿಸಿಕೊಳ್ಳುವ ಅವಕಾಶ ದೊರೆಯುವುದಲ್ಲದೆ ರೋಗ ಪ್ರತಿಬಂಧಕ ಉಪಾಯಗಳ ಮಾಹಿತಿ ಪಡೆಯಲಿಕ್ಕೂ ಸಾಧ್ಯವಾಗುತ್ತದೆ ಎಂದರು. ಆಸ್ಪತ್ರೆಗಳನ್ನು ಹೆಚ್ಚಿಸುತ್ತಾ ಹೋಗುವುದಕ್ಕಿಂತ ಇದ್ದ ಆಸ್ಪತ್ರೆಗಳನ್ನು ಯೋಗ್ಯ ಮಟ್ಟದಲ್ಲಿ ಇಟ್ಟುಕೊಳ್ಳಬೇಕಾದುದು ಅಗತ್ಯ. ಆಸ್ಪತ್ರೆಗಳ ಡಾಕ್ಟರರು, ರೋಗಿಗಳು ಮತ್ತು ಇತರ ಸಂದರ್ಶಕರೊಡನೆ ಸ್ನೇಹಭಾವದಿಂದ ವರ್ತಿಸಿ, ಆಸ್ಪತ್ರೆಗಳನ್ನು ಜನಪ್ರಿಯವನ್ನಾಗಿ ಮಾಡಬೇಕೆಂದರು.

ಒಂದು ಬೋಧಕ ಆಸ್ಪತ್ರೆಯಾಗಿ ಮಾರ್ಪಟ್ಟಿರುವ ಈ ಆಸ್ಪತ್ರೆಯನ್ನು ಇನ್ನೂ ವಿಸ್ತರಿಸುವುದಕ್ಕಾಗಿ ಸರಕಾರವು ಈಚೆಗೆ ಆಸ್ಪತ್ರೆಯ ಪೂರ್ವಕ್ಕಿರುವ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವರೆ ಮಾಡಿದ ನಿರ್ಣಯವನ್ನು ತಿಳಿಯಪಡಿಸಿ ಬೋಧಕ ಆಸ್ಪತ್ರೆಯಿರುವುದು ಕೇವಲ ಹೊಸ ಡಾಕ್ಟರುಗಳ ತರಬೇತಿಕೊಡುವುದಕ್ಕಾಗಿಯೇ ಅಗಿರದೆ, ಸುತ್ತುಮುತ್ತಲಿರುವ ಡಾಕ್ಟರುಗಳ ಜ್ಞಾನಮಟ್ಟವನ್ನು ಮೇಲೆತ್ತುವುದಕ್ಕಾಗಿಯೂ ಆಗಿದೆ. ಈ ಉದ್ದೇಶದಿಂದ ಬೋಧಕ ಆಸ್ಪತ್ರೆಗಳಲ್ಲಿ ಏರ್ಪಡಿಸಿದ 'ರಿಫ್ರೆಶರ್ ಕೋರ್ಸ್'ಗಳ ಅವಶ್ಯಕತೆಯನ್ನು ಮನಗಂಡು ಪ್ರತ್ಯೇಕವಾಗಿರುವ ಡಾಕ್ಟರರು ಅದರ ಲಾಭವನ್ನು ಪಡೆಯಲು ಮುಂದಾಗಬೇಕೆಂದು ಆಶಿಸಿದರು. ಆರಂಭದಲ್ಲಿ ಜಿಲ್ಲಾ ವೈದ್ಯಾಧಿಕಾರಿ ಡಾ. ಎ. ತಿಮ್ಮಪ್ಪನವರು ಸ್ವಾಗತ ಮಾತುಗಳನ್ನಾಡಿ ಕಳೆದ ನಾಲ್ಕಾರು ವರ್ಷಗಳಿಂದ ಆದ ಈ ಆಸ್ಪತ್ರೆಯ ವಿಸ್ತರಣೆ ಮತ್ತು ಇನ್ನೂ ಆಗಲಿರುವ ಅಭಿವೃದ್ಧಿ ಕಾರ್ಯಗಳ ಕುರಿತು ವಿವರಣೆಯಿತ್ತರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈಸ್ ಚಾನ್ಸಲರ್ ಡಾ| ಜಿ. ಡಿ. ನೆಲಿಯತ್ ಅವರು ಮಾತನಾಡುತ್ತಾ ಮೆಡಿಕಲ್ ಕಾಲೇಜು ಈ ಆಸ್ಪತ್ರೆಯ ಪ್ರಗತಿಗಾಗಿ ಪೂರ್ಣ ಸಹಕಾರ ನೀಡುವುದಾಗಿ ಆಶ್ವಾಸನೆಯಿತ್ತರು. ಡಾ| ಗಡಿಯಾರರು ಧನ್ಯವಾದಗಳನ್ನಿತ್ತರು.

---

### ಉಡ್ಪಿ ಡಿ. ಮು. ಕೋರ್ಟಿನಲ್ಲಿ
### O. P No. 7/1952
### R. I. A. 977/56

1. P. ತುಳಸಿಬಾಯಿ - ಕೇಶ್ವನ್ ಬಾಪಂಜಿ ರಾಮಚಂದ್ರ ರಾಯರ ವಿಧವೆ—

2. ಮೋಹನ—3. ಬಾಲಕೃಷ್ಣ — ಮ್ಯಾನರು— ರಾಮಚಂದ್ರರಾಯರ ಮಕ್ಕಳು.

ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು ಉಡ್ಪಿ ಕಸಬಾ — ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ—

ಸದ್ರಿ ಅರ್ಜಿಯು 1ನೇ ಅರ್ಜಿದಾರಳ ಗಂಡ — 2 — 3ನೇ ಅರ್ಜಿದಾರರ ತಂದೆ . ತಾ. 25-8-1941ರಲ್ಲಿ ಸ್ವರ್ಗಸ್ಥರಾದ— ಕೇಶ್ವನ್ ಬಾಪಂಜಿ ರಾಮಚಂದ್ರ ರಾಯರಿಗೆ—ಸನ್ ಲೈಫ್ ಎಸ್ಸೂರೆನ್ಸ ಕಂಪ್ನಿ ಓಫ್ ಕೆನಡಾ— ಈ ಕಂಪ್ನಿಯಿಂದ ಸಿಕ್ಕತಕ್ಕ ಯಿನ್ಸೂರೆನ್ಸ ಆಯಿವಜು—ವಸೂಲು ಪಡಿಯುವರೆ— ತಾವು ವಾರಿಸುದಾರರೆಂತಲೂ ಆ ಕುರಿತು—1ನೆ ಅರ್ಜಿದಾರಳಿಗೆ—ಈ ಮೊದ್ಲು ಕೊಟ್ಟ ಸಕ್ಸೆಶನ್ ಸರ್ಟಿಫಿಕೇಟನ್ನು ಎಕ್ಸ್‌ಟೆಂಶನ್ ಮಾಡಿ—ಕೊಡ್ಸಬೇಕಾಗಿ—ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 21-9 56ಕ್ಕೆ ತನ್ನಿಗೆ ಯಿಡೋಣಾಗಿಯಿದೆ- ಆ ಕುರಿತು ಆಕ್ಷೇಪ ಹೇಳತಕ್ಕವರು—ಆ ದಿವ್ಸ—ಮೇಲ್ಕಂಡ ಕೋರ್ಟಿನ ಮುಂದೆ 10 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು— ಎಂಬ ಸಂಗ್ತಿ ಪ್ರಕಟಿಸೋಣಾಗಿಯದೆ.

K. Venkatasubba Rao,
Advocate for Petitioners.

ಉಡ್ಪಿ 3-9-1956.

---

### ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

---

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ಶೆಣೈಯವರ

**ಓದಲೇಬೇಕಾದ ಮೂರು ಪುಸ್ತಕಗಳು**

| | |
|---|---|
| ನೀರೆ ಮತ್ತು ನಾನು (೧೫ ವಿನೋದ ಕತೆಗಳು) | 1—0—0 |
| ಜಪಾನ್ ಬೆಳಕು ಮತ್ತು ಇತರ ಕಥೆಗಳು | 1—0—0 |
| ಕಸದ ಡಬ್ಬಿಗಳು (೨೪ ಹರಟೆಗಳು) | 1— — |

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ




# ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದನ್ನು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು, ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

**ನಮ್ಮ ಸ್ಟಾಕಿಸ್ಟರು:**

(1) ಸುದರ್ಶನ ಆಯುರ್ವೇದ ವೈದ್ಯಶಾಲ— ಬೆಂಗಳೂರು 2.
(2) ಷಾ ಕಂಪೆನಿ— ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ— ಚಿಂತಾಮಣಿ.

# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

### ಭಾರತದಲ್ಲಿ ರಶ್ಯದ ಯಾತ್ರಿಕರು

(೩ನೇ ಪುಟದಿಂದ)

ಸಾಲ್ಟಿಯ್‌ಕೋವ್‌ರವರ ಕಿರುವಾಯ ಚಿತ್ರಕಲಾವಿದರಾದ ವಿ. ವೆರೆಶ್ಚಗಿನ್‌ರವರೂ ಮತ್ತು ಎನ್. ಕರಮ್‌ಜಿನ್‌ರವರೂ ಭಾರತದೇಶವನ್ನು ಸಂದರ್ಶಿಸಿದರು. ತಮ್ಮ ಚಿತ್ರಗಳಲ್ಲಿ, ಈ ಅಸಾಧಾರಣವಾದ ದೇಶವನ್ನೂ ಬ್ರಿಟಿಷ್ ವಸಾಹತುದಾರರು ಭಾರತೀಯ ರಾಷ್ಟ್ರೀಯ ವಿಮೋಚನಾ ಚಳವಳಿಯನ್ನು ಅಡಗಿಸಲು ನಡೆಸುತ್ತಿದ್ದ ಕಾರ್ಯಾರ್ಚಣೆಯ ದುರಂತ ಅಧ್ಯಾಯಗಳನ್ನೂ ವೆರೆಶ್ಚಗಿನ್‌ರವರು ಸ್ಪಷ್ಟವಾಗಿಯೂ ಮತ್ತು ವಾಸ್ತವತಾ ಪೂರ್ಣವಾಗಿಯೂ ಪ್ರತಿಬಿಂಬಿಸಿದರು.

ಕಳೆದ ಶತಮಾನದ ಅತ್ಯಂತ ಗಣನೀಯ ಭಾರತೀಯ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದ, ಸೈಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯದ ಪ್ರೊಫೆಸರ್ ಮಿನಾಯೇವ್‌ರವರು ವೆರೆಶ್ಚಗಿನ್‌ರವರಿದ್ದ ಸಮಯದಲ್ಲಿಯೇ ಭಾರತ ದೇಶದಲ್ಲಿ ಇದ್ದರು. ಪುರಾತನ ಮತ್ತು ಆಧುನಿಕ ಭಾರತೀಯ ಭಾಷೆಗಳಲ್ಲಿಯೂ ಮತ್ತು ಒಟ್ಟಿನಲ್ಲಿ ಭಾರತ ದೇಶದ ಇತಿಹಾಸದ ಬಗ್ಗೆಯೂ ಪ್ರೊಫೆಸರ್ ಮಿನಾಯೇವ್‌ರವರು ಪರಿಣತರಾಗಿದ್ದರು. ತಮ್ಮ ಸ್ವಂತ ದೇಶದ ಪುರಾತನ ಭಾಷೆಗಳ ವ್ಯಾಸಂಗದಲ್ಲಿ ತೊಡಗಿದ್ದ ಭಾರತೀಯ ವಿದ್ಯಾರ್ಥಿಗಳಿಂದ ಪ್ರೊ. ಮಿನಾಯೇವ್‌ರವರ ಪುಸ್ತಕಗಳು ಉಪಯೋಗಿಸಲ್ಪಡುತ್ತಿದ್ದುವು.

೧೯ನೆಯ ಶತಮಾನದಲ್ಲಿ ಭಾರತ ದೇಶದಲ್ಲಿದ್ದ ಗಣ್ಯ ಯಾತ್ರಿಕರಲ್ಲಿ ಐ. ಪಾಶಿನೋರವರಿಗೆ ಒಂದು ವಿಶಿಷ್ಟ ಸ್ಥಾನವು ಸಲ್ಲಬೇಕಾಗಿದೆ. ಉತ್ಸಾಹೀ ಪ್ರಾಚ್ಯಶಾಸ್ತ್ರಜ್ಞರೂ, ಮೌಲಿಕವಾದ ಮತ್ತು ಸ್ವಾರ್ಥರಹಿತ ಸಂಶೋಧನೆಯಲ್ಲಿ ನಿರತರಾಗಿದ್ದವರೂ, ಪ್ರಾಚ್ಯ ಭಾಷೆಗಳಲ್ಲಿ ಮಹಾ ವಿಶೇಷಜ್ಞರೂ ಆಗಿದ್ದ ಪಾಶಿನೋರವರು ಇರಾನ್, ಟರ್ಕಿ, ಚೀನಾ ದೇಶಗಳನ್ನೂ ಒಳಗೊಂಡು ಅನೇಕ ಪ್ರಾಚ್ಯ ದೇಶಗಳಲ್ಲಿ ಸಂಚಾರವನ್ನು ಮಾಡಿದ್ದರು. ಭಾರತ ದೇಶಕ್ಕೆ ಅವರು ಮೂರು ಬಾರಿ ಹೋಗಿದ್ದರು. ಪಾಶಿನೋರವರ ಆರೋಗ್ಯವು ಚೆನ್ನಾಗಿರಲಿಲ್ಲ. ಅವರ ಕಾಲು ಕುಂಟಾಗಿದ್ದಿತು ಆದರೂ ಕೂಡ ಅವರು ಧೈರ್ಯದಿಂದ ಮುನ್ನುಗ್ಗಿ ಭಾರತ ದೇಶದ ಮತ್ತು ಅಫ್ಘಾನಿಸ್ಥಾನದ ಎಂದೂ ಯಾರೂ ಕಾಲಿಡದಂತಹ ಅರಣ್ಯಗಳಲ್ಲಿ ಸಂಚರಿಸಿದ್ದರು.

ಕಳೆದ ಶತಮಾನದ ಅಂತ್ಯದಲ್ಲಿಯೂ ಮತ್ತು ಈ ಶತಮಾನದ ಪ್ರಾರಂಭದಲ್ಲಿಯೂ ಭಾರತ ದೇಶಕ್ಕೆ ಭೇಟಿಯನ್ನಿತ್ತ ಯಾತ್ರಿಕರಲ್ಲೂ, ವಿಜ್ಞಾನಿಗಳಲ್ಲಿಯೂ ವಿ. ನೊವಿಟ್‌ಸ್ಕೀಯವರೂ, ಸುಪ್ರಸಿದ್ಧ ಪ್ರಕೃತಿಶಾಸ್ತ್ರ ವಿಶಾರದರಾಗಿದ್ದ ಎ. ಕ್ರಾಸ್ನೋವ್ ವರೂ ಮತ್ತು 'ಅಕಡೆಮಿಷಿಯನ್' ಎಫ್.-ಶ್ಚೆರ್‌ಬಾತ್‌ಸ್ಕೀಯವರೂ ಮುಖ್ಯರಾದವರಾಗಿದ್ದರು. ಮೊದಲನೆಯ ಜಾಗತಿಕ ಯುದ್ಧ ಕಾಲದಲ್ಲಿ ಭಾರತ ದೇಶಕ್ಕೆ ಸಂಬಂಧಿಸಿದ ಸಂಶೋಧನೆಗಳು ಕಡಿಮೆಯಾದುವು. ಆದರೂ ಕೂಡ ರಶಿಯದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಮಾನವ ಕುಲ ವಿವರಣಾ ಶಾಸ್ತ್ರೀಯ ಸಂಶೋಧನಾ ಮಂಡಲವು ನಾಲ್ಕು ಸರ್ಗಗಳ ಕಾಲ ಭಾರತದಲ್ಲಿದ್ದು ಅನೇಕ ಅಮೂಲ್ಯ ವಿಷಯಗಳನ್ನು ಸಂಗ್ರಹಿಸಿಕೊಂಡಿತು.

ಭಾರತೀಯ ಜನತೆಯ ವಿಷಯದಲ್ಲಿ ರಶಿಯಾ ದೇಶದ ಈ ರಾಯಭಾರಿಗಳು ಬಹಳ ತಪ್ಪದ ತೋರಿಸುತ್ತಿದ್ದ ಸ್ನೇಹದ ಮನೋಭಾವನೆಯಿಂದ ಭಾರತ ದೇಶದ ವಿಷಯವಾಗಿ ಆಳವಾದ ಅಭ್ಯಾಸವನ್ನು ಮಾಡುವುದರ ಸಲುವಾಗಿಯೂ ಮತ್ತು ಪ್ರಪಂಚಕ್ಕೆ ಮಹತ್ತರವಾದ ಭಾರತೀಯ ಸಂಸ್ಕೃತಿಯನ್ನೂ, ಅದರ ಅತ್ಯುನ್ನತ ಪ್ರತಿಭಾಸಂಪನ್ನರಾದ, ಉದ್ಯಮಶೀಲ ಜನತೆಯನ್ನೂ ವಿಸ್ತೃತ ರೀತಿಯಲ್ಲಿ ಪರಿಚಯ ಮಾಡಿಕೊಡುವುದರ ಸಲುವಾಗಿಯೂ ತುಂಬ ಸಹಕಾರ ದೊರೆತಿದೆ ಎನ್ನಬಹುದು.

---

## ಕ್ಷಯರೋಗ ನಿವಾರಣೆ ಸಾಧಿಸುವುದೆಂತು

### ಕೆಳಗಿನ ಸೂತ್ರಗಳನ್ನು ಪಾಲಿಸುವುದರಿಂದ

ನೀವು ಇಂದು ದೃಢಕಾಯರಾಗಿರಬಹುದು. ಆದರೆ ಕ್ಷಯರೋಗವು ರೋಗಗ್ರಸ್ತರಿಂದ ದೃಢಕಾಯರಿಗೂ ತಗಲುವುದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ. ಭಾರತ ದೇಶದಲ್ಲಿ 25,00,000 ಜನರು ಈ ರೋಗದಿಂದ ಬಳಲುತ್ತಿದ್ದಾರೆ. ಅನೇಕರಿಗೆ ಈ ಸಾಂಕ್ರಾಮಿಕ ರೋಗವು ಹೇಗೆ ಒಬ್ಬರಿಂದ ಇನ್ನೊಬ್ಬರಿಗೆ ತಗಲುತ್ತದೆ ಎಂಬುದು ತಿಳಿಯದಾಗಿದೆ. ಪೇಟೆಗಳಲ್ಲಿ, ಮೇಳ ಕೂಟಗಳಲ್ಲಿ, ಶಾಲೆಗಳಲ್ಲಿ, ಪ್ರಾರ್ಥನಾ ಮಂದಿರಗಳಲ್ಲಿ, ಆಫೀಸುಗಳಲ್ಲಿ, ಸಿನೆಮಾ ಮಂದಿರಗಳಲ್ಲಿ ಜನರು ಕಲೆತು ಬೆರೆತು ಕೂಡುವರು. ಜನಜಂಗುಳಿಯ ಈ ಸ್ಥಳಗಳಲ್ಲಿ ಕೆಲವರು ಕೆಮ್ಮುವರು, ಕೆಲವರು ಉಗುಳುವರು. ಇದರ ದೆಸೆಯಿಂದಾಗಿ ಕ್ಷಯ ರೋಗಾಣುಗಳು ರೋಗಗ್ರಸ್ತರಿಂದ ಇತರರಿಗೆ ಗೋಚರಕ್ಕೆ ಬಾರದೆನೇ ಅವರ ದೇಹವನ್ನು ಪ್ರವೇಶಿಸುವುವು. ಯಾವ ಕಾಲಕ್ಕೆ ಎಲ್ಲಿಂದ ಈ ರೋಗ ತಗಲುವುದು ಎಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಸಮೀಪದ ಕ್ಷಯರೋಗ ನಿವಾರಣಾ ಕ್ಲಿನಿಕಿಗೆ ಹೋಗಿ ಪರೀಕ್ಷಿಸಿಕೊಳ್ಳಿರಿ. ಇಲ್ಲವೆ ಡಾಕ್ಟರರಿಂದ ವೈದ್ಯಕೀಯ ಎಕ್ಸ್‌ರೇ ಮೊದಲಾದ ಪ್ರಯೋಗಗಳನ್ನು ಮಾಡಿಸಿಕೊಳ್ಳಿರಿ ಕ್ಷಯರೋಗವನ್ನು ಹತೋಟಿಗೆ ತರಲು ಸಮಾಜ ಕ್ಷೇಮ ಚಿಂತನಾ ಕಾರ್ಯಕ್ರಮ ಅವಶ್ಯಕ. ಸಾರ್ವಜನಿಕರೂ ಡಾಕ್ಟರರು, ಎಲ್ಲರೂ ಒಕ್ಕಟ್ಟಿನಿಂದ ಪ್ರಚಾರ ಕಾರ್ಯ ಕೈಕೊಳ್ಳಬೇಕು. ಜನಜೀವನವನ್ನು ಸುಧಾರಿಸಬೇಕು. ರೋಗಗ್ರಸ್ತ ಜನತೆಯ ಪರವಾಗಿ ಸಹಾಯನಿಧಿಯನ್ನು ಸಂಗ್ರಹಿಸಬೇಕು. ಈ ಕಾರ್ಯದ ಬಗ್ಗೆ ಭಾರತದ ಉದ್ದಿಮೆದಾರರ ಹಾಗೂ ಇತರರ ನೆರವಿನಿಂದ, ನವದೆಹಲಿಯಲ್ಲಿ ಇಂಡಿಯಾದ ಕ್ಷಯರೋಗ ನಿವಾರಣಾ ಸಂಘವು ಸ್ಥಾಪಿಸಲ್ಪಟ್ಟಿದೆ. ಅದರ ಮೂಲಕ ಪರಿಣಾಮಕಾರಿ ಕಾರ್ಯ ನಡೆಸಲು, ರಾಜ್ಯ, ಜಿಲ್ಲಾ, ತಾಲೂಕು, ಗ್ರಾಮೀಣ ಸಂಘಗಳು ಉದಯಕ್ಕೆ ಬಂದಿವೆ. ಈಗಾಗಲೇ ಸಹಸ್ರಾರು ಮಂದಿ ಕ್ಷಯರೋಗಿಗಳಿಗೆ ಔಷಧೋಪಚಾರವನ್ನಿತ್ತು ಅಕಾಲ ಮರಣಕ್ಕೆ ತುತ್ತಾಗುವುದನ್ನು ತಪ್ಪಿಸಲಾಗಿದೆ ಅಲ್ಲದೆ ಗುಣಹೊಂದಿದವರು ಈಗ ತಮ್ಮ ಸಂಸಾರ ನೌಕೆಯನ್ನು ನಡೆಸಿಕೊಂಡು ಹೋಗಲು ಸಮರ್ಥರಾಗಿರುತ್ತಾರೆ. ಇಂತಹ ಪವಿತ್ರ ಕಾರ್ಯದ ಮುನ್ನಡೆಗಾಗಿ ಎಲ್ಲರೂ ಒಂದಾಣೆ ಬೆಲೆಯ ಟಿ. ಬಿ. ಮೊಹರುಗಳನ್ನು ಪಡೆಕೊಳ್ಳಬೇಕಾದುದು ಆದ್ಯ ಕರ್ತವ್ಯವಿದೆ.

ಕ್ಷಯ ರೋಗವನ್ನು ತಡೆಗಟ್ಟಲು ಜನ ಸಾಮಾನ್ಯರಿಗೆ ಅದರ ಜ್ಞಾನವನ್ನುಂಟು ಮಾಡುವ ಸಲುವಾಗಿ ನವದೆಹಲಿಯಲ್ಲಿರುವ ಇಂಡಿಯಾ ಕ್ಷಯರೋಗ ನಿವಾರಣಾ ಸಮಿತಿಯವರು ಪ್ರಾದೇಶಿಕ ಭಾಷೆಗಳಲ್ಲಿ ಚಿಕ್ಕ ಪುಟ್ಟ ಚಿಕ್ಕ ಕರ ಪ್ರಕಟಣೆಗಳನ್ನು ಪ್ರಕಟಿಸಿದ್ದಾರೆ. ಜನತೆಗೆ ಹಂಚುತ್ತಲೂ ಇದ್ದಾರೆ. ಇಂತಹ ಜನಹಿತಕಾರ್ಯದ ಸದುಪಯೋಗವನ್ನು ಸರ್ವರೂ ಪಡೆಯಬೇಕಾದುದು ಅತ್ಯಾವಶ್ಯಕವೆಂದು ಬೇರೆ ಹೇಳಬೇಕಾಗಿಲ್ಲ

---

### ಮೈಸೂರು ರಾಜ್ಯ ಅಭಿವೃದ್ಧಿ ಯೋಜನಾ ಸಾಲ

ಕಳೆದ ತಾ 29 ಮತ್ತು 30ರಲ್ಲು ಬೆಂಗಳೂರಲ್ಲಿ ಅಂತರ್ ರಾಜ್ಯ ಮಂತ್ರಿಮಟ್ಟದ ಸಭೆಯು ಜರಗಿ ಕರ್ನಾಟಕ ರಾಜ್ಯದ ಬೊಂಬಾಯಿ ಹೈದರಾಬಾದ್, ಮದ್ರಾಸ್ ಮತ್ತು ಕೊಡಗಿನ ನಾಗರೀಕರು ದ್ವಿತೀಯ ಪಂಚವಾರ್ಷಿಕ ಯೋಜನಾಭಿವೃದ್ಧಿ ಕಾರ್ಯಗಳಿಗಾಗಿ ಮೈಸೂರು ಸರಕಾರವು ಹೊರಡಿಸಿದ ನೇಕಡಾ 4ರ ಬಡ್ಡಿ ಸಾಲಕ್ಕೆ ಚಂದಾ ತೊಡಗಿಸಿ ಸಹಕರಿಸಬೇಕಾಗಿ ವಿನಂತಿಮಾಡಲಾಗಿದೆ.

---

## ನೇಗಿಲ ಮಹಿಮೆ

ನೇಗಿಲ ಮಹಿಮೆಯು ಏನು ವಿಚಿತ್ರವು
ಲೋಕದ ಸಾಕುವ ಸಾಧನವು|
ನೇಗಿಲ ಗುಳವೇ ನಾಡಿನ ಶಕ್ತಿಯು|
ನೇಗಿಲ ಯೋಗಿಯೆ ಸಾಧಕನು||

ಭೂಮಿಯ ಒಡಲನು ಅಗೆಯುತ
ಅರೆಯುತ
ಕಾಳನು ಬೆಳೆಸಲು ಗೈಯುತಿಹೆ|
ಸ್ವಾಮಿಯು ನೀನಿಹೆ ನಾಡಿನಮುಂದಿಗೆ|
ಸೇವೆಯ ಮುದದಲಿ ನೀಡುತಿಹೆ||

ಹಸಿದಿಹ ಹೊಟ್ಟೆಗೆ ಹಿಟ್ಟನೀಯುತಿಹೆ|
ಜನ್ಮದ ತಾಳಿದೆ ವಂದಿಸುವೆ|
ಮಸಿ ನುಡಿಯಲ್ಲವು, ಹೊಗಳುವುದಲ್ಲವು|
ಜನ್ಮವ ಸಾರ್ಥಕ ಗೊಳಿಸಿರುವೆ||

ನೀನೆಗೆ ಎಂದೇ ಬಾಳುವ ಪ್ರಾಣದ|
ಕೊಂದಿಗೆ ಬಾಳನು ಸಾಗಿಸಿದೆ|
ಸೇವೆಯೆ ಲೋಕದ ಶಾಶ್ವತ ಕೀರ್ತಿಯು|
ಎಂಬುದ ಲೋಕಕೆ ತೋರಿಸಿದೆ||

ಸಾವಿರ ಸ್ವರ್ಗದ ಶಕ್ತಿಗೂ ನಿನ್ನಯ|
ಬಾಲದ ಬಲವೇ ಮಿಗಿಲಿರದೆ?
ಸಾವಿರ ಕೋಟಿಯ ಜನಗಳ ಹಸಿವನು|
ತಣಿಸುವ ಹೊಣೆಯನು ಹೊತ್ತಿರುವೆ||

ಎಮ್. ಎಸ್. ಬ್ರಹ್ಮಾವರ

೬೦ ವರ್ಷಗಳಿಂದಲೂ ಪ್ರಸಿದ್ಧ ಇದೆ.

ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

# ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು;

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.

Tele add "CAWASHABAD"



ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

# ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

**SRI GAJANANA CLOTH STORES,**

TENKAPET, **UDIPI,** S. KANARA.



ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

## ಕಾಸರಗೋಡು ಹೋಯಿತು!

(೧ನೇ ಪುಟದಿಂದ)

ನ್ನು ನಿಲುವೆಯನ್ನು ಬದಲಾಯಿಸಿರು ರೆಂದು ವ್ಯಕ್ತವಾಯಿತು. ಆವನು ಶ್ರೀಗ ಎದ ಮಲ್ಯ ಮತ್ತು ಹೆಗ್ಡೆಯವರಿಗೆ ಕೇ ರಳದ ಪ್ರತಿನಿಧಿಗಳೊಡನೆ ಒಡಂಬಡಿಕೆಗೆ ನ್ನಿರೆಂದು ಹೇಳಿದರು! ಭಾರತ ಸರಕಾ ರ ಪೂರ್ವ ನಿರ್ಧಾರವು ಕಾಸರಗೋಡಿ ಕನ್ನಡಿಗರಿಗೆ ಅನುಕೂಲವಾಗಿತ್ತೆಂಬು ದನ್ನು ಅವರು ಒಪ್ಪಿದರೂ ಈಗ ಇಂತಹ ದ್ದು ಪಡಿ ಮಾಡುವುದಕ್ಕೆ ಕೇರಳದ ಪ್ರತಿ ನಿಧಿಗಳ ಸಮ್ಮತಿ ಅವಶ್ಯವೆಂದು ಹೇಳ ತ್ತಿದರು!

ಇಂತಹ ಸಮ್ಮತಿಯು ಬಾರದಿದ್ದರೆ ಕಾಸರಗೋಡಿನ ಕನ್ನಡಿಗರ ಗೋಳನ್ನು ಕೇಳುವಂತಿಲ್ಲವೆಂದೇ ಗೃಹಮಂತ್ರಿಗಳ ನಿ ಲುವೆ ಸ್ಪಷ್ಟಪಡಿಸಿತು. ತಮಗೆ ಸಂಪೂ ರ್ಣ ಅನುಕೂಲವಾಗಿ ಸರಕಾರ ಮನೋ ಭಾವವಿರುವಾಗ, ಕೇರಳೀಯರು ಸ್ವೇಚ್ಛೆ ಯಿಂದ ಕಾಸರಗೋಡಿನ ಒಂದಂಶವನ್ನು ಬಿಡಲೊಪ್ಪಲಾರರೆಂಬ ವ್ಯಾವಹಾರಿಕ ವಿ ಷಯಗಳ ಕಡೆಗೆ ಗಮನ ಸೆಳೆದಾಗ ಸಹ ಗೃಹಮಂತ್ರಿಗಳು ತಮ್ಮ ಹಟವಾದಿತನ ವನ್ನು ಬಿಡಲಿಲ್ಲ.

ಲೋಕಸಭೆಯ ಮುಂದೆ ರಾಜ್ಯಗಳ ಪುನಾರಚನೆಯ ವಿಧೇಯಕವಿದ್ದಾಗ ಮ ಧ್ಯಸ್ಥಿಕೆಯ ಮೂಲಕ ಈ ಗಡಿ ತಂಟೆಯ ನ್ನು ಬಗೆಹರಿಸಿಕೊಳ್ಳುವ ನಿರ್ಧಾರ ಮಾ ಡಲಾಯಿತು. ಉಪರಾಷ್ಟ್ರಾಧ್ಯಕ್ಷರನ್ನು ಮಧ್ಯಸ್ಥಿಕೆಗೆ ಕೇಳಿಕೊಂಡಾಗ ಅವರು ತನಗಿದು ಯೋಗ್ಯವಲ್ಲವೆಂದು ಹೇಳಿ ನಿ ರಾಕರಿಸಿದರು. ಆದರೆ ಬೇರೆ ಯಾರಾದ ರೊಬ್ಬ ಮಧ್ಯಸ್ಥಗಾರನನ್ನು ಹುಡುಕಿ ಆ ತ ನಿ ಗೆ ಈ ವಿ ಷ ಯ ವ ನ್ನು ನ್ಯಾಯವಾಗಿ ಒಪ್ಪಿಸಿಕೊಡಬೇಕಾಗಿತ್ತ ಲ್ಲವೆ? ತಾನು ಶ್ರೀ ಲಾಲಬಹಾದುರ ಶಾಸ್ತ್ರಿ, ಶ್ರೀ ಜಗಜೀವನರಾಮ ಅಥವಾ ಶ್ರೀ ಚಂದ್ರಶೇಖರ ಅಯ್ಯರ (ವರಿಷ್ಠ ನ್ಯಾಯಾಲಯದ ಮಾಜಿ ನ್ಯಾಯಮೂ ರ್ತಿ ಮತ್ತು ಈಗ ಮತದಾರ ಸಂಘಗಳ ಆಯೋಗದ ಅಧ್ಯಕ್ಷ) ಇವರಲ್ಲಿ ಯಾರಾದ ರೊಬ್ಬರಿಗೆ ಈ ವಿಷಯ ಒಪ್ಪಿಸಲು ಸೂ ಚಿಸಿದುದಾಗಿ ಶ್ರೀ ಶಿವರಾಯರು ತಿಳಿಸಿ ದ್ದಾರೆ.

ಈ ಸೂಚನೆಯನ್ನು ಪ್ರಧಾನ ಮಂತ್ರಿ ಗಳ ಅವಗಾಹನೆಗೆ ಸಹ ತರಲಾಯಿತು. ಆದರೆ ಯಾವ ಕಾರ್ಯಕ್ರಮವನ್ನೂ ಕೈ ಗೊಳ್ಳಲಿಲ್ಲ. ಕಾಂಗ್ರೆಸು ಅನಂತರವೂ ಕೆಲ ಸಭೆ ನಡೆಸಿದೆ. ಆದರೆ ಹಿಂದೆ ಮಾ ಡಿದ್ದ (ಮಧ್ಯಸ್ಥಿಕೆಗಾರರನ್ನು ನೇಮಿಸು ವ) ಗೊತ್ತುವಳಿಯನ್ನು ಅದು ರದ್ದುಗೊ ಳಿಸಿಲ್ಲ. ಹೀಗಿದ್ದೂ ಈ ಅಸಡ್ಡೆಗೇನೆ ನ್ನೋಣ?

ದಕ್ಷಿಣ ಕನ್ನಡದ ಜನರ ಆತ್ಮೀಯ ರಾದ ಕಾಸರಗೋಡಿನ ಎರಡು ಲಕ್ಷ ಕನ್ನ ಡಿಗರು—ಅವರು ನಿಜವಾಗಿ ತುಳುವರು —ಇಂದು ನಮ್ಮನ್ನು ಅಗಲುವಂತಾಗಿ ದೆ. ಪ್ರಜಾಪ್ರಭುತ್ವದ ಅವಹೇಳನೆ ಈ ಪ್ರಸಂಗದಲ್ಲಿ ನಡೆದಷ್ಟು ಬೇರೆ ಎಲ್ಲಿಯಾ ದರೂ ಆಗದೆಯೆ? ಇಲ್ಲವೆಂದು ನಾವಂತೂ ಕಂಠೋಕ್ತವಾಗಿ ಸಾರು ತ್ತೇವೆ.

---

**ಉಡುಪಿ ಡಿ. ಮು. ಕೋರ್ಟಿನಲ್ಲಿ**

O. P. No. 145/1956.

ರಾಜಾ M. ಶೆಟ್ಟಿ ಕೂಡಾ . ಅರ್ಜಿದಾರರು ಮತ್ತು

. ರಾಧಾಕೃಷ್ಣ ಶೆಟ್ಟಿ ಕೂಡಾ —ಎದ್ರಿರು ಇವರೊಳಗೆ

ಈ ಮೂಲಕ ಎದ್ರಿಗೆ ವ, ಇತರ ಸಮಸ್ತ ನರಿಗೂ ತಿಳಿಯಪಡಿಸುದ್ದು:

1ನೇ ಅರ್ಜಿದಾರಳ ಗಂಡ ಮತ್ತು ಮಿಕ್ಕ ಅರ್ಜಿದಾರರ ವ, 1ನೇ ಎದ್ರಿಯ ತಂದೆ ಕ್ಕೆ ಲಾಗ್ಯೆ ಮೃತಪಟ್ಟ ಉಳಿಯಾರುಗೋಳಿ ಪ್ರಮದ, ಕಾಪು ಕೆಸರು ನಸರಿಯ, K. ಮುದ್ದಣ್ಣ ಶೆಟ್ರಿಗೆ ಅರ್ಜಿಯಲ್ಲಿ ಕಾಣ್ಸಿದಂತೆ ಸಾ "Debts and securities" ಲೂಲುಮಾಡಲಿಕ್ಕೆ ತಾವು ವ,1ನೇ ಎದ್ರಿಯು ಕ್ಕೃದಾರರಿಂತಲೂ, ಅವುಗಳನ್ನು ವಸೂಲು ಸಯಲಿಕ್ಕೆ ಅವರ ಬಗ್ಗೆ 1ನೇ ಅರ್ಜಿದಾರಳ ಪ್ರಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಿಸ ಬೇಕಾಗಿಯೂ, ಅರ್ಜಿದಾರರು ದಾಖ್ಲು ಮಾಡಿ ಮೇಲ್ಕಂಡ ಅರ್ಜಿಯು ತಾ. 19-9-56 ತನ್ನಿಗೆ ಇಡೋಣಾಗಿಯದೆ ಅಪ್ರಿಂದ ಆ ರಿತು ಆಕ್ಷೇಪವುಳ್ಳವರು ತಪ್ಪ ಆಕ್ಷೇಪಗ ಳ್ನು ಸದ್ರಿ ದಿನಸ ಹಗಲು ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಮುಂದೆ ಹಾಜ್ರಾಗಿ ಹಿಬಿಲುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸ್ರಿ ಅರ್ಜಿಯು ಯೇಕಪಕ್ಷವಾಗಿ ತೀರ್ಮಾನ ಲ್ಪಡುವುದು.

B. S. Hegde.
Vakil for Pltf.

Udipi Dated 26—8—1956.

---

## ಕಲಿಯುಗದ ಗೀತಾಚಾರ್ಯ

(೨ನೇ ಪುಟದಿಂದ)

ಹೌದು! ಅದೇ ಸ್ವಾಮಿ ವಿವೇಕಾನಂ ದರೆ ಶ್ರೀ ಕೃಷ್ಣನೆಂದರೆ ತಪ್ಪಾಗಲಾರ ದು. ದುಷ್ಟದಮನ, ಶಿಷ್ಟಪರಿಪಾಲಕನಾ ಗಿ ಭಕ್ತರನ್ನು ಉದ್ಧರಿಸಿದವನು ಶ್ರೀ ಕೃ ಷ್ಣನಾದರೆ, ದುಷ್ಟರನ್ನು ಶಿಷ್ಟರನ್ನಾಗಿ ಮಾಡಿ, ಶಿಷ್ಟರಿಗೆ ಪರಮಾತ್ಮನಲ್ಲಿ ಲೀನ ವಾಗುವ ಮಾರ್ಗ ತೋರಿದವರು ಸ್ವಾಮಿ ವಿ ವೇ ಕಾ ನಂ ದ ರು. ದೈ ವ ಸಂ ಭೂ ತ, ವಿ ಭೂ ತಿ ಪು ರು ಷ ರು ಅವರು ಅಮಾನುಷ ಕೃತ್ಯಗಳನ್ನು ಎಸೆಗಲು ಅವರಿಂದ ಸಾಧ್ಯವಿದ್ದ ರೂ ಮನುಷ್ಯ ಪ್ರಯತ್ನದಿಂದ ಎಲ್ಲಿಯ ವರೆಗೆ ಹಿರಿದ ದಾರಿಯಲ್ಲಿ ಸಾಗಬಹುದು? ಎಷ್ಟು ಸಾಧಿಸಬಹುದು? ಎಂದು ಜನರಿಗೆ ಸಾಧಿಸಿ ತೋರಿಸುವುದರಲ್ಲೇ ಅವರು ಆಸ ಕ್ತರಾದರು. "ಭಾರತಾಂಬೆ ನಿನ್ನುದರ ದಿಂದ ನಗ್ನನಾಗಿಯೇ ಬಂದೆ. ನಗ್ನನಾಗಿ ಯೇ ಹೋಗಲಿರುವೆನು" ಎಂದವರು ನು ಡಿದರೂ ದೈವತ್ವದ ಪೀತಾಂಬರ ಉಟ್ಟೇ ಅವರು ಭಾರತೀಯರ ಕಣ್ಣಿಗೆ ಕಂಡಿ ದ್ದಾರೆ. ಏಕೆಂದು ಪ್ರಶ್ನಿಸದೆ ಮಾಡಿ ಮಡಿ ದಿದ್ದಾರೆ. "ಇನ್ನೊಬ್ಬನಲ್ಲಿ ವಿಶ್ವಾಸವಿಡಿ ಎನ್ನಬೇಡಿರಿ. ಮೊದಲು ನಿಮ್ಮಲ್ಲಿ ನೀವೇ ವಿಶ್ವಾಸವಿಟ್ಟುಕೊಳ್ಳಿ" ಎಂದು ಬಾಳ ಹಾದಿಯಲ್ಲಿ ಎತ್ತಿ ತೋರಿಸಿದ್ದಾರೆ.

"ಮಾತೃ ದೇವೋಭವ, ಪಿತೃ ದೇವೋ ಭವ ಎನ್ನುತ್ತಿರುವಿರಿ. ಆದರೆ ನಾನೆನ್ನು ತ್ತೇನೆ, ದರಿದ್ರ ದೇವೋಭವ, ಮೂರ್ಖ ದೇವೋಭವ ಎನ್ನಿರೆಂದು" ಎಂಬ ಅವರ ಉತ್ತೇಜಿತ ಸಮತಾಭಾವದ ನುಡಿ ಜನತೆ ಯ ಮೇಲೆ ಅವರಿಗಿರುವ ನಿಸ್ವಾರ್ಥ ಪ್ರೇ ಮವನ್ನು ಎತ್ತಿ ತೋರಿಸುವುದಿಲ್ಲವೆ?

ಜೀವನದ ಸಂಧ್ಯಾಕಾಲ ಸಮೀಪಿಸು ತ್ತಿರುವ ಕಾಲದಲ್ಲಿ ಸಹ ಸ್ವಾಮಿ ವಿವೇ ಕಾನಂದರು—"ಹೇ ಭಾರತ ಜನನಿ! ನೀನೆ ನಗೆ ಜನ್ಮವಿತ್ತೆ ಆದರೆ ಎಲ್ಲರಂತೆ ನಾನೂ ಸ್ಥಿರನಲ್ಲ. ಎಲ್ಲರೂ ಎಲ್ಲಿಗೆ ಹೋಗಬೇ ಕೊ ಅಲ್ಲಿಗೇ ನಾನೂ ಹೋಗುತ್ತೇನೆ. ಆದರೆ ಅಮ್ಮಾ, ಹಿಂದೂ ಸಾಗರವೇ ಮ ಸಿಯಾದರೂ, ಹಿಮಾಲಯದ ಅತ್ಯಂತ ಉನ್ನತ ಶಿಖರವೇ ಲೇಖನಿಯಾದರೂ, ಭೂಮಿಯೇ ಕಾಗದವಾದರೂ, ಕಾಲನೇ ಬರಹಗಾರನಾದರೂ ಬಿನ್ನ ಕೃತಜ್ಞತೆಯ ನ್ನು ವಿವರಿಸಲಾರೆ" ಎಂದು ಭಾರತ ಮಾತೆಗೆ ಯಾರೂ ಅರ್ಪಿಸದಂತಹ ಬಹು ದೊಡ್ಡ ವಂದನೆಯನ್ನು ಅರ್ಪಿಸಿದ್ದಾರೆ.

ಗೀತಾಚಾರ್ಯ ಮತ್ತು ವಿವೇಕಾನಂ ದರ ಜೀವನ ಮತ್ತು ಅವರ ನುಡಿಗಳನ್ನು ಸರಿ ಹೋಲಿಸಿ, ಬೇಕಾದ ಆತ್ಮ ಪೋಷ ಕಜ್ಞಾನವನ್ನು ಸಂಪಾದಿಸುವುದು ಭಾರತೀ ಯನಾದ ಪ್ರತಿಯೊಬ್ಬನ ಹಕ್ಕು ಏಕೆ, ಇದೇ ವಿಶ್ವದ ಜನತೆಯ ಹಕ್ಕು. ವಿವೇ ಕಾನಂದರ ನುಡಿಮುತ್ತುಗಳು ನಿರ್ಮಲಾ ಕಾಶದಲ್ಲಿ ಬೆಳಗುವ ಚಂದ್ರನಂತೆ ಪ್ರತಿ ಯೊಬ್ಬನ ಬಾಳಿನಲ್ಲಿ ಸುಪ್ರಭೆಯನ್ನು ಹ ರಡಿಸಿ, ಕ್ಷಣ ಕ್ಷಣಕ್ಕೂ ಸದುತ್ತೇಜನವ ನ್ನು ನೀಡುವಂಥವುಗಳಾಗಿವೆ. ಅವರ ಜೀ ವನ, ಆದರ್ಶ, ಧ್ಯೇಯ, ಹಿರಿಮೆಗಳು ಭಾ ರತದ—ಲೋಕದ ಪ್ರತಿಯೊಬ್ಬನಿಗೂ ಅ ನುಕರಣೀಯವಾಗಿದ್ದು—ಬಾಳಿನ ಈ ದೀ ಪದ ಆಸರೆ ನಮಗೆ ಎಂದೆಂದಿಗೂ ಬೇಕಾ ಗಿದೆ.

**ಕೆ. ತಿಮ್ಮಪ್ಪ ಗಟ್ಟಿ, ಪೆರಡಾಲ.**

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 470/1956.

ಶ್ರೀನಿವಾಸ ಸೋಮಯಾಜಿ —ವಾದಿ.

ಕೃಷ್ಣದೇವ ಕಾರಂತ. ಬೆಟ್ಲಕ್ಕಿ ನರಸಿಂಹ ಕಾರಂತರ ಮಗ ಚಿತ್ರಪಾಡಿ ಗ್ರಾಮದಲ್ಲಿ ರುವವ. P. o. Kota. —ಪ್ರತಿವಾದಿ

ಇವರಿಗೆ ಈ ಮೂಲಕ ತಿಳಿಯಪಡಿಸುವು ದೇನೆಂದರೆ—

ವಾದಿಯು ನಿಮ್ಮಿಂದ ಪ್ರಾಮಿಸರಿ ನೋಟಿ ನ ಪ್ರಕಾರ ಬರಾ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೇ ಜರಗಿಸಿದ ಮೇಲಣ ದಾವೆಯನ್ನು ನಿಮ್ಮ ಹಾಜರಿಬಗ್ಗೆ ತಾರೀಕು 10-9-56ಕ್ಕೆ ಇಟ್ಟಿರುತ್ತಾರೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ 11 ಗಂಟೆಗೆ ಸರಿಯಾಗಿ ಕೋರ್ಟಿನಮುಂದೆ ಹಾಜರಾಗದೆ ಇದ್ದಲ್ಲಿ ನಿಮ್ಮನ್ನು ಎಕ್ಸಪಾ ರ್ಟಿಮಾಡಿ ಸದ್ರಿ ದಾವೆಯು ತೀರ್ಮಾನಿಸಲ್ಪ ಡುವುದು ಎಂಬ ಸಂಗತಿಯನ್ನು ಕೋರ್ಟು ಹುಕ್ಕುಂಪ್ರಕಾರ ತಿಳಿಯಪಡಿಸಿಯದೆ.

(Sd) A N. Rao.
Advocate for Pltf.

Coondapoor 24—8—56,

ನಂಬಿಕೆಗೆ ಅರ್ಹತೆ

ಅತ್ಯುತ್ತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ

ಎಸ್. ಆರ್.

ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.

★

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

S.R. Beedi Works UDIPI S.K.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮ ಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಖಟ್, ಬಳೆ ಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ವಸ್ತುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
*Head Office:* Tenkapet, **Udipi**, S. K. *Phone:* 66

ಕುಮಾರಿ ಬಿಲ್ಲೆಗಳು

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

# ಜನಮತ

## ಯಾರಿಗಿದು ಉಪದೇಶ?

ನೆರೆಯ ರಾಜ್ಯವಾದ ಮೈಸೂರಿನಲ್ಲಿ ಹೊಸತಾಗಿ ಮುಖ್ಯ ಮಂತ್ರಿ ಪಟ್ಟವನ್ನು ಅಲಂಕರಿಸಿರುವ ಶ್ರೀ ಕಡಿದಾಳ ಮಂಜಪ್ಪನವರು ತಾವು ಅಧಿಕಾರವನ್ನು ಸ್ವೀಕರಿಸಿದ ಪ್ರಾರಂಭದಲ್ಲಿ ಪರೋಪದೇಶ ಪಾಂಡಿತ್ಯವನ್ನು ವ್ಯಕ್ತಪಡಿಸಿದರು.

ನಾವು ಹಿಂದಿನದೆಲ್ಲವನ್ನು ಮರೆತುಬಿಟ್ಟು ಇನ್ನು ಮುಂದೆ ಒಗ್ಗಟ್ಟಿನಿಂದ ಕೂಡಿ ಕೆಲಸ ಮಾಡೋಣ ಎಂಬ ಹಾಗೆ ಅವರು ಮಾತನಾಡಿದರು. ಅವರ ಮಾತಿನಿಂದ ಇಂದು ಬಿಕ್ಕಟ್ಟು ಉಂಟಾಗಿದೆಯೆಂದೂ ಅದಕ್ಕೆ ಜನತೆ ಕಾರಣವೆಂದೂ ಧ್ವನಿಸುತ್ತದೆ

ಆದರೆ ಇದನ್ನು ಒಪ್ಪಬಹುದೆ? ಕಡಿದಾಳರು ಯಾರಿಗೆ ಈ ಉಪದೇಶವನ್ನು ಮಾಡುತ್ತಾರೆ? ತಮಗೆ ತಾವೇ ಈ ಉಪದೇಶವನ್ನು ಹೇಳಿಕೊಂಡರೆ ಹಿತವಲ್ಲವೆ? ಎಲ್ಲರಿಗೂ ತಿಳಿದಿರುವಂತೆ ಕಾಂಗ್ರೆಸು ಪಕ್ಷದ ಸದಸ್ಯರಲ್ಲಿರುವ ಬಿಕ್ಕಟ್ಟೇ ಕಡಿದಾಳರನ್ನು ಮುಖ್ಯಮಂತ್ರಿಯಾಗಿ ಮಾಡಿತು. ಜನತೆಯ ಕೈವಾಡ ಇಲ್ಲಿಲ್ಲವೆ?

೧೯೫೪ರಲ್ಲಿ ಆಗ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರ ಮೇಲೆ ಅವಿಶ್ವಾಸ ಸೂಚಕ ಗೊತ್ತುವಳಿಯನ್ನು ತರಲಾಯಿತು; ಆದರೆ ಶ್ರೀ ಹನುಮಂತಯ್ಯನವರು ಬಹುಮತದ ವಿಶ್ವಾಸಕ್ಕೆ ಪಾತ್ರರಾದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ನಾಯರು "ಇನ್ನು ಮುಂದೆ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಮರೆತು ಬಿಟ್ಟು ನೀವು ಒಂದಾಗಿ ಬಾಳಿರಿ" ಎಂದಿದ್ದರು!

ಶ್ರೀ ಕಡಿದಾಳರಾಗಲೀ ಅವರ ಅನುಯಾಯಿಗಳಾಗಲೀ ಮೈಸೂರು ಕಾಂಗ್ರೆಸಿನ ಇತರ ಸದಸ್ಯರಾಗಲೀ ಸುಮಾರು ಎರಡು ವರ್ಷಗಳ ಹಿಂದೆ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳ ಮಾಡಿದ ಉಪದೇಶಕ್ಕೆ ಎಷ್ಟರ ಮಟ್ಟಿಗೆ ಕಿವಿಗೊಟ್ಟು ನಡೆದಿದ್ದಾರೆ? ಕಿವಿಗೊಟ್ಟಿದ್ದರೆ ಶ್ರೀ ಹನುಮಂತಯ್ಯನವರನ್ನು ಉರುಳಿಸುವ ಹಂಚಿಕೆ ನಡೆಯುತ್ತಿತ್ತಾದರೂ ಏಕೆ? ಅದೂ ಕೇವಲ ಎರಡೂವರೆ ತಿಂಗಳುಗಳ ಮಟ್ಟಿಗೊಬ್ಬ ಮುಖ್ಯಮಂತ್ರಿ ಬೇಕೆಂಬುದಕ್ಕಾಗಿಯೇ?

ಧುರೀಣರಾದವರ ಮಾತಿಗೆ ಬೆಲೆ ಇಲ್ಲವೆಂದಾಗುವುದು ಇಂತಹ ಅನುಚಿತವಾದ ಉದ್ಗಾರಗಳಿಂದಲೇ ಎನ್ನಲು ಬೇಸರವಾಗುತ್ತದೆ. ಅವರು ತಮ್ಮ ನಡತೆಯನ್ನು ಶುದ್ಧವಾಗಿಟ್ಟುಕೊಳ್ಳಲು ಯಾವಾಗ ಕಲಿತಾರೋ ಎನ್ನಿಸುತ್ತದೆ. ಅಧಿಕಾರ ಪ್ರದರ್ಶನದ ಅಗ್ಗದ ಉಪಾಯವೆಂಬಂತೆ ಹಿತೋಪದೇಶ ಪಾಂಡಿತ್ಯಕ್ಕೆ ಧುರೀಣರು ಮನಸ್ಸು ಮಾಡಬಾರದು.

ಮೊದಲು ಮನೆಯಲ್ಲಿ ದೀಪ ಹಚ್ಚಿ, ಹಿಂದಿನಿಂದ ಮಂದಿರದ ದೀಪ ಹಚ್ಚಲು ಹೋಗು ಎನ್ನುವ ಹಿಂದೀಗಾದೆಯನ್ನು ನೆನಪುಮಾಡಿಕೊಳ್ಳುವುದು ಇಲ್ಲಿ ಸೂಕ್ತವಾದುದಾಗಿದೆ.

## ವಿದ್ಯಾರ್ಥಿಗಳಲ್ಲಿ ಶಿಸ್ತು

ಇಂದಿನ ವಿದ್ಯಾರ್ಥಿಗಳಲ್ಲಿ ಶಿಸ್ತು ತೀರ ಸಡಿಲವಾಗಿದೆ, ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ, ಹೆತ್ತವರ ಅಸಡ್ಡೆಯು ಇದಕ್ಕೆ ಮುಖ್ಯವಾದ ಕಾರಣವೆಂಬುದನ್ನು ಒತ್ತಿ ಹೇಳಬೇಕಾಗಿದೆ.

ಹುಡುಗ ಹುಡುಗಿಯರನ್ನು ಮನೆಯಿಂದ ಹೊರಗೆ ಅಟ್ಟಿದರೆ, ಮುಂದೆ ಆ ಮಕ್ಕಳ ಮೇಲ್ವಿಚಾರಣೆಯ ಎಲ್ಲ ಜವಾಬ್ದಾರಿಯೂ ಅಧ್ಯಾಪಕನದ್ದೆಂದು ಹೆತ್ತವರು ತಿಳಿದಂತಿದೆ. ಶಾಲೆಗೆ ಹೋಗುವ ಮಕ್ಕಳ ವಿಷಯದಲ್ಲಿ ತಮ್ಮದೇನೂ ಜವಾಬ್ದಾರಿ ಇಲ್ಲವೆಂದು ಅವರು ಭಾವಿಸಿದಂತಿದೆ.

ಇದು ಸರಿಯಾದ ಮನೋಭಾವವಲ್ಲ. ತಮ್ಮ ಮಕ್ಕಳ ಶಿಕ್ಷಣದಲ್ಲಿ ಹೆತ್ತವರೇ ವಿಶೇಷವಾದ ಆಸಕ್ತಿಯನ್ನು ವಹಿಸಬೇಕಾಗಿದೆ. ಅಧ್ಯಾಪಕರ ಮೇಲೆಯೇ ಹೊಣೆಯನ್ನು ಹೇರಲಾಗದು. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಒಬ್ಬ ಅಧ್ಯಾಪಕನು ಎಲ್ಲ ಹುಡುಗರ ಮೇಲೂ ತನ್ನ ಗಮನವನ್ನು ಇಡುವುದು ಬಹಳ ಕಷ್ಟ. ಆದರೆ ಹೆತ್ತವರು ತಮ್ಮ ಮಕ್ಕಳ ಮೇಲೆ ಕಣ್ಣಿಡುವುದು ಕರ್ತವ್ಯವೇ ಆಗಿದೆ. ತಮ್ಮ ಮಕ್ಕಳ ವಿಷಯದಲ್ಲಿ ಹೆತ್ತವರಿಗಿರುವ ಸ್ವಾರ್ಥವು ಸ್ವಾಭಾವಿಕವಾದುದೂ ನ್ಯಾಯಸಮ್ಮತವಾದುದೂ ಆಗಿದೆ.

ಅಧ್ಯಾಪಕರ ಬಗ್ಗೆ ತಮ್ಮ ಮಕ್ಕಳಿಗೆ ಗೌರವವಿರುವಂತೆ ಮಾಡುವ ಕೆಲಸವಾದರೂ ಹೆತ್ತವರದೇ ಆಗಿದೆ. ಮಕ್ಕಳ ಮುಂದೆ ತಾವೇ ಅಧ್ಯಾಪಕರ ಅವಹೇಳನೆ ಮಾಡುತ್ತಿದ್ದರೆ ಆ ಮಕ್ಕಳಿಗೆ ಅಧ್ಯಾಪಕರಲ್ಲಿ ಎಂತಹ ಗೌರವ ಹುಟ್ಟಬಹುದು?

ಹೆತ್ತವರು ತಮ್ಮ ಮಕ್ಕಳ ಶ್ರೇಯಸ್ಸನ್ನು ದೃಷ್ಟಿಯಲ್ಲಿಟ್ಟುಕೊಂಡಾದರೂ ಅಧ್ಯಾಪಕರನ್ನು ಗೌರವಿಸಲು ನೋಡಬೇಕು. ಯಾವ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳ ಮಾತು ಕೇಳಿ ಅಧ್ಯಾಪಕರ ವರ್ತನೆಯನ್ನು ಆಕ್ಷೇಪಿಸಲಾಗದು. ಆಕ್ಷೇಪಿಸುವುದಾದರೂ ಅದು ಏಕಾಂತದಲ್ಲಿ ನಡೆಯಬೇಕಲ್ಲದೆ ಅದಕ್ಕೆ ಪ್ರಸಿದ್ಧಿಯು ದೊರೆಯಬಾರದು.

ದುರ್ದೈವದಿಂದ ಇಂದು ಇಂತಹ ಪರಿಸ್ಥಿತಿ ಇರುವುದಿಲ್ಲ. ಹುಡುಗರನ್ನು ಬೆತ್ತದಿಂದ ಬಾರಿಸಿದರು ಎಂಬಂತಹ ಕಾರಣಗಳಿಗಾಗಿ ಅಧ್ಯಾಪಕರ ಮೇಲೆ ತಪ್ಪು ಹೊರಿಸಿ ನ್ಯಾಯಸ್ಥಾನಗಳಿಗೆ ಅವರನ್ನು ಎಳೆಯುವ ನಿದರ್ಶನಗಳು ಕಂಡುಬರುತ್ತವೆ. ತಪ್ಪಿಗೆ ಶಿಕ್ಷೆಯಾಗುವುದಕ್ಕೆ ಯಾರದೂ ವಿರೋಧವಿರಲಾರದು. ಆದಾಗ್ಯೂ ಹೆತ್ತವರೇ ತಮ್ಮ ನಿಲುಮೆಯನ್ನು ಹೆಚ್ಚು ಉದಾರವಾಗಿಡುವುದು ಇಷ್ಟವಾಗಿದೆ.

ಮಕ್ಕಳ ಶಿಕ್ಷಣ ಮತ್ತು ಅವರಲ್ಲಿ ಪೋಷಣೆಗೊಳ್ಳಬೇಕಾದ ಶಿಸ್ತು ಮತ್ತು ಸಂಯಮದ ಭಾವಗಳ ಹಿನ್ನೆಲೆಯಲ್ಲಿ ಈ ಮಾತನ್ನು ವಿಚಾರಿಸುವುದು ಯೋಗ್ಯವೆನಿಸುತ್ತದೆ.

## ಗೇಣಿ ನಿರ್ಣಯ ಮಸೂದೆ

ನ್ಯಾಯವಾದ ಗೇಣಿ ನಿರ್ಣಯ ಮಸೂದೆಯನ್ನು ಕಳೆದ ತಿಂಗಳಲ್ಲಿಯೇ ಚರ್ಚೆಗೆ ತೆಗೆದುಕೊಳ್ಳಬೇಕಾಗಿದ್ದ ಮದ್ರಾಸಿನ ಶಾಸನಾಂಗವು ಹಾಗೆ ಮಾಡಲಿಲ್ಲ. ಯೋಜನಾ ಆಯೋಗದ ಕರೆಯ ಮೇರೆಗೆ ಕಂದಾಯ ಸಚಿವರು ಸಮಾಲೋಚನೆಗಾಗಿ ಹೊಸ ದೆಹಲಿಗೆ ತೆರಳುವರೆಂದಿದ್ದ ಪ್ರಯುಕ್ತ ಈ ತಿಂಗಳಿಗೆ ಮಸೂದೆಯ ಪರಿಶೀಲನೆಯನ್ನು ಮುಂದೆ ಹಾಕಲಾಯಿತು.

ಈಗ ಮಾನ್ಯ ಮಂತ್ರಿಗಳು ವಾಪಸಾಗಿದ್ದಾರೆ. ಅವರು ಮದ್ರಾಸಿಗೆ ಮರಳಿದ ಬಳಿಕ ವ್ಯಕ್ತಪಡಿಸಿದ ಅಭಿಪ್ರಾಯದ ಮೇಲಿಂದ ಹೇಳುವುದಾದರೆ, ಯೋಜನಾ ಆಯೋಗವು ತಾನು ಮಾಡಿದ ಶಿಫಾರಸುಗಳನ್ನೆ ಭೂಸುಧಾರಣೆಯ ವಿಷಯದಲ್ಲಿ ಅನುಸರಿಸಬೇಕೆಂದು ಸಲಹೆಕೊಟ್ಟಿರುವಂತೆ ಕಾಣುತ್ತದೆ.

> ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.
>
> ಸಂ. ನ.

ಮಂತ್ರಿಗಳು ತಾವು ಎಷ್ಟು ಉದಾರವಾಗಿ ಮುನ್ನಡೆಯಬಹುದೋ ಅಷ್ಟು ಪ್ರಗತಿಪರ ಕ್ರಮಗಳನ್ನು ಕೈಗೊಂಡುದಾಗಿ ಹೇಳಿರುವರಂತೆ. ಆಂಧ್ರ ರಾಜ್ಯದಲ್ಲಿ ಉತ್ಪತ್ತಿಯ ಅರೆವಾಸಿಯಷ್ಟು (೫೦%) ಅಂಶವನ್ನು ಗೇಣಿಯಾಗಿ ನಿಗದಿಗೊಳಿಸಲಾಗಿದೆಯೆಂದೂ ಆದರೆ ಮದ್ರಾಸಿನ ಮಸೂದೆಯು ೪೦% ಅಂಶವನ್ನಷ್ಟೆ ಗೇಣಿಯಾಗಿ ನಿರ್ಧರಿಸಿದೆಯೆಂದೂ ಈ ಸಂದರ್ಭದಲ್ಲಿ ಎತ್ತಿಹೇಳಿದರು—ಎಂದೂ ವರದಿಯಾಗಿದೆ.

ಯೋಜನಾ ಆಯೋಗದವರು ಆಂಧ್ರದ ಉದಾಹರಣೆಯನ್ನು ಮಂತ್ರಿಗಳು ಕೊಟ್ಟುದಕ್ಕೆ ಪ್ರತಿಯಾಗಿ ಮುಂಬಯಿಯ ನಿದರ್ಶನವನ್ನು ನೀಡಿದರಂತೆ! ಮಂತ್ರಿಗಳು ಇದಕ್ಕೆ ಏನೆಂದರೋ ತಿಳಿದುಬಂದಿಲ್ಲ. ಆದರೆ, ಪ್ರತಿಯೊಬ್ಬ ಬೇಸಾಯಗಾರನೂ ಯೋಜನಾ ಆಯೋಗವು ಭೂಸುಧಾರಣೆಯ ವಿಷಯದಲ್ಲಿ ವಹಿಸಿರುವ ನಿಲುಮೆಯನ್ನು ಅನುಮೋದಿಸುವುದು ನಿಶ್ಚಯ.

ಯೋಜನಾ ಆಯೋಗದ ಸಲಹೆಯನ್ನು ಕೇಳಿಬಂದ ಬಳಿಕವಾದರೂ ನಮ್ಮ ಸರಕಾರದವರು ಗೇಣಿಯ ಮಟ್ಟವನ್ನು ಮಸೂದೆಯಲ್ಲಿ ಹೇಳಿದ ೪೦% ಮಿತಿಗಿಂತ ಗಣನೀಯವಾಗಿ ಕಡಿಮೆಮಾಡಲಾರರೆ? ಹಾಗಲ್ಲದಿದ್ದರೆ, ಹೊಸ ದೆಹಲಿಗೆ ಮಂತ್ರಿಗಳು ಹೋಗಿಬಂದು ಆದ ಪ್ರಯೋಜನವೇನು?

## ನಿಷ್ಪ್ರಯೋಜಕ ತಂತ್ರ

ನಮ್ಮಲ್ಲಿಯ ಭೂಮಾಲಕರೆಲ್ಲ ನ್ಯಾಯವಾದ ಗೇಣಿನಿರ್ಣಯ ಮಸೂದೆಯು ಬಾರದಂತೆ ತಡೆಯಲು ಈಗಲೂ ಪ್ರಯತ್ನಶೀಲರಾಗಿದ್ದಾರೆಂದು ವ್ಯಕ್ತವಾಗಿದೆ. ಅಲ್ಲಲ್ಲಿ ಭೂಮಾಲಿಕರ ಸಭೆಗಳು ಜರಗಿ ಸರಕಾರವು ತರಬೇಕೆಂದಿರುವ ಮಸೂದೆಯ ಆಶಯಗಳಿಗೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆಂದು ವರದಿಗಳಿಂದ ತಿಳಿದುಬರುತ್ತದೆ.

ಹೀಗೆ ವಿರೋಧವನ್ನು ತೋರಿಸುವುದರಲ್ಲಿ ಏನಾದರೂ ಬುದ್ಧಿವಂತಿಕೆ ಇದೆಯೇ? ಯಾವುದೇ ರಾಜಕೀಯ ಪಕ್ಷದ ಕಾರ್ಯಕ್ರಮವನ್ನು ನೋಡಲಿ—ಭೂಮಾಲಿಕರನ್ನು ಹೀಗೆಯೇ ಉಳಿಯಗೊಡುವ ಧ್ಯೇಯ ಯಾವುದಕ್ಕೂ ಇಲ್ಲವೆಂದು ಖಚಿತವಾಗುತ್ತದೆ. ಇರುವ ರಾಜಕೀಯ ಪಕ್ಷದಲ್ಲಿ ಕಾಂಗ್ರೆಸೊಂದೇ ಉದಾರವಾದ ಧೋರಣೆಯನ್ನು ಉಳಿದವುಗಳಿಗಿಂತ ತಾಳಿಕೊಂಡಿರುವುದು ಸಹ ಸ್ಪಷ್ಟವಾಗಿದೆ

ಕಾಂಗ್ರೆಸು ಈಗಾಗಲೇ ಎಷ್ಟು ವಿಳಂಬವು ಸಾಧ್ಯವೋ ಅಷ್ಟನ್ನೂ ಮಾಡಿದೆ. ಯೋಜನಾ ಆಯೋಗ ಏನೇ ಹೇಳಲಿ – ಅದನ್ನು ಕಡೆಗಣಿಸಿ ರಾಜ್ಯಸರಕಾರಗಳು ಉತ್ಪತ್ತಿಯ ೫೦%, ಅಥವಾ ೪೦% ಗೇಣಿಯಾಗಿರಬೇಕೆಂಬ ಮಸೂದೆಗಳನ್ನು ತರಲು ನೋಡುತ್ತಿವೆ ಯೋಜನಾ ಆಯೋಗವು ಹೇಳುವ ಗೇಣಿ ೨೦%! ಆದುದರಿಂದ ಈ ಮಸೂದೆ ಭೂಮಾಲಿಕರ ಪಕ್ಷಪಾತಿಯಾಗಿದೆ ಎನ್ನುವುದು ಸ್ಪಷ್ಟ.

ಹೀಗಿದ್ದೂ ಇದಕ್ಕೆ ಭೂಮಾಲಿಕರು ವಿರೋಧಸೂಚಿಸಿದ್ದಾರೆ. ಇದು ಯೋಗ್ಯವಾದುದೆ? ಇವತ್ತಿನ ದಿವಸದಲ್ಲಿ ೪೦% ಗೇಣಿಯನ್ನು ನಮ್ಮ ಸರಕಾರ ನಿರ್ಧರಿಸಲಿದೆ. ಭೂಮಿಯನ್ನು ಸಾಗುವಳಿದಾರನಿಗೆ ಬಿಟ್ಟುಕೊಡಬೇಕೆನ್ನುವಾಗ ಈ ಗೇಣಿಗೆ ಅನುಗುಣವಾದ ಪ್ರತಿಫಲವು ಪರಿಹಾರ ರೂಪದಲ್ಲಿ ಸಿಗುವುದಕ್ಕಾದರೂ ಎಡೆ ಇದೆ. ಆದರೆ ಇದು ಕೆಲವು ವರ್ಷಗಳ ಬಳಿಕ ಹೀಗೆ ಆಗಲಾರದು ಎಂಬುದನ್ನು ದೂರದರ್ಶಿಗಳು ಚೆನ್ನಾಗಿ ಬಲ್ಲರು.

ಕಳೆದ ಐದು ವರ್ಷಗಳಲ್ಲಿ ನಮ್ಮ ಘಟನೆಗೆ ಹತ್ತು ಸಲ ತಿದ್ದುಪಡಿಯಾಗಿದೆ. ಈಗ ವಶಪಡಿಸಿಕೊಂಡ ಭೂಮಿಗೆ ಸ್ವಲ್ಪವಾದರೂ ಪರಿಹಾರ ಕೊಡಲು ಅದರಲ್ಲಿ ಎಡೆಇದೆ. ಮುಂದಿನ ಹತ್ತು ವರ್ಷಗಳಲ್ಲಿ ಪರಿಹಾರವನ್ನೆ ಕೊಡಬಾರದೆಂದು ತಿದ್ದುಪಡಿಮಾಡಿದರೆ ಆಗ ಈಗ ವಿರೋಧ ಮಾಡುತ್ತಿರುವ ಭೂಮಾಲಿಕರು ಏನುಮಾಡುತ್ತಾರೆ?

ಭೂಮಾಲಿಕರಿಗೆ ಅನುಕೂಲವಾಗಿ ಇನ್ನು ಮುಂದೆ ಯಾವುದೇ ಶಾಸನವಾದೀತೆಂದು ಎಷ್ಟುಮಾತ್ರಕ್ಕೂ ನಂಬಬಾರದು. ಏಕೆಂದರೆ ಕಾಲಗತಿಯು ಇದಕ್ಕೆಂದೂ ಅನುಕೂಲವಾಗಿಲ್ಲ. ಆದುದರಿಂದ ಇಂದು ಏನು ದೊರೆಯಿತೋ ಅದರಿಂದ ತೃಪ್ತರಾಗಿ, ವಿಲಾಸೋಪೇತ ಜೀವನದ ಹಂಬಲವನ್ನು ತೊರೆದು, ಎಲ್ಲರಂತೆ ಉದರ ನಿರ್ವಹಣೆಯ ನ್ಯಾಯವಾದ ದಾರಿಯನ್ನು ಈಗಿನಿಂದಲೇ ಮಾಡಿಕೊಳ್ಳಲು ಭೂಮಾಲಿಕರಾದವರು ಮುಂದಾಗಬೇಕು. ವಿರೋಧ ವ್ಯಕ್ತಪಡಿಸುವುದರಿಂದ ಲಾಭವಾಗುವುದೆಂಬ ಆಸೆಯನ್ನು ತೊರೆಯಬೇಕು. ಅದು ತೀರ ನಿಷ್ಪ್ರಯೋಜಕವಾದ ತಂತ್ರ.

ನವಯುಗದ ಈ ಸಂದೇಶಕ್ಕೆ ಭೂಮಾಲಿಕರು ದಯಮಾಡಿ ಕಿವಿಗೊಡಲಿ!

(ವಿವಿಧ ಮೂಲಗಳಿಂದ)

ಮಿನಿಕಾಯ್ ದ್ವೀಪದಲ್ಲಿರುವ ಸೂಸು ಮಣ್ಣು ಮತ್ತು ಆಳಿಜಾರು ಪ್ರದೇಶವು ಇಲ್ಲಿ ಸಸ್ಯಗಳ ಬೆಳೆಯನ್ನು ಮಿತಿಗೊಳಿಸಿದೆ. ಆದರೂ ಇದು ಅತ್ಯಂತ ರಮ್ಯವಾಗಿದೆ. ಇಲ್ಲಿ ಒತ್ತಾಗಿ ಬೆಳೆದಿರುವ ತೆಂಗಿನ ಮರಗಳು ದ್ವೀಪದ ಸೊಬಗನ್ನು ಹೆಚ್ಚಿಸುವುದರ ಜೊತೆಗೆ ಸಂಪತ್ತನ್ನೂ ಹೆಚ್ಚಿಸಿದೆ.

ತಾಳೆಯ ಮರಗಳಿಂದ ಶೋಭಿಸುವ ತೀರ ಪ್ರದೇಶದ ನೋಟವನ್ನು ಸೌತ್ ಸೀ ದ್ವೀಪಗಳಿಗೆ ಹೋಲಿಸಬಹುದಾಗಿದೆ.


## ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

| | |
|---|---|
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK LTD., MULKI.



## ಹಿಂದೂ ಉತ್ತರಾಧಿಕಾರ ಶಾಸನ

| | |
|---|---|
| 1, ಕನ್ನಡ ಪ್ರತಿ | 0–12–0 |
| 2, ,, | 0–8–0 |
| 3, ಇಂಗ್ಲಿಷ್ | 0–6–0 |

ನವಭಾರತ ಪುಸ್ತಕ ಭಂಡಾರ, ಉಡುಪಿ.


Edited, Printed & Published by K. H. Shetty, at the Navayuga press, Udipi S. India

REGD. NO. M. 3818

Licensed to Post without Prepayment

# ನವಯುಗ

ಸಂಪುಟ ೩೬ | ಸಂಚಿಕೆ ೨

VOL. 36 | 13—9—1956 | NO. 2

## ಮನನೀಯ ಮಾತು

# ಸ್ವಾತಂತ್ರ್ಯ ಬಂದಿದ್ದರೂ ದಾಸ್ಯ ಬುದ್ಧಿ ಬಿಟ್ಟಿಲ್ಲ!

### "ದುಡ್ಡಿದ್ದರೆ ಎಲ್ಲವೂ ಸಾಧ್ಯ" ಎನ್ನುವುದು ಪ್ರಜಾಸತ್ತೆಗೆ ದ್ರೋಹ

ಮಹಾಪುರುಷರ ಮಾತುಗಳು ಒಂದಲ್ಲೊಂದು ದಿನ ತಮ್ಮ ಮಹತ್ವಿಕೆಯನ್ನು ಪ್ರದರ್ಶನ ಮಾಡಿಯೇ ಮಾಡುತ್ತವೆ. ಕವಿ ರವೀಂದ್ರನಾಥ ಠಾಕೂರರು ಸ್ವಾತಂತ್ರ್ಯ ಸಿದ್ಧಿಯ ಕುರಿತು ಹೇಳಿದ್ದ ಕೆಲವು ಮಾತುಗಳು ಈ ಸಂದರ್ಭದಲ್ಲಿ ಸ್ಮರಣೆಗೆ ಬರುತ್ತಿವೆ. ಗಾಂಧೀಜಿ ಮತ್ತು ಠಾಕೂರರೊಳಗೆ ಸ್ವಾತಂತ್ರ್ಯ ಸಾಧನೆ ಮತ್ತು ಸಫಲತೆಯ ಕುರಿತು ವಿಚಾರ ಗೋಷ್ಠಿ ನಡೆದಾಗ ಠಾಕೂರರು ಹೇಳಿದ್ದರು 'ಸ್ವಾತಂತ್ರ್ಯವೆಂಬುದು ರಾಷ್ಟ್ರ ಜೀವನವೆಂಬ ವೃಕ್ಷದಲ್ಲಿ ಸಕಾಲಕ್ಕೆ ಅರಳುವ ಹೂ, ಮರಕ್ಕೆ ತೂಗುಕಟ್ಟಿದ ಲಾಟೀನು ದೀಪವಲ್ಲ." ಲಾಟೀನನ್ನು ತೆತ್ತುಕೊಂಡು ತಂದು ಕತ್ತಲೆಕೋಣೆಯನ್ನು ಬೆಳಗಿಸುವಂತೆ ಸ್ವಾತಂತ್ರ್ಯವನ್ನು ಬ್ರಿಟಿಷರಿಂದ ಕಸಿದುಕೊಂಡು ದೇಶವನ್ನು ಬೆಳಗಿಸಲಾಗುವುದಿಲ್ಲ. ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಸಫಲತೆಗೆ ಜನತೆ ಸಿದ್ಧವಾಗಿರಬೇಕು. ಆ ಪ್ರಕಾಶವು ಜನತೆಯ ಜ್ಞಾನ ಪ್ರಭೆಯಿಂದಲೇ ಪ್ರಕಾಶಿಸಲ್ಪಡಬೇಕು. ಜನರಾಜ್ಯದ ಅರ್ಥವನ್ನು ಜನತೆಗೆ ಹೃದಯದಲ್ಲಿ ಮೂಡಿಸಿಕೊಳ್ಳಲು ಅಸಾಧ್ಯವಾದರೆ ಅದರಿಂದ ಅನರ್ಥಗಳೇ ಸಂಭವಿಸುವ ಅಪಾಯವಿದೆ ಎಂಬುದೇ ವಿಶ್ವಕವಿಗೆ ಅಂದು ಹೊಳೆದ ವಿಚಾರ ಸರಣಿ. ಪ್ರಚಲಿತ ಸಮಸ್ಯೆಗಳನ್ನು ಈ ಅಭಿಪ್ರಾಯದೊಡನೆ ಹೋಲಿಸಿ ನೋಡಿದಾಗ ಕವಿವರ್ಯರ ಅಂದಿನ ಮಾತು ಕಠೋರತರ ಸತ್ಯವಾಗಿಯೇ ಕಾಣುವುದಿಲ್ಲವೇ?

ಓರ್ವ ನೆಹರು ಅಥವಾ ನೂರು ಜ್ಞಾನಿ ವಿಧಾಯಕರಿಗೆ ಅಥವಾ ಹಲವು ತತ್ವವೇತ್ತರಿಗೆ ಸ್ವಾತಂತ್ರ್ಯ ಅಥವಾ ಪ್ರಜಾಪ್ರಭುತ್ವದ ಮಹತ್ವಿಕೆ ಮನನವಾಗಿದ್ದರೆ ಸಾಕೆ? ಅದರಿಂದ ಜನರಾಜ್ಯದ ಸಫಲತೆಯಾಯಿತೆ? ಕೋಟ್ಯಾನುಕೋಟಿ ಭಾರತದ ಸಾಮಾನ್ಯಜನ ಪ್ರಜಾಪ್ರಭುತ್ವಕ್ಕೆ ಯಾವ ಬೆಲೆ ಕಟ್ಟುತ್ತದೆ? ಬ್ರಿಟಿಷ್ ಸರಕಾರ ಹಿತವಿತ್ತೇ, ನಮ್ಮ ಸರಕಾರ ಹಿತವೇ ಎಂದು ಸರಳವಾಗಿ ಪ್ರಶ್ನಿಸಿದರೆ ಸಾಮಾನ್ಯ ಭಾರತೀಯ ಏನು ಉತ್ತರ ಕೊಡಬಹುದು? ನಮ್ಮ ಸರಕಾರವೇ ಹಿತ ಎಂದು ದೇಶವಿಡೀ ಅಲ್ಲದಿದ್ದರೂ ಬಹು ಜನರಾದರೂ ಒಕ್ಕೊರಲಿನಿಂದ ಘೋಷಿಸಬಹುದೆ? ಹಾಗಿಲ್ಲವಾದರೆ ಜನತೆ ಪವಿತ್ರವಾದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಯಾವ ದರ ಹೇಳುತ್ತದೆ?

ಅನ್ನ ನೀರನ್ನು ತ್ಯಜಿಸಿ ಮನೆಮಾರು ಕಳೆದುಕೊಂಡು ನೆತ್ತರೋ ಕುಳಿಯಲ್ಲಿ ಓಲಾಡಿ ಜೈಲಿನ ಅನ್ನವನ್ನು ತಿಂದು, ನಾನಾ ಬನ್ನಭವಣೆಗಳನ್ನು ಅನುಭವಿಸಿ ಹಲವಾರು ಮಹಾಜೀವಗಳನ್ನು ಬಲಿದಾನ ಕೊಟ್ಟು ಪಡೆದ ಮತ್ತು ಪವಿತ್ರಪೂಜ್ಯ ಪರಮ ಶ್ರೇಷ್ಠವೆಂದು ಕರೆದ ಸ್ವಾತಂತ್ರ್ಯ ಮತ್ತು ಸ್ವರಾಜ್ಯಕ್ಕೆ ಜನತೆ ಕೊಡುವ ಗೌರವ, ಮಾಡುವ ಅರ್ಘ್ಯ, ಕಟ್ಟುವ ಬೆಲೆ ಹೀಗಾಗ ಬೇಕಾದರೆ ..!

ಕಳೆದ ಚುನಾವಣೆಯ ಸಮಯದ ಒಂದು ಕತೆ ನೆನಪಾಗುತ್ತಿದೆ. ಓರ್ವ ಮಹಾನುಭಾವರು, ಸಾಧಾರಣ ಸ್ಥಿತಿವಂತರು "ನಮ್ಮ ಹಿಂದುಸ್ಥಾನ್‌ದ ಮಿನೂ ಮಸಾನಿ ವರ್ಣಿಸಿದ್ದ ೨೬ ರೂಪಾಯಿ ವಾರ್ಷಿಕ ಆದಾಯದ ಬಡ ಜನರಲ್ಲಿ" ಹಳ್ಳಿಯಲ್ಲಿ ಹತ್ತು ಮಂದಿಗೆ ಮುಖ್ಯಾಣಿಯಂತಿದ್ದವರು ಚುನಾವಣೆಯ ಕುರಿತು ಮಾತುಕತೆ ನಡೆಯುತಿದ್ದಾಗ ಹೇಳತೊಡಗಿದರು: "ಈ ಕಾಂಗ್ರೆಸ್ ಸೋಷಲಿಸ್ಟಗಳ ಜೊತೆಗೆ ಬ್ರಿಟಿಷರದೂ ಒಂದು ಓಟಿನ ಪೆಟ್ಟಿಗೆ ಇಡಲಿ, ಈ ಎರಡು ಪೆಟ್ಟಿಗೆ ಖಾಲಿಯಾಗಿ ಬ್ರಿಟಿಷರ ಪೆಟ್ಟಿಗೆ ತುಂಬಿ ಹೋಗದಿದ್ದರೆ ಈ ಮೀಸೆ ಬೋಳಿಸುತ್ತೇನೆ" ಆ ವ್ಯಕ್ತಿಯು ಮನಸ್ಸೋಯಿಸುವ ಇಚ್ಛೆಯಿಂದ ಇದನ್ನು ಹೇಳುತ್ತಿಲ್ಲ, ಅವರಿಂದು ಬದುಕಿಯೂ ಇಲ್ಲ. ಗ್ರಾಮದ ಮುಂದಾಳುವಾಗಿದ್ದು ವಿದ್ಯಾವಂತರೂ ಆಗಿರುವ ಜನರೇ ನಾವು ಹೊಸತಾಗಿ ಪಡೆದಿರುವ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕೆ ಈ ಬಗೆಯ ಬೆಲೆಯನ್ನು ಕಟ್ಟಿದರೆ ಮತ್ತೆ ಕೌಪೀನ ಮುಂಡಾಸಿನ ಸಾಮಾನ್ಯ ರೈತ ಹೇಗೆ ಹೇಳ್ಯಾನು ಎಂಬುದೇ ಇಲ್ಲಿ ವಿಚಾರಣೀಯವಾದ ಅಂಶ.

ಹಾಗೆಯೇ ಮೊನ್ನೆ ಓರ್ವ ರಾಜಕಾರಣಿ ಹೇಳತೊಡಗಿದ. "ಅಮೇರಿಕಾದವರಿಗ ತಲೆಯಿಲ್ಲ. ಈ ತುಪ್ಪ, ಹಾಲಿನ ಪುಡಿ, ಅದು ಇದು ಎಲ್ಲಾ ಸಹಾಯ ಕೊಡುವ ಬದಲು ಬರೇ ದುಡ್ಡಿನ ಸಹಾಯ ಕೊಟ್ಟು, ತಮ್ಮ ದುಡ್ಡಿನ ಬಲದಿಂದ ತಮ್ಮ ಒಂದು ಪಾರ್ಟಿಯನ್ನು ರಚಿಸಿಕೊಂಡು ಅವರನ್ನೇ ಚುನಾವಣೆಗೆ ನಿಲ್ಲಿಸಿ, ತಲಾ ಒಂದರ ಅಥವಾ ಓಟು ಒಂದಕ್ಕೆ ಒಂದೊಂದು ಡಾಲರನ್ನು ಹಂಚಿ ಒಂದು ನೂರು ಕೋಟಿ ಡಾಲರನ್ನು ಖರ್ಚುಮಾಡಿಬಿಟ್ಟರೆ ಇಡೀ ಹಿಂದೂದೇಶ ಅಮೇರಿಕಾದ ಬಗಲೊಳಗೆ! ನಾನಾದರೋ ಅವರಿಗೆ ಓಟು ಕೊಡುವುದೇ ಸೈ!" ಇದು ಭಾರತೀಯರಲ್ಲಿ ಕೆಲವರ ವಿಚಾರ ಸರಣಿ ಹರಿದು ಹೋಗುವ ಇನ್ನೊಂದು ಬಗೆಯಾಗಿದೆ. ಇವರ ಅಭಿಪ್ರಾಯದಲ್ಲಿ ರಾಜಕೀಯ ತಿಳುವಳಿಕೆಗೆ ಬೆಲೆ ಇಲ್ಲ. ದುಡ್ಡಿನಿಂದ ಎಲ್ಲವೂ ಸಾಧ್ಯವಿದೆ. ಯಾವುದೂ ಸಾಧ್ಯವಿಲ್ಲದಿದ್ದರೂ ಇಂದಿನ ಭಾರತೀಯ ಪ್ರಜಾಪ್ರಭುತ್ವದಲ್ಲಿ ಚುನಾವಣೆಗೆ ನಿಂತು ಜಯ ಗಳಿಸಲು ಸಾಧ್ಯವಿದೆ. ಹೀಗೆ ನಂಬಿರುವ ಇಂತಹ ತತ್ವಜ್ಞರ ನಮ್ಮಲ್ಲಿ ದಂಡಾಳ.

ಪ್ರಜಾಪ್ರಭುತ್ವ ಬಹು ಕಷ್ಟತರವಾದ ರಾಜ್ಯಭಾರ ಕ್ರಮ. ದುರುಪಯೋಗವಾಗತೊಡಗಿದರೆ ಅದರಿಂದ ದುಷ್ಪರಿಣಾಮವೂ ಬಹಳ. ಆದರೆ ಪ್ರಜಾಪ್ರಭುತ್ವದಷ್ಟು ಉತ್ತಮವಾದದ್ದೂ ಬೇರೆ ಇಲ್ಲ. ದಾಸ್ಯದಲ್ಲಿದ್ದ ಬದುಕಿಗಿಂತಲೂ ಸ್ವಾತಂತ್ರ್ಯ ಹೊಂದಿದ ಸಾವೇ ಲೇಸು ಎಂದು ತಿಳಿದ ಜನವೇ ಪ್ರಜಾಪ್ರಭುತ್ವ ರಾಜ್ಯಭಾರಕ್ಕೆ ಹೇಳಿಸಿದವರು. ಸಮಾನತೆ, ಸಹೋದರತೆ, ಸ್ವಾತಂತ್ರ್ಯ ಇವುಗಳ ಯಥಾರ್ಥ ಕಲ್ಪನೆ ಇಲ್ಲದ ವ್ಯಕ್ತಿ ಪ್ರಜಾಪ್ರಭುತ್ವಕ್ಕೊಂದು ಗಂಡಾಂತರ. ದುಡ್ಡಿನಿಂದ ಪ್ರಜಾಪ್ರಭುತ್ವವನ್ನು ಕ್ರಯಕ್ಕೆ ಪಡೆಯುತ್ತೇನೆ, ದುಡ್ಡಿಗಾಗಿ ಸ್ವಾತಂತ್ರ್ಯವನ್ನು ಮಾರುತ್ತೇನೆ ಎಂಬ ಎರಡೂ ವರ್ಗಗಳು ಜನತಾ ರಾಜ್ಯಕ್ಕೆ ಅಪಾಯಕಾರಿಯಾದವು. ಹರಿಶ್ಚಂದ್ರ ತನ್ನನ್ನು ಮಾರಿಕೊಂಡ, ತನ್ನ ಪತ್ನೀ ಪುತ್ರರನ್ನು ಮಾರಿಕೊಂಡ. ಆದರೆ ಸತ್ಯವನ್ನು ಪಾಲಿಸುವ ಸ್ವಾತಂತ್ರ್ಯವನ್ನು ಮಾರಿಕೊಳ್ಳಲಿಲ್ಲ. ಪರಮ ಪವಿತ್ರವಾದ ಸ್ವಾತಂತ್ರ್ಯವನ್ನು ಮಾರುವ, ಮಾರಿಸುವ ಕ್ರಯಕೊಳ್ಳುವ, ದಲಾಲಿ ಮಾಡುವ ಜನ ತನ್ನ ಕ್ಷಣಿಕ ಸ್ವಾರ್ಥಕ್ಕಾಗಿ ಜನತೆಯ ನಾಶಕ್ಕೆ ಕಾರಣನಾಗುತ್ತಾನೆ ಎಂಬುದನ್ನು ತಿಳಿಯದಿರಲಾಗದು. ಅಂತೆಯೇ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಮಹತ್ವಿಕೆಯ ಕುರಿತು, ಅವುಗಳ ಸಫಲತೆಯ ಕುರಿತು ಜನತೆ ತಿಳಿದುಕೊಳ್ಳುವಂತೆ ಸ್ವಲ್ಪವಾದರೂ ಹೇಗಾದರೂ ಸಹಾಯ ಮಾಡುವ ಜನ ಸ್ವಾತಂತ್ರ್ಯ ಶಿಶುವಿಗೆ ಹಾಲುಣಿಸುತ್ತಾರೆ ಎಂಬುದನ್ನೂ ಗ್ರಹಿಸದಿರಲಾಗದು. ನೂರಕ್ಕೆ ನೂರು ಜನ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳ ಅರ್ಥವನ್ನು ತಿಳಿದುಕೊಂಡಾಗ ಮಾತ್ರ ನಮ್ಮ ಮುಂದಾಳುಗಳು ಹಿಂದೆ ವಹಿಸಿದ, ಈಗ ವಹಿಸುವ ಶ್ರಮ ಸಾರ್ಥಕ. ಆದುದರಿಂದ ಕವಿವರ್ಯ ರವೀಂದ್ರರು ಅಂದು ಗಾಂಧೀಜಿಯ ಮುಂದೆ ಹೇಳಿದ್ದ ಮಾತ ಇಂದಾದರೂ ನಮ್ಮ ಜನತೆಯ ಲಕ್ಷ್ಯಕ್ಕೆ ಬರಬೇಕು.

—ಶ್ರೀ ದಾಂತಿ

ನಿಮ್ಮ ಬೇಂಕರರನ್ನು ಹೇಗೆ ಆರಿಸುವಿರಿ?

ನಿಮ್ಮ ಬೇಂಕು ಭದ್ರ ಮತ್ತು ಸುರಕ್ಷಿತವಾಗಿರಬೇಕು, ಮಾತ್ರವಲ್ಲ ಅದರ ನೌಕರವರ್ಗವೂ ಕ್ಷಿಪ್ರ ಮತ್ತು ವಿನಯಶೀಲ ಕಾರ್ಯಪ್ರವೃತ್ತಿಯವರಾಗಿರಬೇಕು

ಎಲ್ಲಕ್ಕಿಂತಲೂ, ನಿಮಗೆ ಅವಶ್ಯಕತೆಯಿರುವಾಗ, ಬೇಂಕು ನಿಮ್ಮ ಸಹಾಯಕ್ಕೊದಗಬೇಕು,

ನೀವು ಉಳಿತಾಯ ಮಾಡಲು ಶಕ್ತರಾದಾಗ, ನಿಮ್ಮ ಠೇವಣಾತಿ ಪಡೆಯುವುದು ಮಾತ್ರ ಬೇಂಕಿನ ಕೆಲಸವಲ್ಲ ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಬೇಂಕಿನ ಸಹಕಾರವು ಅಗತ್ಯ ಬಿದ್ದಲ್ಲಿ ನಿಮಗೆ ಸಹಾಯ ಮಾಡಲು ಬೇಂಕು ಪ್ರಯತ್ನಿಸಬೇಕು.

ಮೇಲಿನ ತತ್ವಗಳನ್ನು ನಾವು ಕಳೆದ 25 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯಾಚರಣೆಗಿಳಿಸಿದ್ದೇವೆ.

ದಿ ವಿಜಯ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು ಮಂಗಳೂರು—3.

(ಸ್ಥಾಪನೆ—1931)

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ- ರೂ. 11 ಲಕ್ಷಕ್ಕೂ ಮಿಕ್ಕಿದೆ.

## ಸಫಲ ಸಂಶೋಧನೆ

# ಭಟ್ಟರ ಪಂಪು

* *

### ಹರಿಯುವ ನೀರೇ ಬಲ

ದ. ಕ. ಜಿಲ್ಲೆಯ 'ಅಡ್ಯನಡ್ಕ'ದ ಸಮೀಪ ಶ್ರೀ ಮರಕ್ಕಿಣಿ ಜಿ. ವಿ. ಭಟ್‌ರವರು ನವೀನರೀತಿಯ ಪಂಪೊಂದನ್ನು ಕಂಡು ಹಿಡಿದ ವಿಚಾರ ಈಗಾಗಲೇ ಹಲವರಿಗೆ ತಿಳಿದಿರಲೂ ಬಹುದು. ಪಂಪಿನ ಶೋಧನೆಯಾಗಿ ಒಂದೂವರೆ ವರುಷಕ್ಕೂ ಮೇಲಾಯಿತು. ಪ್ರಾರಂಭದಲ್ಲಿ ಹೊಸ ಪಂಪೊಂದು (ಕೇವಲ ಹರಿಯುವ ನೀರಿನ ಶಕ್ತಿಯಿಂದಲೇ ನಡೆಯುವ) ಶೋಧಿಸಲ್ಪಟ್ಟಿದೆ ಎಂದು ಪತ್ರಿಕೆಯಲ್ಲಿ ಓದಿದೆ. ಕೆಲವು ಸಮಯ ಕಳೆಯಲು ಜಿಲ್ಲಾ ಕಲೆಕ್ಟರರಾದ ಶ್ರೀ ಯಂ. ಜಿ. ರಾಜಾರಾಮ್ ಅವರು ಪಂಪನ್ನು ಪರಿಶೀಲಿಸಿ ಪ್ರೋತ್ಸಾಹ ನೀಡುವ ಭರವಸೆಯಿತ್ತರೆಂಬ ವಿಚಾರ ನೋಡಿದೆ.

ಕಳೆದ ೧೮—೩—೧೯೫೬ರಂದು ಮದ್ರಾಸಿನ ಎಗ್ರಿಕಲ್ಚರಲ್ ಡೆಪ್ಯೂಟಿ ಡೈರೆಕ್ಟರ್ (ಇಂಜಿನಿಯರಿಂಗ್) ರವರಾದ ಶ್ರೀ ಬಿ. ಎಂ. ಲಕ್ಷ್ಮೀಪತಿ ಅವರು ಶ್ರೀ ಭಟ್ಟರ ಪಂಪನ್ನು ನಿರೀಕ್ಷಿಸಿದರು. ಅದರ ವಿವಿಧ ಪ್ರಯೋಜನಗಳನ್ನು ಮನಗಂಡ ಅವರು ಭಟ್ಟರನ್ನು ಶ್ಲಾಘಿಸಿ, ಪಂಪನ್ನು "ಭಟ್‌"ರ ಪಂಪು" ಎಂದು ಕರೆದರು. ಅಲ್ಲದೆ ಇದನ್ನು ಶಿಫಾರಸು ಮಾಡುವುದಾಗಿಯೂ ಭರವಸೆಯಿತ್ತರು.

ಇತ್ತೀಚೆಗೆ ಅಂದರೆ ೨೫-೮-೧೯೫೬ರಂದು ಮಂಗಳೂರಿಗಾಗಮಿಸಿದ್ದ ಕೇಂದ್ರದ ಕೃಷಿ ಮಂತ್ರಿಗಳಾದ ಮಾನ್ಯ ಎಂ.ವಿ.ಕೃಷ್ಣಪ್ಪ, ಅವರು ಈ ನವೀನ ಪಂಪನ್ನು ಪರಿಶೀಲಿಸಿದರು. ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಜನರಿಗೆ ಬೇಗನೇ ಇದರ ಪ್ರಯೋಜನ ಸಿಗುವಂತಾಗಲಿಯೆಂದು ಆಶಿಸಿದ್ದಲ್ಲದೆ ತಮ್ಮಿಂದಾದ ನೆರವನ್ನು ನೀಡುವುದಾಗಿಯೂ ಅಭಯವಿತ್ತರು.

— ಎಂಬುದಾಗಿ ನನಗೆ ತಿಳಿಯಿತು.

ನನಗೆ ಬಹಳ ಆಶ್ಚರ್ಯವಾಯಿತು. ಈ ನವೀನ ರೀತಿಯ ಪಂಪಿನ ಕುರಿತಾಗಿ ನಾನು ಕೇಳುತ್ತಿದ್ದು ಹಲವು ಸಮಯವಾಯಿ. ಜನತೆಗೆ ಸರ್ವವಿಧದಲ್ಲಿ ಉಪಯುಕ್ತವಾದ ಈ ಪಂಪಿನ ಕುರಿತು ಸರಕಾರವೇಕೆ ವಿಶೇಷ 'ನಿಗಾ' ತಕ್ಕೊಳ್ಳುವುದಿಲ್ಲ? ಎಂದು ಆಲೋಚಿಸತೊಡಗಿದೆ. ಹೇಗಿದ್ದರೂ ಒಮ್ಮೆ ಇದರ ವಿಷಯ ಸರಿಯಾಗಿ ತಿಳಿಯಬೇಕೆಂಬ ಆಶೆ ನನ್ನಲ್ಲಿ ಮೂಡಿತು.

ಅಂತೆಯೇ ಅಡ್ಯನಡ್ಕದ ವರೆಗೆ ಹೋಗುವ ಮನಸ್ಸು ಮಾಡಿದೆ.

ಖಾದಿಯ ಸಾದಾ ಉಡುಪಿನಿಂದ ಕಂಗೊಳಿಸಿ, ಸದಾ ಗಂಭೀರ ಮುಖಭಾವದಿಂದಿರುವ ಶ್ರೀ ಜಿ. ವಿ. ಭಟ್ಟರಿಗೆ ಇನ್ನೂ ಮೂವತ್ತೆರಡು ವರುಷ ಪ್ರಾಯ. ನಾನು ಹೋಗಿ ಕೇಳಿಕೊಂಡಕೂಡಲೇ ಏನೊಂದೂ ಬೇಸರಿಸದೆ ಪಂಪಿನ ವಿವಿಧ ಕಾರ್ಯಕಲಾಪಗಳನ್ನು ಪ್ರತ್ಯಕ್ಷವಾಗಿ ನನಗವರು ವಿವರಿಸಿ ಹೇಳಿದರು. ಮಹಾಜನರ ಅವಗಾಹನೆಯ ಬಗ್ಗೆ ನಮ್ಮ ಸಂಭಾಷಣೆಯ ಮುಖ್ಯ ವಿಷಯಗಳನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ

'ಭಟ್'ರ ಪಂಪು' ಎಂದು ಹೆಸರಿಸಲಾದ ಈ ಪಂಪಿನ ಗಾತ್ರ ಇಲ್ಲಿ ಕಾಣುವಂತೆ ಬಹಳ ಸಣ್ಣದು. (ಮೋಡೆಲ್.) ಹರಿಯುವ (ನಿಧಾನವಾಗಿ) ನೀರಲ್ಲಿಟ್ಟಾಗ ಎಣ್ಣೆ ಪೆಟ್ರೋಲು ವಗೈರೆ ಯಾವುದೇ ವೆಚ್ಚವಿಲ್ಲದೆ ಒಂದು 'ಹೆಬ್ಬೆರಳ' ನಷ್ಟು ತೋರದಲ್ಲಿ (ಮಾದರಿ ಪಂಪಿನಲ್ಲಿ) ೪೦ ಫೀಟಿಗಿಂತಲೂ ಮೇಲಕ್ಕೆ ನೀರು ಹಾರುವುದನ್ನು ಕಂಡಾಗ ಶ್ರೀ ಭಟ್ಟರ ಸಾಹಸಕ್ಕೆ ಯಾರೂ ಬೆಟ್ಟು ಚಚ್ಚಲೇಬೇಕು! ಇದನ್ನು ಕಂಡುಹಿಡಿದ ಶ್ರೀ ಭಟ್ಟರು ನಿಜವಾಗಿಯೂ ಧನ್ಯರು ಎಂದುಕೊಂಡೆ. ಕುತೂಹಲ ತಡೆಯದೆ ನಾನು ಪ್ರಶ್ನಿಸಿದೆ.

"ತಾವಾರು ಒಂದೂವರೆ ವರುಷಕ್ಕೆ ಮೊದಲೇ ತಾವು ಪಂಪು ಕಂಡುಹಿಡಿದ ವಿಚಾರ ಪತ್ರಿಕೆಗಳಿಂದ ನಾನು ತಿಳಿದಿದ್ದೇನೆ. ಆದರೂ ಸರಕಾರವೇಕೆ ಇದಕ್ಕೆ ಸರಿಯಾದ ಪ್ರೋತ್ಸಾಹ ನೀಡಲಿಲ್ಲ?"

ಅವರು ಹೀಗೆ ಉತ್ತರವಿತ್ತರು—

"ನಿಜ ನೀವು ಹೇಳುತ್ತಿರುವುದು; ಇದನ್ನು ಶೋಧಿಸಿ ವರುಷ ಒಂದೂವರೆ ಕಳೆಯಿತು. ಅದಕ್ಕೆ ಕಾರಣವಿದೆ—; ಪಂಪನ್ನು ಕಂಡು ಹಿಡಿದ ಸಮಯದಲ್ಲಿ ನನಗೆ ಸರಿಯಾದ ಜನಬೆಂಬಲ ಸಿಗಲಿಲ್ಲ; ಎನ್ನದೆ ಉಪಾಯವಿಲ್ಲ. ನನ್ನ ಈ ಶೋಧನೆಯನ್ನು ನೋಡಿ ಕೆಲವರು ಅಸೂಯೆಗೊಂಡರೆ —ಹಲವರು ಏನೊಂದೂ ವಿಚಾರಮಾಡದೆ "ಇಂಥ ವಿಧಾನ ಹೊಸತಲ್ಲ; ಇದು ಮೊದಲೇ ಇದೆ"; ಎನ್ನ ತೊಡಗಿದರು. ಇಂಗ್ಲಿಷ್ ಕಲಿಯದ, ಸಯನ್ಸ್ ಓದದ ಇವರೇನು ಪರಿಶೋಧನೆ ನಡೆಸುತ್ತಾರೆ? ಎನ್ನಲೂ ಕೆಲವರು ಹಿಂಜರಿಯಲಿಲ್ಲ. ಆದಾಗ್ಯೂ ನಾನು ಅದೊಂದನ್ನು, ಪರಿಗಣಿಸದೆ ಆತ್ಮ ವಿಶ್ವಾಸದಿಂದ ಮುಂದಡಿಯಿಡ ತೊಡಗಿದೆ.

ನಾನು ಇಂಗ್ಲಿಷ್ ಹೆಚ್ಚು ಕಲಿತಿಲ್ಲವಾದ ಕಾರಣ ಪತ್ರವ್ಯವಹಾರಕ್ಕೆ—ವಿಜ್ಞಾನದ ಭಾವನೆಗಳನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ—ತುಂಬಾ ಕಷ್ಟವಾಗುತಿತ್ತು ವಿಜ್ಞಾನದ ಪರಿಜ್ಞಾನವಿರುವ ಇಂಗ್ಲಿಷ್ ಬಲ್ಲವರೂ ನನಗೆ ಸಿಗದಿದ್ದುದರಿಂದ ಎಲ್ಲಾ ಅಭಿಪ್ರಾಯಗಳನ್ನು ಪಂಪಿನ ವಿವರಗಳನ್ನೂ ಮುಂದಟ್ಟಾಗುವಂತೆ ಮೇಲಧಿಕಾರಿಗಳಿಗೆ ತಿಳಿಸಲು ಆಗುತ್ತಿರಲಿಲ್ಲ. ಅಲ್ಲದೆ ವಿಜ್ಞಾನ ರಂಗದಲ್ಲಿ ನಾನು ಹೊಸಬ —ಇದು ನನ್ನ ಪ್ರಥಮ ಪ್ರಯೋಗ. ಯಾವ ದಾರಿಯಲ್ಲಿ ಹೇಗೆ ಮುಂದಡಿಯಿಡಬೇಕು ಎಂಬುದನ್ನೆಲ್ಲಾ ತಿಳಿದೇ ಸಾಗಬೇಕಾಗಿದ್ದುದರಿಂದ ಈ ರೀತಿ ಇಷ್ಟು ತಡವಾಗಲು ಕಾರಣವಾಯಿತು—ಸರಕಾರದ ಅವಗಾಹನೆಗೆ ತರಲು.

ಆದರೆ ಈಗೀಗ ಜನರಿಗೂ ಸರಕಾರಕ್ಕೂ ಇದರ ಪ್ರಯೋಜನ ತಿಳಿಯತೊಡಗಿದೆ. ಹಲವಾರು ಕಾಗದಗಳು ಪ್ರೋತ್ಸಾಹಕರವಾಗಿ ಬರುತ್ತಿವೆ. ಆದರೂ ಇಂದು ಸಂಶೋಧಕರಿಗೆ ಸಿಗುವ ಪ್ರೋತ್ಸಾಹ ಸಾಲದಾಗಿದೆ. ಈ ರೀತಿ ವಿಳಂಬವಾಗುವುದರಿಂದ ಎಷ್ಟೋ ಯೋಜನೆಗಳು ಬಹಿರಂಗಕ್ಕೆ ಬಾರದೆ ಅಂತರಂಗದಲ್ಲೇ ಉಳಿಯುತ್ತಿವೆ."

—ಎಂದು ವಿವರವಾಗಿ ನನ್ನ ಪ್ರಶ್ನೆಗೆ ಉತ್ತರವಿತ್ತರು ಶ್ರೀ ಭಟ್. ಅಲ್ಲದೆ ಮಾನ್ಯಮಂತ್ರಿಗಳು, ಡೈರೆಕ್ಟರರು, ಕಲೆಕ್ಟರರು—ಬಂದಿರುವಾಗ ತೆಗೆದ ಕೆಲವು ಫೋಟೋಗಳನ್ನು ಅವರು ನನಗೆ ತೋರಿಸಿದರು. (ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ).

"ಇತ್ತೀಚೆಗೆ ನೆಹರೂ ಮಂಗಳೂರಿಗೆ ಬಂದಿದ್ದಾಗ ತಾವೇಕೆ ಈ ಪಂಪನ್ನು ಅವರಿಗೆ ತೋರಿಸಲಿಲ್ಲ?'

"ಹೌದು; ನೆಹರೂರವರಿಗೆ ನನ್ನೀ ಪ್ರಥಮ ಪ್ರಯತ್ನವನ್ನು ಕಾಣಿಸಬೇಕೆಂಬ ಬಯಕೆ ನನಗೆ ಬಹಳವಾಗಿತ್ತು. ಪ್ರದರ್ಶಿಸಲು ಏರ್ಪಾಡುಗಳೂ ನಡೆದಿದ್ದುವು. ಆದರೆ ಕೆಲವು ವಿಶೇಷ ತೊಂದರೆಗಳಿಂದ ಅಂದು ಪ್ರದರ್ಶಿಸಲಾಗಲಿಲ್ಲ."— ಎಂದು ಮಾತ್ರ ಹೇಳಿದರು ಭಟ್ಟರು—ನನ್ನ ಪ್ರಶ್ನೆಗೆ ಉತ್ತರರೂಪವಾಗಿ. ಕಾರಣ ಅವರು ತಿಳಿಸಲಿಲ್ಲ ಅಲ್ಲಿಯೂ ಜನತೆ ಅವರಿಗೆ ಅನುಕೂಲವಾಗಿ ಇರಲಿಲ್ಲವೆಂದು ಅವರ ಮಾತಿನ 'ಧ್ವನಿ' ಯಿಂದ ನಾನು ತಿಳಿದುಕೊಂಡೆ.

"ಈ ಪಂಪಿನ ಉಪಯೋಗದ—ಪ್ರಯೋಜನದ ಕುರಿತಾಗಿ ಸ್ವಲ್ಪ ಹೇಳುತ್ತೀರಾ?"— ಅಂದೆ. ಅವರು ನಗುತ್ತಾ ಮುಂದುವರಿಸಿದರು.

"ಇಲ್ಲಿ ತೋರುತ್ತಿರುವ ಈ ಪಂಪು—ಇದೊಂದು ಮಾದರಿ ಮಾತ್ರ. ಇದರ

(೧೧ನೇ ಪುಟ ನೋಡಿ).


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.



ಫಂಟಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ
ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.
—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು'
—ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು."
—ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

●

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.
ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ
ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

## ಸಂಸ್ಕೃತಿಯ ದಿಗ್ದರ್ಶನ

# ಒಳ್ಳೆಯದನ್ನು ಗ್ರಹಿಸಿ, ಕೆಟ್ಟುದನ್ನು ತ್ಯಜಿಸುವುದೇ ಆತ್ಮ ಸಂಸ್ಕರಣ

* *

**ಇಲ್ಲಿ ನಾಗರಿಕರ ನಡುವೆ ಜಾತಿ, ಮತ, ಧರ್ಮ ಮುಂತಾದ ಭೇದಭಾವಕ್ಕೆ ಎಡೆಯೇ ಇಲ್ಲ**

ನಮ್ಮ ಜೀವನರಂಗದ ವಿವಿಧ ಮುಖಗಳಲ್ಲಿ ಸೌಂದರ್ಯದ ಗೆಲವು ನಗೆಗಳನ್ನು ಮೂಡಿಸಿ ಧ್ಯೇಯ ಸಿದ್ಧಿಗಾಗಿ ಶಕ್ತಿ-ಸಾಹಸಗಳನ್ನು ಹೆಚ್ಚಿಸಿ ಸಾತ್ವಿಕ ಸತ್ವತೇಜವನ್ನು ಬೆಳಗಿಸುವ ಮಹಾನ್ ಶಕ್ತಿಯುಳ್ಳದ್ದು ಸಂಸ್ಕೃತಿ. ಜೀವನಕ್ಕೊಂದು ಸ್ಥಾನಮಾನಗಳನ್ನು ಕಲ್ಪಿಸಿ ಅದು ಪ್ರಗತಿಯ ದಾರಿಯಲ್ಲಿ ಮುನ್ನಡೆಯಲು ಕಟ್ಟು ನಿಟ್ಟುಗಳನ್ನೂ ಸಾಧನ ವಿಧಾನಗಳನ್ನೂ ಕಲ್ಪಿಸಿ ಅದರ ವಿವಿಧೋಪಾಂಗಗಳೂ ಪೋಷಣೆಹೊಂದಲು ಮಾರ್ಗದರ್ಶನ ಮಾಡುವದು ಸಂಸ್ಕೃತಿ. ನಾವು ಮನುಷ್ಯರಾಗಿ ಹುಟ್ಟಿದರೂ ಮನುಷ್ಯತ್ವ-ಅದರ ಗುರಿಯನ್ನು ಸಾಧಿಸಲು ಸಂಸ್ಕೃತಿ ಬೇಕು. ಜೀವನದಲ್ಲಿ ಇಷ್ಟು ಅವಿಭಾಜ್ಯವಾದ ನಿಕಟ ಸಂಬಂಧವುಳ್ಳದ್ದು ಸಂಸ್ಕೃತಿ.

ಸಂಸ್ಕೃತಿಯ ಸಂಬಂಧವಿಲ್ಲದಿದ್ದ ಜೀವನ ಕಂಡಾಗ ಸಂಸ್ಕೃತಿಯ ಪ್ರಭಾವ ಎಷ್ಟೆಂಬುದು ಕಂಡುಬರುತ್ತದೆ. ಬಿರುಗಾಳಿಯ ಹೊಯ್ದಾಟದಲ್ಲಿ ಅನಿಶ್ಚಿತ ಗತಿಯಿಂದ ಸಾವು ನೋವುಗಳ ಸುಳಿಯಲ್ಲಿ ಸಿಲುಕಿ ಚಲಿಸುವ ನಾವೆಯಂತೆ—ಸುಸಂಸ್ಕೃತಿಯಿಲ್ಲದಿದ್ದ ಜೀವನವೂ ಶಾಂತಿ ಸಮಾಧಾನ ಸುವ್ಯವಸ್ಥಿತ ವ್ಯವಹಾರಗಳಿಲ್ಲದೇ ತೀರ ಕಾಡುತನದಲ್ಲಿ ಪಶು ಸಮಾನ ಬಾಳಿನಂತೆ ಇರಬೇಕಾದಂಥ ಪರಿಸ್ಥಿತಿ ಬಂದೊದಗುತ್ತದೆ. ನಮ್ಮಲ್ಲಿ ಸಂಸ್ಕೃತಿ ವಿಕಾಸಗೊಳ್ಳದಿದ್ದರೆ ಹೂಗಿಡದಲ್ಲಿ ಹೂ ಬಿಡದೇ ಹಾಗೆಯೇ ಅದು ಬೆಳೆದು ನಿಂತರೆ ಅದಕ್ಕೆಷ್ಟು ಧನ್ಯತೆಯೋ ಅಷ್ಟೇ ನಮಗೂ. ಅಂದಾಗ ಸಂಸ್ಕೃತಿಯ ವಿಚಾರವಾಗಿ ತಿಳಿಯಬೇಕಾದುದು ಅಗತ್ಯ, ಅವಶ್ಯ.

ಹೀಗೆನ್ನುವಾಗ ಸಂಸ್ಕೃತಿಯೆಂದರೇನು ಎಂದು ಜನಸಾಮಾನ್ಯರ ಮಹಾನ್ ಪ್ರಶ್ನೆಯೊಂದು ಉದ್ಭವಿಸುತ್ತದೆ. ಇದಕ್ಕೆ ದೊಡ್ಡ ದೊಡ್ಡ ಪಂಡಿತರೆಷ್ಟೋ ಉತ್ತರಿಸುವಾಗ ಇದನ್ನು ತೀರ ಗಂಭೀರವಾಗಿ ಹೇಳಿ ಅವರ ಮನಸ್ಸಿಗೆ ಹಿಡಿಸದಂತೆ ಮಾಡಿ ಮತ್ತೂ ಕೊನೆಯಲ್ಲಿ "ಸಂಸ್ಕೃತಿಯಂಥ ಗಹನ ಗಂಭೀರ ವಿಷಯಕ್ಕೆ ನಾನು ಹೇಳಿದ್ದು ತೀರ ಅಲ್ಪ" ಎಂದು ಮುಕ್ತಾಯಗೊಳಿಸಿ ಬಿಡುವುದೂ ಉಂಟು. ಇದರಿಂದ "ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವದು ಅಸಾಮಾನ್ಯ ಕಾರ್ಯ. ಇದು ನಮ್ಮಿಂದ ಸಾಧ್ಯವಲ್ಲದ ವಿಷಯ" ಎಂಬ ಭಾವನೆ ತಾನಾಗಿ ಮೂಡಿ ಬರುತ್ತದೆ. ಹಾಗಾಗಿ ಸಂಸ್ಕೃತಿ-ಸಂಸ್ಕೃತಿ— ಎಂಬುದು ತಲೆ ತಿನ್ನುವ ವಿಷಯವಾಗಿದೆಯೇ ಹೊರತು ಅದರ ಯಥಾರ್ಥ ಕಲ್ಪನೆ ಸಾಕಷ್ಟು ಹುಟ್ಟಲಿಲ್ಲ. ಸಂಸ್ಕೃತಿಯ ದಿವ್ಯ ಭವ್ಯ ತತ್ವಗಳೆಲ್ಲ ಲೇಖನ ಭಾಷಣಗಳಲ್ಲಿ ತುಂಬಾ ಬೆಳೆಯಿತೇ ಹೊರತು ಜೀವನ ರಂಗದಲ್ಲಿ ಸಾಕಷ್ಟು ಬೆಳೆಯಲಿಲ್ಲ—ಬೆಳಗಲೂ ಇಲ್ಲ.

ಸಂಸ್ಕೃತಿಯೆಂದರೆ ಅದೊಂದು ದೃಗ್ಗೋಚರ ವಸ್ತು ವಿಶೇಷವಲ್ಲ. ಇಂದ್ರಿಯಾತೀತವೂ ಅಲ್ಲ. ಅದು ಜ್ಞಾನಗಮ್ಯವಾದುದು. ಅದನ್ನು ಕಾಣಲು ನಾವು ಎಲ್ಲಿಯೂ ಹೋಗಬೇಕಾದುದೂ ಇಲ್ಲ. ಸಂಸ್ಕೃತಿಯ ಜಿಜ್ಞಾಸುಗಳು ಶಾಂತ ಮನಸ್ಕರಾಗಿ ಅಂತರ್ಮುಖರಾಗಬೇಕು. ನಮ್ಮ ಧೃತಿಗೆಡದ ಆತ್ಮಶಕ್ತಿಯ ಹಿನ್ನೆಲೆಯಲ್ಲಿ ಯಾವ ಚೈತನ್ಯ ನಮಗೆ ಸತ್ಪ್ರಚೋದನೆಯನ್ನುಂಟುಮಾಡುತ್ತಿದೆ?—ಯಾವುದು ನಮ್ಮ ಜೀವಕ್ಕೆ ಜೀವಾಳವೆನಿಸಿ ಜೀವನ ಕ್ಷೇತ್ರದಲ್ಲಿ ಬರುವಂಥ ದುಷ್ಟ ಶಕ್ತಿಗಳನ್ನು ಎದುರಿಸಲು ಸಾಹಸ—ಚೈತನ್ಯಗಳನ್ನು ನೀಡುತ್ತಿದೆಯೋ ಅದೇ ಯುಗಯುಗಾಂತರಗಳಿಂದಲೂ ನಮ್ಮ ಜೀವನ ಪ್ರಣಾಳಿಯಲ್ಲಿ ಓತಪ್ರೋತವಾಗಿ ಹರಿಹರಿದು ಬಂದಿರುವ ಸಂಸ್ಕೃತಿ. ಇದೇ ನಮ್ಮ ಆತ್ಮ ಮನಸ್ಸುಗಳ ಸಂಸ್ಕರಣವನ್ನು ಮಾಡುವಂಥಾದ್ದು.

ವ್ಯಕ್ತಿ—ಸಮಾಜ-ರಾಷ್ಟ್ರ ಇವೆಲ್ಲವುಗಳ ಪ್ರಗತಿಯು ಅವಿರೋಧವೂ—ಅವಿನಾಶಿಯೂ—ಅಜೇಯವೂ ಎನಿಸಬೇಕಾದರೆ ಇವೆಲ್ಲವುಗಳ ಆತ್ಮಶಕ್ತಿಯಲ್ಲಿ ಸಂಸ್ಕೃತಿಯ ಅಕ್ಷಯ ಬೆಳಕು ಬೆಳಗುತ್ತಿದೆಯೆಂದು ಊಹಿಸಬೇಕಾಗುತ್ತದೆ. ಜೀವನವು ತನ್ನ ಬಾಳಿನ ಸುತ್ತಲೂ ಪಸರಿಸುವಂಥ ಕ್ಷುದ್ರ ವಿಷಮ ವಾತಾವರಣವನ್ನು ಎದುರಿಸುವ ಸಮಾಜವು ತನ್ನ ಧ್ಯೇಯ—ಧೋರಣೆ—ತತ್ವ ಆದರ್ಶಗಳಿಗೆ ಸ್ವಲ್ಪವೂ ಕುಂದುಂಟಾಗದೇ ಮುನ್ನಡೆಯುವ—ರಾಷ್ಟ್ರವು ಬಲಿಷ್ಟವಾಗಿ ಪರರಾಷ್ಟ್ರದ ದುರಾಕ್ರಮಣವನ್ನು ವಿರೋಧಿಸುವ—ಪ್ರಬಲಶಕ್ತಿ ಇನ್ನಾವುದೂ ಅಲ್ಲ—ಅದೇ ನಮ್ಮ ಪರಂಪರೆಯಲ್ಲಿ ಅನೂಚಾನವಾಗಿ ಬೆಳಗುತ್ತ ಬಂದಂಥ ಸಂಸ್ಕೃತಿ. ಜೀವನವು ತನ್ನ ಸಿದ್ಧಿಯನ್ನು ಇನ್ನಾವ ಪ್ರಯೋಗ ಪ್ರಮೇಯಗಳಿಂದಲೂ ಸಾಧಿಸಲಾರದು. ಸಮಾಜವು ತನ್ನ ಆದರ್ಶವನ್ನು ಸುಸಂಸ್ಕೃತವಲ್ಲದ ಯಾವ ಸಾಧನ ವಿಧಾನಗಳಿಂದಲೂ ಗಳಿಸಲಾರದು. ರಾಷ್ಟ್ರವೂ ತನ್ನ ವಿಜಯವನ್ನು ಯಾವ ಶಸ್ತ್ರಾಸ್ತ್ರ ಸೈನ್ಯಬಲಗಳಿಂದಲೂ ಪಡೆಯಲಾರದು. ಕೇವಲ ಇವೆಲ್ಲವುಗಳ ಆತ್ಮಶಕ್ತಿಯಲ್ಲಿ ಸುಪ್ತವಾಗಿರುವಂಥ ಸಂಸ್ಕೃತಿಯೊಂದರಿಂದಲೇ ಇವೆಲ್ಲವನ್ನೂ ಸಾಧಿಸಬಹುದು. ಜಾಗ್ರತಗೊಂಡ ಆತ್ಮಶಕ್ತಿಯು ಶತಕೋಟಿ ಶಸ್ತ್ರಾಸ್ತ್ರಗಳನ್ನೂ ಪರಾಭವಿಸಿ ದುಷ್ಟಶಕ್ತಿಗಳಾದ ದಂಭ—ದುರಭಿಮಾನ—ದರ್ಪ ಇವುಗಳನ್ನೆಲ್ಲಾ ಎದುರಿಸಿ ವಿಜಯದ ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲದು ಎಂಬುದನ್ನು ನಾವು ಖಚಿತವಾಗಿ ತಿಳಿಯಬೇಕಾದ ವಿಷಯ.

ನಮ್ಮಲ್ಲಿಂದು ಕೃತಿಕಾರರು ಬೆಳೆಯುವದರ ಬದಲು—ಮಾತುಗಾರರು ಎಣಿಕೆಯಿಲ್ಲದಷ್ಟು ಬೆಳೆಯುತ್ತಿದ್ದಾರೆ. ತಮ್ಮ ಕೃತಿಯಲ್ಲಿ ಸೌಂದರ್ಯವನ್ನು ಹೆಚ್ಚಿಸುವದರ ಬದಲು ಮಾತು—ಶರೀರಗಳ ಕೃತ್ರಿಮ ಸೌಂದರ್ಯವನ್ನು ಹೆಚ್ಚಿಸುತ್ತಿದ್ದಾರೆ. ಈ ಹವ್ಯಾಸಕ್ಕಾಗಿ ದುಡಿಯುವ ಕೆಲವಂಶವನ್ನು—"ತಮ್ಮ ಕೃತಿ ಜನಪ್ರೀತಿಗಳಿಸಬೇಕು—ಕೃತಿಯಿಂದ ಜನಪ್ರಿಯರಾಗಬೇಕು" ಎಂದು ದುಡಿದಿದ್ದರೆ—ಇದು ಜನಜೀವನಕ್ಕೆ ತುಂಬಾ ಹಿತಕಾರಿಯೆನಿಸುತ್ತಿತ್ತು. ಶಕ್ತಿಯಿಲ್ಲದ ಸತ್ವಹೀನ ಬಾಳಿನ ಇಂದಿನ ಕಾಲ ಕಳೆದುಹೋಗುತ್ತಿತ್ತು. ಸಂಸ್ಕೃತಿಯ ಉಪಾಸನೆ—ಸಂಸ್ಕೃತಿಯ ಆವಿಷ್ಕಾರಗಳಿಗೆ ಆಗ ಅವಕಾಶವೂ ಉಂಟಾಗುತ್ತಿತ್ತು.

ಸಂಸ್ಕೃತಿಯ ಅಭಿವೃದ್ಧಿ ಉಪಾಸನೆಯೇನು ಗುರುತರ ಕಾರ್ಯವಲ್ಲ. ನಮ್ಮ ಎಷ್ಟೋ ಅರ್ಥವಿಲ್ಲದ ವ್ಯರ್ಥ ದುಡಿಮೆಯಷ್ಟು ಇದಕ್ಕೆ ದುಡಿಯಬೇಕಾದುದಿಲ್ಲ. ಆದರಲ್ಲೂ ಭಾರತೀಯ ಜನಾಂಗಕ್ಕೆ ಭಾರತೀಯ ಸಂಸ್ಕೃತಿಯ ಉಪಾಸನೆ ಹೊಸತಲ್ಲ. ಅದು ಯುಗಾನುವರ್ತಿಯಾಗಿ ಬಾಳಿನ ತುಂಬಾ ಹಾಸುಹೊಕ್ಕಾಗಿ ಜೀವನದ ಉಸಿರಾಗಿ ಬಂದಿದೆ. ಇಷ್ಟು ಜೀವನದೊಂದಿಗೆ ಸಾಮರಸ್ಯಗೊಂಡ ಶ್ರೇಷ್ಠ ಸಂಸ್ಕೃತಿ ವಿಶ್ವದಲ್ಲಿ ಇನ್ನೆಲ್ಲಿಯೂ ಇಲ್ಲ. ಇದರಲ್ಲಿರುವ ಅಮೋಘ ತತ್ವಗಳು ಇನ್ನಾವ ಸಂಸ್ಕೃತಿಯಲ್ಲೂ ಇಲ್ಲ. ಅದಕ್ಕಾಗಿಯೇ ಅಮೇರಿಕೆಯ ಸರ್ವ ಧರ್ಮ ಪರಿಷತ್ತಿನಲ್ಲಿ ಭಾರತೀಯ ಸಂಸ್ಕೃತಿಯ ಜ್ವಲಂತ ತೇಜಸ್ಸಿನ ಮುಂದೆ ವಿದೇಶೀಯ ಸಂಸ್ಕೃತಿಗಳು ತಲೆತಗ್ಗಿಸಬೇಕಾಯಿತು. ತತ್ವಗಳ ಭಿಕ್ಷೆ ಯಾಚನೆ ಮಾಡಬೇಕಾಯಿತು. ಇತರ ರಾಷ್ಟ್ರಗಳು ಭೌತಿಕ ಸಂಪತ್ತಿನ ಬೆಳವಣಿಗೆಯಿಂದ ಜೀವಿತದ ವ್ಯವಹಾರಕ್ಕೆ ಸುಖ ಸೌಕರ್ಯಗಳನ್ನು ಕಲ್ಪಿಸಿಕೊಂಡು ಮುಂದೆ ಬಂದರೂ ನಮ್ಮ ಸಂಸ್ಕೃತಿಯ ತಾತ್ವಿಕ ಸಂಪತ್ತಿನ ಎದುರಿನಲ್ಲಿ ಅವು ಮನ್ನಣೆ ಪಡೆಯಲಾರವು. ಈ ರಾಷ್ಟ್ರಗಳು ಭೌತಿಕ ಬಲದಿಂದ ಒಂದೊಂದು ಕಾಲ ತೀರ ಉನ್ನತಿಗೇರಿ ಇನ್ನೊಂದು ಕಾಲ ಹೇಳ ಹೆಸರಿಲ್ಲದಷ್ಟು ಅಧೋಗತಿಗೆ ಹೋಗುತ್ತವೆ. ಇದಕ್ಕೆ ಜರ್ಮನಿಯೇ ಸಾಕ್ಷಿ! ಆದರೆ ಭಾರತೀಯ ಸಂಸ್ಕೃತಿಯ ಪ್ರಭಾವದಿಂದ ಭಾರತವು ಅಂಥ ದುರ್ದೆಶೆಗೆ ಯಾವಾಗಲೂ ಈಡಾಗುವುದಿಲ್ಲ. ಎರಡು—ಮೂರು ಶತಮಾನಗಳಿಂದ ವಿದೇಶೀಯ ವ್ಯವಹಾರ ಭಾರತದಲ್ಲಿ ಸಾಗಿತು. ಇಲ್ಲಿಯ ಸಂಸ್ಕೃತಿಯ ಮೇಲೆಯೂ ತಮ್ಮ "ನಾಗರಿಕತೆ"ಯ ಮುದ್ರೆಯನ್ನೊತ್ತಿದರು. ಶಿಕ್ಷಣ ಮುಂತಾದ ಎಲ್ಲ ವ್ಯವಹಾರಗಳೂ ವಿದೇಶೀಯ ಕ್ರಮದಲ್ಲೇ ಸಾಗಿತು. ಹಾಗಿದ್ದರೂ ಭಾರತದ ಆತ್ಮಶಕ್ತಿಯಲ್ಲಿ ಹುದುಗಿರುವ ಸಾಂಸ್ಕೃತಿಕ ಶಕ್ತಿಯನ್ನು ತಡೆಯುವದಾಗಲಿಲ್ಲ. ಅದು ಒಮ್ಮೆ ಜಾಗೃತವಾಯಿತು. ಯಾವ ಶಸ್ತ್ರಾಸ್ತ್ರ ಭೌತಿಕ ಬಲವನ್ನೂ ಅವಲಂಬಿಸದೇ ಸ್ವಾತಂತ್ರ್ಯ ಪಡೆಯಿತು. ಇದೇ ಭಾರತೀಯ ಸಂಸ್ಕೃತಿಯ ಪ್ರಭಾವದ ದ್ಯೋತಕ. ವಿಜಯದ ಸತ್ಯನಿದರ್ಶನ.

ಈ ಸಂಸ್ಕೃತಿಯ ಹಲವು ಅವತಾರಗಳು ಭಾರತೀಯ ಜೀವನದಲ್ಲಿ ಹಲವು ಶತಮಾನಗಳಿಂದ ಅಸ್ತಿತ್ವದಲ್ಲಿ ಬಂದಿವೆ. ಭಗವಂತನನ್ನೂ ವಿವಿಧ ನಾಮ—ರೂಪ—ಕ್ರಿಯೆಗಳಿಂದ ಕಾಣುವಂತೆ ಇದನ್ನೂ ವಿವಿಧ ರೀತಿಯಿಂದ ಧರ್ಮ—ಸಂಪ್ರದಾಯ—ಸಮಾಜಪಂಥ—ಆಚಾರ ಮುಂತಾದ ಹೆಸರಿನಿಂದ ಉಪಾಸನೆಯ ವಿವಿಧ ಕ್ರಮಗಳು ನಡೆಯುತ್ತಿವೆ. ಇವೆಲ್ಲ ಸಂಸ್ಕೃತಿಯ ಪೋಷಕ ಅಂಗೋಪಾಂಗಗಳೇ ಹೊರತು ಇವೇ ಸಂಸ್ಕೃತಿಯೆಂದೆನಿಸುವದಿಲ್ಲ. ಈ ಅಂಗ ಸಂಸ್ಕೃತಿಯೆನಿಸುವ ಧರ್ಮದಲ್ಲೂ—ಸನಾತನ ಧರ್ಮ—ಹಿಂದೂ ಧರ್ಮ—ಇಸ್ಲಾಂ—ಕ್ರೈಸ್ತ—ಪಾರ್ಸಿ—ಮುಂತಾದ ಬೇಧಗಳುಂಟಾಗ

(೧೦ನೇ ಪುಟ ನೋಡಿರಿ)

**ಕುಟುಂಬ ಯೋಜನೆ**

ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಭದ್ರವಾದರೆನೇ ನಿಮ್ಮ ಕುಟುಂಬಯೋಜನೆ ಪರಿಪೂರ್ಣವಾಗುವುದು. ಕುಟುಂಬದ ಒಬ್ಬರ ಅಭ್ಯುದಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ. ನಿಮ್ಮ ಮಡದಿ, ಮಕ್ಕಳ ಪ್ರತಿಯೊಬ್ಬರ ಹೆಸರಲ್ಲಿ ಒಂದೊಂದು **'ಕ್ಯುಮುಲೆಟಿವ್ ಡಿಪೋಜಿಟ್'** ಲೆಕ್ಕ ತೆರೆದು ಅವರು ಕ್ರಮವಾಗಿ ಉಳಿಸುವಂತೆ ಮಾಡಿರಿ. ಇದಕ್ಕೆ ದೊಡ್ಡ ಮೊಬಲಗು ಬೇಕಾಗಿಲ್ಲ; ಕ್ರಮಬದ್ಧವಾಗಿ ನಿಶ್ಚಿತ ಹಣವನ್ನು ಉಳಿಸುವುದೇ ಮುಖ್ಯ.

ಆದುದರಿಂದ ಈ ಯೋಜನೆಯನ್ನು ಅಂಗೀಕರಿಸಿ ಕುಟುಂಬದೊಂದಿಗೆ ಕುಟುಂಬಯೋಜನೆಯನ್ನು ನೆರವೇರಿಸಿರಿ.

ಒಟ್ಟು ಆರ್ಥಿಕ ಆಸರೆ ರೂ. **9.5** ಕೋಟಿ.

**ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್**

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

**ಕಾರ್ಕಳ ಡಿ. ಮು. ಕೋರ್ಟಿನಲ್ಲಿ**

O. S. No. 217/1956.

ಪುಟ್ಟಣ್ಣ ಕಲ್ಕೂರ —ವಾದಿ

ಪದ್ಮನಾಭ ಪಾಟಕ ಕೂಡಾ 3 ಜನರು —ಪ್ರತಿವಾದಿರು

2. ಸುಬ್ರಾಯ ಪಾಟಕ ಶ್ರೀನಿವಾಸ ಪಾಠಕರ ಮಗ, ಕಾರ್ಕಳ ತಾಲ್ಲೂಕು ಬಾರಗ್ರಾಮದ ದುರ್ಗ ದೇವಸ್ಥಾನದ ಬಳಿಯಲ್ಲಿರುವವ.

2ನೇ ಪ್ರತಿವಾದಿ ಆದ ನಿಮಗೆ ಈ ಮೂಲ್ಕ ತಿಳಿಸುವುದೇನಂದ್ರೆ—

ನೀವು ಮತ್ತು 1.3ನೇ ಪ್ರತಿವಾದಿರು ವಾದಿಗೆ ತಾ. 21-8-50ರಲ್ಲು ರಿಜಿಸ್ಟ್ರು ಸಿರಿ ರೂ. 450ಕ್ಕೆ/- ಬರೆಕೊಟ್ಟ ತೋರಣವು ದಸ್ತಾವೇಜಿನ ಅಸಲು ಮತ್ತು ಬಾಕಿ ಬಡ್ಡಿ ಮತ್ತು ತಾ. 23-1 1951ರಲ್ಲು ರಿಜಿಸ್ಟ್ರು ಸಿರಿ ರೂ. 550-0-0ಕ್ಕೆ ವಾದಿಗೆ ನೀವು ಕೂಡಾ 3 ಜನರು ಬರೆಕೊಟ್ಟ ಗೊಂಚು ಪತ್ರದ ಬಾಬ್ತು ಅಸಲು ಬಾಕಿ ಬಡ್ಡಿ ಕೂಡಾ ರೂಪಾಯಿ 1201-2-2 ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 20-9-56ಕ್ಕೆ ನಿಮಗೆ ಆಕ್ಷೇಪ ನೋಟೀಸಿನ ಬಗ್ಗೆ ಇಟ್ಟಿದೆ. ಆಕ್ಷೇಪಯಿದ್ರೆ ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಹಾಜರ್ರಾಗಿ ನಿಮ್ಮ ಉಜ್ರಾಪದಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

**K. V. Kamath.**
Advocate for Pltf.

Karkala, 8—9—1956.

## ಜನಪದ ಜೀವನ

# ದಕ್ಷಿಣ ಕನ್ನಡದಲ್ಲಿ ಮನೆ ತುಂಬುವ ಹಬ್ಬ

* * *

## ತುಳುನಾಡ ಕನ್ನಡಿಗರ ಹೃದ್ಯ ಗೀತಗಳು

ಪುಷ್ಪಕನವ್ವುಂಬಲೆ ತುಳುನಾಡಿಂಗೋ
ಯೆಕ್ಕು
ಅಕ್ಕಿಯು ವೋಲೆ ಗೆರೆಯಿಲ್ಲೆ–ತುಳುನಾಡ
ಮಕ್ಕಳ ವ್ಯೈಲಿ ಕಲೆಯಿಲ್ಲೆ ‖ ೧ ‖

ತನ್ನ ತಾಯ್ನೆಲವನ್ನೂ ತಾಯಿಣುಗರನ್ನೂ ಇಷ್ಟು ಸಂಭ್ರಮದಿಂದ, ತುಂಬು ಹೃದಯದಿಂದ, ಹೃದಯ ವೈಶಾಲ್ಯದಿಂದ ಮನತುಂಬಿ ಮೆಚ್ಚಿ ಕೊಂಡಾಡುವ ಈ ಸಹೃದಯತೆ ಜನಪದ ಕಲಾವಿದರ ಸೌಭಾಗ್ಯ. ದಕ್ಷಿಣದ ಚಂದ್ರಗಿರಿ ಹೊಳೆಯಿಂದ ಉತ್ತರದ ಕಲ್ಯಾಣಪುರ ನದೀ ದಡದವರೆಗೆ ವಿಸ್ತಾರವಾಗಿ ಹಬ್ಬಿದ ತುಳುನಾಡು, ಜನಪದ ಕಲಾವಿದರ ಕಣ್ಣಿನಲ್ಲಿ ಸ್ವರ್ಗ ತುಳುನಾಡ ಜನರು ಮಾನವ ಶ್ರೇಷ್ಠರು. ಅನ್ಯರನ್ನು ಜರೆಯುವ ಮಾತ್ಸರ್ಯವಿಲ್ಲ, ಇವರಲ್ಲಿ; ತಮ್ಮ ಕುರಿತು ಅಭಿಮಾನ, ಸ್ವಾಭಿಮಾನ.

ಇಲ್ಲಿನ ಜನಪದ ಕಲಾವಿದರನ್ನು ಅರಿವಿನ ಜೇನು ಗೂಡಿಗೆ ಕೈಯಿಕ್ಕಲಂಜನ ಪಂಡಿತರೆಂದು ಹೇಳಿದರೆ ಅತಿಶಯೋಕ್ತಿಯಾದೀತು. ಆದರೆ, ಜಗತ್ತಿನ ಎಲ್ಲ ಜನಪದ ಕಲಾವಿದರಂತೆ, ರಸಿಕ ಜನವೃಂದದಿಂದಲೇ ಮೂಡಿ ಬಂದು, ಆರಸ ತನ್ಮಯತೆಯಲ್ಲಿಯೇ ರಸಿಕರಿಗಾಗಿ ಹಾಡಿದ 'ರಸರಕ್ಷ'ರು ಇವರೆನ್ನಬಹುದು. ತಮ್ಮ ಮತ್ತು ತಮ್ಮ ಬಳಗದ ಮನ್ನರಂಜನೆಗಾಗಿ, ಹೃದ್ಯವಾಗುವಂತೆ ಸರಸವಾಗಿ ಹಾಡಿದ ಈ ಜನಪದ ಹಾಡುಗಳು ಪ್ರಖ್ಯಾತಗೊಂಡಿವೆ; ಗರತಿಯ ಗಾಯತ್ರಿಯೆಂದು ಪ್ರಸಂಸೆಪಡೆದಿದೆ.

ಅವರ ಭಾವ, ಅನುಭವ, ಅನುಭಾವ ವೈಭವವನ್ನು ಪರಿಚಯ ಮಾಡಿಕೊಳ್ಳಲು, ಜನಪದ ಗೀತೆಯ ಯಾವ ಚರಣವನ್ನು ಅವಲೋಕಿಸಿದರೂ ಸಾಕು; ಹಾಲು ಹರಿವಷ್ಟು ಜೇನು ಸುರಿವಷ್ಟು ಮಾಧುರ್ಯ ಅಲ್ಲಿ ತುಂಬಿ ತುಳುಕುತ್ತಿದೆ. ತುಳುನಾಡಿನ ಸೂರ್ಯೋದಯದ ವರ್ಣನೆಯನ್ನು ಜನಪದ ಕಲಾವಿದರ ನುಡಿಮುತ್ತಿನಲ್ಲಿಯೇ ಆಗಿಸಬೇಕೆ? ದಿನ ದಿನವೂ ಹಬ್ಬವೇ—ಸೂರ್ಯೋದಯದ ಸಂಭ್ರಮ, ರಸಿಕ ತಾಳವರಿಗೆ!

ಮೂಡಣ್ಣಾಗಿಂದ ಬಂತೊಂದು ಮುನ್ನೂರು
ಕೈದೀಪ
ಎಣ್ಣೆ ಬೇಡದನೆ; ನೆಣೆಬೇಡ—
ಎಣ್ಣೆ ಬೇಡದ ದೀಪ: ನೆಣೆ ಬೇಡದ
ದೀಪ
ಸತ್ಯದಿಂದಲೆವ ಜಗಜ್ಯೋತಿ ॥

ಭಾವಗರ್ಭಿತವೂ, ಅಲಂಕಾರ ಪೂರ್ಣವೂ, ವೈಭವಯುಕ್ತವೂ ಆದ ವರ್ಣನೆ ಇದು. ಆದರೆ ನುಡಿದ ರೀತಿಯೋ ಎಷ್ಟು ಹಿತ; ಮಿತ; ಸರಳ! ಜನಪದ ಕಲಾವಿದರ ಕೃತಿಗಳೇ ಹಾಗೆ; ಚೊಕ್ಕ ಚಿನ್ನ!

ಈ ಕಲಾ ಪರಿಣತಿ, ಜನಪದ ಕಲಾವಿದರಿಗೆ ದೊರಕಿದುದು ದಿವ್ಯ ಸಾಧನೆ ವರಪ್ರಭಾವ ಇದು ಯಾವುದರಿಂದಲೂ ಅಲ್ಲ; ಜೀವನವನ್ನು ಕುತೂಹಲದಿಂದ, ಆಸಕ್ತಿಯಿಂದ, ಆತ್ಮೀಯತೆಯಿಂದ ನಿರೀಕ್ಷಿಸಿದ; ಅಷ್ಟೇ ಸಂತೋಷ, ಸಂತೃಪ್ತಿ, ಸರಳತೆಯಿಂದ ಜೀವನವನ್ನು ಸಾಗಿಸಿದ, ಸದ್ಗೃಹಸ್ಥ—ಗೃಹಿಣಿಯರಾಗಿದ್ದರೆಂದೇ. ಮಣ್ಣಿನ ಗುಣ ಮಣ್ಣು ಮಕ್ಕಳಲ್ಲಿ ಮೂಡಿದೆ; ಕೃತಿಗಳಲ್ಲಿ ಶೋಭಿಸಿವೆ. ಕೃತಿಗಳನ್ನು ಚಿರಂತನಗೊಳಿಸಿ ಜನಪದ ಜೀವನದ ವೈಭವದ ಕುಶಲವನ್ನೇರಿಸಿದ, ಜನಪದ ಕಲಾವಿದರಷ್ಟು ಸಂಪನ್ನ ಕಲಾವಿದರು ಅತಿ ವಿರಳ.

ಜನಪದ ಕಲಾವಿದರು ಚಿತ್ರಿಸಿದ ಬದುಕೆಂದರೆ, ಸ್ವತಃ ಅವರು ಕಂಡುಂಡ ಅನುಭವ. ಎಂದರೆ ಜನಜೀವನ ನಡೆಸುತ್ತಲಿದ್ದ ಸತ್ಯ ಚಿತ್ರಣ. ಈ ಚಿತ್ರಗಳಲ್ಲಿ ಒಂದು ರಮ್ಯತೆ, ಒಂದು ಮನೋಹರತೆ, ಒಂದು ರಸಿಕತೆ, ಒಂದು ಸುಭಗತೆ ಕಾಣಿಸುವುದು— ಜೀವನದಲ್ಲಿ ಹಾಸುಹೊಕ್ಕಾಗಿದ್ದ ಆಯಾಯ ಅಂಶಗಳ ದೆಸೆಯಿಂದಲೇ ದಿನನಿತ್ಯದ ಜೀವನದಲ್ಲಿ, ಹಬ್ಬ ಹುದಿನಗಳ ವಿಶೇಷದಲ್ಲಿ ಜನರು ಆಚರಿಸುವ ನಡತೆ ಅಮೋಘವಾದುದು. ಹಬ್ಬದ ಹಿರಿಮೆಯನ್ನು ಮನಸೋಕ್ತ ಅನುಭವಿಸುತ್ತಾರೆ ನಿಜ; ಆದರೆ, ಪಿತ್ಥ ತಲೆಗಡರಿ ಅಹಂಕಾರದರ್ಪಣಪೂರ್ಣರಾಗುವುದಿಲ್ಲ; ಅವರು. ದೇವರ ದಯೆ ಎಂದುಕೊಂಡು ಆತ್ಮೀಯತೆಯಿಂದ ಅನುಭವಿಸುತ್ತಾರೆ, ಶಾಂತಿಯ ಕಾಲದ ಜೀವನದಂತೆ!

ಮನೆ ತುಂಬುವುದು ದಕ್ಷಿಣ ಕನ್ನಡದ ಒಂದು ವಿಶಿಷ್ಟ ಹಬ್ಬ; ಜನಜೀವನದಲ್ಲಿ ಅದರ ಸ್ಥಾನ ಪ್ರಾಮುಖ್ಯವಾದುದೂ ಹೌದು. ವರುಷ ಇಡೀ ಬದುಕಿಗಾಧಾರವಾದ ಅನ್ನ ಬ್ರಹ್ಮನ ಪರೋಕ್ಷ ಪೂಜೆಯೇ ಈ ಮನೆ ತುಂಬುವುದು; ಗದ್ದೆಯಲ್ಲಿ ಮೈಚಾಚಿ ಕಂಗೊಳಿಸುವ ತುಂಬಿದ ಹಸಿರು ಸುವರ್ಣ ಮಿಶ್ರಿತ ವರ್ಣದ, ಬೆಳೆಯುತ್ತಿರುವ ಕದಿರಿಗೆ ಸಲ್ಲಿಸುವ ಪೂಜಾ ವಿಶೇಷ; ಪೂಜಿಸಿ ಕದಿರನ್ನು ಕೊಯ್ದು, ಮನೆಗೆ ತಂದು ಮನೆ ತುಂಬಿಸುವುದು ಪದ್ಧತಿ. ತುಂಬಿದ ಮನೆಯ ಕಣಜ ಎಂದಿಗೂ ಬರಿದಾಗಬಾರದೆಂಬುದೇ ಅವರ ಎದೆಯಾಸೆ.

ಗಣೇಶ ಚತುರ್ಥಿಯ ಹಿಂದು ಮುಂದಾಗಿರುವ ಒಂದು ಸುದಿನ. ಸುಪ್ರಭಾತವಾಗುವಷ್ಟರಲ್ಲಿಯೇ ಗೃಹಿಣಿಯು ಎದ್ದು ಮನೆಯನ್ನೆಲ್ಲ ಗುಡಿಸಿ, ಸಾರಿಸಿ, ರಂಗವಲ್ಲಿಯನ್ನಿಟ್ಟು ಅಲಂಕರಿಸಿ, ಮಿಂದು ಮಡಿಯುಟ್ಟು ಬಂದು ದೇವರ ಮುಂದಿನ ನಂದಾದೀಪವನ್ನು ತುಸು ದೊಡ್ಡದು ಮಾಡಿದ್ದಾಳೆ. ಇನಿದನಿಯಿಂದ ಒಂದು ಪಟ್ಟ ಹಾಡನ್ನು ಹಾಡುತ್ತ ಕೈಮುಗಿದು ಪ್ರಾರ್ಥನೆ ಸಲ್ಲಿಸುತ್ತಿದ್ದಾಳೆ:

ಗೋವಿಂದ ಸ್ವಾಮಿಯ ದೂರದಿಂದಲೆ
ನಮಿಪೆ
ಹಾಲೆಂದೆ ಮೊಗೆವೆ ಹನಿನೀರ ಸ್ವಾಮಿಯ
ಪಾದಕೆಂದೆರೆವೆ ತನಿ ಹಾಲ‖

ಇಂದು ಕದಿರು ತರುವ ಮನೆ ತುಂಬುವ ಹಬ್ಬ. ಹೊರಗೆ ರವಿಯು ಮಂಗಳ ಬೆಳಕನ್ನು ಬೀರಿದ್ದಾನೆ; ಮುಗಿಲು ಕವಿದಿರದ ಭಾನು ಶುಭ್ರವಾಗಿ ಎಳೆ ಬಿಸಿಲನ್ನು ಗಿಡ ತೋಟ ಮರ ಮಂದಿರಗಳೆಲ್ಲದರ ಮೇಲೂ ಹರಿಯ ಬಿಟ್ಟಿದೆ. ಮಕ್ಕಳನ್ನೆಲ್ಲ ಎಬ್ಬಿಸಿ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ ಶುಚಿರ್ಭೂತರನ್ನಾಗಿಸುವಷ್ಟರಲ್ಲಿ ಮನೆಯ ಯಜಮಾನ ತಾನೂ ಮಿಂದು ಮಡಿಯುಟ್ಟು ಸಿದ್ಧನಾಗುತ್ತಾನೆ— ಮಂಗಳ ಕಾರ್ಯವೊಂದನ್ನು ನಡೆಸಲು ಕಾಯಾ ವಾಚಾ ಮನಸಾ ಸಿದ್ಧರಾಗುತ್ತಾರೆ— ಆ ಇಡೀ ಸಂಸಾರದವರು

ಜನಪದ ಕಲಾವಿದರು ಕಂಡ ಇಂತಹದೊಂದು ಹಬ್ಬವನ್ನು ಚಿತ್ರಿಸಿದ ಬಗೆಯನ್ನು ಅವರ ಸವಿನುಡಿಗಳಲ್ಲೇ ಕಾಣಬಹುದು: ಕದಿರು ಬೆಳೆಯಲು ಹೊಲ ಸಿದ್ಧವಾದ ಬಗೆಯನ್ನು ಕವಿ ಚಿತ್ರಿಸಿದ ಬಗೆ ಎಷ್ಟು ಚಮತ್ಕಾರಪೂರ್ಣವಾಗಿದೆ!

ಮೂಡಲ ಮುಗಿಲೆದ್ದು ಮುನ್ನೂರು
ಹನಿಬಿದ್ದು
ನಮ್ಮೂರ ಪೈರು ಆಗೆಯೆದ್ದು ।
ನಮ್ಮಣ್ಣಯ್ಯನು
ಬಂಬು ಬಿತ್ತಿ ಬೆಳೆಯಾಯ್ತು ‖

ಮುಂಗಾರು ಮುಗಿಲೆದ್ದಿತಂತೆ; ಪಡುವಣ ಗಟ್ಟ ತಡೆಯಿತಂತೆ; ಹನಿನೀರು ಸಾಲಾಗಿ ಸುರಿಯಿತಂತೆ. ಆಗೆ ಚಿಗುರಿತಂತೆ, ಅಣ್ಣಯ್ಯನ ಬೆಳೆ ಬೆಳೆಯ ತೊಡಗಿತಂತೆ! ಓಹ್ ಎಷ್ಟು ರಮ್ಯ ಸುಂದರ ಚಿತ್ರಣ; ಇನ್ನು ತುಸು ವಿವರಣೆ ಬೇಕೆ?

ತೆಂಕಲೆಲರು ಬೀಸಿ ತೆನ್ನೂರು
ಹನಿಸೂಸಿ
ತೊಂಡಿಲಕದಿರು ತೆನೆಹಾಸಿ ಹಾರೈಸಿ
ತಂಗಾಳಿ ನೆಲಕೆ ನಿಸೂರಿತ್ತು ॥

ಈಗ ಕಲಾವಿದ ಆ ಯಜಮಾನನ ಆಸ್ತಿಪಾಸ್ತಿಯ ವಿಸ್ತಾರದ ಬಗ್ಗೆ ನುಡಿಯುತ್ತಾನೆ:

ಬಿಟ್ಟುಗದ್ದೆಗೊನೂರು ಬೈಲುಗದ್ದೆಗೊ
ನೂರು
ಎತ್ತುಗೊನೂರು ನೊಗನೂರು ।
ಅಣ್ಣಯ್ಯನ
ಸಿರಿಯೊಕ್ಕಲಕ್ಕೆ ಕಳೆಯೇರಿ ‖;

ಹೀಗೆ ವಿಷ್ಕಂಭಕದಂತೆ ವೇಗವಾಗಿ, ಆದರೆ ಸ್ಪಷ್ಟವಾಗಿ ಸಂಸಾರದ ಸಮಗ್ರ ಚಿತ್ರಣವನ್ನು ನೀಡಿದ ಬಗೆ ಅತ್ಯಪೂರ್ವವಾದುದು.

ಗದ್ದೆಯಲ್ಲಿ ನೂರುಮುಡಿ ಗದ್ದೆಯಲ್ಲಿ ನೂರು ಜೊತೆ ಎತ್ತುಗಳನ್ನು ಹೂಡಿ ಅಣ್ಣ ಬೇಸಾಯ ಮಾಡಿಸಿದ. ಕಡಲಿಂದಲೇ ಎದ್ದ ಭೀಮಾಕಾರದ ಮೋಡಗಳು ಮಳೆ ಸುರಿಸಿದುವು; ಬಿತ್ತಿದ ಬೆಳೆ ಬೆಳೆಯಿತು; ಹಸಿರ ಸೆರಗು ಕಾಣಿಸಿತು.

ಪಚ್ಚೆಗುಪ್ಪಸ ಬೆಗುರಿಕೆಚ್ಚಾನೆ ಕೈಗಾರಳಿ
ಕೆಯ್ಯಲರಕೆ ಕೂಸಿ ಮನೆವಾಡಿ ।
ಎದೆದುಂಬಿ
ಮದನನ ಸೇನೆ ನರೆದಿತ್ತು ‖

ಕೆಚ್ಚಿದ್ದ — ಮದದಾನೆಯಷ್ಟು ಬಲಿಷ್ಟವಾದ ತೆನೆಗಳದ್ದಾವಂತೆ ಅಣ್ಣಯ್ಯನ ನೂರ್ಮುಡಿ ಗದ್ದೆಗಳಲ್ಲಿ! ಆಹಾ ವರ್ಣನೆಯ ನೈಪುಣ್ಯವೇ!

ಪೈರು ಬೆಳೆಯುತಿದ್ದಂತೆ ಹಕ್ಕಿಗಳು ಹಾರಿ ಬಂದುವು. ಕೊಕ್ಕಿನಿಂದ ಕುಕ್ಕಿ ತಿನ್ನಲಾರಂಭಿಸಿದುವು. ಆಗ ಅಣ್ಣರಾಯರಿಗೆ ವರದಿ ತಲಪುತ್ತದೆ—ಉಪ್ಪರಿಗೆಯಲ್ಲಿ ಹಂಸ ತೂಲಿಕಾತಲ್ಪದಲ್ಲಿ ತಾಂಬೂಲ ಮೆಲ್ಲುತ್ತ ಚದುರಂಗವಾಡುತ್ತ ಕುಳಿತಣ್ಣನಿಗೆ ವರದಿ ತಲಪುತ್ತದೆ,

ಬಾಗಿಲ ಮುಂದಣ ಗದ್ದೆ ಕದಿರೆಲ್ಲ ಹೆರ
ಬಂದು
ಬಾಗಿತ್ತು ಅಂಚಂಚು ಗಿಳಿ ಮೇಲು ಅಣ್ಣನೆ
ಮಂಚದಿಂದೆದ್ದು ಗಿಳಿ ಸೋಗು ‖

ಗಿಳಿಗಳನ್ನೇನೋ ಓಡಿಸಿ ಆಯಿತೊಮ್ಮೆಗೆ. ಆದರೆ ಗಿಳಿ ಓಡಿಸಲು ನಡೆದಿದ್ದ ಅಣ್ಣನಿಗೆ ಬೆಳೆಯುತ್ತಬಂದ ಕದಿರ ಸಂಭ್ರಮ ಕಾಣಿಸಿತು; ಮೈಮನಸು ತುಂಬಿ ಬಂತು; ಮನೆ ತುಂಬಿಸಲೊಂದು ಶುಭದಿವಸವನ್ನು ನಿಶ್ಚಯಿಸಿದ. ಅಂದು ಮನೆಯಾಕೆ ಅಂತು ಸಿದ್ಧಳಾದರೆ ಮನೆಯಾನ ಈ ಅಣ್ಣಯ್ಯ.

ಪಚ್ಚೆ ಸಾಲೆಯನಾಂತ ಗಟ್ಟ ಮುರುವ
ನುಟ್ಟ
ಕಣ್ಣ ಮುಚ್ಚಾಳೆ ತಲೆಗಿಟ್ಟ ಬಳೆ ತೊಟ್ಟ
ಹೊಂಗದಿರ ಕಳಕೆ ನಡೆಗೊಂಡ ‖
ಬಣ್ಣ ಹಚ್ಚಡ ಹೊಡೆದರನ್ನ ಕೊಡಂಗೆ
ಯನೇಲ್ದ
ಚಿನ್ನದುಂಗುರವ ಬೆರಳಟ್ಟ । ಮಡಿ
ಯುಟ್ಟ
ಬೆಳ್ಳಿ ಪಲುಗತ್ತಿ ಕಿರಿಡು ಕೊಂಡ ‖

(೯ನೇ ಪುಟ ನೋಡಿರಿ)




ನಾಟಕ ಸಾಹಿತ್ಯ ಸಲಕರಣೆಗಳು

ಸಚಿತ್ರ ಕನ್ನಡ ಹೊಸ ಪ್ರಾಯಿಸ್ ಲಿಸ್ಟಿಗಾಗಿ ಇಂದೇ ಬರೆಯಿರಿ

ಸ್ತ್ರೀ ಪಾತ್ರದ ಟೋಪಣ, ಪುರುಷ ಪಾತ್ರದ ಟೋಪಣ ಗಡ್ಡ ಮೀಸೆಗಳು, ನಾಟಕದ ಖಡ್ಗ, ಗಧೆ ಮೊದಲಾದ ಸಾಮಾನುಗಳು, ಜರತಾರಿ ದುಮಾಲು, ಪಗಡಿ, ಡ್ರೆಸ್ಸು ಇತ್ಯಾದಿ ಇತ್ಯಾದಿ ರಂಗಭೂಮಿಗೆ ಅವಶ್ಯವಿರುವಂಥವು ದೊರೆಯುತ್ತವೆ.

DHARAMSHI MULJI,
DRESSWALA,
132 C, Bhagatwadi,
Bhuleshwar Road, Bombay—2.

## ವಸ್ತು ಸಂಗ್ರಹ

# ಭಾರತದ ಕುಶಲ ಕಲೆಯ ಮಾದರಿ ಸರಕುಗಳು

* *

### ರಶ್ಯದ ಪ್ರಜೆಗಳೂ ಅವನ್ನು ಮೆಚ್ಚುತ್ತಾರೆ!

ಕಪ್ಪು ಮಕಮಲ್ಲಿನಂತಹ ಹಿನ್ನೆಲೆಯ ಮೇಲೆ ಸೂಕ್ಷ್ಮವಾದ ಬೆಳ್ಳಿಯ ತಂತಿಯಿಂದ ಚಿತ್ರಿಸಲಾದ ಮಹಿಳೆಯ ತಲೆಯ ಲಾವಣ್ಯಪೂರ್ಣವಾದ ರೂಪರೇಖೆಗಳು ಅದು ಬೀದರಿನಿಂದ ಬಂದ ಒಂದು ತಟ್ಟೆ.

ತೆಳ್ಳನೆಯ, ನೀಲಿಬಣ್ಣದ, ಮತ್ತು ಬೂದು ಬಣ್ಣದ ಸೀರೆ; ಅದರ ಅಂತರ್ಭಾಗದಲ್ಲಿ ನೇಯಲಾದ ಚಿನ್ನದ, ಬೆಳ್ಳಿಯ ಎಲೆಗಳು. ಇಂತಹ ಸೀರೆಯನ್ನು ಗಾಳಿಯೊಡನೆಯೂ, ಪ್ರವಹಿಸುತ್ತಿರುವ ನೀರಿನೊಂದಿಗೂ ಹೋಲಿಸಿದ ಐರೋಪ್ಯರು ಅತ್ಯಂತ ಸ್ವಲ್ಪದಷ್ಟೂ ಉತ್ಪ್ರೇಕ್ಷೆಯ ತಪ್ಪನ್ನು ಮಾಡಿರಲಿಲ್ಲ.

ಪಾಶ್ಚಾತ್ಯ ಸಂಸ್ಕೃತಿಗಳ ರಾಜ್ಯ ವಸ್ತು ಸಂಗ್ರಹಾಲಯದ ಭಾರತೀಯ ಶಾಖೆಯ ಸಂಗ್ರಹಕ್ಕೆ ಭಾರತೀಯ ಹಸ್ತ ಕುಶಲ ಕಲಾ ವಸ್ತು ಪ್ರದರ್ಶನದಿಂದ ತೆಗೆದುಕೊಳ್ಳಲಾದ, ೩೦೦ಕ್ಕಿಂತಲೂ ಹೆಚ್ಚು ಪ್ರದರ್ಶಿತ ವಸ್ತುಗಳು ಸೇರಿಸಲ್ಪಟ್ಟವು. "ಅವು ಬೀದರಿ"ನ ಉತ್ಪಾದಿತ ವಸ್ತುಗಳನ್ನೂ, ಸರಿಗೆಯ ನೇಯ್ಗೆಯುಳ್ಳ ರೇಶ್ಮೆ ಬಟ್ಟೆಗಳನ್ನೂ, ಸೂರತ್ತಿನ ಮತ್ತು ಬನಾರಸ್ಸಿನ ವಿಚಿತ್ರವಾದ ಸೂಜಿಗೆಲಸವನ್ನೂ ಒಳಗೊಂಡಿವೆ. ಕಾಶ್ಮೀರದಿಂದ ಬಂದಿರುವ, ಆನೆಗಳ ಮೆರವಣಿಗೆಯ ಚಿತ್ರವನ್ನು ತೋರಿಸುವ ಸಣ್ಣ ಮೇಜು ನಿಜವಾಗಿಯೂ ಆಶ್ಚರ್ಯಕರವಾಗಿದೆ. ಹೈದರಾಬಾದಿನ ನಿಪುಣರಿಂದ ತಯಾರಿಸಲ್ಪಟ್ಟ ಅರಗಿನ ಮೆರುಗಿನ ವಸ್ತುಗಳ — ಶಿವತಾಂಡವ ನೃತ್ಯ, ಪುಷ್ಪಗಳು— ಮುಂದೆ ಪ್ರೇಕ್ಷಕರು ಹೆಚ್ಚು ಹೊತ್ತು ನಿಲ್ಲುತ್ತಾರೆ. ಬೆಳ್ಳಿಯ ವಸ್ತುಗಳ ಸಂಗ್ರಹಕ್ಕೆ ಸೇರಿಸಲ್ಪಟ್ಟಿರುವ ಕಂಕಣಗಳೂ, ಕಿವಿಯುಂಗುರಗಳೂ ಅವುಗಳ ಸೂಕ್ಷ್ಮವಾದ ಹಸ್ತ ಕೌಶಲ್ಯದ ಬಗ್ಗೆ ಮನ್ನಣೆಗೆ ಯೋಗ್ಯವಾಗಿವೆ. ಮಣ್ಣಿನ ಪಾತ್ರೆಗಳು (ಸೆರಾಮಿಕ್ಸ್), ಲೋಹ ಪದಾರ್ಥಗಳು, ದಂತದ ಕೆತ್ತನೆಗೆಲಸಗಳು, ಮತ್ತು ಬಂಗಾಳಿ ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟ ಚರ್ಮ ಕಲಾಕೃತಿಗಳು, ಹಾಗೂ ಗೃಹೋಪಯೋಗದ ವಸ್ತುಗಳೂ— ಈ ವಸ್ತು ಸಂಗ್ರಹಾಲಯವು ಪಡೆದುಕೊಂಡಿರುವ ನೂತನ ಪ್ರದರ್ಶನ ವಸ್ತುಗಳಲ್ಲಿ ಸೇರಿಕೊಂಡಿವೆ.

ಈ ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಡಲ್ಪಟ್ಟಿರುವ ವಸ್ತುಗಳು ಮಹತ್ತರ ಭಾರತ ದೇಶದ ಸಂಸ್ಕೃತಿಯ ಮತ್ತು ಕಲೆಗಳ ಮಹಾಸಮೃದ್ಧತೆಯನ್ನೂ ಮತ್ತು ವೈವಿಧ್ಯತೆಯನ್ನೂ ಚಿತ್ರಿಸುತ್ತವೆ.

ವಸ್ತು ಸಂಗ್ರಹಾಲಯದಲ್ಲಿರುವ ಪ್ರದರ್ಶಿತ ವಸ್ತುಗಳಿಗೆ ಮಹತ್ತರ ಮೊಗಲ್ ರಾಜವಂಶದ ಮೂಲಪುರುಷರಾಗಿದ್ದ ಬಾಬರ್ 'ಬಖೈರು'ಗಳಿಗಾಗಿ (ಮೆಮ್ವಾಯಿರ್ಸ್) ತಯಾರಿಸಲ್ಪಟ್ಟಿದ್ದ ಅದ್ವಿತೀಯವಾದ ಸೂಕ್ಷ್ಮ ಚಿತ್ರಗಳು ತುಂಬಾ ಸ್ವಾರಸ್ಯಕರವಾಗಿವೆ. ಭಾರತ ದೇಶದ ಶಿಕ್ಷಣ ಸಚಿವಾಲಯದ ಬೇಡಿಕೆಯ ಮೇರೆಗೆ ಈ ಸೂಕ್ಷ್ಮ ಚಿತ್ರಗಳ ಛಾಯಾ ಚಿತ್ರಾವಳಿಯೊಂದನ್ನು ಟಿಪ್ಪಣಿಸಿಂದ ಭಾರತ ದೇಶಕ್ಕೆ ಈ ವಸ್ತು ಸಂಗ್ರಹಾಲಯವು ಈ ಮಧ್ಯೆ ಕಳಿಸಿಕೊಟ್ಟಿದೆ.

ಭಾರತೀಯ ಲೇಖಕರಾದ ಶ್ರೀ ಮುಲ್ಕ್‌ರಾಜ್ ಆನಂದ್‌ರವರು ಸೋವಿಯತ್ ಒಕ್ಕೂಟಕ್ಕೆ ಸಂದರ್ಶನಾರ್ಥವಾಗಿ ಬಂದಿದ್ದ ವೇಳೆಯಲ್ಲಿ ಈ ಬಾಬರ್ ಸಂಕಲನದ ೩೩ ಪಕ್ಷಿಗಳ ಛಾಯಾಚಿತ್ರಗಳು ಅವರಿಗೆ ಬಹುಮಾನವಾಗಿ ಕೊಡಲ್ಪಟ್ಟವು. ಅವು 'ಮಾರ್ಗ್" ಪತ್ರಿಕೆಯಲ್ಲಿ ಪ್ರಕಟವಾಗುವುವು.

ಭಾರತೀಯ ಕಲೆಗಳನ್ನು ಸೋವಿಯತ್ ಒಕ್ಕೂಟದಲ್ಲಿ ಜನಪ್ರಿಯಗೊಳಿಸುವುದರ ಸಲುವಾಗಿ ಈ ವಸ್ತು ಸಂಗ್ರಹಾಲಯವು ತುಂಬಾ ಕೆಲಸವನ್ನು ಮಾಡುತ್ತಿದೆ. "ಭಾರತ ದೇಶದಲ್ಲಿರುವ ಕಲೆಗಳ ಇತಿಹಾಸ" ಎಂಬ ಎಪಿಡಿಯಾಸ್ಕೋಪಿನ ಚಲಚ್ಚಿತ್ರವೂ ಮತ್ತು ಮಾಧ್ಯಮಿಕ ಪಾಠಶಾಲೆಗಳ ಸಲುವಾಗಿ "ಪುರಾತನ ಭಾರತದ ಸಂಸ್ಕೃತಿ" ಎಂಬ ಚಿತ್ರ ಫಲಕಗಳ (ಸ್ಲೈಡ್ಸ್) ಒಂದು ಕಟ್ಟೂ ಇತ್ತೀಚೆಗೆ ಹೊರಡಿಸಲ್ಪಟ್ಟವು. 'ಸೋವಿಯತ್ ಒಕ್ಕೂಟದ ವಸ್ತು ಸಂಗ್ರಹಾಲಯಗಳಲ್ಲಿರುವ ಭಾರತೀಯ ಕಲೆಯ ಸ್ಮೃತಿ ಚಿಹ್ನೆಗಳು ಎಂಬ ಪುಸ್ತಕದ ಮೊದಲನೆಯ ಸಂಸ್ಕರಣವು ಸಂಪೂರ್ಣವಾಗಿ ಮಾರಾಟವಾಗಿ ಹೋಗಿದ್ದು, ಈ ಚಿತ್ರ ಸಂಪುಟದ ಎರಡನೆಯ ಆವೃತ್ತಿಯು ಮುದ್ರಣಕ್ಕಾಗಿ ಸಿದ್ಧಪಡಿಸಲ್ಪಡಲಾಗುತ್ತಿದೆ. "ಭಾರತ ದೇಶದಲ್ಲಿನ ಕಲೆಗಳ ಇತಿಹಾಸ" ಎಂಬುದು ಎಲ್ಲ ಅಂಗಡಿಗಳಲ್ಲಿಯೂ ಬೇಗನೆ ದೊರೆಯಲಿರುವ ಒಂದು ಶೋಭಾಯಮಾನವಾದ ಚಿತ್ರ ಸಂಪುಟದ ಹೆಸರಾಗಿದೆ. ಸೋವಿಯತ್ ಒಕ್ಕೂಟದ ಕಲಾಪರಿಷತ್ತಿನಲ್ಲಿ ಓ. ಎಸ್. ಪ್ರಿಕೋಫ್ಯೆವ್‌ರವರು ಅಜಂತಾದ ಗುಹಾಮಂದಿರಗಳಲ್ಲಿರುವ ಚಿರಸ್ಮರಣೀಯವಾದ ಭಿತ್ತಿತೈಲ ಚಿತ್ರಗಳನ್ನು ಕುರಿತು ತಮ್ಮ ಪ್ರೌಢ ಪ್ರಬಂಧವನ್ನು ಅರ್ಪಿಸುವರೆಂಬ ನಿರೀಕ್ಷೆಯಿದೆ. ಈ ವಸ್ತು ಸಂಗ್ರಹಾಲಯವು 'ಭಾರತ ದೇಶದ ಕಲೆಗಳು' ಎಂಬ ವಿಷಯವಾಗಿ ಛಾಯಾ ಚಿತ್ರ ಪ್ರದರ್ಶನಗಳನ್ನು ಅನೇಕ ಸೋವಿಯತ್ ನಗರಗಳಿಗೆ ಕಳುಹಿಸುತ್ತಿದೆ. ಮೊನ್ನೆ ಮೊನ್ನೆ ಒಡಿಸ್ಸಾ ಮತ್ತು ವಿನ್ನಿತ್ಸಾ ನಗರಗಳಿಗೆ ಇಂತಹ ಪ್ರದರ್ಶನಗಳು ಕಳಿಸಲ್ಪಟ್ಟವು. ವಸ್ತು ಸಂಗ್ರಹಾಲಯದ ಕಾರ್ಯಕರ್ತರು ನಾಟಕ, ಚಲಚ್ಚಿತ್ರ ಕಾರ್ಯಕರ್ತರಿಗೆ ಭಾರತೀಯ ವಸ್ತ್ರಾಲಂಕಾರಗಳ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಸಹಕರಿಸುತ್ತಾರೆ. ವಿಶ್ವವಿದ್ಯಾನಿಲಯದಲ್ಲಿಯೂ ಮತ್ತು ಇತರ ಉನ್ನತ ಪಾಠಶಾಲೆಗಳಲ್ಲಿಯೂ ಭಾರತ ದೇಶದ ಬಗ್ಗೆ ಅವರು ಭಾಷಣಗಳನ್ನು ಕೊಡುತ್ತಾರೆ, ಮತ್ತು ಭಾರತೀಯ ಪುಸ್ತಕಗಳ ಸಲುವಾಗಿ ಚಿತ್ರಗಳನ್ನು ಬರೆಯುತ್ತಿರುವ ಕಲಾವಿದರಿಗೆ ನೆರವನ್ನು ನೀಡುತ್ತಾರೆ.

ಭಾರತದಲ್ಲಿ ನೋಬೆಲ್ ಪಾರಿತೋಷಕ ಪಡೆದ ಪ್ರಸಿದ್ಧ ವಿಜ್ಞಾನಿ ಸರ್. ಸಿ. ವಿ. ರಾಮನ್ ಅಂತಾರಾಷ್ಟ್ರೀಯ ಖ್ಯಾತಿಯನ್ನು ಹೆಚ್ಚು ಹೆಚ್ಚಾಗಿ ಪಡೆಯುತ್ತಲೇ ಇದ್ದಾರೆ. ಇವರು ಬೆಂಗಳೂರಿನಲ್ಲಿದ್ದುಕೊಂಡು ಇವರು ಹರಳುಗಳ ಕುರಿತು ನಡೆಸಿದ ಸಂಶೋಧನೆಯು ಈ ಕ್ಷೇತ್ರದ ಬಗ್ಗೆ ಅತಿ ಹೆಚ್ಚಿನ ತಿಳುವಳಿಕೆಯನ್ನು ಉಂಟು ಮಾಡಿದೆ; ಅಲ್ಲದೆ, ಜಗತ್ತಿನ ವಿಜ್ಞಾನಿಗಳನ್ನು ವಿಶೇಷವಾಗಿ ಈ ವಿಷಯದ ಕಡೆಗೆ ಆಕರ್ಷಿಸಿದೆ. ಇದೀಗ ಸರ್ ರಾಮನ್ ಜಪಾನಿನ ಪ್ರಸಿದ್ಧ ವಿಜ್ಞಾನ ಮಂಡಲದಲ್ಲಿ ಸ್ಥಾನವನ್ನು ಪಡೆದಿದ್ದಾರೆ. ಈ ಮಂಡಲದಲ್ಲಿರುವ ಸದಸ್ಯರು ಜಾಗತಿಕ ಮಟ್ಟದಲ್ಲಿ ಆರಿಸಲ್ಪಟ್ಟ ೩೦ ಮಂದಿ ಮಾತ್ರ ಎಂಬುದನ್ನು ನೆನೆದರೆ, ರಾಮನ್ ಪಡೆದಿರುವ ಮನ್ನಣೆಯ ಮಹತ್ವ ಕಣ್ಣಿಗೆ ಕಟ್ಟುವುದು ನಿಶ್ಚಯ.


**NAVAYUGA WEEKLY**

**ADVERTISEMENT RATES**

Display Advertisements: — Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

*For rates for advertising in colours and special positions, please write to:*
*ADVERTISEMENT MANAGER,*
**'NAVAYUGA'**
**Post Box No. 22, UDIPI, S. K.**


## ನುಡಿ ಮುತ್ತುಗಳು

....ಮತ್ತೆ ಆ ನೀತಿವಂತ ನಡವಳಿಕೆ ಎಂದರೇನು? ಶ್ರೀಮಂತರು ಇದನ್ನು ಮೀರಿ ಮೇಲೆ ನಿಂತಿದ್ದಾರೆ; ಬಡವರಂತೂ ಈ ಬಗೆಯ ನಡವಳಿಕೆಗಿಂತ ಎಷ್ಟೋ ಕೆಳಗಿನ ಮಟ್ಟದಲ್ಲಿದ್ದಾರೆ; ಕೇವಲ ಮಧ್ಯಮವರ್ಗದವರಷ್ಟೇ ನೀತಿವಂತ ನಡವಳಿಕೆಯ ಭಯಕಾರಕ ಬಂಧನದಲ್ಲಿ ಕೊಳೆಯುತ್ತಿದ್ದಾರೆ!

○○

ತನಗೇನೂ ತಿಳಿದಿಲ್ಲ; ಮತ್ತು ತನಗೇನೂ ತಿಳಿದಿಲ್ಲವೆಂದು ಗೊತ್ತೂ ಇಲ್ಲ— ಇವನು ಒಬ್ಬ ಮೂರ್ಖ! ಈತನನ್ನು ದೂರವಿಡಿ.

ತನಗೇನೂ ತಿಳಿದಿಲ್ಲ; ಆದರೆ ತನಗೇನೂ ತಿಳಿದಿಲ್ಲವೆಂದು ಮಾತ್ರ ಗೊತ್ತಿದೆ— ಇವನು ಸರಳಜೀವಿ! ಈತನಿಗೆ ಕಲಿಸಿರಿ.

ತನಗೆ ತಿಳಿದಿದೆ; ಆದರೆ ತನಗೆ ತಿಳಿದಿದೆ ಎಂದು ಮಾತ್ರ ಗೊತ್ತಿಲ್ಲ— ಇವನು ನಿದ್ರಾಸಕ್ತ! ಈತನನ್ನು ಎಚ್ಚರಿಸಿರಿ.

ತನಗೆ ತಿಳಿದಿದೆ; ಮತ್ತು ತನಗೆ ತಿಳಿದಿದೆ ಎಂದು ಗೊತ್ತೂ ಇದೆ—ಇವನು ಜಾಣ! ಈತನನ್ನು ಅನುಸರಿಸಿರಿ.

○○

ಫ್ರಾನ್ಸಿನಲ್ಲಿ ಚುಂಬನದ ವಿರುದ್ಧ ಚಳವಳವು ೧೯೩೬ರಲ್ಲಿ ನಡೆದಾಗ ಆಂದೋಲಕರು "ಒಮ್ಮೆ ಮುತ್ತಿಡುವಾಗ ೪೦,೦೦೦ ಕೀಟಾಣುಗಳು ಅಂಟಿಕೊಳ್ಳುತ್ತವೆ" ಎಂದು ಆರೋಪಿಸಿದರು. ಅದಕ್ಕೆ ಉತ್ತರವಾಗಿ ಸೇರಿಸಿದ ಪತ್ರಿಕೆಯೊಂದು "ಹಾಗಾದರೆ, ಯಾರೇ ಆಗಲಿ ಪಡೆದ ಮುತ್ತನ್ನು ಕೂಡಲೇ ಮರಳಿಸದಿರಬಾರದು" ಎಂದು ಬರೆಯಿತು!

ಆದಷ್ಟು ಬೇಗ ಮದುವೆಯಾಗುವುದು ಹೆಂಗಸಿನ ಕೆಲಸ; ಆದಷ್ಟು ತಡವಾಗಿ ಮದುವೆಯಾಗುವುದು ಗಂಡಸಿನದು.

— ಬರ್ನಾರ್ಡ್ ಶಾ.

○○

ನಾಗರಿಕತೆಯ ನಿಜವಾದ ಲಕ್ಷಣಕ್ಕಾಗಿ ಜನಗಣತಿಯನ್ನಾಗಲೀ ನಗರಗಳ ರೂಪವನ್ನಾಗಲೀ ಬೆಳೆಯ ಬಗೆಯನ್ನಾಗಲೀ ನೋಡಬೇಕಾಗಿಲ್ಲ—ಆ ದೇಶದ ಜನರ ಗುಣಶೀಲಗಳ ಪರಿಶೀಲನೆ ನಡೆಸಿದರೆ ಸಾಕು.

—ಎಮರ್ಸನ್.

○○

ನನಗೆ ದೊಡ್ಡ ಅಧಿಕಾರ ಸಿಗಲಿಲ್ಲವಲ್ಲ ಎಂದು ಚಿಂತಿಸಬೇಡ; ನಿನ್ನ ಪಾತ್ರವನ್ನು ಚೆನ್ನಾಗಿ ನಿರ್ವಹಿಸುವ ಕುರಿತಾಗಿ ಮಾತ್ರ ನೀನು ಚಿಂತಿಸು. ನನ್ನನ್ನು ಯಾರೂ ತಿಳಿದಿಲ್ಲವಲ್ಲ ಎಂಬ ಚಿಂತೆ ಮಾಡಬೇಡ; ಎಲ್ಲರೂ ನಿನ್ನನ್ನು ತಿಳಿದುಕೊಳ್ಳುವಂತಹ ಒಳ್ಳೆ ಕೆಲಸ ಮಾಡು.

— ಕೊಂಗ್ ಫೂತ್ಸೆ

○○

ನಾನು ಮದುವೆಯಾಗುವುದಕ್ಕೆ ಮುಂಚೆ ಮಕ್ಕಳನ್ನು ಹೇಗೆ ಸಾಕಬೇಕೆಂಬ ಬಗ್ಗೆ ಆರು ಸೂತ್ರಗಳನ್ನು ಪ್ರತಿಪಾದಿಸುತ್ತಿದ್ದೆ; ಈಗ ನನಗೆ ಆರು ಮಕ್ಕಳಿವೆ; ಸೂತ್ರ ಒಂದೂ ಗೊತ್ತಿಲ್ಲ!

—ಲಾರ್ಡ್ ರೋಚೆಸ್ಟರ್.

# NAVAYUGA

Popular Kannada Weekly

*Founder:—*

**A. B. SHETTY**, *M. L. A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೪-೯-'೫೬ | ೨ |


## ಅರಿವೆಯ ಸುಂಕ

ಅರಿವೆಯ ಮೇಲೆ ಸುಂಕ ಹೆಚ್ಚಿಸಲು ಕೇಂದ್ರ ಸರಕಾರ ಮಂಡಿಸಿದ ಸೂಚನೆಯು ಸಂಸತ್ತಿನಲ್ಲಿ ಕಟುವಾದ ಟೀಕೆಗೆ ಒಳಗಾಯಿತು; ಈ ಟೀಕೆಯನ್ನು ಎದುರಿಸಿಕೊಂಡೂ ಅದು ಮನ್ನಣೆ ಪಡೆಯಿತು! ಸಂಸತ್ಸದಸ್ಯರಲ್ಲಿ ಬಹುಸಂಖ್ಯಾಕರ ಮನ್ನಣೆಯನ್ನು ತೆರಿಗೆ ಏರಿಸುವ ಈ ಸೂಚನೆ ಪಡೆದಿದೆ, ಎಂದ ಮಾತ್ರಕ್ಕೆ ಜನತೆ ಇದನ್ನು ಒಪ್ಪುತ್ತದೆ ಎಂದು ಮಾತ್ರ ಭಾವಿಸಲಾಗದು. ತೆರಿಗೆ ಏರಿಸುವ ಸೂಚನೆಗಳನ್ನು ಜನತೆ ಸಾಮಾನ್ಯವಾಗಿ ಸ್ವಾಗತಿಸುವುದಿಲ್ಲ, ನಿಜ. ಹೊಸ ತೆರಿಗೆಗಳನ್ನು ಮಾನ್ಯ ಮಂತ್ರಿಗಳೇ ಒತ್ತಾಯದಿಂದೆಂಬಂತೆ ಹೇರಲು ಹೋಗುತ್ತಾರೆ— ಇದೇ ಸಾಮಾನ್ಯ ಕ್ರಮ. ಅದರೆ ಅವರ ಉದ್ದೇಶವು ತೀರ ಸ್ಪಷ್ಟವಾಗಿರಬೇಕಾಗಿದೆ; ಮತ್ತು ಜನರಿಗೆ ಒಂದಲ್ಲ ಒಂದು ವಿಧದಲ್ಲಿ ಹೀಗೆ ತೆರಿಗೆ ಏರಿಸಿದುದರ ಫಲವಾಗಿ ಲಾಭವೇ ಆಗಬೇಕಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜನರಲ್ಲಿ ಹೆಚ್ಚಿಗೆ ತೆರಿಗೆ ಕೊಡುವ ಶಕ್ತಿಯು ನಿಶ್ಚಯವಾಗಿಯೂ ಇರಬೇಕಾಗಿದೆ. ಅರಿವೆಯ ಮೇಲಿನ ಅಧಿಕ ಸುಂಕವು ಈ ಒರೆಗಲ್ಲಿಗೆ ಹಚ್ಚಲ್ಪಟ್ಟಾಗ ಸಾಧುವಾದುದೆಂದು ತೋರಲಾರದು. ಸರಕಾರಕ್ಕೆ ಹಣ ವಸೂಲಿಯಾಗಬೇಕಾಗಿದೆ— ಎಂಬುದಕ್ಕಾಗಿಯಷ್ಟೇ ಸುಂಕವನ್ನು ಹೆಚ್ಚಿಸುತ್ತಾ ಹೋಗುವುದಾದರೆ ಈ ರೀತಿಯ ಸುಂಕ ಹೇರುವಿಕೆಯು ಪದ್ಧತಿಯೇ ಸಲ್ಲದೆನ್ನಬೇಕಾಗುತ್ತದೆ. ಹಾಗಲ್ಲದೆ ಜನರ ಪ್ರಯೋಜನಾರ್ಥವಾಗಿ ಈ ಸುಂಕ ಹೇರಿದುದಾಗಿದೆಯೆ? ನಮಗಂತೂ ಹಾಗೆ ತೋರುತ್ತಿಲ್ಲ. ಸುಂಕವನ್ನು ಹೆಚ್ಚಾಗಿ ಕೊಟ್ಟರೆ, ಜನರ ಕೈಯಲ್ಲಿರುವ ಕಾಸೇ ಕೈಬಿಡುತ್ತದೆ; ಎಂದಮೇಲೆ ಜನರಿಗೆ ನೇರವಾದ ಲಾಭವೇನೂ ಈ ಹೊಸ ಸೂಚನೆಯಲ್ಲಿಲ್ಲ. ಜನರಿಗೆ ಹೀಗೆ ಅಧಿಕ ಸುಂಕಕೊಡುವ ಶಕ್ತಿಯು ಇದ್ದಿದ್ದರೆ ಸರಕಾರವನ್ನು ದೂರುವುದಕ್ಕೆ ಅವಕಾಶವಿಲ್ಲ ಎನ್ನಬಹುದಾಗಿತ್ತೋ, ಏನೋ! ಅದರೆ ವಾಸ್ತವವಾಗಿ ಜನರು ಈ ಶಕ್ತಿಯನ್ನು ಈಗಲಂತೂ ಹೊಂದಿಲ್ಲ. ಮೊದಲನೇ ಪಂಚವಾರ್ಷಿಕ ಯೋಜನೆಯ ಗುರಿಗಳಲ್ಲಿ ಬಟ್ಟೆಬರೆಯ ಉತ್ಪಾದನೆಯ ಗುರಿಯನ್ನು ಅವಧಿಗೆ ಎರಡು ವರ್ಷಗಳಷ್ಟು ಮೊದಲೇ ಸಾಧಿಸಲಾಯಿತು; ಮುಂದಿನ ಎರಡು ವರ್ಷಗಳಲ್ಲಿ ನಡೆಸಿದ ಎಲ್ಲ ಉತ್ಪಾದನೆಯೂ ಆವಶ್ಯಕತೆಗಿಂತಲೂ ಹೆಚ್ಚಿನದೆಂದೇ ಭಾವಿಸಬಹುದು—ಎಂದೆಲ್ಲ ಯೋಜನೆಯ ಬೆಂಬಲಿಗರು ಡಂಗುರ ಸಾರಿದರು. ಅಂಕೆಸಂಖ್ಯೆಗಳ ಇಂದ್ರಜಾಲದ ಕೈವಾಡವೇ ನಡೆಯುವ ಮಾಯಾಲೋಕದಲಿ ಇದೆಲ್ಲ ನಿಜವಾಗಿರಬಹುದು— ಆದರೆ, ಜನಸಾಮಾನ್ಯರ ಅನುಭವವು ಮಾತ್ರ ಹೀಗೆ ಉತ್ಪಾದನೆ ಹೆಚ್ಚಿಗೊಂಡಿತೆಂದಾಗಲೀ ಹೆಚ್ಚಿಕೊಂಡಿದ್ದರೂ ಅದರಿಂದ ಲಾಭವಾಯಿತೆಂದಾಗಲೀ ಪುಷ್ಟೀಕರಿಸುವುದಿಲ್ಲ. ಜನರಿಗೆ ಈಗ ವಸ್ತ್ರವು ಹಿಂದಿಗಿಂತಲೂ ತುಟ್ಟಿಯಾಗಿದೆ; ಬಟ್ಟೆಬರೆಯ ಬೆಲೆಯು ಕಳೆದ ಕೆಲವು ತಿಂಗಳುಗಳಲ್ಲಿ ಏರುತ್ತಾ ಬಂದಿದೆಯೇ ಹೊರತು ವಸ್ತ್ರಸಮೃದ್ಧಿಯ ಫಲವಾಗಿ ಇಳಿಮುಖವಾದುದಿಲ್ಲ. ಬೆಲೆಯು ಏರಿಕೆಯಲ್ಲಿಯೇ ಇದ್ದು ಜನರಿಂದ ಹೆಚ್ಚು ಹಣವನ್ನೆ ಕೈಬಿಡಿಸುವ ಸಮೃದ್ಧಿಯನ್ನು ಸಮೃದ್ಧಿ ಎಂದು ನಾವು ಭಾವಿಸುವುದಾದರೂ ಹೇಗೆ? ಇದು ಬಹಳ ಶೋಚನೀಯವಾದ ವಿಚಾರ. ಮಾನ್ಯ ಮಂತ್ರಿಗಳು ಮಾತ್ರ ಈ ವಿಚಾರದಿಂದ ಧೃತಿಗೆಡುವುದಿಲ್ಲ. ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕಾಗಿಯೇ ಅವರು ಹೆಚ್ಚು ಸುಂಕವನ್ನು ಹೇರಲು ಹೋಗಿದ್ದಾರಂತೆ! ತಜ್ಞರೆನಿಸಿದವರು ಆಡುವ ಇಂತಹ ಮಾತುಗಳ ಚಮತ್ಕೃತಿಗೆ ಸಾಮಾನ್ಯ ನಾಗರಿಕರು ಬೆರಳು ಕಚ್ಚಿಕೊಂಡಾರೇ ಹೊರತು, ಅವರಿಗೆ ಈ ಮಾತಿನ ಅಂತರ್ಯವಂತೂ ಅರಿವಾಗಲಾರದು. ಬಡ ಜನರಿಗೆ ಒಂದು ವಿಷಯ ಮಾತ್ರ ಗೊತ್ತಿದೆ: ಅದೇನೆಂದರೆ, ಸರಕಾರವು ಯಾವ ನೆಪದಿಂದಲೇ ಆಗಲಿ, ಎಷ್ಟು ಸುಂಕವನ್ನು ಹೆಚ್ಚಿಸಿತೋ, ಅಷ್ಟಕ್ಕೆ ವ್ಯಾಪಾರಿಯ ಲೆಕ್ಕದಲ್ಲಿ ಇನ್ನೊಂದಷ್ಟು ಹೆಚ್ಚಿಗೆ ಸೇರಿಸಲ್ಪಟ್ಟು, ವಸ್ತ್ರ ವಿಕ್ರಯ ಕಾಲದ ಕ್ರಯಪಟ್ಟಿ ಸಿದ್ಧವಾಗುತ್ತದೆ! ಹೀಗಿರುವಾಗ ಸುಂಕ ಹೇರಿದುದರಿಂದ ಬೆಲೆಗಳು ಇಳಿಮುಖವಾಗುತ್ತವೆ ಎಂದೆನ್ನುವ ಮಂತ್ರಿಗಳ ಮಾತಿನಲ್ಲಿ ಸಾಮಾನ್ಯ ಜನರು ವಿಶ್ವಾಸವಿಡುವುದಕ್ಕೆ ಹೆದರಿಕೊಳ್ಳುವುದು ತೀರ ಸಹಜ. ಮಂತ್ರಿಗಳು ಜವಳಿ ಉದ್ದಿಮೆದಾರರಿಗೆ ಗಂಭೀರವಾದ ಎಚ್ಚರಿಕೆಗಳನ್ನೂ ಕೊಡುತ್ತಾರೆ- ಬೆಲೆಯನ್ನು ಇಳಿಸದಿದ್ದರೆ ಸರಕಾರವು ಬಟ್ಟೆಬರೆಗಳ ಮೇಲೆ ನಿಯಂತ್ರಣ ಕ್ರಮವನ್ನು ಜ್ಯಾರಿಗೆ ತರುವುದು ಎಂದು ಸಹ ಅವರು ಘೋಷಿಸಿದ್ದಾರೆ. ಇಂತಹ ಎಚ್ಚರಿಕೆಗಳು ಯಾವ ಫಲವನ್ನೂ ಕೊಡುವುದಿಲ್ಲ; ಪೊಳ್ಳು ಮಾತುಗಳಿಗಿಂತ ಹೆಚ್ಚಿನ ತೂಕವಾಗಲೀ ಶಕ್ತಿಯಾಗಲೀ ಇವುಗಳಿಗಿಲ್ಲ ಎಂಬುದನ್ನು ಇಷ್ಟರ ವರೆಗಿನ ಅನುಭವವೇ ಸಿದ್ಧಗೊಳಿಸಿದೆ. ಆಹಾರ ಧಾನ್ಯಗಳ ಸಮೃದ್ಧಿಯನ್ನು ಅನುಭವಿಸುತ್ತಿದ್ದಂತೆಯೇ ಅಕ್ಕಿ ಮತ್ತಿತರ ದವಸಗಳ ಬೆಲೆಯು ಏರತೊಡಗಿತು! ನಿಯಂತ್ರಣ ಕಾಲದಲ್ಲಿ ಸರಕಾರ ಗೊತ್ತುಪಡಿಸಿದ್ದ ದರಕ್ಕಿಂತಲೂ ಒಂದೂವರೆ ಪಾಲಿನಷ್ಟು ಹೆಚ್ಚು ಹಣವನ್ನು ಕೊಟ್ಟು ಇಂದು ಅಂದಿನ ಕುಪ್ರಖ್ಯಾತ ಕಳ್ಳಪೇಟೆಯಲ್ಲಿ ಮಾರುತ್ತಿದ್ದ ದರದಲ್ಲಿ ಬಹಿರಂಗವಾಗಿ ಅಕ್ಕಿಯನ್ನು ನಾಗರಿಕರು ಕೊಂಡುಕೊಂಡು ಉಂಡು ಬಾಳುವ ಸುಖವನ್ನು ಅನುಭವಿಸುತ್ತಿದ್ದಾರೆ. ಪರಿಸ್ಥಿತಿಯ ವಿಷಮತೆಯನ್ನು ನಿವಾರಿಸಲು ನ್ಯಾಯ ಬೆಲೆಯ ಅಂಗಡಿಗಳನ್ನು ಸರಕಾರದವರು ಜಿಲ್ಲೆಗೆ ಎಲ್ಲೋ ಎಳೆಂಟರಂತೆ ತೆರೆದಿರಬಹುದು — ಇವುಗಳಿಂದ ಜನರು ಪಡೆಯಬಹುದಾದ ಪ್ರಯೋಜನ ತೀರ ಮಿತವಾದುದಾಗಿದೆ; ಅದಲ್ಲದೆ ಈ ಅಂಗಡಿಗಳು ಎಲ್ಲರಿಗೂ ಉಪಯೋಗವಾಗುವಷ್ಟು ಹತ್ತಿರದಲ್ಲಿ ಒತ್ತೊತ್ತಿಗೆ ಇಲ್ಲದಿರುವ ಪ್ರಯುಕ್ತ ಹೆಚ್ಚಿನವರು ಏರಿದ ಧಾರಣೆಯಲ್ಲಿಯೇ ಹತ್ತಿರದ ಖಾಸಗಿ ಅಂಗಡಿಯಿಂದಲೇ ಅಕ್ಕಿಯನ್ನು ಕೊಂಡುಕೊಳ್ಳುವುದು ಅನಿವಾರ್ಯವಾಗಿದೆ. ಯಾರೇ ಆಗಲಿ, ಎರಡು ಸೇರು ಅಕ್ಕಿಗಾಗಿ ದಿನವೂ ಎರಡು ಗಂಟೆ ಕಾಲ ನಡೆಯುವಷ್ಟು ಬಿಡುವು ಮಾಡಿಕೊಳ್ಳುವುದು ಇತರ ಆವಶ್ಯ ಕೆಲಸಗಳ ನಡುವೆ ಸುಲಭವಾದುದಲ್ಲ; ವ್ಯವಹಾರ್ಯವಾದುದೂ ಅಲ್ಲ. ಇದನ್ನೆಲ್ಲ ತಿಳಿದುಕೊಳ್ಳುವಷ್ಟು ಆಸಕ್ತಿಯನ್ನು ಸರಕಾರ ತೋರಿಸಲಿಲ್ಲ; ಉಗ್ರಾಣದಲ್ಲಿ ಅಂಗಡಿಕಾರರು ಲಾಭದಾಶೆಯಿಂದ ಸಂಗ್ರಹಿಸಿರುವ ರೆಸ್ನಲಾದ ಅಕ್ಕಿಮುಡಿಗಳು ಹೊರಗೆ ಬಂದು ಅಗ್ಗದರದಲ್ಲಿ ವಿಕ್ರಯವಾಗುವಂತೆಯೂ ಏನೂ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಬಾಯಿಮಾತಿನ ಎಚ್ಚರಿಕೆಯನ್ನು ಮಾತ್ರ ಸರಕಾರವು ಪದೇ ಪದೇ ಕೊಟ್ಟಿತು — ಅದರ ಪರಿಣಾಮ ಮಾತ್ರ ಗೋಚರವಾಗಲಿಲ್ಲ! ಇದೇ ಅನುಭವವು ಬಟ್ಟೆಬರೆಗಳ ಉತ್ಪಾದಕರಿಗೆ ಕೇಂದ್ರ ಮಂತ್ರಿಗಳು ಕೊಟ್ಟ ಮತ್ತು ಕೊಡುತ್ತಿರುವ ಎಚ್ಚರಿಕೆಗಳ ಮಟ್ಟಿಗೂ ನಮಗಾದರೆ ಆಶ್ಚರ್ಯಪಡಬೇಕಾದುದಿಲ್ಲ. ಗಜಕ್ಕೆ ಒಂದು ಪೈಯಂತೆ ಸುಂಕವು ನಿಜವಾಗಿ ಏರಿದ್ದರೂ ಗ್ರಾಹಕರಿಂದ ಕನಿಷ್ಠ ಒಂದಾಣೆಯನ್ನಾದರೂ ಸುಂಕ ಏರಿದ ನೆಪದಲ್ಲಿ ಸುಲಿಯುವ ಬುದ್ಧಿ ವ್ಯಾಪಾರಿಗಳದ್ದಾಗಿರುವಾಗ — ನಮ್ಮ ಸರಕಾರವು ಪೌರುಷ ಹೀನತೆಯ ವರ್ತನೆಯನ್ನೆ ತೋರಿಸುತ್ತಿದ್ದರೆ ಜನರ ಕಷ್ಟ ಪರಿಹಾರವಾಗುವುದಾದರೂ ಹೇಗೆ? ಸರಕಾರವಿರುವುದು ಜನರ ಯೋಗಕ್ಷೇಮವನ್ನು ಕುರಿತು ಎಚ್ಚರಿಕೆಯ ಕಣ್ಣುಗಳನ್ನು ಇಡಲಿಕ್ಕಾಗಿಯೆ ಅಲ್ಲವೆ? ಅಂತಹ ಜಾಗರೂಕತೆ ಮತ್ತು ಪರಿಸ್ಥಿತಿಯನ್ನು ಹಿಡಿತದಲ್ಲಿ ಇಟ್ಟುಕೊಂಡೇ ತೀರುವ ದಕ್ಷತೆ ಸರಕಾರಿ ಧುರೀಣರಲ್ಲಿ ಎಂದು ಮೂಡಿ ಬರುವುದೊ! ಜನರ ಈ ಬಗೆಯ ಮನೋಭಾವನೆಯನ್ನು ಅರ್ಥ ಮಾಡಿಕೊಂಡಾದರೂ ಧುರೀಣರು ಕಾರ್ಯಪಟುಗಳಾಗಿ ಮೆರೆಯಲಿ; ಮಾತಿನಮಲ್ಲರಾಗದಿದ್ದರೂ ಚಿಂತಿಲ್ಲ — ಎನ್ನುವುದೇ ನಮ್ಮ ನಮ್ರ ಸೂಚನೆಯಾಗಿದೆ. ಒಂದೆಡೆ ಕಟ್ಟುವಾಗ ಇನ್ನೊಂದೆಡೆ ಕುಸಿಯುತ್ತಿದ್ದರೆ ನಮ್ಮ ಪ್ರಗತಿ ಅರ್ಥಶೂನ್ಯವೆನಿಸುವುದು; ಸಮೃದ್ಧಿಯ ಎಲ್ಲ ಬಣ್ಣನೆಯೂ ಹಾಸ್ಯಾಸ್ಪದವೆನಿಸುವುದು—ಇದನ್ನು ಜನತೆ ಎಷ್ಟು ಮಾತ್ರಕ್ಕೂ ಅಪೇಕ್ಷಿಸದು.

---

# ಕೈರೋ ಮಾತುಕತೆಯ ಮುಕ್ತಾಯ

## ಪಾಕಿಸ್ತಾನಿ ಪ್ರಧಾನಿಯಾಗಿ ಸುಹ್ರವರ್ದಿ

ಸುಯೇಜಿನ ಕಾಲುವೆಯ ಬಗ್ಗೆ ಪಾಶ್ಚಾತ್ಯ ರಾಷ್ಟ್ರಗಳ ನಿಲುಮೆಯನ್ನು ಈಜಿಪ್ತದ ಸರಕಾರಕ್ಕೆ ನಿವೇದಿಸಲಿಕ್ಕಾಗಿ ಕೈರೋಗೆ ಬಂದಿದ್ದ ಮೆಂಜಿಸ್ ಸಮಿತಿಯು ಈಗ ಲಂಡನಿಗೆ ಮರಳಿದೆ. ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವನ್ನು ಅಧ್ಯಕ್ಷ ನಾಸೇರರು ಒಪ್ಪಲಿಲ್ಲ ಎಂಬ ವರದಿಯನ್ನು ಅದು ಪಾಶ್ಚಾತ್ಯ ಮಿತ್ರರಿಗೆ ಒಪ್ಪಿಸಿದೆ.

### ಅಂತಾರಾಷ್ಟ್ರೀಯ ನಿಯಂತ್ರಣ

ಸುಯೇಜಿನ ಕಾಲುವೆಯನ್ನು ಅಂತ
ರಾಷ್ಟ್ರೀಯ ನಿಯಂತ್ರಣಕ್ಕೆ ಒಪ್ಪಿಸ
ದೇ ಪಾಶ್ಚಾತ್ಯರ ಸೂಚನೆಯ ತಿರು
ಇದನ್ನು ನಾಸೇರರು ವಿರೋಧಿಸಿದುದರ
ಯಾವ ಆಶ್ಚರ್ಯವೂ ಇಲ್ಲ. ಆದರೆ, ಸ
ಯೋಜಿನ ತಂಟೆಯನ್ನು ಬಗೆ ಹರಿಸ
ಅವರು ಆತುರರಿದ್ದಾರೆ. ಇದಕ್ಕಾಗಿ ಪ್ರ
ಸೂಚನೆಯನ್ನು ಮಾಡಿದ್ದಾರೆ.

### ಹೊಸ ಸೂಚನೆ

ಇವುಗಳಿಗನುಸಾರ, ಏಗುಪ್ತಕ್ಕೆ ಸ
ಯೋಜಿನ ಕಾಲುವೆಯ ವಿಷಯದ
ಸಂಪೂರ್ಣ ಸ್ವಾಮ್ಯವಿದ್ದರೂ ಸಹ ಅ
ಬಾಂಧಿತವಾಗಿ ಹಡಗು ಚಲಾವಣೆಗೆ
ವಚನ ಕೊಡುವುದು, ಇದಕ್ಕಾಗಿ ತೆ
ಬೇಕಾದ ಸುಂಕದ ದರವನ್ನು ಸಮತಾಭ
ವದಿಂದಲೇ ಎಲ್ಲ ರಾಷ್ಟ್ರಗಳಿಗೂ ಅ
ಯಿಸುವುದು, ಕಾಲುವೆ ಸಂಚಾರಕ್ಕೆ ಇ
ವ ಸೌಲಭ್ಯಗಳನ್ನು ಹೆಚ್ಚಿಸುವುದು
ವಿಷಯಗಳಲ್ಲಿ ಸಮಾಲೋಚನೆ ನಡೆಸ
ಕಾಲುವೆಯನ್ನು ಉಪಯೋಗಿಸುವ ಎ
ರಾಷ್ಟ್ರಗಳ ಪರಿಷತ್ತನ್ನು ಕರೆಯ
ಏಗುಪ್ತಕ್ಕೆ ಒಪ್ಪಿಗೆ ಇದೆ.

### ಮಹಮ್ಮದಾಲಿಗಳ ರಾಜೀನಾಮೆ

ಪಾಕಿಸ್ತಾನದಲ್ಲಿ ಅದು ಹುಟ್ಟಿದ ಬ
ಕ ನಾಲ್ಕನೇ ಪ್ರಧಾನಮಂತ್ರಿಯಾಗಿ
ಮಹಮ್ಮದಾಲಿಯವರು ಈಗ ರಾಜೀನಾ
ಮೆಯನ್ನು ಒಪ್ಪಿಸಿದ್ದಾರೆ. ಮುಸ್ಲಿಂ ಲೀ
ನೊಡನೆ ತಾನು ಸಂಬಂಧವನ್ನು ಕಡಿ
ಕೊಂಡುದರಿಂದ, ಪ್ರಧಾನ ಮಂತ್ರಿತ್ವ
ನ್ನು ಬಿಟ್ಟುಕೊಡುವುದೂ "ಗೌರವಾ
ಕಾರ್ಯ"ವೆಂದು ಭಾವಿಸಿದುದಾಗಿ ಅ
ರು ಹೇಳಿಕೆಯನ್ನಿತ್ತಿದ್ದಾರೆ. ಮುಸ್ಲಿಂ ಲಿ
ಗಿನಲ್ಲಿ ರಾಷ್ಟ್ರೀಯ ಮನೋವೃತ್ತಿ
ನಶಿಸಿ, ಅಧಿಕಾರಲಾಲಸೆಯೇ ತಾಂಡ
ವಾಡುತ್ತಿದೆ; ಇದು ಪ್ರಜಾಪ್ರಭುತ್ವ
ಪೋಷಕವಾಗುವಂತಿಲ್ಲ ಎಂದೂ ಅವ
ಅಭಿಪ್ರಾಯಪಟ್ಟಿದ್ದಾರೆ.

### ಸುಹ್ರವರ್ದಿ ಹೊಸ ಪ್ರಧಾನಿ

ಈಗಿನ ಪಾಕಿಸ್ತಾನಿ ಸಂಸತ್ತಿನಲ್ಲಿರು
ಸಮ್ಮಿಶ್ರ ಸ್ವರೂಪವುಳ್ಳ ಪಕ್ಷದ ನಾಯ

---

### ಸೂಚನೆ

'ನವಯುಗ'ದ ೩೫ನೆಯ ಸಂಪುಟ
ಇದೇ ಅಗಸ್ಟ್ ಅಂತ್ಯಕ್ಕೆ ಮುಗಿದ
ಸಪ್ಟಂಬರದಿಂದ ೩೬ನೇ ವರ್ಷವು ಆರಂ
ವಾಗಿರುತ್ತದಷ್ಟೆ. ಈ ಅವಧಿಗೆ ಯಾ
ಯಾರ ಚಂದಾಹಣ ಮುಗಿಯುತ್ತದ
ಅವರೆಲ್ಲರೂ ಬಾಕಿ ಚಂದಾಹಣವನ್ನು
ಬೇಗನೆ ಕಳುಹಿಸುವಂತೆ ವಿನಂತಿ. ವಿ
ಪಿ. ಪಿ. ಮಾಡಿದರೆ ೧೦ ಆಣೆ ಹೆಚ್ಚ
ಬೀಳುವುದರಿಂದ ಚಂದಾದಾರರು ಹಣ
ವನ್ನು ಮನಿಯಾರ್ಡರು ಮಾಡಬೇಕಾ
ಬಿನ್ನಹ. ಇಲ್ಲವೆ ಕೆನರಾ ಇಂಡಸ್ಟ್ರಿಯಲ
ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯ
ಪನೇ ಶಾಖೆಯಲ್ಲಿ ಯಾವನೊಂದು
ಖರ್ಚಿಲ್ಲದೆ 'ನವಯುಗದ ಖಾತೆ
ಕಟ್ಟಬಹುದು.

ಮೆನೇಜರ್,
ನವಯುಗ, ಉಡುಪಿ.

ಅಣುಶಕ್ತಿಯನ್ನು ಸಂಗ್ರಾಮ ಕಾರ್ಯಕ್ಕಾಗಿಯಲ್ಲ, ಶಾಂತಿ ಕಾಲದಲ್ಲಿ ಬಳಕೆಗಾಗಿ ಉಪಯೋಗಿಸುವುದೇ ಸೂಕ್ತವಾದುದೆಂದು ಭಾರತವು ಹೇಳುತ್ತಾ ಬಂದಿದೆ. ನಮ್ಮ ಸರಕಾರವು ಈ ದಿಸೆಯಲ್ಲಿ ಮುಂದಿಟ್ಟ ಪ್ರಗತಿಪರ ಹೆಜ್ಜೆಗಳನ್ನು ಡಾ. ಭಾಭಾರವರು ಮೊನ್ನೆ ತಾನೆ ಮಾಡಿದ ಪ್ರಸಾರ ಭಾಷಣದಲ್ಲಿ ವಿವರಿಸಿದ್ದಾರೆ.

ಜಗತ್ತಿನ ಪ್ರಬಲ ರಾಷ್ಟ್ರಗಳಾದ ಅಮೇರಿಕ ಮತ್ತು ರಶಿಯಗಳೂ ಶಾಂತಿ ಕಾಲದ ಬಳಕೆಗೆ ಅಣುಶಕ್ತಿಯನ್ನು ಉಪಯೋಗಿಸಲು ಆಸಕ್ತವಾಗಿವೆ. ಪದೇ ಪದೇ ಅಣು ಬಾಂಬುಗಳ ಸ್ಫೋಟನ ಪ್ರಯೋಗಗಳನ್ನು ನಡೆಸುತ್ತಿದ್ದರೂ ಶಾಂತಿ ಕಾಲದ ಬಳಕೆಯ ಮಟ್ಟಿಗೆ ಅಣು ಶಕ್ತಿಯ ಗುಟ್ಟನ್ನು ಈ ರಾಷ್ಟ್ರಗಳು ಇತರ ದೇಶಗಳವರಿಗೆ ಹೇಳಿಕೊಡುತ್ತವೆ.

ಮೇಲೆ ಎಡಗಡೆ ಐಗುಪ್ತದ ವಿಜ್ಞಾನಿಯೋರ್ವನು ರೇಡಿಯೋ ಐಸೋಟೋಪುಗಳ ಅಧ್ಯಯನ ನಡೆಸುತ್ತಿರುವುದನ್ನೂ ಬಲಗಡೆ ಅಣುಶಕ್ತಿಯ ದುಷ್ಪರಿಣಾಮವು ದೇಹದ ಮೇಲಾಗದಂತೆ ತಡೆಯುವ ಪ್ಲಾಸ್ಟಿಕ್ಕಿನ ಕವಚವನ್ನು ಅಮೇರಿಕದ ಅಧ್ಯಕ್ಷರು ಪರಿಶೀಲಿಸುತ್ತಿರುವುದನ್ನು ಕಾಣಬಹುದು.

ಕ ಸ್ಥಾನಕ್ಕೆ ಅವರು ರಾಜೀನಾಮೆಯನ್ನು ಕೊಟ್ಟಿಲ್ಲ. ಅವರಿಗೆ ಈ ಪಕ್ಷದ ಸಂಪೂರ್ಣ ಬೆಂಬಲವಿದೆ; ಸಂಸತ್ತಿನಲ್ಲಿ ಈ ಪಕ್ಷಕ್ಕೆಯೇ ಬಹುಮತವಿದೆ. ಆದುದರಿಂದ ಪಾಕಿಸ್ತಾನದ ಅಧ್ಯಕ್ಷರು ಮಹಮ್ಮದಾಲಿಯವರನ್ನು ಪುನಃ ಪ್ರಧಾನಮಂತ್ರಿಯಾಗಲು ಆಮಂತ್ರಿಸಿದರು. ಆದರೆ ಈ ಕೊಡುಗೆಯು ನಿರಾಕರಿಸಲ್ಪಟ್ಟುದರಿಂದ ಅಧ್ಯಕ್ಷರು ಸುಹ್ರವರ್ದಿಯವರನ್ನು ಪ್ರಧಾನ ಮಂತ್ರಿ ಸ್ಥಾನಕ್ಕೆ ಆಮಂತ್ರಿಸಿದ್ದಾರೆ; ಮತ್ತು ಈ ಆಮಂತ್ರಣವನ್ನು ಸ್ವೀಕರಿಸಿ ಹೊಸ ಮಂತ್ರಿ ಮಂಡಳವನ್ನು ಸುಹ್ರವರ್ದಿಯವರು ರಚಿಸಲು ಒಪ್ಪಿದ್ದಾರೆ.

**ರಾಜ್ಯ ಪುನಾರಚನೆಯ ಸಮಸ್ಯೆ**

ಭಾರತದ ಸಂಸತ್ತಿನಲ್ಲಿ ರಾಜ್ಯಗಳ ಪುನಾರಚನೆಯ ದೆಸೆಯಿಂದ ಘಟನೆಗೆ ಆವಶ್ಯಕ ತಿದ್ದುಪಡಿಗಳನ್ನು ಮಾಡುವ ಮಸೂದೆಯು ಮಾನ್ಯವಾಗಿದೆ. ಹೀಗಾಗಿ ರಾಜ್ಯಗಳ ಪುನಾರಚನೆಯ ಎಲ್ಲ ಕಾನೂನಿನ ಅಂಶಗಳೂ ಮುಗಿದ ಹಾಗಾಗಿದೆ. ಬಾಕಿ ಉಳಿದಿರುವುದು ಹೊಸ ರಾಜ್ಯಗಳು ಸುಗಮ ಆಡಳಿತ ನಡೆಸುವಂತೆ ಮಾಡಬೇಕಾದ ಪ್ರಾಸ್ತಾವಿಕ ಸಿದ್ಧತೆ ಮಾತ್ರ.

**ಆಡಳಿತ ವಿಭಾಗ**

ಹೊಸ ಮೈಸೂರು ರಾಜ್ಯವು ರಾಯಚೂರು, ಬೆಳಗಾಂವಿ, ಮೈಸೂರು ಮತ್ತು ಬೆಂಗಳೂರು ಎಂಬ ಕೇಂದ್ರಗಳಿಂದ ನಾಲ್ಕು ಆಡಳಿತ ವಿಭಾಗಗಳನ್ನೊಳಗೊಳ್ಳುವುದೆಂದು ತಿಳಿದು ಬಂದಿದೆ. ಹೊಸ ರಾಜ್ಯದ ಮುಖ್ಯ ಮಂತ್ರಿ ಸ್ಥಾನಕ್ಕೆ ಯಾರನ್ನು ಆರಿಸಬೇಕೆಂಬ ವಿಷಯದ ಪರ್ಯಾಲೋಚನೆಯೂ ಅಲ್ಲಲ್ಲಿ ನಡೆದಿದೆ. ಮತದಾರ ಕ್ಷೇತ್ರಗಳನ್ನು ಪುನರ್ಘಟಿಸುವ ಸಮಿತಿಯು ನೇಮಕವೂ ಆಗಿರುತ್ತದೆ.

**ನೇತಾಜಿ ಮಡಿದದ್ದು ನಿಜ**

ನೇತಾಜಿ ಸುಭಾಷಚಂದ್ರ ಬೋಸರ ಮರಣ ಸಮಸ್ಯೆಯ ಕುರಿತು ವಿಚಾರಣೆ ಮಾಡಲು ಭಾರತ ಸರಕಾರವು ಏರ್ಪಡಿಸಿದ್ದ ಸಮಿತಿಯು ವರದಿಯನ್ನು ಇದೇ ತಾ. 11 ರಲ್ಲು ಪ್ರಧಾನಿ ನೆಹರುಗಳು ಲೋಕ ಸಭೆಯ ಮುಂದಿರಿಸಿದರು. "ಫ್ರೋರ್ಮೋಸಾದ ಟಾಯಿ ಹೋಕ್ ವಿಮಾನ ನಿಲ್ದಾಣದಲ್ಲಿ ತಾ 18-8-1945 ರಲ್ಲು ಆದ ವಿಮಾನ ಅಪಘಾತದಲ್ಲಿ ಸುಭಾಸಚಂದ್ರರು ಮಡಿದದ್ದು ನಿಜ. ಅವರ ಚಿತಾ ಭಸ್ಮವು ಟೋಕಿಯೋದ ರೆಂಕೋಜಿ ದೇವಸ್ಥಾನದಲ್ಲಿ ಇರಿಸಲ್ಪಟ್ಟಿದೆ" ಎಂಬುದಾಗಿ ಸಮಿತಿಯು ವರದಿ ಮಾಡಿರುತ್ತದೆ.

## ಉಡುಪಿ ವಾರ್ತೆ

**ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ**— ಇದೇ ತಾ. 10ರ ಮಧ್ಯಮಾ, ರಾಷ್ಟ್ರಭಾಷಾ, ಪ್ರವೇಶಿಕಾ, ವಿಶಾರದ ಪೂರ್ವಾರ್ಧ ಮತ್ತು ಉತ್ತರಾರ್ಧ ವರ್ಗಗಳನ್ನು ತೆರೆಯಲಾಗಿದೆ. ವರ್ಗಗಳಿಗೆ ಸೇರಬಯಸುವವರು ಚಿತ್ತರಂಜನ ಭವನದ "ಸಮಿತಿ"ಯ ಕಾರ್ಯಾಲಯದಲ್ಲಿ ಕಾರ್ಯನಿರ್ವಾಹಕರೊಡನೆ ಸ್ವತ ಬಂದು ಮಾತಾಡಬಹುದೆಂದು ಸಂಚಾಲಕರು ತಿಳಿಸುತ್ತಾರೆ.

**ಬ್ರಹ್ಮಗಿರಿಗೊಂದು ಬ್ರಾಂಚ್ ಟಪ್ಪಾಲು ಕಟ್ಟೆಯ ಆವಶ್ಯಕತೆ** — ಅಂಬಲಪಾಡಿ, ಬ್ರಹ್ಮಗಿರಿ, ಕಾಡಬೆಟ್ಟು, ಅಜ್ಜರಕಾಡು, ಕನಪಾಡಿ ಜನರ ಕಡೆಯಿಂದ ಬ್ರಹ್ಮಗಿರಿಯಲ್ಲಿ ಒಂದು ಸಬ್ ಪೋಸ್ಟಾಫೀಸನ್ನು ತೆರೆಯಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಯೊಂದು ಕಳುಹಿಸಲಾಗಿದೆ.

**ಗುಂಡಿಬೈಲು**— ಕಲ್ಸಂಕ, ಗುಂಡಿಬೈಲು ನಿವಾಸಿಗಳ ಸೌಕರ್ಯಕ್ಕಾಗಿ ಅಂಚೆ ಪೆಟ್ಟಿಗೆಯೊಂದನ್ನು ಗುಂಡಿಬೈಲಲ್ಲಿ ಇರಿಸುವಂತೆ ಮೇಲಧಿಕಾರಿಗಳಿಗೆ ಮನವಿಯೊಂದು ಹೋಗಿದೆ.

**ಜನ್ಮ ದಿನಾಚರಣೆ** — ಕಾಣೂರು ಮಠದ ಕಿರಿಯ ಶ್ರೀ ವಿದ್ಯಾವಾರಿಧಿತೀರ್ಥ ಸ್ವಾಮಿಗಳವರು ತಾ. 3ರಲ್ಲಿ ತಮ್ಮ ಜನ್ಮದಿನೋತ್ಸವವನ್ನು ಶ್ರೀಕೃಷ್ಣ ಮಠದಲ್ಲಿ ವೈಭವದಿಂದ ನೆರವೇರಿಸಿದರು. ಮಧ್ಯಾಹ್ನ ಅನ್ನ ಸಂತರ್ಪಣೆ ರಾತ್ರಿ ಹೂವಿನ ಪೂಜೆ ನಡೆಯಿತು. ಭಕ್ತವೃಂದಕ್ಕೆ ಪಂಚಗವ್ಯಾಯ ಕಳುಹಿಸಲಾಗಿತ್ತು. ಹಿರಿಯ ಪುತ್ತಿಗೆ ಮತ್ತು ಕಾಣೂರು ಸ್ವಾಮಿಗಳಿಂದ ಪೂಜಿಸಲ್ಪಟ್ಟ ಗಂಗಾತೀರ್ಥವನ್ನು ಈ ಶುಭದಲ್ಲಿ ಸಂತರ್ಪಣೆ ಕಾಲದಲ್ಲಿ ವಿತರಣೆ ಮಾಡಲಾಯಿತು.

**ನಗರಸಭೆಯು** — ತಾ. 10ರಲ್ಲಿ ಸಂಜೆ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. 1955-56ನೆ ವರ್ಷದ ಆಡಳಿತ ವರದಿ ಪರಿಶೀಲನೆಯನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ಆದಿಉಡುಪಿ ಮಕ್ಕಳ ಆಟವಾಡುವ ಸ್ಥಳವನ್ನು ಕೆಲವೊಂದು ಚರ್ಚೆಗಳಾದ ಬಳಿಕ ನಗರ ಸಭೆಯು ಸ್ವಾಧೀನಪಡಿಸಿಕೊಂಡು ಪೋಷಣೆ ಮಾಡಲು ಒಪ್ಪಿಗೆ ಕೊಟ್ಟಿತು.

**ಸತ್ಕಾರ ಕೂಟ** — ಸ್ವಪ್ರಯತ್ನದಿಂದ, ಅಚಲ ಪರಿಶ್ರಮದಿಂದ ಪ್ರಗತಿಹೊಂದಿ ಬಡವಬಲ್ಲಿದರೆನ್ನದೆ ಸರ್ವರ ಜನಾನುರಾಗಗಳಿಸಿರುವ, ಹಾಗೂ ಶ್ರೀ ಮಂಜುನಾಥ ಮೋಟರ್ ಸರ್ವಿಸಿನ ಮಾಲಕರಾದ ಶ್ರೀ ಕೆ. ಗೋಪಾಲ ಸೆಟ್ಟರು ಕಿನ್ನಿಮೂಲ್ಕಿಯಲ್ಲಿ ಕಟ್ಟಿಸಿರುವ ಅತ್ಯಾಧುನಿಕ ಮಾದರಿಯ ನೂತನ ಗೃಹ ಪ್ರವೇಶವನ್ನು ಇದೇ ತಾ. 5ರಲ್ಲಿ ನೆರವೇರಿಸಿದ ಸಂಬಂಧ ತಾ. 9ರಂದು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ನಗರದ ಮತ್ತು ಆಸುಪಾಸಿನ ಸಾವಿರಾರು ಮಂದಿ ಸತ್ಕಾರಕೂಟದಲ್ಲಿ ಭಾಗವಹಿಸಿದ್ದರು

ಶ್ರೀ ಶೆಟ್ಟರ ಸಾಹಸೋದ್ಯಮವು ನಮ್ಮ ತರುಣರಿಗೊಂದು ಪ್ರೇರಕಶಕ್ತಿಯಾಗಿದೆ.

**ಸಾರ್ವಜನಿಕ ಸಭೆ**— ಭೂಕ್ರಾಂತಿ ದಿನಾಚರಣೆಯ ಅಂಗವಾಗಿ ತಾ. 11ನೇ ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎಲ್. ಎಸ್. ನ್ಯಾಕರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಎ. ಜಿ ಆಳ್ವೆಯವರಿಂದ ಸ್ವಾಗತ, ಶ್ರೀಗಳಾದ ಕೆ. ಶ್ರೀನಿವಾಸ ಪೈ, ಬಿ. ಕೃಷ್ಣ ಭಟ್ಟರಿಂದ ಭೂಕ್ರಾಂತಿ ದಿನಾಚರಣೆ ಕುರಿತು ಭಾಷಣಗಳಾದುವು. ಬಳಿಗೆ ನಗರ ಸ್ವಚ್ಛತೆ, ಸರ್ವೋದಯ ಸಾಹಿತ್ಯ ಪ್ರಚಾರಗಳಿದ್ದುವು.

**ಇನ್ನಂಜೆ**:— ಇದೇ ತಾ7ರಲ್ಲು ಸ್ಥಳೀಯ ಹಿಂದೂ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಟಿ. ಎ. ಪೈ. ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನಿವೃತ್ತ ಜಿಲ್ಲಾ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳು ನೆರವೇರಿಸಿದರು. ಶ್ರೀ ಗಳಾದ ಸದಾಶಿವ ಸೆಟ್ಟಿ, ರಮೇಶ ಪೈ. ಶೀನ ಸೆಟ್ಟಿ ಮೊದಲಾದವರು ಮಾತಾಡಿದರು.

## ಕಾರ್ಯಕ್ರಮ

**ಜಿಲ್ಲೆಯಲ್ಲಿ ಮದ್ರಾಸ್ ಗವರ್ನರರ ಪ್ರವಾಸ**— ಮದ್ರಾಸು ರಾಜ್ಯದ ಮಾನ್ಯ ಗವರ್ನರ್ ಶ್ರೀ ಶ್ರೀಪ್ರಕಾಶರು ಈ ತಿಂಗಳ ತಾ 20ರಿಂದ 23ರ ತನಕ ದ. ಕ. ಜಿಲ್ಲೆಯ ಪ್ರವಾಸ ಕೈಕೊಂಡಿರುವರು. ಪ್ರವಾಸದ ತಾತ್ಕಾಲಿಕ ಕಾರ್ಯಕ್ರಮದ ವಿವರ ಹೀಗಿದೆ: ತಾ 20—9—56 ಸಂಜೆ 4-40ಕ್ಕೆ ಮಂಗಳೂರಿಗೆ ಆಗಮನ; ಘಂಟೆ 6ಕ್ಕೆ ನಗರಸಭೆಯ ಮತ್ತು ಜಿಲ್ಲಾ ಬೋರ್ಡಿನ ಮಾನಪತ್ರ ಸ್ವೀಕಾರ. ರಾತ್ರಿ 8ರಿಂದ 10 ಗಂಟೆ ತನಕ ಜಿಲ್ಲಾ ಬೋರ್ಡು ಸಭಾ ಭವನದಲ್ಲಿ ಭೋಜನ ಸಮಾರಂಭ.

ತಾ. 21ರಲ್ಲಿ ಬೆಳಗ್ಗೆ 8-30ಕ್ಕೆ ಹಿಂದೀ ಪ್ರಚಾರ ಸಭೆಯ ಕಟ್ಟಡದ ಶಂಕುಸ್ಥಾಪನೆ. 10 ಗಂಟೆಗೆ ಗಿಲ್ಡಿನ ಕಟ್ಟೋಣ ಉದ್ಘಾಟನೆ. 11ರಿಂದ 12-10ರ ತನಕ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಭೇಟಿ. ಸಂಜೆ 4ರಿಂದ 45ರ ತನಕ ವಕೀಲರ ಸಂಘ ಮತ್ತು ಕೋರ್ಟು ಸಂದರ್ಶನ, 5-15ರಿಂದ 7-15ರವರೆಗೆ ಕಂಕನಾಡಿಭತ್ತ ಕೇಂದ್ರಕ್ಕೆ ಭೇಟಿ ಇತ್ಯಾದಿ. ತಾ. 22ರಂದು ಬೆಳಗ್ಗೆ 7-45ಕ್ಕೆ ಮರೋಲಿ ಸ್ಪಿನ್ನಿಂಗ್ ಕಾರ್ಖಾನೆ, 8-45ಕ್ಕೆ ಗುರುಪುರ ವನಿತ ಸಮಾಜ, 9-10ಕ್ಕೆ ಬಜಪೆ ಸಮಾಜ ವಿಕಾಸ ಯೋಜನೆ ಕೇಂದ್ರ ಸಂದರ್ಶನ. 10ಕ್ಕೆ ಯುಡುಪದವು. 11ರಿಂದ 12 ಮೂಡಬಿದ್ರೆ. 12-45 ಮಂಗಳೂರು. ಸಂಜೆ 4 ಗಂಟೆಗೆ ತುಂಬೆ, ನೀರು ಯೋಜನೆಯ ಸಂದರ್ಶನ. 4-45 ಬಿ. ಸಿ. ರೋಡ್. 4-50 ಸಂಪಾವರ. 5-10ರಿಂದ 6-30ರ ತನಕ ಬಂಟ್ವಾಳದಲ್ಲಿ ಕಾರ್ಯಕ್ರಮ. 8ರಿಂದ 9-30ರ ವರೆಗೆ ರೋಟರಿ ಕ್ಲಬ್ಬಿನಲ್ಲಿ ಭೋಜನ.

ತಾ. 23ರಂದು ಬೆಳಿಗ್ಗೆ 7-30ಕ್ಕೆ ಮಂಗಳೂರು 9-15ರಿಂದ 10-45ರ ವರೆಗೆ ಬೈಲೂರು ಹ್ಯಾಸ್ಕೂಲು ಕಟ್ಟಡದ ಉದ್ಘಾಟನೆ. 11-10ಕ್ಕೆ ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಭೇಟಿ ಬಿಲ್ಡಿಂಗ್ ಸೊಸೈಟಿಯ ಕಟ್ಟಡದ ಶಂಕುಸ್ಥಾಪನೆ ಇತ್ಯಾದಿ. ಸಂಜೆ 3 ಗಂಟೆಗೆ ಮಂಗಳೂರಿಗೆ ಪ್ರಯಾಣ, 6-15ಕ್ಕೆ ಮಂಗಳೂರಿನಿಂದ ರೈಲ್ ಪ್ರಯಾಣ

**ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.**

# ಎಲ್ಲೆಲ್ಲಿ ಏನೇನು?

**ಕುಂದಾಪುರ-ಹೆಬ್ರಿಯಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರ ಕಾರ್ಯಕ್ರಮಗಳು—** ಕುಂದಾಪುರದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಯನ್ವಯ ಎಡ್ವರ್ಡ್ ಮೆಮೋರಿಯಲ್ ಕ್ಲಬ್ಬಿಗೆ ರೂಪಾಯಿ 14,000 ವೆಚ್ಚದಿಂದ ಕಟ್ಟಿಸಲಾದ 'ಗಾಂಧಿ ಸ್ಮಾರಕ ಮಂದಿರ'ದ ಉದ್ಘಾಟನೆಯನ್ನು ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ತಾ. 2ರಲ್ಲಿ ಸಂಜೆ ನೆರವೇರಿಸುತ್ತಾ, ಕ್ಲಬ್ ಜೀವನದ ಕುರಿತು ಮಾಹಿತಿಯನ್ನಿತ್ತರು. ಅಲ್ಲದೆ ಕ್ಲಬ್ಬಿಗೆ ರೇಡಿಯೋ ಪಡಕೊಳ್ಳುವ ಬಗ್ಗೆ ರೂ. 100 ಕೊಡುವುದಾಗಿ ವಾಗ್ದಾನವಿತ್ತರು. ಶ್ರೀ ಎಮ್. ಎಮ್. ಊರಾಳರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಎಮ್. ಹೆಗ್ಡೆಯವರು ವರದಿಯನ್ನೋದಿದರು. ಶ್ರೀ ಕೆ. ಎಲ್. ಕಾರಂತರು ಧನ್ಯವಾದಗಳನ್ನಿತ್ತರು.

ರಾತ್ರಿ ಅತಿಥಿಸತ್ಕಾರ ಸಮಿತಿಯ ಕಡೆಯಿಂದ ಮಂತ್ರಿಗಳಿಗೂ ಇತರರಿಗೂ ಊಟೋಪಚಾರಗಳಾದುವು.

ಮರುದಿವಸ ತಾ. 3ರಲ್ಲಿ ಶ್ರೀ ಎ. ಬಿ. ಶೆಟ್ಟರು ಕುಂದಾಪುರ ಬಸ್‌ಸ್ಟೇಂಡಿನ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸುತ್ತಾ, ಸರಕಾರದ ಕಾರ್ಯಗಳಲ್ಲಿ ಜನರು ಸಹಕರಿಸಬೇಕಾದ ಆವಶ್ಯಕತೆಯನ್ನು ಹೇಳಿದರು. ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರು, ಸರಕಾರ ಕೈಗೊಂಡಿರುವ ಕಾರ್ಯಗಳ ಸಫಲತೆಗೆ ಜನರು ಬೆಂಬಲವೀಯಬೇಕೆಂದರು. ಸಮಾರಂಭದ ಅಧ್ಯಕ್ಷತೆಯನ್ನು ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಕೆ. ವೆಂಕಪ್ಪ ಶೆಟ್ಟರು ವಹಿಸಿದ್ದರು. ಶ್ರೀ ಎನ್. ಎಸ್. ಪರಮೇಶ್ವರಯ್ಯನವರು ವಂದನೆಗಳನ್ನಿತ್ತರು.

**ಹೆಬ್ರಿಯಲ್ಲಿ—** ಸ್ಥಳೀಯ ಸಮಾಜ ಮಂದಿರದಲ್ಲಿ ತಾ. 3ರಲ್ಲಿ ಸಾರ್ವಜನಿಕ ಸಭೆಯಲ್ಲಿ ಅರ್ಪಿಸಲಾದ ಪಂಚಾಯತಬೋರ್ಡ ಮಾನಪತ್ರಕ್ಕೆ ಶ್ರೀ ಎ. ಬಿ. ಶೆಟ್ಟರು ಉತ್ತರಿಸುತ್ತಾ, ಹೆಬ್ರಿಯಲ್ಲಿ ಹೈಸ್ಕೂಲು ಅಗತ್ಯವೆಂಬ ಅಭಿಪ್ರಾಯಪಟ್ಟು ಆ ಬಗ್ಗೆ ತಾವೂ ಪ್ರಯತ್ನಿಸುವುದಾಗಿ ಆಶ್ವಾಸನೆಯಿತ್ತರು. ಇಲ್ಲಿಯ ಸಮಾಜ ಮಂದಿರವು ಇದೇ ಜಿಲ್ಲೆಯಲ್ಲಿಯೇ ದ್ವಿತೀಯ ಸ್ಥಾನಪಡೆವ ಉತ್ತಮ ಮಟ್ಟದಲ್ಲಿ ಕಟ್ಟಿಸಲ್ಪಟ್ಟುದಕ್ಕೆ ಆನಂದವನ್ನು ಸೂಚಿಸಿ ಶ್ರೀ ಭುಜಂಗ ಬಲ್ಲಾಳ ಮೊದಲಾದವರನ್ನು ಅಭಿನಂದಿಸಿದರು.

ಹಾಜರಿದ್ದ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಕೂಡಾ ಹೈಸ್ಕೂಲು ಬಗ್ಗೆ ತಾವೂ ಕೈಲಾದ ಸಹಕಾರವೀಯುವುದಾಗಿ ಸೂಚಿಸಿದರು. ಮಾನ್ಯ ಮಂತ್ರಿಗಳು ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರ ಆಶ್ವಾಸನೆಗಳಿಗಾಗಿ ಶ್ರೀ ಎಚ್. ಭುಜಂಗ ಬಲ್ಲಾಳರು ಧನ್ಯವಾದವಿತ್ತರು.

ಸ್ಥಳೀಯ ಸಮಾಜ ಮಂದಿರದಲ್ಲಿ ತಾ. 2ರಲ್ಲಿ ಹೆಬ್ರಿ ಬ್ಲಾಕಿನ ಗ್ರಾಮನಾಯಕರ ಸಭೆಯು ಕಾರ್ಕಳ ಅಸಿಸ್ಟೆಂಟ್ ಪ್ರೊಜೆಕ್ಟ್ ಆಫೀಸರ್ ಶ್ರೀ ಹಾಜಿ ರಮುಲಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು.

ಈ ತಿಂಗಳ ತಾ. 27 ಮತ್ತು 28ರಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ಪ್ರಚಾರ ಸಪ್ತಾಹ ಜರಗಿಸಬೇಕೆಂದು ನಿರ್ಧಾರವಾಯಿತು. ಆ ಬಗ್ಗೆ ಶ್ರೀಗಳಾದ ಎಚ್. ಭುಜಂಗ ಬಲ್ಲಾಳ, ಅಧ್ಯಕ್ಷ; ಎಮ್. ಮೊದಯ್ಯ ಮತ್ತು ಶ್ರೀನಿವಾಸಾಚಾರ್ಯ, ಜತೆಕಾರ್ಯದರ್ಶಿಗಳು ಮತ್ತು ಹೆಬ್ರಿ ಠಾನ ಭಾಗದ [illegible]ಯೂಗಿರುವ ಸಮಿತಿಯೊಂದು ರಚಿಸಲ್ಪಟ್ಟಿತು. ತಾ. 27ರಲ್ಲಿ ಬೆಳಗ್ಗೆ ಶಿಶು ಪ್ರದರ್ಶನ ಮತ್ತು ಕೃಷಿ ಪ್ರದರ್ಶನಗಳ ವ್ಯವಸ್ಥೆ ಮಾಡಿ ಬಹುಮಾನ ಕೊಡಬೇಕೆಂದೂ ನಿರ್ಧರಿಸಲಾಯಿತು.

**ಮುಳವೂರು—** ದಲಿತ ಸುಧಾರಕ ಸಂಘದ ವರ್ಷಾವಧಿ ಮಹಾಸಭೆಯು ತಾ. 2ರಲ್ಲಿ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಬಜ್ಪೆ ಬಂಗಲೆಯಲ್ಲಿ ಜರಗಿ ಹೊಸ ವರ್ಷಕ್ಕೆ ಕಾರ್ಯಕಾರೀ ಸಮಿತಿ ರಚನೆಯಾಯಿತು. ಇಲ್ಲಿಯ ಹರಿಜನ ಕೋಲನಿಗೆ 'ಮುಳವೂರು ಈಶ್ವರ ಪುರಂ' ಎಂಬ ಹೆಸರನ್ನಿಡಬೇಕೆಂದು ನಿರ್ಣಯಿಸಲಾಯಿತು. ಮುಂದಿನ ಅಕ್ಟೋಬರ ತಿಂಗಳಲ್ಲಿ ಜರಗಲಿರುವ ಹರಿಜನ ಪರಿಷತ್ತಿಗೆ ಈ ಸಭೆಯ ಕಡೆಯಿಂದ ಆದಷ್ಟು ಸಹಾಯನೀಡಬೇಕೆಂದು ನಿಶ್ಚಯಿಸಲಾಯಿತು.

**ಕಡಿಯಾಳಿ—** ಸ್ಥಳೀಯ ಹಾ. ಎ. ಶಾಲೆಯ ಶಾಲಾ ನಾಯಕನ ಚುನಾವಣೆಯಲ್ಲಿ ಶ್ರೀ ಎಸ್. ಜನಾರ್ಧನ ಆಚಾರಿ ಮತ್ತು ಜಿ. ಜಯಂತಿಯವರು ಅನುಕ್ರಮವಾಗಿ ಶಾಲಾ ನಾಯಕ ಮತ್ತು ಉಪನಾಯಕಿಯರಾಗಿ ಆರಿಸಲ್ಪಟ್ಟಿರುವರು.

**ಅಜ್ಜಾವರ—** ಸ್ಥಳೀಯ ಗ್ರಾಮಸೇವಾ ಸಂಘದ ವತಿಯಲ್ಲಿ ರಚಿಸಲ್ಪಡುವ ತರುಣ ಬರಹಗಾರರ ಹಸ್ತಾಕ್ಷರೀ ಪತ್ರಿಕೆ 'ಗ್ರಾಮೋದಯ' (ಮಾಸಿಕ)ದ ಪ್ರಥಮ ಸಂಚಿಕೆಯನ್ನು ಮುಂದಿನ ತಿಂಗಳ ತಾ 2 ಗಾಂಧಿ ಜಯಂತಿಯಂದು ಉದ್ಘಾಟಿಸಲಾಗುವುದು. ಈ ತಿಂಗಳ ತಾ 25ರ ತನಕ ಲೇಖನಗಳನ್ನು ಸ್ವೀಕರಿಸಲಾಗುವುದೆಂದು ಸಂಪಾದಕರು ಬರೆಯುತ್ತಾರೆ.

**ಕುಂಬಳೆ—** ಇಲ್ಲಿಯ ಆಸ್ಪತ್ರೆಯ ಸಮಿತಿ ಸಭೆಯು ತಾ 8ರಲ್ಲು ಶ್ರೀ ಐ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಆಸ್ಪತ್ರೆಗೆ ಕಾರ್ಯಕ್ಕಾಗಿ ಬಾವಿಯೊಂದನ್ನು ನಿರ್ಮಿಸುವರೆ ಜಿಲ್ಲಾ ಕಲೆಕ್ಟರರೊಡನೆ ಕೇಳಿಕೊಳ್ಳಬೇಕೆಂದು ನಿರ್ಣಯವಾಯಿತು.

**ಕಾಸರಗೋಡು—** ಈ ತಾಲೂಕಿನ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಕಾರ್ಯಕಾರೀ ಸಮಿತಿ ಸಭೆಯು ತಾ 7ರಲ್ಲು ಶ್ರೀ ಪಿ. ಶಿವರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿ, ಅಧ್ಯಾಪಕರ ಸಂಕಷ್ಟಗಳ ಕುರಿತು ಪರಿಶೀಲಿಸಲಾಯಿತು.

**ಹಳುವಳ್ಳಿ—** ಇದೇ ತಾ. 10ರಲ್ಲು ಸ್ಥಳೀಯ ಶಾಲಾ ಯಕ್ಷಗಾನ ಸಂಘದ ವತಿಯಿಂದ ಶ್ರೀಗಳಾದ ಶೀನಪ್ಪ ಹೆಗ್ಡೆ, ತಿಮ್ಮಪ್ಪ ನಾಯ್ಕ, ಮಹಾಬಲ ಶೆಟ್ಟಿ, ರಾಜೀವ ಶೆಟ್ಟಿ ಮೊದಲಾದ ನುರಿತ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ 'ಶ್ರೀಕೃಷ್ಣ ದೌತ್ಯ' ಅಂಗದ ಸಂಧಾನ ಮತ್ತು ಕರ್ಣಾರ್ಜುನರ ಕಾಳಗ, ವೆಂಬ ಪ್ರಸಂಗಗಳು ಜರಗಿದವು.

**ಕೊಡಿಯಾಲ—** ತಾ. 7ರಲ್ಲು ಬೆಳಗ್ಗೆ ಕೊಡಿಯಾಲ ಜೋಡ್ಯು ಎಲಿಮೆಂಟರಿ ಶಾಲೆಯ ಶಂಕುಸ್ಥಾಪನೆಯನ್ನು ಕೊಡಿಯಾಲ ಗ್ರಾಮ ಪಟೇಲ್ ಶ್ರೀ ಎಮ್. ಶುಕ್ರಪ್ಪ ರೈಗಳು ನೆರವೇರಿಸಿದರು. ಶ್ರೀಗಳಾದ ಬಿ. ಬಾಲಕೃಷ್ಣ ರೈ, ಬಿ. ರಾಮ ಶೈ, ರಾಮಚಂದ್ರ ಗೌಡ, ಸಂಗೀತ ಮಾಸ್ಟರ್ ವ್ಯಾಸಾಚಾರ್ಯ ಮೊದಲಾದವರು ಮಾತನಾಡುತ್ತಾ ಶಾಲೆಗೆ ಶುಭವನ್ನು ಕೋರಿದರು. ಶಾಲಾ ಸಮಿತಿ ಅಧ್ಯಕ್ಷ ಶ್ರೀ ಬಿ. ಬಾಲಕೃಷ್ಣ ರೈಗಳು ಧನ್ಯವಾದಗಳನ್ನರ್ಪಿಸಿದರು.

**ಉಜ್ರೆ ಬೆಳಾಲು—** ಸ್ಥಳೀಯ ಶ್ರೀ ಸರಸ್ವತಿ ಬುನಾದಿ ಶಾಲೆಯಲ್ಲಿ ಕಳೆದ ತಾ 31ರಲ್ಲು ದಿ| ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಪುಣ್ಯತಿಥಿಯು ಬೆಳಾಲು ಪಟೇಲ್ ಶ್ರೀ ಬಿ. ನಮಿರಾಜ ಕೊಟ್ಟಾರಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ದಿವಂಗತ ಹೆಗ್ಡೆಯವರ ಭಾವಚಿತ್ರವನ್ನು ಅನಾವರಣಮಾಡಿದರು. ಶ್ರೀಗಳಾದ ಎಚ್. ಎಸ್. ತೋಳ್ಪಿಲ್ಲಾಯ, ಕೆ. ಮೋಹನ್ ನಾಯರ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಗೋಪಾಲಕೃಷ್ಣ ಗೊಲ್ಲರು ಧನ್ಯವಾದವಿತ್ತರು.

## ಮದರಾಸು

**ಯಕ್ಷಗಾನ ಕೂಟ—** ತಾ 2.9.56 ರಲ್ಲಿ ಸರ್. ಯಂ. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲು ಭವನದಲ್ಲಿ ಮದ್ರಾಸ್ ಕರ್ನಾಟಕ ಸಂಘದ ಆಶ್ರಯದಲ್ಲಿ "ಶ್ರೀ ಕೃಷ್ಣ ಸಾಧ್ವಾಸ" ಎಂಬ ಯಕ್ಷಗಾನ ಕೂಟವು ಜರಗಿತು. ಈ ಕಾರ್ಯಕ್ರಮದಲ್ಲಿ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ಶ್ರೀ ಶ್ರೀನಿ ಗೋಪಾಲಕೃಷ್ಣ ಭಟ್ಟರು, ಶ್ರೀ ಬೆಳಂಜೆ ಮೈಂದಪ್ಪ ರೈಗಳು ಪ್ರೊಫೆಸರ್ ಯಂ. ಆರ್. ಶಾಸ್ತ್ರಿಗಳು, ಶ್ರೀ ಯಂ. ಮರಿಯಪ್ಪ ಭಟ್ಟರು, ಶ್ರೀ ಪಿ. ವೆಂಕಟಸುಬ್ಬರಾಯರು, ಶ್ರೀ. ಯನ್. ಪಿ. ಮೂರ್ತಿಗಳು ಭಾಗವಹಿಸಿದ್ದರು. ಭೀಮನ ಪಾತ್ರಧಾರಿಗಳಾದ ಶ್ರೀ ಶ್ರೀನಿಯವರ ಮತ್ತು ವ್ಯಾಸನಿಯ ಪಾತ್ರ ವಹಿಸಿದ ಶ್ರೀ ಯಂ. ಆರ್. ಶಾಸ್ತ್ರಿಗಳ ಕಲಾಕೌಶಲ್ಯವೂ, ಶ್ರೀ ಮೈಂದಪ್ಪ ರೈಗಳ ಹಾಡುಗಾರಿಕೆ ಮತ್ತು ಯನ್. ಪಿ. ಮೂರ್ತಿಗಳ ಮೃದಂಗ ವಾದನವು ಕಿಕ್ಕಿರಿದ ಜನಸ್ತೋಮದ ಮೆಚ್ಚುಗೆ ಪಡೆಯಿತು. ಮದ್ರಾಸ್ ನಗರದಲ್ಲಿ ಮೊದಲನೆಯ ಬಾರಿ ಏರ್ಪಡಿಸಲ್ಪಟ್ಟ ಈ ಕಾರ್ಯಕ್ರಮವು ಯಶಸ್ವಿಯಾಗಿ ಜನಪ್ರಿಯವಾಗಿ ಮುಕ್ತಾಯವಾಯಿತಲ್ಲದೆ ಇನ್ನೂ ಇಂತಹ ಅತ್ಯುತ್ತಮ ಕಾರ್ಯಕ್ರಮಗಳಿಗಾಗಿ ಇಲ್ಲಿಯ ಕನ್ನಡಿಗರು ಹಾತೊರೆಯುವಂತಾಯಿತು.

**ಹರಿಕಥೆ—** ತಾ 4-9-55ರಲ್ಲಿ ಶ್ರೀ ದಿನಕರರಾವ್‌ರವರ ಸ್ಮಾರಕ ಭವನದಲ್ಲಿ ಹರಿದಾಸ ಶ್ರೀ ಶ್ರೀನಿಗೋಪಾಲ ಕೃಷ್ಣ ಭಟ್ಟರಿಂದ "ರಾಮಾಂಜನೇಯ" ಎಂಬ ಹರಿಕಥೆಯು ನಡೆಯಿತು. ಮದ್ರಾಸಿನ ಅಶ್ಯ ಕನ್ನಡಿಗರು ಈ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಶ್ರೀ ಶ್ರೀನಿಯವರ ಪ್ರಾವೀಣ್ಯತೆಯನ್ನು ಎಲ್ಲರೂ ಕೊಂಡಾಡಿದರು.

---

ನಿಂದೆಯಿಂದ ಆಚೆಗೆ ಸಾಗುವುದಕ್ಕೆ ಅನುಕೂಲವಾದ ಸೇತುವೆಯೆಂದರೆ ಇಡೀ ರಾತ್ರಿಯ ತುಂಬು ನಿದ್ರೆ!

—ಜೇಕನ್.

೦೦

ನಾವು ಸಂತೋಷ ಪೂರ್ವಕ ಕಲಿತುದನ್ನು ಎಂದಿಗೂ ಮರೆಯುವಂತಿಲ್ಲ.


## ನಾನಾ ಬಗೆಯ ಪುಸ್ತಕಗಳು

| | | | |
|---|---|---|---|
| 1 | ಸ್ವತಂತ್ರ ಜೀವನೋಪಾಯ | 0 | 4 |
| 2 | ಸಂಶಯ ಪಿಶಾಚ | 0 | 10 |
| 3 | ನಾಡ ಕತೆಗಳು | 0 | 8 |
| 4 | ಕುಶಲವ | 0 | 8 |
| 5 | ಕಾವ್ಯ ಸಾಮ್ರಾಜ್ಯ | 1 | 8 |
| 6 | ಮಧುವನ | 3 | 0 |
| 7 | ಮುಂದಿನ ದೇವರು | 0 | 4 |
| 8 | ವ್ಯಭಿಚಾರಿಣಿ ಯಾರು | 1 | 0 |
| 9 | ಹೆಂಡ್ತಿ ಗಂಡನಾದರೆ | 0 | 4 |
| 10 | ಪುರುಷ ವಧು | 0 | 4 |
| 11 | ಸನ್ಯಾಸಿಯ ಸೋಗಿನಲ್ಲಿ | 0 | 12 |
| 12 | ನಂದಾದೀಪ | 0 | 14 |
| 13 | ದೇಶಭಕ್ತ | 1 | 4 |
| 14 | ಪ್ರೇಮ ವಿಜಯ | 1 | 0 |
| 15 | ರಂಗಭೂಮಿ | 0 | 10 |
| 16 | ಸೇವಾಪಥ | 0 | 8 |
| 17 | ನಾರೀ ಹೃದಯ | 1 | 8 |
| 18 | ಭಾರತೀಯ ಕತೆಗಳು | 1 | 12 |
| 19 | ಪ್ರಕಾಶ | 2 | 8 |
| 20 | ಮೂರು ಪ್ರಹಸನಗಳು | 1 | 4 |
| 21 | ನಗೆ ನೋಟಗಳು | 1 | 4 |
| 22 | ಅನ್ನದೇವರು ಮತ್ತಿತರ ಕತೆಗಳು | 1 | 0 |
| 23 | ಭಾರತದಲ್ಲಿ ಜಾತಿಭೇದ | 1 | 0 |
| 24 | ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು | 0 | 12 |
| 25 | ಆಕಾಶ ಗಂಗೆ | 2 | 8 |
| 26 | ಸ್ವಾತಂತ್ರ್ಯವೀರ ಸಾವರಕರರು | 1 | 4 |
| 27 | ಜೀವನ ಸಂಗ್ರಾಮ | 1 | 8 |
| 28 | ಕದಂಬ | 1 | 4 |
| 29 | ಕವಿತಾಕಾಮಿನಿ | 2 | 0 |
| 30 | ಸ್ವರಾಜ್ಯ ವಿಜಯ | 0 | 8 |
| 31 | ಸಪ್ತಸಾಗರ | 0 | 12 |
| 32 | ಜವಿನಾಸ್ತಾರ | 1 | 8 |
| 33 | ಬಾಳಿನ ಬೆಡಗು | 1 | 0 |
| 34 | ಲೋಪಾಮುದ್ರೆ | 1 | 0 |
| 35 | ಚಿಗುರು | 0 | 10 |
| 36 | ಸಣ್ಣ ಕಥೆಗಳು | 0 | 10 |
| 37 | ಎಲ್ಲರೂ ನಗಬಹುದು | 0 | 10 |
| 38 | ಧರ್ಮ ಸಂಕಟ | 0 | 6 |

ವಿವರವಾದ ಕೆಟಲಾಗಿಗೆಬರೆಯಿರಿ
ನವಭಾರತ ಬುಕ್ ಡಿಪೊ, ಉಡುಪಿ.
ಅಥವಾ ಕಿರಿಯರ ಪ್ರಪಂಚ, ಉಡುಪಿ.

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೋಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.



ಮಹಿಳಾ ಸಾಹಿತ್ಯ! ನವೀನ ಪುಸ್ತಕ!
ಕುಮಾರಿ ಸಿ. ಯಶೋದಾ ಅವರು ಬರೆದ
# ಬಾಳಿನ ಬೆಳೆ
ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!
ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೋ, ಉಡುಪಿ.

## ಮಂಗಳೂರು

**ಜಿಲ್ಲಾ ಶಿಕ್ಷಣ ಪರಿಷತ್ತು**—ದ. ಕ. ಜಿಲ್ಲಾ ಶಿಕ್ಷಕರ ಸಂಘದ ಕೌನ್ಸಿಲಿನ ಸಭೆಯು ತಾ. 2 ರಲ್ಲಿ ಸೇರಿ ಜಿಲ್ಲಾ ಶಿಕ್ಷಣ ಪರಿಷತ್ತನ್ನು ಮುಂದಿನ ದಶಂಬರ ತಾ. 29 ಮತ್ತು 30ರಲ್ಲಿ ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಜರಗಿಸಲು ನಿರ್ಧಾರವಾಯಿತು. ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ ಉಪಾಧ್ಯಾಯರ ಪರವಾಗಿ ಆರಿಸಲ್ಪಟ್ಟ ಶ್ರೀ ಟಿ. ಪಿ. ಶ್ರೀನಿವಾಸ ವರದನ್, ಅವರನ್ನು ಅಭಿನಂದಿಸಲಾಯಿತು.

**ಜಿಲ್ಲಾ ಬೋರ್ಡು ಸಭೆಯು**—ತಾ. 4ರಲ್ಲಿ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳ್ತಂಗಡಿಯ ಡಾ. ಬಿ. ನಾರಾಯಣ ರಾಯರ ಸವಸ್ಯತನವನ್ನು ಊರ್ಜಿತಗೊಳಿಸಲಾಯಿತು. ಈ ತಿಂಗಳ ತಾ. ೨೦ರಲ್ಲಿ ಮಂಗಳೂರಿಗೆ ಬರಲಿರುವ ಮದ್ರಾಸ್ ಗವರ್ನರ್ ಶ್ರೀ ಶ್ರೀ ಪ್ರಕಾಶರಿಗೆ ಮಂಗಳೂರು ನಗರ ಸಭೆಯೊಂದಿಗೆ ಜಂಟೀ ಸ್ವಾಗತವೀಯುವ ನಿರ್ಣಯವಾಯಿತು. ಬೋರ್ಡು ಸಿಬಂಧಿಯವರ ಸಂಘದವರು ಸರಕಾರ ನೌಕರರ ಹಾಗೂ ಇತರ ಸವಲತ್ತುಗಳು ಸಿಗಬೇಕೆಂದು ಕೇಳಿಕೊಂಡ ಗೊತ್ತುವಳಿಗಳನ್ನು ಸರಕಾರಕ್ಕೆ ಶಿಫಾರಸು ಮಾಡಲಾಯಿತು. ವೇಣೂರಿನಲ್ಲಿ ಈಚೆಗೆ ತೆರೆಯಲಾದ ಹೈಸ್ಕೂಲಿಗೆ ಬೇಕಾಗುವ ಉಪಾಧ್ಯಾಯರುಗಳ ನೇಮಕ, ಗ್ರಾಮಸ್ಥರು ಕಟ್ಟಡ ಇತ್ಯಾದಿ ಉಪಕರಣಗಳನ್ನು ಒದಗಿಸಿಕೊಟ್ಟಲ್ಲಿ ಹೆಬ್ರಿಯಲ್ಲಿ ಹೈಸ್ಕೂಲೊಂದನ್ನು ತೆರೆಯುವುದು ಇತ್ಯಾದಿ ವಿಷಯಗಳಲ್ಲಿ ಠರಾವುಗಳಾದುವು

**ಜಿಲ್ಲಾ ಅಭಿವೃದ್ಧಿ ಬೋರ್ಡಿನ ಕಾರ್ಯಕಾರೀ ಸಮಿತಿ ಸಭೆಯು**—ತಾ. 3ರಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ ಮಲ್ಪೆಯನ್ನು ದೊಡ್ಡ ಬಂದರವನ್ನಾಗಿ ಅಭಿವೃದ್ಧಿಗೊಳಿಸುವ ವಿಚಾರದಲ್ಲಿ ಪರಿಶೀಲನೆ ನಡೆಸಬೇಕೆಂದು ಕೇಂದ್ರ ಸರಕಾರವನ್ನು ವಿನಂತಿಸುವ ನಿರ್ಣಯ ಸ್ವೀಕೃತವಾಯಿತು. ಮಂಗಳೂರು ಬಂದರವನ್ನು ಒಂದು ಸರ್ವಕಾಲೀನ ಬಂದರವನ್ನಾಗಿ ಅಭಿವೃದ್ಧಿಗೊಳಿಸುವ ಕಾರ್ಯಕ್ರಮವನ್ನು ಬೇಗನೆ ಕೈಕೊಳ್ಳಬೇಕೆಂದು ಮದ್ರಾಸು, ಮೈಸೂರು ಮತ್ತು ಕೇಂದ್ರ ಸರಕಾರಗಳನ್ನು ವಿನಂತಿಸುವ ಮತ್ತು ಸರ್ವಕಾಲೀನ ಬಂದರವಾಗಿ ಅಭಿವೃದ್ಧಿಗೊಳಿಸುವ ಕಾರ್ಯದ ಪೂರ್ವಸಿದ್ಧತೆಯ ಯೋಜನೆಗಾಗಿ ಮಂಗಳೂರು ಪೋರ್ಟು ಟ್ರಸ್ಟ್ ಬೋರ್ಡಿನವರು ರೂ. 50,000ವನ್ನು ಪ್ರತ್ಯೇಕವಾಗಿ ತೆಗೆದಿರಿಸಿರುವ ವಿಚಾರವನ್ನು ಈ ಸರಕಾರಗಳ ಗಮನಕ್ಕೆ ತರುವ ನಿರ್ಣಯಗಳಾದುವು. ಉಡುಪಿಯ ವಿದ್ಯುದಾಗಾರದ ಜನರೇಟರುಗಳು ಮತ್ತು ಇಂಜಿನುಗಳನ್ನು ಕಿತ್ತು ಹೊರಸಾಗಿಸುವ ಮದ್ರಾಸ್ ಸರಕಾರದ ಆಜ್ಞೆಯಿಂದಾಗಿ ಈ ಸಮಿತಿಗೆ ತುಂಬಾ ಕಳವಳ ಉಂಟಾಗಿದೆ. ಈ ಜಿಲ್ಲೆಗೆ ಬೇಕಾಗುವ ಸಲಕರಣೆಗಳನ್ನು ಒದಗಿಸಿದ ಬಳಿಕವೇ ಅನಗತ್ಯ ಅಧಿಕವೆಂದು ಕಂಡುಬರುವಂತಹ ಸಲಕರಣೆಗಳನ್ನು ಜಿಲ್ಲೆಯಿಂದ ಹೊರಗೆ ಸಾಗಿಸಬೇಕು ಎಂದು ಸಮಿತಿಯು ಅಭಿಪ್ರಾಯ ಸೂಚಿಸಲಾಯಿತು. ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡ ಶ್ರೀ ಕಡಿದಾಳ ಮಂಜಪ್ಪನವರನ್ನು ಅಭಿನಂದಿಸಿ ಅವರಿಗೆ ಯಶಸ್ಸನ್ನು ಕೋರಲಾಯಿತು.

ಜಿಲ್ಲಾ ಅಭಿವೃದ್ಧಿ ಬೋರ್ಡಿನ ಸ್ಥಳೀಯ ಸಂಸ್ಥೆಗಳ ಉಪಸಮಿತಿಯ ಸಭೆಯು ಕಳೆದ ತಾ. 21ರಲ್ಲಿ ಡಾ. ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ಮಾಡಿದ ವರದಿಯನ್ನು ಮಂಜೂರು ಮಾಡಲಾಯಿತು. ಅಂತೆಯೇ ಕಳೆದ ತಾ. 18ರಲ್ಲಿ ಶ್ರೀ ಎಮ್. ಎಸ್. ವಿಶ್ವಾಂಬರ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಶಿಕ್ಷಣ ಸಮಿತಿಯ ಸೂಚನೆಗಳನ್ನು ಅಂಗೀಕರಿಸಲಾಯಿತು. ಆರೋಗ್ಯ ಮತ್ತು ವೈದ್ಯಕೀಯ ಸಲಹಾ ಸಮಿತಿಗಳು ಮಾಡಿದ ಶಿಫಾರಸುಗಳನ್ನು ಸ್ವೀಕರಿಸಲಾಯಿತು.

**ಗಣೇಶೋತ್ಸವ**—ಸ್ಥಳೀಯ ಭಜರಂಗ ವ್ಯಾಯಾಮ ಶಾಲೆಯಲ್ಲಿ ತಾ. 8ರಲ್ಲಿ ಬೆಳಗ್ಗೆ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ಸೆಶ್ಶನ್ಸ್ ಜಡ್ಜರಾದ ಶ್ರೀ ಎನ್. ರಾಧಾಕೃಷ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಗಣೇಶ ಪ್ರತಿಮೆಯ ಪ್ರತಿಷ್ಠಾಪನಾ ಕಾರ್ಯ ಜರಗಿತು. ಧ್ವಜಾರೋಹಣ ಹಾಗೂ ಪ್ರಾರ್ಥನೆಗಳಾದ ಬಳಿಕ ಶ್ರೀ ಪ್ರಭಾಕರ ಘಾಟೆಯವರು ಸಂದೇಶಗಳನ್ನೋದಿದರು. ಸಭಾಧ್ಯಕ್ಷರು ದಕ್ಷಿಣ ಭಾರತದ ಕೆಲವೆಡೆಗಳಲ್ಲಿ ಇಂದು ನಾಸ್ತಿಕ ವಾದವು ಬೆಳೆಯುತ್ತಿರುವಾಗ, ಮಂಗಳೂರಿನ ನಾಗರಿಕರು ಗಣೇಶೋತ್ಸವವನ್ನು ಸಾರ್ವಜನಿಕ ಮಟ್ಟದಲ್ಲಿ ಆಚರಿಸಿ ಜನರಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡುವುದು ಸ್ತುತ್ಯವೆಂದರು.

**ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ**—ತಾ. 8ರಲ್ಲಿ ಪೂರ್ವಾಹ್ನ ಶ್ರೀ ಕೆ. ಶಿವರಾಮ ಕಾರಂತರ ಸಮಕ್ಷಮದಲ್ಲಿ ಗಣೇಶ ಪ್ರತಿಷ್ಠಾಪನೆಯಾಯಿತು. ಡಾ. ಶಿವರಾಮನ್, ಅವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಕಾರಂತರು ಗಣೇಶ ಹಬ್ಬದ ಹಿನ್ನೆಲೆಯೇನೆಂಬುದನ್ನು ವಿವರಿಸಿ ಭಾಷಣವಿತ್ತರು. ಸಂಜೆ ಶ್ರೀಮತಿ ಭಾನುಮತಿ ರಾಯರ ಹಿರಿತನದಲ್ಲಿ ನೃತ್ಯ, ಸಂಗೀತ ನಾಟಕಾದಿ ಜನಮನರಂಜನ ಕಾರ್ಯಕ್ರಮಗಳಾದುವು.

**ಮಹಾಸಭೆ**—ಭಾರತ ಸ್ಕೌಟ್ಸ್ ಮತ್ತು ಗೈಡ್ಸ್—ದ. ಕ. ಜಿಲ್ಲಾ ಸಂಘದ ವರ್ಷಾವಧಿ ಸಭೆಯು ತಾ. 9ರಲ್ಲಿ ಸಂಜೆ ಸೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಜಿಲ್ಲಾ ಸ್ಕೌಟ್ ಕಮಿಶನರ್ ಡಾ. ಕೆ. ಗಿರಿಧರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಡಿ. ಫಿಲಿಪ್ಸ್ ಮತ್ತು ಕೆ. ದೇವದಾಸ ನಾಯ್ಕರು ಅನುಕ್ರಮವಾಗಿ ವರದಿ ಮತ್ತು ಲೆಖ್ಖಪತ್ರಗಳನ್ನೊಪ್ಪಿಸಿದರು. ಅಧ್ಯಕ್ಷರು ಶ್ರೀಗಳಾದ ಬಿ. ಎಚ್. ಭಾಸ್ಕರ ಪೈ ಮತ್ತು ಎಮ್. ಬಾಬು ಸೆಟ್ಟಿಗೆ ಸಹಾಯಕ ಜಿಲ್ಲಾ ಕಮಿಶನರರ ವಾರಂಟುಗಳನ್ನು ಕೊಟ್ಟರು. ಬಳಿಕ ಹೊಸ ವರ್ಷದ ಕಾರ್ಯಕಾರಿ ಸಮಿತಿಗೆ ಡಾ. ಕೆ. ಕೆ. ಹೆಗ್ಡೆ (ಅಧ್ಯಕ್ಷ) ಶ್ರೀ. ಕೆ. ಸೂರ್ಯನಾರಾಯಣ ಅಡಿಗ ಮತ್ತು ಶ್ರೀಮತಿ ಶಾಂತೇರಿ ಜಿ. ಪ್ರಭು (ಉಪಾಧ್ಯಕ್ಷರು). ಶ್ರೀ. ಬಿ. ಡಿ. ಫಿಲಿಪ್ಸ್ (ಕಾರ್ಯದರ್ಶಿ), ಡಾ. ಪಿ. ನಾರಾಯಣ ರಾವ್ (ಜತೆ ಕಾರ್ಯದರ್ಶಿ) ಶ್ರೀ ಕೆ ದೇವದಾಸ ನಾಯಕ್ (ಖಜಾನ್ಜಿ), ಅಧಿಕಾರಿಗಳಾಗಿ ಆರಿಸಲ್ಪಟ್ಟರು.

**ಯಕ್ಷಗಾನ**—ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಸೆಕೆಂಡರಿ ಗ್ರೇಡ್ ವಿದ್ಯಾರ್ಥಿ ಅಧ್ಯಾಪಕರ ಯೂನಿಯನ್ನಿನ ಆಶ್ರಯದಲ್ಲಿ ತಾ. 5ರಲ್ಲಿ ಶ್ರೀ ಪಿ. ಎಸ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ 'ಕರ್ಣಾವಸಾನ' ಎಂಬ ಯಕ್ಷಗಾನ ಕೂಟ ಜರಗಿತು.

**ಭರತನಾಟ್ಯ ಪ್ರದರ್ಶನ**—ತಾ. 2ರಲ್ಲಿ ಲಲಿತಕಲಾ ಮಂಡಳಿಯ ಆಶ್ರಯದಲ್ಲಿ ಡಾನ್‌ಬೋಸ್ಕೊ ನಾಟಕ ಮಂದಿರದಲ್ಲಿ ಶ್ರೀಮತಿ ಕಮಲಾ ಲಕ್ಷ್ಮಣ್ ಮತ್ತವರ ಸಹೋದರಿ ಕುಮಾರಿ ರಾಧಾರವರು ಭರತನಾಟ್ಯ ಪ್ರದರ್ಶನವಿತ್ತರು.

**ಆನೆಕಾಲುರೋಗ ನಿವಾರಣಾ ಕಾರ್ಯಾರಂಭ**—ಮಂಗಳೂರು ನಗರ ಕ್ಷೇತ್ರದಲ್ಲಿ ಆನೆಕಾಲು ರೋಗ ನಿವಾರಣೆಗಾಗಿ 'ಹೆಟ್ರಜಾನ್' ಮಾತ್ರೆಗಳನ್ನು ಹಂಚಲು ಪ್ರಾರಂಭವಾಗಿದೆ. ಈ ಮಾತ್ರೆಯನ್ನು ಎಡೆಬಿಡದೆ 5 ದಿನಗಳ ವರೆಗೆ ದಿನಾಲೂ ಎರಡು ಮಾತ್ರೆಗಳಂತೆ ಪ್ರಾಯಸ್ಥರು ಸೇವಿಸಬೇಕು. ಈ ಮಾತ್ರೆಯನ್ನು ಸೇವಿಸುವುದರಿಂದ ನಮ್ಮ ರಕ್ತದಲ್ಲಿರುವ ಆನೆಕಾಲು ಹಬ್ಬುವ 'ಮೈಕ್ರೋಫೈಲೇರಿಯಾ' ಕ್ರಿಮಿಗಳು ಸಂಪೂರ್ಣ ನಾಶವಾಗುವುವು. ಈ ಕ್ರಿಮಿಗಳನ್ನು ನಮ್ಮ ರಕ್ತದಿಂದ ನಾಶಪಡಿಸಿದರೆ ಸೊಳ್ಳೆಗಳ ಕಡಿತದ ಮೂಲಕ ಒಬ್ಬರಿಂದ ಇನ್ನೊಬ್ಬರಿಗೆ ಈ ಭಯಂಕರ ರೋಗವು ಹಬ್ಬದಂತೆ ಮಾಡಲು ಸಾಧ್ಯವಿದೆ. ಆದುದರಿಂದ ಸರ್ವರೂ ಈ ಮಾತ್ರೆಗಳನ್ನು ಸೇವಿಸಿ ಮಂಗಳೂರಲ್ಲಿ ಆನೆಕಾಲು ರೋಗವಿಲ್ಲವೆನ್ನುವಂತೆ ಮಾಡಬೇಕಾದು ಪ್ರತಿಯೋರ್ವನ ಆದ್ಯ ಕರ್ತವ್ಯವಿದೆ.

---

(೪ನೇ ಪುಟದಿಂದ)

ಈ ಪರಿಯ ವೈಭವದಿಂದ ಅಣ್ಣಯ್ಯ ಸಪತ್ನೀಕನೂ, ಪರಿವಾರ ಪರಿವೇಷ್ಟಿತನೂ ಆಗಿ ಗದ್ದೆಯಂಚಿಗೆ ತೆರಳಿ;

ಶ್ರೀ ಗುರುವನಡಿಗೆರಗುತ ಮಂಗಳ
ವಾಗ್ಯಲಂಕಾರವಗೈದು
ಹೂಗು ಸುಗಂಧವ ತಾ ಕೊಂಡೈದು ಪ
ರಾಗದಿರವಿಯನು ಪೂಜಿಸುತೊಲಿದು
ಬೇಗದಿ ಬತ್ತದ ಕದಿರನೆಳೆದು
ಬಾಗಿ ಪೂಜಿಸಿ ದೇವರ ಧರೆಯೊಳ
ಗಾಗಿ ಧರಿಸುತ್ತ ಬರಲಂದು
ಬರುತಲಿ ಕ್ಷೀರವ ಪ್ರೋಕ್ಷಿಸಿ ಅರಳನು
ಸುರಿಯುತ ದುಂದುಭಿ ಘೋಷವಲಿ
ತರತರದಿಂದಲಿ ಲಕ್ಷ್ಮಿ ಸುಮಂಗಲೆ
ಬರಲಿದಿರ್ಗೊಳ್ಳೆನ್ನುತಲಿ
ಹರಿಂಪರುಷೋತ್ತಮ ಶ್ರೀ ಲಕ್ಷ್ಮೀನಾಥನೆ
ಸ್ಮರಿಸುತಂಗಳದಲಿ ತೊಳಸಿ ಪ್ರದಕ್ಷಿಣೆ
ಮೆರಸಿ ಚಾವಡಿಗೆ ಬರಲಂದು
ಒಳಗಯ್ಯುತ ಬಲಗಾಲನು ಹೊಸ್ತಿಲ
ಒಳಗಿಡುತಲಿರವೆ ರೂಪಳನು
ಚೆಲುವಳುಕಲು ಚೆಲುವಹ ಕದಿರನು
ಕುಲದೇವನ ಮುಂದಿರಿಸುತಿಹ
ಕಳಕಳದಿಂದಲಿ ಹೊಳೆವ ಮಣಿ
ಮೇಲೊಳಲಿಟ್ಟು ಕೊಳ್ಳುರುವ ರವಾಸನೆ
ನಲವಿಂದ ಸಾಷ್ಟಾಂಗವೆರಗಿದ॥

ಶಾಸ್ತ್ರ ಪದ್ಧತಿಯಂತೆ ಪೂಜಿಸಿ, ಹೆಗಲೇರಿಸಿ ಬಲಗಾಲ ಮುಂದಿರಿಸಿ ಕದಿರನ್ನು ಹೆಮೇಲಿಟ್ಟು ಹೊತ್ತು ತಂದು ತೊಳಸಿ ಪ್ರದಕ್ಷಿಣೆ ಹಾಕಿ ಅಣ್ಣಯ್ಯ ಮನೆ ತುಂಬುವಾಗ, ಸುಮಂಗಲಿ ತಂಗಿಯಂದಿರು

ಭಾಗ್ಯದಲಕ್ಷ್ಮಿ ಬಪ್ಪಾಗ ಬಾಗಿಲಲಿ
ಕಾದಿದ್ದೆ
ಸೂಗು ಅಕ್ಷತೆಯ ಹರಿವಾಣ ಹಿಡಿದಿದ್ದೆ
ಹೊಲಿಬಾರೆ ನಮ್ಮ ಮನೆ ತುಂಬಿ ॥
ಕದಿರಮ್ಮ ಬಪ್ಪಾಗ ಎದುರ್ಗೊಂಬ
ಲಾನಿದ್ದೆ
ಗರತಿಯ ಪುಣ್ಯಗಳಸಿದ್ದೆ, ಮಹಾಲಕ್ಷ್ಮಿ
ಹೊಲಿಬಾರೆ ನಮ್ಮ ಮನೆ ತುಂಬಿ ॥
ಹೋವಾಗ ಹೆಡಗ್ಗೇಲಿ ಬಪ್ಪಾಗ
ದುಡಿಗೇಲಿ
ಮದುಮಗಳಾಗಿ ತಲೆಬಾಗಿ ಸಿರಿದೇವಿ
ಹೊಲಿಬಾರೆ ನಮ್ಮ ಮನೆತುಂಬಿ ॥
ಮನೆ ತುಂಬಿ ಇಂತು ಹೊಲಿ ಬಾರೆಂದು
ಸ್ವಾಗತಿಸಿದ ಸುಮಂಗಲಿಯರ ಎದೆಯಾಸೆ ಬಯಲಾಗುವುದಿದೆಯೇ?
ಮಾಳಿಗೆ ತುಂಬಿತ್ತು ಚಾವಡಿ ತಲ್ಲಣಿಸಿತ್ತು
ಪಡಸಾಲೆ ಕಂಭ ಅಲುಗಿತ್ತು । ನಡುಗಿತ್ತು
ಕದಿರಮ್ಮ ನಮ್ಮ ಮನೆ ತುಂಬಿ ॥
ಇಂದಿರೆ ಮಹಾದೇವಿ ಚಂದದಿ ಮನಪಾರ್ತಿ
ಆಂದದಿ ಸಾಗಿ ಸಲುವಂತೆ । ಕುಂದಣ
ದಾರತಿಯ ಬೆಳಗ್ವಿರೆ ॥

ಹೀಗೆ ಆರತಿಯೆತ್ತಿ, ಹಾಡಿ ಹರಸಿ ಧನ್ಯರಾಗುತ್ತಾರೆ; ಬದುಕು ಹಸನಾಗುತ್ತದೆ; ಜೀವನ ರಸಮಯವಾಗುತ್ತದೆ. ಆ ರಸೋತ್ಕರ್ಷೆಯಲ್ಲಿ ಹಾಡಿದ ಇನಿದನಿಯ ಸೊಲ್ಲು ಚಿರಂತನ ಕಾವ್ಯವಾಗಿ ಉಳಿಯುತ್ತದೆ; ರಸಿಕರ ಹೃದಯವನ್ನು ಸೂರೆಗೊಳ್ಳುತ್ತದೆ.

— ಶ್ರೀ ಯಂ. ಬಿ. ಮರಕಿಣಿ.

["ಪುಸ್ತಕ ಪ್ರಪಂಚ"ದಿಂದ]

## ಬೊಂಬಾಯಿ

**ಮುಲ್ಕಿ ಉಲ್ಯ ಮೊಗವೀರ ವಿದ್ಯಾ ಪ್ರಚಾರ ಸಂಘ**—ಸಂಸ್ಥೆಯಲ್ಲಿ ವಿದ್ಯೆ ಪಡೆಯುವ ಬಡ ಮಕ್ಕಳ ಸಹಾಯಾರ್ಥವಾಗಿ ಉಡುಪಿ ತಾಲೂಕಿನ ಉದ್ಯಾವರ ಸದಿಯ ಸಾಹುಕಾರರು ರೂಪಾಯಿ 143।-ರ ಧನ ಸಹಾಯವಿತ್ತಿರುವರೆಂದು ಸಂಘದ ಗೌ। ಕಾರ್ಯದರ್ಶಿಗಳು ತಿಳಿಸುತ್ತಾರೆ.

**ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ**—ಇದರ 33ನೇ ವಾರ್ಷಿಕೋತ್ಸವವು ಮತ್ತು ಮೊಗವೀರ ಧರ್ಮಾರ್ಥ ಪ್ರೌಢ ರಾತ್ರಿ ಶಾಲೆಯ ಪಾರಿತೋಷಕ ವಿತರಣ ಸಮಾರಂಭವು ಕಳೆದ ತಾ. 20ರಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಶೇಟ್ ಭಗವತಿ ಪ್ರಸಾದ ಖೇತನರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ ಬಿ. ಎಸ್. ಸಾಲಿಯಾನರು ಸ್ವಾಗತಭಾಷಣ ಮಾಡಿದರು. ಜತೆಕಾರ್ಯದರ್ಶಿ ಶ್ರೀ ಉಮೇಶ ಎಸ್. ಬಂಗೇರರು ಸಂದೇಶವಾಚನ ಮಾಡಿದರು. ಶ್ರೀಮತಿ ಭಗವತಿಬಾಯಿ ಭಗವತಿಪ್ರಸಾದ ಖೇತನರು ಶಾಲಾವಿದ್ಯಾರ್ಥಿಗಳಿಗೂ, ಮಂಡಳಿಯ ಕೆಲಸಗಾರರಿಗೂ ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಸರ್ದಾರ್ ಮನಮೋಹನ ಸಿಂಘ ಬಿ. ಎಮ್. ಕೋಡಿಕಲ್, ಎಮ್. ಕೆ. ಅಮೀನ್, ಎಮ್. ಎಸ್. ಚಂದಾವರ್‌ಕಾರ್, ಜಿ ದುಗ್ಗಪ್ಪ ಸಾಹುಕಾರ್, ಕೆ. ಕೆ. ಸಾಲಿಯಾನ್, ಎಚ್. ಕೆ. ಎ. ಕುಂದರನ್, ಮತ್ತು ಡಾ. ಪಂಜಾಬಿಯವರು ಭಾಷಣವಿತ್ತರು. ಸಭಾಧ್ಯಕ್ಷರು ಮಂಡಳಿಯ ಬಹುಮುಖ ಸೇವೆಗಳನ್ನು ಶ್ಲಾಘಿಸಿ ಸಂಘಕ್ಕೆ ರೂ. 1001 ಮತ್ತು ಸಂಘದ ಕಟ್ಟಡ ನಿಧಿಗೆ ರೂ. 500 ದಾನ ಕೊಡುವುದಾಗಿ ವಾಗ್ದಾನವಿತ್ತರು. ಶ್ರೀಮತಿ ಭಗವತಿ ಬಾಯಿಯವರೂ ರೂ. 500ರ ಸಹಾಯ ಧನದ ಆಶ್ವಾಸನೆಯಿತ್ತರು. ಶ್ರೀ ನಾರಾಯಣ ಬಿ. ಬಂಗೇರರು ಧನ್ಯವಾದಗಳನ್ನಿತ್ತರು. ಬಳಿಕ ಸಾಮಾಜಿಕ ನಾಟಕಾಭಿನಯವಾಯಿತು

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ
# ಹಿರೋಶಿಮಾದಿಂದ ಜಿನೇವ
ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.
ಉತ್ತಮ ಕಾಗದ. ಬೆಲೆ: ರೂ. ೧—೮—೦.
ನವಯುಗ ಪ್ರೆಸ್, ಉಡುಪಿ.

## ಸಂಸ್ಕೃತಿಯ ದಿಗ್ದರ್ಶನ

(೩ನೇ ಪುಟದಿಂದ)

ಆಗುತ್ತಲೇ ಬಂದಿವೆ. ಇವೆಲ್ಲ ಧರ್ಮಗಳಿಗೂ ಆಶ್ರಯವಾದದ್ದು ಸಂಸ್ಕೃತಿಯೊಂದೇ! ಒಂದೇ ಪರ್ವತದಿಂದ ಹಲವು ನದಿಗಳು ಉಗಮಗೊಂಡು ಬೇರೆ ಬೇರೆ ಹೆಸರಿನಿಂದ ಚಲಿಸುವಂತೆ ಸಂಸ್ಕೃತಿಯಿಂದಲೂ ಕಾಲದ 'ಬದಲಾವಣೆಗೆ ಅಪೇಕ್ಷೆಯಿಂದಾಗುವಂತೆ ಬೇರೆ ಬೇರೆ ಧರ್ಮ—ಮತಗಳು ಉಗಮಗೊಂಡವು. ಹೀಗೆ ಭಾರತದಲ್ಲಿ ಉದಯಗೊಂಡ ಸತ್ಪಂಥಗಳಿಗೆಲ್ಲಾ ಭಾರತೀಯ ಸಂಸ್ಕೃತಿಯೇ ಉಗಮ ಸ್ಥಾನ. ಇವೆಲ್ಲವುಗಳ ಧ್ಯೇಯಗಳೂ ಭಾರತೀಯ ಸಂಸ್ಕೃತಿಯ ಆದರ್ಶ ಸಿದ್ಧಿಗಾಗಿಯೇ!

ಧರ್ಮ-ಮತಗಳ ಯಥಾರ್ಥ ವಿಚಾರ ಹೀಗಿರುವಾಗಲೂ ಹಲಕೆಲವು ಮತೀಯ ವಾದಿಗಳು ಎನಿಸಿದ ಜ್ಞಾನಲವದುರ್ವಿದಗ್ಧರು ಇನ್ನೊಂದು ಧರ್ಮ--ಮತದವರನ್ನು ದೂಷಿಸಿ— ದ್ವೇಷಿಸುವ ಸ್ವಧರ್ಮಾಭಿಮಾನದ ವ್ಯವಹಾರ ಹಿಂದಿನಿಂದಲೂ ಬಂದಿದೆ. ಇಂಥ ಅಸಹ್ಯ ವ್ಯವಹಾರದ ಘಟನೆಗಳು ಆಗಾಗ ನಡೆದದ್ದು ಕಂಡು ಬರುತ್ತಿದೆ. ಇದೆಂಥ ಹೇಯ ಕಾರ್ಯ? ಒಂದೇ ದೇಶೀಯರಾಗಿ – ಒಂದೇ ಸಂಸ್ಕೃತಿಯವರಾಗಿ ಇಂಥ ಕುತ್ಸಿತ ಭಾವನೆಗೆ ಎಡೆ ಕೊಡುವದು ಸರ್ವಥಾ ಯೋಗ್ಯವಲ್ಲ. ಧರ್ಮದ ವಿಷಯದಲ್ಲಿ ಉಂಟಾದ ಅಪಚಾರ— ಅಪಭ್ರಂಶಗಳ ಬಗ್ಗೆ ಆಗಾಗ್ಯೆ ಮತಸ್ಥಾಪಕರೆನ್ನಿಸಿದ ಆಚಾರ್ಯ ಶಂಕರ—ಮಧ್ವ—ರಾಮಾನುಜ ಮುಂತಾದ ಮಹಾತ್ಮರೂ—ರಾಮಕೃಷ್ಣ ಪರಮಹಂಸ— ಸ್ವಾಮಿ ವಿವೇಕಾನಂದ— ಯೋಗಿ ಅರವಿಂದ — ಇವರೆಲ್ಲರುಗಳೂ ಸರಿಯಾಗಿ ಸಂಸ್ಕೃತಿಯ ಮಾರ್ಗದರ್ಶನ ಮಾಡಿ ಪುನರುಜ್ಜೀವನಗೊಳಿಸಿದ್ದಾರೆ. ಗಾಂಧೀಜಿಯವರಂತೂ ಮತೀಯ ವಿಷಯದಲ್ಲಿ ಹೊಸ ದೃಷ್ಟಿಯನ್ನೇ ತೋರಿಸಿ ಪರಮತ ಸಹಿಷ್ಣುತೆಯ ಪಾಠ ಕಲಿಸಿದ್ದಾರೆ.

ಎಲ್ಲ ಧರ್ಮಗಳ ಮೂಲತತ್ವಗಳೂ ಒಂದೇ! ಹಲಕೆಲವು ಆಚಾರ—ವ್ಯವಹಾರಗಳ ದೃಷ್ಟಿಯಿಂದ ಬೇರೆಂದು ಕಾಣಿಸಿಕೊಂಡರೂ ಅವೆಲ್ಲವುಗಳ ತತ್ವವೂ ಮೂಲತಃ ಒಂದೇ ಆಗಿವೆ. ಧರ್ಮದ ಲಕ್ಷಣವನ್ನು ಹೀಗೆ ವಿವರಿಸಿದ್ದಾರೆ—

ಧೃತಿ ಕ್ಷಮಾ— ದಮೋಸ್ತೇಯಂ ಶೌಚ
ಮಿಂದ್ರಿಯ ನಿಗ್ರಹಃ।
ಹ್ರೀರ್ವಿದ್ಯಾ ಸತ್ಯಮಕ್ರೋಧೋ ದಶ
ಕಂ ಧರ್ಮಲಕ್ಷಣಂ।

ಧೈರ್ಯ—ಕ್ಷಮೆ—ಇಂದ್ರಿಯ ನಿಗ್ರಹ—ಹೆರವರ ಸೊತ್ತನ್ನು ಎತ್ತಿಹಾಕದಿರುವಿಕೆ—ಪವಿತ್ರತೆ— ಮನಃ ಸಂಯಮನ— ನಮ್ರವೃತ್ತಿ— ಸುವಿಚಾರ—ಸತ್ಯ—ಕೋಪರಾಹಿತ್ಯ—ಈ ಗುಣಗಳು ನಿರಾಡಂಬರವಾದ ರೀತಿಯಿಂದ ಜೀವನದಲ್ಲಿ ನೆಲೆಗೊಂಡರೆ ಅದೇಧರ್ಮ. ಹಿಂದುವಿರಲಿ! ಕ್ರೈಸ್ತನಿರಲಿ! ಮುಸ್ಲೀಮನಿರಲಿ! ತನ್ನ ಧರ್ಮದಲ್ಲಿ ಈ ಗುಣಗಳಿಗೆ ಅವಕಾಶವಿಲ್ಲೆಂದು ವಾದಿಸಲು ಸಾಧ್ಯವೇ?–ಸರ್ವಥಾ ಇಲ್ಲ. ಇಂದಿನ ಎಷ್ಟೋ ರಾಷ್ಟ್ರೀಯ ವಾದಿಗಳೂ ಸನಾತನ ಧರ್ಮವೆಂದೊಡನೆ ಅಪಹಾಸ್ಯಮಾಡುವವರಿದ್ದಾರೆ. ಆದರೆ ಇವರ ರಾಷ್ಟ್ರೀಯ ಧರ್ಮದಲ್ಲಿ ಈ ಗುಣಗಳಿಗೆ ಎಡೆಯಿಲ್ಲವೇ? ಈ ತತ್ವಗಳನ್ನು ಯಾವ ಧರ್ಮದವರಿಗೆ ಬಿಟ್ಟಿರಲು ಸಾಧ್ಯವಿದೆ? ಹೀಗೆ ಧರ್ಮದ ಸ್ವರೂಪವೆಲ್ಲಾ ಒಂದೇ ಇದ್ದು ಕೇವಲ ಹೆಸರಿನಿಂದ ಬೇರೆಯಾದ ಮಾತ್ರಕ್ಕೆ ನಮ್ಮ ಸಂಸ್ಕೃತಿ ಬೇರೆ ಎಂದು ಯಾವ ಭಾರತೀಯನಿಗೂ ಹೇಳುವ ಅಧಿಕಾರವಿರಲಾರದು.

"ಧರ್ಮಗಳೆಲ್ಲಾ ಒಂದೇ ಎನಿಸಿದಮೇಲೆ ಯಾವ ಧರ್ಮವಾದರೂ ಸರಿಯೆ", ಎಂದು ತನ್ನ ಧರ್ಮವನ್ನು ಬಿಟ್ಟು ಇನ್ನೊಂದು ಧರ್ಮಕ್ಕೆ ಸೇರಲು ನಮ್ಮ ಸಂಸ್ಕೃತಿಯು ಅನುಜ್ಞೆ ಕೊಡುವದಿಲ್ಲ.

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋಭಯಾವಹಃ" ಮನುಷ್ಯನಿಗೆ ಅವನವನ ಧರ್ಮವೊಂದೇ ಶ್ರೇಯಸ್ಕರವೆಂದು ಗೀತೆಯು ಎಚ್ಚರಿಸುತ್ತದೆ.

ನಮ್ಮ ಸಂಸ್ಕೃತಿಯ ಸಂದೇಶಗಳೆಂದರೆ ವೇದೋಪನಿಷತ್ತುಗಳು. ಪಠ್ಯ ಪುಸ್ತಕಗಳಾಗಿ ನಮ್ಮ ಜ್ಞಾನಭಂಡಾರವನ್ನು ಬೆಳೆಸುವಂಥ ಇವು ಕೇವಲ ಪುಸ್ತಕಗಳಲ್ಲಿ ಮಾತ್ರ ಆಶ್ರಯಪಡೆಯಬೇಕಾಗಿದೆ. ಇಂದಿನ ಶಿಕ್ಷಣದಿಂದ ಇಂಥ ಅಮೂಲ್ಯ ಜ್ಞಾನರಾಶಿಯನ್ನು ಉಪಾಸನೆಮಾಡುವ ಸದವಕಾಶ ನಮಗಿಲ್ಲವಾಗಿದೆ. ನಾವು ತಿಳಿಯಬೇಕಾಗಿದ್ದ ನಮ್ಮ ಸಂಸ್ಕೃತಿ ಪ್ರೇರಕರ ಜೀವನ ಚಿತ್ರಗಳೂ ನಮ್ಮ ಶಿಕ್ಷಣ ರಂಗದಲ್ಲಿ ಸಾಕಷ್ಟು ಸ್ಥಾನ—ಮನ್ನಣೆ ಪಡೆಯದಾಯಿತು.

ಭಾರತೀಯ ಸಂಸ್ಕೃತಿಗೆ ಭಾರತೀಯ ವಿದ್ಯಾಭ್ಯಾಸವೇ ಬೇಕು. ಇದರ ಅಭಾವದಿಂದ ಸಾಂಸ್ಕೃತಿಕ ತತ್ವಗಳೆಲ್ಲಾ ನಮ್ಮ ಜೀವನದಲ್ಲಿ ಅವಕಾಶಪಡೆಯದೇ ಅದು ಸುಪ್ತವಾಗಿಯೇ ಇರುವಂತಾಯಿತು. ನಮ್ಮ ಉಸಿರಿನೊಂದಿಗೆ ಉಸಿರಾಗಿ ಹೊಂದಿಕೊಂಡಿದ್ದರೂ ಅದರ ಪರಿಚಯನೇ ನಮಗೆ ಇಲ್ಲದೇ ಸಂಸ್ಕೃತಿಯೆಂದರೇನು ಎಂದು ಕೇಳುವಷ್ಟು ಸಾಂಸ್ಕೃತಿಕ ಜೀವಿಗಳಾದೆವು.

ನಮ್ಮ ಸಂಸ್ಕೃತಿಯ ಭಂಡಾರ ವಿಶಾಲವಾದದ್ದು. "ಕುಲಾಲೇಭ್ಯಃ—ಕರ್ಮಾರಾಣಾಂ ಪತಯೋ – ರಥಕಾರೇಭ್ಯೋನಮಃ" ಇತ್ಯಾದಿ ಸಮಾಜ ಸೇವೆ ಮಾಡುವಂಥ ಎಲ್ಲ ಜೀವಿಗಳನ್ನು ಅದು ಪೂಜ್ಯತೆಯಿಂದ ಕಾಣುವದು. ಜಾತಿ—ಮತ—ಪಂಥಗಳ ಭೇದವಿಲ್ಲದೇ ನೀತಿಮಯ ಸಾತ್ವಿಕ ಸತ್ಯಜೀವನವನ್ನು ಅದು ತುಂಬಾ ಪ್ರೀತಿಸುತ್ತದೆ. ಇದು ಸಂಸ್ಕೃತಿಯ ವೈಶಿಷ್ಟ್ಯ.

ಸಂಸ್ಕೃತಿ ಬರೇ ವಿಚಾರ—ಪ್ರಚಾರಗಳ ಮೂಲಕ್ಕಮುನ್ನಡೆಯಾಗುವದಿಲ್ಲ; ಇದು ಜಾಗ್ರತಗೊಳಿಸಲು ಸಹಾಯಕಮಾತ್ರ ತತ್ವನಿಷ್ಠವಾದ ಆಚಾರ ಸಂಸ್ಕೃತಿಯನ್ನು ಬೆಳೆಸಬಲ್ಲುದು. ನಮ್ಮಲ್ಲಿ ರಾಷ್ಟ್ರೀಯ ಮತ್ತು ಧಾರ್ಮಿಕ ಹಬ್ಬ ಉತ್ಸವಗಳಂತೆ—ವರ್ಷದ ಒಂದು ದಿನವಾದರೂ ಸಾಂಸ್ಕೃತಿಕ ದಿನಾಚರಣೆ –ಯಾಗುವದು ಉತ್ತಮ. ಹಬ್ಬ ಉತ್ಸವಗಳೆಲ್ಲಾ ಸಾಂಸ್ಕೃತಿಕ ಸಂಕೇತವೇ ಆಗಿದ್ದರೂ ಇಂದು ಸಂಸ್ಕೃತಿಯ ನೆನಪಿನ ಬದಲು ವಿಚಾರವಿಲ್ಲದ ವಿಶೇಷ ವಿನೋದಗಳು ನಡೆಯುತ್ತಿರುತ್ತವೆ. ಇವುಗಳ ದೃಷ್ಟಿ ಬದಲಿಸಿ ಸಂಸ್ಕೃತಿಯ ಪ್ರೇರಣೆ ಯಾಗುವಂತೆ ಅವು ಆಚರಣೆಯಲ್ಲಿ ಬರಬೇಕು.

ಸಮೃದ್ಧ ಸುಂದರ ಶಿಕ್ಷಣದಿಂದ ನಮ್ಮ ಸಂಸ್ಕೃತಿಯನ್ನು ಜೀವನದೊಂದಿಗೆ ಸಮರಸಗೊಳಿಸಿ ಸತ್ಯಜೀವಿಗಳಾಗೋಣ! ನೈತಿಕ ವಿಕಾಸ ಸಾಧಿಸೋಣ!!

ಇದೇ ಭಾರತೀಯ ಸಂಸ್ಕೃತಿಯ ಹಿರಿಮೆ! ಗೆಲವು!!

—ಶ್ರೀ ವಿಶ್ವೇಶ್ವರ ಶರ್ಮಾ,
ತದ್ದಲಸೆ.

### ನೋಟೀಸು

ಕುಂದಾಪುರ ತಾಲ್ಲೂಕು ನಂಬ್ರ 74ನೇ ಉಳ್ಳೂರು ಗ್ರಾಮದ ಚಿಟ್ಟೆಯಲ್ಲಿರುವ ಲಿಂಗಮ್ಮ ಶೆಡ್ತಿರ ಮಗಳು ಪುಟ್ಟಮ್ಮ ಶೆಡ್ತಿಯು ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ—

1. ನಮ್ಮ ಕುಟುಂಬದಲ್ಲಿ ಅಶನಾರ್ಥ ವಗೈರೆ ವ್ಯವಹರಣೆ ನಡೆದು ಕುಟುಂಬದ ಆಸ್ತಿಗಳಿಗೆ ರಿಸೀವರ್ ನೇಮಕವಾಗಿರುವುದರಿಂದ ಸದ್ರಿ ರಿಸೀವರಿಗೆ ಸ್ವಾಧೀನವಾದ ಆಸ್ತಿಗಳ ಸಾಟ್ತು ನನಗೆ ಬರತಕ್ಕ ಅಶನಾರ್ಥದ ಬಗ್ಗೆ ದಾವಾ ಜರಗಿಸುತ್ತೇನಾಗಿ ಹೇಳಿ ನನ್ನ ಅಕ್ಕ ಮುತ್ತಕ್ಕ ಶೆಡ್ತಿ ಮಗನಾದ ಮಾಸ್ತರ್ ಶಂಕರ್ ಶೆಟ್ಟಿಯು ಮತ್ತು ನನ್ನ ತಮ್ಮ ಗಣ್ಪಯ್ಯ ಶೆಟ್ಟಿಯು ಕೂಡಾ ಸದ್ರಿ ದಾವೆಯ, ಬಗ್ಗೆ ಬೇಕೆಂತ 7-8 ಖಾಲಿ ಕಾಗದಗಳ ಮೇಲೆ 8 ದಿನಗಳ ಹಿಂದೆ ನನ್ನ ಎಡಗೈ ಹೆಬ್ಬೆಟ್ಟುಗಳನ್ನು ಪಡೆದಿರುತ್ತಾರೆ. ಆದರೆ ಈಗ ವಿಚಾರಿಸಿ ತಿಳಿಯುವಾಗ್ಯೆ ಸದ್ರಿ ಹೆಬ್ಬೆಟ್ಟುಗಳ ಕಾಗದಗಳನ್ನು ಸದ್ರಿಯವ್ರು ದುರುಪಯೋಗಪಡಿಸಿ ಕಲ್ಪನೆ ನೋಟು ವಗೈರೆ ರಿಕಾರ್ಡುಗಳನ್ನು ಮಾಡುವ ಇರಾದೆಯಲ್ಲಿದ್ದಾರೆಂತ ತಿಳಿದು ಬಂದಿರುತ್ತದೆ ನಾನು ಈ ವರೆಗೆ ಯಾರಿಂದ ಎಷ್ಟನ್ನಾದರೂ ಸಾಲಗಳನ್ನು ಪಡೆದದ್ದಾಗಲೀ ಯಾರಿಗಾದರೂ ನೋಟು ವಗೈರೆ ರಿಕಾರ್ಡುಗಳನ್ನು ಬರೆಕೊಟ್ಟದ್ದಾಗಲೀ ಇರುವುದಿಲ್ಲ. ಆದ್ದರಿಂದ ಮೇಲೆ ಹೇಳಿದವರು ಮೋಸದಿಂದ ಪಡೆದ ಹೆಬ್ಬೆಟ್ಟಿನ ಕಾಗದಗಳನ್ನು ದುರುಪಯೋಗಪಡಿಸಿ ಯಾವುದಾದರೂ ನೋಟು ವಗೈರೆ ರಿಕಾರ್ಡುಗಳನ್ನು ಮಾಡಿದ ಪಕ್ಷದಲ್ಲಿ ಅಂತಹ ರಿಕಾರ್ಡುಗಳು ಅಸಿಂಧುವಾದದ್ದು ಎಂತ ಈ ಮೂಲ್ಕ ಸರ್ವ ಜನರಿಗೆ ತಿಳಿಯಪಡಿಸಿದ್ದಾಗಿರುತ್ತದೆ.

● ॥ ಈ ಎರಡು ಗೆರೆ ಮತ್ತು ಎಡಗೈಹೆಬ್ಬೆಟ್ಟಿನ ಗುರ್ತು ಪುಟ್ಟಮ್ಮ ಶೆಡ್ತಿ ರುಜು.

ಮೊಕ್ಕಾಂ: ಕುಂದಾಪುರ, 7-3 56

**'NAVAYUGA' WEEKLY** is in the list of periodicals and Newspapers approved for use in Secondary Schools as per proceedings Roc. No 466 N/50 dated 12-12-1950 of the Director of public Instruction, Madras.


ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

**ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,**

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ನೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

**SRI GAJANANA CLOTH STORES,**
TENKAPET, **UDIPI**, S. KANARA.


## ನಗೆ ಹನಿ

### ದೋಷ ಶೋಧನೆ

ಥಳಕಿನ ತೆಳು ದೇಹದ ತರುಣಿಯೋರ್ವಳು "ಡಾಕ್ಟರೇ, ನನ್ನಲ್ಲಿ ಏನು ದೋಷವಿದೆ ಎಂದು ಕಂಡುಕೊಳ್ಳಲಿಕ್ಕಾಗಿ ನಾಸಿಲ್ಲಿಗೆ ಬಂದಿದ್ದೇನೆ" ಎಂದಳು.

ಡಾಕ್ಟರರು ತಲೆಯಾಡಿಸಿ ಹೇಳಿದರು- "ಮೂರು ದೋಷಗಳಿವೆ-ನೀವು ಬೇಕಾದಷ್ಟು ಉಣ್ಣುವುದಿಲ್ಲ; ಅಗತ್ಯಕ್ಕಿಂತ ಹೆಚ್ಚು ಅಲಂಕಾರ ಮಾಡಿಕೊಳ್ಳುತ್ತೀರಿ; ಮತ್ತು ನಿಮ್ಮ ಕಣ್ಣು ಸಹ ಚೆನ್ನಾಗಿಲ್ಲ–ಏಕೆಂದರೆ ಹೊರಗಡೆ ನಾನು ಪಶುವೈದ್ಯನೆಂದು ಬೋರ್ಡಿದೆ!"

○ ○

### ಎಚ್ಚರ

ಶಸ್ತ್ರ ಚಿಕಿತ್ಸೆಗೆ ಸಿದ್ಧವಾಗಿ ಹಾಸಿಗೆಯಲ್ಲಿ ಬಿದ್ದುಕೊಳ್ಳುವುದರಲ್ಲಿ ಇದ್ದಾಗ ಏನೊ ನೆನಪಾದಂತೆ ಅವಳಿಗೆ ತೋರಿತು.

ಎಲ್ಲರೂ ನೋಡುತ್ತಿದ್ದಂತೆ ಅವಳು ಅಲಾರಾಂ ಗಡಿಯಾರವನ್ನು ತಂದು ಕಿಟಕಿಯ ಬಳಿ ನಿಲುವಿನಲ್ಲಿ ಇಟ್ಟು, ಹತ್ತಿರವಿದ್ದವರಿಗೆ ಕೇಳಿಸುವಂತೆ ಹೇಳಿದಳು—

"ನಾನೆಲ್ಲಿಯಾದರೂ ಸಕಾಲದಲ್ಲಿ ಏಳದಿದ್ದರೆ ಎಚ್ಚರಿಸಲಿಕ್ಕೆ, ಇದು ಇಲ್ಲಿರಲಿ!"

○ ○

### ನಿದ್ರೆ ಬರಿಸುವ ಪ್ರಯತ್ನ

ಆಸ್ಪತ್ರೆಯ ದಾಯಿಯು ಒಂದೇ ಸಮನೆ ಆ ರೋಗಿಯ ಬಳಿ "........ಏಳಿ.... ಏಳಿ ಸ್ವಾಮಿ—ಎಚ್ಚೇಳಿ......" ಎಂದು ರಾಗವಾಗಿ ಕೂಗುತ್ತಿದ್ದಳು.

ಐದಾರು ನಿಮಿಷ ಹೀಗೆ ಸಂಗೀತವಾದ ಬಳಿಕ ಆ ಕುಂಭಕರ್ಣ ರೋಗಿ "ಅಂ– ಏನು" ಎಂದು ಕಣ್ಣು ತೆರೆದ.

"ಮತ್ತೇನಿಲ್ಲ, ನಿಮಗೆ ನಿದ್ರೆ ಬರಿಸುವ ಮಾತ್ರೆ ಕೊಡುವ ಸಮಯವಾಯಿತು!" ಎಂದಳು ಆ ದಾಯಿ, ಮಾತಾಯಿ.

○ ○

### ವೈದ್ಯರ ಅಕ್ಷರ

ಹೊಸತಾಗಿ ಊರಿಗೆ ಬಂದಿದ್ದ ಡಾಕ್ಟರರಿಗೆ ಒಂದು ಸಮಾರಂಭದಲ್ಲಿ ಭಾಗಿಯಾಗಲು ಆಮಂತ್ರಣ ಹೋಯಿತು. ಇದಕ್ಕೆ ಉತ್ತರವಾಗಿ ಆ ಡಾಕ್ಟರರು ಒಂದು ಕಾಗದದಲ್ಲಿ ಏನನ್ನೋ ಗೀಚಿ ಕಳುಹಿಸಿದರು. ಅದನ್ನು ಓದುವುದು ಬಹಳ ಕಷ್ಟವಾಯಿತು.

ಕೊನೆಗೊಬ್ಬ ಬುದ್ಧಿವಂತ "ನಾವೀ ಚೀಟನ್ನು ಔಷಧಿ ಮಾರುವ ಅಂಗಡಿಯಾತನಿಗೆ ತೋರಿಸೋಣ – ಆ ಜನರಿಗೆಲ್ಲ ಡಾಕ್ಟರರ ಅಕ್ಷರದ ಗುರುತು ಚೆನ್ನಾಗಿ ಹತ್ತುತ್ತದೆ" ಎಂದು.

ಚೀಟನ್ನು ಔಷಧಿ ಮಾರುವಾತನಿಗೆ ತೋರಿಸಲಾಯಿತು. ಆತನು ಅದನ್ನು ನೋಡಿ ಎರಡು ನಿಮಿಷದ ಬಳಿಕ ಒಂದು ಬಾಟ್ಲಿಯನ್ನು ತಂದುಕೊಟ್ಟು "ಬೆಲೆ ಆರು ರೂಪಾಯಿ, ಎಂಟಾಣೆ" ಎಂದ!

○ ○

### ಪರೀಕ್ಷೆಯ ಸಿದ್ಧತೆ

"ಸರಿ, ನಿಮ್ಮ ಬಾಯಿಯ ಕ್ಷ-ಕಿರಣ ಪರೀಕ್ಷೆಯನ್ನು ನಡೆಸಿ ಚಿತ್ರತೆಗೆಯಬೇಕಾಗಿದೆ" ಎಂದ. ಡಾಕ್ಟರರು ಆ ತರುಣಿಗೆ ಹೇಳಿದರು!

"ಆಯಿತು, ಆದರೆ ದಯಮಾಡಿ ಒಂದು ನಿಮಿಷದ ಅವಕಾಶ ಕೊಡಿ—ಈಗ ನಾನು ತಯಾರಾಗಿ ಬರುತ್ತೇನೆ" ಎಂದು ಆಕೆ ತನ್ನ ಶೃಂಗಾರ ಪ್ರಸಾಧನ ಪೆಟ್ಟಿಗೆಯನ್ನು ಕೈಗೆತ್ತಿಕೊಂಡಳು!

—ಸಾಧಾರ

## ಸಫಲ ಸಂಶೋಧನೆ

(೩ನೇ ಪುಟದಿಂದ)

ನಡೆಯುವಿಕೆಗೆ ಆವುದೇ ಎಣ್ಣೆಯ ಅಗತ್ಯವೂ ಇಲ್ಲ. ನಿಧಾನವಾಗಿ ಹರಿಯುವ ನೀರಿನಲ್ಲಿಟ್ಟರೆ ಸಾಕು. ನೀರು ಮೇಲೇರಬಲ್ಲುದು. (ನಾನು ಪ್ರತ್ಯಕ್ಷ ನೋಡಿದ್ದೆ) ಎ ಭತ್ತು ಫೀಟಗಿಂತಲೂ ಅಧಿಕ ಎತ್ತರದಲ್ಲಿ ನೀರು ಹಾರುತ್ತಿದೆ. ಇದರಲ್ಲಿರುವ ಗುಣವೆಂದರೆ ಶಕ್ತಿ ಹಾಳಾಗುವುದು ಏನಿಲ್ಲ. ಇದರಲ್ಲೀಗ ¼ ರಷ್ಟು ಮಾತ್ರ ಶಕ್ತಿ ವ್ಯಯವಾಗುತ್ತಾ ಇದೆ. ಅಂದರೆ ಇದೇ ಪಂಪಿನಲ್ಲಿ (ಮೋಡಲ್) ಒಂದು-ಒಂದೂವರೆ ಇಂಚು ತೋರದ ನಳಿಗೆಯಿಂದಲೂ ನೀರು ಬರಬಲ್ಲುದು. ಈ ರೀತಿಯ ಪಂಪಿಗೆ 'ಎಣ್ಣೆ ಪಂಪು'ಗಳಲ್ಲಿರುವಂತೆ ಅಧಿಕ ಚಕ್ರಗಳಿರುವುದಿಲ್ಲವಾದ ಕಾರಣ ಘರ್ಷಣೆ ಕಡಿಮೆ. ಸಾಮಾನುಗಳು ಸವೆಯುವುದು ನಿಧಾನ. ಇದರಿಂದ ಬಾಳಿಕೆ ಹೆಚ್ಚು. ಇನ್ನು ಪ್ರಯೋಜನ-ಕಂಬಾ ಇದೆ. ಒಂದೇ ನೀರಲ್ಲಿ ಎಷ್ಟು ಪಂಪುಗಳನ್ನೂ ತಿರುಗಿಸಬಹುದು. ಆದರಿಂದ ನಮಗೆ ಬೇಕಾದಷ್ಟು ಸಂಖ್ಯೆಯಲ್ಲಿ ಪಂಪು ಸೆಟ್ ಇರಿಸಿ ಶಕ್ತಿಯನ್ನು ಕೇಂದ್ರೀಕರಿಸಲು ಸಾಧ್ಯವಿದೆ. ಇದನ್ನು ಇತರ ಯಂತ್ರಗಳಿಗೆ ಜೋಡಿಸಿದ್ದೇ ಆದರೆ ಕಡಿಮೆ ಖರ್ಚಿನಾದ ಅಂತಹ ಯಂತ್ರಗಳನ್ನು ನಡೆಸಬಹುದು. ವಿದ್ಯುತ್ತನ್ನಂತೂ ಪಡೆಯಲು ಅಡ್ಡಿಯೇ ಇಲ್ಲ.

ಇಷ್ಟುಮಾತ್ರವಲ್ಲ; ಬಾವಿಗೆ ಇದನ್ನು ಜೋಡಿಸಿದರೆ ನೀರು ಮೇಲೆತ್ತಬಹುದು. ಕೈಲಿಯಿಂದ ಮಾತ್ರ ತಿರುಗಿಸಬೇಕು. ಹಾಗಿದ್ದರೂ ಆರೆಂಟು ವರ್ಷದ ಮಗು ಕೂಡಾ ನೀರೆತ್ತಬಲ್ಲನು. ಅಲ್ಲದೆ ಇದೇ ಸೂತ್ರದಿಂದ ಔಷಧಿ ಚಿಮುಕಿಸಲೂ ಸಾಧ್ಯವಿದೆ. ಸ್ಪೆಷಲ್ಲಾಗಿ... ಈ ಒಂದೇ ವಿಧಾನದಿಂದ ಹಲವು ಕಾರ್ಯಗಳನ್ನು ಸಾಧಿಸಬಹುದು. ಇದರಲ್ಲಿ ಇನ್ನೂ ಹಲವು ಸುಧಾರಣೆಗಳಾಗಬೇಕಾಗಿವೆ. ಇದನ್ನು ಇನ್ನಷ್ಟು ಸುಲಭ ರೀತಿಯಲ್ಲಾಗುವಂತೆ ಮಾರ್ಪಡಿಸುವ ಹೊಸ ಆಲೋಚನೆಯೂ ಇದೆ. ಸರಿಯಾದ ಬೆಂಬಲ—ಪ್ರೋತ್ಸಾಹಗಳು ಮಾತ್ರ ಸಿಗಬೇಕು—ಅಷ್ಟೆ. ಇಂತಹ ಇನ್ನೂ ಕೆಲವು ಸಂಶೋಧನೆಗಳನ್ನು ನಡೆಸಬಹುದೆಂಬ ಆತ್ಮವಿಶ್ವಾಸವೂ ಇದೆ—ನನಗೆ."

ಶ್ರೀ ಭಟ್ಟರು ಮುಂದುವರಿಸುತ್ತಾ—"ಸಾಮೂಹಿಕವಾಗಿ ಇಂತಹ ಪಂಪುಗಳನ್ನು ತಯಾರಿಸುವುದಿದ್ದರೆ ಒಂದರ ಬೆಲೆ ರೂ. ಐವತ್ತಕ್ಕೆ ಮಿಕ್ಕದು ಆದ್ದರಿಂದ ಶ್ರೀಮಂತರಿಗೂ—ಬಡವರಿಗೂ ಇದನ್ನು ಕೊಂಡುಕೊಂಡು ಪ್ರಯೋಜನಹೊಂದಲು ಸಾಧ್ಯವಿದೆ." ಎಂದರು.

ತದನಂತರ ಅವರು ಇದರ ಮೂಲಕ ಮದ್ದು ಚಿಮುಕಿಸುವ ವಿಧಾನವನ್ನೂ, ಬಾವಿಯಿಂದ ನೀರೆತ್ತುವ ಕ್ರಮವನ್ನೂ ನನಗೆ ಪ್ರಯೋಗಿಸಿ ತೋರಿಸಿದರು. ಅಬ್ಬಾ! ಒಂದರಿಂದಲೇ ಎಷ್ಟು ಕಾರ್ಯಗಳನ್ನು ಸಾಧಿಸಬಹುದ."

ಶ್ರೀ ಜಿ. ವಿ. ಭಟ್ಟರವರ ಈ ನೂತನ 'ಭಟ್‌ರ ಪಂಪು' ನಿಜವಾಗಿಯೂ ತುಂಬಾ ಪ್ರಯೋಜನಕಾರಿ ಎಂಬುವನ್ನು ನಾನು ಪ್ರತ್ಯಕ್ಷ ಮನಗಂಡೆ. ಅದಕ್ಕಾಗಿ ಅವರ ಸಾಹಸವನ್ನು—ಸಾಮರ್ಥ್ಯವನ್ನು ನಾವು ಮೆಚ್ಚಲೇ ಬೇಕು!

ಯಾರೇ ಆಗಲಿ ಎಷ್ಟೇ ಕಲಿಯಲಿ; ಅವರಿಂದೇನಾಗಬಹುದು? ಅವರೇನು ಮಾಡಬಲ್ಲರು? ಎಂದು ನಾವೆಣಿಸಬಾರದು ಎಂಬುದಕ್ಕೆ ಶ್ರೀ ಜಿ. ವಿ. ಭಟ್ಟರವರೇ ನಿದರ್ಶನ. ಶ್ರೀಯುತರು ಕೇವಲ ಎಂಟನೆಯವರೆಗೆ ಓದಿದವರು; ಹೈಸ್ಕೂಲ ಮೆಟ್ಟಲೇರಿದವರಲ್ಲ; ಇಂಗ್ಲಿಷನ್ನು ಬಲ್ಲವರಲ್ಲ ಆದಾಗ್ಯೂ ಅವರಿಂದ ಮಾನವ ಜನಾಂಗಕ್ಕೆ—ರೈತರ ಏಳಿಗೆಗೇ ಪ್ರಯೋಜನಕಾರಿಯಾದ-ಸಹಕಾರಿಯಾದ ನವವಿಧಾನವೊಂದನ್ನು ಕಂಡುಹಿಡಿದಿದ್ದಾರೆ!

ಹೌದು ವಿಜ್ಞಾನಿಯಾಗುವುದು ಬರಿಯ ಕಲಿಯುವಿಕೆಯಿಂದಲೇ ಅಲ್ಲ. ಕಲಿಯದವನೂ ವಿಜ್ಞಾನಿಯಾಗಬಲ್ಲನು. ಪ್ರಯತ್ನಪಟ್ಟರೆ ವಿಜ್ಞಾನಿಯಾಗಲು ಸಾಧ್ಯವೂ ಇಲ್ಲ. ಎಲ್ಲರಿಗೂ ಸಾಧಿಸುವ ಕಾರ್ಯವಲ್ಲವದು; ಅಂದರೆ ಅದೆಲ್ಲ ನಿಸರ್ಗ ದೇವಿಯ ವರಪ್ರಸಾದ!!

ಒಮ್ಮೆ ವಿಜ್ಞಾನದತ್ತ ಮನಸ್ಸು ಹರಿಯಿತೆಂದರೆ ಮತ್ತೆ ಅವನು ವಿಜ್ಞಾನಿಯೂ ದಂತೆಯೇ. ಒಂದನ್ನು ಸಾಧಿಸಿದವನಿಗೆ ಇನ್ನೊಂದನ್ನು ಸಾಧಿಸಲು ಕಷ್ಟವಿಲ್ಲ. ಆದ್ದರಿಂದ ವಿಜ್ಞಾನದತ್ತ ಆಸಕ್ತಿಯಿರುವವರನ್ನು ನಾವು ಪ್ರೋತ್ಸಾಹಿಸಿ ಅವರು ಇನ್ನೂ ನವೀನ ಶೋಧನೆಗಳನ್ನು ನಡೆಸುವಂತೆ ಮಾಡಬೇಕು.

ವಿಜ್ಞಾನಿಗೆ ಒಂದು ನಿಮಿಷವೂ ಬಹಳ ಮಹತ್ವವುಳ್ಳದಾಗಿದೆ. ಒಂದೇ ಒಂದು ನಿಮಿಷದಲ್ಲಿ ಆತ ಅತೀ ಮಹತ್ವದ ಸಾಧನವೊಂದರ ಸೂತ್ರವನ್ನು ನಿರ್ಮಿಸಬಲ್ಲ! ಅಂತಹ ಅದ್ಭುತಶಕ್ತಿಯಿದೆ—ವಿಜ್ಞಾನಿಗೆ ಒಂದು ಆಲೋಚನೆ ಹೊಳೆಯಿತೆಂದರೆ ಅದನ್ನು ಮಾಡಿನೋಡಲು ಆತನಲ್ಲಿ ಅನುಕೂಲತೆಯಿರಬೇಕು – ಸಾಹಿತ್ಯಸಲಕರಣೆಗಳಿರಬೇಕು. ಒಂದನ್ನು ಶೋಧಿಸತೊಡಗಿದರೆ ಅದರ ಪ್ರಯೋಜನ ಮನಗಾಣದೆ ಇನ್ನೊಂದು ಶೋಧನೆಗೆ ತೊಡಗಲಾಗುವುದಿಲ್ಲ.

ಶ್ರೀ ಜಿ. ವಿ. ಭಟ್ಟರೇ ಅನ್ನುವಂತೆ, ಒಂದು ಸಂಶೋಧನೆಯು 'ಪ್ರಸಾರ'ಕ್ಕಾಗಿಯೇ ವರ್ಷಗಟ್ಟಲೆ ಸಮಯ ವೆಚ್ಚಮಾಡಿದರೆ ಪ್ರಯೋಜನವೇನು? ಹೀಗೆ ವೃಥಾ ಸಮಯ ಕಳೆಯುವುದರಿಂದ ವಿಜ್ಞಾನಿಯ ಮಿದುಳಲ್ಲಿ ಮೂಡುತ್ತಿರುವ ಹೊಸ ಹೊಸ ವಿಷಯಗಳು ಅಲ್ಲಿಯೇ ಇರಬೇಕಾಗುವುವು.

ಆದುದರಿಂದ ಇವಕ್ಕೆಲ್ಲಾ ಸರಕಾರದ ಬೆಂಬಲ ಅತೀ ಅಗತ್ಯ ಬೇಕು. ವಿಜ್ಞಾನಿಯ ಕೆಲಸ— ಸೂತ್ರವನ್ನು ಕಂಡು ಹುಡುಕುವುದು ಮಾತ್ರ. ಉಳಿದದ್ದನ್ನು ಸರಕಾರ— ಜನತೆ ಪೂರೈಸಬೇಕು. ಇಂಥ ವಿಷಯಗಳಲ್ಲಿ ನಾವು ಅಸಡ್ಡೆ ವಹಿಸಿದರೆ ಮುಂದೆ ಸಂಶೋಧಕರಿಂದ ನಮಗೆ ಸಿಗಬಹುದಾದ ಪ್ರಯೋಜನಗಳಿಗೆ ನಾವೇ ಕೊಡಲಿಯಿಟ್ಟಂತೆ!!

ಆದ್ದರಿಂದ ನಮ್ಮವರೇ ಆದ ಶ್ರೀ ಜಿ. ವಿ. ಭಟ್ಟರಿಗೆ ಪ್ರೋತ್ಸಾಹ ನೀಡಬೇಕಾದುದು ನಮ್ಮ ಆದ್ಯ ಕರ್ತವ್ಯ.

ಇತ್ತೀಚೆಗಿನ ವರದಿಯಂತೆ— ಭಟ್‌ರ ಪಂಪನ್ನು ಡೈರೆಕ್ಟರ್ ಓಫ್ ಎಗ್ರಿಕಲ್ಚರಲ್ (ಇಂಜಿನಿಯರಿಂಗ್) ಮದ್ರಾಸು, ಅವರು ಹೆಚ್ಚಿನ ಪರಿಶೀಲನೆಗಾಗಿ ಕೊಯಂಬುತ್ತೂರಿಗೆ ಒಂದು ಸ್ಪೆಶಲ್ ವಾಹನದ ಮೂಲಕ ಕೊಂಡು ಹೋಗಿರುವರು—ಎಂದು ತಿಳಿಯುತ್ತದೆ. ಆದಷ್ಟು ಬೇಗನೇ ಇದು ಅಲ್ಲಿಂದ ಜಯಶೀಲವಾಗಿ ಹೊರಬಿದ್ದು ನಮ್ಮ ರೈತ ಬಾಂಧವರಿಗೆ ಬೇಗನೆ ದೊರಕುವಂತಾಗಲಿ! ಶ್ರೀ ಜಿ. ವಿ. ಭಟ್‌ರವರು ಇನ್ನೂ ಇಂತಹ ಜನೋಪಯುಕ್ತ ಸಂಶೋಧನೆಗಳನ್ನು ನಡೆಸುವಂತೆ ಅವರಿಗೆ ಶ್ರೀ ನಿಸರ್ಗದೇವಿಯು ಆಯುರಾರೋಗ್ಯವನ್ನು ದಯಪಾಲಿಸಲಿ!"— ಎಂದು ಆಶಿಸುತ್ತೇನೆ.

**ಶ್ರೀ ಕೇ. ವ. ಕೇಶವ, ದೇಲಂಪಾಡಿ.**

ಈ ಪಂಪಿನ ಕುರಿತು ಹೆಚ್ಚಿನ ವಿವರ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ಅಥವಾ ಮುಖತಃ ವಿಚಾರಿಸಬಹುದು.

ಶ್ರೀ ಜಿ. ವಿ. ಭಟ್, ಮರಕಿಣಿ, ಎಗ್ರಿಕಲ್ಚರಿಸ್ಟ್, ಪೋಸ್ಟು ಆಡ್ಯನಡ್ಕ, ದ. ಕ.

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 440/ 56.

ಸೂರಪ್ಪ ಮಯ್ಯ —ವಾದಿ

ವೆಂಕಟ ಕೂಡಾ —ಪ್ರತಿವಾದಿರು

ಸದ್ರಿ ದಾವೆಯ 1—2ನೆ ಪ್ರತಿವಾದಿರಿಗೆ ತಿಳಿಸುವದೇನೆಂದರೆ.

1ನೆ ಪ್ರ. ವೆಂಕಟ. ಹಳೆಪೈಕ ಕಟ್ಟೆಮನೆ ಬೆಳಿಯನ ಹೆಂಗ್ಸಿನ ಮಗ.

2ನೆ ಪ್ರ. ಚಂಣಮ್ಮ ಹೆಂಗಸು. ಯೆಂಕಟನ ಸಮಗಳು. ಕುಂದಾಪುರ ತಾಲ್ಲುಕ ಕೆರೆಗಾಲ ಗ್ರಾಮದಲ್ಲಿರುವವರು.

ವಾದಿಯು ಗೇಣಬಾಕಿ ಬಗ್ಗೆ ನಿಮ್ಮ ಮೇಲೆ ಸೋಲ್ಕಂಡ ದಾವೆಯನ್ನು ದಾಕಲುಮಾಡಿದ್ದಾನೆ. ಸದ್ರಿ ದಾವೆಯು ತಾರೀಕು 18–9–56ಕ್ಕೆ ತನ್ಕಿಗೆ ಯಿಟ್ಟಿರುವದರಿಂದ ಆ ದಿವಸ ಹಗಲು 11ಗಂಟೆಗೆ ಸೋಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರುಆಗಿ ನಿಮ್ಮ ಉದಾಹರಣೆ ಯಿದ್ದ ಪಕ್ಷದಲ್ಲಿ ಹಾಜ್ರು ಮಾಡತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯನ್ನು ಪೈಸಲು ಮಾಡೋಣಾದೀತೆಂತ ನೀವು ತಿಳಿಯತಕ್ಕದ್ದು.

M. Ananthaya
Advocate for Plaintiff.

ಮೊಕ್ಕಾಂ ಕುಂದಾಪುರ ತಾ. 4–9–56.

ದಿ| ಕಿಲ್ಲೆಯವರ ಪುಸ್ತಕಗಳು

**ಪ್ರಾಚೀನ ತುಳುನಾಡು**

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾ ಪತ್ರ ಬೆಲೆ 2–0–0

**ಭಾರತದ ಕರ್ಣ**

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0–6–0.

**ಮುರಲಿ**

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ: 0–12–0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರ ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ.

**ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್**

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಸವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮ್ಯಾಡಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸಾಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
*Head Office:* Tenkapet, **Udipi**, S. K. *Phone:* 66

**ಕುಮಾರಿ ಬಿಲ್ಲೆಗಳು**

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

**ಮೂಲ್ಕಿ ಬೇಂಕ್ ಲಿಮಿಟೆಡ್,**

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3½% |
| 6 | ,, | 3¼% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

**ಗೀತೆಯ ಕೈಗನ್ನಡಿ**

0—12—0

ನವಯುಗ ಪ್ರೆಸ್, ಉಡುಪಿ.

# ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

## ಆನೆಕಾಲು ರೋಗ ನಿರೋಧ

ಮಂಗಳೂರಿನಲ್ಲಿ ಈಚೆಗೆ ಆನೆಕಾಲು ರೋಗ ನಿರೋಧ ಚಳವಳವನ್ನು ತೀವ್ರವಾಗಿ ಸಿ, ಹೆಟ್ರಾಜನ್ ಮಾತ್ರೆಗಳನ್ನು ಪ್ರತಿಯೊಬ್ಬ ನಾಗರಿಕನಿಗೂ ಬಿಡದೆ ವಿತರಿಸುವ ಕಾರ್ಯಕ್ರಮವು ಪ್ರಾರಂಭವಾಗಿರುವಂತಹದು ಸ್ತುತ್ಯ. ಪರಿಹಾರವೇ ದುರ್ಲಭ ಎಂಬ ಚಿಂತೆಯನ್ನು ಹುಟ್ಟಿಸಿರುವ ಈ ರೋಗದ ಉಚ್ಛಾಟನಕ್ಕೆ ಇಷ್ಟು ತಡವಾಗಿಯಾದರೂ ಸರಕಾರಿ ಮಟ್ಟದಲ್ಲಿ ಪ್ರಯತ್ನ ನಡೆದಿರುವುದನ್ನು ತುಂಬ ಸಂತೋಷದಿಂದ ಸ್ವಾಗತಿಸಲು ಆನಂದವಾಗುತ್ತದೆ.

ಈ ರೋಗವು ಮೂಲ್ಕಿ, ಉಡುಪಿ ಮತ್ತು ಕಾರ್ಕಳದಂತಹ ಬೇರೆ ಪಟ್ಟಣಗಳಲ್ಲಿಯೂ ಈಗ ವಿಶೇಷವಾಗಿ ಹಬ್ಬುತ್ತಿದೆ. ಮಂಗಳೂರಿನಿಂದಲೇ ರಫ್ತಾನೆಯಾದ ಈ ರೋಗವು ಈ ಚಿಕ್ಕ ಪಟ್ಟಣಗಳಲ್ಲಿ ಮಂಗಳೂರಿನಲ್ಲಿ ಈಗ ವ್ಯಾಪಕವಾಗಿರುವಷ್ಟು ಪ್ರಬಲವಾಗಿ ಬೆಳೆಯುವ ವರೆಗೆ ಬಿಡದೆ, ಸರಕಾರವು ಕೂಡಲೇ ಹೆಟ್ರಾಜನ್ ಮಾತ್ರೆಗಳ ವಿತರಣೆ ಮತ್ತಿತರ ರೋಗೋಪಶಮನದ ಕ್ರಮಗಳನ್ನೂ ಮುಂಜಾಗ್ರತೆಯ ಹೆಜ್ಜೆಗಳನ್ನೂ ಕೈಗೊಳ್ಳಬೇಕಾದುದು ಅವಶ್ಯವಿದೆ. ಈ ಬಗ್ಗೆ ಸಾರ್ವಜನಿಕರೂ ಸಮಾಜದ ಮುಂದಾಳುಗಳೂ ಶಾಸನ ಸಭೆಯ ಸದಸ್ಯರೂ ತಕ್ಷಣ ಕಾರ್ಯಪ್ರವೃತ್ತರಾಗಲಿ!

ಇನ್ನೂ ಒಂದು ಮಾತು— ಆನೆಕಾಲು ರೋಗದ ಹಬ್ಬುವಿಕೆಯ ಕ್ರಮ ಮತ್ತು ನಿವಾರಣೋಪಾಯಗಳ ಬಗ್ಗೆ ಮಂಗಳೂರಿನಲ್ಲಿ ಈಚೆಗೆ ಮಂತ್ರಿಗಳೂ ಬೇರೆ ತಜ್ಞರೂ ಭಾಷಣವಿತ್ತರೆಂದು ವರದಿಯಾಗಿದೆ. ಆದರೆ ಅವರು ತಮ್ಮ ಭಾಷಣಗಳಲ್ಲಿ ಯಾವ್ಯಾವ ಉಪಯುಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ ಮತ್ತು ರೋಗದ ಬಗ್ಗೆ ಎಂತಹ ವಿವರಣೆಯನ್ನು ನೀಡಿದ್ದಾರೆ ಎಂಬಿತ್ಯಾದಿ ವಿಷಯಗಳು ಪತ್ರಿಕೆಗಳಲ್ಲಿ ಬಂದಿಲ್ಲ. ಇಂಥಿಂಥವರು ಭಾಷಣ ಮಾಡಿದರು ಎಂಬಂತಹ ಹೆಸರುಗಳೇ ತುಂಬಿರುವ ಪಟ್ಟಿಯೇ ಇಂದು ಸುದ್ದಿಗಳ ವರದಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆಯಲ್ಲದೆ, ಅವರು ಭಾಷಣ ಮಾಡಿದ ವಿಷಯಗಳ ಮೇಲೆ ಬೆಳಕು ಚೆಲ್ಲುವ ಅಥವಾ ವಿಷಯಗಳ ವಿವರವನ್ನು ಕೊಡುವ ವರದಿಗಳು ನಮ್ಮ ಜಿಲ್ಲೆಯ ಸುದ್ದಿಗಳ ಬಗ್ಗೆ ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಇದನ್ನು ಪತ್ರಿಕೆಗಳ ವರದಿಗಾರರೇ ನಿವಾರಿಸಬೇಕು.

ಈ ಮಾತನ್ನು ಸೂಚಿಸುವುದರ ಜೊತೆಗೆ, ತಜ್ಞರಾದವರು ಆನೆಕಾಲು ರೋಗ ನಿರೋಧದಂತಹ ಪ್ರಾಮುಖ್ಯ ವಿಷಯದ ಮೇಲೆ ಲೇಖನವನ್ನು ಬರೆದು ಎಲ್ಲ ಮುಖ್ಯ ಪತ್ರಿಕೆಗಳಲ್ಲಿ ಪ್ರಕಟಿಸಲೂ ನೋಡಬೇಕೆಂದು ಸಹ ಸೂಚಿಸಲು ಇಚ್ಛಿಸುತ್ತೇವೆ. ಭಾಷಣವು ಒಮ್ಮೆ ಕೇಳಿದ ಬಳಿಕ ಮರೆತು ಹೋಗಬಹುದು; ಆದರೆ ಲೇಖನವನ್ನು ಜೋಪಾನವಾಗಿಟ್ಟು ಪದೇಪದೇ ಓದಿ, ಮರೆತುಹೋದ ವಿಷಯಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ಇದೇ ಲೇಖನವನ್ನು ಬರೆದು ಪ್ರಕಟಿಸುವುದರಲ್ಲಿರುವ ಮುಖ್ಯ ಪ್ರಯೋಜನ. ಭಾಷಣವನ್ನು ಕೇಳಲು ನೆರೆದಿಲ್ಲದ ಜನರು ಸಹ ಈ ಲೇಖನಗಳ ಪ್ರಯೋಜನ ಪಡೆಯಬಹುದು ಎಂಬುದನ್ನಿಲ್ಲಿ ಮರೆಯಲಾಗದು.

## ನಿಜವಾದ ಭೂಸುಧಾರಣೆ

ಭೂಸುಧಾರಣೆಯ ಬಗ್ಗೆ ಆಕ್ಷೇಪಗಳು ಇರಲಿಕ್ಕಿಲ್ಲ-ಇದ್ದರೂ ಸಮಾಜವಾದಿ ಮಾದರಿಯ ಸಮಾಜ ರಚನೆಯ ಹುಮ್ಮಸ್ಸಿನಲ್ಲಿ ಇಂದಿನ ಸರಕಾರವು ಈ ಆಕ್ಷೇಪಕ್ಕೆ ಮಹತ್ವ ಕೊಡಲಿಕ್ಕಿಲ್ಲ—ಎನ್ನುವುದು ನಿಜ.

ಆದರೆ ಭೂಸುಧಾರಣೆಯ ಕ್ರಮಗಳು ಒಕ್ಕಲಿಗೆ ಅಥವಾ ಬೇಸಾಯಗಾರನಿಗೆ ಭದ್ರತೆಯನ್ನು ಮಾತ್ರ ಕೊಡುವ ಹಾಗಿದ್ದರೆ ಭೂಸುಧಾರಣೆ ಎಂಬ ಪದಪ್ರಯೋಗಕ್ಕೆ ಸಂಪೂರ್ಣ ನ್ಯಾಯವನ್ನು ಮಾಡಿದಂತಾಗುವುದಿಲ್ಲ. ಇದು ಸುಧಾರಣೆಯ ಪ್ರಥಮ ಘಟ್ಟ ಮಾತ್ರ.

ನಿಜವಾದ ಭೂಸುಧಾರಣೆಯು ಆ ಮೇಲೆ ನಡೆಯಬೇಕಾಗಿದೆ—ಎಂದರೆ, ಭದ್ರತೆಯನ್ನು ಹೊಂದಿದ ಸಾಗುವಳಿದಾರನು ತನ್ನ ಬೇಸಾಯದಲ್ಲಿರುವ ಭೂಮಿಯಲ್ಲಿ ಆದಷ್ಟು ಹೆಚ್ಚು ಉತ್ಪತ್ತಿಯನ್ನು ತೆಗೆಯಬೇಕಾಗಿದೆ. ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಸಕಲ ಸಾಧನಗಳನ್ನೂ ಕೈಗೊಳ್ಳಬೇಕಾಗಿದೆ. ಹೊಲಗಳ ತುಂಡರಿಸುವಿಕೆಯನ್ನು ನಿಲ್ಲಿಸಬೇಕಾಗಿದೆ. ಇದೇ ಭೂಸುಧಾರಣೆಯ ಅಂತರ್ಯ.

(ವಿವಿಧ ಮೂಲಗಳಿಂದ)

# ಅಧ್ಯಾಪಕರಿಗೆ-

## ಕಾಂಟ್ರಿಬ್ಯೂಟರಿ ಪ್ರಾವಿಡೆಂಟ್ "ಫಂಡ್"—ಇನ್ಶ್ಯೂರೆನ್ಸ್—ಪೆನ್‌ಶನ್

ಖಾಸಗಿ ಮೆನೇಜ್‌ಮೆಂಟುಗಳಲ್ಲಿ ಮತ್ತು ಸ್ಥಳೀಕ ಸಂಸ್ಥೆಗಳಲ್ಲಿ ನೇಮಕ ಮಾಡಲ್ಪಟ್ಟಿರುವ ಅಧ್ಯಾಪಕರ ಉಪಯೋಗಾರ್ಥವಾಗಿ, ಸರಕಾರದವರು ಕಾಂಟ್ರಿಬ್ಯೂಟರಿ ಪ್ರಾವಿಡೆಂಟ್‌ಫಂಡ್-ಇನ್ಶ್ಯೂರೆನ್ಸ್ ಪೆನ್‌ಶನ್ ಸ್ಕೀಮನ್ನು ಪ್ರಾರಂಭಿಸಲು ನಿಶ್ಚಯಿಸಿರುತ್ತಾರೆ. ಅಧ್ಯಾಪಕರ ಬಗ್ಗಿನ ಪೆನ್‌ಶನ್ ಸ್ಕೀಮು, ಸರಕಾರಿ ನೌಕರರ ನೌಕರಿ ಪೆನ್‌ಶನ್‌ಗಳ ಬಗ್ಗೆ ಅನುಸರಿಸಲ್ಪಟ್ಟ ರೀತಿಯಲ್ಲಿಯೇ ಹೆಚ್ಚು ಕಡಿಮೆಯಾಗಿ ಅನುಸರಿಸಲ್ಪಡುವುದು. 40 ವರ್ಷ ಪ್ರಾಯದ ತನಕದ ಅಧ್ಯಾಪಕರ ಬಗ್ಗೆ ಒಂದು ಕಡ್ಡಾಯವಾದ ಇನ್ಶ್ಯೂರೆನ್ಸ್ ಯೋಜನೆಯನ್ನು ಪ್ರಾರಂಭಿಸಲು ಸರಕಾರದವರು ನಿಶ್ಚಯಿಸಿರುತ್ತಾರೆ. ಈ ಯೋಜನೆಯ ಮೇರೆಗೆ ಇನ್ಶ್ಯೂರೆನ್ಸ್ ಬಗ್ಗೆ ಅಧ್ಯಾಪಕರು ತಾವೇ ಹಣ ಪಾವತಿ ಮಾಡಬೇಕಾಗಿದೆ. ಆದಾಗ್ಯೂ ನಾನ್-ಪೆನ್‌ಶನಬಲ್ ನೌಕರಿಯಲ್ಲಿರುವ ಅಧ್ಯಾಪಕರ ಬಗ್ಗೆ ಸರಕಾರದವರಿಂದ ಪ್ರಾರಂಭಿಸಲಾದ ಈಗಿರುವ ಪ್ರಾವಿಡೆಂಟ್ ಫಂಡು ಮತ್ತು ಸ್ಥಳೀಕ ಸಂಸ್ಥೆಗಳವರಿಂದ ಅಂಥ ಸಂಸ್ಥೆಗಳಲ್ಲಿ ಕೆಲಸಕ್ಕಿಡಲ್ಪಟ್ಟವರ ಬಗ್ಗೆ ಸ್ಥಾಪಿಸಲಾಗಿದ್ದ ಪ್ರಾವಿಡೆಂಟ್ ಫಂಡುಗಳು ಅವುಗಳ ಆಡಳಿತೆಯ ಬಗ್ಗೆ ಏರ್ಪಡಿಸಲಾಗಿರುವ ಕ್ರಮಗಳ ಮೇರೆಗೆ ಇಟ್ಟುಕೊಂಡು ಬರಲಾಗುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವ ಬಗ್ಗೆ ಏರ್ಪಡಿಸಲಾದ ಕ್ರಮಗಳು, 1955ನೇ ಇಸವಿ ಎಪ್ರಿಲ್ 1ನೇ ತಾರೀಕಿನಿಂದ ಸಲುವಳಿಯಲ್ಲಿ ಬಂದಿರುವಂತೆ ಭಾವಿಸಲ್ಪಡತಕ್ಕದ್ದು ಮತ್ತು ಇದು 1955ನೇ ಇಸವಿ ಎಪ್ರಿಲ್ 1ನೇ ತಾರೀಕಿನಂದು ಅಥವಾ ಆ ಮೇಲೆ ನೌಕರಿಯಿಂದ ನಿವೃತ್ತರಾದ ಸಮಸ್ತರಿಗೂ ಅನ್ವಯಿಸಲ್ಪಡತಕ್ಕದ್ದು, ಸ್ಥಳೀಕ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವ ಅಧ್ಯಾಪಕರು, 1955ನೇ ಇಸವಿ ಎಪ್ರಿಲ್ 1ನೇ ತಾರೀಕಿನಿಂದ ಗ್ರಾಚ್ಯೂಟಿಗಳಿಗೆ ಅರ್ಹರಾಗಿರುವುದಿಲ್ಲ. ಈ ಹೊಸ ಯೋಜನೆಯು ಲೋಕಲ್ ಫಂಡ್ ನೌಕರರ ಅಥವಾ ಸ್ಥಳೀಕ ಸಂಸ್ಥೆಗಳಿಗೆ ವರ್ಗಾಯಿಸಲಾದ ಗವರ್ನ್‌ಮೆಂಟ್ ಶಾಲೆಗಳಲ್ಲಿಯ ಅಧ್ಯಾಪಕರ ಪೆನ್‌ಶನುಗಳಿಗೆ ಬಾಧಕ ತಟ್ಟುವುದಿಲ್ಲ. ಈ ಯೋಜನೆಯ ಮೇರೆಗೆ ಮಂಜೂರುಮಾಡಲಾದ ಪೆನ್‌ಶನ್ ಕಮ್ಯೂಟೇಶನನ್ನು ಅನುಮತಿಸಲಾಗುವುದಿಲ್ಲ. ಸರಕಾರದವರು, ಈ ಯೋಜನೆಯ ಆಡಳಿತೆಯ ಬಗ್ಗೆ ಕ್ರಮಗಳನ್ನು ಪ್ರಕಟಿಸಿರುತ್ತಾರೆ. ಈ ಕ್ರಮಗಳ ಆಧಾರದ ಮೇಲೆ ಮುಂದೆ ಕಾನೂನನ್ನು ಏರ್ಪಡಿಸಲಾಗುವುದು.


## ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 140/1956.

ಸಿಲ್ವೆಸ್ಟರ್ ಡಿಸೋಜಾರ್-ಯವರ ಜನರಲ್ ಪವರ್ ಓಫ್ ಎಟೋರ್ನಿ ಹೋಲ್ಡರ ಅಣ್ಣಯ್ಯ ಹೆಗ್ಡೆ — ವಾದಿ.

ಮತ್ತು

1) ಪೂವು ಹೆಂಗ್ಸು, 2) ಅಪ್ಪಯ್ಯ ಸಿಪಗ-ಪೂವು ಹೆಂಗ್ಸಿನ ಮಗ-ಉಡುಪಿ ತಾಲ್ಲೂಕು ವರ್ಗ ಗ್ರಾಮದ ಬಲ್ಲಾಡಿ ಪಡುಮನೆ

— ಪ್ರತಿವಾದಿರು.

ಸದ್ರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ವಾದಿಯು ಪ್ರತಿವಾದಿರ ಮೇಲೆ ಬಾಲಗೇಣಿ ಬಾಕಿ ಬಡ್ಡಿ ವಗೈರೆಗೆ ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು 2ನೇ ಪ್ರತಿವಾದಿಯ ನೋಟೀಸು ಬಗ್ಗೆ ತಾರೀಕು 21-9-1956ಕ್ಕೆ ಇಟ್ಟಿದೆ. ಆ ಕುರಿತು ಸದ್ರಿ 2ನೇ ಪ್ರತಿವಾದಿ ಆಕ್ಷೇಪ ಹೇಳತಕ್ಕದ್ದು ಇದ್ದರೆ ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಗಲು 10 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿಯನ್ನು ತಿಳಿಯಪಡಿಸೋಣಾಗಿದೆ.

P. Shivaji Shetty,
Advocate for Plaintiff.

Udipi, Dated 5—9—1956

## ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 380/1956

ವಾದಿ ನಾಗಪ್ಪಯ್ಯ ಭಟ್ಟ ಕಾಳಿಂಗ ಭಟ್ಟರ ಮಗ ಧಾರವಾಡ ಜಿಲ್ಲಾ ಹಾನಗಲ್ಲು ತಾಲ್ಲೂಕು ಅಕ್ಕಿ ಆಲೂರಲ್ಲಿರುವವನು. Post- Akkealur.

ಪ್ರತಿವಾದಿರು— 1. ಕೃಷ್ಣ ದೇವಡಿಗ ಕೇಶಿ ಹೆಂಗ್ಸಿನ ಮಗ, 2. ನಾಗು ಹೆಂಗ್ಸು 1ನೆ ಪ್ರತಿವಾದಿ ಸೊಸೆ, 3. ಅಂಬೆ ಹೆಂಗ್ಸು 4. ಬಚ್ಚಿ ಹೆಂಗ್ಸು 2ನೆ ಪ್ರತಿವಾದಿಯ ಮಕ್ಕಳು.

ಕುಂದಾಪುರ ತಾಲ್ಲೂಕು ನಾಡಾ ಗ್ರಾಮದಲ್ಲಿರುವವರು Post- Nada.

ಸದ್ರಿ ವಾದಿಯು ಸದ್ರಿ ಪ್ರತಿವಾದಿರ ಮೇಲೆ ಆಸ್ತಿ ಸ್ವಾಧೀನತೆಗೂ ಗೇಣಿ ಮಹುಟ್ಟುವಳಿ ಬಾಕಿಗೂ ಮಾಡಿದ ಮೇಲಿನ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 25-9-1956 ಕ್ಕೆ ತನಿಖೆಗೆ ಇಡಲಾಗಿರುತ್ತದೆ. ಆ ಕುರಿತು ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ರೆ ಸದ್ರಿ ಪ್ರತಿವಾದಿರನ್ನು ಯಕ್ಸಪಾರ್ಟಿಯಾಗಿ ಮಾಡಿ ಸದ್ರಿ ದಾವೆ ಅವರ ಗೈರಹಾಜ್ರಿಯಲ್ಲಿ ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳುಹಿಸೋಣಾಗುತ್ತದೆ.

M. M. Hebbar.
Advocate for Plaintiff.

ಮೊಕ್ಕಾಂ: ಕುಂದಾಪುರ. ತಾ 6-9-1956.

## ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S No. 218/1956.

ಪಿಟ್ಟಿಲ ಪ್ರಭು — ವಾದಿ

ರಾಘವೇಂದ್ರ ಮಲ್ಯ ಕೂಡಾ 3 ಜನರು — ಪ್ರತಿವಾದಿರು.

2. ಕಮಲಾಕ್ಷ ಮಲ್ಯ, ರಾಮಕೃಷ್ಣ ಮಲ್ಯರ ಮಗ, ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದ ಮೂಡಬಿದ್ರಿಯಲ್ಲಿರುವವ

2ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ ವಾದಿಯು ಪೂರ್ವಾಧಿಕಾರಿ ಅನಂತರಾಯ ಮಲ್ಯರಿಗೆ ನಿಮ್ಮ ಮತ್ತು 1-3ನೇ ಪ್ರತಿವಾದಿರ ಕುಟುಂಬದ ಬಾಬ್ತು ಸ್ಥಿರಾಸ್ತಿಗಳನ್ನು ಭೋಗ್ಯಾದಿಗೆ ಕೊಟ್ಟು ಆ ಬಗ್ಗೆ ಅವರಿಗೆ ನೀವು ತಾ. 4-10-29ರಲ್ಲು ರಿಜಿಸ್ಟ್ರಿ ರೂ 9000-0-0ಕ್ಕೆ ಬರಕೊಟ್ಟ ಭೋಗ್ಯಾದಿ ಆಧವು ಪ್ರಸ್ತಾವೇಜಿನಂತೆ ತೋರುವ, ವಾದಿಯು minarity ಕಾಲದಲ್ಲಿ ನೀವು ಅಕ್ರಮವಾಗಿ ಸ್ವಾಧೀನ ಮಾಡಿಕೊಂಡ ಆಸ್ತಿಗಳನ್ನು ಸ್ವಾಧೀನತೆ ಹುಟ್ಟುವಳಿ ವಗೈರೆ ಸಿವೃತ್ತಿ ಕೇಳಿ ರೂ. 5000ಕ್ಕೆ ವಾದಿಯು ತನ್ನ title ಆಧರಿಸಿ ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾ. 20-9-56ಕ್ಕೆ ನಿಮಗೆ ಅಖೈರ ನೋಟಿಸಿಗೆ ಇಟ್ಟಿದೆ. ಆ ಕುರಿತು ನಿಮಗೆ ಆಕ್ಷೇಪ ಇದ್ರೆ ಸದ್ರಿ ದಿವಸ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನವಾಗುವದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯದೆ.

K. V. Kamath
Advocate for Plaintiff.

Karkala, 8—2—56.

ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬
VOL. 36

20—9—1956

ಸಂಚಿಕೆ ೩
NO. 3

## ನೇತಾಜಿ ಬೋಸರು

# ಸುಭಾಷರು ಮರಣಗೊಂಡಿರುವ ವಿಷಯವು ನಿಜವಾದುದಾಗಿದೆ

### ಭಾರತ ಸರಕಾರದಿಂದ ನೇಮಿತ ವಿಚಾರಣಾ ಸಮಿತಿಗೆ ಇದು ಸಂಪೂರ್ಣ ಖಚಿತವಾಗಿದೆ

ನೇತಾಜಿ ಸುಭಾಷ್ ಚಂದ್ರ ಬೋಸ್ ... ಚಾರಣಾ ಸಮಿತಿಯವರು ಇದೇ ೧೧ನೇ ... ನಾಂಕ ತಮ್ಮ ವರದಿಯನ್ನು ಪ್ರಕಟಿಸಿ ... ರು. ನೇತಾಜಿ ಸುಭಾಷ್ ಚಂದ್ರ ಬೋ... ರವರು, ೧೯೪೫ನೇ ಅಗಸ್ಟ್ ೧೮ರಂದು ... ಫಾರ್ಮೋಸಾದಲ್ಲಿ ತೈಹೊಕು ವಿಮಾನ ನಿ... ಲ್ದಾಣದಲ್ಲಿ ಸಂಭವಿಸಿದ ವಿಮಾನಾಪ... ಘಾತದಲ್ಲಿ ಮೃತರಾದರೆಂಬ ತೀರ್ಮಾನಕ್ಕೆ ... ಸಮಿತಿಯವರು ಬಂದಿರುವರು. ಅವರ ... ಸ್ತಿಯು ಈಗ ಟೋಕಿಯೋದಲ್ಲಿರುವ ... ಂಕೋಜಿ ದೇವಾಲಯದಲ್ಲಿದೆಯೆಂದೂ ... ಸಮಿತಿಯ ಸದಸ್ಯರು ವರದಿಯಲ್ಲಿ ತಿ... ಸಿರುವರು.

ಸುಭಾಷ್ ಬೋಸ್‌ರವರ ಅಸ್ತಿಯ... ನ್ನು ಉಚಿತ ಗೌರವದೊಂದಿಗೆ ಭಾರತಕ್ಕೆ ... ಂದು, ಸೂಕ್ತವಾದ ಸ್ಥಳದಲ್ಲಿ ಸ್ಮಾರಕ ... ಯೊಂದನ್ನು ನಿರ್ಮಿಸಬೇಕೆಂದೂ ಈ ಸಮಿ... ತಿಯವರು ಶಿಫಾರಸು ಮಾಡಿರುವರು

ಈ ಅಧಿಕೃತ ವಿಚಾರಣಾ ಸಮಿತಿಯ... ನ್ನು ೧೯೫೬ನೇ ಎಪ್ರಿಲ್ ತಿಂಗಳಲ್ಲಿ ಭಾ... ರತ ಸರ್ಕಾರದವರು ನೇಮಿಸಿದರು. ನೇ... ತಾಜಿಯವರ ಜೀವನ ಕೊನೆಯ ದಿನಗಳಿ... ಗೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ವಿ... ಚಾರಣೆ ನಡೆಸಿ ಪ್ರಕಟಿಸಬೇಕೆಂದು ಸಾ... ರ್ವಜನಿಕ ಬೇಡಿಕೆಗಳನುಸಾರವಾಗಿ ಈ ... ಸಮಿತಿಯನ್ನು ಭಾರತ ಸರ್ಕಾರದವರು ... ನೇಮಿಸಿದರು. ಆಗಾಗ್ಗೆ ಪಾರ್ಲಿಮೆಂಟಿನ... ಲ್ಲಿಯೂ ಇದೇ ಅಪೇಕ್ಷೆಯನ್ನು ವ್ಯಕ್ತಪ... ಡಿಸಲಾಗಿತ್ತು.

ಈ ಸಮಿತಿಯಲ್ಲಿ, ಪಾರ್ಲಿಮೆಂಟಿನ ಸ... ದಸ್ಯರಾದ ಶ್ರೀ ಷಾನವಾಜ್ (ವಿಸರ್ಜಿತ ... ಐ. ಎನ್. ಎ. ನಲ್ಲಿ ಮೇಜರ್ ಜೆನರಲ್) ... ನೇತಾಜಿಯವರ ಅಣ್ಣಂದಿರಾದ ಶ್ರೀ ... ಸುರೇಶ್ ಚಂದ್ರ ಬೋಸ್, ಅಂದಮಾನ ... ಮತ್ತು ನಿಕೋಬಾರ್ ದ್ವೀಪಗಳ ಮುಖ್ಯ ... ಕಮಿಷನರಾದ ಶ್ರೀ ಎಸ್. ಎನ್. ಮೈತ್ರ ಇವರು ಸದಸ್ಯರಾಗಿದ್ದರು. ಶ್ರೀ ಮೈತ್ರರವರನ್ನು ಪಶ್ಚಿಮ ಬಂಗಾಳ ಸರ್ಕಾರದವರು ನೇಮಿಸಿದ್ದರು.

೧೯೪೫ ಅಗಸ್ಟ್ ೧೮ರ ಸುಮಾರಿನಲ್ಲಿ, ನೇತಾಜಿ ಸುಭಾಷ್ ಚಂದ್ರ ಬೋಸರು ಬಾಂಗ್‌ಕಾಕ್‌ಗೆ ಹೊರಟದ್ದಕ್ಕೆ ಸಂಬಂಧಪಟ್ಟ ಪರಿಸ್ಥಿತಿ, ವಿಮಾನಾಪಘಾತದ ಪರಿಣಾಮವಾಗಿ ಅವರು ಮೃತರಾದರೆಂಬ ವದಂತಿ, ಹಾಗೂ ಅನಂತರ ಆ ಸಂಬಂಧದ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಭಾರತ ಸರ್ಕಾರಕ್ಕೆ ವರದಿಮಾಡುವುದು ಈ ಸಮಿತಿಯವರ ಮುಖ್ಯ ಕಾರ್ಯವಾಗಿತ್ತು.

ಈ ಸಮಿತಿಯವರು ಭಾರತ ಹಾಗೂ ಪೂರ್ವ ಏಷ್ಯಾದಲ್ಲಿ, ನೇತಾಜಿಯವರ ಕೊನೆಯ ದಿನಕ್ಕೆ ಸಂಬಂಧಪಟ್ಟ ಸಾಕ್ಷ್ಯಗಳನ್ನೆಲ್ಲ ಪರಿಶೀಲಿಸಿದರು. ಯುದ್ಧಾನಂತರದಲ್ಲಿ ಸಿವಿಲ್ ಮತ್ತು ಮಿಲಿಟರಿ ಶಾಖೆಯವರು ನಡೆಸಿದ ಗುಪ್ತ ವಿಚಾರಣೆಗಳೆಲ್ಲವನ್ನೂ ಈ ಸಮಿತಿಯವರು ಸಮೀಕ್ಷೆ ಮಾಡಿದರು. ಒಟ್ಟು, ಈ ಸಮಿತಿಯವರು ೬೭ ಸಾಕ್ಷ್ಯಗಳನ್ನು ಪರಿಶೀಲಿಸಿದರು. ಅವುಗಳಲ್ಲಿ ೩೨ ಸಾಕ್ಷ್ಯಗಳನ್ನು ಟೋಕಿಯೋದಲ್ಲಿಯೂ, ೪ನ್ನು ಬಾಂಗ್‌ಕಾಕ್‌ನಲ್ಲಿಯೂ, ೩ನ್ನು ಸೈಗಾನಿನಲ್ಲಿಯೂ, ಉಳಿದ ೨೮ನ್ನು ದೆಹಲಿ ಮತ್ತು ಕಲ್ಕತ್ತೆಗಳಲ್ಲಿಯೂ ಪರಿಶೀಲಿಸಲಾಯಿತು. ಈ ವಿಮಾನಾಪಘಾತದಿಂದ ಪಾರಾಗಿ ಬದುಕಿಕೊಂಡಿದ್ದ ೬ ಮಂದಿ ಜಪಾನೀಯರಲ್ಲಿ ೪ ಮಂದಿಯ ಸಾಕ್ಷ್ಯವನ್ನೂ, ನೇತಾಜಿಯವರ ಅಂತಿಮಕಾಲದಲ್ಲಿ ಚಿಕಿತ್ಸೆ ನಡೆಸಿದ ಇಬ್ಬರು ಡಾಕ್ಟರ ಸಾಕ್ಷ್ಯವನ್ನೂ ಈ ಸಮಿತಿಯವರು ಪಡೆದರು.

ಈ ಸಾಕ್ಷ್ಯಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿದ ನಂತರ ಸಮಿತಿಯ ಸದಸ್ಯರು ವಿವರವಾದ ಸಮಾಲೋಚನೆ ನಡೆಸಿ, ಸದಸ್ಯರೆಲ್ಲರೂ ಒಪ್ಪುವ ಅಂಶಗಳ ಒಂದು ಪಟ್ಟಿಯನ್ನು ತಯಾರಿಸಿದರು. ಅದರ ಪ್ರಕಾರ, ಫಾರ್ಮೋಸಾದಲ್ಲಿ ತೈಹೊಕು ವಿಮಾನ ನಿಲ್ದಾಣದಲ್ಲಿ ವಿಮಾನಾಪಘಾತವಾಯಿತೆಂದೂ, ಅದರಲ್ಲೇ ನೇತಾಜಿಯವರಿದ್ದರೆಂದೂ, ಅವರಿಗೆ ಅಲ್ಲಿಯೇ ಅಂತಿಮ ದಹನಕ್ರಿಯೆ ನಡೆಸಲಾಯಿತೆಂದೂ, ಈಗ ಟೋಕಿಯೋದಲ್ಲಿ ರೆಂಕೋಜಿ ದೇವಾಲಯದಲ್ಲಿರುವ ಅಸ್ತಿಯು ಬಹುತೇಕ ಅವರದೇ ಎಂದು ಈ ಸಮಿತಿಯ ಎಲ್ಲಾ ಸದಸ್ಯರು ಅಭಿಪ್ರಾಯಪಟ್ಟರು. ಅಲ್ಲಿಂದೀಚೆಗೆ, ಸಮಿತಿಯ ಸದಸ್ಯರಾದ ನೇತಾಜಿಯ ಅಣ್ಣ ಶ್ರೀ ಬೋಸ್‌ರವರು, ಬೇರೆಯ ದೃಷ್ಟಿಯನ್ನು ತಾಳಿ, ಈ ವರದಿಗೆ ಸಹಿಯನ್ನು ಹಾಕಿಲ್ಲ. ನೇತಾಜಿ ಬದುಕಿರುವರೆಂದೇ ತಾವಿನ್ನೂ ನಂಬಿರುವುದಾಗಿ ಅವರು ಹೇಳಿದ್ದಾರೆ; ಮತ್ತು ಬೇಗನೆ ತಮ್ಮ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಹೊರಡಿಸುವುದಾಗಿ ಹೇಳಿದ್ದಾರೆ.

ಈ ವರದಿಯನ್ನು ಆರು ಭಾಗಗಳನ್ನಾಗಿ ವಿಂಗಡಿಸಲಾಗಿದೆ: (೧) ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ಕೊನೆಯ ಯೋಜನೆಗಳು, (೨) ತೈಹೊಕುನಲ್ಲಿ ವಿಮಾನಾಪಘಾತ, (೩) ನೇತಾಜಿಯವರ ಮರಣ, (೪) ಅವರ ಅಂತಿಮ ದಹನ ಕ್ರಿಯೆ, (೫) ನೇತಾಜಿಯವರ ಅಸ್ತಿ, (೬) ಅವರು ತಮ್ಮೊಂದಿಗೆ ವಿಮಾನದಲ್ಲಿ ಕೊಂಡೊಯ್ದ ಸಂಪತ್ತು—ಇವೇ ವರದಿಯಲ್ಲಿರುವ ಆರು ಭಾಗಗಳು.

ಜಪಾನಿನ ಸೋಲು ಅನಿವಾರ್ಯವೆಂದು ಖಚಿತಪಟ್ಟಾಗ ನೇತಾಜಿ ಸುಭಾಷ ಚಂದ್ರ ಬೋಸರು ತಮ್ಮ ಹೋರಾಟದ ನೆಲೆಯನ್ನು ಆಗ್ನೇಯ ಏಷ್ಯಾದಿಂದ ಮಂಚೂರಿಯ ಮಾರ್ಗವಾಗಿ, ರಷ್ಯಾಕ್ಕೆ ಬದಲಾಯಿಸಿಕೊಳ್ಳಲು ಹವಣಿಸಿದರು. ೧೯೪೫ರ ಆಗಸ್ಟ್ ೧೬ರಂದು ಅವರು ಬಾಂಕಾಕನ್ನೂ; ೧೯೪೫ರ ಆಗಸ್ಟ್ ೧೭ರಂದು ಸೈಗಾನನ್ನು ಬಿಟ್ಟು ವಿಮಾನದಲ್ಲಿ ಮಂಚೂರಿಯಾಕ್ಕೆ ಹೋದರು ೧೯೪೫ರ ಆಗಸ್ಟ್ ೧೮ರಂದು ತೈಹೋಕುವಿನಲ್ಲಿ ವಿಮಾನಾಪಘಾತವಾಯಿತು. ಅದರ ಪರಿಣಾಮವಾಗಿ ನೇತಾಜಿಯವರಿಗೆ ತೀವ್ರ ಗಾಯಗಳಾಗಿ ತೈಹೊಕು ಆಸ್ಪತ್ರೆಯಲ್ಲಿ ಅದೇ ದಿನ ರಾತ್ರಿ ನಿಧನರಾದರು. ಅವರ ಕಳೇಬರಕ್ಕೆ ತೈಹೊಕ್ಕುನಲ್ಲಿ, ದಹನಕ್ರಿಯೆಯನ್ನು ನೆರವೇರಿಸಿ, ಸೆಪ್ಟೆಂಬರ್ ತಿಂಗಳಲ್ಲಿ ಅವರ ಅಸ್ತಿಯನ್ನು ಟೋಕಿಯೋದಲ್ಲಿ ರೆಂಕೊಜಿ ದೇವಾಲಯಕ್ಕೆ ತರಲಾಯಿತು.

೧೯೪೫ರ ಆಗಸ್ಟ್ ೧೬ರಂದು ಪ್ರಾತಃಕಾಲ ನೇತಾಜಿಯವರು ಸಿಂಗಪುರವನ್ನು ಬಿಟ್ಟು ಅದೇ ದಿನ ಮಧ್ಯಾಹ್ನ ಬಾಂಕಾಕಿಗೆ ಬಂದರು. ಅವರ ಜೊತೆಗೆ ಅವರ ೬ ಮಂದಿ ಭಾರತೀಯ ಸಲಹಾಗಾರರಿದ್ದರು. ಸೈಗಾನಿನಲ್ಲಿ ಅವರ ನಿರೀಕ್ಷೆಯಂತೆ ವ್ಯವಸ್ಥೆಗಳಾಗಲಿಲ್ಲ. ನೇತಾಜಿಯವರನ್ನೂ ಅವರ ಪಕ್ಷದವರನ್ನೂ ಮಂಚೂರಿಯಾಕ್ಕೆ ಕೊಂಡೊಯ್ಯುವುದಕ್ಕೆ ಯಾವುದೇ ವಿಶೇಷ ವಿಮಾನದ ವ್ಯವಸ್ಥೆಯಾಗಿರಲಿಲ್ಲ ಆಗಲೇ ನೇತಾಜಿಯವರ ಜೊತೆಗೆ ಕರ್ನಲ್ ಹಬೀಬ್-ಉರ್-ರೆಹಮಾನ್‌ರವರೊಬ್ಬರೇ ಹೋಗಬೇಕೆಂದು ನಿರ್ಧಾರವಾಯಿತು. ಜಪಾನಿ ಪ್ರಯಾಣಿಕರಲ್ಲಿ, ಸುಪ್ರಸಿದ್ಧ ಮಿಲಿಟರಿ ಅಧಿಕಾರಿ ಲೆ|| ಜನರಲ್ ಷೈಡೈರವರಿದ್ದರು, ಅವರೂ ಮಂಚೂರಿಯಾಕ್ಕೆ ಹೋಗುತ್ತಿದ್ದರು. ಆಗಸ್ಟ್ ೧೭ರಂದು ಮಧ್ಯಾಹ್ನ ಸೈಗಾನ್ ವಿಮಾನ ನಿಲ್ದಾಣದಿಂದ ಹೊರಟು ತೈಹೋಕ್‌ನಲ್ಲಿ ಇಳಿಯಿತು. ತೈಹೊಕುನಲ್ಲಿ ಎಂಜಿನ್‌ಗಳನ್ನು ಪರೀಕ್ಷಿಸಲಾಗಿತ್ತು. ಆದರೂ, ವಿಮಾನವೇರುತ್ತಿದ್ದ ಹಾಗೆಯೇ ಅ ಸ್ಫೋಟನೆಯಾಗಿ ಬೆಂಕಿ ಹತ್ತಿಕೊಂಡಿತು. ಈ ಅಪಘಾತದಿಂದ ಪಾರಾಗಿ ಬದುಕಿಕೊಂಡ ೭ ಮಂದಿಯಲ್ಲಿ ೫ ಜನರ ಸಾಕ್ಷ್ಯವನ್ನು ಈ ಸಮಿತಿಯವರು ಪಡೆದಿರುವರು. ಆರನೆಯವರು ದಾಖಲು ಮಾಡಿದ್ದ ಹೇಳಿಕೆಯನ್ನು ಪರಿಶೀಲಿಸಿರುವರು.

೧೨ ನೇ ಪುಟ ನೋಡಿರಿ

## ನಮ್ಮ ಸಂಪತ್ತು

* * *

ನಾವು ನೆರವಾಗಿ ವಿಸ್ತರಿಸಿದ ವ್ಯಾಪಾರ ಕ್ಷೇತ್ರವು ನಮ್ಮ ಸಂಪತ್ತಲ್ಲ.
ನಾವು ಭವ್ಯವಾಗಿ ಕಟ್ಟಿಸಿದ ಕಟ್ಟೋಣಗಳು ನಮ್ಮ ಐಶ್ವರ್ಯವಲ್ಲ.
ನಾವು ಜೋಕೆಯಾಗಿ ಉಳಿಸಿದ ಕ್ಷೇಮನಿಧಿಯು ನಮ್ಮ ಸೌಭಾಗ್ಯವಲ್ಲ.
ನಾವು ಪಾಲುಗಾರರಿಗೆ ವಿತರಣೆ ಮಾಡುವ ಉತ್ಪಾದನೆಯು ನಮ್ಮ ಶ್ರೀಮಂತಿಕೆಯಲ್ಲ.

ಇವೆಲ್ಲವೂ ನೀವು ನಮ್ಮ ಮೇಲೆ ತೋರಿಸುತ್ತಿರುವ ವಿಶ್ವಾಸದ ಫಲಿತಾಂಶ. ನಿಮ್ಮ ವಿಶ್ವಾಸವೇ ನಮ್ಮ ಪರೋಕ್ಷ ಸಂಪತ್ತು. ಅದನ್ನು ಅತ್ಯಧಿಕವಾಗಿ ಸಂಪಾದಿಸಿ ನಿಮ್ಮೆಲ್ಲರ ಅರ್ಹತೆಯನ್ನು ಪಡೆಯುವುದೇ ನಮ್ಮ ಮುಖ್ಯ ಧ್ಯೇಯ.

ದಿ ವಿಜಯ ಬೇಂಕ್ ಲಿಮಿಟೆಡ್
ಒಟ್ಟು ವಹಿವಾಟು ಮೊಬಲಗು ರೂ. 90,00,000

## ಭಾರತೀಯ ನರ್ತನ

# ಸೋವಿಯತ್ತಿನಲ್ಲಿ ನಮ್ಮ ನೃತ್ಯಕಲಾವಿದರ ಮಧುರ ಪ್ರವಾಸ

* *

**ರಶಿಯದ ಪ್ರೇಕ್ಷಕರನ್ನು ಮುಗ್ಧಗೊಳಿಸುವ ಪ್ರದರ್ಶನ ಅಸದೃಶ ಪ್ರೌಢಿಮೆ**

ಭಾರತ ದೇಶದ ಮತ್ತು ಸೋವಿಯತ್ ಒಕ್ಕೂಟದ ಬೃಹತ್ ಜನತೆಗಳ ನಡುವಣ ಸಾಂಸ್ಕೃತಿಕ ಸಂಬಂಧಗಳು ಎಂದಿಗಿಂತಲೂ ಹೆಚ್ಚು ಹೆಚ್ಚು ವ್ಯಾಪಕವೂ ಮತ್ತು ಸನ್ನಿಹಿತವೂ ಆಗುತ್ತಿವೆ. ಇನ್ನೊಂದು ದೇಶದ ಜನತೆಯಿಂದ ನಿರ್ಮಿತವಾದ ಸಾಂಸ್ಕೃತಿಕ ಮೌಲ್ಯಗಳ ಪರಿಚಯವನ್ನು ಪಡೆಯುವುದೇ ಆ ದೇಶದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯುವ ಮಾರ್ಗವಾಗಿರುತ್ತದೆ. ಆದುದರಿಂದ ಸೋವಿಯತ್ ಜನತೆಯು ಭಾರತೀಯ ಸಂಸ್ಕೃತಿಯ ವಿಷಯದಲ್ಲಿ ತೋರುವ ಆಸಕ್ತಿಯು ತೀರಾ ಸ್ವಾಭಾವಿಕವಾದುದೇ ಆಗಿದೆ. ಮಾಸ್ಕೋ ಮತ್ತು ಲೆನಿನ್‌ಗ್ರಾಡ್ ನಗರಗಳಲ್ಲಿ ನಡೆದ ಭಾರತೀಯ ಕಲಾಪ್ರದರ್ಶನಗಳು ತುಂಬಾ ಯಶಸ್ವಿಯಾಗಿದ್ದುವು. ಶ್ರೀಯುತರಾದ ರವೀಂದ್ರನಾಥ ಟಾಗೋರ್, ಪ್ರೇಮಚಂದ್, ಮುಲ್ಕ್‌ರಾಜ್ ಆನಂದ್, ಖ್ವಾಜಾ ಅಹಮದ್ ಅಬ್ಬಾಸ್ ಮತ್ತು ಇತರ ಭಾರತೀಯ ಲೇಖಕರ ಪುಸ್ತಕಗಳು ಪ್ರಕಟವಾದ ಅತ್ಯಲ್ಪ ಕಾಲದಲ್ಲಿಯೇ ಸೋವಿಯತ್ ಓದುಗರಿಂದ ಕೊಳ್ಳಲ್ಪಡುತ್ತವೆ. ಭಾರತೀಯ ಚಲಚ್ಚಿತ್ರಗಳು ಅತ್ಯಂತ ದೊಡ್ಡ ಜನಸಮುದಾಯಗಳನ್ನು ತಪ್ಪದೆ ಆಕರ್ಷಿಸುತ್ತವೆ.

ಭಾರತೀಯ ಜನತೆಯು ಪುರಾತನ ಕಾಲದಿಂದಲೂ ಅವರ ಸಂಗೀತ ಪ್ರತಿಭೆಗೂ, ಅವರ ಗೀತ—ನೃತ್ಯ—ಪ್ರಿಯತೆಗೂ ಪ್ರಸಿದ್ಧರಾದವರಾಗಿದ್ದಾರೆ. ಅವರ ಬಹುರೂಪದ ಮತ್ತು ನವೀನ ಕಲ್ಪನೆಯ ಕಲೆಯು ಪ್ರತಿಯೊಂದು ಪ್ರಾಂತದಲ್ಲಿಯೂ ತನ್ನ ಸ್ವಂತ ಸಂಪ್ರದಾಯಗಳನ್ನೂ, ವಿಶಿಷ್ಟವಾದ ವಿಲಕ್ಷಣ ಸ್ವರೂಪಗಳನ್ನೂ ಹೊಂದಿದ್ದು, ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಪರಂಪರಾಗತವಾಗಿ ಕೊಡುಗೆಯಾಗಿ ನೀಡಲ್ಪಟ್ಟಿದೆ. ೧೯೫೩ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ನೃತ್ಯ-ಸಂಗೀತ-ನಾಟಕ ಅಕಾಡೆಮಿಯಂತಹ ವಿಶಿಷ್ಟ ಸಂಘಟನೆಗಳು ಜಾನಪದ ಸಂಗೀತವನ್ನೂ, ಹಾಡುಗಳನ್ನೂ ಮತ್ತು ಕುಣಿತಗಳನ್ನೂ ಅತ್ಯಂತ ಶ್ರಮವಹಿಸಿ ಸಂಗ್ರಹಿಸುತ್ತಿವೆ ಮತ್ತು ಬೆಳೆಸುತ್ತಿವೆ. ಭಾರತ ದೇಶವು ಅನೇಕ ವಿಶಿಷ್ಟ ಶಿಕ್ಷಣ ವಿದ್ಯಾಲಯಗಳನ್ನು ಹೊಂದಿದೆ. ಜಾನಪದ ಸಂಗೀತಕಾರರೂ, ಗಾಯಕರೂ ಮತ್ತು ನರ್ತಕರೂ ತಮ್ಮ ಪ್ರತಿಭಾನಂತ ಯೋಗ್ಯತೆಗಳನ್ನು ಈ ಶಿಕ್ಷಣಾಲಯಗಳಲ್ಲಿ ಅಭಿವೃದ್ಧಿ ಪಡಿಸಿಕೊಳ್ಳುತ್ತಾರೆ.

ಪ್ರಚಲಿತ ಸಮಯದಲ್ಲಿ ಭಾರತೀಯ ಕಲಾಕಾರರದೊಂದು ವೃಂದವು ರಶಿಯದಲ್ಲಿ ಸಂಚರಿಸುತ್ತಿದೆ. ಅವರ ಕಾರ್ಯಕ್ರಮ ಸಿದ್ಧತೆಯು, ಸಮೃದ್ಧತೆಗೂ, ವೈವಿಧ್ಯತೆಗೂ ಗಣನೀಯವಾದುದಾಗಿದೆ.

ಅತ್ಯಂತ ಪ್ರಾಚೀನವಾದ ಶ್ರೇಷ್ಠ ನೃತ್ಯ ಪದ್ಧತಿಯಾಗಿರುವ "ಭರತನಾಟ್ಯ"ವು (೨೦೦೦ ವರ್ಷಗಳಷ್ಟು ಹಳೆಯದು) ಮೂರು ನೃತ್ಯಗಳಿಂದ ಈ ಪದ್ಧತಿಯ ಪ್ರತಿಭಾಪೂರ್ಣ ನೃತ್ಯ ಕಲಾವಿದೆಯರಾದ ಶ್ರೀಮತಿ ಅಲ್ಲಡಿ ಶಾರದಾರವರು ಪ್ರದರ್ಶಿಸಿದ 'ಅಲರಿಪ್ಪು' 'ಜತಿಸ್ವರಂ' ಮತ್ತು ಜಾವಳಿ'ಗಳಿಂದ— ಪ್ರತಿನಿಧೀಕರಿಸಲ್ಪಟ್ಟಿದೆ. ಅಸಾಧಾರಣವಾದ ನೃತ್ಯರಚನೆಯನ್ನು ರೂಪುಗೊಳಿಸುತ್ತ, ಈ ನೃತ್ಯಗಳ ಸಾಂಪ್ರದಾಯಿಕವಾದ ಮುದ್ರೆಗಳನ್ನೂ, ಹಾವಭಾವಗಳನ್ನೂ ನಿರ್ದುಷ್ಟವಾದ ಸಿಷ್ಕೃಷ್ಟತೆಯಿಂದಲೂ ಮತ್ತು ಅಂಗವಿನ್ಯಾಸದ ಭಾವ ಪ್ರದರ್ಶಕತೆಯಿಂದಲೂ ಈ ಕಲಾವಿದೆಯು ಪ್ರೇರೇಪಿಸುತ್ತಾರೆ.

ಪ್ರಾಚೀನ 'ಕಥಕಳಿ' ನೃತ್ಯ ಪದ್ಧತಿಯು ಮೂಕಾಭಿನಯದ ನೃತ್ಯಗಳನ್ನೊಳಗೊಂಡಿದೆ. ಭಾರತೀಯ ದೇವತೆಗಳ ಜೀವನವನ್ನು ಕುರಿತು ಬರೆಯಲ್ಪಟ್ಟಿರುವ ಪೌರಾಣಿಕ ಕೃತಿಗಳಿಂದ ಇದಕ್ಕೆ ಕಥಾವಸ್ತುಗಳು ತೆಗೆದುಕೊಳ್ಳಲ್ಪಟ್ಟಿವೆ. ಕಥಾನಾಯಕ ಪಾತ್ರಗಳ ಪೌರಾಣಿಕ ಸ್ವರೂಪವು ಅದರ ರೂಪಾಲಂಕಾರದ ಮೇಲೆಯೂ ಮತ್ತು ಉಡುಪುಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರುತ್ತದೆ: ಹೊಳೆಯುವ ಬಣ್ಣಬಣ್ಣದ ಮೊಗವಾಡಗಳ ಹಿಂಬದಿಯಲ್ಲಿ ನರ್ತಕರ ಮುಖಗಳು ಅಡಗಿರುತ್ತವೆ; ಎತ್ತರವಾದ ಕಿರೀಟಗಳು ಅವರ ತಲೆಗಳನ್ನು ಅಲಂಕರಿಸುತ್ತವೆ; ಅವರ ವೇಷಗಳು ದಿವ್ಯವಾದ ಉಡುಪುಗಳಿಂದ ಮೈತುಂಬಿಕೊಂಡಿರುತ್ತವೆ. ಶ್ರೀ ಟಿ. ರಾಮನ್ ಕುಟ್ಟಿ ಮತ್ತು ಶ್ರೀ ಕೃಷ್ಣ ಕುಟ್ಟಿಯವರಿಂದ "ಕೃಷ್ಣ ದುರ್ಯೋಧನ" ನೃತ್ಯವು— ಪ್ರಾಚೀನ ಕಥಕಳಿ ಪದ್ಧತಿಗೆ ಸೇರಿದುದು —ಅಭಿನಯಿಸಲ್ಪಡುತ್ತದೆ. ಕೃಷ್ಣ ದೇವರ ಕ್ರೋಧಪೂರ್ಣವಾದ "ಭಾಷಣಗಳನ್ನೂ" ಮತ್ತು ದುರ್ಯೋಧನ ಚಕ್ರವರ್ತಿಯ ಅಸಹಾಯಕತೆಯ ಆವೇಶವನ್ನೂ—ಇವೆರಡನ್ನೂ— ಈ ನೃತ್ಯ ಕಲಾವಿದರು ಅತ್ಯುತ್ಕೃಷ್ಟವಾಗಿ ಪ್ರದರ್ಶಿಸುತ್ತಾರೆ.

ಶಾಂತಿನಿಕೇತನದ ಒಂದು ಮಂಡಲಿಯವರು— ಶ್ರೀ ರವೀಂದ್ರನಾಥ ಟಾಗೋರರ ಕಥಾವಸ್ತುಗಳ ಮೇಲೆ ಆಧರಿಸಲ್ಪಟ್ಟ ಮತ್ತು ಶ್ರೀ. ನರೇಂದ್ರ ಕುಮಾರರವರಿಂದ ತಯಾರಿಸಲ್ಪಟ್ಟ "ಸುಗ್ಗಿಯ ಕುಣಿತ"ವನ್ನು ಪ್ರದರ್ಶಿಸಿದರು. ಶ್ರೀಮತಿಗಳಾದ ಮಿತ್ರ ದತ್, ಕಿರಣ್ ಮಹಾಜನ್, ಉಷಾ ಆರ್ಯ ನಾಯಕಂ, ಮತ್ತು ಮಂಜುಳಾ ದತ್— ಇವರೆಲ್ಲರೂ ಶ್ರೀ ರವೀಂದ್ರನಾಥ ಟಾಗೋರರು ಸ್ಥಾಪಿಸಿದ ವಿಶ್ವವಿದ್ಯಾನಿಲಯದ ಸಂಗೀತ-ನೃತ್ಯ ಶಾಖೆಯ ವಿದ್ಯಾರ್ಥಿನಿಯರು— ಭಾರತೀಯ ಕೃಷಕನ ಶ್ರಮದ ವಿಷಯವಾಗಿ ಕವಿತೆಯ ಮುಖಾಂತರವಾಗಿಯೂ, ಉತ್ಸಾಹಪೂರ್ವಕವಾಗಿಯೂ ಅತ್ಯಂತ ಭಾವನಾಪರವಶತೆಯಿಂದ ನೃತ್ಯ ಗಾನವೃಂದದಲ್ಲಿ ತಮ್ಮ ನೃತ್ಯವನ್ನು ನುಡಿಸುತ್ತಾರೆ. ಅದು ಹಲವು ರೀತಿಯಲ್ಲಿ ರಶಿಯದ ಪ್ರಾಂತವಾದ ಮಧ್ಯ ಏಶಿಯದ "ಹತ್ತಿ ಬಿಡಿಸುವ" ನೃತ್ಯವನ್ನು ಹೋಲುತ್ತದೆ.

ಪ್ರಸಿದ್ಧ ನರ್ತಕಿ ಸಿತಾರಾ ದೇವಿಯು ಭಾರತ ದೇಶದಲ್ಲಿ ಮಾತ್ರವಷ್ಟೇ ಅಲ್ಲದೆ ಭಾರತ ದೇಶದ ಗಡಿಗಳಿಂದಾಚೆಯೂ ಕೂಡ ದೂರದ ವರೆಗೆ ಸುಪರಿಚಿತರಾದ ಕಲಾವಿದೆಯರಾಗಿದ್ದಾರೆ. ಆಕೆಯು ಪುರಾತನ ಕಥಕ್-ಪದ್ಧತಿಯ "ಹೋಳಿ" ನೃತ್ಯವನ್ನು ಪ್ರದರ್ಶಿಸುತ್ತಾರೆ. ಅದರ ಸಮೃದ್ಧ ವೈವಿಧ್ಯತೆಗಾಗಿಯೂ, ಕ್ಲಿಷ್ಟವಾದ ಸ್ವರತರಂಗಗಳಿಗಾಗಿಯೂ, ಮಹತ್ತರವಾದ ಚಲನ ಸೌಲಭ್ಯತೆಗಾಗಿಯೂ, ಮತ್ತು ಕ್ರಿಯಾತ್ಮಕ ಚಲನವಿನ್ಯಾಸಕ್ಕಾಗಿಯೂ ಈ ಪದ್ಧತಿಯು ಗಣನೀಯವಾದುದಾಗಿದೆ. ಶ್ರೀಮತಿ ಸಿತಾರಾದೇವಿಯು ಸೊಗಸಾದ ನೃತ್ಯಕೌಶಲ್ಯವನ್ನೂ, ಭಾವ ಪ್ರದರ್ಶಕ ಮೂಕಾಭಿನಯವನ್ನೂ ಮತ್ತು ಮನಸೆಳೆಯುವ ನಟನಾಭಿರುಚಿಯನ್ನೂ ಹೊಂದಿದ್ದಾರೆ. ಮಯೂರ ನೃತ್ಯದಲ್ಲಿ ಆಕೆಯು ಈ ಪಕ್ಷಿಯ ಮೌಢ್ಯವನ್ನೂ ಮತ್ತು ಹೆಮ್ಮೆಯನ್ನೂ ಸೂಕ್ಷ್ಮವಾದ ವಿನೋದದ ಮೂಲಕ ಪ್ರದರ್ಶಿಸುತ್ತಾರೆ, ಮತ್ತೆ 'ಚುಟ್ಕ' ನೃತ್ಯದಲ್ಲಿಯಂತೂ ಆಕೆಯು ತನ್ನ ಲೋಕೋತ್ತರವಾದ ನಾದಲಹರಿಯಿಂದಲೂ ಮತ್ತು ತಲೆ ತಿರುಗಿಸುವಂತಹ ನೃತ್ಯಗತಿಯಿಂದಲೂ ಆಕೆಯು- ಸರಳವಾಗಿ ಹೇಳುವುದಾದಲ್ಲಿ — ಎಲ್ಲರನ್ನೂ ಬೆರಗುಗೊಳಿಸುತ್ತಾರೆ.

ಭಾರತ ದೇಶದ ಗಾಯನ ಕಲೆಯು ನೃತ್ಯ ಕಲೆಯಂತೆಯೇ, ಶತಮಾನಗಳ ಕಾಲದಲ್ಲಿ ಉದ್ಭವಿಸಿದ ಅನೇಕ ಗಾಯನ ಪದ್ಧತಿಗಳನ್ನೂ ಮತ್ತು ಪ್ರವೃತ್ತಿಗಳನ್ನೂ ಹೊಂದಿದೆ. ಪುರಾತನ ಗಾಯನ ಕಲೆಗೆ ಸೇರಿದ ಗೌಡ ಮಲ್ಹಾರ ರಾಗದ ಪರಿಚಯವನ್ನು ಶ್ರೀಮತಿ ಲಲಿತಾ ಉಭಯಕರ್‌ರವರು ರಶ್ಯನರಿಗೆ ಮಾಡಿಕೊಡುತ್ತಾರೆ. ಶ್ರೀ ರವೀಂದ್ರನಾಥ ಟಾಗೋರರವರ ಗೀತೆಗಳನ್ನು – ಟಾಗೋರರವರದೇ ಸ್ವರಸಂಯೋಜನೆಯನ್ನನುಸರಿಸಿ-ಶ್ರೀ ದ್ವಿಜೇನ ಮುಖರ್ಜಿಯವರು ಹಾಡಿದುದು ಪ್ರೇಕ್ಷಕರ ಗಮನವನ್ನು ತುಂಬಾ ಆಕರ್ಷಿಸಿತು. ಈ ಗಾಯಕರು ತಮ್ಮ ಸಂಗೀತ ಪ್ರತಿಭೆಯಿಂದಲೂ, ಸರಳ ಕಂಠ ಸ್ವರದಿಂದಲೂ ಸುಂದರ ನಾದಮಾಧುರ್ಯದಿಂದಲೂ ಶ್ರೋತೃಗಳನ್ನು ಒಲಿಸಿಕೊಳ್ಳುತ್ತಾರೆ. ವಾರ್ಸಾದಲ್ಲಿ ನಡೆದ ವಿಶ್ವ ಯುವಜನೋತ್ಸವದಲ್ಲಿ ಪ್ರಥಮ ಬಹುಮಾನವನ್ನೂ ಸುವರ್ಣ ಪದಕವನ್ನೂ ಪಡೆದ ಶ್ರೀ ನಿರ್ಮಲೇಂದು ಚೌಧುರಿಯವರು ಹಾಡಿದ ಜಾನಪದ ಗೀತಗಳೂ ಕೂಡ ತಮ್ಮ ಮನಮುಟ್ಟುವ ವೈಶಿಷ್ಟ್ಯತೆಗೆ ಪ್ರಖ್ಯಾತಿಯನ್ನು ಪಡೆದುಕೊಂಡಿವೆ.

ಭಾರತೀಯ ವಾದ್ಯ ಸಂಗೀತವು ನಾದಲಹರಿಯಲ್ಲಿ ಅತ್ಯಂತ ಭಿನ್ನಭಿನ್ನವಾಗಿದೆ. ಬೆರಳುಗಳಿಂದ ತಟ್ಟಿ ಬಾರಿಸುವ ಎಲ್ಲ ಬಗೆಯ ಉಪಕರಣಗಳಿಂದ ಈ ವೈವಿಧ್ಯತೆಯು ಸಾಧಿಸಲ್ಪಡುತ್ತದೆ. ಇವುಗಳಲ್ಲಿ 'ತಬಲಾ' ಅತ್ಯಂತ ವಿಸ್ತೃತ ವ್ಯಾಪ್ತಿಯನ್ನು ಪಡೆದುದಾಗಿದೆ. ಕಲಾವಿದ ಶ್ರೀ ಶಮಟಾ ಪ್ರಸಾದರವರು ಮಹತ್ತರವಾದ ಕಲಾಭಿಜ್ಞತೆಯಿಂದ, ನಾದಲಹರಿಯ ಸೂಕ್ಷ್ಮತರ ರಸಾನುಭವದಿಂದ ಧ್ವನಿವಿನ್ಯಾಸದ ವರ್ಣನೆವಿಧ್ಯತೆಯಿಂದ ತಬಲಾವನ್ನು ನುಡಿಸುತ್ತಾರೆ.

ಪುರಾತನ ತಂತುವಾದ್ಯೋಪಕರಣಗಳಾದ 'ಸಿತಾರ್' ಮತ್ತು 'ಸರೋದ್'ಗಳ ಪರಿಚಯವನ್ನು ಶ್ರೀಗಳಾದ ವಿಲಾಯತ್‌ಖಾನ್ ಮತ್ತು ಬಹದೂರ ಖಾನರವರು ನಮಗೆ ಮಾಡಿಕೊಟ್ಟರು. ಅವರೂ ಸಹ ಅಸಾಧಾರಣವಾದ ಕಲಾಭಿಜ್ಞತೆಯನ್ನು ಪ್ರದರ್ಶಿಸಿದರು.

ಭಾರತೀಯ ಕಲಾಕಾರರ ಅಸಾಧಾರಣ ಕಲೆಯು ಮಹತ್ತರವಾದ ರಸಾಭಿಜ್ಞತೆಯ ಆನಂದವನ್ನು ಸೋವಿಯತ್ತಿನ ಸಂಗೀತಪ್ರಿಯ ಜನತೆಗೆ ಉಂಟುಮಾಡುತ್ತಿದೆ.

---


## ಝಂಡುರವರ 'ಕೇಸರಿ ಜೀವನ'

**(KESARI JEEVANA)**

ಇದನ್ನೇ ಉಪಯೋಗಿಸಿರಿ.

**ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.**

ಕೆಮ್ಮು, ಶೀತ, ಅಸ್ತಮಾ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ಪಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.



ಪತ್ರಿಕೋದ್ಯಮ

# ಪ್ರಜಾಪ್ರಭುತ್ವದಲ್ಲಿ ಪತ್ರಿಕಾಕರ್ತರ ಸ್ಥಾನ ಮತ್ತು ಪಾತ್ರ

**ಸಂಭಾವಿತ ಪತ್ರಿಕೋದ್ಯಮವು ಪ್ರಜಾಸತ್ತಾತ್ಮಕ ರಾಷ್ಟ್ರದ ಜೀವನಾಡಿ**

ಮನುಷ್ಯ ಕುಲದ ಇತಿಹಾಸದಲ್ಲಿ ಪತ್ರಿಕೆಗಳ ಪಾತ್ರವು ಬಹಳ ಗಮನಾರ್ಹವಾದುದು. ಅದರಲ್ಲಿಯೂ ಇಂದಿನ ಪ್ರಜಾಪ್ರಭುತ್ವದ ಯುಗದಲ್ಲಿ ಪತ್ರಿಕೆಗಳ ಕರ್ತವ್ಯ ದೃಷ್ಟಿ, ವಿಚಾರಪರತೆ, ವಿಷಯ ವಿಮರ್ಶೆ, ಹಾಗೂ ಪತ್ರಿಕೆಗಳ ಜವಾಬ್ದಾರಿ, ನಾಗರಿಕ ಜನಾಂಗದ ಸುಧಾರಿತ ಸಮಾಜಸ್ವರೂಪದ ಮೈಲಿಗಲ್ಲು ಎಂದು ಹೇಳಿದರೆ ಅಷ್ಟೇನೂ ಹೆಚ್ಚಿನ ಮಾತಾಗಲಾರದು. ಅಂದಮೇಲೆ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳೇನೆಂಬುದನ್ನು ನಾವು ಬಹು ಮುಖ್ಯವಾಗಿ ಗಮನಿಸಬೇಕಾಗಿದೆ.

ಒಂದು ದೇಶದಲ್ಲಿ ಪ್ರಜಾಪ್ರಭುತ್ವದಿಂದ ರೂಪುಗೊಂಡ ಸರಕಾರ ನ್ಯಾಯಸಮ್ಮತವಾಗಿ ಧರ್ಮದೃಷ್ಟಿಯಿಂದ ರಾಜ್ಯ ಪಾಲನೆಯನ್ನು ಮಾಡಬೇಕಾದರೆ ಆಯಾ ದೇಶದ ಪತ್ರಿಕೆಗಳ ಸಂಪೂರ್ಣ ಸಹಕಾರವಿರಬೇಕು. ಹಾಗೆಯೇ ಪ್ರಜಾಸರಕಾರವು ಯಾವ ಬಗೆಯಿಂದ ಪತ್ರಿಕೆಗಳ ನೆರವನ್ನು ಅಪೇಕ್ಷಿಸುವುವೋ, ಅದೇ ಉದಾತ್ತ ಮಟ್ಟದ ಉನ್ನತ ಬಗೆಯಿಂದ ಪತ್ರಿಕೆಗಳೂ ಮತ್ತು ಪತ್ರಿಕಾಕರ್ತರೂ ತಮ್ಮ ಸಂಪೂರ್ಣ ಜವಾಬ್ದಾರಿಯನ್ನು ಅರಿತಿರಬೇಕು. ಹಾಗೆಂದರೆ ಆ ದೇಶದ ಪ್ರಜಾಪ್ರಭುತ್ವದ ಆಡಳಿತ ಸುಗಮವಾಗಿ ಸಾಗುವುದರಲ್ಲಿ ಸಂದೇಹವಿಲ್ಲ. ಪತ್ರಿಕೆ ಹಾಗೂ ಪ್ರಜಾಪ್ರಭುತ್ವದ ಸಮಾನ ಸ್ತಂಭಗಳವೇ ಸುಧಾರಿತ ಸಮಾಜದ ಮೊದಲ ಸೋಪಾನ.

ಸಮಾಜದ ಆಗುಹೋಗುಗಳನ್ನು ಸರಿಯಾದ ಹಾದಿಯಲ್ಲಿ ಕೊಂಡೊಯ್ಯಲು ಅನೇಕ ಸಾಧನಗಳ ಪೈಕಿ ಪತ್ರಿಕೆಯೂ ಒಂದು. ಇಂದಿನ ವಿಜ್ಞಾನ ಯುಗದ ಬೆಳವಣಿಗೆಯ ಆದಿಯಲ್ಲಿ ಅಂದರೆ ಸುಮಾರು ಅರ್ಧ ಶತಮಾನಗಳ ಹಿಂದೆ ಸಮಾಜದ ಅಂದಿನ ಆಗುಹೋಗುಗಳನ್ನು ತಿದ್ದಲು ಬಹುಮಟ್ಟಿಗೆ ರಂಗಭೂಮಿಯು ನೆರವಾಗಿದ್ದಿತು. ಆಗಿನ ಕಾಲದ ರಂಗಭೂಮಿಯು ಅಂದಿನ ಸಮಾಜಕ್ಕೆ ಅನುಗುಣವಾಗಿ ನಿತ್ಯದ ತಪ್ಪುಗಳನ್ನು ಜನತೆಯ ಮುಂದೆ ಎತ್ತಿ ತೋರಿಸಿ ಸಮಾಜವನ್ನು ಸರಿಯಾದ ಹಾದಿಗೆ ಕೊಂಡೊಯ್ಯಲು ತನ್ನ ಶಕ್ತಿಮೀರಿ ಸಹಕಾರವನ್ನು ನೀಡುತ್ತಿದ್ದಿತು.

ವಿಜ್ಞಾನವು ಬೆಳೆದಂತೆ, ಅಚ್ಚಿನ ಸೌಕರ್ಯವೂ ಸುಲಭವಾದಂತೆ ಪತ್ರಿಕೆಗಳ ಪಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯಲು ಸಾಧ್ಯವಾಯಿತು. ಅಂತೆಯೇ ಪ್ರಪಂಚದ ನಾನಾ ಮೂಲೆಯಲ್ಲಿ ಉಂಟಾಗುವ ಸುದ್ದಿಗಳನ್ನು ಸಂಗ್ರಹಿಸಿ, ಅದಷ್ಟು ಮಟ್ಟಿಗೆ ಪ್ರಚಲಿತ ರೀತಿಯಲ್ಲಿ ಪ್ರಕಟಿಸಲು ಪತ್ರಿಕೆಗಳು ನೆರವಾದವು. ಅದರಲ್ಲಿಯೂ ಜೊತೆ ಜೊತೆಗೆ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿಯೂ ಪ್ರಜಾಪ್ರಭುತ್ವವು ರೂಪುಗೊಂಡ ಮೇಲೆ ಪತ್ರಿಕೆಗಳ ಪಾತ್ರವೂ ಅಷ್ಟೇ ಪ್ರಾಧಾನ್ಯತೆಯನ್ನು ಪಡೆಯಲು ಸಾಧ್ಯವಾಯಿತು.

ಪ್ರಜಾಪ್ರಭುತ್ವದ ಆಡಳಿತದಲ್ಲಿ ದೇಶದ ಪ್ರಗತಿಯನ್ನು ಸಾಧಿಸಲು ಎಷ್ಟು ಜವಾಬ್ದಾರಿಯನ್ನು ಹೊರಬೇಕೋ ಅದಕ್ಕಿಂತಲೂ ಅತಿಶಯವಾಗಿ ಉನ್ನತ ಮಟ್ಟದ ರೀತಿಯಲ್ಲಿ ಪತ್ರಿಕೆಗಳನ್ನೂ ಕಾಪಾಡಿಕೊಂಡು ಬರುವುದು ಆಯಾ ದೇಶದ ಜನನಾಯಕರ ಆದ್ಯ ಕರ್ತವ್ಯ.

ಸಮಾಜಸೇವೆಯಲ್ಲಿ ಪತ್ರಿಕೆಗಳು ವಹಿಸಬೇಕಾದ ಜವಾಬ್ದಾರಿ ಬಹಳ ಹಿರಿಯದು. ಅದರಲ್ಲಿಯೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮತ್ತು ಅವುಗಳ ಪ್ರಗತಿಯ ಸಾಧನೆಯಲ್ಲಿ ಪತ್ರಿಕೆಗಳ ಪಾತ್ರ ಬಹು ಮುಖ್ಯ. ಯಾವ ಒಂದು ಉದಾತ್ತ ಸೇವೆಯನ್ನು ಮಾಡಬೇಕಾದರೂ ಸಂಕುಚಿತ ಸ್ವಾಭಿಮಾನವನ್ನು ತೊರೆದು ವಿಶಾಲ ದೃಷ್ಟಿಯ ಉದಯೋನ್ಮುಖರಾಗಿ ತಮ್ಮ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಪತ್ರಿಕೆಯು ಅನಾವಶ್ಯಕವಾದ ವಾದ ವಿವಾದಗಳಲ್ಲಿ ತೊಡಗಬಾರದು.

ಈ ವಿಚಾರದಲ್ಲಿ ಪತ್ರಿಕೆ ಹಾಗೂ ಪತ್ರಿಕಾಕರ್ತರ ಜವಾಬ್ದಾರಿ ಬಹಳ ಹಿರಿಯದಾಗಿರುತ್ತದೆ. ಸಮಾಜ ಸೇವೆಯ ತೆರೆಯ ಮರೆಯಲ್ಲಿ ಸಂಕುಚಿತ ಮನೋಭಾವನೆಯಿಂದ ನ್ಯಾಯಾನ್ಯಾಯಗಳನ್ನು ಸರಿಯಾಗಿ ತುಲನೆ ಮಾಡದೆ ಕಾರಣವಿಲ್ಲದೆ ಅನ್ಯರನ್ನು ಅಲ್ಲಗಳೆಯಲು ಹವಣಿಸುವುದು ಸುಧಾರಿತ ಪತ್ರಿಕೆಯ ಸುಲಕ್ಷಣವಲ್ಲ. ಎಂತಲೇ ಪತ್ರಿಕಾವೃತ್ತಿಯ ಘನತೆ, ಗೌರವಗಳನ್ನು ಅದಷ್ಟು ಮಟ್ಟಿಗೆ ಸುಭದ್ರವಾಗಿ ಕಾಪಾಡಿಕೊಂಡು ಬರುವುದು ಆಯಾ ಪತ್ರಿಕಾಕರ್ತರ ಮೊಟ್ಟಮೊದಲನೆಯ ಜವಾಬ್ದಾರಿ. ಇದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ, ಒಪ್ಪಿದ್ದಾರೆ.

ನಾವು ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೆಗಳ ಪಾತ್ರದ ಬಗ್ಗೆ ಯಾವ ಬಗೆಯ ಉನ್ನತ ಮಟ್ಟದ ಅಭಿಪ್ರಾಯವನ್ನು ತಳೆಯಲು ಹವಣಿಸುತ್ತೇವೆಯೋ ಅದಕ್ಕಿಂತಲೂ ಮಿಗಿಲಾಗಿ ಪತ್ರಿಕಾಕರ್ತನ ಬಗ್ಗೆ ಸಹಾನುಭೂತಿಯನ್ನು ತೋರಿಸುವುದು ಅತ್ಯಗತ್ಯ. ಪತ್ರಿಕಾಕರ್ತನು ತನ್ನ ದೇಶದ ಜನಸಮೂಹದಿಂದ ರೂಪುಗೊಂಡ ಸರ್ಕಾರ ಹಾಗೂ ಜನಸಾಮಾನ್ಯರಿಗೆ ಜವಾಬ್ದಾರನಾಗಿರಬೇಕು. ಸರಕಾರದ ನಿತ್ಯದ ನಡವಳಿಕೆಗಳನ್ನು ಟೀಕಿಸುವ ಸಂಭ್ರಮದಲ್ಲಿ ಸಾರ್ವಜನಿಕರ ಹಿತವನ್ನು ಮರೆಯಬಾರದು ಮರೆಯಲಾಗದು! ಅಂತೆಯೇ ಸಾರ್ವಜನಿಕರ ಬಲವನ್ನು ಪಡೆಯುವ ವಿಶೇಷ ಉತ್ಸಾಹದಲ್ಲಿ ಸರ್ಕಾರವನ್ನು ಸಹ ರಚನಾತ್ಮಕ ಟೀಕೆಯಿಂದ ಬೇರೆಯಾಗಿ ಟೀಕಿಸಬಾರದು. ಅದೂ ಅಲ್ಲದೆ ಪತ್ರಿಕಾಕರ್ತನು ಸಾರ್ವಜನಿಕ ಹಾಗೂ ಸರ್ಕಾರದ ಸಹೃದಯ ಸಂಪರ್ಕವನ್ನು ಸ್ಥಾಪಿಸಲು ಸೂತ್ರಧಾರಿಯಾಗಿರಬೇಕು. ಅಲ್ಲದೆ ಸಾರ್ವಜನಿಕ ಅಭಿಪ್ರಾಯಗಳಿಗೆ ತನ್ನ ಪತ್ರಿಕೆಯ ಮೂಲಕ ಮನ್ನಣೆಯನ್ನು ತರಬಲ್ಲ ಒಂದು ವಿಧವಾದ ದೈವಿಕ ಶಕ್ತಿಯನ್ನು ಆಯಾ ಪತ್ರಿಕಾಕರ್ತನು ಸಂಪಾದಿಸಿಕೊಂಡಿರಬೇಕು. ಪತ್ರಿಕಾ ಸಂಪಾದಕನೆಂದರೆ ಸಮಯಕ್ಕೆ ತಕ್ಕಂತೆ ನಾಲ್ಕು ಸಾಲು ಜೋಡಿಸಬಲ್ಲ ಬರಿಯ ಸಾಹಿತಿಯಾಗಿರಬಾರದು ಬದಲಾಗಿ, ಸಹಸ್ರಾರು ಮಂದಿಯ ಆಂತರಿಕ ಹೃದಯದ ನುಡಿ ವೀಣೆಯನ್ನು ಮಿಡಿದು ಅದರಲ್ಲಿ ಹೊಮ್ಮಿ ಬರುವ ಶಬ್ದನಾದಕ್ಕೆ ಇಂಬುಗೊಡುವ ರಸಿಕನಾಗಿರಬೇಕು. ಅಂದರೆ ತನ್ನ ದೇಶದ ಪ್ರಜಾಸರಕಾರದ ಮುಖ್ಯ ಗಮನಕ್ಕೆ ಸಾರ್ವಜನಿಕರ ಕುಂದುಕೊರತೆಗಳನ್ನು ತರಬಲ್ಲ ಸಂಯಮದ ಶಕ್ತಿಯನ್ನು ಪತ್ರಿಕಾಕರ್ತನು ಗಳಿಸಿಕೊಂಡಿರಬೇಕು. ಅದಾದ ಹೊರತು ಪತ್ರಿಕೆಯೇ ಆಗಲಿ ಪತ್ರಿಕಾಕರ್ತನೇ ಆಗಲಿ ಸಮಾಜವು ನಿರೀಕ್ಷಿಸುವ ಮಟ್ಟದಲ್ಲಿ ತನ್ನ ಸೇವೆಯನ್ನು ಸಲ್ಲಿಸಲು ಸಾಧ್ಯವಾಗಲಾರದು. ಇದು ನಿತ್ಯಸತ್ಯ.!!

ಸಾರ್ವಜನಿಕ ಹಾಗೂ ಅದೇ ಸಾರ್ವಜನಿಕರಿಂದ ರೂಪುಗೊಂಡ ಸರಕಾರ ಇವೆರಡರ ಸಾಮರಸ್ಯದ ಸಂಬಂಧವನ್ನು ಬೆಳೆಸಿಕೊಂಡು ಬರಲು ಪತ್ರಿಕಾಕರ್ತನು ತನ್ನ ಪತ್ರಿಕೆಯ ಮೂಲಕ ಸತತ ಪ್ರಯತ್ನವನ್ನು ಮಾಡಲು ಹವಣಿಸಬೇಕು. ಸಮಾಜಸೇವೆ ಮಾಡಲು ದೇಶದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸರಿಸಮನಾದ ಹಕ್ಕಿರುವುದು ಖಂಡಿತ; ಸಮಾಜಸೇವೆಯು ನಾನಾ ಹಾದಿಯಲ್ಲಿ ಪತ್ರಿಕೆಯ ಮೂಲಕ ಸಮಾಜಸೇವೆಯನ್ನು ಮಾಡುವುದು ಒಂದು ವಿಧಾನ. ಅಲ್ಲದೆ ಬಹುಕಾಲ ಜನತೆಯ ವಿಶ್ವಾಸವನ್ನು ಗಳಿಸಿ ಸಾಮಾನ್ಯ ಪ್ರಜೆಗಳ ಸಾಮೂಹಿಕ ಅಭಿಮಾನವನ್ನು ಪಡೆಯಲೆಳಸುವುದು ಆಯಾ ಪತ್ರಿಕೆಯ ಹಾಗೂ ಪತ್ರಿಕಾಕರ್ತನ ಮುಖ್ಯ ಗುರಿಯಾಗಿರಬೇಕು.

ಕಾಲ ಕಳೆದಂತೆ ಸಾಮಾನ್ಯ ಜನತೆಯ ತಿಳುವಳಿಕೆಯ ಬೆಳವಣಿಗೆಯೂ ಪ್ರಗತಿ ಹೊಂದುವುದರಲ್ಲಿ ಸಂದೇಹವಿಲ್ಲ. ಅಂದಮೇಲೆ ಯಾವುದೊಂದು ಸಂಕುಚಿತ ದೃಷ್ಟಿಯಿಂದಲೂ ಪತ್ರಿಕೆಯು ಬಹುಕಾಲ ಬಾಳಲು ಸಾಧ್ಯವಾಗಲಾರದು. ನಿಜವಾಗಿಯೂ ಪ್ರಪಂಚದಲ್ಲಿ ಅದರಲ್ಲಿಯೂ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ರೂಪುಗೊಂಡ ಮೇಲೆ ಪತ್ರಿಕೆಗಳ ಬೆಳವಣಿಗೆಯು ಬಹುವಾಗಿ ಪ್ರಗತಿಯನ್ನು ಸಾಧಿಸಿದೆ. ಭಾರತ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿದ ತರುವಾಯ ಪ್ರತಿಯೊಬ್ಬ ಪ್ರಜಾಸಾಮಾನ್ಯನಿಗೂ ತನ್ನ ದೇಶದ ಪತ್ರಿಕೆಗಳ ಮಹತ್ವದ ಉಪಯೋಗದ ಅರಿವುಂಟಾಗಿದೆ.

ಪ್ರಜಾಪ್ರಭುತ್ವದ ಸಾಮಾನ್ಯ ತತ್ವವನ್ನು ಪತ್ರಿಕೆಗಳೇ ಮೊಟ್ಟಮೊದಲಿಗೆ ಪ್ರಚಾರ ಮಾಡಿದವು. ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳೇ ಸರ್ಕಾರದ ಉಪಯುಕ್ತತೆಯ ಬಗ್ಗೆ ಆದಿಯಿಂದಲೂ ಪತ್ರಿಕೆಗಳೇ ಸಾಮಾನ್ಯ ಜನತೆಯ ಗಮನಕ್ಕೆ ತರಲು ವಿಶೇಷ ಶ್ರಮವನ್ನು ನಿರ್ವಹಿಸಿದ್ದವು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗ

(ಮುಂದಿನ ಪುಟ ನೋಡಿರಿ)

**ANNOUNCEMENT.**

Branches of the Bank will be opened shortly at

HYDERABAD CITY (DN.)

and

GULBARGA

(Gulbarga District of proposed New Mysore State)

and

URAVAKONDA

(in Ananthapur District of Andhra State)

to make available our well-known service of

"BANKING AT ITS BEST".

**The Canara Industrial & Banking Syndicate, Ltd.**

UDIPI. (S. I.)

**ರಾಮತೀರ್ಥ ಬ್ರಾಹ್ಮೀ ತೈಲ**



ಸ್ಪೆಶಲ್ ನಂ ೧ [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

## ಪತ್ರಿಕೋದ್ಯಮ

(ಹಿಂದಿನ ಪುಟದಿಂದ)

ಲಾರದು ಮೊಟ್ಟಮೊದಲಿಗೇ ಮಾನವ ಪ್ರಪಂಚದಲ್ಲಿ ಪ್ರಜಾಪ್ರಭುತ್ವದ ಸರಕಾರ ರೂಪುಗೊಂಡ ಅಮೇರಿಕಾ ದೇಶದಲ್ಲಿಯೂ ಸಹ ಅಲ್ಲಿನ ಜನತೆಯು ತಮ್ಮ ದೇಶದ ಪತ್ರಿಕೆ ಹಾಗೂ ಪತ್ರಿಕಾಕರ್ತರ ಬಗ್ಗೆ ಅಪೂರ್ವವಾದ ಗೌರವವನ್ನು ಪಡೆದಿದ್ದಿತು. ಇಂಗ್ಲೆಂಡ್, ಫ್ರಾನ್ಸ್, ರಷ್ಯ ಮುಂತಾದ ಪ್ರಗತಿಶೀಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಕೂಡ ಪ್ರಜಾಪ್ರಭುತ್ವ ರೂಪುಗೊಂಡ ತರುವಾಯ ಆಯಾ ದೇಶದ ಪತ್ರಿಕೆಗಳಿಗೆ ಹೆಚ್ಚಿನ ಮಟ್ಟದ ಪ್ರಜಾಸಮುದಾಯದ ಪ್ರಶಸ್ತಿ ದೊರಕಿದೆ. ಅಲ್ಲದೆ ಪತ್ರಿಕಾಕರ್ತರೆಂದರೆ ಅವರು ಸಮಾಜದ ಜೀವನಾಡಿಯ ಒಂದು ಕಣ್ಣು ಎಂದು ತಿಳಿದಿದ್ದಾರೆ.

ಇಂದು ಕನ್ನಡ ಪತ್ರಿಕಾ ಪ್ರಪಂಚದ ಸ್ಥಿತಿ ಯಾವ ಮಟ್ಟದಲ್ಲಿದೆಯೆಂಬುದನ್ನು ಸೂಕ್ತವಾಗಿ ವಿಮರ್ಶಿಸೋಣ. ಪತ್ರಿಕಾ ವ್ಯವಸಾಯದ ಪವಿತ್ರತೆಯನ್ನು ಬಹು ಜೋಪಾನವಾಗಿ ಕಾಪಾಡಿಕೊಂಡು ಬರಬೇಕು. ಇದು ಸ್ವಲ್ಪ ಕಷ್ಟಸಾಧ್ಯವೆನಿಸಿದರೂ ಪತ್ರಿಕಾವೃತ್ತಿಯ ಘನತೆ ಹಾಗೂ ಗೌರವವನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಅದರಲ್ಲಿಯೂ ಪ್ರತಿಯೊಬ್ಬ ಕನ್ನಡಿಗನ ನಿತ್ಯದ ಜವಾಬ್ದಾರಿ. ಇದನ್ನು ಮುಖ್ಯವಾಗಿ ಗಮನಿಸಿದ ಹೊರತು ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೆಗಳ ಸ್ಥಾನಮಾನದ ಉನ್ನತ ಮಟ್ಟವನ್ನು ಸ್ಥಿರಪಡಿಸಲು ಸಾಧ್ಯವಾಗಲಾರದು. ನಿಷ್ಪಕ್ಷಪಾತವಾಗಿ ಪತ್ರಿಕೆಗಳು ಸಾರ್ವಜನಿಕ ಚಟುವಟಿಕೆಗಳ ಬಗ್ಗೆಯಾಗಲಿ, ಅಥವಾ ಸರಕಾರದ ಆಗುಹೋಗುಗಳ ಬಗ್ಗೆಯಾಗಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಲ್ಲದೆ ನ್ಯಾಯಸಮ್ಮತವಾಗಿ ಸಾಮಾನ್ಯ ಜನತೆಯ ಅಭಿಪ್ರಾಯವನ್ನು ಸಂಗ್ರಹಿಸಿ ಆಯಾ ಪತ್ರಿಕೆಗಳ ಘನತೆಗೆ ತಕ್ಕಂತೆ ಪ್ರಕಟಿಸುವುದು ಉತ್ತಮ ಪತ್ರಿಕೆಯ ಹಾಗು ಪತ್ರಿಕಾಕರ್ತನ ಮುಖ್ಯ ಗುಣ, ಮೊದಲ ಗುಣ!! ಇದಾದ ಹೊರತು ಕನ್ನಡ ಪತ್ರಿಕೆಗಳ ಸ್ಥಾನಮಾನ ನಾವು ನಿರೀಕ್ಷಿಸಿದ ಮಟ್ಟಕ್ಕೆ ಏರಿದೂಗಲಾರದು.

ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೆಗಳ ಪ್ರಾಮುಖ್ಯತೆಯ ಬಗೆಗೆ ನಾವು ಎಷ್ಟು ಬೇಕಾದರೂ ಸಹ ಹೇಳಬಹುದು. ಆದರೆ ದಿನಗಳು ಕಳೆದಂತೆ ಸಾಮಾನ್ಯ ಜನತೆಯ ತಿಳುವಳಿಕೆಯ ಮಟ್ಟವು ಬೆಳೆಯುವುದರಲ್ಲಿ ಸಂದೇಹವಿಲ್ಲ. ಅದರ ಫಲವಾಗಿ ಸಮಾಜದ ನಿತ್ಯಜೀವನದಲ್ಲಿ ಪತ್ರಿಕೆಗಳ ಪಾತ್ರ ಖಂಡಿತವಾಗಿಯೂ ಶ್ರೇಷ್ಠತೆಯನ್ನು ಪಡೆದೇ ಪಡೆಯುತ್ತದೆ. ಸಾರ್ವಜನಿಕ ಹಾಗೂ ಸಾರ್ವಜನಿಕರಿಂದಲೇ ರೂಪುಗೊಂಡ ಸರಕಾರ, ಇವರಿಬ್ಬರ ನಡುವೆ ಪತ್ರಿಕೆ ಹಾಗೂ ಪತ್ರಿಕಾಕರ್ತನ ಜವಾಬ್ದಾರಿಯೇನೆಂಬುದನ್ನು ನಾವು ಮೊದಲೇ ವಿಮರ್ಶಿಸಿದ್ದೇವೆ. ಅಂದಮೇಲೆ ಪತ್ರಿಕಾಕರ್ತನ ಕರ್ತವ್ಯ ಪಾಲನೆಯೇನೆಂಬುದನ್ನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿಲ್ಲ. ಸತ್ಯವಾಗಿ ಅದರಲ್ಲಿಯೂ ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕಾಕರ್ತನ ಹಾಗೂ ಪತ್ರಿಕೆಯ ಸ್ಥಾನಮಾನ ಬಹು ಮುಖ್ಯವಾದುದು. ಯಾವ ಒಂದು ಹೆಚ್ಚಿನ ಅಭಿಮಾನದಿಂದ ಸಾರ್ವಜನಿಕರ ಸ್ತೊತ್ತಾಗಿ ಪತ್ರಿಕೆಯು ಪರಿಣಮಿಸುವುದೋ ಅದೇ ಮಟ್ಟದ ಅಭಿಮಾನದ ಪ್ರತಿ ಕುಶಲತೆಯನ್ನು ಕಾಪಾಡಿಕೊಂಡು ಬರುವುದು ಪತ್ರಿಕಾಕರ್ತನ ಮುಖ್ಯ ಕರ್ತವ್ಯ. ಪತ್ರಿಕೆಯನ್ನು ನಡೆಸುವವನು ಒಬ್ಬನಾದರೂ ಅಂತಹ ಪತ್ರಿಕೆಯ ಸಹಸ್ರಾರು ವರ್ಷಗಳ ತುಂಬು ಜೀವನವನ್ನು ನಡೆಸುವವರು ಸಾರ್ವಜನಿಕರು ಎಂಬುದನ್ನು ಎಂದಿಗೂ ಮರೆಯಬಾರದು. ಎಲ್ಲಿಯವರೆಗೆ ಪತ್ರಿಕೆಯ ಜೀವನಾಡಿ ಸಾಮಾನ್ಯ ಜನತೆಯ ನುಡಿವೀಣೆಗೆ ತಾಳವನ್ನು ಹಾಕುವುದೋ ಅಲ್ಲಿಯವರೆಗೆ ಪತ್ರಿಕೆಯ ತುಂಬು ಆಯುಷ್ಯಕ್ಕೆ ಚ್ಯುತಿಯಿಲ್ಲ. ಸಾಮಾನ್ಯವಾಗಿ ಈ ತತ್ವವನ್ನು ಪ್ರಜಾಪ್ರಭುತ್ವ ಯುಗದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಆತ್ಮಗೌರವದ ವಿಶ್ವಾಸದಿಂದ ತನ್ನ ದೇಶದ ಪತ್ರಿಕೆಗಳ ಹಾಗೂ ಅದರ ಸ್ಥಾನಮಾನದ ಬಗ್ಗೆ ಚಿರಕಾಲ ಅಭಿಮಾನವನ್ನು ತಳೆದೇ ತಳೆಯುತ್ತಾನೆ.

—ಶ್ರೀ ಎಂ. ಎಸ್. ಗೋಪಾಲನ್.

(ಬೆಂಗಳೂರು ಆಕಾಶವಾಣಿ ಕೃಪೆಯಿಂದ)

## ರಾಘವಾಂಕ ಉವಾಚ

# 'ನಡೆವರೆಡಹುವರಲ್ಲದೆ ಕುಳಿತರೆಡಹುವರೆ?'

**ಹಿತಾ ಹಿತದಕಡೆ ಗಮನವೀಯದೆ ಟೀಕಿಸುವವರು ಬೇನೆವರಿಯದ ನೀರಸರು**

"ಒಳ್ಳೆಯದು ಕೆಟ್ಟದನ್ನೆರಡನ್ನೂ ಟೀಕಿಸುವುದು ಮಾನವತೆಯ ಲಕ್ಷಣವಲ್ಲ".

ಆರುನೂರು ವರುಷಗಳ ಹಿಂದೆ ಕನ್ನಡ ನಾಡಿನಲ್ಲಿ ಹುಟ್ಟಿ ಬಾಳಿ ಬೆಳಗಿದ್ದ, ಷಟ್ಪದಿ ಕಾವ್ಯರಚನೆಯಲ್ಲಿ ಆದಿಕವಿಯೆನಿಸಿದ ರಾಘವಾಂಕ ಕವಿಯು ಟೀಕಾಕಾರರ ಕುರಿತು ಹೇಳಿದ್ದ "ನಡೆವರೆಡಹುವರಲ್ಲದೆ ಕುಳಿತರೆಡಹುವರೆ|| ....ಬೇನೆವರಿಯದ ನೀರಸರನೇಕೆ ಹುಟ್ಟಿಸಿದನಬುಜಭವನು ||" ಮಾತು ತ್ರಿಕಾಲ ಸತ್ಯವಾದುದು. ಈ ಮಾತಿನ ಹೊಂದಿಕೆಯಲ್ಲಿ ಸ್ವಲ್ಪ ಸಂದರ್ಭವಿರೋಧವಿರುವುದಾದರೂ ಸಾಮಾನ್ಯ ಅಭಿಪ್ರಾಯವು ಸರ್ವಕಾಲಕ್ಕೂ ಅನ್ವಯಿಸುತ್ತದೆ. "ಬೇನೆವರಿಯದನೀರಸರನೇಕೆ ಹುಟ್ಟಿಸಿದನಬುಜಭವನು"— ಒಂದು ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಲು ಎಷ್ಟು ಕಷ್ಟವಿದೆ ಎಂಬುದನ್ನು ತಿಳಿದುಕೊಳ್ಳಲು ಅಸಮರ್ಥರಾದ. ಕಷ್ಟ ಸಂಕಷ್ಟಗಳ ತಿಳುವಳಿಕೆಯನ್ನು ಗ್ರಹಿಸಿಕೊಳ್ಳಲು ಅಶಕ್ತರಾದ, ಸದಾ ಕಠಿಣ ಹೃದಯರಾದ, ನೀರಸರಾದ ವ್ಯಕ್ತಿಗಳನ್ನು ಬ್ರಹ್ಮನು ಏಕೆ ಹುಟ್ಟಿಸಿದನೊ ಏನೊ? ಅಂತಹ ವ್ಯಕ್ತಿಗಳಿಂದ, ಅವರ ಟೀಕೆಯಿಂದ ಸಮಾಜಕ್ಕೆ ಉಪಕಾರವಿದೆಯೇ? ಇಲ್ಲ. ಬದಲು ಅಪಕಾರವೇ ಹೆಚ್ಚು. ಅವರ ಟೀಕೆಯನ್ನು ಕೇಳುವ ಜನರೆಲ್ಲರಲ್ಲಿಯೂ ಸಾರಾಸಾರ ವಿವೇಚನೆಯ ಬುದ್ಧಿಮತ್ತತೆ ಇರುವುದಿಲ್ಲ. ಅದನ್ನು ಸರಿಯೆಂದು ನಂಬುವವರೇ ಹೆಚ್ಚಿಗೆ ಇರಲೂ ಬಹುದು. ಆದ್ದರಿಂದ ಅಂತಹ ಟೀಕೆಯು ಸಮಷ್ಟಿಯ ಹಿತದ ಬದಲು ಅಹಿತವನ್ನೇ ಮಾಡುತ್ತದೆ. ಆದ್ದರಿಂದಲೇ ರಾಘವಾಂಕ ಹೇಳಿದ್ದನು: ಇಂತಹ ಬೇನೆವರಿಯದ ನೀರಸರು ಹುಟ್ಟದೇ ಇದ್ದರೆ ಚೆನ್ನಾಗಿತ್ತು ಎಂದು.

"ಹುಟ್ಟದಿದ್ದರೆ ಚೆನ್ನಾಗಿತ್ತು" ಈ ಮಾತು ಬಹು ಮಾರ್ಮಿಕವಾದುದು. ತನ್ನನ್ನು ವಿಕ್ರಯಿಸಿದ ಜುದಾಸನ ಕುರಿತು ಕ್ರೈಸ್ತ ಸ್ವಾಮಿ ಹೇಳಿದ್ದ "ಆತನು ತನ್ನ ತಾಯಿಯ ಹೊಟ್ಟೆಯಲ್ಲಿ ಹುಟ್ಟಲೇಬಾರದಾಗಿತ್ತು" ಎಂದು. ಹಾಗೆಯೇ ಕವಿ ರಾಘವಾಂಕನು ಈ ಒಳ್ಳೆದು ಕೆಟ್ಟದನ್ನೆರಡನ್ನೂ ಟೀಕಿಸುವ ಜನರ ಕುರಿತು ಬಹುವಾಗಿ ನೊಂದು ಇಂತಹ ನಿಷ್ಠುರವಾದ ಪದ ಪ್ರಯೋಗ ಮಾಡಿರಬೇಕು.

ಟೀಕೆ ಬೇಕು. ಪ್ರಜಾಪ್ರಭುತ್ವದಲ್ಲಿ ಅದು ಅವಶ್ಯವಾಗಿ ಬೇಕು. "ಸರಕಾರೀ ಆಸ್ಪತ್ರೆಯ ವೈದ್ಯರೊಬ್ಬರು ಲಂಚದ ಆಸೆಯಿಂದ ಒಂದು ಮಗುವನ್ನು ಆಸ್ಪತ್ರೆಯಲ್ಲಿ ದಾಖಲಾತಿ ಮಾಡಿಕೊಂಡು ಕ್ರಮದಂತೆ ಚಿಕಿತ್ಸೆ ಆರೈಕೆ ಮಾಡಲು ತಪ್ಪಿದ ಪರಿಣಾಮವಾಗಿ, ಆ ಮಗುವು ತೀರಿ ಹೋದರೆ ಅಂತಹ ವೈದ್ಯರನ್ನು ಟೀಕಿಸಲೇ ಬೇಕು. ಇಂತಹ ಕಾರಣಕ್ಕಾಗಿ ಸರಕಾರವೇ ಬದಲಾವಣೆಗೊಳ್ಳುವಷ್ಟು ಪರಿಣಾಮಕಾರಿಯಾದ ಟೀಕೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆದ ಉದಾಹರಣೆ ಕೇಳಿದ ನೆನಪುಂಟು. ಸಾರ್ವಜನಿಕ ಹಣವನ್ನು ಧರ್ಮಕಾರ್ಯಕ್ಕೆಂದು ಸಂಗ್ರಹಿಸಿ ಆ ಸಂಪತ್ತಿನಿಂದ ಸುಖಲೋಲುಪ ಜೀವನವನ್ನು ನಡೆಸುವ ವರ್ತನೆಯ ಕುರಿತು ಟೀಕೆ ಬೇಕು. ಅಂತವರನ್ನು ಗಡಿಪಾರು ಮಾಡಿದ ಚಾರಿತ್ರಿಕ ದಾಖಲೆಗಳು ಅಪರೂಪವಲ್ಲ. ಅಂತಹ ಟೀಕೆಗಳಿಲ್ಲದಿದ್ದರೆ ನಿರಂಕುಶ ಮನೋವೃತ್ತಿ ಬೆಳೆದು ಬಡಜನತೆ ಬಾಳಿ ಬದುಕುವುದು ಕಷ್ಟವಾದೀತು. ಯೋಗ್ಯತೆಯಿದ್ದ ಜನ, ಪತ್ರಿಕೆಗಳು ಇಂತಹ ದುಷ್ಕೃತ್ಯಗಳಿಗೆ ಅಂಕುಶ ಹಾಕಬೇಕು. ಅನ್ಯಾಯವನ್ನು ಪ್ರತಿಭಟಿಸುವ ಎದೆಗಾರಿಕೆ ವೀರೋಚಿತ ಗುಣವೇ ಆಗಿದೆ. ಆದರೆ ಹಾಗೆ ಪ್ರತಿಭಟಿಸುವಾಗ ವೈಯಕ್ತಿಕ ದ್ವೇಷ, ಪಕ್ಷ ದ್ವೇಷ, ಜಾತಿ ದ್ವೇಷ ಇತ್ಯಾದಿ ಯಾವುದೇ ದ್ವೇಷದ ಸಾಧನೆಗೆ ಇದೊಂದು ಸಂದರ್ಭವೆಂದು ಬಗೆಯಬಾರದು.

ಟೀಕೆಯಿಂದ ಜನಸಾಮಾನ್ಯರನ್ನು ಒಲಿಸಿಕೊಳ್ಳುವುದು ಬಹು ಸುಲಭ ಕಾರ್ಯವಾಗಿದೆ. ಜನರ ಚಿತ್ತವು ಆ ಕಡೆಗೆ ತೀವ್ರವೇ ಹರಿಯುತ್ತದೆ. ವಿಲಕ್ಷಣತೆಯು ಲಕ್ಷ್ಯವನ್ನು ಸೆಳೆವ ಒಂದು ಸಾಧನ. ರಸ್ತೆಯ ಮೇಲೆ ಓರ್ವ ನಗ್ನ ಪುರುಷನು ಕಿರಿಚುತ್ತಾ ಹೋದರೆ, ಜನ ಆಕಡೆ ನೋಡುವಷ್ಟು, ಮಾರ್ಗಾಕ್ರಮಣ ಮಾಡುತ್ತಿರುವ ಸಾದಾ ಸಾಮಾನ್ಯ ವ್ಯಕ್ತಿಗಳ ಕಡೆಗೆ ನೋಡುವುದಿಲ್ಲ. ಛದ್ಮವೇಷ ಸ್ಪರ್ಧೆ, ಮೇಳಗಳ ಕುಣಿತಗಳಲ್ಲಿ ಮೊಗೇರನ ವೇಷವನ್ನು ಕಂಡು ಜನ ನಗಾಡಿದಷ್ಟು ಕುಲಿ ವೇಷ, ಕೃಷ್ಣನ ವೇಷ ಕಂಡು ಜನ ಆನಂದಪಡುವುದಿಲ್ಲ. ಜನಸಾಮಾನ್ಯರ ಲಕ್ಷ್ಯ ತಮ್ಮ ಟೀಕೆಯ ಕಡೆಗೆ ಹರಿಯುತ್ತದೆಂದು ಸಿಕ್ಕಿ ಸಿಕ್ಕಿದಂತೆ ಮಾತುಗಾರಿಕೆ ಮತ್ತು ಲೇಖನದ ಛದ್ಮವೇಷ ನ್ಯಾಯವಲ್ಲ. ಮುಖ್ಯವಾಗಿ ಟೀಕೆಯ ಉದ್ದೇಶ ಪವಿತ್ರವಾಗಿರ

೯ ನೇ ಪುಟ ನೋಡಿರಿ


## ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
## ರಾಜಮಹೇಂದ್ರಿ — ಇವರ

# ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

**ನಮ್ಮ ಸ್ಟಾಕಿಸ್ಟರು:**

(1) **ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.**
(2) **ಷಾ ಕಂಪೆನಿ—ಮಂಗಳೂರು 1.**
(3) **ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.**

**ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

[ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

**1906** | **ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ!** | **1956**

**THE CANARA BANKING CORPORATION LIMITED**

H. Office: UDIPI (S.India).

## ಸಫಲ ಪರಿಶ್ರಮ

# ದಕ್ಷಿಣ ಅಮೇರಿಕೆಯಲ್ಲಿ ಪ್ರಖ್ಯಾತ ರಾಕ್‌ಫೆಲರ್ ಪಶುಪಾಲನಾ ಕ್ಷೇತ್ರ

[ರಾಕ್‌ಫೆಲರ್ ಮತ್ತು ಹಡಸನ್ ಎಂಬವರು ತಮ್ಮ ಕಲ್ಪಕತೆ ಹಾಗೂ ಪರಿಶ್ರಮದಿಂದ ಒಂದು ಬೀಳು ಭೂಮಿಯನ್ನು ಸಮೃದ್ಧ ಹುಲ್ಲುಗಾವಲನ್ನಾಗಿ ಪರಿವರ್ತಿಸಿದ ಕಥೆ ಹೀಗಿದೆ;]

ವಿನ್‌ರಾಕ್ ಎಂಬುದು ದಕ್ಷಿಣ ಅಮೇರಿಕೆಯ ಒಂದು ಪ್ರಾಂತ್ಯದಲ್ಲಿ ಓಝಾರ್ಕ ಪರ್ವತಗಳ ಅಡಿಯಲ್ಲಿ ಹಬ್ಬಿರುವ ೧,೦೦೦ ಎಕ್ರೆ ವಿಸ್ತಾರವಾದ ಪ್ರದೇಶವಾಗಿದೆ. ಕೇವಲ ಮೂರು ವರುಷಗಳ ಹಿಂದೆ ಅದು ಚಿಕ್ಕ ಪುಟ್ಟ ಓಕ್ ಗಿಡ ಗಂಟಿಗಳಿಂದ ತುಂಬಿದ ನಿರುಪಯುಕ್ತ ಭೂಮಿಯಾಗಿತ್ತು. ಇಂದು ಅದೇ ವಿನ್‌ರಾಕ್ ಒಂದು ಸುಂದರವಾದ ಫಾರ್ಮು ಆಗಿದ್ದು ಅಲ್ಲಿ ಸಾಂತಾಗರ್ ಟ್ರೂಡಿಸ್ ಎಂಬ ಉತ್ತಮ ಜಾತಿಯ ದನಕರುಗಳು ಆ ಫಾರ್ಮಿನಲ್ಲಿ ಬೆಳೆಯುವ ಹಲವಾರು ಬಗೆಯ ಸತ್ವಯುತವಾದ ಹುಲ್ಲುಗಳನ್ನು ಮೇಯುತ್ತ ಪುಷ್ಟವಾಗಿ ಬೆಳೆಯುತ್ತಿರುವುದನ್ನು ಕಾಣಬಹುದಾಗಿದೆ. ಇಬ್ಬರು ಗೆಳೆಯರು ವಿನ್‌ರಾಕದ ಈ ಅದ್ಭುತ ಪರಿವರ್ತನೆಗೆ ಕಾರಣರಾಗಿದ್ದಾರೆ.

ಬೇರೆ ಬೇರೆ ಹಿನ್ನೆಲೆಯ ಪರಿಸ್ಥಿತಿಯಿಂದ ಬಂದ ಇಬ್ಬರು ೧೯೩೦ರಲ್ಲಿ ಗೆಳೆಯರಾದರು. ಹಾಗೂ ಅವರು ತಮ್ಮ ಶ್ರಮದಿಂದ ಈ ಭೂಮಿಯನ್ನು ಪರಿವರ್ತಿಸಿದರು. ಈ ಕೆಲಸವು ನೆರೆವೇರಿಯುವರೆಗೆ ಒಂದು ಆಧುನಿಕ ಅದ್ಭುತವಾಗಿ ಪರಿಣಮಿಸಿತು. ಶ್ರೀ ವಿನ್‌ಥ್ರಾಪ್ ರಾಕ್‌ಫೆಲರ ಮತ್ತು ಜೇಮ್ಸ್ ಹಡ್‌ಸನ್ ಇವರೇ ಆ ವ್ಯಕ್ತಿಗಳಾಗಿದ್ದಾರೆ. ಬರಡು ಜಾತಿಯ ಈ ಭೂಮಿಯನ್ನು ಸುಂದರ ಹುಲ್ಲುಗಾವಲನ್ನು ಮಾಡುವದೆಂದರೆ ಒಂದು ನಿಜವಾದ ಆಹ್ವಾನವಾಗಿತ್ತು. ೧೯೫೩ರಲ್ಲಿ ಶ್ರೀ ರಾಕ್‌ಫೆಲರು ಶ್ರೀ ಹಡಸನರಿಗೆ ತಾವು ಮುಂದಿನ ವರುಷ ಆ ಭೂಮಿಯಲ್ಲಿ ದನಮೇಯಿಸುವ ಯೋಜನೆಯುಳ್ಳವರಾಗಿದ್ದೇನೆಯೆಂದು ತಿಳಿಸಿದರು. ಹಡಸನ್ ತತ್‌ಕ್ಷಣ ಕಾರ್ಯ ಪ್ರಾರಂಭಿಸಿಯೇ ಬಿಟ್ಟರು. ಮುಂದಿನ ೬ ತಿಂಗಳುಗಳಲ್ಲಿ ಆ ಭೂಮಿಯಲ್ಲಿಯ ಕಂಟಿ, ಗಿಡಗಳನ್ನು ಕಿತ್ತಿ ಭೂಮಿಯನ್ನು ಸಮಗೊಳಿಸಲಾಯಿತು. ಬೇಸಿಗೆಯಲ್ಲಿ ವಾಸಿಸಬಹುದಾದ ಕುಟೀರವು ಹೊಲದಕೇಂದ್ರದ ಮುಖ್ಯಗೃಹವಾಗಿ ಪರಿಣಮಿಸಿತು. ದನಗಳ ಮೇವಿಗಾಗಿ ಸಮೀಪದ ಕೊಳ್ಳದಲ್ಲಿಯ ೫೦೦ ಎಕ್ರೆಗಳಲ್ಲಿ ಕಾಳು ಮತ್ತು ಹುಲ್ಲು ಬೆಳೆಸಲಾಯಿತು. ನೀರಿನ ಪೂರೈಕೆಗಾಗಿ ಎರಡು ಸರೋವರಗಳಿಗೆ ಪೈಪುಗಳನ್ನು ಜೋಡಿಸಲಾಯಿತು.

ಈ ಕೆಲಸಗಳ ಎಲ್ಲ ಸಂದರ್ಭಗಳಲ್ಲಿ ಹಡ್‌ಸನ್‌ರು ಮಾತ್ರ ಇರುತ್ತಿದ್ದರು. ರಾಕ್‌ಫೆಲರರು, ಸುಪರಿಂಟೆಂಡೆಂಟರೆಂದು ಪ್ರಕಟಿಸುವುದಕ್ಕಿಂತ ಪೂರ್ವದಲ್ಲಿಯೇ ಶ್ರೀ ಹಡ್‌ಸನ್‌ರು ಆ ಕಾರ್ಯಗಳ ನಿರ್ದೇಶಕರಾಗಲು ಒಪ್ಪಿಕೊಂಡಿದ್ದರು. ಇಷ್ಟರಲ್ಲಿಯೇ ಸಮೀಪದ ಪಟ್ಟಣವಾದ ಮೊರಿಲ್‌ಟನ್ನದ ವ್ಯಾಪಾರಸ್ಥರು ಮತ್ತು ಒಕ್ಕಲಿಗರು ಹಡ್‌ಸನ್‌ನೆಂದರೆ ಓರ್ವ ಅರ್ಹ ಆಡಳಿತಗಾರನೆಂದು ಗಣಿಸಲಾರಂಭಿಸಿದರು.

ಸಾಧಾರಣ ಅರಣ್ಯ ಭೂಮಿಯನ್ನು ಉತ್ಪಾದನಾ ಭೂಮಿಯನ್ನಾಗಿ ಪರಿವರ್ತಿಸಿದಕ್ಕಾಗಿ ಶ್ರೀ ಹಡ್‌ಸನ್‌ರು ತಮ್ಮ ಕಾರ್ಯದ ಬಗ್ಗೆ ಅಭಿಮಾನಿಗಳಾಗಿದ್ದಾರೆ. ತಮ್ಮ ಪತ್ನಿಯು ಕಾರ್ಯದರ್ಶಿನಿಯಾಗಿ ಸಹಾಯ ಮಾಡುತ್ತಿರುವ ಆ ಭೂಮಿಯಲ್ಲಿ ದುಡಿಯಲು ಅವರು ಸ್ಫೂರ್ತಿಗೊಂಡವರಾಗಿದ್ದಾರೆ.

ಶ್ರೀ ಮತ್ತು ಶ್ರೀಮತಿ ಹಡ್‌ಸನ್‌ರ ಪ್ರೀತಿಯನ್ನು ಪರ್ವತಾರೋಹಿಗಳು ಕೂಡಾ ಗಳಿಸಿದ್ದಾರೆ. ತಾನು ತನ್ನ ಪತಿಯೊಡನೆ ಪರ್ವತದ ಮೇಲೆ ವಾಸಿಸಲು ಬರುವವಳಿದ್ದೇನೆಯೆಂದು ತಿಳಿದೊಡನೆ ಶತ್ತಿ, ಬೆಣ್ಣೆ, ಮತ್ತು ತಾಜಾ ವಿನಿಸುಗಳನ್ನು ತನ್ನ ಮುಂದಿಟ್ಟುದುದು ಕಾಣುತ್ತಿತ್ತು. ಆದರೆ ಅವನ್ನು ಯಾರು ಇಡುತ್ತಿದ್ದರೆಂಬುದು ತಾನರಿಯೆ ಎಂದು ಹೇಳಿದರು.

ಅಮೇರಿಕೆಯ ಟೆಕ್ಸಾಸ ಬಳಿಯ ವಿನ್‌ರಾಕ್‌ದಲ್ಲಿ ಮೇಯುವ ಸಾಂತಾಗರ್ ಟ್ರೂಡ ಜಾತಿಯ ದನಗಳು ಒಂದು ಪ್ರತ್ಯೇಕ ಜಾತಿಯವಾಗಿವೆ. ಈ ಸೀಳಿಗೆಯು ಬ್ರಾಹಮ ಮತ್ತು ಶಾರ್ಟ್‌ಹಾರ್ನ ಜಾತಿಗಳ ಸಂಕರದಿಂದ ಉದ್ಭವಿಸಿವೆ. ಈ ಹೊಸ ಜಾತಿಯು ರೋಗರುಜಿನಗಳನ್ನು ನಿರೋಧಿಸಬಲ್ಲುದಾಗಿದ್ದು ಅತಿ ಉಷ್ಣ ಹವಾಮಾನದಲ್ಲಿ ಉತ್ತಮ ತಳಿಯಾಗಿದೆ.



• ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ವಿಕ್ಟೋರಿಯಾ ಪದಕಗಳನ್ನು ಪಡೆದ ಸಾಹಸಿ ಸಿಪಾಯಿಗಳನ್ನು ಈಚೆಗೆ ಆಂಗ್ಲ ರಾಣಿಯು ಲಂಡನಿಗೆ ಬರಮಾಡಿಕೊಂಡು ಗೌರವಿಸಿದ್ದರು. ನೂರು ವರ್ಷಗಳ ಹಿಂದೆ ಈ ಪದಕವನ್ನು ಕೊಡಲು ಪ್ರಾರಂಭಿಸಿದ ನೆನಪಿಗಾಗಿ ಈ ಸಮಾರಂಭವನ್ನು ಅವರು ಏರ್ಪಡಿಸಿದ್ದರು. ಇಷ್ಟರ ವರೆಗೆ ೧೩೪೪ ಮಂದಿ ಈ ಪದಕ ಪಡೆದಿರುವರೆಂದೂ ಅವರಲ್ಲಿ ೩೮೫ ಮಂದಿ ಈಗ ಬದುಕಿರುವರೆಂದೂ ತಿಳಿದು ಬಂದಿದೆ. ಭಾರತದಿಂದಲೂ ಕೆಲವು ಪದಕಧಾರಿಗಳು ಈ ಸಮಾರಂಭಕ್ಕೆ ಹೋಗಿದ್ದರು. ಸುಯೋಜನ ಕಾಲುವೆ ತಂಟೆಯ ಹಿನ್ನೆಲೆಯಲ್ಲಿ ಮೇಲಿನ ಚಿತ್ರದಲ್ಲಿ ತೋರುವ ಯೋಧರ ಗಂಭೀರ ನಡಿಗೆಯು ಎದೆ ನಡುಗಿಸುವಂತಿದೆಯಲ್ಲವೆ?

## ರೂಪಕ ಕತೆ

# ಪ್ರತಿಮೆ—ಪ್ರವೃತ್ತಿ

ಒಂದು ಊರಿನಲ್ಲಿ ಓರ್ವ ನಾಸ್ತಿಕ ನಿದ್ದನು.

ದೇವರ ಮೂರ್ತಿಗಳನ್ನು ಕಂಡರೆ—ಕೆಂಡದಂತಾಗುತ್ತಿದ್ದನು.

ದೇವರ ಮೂರ್ತಿಯೆಂದರೆ ಬೀದಿಯಲ್ಲಿಯ ಕಲ್ಲೆಂದು ಅವನು ಪ್ರತಿಪಾದಿಸುತ್ತಿದ್ದನು.

"ದೇವರನ್ನು ಯಾರು ಕಂಡಿದ್ದಾರೆ? ತೋರಿಸಿರಿ" ಎಂದು ಮೊದಲಾಗಿ ಇತ್ತಂಡ ವಾದವನ್ನು ಹಾಕುತ್ತಿದ್ದನು.

೦ ೦

ಅದೇ ಊರಿನಲ್ಲಿ ಒಬ್ಬ ಆಸ್ತಿಕ ನಿದ್ದನು

ದೇವರ ಮೂರ್ತಿಗಳನ್ನು ಕಂಡ ಕೂಡಲೇ ಆದರದಿಂದ ಶಿರತಗ್ಗಿಸಿ ನಮಸ್ಕರಿಸುತ್ತಿದ್ದನು.

ಬೀದಿಯಲ್ಲಿಯ ಕಲ್ಲಿನಲ್ಲಿ ಕೂಡಾ—ದೇವರಿದ್ದಾನೆಂದು ಭಾವಿಸುತ್ತಿದ್ದನು.

ಚರಾಚರ ವಸ್ತುಗಳಲ್ಲಿ ದೇವರಿದ್ದಾನೆ. ಆತನನ್ನು ಕಾಣುವುದಕ್ಕೆ ಅರ್ಹತೆ ಏವಂ ಯೋಗ್ಯತೆ ಬೇಕು ಎಂದು ಅನ್ನುತ್ತಿದ್ದನು.

೦ ೦

ಒಂದು ದಿನ ಆಸ್ತಿಕ—ನಾಸ್ತಿಕರ ಭೆಟ್ಟಿಯು ಬೀದಿಯಲ್ಲಿ ಆಯಿತು.

ನಾಸ್ತಿಕ ಕಲ್ಲನ್ನು ಪೂಜಿಸುವ ಆಸ್ತಿಕನನ್ನು ಜರೆದನು.

"ಪ್ರ ತಿ ಮೆ ಯೆಂ ದ ರೆ ಬೀ ದಿ ಯ ಲ್ಲಿ ಯ ಕ ಲ್ಲು! ಅ ದ ರ ಲ್ಲಿ ದೇ ವ ರು ಎಂದಾದರೂ ಇರುವನೆ? ಕಲಾಕಾರಲ್ಲಿಗೊಂದು ರೀತಿಯ ರೂಪವನ್ನು ತದ್ವೇವಂ ಆಕಾರವನ್ನು ತನ್ನ ಕಲೆಯ ಸಹಾಯದಿಂದ ತಂದುಕೊಟ್ಟಿದ್ದಾನೆ ಅಸದೃಶ, ಅಸಮ, ಎಂದಿಗೂ ಇರದ, ಕಾಣದ ರೂಪ ಭಂಗಿಗಳನ್ನು ಮೂರ್ತಿಗೆ ಕೊಡುವನು, ಅವನೇ ದೇವರೇನು? ಅವನು ದೇವರಲ್ಲ! ಕಲಾಕಾರನ ಕಲೆಯದು! ಅದ್ದರಿಂದ ದೇವರೆಂದು ಅನ್ನದೆ ಕಲಾಕಾರನ ಕಲೆಯನ್ನು ಪೂಜಿಸುತ್ತಿದ್ದೇವೆಂದು ಅನ್ನಿರಿ" ಎಂದು ದೊಡ್ಡದಾದ ಭಾಷಣವನ್ನೇ ಮಾಡಿದನು.

ಆಸ್ತಿಕ ಎಲ್ಲವನ್ನೂ ಶಾಂತಭಾವದಿಂದ ಕೇಳಿಕೊಂಡನು. ತದನಂತರ ಶಾಂತ ಸ್ವರದಲ್ಲಿ ಅಂದನು—

"ಪ್ರತಿಮೆಯಲ್ಲಿ ದೇವರಿಲ್ಲ. ಪ್ರತಿಮೆಯಂತೆ ಮಾನವನ ಪ್ರವೃತ್ತಿಯಾಗುವುದು. ಆ ಪ್ರವೃತ್ತಿಯಲ್ಲಿ ದೇವರಿದ್ದಾನೆ."

—ಶ್ರೀಮತಿ ರತ್ನಾ ಶಾಸ್ತ್ರಿ.


## ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿ ಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—9—56ರಿಂದ ಜನತಾ ಸಾಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

*Head Office:* Tenkapet, Udipi, S. K. *Phone:* 66



## ಹಿಂದೂ ಉತ್ತರಾಧಿಕಾರ ಶಾಸನ

| | |
|---|---|
| 1, ಕನ್ನಡ ಪ್ರತಿ | 0—12—0 |
| 2, ,, | 0—8—0 |
| 3, ಇಂಗ್ಲಿಷ್ | 0—6—0 |

ನವಭಾರತ ಪುಸ್ತಕ ಭಂಡಾರ, ಉಡುಪಿ.

# NAVAYUGA

Popular Kannada Weekly

*Founder:—*

A. B. SHETTY, *M. L. A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೦-೯-'೫೬ | ೩ |


## ಏಕೆ ಈ ಗಲಭೆ?

ಗೃಹಮಂತ್ರಿ ಪಂಡಿತ ಪಂತರು ದೇಶದಲ್ಲಿ ಜಾತೀಯ ಗಲಭೆಯ ಪುನರವತಾರವಾಗುತ್ತಿರುವುದಕ್ಕೆ ವಿಷಾದಿಸಿ ಮತ್ತು ಹೀಗೆ ಗಲಭೆಗಳನ್ನು ಪ್ರಚೋದಿಸುವ ಮನೋಭಾವನನ್ನು ಖಂಡಿಸಿ ಮೊನ್ನೆ ಭೋಪಾಳದಲ್ಲಿ ಹಲವಾರು ಮನನೀಯ ಮಾತುಗಳನ್ನು ಉಪದೇಶಿಸಿದರು. ಮುಸ್ಲಿಂಲೀಗಿನ ದುಷ್ಟ ಚಟುವಟಿಕೆಗಳು ಮರಳಿ ತಲೆಎತ್ತಿವೆಯೋ ಎಂಬಂತೆ ಭಾಸವಾಗಿರುವ ಪರಿಸ್ಥಿತಿ ಏರ್ಪಟ್ಟಿದೆ ಎಂದವರು ಸ್ಪಷ್ಟವಾಗಿ ಹೇಳಿದರು. ಇದಕ್ಕೆ ಕಾರಣವಾದ ಘಟನೆಯು ತೀರ ಸಣ್ಣ ವಿಷಯವಾಗಿದೆ—ಒಂದು ಪುಸ್ತಕದಲ್ಲಿದ್ದ ಕೆಲವು ವಾಕ್ಯಗಳೇ ಅಖಿಲ ಭಾರತ ಸ್ವರೂಪದ ಗಲಭೆಗಳಿಗೆ ಕಾರಣವಾದವೆಂದರೆ ಥಕ್ಕನೆ ಯಾರೂ ನಂಬಲಿಕ್ಕಿಲ್ಲ. ಆದರೆ ನಮ್ಮ ದೇಶದಲ್ಲಿ—ಅಥವಾ ಯಾವ ದೇಶದಲ್ಲಿಯೇ ಆಗಲಿ—ಗಲಭೆ ಎಬ್ಬಿಸಬೇಕೆಂಬ ತೀವ್ರೇಚ್ಛೆ ಇರುವವರಿಗೆ ಇಷ್ಟೇ ಸಾಕು! ಗಲಭೆ ತೊಡಗಿತೇ—ಮೆರವಣಿಗೆ ಎದ್ದಿತೇ—ಹಲ್ಲಿವಿ ಕೂಗುತ್ತಿರುವ ಒಬ್ಬನ ಹಿಂದೆ ನೂರು ಜನ ಹೊರಟರೇ! ಮುಂಬಯಿಯ ಭಾರತೀಯ ವಿದ್ಯಾಭವನದವರು ಅಮೇರಿಕದ ಪ್ರಸಿದ್ಧ ಲೇಖಕರು ಬರೆದಿರುವ ಮತ್ತು ಕಳೆದ ಹದಿನೈದು ವರ್ಷಗಳಿಂದಲೂ ಎಲ್ಲೆಡೆಯಲ್ಲೂ ಓದಲ್ಪಡುತ್ತಿರುವ "ಧಾರ್ಮಿಕ ಮುಂದಾಳುಗಳು" ಎಂಬ ಪುಸ್ತಕದ ಪುನಃ ಮುದ್ರಣವನ್ನು ತಮ್ಮ ಅಧಿಕಾರವಲ್ಲಿ ಮಾಡಿ, ಈಚೆಗೆ ಪ್ರಕಟಿಸಿದರು. ಈ ಪುಸ್ತಕದಲ್ಲಿ ಇಸ್ಲಾಂ ಮತಪ್ರವರ್ತಕರಾದ ಮಹಮ್ಮದ ಪೈಗಂಬರರ ಬಗ್ಗೆ ಬರೆದ ಕೆಲವು ವಿಷಯಗಳು ಅನುಚಿತವಾಗಿವೆ ಎಂಬುದನ್ನು ಕೆಲವು ವಿದ್ವಾಂಸ ಮುಸ್ಲಿಮರು ಕಂಡುಕೊಂಡರು; ಮತ್ತು ಹೀಗೆ ಅನುಚಿತ ವಿಷಯಗಳುಳ್ಳ ಪುಸ್ತಕದ ವಿರುದ್ಧ ತಕ್ಕ ಕ್ರಮ ಕೈಗೊಳ್ಳಬೇಕೆಂದು ಅವರು ಸರಕಾರಕ್ಕೆ ವಿನಂತಿ ಮಾಡಿಕೊಂಡರು. ಪ್ರಧಾನಿ ನೆಹರುಗಳು ಪುಸ್ತಕದ ಆ ಅಂಶಗಳನ್ನು ಓದಿ ನೋಡಿ ಅವು ನಿಜಕ್ಕೂ ಆಕ್ಷೇಪಾರ್ಹವಿವೆ ಎಂದು ಅಭಿಪ್ರಾಯಪಟ್ಟು, ವಿದ್ಯಾಭವನದ ಮುಖ್ಯ ಸಂಪಾದಕ ಸ್ಥಾನದಲ್ಲಿರುವ ಉತ್ತರ ಪ್ರದೇಶದ ಗವರ್ನರರಾದ ಶ್ರೀ ಕೆ. ಎಂ. ಮುನ್ಶಿಯವರ ಗಮನವನ್ನು ಇತ್ತ ಸೆಳೆದರು. ಮುನ್ಶಿಯವರು ಸಹ ಆಕ್ಷೇಪಾರ್ಹ ವಿಷಯವು ಪುಸ್ತಕದಲ್ಲಿದೆ ಎಂದು ಸಮಾಧಾನಪಟ್ಟರಲ್ಲದೆ, ಮಾರಾಟವಾಗದೆ ಉಳಿದ ಪುಸ್ತಕದ ಪ್ರತಿಗಳನ್ನೆಲ್ಲ ಹಿಂದೆ ಕರೆಸಿಕೊಂಡರು; ಮತ್ತು ವಿದ್ಯಾಭವನದ ಸಂಪಾದಕರು ಹದಿನೈದು ವರ್ಷಗಳಿಂದ ಎಲ್ಲೆಡೆಯಲ್ಲೂ ಓದಲ್ಪಡುತ್ತಿರುವ ಈ ಪುಸ್ತಕದಲ್ಲಿ ದೋಷಯುಕ್ತ ಭಾಗವಿರಲಾರದೆಂಬ ನಂಬಿಕೆಯಿಂದ ಇಂತಹ ಆಕ್ಷೇಪಾರ್ಹ ಪ್ರಕಟಣೆಗೆ ಇಂಬು ಕೊಟ್ಟುದಕ್ಕಾಗಿ ಎಲ್ಲರ ಕ್ಷಮಾಯಾಚನೆಯನ್ನು ಮಾಡಿದರು. ರಾಜ್ಯ ಸರಕಾರಗಳಾದರೂ ಈ ಪುಸ್ತಕಕ್ಕೆ ಬಹಿಷ್ಕಾರವನ್ನು ಹಾಕಿ, ಅವುಗಳ ಮಾರಾಟವನ್ನೀಗ ತಡೆದು ಹಿಡಿದಿವೆ. ಇದಿಷ್ಟು ಪುಸ್ತಕ ಪ್ರಕಟಣೆಗೆ ನೇರವಾಗಿ ಸಂಬಂಧಪಟ್ಟ ವಿಷಯ—ಇದನ್ನೋದಿದರೆ, ಗಲಭೆ ನಡೆಸಲು ಎಲ್ಲಿಯಾದರೂ ಅವಕಾಶವಿತ್ತೆ, ಅಂತಹ ಗಲಭೆಯು ಅಗತ್ಯವಾಗಿತ್ತೇ ಎಂಬ ಪ್ರಾಮಾಣಿಕವಾದ ಸಂದೇಹವು ನ್ಯಾಯಪರರಲ್ಲಿ ತಲೆದೋರದಿರದು. ವಿದ್ಯಾಭವನದ ಸಂಪಾದಕ ವರ್ಗವು ಅಚಾತುರ್ಯದಿಂದ ನಡೆದುಕೊಂಡಿತು ನಿಜ. ಪುಸ್ತಕವು ಎಷ್ಟೇ ಪ್ರಸಿದ್ಧಿಗೆ ಬಂದಿರಲಿ, ಪುನಃ ಮುದ್ರಣ ಮಾಡಿ ಪ್ರಕಟಿಸುವಾಗ, ಅದನ್ನೊಮ್ಮೆ ಓದಿ ನೋಡಿ ತಕ್ಕ ಪರಿಷ್ಕಾರಗಳನ್ನು ಮಾಡುವುದು, ಅಥವಾ ಪುಸ್ತಕದಲ್ಲಿದ್ದ ವಿಷಯಗಳ ಸಮಂಜಸತೆಯ ಬಗ್ಗೆ ಸಮಾಧಾನ ಮಾಡಿಕೊಳ್ಳುವುದು ಒಂದು ಸಂಪ್ರದಾಯ. ಭವನದ ಸಂಪಾದಕರು ಏಕೆ ಈ ಸತ್ಸಂಪ್ರದಾಯವನ್ನು ಅನುಸರಿಸಲಿಲ್ಲವೋ ತಿಳಿಯದು. ಆದರೆ, ಸರಕಾರದವರು ಈ ಪುಸ್ತಕವನ್ನು ಓದಿ, ಆಕ್ಷೇಪಾರ್ಹ ಅಂಶಗಳಿವೆ ಎಂದು ಎತ್ತಿ ಹೇಳಿ ತಕ್ಕ ಕ್ರಮ ಕೈಗೊಳ್ಳಬೇಕೆಂದ ಪಾರ್ಲಿಮೆಂಟಿನ ಮುಸ್ಲಿಂ ಸದಸ್ಯರೊಬ್ಬರ ವಿನಂತಿಯನ್ನು ಕ್ಷಿಪ್ರದಲ್ಲಿ ನಡೆಸಿಕೊಟ್ಟಿದೆ. ಜಾತೀಯ ಭೂತವು ತಾಂಡವವಾಡಗೊಡಬಾರದು; ಅಲ್ಪಸಂಖ್ಯಾಕರಾಗಿರುವ ಮುಸ್ಲಿಮರಿಗೆ (ಇವರು ೪½ ಕೋಟಿಯಷ್ಟಿದ್ದಾರೆ, ಈ ಭಾರತದಲ್ಲಿ!) ಧಾರ್ಮಿಕ ಅಥವಾ ಬೇರೆ ಯಾವುದೇ ಮೂಲದಿಂದ ಭಯವಾಗಬಾರದು— ಎಂಬ ತೀಕ್ಷ್ಣ ಪ್ರಜ್ಞೆಯು ಭಾರತ ಸರಕಾರಕ್ಕೆ ಇದ್ದುದರಿಂದಲೇ ಅದು ಏನೇನೂ ವಿಳಂಬವಿಲ್ಲದೆ ಒಡನೆಯೇ ಉಚಿತ ಕಾರ್ಯದಲ್ಲಿ ಪ್ರವೃತ್ತವಾಯಿತು. ಈ ಸಮಯ ಕ್ಲಪ್ತತೆಯನ್ನು ನಿಜವಾಗಿಯೂ ಶ್ಲಾಘಿಸಬೇಕು. ಹೀಗಿರುವಾಗ, ಗಲಭೆಗಳನ್ನು ಪ್ರಚೋದಿಸಿದವರು ಒಳ್ಳೆಯದನ್ನು ಮಾಡಿದರೆಂದು ಹೇಳುವುದು ಹೇಗೆ? ಅಲೀಗಢ ವಿಶ್ವವಿದ್ಯಾನಿಲಯದ ವಿದ್ಯಾರ್ಥಿವೃಂದವು ಗವರ್ನರರೂ ತಮ್ಮ ವಿಶ್ವವಿದ್ಯಾನಿಲಯದ ಕುಲಪತಿ ಸ್ಥಾನದಲ್ಲಿರುವವರೂ ಆದ ಶ್ರೀ ಮುನ್ಶಿಯವರ ಮೂರ್ತಿಯೊಂದನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ, ಅದಕ್ಕೆ ವಾದರಕ್ಷೆಯಿಂದ ಬಹಿರಂಗವಾಗಿ ಹೊಡೆಯುತ್ತಾ ಬೈಯುತ್ತಾ ಬೆಂಕಿಕೊಟ್ಟು ಸುಟ್ಟರೆಂದು ತಿಳಿದುಬರುತ್ತದೆ. ನಮ್ಮ ವಿದ್ಯಾರ್ಥಿಗಳು ಶಿಸ್ತುಗೇಡಿಗಳಾಗಿದ್ದಾರೆಂದು ಪದೇ ಪದೇ ದೂರು ಕೇಳಬರುತ್ತಿರುವುದಕ್ಕೂ ವಿಶ್ವವಿದ್ಯಾನಿಲಯದಂತಹ ಉಚ್ಚ ಶೈಕ್ಷಣಿಕ ಸಂಸ್ಥೆಯಲ್ಲಿ ಕಲಿಯುತ್ತಿರುವವರು ನಡೆದುಕೊಳ್ಳುತ್ತಿರುವ ಮೇಲಿನ ಬಗೆಗೂ ನಿಕಟವಾದ ಸಂಬಂಧವಿದೆ ಎಂದು ತೋರುತ್ತಿಲ್ಲವೆ? ಬುದ್ಧಿಶೂನ್ಯರಾದವರೇ ಇಂತಹ ದುಷ್ಕೃತ್ಯಗಳಲ್ಲಿ, ಹೇಯವಾದ ಗಲಭೆಗಳಲ್ಲಿ ಪ್ರವೃತ್ತರಾದಾರಲ್ಲದೆ ವಿವೇಕಿಗಳಲ್ಲ. ಮೆರವಣಿಗೆ ಮತ್ತು ಗೊಂದಲ ನಡೆದ ಸಮಾರಂಭಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದ ಸಾವಿರಾರು ಮಂದಿಯಲ್ಲಿ ನಿಜವಾಗಿ ವಿದ್ಯಾಭವನದ ಆ ಪುಸ್ತಕವನ್ನು ಓದಿದವರು ಎಷ್ಟಿರಬಹುದು? ಎಣಿಸಿದರೆ ಕೈಬೆರಳಿನಿಂದೆಣಿಸುವಷ್ಟು ಎಂಬುದು ನಮ್ಮ ವಿಶ್ವಾಸ. ಇಲ್ಲದಿದ್ದರೆ, ವಿದ್ಯಾಭವನದ ಈ ಪ್ರಕಟಣೆಯು ಲಕ್ಷಗಟ್ಟಳೆಯಲ್ಲಿ ಮಾರಾಟವಾಗಿ ಹೋಗಿರಬೇಕಿತ್ತೆಂಬುದು ಸ್ಪಷ್ಟ: ಹಾಗೇನೂ ಆಗಿಲ್ಲ. ಒಂದೆರಡು ಸಾವಿರ ಪ್ರತಿಗಳ ಮಾರಾಟವೂ ಆಗಿಲ್ಲ. ಆದುದರಿಂದ, ಜನರನ್ನು ಗಲಭೆಯ ಮೂಲ ಪ್ರಚೋದಕರು ಉದ್ರೇಕಿಸಿದುದರಿಂದಲೇ ಅವರಿಗೆ ಹಿಂಬಾಲಕರು ದೊರೆತರಲ್ಲದೆ, ಸ್ವತಃ ಪುಸ್ತಕವನ್ನೋದಿ, ಅನ್ಯಾಯವಾಗಿದೆ ಎಂಬುದನ್ನು ಮನಗಂಡು, ವಾಸ್ತವವಾದ ಅಸಮಾಧಾನದಿಂದ ಮೆರವಣಿಗೆಯಲ್ಲಿ ಭಾಗವಹಿಸಿದವರೇನೂ ಹೆಚ್ಚಿರಲಿಕ್ಕಿಲ್ಲ. ಇದನ್ನೇ ಹಿಂದೆ ಮುರಾರ್ಜಿ ದೇಸಾಯಿಯವರು "ಜನಸಮೂಹದ ಮನೋಭಾವ" ಎಂದು ಕರೆದುದಾಗಿದೆ. ಜನಸಮೂಹದ ಮನೋಭಾವಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲವೆಂದೂ ಅವರು ಹೇಳಿದ್ದಾರೆ. ವ್ಯಕ್ತಿಯೊಬ್ಬನು ಆಲೋಚಿಸುವಾಗ, ಅಥವಾ ಒಂದು ನಿರ್ಧಾರಕ್ಕೆ ಬರುವಾಗ ಅದಕ್ಕೆ ಯೋಗ್ಯ ಹಿನ್ನೆಲೆಗಳನ್ನೂ ಆತನು ಕೊಡಲು ಸಮರ್ಥನಾಗುತ್ತಾನೆ. ಆದರೆ, ಜನಸಮೂಹವು ಗೊಂದಲ ಹಾಕುವಾಗ, ಅದಕ್ಕೆ ತರ್ಕಬದ್ಧವಾದ ಕಾರಣವು ಸಿಗಲಾರದು; ನೈತಿಕ ಸಮರ್ಥನೆಯಂತೂ ಹುಡುಕಿದರೂ ಈ ಗೊಂದಲಕ್ಕೆ ದೊರೆಯದು. ಜನಗಳೆಲ್ಲರೂ ಆಗ ದನಗಳಾಗುತ್ತಾರೆ-ಘೋಷಣೆ ಕೂಗುವಾತನ ಹಿಂಬಾಲಕರಾಗುತ್ತಾರೆ-ವಿಚಾರವಂತರೂ ದೂರದರ್ಶಿಗಳೂ ಸಂಯಮಿಗಳೂ ವಿವೇಕಶೀಲರೂ ಆಗಿರುವವರು ಉಳಿಯುದಿಲ್ಲ. ತಲೆ ಕೆಟ್ಟವರಂತೆಯೇ ಅವರೆಲ್ಲ ಪರಿಸ್ಥಿತಿ ಯಾಗುತ್ತದೆ. ಅನೇಕ ರಾಜಕಾರಣಿಗಳೂ ಗೊಂದಲಪ್ರಿಯರೂ ಜನಸಮೂಹದ ಮನೋಭಾವವನ್ನು ತೀರ ಕ್ಷುಲ್ಲಕ ಕಾರಣಗಳಿಗಾಗಿಯೂ ಉದ್ರೇಕಿಸಿ ಬಿಡಬಹುದೆಂಬ ಗುಟ್ಟನ್ನು ತಿಳಿದು, ತಮ್ಮ ದುಷ್ಕೃತ್ಯಗಳ ತಂತ್ರವನ್ನು ಪ್ರಾರಂಭಿಸುತ್ತಾರೆ. ಈಚೆಗೆ ದೇಶದಾದ್ಯಂತ ನಡೆದ ಗಲಭೆಗಳ ಮೂಲ ಇಷ್ಟೇ— ಗುಂಪಿನೊಡನೆ ಸೇರಿ ಹೋಗುವಷ್ಟು ಸುಲಭವಾಗಿ ತಮ್ಮ ವೈಯಕ್ತಿಕ ಅಸ್ತಿತ್ವವನ್ನು ಕಳೆದುಕೊಳ್ಳುವ ಜನರಿಗೆ "ತಲೆ

## ನಿಧನ

**ವಕೀಲ್ ಕೆ. ಜೆ. ಬಲ್ಲಾಳರ ಆಕಸ್ಮಿಕ ನಿಧನ—** ಉಡುಪಿಯ ಸುಪ್ರಸಿದ್ಧ ವಕೀಲರೂ, ಸಮಾಜ ಮತ್ತು ಸಾರ್ವಜನಿಕ ಸೇವಾಸಕ್ತರೂ ಆಗಿದ್ದ ಶ್ರೀ ಕೆ. ಜೆ. ಬಲ್ಲಾಳರ ಆಕಸ್ಮಿಕ ನಿಧನದಿಂದ ಉಡುಪಿಯ ಜನತೆಗೆ ವಜ್ರಾಘಾತವಾದಂತಾಗಿದೆ. ಸದ್ದಿಲ್ಲದೆ ಸಮಾಜಸೇವೆ ಮಾಡುವುದು ಅವರ ಜೀವನದ ವೈಶಿಷ್ಟ್ಯವಾಗಿತ್ತು. ಅವರೊಬ್ಬ ಅನುಕರಣೀಯ ಆದರ್ಶವ್ಯಕ್ತಿ. ಅವರ ಸಾಮಾಜಿಕ ಜೀವನದಲ್ಲಿ ಮಾತಿಗಿಂತ ಕೃತಿಗೆ ಹೆಚ್ಚಿನ ಮೌಲ್ಯವನ್ನು ಕೊಡುತ್ತಿದ್ದರು. ತಾನು ಹಿಡಿದ ಕಾರ್ಯವನ್ನು ಪ್ರಾಮಾಣಿಕತನದಿಂದ, ನಿಷ್ಠೆಯಿಂದ ನಡೆಸಿಕೊಂಡು ಬರುವ ನಿಶ್ಚಲ ಮನೋವೃತ್ತಿಯಿಂದ ಅವರು ಕಟ್ಟಿ ಬೆಳೆಸಿದ ಸಂಘ ಸಂಸ್ಥೆಗಳು ಇಂದು ಭದ್ರವಾದ ತಳಹದಿಯಲ್ಲಿ ನಿಂತಿರುತ್ತವೆ. ಅವರು ಜಿಲ್ಲಾ ಬೋರ್ಡಿನ ಸದಸ್ಯರೂ, ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಸದಸ್ಯರೂ ವಿಜಯಾ ಬೇಂಕಿನ ಡೈರೆಕ್ಟರರೂ ಆಗಿ ಸೇವೆಸಲ್ಲಿಸಿದ್ದರು. ಉಡುಪಿ ಬಾರ್ ಎಸೋಸಿಯೇಶನಿನ ಅಧ್ಯಕ್ಷರೂ, ಅನೇಕ ಸಹಕಾರಿ ಹಾಗೂ ಸ್ಥಾನಿಕ ಸಂಸ್ಥೆಗಳ ಅಧ್ಯಕ್ಷರೂ, ನವಯುಗ ಎಂಟರ್‌ಪ್ರೈಸಿನ ಚೇಯರ್‌ಮೇನರೂ, ಛೂಪ್ಯಾಲಕ ಸಂಘದ ಅಧ್ಯಕ್ಷರೂ ಶಿರ್ವ ಹಿಂದೂ ಹ್ಯಾಸ್ಕೂಲಿನ ಕರೆಸ್ಪೋಂಡೆಂಟರೂ ಆಗಿದ್ದರು ಹೀಗೆ ಅನೇಕ ಸಂಘ ಸಂಸ್ಥೆಗಳ ಮೂಲಕ ಬಹುಮುಖ ಸೇವೆಯನ್ನು ಸಲ್ಲಿಸಿರುವರು. ಉಡುಪಿಯಲ್ಲಿ ಪ್ರಥಮತಃ ಹರಿಜನ ಹಾಸ್ಟೇಲನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಹರಿಜನರ ಉದ್ಧಾರಕ್ಕಾಗಿ ದುಡಿದವರಲ್ಲಿ ಅವರು ಪ್ರಮುಖರು. ಜಿಲ್ಲಾ ಹರಿಜನ ಸಂಘದ ಸದಸ್ಯರಾಗಿಯೂ ಇದ್ದರು. ಉಡುಪಿ ರಾಮಕೃಷ್ಣ ವಿದ್ಯಾರ್ಥಿ ಭವನವೂ ಅವರ ಪರಿಶ್ರಮದ ಫಲವಾಗಿದೆ.

ಸಾರ್ವಜನಿಕ ಸೇವೆಯು ತನ್ನ ಜೀವನದ ಪ್ರಧಾನ ಉದ್ದೇಶವನ್ನಿಟ್ಟುಕೊಂಡಿರುವ ಈ ನಿರಾಡಂಬರ ವ್ಯಕ್ತಿಯ ಅಂತ್ಯವೂ ಸಾರ್ವಜನಿಕ ಸೇವೆಯಲ್ಲಿಯೇ ಮುಕ್ತಾಯಗೊಂಡಿತು. ತಾ. 15ನೇ ಸಾಯಂಕಾಲ ಶಿರ್ವ ಹಿಂದೂ ಹ್ಯಾಸ್ಕೂಲಿನ ಕಟ್ಟಡದ ಸಹಾಯಾರ್ಥವಾಗಿ ಹಣ ಸಂಗ್ರಹಿಸಲು ಮೂಲ್ಕಿಗಾಗಿ ಕವತಾರಿಗೆ ಹೋಗುವಾಗ ದಾರಿಯಲ್ಲಿಯೆ ಬಳ್ಕುಂಜೆಯಲ್ಲಿ ಸುಮಾರು ರಾತ್ರಿ 8 ಗಂಟೆಗೆ ಹೃತ್ಕ್ರಿಯೆ ನಿಂತು ಇಹಲೋಕವನ್ನು ತ್ಯಜಿಸಿದರು. ಇದು ಯೋಗಾಯೋಗ. 'ಮಾಡು ಮಡಿ' ಎನ್ನುವ ತತ್ವದಂತೆ ಕೆಲಸಮಾಡುತ್ತಲೇ ಮೃತ್ಯುವನ್ನಪ್ಪಿದರು. ಕರ್ಮಜೀವಿಗಳ ಜೀವನವೇ ಹೀಗೆನ್ನಬಹುದು. ಅವರ ಪ್ರಾಯ ಸುಮಾರು 66.

ಜನನ— 6—6—1890
ನಿಧನ— 15—9—1956

ಇವರಿಗೆ 3 ಗಂಡು 3 ಹೆಣ್ಣು ಮಕ್ಕಳು. ಹಿರೇ ಮಗ ಶ್ರೀ ವೈ. ಡಿ. ಹೆಗ್ಡೆಯವರು ಇಂಡಿಯಾ ಸರಕಾರದ ಆಫೀಸರ್ ಸರ್ವೇಯರರಾಗಿದ್ದಾರೆ. ಎರಡನೆ ಪುತ್ರ ಶ್ರೀ ವೈ. ವಿಠ್ಠಲ ಹೆಗ್ಡೆಯವರು ಎಗ್ರಿಕಲ್ಚರ್ ಡೆಮೋನ್‌ಸ್ಟ್ರೇಟರಾಗಿದ್ದಾರೆ. ಕಿರೇ ಮಗ ಶ್ರೀ ವೈ. ಸಿ. ಎಸ್. ಹೆಗ್ಡೆಯು ಎಡ್ವಕೇಟರಾಗಿಯೂ ಇದ್ದಾರೆ.

ಶ್ರೀ ಬಲ್ಲಾಳರ ಆಕಸ್ಮಿಕ ನಿಧನದಿಂದ ನಿಷ್ಠಾವಂತ ಸಮಾಜ ಸೇವಕರೊಬ್ಬರನ್ನು ಕಳೆದುಕೊಂಡಂತಾಗಿದೆ. ಬಲ್ಲಾಳರಂತಹ ಶ್ರೇಷ್ಠ ವ್ಯಕ್ತಿತ್ವ ಅಪ್ರತಿಮವಾದದ್ದು. ಬಂಟ ಸಮಾಜದ ಸುಪ್ರತಿಷ್ಠಿತ ಹಾಗು ಘನತೆಯನ್ನು ಹೊಂದಿದ ಪ್ರಮುಖ ವ್ಯಕ್ತಿತ್ವ ಅವರದೊಂದರೆ ತಪ್ಪಾಗದು. ಜೀವನದ ಬಹ್ವಂಶ ಸಮಯವನ್ನು ಸಮಾಜಸೇವೆಗಾಗಿ, ದೀನ ಪತಿತರ ಸೇವೆಗಾಗಿ ಸವೆಯಿಸಿ ಇಡೀ ಜಿಲ್ಲೆಯಲ್ಲಿ ಪ್ರಖ್ಯಾತರಾಗಿದ್ದಾರೆ. ಶ್ರೀ ಬಲ್ಲಾಳರ ಅಕಾಲ ನಿಧನದಿಂದ ಅಪಾರ ಶೋಕಕ್ಕೀಡಾದ ಜನತೆ ಹಾಗೂ ಬಂಧು ಬಳಗದವರ ಅಪಾರ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ. ಶ್ರೀ ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

## ಸುಯೇಜಿನ ತಂಟೆ

# ಬಳಕೆಗಾರರ ಸಂಘದ ಯೋಜನೆ

### ಐಗುಪ್ತದ ಧಿಕ್ಕಾರ!

ಸುಯೇಜಿನ ಕಾಲುವೆ ತಂಟೆಯು ಈಗ ತೀರ ವಿಷಮಿಸಿದೆ. ಕಾಲುವೆಯ ಮೇಲೆ ಐಗುಪ್ತಕ್ಕಿರುವ ಸಾರ್ವಭೌಮಾಧಿಕಾರವನ್ನು ಲೆಕ್ಕಿಸದೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಮುಖವಾದ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳು ಕಾಲುವೆಯು ತಮ್ಮ ಇಚ್ಛೆಯಂತೆ ನಡೆಸಲ್ಪಡಬೇಕೆಂಬ ನಿರ್ಧಾರಕ್ಕೆ ಬಲವಾಗಿ ಅಂಟಿಕೊಂಡಿರುವಂತೆ ತೋರುತ್ತದೆ.

ಭೂಮಧ್ಯ ಸಮುದ್ರ ಪ್ರದೇಶದ ಸೈನ್ಯ ಠಾಣ್ಯಗಳಲ್ಲಿ ವಿಮಾನಗಳೂ ಹಡಗಗಳೂ ಯುದ್ಧ ಸನ್ನದ್ಧವಾಗಿ ನಿಂತಿರುವಂತೆ ಈ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಮೇರಿಕವನ್ನು ಬಿಟ್ಟುಳಿದ ಎರಡು ರಾಷ್ಟ್ರಗಳು ಸಕಲ ವ್ಯವಸ್ಥೆಗಳನ್ನು ಮುಂದರಿಸುತ್ತಲೇ ಇವೆ. ಅಮೇರಿಕವು ಮಾತ್ರ 'ಶಾಂತಿಯಿಂದ ತಂಟೆಯನ್ನು ತೀರ್ಮಾನಿಸುವ ಎಲ್ಲ ಮಾರ್ಗಗಳೂ ಮುಚ್ಚಿದ ಬಳಿಕ ಯುದ್ಧದ ಕಡೆ ತಿರುಗೋಣ' ಎನ್ನುತ್ತಿರುವಂತೆ ಭಾಸವಾಗುತ್ತದೆ.

ಬ್ರಿಟನಿನ ಪ್ರಧಾನಿ ಈಡನ್ನರು ಅಮೇರಿಕದ ಈ ನಿಲುಮೆಗೆ ಸಂಪೂರ್ಣವಾಗಿ ತಮ್ಮ ಅನುಮೋದನೆ ಇದೆ ಎಂಬುದನ್ನು ಪ್ರತಿ ಪಕ್ಷಗಳ ಒತ್ತಾಯವು ಬಲವಾಗಿ ತಮ್ಮ ಮೇಲೆ ಬೀಳುವ ವರೆಗೆ ವ್ಯಕ್ತವಾಗಗೊಡಲಿಲ್ಲ. ಕಾಲುವೆ ಬಳಕೆಗಾರರ ಸಂಘವೊಂದನ್ನು ಸ್ಥಾಪಿಸಿ, ಈ ಸಂಘದ ಮೂಲಕ ಹಡಗ ನಡೆಸುವುದಕ್ಕೆ ನಾವು ಪ್ರಯತ್ನಿಸುತ್ತೇವೆ; ಇದಕ್ಕೆ ಐಗುಪ್ತದ ಸಹಕಾರ ದೊರೆಯದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುತ್ತಲೇ ಅವರು ಬಂದರು.

ಈ "ಮುಂದಿನ ಕ್ರಮ"ವು ಯುದ್ಧವೆ? ಎಂಬ ಬಗ್ಗೆ ಪ್ರತಿಪಕ್ಷದ ಮುಖಂಡರು ಒತ್ತಾಯ ಪೂರ್ವಕ ಪದೇ ಪದೇ ಸ್ಪಷ್ಟೀಕರಣವನ್ನು ಕೇಳಿದುದರ ಪರಿಣಾಮವಾಗಿ "ಯುದ್ಧವಲ್ಲ—ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳಕ್ಕೆ ಒಪ್ಪಿಸುವುದೇ ಆಕ್ರಮ" ಎಂಬ ಉತ್ತರ ಬಂತು. ಐಗುಪ್ತದ ಅಧ್ಯಕ್ಷರಾದ ನಾಸೇರರಿಗೆ ಪಾಶ್ಚಾತ್ಯ ರಾಷ್ಟ್ರಗಳು ಯುದ್ಧವನ್ನೆ ಪ್ರಾರಂಭಿಸಬಹುದೆಂಬ ಭಯವಿರಲಿ ಎಂದು ಜೋಪಾನವಾಗಿ ಗುಟ್ಟನ್ನು ಕಾಯ್ದಿಡುತ್ತಾ ಬಂದ ಈಡನ್ನರು ಪ್ರತಿಪಕ್ಷದ ನಾಯಕರಿಗೆ ಹೀಗೆ ಸೋತರು.

ಆದರೆ, ಸೋತರೂ, ಅವರು ಇನ್ನೊಂದು ರೀತಿಯಲ್ಲಿ ಗೆದ್ದು ಎಲ್ಲರ ಕೃತಜ್ಞತೆಗೆ —ಅದು ತಾತ್ಕಾಲಿಕ ಕೃತಜ್ಞತೆಯಾಗಿದೆ— ಪಾತ್ರರಾಗಿದ್ದಾರೆ. ಕೆಲವೇ ದಿನಗಳಲ್ಲಿ ತೊಡಗಬಹುದಾಗಿದ್ದ ಯುದ್ಧವು ಕೆಲವು ವಾರಗಳ ವರೆಗಾದರೂ "ಮುಂದೂಡಲ್ಪಟ್ಟಿತು" ಎಂಬುದು ಬ್ರಿಟನಿನ ಜನತೆಯ ಸಮಾಧಾನವಾದರೆ, ಭಾರತ ಮತ್ತಿತರ ರಾಷ್ಟ್ರಗಳು ಈ ಅವಧಿಯಲ್ಲಿ ಪರಸ್ಪರ ತಿಳಿವಳಿಕೆ ಹೆಚ್ಚಿಕೊಂಡು ತಂಟೆಯು ಶಾಂತವಾಗಿ ಪರಿಹಾರ ಹೊಂದುವ ಮಾರ್ಗವನ್ನು ಕಂಡುಹಿಡಿಯುವುದು ಸಾಧ್ಯವಾದೀತೆಂದು ನಂಬಿವೆ.

ಪಾಶ್ಚಾತ್ಯ ರಾಷ್ಟ್ರಗಳು ಇದೇ ಬುಧವಾರ "ಕಾಲುವೆಯ ಬಳಕೆಗಾರರ ಸಂಘ"ವೊಂದನ್ನು ಸ್ಥಾಪಿಸುವ ಇಚ್ಛೆಯಿಂದ ಒಂದು ಸಮ್ಮೇಳನವನ್ನು ಕರೆದಿವೆ. ಈ ಹಿಂದೊಮ್ಮೆ ೨೨ ರಾಷ್ಟ್ರಗಳ ಸಮ್ಮೇಳನ ನಡೆದಿತ್ತಷ್ಟೇ: ಇದರಲ್ಲಿ ಪಾಶ್ಚಾತ್ಯ ರಾಷ್ಟ್ರಗಳು—ಅಂದರೆ, ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸ್—ಮುಂಡಿಸಿದ್ದ ಯೋಜನೆಗೆ ರಶ್ಯ, ಭಾರತ ಮತ್ತು ಬೇರೆ ಎರಡು ರಾಷ್ಟ್ರಗಳು ಬೆಂಬಲ ಕೊಡಲಿಲ್ಲ. ಬೇರೆ ೧೮ ರಾಷ್ಟ್ರಗಳು ಮಾತ್ರ ಬೆಂಬಲವಿತ್ತಿದ್ದವು. ಈ ೧೮ ರಾಷ್ಟ್ರಗಳದೇ ಪರಿಷತ್ತು ಬಳಕೆಗಾರರ ಸಂಘ ರಚನೆಗಾಗಿ ನಡೆದಿದೆ.

ಈಗ ಕಾಲುವೆಯಲ್ಲಿ ಹಡಗವು, ಅದು ಯಾರದೇ ಆಗಿರಲಿ, ಸಂಚಾರ ಕೈಗೊಳ್ಳಬೇಕಾದರೆ ಕಾಲುವೆ ಕಂಪೆನಿಯ ಪೈಲಟ್ಟರ ವಶಕ್ಕೆ ಹೋಗಬೇಕಾಗಿದೆ. ಈ ಪೈಲಟರು ದಡದಲ್ಲಿ ಕೊಡಲಾದ ಸೂಚನೆಗಳನ್ನು ಅನುಸರಿಸಿ ಕಾಲುವೆಯಲ್ಲಿ ಹಡಗವನ್ನು ಮುನ್ನಡೆಸಿಕೊಂಡು ಹೋಗುತ್ತಾರೆ. ಪೈಲಟರಿಲ್ಲದಿದ್ದರೆ ಹಡಗ ಸಂಚಾರ ಕಠಿಣವಾಗುವುದೆಂದು ತಿಳಿದ ಪಾಶ್ಚಾತ್ಯ ರಾಷ್ಟ್ರಗಳು, ತಮ್ಮ ದೇಶದವರಾಗಿದ್ದು ಕಾಲುವೆ ಪ್ರದೇಶದಲ್ಲಿ ಹಡಗ ನಡೆಸುವ ಮತ್ತು ಸೂಚನೆ ಕೊಡುವ ಕೆಲಸದಲ್ಲಿದ್ದ ಸುಮಾರು ೫೦೦ ಮಂದಿಯನ್ನು ಕೆಲಸ ಬಿಟ್ಟು ಸ್ವದೇಶಕ್ಕೆ ಬರುವಂತೆ ಹೇಳಿವೆ. ಹಾಗೆ ಇವರು ಕೆಲಸ ಬಿಟ್ಟು ಹೋಗಿದ್ದಾರೆ

ಐಗುಪ್ತವು ಇದರಿಂದ ಭಯಗೊಂಡಿಲ್ಲ. ಈ ಸಂಭವವನ್ನು ಮೊದಲೇ ಊಹಿಸಿದ್ದ ಐಗುಪ್ತವು ತನ್ನ ಪ್ರಜೆಗಳನ್ನೆ ತರಬೇತಿಗೊಳಿಸುತ್ತಿದೆ. ರಶ್ಯ ಯುಗೊಸ್ಲಾವಿಯ ಮತ್ತು ಗ್ರೀಸಿನಿಂದಲೂ ಕೆಲವು ಜನರು ತರಬೇತಿಗಾಗಿ ಬಂದಿದ್ದಾರೆ. ಹೀಗಾಗಿ ಕಾಲುವೆಯಲ್ಲಿ ಹಡಗ ಸಂಚಾರಕ್ಕೆ ಅಡಚಣೆ ಏನೂ ಆಗುತ್ತಿಲ್ಲ. ಆದರೆ ಬ್ರಿಟನು ಉದ್ದೇಶಪೂರ್ವಕವಾಗಿ ಎಂದಿಗಿಂತ ಹೆಚ್ಚು ಹಡಗಗಳನ್ನು ಕಾಲುವೆ ದಾಟಲು ಕಳುಹಿಸುತ್ತಿದೆಯೆಂದು ತಿಳಿದು ಬರುತ್ತದೆ.

ಹೇಗಾದರೂ ಮಾಡಿ ಕಾಲುವೆ ಸಂಚಾರ ವ್ಯವಸ್ಥೆಯನ್ನು ಕೆಡಿಸಬೇಕೆಂದೂ ಹಾಗೆ ಐಗುಪ್ತವನ್ನು ತಪ್ಪಿತಸ್ಥ ಸ್ಥಾನದಲ್ಲಿಟ್ಟು ತಮ್ಮ ತಂತ್ರವನ್ನು ಸಾಧಿಸಬೇಕೆಂದೂ ಪಾಶ್ಚಾತ್ಯ ರಾಷ್ಟ್ರಗಳ ಹಂಬಲ. ಅಮೇರಿಕವು ಎಣ್ಣೆ ಪೂರೈಕೆಯ ಹೊಣೆಯನ್ನು ತಾನು ಹೊತ್ತುಕೊಂಡು, ಯುರೋಪಿನ ಮಿತ್ರ ರಾಷ್ಟ್ರಗಳಿಗೆ ತಲೆದೋರಿದ್ದ ಚಿಂತೆಯನ್ನು ನಿವಾರಿಸಿದೆ. ಅಗತ್ಯಬಿದ್ದರೆ ತನ್ನಲ್ಲಿರುವ ಶಕ್ತಿಯನ್ನು ಯುರೋಪಿನ ಪೇಟೆಗೆ ಎಂದಿಗಿಂತ ಹೆಚ್ಚಾಗಿ ಪೂರೈಸಿ, ಐಗುಪ್ತದ ಮೇಲೆ ಆರ್ಥಿಕ ಭಾರವನ್ನು ಹಾಕಲೂ ಅದು ಸಿದ್ಧವಿದೆ. ಅಲ್ಲದೆ, ಪಾಶ್ಚಾತ್ಯ ದೇಶಗಳ ಹಡಗಗಳು ಸುಯೇಜಿನ ಕಾಲುವೆಯನ್ನು ಉಪಯೋಗಿಸದೆ ಆಫ್ರಿಕಕ್ಕೆ ಸುತ್ತಿ ಹೋಗಬೇಕೆಂದೂ ಆಗ ಐಗುಪ್ತಕ್ಕೆ ಸುಂಕದ ಹಣವೇನೂ ಸಿಗದೆ ಅದು ಕಂಗಾಲಾಗುವುದೆಂದೂ ಹೀಗೆ ಸುತ್ತಿಬರುವ ಹೆಚ್ಚಿನ ವೆಚ್ಚವನ್ನು ತಾನೇ ನೋಡಿಕೊಳ್ಳುವುದಾಗಿಯೂ ಅಮೇರಿಕ ಅಭಯವಿತ್ತಿದೆಯಂತೆ.

ಅಮೇರಿಕವು ಯುದ್ಧವಿಲ್ಲದೆ ಶಾಂತ ರೀತಿಯಿಂದ ಸುಯೇಜಿನ ತಂಟೆಯನ್ನು ಬಗೆಹರಿಸಲು ಯೋಜಿಸಿರುವ ಉಪಾಯವಿದು. ಡಲ್ಲೇಸರು ಇದರೊಟ್ಟಿಗೆ ಬಳಕೆಗಾರ ಸಂಘದ ಯೋಜನೆಯನ್ನೂ ಮಾಡಿದ್ದಾರೆ. ಇದರ ಪ್ರಕಾರ ಈಗ ಹಿಂದೆ ಸರೆಸಿಕೊಂಡಿರುವ ಪೈಲಟರನ್ನೂ ಸೂಚನೆಗಾರರನ್ನೂ ಈ ಸಂಘವು ಕೆಲಸಕ್ಕೆ ನೇಮಿಸಿಕೊಳ್ಳುತ್ತದೆ-ಮಿತ್ರ ರಾಷ್ಟ್ರಗಳ ಹಡಗಗಳನ್ನು ಇವರಿಗೆ ನಡೆಸಗೊಡುವಂತೆ ಐಗುಪ್ತವನ್ನು ಕೇಳಲಾಗುತ್ತದೆ-ಬಳಕೆಗಾರ ಸಂಘವೇ ಐಗುಪ್ತದ ಕಂಪೆನಿಗೆ ಪ್ರತಿಸ್ಪರ್ಧಿಯಾಗಿ ನಿಂತುಕೊಂಡು ಈ ಹಡಗಗಳಿಂದ ಸುಂಕವಸೂಲು ಮಾಡುತ್ತದೆ. ತಕ್ಕ ಸೌಕರ್ಯಗಳನ್ನೊದಗಿಸಲು ಐಗುಪ್ತವು ತಪ್ಪಿದರೆ ೧೮೮೮ನೇ ಇಸವಿಯ ಕಾನ್‌ಸ್ಟಾಂಟಿನೋಪಲ್ ಒಪ್ಪಂದವನ್ನು ಭಂಗಿಸಿದ ಆರೋಪಕ್ಕೆ ಐಗುಪ್ತವನ್ನು ಗುರಿಪಡಿಸಲಾಗುತ್ತದೆ; ಮತ್ತು ಸಂಯುಕ್ತ ರಾಷ್ಟ್ರ ಸಂಘದ ಅನುಮೋದನೆಯನ್ನು ಪಡೆಯಲೂ ಪಾಶ್ಚಾತ್ಯ ರಾಷ್ಟ್ರಗಳು ಹವಣಿಸುತ್ತವೆ.

ಐಗುಪ್ತವು ಇಂತಹ ಬಳಕೆಗಾರ ಸಂಘದ ರಚನೆಯು ಕ್ರಮಬದ್ಧವಲ್ಲವೆಂದಿದೆ; ಯಾರಾದರೂ ಈ ಸಂಘದ ಆಶ್ರಯದಲ್ಲಿ ಕಾಲುವೆ ದಾಟಲು ಬಂದರೆ ಏನು ಮಾಡುವಿರೆಂದು ಸರಕಾರಿ ವಕ್ತಾರನನ್ನು ಕೇಳಿದಾಗ 'ಅಂತಹ ಸಾಹಸ ಮಾಡಿ ನೋಡಲಿ ಪರಿಣಾಮ ಗೊತ್ತಾಗುತ್ತದೆ' ಎಂಬ ಮಾರ್ಮಿಕ ಉತ್ತರ ಬಂತು. ಕಾನ್‌ಸ್ಟಾಂಟಿನೋಪಲ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳ ಮತ್ತು ಅವುಗಳ ಉತ್ತರಾಧಿಕಾರ ಪ್ರತಿನಿಧಿತ್ವವನ್ನು ಪೂರ್ಣರೂಪದಲ್ಲಿ ಹೊಂದಿರದ ಈ ಬಳಕೆಗಾರ ಸಂಘವು ಹಾಸ್ಯಾಸ್ಪದ ಸೃಷ್ಟಿ ಎಂದು ತಜ್ಞರು ಈಗಾಗಲೇ ಹೇಳತೊಡಗಿದ್ದಾರೆ.

ರಶ್ಯವು ಪಾಶ್ಚಾತ್ಯ ರಾಷ್ಟ್ರಗಳಿಗೆ ಎಚ್ಚರಿಕೆಯನ್ನಿತ್ತು ಶಾಂತಿ ಭಂಜಕವಾದ ವಾತಾವರಣವನ್ನು ಅವು ನಿರ್ಮಿಸುತ್ತಿರುವುವಾಗಿ ಆರೋಪಿಸಿದೆ. ಐಗುಪ್ತವು ಈಗಾಗಲೇ ಭದ್ರತಾಮಂಡಳಕ್ಕೆ ದೂರೊಯ್ದು ತನ್ನ ಗಡಿ ಪ್ರದೇಶದಲ್ಲಿ ಕ್ಲೇಶ ಹೆಚ್ಚಿಸಲು ಪಾಶ್ಚಾತ್ಯ ರಾಷ್ಟ್ರಗಳು ಹವಣಿಸುತ್ತಿವೆ ಎಂದು ಸ್ಪಷ್ಟಗೊಳಿಸಿದೆ. ಭಾರತದ ಶ್ರೀ ಎ. ಕೆ. ಕೃಷ್ಣಮೇನನ್ನರು—ಕೈರೊ—ಲಂಡನುಗಳ ನಡುವೆ ಸೌಹಾರ್ದಭಾವನೆಯನ್ನುಂಟುಮಾಡಲು ಹಾರಾಡುತ್ತಿದ್ದಾರೆ. ನೆಹರುಗಳು ಯುದ್ಧ ಅಥವಾ ಬಳಕೆಗಾರ ಸಂಘದ ನಿರ್ಮಾಣದ ಆತುರ ಯೋಗ್ಯವಲ್ಲ ಎಂಬ ಎಚ್ಚರಿಕೆಯನ್ನಿತ್ತಿದ್ದಾರೆ. ಐಗುಪ್ತವು ತಾನು ಎಲ್ಲದಕ್ಕೂ ಸಿದ್ಧ ಎನ್ನುತ್ತದೆ.

---

...ಗೊಂದು ಓಟು" ಎಂಬುದೇ ಸೂತ್ರವಾದ ಪ್ರಜಾಪ್ರಭುತ್ವಕ್ಕೆ ಒಗ್ಗಿಕೊಳ್ಳುವುದು ...ಗಳ ಕಷ್ಟವಾದೀತು. ಇಂಥವರೂ ಪ್ರಜಾಪ್ರಭುತ್ವವಾದಿಗಳಾಗಿ ಪರಿಣಮಿ...ುವ ವರೆಗೆ ನಮ್ಮ ದೇಶದ ಸರಕಾರವು ಸರ್ವಾಧಿಕಾರಿಯ ಲಕ್ಷಣಗಳನ್ನೂ ತೋರ್ಪಡಿಸುತ್ತಿರುವುದು ಅನಿವಾರ್ಯವಾಗುತ್ತದೆ: ಏಕೆಂದರೆ ಸರಕಾರವನ್ನು ಎದುರಿಸುವವರು ಬುದ್ಧಿವಂತರಾದ ಪ್ರಜೆಗಳಾಗಿರುವುದಿಲ್ಲ; ಗುಂಪಿನ ಹಿಂದೆ ...ುವ ಮುಂಡರಾಗಿರುತ್ತಾರೆ! ನಮ್ಮ ರಾಷ್ಟ್ರದ ಹೆಚ್ಚಿನ ದೌರ್ಬಲ್ಯಗಳಲ್ಲಿ ಇದ...ಯೇ ಅಗ್ರಸ್ಥಾನ ಸಲ್ಲುತ್ತದೆ.

---

**ಶ್ರೀ ಕೆ. ಜೆ. ಬಲ್ಲಾಳರ ನಿಧನಕ್ಕಾಗಿ ಸಂತಾಪ ಸೂಚಕ ಸಭೆಯು—** ನವಯುಗ ಪ್ರೆಸ್ಸಿನಲ್ಲಿ ದಿನಾಂಕ 17ರಂದು ಡಾ. ಪಿ. ಆರ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಕೆ. ಹೊನ್ನಯ್ಯ ಶೆಟ್ಟರು ಭಾಷಣ ಮಾಡಿ ಶ್ರೀ ಬಲ್ಲಾಳರು ಆರಂಭದಿಂದಲೂ ನವಯುಗ ಎಂಟರ್‌ಪ್ರೈಸ್ ಸಂಸ್ಥೆಯ ಚೇರ್ಮನ್‌ರಾಗಿ, ಅದರ ಅಭಿವೃದ್ಧಿಗಾಗಿ ಅಹೋರಾತ್ರಿ ದುಡಿದು ಅದಕ್ಕೊಂದು ರೂಪವನ್ನು ಕೊಡಲು ತನಗೆ ತುಂಬಾ ನೆರವಾಗಿರುವರೆಂದೂ ಸದಾ ತನ್ನ ಹಿತೈಷಿಗಳಾಗಿದ್ದರೆಂದೂ ಹೇಳಿ ಅವರು ಕೈ ಹಾಕಿರುವ ಪ್ರತಿಯೊಂದು ಸಂಸ್ಥೆಯಲ್ಲಿ ಪ್ರಾಮಾಣಿಕವಾಗಿ ದುಡಿಯುವುದೇ ಅವರ ಜೀವನದ ವೈಶಿಷ್ಟ್ಯವಾಗಿತ್ತೆಂದರು. ಶ್ರೀ ಪಿ. ಶೀನ ಶೆಟ್ಟರು ಅವರ ಜೀವನದ ಆದರ್ಶವನ್ನು ನಾವು ಮುಂದಿಟ್ಟು ಅವರು ಕೈಕೊಂಡಿರುವ ಕಾರ್ಯದಲ್ಲಿ ಸಹಭಾಗಿಗಳಾಗಬೇಕೆಂದು ಹೇಳಿದರು. ಶ್ರೀ ಯು. ಎಸ್. ನಾಯಕರು ತನಗೂ ಬಲ್ಲಾಳರಿಗೂ ಕೆಲಕಾಲ ಇದ್ದ ಕಡು ವೈರತ್ವವನ್ನೂ ಈಗ ಕೆಲವರ್ಷಗಳಿಂದ ಇದ್ದ ಆತ್ಮೀಯತೆಯನ್ನೂ ವಿವರಿಸಿ ಶಿರ್ವ ಹಿಂದೂ ಹ್ಯಾಸ್ಕೂಲಿನ ಸಹಾಯಾರ್ಥವಾಗಿ ನಾವು ಹಣ ಸಂಗ್ರಹಿಸಲು ಕವತಾರಿಗೆ ಶ್ರೀ ಎಲ್ಲಪ್ಪ ಅಜಿಲ ಎಂಬವರ ಮನೆಗೆ ಹೋಗುತ್ತಿದ್ದೆವು. ಮರುದಿನ ಸಕಲೇಶಪುರ, ಕೊಪ್ಪಕ್ಕಾಗಿ ಸೋಮವಾರ ಉಡುಪಿಗೆ ಬರುವ ಕಾರ್ಯಕ್ರಮವನ್ನಿರಿಸಿಕೊಂಡಿದ್ದೆವು. ದಾರಿಯಲ್ಲಿ ಸ್ವಲ್ಪ ದೂರ ನಡೆಯುವಾಗ ಶ್ರೀ ಬಲ್ಲಾಳರು ಅಸೌಖ್ಯವಾಗುತ್ತದೆಂದು ಹೇಳಿದರು. ಹಾಗಾದರೆ ಸ್ವಲ್ಪ ವಿಶ್ರಮಿಸಿ ಮುಂದುವರಿಯೋಣ ಎಂದೆ. ಸ್ವಲ್ಪ ವಿಶ್ರಮಿಸಿದ ತರುವಾಯ ಇನ್ನು ಹೋಗೋಣವೆಂದು ಹೇಳಿದರು. ಸ್ವಲ್ಪ ದೂರ ಹೋಗುವಾಗ ಒಮ್ಮೆಲೆ ನಿಂತರು; ಕೂತವರು ಅಲ್ಲೇ ಒರಗಿದರು. ಅವರನ್ನು ಆಧರಿಸಿ ಹಿಡಿದು ಪಕ್ಕದ ಮನೆಯೊಂದಕ್ಕೆ ಸಾಗಿಸಿ ಅಲ್ಲಿ ಶುಶ್ರೂಷೆ ನಡೆಸಿದೆವು. ಅವರನ್ನು ಎಷ್ಟು ಕರೆದರೂ ಓಗೊಡಲಿಲ್ಲ. ಕೂಡಲೇ ಕಿನ್ನಿಗೋಳಿಗೆ ಡಾಕ್ಟರರಿಗೆ ಜನಕಳಿಸಿ ಕರೆಸಿ ಪರೀಕ್ಷಿಸಲು ಅವರು ಏನೂ ಉಪಯೋಗವಿಲ್ಲೆಂದು ಹೇಳಿದರು. ತದನಂತರ ಅವರ ಕಳೇಬರವನ್ನು ರಾತ್ರಿ ಹನ್ನೆರಡೂವರೆ ಗಂಟೆಗೆ ಉಡುಪಿಗೆ ಸಾಗಿಸಿಕೊಂಡು ಬಂದೆವು. ಅವರು ನನ್ನ ಹಿರಿಯಣ್ಣನಂತಿದ್ದು ಕೊನೆಗೂ ನನ್ನ ತೋಳಿನಲ್ಲೆ ಅವರ ಪ್ರಾಣಪಕ್ಷಿ ಹಾರಿಹೋಯಿತು. ಇಂತಹವೊಂದು ಕಷ್ಟಕ್ಕೆ ನಾನೀವರೆಗೆ ಗುರಿಯಾಗಿರಲಿಲ್ಲ. ಅವರು ಹೋಗುವಾಗ ಶಿರ್ವ ಹಿಂದೂ ಹ್ಯಾಸ್ಕೂಲಿನ ಹೊಣೆಯನ್ನು ನನ್ನ ಮೇಲೆ ಹಾಕಿ ಹೋಗಿದ್ದಾರೆ. ಅವರು ಕೈಗೊಂಡಿರುವ ಸೇವಾ ಕಾರ್ಯದಲ್ಲಿ ನಾವೆಲ್ಲರೂ ನೆರವಾಗಬೇಕೆಂದೂ ಹೃದಯಸ್ಪರ್ಶಕವಾಗಿ ಹೇಳಿಕೊಂಡರು. ಶ್ರೀ ಪಿ. ಶ್ರೀಪತಿ ಆಚಾರ್ಯರವರು ಮನುಷ್ಯ ಜೀವನ ಅಶಾಶ್ವತ. ಆದರೆ ಆತನು ಸಮಾಜಕ್ಕೆ ಮಾಡಿದ ಸೇವೆ ಶಾಶ್ವತವಾಗಿ ಉಳಿಯುವಂತಹದು. ಮಿಕ್ಕವರಿಗೆ ಮಾರ್ಗದರ್ಶನ ಮಾಡುವಂತಹದು. ಶ್ರೀ ಬಲ್ಲಾಳರು ಕೈಗೊಂಡಿರುವ ಕಾರ್ಯವನ್ನು ಮುಂದುವರಿಸಿಯೂ ಅವರ ಆದರ್ಶವನ್ನು ಅನುಸರಿಸಿಯೂ ನಾವವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಮುಖ್ಯವಾಗಿದೆ ಎಂದು ಹೇಳಿದರು. ಶ್ರೀ ಟಿ. ರಮೇಶ ಪೈಗಳು ಬಲ್ಲಾಳರ ಸಾರ್ವಜನಿಕ ಸೇವೆಯು ಕಿರಿಯರಾದವರಿಗೆಲ್ಲ ಒಂದು ಮೇಲ್ಪಂಕ್ತಿಯಾಗಿದ್ದು ಸಾರ್ವಜನಿಕ ಸೇವಾರಂಗದಲ್ಲಿ ದುಡಿಯುವವರು ಹಲವು ವೇಳೆ ಮನಸ್ತಾಪಕ್ಕೆ ಗುರಿಯಾದರೂ ಮತ್ತೆ ಹೇಗೆ ಆತ್ಮೀಯತೆಯನ್ನು ಬೆಳೆಸುವರೆನ್ನುವುದಕ್ಕೆ ಶ್ರೀ ನಾಯಕರಿಗೂ ಬಲ್ಲಾಳರಿಗೂ ಇದ್ದ ಆತ್ಮೀಯತೆ ಒಂದು ನಿದರ್ಶನವಾಗಿದೆಯೆಂದೂ ಸಾರ್ವಜನಿಕ ಕೆಲಸಗಾರರ ಮರಣವು ಅಂತಹ ಕೆಲಸವನ್ನು ಮಾಡುವಾಗಲೇ ಉಂಟಾದುದು ಒಂದು ಯೋಗ್ಯತೆಯೆಂದೂ ಹೇಳಿದರು. ಅಧ್ಯಕ್ಷ ಡಾ। ನಾಯ್ಕರು ತನಗೂ ಶ್ರೀ ಬಲ್ಲಾಳರಿಗೂ ಅವರ ಮನೆಯವರಿಗೂ ಇದ್ದ ಪ್ರೀತಿವಾತ್ಸಲ್ಯ, ಅವರ ಜೀವನಾದರ್ಶವನ್ನೆತ್ತಿ ಮಾತನಾಡಿ, ಅವರು ಸಮಾಜಕ್ಕೆ ಮೂವರು ಸತ್ಪುತ್ರರನ್ನು ನೀಡಿದ್ದಾರೆಂದೂ ಮೃತರ ಆತ್ಮಕ್ಕೆ ಶಾಂತಿ ಬಯಸುವುದು ನಮ್ಮ ಕರ್ತವ್ಯವೆಂದು ಹೇಳಿದರು. ಮೌನ ಪ್ರಾರ್ಥನೆ ಸಲ್ಲಿಸಿ ದುಃಖ ಸೂಚನಾರ್ಥವಾಗಿ ಪ್ರೆಸ್ಸನ್ನು ಆದಿನ ಮುಚ್ಚಲಾಯಿತು.

## ಎಲ್ಲೆಲ್ಲಿ ಏನೇನು?

**ಮಣಿಪಾಲ**—ಇದೇ ತಾ. ೨ರಲ್ಲು ದ. ಕ. ಜಿಲ್ಲಾ ಮರಾಠ ಸಮಾಜ ಸೇವಾ ಸಂಘ ಉಡುಪಿ ಇದರ ಮಹಾ ಸಭೆಯು ಶ್ರೀ. ಟಿ. ಎ. ಪೈ, ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ನೆರವೇರಿತು (ಮರಾಠ ಸಮಾಜವು ಬಹಳ ಹಿಂದುಳಿದಿರುವುದೆಂದೂ ಜಿಲ್ಲೆಯಲ್ಲಿ ಸಾಧಾರಣ 45,000 ಮರಾಠರನ್ನು ಸಂಘಟಿಸುವ ಆವಶ್ಯಕತೆಯನ್ನು ವಿವರಿಸಿ ಸಂಘದ ಅಧ್ಯಕ್ಷ ಶ್ರೀ ಅಣ್ಣಯ್ಯ ನಾಯ್ಕರು ಸ್ವಾಗತ ಭಾಷಣ ಮಾಡಿದರು).

ಮರಾಠರ ಪೂರ್ವೇತಿಹಾಸವನ್ನು ವಿವರಿಸಿ ಶ್ರೀಗಳಾದ ವಾಂತಿ, ಎ. ಜೆ. ಆಳ್ವ, ಪಿ. ಶೀನ ಸೆಟ್ಟರೂ ಮಾತನಾಡಿದರು. ಅಧ್ಯಕ್ಷರು ಪ್ರತಿ ಕುಟುಂಬದಲ್ಲಿ ಒಬ್ಬೊಬ್ಬನನ್ನಾದರೂ ವಿದ್ಯಾವಂತನನ್ನಾಗಿ ಮಾಡುವುದೇ ಇತರ ಎಲ್ಲಾ ಯೋಜನೆಗಳಿಗಿಂತ ಉತ್ತಮವಾದುದೆಂದೂ ಕೃಷಿಕರಾದ ಈ ಸಮಾಜದವರಿಗೆ ಸರಕಾರವು ತಕ್ಕ ಸವಲತ್ತುಗಳನ್ನು ಒದಗಿಸುವುದು ಸೂಕ್ತವೆಂದೂ ಮುಂತಾಗಿ ಹೇಳಿದರು.

**ಕೋಡಿಬೆಟ್ಟು**— ಇದೇ ತಾ. ೨ರಲ್ಲು ಕೃದಿಗ್ರಾಮದ ಖಾಸಗೀ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಉಡುಪು ಹಂಚುವ ಮತ್ತು ಗ್ರಾಮಸ್ಥರಿಂದ ಹೊಸತಾಗಿ ನಿರ್ಮಿಸಲ್ಪಟ್ಟಿರುವ ರಸ್ತೆಯ ಉದ್ಘಾಟನಾ ಸಮಾರಂಭವು ಶ್ರೀ ಟಿ. ಎ. ಪೈ- ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಪೈಗಳು ಗ್ರಾಮಸ್ಥರು ಯಾವುದೇ ಪ್ರಚಾರದ ಸುಳಿಯಲ್ಲಿ ಬೀಳಬಾರದೆಂದೂ ಚುನಾವಣೆಯನ್ನು ಮರೆತುಬಿಟ್ಟು ಗ್ರಾಮಾವಶ್ಯಕ ಕಾರ್ಯಗಳಲ್ಲಿ ಮಗ್ನರಾಗಬೇಕೆಂದೂ ಧನಿ ಒಕ್ಕಲುಗಳು ಪ್ರೀತಿ ವಿಶ್ವಾಸಗಳಿಂದ ಬಾಳುವಂತೆ ಕಾಂಗ್ರೆಸ್ಸು ಸರಕಾರ ಆಶಿಸುತ್ತದೆಯೆಂದೂ. ಧನಿ-ಒಕ್ಕಲು, ಮೂಲಕ ಮಜೂರರೊಳಗಣ ಸಂಬಂಧವನ್ನು ಪಡೆಯಲ್ಲಿರಿಸುವ ಯಾವ ಕಾನೂನಾದರೂ ಜಯಶೀಲವಾಗಬೇಕಾದರೆ ಜನರ ಹೃದಯ ಪರಿವರ್ತನೆಯೇ ಅತ್ಯಾವಶ್ಯಕವೆಂದೂ ಮುಂತಾಗಿ ಭಾಷಣಮಾಡಿದರು. ಆರಂಭದಲ್ಲಿ ಶಾಲಾ ಮೆನೇಜರ್ ಶ್ರೀ ರಂಗಪ್ಪ ನಾಯ್ಕರು ಸ್ವಾಗತಭಾಷಣಮಾಡಿದರು. ಕೊನೆಯಲ್ಲಿ ಶ್ರೀ ಪಾಂಡಿಯವರು ಆಭಾರ ಸೂಚಿಸಿದರು.

**ಪಡುತೋನ್ಸೆ**— ತೋನ್ಸೆ ಮತ್ತು ನೆರೆಕರೆಯ ಮುಸ್ಲಿಮರ ಪ್ರಯತ್ನದ ಫಲವಾಗಿ ಸ್ಥಾಪಿಸಲಾದ 'ಮದ್ರಸಾದಾರುಸ್ಸಲಾಂ' ಹೆಸರಿನ ಅರಬಿ ಶಾಲೆಯನ್ನು ತಾ. 6ರಲ್ಲಿ ಸ್ಥಳೀಯ ಕರೀಮ್ ಜುಮ್ಮಾ ಮಸೀದಿಯಲ್ಲಿ ಜನಾಬ್ ಮೌಲ್ವಿ ಸುಲೇಮಾನ್ ನೂರಿಯವರು ಉದ್ಘಾಟಿಸಿದರು. ಜನಾಬ್ ಖ್ವಾಜೆ ಇಸ್ಮಾಯಿಲ್ ಸಾಹೇಬರು ಸಭಾಧ್ಯಕ್ಷತೆ ವಹಿಸಿದ್ದರು. ಕುರಾನಿನ ಪಠನವಾದ ಬಳಿಕ ಜನಾಬ್ ಟಿ. ಇಬ್ರಾಹಿಮ್ ಹುಸ್ಸೇನರು ಸ್ವಾಗತ ಭಾಷಣವಿತ್ತರು. ಸಭಿಕರ ಭಾಷಣ, ಅಧ್ಯಕ್ಷರ ಮಾತುಗಳಾಗಿ ಸಮಾರಂಭ ಕೊನೆಗೊಂಡಿತು.

**ಕಡಿಯಾಳಿ**— ಸ್ಥಳೀಯ ಹಾ. ಎ. ಶಾಲೆಯಲ್ಲಿ ತಾ. 14ರಂದು ಆಚಾರ್ಯ ವಿನೋಬಾರವರ ಜನ್ಮದಿನೋತ್ಸವದ ಅಂಗವಾಗಿ ಶ್ರೀ ಕೆ. ಶ್ರೀನಿವಾಸ ಪೈಗಳು ಸರ್ವೋದಯ ತತ್ವಗಳ ಕುರಿತು ಭಾಷಣವಿತ್ತರು. ಶ್ರೀ ಎಸ್. ಸದಾಶಿವ ರಾಯರು ವಂದನೆಗಳನ್ನಿತ್ತರು.

**ನೀರೆಬೈಲೂರು**—ಸ್ಥಳೀಯ ಎಡ್ಯುಕೇಶನ್ ಸೊಸೈಟಿಯ ಆಶ್ರಯದಲ್ಲಿ ಕಟ್ಟಿಸಲಾದ ಬೈಲೂರು ಬೋರ್ಡ್ ಹೈಸ್ಕೂಲು ಕಟ್ಟಡದ ಉದ್ಘಾಟನೆಯನ್ನು ಇದೇ ತಾ. 23ನೆ ಆದಿತ್ಯವಾರ ಬೆಳಿಗ್ಗೆ ೯ಕ್ಕೆ ಶಾಸಿನೆ ಮದ್ರಾಸಿನ ರಾಜ್ಯಪಾಲರಾದ ಶ್ರೀ ಶ್ರೀ ಪ್ರಕಾಶರು ನೆರವೇರಿಸುವರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ವಹಿಸುವರು ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಡಾ. ಯು. ಕೃಷ್ಣರಾಯ, ಎಮ್. ಎಲ್. ಎ, ಮದ್ರಾಸ್, ಅವರೂ ಡಾ. ಯು ಎಲ್. ನಾರಾಯಣ ರಾವ್, ಮದ್ರಾಸ್, ಅವರ ಭಾವ

ಕೆ. ಕೆ. ಹೆಗ್ಡೆಯವರೂ ಈ ಶುಭಮುಹೂರ್ತದಲ್ಲೇ ಅನಾವರಣ ಮಾಡುವರು.

**ಕಟಪಾಡಿ**—ಸ್ಥಳೀಯ ಪ್ರಮುಖ ಮನೆತನದವರೂ, ಉಡುಪಿಯ ಸುಪ್ರಸಿದ್ಧ ವಕೀಲರೂ, ಉಡುಪಿ ತಾಲೂಕಿನ ಸಹಕಾರಿ ಚಳವಳಿಯ ಹೆಸರಾಂತ ಮುಖಂಡರೂ ಆಗಿದ್ದ ಶ್ರೀ ಕೆ. ಜೆ. ಬಲ್ಲಾಳರ ಅಕಾಲ ನಿಧನದ ದುಃಖ ಸೂಚನಾರ್ಥವಾಗಿ ಸ್ಥಳೀಯ ಎಸ್. ವಿ. ಎಸ್. ಹೈಸ್ಕೂಲಿನ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದದವರು ಮುಖ್ಯ ಅಧ್ಯಾಪಕ ಶ್ರೀ ಪಿ. ರಾಮದಾಸ ನಾಯಕರ ಅಧ್ಯಕ್ಷತೆಯಲ್ಲಿ ತಾ 17ರಂದು ಸಂತಾಪಸೂಚಕ ಸಭೆ ಸೇರಿದಾಗ ಶ್ರೀ ಕೆ. ಆರ್. ಶೆಟ್ಟಿಯವರು ದಿವಂಗತರ ಗುಣಕಥನ ಮಾಡಿದರು. ಬಳಿಕ ಈ ಕುರಿತಾದ ದುಃಖಸೂಚಕ ಠರಾವನ್ನು ದಿವಂಗತರ ಕುಟುಂಬದವರಿಗೆ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು. ಶೋಕ ಸೂಚನಾರ್ಥವಾಗಿ ಶಾಲೆಯಲ್ಲಿ ಪೂರ್ವಾಹ್ನದ ಮೊದಲ ಪಿರೇಡ್ದಿನಲ್ಲಿ ಕೆಲಸ ನಡೆಯಲಿಲ್ಲ.

**ಕಕ್ಕುಂಜೆ**—ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯ ಹೊಸ ಕಟ್ಟೋಣದ ಶಂಕು ಸ್ಥಾಪನೆಯನ್ನು ನಿವೃತ್ತ ಜಿಲ್ಲಾ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳು ತಾ. 7ರಂದು ಶ್ರೀ. ಟಿ. ಎ. ಪೈ, ಎಂ ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಸದಾಶಿವ ಸೆಟ್ಟರು ಕಟ್ಟಡ ನಿರ್ಮಾಣದ ಪರಿಯನ್ನು ವಿವರಿಸಿದರು. ಶ್ರೀ ರೈಗಳು ಪೈ ಬಂಧುಗಳ ವಿದ್ಯಾಪ್ರೇಮವನ್ನು ನಿರೂಪಿಸಿದರು. ಶಿವಳ್ಳಿ ಪಂಚಾಯತಿನ ಅಧ್ಯಕ್ಷರಾದ ಶ್ರೀ ಟಿ. ರಮೇಶ ಪೈಗಳೂ ಉಪಾಧ್ಯಾಯರಾದ ಶ್ರೀ ಶೀನ ಸೆಟ್ಟರೂ ಸಂದರ್ಭೋಚಿತ ಭಾಷಣವಿತ್ತರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಮ್ಮ ಅವಶ್ಯಕತೆಗಳನ್ನು ನಾವು ತಿಳಿದುಕೊಂಡು ಕಾರ್ಯೋನ್ಮುಖರಾಗುವ ತಿಳಿವು ನಮಗೆ ಬಂದಿರುವುದೆಂದೂ, ದೃಢ ಸಂಕಲ್ಪದಿಂದ ಯಾವ ಕಾರ್ಯವನ್ನಾದರೂ ಸಾಧಿಸಲು ಸಾಧ್ಯವೆಂಬುದಕ್ಕೆ ಈ ಶಾಲಾ ಕಟ್ಟಡದ ರಚನೆಯೇ ಒಂದು ನಿದರ್ಶನವೆಂದು ಹೇಳಿದರು.

**ದೇಲಂಪಾಡಿ**— ಬನಾರಿಯಲ್ಲಿ ತಾ. 16ರಂದು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ. ಸುಪ್ರಸಿದ್ಧ ಯಕ್ಷಗಾನ ಕಲಾಕೋವಿದರಾದ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟರ ನಿಧನಕ್ಕಾಗಿ ತಮ್ಮ ಅಪಾರ ಸಂತಾಪವನ್ನು ಸೂಚಿಸಿದರು.

ಇಲ್ಲಿಯ ಯುವಕರಿಂದ ಹೊರಡಿಸಲ್ಪಡುತ್ತಿರುವ 'ವನಸುಮ' ಹಸ್ತಾಕ್ಷರೀ ಮಾಸಪತ್ರಿಕೆಯ ವಾರ್ಷಿಕ ವಿಶೇಷಾಂಕವು ಇದೇ ಅಕ್ಟೋಬರ ತಿಂಗಳಲ್ಲಿ ಪ್ರಕಟವಾಗುವುದೆಂದೂ ಲೇಖನಗಳನ್ನು ಕಳುಹಿಸುವವರು ಸಪ್ಟಂಬರ ಅಂತ್ಯದೊಳಗೆ ಕಳುಹಿಸಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

**ಕಥಾ ಸ್ಪರ್ಧೆ**—

ದಿ ಶ್ರೀಮತಿ ಎಚ್. ವಿ. ಕಾವೇರಮ್ಮನವರ ಸ್ಮಾರಕಾರ್ಥವಾಗಿ ಕೊಡಗಿನ 'ನಂದಾದೀಪ' ಮಾಸಪತ್ರಿಕೆಯು ಒಂದು ಕಥಾ ಸ್ಪರ್ಧೆಯನ್ನು ಏರ್ಪಡಿಸಿದ್ದು, ರೂ. 30ರ ಮೂರು ಬಹುಮಾನಗಳನ್ನಿರಿಸಿದೆ. ಕತೆಯನ್ನು ತಾ. 15-10 56ರೊಳಗೆ ಸಂಪಾದಕರು, 'ನಂದಾದೀಪ', ಕೊಡಗು ಇವರಿಗೆ ಕಳುಹಿಸಬಹುದು.

### ಬೊಂಬಾಯಿ

ಕುಕ್ಕಾಲು ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಕೆ. ನರಸಿಂಹಾಚಾರ್ಯ, ಕುಕ್ಕಾಲು ಪಟೇಲ್ ಚಂದಯ್ಯ ಸೆಟ್ರ ಮಗ ವಾಸು ಸೆಟ್ಟಿ—ಇವರಿಬ್ಬರು ಕುಕ್ಕಾಲು ಪಂಚಾಯತ ಬೋರ್ಡಿಗೆ ಕಟ್ಟೋಣ ಕಟ್ಟಿಸುವರೆ ಸಹಾಯ ಧನವಾಗಿ ಬೊಂಬಾಯಿ ಜನತೆಯಿಂದ. ಹಣ ಸಂಗ್ರಹ ಮಾಡುತ್ತಿರಲು ಅಲ್ಲಿಯ ಸಿ ಐ. ಡಿ. ಕ್ರೈಮ್ ಬ್ರ್ಯಾಂಚಿನ ಪೋಲೀಸಿನವರು ಇವರ ಹಣ ಸಂಗ್ರಹದ ಅನುಮಾನದಿಂದ ಸದ್ರಿ ಪ್ರೆಸಿಡೆಂಟ್ ನರಸಿಂಹಾಚಾರ್ಯರನ್ನು ತಾ 31-8-56ನೇ ರಾತ್ರಿಯಲ್ಲಿಯೂ ಸದ್ರಿ ವಾಸು ಸೆಟ್ಟರನ್ನು ತಾ 1-9.56ನೇ ಬೆಳಿಗ್ಗೆಯೂ ಕೈದುಮಾಡಿ ಒಂದು ದಿನದ ದಿನಾಂಡಿನಲ್ಲಿಟ್ಟು ಪ್ರತಿಯೊಬ್ಬರಿಗೆ ಎರಡೂವರೆ ಸಾವಿರ ರೂಪಾಯಿ ಜ್ಯಾಮೀನು ಪಡಕೊಂಡು ಬಿಟ್ಟಿದ್ದಾರೆಂತಲೂ ಸದ್ರಿ ಪೋಲೀಸ್ ಮೊಕದ್ದಮೆಯು ತಾ 3-10-56ಕ್ಕೆ ಬೊಂಬಾಯಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದ್ದಾರಾಗಿಯೂ ತಿಳಿದುಬರುತ್ತದೆ.

**ಕೊಯಮುತ್ತೂರು**— ಇಲ್ಲಿಯ ಕರ್ನಾಟಕದ ಸಂಘದ ವಾರ್ಷಿಕ ಅಧಿವೇಶನವು ಇದೇ ತಾ. 9ರಲ್ಲು ದೇವಾಂಗ ಹೈಸ್ಕೂಲಿನಲ್ಲಿ ಎಗ್ರಿಕಲ್ಚರಲ್ ಕಾಲೇಜ್ ಪ್ರಿನ್ಸಿಪಾಲ್ ಡಾ. ಕೆ. ಸಿ. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸಮಾರಂಭವು ಅಧ್ಯಕ್ಷರಿಂದ ಧ್ವಜಾರೋಹಣ ಮತ್ತು ಛದ್ಮವೇಷ ಸ್ಪರ್ಧೆಯಿಂದ ಪ್ರಾರಂಭವಾಯಿತು; ನಂತರ ಉಪಾಹಾರವಾಗಿ ಡಾ. ಸಿ. ವಿ. ರಾಮರಾಜರು ಸ್ವಾಗತ ಮಾತುಗಳನ್ನಾಡಿದರು. ಶ್ರೀಮತಿ ಇಂದಿರಾ ನಾಯಕರು ಕುಶಲ ಪಂದ್ಯಾಟಗಳಲ್ಲಿ ಗೆದ್ದವರಿಗೆ ಪಾರಿತೋಷಕವಿತರಣೆಮಾಡಿದರು. ಶ್ರೀ ಕೆ. ನಂಜುಂಡಯ್ಯ ನವರು ಭಾಷಾವಾರು ಪ್ರಾಂತ ರಚನೆಯಾದ ಬಳಿಕ ಹೊರನಾಡ ಕನ್ನಡಿಗರ ಪರಿಸ್ಥಿತಿಯ ಕುರಿತು ಭಾಷಣವಿತ್ತರು. ಅಧ್ಯಕ್ಷ ಭಾಷಣಾನಂತರ ವಿವಿಧ ಜನಮನರಂಜನ ಕಾರ್ಯಕ್ರಮಗಳಾದುವು.


ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ


## ಯುವಕರ ಮುನ್ನಡೆ

**ಉಚ್ಚ ಶಿಕ್ಷಣಕ್ಕಾಗಿ ಲಂಡನಿಗೆ ಶ್ರೀ ಯಶವಂತ ಅಜಿಲರ ಪ್ರಯಾಣ**— ಶ್ರೀ ಎಲ್ಲಪ್ಪ ಅಜಿಲರ ಪುತ್ರ ಶ್ರೀ ಯಶವಂತ ಅಜಿಲರು ಹೆಚ್ಚಿನ ವಿದ್ಯಾಭ್ಯಾಸಂಗಕ್ಕಾಗಿ ಇದೇ ತಾ. 11ರಲ್ಲಿ ಬೊಂಬಾಯಿಯಿಂದ ಲಂಡನಿಗೆ ಹೊರಟುಹೋದರು.

ಶ್ರೀ ಅಜಿಲರು 1951ರಲ್ಲಿ ಮಂಗಳೂರು ಸರಕಾರಿ ಕಲಾಶಾಲೆಯಲ್ಲಿ ಬಿ. ಎ. ಡಿಗ್ರಿ ಪಡೆದು ನಂತರ ಧಾರವಾಡ ಕಾಲೇಜಿನಲ್ಲಿ ಸೇರಿ 1954ರಲ್ಲಿ ಎಮ್. ಎ. ಪಾಸಾದರು. ಬಳಿಕ ಬೊಂಬಾಯಿಗೆ ಹೋಗಿ ಅಲ್ಲಿಯ ಪ್ರೊಫೆಸರ್ ಕೆ. ಎಸ್. ರಾಯರ ನೇತೃತ್ವದಲ್ಲಿ ಈ ತನಕವೂ ಪರಿಶೋಧನಾ ಕಾರ್ಯವೆಸಗುತ್ತಿದ್ದರು. ಪ್ರೊಫೆಸರರ ಸಹಾಯದಿಂದ ಶ್ರೀ ಅಜಿಲರಿಗೆ ಲಂಡನಿನ ಅರ್ಥಶಾಸ್ತ್ರ ಶಾಲೆಯಲ್ಲಿ ಪಿ. ಎಚ್. ಡಿ. ಸೀಟು ದೊರೆತು ಇದೀಗ ಅವರು ಸ್ಟೀಮರು ಮೂಲಕ ಪ್ರಯಾಣ ಬೆಳೆಸಿದರು.

**ಶ್ರೀ ಕವಿ ಭೂಷಣ ವೆಂಕಪ್ಪ ಸೆಟ್ಟರ ನಿಧನ**—ದ. ಕ. ಜಿಲ್ಲೆಯ ಸುಪ್ರಸಿದ್ಧ ಯಕ್ಷಗಾನ ಸಾಹಿತ್ಯ ಕಲಾವಿದರೂ ಕವಿಗಳೂ, ಲೇಖಕರೂ ವಾಗ್ಮಿಗಳೂ ಆದ ಶ್ರೀ ಕವಿಭೂಷಣ ಕೆ. ಪಿ. ವೆಂಕಪ್ಪ ಸೆಟ್ಟರು ತಾ. 12 ರಲ್ಲು ಮಧ್ಯಾಹ್ನ ಮೂಡಬಿದರೆಯಲ್ಲಿ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ಶ್ರೀ ಸೆಟ್ಟರು ರಾಜಾ ಬಾಣಾಸಿಂಹ, ವಾಲಿಸಂಹಾರ, ಭರತೇಶ ದಿಗ್ವಿಜಯ, ಸಾಹಸ ಭೀಮ ವಿಜಯ, ಯಶೋಧರ ಚರಿತ್ರೆ, ಭಾರತದ ಗುರುಕುಲ ಇತ್ಯಾದಿ ಹಲವಾರು ಯಕ್ಷಗಾನ ಕೃತಿಗಳನ್ನು ಬರೆದಿದ್ದರು. ಅವರು ಬರೆಯುತ್ತಿದ್ದ 'ಯಕ್ಷಗಾನ ಕೈಪಿಡಿ' ಎಂಬ ಯಕ್ಷಗಾನ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕವು ಇನ್ನೂ ಮುದ್ರಣ ಶಾಲೆಯನ್ನು ನೋಡಲಿಕ್ಕೆ ಬಾಕಿಯಿರುವುದು. ದಿವಂಗತರು ಬರೆದ 'ಭಾರತದ ಗುರುಕುಲ' ಕೃತಿಯು ಮದ್ರಾಸು ಸರಕಾರದಿಂದ ಪಾರಿತೋಷ ಪಡೆದಿದೆ. 1953ರಲ್ಲಿ ಕುಮಟಾದಲ್ಲಿ ಜರಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಯಕ್ಷಗಾನ ಗೋಷ್ಠಿಯ ಅಧ್ಯಕ್ಷಪೀಠವನ್ನು ಅವರು ಅಲಂಕರಿಸಿದ್ದರು. ಶ್ರೀ ಸೆಟ್ಟರ ನಿಧನದಿಂದ ಯಕ್ಷಗಾನ ಕಲಾ ಕ್ಷೇತ್ರಕ್ಕೆ ಅತೀವ ನಷ್ಟವಾಯಿತು. ಶ್ರೀ ಶೆಟ್ಟರು ಪಕ್ಷವಾತ ಪೀಡಿತರಾಗಿ ಎರಡು ಮೂರು ತಿಂಗಳುಗಳಿಂದ ಮೂಡಬಿದ್ರೆಯಲ್ಲಿ ಚಿಕಿತ್ಸೆ ಪಡೆಯುತಿದ್ದರು. ಇತ್ತೀಚೆಗೆ ಸ್ವಲ್ಪ ಸುಧಾರಿಸಿಯೂ ಇದ್ದರೆಂದು ತಿಳಿದು ಬರುತ್ತದೆ.

### ಸೂಚನೆ

'ನವಯುಗ'ದ ೩೫ನೆಯ ಸಂಪುಟವು ಇದೇ ಆಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ ೩೬ನೇ ವರ್ಷವು ಆರಂಭವಾಗಿರುತ್ತದಷ್ಟೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನು ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಪಿ. ಮಾಡಿದರೆ ೧೨ ಆಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ಬಿನ್ನಹ. ಇಲ್ಲವೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ಯಾವದೊಂದೂ ಖರ್ಚಿಲ್ಲದೆ 'ನವಯುಗದ ಖಾತೆಗೆ ಕಟ್ಟಬಹುದು.

ಮೆನೇಜರ್,
ನವಯುಗ, ಉಡುಪಿ.


ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

# ಮಂಗಳೂರು

**ಕೇಂದ್ರದ ಉಪ ಆಹಾರ ಮಂತ್ರಿ ಶ್ರೀ ಎಮ್. ವಿ. ಕೃಷ್ಣಪ್ಪನವರು—**

ಕೇಂದ್ರ ಸರಕಾರದ ಆಹಾರ ಖಾತೆಯ ಉಪ ಮಂತ್ರಿ ಶ್ರೀ ಎಮ್. ವಿ. ಕೃಷ್ಣಪ್ಪನವರು ತಾ. 13ರಂದು ಸಂಜೆ ರೋಟರಿ ಕ್ಲಬ್ಬಿನ ಸಭೆಯಲ್ಲಿ ಮಾತನಾಡುತ್ತಾ, ನಮ್ಮ ದೇಶದ ಸ್ಥಿತಿಗತಿಗಳಿಗೆ ಬಹುತೇಕ ಹೋಲಿಕೆಯಿರುವ ಜಪಾನು ದೇಶದಿಂದ ನಾವು ಬಹಳ ಕಲಿಯಲಿಕ್ಕಿದೆ ಎಂದರು. ಕೃಷಿಯು ಎಲ್ಲಾ ಸಂಸ್ಕೃತಿಗಳ ಮೂಲವಾದುದರಿಂದ ಹುಟ್ಟು ಕೃಷಿಕನಾದ ತಾನು ನಮ್ಮ ದೇಶದ ಕೃಷಿ ಅಭಿವೃದ್ಧಿಯ ಕುರಿತು ಮಾತನಾಡುತ್ತಾ 'ನಮ್ಮ ದೇಶದಲ್ಲಿ ಇಂದು 30 ಕೋಟಿ ಎಕ್ರೆಗಳಷ್ಟು ಕೃಷಿ ಯೋಗ್ಯವಾದ ಭೂಮಿಯಿದೆ. ಈ ಲೆಕ್ಕದಲ್ಲಿ ತಲಾ ಹೆಚ್ಚು ಕಡಿಮೆ 1 ಎಕ್ರೆ ಭೂಮಿ ಬರುತ್ತದೆ. ನಾವು ಹೆಚ್ಚು ಹೆಚ್ಚು ಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುತ್ತಿರುವೆಯಾದರೂ ಮತ್ತೊಂದೆಡೆಯಲ್ಲಿ ಜನಸಂಖ್ಯೆಯೂ ಹೆಚ್ಚುತ್ತಿರುವುದರಿಂದ ಆ ಅಂಶ ಅಲ್ಲಿಯೇ ಭರ್ತಿಯಾಗುವುದು. ಆದುದರಿಂದ ನಾವೀಗ ಇದ್ದ ಭೂಮಿಯಲ್ಲಿ ಅಧಿಕ ಉತ್ಪಾದನೆಯನ್ನು ಮಾಡುವ ಕಲುವಾಗಿ ಹೆಚ್ಚಿನ ನಿಗಾ ಕೊಡಬೇಕಾಗಿದೆ ಎಂದರು. ಬಳಿಕ ಜಪಾನಿನ ಮೀನುಗಾರಿಕೆಯ ಪ್ರಗತಿಯನ್ನು ವಿವರಿಸಿ' ನಮ್ಮ ದೇಶದಲ್ಲೂ ಮೀನುಗಾರಿಕೆಯ ಅಭಿವೃದ್ಧಿಗೆ ತುಂಬಾ ಅವಕಾಶವಿದೆ ಎಂದು ತಿಳಿಸಿ ಈ ಭಾಗದಲ್ಲಿ ಸರಕಾರವು ಕೈಕೊಳ್ಳಲಿರುವ ಕಾರ್ಯಕ್ರಮದಲ್ಲಿ ಜನತೆಯ ಸಹಕಾರವನ್ನು ಆಶಿಸಿದರು

ಆರಂಭದಲ್ಲಿ ಪ್ರಾರ್ಥನೆ, ವರದಿ ವಾಚನಗಳಾದ ನಂತರ ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರು ಮಂತ್ರಿಗಳನ್ನು ಅವರ ಜತೆಯಲ್ಲಿ ಬಂದಿರುವ ಡಾ| ಪಿ. ಎಲ್. ಆನಂದ, ಶ್ರೀಗಳಾದ ಸಿ. ಎ. ರಾಮಕೃಷ್ಣ, ಪಿ. ಎಸ್. ಕೃಷ್ಣಸ್ವಾಮಿ ಮೊದಲಾದವರನ್ನು ಸ್ವಾಗತಿಸಿದರು ಶ್ರೀ ಕೆ. ವಿ. ಕಾಮತರು ಧನ್ಯವಾದಗಳನ್ನಿತ್ತರು.

ಮಾನ್ಯ ಮಂತ್ರಿಗಳು ಮಡಿಕೇರಿಯಿಂದ ಇಲ್ಲಿಗೆ ಬಂದವರು ನಗರದಲ್ಲಿರುವ ನ್ಯಾಯಬೆಲೆಯ ಅಂಗಡಿಗಳಿಗೆ ಸಂದರ್ಶನವಿತ್ತರು. ಮಾನ್ಯ ಮಂತ್ರಿಗಳು ತಾ. 14ರಂದು ಬೆಳಿಗ್ಗೆ ಬಜ್ಪೆ ವಿಮಾನ ನಿಲ್ದಾಣಕ್ಕೆ ತೆರಳುವ ಮೊದಲು ಸ್ಥಳೀಯ ಸುದ್ದಿಗಾರರಿಗಿತ್ತ ಸಂದರ್ಶನದಲ್ಲಿ, ದ. ಕ. ಜಿಲ್ಲೆಯಲ್ಲಿ ಪ್ರಥಮ ಬೆಳೆಯ ಕಟಾವು ಈಗಾಗಲೇ ಆರಂಭವಾಗಿರುವುದರಿಂದ ಆಹಾರ ಧಾನ್ಯಗಳ ಬೆಲೆಯ ಏರಿಕೆಯ ವಿಚಾರದಲ್ಲಿ ಕಳವಳಪಡಬೇಕಾದ ಅಗತ್ಯವಿಲ್ಲವೆಂದೂ, ಅಗತ್ಯವಿದ್ದಲ್ಲಿ ಜಿಲ್ಲೆಯಲ್ಲಿ ಇನ್ನು ಕೆಲವು ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯುವಂತೆ ಜಿಲ್ಲಾ ಕಲೆಕ್ಟರರಿಗೆ ಆದೇಶವೀಯಲಾಗಿದೆ ಎಂದೂ ತಿಳಿಸಿದರು. ಅಲ್ಲದೆ ಜಿಲ್ಲೆಯ ಶಾಲಾ ಮಕ್ಕಳಿಗೆ ಧರ್ಮಾರ್ಥವಾಗಿ ಹಂಚುವಂತೆ, ಸರಕಾರವು ಕೂಡಲೇ ಐವತ್ತು ಸಾವಿರ ಪೌಂಡು ಹಾಲಿನ ಹುಡಿಯನ್ನು ಕಳುಹಿಸಿ ಕೊಡುವುದೆಂದೂ ತಿಳಿಸಿದರು.

ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ., ಶ್ರೀ ಕೆ. ವಿಶ್ವನಾಥ ಕಾಮತರು ಮಂತ್ರಿಗಳನ್ನು ಭೆಟ್ಟಿಯಾಗಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನು ಅಭಿವೃದ್ಧಿಗೆ ಸಂಬಂಧಿಸಿದ ಮನವಿಯೊಂದನ್ನು ಒಪ್ಪಿಸಿದರು.

**ಕೇನ್ಸರ್ ರೋಗದ ಕುರಿತು ಭಾಷಣ**— ತಾ. 14ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಪುರಜನ ಸಂಘದ ವತಿಯಿಂದ ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಡಾ. ಜಿ. ಡಿ. ವೆಲಿಯವರು 'ಅರ್ಬುದ ರೋಗ' (ಕೇನ್ಸರ್)ದ ಕುರಿತು ಭಾಷಣವೀಯುತ್ತಾ ಮಿಲಿಯಗಟ್ಟಲೆ ಜೀವಾಣುಗಳ ಸಂಯೋಜನೆಗೊಂಡ ಮನುಷ್ಯ ಶರೀರಕ್ಕೆ ಹೊರಗಿನಿಂದ ಪ್ರವೇಶಿಸಿ, ಪೀಡೆಯನ್ನು ಕೊಡುವ ಎಲ್ಲಾ ರೋಗಗಳಿಗೂ ಆಧುನಿಕ ವಿಜ್ಞಾನದಲ್ಲಿ ನಿವಾರಣೋಪಾಯಗಳನ್ನು ಕಂಡುಹಿಡಿಯಲಾಗಿದೆಯಾದರೂ, ಮಾನವ ಶರೀರದ ಒಂದು ಜೀವಾಣುವು, ಕೋಟಿಗಟ್ಟಲೆಯಲ್ಲಿ ಬೆಳೆಯುತ್ತಾ ಹೋಗಿ ಇಡಿಯ ಶರೀರವನ್ನೇ ಆವರಿಸಿ, ಮಾನವನಿಗೆ ಮೃತ್ಯುವನ್ನು ತಂದೊಡ್ಡುವ ಅರ್ಬುದ ರೋಗಕ್ಕೆ ಇಷ್ಟರ ತನಕ ಪರಿಹಾರವನ್ನು ಕಂಡುಹಿಡಿಯಲಾಗಿಲ್ಲವೆಂದರು. ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಟಿ. ರಾಜಾರಾಮರು ಸಭಾಧ್ಯಕ್ಷತೆವಹಿಸಿದ್ದರು.

**ಸಂತಾಪಸೂಚಕ ಸಭೆ**— ದಿ|| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ತಾ. 16ರಲ್ಲು ಮಂಗಳೂರು ಯಕ್ಷಗಾನ ಸಂಘವು ಸ್ವೀಕರಿಸಿತು ಶ್ರೀ ಕೆ. ಆರ್. ಆಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಪೊಳಲಿ ಶಂಕರ ನಾರಾಯಣ ಶಾಸ್ತ್ರಿ, ಶ್ರೀಣಿ ಗೋಪಾಲಕೃಷ್ಣ ಭಟ್ಟ, ಕೆ. ಕೆ. ರೈ, ಕೆ. ಬಾಲಕೃಷ್ಣ ರಾವ್ ಮೊದಲಾದವರು ದಿವಂಗತರ ಕುರಿತು ಮಾತನಾಡಿ ಅವರ ಆತ್ಮಕ್ಕೆ ಶಾಂತಿಪ್ರಾರ್ಥನೆಮಾಡಿದರು.

**ಮೆನೇಜ್ ಮೆಂಟ್ ಎಸೋಸಿಯೇಶನಿನವರು**— ತಾ. 16ರಲ್ಲಿ ಸಂಜೆ, ಭಾರತ-ಅಮೇರಿಕಾ ತಾಂತ್ರಿಕ ಸಹಕಾರ ಸಂಸ್ಥೆಯ ಡೈರೆಕ್ಟರ್ ಮಿ| ಕ್ಲಿಫರ್ಡ್ ವಿಲ್ಸನ್‌ರವರಿಗೆ ಸತ್ಕಾರ ಕೂಟವಿತ್ತು ಗೌರವಿಸಿದರು. ಮುಖ್ಯ ಅತಿಥಿಗಳು ಮಾತನಾಡುತ್ತಾ ಭಾರತದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯ ಸಾಧಿಸಲ್ಪಟ್ಟಿದೆ. ದ್ವಿತೀಯ ಯೋಜನೆಯಲ್ಲಿ ಔದ್ಯೋಗೀಕರಣದ ಅತಿ ಅವಶ್ಯಕತೆಗಳಾದ ಉಕ್ಕು, ಯಂತ್ರ ಸಾಮಗ್ರಿಗಳು ಮತ್ತು ತಾಂತ್ರಿಕ ಜ್ಞಾನವನ್ನು ಒದಗಿಸಿಕೊಳ್ಳುವ ಕ್ರಮಬದ್ಧವಾದ ಕಾರ್ಯಕ್ರಮಗಳಿರುವುದರಿಂದ ಅದನ್ನು, ಔದ್ಯೋಗೀಕರಣದ ಪೂರ್ವತಯಾರಿ ಯೋಜನೆಯೆಂದಷ್ಟೇ ಹೇಳಬಹುದೆಂದು ಸೂಚಿಸಿದರು. ಶ್ರೀ ಟಿ. ಎಸ್. ಅನಂತನಾರಾಯಣ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ವಿ. ಎಸ್. ಕುಡ್ವ ಮೊದಲಾದವರು ಮಾತನಾಡಿದರು. ಶ್ರೀ ಕೆ. ವಿ. ಕಾಮತರು ಧನ್ಯವಾದಗಳನ್ನಿತ್ತರು.

**ವಿನೋಬಾ ಜನ್ಮ ದಿನಾಚರಣೆ**— ದ. ಕ. ಜಿಲ್ಲಾ ಭೂದಾನ ಸಮಿತಿಯ ನೇತೃತ್ವದಲ್ಲಿ ಇದೇ ತಾ 11ರಂದು ಸಂಜೆ ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಶ್ರೀ ವಿನೋಬಾ ಭಾವೆಯವರ 62ನೇ ಜನ್ಮದಿನೋತ್ಸವವು, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಡಾ| ಪಿ. ಜಿ ಗೊಲ್ಲರಕೇರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ವಿ. ಬಾಳಿಗ, ಎಮ್. ಎಲ್. ಎ, ಕೆ. ಆರ್. ಆಚಾರ್, ಕೆ. ಕೆ. ಶೆಟ್ಟಿ, ಎಸ್. ಗೋಪಾಲ ಸಾಲೆನ್ಸ, ಶಾಂತಾರಾಮ್ ಶೆಣೈ, ವಸಂತ ರಾವ್ ಮೊದಲಾದವರು ಶ್ರೀ ವಿನೋಬಾರವರ ಆದರ್ಶ ಜೀವನ ಧ್ಯೇಯಗಳನ್ನೆತ್ತಿ ಭಾಷಣವಿತ್ತರು. ಶ್ರೀ ಸಾಲೆನ್ಸರು 5 ಸೆಂಟ್ಸು ಭೂಮಿಯನ್ನು ದಾನವೀಯುವುದಾಗಿ ಜಾಹೀರು ಮಾಡಿದರು. ಶ್ರೀ ಎಸ್. ಯು. ರಾಮಚಂದ್ರ ರಾಯರು ಧನ್ಯವಾದವಿತ್ತರು.

**ಭೂಮಾಲಕರ ಕೋರಿಕೆ**—ದ. ಕ. ಜಿಲ್ಲಾ ವರ್ಗದಾರರ ಮತ್ತು ಕೃಷಿಕರ ಸಂಘದ ಸಭೆಯೊಂದು ತಾ. 4ರಲ್ಲು ಡಾ| ಬಿ| ಕೆ. ಶೆ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮ್ಕಿ ಮತ್ತು ಕದೀಂ ಸ್ಥಳಗಳ ದರಖಾಸ್ತಿನ ಕ್ರಮದಲ್ಲಿ ಇತ್ತೀಚೆಗೆ ರೆವಿನ್ಯೂ ಬೋರ್ಡಿನ ಮತ್ತು ಜಿಲ್ಲಾ ಕಲೆಕ್ಟರರ ಆಜ್ಞೆ ಮತ್ತು ಪ್ರಕಟಣೆಗಳು ನ್ಯಾಯವಾದವುಗಳಲ್ಲವೆಂದೂ ಅವುಗಳನ್ನು ಹಿಂತೆಗೆದು, ವರ್ಗದಾರರಿಗೆ ಹಿಂದಿನಂತೆಯೇ ದರಖಾಸ್ತಿಗೆ ಸ್ಥಳಗಳನ್ನು ಪಡೆಯಲು ಅನುಕೂಲವಾಗುವಂತಾಗಬೇಕೆಂದೂ ಸರಕಾರವನ್ನು ಒತ್ತಾಯಿಸುವ ನಿರ್ಣಯ ಪಾಸಾಯಿತು.

**ಪಂಡಿತ್ ಸುಂದರಲಾಲರ ಹಿತವಾದ** ತಾ. 17ರಂದು ಸಂಜೆ ಕೇಂದ್ರ ಮೈದಾನಿನಲ್ಲಿ ಸೇರಿದ ನಿಶ್ಯಸ್ತ್ರೀಕರಣ ಸಭೆಯಲ್ಲಿ ಪಂಡಿತ್ ಸುಂದರಲಾಲ್‌ರು ಮಾತನಾಡುತ್ತಾ ಜಾಗತಿಕ ಶಾಂತಿಯಲ್ಲಿಯೇ ನಮ್ಮೆಲ್ಲರ ಹಿತ ಮತ್ತು ಧರ್ಮವಿದೆ. ಈ ಶಾಂತಿಸ್ಥಾಪನೆಗಾಗಿ ನಾವೆಲ್ಲರೂ ಒಂದಾಗಿ ಶ್ರಮಿಸುವ; ಮಾನವಕುಲ ನಾಶಕಗಳಾದ ಮಾರಕಾಸ್ತ್ರಗಳನ್ನು ಸಂಪೂರ್ಣವಾಗಿ ನಾಶಮಾಡಿ ಜಗತ್ತಿನ ಚಿರಶಾಂತಿಯನ್ನು ನೆಲೆಗೊಳಿಸುವ ಎಂದು ಮುಂತಾಗಿ ಹಿತವಚನಗಳನ್ನಿತ್ತರು.

ಬಿ. ವೈಕುಂಠ ಬಾಳಿಗರ, ಅಧ್ಯಕ್ಷತೆಯಲ್ಲಿ ಶಾಂತಿ ಸಮಿತಿಯ ಆಶ್ರಯದಲ್ಲಿ, ಪಂಡಿತ ಸುಂದರಲಾಲರು ಸುಯೇಜ್ ಕಾಲುವೆಯ ಸಮಸ್ಯೆಯ ಕುರಿತು ಪ್ರಸ್ತಾಪಿಸುತ್ತಾ ಹಿಂದಿನ ಐತಿಹಾಸಿಕ ದಾಖಲೆಗಳಿಂದಲೂ ಇದು ಐಗುಪ್ತಕ್ಕೆ ಸೇರಿದುದು ಎಂದರು. ಸುಯೇಜ ಕಾಲುವೆಯು ಕೇವಲ ಐಗುಪ್ತ ಮತ್ತು ಅರಬ ರಾಷ್ಟ್ರಗಳಿಗಷ್ಟೆ ಸಂಬಂಧಿಸಿದೆ ಸಮಗ್ರ ಏಶ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಿಗೂ ಸಂಬಂಧಿಸಿದುದಾಗಿದ್ದು, ಕಾಲುವೆಯ ಮೇಲಿನ ಸಾರ್ವಭೌಮಾಧಿಕಾರವನ್ನು ಳಿಸಿಕೊಳ್ಳಲು ಅಧ್ಯಕ್ಷ ನಸ್ಸೇರರು ನಡೆಸುವ ಹೋರಾಟಕ್ಕೆ ನಾವೆಲ್ಲರೂ ಬೆಂಬಲ ನೀಡಬೇಕೆಂದೂ 'ವಿಶ್ವಶಾಂತಿಗಾಗಿ ನಾವೆಲ್ಲರೂ ದುಡಿಯಬೇಕೆಂದೂ ಹಿತನುಡಿದರು.

ಆರಂಭದಲ್ಲಿ ಶಾಂತಿಸಮಿತಿ ಅಧ್ಯಕ್ಷ ಶ್ರೀ ಜಿ. ಸೋಮಶೇಖರರಾಯರು ಭಾಷಣಮಾಡಿದರು. ಕೊನೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗರು ಸಮಾರೋಪ ಭಾಷಣಮಾಡಿದರು. ಡಾ. ಎಂ. ಎಸ್. ಶಾಸ್ತ್ರಿಗಳ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

---

೪ ನೇ ಪುಟದಿಂದ

ಬೇಕಲ್ಲದೆ ಯಾವುದೇ ವೈರ ಸಾಧನೆಯ ಸಾಧನವಾಗಿರಲಾಗದು.

ಕೆಟ್ಟದನ್ನು ಟೀಕಿಸುವಂತೆ ಒಳ್ಳೆಯದನ್ನು ಪುರಸ್ಕರಿಸುವ ಬುದ್ಧಿಯೂ ಬೇಕು. ಓರ್ವ ಪೋಲಿಸ್ ಅಧಿಕಾರಿಯು ಒಬ್ಬ ತಪ್ಪಿತಸ್ಥನನ್ನು ಬಿಡಬೇಕೆಂದು ಕೊಟ್ಟ ಅರುವತ್ತು ಸಾವಿರ ರೂಪಾಯಿಗಳ ಲಂಚವನ್ನೂ ತಿರಸ್ಕರಿಸಿದ್ದನಂತೆ. ಇಂತಹ ಅಧಿಕಾರಿಯನ್ನು ಜನತೆಯು ಗೌರವಿಸಬೇಕು. ಅವರ ಕುರಿತೊಂದು ಒಳ್ಳೆಯ ಮಾತನ್ನಾದರೂ ಆಡುವಷ್ಟು ಉದಾರತೆಯ ಬುದ್ಧಿ ಇರಬೇಕು. ದಿನದ ೧೮ ತಾಸುಗಳನ್ನು ಜನರ ಸೇವೆಗಾಗಿ ಉಪಯೋಗಿಸುತ್ತಾ ತನ್ನ ಸುಖಕ್ಕೆ ಲ್ಲಾ ತಿಲಾಂಜಲಿಯಿತ್ತ ನೆಹರೂವಿನಂತಹ ಪುಣ್ಯಜೀವಿಗಳನ್ನು ಸಹಾ ಟೀಕಿಸುವ ಹುಮ್ಮಸವೇ ಹೆಚ್ಚಿನ್ನು ಹೊಗಳುವ ಹವ್ಯಾಸವನ್ನೇ ಅರಿಯದ ಟೀಕಾಕಾರರನ್ನೇನೆಂದು ಕರೆಯಬೇಕು? ಇಂತಹರೇ ಟೀನೆಸರಿಯದ ನೀರಸರು. ಎಂದು ರಾಘವಾಂಕ ಕವಿ ಹೇಳಿದ್ದುದು.

ಹೀಗೆಂದ ಮಾತ್ರಕ್ಕೆ ಹೊಗಳುಭಟ್ಟನ ಕೆಲಸವನ್ನೇ, ಆಸ್ಥಾನದ ವಂದಿಮಾಗಧರ ಕಾರ್ಯವನ್ನೇ ಮಾಡಬೇಕೆಂಬುದು ಅಭಿಪ್ರಾಯವಲ್ಲ ಕಾರ್ಯಪ್ರವೃತ್ತನಾದ ವ್ಯಕ್ತಿ ಯಾರೇ ಆಗಲಿ, ಆತನು ತಪ್ಪಿಬಿದ್ದೇ ಬೀಳುವನು. ಯಾವನೇ ಮಾನವ ವ್ಯಕ್ತಿಯು ಪರಿಪೂರ್ಣನಲ್ಲ. ಹಾಗಾದ ಮಾನವನು ದೇವಸಮಾನನು. ದೇವನೇ ಎನ್ನಬಹುದು. ಮಾನವನಲ್ಲಿ ದೋಷಗಳಿದ್ದೇ ತೀರಬೇಕು. ಆದರೆ ನೂರು ಮಹಾ ಗುಣಗಳಿದ್ದು ಒಂದು ಅಲ್ಪ ದೋಷವಿದ್ದ ಮಾತ್ರಕ್ಕೆ ಆ ವ್ಯಕ್ತಿ ನಿಂದ್ಯನೆನಿಸುವುದಿಲ್ಲ. ಆತನು ವಂದ್ಯನೇ. ಅಂತಹ ಮಹಾಪುರುಷರು ವಿರಳ. ಇದ್ದರೂ ಸಾರ್ವಜನಿಕ ರಂಗಕ್ಕೆ ಇಳಿಯುವುದು ಅಪರೂಪ. ಹಾಗಿರುವ ವ್ಯಕ್ತಿಗಳನ್ನು ದ್ವೇಷಸಾಧನೆಗಾಗಿ ಟೀಕಿಸಿ ತೇಜೋವಧೆಯನ್ನು ಮಾಡಿ ಅವರನ್ನು ಮೂಲೆಸೇರಿಸುವುದು ಪ್ರಶಂಸನೀಯವಲ್ಲ. ಹಾಗೆ ಮಾಡುವ ಕೃತ್ಯವು ನಿಜಕ್ಕೂ ಆಕ್ಷೇಪಣೀಯ. ಹಾಗೆ ಟೀಕಿಸುವವನರು ನಿಜಕ್ಕೂ ನೀಸಸ;-ರಿಣ ಹೃದಯರು. ಅಂತಹರನ್ನು ಬ್ರಹ್ಮನು ಏಕೆ ಹುಟ್ಟಿಸಿದನೋ ಎಂದು ರಾಘವಾಂಕ ಹೇಳಿದುದು ಕಠಿಣ ಮಾತಲ್ಲ. ರಾಘವಾಂಕ ಕವಿಯ ಅಂದಿನ ಮಾತನ್ನು ಇಂದಿನ ಜನತೆ ತಿಳಿದುಕೊಂಡು ಕಟ್ಟ ಕೆಲಸವನ್ನು ಟೀಕಿಸಿ ತಿರಸ್ಕರಿಸುವಂತೆ ಒಳ್ಳೆಯ ಕೆಲಸವನ್ನು ಪುರಸ್ಕರಿಸಲೂ ಮರೆಯಬಾರದು.

—ಶ್ರೀ ದಾಂತಿ.




ನಾಟಕ ಸಾಹಿತ್ಯ ಸಲಕರಣೆಗಳು

ಸಚಿತ್ರ ಕನ್ನಡ ಹೊಸ ಪ್ರಾಯಿಸ್ ಲಿಸ್ಟಿಗಾಗಿ ಇಂದೇ ಬರೆಯಿರಿ

ಸ್ತ್ರೀ ಪಾತ್ರದ ಟೋಪಣ, ಪುರುಷ ಪಾತ್ರದ ಟೋಪಣ, ಗಡ್ಡ ಮೀಸೆಗಳು, ನಾಟಕದ ಖಡ್ಗ, ಗಧೆ ಮೊದಲಾದ ಸಾಮಾನುಗಳು, ಜರತಾರಿ ರುಮಾಲು, ಪಗಡಿ, ಡ್ರೆಸ್ಸು ಇತ್ಯಾದಿ ಇತ್ಯಾದಿ ರಂಗಭೂಮಿಗೆ ಅವಶ್ಯವಿರುವಂಥವು ದೊರೆಯುತ್ತವೆ.

DHARAMSHI MULJI, DRESSWALA,

132 C, Bhagatwadi, Bhuleshwar Road, Bombay—2.

೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ.

ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಸ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ್, ದಾದರ, ಮುಂಬಯಿ ೨೮.

Tele add "CAWASHABAD"

## ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

### ಕಾಸರಗೋಡು ಹಾಗೂ ಚುನಾವಣೆ

ಚಂದ್ರಗಿರಿಯ ಉತ್ತರ ಪ್ರದೇಶವು ಮೈಸೂರು ಪ್ರಾಂತದಲ್ಲೇ ಸೇರಬೇಕೆಂಬ ಉದ್ದೇಶವನ್ನು ಜನತೆಯ ಮುಂದಿಟ್ಟು ಬರುವ ಚುನಾವಣೆಯಲ್ಲಿ ಪಕ್ಷಾತೀತ ಉಮೇದ್ವಾರರನ್ನು ನಿಲ್ಲಿಸಬೇಕಾಗಿ ಸಮಿತಿಯು ನಿರ್ಣಯಿಸಿದೆ. ಸರಕಾರದ ತೀರ್ಮಾನವು ಎಲ್ಲಾ ರಾಜಕೀಯ ಪಕ್ಷಗಳ ಅಭಿಪ್ರಾಯಕ್ಕೆ ವಿರುದ್ಧವಾದುದರಿಂದ ಈ ಪಕ್ಷಗಳು ಈ ವಿಷಯದಲ್ಲಿ ಸಂಪೂರ್ಣ ಸಹಕರಿಸುವವಾಗಿ ನಂಬುತ್ತೇವೆ. ಈ ರೀತಿ ಚುನಾಯಿಸಿ ಬರಬಹುದಾದ ಒಂದೆರಡು ಪ್ರತಿನಿಧಿಗಳು ತಾವಾಗಿ ಸಮಿತಿಯ ಉದ್ದೇಶವನ್ನು ಸಾಧಿಸಲು ಸಾಧ್ಯವಾಗಲಾರದು. ಆದರೂ ಈ ಪ್ರದೇಶದ ಜನತೆಯ ಅಪೇಕ್ಷೆಯು ಯಾವ ರೀತಿ ಇದೆ ಎಂಬುದಾಗಿ ಈ ಮೂಲಕ ತಿಳಿಯುವಂತಾಗುವುದು.

ಚುನಾವಣೆಯ ಅನಂತರ ಅಗತ್ಯವಿರುವ ಬದಲಾವಣೆಗಳನ್ನು ಮಾಡಲೂ ಬಹುದೆಂದು ಪ್ರಧಾನ ಮಂತ್ರಿಗಳೂ ಕಾಂಗ್ರೆಸ್ ಅಧ್ಯಕ್ಷರೂ ಸೂಚಿಸಿರುತ್ತಾರಾಗಿ ತಿಳಿಯುತ್ತೇವೆ. ಇದು ಹೇಗೆಂದು ಊಹಿಸಲು ಸುಲಭವಲ್ಲ. ಆದರೂ ನ್ಯಾಯವಾದ ಬೇಡಿಕೆಯನ್ನು ಸಮರ್ಥಿಸಿ ಪ್ರಯತ್ನಗಳನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಕೇರಳ ಸರಕಾರಕ್ಕೆ ಮನಸಿಗೆ ಅನ್ನಿಸುವುದು, ಮೈಸೂರು ಸರಕಾರವು ಅವರ ಕೂಡೆ ಈ ವಿಷಯದಲ್ಲಿ ಸಮಾಲೋಚನೆ ನಡೆಸುವುದು, ಸಂಬಂಧಪಟ್ಟ ನಲಯ ಸಮಿತಿಗಳು ಇದನ್ನು ಆಲೋಚಿಸಿ ತೀರ್ಮಾನಿಸುವುದು, ಈ ಎಲ್ಲಾ ವಿಧಗಳಲ್ಲಿ ನಮ್ಮ ಉದ್ದೇಶವು ಪೂರ್ತಿಯಾಗುವಂತೆ ನಾವು ಪ್ರಯತ್ನಿಸಬೇಕು.

ಅಲ್ಲದೆ ಆ ತನಕ ಈ ಪ್ರದೇಶದ ಜನರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವರೇ ನಾವು ಅವಿಶ್ರಾಂತವಾಗಿ ದುಡಿಯಲೂ ಬೇಕಿದೆ. ಸಂಘಟಿತ ಸಂಸ್ಥೆಯು ಈ ಬಗ್ಗೆ ಅತ್ಯಗತ್ಯ. ಇಂತಹ ಸಂಸ್ಥೆಯು ನಮ್ಮ ಪ್ರತಿನಿಧಿಗಳು ಪ್ರಯತ್ನಪಟ್ಟರೆ ಮಾತ್ರವೇ ಈ ಕಾರ್ಯವು ಸಾಧ್ಯವೂ ಫಲಕಾರಿಯೂ ಆಗಬಲ್ಲುದು. ಈ ಬಗ್ಗೆ ಈ ಪ್ರದೇಶದ 71 ಗ್ರಾಮಗಳಲ್ಲಿ ಸಮಿತಿಗೆ ಸದಸ್ಯರನ್ನು ಸೇರಿಸಿ ಪ್ರತಿ ಗ್ರಾಮದಲ್ಲಿ ಪ್ರಾತಿನಿಧ್ಯವುಳ್ಳ ಗ್ರಾಮ ಸಮಿತಿಗಳನ್ನು ಸ್ಥಾಪಿಸುವರೇ ನಿರ್ಣಯಿಸಲಾಗಿದೆ. ಈ ಸಮಿತಿಗಳ ಮೂಲಕ ಚುನಾವಣಾ ಪ್ರಚಾರ ಕಾರ್ಯ ಮತ ಸಂಗ್ರಹ ಮತ್ತು ಇತರ ಯಾವತ್ತೂ ಚಟುವಟಿಕೆಗಳೂ ಸಾಧ್ಯವಾಗುವುವು.

ಮೇಲಿನ ಕಾರ್ಯಕ್ರಮದಲ್ಲಿ ಈ ಪ್ರದೇಶದ ಜನರೂ ಮೈಸೂರು ಪ್ರಾಂತದ ಎಲ್ಲಾ ರಾಜಕೀಯ ಪಕ್ಷಗಳೂ ಸಹಕರಿಸಬೇಕಾಗಿ ವಿನಂತಿ.

ಉಮೇಶರಾವ್ ಯಂ.

ಅಧ್ಯಕ್ಷ. ಕರ್ನಾಟಕ ಪ್ರಾಂತೀಕರಣ ಸಮಿತಿ

ಕಾಸರಗೋಡು.

* * *

### ಕೊರಗರಿಗೆ ಬಿಸಾಡುವ ಎಂಜಲು ಎಲೆ

ಉಂಡು ಹೊರಗೆ ಎಸೆದ ಎಂಜಲು ಎಲೆಯನ್ನು ನೆಕ್ಕುವ ಕೊರಗರ ಸಂಖ್ಯೆಯು ಹೆಚ್ಚುತ್ತಲೇ ಇದೆ. ಇತರರ ಎಂಜಲನ್ನು ತಿನ್ನುವ ಈ ಹಾಳು ಪದ್ಧತಿಯು ಈ ವರ್ಗದ ಜನರಿಗೆ ಒಗ್ಗಿದೆ ಯಾದರೂ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿರುವ ನಮ್ಮ ನಾಡಿಗೆ ಇದು ಭೂಷಣವಲ್ಲ; ತೀರಾ ಅಪಹಾಸ್ಯಕರ. ಈ ಜನರ ಮೇಲ್ಮೆಗಾಗಿ ಸರಕಾರವು ಹೆಚ್ಚಿನ ಮುತುವರ್ಜಿಯಿಂದ ತಕ್ಕ ವ್ಯವಸ್ಥೆಗಳನ್ನು ಮಾಡಲು ಯತ್ನಿಸುತ್ತಿದೆಯಾದರೂ ಈ ಜನರು ಕೆಲವರು ಇನ್ನೂ ತಮ್ಮ ಹಳೆಯ ಅಭ್ಯಾಸಗಳನ್ನು ಹೊಲಸು ಪದ್ಧತಿಗಳನ್ನು ಮುಕ್ತೊ ಮುಂದರಿಸುತ್ತಿರುವುದು ಸಹ ವಿಷಾದಕರ. ಅದರೆ ಇಂಥ ಅಭ್ಯಾಸಗಳ ಹಿನ್ನೆಲೆಯಲ್ಲಿ ಬಡತನ, ಅವಿದ್ಯೆ ಮೊದಲಾದವುಗಳೆಂತ ನಾಟಕವನ್ನು ಆಡಿಸುತ್ತಿವೆ ಎನ್ನುವುದು ಗಮನಿಸತಕ್ಕ ವಿಚಾರ. ಅದೇನೇ ಇರಲಿ, ಈಗಿನ ಸುಧಾರಣೆಯ ದಿನಗಳಲ್ಲಿ ಈ ಜನರು ಒಳ್ಳೆಯದು ಕೆಟ್ಟದರ ಪರಿಣಾಮವನ್ನರಿತು ತಮ್ಮ ಮನೋವೃತ್ತಿಯನ್ನು ಬದಲಾಯಿಸುವುದು ತೀರಾ ಅಗತ್ಯವು—

ಶ್ರೀಮಂತರೂ ವಿದ್ಯಾವಂತರೂ ಈ ಸಲುವಾಗಿ ಹೆಚ್ಚಿನ ಸಹಾನುಭೂತಿಪೂರ್ಣವಾದ ಧೋರಣೆಯನ್ನು ತಳೆಯಬೇಕಾಗಿದೆ. ತಮ್ಮಲ್ಲಿನ ವಿಶೇಷ ಔತಣದ ದಿನ ಎಂಜಲು ಎಲೆಗಾಗಿ ಕಾದು ಕುಳಿತ ಜನರಿಗೆ ತಮ್ಮ ಅತಿಥಿಗಳಿಗೆ ಬಡಿಸಿದಂತೆಯೇ ಸಾಕಷ್ಟು ಆಹಾರವನ್ನು ಬಡಿಸಿದರೆ ಎಂಜಲು ಎಲೆಯನ್ನು ನೆಕ್ಕುವ ಹೊಲಸು ಪದ್ಧತಿಯಿಂದ ಅಂಥ ಜನರನ್ನು ಪರಾವೃತ್ತರಾಗಿ ಮಾಡಲು ಸಾಧ್ಯವಾಗಬಹುದು. ಇಂಥ ಸಹಾನುಭೂತಿಪರವಾದ ಮನೋಭಾವವು ನಮ್ಮಲ್ಲಿ ಚೆನ್ನಾಗಿ ಒಲಿಯುವಂತಾಗಬೇಕು–ನೂರಾರು ಜನರಿಗೆ ಸಂತರ್ಪಣೆಯು ಅನುದಿನವೂ ತಪ್ಪದೆ ಸಾಗುವ ಸಂಸ್ಥೆಗಳೂ ದೇವಾಲಯಗಳೂ ನಮ್ಮೂರುಗಳಲ್ಲಿ ಇವೆ. ಎಂಜಲು ಎಲೆಗಾಗಿ ಕಾದುಕುಳಿತುಕೊಳ್ಳುವ ಜನರ ದೃಶ್ಯವು ಅಲ್ಲಿ ಸುಳಿಯದಂತಾಗಬೇಕು. ಅವರಿಗಾಗಿ ಪ್ರತ್ಯೇಕ ನಾಲ್ಕು ಎಲೆಗಳಲ್ಲಿ ಬಡಿಸಿ ಕೊಡುವ ಉದಾರತೆಯು ಮೂಡಿಬರಬೇಕು.

ಪರಿಜನ ಸೇವಕರಾಗಿ ದುಡಿಯುತ್ತಿರುವವರು ಈ ಜನರ ಈ ಹಾಳು ಪದ್ಧತಿಯನ್ನು ನಿಲ್ಲಿಸುವರೆ ಹೆಚ್ಚಿನ ಮುತವರ್ಜಿಯಿಂದ ದುಡಿಯುವಂತಾಗಬೇಕು. ಸರಕಾರವು ಈ ಜನರ ವಿದ್ಯೆ ಜೀವನ ಕ್ರಮ ಏಳಿಗೆ ಮೊದಲಾದುವುಗಳ ಸಲುವಾಗಿ ಪರಿಶ್ರಮದಿಂದ ದುಡಿಯುತ್ತಿರುವಂತೆಯೇ ಈ ಜನರಲ್ಲಿ ಬೆಳೆದು ಬಂದ ಈ ಅಪಹಾಸ್ಯಕರ ಪದ್ಧತಿಯನ್ನು ನಿಲ್ಲಿಸುವ ಸಲುವಾಗಿ ಸಹ ತಕ್ಕ ಕ್ರಮಕೈಗೊಳ್ಳಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಅಸ್ಪೃಶ್ಯರೆಂದು ಹೀನೈಸುವುದು ಅಥವಾ ಅವರ ಹಕ್ಕುಬಾಧ್ಯತೆಗಳನ್ನು ತಡೆಗಟ್ಟುವುದು ಹೇಗೆ ಕಾನೂನಿಗೆ ವಿರೋಧವೋ ಅಂತೆಯೇ ಸೂಚಿಸಲ್ಪಟ್ಟ ಅಲ್ಪ ಅವಧಿಯ ನಂತರ ಎಂಜಲು ಎಲೆಯ ಆಹಾರವನ್ನು ಉಪಯೋಗಿಸುವ ಪದ್ಧತಿಯು ಕಾನೂನಿಗೆ ವಿರೋಧವೆಂಬ ಶಾಸನವನ್ನು ಜ್ಯಾರಿಗೆ ತರುವುದು ಅಪ್ರಸ್ತುತವಾಗಲಾರದು.

—ಎಂ. ಎಸ್. ಬ್ರಹ್ಮಾವರ.

## ನಗೆ ಹನಿ

### ಕತ್ತೆಗೂ ಗೊತ್ತು!

ತರಗತಿಯಲ್ಲಿ ಉಪಾಧ್ಯಾಯರು ಪ್ರಶ್ನೆ ಕೇಳುತ್ತಿದ್ದರು. ಬರಡ ರಾಮನ ಪಾಳಿಗೆ "ಉತ್ತರ ದಿಕ್ಕು ಯಾವ ದಿಕ್ಕಿಗಾಗುತ್ತದೆ, ಹೇಳು" ಎಂಬ ಪ್ರಶ್ನೆ ಬಂತು.

"ಸರ್, ಅದೇನು ದೊಡ್ಡ ಪ್ರಶ್ನೆ. ಎಂಥ ದಡ್ಡ ಕತ್ತೆಯಾದರೂ ಅದನ್ನು ಉತ್ತರಿಸೀತು" ಎಂದು ರಾಮು ತನಗೆ ಅದಕ್ಕಿಂತ ಕಠಿಣ ಪ್ರಶ್ನೆಯೇ ಯೋಗ್ಯವಾಗಿದೆ ಯೆಂಬಂತೆ ಗೊಣಗಿದ.

ಉಪಾಧ್ಯಾಯರು ಮಾತ್ರ ಜಗ್ಗದೆ "ಅದು ನನಗೂ ಗೊತ್ತಿದೆ—ಅದಕ್ಕೆಯೇ ನಿನ್ನನ್ನು ಕೇಳಿದೆ" ಎಂದು ಅವನ ತೇಜೋವಧೆ ಮಾಡಿದರು.

### ಔಷಧಿ ಬದಲಾವಣೆ

"ನಾವಿಬ್ಬರೂ ದೀರ್ಘ ಕಾಲದಿಂದ ಮಿತ್ರರಾಗಿದ್ದೇವೆ. ಆದುದರಿಂದ ನಿಮಗೆ ಚಿಕಿತ್ಸೆಗಾಗಿ ಹಣವನ್ನಿತ್ತು ನಿಮ್ಮ ಅಪಮಾನ ಮಾಡಲು ನಾನು ಬಯಸುತ್ತಿಲ್ಲ. ಆದಾಗ್ಯೂ ನಿಮ್ಮ ಉಪಕಾರಕ್ಕೆ ಪ್ರತ್ಯುಪಕಾರವಾಗಬೇಕೆಂದು ನನ್ನ ಮೃತ್ಯುಪತ್ರದಲ್ಲಿ ನಿಮಗೂ ತಕ್ಕ ವ್ಯವಸ್ಥೆ ಮಾಡಿದ್ದೇನೆ" ಎಂದನು ಆ ಶ್ರೀಮಂತ ರೋಗಿ.

"ಅದು ಬಹಳ ಚೆನ್ನಾಯಿತು—" ಎಂದು ಒಂದು ಕ್ಷಣ ಆಲೋಚಿಸಿ, ಆ ವೈದ್ಯರೆಂದರು; "ಈಗ ದಯಮಾಡಿ ನಾನು ಬರೆದುಕೊಟ್ಟ ಔಷಧಿಯ ಚೀಟನ್ನು ಇಲ್ಲಿ ಕೊಡಿ; ಅದರಲ್ಲಿ ತುಸು ಬದಲಾವಣೆಯನ್ನು ಮಾಡಬೇಕಾಗಿದೆ!"


### ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 219/1956.

ದೇವರಾಜ ಭಟ್ಟ —ವಾದಿ

ಮತ್ತು

1 ಕೆ. ದೊಡ್ಡಣ್ಣ ಶೆಟ್ಟಿ, 2 ಬಿಂದು ಶೆಡ್ತಿ, —ಪ್ರತಿವಾದಿಯರು

ಇವರೊಳಗೆ

ಮೇಲ್ಕಂಡ ವ್ಯಾಜ್ಯವು ವಾದಿಯು ಪ್ರತಿವಾದಿರ ಮೇಲೆ ಚಾಲಗೇಣಿ ಗೇಣಿ ಬಾಕಿ ಆಸ್ತಿ ಸ್ವಾಧೀನತೆಗೆ ಕೂಡಾ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿರಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ. 21-9-56ಕ್ಕೆ ಇಟ್ಟಿರುವದ್ರಿಂದ ಪ್ರತಿವಾದಿರು ಆಕ್ಷೇಪ ಹೇಳುವುದನ್ನು ಆ ದಿನ ಸದ್ರಿ ಕೋರ್ಟು ಮುಂದೆ ಹಾಜರ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. Padmanabha Rao.

Vakil for Pltff.

Udipi, Dated 12—9—56.



### ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರ ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3¼% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.



ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

**ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,**

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಪೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

**SRI GAJANANA CLOTH STORES,**

TENKAPET, **UDIPI**, S. KANARA.

**ಕುಮಾರಿ ಬಿಲ್ಲೆಗಳು**

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**

**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

# ಮನೆ-ಮದ್ದು

**HOME REMEDIES**

ಬರೆದವರು:- ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.



## ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

## ಕೃಷಿ ವಿಜ್ಞಾನ

# ಅನವಶ್ಯ ಮಣ್ಣಿಗೂ ಅನ್ನ ಆವಶ್ಯಕ

* * *

### ಕೃತಕ ಗೊಬ್ಬರಗಳನ್ನು ತಕ್ಕ ಕ್ರಮದಲ್ಲಿ ಗದ್ದೆಗೆ ಆಗಿಂದಾಗ್ಗೆ ಬೇಸಾಯಗಾರರು ಹಾಕಲಿ!

ವೈಜ್ಞಾನಿಕ ಸಂಶೋಧನಗಳಿಂದ ಸಸ್ಯ ಪೌಷ್ಟಿಕದಲ್ಲಿ ಖನಿಜಗಳು ಬಹಳ ಪ್ರಾಮುಖ್ಯವಾಗಿವೆಯೆಂದು ತಿಳಿದುಬಂದಿದೆ. ಇಷ್ಟು ಆರ್ಥಿಕ ಹಾಗೂ ಸಾಮಾಜಿಕ ಪರಿಣಾಮಗಳನ್ನುಂಟುಮಾಡಿದ ವೈಜ್ಞಾನಿಕ ಸಂಶೋಧನೆಗಳು ತೀರಾ ವಿರಳ. ಇದರಿಂದಾಗಿ ರಾಸಾಯನಿಕ ಕೈಗಾರಿಕೆಗೆ ಒಂದು ಶಾಖೆಯು ಹುಟ್ಟಿಕೊಂಡಿದೆ. ಇದು ಪ್ರಮುಖ ಶಾಖೆಗಳಲ್ಲೊಂದು ಇದುವೇ ಗೊಬ್ಬರಗಳ ಉತ್ಪಾದನೆ. ಕೃಷಿ ಭೂಮಿಯ ಸಾರವು ತೀವ್ರ ಸಾಗುವಳಿಯಿಂದಾಗಿ ಅಳಿಯುತ್ತಿದೆ; ರಕ್ಷಣೋಪಾಯಗಳು ಚೆನ್ನಾಗಿಲ್ಲದಿದ್ದರೆ ಮಣ್ಣು ಬಡವಾಗುತ್ತದೆ. ಇದರಿಂದ ಮಣ್ಣಿನಲ್ಲಿ ನಾನಾ ತರದ ನ್ಯೂನತೆಗಳುಂಟಾಗುತ್ತವೆ. ಇತ್ತೀಚಿಗೆ ಗೊಬ್ಬರಗಳ ಉಪಯೋಗದಲ್ಲಿ ದೊಡ್ಡದೊಂದು ಕ್ರಾಂತಿಯುಂಟಾಗಿದೆ ಬಹಳ ಅದ್ಭುತಕರವಾದ ಮಾರ್ಪಾಟಾಗಿರುತ್ತದೆ. ರಾಸಾಯನಿಕ ಗೊಬ್ಬರಗಳ ಉಪಯೋಗವು ಬಹಳ ಅಧಿಕವಾಗಿರುತ್ತದೆ. ರಾಸಾಯನಿಕ ಗೊಬ್ಬರಗಳನ್ನು ಹಾಕುವ ಅಭ್ಯಾಸವು ಅತ್ಯಂತ ಜನಪ್ರಿಯವಾಗಿದೆ; ಇದು ಬಹಳ ಅನುಕೂಲವಾಗಿದೆ ಹಾಗೂ ಅಗ್ಗವೂ ಆಗಿದೆ. ವ್ಯವಸಾಯಿಕ ಹಾಗೂ ತೋಟಗಾರಿಕೆ ಪೈರುಗಳಿಗೆ ಅಗತ್ಯವುಳ್ಳ ಪೋಷಣಾಂಶಗಳ ಕುರಿತು ನಮ್ಮ ಅನುಭವವು ತುಂಬಾ ಮುಂದುವರಿದಿದೆ. ಸಾರಜನಕ, ರಂಜಕ, ಪೊಟೇಸಿಯಮ್, ಕ್ಯಾಲ್ಸಿಯಮ್ ಮುಂತಾದ ಧಾತುಗಳು ಮರಗಿಡಗಳಿಗೆ ಅತ್ಯಗತ್ಯ ಎಂದು ತಿಳಿದಿದ್ದೇವೆ. ಮಣ್ಣುಗಳಿಗೆ ಗೊಬ್ಬರ, ಸುಣ್ಣ ಮುಂತಾದುವುಗಳ ಅಗತ್ಯವನ್ನೂ ನಾವು ಚೆನ್ನಾಗಿ ಬಲ್ಲೆವು, ಆದರೂ ಕೂಡ, ಕೆಲವೆಡೆಗಳಲ್ಲಿ ಈ ಕುರಿತು ವಿಜ್ಞಾನಕ್ಕೆ ವಿರೋಧವಾದ ಅಭಿಪ್ರಾಯಗಳನ್ನು ಜನರು ಕಟ್ಟಿಕೊಂಡಿರುವರು. ಇದು ಅತ್ಯಂತ ಶೋಚನೀಯ ವಿಷಯ. ರಾಸಾಯನಿಕ ಗೊಬ್ಬರಗಳು ಮಣ್ಣಿಗೆ ವಿಷಕಾರಿಯಾಗಿದ್ದು, ಮರಗಿಡ ಮತ್ತು ಪ್ರಾಣಿಗಳ ಆರೋಗ್ಯವನ್ನು ಕೆಡಿಸುವುವೆಂದು ಈ ರಾಸಾಯನಿಕ ಗೊಬ್ಬರ ವಿರೋಧಿಗಳ ವಾದ. ಇದರಿಂದಾಗಿ ಮನುಷ್ಯನ ಆರೋಗ್ಯ ಕೂಡ ಕೆಡುವುದೆಂದು ಅವರ ಮತ. ಈ ಮತ್ಸರ ಭಾವನೆಯು ಬೇರೆ ಬೇರೆ ಪ್ರಮಾಣಗಳಲ್ಲಿ ಕಂಡುಬರುತ್ತದೆ. ಕೆಲವರು ಸುಣ್ಣದ ಉಪಯೋಗವನ್ನು ಕೂಡ ಖಂಡಿಸುತ್ತಾರೆ. ಅದು ಕಾರ್ಬನೇಟನ್ನು ಸುಟ್ಟು ಪಡೆಯುವ ವಸ್ತುವೆಂದು ಅವರ ಅಭಿಪ್ರಾಯ. ಸುಣ್ಣವು ಮಣ್ಣಿಗೊಂದು ವ್ಯವಸ್ಥಾಪನೆಯ ಕವಾಟ. ಮಣ್ಣಿನಲ್ಲಿ ಪಿ. ಯಚ್. ಬಹಳ ಕಡಿಮೆಯಾದರೆ, ಆದರ ಹುಳಿತನವು ಹೆಚ್ಚಾಗುತ್ತದೆ. ಇದರಿಂದ ಕಬ್ಬಿಣ, ಅಲ್ಯೂಮಿನಿಯಮ್ ಮತ್ತು ಲೋಹಮಂಡೂರ (manganese) ಮುಂತಾದುವುಗಳ ಪ್ರಮಾಣವು ಹೆಚ್ಚುತ್ತದೆ, ಅದೇ ವೇಳೆಯಲ್ಲಿ ಸಾರಜನಕ, ರಂಜಕ, ಕ್ಯಾಲ್ಸಿಯಮ್ ಮತ್ತು ಮೆಗ್ನೀಸಿಯಮ್ ಇವುಗಳ ಕೊರತೆಯುಂಟಾಗುತ್ತದೆ. ಮಣ್ಣಿನಲ್ಲಿ ಪಿ. ಯಚ್. (P. H.) ಅಧಿಕ ಪ್ರಮಾಣದಲ್ಲಿದ್ದರೆ ಕಬ್ಬಿಣ, ಲೋಹಮಂಡೂರ ಮತ್ತು ಪೊಟೇಶ್ ಮುಂತಾದುವುಗಳ ಪ್ರಮಾಣವು ಮಿತಿಯಲ್ಲಿರುತ್ತದೆ. 6.0 ಮತ್ತು 6.5ರ ಮಧ್ಯೆ ಪಿ. ಯಚ್. ವ್ಯವಸ್ಥೆ ಇರುವ ಮಣ್ಣಿನಲ್ಲಿ ಸಸ್ಯಗಳಿಗೆ ಅಗತ್ಯವುಳ್ಳ ಎಲ್ಲಾ ಪೋಷಣಾಂಶಗಳಿರುತ್ತವೆ. ಆದರೆ ಈ ಪೋಷಣಾಂಶಗಳೆಲ್ಲಾ ಮೊದಲೇ ಭೂಮಿಯಲ್ಲಿ ಇದ್ದಿರಬೇಕು. ಸುಣ್ಣದ ಉಪಯೋಗದಲ್ಲಿ ಕ್ರಮತಪ್ಪಿದರೆ ಮಣ್ಣಿಗೆ ಹಾಕಿದ ಗೊಬ್ಬರಗಳ ಪ್ರಯೋಜನಗಳೆಲ್ಲಾ ವ್ಯರ್ಥವಾಗುವುದು. ಫೋಸ್ಫೇಟು ಖನಿಜದ ಉಪಯೋಗವನ್ನು ಎಲ್ಲರೂ ಸಹಿಸಿಕೊಂಡರೂ ಕೂಡ ಪೊಟೇಶ್ ಲವಣಗಳನ್ನು ಉಪಯೋಗಿಸುವುದಕ್ಕೆ ತುಂಬಾ ಜನ ಆತಂಕಗೊಳ್ಳುವರು. ಆದರೆ ಪೊಟೇಶ್ ಮತ್ತು ಫೋಸ್ಫೇಟು ಇವೆರಡೂ ಪ್ರಕೃತಿಯಲ್ಲಿ ದೊರಕುವ ಖನಿಜಗಳು. ಕೆಲವು ಕಡೆಗಳಲ್ಲಿ ಮೂಲಕಿಟ್ಟ (slag)ದ ಉಪಯೋಗವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಸುಫರ್ ಫೋಸ್ಫೇಟಿನ ಉಪಯೋಗವನ್ನು ಅವರು ಮೆಚ್ಚುವುದಿಲ್ಲ. ಯಾಕೆಂದರೆ ಸುಫರ್ ಫೋಸ್ಫೇಟನ್ನು ತಯಾರಿಸಲು ಗಂಧಕಾಮ್ಲವನ್ನು ಉಪಯೋಗಿಸುತ್ತಾರೆಂದು ಅವರ ವಾದ. ಮಾತ್ರವಲ್ಲ, ಸುಫರ್ ಫೋಸ್ಫೇಟನ್ನು ಉಪಯೋಗಿಸಿದರೆ ಮಣ್ಣು ಆಮ್ಲವಾಗುವುದೆಂದು ಅವರ ಅಭಿಪ್ರಾಯ. ಕೃತಕ ಗೊಬ್ಬರಗಳ ಪೈಕಿ ಅಮೋನಿಯಮ್ ಸಲ್ಫೇಟಿಗಿರುವ ವಿರೋಧವು ಬಹಳ ಬಲವಾಗಿದೆ. ಸಾರಾಯಿ ಬಟ್ಟಿ ಇಳಿಸುವ ಕಾರ್ಖಾನೆಯಲ್ಲಿ ತಯಾರಾದುದರಿಂದಲೇ ಅದರ ಮೇಲಿನ್ನು ದ್ವೇಷ. ಈಗ ಅಮೋನಿಯಮ್ ಸಲ್ಫೇಟನ್ನು ಗಾಳಿಯಲ್ಲಿರುವ ಸಾರಜನಕದಿಂದ ತಯಾರಿಸುತ್ತಾರೆ. ಆದರೂ ಕೂಡ ಮೇಲಿನ ದ್ವೇಷವು ಅಳಿಯಲಿಲ್ಲ. ಸಾರಜನಕವನ್ನು ಸೆಗಣಿ ರೂಪದಲ್ಲಿ ಯಾ ಅಮೋನಿಯಮ್ ಸಲ್ಫೇಟು ಮುಂತಾದ ರಾಸಾಯನಿಕಗೊಬ್ಬರ ರೂಪದಲ್ಲಿ ಭೂಮಿಗೆ ಹಾಕಿದಾಗ ಅದು ಮಣ್ಣಿನಲ್ಲಿ ಬದಲಾವಣೆ ಹೊಂದುತ್ತದೆ. ಮಣ್ಣಿನಲ್ಲಿರುವ ಸೂಕ್ಷ್ಮ ಕಣಗಳ ಕ್ರಿಯೆಗಳಿಂದ ಈ ಗೊಬ್ಬರಗಳು ರಾಸಾಯನಿಕ ಯೌಗಿಕಗಳಾಗಿ ಮಾರ್ಪಡುತ್ತವೆ. ಅನಂತರವೇ ಸಸ್ಯಗಳು ಈ ಗೊಬ್ಬರಗಳನ್ನು ಉಪಯೋಗಿಸಿಕೊಳ್ಳುತ್ತವೆ. ಈ ವಿಷಯವನ್ನು ಹೆಚ್ಚಿನವರು ಗಣನೆಗೆ ತರುವುದಿಲ್ಲ.

ಇನ್ನು ಕೆಲವು ಸಂಪ್ರದಾಯವಾದಿಗಳಿದ್ದಾರೆ. ಆಧುನಿಕ ಕೃಷಿ ಉಪಕರಣಗಳ ಉಪಯೋಗವು ಇದರಿಂದ ಬಹಳವಾಗಿ ವಿರೋಧಿಸಲ್ಪಟ್ಟಿದೆ ಈ ಕೃಷಿ ಉಪಕರಣಗಳ ವಿರೋಧವು ರಾಸಾಯನಿಕ ಗೊಬ್ಬರಗಳು ಬಳಕೆಗೆ ಬರುವ ಮೊದಲೇ ತೊಡಗಿತ್ತು. ಇವುಗಳನ್ನು ಉಪಯೋಗಿಸದಿದ್ದಲ್ಲಿ ಕೂಡ ಇದಕ್ಕೆ ವಿರೋಧವಿತ್ತು. ಕೆಲವೆಡೆಗಳಲ್ಲಿ ಪ್ರಕೃತಿ ಜನ್ಯ ಗೊಬ್ಬರಕ್ಕೆ ತುಂಬಾ ಗಿರಾಕಿಯಿದೆ ಮತ್ತು ರಾಸಾಯನಿಕ ಗೊಬ್ಬರಗಳಿಗೆ ತುಂಬಾ ವಿರೋಧವಿದೆ. ರಾಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಉಪಯೋಗಿಸಿ ಸಾವಯವ ಗೊಬ್ಬರಗಳನ್ನು ಅಲಕ್ಷಿಸುತ್ತಾರೆಂದು ಕೆಲವರು ಆರೋಪ ಹೊರಿಸುತ್ತಾರೆ. ಕೃತಕ ಗೊಬ್ಬರಗಳನ್ನು ಹಾಕುವುದರಿಂದ ಮಣ್ಣಿನಲ್ಲಿರುವ ಸಾವಯವ ಗೊಬ್ಬರದ ಅಂಶವೆಲ್ಲಾ ಉಪಯೋಗಿಸಲ್ಪಟ್ಟು ಮಣ್ಣು ಹಾಳಾಗುತ್ತದೆಂದು ಅವರ ಭಾವನೆ. ಆದರೆ ಖಂಡಿತವಾಗಿಯೂ ಮಣ್ಣು ಹಾಳಾಗುವುದಿಲ್ಲ. ಬದಲು ಅಭಿವೃದ್ಧಿಯಾಗುತ್ತದೆ. ಇದನ್ನು ನಾವು ಸುಲಭದಲ್ಲಿ ಗ್ರಹಿಸಬಹುದು. ಪೈರುಗಳ ಫಸಲು ಹೆಚ್ಚುತ್ತಿರುವ ದಿನಗಳಿವು. ಅವುಗಳಿಗೆ ಬೇಕಾಗುವಷ್ಟು ಯನ್. ಪಿ. ಕೆ. (N. P. K.) ಮುತ್ತಿತರ ಪೋಷಣಾಂಶಗಳನ್ನು ಬರೇ ಸಾವಯವ ಗೊಬ್ಬರಗಳಿಂದ ಪಡೆಯಲು ಸಾಧ್ಯವಿಲ್ಲ. ಆದುದರಿಂದ ಇತರ ರೂಪದಲ್ಲಿ ಇವುಗಳನ್ನು ಮಣ್ಣಿಗೆ ಸೇರಿಸದೆ ನಿರ್ವಾಹವಿಲ್ಲ. ಪೈರುಗಳು ಖರ್ಚು ಮಾಡಿದ ಪೋಷಣಾಂಶಗಳನ್ನು ರಾಸಾಯನಿಕ ಗೊಬ್ಬರಗಳು ಭೂಮಿಗೆ ಒದಗಿಸುತ್ತವೆ. ಮಳೆ ನೀರಿಗೆ ಹರಿದು ಹೋದ ಗೊಬ್ಬರದಂಶಗಳನ್ನು ಕೂಡ ಇವು ಒದಗಿಸುತ್ತವೆ. ಕೃತಕ ಗೊಬ್ಬರಗಳನ್ನು ಹಾಕುವುದರಿಂದ ದಂಡಿ ಬೆಳೆಗಳನ್ನು ಬೆಳೆಯಲು ಸಾಧ್ಯವಾಗಿದೆ. ಈ ಕೃತಕ ಗೊಬ್ಬರಗಳು ಸಸ್ಯಗಳ ಅವಶೇಷಗಳನ್ನು ಬಹು ಸುಲಭದಲ್ಲಿ ಉತ್ತಮವಾದ ಹೊಲದ ಗೊಬ್ಬರವಾಗಿ ಮಾರ್ಪಡಿಸಿ ಪೈರುಗಳಿಗೆ ಒದಗಿಸುತ್ತವೆ. ಆದುದರಿಂದ, ಮಣ್ಣು ರಕ್ಷಣೆಗೆ ರಾಸಾಯನಿಕ ಗೊಬ್ಬರಗಳು ಅತ್ಯಗತ್ಯ. ಆದರೆ ಈ ರಾಸಾಯನಿಕ ಗೊಬ್ಬರಗಳನ್ನು ಬಹಳ ಬುದ್ಧಿವಂತಿಕೆಯಿಂದ ಉಪಯೋಗಿಸಬೇಕು. ವೈಜ್ಞಾನಿಕ ಕ್ರಮಗಳ ಅನುಭವವುಳ್ಳ ಕೃಷಿಕನಿಗೆ ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳಲ್ಲಿ ಭೇದ ಭಾವವಿಲ್ಲ. ಆವನು ಅವೆರಡರ ಅವುಗಳ ಸದುಪಯೋಗವನ್ನೂ ಮಾಡಿಕೊಳ್ಳುತ್ತಾನೆ. ಅವೆರಡನ್ನೂ ಬುದ್ಧಿವಂತಿಕೆಯಿಂದ ಉಪಯೋಗಿಸಿ ಉತ್ತಮ ಲಾಭವನ್ನು ಗಳಿಸುತ್ತಾನೆ; ಮಣ್ಣಿನ ಸಾರವನ್ನು ಕಾಪಾಡುತ್ತಾನೆ. ಈ ಸಾವಯವ ಮತ್ತು ರಾಸಾಯನಿಕ ಗೊಬ್ಬರ ಒಂದನ್ನೊಂದು ಸಹಕರಿಸುತ್ತವೆ; ಹೊರತು ಅವುಗಳು ಒಂದಕ್ಕೊಂದು ವಿರೋಧವಾಗಿಲ್ಲ; ಒಂದಿಲ್ಲದೆ ಇನ್ನೊಂದು ಪರಿಪೂರ್ಣವಾಗುವುದಿಲ್ಲ. ಆದುದರಿಂದ ಇವುಗಳನ್ನು ಬೇರೆ. ಮಣ್ಣಿನ ಹಾಗು ಪೈರುಗಳ ಅಗತ್ಯಕ್ಕೆ ಅನುಸರಿಸಿ ಉಪಯೋಗಿಸಬೇಕು. ಅಮೋನಿಯಮ್ ಸಲ್ಫೇಟು ಒಳ್ಳೆಯದು. ಆದರೆ ಮಿತಿಮೀರಿ ಉಪಯೋಗಿಸಿದರೆ, ಅದರಿಂದ ಮಣ್ಣಿನಲ್ಲಿರುವ ಸುಣ್ಣದಂಶವು ಬೇಗನೆ ಕಳೆದು ಹೋಗುತ್ತದೆ. ಹೀಗಾಗಿ ಆಮ್ಲತನವು ಹೆಚ್ಚಾಗುತ್ತದೆ. ಆದುದರಿಂದ ಮಣ್ಣಿನಲ್ಲಿಯ ಸಮತೋಲನವನ್ನು ಕಾಪಾಡಲು ಸುಣ್ಣವನ್ನು ಹಾಕುವುದು ಆಗತ್ಯ. ಒಂದು ಉದಾಹರಣೆಯನ್ನು ಮಾತ್ರ ಮೇಲೆ ಕೊಡಲಾಗಿದೆ.

ಮಣ್ಣು ಸವೆತದ ಸಮಸ್ಯೆಯನ್ನು ಕೃತಕ ಗೊಬ್ಬರಗಳ ಉಪಯೋಗದ ಮೇಲೆ ಹೊರಿಸಲಾಗಿದೆ. ಅಮೇರಿಕದ ಅರಳೆ ಕೃಷಿ ವಲಯವು ಇದಕ್ಕೊಂದು ನಿದರ್ಶನ. ಇಲ್ಲಿ ರಾಸಾಯನಿಕ ಗೊಬ್ಬರಗಳು ಉಪಯೋಗಿಸಲ್ಪಡುತ್ತವೆ. ಇದರಿಂದ ಮಣ್ಣು ಸವೆತವುಂಟಾಗಿದೆ. ಆದರೆ ಕೃತಕ ಗೊಬ್ಬರಗಳನ್ನು ಉಪಯೋಗಿಸದಿರುವಲ್ಲಿ ಕೂಡ ಮಣ್ಣು ಸವೆತದ ದುಷ್ಪರಿಣಾಮವು ದೂರವಾಗಿಲ್ಲ; ಮಣ್ಣು ಸವೆತವು ಎಲ್ಲೆಡೆಯಲ್ಲೂ ಉಂಟು. ಸಾಗುವಳಿಯ ನ್ಯೂನತೆಯಿಂದ ಮಣ್ಣು ಸವೆತವುಂಟಾಗುತ್ತದೆ. ಸರಿಯಾದ ಕ್ರಮದಲ್ಲಿ ಈ ಗೊಬ್ಬರಗಳನ್ನು ಉಪಯೋಗಿಸಿದರೆ ಮಣ್ಣು ಸವೆತವು ದೂರವಾಗುತ್ತದೆ. ಇದುವೇ ಮಣ್ಣು ರಕ್ಷಣೋಪಾಯದ ಮೂಲ ತತ್ವ.

ಮಣ್ಣಿನಲ್ಲಿರುವ ಸೂಕ್ಷ್ಮಾಣು (microplora)ಗಳು ಕೃಷಿಕನಿಗೆ ಉಪಕಾರಿಯಾಗಿವೆ. ಈ ಸೂಕ್ಷ್ಮಾಣುಗಳನ್ನು ರಾಸಾಯನಿಕ ಗೊಬ್ಬರಗಳು ಕೆಡಿಸುತ್ತವೆಯೆಂದು ಕೆಲವರ ವಾದ. ಕೃತಕ ಗೊಬ್ಬರಗಳ ವಿರೋಧ ಸೂಚನೆಗೆ ಇನ್ನೊಂದು ಕಾರಣವಿದು. ರಾಸಾಯನಿಕಗಳು ಮಣ್ಣಿನ ಅಣುಜೀವಿಗಳ ಸಂತಾನಾಭಿವೃದ್ಧಿ ಚಟುವಟಿಕೆಗಳನ್ನು ಉತ್ತೇಜನಗೊಳಿಸುತ್ತವೆ. ಇದರಿಂದಾಗಿ ಸಾವಯವ ವಸ್ತುಗಳ ಕೊಳೆಯುವಿಕೆಯು ತ್ವರಿತವಾಗುತ್ತದೆ; ಅಮೋನಿಫಿಕೇಶನ್ (ammonification) ನೈಟ್ರಿಫಿಕೇಶನ್ (nitrification) ಹೆಚ್ಚುತ್ತದೆ; ಸಾರಜನಕವು ಅಧಿಕ ಪ್ರಮಾಣದಲ್ಲಿ ಮಣ್ಣಿನೊಳಗೆ ಸ್ಥಾಪಿಸಲ್ಪಡುತ್ತದೆ; ಮತ್ತು ಮಣ್ಣಿನಲ್ಲಿರುವ ಖನಿಜಗಳ ದ್ರವಿಸುವಿಕೆಯು ವರ್ಧಿಸುತ್ತದೆ. ರಾಸಾಯನಿಕ ಗೊಬ್ಬರಗಳ ಉಪಯೋಗದಿಂದ ಆಮ್ಲತನವು ಹೆಚ್ಚುತ್ತದೆ; ಮಣ್ಣಿನ ಹರಳು ಹರಳಾದ ರಚನೆಯು (granular structure) ಅಳಿಯುತ್ತದೆ. ಆದರೆ ಭೂಮಿಗೆ ಸುಣ್ಣವನ್ನು ಹಾಕುವುದರಿಂದ ಮಣ್ಣಿನ ಈ ಗುಣಗಳನ್ನು ಕಾಪಾಡಿಕೊಳ್ಳಬಹುದು ಮತ್ತು ಮಣ್ಣನ್ನು ತಿದ್ದಬಹುದು. ಗೊಬ್ಬರಗಳನ್ನು ಹಾಕುವುದರಿಂದ ಮರಗಿಡಗಳಲ್ಲಿ ನಾವು ಕಾಣುವಂತಹ ಪ್ರಯೋಜನಕರ ಸತ್ಪರಿಣಾಮಗಳಿಗೆಲ್ಲಾ ಪರೋಕ್ಷವಾಗಿ ಮಣ್ಣಿನಲ್ಲಿರುವ ಸೂಕ್ಷ್ಮಾಣುಜೀವಿಗಳೇ ಕಾರಣ. ಈ ಸೂಕ್ಷ್ಮಾಣುಜೀವಿಗಳ ಚಟುವಟಿಕೆಗಳಿಗೆ ಗೊಬ್ಬರಗಳೇ ಹೇತು. ಆದರೆ ಗೊಬ್ಬರಗಳ ಈ ವಿಶಿಷ್ಟ ಗುಣವು ಹೆಚ್ಚಿನವರಿಂದ ಅಲಕ್ಷಿಸಲ್ಪಟ್ಟಿದೆ. ಸಸ್ಯಾದಿಗಳ ಉತ್ತಮ ಬೆಳವಣಿಗೆಗೆ ಉತ್ತಮ ಗಾಳಿ ಸಂಚಾರಬೇಕು; ತೇವ ಚೆನ್ನಾಗಿರಬೇಕು, ಮಣ್ಣು ಪ್ರತಿಕ್ರಿಯೆ ಯೋಗ್ಯವಾಗಿರಬೇಕು; ನಿರವಯವ ಪೋಷಣಾಂಶಗಳ ಸರಬರಾಯಿಯು ಸಾಂಗವಾಗಿ ನಡೆಯಬೇಕು. ಇದುವೇ ಪರಿಸ್ಥಿತಿಗಳು ಸೂಕ್ಷ್ಮಾಣುಜೀವಿಗಳ ಉತ್ತಮ ಚಟುವಟಿಕೆಗಳಿಗೂ ಅಗತ್ಯ. ಆದುದರಿಂದ ಸಸ್ಯಗಳ ಬೆಳವಣಿಗೆಗೆ ಹಾಗೂ ಸೂಕ್ಷ್ಮಾಣುಜೀವಿಗಳ ಚಟುವಟಿಕೆಗಳಿಗೆ ಮಣ್ಣಿನ ಪರಿಸ್ಥಿತಿಗಳು ಹೆಚ್ಚು ಕಡಿಮೆ ಒಂದೇಯಾಗಿವೆ. ಮಣ್ಣಿನಲ್ಲಿರುವ ಸೂಕ್ಷ್ಮಾಣುಜೀವಿಗಳ ಬೆಳವಣಿಗೆಗೆ ಹಾಗೂ ಸಂತಾನಾಭಿವೃದ್ಧಿಗೆ ಸಾವಯವ ವಸ್ತುಗಳು ಅಗತ್ಯ. ಹೀಗೆ ಅಭಿವೃದ್ಧಿಗೊಂಡ ಪರಮಾಣುಜೀವಿಗಳು ಸಸ್ಯ ಪೌಷ್ಟಿಕಗಳನ್ನು ಹೊರಗೆಡಹುತ್ತವೆ. ಆದರೆ ಈ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಲು ಖನಿಜ ವಸ್ತುಗಳ ಸರಬರಾಯಿಯು ಸಾಕಷ್ಟಿರಬೇಕು. ಆದುದರಿಂದ ಖನಿಜ ಪೌಷ್ಟಿಕಗಳನ್ನು ಮಣ್ಣಿಗೆ ಸೇರಿಸಿದರೆ, ಪೈರೂ ಅಭಿವೃದ್ಧಿಯಾಗುವುದು; ಪರಮಾಣು ಜೀವಿಗಳೂ ಅಭಿವೃದ್ಧಿಗೊಳ್ಳುವುವು. ರಾಸಾಯನಿಕ ಗೊಬ್ಬರಗಳು ಸಾವಯವ ಪದಾರ್ಥಗಳ ಸರಬರಾಯಿಯನ್ನು






### ಕುಂದಾಪುರ ಡಿ ಮು. ಕೋರ್ಟಿನಲ್ಲಿ

**O. P. 66/1956.**

1. ಶಾಂತಾ ಬಾ, 2. ಮೈನರ್ ಚಂದ್ರಪ್ರಭಾ, 3. ಮೈನರ್ ವೀಣಾ—ಮೃತ ರಾಜೀವಿ ಬಾ ಮಕ್ಕಳು. 2, 3ನೇ ಅರ್ಜಿದಾರರ ಕ್ಷೇಮ ಚಿಂತಕ ಕಂಪೌಂಡರ್ ರಾಮರಾವ್, ಪಾಲಿ ಕುಂದಾಪುರ ತಾಲೂಕು ಬೈಂದೂರು ಗ್ರಾಮದಲ್ಲಿರುವವರು. P. O. ಬೈಂದೂರು.

—ಅರ್ಜಿದಾರರು.

ಸದ್ರಿ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದ್ರೆ- ಅರ್ಜಿದಾರರ ತಾಯಿ ರಾಜೀವಿ ಬಾಯಿಯು ತಾ. 23/10/55ರಲ್ಲು ಮೃತಪಟ್ಟಿರುವುದರಿಂದ ಆತಳ ಬಾಬ್ತು ಸದ್ರಿ ಅರ್ಜಿಯಲ್ಲಿ ಹೇಳುವ ಆಪೇಜನ್ನು ಪಡಕೊಳ್ಳುವರೆ ಅರ್ಜಿದಾರರು ಹಕ್ಕುದಾರರಾದುದರಿಂದ ಅರ್ಜಿದಾರರ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ದಾಕ್ಲು ಮಾಡಿದ ಮೇಲಿನ ಅರ್ಜಿ ತಾ. 24/9/56ಕ್ಕೆ ತನ್ಖಿಗೆ ಇಟ್ಟಿದೆ. ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ದಿವ್ಸ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

**Y. Manjaya Shetty.**
Advocate for Petitioner

ಮೊಕ್ಕಾಂ ಕುಂದಾಪುರ, ತಾ. 18.9.56

# ಕೃಷಿ ವಿಜ್ಞಾನ

ಹೆಚ್ಚಿಸುತ್ತವೆ. ಯಾಕೆಂದರೆ ಅವುಗಳಿಂದಾಗಿ ಸಸ್ಯಗಳ ಬೇರು, ದಂಟು ಇವೆಲ್ಲಾ ಅವಶೇಷಗಳು ವರ್ಧಿಸುತ್ತವೆ ಮತ್ತು ಇವುಗಳು ಮಣ್ಣಿನಲ್ಲಿಯೇ ಉಳಿಯುತ್ತವೆ.

ಕೃತಕ ಗೊಬ್ಬರಗಳು ಮಣ್ಣಿನಲ್ಲಿರುವ ಎರೆಹುಳಗಳನ್ನು ನಾಶಪಡಿಸುತ್ತವೆಯೆಂದು ಕೆಲವರು ಪ್ರತಿವಾದಿಸುತ್ತಾರೆ, ಮತ್ತು ಪೈರುಗಳು ಕ್ರಿಮಿಕೀಟ, ಬೂಜು, ನಂಜು ರೋಗಗಳಿಗೆ ಬಲಿಬೀಳುವಂತೆ ರಾಸಾಯನಿಕ ಗೊಬ್ಬರಗಳು ಸಹಕರಿಸುತ್ತವೆಯೆಂದು ವಾದಿಸುತ್ತಾರೆ. ಈ ಕುರಿತು ರೋಥಮ್ ಸ್ಟೆಡ್ಡಿನಲ್ಲಿ ಪ್ರಯೋಗಗಳನ್ನು ಇತ್ತೀಚೆಗೆ ನಡೆಸಿರುವರು. ಸರಿಯಾಗಿ ಸುಣ್ಣವನ್ನು ಸೇರಿಸಿ, ಮಣ್ಣು ಪ್ರತಿಕ್ರಿಯೆಯನ್ನು ಕಾಪಾಡಿದ ಭೂಮಿಯಲ್ಲಿ ಎರೆಹುಳಗಳಿಗೆ ಹಾನಿಯುಂಟಾಗುವುದಿಲ್ಲವೆಂದು ಇದರಿಂದ ಸ್ಪಷ್ಟವಾಗಿದೆ. ಮತ್ತು ಮಣ್ಣಿನಲ್ಲಿಯ ವಿವಿಧ ಪೋಷಣಾಂಶಗಳು ಸಮತೂಕ ನೆಲೆಯಲ್ಲಿಲ್ಲದಿದ್ದರೆ ಮಾತ್ರವೇ ಕ್ರಿಮಿಕೀಟಗಳ ಉಪಟಳವು ಪೈರುಗಳಲ್ಲಿ ಕಂಡುಬರುತ್ತದೆಯೆಂದು ತಿಳಿಯುತ್ತದೆ ಕೃತಕ ಗೊಬ್ಬರಗಳಿಂದ ಈ ದುಷ್ಪರಿಣಾಮಗಳುಂಟಾಗುತ್ತವೆಯೆಂಬುದಕ್ಕೆ ಆಧಾರಗಳಿಲ್ಲ. ಮಣ್ಣಿನಲ್ಲಿಸುಫರ್ ಫೋಸ್ಫೇಟಿನ ಕೊರತೆಯಿದ್ದಲ್ಲಿ ಬಾರ್ಲಿಯ ಬೆಳವಣಿಗೆಯು ತಡೆಯಲ್ಪಡುತ್ತದೆಂದುಗೊತ್ತಾಗಿರುತ್ತದೆ. ಇದರಿಂದ ಅವುಗಳು ಗೌಟ್ (Gout) ಹುಳಗಳ ಉಪಟಳಕ್ಕೆ ಬಲಿಬೀಳುತ್ತವೆ. ಬೂಜು (Jungal) ರೋಗಗಳ ಕುರಿತು ಸಂಶೋಧನೆಗಳು ಇನ್ನೂ ನಡೆಯುತ್ತಲಿವೆ. ಗೊಬ್ಬರಗಳಿಗೂ, ಇವುಗಳಿಗೂ ಏನು ಸಂಬಂಧವೆಂದು ತಿಳಿದಿಲ್ಲ. ಗೊಬ್ಬರ ಹಾಕುವಿಕೆಯಿಂದಾಗಿ ಈ ರೋಗಗಳು ತಲೆದೋರುತ್ತವೆಯೆಂಬುದಕ್ಕೆ ಪುರಾವೆಗಳಿಲ್ಲ. ಗೋಧಿಯ ಕಲೆ (eyespot) ರೋಗವೂ ವರ್ಟಿಸಿಲಿಯಮ್ ವಿಲ್ಟ್ (Verticillium wilt) ರೋಗವೂ ಸಾರಜನಕ ಗೊಬ್ಬರದಿಂದಾಗಿ ಹೆಚ್ಚುತ್ತದೆ. ಆದರೆ ಧಾನ್ಯಗಳಲ್ಲಿ "ಎಲ್ಲಾ-ತಕ್ಕೊಳ್ಳು" ರೋಗವು (take all disease) ಅದೇ ಪರಿಸ್ಥಿತಿಗಳಲ್ಲಿ ಸಾರಜನಕ ಗೊಬ್ಬರದಿಂದಾಗಿ ಕಡಿಮೆಯಾಗುತ್ತದೆ ನಂಜು ರೋಗ (virus disease) ಗಳ ಹಬ್ಬುವಿಕೆ ಸಾವಯವ ಗೊಬ್ಬರಗಳೇ ಕಾರಣವೆಂದು ಸಂಶೋಧನೆಗಳಿಂದ ಸ್ಪಷ್ಟವಾಗಿರುತ್ತದೆ. ರಾಸಾಯನಿಕ ಗೊಬ್ಬರಗಳಿಗಿಂತ ಸಾವಯವ ಗೊಬ್ಬರಗಳನ್ನು ಹಾಕುವಾಗ್ಗ ಇವು ಬಲವಾಗುತ್ತವೆ. ಆಲೂಗೆಡ್ಡೆ ಮತ್ತು ಸಕ್ಕರೆ ಬೀಟ್ ಪೈರುಗಳನ್ನು ಕೆಡಿಸುವ ಮರಹೇನು (aphid) ಗಳ ಕುರಿತು ನಡೆಸಿದ ಪ್ರಯೋಗಗಳಿಂದ ಇದು ತಿಳಿದಿರುತ್ತದೆ. ಕೃತಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ತೆಂಗುಗಳ ಕಾಂಡ ಸೋರುವಿಕೆ ರೋಗವು ತಲೆದೋರುತ್ತದೆಂದು ಸಿಲೋನಿನಲ್ಲಿ ಒಂದು ಅಭಿಪ್ರಾಯವಿತ್ತು. ಇದನ್ನು ಪರೀಕ್ಷಿಸಲಾಗಿ ಇದು ಹುರುಳಿಲ್ಲದ ಅಭಿಪ್ರಾಯವೆಂದು ತಿಳಿದಿರುತ್ತದೆ ಯಾವತ್ತೂ ಗೊಬ್ಬರಗಳನ್ನು ಉಪಯೋಗಿಸದೆ, ಇರುವ ತೋಟಗಳಲ್ಲಿ ಈ ರೋಗವು ಧಾರಾಳವಾಗಿ ಕಂಡುಬರುತ್ತದೆ. ಅಂತೆಯೇ ಬರೇ ಜಾನುವಾರು ಗೊಬ್ಬರವನ್ನು ಉಪಯೋಗಿಸಿದ ತೋಟಗಳನ್ನು ಪರೀಕ್ಷಿಸಲಾಗಿದೆ; ಕೃತಕ ಗೊಬ್ಬರಗಳನ್ನು ಮಾತ್ರ ಹಾಕಿದ ತೋಟಗಳನ್ನೂ ಪರೀಕ್ಷಿಸಲಾಗಿದೆ. ಇದರಿಂದ ಮೇಲಿನ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲವೆಂದು ಖಚಿತವಾಗಿದೆ.

ಕ್ರಿಮಿನಾಶಕ, ಬೂಜುನಾಶಕ, ಮತ್ತು ರಾಸಾಯನಿಕ ಗೊಬ್ಬರಗಳನ್ನು ಸಮ್ಮಿಶ್ರಗೊಳಿಸುವ ಆಸಕ್ತಿಯು ಈಗ ಬಲವಾಗಿದೆ. ಮಣ್ಣು ಮತ್ತು ಸಸ್ಯಗಳ ಪರಾನ್ನ ಜೀವಿಗಳನ್ನು (foliage parasites) ಎದುರಿಸಲು ಮೇಲಿನ ಪ್ರಯತ್ನವು ನಡೆಯುತ್ತಿದೆ. ಆದರೆ ಕ್ರಿಮಿನಾಶಕ ಮತ್ತು ಬೂಜುನಾಶಕಗಳನ್ನು ಹಾಕಿದ ಕೃಷಿ ಉತ್ಪತ್ತಿಗಳನ್ನು ನಾವು ತಿಂದರೆ ಹಾನಿಯುಂಟೇ! ಎಂಬ ಪ್ರಶ್ನೆಯನು ಉತ್ತರಿಸಬೇಕಾಗಿದೆ. ಇವುಗಳ ವಿಷವು ಉಳಿಯುವುದೇ ಎಂಬ ಸಂದೇಹವಿದೆ. ಈ ಕುರಿತು ಅಮೇರಿಕದಲ್ಲಿ ಒಂದು ಪ್ರಯೋಗವನ್ನು ನಡೆಸಿರುವರು. ಕೆಲವು ಹಂದಿಗಳಿಗೆ (guinea pigs) ಒಂದು ವರ್ಷದ ತನಕ ದಿನನಿತ್ಯ ಡಿ. ಡಿ. ಟಿ. ಯನ್ನು ತಿನ್ನಿಸಿದರು. ಇದರಿಂದಾಗಿ ಈ ಹಂದಿಗಳಿಗೆ ಏನೊಂದು ಹಾನಿಯೂ ಉಂಟಾಗಲಿಲ್ಲ; ರೋಗಗಳ ಚಿಹ್ನೆ ಕೂಡ ತಲೆದೋರಲಿಲ್ಲ. ಆದುದರಿಂದ, ಕ್ರಿಮಿನಾಶಕಗಳನ್ನೆರಚಿಸಿದ ಪೈರುಗಳಿಂದ ಪಡೆಯುವ ಆಹಾರ ವಸ್ತುಗಳು ಸುರಕ್ಷಿತವಾಗಿವೆಯೆಂಬುದು ಖಂಡಿತ. ಕೃಷಿ ಪೈರುಗಳ ಆಹಾರಾಂಶ ರಚನೆಯಲ್ಲಿ ಕೃತಕ ಗೊಬ್ಬರಗಳ ಕೈವಾಡವಿದೆಯೇ ಎಂಬುದನ್ನು ಸಹ ಚರ್ಚಿಸಲಾಗಿದೆ ಸಾವಯವ ಗೊಬ್ಬರಗಳ ಉಪಯೋಗದಿಂದ ಸಸ್ಯ ಬೆಳವಣಿಗೆಯು ಉತ್ತೇಜನಗೊಳ್ಳುತ್ತದೆ. ಆದರೆ ಇದರಿಂದ ಪೈರುಗಳ ಫಸಲಿನ ಗುಣ ಪರಿಮಾಣಗಳು ಪರಿವರ್ತನೆಗೊಳ್ಳುತ್ತವೆಯೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹೊಲದ ಗೊಬ್ಬರಕ್ಕೆ ಪೈರುಗಳ ಫಸಲಿನ ಜೀವಾತು ಪ್ರಮಾಣವನ್ನು ವರ್ಧಿಸುವ ಶಕ್ತಿಯಿದೆಯೆಂದೂ ರಾಸಾಯನಿಕ ಗೊಬ್ಬರಗಳಿಂದ ಬೆಳೆಯುವ ಪೈರುಗಳಲ್ಲಿ ಜೀವಾತುಗಳ ಅಂಶವು ಕಡಿಮೆಯೆಂದೂ ನಂಬಲಾಗಿದೆ. ಈ ಕುರಿತು ರೋಥಮ್ ಸ್ಟೆಡ್ ಮತ್ತು ಅಮೇರಿಕದಲ್ಲಿ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ. ಸುವ್ಯವಸ್ಥಿತವಾಗಿ ನಡೆಸಿದ ಪ್ರಯೋಗಗಳಿವು ಪೈರುಗಳ ಬೆಳವಣಿಗೆ ಹಾಗೂ ಫಸಲಿನ ಗುಣಪರಿಮಾಣಗಳನ್ನು ಈ ಪ್ರಯೋಗಗಳಲ್ಲಿ ಪರೀಕ್ಷಿಸಲಾಗಿದೆ ಸಾವಯವ ಗೊಬ್ಬರಗಳನ್ನು ಹಾಕಿ ಬೆಳಸಿದ ಪೈರುಗಳ ಫಸಲು ಎಲ್ಲಾ ಪೋಷಣಾಂಶ ಭರಿತವಾಗಿವೆ ಮತ್ತು ಬರೇ ಸಾವಯವ ಗೊಬ್ಬರಗಳಿಂದ ಕೃಷಿ ಮಾಡಿದ ಪೈರುಗಳ ಫಸಲಿನಲ್ಲಿ ಪೋಷಣಾಂಶಗಳ ಕೊರತೆಯಿದೆಯೆಂಬುದಕ್ಕೆ ಈ ಪ್ರಯೋಗಗಳಿಂದ ಏನೂ ಪುರಾವೆಗಳು ದೊರೆತಿಲ್ಲ ಇವುಗಳಲ್ಲಿ ಯಾವತ್ತೂ ವ್ಯತ್ಯಾಸ ಕಂಡು ಬಂದಿಲ್ಲ ಈ ದೃಷ್ಟಿಯಿಂದ ಸಾವಯವ ನಿರವಯವ ಗೊಬ್ಬರಗಳಲ್ಲಿ ವ್ಯತ್ಯಾಸವಿಲ್ಲ. ಪೈರುಗಳಿಗೆ ಅಗತ್ಯವುಳ್ಳ ಪೌಷ್ಟಿಕಗಳ ಸರಬರಾಯಿಯನ್ನು ನೆರವೇರಿಸುವ ಹೆಗ್ಗುರಿಯಿಂದ ಗೊಬ್ಬರಗಳನ್ನು ಹಾಕಬೇಕು; ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಬಹುದು; ಇಲ್ಲವೆ ಸಾವಯವ ಗೊಬ್ಬರಗಳನ್ನು ಮಾತ್ರ ಉಪಯೋಗಿಸಬಹುದು; ಯಾ ಎರಡನ್ನೂ ಸಮ್ಮಿಶ್ರಮಾಡಿ ಹಾಕಬಹುದು. ಅಂತೂ ಮಣ್ಣಿನ ಪೌಷ್ಟಿಕದಂಶಗಳ ಸಮತೂಕವನ್ನು ರಕ್ಷಿಸಬೇಕು ಈ ಅಭಿಪ್ರಾಯದಿಂದ ರಾಸಾಯನಿಕ ಗೊಬ್ಬರಗಳನ್ನು ವಿರೋಧಿಸುವುದು ಸಮಂಜಸವಲ್ಲ.

ರಾಸಾಯನಿಕ ಗೊಬ್ಬರಗಳು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ತಮ್ಮ ಮುಖ್ಯ ಕೆಲಸವನ್ನು ಪೂರೈಸಿರುತ್ತವೆಯೆಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಜಗತ್ತಿನಾದ್ಯಂತ ಅವು ಕೃಷಿ ಉತ್ಪಾದನೆಯನ್ನು ಹೆಚ್ಚಿಸಿವೆ. ಮಣ್ಣಿನ ಸಸ್ಯ ಪೌಷ್ಟಿಕಗಳ ಅಭಾವದಿಂದಾಗಿ ಪೈರುಗಳಿಗೆ ಸಾಕಷ್ಟು ಆಹಾರಾಂಶವು ದೊರೆಯದೆ, ಅವುಗಳ ಆರೋಗ್ಯವು ಬಹಳವಾಗಿ ಕೆಟ್ಟಿರುತ್ತದೆ. ಈ ಕೊರತೆಯನ್ನು ರಸಾಯನಿಕ ಗೊಬ್ಬರಗಳು ಮಾತ್ರವೇ ಭರ್ತಿಮಾಡಬಲ್ಲವು ಮರಗಿಡಗಳ ಹಲವಾರು ಶಾರೀರಿಕ ಕೊರತೆಗಳನ್ನು ಇವು ನಿವಾರಿಸಿರುತ್ತವೆ; ರೋಗ ಪರಿಸ್ಥಿತಿಗಳನ್ನು ತಿದ್ದಿರುತ್ತವೆ. ಫೋಸ್ಫೇಟಿನ ತೀವ್ರ ಕೊರತೆಯಿಂದಾಗಿ ಭಾರತದಲ್ಲಿ ವಿಸ್ತಾರ ಕೃಷಿ ಭೂಮಿಯು ಬಂಜರಾಗಿರುತ್ತದೆ. ಕೆಲವು ಜಮೀನುಗಳಲ್ಲಿ ಬರೇ ಅಲ್ಪ ಉತ್ಪಾದನೆಯ ಕೊರತೆಯನ್ನು ನಿವಾರಿಸಲು ಸಮ್ಮಿಶ್ರ ಸಾರಜನಕ ಗೊಬ್ಬರಗಳನ್ನು ಉಪಯೋಗಿಸುವುದೊಂದೇ ದಾರಿ ಇದೇ ಈ ಸಮಸ್ಯೆಯ ಪರಿಹಾರ.

"ಇಂದಿನ ಜಗತ್ತಿನ ಇಳಿ ಮುಖವಾದ ಆರೋಗ್ಯವನ್ನು ಸುಧಾರಿಸಲು ಸಾಕಷ್ಟು ಆಹಾರವನ್ನು ಒದಗಿಸುವುದೊಂದೇ ದಾರಿ. ಬೇರಾವ ರೀತಿಯಿಂದಲೂ ಇದನ್ನು ಪೂರೈಸಲು ಸಾಧ್ಯವಿಲ್ಲ. ಆದುದರಿಂದ ರಾಸಾಯನಿಕ ಗೊಬ್ಬರಗಳ ದುಷ್ಪರಿಣಾಮಗಳ ಕುರಿತಾಗಿ ನಿರಾಧಾರವಾದ ಅಭಿಪ್ರಾಯಗಳನ್ನು ಪ್ರಚಾರಗೊಳಿಸುವುದು ಇಡೀ ಸಮುದಾಯದ ಪ್ರಗತಿಗೆ ತಡೆಯೆಂದು ಸರ್ ವಿಲ್ಲಿಯಮ್ ಓಗ್ ಹೇಳಿರುವರು. ರಾಸಾಯನಿಕ ಗೊಬ್ಬರಗಳ ಪಾತ್ರವನ್ನು ತೀರಾ ಅಲಕ್ಷಿಸಿ; ಮಣ್ಣು ಸಂರಕ್ಷಣೆಗೆ ಬರೇ ಸಾವಯವ ಗೊಬ್ಬರಗಳ ಚಿತ್ರವನ್ನು ಚಿತ್ರಿಸುವುದು ಮೂಢತನ. ಇದು ತೀರಾ ಅಸಾಧ್ಯ. ಹೊಲ ಗದ್ದೆಗಳ ಮಣ್ಣಿನ ಪೃಥಕ್ಕರಣದ ಕುರಿತು ತಿಳಿವು ಕೃಷಿಕರಿಗೆ ಈಗ ಅತ್ಯಗತ್ಯ. ಮಣ್ಣಿನ ಖನಿಜ ವಸ್ತುಗಳ ಕೊರತೆ ಹಾಗೂ ಈ ಕೊರತೆಯ ಕಾರಣವನ್ನು ಅವರು ತಿಳಿಯಬೇಕು. ಈ ಗೊಬ್ಬರಗಳನ್ನು ಉಪಯೋಗಿಸುವ ಅನುಭವವು ಅವರಿಗೆ ಅಗತ್ಯ. ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸಲು ಅವರು ತಿಳಿದಿರಬೇಕು. ಈ ಸಲುವಾಗಿ ಪ್ರಯತ್ನಗಳು ಭರದಿಂದ ಸಾಗುತ್ತಿವೆ.

---

೧ನೇ ಪುಟದಿಂದ

ಪ್ರತ್ಯಕ್ಷವಾಗಿ ವಿಮಾನಾಪಘಾತವನ್ನು ನೋಡಿದವರೆಲ್ಲರೂ, ನೇತಾಜಿಯವರ ಉಡುಪಿಗೆ ಬೆಂಕಿ ಹತ್ತಿಕೊಂಡಿತ್ತೆಂದು ಅನುಮತಿಸಿರುವರು ಅವರ ಕೊನೆಯ ಮಾತುಗಳಿವು:—"ನಾನು ನನ್ನ ಕೊನೆಯ ಗಳಿಗೆಯ ವರೆಗೆ ನಮ್ಮ ಮಾತೃ ಭೂಮಿಗಾಗಿ ಹೋರಾಡುತ್ತಿದ್ದೆನೆಂದು ನಮ್ಮವರಿಗೆ ಹೇಳಿರಿ. ಅವರು ಹೋರಾಟವನ್ನು ಮುಂದುವರಿಸಲಿ, ಭಾರತವು ಅದಷ್ಟು ಬೇಗ ಸ್ವಾತಂತ್ರ್ಯವನ್ನು ಗಳಿಸುವುದು. ಯಾರು ಭಾರತವನ್ನು ದಾಸ್ಯದಲ್ಲಿಡಲಾರರು.

ಈ ಅಂಶಗಳಿಂದ ೧೯೪೫ ಆಗಸ್ಟ ೧೮ರಂದು ಮಧ್ಯಾಹ್ನ, ಕೈರೋ ಕುವಿನಲ್ಲಿ ನೇತಾಜಿಯವರನ್ನು ಕೊಂಡೊಯ್ಯುತ್ತಿದ್ದ ವಿಮಾನವು ಅಪಘಾತಕ್ಕೀಡಾದುದು ನಿಜವೆಂದು ಧೃಢಪಡುವುದು. ಅಧಿಕ ಸಂಖ್ಯೆಯ ಜಪಾನಿ ಹಾಗೂ ಜಪಾನೇತರ ಸಾಕ್ಷ್ಯಗಳನ್ನು ನಂಬದಿರುವುದಕ್ಕೆ ಯಾವ ಕಾರಣವೂ ಇಲ್ಲವೆಂದು ಈ ಸಮಿತಿಯ ಸದಸ್ಯರು ಅಭಿಪ್ರಾಯಪಟ್ಟಿರುವರು. ದುರದೃಷ್ಟವಶಾತ್, ಜಪಾನ್ ಅಧಿಕಾರಿಗಳು ಆ ಸಮಯದಲ್ಲಿ ಈ ವಿಮಾನಾಪಘಾತವಾದ ಬಗೆಗೆ ವಿಚಾರಣೆಯನ್ನು ನಡೆಸಲಿಲ್ಲ. ಇದಕ್ಕೆ ಬಹುಶ್ಯ ಅವರು ಶರಣಾಗತರಾಗಿದ್ದ ಕಾಲದಲ್ಲಿದ್ದ ಅವ್ಯವಸ್ಥೆಯೇ ಕಾರಣವೆನ್ನಬಹುದು.

ನೇತಾಜಿಯವರ ಮರಣದ ಬಗೆಗೆ ಸಾಕಷ್ಟು ದಾಖಲೆಗಳಿವೆ. ಆದರೂ ಈ ಸಮಿತಿಯವರು ನೇತಾಜಿಯವರು ಜೀವಂತರಾಗಿರುವರೆ? ಎಂಬ ವಿಷಯವನ್ನು ಪರಿಶೀಲನೆಗೆ ತೆಗೆದುಕೊಂಡಿರುವರು. ಈ ನಂಬಿಕೆಯುಳ್ಳವರನ್ನು ಎರಡು ವಿಧವಾಗಿ ಈ ಸಮಿತಿಯವರು ವಿಂಗಡಿಸಿರುವರು. ಮೊದಲನೆಯ ವರ್ಗ ಬೋಸರ ಮನೆತನಕ್ಕೆ ಸೇರಿದ ಹಲವರು, ನೇತಾಜಿಯವರು ಜೀವಂತರಾಗಿರುವರು. ಅವರು ತಮ್ಮ ವೈಯುಕ್ತಿಕ ಕಾರಣಗಳಿಗಾಗಿ ಅಜ್ಞಾತವಾಸದಲ್ಲಿರುವರು ಯಾರೂ ಅವರೊಂದಿಗೆ ಸಂಪರ್ಕವನ್ನಿಟ್ಟುಕೊಂಡಿಲ್ಲ. ಅನಗತ್ಯ ಸಮಯದಲ್ಲಿ ಅವರು ಭಾರತಕ್ಕೆ ಪುನಃ ಆಗಮಿಸುವರು. ಎಂಬ ನಂಬಿಕೆಯನ್ನಿಟ್ಟುಕೊಂಡಿರುವರು.

ಮತ್ತೊಂದು ವರ್ಗ: ನೇತಾಜಿಯವರು ಜೀವಂತರಾಗಿರುವುದಷ್ಟೇ ಅಲ್ಲ—ಅವರನ್ನು ಹಲವರು ನೋಡಿದ್ದಾರೆ. ಅವರು ಇಲ್ಲಿ ಅಲ್ಲಿ, ಮುಖ್ಯವಾಗಿ ಚೀನಾದಲ್ಲಿ ಹಾಗೂ ಭಾರತ ಚೀನಾ ಗಡಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ ಎಂಬ ನಂಬಿಕೆಯನ್ನು ಹೊಂದಿರುವರು. ಸಮಿತಿಯವರು ಇದಕ್ಕೆ ಹೆಚ್ಚಿನ ಮೌಲ್ಯವನ್ನಿತ್ತಿಲ್ಲ.

೧೯೫೧ರಲ್ಲಿ ಪೇಕಿಂಗ್‌ನಲ್ಲಿ ಪ್ರಕಟವಾದ ಗ್ರೂಪ್ ಭಾವ ಚಿತ್ರವು ನೇತಾಜಿಯವರ ಬಗೆಗೆ ಊಹಾಪೋಹಗಳಿಗೆ ಎಡೆಗೊಟ್ಟಿದೆ. ಈ ಸಂದರ್ಭದಲ್ಲಿ ನಡೆಸಿದ ಸಮೀಕ್ಷೆಯಿಂದಾಗಿ, ಅದು, ಪೇಕಿಂಗ್ ವಿಶ್ವವಿದ್ಯಾನಿಲಯದ ವೈದ್ಯಕೀಯ ಕಾಲೇಜಿನ ಸೂಪರಿಂಟೆಂಡೆಂಟರಾದ ಮಿ|| ಲಿ ಹೆಂಗ್‌ರವರೆಂದು ತಿಳಿದುಬಂದಿತು-ಎಂದು ಸಮಿತಿಯವರು ತಿಳಿಸಿದರು.

ನೇತಾಜಿಯವರ ಅಂತ್ಯ ದಹನ ಕ್ರಿಯೆಯನ್ನು ಕುರಿತು ಒಂದು ಅಧ್ಯಾಯವು ಈ ಸಮಿತಿಯ ವರದಿಯಲ್ಲಿದೆ ಈ ಸಂಬಂಧದ ಪ್ರಮಾಣಗಳನ್ನು ಇಬ್ಬರು ಭಾರತೀಯರು ಇಬ್ಬರು ಜಪಾನಿಯರು, ಮತ್ತು ಒಬ್ಬರು ಫಾರ್ಮೋಸಾದವರು ಒದಗಿಸಿರುವರು. ಅವರ ಸಾಕ್ಷ್ಯಗಳು ಪರಸ್ಪರ ತಾಳೆಯಾಗುತ್ತದೆ. ನೇತಾಜಿಯವರ ಕಳೇಬರವನ್ನು ತೈಹೋಕುವಿನಲ್ಲಿ ದಹನ ಮಾಡಿದೆ ಇನ್ನಾವುದೇ ರೀತಿಯಲ್ಲಿಯಾಗಲಿ ಅಂತ್ಯ ಕ್ರಿಯೆ ನಡೆಸಿದ ಬಗೆಗೆ ಯಾವ ಸಾಕ್ಷ್ಯವೂ ಇಲ್ಲ.

ನೇತಾಜಿಯವರಿಗೆ, ಆಗ್ನೇಯ ಏಷ್ಯಾದಲ್ಲಿನ ಭಾರತೀಯರು ಧಾರಾಳವಾಗಿ ಕೊಟ್ಟಿದ್ದ ಚಿನ್ನ ಹಾಗೂ ಇತರ ಬೆಲೆಬಾಳುವ ವಸ್ತುಗಳೇನಾದುವು? ಎಂಬ ವಿಷಯವನ್ನು ಈ ಸಮಿತಿಯ ಸದಸ್ಯರು ಸಾರ್ವಜನಿಕ ಆಸಕ್ತಿಯ ದೃಷ್ಟಿಯಿಂದ ಪರಿಶೀಲಿಸಿರುವರು. ನೇತಾಜಿಯವರು ತೆಗೆದುಕೊಂಡ ಹಣವೆಷ್ಟು, ವೆಚ್ಚ ಮಾಡಿದ ಹಣವೆಷ್ಟು, ತಮ್ಮೊಂದಿಗೆ ತೆಗೆದುಕೊಂಡು ಹೋದ ಚಿನ್ನ ಮತ್ತು ಆಭರಣಗಳ ಮೌಲ್ಯವೇನು ಎಂಬ ವಿವರಗಳು ಗೊತ್ತಿಲ್ಲ. ಆದರೂ ನೇತಾಜಿಯವರು ಅಧಿಕ ಪ್ರಮಾಣದಲ್ಲಿ ಹಣವನ್ನು ಹಂಚಿದರೆಂದೂ, ಕೊನೆಯ ಘಟ್ಟದಲ್ಲಿ ಬೆಲೆಬಾಳುವ ಕೆಲವು ವಸ್ತುಗಳನ್ನು ಮಾತ್ರ ತಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋದರೆಂದೂ ತಿಳಿದು ಬರುವುದಾಗಿ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿರುವರು. ೧೯೪೫ರ ಆಗಸ್ಟ ೧೮ರಂದು ವಿಮಾನಾಪಘಾತವಾದ ಮೇಲೆ, ಬೆಂದು ಹೋಗಿದ್ದ ಕೆಲವು ಆಭರಣಗಳು ದೊರೆತು, ಅವುಗಳನ್ನು ಮಿಲಿಟರಿ ಪ್ರಧಾನ ಕಛೇರಿಯಲ್ಲಿ ಸುರಕ್ಷಿತವಾಗಿಡಲಾಗಿತ್ತು ಕರ್ನಲ್ ಹಬಿಬ್-ಉರ್-ರೆಹಮಾನ್‌ರವರು ಈ ಅಮೂಲ್ಯ ವಸ್ತುಗಳನ್ನು ಶ್ರೀ ರಾಮಮೂರ್ತಿಯವರಿಗೆ ಒಪ್ಪಿಸಿ ಅವುಗಳನ್ನು ಭಾರತದಲ್ಲಿ ನೇತಾಜಿ ಚಳವಳಿಯ ಯಾವ ಉತ್ತರಾಧಿಕಾರಿಗಾಗಲಿ ತಲುಪಿಸಬೇಕೆಂದು ಹೇಳಿದ್ದರು ಶ್ರೀ ರಾಮಮೂರ್ತಿಯವರು ಈ ಆಭರಣಗಳನ್ನು ೧೯೪೫ರಿಂದ ೧೯೫೧ರ ವರೆಗೆ ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡಿದ್ದರು. ಈ ಅವಧಿಯಲ್ಲಿ ಅವರು ಭಾರತೀಯ ಅಧಿಕಾರಿಗಾಗಲಿ, ಟೋಕಿಯೊದಲ್ಲಿರುವ "ಭಾರತೀಯ ಮಿಷನ್"ನವರಿಗಾಗಲಿ ತಲುಪಿಸಲಿಲ್ಲ.

ಆದರೆ ೧೯೫೧ರ ಸೆಪ್ಟೆಂಬರ್ ೨೪ರಂದು "ಭಾರತೀಯ ಮಿಷನ್" ಈ ಆಭರಣಗಳನ್ನು ವಶಪಡಿಸಿಕೊಂಡಿತು. ಅವುಗಳನ್ನು ಪರೀಕ್ಷೆ ಮಾಡಿ ನೋಡಿದಾಗ ಕರ್ನಲ್ ರೆಹಮಾನ್‌ರವರ ಮೂಲ ಪಟ್ಟಿಯಲ್ಲಿದ್ದ ತಪಶೀಲಿಗಿಂತಲೂ ಕೊಂಚ ತೂಕ ಹೆಚ್ಚಾಗಿರುವುದು ಕಂಡು ಬಂದಿತು. ಈ ಆಭರಣಗಳನ್ನು ಈಗ ಭಾರತಕ್ಕೆ ತಂದು ರಾಷ್ಟ್ರಪತಿ ಭವನದ "ರಾಷ್ಟ್ರೀಯ ವಸ್ತು ಸಂಗ್ರಹಾಲಯ"ದಲ್ಲಿಡಲಾಗಿದೆ. ಈ ಆಭರಣಗಳ ಮೌಲ್ಯ ಸುಮಾರು ೧ ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಆದಾಗ್ಯೂ ಈ ಆಭರಣಗಳ ಪ್ರಮಾಣವು ನೇತಾಜಿಯವರು ತಮ್ಮೊಂದಿಗೆ ತೆಗೆದುಕೊಂಡು ಹೋದ ಆಭರಣಕ್ಕಿಂತಲೂ ಕಡಿಮೆ ಇದೆ ಎಂದು ಈ ಸಮಿತಿಯವರು ಅಭಿಪ್ರಾಯಪಟ್ಟಿರುವರು. ಈ ಆಭರಣಗಳನ್ನು ಸಂಗ್ರಹಿಸಿದ ಸಂದರ್ಭ ಇತ್ಯಾದಿಗಳ ಬಗೆಗೆ ಸಮಿತಿಯವರಿಗೆ ಸಾಕಷ್ಟು ಪುರಾವೆಗಳು ದೊರೆತಿಲ್ಲವಾದ್ದರಿಂದ ಆ ಬಗ್ಗೆ ನಿರ್ದಿಷ್ಟವಾದ ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಾಗಿಲ್ಲ.

Edited, Printed & Published by K. H. Shetty, at the Navayuga press, Udipi S. Indi

REGD. NO. M. 3618

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬
VOL. 36

27—9—1956

ಸಂಚಿಕೆ ೪
NO. 4

ಇತಿಹಾಸದ ಪುಟಗಳಿಂದ

## ನಮ್ಮ ದೇಶಕ್ಕೆ ಭಾರತ ವರ್ಷವೆಂದು ಏಕೆ ಹೆಸರಾಯಿತು?

### ಋಷಭಪುತ್ರ ಭರತನ ಹೆಸರಿನಿಂದಲೇ ಭಾರತವರ್ಷವೆಂದಾಯಿತು

ನಮ್ಮ ಜನ್ಮಭೂಮಿಯು, ಜನನಿಯೂ, ಮಾತೃಭೂಮಿಯೂ, ಕರ್ಮಭೂಮಿಯೂ ಆಗಿರುತ್ತಾಳೆ. ಅವಳ ಆಧಾರದಿಂದಲೇ ನಾವು ರಾಷ್ಟ್ರ ಹಾಗೂ ದೇಶವನ್ನು ನಡೆಸುತ್ತಿದ್ದೇವೆ. ಈ ದೇಶಕ್ಕೆ ಆರ್ಯಾವರ್ತ, ಬ್ರಹ್ಮಾವರ್ತ ಇತ್ಯಾದಿ ಅನೇಕ ಹೆಸರುಗಳಿವೆ. ಇವೆಲ್ಲವೂ ಹಿಂದೂ ಸ್ಥಾನದ ಪರ್ಯಾಯವಾಚಿ ಹೆಸರುಗಳಲ್ಲ. ...ಎಲ್ಲಾ ಕಡೆಗಳಲ್ಲಿ ಮತ್ತು ಸಂಪೂರ್ಣ ದೇಶಕ್ಕೆ 'ಭಾರತ ವರ್ಷ' ಎಂಬ ಒಂದು ಹೆಸರು ಮಾತ್ರ ಪ್ರಯೋಗ ಯೋಗ್ಯವಾಗಿದೆ. ಜಂಬೂ ದ್ವೀಪದ ಕ್ಷೇತ್ರ ಭಾರತ ವರ್ಷಕ್ಕಿಂತ ದೊಡ್ಡದಿದೆ. ಅದರಲ್ಲಿಯ ಕೆಲವು ಕ್ಷೇತ್ರಗಳನ್ನು ಸಪ್ತಸಿಂಧೂ ಅಥವಾ ಸಪ್ತ ಸೈಂಧವ ಎಂಬ ಹೆಸರಿನಿಂದ ...ಂದೆ ಕರೆಯುತ್ತಿದ್ದರು. ಇಲ್ಲಿಯೇ ಮೊ...ಲ ಆರ್ಯರು ವಾಸಿಸಿಕೊಂಡಿದ್ದರು. ...ಮೇಣ ಈ ಹೆಸರು ಉತ್ತರ ಭಾರತದ ...ಮಾತ್ರ ಪ್ರಯೋಗವಾಗಿ ತೊಡಗಿತು. ...ಪ್ರಾಚೀನ ವೈದಿಕ ಸಾಹಿತ್ಯದಲ್ಲಿ 'ಸಿಂಧೂ' ...ಎಂಬ ಶಬ್ದಕ್ಕೆ 'ಸಮುದ್ರ' ಎಂಬ ಅರ್ಥ...ವೂ ಇದೆ.

ವಿದೇಶಗಳಲ್ಲಿ ನಮ್ಮನ್ನು ಹಿಂದೂ...ಗಳೆಂದೂ ನಮ್ಮ ದೇಶವನ್ನು ...ಂದೂಸ್ಥಾನವೆಂದೂ ಹೆಚ್ಚಾಗಿ ...ರೆಯುತ್ತಿದ್ದಾರೆ. 'ಹಿಂದೂ' ಎಂಬ ಶ...ವು 'ಸಿಂಧೂ' ಎಂಬ ಶಬ್ದದಿಂದಲೇ ...ತ್ಪನ್ನವಾದುದು. ಯೂನಾನಿಗಳು ...ಂದೂ'ಗಳನ್ನು 'ಇಂಡೋ' ಎಂದೂ, ...ಯುರೋಪದಲ್ಲಿ 'ಇಂಡಿಯನ್'ರೆಂದೂ ...ತ್ತು ನಮ್ಮ ದೇಶವನ್ನು 'ಇಂ...ಯಾ' ಎಂದೂ ಕರೆಯುತ್ತಾನೆ. 'ಹಿಂ...ದೂ' ಮತ್ತು 'ಹಿಂದೂಸ್ಥಾನ'ಗಳ ಸಂ...ಧವಾಗಿ ನಮ್ಮ ದೇಶದಲ್ಲಿ ವಿಶೇಷ ...ಚರ್ಚೆ ಇರುವುದಿಲ್ಲ. ಆದರೆ 'ಭಾರತ ವ...' ಎಂಬ ವಿಷಯದಲ್ಲಿ ಲಕ್ಷ್ಯಕೊಟ್ಟ...ು ಕೆಲವೇ ಮಂದಿ.

'ಭಾರತ ವರ್ಷ'ವೆಂದು ಹೆಸರು ...ಲು ಕೆಲವು ಕಾರಣಗಳನ್ನು ...ಕೆಳಗೆ ಕೊಡಲಾಗಿದೆ. ...ತ ಎಂಬ ಹೆಸರಿನ ಅರಸು ಹಾಗು ಮಹಾಪುರುಷನ ಹೆಸರಿನಿಂದಾಗಿ ನಮ್ಮ ದೇಶಕ್ಕೆ 'ಭಾರತ'ವೆಂದು ಹೆಸರಾಯಿತು. ಸಾಮಾನ್ಯ ಜನರು ಹಾಗು ವಿದ್ವಾಂಸರು ಈ ಕಾರಣವನ್ನೇ ಹೆಚ್ಚಾಗಿ ಸ್ವೀಕರಿಸಿದ್ದಾರೆ. ಭರತ ಎಂಬ ಹೆಸರಿನ ಅನೇಕ ಅರಸರು ಇಲ್ಲಿ ಆಗಿ ಹೋಗಿದ್ದಾರೆ. ಅವರಲ್ಲಿ ಯಾರ ಹೆಸರ ಮೇಲಿಂದ ನಮ್ಮ ದೇಶಕ್ಕೆ ಭಾರತವೆಂದು ಹೆಸರಾಯಿತೆಂಬುದನ್ನು ಗಮನಿಸುವುದು ಅತ್ಯವಶ್ಯವಿದೆ.

ಪ್ರಾಚೀನ ಕಾಲದಲ್ಲಿ ಭರತ ಎಂಬ ಹೆಸರಿನ ಈ ಕೆಳಗಿನ ಐದು ಮಂದಿ ಮಹಾ ವ್ಯಕ್ತಿಗಳು ಕಳೆದು ಹೋಗಿದ್ದಾರೆ:

(1) ಜಡಭರತ (2) ದುಷ್ಯಂತ ಮತ್ತು ಶಕುಂತಲೆಯ ಪುತ್ರ ಭರತ (3) ದಶರಥನ ಪುತ್ರ ಮತ್ತು ರಾಮನ ಸಹೋದರ ಭರತ (4) ನಾಟ್ಯಶಾಸ್ತ್ರ ಪ್ರಣೇತಾ ಭರತ ಮತ್ತು (5) ಋಷಭದೇವನ ಪುತ್ರ ಭರತ.

ಜಡಭರತ ನಂತಹ ವಿರಕ್ತ, ಸಾಧು ಸನ್ಯಾಸಿ, ಮಹಾತ್ಮನ ಹೆಸರಿಂದ ಯಾವುದೇ ಸ್ಥಳದ ಹೆಸರು ಉಂಟಾಗುವುದು ಸಂಭವವೇನೊ ನಿಜ; ಆದರೆ ಭಾರತ ವರ್ಷದ ಕುರಿತು ಯಾವುದೇ ವಿದ್ವಾಂಸರಿಂದ ಈ ಅಭಿಪ್ರಾಯ ದೊರೆಯುವುದಿಲ್ಲ. ಇದಕ್ಕೆ ಪ್ರಮಾಣ ಬದ್ಧವಾದ ಆಧಾರಗಳೊಂದೂ ತೋರುವುದಿಲ್ಲ.

ದಶರಥನ ಪುತ್ರ ಹಾಗು ಮಹಾಪುರುಷ ಶ್ರೀ ರಾಮಚಂದ್ರನ ತಮ್ಮ ಭರತನ ಅನುಪಮ ತ್ಯಾಗವು ಜಗತ್ಪ್ರಸಿದ್ಧವಾಗಿದೆ. ಆದರೆ ಅವನ ಹೆಸರ ಮೇಲಿಂದ ನಮ್ಮ ದೇಶಕ್ಕೆ "ಭಾರತ ವರ್ಷ"ವೆಂದು ಹೆಸರಾಯಿತೆಂಬುದನ್ನು ಯಾವ ವಿದ್ವಾಂಸರೂ ಹೇಳಿದ ಉಲ್ಲೇಖವಿಲ್ಲ.

ನಾಟ್ಯಶಾಸ್ತ್ರ ಪ್ರಣೇತಾ ಭರತನು ಭಾರತೀಯ ಸಾಹಿತ್ಯದಲ್ಲಿ ಅಪಾರ ಖ್ಯಾತಿಯನ್ನು ತಂದಿರುತ್ತಾನೆ. ಆದರೆ ಅವನಿಗೂ ದೇಶದ ನಾಮಕರಣಕ್ಕೂ ಯಾವ ಸಂಬಂಧವೂ ಇದ್ದಂತೆ ಭಾಸವಾಗುವುದಿಲ್ಲ.

ದುಷ್ಯಂತ ಮತ್ತು ಶಕುಂತಲೆಯರ ಪುತ್ರ ಭರತನನ್ನು ಮಹಾಕವಿ ಕಾಳಿದಾಸನ ಅಮರ ಲೇಖನಿಯು ಮನೆ ಮನೆಗಳಲ್ಲಿ ಪ್ರಸಿದ್ಧನನ್ನಾಗಿ ಮಾಡಿದೆ. ಅನೇಕ ಆಧುನಿಕ ಲೇಖಕರು ಈ ಭರತನಿಂದಲೇ ನಮ್ಮ ದೇಶಕ್ಕೆ ಭಾರತ ಎಂದು ಹೆಸರಾಯಿತೆಂಬುದನ್ನು ನಿರೂಪಿಸುತ್ತಾರೆ. ಆದರೆ ಇದರ ಸ್ಪಷ್ಟ ಸಮರ್ಥನೆಯು ಯಾವುದೇ ಪ್ರಾಚೀನ ಸಾಹಿತ್ಯ ಗ್ರಂಥದಲ್ಲಿ ಸಿಗುವುದಿಲ್ಲ. ಈ ಭರತನ ಶಾಸನ ಕಾಲದಲ್ಲಿ ಕೇವಲ ದಿಗ್ವಿಜಯ ಪ್ರತಾಪ, ನ್ಯಾಯ, ದಾನ, ವ್ಯವಸ್ಥೆ ಇತ್ಯಾದಿಗಳ ಮಹಿಮೆಯ ಒಳ್ಳೆಯ ವರ್ಣನೆಯೊಂದೂ ಸಿಗುವುದಿಲ್ಲ. ಯಾವ ಭರತ ವಂಶದ ಖ್ಯಾತಿಯು ಪ್ರಾಚೀನ ಸಾಹಿತ್ಯದಲ್ಲಿ ನಮಗೆ ಕಾಣಸಿಗುವುದೋ ಅದು ಇದೇ ಭರತನಿಗೆ ಸಂಬಂಧಿಸಿದ ವಂಶವಾಗಿರುತ್ತದೆ. ಈ ಭರತನ ಕುರಿತು ವಿವಿಧ ಗ್ರಂಥಗಳಲ್ಲಿ ಏನೇನು ಉಲ್ಲೇಖ ಮತ್ತು ವರ್ಣನೆ ದೊರೆಯುವುದೆಂಬುದನ್ನು ಗಮನಿಸುವುದವಶ್ಯ. ಇವನ ಜನ್ಮದ ಕುರಿತಾದ ಮುಖ್ಯ ಕಥೆ ಮತ್ತು ದುಷ್ಯಂತ ಶಕುಂತಲೆಯರ ಸಂಬಂಧದ ಕುರಿತಾದ ವೃತ್ತಾಂತ ಸರ್ವಸಾಮಾನ್ಯ ಎಲ್ಲರೂ ಬಲ್ಲರು. ಪ್ರಕೃತ ನಾವು ಚರ್ಚಿಸುವಂತಹ ವಿಷಯಕ್ಕೆ ನಮಗೆ ಸಹಾಯವಾಗಬಲ್ಲ ಉಲ್ಲೇಖಗಳ ಕುರಿತು ಮಾತ್ರ ಯೋಚಿಸುವ. ಶ್ರೀ ಮದ್ಭಾಗವತದ ನವಮಸ್ಕಂಧದ ಎರಡನೇ ಅಧ್ಯಾಯದಲ್ಲಿ ಈ ರೀತಿ ಹೇಳಿದೆ:—

"ಈ ಬಾಲಕನು ಸಿಂಹದ ಮರಿಗಳನ್ನು ಸಾಮಾನ್ಯ ಪ್ರಾಣಿಗಳಂತೆ ಎತ್ತಿಕೊಂಡು ಅವುಗಳೊಡನೆ ಆಟವಾಡುತ್ತಿದ್ದನು. ದುಷ್ಯಂತನ ದೇಹಾವಸಾನದ ನಂತರ ಇದೇ ವೀರ ಬಾಲಕನು ಭರತ ಸಮ್ರಾಟನಾದನು. ಮಹಾರಾಜ ಭರತನು ಭಗವಂತನ ಅಂಶಾವತಾರವಾಗಿದ್ದನು. ಅವನ ಮಹಿಮೆಯು ಜಗತ್ತಿನ ಎಲ್ಲಾ ಕಡೆಗಳಲ್ಲಿ ಹಬ್ಬಿಕೊಂಡಿತ್ತು. ಪಟ್ಟಾಭಿಷೇಕದ ನಂತರ ಗಂಗಾತಟದಲ್ಲಿ ಅವನು ಕ್ರಮಶಃ ೫೫ ಅಶ್ವಮೇಧ ಯಜ್ಞಗಳನ್ನು ನಡೆಸಿದ್ದನು. ಮಮತೆಯ ಸುತ ಭಾರದ್ವಾಜರನ್ನು ಅವನು ತನ್ನ ಪುರೋಹಿತನನ್ನಾಗಿ ಮಾಡಿಕೊಂಡಿದ್ದ. ೭೮ ಅಶ್ವಮೇಧ ಕುದುರೆಗಳನ್ನು ಅವನು ಕಟ್ಟಿದ್ದನು. ಯಜ್ಞಕಾಲದಲ್ಲಿ ಬ್ರಾಹ್ಮಣರಿಗೆ ಅವರು ಇಚ್ಛಿಸಿದಷ್ಟು ಧನಕೊಟ್ಟು ತೃಪ್ತಿಪಡಿಸಿದ್ದನು. ಭರತನು ಸುಮಾರು ೩೩೦೦ ಅಶ್ವಮೇಧ ಯಾಗಗಳನ್ನು ನಡೆಸಿದ್ದನು.

ಅಶ್ವಮೇಧ ಯಜ್ಞಗಳ ಸಂಬಂಧವಾಗಿ ದಿಗ್ವಿಜಯ ನಡೆಸುವ ಕಾಲದಲ್ಲಿ ಕಿರಾತ, ಹೂಣ, ಯವನ, ಪೌಂಡ್ರ, ಕಕ, ಖಶ, ಶಕ, ಹಾಗು ಅನ್ಯನ್ಯ ಜಾತಿಯ ಮ್ಲೇಂಛ, ಅಬ್ರಾಹ್ಮಣ ಮತ್ತು ಅನಾರ್ಯ ಅರಸರನ್ನು ಭರತನು ವಿನಾಶಗೊಳಿಸಿದ್ದನು. ಮಹಾರಾಜ ಭರತನ ಶಾಸನ ಕಾಲದಲ್ಲಿ ಸ್ವರ್ಗ ಮತ್ತು ಪೃಥ್ವಿಯಿಂದ ಪ್ರಜಾಗಣಕ್ಕೆ ಮನಸ್ಸಿನಲ್ಲಿ ಇಚ್ಛಿಸಿದ ವಸ್ತುಗಳ ಪ್ರಾಪ್ತಿಯಾಗುತ್ತಿತ್ತು. ಅವನು ೨೭೦೦೦ ವರ್ಷ ರಾಜ್ಯಭಾರ ನಡೆಸಿದ್ದನು"

ಹಲವರು ಈ ಸಾವಿರಗಟ್ಲೆ ಅಶ್ವಮೇಧಗಳ ಮತ್ತು ದಶ ಸಾವಿರ ವರ್ಷಗಳ ರಾಜ್ಯಭಾರದ ವಿಷಯವನ್ನು ಮಾನ್ಯ ಮಾಡುವುದಿಲ್ಲ ಆದರೆ ಪುರಾಣಗಳಲ್ಲಿ ಬರುವ ಈ ವರುಷಗಳ ಸಂಖ್ಯೆಯನ್ನು ದಿನದ ಪ್ರಮಾಣದಲ್ಲಿ ತೆಗೆದುಕೊಂಡರೆ ಸರಿ ಬರುತ್ತದೆ. ಐತರೇಯ ಬ್ರಾಹ್ಮಣದ ಅಂತಿಮ ಭಾಗದಲ್ಲಿ ಅಶ್ವಮೇಧ ಯಜ್ಞ ನಡೆಸುತ್ತಿದ್ದ ಅರಸರಲ್ಲಿ ಭರತನ ಉಲ್ಲೇಖವೂ ದೊರೆಯುತ್ತದೆ. ಭರತನು ಸೀಮಾಂತದ ವರೆಗೆ ಪೃಥ್ವಿಯನ್ನು ಜಯಿಸಿದ್ದ. ಮಹಾಭಾರತದ ಆದಿ ಪರ್ವದಲ್ಲಿ ಈ ಭರತನ ರಾಜ್ಯಾಭಿಷೇಕದ ವರ್ಣನೆಯಿದೆ. ಅನೇಕ ಅರಸರನ್ನು ಜಯಿಸಿ ಅತ

೧೧ನೇ ಪುಟನೋಡಿರಿ

ನಮ್ಮ ಸಂಪತ್ತು

* * *

ನಾವು ನೆರವಾಗಿ ವಿಸ್ತರಿಸಿದ ವ್ಯಾಪಾರ ಕ್ಷೇತ್ರವು ನಮ್ಮ ಸಂಪತ್ತಲ್ಲ.
ನಾವು ಭವ್ಯವಾಗಿ ಕಟ್ಟಿಸಿದ ಕಟ್ಟೋಣಗಳು ನಮ್ಮ ಐಶ್ವರ್ಯವಲ್ಲ.
ನಾವು ಜೋಕೆಯಾಗಿ ಉಳಿಸಿದ ಕ್ಷೇಮನಿಧಿಯು ನಮ್ಮ ಸೌಭಾಗ್ಯವಲ್ಲ.
ನಾವು ಸಾಲುಗಾರರಿಗೆ ವಿತರಣೆ ಮಾಡುವ ಉತ್ಪಾದನೆಯು ನಮ್ಮ ಶ್ರೀಮಂತಿಕೆಯಲ್ಲ.

ಇವೆಲ್ಲವೂ ನೀವು ನಮ್ಮ ಮೇಲೆ ತೋರಿಸುತ್ತಿರುವ ವಿಶ್ವಾಸದ ಫಲಿತಾಂಶ. ನಿಮ್ಮ ವಿಶ್ವಾಸವೇ ನಮ್ಮ ಪರೋಕ್ಷ ಸಂಪತ್ತು. ಅದನ್ನು ಅತ್ಯಧಿಕವಾಗಿ ಸಂಪಾದಿಸಿ ನಿಮ್ಮೆಲ್ಲರ ಆರ್ಹತೆಯನ್ನು ಪಡೆಯುವುದೇ ನಮ್ಮ ಮುಖ್ಯ ಧ್ಯೇಯ.

ದಿ ವಿಜಯ ಬೇಂಕ್ ಲಿಮಿಟೆಡ್
ಒಟ್ಟು ವಹಿವಾಟು ನೊಬಲಗು ರೂ. 90,00,000

## ನಯಿ ತಾಲೀಂ

# "ಸಚ್ಚಿದಾನಂದ" ಇದೇ ನಮ್ಮ ಶಿಕ್ಷಣದ ಬೀಜ ಮಂತ್ರ

### ಜ್ಞಾನ ಮತ್ತು ಕರ್ಮ ಯೋಗದ ಮಧುರ ಸಂಗಮವು ಅವಶ್ಯ

"ನಮ್ಮ ದೇಶಕ್ಕೆ 'ನಯಿ ತಾಲಿಂ' ನನ್ನ ಸರ್ವೋತ್ತಮವಾದ ಮತ್ತು ಕೊನೆಯ ಕಾಣಿಕೆ ಎಂಬುದಾಗಿ ಬಾಪೂಜಿಯವರು ಹೇಳುತ್ತಿದ್ದುದನ್ನು ನಿಮ್ಮಲ್ಲಿ ಅನೇಕರು ತಿಳಿದಿರಬಹುದು. ಯಾವುದೇ ಮಾತನ್ನಾಗಲಿ, ದೊಡ್ಡದಾಗಿ ಅಥವಾ ಸಣ್ಣದಾಗಿ ಹೇಳುವುದು ಬಾಪೂಜಿಯ ಅಭ್ಯಾಸವಾಗಿರಲಿಲ್ಲ. ತನ್ನ ಶಬ್ದವನ್ನು ಸಂಪೂರ್ಣ ತೂಗಿನೋಡಿ ಉಪಯೋಗಿಸುವಷ್ಟು ಜಾಗರೂಕತೆ ವಹಿಸುತ್ತಿದ್ದ ಬೇರೊಬ್ಬ ವ್ಯಕ್ತಿಯನ್ನು ನಮ್ಮಲ್ಲಿ ಯಾರೇ ಆಗಲಿ ಕಂಡಿರುವುದು ಸಾಧ್ಯವಿಲ್ಲ. ಆದುದರಿಂದ ಅವರೇನು ಹೇಳಿದ್ದರೋ, ಅದು ಅವರ ದೃಷ್ಟಿಯಲ್ಲಿ ಸಂಪೂರ್ಣ ಯಥಾರ್ಥವಾಗಿತ್ತೆಂದು ಭಾವಿಸುವುದೇ ಸೂಕ್ತ.

ಬಾಪೂಜಿಯಲ್ಲಿ ಪ್ರತಿಭೆ ಇತ್ತೆಂಬುದೇ ಅವರ ಸರ್ವ ಶ್ರೇಷ್ಠ ಗುಣ; ತರ್ಕಶಕ್ತಿಯಿಂದಲ್ಲ, ಸ್ವಯಂಪ್ರಜ್ಞೆಯಿಂದ ಅವರು ಅವಶ್ಯಕತೆಯನ್ನು ಕಂಡುಕೊಳ್ಳುತ್ತಿದ್ದರು. ಸ್ವರಾಜ್ಯಪ್ರಾಪ್ತಿಯ ಬಳಿಕ ಯಾವ ವಸ್ತುವಿನ ವಿಶೇಷ ಆಗತ್ಯಬೀಳುವುದೆಂಬುದನ್ನು ಮುಂದಾಗಿ ತಿಳಿದುಕೊಂಡು ಅವರು ಅದನ್ನು ಪೂರೈಸಲು ಸರ್ವ ಸಿದ್ಧತೆಯನ್ನು ನಡೆಸಿ ಯೋಗ್ಯ ಆವಿಷ್ಕಾರವನ್ನು ಮಾಡಿದರು. ಇದೇ ನಯಿ ತಾಲೀಂ; ಅಥವಾ ಮೂಲ ಶಿಕ್ಷಣ ಎಂದು ನಾವಿಂದು ಕರೆಯುವ ಶಿಕ್ಷಣಕ್ರಮ.

ರಾಷ್ಟ್ರದ ಆಡಳಿತ ಸೂತ್ರವು ಸ್ವರಾಜ್ಯ ಪ್ರಾಪ್ತಿಯ ದೆಸೆಯಿಂದ ಕೈ ಬದಲಾದ ಪರಿಣಾಮವಾಗಿ ರಾಷ್ಟ್ರಧ್ವಜವು ಹೇಗೆ ಬದಲಾಗುವುದೋ ! ಅದೇ ರೀತಿಯಲ್ಲಿ ನೂತನ ರಾಷ್ಟ್ರದಲ್ಲಿ ನವಚೇತನವನ್ನು ತುಂಬಿಸುವುದಕ್ಕಾಗಿ ಹೊಸತಾದ ಶಿಕ್ಷಣ ಪದ್ಧತಿಯನ್ನೇ ಪ್ರಾರಂಭಿಸಬೇಕೆಂದು ಬಾಪೂಜಿ ಅಭಿಪ್ರಾಯಪಡುತ್ತಿದ್ದರು.

"ನಯೀ ತಾಲಿಂ" ಎಂಬುದರ ಶಬ್ದಾರ್ಥವು "ಹೊಸ ಶಿಕ್ಷಣ" ಎಂದಾಗುತ್ತದೆ. ಶಿಕ್ಷಣದ ಮುಂದೆ ಹೊಸ ಎಂಬ ವಿಶೇಷಣವನ್ನು ಜೋಡಿಸುವುದರ ಒಳಗುಟ್ಟೇನು! ಶಿಕ್ಷಣ ಮತ್ತು ಜ್ಞಾನದ ಹಿಂದಿರುವ ಮೂಲಭೂತ ವಿಚಾರಗಳು ಅನಾದಿಯಾಗಿವೆ; ಎಂದಿಗೂ ಅವು ಹೊಸದಲ್ಲ. ಆದಾಗ್ಯೂ ವಿಚಾರವು ಮಂದವಾಗಿಯಷ್ಟೇ ಗೋಚರಿಸತೊಡಗುತ್ತದೆ; ಆಗ ಹೊಸ ಕಾಲಕ್ಕೆ ಅನುಸಾರ ಅದನ್ನು ಹೊಸರೂಪದಲ್ಲಿ ಪ್ರಕಾಶಕ್ಕೆ ತರಬೇಕಾಗುತ್ತದೆ—ಹಾಗೆ ಅದಕ್ಕೆ ಹೊಸತನವು ಪ್ರಾಪ್ತವಾಗುತ್ತದೆ.

ಶ್ರೀಕೃಷ್ಣ ಭಗವಾನನು ಸಾಂದೀಪ ಮುನಿಯ ಆಶ್ರಮದಲ್ಲಿ ವಿದ್ಯಾರ್ಜನೆಗಾಗಿ ವಾಸಿಸುತ್ತಿದ್ದಾಗ ಗುರುವು ಈ ಶಿಷ್ಯನಿಗೆ ಕಾಡಿನಿಂದ ಕಟ್ಟಿಗೆಯನ್ನು ತರಲು ಹೇಳುತ್ತಿದ್ದನೆಂದು ನಾವು ಓದಿದ್ದೇವೆ; ಈ ಕೆಲಸದೊಟ್ಟಿಗೆಯೇ ಶ್ರೀಕೃಷ್ಣನ ವಿದ್ಯಾಭ್ಯಾಸ ನಡೆಯಿತು. ಸತ್ಯಕಾಮ ಜಾಬಾಲನು ಗುರುವಿನ ಬಳಿ ಹೋದಾಗ "ನೀನು ದನಗಳನ್ನು ಮೇಯಿಸುತ್ತಿರು" ಎಂಬುದೇ ಆ ಗುರುವಿನಿಂದ ಈ ಶಿಷ್ಯನಿಗೆ ದೊರೆತ ಉಪದೇಶಪರ ಮಂತ್ರವಾಗಿತ್ತೆಂದೂ ನಾವು ಓದಿದ್ದೇವೆ. ಸತ್ಯಕಾಮ ಜಾಬಾಲಿಯ ಮುಖದಲ್ಲಿ ಕೆಲ ದಿನಗಳ ಬಳಿಕ ವಿದ್ಯೆಯ ತೇಜಸ್ಸು ಪ್ರಕಾಶಿಸುತ್ತಿದ್ದುದನ್ನು ಕಂಡ ಗುರುವು "ನಿನಗೆ ಎಲ್ಲಿಂದ ವಿದ್ಯೆ ಬಂತು" ಎಂದು ಪ್ರಶ್ನಿಸಲು—"ಅನ್ಯೇ ಮನುಷ್ಯೇಭ್ಯಃ" ಎಂಬ ಉತ್ತರ ಶಿಷ್ಯನಿಂದ ಬಂತೆಂದು ಉಪನಿಷತ್ತು ವಿವರಿಸುತ್ತದೆ.

ಇದರ ಅರ್ಥವೇನೆಂದರೆ ಮನುಷ್ಯನ ಮೂಲಕ ವಲ್ಲದೆಯೂ ನಾವು ವಿದ್ಯೆಯನ್ನು ಸಂಪಾದಿಸಬಹುದು. ಮನುಷ್ಯನಿಂದ ನಮಗೆ ಸಿಗಬಹುದಾದ ವಿದ್ಯೆಯು ಒಟ್ಟು ವಿದ್ಯೆಯ ಒಂದಂಶ ಮಾತ್ರ ಎಂಬುದೇ ನಿಜವಾದ ವಿಷಯ. ಸರಕಾರದವರು ಕಡ್ಡಾಯ ಶಿಕ್ಷಣ ಕ್ರಮವನ್ನು ನಾಗರಿಕರ ಮೇಲೆ ಹೇರಲು ಆತುರಪಡುತ್ತಾರೆ. ಆದರೆ, ಸರಕಾರದವರೇ ಕಡ್ಡಾಯ ಶಿಕ್ಷಣಕ್ರಮದ ಮೂಲಕ ಶಿಕ್ಷಣಪ್ರಸಾರವನ್ನು ಮಾಡುತ್ತಾರೆಂಬ ಭರವಸೆಯನ್ನು ದೇವರು ಹೊಂದಿದ್ದ ಪಕ್ಷದಲ್ಲಿ ಆ ಭರವಸೆಯು ಎಂದಿಗೂ ಕಾರ್ಯರೂಪದಲ್ಲಿ ಪರಿಣತವಾಗುತ್ತಿರಲಿಲ್ಲವೆಂದು ನನಗೆ ತೋರುತ್ತದೆ.

ಆದುದರಿಂದಲೇ ದೇವರು ತನ್ನದೇ ರೀತಿಯಲ್ಲಿ ಕಡ್ಡಾಯ ಶಿಕ್ಷಣ ಕ್ರಮವನ್ನು ಜಾರಿಗೆ ತಂದಿದ್ದಾನೆ; ಆತನು ಮನುಷ್ಯ ತಲೆಯಲ್ಲಿ ಬುದ್ಧಿಯನ್ನಿಟ್ಟಿದ್ದಾನೆ. ಹೊಟ್ಟೆಯಲ್ಲಿ ಹಸಿವನ್ನು ಹುಟ್ಟಿಸಿದ್ದಾನೆ; ಹೃದಯದಲ್ಲಿ ಸಹಾನುಭೂತಿಪರ ಪ್ರವೃತ್ತಿಯನ್ನು ನೆಲೆಗೊಳಿಸಿದ್ದಾನೆ. ಸಹಾನುಭೂತಿಪರವಾದ ಹೃದಯ, ಬುದ್ಧಿಯುಕ್ತವಾದ ತಲೆ ಮತ್ತು ಹಸಿವಿನಿಂದ ಕೂಡಿದ ಹೊಟ್ಟೆ—ಇವು ಮೂರು ಜ್ಞಾನ ಪ್ರಾಪ್ತಿಯ ನಿಜವಾದ ಸಾಧನಗಳೆಂದು ನನ್ನ ಮತ. ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳುವುದಕ್ಕಾಗಿ ಮನುಷ್ಯನು ಸಹಾನುಭೂತಿಪರನಾಗಿ ಬುದ್ಧಿವಂತಿಕೆಯಿಂದ ಕೆಲಸ ಕೈಗೊಳ್ಳುತ್ತಾನೆ — ಮತ್ತು ಈ ಕೆಲಸವನ್ನು ನಿರ್ವಹಿಸುತ್ತಿರುವಾಗಲೇ ಆತನಿಗೆ ವಿದ್ಯಾಭ್ಯಾಸವಾಗುತ್ತದೆ!

ಹೊಟ್ಟೆಯಲ್ಲಿ ಮನುಷ್ಯನಿಗೆ ಹಸಿವಿಲ್ಲದಿರುತ್ತಿದ್ದರೆ ಸರಕಾರದ ಯಾವ ಶಿಕ್ಷಣ ಸಂಸ್ಥೆಯಿಂದಲೂ ವಿದ್ಯಾಭ್ಯಾಸ ಹೊಂದುವ ಆತುರ ಅಥವಾ ಆಸಕ್ತಿಯು ಜನರಿಗೆ ಇರುತ್ತಿರಲಿಲ್ಲ. ಯಾವ ಸರಕಾರವೂ ಸಂಘವೂ ಜ್ಞಾನದಾನ ಸತ್ರಕ್ಕೆ ಮನಸ್ಸು ಮಾಡುತ್ತಿರಲಿಲ್ಲ. ನನ್ನ ದೃಷ್ಟಿಯಲ್ಲಿ ಸರಕಾರದ ಧರ್ಮಾರ್ಥ ಶಿಕ್ಷಣ ಕ್ರಮಕ್ಕೆ ಅಷ್ಟು ಮಹತ್ವವಿಲ್ಲ. ಹೆತ್ತ ತಾಯಿಯು ತನ್ನ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುತ್ತಾಳೆ; ವಿದ್ಯೆ ಬುದ್ಧಿಗಳನ್ನು ಕಲಿಸುತ್ತಾಳೆ. ಇದಕ್ಕೆ ಬದಲಾಗಿ ಒಂದೇ ಒಂದು ಕಾಸನ್ನಾದರೂ ಶಿಕ್ಷಣ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ. ಇದು ದೇವರೇ ಮಾಡಿಟ್ಟಿರುವ ಶೈಕ್ಷಣಿಕ ಏರ್ಪಾಟು! ಮನುಷ್ಯನು ಏರ್ಪಡಿಸಲು ಸಾಹಸಪಡುವ ವ್ಯವಸ್ಥೆ ಇದರ ಮುಂದೆ ಎಲ್ಲಿ ತಾಳೀತು?

ಇಂದು ಸಾಮಾನ್ಯ ರೀತಿಯಲ್ಲಿ ಮೆಟ್ರಿಕ್ಯುಲೇಶನನ್ನು ಮುಗಿಸಿದ ಹುಡುಗನು ಕುಶಲನಾದ ಬಡಗಿಯನ್ನು ಮೂಢನೆಂದೇ ಭಾವಿಸುತಿದ್ದಾನೆ! ಈ ಬಡಗಿಯ ಮನೆಗೆ ಹೋಗಿ "ನನ್ನ ಮನೆಯಲ್ಲಿ ಮರದ ಕೆಲಸವಿದೆ; ಇದಕ್ಕಾಗಿ ನಿನಗೆಷ್ಟು ಕೂಲಿ ಬೇಕು?" ಎಂದು ಹುಡುಗನು ಕೇಳುತ್ತಾನೆ; "ನಿಮ್ಮ ಸಂಬಳ ಹೇಗೆ?" ಎಂಬ ವಿನಯದಿಂದ ಆತನೆಂದೂ ವಿಚಾರಿಸಲು ಹೋಗುವುದಿಲ್ಲ! ತನ್ನ ಕಾರ್ಯಕ್ಷೇತ್ರದಲ್ಲಿ ತುಂಬ ನಿಪುಣನೂ ಅನುಭವಿಯೂ ವಯೋವೃದ್ಧನೂ ಪ್ರಾಜ್ಞನೂ ಆಗಿರುವ ಬಡಗಿಯನ್ನು ಆತನು ಶಾಲೆಗೆ ಹೋಗಿ ಓದು ಬರಹ ಕಲಿಯಲಿಲ್ಲವೆಂಬ ಒಂದೇ ಕಾರಣದಿಂದ "ನೀನು" ಎಂಬ ನೀಚಸಂಬೋಧನೆಗೆ ಗುರಿಪಡಿಸಲಾಗುತ್ತದೆ.

ಮಹಮ್ಮದ ಪೈಗಂಬರರ ವಿಷಯದಲ್ಲಿ ಹೇಳಲಾಗುವ ಕತೆಯೊಂದು ಇಲ್ಲಿ ನೆನಪಾಗುತ್ತದೆ. ಒಮ್ಮೆ ಅವರು ಧ್ಯಾನಮಗ್ನರಾಗಿದ್ದರು. ದೇವರ ದರ್ಶನಾಕಾಂಕ್ಷಿಯಾಗಿದ್ದರು. ಆಗ ದೇವರು ಅವರಿಗೆ ಪತ್ರವು ಮೇಣ ಏನನ್ನೋ ಬರೆದು ಕಳುಹಿಸಿದರು. ಪೈಗಂಬರರಿಗೆ ಓದಲು ಬರುತ್ತಿರಲಿಲ್ಲ. ಆದುದರಿಂದ ಅವರು ದೇವರೊಡನೆ ನನಗೆ ನಿನ್ನ ದರ್ಶನವೇ ಬೇಕು ಎಂದರು. ದೇವರು ಅವರ ಕೋರಿಕೆಯನ್ನು ಈಡೇರಿಸಿದನು. ಅಂದಿನಿಂದ ಪೈಗಂಬರರು ತನ್ನವರಿಗೆಲ್ಲ ಹೇಳುತಿದ್ದರು—ಏನೆಂದರೆ "ನನಗೆಲ್ಲಿಯಾದರೂ ಓದಲು ಬರುತ್ತಿದ್ದರೆ, ದೇವರ ದರ್ಶನವಾಗುತ್ತಿರಲಿಲ್ಲ; ಅವರು ಕಳುಹಿಸಿದ ಕಾಗದದಿಂದಲೇ ನಾನು ತೃಪ್ತನಾಗಬೇಕಾಗುತ್ತಿದ್ದಿತು."

ಶಿಕ್ಷಣದಾನದ ಕಾರ್ಯವು ಎಂದಿಗೂ ಅಹಂಕಾರಯುಕ್ತವಾಗಿರಕೂಡದು. ನಿರಹಂಕಾರ ವೃತ್ತಿಯ ಅವಶ್ಯಕತೆಯು ಇಲ್ಲಿ ಬಹಳ ಹೆಚ್ಚು. ವಿದ್ಯಾರ್ಥಿಯ ಸೇವೆಗಾಗಿಯೇ ಇಲ್ಲಿ ಶಿಕ್ಷಕನು ಸದಾಕಾಲ ಉಪಸ್ಥಿತನಿರುತ್ತಾನೆ; ಮತ್ತು ನಮ್ರತೆಯಿಂದಲೇ ವಿದ್ಯಾರ್ಥಿಗೆ ವಿದ್ಯಾದಾನವನ್ನು ಮಾಡುತ್ತಾನೆ. ವಿದ್ಯಾರ್ಥಿಯಾದರೂ ಅಷ್ಟೇ ಭಕ್ತಿ ವಿನಯ ಸಂಪನ್ನನಾಗಿ ಶಿಕ್ಷಣ ಗ್ರಹಣವನ್ನು ಮಾಡಬೇಕಾಗಿದೆ. ಗುರು ಮತ್ತು ಶಿಷ್ಯ—ಇವರಿಬ್ಬರೂ ವಿದ್ಯಾದಾನದ ಕಾಲದಲ್ಲಿ ಪರಸ್ಪರ ಸಂಗಾತಿಗಳಾಗಿದ್ದಾರೆ. ಆದುದರಿಂದಲೇ ಹಿಂದಿನ ಕಾಲದಲ್ಲಿ ಇವರಿಬ್ಬರೂ ಒಟ್ಟೊಟ್ಟಿಗೆ ದೇವರಲ್ಲಿ "ತೇಜಸ್ವಿನಾವಧೀತಮಸ್ತು" (ಅಂದರೆ "ನಮ್ಮಿಬ್ಬರ ಅಧ್ಯಯನವೂ ತೇಜಸ್ವಿಯಾಗಲಿ") ಎಂದು ಪ್ರಾರ್ಥಿಸುತಿದ್ದರು. ಶಿಕ್ಷಕನು ತಾನು ಅಧ್ಯಾಪಕನ ವೃತ್ತಿಯನ್ನು ಕೈಗೊಂಡಿದ್ದೇನೆಂದು ನೆನೆಸದೆ ತಾನೂ ಅಧ್ಯಯನವನ್ನೇ ಮಾಡುತ್ತಿರುವುದಾಗಿ ಇಲ್ಲಿ ಹೇಳಿಕೊಳ್ಳುತ್ತಾನೆ ಎಂಬುದೇ ಗಮನಾರ್ಹವಾದ ವಿಚಾರ.

ಗುರುವು ಶಿಷ್ಯನಿಗೆ ತಾನು ಉಪಕಾರ ಮಾಡುತ್ತಿರುವೆನೆಂದಾಗಲಿ, ಶಿಷ್ಯನು ತಾನು ಗುರುವಿನಿಂದ ಉಪಕೃತನಾಗುತ್ತಿದ್ದೇನೆಂದಾಗಲೀ ಭಾವಿಸುವುದಕ್ಕೆ ಇಲ್ಲಿ ಮಹತ್ವವಿಲ್ಲ. ವಿಶ್ವಾಮಿತ್ರನು ದಶರಥರಾಜನಲ್ಲಿಗೆ ಬಂದು ರಾಮ-ಲಕ್ಷ್ಮಣರನ್ನು ತನ್ನೊಡನೆ ಕಳುಹಿಸಲು ಕೇಳಿಕೊಂಡನು; ಏಕೆಂದರೆ ತನ್ನ ಯಜ್ಞದ

(೧೧ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇವರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

## ಕಣ್ಣುಗಳ ಆರೋಗ್ಯ

# ಕಣ್ಣುಗಳನ್ನು ಹೇಗೆ ಉಪಯೋಗಿಸಬೇಕು?

ಬಹು ಜನರ ಕಣ್ಣುಗಳು ಆರೋಗ್ಯಕರವಾಗಿಲ್ಲ ಹಲವು ಜನರು ಕಣ್ಣು ರೋಗದಿಂದ ನರಳುತ್ತಾರೆ. ನೂರಕ್ಕೆ ೫೦ರಷ್ಟು ಜನರು ಕನ್ನಡಕ ಉಪಯೋಗಿಸುತ್ತಾರೆ. ಇತ್ತೀಚೆಲಾಗಿ ಮನುಷ್ಯನಿಗೆ ಕಣ್ಣಿನ ಬಾಧೆ ಹೆಚ್ಚತೊಡಗಿದೆ, ಕಾರಣವೇನು?

ಪ್ರಕೃತಿಯ ಯಾವ ಪ್ರಾಣಿಯನ್ನು ತೆಗೆದುಕೊಂಡರೂ ಅವುಗಳ ಕಣ್ಣು ಸಾಯುವ ತನಕ ಚೆನ್ನಾಗಿರುತ್ತದೆ. ಬೆಕ್ಕು, ನಾಯಿ, ಕಾಡು ಪ್ರಾಣಿಗಳು, ಪಕ್ಷಿ ಸಂಕುಲ ಯಾವುದರ ಕಣ್ಣೂ ಕೂಡಾ ಪೆಟ್ಟಾಗಿಯೂ ಅವಘಡಗಳಿಂದಲ್ಲದೆ ಬೇರೆ ರೀತಿಯಲ್ಲಿ ಯಾವುದೇ ರೋಗಕ್ಕೆ ತುತ್ತಾಗುವುದಿಲ್ಲ. ಅವು ಸಾಯುವ ವರೆಗೆ ಚೆನ್ನಾಗಿ ಕೆಲಸ ಮಾಡುತ್ತಿರುತ್ತವೆ. ಆದರೆ ಮನುಷ್ಯನ ಕಣ್ಣು ಮಾತ್ರ ನಾನಾ ಉಪದ್ರಕ್ಕೆ ಈಡಾಗುತ್ತದೆ. ಹಲವರಿಗೆ ದೂರದೃಷ್ಟಿ ಇಲ್ಲದಾಗುತ್ತದೆ. ಹಲವರಿಗೆ ಹತ್ತಿರ ಕಣ್ಣು ಕಾಣದಾಗುತ್ತದೆ. ಕೆಲವರಿಗೆ ರಾತ್ರಿ ಕಣ್ಣು ಕಾಣದಾಗುತ್ತದೆ. ಇನ್ನು ಕೆಲವರಿಗೆ ಬಿಸಿಲನ್ನು ನೋಡಲಾಗುವುದಿಲ್ಲ. ಹೀಗೆ ಮನುಷ್ಯನು ವಿವಿಧ ರೀತಿಯ ಕಣ್ಣಿನ ತೊಂದರೆಗಳಿಂದ ಬಳಲುತ್ತಿರುವುದೇಕೆ?

ಕಾರಣವೆಂದರೆ ಮನುಷ್ಯನು ತನ್ನ ಕಣ್ಣುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಿಲ್ಲ. ಒಂದೇ ವಸ್ತುವನ್ನು, ಉದಾಹರಣೆಗೆ ಪುಸ್ತಕದ ಒಂದು ಪುಟವನ್ನು ಎವೆಯಿಕ್ಕದೆ ಒಂದೇ ದೃಷ್ಟಿಯಿಂದ ನೋಡಿದರೆ ಕ್ರಮಶಃ ಅಲ್ಲಿಯ ಅಕ್ಷರಗಳು ಕಾಣೆಯಾಗುವುವು. ಹಾಗಾದಾಗ ಕಣ್ಣೆವೆಯನ್ನು ಬಡಿದು ಪುನಃ ನೋಡಿದರೆ ಅಕ್ಷರ ಕಾಣುತ್ತದೆ. ಇದರಿಂದ ಅರ್ಥವಾಗುವದೇನೆಂದರೆ ಕಣ್ಣು ಆರೋಗ್ಯದಲ್ಲಿರಲು ರೆಪ್ಪೆಗಳನ್ನು ಬಡೆಯುವುದು ಆಗತ್ಯ. ರೆಪ್ಪೆ ಮುಚ್ಚಿದಾಗ ಕಣ್ಣಿಗೆ ಶಾಂತಿ ದೊರೆಯುತ್ತದೆ. ಸಾಮಾನ್ಯವಾಗಿ ಒಬ್ಬ ಮನುಷ್ಯನು ಮಿನಿಟಿಗೆ ಹತ್ತು ಸಲ ರೆಪ್ಪೆ ಬಡೆಯುತ್ತಾನೆ. ಕಣ್ಣಿನ ರೆಪ್ಪೆಗಳು ಕೂಡಾ ಒಂದು ನಿಯಮಿತ ರೀತಿ ತೆರೆದಿರಬೇಕು. ರೆಪ್ಪೆಗಳನ್ನು ಅಗಲಿಸಿದರೆ ಆಯಾಸ ಬೇಗಬರುತ್ತದೆ.

ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆನ್ನುವವರು ಈ ಕೆಳಗಿನ ಕೆಲವು ನಿಯಮಗಳನ್ನು ಮನಸ್ಸಿನಲ್ಲಿಡುವುದು ಯೋಗ್ಯ.

**ಓದುವಾಗ—**

ಯಾವಾಗಲೂ ಪುಸ್ತಕವನ್ನು ಮುಖದ ಎತ್ತರಕ್ಕಿಂತ ಕೆಳಗೆ ಹಿಡಿಯಬೇಕು. ಮಲಗಿ ಓದುವವರು ಪುಸ್ತಕವನ್ನು ತಲೆಯ ಸಮಕ್ಕೆ ಹಿಡಿದು ಕಣ್ಣನ್ನು ಮೇಲೆ ಮಾಡಿ ಓದುತ್ತಾರೆ. ಇದು ಹಾನಿಕರ. ಒಂದು ಗೆರೆ ಓದುವ ಮೊದಲು ಎರಡು ಬಾರಿ ಕಣ್ಣೆವೆ ಮುಚ್ಚುವುದು ಹಿತ. ಬಿಸಿಲು ಪುಸ್ತಕಕ್ಕೆ ಬೀಳುವಂತೆ ಓದಬಾರದು. ಓದುವಾಗ ಆದಷ್ಟು ಕಣ್ಣೆವೆ ಇಕ್ಕುವುದು ಆರೋಗ್ಯಕರ.

**ಬರೆಯುವಾಗ:—**

ಬರೆಯುವಾಗ ದೃಷ್ಟಿಯು ಪೆನ್ನಿನ ಮೊನೆಯಲ್ಲಿರಲಿ. ಬರೆಯುತ್ತಾ ಹೋದಂತೆ ಕಣ್ಣು ಅದರೊಡನೆ ಬಲಗಡೆ ಸರಿಯಲಿ. ಮುಂದಕ್ಕೆ ಬರೆಯುತ್ತಿದ್ದಂತೆ ಹಿಂದಿನ ಅಕ್ಷರಗಳನ್ನು ನೋಡುವುದು ತಪ್ರಾಸದಾಯಕ. ಕಣ್ಣೆವೆಯಿಕ್ಕುವುದನ್ನು ಮರೆಯದಿರಿ.

**ಹೊಲಿಯುವಾಗ:—**

ಹೊಲಿಯುವ ಕೆಲಸ ಮಾಡುವ ಅನೇಕರ ದೃಷ್ಟಿ ಚೆನ್ನಾಗಿರುವುದಿಲ್ಲ. ಅವರಿಗೆ ತಲೆನೋವು ಬರುತ್ತದೆ. ಇದರ ಕಾರಣವೆಂದರೆ ಅವರು ಹೊಲಿಯುವ ಸೂಜಿಯತ್ತ ಕಣ್ಣಿರಿಸಿ ಎವೆಯಿಕ್ಕದೆ ನೋಡುವುದಾಗಿದೆ. ಒಂದೇ ಕಡೆ ನೋಡುತ್ತಿರುವುದು ಕಣ್ಣಿಗೆ ತ್ರಾಸ ಕೊಡುತ್ತದೆ. ದೃಷ್ಟಿ ಬದಲಿಸುತ್ತಿರುವುದು ಆರೋಗ್ಯಕರ.

**ಸಿನೆಮಾದಲ್ಲಿ—**

ಚಲನ ಚಿತ್ರವು ಕಣ್ಣುಗಳಿಗೆ ಹಾನಿಕರವೆಂದು ಹೇಳುವುದು ನಿಜ. ಅನೇಕ ವೇಳೆ ಅವು ಕಣ್ಣಿಗೆ ತೊಂದರೆಕೊಡುವುದಲ್ಲದೆ ಕ್ರಮಶ. ದೃಷ್ಟಿದೋಷಕ್ಕೂ ಕಾರಣವಾಗಬಹುದು. ಆದರೆ ಅವನ್ನು ದೃಷ್ಟಿಯ ಅಭಿವೃದ್ಧಿಗೂ ಬಳಸಬಹುದಾಗಿದೆ. ನೆಟ್ಟ ದೃಷ್ಟಿಯಿಂದ ನೋಡುವುದರಿಂದಲೇ ಅದು ಕಣ್ಣಿಗೆ ಅನಿಷ್ಟ ಪರಿಣಾಮವನ್ನುಂಟುಮಾಡುತ್ತದೆ. ತದೇಕ ದೃಷ್ಟಿಯಿಂದ ನೋಡದೆ ದೃಷ್ಟಿ ಬದಲಾಯಿಸಿ ನೋಡುವುದರಿಂದ ಕಣ್ಣಿಗೆ ಹಿತವಾಗುವುದು ಸಿನೆಮಾ ನೋಡಲು ಕೂರುವಾಗ ನೆಟ್ಟಗೆ ಹಾಗೂ ಆರಾಮವಾಗಿ ಕೂರಬೇಕು. ಕಣ್ಣಿನ ಮೇಲಿನ ರೆಪ್ಪೆಯು ಹೆಚ್ಚು ಮೇಲೆ ಹೋಗದಂತಿರಬಹುದು. ಆಗಾಗ್ಗೆ ಕಣ್ಣು ಮುಚ್ಚಬೇಕು.

ಕಣ್ಣಿಗೆ ಪ್ರತಿದಿನ ಕೆಲಸಮಯವಾದರೂ ಸೂರ್ಯನ ರಶ್ಮಿ ಬೀಳುವಂತೆ ಮಾಡುವುದು ಆರೋಗ್ಯಕರ. ಸೂರ್ಯನಿಗೆ ಎದುರಾಗಿ ಬಿಸಿಲು ಕಣ್ಣಿಗೆ ಬೀಳುವಂತೆ ಕಣ್ಮುಚ್ಚಿ ಶರೀರವನ್ನು ಬದಿಯಿಂದ ಬದಿಗೆ ಬಾಗಿಸಿರಿ. ಹತ್ತು ನಿಮಿಷಗಳವರೆಗೆ ಹೀಗೆ ಮಾಡಿ ಬೆಳಗಿನ ಹಾಗೂ ಸಾಯಂಕಾಲದ ಹೊತ್ತಿಗೆ ಸೂರ್ಯನ ಪ್ರಕಾಶ ಹೆಚ್ಚಿಲ್ಲದಿದ್ದು ಬಿಸಿಲಿನಲ್ಲಿ "ಅಲ್ಟ್ರಾವಾಯಿಲೆಟ್" ಕಿರಣಗಳು ಹೆಚ್ಚಿರುವಾಗ ಹೀಗೆಮಾಡುವುದು ಯೋಗ್ಯ. ಸೂರ್ಯನ ಕಿರಣದ ಈ ಚಿಕಿತ್ಸೆಯಾದ ನಂತರ ನೆರಳಿಗೆ ಬಂದು ಕಣ್ಣನ್ನು ತಣ್ಣೀರಿನಿಂದ ತೊಳೆದುಕೊಳ್ಳಬೇಕು.

ಕಣ್ಣಿನ ಸ್ನಾನ ಉಪಯುಕ್ತ. ಅದ್ದರಿಂದ ಕಣ್ಣಿಗೆ ವಿಶ್ರಾಂತಿ ದೊರೆಯುತ್ತದೆ. ತಣ್ಣೀರನ್ನೆ ಉಪಯೋಗಿಸಬೇಕು ಕಣ್ಣನ್ನು ಬಲವಾಗಿ ಉಜ್ಜಬಾರದು. ಪ್ರತಿಕಣ್ಣಿಗೆ ಎರಡು ನಿಮಿಷಗಳ ಈ ತಣ್ಣೀರು ಸ್ನಾನ ಉತ್ತಮ.

ಕಣ್ಣುಗಳ ಸೋತಿರುವಾಗ ಕಣ್ಣುಮುಚ್ಚಿಕೊಳ್ಳುವುದು ಅವಶ್ಯ. ಬಸ್ಸಿನಲ್ಲಿ ಮತ್ತಿತರ ವೇಗವಾದ ವಾಹನಗಳಲ್ಲಿ ಪ್ರಯಾಣ ಮಾಡುವಾಗ ಆಗಾಗ ಕಣ್ಮುಚ್ಚಿಕೊಳ್ಳುವುದು ಹಿತಕರ. ಕಣ್ಣು ಮುಚ್ಚಿದರೂ ಒಂದು ರೀತಿಯ ಬೆಳಕು ಕಣ್ಣಿಗೆ ಬೀಳುತ್ತದೆ. ಆ ಬೆಳಕೂ ಬೀಳದಂತೆ ಮಾಡಿದರೆ ಇನ್ನೂ ಹಿತ. ಕಣ್ಣುಗಳನ್ನು ಕೈಯಿಂದ ಮೆದುವಾಗಿ ಮುಚ್ಚಿಕೊಳ್ಳುವುದರಿಂದ ಇದು ಸಾಧ್ಯವಾಗುತ್ತದೆ. ಹಾಗೆ ಕಣ್ಮುಚ್ಚಿದಾಗ ಕಪ್ಪಗಿರುವ ಚಿತ್ರವನ್ನು ಕಣ್ಮುಂದ ತಂದುಕೊಳ್ಳಿ. ಇಲ್ಲವೇ ಸುಂದರವಾದ ಹೂವು, ಹಸುರಾದ ಎಲೆಗಳ ಚಿತ್ರವನ್ನು ತಂದು ಕೊಳ್ಳಿ.

ಈ ರೀತಿ ಎಚ್ಚರಿಕೆ ವಹಿಸುವುದರಿಂದ ನೂರಕ್ಕೆ ೭೦ರಷ್ಟು ಜನರು ತಮ್ಮ ಕಣ್ಣಿನ ನ್ಯೂನತೆಗಳನ್ನೂ ಪರಿಹರಿಸಿ ಕೊಂಡು ಆರೋಗ್ಯಕರ ದೃಷ್ಟಿ ಪಡೆಯಬಹುದು.

(ಆಧಾರದಿಂದ)—'ಗುಪ್ತ', (ಕೊಡಗು)

## ಭಾರತದ ನೂತನ ಭೂಪಟ

1956ರ ನವೆಂಬರ್ 1ರಿಂದ ರಾಜ್ಯಗಳ ಪುನರ್ವ್ಯವಸ್ಥಾ ಕಾನೂನು ಮತ್ತು ಬಿಹಾರ್ - ಹಾಗೂ ಪಶ್ಚಿಮ ಬಂಗಾಳ (ಭೂಪ್ರದೇಶಗಳ ವರ್ಗಾವಣೆ) ಕಾನೂನಿನ ಕಟ್ಟು ಪಾಡುಗಳಿಗೆ ಅನುಗುಣವಾಗಿ ರಾಜ್ಯಗಳು ಪುನರ್ವ್ಯವಸ್ಥೆಗೊಂಡ ನಂತರ, ಭಾರತವು 14 ರಾಜ್ಯಗಳನ್ನೊಳಗೊಂಡಿರುವುದು. ಈ ರಾಜ್ಯಗಳಾವುವೆಂದರೆ:—ಅಸ್ಸಾಂ, ಬಿಹಾರ, ಮುಂಬೈ, ಜಮ್ಮು ಮತ್ತು ಕಾಶ್ಮೀರ, ಕೇರಳ, ಮಧ್ಯ ಪ್ರದೇಶ, ಮದರಾಸು, ಮೈಸೂರು, ಒರಿಸ್ಸಾ, ಪಂಜಾಬು, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ. ಇವುಗಳ ಜೊತೆಗೆ ಕೇಂದ್ರದ ಆಳ್ವಿಕೆಗೆ ಒಳಪಡುವ ಆರು ಭೂಪ್ರದೇಶಗಳಿರುವುವು. ಇವುಗಳಾವುವೆಂದರೆ: ಅಂದಮಾನ್ ಮತ್ತು ನಿಕೋಬಾರ್ ದ್ವೀಪಗಳು, ದೆಹಲಿ, ಹಿಮಾಚಲ ಪ್ರದೇಶ ಲಕ್ಷ ದ್ವೀಪಗಳು ಮತ್ತು ಅಮಿನ್ ದಿವಿ ದ್ವೀಪಗಳು, ಮಣಿಪುರ ಮತ್ತು ತ್ರಿಪುರ.

ರಾಜಪ್ರಮುಖರ ಸ್ಥಾನವನ್ನೂ ಹಾಗೂ 'ಎ' 'ಬಿ' ಮತ್ತು 'ಸಿ' ವರ್ಗದ ರಾಜ್ಯಗಳೆಂದು ತಾರತಮ್ಯ ಮಾಡುವುದನ್ನೂ ರದ್ದುಪಡಿಸಲಾಗುತ್ತದೆ.

ರಾಜ್ಯಗಳ ವಿಸ್ತೀರ್ಣ ಹಾಗೂ ಜನಸಂಖ್ಯೆ ಈ ರೀತಿ ಇರುವುವು:—

| ರಾಜ್ಯ | ವಿಸ್ತೀರ್ಣ (ಚ.ಮೈಲುಗಳಲ್ಲಿ) | ಜನಸಂಖ್ಯೆ (ಲಕ್ಷಗಳಲ್ಲಿ) |
|---|---|---|
| ಆಂಧ್ರ ಪ್ರದೇಶ | 1,10,250 | 322 |
| ಅಸ್ಸಾಂ | 84,924 | 90 |
| ಬಿಹಾರ್ | 67,834 | 389 |
| ಮುಂಬೈ | 1,83,240 | 478 |
| ಜಮ್ಮುಮತ್ತು ಕಾಶ್ಮೀರ | 92,780 | 44 |
| ಕೇರಳ | 14,980 | 136 |
| ಮಧ್ಯ ಪ್ರದೇಶ | 1,71,200 | 261 |
| ಮದರಾಸ್ | 50,170 | 300 |
| ಮೈಸೂರು | 72,730 | 190 |
| ಒರಿಸ್ಸಾ | 60,140 | 146 |
| ಪಂಜಾಬ್ | 46,616 | 160 |
| ರಾಜಸ್ಥಾನ್ | 1,32,300 | 160 |
| ಉತ್ತರ ಪ್ರದೇಶ | 1,13,410 | 632 |
| ಪಶ್ಚಿಮ ಬಂಗಾಳ | 33,279 | 261 |

ಹೊಸ ಸುದ್ದಿ

"ಭದ್ರತೆಯ ಬೇಂಕಿಂಗ್ ವ್ಯವಹಾರ"
"ಮೆಚ್ಚುಗೆಯ ಜನರ ಸಹಕಾರ"
"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ
ಒದಗಿಸಿಕೊಡುವ ಸರ್ವವಿಧಿತ ಸೇವಾಕಾರ್ಯದ ಸಾಧನೆಗಾಗಿ—
ಇನ್ನೂ ಮೂರು ಹೊಸ ಶಾಖೆಗಳು

**ಹೈದರಾಬಾದ್** (ದಕ್ಷಿಣ)
**ಗುಲ್ಬರ್ಗ** (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು
**ಉರುವಕೊಂಡ** (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)

ಶೀಘ್ರದಲ್ಲೇ ತೆರೆಯಲ್ಪಡುವುವು

**ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.**
**The Canara Industrial & Banking Syndicate Ltd.**
H. O UDIPI (S. I.)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**
**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

**ಮನೆ-ಮದ್ದು**

**HOME REMEDIES**

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

**ನವಭಾರತ ಪುಸ್ತಕ ಭಂಡಾರ, ಉಡುಪಿ.**

## ವ್ಯಾಯಾಮ ಶಿಕ್ಷಣ

# ಭಾರತೀಯ ಅಖಾಡಾಗಳು ಮೂಲೆಗುಂಪಾಗಿರುವುದು ಶೋಚನೀಯ

### ದೇಶೀಯ ಆಟ ಮತ್ತು ಯೋಗಾಸನಗಳಿಗೆ ಸಾರ್ವಜನಿಕರ ಬೆಂಬಲ ಸಿಗಬೇಕು

ಭಾರತೀಯರಾದ ನಮಗೆ ಸೈನಿಕ ಶಿಕ್ಷಣ ಸಹಿತವಾದ ವ್ಯಾಯಾಮವು ಹೊಸತಾದುದಾಗಿಲ್ಲ. ದೈಹಿಕ ವ್ಯಾಯಾಮಕ್ಕೆ ಅನಾದಿ ಕಾಲದಿಂದಲೂ ನಮ್ಮವರು ತುಂಬ ಬೆಲೆಯನ್ನೂ ಮಹತ್ವವನ್ನೂ ಕೊಡುತ್ತಾ ಬಂದಿದ್ದಾರೆ.

ಹನುಮಂತ ಮತ್ತು ಭೀಮರು ನಮ್ಮವರಿಯ ವ್ಯಾಯಾಮ ಪಟುಗಳಿಂದ ಪೂಜೆಗೊಂಬ ಆದರ್ಶ ವ್ಯಕ್ತಿಗಳಾಗಿದ್ದಾರೆ. ಮಹಾಭಾರತದಲ್ಲಿ ಕೌರವರೂ ಪಾಂಡವರೂ ದ್ರೋಣಾಚಾರ್ಯರೆಂಬ ಸುಪ್ರಸಿದ್ಧ ಗರಡಿಯಾಚಾರ್ಯರಲ್ಲಿ ದೈಹಿಕ ವ್ಯಾಯಾಮ ಶಿಕ್ಷಣವನ್ನೂ ಸೈನಿಕ ಶಿಕ್ಷಣವನ್ನೂ ಹೊಂದಿದರೆಂದು ಹೇಳಿದೆ. ಹರಿವಿಜಯದಲ್ಲಿ ಶ್ರೀಕೃಷ್ಣ ಮತ್ತು ಬಲರಾಮರು ಚಾಣೂರ ಮತ್ತು ಮುಷ್ಟಿಕರೆಂಬ ಜಟ್ಟಿಗಳೊಡನೆ ಮಲ್ಲಯುದ್ಧವನ್ನು ಮಾಡಿದ ರಸವತ್ತಾದ ವರ್ಣನೆಯಿದೆ.

ಪುರಾಣಗಳನ್ನು ಬಿಟ್ಟು ಐತಿಹಾಸಿಕ ದಾಖಲೆಗಳನ್ನು ನೋಡಿದರೂ ಭಾರತೀಯರಿಗೆ ವ್ಯಾಯಾಮ ಪ್ರದರ್ಶನದ ಮೇಲಿದ್ದ ಅಭಿಮಾನವು ವ್ಯಕ್ತವಾಗುತ್ತದೆ. ಪ್ರತಿಯೊಂದೂ ರಾಜವಂಶಜರು ತಮಗಾಗಿಯೇ ಪ್ರತ್ಯೇಕವಾಗಿ, ವಿಶೇಷ ರೀತಿಯಲ್ಲಿ ಸಿದ್ಧಗೊಳಿಸಲಾದ ಅಖಾಡಾಗಳಲ್ಲಿ ಪ್ರತಿನಿತ್ಯವೂ ವ್ಯಾಯಾಮ ಶಿಕ್ಷಣವನ್ನು ಹೊಂದುತ್ತಿದ್ದರು. ಶ್ರೀ ಸಮರ್ಥ ರಾಮದಾಸರಂತಹ ಆಧ್ಯಾತ್ಮಿಕ ತೇಜೋನ್ವಿತರು ಸಹ ೧೨೦೦ ಅಖಾಡಾಗಳನ್ನು ಸ್ಥಾಪಿಸಿ, ಜನಸಾಮಾನ್ಯರು ಇವುಗಳಲ್ಲಿ ವ್ಯಾಯಾಮ ಶಿಕ್ಷಣವನ್ನು ಹೊಂದುವಂತೆ ಏರ್ಪಡಿಸಿದ್ದರು. ಝಾನ್ಸಿಯ ಸುಪ್ರಸಿದ್ಧ ವೀರರಮಣಿ ರಾಣಿ ಲಕ್ಷ್ಮೀಬಾಯಿಯು ಎಲ್ಲ ಕ್ರೀಡೆಗಳಲ್ಲೂ ಪಾರಂಗತಳಾಗಿದ್ದಳಲ್ಲದೆ, ತನ್ನ ಬಾಲ್ಯದಲ್ಲಿಯೇ ಕುದುರೆ ಸವಾರಿ ಮತ್ತು ಗುಂಡು ಹೊಡೆಯುವುದರಲ್ಲಿ ನಿಷ್ಣಾತಳಾಗಿದ್ದಳು.

ವಿಶ್ವಕವಿಗಳೆಂದು ಮನ್ನಣೆ ಪಡೆದಿರುವ ಕವೀಂದ್ರ ರವೀಂದ್ರರು ತಮ್ಮ ಬಾಲ್ಯದ ನೆನಪನ್ನು ಮಾಡಿಕೊಳ್ಳುತ್ತಾ ಸಾಸುವೆ ಎಣ್ಣೆಯನ್ನು ಪ್ರತಿನಿತ್ಯವೂ ಮುಂಜಾನೆ ಮೈಗೆ ಹಚ್ಚಿಕೊಂಡು, ಮನೆಯಲ್ಲೇ ತಯಾರಿಸಿದ ಅಖಾಡಾದಲ್ಲಿ ತನಗಿಂತ ಪ್ರಾಯದಲ್ಲಿ ಎಷ್ಟೋ ದೊಡ್ಡವನಾದ ಜಟ್ಟಿಯೊಬ್ಬನೊಡನೆ ಹೋರಾಟ ಕೊಡಬೇಕಾಗಿ ಬಂದಿದ್ದ ಪ್ರಸಂಗವನ್ನು ಹೃದಯಂಗಮವಾಗಿ ತಮ್ಮ ಪುಸ್ತಕವೊಂದರಲ್ಲಿ ವರ್ಣಿಸಿದ್ದಾರೆ. ನಮ್ಮ ಪ್ರಧಾನಿಗಳಾದ ಶ್ರೀ ನೆಹರುಗಳು ತಾನು ನಿತ್ಯವೂ ಮಾಡುತ್ತಿರುವ ಶೀರ್ಷಾಸನ ಮತ್ತಿತರ ವ್ಯಾಯಾಮಗಳೇ ತನ್ನ ದೇಹ ದಾರ್ಢ್ಯಕ್ಕೂ ಆರೋಗ್ಯಕ್ಕೂ ಮಾನಸಿಕ ಚುರುಕಿಗೂ ಕಾರಣವೆಂದು ಒಪ್ಪಿದ್ದಾರೆ.

ಇಂದಿಗಾದರೂ ನಮ್ಮ ದೇಶದಲ್ಲಿ ಪ್ರತಿಯೊಂದೂಕಡೆ ವ್ಯಾಯಾಮ ಶಾಲೆಗಳನ್ನು ನೋಡ ಬಹುದಾಗಿದೆ. ಪಟ್ಟಣಗಳಲ್ಲಿ ಗಲ್ಲಿಗೊಂದರಂತೆ, ಹಳ್ಳಿ ಕೇಂದ್ರಕ್ಕೊಂದರಂತೆ ವ್ಯಾಯಾಮ ಶಾಲೆಗಳನ್ನು ಉತ್ಸಾಹಿ ಯುವಜನರು ತಾವಾಗಿಯೇ ಏರ್ಪಡಿಸಿ ಕೊಂಡಿದ್ದಾರೆ. ಮೊಹರಂ, ಹೋಳಿ ಮತ್ತಿತರ ಉತ್ಸವ ಮತ್ತು ಸಮಾರಂಭಗಳಲ್ಲಿ ಉತ್ಸಾಹಿ ಯುವಕರು ವ್ಯಾಯಾಮ ಪ್ರದರ್ಶನವನ್ನು ಮಾಡಿ ತಮ್ಮ ನೈಪುಣ್ಯವನ್ನು ಹತ್ತು ಮಂದಿಯ ಮುಂದೆ ತೋರಿಸುವುದು ಒಂದು ಒಳ್ಳೆಯ ಸಂಪ್ರದಾಯವಾಗಿ ಬೆಳೆದು ಬಂದಿದೆ.

ಒಂದು ಕಾಲದಲ್ಲಿ ವ್ಯಾಯಾಮ ಶಾಲೆಗಳನ್ನು ಜನರು ತುಂಬ ಗೌರವದಿಂದ ನೋಡುತ್ತಿದ್ದರು. ಹಣವುಳ್ಳವರು ಇವುಗಳಿಗೆ ಉದಾರ ದಾನವನ್ನು ನೀಡುತ್ತಿದ್ದರು; ಸಮಾಜದ ಎಲ್ಲರೂ ಇಲ್ಲಿ ಶಿಕ್ಷಣ ಹೊಂದುತ್ತಿರುವ ಯುವಜನರನ್ನು ಅಭಿಮಾನದಿಂದ ಕಾಣುತ್ತಿದ್ದರು. ಆದರೆ ಬ್ರಿಟಿಷರ ಆಡಳಿತೆಯು ನಮ್ಮ ದೇಶದಲ್ಲಿ ಪ್ರಾರಂಭವಾದ ಮೇಲೆ ಈ ಚಿತ್ರವು ಬದಲಾವಣೆ ಗೊಳಗಾಯಿತು. ವ್ಯಾಯಾಮ ಶಾಲೆಗಳಿಗೆ ಪ್ರೋತ್ಸಾಹವನ್ನು ಕೊಡುವ ಜನರು ಕಡಿಮೆಯಾದರು. ಅಲ್ಲದೆ, ಸರಕಾರದವರು ವ್ಯಾಯಾಮ ಶಿಕ್ಷಣವನ್ನೂ ಪ್ರದರ್ಶನವನ್ನೂ ಸಂಶಯ ಚಿತ್ತರಾಗಿ ನೋಡಹತ್ತಿದರು.

ಭಾರತೀಯ ವ್ಯಾಯಾಮ ಶಿಕ್ಷಣದ ಸ್ಥಾನವನ್ನು ನಿಧಾನವಾಗಿ ಆಂಗ್ಲ ವ್ಯಾಯಾಮ ಪದ್ಧತಿ ಆಕ್ರಮಿಸಿತು. ಆಂಗ್ಲರಾಡುವ ಆಟಗಳನ್ನೆ ನಮ್ಮ ಜನರೂ ಆಡಹತ್ತಿದರು. ಇಂಗ್ಲಿಷಿನ ವಿದ್ಯಾಭ್ಯಾಸದ ವೇಗ ಮತ್ತು ಜನಪ್ರಿಯತೆ ಅಧಿಕವಾದಂತೆ ಕ್ರಿಕೆಟ್, ಹಾಕಿ, ಟೆನ್ನಿಸ್ ಮುಂತಾದ ಆಂಗ್ಲರಾಟಗಳೇ ಯುವಜನರ ಪಾಲಿಗೆ ಹಿತವೆನಿಸಿದವು. ಆದರೆ, ಇವುಗಳಿಗೆಲ್ಲ ಅನುಕೂಲತೆಯು ದೇಶದಲ್ಲಿ ಧಾರಾಳವಾಗಿರಲಿಲ್ಲ. ಇಂದಿಗೂ ಇದೇ ಪರಿಸ್ಥಿತಿ—ಜನಸಾಧಾರಣರಿಂದ ಆಂಗ್ಲರಾಟಗಳು ತುಂಬ ದೂರವಾಗಿಯೇ ಇವೆ. ಆದರೆ, "ಸುಶಿಕ್ಷಿತ"ರೆನಿಸಿದ ಕೆಲವರ ಪಾಲಿಗೆ ಮಾತ್ರ ಆಂಗ್ಲರಾಟಗಳೇ ಆನಂದದಾಯಿಗಳಾಗಿ ಉಳಿದಿವೆ.

ಯೋಗ್ಯ ಪ್ರೋತ್ಸಾಹ ಮತ್ತು ಬೆಂಬಲವು ಲಭಿಸದಿರುವ ದೆಸೆಯಿಂದ ಇಂದು ಅಖಾಡಾಗಳೂ ದೇಶೀಯ ಆಟಗಳೂ ಪ್ರಸಿದ್ಧಿಗೆ ಬರಲಾರದೆ ಹಿಂದುಳಿದಿವೆ. ಸುಶಿಕ್ಷಿತರೆನಿಸಿಕೊಂಡು ಸಮಾಜದಲ್ಲಿ ಮನ್ನಣೆಯ ಸ್ಥಾನವನ್ನು ಗಳಿಸಿಕೊಂಡವರು ಈ ವ್ಯಾಯಾಮ ಶಾಲೆಗಳನ್ನೂ ದೇಶೀಯ ಆಟಗಳನ್ನೂ ತಾತ್ಸಾರದಿಂದ ನೋಡತೊಡಗಿದುದಷ್ಟೇ ಅಲ್ಲ—ಗಾಯದ ಮೇಲೆ ಬರೆ ಎಳೆಯುವ ಹಾಗೆ, ಈ ವ್ಯಾಯಾಮ ಶಾಲೆಗಳಲ್ಲಿ ಶಿಕ್ಷಣಹೊಂದುವ ಯುವಜನರನ್ನು ಪುಂಡರು, ಪೋಕರಿಗಳು ಎಂದು ಮುಂತಾಗಿ ಕುತ್ಸಿತ ನಿಂದೆಗೆ ಗುರಿಪಡಿಸಲೂ ಹೇಸಲಿಲ್ಲ.

ದೇಶದಲ್ಲಿ ಸ್ವಾತಂತ್ರ್ಯ ಚಳವಳಿವು ಪ್ರಾರಂಭವಾಗಿ, ಪ್ರಾದುರ್ಭಾವವನ್ನು ಹೊಂದಿದಂತೆ, ಧುರೀಣರು ದೇಶೀಯ ಆಟಗಳ ಕಡೆಗೂ ಅವುಗಳಲ್ಲಿ ಶಿಕ್ಷಣವನ್ನೀಯುವ ವ್ಯಾಯಾಮ ಶಾಲೆಗಳ ಕಡೆಗೂ ನಿಧಾನವಾಗಿ ಗಮನವನ್ನು ಹರೈಸಿ, ಅವುಗಳ ಪುನರುತ್ಥಾನಕ್ಕಾಗಿ ಪ್ರಯತ್ನಶೀಲರಾದರೆಂದು ಹೇಳಬಹುದು. ಜನನಾಯಕರು ಇತ್ತ ಗಮನವನ್ನಿತ್ತರೂ ಸರಕಾರದಲ್ಲಿದ್ದ ಪರಕೀಯರು ಬಂಗಾಳ, ಮಹಾರಾಷ್ಟ್ರ ಮುಂತಾದೆಡೆಯಲ್ಲಿ ಇಂತಹ ಪುನರುತ್ಥಾನದ ಪ್ರಯತ್ನವನ್ನು ದ್ರೋಹಕಾರಕ ವರ್ತನೆಯೆಂದು ಸಾರಿ, ಆಕ್ಷೇಪಿಸಿದರು.

ತತ್ಪರಿಣಾಮವಾಗಿ, ಪುನರುತ್ಥಾನದ ಪ್ರಯತ್ನವು ತುಸು ನಿಧಾನವಾಯಿತು. ಆದರೇನು? ಜನರು ವ್ಯಾಯಾಮ ಶಾಲೆಗಳ ಮತ್ತು ದೇಶೀಯ ಆಟಗಳ ಕಡೆಗೆ ಆಕರ್ಷಿತರಾಗುವುದೇನು ಇದರಿಂದ ನಿಲ್ಲಲಿಲ್ಲ. ಆದುದರಿಂದಲೇ ಇಂದು ನಮ್ಮ ದೇಶದಲ್ಲಿ ಹಲವಾರು ಸುಸಂಘಟಿತ ವ್ಯಾಯಾಮ ಶಾಲೆಗಳು ಇರುವಂತಾಗಿದೆ. ಗಾಮಾ, ಜುಮ್ಮಾ ದಾದಾ ಮುಂತಾದ ಜಗತ್ಪ್ರಸಿದ್ಧ ಜಟ್ಟಿಗಳನ್ನು ಪೋಷಿಸಿದ ರಾಜವಂಶಗಳೂ ನಮ್ಮಲ್ಲಿದ್ದವು. ಈಚೆಗೆ ಮಾತ್ರ ರಾಜವಂಶಗಳೇ ತಮ್ಮ ಹಿಂದಿನ ವೈಭವ ಸಂಪತ್ತುಗಳನ್ನು ಕಳೆದುಕೊಂಡಿರುವುದರಿಂದ, ಜಗಜಟ್ಟಿಗಳ ಹೆಸರೂ ಕಡಿಮೆಯಾಗುತ್ತಾ ಹೋಗುತ್ತಿವೆ.

ಜಟ್ಟಿ ಕಾಳಗವು ಇಂದಿಗೂ ದೇಶೀಯ ವ್ಯಾಯಾಮ ಪ್ರದರ್ಶನದಲ್ಲಿ ಶ್ರೇಷ್ಠವಾದ ಮತ್ತು ಅತ್ಯುನ್ನತವಾದ ಸ್ಥಾನವನ್ನು ಪಡೆದಿದೆ. ಈಚೆಗೆ ಹೆಂಗಸರು ಸಹ ಮಲ್ಲಯುದ್ಧದಲ್ಲಿ ತೀವ್ರಾಸಕ್ತಿಯನ್ನು ತೋರಿಸುತ್ತಿದ್ದಾರೆ ಎಂಬುದಕ್ಕೆ ತನ್ನನ್ನು ಸೋಲಿಸುವ ಗಂಡಸು ಜಟ್ಟಿಯನ್ನು ತಾನು ಮದುವೆಯಾಗುತ್ತೇನೆ ಎಂದು ಸಡ್ಡು ಹೊಡೆದು ನಿಂತ ಆ ಮಹಿಳಾ ಜಟ್ಟಿಯ ನಿದರ್ಶನವೇ ಸಾಕು. ಈ ದೃಷ್ಟಿಯಿಂದ ನೋಡಿದರೆ, ನಮ್ಮಲ್ಲಿಯ ವ್ಯಾಯಾಮ ಶಾಲೆಗಳು ಸಾಲವೆಂದು ತೋರುತ್ತದೆ.

ಆದುದರಿಂದ ನಾವು ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಇಂತಹ ವ್ಯಾಯಾಮ ಶಾಲೆಗಳನ್ನು ಸ್ಥಾಪಿಸಬೇಕು. ಒಳ್ಳೆಯ ಸಾಹಿತ್ಯವನ್ನು ವ್ಯಾಯಾಮ ಶಾಲೆಗಳನ್ನು ನಡೆಸುವ ಬಗೆಗೂ ದೇಶೀಯ ಆಟಗಳ ಕುರಿತಾಗಿಯೂ ಶಿಕ್ಷಣ ಪದ್ಧತಿಯ ಮೇಲೆಯೂ ಬರೆದು ಅವುಗಳು ವಿದ್ಯಾರ್ಥಿಗಳಿಗೆ ಸಿಗುವಂತೆ ಮಾಡಬೇಕು. ದೇಶದಲ್ಲಿ ಕೆಲವೊಂದು ಪತ್ರಿಕೆಗಳು ವ್ಯಾಯಾಮ ಶಿಕ್ಷಣ ವಿಷಯವನ್ನೆತ್ತಿ ತಮ್ಮಿಂದಾದಷ್ಟು ಸೇವೆಯನ್ನು ಸಲ್ಲಿಸುತ್ತಿವೆ. ಈ ಪ್ರಯತ್ನವು ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂಬಂತಾಗಿದೆ.

ಮರಾಠಿಯಲ್ಲಿ ಬರೋಡದ ಶ್ರೀ ಆದಾಸಾಹೇಬ ಮಜುಮದಾರರು ವ್ಯಾಯಾಮ ಕೋಶ ಎಂಬ ಪುಸ್ತಕವನ್ನು ಬರೆದಿದ್ದಾರೆ; ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿಯೂ ಇಂತಹ ಕೆಲವು ಪುಸ್ತಕಗಳಿವೆ. ಆದರೆ ಅವುಗಳ ಪ್ರಕಾಶಕರಿಗೆ ತುಂಬ ತ್ಯಾಗವನ್ನು ಮಾಡಬೇಕಾಗಿ ಬಂತೇ ಹೊರತು, ಲಾಭವಾಗಲಿಲ್ಲ. ಔಂಧದ ಬಾಳಾಜಿ ರಾಜಾಸಾಹೇಬರು ಸೂರ್ಯ ನಮಸ್ಕಾರದ ಕುರಿತು ತುಂಬ ಆಸಕ್ತಿ ವಹಿಸಿ ಅದರ ಪ್ರಚಾರಕಾರ್ಯಕ್ಕೆ ಶ್ರಮ ವಹಿಸಿದ್ದರು. ಸ್ವಾಮಿ ಕುವಲಯಾನಂದರು ಲೋಣಾವಳದಲ್ಲಿಯೂ ಪಂಡಿತ ಸಾತವಳೇಕರರು ಸೂರತಿನಲ್ಲಿಯೂ ಯೋಗಾಸನಗಳನ್ನು ಜನಪ್ರಿಯಗೊಳಿಸಲು ಕಳೆದ ಕೆಲವು ದಶಕಗಳಿಂದ ಶ್ರಮವಹಿಸುತ್ತಿದ್ದಾರೆ. ಆದರೆ ಹಣದ ಅಭಾವವು ಇಂತಹ ಸಾಹಸಗಳಲ್ಲಿ ಹೆಜ್ಜೆ ಹೆಜ್ಜೆಗೂ ಗೋಚರಿಸಿದೆ.

ಸಂಸ್ಕೃತದಲ್ಲಿ ಯೋಗಾಸನಗಳ ಬಗ್ಗೆ ತುಂಬ ವಿಸ್ತಾರವಾದ ಸಾಹಿತ್ಯರಾಶಿಯಿದೆ. ಶಾರೀರಿಕ ಹಾಗು ಮಾನಸಿಕ ಬೆಳವಣಿಗೆಗೆ ವೈಜ್ಞಾನಿಕ ದೃಷ್ಟಿಯಿಂದ ಅತ್ಯಂತ ಸೂಕ್ತವೆನಿಸಿದ ವ್ಯಾಯಾಮಗಳೇ ಯೋಗಾಸನಗಳಾಗಿವೆ. ಇವುಗಳನ್ನು ಸರಕಾರದ ಪ್ರೋತ್ಸಾಹ ಸಿಗುತ್ತಿರುವ ವ್ಯಾಯಾಮ ಶಾಲೆಗಳಲ್ಲಿ ಯಾದರೂ ಸಾರ್ವತ್ರಿಕವಾಗಿ ಪ್ರಚುರಪಡಿಸುವ ವ್ಯವಸ್ಥೆ ಇಷ್ಟರವರೆಗೆ ಆಗಿಲ್ಲದಿರುವುದೊಂದು ಕೊರತೆಯೇ ನಿಜ. ಅಲ್ಲದೆ ಸರಕಾರದ ದೃಷ್ಟಿಯು ಗ್ರಾಮಾಂತರ ಪ್ರದೇಶದಲ್ಲಿ ವ್ಯಾಯಾಮ ಶಾಲೆಗಳನ್ನು ಪ್ರೋತ್ಸಾಹಿಸುವ ಕಡೆಗೆ ಏನೇನೂ ಹರಿದಿಲ್ಲವೆಂದು ಸಹ ತೋರುತ್ತದೆ.

"ಕುಟ್ಟಿ-ದೊಣ್ಣೆ"ಯಂತಹ ಆಟವನ್ನು ದೊಡ್ಡವರು ಸಹ ಆನಂದದಿಂದ ಆಡುತ್ತಿರುವುದನ್ನು ಕೆಲವೇ ವರ್ಷಗಳ ಹಿಂದೆ ನಾವು ನೋಡುತ್ತಿದ್ದೆವು. ಆದರೆ ಇಂದು? ದೊಡ್ಡವರಿಗೆ ಇದರಲ್ಲಿ ಉತ್ಸಾಹವಿಲ್ಲದಾಗಿದೆ, ಸಣ್ಣವರು ಆಡುತ್ತಿರುವುದನ್ನು ನೋಡುತ್ತಾ ಕುಳಿತಿರುವುದೂ ಸಾಧ್ಯವಾಗದಷ್ಟು ಅಸಹನೆಯು ಈ ದೊಡ್ಡವರಲ್ಲೀಗ ಬಲಿತಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಎಲ್ಲೆಲ್ಲೂ ಪ್ರಚಾರವಿದ್ದ ಈ ಆಟಕ್ಕೆ ಬಂದಿರುವ ಅಧೋಗತಿಯು ನಮ್ಮಲ್ಲಿ ವ್ಯಾಯಾಮ ಶಿಕ್ಷಣಕ್ಕೆ ಮತ್ತು ದೇಶೀಯ ಆಟಕ್ಕೆ ತಗಲಿರುವ ರೋಗದ ಭಯಂಕರತೆಯನ್ನು ಸ್ಪಷ್ಟಗೊಳಿಸುತ್ತದೆ. ಕೋಕೋದಂತಹ ಆಟವೂ ಇಂದು ತನ್ನ ಮಹತ್ವ

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಒಡವೆ, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ಸ್ವಂತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ್, ಕಪ್, ಸ್ಪೋರ್ಟ್ಸ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

*Head Office:* Tenkapet, **Udipi**, S. K. *Phone:* 66

## ಗೃಹ ವಿಜ್ಞಾನ

# ಸಗಣಿಯಿಂದ ಅನಿಲ

### ಗೊಬ್ಬರ ಸತ್ವವನ್ನು ಕೆಡಿಸದೆ ಇಂಧನವನ್ನೊದಗಿಸುವ ಯಂತ್ರ

ದೆಹಲಿಗೆ ೧೦ ಮೈಲಿ ದೂರದ ನಾಗಲೋಯ್ ಗ್ರಾಮದಲ್ಲಿರುವ ಚೌಧರಿ ಸಹಜ್ ರಾಮನ ಅಚ್ಚುಕಟ್ಟಾದ ಮಣ್ಣಿನ ಮನೆಯು ನೆರೆಹೊರೆ ಗ್ರಾಮದ ಅನೇಕ ಗ್ರಾಮನಿವಾಸಿಗಳನ್ನು ಆಕರ್ಷಿಸುತ್ತಿದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳದವರು ಈ ಮನೆಯಲ್ಲಿ ನಿರ್ಮಿಸಿರುವ, ಸಗಣಿಯಿಂದ ಅನಿಲವನ್ನು ತಯಾರಿಸುವ, ಯಂತ್ರದ ಬಗೆಗೆ ಗ್ರಾಮಸ್ಥರು ವಿವಿಧ ರೀತಿಯಲ್ಲಿ ಮಾತನಾಡುತ್ತಿರುವರು.

ಬೆಲೆ, ಅಂದಚಂದ ಹಾಗೂ ಸೌಕರ್ಯ, ಎಲ್ಲಕ್ಕೂ ಮಿಗಿಲಾಗಿ ರಾತ್ರಿಯ ಹೊತ್ತು ಬೆಳಕನ್ನೊದಗಿಸುವ ಅನುಕೂಲತೆಯ ಬಗ್ಗೆ ರೈತರು ತುಂಬಾ ಉತ್ಸಾಹ ಭರಿತರಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಈ ರೈತರು ಮೊದಲು ನಿಂತಿಕೆ ಹೊಂದಿದ್ದರು. ಆದರೆ ಈಗ ಗ್ರಾಮದ ಸಗಣಿಯನ್ನು ಗೊಬ್ಬರವಾಗಿ ಉಪಯೋಗಿಸುವುದಕ್ಕೆ ತೊಂದರೆಯಾಗದೆ ಅದರಿಂದ ಅನಿಲ ರೂಪವಾದ ಇಂಧನವನ್ನು ಮುಂಬಾಗಿ ಪಡೆಯುವುದಕ್ಕೆ ಈ ಯಂತ್ರವು ಅತ್ಯುತ್ತಮವಾದ ಸಾಧನವೆಂಬ ನಂಬಿಕೆ ಅವರಲ್ಲಿ ಹುಟ್ಟಿದೆ.

ನಾಗಲೋಯನಲ್ಲಿ ಸ್ಥಾಪಿಸಿರುವ ಈ ಯಂತ್ರವು ಭಾರತೀಯ ಕೃಷಿ ಸಂಶೋಧನಾ ಮಂಡಳದವರು ದೆಹಲಿಯ ಹಲವು ಗ್ರಾಮಗಳಲ್ಲಿ ಸ್ಥಾಪಿಸಿರುವ ಯಂತ್ರಗಳಲ್ಲಿ ಏಳನೆಯದಾಗಿದೆ.

ಇಂದು ಅತ್ಯುತ್ತಮ ಗೊಬ್ಬರವೆನಿಸಿದ ಸಗಣಿಯನ್ನು ಅತಿ ಕೀಳು ಮಟ್ಟದ ಇಂಧನ ಸಾಧನವೆನಿಸಿದ ಬೆರಣಿಗಳಾಗಿ ರೈತರು ಉಪಯೋಗಿಸುತ್ತಿದ್ದಾರೆ. ಸೌದೆಯಾಗಿ ಉಪಯೋಗಿಸಲು ಕಟ್ಟಿಗೆ ಅಥವಾ ಬೇರೆ ಯಾವುದೇ ಇಂಧನ ಸುಲಭದಲ್ಲಿ ಅವರಿಗೆ ದೊರಕುವುದಿಲ್ಲ.

ನಿರ್ದಿಷ್ಟ ಪ್ರಮಾಣದಲ್ಲಿ, ಗೊತ್ತಾದ ಕಾಲದಲ್ಲಿ ಗೊಬ್ಬರ ಹಾಕದಿದ್ದರೆ ಬೆಳೆಯ ಉತ್ಪಾದನೆಯು ಕಡಿಮೆಯಾಗುವುದಲ್ಲದೆ ಮಣ್ಣಿನ ಸಾರವೂ ಕ್ಷೀಣಿಸುತ್ತದೆ. ಆದರೆ ಗ್ರಾಮಸ್ಥರಿಗೆ ಅಡಿಗೆ ಇತ್ಯಾದಿಗಳಿಗೆ ಸೌದೆಯು ಅಗತ್ಯ. ಹೀಗಿರುವಲ್ಲಿ ಗೊಬ್ಬರಕ್ಕಾಗಿ ಸಗಣಿಯನ್ನು ಉಳಿಸುವುದು ಹೇಗೆ? ಸೌದೆಗಾಗಿ ಏನನ್ನು ಉಪಯೋಗಿಸಬೇಕು? ಸಗಣಿಯನ್ನು ಗೊಬ್ಬರವನ್ನಾಗಿಯೂ, ಸೌದೆಯಾಗಿಯೂ ಏಕಕಾಲದಲ್ಲಿ ಉಪಯೋಗಿಸಲು ಸಾಧ್ಯವೆ?

ಭಾರತೀಯ ಕೃಷಿ ಸಂಶೋಧನೆ ಮಂಡಳ ಮತ್ತು ಬೇಲೂರಿನ ರಾಮಕೃಷ್ಣ ಮಿಷನ್‌ನಲ್ಲಿರುವ ಸಂಶೋಧಕರು ಸಗಣಿಯನ್ನು ಗೊಬ್ಬರವನ್ನಾಗಿಯೂ ಸೌದೆಯನ್ನಾಗಿಯೂ ಉಪಯೋಗಿಸುವ ಬಗೆಗೆ ಕೆಲವು ವರ್ಷಗಳಿಂದ ತೀವ್ರವಾಗಿ ಸಂಶೋಧನೆ ಮಾಡುತ್ತಿದ್ದಾರೆ.

ಅವರ ಸಂಶೋಧನೆಯ ಫಲವಾಗಿ ಜಲಾಂಶವುಳ್ಳ ಸಗಣಿಯನ್ನು ಮುಚ್ಚಿದ ಪಾತ್ರೆಯಲ್ಲಿ ಹಾಕಿ ಕೆಲ ಕಾಲ ಬಿಟ್ಟರೆ, ನೀಲಿ ಬಣ್ಣದ 'ಮಿಥೇನ್" ಎಂಬ ದಹನಕಾರಿ ಅನಿಲವು ಉತ್ಪನ್ನವಾಗುತ್ತದೆಂದು ತಿಳಿದು ಬಂದಿದೆ. ಒಂದು ರಾತಲಿನಷ್ಟು ಸಗಣಿಯಿಂದ ಒಂದು ಘನ ಅಡಿಯಷ್ಟು ಅನಿಲ ಉತ್ಪತ್ತಿಯಾಗುತ್ತದೆ. ಇದರ ಪ್ರಕಾರ ೫-೬ ಜಾನುವಾರುಗಳಿರುವ ಒಬ್ಬ ರೈತನು ಸುಮಾರು ೧೦೦ ಘನ ಅಡಿಗಳಷ್ಟು ಅನಿಲವನ್ನು ಪ್ರತಿದಿನವೂ ಪಡೆಯಲು ಸಾಧ್ಯ. ಇದು ಸರಾಸರಿ ೫-೬ ಮಂದಿಯಿರುವ ಸಂಸಾರಕ್ಕೆ ಅಡಿಗೆ ಇತ್ಯಾದಿಗಳಲ್ಲಿ ಇಂಧನವಾಗಿ ಬಳಸಲು ಸಾಕಾಗುತ್ತದೆ.

ಈ ಸಂಶೋಧನೆಯ ಗಣನೀಯವಾದ ಇನ್ನೊಂದು ಫಲವೆಂದರೆ, ಹೀಗೆ ಸಗಣಿಯಿಂದ ಈ ಅನಿಲವನ್ನು ಉತ್ಪನ್ನಮಾಡುವುದರಿಂದ ಸಗಣಿಯಲ್ಲಿನ ಗೊಬ್ಬರದ ಅಂಶವು ಎಳ್ಳಷ್ಟೂ ಕಡಿಮೆಯಾಗುವುದಿಲ್ಲ. ಅನಿಲ ಉತ್ಪನ್ನದ ಬಳಿಕ ಸಗಣಿಯನ್ನು ಗೊಬ್ಬರಕ್ಕೆ ಉಪಯೋಗಿಸಬಹುದು.

ಭಾರತೀಯ ಕೃಷಿ ಸಂಶೋಧನ ಮಂಡಳದವರು ಸ್ಥಾಪಿಸಿರುವ ಈ ವಿಧಾನವು ತುಂಬಾ ಸರಳವಾಗಿದೆ. ೫ ಅಡಿ ವ್ಯಾಸವುಳ್ಳ ಮತ್ತು ೪ ಅಡಿ ಎತ್ತರವುಳ್ಳ ಒಂದು ಲೋಹದ ಪೀಪಾಯಿಯನ್ನು ೧೫ ಅಡಿ ಆಳವಿರುವ ಸಗಣಿ ಶೇಖರಿಸುವ ಗುಂಡಿಯಲ್ಲಿ ಇಡಲಾಗುತ್ತದೆ. ಉತ್ಪನ್ನವಾದ ಅನಿಲವು ಈ ಪೀಪಾಯಿಯಲ್ಲಿ ಸಂಗ್ರಹವಾಗುವುದು. ಅಲ್ಲಿಂದ ಆ ಅನಿಲವನ್ನು ಕೊಳವೆಯ ಮೂಲಕ ಹೊರಕ್ಕೆ ತೆಗೆದುಕೊಳ್ಳಬಹುದು.

ಈ ಅನಿಲದ ಉತ್ಪಾದನೆಯು ಹವಾಗುಣದ ಉಷ್ಣಾಂಶವನ್ನು (ಚಳಿಗಾಲ, ಬೇಸಿಗೆ ಕಾಲ ಮುಂತಾದವುಗಳನ್ನು) ಅವಲಂಬಿಸಿರುತ್ತದೆ.

ಈ ಯಂತ್ರವನ್ನು ನಡೆಸುವುದೂ ಸುಲಭ. ಪ್ರತಿದಿನವೂ ಜಲಾಂಶವುಳ್ಳ ಸಗಣಿಯನ್ನು ಸಂಗ್ರಹಿಸಿ ಹಾಕುವುದನ್ನು ಬಿಟ್ಟರೆ ಇನ್ನಾವ ತೊಂದರೆಯೂ ಇರುವುದಿಲ್ಲ.

ಹೀಗೆ ಉಪಯೋಗಿಸಿದ ಸಗಣಿಯು ಗುಂಡಿಯಿಂದ ಇಳಿಜಾರಿನ ಹಳ್ಳಗಳಿಗೆ ಸ್ವಚಲನೆಯಿಂದ ಹೋಗಿ ಶೇಖರಿಸಲ್ಪಡುತ್ತದೆ. ಆಗ ಅದು ಗೊಬ್ಬರವನ್ನಾಗಿ ಉಪಯೋಗಿಸಲು ಸಿದ್ಧವಾಗಿರುತ್ತದೆ.

ಈ ವಸ್ತುವು ಕೀಟಗಳನ್ನು ಆಕರ್ಷಿಸದಿರುವುದು ಮತ್ತೊಂದು ಗಮನಾರ್ಹವಾದ ಅಂಶ.

ಈ ವಿಧಾನವನ್ನು ಎಲ್ಲಾ ಕಡೆಗಳಲ್ಲೂ ಬಳಸುವುದಕ್ಕೆ ಮುಂಚೆ, ಈ ವಿಧಾನದಲ್ಲಿ ಇನ್ನೂ ಇರುವ ನ್ಯೂನತೆಗಳನ್ನು ಸರಿಪಡಿಸಬೇಕಾಗುವುದು. ಇದಕ್ಕೆ ಸ್ವಲ್ಪಕಾಲ ಹಿಡಿಯಬಹುದು.

ಆರಂಭದಲ್ಲಿ ಪೀಪಾಯಿಗಳು, ಕೊಳಾಯಿಗಳು, ಅನಿಲದ ಬರ್ನರ್‌ಗಳು ಮುಂತಾದ ವಸ್ತುಗಳನ್ನು ಒದಗಿಸಿಕೊಳ್ಳುವುದಕ್ಕೆ ಸ್ವಲ್ಪ ಹಣವು ಬೇಕಾಗುತ್ತದೆ. ಈ ವೆಚ್ಚವು ಬಹು ಜನರು ಈ ವಿಧಾನವನ್ನು ಅನುಸರಿಸುವ ಪ್ರಯತ್ನದಲ್ಲಿ ಅಡ್ಡಿಯಾಗಬಹುದು. ಇದನ್ನು ಮನಗಂಡ ಮಂಡಳದವರಿಂದ ಈ ವೆಚ್ಚವನ್ನು ತಗ್ಗಿಸುವ ಸಂಬಂಧವಾದ ಸಂಶೋಧನೆ ಮುಂದುವರಿದಿದೆ.

ಈ ವಿಧಾನವನ್ನು ಗ್ರಾಮದ ಬೇಡಿಕೆಯನ್ನು ಪೂರೈಸುವಂತೆ ದೊಡ್ಡ ಪ್ರಮಾಣದಲ್ಲಿ ಸಹಕಾರದಿಂದ ಕೈಗೊಂಡರೆ ವೆಚ್ಚವು ಕಡಿಮೆಯಾದೀತು. ಸಂಶೋಧಕರು ಇಂತಹ ಬೃಹತ್ ಮಾದರಿಗಳನ್ನು ನಿರ್ಮಿಸಲು ಸಾಧ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.

ದೊಡ್ಡ ಪ್ರಮಾಣದಲ್ಲಿ ಈ ವಿಧಾನಗಳನ್ನು ಕೈಗೊಂಡಲ್ಲಿ ಈ ಅನಿಲವನ್ನು ಅಡಿಗೆಗಲ್ಲದೆ ದೀಪ ಉರಿಸಲೂ ಯಂತ್ರಗಳನ್ನು ನಡೆಸಲೂ ಉಪಯೋಗಿಸುವುದಕ್ಕೆ ಸಾಧ್ಯವಾಗಬಹುದು.

---

(ಹಿಂದಿನ ಪುಟದಿಂದ)

ವನ್ನು ಕಳೆದುಕೊಂಡಿದೆಯೆನ್ನಲು ದುಃಖವಾಗುತ್ತದೆ.

ಲಾಠಿ, ಮುದ್ಗರ, ಕತ್ತಿ ಇತ್ಯಾದಿಗಳನ್ನು ಉಪಯೋಗಿಸಿ, ವ್ಯಾಯಾಮಶಿಕ್ಷಣವನ್ನು ಕೆಲವು ಶಾಲೆಗಳು ಕೊಡುತ್ತಿದ್ದರೂ ಸುಶಿಕ್ಷಿತರಿಂದ ಮನ್ನಣೆಯು ಇದಕ್ಕೆ ಇನ್ನೂ ದೊರಕಿಲ್ಲ. ದೈಹಿಕ ವ್ಯಾಯಾಮಕ್ಕೆ ಅನುಕೂಲತೆಗಳನ್ನು ಒದಗಿಸುವ ಮತ್ತು ದೇಶೀಯ ಆಟಗಳನ್ನ ಪ್ರೋತ್ಸಾಹಿಸಿ ವ್ಯಾಯಾಮದ ವೆಚ್ಚವನ್ನು ಆದಷ್ಟು ಕಡಿಮೆ ಮಾಡುವ ಮತ್ತು ವೈಜ್ಞಾನಿಕ ದೃಷ್ಟಿಯಿಂದಲೂ ಶರೀರ ಮನಸ್ಸುಗಳ ಸಮತೂಕದ ಆರೋಗ್ಯಕ್ಕೆ ಹಿತಕಾರಿಯಾದ ಯೋಗಾಸನಗಳನ್ನು ಜನಪ್ರಿಯಗೊಳಿಸುವ ವಿಷಯ ಸುಶಿಕ್ಷಿತರನ್ನು ಏನೇನೂ ಆಕರ್ಷಿಸಿಲ್ಲ.

ನಮ್ಮದು ಪ್ರಜಾಸತ್ತಾತ್ಮಕ ಸರಕಾರ. ಆದುದರಿಂದ ರಾಷ್ಟ್ರವ್ಯಾಪಿ ವಿಧಾನದಲ್ಲಿ ನಾವು ಈ ವಿಷಯದ ಪ್ರತಿಪಾದನೆಯನ್ನು ಮಾಡಿದರೆ, ಅದಕ್ಕೆ ಯೋಗ್ಯ ಮನ್ನಣೆಯು ಸಿಕ್ಕಿಯೇ ತೀರಬೇಕು. ಗ್ರಾಮಪಂಚಾಯತುಗಳಿಂದ ಹಿಡಿದು, ಕೇಂದ್ರ ಸರಕಾರದವರೆಗೆ ಪ್ರತಿಯೊಂದೂ ಘಟ್ಟದಲ್ಲಿ ನಾವು ಈ ವಿಷಯವನ್ನೆತ್ತಬೇಕು. ಕೇಂದ್ರ ಮತ್ತು ರಾಜ್ಯಸರಕಾರಗಳು ಬಹಳ ವಿರಳವಾಗಿ ಕೆಲವು ವ್ಯಾಯಾಮ ಶಾಲೆಗಳಿಗೂ ಯೋಗಾಸನಗಳ ಶಿಕ್ಷಣಕೊಡುವ ಆಶ್ರಮಗಳಿಗೂ ಸಹಾಯ ಸಲ್ಲಿಸುತ್ತವೆ. ಇದು ಸಾಲದೆಂದು ಜನರು ಧ್ವನಿ ಎತ್ತಬೇಕು.

ಮನಸ್ಸು ಮಾಡಿದರೆ ಸರಕಾರದ ಗಮನ ಸೆಳೆಯುವುದು ಕಷ್ಟವಾಗಲಾರದು. ನಮ್ಮ ಎರಡನೇ ಯೋಜನೆಯಲ್ಲಿ ಶಿಕ್ಷಣಕ್ಕೆ ಹಿಂದಿಗಿಂತ ಹೆಚ್ಚು ಹಣ ಮೀಸಲಾಗಿದೆ. ಯೋಜನೆಯ ಬೆಂಬಲಿಗರು ಶ್ರಮದಾನದ ತತ್ತ್ವವನ್ನು ಪುರಸ್ಕರಿಸುವವರಾಗಿದ್ದಾರೆ. ವ್ಯಾಯಾಮ ಶಿಕ್ಷಣವು ಶ್ರಮದಾನಕ್ಕೆ ನಾಗರಿಕರನ್ನು ಅರ್ಹರನ್ನಾಗಿ ಮಾಡುತ್ತದೆ. ಈ ದೃಷ್ಟಿಯಿಂದಲಾದರೂ ನಾವು ಪ್ರೋತ್ಸಾಹವನು ದೇಶೀಯ ಆಟಗಳಿಗೂ ವ್ಯಾಯಾಮ ಕ್ರಮಕ್ಕೂ ಕೊಡಬೇಕಾದದ್ದು ಕರ್ತವ್ಯ.

ನಮ್ಮ ಜನಪ್ರಿಯ ಮುಂದಾಳಾದ ಜವಾಹರಲಾಲರು ಮಾತಿನಲ್ಲಿಯೇ ಹೇಳುವುದಾದರೆ— "ಭಾರತದಲ್ಲಿ ಪ್ರತಿಯೊಂದೂ ರೀತಿಯಲ್ಲಿ ಆಟಗಳಿಗೂ ವ್ಯಾಯಾಮಗಳಿಗೂ ಪ್ರೋತ್ಸಾಹವನ್ನು ಕೊಡುವುದು ಅಗತ್ಯವಾಗಿದೆ. ರಾಷ್ಟ್ರದ ದೈಹಿಕ ಸಂಪತ್ತನ್ನು ಬೆಳೆಸುವ ದೃಷ್ಟಿಯಿಂದ ಇದು ಅವಶ್ಯವಿರುತ್ತದೆ. ಇದರಿಂದ ಪರಸ್ಪರರಲ್ಲಿ ಸೌಹಾರ್ದಭಾವನೆಯೂ ಶಿಸ್ತಿನ ಬುದ್ಧಿಯೂ ಬೆಳೆಯುವುದರಿಂದ ಇಂತಹ ಪ್ರೋತ್ಸಾಹ ಅತ್ಯವಶ್ಯವೆಂದೇ ಹೇಳಬಹುದು."

(ಸಾಧಾರ)

## ನಗೆ ಹನಿ

**ಸ್ವರ್ಗ-ನರಕಗಳೆರಡರಲ್ಲೂ ಸ್ಥಾನ**

ಪತ್ರಿಕೋದ್ಯಮಿಯೊಬ್ಬ ನಿಧನಹೊಂದಲು, ನೇರಾಗಿ ಸ್ವರ್ಗಕ್ಕೆ ಹೋಗಿ ಬಾಗಿಲು ತಟ್ಟಿದ. ಆತನನ್ನು ಸ್ವಾಗತಿಸಲು ಬಂದ ಸ್ವರ್ಗದ ಅಧಿಕಾರಿ—ಆತ ಪತ್ರಿಕೋದ್ಯಮಿಯೆಂದು ಹೇಳಿದೊಡನೆ— ನಿನಗೆ ಸ್ವರ್ಗದಲ್ಲಿ ಸ್ಥಳವಿಲ್ಲವೆಂದನು. ಅಲ್ಲಿಂದ ಪತ್ರಿಕೋದ್ಯಮಿಯು ನರಕಕ್ಕೆ ನಡೆದನು. ಅಲ್ಲಿಯೂ ಅವನಿಗೆ ಸ್ಥಳವಿಲ್ಲವೆಂದೇ ಉತ್ತರ ದೊರೆಯಿತು. ಧೈರ್ಯಶಾಲಿಯಾದ ಈ ಪತ್ರಿಕೋದ್ಯಮಿಯು ಮಂಗಳ ಗ್ರಹವನ್ನು ಸೇರಿ, ಅಲ್ಲೊಂದು ಮುದ್ರಣಾಲಯವನ್ನು ಆರಂಭಿಸಿ ಪತ್ರಿಕೆ ಹೊರಡಿಸಿದನು. ಆಗ ಆತನಿಗೆ ಸ್ವರ್ಗ ನರಕಗಳೆರಡರಲ್ಲೂ ಸ್ಥಾನ ದೊರೆಯಿತು. (ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ಮಂಗಳೂರಲ್ಲಿ ಪತ್ರಿಕೋದ್ಯಮಿಗಳೊಡನೆ ಹೇಳಿದ್ದು)

**ಮೊದಲ ಸವಾರಿ**

ಸುಂದರ—"ನಾನೊಂದು ಮೋಟಾರು ಸೈಕಲ್ ತೆಗೆದುಕೊಂಡರೆ ಮೊದಲು ಎಲ್ಲಿ ಹೋಗುತ್ತೇನೆಂದು ಹೇಳಬಲ್ಲೆಯಾ?"

ನಾರಾಯಣ—"ಆಸ್ಪತ್ರೆಗೆ!"

---




ನಾಟಕ ಸಾಹಿತ್ಯ ಸಲಕರಣೆಗಳು

**ಸಚಿತ್ರ ಕನ್ನಡ ಹೊಸ ಪ್ರೈಸ್ ಲಿಸ್ಟಿಗಾಗಿ ಇಂದೇ ಬರೆಯಿರಿ**

ಸ್ತ್ರೀ ಪಾತ್ರದ ಪೋಷಣ, ಪುರುಷ ಪಾತ್ರದ ಪೋಷಣ, ಗಡ್ಡ ಮೀಸೆಗಳು, ನಾಟಕದ ಖಡ್ಗ, ಗಧೆ ಮೊದಲಾದ ಸಾಮಾನುಗಳು, ಜರತಾರಿ ರುಮಾಲು, ಪಗಡಿ, ಡ್ರೆಸ್ಸು ಇತ್ಯಾದಿ ಇತ್ಯಾದಿ ರಂಗಭೂಮಿಗೆ ಅವಶ್ಯವಿರುವಂತಹವು ದೊರೆಯುತ್ತವೆ.

**DHARAMSHI MULJI, DRESSWALA,**

132 C, Bhagatwadi, Bhuleshwar Road, Bombay 2

# NAVAYUGA

Popular Kannada Weekly

*Founder:—*

A. B. SHETTY, *M.L.A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೭-೯-'೫೬ | ೪ |


## ಪ್ರಜಾಪ್ರಭುತ್ವದ ಪ್ರಹಸನ?

ಮುಂಬಯಿಯಲ್ಲಿ ಇದೇ ೧೯ನೇ ದಿನಾಂಕ ಪ್ರಜಾಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯು ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಪಕ್ಷದ ಗಯಾ ಪರಿಷತ್ತಿನಲ್ಲಿ ನಿರೂಪಿಸಲಾದ ಧೋರಣೆಯನ್ನು ಎತ್ತಿ ಹಿಡಿಯುತ್ತಾ ಕಾಂಗ್ರೆಸಿನೊಡನೆಯಾಗಲೀ ಕಮ್ಯುನಿಸ್ಟರೊಡನೆಯಾಗಲೀ ಜಾತೀಯವಾದಿ ಗುಂಪಿನೊಂದಿಗಾಗಲೀ ಯಾವುದೇ ತರದ ಗೆಳೆತನವನ್ನು ಚುನಾವಣೆಯ ಸಲುವಾಗಿ ಬೆಳೆಸುವುದಕ್ಕೆ ತನ್ನ ವಿರೋಧವನ್ನು ಪುನರುಚ್ಚರಿಸಿದೆ. ಸರಕಾರಿ ಆಡಳಿತದಲ್ಲಿ ಸರ್ವಾಧಿಕಾರಿ ಮನೋಭಾವವೇ ಬಲಿಯುತ್ತಿರುವುದನ್ನು ಕಂಡಿರುವ ನಮ್ಮ ಜನರು ಸರಕಾರದ ಬಲ ಹೆಚ್ಚುತ್ತಿರುವುದರ ವಿರುದ್ಧ ತಕ್ಕ ಕ್ರಮ ತೆಗೆದುಕೊಳ್ಳಲು ಸಮರ್ಥವಾದ ವಿರೋಧ ಪಕ್ಷದ ಆವಶ್ಯಕತೆಯನ್ನು ಮನಗಂಡಿರುವರೆಂದು ಈ ಗೊತ್ತುವಳಿಯು ಹೇಳುತ್ತಾ ಪ್ರಜಾಸಮಾಜವಾದಿ ಪಕ್ಷವು ಚುನಾವಣೆಯಲ್ಲಿ ಈ ದೃಷ್ಟಿಯನ್ನಿಟ್ಟುಕೊಂಡು ಧುಮುಕುವುದೆಂದು ತಿಳಿಸಲಾಗಿದೆ. ಏಕಮನೋಭಾವದ ಪಕ್ಷಗಳೊಡನೆ ಮತ್ತು ಪ್ರಜಾಸತ್ತಾತ್ಮಕ ಗುಂಪುಗಳೊಡನೆ ಸಹಕರಿಸುವುದು ಮತ್ತವುಗಳ ಸಹಕಾರವನ್ನು ಪಡೆಯುವುದನ್ನು ಪ್ರಜಾಸಮಾಜವಾದಿ ಪಕ್ಷವು ಸ್ವಾಗತಿಸುತ್ತದೆ; ಆದರೆ, ಇಂತಹ "ಸಂಯುಕ್ತ ಪ್ರಯತ್ನ"ವು ಮನೋಭಾವ ಮತ್ತು ಆದರ್ಶಗಳು ತಮ್ಮ ಪಕ್ಷದ ಧ್ಯೇಯಗಳಿಗೂ ಮೂಲಭೂತ ತತ್ತ್ವಗಳಿಗೂ ವಿರೋಧವಾಗಿರುವ ಪಕ್ಷಗಳ ಜೊತೆಗೆಂದೂ ನಡೆಯಲಾರದು ಎಂದು ಪ್ರಜಾಸಮಾಜವಾದಿ ಪಕ್ಷದ ಈ ಸಭೆ ಸ್ಪಷ್ಟವಾಗಿ ಹೇಳುತ್ತದೆ. ಆದಾಗ್ಯೂ, ಅಪವಾದರೂಪದ ಕೆಲವು ಸಂಗತಿಗಳಲ್ಲಿ ವಿವಿಧ ವಿರುದ್ಧ ಪಕ್ಷಗಳ ನಡುವೆ ಒಂದು ಬಗೆಯ ಒಡಂಬಡಿಕೆ ಮಾಡಿಕೊಂಡು ಮತದಾರ ಕ್ಷೇತ್ರಗಳನ್ನು ತಮ್ಮೊಳಗೆ ಹಂಚಿಕೊಂಡು, ಕಾಂಗ್ರೆಸಿನ ವಿರುದ್ಧ ಪ್ರತಿಭಟನೆಯನ್ನು ಕೊಡಬಹುದು. ಈ ಒಡಂಬಡಿಕೆಯನ್ನು ರಾಷ್ಟ್ರೀಯ ಕಾರ್ಯಕಾರಿಣಿಯ ನೇತೃತ್ವದಲ್ಲಿಯೇ ಸಾಧಿಸಬೇಕು. ಆದರೆ ಇಂತಹ ಒಡಂಬಡಿಕೆಯಾಗಿದೆ ಎಂದ ಮಾತ್ರಕ್ಕೆ ಹಂಚಿಕೊಂಡ ಮತದಾರ ಕ್ಷೇತ್ರಗಳಲ್ಲಿ ಹಾಗೆ ಒಡಂಬಡಿಕೆಗೆ ಬಂದ ಎಲ್ಲ ವಿರುದ್ಧ ಪಕ್ಷಗಳೂ ಒಟ್ಟಾಗಿ ಮತದಾರ ಕ್ಷೇತ್ರದಲ್ಲಿ ಹೋರಾಡುತ್ತವೆ ಎಂದು ಅರ್ಥವಲ್ಲ; ಧ್ಯೇಯಾದರ್ಶಗಳಲ್ಲಿ ಮೂಲಭೂತ ವ್ಯತ್ಯಾಸವಿರುವ ಒಡಂಬಡಿಕೆ ಸಾಧಿಸಿದ ನೆಪದಲ್ಲಿ ಪ್ರಜಾಸಮಾಜವಾದಿ ಪಕ್ಷವು ಸಹಕಾರ ನೀಡಲಿಕ್ಕೆ ಹೋಗಲಾರದು—ಎಂದು ಪಕ್ಷ ರಾಷ್ಟ್ರೀಯ ಕಾರ್ಯಕಾರಿಣಿಯು ಹೇಳುತ್ತದೆ. ಪಕ್ಷದ ವಕ್ತಾರರೊಬ್ಬರು ಈ ಗೊತ್ತುವಳಿಯ ಕುರಿತು ಮಾತನಾಡುತ್ತಾ ಮುಂಬರುವ ಮಹಾ ಚುನಾವಣೆಯ ಸಂಬಂಧದಲ್ಲಿ ನಿರೂಪಿಸಲಾದ ಈ ನೀತಿಯನ್ನು ಪಕ್ಷದ ಗಯಾ ಪರಿಷತ್ತಿನಲ್ಲಿ ಸ್ಪಷ್ಟಗೊಳಿಸಲಾದ ಧೋರಣೆಯ ಹಿನ್ನೆಲೆಯಲ್ಲಿ ನೋಡಬೇಕೆ ಹೊರತು, ಶ್ರೀ ಜಯಪ್ರಕಾಶ ನಾರಾಯಣರು ಪತ್ರ ಮುಖೇನ ಮಾಡಿರುವ ಸೂಚನೆಯ ಹಿನ್ನೆಲೆಯಲ್ಲಲ್ಲ ಎಂದಿದ್ದಾರೆ. ಶ್ರೀ ಜಯಪ್ರಕಾಶರು ತಮ್ಮ ಪತ್ರದಲ್ಲಿ ಹೇಳಿದ್ದೇನು? ಚುನಾವಣೆಯಲ್ಲಿ ತ್ರಿಪಕ್ಷೀಯ ಸ್ಪರ್ಧೆಯನ್ನು ತಪ್ಪಿಸಲಿಕ್ಕಾಗಿ ಪ್ರಬಲ ಪ್ರತಿಪಕ್ಷಗಳು ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಂಡು, ತಮ್ಮ ಬಲವನ್ನು ಸಂವರ್ಧಿಸಿಕೊಳ್ಳಬೇಕು ಎಂಬುದೇ ಅವರ ಸೂಚನೆಯ ಸಾರ. ದೇಶದಲ್ಲಿ ಪ್ರಜಾಪ್ರಭುತ್ವದ ಶಕ್ತಿಯನ್ನು ಹೆಚ್ಚಿಸಬೇಕಾಗಿದೆ; ಈಗ ಇರುವ ರೀತಿಯಲ್ಲಿ ನಮ್ಮದು ಹೆಸರಿಗಷ್ಟೇ ಪ್ರಜಾಪ್ರಭುತ್ವವಾಗಿದೆ, ವಾಸ್ತವವಾಗಿ ಕಾಂಗ್ರೆಸಿನ ಸರ್ವಾಧಿಕಾರವೇ ನಡೆದಿದೆ. ಏಕಪಕ್ಷೀಯ ಆಡಳಿತದಿಂದ ಪ್ರಜಾಸತ್ತೆಗೆ ತುಂಬ ಅಪಾಯವಿದೆ. ಇದನ್ನು ತಪ್ಪಿಸಿ, ಸಂಸದಾತ್ಮಕ ಪ್ರಜಾಪ್ರಭುತ್ವವನ್ನು ರಾಷ್ಟ್ರದಲ್ಲಿ ನೆಲೆಗೊಳಿಸಲಿಕ್ಕಾಗಿ ಈಗಿನ ವಿರುದ್ಧ ಪಕ್ಷಗಳೆಲ್ಲವೂ ಚುನಾವಣೆಯ ಮಟ್ಟಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡು, ಆದಷ್ಟು ಹೆಚ್ಚು ಪ್ರತಿಪಕ್ಷೀಯ ಉಮೇದ್ವಾರರೇ ಆರಿಸಿ ಬರುವಂತೆ ಮಾಡಬೇಕು ಎಂಬುದಾಗಿ ಶ್ರೀ ಜಯಪ್ರಕಾಶರ ಅಭಿಪ್ರಾಯ. ಅವರ ಎಣಿಕೆಯಂತೆ, ತ್ರಿಪಕ್ಷೀಯ ಹೋರಾಟವೇ ಇಂದು ಕಾಂಗ್ರೆಸಿನ ವಿಜಯಕ್ಕೆ ಸಹಾಯಕವಾದ ಮುಖ್ಯ ಕಾರಣವಾಗಿದೆ. ಕಾಂಗ್ರೆಸಿಗೆ ಮತದಾರರಲ್ಲಿ ಹೆಚ್ಚಿನವರ ಬೆಂಬಲವಿಲ್ಲದಿದ್ದರೂ ಕಾಂಗ್ರೆಸಿಗೆ ವಿರೋಧವುಳ್ಳ ಈ ಮತದಾರರು ಎರಡು ಅಥವಾ ಹೆಚ್ಚು ವಿರುದ್ಧ ಗುಂಪುಗಳಲ್ಲಿ ಹಂಚಿಹೋಗಿ ತಮ್ಮ ಮೆಚ್ಚಿಕೆಯ ಪ್ರತಿಪಕ್ಷೀಯ ಹುರಿಯಾಳುಗಳನ್ನೆ ಬೆಂಬಲಿಸುವ ಆತುರದಲ್ಲಿ ಕಾಂಗ್ರೆಸಿಗೆ ವಿರೋಧವಾಗಿರುವ ತಮ್ಮ ಮತವನ್ನು ವಿಭಜಿಸಿಕೊಂಡು ಶಕ್ತಿಗುಂದಿ, ಕಾಂಗ್ರೆಸಿನ ಉಮೇದ್ವಾರರೇ ಗೆದ್ದು ಬರುವಂತೆ ಮಾಡುತ್ತಾರೆ ಎಂಬುದಾಗಿ ಶ್ರೀ ಜಯಪ್ರಕಾಶರ ವಿಶ್ವಾಸ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿಗೆ ಹೆಚ್ಚಿನ ಮತದಾರಕ್ಷೇತ್ರಗಳಲ್ಲಿ ಒಟ್ಟಿಗೆ ನಡೆದ ಮತದಾನದಲ್ಲಿ ಅರೆವಾಸಿಗೂ ಮಿಕ್ಕ ಮತ ದೊರೆತ ನಿದರ್ಶನ ಅತ್ಯಲ್ಪ. ಪ್ರತಿಪಕ್ಷಗಳ ಉಮೇದ್ವಾರರು ಕಾಂಗ್ರೆಸನ್ನು ಸೋಲಿಸುವ ಉದ್ದೇಶವಿಟ್ಟುಕೊಂಡರೂ ತಂತಮ್ಮಲ್ಲಿ ಒಡಂಬಡಿಕೆ ಮಾಡಿಕೊಳ್ಳದೆ ಕಾಂಗ್ರೆಸಿನ ಉಮೇದ್ವಾರನನ್ನೆಂತೊ ಅಂತೆಯೇ ಪ್ರತಿಪಕ್ಷದ ಇನ್ನೊಬ್ಬ ಉಮೇದ್ವಾರನನ್ನೂ ಸೋಲಿಸಿ ಜಯಶೀಲನಾಗಲು ಪ್ರಯತ್ನಪಟ್ಟುದರಿಂದಲೇ ಕಾಂಗ್ರೆಸು ಗೆದ್ದು ಪ್ರತಿಪಕ್ಷಗಳ ಉಮೇದ್ವಾರರೆಲ್ಲರೂ ಹೆಚ್ಚಾಗಿ ಸೋತರೆಂದು ಶ್ರೀ ಜಯಪ್ರಕಾಶರು ಹೇಳುತ್ತಾರೆ. ಮುಂದಿನ ಚುನಾವ ಸ್ಪಷ್ಟವಾಗಿ ಕಳೆದುಕೊಳ್ಳುವುದೆಂದೂ ಅವರು ನಂಬಿದ್ದಾರೆ—ಒಟ್ಟು ಮತಗಳಲ್ಲಿ ೪೦% ಮತವಾದರೂ ಕಾಂಗ್ರೆಸಿಗೆ ಸಿಗುವುದು ಸಂಶಯವಂತೆ—ಹೀಗಿರುವುದರಿಂದ ಕಾಂಗ್ರೆಸಿಗೆ ವಿರೋಧವಾಗಿರುವ ೬೦% ಜನರ ಬೆಂಬಲವನ್ನು ಯಾವುದಾದರೂ ಒಂದೇ ಪ್ರತಿಪಕ್ಷದ ಉಮೇದ್ವಾರನು ಪಡೆಯಬೇಕು; ಆಗ ಆತನು ಗೆದ್ದು ಬರುವುದು ಖಂಡಿತ; ಆತನು ಗೆದ್ದು ಬಂದರೆ ಮಾತ್ರ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಶಕ್ತಿಯು ಹೆಚ್ಚುತ್ತದೆ ಎಂಬ ರೀತಿಯಲ್ಲಿ ಶ್ರೀ ಜಯಪ್ರಕಾಶರ ವಿಚಾರಧಾರೆ ಹರಿಯುತ್ತದೆ. ಹೀಗೆ ಪ್ರತಿಪಕ್ಷದ ಉಮೇದ್ವಾರರು ಹೆಚ್ಚು ಸಂಖ್ಯೆಯಲ್ಲಿ ಗೆದ್ದು ಬರಲಾರದಾದರೆ, ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಪ್ರಹಸನವಷ್ಟೇ ನಡೆಯುತ್ತದೆ; ಪ್ರಯೋಗವಲ್ಲ ಎಂದವರು ನಿರಾಶೆಯ ಮಾತುಗಳನ್ನಾಡಿದ್ದಾರೆ. ಒಟ್ಟು ಮತದಾರರಲ್ಲಿ ಹೆಚ್ಚಿನವರು ಕಾಂಗ್ರೆಸಿಗೆ ವಿರೋಧವಾಗಿದ್ದರೂ ಸಂಸತ್ತಿನಲ್ಲೂ ಶಾಸನಸಭೆಗಳಲ್ಲೂ ಕಾಂಗ್ರೆಸಿನ ಕಾರುಭಾರೇ ನಡೆಯುವ, ಸರಕಾರದ ಸೂತ್ರಧಾರರಾಗಿ ಕಾಂಗ್ರೆಸಿಗರೇ ಮೆರೆಯುವ ಚಿತ್ರವು ಅವರ ಪಾಲಿಗೆ, ಅದಕ್ಕಿಂತ ಹೆಚ್ಚಾಗಿ ಅವರು ಪವಿತ್ರವೆಂದು ಭಾವಿಸಿರುವ ಪ್ರಜಾಪ್ರಭುತ್ವದ ಪಾಲಿಗೆ, ಜುಗುಪ್ಸಾವಹವಾಗಿದೆ; ಅಪಹಾಸ್ಯಕರವಾಗಿದೆ. ಶ್ರೀ ಜಯಪ್ರಕಾಶರ ಈ ಬಗೆಯ ಮನೋಭಾವವನ್ನು ಅರ್ಥಮಾಡಿಕೊಂಡು, ತುಸು ವಿಮರ್ಶೆ ಮಾಡಿದರೆ ಮಾತ್ರ ಅವರ ನಿಲುಮೆ ಯೋಗ್ಯವಾದುದೆ ಎಂಬ ಸಂಶಯ ಉಂಟಾಗುತ್ತದೆ. ರಾಷ್ಟ್ರದಲ್ಲಿ ಪ್ರಬಲ ಪ್ರತಿಪಕ್ಷವೆ ಅಸ್ತಿತ್ವದಲ್ಲಿಲ್ಲದಿದ್ದರೆ ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದು ಎಂಬ ಅವರ ಹೇಳಿಕೆಯನ್ನು ವಿರೋಧಿಸುವುದು ಸಾಧ್ಯವಿಲ್ಲ. ಆದರೆ, ಪ್ರಬಲ ಪ್ರತಿಪಕ್ಷವನ್ನು ಕೃತಕ ರೀತಿಯಿಂದ ಸೃಷ್ಟಿಸುವ ಅವರ ವಿಧಾನ ಮಾತ್ರ ನಿಷ್ಪ್ರಯೋಜಕವಾದುದೆಂದೇ ನಮಗೆ ತೋರುತ್ತದೆ. ಕಾಂಗ್ರೆಸು ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆ ಎನ್ನುತ್ತಿರುವ ಶ್ರೀ ಜಯಪ್ರಕಾಶರು ಪ್ರತಿಪಕ್ಷಗಳು ಏಕಾಂಗಿಯಾಗಿ ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡು "ಸಬಲನೇ ಉಳಿದಾನು" (ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್) ಎಂಬ ನೀತಿಯಂತೆ ಕಾಂಗ್ರೆಸನ್ನು ಸೋಲಿಸಿ, ಜಯಶೀಲವಾಗುವುದು ನಿಜವಾದ ಬೆಳವಣಿಗೆ. ಇದಕ್ಕೆ ಕೆಲವು ದಶಕಗಳ ಕಾಲ ಬೇಕಾದೀತೆಂಬುದು ನಿಜ. ಕಾಂಗ್ರೆಸಿಗೆ ಎಂಭತ್ತು ವರ್ಷಗಳ ಐತಿಹಾಸಿಕ ಬೆಳವಣಿಗೆಯ ದಾಖಲೆ ಇದೆ ಎಂಬುದನ್ನು ಗಮನಿಸದಿರಬಾರದು. ಇಂಗ್ಲೆಂಡಿನಲ್ಲಿ ಎರಡೇ ಚಾರಿತ್ರಿಕ ಪಕ್ಷಗಳಿವೆ ಎಂಬ ಉದಾಹರಣೆಯನ್ನು ಕೊಡುವಾಗ ಸಹ, ಅಲ್ಲಿ ಸಂಸದಾತ್ಮಕ ಪ್ರಜಾಪ್ರಭುತ್ವಕ್ಕೆ ಎಂಟುನೂರು ವರ್ಷಗಳ ಇತಿಹಾಸವಿದೆ ಎಂಬುದನ್ನು ಉಪೇಕ್ಷಿಸಬಾರದು. ನಮಗೆ ಪ್ರಜಾಪ್ರಭುತ್ವದ ಬೆಳವಣಿಗೆಯೂ ಬೇಕು; ಅದೇ ಹೊತ್ತಿಗೆ ಸಮರ್ಥವೂ ದಕ್ಷವೂ ಆದ ಆಡಳಿತ ಯಂತ್ರ ಮತ್ತು ಸರಕಾರಿ ಧೋರಣೆಯೂ ಬೇಕು. ಪ್ರತಿಪಕ್ಷಗಳ ಸದಸ್ಯರನ್ನೆ ಹೆಚ್ಚಾಗಿ ಚುನಾಯಿಸಿ ಕಳುಹಿಸಿದ ತಿರು-ಕೊಚ್ಚಿಯಲ್ಲಿ ಮತ್ತಿತರ ಬೇರೆ ಕೆಲವು ರಾಜ್ಯಗಳಲ್ಲಿ ಯಾವ ಪಕ್ಷಕ್ಕೂ ಸರಕಾರವನ್ನು ಅಬಾಧಿತವಾಗಿ ನಡೆಸುವ ಸ್ವಶಕ್ತಿಯು ಲಭ್ಯವಾಗದೆ, ಪ್ರಜಾತಂತ್ರಾತ್ಮಕ ಆಡಳಿತೆಯ ಹೆಗ್ಗುರುತಾದ ಶಾಸನಾಂಗವೇ ವಿಸರ್ಜನೆಹೊಂದಲ್ಪಡುವ ಗತಿಯೊದಗಿತು ಎಂಬುದನ್ನು ಶ್ರೀ ಜಯಪ್ರಕಾಶರ ಆತುರವನ್ನು ನೆನೆಯುವಾಗಲೇ ಸ್ಮರಿಸಿಕೊಳ್ಳಬೇಕು. ಎರಡೂ ಕಾಲು ಸರಿಯಿದ್ದ ಒಬ್ಬ ಮನುಷ್ಯನ ಯೋಗ್ಯತೆಯು ಹಲವರು ಕುಂಟರನ್ನು ಒಟ್ಟಿಗೆ ಸೇರಿಸಿಕೊಂಡರೂ ವ್ಯಕ್ತವಾಗಲಾರದು. ಅದೂ ಅಲ್ಲದೆ, ಕಮ್ಯುನಿಸ್ಟರೇ ಪ್ರಬಲ ಪ್ರತಿಪಕ್ಷದ ಸ್ಥಾನದಲ್ಲಿ ರಾರಾಜಿಸುವ ದಿನ ಬಂದುದಾದರೆ, ಅಂದಿಗೆ "ಪ್ರಜಾಪ್ರಭುತ್ವ"ದ ಪವಿತ್ರ ಪದ್ಧತಿಯೇ ನಿರ್ನಾಮ ಹೊಂದುವುದು ನಿಶ್ಚಯ. ಶ್ರೀ ಜಯಪ್ರಕಾಶರು ಕಮ್ಯುನಿಸ್ಟರೊಡನೆ ಕೂಡಿಕೊಂಡು ಹೋಗುವ ಸೂಚನೆಯನ್ನು ಪ್ರಜಾಸಮಾಜವಾದಿ ಕಾರ್ಯಕಾರಿಣಿಗೆ ಮಾಡಿದುದು ನಿಜಕ್ಕೂ ಆಶ್ಚರ್ಯ! ಏನೇ ಆಗಲಿ, ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿಣಿಯು ಇಂತಹ ಗೆಳೆತನದ ಹವ್ಯಾಸಕ್ಕೆ ಮನಸ್ಸು ಮಾಡದಿರುವುದನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ; ಪ್ರಜಾಪ್ರಭುತ್ವದ ಸ್ವಾಭಾವಿಕವಾದ ಬೆಳವಣಿಗೆಯ ದೃಷ್ಟಿಯಿಂದ ಅದನ್ನು ಮೆಚ್ಚಿಕೊಳ್ಳುತ್ತೇವೆ. ಆದರೆ, ಅಪವಾದ ರೂಪದಲ್ಲಿ, ಮತದಾರ ಕ್ಷೇತ್ರಗಳನ್ನು ಹಂಚಿಕೊಡಬಹುದೆಂಬುದಾಗಿ ಗೊತ್ತುವಳಿಯಲ್ಲಿರುವ ಕುಂಟು ಪಂಕ್ತಿಯು ಮಾತ್ರ ಪ್ರಶಸ್ತವಾದುದಲ್ಲವೆಂದೇ ನಮಗೆ ತೋರುತ್ತದೆ.

---

ನಮ್ಮಲ್ಲಿ ಕನ್ನಡ ಟೈಪ್‌ರೈಟರ್ ಯಂತ್ರದ ಬಗ್ಗೆ ಇನ್ನೂ ಚರ್ಚೆ ನಡೆದಿದೆ. ಉತ್ಪಾದಿ ಯಂತ್ರ ಸಿಗುತ್ತಿಲ್ಲ. ಆದರೆ ಬೇರೆ ಭಾಷೆಗಳವರು ಲೈನೋ ಟೈಪ್ ಯಂತ್ರಗಳನ್ನೂ ತಯಾರಿಸಿಕೊಂಡಿದ್ದಾರೆ. ಚಿತ್ರದಲ್ಲಿರುವುದು ಅರಬಿ ಭಾಷೆಯಲ್ಲಿ ಮೊಳೆ ಜೋಡಿಸಿ ಕೊಡು

# ಸೌದಿ ಅರೇಬಿಯಕ್ಕೆ ಪ್ರಧಾನಿಗಳ ಸಂದರ್ಶನ

## ಸುಯೇಜದ ತಂಟೆಯು ಭದ್ರತಾಮಂಡಳದ ಮುಂದೆ ಹೋಯಿತು

ಪ್ರಧಾನಿ ನೆಹರುಗಳು ಇದೇ ೨೪ನೇ ದಿನಾಂಕ ಸೌದಿ ಅರೇಬಿಯಕ್ಕೆ ತೆರಳಿದ್ದಾರೆ. ಆ ದೇಶದ ಅರಸರು ಈಚೆಗೆ ಭಾರತವನ್ನು ಸಂದರ್ಶಿಸಿದ್ದರು. ಆಗ ನೀಡಲಾದ ಆಮಂತ್ರಣವನ್ನು ಸ್ವೀಕರಿಸಿ ಪ್ರಧಾನಿಗಳು ಈಗ ಸಂದರ್ಶನವೀಯುವುದಾಗಿದೆ.

ಸೌದಿ ಅರೇಬಿಯದೊಡನೆ ಭಾರತಕ್ಕೆ ವಿವಾದ ವಿಷಯಗಳೇನೂ ಇಲ್ಲ; ಅಲ್ಲದೆ ವಿಶೇಷವಾಗಿ ಸಮಾಲೋಚನೆ ನಡೆಸುವ ಸಂಗತಿಯೂ ಇಲ್ಲ. ಆದಾಗ್ಯೂ ಸುಯೇಜಿನ ತಂಟೆಯು ಜಾಗತಿಕ ಚರ್ಚೆಯ ವಿಷಯವಾಗಿ ಪರಿಣಮಿಸಿರುವ ಇಂದಿನ ವಾತಾವರಣದಲ್ಲಿ ಅರಬ ರಾಷ್ಟ್ರಗಳಲ್ಲಿ ಪ್ರಮುಖವಾದ ಸೌದಿ ಅರೇಬಿಯದ ಬಲವನ್ನು ತಿಳಿದುಕೊಳ್ಳುವುದರಿಂದ ಭಾರತದ ವಿದೇಶಾಂಗ ಖಾತೆಗೆ ಲಾಭವಿದೆ.

ಇದೊಂದು ಬಿಟ್ಟರೆ ಬೇರೆಲ್ಲ ದೃಷ್ಟಿಯಿಂದಲೂ ಸದ್ಯದ ಸಂದರ್ಶನವು ಸೌಹಾರ್ದ ಪೂರ್ಣ ತಿಳುವಳಿಕೆ ಹೆಚ್ಚಿಸುವ ಉದ್ದೇಶಗಳನ್ನಿಟ್ಟುಕೊಂಡಿದೆಯಲ್ಲದೆ ರಾಜಕೀಯ ಹೇತು ಇದರಲ್ಲಿಲ್ಲ. ನೆಹರುಗಳು ತಮ್ಮ ಸೌದಿ ಅರೇಬಿಯ ಸಂದರ್ಶನವನ್ನು ಮುಗಿಸಿ ಇದೇ ೨೮ನೇ ದಿನಾಂಕ ಮರಳಿ ಭಾರತಕ್ಕೆ ಬರುವ ನಿರೀಕ್ಷೆಯಿದೆ.

ಸುಯೇಜಿನ ತಂಟೆಯ ಬಗ್ಗೆ ನಾಸೇರರೊಡನೆ ನೆಹರು ಮುಖತಃ ಮಾತುಕತೆ ನಡೆಸಬಹುದು ಎಂಬ ವರದಿಗಳು ಬಂದಿದ್ದವು. ನಾಸೇರರು ಸೌದಿ ಅರೇಬಿಯಾದ ಅರಸರೊಡನೆ ಮತ್ತು ಸಿರಿಯಾದ ಅಧ್ಯಕ್ಷರೊಡನೆ ಮಾತುಕತೆ ನಡೆಸಲು ಸೌದಿ ಅರೇಬಿಯಕ್ಕೆ ಹೋಗುವ ಸುದ್ದಿ ಇದ್ದುದರಿಂದ ಎದ್ದ ವಾರ್ತೆ ಇದು. ನಾಸೇರರು ಸೌದಿ ಅರೇಬಿಯಕ್ಕೆ ಹೋಗಲೇನೊ ಹೋದರು; ಸಮಾಲೋಚನೆಯನ್ನೂ ನಡೆಸಿದರು. ಆದರೆ ನೆಹರು ಸೌದಿ ಅರೇಬಿಯಕ್ಕೆ ಮುಟ್ಟುವ ಮೊದಲೇ ಕೈರೋಗೆ ಮರಳಿದರು.

ಪಾಶ್ಚಾತ್ಯ ರಾಷ್ಟ್ರಗಳು ಸುಯೇಜಿನ ಕಾಲುವೆಯಲ್ಲಿ ತಮ್ಮ ಹಡಗಗಳನ್ನು ಸುರಕ್ಷಿತವಾಗಿ ನಡೆಸುವ ದೃಷ್ಟಿಯಿಂದ ಬಳಕೆಗಾರ ಸಂಘದ ರಚನೆ ಮಾಡಬೇಕೆಂದು ತೀರ್ಮಾನಿಸಿವೆ. ಇದೇ ಅಕ್ಟೋಬರದ ೧ನೇ ದಿನಾಂಕ ಈ ಸಂಘ ಏರ್ಪಡುವುದೆನ್ನಲಾಗಿದೆ. ಆದರೆ, ಈ ನಿರ್ಣಯವು ಪರಿಷತ್ತಿನಲ್ಲಿ ಭಾಗ ವಹಿಸಿದ ೧೮ ರಾಷ್ಟ್ರಗಳಲ್ಲಿ ೩ ರಾಷ್ಟ್ರಗಳ ಮನಸ್ಸಿಗೆ ಬಂದಂತೆ ತೋರಿಲ್ಲ.

ಅದೂ ಅಲ್ಲದೆ, ಬಳಕೆಗಾರ ಸಂಘದ ಬಗ್ಗೆ ಬ್ರಿಟನು ಮತ್ತು ಫ್ರಾನ್ಸುಗಳು ಇಟ್ಟುಕೊಂಡಿದ್ದ ಅಭಿಪ್ರಾಯಕ್ಕೂ ಅಮೇರಿಕದ ಡಲ್ಲೇಸರದಕ್ಕೂ ಹೊಂದಿಕೆಯಾಗಿಲ್ಲ. ಡಲ್ಲೇಸರ ಯೋಜನೆ ತೀರ ಅಸ್ಪಷ್ಟವಾದುದಾಗಿದೆ; ವಿರೋಧಾಭಾಸಯುಕ್ತ ಸಂಗತಿಗಳಿಂದ ಕೂಡಿದೆ. ತೀವ್ರ ಯುದ್ಧವನ್ನು ತಪ್ಪಿಸುವುದಕ್ಕಲ್ಲದೆ, ಬೇರಾವ ರೀತಿಯಿಂದಲೂ ಈ ಯೋಜನೆಯು ಪಾಶ್ಚಾತ್ಯ ರಾಷ್ಟ್ರಗಳಿಗೆ ಸಹ ಉಪಯುಕ್ತವಾಗಿಲ್ಲ.

ಆದರೂ ಬಳಕೆಗಾರ ಸಂಘ ಎಂಬುದು ತಲೆಎತ್ತಲಿದೆ. ಈ ನಡುವೆ ಇದೇ ಬುಧವಾರ (ತಾ. ೨೬) ಸುಯೇಜಿನ ತಂಟೆಯನ್ನು ವಿಚಾರಿಸಲು ಭದ್ರತಾಮಂಡಳದ ಸಭೆಯನ್ನು ಕರೆಯಬೇಕೆಂದು ಬ್ರಿಟನು ಮತ್ತು ಫ್ರಾನ್ಸು ಸೂಚಿಸಿವೆ. ಅಮೇರಿಕವು ಇದಕ್ಕೆ ಬೆಂಬಲವಿತ್ತಿದೆ. ಪ್ರಧಾನಿ ನೆಹರುಗಳು ಸಹ ಈ ಕ್ರಮವು ಯೋಗ್ಯವಾದುದೆಂದು ಅಭಿಪ್ರಾಯಪಟ್ಟಿದ್ದಾರೆ.

ಭದ್ರತಾ ಮಂಡಳದ ಮುಂದೆ ಈಜಿಪ್ತದ ಕಡೆಯಿಂದ ಕಳುಹಿಸಲಾದ ದೂರು ಸಹ ಇದೆ. ಇಲ್ಲಿ ಚರ್ಚೆ ನಡೆದಾಗ, "ವಿಟೋ" ಪ್ರಯೋಗದ ಅಧಿಕಾರವುಳ್ಳ ರಾಷ್ಟ್ರಗಳು ಯಾವುದೇ ಒಂದು ನಿರ್ಣಯವು ಕಾರ್ಯಗತವಾಗುವುದಕ್ಕೆ ಬಿಡುವವೇ ಎಂಬ ಸಂಶಯವಿದೆ. ಪಾಶ್ಚಾತ್ಯ ಯೋಜನೆಗೆ ರಶ್ಯ ವಿಟೋಪ್ರಯೋಗಿಸಬಹುದು; ರಶ್ಯದ ನಿಲುವೆಯನ್ನು ಪಾಶ್ಚಾತ್ಯ ರಾಷ್ಟ್ರಗಳು ವಿಟೋ ಪ್ರಯೋಗದಿಂದ ಕ್ಷೀಣಗೊಳಿಸಬಹುದು..

ಹೀಗಾದರೆ ತಂಟೆಯು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಮುಂದೆ ಹೋಗಬೇಕಾಗುತ್ತದೆ. ಹೀಗೆ ಪರಿಹಾರವು ಹಿಂದೆ ಹೋಗುವಾಗ ಪ್ರಶ್ನೆಗೆ ನೇರಾಗಿ ಸಂಬಂಧಪಟ್ಟ ರಾಷ್ಟ್ರಗಳಲ್ಲಿ ವಿವೇಕೋದಯವಾದೀತೆಂಬ ಆಸೆ ಶಾಂತಿಪ್ರಿಯರದು. ಭಾರತದ ಸಂಚಾರಿ ರಾಯಭಾರಿಯೆಂದು ಹೆಸರಾದ ಮೆನನ್ನರು ಕೈರೋಗೆ ಹೋದುದೂ ಅಲ್ಲಿಂದ ಈಗ ಲಂಡನಿಗೆ ತೆರಳಿರುವುದೂ ಇದೇ ಉದ್ದೇಶದಿಂದ.

### ಗೇಣಿ ನಿರ್ಣಯ ಮಸೂದೆ

ಮದ್ರಾಸಿನ ಶಾಸನಾಂಗದ ಮುಂದೆ ನ್ಯಾಯವಾದ ಗೇಣಿ ನಿರ್ಣಯ ಮಸೂದೆಯ ಚರ್ಚೆ ನಡೆದಿದೆ. ಈ ಮಸೂದೆಯು ದಕ್ಷಿಣ ಕನ್ನಡಕ್ಕೂ ಅನ್ವಯವಾಗುವುದೆಂದು ಮಂತ್ರಿಗಳು ಇದೇ ೨೪ನೇ ದಿನಾಂಕ ಹೇಳಿದ್ದಾರೆ.

### ನೂತನ ಅಧಿಕಾರಿ ವರ್ಗ

ಹೊಸ ಮೈಸೂರು ರಾಜ್ಯದ ಅಧಿಕಾರಿ ವರ್ಗವನ್ನು ಹೆಸರಿಸಲಾಗಿದೆ. ಈ ಪಟ್ಟಿಯನ್ನು ಕೇಂದ್ರ ಸರಕಾರವೀಗ ಪರಿಶೀಲಿಸುತ್ತಿದೆಯೆಂದೂ ಅಗತ್ಯ ಕಂಡರೆ ಅಧಿಕಾರಿಗಳ ಬದಲಾವಣೆ ನಡೆದೀತೆಂದೂ ಹೇಳಲಾಗಿದೆ.

### ಮೈಸೂರಿನ ಉದ್ಘಾಟನೆ

ನೂತನ ಮೈಸೂರು ಇದೇ ನವಂಬರ ೧ನೇ ತಾರೀಕಿನಂದು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರಿಂದ ಉದ್ಘಾಟಿಸಲ್ಪಡುತ್ತದೆ. ಅಕ್ಟೋಬರ ಮೂರನೇ ವಾರದಲ್ಲಿ ಕಾಂಗ್ರೆಸು ಪಕ್ಷದ ನಾಯಕನ ಆಯ್ಕೆಗೆ ವ್ಯವಸ್ಥೆಯಾಗುವುದೆಂದೂ ತಿಳಿದು ಬರುತ್ತದೆ.

### ಹೊಗೆಬತ್ತಿ ಮತ್ತು ಮಕ್ಕಳು

ಪಶ್ಚಿಮ ಬಂಗಾಳ ಸರಕಾರವು ಒಂದು ಶಾಸನದ ಮೂಲಕ ಚಿಕ್ಕವರು ಹೊಗೆಬತ್ತಿ ಸೇದಬಾರದೆಂದು ವಿಧಿಸಿದೆ. ಶಾಲೆಗಳ ಮುಖ್ಯೋಪಾಧ್ಯಾಯರಿಗೆ ೧೬ ವರ್ಷಕ್ಕಿಂತ ಕಡಮೆ ವಯಸ್ಸಿನ ವಿದ್ಯಾರ್ಥಿಗಳು ಹೊಗೆಬತ್ತಿ ಸೇದುತ್ತಿದ್ದರೆ ಅದನ್ನು ಕಸಿದುಕೊಳ್ಳಲಿಕ್ಕೂ ಪೋಲೀಸರಿಗೆ ರಸ್ತೆಯಲ್ಲಿಯೂ ಸಾರ್ವಜನಿಕ ಸ್ಥಳದಲ್ಲಿಯೂ ಹೊಗೆಬತ್ತಿ ಸೇದುವ ೧೬ ವರ್ಷ ಪ್ರಾಯಕ್ಕಿಂತ ಕಡಿಮೆಯ ಎಳೆಯರ ವಿರುದ್ಧ ತಕ್ಕ ಕ್ರಮ ತೆಗೆದುಕೊಳ್ಳಲಿಕ್ಕೂ ಅಧಿಕಾರ ನೀಡುವ ಈ ಶಾಸನವು ಬರುವ ಜನವರಿಯ ೧ನೇ ತಾರೀಕಿನಿಂದ ಜ್ಯಾರಿಗೆ ಬರಲಿದೆ.

### ಪ್ರಜಾಸತ್ತಾತ್ಮಕ ಪ್ರಯೋಗ

ತಿರುಕೊಚ್ಚಿಯ ರಾಜಪ್ರಮುಖರು ನಮ್ಮ ದೇಶದಲ್ಲಿ ನಡೆದಿರುವ ಪಂಚ ವಾರ್ಷಿಕ ಯೋಜನೆಯು ಪ್ರಜಾಸತ್ತಾತ್ಮಕ ಪ್ರಯೋಗವಾಗಿದೆ ಎಂದಿದ್ದಾರೆ. ಜನರಲ್ಲಿ ಸ್ವಾವಲಂಬನೆ ಮತ್ತು ಅಭಿವೃದ್ಧಿಯ ಮನೋಭಾವವನ್ನು ಹುಟ್ಟಿಸಿ ಪೋಷಿಸುವುದಕ್ಕೆ ಸರಕಾರವು ಪ್ರಯತ್ನ ಶೀಲವಾಗಿರುವುದೆಂದು ಅವರ ಅಭಿಪ್ರಾಯ.

---

# ಉಡುಪಿ ವಾರ್ತೆ

**ಅಂಚೆ ಮತ್ತು ತಂತಿ ರಿಕ್ರಿಯೇಶನ್ ಕ್ಲಬ್ಬಿನ ಸಭೆಯು—** ತಾ. ೨೨ರಲ್ಲಿ ಶ್ರೀ ಕೆ. ದತ್ತ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಶಿವಾನಂದರು ಕ್ಲಬ್ ದಿನಾಚರಣೆ ಆಚರಿಸುವ ಕುರಿತು ಸಲಹೆಕೊಟ್ಟರು, ಪ್ರಾಂತಿಕ ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿಗೆ ಶ್ರೀ ಶಿವಾನಂದರನ್ನು ಪ್ರತಿನಿಧಿಯಾಗಿ ಆರಿಸಲಾಯಿತು. ಕ್ಲಬ್ಬಿನ ಕಾರ್ಯನಿರತ ಸದಸ್ಯರಾಗಿದ್ದು ಈಗ ಕಲ್ಯಾಣಪುರಕ್ಕೆ ಸಬ್ ಪೋಸ್ಟ್‌ಮಾಸ್ತರರಾಗಿ ನೇಮಕ ಹೊಂದಿರುವ ಶ್ರೀ ವೆಂಕಟೇಶ ಭಟ್ಟರ ಕುರಿತು ಪ್ರಶಂಸನಾತ್ಮಕ ಮಾತುಗಳಾದುವು.

**ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ—** ಶ್ರೀ ಕಾಶೀ ಮಠಾಧೀಶ ಶ್ರೀ ಸುಕೃತೀಂದ್ರ ತೀರ್ಥಸ್ವಾಮಿಗಳವರು ತಾ. ೨೦ರಲ್ಲಿ ಚಾತುರ್ಮಾಸವನ್ನು ಮುಕ್ತಾಯಗೊಳಿಸಿ ಮೃತ್ತಿಕಾ ವಿಸರ್ಜನೆಯನ್ನು ನೆರವೇರಿಸಿದರು. ಡಾ. ಪಿ. ಆರ್. ನಾಯ್ಕರು ಶ್ರೀಗಳವರು ಜಾತಿಬಾಂಧವರ ಪ್ರಾರ್ಥನೆಯನ್ನು ಮನ್ನಿಸಿ ಇಲ್ಲಿಯೇ ಚಾತುರ್ಮಾಸ ಕುಳಿತ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಸ್ವಾಮಿಗಳವರು ನೆರೆದ ಭಕ್ತವೃಂದಕ್ಕೆ ಫಲಮಂತ್ರಾಕ್ಷತೆಯಿತ್ತರು.

**ಕೆ. ಜೆ. ಬಲ್ಲಾಳರ ನಿಧನದ ಬಗ್ಗೆ ಸಂತಾಪಸೂಚಕ ಸಭೆ—** ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ ಡೈರೆಕ್ಟರರ ಸಭೆಯು ತಾ. ೨೩ರಲ್ಲಿ ಶ್ರೀ ಸಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಅಧ್ಯಕ್ಷರಾಗಿದ್ದ ಶ್ರೀ ಕೆ ಜೆ. ಬಲ್ಲಾಳರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು. ದಿವಂಗತರ ಜೀವನಾದರ್ಶಗಳ ಕುರಿತು ಶ್ರೀಗಳಾದ ಪಿ. ವಿ. ಆಚಾರ್ ಮತ್ತು ಕುಶಾಲು ಗಣಪಯ್ಯ ಸೆಟ್ಟರು ಮಾತನಾಡಿದರು. ಶ್ರೀ ಬಲ್ಲಾಳರ ಸ್ಮಾರಕಾರ್ಥವಾಗಿ ಅವರ ತೈಲ ಚಿತ್ರವೊಂದನ್ನು ಯೂನಿಯನ್ ಆಫೀಸಿನಲ್ಲಿ ಇರಗೊಡಿಸಬೇಕೆಂದು ಸಭೆಯು ತೀರ್ಮಾನವಾಯಿತು. ಡೈರೆಕ್ಟರರ ಮಂಡಳಿಯಲ್ಲಿ ಖಾಲಿಯಾದ ಒಂದು ಸ್ಥಾನಕ್ಕೆ ಬ್ರಹ್ಮಾವರ ಸೊಸೈಟಿಯ ಅಧ್ಯಕ್ಷ ಶ್ರೀ ಬಿ. ವಿ. ಗಾಧವ ರಾಯರನ್ನು ಆರಿಸಲಾಯಿತು. ಯೂನಿಯನಿನ ಅಧ್ಯಕ್ಷರಾಗಿ ಶ್ರೀ ಸಿ. ವಿ. ಆಚಾರ್ಯರೂ, ಕಾರ್ಯದರ್ಶಿಗಳಾಗಿ ಶ್ರೀ ಪಿ. ವಿಠಲ ಸೆಟ್ಟರೂ ಒಮ್ಮತದಿಂದ ಆರಿಸಲ್ಪಟ್ಟರು.

**ಪುರಜನರ ಸಂತಾಪಸೂಚನೆ—**ತಾ. ೨೦ರಲ್ಲಿ ಉಡುಪಿ ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ದಿವಂಗತ ಕೆ. ಜೆ. ಬಲ್ಲಾಳರ ನಿಧನದ ಬಗ್ಗೆ ಸಂತಾಪಸೂಚಿಸಲು ಮುನ್ಸಿಪಲ್ ಗಾಂಧಿ ಮೆಮೋರಿಯಲ್ ಶಾಲೆಯಲ್ಲಿ ಕರೆದ ಸಭೆಯಲ್ಲಿ ಶ್ರೀಗಳಾದ ಪಿ. ಪದ್ಮನಾಭರಾವ್, ಪಿ. ವಿ. ಆಚಾರ್ಯ, ಯು. ಎಸ್. ನಾಯಕ್, ಬಿ. ಶೀನಪ್ಪ ಹೆಗ್ಡೆ, ಯು. ಪಿ. ಪೈ, ಡಾ. ಎಸ್. ಆರ್. ಪೈ ಮೊದಲಾದವರು ಮೃತರ ಜೀವನ ವೈಶಿಷ್ಟ್ಯವನ್ನೆತ್ತಿ ಭಾಷಣವಿತ್ತರು. ಸಭಾಧ್ಯಕ್ಷತೆಯನ್ನು ವಹಿಸಿದ ಸ್ಥಳೀಯ ಡಿ. ಮುನ್ಸಿಫ್ ಶ್ರೀ ರಾಮಚಂದ್ರ ರಾಯರು ದಿವಂಗತ ಬಲ್ಲಾಳರ ಶಿಸ್ತು, ಸೇವಾಬುದ್ಧಿಯ ಜೀವನವು ನವತರುಣರಿಗೆ ಆದರ್ಶವಾಗಲೆಂದು ಕೋರಿದರು. ಅನಂತರ ದುಃಖಸೂಚಕ ನಿರ್ಣಯವಾಯಿತು. ಆರಂಭದಲ್ಲಿ ಶ್ರೀ ಕೆ. ಕೆ. ಪೈಗಳು ಪ್ರಾಸ್ತಾವಿಕ ಭಾಷಣಮಾಡಿದರು.

**ಲೇಂಡ್ ಹೋಲ್ಡರ್ಸ್ ಎಸೋಸಿಯೇಶನ್** ಇದರ ವತಿಯಿಂದ ಶ್ರೀ ಕೆ. ಜೆ. ಬಲ್ಲಾಳರ ನಿಧನದ ಸಂತಾಪ ಸೂಚಕ ಸಭೆಯು ತಾ. 17ರಂದು ವಕೀಲ್ ಶ್ರೀ. ಬಿ. ಶೀನಪ್ಪ ಹೆಗ್ಡೆಯವರ ಆಫೀಸಿನಲ್ಲಿ ಶ್ರೀ. ಬೈಲೂರು ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಜರಗಿ ದಿವಂಗತರ ಕುರಿತು ಭಾಷಣಗಳಾಗಿ ದುಃಖ ಸೂಚಕ ನಿರ್ಣಯವಾಯಿತು.

**ವಕೀಲರ ಸಂಘದಲ್ಲಿ ದುಃಖ ಸೂಚನಾ ಸಭೆಯು—** ಡಿ| ಮುನ್ಸಿಫ್ ಶ್ರೀ ಪಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಬಿ. ಶೀನಪ್ಪ ಹೆಗ್ಡೆ, ಪಿ. ವಿ. ಆಚಾರ್, ಎಂ. ಡಿ. ಕಾಮತರು ದಿ| ಕೆ. ಜೆ. ಬಲ್ಲಾಳರ ವ್ಯಕ್ತಿತ್ವದ ಕುರಿತು ಭಾಷಣಮಾಡಿದರು. ಶ್ರೀ ಜಿ. ಸಿ. ರೇಗೋರವರು ದುಃಖಸೂಚನಾ ಠರಾವನ್ನು ಮುಂದಿಡಲಾಗಿ ಅದು ಮೌನ ಪ್ರಾರ್ಥನೆಯೊಂದಿಗೆ ಪಾಸಾಯಿತು. ಆರಂಭದಲ್ಲಿ ಕೋರ್ಟು ಪ್ರಾರಂಭವಾದೊಡನೆ ಶ್ರೀ ಪಿ. ಪದ್ಮನಾಭರಾಯರು ಶ್ರೀ ಬಲ್ಲಾಳರ ನಿಧನದ ಸೂಚನೆ ಇತ್ತು ಭಾಷಣ ಮಾಡಿದರು. ಡಿ| ಮುನ್ಸಿಫರೂ ವಿಷಾದ ವ್ಯಕ್ತವಾಗಿ ಕೋರ್ಟು ಮೌನವನ್ನಾಚರಿಸಿತು.

---

**ಸಂತಾಪ ಸೂಚನೆ—**ಇದೇ ತಾ. 23 ರಂದು ಶ್ರೀ ಜೊಲ್ಲ ದೇಜು ಶೆಟ್ರು ಮತ್ತು ಉಡುಪಿ ನಾರಾಯಣ ಶೆಟ್ರ ಕೊಡುವಿಕೆಯಿಂದ ಮುಂಬಯಿಯ ಜವಾಹರ ಫ್ರೀ ನೈಟ್ ಹೈಸ್ಕೂಲಿನಲ್ಲಿ, ಅದೇ ಶಾಲೆಯ ಪ್ರಿನ್ಸಿಪಾಲ್ ಶ್ರೀ ಯಂ. ಯಸ್ ರಾವ್ ಇವರ ಅಧ್ಯಕ್ಷತೆಯಲ್ಲಿ "ರಾಜಸೂಯ" ಎಂಬ ಪ್ರಸಂಗದ ಒಂದು ಯಕ್ಷಗಾನ ಕೂಟ ಜರಗಿತು.

ದಿ. ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರ ಅನಿರೀಕ್ಷಿತ ನಿಧನದ ಕುರಿತು ಸಂತಾಪ ಸೂಚಿಸಲಾಯಿತು. ಶ್ರೀ ಮುದ್ರಾಡಿ ಭೋಜರಾಜ ಶೆಟ್ರು ದಿವಂಗತರ ಜೀವನದ ಕುರಿತು ಮಾತಾಡಿದರು. ಅನಂತರ ನೆರೆದ ಸಭೆ ಎದ್ದುನಿಂತು ಮೌನ ಪ್ರಾರ್ಥನೆ ಮಾಡಿ ಮೃತರ ಆತ್ಮಕ್ಕೆ ಶಾಂತಿ ಕೋರಿತು.

---

**ಕಟಪಾಡಿ—** ಎಸ್. ವಿ. ಎಸ್. ಹಾ. ಎ. ಶಾಲೆಯ ಸ್ಥಾಪಕರ ದಿನಾಚರಣೆಯು ತಾ. 20ರಲ್ಲಿ ಶ್ರೀ. ಎಸ್. ಎಲ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಸ್ಥಾಪಕರ ದಿ| ಪಾಂಗಾಳ ಶ್ರೀನಿವಾಸ ನಾಯಕರು ಶಾಲೆಗಾಗಿ ವಹಿಸಿದ ಪಾತ್ರವನ್ನು ವಿವರಿಸಿ ಹಲವರು ಭಾಷಣ ಮಾಡಿದರು.

---

## ಚಂದಾದಾರರಲ್ಲಿ ವಿನಂತಿ

'ನವಯುಗ'ದ ೩೫ನೆಯ ಸಂಪುಟವು ಇದೇ ಅಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ ೩೬ನೇ ವರ್ಷವು ಆರಂಭವಾಗಿರುತ್ತದಷ್ಟೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನು ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಮಾಡಿದರೆ ೧೦ ಆಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ಬಿನ್ನಹ. ಇಲ್ಲವೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ಯಾವದೊಂದೂ ಖರ್ಚಿಲ್ಲದೆ 'ನವಯುಗದ' ಖಾತೆಗೆ ಕಟ್ಟಬಹುದು. ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ಸಂಚಿಕೆಯನ್ನು ಉಪಾಯವಿಲ್ಲದೆ ವಿ. ಪಿ. ಮಾಡುತ್ತೇವೆ.

ಮೆನೇಜರ್,
ನವಯುಗ, ಉಡುಪಿ.

# ಎಲ್ಲೆಲ್ಲಿ ಏನೇನು?

**ಶಿರ್ವ—** ಸ್ಥಳೀಯ ವಿದ್ಯಾವರ್ಧಕ ಸಂಘದ ಕಡೆಯಿಂದ ನಡೆಸಲಾಗುವ ಶಾಲೆಗಳ ಕರೆಸ್ಪೊಂಡೆಂಟರಾಗಿದ್ದ ಶ್ರೀ ಕೆ. ಜಿ. ಬಲ್ಲಾಳರ ಅಕಾಲ ನಿಧನದ ಬಗ್ಗೆ ಸಂತಾಪಸೂಚಿಸುವ ಸಭೆಯು ತಾ. 17ರಲ್ಲಿ ಹಿಂದೂ ಹಾ| ಎ| ಶಾಲೆಯಲ್ಲಿ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಬಿ. ಜಯರಾಮ ಶೆಟ್ಟಿ, ಎಸ್. ದುಗ್ಗಪ್ಪ ಹೆಗ್ಡೆ, ಗೋಪಾಲಕೃಷ್ಣ ಪೈ ಮೊದಲಾದವರು ಕಾಲೋಚಿತಮಾತುಗಳನ್ನಾಡಿದ ಬಳಿಕ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು.

**ಬೆಳ್ತಂಗಡಿ—** ಸ್ಥಳೀಯ ಬೋರ್ಡು ಮಿಡ್ಲ್‌ಸ್ಕೂಲಿನ ಉದ್ಘಾಟನಾ ಸಮಾರಂಭವು ತಾ. 17ರಲ್ಲು ಬೆಳ್ತಂಗಡಿ ಬೋರ್ಡು ಹಾ| ಎ| ಶಾಲೆಯಲ್ಲಿ ಜರಗಿತು. ಡಾ. ಬಿ. ನಾರಾಯಣ ರಾಯರು ಪ್ರಾರಂಭಿಕ ಮಾತುಗಳನ್ನಾಡಿದರು. ಉಜಿರೆ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಆರ್. ಎಸ್. ಭಿಡೆ, ಬೆಳ್ತಂಗಡಿ ತಹಶಿಲ್ದಾರ್ ಶ್ರೀ ಕೆ. ದೇವೇಂದ್ರ, ಶ್ರೀಗಳಾದ ಕೆ. ಪಿ. ಕುಮಾರಯ್ಯ ಹೆಗ್ಡೆ, ಎ. ಕೆ. ನಾರಾಯಣ ಭಂಡಾರಿ, ಎಸ್. ಕೆ. ಭಿಡೆ, ಕೆ. ರಾಮಕೃಷ್ಣ ರಾವ್, ಎಸ್. ಬಾಳಿಗ ಮೊದಲಾದವರು ಸಂದರ್ಭೋಚಿತ ಭಾಷಣಮಾಡಿದರು. ಮಿಡ್ಲ್ ಸ್ಕೂಲ್ ಹೆಡ್ಮಾಸ್ತರ್ ಶ್ರೀ ಇನ್ನ ದಿನೇಶ ರಾಯರು ವಂದನೆಗಳನ್ನರ್ಪಿಸಿದರು.

**ಹಿರಿಯಡಕ—** ಉಡುಪಿ ತಾಲೂಕಿನ ಅಂಜಾರು ಗ್ರಾಮದ ಪಟೇಲ್ ಶ್ರೀ ನಾರಾಯಣ ಹೆಗ್ಡೆಯವರು ತನ್ನ 76ನೇ ವಯಸ್ಸಿನಲ್ಲಿ ತಾ. 16ರಲ್ಲು ಹೃದಯಸ್ತಂಭನದಿಂದ ದೈವಾಧೀನರಾದರು. ದಿವಂಗತರು ಜನಪ್ರಿಯತೆಯನ್ನು ಗಳಿಸಿದ್ದರು.

**ಅಲೆವೂರು -** ಸ್ಥಳೀಯ ಗ್ರಾಮಸೇವಾ ನಿರತ ಶ್ರೀ ಕೆ. ರಂಗರಾಯರು ನಿತಾರದಲ್ಲಿ ಅಕಾಲ ನಿಧನಕ್ಕೆ ತುತ್ತಾದ ಬಗ್ಗೆ ಸಂತಾಪಸೂಚಿಸುವ ಸಭೆಯು ತಾ. 18ರಲ್ಲಿ ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ರಂಗಣ್ಣ ಭಟ್ಟ, ರಮೇಶ ಪೈ, ಎಚ್. ಶಾಂತಿ, ಎ. ಜೆ. ಆಳ್ವ, ಅಚ್ಚಣ್ಣ ಶೆಟ್ಟಿ ಮೊದಲಾದವರು ಮಾತನಾಡಿದರು. ಮೃತರ ಆತ್ಮಕ್ಕೆ ಶಾಂತಿಕೋರಲಾಯಿತು.

**ಮಣಿಪಾಲ —** ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್‌ರಾಗಿದ್ದ ಕೆಪ್ಟನ್ ಎನ್. ಮಂಗೇಶರಾಯರು ನಿವೃತ್ತರಾದ ಬಗ್ಗೆ ಅವರನ್ನು ಗೌರವಿಸಿ ಬೀಳ್ಕೊಡಲು ಕಾಲೇಜಿನ ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ತಾ 15ರಲ್ಲು ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಕೆಪ್ಟನ್ ರಾಯರ ಸ್ಥಾನದಲ್ಲಿ ಡಾ. ಆರ್. ಪಿ. ಕೊಪ್ಪಿಕಾರ್, ಅವರು ನೇಮಕಹೊಂದಿರುವರು.

**ಕೊಡವೂರು—** ಸ್ಥಳೀಯ ಬೋರ್ಡು ಹಾ| ಎ| ಶಾಲೆಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ| ಕೆ. ಎಲ್. ಐತಾಳರು ವಹಿಸಿದ್ದರು. ಪಂಡಿತ ಯು. ಬಿ. ಆಚಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎ ಜೆ. ಆಳ್ವ ಕೆ. ಶಂಕರನಾರಾಯಣ ಉಪಾಧ್ಯಾಯ, ಬಿ. ರಾಮಾಚಾರ್ಯ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಎಚ್. ಜಿ. ಕೆದ್ಲಾಯರು ಧನ್ಯವಾದ ಸಮರ್ಪಿಸಿದರು.

**ಉದ್ಯಾವರ—** ಇಲ್ಲಿಯ ಅಂಜುಮನ್ ಇತ್ತೆಹಾದ ಉಲ್ ಇಸ್ಲಾಮ್ ಸಂಘದ ಮಹಾ ಸಭೆಯು ತಾ. 18ರಲ್ಲು ಜನಾಬ್ ಯು. ಹುಸೇನ್ ಆಲಿಯವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯ ಸಮಿತಿಗೆ ಶ್ರೀಗಳಾದ ಯು. ಎ. ರಹೀಮ್ ಅಧ್ಯಕ್ಷ, ಯು. ಎಮ್. ಹಾಶಿಂ, ಉಪಾಧ್ಯಕ್ಷ, ಯು. ಷಹಾಬುದ್ದೀನ್ ಉಮರ್, ಪ್ರಧಾನ ಕಾರ್ಯದರ್ಶಿ, ಯು. ಹುಸೇನ್ ಅಲಿ, ಖಜಾಂಚಿಯರಾಗಿ ಆರಿಸಲ್ಪಟ್ಟರು.

**ಮಣಿಪಾಲದಲ್ಲಿ ರಾಜ್ಯಪಾಲರು—** ತಾ. 23ರಲ್ಲಿ ಬೆಳಿಗ್ಗೆ ಮದ್ರಾಸಿನ ರಾಜ್ಯಪಾಲರಾದ ಶ್ರೀ ಶ್ರೀ ಪ್ರಕಾಶರು ಮಣಿಪಾಲಕ್ಕೆ ಆಗಮಿಸಿದೊಡನೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈ, ಡಾ. ಎಸ್ ಆರ್. ಪೈ, ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ; ಶಿವಳ್ಳಿ ಪಂಚಾಯತ ಅಧ್ಯಕ್ಷ ಟಿ. ರಮೇಶ ಪೈ, ಉಡುಪಿ ನಗರಸಭಾಪತಿ ಶ್ರೀ ಕೆ. ಕೆ. ಪೈ, ಡಾ. ಕೆ. ಎಲ್. ಐತಾಳ್ ಉಡುಪಿ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆ ಮೊದಲಾದವರು ಸ್ವಾಗತಿಸಿದರು. ಬಳಿಕ ರಾಜ್ಯಪಾಲರು ಮಣಿಪಾಲ-ಅಲೆವೂರು ರಸ್ತೆಯನ್ನು, ಮಣಿಪಾಲದ ಕುಟುಂಬಯೋಜನಾ ಕ್ಷೇತ್ರವನ್ನು ಉದ್ಘಾಟಿಸಿ ಸಹಕಾರಿ ವಸತಿಕೇಂದ್ರ ನಿರ್ಮಾಣ ಯೋಜನೆಯ ಶಂಕುಸ್ಥಾಪನೆಮಾಡಿದರು. ನಂತರ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಆಗಮಿಸಿ ಅಲ್ಲಿಯ ವಿವಿಧ ವಿಭಾಗಗಳನ್ನು ನೋಡಿ, ಕಾಲೇಜಿಗೆ ಅಡಳಿತ ವರ್ಗದವರ ಪರಿಚಯ ಪಡೆದರು.

ಬಳಿಕ ಕಾಲೇಜು ಉಪ್ಪರಿಗೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ರಾಜ್ಯಪಾಲರಿಗೆ ಶಿವಳ್ಳಿ ಪಂಚಾಯತದ ಪರವಾಗಿ ಅದರ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ಮಾನಪತ್ರ ಅರ್ಪಿಸಿದರು. ಆ ಮೇಲೆ ಕುಟುಂಬ ಯೋಜನಾ ಸಮಿತಿಯ ಅಧ್ಯಕ್ಷ ಡಾ| ಟಿ. ಮಾಧವ ಪೈಗಳು ರಾಜ್ಯಪಾಲರಿಗೆ ಸ್ವಾಗತವನ್ನು ಬಯಸಿ ಮಾನಪತ್ರವನ್ನೊಪ್ಪಿಸಿದರು. ಅದರಲ್ಲಿ ಯೋಜನಾ ಆಯೋಗದವರು ಹೆಚ್ಚುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟುವ ಆವಶ್ಯಕತೆ ಕುರಿತು ಜನತೆಯ ಗಮನವನ್ನು ಸೆಳೆದಿರುವರು. ನಮ್ಮ ರಾಷ್ಟ್ರದ ಪ್ರಗತಿಯಲ್ಲಿ ಕುಟುಂಬ ಯೋಜನೆಗೊಂದು ಪ್ರಮುಖ ಸ್ಥಾನವಿದೆ. ವೈಜ್ಞಾನಿಕ ರೀತಿಯಲ್ಲಿ ಕುಟುಂಬ ಯೋಜನೆಯ ಮಾಡಿಕೊಳ್ಳುವ ಸೌಕರ್ಯವನ್ನು ಈ ಪ್ರದೇಶದ ಜನತೆಗೆ ಒದಗಿಸುವ ಬಗ್ಗೆ ಈ ಕ್ಷೇತ್ರವನ್ನು ಇಲ್ಲಿ ಸ್ಥಾಪಿಸಲಾಗಿದೆ. ಇದನ್ನು ಮತ್ತು ಮಣಿಪಾಲದ ಕಸ್ತೂರ್ಬಾ ಪ್ರಸೂತಿಕಾ ಗೃಹಗಳನ್ನು ಒಂದಕ್ಕೊಂದು ತಾಗಿ ಕಟ್ಟಿಸಲಾಗಿದೆ. ಇವೆರಡೂ ಹತ್ತಿರ ಹತ್ತಿರವಾಗಿರುವುದು ಉಚಿತವಾಗಿದೆ. ಪ್ರಸೂತಿಕಾ ಗೃಹದಲ್ಲಿ ಹೆರಿಗೆಗಾಗಿ ಬರುವ ಮಹಿಳೆಯರೊಡನೆ ಕುಟುಂಬಯೋಜನೆಯ ಕುರಿತು ಸರಿಯಾದ ಸಲಹೆ ಮತ್ತು ಮಾರ್ಗದರ್ಶನ ಮಾಡಲು ಸರಿಯಾದ ವಾತಾವರಣವಿರುತ್ತದೆ. ಇದರಿಂದಾಗಿಯೇ ಆ ವೆರಡನ್ನೂ ಹತ್ತಿರ ಹತ್ತಿರವಾಗಿ ಕಟ್ಟಿಸಿದುದಾಗಿದೆ ಎಂಬಿತ್ಯಾದಿಗಳು ಮಾನಪತ್ರದಲ್ಲಿ ಇದ್ದುವು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮಣಿಪಾಲ—ಅಲೆವೂರು ರಸ್ತೆಯ ವರದಿಯನ್ನೋದುತ್ತಾ, ಈ ರಸ್ತೆಯ ನಿರ್ಮಾಣಕ್ಕೆ ಸರಕಾರದಿಂದ ಸ್ಥಳೀಯ ಅಭಿವೃದ್ಧಿಯೋಜನೆ ಮೇರೆಗೆ ರೂ. 10,000 ಸಹಾಯಧನ ದೊರೆತಿದ್ದು ಉಳಿದ ವೆಚ್ಚವನ್ನು ಸಂಬಂಧಪಟ್ಟ ಪಂಚಾಯತ್ ಮತ್ತು ಜನತೆ ವಹಿಸಿದೆ ಎಂದರು. ಸಹಕಾರಿ ವಸತಿಕೇಂದ್ರ ನಿರ್ಮಾಣ ಯೋಜನೆಯನ್ನು ಶ್ರೀ ಪೈಗಳು ವಿವರಿಸುತ್ತಾ, ಈ ಯೋಜನೆಯಂತೆ ಕಟ್ಟಲ್ಪಡುವ 100 ಮನೆಗಳು ಮೂರು ವರ್ಗಗಳಾಗಿದ್ದು ಪ್ರಥಮ ವರ್ಗಕ್ಕೆ ರೂ. 10,000; ದ್ವಿತೀಯ ವರ್ಗಕ್ಕೆ ರೂ. 5000; ಮತ್ತು ತೃತೀಯ ವರ್ಗಕ್ಕೆ ರೂ. 3000 ವೆಚ್ಚ ತಗಲಬಹುದಾಗಿದೆ ಎಂದರು.

ಶ್ರೀ ಶ್ರೀ ಪ್ರಕಾಶರು ತಮ್ಮ ಭಾಷಣದಲ್ಲಿ 'ನಾನು ನಿಮಗೆ ವಿದಾಯ ಹೇಳಲು ಮತ್ತು ಮದ್ರಾಸು ಸರಕಾರದ ಶುಭಾಶಯ ಸಲ್ಲಿಸಲು ಬಂದಿದ್ದೇನೆ. ಆದರೆ ನಿಮ್ಮಂತಹ ಸ್ಫೂರ್ತಿಯುತ, ಉತ್ಸಾಹೀ ಜನತೆಯುಳ್ಳ ಜಿಲ್ಲೆಯು ಮದ್ರಾಸಿನಲ್ಲಿಯೇ ಉಳಿಯುವಂತೆ ಕೇಳಿ ಕೊಳ್ಳುವ ಇಚ್ಛೆಯಾಗುತ್ತದೆ.

ನಿಮ್ಮ ಕಾಲೇಜು ಅತ್ಯುತ್ತಮವಾದ ವಾತಾವರಣದಲ್ಲಿ ಸ್ಥಾಪಿಸಲ್ಪಟ್ಟಿದೆ. ನಮ್ಮ ದೇಶಕ್ಕೆ ತುಂಬಾ ಡಾಕ್ಟರರ ಆವಶ್ಯಕತೆಯಿದೆ. ಅನಾರೋಗ್ಯದಿಂದಿರುವ ನಿರ್ಬಲ ದೇಹದ ಜನತೆಯು ಸ್ವತಂತ್ರ ಪ್ರಜಾಪ್ರಭುತ್ವಕ್ಕೆ ಸರಿಹೊಂದಲು. ನಾವೀಗ ನಮ್ಮ ಪ್ರಜಾಪ್ರಭುತ್ವವನ್ನು ರಚಿಸುತ್ತಲಿದ್ದೇವೆ. 'ಶರೀರ ಮಾದ್ಯಂ ಖಲು ಧರ್ಮಸಾಧನಂ' ಎಂದು ನಮ್ಮ ಹಿರಿಯರು ಹೇಳಿದ ಮಾತನ್ನು ನೆನಪಿನಲ್ಲಿಟ್ಟುಕೊಂಡು ಪ್ರಜಾಪ್ರಭುತ್ವವನ್ನು ದೃಢಪಡಿಸಬೇಕು. ಇದಕ್ಕಾಗಿ ನಮ್ಮ ಗ್ರಾಮಾಂತರ ಪ್ರದೇಶಗಳಿಗೂ ಸರಿಯಾದ ವೈದ್ಯಕೀಯ ಸಲಹೆಗಳು ದೊರೆತು ಜನರು ಆರೋಗ್ಯವಂತರಾಗಿರಬೇಕು. ಈ ಸಂಸ್ಥೆಯಿಂದ ಹೊರ ಹೋಗುವ ತರುಣ ತರುಣಿಯರು ತಮ್ಮ ಗಮನವನ್ನು ಗ್ರಾಮಾಂತರ ಪ್ರದೇಶಗಳಿಗೆ ಹರಿಸಿ, ಅಲ್ಲಿನ ಜನಜೀವನದ ಪುನರುಜ್ಜೀವನಕ್ಕೆ ತಮ್ಮ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸುವರೆಂದು ನಂಬುತ್ತೇನೆ. ಗ್ರಾಮಾಂತರಗಳಲ್ಲಿ ಸ್ಥಾಪಿಸಲ್ಪಟ್ಟ ಈ ಕಾಲೇಜು ಗ್ರಾಮಗಳ ಕಡೆಗೆ ಸರಿಯಾದ ಗಮನಕೊಡಬೇಕೆನ್ನುವ ಆಕಾಂಕ್ಷೆಯ ಕುರುಹಾಗಿದೆ ಎಂದರು.

ಮುಂದುವರಿಸುತ್ತಾ ಕುಟುಂಬಯೋಜನೆಯ ಕುರಿತಾಗಿ ಜನರಲ್ಲಿರುವ ಅಂಧಶ್ರದ್ಧೆಗಳನ್ನು ಹೋಗಲಾಡಿಸಬೇಕು. ಕುಟುಂಬಯೋಜನೆ ಎಂದರೆ ಮಕ್ಕಳೇ ಇರಬಾರದೆಂಬ ಅರ್ಥವಲ್ಲ. ಮಕ್ಕಳಿಲ್ಲದಿದ್ದರೆ ಜೀವನವೇ ನೀರಸವಾಗುವುದು ಎಂದರು. ನಮ್ಮ ದೇಶದಲ್ಲಿ ವಸತಿಗಳ ಪ್ರಶ್ನೆಯೊಂದು ಪ್ರಮುಖ ಪ್ರಶ್ನೆಯಾಗಿದೆ. ಇಲ್ಲಿಯ ಸಹಕಾರಿ ವಸತಿಕೇಂದ್ರ ರಚನೆಯ ಯೋಜನೆಯು ಉತ್ತಮ ಹೆಜ್ಜೆಯಾಗಿರುವುದು ಎಂದು ನುಡಿದು ಸ್ಥಳೀಯ ಗ್ರಾಮಾಂತರ ವೈದ್ಯಕೀಯ ಸಹಾಯ ಕೇಂದ್ರಕ್ಕೆ ರೂ. 500 ಕೊಡುವ ವಾಗ್ದಾನವಿತ್ತರು. ಡಾ. ಕೃಷ್ಣರಾಯರು ವಂದನೆಗಳನ್ನರ್ಪಿಸಿದರು

**ಕಾರ್ಕಳ ಆಸ್ಪತ್ರೆಯ ವಿಸ್ತರಣದ ಶಂಕುಸ್ಥಾಪನೆ—** ಮಣಿಪಾಲದ ಕಾರ್ಯಕ್ರಮವನ್ನು ಮುಗಿಸಿ ಅಲ್ಲಿಯೇ ಭೋಜನ ತೀರಿಸಿ, ಅಲ್ಲಿಯ ಹರಿಜನ ವಿದ್ಯಾರ್ಥಿಭವನವನ್ನು ಸಂದರ್ಶಿಸಿ ರಾಜ್ಯಪಾಲರು ಕಾರ್ಕಳಕ್ಕೆ ಆಗಮಿಸಿದರು. ಕಾರ್ಕಳದ ಪುರಜನರು ಸ್ವಾಗತ ನೀಡಿದರು. ಶಾಲಾ ಬಾಲ ಬಾಲಿಕೆಯರು ಗೌರವರಕ್ಷೆ ಸಲ್ಲಿಸಿದರು ನಂತರ ಕಾರ್ಕಳ ಪಂಚಾಯತ ಅಧ್ಯಕ್ಷ ಶ್ರೀ ಎಸ್. ಎಮ್. ಅಡ್ಯಂತಾಯರು ಪಂಚಾಯತರ ಪರವಾಗಿ ಮಾನಪತ್ರವನ್ನು ರಾಜ್ಯಪಾಲರಿಗೆ ಅರ್ಪಿಸಿದರು. ಜಿಲ್ಲಾ ಮೆಡಿಕಲ್ ಆಫೀಸರ್ ಡಾ. ಎ ತಿಮ್ಮಪ್ಪಯ್ಯನವರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನೋದಿ ಆಸ್ಪತ್ರೆಯ ವರದಿಯನ್ನೋದಿದರು. ಈ ಆಸ್ಪತ್ರೆಯು 1879ರಲ್ಲು ಸ್ಥಳೀಯ ಸಂಸ್ಥೆಯಿಂದ ಸ್ಥಾಪಿಸಲಾಗಿದ್ದು 1919ರಲ್ಲು ಇದರಲ್ಲಿ ಚಿಕಿತ್ಸಾಲಯ ಮತ್ತು ಹೊರ ರೋಗಿಗಳ ವಿಭಾಗ ತೆರೆಯಲ್ಪಟ್ಟಿತು. 1951ನೆ ಜೂನ್ ತಿಂಗಳಲ್ಲಿ ಆಸ್ಪತ್ರೆಯನ್ನು ಸರಕಾರವು ವಹಿಸಿಕೊಂಡು 38 ಹಾಸಿಗೆಗಳ ಸೌಕರ್ಯ ಒದಗಿಸಲಾದೆ. ಜಿಲ್ಲೆಯ ತಾಲೂಕು ಆಸ್ಪತ್ರೆಗಳ ಪೈಕಿ ಕಾರ್ಕಳ ಆಸ್ಪತ್ರೆಯಲ್ಲಿ ದಂತ ಚಿಕಿತ್ಸಾ ವಿಭಾಗ ತೆರೆಯಲಾಗಿದೆ. ಪ್ರಕೃತ ಅಸ್ತಿವಾರಿಹಾಕುತ್ತಿರುವ ಹೊಸ ವಿಭಾಗದ ಮೂಲಕ ಆಸ್ಪತ್ರೆಯಲ್ಲಿ ಒಟ್ಟು 53ಹಾಸಿಗೆಗಳಸೌಕರ್ಯಜರಗಿಸಿದಂತಾಗುವುದು. ಕಾರ್ಕಳ ಆಸ್ಪತ್ರೆಯ ಸುಧಾರಣೆಯ ಕಾರ್ಯದಲ್ಲಿ ಮದ್ರಾಸಿನ 'ಆರೋಗ್ಯ' ಮಂತ್ರಿ ಶ್ರೀ ಎ. ಬಿ. ಶೆಟ್ಟರು ತೋರಿದ ಸಹಾನುಭೂತಿ, ಸಹಕಾರ ಸ್ಮರಣೀಯವಾಗಿದೆ ಎಂದು ಮುಖ್ಯವಾಗಿ ವರದಿಯಲ್ಲಿ ಹೇಳಲಾಗಿತ್ತು.

ರಾಜ್ಯಪಾಲರು ವಿದ್ಯುತ್ ಗುಂಡಿಯನೊತ್ತಿ ಅಸ್ತಿವಾರ ಶಿಲೆಯ ಅನಾವರಣಮಾಡಿದರು. ಬಳಿಕ ಬೆಳ್ಳಿ ಬಾಣಿಯಿಂದ ಗಾರೆಯನ್ನು ಅಸ್ತಿವಾರ ಕಲ್ಲಿನ ಮೇಲೆ ಬಳಿದರು. ಶ್ರೀ ಎ. ಎಸ್. ಖುರ್ಷಿದ್ ಹಸ್ಸನ್‌ರವರು ಧನ್ಯವಾದವಿತ್ತರು.

**ಕಡಿಯಾಳಿ—** ಸ್ಥಳೀಯ ಕಡಿಯಾಳಿ ಹಾ. ಎ. ಶಾಲೆಯಲ್ಲಿ ಆ ಶಾಲೆಯ ಸ್ಥಾಪಕರ ದಿನಾಚರಣೆಯು ತಾ. 17ರಲ್ಲು ಶ್ರೀ ಬಿ. ಶ್ರೀನಿವಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ವಿ. ವಾಸುದೇವ ಭಟ್ಟರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ಎಚ್. ರಾಮಚಂದ್ರ ಭಟ್ ಮತ್ತು ಎಸ್. . ಸದಾಶಿವರಾಯರು ಸಂದರ್ಭೋಚಿತ ಭಾಷಣವಿತ್ತರು. ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

**ಬ್ರಹ್ಮಾವರ—** ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ತಾ. 16ರಲ್ಲು ಶ್ರೀ ಎ. ಜೆ. ಆಳ್ವಯವರ ಅಧ್ಯಕ್ಷತೆಯಲ್ಲಿ ಶ್ರೀ ವಿನೋಬಾರವರ ಜನ್ಮದಿನೋತ್ಸವ ಹಾಗೂ ಭೂ ಜಯಂತಿ ಆಚರಿಸಲ್ಪಟ್ಟಿತು. ಶ್ರೀಗಳಾದ ಕೆ. ಶ್ರೀನಿವಾಸ ಪೈ ಬಿ. ವೆಂಕಟಕೃಷ್ಣ ರಾವ್ ಮೊದಲಾದವರ ಭಾಷಣಗಳಾದ ನಂತರ, ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ರಾಮನ್ ಗುರುಕಲ್, ಅವರು ಧನ್ಯವಾದಗಳನ್ನಿತ್ತರು.

ಬ್ರಹ್ಮಾವರದಲ್ಲಿ ಉಡುಪಿ ತಾಲೂಕು ಆಯುರ್ವೇದ ವೈದ್ಯರ ಸಭೆಯೊಂದು ಪಂಡಿತ ಕೇಶವ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿ ತಾಲೂಕು ಆಯುರ್ವೇದ ವೈದ್ಯರ ಮಹಾ ಸಭೆಯನ್ನು ಉಡುಪಿಯಲ್ಲಿ ಕರೆಯಬೇಕೆಂದಾಯಿತು.

**ಸಾಸ್ತಾನ—** ಇಲ್ಲಿಯ ತಾ. 16ರಲ್ಲು ಶ್ರೀ ಎ. ಜೆ. ಆಳ್ವಯವರ ಅಧ್ಯಕ್ಷತೆಯಲ್ಲಿ ವಿನೋಬಾರವರ ಜಯಂತಿ ಆಚರಿಸಲಾಯಿತು. ಶ್ರೀಗಳಾದ ಗಣಪತಿ ವೆಂಕಟ್ರಮಣ ಅಡಿಗ, ಕೆ. ಎಸ್. ಪೈ, ಐ. ಗಾಮವಾಸ ಪೈ, ಯು. ರಾಮರಾಯರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಪಿ. ಜಿ. ವಿ. ಚಡಗರು ವಂದನೆಗಳನ್ನರ್ಪಿಸಿದರು

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೋಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.



## ಗೋವಿಜಯ
(ಗೋವಿನ ಕಥೆ)

ಶ್ರೀ. ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ಮುಮುಕ್ಷುರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ. ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ, ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತ, ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**೬೪ ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

## ರಾಜ್ಯಪಾಲರ ಸಂಚಾರ

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮದ್ರಾಸ್ ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು

### ನಿಬಿಡ ಕಾರ್ಯಕ್ರಮಗಳು ಎಲ್ಲೆಲ್ಲೂ ಸಂಭ್ರಮದ ಸ್ವಾಗತ

ಮದ್ರಾಸ್ ಗವರ್ನರ್ ಶ್ರೀ ಶ್ರೀ ಪ್ರಕಾಶರು ಇದೇ ತಾ. 20ರಂದು ಸಂಜೆ ಮಂಗಳೂರಿಗೆ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ ವಿ. ಸುಬ್ರಹ್ಮಣ್ಯಂ ರವರು ಸ್ವಾಗತಿಸಿದರು. ರಾಜ್ಯಪಾಲರ ಬಂಡಿಯು ಮಂಗಳೂರು ಬಂದರದ ಬಳಿಗೆ ಬಂದಾಗ, ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರೂ ರಾಜ್ಯಪಾಲರಿಗೆ ಪುಷ್ಪಹಾರಗಳನ್ನರ್ಪಿಸಿದರು. ನಂತರ ಜಿಲ್ಲಾ ಕಲೆಕ್ಟರರು ಪ್ರಮುಖರ ಪರಿಚಯ ಮಾಡಿಸಿದರು.

**ನಗರಸಭೆ ಮತ್ತು ಜಿ. ಬೋರ್ಡಿನ ಸ್ವಾಗತ—** ಸರಕಾರಿ ಕಲಾಶಾಲೆಯ ಸಭಾಂಗಣಕ್ಕೆ ಬರುವ ಮುನ್ನ ಶ್ರೀ ಶ್ರೀ ಪ್ರಕಾಶರು ರಿಜರ್ವ್ ಪೋಲೀಸರ ಗೌರವ ರಕ್ಷೆಯನ್ನು ಸ್ವೀಕರಿಸಿದರು. ಮಂಗಳೂರು ನಗರಸಭೆಯ ಪರವಾಗಿ ನಗರಸಭಾಪತಿ ಶ್ರೀ ಕೆ. ಎಸ್. ಎನ್. ಅಡಿಗರು ಗಂಧದ ಕರಂಡಕದಲ್ಲಿ ಮಾನಪತ್ರವನ್ನೂ ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ರಜತ ಕರಂಡಕದಲ್ಲಿ ಜಿಲ್ಲಾ ಬೋರ್ಡಿನ ಮಾನಪತ್ರವನ್ನೂ ರಾಜ್ಯಪಾಲರಿಗೆ ಅರ್ಪಿಸಿದರು.

ಶ್ರೀ ಶ್ರೀ ಪ್ರಕಾಶರು ಮಾನಪತ್ರಗಳಿಗೆ ಉತ್ತರವೀಯುತ್ತಾ ರಾಜ್ಯಪುನರ್ಘಟನಾ ವ್ಯವಸ್ಥೆಯಲ್ಲಿ ನಿಮ್ಮ ಜಿಲ್ಲೆಯು ತನ್ನ ಮಾತೃರಾಜ್ಯವನ್ನು ಅಗಲಿ ಮಹಾ ಮೈಸೂರು ರಾಜ್ಯಕ್ಕೆ ಸದ್ಯವೇ ಸೇರಲಿರುವ ಈ ಸನ್ನಿವೇಶದಲ್ಲಿ ನಾನಿಂದು ನಿಮ್ಮ ಜಿಲ್ಲೆಗೆ ಸಂದರ್ಶನವೀಯುತ್ತಿದ್ದೇನೆ. ಈ ಸಂದರ್ಭದಲ್ಲಿ ಕಾಸರಗೋಡು ತಾಲೂಕನ್ನು ನಿಮ್ಮ ಜಿಲ್ಲೆ ಕಳಕೊಳ್ಳುತ್ತಿರುವುದಾಗಿ ನಿಮಗೆ ವ್ಯಸನವಿರುವುದು ಸಹಜವೇ. ಕಾಸರಗೋಡು ತಾಲೂಕಿನ ಜನಾಭಿಪ್ರಾಯಕ್ಕೆ ಮಾನ್ಯತೆ ಕೊಡಬೇಕೆಂದು ಲೋಕಸಭಾ ಸದಸ್ಯರು ಸಾಧ್ಯವಿದ್ದ ಎಲ್ಲಾ ಪ್ರಯತ್ನವನ್ನೂ ಮಾಡಿದ್ದಾರೆ. ಮಾತ್ರವಲ್ಲದೆ, ಮದ್ರಾಸು ಸರಕಾರವೂ ಕಾಸರಗೋಡು ತಾಲೂಕಿನ ಬಹು ಜನಾಭಿಪ್ರಾಯಕ್ಕೆ ಮನ್ನಣೆ ಕೊಡಬೇಕೆಂಬ ಶಿಫಾರಸು ಮಾಡಿತ್ತು. ಆದರೂ ಲೋಕಸಭೆಯು ಇಂತಹ ಹಲವು ಸಮಸ್ಯೆಗಳನ್ನೂ ಗಮನಿಸಬೇಕಾಗಿದ್ದುದರಿಂದ ಈ ವಿಚಾರದಲ್ಲಿ ಹೆಚ್ಚಿಗೇನನ್ನೂ ಮಾಡಲಾಗಲಿಲ್ಲ. ಹೇಗಿದ್ದರೂ ಒಮ್ಮೆ ಆದ ಈ ನಿರ್ಣಯವನ್ನು ದೇಶ ಹಾಗೂ ಜನಾಂಗದ ಹಿತದೃಷ್ಟಿಯಿಂದ ನೀವು ಒಪ್ಪಿಕೊಳ್ಳಬೇಕೆಂದು ನನ್ನ ವಿನಂತಿ. ಪ್ರಜಾಪ್ರಭುತ್ವದಲ್ಲಿ ಯಾವ ನಿರ್ಣಯವೂ ಅಂತಿಮವೆಂದಲ್ಲ. ಘಟನಾತ್ಮಕ ವಿಧಾನದಿಂದ ಶಾಂತ ವಾತಾವರಣದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ, ಎಂದರು. ರಾಜ್ಯಪಾಲರು ಮುಂದುವರಿದು ಎಲ್ಲಾ ವಿಷಯಗಳಲ್ಲೂ ನಿಮ್ಮ ನಗರವು ಬಹಳ ಮುಂದುವರಿದಿದೆ. ನಗರ ಅಭಿವೃದ್ಧಿಗಾಗಿ ನೀವು ಮಾಡುತ್ತಿರುವ ಕಾರ್ಯವು ಇತರರಿಗೆ ಒಂದು ಮಾದರಿಯಾಗಿದೆ. ನಿಮ್ಮ ಜಿಲ್ಲೆ ಮದ್ರಾಸು ರಾಜ್ಯದಿಂದ ಬೇರ್ಪಟ್ಟು ವಿಸ್ತೃತ ಮೈಸೂರು ರಾಜ್ಯಕ್ಕೆ ಸೇರುವ ಈ ಸನ್ನಿವೇಶದಲ್ಲಿ, ನಿಮ್ಮ ನಗರ ಸಭಾಭವನ ನಿರ್ಮಾಣಕ್ಕಾಗಿ ಸರಕಾರಿ ಸ್ಥಳವೊಂದನ್ನು ಬಿಡುಗಡೆಯ ಉಡುಗೊರೆಯಾಗಿ ಕೊಡಬೇಕೆಂದು ನೀವು ಮಾನಪತ್ರದಲ್ಲಿ ಸೂಚಿಸಿರುವಿರಿ. ಆ ಬಗ್ಗೆ ನಾನೇನಾದು ಸೂಚನೆ ಮಾಡುವೆನು ಎಂದರು. ಕೊನೆಯದಾಗಿ ಶ್ರೀ ಎ. ಬಿ. ಶೆಟ್ಟರು ನಿಮ್ಮ ನಗರ ಹಾಗೂ ಜಿಲ್ಲೆಯ ಆರೋಗ್ಯಾಭಿವೃದ್ಧಿಗಾಗಿ ಮಾಡಿದ ಸೇವೆಯನ್ನು ನೀವು ಪ್ರಶಂಸಿಸುವಿರಿ. ಎಪ್ಪತ್ತು ವರ್ಷ ಪ್ರಾಯದಲ್ಲೂ ವಿಶ್ರಾಂತವಾಗಿ ಶ್ರಮಿಸುತ್ತಿರುವ ಶ್ರೀ ಶೆಟ್ಟರಿಂದ ನಾವು ಪ್ರತ್ಯೇಕವಾಗಬೇಕಾಗಿ ಬಂದುದಕ್ಕಾಗಿ ನಾನು ವಿಷಾದಪಡುತ್ತೇನೆ ಎಂದರು.



ನಂತರ ರಾಜ್ಯಪಾಲರು ಬಂದರಿಗೆ ತೆರಳುವಾಗ ದಾರಿಯಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಭೇಟಿಯಿತ್ತು ಶ್ರೀ ಟಿ. ಅಣ್ಣಪ್ಪ ನಾಯಕರಿಂದ ಸ್ವಾಗತ ಸ್ವೀಕರಿಸಿ ಗಂಧಪ್ರಸಾದ ಸ್ವೀಕರಿಸಿದರು. ರಾತ್ರಿ ಜಿಲ್ಲಾ ಬೋರ್ಡ್ ಸಭಾಭವನದಲ್ಲಿ ಸತ್ಕಾರಸಮಿತಿಯ ಭೋಜನ ಸತ್ಕಾರವಾಯಿತು.

**ಜಿಲ್ಲಾ ಕೋರ್ಟಿನಲ್ಲಿ ಡಾ| ಬಿ ಎನ್. ರಾಯರ ಭಾವಚಿತ್ರ ಅನಾವರಣ.** ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ತಾ. 21ರಂದು ಅಪರಾಹ್ನ ಜಿಲ್ಲಾ ಕೋರ್ಟಿನಲ್ಲಿ ದಿವಂಗತ ಸರ್ ಬೆನಗಲ್ ನರಸಿಂಗರಾಯರ ಭಾವಚಿತ್ರವನ್ನು ಅನಾವರಣ ಮಾಡುತ್ತಾ ಶ್ರೀ ಬೆನಗಲ್ ನರಸಿಂಗ ರಾಯರು ದೇಶವಿದೇಶಗಳಲ್ಲಿ ಹೆಸರಾಂತ ಕೆಲಸಮಾಡಿರುತ್ತಾರೆ. ಕಾಶ್ಮೀರ ವಿವಾದದಲ್ಲಿ ಭಾರತದ ವಾದವನ್ನು ಬಹಳ ದಕ್ಷತೆಯಿಂದ ಮಂಡಿಸಿದ್ದರು. ಡಾ| ಬಿ. ಎನ್. ರಾಯರಂತಹ ಪುತ್ರನನ್ನು ಪಡೆದ ಈ ಜಿಲ್ಲೆಯು ಭಾಗ್ಯಶಾಲಿ ಎಂದರು.

ಆರಂಭದಲ್ಲಿ ವಕೀಲ ಸಂಘದ ಅಧ್ಯಕ್ಷ ಶ್ರೀ ಜಿ. ಸೋಮಶೇಖರ ರಾಯರು ಸ್ವಾಗತ ಭಾಷಣ ಮಾಡಿದರು. ವಕೀಲ ಸಂಘದ ಕಾರ್ಯದರ್ಶಿ ಶ್ರೀ ಎ. ಶಂಕರ ಆಳ್ವರು ಸಂದೇಶವನ್ನು ಓದಿ, ಧನ್ಯವಾದಗಳನ್ನರ್ಪಿಸಿದರು.

**ಕಂಕನಾಡಿ ಕೃಷಿ ಪರಿಶೋಧನಾ ಕೇಂದ್ರದಲ್ಲಿ—** ಕೃಷಿ ಪರಿಶೋಧನಾ ಮತ್ತು ಪಡೀಲ್ ಹಣ್ಣು ಹಂಪಲು ಕ್ಷೇತ್ರದ ರೈತರ ದಿನಾಚರಣೆಯು ತಾ 21ರಲ್ಲಿ ಅಪರಾಹ್ನ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ಈ ಕ್ಷೇತ್ರವನ್ನು ಸಂದರ್ಶಿಸಿ, ಕ್ಷೇತ್ರದ ಸಿಬ್ಬಂಧಿ ವಸತಿ ಗೃಹಗಳ ಉದ್ಘಾಟನೆ ಮಾಡಿದರು. ವನಮಹೋತ್ಸವದ ಪ್ರಾದೇಶಿಕ ಪಾರಿತೋಷಕವಾದ ರೋಲಿಂಗ್ ಕಪ್ಪನ್ನು ದ. ಕ. ಜಿಲ್ಲೆಯ ಪರವಾಗಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರಿಗೆ ಒಪ್ಪಿಸಿದರು. ರಾತ್ರಿ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ರಜತ ಮಹೋತ್ಸವದ ಸಂಬಂಧವಾದ ಭೋಜನ ಸತ್ಕಾರದಲ್ಲಿ ಸಹ ಭಾಗಿಗಳಾದರು.

**ಹಿಂದೀ ಪ್ರಚಾರ ಸಮಿತಿಯ ಕಟ್ಟಡದ ಶಂಕುಸ್ಥಾಪನೆ—** ಮದ್ರಾಸಿನ ರಾಜ್ಯಪಾಲರು ತಾ 21ರಂದು ಬೆಳಿಗ್ಗೆ ಮಂಗಳೂರು ಪ್ರಾದೇಶಿಕ ಹಿಂದಿ ಪ್ರಚಾರ ಸಮಿತಿಯ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡುತ್ತಾ ಹಿಂದಿಯು ಮಾತ್ರವೇ ನಮ್ಮ ರಾಷ್ಟ್ರಭಾಷೆಯಲ್ಲ ಭಾರತದ ಎಲ್ಲಾ ಭಾಷೆಗಳೂ ರಾಷ್ಟ್ರಭಾಷೆಗಳು. ರಾಷ್ಟ್ರದ ಬಹುತೇಕ ಮಂದಿ ಪ್ರಜೆಗಳ ಮಾತೃಭಾಷೆಯಾಗಿರುವ ಹಿಂದಿಯನ್ನು ಅಂತರ್ಪ್ರಾಂತೀಯ ವಿಚಾರ ವಿನಿಮಯ ಹಾಗೂ ರಾಷ್ಟ್ರದ ಆಡಳಿತ ನಿರ್ವಹಣಕ್ಕಾಗಿ ಆರಿಸಿಕೊಳ್ಳಲಾಗಿದೆಯಷ್ಟೇ ಎಂದು ಮುಂತಾಗಿ ಹೇಳಿ ಸ್ಥಳೀಯ ಹಿಂದಿ ಪ್ರಚಾರ ಸಮಿತಿಗೆ ರೂಪಾಯಿ 250/- ಉದಾರ ದಾನವಿತ್ತರು. ಆರಂಭದಲ್ಲಿ ಸಮಿತಿಯ ಖಜಾಂಚಿ ಡಾ. ಯು. ಪಿ. ಮಲ್ಯರು ಸ್ವಾಗತ ಭಾಷಣ ಮಾಡಿದರು. ಸಮಿತಿ ಉಪಾಧ್ಯಕ್ಷ ಡಾ. ಕೆ. ನಾಗಪ್ಪ ಆಳ್ವರು ಧನ್ಯವಾದಗಳನ್ನಿತ್ತರು.

**ಸೇವಾ ಸಮಾಜದ ನರ್ಸರಿಶಾಲಾ ಕಟ್ಟಡದ ಉದ್ಘಾಟನೆಯನ್ನು—** ಶ್ರೀ ಶ್ರೀ ಪ್ರಕಾಶರು ನೆರವೇರಿಸುತ್ತಾ ಮಂಗಳೂರು ಸೇವಾಸಮಾಜದವರು ಮಾಡುತ್ತಿರುವ ಕಾರ್ಯಗಳಿಗೆ ಮನದಣಿಯೆ ಪ್ರಶಂಸಿಸಿ ಮಹಿಳೆಯರಾದ ನೀವು ಇಂತಹದೊಂದು ಸೇವಾಸಮಾಜದ ಮೂಲಕ, ಬಡ ಮಕ್ಕಳ ಪಾಲನೆಯನ್ನು ಮಾಡುತ್ತಿರುವುದು ಪ್ರಶಂಸನೀಯ ಸಂಗತಿ. ಸಮಾಜಸೇವಾ ಕಾರ್ಯದಲ್ಲಿ ನಿರತರಾದ ನೀವು-ಮಹಿಳೆಯರು, ಮನೆ ಮನೆಗೂ ಹೋಗಿ, ತಂದೆ ತಾಯಂದಿರು, ಎಷ್ಟು ಬಡವರಾದರೂ ಕೂಡಾ, ತಮ್ಮ ಮಕ್ಕಳ ಆರೈಕೆಯನ್ನು ಹೇಗೆ ಉತ್ತಮವಾಗಿ ಮಾಡಬೇಕು ಹಾಗೂ ನೋಡಲಿಕ್ಕೆ ಸಾಧ್ಯವಿದೆ ಎಂಬುದನ್ನು ವಿವರಿಸಿ ತಿಳಿಯಪಡಿಸಬೇಕು, ಎಂದು ಮುಂತಾಗಿ ಹೇಳಿ ಸೇವಾ ಸಮಾಜಕ್ಕೆ ರೂಪಾಯಿ 500/- ಉದಾರ ದಾನವಿತ್ತರು.

**ಕೆನರಾ ವರ್ಕ್ ಶೋಪಿಗೆ ಸಂದರ್ಶನ—** ತಾ. 22ನೇ ಬೆಳಿಗ್ಗೆ ರಾಜ್ಯಪಾಲರು ಮಾರ್ನೇಮಿಯ ಕೆನರಾ ವರ್ಕ್ಸ್ ಶೋಪಿಗೆ ಸಂದರ್ಶನವಿತ್ತರು. ಮೆನೇಜಿಂಗ್ ಡೈರೆಕ್ಟರ್ ಶ್ರೀ ವಿ. ಎಸ್. ಕುಡ್ವರು 1948ರಲ್ಲಿ ಸಣ್ಣ ರೂಪದಲ್ಲಿ ಪ್ರಾರಂಭವಾದ ಈ ಕಾರ್ಖಾನೆಯು ಈಗ ಎಂಟು ಲಕ್ಷಕ್ಕೆ ಮಿಕ್ಕಿದ ಭಂಡವಾಳವಿರುವ ಆತ್ಯಾಧುನಿಕ ಯಂತ್ರ ಸಾಮಗ್ರಿಗಳಿಂದ ಸಜ್ಜಿತವಾಗಿ ಮೋಲ್ದರಗತಿಯ ಸ್ಪ್ರಿಂಗುಗಳನ್ನು ತಯಾರಿಸುವ ಕಾರ್ಖಾನೆಯಾಗಿ ಬೆಳೆದು ಬಂದ ವಿಧಾನ, ಮುಂದಿನ ಯೋಜನೆ, ಮೊದಲಾದುವನ್ನು ವಿವರಿಸುವ ನಿರೂಪಣಾ ಪತ್ರವನ್ನು ಕೊಟ್ಟು ಕಾರ್ಖಾನೆಯ ವಿವಿಧ ವಿಭಾಗಗಳ ಕಾರ್ಯವನ್ನು ವಿವರಿಸಿದರು. ರಾಜ್ಯಪಾಲರು ಕಾರ್ಖಾನೆಯ ಕಾರ್ಯ ವಿಭಾಗಗಳನ್ನೆಲ್ಲ ಆಸಕ್ತಿಯಿಂದ ನೋಡಿ, ಅದರ ಪ್ರಗತಿಯ ಬಗ್ಗೆ ಆನಂದಪಟ್ಟರು.

**ಇತರ ಕಡೆಗೆ ಭೇಟಿಗಳು—** ಅನಂತರ ಬಜ್ಪೆಗೆ ಹೋಗಿ ಅಲ್ಲಿ ಸಮಾಜ ಮಂದಿರ, ಪ್ರೈಮರಿ ಹೆಲ್ತ್ ಸೆಂಟರ್, ಮತ್ತು ಪಶುವೈದ್ಯ ಕೇಂದ್ರಗಳಿಗೆ ಭೇಟಿಯಿತ್ತರು. ಅಲ್ಲಿಂದ ಮುಂದುವರಿದು ಹದವು ಸಮಾಜ ವಿಕಾಸನಾ ಯೋಜನೆಯ ರಸ್ತೆಯ ಮಾರ್ಗವಾಗಿ ಮೂಡಬಿದ್ರೆಗೆ ತೆರಳಿ, ಅಲ್ಲಿಯ ಕಲಾಮಂಟಪದ ಉದ್ಘಾಟನೆಯನ್ನು ನೆರವೇರಿಸಿದರು.

ತಾ. 22ನೇ ಅಪರಾಹ್ನ ಮಂದಾವರ ಹೊಳೆಗೆ ಸಮಾಜ ವಿಕಾಸ ಯೋಜನೆಯ ಸಹಾಯದಿಂದ ಕಟ್ಟಿಸಿದ ಸಂಕವನ್ನು ಉದ್ಘಾಟಿಸಿದರು. ತತ್ಪೂರ್ವದಲ್ಲಿ ತುಂಬೆಯಲ್ಲಿರುವ ಮಂಗಳೂರಿನ ನಳ್ಳಿ ನೀರು ಒದಗಿಸುವ ಪೂರೈಕೆಯ ಯೋಜನೆಯ ಜಲಾಶಯವನ್ನು ನೀಕ್ಷಿಸಿದರು.

ತರುವಾಯ ಬಂಟ್ವಾಳಕ್ಕೆ ತೆರಳಿ ಅಲ್ಲಿ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಸಮಾಜ ವಿಕಾಸ ಯೋಜನೆಯ ಸಹಾಯದಿಂದ ಕಟ್ಟಿಸಿದ ಹೆರಿಗೆ ವಾರ್ಡನ್ನು ಉದ್ಘಾಟಿಸಿದರು. ತರುವಾಯ ಶ್ರೀ ವೆಂಕಟ್ರಮಣ ಸ್ವಾಮಿ ದೇವಸ್ಥಾನದ ಶಾಲಾ ವಠಾರದಲ್ಲಿ ಸಾರ್ವಜನಿಕ ಸಭೆ ಜರಗಿತು. ಅಲ್ಲಿ ಗೌರವ ರಕ್ಷೆ, ವ್ಯಾಯಾಮ ಪ್ರದರ್ಶನಗಳು ನಡೆದ ಮೇಲೆ ಬಂಟ್ವಾಳಕ್ಕೆ ಜೋಗ ವಿದ್ಯುತ್ತಿನ ಪೂರೈಕೆಯ ಉದ್ಘಾಟನೆಯನ್ನು ನೆರವೇರಿಸಿದರು.

**ರೋಟರಿ ಕ್ಲಬ್ಬಿನಲ್ಲಿ—** ತಾ. 22ನೇ ರಾತ್ರಿ ರೋಟರಿ ಕ್ಲಬ್ಬಿನವರು ರಾಜ್ಯಪಾಲರಿಗೆ ಭೋಜನಸಮಾರಂಭವನ್ನು ಏರ್ಪಡಿಸಿದ್ದರು ಅಲ್ಲಿ ರಾಜ್ಯಪಾಲರು ಆದಷ್ಟು ಹೆಚ್ಚೆಚ್ಚು ಜನರೊಡನೆ ಸಂಪರ್ಕವನ್ನು ಬೆಳೆಯಿಸುತ್ತ, ಮಾನುಷತ್ವದ ಉನ್ನತಿಯನ್ನು ಸಾಧಿಸಬೇಕೆಂದರು. ಡಾ. ಯು. ಪಿ. ಮಲ್ಯರು ರಾಜ್ಯಪಾಲರ ಪರಿಚಯ ಮಾಡಿದರು. ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಯಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು.

**ಬೈಲೂರು ಹೈಸ್ಕೂಲು ಕಟ್ಟಡದ ಉದ್ಘಾಟನೆ—** ತಾ. 23ನೇ ಬೆಳಿಗ್ಗೆ ನೀರೆ ಬೈಲೂರು ಶಿಕ್ಷಣ ಸಂಘದವರು ಸಮಾಜವಿಕಾಸಯೋಜನೆ ಮತ್ತು ಸಾರ್ವಜನಿಕರ ಸಹಾಯದಿಂದ ಕಟ್ಟಿಸಿದ ಬೋರ್ಡ್ ಹೈಸ್ಕೂಲಿನ ನವೀನ ಕಟ್ಟಡದ ಉದ್ಘಾಟನೆಯನ್ನು ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ನೆರವೇರಿಸುತ್ತಾ, ಗ್ರಾಮಗಳೇ ದೇಶದ ಜೀವಾಳವೆಂದೂ, ಗ್ರಾಮಗಳ ಶಿಕ್ಷಿತ ಜನರು ತಮ್ಮ ಗ್ರಾಮಾಭಿವೃದ್ಧಿಗಾಗಿ ದುಡಿಯಬೇಕೆಂದೂ ಹೇಳಿದರು.

ಇದೇ ಸಂದರ್ಭದಲ್ಲಿ ಈ ಶಿಕ್ಷಣ ಸಂಘದ ಅಧ್ಯಕ್ಷ ಡಾ. ಯು. ಎಲ್. ನಾರಾಯಣ ರಾಯರ ಭಾವಚಿತ್ರದ ಅನಾವರಣವನ್ನು ರಾಜ್ಯಪಾಲರು ಜರಗಿಸುತ್ತಾ, ಡಾ. ರಾಯರು ಮದ್ರಾಸಿನಲ್ಲಿದ್ದರೂ ತನ್ನ ಸ್ವಗ್ರಾಮವನ್ನು ಮರೆಯದುದು ಆದರ್ಶನೀಯವೆಂದರು.

ಆರಂಭದಲ್ಲಿ ಸಂಭ್ರಮದ ಸ್ವಾಗತವಾಯಿತು. ನಂತರ ಶ್ರೀ ಬಿ. ವೈಕುಂಠ ಬಾಳಿಗ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಸಭೆಜರಗಿದಾಗ ಶ್ರೀ ಕೆ. ಸದಾನಂದ ಹೆಗ್ಡೆ ಎಮ್. ಪಿ. ಯವರು ಸ್ವಾಗತಿಸಿದರು. ಡಾ ಯು. ಎಲ್. ನಾರಾಯಣ ರಾಯರು ರಾಜ್ಯಪಾಲರಿಗೆ ಮಾನಪತ್ರವನ್ನರ್ಪಿಸಿದರು. ಶ್ರೀ ವಿ. ಎಸ್. ಭಾಸ್ಕರ ರೈಗಳು ಶುಭ ಸಂದೇಶಗಳನ್ನು ವಾಚಿಸಿದರು. ಶ್ರೀ ಜೆ. ನಾರಾಯಣ ಹೆಗ್ಡೆಯವರು ಸಮಿತಿಯ ವರದಿಯನ್ನೂ ಪ್ರಧಾನ ಅಧ್ಯಾಪಕ ಶ್ರೀ ಬಿ. ಎನ್. ಆಚಾರ್ಯರು ಹೈಸ್ಕೂಲಿನ ವರದಿಯನ್ನೂ ಒಪ್ಪಿಸಿದರು. ತರುವಾಯ ಡಾ. ಯು. ಕೃಷ್ಣರಾಯರು ಮಹಾತ್ಮ ಗಾಂಧಿಯವರ ಭಾವಚಿತ್ರದ ಅನಾವರಣಗೈದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಡಾ. ಯು. ಎಲ್. ನಾರಾಯಣ ರಾಯರ ಜೀವನದ ಪರಿಚಯವನ್ನು ವಿವರಿಸಿ, ಅವರ ಭಾವಚಿತ್ರವನ್ನು ಅನಾವರಣ ಮಾಡುವಂತೆ ವಿನಂತಿಸಿದ ಮೇರೆಗೆ ರಾಜ್ಯಪಾಲರು ಡಾ. ರಾಯರ ಭಾವಚಿತ್ರವನ್ನು ಅನಾವರಣಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಡಾ. ಎ. ಕೆ. ಎಲ್. ರಾಯರು ಆಭಾರ ಸೂಚಿಸಿದರು.

ತತ್ಪೂರ್ವದಲ್ಲಿ ರಾಜ್ಯಪಾಲರು ಸಮಾಜವಿಕಾಸ ಯೋಜನೆಯ ಸಹಾಯದಿಂದ ನಿರ್ಮಿಸಿದ ಇಗಾರಂ — ಯೆಲಿಯಾವಿ — ಬೈಲೂರು ರಸ್ತೆ, ಮತ್ತು ಚಿಕ್ಕಾಲುಬೆಟ್ಟು ಸಂಕವನ್ನು ಶ್ರೀ ಜೆ. ದಿವಾಕರ ಹೆಗ್ಡೆಯವರ ಸ್ವಾಗತದೊಡನೆ ಉದ್ಘಾಟಿಸಿದರು.

ಅನಂತರ ಮಣಿಪಾಲ ಕಾರ್ಕಳಗಳ ಕಾರ್ಯಕ್ರಮವನ್ನು ಜರಗಿಸಿ (ವಿವರವನ್ನು ಬೇರೆ ಕಡೆ ಕೊಡಲಾಗಿದೆ) ಸಂಜೆ ರಾಜ್ಯಪಾಲರು, ದ. ಕನ್ನಡದ ನಾಲ್ಕು ದಿವಸಗಳ ಪ್ರವಾಸವನ್ನು ಮುಗಿಸಿ ಕಣ್ಣಾನೂರಿಗೆ ತೆರಳಿದರು.


ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೇವ

ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.
ಉತ್ತಮ ಕಾಗದ. ಬೆಲೆ: ರೂ ೧-೮-೦.
ನವಯುಗ ಪ್ರೆಸ್, ಉಡುಪಿ.

# ಜನಮತ

**ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.**

**ಸಂ. ನ.**

## ಚಲಚ್ಚಿತ್ರಗಳಲ್ಲಿ 'ಅಶ್ಲೀಲ

ನಾಗರಿಕ ಪ್ರಪಂಚದ ಆಧುನಿಕ ಸಾಧನಗಳಲ್ಲಿ ಒಂದಾದ ಚಲಚ್ಚಿತ್ರವು ಇಂದು, ಜನಮನದಲ್ಲಿ ಮನೆಮಾಡಿರುವ ಅಜ್ಞಾನಾಂಧಕಾರವನ್ನು ಅಳಿಸಿ ಅಲ್ಲಿ ಸುಜ್ಞಾನದ ಪ್ರಭೆಯನ್ನು ಪಸರಿಸಿ ತನ್ಮೂಲಕ ಸಮಸ್ತ ಸಮಾಜದ ಸಂಸ್ಕಾರಕ್ಕೆ ಸಹಾಯಕವಾಗುವ ಬದಲು, ಮಾನವನ ಮನುಷ್ಯತ್ವವನ್ನೇ ಮಾಸಿಸಿ ಅವನನ್ನು ಮರಳುಗಾಡಿಗೊಯ್ದು, ಅಖಿಲ ಮಾನವ ಜನಾಂಗವನ್ನೇ ಅಪಕರ್ಷಕ್ಕೀಳಿಸುವ ಅಸಹ್ಯ ಕಾರ್ಯವನ್ನು ಪ್ರಚೋದಿಸುತ್ತಿದೆ. ಎಂದು ವಿಷಾದದಿಂದ ನುಡಿಯಬೇಕಾಗಿದೆ.

'ಅಶ್ಲೀಲ"ವು ಚಲಚ್ಚಿತ್ರ ಪ್ರಪಂಚವನ್ನೂ ಆಕ್ರಮಿಸಿರುವುದೇ ಇದಕ್ಕೆ ಪ್ರಬಲವಾದ ಕಾರಣವಾಗಿದೆ. ಇಂದಿನ ದಿನಗಳಲ್ಲಿ ತೆರೆಯ ಮೇಲೆ ಮೆರೆಯುವ ಹೆಚ್ಚಿನ ಚಿತ್ರಗಳಲ್ಲೂ ಅಶ್ಲೀಲವೇ ಕಂಡುಬರುತ್ತಿದೆ. ಪ್ರಣಯ ಸನ್ನಿವೇಶಗಳಿಂದಲೇ ಕಥೆಯನ್ನು ಪರಿಪುಷ್ಟಿಗೊಳಿಸಿರುತ್ತಾರೆ; ಹೀಗೆ ಜನತೆಯ ಮಾನಸಿಕ ಮೇಲ್ಮೆಗೆ ಕಾರಣವಾಗಿರುವ ಬೇರೆ ಎಲ್ಲಾ ವಿಷಯಗಳಿಂದಲೂ ಅದು ಬಾಹಿರವಾಗಿರುತ್ತದೆ.

ಚಲಚ್ಚಿತ್ರವೂ ಸಾಹಿತ್ಯದಂತೆ ಜನಜೀವನದ ಕೈಗನ್ನಡಿ ಮಾತ್ರವಲ್ಲದೆ ಶ್ರೇಷ್ಠ-ಸುಂದರ ಸಮಾಜ ಸೃಷ್ಟನೆಗೆ ಸಹಕಾರಿಯಾಗಬೇಕಾದ ಸಾಧನವಾಗಿದೆ. ಈ ತನ್ನ ಉಜ್ವಲ ಉದ್ದೇಶವನ್ನು ಬಿಟ್ಟು ಧನಸಂಪಾದನೆಯನ್ನೇ ಪ್ರಾಮುಖ್ಯ ಗುರಿಯಾಗಿಟ್ಟು-ವಿವಿಧಾಂಗಗಳನ್ನು ಪ್ರದರ್ಶಿಸುವಂತೆ ಉಡುಪು ತೊಡುಪುಗಳನ್ನು ಧರಿಸಿ ಒಲಪು ವೈಯ್ಯಾರಗಳಿಂದ ಅಲ್ಲದ ಸಲ್ಲದ ಶುದ್ಧ ಹೃದಯವು ಎಂದೆಂದಿಗೂ ಒಲ್ಲದ ಕೆಟ್ಟ ವಿಚಾರಗಳನ್ನು ಜನತೆಯ ಹೃದಯದಲ್ಲಿ ಹುಟ್ಟಿಸುವುದೆಂದರೆ-ಇದಕ್ಕೆ ನಾವೇನೆನ್ನಬೇಕು? ಉತ್ತಮ ಫಲಕಾಂಕ್ಷೆಯಿಂದ ಬಿತ್ತಿದ ಬೀಜ ವಿಷದ ಹಣ್ಣುಗಳನ್ನೀಯುತ್ತಿದೆ ಎನ್ನದೆ ನಿರ್ವಾಹವಿದೆಯೇ?

ಚಲಚ್ಚಿತ್ರವು ಸ್ವಾಭಾವಿಕವಾಗಿಯೇ ಪ್ರತಿಯೊಬ್ಬನನ್ನೂ ಇನ್ನೂ ಒತ್ತಿ ಎತ್ತಿ ಹೇಳುವುದಿದ್ದರೆ-ಯುವಕರನ್ನೂ ಮಕ್ಕಳನ್ನೂ ಬಹು ಬೇಗನೆ ತನ್ನಡೆಗೆ ಆಕರ್ಷಿಸುತ್ತವೆ. ಪ್ರದರ್ಶನದ ಅಶ್ಲೀಲ ಪ್ರಚಾರ ಅವರ ಹೃದಯದಲ್ಲಿ ಥಕ್ಕನೆ ಪರಿಪೂರ್ಣ ಪ್ರಭಾವವನ್ನು ಬೀರಿಬಿಡುತ್ತದೆ. ಅವರ ಮನಸ್ಸಿಗೆ ಒಮ್ಮೆ ಆ ರೀತಿಯ ಹಾಳು ವಿಚಾರದ ಸೋಂಕು ತಗಲು ತಟ್ಟಿದರೆ ಸಾಕು; ಅದು ಅಲ್ಲಿ ಯಾತಾಯಾತ ಮಾಡುತ್ತಾ ಅವರನ್ನು ಒಂದಲ್ಲ ಒಂದು ದಿನ ನರಕಕೂಪಕ್ಕೆ ತಳ್ಳದಿರಲಾರದು. ಮಕ್ಕಳೂ ಯುವಕರೂ ತಪ್ಪುದಾರಿ ತುಳಿಯಲು ಪ್ರಾರಂಭಿಸಿದರೆ ಭವ್ಯಭಾರತದ ಭಾವೀಜನಾಂಗದ ಗತಿ-ಅಧೋಗತಿ!

ಚಲಚ್ಚಿತ್ರದಲ್ಲಿ ಅಶ್ಲೀಲ ದೃಶ್ಯಗಳನ್ನು ಕಣ್ಣಾರೆ ಕಾಣುವುದರಿಂದ ಅವು ನಿಶ್ಚಯವಾಗಿಯೂ ನಾವು ಕಾದಂಬರಿಯಲ್ಲಿ ಓದುವ ಅಶ್ಲೀಲ ವಿಚಾರಗಳಿಗಿಂತ ಹೆಚ್ಚಿನ ದುಷ್ಪರಿಣಾಮವನ್ನು ಉಂಟುಮಾಡದೆ ಇರಲಾರವು ಆದುದರಿಂದಲೇ ಪ್ರತಿಯೊಬ್ಬನೂ ನೋಡುವ ಚಲಚ್ಚಿತ್ರದಲ್ಲಿ 'ಅಶ್ಲೀಲ'ದ ಅಗಮನ ಖಂಡಿತವಾಗಿಯೂ ಖಂಡನೀಯ!

ಕೆಲವು 'ಸಿನಿಮಾ'ಗಳಲ್ಲಿ ವಯಸ್ಕರಿಗೆ ಮಾತ್ರ ಎಂದು 'ಬೋರ್ಡು' ಹಾಕುವುದಿದ್ದರೂ ಎರಡನೇ ಶೋಕ್ಕೆ ವಿದ್ಯಾರ್ಥಿಗಳೂ ಯುವಕರೂ ಹೋಗುವುದೇ ಹೆಚ್ಚು ಎಂಬುದನ್ನು ಜ್ಞಾಪಿಸಿಕೊಳ್ಳುವುದು ಅಗತ್ಯ.

ಚಲಚ್ಚಿತ್ರದಲ್ಲಿ 'ಅಶ್ಲೀಲ' ಬಾರದಂತೆ ಜಾಗ್ರತೆವಹಿಸಲು ಸರಕಾರದವರು ಒಂದು ಸಂಸ್ಥೆಯನ್ನು ಏರ್ಪಡಿಸಿರುವರಾದರೂ ಅದರ ಅಧಿಕಾರಿಗಳಿಗೆ ಲಂಚವನ್ನು ಕೊಟ್ಟು ಸತ್ಯಕ್ಕೆ ವಂಚನೆಯನ್ನು ನಿರ್ಮಾಪಕರು ಬಗೆಯುವುದರಿಂದಲೇ ಇಂತಹ ಚಿತ್ರಗಳು ತೆರೆಗೆ ಬರುತ್ತಿವೆಯೆಂದು ಹೇಳುವಂತೆ ಇಂದಿನ ಪರಿಸ್ಥಿತಿಯಾಗಿದೆ. ಚಲಚಿತ್ರಗಳೆಲ್ಲವೂ ಅಶ್ಲೀಲದಿಂದ ಕೂಡಿಲ್ಲವೆಂಬುದೂ ಸತ್ಯ. ಆದರೂ ಇನ್ನು ಮುಂದೆ ರಚಕರು 'ನೀತಿಯೇ ಸಮಾಜದ ಸತ್ಯವಾದ ಸಂಪತ್ತು', ಎಂಬುದನ್ನು ಮನಗಂಡು, ಉತ್ತಮ ಚಿತ್ರಗಳನ್ನೇ ಬೆಳಕಿಗೆ ತಂದು ನವ್ಯ ಭವ್ಯ ಸಮಾಜ ಸೃಷ್ಟನೆಗೆ ನೆರವು ನೀಡಲಿ ಎಂದು ಹಾರೈಸೋಣ!

**ಶ್ರೀ ರಮಾನಂದ ಬನಾರಿ,**

ದೇಲಂಪಾಡಿ.

**

## ಶಿಕ್ಷಣ ವಿಧಾನದಲ್ಲಿ ಬದಲಾವಣೆ ಅತ್ಯವಶ್ಯ.

ಹಳ್ಳಿಯಿಂದ ಪೇಟೆಗೆ ಕಲಿಯಲು ತೆರಳಿದ ಓರ್ವ ವಿದ್ಯಾರ್ಥಿ, ಕಾಲೇಜಿನ ವಿದ್ಯಾಭ್ಯಾಸ ಮುಗಿಸಿ, 'ಬಿ. ಎ.' ಯೋ 'ಎಂ. ಎ.' ಯೋ ಆಗಿ ಬಂದಾಗ ಆತನಿಗೆ ಅದೇ ಹಳ್ಳಿಯ ಜನರನ್ನು ಕಂಡಾಗ 'ತಾತ್ಸಾರ' ವುಂಟಾಗುತ್ತಿದೆ- ಇಂದು ಹಳ್ಳಿಯ ಜನರಿಗೆ ಯೇನೂ ತಿಳಿಯದು; ಅವರು ಗಂಜಿಯಲ್ಲಿ ಬಿದ್ದ ನೊಣಗಳು (!)-ಎಂದು ಅವನೆಣಿಸುತ್ತಾನೆ—ಹಗಲಿಡೀ ಬೆವರಿಳಿಸಿ ದುಡಿಯುತ್ತಿರುವ ದುಡಿಮೆಗಾರರನ್ನು ಕಂಡು.

ಅದೇ ಜನರು ಬೆಳೆಸಿದ ಅನ್ನವನ್ನೇ ತಾನು ಉಣ್ಣುವುದು. ಅವರ ದುಡಿಮೆಯ ಫಲದಿಂದಲೇ ತಾನು ಕಲಿತುದು, ಅವರೇ ನಾಡಿನ ಅಧಾರಸ್ತಂಭಗಳು, ಎಂಬಾತ, ತಿಳಿದುಕೊಳ್ಳುವುದಿಲ್ಲ. ಕಾರ್ಮಿಕರು ಇಲ್ಲವೇ ಇದ್ದಲ್ಲಿ ಈ ಪ್ರಪಂಚ ಸಾಗಲಾರದು, ಎಂಬುದವನಿಗೆ ತಿಳಿದಿಲ್ಲ!

ಕಲಿತ ನಾಗರಿಕನಿಗೆ ಬೇಸಾಯ ಮಾಡಲು ತಿಳಿಯದು; 'ಅಡಿಕೆ'ಯು ಮರದಲ್ಲಾಗುವುದೋ, ಬಳ್ಳಿಯಲ್ಲೋ ಎಂದೂ ಕೆಲವರಿಗೆ ತಿಳಿದಿಲ್ಲ. (ಅಂದರೆ ಅದನ್ನಾತ ಪ್ರತ್ಯಕ್ಷ ಕಲಿಯಲಿಲ್ಲ!!) ಹಾಗಿದ್ದರಾತ ಕಲಿತುದೇನು? ವರ್ಷವೊಂದರ ಆ್ಮನೂರು, ಆರುನೂರು ಖರ್ಚು ಮಾಡಿ ಕಲಿತ ವಿದ್ಯೆಯಾವುದು?

ಕೇವಲ ಮಾನಸಿಕ ವಿದ್ಯಾಭ್ಯಾಸ! ಜೀವನವನ್ನು ಸಾಗಿಸಲು ಈ ಮಾನಸಿಕ ವಿದ್ಯಾಭ್ಯಾಸದಿಂದೇನು ಪ್ರಯೋಜನ?

ನಾವಿಂದು ನೋಡುತ್ತಿದ್ದೇವೆ—; ಕಲಿತಂತಹ 'ನಾಗರಿಕ'ರಲ್ಲಿ ಅಂಟಿಕೊಳ್ಳದ ದುರಭ್ಯಾಸಗಳುಂಟೇ? ಅವರಿಗೆ ಸಿಗರೇಟು ಸೇದಬೇಕು. ಸ್ನೋ ಪೌಡರು ಬಳಿದುಕೊಂಡು, ಪೇಂಟು, ಕೋಟು, ಧರಿಸಿ, (ಸ್ನಾನ ಮಾಡದಿದ್ದರೂ ಚಿಂತಿಲ್ಲ) ಪೇಟೆ ಪೇಟೆ 'ವಾಕಿಂಗ್' ಹೋಗಬೇಕು. ಎರಡು ದಿವಸಗಳಿಗೊಮ್ಮೆ 'ಸಿನಿಮಾ' ನೋಡಬೇಕು. ಕನ್ನಡಿಗರಾದರೂ, ಅವರು ನೋಡುತ್ತಿರುವುದು ಇಂಗ್ಲಿಷ್ ಚಿತ್ರಗಳು! ಓದುತ್ತಿರುವುದೂ ಆಂಗ್ಲ ಸಾಹಿತ್ಯವನ್ನೆ!!—ಇನ್ನೂ ಎಷ್ಟೆಷ್ಟೋ...!

ಈ ರೀತಿಯಾಗಲು ಕಾರಣ ಇಂದಿನ ವಿದ್ಯಾಭ್ಯಾಸದ ಕ್ರಮವಲ್ಲದೆ ಬೇರೆಯುಂಟೇ?

ಹೌದು; ಇಂದಿನ ವಿದ್ಯಾಭ್ಯಾಸ ಕ್ರಮ ಬದಲಾಗಬೇಕು; ದೈಹಿಕ ಶ್ರಮವನ್ನೊಳಗೊಂಡಿರಬೇಕು. ಜ್ಞಾನವೆಂಬುದು ಅನುಭವದಿಂದ ಬರಬೇಕು. ಅದು ಪುಸ್ತಕದ ಬದನೆಕಾಯಿಯಾಗಿರಬಾರದು; ನಿಜವಾದ ಬದನೆಕಾಯಿಯೇ ಆಗಿರಬೇಕು. ವಿದ್ಯೆಯನ್ನು ಕಲಿಯುವುದು ಉದ್ಯೋಗಕ್ಕೇ ಅಲ್ಲ; ಅನುಭವಕ್ಕೆ ಎಂದು ತಿಳಿದು ತನ್ನ ಹಿರಿಯರ ವೃತ್ತಿಯನ್ನೇ ಅನುಸರಿಸುವ, ಅಥವಾ ಬೇರೆ ಸದ್ವೃತ್ತಿಗಳನ್ನು ಕೈಗೊಳ್ಳುವ ಕಾರ್ಯದಲ್ಲಿ ಮುಂದೆ ಬರಬೇಕು. ಕೇವಲ ಮಾನಸಿಕ ವಿದ್ಯಾಭ್ಯಾಸದಿಂದ ಆತನಿಗೇನೂ ಅನುಭವ ಬರಲಾರದು. ಪ್ರತ್ಯಕ್ಷ ಅನುಭವದೊಂದಿಗೆ ಹೊಂದಿಸಿಕೊಂಡರೆ ಮಾತ್ರ ವಿದ್ಯಾಭ್ಯಾಸದಿಂದ ಪ್ರಯೋಜನ. ಮನುಷ್ಯನು ನಿಮಿಷ ನಿಮಿಷಕ್ಕೂ, ಕ್ಷಣ ಕ್ಷಣಕ್ಕೂ ಕಲಿಯುತ್ತಲೇ ಇರುತ್ತಾನೆ. ಅವನ ಆ ಕಲಿಯುವಿಕೆಯು ಮುಗಿಯಲಿಕ್ಕೆಂದಿಲ್ಲ. ಆದ್ದರಿಂದ ಬರಿಯ ಮಾನಸಿಕ ವಿದ್ಯಾಭ್ಯಾಸವು ಹೆಚ್ಚಿನ ಪ್ರಯೋಜನವನ್ನು ಕೊಡಲಾರದು.

ಚಿಕ್ಕಂದಿನಿಂದಲೇ, ಇಂತಹ ದೈಹಿಕ ಶಿಕ್ಷಣವನ್ನು ಕೊಟ್ಟರೆ ಮುಂದೆ ಅವರಲ್ಲಿ ತಾವೂ ಕೃಷಿಕರೂ ಬೇರೆ ಎಂಬ ಭಾವನೆ ಮೂಡಲಾರದು. ಕೆಲಸಮಾಡಲು ಮನ ಹಿಂಜರಿಯಲಾರದು. ಹಳ್ಳಿ ನಾಡಾದ-ರೈತರ ನಾಡಾದ ನಮ್ಮ ಹಿಂದೂಸ್ಥಾನಕ್ಕೆ ಅಂತಹ ಶಿಕ್ಷಣ ಬೇಕು. ಗಾಂಧೀಜಿಯವರೂ ಈ ಮಾತನ್ನೇ ಹೇಳಿದ್ದರು. ಸರಕಾರವು ಇತ್ತೀಚೆಗೆ ಇದನ್ನು ಅಲ್ಪಸ್ವಲ್ಪ ಮನಗಂಡದೆ-ಬುನಾದಿಶಾಲೆಗಳು ಸ್ಥಾಪಿಸಲ್ಪಡುತ್ತಿವೆ. ಎಲ್ಲಾ ಶಾಲೆಗಳು ಈ ರೀತಿಯಾಗಬೇಕು, ಶಾಲಾ ಕೋಲೇಜುಗಳು ಕೂಡಾ.

ದೈಹಿಕ ಶ್ರಮಕ್ಕೆ ಹೆಚ್ಚಿನ ಸಮಯವನ್ನಿಟ್ಟು ಅವರೊಂದಿಗೆ ಭೌತಿಕ ಜ್ಞಾನವನ್ನು ಮಕ್ಕಳಿಗೊಪ್ಪಗಿಸುವುದರಿಂದ ಅವರಿಗೆ ಪ್ರತಿಯೊಂದು ಜ್ಞಾನವೂ ಅನುಭವದಿಂದಲೇ ಬರುತ್ತದೆ.

ಈ ರೀತಿಯಾಗುವುದರಿಂದ ನಾಗರಿಕ—ಅನಾಗರಿಕ, ವಿದ್ಯಾವಂತ-ಅವಿದ್ಯಾವಂತ ಎಂಬ ವ್ಯತ್ಯಾಸವಳಿದು ನಮ್ಮ ದೇಶ ಉನ್ನತಿ ಹೊಂದಬಲ್ಲುದು. ನಾವು ನಿಜವಾದ ನಾಗರಿಕರಾಗಬಲ್ಲೆವು. ಆರೀತಿಯಾಗಲಿ!

—ಶ್ರೀ ಕೇ. ವ. ಕೇಶವ, ದೇಲಂಪಾಡಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭವಲ್ಲ ಇಂಗ್ಲಿಷ್**

**[ENGLISH MADE EASY]**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

**ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ**

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

**ನವಭಾರತ ಪುಸ್ತಕ ಭಂಡಾರ, ಉಡುಪಿ.**

# ಸ್ವೀಕಾರ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

**ತುಂಗೆಮ್ಮನ ತವರುಮನೆ**
(ಸಾಮಾಜಿಕ ಕಾದಂಬರಿ)
ಬೆಲೆ ರೂ. ೦—೧೪—೦

**ಧರ್ಮಶಾಲೆ**
(ಸಾಮಾಜಿಕ ಕಾದಂಬರಿ)
ಬೆಲೆ ರೂ. ೦—೧೪—೦

**ಕೈಲಾಸದಲ್ಲಿ ಕಮ್ಯುನಿಸ್ಟರು**
(ನಾಟಕ) ಬೆಲೆ ರೂ. ೧—೦—೦
ಮೇಲಿನ ಮೂರು ಪುಸ್ತಕಗಳ ಗ್ರಂಥಕರ್ತರು: ಎಸ್. ವೆಂಕಟರಾಜರು. ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ, ಉಡುಪಿ.

**ಹೃದಯ ಸಮುದ್ರ**
(ಕವನ ಸಂಕಲನ) ಬೆಲೆ ರೂ. ೧-೮-೦
ಬರೆದವರು: ಶ್ರೀ ಅಂಬಿಕಾ ತನಯ ದತ್ತ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ.

**ಮುಕ್ತ ಕಂಠ**
(ಕವನ ಸಂಕಲನ) ಬೆಲೆ ರೂ. ೧-೮-೦
ಬರೆದವರೂ ಪ್ರಕಾಶಕರೂ ಮೇಲಿನವರೆ.

**ಬಂಗಾರದ ಹೆಣ್ಣು**
(ಅದ್ಭುತ ಕಾದಂಬರಿ) ರೂ. ೦-೧೪-೦
ಬರೆದವರು: ಎಂ. ದಸ್ತಗೀರ್.

**ಬರಡ ಬಾಳು**
(ಶ್ರೀ ಜೈನೇಂದ್ರ ಕುಮಾರರ ಹಿಂದಿ ಕಾದಂಬರಿಯ ಅನುವಾದ) ಅನುವಾದಿಕೆ: ಶ್ರೀಮತಿ ಬಿ. ಕೆ. ಸುಬ್ಬಲಕ್ಷ್ಮಿ.
ಬೆಲೆ ರೂ. ೧—೮—೦.

**ಪ್ರೇಮ ವೈರಾಗ್ಯ**
(ಸಾಮಾಜಿಕ ಕಾದಂಬರಿ)
ಬರೆದವರು: ಚಿದಾನಂದ.
ಬೆಲೆ ರೂ. ೧—೮—೦.
ಮೇಲಿನ ಮೂರು ಪುಸ್ತಕಗಳ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ.

**ಗೆಲವು ನನ್ನ ಕೈಯಲ್ಲಿ!**
(ಮೂಲಲೇಖಕರು ಹೆರಾಲ್ಡ್ ರಸ್ಸೆಲ್)
ಕನ್ನಡ ರೂಪ "ಧನ್ವಂತ". ಪ್ರಕಾಶಕರು: ಎಚ್.ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ. ಬೆಲೆ ೧—೪—೦

**ಸ್ವಾತಂತ್ರ್ಯ**
(ಏಕಾಂಕ ನಾಟಕ) ಬೆಲೆ ೦—೧—೦
ಮೂಲ ಲೇಖಕರು: ಶ್ರೀ ಸುರೇಂದ್ರ ಕುಮಾರ ಮಲ್ಹೋತ್ರ. ಅನುವಾದಕರು: ಶ್ರೀ ಕೆ. ಎನ್. ಭಟ್ ಶಿರಾಡಿಪಾಲ್. ಪ್ರಕಾಶಕರು: ಒಂದಾಣೆ ಮಾಲೆ, ಮಂಗಳೂರು.

**ಭಕ್ತ ರಾಘವೇಂದ್ರರು**
ಬೆಲೆ ರೂ. ೦—೧೦—೦.
ಲೇಖಕರು ಮತ್ತು ಪ್ರಕಾಶಕರು: ಹಂಡೆ ಗುರು ವೇದವ್ಯಾಸದಾಸರು, ಕೀರ್ತನಾಲಂಕಾರ, ಉಡುಪಿ.

**ಭಕ್ತ ವಾದಿರಾಜರು**
ಬೆಲೆ ರೂ. ೦—೧೦—೦.
ಬರೆದವರು: ಹಂಡೆ ಶ್ರೀಪಾದದಾಸರು, ಕೀರ್ತನಭೂಷಣ. ಪ್ರಕಾಶಕರು: ಹಂಡೆ ಗುರುವೇದವ್ಯಾಸಾಚಾರ್ಯರು.

**ಭಕ್ತ ಕನಕದಾಸರು**
ಬೆಲೆ ರೂ. ೦—೧೨—೦.
ಬರೆದವರು: ಹಂಡೆ ಶ್ರೀಪಾದದಾಸರು. ಪ್ರಕಾಶಕರು: ಹಂಡೆ ಗುರುವೇದವ್ಯಾಸಾಚಾರ್ಯರು.

**ಹರಿಭಜನ ಮಾಲಿಕಾ**
ಬೆಲೆ ರೂ. ೦—೩—೦.
ಸಂಗ್ರಾಹಕರು ಮತ್ತು ಪ್ರಕಾಶಕರು: ಹಂಡೆ ಗುರುವೇದವ್ಯಾಸದಾಸರು.

(ವಿಮರ್ಶೆ ಯಥಾವಕಾಶವಾಗಿ)

## ಬಾಷ್ಪಾಂಜಲಿ

# ದಿವಂಗತ ಯಕ್ಷಗಾನ ಭಾಸ್ಕರ ಕವಿಭೂಷಣರಿಗೆ ಬಾಷ್ಪಾಂಜಲಿ

ಯಕ್ಷಗಾನ ಭಾಸ್ಕರನು ಅಸ್ತಂಗತನಾದನು. ಇದಕ್ಕೆ ಮೊದಲೇ ಯಕ್ಷಗಾನದ ಹಲವು ದೇದೀಪ್ಯ ಗ್ರಹಗಳು ಮುಳುಗಿ ಮೂಡದ ತಾಣಕ್ಕೆ ನಡೆದವು. ಇಂದು ಯಕ್ಷಗಾನಾಕಾಶದ ಸೂರ್ಯನೇ ಮುಳುಗಿದನು. ಯಕ್ಷಗಾನ ನಭೋಮಂಡಲವು ಕಾರ್ಗತ್ತಲೆಯ ಅಂಧ ತಮಸ್ಸಿನಲ್ಲಿ ಮುಳುಗಿ ಉಳಿದ ಗ್ರಹಗಳಿಗೆ ಪಥ ಕಾಣದಂತಾಯಿತು. ಯಕ್ಷಗಾನ ಸರಸ್ವತಿಯ ವೀಣೆಯನ್ನು ಸರ್ವ ಸಾಮರ್ಥ್ಯದಿಂದ ಮಿಡಿಯುವ ಬಲುಹಿದ್ದ ಯಕ್ಷಗಾನಾಭಿಮಾನದೇವತೆಯು ದಿವಂಗತರಾದರು. ಯಕ್ಷಗಾನದಲ್ಲಿ ಪ್ರಧಾನರಸಗಳಾದ ಕರುಣ, ವೀರರಸಗಳನ್ನು ಏಕಮುಖದಿಂದ ನುಡಿದು ಶ್ರೋತೃವೃಂದವನ್ನು ರಸಗಂಗೆಯಲ್ಲಿ ತೇಲಿಸುತ್ತಿದ್ದ ಯಕ್ಷಗಾನ ಸವ್ಯಸಾಚಿಯು ಪರಲೋಕವಾಸಿಯಾದರು.

ಇಂದಿನ ಪ್ರಸಿದ್ಧ ಯಕ್ಷಗಾನ ಮೃದಂಗ ವಾದನಿಗೆ ತಿಳಿಯದ ತಾಳದ ತಿಳಿವನ್ನು ತಿಳಿಸಿಕೊಡುತಿದ್ದ ಮೃದಂಗವಾದಕರ ಗುರುವು ನಮ್ಮೆಲ್ಲರ ನಡುವಿನಿಂದ ಮರೆಯಾದರು. ಇದನ್ನು ಅಲ್ಲಗಳೆದರೆ ಸತ್ಯಕ್ಕೆ ಅಪಚಾರವಸಗಿದಂತೆ. ಇಂದಿನ ಸುಪ್ರಸಿದ್ಧ ಹಾಡುಗಾರರು ಶೆಟ್ಟರ ಮುಂದೆ ಹಾಡುವದೆಂದರೆ ಶಿಷ್ಯನು ಗುರುವಿನ ಮುಂದೆ ಪಾಠವೊಪ್ಪಿಸುವಂತೆ ಎಂದರೆ ಅತಿಶಯೋಕ್ತಿಯಾಗಲಾರದು. ವೀರರಸಾವೇಶವನ್ನು ಉಂಟುಮಾಡುವ ಚೆಂಡೆಯ ಪ್ರಚಂಡ ಕೈಯನ್ನು ಯಕ್ಷಗಾನವು ಇಂದು ಕಳಕೊಂಡಿತು. ಯಕ್ಷನಾಟ್ಯದ ಸಂಪೂರ್ಣ ಅನುಭವವನ್ನು ಯಕ್ಷಗಾನ ಬಯಲಾಟಗಾರರಿಗೆ ಸಂತೃಪ್ತಿಯಿಂದ ತಾಳಹಾಕಿ ಅಲ್ಲಿಯೂ ಅರ್ಥವಾಗದಿದ್ದರೆ ಎದ್ದು ಕಾಲ್ಗೆಗೆದು ನಟಿಸಿ ತೋರಿಸಿಕೊಡುತಿದ್ದ ನಟ್ಟುವ ಶೆಟ್ಟರು ಗತಿಸಿ ಯಕ್ಷಗಾನವು ಕಾಲನ್ನೇ ಕಳಕೊಂಡಿತು. ವೇಷಕ್ಕೆ ಬೇಕಾಗುವ ಬಣ್ಣ ಬಳಿಯುವ ವಿಧಾನವನ್ನು ಶಾಸ್ತ್ರೀಯವಾಗಿ ನಟರಿಗೆ ತಿಳಿಸಿಕೊಡುತಿದ್ದ ಶೆಟ್ಟರ ಅಭಾವದಿಂದಾಗಿ ಯಕ್ಷಗಾನ ಕಲೆಯೇ ಬಣ್ಣಗುಂದಿತು. ರಸಭರಿತವಾದ ತನ್ನ ಮಾತಿನ ಜಾಣ್ಮೆಯಿಂದ ಯಕ್ಷಗಾನವು ರಸವಿಹೀನವೆಂದು ಬಗೆದು ಬಂದಿದ್ದ ಶ್ರೋತೃವೃಂದಕ್ಕೆ ಯಕ್ಷಗಾನವು ನವರಸಭರಿತವಾದುದು ಎಂದು ಮನಗಾಣಿಸಿಕೊಟ್ಟ ಯಕ್ಷಗಾನ ರಸಘಟ್ಟಿಯು ಇಂದು ಕರಗಿ ಅನಂತಾಕಾಶದಲ್ಲಿಯೇ ಲೀನವಾಯಿತು. ಶೆಟ್ಟರ ಸೊಬಗಿನ ವಾಗ್ಝಣ್ಮೆಯಿಂದ ಸಂತಸಗೊಂಡು ಪ್ರಫುಲ್ಲವದನಳಾಗಿದ್ದ ಮಂಗಳೆ ಯಕ್ಷಗಾನ ವಾಣಿಯ ಫಣಾ ತಿಲಕವು ಶೆಟ್ಟರ ನಿಧನದಿಂದ ಜಗುಳಿ ಬಿದ್ದು ಆಕೆಯು ಅಮಂಗಲೆಯಾದಳೇ? ಈ ಸಂದೇಹವನ್ನು ಪರಿಹರಿಸುವ ಎದೆಗಾರರು ಯಕ್ಷಗಾನ ಪ್ರಪಂಚದಲ್ಲಿರುವರೇ?

ಯಕ್ಷಗಾನ ಶಾಸ್ತ್ರಿಗಳೊಡನೆ ಶಾಸ್ತ್ರೀಯ ವಾದದಲ್ಲಿ ಶಾಸ್ತ್ರಗಳ ಸರ್ವಸಾರವನ್ನು ಶೋಧಿಸಿ ವಾದಿಸಿ ಸೈಯೆನಿಸಿದ ಯಕ್ಷಗಾನದ ಶಾಸ್ತ್ರಿ ಶೆಟ್ಟರೆಂಬುದ ಮಾತು ಬಲವರದ ಮಾತೆಂದರೆ ಪಾಪಕ್ಕೆ ಪಕ್ಕಾಗಬೇಕಾದೀತು. ನವನವೀನ ಪ್ರಸಂಗಗಳನ್ನು ಬರೆದು ಯಶಸ್ವೀ ಪ್ರಯೋಗಗಳನ್ನು ಮಾಡಿ ಜನತೆಯನ್ನು ಮೆಚ್ಚಿಸಿ ಯಕ್ಷಗಾನ ಕವಿಭೂಷಣ ಎಂಬ ಅನ್ವರ್ಥನಾಮವನ್ನು ಗಳಿಸಿ ಕೀರ್ತಿಶರೀರಿಯಾದ ದಿವಂಗತ ಶೆಟ್ಟರ ಯಕ್ಷಗಾನ ಕಾವ್ಯ ಪ್ರತಿಭೆಯನ್ನು ಸರಿಗಟ್ಟುವ ಕವಿಯ ಉದಯವನ್ನು ಯಕ್ಷಗಾನಾಭಿಮಾನಿಗಳು ಇನ್ನೆಷ್ಟು ಕಾಲ ಕಾಯಬೇಕಾಗಿದೆಯೋ ಏನೋ! ಜೈನ ಪುರಾಣಗಳನ್ನು ಯಕ್ಷಗಾನಕ್ಕೆ ಪರಿವರ್ತಿಸಿ **ಯಶೋಧರ**ನಾಗಿ ಜನಜನತೆಯ ಪ್ರೀತಿಗೆ ಪಾತ್ರನಾಗಿ ಪರಿಷರಿಯ ಸಂಭಾವನೆಗಳಿಂದ ಸಂಭಾವಿಸಲ್ಪಟ್ಟ ಜೈನ ಯಕ್ಷಗಾನ ಕವಿಸಾರ್ವಭೌಮನನ್ನು ಜೈನ ಜನತೆಯು ನಿರೀಕ್ಷಿಸುವ ಹಂಬಲವನ್ನೇ ತೊರೆಯಬೇಕಾಗಿ ಬರುವ ಕಾಲವೊದಗಿತು. ಚಾರಿತ್ರಿಕ ವಿಷಯವನ್ನು ಯಕ್ಷಗಾನ ಮೂಸೆಯಲ್ಲಿ ಮಥಿಸಿ ಜನತೆಗೆ ಚಾರಿತ್ರಿಕ ಕಥಾನವನೀತವನ್ನುಣಿಸಿ ತಣಿಸಿದ ಕವಿ **ರಾಣಾರಾಜ ಸಿಂಹ**ನು ಇನ್ನು ಬರಲಾರ. ತನ್ನ ವಾಕ್ಶಕ್ತಿಯಿಂದ ಯಕ್ಷಗಾನ ಪ್ರಪಂಚದ ಪ್ರಜೆಗಳನ್ನು ಪದ್ಧತಿಗಿಟ್ಟು ಪಾರುಪತ್ಯವನ್ನು ನಡೆಸುತ್ತಿದ್ದ ರಾಯನು ಶೆಟ್ಟರಲ್ಲದೆ ಬೇರೊಬ್ಬನಿಲ್ಲ. ದಿನದ ಹದಿನೆಂಟು ಗಂಟೆಗಳನ್ನು ತನ್ನ ಜೀವನಾನದಲ್ಲಿ ಯಕ್ಷಗಾನಕ್ಕೇ ಮುಡಿಪಾಗಿಟ್ಟು ತನು ಮನಧನಗಳನ್ನು ಅದಕ್ಕೆ ಧಾರೆಯೆರೆದು ಕೊನೆಗಾಲದಲ್ಲಿ ಕೂಡ ಯಕ್ಷಗಾನ ಸಾಹಿತ್ಯವನ್ನೋದಿ ಬರೆದು ಅದಕ್ಕೇ ತನ್ನ ಶಕ್ತಿ ಸರ್ವಸ್ವವನ್ನು ವಿನಿಯೋಗಿಸಿ ಅದರಲ್ಲೇ ಐಕ್ಯತೆಯನ್ನು ಹೊಂದಿದ ಶೆಟ್ಟರು ಯಕ್ಷಗಾನದ ಸರ್ವಾಧಿಕಾರಿಯೆಂದರೆ ಎಷ್ಟಕ್ಕೂ ಅಪಚಾರವಾಗದು. ಮಹಾಕವಿ ಭರ್ತೃಹರಿಯು ಹೇಳಿದಂತೆ "ಹುಟ್ಟಿದನೊರ್ವನೇ ಕವನೆಸು ಉರ್ವಿಯ ಭಾರವನಾಂತ ಕಾರಣಂ| ಹುಟ್ಟಿದನೊರ್ವನೇ ಧ್ರುವಂ ಉಡುವ್ರಜವ ನಡೆಯಿಪ್ಪ ಕಾರಣಂ—...ಹುಟ್ಟವೇ ಸಾಯವೇ ಜಗದೊಳತ್ತಿಯ ಪಣ್ಣೊಳಿನಿತ್ತೊ ಜಂತುಗಳ್" ಸೈ! ಶೆಟ್ಟರು ಯಕ್ಷಗಾನ ಪ್ರಪಂಚದ ಕನಕನೆಂದರೆ ಅತಿಶಯೋಕ್ತಿಯೇ? ಯಕ್ಷಗಾನದ ಯಾವ ಮೂಲೆಯನ್ನು ಅವರು ಎತ್ತಿ ಹಿಡಿದು ಕೀರ್ತಿ ವಿಂಧ್ಯೆಯ ತುತ್ತತುದಿಯಲ್ಲಿ ನಿಲ್ಲಿಸಿಲ್ಲ? ಯಕ್ಷಗಾನಾಕಾಶದ ಧ್ರುವನು ದಿವಂಗತ ಶೆಟ್ಟರೆಂದರೆ ಹೊಗಳಿಕೆಯ ಮಾತಾದೀತೇ? ಇಲ್ಲ, ಎಂದೆಂದಿಗೂ ಆಗಲಾರದು. ಯಕ್ಷಗಾನಾಕಾಶದಲ್ಲಿ ಅವರ ಸಾಹಸದ ಕೈಯು ಅವರ ಪ್ರತಾಪ ಜ್ವಾಲೆಯು ಯಾವ ಗ್ರಹವನ್ನು ಪರಿಶೀಲಿಸದೆ ಬಿಟ್ಟಿದೆ? ಶೆಟ್ಟರ ಪ್ರತಿಭೆಗೆ ಸರಿದೂಗುವ ಕೈಯು ಯಕ್ಷಗಾನ ಪ್ರಪಂಚದಲ್ಲಿ ಇದ್ದರೆ ಅದು ಆ ಕಲಾರಾಧಕರಾದ ನಮ್ಮ ಭಾಗ್ಯ! ಆದರೆ ಯಕ್ಷಗಾನ **ಗುರುಕುಲ**ದ ಕುಲಪತಿಯನ್ನು ಕಳೆದುಕೊಂಡ ಕಲಾರಾಧಕರು ನಾವೆಂಬುದು ನಿತ್ಯಸತ್ಯ. ತನ್ನ ವಾನದೂರಾದ ಐಜಾಜೆಯಂಥ ಹಳ್ಳಿಕೊಂಪೆಯಲ್ಲಿ ಕಲ್ಲಿನಂತೆ ಜಡಭರಿತರಾಗಿದ್ದ ಜನತೆಗೆ ಚೇತನವನ್ನು ಕೊಟ್ಟು ಹಲವಾರು ಮಂದಿ ಯಕ್ಷಗಾನ ಕಲಾನಿಪುಣರನ್ನು ನಿರ್ಮಿಸಿ, ಕವಿವರ್ಯ "ಕಯ್ಯಾರ"ರಂತಹರ ಬಾಯಿಯಿಂದ ಪಾಣಾಜೆಯ ತುರುಗಾಹಿಯೊಡನೆ ಕೂಡಾ ಯಕ್ಷಗಾನದ ವಿಚಾರ ಮಾತಾಡುವುದೆಂದರೆ ವಿಚಾರ ಮಾಡಬೇಕಾದ ವಿಷಯವೆಂಬ ಉದ್ಗಾರವು ಬರುವಂತೆ ಮಾಡಿದ ಯಕ್ಷಗಾನ ವರಶಿಲ್ಪಿಯೇ ನಿಮಗೆ ನಮಸ್ಕಾರವು. ಯಕ್ಷಗಾನಕ್ಕಂಟಿದ ಹಲವು ಗಾಣರೋಗಗಳನ್ನು ಉತ್ತಮ ಚಿಕಿತ್ಸೆಯಿಂದ ಗುಣಪಡಿಸಲು ಅಹೋರಾತ್ರಿ ಹೆಣಗಿ ದುಡಿದು ಬಳಲಿ ಬೆಂಡಾದ ಯಕ್ಷಗಾನ ಪ್ರಪಂಚದ ಏಕಮಾತ್ರ ಭಿಷಗ್ವರನೇ ಇಂತಹ ಅಪರ್ವಿಕ ದುಡಿತದಿಂದ ನಿಮ್ಮ ಜಡದೇಹಕ್ಕಂಟಿದ ರೋಗವನ್ನು ಗುಣಪಡಿಸಲು ಆಶಿಸಿ "ಮೂಡಣತ್ತ ವಿಶ್ರಾಂತಿಗಾಗಿ ಹೋಗುವೆ" ಎಂದು ನಮ್ಮನ್ನು ನಂಬಿಸಿ ಮೂಡದತ್ತ ಕಡೆಯೆಂಬ ನಿಮ್ಮ ಅಂತರಾರ್ಥದ ಮಾತಿನ ಜಾಣ್ಮೆಯನ್ನು ನಾವು ಅಂದು ಅರಿಯದ ಗಾಂಪರಾದೆವು. ಹೌದು ಗುರುವೇ ಹೌದು! ನೀವು ಮೂಡಣತ್ತವೆಂದು ಎಂದೂ ಮೂಡದತ್ತ ತೆರಳಿದಿರಿ. ಚಿರವಿಶ್ರಾಂತಿ ಹೊಂದಿದಿರಿ.

ಕೆ. ಜೆ. ರೈ,

(ಪಾಣಾಜೆ ಅವರ ಶಿಷ್ಯವೃಂದದ ಪರವಾಗಿ)

## ನಯೀ ತಾಲೀಂ

(೩ನೇ ಪುಟದಿಂದ)

ರಕ್ಷಣೆಗಾಗಿ. ರಾಮ-ಲಕ್ಷ್ಮಣರು ಈ ವ್ಯಾಜದಲ್ಲಿ ಬಿಲ್ಲು:ವಿದ್ಯೆಯಲ್ಲಿ ಅತ್ಯಂತ ನಿಷ್ಣಾತರಾದರು—ವಿಶ್ವಾಮಿತ್ರನೇ ಅವರಿಗೆ ತನ್ನ ಯಾಗ ರಕ್ಷಣೆಯ ಬಗ್ಗೆ ಎಲ್ಲವನ್ನೂ ಹೇಳಿಕೊಟ್ಟನು.

ಜನರಲ್ಲಿ ವಿಶೇಷವಾದ ಭಯವೊಂದಿದೆ, ಅದೇನೆಂದರೆ, ಪುಸ್ತಕದ ಉಪಯೋಗವು ಕಡಿಮೆ ಯಾದಾರೆ, ಜ್ಞಾನ ಸಾಧನವೇ ಕ್ಷೀಣವಾಯಿತು; ಅಥವಾ ಲುಪ್ತವಾಯಿತು! ಜ್ಞಾನಪ್ರಾಪ್ತಿಗೆ ಪುಸ್ತಕಗಳಿಂದ ಕೆಲವಂಟ್ಟಿನ ಪ್ರಯೋಜನವಾಗುತ್ತದೆಂಬುದು ನಿಸ್ಸಂಶಯ; ಪರಂತು, ಈ ಸಹಾಯ್ಯವು ತೀರ ಗೌಣವಾದುದಾಗಿದೆ. ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಅಂತರವು ದೂರಾಗುವುದೇ ಪ್ರಧಾನವಾದ ವಿಷಯ.

" ನಯೀ ತಾಲಿಂ " ಮಾಡುವ ಇನ್ನೊಂದು ಕೆಲಸವು ಜ್ಞಾನ ಮತ್ತು ಕರ್ಮಗಳ ಭೇದ, ವಿರೋಧ ಮತ್ತು ತತ್ಸಂಬಂಧಿ ವಾದಗಳ ನಿವಾರಣೆ ಎನ್ನಬಹುದು. ಜಗತ್ತಿನಲ್ಲಿರುವ ಎಲ್ಲ ತತ್ತ್ವಜ್ಞಾನಗಳೂ ಭೇದ ವಿರೋಧ ಅಥವಾ ವಾದವೆಂಬ ಮೂರು ಶಬ್ದಗಳ ಚೌಕಟ್ಟಿನಲ್ಲಿಯೇ ಬಂಧಿತವಾಗಿರುತ್ತವೆ. ಜ್ಞಾನ ಮತ್ತು ಕರ್ಮ ಇವೆರಡೂ ಒಂದೇ ವಸ್ತುವಿನ ಬೇರೆ ಬೇರೆ ಸ್ವರೂಪಗಳೆಂದು ನಯೀತಾಲಿಂ ನಂಬುತ್ತದೆ. ಇಲ್ಲಿ ಜ್ಞಾನಯೋಗವಷ್ಟೇ ಕಾಣುವುದಲ್ಲ; ಕರ್ಮಯೋಗವಷ್ಟೆ ಕಾಣುವುದೂ ಅಲ್ಲ—ಶಿಕ್ಷಣ ಪ್ರಯೋಗವಷ್ಟೇ ನಮಗೆ ಗೋಚರಿಸುತ್ತದೆ!

ಈಗಿನ ಶಾಲೆಗಳಲ್ಲಿ ನೂರಾರು ಬಗೆಯ ಆಟಗಳನ್ನು ಕಲಿಸಲಾಗುತ್ತದೆ—ಪಾಠಗಳನ್ನು ಹೇಳಿಕೊಡಲಾಗುತ್ತದೆ—ಆದರೆ ಉತ್ಪಾದಕ ಕಾರ್ಯದಲ್ಲಿ ಮಾತ್ರ ವಿದ್ಯಾರ್ಥಿಗಳನ್ನು ತೊಡಗಿಸುವುದಿಲ್ಲ! ಕೈಯಲ್ಲಿ ಹಾರೆ ಅಥವಾ ಕತ್ತಿ ಹಿಡಿದು ಗದ್ದೆಯಲ್ಲಿ ಕೆಲಸಮಾಡುವುದು ದುಡಿಮೆ ಎಂದೆನ್ನಿಸಿಕೊಳ್ಳುತ್ತದೆ; ಅದೇ ಮುದ್ಗರ ಹಿಡಿದು ತಿರುಗಿಸುವುದನ್ನು ವ್ಯಾಯಾಮ ಎಂದೆನ್ನುತ್ತೇವೆ. ಮೊದಲನೆಯದನ್ನು ಜುಗುಪ್ಸೆ ಮತ್ತು ತಾತ್ಸಾರದಿಂದ ನೋಡುವುದೇ ನಮ್ಮ ಅಭ್ಯಾಸ; ಎರಡನೆಯದರ ಮೇಲೆ ವ್ಯಾಮೋಹ ಮತ್ತು ಅಭಿಮಾನ. ಇಂತಹ ಭೇದವನ್ನು ನಯೀ ತಾಲಿಂ ಎಂದಿಗೂ ಪುರಸ್ಕರಿಸದು.

ಶಾಲೆಗಳಲ್ಲಿ ಬೇಸರವನ್ನು ಹೋಗಲಾಡಿಸಲಿಕ್ಕೆ ಆಗಾಗ್ಗೆ ಮನೋರಂಜನೆಯ ಕಾರ್ಯಕ್ರಮಗಳನ್ನಿಟ್ಟುಕೊಳ್ಳಲಾಗುತ್ತದೆ. ನಯೀತಾಲಿಂ ಇಂತಹ ತೇಪೆ ಹಚ್ಚುವ ಮಾದರಿಯ ಮನೋರಂಜನೆಯನ್ನು ಆದರಿಸದು. ಹೆಚ್ಚಿನ ಸಮಯವನ್ನು 'ದುಃಖ'ದಲ್ಲಿ ಕಳೆದು ತಾಸು, ಅರೆ ತಾಸು ಮನೋರಂಜನೆಯ ಕಾರ್ಯಕ್ರಮದಿಂದ "ಸುಖ" ಅನುಭವಿಸುವ ಕ್ರಮವೇ ಅದಕ್ಕೆ ಸಲ್ಲದು. ನಯೀ ತಾಲಿಂ ದಿನದ ಇಪ್ಪತ್ತ ನಾಲ್ಕೂ ತಾಸು ಸುಖಾನುಭವವಾಗಬೇಕೆಂಬ ಛಲವನ್ನು ಹೊಂದಿದೆ. ಇಪ್ಪತ್ತ ನಾಲ್ಕು ತಾಸು ಜ್ಞಾನ ಸಂಪಾದಿಸಿ, ಕಾರ್ಯ ನಿರತರಾಗಿ, ಆನಂದ ಭಾಗಿಗಳಾಗಬೇಕೆಂಬುದೇ ನಯೀ ತಾಲಿಂ ಇಟ್ಟುಕೊಂಡಿರುವ ಧ್ಯೇಯ.

ಆದುದರಿಂದ ಆನಂದವಾದರೂ ಶ್ರಮ ಅಥವಾ ಜ್ಞಾನಕ್ಕಿಂತ ಭಿನ್ನವಾಗಿರಲಾರದು; ಅದಕ್ಕೆ ದಿನದ ಇಪ್ಪತ್ತನಾಲ್ಕು ತಾಸುಗಳಿಗಿಂತ ಕಡಿಮೆ ಸಮಯದ ಕಾರ್ಯಕ್ರಮ ಪಟ್ಟಿ ಸಾಲದು. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಶಿಕ್ಷಣದ ಮಂತ್ರವು 'ಸಚ್ಚಿದಾನಂದ' ಎಂಬುದಾಗಿದೆ. ಸತ್ ಎಂಬುದೇ ಕರ್ಮಯೋಗ; ಅದಿಲ್ಲದೆ ಜೀವನ ನಡೆಯದು. ಚಿತ್ ಎಂಬುದು ಜ್ಞಾನಯೋಗದ ಸಂಕೇತ; ಇದಿಲ್ಲದೆ ಜೀವನವು ಚೇತನಯುಕ್ತವಾಗಲಾರದು. ಆನಂದದ ಹೊರತು ಜೀವನವು ರಸಭರಿತವಾಗಲಾರದು. ಸತ್, ಚಿತ್ ಮತ್ತು ಆನಂದ—ಈ ಮೂರರ ಮಧುರ ಮಿಲನವಾದ ಶಿಕ್ಷಣವೇ ನಿಜವಾದ ಶಿಕ್ಷಣ. ಇದನ್ನು ನಯೀ ತಾಲಿಂ ಎನ್ನಲಿ, ಅಥವಾ ಬೇರೆ ಯಾವುದೇ ಹೆಸರಿನಿಂದ ಕರೆಯಲಿ, ಬಾಧಕವಾಗಲಾರದು.

—ವಿನೋಬಾಜಿಯ ಭಾಷಣದಿಂದ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರನೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ, ದ. ಕನ್ನಡ.
ಯಾವದೇ ತರದ ಹೇಂಡ್‌ಲೂಮ್ಸ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, UDIPI. S. KANARA.

ಕುಮಾರಿ ಬಿಲ್ಲೆಗಳು
(Govt. Regd.)
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & CO. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮಕ್ಕಳ ಮಗ್ಗಿಪುಸ್ತಕ
0—1—0
ನವಯುಗ ಪ್ರೆಸ್, ಉಡುಪಿ.

## ಇತಿಹಾಸದ ಪುಟಗಳಿಂದ

೧ನೇ ಪುಟದಿಂದ

ತನ್ನ ವಶದಲ್ಲಿಟ್ಟುಕೊಂಡಿದ್ದನೆಂದೂ ಮಹಾತ್ಮರನೇಕ ಮಂದಿಯನ್ನು ಮನ್ನಿಸಿದ್ದನೆಂದೂ, ಇದರಿಂದ ಅತ ಅನುಪಮಖ್ಯಾತಿ ಪಡೆದಿದ್ದನೆಂದೂ ಮಹಾಭಾರತದಲ್ಲಿ ಉಲ್ಲೇಖವಿದೆ. ಈ ಅರಸನು ಸಾರ್ವಭೌಮ ಚಕ್ರವರ್ತಿಯಾಗಿದ್ದನು. ದೇವೇಂದ್ರನಂತೆ ಅವನು ಅನೇಕ ಯಜ್ಞಗಳನ್ನು ನಡೆಸಿದ್ದನು. ಮಹರ್ಷಿ ಕಣ್ವ ಋಷಿಯು ಅವನಿಂದ ಅತ್ಯಮಿತ ಖರ್ಚು ತಗಲುವ "ಗೋವಿತತ" ಎಂಬಹೆಸರಿನ ಯಜ್ಞವನ್ನು ಮಾಡಿಸಿ, ಸಾವಿರಾರು ಗೋವುಗಳ ದಾನ ಕೊಡಿಸಿದ್ದ. ಭರತನಿಂದ ಭಾರತಿ (ಕೀರ್ತಿ) ಮತ್ತು ಭರತ ವಂಶ ಉಂಟಾದುವು. ಅವನ ವಂಶದಲ್ಲಿ ದೇವಸದೃಶ ಶಕ್ತಿವಂತ ಹಾಗೂ ಮೇಧಾವಿ ಶ್ರೇಷ್ಠ ರಾಜರು ಅನೇಕ ಮಂದಿ ಆಗಿ ಹೋಗಿದ್ದರು.

ಆ ಕಾಲದಲ್ಲಿ ಭರತನ ಹೆಸರಿನ ಪ್ರಸಿದ್ಧಿ ಎಷ್ಟರ ಮಟ್ಟಗಿತ್ತೆಂಬುದನ್ನು ಮೇಲೆ ಸವಿವರವಾಗಿ ಹೇಳಿರುತ್ತದೆ. ಆದರೆ ಈ ಭರತನಿಂದಲೇ ದೇಶಕ್ಕೆ ಭಾರತ ವರ್ಷವೆಂದು ಹೆಸರಾಯಿತೆಂಬುದು ಯಾವ ಪ್ರಾಚೀನ ಗ್ರಂಥದಲ್ಲಿಯೂ ತೋರುವುದಿಲ್ಲ.

ಋಷಭದೇವನ ಪುತ್ರ ಭರತನಿಂದಲೇ ಈ ದೇಶಕ್ಕೆ "ಭಾರತ ವರ್ಷ" ಎಂಬ ಹೆಸರಾಯಿತೆಂಬುದಕ್ಕೆ ಸಾಕಷ್ಟು ಆಧಾರಗಳು ಸಾಹಿತ್ಯದಲ್ಲಿ ಸಿಗುತ್ತವೆ. ಶ್ರೀ ಮದ್ಭಾಗವತದಲ್ಲಿ ಮೂರು ಕಡೆಗಳಲ್ಲಿ ಇದರ ಉಲ್ಲೇಖವು ದೊರೆಯುತ್ತದೆ. ಪಂಚಮಸ್ಕಂದದ ನಾಲ್ಕನೆ ಅಧ್ಯಾಯದಲ್ಲಿ ಈ ರೀತಿ ಹೇಳಿರುತ್ತದೆ. 'ಶ್ರುತಿ ಮತ್ತು ಸ್ಮೃತಿಗಳಲ್ಲಿ ಹೇಳಿರುವ ಧರ್ಮವನ್ನು ಪಾಲಿಸಿ ಋಷಭದೇವನು ಇಂದ್ರನ ಕನ್ಯೆ ಜಯಂತಿಯಲ್ಲಿ ತನ್ನ ಸಮಾನರಾದ 100 ಮಂದಿ ಪುತ್ರರನ್ನು ಪಡೆದನು. ಆ ಮಕ್ಕಳಲ್ಲಿ ಭರತನೇ ಸರ್ವಶ್ರೇಷ್ಠನು. ಅವನು ಮಹಾಯೋಗಿಯೂ ಸದ್ಗುಣಿಯೂ ಆಗಿದ್ದನು. ಅವನ ಹೆಸರಿನಿಂದಲೇ ಈ ಭೂಖಂಡಕ್ಕೆ ಭಾರತ ವರ್ಷವೆಂದು ಹೆಸರಾಯಿತು.'

ಪಂಚಮಸ್ಕಂದದ ಏಳನೇ ಅಧ್ಯಾಯದಲ್ಲಿ ಈ ರಾಜನ ಚರಿತ್ರೆಯ ಕುರಿತು ಈ ರೀತಿ ವರ್ಣನೆ ಇದೆ:

'ಮಹಾ ಭಗವದ್ಭಕ್ತ ಭರತನು ಭಗವಾನ್ ಋಷಭದೇವನ ಅಭಿಲಾಷೆಗನುಸಾರವಾಗಿ ಪೃಥ್ವೀಮಂಡಲದ ಶಾಸನ ನಡೆಸಿಕೊಂಡಿದ್ದ. ಈ ಖಂಡವನ್ನು ಮೊದಲು 'ಅಜನಾಭ'ವೆಂದು ಕರೆಯುತ್ತಿದ್ದರು. ಓರ್ವ ಟೀಕಾಕಾರರೆನ್ನುವಂತೆ ಋಷಭದೇವ ಮತ್ತು ಅವನ ತಂದೆ 'ನಾಭಿ' ಇವರಿಬ್ಬರಿಂದಾಗಿ ಈ ಹೆಸರು ಬಂದಿತೆನ್ನಲಾಗಿದೆ. ಭರತನು ರಾಜನಾದ ಮೇಲೆ ಆ ಹೆಸರು 'ಭಾರತ ವರ್ಷ' ಎಂದಾಯಿತು. ಹಲವು ವರ್ಷಗಳ ವರೆಗೆ ಧರ್ಮದಿಂದ ರಾಜ್ಯಭಾರ ನಡೆಸಿಕೊಂಡಿದ್ದು ಅನಂತರ ತನ್ನ ಹಿರಿಯರ ಸಂಪತ್ತನ್ನೆಲ್ಲಾ ತನ್ನ ಪುತ್ರರಿಗೆ ಹಂಚಿ, ತಾನು ವಿಲಾಸ ಸುಖೋಪಭೋಗಗಳನ್ನೆಲ್ಲಾ ತ್ಯಜಿಸಿ, ಅರಣ್ಯವನ್ನು ಸೇರಿ ಅಲ್ಲಿ ಸನ್ಯಾಸವನ್ನು ಸ್ವೀಕರಿಸಿದನು.'

ಅಷ್ಟಮ ಅಧ್ಯಾಯದಲ್ಲಿ ಭರತನಿಗೆ ಮೃಗಶರೀರ ಪ್ರಾಪ್ತಿಯಾದ ವಿಷಯದ ಕಥೆ; ಒಂಬತ್ತನೇ ಅಧ್ಯಾಯದಲ್ಲಿ ತೃತೀಯ ಬ್ರಾಹ್ಮಣ ಜನ್ಮದಲ್ಲಿ (ಅಂತಿಮ) ಆತ ಜಡಭರತನಾಗಿ ಹುಟ್ಟಿದ ವಿಚಾರಗಳ ಉಲ್ಲೇಖವಿದೆ. ದ್ವಾದಶಸ್ಕಂದದ ಎರಡನೆ ಅಧ್ಯಾಯದಲ್ಲಿ ಪುನಃ ರಾಜಾ ಭರತನ ಪೂರ್ವಜರ ಕುರಿತಾದ ವರ್ಣನೆಯಲ್ಲಿ, 'ಋಷಭದೇವನ ಮಕ್ಕಳಲ್ಲಿ ಸರ್ವಶ್ರೇಷ್ಠನಾದ ಭರತನು ನಾರಾಯಣನ ಪರಮ ಭಕ್ತನಾಗಿದ್ದನು. ಈ ಅದ್ಭುತಖಂಡವು ಅವನ ಹೆಸರಿಂದಲೇ 'ಭಾರತ ವರ್ಷ'ನೆಂದು ಪ್ರಸಿದ್ಧವಾಗಿದೆ. ಎಲ್ಲಾ ತರದ ಐಶ್ವರ್ಯ ಸುಖೋಪಭೋಗಗಳನ್ನು ಅನುಭವಿಸಿಯಾದ ಮೇಲೆ, ಈ ಪೃಥ್ವೀಮಂಡಲದ ಶಾಸನವನ್ನು ತ್ಯಜಿಸಿ, ಹರಿಯ ಆರಾಧನೆಗಾಗಿ ತಪೋವನವನ್ನು ಸೇರಿ, ಕ್ರಮಶಃ ಮೂರು ಜನ್ಮಗಳ ವರೆಗೆ ಈಶ್ವರ ಭಜನೆಯಲ್ಲಿ ನಿರತನಾಗಿದ್ದು ಪರಮ ಪದವನ್ನು ಪಡೆದನು' ಎಂದು ಹೇಳಿರುತ್ತದೆ. ಮೇಲೆ ಹೇಳಿರುವ ಎಲ್ಲಾ ವಿಷಯಗಳಿಂದ ತಿಳಿದುಬರುವುದೇನೆಂದರೆ, ಈ ದೇಶದ ಹೆಸರು ಋಷಭ ಪುತ್ರ ಭರತನ ಹೆಸರಿಂದಲೇ ಭಾರತ ವರ್ಷವೆಂದಾಯಿತು. ಈ ಭರತನಲ್ಲಿ ಅಂತಹ ವಿಲಕ್ಷಣ ವಿಶೇಷತೆ ಏನಿತ್ತೆಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಅವನ ಅಭೂತ ವರ್ಷ (10 ಸಾವಿರ) ಗಳ ಸುದೀರ್ಘ ಶಾಸನದ ವಿಚಾರವು ಶಕುಂತಲೆಯ ಪುತ್ರ ಭರತನಂತೆ ಪೌರಾಣಿಕ ಭಾವನೆಯ ದ್ಯೋತಕವಾಗಿದೆ.

ಪುಣ್ಯ, ಪ್ರತಾಪ ಮತ್ತು ತೇಜಗಳೇ ಅವನ ಶ್ರೇಯಸ್ಸಿಗೆ ಕಾರಣವೆನ್ನಲಾಗುವುದಿಲ್ಲ. ಉತ್ತರ ಮತ್ತು ದಕ್ಷಿಣ ಹೀಗೆ ಉಭಯ ಭಾಗಗಳನ್ನು ಜಯಿಸಿ ಅವುಗಳನ್ನು ಸಂಘಟಿತವನ್ನಾಗಿ ಮಾಡಿದ ವೈಶಿಷ್ಟ್ಯವೇ ಈ ಅಸಾಮಾನ್ಯ ಶ್ರೇಯಸ್ಸಿಗೆ ಕಾರಣವೆನ್ನಬಹುದು.

ಭಾಗವತದಂತೆ ಇತರ ಹಲವು ಪುರಾಣ ಗ್ರಂಥಗಳಲ್ಲಿಯೂ ಮೇಲಿನ ಮತಕ್ಕೆ ಸಮರ್ಥನೆಯು ಸಿಗುತ್ತದೆ. ಮಾರ್ಕಾಂಡೇಯ ಪುರಾಣದಲ್ಲಿ ಶ್ರೀ ಋಷಭದೇವನ ಕುರಿತಾದ ಪ್ರಸಂಗದ ವಿವರಣೆಯಲ್ಲಿ 'ಹಿಮಾಲಯದ ದಕ್ಷಿಣದಲ್ಲಿರುವ ಪ್ರದೇಶವನ್ನು ತಂದೆಯು ಭರತನಿಗೆ ಕೊಟ್ಟನು. ಈ ಕಾರಣದಿಂದ ಅದಕ್ಕೆ ಭಾರತ ವರ್ಷವೆಂದು ಹೆಸರಾಯಿತು' ಎಂದು ಹೇಳಿರುತ್ತದೆ.

ಹಿಂದಿ ವಿಶ್ವಕೋಶದಲ್ಲಿ ಕುಮಾರಿಕಾ ಖಂಡ ಮತ್ತು ನೃಸಿಂಹ ಪುರಾಣಗಳಲ್ಲಿ ಈ ಉಲ್ಲೇಖ ಕಂಡು ಬರುತ್ತದೆ. 'ಜಂಬೂದ್ವೀಪಾಧಿಪತಿ ಅಗ್ನಿಧನ ಜ್ಯೇಷ್ಠ ಪುತ್ರ ನಾಭಿಯು ಹಿಮಾಲಯದ ಅಧಿಪತ್ಯವನ್ನು ಪ್ರಾಪ್ತಮಾಡಿಕೊಂಡನು. ನಾಭಿಯ ಪುತ್ರ ಋಷಭ ಮತ್ತು ಅವನಪುತ್ರ ಭರತ. ಈ ಭರತನು ಹಲವು ಕಾಲ ಧರ್ಮಾನುಸಾರತಃ ವರ್ಷದ ಶಾಸನ ಮಾಡಿಕೊಂಡಿದ್ದುದರಿಂದಲೇ ಅವನ ಹೆಸರಿಂದ ಇದಕ್ಕೆ ಭಾರತ ವರ್ಷವೆಂದು ಹೆಸರಾಯಿತು.'

ಇದೇ ಪ್ರಕಾರ ಸಮಸ್ತ ಗ್ರಂಥಗಳು ಹಾಗು ಪೌರಾಣಿಕ ಸಾಹಿತ್ಯವು ಏಕ ಮತದಿಂದ ಈ ವಿಷಯವನ್ನು ಸಮರ್ಥಿಸುತ್ತವೆ.

—ಶ್ರೀ. ನಾರಾಯಣ ಪ್ರಸಾದ್ ಸಿನ್ನೆ.

## ಗೆಳೆಯನಿಗೆ ಓಲೆ—೧

## ಕನ್ನಡದಲ್ಲಿ ಕಾದಂಬರಿ ಸಾಹಿತ್ಯ

### ಜೊಳ್ಳಿನ ಬೆಳೆಯೇ ಈಚೆಗೆ ಹೆಚ್ಚಿದೆ

ನನ್ನ ಗೆಳೆಯಾ,

ಇನ್ನು ಕೆಲವೇ ತಿಂಗಳುಗಳಲ್ಲಿ ರೂಪುಗೊಳ್ಳಲಿರುವ ಕನ್ನಡ ನಾಡಿನಲ್ಲಿ ಹೊಸ ಬಗೆಯ ಕಲೆಗಳು ಚಿಗುರೊಡೆಯಬಹುದು. ಇದು ಇಂದಿನ ನಮ್ಮ ಜೀವನದಲ್ಲಿ ನಿರೂಪಣೆಯಲ್ಲಿ ಹೊಸದಲ್ಲವಾದರೂ, ವಸ್ತುವಿನ ಆಯ್ಕೆಯ ದೃಷ್ಟಿಯಿಂದ ಹೊಸತಾಗಿರುವ ಹಲವಾರು ಕಲಾಕೃತಿಗಳನ್ನು ಕಂಡಿರುತ್ತೇವೆ; ಅವುಗಳಲ್ಲಿಯ ವೈವಿಧ್ಯವನ್ನು ಅನುಭವಿಸಿರುತ್ತೇವೆ. ಹೊಸ ಬಾಳನ್ನು ತೊಡಗುವ ಈ ಮಂಗಲ ಸಮಯದಲ್ಲಿ ನಮ್ಮ ಈ ತನಕದ; ಅದರಲ್ಲೂ ಪ್ರಾಮುಖ್ಯವಾಗಿ ಆಧುನಿಕ ಸಾಹಿತ್ಯದ ಚಿಕ್ಕ ವಿಮರ್ಶೆಯನ್ನು ನಡೆಸುವುದು ಅಗತ್ಯವಾಗಿದೆ.

ಈ ಶತಮಾನದ ಎರಡು-ಮೂರನೆಯ ದಶಕದಿಂದ ತೊಡಗಿದ ನಮ್ಮ ಆಧುನಿಕ ಕನ್ನಡ ಸಾಹಿತ್ಯದ ಬಾಹ್ಯರೂಪ ಬಹು ಬೆಳೆದಿದೆಯಾದರೂ, ಅಂತರಂಗದ ಬೆಳವಣಿಗೆಗೆ ಬಾಹ್ಯದಷ್ಟಾಗಿಲ್ಲ ಎಂಬುದು ನಿರ್ವಿವಾದ. ಇತ್ತೀಚಿನ ಐದಾರು ವರ್ಷಗಳಲ್ಲಂತೂ ಕಾದಂಬರಿಗಳ ಹುಚ್ಚು ಹೊಳೆ ಹರಿಯುತ್ತಿದೆ. ಕಾದಂಬರಿಗಳೆಂದರೇನು? ಅವುಗಳು ನಿರೂಪಿಸತಕ್ಕ ಸಾಮಾಜಿಕ ಅಂಗಗಳು ಯಾವುವು? ವ್ಯಕ್ತಿತ್ವ ಪ್ರಕಾಶನಕ್ಕೆ ಕಾದಂಬರಿಯು ಏಕೆ ಸಹಾಯಕಾರಿ?—ಇವುಗಳನ್ನೆಲ್ಲಾ ತಿಳಿಯದೆ, ಬರಿಯ ಪೊಳ್ಳು ಕತೆಗಳನ್ನು ಬೆಳೆಸಿ ಬರೆದು ಕಾದಂಬರಿ ಎಂದು ಹೆಸರಿಸುತ್ತಿರುವುದನ್ನು ನಾವು ಕಾಣಬಹುದು. ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ಇದೊಂದು ತೊಡಕು. ಕಾದಂಬರಿಕಾರ ತನ್ನ ಕೋಣೆಯೊಳಗೆಯೇ ಜಗತ್ತಿನ ಎಲ್ಲಾ ನದಿ, ಬನ, ಹೊಲ, ಗಿಡ, ಹೂ ಬಳ್ಳಿಗಳನ್ನು ಸೃಷ್ಟಿಸುವಂತಿಲ್ಲ. ಇದೇ ತೆರನಾಗಿ ಆತ ವ್ಯಕ್ತಿ ಚಿತ್ರಗಳನ್ನು ಸೃಷ್ಟಿಸಲೂ ಸಾಧ್ಯವಿಲ್ಲ. ಅನುಭವಿ ಆತನಾದರೆ, ಪ್ರಪಂಚದ ಆಗುಹೋಗುಗಳನ್ನು ತನ್ನದೇ ಆದ ದೃಷ್ಟಿಯಿಂದ ವಿವೇಚಿಸಿ ನೋಡಬಲ್ಲ ಶಕ್ತಿ ಆತನಲ್ಲಿ ಇರುವುದೆಂದಾದರೆ ಮಾತ್ರ ಆತ ಲೇಖಕನಾಗಬಲ್ಲ. ಬರೆದುದೆಲ್ಲಾ ಹೇಗೆ ಸಾಹಿತ್ಯವಾಗಲಾರದೋ, ಹಾಗೆಯೇ ಬರೆಯುವವರೆಲ್ಲರೂ ಸಾಹಿತಿಗಳಾಗಲಾರರು. ತಾನು ತಿಳಿದ ವಿಷಯಗಳನ್ನು, ಸರ್ವಸಾಮಾನ್ಯರು ಮೆಚ್ಚುವಂತೆ ಬರೆದು, ಅವರ ಜೊತೆಯಲ್ಲಿ ತನ್ನ ಕಲಾತ್ಮಕ ಕೈವಾಡವನ್ನು ತೋರುವುದು ಸಾಮಾನ್ಯವಾದ ಕೆಲಸವಲ್ಲ.

ಇತ್ತೀಚೆಗೆ ಬೆಳೆದು ಬಂದಿರುವ ಕಾದಂಬರಿ ಕ್ಷೇತ್ರದ ವಿಮರ್ಶೆಯನ್ನು ಮಾಡಹೊರಟರೆ, ಅದರಲ್ಲಿ ಜೊಳ್ಳಿನ ಸಂಖ್ಯೆಯೇ ಬಹಳವಾಗಿ ಕಂಡೀತು. ಅಪಕ್ವವಾದ ಅನುಭವ, ಕೆಲವೇ ಜನರ ಮನೋರಂಜನೆಗಾಗಿ ಅಥವಾ ಯಾವುದೋ ಒಂದು ಜೀವದ ಸುಖವನ್ನು ಬಯಸಿ ಬರೆದ ಕಾದಂಬರಿಗಳು ಬಹಳ ಬಂದಿವೆ. ಇಂತಹ ಕಾದಂಬರಿಕಾರರು ಮೊದಲು ಕಾದಂಬರಿ ಎಂದರೇನು-ಅದರ ವೈಶಾಲ್ಯವೆಷ್ಟು—ಸಮಾಜಕ್ಕೆ ಕಾದಂಬರಿ-ಯಿಂದ ಸಿಗಬಹುದಾದ ಉಪಕಾರ ಎಷ್ಟು—ಎಂಬುದನ್ನು ಅಭ್ಯಸಿಸಬೇಕು. ಈ ಬಗೆಯ ಅಭ್ಯಾಸದ ಬಳಿಕ, ತಮ್ಮ ಅನುಭವಗಳನ್ನು ಸ್ವಕಲ್ಪಿತ ಸಂಯೋಜನೆಯಿಂದ ಒಂದುಗೂಡಿಸಿ, ಬರಹ ಕೀಟಿಯಾಗದಂತೆ ಎಚ್ಚರವಿದ್ದು ಬರೆಯಬೇಕು. ಸುಪ್ರಸಿದ್ಧರಾದ ಹಲವಾರು ಪಾಶ್ಚಾತ್ಯ ಕಾದಂಬರಿಕಾರರು ಒಂದು ಕಾದಂಬರಿಯನ್ನು ಬರೆಯಲು ಅದೆಷ್ಟು ಶ್ರಮವಹಿಸುತಿದ್ದಾರೆ. ಎಂಬುದನ್ನು ತಿಳಿದರೆ, ನಮ್ಮ ಕಾದಂಬರಿಕಾರರು ಬೆರಗು ಕಚ್ಚಬೇಕಾದೀತು. ಅವರ ಲೇಖಕರಿಗೆ ದೊರೆಯುತ್ತಿರುವ ಪುರಸ್ಕಾರ ನಮ್ಮ ಬರಹಗಾರರಿಗೆ ದೊರೆಯುತ್ತಿಲ್ಲ ಎಂಬುದು ನಿಜ. ನಮ್ಮ ಲೇಖಕರಲ್ಲಿ ಹೆಚ್ಚಿನವರು ಲೇಖನ ವ್ಯವಸಾಯವನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡವರು. ಬರಹದಿಂದ ಅನ್ನದ ಸಮಸ್ಯೆ ಬಗೆಹರಿಯಲಾರದು ಎಂದಾದಾಗ, ಉತ್ತಮ ಬರಹಗಳನ್ನೇ ಏಕೆ ಬರೆಯಬಾರದು?

ಉತ್ತಮ ಬರಹಗಳ ಬರವಣಿಗೆಯು ಸುಲಭವಲ್ಲ. ಎಷ್ಟೆಷ್ಟು ಆಳವಾದ ಅಭ್ಯಾಸ ಲೇಖಕನಿಗೆ ಇದೆಯೋ, ಎಷ್ಟೆಷ್ಟು ತೀಕ್ಷ್ಣವಾಗಿ ಆತ ಸಾಮಾಜಿಕ ಪ್ರತಿಕ್ರಿಯೆಗಳನ್ನು ತೋರಬಲ್ಲನೋ, ಎಷ್ಟೆಷ್ಟು ಮಾನವೀಯ ಅನುಕಂಪದಿಂದ ತನ್ನೆದುರಿನ ವ್ಯಕ್ತಿಗಳ ಸಮಸ್ಯೆಗಳನ್ನು ಬಿಡಿಸಲು ಶಕ್ತನಾಗುತ್ತಾನೋ, ಅಷ್ಟಷ್ಟೇ ಉತ್ತಮ ಬರಹಗಳನ್ನು ಬರೆಯಬಲ್ಲ. ಬರಹವು ಬಾಲ್ಯದಿಂದಲೇ ಒಲಿದು ಬರುವ ಒಂದು ಕಲೆ ಎನ್ನಲಾಗುವುದಿಲ್ಲ. ಅದರಲ್ಲಿ ಅಭ್ಯಾಸಕ್ಕೂ ವಿಶೇಷವಾದ ಬೆಲೆ ಇದೆ. ಅಭ್ಯಾಸ ಹೆಚ್ಚಿದಷ್ಟು ಬರಹದ ಪಾಂಡಿತ್ಯ ಹೆಚ್ಚುತ್ತದೆ; ವಿಷಯ ನಿರೂಪಣೆ ಸರಳವಾಗುತ್ತದೆ; ಹೇಳಬೇಕೆಂದಿರುವ ವಿಷಯಗಳಲ್ಲಿ ಸವಿ ತಳೆದೋರುತ್ತದೆ. ಇಲ್ಲವಾದರೆ ಎಲ್ಲವೂ ಬಂಜರು ಭೂಮಿಯಂತಾಗುತ್ತದೆ.

ನನ್ನ ಗೆಳೆಯಾ, ಇದೀಗ ಈ ದೃಷ್ಟಿಯಿಂದ ಇತ್ತೀಚಿಗಿನ ಕಾದಂಬರಿಗಳನ್ನು ಅಳೆದು ನೋಡು. ಇಂದಿನದನ್ನು ಕಾದಂಬರಿ ಯುಗವೆಂದು ನಮ್ಮಲ್ಲಿ ಜನರು ಅಡುತ್ತಿರುವರು. ಪ್ರಕಟಗೊಳ್ಳುತ್ತಿರುವ ಸಣ್ಣ ಕತೆ—ಕವನ—ವಿಮರ್ಶಾತ್ಮಕ—ಬರಹಗಳಿಗೆ ಬೆಲೆ ಇಲ್ಲ. ಕಾರಣ ಸಣ್ಣ ಕತೆಗಳಲ್ಲಿ ಕಾಣಲಾರದಂತಹ ಸವಿಯನ್ನು, ನಮ್ಮ ಕನ್ನಡಿಗರು ದೊಡ್ಡ ಕತೆಯಲ್ಲಿ ಕಾಣತೊಡಗಿದ್ದಾರೆ. ದೊಡ್ಡ ಕತೆಯೇ ಕಾದಂಬರಿ ಎಂಬ ದೃಷ್ಟಿ ಹೆಚ್ಚಿನ ಓದುಗರಲ್ಲಿದೆ ಮಾತ್ರವಲ್ಲದೆ, ಹಲವು ಲೇಖಕರೂ ಈ ಸೂತ್ರವನ್ನು ಅನುಸರಿಸುವಂತಿದೆ. ಇದರಿಂದ ಕಾದಂಬರಿಗೆ ಸಾಹಿತ್ಯದಲ್ಲಿರುವ ತನ್ನದೇ ಆದೊಂದು ಸ್ಥಾನವು ದೊರಕದೆ ಹೋಗಬಹುದು.

ಕಾದಂಬರಿಕಾರನಾಗಬೇಕೆಂದು ಬಯಸುವ ಪ್ರತಿಯೊಬ್ಬನು ಮೊದಲಾಗಿ ಅನುಭವ ಗಳಿಸಲಿ. ಅನುಭವಗಳ ವಿಸ್ತಾರ ಹೆಚ್ಚಿದಂತೆ ಲೇಖಕನ ಬರಹದಲ್ಲಿ ವೈವಿಧ್ಯವೂ ಮೂಡುತ್ತದೆ, ಕಾಣುವ ನೋಟದಲ್ಲಿ ಸಮಗ್ರತೆ ಉಂಟಾಗುತ್ತದೆ.

ಸಾಹಿತಿ ಸಮಾಜದಿಂದ ಹೊರತಾಗಿ ಬಾಳುವ ವ್ಯಕ್ತಿಯಲ್ಲ; ಹಾಗೆಂದು ಸಮಾಜದ ಎಲ್ಲಾ ಕಟ್ಟುನಿಟ್ಟುಗಳಿಗೆ ತಲೆತೂಗಿ ಬಾಳುವಂತವನೂ ಅಲ್ಲ. ಆತನಿಗೆ ಅವನದೇ ಆದ ವಿವೇಚನಾ ನೋಟವಿದೆ. ಸುಸಂಸ್ಕೃತ ಸುಖಮಯ ಸಮಾಜ ರಚನೆಯಲ್ಲಿ ಎಲ್ಲಾ ಕಲಾವಿದರ ಪಾತ್ರ ಇದ್ದೇ ಇದೆ.

ಇನ್ನತ್ತಿನ ಕನ್ನಡ ಕಾದಂಬರಿಗಳ ಕುರಿತಾದ ಸೂಕ್ಷ್ಮ ಹೊರನೋಟವೊಂದನ್ನು ನಾನೀಗ ನಿನ್ನೆದುರಿಗೆ ಇಟ್ಟಿರುತ್ತೇನೆ. ಅವುಗಳ ಹೆಚ್ಚಿನ ವಿಮರ್ಶೆಯನ್ನು ಮುಂದಿನ ಪತ್ರದಲ್ಲಿ ಕಾಣುವಿಯಂತೆ.

ನಿನ್ನ ಗೆಳೆಯ,
"ನಾಗೇಶ".


## ಹಿಂದೂ ಉತ್ತರಾಧಿಕಾರ ಶಾಸನ

| | |
|---|---|
| 1, ಕನ್ನಡ ಪ್ರತಿ | 0—12—0 |
| 2, ,, | 0—8—0 |
| 3, ಇಂಗ್ಲಿಷ್ | 0—6—0 |

ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬ VOL. 36

4—10—1956

ಸಂಚಿಕೆ ೫ NO. 5

## ಗಾಂಧೀ ಜಯಂತಿ

## ರಾಷ್ಟ್ರದ ಎಲ್ಲ ಕ್ಷೇತ್ರದಲ್ಲೂ ಮಹಾತ್ಮರ ಪ್ರಭಾವ ಬಿದ್ದಿದೆ: ಭಾರತಕ್ಕೆ ಅವರಂತಹ ಗುರು ಬೇರೆ ಸಿಕ್ಕಿಲ್ಲ

ರಾಷ್ಟ್ರಪಿತನೆಂದು ಗೌರವದಿಂದ, ಮಹಾತ್ಮನೆಂದು ಪೂಜ್ಯ ಭಾವದಿಂದ ಬಾಪೂಜಿಯೆಂದು ಸಲಿಗೆಯಿಂದ ನಾವು ಕರೆಯುವ ಗಾಂಧೀಯವರು ಇಂದಿರುತ್ತಿದ್ದರೆ, ೮೭ ವರ್ಷ ವಯಸ್ಸಿನವರಾಗುತ್ತಿದ್ದರು ಆದರೆ, ದೇಶವು ಆ ಸೌಭಾಗ್ಯವನ್ನು ಪಡೆದುಬಂದಿರಲಿಲ್ಲ ಸ್ವಾತಂತ್ರ್ಯ ದೊರೆತ ಐದೂವರೆ ತಿಂಗಳಲ್ಲಿಯೇ ದುರಾತ್ಮನ ಗುಂಡಿಗೆ ಅವರು ಆಹುತಿಯಾದರು ಆದಾಗ್ಯೂ ಅಕ್ಟೋಬರ ೨ನೇ ದಿನಾಂಕ ನಮ್ಮ ದೃಷ್ಟಿ ಸಹಜವಾಗಿಯೇ ಚರಖಾ ಜಯಂತಿ ಎಂಬುದಾಗಿ ಉತ್ಸವವನ್ನು ಆಚರಿಸುತ್ತಿದ್ದ ಹಿಂದಿನ ದಿನಗಳ ಕಡೆಗೆ ಹರಿಯುತ್ತದೆ

ಗಾಂಧೀಯವರು ಇಂದು ದೊಡ್ಡವರೆನಿಸಿದ್ದಾರೆ ಆದರೆ, ಅವರ ದೊಡ್ಡಸ್ತಿಕೆಯು ಬಹಳ ಶ್ರಮಪೂರ್ವಕ ಕಟ್ಟಿಕೊಂಡ ದಿವ್ಯ ಭವನದಂತಿದೆ ಬಹಳ ದೀರ್ಘವಾದ ಪ್ರಯೋಗ, ಸತ್ಯನಡೆದಾಗಲೆಲ್ಲ ಅದನ್ನು ಹಿಡಿದುಕೊಂಡು ಹೋಗುವ ಪ್ರವೃತ್ತಿ, ದೃಢವಾದ ಸಂಕಲ್ಪ ಮತ್ತು ಉದ್ಯೋಗಶೀಲತೆ, ಕಾರ್ಯೋತ್ಸಾಹ ಇತ್ಯಾದಿ ಗುಣಗಳ ದೆಸೆಯಿಂದ ದೊರೆತ ಪದವಿಯದು. ಆಕಸ್ಮಿಕವಾಗಿಯಾಗಲಿ, ಜನ್ಮದತ್ತವಾದವರದಿಂದಾಗಲೀ ಗಾಂಧೀಜಿಯ ಗುಣಗಳು ರೂಪುಗೊಂಡವೆಂದು ಹೇಳುವ ಹಾಗಿಲ್ಲ. "ಸತ್ಯ ಶೋಧನೆಯ ಪ್ರಯೋಗ"— ಎಂಬುದಾಗಿ ಅವರು ತಮ್ಮ ಜೀವನ ಕತೆಯನ್ನು ಹೆಸರಿಸಿದಾಗ, ತನ್ನ ಗುಣ ಸಂಪತ್ತುಗಳ ಮೂಲವನ್ನು ಬೆರಳಿಟ್ಟು ತೋರಿಸಿದ್ದರು

ಎಲ್ಲರಂತೆಯೇ ಸಾಮಾನ್ಯವಾದ ಜೀವನವನ್ನೇ ಗಾಂಧೀಜಿ ಸಹ ಪ್ರಾರಂಭಿಸಿದ್ದರು. ದಕ್ಷಿಣ ಆಫ್ರಿಕಕ್ಕೆ ಅವರು ವಕೀಲಿಯ ವ್ಯವಸಾಯಕ್ಕಾಗಿ ಕಾಲಿಟ್ಟರು ಆದರೆ, ಅಲ್ಲಿ ಸ್ವತಂತ್ರ ಜೀವನವನ್ನು ನಡೆಸಲು ಹತ್ತಿದಾಗ, ಅವರಿಗೆ ಸತ್ಯ ಶೋಧನೆಯ ಪ್ರಯೋಗಗಳನ್ನು ಭರದಿಂದ ಮುಂದೊತ್ತಲು ವಿಶೇಷವಾದ ಅನುಕೂಲತೆಗಳೂ ಸನ್ನಿವೇಶಗಳೂ ಗೋಚರಿಸಿದವು ಗಾಂಧೀಜಿ ಏನಾಗುವರೆಂದು ಎಲ್ಲರೂ ಭಾವಿಸಿದ್ದರೋ ಹಾಗಾಗದೆ ಅವರ ಜೀವನವು ತೀರ ನವೀನವಾದ ಪಥವನ್ನು ಇಲ್ಲಿ ಅವಲಂಬಿಸಿ ಮುಂದರಿದಂತೆ ಕೆಲವೇ ವರ್ಷಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಯಿತು.

ದಕ್ಷಿಣ ಆಫ್ರಿಕದಲ್ಲಿ ಅವರು ರೂಪಿಸಿದ 'ಟಾಲ್ ಸ್ಟಾಯ್ ಫಾರ್ಮ್', ಅಹಮದಾಬಾದಿನ ಬಳಿ ನೆಲೆಗೊಳಿಸಿದ "ಸಬರಮತಿ ಆಶ್ರಮ", ಮುಂದೆ ವರ್ಧಾದ ಸಮೀಪ ತಲೆ ಎತ್ತಿದ "ಸೇವಾ ಗ್ರಾಮ"—ಗಾಂಧೀಜಿ ಯಾವುದನ್ನು ಆದರ್ಶವೆಂದು ಸ್ವೀಕರಿಸಿದರು ಮತ್ತು ತಮ್ಮ ಜೀವನದಲ್ಲಿ ಯಾವುದಕ್ಕೆ ಮಹತ್ವದ ಸ್ಥಾನವನ್ನಿತ್ತರು ಎಂಬುದನ್ನು ತೋರಿಸಿ ಕೊಡುತ್ತವೆ ಇವು ಮೂರೂ ಪ್ರಯೋಗ ಶಾಲೆಗಳಲ್ಲಿದ್ದು ಗಾಂಧೀಜಿಯವರು ಸರಳ ಜೀವನ, ಪರಿಶುದ್ಧವೂ ಉಚ್ಚವೂ ಆದ ವಿಚಾರ ಮತ್ತು ಪರಿಶ್ರಮಕ್ಕೆ ಹಿಂಜರಿಯದ ಭಯದಿಂದ ಕಂಪಿತವಾಗದ ಮನೋಭಾವಗಳೇ ಭಾರತಕ್ಕೆ ಎಲ್ಲ ಜನರಿಗೆ, ಬೇಕಾದ ವಿಷಯಗಳೆಂದು ಕಂಡು ಕೊಂಡರು. ಇದೇ ಸಂದೇಶವನ್ನು ಸುತ್ತಲೂ ಬೀರಿದರು

"ನಾನು ದರಿದ್ರ ನಾರಾಯಣನ ಆರಾಧಕ" ಎಂದು ಗಾಂಧೀಜಿ ಹಲವುಮ್ಮೆ ಹೇಳಿದ್ದರು ವಿಲಾಸೋಪಭೋಗವೇ ಪ್ರಧಾನವಾಗುಳ್ಳ ಜೀವನದ ರೀತಿ ಅವರಿಗೆ ಎಳ್ಳಷ್ಟೂ ಹಿಡಿಸುತ್ತಿರಲಿಲ್ಲ ತಪಸ್ಸು, ಸಂಯಮ, ತ್ಯಾಗ ಇತ್ಯಾದಿ ಉದಾತ್ತವೂ ಕಠಿಣವೂ ಆದ ಮಾರ್ಗವೇ ಭಾರತೀಯರಿಗೆ ತಾರಕವೆಂದು ಅವರು ಸಾರಿದರು ಅವರ ದೃಷ್ಟಿಯಲ್ಲಿ ಭಾರತವನ್ನು ಹಾಳು ಮಾಡಿದ ಸಂಗತಿಗಳು ಕೇವಲ ಎರಡು—ಒಂದನೆಯದೇ ವಿದೇಶೀಯರ ಆಡಳಿತ, ಎರಡನೆಯದೇ ಬಡತನ.

ಬಡತನವನ್ನು ನಾವಾಗಿ ಬರಮಾಡಿಕೊಂಡಿರುವಂತೆ ಗಾಂಧೀಜಿಗೆ ತೋರಿತು ಭಾರತೀಯರು ಶ್ರಮಕ್ಕೆ ಹೆದರುವ ಭೀರುಗಳೂ ಅದಕ್ಕಿಂತ ಹೆಚ್ಚಾಗಿ, ಸೋಮಾರಿಗಳೂ ಆಗಿರುವರೆಂದು ಗಾಂಧೀಜಿ ಪದೇ ಪದೇ ಎಚ್ಚರಿಸಿದರು ಭಾರತೀಯರು ಬಡವರಾಗಿರುವುದಕ್ಕೆ ಕೆಲವರ ಶೋಷಣೆಯ ಜೊತೆಗೆ ಹೆಚ್ಚುತ್ತಿರುವ ಜನಸಂಖ್ಯೆಯೂ ಕಾರಣವೆಂಬ ಸತ್ಯವನ್ನೂ ಗಾಂಧೀಜಿ ಆಗಾಗ್ಗೆ ಜನರ ಗಮನಕ್ಕೆ ತಂದುಕೊಟ್ಟರು. ಈ ಸಮಸ್ಯೆಗಳನ್ನು ಬಿಡಿಸುವ ಸಲುವಾಗಿ ಅವರು ತಮ್ಮ ಪರಿಹಾರೋಪಾಯಗಳನ್ನೂ ಮುಂದಿಟ್ಟರು.

ಮೊದಲನೆಯದಾಗಿ, ನಮ್ಮ ಎಲ್ಲ ಸಾಧನ ಸ್ರೋತಗಳನ್ನು ರಚನಾತ್ಮಕ ಕಾರ್ಯದಲ್ಲಿ ತೊಡಗಿಸಬೇಕೆಂದು ಅವರು ಸಲಹೆ ಇತ್ತರು ನಮ್ಮಲ್ಲಿ ಯಾರೂ ಆಲಸಿಯಾಗಿರಬಾರದು, ಪ್ರತಿಯೊಬ್ಬ ಸಶಕ್ತನೂ ಎರಡೂ ಕೈಯಿಂದ ಕೆಲಸ ಮಾಡಿ ಉಣ್ಣುವುದಕ್ಕೆ ಮುಂಬರಬೇಕು; ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವುದಕ್ಕೆ ಶ್ರಮಪೂರ್ವಕ ದುಡಿಯಬೇಕು ಎಂದವರು ಬೋಧಿಸಿದರು. ಶೋಷಕ ಪ್ರವೃತ್ತಿಯು ಅಂತ್ಯಗೊಳ್ಳಬೇಕೆಂದು ಸಹ ಅವರು ಸಾರಿದರು ಇದಕ್ಕಾಗಿ ಕೃಷಿ ಕ್ಷೇತ್ರದಲ್ಲಿಯೂ ಆರ್ಥಿಕ ಚಟುವಟಿಕೆಯ ಉಳಿದ ರಂಗದಲ್ಲಿಯೂ ಸಂಪತ್ತಿನ ಸಮಾನ ವಿತರಣೆಯಾಗುವಂತೆ ಉತ್ತಮ ಶಾಸನಗಳನ್ನೂ ಸಂಪ್ರದಾಯಗಳನ್ನೂ ರೂಢಿಸಬೇಕೆಂದು ಅವರು ಒತ್ತಾಯಿಸಿದರು ಜನ ಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸುವುದಕ್ಕೆ ಬ್ರಹ್ಮಚರ್ಯ ವ್ರತಪಾಲನೆಯಂತಹ ದೋಷ ದೂರವಾದ ಭಾರತೀಯ ಪರಂಪರೆಗೆ ತುಂಬ ಹೊಂದಿಕೊಳ್ಳುವ, ಉದಾತ್ತ ಮಾರ್ಗಾವಲಂಬಿಗಳಾಗಬೇಕೆಂದು ಅವರು ಪ್ರತಿಪಾದಿಸಿದರು

ಇಷ್ಟೆಲ್ಲ ಮಾಡಿದರೂ ನಾವು ಭೌತಿಕ ಸಾಧನ ಸಂಪತ್ತುಗಳ ಮಾನದಿಂದ ಅಮೇರಿಕ ಅಥವಾ ಬ್ರಿಟನುಗಳ ಮಟ್ಟಕ್ಕೆ ಬರುವುದು ಎಷ್ಟಕ್ಕೂ ಸಾಧ್ಯವಿಲ್ಲ ಎಂಬ ಸತ್ಯಾಂಶವನ್ನು ಗಾಂಧೀಜಿ ಮರೆತಿರಲಿಲ್ಲ ಸ್ವಾತಂತ್ರ್ಯ ಭಾರತದ ಸರಕಾರವು ಮುಂದಿನ ೨೫ ವರ್ಷಗಳಲ್ಲಿ ಭಾರತದ ಸಂಪತ್ತನ್ನು ದ್ವಿಗುಣಿತಗೊಳಿಸಲು ತನ್ನ ಪಂಚವಾರ್ಷಿಕ ಯೋಜನೆಗಳ ಕಾರ್ಯಕ್ರಮದ ಮೂಲಕ ನಿರ್ಧರಿಸಿದೆ ಆದರೆ, ನಾವು ಎಷ್ಟೇ ಪ್ರಯತ್ನಪಟ್ಟರೂ ಬ್ರಿಟನನ್ನಾಗಲೀ ಅಮೇರಿಕವನ್ನಾಗಲೀ ಭೌತಿಕ ಸುಖ ಸಂಪತ್ತುಗಳ ಮಟ್ಟಿಗೆ ಎಂದೇ ಆಗಲಿ, ಹಿಂದೆ ಹಾಕಬಲ್ಲೆವೆಂಬ ನಂಬಿಕೆ ಉಂಟಾಗಲಾರದು ಗಾಂಧೀಜಿ ಇದನ್ನು ಮನಗಂಡಿದ್ದ ದೆಸೆಯಿಂದಲೇ ಭಾರತೀಯರಿಗೆ ಸರಳ ಜೀವನವೇ ತಾರಕ ಎಂದು ಉಪದೇಶಿಸಿದರು. ಭೌತಿಕ ಸುಖ ಸಾಧನೆಗಳ ಹಂಬಲವುಳ್ಳ ಜಗತ್ತು ನಾಗರಿಕತೆಯ ನಾಶವನ್ನು ಮಾಡುವುದೆಂದು ಹೇಳುವುದು ದಾರ್ಷ್ಟ್ಯವಾದೀತು. ಗಾಂಧೀಜಿ ನಾಗರಿಕತೆಯ ನಾಶವನ್ನೆಂದೂ ಬಯಸಿದವರಲ್ಲ ಆದರೆ ಭಾರತದ ಆಧ್ಯಾತ್ಮಿಕ ತೇಜಸ್ಸು ನಾಗರಿಕತೆಗೆ ನವೀನ ಶೋಭೆ ನೀಡಬಲ್ಲದೆಂಬ ನಂಬಿಕೆಯನ್ನವರು ಇಟ್ಟುಕೊಂಡಿದ್ದರು

ಮೇಲಿನ ಮಾತುಗಳನ್ನೆಲ್ಲ ವಿವೇಚಿಸಿದರೆ ಗಾಂಧೀಜಿಯವರೊಬ್ಬ ಶಿಕ್ಷಕನಂತೆ ತೋರುತ್ತಾರೆ ರಾಷ್ಟ್ರವು ಅವರನ್ನು ಸ್ವಾತಂತ್ರ್ಯ ದೊರಕಿಸಿ ಕೊಟ್ಟ ಧೀರ ನಾಯಕನೆಂದು ಸಂಬೋಧಿಸುತ್ತದೆ, ನಿಜ. ಆದರೆ, ಅವರು ಸ್ವಾತಂತ್ರ್ಯ ಹೋರಾಟದಲ್ಲಿಯಷ್ಟೇ ಮುಂಚೂಣಿಯಲ್ಲಿ ನಿಂತವರಲ್ಲ — ಅವರು ದೇಶದ ಪ್ರತಿಯೊಂದೂ ರಂಗದ ಗತಿವಿಧಿಯನ್ನು ಆಮೂಲಾಗ್ರವಾಗಿ ಬದಲಾಯಿಸಿದರು. ಯೋಧನೆಂಬ, ದೇಶಭಕ್ತನೆಂಬ ನೆಲೆಯೊಂದೇ ಅವರದಲ್ಲ— ಅವರು ಭಾರತಕ್ಕೆ ಯಾವುದು ಒಳ್ಳೆಯ

(೧೨ನೇ ಪುಟ ನೋಡಿರಿ)

## ನಮ್ಮ ಸಂಪತ್ತು

* * *

ನಾವು ನೆರವಾಗಿ ವಿಸ್ತರಿಸಿದ ವ್ಯಾಪಾರ ಕ್ಷೇತ್ರವು ನಮ್ಮ ಸಂಪತ್ತಲ್ಲ
ನಾವು ಭವ್ಯವಾಗಿ ಕಟ್ಟಿಸಿದ ಕಟ್ಟೋಣಗಳು ನಮ್ಮ ಐಶ್ವರ್ಯವಲ್ಲ.
ನಾವು ಜೋಕೆಯಾಗಿ ಉಳಿಸಿದ ಕ್ಷೇಮನಿಧಿಯು ನಮ್ಮ ಸೌಭಾಗ್ಯವಲ್ಲ
ನಾವು ಪಾಲುಗಾರರಿಗೆ ವಿತರಣೆ ಮಾಡುವ ಉತ್ಪಾದನೆಯು ನಮ್ಮ ಶ್ರೀಮಂತಿಕೆಯಲ್ಲ

ಇವೆಲ್ಲವೂ ನೀವು ನಮ್ಮ ಮೇಲೆ ತೋರಿಸುತ್ತಿರುವ ವಿಶ್ವಾಸದ ಫಲಿತಾಂಶ. ನಿಮ್ಮ ವಿಶ್ವಾಸವೇ ನಮ್ಮ ಪರೋಕ್ಷ ಸಂಪತ್ತು ಅದನ್ನು ಅತ್ಯಧಿಕವಾಗಿ ಸಂಪಾದಿಸಿ ನಿಮ್ಮೆಲ್ಲರ ಅರ್ಹತೆಯನ್ನು ಪಡೆಯುವುದೇ ನಮ್ಮ ಮುಖ್ಯ ಧ್ಯೇಯ

### ದಿ ವಿಜಯ ಬೇಂಕ್ ಲಿಮಿಟೆಡ್

ಒಟ್ಟು ವಹಿವಾಟು ಮೊಬಲಗು ರೂ. 90,00,000

ವಾರ್ಷಿಕ ಚಂದಾ ರೂ ೫—೧೨—೦

NAVAYUGA WEEKLY, UDIPI.

ಬಿಡಿಸಂಚಿಕೆ ಎರಡಾಣೆ

## ಶಿಕ್ಷಣ

# ಜೀವನ-ಶಿಕ್ಷಣ ಶಾಲೆಯ ಆರಂಭ

"ಈ ನಗರದಲ್ಲಿ ನೀನು ನೋಡಿದ ಸುಂದರವಾದ ದೃಶ್ಯವೆಂದರೆ ಯಾವುದು ಪರಶುರಾಮ?" ಎಂದು ಹೊಸಬನನ್ನು ಉದ್ದೇಶಿಸಿ ಶಿಕ್ಷಕರು ಕೇಳಿದರು.

ಕುಂಬಾರದ ಈ ಚಿಕ್ಕ ಹುಡುಗ ಅದೇ ತಾನೇ ಡಾ. ರಘುಪತಿಯವರ ಆಡಳಿತದಲ್ಲಿನ ಹಾಯಸ್ಕೂಲನ್ನು ಸೇರಿದ್ದ.

"ಒಬ್ಬ ಚಿಕ್ಕ ಬಾಲಕ— ಯಾವ ಬಟ್ಟೆಯನ್ನೂ ಹಾಕಿಕೊಳ್ಳದಷ್ಟು ಚಿಕ್ಕವ—ಇನ್ನೊಬ್ಬ ಇದಕ್ಕೂ ಚಿಕ್ಕವ ಬರಿ ಮೈಯಲ್ಲಿದ್ದ ಬಾಲಕನನ್ನು ರಸ್ತೆಗಳ ಮೇಲೆ ಜನ ಹಾಗು ವಾಹನಗಳ ನಡುವೆ ಹಾಯ್ದು ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತಿದ್ದ. ಇದೇ ನಾನು ನೋಡಿದ ಸುಂದರ ದೃಶ್ಯವೆನ್ನಬಹುದು."

"ಪರಶುರಾಮ ನೀನು ಕವಿ ಹಾಗು ಒಳ್ಳೇ ಹುಡುಗನೂ ಆಗಿರುವೆ" ಮುಖ್ಯೋಪಾಧ್ಯಾಯರಾದ ರಘುಪತಿಯವರು ಹೇಳಿದರು. "ನೀನು ಸರಿಯಾಗಿ ನಿರೀಕ್ಷಣೆ ಮಾಡುವೆ. ನೀನು ವಯಸ್ಸಿಗೆ ಬಂದ ಮೇಲೆ ಬಹಳ ದೊಡ್ಡ ಮನುಷ್ಯನಾಗುವೆ."

ಪರಶುರಾಮ ಕುಲನಾಚಿಕೆಯಿಂದ ಗುರುಗಳಿಗೆ ಕೃತಜ್ಞತೆಯನ್ನರ್ಪಿಸಿದ. ವರ್ಗದ ಎಲ್ಲಾ ವಿದ್ಯಾರ್ಥಿಗಳು ತಮ್ಮ ಹೊಳೆಯುವ ಕಣ್ಣುಗಳನ್ನು ಆ ಹೊಸಬನ ಕಡೆಗೆ ತಿರುಗಿಸಿದರು.

ಮರು ವಾರ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳ ಸಂಗಡ ಮಾತನಾಡುತ್ತಿರುವಾಗ "ಪರಶುರಾಮ, ಈ ವಾರ ಮದ್ರಾಸ ಬೀದಿಗಳಲ್ಲಿ ಮತ್ತೇನಾದರೂ ನಿನಗೆ ಆನಂದವುಂಟುಮಾಡಿದುದು ಕಂಡು ಬಂತೆ?" ಎಂದರು.

"ರಸ್ತೆಯ ಪಕ್ಕದಲ್ಲಿ ಕೆಂಪು ಗಡಿಗೆಗಳನ್ನು ಸಾಲುಮಾಡಿ ನಿಲ್ಲಿಸಿದ್ದು ಕೊಳ್ಳಲು ಬಂದ ಹೆಂಗಸು ಜಾಗರೂಕತೆಯಾಗಿ ಪಾತ್ರೆಯನ್ನು ನೋಡಿ, ಕೈಯಿಂದ ತಟ್ಟುವ ದೃಶ್ಯ ಅತ್ಯಂತ ಚಿತ್ತಾಕರ್ಷಕವಾಗಿತ್ತು."

ಮುಖ್ಯೋಪಾಧ್ಯಾಯರಿಗೆ ಮತ್ತಷ್ಟು ಸಂತೋಷವಾಗಿ 'ನೀನೊಬ್ಬ ಅದ್ಭುತ ವ್ಯಕ್ತಿ' ಎಂದರು. ಹಿಂದಿನ ಬಾರಿಗಿಂತ ಹುಡುಗ ನಾಚಿದ. ತನ್ನನ್ನು ಈ ರೀತಿ ಏಕೆ ಹೊಗಳುವರೆಂದು ಆತನಿಗೆ ಅರ್ಥವಾಗಲಿಲ್ಲ.

"ಪರಶುರಾಮನಿಗೆ ನಿರೀಕ್ಷಕ ದೃಷ್ಟಿ ಹಾಗು ಕುಶಾಗ್ರ ಬುದ್ಧಿಯಿದೆ" ಎಂದು ಮುಖ್ಯೋಪಾಧ್ಯಾಯರು ಆ ಶಾಲೆಯಾಳೇ ಹುಡುಗನನ್ನು ಆಗಲೇ ಮೆಚ್ಚಿಕೊಂಡಿದ್ದ ಇತರ ಹುಡುಗರೆದುರು ಹೇಳಿದರು.

"ನೀವು ಕುಂಬಾರರು ಗಡಿಗೆ ಮಾಡುವದನ್ನು ನೋಡಿದ್ದೀರಾ?" ಎಂದು ಮುಖ್ಯೋಪಾಧ್ಯಾಯರು ಇತರ ವಿದ್ಯಾರ್ಥಿಗಳಿಗೆ ಕೇಳಿದರು.

"ಇಲ್ಲ"ವೆಂದು ಅವರು ಉತ್ತರಕೊಟ್ಟರು. "ಹಾಗಾದರೆ ಈ ವಾರ ನಾವು ಅಲ್ಲಿಗೆ ಹೋಗೋಣ" ಎಂದವರು ಹೇಳಿದರು.

ಬಾಲಕರು ಕುಂಬಾರನ 'ಗಾಲಿಯ ಜಾದು'ವನ್ನು ನೋಡಿ ವಿಸ್ಮಿತರಾದರು. ಹಲವು ದಿನಗಳ ವರೆಗೆ ಅವರು ಈ ಸುದ್ದಿಯನ್ನು ಬಿಟ್ಟು ಬೇರೆ ಮಾತೇ ಆಡುತ್ತಿರಲಿಲ್ಲ. ಹಲವರು ತಾವು ನೋಡಿದವುಗಳ ಚಿತ್ರಗಳನ್ನು ಕೂಡ ತೆಗೆದರು.

ಹಿಂದೂಗಳ ಪುರಾತನರು ಬ್ರಹ್ಮನನ್ನು ವಿಶ್ವಕರ್ಮನೆಂದು ಕರೆಯುವರು. ಅವರ ತತ್ವ ಶಾಸ್ತ್ರಗಳಲ್ಲಿ ಮಣ್ಣು, ಗಡಿಗೆ, ಕುಂಬಾರ ಇವುಗಳ ಬಗೆಗೆ ಉಲ್ಲೇಖವಿದೆ. ಕುಂಬಾರರಿಗೆ ತಮ್ಮ ಕೆಲಸದ ಬಗೆಗೆ ಹಾಗೂ ಮನುವಿನಿಂದ ನೇರವಾಗಿ ಬಂದವರೆಂದು ತಮ್ಮ ಜಾತಿಯ ಬಗೆಗೆ ಅವರಿಗೆ ಬಹಳೇ ಅಭಿಮಾನವಿದೆ.

"ನೀವು ಗಡಿಗೆ ಮಾಡಲಿಚ್ಛಿಸುವಿರಾ" ಎಂದು ವಿದ್ಯಾರ್ಥಿಗಳನ್ನು ಮುಖ್ಯೋಪಾಧ್ಯಾಯರು ಕೇಳಿದರು.

ಹನ್ನೆರಡು ಜನ ವಿದ್ಯಾರ್ಥಿಗಳು ಒಮ್ಮೆಲೇ "ಹೌದು" ಎಂದು ಕೂಗಿದರು.

"ಅದನ್ನು ಕಲಿಯಲು ನಿಮಗೆ ಬಹಳ ಸಮಯ ಹತ್ತಬಹುದು. ಆ ಕುಂಬಾರನಷ್ಟು ನಿಮಗೆ ಚೆನ್ನಾಗಿ ಮಾಡಲು ಬರಲಿಕ್ಕಿಲ್ಲ." ಎಂದು ಮುಖ್ಯೋಪಾಧ್ಯಾಯರು ಹೇಳಿದರು.

"ನಮ್ಮ ಶಾಲೆಯ ಬೈಲಿನಲ್ಲಿ ನಿಮಗೆ ಕಲಿಸಲು ಚಕ್ರವನ್ನು ಹಾಕಲು ಕುಂಬಾರನಿಗೆ ಒಪ್ಪಿಸೋಣ" ಎಂದು ಮುಖ್ಯೋಪಾಧ್ಯಾಯರು ಹೇಳಿದ ಮಾತಿನಿಂದ ವಿದ್ಯಾರ್ಥಿಗಳಿಗೆಲ್ಲ ಆನಂದವಾಯಿತು. ಹೀಗೆ ಯಾವ ಆಡಂಬರ — ಗೊಂದಲಗಳಿಲ್ಲದೆ ಜೀವನ ಶಿಕ್ಷಣ ಶಾಲೆಯು ಆ ಹುಡುಗನಿಂದಲೇ ಸ್ಫೂರ್ತಿ ಪಡೆದು ಆರಂಭವಾಯಿತು.

—ಶ್ರೀ. ಸಿ. ರಾಜಗೋಪಾಲಾಚಾರಿ.

(ಆಯ್ದ)

## ಸುಲಭ ಯೋಗಾಸನ

# ನೆಹರು ಸಹ ಶೀರ್ಷಾಸನ ಹಾಕುತ್ತಾರೆ: ಅದರಿಂದ ಸಿಕ್ಕುವ ಪ್ರಯೋಜನ ಅಷ್ಟಿಷ್ಟಲ್ಲ

ಅಚಲ ಶರೀರಿಯಾಗಿ ಸ್ವಸ್ಥವಾಗಿ ನಿರಾಧಾರಿಯಾಗಿರುವುದೇ ಆಸನವೆನಿಸುವುದು. ಆಸನಗಳಲ್ಲಿ ಅನೇಕ ಪ್ರಕಾರಗಳುಂಟು. ಅವುಗಳಲ್ಲಿ ಯೋಗಾಸನಗಳೇ ಹೆಚ್ಚು ಪ್ರಸಿದ್ಧವಾದವುಗಳು. ಯೋಗಾಸನಗಳ ಅಭ್ಯಾಸದಿಂದ ಮೊದಲು ನಾಡಿಗಳು ಶುದ್ಧವಾಗುವುವು. ಆ ಬಳಿಕ ಶರೀರದಲ್ಲಿ ಆರೋಗ್ಯ ಉಂಟಾಗುವುದು; ಅನಂತರ ಶರೀರವು ತನಗಿದೆ ಎಂಬ ಭಾವನೆಯೇ ಮರೆತು ಬಿಡುವುದು. ಮಿತಾಹಾರಿಗಳಾಗಿದ್ದು, ಬ್ರಹ್ಮಚರ್ಯ ನಿಯಮಗಳನ್ನು ಪಾಲಿಸಿ, ಮೃದುವಾದ ಮತ್ತು ಬೇಗನೆ ಪಚನವಾಗುವ ಸಾತ್ವಿಕ ಆಹಾರವನ್ನು ತಕ್ಕೊಳ್ಳುವವರಿಗೆ ಆಸನವು ಬೇಗನೆ ಸಿದ್ಧಿಯಾಗುತ್ತದೆ. ಬ್ರಹ್ಮಚರ್ಯ ನಿಯಮಕ್ಕೆ ವಿರೋಧವಾಗಿ ವರ್ತಿಸುವುದರಿಂದಲೂ ಆರೋಗ್ಯ ನಿಯಮಕ್ಕೆ ಹೊರತಾಗಿ ನಡೆಯುವುದರಿಂದಲೂ ಆಸನಗಳ ಸಿದ್ಧಿ ದೂರವಾಗುವುದು. ಕೆಲವರಿಗೆ ಬೇಗ ಆಸನಗಳು ಸಾಧಿಸುವುವು. ಹಲವರಿಗೆ ಬೇಗ ಆಸನಗಳು ಸಾಧಿಸುವುದಿಲ್ಲ. ಇಂಥವರು ಚಿಂತೆ ಮಾಡುವ ಕಾರಣವಿಲ್ಲ. ಕೆಲದಿವಸ ಆಸನಗಳ ನಿತ್ಯಕ್ರಮ ಹಾಗೇ ಸಾಧಿಸಿದರೆ ಮುಖ್ಯವಾಗಿ ಎಲ್ಲ ಆಸನಗಳೂ ಸಿದ್ಧಿಸುವವು. ಮೃದುವಾದ ಹಾಸಿಗೆಯ ಮೇಲೆ ಆಸನಗಳನ್ನು ಹಾಕುವುದು ಬಹಳ ಹಿತಕರ.

ಯೋಗಾಸನಗಳ ಪೈಕಿ ಶೀರ್ಷಾಸನವೇ ಅತೀ ಶ್ರೇಷ್ಠ ಆಸನ. ಇದರಿಂದುಂಟಾಗುವ ಪ್ರಯೋಜನವು ಅಷ್ಟಿಷ್ಟಲ್ಲ.

**ಶೀರ್ಷಾಸನ ಹಾಕುವ ಕ್ರಮ:—** ಎರಡೂ ಮೊಳಕಾಲುಗಳನ್ನು ನೆಲಕ್ಕೆ ಹಚ್ಚಿ ಕುಳಿತುಕೊಳ್ಳಬೇಕು. ಬಳಿಕ ಎರಡೂ ಕೈಗಳನ್ನು ಚಿಪ್ಪುಗೈಯಾಗಿರಿಸಿ ತಲೆಯನ್ನು ನೆಲಕ್ಕೆ ಹಚ್ಚಿ ತಲೆಯ ಹಿಂಬದಿಗೆ ಚಿಪ್ಪುಗೈಯನ್ನು ಆಸರವಾಗಿಟ್ಟು ಎರಡೂ ಕಾಲುಗಳನ್ನು ಕೂಡಿಸಿ ಮೇಲಕ್ಕೆತ್ತಬೇಕು. ಶರೀರದ ಸರ್ವ ಭಾರವನ್ನು ತಲೆಯ ಮೇಲೆ ಬೀಳುವಂತೆ ಮಾಡಿ, ಅಚಲನಾಗಿ ನಿರಾಧಾರವಾಗಿ ನಿಲ್ಲಬೇಕು. ಎರಡೂ ಕಾಲುಗಳು ಭೂಮಿಗೆ ಲಂಬವಾಗಿ ಬೆನ್ನೆಲುಬಿಗೆ ಭಾರ ಬೀಳುವಂತೆ ಪಾದಗಳ ಹೆಬ್ಬೆರಳನ್ನು ಹೊಂದಿಸಿ ಸಾಧ್ಯವಾದಷ್ಟು ಆಕಾಶದ ಕಡೆಗೆ ಮಾಡಿ ನಿಂತುದೇ ಈ ಆಸನವೆನಿಸುವುದು. ಪ್ರಾರಂಭಮಾಡುವಾಗ ಕೇವಲ ಐದೈದು ನಿಮಿಷಗಳ ತನಕ ಈ ರೀತಿ ನಿಂತು, ಬಳಿಕ ನಿಧಾನವಾಗಿ ಕಾಲುಗಳನ್ನು ಕೆಳತರಬೇಕು. ಎರಡು ಮೂರು ತಿಂಗಳ ಅಭ್ಯಾಸದಿಂದ ಅರ್ಧತಾಸಿನವರೆಗೆ ಈ ಆಸನದಲ್ಲಿ ನಿಲ್ಲಬಹುದು. ಯಾವಾಗಲೂ ಈ ಆಸನವನ್ನು ಬಹಳ ನಿಧಾನವಾಗಿಯೂ, ನಿಶ್ಚಿಂತನಾಗಿಯೂ ಹಾಕಬೇಕು. ಬರಿ ಹೊಟ್ಟೆಯಲ್ಲೇ ಈ ಆಸನ ಹಾಕುವುದು ಉತ್ತಮ. ಪ್ರಾರಂಭದಲ್ಲಿ ಗೋಡೆಯ ಇಲ್ಲವೇ ಇತರ ಜನ ಸಹಾಯದಿಂದ ಈ ಆಸನವನ್ನು ಸಾಧಿಸಲು ಸಂದೇಹವಿಲ್ಲ. ಬೇಸಿಗೆ ಕಾಲದಲ್ಲಿ ಈ ಆಸನವನ್ನು ಹೆಚ್ಚು ಹೊತ್ತು ಹಾಕಬಾರದು; ಚಳಿಗಾಲದಲ್ಲಿ ಸಾಧ್ಯವಿದ್ದಷ್ಟು ಸಮಯ ಹಾಕಬಹುದು.

**ಈ ಆಸನದಿಂದುಂಟಾಗುವ ಲಾಭಗಳು:—**

ಬ್ರಹ್ಮಚರ್ಯವನ್ನು ಪಾಲಿಸಲು ಇದು ಬಹಳ ಪ್ರಯೋಜನಕಾರಿ. ವೀರ್ಯವು ಊರ್ಧ್ವಮುಖವಾಗುವುದು. ಸ್ವಪ್ನದೋಷ ನಿವಾರಣೆಯಾಗುವುದು. ದೃಷ್ಟಿಮಾಂದ್ಯ ದೂರವಾಗುವುದು. ಲಾಲಾಜಲ ಕೋಶಗಳು ಬೆಳೆದು ಅವ್ಯಾಹತವಾಗಿ ಲಾಲಾಜಲವನ್ನುಂಟುಮಾಡುವವು. ರಕ್ತದ ಪೂರೈಕೆ ಮೆದುಳಿಗೆ ಬೇಗ ದೊರಕುವುದು. ಕರುಳುಗಳ ಭಾರ ಶರೀರದ ವಿರುದ್ಧ ಬಿದ್ದು ಮೊದಲಿನ ಶರೀರದ ಭಾಗವು ವಿಶ್ರಾಂತಿ ಹೊಂದುವುದು. ಜ್ಞಾಪಕ ಶಕ್ತಿಯು ವರ್ಧಿಸುತ್ತದೆ. ಪಿನಿಸಿ ಮೊದಲಾದ ನಾಶಕ— ರೋಗಗಳು ನಿರ್ಮೂಲವಾಗುವುವು. ಶುಷ್ಕ ಧ್ರಮಣ, ತಲೆಶೂಲಿ, ಕಿವಿರೋಗ, ಹಲ್ಲಿನ ದೋಷಗಳೆಲ್ಲವೂ ನಾಶವಾಗುವುವು. ಹಲ್ಲು ಬೀಳುವುದಿಲ್ಲ. ಒಂದೆರಡು ವರ್ಷಗಳ ವರೆಗೆ ಈ ಆಸನವನ್ನು ಹಾಕಿದರೆ ನರೆ ಕೂದಲು ಕರೇ ಕೂದಲುಗಳಾಗುವುವು. ಕಣ್ಣು, ಮೂಗು, ತಲೆ, ಗಂಟಲು, ಹೊಟ್ಟೆ, ಮೂತ್ರ ಕೋಶ, ಕರುಳು, ಶ್ವಾಸಕೋಶ, ಆ ಮುಂತಾದುವುಗಳಿಗೆ ಸಂಬಂಧಪಟ್ಟ ಎಲ್ಲಾ ತರದ ರೋಗಗಳೂ ಕಿವುಡು, ಪ್ರಮೇಹ, ಸಿಹಿ ಮೂತ್ರ, ಮೂಲವ್ಯಾಧಿ ಕ್ಷಯ, ಮುಂತಾದುವೂ ಗುಣ ಹೊಂದುತ್ತವೆ. ಮುಖವು ಚಿತ್ತಾಕರ್ಷಕ ಹಾಗೂ ಸತೇಜವಾಗುವುದು. ಹೆಂಗಸರಲ್ಲಿರುವ ಬಂಜೆ ತನವು ಮಾಯವಾಗುವುದು. ಅದು ಕಾರಣ ಸ್ತ್ರೀ ಪುರುಷರೆನ್ನದೆ ಈ ಆಸನವನ್ನು ಸದಾಕಾಲ ಹಾಕಬಹುದು. ಗರ್ಭಿಣಿ ಸ್ತ್ರೀಯರು ಮತ್ತು ಮುಟ್ಟಾದ ಸ್ತ್ರೀಯರು ಮಾತ್ರ ಈ ಆಸನವನ್ನು ಹಾಕಬಾರದು.

ಈ ಆಸನವನ್ನು ಹೆಚ್ಚು ಹೊತ್ತು ಹಾಕುವವರು ಆಸನ ಹಾಕಿದ ಬಳಿಕ ಲಘು ಭಕ್ಷಣವನ್ನು ಸೇವಿಸಬೇಕು.

(ಆಧಾರದಿಂದ)

— ಶ್ರೀ ಕೆ. ಪಿ. ನೆಗಸ್ ಕುಂಬಳೆ

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು, ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

## ನಗೆಯ ಬಗೆ

# ನಾವೆಲ್ಲರೂ ನಗುತ್ತೇವೆ; ಆದರ ಸ್ವರೂಪದಲ್ಲಿ ಮಾತ್ರ ವೈವಿಧ್ಯ ಲೆಕ್ಕವಿಲ್ಲದಷ್ಟಿದೆ.

ಈ ಪ್ರಪಂಚದಲ್ಲಿ ಮಾನವನು ನಾಗರಿಕನೆಂದು ವಿಹರಿಸಲು ಹತ್ತಿದಂತೆ ನಗೆಯು ಅವನ ಜೀವನದಲ್ಲಿ ಪಾದಾರ್ಪಣ ವನ್ನು ಮಾಡಿತೆಂದು ಹೇಳಬಹುದು. ಇದು ಪ್ರವೇಶವನ್ನು ಮಾಡಿ ಹಾಗೆಯೆ ಸುಮ್ಮನೆ ಕುಳಿತುಕೊಳ್ಳದೆ—ಮಾನವ ಜೀವನದ ಸರ್ವಸ್ವವೂ ಆಗಿಬಿಟ್ಟಿತು. ಮಾನವನ ಮನೋವಿಚಾರದಂತೆ ಇದು ತನ್ನ ಅಸ್ತಿತ್ವವನ್ನು ಪ್ರಕಟಿಸುವುದಕ್ಕೆ ಹತ್ತಿತು. ಮನೋಭಾವಕ್ಕೆ ತಕ್ಕಂತೆ ಒಂದೊಂದು ರೀತಿಯ ಆವರಣವನ್ನು ಹೊದ್ದುಕೊಂಡು ಮಾನವನ ಹೃದಯದಲ್ಲಿ ಇದು ಇರುವುದಕ್ಕೆ ಆರಂಭಿಸಿತು. ರಸ-ಭಾವಕ್ಕೆ ಅನುಗುಣವಾಗಿ ಅದು ಅವನ ಮೊಗದ ಮೇಲೆ ಪ್ರಕಟವಾಗುವುದಕ್ಕೆ ಆರಂಭವಾಯಿತು. ಅಂದಿನಿಂದ ಮೊದಲು ಮಾಡಿಕೊಂಡು ನಗೆಗೆ-ವಿಶಿಷ್ಟವಾದ ಸ್ಥಾನ ಪ್ರಾಪ್ತವಾಯಿತು. ಮಾನವನು ನಾಗರಿಕತೆಯನ್ನು ಹೆಚ್ಚು ಹೆಚ್ಚಾಗಿ ಪಡೆದಂತೆ ಈ ನಗೆಯು ಅವನೊಂದಿಗೆ ಬೆಳೆದುಕೊಂಡು ಬಂದಿತೆಂದು ಬಲ್ಲವರು ಅಭಿಪ್ರಾಯಪಡುವರು. ಅದ್ದರಿಂದ ನಗೆಯು ಮಾನವನ ಜೀವನದ ಪಡಿ ನೆರಳು—ಎಂದ ಕೆಲವರು ಅಂದರು. ನಗೆಯು ಮಾನವನ ಅಂತರಂಗವನ್ನು ಬಿಂಬಿಸುವ ಸಾಧನ! ಎಂದು ಕೆಲವರು ಅಂದರು. ಆದರೆ ನಗೆಯು ದುಃಖಪೂರಿತವಾದ ಭಾವವನ್ನು, ಕ್ರೋಧಯುಕ್ತವಾದ ಭಾವವನ್ನು, ಆಶ್ಚರ್ಯ ಪೂರ್ಣಭಾವವನ್ನು ಪ್ರಕಟಿಸ ವುದಕ್ಕೆ ಅಸಮರ್ಥವಾಗಿರುವುದೆಂದು ಹೇಳಬಹುದು.

ಇದರ ಪರಿಣಾಮ ರೂಪದಿಂದ ನಗೆಯಲ್ಲಿ ಸ್ವಾಭಾವಿಕವಾಗಿ ನಾವು ಎರಡು ಪ್ರಭೇದಗಳನ್ನು ಕಾಣಬಹುದು. ಒಂದು ಮಾನವನನ್ನು ಕೊಲ್ಲುವುದಾದರೆ ಇನ್ನೊಂದು ಅವನನ್ನು ಉಳಿಸುವದಿರುವದು. ಒಂದು ವಿಷ! ಆದರೆ ಇನ್ನೊಂದು ಅಮೃತ! ಅಮೃತಪೂರ್ಣ ನಗೆಯು ಮೇಲು ನಗೆ. ಆನಂದ ಹೆಚ್ಚಾದಾಗ ಬರುವ ನಗೆ, ಎಂದು ಹೇಳಬಹುದು. ಸ್ತ್ರೀಯು ನಾಚಿಕೆಯಿಂದ ಕೂಡಿದಾಗ ಈ ಮೇಲುನಗೆಯು ಅವಳಿಗೆ ಸಹಾಯವನ್ನು ಮಾಡುವುದು ಅದ್ದರಿಂದ ಆನಂದ, ಲಜ್ಜೆ, ಕುತೂಹಲ, ಈ ಭಾವನೆಗಳನ್ನು ಪ್ರಕಟಿಸಬೇಕಾದಾಗ ಅಮೃತಪೂರ್ಣ ನಗೆಯನ್ನು ಮಾನವ ಪ್ರಯೋಗಿಸುವನು. ಮೇಲು ನಗೆಯ ವಿಷಯದಲ್ಲಿ ನಮ್ಮ ನೆರೆಮನೆಯ ಸುಂದರಮ್ಮನವರ ಉದಾಹರಣೆಯನ್ನು ನಾನಿಲ್ಲಿ ಕೊಟ್ಟರೆ — ಅಪ್ರಸಂಗಿಕವಾಗಲಾರದೆಂದು ನಾನು ಭಾವಿಸುತ್ತೇನೆ. ಯಾಕೆಂದರೆ ಅವರದಿಂದ ಯಾರನ್ನಾದರೂ ಸ್ವಾಗತಿಸುವ ಪ್ರಸಂಗದಲ್ಲಿ ಈ ಮೇಲು ನಗೆಯನ್ನು ಉಪಯೋಗಿಸುವವರ ಪ್ರಥೆಯು ಪುರಾತನ ಕಾಲದಿಂದ ರೂಢಿಯಲ್ಲಿರುವುದು. ಸುಂದರಮ್ಮನವರು ಈಗ ಮಕ್ಕಳನ್ನು ಕಂಡಿದ್ದಾರೆ. ಆದರೂ ಸಹ ಪತಿ ದರ್ಶನವಾದರೆ—ಎದ್ದುನಿಂತು ಮೇಲುನಗೆಯಿಂದ ಪತಿಗೆ ಸ್ವಾಗತವನ್ನು ಬಯಸುತ್ತಾರೆ ಪ್ರೇಮಮಯ ವಿಷಮಪ್ರೇಮಪೂರ್ಣ ಸಂಬಂಧವನ್ನು ಪ್ರಕಟಿಸುವ ಸಂದರ್ಭದಲ್ಲಿ ಈ ನಗೆಯ ಉಪಯೋಗವನ್ನು ಈಗಲೂ ಜನರು ಮಾಡಿಕೊಳ್ಳುತ್ತಿದ್ದಾರೆ.

ನಾನು ನನ್ನ ವೈಯಕ್ತಿಕವಾದ ಉದಾಹರಣೆಯನ್ನೇ ಉದಹರಿಸುವುದಕ್ಕೆ ಸಮರ್ಥಳಿದ್ದೇನೆ. ನಾನು ಕಾಲೇಜಿನಲ್ಲಿ ಓದುತ್ತಿರುವಾದ ಗೆಳತಿಯರ ಸ್ವಾಗತ ತದ್ದೀವಂ ಪ್ರಾಧ್ಯಾಪಕರ ಸ್ವಾಗತವನ್ನು ಮೇಲುನಗೆಯ ಸಹಾಯದಿಂದ ಪ್ರಕಟಿಸಿದುದುಂಟು. ನಾನೊಬ್ಬಳಷ್ಟೇ ಏಕೆ? ಮಾನವ ಜಾತಿಯೇ ಈ ರೀತಿಯಲ್ಲಿ ವರ್ತಿಸುವುದು ಸ್ವಾಭಾವಿಕ! ಈ ನಗೆಯು ಸಮಾಜದ ಘಟಕಗಳಲ್ಲಿ ಅದೃಶ್ಯವಾಗಿ ಬೆರೆತುಕೊಂಡು ಒಂದು ರೀತಿಯ ಸಂಘ ಶಕ್ತಿಯನ್ನು ಸಹಾ ಪಡೆಯುವದು. ಇಂಥ ಸಂದರ್ಭಗಳನ್ನು ನಾವು ಸೂಕ್ಷ್ಮಾವಲೋಕನದಿಂದ ಅವಲೋಕಿಸಿ ನೋಡಿದಾಗ ನಗೆಯು ಹೊಗೆಯಬಹುದು! ಎಂದು ಅನಿಸುವುದು. ಆದರೆ ಮತ್ತೆ ಕೆಲವೊಂದು ಘಟನೆಗಳನ್ನು ಅವಲೋಕಿಸಿದಾಗ ನಗೆಯೊಂದು ಮಾನವನಿಗೆ ಪ್ರಬಲವಾದ ಅಸ್ತ್ರವೂ ಆಹುದು ಎಂದು ಅನಿಸುವುದು ಕೆಲವೊಂದು ಸಂದರ್ಭದಲ್ಲಿ ಮಾನವನನ್ನು ಆನಂದ ಸಾಗರದಲ್ಲಿ ಲೋಲಾಡಿಸುವ ನಗೆಯು—ಅವನ ನಾಶವನ್ನು ಮಾಡಲಿಕ್ಕೂ ಸಿದ್ಧವಾಗುವದೆಂಬುದನ್ನು ನಾವು ಸಮಾಜದಲ್ಲಿಯ ಕೆಲವೊಂದು ಘಟನೆಗಳನ್ನು ಕಂಡಾಗ ಅನಿಸದಿರಲಾರದು. ಹಾಗಾದ ಬಳಿಕ ನಗೆಯು ಮಾನವನ ಜೀವಿತಕ್ಕೆ ಎಷ್ಟೊಂದು ಸಹಾಯಕವಾಗಿರುವುದೊ ಅಷ್ಟೇ ವಿರೋಧಕವೂ ಗಿರುವುದೆಂದು ಹೇಳಬಹುದು ಆದರೆ ಮಾನವನು ಪ್ರಸಂಗೋಪಾತ್ ಅವುಗಳ ಉಪಯೋಗವನ್ನು ಮಾಡಿಕೊಳ್ಳುತ್ತಿರುವುದನ್ನು ನಾವು ಕಾಣಬಹುದು. ಆದ್ದರಿಂದ ಮಾನವ ನಗೆಗಾಗಿ ಆಲ್ಹಾದಕ್ಕಾಗಿ ಕೆಲವೊಂದು ಸಾಧನ—ಸಾಮಗ್ರಿಗಳನ್ನು ನಿರ್ಮಿಸಿಕೊಂಡನು ನೈಸರ್ಗಿಕ ರೀತಿಯಲ್ಲಿ ನಗೆಯನ್ನು (ಆಲ್ಹಾದ) ಪಡೆಯಲು ಅಸಮರ್ಥರಾದವರು ಕೃತ್ರಿಮ ರೀತಿಯ ನಗುವನ್ನು ಪಡೆಯುವುದಕ್ಕೆ ಆರಂಭಿಸಿದುದನ್ನು ನಾವು ಕಾಣಬಹುದು. ಇಂಥ ಜನರು ಪಡೆದುಕೊಂಡ ನಗೆಯೂ ಕೃತ್ರಿಮವಾದುದೆಂಬುದನ್ನು ನಾವು ಮರೆತು ನಡೆಯುವಂತಿಲ್ಲ. ಈ ಕೃತ್ರಿಮ ನಗೆಯೆಂದಿಗೂ ಮಾನವನ ಹೃದಯದ ಅಂತರಾಳದವರೆಗೂ ತಲ್ಪುವುದಿಲ್ಲ. ಅದ್ದರಿಂದ ಕೃತ್ರಿಮತೆಯ ಪ್ರಭಾವ ಮುಗಿದ ಮೇಲೆ —ಮಾನವನ ಮನಸ್ಸು ಪುನಃ ಮೊದಲಿನ ಪರಿಸ್ಥಿತಿಯನ್ನು ಪಡೆಯುವದು.

ನಗೆಯು ರಸ, ಭಾವಗಳ ಅನುಕರಣವನ್ನು ಕೆಲವೊಂದು ಪ್ರಸಂಗದಲ್ಲಿ ಮಾಡುವುದನ್ನು ನಾವು ಕಾಣಬಹುದು. ರಸ, ಭಾವಗಳು ನಗೆಯ ಜೀವಾಳ. ಇವುಗಳಿಗೆ ತಕ್ಕಂತೆ ನಗೆಯು ತನ್ನ ರೂಪ—ಭಂಗಿಗಳನ್ನು ಬದಲಿಸುವದೆಂದು ಹೇಳಬಹುದಲ್ಲದೆ ಮಾನವನಲ್ಲಿಯ ಈ ರಸಭಾವಗಳ ಬೆಳವಣಿಗೆಯನ್ನು ಕುರಿತು—ಅನೇಕ ಉಪಕ್ರಮಗಳಲ್ಲಿ ಆಟ, ನೋಟ, ಸುಂದರ ಭಾವಚಿತ್ರ, ನೈಸರ್ಗಿಕ ಸೌಂದರ್ಯ ಪ್ರಮುಖ್ಯವಾದವುಗಳೆಂದು ಹೇಳಬಹುದು. ಇವೆಲ್ಲವುಗಳ ಜೊತೆಯಲ್ಲಿ ನಗೆಯ ನಿಕಟವಾದ ಸಂಬಂಧವಿರುವದು. ಇವುಗಳನ್ನು ಕಂಡು, ಮಾನವನು ನಗೆಯ ಸಹಾಯದಿಂದ ರಸ—ಭಾವವನ್ನು ಉದ್ರೇಕಿಸಿಕೊಳ್ಳುವನು. ಅದರ ಸ್ಪಷ್ಟತಮವಾದ ಚಿತ್ರ ಆತನ ಮೊಗದಲ್ಲಿ ಮೂಡುವುದು. ನಗೆಯು ಮಾನವನಲ್ಲಿ ವಿಲಾಸವನ್ನು ಹುಟ್ಟಿಸುವ ದೊಡ್ಡದಾದ ಕೆಲಸವನ್ನು ಮಾಡುವುದು

ನಗೆಯ ವಿಷಯದಲ್ಲಿ ಮನಃಶಾಸ್ತ್ರಜ್ಞರು ಮೌನವನ್ನು ಧಾರಣಮಾಡಿದ್ದರೂ —ನಗೆಯು ಮಾನವನಲ್ಲಿಯ ಅನೇಕ ಸಹಜ ಪ್ರವೃತ್ತಿಗಳಲ್ಲಿಯದೊಂದು ಪ್ರವೃತ್ತಿಯೆಂದು ಒಡಂಬಡುವರು. ಉಳಿದ ಸಹಜ ಪ್ರವೃತ್ತಿಗಳು ಅಭ್ಯಾಸದಿಂದ ಬೆಳೆದು ಬರುವಂತೆ—ಈ ಪ್ರವೃತ್ತಿಯನ್ನು ಬೆಳೆಯಿಸಿಕೊಂಡು ಬರುವುದಕ್ಕೆ ಸಾಧ್ಯವಿದೆಯೆಂದು ಅವರು ಅಭಿಪ್ರಾಯಪಟ್ಟದ್ದಾರೆ. ಇದರ ವಿಷಯದಲ್ಲಿ ಪಾಶ್ಚಿಮಾತ್ಯರು ಅನೇಕ—ಪ್ರಾಸಂಗಿಕ ತಥಾ ಪೂರ್ವನಿಯೋಜಿತ ಕೆಲವೊಂದು ಘಟನೆಗಳನ್ನು ದೃಶ್ಯರೂಪದಲ್ಲಿ ಪ್ರದರ್ಶಿಸಿ ಈ ಪ್ರವೃತ್ತಿಯ ಬೆಳವಣಿಗೆಯನ್ನು ಮಾಡಿರುವುದನ್ನು ನಾವು ನೋಡಬಹುದು. ಕಾಳಿದಾಸ, ಶೇಕ್ಸ್‌ಪಿಯರ್ ಮೊದಲಾದವರಿಂದ ಮೊದಲುಮಾಡಿಕೊಂಡು ಎಲ್ಲ ಸಾಹಿತಿಗಳು ಕೂಡ ತಮ್ಮ ತಮ್ಮ ನಾಟಕದಲ್ಲಿ ಸ್ವಾಭಾವಿಕ ರೀತಿಯಲ್ಲಿ ಈ ಪ್ರವೃತ್ತಿಯು ಬೆಳೆದು ಬರುವಂತೆ ಕೆಲವೊಂದು ಪಾತ್ರಗಳ ನಿಯೋಜನೆಯನ್ನು ಮಾಡಿದ್ದಾರೆ. ನಾವು ಶೃಂಗಾರ, ವೀರ, ಕರುಣ, ಅದ್ಭುತ, ಘಟನೆಗಳಲ್ಲಿ ಪ್ರಸಂಗಕ್ಕನುಗುಣವಾಗಿ ಆಲ್ಹಾದ ಪಡೆದು ಅಂತಹ ನಗೆಯನ್ನು ನಾವು ಮುಖದಲ್ಲಿ ತಂದುಕೊಳ್ಳುತ್ತೇವೆ.

. ನಗೆಯು ಸಹಜ ಪ್ರವೃತ್ತಿಯೆಂದು ಮೊದಲೆಯೇ ನಾನು ಹೇಳಿದ್ದೇನೆ. ಆದ್ದರಿಂದ ನಗೆಯನ್ನು ಕೂಸು ಕೂಡ ಬಲ್ಲುದು. ಸಾಮಾನ್ಯರು ನಗೆಯು ಆನಂದದ ದ್ಯೋತಕವಾಗಿದ್ದರೆ—ಅಳುವು ದುಃಖದ ದ್ಯೋತಕವೆಂದು ಎಣಿಸುವರು ಈ ಅಭಿಪ್ರಾಯವನ್ನು ಬಲ್ಲವರು ಮಂಡಿಸುವುದನ್ನು ನಾನೆಷ್ಟೋ ಪ್ರಸಂಗದಲ್ಲಿ ಕಂಡಿದ್ದೇನೆ. ಮಾನಸ ಶಾಸ್ತ್ರಜ್ಞನು ಗುಣಾತ್ಮದ ರೀತಿಯಲ್ಲಿ ನಾವು ವಿಚಾರಮಾಡಿ ನೋಡಿದರೆ ಈ ಸಹಜ ಪ್ರವೃತ್ತಿಗಳನ್ನು ಯಾರೂ ಕಲಿಸಿಲ್ಲ! ಕಲಿಸಬೇಕಾಗುವದಿಲ್ಲ! ಅವು ಮಾನವನ ಜನ್ಮದೊಂದಿಗೆ ಅವನಲ್ಲಿ ಬರುವುವು. ಚಿಕ್ಕ ಕೂಸು ಆಟವನ್ನು ಆಡುತ್ತಿದ್ದಂತೆಯೇ ಅದು ನಗುವುದನ್ನೂ ಅಳುವುದನ್ನೂ ನಾವು ಕಾಣಬಹುದು. ಆಟದ ತಥಾ ನಗೆಯ ಸಂಬಂಧ ಸಹಜ ಪ್ರವೃತ್ತಿಯಲ್ಲಿಯೇ ಇರುವುದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಕೂಸುಗಳ ಕ್ರೀಡನಗಳ ಅನುಸಾರವಾಗಿ ಮತ್ತು ಸುಖದಲ್ಲಿ—ಅನೇಕ ಬಗೆಗಳ ರೂಪವನ್ನು ಮನಸ್ಸು ಪರಿಧಾರಣ ಮಾಡಿದ ಆ ರೀತಿಯಲ್ಲಿ ನಗೆಯು ರೂಪವನ್ನು ತಾಳುವದು. ಆದ್ದರಿಂದ ನಗೆಯು ಸಹಜ ಪ್ರವೃತ್ತಿಯಾದ್ದರಿಂದ ಅದರಲ್ಲಿ ಅನೇಕ ಪ್ರಭೇಧಗಳನ್ನು ನಾವು ನೋಡಬಹುದು. ಸುಖದಂತೆ ದುಃಖದಲ್ಲಿ ಪ್ರಕಾಶಗಳುಂಟು! ಇವನ್ನು ನಾವು ಮನುಷ್ಯನು ಕೂಸಿರುವಾಗಿನಿಂದ ಅವನ ವಾರ್ಧಕ್ಯ ಕಾಲದ ಸಮಯದ ವರೆಗೆ— ಅವನ ಆಯುಷ್ಯವನ್ನು ನೋಡಿದರೆ ಕಂಡುಬರುವುದು. ಚಿಕ್ಕ ಮಗುವಿನ ನಗೆಯಲ್ಲಿ ನಿರ್ವಿಕಾರದ ಮನೋಭಾವವನ್ನು ನಾವು ಕಾಣುತ್ತೇವೆ. ತಾರುಣ್ಯದಲ್ಲಿ ಪಾದಾರ್ಪಣ ಮಾಡಿದ ಸ್ತ್ರೀ-ಪುರುಷರ ನಗೆಯಲ್ಲಿ ಪ್ರೇಮ-ಕಾಮದ ಪಡಿನೆರಳು ಕಾಣುವದಲ್ಲದೆ—ಹೃದಯ-ಮನಸ್ಸುಗಳನ್ನು ಆಕರ್ಷಿಸುವ ಆಕರ್ಷತೆ ತೋರುವದು. ಇದಲ್ಲದೆ ಆಯಾ ಮನುಷ್ಯನು ಬೆಳೆದು ಬಂದಂತೆ ಆತನ ನಗೆಯಲ್ಲಿ ಹಾಸ್ಯ, ಕುಹಕ, ಮೋಜು ಮೊದಲಾದ ಪ್ರವೃತ್ತಿಗಳಿಗೆ ಅನುಗುಣವಾಗಿ ನಗೆಯು ಪರಿವರ್ತನ ಹೊಂದಿರುವದನ್ನು ನಾವು ನೋಡಬಹುದು. ವಯಸ್ಸು ಇಳಿಯಲು ಹತ್ತಿದಂತೆ ಮಾನವನ ಪ್ರವೃತ್ತಿಗಳಲ್ಲಿ ಬದಲು ಕಂಡುಬರುವಂತೆ— ಆತನ ನಗೆಯಲ್ಲಿಯೂ ಕಂಡುಬರುವುದು.

(೧೦ನೇ ಪುಟ ನೋಡಿರಿ)


**ಹೊಸ ಸುದ್ದಿ**

"ಭದ್ರತೆಯ ಬೇಂಕಿಂಗ್ ವ್ಯವಹಾರ"

"ಮೆಚ್ಚುಗೆಯ ಜನರ ಸಹಕಾರ"

"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

**ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ**

ಒದಗಿಸಿಕೊಡುವ ಸರ್ವವಿಧಿತ ಸೇವಾಕಾರ್ಯದ ಸಾಧನೆಗಾಗಿ—

ಇನ್ನೂ ಮೂರು ಹೊಸ ಶಾಖೆಗಳು

**ಹೈದರಾಬಾದ್** (ದಕ್ಷಿಣ)

**ಗುಲ್ಬರ್ಗ** (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು

**ಉರುವಕೊಂಡ** (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)

ಶೀಘ್ರದಲ್ಲೇ ತೆರೆಯಲ್ಪಡುವುವು

**ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.**

**The Canara Industrial & Banking Syndicate Ltd.**

H. O. UDIPI (S. I.)

# ಸುಯೇಜಿನ ತಂಟೆ

## ಇನ್ನೊಬ್ಬರ ಮನೆಯಲ್ಲಿ ತಾವು ಯಜಮಾನರಾಗಿ ಇರಲು ಪಾಶ್ಚಾತ್ಯರ ಉತ್ಕಟೇಚ್ಛೆ!

### ೧೯ನೇ ಶತಮಾನದ ವಸಾಹತುವಾದಿ ನೀತಿ ಇದು!

ಈಜಿಪ್ಟ್ ಪ್ರಜಾತಂತ್ರದ ವಿರೋಧವಾಗಿ ತಿವಿತದ ಮೊನೆಯಂತಿರುವ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳ ಉದ್ರೇಕಪೂರಿತವಾದ ಕಾರ್ಯಾಚರಣೆಗಳ ಮೇಲೆ ಪ್ರಪಂಚದ ಸಾರ್ವಜನಿಕರ ಗಮನವು ಕೇಂದ್ರೀಕರಿಸಲ್ಪಟ್ಟಿದೆ. ಸೂಯೆಜ್ ಕಾಲುವೆಯ ಮೇಲೆ ನೌಕಾಯಾನದ ಸ್ವಾತಂತ್ರ್ಯವನ್ನು ಉಳಿಸುವ, "ಸ್ವದೇಶೀಯರ ಹಿತಗಳ ಪ್ರತಿರಕ್ಷಣೆ"ಯ, ಇತ್ಯಾದಿಗಳ, ಸುಳ್ಳು ನೆಪಗಳಡಿಯಲ್ಲಿ ಪಾಶ್ಚಾತ್ಯ ರಾಜ್ಯಶಕ್ತಿಗಳು ಈಜಿಪ್ಟಿನ ವಿರೋಧವಾಗಿ ಬಲಪ್ರಯೋಗವನ್ನು ಮಾಡುವ ಬೆದರಿಕೆಯನ್ನು ಹಾಕುತ್ತಿವೆ ಮತ್ತು ಅವು ಈಜಿಪ್ಟಿನ ಭೂಭಾಗದ ಮೇಲೆ ಆಕ್ರಮಣ ಮಾಡುವುದರ ಸಲುವಾಗಿ ಸಿದ್ಧತೆಗಳನ್ನು ಮಾಡುತ್ತಿವೆ. ಈ ಲಕ್ಷ್ಯವನ್ನು ದೃಷ್ಟಿಪಥದಲ್ಲಿಟ್ಟುಕೊಂಡು ನೌಕಾಬಲಗಳೂ, ವಾಯುಸೇನೆಗಳೂ ಮತ್ತು ಪದಾತಿದಳಗಳೂ— ಪಾಶ್ಚಾತ್ಯರಾಜ್ಯ ಶಕ್ತಿಗಳ ಸೇನಾಬಲಕ್ಕೆ ಸೇರಿದವುಗಳು— ಈಜಿಪ್ಟ್ ದೇಶಕ್ಕೆ ಹೋಗುವ ಹೆದ್ದಾರಿಗಳ ಬಳಿ ಕೇಂದ್ರೀಕರಿಸಲ್ಪಟ್ಟಿವೆ.

ಎಲ್ಲರಿಗೂ ಸುವಿದಿತವಾಗಿರುವ ಪ್ರಕಾರ, ಹಾಗೆಂದು ಕರೆಯಲಾದ "ಐವರ ಸಮಿತಿ"ಯ ಅಂತಿಮ ಬೇಡಿಕೆಗಳನ್ನು— ಕಾಲುವೆಯ ಆಡಳಿತವನ್ನು ವಿದೇಶೀ ಕಾರುಬಾರಿನ ವಶಕ್ಕೆ ವರ್ಗಾಯಿಸುವುದಕ್ಕಾಗಿ "ಡಲ್ಲೆಸ್‌ರವರ ಯೋಜನೆ"ಯ ಪ್ರಕಾರ ಲಂಡನ್ ಸಮಾವೇಶದಲ್ಲಿ ಮಂಡಿಸಲ್ಪಟ್ಟ ಬೇಡಿಕೆಗಳನ್ನು— ಈಜಿಪ್ಟ್ ದೇಶವು ನಿರಾಕರಿಸಿತು. ಈಜಿಪ್ಟಿಗೆ ಸೇರಿದ, ಕಾಲುವೆಯ ಮೇಲಿನ ಸರ್ವಸ್ವತಂತ್ರವಾದ ತನ್ನ ಹಕ್ಕುಗಳನ್ನು ತ್ಯಜಿಸಲು ಈಜಿಪ್ಟ್ ದೇಶದ ಸರಕಾರವು ನಿರಾಕರಿಸಿತು. ಅದೇ ವೇಳೆಯಲ್ಲಿ, ಸಂಬಂಧಪಟ್ಟ ದೇಶಗಳೊಡನೆ, ಸೂಯೆಜ್ ಕಾಲುವೆಯ ಮೇಲಿನ ನೌಕಾಯಾನ ಸ್ವಾತಂತ್ರ್ಯವನ್ನು ಖಚಿತಪಡಿಸುವ ಸಮಸ್ಯೆಯ ಮೇಲೆ ಸಮಾಲೋಚನೆಗಳನ್ನು ಪ್ರಾರಂಭಿಸಲು ತನ್ನ ಸಿದ್ಧತೆಯನ್ನು ಅದು ಪ್ರಕಟಿಸಿತು.

ಸಪ್ಟೆಂಬರ್ ದಿನಾಂಕ ೧೦ರ ತನ್ನ ಪತ್ರದಲ್ಲಿ ಈಜಿಪ್ಟ್ ಸರಕಾರವು ೧೮೮೮ರ ಕಾನ್‌ಸ್ಟಾನ್‌ಟಿನೋಪಲ್ ಒಡಂಬಡಿಕೆಯ ಮೇಲೆ ಹಸ್ತಾಕ್ಷರ ಮಾಡಿದ ಇತರ ದೇಶಗಳೊಟ್ಟಿಗೆ, ಈ ಒಡಂಬಡಿಕೆಯನ್ನು ಪುನರ್ವಿಮರ್ಶಿಸುವ ಮತ್ತು ನೌಕಾಯಾನ ಸ್ವಾತಂತ್ರ್ಯವನ್ನು ಅನುಸರಿಸಿ, ಖಚಿತಪಡಿಸುವಂತಹ ಒಡಂಬಡಿಕೆಯನ್ನು ಮಾಡಿಕೊಳ್ಳುವ ಉದ್ದೇಶದ ಸಲುವಾಗಿ ಏರ್ಪಡಿಸಲಾಗುವ ಸಮಾವೇಶದಲ್ಲಿ ತಾನು ಭಾಗವಹಿಸಲು ಸಿದ್ಧವಾಗಿದೆಯೆಂದು ಅದು ಮತ್ತೊಮ್ಮೆ ಸಮರ್ಥಿಸಿ ಹೇಳಿತು. ಈ ದಿಸೆಯಲ್ಲಿ ತಕ್ಷಣದ ಕಾರ್ಯಕ್ರಮವಾಗಿ, ಈಜಿಪ್ಟ್ ಸರಕಾರವು, ಸಮಾಲೋಚನೆಗಳನ್ನು ನಡೆಸುವುದಕ್ಕೋಸ್ಕರ—ಅದರಲ್ಲಿ ಕಾಲುವೆಯನ್ನು ಬಳಸುವ ರಾಜ್ಯಗಳ ವಿಭಿನ್ನ ದೃಷ್ಟಿಕೋನಗಳು ಪ್ರತಿನಿಧೀಕರಿಸಲ್ಪಡಲೇ ಬೇಕು—ಒಂದು ಕಾರುಬಾರು ಸಂಸ್ಥೆಯನ್ನು ನೆಲೆಗೊಳಿಸಲು ಸೂಚನೆಯನ್ನು ಮಂಡಿಸುತ್ತದೆ.

ಅಂತಾರಾಷ್ಟ್ರೀಯ ಸಮ್ಮೇಲನವನ್ನು ಕೂಡಿಸುವ ವಿಷಯವಾಗಿ ಈಜಿಪ್ಟ್ ಮಾಡಿದ ಸೂಚನೆಯು ಅಧಿಕೃತವಾಗಿ ಇಪ್ಪತ್ತು ರಾಜ್ಯಗಳಿಂದ—ಸೋವಿಯತ್ ಒಕ್ಕೂಟ, ಭಾರತ ದೇಶ, ಚೀಣಾ, ಇಂಡೋನೇಷಿಯಾ, ಪಾಕಿಸ್ತಾನ, ಪೋಲೆಂಡ್, ಜೆಕೊಸ್ಲೊವೇಕಿಯಾ, ಯೂಗೋಸ್ಲಾವಿಯಾ ದೇಶಗಳನ್ನು ಒಳಗೊಂಡು— ಅಂಗೀಕರಿಸಲ್ಪಟ್ಟಿತು. ಭಾರತ ದೇಶದ ಪ್ರಧಾನ ಮಂತ್ರಿ ಶ್ರೀ ನೆಹರೂರವರು ತಮ್ಮ ಶಾಸನಸಭೆಯ ಭಾಷಣದಲ್ಲಿ ಒತ್ತಿ ಹೇಳಿದ ಪ್ರಕಾರ, ಈಜಿಪ್ಟಿನ ಪ್ರಸ್ತಾಪವು ಸೂಯೆಜ್ ಸಮಸ್ಯೆಯ ಶಾಂತಿಯುತ ಇತ್ಯರ್ಥದ ಸಲುವಾಗಿ ಮಾರ್ಗವನ್ನು ಸುಗಮಗೊಳಿಸಿ ತೆರೆದಿಡುತ್ತದೆ.

ಆದರೂ ಕೂಡ, ಈ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಪಾಶ್ಚಾತ್ಯ ರಾಜ್ಯಶಕ್ತಿಗಳು ಇಚ್ಛೆಯುಳ್ಳವಾಗಿಲ್ಲವೆಂಬುದನ್ನು ವಾಸ್ತವಾಂಶಗಳು ತೋರಿಸುತ್ತವೆ. ಅವು ಈಜಿಪ್ಟ್ ದೇಶದ ವಿರೋಧವಾಗಿ, ವಸಾಹತುಲೂಟಿಯ ಮತ್ತು ಸಮುದ್ರಗಳ್ಳತನದ ನೀತಿಯನ್ನು ಅನುಸರಿಸಲಾರಂಭಿಸತೊಡಗಿವೆ. ದಶಾಬ್ದಗಳ ಅವಧಿಯಲ್ಲೆಲ್ಲ ಭಾರತ ದೇಶದಲ್ಲಿಯೂ ಮತ್ತು ಬರ್ಮಾ ದೇಶದಲ್ಲಿಯೂ ಬ್ರಿಟಿಷ್ ವಸಾಹತು ವಾದಿಗಳು ಮಾಡಿದುದನ್ನೂ, ಫ್ರೆಂಚ್ ವಸಾಹತುವಾದಿಗಳು ಇಂಡೋ—ಚೀಣ ಮತ್ತು ಆಫ್ರಿಕಗಳಲ್ಲಿಯೂ ಮತ್ತು ಅಮೇರಿಕನ ವಸಾಹತುವಾದಿಗಳು ಫಿಲಿಪ್ಪೈನ್ ಮತ್ತು ಲ್ಯಾಟಿನ್ (ದಕ್ಷಿಣ) ಅಮೇರಿಕದಲ್ಲಿಯೂ ಮಾಡಿದುದನ್ನೂ, ತಾವೂ ಮಾಡಲು ಪಾಶ್ಚಾತ್ಯ ರಾಜ್ಯಶಕ್ತಿಗಳು ಪ್ರಯತ್ನಿಸುತ್ತಿವೆ.

ಹಾಗೆಂದು ಕರೆಯಲಾದ ಸೂಯೆಜ್ ಕಾಲುವೆ ಬಳಕೆಗಾರರ ಸಂಘವೊಂದನ್ನು ರೂಪುಗೊಳಿಸುವ ಹಠಮಾರಿತನವು ಪಾಶ್ಚಾತ್ಯ ರಾಜ್ಯಶಕ್ತಿಗಳ ಸೂಯೆಜ್ ನೀತಿಯಲ್ಲಿ ಮೂರ್ತೀಭವಿಸಿಕೊಂಡಿರುವ ವಸಾಹತುವಾದೀ ಸಾರಾಂಶದ ಅತ್ಯಂತ ನಗ್ನ ಪ್ರದರ್ಶನವಾಗಿದೆ. ಸಂಪೂರ್ಣತಃ ಸಕಾರಣವಾಗಿಯೇ ಅರಬ್ ಸಾರ್ವಜನಿಕರು, ಪಶ್ಚಿಮ ರಾಜ್ಯಶಕ್ತಿಗಳ ಈ ಸಂಘಟನೆಯು "ಈಜಿಪ್ಟಿನ ವಿರೋಧವಾಗಿ ಯುದ್ಧವನ್ನು ಘೋಷಿಸಲು ಒಂದು ಸಂಘ"ವೆಂದೂ, ಅದನ್ನು ಈ ಪಾಶ್ಚಾತ್ಯ ರಾಜ್ಯಶಕ್ತಿಗಳು ನಿರ್ಬಂಧಯುತವಾಗಿ ಕೂಡಿಸುತ್ತಿವೆಯೆಂದೂ ಆಣಕವಾಡಿದ್ದಾರೆ. ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ದೊಡ್ಡ ಬಂಡವಾಳ ಸಂಸ್ಥೆಗಳು, ಸಮೀಪ ಮತ್ತು ಮಧ್ಯಪ್ರಾಚ್ಯದಲ್ಲಿ ತಮ್ಮ ವಸಾಹತು ದರೋಡೆಯನ್ನು ಮುಂದುವರಿಸಲೇಬೇಕೆಂಬ ಉದ್ದೇಶದಿಂದ, ಈ ಕುಪ್ರಸಿದ್ಧವಾದ "ಸಂಘ"ದ ಜನ್ಮಕ್ಕೆ ಸೂಲಗಿತ್ತಿ ತರದ ಕೆಲಸ ಮಾಡಿವೆ.

"ಸೂಯೆಜ್ ಕಾಲುವೆ ಬಳಕೆಗಾರರ ಸಂಘದ ಮುಖ್ಯ ಪುರಸ್ಕರ್ತ ರಾಷ್ಟ್ರಗಳು—ಎಂದರೆ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕ ದೇಶಗಳು—ತಮ್ಮ ಕೈವಶಕ್ಕೆ, "ಸೂಯೆಜ್ ಕಾಲುವೆಯ ಮುಖಾಂತರ ಸಾಗಾಣಿಕೆಯ ಸಮೀಕರಣ"ವನ್ನೂ, 'ಪೈಲಟ್ ಕಪ್ತಾನರ' (ಹಡಗುಗಳನ್ನು ಸುರಕ್ಷಿತವಾಗಿ ಸಾಗಿಸುವ ನೌಕಾಧಿಪತಿಗಳ) ನೇಮಕವನ್ನೂ, ಉದ್ಯೋಗವನ್ನೂ, ಮತ್ತು ಕಾಲುವೆಯಲ್ಲಿನ ಸಾಗಾಣಿಕೆಯ ಸುಂಕಗಳ ನಿರ್ಬಂಧದ ವಸೂಲಿಯನ್ನೂ, ತೆಗೆದುಕೊಳ್ಳುವ ಉದ್ದೇಶವನ್ನು ಪ್ರಕಟಿಸುತ್ತಿವೆ. ಈ "ಸಂಘ"ದ ಸಂಘಟಕರು ಈ ಜಿ ಪ್ಟಿ ನ ಸ ರ್ವ ಸ್ವತಂತ್ರ ಹಕ್ಕುಗಳನ್ನು ಕಸಿದುಕೊಳ್ಳುವ, ಮತ್ತು ತಮ್ಮ ಮನಬಂದಂತೆ ಈಜಿಪ್ಟಿನ ಪ್ರದೇಶವನ್ನು ಆಳುವ ಉದ್ದೇಶಗಳ ಸವಿಗನಸು ಕಾಣುತ್ತಿವೆಯೆಂಬುದನ್ನು ಈ ಕಾರ್ಯಾಚರಣೆಯ ಬಗ್ಗೆ ಅವರ ಕಾರ್ಯಕ್ರಮವು ಪೂರ್ಣತಃ ಸ್ಪಷ್ಟಪಡಿಸುತ್ತದೆ.

ಈ ರೀತಿ, ಯಾವ ವಿಧವಾದ ಅನುತಾಪವೂ ಇಲ್ಲದೆಯೇ, ಮೂರು ಪಾಶ್ಚಿಮಾತ್ಯ ರಾಜ್ಯಶಕ್ತಿಗಳು, ಉಭಯತಃ ಅಂತಾರಾಷ್ಟ್ರೀಯ ನ್ಯಾಯ ಸೂತ್ರವನ್ನೂ ಮತ್ತು ಸಾಮಾನ್ಯ ಜ್ಞಾನದ ಕೂಗನ್ನೂ—ಇಂತಹ ಆಕ್ರಮಣಕಾರೀ ಕಾರ್ಯಾಚರಣೆಗಳನ್ನು ತಾವು ಮಾಡಿ, ಸಫಲರಾಗಿರಲು ಸಮರ್ಥರಾಗಿದ್ದ ಅಂದಿನ ೧೯ನೆಯ ಶತಮಾನವು ಇಂದಿಲ್ಲವೆಂಬುದನ್ನೂ ಮತ್ತು ಜನತೆಗಳು, ಸಾಮ್ರಾಜ್ಯವಾದೀ ಪೀಡನೆಯನ್ನು ತೊಲಗಿಸಿ ಬಿಟ್ಟು, ತಮ್ಮ ಸರ್ವಸ್ವತಂತ್ರ ಹಕ್ಕುಗಳನ್ನು ಪ್ರತಿರಕ್ಷಿಸಿಕೊಳ್ಳಲು ಸಾಕಾದಷ್ಟು ಶಕ್ತಿವಂತರಾಗಿರುವಂತಹ ಕಾಲವಾದ ೨೦ನೆಯ ಶತಮಾನದ ಮಧ್ಯಕಾಲವಿದೆಂಬುದನ್ನೂ ಈ ಕೂಗು ಹೇಳುತ್ತದೆ. ಕಡೆಗಣಿಸಿ ಇನ್ನೊಬ್ಬನ ಮನೆಯಲ್ಲಿ ತಾವು ಯಜಮಾನರಾಗಿರಲು ತಮಗಿರುವ ಇಚ್ಛೆಯನ್ನು ಇಡೀ ಪ್ರಪಂಚಕ್ಕೆ ತಿಳಿಸಿವೆ.

ಈಜಿಪ್ಟಿನ ವಿಷಯದಲ್ಲಿ ಮೂರು ಪಾಶ್ಚಾತ್ಯ ರಾಜ್ಯಶಕ್ತಿಗಳು ಈಗ ಕೈಗೊಳ್ಳಲು ಯೋಜಿಸುತ್ತಿರುವ, ಆದರ ಅಂತರ್ವ್ಯವಹಾರಗಳಲ್ಲಿ ನಡೆಸಬಯಸುತ್ತಿರುವಂತಹ ಹಸ್ತಕ್ಷೇಪವನ್ನು ಯಾವೊಂದು ಸ್ವಾಭಿಮಾನವುಳ್ಳ ರಾಷ್ಟ್ರವೂ ಸಹಿಸಲಾರದೆಂಬುದು ಸ್ಪಷ್ಟವಾಗಿ ತಮಗೆ ಮನವರಿಕೆಯಾಗದಿರುವಂತಹವರು ಯಾರಾದರೂ ಇದ್ದಾರೆಯೇ ಎಂದು ಸೋಜಿಗಪಡುತ್ತೇವೆ. ಪಾಶ್ಚಿಮಾತ್ಯ ರಾಜ್ಯಶಕ್ತಿಗಳ ಕಾರ್ಯಾಚರಣೆಗಳ ವಿಷಯದಲ್ಲಿ ಈಜಿಪ್ಟಿನ ಇಡೀ ಜನತೆಯು ಹೊಂದಿರುವ ಕ್ರೋಧಪೂರ್ಣವಾದ ರೋಷವು ತೀರಾ ಅವಗಾಹನೆಗೆ ಯೋಗ್ಯವಾದುದಾಗಿದೆ. ಈಜಿಪ್ಟಿನ ಜನತೆಯು ತಮ್ಮ ಸ್ವೇಚ್ಛಾ ಸ್ವಾತಂತ್ರ್ಯಗಳನ್ನು ರಕ್ಷಿಸಿಕೊಳ್ಳಲು ಕೃತ ನಿಶ್ಚಯರಾಗಿದ್ದಾರೆ ಮತ್ತು ಈ ವಿಷಯವು ಗಾಢವಾದ ಮೆಚ್ಚಿಕೆಗೂ, ಶ್ಲಾಘನೆಗೂ ಅರ್ಹವಾದುದಾಗಿದೆ.

ಸಪ್ಟೆಂಬರ್ ದಿನಾಂಕ ೧೫ರಂದು ಬೆಲ್ಬೇಸ್‌ನಲ್ಲಿ ಮಾತನಾಡುತ್ತ ಅಧ್ಯಕ್ಷ ನಾಸೆರ್‌ರವರು ಈ ರೀತಿ ಹೇಳಿದರು: "ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ತಮ್ಮ ಶಕ್ತಿಗಳನ್ನು ಝಳಪಿಸುತ್ತಿರುವಾಗ, ಈಜಿಪ್ಟ್ ಜನತೆಯ ಪರವಾಗಿ—ಅವರು ಗತಕಾಲದಲ್ಲಿ ವಿದೇಶೀ ಆಡಳಿತ ಮತ್ತು ದಬ್ಬಾಳಿಕೆಗಳ ವಿರೋಧವಾಗಿ ಯಶಸ್ವಿಯಾಗಿ ಹೋರಾಡಿದ್ದಾರೆ—ನಾವು ನಮ್ಮ ಸರ್ವಸ್ವತಂತ್ರತೆಯನ್ನು ಹೇಗಾದರೂ ಪ್ರತಿರಕ್ಷಿಸಿಕೊಳ್ಳಲು ಬಯಸುತ್ತೇವೆಂಬುದನ್ನು ನಾನು ಪ್ರಕಟಿಸುತ್ತೇನೆ. ತಮ್ಮ ಒಳಸಂಚುಗಳಿಂದಲೂ, ಬೆದರಿಕೆಗಳಿಂದಲೂ ಈ ದೊಡ್ಡ ದೇಶಗಳು ನಮ್ಮನ್ನು ಬೆದರಿಸುವುದರಲ್ಲಿ ಸಫಲವಾಗಲಾರವು. ನಾವು ನಮ್ಮ ಕಡೆಯ ಉಸಿರಿರುವ ವರೆಗೂ ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವೆವು."

ಈಜಿಪ್ಟು ದೇಶವು ನ್ಯಾಯವಾದ ಉದ್ದೇಶವನ್ನು ಪ್ರತಿ ರಕ್ಷಿಸಿಕೊಳ್ಳುತ್ತಿದೆಯೆಂಬ ವಾಸ್ತವಾಂಶಗಳನ್ನು ಯಾವ ಪ್ರಾಮಾಣಿಕ ಮನುಷ್ಯನೂ ಎದುರಿಸಲಾರನು. ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕ ದೇಶಗಳಲ್ಲಿರುವ ಶಾಂತಿಪ್ರಿಯ ಸಾರ್ವಜನಿಕರು ಚೆನ್ನಾಗಿ ಗ್ರಹಿಸಿಕೊಳ್ಳುವಂತಹ ವಿಷಯ ಇದು. ಹಲವು ದೇಶಗಳ ತಂಡವು "ಲಂಡನ್ ಬಂದರನ್ನು ಬಳಸುವವರ ಸಂಘ"ವೊಂದನ್ನು ರೂಪಿಸಲು, ಇಂತಹ ಸಂಘವು ಬ್ರಿಟನ್ನಿನ ಸರ್ವಸ್ವತಂತ್ರತೆಯನ್ನು ಕಡೆಗಣಿಸುತ್ತ, ದೇಶದಲ್ಲೆಲ್ಲಾ ದೊಡ್ಡದಾದ ಈ ಬಂದರಿನ ಮೇಲೆ ಅಧಿಕಾರವನ್ನು ತಾನು ಚಲಾಯಿಸಲು ಸೂಚನೆಯನ್ನು ಮಂಡಿಸಿದಾದರೆ, ಆಗ ಬ್ರಿಟನ್ ಏನು

(೯ನೇ ಪುಟ ನೋಡಿರಿ)


ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ




# ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

## ಗೇಣಿ ನಿರ್ಣಯ ಮಸೂದೆ

# ಜಿಲೆಯ ಒಕ್ಕಲುಗಳಿಗೆ "ಬಿಡುಗಡೆಯ ಉಡುಗೊರೆ"

### ಮದರಾಸಿನ ಶಾಸನಾಂಗದಿಂದ ಗೇಣಿನಿರ್ಣಯ ಮಸೂದೆಯ ಅಂಗೀಕಾರ

ಮದ್ರಾಸು ಶಾಸನಾಂಗದ ಉಭಯ ಸದನಗಳೂ ನ್ಯಾಯವಾದ ಗೇಣಿ ನಿರ್ಣಯ ಮಸೂದೆಯನ್ನು, ಕೆಲವು ತಿದ್ದುಪಡಿಗಳ ಸಹಿತ, ಅಂಗೀಕರಿಸಿವೆ. ಈ ತಿದ್ದುಪಡಿಗಳು ಧನಿಗಳಿಗೆ ಅನುಕೂಲವಾಗಿವೆ.

ಮಾನ್ಯ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕ್ಕರರು ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತಾ "ಒಕ್ಕಲುಗಳ ವರ್ಗಕ್ಕೆ ಆರ್ಥಿಕ ನ್ಯಾಯವನ್ನು ದೊರಕಿಸಿಕೊಡಲು ಇದನ್ನು ತಂದುದಾಗಿದೆ" ಎಂದರು. "ಪರಿಶೀಲಕ ಸಮಿತಿಯಲ್ಲಿದ್ದ ಕೆಲವು ಸದಸ್ಯರು ಧನಿ-ಒಕ್ಕಲುಗಳ ನಡುವಣ ಮಧುರ ಸಂಬಂಧವನ್ನು ಈ ಮಸೂದೆ ಕೆಡಿಸುವುದೆಂದೂ ಸಣ್ಣ ಹಿಡುವಳಿಯುಳ್ಳ ಧನಿಗಳನ್ನು ಇದು ತೊಂದರೆಗೆ ಗುರಿಪಡಿಸುವುದೆಂದೂ ಹೇಳಿದರು. ಬೇರೆ ಕೆಲವರು ಒಕ್ಕಲುಗಳಿಗೆ ೭೫% ಪಾಲು ಸಿಗುವಂತಾಗಬೇಕೆಂದೂ ಇದೇ ಯೋಜನಾಆಯೋಗದ ಉದ್ದೇಶವಾಗಿದೆಯೆಂದೂ ವಾದಿಸಿದರು. ನಾನು ಇವೆರಡೂ ಅಭಿಪ್ರಾಯಗಳನ್ನು ನ್ಯಾಯಬದ್ಧವಾಗಿ ಸಂಯೋಜಿಸುವ ಮಸೂದೆ ಇದೆಂದು ಭಾವಿಸಿದ್ದೇನೆ"ಎಂದರು ಕಂದಾಯಮಂತ್ರಿ.

ಮಸೂದೆಯ ಚರ್ಚೆಯನ್ನು ಪ್ರಾರಂಭಿಸಿದ ಕಾಂಗ್ರೆಸು ಸದಸ್ಯರೊಬ್ಬರು ಒಕ್ಕಲು ತನ್ನ ಭೂಮಿಗೆ ಗೊಬ್ಬರವನ್ನು ಹಾಕಲು ತಪ್ಪಬಾರದೆಂದು ಕೇಳಿಕೊಂಡರು; ಅಲ್ಲದೆ, ವಿಧವೆಯರು, ವಿದ್ಯಾರ್ಥಿಗಳು ಮತ್ತು ತಮ್ಮ ಜೀವನಾರ್ಥವಾಗಿ ಭೂಮಿಯ ಗೇಣಿಯನ್ನೇ ಅವಲಂಬಿಸಿರುವ ಆದರೆ ತಮಗೆ ಸ್ವತಃ ಸಾಗುವಳಿಮಾಡಿಕೊಳ್ಳಲು ಅಸಾಧ್ಯವಾಗಿರುವ ಇತರರಿಗೆ ಈ ಮಸೂದೆಯು ಅನ್ವಯಿಸಕೂಡದೆಂದರು.

ಮತ್ತೊಬ್ಬ ಸದಸ್ಯರು 'ನಡು ಬೆಳೆ'ಯನ್ನು ಬೆಳೆಸಲು ತುಂಬ ಪರಿಶ್ರಮವು ಅಗತ್ಯವಾಗಿದೆ. ಆದುದರಿಂದ ಇದರಲ್ಲಿ ಧನಿಗೆ ಪಾಲುಸಿಗಬೇಕೆನ್ನುವ ಈಗಿನ ಬಹಿಷ್ಕೃತ ಸ್ವರೂಪ ಹಿತವಲ್ಲ ಎಂದರು. ಬೇರೊಬ್ಬರು "ನೀರುಣ್ಣುವ ಭೂಮಿಗೆ ಉತ್ಪತ್ತಿಯ ೪೦% ಗೇಣಿ ಎಂದು ತೀರ್ಮಾನಿಸಿದುದು ಯೋಗ್ಯವಲ್ಲ. ಏಕೆಂದರೆ, ಒಂದೇ ಗ್ರಾಮದಲ್ಲಿಯೂ ಭೂಮಿಯ ಫಲವತ್ತತೆಯು ಗದ್ದೆಯಿಂದ ಗದ್ದೆಗೆ ವ್ಯತ್ಯಾಸಗೊಂಡಿರುತ್ತದೆ. ಆದುದರಿಂದ ಭೂಮಿಯ ಫಲವತ್ತತೆಯನ್ನೇ ಹೊಂದಿಕೊಂಡು ಗೇಣಿ ನಿರ್ಣಯವಾಗಬೇಕು" ಎಂದು ವಾದಿಸಿದರು.

ನಮ್ಮ ಜಿಲ್ಲೆಯ ಶ್ರೀ ಯೆತ್ತರೆ ಮಂಜಯ್ಯ ಶೆಟ್ಟಿಯವರು ಈ ಮಸೂದೆಯನ್ನು ದಕ್ಷಿಣಕನ್ನಡಕ್ಕೂ ಅನ್ವಯಿಸುವುದಕ್ಕೆ ಸರಕಾರವು ಒಪ್ಪಿರುವುದನ್ನು ಸ್ವಾಗತಿಸುತ್ತಾ "ಈ ಮಸೂದೆಯು ಮದರಾಸಿನಿಂದ ಬೇರ್ಪಡುವ ಕಾಲದ ಬಹುಮಾನ" ಎಂದು ಸಂತೋಷವನ್ನು ಸೂಚಿಸಿದರು "ಮಸೂದೆಯಲ್ಲಿ ಉತ್ಪತ್ತಿಯ ೪೦% ಗೇಣಿ ಎನ್ನಲಾಗಿದೆ; ಇದನ್ನು ಮೂರರಲ್ಲಿ ಒಂದಂಶ ಎಂಬುದಾಗಿ ತಗ್ಗಿಸಬೇಕು. ಅಲ್ಲದೆ, ಈ ಮಸೂದೆಯಂತೆ ಆಗುವ ಗೇಣಿಗಿಂತಲೂ ಈಗಾಗಲೇ ಮಾಡಿಕೊಂಡಿರುವ ಒಡಂಬಡಿಕೆ ಪ್ರಕಾರದ ಗೇಣಿಯು ಕಡಿಮೆಯಾಗಿದ್ದರೆ, ಆ ಕಡಿಮೆ ಗೇಣಿಯನ್ನೇ ಒಕ್ಕಲು ತೆರುವುದಕ್ಕೆ ಅವಕಾಶವಿರಬೇಕು" ಎಂದೂ ಶ್ರೀ ಶೆಟ್ಟಿಯವರು ಸೂಚಿಸಿದರು.

ಕಾಂಗ್ರೆಸಿನ ಬೇರೊಬ್ಬ ಸದಸ್ಯರು ಬಾಗಾಯತು ಭೂಮಿಗೆ ನಿಗದಿ ಮಾಡಿರುವ ಗೇಣಿಯನ್ನು (ಉತ್ಪತ್ತಿಯ ೧/೩ನೇ ಅಂಶ) ಹೆಚ್ಚಿಸಬೇಕೆಂದೂ ವಾದಿಸಿದರು. ಬಾಗಾಯತು ಭೂಮಿಯಲ್ಲಿ ಕೃಷಿಯು ತುಂಬ ತ್ರಾಸದಾಯಕವಾದುದೆಂಬ ಕಾರಣವನ್ನು ಅವರು ಕೊಟ್ಟರು. ಶ್ರೀ ಸ್ವಯಂ ಪ್ರಕಾಶ ರೆಂಬ ಸದಸ್ಯರು" ಚಿಕ್ಕ ಹಿಡುವಳಿಗೆ ಮಾತ್ರ ಈ ಮಸೂದೆಯು ಅನ್ವಯಿಸುತ್ತದೆ; ದೊಡ್ಡ ಹಿಡುವಳಿಗಳನ್ನು ಈ ಮಸೂದೆಯ ವ್ಯಾಪ್ತಿಯಿಂದ ಹೊರಗಿರಿಸಲಾಗಿದೆ. ಇದು ಯೋಗ್ಯವಲ್ಲ" ಎಂದು ಟೀಕಿಸಿದರು.

ವಿರೋಧಿ ಗುಂಪಿನ ನಾಯಕರಾದ ಶ್ರೀ ಪಿ. ರಾಮಮೂರ್ತಿಯವರು ಯೋಜನಾ ಆಯೋಗವು ಒಟ್ಟು ಉತ್ಪತ್ತಿಯ ೨೦—೨೫% ಗೇಣಿಯಾಗಿರಬೇಕೆಂದು ಸಲಹೆ ಮಾಡಿರುವಾಗಲೂ ಮಂತ್ರಿಗಳು ಅದನ್ನು ಉಪೇಕ್ಷಿಸಿರುವುದಕ್ಕೆ ಆಶ್ಚರ್ಯಪಟ್ಟರು. ಆಂಧ್ರ ಸರಕಾರವು ಸರಿ ಅರೆವಾಸಿ ಗೇಣಿಯಾಗಿರಬೇಕೆಂದು ಹೇಳಿರುವುದು ನಿಜ. ಇದಕ್ಕೆ ಆ ಸರಕಾರದಲ್ಲಿ ಭೂಮಾಲಕರೇ ತುಂಬಿರುವುದು ಕಾರಣ ಮದ್ರಾಸಿನಲ್ಲೂ ಹೀಗೆಯೇ ಇದೆ ಎಂದು ಈ ಮಸೂದೆಯು ಸ್ಪಷ್ಟಪಡಿಸುತ್ತದೆ. ಸರಕಾರದವರು ತಮಗೆ ನಿಜವಾಗಿ ಮನಸ್ಸಿಲ್ಲದಿದ್ದರೂ ಒತ್ತಾಯಕ್ಕೆ ಬಲಿಬಿದ್ದು ಈ ಮಸೂದೆಯನ್ನು ತಂದಂತಿದೆ ಎಂದವರು ಆರೋಪಿಸಿದರು.

ಮುಂದುವರಿದು ಅವರು ಹೀಗೆಂದರು—'ಆಧುನಿಕ ಆರ್ಥಿಕ ವಿಧಾನದಲ್ಲಿ ಸೋಮಾರಿಯಾಗಿ ಕುಳಿತುಕೊಂಡು ತಾನು ಭೂಮಿಗೆ ಹಣ ಹಾಕಿರುವೆನೆಂದು ಮುಂತಾದ ಕಾರಣಗಳಿಗಾಗಿ ಪ್ರತಿಫಲವನ್ನು ಕೇಳುವವನಿಗೆ ಸ್ಥಾನವಿಲ್ಲ. ಈ ಮಸೂದೆಗೆ ಮಾಡಿದ ತಿದ್ದುಪಡಿಗಳೆಲ್ಲವೂ ಧನಿಗಳಿಗೆ ಅನುಕೂಲವಾಗಿರುತ್ತವೆ. ಕಳೆದ ಕೆಲವು ಶತಮಾನಗಳಲ್ಲಿ ಭೂಮಿಯ ಮೇಲೆ ಧನಿಗಳ ಒಡೆತನವೇ ಇದ್ದಿತು. ಆದಾಗ್ಯೂ ಈ ದೀರ್ಘ ಕಾಲದಲ್ಲಿ ಭೂಮಿಯ ಉತ್ಪನ್ನ ಹೆಚ್ಚಲಿಲ್ಲ. ಧನಿಗಳು ನಿಷ್ಕ್ರಿಯರಾಗಿದ್ದರು. ಈಗ ನಾಲ್ಕೈದು ವರ್ಷಗಳಿಂದ ಸಾಗುವಳಿದಾರ ಒಕ್ಕಲೇ ಸುಧಾರಿತ ರೀತಿಯ ವ್ಯವಸಾಯಕ್ರಮವನ್ನು ಸ್ವಪ್ರೇರಣೆಯಿಂದ ಅನುಸರಿಸಿ ಹೆಚ್ಚು ಉತ್ಪಾದನೆಯನ್ನು ಮಾಡುತ್ತಿದ್ದಾನೆ. ಹೀಗಿರುವಾಗ ಧನಿಗಳಿಗೆ ಪಕ್ಷಪಾತಿಯಾಗಿಯೇ ಸರಕಾರವಿರುವುದೇಕೆ? ಕಾಂಗ್ರೆಸು ಪಕ್ಷದಲ್ಲಿಯೇ ಇರುವ ಭೂಮಾಲಕ ವರ್ಗವು ಏನಾದರೂ ಕಿರುಕುಳ ಎಬ್ಬಿಸೀತೆಂಬುದಕ್ಕಾಗಿಯೇ ಇರಬೇಕೆಂದು ಕಾಣುತ್ತದೆ."

ಮಂತ್ರಿಗಳು ಚರ್ಚೆಗೆ ಉತ್ತರ ಕೊಡುತ್ತಾ 'ಯೋಜನಾ ಆಯೋಗವು ವಿಶೇಷ ವಿದ್ಯಮಾನಗಳಿರುವ ಕಡೆಗಳಲ್ಲಿ ಧನಿ-ಒಕ್ಕಲುಗಳ ನಡುವೆ ಹಂಚಲ್ಪಡಬೇಕಾದ ಉತ್ಪತ್ತಿಯ ಪಾಲುಮಾಡಿಕೆಯನ್ನು ವ್ಯತ್ಯಾಸಗೊಳಿಸಬಹುದೆಂದು ತಿಳಿಸಿದೆ. ಹೊಸ ದೆಹಲಿಯಲ್ಲಿರುವ ಉಚ್ಚ ಅಧಿಕಾರಿಗಳೊಬ್ಬರು ಅಖಿಲ ಭಾರತದಲ್ಲೆಲ್ಲ ಒಂದೇ ಬಗೆಯ ಶಾಸನವಿರುವುದು ಕಷ್ಟವೆಂದೂ ರಾಜ್ಯದಿಂದ ರಾಜ್ಯಕ್ಕೆ ಶಾಸನದ ಸ್ವರೂಪ ಬದಲಾಗಬಹುದೆಂದೂ ಹೇಳಿದ್ದಾರೆ." ಎಂದರು.

"ಪ್ರತಿಪಕ್ಷದ ನಾಯಕರು ಜಾಗೀರುದಾರರಾಗಿ ಭೂಮಾಲಕರು ಭೂಮಿಯನ್ನು ಪಡೆದಿರುವರೆಂದು ಭಾವಿಸಿದಂತಿದೆ. ವಾಸ್ತವವಾಗಿ ಹೀಗಿಲ್ಲ: ಕಷ್ಟಪಟ್ಟು ಹಣ ಸಂಪಾದಿಸಿಕೊಂಡುಕೊಂಡ ಭೂಮಿಯೇ ಹೆಚ್ಚು. ಹಾಗೆಯೇ ಬೇರೆ ಕಡೆ ಕಡಿಮೆ ಗೇಣಿ ಇದೆ ಎಂದು ತೋರಿಸಹೋಗುವುದೂ ಯೋಗ್ಯವಲ್ಲ. ಮುಂಬಯಿ, ಹೈದರಾಬಾದುಗಳಲ್ಲಿ ಭೂಮಿಗೆ ಎಕ್ರೆಯೊಂದರ ೨೫೦೦ ರೂಪಾಯಿ ಬೆಲೆಯೂ ಸಿಗುವುದಿಲ್ಲ. ನಮ್ಮಲ್ಲಿ ೬ ರಿಂದ ೧೦ ಸಾವಿರ ರೂಪಾಯಿ ವರೆಗೂ ಬೆಲೆಯಿದೆ. ಇಲ್ಲಿಯದು ಬಹಳ ಫಲವತ್ತಾದ ಭೂಮಿ. ಬೇರೆ ರಾಜ್ಯಗಳಲ್ಲಿ ಈಗ ನಿಗದಿಮಾಡಿರುವ ೨೦-೨೫% ಗೇಣಿಯೇ ವಾಸ್ತವವಾಗಿ ಒಕ್ಕಲುಗಳು ಸಲ್ಲಿಸುತ್ತಿದ್ದುದಕ್ಕಿಂತ ಹೆಚ್ಚಾಗಿದೆ ಎನ್ನಬಹುದು: ಏಕೆಂದರೆ ಧನಿಗಳಿಗೆ ಇಷ್ಟು ಗೇಣಿಯನ್ನು ಒಕ್ಕಲುಗಳು ಹಿಂದೆಂದೂ ಕ್ರಮಪ್ರಕಾರ ಕೊಟ್ಟುದೇ ಇಲ್ಲ!" ಎಂದೂ ಮಂತ್ರಿಗಳು ತಿಳಿಸಿದರು

ಬೇರೆ ರಂಗಗಳಲ್ಲಿ ಯೋಗ್ಯ ನಿಯಂತ್ರಣವನ್ನು ಹೇರುವ ಕ್ರಮಗಳೇನನ್ನೂ ಕೈಗೊಳ್ಳದೆ ಕೃಷಿ ಕ್ಷೇತ್ರದಲ್ಲಿಯೇ ಏಕೆ ಸರಕಾರವು ಕೈಹಾಕುತ್ತಿದೆ ಎಂಬ ಪ್ರಶ್ನೆಯನ್ನು ಉತ್ತರಿಸುತ್ತಾ ಮಾನ್ಯ ಮಂತ್ರಿಗಳು "ಜಗತ್ತಿನಲ್ಲಿ ಕೃಷಿಯು ಬಹಳ ಪುರಾತನವಾದ ಉದ್ಯೋಗವಾಗಿದೆ. ಭೂಮಿಯ ಮೇಲೆ ಈಗ ಎಷ್ಟು ಹೆಚ್ಚಿನ ಒತ್ತಡ ಬಿದ್ದಿದೆ ಎಂದರೆ, ಈ ಸಮಸ್ಯೆಯನ್ನು ಮೊದಲಾಗಿ ಬಿಡಿಸಬೇಕಾಗಿದೆ" ಎಂದು ಮಂತ್ರಿಗಳು ಸ್ಪಷ್ಟೀಕರಣವಿತ್ತರು.

ಸರಕಾರದ ಕಡೆಯಿಂದ ಕೆಲವು ತಿದ್ದುಪಡಿಗಳನ್ನು ಮಂಡಿಸಲಾಯಿತು. "ಇವುಗಳಲ್ಲಿ ಒಂದು ಒಣಭೂಮಿ (ಬೆಟ್ಟು ಗದ್ದೆ)ಯ ಉತ್ಪತ್ತಿಯಲ್ಲಿ ಕಾಲಂಶ ಮಾತ್ರ ಗೇಣಿ ಎಂದಿದ್ದುದನ್ನು ಬದಲಾಯಿಸಿ ಮೂರರಲ್ಲಿ ಒಂದಂಶವಾಗಿ ಮಾಡಲು, ಅಂದರೆ ಮೊದಲು ಹೇಳಿದುದಕ್ಕಿಂತ ಹೆಚ್ಚಿಸಲು, ಉದ್ದೇಶಪಡುತ್ತದೆ. ಒಳ್ಳೆಯ ಮಳೆ ಬಂದರೆ ಬೆಟ್ಟು ಗದ್ದೆಗಳಲ್ಲಿ ಚೆನ್ನಾಗಿ ಬೆಳೆಯಾಗುತ್ತದೆ. ಬೈಲು ಗದ್ದೆಯಲ್ಲಿ ಕೆಲಸ ಮಾಡುವವನಿಗಿಂತಲೂ ಬೆಟ್ಟುಗದ್ದೆಯ ಒಕ್ಕಲಿಗೆ ಕಷ್ಟ ಕಡಿಮೆ ಎಂಬುದು ಸಾಮಾನ್ಯ ಅನುಭವ" ಎಂದು ಮಂತ್ರಿಗಳು ಗೇಣಿ ಏರಿಸುವ ಈ ತಿದ್ದುಪಡಿಗೆ ಹಿನ್ನೆಲೆಯನ್ನು ನೀಡಿದರು.

(೬ನೇ ಪುಟನೋಡಿರಿ)

ವ್ಯಾಪಾರೋದ್ಯಮಿಗಳಿಗೆ

ಖಾತ್ರಿಯಾಗಿ ತಿಳಿದಿದೆ.

ಅವರು ಒಂದು ಬ್ಯಾಂಕನ್ನು ಅದರ ಉಪಯುಕ್ತತೆ, ಸ್ನೇಹಭಾವ, ಮತ್ತು ಕಾರ್ಯದಕ್ಷತೆಗಾಗಿ ಆರಿಸಿಕೊಳ್ಳುವರು.

**ಕೆನರಾ ಬ್ಯಾಂಕು** ಅಂತಹ ಒಂದು ಬ್ಯಾಂಕು. ನೀವು ಕೆನರಾ ಬ್ಯಾಂಕಿನ ಉಪಯುಕ್ತತೆ, ಸ್ನೇಹಭಾವ ಮತ್ತು ಕಾರ್ಯದಕ್ಷತೆಯ ವಿಷಯದಲ್ಲಿ ಸಂಪೂರ್ಣ ಭರವಸೆ ಇಡಬಹುದು.

**50 ವರ್ಷಗಳ ಅನುಭವ,** ಅನೇಕ ಶಾಖೆಗಳು, ಮತ್ತು ಜಗತ್ತಿನ ಎಲ್ಲಾ ಕಡೆಗಳಲ್ಲೂ ವಿದೇಶಿ ಕರೆಸ್ಪೊಂಡೆಂಟರುಗಳು— ಇವುಗಳ ನೆರವಿನಿಂದ ಕೆನರಾ ಬ್ಯಾಂಕು ಪರಿಪೂರ್ಣ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸಲು ಶಕ್ತನಾಗಿರುತ್ತದೆ.

**CANARA BANK LIMITED**

ಕೆನರಾ ಬ್ಯಾಂಕ್ ಲಿಮಿಟೆಡ್

**1906** — ಸರ್ವ ಜನತೆಯ ಸಹಾಯಕ ಬ್ಯಾಂಕ್ — **1956**

**ಮಂಗ್ಳೂರು ಡಿ. ಮು ಕೋರ್ಟಿನಲ್ಲಿ**

S. C. 486/1956.

ಯಂ. ಯನ್. ಚೌಟ—ವಕೀಲ್ ಮತ್ತು ದ. ಕ. ಜಿಲ್ಲಾ ಸಬ್‌ಕೋರ್ಟ O. S. 9?/49ನೇ ವ್ಯಾಜ್ಯದಲ್ಲಿ ನೇಮಕಪಟ್ಟ ರಿಸೀವರ_ಮಂಗ್ಳೂರು ಪಟ್ಟಣದಲ್ಲಿರುವವ

—ವಾದಿ

ಮತ್ತು

ಪಿಲಿಕುಂಡ ಶೇಕುಟ್ಟಿ ಬ್ಯಾರಿ_ಅಸೂನತ್ ಬ್ಯಾರಿಗಳ ಮಗ_ಕಾಸ್ರಗೋಡು ತಾಲೂಕು ಕೊಡ್ಲಮೊಗ್ರು ಗ್ರಾಮದ ಪಿಲಿಕುಂಡದಲ್ಲಿರುವವ

— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ— ಪ್ರತಿವಾದಿಯಿಂದ ವಾದಿಗೆ ಬರತಕ್ಕ ಗೇಣಿ ಬಾಕಿಗೆ ಮೇಲ್ಕಂಡ ವಾದಿಯು ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ವ್ಯಾಜ್ಯ ದಾಖಲ್ಲುಮಾಡಿರುತ್ತಾರೆ. ಸದ್ರಿ ವ್ಯಾಜ್ಯವು ತನ್ಖಬಗ್ಗೆ ತಾ. 25—10—56ಕ್ಕೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯು ಆಕ್ಷೇಪ ಇದ್ದರೆ ಆ ದಿನ ಹಗಲು 11 ಗಂಟೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಾರಣೆಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದು. ಇದ್ದಕ್ಕೆ ತಪ್ಪಿದರೆ ನಿಮ್ಮ ಮೇಲೆ ವ್ಯಾಜ್ಯವು ಎಕ್ಸಪಾರ್ಟೆಯಾಗಿ ತೀರ್ಮಾನಿಸಲಾದೀತು— ತಿಳಿದಿರಲಿ.

K. S. Alva.
Advocate for Plff.

ಮಂಗ್ಳೂರು, ತಾ. 28—9—56.

**NAVAYUGA**

Popular Kannada Weekly

*Founder:—*

**A. B. SHETTY**, *M.L.A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೪-೧೦-'೫೬ | ೫ |


## ವನ್ಯ ಪ್ರಾಣಿ ಸಪ್ತಾಹ

ಭಾರತದಲ್ಲಿ ಆಚರಿಸಲಾಗುತ್ತಿರುವ ಅನೇಕ ಸಪ್ತಾಹಗಳ ಸಾಲಿನಲ್ಲಿ ಇದೀಗ ವನ್ಯ ಪ್ರಾಣಿ ಸಪ್ತಾಹವು ಜೊತೆಯಾಗಿದೆ. ಪ್ರತಿ ವರ್ಷ ಅಕ್ಟೋಬರ ತಿಂಗಳ ಮೊದಲನೇ ವಾರವನ್ನು ನಮ್ಮ ದೇಶದ ಮೃಗ ಮತ್ತು ಪಕ್ಷಿಗಳ ಜಗತ್ತಿನ ಕಡೆಗೆ ಜನರ ಗಮನ ಹರಿಯಿಸಲು ಈಗ ಕೆಲವು ವರ್ಷಗಳಿಂದ ಉಪಯೋಗಿಸಲಾಗುತ್ತದೆ. ನಿತ್ಯ ಜೀವನದ ಸಮಸ್ಯೆಗಳೇ ವಿಶೇಷವಾಗಿರುವ ನಮ್ಮ ಜನರಿಗೆ ಕಾಡುಗುಡ್ಡೆಗಳಲ್ಲಿರುವ ಪಕ್ಷಿಗಳ ಮತ್ತು ಮೃಗಗಳ ಜೀವನದ ಸಮಸ್ಯೆಗಳನ್ನು ತಿಳಿದುಕೊಳ್ಳುವ ಮನಸ್ಸು ಆಗುವುದು ವಿರಳ. ಆದಾಗ್ಯೂ ಪ್ರಧಾನಿ ನೆಹರುಗಳು ತಮ್ಮ ಸಂದೇಶದಲ್ಲಿ ಹೇಳಿರುವಂತೆ ಪ್ರಾಣಿಯು ಎಷ್ಟೇ ಕ್ಷುಲ್ಲಕವಾದುದಾಗಲಿ, ಅದರ ಜೀವಕ್ಕೆ ಮಹತ್ವದ ಬೆಲೆ ಇದೆ ಎಂಬುದನ್ನು ತಾತ್ತ್ವಿಕವಾಗಿ ಭಾರತದಷ್ಟು ಜಗತ್ತಿನ ಬೇರೆಯಾವುದೇ ರಾಷ್ಟ್ರವೂ ಒಪ್ಪಿದಂತಿಲ್ಲ. ನಾವು ಅಹಿಂಸಾವ್ರತಧಾರಿಗಳಾಗಿದ್ದೇವೆ. ಕಾಲಡಿ ಇರುವೆಗಳಿರಬಹುದೆಂದೂ ನಮ್ಮ ಪಾದಾಘಾತದಿಂದ ಅವುಗಳು ಮರಣಗೊಳ್ಳಬಹುದೆಂದೂ ಹೆದರಿ, ಜಾಗರೂಕತೆಯಿಂದ ಹೆಜ್ಜೆ ಮುಂದಿಡುವುದು ನಮ್ಮ ಧಾರ್ಮಿಕ ಸಂಪ್ರದಾಯವಾಗಿದೆ. ದೀಪ ಹಚ್ಚಿದರೆ, ಕೀಟಗಳು ಆಕರ್ಷಿಸಲ್ಪಟ್ಟು, ಆ ದೀಪಕ್ಕೆ ಮುತ್ತಿ ಅವು ಸಾಯಬಹುದೆಂದು ಕತ್ತಲಾಗುವ ಮೊದಲೇ ಊಟ ಮುಗಿಸಿ ಬಿಡುವಷ್ಟು ಎಚ್ಚರವುಳ್ಳ ಟವರ್ಗವೊಂದು ನಮ್ಮಲ್ಲಿದೆ ಆದರೆ ಇದೆಲ್ಲ ಧಾರ್ಮಿಕ ಆಚರಣೆಯ ಹೊರಗೆ ಎಷ್ಟರ ಮಟ್ಟಿಗೆ ಮಹತ್ವಪೂರ್ಣವಾಗಿ ಉಳಿದಿದೆ ಎಂಬುದನ್ನು ವಿಮರ್ಶಿಸಿದರೆ ನಿರಾಸೆ ನಮಗಾಗುತ್ತದೆ. ನಾವು ನಿತ್ಯ ವ್ಯವಹಾರದಲ್ಲಿ ಪಶು ಪಕ್ಷಿಗಳನ್ನು ಆದರದಿಂದ ಕಾಣುವುದಿಲ್ಲ— ಅವುಗಳ ಉಪಚಾರ ಮಾಡುವುದಕ್ಕೆ ನಮಗೆ ವ್ಯವಧಾನವಿದ್ದಂತಿಲ್ಲ. ಸಾಧು ಪ್ರಾಣಿಗಳನ್ನು— ಅವುಗಳಿಂದ ದುಡಿಮೆ ಮಾಡಿಸುವ ತಪ್ಪಿಗೆ ಪ್ರಾಯಶ್ಚಿತ್ತವೆಂಬಂತೆ— ಅರೆಹೊಟ್ಟೆ ಹಾಕಿ ಋಣ ತೀರಿಸುತ್ತೇವೆ. ಆದರೆ ವನ್ಯ ಮೃಗ ಪಕ್ಷಿಗಳ ಕುರಿತು ನಾವು ಆಲೋಚಿಸುವುದೇ ಇಲ್ಲ. ಹಿಂದೆ ಋಷ್ಯಾಶ್ರಮಗಳಲ್ಲಿ ಬಗೆಬಗೆಯ ಬಣ್ಣದ ಹಕ್ಕಿಗಳೂ ಸ್ವಭಾವ ವೈಚಿತ್ರ್ಯವುಳ್ಳ ಮೃಗಗಳೂ ಇದ್ದುದರ ವರ್ಣನೆ ಕೇಳಿದಾಗ ನಮಗೆ ಕುತೂಹಲವಾಗುತ್ತದೆ, ನಿಜ. ಆದರೆ ನಿಜವಾಗಿ ನಮಗೆ ಎಷ್ಟು ಮೃಗಪಕ್ಷಿಗಳ ಪರಿಚಯವಿದೆ? ನಿತ್ಯವೂ ಕಣ್ಣಿಗೆ ಬೀಳುವ ಪಕ್ಷಿಗಳ ಹೆಸರು ನಮಗೆ ತಿಳಿದಿದೆಯೆ? ಕಾಗೆ ಮತ್ತಿತರ ಸಾಮಾನ್ಯ ಪಕ್ಷಿಗಳನ್ನು ಬಿಟ್ಟರೆ ನಮಗೆ ಬೇರೆ ಎಷ್ಟು ಹಕ್ಕಿಗಳ ಗುರುತು ಸಿಗುತ್ತದೆ? ಕಾಡುಪ್ರಾಣಿಗಳಲ್ಲಿಯಾದರೂ ನಮಗೆ ಎಲ್ಲದರ ಗುರುತು ಆಗುವುದು ಕಷ್ಟ. ನಾವು ಈ ವಿಷಯದಲ್ಲಿ ಜ್ಞಾನಸಂಪಾದಿಸಿ ಲಾಭಹೊಂದುವುದೇನು?—ಏನೂ ಇಲ್ಲ ಎಂಬ ಅಸಡ್ಡೆಯೇ ನಮ್ಮನ್ನು ಇಷ್ಟು ಉದಾಸೀನರಾಗಿಯೂ ಜ್ಞಾನಶೂನ್ಯರಾಗಿಯೂ ಮಾಡಿದೆ. ನಾವು ವನ್ಯ ಮೃಗಪಕ್ಷಿ ಸಸ್ಯ ಸಂಪತ್ತುಗಳ ಬಗ್ಗೆ ಹೆಚ್ಚಿನ ತಿಳಿವಳಿಕೆಯನ್ನು ಏಕೆ ಹೊಂದಬೇಕೆಂದು ಮನವರಿಕೆ ಮಾಡಿಕೊಟ್ಟವರು ಕಡಿಮೆ—ನಮ್ಮಲ್ಲಿ ಈ ವಿಷಯದ ಮೇಲೆ ಪುಸ್ತಕಗಳೂ ಲಭ್ಯವಿಲ್ಲ. ಶಿವರಾಮ ಕಾರಂತರ ಕೆಲವು ಕಾದಂಬರಿಗಳು ನಿಸರ್ಗಜೀವನದ ರಮ್ಯ ಚಿತ್ರವನ್ನು ಮುಂದಿಡುತ್ತವೆ; ಆದರೆ ಕನ್ನಡದಲ್ಲಿ ಅವರನ್ನು ಬಿಟ್ಟರೆ ಬೇರೆ ಯಾರೇ ಆಗಲಿ, ನಿಸರ್ಗದ ಸಹಜ ಚೆಲುವಿನ ಕಡೆಗೆ ಗಮನ ಹರಿಯುವಂತೆ ಮಾಡಿದವರಿಲ್ಲ! ವೈಜ್ಞಾನಿಕ ದೃಷ್ಟಿಯಿಂದ ವಿವೇಚಿಸಿ ಬರೆದ ಗ್ರಂಥ ಪ್ರಾಯಶಃ ಒಂದೂ ಇಲ್ಲ! ಬೇಡ, ಇಂಗ್ಲಿಷಿನಲ್ಲಿರುವ 'ಹರಿ, ದಿ ಜಂಗಲ್ ಲ್ಯಾಡ್'' ಎಂಬಂತಹ ಕಥಾನಕವನ್ನೊಳಗೊಂಡ ಗ್ರಂಥವಾದರೂ ಕನ್ನಡದಲ್ಲಿ ಪ್ರಕಟವಾದುದಿದೆಯೆ? ಇಲ್ಲ! ಎಂದ ಮೇಲೆ ಓದು ಬರಹ ತಿಳಿದವರಾದರೂ ವನ್ಯ ಮೃಗಪಕ್ಷಿಸಸ್ಯಗಳ ಬಗ್ಗೆ ತಿಳಿವಳಿಕೆ ಸಂಪಾದಿಸಿಕೊಳ್ಳುವುದು ಕಠಿಣವೇ ಆಗಿದೆ ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೀಗಲ್ಲ —ಅವರು ವಾರದ ರಜಾ ದಿನವನ್ನು "ಪಿಕ್‌ನಿಕ್" (ವನ ಭೋಜನ) ರೂಪದಲ್ಲಿ ವ್ಯಯಿಸುವ ಚತುರರು—ಏನಿಲ್ಲದಿದ್ದರೂ ಊರಿನಲ್ಲಿ ಸುಂದರವಾದ ಉದ್ಯಾನವನ್ನು ನಿರ್ಮಿಸಿ, ಅಲ್ಲಿ ಕಲ್ಲು ಬೆಂಚಿನ ಮೇಲೆಯೋ ಹೂಬಳ್ಳಿಯ ಮಂಟಪದಲ್ಲಿಯೋ ಕುಳಿತು ಸಮಯ ಕಳೆಯುವ ರಸಿಕರು. ಜೀವನವನ್ನು ಸರಸ, ಸುಂದರ, ಹಾಗು ರಸಭರಿತವಾಗಿ ಮಾಡಲು ನಾವು ನಿಸರ್ಗ ಪ್ರಿಯರಾಗುವುದು ಅತ್ಯಂತ ಅಪೇಕ್ಷಣೀಯವೆಂದು ಅವರು ಚೆನ್ನಾಗಿ ಅರಿತುಕೊಂಡಿದ್ದಾರೆ. ನಮ್ಮಲ್ಲಿ ಇಂತಹ ಉಚ್ಚ ಮಟ್ಟದ ವಿಚಾರವು ಇನ್ನೂ ಬೇರೂರಿಲ್ಲ; ಬಲಗೊಂಡಿಲ್ಲ. ಈ ವಿಚಾರಾಂಕುರವುಂಟಾದರೆ, ಆ ಮೇಲೆ ವನ್ಯ ಮೃಗ ಪಕ್ಷಿ ಸಸ್ಯಗಳ ಜೀವನಕ್ಕೂ ಮಾನವ ನಾಗರಿಕತೆಗೂ ನಿಕಟ ಸಂಬಂಧವಿದೆ ಎಂಬ ಸತ್ಯ ಹೊಳೆದೀತು. ಉದಾಹರಣೆಗೆ, ಕಾಡಿನಲ್ಲಿ, ಜಿಂಕೆಗಳನ್ನು ಬೇಟೆಯಾಡಿ ಕೊಂದರೆ, ಹುಲಿ ಚಿರತೆಗಳು ಊರಿನೊಳಗೆ ನುಗ್ಗಿ ಸಾಧು ಪ್ರಾಣಿಗಳಾದ ಎತ್ತು, ದನಗಳನ್ನು ಅಪಹರಿಸಿಕೊಂಡು ಹೋಗಿ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತವೆ! ಕಾಡುಗಳನ್ನು ಕಡಿದು ಬೋಳುಗಿಸಿದರೆ, ಕ್ರೂರ ಪ್ರಾಣಿಗಳ ಸಂತಾನವೂ ನಾಶವಾಗುತ್ತಾ ಹೋಗುತ್ತದೆ. ಎಷ್ಟೋ ಪಶು ಪಕ್ಷಿಗಳು ತಮಗೆ ವಿಶಿಷ್ಟವಾದ ಅದೊಂದು ಬಗೆಯಲ್ಲಿ ವನ್ಯ ಶ್ರೀಯನ್ನು ಹೆಚ್ಚಿಸುತ್ತವೆ: ಕೀಟ ಪ್ರಪಂಚದಿಂದ ಮನುಷ್ಯನಿಗೆ ತಿಳಿದೊ ತಿಳಿಯದೆಯೊ ಆಗುತ್ತಿರುವ ಅನೇಕ ಬಗೆಯ ಉಪಕಾರಗಳಲ್ಲಿ ವನ್ಯ ಮೃಗ ಪಕ್ಷಿಗಳ ಸಹಕಾರ ಅತ್ಯಮೂಲ್ಯವಾದುದಾಗಿದೆ. ಹೀಗೆ ನಾವು ಎಷ್ಟು ಆಳವಾಗಿ ವನ್ಯ ಮೃಗ ಪಕ್ಷಿ ಸಸ್ಯ ಜೀವನವನ್ನು ಅಭ್ಯಸಿಸುತ್ತೇವೊ ಅಷ್ಟೂ ನಮಗೆ ಅವುಗಳ ಮೇಲೆ ಮಮತೆ ಹುಟ್ಟುವುದು ನಿಶ್ಚಯ. ಒಮ್ಮೆ ನಾವು ಸದಭಿಪ್ರಾಯವನ್ನು ಹೊಂದಿದೆವೆಂದರೆ, ಮುಂದೆ ನಮ್ಮದೇ ಆದ ರೀತಿಯಲ್ಲಿ ಜ್ಞಾನ ಸಂವರ್ಧನೆ ಮಾಡಿಕೊಂಡೇವು!

---

## ಗೇಣಿ ನಿರ್ಣಯ ಮಸೂದೆ

### ಜಿಲ್ಲೆಯ ಒಕ್ಕಲುಗಳಿಗೆ "ಬಿಡುಗಡೆಯ ಉಡುಗೊರೆ"

(೫ನೇ ಪುಟದಿಂದ)

ಕಂದಾಯ ಮಂತ್ರಿಗಳು ಇನ್ನೊಂದು ತಿದ್ದುಪಡಿಯನ್ನು ಮಂಡಿಸಿ ಈ ಶಾಸನವು ಇದೇ ಅಕ್ಟೋಬರದ ೧ನೇ ತಾರೀಕಿನಿಂದ ಜ್ಯಾರಿಗೆ ಬರಬೇಕೆಂದು ಸೂಚಿಸಿದರು. ಮೂಲ ಮಸೂದೆಯಲ್ಲಿ ೧೯೫೬ನೇ ಎಪ್ರೀಲಿನ ೧ನೇ ದಿನದಂದು ಈ ಶಾಸನ ಜ್ಯಾರಿಗೆ ಬರುವುದೆಂದು ಹೇಳಲಾಗಿತ್ತು; ಪರಿಶೀಲಕ ಸಮಿತಿಯು ಇದನ್ನು ೧ನೇ ಜುಲಾಯಿ ೧೯೫೬ ಎಂದು ತಿದ್ದಿತು. ಶಾಸನ ಜ್ಯಾರಿಯ ದಿನವನ್ನು ಹಿಂದಿನ ತಾರೀಕಿಗೆ ಕೊಂಡು ಹೋದರೆ ನಾನಾ ಬಗೆಯ ತೊಡಕುಗಳೇಳಬಹುದೆಂಬ ಕಾರಣವನ್ನಿತ್ತು ಮಂತ್ರಿಗಳು ಈ ತಿಂಗಳ ೧ನೇ ತಾರೀಕಿನಿಂದ ಈ ಶಾಸನ ಜ್ಯಾರಿಗೆ ಬಂತೆಂದು ವಿಧಿಸುವುದೇ ಸೂಕ್ತವೆಂದರು.

ಆದರೆ ಅನೇಕ ಸದಸ್ಯರು ತಾರೀಕನ್ನು ಹೀಗೆ ಕೊನೆಯ ಗಳಿಗೆಯಲ್ಲಿ ಬದಲಾಯಿಸಿದರೆ, ದುಷ್ಪರಿಣಾಮವಾಗುವುದು ನಿಶ್ಚಯವೆಂದು ಪ್ರತಿಪಾದಿಸಿದರು. ಕಾರ್ತಿ ಬೆಳೆಯು ಈಗಾಗಲೇ ಅನೇಕ ಕಡೆಗಳಲ್ಲಿ ಕಟಾವಾಗಿದೆ; ಇನ್ನು ಎಷ್ಟೋ ಕಡೆಗಳಲ್ಲಿ ಕಟಾವಾಗುವುದು ಬಾಕಿ ಇದೆ. ಹೀಗಿರುವಾಗ, ಒಂದೇ ಬೆಳೆಯ ವಿಷಯದಲ್ಲಿ ಗೇಣಿಯು ವ್ಯತ್ಯಾಸವಾಗುವುದಕ್ಕೆ ಅವಕಾಶವಿರಕೂಡದು ಎಂದು ಸದಸ್ಯರು ಒತ್ತಾಯಿಸಿದರು.

ಕೊನೆಯಲ್ಲಿ "ಅಕ್ಟೋಬರ ೧ನೇ ತಾರೀಕಿನಿಂದ ಈ ಶಾಸನವು ಜ್ಯಾರಿಗೆ ಬರುವುದು" ಎಂಬ ಮೂಲಸೂತ್ರಕ್ಕೆ "ಸಾಮಾನ್ಯವಾಗಿ ಸಪ್ಟಂಬರ, ೧೯೫೬ನೇ ತಿಂಗಳಲ್ಲಿ ಕಟಾವಾದ ಬೆಳೆಗೆ ಸಹ ಈ ಶಾಸನದ ಪ್ರಕಾರವಿರುವ ಗೇಣಿಯ ನಿಯಮಗಳು ಅನ್ವಯವಾಗಬೇಕು" ಎಂಬ ಹೆಚ್ಚಿನ ವಿವರಣೆಯನ್ನು ಜೋಡಿಸಲಾಯಿತು.

ಯಾವನೇ ಹಿಡುವಳಿದಾರನು ಸ್ವತಃ ತಾನು ಒಕ್ಕಲಾಗಿದ್ದರೆ ಮತ್ತು ತನ್ನ ಭೂಮಿಯನ್ನು ಸಾಗುವಳಿಗಾಗಿ ಬೇರೊಬ್ಬ ಒಕ್ಕಲಿಗೆ ಬಿಟ್ಟುಕೊಟ್ಟಿದ್ದು ಆತನಿಂದ ತಾನು ಪಡೆಯುವ ಗೇಣಿಯು ಈ ಶಾಸನದ ದೆಸೆಯಿಂದಾಗಿ ಕಡಿಮೆಯಾಗುವುದಾದರೆ ತನ್ನ ವಶದಲ್ಲಿರುವ ಭೂಮಿಗೆ ಸಂಬಂಧಿಸಿದ ಗೇಣಿಚೀಟನ್ನು ತಾನು ನಿರ್ದಿಷ್ಟಪಡಿಸಿದ ಒಂದು ದಿನದಂದು ರದ್ದುಗೊಳಿಸಿ ಹಿಡುವಳಿಯನ್ನು ತನ್ನ ಧನಿಗೆ ವಾಪಸುಗೊಳಿಸಲು ಅಧಿಕಾರ ನೀಡುವ ಇನ್ನೊಂದು ಸರಕಾರಿ ತಿದ್ದುಪಡಿಯೂ ಶಾಸನಸಭೆಯಿಂದ ಅಂಗೀಕೃತವಾಯಿತು.

ಮಸೂದೆಯಲ್ಲಿ ಗೇಣಿಯನ್ನು ನಗದಿಯಾಗಿ ಅಥವಾ ಧಾನ್ಯರೂಪದಲ್ಲಿ ಒಕ್ಕಲು ಕೊಡಬಹುದು ಎಂದಿದೆ. ಸರಕಾರದ ಕಡೆಯಿಂದ ಇದಕ್ಕೆ ತಿದ್ದುಪಡಿಯೊಂದನ್ನು ಮಂಡಿಸಲಾಯಿತು. ಏನೆಂದರೆ, "ಬೆಳೆಸಿದ ಬೆಳೆಯು ಭತ್ತವಾದರೆ, ಭೂಮಾಲಿಕನಿಗೆ ತನಗೆ ಸಲ್ಲುವ ಗೇಣಿಯು ಭತ್ತದ ರೂಪದಲ್ಲಿಯೇ ಇರಬೇಕೆಂದು ಒತ್ತಾಯಿಸುವ ಅಧಿಕಾರವಿರುತ್ತದೆ. ಸಾಗುವಳಿದಾರ ಒಕ್ಕಲು ಹೀಗೆ ಭತ್ತರೂಪದಲ್ಲಿ ಗೇಣಿ ಸಲ್ಲಿಸಲು ನಿರಾಕರಿಸಿದರೆ ಭೂಮಾಲಿಕನು ಆ ಗೇಣಿಗೆ ಸಮನಾದಷ್ಟು ಭತ್ತವನ್ನು ಬೇರೆ ಎಲ್ಲಿಂದವಾದರೂ ಕ್ರಯಕ್ಕೆ ಪಡೆದುಕೊಂಡು, ಆ ಕ್ರಯವನ್ನು ತನ್ನ ಒಕ್ಕಲಿನಿಂದ ವಸೂಲು ಪಡೆಯಬಲ್ಲನು." ಆದರೆ ಚರ್ಚೆಯ ಕೊನೆಯಲ್ಲಿ ಈ ತಿದ್ದುಪಡಿಯ ಉತ್ತರಾರ್ಧವನ್ನು, ಅಂದರೆ, ಒಕ್ಕಲು ಭತ್ತರೂಪದಲ್ಲಿ ಗೇಣಿಯನ್ನು ಧನಿಯು ಅಪೇಕ್ಷಿಸಿದಾಗಲೂ ಸಲ್ಲಿಸದಿದ್ದರೆ ಧನಿಯು ಗೇಣಿಗೆ ಸಮನಾದ ಭತ್ತವನ್ನು ಬೇರೆ ಕಡೆಯಿಂದ ಕ್ರಯಕ್ಕೆ ಪಡೆದು ಆ ಹಣವನ್ನು ಒಕ್ಕಲಿನಿಂದ ವಸೂಲು ಪಡೆಯಬಹುದೆಂಬುದನ್ನು, ಬಿಟ್ಟು ಬಿಡಲಾಯಿತು.

ಒಂದುಸಲ ನಿರ್ಧರಿಸಿದ ಗೇಣಿಯನ್ನು ಐದು ವರ್ಷಗಳ ವರೆಗೆ ಬದಲಾಯಿಸಬಾರದು ಎಂಬ ಮಸೂದೆಯ ಸೂತ್ರವನ್ನು ಕೆಲವರು ವಿರೋಧಿಸಿದರು. ಉತ್ಪತ್ತಿಯು ಪ್ರತಿಯೊಂದು ಬೆಳೆಗೆ ವ್ಯತ್ಯಾಸವಾಗುತ್ತಾ ಹೋಗುತ್ತದೆ ಎಂದು ಸದಸ್ಯರು ಇದಕ್ಕೆ ಕಾರಣವನ್ನಿತ್ತರು. ಮಂತ್ರಿಗಳು ಇದಕ್ಕೆ ಸಮಾಧಾನವನ್ನು ಕೊಡುತ್ತಾ ಗೇಣಿ ನಿರ್ಣಯವು ಅಸಮರ್ಪಕವಾದುದಾಗಿದೆ ಎನ್ನುವವರು ನ್ಯಾಯಾಲಯಗಳಿಗೆ ಹೋಗಬಹುದಾದುದರಿಂದ ಸ್ವಲ್ಪ ದೀರ್ಘ ಅವಧಿಯನ್ನು ಕೊಡುವುದು ಇಷ್ಟವೆಂದೂ ಈಗ ಸಹ ಅನೇಕರು ಒಮ್ಮೆ ನಿರ್ದಿಷ್ಟಪಡಿಸಿದ ಗೇಣಿಯು ಹತ್ತು ವರ್ಷಗಳ ವರೆಗಾದರೂ ಬದಲಾಗಬಾರದೆಂದು ಅಪೇಕ್ಷಿಸುವ ಜನರಿದ್ದಾರೆಂದೂ ತಿಳಿಸಿದರು. ಗೇಣಿ ನಿರ್ಣಯ ತಂಟೆಗಳನ್ನು ಹೈಕೋರ್ಟಿಗೆ ಸಹ ತೆಗೆದುಕೊಂಡು ಹೋಗಿ, ಅದರ ತೀರ್ಮಾನಕ್ಕೆ ಬಿಡಬಹುದು ಎಂಬ ಹೊಸ ಸೂತ್ರವನ್ನು ಚರ್ಚೆಯ ಕಾಲದಲ್ಲಿ ಸೇರಿಸಲಾಯಿತು.

ಉಡುಪಿಯ ಶ್ರೀ ಟಿ. ಅನಂತ ಪೈಗಳು ಮಸೂದೆಯ ವಿಷಯದಲ್ಲಿ ಮಾತನಾಡುತ್ತಾ ನಮ್ಮ ಜಿಲ್ಲೆಯಲ್ಲಿ ಸರಕಾರವು ಭೂಮಿಯ ಸರ್ವೇಯನ್ನು ಹೊಸದಾಗಿ ನಡೆಸಬೇಕಾಗಿದೆ ಎಂದರು. ಕರಾವಳಿಯ ನೆಲಕ್ಕೂ ಘಟ್ಟದ ಬದಿಯದಕ್ಕೂ ಫಲವತ್ತತೆಯಲ್ಲಿ ತುಂಬ ವ್ಯತ್ಯಾಸವಿರುವುದರ ಕಡೆಗೆ ಅವರು ಗಮನವನ್ನು ಸೆಳೆದರು. ಗೇಣಿಯನ್ನು ಸುಲಭದಲ್ಲಿ ತೀರ್ಮಾನಿಸುವ ವ್ಯವಸ್ಥೆಯಾಗದಿದ್ದರೆ ನ್ಯಾಯಸ್ಥಾನಗಳಲ್ಲಿ ಹೊಯ್ದಾಡುವ ಪ್ರಸಂಗವೇ ಬರುತ್ತದೆ ಎಂದವರು ಎಚ್ಚರಿಸಿದರು. ತನ್ನ ಭೂಮಿಯನ್ನು ಸ್ವತಃ ನೀರಿನ ಸಂಪನ್ನಟ್ಟು ಅಥವಾ ಇತರ ವಿಧಾನದಿಂದ ಸುಧಾರಿಸಿದ ಒಕ್ಕಲಿನ ಪಾಲಿನ ಗೇಣಿಯು ತಗ್ಗಬೇಕೆಂದೂ ಅವರು ಅಪೇಕ್ಷಿಸಿದರು.

ಕಂದಾಯ ಮಂತ್ರಿಗಳು ಕೊನೆಯ ಉತ್ತರವನ್ನು ಕೊಡುತ್ತಾ ಒಣಭೂಮಿಯಲ್ಲಿ ಧಾನ್ಯ ಮುಂತಾದ ನಡುಬೆಳೆಗಳು ಹೆಚ್ಚಿನ ಶ್ರಮವಿಲ್ಲದೆ ಆಗುತ್ತಿರುವುದರಿಂದ

# ಪ್ರಜಾಪ್ರಭುತ್ವದಲ್ಲಿ ದಂಡ ಪ್ರಯೋಗ ಸಲ್ಲದು

## ಕಲ್ಲೆಸೆತ ಇತ್ಯಾದಿ ನಿಷಿದ್ಧ ಕ್ರಮಗಳು ನಿಂದ್ಯ

ಗುಜರಾತಿನಲ್ಲಿ ಈ ವಾರ ಪ್ರವಾಸ ಕೈಗೊಂಡಿರುವ ಪ್ರಧಾನಿ ನೆಹರುಗಳು ತಮ್ಮ ಭಾಷಣಗಳಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಸ್ವೀಕರಿಸಿದ ಭಾರತೀಯರು ತಮ್ಮ ಇಚ್ಛೆಯನ್ನು ಸಾಧಿಸಿಕೊಳ್ಳುವುದಕ್ಕಾಗಿ ದಂಡ ಪ್ರಯೋಗದಂತಹ ನಿಷಿದ್ಧ ಮಾರ್ಗವನ್ನು ಅವಲಂಬಿಸಬಾರದೆಂದು ಪುನರುಚ್ಚರಿಸಿದ್ದಾರೆ. ನಮ್ಮನ್ನು ನಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತಿದ್ದರೂ ಅಲ್ಲಲ್ಲಿ ನಡೆಯುವ ಪುಂಡಾಟಿಕೆ ಮತ್ತು ಅನಾಗರಿಕ ವರ್ತನೆಗಳ ಮೇಲಿಂದ 'ಜಂಗ್ಲಿಗಳು' ಎಂಬ ಆರೋಪಕ್ಕೆ ಗುರಿಯಾಗುವ ಪ್ರಮೇಯ ಉಂಟಾಗಿದೆ ಎಂದು ನೆಹರು ನುಡಿದಿದ್ದಾರೆ.

### ಹಿಂಸಾಚರಣೆಯ ಖಂಡನೆ

ಅವರು ಕಮ್ಯುನಿಸ್ಟರ ವರ್ತನೆಯನ್ನು ಸಹ ಬಲವಾಗಿ ಆಕ್ಷೇಪಿಸಿದ್ದಾರೆ. ಕಮ್ಯುನಿಸ್ಟರಲ್ಲಿ ಒಳ್ಳೆಯವರಿಲ್ಲವೆಂದು ನಾನು ಹೇಳುವುದಿಲ್ಲ; ಆದರೆ, ಅವರು ವಿಚಾರ ಶಕ್ತಿಯನ್ನು . ವಿನಿಯೋಗಿಸುವುದಕ್ಕಿಂತಲೂ ದೈಹಿಕ ಶಕ್ತಿಯ ಪ್ರಯೋಗದಿಂದಲೇ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವಂತಿದೆ. ಜನಾಭಿಪ್ರಾಯದ ಸಮರ್ಥ ಮಂಡನೆಗೆ ತರ್ಕ ಮತ್ತು ವಾದವನ್ನು ಉಪಯೋಗಿಸುವ ಬದಲಿಗೆ, ಕಲ್ಲುಗಳನ್ನು ಎಸೆಯುವುದು, ಬೊಬ್ಬೆ ಹಾಕಿ ಮೆರವಣಿಗೆ ತೆಗೆಯುವುದು ಮತ್ತು ವಿನಾಶಕಾರಿ ಕೃತ್ಯಗಳಲ್ಲಿ ಮಗ್ನರಾಗುವುದು ಕಮ್ಯುನಿಸ್ಟರ ಕಾರ್ಯ ವಿಧಾನವಾಗಿದೆ. ಇದು ಖಂಡನೀಯವೆಂದರು ನೆಹರು.

### ಗಾಂಧೀ ಜಯಂತಿ

ಈ ಸಲದ ಗಾಂಧಿ ಜಯಂತಿಯನ್ನು

---

ಗೇಣಿಯನ್ನು ಕಾಲಂಶದಿಂದ ಮೂರರಲ್ಲಿ ಒಂದಂಶಕ್ಕೆ ಏರಿಸಿದುದು ನ್ಯಾಯವಾಗಿದೆ ಎಂದರು. ಸರಕಾರವು ಕೇವಲ ಒಕ್ಕಲುಗಳ ಹಿತವನ್ನಷ್ಟೆ ನೋಡಿಕೊಂಡಿರಲಾರದು; ಒಕ್ಕಲುಗಳಷ್ಟು ಚೆನ್ನಾದ ಸ್ಥಿತಿಯಲ್ಲಿಲ್ಲದ ಧನಿಗಳು ಸಹ ಇದ್ದಾರೆ; ಅವರಿಗೂ ಸಂರಕ್ಷಣೆ ಸಿಗಬೇಕು. ಸರಕಾರದ ಧ್ಯೇಯವು ಉಳುವವನನ್ನು ಹೊಲದೊಡೆಯನಾಗಿಯೂ ಹೊಲದೊಡೆಯನನ್ನು ಉಳುವವನನ್ನಾಗಿಯೂ ಮಾಡುವುದಾಗಿದೆ. ಎಂದರೆ ಉಳುಮೆಯ ಕೆಲಸವೂ ಹೊಲದೊಡೆತನದ ಅನುಭವವೂ ಏಕಕಾಲದಲ್ಲಿ ಕೃಷಿ ಕ್ಷೇತ್ರದ ಎಲ್ಲರ ಪಾಲಿಗೆ ಬರಬೇಕು. ಇನ್ನು ಮುಂದಿನ ಹೆಜ್ಜೆಯು ಈ ಉದ್ದೇಶದಿಂದ ಕೂಡಿರುತ್ತದೆ ಎಂದು ಮಂತ್ರಿಗಳು ಚರ್ಚೆಯನ್ನು ಮುಗಿಸಿದರು. ಸಭೆ ಮಸೂದೆಯನ್ನು ಅಂಗೀಕರಿಸಿತು.

ಮಸೂದೆಯು ಶಾಸನಾಂಗದ ಮೇಲ್ಮನೆಯಲ್ಲಿ ಚರ್ಚೆಗೆ ಬಂದಾಗಲೂ ಸ್ವಾರಸ್ಯವಾದ ವಾದ ವಿವಾದ ನಡೆಯಿತು. ಮಂತ್ರಿಗಳು ಎಲ್ಲ ಆಕ್ಷೇಪಗಳಿಗೂ ಸಮಾಧಾನಕರವಾದ ಉತ್ತರವಿತ್ತರು. ಮಸೂದೆಯು ಅಲ್ಲಿಯೂ ಅಂಗೀಕಾರವಾಯಿತು.

[ಪರಿಶೀಲಕ ಸಮಿತಿಯಿಂದ ಹೊರಬಿದ್ದ ರೂಪದಲ್ಲಿ ಮಸೂದೆಯು ಹೇಗಿತ್ತೆಂಬುದನ್ನು 'ನವಯುಗ'ದ ತಾ. ೯-೮-೧೯೫೬ನೇ ಸಂಚಿಕೆಯಲ್ಲಿ ವಿವರಿಸಿದ್ದೇವೆ]

# ಉಡುಪಿ ವಾರ್ತೆ

**ದ್ವಿ. ಪಂ. ವಾ. ಯೋಜನಾ ಪ್ರಚಾರ ಸಪ್ತಾಹ**—ವನ್ನು ಕಳೆದ ತಾ. ೩೦ರಲ್ಲಿ ಬೆಳಿಗ್ಗೆ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸೂರ್ಯನಾರಾಯಣ ರಾಯರು ವಸ್ತು ಪ್ರದರ್ಶನ ಉದ್ಘಾಟನಾ ಮುಖೇನ ಪ್ರಾರಂಭಿಸಿದರು. ಸಮಾರಂಭವು ಮುನಿಸಿಪಲ್ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡೆಪ್ಯುಟಿ ತಹಶೀಲ್ದಾರ್ ಶ್ರೀ ಸೋಜರು ಮುಖ್ಯ ಅತಿಥಿಗಳು ಆಸನಾರೂಢರಾಗುವಂತೆ ವಿನಂತಿಸಿದರು. ಶ್ರೀ ಎ. ಜೆ. ಅಳ್ವೆಯವರು ಸ್ವಾಗತಮಾತುಗಳನ್ನಾಡಿ ಸಪ್ತಾಹದ ಆವಶ್ಯಕತೆಯನ್ನು ವಿವರಿಸಿದರು. ಡಾ. ಟಿ. ಎಮ್. ಎ. ಪೈ ಶ್ರೀಗಳವರ ಶು. ಶಿ. ಹರಿದಾಸ ಭಟ್, ಮತ್ತು ಶೀನ ಸೆಟ್ಟರು ಮಾತನಾಡಿ ಯೋಜನೆಗೆ ಜನತಾ ಸಹಕಾರ ಸಿಗಲೆಂದೂ ಯೋಜನೆಗೆ ಜಯಶೀಲವಾಗಿ ಸಮೃದ್ಧಿಯಾಗಲೆಂದೂ ಹೇಳಿದರು. ಜನತೆಯ ಸಹಕಾರವನ್ನು ಕೇಳಿ ಸಭಾಧ್ಯಕ್ಷರು ಮಾತನಾಡಿದರು. ಸಂಜೆ ಭಾಷಣ ಸ್ಪರ್ಧೆ, ವ್ಯಾಯಾಮ ಪ್ರದರ್ಶನ, ನಾಟಕ ಇತ್ಯಾದಿ ಕಾರ್ಯಕ್ರಮಗಳಿದ್ದುವು.

---

ಅನೇಕ ಬಗೆಯ ವಿಧಾಯಕ ಕಾರ್ಯಕ್ರಮಗಳಿಂದ ಆಚರಿಸಲಾಯಿತು. ಭೂದಾನ, ಕೈದಿಗಳ ಬಿಡುಗಡೆ, ಸೂತ್ರಯಜ್ಞ ಇತ್ಯಾದಿ ಚಟುವಟಿಕೆಗಳು ರಾಷ್ಟ್ರದಾದ್ಯಂತ ನಡೆದವು. ಆಕಾಶವಾಣಿಗಳಲ್ಲಿ ವಿಶೇಷ ಕಾರ್ಯಕ್ರಮಗಳ ಪ್ರಸಾರವಾಯಿತು. ಮಹಾತ್ಮಾ ಗಾಂಧೀಜಿಯವರಿಗೆ ಅನೇಕ ಧುರೀಣರು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ದಿವ್ಯ ಸಂದೇಶವನ್ನು ನೆನಸಿಟ್ಟುಕೊಂಡು ಸಾಗಬೇಕೆಂಬ ಪ್ರತಿಜ್ಞೆ ಸ್ವೀಕರಿಸಲು ಜನರನ್ನು ವಿನಂತಿಕೊಂಡರು.

### ಸಾಹಿತ್ಯ ಕೃತಿಗೆ ಪ್ರೋತ್ಸಾಹ

ಕೇಂದ್ರ ಸರಕಾರದವರು ಸುಲಭಸಾಹಿತ್ಯ ಕೃತಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕೆಲವು ವರ್ಷಗಳಿಂದೀಚೆಗೆ ಬಹುಮಾನಗಳನ್ನು ಕೊಡುತ್ತಾ ಬಂದಿದ್ದಾರೆ. ಈ ಸಲ ಮಲ್ಕಿಯಲ್ಲಿ ಸರಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿರುವ ಉಡುಪಿಯ ಶ್ರೀ ಕೆ. ವಿಟ್ಠಲ ಶೆಣೈಯವರ "ಸಕ್ಕರೆ" ಎಂಬ ಪುಸ್ತಕಕ್ಕೂ ದೆಹಲಿಯಲ್ಲಿ ಭಾರತೀಯ ವಿಮಾನದಳದ ಹುದ್ದೆಯೊಂದರಲ್ಲಿರುವ ಉಡುಪಿಯವರೇ ಆದ ಶ್ರೀ ಯು. ರಾಘವೇಂದ್ರ ಆಚಾರ್ಯರ "ಜನತಾ ವಿಜ್ಞಾನ" ಎಂಬ ಪುಸ್ತಕಕ್ಕೂ ೫೦೦ ರೂಪಾಯಿಗಳ ಬಹುಮಾನ ದೊರಕಿದೆ. ಕನ್ನಡದಲ್ಲಿ ಬರೆದ ಬೇರೆ ಕೆಲವು ಪುಸ್ತಕಗಳಿಗೂ ಪುರಸ್ಕಾರವು ಸಿಕ್ಕಿದೆ.

### ವಿದಾಯ ಅಧಿವೇಶನ

ಮದ್ರಾಸಿನ ಶಾಸನಾಂಗವು ಅಕ್ಟೋಬರ ತಿಂಗಳ ೩೧ನೇ ದಿನಾಂಕ ಪುನಃ ಸೇರಲಿದೆ. ನವಂಬರದ ೧ನೇ ತಾರೀಕಿನಿಂದ ಹೊಸ ರಾಜ್ಯಗಳು ರೂಪುಗೊಳ್ಳಲಿದ್ದು ಮಲಬಾರು ಮತ್ತು ದಕ್ಷಿಣಕನ್ನಡದ ಪ್ರತಿನಿಧಿಗಳು ಮುಂದೆ ಮದ್ರಾಸಿನ ಶಾಸನಾಂಗದಿಂದ ಬೇರ್ಪಡುವವರಾದ ಕಾರಣ ಈ ಜಿಲ್ಲೆಗಳ ಪ್ರತಿನಿಧಿಗಳನ್ನು ಬೀಳ್ಕೊಡುವುದೇ ಈ ಅಧಿವೇಶನದ ಮುಂದಿನ ಮುಖ್ಯ ಕಾರ್ಯಕ್ರಮ.

### ಮೈಸೂರಿನ ರಾಜ್ಯಪಾಲರು

ಮೈಸೂರು ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸುಗಳನ್ನು ಒಂದುಗೂಡಿಸುವ ಕೆಲಸ ಇಷ್ಟರಲ್ಲೇ ನಡೆಯಲಿದೆ. ನೂತನ ಮೈಸೂರು ರಾಜ್ಯಕ್ಕೆ ಈಗಿನ ಮೈಸೂರಿನ ರಾಜಪ್ರಮುಖರೇ ರಾಜ್ಯಪಾಲರಾಗುವರೆಂಬ ವದಂತಿ ದಟ್ಟವಾಗಿ ಹಬ್ಬಿದೆ. ಮುಖ್ಯ ಮಂತ್ರಿ ಸ್ಥಾನವು ಯಾರಿಗೆ ದೊರೆದೀತೋ—ಇನ್ನೂ ಖಚಿತವಾಗಿಲ್ಲ.

---

**ಪತ್ರಿಕಾ ಸಭೆ**— ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ತಾ. ೧ರಲ್ಲಿ ಸ್ಥಳೀಯ ಪತ್ರಿಕೋದ್ಯಮಿಗಳನ್ನು ಬರಮಾಡಿಸಿಕೊಂಡು ಶ್ರೀ ಪುತ್ತಿಗೆ ಹಿರಿಯ ಸ್ವಾಮಿಗಳವರ ಶತಮಾನೋತ್ಸವದ ನೆನಪಿಗಾಗಿ ಕಟ್ಟಿಸಲಿರುವ ಬೆಳ್ಳಿರಥದ ಕುರಿತು ಸೂಚಿಸುತ್ತಿದ್ದರು. ಸಾಧಾರಣ ಮುಕ್ಕಾಲು ಲಕ್ಷ ರೂಪಾಯಿ ಇನ್ನೂ ಬೇಕಾಗಿರುವುದರಿಂದ ಆಸ್ತಿಕ ಜನತೆಯು ಉದಾರ ಮನಸ್ಸಿನಿಂದ ಧನಸಹಾಯವಲ್ಲದೆ ಬೆಳ್ಳಿ ಸಹಾಯವನ್ನಿತ್ತು ಬೆಳ್ಳಿ ರಥ ನಿರ್ಮಾಣಗೊಂಡು ಶ್ರೀ ಕೃಷ್ಣನ ಹಾಗೂ ಶ್ರೀ ಗುರುಗಳವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ತಮ್ಮ ಆಶಯವಿರುವುದಾಗಿ ತಿಳಿಸಿದರು.

**ಯೂತ್ ಕಾಂಗ್ರೆಸ್ ಸಭೆಯಲ್ಲಿ**— ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಅವರು ಮಾತನಾಡುತ್ತಾ, ಹೊಸ ಮೈಸೂರು ರಾಜ್ಯದಲ್ಲಿ ನಾಲ್ಕು ವಿಭಾಗಗಳನ್ನು ಮಾಡುವ ಸೂಚನೆಗೆ ಯಾವ ಉದ್ದೇಶವನ್ನು ಬೇಕಾದರೂ ಇಟ್ಟುಕೊಂಡಿರಲಿ, ಇದರಿಂದ ಮೈಸೂರು ಮತ್ತು ಮೈಸೂರೇತರರು ಎಂಬ ಇಂದಿನ ದುರ್ಭಾವನೆ ನಿರಂತರ ಉಳಿಯುವಂತೆ ಮಾಡುವುದಕ್ಕೆ ಈ ವಿಭಾಗ ಪದ್ಧತಿ ಅನುಕೂಲವಾಗುವುದು. ನವ ಮೈಸೂರು ರಾಜ್ಯದ ಎಲ್ಲಾ ಪ್ರಜೆಗಳ ಆದ್ಯಕರ್ತವ್ಯವೆಂದರೆ ಈ 'ನಾವು-ಅವರು' ಎಂಬ ಭಾವನೆಯನ್ನು ನಿರ್ಮೂಲಗೊಳಿಸಿ, ಐಕ್ಯ ಭಾವನೆಯನ್ನುಂಟುಮಾಡಲು ಯತ್ನಿಸುವುದೇ ಆಗಿದೆ ಎಂದರು.

**ಶ್ರೀ ಕೆ. ಜೆ. ಬಲ್ಲಾಳರ ನಿಧನದ ಕುರಿತು**— ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಂತಾಪಸೂಚಕ ಸಭೆಯು ಕಳೆದ ತಾ. ೨೭ರಲ್ಲಿ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು, ದಿವಂಗತರು ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮಗಳಲ್ಲಿ ಹೇಗೆ ದುಡಿದಿರುವರೆಂಬುದನ್ನೂ ಅವರ ಕಾರ್ಯದಕ್ಷತೆಯನ್ನು ವಿವರಿಸಿದರು. ಬಳಿಕ ಶ್ರೀಗಳಾದ ಕೆ. ಹೊನ್ನಯ್ಯ ಶೆಟ್ಟಿ, ಎ. ಜೆ. ಆಳ್ವೆಯವರು ಶ್ರೀ ಬಲ್ಲಾಳರ ನಿಧನವು ಜನತೆಗೆ ತುಂಬಿಬಾರದ ನಷ್ಟವೆಂದರು. ನಂತರ ಸಂತಾಪಸೂಚಕ ನಿರ್ಣಯವು ಅಧ್ಯಕ್ಷರಿಂದ ಮಂಡಿಸಲ್ಪಟ್ಟು ಮೌನ ಪ್ರಾರ್ಥನೆಯೊಂದಿಗೆ ಸ್ವೀಕರಿಸಲಾಯಿತು.

**ತಹಶೀಲ್ದಾರರ ಪ್ರಕಟಣೆ**— ಎರಡನೆಯ ಜಾಗತಿಕ ಯುದ್ಧದಲ್ಲಿ ದುಡಿದು ಬಹುಮಾನಗಳನ್ನು ಪಡೆಯಲು ಅರ್ಹರಾದ ಹಲವಾರು ಮಾಜಿ ಸೈನಿಕರಿಗೆ ಇನ್ನೂ ಸದ್ರಿ ಬಹುಮಾನಗಳು ವಿತರಣೆಯಾಗದೆ ಬಾಕಿ ಉಳಿದಿವೆ ಎಂದು ತಿಳಿದು ಬಂದಿರುತ್ತದೆ—ಆದುದರಿಂದ ಸದ್ರಿ ಬಹುಮಾನಗಳನ್ನು ಪಡೆಯುವರೆ ಅರ್ಹತೆಯುಳ್ಳ ಮಾಜಿ ಸೈನಿಕರು ಯಾ ಅವರ ನ್ಯಾಯವಾದ ಉತ್ತರಾಧಿಕಾರಿಗಳು ಸದ್ರಿ ಬಹುಮಾನಗಳನ್ನು ಭಾರತೀಯ ಸೈನಿಕರ ಬೋರ್ಡಿಗೆ (Indian Sailors Soldiers and Airmens Board New Delhi) ಬರೆದು ತರಿಸಿಕೊಳ್ಳಬಹುದು.

**ಯೂನಿಯನ್ ಸ್ಥಾಪನೆ**— ಮಂಗಳೂರು ಕೆನರಾ ಮೋಟರ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಶಾಖೆಯೊಂದು ತಾ. ೨೭ರಲ್ಲಿ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟಿತು. ಶ್ರೀ ಎಮ್. ಸುಂದರನವರು ಸಭಾಧ್ಯಕ್ಷತೆವಹಿಸಿದ್ದರು. ಜಿಲ್ಲಾ ಯೂನಿಯನ್ ಕಾರ್ಯದರ್ಶಿ ಶ್ರೀ ಸಿ. ಗೋವಿಂದನವರು ಕೆಲಸಗಾರರ ಸಂಘಟನೆ ಕುರಿತು ಮಾತನಾಡಿದರು. ಶ್ರೀ ವಿ ಶ್ರೀನಿವಾಸ ಸೆಟ್ಟರು ಯೂನಿಯನ್ ಆವಶ್ಯಕತೆ ಕುರಿತು ಮಾತನಾಡಿದರು. ಯೂನಿಯನ್ ಕಾರ್ಯಕಾರೀ ಅಧಿಕಾರಿಗಳಾಗಿ ಶ್ರೀಗಳಾದ ಎಮ್. ಸುಂದರ, ಅಧ್ಯಕ್ಷ; ಎಮ್. ಅಣ್ಣಪ್ಪ, ಉಪಾಧ್ಯಕ್ಷ; ಸಂಜೀವ ಜೋಸೆಫ್ ಮತ್ತು ಮುದ್ದಯ್ಯ ಸೋನ್ಸ್, ಕಾರ್ಯದರ್ಶಿಗಳು; ಬಿ. ಎಸ್. ಲೂವಿಸ್, ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

**ವಿದಾಯ ಸತ್ಕಾರ**— ಉಡುಪಿಯ ಮುನಿಸಿಪಲ್ ಕಮಿಶನರ್ ಶ್ರೀ ಯು. ವಿ. ಕೆ. ನಂದೀಶನರವರು ಮದ್ರಾಸಿಗೆ ವರ್ಗಾಯಿಸಲ್ಪಟ್ಟದ್ದರಿಂದ ಅವರಿಗೆ ನಗರಸಭಾಪತಿ ಶ್ರೀ ಕೆ. ಕೆ. ಪೈಗಳು ವಿದಾಯಸತ್ಕಾರವಿತ್ತು ಗೌರವಿಸಿದರು. ಹೊಸ ಕಮಿಶನರ್ ಶ್ರೀ ಎ. ಎಸ್. ಡಿ'ಸೋಜ, ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಮೊದಲಾದವರು ಹಾಜರಿದ್ದರು.

**ಗಾಂಧೀ ಜಯಂತಿಯು**— ತಾ. ೨ರಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಬೆಳಿಗ್ಗೆ ನಗರ ಸ್ವಚ್ಛತೆ, ಸಂಜೆ ಸೂತ್ರ ಯಜ್ಞಾದಿ ಕಾರ್ಯಕ್ರಮಗಳೊಡನೆ ಯಥಾಸಾಂಗವಾಗಿ ಆಚರಿಸಲ್ಪಟ್ಟಿತು. ರಥಬೀದಿಯಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಎ. ಜೆ. ಆಳ್ವೆಯವರ ಸ್ವಾಗತ, ಬನ್ನಂಜೆ ರಾಮಾಚಾರ್ಯರಿಂದ ಪರಿಚಯ ಕೊಡಗಿನ ಶ್ರೀ ಎಂ. ಎಸ್. ಅನಂತಪದ್ಮನಾಭ ರಾಯರ ಕವಿತಾವಾಚನವಾದ ಮೇಲೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪಂಡಿತರತ್ನ, ಬಿ. ಶಿವಮೂರ್ತಿ ಶಾಸ್ತ್ರಿ, ಶ್ರೀ ದೇವುಡು, ನರಸಿಂಹ ಶಾಸ್ತ್ರಿಗಳು ಗಾಂಧೀಜಿಯವರ ಜೀವಾಳದ ಕುರಿತು ಮಾತನಾಡಿ ಅವರ ತತ್ವಗಳನ್ನು ಆಚರಿಸುವುದರಿಂದಲೇ ಜೀವನ ಸಾರ್ಥಕವೆಂದರು. ಅಧ್ಯಕ್ಷರ ಭಾಷಣ, ಶ್ರೀ ದಾಂತಿಯವರ ಧನ್ಯವಾದಗಳೊಡನೆ ಸಭಾಂತ್ಯವಾಯಿತು.

**ದಿ. ಕವಿಭೂಷಣ ವೆಂಕಪ್ಪ ಶೆಟ್ಟರ**— ಕುರಿತು ಶ್ರೀಗಳಾದ ಎ. ರಾಮಣ್ಣ ಶೆಟ್ಟಿ, ಧರ್ಮಸ್ಥಳ, ನೆಕ್ಕಾರಜೆ ಜಗನ್ನಾಥ ಶೆಟ್ಟಿ, ವಿದ್ವಾನ್, ಶಾಸ್ತ್ರರಗೋಡು ಇವರಿಂದ ಬೇರೆ ಬೇರೆ ಲೇಖನಗಳು ಬಂದಿವೆ. ಮೊದಲನೆಯವರ ಲೇಖನದ ಸಾರಾಂಶವನ್ನು ಬರುವ ವಾರ ಪ್ರಕಟಿಸಲಾಗುವುದು. ಎರಡನೆಯವರ ಲೇಖನವು ಈಗಾಗಲೇ ಬೇರೆ ಪತ್ರಿಕೆಯಲ್ಲಿ ಬಂದಿರುವುದರಿಂದ ನಾವು ಪುನಃ ಪ್ರಕಟಿಸುವ ಆವಶ್ಯಕತೆಯಿಲ್ಲ. ಸಂ. ನ.

## ಲೇಖಕರೊಡನೆ—

**"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.**

**—ಸಂ. ನ.**

## ಚಂದಾದಾರರಲ್ಲಿ ವಿನಂತಿ

'ನವಯುಗ'ದ ೩೫ನೆಯ ಸಂಪುಟವು ಇದೇ ಆಗಸ್ಟು ಅಂತ್ಯಕ್ಕೆ ಮುಗಿದು ಸೆಪ್ಟಂಬರದಿಂದ ೩೬ನೇ ವರ್ಷವು ಆರಂಭವಾಗಿರುತ್ತದಷ್ಟೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನು ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಮಾಡಿದರೆ ೧೧ ಆಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ಬಿನ್ನಹ. ಇಲ್ಲವೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವುದೇ ಶಾಖೆಯಲ್ಲಿ ಯಾವದೊಂದೂ ಖರ್ಚಿಲ್ಲದೆ 'ನವಯುಗ'ದ ಖಾತೆಗೆ ಕಟ್ಟಬಹುದು. ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ಸಂಚಿಕೆಯನ್ನು ಉಪಾಯವಿಲ್ಲದೆ ವಿ. ಪಿ. ಮಾಡುತ್ತೇವೆ.

**ಮೆನೇಜರ್.**

## ಸ್ವೀಕಾರ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ಪ.)

**ಸಿಂಗರದ ಉಂಗುರ—**

ಪತ್ತೆದಾರಿ ಕಾದಂಬರಿ, ಬೆಲೆ: 0-10-0
ಬರೆದವರು ಮತ್ತು ಪ್ರಕಾಶಕರು- ಕೇರಿಕಾಡು ಮಾಸ್ತರ್ ವಿಷ್ಣು ಭಟ್ಟ, ಬನಾರಿ, ದೇಲಂಪಾಡಿ.

**ಶಿವಲೀಲೆ —**

ಮಿಶ್ರಛಂದ ಕಾವ್ಯ. ಬೆಲೆ: 1-8-0
ಬರೆದವರು ಅ. ಗೌ. ಕಿ. ಪ್ರಕಾಶಕರು- ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ.

**ಶ್ರೀ ರಾಘವೇಂದ್ರ ಭಜನಮಾಲಿಕಾ**

ಬೆಲೆ ರೂ ೦—೩—೦
ಸಂಗ್ರಾಹಕರು ಮತ್ತು ಪ್ರಕಾಶಕರು —ಹಂಡೆ ಗುರುವೇದವ್ಯಾಸದಾಸರು.

**ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ**

(ಸಂಶೋಧನ ಲೇಖನಗಳು)
ಬೆಲೆ ರೂ ೦—೮—೦
ಬರೆದವರು- ಶ್ರೀ ಬಿ. ವಿ. ಶ್ರೀನಿವಾಸ ರಾವ್, ಎಂ. ಎ ಪ್ರಕಾಶಕರು- ಡಾ। ಎಸ್.ಎಂ.ಹುಣಶಾಳ. ಮುಖ್ಯಾಧ್ಯಾಪಕರು ಹರ್ಡೇಕರ್ ಹೈಸ್ಕೂಲು- ರಾಯಚೂರು.

**ನವೀನ ಶಿಕ್ಷಕ**

(ವಿದ್ಯಾಭಿವೃದ್ಧಿಗೆ ಪೋಷಕವಾದ ಕೊಡಗು ಸರಕಾರದ ಮಾಸಪತ್ರಿಕೆಯ ಪ್ರಥಮ ಸಂಪುಟದ ೨ನೇ ಸಂಚಿಕೆ)
(ವಿಮರ್ಶೆ ಯಥಾವಕಾಶವಾಗಿ)

### ಪ್ರಕಟಣೆ

ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ದಶಾವತಾರ ಮೇಳವನ್ನು 1956-57ನೇ ಇಸವಿಗೆ ನಡೆಸತಕ್ಕ ಹಕ್ಕನ್ನು ಮದ್ರಾಸ್ ಕಮಿಶನರ ಹುಕುಮಿಗೆ ಒಳಪಟ್ಟು ಸ್ಥಿರಪಡಿಸುವರೆ ತಾ. 11-10-56 ನೇ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಪಬ್ಲಿಕ್ ಏಲಂ ಕರೆಯಲಾಗುವದು. ಕಾಯಸುಳ್ಳವರು ಸದ್ರಿ ಸಮಯ ಹಾಜರಾಗಿ ಮೇಳವನ್ನು ಪಡಕೊಳ್ಳಬಹುದು. ಏಲಂ ಶರ್ತವನ್ನು ದೇವಸ್ಥಾನದ ಆಫೀಸಿನಲ್ಲಿ ಏಲಂಗೆ ಮುಂಚಿತವಾಗಿ ತಿಳಿಯಕೊಳ್ಳತಕ್ಕದ್ದು.

*Sd.* B. Umesha Rao,
Executive Officer.
ಮಂದಾರ್ತಿ ದೇವಸ್ಥಾನ, ತಾ. 30-9-56.

## ಎಲ್ಲೆಲ್ಲಿ ಏನೇನು?

**ಕಾಸರಗೋಡು ಕರ್ನಾಟಕ ಪರಿಷತ್ತು—** ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ದೊರೆಯಬೇಕೆಂಬ ಪೂರ್ಣ ವಿಶ್ವಾಸದಿಂದ ಕಾಸರಗೋಡು ತಾಲೂಕಿನ ಚಂದ್ರಗಿರಿಯ ಉತ್ತರ ಭಾಗವನ್ನು ಮೈಸೂರು ಪ್ರಾಂತದಲ್ಲಿಯೇ ಸೇರಿಸಬೇಕೆಂಬ ಜನತೆಯ ಪ್ರಬಲ ಅಪೇಕ್ಷೆಯನ್ನು ಸಮರ್ಥಿಸುವರೆಯೂ ಸರಕಾರದ ಕೊನೆಯ ನಿರ್ಧಾರವು ನಿರಾಶಾಜನಕವಾದುದರಿಂದಲೂ ಮುಂದಿನ ಕಾರ್ಯಕ್ರಮ ನಿಶ್ಚಯಿಸುವರೆಯೂ ಕಾಸರಗೋಡಿನಲ್ಲಿ ಅಕ್ಟೋಬರ ತಿಂಗಳ ತಾ. 28ನೆ ಆದಿತ್ಯವಾರ ಅಪರಾಹ್ನ 4 ಗಂಟೆಗೆ ಪರಿಷತ್ತನ್ನು ಸೇರಿಸಬೇಕಾಗಿ ನಿಶ್ಚಯಿಸಲಾಗಿದೆ ಪೂರ್ವಸಿದ್ಧತೆಗಳು ಸ್ವಾಗತ ಸಮಿತಿಯ ಕಡೆಯಿಂದ ಈಗಾಗಲೇ ಭರದಿಂದ ಸಾಗುತ್ತಿವೆ. ಚಂದ್ರಗಿರಿಯ ಉತ್ತರದ ಪ್ರತಿಯೊಂದು ಗ್ರಾಮದಿಂದಲೂ ಸಾಕಷ್ಟು ಮಂದಿ ಪ್ರತಿನಿಧಿಗಳು ಬಂದು ಭಾಗವಹಿಸಿ ಜನತೆಯ ಪ್ರಬಲವಾದ ಅಪೇಕ್ಷೆಯು ಸಫಲವಾಗುವಂತೆ ಸಹಕರಿಸಬೇಕಾಗಿ ಸ್ವಾಗತಸಮಿತಿಯ ಅಧ್ಯಕ್ಷ ಶ್ರೀ ಯಂ. ಉಮೇಶ ರಾಯರು ವಿನಂತಿಸುತ್ತಾರೆ.

ಸ್ಥಳೀಯ ಪಂಚಾಯತದ ಸಂಚಾಲಕತ್ವದಲ್ಲಿ ಸಾಮೂಹಿಕ ಪೆಟ್ರೋಜನ್ ಮಾತ್ರೆಗಳ ವಿತರಣೆ ಸಮಾರಂಭವನ್ನು ತಾ. 24ರಲ್ಲಿ ತಾಲೂಕು ಕಚೇರಿ ವಠಾರದಲ್ಲಿ ಶ್ರೀ ಕೆ. ನಾರಾಯಣ ನಾಯರರು ನೆರವೇರಿಸಿದರು. ಶ್ರೀ ಸಿ. ಅಬ್ದುಲ್ಲನವರು ಸಭಾಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಲೇರಿಯಾ ಆರೋಗ್ಯಾಧಿಕಾರಿ ಡಾ. ಸಿ ಎಸ್. ರಾಮಚಂದ್ರ ಪೈ ಮೊದಲಾದವರು ಭಾಷಣವಿತ್ತರು.

**ಕಟ್ಟೆ ಬೆಲ್ತೂರು—** ಸ್ಥಳೀಯ ಶಾಲಾ ಮಾಸ್ತರ್ ಶ್ರೀ ಕೆ. ವಿಠಲ ರಾಯರಿಂದ ತರಬೇತು ಹೊಂದಿದ ಯಕ್ಷಗಾನ ನಟರು ತಾ. 23ರಲ್ಲಿ "ಕೃಷ್ಣಲೀಲೆ" ಎಂಬ ಪ್ರಸಂಗವನ್ನು ಪ್ರೇಕ್ಷಣೀಯವಾಗಿ ಅಭಿನಯಿಸಿದರು. ಶ್ರೀಗಳಾದ ಕೆ. ಎನ್. ಶ್ರೀಯಾನ್ ಮತ್ತು ಬಿ. ರಾಮನವರು ಅನುಕ್ರಮವಾಗಿ ಕೃಷ್ಣ ಮತ್ತು ಕಂಸರ ಪಾತ್ರಗಳನ್ನು ವಹಿಸಿದ್ದರು.

**ಅವನೂರು—** ಸ್ಥಳೀಯ ಹಿಂದೂ ಹಾ. ಎ. ಶಾಲೆಯಲ್ಲಿ ಅಧ್ಯಾಪಕರಾಗಿದ್ದು ಈಗ ತಾನು ಕೆಲಸದಿಂದ ನಿವೃತ್ತಿ ಹೊಂದಲಿರುವ ಶ್ರೀ ಎಪರ್ಾಳು ತಬುರ ಶೆಟ್ಟರಿಗೆ ಕಳೆದ ತಾ. 26ರಲ್ಲಿ ಶಾಲಾ ಮೆನೇಜರ್ ಹಾಗೂ ಅಧ್ಯಾಪಕ ವೃಂದದವರು ವಿದಾಯ ಸತ್ಕಾರವನ್ನಿತ್ತು ಗೌರವಿಸಿದರು. ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

## ಬೊಂಬಾಯಿ

**ಬೊಂಬಾಯಿ ನಗರದಲ್ಲಿ ಪಾದಯಾತ್ರೆ—** ಸ್ವರ್ಗೀಯ ಮಹಾದೇವ ದೇಸಾಯರ ಪುತ್ರರೂ ಗುಜರಾಥದ ಭೂದಾನ ಆಂದೋಲನದ ಅಗ್ರಗಣ್ಯ ಮುಖಂಡರೂ ಆದ ಶ್ರೀ ನಾರಾಯಣ ದೇಸಾಯಿಯವರು ಕಳೆದ ಆಗಸ್ಟ 15ರಿಂದ ಸಪ್ಟಂಬರ 15ರ ತನಕ ಮುಂಬಾಯಿ ನಗರದಲ್ಲಿ ಪಾದ ಯಾತ್ರೆಯನ್ನು ಕೈಕೊಂಡರು. ಒಟ್ಟು 161 ಮೈಲು ಸಂಚಾರದಲ್ಲಿ 7000ಕ್ಕೂ ಮಿಕ್ಕಿ ಜನರು ಸಂಪತ್ತಿದಾನ ಮಾಡಿದರು. ಮೊಬಲಗು ರೂ. 115000ಕ್ಕೂ ಮಿಕ್ಕಿತು. ಒಂದು ತಿಂಗಳ ಅವಧಿಯಲ್ಲಿ 106 ಸಭೆಗಳು ಜರಗಿ ಭಾಷಣಗಳಾದುವು. ದಕ್ಷಿಣ ಕನ್ನಡಿಗರಾದ ಡಾ| ವಿಶ್ವನಾಥ ಆಡ್ಯಂತಾಯರು ಸಂಪತ್ತಿದಾನದ ಭರವಸೆಯನ್ನು ಶ್ರೀ ನಾರಾಯಣ ದೇಸಾಯರಿಗೆ ಇತ್ತರು.

**ಖಾಲ್ಸಾ ಕಾಲೇಜ್ ಕನ್ನಡ ಪ್ರೇಮಿ ಮಂಡಳಿಯ ಉದ್ಘಾಟನಾ—** ಸಮಾರಂಭದಂದು ಮುಖ್ಯ ಅತಿಥಿಗಳಾದ ಶ್ರೀ ಸಿ. ಆರ್. ರಾವ್ ಅವರು 'ಕನ್ನಡದ ಗುಡಿಯಲ್ಲಿ' ಎಂಬ ವಿಷಯದ ಮೇಲೆ ಮಾತನಾಡುತ್ತಾ, ಕನ್ನಡದ ಗುಡಿ ತುಂಬಾ ಪ್ರಾಚೀನವಾದುದು, ಕನ್ನಡ ಸಾಹಿತ್ಯ ಲಕ್ಷ್ಮಿ ಸಾಲಂಕೃತಳಾಗಿ ಗುಡಿಯಲ್ಲಿ ವಿರಾಜಮಾನಳಾಗಿದ್ದಾಳೆ. ನಮ್ಮ ಸಾಹಿತ್ಯ ಹೊಳೆ ಅನೇಕ ಮುಖವಾಗಿ ಒತ್ತಿ ಹರಿದಿದೆ. ಒಂದು ಹೃದಯದ ಸಂದೇಶ ಮತ್ತೊಂದು ಹೃದಯಕ್ಕೆ ಮುಟ್ಟುವುದೇ ಕಾವ್ಯದ ಲಕ್ಷಣ. ಕಾವ್ಯಕ್ಕೆ ರಸವೇ ಜೀವ; ಭಾವವೇ ಒಡಲು. ನೀರಸ ಸಾಹಿತ್ಯ ನಮಗೆ ಬೇಕಿಲ್ಲ—ಎಂದರು. ಪ್ರೊ. ಎಸ್. ಎಸ್. ಬ್ಯಾತನಾಳರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎಚ್. ವಿ. ಹೆಗ್ಡೆಯವರು ವರದಿವಾಚನಮಾಡಿದರು. ಉಪಕಾರ್ಯದರ್ಶಿ ಶ್ರೀ ಜಿ. ಕೆ. ಪೈಗಳು ಆಭಾರಮನ್ನಣೆ ಮಾಡಿದರು.

**ಕಟಪಾಡಿ—** ಸ್ಥಳೀಯ ಸೌತ್ ಕೆನರಾ ವೆಲ್ಫೇರ್ ಲೀಗಿನ ಆಶ್ರಯದಲ್ಲಿ ನಡೆಯುವ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 23ರಲ್ಲಿ ಡಾ. ಕೆ. ಆರ್. ಕೊರಡ್ಕಲ್ ರವರ ಅಧ್ಯಕ್ಷತೆಯಲ್ಲಿ ಶ್ರೀ ವೆಂಕಟರಮಣ ಸ್ವಾಮಿ ಹಾ. ಎ. ಶಾಲಾ ವಠಾರದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.


# ಗೋವಿಜಯ
(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.
ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.
**60 ಪುಟಗಳು: ಬೆಲೆ 0—8—0**
— ನವಯುಗ ಪ್ರೆಸ್, ಉಡುಪಿ. —


## ಮದ್ರಾಸು

**ಚಾತುರ್ಮಾಸ ಮುಕ್ತಾಯ—** ಮದ್ರಾಸ್ ಪರಶುವಾಕದಲ್ಲಿರುವ ಶ್ರೀ. ಕೆ. ಸೀತಾರಾಮರಾಯರ 'ದಾಸಪ್ರಸಾದ'ದಲ್ಲಿರುವ ಉಡುಪಿಯ ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಸ್ವಾಮಿಗಳವರು ಕೈಕೊಂಡ ಚಾತುರ್ಮಾಸ ವ್ರತವು ಕಳೆದ ತಾ. 20ರಲ್ಲು ವೈಭವದಿಂದ ಮುಕ್ತಾಯವಾಯಿತು. ಅಂದು ವಿಶೇಷ ಅನ್ನ ಸಂತರ್ಪಣೆ ನಡೆಯಿತು. ಸಂಜೆ ಶ್ರೀಮತಿ ಸರಸ್ವತಿ ಬಾಯಿ ಮತ್ತು ಮೈಸೂರಿನ ಆಸ್ಥಾನ ವಿದ್ವಾನ್ ಶ್ರೀ ಕೆ. ವಾಸುದೇವಾಚಾರ್ಯರ ಸಂಗೀತ ಕಚೇರಿಯಾಯಿತು. ಮದ್ರಾಸು ಮಂತ್ರಿಗಳಾದ ಶ್ರೀಯುತರು ಸಿ. ಸುಬ್ರಹ್ಮಣ್ಯಂ, ಎ. ಬಿ. ಶೆಟ್ಟಿ, ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಶ್ರೀ ಕೆ ಗೋಪಾಲ ಮೆನನ್, ಹೈಕೋರ್ಟ್ ಚೀಫ್‌ಜಸ್ಟಿಸ್, ಶ್ರೀಗಳಾದ ಪಿ. ವಿ. ರಾಜಮನ್ನಾರ್, ಎ. ಎಸ್. ಪಿ. ಐಯರ್, ದ. ಕ. ಜಿಲ್ಲೆಯ ಎಮ್. ಎಲ್. ಎ. ಗಳಾದ ಶ್ರೀ ಟಿ. ಎ. ಪೈ, ಬಿ. ವಿ ಬಾಳಿಗ ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ಸೀತಾರಾಮ ರಾಯರು ಸ್ವಾಗತ ಭಾಷಣಮಾಡಿದರು. ಲೋಕಸಭೆಯ ಅಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರರಿಗೆ ಸ್ವಾಮಿಗಳವರು ಅಭಿನಂದನ ಪತ್ರವನ್ನು ಚಿನ್ನದ ಪದಕದಲ್ಲಿ ಕೆತ್ತಿದ 'ಲೋಕಸೇವಾ ಧುರೀಣ" ಎಂಬ ಬಿರುದನ್ನು ಆಶೀರ್ವಚನ ಪೂರ್ವಕ ದಯಪಾಲಿಸಿದರು. ಶ್ರೀ ಕೆ. ಸೀತಾರಾಮ ರಾಯರಿಗೂ ಚಿನ್ನದ ಪದಕದಲ್ಲಿ ಕೆತ್ತಿದ 'ಧರ್ಮಭೂಷಣ' ಎಂಬ ಬಿರುದನ್ನು ಸ್ವಾಮಿಗಳವರು ಅನುಗ್ರಹಿಸಿ ಆಶೀರ್ವದಿಸಿದರು. ಆಭಾರ ಮನ್ನಣೆ, ಫಲಮಂತ್ರಾಕ್ಷತೆ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

**ಹವಾಮಾಪಕ ಯಂತ್ರದ ತಯಾರಿ—** ಮದ್ರಾಸು ಸರಕಾರದ ಗ್ಲಾಸ್ ಟೆಕ್ನಾಲಜಿಸ್ಟರಾಗಿರುವ ಶ್ರೀ ಬಿ. ಬಿ. ಶೆಟ್ಟರು ತಾ 28ರಲ್ಲು ಪತ್ರಕಾರರೊಡನೆ ಮಾತನಾಡುತ್ತಾ ಮದ್ರಾಸಿನ ಸೆಂಟ್ರಲ್ ಪೋಲಿಟೆಕ್ನಿಕ್‌ನಲ್ಲಿ ಹವಾಮಾಪಕ ಯಂತ್ರವನ್ನು ತಯಾರಿಸುವ ಕಾರ್ಯದಲ್ಲಿ ತಾನು ಯಶಸ್ವಿಯಾಗಿದ್ದೇನೆಂದೂ ಭಾರತದಲ್ಲಿ ಈ ರೀತಿಯ ಮಾಪಕ ಯಂತ್ರವನ್ನು ತಯಾರಿಸುವುದು ಇದೇ ಮೊದಲಬಾರಿ ಎಂದೂ ಹೇಳಿರುವರು.


# ಗೀತೆಯ ಕೈಗನ್ನಡಿ
0 -12—0
**ಹಿಂದೂ ಉತ್ತರಾಧಿಕಾರ ಶಾಸನ**

| | |
|---|---|
| 1, ಕನ್ನಡ ಪ್ರತಿ | 0 .12—0 |
| 2, ,, | 0—8—0 |
| 3, ಇಂಗ್ಲಿಷ್ | 0—6—0 |

**ನವಭಾರತ ಪುಸ್ತಕ ಭಂಡಾರ, ಉಡುಪಿ.**



**ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 | ಇನ್ನೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! | 1956

THE CANARA BANKING CORPORATION LIMITED
H. Office: UDIPI (S.India).



೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | **ಮಲೇರಿಯಾ** ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

# ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ
**ಮತ್ತು ಗುಳಿಗೆಗಳು**

ಸೋಲ ಮ್ಯಾನುಫ್ಯಾಕ್ಚರರು:
**ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,**
ಬಾಟ್ಲಿವಾಲಾ ಬಿಲ್ಡಿಂಗ, ೩೪ ಬಿ, ಪೋರ್ಚುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.
Tele add. "CAWASHABAD"

ನಾಟಕ ಸಾಹಿತ್ಯ ಸಲಕರಣೆಗಳು

**ಸಚಿತ್ರ ಕನ್ನಡ ಹೊಸ ಪ್ರಾಯಿಸ್ ಲಿಸ್ಟಿಗಾಗಿ ಇಂದೇ ಬರೆಯಿರಿ**

ಶ್ರೀ ಪಾತ್ರದ ಟೋಪಣ, ಪುರುಷ ಪಾತ್ರದ ಟೋಪಣ, ಗಡ್ಡ ಮೀಸೆಗಳು, ನಾಟಕದ ಖಡ್ಗ, ಗಧೆ ಮೊದಲಾದ ಸಾಮಾನುಗಳು, ಜರತಾರಿ ರುಮಾಲು, ಪಗಡಿ, ಡ್ರೆಸ್ಸು ಇತ್ಯಾದಿ ಇತ್ಯಾದಿ ರಂಗಭೂಮಿಗೆ ಅವಶ್ಯವಾದ ಸಂಪೂರ್ಣ ಸಾಮಾನುಗಳು ದೊರೆಯುತ್ತವೆ.

**DHARAMSHI MULJI, DRESSWALA,**
132 C, Bhagatwadi, Bhuleshwar Road, Bombay—2.

## ಮಂಗಳೂರು

**ಜಿಲ್ಲಾ ಕಲೆಕ್ಟರರಿಗೆ ವರ್ಗ—** ದ. ಕ. ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರು ಮದ್ರಾಸಿನ ಎಡಿಶನಲ್ ಡೆವಲಪ್‌ಮೆಂಟ್ ಕಮಿಶನರಾಗಿ ವರ್ಗಾಯಿಸಲ್ಪಟ್ಟರು.

**ಭಾಷಣ—** ದ. ಕ. ಜಿಲ್ಲಾ ಕೇಂದ್ರ ಲ್ಯಾಬ್ರೆರಿಯ ನೇತೃತ್ವದಲ್ಲಿ ತಾ. 24ರಲ್ಲಿ ಶ್ರೀ ಜಿ. ಸೋಮಶೇಖರ ರಾಯರು ಹಿಂದೂ ಉತ್ತರಾಧಿಕಾರ ಶಾಸನದ ವೈಶಿಷ್ಟ್ಯಾದಿಗಳನ್ನೆತ್ತಿ ಭಾಷಣವಿತ್ತರು. ಪ್ರಿನ್ಸಿಪಲ್ ಸಬ್ ಜಡ್ಜ್ ಶ್ರೀ ಜಿ. ಎಮ್. ಸಿಕ್ವೇರರು ಸಭಾಧ್ಯಕ್ಷತೆ ವಹಿಸಿದ್ದರು.

**ಮದ್ರಾಸು ರಾಜ್ಯಪಾಲರ ದಾನಗಳು—** ಕಳೆದ ತಾ. 20ರಿಂದ 23ರ ತನಕ ಜಿಲ್ಲಾ ಪ್ರವಾಸ ಗೈದ ಮದ್ರಾಸು ರಾಜ್ಯಪಾಲ ಶ್ರೀ ಶ್ರೀ ಪ್ರಕಾಶರು ರೂ. 1750/-ನ್ನು ಜಿಲ್ಲೆಯ ವಿವಿಧ ಸಂಸ್ಥೆಗಳಿಗೆ ದಾನಮಾಡಿದರು.

**ಸಮಾಜವಿಕಾಸ ಯೋಜನಾ ಸಲಹಾಸಮಿತಿಯ ಸಭೆಯು—** ತಾ. 28ರಲ್ಲಿ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಸ. ವಿ. ಯೋಜನಾಧಿಕಾರಿ ಶ್ರೀ ಎಚ್. ನರಸಿಂಹನವರು, ತಾ. 2—10—1952 ರಲ್ಲಿ ಉದ್ಘಾಟಿಸಲ್ಪಟ್ಟ ಸಮಾಜ ವಿಕಾಸ ಯೋಜನೆಯು ಇಂದಿನ ತನಕ ಸಾಧಿಸಿದ ಕಾರ್ಯಗಳ ವರದಿಯನ್ನು ಮಂಡಿಸುತ್ತಾ, 30—9—1956 ರಿಂದ ಸಮಾಜವಿಕಾಸ ಯೋಜನೆಯು ಕೊನೆಗೊಂಡು ರಾಷ್ಟ್ರೀಯ ವಿಸ್ತರಣ ಸೇವಾಯೋಜನೆಗಾಗಿ ಮಾರ್ಪಡುವುದೆಂಬುದಾಗಿ ತಿಳಿಸಿ, ಸಮಾಜವಿಕಾಸ ಯೋಜನೆ ಮೇರೆಗೆ ಇಷ್ಟರೊಳಗೆ ಕೈಕೊಳ್ಳಲಾದ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವರೆ 31—3—1957 ರ ವರೆಗಿನ ಕಾಲಾವಧಿಯನ್ನೀಯಲಾಗಿದೆಯೆಂದರು. ಜಿಲ್ಲೆಯಲ್ಲಿರುವ ಒಟ್ಟು ಮೂರು ಸಮಾಜವಿಕಾಸ ಯೋಜನಾ ಕ್ಷೇತ್ರಗಳ ವ್ಯಯಕ್ಕಾಗಿ 65 ಲಕ್ಷ ರೂಪಾಯಿಗಳ ಅಂದಾಜು ವೆಚ್ಚವನ್ನು ನಿಶ್ಚಯಿಸಲಾಗಿತ್ತೆಂಬುದಾಗಿ ವರದಿಯಲ್ಲಿ ಹೇಳಲಾಗಿದೆ. ಇದರಲ್ಲಿ 28.15 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿಯೂ 36.85 ಲಕ್ಷ ರೂಪಾಯಿಗಳನ್ನು ಸಾಲೇತರ ಉದ್ದೇಶಗಳಿಗಾಗಿಯೂ ವ್ಯಯಿಸಬೇಕೆಂಬ ನಿಯಮವಿತ್ತು ಇದೇ ಸಂದರ್ಭದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ವರ್ಗವಾಗಿ ಮದ್ರಾಸಿಗೆ ಹೋಗುವ ಸಂಬಂಧ ಅವರಿಗೆ ಶುಭ ವಿದಾಯವನ್ನು ಬಯಸಿ, ಅವರು ಜಿಲ್ಲೆಗೆ ಮಾಡಿದ ಸೇವೆಯನ್ನು ಪ್ರಶಂಸಿಸಲಾಯಿತು. ಶ್ರೀಗಳಾದ ಕೆ. ಪಿ. ಮುಕುಂದ ಪ್ರಭು, ಎಸ್. ಡಿ. ಸಾವಪ್ರಾಜ್ಯ, ರೆ| ಫಾ| ಸಿಕ್ವೇರ, ಎ. ಬಿ. ಸೋನ್ಸ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು.

**ಜೀವವಿಮಾ ಅಧಿಕಾರಿಗಳ ಸಭೆಯು—** ತಾ. 28ರಲ್ಲಿ ಹಮ್ಮೀರನಲ್ಲಿ ಶ್ರೀ ಟಿ. ಪಿ. ಎನ್. ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ಕಂಪೆನಿಗಳಲ್ಲಿ ನೌಕರಿ ಮಾಡುತ್ತಿದ್ದ ಜೀವವಿಮಾ ನೌಕರರ ಪರಿಸ್ಥಿತಿಗಳ ಕುರಿತಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿವೇದಿಸಿಕೊಳ್ಳುವ ಮೊದಲಾದ ಉದ್ದೇಶಗಳಿಗಾಗಿ ಒಂದು ಸಂಘಟನೆಯನ್ನು ರಚಿಸುವ ನಿರ್ಣಯವಾಯಿತು. ಕೋರ್ಪರೇಶನ್ ಆದ ಬಳಿಕ ನೌಕರರ ವರ್ಗೀಕರಣ ಇತ್ಯಾದಿಗಳಿಂದುಂಟಾದ ಕೆಲವೊಂದು ಅನ್ಯಾಯಗಳ ಕುರಿತು ಶ್ರೀಗಳಾದ ಜೆ. ಆರ್. ವಾಲಿಯಾ, ಎಮ್. ಕೆ. ಮಲ್ಯ, ಎಮ್. ಎ. ಬೆಳಿಯಪ್ಪ ಮೊದಲಾದವರು. ಭಾಷಣಮಾಡಿದರು. ಸೂಕ್ತ ಕಾರ್ಯಕ್ರಮ ಕೈಗೊಳ್ಳಲು 11 ಮಂದಿಯ ಕಾರ್ಯಕಾರೀ ಸಮಿತಿ ರಚಿಸಲಾಯಿತು.

**ರಾಜಾರಾಮ್ ಮಂದಿರದ ಪ್ರವೇಶೋತ್ಸವ—** ಸೂಟರ್ ವಾಚನಾಲಯಕ್ಕಾಗಿ ಕಟ್ಟಿಸಿದ ರಾಜಾರಾಮ್ ಮಂದಿರದ ಪ್ರವೇಶೋತ್ಸವವನ್ನು ತಾ. 29ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್ ಜಿ. ರಾಜಾರಾಮರು ನೆರವೇರಿಸುತ್ತಾ, ತಾನು ತನ್ನ ಸಹೋದರರಾಧಿಕಾರಿಗಳೊಡನೆ, ಕಾನೂನು ನಿಬಂಧನೆಗಳಿಂದ ಜನತೆಗೆ ಉಪಯೋಗವಾಗುವಂತೆ ಮಾಡಿರಿ; ಜನರು ತಾವು ಚುನಾಯಿಸಿದ ಪ್ರತಿನಿಧಿಗಳಿಂದ ಮಾಡಿಸಿದ ಕಾನೂನು ನಿಬಂಧನೆಗಳು, ಅವರ ಉಪಯೋಗಕ್ಕೆ ಬಾರದೆ, ಅವುಗಳು ಅವರ ಪಾಲಿಗೆ ತ್ರಾಸದಾಯಕವಾದರೆ, ಅಂತಹ ಕಾನೂನುಗಳಿಂದ ಏನೂ ಪ್ರಯೋಜನವಿಲ್ಲದಂತಾಗುವುದೆಂಬುದಾಗಿ ಹೇಳಿರುವುದಾಗಿ ತಿಳಿಸಿದರು. ಆರಂಭದಲ್ಲಿ ಶ್ರೀ ಅಣ್ಣಯ್ಯ ಹೆಗ್ಡೆಯವರು ಸ್ವಾಗತಭಾಷಣ ಮಾಡಿದರು. ಶ್ರೀ ಪಿ ರಾಮರಾಯರು ವರದಿಯನ್ನೋದಿದರು. ಶ್ರೀ ಲಿಂಗಪ್ಪಯ್ಯ ನವರು ಧನ್ಯವಾದಗಳನ್ನಿತ್ತರು.

**ಕುಷ್ಠರೋಗ ನಿರೋಧ ಚಳವಳಿ:** ತಾ. 29ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಂಗಣದಲ್ಲಿ ಕುಷ್ಠರೋಗ ನಿರೋಧ ಚಳವಳದ ಉದ್ಘಾಟನೆಯನ್ನು ಮಾಡುತ್ತಾ, ಈ ಜಿಲ್ಲೆಯಲ್ಲಿ ಅನೇಕಾಲು ರೋಗದಷ್ಟೇ ಭಯಂಕರವಾಗಿರುವ ಕುಷ್ಠರೋಗದ ನಿವಾರಣೆಗಾಗಿ, ಹಿಂದ್ ಕುಷ್ಠ ನಿವಾರಣಾ ಸಂಘದ ಕಾರ್ಯದರ್ಶಿ ಡಾ. ಕ್ಯಾಸ್ಟೋರರವರು ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿ, ಪ್ರತಿ ತಾಲೂಕು ಕೇಂದ್ರದಲ್ಲಿಯೂ ಹಿಂದ್ ಕುಷ್ಠನಿವಾರಣಾ ಸಂಘದ ಶಾಖೆಗಳನ್ನು ತೆರೆಯುವ ಯೋಜನೆಯಿದೆ ಎಂದು ಹೇಳಿದರು. ಡಾ. ಉಮೇಶ ರಾಯರು ಸ್ವಾಗತಭಾಷಣ ಮಾಡಿದರು ರೆ. ಫಾ. ಎ. ಜೆ. ಸಲ್ದಾನಾ ಮತ್ತು ಡಾ. ಯು. ಪಿ. ಮಲ್ಯರು ಕಾಲೋಚಿತ ಭಾಷಣವಿತ್ತರು. ಜಿಲ್ಲಾ ವೈದ್ಯಾಧಿಕಾರಿ ಡಾ. ಎ. ತಿಮ್ಮಪ್ಪಯ್ಯನವರು ಕುಷ್ಠರೋಗ ನಿರೋಧ ಚಳವಳಿಯ ಅಂಗವಾದ ಪ್ರದರ್ಶನವನ್ನು ಉದ್ಘಾಟಿಸಿದರು. ಡಾ. ಎ. ಎಸ್. ಕ್ಯಾಸ್ಟೋರವರು ಧನ್ಯವಾದಗಳನ್ನಿತ್ತರು.

## ಸುಯೇಜಿನ ತಂಟೆ

(೪ನೇ ಪುಟದಿಂದ)

ಹೇಳೀತು ಯಾರಾದರೊಬ್ಬರು "ಫ್ರೆಂಚ್ ಕಾಲುವೆಗಳನ್ನು ಬಳಸುವವರ ಸಂಘ" ವೊಂದನ್ನು ಸ್ಥಾಪಿಸುವ ಪ್ರಸ್ತಾಪವನ್ನು ತಂದರೆ ಫ್ರೆಂಚರೇನೆಂದಾರು? "ಅಮೇರಿಕದ ದೇಶವ್ಯಾಪಿತವಾದ ಹೆದ್ದಾರಿಗಳನ್ನು ಬಳಸುವವರ ಸಂಘ"ವೊಂದು ಪರರಾಷ್ಟ್ರದ್ದು ಸ್ಥಾಪಿತವಾಗುವುದಾದರೆ ಆ ಬಗ್ಗೆ ಅಮೇರಿಕದ ಜನರ ಪ್ರತಿಕ್ರಿಯೆ ಹೇಗಿದ್ದೀತು?

ಈ ರಾಜ್ಯಗಳ ಪೈಕಿ ಯಾವುದೂ, ತಮ್ಮ ಪ್ರದೇಶದ ಮೇಲೆ ಫಿರಂಗಿ ಗುಂಡಿನ ವ್ಯಾಪ್ತಿಗೊಳಪಟ್ಟ ಇಂತಹ "ಸಂಘಗಳಿಗೆ" ಎಂದಿಗೂ ಎಡೆಗೊಡದೆಂಬುದನ್ನು ಬೇರೆ ಹೇಳಬೇಕಾದ ಅವಶ್ಯಕತೆಯೇ ಇಲ್ಲ.

"ಸೂಯೆಜ್ ಕಾಲುವೆ ಬಳಕೆಗಾರರ ಸಂಘ"ವೊಂದನ್ನು ರೂಪುಗೊಳಿಸುವ ಸಾಹಸವಾದೀ ಯೋಜನೆಯನ್ನ ಮುಂದಿಡುವ ಕೆಲಸವನ್ನು ಪಾಶ್ಚಾತ್ಯ ರಾಜ್ಯಶಕ್ತಿಗಳು ೧೮೮೮ರ ಒಡಂಬಡಿಕೆಯ ಸುಳ್ಳು ನೆಪದ ಧ್ವಜದಡಿಯಲ್ಲಿ ನಡೆಸುತ್ತಿವೆ. ಆದು ಸೂಯೆಜ್ ಕಾಲುವೆಯ ಅಂತಾರಾಷ್ಟ್ರೀಯ ನ್ಯಾಯಬದ್ಧ ಸ್ಥಾನವನ್ನು ನಿರ್ಣಯಿಸುತ್ತದೆ. ಆದರೆ ಇದು ಒಂದು ಸುಳ್ಳು ಬಾವುಟವಾಗಿದೆ. ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ "ಸೂಯೆಜ್ ಕಾಲುವೆ ಬಳಕೆಗಾರರ ಸಂಘ"ದ ಸಂಘಟನೆಯು ೧೮೮೮ರ ಒಡಂಬಡಿಕೆಯ ಮೂಢ ಉಲ್ಲಂಘನೆಯನ್ನು ಸೂಚಿಸುತ್ತದೆ. ಈ ಒಡಂಬಡಿಕೆಗೆ ಹಸ್ತಾಕ್ಷರವನ್ನು ಮಾಡಿದ ಅನೇಕ ರಾಜ್ಯ ಶಕ್ತಿಗಳಿಗೆ ತಿಳಿಸದಂತೆಯೇ ಅದು ರೂಪುಗೊಳಿಸಲ್ಪಡಲಾಗುತ್ತಿದೆ. ಅದಕ್ಕೂ ಹೆಚ್ಚಾಗಿ, ಅದು ಈ ಒಡಂಬಡಿಕೆಗೆ ಸೇರಿದ ಈಜಿಪ್ಟು ಮತ್ತು ಅನೇಕ ಇತರ ದೇಶಗಳ ವಿರೋಧವಾಗಿ ಲಕ್ಷ್ಯವುಳ್ಳದ್ದಾಗಿದೆ.

ಅಭಿವೃದ್ಧಿಗಳ ಪಥವು ಮುಂದುವರಿದಷ್ಟೂ ಈಜಿಪ್ಟ್ ದೇಶದ ವಿರೋಧವಾಗಿ ವಸಾಹತುವಾದಿಗಳ ಒಳಸಂಚಿನ ಒರಟು ತಂತ್ರ ವ್ಯವಸ್ಥೆಯೂ ಹೆಚ್ಚು ಸ್ಪಷ್ಟವಾಗುತ್ತದೆ. ತಮ್ಮ ಲಾಭಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅವರು ಗುರುತರವಾದ ವಿನಾಶವನ್ನುಂಟುಮಾಡುವ, ಅತ್ಯಂತ ಮೌಢ್ಯ ದುಸ್ಸಾಹಸದ ಸೈನಿಕ ದೂತದಲ್ಲಿ ತಮ್ಮ ಸ್ವಂತ ರಾಷ್ಟ್ರಗಳನ್ನು ಮುಳುಗಿಸಲು ಹಿಂಜರಿಯದೆ ಸನ್ನದ್ಧರಾಗಿರುತ್ತಾರೆ. ಪಾಶ್ಚಿಮಾತ್ಯ ರಾಜ್ಯಶಕ್ತಿಗಳು ಮಾಡುತ್ತಿರುವ ಈ ಕೆಲಸವು ಬೆಂಕಿಯೊಡನೆ ಚೆಲ್ಲಾಟವಾಗಿದೆ.

ಪಾಶ್ಚಾತ್ಯ ಶಕ್ತಿಗಳ ಕಾರ್ಯಾಚರಣೆಯಿಂದಾಗಿ ಸಮೀಪ ಮತ್ತು ಮಧ್ಯ ಪ್ರಾಚ್ಯದಲ್ಲಿನ ಪರಿಸ್ಥಿತಿಯು ತೀವ್ರಾವಸ್ಥೆಯನ್ನು ಮುಟ್ಟಿರುವ ಸಮಯದಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯೂ ಕೂಡ ದೂರವಾಗಿ ಬೇರೆಯಾಗಿರಲಾರದೆಂಬುದು ಪರಿಪೂರ್ಣವಾಗಿ ಸ್ಪಷ್ಟವಾಗಿದೆ. ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕ ಇವು ಈಗ ಮಾಡುತ್ತಿರುವ ಕಾರ್ಯವು ಸಂಯುಕ್ತ ರಾಷ್ಟ್ರ ಸಂಸ್ಥೆಯ ಅಧಿಕಾರ ಪತ್ರಕ್ಕೆ ಮತ್ತು ಶಾಂತಿಶೀಲ ಆಶಯಗಳಿಗೆ ಸರಿಹೊಂದುತ್ತಿಲ್ಲ ಮತ್ತು ವಿರೋಧವಾಗಿದೆ. ಸದಸ್ಯರೆಲ್ಲರೂ ತಮ್ಮ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಬಲಪ್ರಯೋಗದ ಬೆದರಿಕೆಯನ್ನು ಮಾಡದಿರಬೇಕೆಂದೂ, ಅಥವಾ ಯಾವುದಾದರೊಂದು ರಾಜ್ಯದ ಪ್ರಾದೇಶಿಕ ಅಖಂಡತ್ವ ಅಥವಾ ರಾಜಕೀಯ ಸ್ವಾತಂತ್ರ್ಯದ ವಿರೋಧವಾಗಿ ಬಲಪ್ರಯೋಗವನ್ನು ಮಾಡದಿರಬೇಕೆಂದೂ ಸಂಯುಕ್ತ ರಾಷ್ಟ್ರ ಸಂಸ್ಥೆಯ ಅಧಿಕಾರ ಪತ್ರವು ತನ್ನ ಸದಸ್ಯ ರಾಷ್ಟ್ರಗಳಿಗೆ ವಿಧಿಸುತ್ತದೆ.

ಇವಕ್ಕೆ ಸಂಬಂಧಿಸಿ ಆಸಕ್ತಿಯುಳ್ಳ ರಾಜ್ಯಗಳೆಲ್ಲವೂ ಅಪ್ರಮತ್ತತೆಯ ಮತ್ತು ಶಾಂತವಾದ ದೃಕ್ಪಥವನ್ನು ಪ್ರದರ್ಶಿಸಬೇಕೆಂದು ಜನತೆಗಳ ಶಾಂತಿ ಭದ್ರತೆಗಳ ಹಿತಗಳು ಒತ್ತಾಯದ ಬೇಡಿಕೆಯನ್ನು ಮುಂಡಿಸುತ್ತವೆ. ಈಜಿಪ್ಟು ಮತ್ತು ಈ ಬಗ್ಗೆ ಆಸಕ್ತಿಯುಳ್ಳ ಇತರ ದೇಶಗಳ ನ್ಯಾಯಸಮ್ಮತವಾದ ಹಕ್ಕುಗಳನ್ನು ಗಣನೆಗೆ ತೆಗೆದುಕೊಳ್ಳುವಂತಹ ವಾಸ್ತವಿಕ ದೃಕ್ಪಥವು ಮಾತ್ರವೇ ಸೂಯೆಜ್ ಸಮಸ್ಯೆಯ ನ್ಯಾಯೋಚಿತವಾದ ಶಾಂತಿಯುತ ಇತ್ಯರ್ಥವನ್ನು ಖಚಿತಪಡಿಸಬಲ್ಲುದು; ಈಜಿಪ್ಟ್ ರಾಜ್ಯದ ವಿರೋಧವಾಗಿ ಬಲಪ್ರಯೋಗ ಮಾಡುವ ದುಸ್ಸಾಹಸದ ಯೋಜನೆಗಳ ಮೇಲೆ ಭರವಸೆಯಿಡುವುದರಿಂದ ಈ ಕಾರ್ಯವು ಸಾಧ್ಯವಾಗದು.

ಪಾಶ್ಚಾತ್ಯ ರಾಜ್ಯಶಕ್ತಿಗಳ ವಸಾಹತುವಾದೀ ಕಾರ್ಯಾಚರಣೆಗಳ ಬಗ್ಗೆ ಹೇಳುವುದಾದಲ್ಲಿ, ಅವು ಎಲ್ಲಾ ಶಾಂತಿಪ್ರಿಯ ಜನತೆಗಳಿಂದಲೂ ಒಮ್ಮತದಿಂದ ಖಂಡಿಸಲ್ಪಟ್ಟಿವೆ. ವಸಾಹತುಗಳನ್ನು ಆಕ್ರಮಿಸಿ ಕೈವಶ ಮಾಡಿಕೊಳ್ಳುವ ಕಾಲವು ಗತಕಾಲಕ್ಕೆ ಸರಿದು ಹೋಯಿತು. ಸ್ವತಂತ್ರವಾದ ವಿಕಾಸ ಮಾರ್ಗವನ್ನು ಅನುಸರಿಸುತ್ತಿರುವ ಜನತೆಗಳು ೧೯ನೇ ಶತಮಾನದ ವಸಾಹತುವಾದಿಗಳ ಪದ್ಧತಿಗಳನ್ನೂ, ಕಾರ್ಯಾಚರಣೆಗಳನ್ನೂ ಪುನರುದ್ಧರಿಸಲು ಯಾರಿಗೂ ಕೊಡರು, ತಮ್ಮ ಸರ್ವ ಸ್ವತಂತ್ರತೆಯ ಸಲುವಾಗಿ ಅವರು ದೃಢವಾಗಿ ಕಾವಲು ನಿಲ್ಲುತ್ತಾರೆ. ಶಾಂತಿಪ್ರಿಯ ಸಾರ್ವಜನಿಕರು ದಿನ ದಿನಕ್ಕೆ ಹೆಚ್ಚು ಹೆಚ್ಚಾಗಿ ಈಜಿಪ್ಟಿನ ಬೆಂಬಲಕ್ಕೆ ದೃಢಮನಸ್ಸಿನಿಂದ ಹೊರಬರುತ್ತಿದ್ದಾರೆ. ಆಕ್ರಮಣದ ಪ್ರಮಾದವನ್ನು ಹೊರತರಲೆತ್ನಿಸುತ್ತಿರುವ ದುಸ್ಸಾಹಸದ ಯೋಜನೆಗಳ ವಿರೋಧವಾಗಿ ತಮ್ಮ ಕೂಗನ್ನೆಬ್ಬಿಸುತ್ತಿದ್ದಾರೆ. ಎಲ್ಲಾ ಪ್ರಾಮಾಣಿಕರಾದ ಜನರಿಗೂ, ಎಡೆಗಾರಿಕೆಯಿಂದ ಸಾಮ್ರಾಜ್ಯವಾದೀ ಲೂಟಿಕೋರರ ಮಾರ್ಗವನ್ನು ತಡೆಗಟ್ಟಬೇಕಾದು ದು ಅವರ ಕರ್ತವ್ಯವಾಗಿದೆ.!

---

### ಉಡ್ಪಿ ಡಿ. ಮು. ಕೋರ್ಟಿನಲ್ಲಿ

**O. S. No. 514/56**

ಮೂಲೂರು ಮುಸ್ಲಿಂಮಿಸ್ಕಿನ್ ಫಂಡ್, ಬೊಂಬೈ. ಇದರ ಪರವಾಗಿ 2ನೇ ವಾದಿ ಅಬ್ದುಲ್ಲಾ ಬ್ಯಾರಿ —ವಾದಿರು.

ಮತ್ತು

1. ಸೇಕ್ ಅಹಮ್ಮದ್ ಸಾಹೇಬ್, 2. ಸೇಕ್ ಹುಸ್ಸೇನ್ ಸಾಹೇಬ್, 3. ಸೇಕ್ ಇಬ್ರಾಹಿಮ್ ಸಾಹೇಬ್ —ಪ್ರತಿವಾದಿರು.

ಯಿವರೊಳಗೆ—

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದ್ರೆ:—

ಮೇಲ್ಕಂಡ ವ್ಯಾಜ್ಯದ 2ನೇ ವಾದಿಯು ಮೇಲ್ಕಂಡ ವ್ಯಾಜ್ಯವನ್ನು 1ನೇ ವಾದಿ ಫಂಡಿನ ಪರವಾಗಿಯೂ ಮತ್ತು ಸದ್ರಿ ಫಂಡಿನ ಎಲ್ಲಾ ಮೆಂಬ್ರರ ಪರವಾಗಿಯೂ ಕೂಡಾ ಹರುವ ಹಾಗೆ ಪರ್ಮಿಶನ್ ಕೇಳಿ ದಾಖಲ್ಮಾಡಿರುವ R. I. A No. 1129/1956ನೇ ಅರ್ಜಿಯಲ್ಲಿ 2ನೇ ವಾದಿಗೆ ಪರ್ಮಿಷನ್ ಕೊಡೋಣಾಗಿದೆ. ಈ ಕುರಿತು ಆಕ್ಷೇಪ ಹೇಳಲುಳ್ಳವರು ಸದ್ರಿ ವ್ಯಾಜ್ಯವನ್ನು ಪ್ರತಿವಾದಿಂಗೆ ನೋಟೀಸು ಬಗ್ಯೆ ಇಡೋಣಾದ ತಾ. 25-10-1956ನೇ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರ್ಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಉಡ್ಪಿ. 1-10-1956 } **P. V. Achar,** Vakil for Plaintiffs.

---


## ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಪಯೋಗಕ್ಕೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮೌಲ್ಯಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಪೆಯನ್ನು ತೆರೆಯಲಾಗಿದೆ.

**SRI KRISHNA JEWELLERY MART**

*Head Office:* Tenkapet, **Udipi**, S. K. *Phone:* 66

## ನಗೆಯ ಬಗೆ

(೩ನೇ ಪುಟದಿಂದ)

ಮುದ್ರೆಯಲ್ಲಿ ನಗೆಯು ಸಂಬಂಧವು ಕಣ್ಣಿನ ಜೊತೆಯಲ್ಲಿ ನಿಕಟವಾಗಿರುವುದನ್ನು ನಾವು ನಗುಮೊಗವನ್ನು ಕಂಡಾಗ ಕಂಡುಕೊಳ್ಳಬಹುದು...! ನಗೆಯಂತೆಯೇ ಕಣ್ಣು ಕೂಡಾ ಮಾನವನ ಪ್ರವೃತ್ತಿಗಳ ಪ್ರದರ್ಶನವನ್ನು ಮಾಡುವುದು. ಕೆಲವೊಂದು ಸಾರೆ ಭಾವಗಳು ಒಂದಕ್ಕೊಂದು ಕೂಡಿ ಹೋದಾಗ ಅಂತಹ ನಗೆಯು ಮೊಗದಲ್ಲಿ ಕಂಡುಬರುವುದು. ಕಾಳಿದಾಸಾದಿ ಕವಿಗಳು ತಮ್ಮ ನಾಟಕಗಳಲ್ಲಿ ಇಂಥ ಸಮ್ಮಿಶ್ರ ಭಾವನೆಗಳ ವರ್ಣನೆಯನ್ನು ಮಾಡಿದ್ದುಂಟು. ಅದರ ಪ್ರದರ್ಶನವನ್ನು ಮಾಡುವ ಹೊಣೆಯನ್ನು ನಟವರ್ಗಕ್ಕೆ ಅವನು ಬಿಟ್ಟುಕೊಟ್ಟಿದ್ದಾನೆ. ಮನುಷ್ಯನು ಬೆಳೆದು ದೊಡ್ಡವನಾದಂತೆ—ಅವನ ಭಾವವು ಅನೇಕ ಭಾವಗಳ ಮಿಶ್ರಣವಾಗಿ ಹೋಗುವದರಿಂದ...ಅವನ ನಗೆಯೂ ಅನೇಕ ಭಾವಗಳ ಮಿಶ್ರಣವಾದುದನ್ನು ನಾವು ನೋಡಬಹುದು—ದುಃಖ-ಆನಂದಗಳ ಮಿಶ್ರಣ ಪ್ರಸಂಗದಲ್ಲಿಯ ನಗೆಯ ಕಲ್ಪನೆಯನು ಇಲ್ಲಿ ನಾವು ಮಾಡಿಕೊಳ್ಳಬಹುದು. ಈ ರೀತಿಯಾಗಿ ನಗೆಯು ಸಹಜ ಪ್ರವೃತ್ತಿಯಾಗಿರುವದರಿಂದ-ಆಯಾ ಜನರ ಮಾತಿನಲ್ಲಿ ನಡೆಯಲ್ಲಿ, ನಾವು ಈ ನಗೆಯ ವೈವಿಧ್ಯವನ್ನು ಕಾಣಬಹುದು. ಆದಿ ಕವಿ ವಾಲ್ಮೀಕಿಯವರು ಬರೆದ ರಾಮಾಯಣದಲ್ಲಿ ಅನೇಕ ಸಂದರ್ಭಗಳು ಈ ಸಂಗತಿಗಳಿಗೆ ಕಾರಣೀಭೂತವಾಗಿರುವವು. ಶ್ರೀ ವ್ಯಾಸರು ಬರೆದ ಭಾರತವಂತೂ ಪ್ರವೃತ್ತಿಗಳ ಆಗರವಾಗಿರುವದರಿಂದ ನಮಗೆ ಅನೇಕರೀತಿಯ ನಗೆಯ ನಮೂನೆಗಳನ್ನು ಕಾಣಬಹುದು. ಕುಮಾರ ವ್ಯಾಸನು ಬರೆದ ಭಾರತದಲ್ಲಿಯ ಉತ್ತರಕುಮಾರನ ಪಾತ್ರವನ್ನು ನಿರ್ಮಿಸುವಾಗಿನ ನಗೆಯ ಬಗೆ, ದ್ರೌಪದಿ ಸ್ವಯಂವರದ ಸಮಯದಲ್ಲಿ ಸುರವ್ರಾತಗಳ ಮಾತು, ಅರ್ಜುನನ ಮಾತಿನ ಮಾದರಿ ಇವುಗಳನ್ನು ತೋರಿಸುವ ಮಾತಿನ ಬಗೆ ಬೇರೆ ಬೇರೆ ನಗೆಯ ಬಗೆಗಳನ್ನು ಎತ್ತಿತೋರಿಸುವಂತಹವುಗಳು ಆಗಿರುವವು. ಇವಲ್ಲದೆ—ಕನ್ನಡ ಕಾವ್ಯಗಳಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ಎತ್ತಿ ತೋರಿಸುವುದಕ್ಕೆ ಸಾಧ್ಯವಿದೆ.

ದೇವತೆಗಳ ನಗೆಯಲ್ಲಿ, ಮಹಾಪುರುಷರ ನಗೆಯಲ್ಲಿ, ಜನ ಸಾಮಾನ್ಯರ ನಗೆಯಲ್ಲಿ ಭೇದವು ಸ್ಪಷ್ಟವಾಗಿ ಕಂಡು ಬರುವುದು. ಗಧಾಯುದ್ಧದ ಪ್ರಸಂಗದಲ್ಲಿ ಧುರ್ಯೋಧನನನ್ನು ಭೀಮ ಕಂಡು ನಗುವ ಬಗೆ, ಕರ್ಣಾರ್ಜುನರು ಯುದ್ಧ ರಂಗದ ಮೇಲೆ ನಿಂತುಕೊಂಡು ನಗುವ ಬಗೆ; ಲೆತ್ತವನ್ನಾಡುವಾಗ ಶಕುನಿಯು ನಗುವ ನಗೆ, ದ್ರೌಪದಿಯ ವಸ್ತ್ರಾಪಹರಣದ ಸಮಯದಲ್ಲಿ. ಧುರ್ಯೋಧನಾದಿಗಳು ನಗುವ ನಗೆ, ಭೀಷ್ಮರು ಶರಶಯ್ಯೆಯಲ್ಲಿ ಮಲಗಿದಾಗ ಅವರ ಮೊಗದಲ್ಲಿ ಒಡಮೂಡಿದ ನಗೆ, ಧರ್ಮ-ದ್ರೌಪದಿಯ ವಾಗ್ವಾದದ ಸಮಯದಲ್ಲಿ ಧರ್ಮರಾಜನ ವಿಚಾರಗಳನ್ನು ಕೇಳಿ ದ್ರೌಪದಿಯ ಮುಖದಲ್ಲಿ ಒಡಮೂಡಿದ ನಗೆ ಇವೆಲ್ಲವೂ ಒಂದೊಂದು ರಸಭಾವದಿಂದ ಕೂಡಿರುವದೆಂಬುದನ್ನು ನಾವು ಕಾಣಬಹುದು. ಇಂದು ನಮಗೆ—ಆಯಾ ವ್ಯಕ್ತಿಗಳನ್ನು ಕಾಣುವುದು ಸಾಧ್ಯವಿಲ್ಲ. ಆದರೆ ಮನೋಚಿತ್ರವನ್ನು ಚಿತ್ರಿಸುವ ಚಿತ್ರಣವನ್ನು ಮನಗೊಟ್ಟು ಓದಿದಾಗ ಆಯಾ ವ್ಯಕ್ತಿಗಳ ಚಿತ್ರವು ಕಣ್ಣೆದುರಿನಲಿ ಕಟ್ಟುವುದು. ರಾಮಚಂದ್ರ ಪ್ರಭುವಿನ ಮುಖದಲ್ಲಿ ನೆಲೆಸಿದ ನಗೆಯಲ್ಲಿ—ಮಾನವನ ಜೀವನದ ಧ್ಯೇಯವಾದವು ನೆಲಸಿದ್ದರೆ, ಅವೇ ಲಕ್ಷ್ಮಣನ ಮೊಗದಲ್ಲಿ ನೆಲಸಿದ ನಗೆಯಲ್ಲಿ—ಅಣ್ಣ ಅತ್ತಿಗೆಯರ ಮೇಲಿನ ಪ್ರೇಮದ ಭಾವವು—ಎದ್ದು ಕಾಣಿಸುವದು. ಊರ್ಮಿಲೆಯ ಪ್ರಸನ್ನ ಪೂರ್ಣ ನೆಲಸಿದ ನಗೆಯಲ್ಲಿ ಪತಿಯ ವಿಷಯದಲ್ಲಿಯ ಆದರ ಪ್ರೇಮಗಳು ನೆಲಸಿರುವವು. ರಾಮನು ವನವಾಸಕ್ಕೆ ಹೊರಟಾಗ ಕೈಕೆಯಿಯ ಮೊಗದಲ್ಲಿ ನೆಲಸಿದ ನಗೆಯಲ್ಲಿ ತಿರಸ್ಕಾರ ಮಿಶ್ರಿತ—ಆನಂದವನ್ನು ನಾವು ಕಾಣಬಹುದು. ಆ ಮೇಲೆ ಗೌತಮ ಬುದ್ಧ—ಮಹಾವೀರ ಇವರ ಮೊಗದಲ್ಲಿ ನೆಲಸಿದ ನಗೆಯಲ್ಲಿ—ಸತ್ಯ ಅಹಿಂಸೆಯ ವಿಷಯಿಕವಾದ ಕಳಕಳವು ತುಂಬಿ ತುಳುಕುವುದು. ಶ್ರೀಮತ್ ಜಗದ್ಗುರು ಶಂಕರಾಚಾರ್ಯರ ವಿಷಯದಲ್ಲಿ ಹೇಳುವುದಾದರೆ ಅವರ ನಗೆಯಲ್ಲಿ ಹಿಂದೂ ಧರ್ಮದ ತೇಜ ಏವಂ ಗೆಲವಿನ ನಗೆ ಕಂಡು ಬರುವುದು. ಮಧ್ವಾಚಾರ್ಯರ ಮುಖದಲ್ಲಿ ಪ್ರಾಸಂಗಿಕ ಗಾಂಭೀರ್ಯ ಪೂರ್ಣ ನಗೆಯು ಕಂಡುಬರುವುದು. ಶ್ರೀ ಬಸವೇಶ್ವರರ ನಗೆಯಲ್ಲಿ ಜನಮನದ ಉದ್ಧಾರ ಮಾಡುವ ಸಾಮರ್ಥ್ಯವನ್ನು ನಾವು ಕಾಣಬಹುದು.

ಕೆಲವರಲ್ಲಿ ಈ ಸಹಜ ಪ್ರವೃತ್ತಿಯು (ನಗೆಯು) ಹೆಚ್ಚಾಗಿ ಕಂಡುಬರುವುದು. ನನಗೋರ್ವ ಗೆಳತಿಯಿದ್ದಾಳೆ. ಅವಳನ್ನು ಕಂಡಕೂಡಲೇ ನಗೆಯು ಬರುವುದು—ಅಂದರೆ ಅವಳು ಶೂರ್ಪನಖಿಯಿದ್ದಾಳೆಂದು ಮಾತ್ರ ಯಾರೂ ತಿಳಿದುಕೊಳ್ಳಬೇಡಿರಿ ಸೌಂದರ್ಯವತಿಯಿದ್ದಾಳೆ; ತುಂಬ ಓದಿದವಳಿದ್ದಾಳೆ. ಆದರೆ ಈ ಪ್ರವೃತ್ತಿಯು ಹೆಚ್ಚು ಪ್ರಮಾಣದಲ್ಲಿರುವುದರಿಂದ—ಅವಳ ಮಾತಿನಲ್ಲಿ ನಗೆಯು ತುಂಬಿರುವುದು. ಅವಳ ವರ್ತನದಲ್ಲಿ ನಗೆಯು ತುಂಬಿರುವುದು. ಅವಳನ್ನ ಕಂಡಾಗ ಬೀರಬಲ್ಲನ ಚತುರೋಕ್ತಿ, ತೆನ್ನಾಲಿಯ ಚತುರೋಕ್ತಿಗಳು, ಪಂಚತಂತ್ರ ಹಿತೋಪದೇಶದಲ್ಲಿಯ ಕೆಲವೊಂದು ಕಥೆಗಳ ನೆನಪಾಗುವುದು, ಆದರೆ ಮಾನವನ ಇಂದಿನ ಜೀವನದಲ್ಲಿ ನಗೆಯು ಹೊಗೆಯಾಗಿ ಪರಿಣಮಿಸಿರುವುದೂ, ಸರಸವು ನಿರಸವಾಗಿ ಪರಿಣಮಿಸಿ ನಗೆಯು ವಿಕೃತ ಭಾವ ಏವಂ ರಸಗಳಿಂದ ಕೂಡಿರುವುದನ್ನು ನಾವು ಕಾಣಬಹುದು.

ರೂಪ, ಕುಲ—ಗೋತ್ರ, ಜಾತಿ—ಕುಲ ಬಡವ—ಬಲ್ಲಿದ, ಪಾಪಿಷ್ಟ—ಪುಣ್ಯವಂತ, ಹಿರಿಯ—ಕಿರಿಯ, ಉಚ್ಚ—ನೀಚ, ಈ ಮಾನವನ ಪ್ರಭೇದಗಳನ್ನು ನಗೆಯು ಲೆಕ್ಕಿಸುವದಿಲ್ಲ. ಮಳೆಯು ಎಲ್ಲೆಡೆಗೆ ಆಗುವಂತ ಇದು ಎಲ್ಲರ ಜೀವನದಲ್ಲಿ ನೆಲಸಿರುವದು. ಬಿಸಿಲು ಎಲ್ಲೆಡೆಗೆ ಬೀಳುವದು. ಆದರೆ ಅದನ್ನು ಪ್ರಸರಿಸುವ ಪ್ರಮಾಣ ಎಲ್ಲೆಡೆಗೆ ಸಮನಾಗಿರುವದಿಲ್ಲವೆಂಬುವದನ್ನು ನಾವು ನೋಡಬಹುದು, ಬಂಗಾರದ ವಸ್ತು-ಒಡವೆಗಳು, ಆಭರಣಗಳನ್ನು ಯಾರೇ ಧರಿಸಿದರೂ ಸೌಂದರ್ಯವನ್ನು ಬೀರುವುದಿಲ್ಲವೇನು? ಈ ಒಡವೆ, ವಸ್ತ್ರಾಭರಣಗಳು ಎಲ್ಲರ ಮನಸ್ಸನ್ನು ಸಮವಾಗಿ ಸಂತೋಷಪಡಿಸುವಂತೆ ನಗೆಯು ಸಹ ಇರುವುದೆಂದು ಹೇಳಬಹುದು. ನಗೆಯು ಮಾನವನಿಗೊಂದು ಅಲಂಕಾರ! ಯಾವುದೇ ಭೇದ—ಭಾವವನ್ನು ಎಣಿಕೆಗೆ ತಾರದೆ ವಿಧಾತನು ಮಾನವನಿಗೆ ಇವನ್ನು ಕೊಟ್ಟಿದ್ದಾನೆ. ಆದರೆ ಮಾನವನ ಬುದ್ಧಿ ಭ್ರಂಶವಾದಾಗ ಅವನು ನಗುವ ನಗೆಯು ಮಾತ್ರ ಉಳಿದೆಲ್ಲ ನಗೆಗಳಿಗಿಂತ ಬೇರೆ ರೀತಿಯದಾಗಿರುವದು, ಅನೇಕ ಶಾಸ್ತ್ರಜ್ಞರು—ನಗೆಗೂ ಮತ್ತು ಮಾನವನ ಸ್ವಭಾವಕ್ಕೂ ಯಾವುದೇ ಸಂಬಂಧವಿಲ್ಲವೆಂದು ವಾದಿಸುವರು. ಉಳ್ಳಾಗಡ್ಡೆ ಹೆಚ್ಚುವಾಗ ಕಣ್ಣೀರು ಬರುವುದುಂಟು! ಅದು ದುಃಖದ ಪ್ರತೀಕವೇ! ಬಿಸಿಲಿನಲ್ಲಿ ಹೋಗಿ ಬಂದರೆ ಮುಖ ಕೆಂಪಾಗುವುದು ಲಜ್ಜೆಯು ಇಲ್ಲವೆ, ಕ್ರೋಧದ ಪ್ರತೀಕವೇ? ಎಂದು ವಾದಿಸುವರು. ಏನೇ ಆದರೂ ಮಾನವನಲ್ಲಿಯ ಸಹಜ ಪ್ರವೃತ್ತಿಗಳಂತೆ—ಅವನ ಜೀವನದಲ್ಲಿ ನಗೆಯು ಸ್ಥಾನವನ್ನು ಪಡೆದು ಕೊಂಡಿರುವದು.

ಕೆಲವೊಂದು ಸಂದರ್ಭದಲ್ಲಿ ನಗೆಯು ಮಾನವನ ತದ್ವೇಷಂ ಸಮಾಜದ ಸುಧಾರಣೆಯನ್ನೂ ಮಾಡುವುದೆಂದು ಹೇಳಬಹುದು ಒಬ್ಬನನ್ನು ಸಮಾಜ ನಗೆಗೀಡು ಮಾಡಿದಾಗ ಮಾನವನು ಅದನ್ನು ಕಂಡು ತನ್ನ ಇರುವಿಕೆಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಮಾನವರಿಂದ ಸಮಾಜವೂ ಸುಧಾರಿಸಬಹುದೆಂದು ಹೇಳಬಹುದು. ಸಾಮಾಜಿಕ ಕ್ರಾಂತಿಯನ್ನು ಮಾಡುವ ಅನೇಕ ಸಾಧನಗಳಲ್ಲಿ ನಗೆಯು ಬಹು ಮುಖ್ಯವಾದ ಸ್ಥಾನವನ್ನು ಏವಂ ಪಾತ್ರವನ್ನು ಪರಿಧಾರಣಮಾಡುವುದೆಂದು ಹೇಳಬಹುದು ನಗೆಯು ಮುಖ್ಯ ಪುರುಷರಲ್ಲಿ ನೆಲಸಿರುವುದು. ಯೋಧರಲ್ಲಿ, ಪಂಡಿತರಲ್ಲಿ, ಪಾಮರರಲ್ಲಿ, ರಾಜಕಾರಣಿಗಳ ಅಂತರಂಗದಲ್ಲಿ ಎಲ್ಲೆಗಲ್ಲಿ ದೇವರು ವಿವಿಧ ರೂಪದಲ್ಲಿ ಹೆಚ್ಚುಕಡಿಮೆ ಪ್ರಮಾಣದಲ್ಲಿ ನೆಲಸಿರುವಂತೆ—ಇದು ಮಾನವನಲ್ಲಿ ನೆಲಸಿರುವದೆಂದು ಹೇಳಬಹುದು. ಇದರಂತೆ ಕೆಲವರು ಇದರ ಉಪಯೋಗವನ್ನು ಕಾಲಿದಾಸಾದಿ ಕವಿಗಳು ಕಾವ್ಯ ಬರೆಯುವುದರಲ್ಲಿ ಉಪಯೋಗಿಸಿಕೊಂಡರು. ಉಳಿದವರು ತಮ್ಮ ತಮ್ಮ ಮನೊಮಟ್ಟಲಿನಂತೆ ಇದರ ಉಪಯೋಗವನ್ನು ಮಾಡಿಕೊಂಡಿರುವುದನ್ನು ನಾವು ಕಾಣಬಹುದು. ಹಾಲು ಮೊಸರಾಗುವಂತೆ ನಗೆಯು ಕೂಡಾ ಕೆಲವೊಂದು ಸಂದರ್ಭದಲ್ಲಿ ವಿಷವಾಗುವುದುಂಟು. ಆದರೆ ವಿಷದಲ್ಲಿಯೂ ಒಂದು ಗುಣವಿದೆ ಅದನ್ನು ಮಾನವನು ಮರೆತಿರುತ್ತಾನೆ. ವಿಷವನ್ನು ಮಾನವ ಅತಿಯಾಗಿ ಸೇವಿಸಿದರೆ ಅದು ಮಾನವನ ಜೀವವನ್ನು ಹರಣಮಾಡುವುದು. ಆದರೆ ಅದೇ ವಿಷವನ್ನು ವೈದ್ಯರು ಔಷಧದಲ್ಲಿ ಉಪಯೋಗಿಸಿದರೆ ಉತ್ತಮ ಔಷಧವಾಗಿ ಮಾನವನಿಗೆ ಉಪಕಾರಿಯಾಗುವುದು. ಈ ವ್ಯಾವಹಾರಿಕ ಸತ್ಯವನ್ನು ಕಣ್ಣೆದುರಿನಲ್ಲಿ ಇಟ್ಟುಕೊಂಡು ನಗೆಯನ್ನು ಮಾನವನು ತನ್ನ ಜೀವನದಲ್ಲಿ ಬಳಸಿಕೊಂಡರೆ ನಿಶ್ಚಯವಾಗಿ ಅದು ಮಾನವನ ಜೀವನವನ್ನು ಸುಖಮಯವಾಗಿ ಮಾಡುವುದರಲ್ಲಿ ಸಂದೇಹವಿಲ್ಲವೆಂದ್ಹೇಳಬಹುದು.

ಶ್ರೀಮತಿ ರತ್ನಾ ಶಾಸ್ತ್ರಿ.


### ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.



ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

### ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

**SRI GAJANANA CLOTH STORES,**

TENKAPET, **UDIPI.** S. KANARA.





### ಕುಮಾರಿ ಬಿಲ್ಲೆಗಳು

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & CO. (N. J.) CALCUTTA-40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

## ಗೆಳೆಯನಿಗೆ ಓಲೆ—೩

# ಲೇಖಕನು ಸಾಮಾಜಿಕ ದೋಷಗಳ ವಿಮರ್ಶಕ, ನಿಜ.

### ಆದರೆ, ಆತನ ಚಿತ್ರಣದಿಂದ ವ್ಯಕ್ತಿಗಳು ಹೀನ ಪ್ರೇರಣೆ ಹೊಂದುವಂತಿದ್ದರೆ ಅದು ಘಾತುಕ!

ನನ್ನ ಗೆಳೆಯಾ,

ನನ್ನ ಹಿಂದಿನ ಪತ್ರದಲ್ಲಿ ಕನ್ನಡದ ಆಧುನಿಕ ಸಾಹಿತ್ಯದ ಕಾದಂಬರಿಕಾರರ ಕುರಿತು ಕೆಲ್ವಾರು ಮಾತುಗಳನ್ನು ಬರೆದಿದ್ದೆ. ಕೆಲವು ಉದಯೋನ್ಮುಖ ಲೇಖಕರಿಗೆ ನನ್ನ ಮಾತುಗಳು ತೀರಾ ಕಹಿಯಾಗಿ ಕಂಡಿರಬಹುದು. ಕಾದಂಬರಿಯ ಬರವಣಿಗೆ ಎಂದರೆ ಅದೊಂದು ಬೃಹತ್ ಯೋಜನೆ—ಎಂಬ ಭಾವನೆಯನ್ನು ಮನಸಿನಲ್ಲಿ ಇರಿಸಿಕೊಂಡು ಕಾರ್ಯತಃ ಯಾವೊಂದು ಬಗೆಯ ಕಲಾತ್ಮಕ ಕೃತಿ ರಚಿಸಲು ಸಾಧ್ಯವಾಗಿರುವವರ ಪಾಲಿಗೆ ನನ್ನ ಮಾತುಗಳು ರಸಹೀನವಾಗಿ ಕಾಣಬಹುದು. ಕನ್ನಡ ಸಾಹಿತ್ಯ ಕೀಳು ಮಟ್ಟಕ್ಕೆ ಇಳಿಯುವುದು ನನಗೆ ಸಲ್ಲದ ವಿಚಾರ. ಪ್ರಯತ್ನಪೂರ್ವಕವಾಗಿ, ಲೇಖಕರೆಲ್ಲರೂ ಶ್ರಮಿಸಿದರೆ ಸಾಧ್ಯವಾಗಬಲ್ಲಂತಹ ಮಾತನ್ನು ನಾನು ಬರೆದುದು ಕನ್ನಡ ಸಾಹಿತ್ಯದ ಏಳಿಗೆಯನ್ನು ಹಾರೈಸಿಯೇ.

ಒಂದೂವರೆ ರೂಪಾಯಿಯ ಕೈಹೊತ್ತಗೆಗಳ ಕಾಲವಿದು. ಕೊಂಡು ಓದುವವರ ಸಂಖ್ಯೆ ಬೆಳೆಯಬೇಕು—ಇದರಿಂದ ಸಾಹಿತ್ಯದ ಬೆಳವಣಿಗೆ ಆಗಬೇಕು—ಎಂಬ ಮನೋದ್ದೇಶದಿಂದ ಈ ರೀತಿ ಪ್ರಕಟನಾಕಾರ್ಯ ಸ್ತುತ್ಯಾರ್ಹವೇನೋ ನಿಜ. ಆದರೆ ಈ ಕೈ ಹೊತ್ತಗೆಗಳಲ್ಲಿ ಬೆರಳೆಣಿಕೆಯ ಕೆಲವನ್ನು ಬಿಟ್ಟರೆ, ಉಳಿದ ಪ್ರಕಟನೆಗಳು ತೀರಾ ಸಾಮಾನ್ಯ ದರ್ಜೆಯವೆಂದು ವಿಮರ್ಶಕರಾದವರೆಲ್ಲರ ಅಭಿಪ್ರಾಯ. ಪುಸ್ತಕಗಳ ಮಾರಾಟದ ದೃಷ್ಟಿಯಿಂದ ಅವುಗಳ ತೂಕವನ್ನು ಪರೀಕ್ಷಿಸುವುದು ಎಷ್ಟು ಸಮಂಜಸವಾದುದೆಂದು ನಾನು ಹೇಳಲಾರೆ. ಕಾರಣ ಕೊಂಡು ಓದುವವರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಈ ಸಮಯದಲ್ಲಿ, ಕೆಲವು ಪ್ರಬುದ್ಧ ಬರಹಗಳು—ವಿಚಾರಶೀಲ ಬರಹಗಳು, ನೂರರ ಎಣಿಕೆಗಿಂತ ಮಿಗಿಲಾಗಿ ಮಾರಿಹೋಗುತ್ತಿಲ್ಲ ಎಂಬುದು ಗಮನಾರ್ಹವಾದುದು. ಕನ್ನಡ ಸಾಹಿತ್ಯದ ಕೆಲವು ಅತ್ಯುತ್ತಮ ಕೃತಿಗಳ ಸಾವಿರ ಪ್ರತಿಗಳು ಮುಗಿಯಬೇಕಾದರೆ, ಹತ್ತು ವರುಷಗಳಿಗಿಂತಲೂ ಹೆಚ್ಚಿನ ಕಾಲಾವಕಾಶ ಬೇಕಾಯಿತು ಎಂಬುದು ನಾವೆಲ್ಲರೂ ತಿಳಿದಿರಬೇಕಾದ ವಿಷಯ. ಉತ್ತಮ ಕೃತಿಗಳು ಈ ರೀತಿಯ ನರಳಿಕೆಯಿಂದ ಬಾಳಿ ಬದುಕುತ್ತಿರುವಾಗ, ಕಲಾಶೂನ್ಯ ಕೃತಿಗಳು ಏಕೆ ಮುಂದುವರಿದುವು. ಎಂಬುದನ್ನು ಪ್ರತಿಯೊಬ್ಬ ಓದುಗನೂ ಯೋಚಿಸಬೇಕು.

ಕೆಲವು ದಿನಗಳ ಹಿಂದೆ ಕನ್ನಡದ ಸುಪ್ರಸಿದ್ಧ ಲೇಖಕರೊಬ್ಬರು ಬರೆದ ಒಂದು ಕಾದಂಬರಿಯನ್ನು ಓದುವ ಪ್ರಮೇಯ ನನಗೆ ಬಂದಿತು. ಹೆಣ್ಣಿನ ಅತಿ ಕಾಮುಕತೆಯ ಚಿತ್ರ ಅಲ್ಲಿ ಮುಖ್ಯವಾದುದು. ಅನೇಕ "ಕೇಸ್ ಹಿಸ್ಟರಿ"ಗಳನ್ನು ಓದಿಕೊಂಡು ಕಾದಂಬರಿಗಳನ್ನು ರಚಿಸಲಾಗಿದೆ ಎಂಬ ಮುನ್ನುಡಿ ಇದ್ದಿತು. ಕೆಲವು ಪಾಶ್ಚಾತ್ಯ ಲೇಖಕರು ಕೇಸ್ ಹಿಸ್ಟರಿಗಳನ್ನು ಆಧರಿಸಿ ಬರೆದಿರುವ ಬರಹಗಳೊಡನೆ, ಈ ಕಾದಂಬರಿಯನ್ನು ಹೋಲಿಸಿ ಕಂಡರೆ, ಇದೊಂದು ಕ್ಷುದ್ರ ಕಾದಂಬರಿಯಾಗಿ ನನಗೆ ತೋರಿತು. ಜೀವನದಲ್ಲಿ ಅನ್ನಕ್ಕೆ ಇರುವ ಪ್ರಾಮುಖ್ಯತೆ ಕಾಮಕ್ಕೆ ಇರಬಹುದು. ಆದರೆ ಅನ್ನಕ್ಕಾಗಿ ನಡೆಯುವ ಸಂಗ್ರಾಮದ ಚಿತ್ರಣವನ್ನು ಚಿತ್ರಿಸುವಷ್ಟು ಕಲಾತ್ಮಕವಾಗಿ, ಕಾಮದ ಚಿತ್ರಣವನ್ನೇಕೆ ಮಾಡಬಾರದು? ಅಶ್ಲೀಲ, ಕೀಳು ವಿವರಣೆಗಳಿಂದ ಇನ್ನೂರಕ್ಕೂ ಮಿಕ್ಕಿ ಪುಟಗಳಷ್ಟು ವ್ಯಾಪಕ ಹೊಂದಿರುವ ಈ ಕಾದಂಬರಿಯಲ್ಲಿ, ನನಗೆ ಹಿತವಾಗಿ ಕಂಡ ಒಂದೇ ಒಂದು ವಿಚಾರವೆಂದರೆ ಅದು ಕಾದಂಬರಿಯ ಮುದ್ರಣ. ಈ ಬಗೆಯ ಕಾದಂಬರಿ ರಚನೆಗೆ ಯಾವ ಕೇಸ್ ಹಿಸ್ಟರಿಗಳ ಅವಶ್ಯಕತೆ ಇರಲಾರದು. ಈ ಕಾದಂಬರಿಯನ್ನು ಬರೆಯದೆ, ಬರಿಯ ಕೇಸ್ ಹಿಸ್ಟರಿಯನ್ನು ಮಾತ್ರ ಶುದ್ಧವಾಗಿ ಬರೆಯುತ್ತಿದ್ದರೆ ಒಳಿತಾಗುತ್ತಿತ್ತು. ಅತಿ ಕಾಮುಕ ವ್ಯಕ್ತಿಗಳು ಜಗತ್ತಿನಲ್ಲಿ ಇಲ್ಲವೆಂದಿಲ್ಲ ಅಥವಾ ಇಂತಹ ವಸ್ತುವನ್ನು ಆಧರಿಸಿ ರಚಿಸಿದ ಕೃತಿಗಳು ಇಲ್ಲವೆಂದಿಲ್ಲ. ಆದರೆ ಇಷ್ಟು ಕೀಳು ದರ್ಜೆಯದಾಗಿ ಯಾವುದೂ ಪ್ರಕಟಗೊಂಡಿರಲಾರದು.

ನೋಡು ಗೆಳೆಯಾ, ಭಾರತದ ಪ್ರತಿಯೊಬ್ಬ ಪ್ರಜೆಯೂ ತನ್ನ ದೇಶದ ಹಿತಕ್ಕಾಗಿ ದುಡಿಯಬೇಕಾದ ಇಂತಹ ಸಮಯದಲ್ಲಿ, ದೇಶದ ಸಾಂಸ್ಕೃತಿಕ ದೃಷ್ಟಿಯಿಂದ ಗಣನೀಯ ವ್ಯಕ್ತಿಯಾದ ಲೇಖಕನಿಗೆ ಎಷ್ಟೊಂದು ಹೊಣೆಗಾರಿಕೆಗಳಿಲ್ಲ? ಹೊಣೆ ಹೊತ್ತಿರುವ ಲೇಖಕರೇ ತಮ್ಮ ಹೀನ ಸಾಹಿತ್ಯವನ್ನು ಜನತೆಗೆ ಒದಗಿಸುವುದರಿಂದ ಸಾಮಾಜಿಕ ಅಭಿವೃದ್ಧಿ ಯಾದೀತೇ? ಸಾಹಿತ್ಯ—ಕೀಳು ಮಟ್ಟದ ಬರವಣಿಯಲ್ಲ. ಅಲ್ಲಿ ವಿವೇಚನಾಪೂರ್ಣ, ಕಲಾತ್ಮಕ ಕೃತಿಗಳಿಗೆ ಮಾತ್ರ ಸ್ಥಾನ, ಹೊರತಾಗಿ ಇಂತಹ ಅಸಭ್ಯ—ಹೊಲಸು ಕಾದಂಬರಿಗಳಿಗೆ ಯಾವ ಸ್ಥಾನವೂ ಇರಲಾರದು.

ಶೋಕಪಟ್ಟಿರುವ ಒಳ್ಳೇತನಗಳನ್ನು ಮಾತ್ರ ಚಿತ್ರಿಸಿದರೆ, ಸಾಹಿತ್ಯದ ಸಮಗ್ರತೆಗೆ ಕೊರತೆ ಬರಲಾರದೇ? ಎಂಬೊಂದು ಸಮಸ್ಯೆ ಈಗ ನಿನ್ನ ಮನಸ್ಸಿನೆದುರು ಇರಬಹುದು. ಮೇಲು—ಕೀಳು; ಸತ್ಯ—ಅಸತ್ಯ; ಆಕರ್ಷಕ—ವಿಕರ್ಷಕ—ಇವೆಲ್ಲವುಗಳು ಸಾಹಿತ್ಯದಲ್ಲಿ ಬರಬೇಕು. ಆದರೆ ಅವುಗಳು ಬರಹ ರೂಪದಲ್ಲಿ ಮೂಡಿ ಬರುವಾಗ, ಅವುಗಳಲ್ಲಿ ಕಲಾತ್ಮಕತೆಗೆ ಕೊರತೆ ಬರಬಾರದು. **ಲೇಖಕ ಸಮಾಜದ ಕೊಳಚೆಗಳನ್ನು ನಿರ್ಭಯವಾಗಿ ಹೊರಗೆಡಹ ಬಲ್ಲ ವಿಮರ್ಶಕನೇನೋ ನಿಜ. ಆದರೆ ಆ ಹುಳುಕುಗಳ ಚಿತ್ರಣದಿಂದ ಹೊಸ ವ್ಯಕ್ತಿಗಳು ಅದೇ ಬಗೆಯ ಹೀನ ಕಾರ್ಯಗಳಿಗೆ ಇಳಿಯುವಂತೆ ಪರೋಕ್ಷವಾಗಿ ಪ್ರೇರೇಪಿಸುವುದು ಶುದ್ಧ ಅನಾಗರಿಕ.**

ಗೆಳೆಯಾ, ಇಂತಹ ಬರಹಗಳನ್ನು ಖಂಡಿಸುವ ಮನೋಸ್ಥೈರ್ಯ ನಮ್ಮಲ್ಲಿ ಹುಟ್ಟಬೇಕು. ಒಳಿತನ್ನು ತೂಗಿ, ಸ್ವೀಕರಿಸುವ ಜಾಣ್ಮೆ ಎಲ್ಲಾ ಓದುಗರಲ್ಲಿ ಬೆಳೆದರೆ, ಸ್ವಾಭಾವಿಕವಾಗಿ ಈ ಬಗೆಯ ಕೀಳು ಲೇಖಕರು ಸುಮ್ಮಗಿರಬಲ್ಲರು.

ನಿನ್ನವ—

"ನಾಗೇಶ"



ಎರಡನೇ ಯೋಜನೆಯಲ್ಲಿ ನಾವು ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ನಿರ್ಣಯ ಮಾಡಿದ್ದೇವೆ. ಯಂತ್ರಗಳನ್ನು ಉತ್ಪಾದಿಸುವ ಯಂತ್ರಗಳೂ ನಮ್ಮಲ್ಲಿರಬೇಕೆಂಬುದು ನಮ್ಮ ಹಂಬಲ. ಚಿತ್ರದಲ್ಲಿ ಮೋಟಾರು ಕಾರುಗಳ ತಯಾರಿಕೆಯಲ್ಲಿ ಉಪಯೋಗಿಸುವ ಯಂತ್ರ ವಿಶೇಷವೊಂದನ್ನು ನೋಡಬಹುದು.

## ನಗೆ ಹನಿ

### ಕಲ್ಲೊಂದು—ಹಕ್ಕಿ ರಡು

ಇಬ್ಬರು ಸಂಭಾವಿತರು ರಸ್ತೆ ಹಿಡಿದು ನಡೆದಿದ್ದರು. ಅರೆಹುಚ್ಚನಂತಿದ್ದವನೊಬ್ಬನು ಅವರ ಮಧ್ಯದಲ್ಲೇ ಹಾದಿಬಿಡಿಸಿಕೊಂಡು ಹೋದ ಇವರಲ್ಲೊಬ್ಬ ಇನ್ನೊಬ್ಬನೊಡನೆ ಹೇಳಿದ: ಒಂದೋ ಅವನು ಹುಚ್ಚನಾಗಿರಬೇಕು; ಅಥವಾ ಸಭ್ಯತೆಯರಿಯದ ಕಾಡುಮನುಷ್ಯನಾಗಿರಬೇಕು.

ಈ ಮಾತು ಕೇಳಿ ಅರೆಹುಚ್ಚ ಹೇಳಿದ: ಹಾಗಲ್ಲ ಸ್ವಾಮಿ ಆವೆರಡರ ಮಧ್ಯಸ್ಥಾನದಲ್ಲಿದ್ದೇನೆ.

೦೦ ೦೦

### ಪ್ರಾರ್ಥನೆಗೆ ತಕ್ಕ ವರ

"ಲೀಲಾ, ನಿನ್ನ ಉಪದ್ರ ಮಿತಿಮೀರಿತು. ನೋಡೆ ನಾನು ನಿನ್ನ ತಾಯಿಯಾಗಿ ಹೋಗುತಿದ್ದಗೆ ಒಂದೇ ದಿನದಲ್ಲಿ ಬುದ್ಧಿ ಕಲಿಸುತಿದ್ದೆ."

'ಹಾಗೇನೇ ಆಗಲಿ ಪಪ್ಪನೊಡನೆ ಹೇಳುತ್ತೇನೆ'.

೦೦ ೦೦

### ಸುಂದರ ವಸ್ತು ಕಂಡರೆ ಓಕರಿಕೆಯೇ?

ನಳಿನ—'ಅತ್ತಿಗೆ ನಮ್ಮ ಅಣ್ಣ ಹೇಳುತ್ತಾರೆ ನಿಮ್ಮ ತಲೆಗೂದಲಿನಷ್ಟು ಚಂದವಾದ ಕೂದಲೇ ಇಲ್ಲವಂತೆ. ನಾನು ಹಾಗೆಯೇ ಹೆರಳನ್ನು ಹಾಕಿಕೊಳ್ಳಬೇಕಂತೆ.'

ಜಲಜ— 'ಸಾಕು ಬಿಡೇ ನನಗೆಲ್ಲಾ ಗೊತ್ತು ನಿನ್ನ ಅಣ್ಣನ ಬುದ್ಧಿ! ಅಷ್ಟು ಹೊಗಳುವವರಾದರೆ ನಿನ್ನೆ ಅನ್ನದಲ್ಲಿ ಒಂದು ಕೂದಲೆಳೆ ಇದ್ದುದನ್ನು ಕಂಡು 'ಇಸ್ಸಿಸ್ಸೀ' ಎಂದು ಓಕರಿಕೆ ತರುತಿದ್ದರೇ?

೦೦ ೦೦

### ಮಿಠಾಯಿಯಂತಹ ತುಟಿ

"ಅಮ್ಮಾ ಮಿಠಾಯಿಕೊಡಮ್ಮಾ"

"ಇಲ್ಲ ಮಗೂ"

"ಹಾಗಾದರೆ ಒಂದು ಮುತ್ತು ಕೊಡು"

"ಆದೇಕೆ ಮಗು ಮುತ್ತು ಕೊಟ್ಟರೆ ಮಿಠಾಯಿಕೊಟ್ಟಂತಾಗುವುದೇ?

"ಹೌದಮ್ಮಾ! ನಿನ್ನ ತುಟಿ ಸಿಹೀ ಇರಬೇಕು—ಎಲ್ಲರೂ ಅದಕ್ಕೆ ಮುತ್ತುಕೊಡುತ್ತಾರೆ.

# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

## ಗಾಂಧೀ ಜಯಂತಿ

(೧ನೇ ಪುಟದಿಂದ)

ದೆಂಬುದನ್ನು ಕಂಡುಕೊಂಡು, ಜನರ ಮುಂದೆ ಅದನ್ನು ಮಂಡಿಸಿದ ಸಫಲ ಸಂಶೋಧಕನೂ ಹೌದು.

ತನ್ನದೊಂದು ಪ್ರತ್ಯೇಕ ಪಂಥವಿದೆ ಎಂದು ಅವರು ಒಪ್ಪಲಿಲ್ಲ. ಆದರೆ ಸತ್ಯ ಮತ್ತು ಅಹಿಂಸೆಗಳನ್ನು ತನ್ನ ಜೀವನ ಧರ್ಮವಾಗಿ ಅವರು ಅಂಗೀಕರಿಸಿದರು; ಕೋಟ್ಯಾಂತರ ಭಾರತೀಯರು ಇದೇ ಧರ್ಮವನ್ನು ಅನುಸರಿಸುವಂತೆ ಮಾಡು ವಷ್ಟು ಪ್ರಭಾವಿಯಾದ ಜೀವನವನ್ನು ಅವರು ಬಾಳಿದರು. ತನ್ನ ವ್ಯಕ್ತಿತ್ವಕ್ಕೆ ಅವರೆಂದೂ ಸಂಕುಚಿತ ವಿಚಾರ ಗೋಡೆಯ ರಕ್ಷಣೆಯನ್ನು ಅಪೇಕ್ಷಿಸಲಿಲ್ಲ. ಒಳ್ಳೆಯದು ಎಲ್ಲಿಂದ ಬಂದರೂ ಅದಕ್ಕೆ ಸ್ವಾಗತವನ್ನು ಕೊಟ್ಟರು. ಆದರೆ ಕೆಟ್ಟ ಗಾಳಿ ಬೀಸುವಾಗ ತನ್ನ ಕಾಲುಗಳು ಕಂಪಿಸದಂತೆ ಗಟ್ಟಿಯಾಗಿ ಊರಿನಿಂತುಕೊಳ್ಳುವ ಶಕ್ತಿಯನ್ನೂ ಅವರು ತೋರಿಸಿದರು. ಹೀಗೆ ಅವರ ವ್ಯಕ್ತಿತ್ವದ ಪ್ರಕಾಶವು ಎಲ್ಲೆಡೆಗೂ ಹಬ್ಬಿತು.

ನಮ್ಮ ರಾಷ್ಟ್ರೀಯ ಜೀವನದ ಯಾವ ರಂಗದಲ್ಲಿ ಗಾಂಧೀಜಿಯ ಜೀವನದ ವರ್ಚಸ್ಸು ಬಿದ್ದಿಲ್ಲ? ಶಿಕ್ಷಣ, ರಾಜಕಾರಣ, ವಿಜ್ಞಾನ, ಆರೋಗ್ಯ, ಸಮಾಜ ನೀತಿ, ಉದ್ಯಮ, ಕೃಷಿ, ಆಡಳಿತ—ಎಲ್ಲಿ ನೋಡಿದರೂ ಅಲ್ಲಿ ಗಾಂಧೀಜಿಯ ಸಲಹೆ, ಸೂಚನೆಗಳ ರಾಶಿಯೇ ಕಂಡುಬರುತ್ತದೆ. ಅವರು ಎಲ್ಲ ರಂಗದ ಚಟುವಟಿಕೆಯನ್ನೂ ತಮ್ಮ ಜೀವನ ಧರ್ಮಕ್ಕೆ ಅನುಗುಣವಾಗುವಂತೆ ಸಂಯೋಜಿಸಲು ಸಾಹಸಪಟ್ಟರು. ಸರ್ವೋದಯ ಎಂಬುದಾಗಿ ನಾವಿಂದು ಆದರದಿಂದ ಕರೆಯುವ ಧರ್ಮವನ್ನು ಪ್ರತಿಪಾದಿಸಲು ಗಾಂಧೀಜಿಯವರು ತಮ್ಮ ಪ್ರಯೋಗಗಳ ಮೂಲಕ ಸರ್ವ ಸಿದ್ಧತೆಗಳನ್ನು ನಡೆಸಿದರು.

ಭಾರತದಲ್ಲಿ ಗಾಂಧೀಜಿಪದಾರ್ಪಣ ಮಾಡಿದಾಗ ಪ್ರಥಮ ಮಹಾಯುದ್ಧದ ಜ್ವಾಲೆಗೆ ಈ ದೇಶವು ಗುರಿಯಾಗಿ ಎಲ್ಲರೂ ತತ್ತರಿಸುತ್ತಿದ್ದರು. ಮೋಂಟೆಗೊ—ಚೆಮ್ಸ್‌ಫೋರ್ಡ್ ಸುಧಾರಣೆಗಳು ಯಾರಲ್ಲೂ ಉತ್ಸಾಹವನ್ನು ವರ್ಧಿಸಲು ಸಮರ್ಥವಾಗಲಿಲ್ಲ. ಆಗ ಗಾಂಧೀಜಿಯವರು ತಮ್ಮ ತುತ್ತೂರಿಯನ್ನೂದಿದರು; ದೇಶಕ್ಕೆ ದೇಶವೇ ಅವರನ್ನು ಹಿಂಬಾಲಿಸಿ ನಡೆಯಿತು. ಈ ಶತಮಾನದ ಮೊದಲೆರಡು ದಶಕಗಳಲ್ಲಿ ನಾಯಕರಾಗಿದ್ದ ಗೋಖಲೆ, ತಿಲಕ, ದಾದಾಭಾಯಿ ನವರೋಜಿ, ಫಿರೋಜ ಶಹಾ ಮೆಹತಾ ಮುಂತಾದವರಲ್ಲಿ ಯಾರೊಬ್ಬರೂ ಗಾಂಧೀಜಿಯಷ್ಟು ವ್ಯಾಪಕವಾಗಿ ಭಾರತೀಯರ ಜೀವನವನ್ನು ಸ್ಪರ್ಶಿಸಿಲ್ಲ.

"ತರುಣ ಭಾರತ" ಸಾಪ್ತಾಹಿಕ ಪತ್ರಿಕೆಯನ್ನು ಅವರು ನಡೆಸ ತೊಡಗಿದ ಕೆಲವೇ ಸಮಯದಲ್ಲಿ ಅದರ ಚಂದಾದಾರರ ಸಂಖ್ಯೆ೩೫೦೦೦ರಿಂದ ೪೦೦೦೦ ಆಯಿತು ಈ ಪತ್ರಿಕೆಯ ಸಂದೇಶವನ್ನೋದಿ ಭಾರತದ ಪ್ರತಿಭಾನ್ವಿತ ಪುತ್ರರೆಲ್ಲರೂ ರಾಷ್ಟ್ರ ಸೇವೆಯ ದೀಕ್ಷೆಯನ್ನು ತೊಟ್ಟರು. ಹಿಂದುಗಳೇನು, ಮುಸ್ಲಿಮರೇನು, ಕ್ರೈಸ್ತರೇನು, ಜೈನರೇನು, ಪಾರ್ಸಿಗಳೇನು, ಯೆಹೂದಿಗಳೇನು—ಎಲ್ಲರಿಗೂ ಗಾಂಧೀಜಿಯೇ ಗುರುವಾದರು. ಜನರ ಸಾಮೂಹಿಕ ಚಳವಳವನ್ನು ಅವರು ಪ್ರಚೋದಿಸಿದರು—ಆದರೆ, ಈ ಚಳವಳವು ಸತ್ಯ ಮತ್ತು ಅಹಿಂಸೆಯ ದಾರಿಯನ್ನು ಬಿಟ್ಟು ಸಾಗದಂತೆ ಎಚ್ಚರವನ್ನು ವಹಿಸಿಕೊಳ್ಳುವ ಧೀರೋದಾತ್ತ ಗುಣಸಂಪನ್ನ ನಾಯಕತ್ವವನ್ನು ಅವರೇ ಹೊತ್ತುಕೊಂಡಿದ್ದರು. ಜನರನ್ನು ತನ್ನ ಈ ಉಚ್ಚ ತತ್ತ್ವಗಳ ಚೌಕಟ್ಟಿನಲ್ಲಿ ಇರಿಸಿಕೊಳ್ಳಲು ಸಾಧ್ಯವಾಗದುದಕ್ಕಾಗಿ ಅವರು ಉಪವಾಸ ಮತ್ತಿತರ ಪ್ರಾಯಶ್ಚಿತ್ತ ಕ್ರಮಗಳನ್ನು ಕೈಗೊಂಡುದಾದರೂ ಅದೆಷ್ಟು ಸಲ!

ತಾನು ಬ್ರಿಟಿಷರ ದ್ವೇಷಿಯಲ್ಲ, ಅವರ ಆಡಳಿತದ ವಿರೋಧಿ ಎನ್ನುತ್ತಿದ್ದರು ಗಾಂಧೀಜಿ. ವ್ಯಕ್ತಿಗತವಾಗಿ ಯಾದರೂ ದ್ವೇಷ ಸಲ್ಲದು ಎಂಬುದೇ ಅವರ ನಿಲುಮೆ. ಮನುಷ್ಯನಲ್ಲಿ ತಿಕ್ಕಾಟವಿರಬಾರದು; ಅಧಿಕಾರಲಾಲಸೆ ದೂರವಾಗಬೇಕು; ತ್ಯಾಗ ಬುದ್ಧಿ ಬೆಳೆಯಬೇಕು ಎಂದು ಅವರು ಹಾರೈಸಿದರು. ಹಿಂಸೆಯನ್ನು ತ್ಯಜಿಸಿ, ಶಾಂತ ವಿಧಾನದಿಂದಲೇ ಗುರಿಯನ್ನು ಸಾಧಿಸಿಕೊಳ್ಳುವ ದೊಡ್ಡ ಮನಸ್ಸಿನವರು ನಾವಾಗಬೇಕು ಎಂದು ಅವರು ಇಚ್ಛಿಸಿದರು. ವ್ಯಕ್ತಿಯ ಶ್ರೇಯಸ್ಸಿಗಾಗಲೀ, ರಾಷ್ಟ್ರದ ಕ್ಷೇಮಕ್ಕಾಗಲೀ, ಜಗತ್ತಿನ ಕಲ್ಯಾಣಕ್ಕಾಗಲೀ ಈ ಮಾರ್ಗಕ್ಕಿಂತಲೂ ಸರಳವಾದ, ಸುಲಭವಾದ, ಅಪಾಯ ರಹಿತವಾದ ಮತ್ತು ಶುಭಕಾರಕವಾದ ಬೇರೆ ದಾರಿಯನ್ನು ಬೇರೆ ಯಾರು ತೋರಿಸಿದ್ದಾರೆ? ನಮ್ಮ ನಡುವೆಯೇ ಬಾಳಿ ಈ ಮಾರ್ಗಾನುಸರಣೆಯು ಸಾರ್ಥಕವಾದುದೆಂದು ನಂಬಿಕೆ ಹುಟ್ಟುವಂತೆ ಸಾಧನೆಗಳ ಬಲಪಡೆದವರಾದರೂ ಬೇರೆ ಯಾರಿದ್ದಾರೆ? ಅದು ಗಾಂಧೀಜಿ ಮಾತ್ರ: ಆದುದರಿಂದ, ಅವರ ನೆನಪೇ ನಮಗೆ ತಾರಕವಾಗಲಿ!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**[ENGLISH MADE EASY]**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

**ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ**

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.


## ಕನ್ನಡಿಗನೆದುರಿಂದು ವಸಂತ ಬಂದಾಗ

ಮೂಡುತಲಿರೆ ರವಿ
ಆಡುತಲಿರೆ ಭುವಿ
ಕತ್ತಲೆಯೊಳ್ಳೇ ಹಣಿಕಿ
ಇಣುಕುತ್ತಲಿಹುದು

ಹಚ್ಚಹಸುರಿನ ಸೀರೆ ನೀಲಿಯಾ ಸೆರಗು
ಭುವನ ಮೋಹನೆ ತಾಯಿ ನಿನ್ನದೇ ಬೆರಗು
ನಿನ್ನ ನಿರ್ಮಲ ಕಾಂತಿ, ಮೋಹಿಸುವ ಸೊಬಗು
ಜನಮನದ ಮೂಲೆಯೊಳಗೇನೊ ಹೊಸ
ಕೊರಗು

ಹಕ್ಕಿಯುಲಿ ಗಾನ
ಮೋಹಕವು ನಿನ್ನ
ನವ ಮಧುರ ಸುಂದರವು
ಮಾತೆಯೂ ವದನ

ತರುಲತೆಯು ಫಲಕುಸುಮ ಸಂಚಯವ ತೂಗಿ
ಆರತಿಯನೆತ್ತುವವು ದಿನಕರಗೆ ಬಾಗಿ
ಕೋಗಿಲೆಯು ಸಸ್ಯಶ್ಯಾಮಲೆಯೊಂದು ಹಾಡೆ
ಮೊಂಟೆ ಹೃದಯದ ತಂತಿ ನೋಯುಗುವ ಪಾಡೆ

ನಲಿಯುತಲಿದೆ ಜಗ
ಹರಿಯುತಲಿದೆ ಸೊಗ
ಹೂವಳ್ಳಿ, ಮಿಗವಕ್ಕಿ
ಹಾಡೆ ಹೊಸರಾಗ

ಹಚ್ಚಹಸುರಿನ ತೋಟ ತೆಂಗುಗಳು ಎಲ್ಲು
ಕಂಗುಗಳ ಎಡೆಯಲ್ಲಿ ಮಾದುರದ ಗೆಲ್ಲು
ಹೊನ್ನ ಪರಿಮಾಣವಾದಲಿ ಹೊಂಗಿರಣನೆಲ್ಲು
ಕಂಬನಿಯೆ ಮುತ್ತು ಮಣಿ ನವರತ್ನಕಲ್ಲು

ತಾಯಿ ಭಾರತಿಯೆ,
ನಿನ್ನ ಮಾರುತಿಯೆ,
ನವ ಪ್ರಭೆ ಬೀರುತಿವೆ
ಕೀರ್ತಿ ಸಾರಥಿಯೆ

ಹಿಮ ಮಣಿಯು ಹೊಂಬಿಸಿಲ ಪ್ರತಿಬಿಂಬ
ಚೆಲುವು
ತಿಳಿಗೊಳದ ನೀರಿನಲಿ ತಾವರೆಯು ಚೆಲುವು
ಸದಿನದಗಳೆಡೆ ಸಪ್ತ ವರ್ಣ ಹೊಳೆ ಹೊಳೆಯೆ
ಮಾಯೂಮುಕುರ ನೆಳಲ ಕಾಣಿಸುವ ಪರಿಯೆ

ರಿಕ್ತ ಗಗನದಲಿ
ನಿಶಿಯ ರಾಜ್ಯದಲಿ
ಕತ್ತಲೆಯು ನಿನ್ನೆಡೆಗೆ
ಹೊಂಚುತಿರಲಲ್ಲಿ.

ನೀಲ ಗಗನದಿ ಮೇಘ ದೋಂಕಾರ ತೇಲಿ
ಭಾಸ್ಕರನ ತೇಜವನೆ ತೀಡಿ ತಂಗಾಳಿ
ಸುಂದರೋದ್ಯಾನದಲಿ ಹಾರೆ ಭೃಂಗಾಳಿ
ಹೃದಯದ ಸರಸಾಗಿ ಚಿಂತೆ ರಾಜ್ಯವಾಳಿ

ಪಾಕಗಾನವಿದು
ಚರಮಗೀತವದು
ದುಃಖದಲೆಗಳಪ್ಪಳಿಸಿ
ಮನವು ಶೂನ್ಯವದು

ಭೂಮಾತೆ ನಿನ್ನೆದೆಯ ಮಂದಿರದೊಳಿರುವೆ
ಮಮತೆ ತುಂಬಿದ ನಿನ್ನ ಮಡಿಲೊಳೊರಗಿರುವೆ
ನಿನ್ನ ಉಜ್ವಲ ಕೀರ್ತಿಗಾನ ಹೊಳೆ ಹರಿದೂ
ಎದೆಯೊಳೇಕೊ ಬಾಡಿಸುವ ಹೂವಿನಂತಿಹುದು!

—ಕೆ. ತಿಮ್ಮಪ್ಪ ಗಟ್ಟಿ.
ಪೆರಡಾಲ (ದ. ಕ.)


## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

**ನವಯುಗ ಪ್ರೆಸ್, ಉಡುಪಿ.**


Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬
VOL. 36

11—10—1956

ಸಂಚಿಕೆ ೬
NO. 6

## ವಿದ್ಯಾರ್ಥಿಗಳಲ್ಲಿ ಶಿಸ್ತು

### ಶೈಕ್ಷಣಿಕ ಸಂಸ್ಥೆಗಳಲ್ಲಿ ಕಲಿಯುತ್ತಿರುವವರು ಹೋಗುತ್ತಿರುವುದೆತ್ತ?

**ಅಹಮ್ಮದಾಬಾದಿನಲ್ಲಾದುದು ಪ್ರಧಾನಿಗಳ ತೇಜೋವಧೆಯಲ್ಲ; ಭಾರತೀಯ ಶೀಲದ ಮಾರಾಟ!**

ನಿಜವಾದ ಭಾರತೀಯ ದೇಶಪ್ರೇಮಿಯೊಬ್ಬನು ಇಂದು ಅರೆಹೊಟ್ಟೆಯಿಂದ ಜೀವಿಸಬಲ್ಲ; ಅರೆ ಬಟ್ಟೆಯಿಂದ ಇರಬಲ್ಲ; ಎಲ್ಲಾ ತರದ ಶೋಷಣಗಳನ್ನು ಸಹಿಸಬಲ್ಲ; ಆದರೆ ಭಾರತದ ಭಾಗ್ಯ ವಿಧಾತ ನೆಹರುಗಳಿಗೆ ಉದ್ದೇಶಪೂರ್ವಕವಾಗಿ ಒಂದು ಅವಮಾನವಾಯಿತೆಂಬುದನ್ನು ಕೇಳಿ 'ಅಯ್ಯೋ' ಎಂದು ಉದ್ಗಾರವೆತ್ತಿ ಪರಿತಪಿಸದಿರಲಾರ. ಮೊನ್ನೆ ಅಹಮ್ಮದಾಬಾದಿನಲ್ಲಿ ನಡೆದ ದುರ್ಘಟನೆಯನ್ನು ಕೇಳುವಾಗ, ನೆನೆಯುವಾಗ ಮೈ ಜುಮ್ಮೆನಿಸುತ್ತಿದೆ. ಯಾವ ವ್ಯಕ್ತಿಯು ಇಂದು ಜಗತ್ತಿನ ಗೌರವಗಳಿಗೆ ಪಾತ್ರನಾಗಿರುತ್ತಾರೋ, ಯಾವ ರಾಜಕಾರಣಿಯನ್ನು ಜಗತ್ತಿನ ರಾಜಕೀಯ ಧುರೀಣರು ಮಾರ್ಗದರ್ಶಕನೆಂದು ತಿಳಿದಿರುವರೋ, ಯಾವ ಶಾಂತಿಪ್ರಿಯ ಮಾನವನನ್ನು ಲೋಕದ ಶಾಂತಿ ಸಾಧಕರೆಲ್ಲರೂ ಜಗತ್ತಿನ ಶಾಂತಿ ಸಾಧಕನೆಂದು ಸನ್ಮಾನಿಸುತ್ತಿದ್ದಾರೋ ಅಂತಹ ಶ್ರೇಷ್ಠ ಮಹಾಪುರುಷ ನೆಹರೂರವರನ್ನು ನಮ್ಮ ವಿದ್ಯಾರ್ಥಿಗಳು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದರೆ ನಮ್ಮ ವಿದ್ಯಾರ್ಥಿಗಳು ಯಾವ ಕಡೆಗೆ ಸಾಗುತಿದ್ದಾರೆ ಎಂದು ನಾವೇ ಪ್ರಶ್ನಿಸಿಕೊಳ್ಳುವ ಸಂದರ್ಭ ಬರುತ್ತದೆ.

'ಇಂದು ಪ್ರಜಾಪ್ರಭುತ್ವದ ತತ್ವಗಳನ್ನು ಸಾಕಷ್ಟು ತಿಳಿದುಕೊಂಡು, ಪ್ರಜೆಗಳ ಅಭಿಪ್ರಾಯಕ್ಕೆ ತನ್ನ ನಿರ್ಧಾರವನ್ನು ಬದಲಾಯಿಸುತ್ತಾ, ಜನತೆಯ ಹಿತಕ್ಕಾಗಿ ತನ್ನ ಜೀವನವನ್ನು ಮೀಸಲಾಗಿರಿಸಿ, ತನ್ನ ಎಲ್ಲಾ ಸುಖ ಸಂತೃಪ್ತಿಗಳಿಗೆ ತಿಲಾಂಜಲಿಯಿತ್ತ ನೆಹರೂರವರಿಗೆ ಭಾರತೀಯರಾದ ನಾವು ನಮ್ಮ ವಿದ್ಯಾರ್ಥಿಗಳೂ ಎಂತಹ ಗೌರವವನ್ನರ್ಪಿಸುತ್ತಿದ್ದೇವೆ? ನಮ್ಮ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾರ್ಥಿ ದೆಸೆಯ ಉದ್ದೇಶ ಜವಾಬ್ದಾರಿಗಳು ಏಕೆ ತಿಳಿದಿಲ್ಲ? ವಿದ್ಯಾರ್ಥಿಯೆಂಬ ಪದವನ್ನು ಸೂಚಿಸುತ್ತದೆ. ವಿದ್ಯೆಯನ್ನು ಸಂಪಾದಿಸಿಕೊಳ್ಳುವುದೇ ವಿದ್ಯಾರ್ಥಿಗಳ ಧ್ಯೇಯ ಹೊರತು, ರಾಜಕಾರಣ ಅಥವಾ ಇನ್ನಾವುದೇ ಬೇರೆ ವಿದ್ಯಾರ್ಥಿಯ ಉದ್ದೇಶಕ್ಕೆ ಅನುಗುಣವಲ್ಲದ ಚಟುವಟಿಕೆಯಲ್ಲಿ ಭಾಗವಹಿಸುವುದು ಅವರ ಹಿತಕ್ಕೆ ಹೇಳಿಸಿದುದಲ್ಲ. ವಿದ್ಯಾರ್ಥಿಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಇತ್ಯಾದಿ ಎಲ್ಲಾ ಜೀವನದ ರಂಗಗಳನ್ನು ಅವುಗಳ ಸಮಸ್ಯೆಯನ್ನು ತಿಳಿದುಕೊಳ್ಳಲು ಯತ್ನಿಸಬೇಕು. ತಮ್ಮ ಮುಂದಿನ ಜೀವನ ನಿರ್ವಹಣಕ್ಕೆ ಅಗತ್ಯವುಳ್ಳ, ಮುಂದೆ ದೇಶದ ಉತ್ತಮ ಪ್ರಜೆಯಾಗಿ ಬಾಳಲಿಕ್ಕೆ ಅವಶ್ಯವುಳ್ಳ ಶೈಕ್ಷಣಿಕ ವಿಷಯಗಳಲ್ಲಿ ಸಾಕಷ್ಟು ಜಾಣ್ಮೆಯನ್ನು ಗಳಿಸಿಕೊಂಡು, ವಿದ್ಯಾರ್ಥಿ ದೆಸೆಯನ್ನು ಮುಗಿಸಿದ ನಂತರ ಈ ಕಾರ್ಯಕ್ಷೇತ್ರಗಳಲ್ಲಿ ದುಡಿಯಬೇಕೇ ಹೊರತು, ಕಲಿಯುವಾಗಲೇ ಕಲಿಸಬೇಕೆಂಬ ಚಟ ಹೇಳಿಸಿದುದಲ್ಲ. ಭಾರತೀಯ ವಿದ್ಯಾರ್ಥಿಗಳು ತಮ್ಮ ಹಿಂದಿನ ಪರಂಪರೆಯನ್ನು ಸ್ವಲ್ಪ ತಿಳಿದುಕೊಳ್ಳಬೇಕು. ನಮ್ಮ ಹಿಂದಿನ ಗುರುಕುಲಗಳಲ್ಲಿ ಆಶ್ರಮಗಳು, ಕುಲಪತಿಗಳು, ಶಿಷ್ಯರು ಯಾವ ರೀತಿಯಲ್ಲಿ ತಮ್ಮ ಉತ್ತಮ ಸಂಪ್ರದಾಯವನ್ನು ಪಾಲಿಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿದುಕೊಂಡಲ್ಲಿ ಆಗ ನಿಜಕ್ಕೂ ನಮ್ಮ ವಿದ್ಯಾರ್ಥಿಗಳು ದಾರಿ ತಪ್ಪಿದ್ದಾರೆ ಎಂದು ಅವರೇ ತಿಳಿದುಕೊಂಡಾರು. ಸುದಾಮ, ಏಕಲವ್ಯ ಇಂತಹ ಒಂದೆರಡಲ್ಲ ಸಾವಿರಾರು ಭಾರತೀಯ ವಿದ್ಯಾರ್ಥಿಗಳ ಆದರ್ಶವನ್ನು ನಮ್ಮ ಕಣ್ಣಮುಂದಿಟ್ಟುಕೊಂಡು ಅವರ ದಾರಿಯಲ್ಲಿ ಹೆಜ್ಜೆ ಹಾಕುತ್ತಾ ತಮ್ಮ ವಿದ್ಯಾರ್ಥಿ ದೆಸೆಯ ಸಾಧನೆಯ ಸಿದ್ಧಿಗಾಗಿ ಯತ್ನಿಸಬೇಕೇ ಹೊರತು ತಮ್ಮನ್ನು ಹೇಳುವವರು, ಕೇಳುವವರು ಯಾರೂ ಇಲ್ಲ ಎಂದು ತಿಳಿದು ಮನಬಂದಂತೆ ವರ್ತಿಸಿ ತಮ್ಮ ಜೀವನ ಹಾಗೂ ದೇಶದ ಮುಂದಿನ ಭವಿತವ್ಯವನ್ನು ಹಾಳು ಮಾಡಲಾಗದು.

ನಮ್ಮ ವಿದ್ಯಾರ್ಥಿಗಳು ಈ ರೀತಿ ದಾರಿ ತಪ್ಪಿ ವರ್ತಿಸುವಾಗ ಶಿಕ್ಷಕರ ಕರ್ತವ್ಯವೇನು? ಶಿಸ್ತು, ನಿಯಮಗಳನ್ನು ತಿಳಿಯದೆ ಉಲ್ಲಂಘಿಸುವ ವಿದ್ಯಾರ್ಥಿಗಳನ್ನು ಎಚ್ಚರಿಸಲು ಸದ್ಬುದ್ಧಿಗೆ ತರಲು ನಮ್ಮ ಶಿಕ್ಷಕ ವರ್ಗ ಪ್ರಯತ್ನಿಸಲು ಸಾಕಷ್ಟು ಅನುಕೂಲತೆಗಳು ಅವರಿಗಿದೆಯೇ? ಹಾಗಿಲ್ಲದಿದ್ದರೆ ಅಂತಹ ಅನುಕೂಲತೆಗಳು, ಶಿಸ್ತು ಪಾಲನೆಗೆ ಅವಶ್ಯಕವಾದ ನಿಯಮಗಳನ್ನು ಸರಕಾರ ಸೃಷ್ಟಿಸಿಕೊಳ್ಳಬೇಕು. ಏಕೆಂದರೆ ಯಾರು ಹಾಳಾದರೂ ಹೇಳಿಕೊಳ್ಳುವ ವಿಷಯವೆನಿಸುವುದಿಲ್ಲವಾದರೂ ನಮ್ಮ ಮಕ್ಕಳು, ನಮ್ಮ ವಿದ್ಯಾರ್ಥಿಗಳು ನಮ್ಮ ಮುಂದಿನ ಜನಾಂಗ ದಾರಿ ತಪ್ಪುವುದನ್ನು ಕಂಡು ಎಷ್ಟಕ್ಕೂ ಸುಮ್ಮನಿರಲಾಗದು.

ಎಲ್ಲದಕ್ಕಿಂತಲೂ ನಮ್ಮ ವಿದ್ಯಾರ್ಥಿಗಳ ಹೆತ್ತವರು, ರಕ್ಷಕರು ಈ ಘಟನೆಯಿಂದ ಕಣ್ತೆರೆಯಬೇಕು. ನಮ್ಮ ವಿದ್ಯಾರ್ಥಿಗಳು ಮುಂದೆ ಯೋಗ್ಯರಾಗಿ ಬಾಳಬೇಕೆಂಬ ಅಪೇಕ್ಷೆ ನಮಗಿರುವುದು ನಿಜವಾದರೆ ಅವರನ್ನು ರಾಜಕೀಯ ರಂಗದಿಂದ ದೂರವಿರಿಸಲು ಶತಪ್ರಯತ್ನ ಮಾಡಬೇಕು. ಯಾವನೇ ಬಾಲಕ ಅಥವಾ ಬಾಲಕಿ ತನ್ನ ವ್ಯಕ್ತಿತ್ವವು ರೂಪುಗೊಳ್ಳುತ್ತಿರುವ ವಿದ್ಯಾರ್ಥಿ ದೆಸೆಯ ಪರ್ವಕಾಲದಲ್ಲಿ ಯಾವುದೇ ದಾರಿ ತಪ್ಪಿದ ಚಟುವಟಿಕೆಗೆ ಕೈ ಹಾಕದಂತೆ ಎಚ್ಚರ ವಹಿಸಬೇಕು.

ಟಾಲ್‌ಸ್ಟಾಯ್ ಒಮ್ಮೆ ಹೇಳಿದ್ದರು: "ಒಬ್ಬ ರಾಜನು ತನ್ನ ವೈರಿ ರಾಜನನ್ನು ಗೆದ್ದು ಆತನ ಮೇಲಿದ್ದ ತನ್ನ ಹಗೆಯನ್ನು ಬಹು ಪರಿಣಾಮಕಾರಿಯಾದ ರೀತಿಯಲ್ಲಿ ಹೇಗೆ ತೀರಿಸಬಹುದೆಂದು ಕೇಳಿದನಂತೆ. ಆಗ ಚಾಣಾಕ್ಷನಾದ ಆತನ ಮಂತ್ರಿಯು ಆ ರಾಜನನ್ನು ಬಂಧನದಲ್ಲಿಡು. ಆತನ ಮಕ್ಕಳಿಗೆ ದುರ್ನಡತೆ, ದುರಾಚಾರಗಳನ್ನು ಕಲಿಸುವ ಏರ್ಪಾಡು ಮಾಡು. ಆ ಮಕ್ಕಳು ದಾರಿ ತಪ್ಪಿ ವರ್ತಿಸುವುದನ್ನು ಆ ವೃದ್ಧ ಬಂಧನದಲ್ಲಿದ್ದ ರಾಜನು ಕಾಣಲಿ. ಅಂತಹ ಚಿತ್ರಹಿಂಸೆ ಬೇರಾವುದೂ ಇಲ್ಲ" ಎಂದು. ನಮ್ಮ ಅನಂತರ ನಮ್ಮ ಹೆಸರನ್ನು ಉಳಿಸತಕ್ಕ ಜವಾಬ್ದಾರಿ ನಮ್ಮ ಮಕ್ಕಳದು. ನಮ್ಮ ಜೀವನದ ಆಶೆ—ಆಕಾಂಕ್ಷೆಗಳು ನಿಹಿತವಾಗಿರುವುದು ನಮ್ಮ ಮಕ್ಕಳಲ್ಲಿ. ಇಂತಹ ಮಕ್ಕಳ ವಿದ್ಯಾಭ್ಯಾಸಕ್ಕೆಂದು ನಾವು ಊರು-ಪರವೂರುಗಳಿಗೆ ಅವರನ್ನು ಕಳುಹಿಸಿಕೊಟ್ಟು, ವೆಚ್ಚಕ್ಕೆ ಬೇಕಾದ ಹಣವನ್ನು ಕಳುಹಿಸಿ—ತನ್ನ ಮಗ ದೊಡ್ಡ ಕ್ಲಾಸಿನಲ್ಲಿ ಓದುತ್ತಾನೆ ಎಂದು ತೃಪ್ತಿಪಟ್ಟು ಕುಳಿತುಕೊಳ್ಳಬಾರದು. ಜೀವನದ ಕಹಿ—ಸಿಹಿಗಳ ಅನುಭವವಿಲ್ಲದ ಬೆಣ್ಣೆಯಂತಹ ಕೋಮಲ ಮನಸ್ಸಿನ ವಿದ್ಯಾರ್ಥಿಗಳು ದಾರಿ ತಪ್ಪದಂತೆ ಎಚ್ಚರಿಕೆ ವಹಿಸುವುದು ಹೆತ್ತವರ, ರಕ್ಷಕರ, ಶಿಕ್ಷಕರ ಆದ್ಯ ಕರ್ತವ್ಯವಾಗಿದೆ.

ಅಹಮ್ಮದಾಬಾದಿನ ವಿಶ್ವವಿದ್ಯಾಲಯದ ಸೆನೆಟ್ ಸಭೆ ಈ ಘಟನೆಗಾಗಿ ದುಃಖ ಸೂಚಿಸಿದೆ. ಅಷ್ಟೇ ಸಾಲದು. ಪ್ರತಿ ವಿದ್ಯಾರ್ಥಿಯೂ ಇಂತಹ ವರ್ತನೆ ವಿದ್ಯಾರ್ಥಿಗಳಿಗೆ ಹೇಳಿಸಿದುದಲ್ಲವೆಂದು ನಿರ್ಧರಿಸಿಕೊಂಡು ಇಂತಹ ನಡತೆಯನ್ನು ತಾನು ತ್ಯಜಿಸುವುದಾಗಿ ಪ್ರತಿಜ್ಞೆತೊಟ್ಟು, ವಿದ್ಯೆಯನ್ನು ಸಂಪಾದಿಸುವುದೊಂದೇ ತನ್ನ ಕರ್ತವ್ಯವೆಂದು ತಿಳಿದು ಮುಂದಿನ ಜನಾಂಗದ ಉತ್ತಮ ಪ್ರಜೆಯಾಗಿ ಬಾಳಲು ಯತ್ನಿಸಬೇಕು.

ಕೊನೆಯದಾಗಿ, ಪ್ರತಿ ವಿದ್ಯಾರ್ಥಿಯೂ ತಾನೂ ಒಬ್ಬ ನೆಹರು ಆಗಲು ಯತ್ನಿಸಬೇಕು. ಆತನ ಆದರ್ಶ, ಆತನ ಜೀವನಗಳನ್ನು ತಿಳಿದುಕೊಂಡು ತನ್ನ ಹಾಗೂ ತನ್ನ ದೇಶದ ಭವಿಷ್ಯವನ್ನು ರೂಪಿಸುವ ಮಹಾಕಾರ್ಯಕ್ಕೆ ಅವಶ್ಯ

(೧೨ನೇ ಪುಟ ನೋಡಿರಿ)

**ಹಬ್ಬಗಳ ಸುಗ್ಗಿ**

* * *

ಈ ವರ್ಷ ನಮ್ಮ ಜಿಲ್ಲೆಯ ಎರಡು ಬೇಂಕುಗಳ ಸುವರ್ಣದ ಹಬ್ಬ. ಇನ್ನೆರಡು ಬೇಂಕುಗಳ ಬೆಳ್ಳಿಯ ಹಬ್ಬ.

ಈ ಯಶಸ್ವೀ ಬೆಳವಣಿಗೆಗೆ ಕಾರಣ:- ನಮ್ಮ ಜನರ ಬೇಂಕು ಮನೋಭಾವ ಮತ್ತು ಪ್ರಗತಿಪರ ಧೋರಣೆ.

ಅಂತೆಯೇ ಬೇಂಕಿನವರ ವ್ಯವಹಾರ ಜಾಣ್ಮೆ ಮತ್ತು ಕಾರ್ಯ ನಿಷ್ಠೆ.

ಕಳೆದ ಎರಡೂವರೆ ದಶಮಾನಗಳಿಂದ ಜಯಶೀಲನಾಗಿ ಮುಂದೊತ್ತಿ ಬಂದು ಈ ವರ್ಷವೇ ಆಚರಿಸಲ್ಪಡುವ ನಮ್ಮ ರಜತೋತ್ಸವದ ಶುಭ ಮುಹೂರ್ತದಲ್ಲಿ ನಿಮಗೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ: ಮಂಗಳೂರು—3.

**ಜುಮ್ಲಾ ವಹಿವಾಟು ಮೊಬಲಗು ರೂ. 90,00,000**

## ನಿರೋಗಿ ಜೀವನ

# ವ್ಯಾಧಿಯನ್ನು ಬರಿಸಿ ಕೊಂಡು ವೈದ್ಯರನ್ನೇಕೆ ಹುಡುಕುವಿರಿ?

### ನೈಸರ್ಗಿಕ ತತ್ವಗಳನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಿರಿ!

"ಎಲ್ಲಿ ಹೋಗಿದ್ದಿರಿ ಇಷ್ಟು ಹೊತ್ತು! ತಲೆಯುಲ್ಲಾ ಒದ್ದೆಯಾಗಿ ಬಿಟ್ಟಿದೆ! ನಾಳೆ ಜ್ವರ, ತಲೆ ನೋವು ಎಂತ ಮತ್ತೆ ಮಲಗಿ!"- ಸಾಮಾನ್ಯವಾಗಿ ಮನೆ ಮನೆಗಳಲ್ಲೂ ಹಿರಿಯರು–ಕೆರೆಯಲ್ಲಿ, ತೋಡಿನಲ್ಲಿ 'ಹಾರಿ'ಯೋ, ಮಳೆಯಲ್ಲಿ ನೆನೆದೋ ಬಂದ ಮಕ್ಕಳನ್ನು ಗದರಿಸುವ ಕ್ರಮವಿದು.

ಹೌದು; ಮಳೆಯಲ್ಲಿ ನೆನೆದರೆ, ಕೆರೆಯಲ್ಲಿ ಮುಳುಗಿ ತಲೆ ಒದ್ದೆ ಮಾಡಿಕೊಂಡರೆ, ಬಿಸಿಲಲ್ಲಿ ಅಡ್ಡಾಡಿದರೆ— ಇಲ್ಲದ ಸಲ್ಲದ ಜಾಡ್ಯ ತಲೆದೋರುತ್ತದೆಂದು ಹೆಚ್ಚಿನವರ ಎಣಿಕೆ.

ಆದರೆ ಪಾಪ! ಆ ಮಕ್ಕಳಿಗೆ ಅದೆಲ್ಲಾ ತಿಳಿಯುತ್ತದೆಯೇ! ಮಳೆಯಲ್ಲಿ ನಿರಂತರ ನೆನೆಯುತ್ತಿರುವ ಮೃಗಪಕ್ಷಿಗಳನ್ನು ಕಂಡೋ ಏನೋ—ಚಿಕ್ಕ ಮಕ್ಕಳು ಅಂಗಳದಲ್ಲಿ ನಿಂತು ಮೈ ಒದ್ದೆಮಾಡಿಕೊಳ್ಳುತ್ತಾರೆ. ತೋಡು ಕೆರೆಗಳಲ್ಲಿ ಗಂಟೆಗಟ್ಟಲೆ 'ಹಾರಿ' ಮುಳುಗಿ, ಎದ್ದು ಬಿದ್ದು, ಮೀನುಗಳಂತೆ ಸ್ವತಂತ್ರವಾಗಿ ಈಜುವುದೆಂದರೆ ಬಾಲಕರಿಗೊಂದು ವಿನೋದ — ಆನಂದ!

ನಿಜ; ಪ್ರಕೃತಿಯತ್ತ ನಾವು ಸರಿಯಾಗಿ ದೃಷ್ಟಿಸಿ—ಆಲೋಚಿಸಿ ನೋಡಿದರೆ, ಇದರಿಂದ—ಪ್ರಕೃತಿಯೊಂದಿಗೆ ನಾವು ಬೆರೆಯುವುದರಿಂದ — ಏನೊಂದೂ ಕೆಡುಕಿಲ್ಲ,—ಹಾನಿಯಿಲ್ಲ ಎಂಬ ಸತ್ಯ ಗೋಚರಿಸುತ್ತದೆ. ರೋಗ ಬರಲು, ಇದು ಕಾರಣವಲ್ಲ ಎಂಬುದಕ್ಕೆ ಮಳೆ ಬಿಸಿಲಲ್ಲಿ ಜೀವಿಸುತ್ತಿರುವ ನಿರೋಗಿಗಳಾದ ಪ್ರಾಣಿ ಪಕ್ಷಿಗಳೇ ನಿದರ್ಶನ. ಮುಂಜಾವಿಂದ ಸಂಜೆಯ ವರೆಗೆ ಗಾಳಿ ಮಳೆಯಲ್ಲಿ—ಉರಿಬಿಸಿಲಲ್ಲಿ ದುಡಿಯುತ್ತಿರುವ ದುಡಿವೆ ಗಾರರೇ ನಿದರ್ಶನ.

ಇಂದು—ದೊಡ್ಡದೊಡ್ಡ ರೋಗಗಳು ಕಂಡು ಬರುತ್ತಿರುವುದು ಹೆಚ್ಚಾಗಿ, ವೈದ್ಯಕೀಯ ಸವಲತ್ತುಗಳಿದ್ದ, ಸಕಲ ಸನ್ನಾಹಗಳಿದ್ದ ಪೇಟೆ ಪಟ್ಟಣಗಳಲ್ಲೇ;

ನಿರೋಗಿಗಳಾದವರನ್ನು ನಾವು ನೋಡಬೇಕಿದ್ದರೆ- ರೋಗಗಳ ಸಂಖ್ಯೆ ಕಡಿಮೆಯಿರುವ ಸ್ಥಳವನ್ನು ನಾವು ಕಾಣಬೇಕಿದ್ದರೆ,—ಆ ನಾಗರಿಕರು, ಅಶುಚಿಗಳು ಎಂದು ಕರೆಯಲ್ಪಡುವ(!) ಯಾವೊಂದೂ ವೈದ್ಯಕೀಯ ಸಹಾಯವೂ ಇಲ್ಲದ ಹಳ್ಳಿಗರನ್ನು—ನಾವು ನಿರೀಕ್ಷಿಸಬೇಕು. ಮನಸ್ಸಿಗೆ ಶಾಂತಿ, ದೇಹಕ್ಕೆ ಸೌಖ್ಯ ಸಿಗುವುದಿದ್ದರೆ ಅದು ನಿಸರ್ಗ ಸೌಂದರ್ಯದ ಬೀಡಾಗಿದ್ದ ಹಳ್ಳಿಯಲ್ಲಿ!

ಹೌದು. ಇದನ್ನು ಸರ್ವರೂ ಒಪ್ಪುತ್ತಾರೆ. ಅದಕ್ಕೆ ಸಮಾಧಾನ ಹೀಗೆ— 'ಪೇಟೆ ಪಟ್ಟಣಗಳಲ್ಲಿ ಜನಸಾಂದ್ರತೆ ಹೆಚ್ಚು. ಅಂತೆಯೇ ಮನೆಮಾರುಗಳು ಬಹು ಹತ್ತಿರ. ಇದರಿಂದ ರೋಗಗಳು ಬೇಗನೇ ಹಬ್ಬುತ್ತವೆ. ಹಳ್ಳಿಯಲ್ಲಿ ಹೀಗಿಲ್ಲವಾದ್ದರಿಂದಲೇ ರೋಗಗಳು ಕಡಿಮೆ!— ಎಂದು.

ಈ ಕುರಿತು ಸ್ವಲ್ಪ ಯೋಚಿಸೋಣ.

ಪೇಟೆಯಲ್ಲಿ ಜನಸಂಖ್ಯೆ ಹೆಚ್ಚಿರಬಹುದು. ಮನೆಗಳು ಒತ್ತೊತ್ತಾಗಿ ಇರಬಹುದು. ಆದರೆ ಅದೇ ಪ್ರಮಾಣದಲ್ಲಿ ಮನೆಗೆ ಒಬ್ಬರಂತೆ ಡಾಕ್ಟರರಿದ್ದಾರೆ. ಅತ್ಯಾಧುನಿಕ ಸಲಕರಣೆಗಳಿಂದೊಡಗೂಡಿದ ಆಸ್ಪತ್ರೆಗಳಿವೆ. ನಗರ ಶುಚಿ—ನೈರ್ಮಲ್ಯಕ್ಕಾಗಿ ಮುನ್ಸಿಪಾಲಿಟಿಗಳಂತಹ ಸಂಸ್ಥೆಗಳಿವೆ. ಮೇಲಾಗಿ ಪೇಟೆಯ ಜನರು ಸುಸಂಸ್ಕೃತರು, ವಿದ್ಯಾವಂತರು. ನಾಗರಿಕರು!!

ಹಳ್ಳಿಯ ಜನರು ಹೆಚ್ಚಿನ ವಿದ್ಯಾವಂತರಲ್ಲ; ಸುಸಂಸ್ಕೃತರಲ್ಲ. ಅಲ್ಲಿ ಮನೆಗೊಬ್ಬರಿಂತ ಗ್ರಾಮಕ್ಕೇ ಒಬ್ಬ ಡಾಕ್ಟರರಿಲ್ಲ; ಆಸ್ಪತ್ರೆಗಳಿಲ್ಲ. ರೋಗದ ಕುರಿತು ಅವರು ಹೆಚ್ಚೇನೂ ತಿಳಿದವರಲ್ಲ. ಸಮತೂಕದ ಆಹಾರವನ್ನೇ—ಪೌಷ್ಟಿಕವಾದ ಆಹಾರವನ್ನೇ ಅವರು ಸೇವಿಸುತ್ತಿಲ್ಲ. ನಾಗರಿಕರ (!) ದೃಷ್ಟಿಯಲ್ಲಿ ಅವರು ಅನಾಗರಿಕರು! ಅವರ ಮನೆಗಳು ಝಗಝಗಿಸುತ್ತಿಲ್ಲ. ಮುಳಿಹಾಕಿದ ಗುಡಿಸಲುಗಳವು. ಮಣ್ಣಿನ ಗೋಡೆ—ಕೆಲವು ಸುಣ್ಣವನ್ನೂ ಕಂಡಿಲ್ಲ!

—ಹೀಗಿರುವಾಗ ಪೇಟೆ ಪಟ್ಟಣಗಳಲ್ಲಿ ರೋಗಗಳ ಸಂಖ್ಯೆ ಅಧಿಕ ಪ್ರಮಾಣದಲ್ಲಿರಲೂ, ಹಳ್ಳಿಯಲ್ಲಿ ಅತ್ಯಲ್ಪ ಪ್ರಮಾಣದಲ್ಲಿರಲೂ – ವೈದ್ಯಶಾಸ್ತ್ರವು ಈಗ ಹೇಳುತ್ತಿರುವ ಕಾರಣ ಸರಿಯಲ್ಲ. ಈ ರೀತಿ ಅಜಗಜಾಂತರದ ವ್ಯತ್ಯಾಸವಿರಲು ಕಾರಣವೇ ಬೇರೆ.

'ನಿಸರ್ಗ ಚಿಕಿತ್ಸಾ ತತ್ವ'ವೂ ಅದನ್ನೇ ಹೇಳುತ್ತಿದೆ. ಹಲವಾರು ದೇಶ, ವಿದೇಶೀಯ ಡಾಕ್ಟರರುಗಳೂ ಇದನ್ನು ಒಪ್ಪಿದ್ದಾರೆ. ಅತ್ತ ದೃಷ್ಟಿ ಹರಿಸೋಣ.

ಮೊದಲು 'ರೋಗವೆಂದರೇನು ಎಂದು ಆಲೋಚಿಸುವ.

ನಾವು ದಿನನಿತ್ಯ ತಿನ್ನುತ್ತಿರುವ ಆಹಾರದಲ್ಲಿ ನಮ್ಮ ಶರೀರಕ್ಕೆ ಹೆಚ್ಚಾದ ಆಹಾರ ಅಲ್ಲೇ ಕಶ್ಮಲವಾಗಿ ಉಳಿಯುತ್ತದೆ. ಹಾಗೆ ಉಳಿದಂತಹ ಕಶ್ಮಲ–ಶರೀರದ ಅವಯುವಯಗಳ ನೂಕುವಿಕೆಯಿಂದಾಗಿ ಹೊರಹೊರಡುತ್ತದೆ. ಹಾಗೆ ಕಶ್ಮಲ ಹೊರಹೋಗುವುದನ್ನೇ ನಾವು ತಲನೋವು, ನೆಗಡಿ, ಹಲ್ಲುಸಿಡಿತ, ಹುಣ್ಣು ಕಜ್ಜಿಗಳೆಂದು ಕರೆಯುತ್ತಿದ್ದೇವೆ. ಕಶ್ಮಲವು ಹಲವು ರೂಪಗಳಿಂದ ಹೊರಹೋಗುವುದನ್ನ ನಾವು ಹಲವು ಹೆಸರಿನಿಂದ ಕರೆಯುತ್ತೇವೆ.

ಒಮ್ಮೆ ತುಂಬಿದ ಕಶ್ಮಲ ಮುಗಿದೊಡನೆಯೇ ಅದರ ಪ್ರತಿಕ್ರಿಯೆಯೂ ನಿಲ್ಲುವುದು. ಅಂದರೆ ತಲೆನೋವು, ಜ್ವರ, ಮಾಯವಾಗಿಬಿಡುವುವು, ಮತ್ತೆ ಪುನಃ ಶರೀರದಲ್ಲಿ ಕೊಳಕು ತುಂಬಿದೊಡನೆಯೇ ಪುನಃ ಶರೀರ ಅದನ್ನು ಹೊರಮಾಡುವ ಕೆಲಸಕ್ಕೆ ತೊಡಗುವುದು. ಈ ರೀತಿ ಕೊಳೆ ಕಶ್ಮಲವನ್ನು ಹೊರಹಾಕುವ ಕೆಲಸವನ್ನು ಶರೀರ ಮಾಡುವುದರಿಂದಲೇ ನಾವು ಮಳೆಗೆ ನೆನೆದಾಗ, ಬಿಸಿಲಲ್ಲಿ ನಡೆದಾಗ ತಣ್ಣೀರು ತಲೆಗೆ ಹೊಯ್ದಾಗ ನಮಗೆ ಪ್ರತಿಕ್ರಿಯೆ ತೋರಿಬರಲು ಕಾರಣ. ಅಂದರೆ ಪ್ರಕೃತಿಸಿದ್ಧ ಶಕ್ತಿಗಳನ್ನು ನಾವು ಬಳಸಿದೊಡನೆಯೇ ನಮ್ಮ ಶರೀರದ ನೈಜ ಶಕ್ತಿಯು ಹೆಚ್ಚಿ ಕೊಳಕನ್ನು ಹೊರದೂಡಲು ಸಹಾಯಕವಾಗುತ್ತದೆ.

ಅದೇ ಕಶ್ಮಲ ಆಗಾಗ ವಿಸರ್ಜಿಸಲ್ಪಡದೆ ತುಂಬುತ್ತಾ ಬಂದರೆ, ಆಗ ಕಠಿಣ ರೀತಿಯಿಂದ ಹೊರಹೊರಡಲುಪಕ್ರಮಿಸುವುದು—ಕೊಳಕು. ಆಗ ಕಶ್ಮಲ ಶರೀರದೊಳಗೆ, ಭಯಂಕರ 'ಕಾಳಗ'ವೇ ಆಗುವುದು. ಇದರ ಪರಿಣಾಮ?—ನಾವು ಹೆಚ್ಚು ಕಷ್ಟಪಡಬೇಕಾಗುತ್ತದೆ! ಅವೇ ದೊಡ್ಡ ದೊಡ್ಡ ರೋಗಗಳು! ಅವು ಒಂದೊಂದು ದಾರಿಯಾಗಿ ಹೊರಹೋಗುವುದನ್ನೇ ನಾವು ಒಂದೊಂದು ಹೆಸರಿನಿಂದ (ಕ್ಷಯ, ಕೇನ್ಸರ್, ವಾಂತಿಬೇಧಿ, ಮಲೇರಿಯಾ, ಸನ್ನಿಪಾತ, ವಗೈರೆ) ಕರೆಯುತ್ತಿದ್ದೇವೆ. ಮೂಲತಃ ರೋಗವೊಂದೇ— ರೋಗಕ್ಕೆ ಕಾರಣವೂ ಒಂದೇ — ಕೊಳಕು ಕಶ್ಮಲ!!

ಶರೀರವು ಕಶ್ಮಲವನ್ನು ಆಗಾಗ ವಿಸರ್ಜಿಸುತ್ತದೆಂದಮೇಲೆ, ಅದೆಂತು ಅಧಿಕ ಪ್ರಮಾಣದಲ್ಲಿ ಕಶ್ಮಲ ಶರೀರದೊಳಗೇ ಉಳಿಯುತ್ತದೆ?—ಎಂಬ ಪ್ರಶ್ನೆಯೊಂದು ತಲೆ ಎತ್ತುತ್ತದೆ. ಇಲ್ಲೇ ಇರುವುದು ಹುರುಳು.

ನಾವು ನಮ್ಮ ದೃಷ್ಟಿಯನ್ನು ನಮ್ಮ ಪೂರ್ವಜರೆಡೆಗೆ ತುಸು ಬೀರೋಣ. ಅವರ ಆರೋಗ್ಯವನ್ನು ನೆನಪಿಗೆ ತರೋಣ. ಇಂದಿನಂತೆ ಭಯಂಕರವಾದ ರೋಗಗಳು ಆಗ ಆವಿರ್ಭವಿಸಿತ್ತೇ? ಈಗಿನಂತೆ ದಿನ ದಿನಕ್ಕೆ ಹೊಸ ಹೊಸ ರೋಗಗಳು ತಲೆದೋರುತ್ತಿದ್ದುವೇ? ಇಲ್ಲ. ಅದೇಕೆ?

ಹಿಂದಿನವರು ಪ್ರಕೃತಿಗೆ ಹೊಂದಿಕೊಂಡಿದ್ದರು: ಪ್ರಕೃತಿ ನಿಯಮವನ್ನು ಪರಿಪಾಲಿಸುತಿದ್ದರು. ಇಂದಿನಂತೆ ಚಾ, ಕಾಫಿ, ಬೀಡಿ ಸಿಗರೇಟುಗಳು ಅಂದು ಇದ್ದಿಲ್ಲ. ಸರಾಯಿ ಬ್ರಾಂದಿಗಳಂತಹ ಮಾದಕ ಪದಾರ್ಥಗಳನ್ನು ಅವರೆಂದೂ ಮುಟ್ಟಿದ್ದಿಲ್ಲ. ಕೋಳಿಗಾಂಕೆ, ಜುಗಾರಿಗಳಂತಹ ಕೆಟ್ಟ ಚಟಗಳು ಆಗ ಅವರನ್ನು ಅಂಟಿದ್ದಿಲ್ಲ. ಅಸೌಖ್ಯತೆಯುಂಟಾದಲ್ಲಿ ಔಷಧಿಯನ್ನೇ ಕುಡಿಯುತ್ತಿದ್ದಿಲ್ಲ. ಒಂದೆರಡು ದಿನದ ಉಪವಾಸದಲ್ಲಿ ಅದು ಗುಣವಾಗುತಿತ್ತು. ಔಷಧ ಮಾಡುವುದಿದ್ದರೂ ಗಿಡ ಮೂಲಿಕೆಗಳದ್ದು ಹೊರತಾಗಿ ಇಂದಿನ ಇಂಗ್ಲಿಷ್ ಔಷಧಗಳಲ್ಲ. ಅವರು ಸರಳ ಜೀವಿಗಳಾಗಿದ್ದರು. ಮಾತ್ರವಲ್ಲ ಏಕಾದಶಿ, ಸೋಮವಾರಾದಿ ವ್ರತಗಳನ್ನು ನಿರಾಹಾರಿಗಳಾಗಿಯೇ ಆಚರಿಸುತ್ತಿದ್ದರವರು.

ಆದರೆ....ಇಂದು....? ಅಂದಿಗೆ ತೀರಾ ವಿರುದ್ಧ! ಇಂದು ಪ್ರಪಂಚ ನಾಗರಿಕತೆ, ನಾಗರಿಕತೆಯೆಂದುಕೊಂಡು, ಅಧರ್ಮದ, ಅಸತ್ಯದ ಬುನಾದಿಯ ಮೇಲೆ ಸಾಗುತ್ತಾ ಇದೆ!

ಮಿತಿಮೀರಿದ ತಿನಸು, ವಿಕೃತ ಜೀವನ ಇವು ಕಶ್ಮಲವನ್ನು ಶರೀರದಲ್ಲಿ ಅಧಿಕ ಪ್ರಮಾಣದಲ್ಲಿ ತುಂಬಿಸುತ್ತಾ ಇದೆ. ನಾವು ಅಸೌಖ್ಯತೆ ತಲೆದೋರಿದೊಡನೆಯೇ ರೋಗಕ್ಕೆ ಕಾರಣ ಕ್ರಿಮಿಗಳೆಂದು ಎಣಿಸಿ ಅವುಗಳನ್ನು ಕೊಲ್ಲಲಿಕ್ಕೆಂದು ಔಷಧ ತಕ್ಕೊಳ್ಳುತ್ತೇವೆ. ಆದರೆ ರೋಗಗಳ ಉದ್ಭವಕ್ಕೆ ಆ ಕ್ರಿಮಿಗಳು ಕಾರಣವಲ್ಲ. ಬದಲಾಗಿ ರೋಗವನ್ನು ನಾಶಮಾಡುವುದರಲ್ಲಿ ಈ ಕ್ರಿಮಿಗಳ ಸ್ಥಾನ ಮಹತ್ವವುಳ್ಳದ್ದಾಗಿದೆ.

ಕೊಳೆ ಕಶ್ಮಲವಿರುವಲ್ಲಿಗೆ ಕ್ರಿಮಿಗಳು


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.



ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3¼% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

## ನಿರೋಗಿ ಜೀವನ

(ಹಿಂದಿನ ಪುಟದಿಂದ)

ರುವುದು ಅಥವಾ ಅಲ್ಲಿ ಉಂಟಾಗುವುದು ಸಹಜ. ಅಂದರೆ ಕೊಳಕೇ ಕ್ರಿಮಿಗಳ ಆಹಾರ. ಮೊದಲು ಕೊಳಕು ತುಂಬಿದ್ದದರಿಂದ ಕ್ರಿಮಿಗಳು ಬರುತ್ತವೆಯೋ ಅಥವಾ ಕ್ರಿಮಿಗಳಿಂದಾಗಿ ಕೊಳಕುಂಟಾಗುವುದಲ್ಲ. ಶರೀರದ ಕಶ್ಮಲವನ್ನು ತಿನ್ನಲೋಸುಗ ಬಂದಂತಹ ಅಥವಾ ಹುಟ್ಟಿಕೊಂಡ ಕ್ರಿಮಿಗಳು ಆ ಕಶ್ಮಲವನ್ನು ಕೆದಕುತ್ತವೆ. ಆಗ ಆದು "ಗೆಜಳೆ" ಕಶ್ಮಲವಾಗೂ ಶರೀರದ ಅಂಗಾಂಗಗಳೊಳಗೆ ತೀವ್ರ ತಿಕ್ಕಾಟವೇ ಆರಂಭವಾಗುತ್ತದೆ. ಆಗ ಶರೀರದಲ್ಲಿ ಅಸ್ವಸ್ಥತೆ ತಲೆದೋರಿ ಕೊಳಕು ಹೊರ ಹೋಗಲಾರಂಭಿಸುತ್ತದೆ. ಈ ಹಿಂದೆ ತಿಳಿಸಿದಂತೆ ಇದು ಒಳ್ಳೆದೇ ಹೊರತು ಕೆಟ್ಟದಲ್ಲ. ತಲೆನೋವು, ನೆಗಡಿ, ಜ್ವರ ಆಗುತ್ತಿದ್ದವರಿಗೆ ಭಯಂಕರ ಕಾಯಿಲೆಗಳು ಬಾರದಿರುವುದೇ ಇದಕ್ಕೆ ಉದಾಹರಣೆ.

ಆದರೆ ನಿಜಸ್ಥಿತಿ ತಿಳಿಯದೆ ನಾವು ಕೂಡನೆಯೇ ಔಷಧದಿಂದ ಆ ಅಣುಜೀವಿಗಳನ್ನು ಕೊಲ್ಲುತ್ತೇವೆ. ಆಗೊಮ್ಮೆ ಕಶ್ಮಲದ ಕೆದಕುವಿಕೆ ನಿಂತು, ಔಷಧದಿಂದ ಆ ಭಾಗದ ಅಂಗಾಂಗಗಳಿಗೆ ಶಕ್ತಿ ಕಡಿಮೆಯಾಗಿ ನಮಗೆ ರೋಗ ಗುಣವಾದಂತೆ ತೋರುತ್ತದೆ. ಆದರೆ ರೋಗ ಗುಣವಾಗಿದೆಯೋ? ಇಲ್ಲ. ಡಾಕ್ಟರರ ಔಷಧಿ ಸೆಣಸಾಡಿದುದು ರೋಗದೊಂದಿಗಲ್ಲ; ರೋಗವನ್ನು ನಿರ್ಮೂಲಗೊಳಿಸಲು ಪ್ರಯತ್ನಿಸುತ್ತಿದ್ದಂತಹ ಕ್ರಿಮಿಕೀಟಗಳೊಂದಿಗೆ; ಹಾಗೂ ಶರೀರದ ಅವಯವಗಳೊಂದಿಗೆ!! ಆದರೆ ಔಷಧಿಯ ಪ್ರಭಾವ ಮಾಸಿತೊಡನೆಯೇ ಅಲ್ಲಿ ಮೊದಲಿಗಿಂತ ಅಧಿಕ ಶಕ್ತಿಯ ಕ್ರಿಮಿಗಳು ಉದ್ಭವಗೊಂಡು ಪುನಃ ರೋಗ ಕಾಣಿಸಿಕೊಳ್ಳುತ್ತದೆ. ರೋಗದ ರೂಪ ಬೇರಾಗಲೂ ಬಹುದು. ಮೊದಲಿನ ಔಷಧಿ ಈಗ ಹಿಡಿಯುವುದಿಲ್ಲ. ಮತ್ತೂ ಹೆಚ್ಚಿನ ಶಕ್ತಿಯ ಔಷಧ ಪ್ರಯೋಗ ನಡೆಸುತ್ತದೆ. ಒಮ್ಮೆ ಗುಣವಾದಂತೆ ಕಂಡು—ಪುನಃ ಕ್ರಿಮಿಗಳ ಜನನ! ಹೀಗೆ ಆಗುತ್ತಾ ಆಗುತ್ತಾ ಸೇವಿಸಿದ ಔಷಧಿಯೂ ವಿಷವಾಗಿ ಪರಿಣಮಿಸಿ ಶರೀರದ ಸ್ವೈಜ ಶಕ್ತಿ ಕುಂದಿ ಹೋಗಿ ರೋಗ ಬಲಗೊಂಡು ಮತ್ತೆ ಮರಣವನ್ನೇ ಅಪ್ಪಬೇಕಾಗಿದೆ—ರೋಗಿ! ಇದಕ್ಕಾರು ಕಾರಣ? ಕಶ್ಮಲವೇ? ಕ್ರಿಮಿಗಳೇ?

ಈ ರೀತಿ ನಡೆದುಕೊಂಡು ಬಂದೇ ನಮಗಿಂದು ಈ ಗತಿ ಬರಲು ನಾವು—ನಮ್ಮ ಮಕ್ಕಳು ನಿರಂತರ ರೋಗಿಗಳಾಗಿರಲು ಕಾರಣ. ಇಂದು ಪ್ರಪಂಚದಲ್ಲಿ ದಿನೇ ದಿನೇ ತಯಾರಾಗುವಂತಹ ಔಷಧಗಳನ್ನು ಲೆಕ್ಕ ಹಾಕಿದ್ದಾರೆ ಅದೆಷ್ಟಾಗದು! ಇವೆಲ್ಲಾ ನಮ್ಮ ಹೊಟ್ಟೆಗೇ ಹೋಗುವುದಲ್ಲವೇ?

—ಎಂಬಾಗ ಈ ಔಷಧವು ಎಷ್ಟೊಂದು ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ!

ನಮ್ಮ ಜೀವನ ಕ್ರಮವೇ ನಮ್ಮನ್ನು ಅಧೋಗತಿಗೆ ತಳ್ಳುತ್ತಿದೆ!

ಹಳ್ಳಿಯ ಜನರಿಗೆ ರೋಗ ಕಡಿಮೆಯಾಗಲೂ, ಪೇಟೆ ಪಟ್ಟಣಗಳಲ್ಲಿ ಅಧಿಕವಾಗಲೂ ಇನ್ನು ಬೇರೆ ಕಾರಣಬೇಕೇ?

ಹಳ್ಳಿಯವರು ವೈಗಳ್ಳ ಲ್ಲ. ಅವರಿಗೆ ನಾಗರಿಕತೆ ಬೇಕಿಲ್ಲ. ಅವರು ಪೇಟೆಯವರಂತೆ ಔಷಧಗಳಿಗೆ ಮರುಳಾಗುವುದಿಲ್ಲ. ಅವರು ಸರಳ ಜೀವಿಗಳು; ದಿನದ ಇಪ್ಪತ್ತನಾಲ್ಕು ತಾಸೂ ಪೇಟೆ ಪಟ್ಟಣಿಗರಂತೆ ಕಟ್ಟಡದೊಳಗೇ ಕುಳಿತು ಜೀವನದೂಡುತ್ತಿಲ್ಲ. ಪ್ರಕೃತಿಯ ವಿಶಾಲವಾಡಿಲಲ್ಲಿ—ಹಾಯಾಗಿ ಮೈಯೊಡ್ಡುವರು; ಪ್ರಕೃತಿಯೊಂದಿಗೆ ಬೆರೆತಿರುವರು. (ಪೇಟೆಯಲ್ಲಿ ಅಂತಹ ಸೌಲಭ್ಯವಿಲ್ಲ) ಎಂತಲೇ ಅವರಿಗೆ ರೋಗಗಳು ಬರುವುದು ಕಡಿಮೆ.

ಪಶು ಪಕ್ಷಿಗಳೂ ಅಂತೆಯೇ. ಅವುಗಳು ಸದಾ ನಿಸರ್ಗದೊಂದಿಗೇ ಕಲೆತು ಜೀವಿಸುವಂಥವುಗಳು ಆದ್ದರಿಂದಲೇ ಅವುಗಳೆಂದೂ ರೋಗಕ್ಕೆ ಬಲಿಯಾಗುವುದಿಲ್ಲ.

ಆದರೆ ಈಗೀಗ ಹಳ್ಳಿಗಳಲ್ಲೂ ನಾಗರಿಕತೆಯ 'ಗಾಳಿ ಬೀಸತೊಡಗಿದೆ. ಆ ತಪ್ಪಿನ ಕುರುಹೋ ಎಂಬಂತೆ ಅದರೊಂದಿಗೇ ಜನಿಸುತ್ತಿವೆ—ಬೆಳೆಯುತ್ತಿವೆ-ರೋಗ!!

ಇದೇ ರೀತಿ ಸಾಗಿದರೆ ಮಾನವ ಜನಾಂಗದ ಅಳಿವಿಗೆ ಇನ್ನು ಹೆಚ್ಚು ಸಮಯ ಬೇಕಾಗಿಲ್ಲ. ಎಂಬುದು ಖಂಡಿತ!

ಆದುದು ಆಗಿಹೋಯಿತು. ಅದಕ್ಕಾಗಿ ನಾವಿನ್ನು ಚಿಂತಿಸಿ ಫಲವಿಲ್ಲ. ಆದರೆ ಇನ್ನು ಮುಂದಾದರೂ ನಮ್ಮ ಮುಂದಿನ ಜನಾಂಗವನ್ನು ರೂಪಿಸುವ ಕಾರ್ಯದಲ್ಲಿ ನಾವಿಂದೇ ಕರ್ತವ್ಯಶೀಲರಾಗಬೇಕಾಗಿದೆ.

ಇನ್ನು ಮುಂದಾದರೂ ನಾವು ಪ್ರಕೃತಿಯನ್ನು ಅಲಕ್ಷಿಸಬಾರದು. ಪ್ರಕೃತಿ ನಮ್ಮೆಲ್ಲರ ಮಾತೆ. ಪ್ರಕೃತಿಸಿದ್ಧ ಶಕ್ತಿಗಳಾದ—ಮಾನವನ ನಿರ್ಮಾಣಕ್ಕೇ ಏಕೆ—ಸಮಸ್ತ ಸಜೀವಿಗಳ ನಿರ್ಮಾಣಕ್ಕೂ ಕಾರಣೀ ಭೂತವಾದ ಪಂಚಭೂತಗಳನ್ನು (ಭೂಮಿ, ಗಾಳಿ, ನೀರು, ಉಷ್ಣ,—ಆಕಾಶ) ನೀವೆಂದೂ ತಿರಸ್ಕರಿಸಬಾರದು. ಅವುಗಳ ಬಳಸುವಿಕೆಯಿಂದ ನಮಗೆಂದೂ ರೋಗ ಬರಲಾರದು. ಬಂದರೂ ಗುಣಪಡಿಸುವ ಕಾರ್ಯವನ್ನೂ ಅವುಗಳೇ ಮಾಡುವುವು.

ಎಂಬಾಗ ನಾವೇಕೆ ತಣ್ಣೀರಲ್ಲಿ ತಲೆಯೊಡ್ಡಲು' ಬಿಸಿಲಲ್ಲಿ ಅಡ್ಡಾಡಲು, ಗಾಳಿಗೆ ಮೈಯೊಡ್ಡಲು ಹೆದರಬೇಕು? ನಮ್ಮ ಮಕ್ಕಳನ್ನೇಕೆ ಗದರಿಸಬೇಕು?

ಬೇಡ, ಹೆದರುವುದೇ ಬೇಡ.

—ಸಾಧ್ಯವಿದ್ದಷ್ಟೂ ಪ್ರಕೃತಿಗೆ ಹೊಂದಿಕೊಂಡಿರಬೇಕು.

ಮಹಾತ್ಮ ಗಾಂಧೀಜಿ ಇದನ್ನು—ಈ ತತ್ವವನ್ನು ಮನಗಂಡಿದ್ದರು. ಎಂತಲೇ ಅವರು ತಮ್ಮ ನಿತ್ಯ ಜೀವನದಲ್ಲಿ ಅದನ್ನು ಅನುಸರಿಸುತ್ತಿದ್ದರು. ಆ ಕುರಿತು ತುಂಬಾ ಆಸಕ್ತಿ ವಹಿಸಿ ದುಡಿದಿದ್ದರು. ಇಡೀ ಹಿಂದೂ ದೇಶವನ್ನೇ ನಿಸರ್ಗ ತತ್ವಕ್ಕಳವಡಿಸಬೇಕೆಂದು ಅವರು ಕನಸು ಕಾಡಿದ್ದರು. ಆದರೆ ಅದರ ಮೊದಲೇ ಆ ಭಾರವನ್ನವರು ನಮ್ಮ ಮೇಲಿಟ್ಟು ನಮ್ಮನ್ನಗಲಿದರು!

ಅವರ ಆ ಉದ್ದೇಶವನ್ನು ಸಫಲಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಎಂದು ನಾವು ನಮ್ಮ ದೃಷ್ಟಿಕೋನವನ್ನು ಬದಲಿಸುವೆವೋ ಅಂದಿಗೆ ಮಹಾತ್ಮಾಜಿಯ ಕನಸಿನ ರಾಮರಾಜ್ಯ ನನಸಾಗಬಲ್ಲುದು! ಅವರ ಆತ್ಮ ತೃಪ್ತಿಯನ್ನು ಹೊಂದಬಲ್ಲುದು. ನಮ್ಮ ಪರಂಪರೆ ರೋಗರಹಿತರಾಗಿ ಬಾಳಬಲ್ಲುದು! ನಮ್ಮ ಜೀವನದಲ್ಲಿ ಹೊಸ ಬೆಳಕು ತೋರಬಲ್ಲುದು!

ಶ್ರೀ. ಕೆ. ವ ಕೇಶವ,
ವೇಲಂಪಾಡಿ. ದ. ಕ.


# ಹಿಂದೂಸ್ಥಾನದಲ್ಲಿ ಟಿ. ಬಿ. ಮೊಹರು ಮಾರಾಟದ ಏಳನೆಯ ಚಳವಳಿ

(ನವದೆಹಲಿಯ ಟ್ಯುಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾದವರಿಂದ ಪ್ರಾರಂಭಿಸಲ್ಪಟ್ಟುದು)

**1956ನೆ ಅಕ್ಟೋಬರ ತಾ. 2ರಿಂದ**
**1957ನೆ ಜನವರಿ ತಾ. 28ರ ತನಕ**

**1956-57 ಟಿ. ಬಿ. ಮುದ್ರೆ**




## ಈ ಮುದ್ರೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಖರೀದಿಸಿರಿ.

ಒಂದು ಟಿ. ಬಿ. ಮುದ್ರೆಯ ಬೆಲೆ ಒಂದಾಣೆ ಮಾತ್ರ.

ಮುದ್ರೆಗಳು ದೊರೆಯುವ ಸ್ಥಳ:— ದಿ ಒನರರಿ ಸೆಕ್ರೆಟರಿ, ದ. ಕ. ಟ್ಯೂಬರ್‌ಕ್ಯೂಲೋಸಿಸ್ ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪಲ್ ರಸ್ತೆ, ಮಂಗಳೂರು.

ನೆನಪಿನಲ್ಲಿಡಿರಿ!
ನೀವು ಕೊಡುವ ಸಹಾಯವು ಕ್ಷಯರೋಗ ನಿವಾರಣಾ ಜನತಾ ಚಳವಳಿಗೆ ನೇರಾದ ಬೆಂಬಲವಾಗಿದೆ.

ಜಾಹೀರಾತು ಜಾಗ ದಾನ ಮಾಡಿದವರು:
ಮೆಸರ್ಸ್. ಎ. ವಿ. ಥೋಮಸ್ ಎಂಡ್ ಕೊ. ಲಿ., ಅಲಪ್ಪೆ.

## ಕಾಡಿನ ಜೀವಜಂತುಗಳು

# ವನ್ಯ ಪ್ರಾಣಿ, ಪಕ್ಷಿಗಳು ರಾಷ್ಟ್ರದ ಸಂಪತ್ತು

### ನಾವಿದನ್ನು ಪ್ರಯತ್ನಪೂರ್ವಕ ಸಂರಕ್ಷಿಸಿಕೊಳ್ಳಬೇಕಾಗಿದೆ

ಭಾರತದಲ್ಲಿರುವ ವೈವಿಧ್ಯಪೂರ್ಣ ವಾಯುಗುಣ ಹಾಗೂ ಪ್ರಾಕೃತಿಕ ಲಕ್ಷಣ ಹಲವು ರೀತಿಯಲ್ಲಿ ಅಸಾಮಾನ್ಯ ವೆನಿಸಿದ ಪ್ರಾಣಿ ವರ್ಗಗಳು ಇರುವುದಕ್ಕೆ ಅನುಕೂಲವಾಗಿವೆ.

ಭಾರತದ ಪಶ್ಚಿಮ ಭಾಗದಲ್ಲಿ ಕಚ್ಛಿನ ಕಾಡುಕತ್ತೆ, ಗಿರ್‌ಕಾಡಿನ ಸಿಂಹ. ದಖನ್ನಿನ ಕರಿಯ ಜಿಂಕೆ— ಇವುಗಳಿಗೂ ಆಫ್ರಿಕದಲ್ಲಿರುವ ಮೃಗಗಳಿಗೂ ನಿಕಟ ಸಾಮ್ಯವಿರುವುದು. ಪೂರ್ವ ಭಾರತದ ಪ್ರಾಣಿ ವರ್ಗಗಳು ಮಲಯಾದ ಪ್ರಾಣಿ ವರ್ಗಕ್ಕೆ ಹೋಲುತ್ತವೆ. ಉದಾಹರಣೆಗೆ: ಖಡ್ಗಮೃಗ, ಕಾಡುಕೋಣ, ಕಾಡೆಮ್ಮೆ ಹಾಗೂ ಅನೇಕ ವಿಧವಾದ ಹಕ್ಕಿಗಳು ಉತ್ತರದಲ್ಲಿ ಹಿಮಾಲಯ ಪರ್ವತ ಪ್ರದೇಶದಲ್ಲಿ ಅನೇಕ ಬಗೆಯ ಕುರಿಗಳು, ಆಡುಗಳು, ಹಕ್ಕಿಗಳೂ ಇವೆ. ದಕ್ಷಿಣ ಪರ್ಯಾಯ ದ್ವೀಪದಲ್ಲಿ ಆನೆ,ಕಾಡೆಮ್ಮೆ, ಜಿಂಕೆ ಮತ್ತು ಕರಡಿಗಳು ಇವೆ.

ಭಾರತದ ರಾಷ್ಟ್ರ ಸಂಪತ್ತಾದ ವನ್ಯ ಜೀವಿಗಳನ್ನು ಸಂರಕ್ಷಿಸುವುದು ಅಗತ್ಯವೆನಿಸಿದೆ. ನಮ್ಮಲ್ಲಿನ ಕೆಲವು ವನ್ಯ ಪಕ್ಷಿಗಳ ಮತ್ತು ಪ್ರಾಣಿಗಳ ಸಂಖ್ಯೆ ತುಂಬಾ ಕಡಿಮೆಯಾಗುತ್ತಿರುವುದರಿಂದ ಅವುಗಳನ್ನು ಸಂರಕ್ಷಿಸುವುದು ಅಗತ್ಯವಾಗಿದೆ. ಕೆಲವು ಹಕ್ಕಿಗಳನ್ನು ಮತ್ತು ಪ್ರಾಣಿಗಳನ್ನು ಕಾನೂನಿನ ಮೂಲಕವಾಗಿ ಸಂರಕ್ಷಿಸಬೇಕಾದ ಪರಿಸ್ಥಿತಿ ಬಂದಿದೆ. ಹಲವು ರಾಜ್ಯಗಳಲ್ಲಿ ಬೇಟೆಯ ಕಾಲವನ್ನು ನಿಗದಿಗೊಳಿಸಲಾಗಿದೆ.

ಸಂರಕ್ಷಣೆ ಪಡೆದ ಪ್ರಾಣಿಗಳಲ್ಲಿ ಭಾರತದ ಸಿಂಹ ಹಾಗೂ ಖಡ್ಗ ಮೃಗಗಳಿವೆ. ಇವು ಇಡೀ ವಿಶ್ವದಲ್ಲೆ ಅತ್ಯಂತ ಅಪರೂಪವಾದ ಮೃಗಗಳು. ಅಧಿಕ ಸಂಖ್ಯೆಯಲ್ಲಿದ್ದ ಸಿಂಹಗಳು ಈಗ ಕೇವಲ ಮುನ್ನೂರಕ್ಕೆ ಇಳಿದಿವೆ. ಭಾರತದಲ್ಲಿರುವ ಖಡ್ಗ ಮೃಗಗಳ ಸಂಖ್ಯೆ ೩೦೦ ಮಾತ್ರ. ಚಿರತೆ, ಕಾಶ್ಮೀರದ ಜಿಂಕೆ, ಕಾಡುಕತ್ತೆ ಇತ್ಯಾದಿಗಳನ್ನು ಸಹ ಕಾನೂನಿನ ಮೂಲಕ ಬೇಟೆಯಾಡದಂತೆ ಪ್ರತಿಬಂಧಿಸಿ ಸಂರಕ್ಷಿಸಬೇಕಾಗಿದೆ

ಪ್ರಾಚೀನ ಕಾಲದಲ್ಲಿ. ಭಾರತದಲ್ಲಿ ಬಗೆಬಗೆಯ ಜಾತಿಯ ನಾನಾ ವರ್ಣಗಳ ಪಶುಪಕ್ಷಿಗಳನ್ನು ಸಾಕಲಾಗುತ್ತಿತ್ತು. ವೈದಿಕ ಕಾಲದಲ್ಲಿ ವನ್ಯ ಮೃಗಗಳನ್ನು ರಕ್ಷಣೆ ಮಾಡುವುದು ತಮ್ಮ ಧರ್ಮವೆಂದು ಜನರು ತಿಳಿದಿದ್ದರು. ವೈದಿಕ ಸಾಹಿತ್ಯದಲ್ಲಿ ಅನೇಕ ಋಷಿಮುನಿಗಳು ಮತ್ತು ಕವಿಗಳು ವನಗಳಲ್ಲಿ ವಾಸಿಸುತ್ತಿದ್ದು ವನ್ಯ ಮೃಗಗಳನ್ನು ಪ್ರೀತಿಸುತ್ತಿದ್ದರು.

ಪಶುಪಕ್ಷಿಗಳು ಹಾಗೂ ಅವುಗಳೊಡನೆ ವಾಸಿಸುವ ಮನುಷ್ಯರಲ್ಲಿದ್ದ ಪರಸ್ಪರ ಪ್ರೇಮ ಇವು ಅನೇಕ ಗ್ರಂಥಗಳಲ್ಲಿ ಅಕ್ಕಪಕ್ಕದಲ್ಲಿ ವನ್ಯ ಜೀವ ಜಂತುಗಳು ನಿರ್ಭಯವಾಗಿ ಆಡ್ಡಾಡುತ್ತಿರುತ್ತಿದ್ದವು. ವನ್ಯ ಮೃಗಗಳ ಹತ್ಯ ಮಾಡಿದರೆ ದಂಡವನ್ನು ವಿಧಿಸಲಾಗುತ್ತಿತ್ತು. ಆನೆಯನ್ನು ಕೊಂದಲ್ಲಿ ಕಠೋರ ದಂಡವನ್ನು ವಿಧಿಸಲಾಗುತ್ತಿತ್ತು.

ಅನಂತರದ ಕಾಲದಲ್ಲಿ ವನ್ಯ ಮೃಗಗಳ ಬಗೆಗೆ ಇದ್ದ ಪ್ರೇಮವು ಕಡಿಮೆಯಾದರೂ, ಮಧ್ಯಕಾಲದ ರಾಜರು ವನ್ಯ ಮೃಗಗಳ ರಕ್ಷಣೆಗಾಗಿ ಕೆಲವು ಸ್ಥಳಗಳನ್ನು ಕಾದಿಡುತ್ತಿದ್ದರು. ಕ್ರಮೇಣ 'ಜೀವಂ ಜೀವಸ್ಯ ಜೀವನಂ' ಎಂಬ ತತ್ವದ ಪ್ರಕಾರ ಮನುಷ್ಯನು ಪಶುಪಕ್ಷಿಗಳನ್ನು ಕೊಲ್ಲುವುದಕ್ಕೆ ಆರಂಭಿಸಿದನು.

ಇದೂ ಅಲ್ಲದೆ ಜನಸಂಖ್ಯೆಯು ವೃದ್ಧಿಗೊಂಡಿದ್ದರಿಂದ ಹಲವು ವನಗಳನ್ನು ಕಡಿದು ವಾಸಯೋಗ್ಯವನ್ನಾಗಿ ಮಾಡಲಾಯಿತು. ಇದರ ಪರಿಣಾಮವಾಗಿ, ವನ್ಯ ಮೃಗಗಳು ವನಗಳನ್ನು ಬಿಟ್ಟೋಡಿದವು; ಅವುಗಳ ಸಂಖ್ಯೆಯೂ ಕಡಿಮೆಯಾಯಿತು.

ಆಧುನಿಕ ಯುಗದಲ್ಲಿ ಬೇಟೆಗಾರರು, ಬೇಟೆಗಾಗಿ ಅತ್ಯಾಧುನಿಕ ಸಾಧನಗಳನ್ನು ಉಪಯೋಗಿಸತೊಡಗಿದರು. ತಮ್ಮ ಬೇಟೆಯ ಉತ್ಸಾಹದಲ್ಲಿ ಅವರು ತಾರತಮ್ಯವಿಲ್ಲದೆ ವನ್ಯ ಮೃಗಗಳನ್ನು ಕೊಲ್ಲತೊಡಗಿದ್ದು, ವನ್ಯ ಮೃಗಗಳ ಸಂಪತ್ತು ಕಡಿಮೆಯಾಗಲು ಕಾರಣವಾಯಿತು. ಇದರಲ್ಲಿ ವನ್ಯ ಜೀವಿಗಳಲ್ಲಿ ಹಲವು 'ನರಭಕ್ಷಕ'ಗಳಾಗಿ ಪರಿವರ್ತನಗೊಂಡವು: ಪ್ರಕೃತಿಯ ಸಮತೂಕವೇ ಕೊಂಚಮಟ್ಟಿಗೆ ಏರುಪೇರಾಗಲು ಕಾರಣವಾಯಿತು.

ಸೃಷ್ಟಿಯ ನಿಯಮದಂತೆ ಯಾದರೂ ಪ್ರತಿ ಪ್ರಾಣಿಗೂ ಒಂದು ಸ್ಥಾನವಿದೆ. ಪ್ರಕೃತಿಯ ಸಮತೋಲನವನ್ನು ಉಳಿಸಿಕೊಂಡು ಬರುವ ವಿಚಾರದಲ್ಲಿ ಜೀವ ಜಂತುಗಳೂ ಪಕ್ಷಿಗಳೂ ಮುಖ್ಯ ಪಾತ್ರ ವಹಿಸುತ್ತವೆ.

ಈ ನಿರೂಪಣೆಯನ್ನು ದೃಷ್ಟಾಂತವೊಂದರ ಮೂಲಕ ಸ್ಪಷ್ಟೀಕರಿಸಬಹುದಾಗಿದೆ. ಒಂದು ಪ್ರದೇಶದಲ್ಲಿರುವ ಅರಣ್ಯದ ಜಿಂಕೆಗಳನ್ನು ನಾಶ ಮಾಡುತ್ತಾ ಬಂದರೆ, ಆ ಪ್ರದೇಶದ ಪಶು ಸಂಪತ್ತಿಗೆ ಧಕ್ಕೆಯುಂಟಾಗುವ ಸಂಭವವಿದೆ. ಹೇಗೆ ಜಿಂಕೆಗಳ ಸಂಖ್ಯೆ ಕಡಿಮೆಯಾದಾಗ, ಹುಲಿಗಳು ಅಥವಾ ಚಿರತೆಗಳು ಪಶು ಪ್ರಾಣಿಗಳನ್ನೇ ಅಪಹರಿಸುವ ಸಂಭವವಿರುವುದು.

ಗಿಡಮರಗಳು, ಫಸಲುಗಳ ಬೆಳವಣಿಗೆಗೆ ಪ್ರಾಣಿಗಳೂ ಮತ್ತು ಪಕ್ಷಿಗಳೂ ನೆರವಾಗುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿರುವುದು. ನಾನಾ ಪಕ್ಷಿಗಳು ಪೈರುಗಳ ವಿನಾಶಕ್ಕೆ ಕಾರಣವಾದ ಮಿಡತೆಗಳು ಮುಂತಾದ ಕೀಟಗಳನ್ನು ಭಕ್ಷಿಸುವುದರಿಂದ, ಬೆಳೆಗಳಿಗೆ ಸಂಭವಿಸುವ ಅಪಾಯ ತಪ್ಪುವುದು. ಈ ರೀತಿಯಾಗಿ ಪಶುಪ್ರಾಣಿಗಳೂ, ಪಕ್ಷಿಗಳೂ ಬೇಸಾಯಗಾರರಿಗೆ ನೆರವಾಗುತ್ತವೆ.

ಈ ಪ್ರಕಾರ ಸೃಷ್ಟಿಯಲ್ಲಿನ ಸಮಸ್ತ ಜೀವಿಗಳ ಹಿತರಕ್ಷಣೆಯು ಯಾವ ಜೀವಿಗೂ ಅನಾವಶ್ಯಕವಾಗಿ ಹಾನಿಯುಂಟಾಗದಿರುವ ವಿಚಾರದಲ್ಲಿ ಅಡಗಿದೆ.

ಮಾನವನ ಕಲ್ಯಾಣವೂ ಇದರಲ್ಲಿ ಸೇರಿದೆ ಮತ್ತು ಪ್ರಕೃತಿಯು ಸಮತೋಲನವನ್ನು ಉಳಿಸಿಕೊಂಡು ಬರುವ ಬಗ್ಗೆ ಇದು ಅವಶ್ಯಕವಾಗಿದೆ.

ಅರಣ್ಯದ ಜೀವ ಜಂತುಗಳನ್ನೂ ಪಕ್ಷಿ ಮುಂತಾದವನ್ನೂ ನಷ್ಟಪಡಿಸುವುದರಿಂದ ಮನುಷ್ಯನು ಯಾವ ರೀತಿಯ ಹಿತ ಸಾಧಿಸಿದಂತಾಗುವುದಿಲ್ಲ. ಆದರೆ ಈ ಜೀವ ಜಂತುಗಳನ್ನೂ ಪಕ್ಷಿ ಮುಂತಾದವನ್ನೂ ಸಂರಕ್ಷಿಸಿಕೊಂಡು ಬರುವುದರಿಂದ ಮನುಷ್ಯರಿಗೆ ನಾನಾ ರೀತಿಯ ಸೌಲಭ್ಯಗಳು ದೊರೆಯುವುವು.

ಉದಾಹರಣೆಗೆ ಗುಲಾಬಿ ಬಣ್ಣದ ಒಂದು ಜಾತಿಕಾಗೆ (ರೋಸಿ ಪಾಸ್ಟರ್) ಮತ್ತು ಹಿಮಾಲಯದ ಮೈನಾ ಜಾತಿಯ ಪಕ್ಷಿ (ಸ್ಟಾರ್ಲಿಂಗ್)ಗಳನ್ನು ಉಲ್ಲೇಖಿಸಬಹುದು. ಹಿಂದೆ ಇವನ್ನು ಲೆಕ್ಕಾಚಾರವಿಲ್ಲದೆ ಕೊಲ್ಲಲಾಗುತ್ತಿತ್ತು. ಈಚೆಗೆ ಪಂಜಾಬಿನಲ್ಲಿ ಕಾನೂನಿನ ಸಹಾಯದಿಂದ ಈ ರೀತಿ ಪಕ್ಷಿಗಳನ್ನು ಅನಿರ್ಬಂಧಿತವಾಗಿ ನಾಶಪಡಿಸುವುದನ್ನು ತಪ್ಪಿಸಲಾಗಿದೆ. ಇವು ಬೇಸಾಯದ ಜಮಾನುಗಳಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮೂರ್ತಿ ಚಿಕ್ಕದಾದಾಗ್ಯೂ ಈ ಪಕ್ಷಿಗಳು ಮಿಡತೆಗಳ ತಂಡಗಳನ್ನು ಧೈರ್ಯದಿಂದ ಎದುರಿಸಿ ನಾಶಪಡಿಸುತ್ತವೆ.

ಬೇಸಾಯಗಾರನ ಸುತ್ತಮುತ್ತಲೂ ವಾಸಿರುವ ಜೀವಜಂತುಗಳೂ ಪಕ್ಷಿಗಳೂ ಹಾನಿಯುಂಟುಮಾಡುತ್ತವೆ ಎಂಬುದು ಸಾಮಾನ್ಯ ನಂಬಿಕೆಯಾಗಿದೆ. ಆದರೆ ಇದು ಸುಳ್ಳು. ಈ ಸಹಸ್ರಾರು ಜೀವಜಂತುಗಳು ಬೇಸಾಯಗಾರನಿಗೆ ಪರಮ ಮಿತ್ರರಾಗಿರುತ್ತವೆ. ಬೇಸಾಯಗಾರನು ಈ ಪರಮ ಮಿತ್ರರಂತಿರುವ ಜೀವಜಂತುಗಳು ಉಪಯುಕ್ತ ರೀತಿಯಲ್ಲಿ ಜೀವಿಸುವಂತೆ ಮಾಡುವುದು ಒಳ್ಳೆಯದು.

ಜೀವ ಜಂತುಗಳು ನಮ್ಮ ದೇಶದ ಪರಂಪರಾಗತ ಸಂಪತ್ತಾಗಿರುವುದು. ಇದಕ್ಕಾಗಿ ಸುರಕ್ಷಿತ ಅರಣ್ಯಗಳು, ಶಿಕಾರಿ ನಿಷಿದ್ಧ ಕ್ಷೇತ್ರಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳೂ ಅವಶ್ಯಕವಾಗಿವೆ. ಕಿರಿಯ ಪೀಳಿಗೆಯವರ ಜ್ಞಾನಾಭಿವೃದ್ಧಿಗಾಗಿ ಈ ಜೀವ ಜಂತುಗಳನ್ನು ಪ್ರಾಣಿ ಸಂಗ್ರಹಾಲಯದಲ್ಲಿಡುವುದು ಉಚಿತವಾಗಿದೆ.

ದೇಶದಲ್ಲಿ ಪ್ರಾಣಿ ಸಮುದಾಯ ಅಧಿಕವಾಗಿಲ್ಲ. ಕೇವಲ ಮೂರು ಪ್ರಾಣಿಗಳು ಮಾತ್ರ ತಲತಲಾಂತರದಿಂದ ನಮ್ಮ ಪಾಲಿಗೆ ಬಂದಿರುವುವು. ಇವುಗಳೇ ಸಿಂಹ, ಆನೆ ಮತ್ತು ಖಡ್ಗಮೃಗಗಳಾಗಿವೆ. ಈ ಮೃಗಗಳ ವಿಚಾರದಲ್ಲಿ ದಂತ ಕತೆಗಳು ನಮ್ಮ ದೇಶದಲ್ಲಿ ಪ್ರಚಲಿತವಾಗಿವೆ. ಈ ಕಾಡುಮೃಗಗಳನ್ನು ಕಾಣುವುದರಿಂದ ಜನಸಾಮಾನ್ಯರು ಪುಳಕಿತಗೊಳ್ಳುವರು. ಇವುಗಳನ್ನು ಕಾಪಾಡುವುದೇ ನಮ್ಮ ಕರ್ತವ್ಯವಾಗಿರುವುದು.

ಈ ಜೀವ ಜಂತುಗಳ ನೆಲೆ, ಅವುಗಳ ಜೀವನ ಮಾರ್ಗಗಳು. ಲಕ್ಷಣಗಳು ಮುಂತಾದವನ್ನು ತಿಳಿಮುಕೊಳ್ಳುವುದು ನಮ್ಮ ಸಾಂಸ್ಕೃತಿಕ ಜೀವನಕ್ಕೆ ಅಮೂಲ್ಯವಾಗಿ ಪರಿಣಮಿಸುವುದು.

---

## ಮಹಾತ್ಮರ ನುಡಿಮುತ್ತುಗಳು

### ಸ್ವರಾಜ್ಯದ ನನ್ನ ಕಲ್ಪನೆ.

ನನ್ನ ಕನಸಿನ ಸ್ವರಾಜ್ಯ ಬಡ ಮನುಷ್ಯನ ಸ್ವರಾಜ್ಯ, ರಾಜ ಮಹಾರಾಜರು ಹಾಗು ಸಿರಿವಂತರು ಬಳಸುವ ಜೀವನಾವಶ್ಯಕ ವಸ್ತುಗಳನ್ನೇ ನೀವೂ ಬಳಸುವಂತಾಗಬೇಕು, ಅದಕ್ಕಾಗಿ ನೀವು ಅವರಂತೆ ಅರಮನೆಗಳಲ್ಲಿಯೇ ವಾಸಿಸಬೇಕಾಗಿಲ್ಲ. ಸುಖಪಡಬೇಕಾದರೆ ಅವು ಬೇಕೇ ಬೇಕು, ಹೇಗೇನಿಲ್ಲ. ಅರಮನೆಯಲ್ಲಿ ಇರಲು ಹೋಗಿ ನಾವು-ನೀವು ದಾರಿಕಾಣದೆ ಹೋಗಬಹುದು. ಆದರೆ ಉಳ್ಳವರು ಪಡೆಯುವ ಸಾಮಾನ್ಯ ಜೀವನಾವಶ್ಯಕ ಒಡವೆಗಳೆಲ್ಲ ನಿಮಗೆ ದೊರೆಯಲೇ ಬೇಕು. ನಿಮಗೆ ಅವು ದೊರೆಯುವ ಭರವಸೆ ಕೊಡಲಾರದ ಸ್ವರಾಜ್ಯ ಪೂರ್ಣ ಸ್ವರಾಜ್ಯ ಹೇಗಾದೀತು?

—ಮಹಾತ್ಮಾ ಗಾಂಧಿ.


# ಫಂಟಿಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು" —ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ನಡಿಸಿದ ಪ್ರಕಾಶಕರೂ ಅಭಿನಂದನೀಯರು." —ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

# ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ,ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ.

## ನಿಮಗಿದು ತಿಳಿದಿರಲಿ

### ಪ್ರೇಮಿಸುವುದು ತಪ್ಪಲ್ಲದೆ ಇರಬಹುದು: ಪ್ರಣಯಪತ್ರ ಲೇಖನವು ಮಾತ್ರ ಬಹಳ ಗಂಭೀರವಾದ ತಪ್ಪು

ಹದಿನೈದರಿಂದ ಇಪ್ಪತ್ತು— ಇಪ್ಪತ್ತನಾಲ್ಕು ವರ್ಷಗಳ ಜೀವನವೇ ವಿಚಿತ್ರವಾಗಿರುತ್ತದೆ. ಆಗ ತರುಣ – ತರುಣಿಯರು ಹೃದಯದ ಭಾವಾವೇಗಗಳ ಪ್ರವಾಹದಲ್ಲಿ ಬಿದ್ದು ಹೋಗುತ್ತಾರೆ; ಮನಸ್ಸಿನ ವಿವೇಕದ ಕಡಿವಾಣಕ್ಕೆ ಅವರು ಬದ್ಧರಾಗಿರುವುದಿಲ್ಲ. "ರೋಮ್ಯಾಂಟಿಕ್" ಎಂದು ಏನನ್ನು ವಿಶೇಷಿಸಲಾಗುತ್ತದೋ ಆ ಮಧುರ ಭಾವಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸುವುದೇ ಯುವಕ—ಯುವತಿಯರಿಗೆ ಅತ್ಯಂತ ಪ್ರಿಯವೆಂದು ಈ ಕಾಲದಲ್ಲಿ ತೋರುತ್ತದೆ.

ಸುಂದರವೆಂದೂ ಮಧುರವೆಂದೂ ಆನಂದದಾಯಕವೆಂದೂ ತಾವು ನಂಬಿದ ಭಾವಲೋಕದ ಆರಾಧಕರಾಗಿ ಒಮ್ಮೆ ಯುವಕ—ಯುವತಿಯರು ಪರಿಣಮಿಸಿದರೆಂದಮೇಲೆ, ಆನರ ಮೇಲೆ ಬುದ್ಧಿಯ ನಿಯಂತ್ರಣ ಹೆಚ್ಚಾಗಿ ನಡೆಯುವುದಿಲ್ಲ. ವಿವೇಕದ ಮಾರ್ಗದರ್ಶನ ಅವರಿಗೆ ಬೇಕಾಗುವುದಿಲ್ಲ. ಪ್ರವಾಹ ಪತಿತರಂತೆ ಅವರ ಗತಿಯಾಗುತ್ತದೆ. ತಾವು ಚೆಲುವಾದುದೆಂದು ಹೃದಯಸ್ಪಂದನದ ವೇಗದ ಮಾನವನ್ನೆ ಆಧಾರವಾಗಿಟ್ಟುಕೊಂಡು ನಿರ್ಧರಿಸಿದ ವಿಷಯಗಳ ಕಡೆಗೆ ಅವರ ಗಮನ ಹರಿಯುವುದೇ ಹೆಚ್ಚು.

ಉನ್ನತ ಧ್ಯೇಯಗಳೂ ಆದರ್ಶಗಳೂ ಮಹತ್ವಾಕಾಂಕ್ಷೆಯ ಕುರುಹಾದ ಗಾಳಿ ಗೋಪುರಗಳೂ ಈ ಅವಧಿಯಲ್ಲಿ ತರುಣ—ತರುಣಿಯರಲ್ಲಿ ಮೂಡಿಕೊಳ್ಳುತ್ತವೆ. ಜೀವನದ ವಾಸ್ತವಾಂಶಗಳನ್ನೂ ಸಾರಾಸಾರ ವಿಚಾರಗಳನ್ನೂ ಮಥಿಸಿ ನೋಡದೆ ಆದರ್ಶ ಪ್ರಪಂಚದಲ್ಲಿ ಮುಳುಗಲು ತರುಣ—ತರುಣಿಯರು ಹಿಂಜರಿಯುವುದಿಲ್ಲ. ತಮ್ಮ ಭಾವಸಮೃದ್ಧಿಯಿಂದ ಎಚ್ಚರಗೊಂಡು ವೈವಿಧ್ಯ ಪೂರ್ಣವಾದ ನಿಜ ಲೋಕವನ್ನು ಸೂಕ್ಷ್ಮ ನಿರೀಕ್ಷಕನ ದೃಷ್ಟಿಯಿಂದ ನೋಡುವ ಆಸಕ್ತಿಯಾಗಲೀ ಸ್ಥೈರ್ಯವಾಗಲೀ ಇವರಲ್ಲಿ ಉಳಿದಿರುವುದು ವಿರಳ.

ಈ ಕಾಲದಲ್ಲಿ ಗಾಂಧೀ, ವಿವೇಕಾನಂದ, ನೆಹರು ಮುಂತಾದ ಲೋಕ ಮಾನ್ಯ ವ್ಯಕ್ತಿಗಳ ಜೀವನದ ಜಾಡು ಹಿಡಿದು ಹೋಗುವ ಧೀರರ ಸೋಗು ಹಾಕಿಕೊಳ್ಳುವವರು ಕೆಲವರಿರಬಹುದು—ಅನೇಕರಿರಲಾರರು! ಆದರೆ, ನಿತ್ಯವೂ ಓದುತ್ತಿರುವ ಕತೆ—ಕಾದಂಬರಿಗಳ ನಾಯಕ—ನಾಯಕಿಯರ, ನೋಡುತ್ತಿರುವ ಚಲಚ್ಚಿತ್ರಗಳ ಹಿರೋ—ಹಿರೋಯಿನುಗಳ ಯಶಸ್ವಿ ಅನುಕರಣೆಯನ್ನು ಮಾಡಿ ತಮ್ಮ ಜೀವನ ಸಾರ್ಥಕ ಮಾಡಿಕೊಳ್ಳಲು ಹಾತೊರೆಯುವ ಯುವಕ-ಯುವತಿಯರಿಗೆ ಮಾತ್ರ ಬರಗಾಲವಿರಲಾರದು ಸ್ಪೆಯಿನಿನ ವಿಖ್ಯಾತ ಮೂರ್ಖ ಸಾಹಸಿಯಾದ ಡಾನ್ ಕ್ವಿಹೋಟನಂತೆ ಯುವಕರು ತಮ್ಮನ್ನೇ ಭಾವಲೋಕದ ಅರಸರೆಂದೂ ತಮಗೊಬ್ಬ "ಡಲ್ಸಿನಿಯಾ" ಳಂತಹ ಪ್ರಣಯಿನಿ ಇದ್ದಾಳೆಂದೂ ಭಾವಿಸಿ, ಅವಳ ಪ್ರೀತ್ಯರ್ಥವಾಗಿ ಗಾಳಿಯೊಡನೆಯಾದರೆ ಗಾಳಿಯೊಡನೆ, ಗುದ್ದಾಡಲಿಕ್ಕೆಂದೇ ಮುನುಗ್ಗುವ ಧೀರರೂ ಶೂರರೂ ಆಗುತ್ತಾರೆ. ಯುವತಿಯರಾದರೂ ಹೀಗೆಯೇ—ದಾಂಪತ್ಯ ಜೀವನದ ಸಿಹಿ-ಕಹಿಗಳ ಕಡೆಗೆ ಲಕ್ಷ್ಯ ಕೊಡುವುದಕ್ಕಿಂತಲೂ "ಪ್ರೇಮ"ವನ್ನು ಅಜರಾಮರವಾಗಿರಿಸುವುದೇ ಆಗ ತರುಣ ಲೋಕಕ್ಕೆ ಪೂಜ್ಯವಾದ ಕರ್ತವ್ಯವೆನಿಸುತ್ತದೆ.

ಯುವಕನಾಗಲೀ ಯುವತಿಯಾಗಲೀ ತನ್ನ ಸಹಜ ಸ್ವಭಾವ, ತಂದೆತಾಯಿಯರ ದೃಷ್ಟಿಕೋಣ, ಸಾಮಾಜಿಕ ಜೀವನದ ರೀತಿ ನೀತಿಗಳ ಮಿತಿಯೊಳಗೆ ಬಹಿರಂಗವಾಗಿಯೇ ಯಾರಾದರೊಬ್ಬಳ(ನ)ನ್ನು ಪ್ರೀತಿಸುತ್ತಿರಬಹುದು; ಪ್ರೇಮ ಯಾಚನೆಯನ್ನು ಮಾಡುತ್ತಿರಬಹುದು; ಏನಿಲ್ಲದಿದ್ದರೂ ಮನಸ್ಸಿನಲ್ಲಿಯೇ ಪೂಜೆಗೊಂಬ ಪ್ರಣಯಿ(ನಿ)ಯನ್ನು ಪಡೆದಿರಬಹುದು. ಗುಟ್ಟಿನಲ್ಲಿ ಆತನ ಸಮಾಗಮ ಸುಖವನ್ನೂ ಸಂಗ ಲಾಭವನ್ನೂ ಮಾಡಿಕೊಂಡಿರಬಹುದು. ಇವೇ ಬಗೆಯ ಕನಸುಗಳನ್ನಾದರೂ ಕಂಡು ಆದರಿಂದಲೇ ಸುಖಿಸುತ್ತಿರಬಹುದು; ಹಾಗೆ ಅಂಕುರಿಸಿದ ಅತೃಪ್ತಿಯನ್ನೆ ತೃಪ್ತಿಯ ರೂಪದಲ್ಲಿ ಅನುಭವಿಸುತ್ತಿರಬಹುದು.

ಅಂತೂ ಪ್ರೇಮ ಪಾತ್ರರೊ(ಳೊ)ಬ್ಬರನ್ನು ಯುವಕ ಯುವತಿಯರು ಅನ್ವೇಷಿಸಿ ಕಂಡುಕೊಂಡಿರುವುದಂತೂ ಹೆಚ್ಚಿನ ಮಟ್ಟಿಗೆ ಸತ್ಯ. ಇದು ಹಿತವೇ ಅಹಿತವೇ ಎಂಬುದು ದೊಡ್ಡ ಪ್ರಶ್ನೆ: ಅದನ್ನು ಉತ್ತರಿಸಲು ಹೋಗುವುದು ಈ ಲೇಖನದ ಉದ್ದೇಶವಲ್ಲ. ಆದರೆ, ಹೃದಯದಾಳದಲ್ಲಿರುವ ಭಾವಲೋಕದ ಈ ವಿಹಾರಿಗಳಿಗೆ ಒಂದು ಹಿತವಾಡಿಯನ್ನು ಮಾತ್ರ ಹೇಳಬೇಕಾಗಿದೆ—ಏನೆಂದರೆ "ದಯಮಾಡಿ ನೀವೆಂದೂ ಪ್ರಣಯ ಪತ್ರವನ್ನು ಬರೆಯುವ ಹವ್ಯಾಸಕ್ಕೆ ಮಾತ್ರ ಬಲಿಯಾಗಬೇಡಿ!"

ಇದೇನ? ಎಂದು ವಿಸ್ಮಯವೆ? ಸಹಜ. ಪ್ರಣಯ ಪತ್ರವನ್ನು ಬರೆಯದ ಪ್ರೇಮವಾದರೂ ಎಂಥದು, ಅಲ್ಲವೆ? ಇನಿಯಳೊ (ನೊ) ಬ್ಬನ ಪ್ರೇಮಪಾಶದಲ್ಲಿ ಬಂಧಿಸಲ್ಪಟ್ಟಿರುವಾಗ ಪ್ರಣಯಪತ್ರ ಲೇಖನ ಬಾಹಿರನಾ (ಳಾ) ಗುವ ವ್ರತವನ್ನು ಕೈಗೊಳ್ಳುವುದಾದರೂ ಹೇಗೆ ಸಾಧ್ಯ? ಪ್ರಣಯಪತ್ರವಿಲ್ಲದೆ ಈ ಪ್ರೇಮಪಾಶ ಬಿಗಿಹೊಂದುವುದಾದರೂ ಹೇಗೆ? ತನ್ನ ಮನದ ಭಾವನೆಗಳನ್ನು ಪ್ರಣಯಿ (ನಿ) ಯ ಬಳಿಗೆ ಕಳುಹಿಸಲು ಬೇರೆ ಯಾವ ಮಾಧ್ಯಮವಿದೆ? ಕಾಳಿದಾಸನ ಶಾಪಗ್ರಸ್ತ ಯಕ್ಷನಿಗೇನೊ ಮೇಘದೂತ ಸಿಕ್ಕಿರಬಹುದು—ಆದರೆ ನಾವು ಟಪ್ಪಾಲು ಕಟ್ಟೆಯ ಪೇದೆಯು ಏನು ಸಂದೇಶ ತಂದಾನೆಂದೇ ಕಾತರದಿಂದ, ಆತುರದಿಂದ ನಿರೀಕ್ಷಿಸುತ್ತಿರಬೇಕಾದುದು ಯುಗ ಧರ್ಮವಷ್ಟೇ! ಇದರಿಂದ ಪರಾವೃತ್ತರಾದರೆ ಪ್ರಿಯ ಸಂದೇಶವೈತರುವುದಾದರೂ ಎಂತು?

ಹೌದು, ಹೃದಯವು ಕ್ರುದ್ಧಗೊಂಡು ಸುರಿಸುವ ಪ್ರಶ್ನೆಗಳವು: "ಪ್ರಿಯೇ, ಪೂರ್ಣಿಮೆಯ ಚಂದ್ರನನ್ನು ಕಂಡಾಗಲೆಲ್ಲ ನಿನ್ನ ಮುಖ ಬಿಂಬವೇ ಕಣ್ಣೆದುರು ನಿಲ್ಲುತ್ತದೆ.... ನೀನಿಲ್ಲದ ಜೀವನವೇ ಬೇಸರವಾಗಿದೆ" "ಪ್ರಿಯಾ, ನಿನ್ನ ಬಾಹುಪಾಶದಿಂದ ವಂಚಿತಳಾಗಿರಲು ಮನಸ್ಸೇ ಕೇಳುವುದಿಲ್ಲ; ನಿನ್ನನ್ನು ಕಾಣುವ ತವಕದಿಂದ ರಾತ್ರಿ ನಿದ್ದೆ ಬರುತ್ತಿಲ್ಲ.." ಈ ಬಗೆಯ "ಹುಚ್ಚು" ವಾಕ್ಯಗಳನ್ನು ಬರೆಯುವುದರಲ್ಲಿರುವ ಆನಂದದಿಂದ ವಂಚಿತರಾಗಿ ಸಂಯಮ ಸಾಧಿಸಲು ಋಷಿ ಮುನಿಗಳು ನಾವಾಗಿಲ್ಲವಲ್ಲ!

ಆದರೆ ಜೋಕೆ! ನಿಮ್ಮ ಮುದ್ದಾದ ಕೈಬರಹದಿಂದ ಬರೆಯಲಾದ ಈ ಪ್ರಣಯ ಪತ್ರಗಳೇ ನಿಮ್ಮ ಜೀವನವನ್ನು ಅಪಮಾನಕರವಾಗಿ ಮಾಡುವ ಸಾಕ್ಷಿಗಳಾಗುತ್ತವೆ! ಇಂದಲ್ಲದಿದ್ದರೆ ಮುಂದೆ ನಿಮ್ಮ ಪ್ರಣಯ ವ್ಯವಹಾರದ ಮೇಲೆ ಈ ಪತ್ರಗಳೇ ಕ್ಷ ಕಿರಣ ಪ್ರಕಾಶವನ್ನು ಚೆಲ್ಲಿ ನಿಮ್ಮ ಮರ್ಯಾದೆಯನ್ನು ಬೀದಿಯಲ್ಲಿ ತಂದು ಮಾರಾಟ ಮಾಡುತ್ತವೆ! ನಿಮ್ಮ ವಿರುದ್ಧ ಫಿತೂರಿಯನ್ನು ಬೇರೆ ಯಾರೂ ಮಾಡುವುದಿಲ್ಲ— ನಿಮ್ಮ ಆ ಪ್ರೇಮ ಪಾತ್ರ ವ್ಯಕ್ತಿಯೇ ಮಾಡುತ್ತದೆ: ಆಗ ಅದಕ್ಕೆ ಶಕ್ತಿಯನ್ನಿತ್ತು ಕೇಸು ವಿಫಲವಾಗದಂತೆ ಮಾಡುವುದಕ್ಕೆ ನೆರವಾಗುವ ಸೈತಾನನ ಸಲಕರಣೆಯೇ ನಿಮ್ಮ ಮುದ್ದಾದ ಕೈ ಬರೆಹದಲ್ಲಿರುವ ಪ್ರಣಯ ಪತ್ರ!

ಹೀಗೆಲ್ಲ ಹೇಳುವುದೇಕೆ? ನಾನು ನನ್ನ ಪ್ರಣಯಿ(ನಿ)ಯನ್ನೆ ವಿವಾಹವಾಗುತ್ತೇನೆ. ದಾಂಪತ್ಯ ಜೀವನದಲ್ಲಿ ಫಿತೂರಿಗಾಗಲೀ ಒಳಸಂಚಿಗಾಗಲೀ ಆಗ ಅವಕಾಶವೆಲ್ಲಿದೆ? ಇದು ನಿಜವಿರಬಹುದು. ಹಾಗೆಂದು ನೂರಕ್ಕೆ ನೂರರಷ್ಟು ಶಕ್ಯವಿರಲಾರದು. ಪ್ರೇಮ ಪಾತ್ರನೊ(ಳೊ)ಡನೆ ಮದುವೆಯಾಯಿತಾದರೆ, ತೊಂದರೆಯಿಲ್ಲ. ಆದರೆ ಹಾಗೆಯೇ ಆಗುವುದೆಂಬ ಭರವಸೆ ಎಲ್ಲಿದೆ? ಆಗಲಿಲ್ಲ ಎಂದಿಟ್ಟುಕೊಳ್ಳೋಣ— ಆಗ? ನೀವು ಕಣ್ಣೀರು ಸುರಿಸುವಿರಿ, ದುಃಖಪೀಡಿತರಾಗುವಿರಿ, ಹಿಂದಿನ "ಸುಖದ ದಿನ"ಗಳನ್ನು ನೆನೆನೆನೆದು ಏಕಾಂತದಲ್ಲಿ ಅಸಂತೃಪ್ತ ದಿನಗಳನ್ನು ಕಳೆಯುವಿರಿ. ಕೊನೆಗೊಮ್ಮೆ ಪ್ರಾಮಾಣಿಕ ಪ್ರೇಮಕ್ಕೆ ಕುರುಡು ಕಾಸಿನ ಬೆಲೆಯನ್ನೂ ಕೊಡದ ಆ ಮೂರ್ಖ ವ್ಯಕ್ತಿಯ ಹಿಂದೆ ಹೋದುದಕ್ಕೆ ನಿಮ್ಮನ್ನೆ ಶಪಿಸಿಕೊಳ್ಳುವಿರಿ. ಮುಂದೆ?

ನಾಲ್ಕು ವಾರವೋ, ತಿಂಗಳೋ ವರ್ಷವೋ ಕಳೆದ ಬಳಿಕ, ನಿಮ್ಮ ಮದುವೆ ಬೇರೆ ಯಾರೊಡನೆಯೋ ಆಗುತ್ತದೆ. ಯುವಕರು ಉಂಡಾಡಿಗಳಾಗಿ ಮುಂದೆ ಸಹ ಕೆಲವು ವರ್ಷ ಕುಳಿತಿರಬಲ್ಲರು. ಆದರೆ ಯುವತಿಯರು ನಮ್ಮ ದೇಶದಲ್ಲಂತೂ ಹಾಗೆ ಅವಿವಾಹಿತೆಯರಾಗಿ ದೀರ್ಘ ಕಾಲ ಉಳಿಯಲಾರರು. ಪ್ರೇಮ ವಿಮುಖರಾದ ಅವರು ಒಂದೋ ಕೆರೆಬಾವಿಯನ್ನು ಹುಡುಕಿಕೊಳ್ಳಬೇಕು, ಇಲ್ಲವೆ ತಂದೆ ತಾಯಂದಿರು ಕಷ್ಟಪಟ್ಟು ಸಂಪಾದಿಸಿ ಕೊಟ್ಟ ವರನ ಹಿಂದೆ ವಧುವಾಗಿ ಹೋಗಬೇಕು. ಬೇರೆ ದಾರಿಯಿಲ್ಲ. ಯುವತಿಯರಲ್ಲಿ ಕೆಲವರು ಹಟದಿಂದ ಅವಿವಾಹಿತೆಯರಾಗಿಯೇ ಉಳಿಯಬಹುದು—ಅದು "ಆ" ತರುಣನ ಮೇಲೆ ಸೇಡು ತೀರಿಸಿ

(೭ನೇ ಪುಟ ನೋಡಿರಿ)


**ಹೊಸ ಸುದ್ದಿ**

"ಭದ್ರತೆಯ ಬೇಂಕಿಂಗ್ ವ್ಯವಹಾರ"
"ಮೆಚ್ಚುಗೆಯ ಜನರ ಸಹಕಾರ"
"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

**ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ**
ಒದಗಿಸಿಕೊಡುವ ಸರ್ವವಿದಿತ ಸೇವಾಕಾರ್ಯದ ಸಾಧನೆಗಾಗಿ—
ಇನ್ನೂ ಮೂರು ಹೊಸ ಶಾಖೆಗಳು

**ಹೈದರಾಬಾದ್** (ದಕ್ಷಿಣ)
**ಗುಲ್ಬರ್ಗ** (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು
**ಉರುವಕೊಂಡ** (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)
**ಶೀಘ್ರದಲ್ಲೇ ತೆರೆಯಲ್ಪಡುವುವು**

**ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.**

**The Canara Industrial & Banking Syndicate Ltd.**
H. O. UDIPI (S. I.)


### NOTICE
In the Court of the Principal Subordinate Judge of South Kanara.

O. S. No. 101/56.

Between:—

Padmavathi Shedthi ... Plaintiff

and

Kusumu Hengsu and others ... Defendants.

To

1st Defendant:— Kusumu Hengsu daughter of Nagamma Hengsu residing at Kukkinadi in Sanur village of Karkal Taluk, Post Sanur.

Notice is hereby given to the above named 1st defendant that the above suit filed against you and others in the above mentioned Court has been posted to **7—11—1956** at 11 a. m. for your appearance in Court either in person or through pleader failing which the suit will be proceeded with in your absence.

(By Order of Court)

N. M. Adyanthaya
K. Devappa Shetty
B. S. Bhasker Rai
Advocates for Plaintiff.

Mangalore, 8—10—1956.

**NAVAYUGA**
Popular Kannada Weekly
*Founder:—*
**A. B. SHETTY,** *M. L. A.*
Minister for Public Health,
Govt. of Madras.

# ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೧-೧೦-'೫೬ | ೬ |

## ದೊಡ್ಡ ಮೈಸೂರಿನ ಸಮಸ್ಯೆ

ನಾಡಹಬ್ಬದ ಸಡಗರವು ಮುಗಿದ ಕೆಲವೇ ದಿನಗಳಲ್ಲಿ, ಅಂದರೆ ಇದೇ ಬರುವ ೨೧ನೇ ದಿನಾಂಕ, ದೊಡ್ಡ ಮೈಸೂರು ರಾಜ್ಯದ ಶಾಸನಾಂಗದಲ್ಲಿರುವ ಕಾಂಗ್ರೆಸು ಸದಸ್ಯರು ಸಭೆ ಸೇರಿ, ತಮ್ಮ ಧುರೀಣನನ್ನು ಆರಿಸುವರೆಂದು ತಿಳಿದು ಬಂದಿದೆ. ಈ ಕೆಲಸವು ಇಂದು ಕುತೂಹಲವನ್ನು ಕೆರಳಿಸುವ ವಿಷಯವಾಗಿದ್ದರೂ ನಾಳೆ ಉದಯವಾಗಲಿರುವ ಕನ್ನಡ ನಾಡಿನ ಭವಿಷ್ಯದ ದೃಷ್ಟಿಯಿಂದ ನೋಡಿದಾಗ, ಅತ್ಯಂತ ಮಹತ್ವಪೂರ್ಣವಾದ ಸಂಗತಿಯಾಗಿಯೇ ತೋರುತ್ತದೆ. ಉದಯವಾಗಲಿರುವ ಚೆಲುವ ಕನ್ನಡ ನಾಡಿನ ರಾಜಕೀಯ ಕ್ಷೇತ್ರದಲ್ಲಿ ಯಾವ ಗುಂಪು ಶಕ್ತಿಸಂಪನ್ನವಾಗಿದೆ, ಈ ಗುಂಪಿನ ಒಲವೇನು ನಿಲವೇನು, ಜನಸಾಮಾನ್ಯರ ಹಿತಕ್ಕೆ ಮತ್ತು ನಾಡಿನ ಪುರೋಗತಿಗೆ ಇದರಿಂದ ದೊರಕುವ ಲಾಭ ಅಥವಾ ಆಗುವ ಹಾನಿ ಎಷ್ಟರದು ಎಂಬುದೆಲ್ಲದರ ಮುಂಗುರುತನ್ನು ಕಾಂಗ್ರೆಸು ಪಕ್ಷದ ನಾಯಕನ ಚುನಾವಣೆಯು ಒದಗಿಸಿಕೊಡುತ್ತದೆ ಎನ್ನಬಹುದು. ಕನ್ನಡ ನಾಡಿನ ರಾಜಕೀಯ ರಂಗದಲ್ಲಿ ಕೋರಿಕೆಗೆ ಕಾಂಗ್ರೆಸ್ಸಲ್ಲದೆ ಬೇರೆ ಕೆಲವು ಪಕ್ಷಗಳಿವೆಯಾದರೂ ಕಾಂಗ್ರೆಸು ಸಂಸ್ಥೆಯು ಅಖಂಡವಾದುದೆಂದು ಹೇಳಿಕೊಳ್ಳುವಷ್ಟು ಒಗ್ಗಟ್ಟಿನ ಶಕ್ತಿಯನ್ನು ಪಡೆದಿಲ್ಲವಾದ ಕಾರಣ, ಕಾಂಗ್ರೆಸಿನೊಳಗೆಯೇ ಗುಂಪುಗಳ ಮೇಲಾಟ ನಡೆಯುವುದೆಂದು ನಮಗೆ ಅನಿಸುತ್ತದೆ. ಕಾಂಗ್ರೆಸುಪಕ್ಷದ ಮೆಚ್ಚುಗೆಗಳಿಸಿದಾತನೇ ಏಕೀಕೃತ ಕನ್ನಡ ನಾಡಿನ ಮುಖ್ಯಮಂತ್ರಿಯಾಗುತ್ತಾನೆಂಬ ವಿಷಯ ಎಲ್ಲರಿಗೆ ಖಚಿತವಾಗಿದ್ದರೂ ಕಾಂಗ್ರೆಸು ಯಾರನ್ನು ಮುಖ್ಯಮಂತ್ರಿಯಾಗಿ ಆರಿಸುವುದೆಂಬುದಿನ್ನೂ ಖಚಿತವಾಗಿ ತಿಳಿದು ಬಾರದಿರಲು ಇದೇ ಮುಖ್ಯ ಕಾರಣ. ಕಳೆದ ಮಹಾಚುನಾವಣೆಯಲ್ಲಿ ನೆಹರು ತಮ್ಮ ಮತದಾರ ಕ್ಷೇತ್ರದಿಂದ ಆರಿಸಿ ಬಂದ ಬಳಿಕ—ಅದಂತೂ ಪೂರ್ಣ ಖಚಿತವಾದ ವಿಷಯವೇ ಆಗಿತ್ತೆನ್ನಲಡ್ಡಿಯಿಲ್ಲ—ಭಾರತದ ಪ್ರಧಾನ ಮಂತ್ರಿ ಯಾರಾದಾರು ಎಂಬ ಶಂಕೆ ಯಾರ ಮನಸ್ಸಿನಲ್ಲೂ ಎದ್ದುದಿಲ್ಲ. ಆದರೆ, ಕನ್ನಡ ರಾಜ್ಯದ ಸರ್ವೋದಯವಾಗುತ್ತಿರುವ ಈ ಕಾಲದಲ್ಲಿ ಈ ನಾಡಿನ ಹಲವು ಸಮಸ್ಯೆಗಳನ್ನು ಧೈರ್ಯದಿಂದಲೂ ನ್ಯಾಯಪರತೆಯಿಂದಲೂ ನಿಷ್ಪಕ್ಷಪಾತವಾಗಿಯೂ ನಡೆಸಬಲ್ಲ ಧೀರೋದಾತ್ತ ನಾಯಕನು ದೃಗ್ಗೋಚರವಾಗುತ್ತಿಲ್ಲ! ಕೆಲವರ ಹೆಸರುಗಳು ಕೇಳಿ ಬರುತ್ತಿವೆ: ಆದ

ರೆನ್ನಲಾದ ರಾಜಕೀಯ ಚದುರಂಗದಾಟದ ಫಲವನ್ನು ೨೧ನೇ ದಿನಾಂಕದಂದೇ ನಾವು ನಿರೀಕ್ಷಿಸಬೇಕಾಗಿದೆ. ತಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಎಲ್ಲ ಕಾಂಗ್ರೆಸಿಗರೂ ಒಪ್ಪುತ್ತಾರೆ; ನಿರ್ವಾಹವಿಲ್ಲದೆ ಹಾಗೆ ಮಾಡುತ್ತಾರೋ ಏನೋ! "ಇನ್ನುಮುಂದೆ ಭಿನ್ನಾಭಿಪ್ರಾಯಗಳನ್ನೆಲ್ಲ ಮರೆತುಬಿಟ್ಟು ಒಗ್ಗಟ್ಟಿನಿಂದ ಬಾಳೋಣ!" ಎಂಬಂತಹ ಉದಾರವಾದ ಸದಾಶಯಗಳನ್ನೂ ನಾಯಕರಾಗಿ ಆರಿಸಿಬಂದವರು ನಾಯಕಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸೋತವರನ್ನು ಉದ್ದೇಶಿಸಿಯೋ ಎಂಬಂತೆ ಹೇಳಿಯೂ ಹೇಳುತ್ತಾರೆ. ಆದರೆ, ಈ ಭಿನ್ನಾಭಿಪ್ರಾಯವೆಂಬುದು ಯಾವ ಕಾಲಕ್ಕೂ ನಿವಾರಣೆಹೊಂದಲಾರದ ರೋಗ ಅಥವಾ ಪೀಡೆ ಎಂಬಂತೆ ತೋರುತ್ತದೆ. ಮೈಸೂರು ಸಣ್ಣದಾಗಿರುವಾಗಲೇ ಹುಟ್ಟಿಕೊಂಡಿರುವ ಮನಃ ಕಷಾಯವು ನಾಲ್ಕು ಬೇರೆಬೇರೆ ಆಡಳಿತ ವಿಭಾಗದಲ್ಲಿದ್ದ ಪ್ರದೇಶಗಳು ಮೈಸೂರಿನಲ್ಲಿ ಸೇರಿಹೋಗಲಿರುವ-ಹಾಗೆಯೇ ಹೇಳಿಕೊಳ್ಳೋಣ, ಮೈಸೂರಿನ ವೈಶಿಷ್ಟ್ಯಪ್ರಿಯರ ತೃಪ್ತಿಗಾಗಿ!—ಈ ಸಂದಿಗ್ಧ ಕಾಲದಲ್ಲಿ ಇನ್ನಷ್ಟು ಉಲ್ಬಣಿಸುವುದೇ ಸಂಭವನೀಯ; ಹಾಗಾಗದಿದ್ದರೆಯೇ ಆಶ್ಚರ್ಯ! ಆದುದರಿಂದ ನಾಯಕಸ್ಥಾನದ ಸ್ಪರ್ಧೆ ಬಹಳ ಬಿರುಸಿನದಾಗಬಹುದೆಂದು ಊಹಿಸಿದರೆ ತಪ್ಪಲ್ಲ. ಅಧಿಕಾರಸ್ಥಾನದ ವ್ಯಾಮೋಹವು ನಾನಾ ಉದ್ದೇಶಗಳ ಸಾಧನೆಗೆ ಅವ್ಯಶವೆನಿಸಿದ ಗುಣವೆಂಬುದಾಗಿ ಇಂದು ಪರಿಗಣಿತವಾಗಿದೆ. ಹೀಗಾಗಿ ನಿಷ್ಪಕ್ಷಪಾತಿಗಳು "ಸಂಕುಚಿತ"ವೆಂದು ನಿಂದಿಸುತ್ತಿದ್ದರೂ ಅಂತಹ ಮನೋಭಾವವನ್ನು ಪೋಷಿಸಿಕೊಂಡು ಮೈಸೂರಿನ ವೈಶಿಷ್ಟ್ಯ ರಕ್ಷಣೆಯ ಹೆಸರಿನಲ್ಲಿಯೋ ಜಾತಿಯ ನೆಪದಲ್ಲಿಯೋ, ಮುಂಬರುವ ಚುನಾವಣೆಯ ಟಿಕೇಟಿನ ನೆಪದಲ್ಲಿಯೋ, ಅಂತೂ ಬಗೆಬಗೆಯ ಕಾರಣಗಳಿಗಾಗಿ ಒಳಗುಂಪುಗಳು ತಂತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಹೆಣಗಾಡುತ್ತಿರುವಂತಹ ಶೋಚನೀಯ ಪರಿಸ್ಥಿತಿ ಇಂದಿನದಾಗಿದೆ. ಹೊರಗಿನವರು—ಒಳಗಿನವರು, ಮೆಚ್ಚುಗೆಯವರು—ಅಪ್ರಿಯರು ಎಂಬಿತ್ಯಾದಿಯಾಗಿ ಪೂರ್ವಗ್ರಹದೂಷಿತ ನಿಲುಮೆಯನ್ನಿಟ್ಟುಕೊಂಡು ನಡೆಯುವ ಬುದ್ಧಿಯು ಧುರೀಣರಲ್ಲಿರುವಷ್ಟರ ವರೆಗೆ ನಾಡಿನ ಹಿತವೆಂಬುದು ಮೂಲೆ ಗುಂಪಿಗೆ ಸರಿಯುವ ವಿಷಯವೇ ಆಗುತ್ತದೆ. ಹೀಗಾಗಬಾರದು ಎಂಬುದೇನೋ, ನಿಜ. ಆದರೆ ರಾಜಕೀಯ ನಾಯಕರು ಕೇಳಬೇಕಲ್ಲ? ಕೇಳಿಯಾರು, ಕೇಳಬೇಕು ಎಂದು ಒತ್ತಾಯಿಸುವ ಸಾಧನ ಸಮರ್ಪಕವಾಗಿಲ್ಲ. ಇದು ಜನತೆಯ ದೊಡ್ಡ ದೌರ್ಬಲ್ಯ: ಈ ದೌರ್ಬಲ್ಯದ ದುರುಪಯೋಗ ಮಾಡಿಕೊಳ್ಳದ ನಾಯಕನು ಅಧಿಕಾರ ಸ್ಥಾನಕ್ಕೇರಲು ಇಂದಿನ ಪರಿಸ್ಥಿತಿ ಅನುಕೂಲವಾಗಿಲ್ಲವೆಂಬುದು ನಮ್ಮ ನಿಜವಾದ ಕೊರಗು. ರಾಜ್ಯ ಸೂತ್ರಗಳು ದಕ್ಷರ, ಸಮಷ್ಟಿಯ ಹಿತದೃಷ್ಟಿಯುಳ್ಳವರ ಕೈಯಲ್ಲಿರದಿದ್ದರೆ ಆಗುವ ಅನಾಹುತವಿದು! ದೊಡ್ಡದೆನಿಸುವ ಮೈಸೂರು ರಾಜ್ಯವು ಇದಿರಿಸಬೇಕಾದ ದೊಡ್ಡ ಸಮಸ್ಯೆ ಇದಲ್ಲದೆ ಬೇರೆ ಇರಲಾರದು.

## ಕನ್ನಡ ನಾಡಿನ ಧುರೀಣತ್ವ
### ಇದೇ ೨೧ಕ್ಕೆ ಕಾಂಗ್ರೆಸು ಪಕ್ಷದ ಸಭೆ

ನವಂಬರ ೧ರಂದು ರೂಪುಗೊಳ್ಳಲಿರುವ ಕನ್ನಡ ನಾಡಿನ ಮುಖ್ಯಮಂತ್ರಿ ಸ್ಥಾನಕ್ಕೆ ಯಾರನ್ನು ಆರಿಸಬೇಕೆಂದು ಇನ್ನೂ ತೀರ್ಮಾನವಾಗಿಲ್ಲ. ಕಾಂಗ್ರೆಸು ಪಕ್ಷದ ಧುರೀಣನಲ್ಲದೆ ಬೇರೆ ಯಾರೂ ಈ ಸ್ಥಾನವನ್ನೇರಲಾರರಾದರೂ ಕಾಂಗ್ರೆಸಿನ ವರಿಷ್ಠರು ತಾವೇ ನಿರ್ಣಯವೊಂದನ್ನು ಕೊಡಲು ಹೋಗುವುದಿಲ್ಲವೆಂದು ಸ್ಪಷ್ಟಪಡಿಸಿರುವುದಾಗಿ ತಿಳಿದುಬರುತ್ತದೆ.

ಹೊಸ ರಾಜ್ಯದಲ್ಲಿ ಸಮಾವೇಶಗೊಳ್ಳುವ ಎಲ್ಲ ಪ್ರದೇಶದ ಕಾಂಗ್ರೆಸು ಪ್ರತಿನಿಧಿಗಳೇ ಈ ವಿಷಯವನ್ನು ಪರಸ್ಪರ ಸಮಾಲೋಚನೆಯಿತ್ತು ಒಮ್ಮತದಲ್ಲಿ ನಿರ್ಣಯಿಸುವುದೇ ಸೂಕ್ತವೆಂದು ವರಿಷ್ಠರು ಅಭಿಪ್ರಾಯಪಟ್ಟಿರುತ್ತಾರೆ. ಒಂದು ವೇಳೆ ಅಂತಹ ಒಮ್ಮತವು ಅಸಾಧ್ಯವಾದರೆ ಮತದಾನದ ಮೂಲಕ ವಿಷಯವನ್ನು ನಿರ್ಣಯಿಸಬೇಕಾಗುತ್ತದೆ.

ಕಾಸರಗೋಡನ್ನು ಬಿಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಉಳಿದೆಲ್ಲ ಪ್ರದೇಶವು ಮೈಸೂರಿನಲ್ಲಿ ಸಮಾವೇಶಗೊಳ್ಳುವುದರಿಂದ ಈ ಭಾಗದ ಹತ್ತುಮಂದಿ ಶಾಸನಾಂಗದ ಪ್ರತಿನಿಧಿಗಳೂ ಮೈಸೂರಿನ ಶಾಸನಾಂಗದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಹೀಗೆಯೇ ಉಳಿದ ಭಾಗದ ಪ್ರತಿನಿಧಿಗಳಿಗೂ ಮೈಸೂರಿನ ನೂತನ ಶಾಸನಾಂಗದಲ್ಲಿ ಸ್ಥಾನವಿದೆ.

ಕಾಂಗ್ರೆಸಿನ ಪ್ರತಿನಿಧಿಗಳಾಗಿ ಈಗ ಮೈಸೂರಿನ ಶಾಸನಾಂಗದಲ್ಲಿ ೮೯ ಮಂದಿ ಇದ್ದಾರೆ; ಇದರೊಂದಿಗೆ ಕೊಡಗಿನಿಂದ ಬರುವ ೧೫, ಹೈದರಾಬಾದಿನಿಂದ ಬರುವ ೨೨ ಮತ್ತು ಮುಂಬಯಿ ಹಾಗು ಮದ್ರಾಸುಗಳಿಂದ ಬರುವ ೪೯, ಅಂದರೆ ಒಟ್ಟಿಗೆ ಮೈಸೂರೇತರ ಪ್ರದೇಶದಿಂದ ೮೯ ಮಂದಿ ಕಾಂಗ್ರೆಸಿಗರು ಹೊಸರಾಜ್ಯದಲ್ಲಿ ಬೆರೆಯುತ್ತಾರೆ. ಹೀಗಾಗಿ ಮೈಸೂರಿನೊಳಗಿನ ಕಾಂಗ್ರೆಸಿಗರೂ ಹೊರಗಿನಿಂದ ಬರುವ ಕಾಂಗ್ರೆಸಿಗರೂ ಸಮಬಲರಾಗುತ್ತಾರೆ.

ಮುಖ್ಯ ಮಂತ್ರಿ ಸ್ಥಾನಕ್ಕೆ, ಅಂದರೆ ಶಾಸನ ಸಭೆಯ ಕಾಂಗ್ರೆಸು ಪಕ್ಷದ ಧುರೀಣತ್ವಕ್ಕೆ, ಮೈಸೂರಿನಲ್ಲಿ ಈಗ ಮುಖ್ಯಮಂತ್ರಿಗಳಾಗಿರುವ ಶ್ರೀ ಕಡಿದಾಳ ಮಂಜಪ್ಪನವರ ಹೆಸರೂ ಲೋಕ ಸಭೆಯ ಸದಸ್ಯರಾದ ಶ್ರೀ ನಿಜಲಿಂಗಪ್ಪನವರ ಹೆಸರೂ ಹೆಚ್ಚಾಗಿ ಕೇಳಿ ಬರುತ್ತಿವೆ. ಮೈಸೂರಿನ ಕಾಂಗ್ರೆಸು ಕಚೆಗಷ್ಟೆ ಮಂಜಪ್ಪನವರ ಧುರೀಣತ್ವಕ್ಕೆ ಒಪ್ಪಿಗೆ ನೀಡಿದೆ. ನಿಜಲಿಂಗಪ್ಪನವರು ಉತ್ತರ ಕರ್ನಾಟಕದಲ್ಲಿ ಪ್ರಭಾವಿಗಳಾಗಿದ್ದಾರೆ. ಆದುದರಿಂದ ಪಡುಕರಾವಳಿಯ ಕಾಂಗ್ರೆಸಿಗರ ಓಟು ಯಾರಿಗೆ ಬೀಳುವುದೋ ಆ ವ್ಯಕ್ತಿಗೆ ಜಯವಾದೀತೆಂದು ತೋರುತ್ತದೆ.

## ಚಂದಾದಾರರಲ್ಲಿ ವಿನಂತಿ

'ನವಯುಗ'ದ ೩೫ನೆಯ ಸಂಪುಟವು ಇದೇ ಅಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ ೩೬ನೇ ವರ್ಷವು ಆರಂಭವಾಗಿರುತ್ತದಷ್ಟೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನು ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಪಿ. ಮಾಡಿದರೆ ೧೦ ಆಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ಬಿನ್ನಹ. ಇಲ್ಲವೆ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ಯಾವದೊಂದೂ ಖರ್ಚಿಲ್ಲದೆ 'ನವಯುಗದ ಖಾತೆಗೆ ಕಟ್ಟಬಹುದು. ಅಂತೂ ಚಂದಾಹಣವು ಸಕಾಲದಲ್ಲಿ ಬಾರದಿದ್ದಲ್ಲಿ ಸಂಚಿಕೆಯನ್ನು ಉಪಾಯವಿಲ್ಲದೆ ವಿ. ಪಿ. ಮಾಡುತ್ತೇವೆ.

ಮೆನೇಜರ್
ನವಯುಗ, ಉಡುಪಿ.



ಬಿ. ಸಿ. ಜಿ. ದಾಕಿನ ಕುರಿತು ವಿವಾದವನ್ನು ಭಾರತದಲ್ಲಿ ರಾಜಾಜಿಯವರು ಹುಟ್ಟಿಸಿದ್ದರೂ ಬ್ರಿಟನಿನಂತಹ ಮುಂದರಿದ ರಾಷ್ಟ್ರಗಳು ಈ ದಾಕಿನ ಉಪಯುಕ್ತತೆಯ ಬಗ್ಗೆ ಶಂಕೆಯನ್ನು ತಾಳಿಲ್ಲ. ಯೂರೋಪಿನಲ್ಲಿ ಬಿ. ಸಿ. ಜಿ. ವಿತರಣೆಯಾಗುವ ದೊಡ್ಡ ಪ್ರಯೋಗ ಶಾಲೆ ಅಲ್ಲಿದೆ. ಶುಷ್ಕ ಬಿ. ಸಿ. ಜಿ. ತಯಾರಿಗಾಗಿ ಈ ಕೀಟಾಣುಗಳಲ್ಲಿರುವ ತೇವದ ಪ್ರಮಾಣ ಅಳೆಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

## ನಿಮಗಿದು ತಿಳಿದಿರಲಿ

(೫ನೆ ಪುಟದಿಂದ)

ಕೊಳ್ಳುವ ಹಂಬಲದಿಂದ; ಇದು ಅಪರೂಪ; ಆದರೆ ಭಯವಿದೆ. ತಾನು ಪ್ರೀತಿಸಿದ ತರುಣಿಯ ಮುಯ್ಯನ್ನು ತೀರಿಸಿಕೊಳ್ಳುವ ತರುಣರು ಮಾತ್ರ ಧಾರಾಳ.

ಪ್ರಣಯಿ (ನಿ)ಯೊಡನೆ ಮದುವೆಯಾಗದೆ, ತಂದೆ ತಾಯಿಯರು ಹೇಳಿದ ಯಾರನ್ನೋ ಮದುವೆಯಾಗಬೇಕಾಗಿ ಬಂದಾಗ, "ಇದು ನನ್ನ ವಿವಾಹವಲ್ಲ ಬಲಿದಾನ" ಎಂದು ನೀವು ರೇಗಬಹುದು. ಆದರೆ ಮದುವೆಯಂತೂ ನಿಲ್ಲಲಾರದು. ಮದುವೆಯಾದ ಬಳಿಕ ಕೈಹಿಡಿದ ವ್ಯಕ್ತಿಯೊಡನೆಯೇ ಸಂಸಾರ ಮಾಡಬೇಕಾಗುತ್ತದೆ. ಇದೇ ಬುದ್ಧಿವಂತಿಕೆ ಸಹ ಆಗಿದೆ. ಏಕೆಂದರೆ, ಸಹಾರಾದ ಮರೀಚಿಕೆಯ ಹಿಂದೆ ಓಡಿಹೋದರೆ ಬಾಳಿಗೇನು ಅರ್ಥವಿದೆ?

ಇಲ್ಲಿ ಒಂದು ವಿಷಯ ನೆನಪಿರಲಿ— ನೀವೇನೊ ನಿಮ್ಮ ಪ್ರೇಮಿ (ಕೆ) ಯನ್ನು ಮರೆತು ಬಿಟ್ಟು, ಕೈಹಿಡಿದ ವ್ಯಕ್ತಿಯನ್ನೆ ಇನ್ನುಮುಂದೆ ಅನುಸರಿಸುವ ದೀಕ್ಷೆ ತೊಡಬಹುದು, ಆದರೆ ಹಿಂದೆ ನೀವು ಪ್ರೇಮಿಸಿದ "ಆ" ವ್ಯಕ್ತಿಗೆ ನಿಮ್ಮನ್ನು ಮರೆಯುವುದು ಸಾಧ್ಯವಾಗದಿದ್ದರೆ? ನೀವು ಮರೆತಿಲ್ಲದಿದ್ದರೂ ನಿತ್ಯವೂ ನೆನೆಯುತ್ತಿರದ "ಆ" ವ್ಯಕ್ತಿ ನಿಮ್ಮ ಸುಖಜೀವನವನ್ನು ಬಯಸಲಾರದ ಮೂರ್ಖ ಭಾವವನ್ನೂ ಸ್ವಾರ್ಥ ಬುದ್ಧಿಯನ್ನೂ ತೋರಿಸುತ್ತಿದ್ದರೆ? ನಿಮ್ಮೊಡನೆ ಮೊದಲಿನಂತೆಯೇ ಈಗಲೂ ಸಮಾಗಮಿಸಲು, ಮಾತುಕತೆ ನಡೆಸಲು ಹೃದಯ ನಿವೇದನೆ ಮಾಡಿಕೊಳ್ಳಲು ಆತನು ಇಚ್ಛಿಸಿದರೆ?— ನೀವೇನೋ ನಿರಾಕರಿಸುವಿರಿ; ಬೆದರಿಸುವಿರಿ; ಗದರಿಸುವಿರಿ. ಒಳ್ಳೆಯವರಾದರೆ ಸಮಾಧಾನದ ಮಾತನ್ನು ಹೇಳಿ ಹಿಂದೆ ಕಳಿಸುವಿರಿ. ಆದರೆ ಆ ವ್ಯಕ್ತಿ ನಿಮ್ಮ ಹಿತನುಡಿಯನ್ನೆ, ಸಮಾಧಾನದ ಮಾತನ್ನೆ ಕೇಳಿ ಹೃದಯ ಸಾಂತ್ವನ ಮಾಡಿಕೊಳ್ಳಲು ಮರಳಿ ಮರಳಿ ಬರುವನಾದರೆ, ಆಗ?

"ದಾಂಪತ್ಯ ಜೀವನದಲ್ಲಿ ಅಗ್ನಿ ಜ್ವಾಲೆಯನ್ನು ಉರಿಸುವ ಅಧಿಕಾರ ನಿನಗಿಲ್ಲ; ಆ ಸಾಹಸ ಮಾಡಿ ಈ ಜೀವನವನ್ನು ದಗ್ಧಗೊಳಿಸಬೇಡ" ಎಂದು ನೀವು ಮಾಡಿಕೊಳ್ಳಬಹುದಾದ ವಿನಂತಿ ಮಾನ್ಯವಾಗದಿದ್ದರೆ?

ಆಗ ನಿಮ್ಮ ಪ್ರಣಯಪತ್ರಗಳೇ ನಿಮ್ಮ ಮುಂದೆ ಒಗೆಯಲ್ಪಡುತ್ತವೆ—"ಇಗೋ, ಇದೇನು? ಈ ಮಾತುಗಳ ಅರ್ಥವೇನು?" "ಅದು ಅಂದಿಗೆ ಲೇಸಾಯಿತು—ಇಂದು ಆ ಮಾತಿನಿಂದೇನು ಲಾಭ" ಎನ್ನಬಹುದು. ಆಗ ಆ ವ್ಯಕ್ತಿ ಅದಕ್ಕೆಲ್ಲ ಕಿವಿಗೊಡದೆ "ನನ್ನ ಮಾತನ್ನು ಕೇಳು, ಇಲ್ಲವಾದರೆ ನಿನ್ನ ಸರ್ವನಾಶ ಮಾಡುತ್ತೇನೆ" ಎಂಬ ಛಲವನ್ನು ತೊಡುವ ಸಂಭವವೇ ಹೆಚ್ಚು.

ಮದುವೆಯಾದ ಮೇಲೆಯೇ ಈ ಭೀತಿ ಇರುವುದಿಲ್ಲ – ಮದುವೆಗೆ ಮೊದಲೂ ಇಂತಹ ಅನುಭವವೇ ಆಗಬಹುದು. ಬಹಳ ಪ್ರಾಮಾಣಿಕನೆಂದೂ ನಿಜಕ್ಕೂ ಪ್ರೀತಿಪಾತ್ರನೆಂದೂ ತಿಳಿದ ವ್ಯಕ್ತಿಯೇ ದ್ರೋಹಿಯಾಗಿ ಏನಾದರೊಂದು ಕಾರಣದಿಂದ ನಿಮಗೆ ತೋರಬಹುದು. ಆಗ ನೀವೇ ಆತನೊಡನೆ ವಿವಾಹ ನಿರಾಕರಿಸಬಹುದು. ಮುಂದೆ? ಸಮಾಜದ ಮುಂದೆ ನಿಮ್ಮ ಪ್ರೇಮ ಪತ್ರಗಳ ರಾಶಿಯನ್ನೊಗೆದು ನಿಮ್ಮ ಚಾರಿತ್ರ್ಯವು ಕಳಂಕ ಪೂರ್ಣವಾಗಿದೆ ಎಂದು ಪ್ರಮಾಣ ಮಾಡಲು ಎಷ್ಟು ಸುಲಭ? ಮತ್ತೆ ಮುಖವೆತ್ತಿ ಬಾಳುವುದೆಂತು?

ಪ್ರೇಮಿಸುವುದೇ ಒಂದು ಬಗೆಯ "ರಿಸ್ಕ್" ಅಥವಾ ಅಪಾಯಕಾರಿ ಭಯ, ಆದರಿಂದ ದೂರವಾಗಿರುವುದೇ ಹಿತ. ಅದು ಸಾಧ್ಯವಿಲ್ಲವೆಂದಾದರೆ ದಯಮಾಡಿ ಪ್ರಣಯ ಪತ್ರ ಬರೆಯುವ ಅಭ್ಯಾಸದಿಂದಲಾದರೂ ದೂರವಿರಿ. ಇದರಿಂದ ನಿಮಗೆ ಒಳ್ಳೆಯದಿದೆ: ನಿಮ್ಮ ಭಾವಿಜೀವನಕ್ಕೂ ತುಂಬ ಹಿತವಿದೆ. ಮರೆತು ಬಿಡುವ ಲೋಕದ ಮುಂದೆ ಲಿಖಿತ ಪುರಾವೆಯ ಮೂಲಕ ನೆನಪು, ಮರುಕಳಿಸುವಂತೇಕೆ ನೀವು ಮಾಡಬೇಕು? ಮರೆಯುವ ಶೀಲವ ಜಗತ್ತು ಸುಲಭದಲ್ಲಿ ನಿಮ್ಮ ಹಿಂದಿನ "ಕಪ್ಪು" ಜೀವನವನ್ನು ಮರೆಯುವಂತೆ ಮಾಡಲಿಕ್ಕಾದರೂ ಪ್ರಣಯ ಪತ್ರ ಬರೆಯದಿರುವಷ್ಟು ಮುನ್ನೆಚ್ಚರಿಕೆಯನ್ನು ವಹಿಸಿಕೊಳ್ಳುವುದು ಕ್ಷೇಮ.

—"ಸರಿತಾ"ದ ಆಧಾರದಿಂದ
ಬರೆದು ಬಂದುದು.

## ಉಡುಪಿ ವಾರ್ತೆ

**ಶ್ರೀ ಚೆನ್ನಯ್ಯನವರ ಆಗಮನ—** ಮೈಸೂರು ಪ್ರದೇಶದ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಸಾಹುಕಾರ್ ಚೆನ್ನಯ್ಯನವರು, ಮೈಸೂರು ಮಾಜಿ ಗೃಹಮಂತ್ರಿ ಶ್ರೀ ಟಿ. ಮರಿಯಪ್ಪನವರು ಮತ್ತು ಮೈಸೂರು ಪ್ರದೇಶ ಕಾಂಗ್ರೆಸಿನ ಸಂಘಟನಾ ಕಾರ್ಯದರ್ಶಿ ಶ್ರೀ ಬಂದೀ ಗೌಡರೊಡನೆ ತಾ. 7ರಲ್ಲಿ ಮಂಗಳೂರಿನಿಂದ ಉಡುಪಿಗೆ ಮಧ್ಯಾಹ್ನ ಆಗಮಿಸಿದರು. ಇವರ ಜತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯ, ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ, ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಮೊದಲಾದವರು ಆಗಮಿಸಿದ್ದರು. ಅತಿಥಿಗಳು ಬಂದವರೇ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳೊಂದಿಗೆ ಮಲ್ಪೆಗೆ ಹೋಗಿ ಅಲ್ಲಿಯ ಬಂದರಿನ ಪ್ರಾಕೃತಿಕ ಲಕ್ಷಣಗಳನ್ನು ನೋಡಿಕೊಂಡು ಬಂದರು. ನಂತರ ಶ್ರೀ ಟಿ. ಎ. ಪೈಗಳು ಮುಕುಂದ ನಿವಾಸದಲ್ಲಿ ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಭಾಗವಹಿಸಿದ್ದರು. ಭೋಜನಾ ನಂತರ ಸರ್ಕಲ್ ಕಾಂಗ್ರೆಸ್ ಕಮಿಟಿ ಪರವಾಗಿ ಶ್ರೀ ಎ. ಜಿ. ಅಳ್ವೆಯವರು ಸ್ವಾಗತಭಾಷಣ ಮಾಡುತ್ತಾ, ಮೈಸೂರಿನವರು, ದಕ್ಷಿಣ ಕನ್ನಡಿಗರು ಎಂಬ ಭೇದವನ್ನು ಎಣಿಸದೆ ಎಲ್ಲರೂ ಪ್ರಾಂತದ ಅಭಿವೃದ್ಧಿಗಾಗಿ ದುಡಿಯುವ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಚೆನ್ನಯ್ಯನವರು ತಮ್ಮ ಭಾಷಣದಲ್ಲಿ ನಿಮ್ಮ ಜಿಲ್ಲೆಯ ವಿದ್ಯೆ, ಕೈಗಾರಿಕೆ, ವಿವಾವಾಣಿಜ್ಯಾದಿ ಕಾರ್ಯಗಳಿಂದ ಬಹಳ ಮುಂದುವರಿದಿರುವುದೆಂದೂ ನೀವು ನಮ್ಮೊಡನೆ ಸೇರುವುದು ಬಹಳ ಸಂತೋಷಕರವೆಂದೂ ನಿಮ್ಮನ್ನು ಸ್ವಾಗತಿಸಲೆಂದೇ ತಾನು ಬಂದಿರುವೆನೆಂದೂ ಮುಖಂಡತ್ವಕ್ಕಾಗಿ ಹೋರಾಡದೆ ನವಂಬರ ತಾ 1ಕ್ಕೆ ರೂಪುಗೊಳ್ಳಲಿರುವ ಮಹಾ ಮೈಸೂರು ಅಭಿವೃದ್ಧಿಗಾಗಿ ನಾವೂ ನೀವೂ ಜತೆಯಾಗಿ ದುಡಿಯಬೇಕೆಂದೂ ನಮ್ಮ ಪ್ರಾಂತವು ದೇಶದಲ್ಲಿಯೇ ಮಾದರಿಯಾಗುವಂತಾಗಬೇಕೆಂದೂ, ಗಾಂಧಿ ತತ್ತ್ವವಾದ ಸತ್ಯ, ಅಹಿಂಸೆಗಳನ್ನು ಕಾರ್ಯರೂಪದಲ್ಲಿ ತೋರಿಸಬೇಕೆಂದೂ ಹೇಳಿದರು. ಕೊನೆಗೆ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರು ಜನತೆಯ ಪರವಾಗಿ ಶ್ರೀ ಚೆನ್ನಯ್ಯರಿಗೆ ಹೂವಮಾಲೆ ಅರ್ಪಿಸಿ, ಧನ್ಯವಾದಗಳನ್ನೀಯುತ್ತಾ, ನಮ್ಮೆಲ್ಲರ ಹೃದಯ ಪರಿವರ್ತನೆಯಾಗಿ ಭದ್ರ ಪ್ರಾಂತವನ್ನು ರೂಪಿಸುವುದೇ ನಮ್ಮ ಗುರಿಯಾಗಿರಲೆಂದರು. ಮೈಸೂರು ದ. ಕ. ದ ಗಡಿಯ ಟೋಲ್ ಗೇಟನ್ನು ತೆರೆದಂತೆ ಹೃದಯದ ಟೋಲ್ ಗೇಟನ್ನೂ ತೆರೆದು ವಿಶಾಲ ಮನೋವೃತ್ತಿ ತಳೆಯಬೇಕೆಂದರು. ಬಳಿಕ ಅತಿಥಿಗಳು ಮಣಿಪಾಲಕ್ಕೆ ಹೋಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್, ಫೆಮಿಲಿ ಪ್ಲಾನಿಂಗ್ ಸೆಂಟರ್, ಮೆಟರ್ನಿಟಿ ವಾರ್ಡ್‌ಗಳನ್ನು ಸಂದರ್ಶಿಸಿದರು. ಅಲ್ಲಿ ಶ್ರೀಮತಿ ಪ್ರೇಮಾ ಎ. ಪೈಗಳೂ ಅಸಿಸ್ಟೆಂಟ್ ವುಮನ್ ವೆಲ್‌ಫೇರ್ ಆಫೀಸರ್ ಶ್ರೀಮತಿ ಇಂದಿರಾ ರಾಯರೂ ಅತಿಥಿಗಳನ್ನು ಸ್ವಾಗತಿಸಿ ಮಾಹಿತಿ ಪರಿಚಯಗಳನ್ನಿತ್ತರು. ಅತಿಥಿಗಳು ಅಲ್ಲಿಯ ಕೆಲಸಗಳನ್ನು ನೋಡಿ, ಕೇಳಿ ಸಂತೋಷ ಸೂಚಿಸಿ ಮಂಗಳೂರಿಗೆ ತೆರಳಿದರು.

**ಧರ್ಮಾರ್ಥ ಅಕ್ಕಿ ವಿತರಣೆ**—ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯಕರು ಇದೇ ತಾ. 13ನೇ ಶನಿವಾರ ಮಧ್ಯಾಹ್ನ 12½ ಗಂಟೆಗೆ ಉಡುಪಿ ಪಾಂಗಾಳ ನಾಯಕ ಬೇಂಕಿನ (ತಾಲೂಕು ಕಚೇರಿ ಎದುರುಗಡೆ) ವಠಾರದಲ್ಲಿ ದೊಡ್ಡವರಿಗೆ ½ ಸೇರು ಅಕ್ಕಿ ಮತ್ತು 2 ಆಣೆಯಂತೆಯೂ ಸಣ್ಣವರಿಗೆ ¼ ಸೇರು ಅಕ್ಕಿ ಮತ್ತು 1 ಆಣೆಯಂತೆಯೂ ಹಂಚಲಿರುವರೆಂದೂ ಅಂದು ಮಧ್ಯಾಹ್ನ 12 ಗಂಟೆಯೊಳಗಾಗಿ ಎಲ್ಲರೂ ಬೇಂಕಿನ ವಠಾರದಲ್ಲಿ ಬಂದು ಸೇರಬೇಕೆಂದೂ ಶ್ರೀ ನಾಯಕರು ಅಪೇಕ್ಷಿಸುತ್ತಾರೆ.

**ಪದ್ಮಾವತಿ ಕಲ್ಯಾಣ**—ಗೌಡ ಸಾರಸ್ವತ ಸಮಾಜದ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಸಮಕ್ಷಮ ಇದೇ ತಾ 9ರಿಂದ 12ರ ತನಕ ರಾತ್ರಿ 9½ ಗಂಟೆಯಿಂದ 11½ ತನಕ ಶ್ರೀ ಭದ್ರಗಿರಿ ಅಚ್ಯುತ ಪೈಗಳಿಂದ ಹರಿಕಥಾ ರೂಪದಲ್ಲಿ ಶ್ರೀ ಪದ್ಮಾವತಿ ಕಲ್ಯಾಣೋತ್ಸವವನ್ನು ನಡೆಸುವರು. ತಾ. 13ರಂದು ಮಧ್ಯಾಹ್ನ ಮಹಾ ಸಮಾರಾಧನೆಯಾಗಿ ಮರುದಿವಸ ತಾ. 14ರಂದು ಶ್ರೀ ಕಾಶಿ ಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಚಾತುರ್ಮಾಸದ ದಿಗ್ವಿಜಯ ಉತ್ಸವವೂ ನಡೆಯಲಿರುವುದು. ಸಮಾಜ ಬಾಂಧವರೆಲ್ಲರೂ ಸಕಾಲಕ್ಕೆ ಬಂದು ಸಹಭಾಗಿಗಳಾಗಬೇಕಾಗಿ ದೇವಸ್ಥಾನದ ಮೊಕ್ತೇಸರ ಡಾ। ಎಸ್. ಆರ್. ಪೈಗಳು ಅಪೇಕ್ಷಿಸುತ್ತಾರೆ.

**ಶ್ರೀ ಕೃಷ್ಣ ಮಠದಲ್ಲಿ** ತಾ. 5ರಲ್ಲು ಪರ್ಯಾಯ ಅದಮಾರು ಸ್ವಾಮಿಗಳವರ ನೇತೃತ್ವದಲ್ಲಿ ಮಂಗಳೂರಿನ ನಾಟ್ಯಕಲಾ ಶಾಲೆಯವರು ಹತ್ತು ನೃತ್ಯ ನಾಟಕಗಳನ್ನರ್ಪಿಸಿದರು. ಮಾಸ್ಟರ್ ವಿಠಲರಾಯರ ನೇತೃತ್ವದಲ್ಲಿ ಶಿವ ಪಾರ್ವತಿ ನೃತ್ಯ, ಕಾಳೀಯ ಮರ್ದನ ನೃತ್ಯ, ಮಯೂರ್ಮ್ಯಗ ನೃತ್ಯ ಇತ್ಯಾದಿ ಪ್ರೇಕ್ಷಣೀಯವಿದ್ದುವು.

**ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿ ಸಭೆಯು** ತಾ. 2ರಲ್ಲು ಮುಕುಂದ ನಿವಾಸದಲ್ಲಿ ಸೇರಿತು. ಸಭೆಯ ಅಧ್ಯಕ್ಷ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಹಾಗೂ ಶ್ರೀಗಳಾದ ದೇವುಡು, ಸಿ. ಕೆ. ನಾಗರಾಜ ರಾವ್, ಆರ್. ಬಿ. ಜೋಶಿ, ನೆಜ್ಜಾರು, ಅನಂತಪದ್ಮನಾಭ ರಾವ್, ಕೆ. ಗೋಪಾಲಕೃಷ್ಣ ರಾವ್, ಎಮ್. ವಾಸುದೇವ ರಾವ್, ಡಿ. ಆರ್. ರಾಮಯ್ಯ, ಪುಟ್ಟ ಗಂಗಪ್ಪ, ಎಚ್. ಎಸ್. ಸೀತಾರಾಮ್, ದೇಸಾಯಿ, ವೆಂಕಟ ಸುಬ್ಬಯ್ಯ ಮೊದಲಾದವರು ಹಾಜರಿದ್ದರು. ಮುಂದಿನ ಸಮ್ಮೇಳನವನ್ನು ಧಾರವಾಡದಲ್ಲಿ ಜರಗಿಸುವುದಾಗಿ ನಿರ್ಧರಿಸಲಾಯಿತೆಂದೂ 1957ನೆ ಇಸವಿಯ ದಸಂಬರ ಸಮ್ಮೇಳನವನ್ನು ಉಡುಪಿಯಲ್ಲಿ ಜರಗಿಸುವಂತೆ ಶ್ರೀ ಅದಮಾರು ಸ್ವಾಮಿಗಳವರು ಕರೆಯುತ್ತಿರುವರೆಂದೂ ತಿಳಿದು ಬರುತ್ತದೆ. ಕಾರ್ಯ ಸಮಿತಿ ಸಭೆ ಜರಗಿಸಲು ಶ್ರೀ ಟಿ. ಎ. ಪೈಗಳವರೂ, ಸತ್ಕಾರ ಊಟ ವಸತಿ ಬಗ್ಗೆ ಶ್ರೀ ಅದಮಾರು ಸ್ವಾಮಿಗಳವರೂ ಸೌಕರ್ಯಗಳನ್ನಿತ್ತು ಸಹಕರಿಸಿರುವರು.

**ಕ। ಸಾ। ಪರಿಷತ್ತಿನ ಸದಸ್ಯರಿಗೆ ಭೋಜನ ಸತ್ಕಾರ**—ತಾ. 3ರಂದು ಮುಕುಂದ ನಿವಾಸದಲ್ಲಿ ಕರ್ನಾಟಕ ಸಂಘದವರು ಪರಿಷತ್ತಿನ ಸದಸ್ಯರಿಗೆ ಭೋಜನ ಸತ್ಕಾರವನ್ನೇರ್ಪಡಿಸಿದ್ದರು.

**ಓ ದೇವರೇ, ನಮ್ಮ ಜನರಿಗೆ ದುಡ್ಡುಕೊಟ್ಟು ಪತ್ರಿಕೆ ಓದುವ ಬುದ್ಧಿಯನ್ನು ಕೊಡು! ಪತ್ರಿಕೆಯನ್ನು ವರ್ಷಗಟ್ಟಲೆ ಓದಿಯೂ ಚಂದಾ ಹಣ ಕಳುಹಿಸದಿರುವ ಮಹಾನುಭಾವರಿಗೆ ಬಾಕಿಯನ್ನು ಕಳುಹಿಸುವ ಸದ್ಬುದ್ಧಿಯನ್ನು ದಯಪಾಲಿಸು!**

ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀ. ಕು. ಶಿ. ಹರಿದಾಸ ಭಟ್ಟರು ದಿ. ಕೆ. ರಾಜಗೋಪಾಲಕೃಷ್ಣರಾಯರ ಕಾಲದಲ್ಲಿ, ಗ್ರಾಮಾಂತರದಲ್ಲಿ ತನ್ನ ಕೇಂದ್ರವನ್ನು ಸ್ಥಾಪಿಸಿ, ತನ್ಮೂಲಕ ಜನತೆಯಲ್ಲಿ ಜ್ಞಾನಪ್ರಸಾರ ಕಾರ್ಯವನ್ನು ಕೈಕೊಳ್ಳಬೇಕೆಂಬ ಧ್ಯೇಯದಿಂದ ಸ್ಥಾಪಿತವಾದ ಈ ಕರ್ನಾಟಕ ಸಂಘವು ಆರ್ಥಿಕ ತೊಂದರೆಯಿಂದ ತನ್ನ ಧ್ಯೇಯ ಸಾಧಿಸಿಕೊಂಡಿಲ್ಲವೆಂದೂ ಇನ್ನು ಮುಂದೆಯಾದರೂ ಇಂತಹ ಸಂಘಗಳಿಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಕೇಂದ್ರವಾಗಿ ಆರ್ಥಿಕ ನೆರವು ದೊರಕುವಂತಾದರೆ ತನ್ನ ಧ್ಯೇಯಸಾಧನೆ ಮಾಡಿತೆಂಬುದರಲ್ಲಿ ಸಂಶಯವಿಲ್ಲವೆಂದೂ ಹೇಳಿದರು. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರು ಕರ್ನಾಟಕ ಏಕೀಕರಣಕ್ಕೆ ಈ ಪರಿಷತ್ತು ಮಾಡಿದ ಸಹಾಯವು ಮಹತ್ತರವಾದುದೆಂದೂ ಮುಂದೆ ಈ ಪರಿಷತ್ತು ಕರ್ನಾಟಕದಲ್ಲಿಯ ಎರಡು ಕೋಟಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಏರ್ಪಡಬೇಕಾಗಿರುವುದೆಂದೂ ಅದಕ್ಕಾಗಿ ತಮ್ಮೆಲ್ಲರ ನೆರವು ಅತ್ಯಗತ್ಯವೆಂದೂ ಹೇಳಿದರು. ಕೊನೆಗೆ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ. ಪೈ ಎಂ. ಎಲ್. ಎ. ಯವರು ತಮ್ಮ ಭಾಷಣದ ನಂತರ ಧನ್ಯವಾದ ಅರ್ಪಿಸಿದರು.

**ವಿವಾಹ ಸಮಾರಂಭ** — ಉಡುಪಿ ಬೋರ್ಡ್ ಹೈಸ್ಕೂಲಿನ ಹಿರಿಯ ಕನ್ನಡ ಪಂಡಿತರಾದ ಶ್ರೀ ಪುಟ್ಟಣ್ಣ ಶೆಟ್ಟರು ದಿನಾಂಕ 8ರಂದು ಪೂರ್ವಾಹ್ನ 11½ ಗಂಟೆಗೆ ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀಮತಿ ಲೀಲಾ ಎಂಬ ಕನ್ನಿಕೆಯನ್ನು ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

**ಮಳೆ ಹಾವಳಿ**— ಸುಮಾರು 10-15 ದಿನಗಳಿಂದ ವಿಶೇಷ ಮಳೆ ಸುರಿಯುತ್ತಿರುವುದರಿಂದ ಪೈರು ಕಟಾವಿಗೆ ಬಹಳ ತೊಂದರೆಯಾಗಿದೆ; ಎಷ್ಟೋ ಕಡೆಗಳಲ್ಲಿ ಕಟಾವು ಮಾಡಿದ ಪೈರು ನೀರುಪಾಲಾಗಿದೆ. ಜೇಡದ ಮಳೆಯಿಂದಾಗಿ ಕೃಷಿಕರು ತುಂಬಾ ಕಷ್ಟನಷ್ಟಗಳಿಗೆ ಒಳಗಾಗಿ ಕಂಗೆಟ್ಟಿರುವರು.

**ತಹಸೀಲ್ದಾರರ ಪ್ರಕಟಣೆ**— ನಿವೃತ್ತ ಸೈನಿಕ, ನಾವಿಕ, ವೈಮಾನಿಕರ ಹಾಗೂ ಕಳೆದ ಮಹಾ ಯುದ್ಧದಲ್ಲಿ ಭಾಗವಹಿಸಿ ಅದರಲ್ಲಿ ತಮ್ಮ ಪ್ರಾಣಗಳನ್ನರ್ಪಿಸಿದ ಯೋಧರ ಕುಟುಂಬದವರ ದುರವಸ್ಥೆಯನ್ನು ಹೋಗಲಾಡಿಸಲು ದ್ರವ್ಯ ಸಂಗ್ರಹಮಾಡುವ ಯೋಜನೆಯನ್ನು ಯಶಸ್ವಿಯಾಗಿ ಮಾಡುವಂತೆ ಪ್ರತಿವರ್ಷ ದಶಂಬರ ತಿಂಗಳ 7ನೇ ತಾರೀಖಿನ ದಿವಸವನ್ನು "ಧ್ವಜದಿನ" (Flag Day) ವನ್ನಾಗಿ ಆಚರಿಸಬೇಕೆಂತ ನಮ್ಮ ಸರಕಾರದವರು ನಿರ್ಧರಿಸಿರುತ್ತಾರೆ. ಆದ್ದರಿಂದ ಸರಕಾರವು ಕೈಕೊಂಡಿರುವ ಈ ಘನ ಉದ್ದೇಶವು ಯಶಸ್ವಿಯಾಗಿ ಜರಗುವಂತೆ ಸಾರ್ವಜನಿಕರೆಲ್ಲರೂ ತಮ್ಮ ಯಥಾಶಕ್ತಿ ಧನ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

### ಶ್ರೀ ಕೆ. ಕೆ. ಶೆಟ್ಟರಿಗೆ ಅಭಿವಂದನೆ

ಹೊಸ ಮೈಸೂರು ರಾಜ್ಯದ ಎಂ. ಎಲ್. ಸಿ. ಆಗಿ ಅವಿರೋಧವಾಗಿ ಆರಿಸಲ್ಪಟ್ಟಿರುವ ಶ್ರೀ ಕೆ. ಕೆ. ಶೆಟ್ಟರನ್ನು ಅಭಿನಂದಿಸಲು ತಾ. 9ನೇ ಸಂಜೆ ಶ್ರೀ ಎಂ. ಶ್ರೀನಿವಾಸಾಚಾರ್ಯರು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ॥ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಂತೋಷಕೂಟವೊಂದನ್ನು ಏರ್ಪಡಿಸಿದ್ದರು. ಪಲವರು ನಿಷ್ಠಾವಂತ ಕಾಂಗ್ರೆಸಿಗರಾದ ಶ್ರೀ ಶೆಟ್ಟರ ಬಹುಮುಖಸೇವೆಯನ್ನು ವಿವರಿಸಿ ಅಭಿನಂದಿಸಿದರು. ಶ್ರೀ ಶೆಟ್ಟರು ಕಾಂಗ್ರೆಸ್ ಸದಸ್ಯರು ತನ್ನಲ್ಲಿಟ್ಟಿರುವ ಪ್ರೀತಿ ವಿಶ್ವಾಸಗಳಿಗಾಗಿ ಆಭಾರ ಸೂಚಿಸಿದರು. ಅಧ್ಯಕ್ಷರು ಶ್ರೀ ಶೆಟ್ಟರ ದಕ್ಷತೆಯನ್ನು ಕೊಂಡಾಡಿ ಶುಭಕೋರಿದರು.

## ಎಲ್ಲೆಲ್ಲಿ ಏನೇನು?

**ಬೆಳ್ಮಣ್ಣು**—ಪಂಚಾಯತು ಮತ್ತು ಯುವಕ ಸಂಘಗಳ ಕೂಡುವಿಕೆಯಿಂದ ತಾ. 2ರಲ್ಲಿ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು. ಆ ದಿನ ಬೆಳಿಗ್ಗೆ ಶ್ರೀ ನಾರಾಯಣ ಶ್ಯಾನುಭಾಗರು ಧ್ವಜಾರೋಹಣ ಮಾಡಿದರು. ಸಂಜೆ ಶ್ರೀ ಭೋಜರಾಜ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಸಭಿಕರ ಭಾಷಣಗಳಾದ ಬಳಿಕ ಡಾ. ಕೊರಡ್ಕಲ್ ವೆಂಕಟ್ರಾಯರು ಧನ್ಯವಾದಗಳನ್ನಿತ್ತರು.

**ಪೆರ್ಕಳ**— ಸ್ಥಳೀಯ ಮಿಶನ್ ಹಾ| ಎ| ಶಾಲೆಯಲ್ಲಿ ಗಾಂಧಿ ಜಯಂತಿಯು ಶ್ರೀ ಲಕ್ಷ್ಮೀನಾರಾಯಣನೆಲ್ಲಿಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಆನಂದ ಶೆಟ್ಟಿ ಮೊದಲಾದವರ ಭಾಷಣಗಳಾದುವು. ಶ್ರೀ ಎಮ್.ಆರ್. ಶ್ಯಾನುಭಾಗರು ವಂದನೆಗಳನ್ನರ್ಪಿಸಿದರು.

**ದೇಲಂಪಾಡಿ**— ಗಾಂಧಿ ಜಯಂತಿ ಹಾಗೂ ಸ್ಥಳೀಯ ಯುವಕರಿಂದ ಹೊರಡಿಸಲ್ಪಡುತ್ತಿರುವ 'ಪನಸುಮ' ಹಸ್ತಪತ್ರಿಕೆಯ ವಾರ್ಷಿಕ ವಿಶೇಷಾಂಕದ ಉದ್ಘಾಟನೆ ಶ್ರೀ ಕೆ. ಫಕೀರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾಮನ ಕಾಮತರು ಧನ್ಯವಾದ ಸಮರ್ಪಿಸಿದರು.

**ಕುಂಬಳೆ**— ಕಳೆದ ತಾ. 30ರಲ್ಲಿ ತಿರುಕೊಚ್ಚಿ ರಾಜಪ್ರಮುಖರ ಸಲಹೆಗಾರ ಶ್ರೀ ಪಿ. ಎಸ್. ರಾಯರು ಕಾಸರಗೋಡನ್ನು ಸಂದರ್ಶಿಸಿದಾಗ, ಕಾಸರಗೋಡು ತಾಲೂಕು ಪ್ರಾಥಮಿಕ ಶಾಲಾಧ್ಯಾಪಕರ ಪರವಾಗಿ ಅದರ ಅಧ್ಯಕ್ಷ ಶ್ರೀ ಶಿವರಾವ್ ಮತ್ತು ಕಾರ್ಯದರ್ಶಿ ಶ್ರೀ ಎಲ್. ಅಬ್ದುಲ್ಲನವರು ಮನವಿಯೊಂದನ್ನರ್ಪಿಸಿದರು.

**ಕೊಡಿಯಾಲ**— ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ. 2 ರಲ್ಲಿ ಗಾಂಧಿ ಜಯಂತಿ ನಿಮಿತ್ತ ಶ್ರೀ ಬಿ. ಬಾಲಕೃಷ್ಣ ರೈಗಳು ರಾಷ್ಟ್ರಧ್ವಜವನ್ನರಳಿಸಿದರು.

**ಕೊಳಂಬೆ**— ಇಲ್ಲಿಯ ಹಿರಿಯ ಬುನಾದಿ ಶಾಲೆಯಲ್ಲಿ ತಾ. 2 ರಲ್ಲು ಗಾಂಧಿ ಜಯಂತಿಯು ಶ್ರೀ ಯು. ಭಾಸ್ಕರ ಮಾರ್ಲರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ತಾ. 5 ರಲ್ಲು ಶಾರದಾಪೂಜಾ ದಿನಾಚರಣೆಯು ಶ್ರೀ ಕೆ. ವಿ. ರಾಮಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

**ಸುರತ್ಕಲ್**— ಸ್ಥಳೀಯ ಎಲಿಮೆಂಟರಿ ಶಾಲಾ ಅಧ್ಯಾಪಕರ ಕೇಂದ್ರ ಸಂಘದ ವಾರ್ಷಿಕೋತ್ಸವವು ಇದೇ ತಾ. 13ರಲ್ಲಿ ಮಂಗಳೂರು ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮದ್ರಾಸಿನ ಶಿಕ್ಷಣ ಮತ್ತು ಅರ್ಥಸಚಿವರಾದ ಶ್ರೀ ಸುಬ್ರಹ್ಮಣ್ಯಂರವರು ಉತ್ಸವದಲ್ಲಿ ಭಾಗವಹಿಸಿ ಭಾಷಣಮಾಡಲಿರುವರು. ಅಲ್ಲದೆ ಶಾಲಾ ಹಳೆವಿದ್ಯಾರ್ಥಿ ಸಂಘದವರ ಕಾಣಿಕೆಯಾಗಿ ಒಪ್ಪಿಸುವ, ವಿದ್ಯುದ್ದೀಪಗಳನ್ನು ಬೆಳಗಿಸುವ ಕಾರ್ಯವನ್ನು ನೆರವೇರಿಸಲಿರುವರು.

**ಮಂಜೇಶ್ವರ**— ಸ್ಥಳೀಯ ಗ್ರಾಮ ಸೇವಾ ಸಂಘದ ಆಶ್ರಯದಲ್ಲಿ ತಾ. 2ರಲ್ಲಿ ಗಾಂಧಿ ಜಯಂತಿಯು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಮುದ್ದಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಸಾಂದರ್ಭೋಚಿತ ಭಾಷಣಗಳಾದುವು. ರಾತ್ರಿ ಚಲಚ್ಚಿತ್ರ ಪ್ರದರ್ಶನವಿತ್ತು.

**ಕೆರೆಬೆಟ್ಟು**— ಕಾರ್ಕಳ ತಾಲೂಕಿನ ಕೆರೆಬೆಟ್ಟು ಗ್ರಾಮದಲ್ಲಿ ಕಟ್ಟಿಸಲಾದ ಎಲಿಮೆಂಟರಿಶಾಲಾ ಕಟ್ಟಡದ ಉದ್ಘಾಟನೋತ್ಸವವು ಕಳೆದ ತಾ. 27ರಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರಿಂದ ನೆರವೇರಿಸಲ್ಪಟ್ಟಿತು. ಕುಂದಾಪುರದ ಸಬ್ ಕಲೆಕ್ಟರ್ ಶ್ರೀ ಸೂರ್ಯನಾರಾಯಣ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಲಕ್ಷ್ಮೀನಾರಾಯಣ ಆಚಾರ್ಯರು ವರದಿಯನ್ನೋದಿದರು. ಶ್ರೀಗಳಾದ ವಿ. ರಸುಲಾನ್, ಎಚ್. ಭುಜಂಗ ಬಲ್ಲಾಳ್ ಮತ್ತು ಡಾ. ಯು. ಕೃಷ್ಣ ಕಾಲೋಚಿತಮಾತುಗಳನ್ನಾಡಿದರು.

**ಹೆಜ್ಮಾಡಿಕೋಡಿ**— ಸ್ಥಳೀಯ ವ್ಯಾಯಾಮ ಶಾಲೆಗೆ ಶ್ರೀ ಗಿರಿಯಪ್ಪ ಪುತ್ರನ್ ರವರು ದಾನವಿತ್ತ ಬೆಳ್ಳಿಯ ಹನುಮಂತನ ವಿಗ್ರಹವನ್ನು ತಾ. 2 ರಂದು ಸಂಜೆ ಶ್ರೀ ವಿ. ಎಸ್. ಕುಡ್ವರು ಅನಾವರಣಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ. ಕೇಶವ ಬಾಳಿಗರು ವಹಿಸಿದ್ದರು. ಶ್ರೀ ಶೀನಪ್ಪ ಕುಂದರರು ಸ್ವಾಗತಭಾಷಣಮಾಡಿದರು. ಶ್ರೀ ಶಿವರಾಯ ಮೆಂಡನರು ವರದಿವಾಚನ ಮಾಡಿದರು. ಜಿಲ್ಲಾಬೋರ್ಡ್ ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರು ವ್ಯಾಯಾಮ ಶಾಲೆಗೆ ರೂ. 51/- ಕೊಡುವ ವಾಗ್ದಾನವಿತ್ತರು.

**ಕಾಸರಗೋಡು**— ತಾ 2 ರಂದು ದಿವಂಗತ ಕವಿಭೂಷಣ ಕೆ ಪಿ. ವೆಂಕಪ್ಪ ಶೆಟ್ಟರ ಪುಣ್ಯಸ್ಮರಣೆ ಮಾಡಿ ಶ್ರದ್ಧಾಂಜಲಿ ಅರ್ಪಿಸುವುದಕ್ಕಾಗಿ ಮಂಗಳೂರು ನಗರಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸುಳ್ಳಿಪಾಡಿ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಸಾರ್ವಜನಿಕ ಸಭೆಯು ಜರಗಿತು. ಶ್ರೀ ಕ್ರೀಣ ಗೋಪಾಲಕೃಷ್ಣ ಭಟ್ಟರು ಸ್ವಾಗತಿಸಿದ ನಂತರ ಶ್ರೀ ಬಾಲಕೃಷ್ಣ ರಾಯರು ದಿ. ಸೆಟ್ಟರ ಭಾವಚಿತ್ರ ಅನಾವರಣ ಮಾಡಿದರು. ಅಧ್ಯಕ್ಷರಾದ ಅಡಿಗರು, ಬಾಲಕೃಷ್ಣ ರಾಯರು, ಕಯ್ಯಾರ ಕಿಞ್ಞಣ್ಣ ರೈ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಕಳ್ಳಿಗೆ ಮಹಾಬಲ ಭಂಡಾರಿ, ಡಾ. ಕೆ. ಎಸ್. ಆನಂದ, ಬಾಡೂರು ಜಗನ್ನಾಥ ರೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ನಂತರ ಮೌನ ಪ್ರಾರ್ಥನೆಯೊಂದಿಗೆ ದಿವಂಗತರ ಆತ್ಮಶಾಂತಿಯನ್ನು ಕೋರಲಾಯಿತು. ಜಿಲ್ಲೆಯ ಪ್ರಮುಖ ಅರ್ಥಧಾರಿಗಳ ಕೂಡುವಿಕೆಯಿಂದ ಕರ್ಣಾರ್ಜುನಕಾಳಗ, ಸಾಧ್ವೀ ಭೀಮನಿಜಯ ಮೊದಲಾದ ಪ್ರಸಂಗಗಳ ತಾಳಮದ್ದಳೆ ಜರಗಿತು. ವಿಷ್ಣು ಭಟ್ಟರಿಂದ ರಚಿತವಾದ 'ಕವಿಭೂಷಣರಿಗೆ ಕಂಬನಿ' ಎಂಬ ಕವನ ಓದಲಾಯಿತು. ಸಭೆಯ ಅಂಗವಾಗಿ ಜರಗಿದ ಕ್ರೀಡಾಸ್ಪರ್ಧೆಯಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣೆಯಾದ ಬಳಿಕ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.

**ಪೆಡೂರು**—ಇದೇ ಕಳೆದ ತಾ. 4ನೇ ಗುರುವಾರ ರಾತ್ರಿ ಸುಮಾರು 8 ಗಂಟೆಗೆ ಪ್ರಾರಂಭವಾದ ಜಡಿ ಮಳೆಯ ದೆಸೆಯಿಂದಾಗಿ ಪೆಡೂರು ಗ್ರಾಮದ ವಾಂಟ್ಯಾಳ ಎಂಬಲ್ಲಿ ಕೆರೆ, ತೋಡುಗಳ ಇಕ್ಕೆಡೆಯ ಅಂಚು, ಕಂಠಗಳೆಲ್ಲಾ ಕಡಿದು ಹೋಗಿ ರಭಸದಿಂದ ಹರಿಯುವ ನೆರೆನೀರು ಪೈರು ತುಂಬಿದ ಬೈಲು ಗದ್ದೆಗಳನ್ನು ಹೊಕ್ಕು ಸುಮಾರು ಎಕ್ರೆ ಜಮೀನಿನ ಬೆಳೆಯನ್ನು ಸಂಪೂರ್ಣ ನಾಶ ಮಾಡಿರುತ್ತದೆ ಸುಮಾರು 70—80 ಎಕ್ರೆ ಜಮೀನು ಕೊಯ್ದು ಹಾಕಿದ ಪೈರು ನೀರುಪಾಲಾಗಿರುತ್ತದೆ. ಅಲ್ಲದೆ ರಾತ್ರಿ ಸಮಯವಾದ್ದರಿಂ[ದ] ನೆರೆನೀರು ಮನೆ ಹಟ್ಟಿಕೊಟ್ಟಿಗೆ ತನಕವ[ೂ] ಅರಿವಿಲ್ಲದಂತೆ ಬಂದುಬಿಟ್ಟು ಹೆಚ್ಚಿನ ಜ[ಾ]ಜಾನುವಾರುಗಳೂ ಕೊಚ್ಚಿಕೊಂಡು ಹೋಗ[ು]ವಾಗ ಸ್ಥಳೀಕರ ಭಗೀರಥ ಪ್ರಯತ್ನದಿಂ[ದ] ರಕ್ಷಿಸಲ್ಪಟ್ಟರೂ ಕೂಡಾ ಕೆಲವು ಜಾನುವಾರುಗಳು ನೀರುಪಾಲೇ ಆಗಿ ಹೋದುವು. ಇಷ್ಟೆ ಅಲ್ಲದೆ ತೋಡಿನ ಕಟ್ಟ ಗದ್ದೆಯ ಅಂಚು ಇತ್ಯಾದಿ ಕಡಿದು ಹೋಗಿ ಅಪಾರವಾದ ಕಷ್ಟನಷ್ಟಗಳಿಗೆ ಇಲ್ಲಿಯ ಜನರನ್ನು ಗುರಿಪಡಿಸಿದೆ.

**ಮೂಡಬಿದರೆ**— ಸ್ಥಳೀಯ ಶ್ರೀ ಸ[ರ]ಸ್ವತಿ ಸೇವಾ ಸಂಘದಲ್ಲಿ ದಸರಾವಾರ್ಷಿಕೋತ್ಸವವು ತಾ. 5ರಂದು ಬೆಳಿಗ್ಗೆ ಧ್ವಜವಂದನ ಮತ್ತು ಶ್ರೀ ಸರಸ್ವತಿ ಪ್ರತಿಷ್ಠೆಯೊಂದಿ[ಗೆ] ಪ್ರಾರಂಭವಾಯಿತು. ಕನ್ನಡ ಸಾಹಿತ್ಯ ಪ[ರಿ]ಷತ್ತಿನ ಅಧ್ಯಕ್ಷ ಶ್ರೀ ದಿ. ಶಿವಮೂರ್ತಿ ಶ[ಾ]ಸ್ತ್ರಿಗಳು ಉತ್ಸವವನ್ನು ಉದ್ಘಾಟಿಸಿದರು. ಸಂಜೆ ಸೇರಿದ ಸಭೆಯಲ್ಲಿ ಸಂಘದ ಅಧ್ಯ[ಕ್ಷ] ಶ್ರೀ ಜೆ. ವಾಸುದೇವ ಪೈಗಳು ಶ್ರೀ ಶಿ[ವ]ಮೂರ್ತಿ ಶಾಸ್ತ್ರಿಗಳಿಗೆ ಮಾನಪತ್ರವನ್ನರ್ಪಿ[ಸಿ]ದರು. ಯಕ್ಷಗಾನಪಟು ಕವಿ ಭೂಷಣ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟರ ನಿಧನದ ಕುರಿ[ತು] ಸಂತಾಪ ಸೂಚಕ ನಿರ್ಣಯ ಪಾಸಾಯಿತು. ತಾ. 6ರಲ್ಲು ಮಂಗಳೂರು ನಗರ ಸಭಾಪ[ತಿ]ಗಳಾದ ಶ್ರೀ ಕೆ. ಸೂರ್ಯನಾರಾಯಣ ಅ[ಡಿ]ಗರು ಎರಡನೆ ದಿವಸದ ಸಾಹಿತ್ಯ ಉತ್ಸವ[ದ]ಯ ಪ್ರಮುಖ ಭಾಷಣಕಾರರಿದ್ದರು. ಶ್ರೀ ಎನ್. ಪಿ. ಮುರರಾಯರು ಸಭಾಧ್ಯಕ್ಷತೆ ವ[ಹಿ]ಸಿದ್ದರು. ಆರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಕೆ. ರೈಗಳು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ. ಜೆ. ವಾಸುದೇವ ಪೈಗಳು ಧನ್ಯವಾದಗಳನ್ನಿತ್ತರು. ತಾ 7 ರಲ್ಲು ಮಂಗಳೂರು ಕಲಾಶಾಲೆಯ ಪ್ರಾಧ್ಯಾಪಕರಾದ ಶ್ರೀ ಎಸ್. ಆನಂದರಾ[ಯ]ರ ಅಧ್ಯಕ್ಷತೆಯಲ್ಲಿ ಜರಗಿತು. ಪಂಡಿ[ತ] ನಂಜುಂಡ ಸ್ವಾಮಿಗಳು 'ಸಾಹಿತ್ಯವೂ ಸಂಗೀ[ತ]ವೂ' ಎಂಬೀ ವಿಷಯದಲ್ಲಿ ಭಾಷಣವಿತ್ತರು. ಶ್ರೀ ಕೆ. ದೊಡ್ಡಣ್ಣ ಸೆಟ್ಟರು ಶಿಶು ಗೀತೆಗಳ ಉದ್ದೇಶಗಳನ್ನು ವಿವರಿಸಿ ಮಾತನಾಡಿದರು. ಶ್ರೀ ಕೆ. ಕೆ. ರೈಗಳು ಧನ್ಯವಾದಗಳನ್ನಿತ್ತರು.

---

### ಕುಂದಾಪುರ ಡಿ ಮು. ಕೋರ್ಟಿನಲ್ಲಿ

O.S. 602/1955 R.E.P. 532/1956

ಗಣಪತಿ ಕಂಮ್ತಿ— ವಾದಿ.

ಅಂಣಯ್ಯ ನ್ಯಾಕ ಕೂಡಾ—ಪ್ರತಿವಾದಿರು

1. ಅಂಣಯ್ಯ ನ್ಯಾಕ. ಭದ್ರಯ್ಯ ನ್ಯಾಕರ ಮಗ, ರಿಟಾಯರ್ಡ್, ಟೀಚರ್ ಕುಂದಾಪುರ ಕಸಬಾ ಗ್ರಾಮ.

2. ಸದಾಶಿವ ರಾವ್, ಅಂಣಯ್ಯ ನ್ಯಾಕರ ಮಗ ಕುಂದಾಪುರ ಕಸಬಾ.

ಇವರಿಗೆ

ವಾದಿಯು ಮೇಲ್ಕಂಡ ಡಿಕ್ರಿಪ್ರಕಾರ ಪ್ರತಿವಾದಿರ ಪಕ್ಷಿನ ಸ್ಥಿರಾಸ್ತಿಯನ್ನು ಯೇಲಂಮ್ಮಿಗೆ ಅಪೇಕ್ಷಿಸಿ ಯೇಲಂ ಯಿಸ್ತಿಹಾರು ದಾಖಲ್ಲುಮಾಡಿರುವುದರಿಂದ ಸದ್ರಿ ಯೇಲಂ ಯಿಸ್ತಿಹಾರಿನ ಶರ್ತ ನಿರ್ಣಯಿಸುವರೇ ತಾ. 3—11—56ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಪ್ರಿಶಿವ್ಯಾ ಮುಂದಿನ ಹುಕುಂ ಕೊಡೋಣಾಗುತ್ತದೆ. ಎಂಬಸಂಗ್ತಿ ನಿಮಗೆ ಈ ಮೂಲಕ ತಿಳಿಸಿಯದೆ.

**K. Raghunatha Shenai**
Pleader for Plff.
Coondapoor 6—10—56.

---

## ಮಹಾ ಸಭೆಯ ನೋಟೀಸು

ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್) ಶಿರ್ವ ಇದರ ಸ್ಪೆಶಲ್ "ಮಹಾ ಸಭೆ"ಯನ್ನು ಇದೇ ತಾ. 28-10-56ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುವದರಿಂದ ಸದಸ್ಯರಾದ ತಾವೆಲ್ಲರೂ ಸಭೆಗೆ ದಯವಿಟ್ಟು ಬರಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:—**

1. ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್) ಶಿರ್ವ ಎಂಬುದನ್ನು ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್) ಶಿರ್ವ ಎಂಬುದಾಗಿ ಬದಲಾಯಿಸಿ ತಾ. 6—5—56ನೇ ಮಹಾ ಸಭೆಯಲ್ಲಿ ಮಾಡಿದ ನಿರ್ಣಯವನ್ನು ಕಾಯಂ ಮಾಡುವ ವಿಷಯ ಪರಿಶೀಲಿಸುವದು.

2. ಶ್ರೀ ಕೆ. ಜೆ. ಬಲ್ಲಾಳರ ಅಕಾಲ ನಿಧನದಿಂದ ತೆರವಾದ ಶಾಲೆಗಳ ಕರೆಸ್ಪೋಂಡೆಂಟ್ ಮತ್ತು ಸಂಘದ ಅಧ್ಯಕ್ಷಸ್ಥಾನವನ್ನು ಬರ್ತಿಮಾಡುವ ವಿಷಯ ಆಲೋಚಿಸುವದು.

3. ಸಭಾಧ್ಯಕ್ಷತೆ ಅನುಮತಿಯಿಂದ ಬರತಕ್ಕ ಇತರ ವಿಷಯಗಳು.

ಶಿರ್ವ
6—10—56.

ಯಸ್. ಅಣ್ಣಯ್ಯ ಹೆಗ್ಡೆ,
ಸೆಕ್ರೆಟರಿ.

---

ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಪಿ. ಯಶೋದಾ ಅವರು ಬರೆದ

## ಬಾಳಿನ ಬೆಳೆ

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನು ಬುಕ್ ಪೋಸ್ಟು ಮಾಡಬಹುದು.)

ಪ್ರತಿಗಳು ಸಿಗುವ ಸ್ಥಳ:—

**ನವಭಾರತ ಬುಕ್ ಡಿಪ್ರೋ, ಉಡುಪಿ.**

---

### ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. P. 67/1956

ಅರ್ಜಿದಾರರು— 1. ನಾಗಿ ಹೆಂಗ್ಸು, ಚ[...]ತ್ತಾರು ಮೂಕ ಹೆಂಗ್ಸಿನ ಮಗಳು—

2. ಗೋವಿಂದ ನಾಯ್ಕ 3. ಮೂಕ ಹೆಂಗ್ಸು, 1ನೇ ಅರ್ಜಿದಾರಳ ಮಕ್ಕಳು.

ಯದ್ರಿ— ನಾಗಿ ಹೆಂಗ್ಸು, ಅಣ್ಣು ಹೆಂಗ್ಸಿನ ಮಗಳು, ಕುಂದಾಪುರ ತಾಲ್ಲು ಆನಗಳ್ಳಿ ಗ್ರಾಮದ ಹೇರಿಕುದ್ರಲ್ಲಿರುವವಳು ಕುಂದಾಪುರ ತಾಲ್ಲು ವಂಡ್ಸೆ ಗ್ರಾಮದಲ್ಲಿರುವವರು

ಸದ್ರಿ ಯದ್ರಿಳಿಗೆ ಮತ್ತು ಯಿತರರಿಗೆ ಕೂಡಾ ಈ ಮೂಲಕ ತಿಳಿಯಪಡಿಸುವದೇನೆಂದ[ರೆ]

1ನೇ ಅರ್ಜಿದಾರಳ ಗಂಡ, 2—3ನೇ ಅರ್ಜಿದಾರರ ತಂದೆ ಮೃತ ಮಂಜ ನಾಯ್ಕನಿಗೆ ಬರತಕ್ಕ ಅರ್ಜಿಯಲ್ಲಿ ಕಾಣಿಸಿದ ಬಾಬ್ತು ದಿ ಕೆನರಾ ಬೇಂಕು ಲಿಮಿಟೆಡ್ ಕುಂದಾಪುರ ಬ್ರಾಂಚಿನಲ್ಲಿ ಅಡವಿಗೆ ಯಿಟ್ಟ ಚಿನ್ನದ ನಗಗಳನ್ನು ಪಡೆಯುವರೆಯೂ, ನೇಶನಲ್ ಪ್ಲೇನ ಲೋನಿನ ಬಾಬ್ತು, ಕಜವಿನ ಕಂಟ್ರಾಕ್ಟಿನ ಬಾಬ್ತು, ವಿಜಯ ಬೇಂಕ್ ಡಿಪೋಜಿಟಿನಲ್ಲಿರುವ ಬಾಬ್ತು ಹಣಗಳನ್ನು ಪಡೆಯೂವರೆಯೂ ಸದ್ರಿ ಸದ್ರಿ ಮಂಜ ನಾಯ್ಕನು ತಾರೀಕು 6—6—53ರಲ್ಲು ಬರದಿಟ್ಟ ವೀಲುನಾಮೆ ಪ್ರಕಾರ ತಾವು ಹಕ್ಕುದಾರರೆಂತಲೂ, ಆ ಬಗ್ಗೆ ತಮ್ಮ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂತಲೂ, ವಗೈರೆ ಅರ್ಜಿದಾರರು ದಾಕ್ಲುಮಾಡಿದ ಮೇಲಿನ ಅರ್ಜಿಯು ತಾರೀಕು 16—10—56ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ಯೇನಾದ್ರೂ ಆಕ್ಷೇಪ ಹೇಳುವದಿದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು ಎಂತ ಕೋರ್ಟ ಹುಕ್ಕುಂ ಪ್ರಕಾರ ತಿಳಿಸಿಯದೆ.

**V. Srinivasa Shetty,**
Advocate for Petitioners.
ಕುಂದಾಪುರ. ತಾ. 4—10—56

## ಮಂಗಳೂರು

**ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚೆನ್ನಯ್ಯನವರು**— ತಾ. 6ರಂದು ಸಂಜೆ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ, ವಿಶಾಲ ಮೈಸೂರು ರಾಜ್ಯದಲ್ಲಿ ಪರಸ್ಪರ ತಿಳುವಳಿಕೆಯಿಂದ ಒಂದಾಗಿ ಬಾಳಬೇಕಾಗಿರುವ ನಾವು ಒಬ್ಬರ ಸ್ಥಿತಿಗತಿಯ ಅರಿವನ್ನು ಇನ್ನೊಬ್ಬರು ಮಾಡಿಕೊಳ್ಳಬೇಕಾದುದು ಅಗತ್ಯವಾದುದರಿಂದ, ಹಲವಾರು ವರ್ಷಗಳಿಂದ ಬೇರೆಯೇ ಆಗಿದ್ದ ನಿಮ್ಮನ್ನೆಲ್ಲಾ ಕಂಡು— ಮಾತನಾಡಿ, ಒಂದೇ ಗುರಿಗಾಗಿ ಕೆಲಸಮಾಡುವ ನಾವೆಲ್ಲ, ಒಂದೇ ಭಾವನೆಯಿಂದ ಕೆಲಸಮಾಡೋಣವೆಂದು ಹೇಳಲು ಹಾಗೂ ವಿಶಾಲ ಮೈಸೂರನ್ನು ಸೇರಲಿರುವ ನಿಮ್ಮನ್ನು ಆದರದಿಂದ ಎದುರುಗೊಳ್ಳುತ್ತೇವೆ ಎಂದರು. ಮಹಾ ಚುನಾವಣೆಯು ಸಮೀಪಿಸುತ್ತಿರುವ ಈ ಸನ್ನಿವೇಶದಲ್ಲಿ, ಕಾಂಗ್ರೆಸ್ ಕಾರ್ಯಕರ್ತರ ಜವಾಬ್ದಾರಿಯನ್ನು ಪ್ರಸ್ತಾಪಿಸಿ, ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿ ಹಳ್ಳಿಗೂ ಹೋಗಿ, ಜನರಿಗೆ ಕಾಂಗ್ರೆಸ್ ಸರಕಾರವು ಜನಾಂಗದ ಕಲ್ಯಾಣಕ್ಕಾಗಿ ಮಾಡಿದ ಕಾರ್ಯಗಳನ್ನೂ ಮಾಡಲಿರುವ ಕಾರ್ಯಗಳನ್ನೂ ವಿವರಿಸಿ ತಿಳಿಸಬೇಕು. ಜನರ ಸುಖದುಃಖಗಳೇನೆಂಬುದನ್ನು ತಿಳಿಯಬೇಕು ಎಂದರು. ಶ್ರೀ ಕೆ. ಕೆ. ಸೆಟ್ಟರು ಧನ್ಯವಾದಗಳನ್ನಿತ್ತರು.

**ಕೆನರಾ ಚೇಂಬರ್ ಆಫ್ ಕಾಮರ್ಸಿನ ಸಭೆಯಲ್ಲಿ**— ಶ್ರೀ ಚೆನ್ನಯ್ಯನವರು ಭಾಷಣವೀಯುತ್ತಾ "ಮೈಸೂರು ಪ್ರಾಂತ್ಯಕ್ಕೊಂದು ಬಂದರವು ಅಗತ್ಯವಾಗಿಬೇಕೆಂಬ ಹಂಬಲವು ಇದ್ದಿತು. ಇದೀಗ ಇತರ ಕನ್ನಡ ಭಾಗಗಳು ಒಂದುಗೂಡಿ ವಿಶಾಲ ಮೈಸೂರು ಪ್ರಾಂತ್ಯವು ರಚಿಸಲ್ಪಡುವಾಗ, ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕರಾವಳಿಯಲ್ಲಿರುವ ಹಲವು ಬಂದರುಗಳು ಈ ಪ್ರಾಂತ್ಯಕ್ಕೆ ಸೇರಿ ಈ ಬಯಕೆ ಈಡೇರಿದಂತಾಗುವುದು. ಈ ಸಂದರ್ಭದಲ್ಲಿ ಮಂಗಳೂರು ಬಂದರನ್ನು ಮಾತ್ರವಲ್ಲ, ಈ ಕರಾವಳಿಯ ಇತರ ಬಂದರಗಳನ್ನೂ ಸರ್ವಋತು ಬಂದರಗಳನ್ನಾಗಿ ಮಾಡಬೇಕು. ಅವುಗಳ ಮೂಲಕ ನಮ್ಮ ಸರಕುಗಳು ರಫ್ತು ಆಗಿ ನಮ್ಮ ಈ ಪ್ರಾಂತದ ಸಂಪತ್ತು ಹೆಚ್ಚುವಂತಾಗಬೇಕು. ಈ ಸಂದರ್ಭದಲ್ಲಿ ನಮ್ಮ ಬಂದರುಗಳ ಅಭಿವೃದ್ಧಿಗಾಗಿ ಕೇಂದ್ರ ಸರಕಾರದಿಂದ ನಮಗೆ ಆರ್ಥಿಕ ಸಹಾಯ ದೊರೆಯಬೇಕೆಂದು ಕೇಳಲು ನಮಗೆ ಹಕ್ಕಿದೆ" ಎಂದರು. ಮೈಸೂರಿನ ಮಾಜಿ ಗೃಹ ಮಂತ್ರಿ ಶ್ರೀ ಟಿ. ಮರಿಯಪ್ಪನವರೂ, ಮೈಸೂರು ಪ್ರದೇಶ ಕಾಂಗ್ರೆಸಿನ ಸಂಘಟನಾ ಕಾರ್ಯದರ್ಶಿ ಶ್ರೀ ಬಂದೀ ಗೌಡರೂ ಉಪಸ್ಥಿತರಿದ್ದರು. ಚೇಂಬರಿನ ಅಧ್ಯಕ್ಷ ಶ್ರೀ ಕೆ. ಶ್ರೀನಿವಾಸ ಶೆಣೈಯವರು ಮುಖ್ಯ ಅತಿಥಿಗಳಿಗೆ ಪುಷ್ಪಹಾರಗಳನ್ನಿತ್ತರು. ಕಾರ್ಯದರ್ಶಿ ಶ್ರೀ ಪಿ. ನರಸಿಂಗ ರಾಯರು ಸ್ವಾಗತಮಾತುಗಳನ್ನಾಡಿದರು. ಶ್ರೀ ಎ ರಾಘವೇಂದ್ರ ಪೈಗಳು ಧನ್ಯವಾದಗಳನ್ನಿತ್ತರು.

ಶ್ರೀ ಚೆನ್ನಯ್ಯನವರು ಕೆಲವು ಹಂಚಿನ ಕಾರ್ಖಾನೆಗಳಿಗೆ ಭೇಟಿಯಿತ್ತರು. ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಕಾರ್ಖಾನೆಗಳ ಕೆಲಸದ ಕ್ರಮಗಳನ್ನು ವಿವರಿಸಿದರು. ರಾತ್ರಿ ಸನ್ಮಾನ್ಯ ಗುಡ್ಡೆಯ ನಿವಾಸದಲ್ಲಿ ಹಾಸನದ ಕ್ಯಾಪ್ಟನ್ ಎಚ್. ಮಹಾದೇವ ಮತ್ತು ಸಹೋದರರು ಭೋಜನಸತ್ಕಾರ ಕೊಟ್ಟಿತ್ತು ಗೌರವಿಸಿದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಮೊದಲಾದವರು ಹಾಜರಿದ್ದರು. ಭೋಜನಾನಂತರ ಶ್ರೀ ಧರ್ಮ ಮಹಾಗಣಪತಿ ಯಕ್ಷಗಾನ ಸಂಘದ ಆಶ್ರಯದಲ್ಲಿ ನಡೆದ ಯಕ್ಷಗಾನ ಕಾಲಕ್ಷೇಪದಲ್ಲಿ ಶ್ರೀ ಚೆನ್ನಯ್ಯ ಮತ್ತು ಅವರ ಸಂಗಾತಿಗಳು ಭಾಗವಹಿಸಿದ್ದರು. ಶ್ರೀ ಕೆ. ಆರ್. ಆಚಾರ್ಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಬಾಲಕೃಷ್ಣ ರಾಯರು ಧನ್ಯವಾದವಿತ್ತರು.

**ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಭಾಷಣ**— ಶ್ರೀ ಚೆನ್ನಯ್ಯನವರು ತಾ. 7ರಂದು ಸಂಜೆ ಕೇಂದ್ರ ಮೈದಾನಿನಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ "ವಿಶಾಲ ಮೈಸೂರಲ್ಲಿ ಸೇರಲಿರುವ ನಿಮಗೆ ಈ ಸಂದರ್ಭದಲ್ಲಿ ಕಾಸರಗೋಡು ತಾಲೂಕನ್ನು ಕಳೆದುಕೊಂಡೆವೆಂಬ ಕೊರಗು ಇರಬಹುದು. ಕಾಸರಗೋಡನ್ನು ಉಳಿಸಿಕೊಳ್ಳಲು ನಿಮ್ಮ ನಾಯಕರೂ, ನಾವೂ, ಬಹಳವಾಗಿ ಪ್ರಯತ್ನಿಸಿದ್ದೆವು. ಆದರೂ ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಅಂದಮಾತ್ರಕ್ಕೆ ನಾವು ನಿರಾಶರಾಗಬೇಕಾಗಿಲ್ಲ. ರಾಜಕೀಯದಲ್ಲಿ ಯಾವುದೂ ಕೊನೆಯಲ್ಲವೆಂಬುದನ್ನು ತಿಳಿದು ನಮ್ಮ ಪ್ರಯತ್ನವನ್ನು ಘಟನಾತ್ಮಕ ವಿಧಾನದಿಂದ ಮುಂದುವರಿಸೋಣ. ನಮ್ಮ ಮಟ್ಟಿಗೆ ಹೇಳುವುದಾದರೆ, ಕಾಸರಗೋಡು ತಾಲೂಕನ್ನು ತಿರುಗಿ ಪಡೆಯಲು ನಮ್ಮ ಕೈಲಾದ ಮಟ್ಟಿನ ಪ್ರಯತ್ನವನ್ನು ಮಾಡುತ್ತೇನೆ ಎಂದು ನಾನು ಭರವಸೆ ಕೊಡುತ್ತೇನೆ. ಸತ್ಯ-ಅಹಿಂಸಾ ಮಾರ್ಗದಿಂದ ನಡೆದರೆ ಕಾಸರಗೋಡು ಇನ್ನು ಹತ್ತು ವರ್ಷಗಳ ನಂತರವಾದರೂ ವಿಶಾಲ ಮೈಸೂರಿಗೆ ಸೇರುವುದೆಂದು ನನಗೆ ಭರವಸೆಯಿದೆ" ಎಂದರು.

**ಗಾಂಧಿ ಜಯಂತಿಯು**— ತಾ. 2ರಲ್ಲು ಸಂಜೆ ಕೇಂದ್ರ ಮೈದಾನಿನಲ್ಲಿ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಡಾ. ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಮ್. ಲೋಕಯ್ಯ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು. ಶ್ರೀಯುತರಾದ ಕೆ. ಆರ್. ಆಚಾರ್, ಬಿ. ಎಮ್. ಇದಿನಬ್ಬ, ಎಮ್. ರಘುನಾಥ, ಲಕ್ಷ್ಮಣ ದೇವ ವಿದ್ಯಾರ್ಥಿ ಮೊದಲಾದವರು ಬಾಪೂಜೀ ಜೀವನ ಹಾಗೂ ಧ್ಯೇಯಾದರ್ಶಗಳ ಕುರಿತು ಮಾತನಾಡಿ ಎಲ್ಲಾ ಆಸಕ್ತ ನಾಗರಿಕರು ಗಾಂಧಿತತ್ವ ಅನುಕರಣೆ ಒಂದೇ ಮಾರ್ಗವೆಂದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಮಹಾತ್ಮಾಜೀಯವರು ನಮ್ಮ ಮುಂದಿರಿಸಿದ ಆದರ್ಶಗಳನ್ನು ಮನನಮಾಡಿ ಅದರಂತೆ ನಡೆಯೋಣವೆಂದರು. ಶ್ರೀ ಎಚ್. ಕೆ. ತಿಂಗಳಾಯರು ಧನ್ಯವಾದಗಳನ್ನಿತ್ತರು. ಅಂದು ಬೆಳಿಗ್ಗೆ ಪ್ರಭಾತಫೇರಿ, ಹರಿಜನ ವಸತಿಗಳಿಂದ ಶುದ್ಧೀಕರಣ ಕಾರ್ಯಕ್ರಮಗಳಾದ ಬಳಿಕ ಶ್ರೀ ಕೆ. ಕೆ. ಸೆಟ್ಟರು ಧ್ವಜಾರೋಹಣ ಮಾಡಿದರು.

**ಬೆಸೆಂಟ್ ಬಾಲಿಕಾಪಾಠಶಾಲೆಯ ವಾರ್ಷಿಕೋತ್ಸವ** — ಮತ್ತು ಬೆಸೆಂಟ್ ಮಾತೆಯ ಸ್ಮಾರಕೋತ್ಸವಗಳು ತಾ. 1ರಂದು ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಅಂದು ಸಂಜೆ ವಾರ್ಷಿಕೋತ್ಸವವು ಜಿಲ್ಲಾ ಜಡ್ಜರಾದ ಶ್ರೀ ಎಮ್. ರಾಧಾಕೃಷ್ಣ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವ ರಾಯರು ಸ್ವಾಗತ ಮಾತುಗಳನ್ನಾಡಿದರು, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ರಾಧಾ ಎಚ್. ರಾಯರು ಶಾಲಾ ವರದಿಯನ್ನೋದಿದರು. ಡಾ. ಟಿ. ಎಸ್. ಸುಬ್ರಹ್ಮಣ್ಯಂ, ಅವರು ಬೆಸೆಂಟ್ ಮಾತೆಯ ಸ್ಮಾರಕ ಭಾಷಣಮಾಡಿದರು. ಮಹಿಳೆಯರ ದಿನವು ಶ್ರೀಮತಿ ವತ್ಸಲಾ ತಾಳಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆಟಗಳ ಸ್ಪರ್ಧೆಯು ಶ್ರೀಮತಿ ವಿಮಲಾ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು.

**ವಸಂತ ಪ್ರೇಮಿ ಮಂಡಳದ** ವಾರ್ಷಿಕೋತ್ಸವವು ಶ್ರೀಮತಿ ಲಕ್ಷ್ಮೀ ಆನಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಪಿ. ಶೀಲಾ ಸೆಟ್ಟಿಯವರು ಮಂಡಲದ ವರದಿಯನ್ನೋದಿದರು.

**ಶ್ರೀ ಕೆ. ಕೆ. ಸೆಟ್ಟರು ಮೈಸೂರು ಮೇಲ್ಮನೆಗೆ**— ದ. ಕ. ಜಿಲ್ಲೆಯಿಂದ ಮೈಸೂರು ವಿಧಾನಪರಿಷತ್ತಿನ (ಮೇಲ್ಮನೆಗೆ) ಒಂದು ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟರನ್ನು ಉಮೇದ್ವಾರಿಯಾಗಿ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಆರಿಸಿದ್ದು ಅವರೀಗ ಅವಿರೋಧನಾಗಿ ಆಯ್ಕೆ ಹೊಂದಿರುವರು.

**ಜೀವವಿಮಾ ಕೊರ್ಪೊರೇಶನಿನ ನೌಕರರ ಸಭೆಯು** — ಕಳೆದ ತಾ. 29ರಲ್ಲಿ ಶ್ರೀ ಎ. ಶಂಕರ ಆಳ್ವರ ಸಭಾಧ್ಯಕ್ಷತೆಯಲ್ಲಿ ಜರಗಿ, ಜೀವ ವಿಮಾ ಸಂಸ್ಥೆಗಳ ರಾಷ್ಟ್ರೀಕರಣವನ್ನು ಸ್ವಾಗತಿಸಲಾಯಿತು.

ಆ ಸಭೆಯಲ್ಲಿ ನೌಕರರ ಮೂಲವೇತನವನ್ನು ಕಡಿಮೆಮಾಡಬಾರದೆಂದೂ, ಬೆಳಿಗ್ಗೆ 10ರಿಂದ ಸಂಜೆ 5-15 ಮತ್ತು ಶನಿವಾರ ಬೆಳಿಗ್ಗೆ 10ರಿಂದ ಅಪರಾಹ್ನ 1-30ರ ವರೆಗೆ ಬದಲಾಯಿಸಬೇಕೆಂದೂ, ಎಫಿಶಿಯನ್ಸಿ ಬಾರ್ ಇರಬಾರದೆಂದೂ, ಕೆಳತರಗತಿಯ ಸಿಬ್ಬಂದಿಗಳ ಹಾಗೂ ಇತರ ನೌಕರರ ವೇತನ ಮಟ್ಟ ಮತ್ತು ಇತರ ಸೌಕರ್ಯಗಳ ವಿಚಾರವಾಗಿ ಅಖಿಲಭಾರತ ಜೀವವಿಮಾ ನೌಕರರ ಸಂಸ್ಥೆಯು ಮಂಡಿಸಿದ ಕೇಳಿಕೆಗಳಿಗೆ ಪುಷ್ಟೀಕರಿಸುವ ನಿರ್ಣಯಗಳಾದುವು.

ಅದಲ್ಲದೆ ಮಂಗಳೂರಿನ ಜೀವವಿಮಾ ಕೋರ್ಪೊರೇಶನಿನ ನೌಕರರ ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಯ ಅಧ್ಯಕ್ಷ ಶ್ರೀಗಳಾದ ಎ. ಶಂಕರ ಆಳ್ವ, ಉಪಾಧ್ಯಕ್ಷ ಕೆ. ಪಿ. ಮೃತ್ಯುಂಜಯ, ಕಾರ್ಯದರ್ಶಿ ಕೆ. ಎಸ್. ಹೊಳ್ಳ, ಜತೆಕಾರ್ಯದರ್ಶಿ ಎ ಎಂ. ಪಿರೇರಾ, ಕೋಶಾಧಿಕಾರಿ; ಎಂ. ಎಲ್. ಶೆಟ್ಟಿ, ಮತ್ತು ಎ. ಟಿ. ಸೋನ್ಸ್, ಕೆ. ಮಹಾಬಲ ನಾಯಕ್, ಎ. ಎಸ್. ಬಿ. ಪುರ್ಟಾಡೋ, ಗಜಾನನ್ ರಾವ್, ಶ್ರೀಮತಿ ಎ. ಸೆಟನ್, ಬಿ. ಆರ್. ಚಂದರ್, ಎಂ ನಾರಾಯಣ ರಾವ್, ಜೋನ್ ಡೇಸಾ, ಬದ್ದಪ್ಪ, ಕೆ. ವಿ. ಪೈ, ಎಂ. ಎಲ್. ಶಿಣೈ, ಲಿಂಗಪ್ಪ ಸೆಟ್ಟಿ, ಎ. ಬಂಗೇರಾ ಮತ್ತು ಕುಮಾರಿ ಕ. ಪಿಂಟೋ ರವರನ್ನು ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತು.

## ಬೊಂಬಾಯಿ

ಕಳೆದ ತಾ. 29ರಂದು ರಾತ್ರಿ ಬೇಂಕ್ ಆಫ್ ಜೈಪುರ, ಪೋರ್ಟ್ ಬ್ರಾಂಚ್ ಕನ್ನಡಿಗರ ಯೂನಿಯನ್ನಿನವರು ವಾಡಿಕೆಯಂತೆ ಜರಗಿಸಿದ "ಮಹಾತ್ಮಾ ಶನಿ ಪೂಜೆ"ಯಲ್ಲಿ ಸಾವಿರಾರು ಮಂದಿ ಭಾಗ ವಹಿಸಿದ್ದರು. ಶ್ರೀ ಗಜಾನನ-ಅಖಿಲ ಕರ್ನಾಟಕ ಯಕ್ಷಗಾನ ಮಂಡಳಿಯವರು "ದ್ರೌಪದಿ ಪ್ರತಾಪ"ವೆಂಬ ಬಯಲಾಟವನ್ನು ಪ್ರೇಕ್ಷಣೀಯವಾಗಿ ಆಡಿದರು. ಮುಂಬಯಿ ಕನ್ನಡಿಗರು ಕನ್ನಡದ ಭಾಷಾ ಪ್ರೇಮದಿಂದ ಪರಭಾಷಾ ಪ್ರದೇಶದಲ್ಲಿ ಕೂಡಾ, ತಮ್ಮ ಮಾತೃಭಾಷೆಯನ್ನು ಮರೆಯದೆ ಜನರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಈ ಮಾದರಿಯಲ್ಲಿ ಜನರನ್ನು ಒಟ್ಟುಗೂಡಿಸುವ ಸುಲಭೋಪಾಯವೆಂದು ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಶ್ರೀ ಬಿ. ಬಿ. ಸೆಟ್ಟರು ತಿಳಿಸಿದರು.

## ಬೆಂಗಳೂರು

**ನವ ಮೈಸೂರು ನಾಯಕರ ಚುನಾವಣೆ**— ನವ ಮೈಸೂರು ರಾಜ್ಯದ ನಾಯಕರನ್ನು ಚುನಾಯಿಸಲು, ರಾಜ್ಯದ ಕಾಂಗ್ರೆಸ್ ಲೆಜಿಸ್ಲೇಟರ್ ಪಾರ್ಟಿಯ ಸಭೆಯು ಇದೇ ತಾ. 21ರಲ್ಲಿ ಬೆಂಗಳೂರಲ್ಲಿ ಸೇರಲಿರುವುದು. ಹೊಸ ರಾಜ್ಯದಲ್ಲಿ ಪಾರ್ಟಿಯ ಸದಸ್ಯರ ಸಂಖ್ಯೆಯು 178—ಪ್ರಸ್ತುತದ ಮೈಸೂರು 81, ಕೊಡಗು, 18, ಹೈದರಾಬಾದ್ 32, ಮುಂಬಯಿ ಕರ್ನಾಟಕ 39 ಮತ್ತು ಮದ್ರಾಸು 10 ಆಗಿದೆ,

**ಮೈಸೂರು ಮುಖ್ಯ ಮಂತ್ರಿಗಳ ಪತ್ರಿಕಾ ಪ್ರಕಟಣೆ**— ನವ ಮೈಸೂರು ರಾಜ್ಯದಲ್ಲಿ ಹಿರಿಯ ಅಧಿಕಾರಿಗಳ ಆಯ್ಕೆಯ ಕುರಿತು ಬೊಂಬಾಯಿ ಕರ್ನಾಟಕದ ಧುರೀಣರು ಕೊಟ್ಟ ಹೇಳಿಕೆಯು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಬಗ್ಗೆ ಮೈಸೂರು ಮುಖ್ಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಪತ್ರಿಕಾ ಪ್ರಕಟಣೆಯೊಂದನ್ನಿತ್ತು ಪತ್ರಿಕೆಗಳಲ್ಲಿ ಪ್ರಕಟವಾದ ಹೇಳಿಕೆಗಳು ನಿರಾಧಾರವೆಂದಿರುವರು. ಮೈಸೂರು, ಬೊಂಬಾಯಿ, ಹೈದರಾಬಾದ್, ಮದ್ರಾಸ್ ಮತ್ತು ಕೊಡಗು ರಾಜ್ಯಗಳ ಮಂತ್ರಿಮಟ್ಟದ ಸಭೆಯು ಜರಗಿ ಯಥಾರ್ಥ ರೀತಿಯಲ್ಲಿ ಯಾವ ರಾಜ್ಯಕ್ಕೂ ಭೇದವೆಣಿಸದೆ ಹಿರಿಯ ಅಧಿಕಾರಿಗಳ ಆಯ್ಕೆ ಮಾಡಿರುವುದು. ನವ ಮೈಸೂರಿನ ಸೆಕ್ರೆಟೇರಿಯಟ್‌ನಲ್ಲಿಯ ಎಂಟು ಕಾರ್ಯದರ್ಶಿಗಳಲ್ಲಿ ಬೊಂಬಾಯಿಯವರು 3, ಮೈಸೂರವರು 4, ಹೈದರಾಬಾದಿನವರು ಒಬ್ಬರು ಇರುವರು. ಚೀಫ್ ಸೆಕ್ರೆಟರಿ, ಆರ್ಥಿಕ ಕಾರ್ಯದರ್ಶಿ, ಪೋಲೀಸ್ ಐ. ಜಿ. ಹುದ್ದೆಗಳು ಮೈಸೂರೇತರರಿಗೆ ಹೋಗಿರುವುವು.

### ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

• ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
ನವಯುಗ ಪ್ರೆಸ್, ಉಡುಪಿ.

# ಸಂಘಟನೆಗೆ ಕರೆ

## ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಕರ ಮತ್ತು ಕೃಷಿಕರ ಸಂಘ

1955ನೆಯ ಜನವರಿ ತಿಂಗಳಲ್ಲಿ ಮಂಗಳೂರಲ್ಲಿ "ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಕರ ಮತ್ತು ಕೃಷಿಕರ ಸಂಘ"ದ ಜನನವಾಯಿತು. ಈ ಸಂಘದ ಉದಯಕ್ಕೆ ಆ ಸಂದರ್ಭದ ಮುಖ್ಯ ಹೇತುಗಳು ಇವು: (1) ಮದ್ರಾಸು ಸರಕಾರವು ಕೈಕೊಳ್ಳಲಿದ್ದ ಭೂಸುಧಾರಣೆ ಹಾಗೂ ಒಕ್ಕಲು ಹಿತ ಮಸೂದೆ, ಮತ್ತು (2) ನಮ್ಮ ಜಿಲ್ಲೆಯ ಯಂ. ಎಲ್. ಎ. ಮತ್ತು ಎಮ್. ಎಲ್. ಸಿ. ಗಳಲ್ಲಿ ಕೆಲವರು, ದಕ್ಷಿಣ ಕನ್ನಡ ಜಿಲ್ಲೆಯ ವರ್ಗದಾರರ ಹಾಗೂ ಕೃಷಿಕರ ನ್ಯಾಯವಾದ ಹಿತಸಾಧನೆಗಳ ಕಡೆಗೆ ಅಲಕ್ಷ್ಯ ಅಥವಾ ಒಂದು ರೀತಿಯ ವಿರೋಧವನ್ನೇ ತೋರಿದುದು.

ಭೂಮಾಲಕರ ಮತ್ತು ಕೃಷಿಕರ ಹಿತವನ್ನು ಸಾಧಿಸುವುದು; ವರ್ಗದಾರರು ಮತ್ತು ಒಕ್ಕಲುಗಳೊಳಗಿನ ಸಂಬಂಧವನ್ನು ಸುಗಮಗೊಳಿಸುವುದು; ಆಹಾರದ ಅಧಿಕ ಉತ್ಪಾದನೆಗೆ ಪ್ರೋತ್ಸಾಹ ಕೊಡುವುದು; ಮತ್ತು ಕೃಷಿಯ ಉತ್ಪನ್ನಗಳಿಗೆ ಯೋಗ್ಯ ಮಾರ್ಕೆಟ್ ಹಾಗೂ ಸಾಗಾಟದ ಅನುಕೂಲತೆಗಳನ್ನು ಲಭ್ಯವಾಗುವಂತೆ ಮಾಡುವುದೇ ಈ ಸಂಘದ ಸಾಮಾನ್ಯ ಉದ್ದೇಶಗಳಾಗಿವೆ. ಈ ಅಲ್ಪ ಕಾಲದಲ್ಲೇ ಸಂಘವು ತಕ್ಕಮಟ್ಟಿಗೆ ಪ್ರಕೃತದ ಗುರಿಯನ್ನು ಸಾಧಿಸಿದೆ ಎನ್ನಬಹುದು. ಆದರೆ ಮಾಡುವ ಕೆಲಸ ಇನ್ನೂ ತುಂಬಾ ಇದೆ. ಆದುದರಿಂದ ಸಂಘವು ಜಿಲ್ಲೆಯ ಪ್ರತಿಯೊಬ್ಬ ವರ್ಗದಾರ ಮತ್ತು ಕೃಷಿಕನ ಸಹಾಯ, ಸಹಕಾರ ಹಾಗೂ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದೆ.

ಸಂಘವು ತನ್ನ ಚಟುವಟಿಕೆಯನ್ನು ಆರಂಭಿಸಿದ ಈ ಅಲ್ಪಾವಧಿಯಲ್ಲೇ ಹಲವು ಸಭೆಗಳನ್ನು ಮಂಗಳೂರಲ್ಲಿ ಜರಗಿಸಿ, ಕೃಷಿಗೆ ಸಂಬಂಧಿಸಿದ ಹಲವು ವಿಷಯಗಳನ್ನೂ, ಮದ್ರಾಸು ಸರಕಾರವು ಮುಂತರಲಿದ್ದ ಭೂಮಾಲಕ ಮತ್ತು ಒಕ್ಕಲುಗಳಿಗೆ ಸಂಬಂಧಿಸಿದ ಮಸೂದೆಯ ಕರಡನ್ನೂ ಚರ್ಚಿಸಿತ್ತು. ಈ ಸಭೆಗಳಲ್ಲಿ ಕೂಲಂಕಷ ವಿಚಾರ ಮಾಡಿದ ಬಳಿಕ ಭೂಸುಧಾರಣೆ, ಒಕ್ಕಲು ಮಸೂದೆ ಇತ್ಯಾದಿಗಳ ಕುರಿತು ನಿಷ್ಕರ್ಷಿತ ಅಭಿಪ್ರಾಯಗಳನ್ನು ಠರಾವಿನ ಮೂಲಕವೂ, ಪತ್ರ ಮತ್ತು ತಂತಿಯ ಮೂಲಕವೂ ಸರಕಾರಕ್ಕೆ ಆಗಿಂದಾಗ ತಿಳಿಸಲಾಗಿತ್ತು. ಮದ್ರಾಸಿನ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಸಂದರ್ಶನವಿತ್ತಾಗ, ಧನಿ ಹಾಗೂ ಒಕ್ಕಲುಗಳ ಸಂಬಂಧವನ್ನು ಸುಗಮಗೊಳಿಸುವ ದೃಷ್ಟಿಯಿಂದ ಹಲವು ಸೂಚನೆಗಳನ್ನು ಮನವಿಗಳ ಮೂಲಕ ಒಪ್ಪಿಸಲಾಯಿತು. ಇಂತಹ ಮನವಿಗಳನ್ನು ಮಾನ್ಯ ಮುಖ್ಯಮಂತ್ರಿ ಶ್ರೀ. ಕಾಮರಾಜ ನಾಡಾರ್, ಕಂದಾಯಮಂತ್ರಿ ಶ್ರೀ. ಮಾಣಿಕ್ಯವೇಲು ನಾಯಕರ್, ಮತ್ತು ಹಣಕಾಸಿನ ಮಂತ್ರಿ ಶ್ರೀ. ಸುಬ್ರಹ್ಮಣ್ಯಮ್ ಇವರುಗಳಿಗೆ ಒಪ್ಪಿಸಲಾಗಿತ್ತು. ಈ ಮನವಿಗಳನ್ನು ಒಪ್ಪಿಸುವ ವೇಳೆ ಮಂಗಳೂರಲ್ಲಿ ಭೂಮಾಲಕ ಮತ್ತು ಕೃಷಿಕರ ದೊಡ್ಡ ಪರಿಷತ್ತುಗಳನ್ನೇ ಕರೆಯಲಾಗಿತ್ತು. ಅಂಕೆ ಸಂಖ್ಯೆಗಳ ಆಧಾರದಿಂದ ದಕ್ಷಿಣ ಕನ್ನಡದಲ್ಲಿರುವ ಪಟ್ಟಾದಾರರ ಬಹು ಅಂಶ ಮಂದಿ ಚಿಕ್ಕ ಹಿಡುವಳಿದಾರರೆಂದೂ, ಆದುದರಿಂದ ದೊಡ್ಡ ಬದಲಾವಣೆಗಳನ್ನು ಮಾಡುವ ಆವಶ್ಯಕತೆ ಇಲ್ಲವೆಂದೂ ಸ್ಪಷ್ಟಪಡಿಸಲಾಗಿತ್ತು. ಅಲ್ಲದೆ ಈ ಜಿಲ್ಲೆಯಲ್ಲಿ ಬಹುಸಂಖ್ಯೆಯಿಂದ ಒಕ್ಕಲೆಬ್ಬಿಸಲಾಗುತ್ತಿದೆ ಎಂಬ ಕೂಗು ಕೇವಲ ಕೆಲವು ಮಂದಿ ಬೇಜವಾಬ್ದಾರಿ ವ್ಯಕ್ತಿಗಳದ್ದಾಗಿದ್ದು, ಅವು ಕೇವಲ ನಿರಾಧಾರವಾದದ್ದೂ, ಬರೇ ಪ್ರಚಾರಾತ್ಮಕವಾದವುಗಳೆಂಬುದನ್ನೂ ಮನವರಿಕೆ ಮಾಡಿಕೊಡಲಾಗಿತ್ತು. ಪಟ್ಟಾದಾರನಿಗೆ ಸ್ವಂತ ಬೇಸಾಯಕ್ಕಾಗಿ ಆವಶ್ಯಕ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕು ಹೊರತು, ನ್ಯಾಯವಾದ ಗೇಣಿಯನ್ನು ಕಾಲಕಾಲಕ್ಕೆ ಸಲ್ಲಿಸುತ್ತಿದ್ದು, ಭೂಮಿಯನ್ನು ಅಗೌರವಗೊಳಿಸದಿದ್ದಲ್ಲಿ, ಒಕ್ಕಲಿಗೆ ಶಾಶ್ವತ ಹಿಡುವಳಿಯ ಹಕ್ಕನ್ನು ಕೊಡಲು ಆಕ್ಷೇಪವಿಲ್ಲ ಎಂಬ ತನ್ನ ಅಭಿಮತವನ್ನೂ ಸಂಘವು ವ್ಯಕ್ತಪಡಿಸಿತ್ತು. ಧನಿಗೆ ನ್ಯಾಯಸಮ್ಮತವಾಗಿ ಸ್ವಂತ ಬೇಸಾಯಕ್ಕೆ ಭೂಮಿ ಅವಶ್ಯಕ ಬಿದ್ದಲ್ಲಿ ಒಕ್ಕಲಿನಿಂದ ಅದನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಭಂಗಬರಬಾರದೆಂದು ಸಂಘವು ಪ್ರತಿಪಾದಿಸಿತ್ತು.

ಸರಕಾರವು "ಮದ್ರಾಸು ಬೇಸಾಯದ ಒಕ್ಕಲುಗಳ (1956ನೆಯ ವರ್ಷದ ಮಿತಗೇಣಿ ನಿರ್ಣಯ) ಮಸೂದೆ" ಎಂಬ ಹೆಸರಿನ ಮಸೂದೆಯೊಂದನ್ನು ಸಿದ್ಧಪಡಿಸಿತು. ಈ ಮಸೂದೆಯ ಕುರಿತು ಮಂತ್ರಿ ಮಂಡಲದ ಉಪಸಮಿತಿಯ ಮುಂದೆ ಈ ಸಂಘವು ತನ್ನ ಅಭಿಮತವನ್ನೀಯಲು ಪ್ರತಿನಿಧಿಗಳನ್ನು ಮದ್ರಾಸಿಗೆ ಕಳುಹಿಸಿತ್ತು. ಅನಂತರ, ಜಂಟಿ ಸಮಿತಿಯ ಮುಂದೆ ಸಾಕ್ಷಿ ಕೊಡಲು ಸಂಘವು ಪುನಃ ತನ್ನ ಪ್ರತಿನಿಧಿಗಳನ್ನು ಮದ್ರಾಸಿಗೆ ಕಳುಹಿಸಿತ್ತು. ಮಾತ್ರವಲ್ಲದೆ, ಮದ್ರಾಸು ವಿಧಾಯಕಾಂಗದ ಎರಡೂ ಸಭೆಗಳ ಸದಸ್ಯರೆಲ್ಲರಿಗೂ, ಜಂಟಿ ಸಮಿತಿಯ ಎಲ್ಲಾ ಸದಸ್ಯರಿಗೂ, ಮಿತಗೇಣಿ ಮಸೂದೆಗೆ ತಿದ್ದುಪಡಿಗಳನ್ನು ಸೂಚಿಸಿ ಮನವಿಗಳನ್ನು ಕಳುಹಿಸಿತ್ತು. "ಮಿತಗೇಣಿ" ನಿಷ್ಕರ್ಷೆಯ ಪ್ರಶ್ನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಗಿತ್ತು. ಉತ್ಪತ್ತಿಯ ಸೇಕಡ 50ರಷ್ಟಾದರೂ ವರ್ಗದಾರನಿಗೆ ಸಲ್ಲಬೇಕಾದುದು ನಿಜವಾದ ನ್ಯಾಯಸಮ್ಮತ ಮಿತಗೇಣಿ ಎಂದೆನಿಸುವುದೆಂದು ವಾದಿಸಲಾಗಿತ್ತು.

ನಮ್ಮ ಮನವಿಗಳು, ಪ್ರಾಂತದ ಇತರ ಜಿಲ್ಲೆಗಳ ಹಲವಾರು ಭೂಮಾಲಕರ ಸಂಘಗಳ ಮನವಿಗಳೊಂದಿಗೆ ಜೊತೆಗೂಡಿ ಸರಕಾರದ ಮೇಲೆ ಪ್ರಭಾವವನ್ನುಂಟು ಮಾಡಲು ಸಮರ್ಥವಾದುವು. ಜಂಟಿ ಸಮಿತಿಯ ಪರಿಶೀಲನೆಯ ಬಳಿಕ ಈ ಮಸೂದೆ ಮದ್ರಾಸು ವಿಧಾಯಕ ಸಭೆಗಳಲ್ಲಿ ಈಗತಾನೇ ಮಂಜೂರಾಗಿ ಕಾನೂನಾಗಿ ಕಾರ್ಯಾಚರಣೆಗೆ ಬರುವುದಿದೆ. ಈ ಮಸೂದೆಯಂತೆ ಒಟ್ಟು ಉತ್ಪತ್ತಿಯಲ್ಲಿ ಭೂಮಾಲಕನ ಪಾಲು ಈ ರೀತಿ ಇದೆ: ನಂಜ ಭೂಮಿಯಲ್ಲಿ ಸೇ. 40, ಏತದಿಂದ ನೀರೆತ್ತಬೇಕಾದ ಗದ್ದೆಗಳಲ್ಲಿ ಸೇ. 35. ತೋಟ ಮತ್ತು ಪುಂಜ ಭೂಮಿಯಲ್ಲಿ ಸೇ. 33 1/3. ಮಾತ್ರವಲ್ಲದೆ ಪ್ರತಿ ಬೆಳೆಯ ಬಣಹುಲ್ಲಿನಲ್ಲಿಯೂ 1/5 ಅಂಶ ಧನಿಗೆ ಸಿಗತಕ್ಕದ್ದು. ಈ ಮಸೂದೆಯು 6 1/2 ಎಕ್ರೆಗಿಂತ ಕಡಿಮೆ ಬೇಸಾಯ ಮಾಡುವ ಒಕ್ಕಲಿಗೆ ಮಾತ್ರ ಅನ್ವಯವಾಗತಕ್ಕದ್ದು. ಮದ್ರಾಸು ಸರಕಾರಕ್ಕೆ ಮತ್ತು ಯೋಜನಾ ಸಮಿತಿಗೆ ಸಂಘವು ಮಾಡಿಕೊಂಡ ಮನವಿಗಳ ಪರಿಣಾಮವಾಗಿ ಪಟ್ಟಾದಾರರಿಗೆ ಇಷ್ಟಾದರೂ ಕಿಂಚಿತ್ ರಿಯಾಯಿತಿಗಳಿಗೆ ಕಾರಣವಾಯಿತೆನ್ನಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ವರ್ಗದಾರರ ಕುಮ್ಕಿ ಹಕ್ಕಿನ ವಿಚಾರದಲ್ಲಿ ಇತ್ತೀಚೆಗೆ ತಲೆದೋರುತ್ತಿರುವ ಆತಂಕದ ವಿಚಾರವನ್ನೂ ಈ ಸಂಘವು ಎತ್ತಿಕೊಂಡು, ಆ ಕುರಿತು ರೆವಿನ್ಯೂ ಬೋರ್ಡಿಗೂ, ಜಿಲ್ಲಾ ಕಲೆಕ್ಟರರಿಗೂ ತನ್ನ ಆಕ್ಷೇಪಗಳನ್ನು ಕಳುಹಿಸಿದೆ.

ಈ ಜಿಲ್ಲೆಯ ಪಟ್ಟಾದಾರರು ಬರೇ ಮೂಕವರ್ಗದವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅವರು ಸರಕಾರವನ್ನು ಕಣ್ಣುಮುಚ್ಚಿ ಸಮರ್ಥಿಸುತ್ತಿದ್ದರು. ಆದುದರಿಂದ ಸರಕಾರವೂ ನ್ಯಾಯೋಚಿತವಾದುದನ್ನು ಅವರಿಗಾಗಿ ಮಾಡುವುದೆಂಬ ಭರವಸೆ ಅವರಲ್ಲಿತ್ತು. ಆದರೆ ದಿನ ಹೋದಂತೆ ಈ ಭರವಸೆ ಕೇವಲ ಭ್ರಮೆಯಾಗುತ್ತಿದೆ. ಮಿತಗೇಣಿಯ ಸೋಗಿನಲ್ಲಿ ಸರಿಯಾದ ಪಾಲನ್ನೂ, ಯೋಗ್ಯ ಪರಿಹಾರವನ್ನೂ ಕೊಡದೆ, ಮಾಲಕತನವನ್ನು ಕಿತ್ತೊಗೆಯುವ ಶಾಸನಗಳು ಬರುತ್ತಿವೆ. ಆದುದರಿಂದ ಪಟ್ಟಾದಾರರು ಒಂದಾಗಿ ಒಕ್ಕೊರಲಿನಿಂದ ಮಾತನಾಡದಿದ್ದರೆ, ವಿಧಾಯಕ ಸಭೆಯ ನಮ್ಮ ಕೆಲ ಪ್ರತಿನಿಧಿಗಳೂ, ತನ್ಮೂಲಕ ನಮ್ಮ ಸರಕಾರವೂ ಪಟ್ಟಾದಾರರ ಹಿತಾಸಕ್ತಿಗಳನ್ನು ಇನ್ನೂ ಬಲಿಗೊಡುವ ಸಂಭವವಿದೆ.

ಆದುದರಿಂದ ಸಂಘವನ್ನು ಸರ್ವಶಕ್ತಗೊಳಿಸಿ ನಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ಸಂಘಟಿತವಾಗಿ ಕಾರ್ಯೋನ್ಮುಖನಾಗುವ ಆವಶ್ಯಕತೆಯಿದೆ. ಸರಕಾರವೂ, ಅಧಿಕಾರಾರೂಢ ಪಕ್ಷವೂ ಕಿವಿಗೊಡುವಂತೆ ಏಕಕಂಠದಿಂದ ನಾವು ಮಾತನಾಡಬೇಕಾಗಿದೆ. ಪಟ್ಟಾದಾರರೆಲ್ಲರೂ ಸಂಘಟಿತರಾಗಿ ಅಲ್ಲಲ್ಲಿ ಈ ಸಂಘದ ಶಾಖೆಗಳನ್ನು ತೆರೆದು ಮೂಲ ಸಂಸ್ಥೆಯನ್ನು ಭದ್ರಗೊಳಿಸಲು ಕೂಡಲೆ ಕಾರ್ಯಪ್ರವೃತ್ತರಾಗದಿದ್ದರೆ, ಅವರ ಹಿತಗಳನ್ನು ರಕ್ಷಿಸಲು ಆಸ್ಪದ ಬರಲಾರದು. ಸರಕಾರಕ್ಕೂ, ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಉಮೇದ್ವಾರರಿಗೂ, ಭೂಮಾಲಕರು ತಮ್ಮ ನಿಲುವನ್ನು ಸ್ಪಷ್ಟಪಡಿಸುವುದು ಅಗತ್ಯಬಿದ್ದಿದೆ.

ದಕ್ಷಿಣ ಕನ್ನಡ ಜಿಲ್ಲಾ ಭೂಮಾಲಕರ ಮತ್ತು ಕೃಷಿಕರ ಸಂಘವನ್ನು ರಿಜಿಸ್ಟರ್ಡ್ ಸಂಘವಾಗಿ ಮಾರ್ಪಡಿಸಿ ಜಿಲ್ಲೆಯಾದ್ಯಂತ ಅದರ ಶಾಖೆಗಳನ್ನು ಸಂಘಟಿಸುವ ಸೂಚನೆಯಿದೆ. ಈ ಸೂಚನೆಯನ್ನು ಕೂಡಲೇ ಕಾರ್ಯಾಚರಣೆಗೊಳಿಸುವ ಅವಸರವೂ ಇದೆ. ಈ ವಿಚಾರಗಳಲ್ಲಿ ಕುತೂಹಲಿಗಳಾಗಿದ್ದು ಭಾಗವಹಿಸಲಿಚ್ಛಿಸುವವರು ಸಂಘದ ಕಾರ್ಯದರ್ಶಿ ಶ್ರೀ ಯಚ್. ಪಾಸಣ್ಣ ಆಳ್ವ, ಬಿ. ಎ., ಬಿ. ಯಲ್., ವಕೀಲ್, ಮಂಗಳೂರು, ಇವರಿಂದ ಮಾಹಿತಿ ಪಡೆಯಬಹುದು. ಸಂಘವನ್ನು ಕಾರ್ಯಪ್ರವೃತ್ತಗೊಳಿಸಲು ಹಾಗೂ ಉದ್ದೇಶಿಸಿದ ಗುರಿಸಾಧಿಸಲು ನಿಧಿಯ ಆವಶ್ಯಕತೆಯೂ ಇದೆ. ಭೂಮಾಲಕರು ಮತ್ತು ಕೃಷಿಕರು ತಮ್ಮ ವಂತಿಗೆಗಳನ್ನು ಸಂಘದ ಖಜಾಂಚಿ ಶ್ರೀ ಪಿ. ಜಯರಾಮ ಶೆಟ್ಟಿ, ಯಮ್. ಎ., ಬಿ. ಯಲ್., ಅತ್ತಾವರ, ಮಂಗಳೂರು ಇವರಿಗೆ ಕಳುಹಿಸಿಕೊಡಬೇಕಾಗಿ ಈ ಮೂಲಕ ವಿನಂತಿಸಲಾಗಿದೆ.

## ಮಹಾತ್ಮರ ದೃಷ್ಟಿಯಲ್ಲಿ ಸ್ತ್ರೀಯರು

"ಸ್ತ್ರೀಯರನ್ನು ಅಬಲೆಯರೆಂದು ಕರೆಯುವದು ಮಹಾಪಾಪ ಇದು ಗಂಡಸು ಹೊರಿಸಿರುವ ಅನ್ಯಾಯ ಪಾಶವೀ ಬಲವೇ ಶಕ್ತಿ ಎನ್ನುವದಾದರೆ ಹೆಂಗಸು ಗಂಡಸಿಗಿಂತ ಅಶಕ್ತಳು ನಿಜ. ನೈತಿಕ ಬಲವೇ ಶಕ್ತಿ ಎಂದರೆ ಹೆಂಗಸು ಗಂಡಸಿಗಿಂತ ಸಾವಿರ ಪಾಲು ಮೇಲು."

"ಸ್ತ್ರೀಯರು ನಿರ್ಭೀತರಾಗಿರಬೇಕು. ತನ್ನ ಪರಿಶುದ್ಧತೆಯೇ ಉತ್ತಮ ರಕ್ಷಣೆ ಎಂದು ಅರಿತ ನಿರ್ಭಾಗ್ಯಳಾದ ಸ್ತ್ರೀಗೆ ಎಂದೂ ಅಗೌರವ ಆಗುವದಿಲ್ಲ. ಮನುಷ್ಯ ಎಷ್ಟೇ ದುಷ್ಟ ಮೃಗನಾಗಿರಲಿ ಆಕೆಯ ಕಣ್ಣು ಕೋರೈಸುವ ಪರಿಶುದ್ಧ ಸ್ವಾಧೀತ್ವ ಜ್ವಾಲೆಯ ಎದುರು ನಾಯಿಯಂತೆ ಬಾಲ ಮುದುರಿಕೊಳ್ಳುತ್ತಾನೆ ಈ ಆಧುನಿಕ ಯುಗದಲ್ಲಿ ಸಹ ಆ ರೀತಿ ಮಾನರಕ್ಷಣೆ ಮಾಡಿಕೊಂಡ ಸ್ತ್ರೀರತ್ನಗಳ ನಿದರ್ಶನಗಳಿವೆ."

"ಗಂಡಸು ಸ್ತ್ರೀಯ ಮಾನರಕ್ಷಣೆ ಮಾಡಿದ ಪ್ರಸಂಗ ನಾನೆಲ್ಲಿಯೂ ನೋಡಿಲ್ಲ. ಅವನಿಗೆ ಸಾಧ್ಯವಿದ್ದರೂ ಮಾಡಲಾರ. ಸೀತೆಯ ಮಾನವನ್ನು ಶ್ರೀರಾಮ ಕಾಯಲಿಲ್ಲ. ದ್ರೌಪದಿಯ ಮಾನ ಐದು ಜನ ಪಾಂಡವರೂ ಕಾಯಲಿಲ್ಲ. ಈ ಇಬ್ಬರು ಸ್ತ್ರೀರತ್ನಗಳಿಗೂ ಅವರ ನಿರ್ಮಲ ಚಾರಿತ್ರ್ಯ ಶಕ್ತಿಯೊಂದೇ ಅವರ ಮಾನ ಕಾಯಿತು. ಸ್ವಸಮ್ಮತಿ ಇಲ್ಲದೆ ತಮ್ಮ ಮಾನ ಮತ್ತು ಆತ್ಮಗೌರವ ಯಾರೂ ಕಳೆದುಕೊಳ್ಳಲು ಸಾಧ್ಯವಿಲ್ಲ."

"ಸ್ತ್ರೀ ಅಹಿಂಸೆಯ ಅವತಾರ. ಅಹಿಂಸೆ ಎಂದರೆ ಅಪಾರ ಪ್ರೇಮ. ಅಂದರೆ ಮಿತಿಯಿಲ್ಲದ ಕಷ್ಟ, ಸಹನ ಶಕ್ತಿ, ಮಾನವ ಮಾತೆಯಾದ ಸ್ತ್ರೀಯಲ್ಲಲ್ಲದೆ ಈ ಅಪಾರ ಶಕ್ತಿ ಯಾರಲ್ಲಿ ಬರಬಹುದು. ಮಗುವನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡು, ಒಂಬತ್ತು ತಿಂಗಳು ಪೋಷಿಸಿ ಆ ಕಷ್ಟದಲ್ಲೇ ಸುಖಪಡೆಯುವದರಲ್ಲಿ ತನ್ನ ಸಹನ ಶಕ್ತಿ ವ್ಯಕ್ತಪಡಿಸುತ್ತಾರೆ. ಜನನ ಕಾಲದ ಯಾತನೆಯನ್ನು ಮೀರಿಸುವ ಯಾತನೆ ಯಾವುದಿದೆ. ಆದರೆ ಸೃಷ್ಟಿಕಾರ್ಯದ ಆನಂದದ ಭರದಲ್ಲಿ ಅವೆಲ್ಲವನ್ನೂ ಮರೆಯುತ್ತಾಳೆ."

"ತನ್ನನ್ನು ನಂಬಬೇಕೆಂದು ಹೆಂಗಸರನ್ನು ಗಂಡಸರು ಬಲಾತ್ಕರಿಸುವಂತೆ ಗಂಡಸರು ನಿಜವಾಗಿ ಗಂಡಸಾಗಿರಬೇಕಾದರೆ ಹೆಂಗಸರನ್ನು ನಂಬಬೇಕು. ಒಂದು ಪಾರ್ಶ್ವಪೂರ್ಣ ಅಥವಾ ಅರ್ಧಮರ್ಧವಾಯು ಗ್ರಸ್ತವಾಗಿ ಬದುಕುವದು ಬೇಡ

ಸಂಗ್ರಾಹಕ: ಗೋ. ರಾ. ವೆಂಕಟೇಶರ,
ತದಡಿ.


## ಹಿಂದೂ ಉತ್ತರಾಧಿಕಾರ ಶಾಸನ

| | |
|---|---|
| 1, ಕನ್ನಡ ಪ್ರತಿ | 0–12–0 |
| 2, ,, | 0–8–0 |
| 3, ಇಂಗ್ಲಿಷ್ | 0–6–0 |

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ಸುಶಿಕ್ಷಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 20—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
*Head Office:* Tenkapet, **Udipi**, S. K. *Phone:* 66

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

# ಶ್ರದ್ಧಾಂಜಲಿ

## ದಿ| ಕವಿಭೂಷಣ ವೆಂಕಪ್ಪ ಶೆಟ್ಟರು

ಶ್ರೀ ಶ್ರೀ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ನಿಧನದಿಂದ ಕರ್ನಾಟಕದ ಯಕ್ಷಗಾನ ಕಲಾಕ್ಷೇತ್ರವು ತುಂಬಲಾರದ ಅತೀವ ನಷ್ಟಕ್ಕೆ ಗುರಿಯಾಗಿದೆ. ಅವರಂತಹ ಸಾಹಿತ್ಯ ಶಾಸ್ತ್ರಾರ್ಥ ಕೋವಿದರು, ರಸಪೂರ್ಣ ವಾಗ್ವೈಖರಿಯ ವಿದ್ವಾಂಸರು, ಯಕ್ಷಗಾನ ಕಲೆಯ ಸರ್ವಾಂಗಗಳಲ್ಲಿಯೂ ನುರಿತ ಕಲಾವಿದರು, ಸಾಹಿತ್ಯ ಸರಸ್ವತಿಯ ಸಹೃದಯವರ ಪುತ್ರರು ನಮ್ಮಲ್ಲಿ ಇನ್ನು ತೀರಾ ಅಪರೂಪರಾಗಿದ್ದಾರೆ. ಯಕ್ಷಗಾನ ಕಲಾ ಸೇವೆಯನ್ನೇ ತನ್ನ ಪೂರ್ಣ ಜೀವನದ ಧರ್ಮವಾಗಿ, ಅದರ ಸಾಧನೆಯೇ ನಿತ್ಯ ತಪಸ್ಸಾಗಿ, ಅದರಿಂದ ಸಕಲ ಸಿದ್ಧಿಯನ್ನು ಪಡೆದ ಯಕ್ಷಗಾನ ರಸಋಷಿಯಾಗಿ, ಅಖಿಲ ಕರ್ನಾಟಕದಲ್ಲಿ ಖ್ಯಾತನಾಮರಾಗಿ-ಇಂತು ಸರ್ವ ವಿಧದಿಂದಲೂ ತುಂಬುಬಾಳುವೆಬಾಳಿ, ತಾನು ಬಾಳಿದ ನಾಡುನುಡಿಗಳಿಗೆ ಕೀರ್ತಿಯನ್ನು ತಂದು ಅಸ್ತಂಗತರಾದ ಶ್ರೀ ಶ್ರೀ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ ಪವಿತ್ರ ಸ್ಮೃತಿಗೆ ಇದು ನನ್ನ ಶ್ರದ್ಧಾಂಜಲಿಯು!

—ಕಯ್ಯಾರ ಕಿಞ್ಞಣ್ಣ ರೈ.

ದಕ್ಷಿಣ ಕನ್ನಡದ ಯಕ್ಷಗಾನ ಕಲಾಪ್ರಪಂಚಕ್ಕೆ ಭೀಷ್ಮನಂತಿದ್ದ ಶ್ರೀ ಕವಿಭೂಷಣ ವೆಂಕಪ್ಪ ಶೆಟ್ಟರ ನಿಧನವು ಯಕ್ಷಗಾನಕ್ಕೆ ತುಂಬಲಾಗದ ಹಾನಿಯಾಗಿದೆ. ಅವರ ಗೆಳೆಯರು, ಶಿಷ್ಯರು, ಬಂಧುಗಳು ಮರೆಯಲಾರದ ದುಃಖಕ್ಕೆ ಒಳಗಾದರು.

ಸುಮಾರು 74 ವರ್ಷ ವಯಸ್ಸಿನ ಶ್ರೀ ಶೆಟ್ಟರು ಕರ್ನಾಟಕದ ಹಲವು ಕಡೆಗಳಲ್ಲಿ ಯಕ್ಷಗಾನದ ಮೂಲಕ ತನ್ನ ಅದ್ವಿತೀಯ ವಿದ್ವತ್ತನ್ನು ಪ್ರದರ್ಶಿಸಿದ್ದಾರೆ. ಭೀಷ್ಮ ಪರ್ವದಲ್ಲಿ ಭೀಷ್ಮನಾಗಿ, ವಾಲಿಸಂಹಾರದಲ್ಲಿ ವಾಲಿಯಾಗಿ, ಕೃಷ್ಣ ಸಂಧಾನದಲ್ಲಿ ಕೌರವನಾಗಿ, ರಾಜಸೂಯದಲ್ಲಿ ಮಾಗಧನಾಗಿ, ಗದಾಪರ್ವದಲ್ಲಿ ಭೀಮನಾಗಿ ಪಾತ್ರವನ್ನು ವಹಿಸಿ ತನ್ನ ಅಘೋಘವಾದ ಅನುಭವವನ್ನು ಗೌರವವೂ ಗಂಭೀರವೂ ಆದ ಶೈಲಿಯಿಂದ ಮಾಡಿದ್ದಾರೆ; ಕೃಷ್ಣನಾಗಿ, ಕರ್ಣನಾಗಿ, ಅರ್ಜುನನಾಗಿ, ರಾವಣನಾಗಿ, ರಾಮನಾಗಿ, ಶುಕ್ರಾಚಾರ್ಯನಾಗಿ, ಭರತೇಶನಾಗಿ, ಯಶೋಧರನಾಗಿ ತನ್ನ ವಾಗ್ವೈಭವನ್ನು ಹರಿಯಿಸಿದ್ದಾರೆ. ಆಯಾ ಪಾತ್ರದ ಗುಣ, ಸ್ವಭಾವ, ಸ್ಥಿತಿ, ಗತಿಗಳೊಂದಿಗೆ ತಾನೇ ಸೇರಿ ತನ್ಮಯನಾಗಿ ಮಾತಾಡುತ್ತಿದ್ದರು. ಶ್ರೀ ಎನ್. ಎಸ್. ಕಿಲ್ಲೆಯವರು ನಿಧನರಾದಾಗ ಒಬ್ಬ ಕರ್ಣನನ್ನು ಕಳಕೊಂಡ ನಾವು, ಶ್ರೀ ಶೆಟ್ಟರ ನಿಧನದಿಂದ ಒಬ್ಬ ಭೀಷ್ಮನನ್ನು ಕಳಕೊಂಡಂತಾಗಿದೆ. ಅವರ ಸರಿಸಮಾನತೆಯ ಸಮಕಾಲೀನ ಯಕ್ಷಗಾನ ಕಲಾಭಕ್ತರಲ್ಲಿ ಇಂದು ಉಳಿದವರು ಒಬ್ಬರು ಮಾತ್ರ.

ಶ್ರೀ ಶೆಟ್ಟರು ಕುಮುಟೆಯ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನ ಗೋಷ್ಠಿಯ ಅಧ್ಯಕ್ಷರಾಗಿ ಅನುಭವಪೂರ್ಣವಾದ ಭಾಷಣ ಮಾಡಿದ್ದಾರೆ. ಹಲವಾರು ನೂತನ ಕೃತಿಗಳನ್ನು ರಚಿಸಿದ್ದಾರೆ. 'ಭಾರತದ ಗುರುಕುಲ' ಎಂಬ ಕೃತಿಗೆ ಮದರಾಸು ಸರಕಾರವು ಬಹುಮಾನಗಳನ್ನಿತ್ತು ಮನ್ನಿಸಿದೆ. ಭರತೇಶ ದಿಗ್ವಿಜಯ, ಯಶೋಧರ ಚರಿತ್ರೆಗಳೆಂಬ ಜೈನ ಪುರಾಣಗಳ ಕಥಾಭಾಗವನ್ನು ದಿವಂಗತ ಶ್ರೀ ಮಂಜಯ್ಯ ಹೆಗ್ಗಡೆಯವರ ಸೂಚನೆ, ಪ್ರೋತ್ಸಾಹಗಳಿಂದ ಅರ್ಥ ಸಮೇತ ರಚಿಸಿದ್ದಲ್ಲದೆ ಕಲ್ಲಾಡಿ ಕೊರಗ ಶೆಟ್ಟರ ಮೇಳದವರು ಅಭಿನಯಿಸುವಂತೆ ಪರಿಶ್ರಮಪೂರ್ವಕ ತರಬೇತು ಮಾಡಿದರು. ಇದಕ್ಕಾಗಿ ಜೈನ, ಜೈನೇತರ ಬಂಧುಗಳು ಕೊರಗ ಶೆಟ್ಟರ ಮೇಳದವರಿಂದ ಮೂಡಬಿದರೆಯಲ್ಲಿ ಭರತೇಶ ದಿಗ್ವಿಜಯ, ಯಶೋಧರ ಚರಿತ್ರೆ, ಇವರೇ ಬರೆದ ರನ್ನನ ಗದಾಯುದ್ಧ ಯಕ್ಷಗಾನ ಬಯಲಾಟಗಳನ್ನಾಡಿಸಿ, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಮಾನಪತ್ರವನ್ನೂ ಸುವರ್ಣಹಾರವನ್ನೂ ಬಹುಮಾನವಿತ್ತಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಶ್ರೀ ಶೆಟ್ಟರು ಯಕ್ಷಗಾನ ಕಲೆಯ ಕುರಿತಾದ ತನ್ನ ಪರಿಶ್ರಮವು ಮುಂದೆಯೂ ಜೀವಂತವಾಗಿರಲೆಂದು ಬಯಸಿ ಕೆಲವು ವಿದ್ಯಾವಂತ ತರುಣರಲ್ಲಿ ಯಕ್ಷಗಾನ ಕಲಾಭಿಮಾನವನ್ನು ತುಂಬಿ, ಅವರು ಯಕ್ಷಗಾನ ಸಭೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿದ್ದಲ್ಲದೆ, ಯಕ್ಷಗಾನ ಕೈಪಿಡಿಯೆಂಬ ತನ್ನ ಸಂಗ್ರಹದ ಬೃಹದ್ಗ್ರಂಥವನ್ನು ಪ್ರಕಟಿಸಲು ಪ್ರಯತ್ನಿಸಿದ್ದರು.

ಇಂದು ಕ್ರೂರ ವಿಧಿಯ ಸೆಳೆತಕ್ಕೆ ಸಿಕ್ಕಿ ಅವರು ಅಗಲಿಸುದರಿಂದ ಅವರು ಪ್ರಾರಂಭಿಸಿದ ಕೆಲಸವನ್ನು ಪೂರೈಸುವ ಗುರುತರವಾದ ಹೊಣೆಯು ಅವರ ಗೆಳೆಯರ ಮೇಲೆ ಬಿದ್ದಿರುವುದು.

ಯಕ್ಷಗಾನಕಲಾ ಪರಸ್ವತಿಯೆಂಬ ಬಿರುದನ್ನು ಪಡೆದ ಶೆಟ್ಟರು ಯಕ್ಷಗಾನ ಕಲೆಯ ಬಹುಮುಖವಾದ ಪಾಂಡಿತ್ಯವುಳ್ಳವರಾಗಿದ್ದರು. ಅಂತಹರು ಇಂದು ಅತ್ಯಂತ ವಿರಳ. ಯಕ್ಷಗಾನ ಕಲಾಭಾಗದಲ್ಲಿ ಪಾತ್ರವರ್ಗ, ಹಾಡುಗಾರಿಕೆ, ಮೃದಂಗ, ಚೆಂಡೆ, ಶ್ರುತಿ, ನಾಟ್ಯ, ವೇಷ, ಅಭಿನಯ, ಮಾತುಗಾರಿಕೆ, ಇಷ್ಟು ಬೇರೆ ಬೇರೆ ಅಂಗಗಳಿವೆ. ಇವೆಲ್ಲದರಲ್ಲೂ ಶೆಟ್ಟರು ಪಾರಂಗತರಾಗಿ, ಯಕ್ಷಗಾನಕೂಟದ ಮಾತುಗಾರಿಕೆಯಲ್ಲಿ, ಸಭಿಕರಿಗೆ ಸಂತೋಷವನ್ನು ಕೊಡುವ ಗೌರವ ಗಂಭೀರ ವ್ಯಕ್ತಿತ್ವ, ವಿರಳವೂ ಗಟ್ಟಿಯೂ ಆದ ಅಧಿಕಾರವಾಣಿ, ಪುರಾಣ, ಶಾಸ್ತ್ರ, ಲೋಕಾನುಭವ, ಕಥಾಸನ್ನಿವೇಶಗಳನ್ನನುಸರಿಸಿ ಸಭಾರಂಜನೆ ಮಾಡುವ ವಾಗ್ಜಾಲ ಮತ್ತು ಎದುರಾಗಿ ಮಾತಾಡುವ ಎಂಥ ಗಂಡೆದೆಯವನನ್ನೂ ನಡುಗಿಸುವ ವೃಥಾನಿರ್ಧಾರ ಇವುಗಳಿಂದ ಶ್ರೋತೃವೃಂದವು ಅತ್ಯಂತ ಆನಂದವನ್ನನುಭವಿಸುತ್ತಿದ್ದಿತು.

ಆಯುರ್ವೇದ ವಿಶಾರದರಾದ ಶ್ರೀ ಶೆಟ್ಟರು ಸ್ವಂತ ತಯಾರಿಸಿ, ಭಸ್ಮ, ಅಂಜನ, ಇತ್ಯಾದಿ ದಿವ್ಯೌಷಧಗಳನ್ನು ರೋಗಿಗಳಿಗೆ ಒದಗಿಸುತ್ತಿದ್ದರು. ಪಾರ್ತಿಸುಬ್ಬನ ಕುರಿತಾದ ತುಂಬಾ ಸಂಗ್ರಹವನ್ನು ಮಾಡಿ ಜೀವನ, ಉದ್ಯೋಗ, ಊರು, ಕಾಲಗಳನ್ನು ನಿರ್ಧರಿಸಮಾಡಿದ್ದರು. ಇವರಿಗೆ ಒಬ್ಬಳೇ ಮಗಳು, ಈಗ ಮೈಸೂರು ಪ್ರಾಂತದ ಮೂಡುಗೆರೆಯಲ್ಲಿ ಡಾಕ್ಟರರಾಗಿರುವ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿರುವ ಶ್ರೀ ಅನಂತರಾಮ ಅಡ್ಯಂತಾಯರ ಧರ್ಮಪತ್ನಿಯೇ ಅವರು ಕವಿಯಾಗಿ, ವೈದ್ಯನಾಗಿ, ಭಾಷಣಕಾರನಾಗಿ, ನಾಟ್ಯವಿದನಾಗಿ, ಯಕ್ಷಗಾನ ಕಲಾವಿದನಾಗಿ ಶ್ರೀ ಶೆಟ್ಟರು ಜಿಲ್ಲೆಯ ಹಾಗೂ ಕರ್ನಾಟಕ ಜನಜೀವನದ ವಿವಿಧ ರಂಗಗಳಲ್ಲಿ ಚಿರ ಪರಿಚಿತರಾಗಿ ಮರೆಯಲಾರದ ಸೇವೆ ಸಲ್ಲಿಸಿದ್ದಾರೆ. ಅಂಥ ಮಹನೀಯರ ಸ್ಮಾರಕವಾಗಿ ಅವರ ಕೈಪಿಡಿಯನ್ನು ಪ್ರಕಟಿಸುವುದು ಮಾತ್ರವಲ್ಲದೆ, ಒಂದು ನಿಧಿಯನ್ನು ಕೂಡಿಸಿ, ಆ ಮೂಲಕ ಮುಂದೆ, ಯಕ್ಷಗಾನ ಕಲಾವಿದನಾಗಿ ಮುಂದುವರಿಯುವವರಿಗೆ ಪ್ರತಿ ವರ್ಷವೂ ಒಂದು ಬಹುಮಾನ ಸಲ್ಲುವಂತೆ ಮಾಡಬೇಕಾದುದೂ ನಮ್ಮ ಕರ್ತವ್ಯವಾಗಿದೆ. ತುಂಬು ಜೀವನಬಾಳಿ ಬೆಳಗಿದ ಒಂದು ಆತ್ಮದ ನೆನಪಾಗಿ ಇಂದಿನ ನವತರುಣ ಜನಾಂಗವು ಬದ್ಧ ಕಂಕಣರಾಗಿ ದುಡಿದರೆ ಖಂಡಿತ ಗುರಿ ಸೇರುವಲ್ಲಿ ಸಂಶಯವಿಲ್ಲ. ಅವರ ಶಿಷ್ಯರು, ಅವರ ಗೆಳೆಯರು ಆ ಕುರಿತು ಪರಿಶ್ರಮಿಸುವರಾಗಿ ನಂಬಿಕೆ.

—ಎ. ರಾಮಣ್ಣ ಶೆಟ್ಟಿ, ಧರ್ಮಸ್ಥಳ.


ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 462/1956.

ನಕ್ತಾಲ್ ಪುಡ್ತಾದ ಬಾಯಿ —ವಾದಿ

1. ಬಾರ್ಬು ಬುಕ್ತೆಲೊ, 2. ರೋಬಿನ್ ಕ್ರಾಸ್ತ, 3. ಡೆನಿಸ್ ವರ್ತ್ವೇರ, 4. ಲಿನೋರ ವರ್ತ್ವೇರ, 5. ಮೇರಿ ವರ್ತ್ವೇರ.-ಪ್ರತಿವಾದಿರು

ಕುಂದಾಪುರ ತಾಲೂಕು ಹದವು ಗ್ರಾಮದ ಮೂಡಕಳಿಯಲ್ಲಿರುವ ಅಜ್ಮು ವರ್ತ್ವೇರನ ವಿಧವೆ ರೋಬಿನ್ ಕ್ರಾಸ್ತ 1 ಪೇದ್ರು ವರ್ತ್ವೇರನ ಮಗಳು ಮೇರಿ ವರ್ತ್ವೇರ. 1 ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪ್ರತಿವಾದಿರಿಂದ ವಾದಿಗೆ ಬರತಕ್ಕ ಕಳೆದ ಬಯ್ಯು, ಮುನ್ನಾಥ ಸಂವತ್ಸರಗಳ ಮೂಲಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 22—10—56ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwaraih.
Advocate for Pltf.

Date 2—10—56, Coondapoor


# ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

## ಆಹಾರ ಧಾನ್ಯಗಳ ಬೆಲೆ ಇಳಿಯುವುದೆಂತು?

ಆಹಾರ ಧಾನ್ಯಗಳ ಬೆಲೆ ಇತ್ತೀಚೆಗೆ ವಿಪರೀತ ಏರಿರುವುದು ಎಲ್ಲರಿಗೂ ತಿಳಿದೇ ಇದೆ. ಆದರೆ ನಮ್ಮ ಕೇಂದ್ರ ಮತ್ತು ಪ್ರಾಂತ ಸರಕಾರದವರು ಬೆಲೆ ತಗ್ಗಿಸಲು ಅನುಸರಿಸುತ್ತಿರುವ ರೀತಿನೀತಿಗಳು ಶ್ರೀಮಂತರನ್ನು ಉದ್ಧರಿಸುವ ದಾರಿಯಲ್ಲಿದೆಯೇ ಹೊರತು ಅದರಿಂದ ಬೆಲೆ ಇಳಿಯುತ್ತಲೂ ಇಲ್ಲ. ಜನಸಾಮಾನ್ಯರಿಗೆ ಬೇಕಾದ ದಿನಸಿಗಳು ಸರಿಯಾಗಿ ದೊರೆಯುತ್ತಲೂ ಇಲ್ಲ. ಅಂದರೆ ನಮ್ಮ ಮಂತ್ರಿಗಳ ದೃಷ್ಟಿಗೆ ಬಡವರು ಮತ್ತು ಕೂಲಿಗಾರರು ಬೀಳುವುದೇ ಇಲ್ಲ. ಮತ್ತು ಅವರ ಗೋಳನ್ನು ಕೇಳುವವರೂ ಇಲ್ಲವೆಂದು ಹೇಳ ಬೇಕಾಗುತ್ತದೆ.

ಭಾರತದ ವಿವಿಧ ಪ್ರಾಂತಗಳ ಭಾಷೆ ಮತ್ತು ನಡೆವಳಿಕೆಗಳಲ್ಲಿ ಎಷ್ಟು ವ್ಯತ್ಯಾಸವಿದೆಯೋ ಅಷ್ಟೇ ವ್ಯತ್ಯಾಸ ಅವರ ಊಟದಲ್ಲೂ ಇದೆ. ಕೆಲವರಿಗೆ ಅಕ್ಕಿ ಬೇಕು; ಕೆಲವರಿಗೆ ಗೋಧಿಬೇಕು; ಮತ್ತೆ ಕೆಲವರಿಗೆ ರಾಗಿ, ಜೋಳ, ಕಂಬು ಮೊದಲಾದ ಧಾನ್ಯಬೇಕು. ಈ ಭಿನ್ನರುಚಿಯನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ.

ನಮ್ಮ ಮೈಸೂರು ವಿಚಾರವನ್ನಷ್ಟೆ ಹೇಳುವುದಾದರೆ ಕೇಂದ್ರದ ಮಾನ್ಯ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಮೈಸೂರಿನವರೇ ಆಗಿದ್ದು, ಈಚೆಗೆ ಅವರು ಮೈಸೂರು, ಮಂಗಳೂರು, ಕೊಡಗು, ಮದರಾಸ್ ಈ ಕಡೆಗಳಲ್ಲೆಲ್ಲಾ ಸಂಚರಿಸಿ, ಆಹಾರ ಅಭಾವದ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಮತ್ತು ಬೆಲೆಯನ್ನು ತಗ್ಗಿಸಲು ವಿದೇಶಗಳಿಂದ ತರಿಸಿ ತಮ್ಮಲ್ಲಿ ದಾಸ್ತಾನುಮಾಡಿದ್ದ ಅಕ್ಕಿಯನ್ನು ಕಡಿಮೆ ಬೆಲೆಗೆ ಮಾರುವ ವ್ಯವಸ್ಥೆಯನ್ನೂ ಮಾಡಿದ್ದಾರೆ. ಇದಕ್ಕಾಗಿ ನಾವು ಅವರನ್ನು ಅಭಿನಂದಿಸಲೇ ಬೇಕು. ಆದರೆ ಅದರಿಂದ ನಮ್ಮಲ್ಲಿ ಬೆಳೆದ ಶ್ರೇಷ್ಠ ದರ್ಜೆಯ ಅಕ್ಕಿ ಅಥವಾ ನಮ್ಮಲ್ಲಿರುವ ಅಸಂಖ್ಯಾತ ಬಡವರಿಗೆ ಬೇಕಾದ ರಾಗಿ ಮತ್ತು ಜೋಳಗಳ ಬೆಲೆಯೇನೂ ಕಡಿಮೆಯಾಗಲಿಲ್ಲ. ಏಕೆಂದರೆ ಇವುಗಳ ಬೆಲೆ ಏರುತ್ತಿರುವುದು ಅಕ್ಕಿಯ ಅಭಾವದಿಂದಲ್ಲ. ನಮ್ಮಲ್ಲೇ ಬೇಕಾದಷ್ಟು ಅಕ್ಕಿಯು ದಾಸ್ತಾನಿದೆ. ಅದನ್ನು ಇಲ್ಲಿ ಮಾರದೆ, ಕುಸುಬಲು ಅಕ್ಕಿಯನ್ನು ಮಾಡಿ ತಲಚೇರಿ, ಕಣ್ಣಾನೂರು, ಕಲ್ಲಿಕೋಟೆ, ಮುಂತಾದ ಮಲಬಾರಿನ ಪ್ರದೇಶಗಳಲ್ಲಿ ಮಾರಿದರೆ ಒಳ್ಳೆಯ ಲಾಭ ಬರುತ್ತದೆ. ಇಂದು ಈ ಕುಸುಬಲಕ್ಕಿಯನ್ನು ಪ್ರತಿನಿತ್ಯವೂ ಸಹಸ್ರಾರು ಹಲ್ಲಿಗಳಂತೆ ಮಲಬಾರಿಗೆ ರವಾನಿಸುವುದು ಹಲವು ಹಳ್ಳಿಗಳಲ್ಲಿ ಸಹ ಒಂದು ಉದ್ಯೋಗವಾಗಿ ಹೋಗಿದೆ. ಸಕಾಲದಲ್ಲಿ ಮಳೆಬಾರದೆ ರಾಗಿ ಜೋಳದ ಬೆಲೆ ಹಾಳಾಗಿರುವುದು ಬೆಲೆ ಏರಲು ಮತ್ತೊಂದು ಕಾರಣ. ಅಂದ ಮೇಲೆ ನಮಗೆ ತಿಂದು ಅಭ್ಯಾಸವಿಲ್ಲದ ವಿದೇಶೀ ಅಕ್ಕಿಯನ್ನು ತರಿಸಿ ಮಾರಿದ ಮಾತ್ರಕ್ಕೆ ಬೆಲೆ ಇಳಿಯುವುದೆ? ಎಂದಿಗೂ ಇಲ್ಲ!

ಮಲಬಾರಿನವರು ಹೆಚ್ಚಾಗಿ ಮೀನು ತಿನ್ನುತ್ತಾರೆ. ಅವರಿಗೆ ಕುಸುಬಲಕ್ಕಿಯೇ ಬೇಕು. ಕೇಂದ್ರ ಮತ್ತು ನಮ್ಮ ಸಂಸ್ಥಾನ ಸರ್ಕಾರದವರು ಏಕೀಭವಿಸಿ ನಮ್ಮಿಂದ ಹೊರಗಡೆಗೆ ಕುಸುಬಲಕ್ಕಿ ರವಾನೆಯಾಗುವುದನ್ನು ತಪ್ಪಿಸಿ, ಮಲಬಾರಿಗೆ ಬೇಕಾದ ಕುಸುಬಲಕ್ಕಿಯನ್ನು ರಂಗೂನ್ ಮತ್ತಿತರ ಕಡೆಗಳಿಂದ ತರಿಸಿ ಒದಗಿಸಬೇಕು. ಹಾಗೂ ನಮ್ಮ ಸಂಸ್ಥಾನದ ಬಡವರು ಮತ್ತು ಕೂಲಿಗಾರರಿಗೆ ಬೇಕಾದ ರಾಗಿ ಜೋಳವನ್ನೂ ಹೊರಗಿನಿಂದ ತರಿಸಿ ಕಡಿಮೆ ಬೆಲೆಯಲ್ಲಿ ಮಾರಾಟಮಾಡಬೇಕು. ಹಾಗೆ ಮಾಡಿದರೆ ಮಾತ್ರ ಧಾನ್ಯಗಳ ಬೆಲೆ ಇಳಿಯುವುದು.

ಕೇಂದ್ರದ ಮತ್ತು ನಮ್ಮ ಸಂಸ್ಥಾನದ ಮಂತ್ರಿಗಳು ಈ ವಿಷಯಕ್ಕೆ ಕೂಡಲೇ ಗಮನಕೊಟ್ಟು, ಸಂಸ್ಥಾನದಿಂದ ಹೊರಕ್ಕೆ ಅಕ್ಕಿಯು ರವಾನೆಯಾಗುವುದನ್ನು ತಪ್ಪಿಸಬೇಕೆಂದು ಕೋರುತ್ತೇನೆ.

ಮೈಸೂರು 25-9-56. } ಎಂ. ಆರ್. ಸಿ. ಬಸಪ್ಪ.


ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.

## ವಿದ್ಯಾರ್ಥಿಗಳಲ್ಲಿ ಶಿಸ್ತು

(೧ನೇ ಪುಟದಿಂದ)

ನಾನಾ ವಿಷಯಗಳನ್ನು ಅಭ್ಯಾಸಿಸಬೇಕು. ಓದಬೇಕು. ಕಲಿಯಬೇಕು ತಿಳಿದುಕೊಳ್ಳಬೇಕು. ತನ್ನ ಜೀವನವನ್ನು ಸಾರ್ಥಕಗೊಳಿಸಬೇಕು— ಷೇಕ್ಸ್‌ಪಿಯರ್ ಮಹಾಕವಿ ಹೇಳಿದ "ನಿಮ್ಮ ಕಿವಿಗಳನ್ನು ತೆರೆದು ಎಲ್ಲವನ್ನೂ ಕೇಳಿರಿ; ನಿಮ್ಮ ನಾಲಗೆಯಿಂದ ಮಾತ್ರ ಯಾವುದನ್ನಾದರೂ ಆಡುವಾಗ ಎಚ್ಚರವಿರಲಿ" ಎಂಬ ಮಾತು ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಅನ್ವಯಿಸುತ್ತದೆ. ಅಭಿಪ್ರಾಯ ಸಂಗ್ರಹಣವೇ ವಿದ್ಯಾರ್ಥಿಗಳ ಕರ್ತವ್ಯವಾಗಲಿ; ಅಭಿಪ್ರಾಯ ಪ್ರಕಟಣೆಗೆ ಸಾಕಷ್ಟು ಅವಕಾಶ ವಿದ್ಯಾರ್ಥಿಗಳಿಗೆ ಮುಂದೆ ಸಿಗಲಿಕ್ಕಿದೆ ಎಂದು ತಿಳಿದುಕೊಂಡು ದಾರಿ ತಪ್ಪದಂತೆ ವಿದ್ಯಾರ್ಥಿಗಳು ಎಚ್ಚರಿಕೆ ವಹಿಸಿ, ಮರ್ಯಾದೆಯಿಂದ ಬಾಳಲಿ!

—ಶ್ರೀ ಶಾಂತಿ.

## ಹಿನ್ನೆಲೆ

ಅಹಮದಾಬಾದಿನಲ್ಲಿ ಗುಜರಾಥ ವಿದ್ಯಾಪೀಠದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮೊನ್ನೆ ೩ನೇ ದಿನಾಂಕ ಪ್ರಧಾನಿ ನೆಹರುಗಳು ಭಾಷಣವನ್ನು ಮಾಡಿದರು. ಆಗ ಮಹಾ ಗುಜರಾಥನ್ನು ರಚಿಸಬೇಕೆನ್ನುತ್ತಾ ವಿದ್ಯಾರ್ಥಿಗಳಲ್ಲಿಯೇ ಒಂದು ಗುಂಪು ಬೊಬ್ಬೆ ಹಾಕ ತೊಡಗಿತು; ಮತ್ತು ನೆಹರುಗಳ ಭಾಷಣಕ್ಕೆ ಪದೇ ಪದೇ ತಡೆಯನ್ನುಂಟು ಮಾಡಿತು. ನೆಹರು ಬಗೆ ಬಗೆಯಿಂದ ಬುದ್ಧಿ ಹೇಳಿದರು; ಸಮಜಾಯಿಸಿದರು; ಗದರಿಸಿದರು; ಆದರೂ ಈ ಗುಂಪು ಸುಮ್ಮನಾಗಲಿಲ್ಲ, ಪ್ರಧಾನಿಗಳಿಗೆ ಪಂಥಾಹ್ವಾನವನ್ನೆ ಕೊಟ್ಟಿತು ಈ ಗುಂಪು. ನೆಹರುಗಳು ಭಾರತೀಯ ಶೀಲದ ಈ ಮಾರಾಟವನ್ನು, ಯಾರೂ ಮೆಚ್ಚದ ಈ ದುಷ್ಟ ಚಾಳಿಯನ್ನು ಕಂಡು ಬೇಸರಿಸಿದರು; ಜುಗುಪ್ಸೆಗೊಂಡರು. ಇದೇ ಭಾವದಲ್ಲಿ ಆ ವಿದ್ಯಾರ್ಥಿ ಗುಂಪಿನ ಚಿತ್ರವನ್ನೂ ತೆಗೆದುಕೊಳ್ಳುವಂತೆ ಫೋಟೋಗ್ರಾಫರರನ್ನೂ ಚಲಚ್ಚಿತ್ರ ಗ್ರಾಹಕರನ್ನೂ ವಿನಂತಿಸಿದರು. ಆಗ ಮಾತ್ರ ವಿದ್ಯಾರ್ಥಿಗಳು "ಇದು ಕೂಡದು" ಎಂದರು. ಆದರೇನು? ತಮ್ಮ ನಡತೆಯನ್ನು ಮಾತ್ರ ಅವರು ಬದಲಾಯಿಸಲಿಲ್ಲ! ಪ್ರಧಾನಿಗಳು ಹಠ ಹಿಡಿದು ಮಾಡಿದ ೧೦೦ ನಿಮಿಷಗಳ ದೀರ್ಘ ಭಾಷಣವು ಈ ತಂಟೆ ಖೋರರನ್ನು ಮಣಿಸಲಿಲ್ಲ. ವಿದ್ಯಾರ್ಥಿಗಳ ಈ ವರ್ತನೆಯ ಹೊಣೆಯಾರದು?—ಸಂ. ಸ.]

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc· No· 466 N/50 date 12-12-1950 of the Director of public Instruction Madras·



ವಿಮಾನೋಡ್ಡಾಣದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ನಿತ್ಯವೂ ಹೊಸ ಪ್ರಯೋಗಗಳನ್ನು ನಡೆಸುತ್ತಿವೆ. ಚಿತ್ರದಲ್ಲಿರುವುದು ಪ್ರಾಯೋಗಿಕ ಹಾರಾಟದಲ್ಲಿ ನಿರತವಾದ ಒಂದು ವಿಮಾನ. ಇದು ನಾಲ್ಕು ಯಂತ್ರಗಳಿಂದ ಕೂಡಿದೆ. ೪೦ ಪ್ರಯಾಣಿಕರನ್ನೂ ೫ ಟನ್ನು ಸಾಮಾನನ್ನೂ ಹೊತ್ತುಕೊಂಡು ಅಗಲಕಿರಿದಾದ ದಾರಿಯಲ್ಲಿ ಇಳಿಯಬಲ್ಲುದಾಗಿದೆ.

## ಗೆಳೆಯನಿಗೆ ಓಲೆ—೩

### ಒಳ್ಳೆಯ ಸಾಹಿತ್ಯ ಸೃಷ್ಟಿಗೆ ಲೇಖಕ, ಪ್ರಕಾಶಕ ಮತ್ತು ವಿಮರ್ಶಕರು ಪರಸ್ಪರ ಸಹಕರಿಸುವುದು ಅವಶ್ಯ

ನನ್ನ ಗೆಳೆಯಾ,

ಕಾದಂಬರಿಗಳಲ್ಲಿ ಬರುವ ಅಶ್ಲೀಲ ವಿವರಣೆ, ಅನಗತ್ಯ ಮಾತುಕತೆಗಳು ಓದುಗನ ಮೇಲೆ ಯಾವ ಬಗೆಯ ಪರಿಣಾಮವನ್ನು ಮೂಡಿಸಬಲ್ಲುವು ಎಂದು ನಿನಗೆ ಹಿಂದಿನ ಪತ್ರದಲ್ಲಿ ತಿಳುಹಿಸಿದ್ದೆ. ಈ ಬಗೆಯ ಕಾದಂಬರಿಗಳಿಗೆ ಪೋಷಕರು ಯಾರೆಂದು ಯೋಚಿಸುವುದು ಅಗತ್ಯವಾಗಿದೆ.

ಜನರ ಅಭಿರುಚಿಗಳನ್ನು ನೋಡಿ, ಲೇಖಕರ ಪರಿಚಯವನ್ನು ಜನರಿಗೆ ಮಾಡಿಕೊಡುವ ವ್ಯಕ್ತಿಗಳೆಂದರೆ ಪ್ರಕಾಶಕರು. ಇವರು ಎರಡೆರಡು ಬಗೆಯ ಕಾರ್ಯಗಳನ್ನು ಮಾಡಬೇಕಾದಂತಹ ವ್ಯಕ್ತಿಗಳು. ಆದರೆ ಈ ಬಗೆಯ ಕಾರ್ಯನಿರ್ವಹಣೆಯಲ್ಲಿ ತಮ್ಮ ಹೊಣೆ ಏನು? ತಾವು ಪ್ರಕಾಶಕರು ಆದುದರಿಂದ ಸಾಮಾಜಿಕ ಹಿತಚಿಂತನೆ ಏನಾಯಿತೆಂದು ಯೋಚಿಸುವುದಿಲ್ಲ. ಕನ್ನಡ ನಾಡಿನಲ್ಲಿ ಬರಿಯ ಬೆರಳೆಣಿಕೆಯಷ್ಟು ಉತ್ತಮ ಪ್ರಕಾಶಕರು ಇದ್ದಾರೆ. ಇಂತಹವರು ತಮ್ಮ ಪ್ರಕಾಶನಗಳಿಗೆ ಜನತೆಯ ಸಾಮೂಹಿಕ ಹಾಗೂ ವೈಯಕ್ತಿಕ ಅಭಿವೃದ್ಧಿಯನ್ನು ಗುರಿಯಾಗಿ ಇಟ್ಟುಕೊಂಡಿರುತ್ತಾರೆ. ಉಳಿದ ಪ್ರಕಾಶಕರನ್ನು ಸಾಮಾಜದ ಶತ್ರುಗಳೆಂದು ಕರೆದರೂ ತಪ್ಪಲ್ಲ. ಅಶ್ಲೀಲ ಸಾಹಿತ್ಯವನ್ನು ಪ್ರಕಟಿಸಿ, ಅದರ ಮುಖಚಿತ್ರವಾಗಿ ನಗ್ನವೊ, ಅರೆ ನಗ್ನವೊ ಚಿತ್ರವೊಂದನ್ನು ಒತ್ತಿಸಿ ಬಿಟ್ಟು, ಜನರನ್ನು ಕೊಳ್ಳೆಹೊಡೆಯುವುದು ನಿಜಕ್ಕೂ ಸಮಾಜ ಶತ್ರುತ್ವ ಅಲ್ಲವೇ? ಪುಸ್ತಕಗಳ ವಿಮರ್ಶೆ ಬಹು ನಾಟಕೀಯವಾಗಿ ನಡೆಯುತ್ತಿರುವ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯನ್ನೋದಿ ಪುಸ್ತಕವನ್ನು ಕೊಂಡುಕೊಂಡರೂ ಅಶ್ಲೀಲತೆಯನ್ನು ಪಾಲಿಗೆ ಎಳೆದುಕೊಳ್ಳುವ ಓದುಗರಿಗೆ ಕೊರತೆ ಇಲ್ಲ. ಕೊಂಡು—ಓದುವ ಅಭ್ಯಾಸ ಬಹು ವಿರಳವಾಗಿರುವ ನಮ್ಮ ಜನರಲ್ಲಿ, ಕೊಳಚೆಯನ್ನೇ ಕೊಂಡು—ಓದುವ ಅಭ್ಯಾಸ ಬೆಳೆದರೆ ಅದೆಷ್ಟು ಚಿಂತಾಜನಕ?

ಈ ಬಗೆಯ ಅನಾಹುತಗಳನ್ನು ಸಾಧ್ಯವಾದಷ್ಟು ತಪ್ಪಿಸಬಲ್ಲ ವ್ಯಕ್ತಿ ಎಂದರೆ ಪ್ರಕಾಶಕ. ಕೆಲವೆಡೆಗಳಲ್ಲಿ ಪ್ರಕಾಶಕರೇ ಲೇಖಕರೊಡನೆ ತಮಗೆ ಇಂತಿಂತಹ ವಸ್ತುವುಳ್ಳ ಬರಹವನ್ನು ಬರೆದುಕೊಡಿರೆಂದು ಕೇಳುವ ಪ್ರಸಂಗವಿದೆ. ಜನತೆಯಿಂದ ಹಣ ದೋಚುವುದೊಂದೇ ಇವರ "ಸಾಹಿತ್ಯಸೇವೆ"ಯ ಗುರಿ. ಕಲೆ—ವ್ಯಾಪಾರಕ್ಕಿಲ್ಲ ನಿಜ. ಆದರೆ ಮಾಡುವ ವ್ಯಾಪಾರದಲ್ಲಿಯೂ ಮೋಸವೇಕೆ?

ಕನ್ನಡ ಲೇಖಕ ಆರ್ಥಿಕ ದೃಷ್ಟಿಯಿಂದ ತೀರಾ ದುರ್ಬಲವ್ಯಕ್ತಿ. ತಾನು ಪ್ರಕಾಶಕರ ಆಜ್ಞೆಯನ್ನು ಅನುಸರಿಸಿ, ಒಂದು ಕಾದಂಬರಿಯನ್ನು ನಾಲ್ಕಾರು ವಾರಗಳಲ್ಲಿ ಬರೆದು ಬಿಸುಡುವಾಗ, ತನಗೆ ದೊರೆಯುವ ಐವತ್ತು-ನೂರು ರೂಪಾಯಿಗಳೇ ದೊಡ್ಡದಾಗಿ ಕಾಣುತ್ತದೆ. ಆದರೆ ಎರಡು ತಿಂಗಳ ಶ್ರಮಕ್ಕೆ ಐವತ್ತು ರೂಪಾಯಿಗಳ ಬಹುಮಾನವೇ? ಅದೂ ಪುಸ್ತಕದ ಎಲ್ಲಾ ಹಕ್ಕುಗಳನ್ನು ಪ್ರಕಾಶಕನಿಗೆ ಮಾರಿಬಿಟ್ಟು! ಈ ಬಗೆಯ ಪ್ರಕಾಶಕರಿಂದ ಆಗುವ ಅನಾಹುತಗಳು ಅಷ್ಟಿಷ್ಟಲ್ಲ. ಇತ್ತ ಲೇಖಕ ವರ್ಗಕ್ಕೂ ಅವರಿಂದ ಸುಖವಿಲ್ಲ—ಅತ್ತ ಓದುಗರಿಗೂ ಅವರೊದಗಿಸುವ ಸಾಹಿತ್ಯದಿಂದ ಹಿತವಿಲ್ಲ.

"ನಮ್ಮ ಜನರ ಅಭಿರುಚಿಯೇ ಕೀಳು—ಅದೇ ಬೆಳೆಯುತ್ತಿದೆ—ಹೀಗಾಗಿ ನಾವು ಜನತೆಗೆ ಬೇಕಾದ ಸಾಹಿತ್ಯವನ್ನೇ ಒದಗಿಸಿಕೊಟ್ಟರೆ ತಪ್ಪೇನು?—ನಾವು ಒದಗಿಸಿಕೊಟ್ಟ ಸಾಹಿತ್ಯ ಜನತಾ ಸಾಹಿತ್ಯ ಆಗಲಾರದೇ"? ಎಂದು ವಾದಿಸುವ ಪ್ರಕಾಶಕರ ಎದುರಿಗೆ ಎಲ್ಲರೂ ಮೂಕರಾಗಬೇಕಾಗುತ್ತದೆ. ತಾವು ಗಳಿಸುವ ಲಾಭಕ್ಕೆ "ಜನರ ಕೀಳು ಮನೋವೃತ್ತಿ ಕಾರಣ" ಎಂಬ ಹೆಸರು ಹೊರಿಸುವುದು ಅನ್ಯಾಯವಲ್ಲವೇ?

ಇನ್ನು ಇಂತಹ ಪುಸ್ತಕಗಳನ್ನು ಪ್ರಚಾರ ಮಾಡುತ್ತಿರುವ ಪತ್ರಿಕೆಗಳ ವಿಚಾರ ಸ್ವಲ್ಪ ವಿವೇಚಿಸುವಾ.

ನಮ್ಮಲ್ಲಿ ವಿಮರ್ಶಾಸಾಹಿತ್ಯದ ಮಟ್ಟ ಏನಿಲ್ಲ ಎಂಬುದು ಎಲ್ಲರೂ ತಿಳಿದವಿಚಾರ. ಆದರೆ ಈ ಹೀನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲವೇ? ಇದ್ದೇ ಇದೆ.

ವಿಮರ್ಶಕರಲ್ಲಿ ಯಾವ ಬಗೆಯ ಪಕ್ಷಪಾತ ಬುದ್ಧಿ ಇರಬಾರದು. ಜನತೆಗೆ ಬೇಕಾಗಬಲ್ಲಂತಹ, ಕಲಾತ್ಮಕವಾದ ಜನರ ವಿಚಾರ ಪ್ರಚೋದನೆಗೆ ಸಹಾಯಕಾರಿಯಾದ ಸಾಹಿತ್ಯವನ್ನು ವಿಮರ್ಶಕ ಹೊಗಳಲೇ ಬೇಕು. ಅಶ್ಲೀಲ, ಜನರ ಕೀಳು ಅಭಿರುಚಿಗಳನ್ನು ಬೆಳೆಸುವ ಸಾಹಿತ್ಯವನ್ನು ವಿಮರ್ಶಕ ನಿರ್ದಾಕ್ಷಿಣ್ಯವಾಗಿ ಟೀಕಿಸಬೇಕು. ಇದರಿಂದ ಲೇಖಕರಿಗೆ, ಪ್ರಕಾಶಕರಿಗೆ ಬೇಸರವಾದರೂ ಚಿಂತಿಲ್ಲ—ಜನತೆಗೆ ಒಂದಿಷ್ಟು ಉಪಯೋಗವಾದೀತು.

ಕೆಲವು ಪ್ರಕಾಶಕರು ತಾವು ಪ್ರಕಟಿಸಿದ ಪುಸ್ತಕದ ವಿಮರ್ಶೆಯನ್ನು ತಾವೇ ಬರೆದು ಪತ್ರಿಕೆಗಳ ಮೂಲಕ ಅಚ್ಚುಹಾಕಿಸುವ ಕ್ರಮವಿದೆ. ಹೀಗಿನ ವಿಮರ್ಶೆ ಸತ್ವಹೀನವಾದುದೆಂದು ಹೇಳಲಾರೆ. ಆದರೆ ಪ್ರಕಾಶಕರು ತಮ್ಮ ಪುಸ್ತಕದ ವಿಮರ್ಶೆಯನ್ನು ತಾವೇ ಮಾಡುವ ಬದಲು, ತಿಳಿದೊಬ್ಬ ವಿಮರ್ಶಕನಿಂದ ವಿಮರ್ಶಿಸಿಕೊಂಡು ಪ್ರಕಟಿಸುವುದು ಒಳಿತು.

ನಮ್ಮ ಸಾಹಿತ್ಯದ ಟೊಳ್ಳು-ಗಟ್ಟಿಗಳನ್ನು ಲೆಕ್ಕಿಸಿ ಕಂಡರೆ ನಾವೇ ನಾಚಿಕೊಳ್ಳಬೇಕಾದೀತು. ಆಯಾಯ ಪ್ರದೇಶದಲ್ಲಿ ಉತ್ಪತ್ತಿಯಾದ ಸಾಹಿತ್ಯದಿಂದ ಆಯಾಯ ಪ್ರದೇಶದ ಜನರನ್ನು ಅಳೆಯುವಂತಾದರೆ, ಕನ್ನಡಿಗರಾದ ನಾವು ಬೇರೆಯವರಿಗೆ ಅನಾಗರಿಕರಾಗಿ ಕಂಡೇವು—ಅನೀತಿವಂತರಾಗಿ ಕಂಡೇವು.

ಕನ್ನಡದ ಪ್ರಕಾಶಕರು ಇನ್ನು ಮುಂದಾದರೂ ಜನತೆಯನ್ನು ವಂಚಿಸುವ ಈ ಕಾರ್ಯವನ್ನು ನಿಲ್ಲಿಸಬೇಕು. ಲೇಖಕರಾದರೂ ಅವರ ಹಂಗಿಗೆ ಬಿದ್ದು ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳಬಾರದು. ವಿಮರ್ಶಕರು ಪಕ್ಷಾತೀತ ವಿಮರ್ಶೆಯನ್ನು ಮಾಡಬೇಕು. ಎಂದರೆ ಹುಟ್ಟಿದ ಸಾಹಿತ್ಯ ನಾಲ್ಕನೆಯ ವ್ಯಕ್ತಿಯಾದ ಓದುಗನ ಮೇಲೆ ಪ್ರಬಲ ಪರಿಣಾಮವನ್ನು ಬೀರಬಲ್ಲುದು.

ನಿನ್ನವ—

"ನಾಗೇಶ"

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತ, ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

69 ಪುಟಗಳು: ಬೆಲೆ 0—8—0

— ನವಯುಗ ಪ್ರೆಸ್, ಉಡುಪಿ. —

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

18—10—1956

ಸಂಚಿಕೆ ೭
NO. 7

## ಪರಿಚಯ

# ಭಾರತದ ರಾಷ್ಟ್ರೀಯ ವಸ್ತು ಸಂಗ್ರಹಾಲಯ

### ರಾಷ್ಟ್ರದ ಕಲಾವಸ್ತುಗಳ ನಿಕ್ಷೇಪ

ಬಹು ಕಾಲದಿಂದಲೂ ಭಾರತಕ್ಕೊಂದು ರಾಷ್ಟ್ರೀಯ ವಸ್ತು ಸಂಗ್ರಹಾಲಯದ ಆವಶ್ಯಕತೆಯಿದೆಯೆಂಬ ವಿಚಾರವು ಅನುಭವ ವೇದ್ಯವಾಗಿದೆ. ಈ ವಸ್ತು ಸಂಗ್ರಹಾಲಯದಲ್ಲಿ ಇತಿಹಾಸ ಪೂರ್ವದಿಂದ ಹಿಡಿದು ಇಂದಿನ ವರೆಗಿನ ಭಾರತೀಯ ನಾಗರಿಕತೆಯ ಅಭಿವೃದ್ಧಿಯ ಗ್ರಾಹ್ಯ ಚಿತ್ರವನ್ನು ನೀಡುವುದು ಉದ್ದೇಶವಾಗಿದೆ. ಕಳೆದ ಕೆಲವು ದಶಕಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಅನೇಕ ಪ್ರಾದೇಶಿಕ ವಸ್ತು ಸಂಗ್ರಹಾಲಯಗಳ ಸ್ಥಾಪನೆ ಹಾಗೂ ಅವುಗಳ ಬೆಳವಣಿಗೆ ಈ ಅಗತ್ಯತೆಗೆ ಹೆಚ್ಚು ಪ್ರಾಮುಖ್ಯ ವಿತ್ತಿತು.

೧೯೪೬ನೇ ಜನವರಿ ತಿಂಗಳಲ್ಲಿ ಕೇಂದ್ರ ಪ್ರಾಕ್ತನ ವಸ್ತು ಸಲಹಾ ಮಂಡಲಿಯು, ಕಲಾ, ಪ್ರಾಕ್ತನ ವಸ್ತು ಹಾಗೂ ಮಾನವ ಶಾಸ್ತ್ರ ಸಂಬಂಧವಾದ ರಾಷ್ಟ್ರೀಯ ವಸ್ತು ಸಂಗ್ರಹಾಲಯವೊಂದನ್ನು ಸ್ಥಾಪಿಸಬೇಕೆಂಬ ಯೋಜನೆಯನ್ನು ಪರಿಶೀಲಿಸಿತು. ಕೊಂಚ ಮಟ್ಟಿಗೆ ಪರಿಷ್ಕರಿಸಿದ ಈ ಯೋಜನೆಗೆ ಸರಕಾರದವರ ಪುರಸ್ಕಾರ ದೊರೆಯಿತು. ದೇಶದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಸಂಬಂಧವಾದ ವಿಸ್ತೃತ ಕಾರ್ಯಕ್ರಮಕ್ಕೆ ಒಪ್ಪಿಗೆ ಸಲ್ಲಿಸಲಾಯಿತು.

ದೇಶದ ವಿವಿಧ ಭಾಗಗಳಿಂದ ಸುಮಾರು ೫೦ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಪ್ರಾಚೀನ ವಸ್ತುಗಳನ್ನೂ ಕಲಾಕೃತಿಗಳನ್ನೂ ಎರವಲಾಗಿ ಪಡೆಯಲಾಯಿತು ಅಥವಾ ಕೊಳ್ಳಲಾಯಿತು. ಇವುಗಳನ್ನು ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ.

ಈ ವಸ್ತುಗಳನ್ನು ತಾತ್ಕಾಲಿಕವಾಗಿ ರಾಷ್ಟ್ರಪತಿ ಭವನದಲ್ಲಿರುವ "ದರ್ಬಾರ್ ಹಾಲ್‌ನಲ್ಲಿ" ಪ್ರದರ್ಶಿಸಲಾಗಿದೆ. ನವ ದೆಹಲಿಯ ರಾಜಪಥ ಹಾಗೂ ಜನಪಥಗಳು ಸಂಧಿಸುವ ಸ್ಥಳದಲ್ಲಿ ರಾಷ್ಟ್ರೀಯ ವಸ್ತು ಸಂಗ್ರಹಾಲಯದ ನೂತನ ಕಟ್ಟಡವನ್ನು ಕಟ್ಟಲಾಗುತ್ತಿದೆ. ಈ ಕಟ್ಟಡದ ಶಂಕು ಸ್ಥಾಪನೆಯನ್ನು ಪ್ರಧಾನ ಮಂತ್ರಿ, ಶ್ರೀ ಜವಾಹರಲಾಲ್ ನೆಹರೂರವರು ೧೯೫೫ನೇ ಮೇ ೧೨ರಂದು ನೆರವೇರಿಸಿದರು. ಒಟ್ಟು ೮೦ ಲಕ್ಷ ರೂ.ಗಳ ವೆಚ್ಚ ತಗಲುವ ಈ ಕಟ್ಟಡವು ಇನ್ನೈದು ವರ್ಷಗಳಲ್ಲಿ ಸಿದ್ಧವಾಗುವ ನಿರೀಕ್ಷೆಯಿದೆ.

ರಾಷ್ಟ್ರೀಯ ವಸ್ತು ಸಂಗ್ರಹಾಲಯವು ಇಂದು ಹೇರಳ ಪ್ರಮಾಣದ ಶಿಲಾ ಪ್ರತಿಮೆಗಳನ್ನು ಹೊಂದಿದೆ. ಪಶ್ಚಿಮ ಭಾರತ, ರಾಜಸ್ಥಾನಿ, ಪಹರಿ, ಮತ್ತು ಮೊಗಲ್ ಶೈಲಿಗಳ ೪೬೦೦ ವರ್ಣ ಚಿತ್ರಗಳನ್ನೂ ೪೮೦ ಕಂಚಿನ ಲೋಹದ ಪ್ರತಿಮೆಗಳನ್ನೂ ೨೭೫ ನೇಯ್ದ ವಸ್ತ್ರಗಳನ್ನೂ ೪೦೦೦ ಪಾರಸಿಕ ಹಾಗೂ ಅರಬ್ಬಿ ಹಸ್ತಪ್ರತಿಗಳನ್ನೂ ೮೯೦ ಸಂಸ್ಕೃತ, ಪಾಳಿ ಮತ್ತು ಪ್ರಾಕೃತ ಹಸ್ತಪ್ರತಿಗಳನ್ನೂ, ೭೫೦೦ ನಾಣ್ಯಗಳನ್ನೂ ಅಲ್ಲದೆ ಬೆಲೆ ಬಾಳುವ ವಜ್ರ ವೈಢೂರ್ಯಾದಿ ಆಭರಣಗಳನ್ನೂ ಈ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಅಸ್ತ್ರ ಶಸ್ತ್ರಗಳ ವಿಭಾಗವೊಂದನ್ನು ಸಿದ್ಧಪಡಿಸಲಾಗುತ್ತಿದೆ. ಇತಿಹಾಸ ಪೂರ್ವದ ವಿಭಾಗದಲ್ಲಿ ಮಹೆಂಜೊ ದಾರೋ ಮತ್ತು ಹರಪ್ಪ, ಝೂಕರ್, ಜಂಗರ್ ಅಮ್ರಿ, ಥರೋ, ಗೋರಾಂಡಿ, ನಾಲ್ ಮುಂತಾದ ಪ್ರಾಚೀನ ಇತಿಹಾಸಿಕ ನಿವೇಶನಗಳಲ್ಲಿ ದೊರೆತ ವಸ್ತುಗಳನ್ನು 'ಸಿಂಧೂ ರೂಂ'ನಲ್ಲಿ ಪ್ರದರ್ಶಿಸಲಾಗಿದೆ. ಶಿಲಾ ಪ್ರತಿಮೆಗಳನ್ನು ವಿವಿಧ 'ಗ್ಯಾಲರಿ'ಗಳಲ್ಲಿ ಇಡಲಾಗಿದೆ. ಈ ಗ್ಯಾಲರಿಗಳಲ್ಲಿ ಪ್ರದರ್ಶಿಸಲಾಗಿರುವ ಗಮನಾರ್ಹವಾದ ಶಿಲಾಪ್ರತಿಮೆಗಳಲ್ಲಿ ಮಥುರಾದಲ್ಲಿ ದೊರೆತ ಬುದ್ಧ, ರಾಮಪುರದಲ್ಲಿ ದೊರೆತ ಅಶೋಕ ಸ್ತಂಭದ ವೃಷಭ ಶಿಖರ, ಲೋಕನಾಥ ಪ್ರತಿಮೆ, ಮತ್ತು ಐ ಹೊಳೆಯಲ್ಲಿ ದೊರೆತ ದೇವ ದೇವತೆಗಳ ಪ್ರತಿಮೆಗಳೂ ಸೇರಿವೆ.

ಅಹಿಚ್ಛತ್ರ, ಕೌಶಾಂಬಿ, ಕೊಂಡಾಪುರ, ಅಖನೂರ್ ಮತ್ತು ನಲಂದಾಗಳಲ್ಲಿ ದೊರೆತ ಗಟ್ಟಿಮಣ್ಣಿನ ಸುಂದರವಾದ ಪ್ರತಿಮೆಗಳನ್ನು ಈ ಸಂಗ್ರಹಾಲಯದಲ್ಲಿಡಲಾಗಿದೆ- ದಕ್ಷ ಯಜ್ಞದ ಧ್ವಂಸ, ಭೈರವರೂಪದಲ್ಲಿರುವ ಶಿವ, ಮಹಾಭಾರತ ಯುದ್ಧದ ಒಂದು ದೃಶ್ಯ, ಮುಂತಾದುವು ದೊರೆತಿವೆ.

ಸಂಗ್ರಹಾಲಯದಲ್ಲಿರುವ ಕಂಚಿನ ಲೋಹದ ವಸ್ತುಗಳು ಉತ್ಕೃಷ್ಟವಾಗಿವೆ- ಶ್ರೀ ಎಸ್. ವಿ. ರಾಮ ಮೂರ್ತಿಯವರ ಕಲಾಸಂಗ್ರಹದಿಂದ ಮೂರು ಅತ್ಯುತ್ತಮ ಚೋಳ ಶೈಲಿಯ ಪ್ರತಿಮೆಗಳನ್ನೂ ಪಡೆಯಲಾಗಿದೆ. ಇವುಗಳಲ್ಲಿ ಒಂದು ತಿರುವರಂಗಲಂನಲ್ಲಿ ದೊರೆತ ಚತುರ್ತಾಂಡವ ಮುದ್ರೆಯ ನಟರಾಜನ ಪ್ರತಿಮೆಯು ಅನುಪಮವಾದದ್ದು. ಸಿಂಧೂ ಕಣಿವೆಯಲ್ಲಿ ದೊರೆತ ನರ್ತಕಿಯ ಪ್ರತಿಮೆಯು ಅತಿ ಪ್ರಾಚೀನ ನಮೂನೆಯದ್ದಾಗಿದೆ.

ಸಂಗ್ರಹಾಲಯದಲ್ಲಿ ಸುಂದರವಾದ ವರ್ಣಚಿತ್ರಗಳನ್ನು ಸಂಗ್ರಹಿಸಲಾಗಿದೆ. ಇವುಗಳಲ್ಲಿ ರಾಜಸ್ಥಾನಿ ಶೈಲಿಯ ವರ್ಣ ಚಿತ್ರಗಳ ಸಂಖ್ಯೆಯೇ ಅಧಿಕವಾಗಿದೆ- ಮೊಗಲ ಶೈಲಿಯ ಚಿತ್ರಗಳ ಸಂಖ್ಯೆ ಕಡಮೆ ಇದ್ದಾಗ್ಯೂ, ತುಜುಕ್ ಜಹಂಗೀರಿಯ ಸೂಕ್ಷ್ಮ ವರ್ಣಚಿತ್ರಗಳು ಅತ್ಯಂತ ಸುಂದರವಾಗಿವೆ.

ಹಸ್ತಪ್ರತಿಗಳ ವಿಭಾಗದಲ್ಲಿ ಟೊಂಕ್ ಪುಸ್ತಕಾಲಯದಿಂದ ಪಡೆದ ೩೭೦೦ ಹಸ್ತಪ್ರತಿಗಳೂ ಮತ್ತು ಶ್ರೀ ಜಟಾ ಶಂಕರ ಶಾಸ್ತ್ರಿಗಳಿಂದ ಪಡೆದ ಸಂಸ್ಕೃತ ಹಸ್ತಪ್ರತಿಗಳೂ ಇವೆ. ಸಂಗ್ರಹಾಲಯದಲ್ಲಿ ಬಾಬರ್ ನಾಮಾ ಹಸ್ತಪ್ರತಿಗಳ ಸಚಿತ್ರ ಪ್ರತಿಯೂ ಮತ್ತು ಕುರಾನ್ ಗ್ರಂಥದ ಹಲವಾರು ಅಪೂರ್ವ ಪ್ರತಿಗಳೂ ಅರಸರ ಗ್ರಂಥ ಭಂಡಾರಗಳೂ ಇವೆ.

ಈ ಸಂಗ್ರಹಾಲಯದಲ್ಲಿ ಗುಪ್ತರ ಕಾಲದ ೧೭೦೦ ಸಹಾನಿ ನಾಣ್ಯಗಳಿವೆ. ಪಲ್ಲವ ಸುಲ್ತಾನ್ ಹಾಗೂ ಮೊಗಲರ ವಂಶಗಳ ನಾಣ್ಯಗಳೂ ಈ ಸಂಗ್ರಹಾಲಯದಲ್ಲಿವೆ.

ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಭಾರತೀಯ ವೇಷಭೂಷಣ ಸಂಬಂಧವಾದ ವಿಭಾಗವೊಂದನ್ನು ತೆರೆಯಲಾಗುವುದು. ಈ ವಿಭಾಗಕ್ಕಾಗಿ ಸಮಕಾಲೀನ ಭಾರತೀಯ ಉಡುಪುಗಳನ್ನು ಭಾರತದ ಪ್ರತಿಪ್ರದೇಶದಿಂದಲೂ ಸಂಗ್ರಹಿಸಲಾಗಿದೆ.

ವಸ್ತು ಸಂಗ್ರಹಾಲಯದ ಗ್ಯಾಲರಿಗಳನ್ನು ಆಯಾ ಪ್ರದೇಶ ಹಾಗೂ ಶೈಲಿಗಳಿಗನುಸಾರವಾಗಿ ಪುನರ್ವ್ಯವಸ್ಥೆಗೊಳಿಸಲಾಗಿದೆ. ಪ್ರಾಚೀನ ಲಿಪಿಗಳ ನಕ್ಷೆಗಳನ್ನೂ ಪ್ರದರ್ಶಿಸಲಾಗಿದೆ ಬ್ರಾಹ್ಮೀ, ನಗರಿ, ಬಂಗಾಳಿ, ತಮಿಳುಗ್ರಂಥ, ಕನ್ನಡ -ತೆಲುಗು ಮುಂತಾದ ಭಾರತೀಯ ಲಿಪಿಗಳ ಬೆಳವಣಿಗೆಯನ್ನು ಈ ನಕ್ಷೆಗಳು ತೋರಿಸುವುವು. ಟಿಬೆಟ್, ಪೂರ್ವ ತುರ್ಕಿಸ್ಥಾನ, ಸಿಂಹಳ ದ್ವೀಪ, ಬರ್ಮಾ, ಸಿಯಾಂ, ಮಲಯಾ, ಜಾವಾ, ಬೋರ್ನಿಯೋ ಮುಂತಾದ ದೇಶದ ಲಿಪಿಗಳನ್ನೊಳಗೊಂಡ ನಕ್ಷೆಯಲ್ಲಿ ನಮ್ಮ ಪುರಾತನ ಭಾರತೀಯ ಲಿಪಿಗಳು ವಿದೇಶದಲ್ಲಿ ಪಡೆದ ಬೆಳವಣಿಗೆಯನ್ನು ತೋರಿಸಲಾಗಿದೆ.

ಇದೇ ರೀತಿ ಭಾರತೀಯ ನಾಣ್ಯಗಳು, ಭಾರತೀಯ ಮೂರ್ತಿ ನಿರ್ಮಾಣ ಕಲೆ ಮುಂತಾದವನ್ನು ಸಚಿತ್ರ ನಕ್ಷೆಗಳಲ್ಲಿ ತೋರಿಸಲಾಗಿದೆ. ಮುಂದಿನ ವರ್ಷ ಭಾರತೀಯ ಆಭರಣಗಳು, ಪೀಠೋಪಕರಣಗಳು, ವಸ್ತ್ರಗಳು ಮತ್ತು ವಾಸ್ತು ಶಿಲ್ಪ ಸಂಬಂಧವಾದ 'ಗ್ಯಾಲರಿ'ಗಳನ್ನು ತಣ್ಣ

(೧೨ನೇ ಪುಟ ನೋಡಿರಿ)

## ಹಬ್ಬಗಳ ಸುಗ್ಗಿ

* * *

ಈ ವರ್ಷ ನಮ್ಮ ಜಿಲ್ಲೆಯ ಎರಡು ಬೇಂಕುಗಳ ಸುವರ್ಣದ ಹಬ್ಬ. ಇನ್ನೆರಡು ಬೇಂಕುಗಳ ಬೆಳ್ಳಿಯ ಹಬ್ಬ.

ಈ ಯಶಸ್ವೀ ಬೆಳವಣಿಗೆಗೆ ಕಾರಣ:- ನಮ್ಮ ಜನರ ಬೇಂಕು ಮನೋಭಾವ ಮತ್ತು ಪ್ರಗತಿಪರ ಧೋರಣೆ.

ಅಂತೆಯೇ ಬೇಂಕಿನವರ ವ್ಯವಹಾರ ಜಾಣ್ಮೆ ಮತ್ತು ಕಾರ್ಯ ನಿಷ್ಠೆ.

ಕಳೆದ ಎರಡೂವರೆ ದಶಮಾನಗಳಿಂದ ಜಯಶೀಲವಾಗಿ ಮುಂದೊತ್ತಿ ಬಂದು ಈ ವರ್ಷವೇ ಆಚರಿಸಲ್ಪಡುವ ನಮ್ಮ ರಜತೋತ್ಸವದ ಶುಭ ಮುಹೂರ್ತದಲ್ಲಿ ನಿಮಗೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ: ಮಂಗಳೂರು—3.

ಜಮಾ ವಹಿವಾಟು ಮೊಬಲಗು ರೂ. 90,00,000

# ವ್ಯಾಯಾಮದ ಪ್ರಭಾವ

## ಕ್ರಮಬದ್ಧವಾದ ಅಂಗ ಸಾಧನೆಯು ಅಮಿತ ಸತ್ಫಲಗಳನ್ನಿತ್ತು ನಮ್ಮ ಜೀವನವನ್ನು ಸುಖಕರವಾಗಿಸುತ್ತದೆ: ದೀರ್ಘಾಯುವಾಗಿ ಬಾಳಲು ಇದೊಂದೇ ಉಪಾಯ ಸಾಕು.

ದೇಹಕ್ಕೆ ಸ್ಥಿರತ್ವವನ್ನುಂಟುಮಾಡುವಂಥ ಶಾಸ್ತ್ರ ಸಮ್ಮತವಾದ ದೇಹದ ಚಲನ ಕ್ರಿಯೆಯನ್ನೇ ವ್ಯಾಯಾಮವೆಂದೆನ್ನುವುದು. ವ್ಯಾಯಾಮದಿಂದ ಶ್ವಾಸೋಚ್ಛ್ವಾಸ ಕ್ರಿಯೆಯು ಭರದಿಂದ ಸಾಗುವದು. ಶುದ್ಧವಾದ ಗಾಳಿಯು ಬೇಗನೇ ಶ್ವಾಸಕೋಶಗಳಲ್ಲಿ ಸೇರುವುದು. ಶ್ವಾಸಕೋಶಗಳ ಗಾತ್ರ ಹೆಚ್ಚುವುದು. ಶ್ವಾಸ ಗ್ರಹಣ ಶಕ್ತಿಯು ಬಲಿಯುವುದು. ರಕ್ತವು ಹೆಚ್ಚು ಕೆಂಪಾಗುವುದು ಪ್ರಾಣ ಸಂಗ್ರಹವಾಗುವುದು. ನಿಶ್ವಾಸದಿಂದ ಶರೀರದೊಳಗೆ ಕೂಡಿಬಿದ್ದ ಮಲಿನ ಕಣಗಳು ಹೊರಗೆ ಹೋಗುವುವು. ರಕ್ತಾಶಯದಲ್ಲಿ ಕಾರ್ಯವು ಭರದಿಂದ ಸಾಗುವುದು. ರಕ್ತವಾಹಿನಿಗಳಲ್ಲಿ ರಕ್ತವು ಹೆಚ್ಚಾಗಿ ಓಡಾಡುವುದು. ಶರೀರದ ಸೂಕ್ಷ್ಮ ಭಾಗಗಳಲ್ಲೆಲ್ಲ ರಕ್ತವು ಸರಿಯಾಗಿ ಸಕಾಲಕ್ಕೆ ದೊರಕುವುದು. ರಕ್ತಾಶಯ ರಕ್ತನಾಳಗಳು ಚೆನ್ನಾಗಿ ಬೆಳೆದು ಬಲಿಷ್ಠವಾಗುವುದು. ಆಕುಂಚನ ಪ್ರಸರಣ ಕ್ರಿಯೆಯು ಕಂಡು ಬರುವುದು. ಇದರಿಂದ ಇವು ಆಘಾತಗಳನ್ನು ಸ್ನಾಯುಗಳಿಗೆ ತಡೆಕೊಳ್ಳಲು ಸಾಮರ್ಥ್ಯವುಳ್ಳವಾಗುವುವು. ಹೆಚ್ಚು ಹುರಿಕಟ್ಟಾಗುವುವು. ಮೈತುಂಬಿ ಚಂದ ಕಾಣುವುದು. ಪಚನೇಂದ್ರಿಯದಲ್ಲಿ ಪಚನ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರುವುವು. ಉಂಡ ಅನ್ನ ಬೇಗನೆ ಜೀರ್ಣವಾಗುವುದು. ಹಸಿವು ಹೆಚ್ಚುವುದು. ಹೊಟ್ಟೆ ನೋವು ಮೊದಲಾದ ನೋವುಗಳೆಲ್ಲಾ ಮಾಯವಾಗುವುವು. ಪಚನೇಂದ್ರಿಯದಲ್ಲಿ ದಾರ್ಢ್ಯವುಂಟಾಗುವುದು. ಎಲುಬುಗಳು ಬೇಗನೆ ಬೆಳೆಯುವುವು. ಆಕಾರ ಮಾನ ಹೆಚ್ಚುವುದು. ದೇಹವು ಬೇಗನೆ ಬೆಳೆಯುವುದು ಕಂಡು ಬರುವುದು. ಮಿದುಳಿಗೆ ಚೆನ್ನಾದ ರಕ್ತದ ಪೂರೈಕೆಯಾಗುವುದು. ಜ್ಞಾನ ಮೊದಲಾದ ಕ್ರಿಯೆಗಳಿಗೆ ಅನುಕೂಲತೆಯಾಗುವುದು. ಶರೀರದಲ್ಲಿ ಚಟುವಟಿಕೆ ಕಾರ್ಯಗಳನ್ನು ನೆರವೇರಿಸುವ ಯೋಗ್ಯತೆ, ಬೆಳವಣಿಗೆ, ಮೊದಲಾದ ಲಾಭಗಳು ಕಂಡುಬರುತ್ತವೆ.

ಆಯುರ್ಬಲ, ವೀರ್ಯ, ಪರಾಕ್ರಮ, ಶಾಂತಿ, ಪುಷ್ಟಿ, ಧೃತಿ, ಕಾಂತಿ, ಚಿರಾರೋಗ್ಯಗಳು ವ್ಯಾಯಾಮದಿಂದುಂಟಾಗುವುವೆಂಬ ಅಭಿಪ್ರಾಯವು ಅನುಭವದಿಂದ ಸತ್ಯವೆಂದು ಕಂಡುಬರುತ್ತದೆ. ಮೇಲೆ ಹೇಳಿದ ಒಂದೊಂದು ಗುಣವು ಲಕ್ಷಾಂತರ ರೂಪಾಯಿ ಖರ್ಚುಮಾಡಿದರೂ ಸಿಗದಂಥವು. ವ್ಯಾಯಾಮದಿಂದ ಅವು ದೊರಕುವುವೆಂದಾಗ ವ್ಯಾಯಾಮದ ಮಹಿಮೆಯಾದರೂ ಏನು? ಧೈರ್ಯವಿದ್ದವನಿಗೆ ದೈವವೇನುಮಾಡೀತು ಎಂಬ ನಾಣ್ಣುಡಿಯಂತೆ ದೈವದಾಟವನ್ನು ನಿಲ್ಲಿಸಲಿಕ್ಕೆ ಧೈರ್ಯವೇ ಕಾರಣವಾಗಿದ್ದು ಅದು ವ್ಯಾಯಾಮದಿಂದ ಸಿಕ್ಕುವುದು. ಒಕ್ಕಲಿಗನು ಕೆಲ ಬೀಜಗಳಿಂದ ಹಲವಾರು ಬೀಜಗಳನ್ನು ರಾಶಿ ಬೆಳೆಕೊಳ್ಳುವಂತೆ, ಹಣವಂತರು ಸಾಲಗಾರನಿಗೆ ಅಸಲು ಕೊಟ್ಟು ಅದರಿಂದ ಅಸಲು ಮತ್ತು ಬಡ್ಡಿ ಪಡೆಕೊಳ್ಳುವಂತೆ, ಈ ವ್ಯಾಯಾಮ ಸಾಲಗಾರನಿಗೆ ಕೊಟ್ಟ ಶ್ವಾಸನಿಧಿಯು. ಉಳಿದ ಕಾಲದಲ್ಲೆಲ್ಲ ಅಧಿಕ ಆಯುಷ್ಯದೊಂದಿಗೆ ಮರಳಿಬರುವುದು ನೂರು ರಾತ್ತಲ ಭಾರವುಳ್ಳ ಒಂದು ತೂಕದ ಕಲ್ಲನ್ನು ಎತ್ತಲಿಕ್ಕೆ ಒಬ್ಬ ಗುಮಾಸ್ತನನ್ನೂ ಒಬ್ಬ ಜಟ್ಟಿಯನ್ನೂ ಬಿಟ್ಟರೆ ಗುಮಾಸ್ತನು ಕಲ್ಲು ಎತ್ತುವಾಗ ಶೀರ ಉಸುರುಗರೆಯುವನು. ಇದರಿಂದ ಅವನ ಶ್ವಾಸ ಖಜಾನೆಯು ಹೆಚ್ಚು ಬರಿದಾಗಿ ಹೋಗುವುದು. ಈ ಬಗ್ಗೆ ಜಟ್ಟಿಯ ಕಡೆಗೆ ನೋಡಿದರೆ ಈ ಕ್ರಿಯೆಯು ಅವನಿಂದ ನಿರಾಯಾಸವಾಗಿ ಆದದ್ದು ಕಂಡುಬರುವುದು. ಇಲ್ಲಿ ಅವನ ಆಯುಷ್ಯರೂಪಿ ಶ್ವಾಸನಿಧಿಯು ಗುಮಾಸ್ತನನಿಗಿಂತ ಕಡಿಮೆ ಖರ್ಚಾದದ್ದು ಕಂಡುಬರುವದು. ಈ ಪ್ರಕಾರ ವ್ಯಾಯಾಮ ಮಾಡುವವನು ತನ್ನ ವ್ಯಾಯಾಮದ ಬಲದಿಂದ ಆಯುಷ್ಯವನ್ನು ಬೆಳೆಯಿಸಿಕೊಳ್ಳುತ್ತಾನೆ ಇನ್ನುಳಿದ ವ್ಯಾಯಾಮದ ಫಲಗಳಾದ ಬಲ ಪರಾಕ್ರಮ ಪುಷ್ಟಿ, ಕಾಂತಿಗಳ ಮಹತ್ವವನ್ನು ಹೇಳಲಾಗಲ್ಲ.

ವ್ಯಾಯಾಮಕ್ಕೆ ಎಲ್ಲಾ ದೇಶಗಳಲ್ಲೂ ತುಂಬ ಆದರವಿವೆ. ಒಂದೊಂದು ದೇಶದಲ್ಲಿ ಒಂದೊಂದು ತರದ ಆಟಗಳಿಗೆ ತುಂಬಾ ಪ್ರಾಧಾನ್ಯವನ್ನಿತ್ತಿದ್ದಾರೆ. ಒಲಿಂಪಿಕ್ ಆಟಗಳು ಗ್ರೀಸಿನಲ್ಲಿ ಪ್ರಸಿದ್ಧ. ಫೀನ್‍ಲೇಂಡಿನ ಜನರು ಸ್ಕಿಪಿಂಗ್‍ನಲ್ಲಿ ಪ್ರವೀಣರು, ವಾಲಿಬೋಲು ಆಟವು ಅಮೇರಿಕದಲ್ಲೂ ಕ್ರಿಕೆಟ್ ಫೂಟ್ ಬೋಲು ಆಟಗಳು ಇಂಗ್ಲೇಂಡಿನಲ್ಲೂ ಹೆಸರು ವಾಸಿಯಾಗಿವೆ ಈ ಆಟಗಳ ಬಗ್ಗೆ ಅವರು ನೀರಿನಂತೆ ಹಣವನ್ನು ಖರ್ಚು ಮಾಡುತ್ತಾರೆ. ಲೇಖನ, ಭಾಷಣ, ಚಿತ್ರ ಇತ್ಯಾದಿಗಳ ಮೂಲಕ ಪ್ರಸಿದ್ಧಿಪಡಿಸುತ್ತಾರೆ. ಆಟಗಳಿಂದ ಸಾಂಘಿಕ ಶಕ್ತಿ ಬೆಳೆಯುವುದಲ್ಲದೆ ನಮ್ಮಲ್ಲಿ ಸಹನಾ ಶಕ್ತಿಯೂ ಧೈರ್ಯವೂ ಹೆಚ್ಚುತ್ತವೆ. ಶಿಸ್ತು, ಆಜ್ಞಾಪರಿಪಾಲಕತ್ವ ಮೊದಲಾದ ಅಮೂಲ್ಯ ಗುಣಗಳು ನಮ್ಮಲ್ಲಿ ಬೆಳೆಯುವುವು. ನಮ್ಮ ದೇಶದಲ್ಲಿ ಮಲ್ಲವಿದ್ಯೆ ಎಂದಿನಿಂದಲೋ ತಲೆ ಎತ್ತಿ ನಿಂತಿದೆ. ಕೀಚಕ, ಭೀಮ ಮೊದಲಾದವರ ಹೆಸರು ಮೊದಲು ಎದ್ದು ಕಾಣುತ್ತಿದೆ. ಹಳ್ಳಿ ಪಟ್ಟಣಗಳಲ್ಲಿ ಗರಡಿ ಮನೆಗಳಿವೆ. ಜಗಮಾನ್ಯವಾದ ಪ್ರಾಣಾಯಾಮ ಆಸನ ಕ್ರಿಯೆಗಳು ಎಂದೋ ಉತ್ಪನ್ನವಾಗಿ ಇಂದಿನ ವರೆಗೆ ಬೆಳಕು ಬೀರುತ್ತ ಬಂದಿರುತ್ತದೆ. ಪರಶುರಾಮನ ಕೊಡಲಿಯ ವಿದ್ಯೆ ಕೃಷ್ಣ-ಬಾಣಾಸುರರ ಮುಷ್ಟಿ ಯುದ್ಧ, ಮಹತ್ವವಾದ ವ್ಯಾಯಾಮ ಕ್ರಿಯೆಗಳೇ ಆಗಿವೆ. ವ್ಯಾಯಾಮ ಮಾಡದವರು ಎಲ್ಲಾ ತರದ ರೋಗಗಳಿಗೂ, ಸಂಕಷ್ಟಗಳಿಗೂ ಕಾರಣಭೂತರಾಗಿರುತ್ತಾರೆ. ವಾತ ಪಿತ್ಥ, ಕಫ ಎಂಬೀ ತ್ರಿದೋಷಗಳ ಹೊಡೆತಕ್ಕೆ ನಗ್ಗುನುಗ್ಗಾಗುವರು. ವೈರಾಗ್ಯಕ್ಕೆ ದುರ್ಬಲವಾಗಲಿಕ್ಕೆ ಅವನು ಕೈಗೆ ವ್ಯಾಯಾಮ ಕೊಡದಿದ್ದುದೇ ಕಾರಣ. ಮಡಿವಾಳನ ಮುಂಗೈಯಲ್ಲಿ ಸಿಗಬಾರದು ಗಾಣಿಗನ ಎದೆಯಲ್ಲಿ ಸಿಗಬಾರದೆಂಬುದಕ್ಕೆ ಅವರವರು ಆಯಾ ಇಂದ್ರಿಯಗಳಿಗೆ ಕೊಟ್ಟ ದುಡಿಮೆಯೇ ಕಾರಣ. ಕುಸ್ತೀ ಹುಡುಗನನ್ನು ಕಂಡರೆ ಸಹಜವಾಗಿ ದುಷ್ಟರಿಗೆ ಹೆದರಿಕೆ ಕಳ್ಳರಿಂದ ಕೇಳುವರ ಮನೆ ಲೂಟಿಯಾಗಲಿಕ್ಕೂ, ಗರಿ ಮಂಡಿ ಜನರಿಂದ ಹಲವರು ಹೊಡೆತ ತಿನ್ನಲಿಕ್ಕೂ ಅವರ ಶಾರೀರಿಕ ಬಲದ ಅಭಾವವೇ ಮೂಲಕಾರಣ. ವ್ಯಾಯಾಮಮಾಡಿದರೆ ಬರವುದು ಬಯಸಿದರೆ ಬರಲಾರದು. ಸ್ವಾಮಿ ರಾಮತೀರ್ಥರು ಎಲುಬಿನ ಹಂದರದಂತಾಗಿದ್ದರು. ನಿತ್ಯ ವ್ಯಾಯಾಮಮಾಡಿ ಗೋಣಿಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹಿಮನದಿಗಳನ್ನು ಸಹಜವಾಗಿ ಸಾರಾಗಿ ಹೋಗಹತ್ತಿದ್ದರು. ಅಶಕ್ತರಾದವರು ಸಶಕ್ತರಾದುದಕ್ಕೆ ಇವರೊಬ್ಬರ ಈ ಉದಾಹರಣೆ ಕೊಟ್ಟರೆ ಸಾಕು. ವ್ಯಾಯಾಮದಂಥ ಸೋನ್ನತಿಯ ಮಾರ್ಗ ಬೇರೊಂದಿಲ್ಲ. ಇದರಿಂದ ರೋಗಿಯು ನಿರೋಗಿಯಾಗುವನು. ಅಶಕ್ತನು ಸಶಕ್ತನಾಗುವನು. ಅಲ್ಪಾಯುವು ದೀರ್ಘಾಯುವಾಗುವನು. ನಿಸ್ತೇಜಿಯು ಸತೇಜಿಯಾಗುವನು. ಆಲಸಿಯು ನಿರಾಲಸ್ಯನಾಗುವನು, ವೀರ್ಯಹೀನನು ವೀರ್ಯವಾನನಾಗುವನು.

— ಬೇಬಿ ಸರೋಜಿನಿ.

(ಆಧಾರದಿಂದ)

ಕ್ಷಯರೋಗ ನಿವಾರಣೆಯಲ್ಲಿ ಬಿ. ಸಿ. ಜಿ. ಡಾಕಿನ ಉಪಯುಕ್ತತೆಯನ್ನು ಲೋಕವಿಂದು ಮೆಚ್ಚಿಕೊಂಡಿದೆ. ಚಿತ್ರದಲ್ಲಿ ಬ್ರಿಟನ್ನಿನ ಪ್ರಯೋಗ ಶಾಲೆಯೊಂದರಲ್ಲಿ ಬಿ. ಸಿ. ಜಿ. ಕೀಟಾಣುಗಳನ್ನು ಪ್ರತ್ಯೇಕಿಸಿಡಲು ಸಿದ್ಧತೆ ನಡೆಸುವುದನ್ನು ಕಾಣಬಹುದು.

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.



## ರಶಿಯದ ಶಾಸನಾಂಗ

### "ನಾನು ಜನತೆಯ ಸೇವಕ" ಎನ್ನಲು ಪ್ರತಿಯೊಬ್ಬ ಪ್ರತಿನಿಧಿಯೂ ರಶ್ಯದಲ್ಲಿ ಹೆಮ್ಮೆಪಡುತ್ತಾನೆ— ಅಲ್ಲಿ ಸ್ತ್ರೀಯರಿಗೆ ಅತ್ಯಧಿಕ ಪ್ರಾತಿನಿಧ್ಯವಿದೆ!

ಸೋವಿಯತ್ ಒಕ್ಕೂಟದಲ್ಲಿ ಕಾರ್ಮಿಕ ಜನತೆಯು ಸೋವಿಯತ್ತುಗಳೆಲ್ಲವೂ— ಸೋವಿಯತ್ ಒಕ್ಕೂಟದ ಸರ್ವೋಚ್ಚ ಸೋವಿಯತ್ತಿನಿಂದ ಸ್ಥಳೀಯ ಸೋವಿಯತ್ತುಗಳ ವರೆಗೆ—ಜನತೆಯಿಂದ ಚುನಾಯಿಸಲ್ಪಡುತ್ತಾರೆ.

ಸೋವಿಯತ್ ಒಕ್ಕೂಟದಲ್ಲಿ ಅಧಿಕಾರವನ್ನು ನಡೆಸುವ ಸಂಸ್ಥೆಗಳ ವಾಸ್ತವವಾದ ಜನಪ್ರಿಯ ಲಕ್ಷಣವು, ಎಲ್ಲಕ್ಕೂ ಮೊದಲಾಗಿ, ಚುನಾವಣೆಯ ಪದ್ಧತಿಯ ಪ್ರಜಾಪ್ರಭುತ್ವವಾದೀ ಸ್ವರೂಪದಿಂದ ನಿರ್ಣಯಿಸಲ್ಪಡುತ್ತದೆ ಉದ್ಯಮಗಳಲ್ಲಿನ ಮತ್ತು ಸಂಸ್ಥೆಗಳಲ್ಲಿನ ಕಾರ್ಮಿಕರ ಮತ್ತು ಕಚೇರಿ ಕರ್ಮಚಾರಿಗಳ ಸಾರ್ವತ್ರಿಕ ಸಭೆಗಳಲ್ಲಿಯೂ, ಮತ್ತು ಸಾಮೂಹಿಕ ಕೃಷಿ ಕ್ಷೇತ್ರಗಳ ರೈತರ ಮತ್ತು ಸೈನಿಕ ತುಕಡಿಗಳಲ್ಲಿನ ಸೈನಿಕರ ಸಭೆಗಳಲ್ಲಿಯೂ ಸೋವಿಯತ್ತುಗಳಿಗೆ ನಾಮಕರಣಗಳು ಮಾಡಲ್ಪಡುತ್ತವೆ.. ನಾಮಕರಣಗಳನ್ನು ಮಾಡುವ ಹಕ್ಕು, ಎಲ್ಲಾ ಸಾರ್ವಜನಿಕ ಸಂಘಟನೆಗಳಿಂದಲೂ (ಪಾರ್ಟಿ, ಟ್ರೇಡ್ ಯೂನಿಯನ್', ಮಹಿಳೆಯರ, ಯುವಜನರ ಮತ್ತು ಇತರರ ಸಂಘಟನೆಗಳು) ಮತ್ತು ಕಾರ್ಮಿಕ ಜನತೆಯ ಸಂಘ (ಸೊಸೈಟಿ)ಗಳಿಂದಲೂ ಅನುಭೋಗಿಸಲ್ಪಡುತ್ತದೆ. ಕಾರ್ಮಿಕ ಜನತೆಯು ತಾವು ಚೆನ್ನಾಗಿ ಬಲ್ಲವರನ್ನೂ ಮತ್ತು ತಮ್ಮ ನಂಬಿಕೆಯ ಜನರನ್ನೂ ನಾಮಕರಣ ಮಾಡುವುದು ತೀರ ಸ್ವಾಭಾವಿಕವಾದುದೇ ಆಗಿದೆ.

ಕಾರ್ಮಿಕ ಜನತೆಯಿಂದ ಸೋವಿಯತ್ತುಗಳಿಗೆ ಪ್ರತಿನಿಧಿಗಳಾಗಿ ಯಾರು ಚುನಾಯಿತರಾಗುತ್ತಾರೆ? ಪ್ರಚಲಿತ ಸರ್ವೋಚ್ಚ ಸೋವಿಯತ್ತಿನಲ್ಲಿರುವವರನ್ನು ಕುರಿತು—ಅವರ ಅಧಿಕಾರ ಕಾಲಾವಧಿಯು ೧೯೫೮ರಲ್ಲಿ ಮುಗಿಯುವುದು— ದೊರೆಯುವ ಆಧಾರಾಂಶಗಳು ಕೆಲವನ್ನು ಪರೀಕ್ಷಿಸೋಣ.

ಈ ಸರ್ವೋಚ್ಚ ಸೋವಿಯತ್ತಿನಲ್ಲಿ ೧,೩೪೭ ಜನ ಪ್ರತಿನಿಧಿಗಳಿದ್ದಾರೆ. ಅವರಲ್ಲಿ ೩೯೧ ಜನ ಕಾರ್ಮಿಕರೂ ಮತ್ತು ೨೫೦ ಜನ ರೈತರೂ ಇದ್ದಾರೆ. ಸರ್ವೋಚ್ಚ ಸೋವಿಯತ್ತಿನ ಅಧಿವೇಶನಗಳು ನಡೆಯುತ್ತಿರುವ ಕಾಲದಲ್ಲಿ, ರಶಿಯನ್ ನೇಕಾರರಾದ ಲ್ಯುಬೋವ್ ಅನನ್ಯೇವಾ ಮತ್ತು ತಾಜಿಕ್ ನೇಕಾರರಾದ ರೋಬಿಯಾ ಜುರಾಯೇವಾರವರೂ,—(ಇವರೀರ್ವರೂ ಮಹಿಳೆಯರು)—ತುರ್ಕ್‌ಮೆನ್ ರೈಲ್ವೇ ಎಂಜಿನ್ ಚಾಲಕ ಮುರಾದ್ ಭುಲೆತೋವ್‌ರವರೂ, ಉಕ್ರೇನಿನ ಗಣಿ ಕಾರ್ಮಿಕರಾದ ಇವಾನ್ ವಾಲೆಗೂರರವರೂ ಅಜರ್ ಬೈಜಾನಿನ ಹತ್ತಿ ಬೆಳೆಯುವ ಬೇಸಾಯಗಿತ್ತಿಯವರಾದ ಪಮಾವಣ ಗಾಸನೋವಾರವರೂ ಮತ್ತು ತಾತರ್ ಶರಕಾರಿ ಕೃಷಕರಾದ ವಗಿಜ್ ಹಷೀಜೋವ್‌ರವರೂ, ಅಲ್ಲಿ ಕಾಣ ಸಿಗುತ್ತಾರೆ,

ಈ ಸರ್ವೋಚ್ಚ ಸೋವಿಯತ್ತಿನಲ್ಲಿ ೩೪೮ ಜನ ಸ್ತ್ರೀ—ಪ್ರತಿನಿಧಿಯರಿದ್ದಾರೆ. ಯೂರೋಪಿನ ಮತ್ತು ಅಮೇರಿಕದ ಬಂಡವಾಳವಾದೀ ದೇಶಗಳ ಎಲ್ಲಾ ಶಾಸನ ಸಭೆಗಳಲ್ಲಿಯೂ, ಒಟ್ಟಿಗೆ ತೆಗೆದುಕೊಂಡಲ್ಲಿ ಇರುವ ಸ್ತ್ರೀ ಪ್ರತಿನಿಧಿಗಳ ಸಂಖ್ಯೆಗಿಂತಲೂ, ಇಲ್ಲಿಯ ಸ್ತ್ರೀ ಪ್ರತಿನಿಧಿ ಸಂಖ್ಯೆಯು ಹೆಚ್ಚಾಗಿದೆ. ದೇಶದಲ್ಲಿನ ರಾಜ್ಯಾಧಿಕಾರ ಶಕ್ತಿಯ ಅತ್ಯುನ್ನತ ಸಂಸ್ಥೆಯಲ್ಲಿರುವ ಮಹಿಳೆಯರ ಅತ್ಯಧಿಕ ಶೇಕಡಾವಾರು ಪ್ರಮಾಣವು, ಸೋವಿಯತ್ ಒಕ್ಕೂಟದಲ್ಲಿ ಗಂಡಸರೊಂದಿಗೆ ಮಹಿಳೆಯರಿಗಿರುವ ವಾಸ್ತವಿಕವಾದ ಸಮಾನತೆಯ ಬಗ್ಗೆ ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ.

ಮೇಧಾವಿಗಳು — ಇಂಜಿನಿಯರರು, ಡಾಕ್ಟರರು, ಉಪಾಧ್ಯಾಯರು, ವಿಜ್ಞಾನಿಗಳು, ಪಂಡಿತರು ಮತ್ತು ಕಲಾಕ್ಷೇತ್ರಗಳಲ್ಲಿ ಕೆಲಸಮಾಡುವವರು —ಸೋವಿಯತ್ ಒಕ್ಕೂಟದ ಸರ್ವೋಚ್ಚ ಸೋವಿಯತ್ತಿನಲ್ಲಿ ವಿಸ್ತೃತ ಪ್ರಾತಿನಿಧ್ಯವನ್ನು ಪಡೆದಿದ್ದಾರೆ. ಕಾರ್ಮಿಕ ಜನತೆಯು ಅವರ ಮೇಲೆ ಇಟ್ಟಿರುವ ಮಹಾ ಭರವಸೆಯು, ಸೋವಿಯತ್ ಜನತೆಯ ಎಲ್ಲಾ ಶ್ರೇಣಿಗಳ ಸನ್ನಿಹಿತ ಸ್ನೇಹದ ಮತ್ತು ಐಕಮತ್ಯದ ಬಗ್ಗೆ ಸಾಕ್ಷೀಭೂತವಾಗಿದೆ.

ಸುವಿಖ್ಯಾತ ಲೇಖಕರಾದ ಮಿಖಾಯಿಲ್ ಷೊಲೊಖೋವ್, ಪ್ರಮುಖ ಪರಮಾಣು ವಿಜ್ಞಾನಿ 'ಅಕೆಡೆಮೀಷಿಯನ್' ಇಗೋರ್ ಕುರ್‌ಚಾತೋವ್, ಕಜಾಖ್ ಇಂಜನಿಯರ್ ಜುಲೀಖಾ ಸಬೀತೋವ್, ಉಜ್ಬೆಕ್ ಕಲಾವಿದರು ಸಾರ್ ಇಷ್‌ನ್ ತುರ್‌ಯೇವ್, ಕಾರಾ- ಕಲ್ಪಕಿಯಾದಿಂದ ಬಂದ ಗ್ರಾಮ ವೈದ್ಯರಾದ ಉರಾಜ್ಮೆತ್ ಹಲ್ಮರಾತೋವ್, ಸಾಮೂಹಿಕ ಕೃಷಿ ಕ್ಷೇತ್ರದ ಪ್ರಯೋಗ ಪಂಡಿತರು ತೆರೆನ್‌ತೀ ಮಾಲ್ಸೇವ್ ಮತ್ತು ಅನೇಕ ಜನ ಇತರರು ಸೋವಿಯಟ್ ಒಕ್ಕೂಟದ ಸರ್ವೋಚ್ಚ ಸೋವಿಯತ್ತಿನ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ.

ಸೋವಿಯತ್ ಒಕ್ಕೂಟದ ಸರ್ವೋಚ್ಚ ಸೋವಿಯತ್ತಿನ ಪ್ರತಿನಿಧಿಗಳೆಲ್ಲರೂ— ಕಾರ್ಮಿಕರಾಗಲಿ, ಸಾಮೂಹಿಕ ಕ್ಷೇತ್ರ ಕೃಷಕರಾಗಲಿ, ಅಥವಾ ಮೇಧಾವಿಗಳಾಗಲಿ—ಜನತೆಯ ರಾಯಭಾರಿಗಳಾಗಿರುತ್ತಾರೆ. ಅವರು ತಮ್ಮ ಜನತೆಯ ಹಿತಗಳಿಗೆ ಸೇವೆಯನ್ನು ಸಲ್ಲಿಸುತ್ತಾರೆ ಮತ್ತು ಅವರೊಡನೆ ಸನ್ನಿಹಿತ ಸಂಬಂಧವುಳ್ಳವರಾಗಿದ್ದಾರೆ. ಪ್ರತಿನಿಧಿಗಳ ಮತ್ತು ರಾಜ್ಯಾಧಿಕಾರ ಸಂಸ್ಥೆಗಳ ಚಟುವಟಿಕೆಗಳು ಒಟ್ಟನಲ್ಲಿ ಜನತೆಯ ಕಣ್ಣ ಮುಂದೆಯೇ ನಿರ್ವಹಿಸಲ್ಪಡುತ್ತವೆ. ರಾಜ್ಯಾಧಿಕಾರ ಸಂಸ್ಥೆಗಳು ಜನತೆಯಿಂದ ಮರೆಮಾಡಿ ಯಾವ ರಹಸ್ಯಗಳನ್ನೂ ಇಟ್ಟಿಲ್ಲ. ಇದಕ್ಕೂ ಹೆಚ್ಚಾಗಿ, ಅತ್ಯಂತ ಮಹತ್ವಪೂರ್ಣವಾದ ರಾಜ್ಯಾಧಿಕಾರದ ಸಮಸ್ಯೆಗಳು, ಜನತೆಯ ಅತ್ಯಂತ ವಿಸ್ತೃತವಾದ ಸಕ್ರಿಯ ಸಹಕಾರದೊಡನೆ ಸೋವಿಯತ್ತುಗಳಿಂದ ನಿರ್ಣಯಿಸಲ್ಪಡುತ್ತವೆ.

ಸೋವಿಯತ್ ರಾಜ್ಯದ ಸಂಸ್ಥಾಪಕರಾದ ವಿ. ಐ. ಲೆನಿನ್‌ರವರು ರಾಜ್ಯಾಧಿಕಾರದ ತಿರುಳನ್ನು ವಿವರಿಸುತ್ತಾ, ಹೀಗೆ ಹೇಳಿದರು.

"ಅದು ಎಲ್ಲರಿಗೂ ತೆರೆದಿಡಲ್ಪಟ್ಟಿರುವ ಅಧಿಕಾರವಾಗಿದೆ, ಜನಸಮುದಾಯಗಳೆದಿರಾಗಿ ಅದು ಎಲ್ಲ ಕೆಲಸಗಳನ್ನೂ ಮಾಡುತ್ತದೆ, ಜನಸಮುದಾಯಗಳಿಗೆ ಅದು ಎಟಕುವಂತಿರುತ್ತದೆ, ಮತ್ತು ಅದು ನೇರವಾಗಿ ಜನಸಮುದಾಯಗಳಿಂದಲೇ ಉದ್ಭವಿಸುತ್ತದೆ; ಅದು ಜನಸಮುದಾಯಗಳ ಮತ್ತು ಅವುಗಳ ದೃಢಚಿತ್ತದ ನೇರವಾದ ರಾಜ್ಯಾಂಗವಾಗಿರುತ್ತದೆ."

ಪ್ರತಿನಿಧಿಯು ತನ್ನ ಚಟುವಟಿಕೆಗಳ ವಿಷಯದಲ್ಲಿ ಆತನನ್ನು ಚುನಾಯಿಸಿದ ಜನತೆಗೆ ಜವಾಬುದಾರಿಯುಳ್ಳವನಾಗಿರುತ್ತಾನೆ. ಕಾರ್ಮಿಕ ಜನತೆಯು ಪ್ರತಿನಿಧಿಗಳ ಕಾರ್ಯವನ್ನು ವಿಮರ್ಶಿಸಲು ಮತ್ತು ನಿಯಂತ್ರಿಸಲು ಅವರು ತಮ್ಮ ಕರ್ತವ್ಯಗಳನ್ನು ಆತ್ಮನಿಷ್ಠೆಯಿಂದಲೂ ಮತ್ತು ಚಟುವಟಿಕೆಯಿಂದಲೂ ನಿರ್ವಹಿಸುತ್ತಿದ್ದಾರೆಯೋ ಎಂಬುವನ್ನು ತಮ್ಮ ಅಂಕೆಯಲ್ಲಿಟ್ಟಿರಲು ಹಕ್ಕುಳ್ಳವರಾಗಿರುತ್ತಾರೆ. ಪ್ರತಿನಿಧಿಯು, ಜನತೆಯ ಭರವಸೆ ಯುಕ್ತವಾದುದೆಂಬುದನ್ನು ತೋರಿಸುವುದರಲ್ಲಿ ವಿಫಲನಾದ ಸಂದರ್ಭದಲ್ಲಿ, ಆತನ ಅಧಿಕಾರಾವಧಿಯು ಮುಗಿಯುವುದರೊಳಗಾಗಿಯೇ ಆತನನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ ಹಕ್ಕನ್ನು ಸೋವಿಯತ್ ಘಟನೆಯು ಜನತೆಗೆ ಕೊಟ್ಟಿದೆ.

ಸೋವಿಯತ್ ನಾಡಿನಲ್ಲಿ, ಕಾರ್ಮಿಕ ಜನತೆಯ ನಾಡಿನಲ್ಲಿ, ಶೋಷಕರು ಯಾರೂ ಇಲ್ಲ; ಆದುದರಿಂದಲೇ ಅಲ್ಲಿ "ಆಳುಗಳು" ಯಾರೂ ಇಲ್ಲ. ಈ ಶಬ್ದವು ಕ್ರಮಶಃ ಅಲ್ಲಿ ಬಳಕೆಯಲ್ಲಿಲ್ಲದಂತಾಗುತ್ತಿದೆ ಪ್ರಾಯಶಃ, ಒಂದೇ ಒಂದು ಸಂದರ್ಭದಲ್ಲಿ ಅಲ್ಲಿ ಈ ಶಬ್ದವು ಇನ್ನೂ ಬಳಸಲ್ಪಡುತ್ತದೆ. ನೀವು ಯಾರಾದರೊಬ್ಬ ಪ್ರತಿನಿಧಿಯನ್ನು ಆತನ ವೃತ್ತಿ ಬಗ್ಗೆ ವಿಚಾರಿಸಿದರೆ, ಆತನು ಹೆಮ್ಮೆಯಿಂದ ನಿಮಗೆ ಉತ್ತರವನ್ನು ಹೀಗೆ ಕೊಡುವನು:

"ನಾನು ಜನತೆಯ ಆಳು!"

---

ಸುಧಾ— ನನಗೀಗ ಮೂವತ್ತು ವರ್ಷ ಪ್ರಾಯವಾದಂತೆ ತೋರುವುದೇ ನಳಿನಿ?

ನಳಿನಿ— ಇಲ್ಲ ಸುಧಾ, ಈಗ ಖಂಡಿತ ತೋರುವುದಿಲ್ಲ. ಕೆಲವು ವರ್ಷಗಳ ಹಿಂದಾದರೆ ತೋರುತ್ತಿತ್ತು.

೦ ೦ ೦

ಗೆಳೆಯ—(ಆಫೀಸು ಪೇದೆಯ ಕೆಲಸಕ್ಕೆ ಒಬ್ಬನನ್ನು ಶಿಫಾರಸು ಮಾಡುತ್ತಾ) ಈತ ಬಹಳ ನಂಬಿಗಸ್ಥ, ಒಂದು ಕಾಸು ಕೂಡಾ ವಂಚನೆ ಮಾಡುವವನಲ್ಲ.

ಆಫೀಸ್ ಮೆನೇಜರ್— ಕಾಸಿನ ಸಂಗತಿ ಇರಲಿ, ರೂಪಾಯಿ ಹೇಗೆ?

೦ ೦ ೦

ಹೊಸ ಸುದ್ದಿ

"ಭದ್ರತೆಯ ಬೇಂಕಿಂಗ್ ವ್ಯವಹಾರ"
"ಮೆಚ್ಚುಗೆಯ ಜನರ ಸಹಕಾರ"
"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ
ಒದಗಿಸಿಕೊಡುವ ಸರ್ವವಿದಿತ ಸೇವಾಕಾರ್ಯದ ಸಾಧನೆಗಾಗಿ—
ಇನ್ನೂ ಮೂರು ಹೊಸ ಶಾಖೆಗಳು

ಹೈದರಾಬಾದ್ (ದಕ್ಷಿಣ)
ಗುಲ್ಬರ್ಗ (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು
ಉರುವಕೊಂಡ (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)
ಶೀಘ್ರದಲ್ಲೇ ತೆರೆಯಲ್ಪಡುವುವು

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.
The Canara Industrial & Banking Syndicate Ltd.
H. O. UDIPI (S. I.)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

## ಆಧುನಿಕ ಭಾರತ

# ನಮ್ಮ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು

### ಯುಗಧರ್ಮದ ಸಂದೇಶ ಕೇಳಿರೆಂದು ನೆಹರು

ಭಾರತದ ಸಮಸ್ಯೆಗಳ ಪರಿಹಾರಕ್ಕೆ ಕಮ್ಯುನಿಸಮ್ಮನ್ನು ಆಶ್ರಯಿಸುವುದು ವಿಹಿತವೆಂದು ಭಾವಿಸಿದರೆ ಅದು ದೊಡ್ಡ ಮೂರ್ಖತನವಾದೀತು. ಕಮ್ಯೂನಿಸ್ಟರಿಗೆ ಸಹಜವಾದ ಹಿಂಸೆ ಮತ್ತು ದ್ವೇಷದ ಮಾರ್ಗದಲ್ಲಿ ಹೋದುದಾದರೆ ಈ ದೇಶವು ವರ್ಗಕಲಹ ಮತ್ತು ನಾಗರಿಕರ ನಡುವೆ ತಿಕ್ಕಾಟದಲ್ಲಿಯೇ ದಿನವನ್ನು ಕಳೆಯಬೇಕಾಗಿ ಬರಬಹುದು.

ಕಮ್ಯೂನಿಸ್ಟರ ಧ್ಯೇಯಕ್ಕೂ ಕಾಂಗ್ರೆಸಿನದಕ್ಕೂ ಕೆಲಮಟ್ಟಿಗೆ ಸಾಮ್ಯವಿರಬಹುದು. ಆದರೆ ಇವೆರಡೂ ಪಕ್ಷಗಳು ಅನುಸರಿಸುತ್ತಿರುವ ಮಾರ್ಗಗಳು ತೀರ ಭಿನ್ನವಾಗಿವೆ. ಇದನ್ನೆಂದೂ ಗಮನಿಸದಿರಬಾರದು.

ರಶ್ಯದಲ್ಲಿ ಕಮ್ಯುನಿಸ್ಟ ಪಕ್ಷವು ಒಂದು ಕ್ರಾಂತಿಯ ಫಲವಾಗಿ ಪ್ರವರ್ಧಮಾನಕ್ಕೆ ಬಂತು. ಭಾರತದಲ್ಲಿರುವ ಕಮ್ಯುನಿಸ್ಟ ಪಕ್ಷವು ರಶ್ಯದಿಂದ ಏನು ಸ್ಫೂರ್ತಿ ದೊರಕಿತೋ ಅದನ್ನಷ್ಟೆ ಉಪಯೋಗಿಸಿಕೊಳ್ಳುತ್ತಿದೆ, ಮತ್ತು ರಶ್ಯದ ಅನುಕರಣೆಯನ್ನು ಧರ್ಮಶ್ರದ್ಧಾಯುಕ್ತವಾಗಿ ಮಾಡುತ್ತಿದೆ.

ಕಾರ್ಲಮಾರ್ಕ್ಸನು ಮಹಾತತ್ತ್ವಜ್ಞಾನಿಯಾಗಿದ್ದನು, ನಿಜ. ಆದರೆ ಆತನು ಏನು ಬರೆದಿರುವನೋ ಅದು ಈಗಾಗಲೇ ೧೫೦ ವರ್ಷಗಳಷ್ಟು ಹಳೆಯ ಕಾಲದ ವಿಷಯವಾಗಿದೆ, ಆದುದರಿಂದ ಅಂದಿನ ಕಾಲಕ್ಕೆ ಆತನ ದೇಶಕ್ಕೆ ಹೇಳಿದ ಸಂಗತಿಗಳನ್ನು ಇಂದಿನ ಭಾರತಕ್ಕೆ ಅನ್ವಯಿಸುವುದಾಗಲೀ ಆ ತತ್ತ್ವಗಳನ್ನು ಇಲ್ಲಿ ಅನುಷ್ಠಿಸುವುದಾಗಲೀ ಶಕ್ಯವಿಲ್ಲ.

ಕಮ್ಯುನಿಸ್ಟ ಪಕ್ಷದ ಚರಿತ್ರೆಯಲ್ಲೂ ಎಷ್ಟೋ ಮಂದಿ ತ್ಯಾಗಶೀಲರು ಸಿಗುತ್ತಾರೆ. ಆದರೇನು? ಅವರೆಲ್ಲರ ಮನಸ್ಸು ಮುಚ್ಚಿ ಹೋಗಿದೆ. ನೂರು-ನೂರೈವತ್ತು ವರ್ಷಗಳ ಹಿಂದೆ ಘೋಷಿಸುತ್ತಿದ್ದ ಪಲ್ಲವಿಗಳನ್ನೆ ಪುನರುಚ್ಚರಿಸುವ ಅವರು ನಮ್ಮನ್ನು ಎಲ್ಲಿಗೂ ಮುನ್ನಡೆಸಲಾರರೆಂಬುದು ಸ್ಪಷ್ಟ.

ಭಾರತದಲ್ಲಿರುವ ಕಮ್ಯುನಿಸ್ಟ ಪಕ್ಷದ ಮನದಾಶೆ ಏನಿದ್ದೀತು? ಲೆನಿನ್ನರ ನೇತೃತ್ವದಲ್ಲಿ ರಶ್ಯವು ಯಾವ ಹೋರಾಟವನ್ನಿತ್ತಿತೋ ಅದನ್ನೆ ಈ ದೇಶದಲ್ಲಿಯೂ ಪುನರಾವರ್ತನೆಗೊಳಿಸಲು ಕಮ್ಯುನಿಸ್ಟರು ಬಯಸುತ್ತಿದ್ದಾರೆಯೆ? ಚೀನದಲ್ಲಿ ಇಂದಿನ ಸಾಮಾಜಿಕ ವಾತಾವರಣವನ್ನು ನಲ್ವತ್ತು ವರ್ಷಗಳ ನಿರಂತರ ಹೋರಾಟದ ಬಳಿಕ ಕಟ್ಟಿ ಕೊಂಡಿದ್ದಾರೆ. ಇದೇ ಬಗೆಯ ಹೋರಾಟ ಇಲ್ಲಿಯೂ ನಡೆಯಬೇಕೆ?

ಸಾಧ್ಯವಿಲ್ಲ—ನಾವು ಹಾಗೆಲ್ಲ ಹಿಂಸಾತ್ಮಕ ಹೋರಾಟವನ್ನಿತ್ತು ಮುಕ್ತರಾದ ಬಳಿಕ ಸಾಮಾಜಿಕ ಜೀವನವನ್ನು ಪುನರ್ಘಟಿಸಿ ಕೊಳ್ಳುವೆವೆಂದು ಸಮಾಧಾನ ಹೊಂದುವಂತಿಲ್ಲ.

ಒಂದು ತತ್ತ್ವವಾಗಿ ಸಮಾಜವಾದವು ಚೆನ್ನಾಗಿರಬಹುದು. ಆದರೆ, ನಾವು ಸಮಾಜವಾದದ ಹೆಸರಿನಲ್ಲಿ ಎಡೆಬಿಡದ ದ್ವೇಷ ಸಾಧನೆಯನ್ನಾಗಲೀ ತಿಕ್ಕಾಟವನ್ನಾಗಲೀ ಪ್ರೋತ್ಸಾಹಿಸುವುದು ಅಥವಾ ಅದಕ್ಕೆ ಅವಕಾಶ ಕೊಡುವುದು ಸಲ್ಲದು. ರಶ್ಯನರೇನು ಮಾಡಿದರು? ಸ್ಟಾಲಿನ್ನರನ್ನು ಅವರ ಜೀವಮಾನ ಕಾಲದಲ್ಲಿ ದೇವರೆಂದು ಪೂಜಿಸಿದರು; ಸತ್ತ ಬಳಿಕ ರಾಷ್ಟ್ರದ್ರೋಹಿ ಎಂದರು! ಇದು ತಪ್ಪು ಮಾರ್ಗವನ್ನು ಅನುಸರಿಸಿ ಹೋದುದರ ಫಲವಲ್ಲದೆ ಮತ್ತೇನು?

ನಾವು ತಪ್ಪು ಮಾರ್ಗವನ್ನು ತುಳಿಯುತ್ತಿದ್ದರೆ ಅದರ ಫಲವಾದರೂ ತಪ್ಪುಗಳಿಂದಲೇ ಕೂಡಿರುವುದು ನಿಶ್ಚಯ. ಗಾಂಧೀಜಿಯವರು ನಮ್ಮ ಧ್ಯೇಯ ಸಾಧನೆಯ ಮಾರ್ಗವಾದರೂ ಧ್ಯೇಯದಷ್ಟೇ ಪವಿತ್ರವಾದುದಾಗಿರಬೇಕೆಂದು ನಮಗೆ ಕಲಿಸಿದರು. ಅದೆಷ್ಟೋ ಕಷ್ಟವಾಗಿರಲಿ, ಸರಿಯಾದ ಮತ್ತು ಪವಿತ್ರವಾದ ಮಾರ್ಗಾನುಸರಣೆಯಿಂದ ವಿಚಲಿತವಾಗಬಾರದೆಂಬುದೇ ಅವರ ಉಪದೇಶ.

ಕಮ್ಯುನಿಸ್ಟ ಪಕ್ಷವು ತನ್ನ ಧ್ಯೇಯಾದರ್ಶಗಳ ಪ್ರಚಾರ ಮಾಡಲು ಸ್ವತಂತ್ರವಿದೆ. ಆದರೆ ಅದೆಂದೂ ಹಿಂಸಾಚರಣೆಗೆ ಇಳಿಯಲಾಗದು. ಕಮ್ಯುನಿಸ್ಟರು ಕೂಲಿಕಾರರನ್ನೆಲ್ಲ ಸಂಘಟಿಸಬಹುದು; ಸಂಪು, ಮುಷ್ಕರಗಳನ್ನೂ ಹೂಡಬಹುದು—ಅದಕ್ಕೆ ಅವರಿಗೆ ಅಧಿಕಾರವಿದೆ, ನಿಜ. ಆದರೆ ಶಾಂತ ರೀತಿಯಲ್ಲಿಯೇ ಇವೆಲ್ಲ ನಡೆಯಬೇಕಾಗಿದೆ. ಎಂದಿಗೇ ಆಗಲಿ ಶಾಂತಿ ಭಂಗವಾಗಬಾರದು.

ಕಮ್ಯುನಿಸ್ಟರದೊಂದು ತಪ್ಪು ದಾರಿಯಾದರೆ, ಜಾತೀಯ ವಾದಿಗಳು ಕಮ್ಯುನಿಸ್ಟರಿಗಿಂತಲೂ ಕೀಳರಾಗಿದ್ದಾರೆ. ಹಿಂದು ಮಹಾಸಭೆಯಂತಹ ಜಾತೀಯ ವಾದಿ ಸಂಸ್ಥೆಗಳಿಗೆ ಯಾವುದೇ ಆರ್ಥಿಕ ಕಾರ್ಯಕ್ರಮವಿಲ್ಲ; ಅವುಗಳಿಗೊಂದು ಉದಾತ್ತ ಧ್ಯೇಯವೂ ಇದ್ದಂತಿಲ್ಲ.

ಜಾತೀಯ ವಾದಿಗಳಿಗೆ ಸಮಾಜವಾದಿಗಳಂತೆ, ಅಥವಾ ಬೇರೆ ರಾಜಕೀಯ ಪಕ್ಷಗಳಂತೆ ಪ್ರಜಾಪ್ರಭುತ್ವದಲ್ಲಿಯೂ ವಿಶ್ವಾಸವಿಲ್ಲ. ಅವರಿಗೆ ಬೇಕಾಗಿರುವುದು ಒಂದೇ "ಹಿಂದೂ ರಾಷ್ಟ್ರ" ಅದಕ್ಕಾಗಿ ಅವರು ಅನುಸರಿಸುವ ಮಾರ್ಗವು ಒಂದೇ—ಹಿಂಸೆಯದು. ಇಂತಹ ಮನೋಭಾವನೆಯನ್ನು ಭಾರತೀಯರೆಂದಿಗೂ ಪೋಷಿಸಲು ಹೋಗಬಾರದು.

ಪ್ರಜಾಸಮಾಜವಾದಿಗಳಾಗಲೀ ಸಮಾಜವಾದಿಗಳಾಗಲೀ ಕಾಂಗ್ರೆಸಿಗಿಂತ ಭಿನ್ನವಾದ ಯಾವುದೇ ಧ್ಯೇಯವನ್ನು ಮುಖ್ಯ ವಿಷಯಗಳಲ್ಲಿ ಹೊಂದಿರುವುದಿಲ್ಲ. ಆರ್ಥಿಕ ಕಾರ್ಯಕ್ರಮಗಳಲ್ಲಿ ಇವೆರಡೂ ಪಕ್ಷಗಳಲ್ಲಿ ಹೆಚ್ಚಿನ ಸಾಮ್ಯವಿದೆ. ಇವುಗಳ ಮಾರ್ಗವಾದರೂ ಕಮ್ಯುನಿಸ್ಟರ ಹಾಗು ಕಾಂಗ್ರೆಸಿನ ಮಾರ್ಗಗಳ ನಡುವೆ ಇರುವಷ್ಟು ಅಂತರದಿಂದ ಕೂಡಿಲ್ಲ.

ಆರ್ಥಿಕ ಕಾರ್ಯಕ್ರಮದಲ್ಲಿ "ಭಂಡವಳ ಶಾಹಿ"ಯನ್ನು ಖಂಡಿಸುವುದು ದೊಡ್ಡ ವಿಷಯವಾಗಿ ಇಂದು ಪರಿಣಮಿಸಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆದ ಔದ್ಯೋಗಿಕ ಕ್ರಾಂತಿಯ ಫಲವಾಗಿ ಭಂಡವಳ ಶಾಹಿತ್ವದ ಉದಯವಾಯಿತು. ಅದು ಉತ್ಪಾದನೆಯ ವೇಗವನ್ನು ಸಾವಿರ ಪಟ್ಟು ಹೆಚ್ಚಿಸಿ ಜೀವನ ವಿಧಾನವನ್ನೆ ಬದಲಾಯಿಸಿತು.

ಸಮಾಜವಾದವೆಂದರೆ ಸಂಪೂರ್ಣ ಸಮಾನತೆ ಎಂದು ಭಾವಿಸುವುದು ಸರಿಯಲ್ಲ. ಒಂದು ಮಿತಿಯ ವರೆಗೆ ಮಾತ್ರ ಅಲ್ಲಿ ಸಮಾನತೆ ಇರಬಹುದು. ಸಂಪೂರ್ಣ ಸಮಾನತೆಯೇ ಸಮಾಜವಾದವಲ್ಲ. ಸಮಾಜವಾದವು ಈ ಭಂಡವಳ ಶಾಹಿತ್ವದ ಕೂಸು. ಭಂಡವಳ ಶಾಹಿತ್ವದ ಫಲವಾಗಿ ದೊಡ್ಡವರು ಇನ್ನೂ ದೊಡ್ಡವರಾಗುತ್ತಾ ಹೋಗುವ, ಬಡವರು ಮತ್ತೂ ಬಡವರಾತ್ತಾ ಬರುವ ವಿಷಮ ಪರಿಸ್ಥಿತಿಗೆ ಸಮಾಜವಾದವು ಒಂದು ಔಷಧವೆಂದು ಹೇಳಲಾಯಿತು.

ಈ ದೃಷ್ಟಿಯಿಂದ, ಸಮಾಜವಾದದ ಉದ್ದೇಶವು ಉತ್ಪಾದನೆಯ ಮೂಲವು ವ್ಯಕ್ತಿಯ ಕೈಯಲ್ಲಿಯಲ್ಲ, ಸಮಾಜದ ಕೈಯಲ್ಲಿರಬೇಕು ಎಂದು ಸಾರಲಾಯಿತು. ಹೀಗೆನ್ನುವಾಗ ಸ್ವಲ್ಪ ಮಟ್ಟಿನ ಸಮಾನತೆಯ ಸೂತ್ರವನ್ನು ಉತ್ಪಾದನೆಯ ಫಲ ಅನುಭೋಗದಲ್ಲಿ ಅನುಸರಿಸಲು ನೋಡಲಾಯಿತು.

ರಶ್ಯದ ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿ ಯಾರೇ ಆಗಲಿ ಸಮಾನತೆಯು ನೆಲಸಿದೆ ಎಂದೆನ್ನುವುದಿಲ್ಲ. ಸಮಾನತೆಯು ಈಗಲ್ಲ—ಮುಂದೆ ಎಂದಾದರೂ ಸಾಧ್ಯವಾದೀತು ಎನ್ನುತ್ತಾರೆ ಅಲ್ಲಿಯ ಜನ. ಇಂಜನಿಯರುಗಳಿಗೂ ಕುಶಲ ತಾಂತ್ರಿಕರಿಗೂ ಸಾಮಾನ್ಯ ಕೆಲಸದವರಿಗಿಂತ ಹತ್ತು-ಹನ್ನೆರಡು ಪಾಲಿನಷ್ಟು ಹೆಚ್ಚು ವೇತನವನ್ನು ರಶ್ಯದಲ್ಲಿ ಈಗಲೂ ಕೊಡಲಾಗುತ್ತದೆ. ಏಕೆಂದರೆ ಅವರಿಂದ ಕೆಲಸ ಮಾಡಿಸಬೇಕಾಗಿದೆ.

ಭಂಡವಳಶಾಹಿ ರಾಷ್ಟ್ರಗಳ ಜನರು ಹಾಳಾಗಿ ಹೋಗಿದ್ದಾರೆನ್ನುವುದಕ್ಕೆ ಸಹ ಪುಷ್ಟಿ ಸಿಗದು. ಉದಾಹರಣೆಗೆ ಬ್ರಿಟನನ್ನು ತೆಗೆದುಕೊಳ್ಳೋಣ. ಅಲ್ಲಿಯ ಜನರು ಭಂಡವಳ ಶಾಹಿತ್ವವನ್ನು ಅಂಗೀಕರಿಸಿ ಕಳೆದ ೧೫೦ ವರ್ಷಗಳಿಂದ ತಮ್ಮ ಆರ್ಥಿಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದರ ಫಲವಾಗಿ ಅಲ್ಲಿಯ ಜನರಿಂದೂ ಹಾಳಾಗಲಿಲ್ಲ—ಅವರ ಜೀವನ ವಿಧಾನವು ತುಂಬ ಮೇಲ್ಮಟ್ಟದ್ದಾಗಿದೆ. ಅವರು ಹೆಚ್ಚಿನ ಪ್ರಗತಿಯನ್ನು ಹೊಂದಿದ್ದಾರೆ.

ಆದಾಗ್ಯೂ ೧೫೦ ವರ್ಷಗಳ ಹಿಂದೆ ಉದಯವಾದ ಭಂಡವಾಳಶಾಹಿ ಯುಗವು ಅಂತ್ಯವಾಗುವ ಕಾಲಬಂತೆಂದು ಹೇಳಬಹುದು, ಇಂದು ಸಮಾಜವಾದಿ ಯುಗವೆಂದೇ ಹೆಸರಾಗಿದೆ. ಆದುದರಿಂದ ನಮ್ಮ ದೇಶದಲ್ಲಿ ನಾವು ಸಮಾಜವಾದವನ್ನು ನೆಲೆಗೊಳಿಸಲು ಸಂಕಲ್ಪಿಸಿದ್ದೇವೆ.

ಕಾಂಗ್ರೆಸಿನ ಮತ್ತು ವಿಧಾಯಕ ರಂಗದ ಕಾರ್ಯಕರ್ತರು ಭಾರತದಲ್ಲಿ ಸ್ವಾತಂತ್ರ್ಯನಂತರ ಬದಲಾಯಿಸಿರುವ ವಾತಾವರಣದ ಮಹತ್ವವನ್ನು ಮನಗಾಣಬೇಕು; ಮತ್ತು ಈ ಬದಲಾವಣೆಯೊಂದಿಗೆ ಹೊಂದಿಕೊಂಡು ನಡೆದು, ಜನತೆಗೆ ನವಯುಗದ ಸಂದೇಶ

೯ನೇ ಪುಟ ನೋಡಿರಿ


ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುವದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೩೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

**ನಮ್ಮ ಸ್ಟಾಕಿಸ್ಟರು:**

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.



ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED
H. Office: UDIPI (S.India).

## ಹಿತ ನುಡಿ

# ಒಳ್ಳೆಯ ವಿರೋಧದ ಭಯವಿರುವುದು ಪ್ರಜಾಸತ್ತೆಯ ಆರೋಗ್ಯಕ್ಕೆ ಒಳ್ಳೆದು

**ಚರಿತ್ರ ಸಂಪನ್ನ ಕಾಂಗ್ರೆಸಿಗರೇ ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲಿ!**

ಸುಮಾರು ೨೫ ವರ್ಷಗಳಿಗಿಂತಲೂ ಹೆಚ್ಚು ದೀರ್ಘ ಕಾಲದ ವರೆಗೆ ಸಾವಿರ ಗಟ್ಟಳೆ ಜನರು ಮಹಾತ್ಮಾ ಗಾಂಧೀಯವರೊಡನೆ ಕೂಡಿಕೊಂಡು ಭಾರತದ ಸ್ವಾತಂತ್ರ್ಯಕ್ಕಾಗಿ ಕೆಲಸವನ್ನು ಮಾಡಿದ್ದರು. ಆ ದಿನಗಳ ನೆನಪು ನನಗೀಗಲೂ ಬಹಳ ಚೆನ್ನಾಗಿದೆ. ಈ ನೆನಪು ದಾಗಲೆಲ್ಲ, ಅಂದಿನ ಆ ಕಾಲದಲ್ಲಿ ಭಿನ್ನ ಭಿನ್ನ ರಾಜ್ಯಗಳ ಸಾವಿರಗಟ್ಟಳೆ ಜನರು ಗಾಂಧೀಯವರ ಹಿಂಬಾಲಕರಾಗಿದ್ದುಕೊಂಡು ಎರಡೂವರೆ ದಶಕಗಳಷ್ಟು ದೀರ್ಘ ಕಾಲದ ವರೆಗೆ ಹೇಗೆ ಶುದ್ಧ ಚರಿತ್ರರಾಗಿಯೂ ಉದಾತ್ತ ನಡತೆಯವರಾಗಿಯೂ ಉಳಿದರೆಂದು ನನಗೆ ಆಶ್ಚರ್ಯವಾಗುತ್ತದೆ. ಅವರು ಅಂತಹ ಗುಣಸಂಪನ್ನರಾಗಿದ್ದರು.

ನನ್ನೊಂದಿಗೆ ದುಡಿದ ಆ ನೂರಾರು ಮಹನೀಯರಲ್ಲಾಗಲೀ ಮಹಿಳೆಯರಲ್ಲಾಗಲೀ ಒಂದೇ ಒಂದಾದರೂ ಕೆಟ್ಟ ವರ್ತನೆ ಇದ್ದುದನ್ನು ನಾನು ಅಂದು ನೋಡಲಿಲ್ಲ. ಆದರೆ ಇಂದು ವಿಷಯವು ಹೀಗಿಲ್ಲ— ಬಹಳ ಬದಲಾಗಿದೆ. ಇಂದು ಯೋಗ್ಯತೆ, ನಿಷ್ಪೃಹತೆ, ಸರಳನಡವಳಿಕೆ ಮತ್ತು ನ್ಯಾಯಪರತೆಗಳುಳ್ಳ ಉತ್ತಮ ವ್ಯಕ್ತಿಗಳೇ ವಿರಳವಾಗಿದ್ದಾರೆ. ಸ್ವಾತಂತ್ರ್ಯದ ಫಲವನ್ನು ಉಣ್ಣುತ್ತಿರುವ ಜನರಲ್ಲಿ ಉದಾತ್ತ ಪುರುಷರೇ ಸಿಗುತ್ತಿಲ್ಲನೆನ್ನುವಂತಹ ದಿನವಿದು. ಕಾಂಗ್ರೆಸಿನ ಹೊರಗೆ ಎಲ್ಲಿಯಾದರೂ ಒಳ್ಳೆಯವರಿದ್ದರೆ ಇರಬಹುದು ಎನ್ನುವಂತಹ ಭಾವನೆಗೆ ಇಂದು ಅವಕಾಶವಾಗಿದೆ. ಅಹಿಂಸೆ ಎಂಬ ಶಬ್ದವನ್ನು ಕೆಲವು ವರ್ತನೆಗಳ ಸಮರ್ಥನೆಗಾಗಿಯೂ ಕೆಲವರ ವಿರೋಧಕ್ಕಾಗಿಯೂ ಅನುಕೂಲ ಬಂದಂತೆ ಉಪಯೋಗಿಸಲಾಗುತ್ತದೆ. ಸರ್ವೋದಯ ಎಂಬ ಶಬ್ದದ ಗತಿಯೂ ಇದೇ. ಹೀಗೆ ಕಾಂಗ್ರೆಸಿಗರು ಇಂದು ಗಾಂಧೀಜಿಯವರು ತುಳಿಯುತ್ತಿದ್ದ ಮಾರ್ಗವನ್ನು ಬಿಟ್ಟು ಬೇರೆ ಯಾವುದೋ ದಾರಿಯಲ್ಲಿ ಹೋಗುತ್ತಿರುವುದಕ್ಕಾಗಿ ನನಗೆ ದುಃಖವಾಗುತ್ತದೆ!

ಆ ಹಳೆಯ ದಿನಗಳಲ್ಲಿ ಕಾಂಗ್ರೆಸಿಗೆ ಹಲವು ವಿರೋಧಿ ಗುಂಪುಗಳಿದ್ದವು; ಮತ್ತು ಈ ಗುಂಪುಗಳ ವಿರೋಧದ ಭಯ ಯಾವಾಗಲೂ ಕಾಂಗ್ರೆಸಿಗಿತ್ತೆನ್ನಬಹುದು. ಒಳ್ಳೆಯ ವಿರೋಧದ ಭಯವು ಒಳ್ಳೆಯ ಪ್ರಜಾಪ್ರಭುತ್ವಕ್ಕೆ ಪೂರಕವಾಗಿ ಹಿತವಾಗಿದೆ. ಇದಾದರೋ ಕಾಂಗ್ರೆಸಿಗರಿಗೆ ಯಾರ ಭಯವೂ ಇಲ್ಲದಂತಹ ವಾತಾವರಣ ಉಂಟಾಗಿದೆ. ಒಂದು ಕಾಲದಲ್ಲಿ ಕಮ್ಯುನಿಸ್ಟರ ಭಯ ಅಸ್ತಿತ್ವದಲ್ಲಿತ್ತು—ಅವರು ಅಧಿಕಾರ ಪೀಠವನ್ನು ಏರಬಹುದೆಂದು ಕಾಂಗ್ರೆಸಿಗರು ಹೆದರಿದ್ದರು. ಸುದೈವದಿಂದಲೋ—ಅಥವಾ ದುರ್ದೈವವೋ— ಅಂತೂ ಇಂದು ಕಾಂಗ್ರೆಸಿಗೆ ಆ ಹೆದರಿಕೆ ಇಲ್ಲ. ಕಮ್ಯುನಿಸ್ಟ ಪಕ್ಷಕ್ಕಾಗಿ ಕಾಂಗ್ರೆಸು ಇಂದು ಕಳವಳಗೊಳ್ಳಲಾರದು; ಏಕೆಂದರೆ ಕಮ್ಯುನಿಸ್ಟ ಪಕ್ಷವು ಇಂದು ತನ್ನ ನೆಲೆಯನ್ನು ತಾನೇ ಅರಿತಿಲ್ಲ. ಪ್ರಜಾಸಮಾಜವಾದಿ ಪಕ್ಷವಿದೆ — ಆದರೆ ಈ ಪಕ್ಷವು ವ್ಯಕ್ತಿಗತ ಸ್ಪರ್ಧೆಯ ಫಲವಾಗಿ ತನ್ನ ನಾಶವನ್ನು ತಾನೇ ಮಾಡಿಕೊಂಡಿದೆ. ಅಲ್ಲದೆ, ಎಷ್ಟಾದರೂ ಈ ಪಕ್ಷವು ಕಾಂಗ್ರೆಸಿನಿಂದಲೇ ಮೊಳೆತುದಾಗಿದೆ. ಆದುದರಿಂದ ಇವಾವುವೂ ಇಂದು ಉತ್ತಮ ವಿರೋಧಿ ಪಕ್ಷವಾಗಿ ಕೆಲಸಮಾಡುವುದು ಕಷ್ಟ.

ಹಾಗಾದರೆ ಮಾಡಬೇಕಾದುದೇನು? ಸಮರ್ಥ ಪ್ರತಿಪಕ್ಷವೊಂದರ ಭಯವಿಲ್ಲದಿರುವುದು ಕಾಂಗ್ರೆಸಿನ ಹಿತ ದೃಷ್ಟಿಯಿಂದಲೇ ಒಳ್ಳೆಯದಲ್ಲ. ಕಮ್ಯುನಿಸ್ಟರು ಕಾಂಗ್ರೆಸನ್ನು ವಿರೋಧಿಸುತ್ತಿದ್ದರೆನ್ನುವುದೂ ಸರಿಯಲ್ಲ – ಅವರು ಕಾಂಗ್ರೆಸಿನ ನಾಶ ಮಾಡಲು ಉತ್ಸುಕರಾಗಿದ್ದರು. ಬಲವಾದ ಸಾವಿರಾರು ಬೀಳಲುಗಳನ್ನು ನೆಲದಲ್ಲಿ ಬೇರಿಳಿಯಬಿಟ್ಟಿದ್ದ ನ್ಯಗ್ರೋಧ ವೃಕ್ಷದೋಪಾದಿಯಲ್ಲಿರುವ ಕಾಂಗ್ರೆಸನ್ನು ಕಮ್ಯುನಿಸ್ಟರೆಂದೂ ಉರುಳಿಸಲಾರರು ಅಲ್ಲದೆ, ಪ್ರತಿಪಕ್ಷ ಬೇಕೆಂದ ಮಾತ್ರಕ್ಕೆ ಕಾಂಗ್ರೆಸನ್ನು ಒಳ್ಳೆಯದರಲ್ಲೂ ಕೆಟ್ಟದರಲ್ಲೂ ಎಲ್ಲದರಲ್ಲೂ ವಿರೋಧಿಸುವ ಪ್ರತಿಪಕ್ಷ ನಮಗೆ ಬೇಕಾಗಿಲ್ಲ. ಕಾಂಗ್ರೆಸಿನದಕ್ಕಿಂತ ಪ್ರತ್ಯೇಕವಾದ ಮೂಲಭೂತ ವಿಷಯಗಳನ್ನು ಎತ್ತಿಕೊಂಡಿರುವ ಪಕ್ಷ ಅದಾಗಬೇಕು; ಈ ವಿಷಯಗಳ ಬಗ್ಗೆ ಬಲವಾದ ಪ್ರತಿಪಾದನೆ ಮಾಡಲು ಅದಕ್ಕೆ ಶಕ್ತಿ ಇರಬೇಕು. ಅದೇ ಸಮಯದಲ್ಲಿ ಬೇರೆ ಕೆಲವು ಮೂಲಭೂತ ವಿಷಯಗಳಮಟ್ಟಿಗೆ ಅದು ಕಾಂಗ್ರೆಸಿನೊಡನೆ ಸಹಮತವಾಗಬೇಕು. ಅಂತಹ ವಿರೋಧವು ಪ್ರಾಯಶಃ ಕಾಂಗ್ರೆಸಿನ ಒಳಗಿಂದಲೇ ಬರಬೇಕೆಂದು ನನಗೆ ತೋರುತ್ತದೆ. ಅದು ಕಾಂಗ್ರೆಸಿನ ಆಧಾರಭೂತ ಆದರ್ಶಗಳಿಗೆ ನಿಷ್ಠವಾಗಿರಬಲ್ಲುದು; ಆದರೆ ಕಾಂಗ್ರೆಸು ಸಂಸ್ಥೆಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ಕೆಲವು ದುಷ್ಟ ಕೆಲಸಗಳಿಗೆ ಅದು ಭಾಗಿಯಾಗಿರಲಾರದು. ಅದೆಂದೂ ಅಧಿಕಾರ ದಾಹದಿಂದ ಕೂಡಿರದು; ಯಾವದೇ ಉಪಕಾರವನ್ನು ಬಯಸದೆ, ನಿರ್ಭಯವಾದ ರೀತಿಯಲ್ಲಿ ವಿಧಾಯಕ ಟೀಕೆಯನ್ನು ಮಾಡುತ್ತಾ ಹೋಗುವುದೇ ಅದರ ಸಾರ್ಥಕತೆಯ ಗುಟ್ಟು.

ಇಂದು ಕಾಂಗ್ರೆಸು ಪಕ್ಷವೇ ದ್ವೇಷ ಮತ್ತು ಮತ್ಸರವನ್ನು ಹಬ್ಬಿಸುವ ಮಾಧ್ಯಮವಾಗಿ ಪರಿಣಮಿಸಿದೆ. ವಿವಿಧ ಜನವರ್ಗದ ಮನೋಭಾವನೆಯನ್ನು ಕಾಂಗ್ರೆಸು ಸಂಸ್ಥೆಯ ಹೆಸರಿನಲ್ಲಿ ಕಲುಷಿತಗೊಳಿಸಲಾಗುತ್ತಿದೆ. ಇದರಿಂದ ತಾತ್ಕಾಲಿಕ ಪ್ರಯೋಜನ ಅಥವಾ ಲಾಭಗಳಾಗಬಹುದು. ಆದರೆ ದೀರ್ಘ ಕಾಲಾವಧಿಯಲ್ಲಿ ಅದು ಕಾಂಗ್ರೆಸನ್ನೂ ದೇಶವನ್ನೂ ಹಾಳುಗೆಡಹುವುದು ನಿಶ್ಚಯ. ಶಾಲೆಯಲ್ಲಿ ಕಲಿಯುತ್ತಿರುವವರಿಗೆ ಸಹ ಇದೇ ವಿಷಬೋಧನೆ ಕೊಡುತ್ತಿರುವುದನ್ನು ಕಂಡು ನಾವೇನು ಹೇಳಬೇಕು? ದೊಡ್ಡವರ ಬುದ್ಧಿ ಹಾಳಾಗಿದ್ದರೆ ಚಿಂತಿಲ್ಲ—ಅವರು ಇನ್ನೆಷ್ಟು ದಿನ ಬಾಳಿಯಾರೆಂದು ಸಮಾಧಾನಪಟ್ಟುಕೊಳ್ಳಬಹುದು. ಆದರೆ ಮಕ್ಕಳು ಹಾಳಾದರೆ? ಎಲ್ಲ ಬಗೆಯ ಅಧಿಕಾರವೂ ಚಾರಿತ್ರ್ಯವನ್ನು ನಷ್ಟಗೊಳಿಸುತ್ತದೆ—ಇದಕ್ಕಾಗಿಯೇ ಕಾಂಗ್ರೆಸು ಸಬಲವಾದ ಸಮರ್ಥ ವಿರೋಧದ ಭಯವಿಲ್ಲದೆ ಬಾಳಬಾರದೆಂದು ನಾನು ಹೇಳುವುದಾಗಿದೆ. ಅನ್ಯಥಾ ಕಾಂಗ್ರೆಸು ಪಕ್ಷವು ಎಲ್ಲ ಬಗೆಯ ಸ್ವಾರ್ಥಿ ಮಹತ್ವಾಕಾಂಕ್ಷಿಗಳ ಮತ್ತು ಅಧಿಕಾರದಾಹದ ಆಡುಂಬೊಲವಾಗಿ ಪರಿಣಮಿಸೀತು.

—ರಾಜಾಜಿಯ ಭಾಷಣದಿಂದ.






TATA PRODUCT
ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಚಾಲಕತ್ವದಲ್ಲಿ, ಇಂಡಿಯಾದಲ್ಲಿಯೇ ತಯಾರಾದುದು
ಟಾಟಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್


ಪ್ರತಿಯೊಬ್ಬರೂ ತಮ್ಮ ಹಕ್ಕುಗಳ ಬಗ್ಗೆ ಆಗ್ರಹಪಟ್ಟು ಕರ್ತವ್ಯ ಮರೆತರೆ ಸಂಪೂರ್ಣ ಗೊಂದಲ ಮತ್ತು ಅವ್ಯವಸ್ಥೆಯ ಪರಿಸ್ಥಿತಿಯುಂಟಾಗುವುದು.

— ಗಾಂಧೀಜಿ.

## ವಿಚಾರ ಸಾಹಿತ್ಯ

### ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಈ ಗ್ರಂಥವನ್ನು ಬರೆದವರು ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಜೇಮ್ಸ್ ಬಿ. ಕೊನೇಂಟ. ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ, ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತಪಂಥಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿದೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾಗುದ ಬೇರೊಂದಿಲ್ಲ.

ಇದನ್ನು ಕನ್ನಡಿಸಿದವರು ಉಡುಪಿ ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ. ಎಲ್. ಟಿ. ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರು.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಅಚ್ಚ ಬಿಳಿ ಕಾಗದದಲ್ಲಿ ಅಚ್ಚಾಗಿರುವ ೧೬೦ ಪುಟಗಳ ಈ ಪುಸ್ತಕದ ಬೆಲೆ ರೂ. ೧ - ೮—೦.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ; ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ- ಇಲ್ಲಿಯೂ ದೊರೆಯುತ್ತವೆ.

# NAVAYUGA

Popular Kannada Weekly

*Founder:—*

**A. B. SHETTY,** *M. L. A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೮-೧೦-'೫೬ | ೭ |


## ಸುಯೋಜಿನ ತಂಟೆ

ಸಂಯುಕ್ತ ರಾಷ್ಟ್ರಸಂಘದ ಭದ್ರತಾ ಮಂಡಳದ ಮುಂದೆ ಸುಯೇಜಿನ ತಂಟೆಯನ್ನೊಯ್ಯುವರೆಂದು ತಿಳಿದುಬಂದಾಗ ಕಾಲಹರಣಕ್ಕೆ ಇದೊಂದು ಅವಕಾಶ ಎಂದು ಭಾವಿಸಿದ್ದವರು ಅನೇಕ; ಆದಾಗ್ಯೂ ಈ ಕಾಲಹರಣದಿಂದಾಗಿ ಸಂಧಾನದ ಮೂಲಕ ಸುಯೇಜಿನ ತಂಟೆಯ ತೀರ್ಮಾನ ಮಾಡಲು ಇನ್ನೂ ಹೆಚ್ಚಿನ ಪ್ರಯತ್ನ ಕೈಗೊಳ್ಳುವುದಕ್ಕೆ ಸಮಯ ಸಿಕ್ಕಿತೆಂದು ಸಂತೋಷಿಸಿದ್ದವರೂ ಕೆಲವರಿದ್ದರು. ಹೀಗೆ ಸಂತೋಷಿಸಿದವರು ದೂರದರ್ಶಿಗಳಾಗಿಲ್ಲವೆಂದು ಆಕ್ಷೇಪಿಸಲು ಎಡೆಸಿಗದಂತೆ ಭದ್ರತಾಮಂಡಳದಲ್ಲಿ ನಡೆದ ಕಾರ್ಯಕಲಾಪಗಳು ನಡೆದಿವೆ. ಯುದ್ಧಮುಖದಿಂದಲ್ಲದೆ ಸುಯೇಜಿನ ತಂಟೆಯನ್ನು ಪರಿಹರಿಸುವುದೇ ಅಸಾಧ್ಯವೆಂಬಂತೆ ತಮ್ಮ ವರ್ತನೆಗಳಿಂದ ಹೆದರಿಕೆಯನ್ನು ಹುಟ್ಟಿಸಿದ್ದ ಫ್ರಾನ್ಸ ಮತ್ತು ಬ್ರಿಟನುಗಳು ಭದ್ರತಾಮಂಡಳದಲ್ಲಿ ಚರ್ಚೆ ನಡೆದಷ್ಟು ದಿನ ಪ್ರತ್ಯೇಕವಾಗಿ ಐಗುಪ್ತದೊಡನೆ ನೇರಾದ ಸಂಧಾನ ಮಾತುಕತೆಗಳನ್ನು ನಡೆಸಿದವೆಂದು ಕೇಳಿದರೆ ಯಾರಿಗೆ ಆಶ್ಚರ್ಯವಾಗದು? ಆದರೆ ಇದು ಸತ್ಯವಾದ ವಿಷಯ— ಸಂಯುಕ್ತ ರಾಷ್ಟ್ರಸಂಘದ ಕಾರ್ಯದರ್ಶಿ ಶ್ರೀ ಡಾಗ ಹೆಮ್ಮರಶೆಲ್ಡರೂ ಭಾರತದ ಶಾಖಾರಹಿತ ಸಚಿವ ಶ್ರೀ ಕೃಷ್ಣ ಮೆನೊನ್ನರೂ ಅವಿರತವಾಗಿ ಮುಂದೊತ್ತಿದ ಪ್ರಯತ್ನಗಳ ಸತ್ಫಲವಿದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಂತೂ ಬ್ರಿಟನು, ಫ್ರಾನ್ಸುಗಳೊಂದೆಡೆ, ಐಗುಪ್ತವು ಇನ್ನೊಂದೆಡೆಯಾಗಿ ಮಾತುಕತೆಗಳನ್ನು ನಡೆಸಿ, ಆರು ಅಂಶಗಳುಳ್ಳ ಒಂದು ಸೂತ್ರವನ್ನು ತಂಟೆಯ ಶಾಂತ ಪರಿಹಾರೋಪಾಯ ಸಾಧನವಾಗಿ ಸ್ವೀಕರಿಸಿದವು; ಇದಕ್ಕೆ ಅಮೇರಿಕದ ಆಶೀರ್ವಾದವೂ ಸಿಕ್ಕಿತು. ಭಾರತವನ್ನೊಳಗೊಂಡು ಎಲ್ಲ ಶಾಂತಿಪ್ರಿಯರಿಗೂ ಹೆಚ್ಚಿನ ಸಂತೋಷವಾಯಿತು. ಈ ಆರು ಸೂತ್ರಗಳು ಭಾರತದಿಂದ ಹಿಂದೆ ಹಲವು ಬಾರಿ ಮುಂದಿಡಲ್ಪಟ್ಟಿದ್ದ ಪರಿಹಾರ ಸೂತ್ರಗಳಂತೆಯೇ ಇವೆ: ಆಗ ಅವುಗಳನ್ನು ವಿಚಾರಿಸಲು ಒಪ್ಪದಿದ್ದ ಪಾಶ್ಚಾತ್ಯ ರಾಷ್ಟ್ರಗಳು ಈಗ ಅವುಗಳ ಯೋಗ್ಯತೆಯನ್ನು ಮನಗಂಡಿದ್ದಾರೆ ಎಂಬುದೇ ಇಷ್ಟು ಸಮಯ ತಳ್ಳಿದುದರಿಂದ ಆದ ಸತ್ಪರಿಣಾಮವಾಗಿದೆ. ಪರಿಹಾರ ಸೂತ್ರದಲ್ಲಿರುವ ಆರು ಅಂಶಗಳ ಪ್ರಕಾರ ಕಾಲುವೆಯಲ್ಲಿ ನೌಕಾ ಸಂಚಾರ ಸ್ವಾತಂತ್ರ್ಯವಿರಬೇಕು, ಐಗುಪ್ತದ ಸಾರ್ವಭೌಮಾಧಿಕಾರಕ್ಕೆ ಮನ್ನಣೆ ಕೊಡಬೇಕು, ಪರಸ್ಪರ ಒಪ್ಪಂದದಿಂದ ಸುಂಕ ಮತ್ತಿತರ ಪಾವತಿಗಳ ಮೊತ್ತವನ್ನು ನಿರ್ಣಯಿಸಬೇಕು, ಕಾಲುವೆಯ ಅಭಿವೃದ್ಧಿಗಾಗಿ ಆದಾಯದಿಂದ ಕೆಲವಂಶವನ್ನು ತೆಗೆದಿಡಬೇಕು, ರಾಜಕೀಯ ವಾತಾವರಣದಿಂದ ಕಾಲುವೆಯನ್ನು ಹೊರಗಿಡಬೇಕು; ಮತ್ತು ವಿವಾದಗಳನು ಮಧ್ಯಸ್ಥಿಕೆಯಿಂದ ತೀರ್ಮಾನಿಸಿಕೊಳ್ಳಬೇಕು. ಈ ಸೂತ್ರವು ಎರಡೂ ಪಕ್ಷದವರಿಂದ ಸ್ವಲ್ಪಮಟ್ಟಿನ ತ್ಯಾಗವನ್ನು ಅಪೇಕ್ಷಿಸಿದೆ. ಉದಾಹರಣೆಗಾಗಿ, ಪಾಶ್ಚಾತ್ಯರಾಷ್ಟ್ರಗಳು ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಕಾಲುವೆ ಪ್ರದೇಶ ಒಳಪಡಬೇಕೆಂದು ಹಿಡಿದಿದ್ದ ಹಠಕ್ಕೆ ಈ ಸೂತ್ರದಲ್ಲಿ ಅವಕಾಶವಿಲ್ಲ. ಐಗುಪ್ತವು ಕಾಲುವೆ ಪ್ರದೇಶವು ತನ್ನ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟ ಭೂಭಾಗವೆಂದು ಹೇಳುತ್ತಾ ಬಂದಿದೆ: ಈ ಅಂಶಕ್ಕೆ ಸೂತ್ರದಲ್ಲಿ ಮನ್ನಣೆ ದೊರಕಿದ್ದರೂ ಸಹ ರಾಜಕೀಯದಿಂದ ಕಾಲುವೆಯು ಹೊರಗಿರಬೇಕು ಎಂಬ ಅಂಕುಶವನ್ನು ಸೂತ್ರದಲ್ಲಿ ಹಾಕಲಾಗಿದೆ. ಅಲ್ಲದೆ, ಕಾಲುವೆಯ ಅಭಿವೃದ್ಧಿಗಾಗಿ ಹಣವನ್ನು ತೆಗೆದಿಡುವುದು, ಅನಿರ್ಬಂಧ ನೌಕಾ ಸಂಚಾರ ಸ್ವಾತಂತ್ರ್ಯ, ಸುಂಕದ ದರವನ್ನು ಪರಸ್ಪರ ಒಪ್ಪಿಗೆಯಿಂದ ತೀರ್ಮಾನಿಸುವುದು ಇದೆಲ್ಲವರ ಮೇಲಿಂದ ಐಗುಪ್ತವು ತನ್ನ ಇಚ್ಛೆ ಬಂದಂತೆ ಕಾಲುವೆಯನ್ನು ಉಪಯೋಗಿಸಿಕೊಳ್ಳಲು ತಡೆಬಿದ್ದಿದೆ. ಐಗುಪ್ತವು ಇಚ್ಛಾನುಸಾರವಾಗಿ ನಡೆಯಲು ತನಗೆ ಸ್ವಾತಂತ್ರ್ಯಬೇಕೆಂದು ಹೇಳಿದ್ದಿಲ್ಲ—ಆದರೂ ಪಾಶ್ಚಾತ್ಯರಿಗೆ ಆ ಭಯವಿತ್ತು. ಅದೀಗ ನಿವಾರಣೆಯಾಗಿದೆ. ಆದುದರಿಂದ ಈ ಆರಂಶಗಳ ಸೂತ್ರದ ಪರಿಧಿಯಲ್ಲಿ ಸಂಧಾನ ಮಾತುಕತೆಗಳನ್ನು ನಡೆಸಲು ವಿವಾದದಲ್ಲಿ ವಿಶೇಷ ಆಸಕ್ತಿಯುಳ್ಳ ಎಲ್ಲ ರಾಜಕೀಯ ಶಕ್ತಿಗಳೂ ಒಪ್ಪಿವೆ. ಭದ್ರತಾ ಮಂಡಳದಲ್ಲಿ ಸಹ ಈ ಆರಂಶಗಳಿಗೆ ಸಂಪೂರ್ಣ ಅನುಮೋದನೆ ದೊರೆತಿದೆ. ಆದರೇನು? ಪಾಶ್ಚಾತ್ಯರ ಈ ಆರಂಶಗಳ ಸೂತ್ರಕ್ಕೆ ಕೊನೆಯಲ್ಲೊಂದು ಕುಂಟು ಪಂಕ್ತಿಯನ್ನು ಸೇರಿಸಿ, ಭದ್ರತಾ ಮಂಡಳಕ್ಕೆ ಬರಬಹುದಾಗಿದ್ದ ಗೌರವವನ್ನು ಕಸಿದುಕೊಂಡರು. ಆರಂಶಗಳ ಸೂತ್ರದಂತೆ ತಂಟೆಯು ಪರಿಹಾರವಾಗುವ ವರೆಗೆ ಸುಯೇಜಿನ ಬಳಕೆಗಾರ ಸಂಘದೊಡನೆ ಐಗುಪ್ತವು ಸಹಕರಿಸಬೇಕು ಎಂಬುದೇ ಅವರು ಸೂತ್ರದ ಕೊನೆಗೆ ಸೇರಿಸಲು ಆತುರಪಟ್ಟ ವಾಕ್ಯ. ಬಳಕೆಗಾರ ಸಂಘದ ಅಸ್ತಿತ್ವವನ್ನು ಮನ್ನಿಸುವುದಾಗಲೀ ಅವರೊಡನೆ ಸಹಕರಿಸಬೇಕೆಂದು ಐಗುಪ್ತಕ್ಕೆ ಆದೇಶಕೊಡುವುದಾಗಲೀ ಐಗುಪ್ತದ ಸಾರ್ವಭೌಮಾಧಿಕಾರಕ್ಕೆ ಧಕ್ಕೆಯುಂಟು ಮಾಡುವ ವಿಷಯವಷ್ಟೇ ಅಲ್ಲ, ಅಂತಾರಾಷ್ಟ್ರೀಯ ನಿಯಂತ್ರಣದ ಸೂತ್ರವನ್ನು ಸೂಚ್ಯವಾಗಿ ಒಪ್ಪಿಕೊಳ್ಳುವಂತಹ ಪ್ರಮಾದ ಎಂದು ಹೇಳುತ್ತಾ ರಷ್ಯದ ಪ್ರತಿನಿಧಿಯು ಸೂತ್ರದ ಈ ಕೊನೆಯ ಅಂಶದ ಮಟ್ಟಿಗೆ ತನ್ನ "ವಿಟೋ" (ನಿಷೇಧ) ಅಧಿಕಾರವನ್ನು ಪ್ರಯೋಗಿಸಿದರು. ತತ್ಫಲವಾಗಿ ಇಡೀ ಗೊತ್ತುವಳಿಯೇ ನಿಷ್ಫಲವೆಂದು ತಾಂತ್ರಿಕ ದೃಷ್ಟಿಯಲ್ಲಿ ಪರಿಣಮಿಸಿತು. ಆದಾಗ್ಯೂ ನಿರಾಶೆಗೆ ಎಡೆ ದೊರೆತಿಲ್ಲ—ಏಕೆಂದರೆ, ಅಂತಾರಾಷ್ಟ್ರೀಯ ನಿಯಂತ್ರಣವು ನಾಳೆ ಬೇಡವೆಂದು ಒಪ್ಪುವಷ್ಟು ಸಿದ್ಧತೆಯನ್ನು ತೋರಿಸಿರುವ ಪಾಶ್ಚಾತ್ಯರ ಮನೋಭಾವವು ಇಂದೂ ಅದು ಬೇಡ ಎನ್ನುವ ಹಾಗೆ ಸ್ವಲ್ಪ ಮಟ್ಟಿನ ಬದಲಾವಣೆಯನ್ನು ಹೊಂದಿದರೆ, ಈಗಾಗಲೇ ಸರ್ವಾನುಮತವು ವ್ಯಕ್ತವಾಗಿರುವ ಆರಂಶಗಳ ಸೂತ್ರದಂತೆ ನಡೆದು ಸಂಧಾನವನ್ನು ಮಾಡಿಕೊಳ್ಳಬಹುದು. ಇಂತಹ ಪ್ರಯತ್ನ ನಡೆಯುವ ನಿರೀಕ್ಷೆ ಬಲವಾಗಿದೆಯೆಂದೂ ಡಾಗ ಹೆಮ್ಮರಶೆಲ್ಡರೂ ಶ್ರೀ ಕೃಷ್ಣ ಮೆನೊನ್ನರೂ ಈ ವಿಷಯದಲ್ಲಿ ತಮ್ಮ ಸಂಪೂರ್ಣ ಸಹಕಾರ ನೀಡುವುದಕ್ಕೆ ಮುಂದಾಗಿರುವರೆಂದೂ ತಿಳಿದುಬಂದಿರುವುದು ಶುಭ ವಾರ್ತೆ. ಪಾಶ್ಚಾತ್ಯ ರಾಷ್ಟ್ರಗಳಾದರೂ ತೀರ ನಿರಾಶವಾಗಿಲ್ಲ. ನಾಳೆಯಾದರೂ ತಂಟೆ ಬಗೆ ಹರಿಯುವ ಮಾರ್ಗ ತೆರೆದಿದೆ, ಅದೇ ಲಾಭ ಎಂದೆನ್ನುತ್ತವೆ ಅವೆಲ್ಲವೂ-ಇನೇನಮ್ಮದೂ ಅಭಿಪ್ರಾಯ; ಇದೇ ವಿವೇಚನೆಗಾಗಿ ಕಾಲಹರಣ ಮಾಡಿದುದರ ಸತ್ಫಲ.

# ಈಗಿನ ರಾಜಪ್ರಮುಖರೇ ನವ ಮೈಸೂರಿನ ರಾಜ್ಯಪಾಲರು

## ಕನ್ನಡ ಪ್ರದೇಶಕ್ಕೆಲ್ಲ ಒಂದೇ ಪ್ರದೇಶ ಕಾಂಗ್ರೆಸು

ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿರುವ ಶ್ರೀ ಎಸ್. ಚೆನ್ನಯ್ಯನವರು ಮೈಸೂರು ನಗರದಲ್ಲಿ ತನಗೆ ಒಪ್ಪಿಸಲಾದ ಮಾನಪತ್ರಕ್ಕೆ ಉತ್ತರಕೊಡುತ್ತಾ ಈಗಿನ ಮೈಸೂರಿನ ರಾಜ್ಯಪ್ರಮುಖರನ್ನು ನವಕರ್ನಾಟಕದ ಪ್ರಥಮ ರಾಜ್ಯಪಾಲರಾಗುವಂತೆ ರಾಷ್ಟ್ರಾಧ್ಯಕ್ಷರು ಕೇಳಿಕೊಂಡಿರುವರೆಂದೂ ಈ ಸೂಚನೆಯನ್ನು ರಾಜಪ್ರಮುಖರು ದಯಮಾಡಿ ಒಪ್ಪಿಕೊಂಡಿರುವರೆಂದೂ ತಿಳಿಸಿದ್ದಾರೆ.

### ಪ್ರದೇಶ ಕಾಂಗ್ರೆಸು

ಈಗ ತಿಳಿದುಬಂದಿರುವ ಪ್ರಕಾರ ಇದೇ ೨೧ನೇ ತಾರೀಕಿನಂದು ಹೊಸ ರಾಜ್ಯದ ಮುಖ್ಯಮಂತ್ರಿ ಸ್ಥಾನಕ್ಕೆ ಯೋಗ್ಯ ವ್ಯಕ್ತಿಯನ್ನು ಆರಿಸಿದ ಬೆನ್ನಿಸಲ್ಲೆ ಈಗಿನ ಕರ್ನಾಟಕ ಮತ್ತು ಮೈಸೂರು ರಾಜ್ಯಗಳಲ್ಲಿರುವ ಬೇರೆ ಬೇರೆ ಪ್ರದೇಶ ಕಾಂಗ್ರೆಸುಗಳನ್ನು ಒಂದೇಯಾಗಿಸುವ ಸಲುವಾಗಿ ಒಂದು ಸಭೆಯು ೨೨ನೇ ದಿನಾಂಕ ನಡೆಯಲಿದೆ, ಇದಕ್ಕಾಗಿ ಎಲ್ಲ ಸಿದ್ಧತೆಗಳೂ ಭರದಿಂದ ಸಾಗುತ್ತಿವೆಯಾಗಿ ಗೊತ್ತಾಗಿದೆ

### ಮುಖ್ಯ ಮಂತ್ರಿಗಳ ಆಯ್ಕೆ

ರಾಜ್ಯಗಳ ಪುನಾರಚನೆಯ ಫಲವಾಗಿ ರೂಪುಗೊಳ್ಳಲಿರುವ ಹೊಸ ರಾಜ್ಯಗಳಲ್ಲಿ ಮುಖ್ಯ ಮಂತ್ರಿಗಳ ಆಯ್ಕೆಯು ಅವಿರೋಧವಾಗಿರಬೇಕೆಂದು ಕಾಂಗ್ರೆಸಿನ ವರಿಷ್ಠರು ಆಶಿಸುತ್ತಿದ್ದಾರೆ. ಆದರೆ, ಮೈಸೂರು, ರಾಜಸ್ಥಾನ, ಮುಂಬಯಿ, ಆಂಧ್ರ ಮತ್ತು ಪೆಪ್ಸುಗಳಲ್ಲಿ ತೀವ್ರ ಸ್ಪರ್ಧೆಗೆ ಅವಕಾಶವಾಗಿದೆ. ನೂತನ ಮಧ್ಯ ಪ್ರದೇಶದ ಮುಖ್ಯ ಮಂತ್ರಿತ್ವ ಸ್ಥಾನವೊಂದಕ್ಕೆ ಮಾತ್ರ ಈಗ ಮಧ್ಯ ಭಾರತದ ಮುಖ್ಯ ಮಂತ್ರಿಗಳಾಗಿರುವ ಪಂಡಿತ ರವಿಶಂಕರ ಶುಕ್ಲರು ಅವಿರೋಧವಾಗಿ ಆರಿಸಿ ಬಂದಿದ್ದಾರೆ.

### ಚವಾಣರ ಗೆಲುವು

ಮುಂಬಯಿ ರಾಜ್ಯದ ಮುಖ್ಯ ಮಂತ್ರಿ ಸ್ಥಾನಕ್ಕೆ ಶ್ರೀ ಮುರಾರ್ಜಿ ದೇಸಾಯಿಯವರನ್ನೆ ಅವಿರೋಧವಾಗಿ ಆರಿಸಬೇಕೆಂದು ಕೊನೆಯ ಗಳಿಗೆಯ ವರೆಗೆ ಪ್ರಯತ್ನಿಸಲಾಯಿತು, ಆದರೆ ಕಂದಾಯ ಮಂತ್ರಿ ಶ್ರೀ ಹಿರೆಯವರು ತಾನು ಪ್ರಜಾಪ್ರಭುತ್ವ ತತ್ವಕ್ಕೆ ಅನುಸಾರವಾಗಿ ಸ್ಪರ್ಧೆ ಕೊಟ್ಟೇ ತೀರುವೆನೆಂಬ ಹಟ ಹಿಡಿದುದರಿಂದ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ವೈ. ಬಿ. ಚವಾಣರ ಹೆಸರನ್ನು ಸದಸ್ಯರು ಸೂಚಿಸಿದರು. ಶ್ರೀ ಮುರಾರ್ಜಿಯವರ ಹೆಸರು ಇದಕ್ಕೆ ಮೊದಲೇ ಸೂಚಿಸಲಾಗಿದ್ದರೂ ಸ್ಪರ್ಧೆಗೆ ಅವಕಾಶವಿತ್ತು ಮುಖ್ಯ ಮಂತ್ರಿ ಸ್ಥಾನಕ್ಕೆ ಬರುವ ಇಚ್ಛೆ ತನ್ನದಲ್ಲವೆಂದು ಶ್ರೀ ದೇಸಾಯಿಯವರು ಹೇಳಿ ಉಮೇದ್ವಾರಿಕೆಯನ್ನು ಹಿಂತೆಗೆದು ಕೊಂಡರು. ಮತದಾನದ ಫಲವಾಗಿ ಶ್ರೀ ಚವಾಣರು ಮುಖ್ಯ ಮಂತ್ರಿಗಳಾಗಿ ಆಯ್ಕೆಯಾದರು.

### ರಾಜ್ಯಪಾಲ ಶ್ರೀಪ್ರಕಾಶ

ಇನ್ನು ಶ್ರೀ ಮುರಾರ್ಜಿ ದೇಸಾಯಿಯವರು ಕೇಂದ್ರದಲ್ಲಿ ಮಂತ್ರಿಗಳಾಗಿ ಸೇರುವ ನಿರೀಕ್ಷೆ ಬಲವಾಗಿದೆ. ಮುಂಬಯಿ ರಾಜ್ಯದ ಗವರ್ನರರಾಗಿದ್ದ ಡಾ. ಹರೇಕೃಷ್ಣ ಮೆಹತಾಬರು ಒರಿಸ್ಸದಲ್ಲಿ ಮುಖ್ಯ ಮಂತ್ರಿ ಸ್ಥಾನವನ್ನು ಸ್ವೀಕರಿಸಲು ಹೋಗಿದ್ದಾರೆ. ತಾತ್ಕಾಲಿಕವಾಗಿ ರಾಜ್ಯಪಾಲ ಸ್ಥಾನಕ್ಕೆ ಮುಂಬಯಿ ಹೈಕೋರ್ಟಿನ ಮುಖ್ಯ ನ್ಯಾಯ ಮೂರ್ತಿಗಳಾದ ಶ್ರೀ ಛಗಲಾ ನೇಮಕಹೊಂದಿದ್ದಾರೆ. ದೊಡ್ಡ ಮುಂಬಯಿ ರಾಜ್ಯವು ೧ನೇ ನವಂಬರದಂದು ರೂಪುಗೊಂಡಾಗ ಈಗ ಮದ್ರಾಸಿನಲ್ಲಿ ರಾಜ್ಯಪಾಲರಾಗಿರುವ ಶ್ರೀ ಶ್ರೀಪ್ರಕಾಶರು ಆ ರಾಜ್ಯಕ್ಕೆ ರಾಜ್ಯಪಾಲರಾಗುತ್ತಾರೆ.

### ಮಂತ್ರಿ ಶ್ರೀ ಎ. ಬಿ. ಶೆಟ್ಟಿ

ಮದ್ರಾಸಿನ ರಾಜ್ಯಪಾಲರು ಯಾರಾಗುವರೆಂಬುದು ಇನ್ನೂ ತಿಳಿದುಬಂದಿಲ್ಲ. ಮದ್ರಾಸಿನ ಶಾಸನಾಂಗದ ಕೆಳಮನೆಯ ಅಧ್ಯಕ್ಷರಾಗಿರುವ ಶ್ರೀ ಗೋಪಾಲ ಮೆನನ್ನರು ರಾಜ್ಯಗಳ ಪುನಾರಚನೆಯ ಫಲವಾಗಿ ತನ್ನ ಸ್ಥಾನದಿಂದ ನಿವೃತ್ತರಾಗುತ್ತಾರೆ. ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರೂ ಹೊಸ ಮೈಸೂರು ರಾಜ್ಯದ ಶಾಸನಾಂಗದ ಸದಸ್ಯರಾಗುವ ದೆಸೆಯಿಂದ ಮದ್ರಾಸು ಸರಕಾರದ ಸಂಬಂಧವನ್ನು ಬಿಡುವವರಾಗುತ್ತಾರೆ. ಅವರೀಗ ಆರೋಗ್ಯ, ವೈದ್ಯಕೀಯ ಸೌಲಭ್ಯ, ಸಹಕಾರ, ಗೃಹನಿರ್ಮಾಣ ಮತ್ತು ನಿವೃತ್ತ ಯೋಧರ ಯೋಗಕ್ಷೇಮ—ಈ ಇಲಾಖೆಗಳನ್ನು ನೋಡಿಕೊಳ್ಳುತ್ತಿದ್ದಾರೆ. ಮದ್ರಾಸಿನಲ್ಲಿ ಈಗಿರುವ ಮಂತ್ರಿಗಳೇ ಈ ಶಾಖೆಗಳನ್ನು ತಮ್ಮಲ್ಲಿ ಹಂಚಿಕೊಳ್ಳುವರೆಂದೂ ಹೊಸ ಮಂತ್ರಿಯೊಬ್ಬನನ್ನು ಶ್ರೀ ಶೆಟ್ಟರ ಸ್ಥಾನದಲ್ಲಿ ನೇಮಿಸುವ ಸಂಭವವಿಲ್ಲವೆಂದೂ ಹೇಳಲಾಗಿದೆ.

### ರಷ್ಯ ಪ್ರವಾಸ

ಕೇಂದ್ರ ಸರಕಾರದಲ್ಲಿ ಕೈಗಾರಿಕೋತ್ಪಾದನೆಗೆ ಸಂಬಂಧಿಸಿದ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಈಗ ಎರಡು ವಾರಗಳ ರಷ್ಯ ಪ್ರವಾಸವನ್ನು ಕೈಗೊಂಡಿದ್ದಾರೆ. ರಷ್ಯದ ಪ್ರಾಮುಖ್ಯ ಔದ್ಯೋಗಿಕ ಕ್ಷೇತ್ರಗಳನ್ನು ಸಂದರ್ಶಿಸಿ

ಭಾರತದಲ್ಲಿ ಯೋಜನಾಬದ್ಧವಾದ ಪ್ರಗತಿಯನ್ನು ಸಾಧಿಸಲು ಪೋಷಕವಾದ ವಿಚಾರಗಳನ್ನು ಸಂಗ್ರಹಿಸುವುದೇ ಅವರ ಈ ಸಂಚಾರದ ಮುಖ್ಯೋದ್ದೇಶ.

**ಅಂಬೇಡ್ಕರರೊಬ್ಬ ಬೌದ್ಧ**

ಭಾರತದ ರಾಜ್ಯ ಘಟನೆಯ "ಮನು" ಎಂದು ಹೆಸರಾಗಿರುವ ಮತ್ತು ಭಾರತ ಸರಕಾರದ ಕಾನೂನು ಮಂತ್ರಿಗಳಾಗಿದ್ದ ಡಾ. ಬಿ. ಆರ್. ಅಂಬೇಡ್ಕರರು ತಮ್ಮ ಪತ್ನಿ ಶ್ರೀಮತಿ ಸವಿತಾ ಬಾಯಿ ಹಾಗು ತಮ್ಮ ಅನುಯಾಯಿಗಳಾದ ಮೂರು ಲಕ್ಷ ಮಂದಿ ಹರಿಜನರೊಂದಿಗೆ ಇದೇ ೧೪ನೇ ದಿನಾಂಕ ನಾಗಪುರದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಸವರ್ಣ ಹಿಂದುಗಳು ತಮ್ಮನ್ನು ನಡೆಸಿಕೊಂಡ ಅಮಾನುಷ ರೀತಿಗಾಗಿ ಅವರು ತುಂಬ ನೊಂದು ಮಾತನಾಡಿದರು. ರಾಜ್ಯ ಘಟನೆಯಂತೆ ಹಿಂದುಳಿದ "ಜಾತಿ"ಯವರಿಗೆ ದೊರಕುವ ಪ್ರಯೋಜನಗಳು ಇನ್ನು ಮುಂದೆ ಬೌದ್ಧ ಮತಾವಲಂಬಿಗಳಾದ ಈ ಹರಿಜನರಿಗೆ ಸಿಗಲಾರವಷ್ಟೆ—ಎಂದು ಪ್ರಶ್ನಿಸಿದಾಗ, "ಇಂತಹ ಪ್ರಯೋಜನ ಪಡೆಯಲಿಕ್ಕಾಗಿ ಬ್ರಾಹ್ಮಣ ಜಾತಿಯವನು ಹರಿಜನನಾಗಲು ಸಿದ್ಧನಿದ್ದಾನೆಯೆ?" ಎಂದು ಅವರು ಕೇಳಿದರು. "ನಾವೀಗ ನಿಜಮಾನವರಾಗಬೇಕೆಂದು ಇದ್ದೇವೆ" ಎಂದೂ ಅವರು ಸಾರಿದರು.

**ನೆರೆ ಹಾವಳಿ**

ಯಮುನಾ ನದಿಗೆ ಮಹಾಪೂರ ಬಂದಿರುವ ದೆಸೆಯಿಂದ ದೆಹಲಿಯ ಕೆಂಪು ಕೋಟೆ ಮತ್ತು ಸುತ್ತುಮುತ್ತಲಿನ ವಿಶಾಲ ಪ್ರದೇಶಕ್ಕೆ ತುಂಬ ಅಪಾಯ ಉಂಟಾಗಿದೆ. ಲಕ್ಷಾಂತರ ಜನರನ್ನು ಸ್ಥಳಾಂತರಿಸಬೇಕಾಗಿ ಬಂದಿದೆ. ಸೈನಿಕರನ್ನು ಕರೆಸಿಕೊಂಡು ನದಿ ದಂಡೆ ಒಡೆಯದಂತೆಯೂ ಸೇತುವೆ ಕುಸಿದು ಬೀಳದಂತೆಯೂ ರಕ್ಷಣೋಪಾಯಗಳನ್ನು ಕೈಗೊಳ್ಳುವ ಕೆಲಸ ನಡೆದಿದೆ. ಕಳೆದ ಮೂರು ದಶಕಗಳಿಂದ ಹಿಂದೆಂದೂ ಇಲ್ಲದಷ್ಟು ಎತ್ತರಕ್ಕೆ ನೀರಿನ ಮಟ್ಟ ಏರಿದ್ದ ನೆರೆಯು ನಿಧಾನವಾಗಿ ಕಡಿಮೆಯಾಗಹತ್ತಿದೆಯೆಂದು ಇತ್ತೀಚೆಯ ವಾರ್ತೆಯಿಂದ ತಿಳಿದು ಬರುತ್ತದೆ.

---

**ಉಡುಪಿ ಡಿ. ಮು. ಕೋರ್ಟಿನಲ್ಲಿ**

**O. S. No. 288/1956.**

ವಾಮನ ಕಾಮತ್ —ವಾದಿ

ಮತ್ತು

ಸುಬ್ಬಣ್ಣ ನಾಯ್ಕ —ಪ್ರತಿವಾದಿ

ಇವರೊಳಗೆ

ಪ್ರತಿವಾದಿ:— ಉಡುಪಿ ತಾಲೂಕು ಹೊಸೂರು ಗ್ರಾಮದ ಪುರ್ಚೆಯಲ್ಲಿರುವ ದೇವಪ್ಪ ನಾಯ್ಕರ ಮಗ. ಸುಬ್ಬಣ್ಣ ನಾಯ್ಕರಿಗೆ—

ಚಾಲಗೇಣಿ ಆಸ್ತಿ ಸ್ವಾಧೀನತೆ ಗೇಣಿಬಾಕಿ ಹುಟ್ಟುವಳಿ ವಗೈರೆ ಸವೃತ್ತಿ ಕೇಳಿ ವಾದಿಯು ನಿಮ್ಮ ಮೇಲೆ ಮಾಡಿದ ದಾವೆಯನ್ನು ತಾ. 26—10—1956ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿದೆ. ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ನೀವು ನೇಮ್ಸಿದ ಕೋರ್ಟಿನಲ್ಲಿ ಹಾಜರಾಗಿ ಆಕ್ಷೇಪ ಇದ್ದಲ್ಲಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ವಾದಿಯ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಯು. ಬಿ. ಕೃಷ್ಣರಾವ್.
ವಾದಿಯ ಎಡ್ವೋಕೇಟ್.
(ಕೋರ್ಟು ಹುಕುಂ ಮೇರೆಗೆ)

ಉಡುಪಿ, ತಾ. 16—10—56.

---

## ಉಡುಪಿ ವಾರ್ತೆ

**ಮಂತ್ರಿದ್ವಯರಿಗೆ ಭೋಜನ ಸತ್ಕಾರ**— ತಾ. 13ರಲ್ಲಿ ಮದರಾಸು ವಿದ್ಯಾಮಂತ್ರಿಗಳಾದ ಸಿ. ಸುಬ್ರಹ್ಮಣ್ಯಂ ಮತ್ತು ಸ್ಥಾನಿಕ ಸಂಸ್ಥೆಗಳ ಮಂತ್ರಿ ಎಸ್. ಎಸ್. ರಾಮಸ್ವಾಮಿ ಪಡಿಯಾಚಿ ಇವರು ಕಟಪಾಡಿ ಕಾರ್ಯಕ್ರಮ ತೀರಿಸಿ ಉಡುಪಿಗೆ ಆಗಮಿಸಿ ಶ್ರೀ ಕೃಷ್ಣ ದರ್ಶನಪಡೆದು ಶ್ರೀ ಟಿ. ಸಂಜೀವ ಪೈಗಳ ವ್ಯಾಯಾಮ ಶಾಲೆಯ ಹೊಸ ಕಟ್ಟಡವನ್ನು ಉದ್ಘಾಟಿಸಿ ರಾತ್ರಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಮುಖಂಡರ ನಿವಾಸದಲ್ಲಿ ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು. ಅಲ್ಲಿ ಮಂತ್ರಿ ಸುಬ್ರಹ್ಮಣ್ಯಂ ಅವರು ಮಾತನಾಡುತ್ತಾ ಮದ್ರಾಸು ಪ್ರಾಂತವನ್ನು ಬಿಟ್ಟು ಮಹಾಮೈಸೂರಿಗೆ ಸೇರುವ ದಕ್ಷಿಣ ಕನ್ನಡ ಜಿಲ್ಲೆಯ ಬುದ್ಧಿಶಾಲಿ ಹಾಗೂ ಕ್ರಿಯಾಶಾಲಿ ಜನರು ಅಲ್ಲಿ ತಮ್ಮ ವೈಶಿಷ್ಟ್ಯವನ್ನು ಕಳೆದುಕೊಳ್ಳಲಾರರು ಎಂದು ನಂಬಿದ್ದೇನೆ ಎಂದರು. ಮೆಡಿಕಲ್ ಕಾಲೇಜಿನ ಕುರಿತು ಪ್ರಸ್ತಾಪಿಸುತ್ತಾ ಮೈಸೂರಿಗೆ ಸೇರಿದ ತರುವಾಯ ಅವರ ಸಮಸ್ಯೆಗಳು ಬಗೆಹರಿದಾವು. ದ. ಕ. ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯು ಅಸಾಧಾರಣವಾದದ್ದು. ನಮ್ಮ ನಿಮ್ಮೊಳಗಿನ ಮಧುರ ಸ್ನೇಹ ಸಂಬಂಧವು ಶಾಶ್ವತವಾಗಿ ಉಳಿಯಲಿ ಎಂದು ಮುಂತಾಗಿ ಹೇಳಿದರು. ಡಾ. ಟಿ. ಮಾಧವ ಪೈಗಳು ಆರಂಭದಲ್ಲಿ ಸ್ವಾಗತ ಭಾಷಣಮಾಡುತ್ತಾ, ಜಿಲ್ಲೆಯ ಪ್ರಗತಿಗೆ ಕಾರಣರಾದ ಇಂದಿನ ಮುಖ್ಯ ಅತಿಥಿಯನ್ನು ಸ್ವಾಗತಿಸಲು ಸಂತೋಷವೆನಿಸುತ್ತದೆ. ಆದರೆ ಅವರ ಅಗಲುವಿಕೆಯೂ ಬೇಸರವನ್ನುಂಟುಮಾಡುತ್ತದೆ. ದಕ್ಷಿಣಪ್ರಾಂತ ರಚನೆಯು ತತ್ವವು ಜನರಿಗೆ ಪ್ರಕೃತ ಇಷ್ಟವಾಗದೆ ಹೋದರೂ ಸ್ವಲ್ಪ ಕಾಲಾನಂತರ ಹೃದಯ ಪರಿವರ್ತನೆಯಾಗಿ ನಾವೆಲ್ಲರೂ ಒಂದಾಗುವ ಸಂದರ್ಭ ಒದಗೀತೆಂದು ಹೇಳಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಅಭ್ಯಾಸ ಮಾಡುವ ಮದ್ರಾಸು ಪ್ರಾಂತದ ವಿದ್ಯಾರ್ಥಿಯ ಬಗ್ಗೆ ತಲಾ 300 ಹಾಗೂ 500 ಮದ್ರಾಸು ಸರಕಾರ ಕೊಡುತ್ತಿರುವ ಫೀ ಮುಂದೇನಾಗಬಹುದೆಂದು ನನಗೆ ಭೀತಿ ಹುಟ್ಟಿದೆ. ಅಜ್ಜರಕಾಡಿನ ಸುಮಾರು 43 ಎಕ್ರೆ, ಮಣಿಪಾಲದ ಸುಮಾರು 200 ಎಕ್ರೆ ಜಾಗಗಳನ್ನು ಸರಕಾರ ಮೆಡಿಕಲ್ ಕಾಲೇಜ್ ಆಸ್ಪತ್ರೆ ಕಟ್ಟಡಗಳಿಗಾಗಿ ಕಾಯ್ದಿರಿಸಿದೆ ಎಂದೂ ತಿಳಿಸಿದರು. ನಗರ ಸಭೆಯ ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ಮಾತನಾಡುತ್ತಾ, ಸರಕಾರಿ ವೇಕೆಂಟ್ ಲೇಂಡಿನ ಬಾಬ್ತು ಸರಕಾರದಿಂದ ಬರಬೇಕಾಗಿರುವ ಸುಮಾರು ರೂಪಾಯಿ 79,000ವನ್ನು ಪಡೆಯುವಂತಾದರೆ ನಮ್ಮ ಕಾರ್ಯಗಳೆಷ್ಟೋ ಸುಖಮಯವಾಗುವುವೆಂದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಧನ್ಯವಾದ ಸಮರ್ಪಿಸುತ್ತಾ ಮಂತ್ರಿಗಳು ಜಿಲ್ಲೆಗೆ ನೀಡಿದ ಸಹಾಯಕ್ಕೆ ಅಭಿನಂದಿಸಿ ಉಡುಪಿ ನಗರಸಭೆಯ ಬೇಡಿಕೆಯನ್ನು ಆಲಿಸಬೇಕೆಂದರು. ದ. ಕ. ಜಿಲ್ಲೆಯಲ್ಲಿ 2 ಸಂಸ್ಕೃತ ಕಾಲೇಜು, ಒಂದು ಮೆಡಿಕಲ್ ಕಾಲೇಜು, ನಾಲ್ಕು ಪ್ರಥಮದರ್ಜೆಯ ಕಾಲೇಜು ಇವೆ. ಮಡಿಕೇರಿ ಹಾಗೂ ದ. ಕ. ಜಿಲ್ಲೆಯನ್ನು ಸೇರಿಸಿ ಪ್ರತ್ಯೇಕವಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರೆ ತುಂಬ ಅನುಕೂಲವಾಗುವುದೆಂದೂ ಈ ಕುರಿತು ಮದ್ರಾಸು ಮತ್ತಿತರ ಸರಕಾರಗಳ ನೆರವು ಅಗತ್ಯವಿದೆ ಎಂದರು.

**ಶಾರದಾಪೂಜೆ**—ಸ್ಥಳೀಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ತಾ. 10ರಲ್ಲಿ ವಿದ್ವಾನ್ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ 'ಶಾರದಾ ಪೂಜಾ' ಸಮಾರಂಭವು ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ ಅವರು ಸ್ವಾಗತ ಮಾತು ಗನ್ನಾಡಿದರು. ಶ್ರೀಗಳಾದ ಎ. ನರಸಿಂಹಯ್ಯ, ಟಿ. ಶೀನಪ್ಪ ಹೆಗ್ಡೆ, ವಿಷ್ಣು ಕಾಮತ್, ಭಾಸ್ಕರ ಸೆಟ್ಟಿ, ವೆಂಕಟೇಶ ಭಟ್, ಜಗದೀಶ ಪಡಿಯಾರ ಮೊದಲಾದವರು ಸಂದೋಚಿತ ಭಾಷಣವಿತ್ತರು.

**ಬಂಗಾರ ಪಡೆದು ಬೆಳ್ಳಿ ರಥದ ಬೆಳ್ಳಿಗೆ ಸಹಾಯಮಾಡಿರಿ**—ಶ್ರೀ ಪುತ್ತಿಗೆ ಸ್ವಾಮಿಗಳವರ ಶತಮಾನೋತ್ಸವದ ನೆನಪಿಗಾಗಿ ಶ್ರೀಕೃಷ್ಣನಿಗೆ ಅರ್ಪಿಸಲಿರುವ ಬೆಳ್ಳಿ ರಥದ ಬಗ್ಗೆ ಮಹಾಜನರ ಅಧಿಕ ನೆರವನ್ನು ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಪರ್ಯಾಯ ಶ್ರೀ ಅದಮಾರು ಸ್ವಾಮಿಗಳವರು ಇಚ್ಛಿಸುತ್ತಾರೆ. ಶತಮಾನೋತ್ಸವ ದಿನ ಸ್ವಾಮಿಗಳವರಿಗೆ ಕನಕಾಭಿಷೇಕ ಮಾಡಿರುವ 1080 ಚಿನ್ನದ ಮಿಸ್ರಿಗಳಿವೆ. ಮಿಸ್ರಿಯ ಬೆಲೆಯು ರೂ. 6—8—0 ಅಧಿಕ ಜನತೆಯು ಮಿಸ್ರಿಯ ಬೆಲೆಗೆ ರೂ 10|— ಕೂಡಿಸಿ ರೂಪಾಯಿ 16—8—0 ಕೊಟ್ಟು ಒಂದೊಂದು ಮಿಸ್ರಿಯನ್ನು ಪಡೆದು ಮನೆಯಲ್ಲಿಟ್ಟುಕೊಂಡಲ್ಲಿ ಬೆಳ್ಳಿರಥದ ಕೆಲಸಕ್ಕೆ ಸಹಾಯ ಮಾಡಿದಂತಾಗುವುದು ಅಲ್ಲದೆ ಮನೆಗೆ ಮಂಗಲಕರವೂ ಆಗುವುದು. ಅಪೇಕ್ಷೆಯುಳ್ಳ ಮಹಾಜನರು 'ಕಾರ್ಯದರ್ಶಿ, ಪುತ್ತಿಗೆ ಸ್ವಾಮಿ ಶತಮಾನೋತ್ಸವ ಸಮಿತಿ, ಅದಮಾರುಮಠ, ಉಡುಪಿ' ಅವರಿಗೆ ರೂ 16—8—0ನ್ನು ಮನಿಯಾರ್ಡರ್ ಮಾಡಿ ಸ್ವರ್ಣ ಮಿಸ್ರಿಗಳನ್ನು ತರಿಸಿಕೊಳ್ಳಬಹುದು.

**ಉಡುಪಿ ನಗರಸಭೆಯು**— ತಾ. 11ರಂದು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. 1955-56ನೇ ವರ್ಷದ ನಗರಾಡಳಿತ ವರದಿಯ ಕುರಿತು ಜಿಲ್ಲಾ ಕಲೆಕ್ಟರರಿಂದ ಬಂದ ವಿಮರ್ಶೆಯನ್ನು ರೆಕಾರ್ಡು ಮಾಡಲಾಯಿತು. ಶ್ರೀ ಹರಿಯಪ್ಪ ಶೆಟ್ಟಿ ಸ್ಮಾರಕ ಬೆಳ್ಳಿಯ ಕಪ್ಪನ್ನು ಮುನಿಸಿಪಲ್ ಶಾಲೆಗಳಲ್ಲಿ ಅತಿಹೆಚ್ಚು ಮಕ್ಕಳ ಹಾಜರಾತಿಯಿರುವ ಶಾಲೆಗೆ ವರ್ಷಂಪ್ರತಿಯೂ ಕೊಡಲು ನಿರ್ಧರಿಸಿರುವುದಾಗಿ ನಗರಸಭಾ ಸದಸ್ಯ ಶ್ರೀ ಕೆ. ದೇವೇಂದ್ರ ಶೆಟ್ಟಿಯವರು ನಗರಸಭೆಗೆ ಮಾಡಿದ ವಿನಂತಿಯನ್ನು ಧನ್ಯವಾದ ಪೂರ್ವಕ ಮನ್ನಿಸಿ ಬೆಳ್ಳಿಯ ಕಪ್ಪನ್ನು ಸ್ವೀಕರಿಸಬೇಕೆಂದಾಯಿತು.

**ವೈದಿಕ ಧರ್ಮ ಪರಿಷತ್ತಿನ ವರ್ಧಂತಿಯು** ತಾ. 14ರಲ್ಲಿ ಸಂಜೆ ವಸಂತಮಹಲಿನಲ್ಲಿ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥರು ಮತ್ತು ಕಾಣಿಯೂರು ಮಠದ ಕಿರಿಯ ಶ್ರೀ ವಿದ್ಯಾವಾರಿನಿಧಿ ತೀರ್ಥಸ್ವಾಮಿಗಳವರ ಸಮಕ್ಷಮ ಜರಗಿತು.

**ಅಕ್ಕಿ ದಾನ**— ಇದೇ ತಾ 13ರಲ್ಲು ಶ್ರೀ ಯು. ಎಸ್. ನಾಯ್ಕರು ದೊಡ್ಡವರಿಗೆ ½ ಸೇರು ಅಕ್ಕಿ, ಮತ್ತು 0 2—0, ಚಿಕ್ಕವರಿಗೆ ¼ ಸೇರು ಅಕ್ಕಿ ಮತ್ತು 0—1—0 ಯಂತೆ ಸಾಧಾರಣ 45 ಮುಡಿ ಅಕ್ಕಿ ಮತ್ತು ರೂಪಾಯಿ 500!- ಧರ್ಮಮಾಡಿರುತ್ತಾರೆ.

**ಉಡುಪಿ ನಗರಸಭಾಡಳಿತ ವರದಿ ವಿಮರ್ಶೆ**—ದ. ಕ. ಜಿಲ್ಲಾ ಕಲೆಕ್ಟರರು ಉಡುಪಿ ನಗರ ಸಭೆಯ 1955-56ನೆ ವರ್ಷದ ಆಡಳಿತ ವರದಿಯನ್ನು ವಿಮರ್ಶಿಸುತ್ತಾ ಆಡಳಿತವು ಸಾಮಾನ್ಯ ತೃಪ್ತಿಕರವಿದೆ ಎಂದು ಹೇಳಿರುವರು. ಟೇಕ್ಸ್ ವಸೂಲಿಗೆ ಬಾಕಿ ನಿಂತಿರುವ ಹಣವನ್ನು ಬೇಗನೆ ವಸೂಲು ಮಾಡಬೇಕೆಂದು ಸೂಚಿಸಿರುವರು. ಸರಕಾರದಿಂದ ಖಾಲಿ ಜಾಗದಮೇಲಣ ತೆರಿಗೆಸಾಧಾರಣ ಎಪ್ಪತ್ತೊಂಭತ್ತು ಸಾವಿರಕ್ಕೂ ಮಿಕ್ಕಿ ಹಣವು ನಗರಸಭೆಗೆ ಪಾವತಿಯಾಗಬೇಕಾಗಿರುವ ಕುರಿತು ಪತ್ರ ವ್ಯವಹಾರ ನಡೆಯುತ್ತಿದೆ ಎಂದು ಸೂಚಿಸಿರುವರು. ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ, ಜನನ ಮರಣಗಳ ಸಂಖ್ಯೆಯನ್ನು ಕಡಿಮೆ ಮಾಡಲು ಕೈಕೊಳ್ಳತಕ್ಕ ಉಪಾಯಗಳು ಸ್ಥಳಾಕ್ರಮಣಗಳನ್ನು ಪತ್ತೆಹಚ್ಚುವ ಅವಶ್ಯಕತೆ, ಕಂಜಿಪಿಟ್ಟನಲ್ಲಿ ಗಾಡಿ ನಿಲ್ದಾಣ ಕಟ್ಟುವಿಕೆ ಇತ್ಯಾದಿ ಕುರಿತು ಸಲಹೆಗಳನ್ನಿತ್ತಿರುವರು.

**ಶ್ರೀಕೃಷ್ಣ ಮಠದಲ್ಲಿ**— ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರ ಹಿರಿತನದಲ್ಲಿ ದಸರಾ ಮಹೋತ್ಸವವು ವೈಭವದಿಂದ ಜರಗಿತು. ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥಶ್ರೀಪಾದಂಗಳವರು ಶ್ರೀ ಕೃಷ್ಣನಿಗೆ ನವರಾತ್ರಿ ಒಂಬತ್ತು ದಿವಸಗಳಲ್ಲೂ ವಿವಿಧ ಕನ್ನಿಕೆ, ಸ್ತ್ರೀಯಲಂಕಾರಗಳನ್ನು ಪ್ರೇಕ್ಷಣೀಯವಾಗಿ ಮನಮೋಹಿಸುವ ರೀತಿಯಲ್ಲಿ ಮಾಡಿದುದು ಕಲಾವಿದರ ಮನಸ್ಸು ಸೂರೆಗೊಳ್ಳುವಂತಿತ್ತು.

**ಮಲ್ಪೆ ಬಂದರಾಭಿವೃದ್ಧಿ ಕಾರ್ಯ**

'ಹಾಸನ-ಮಂಗಳೂರು ರೈಲ್ವೆ ಲೈನು ಸಾಕಷ್ಟು ಉತ್ಪತ್ತಿದಾಯಕವಾಗುವಂತಿಲ್ಲ. ಮಲ್ಪೆ ಬಂದರವನ್ನು ಸುಧಾರಿಸುವ ಮತ್ತು ಮೈಸೂರಿನೊಂದಿಗೆ ಅದರ ಸಂಬಂಧ ಜೋಡಿಸುವ ಕಾರ್ಯದ ಸಮೇತ ಈ ವಿಷಯದ ಕುರಿತು ಈಗ ತಜ್ಞರು ಗಾಢ ಪರೀಕ್ಷೆ ನಡೆಸುತ್ತಿದ್ದಾರೆ ಎಂದು ರೈಲ್ವೆ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳು ಬೆಂಗಳೂರಲ್ಲಿ ನಗರ ಸಭೆಯ ಮಾನಪತ್ರಕ್ಕೆ ಉತ್ತರವೀಯುತ್ತಾ ಹೇಳಿದರು ಚಾಮರಾಜ ನಗರ ಮತ್ತು ಸತ್ಯಮಂಗಲಂ ರೈಲ್ವೆ ಕಾರ್ಯವು ಮುಂದಿನ ವರ್ಷ ಕೈಕೊಳ್ಳಲ್ಪಡುವುದು. ಈ ವರುಷವೇ ಅದರ ಸರ್ವೆ ಪೂರ್ಣವಾಗುವುದೆಂದರು.

**ಶ್ರೀ ಮಧ್ವಮುನಿ ಸೇವಾ ಸಂಘವು**—1926ನೆ ಇಸವಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಇದೀಗ ಶ್ರೀ ಮಧ್ವಾಚಾರ್ಯರ 32 ಗ್ರಂಥಗಳನ್ನು ಕನ್ನಡಿಸಿ ಪ್ರಚಾರಮಾಡಿದೆ. ಇನ್ನೂ ಕೆಲವು ಗ್ರಂಥಗಳನ್ನು ಕನ್ನಡಿಸಿ ಮಾಧ್ವಜನತೆಯ ಮುಂದಿರಿಸಲು ಸಂಘವು ಕಾರ್ಯಕ್ರಮಗಳನ್ನಿಟ್ಟುಕೊಂಡಿದೆ. ಸಂಘದ ಕಾರ್ಯಕಲಾಪಗಳು ಬೆಳೆದು ಬರುವಂತೆ ಸಂಘದ ನಾಯಕ ಮಂಡಳಿಯ ಶ್ರೀಗಳಾದ ಬಿ. ವಾಸುದೇವರಾವ್, ಹಿ. ಪದ್ಮನಾಭರಾವ್, ಕಿದಿಯೂರು ಲಕ್ಷ್ಮೀನಾರಾಣರಾವ್, ಡಾ. ಎಸ್. ಆರ್. ಪೈ ಮೊದಲಾದವರು ಶ್ರದ್ಧಾಪೂರ್ವಕ ದುಡಿಯುತ್ತಿರುವುದು ಅಭಿನಂದನೀಯವಿವೆ.

---

**ಲೇಖಕರೊಡನೆ—**

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.

—ಸಂ. ನ.

---

**1—11—1956**

ರಾಜ್ಯ ಪುನರ್ವಿಂಗಡಣೆಯ ಸುದಿನ!
ಕರ್ನಾಟಕ ನವರಾಜ್ಯೋದಯದ
ಮಹತ್ವದ ದಿನ!

ಈ ಶುಭ ಸನ್ನಿವೇಶ—ದೀಪಾವಳಿಯ
ಸಂತೋಷ—ಕಾಲದಲ್ಲಿ

**ನವಯುಗ**ವು ವಿಶೇಷ ಸಂಚಿಕೆ
ಯೊಂದನ್ನು ಹೊರಡಿಸಲಿದೆ.

ಸುಪ್ರಸಿದ್ಧ ಬರಹಗಾರರ ಸಂದರ್ಭೋಚಿತವೂ ವಿಚಾರಪೂರಿತವೂ ಆದ ಲೇಖನಗಳು!

ವಾರಪತ್ರಿಕೆಯ ಆಕಾರದ ಸುಮಾರು 32 ಪುಟಗಳು!

ಈ ವಿಶೇಷ ಸಂಚಿಕೆಯಲ್ಲಿ ಜಾಹೀರಾತುಗಳನ್ನು ಕೊಡಲಿಚ್ಛಿಸುವವರು ದಯಮಾಡಿ ತಾ 25 ರೊಳಗೆ ತಮ್ಮ ಜಾಹೀರಾತುಗಳನ್ನು ಕಳುಹಿಸುವಂತೆ ಕೋರಲಾಗಿದೆ.

ಮೆನೇಜರ್, ನವಯುಗ, ಉಡುಪಿ.

---

**'NAVAYUGA' WEEKLY**
is in the list of periodicals and Newspapers approved or use in Secondary Schools as per proceedings Roc. No 466 N/50 date 12-12-1950 of the Director of public Instruction Madras.

# ಮದ್ರಾಸು ಮಂತ್ರಿಗಳ ಜಿಲ್ಲಾ ಸಂಚಾರ

**ಸುರತ್ಕಲ್ಲಿನಲ್ಲಿ** — ಅಲ್ಲಿಯ ವಿದ್ಯಾದಾಯಿನಿ ಹ್ಯಾಸ್ಕೂಲಿನಲ್ಲಿ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ವಿದ್ಯಾಮಂತ್ರಿ ಸಿ. ಸುಬ್ರಹ್ಮಣ್ಯಂರು ಮಾತನಾಡುತ್ತಾ, ಪ್ರತಿಯೊಂದು ಹಳ್ಳಿಗೊಂದು ಪ್ರಾಥಮಿಕ ಶಾಲೆ, ಗ್ರಾಮಸಮೂಹಕ್ಕೊಂದು ಪ್ರೌಢ ಪ್ರಾಥಮಿಕ ಶಾಲೆ ಮತ್ತು ಗ್ರಾಮಗಳ ಕೇಂದ್ರಕ್ಕೊಂದು ಹ್ಯಾಸ್ಕೂಲುಗಳನ್ನು ತೆರೆದು ವಿದ್ಯಾಕ್ಷೇತ್ರದಲ್ಲಿ ಪ್ರಗತಿಸಾಧಿಸಬೇಕೆಂಬುದೇ ಸರಕಾರದ ಯತ್ನವಾಗಿದೆ. ಎಲ್ಲಾ ತರದ ಸೌಕರ್ಯಗಳನ್ನೊಳಗೊಂಡು ಅಭಿವೃದ್ಧಿಹೊಂದಿದ ಗ್ರಾಮಗಳನ್ನು ಆದಷ್ಟು ಬೇಗನೇ ಕಾಣುವಂತಾಗಲೆಂದು ನಮ್ಮ ಹಾರೈಕೆ ಎಂದರು.

ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಎಸ್. ಎಸ್. ರಾಮಸ್ವಾಮಿ ಪಡಿಯಾಚಿಯವರು ಹ್ಯಾಸ್ಕೂಲಿಗೆ ಹಳೆ ವಿದ್ಯಾರ್ಥಿ ಸಂಘದವರು ಒದಗಿಸಿಕೊಟ್ಟ ವಿದ್ಯುತ್ ಪೂರೈಕೆ ವ್ಯವಸ್ಥೆಯ ಉದ್ಘಾಟನೆಮಾಡಿ ವಿದ್ಯುದ್ದೀಪವನ್ನು ಬೆಳಗಿಸಿದರು. ಆರಂಭದಲ್ಲಿ ಶ್ರೀ ಬಿ. ವಿ. ಕೃಷ್ಣಯ್ಯನವರು ಮಂತ್ರಿದ್ವಯರನ್ನು ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಟಿ. ಶ್ರೀನಿವಾಸರಾಯರು ಧನ್ಯವಾದವಿತ್ತರು. ಇಡ್ಯಾ ಪಂಚಾಯತರ ಪರವಾಗಿ ಅದರ ಅಧ್ಯಕ್ಷ ಶ್ರೀ ಎಮ್. ಪುರುಷೋತ್ತಮ ಕಾಮತರು ಮಾನಪತ್ರವೊಂದನ್ನರ್ಪಿಸಿದರು.

**ಉಪ್ಪಿನಂಗಡಿಯಲ್ಲಿ ಮಿಡ್ಲಸ್ಕೂಲಿನ ಉದ್ಘಾಟನೆ**—ತಾ. 13ರಂದು ಸಂಜೆ ಉಪ್ಪಿನಂಗಡಿ ಬೋರ್ಡು ಶಾಲಾ ವಠಾರದಲ್ಲಿ ಶ್ರೀ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ಬೋರ್ಡು ಮಿಡ್ಲಸ್ಕೂಲಿನ ಉದ್ಘಾಟನೆಯನ್ನು ನೆರವೇರಿಸುತ್ತಾ, ದ. ಕ. ಜಿಲ್ಲೆಯ ಮಲೆನಾಡು-ಪ್ರದೇಶವು ಇನ್ನೂ ಬಹಳ ಹಿಂದುಳಿದಿದೆ. ಮಲೆನಾಡು ಪ್ರದೇಶದ ಅಭಿವೃದ್ಧಿ ಕಾರ್ಯಗಳೆಷ್ಟೋ ಆಗಬೇಕಾಗಿದೆ. ಈ ಕ್ಷೇತ್ರಕ್ಕೆ ಹ್ಯಾಸ್ಕೂಲ್ ಅತ್ಯವಶ್ಯವು. ಕಟ್ಟಡ ಒದಗಿಸಿಕೊಟ್ಟಲ್ಲಿ ಮುಂದಿನ ವರ್ಷವೇ ಮಿಡ್ಲಸ್ಕೂಲನ್ನು ಹ್ಯಾಸ್ಕೂಲು ಆಗಿ ಪರಿವರ್ತಿಸುವಂತೆ ತಾನು ಮಾಡಿದ ಶಿಫಾರಸನ್ನು ಹೊಸ ರಾಜ್ಯದ ವಿದ್ಯಾ ಮಂತ್ರಿ ಕಾರ್ಯಗತಗೊಳಿಸಲೇ ಬೇಕಾಗುವುದು ಎಂದು ಹೇಳಿದರು.

ಹ್ಯಾಸ್ಕೂಲ್‌ಸಮಿತಿ ಅಧ್ಯಕ್ಷ ಶ್ರೀ ಕೆ. ವೇಣುಗೋಪಾಲ ನ್ಯಾಕರು ಸ್ವಾಗತಮಾತುಗಳನ್ನಾಡಿದರು. ಪಂಚಾಯತ ಅಧ್ಯಕ್ಷ ಶ್ರೀ ಬಾಲಕೃಷ್ಣ ರೈಗಳು ವಿದ್ಯಾ ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರಿಗೂ ಸ್ಥಳೀಯ ಖಾತಾಮಂತ್ರಿ ಶ್ರೀ ಎಸ್. ಎಸ್. ರಾಮಸ್ವಾಮಿ ಪಡಿಯಾಚಿಯವರಿಗೂ ಮಾನಪತ್ರ ಅರ್ಪಿಸಿದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಕೆ. ಆರ್. ಆಚಾರ್, ಕೆ. ಕೆ. ಸೆಟ್ಟಿ, ಎಚ್. ನರಸಿಂಹ (ಜಿಲ್ಲಾ ಕಲೆಕ್ಟರ್) 'ರೆ. ಫಾ. ರೊಡ್ರಿ'ಗಸ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಅಧ್ಯಕ್ಷ ಶ್ರೀ ವೆಂಕಟ್ರಮಣ ಗೌಡರು ಮಾತನಾಡುತ್ತಾ, ಹ್ಯಾಸ್ಕೂಲು ಆಗುವಾಗ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ವಸತಿ ನಿರ್ಮಾಣವಾಗಬೇಕೆಂದರು. ಶ್ರೀ ಕೆ. ವೇಣುಗೋಪಾಲ ನ್ಯಾಯ್ಕರು ಧನ್ಯವಾದವಿತ್ತರು.

**ಕಟಪಾಡಿಯಲ್ಲಿ**—ಮದ್ರಾಸಿನ ಹಣಕಾಸಿನ ಮಂತ್ರಿ ಮಾನ್ಯ ಶ್ರೀ ಸುಬ್ರಮಣ್ಯಂ ಮತ್ತು ಸ್ಥಾನಿಕ ಸರಕಾರೀ ಮಂತ್ರಿ ಮಾನ್ಯ ಶ್ರೀ ರಾಮಸ್ವಾಮಿ ಪಡಿಯಾಚಿಯವರು ಕಟಪಾಡಿಯನ್ನು ಸಂದರ್ಶಿಸಿದರು. ಇಲ್ಲಿಯ ಹರಿಗೆ ಕೇಂದ್ರದಲ್ಲಿ ಮಾನ್ಯ ಶ್ರೀ ಸುಬ್ರಮಣ್ಯಂರು ವಿದ್ಯುದ್ದೀಪವನ್ನು ಬೆಳಗಿಸಿದರು. ಮತ್ತು ಸ್ಥಾನಿಕ ಅಭಿವೃದ್ಧಿಯೋಜನೆಯಲ್ಲಿ ರಚಿಸಲ್ಪಟ್ಟ ಮಕ್ಕಳ ಕ್ರೀಡಾರಂಗವನ್ನು ಉದ್ಘಾಟಿಸಿದರು. ಮಾನ್ಯ ಶ್ರೀ ಪಡಿಯಾಚಿಯವರು 'ರೇಡಿಯೋ ಮಂಟಪ'ವನ್ನು ಉದ್ಘಾಟಿಸಿದರು.

ಆರಂಭದಲ್ಲಿ ಕಟಪಾಡಿ ಪಂಚಾಯತ್ ಬೋರ್ಡಿನ ಪರವಾಗಿ ಅಧ್ಯಕ್ಷ ಶ್ರೀ ಪಿ. ವೆಂಕಟರಾಯ ನಾಯಕರು ಮಂತ್ರಿದ್ವಯರಿಗೆ ಒಂದು ಮಾನಪತ್ರವನ್ನಿತ್ತು ಗೌರವಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮದ್ರಾಸು ಸರಕಾರ ತೋರಿಸಿದ್ದ ಸಹಾನುಭೂತಿ, ನೆರವೇರಿಸಿದ್ದ ಅಭಿವೃದ್ಧಿ ಯೋಜನೆಗಳಿಗಾಗಿ ಕೃತಜ್ಞತೆಯನ್ನು ಮಾನಪತ್ರದಲ್ಲಿ ಸೂಚಿಸಲಾಗಿತ್ತು. ಈ ಸಾರ್ವಜನಿಕ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈ, ಎಂ. ಎಲ್. ಎ ಗಳು ವಹಿಸಿದ್ದರು.

ಮಾನ್ಯ ಸುಬ್ರಮಣ್ಯಂರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಕೆಲವೇ ಪಟ್ಟಣಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಸರಕಾರ ಆಸಕ್ತಿವಹಿಸಿತು. ಆದರೆ ದೇಶದ ಜನರಲ್ಲಿ ಶೇಕಡಾ 80ರಷ್ಟು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇವರಿಗೆ ತಕ್ಕ ಸೌಲಭ್ಯಗಳು ದೊರಕದಿದ್ದರೆ ಸ್ವಾತಂತ್ರ್ಯಸಿದ್ಧಿಯಾಗುವುದಿಲ್ಲವಾದುದರಿಂದ ಜನತಾ ಸರಕಾರವು ಆ ಬಗ್ಗೆ ಹೆಚ್ಚಿನ ಗಮನಕೊಟ್ಟಿತು. ಈ ಕಾರ್ಯಕ್ರಮದಲ್ಲಿ ದ. ಕ. ಜಿಲ್ಲೆಯ ಜನರು ಉತ್ಸಾಹದಿಂದ ಸಹಕರಿಸಿದುದರಿಂದ ಇಷ್ಟೊಂದು ಅಭಿವೃದ್ಧಿ ಸಾಧ್ಯವಾಯಿತು. ಮೂರು ವರುಷಗಳ ಹಿಂದೆ ಈ ಜಿಲ್ಲೆಗೆ ಬಂದಿದ್ದಾಗ ಇಲ್ಲಿ ಬರೀ ವಿದ್ಯುತ್ ಕಂಬಗಳನ್ನು ಮಾತ್ರ ಕಂಡಿದ್ದೆ. ಇಂದು 40 ಗ್ರಾಮಗಳಿಗೆ ವಿದ್ಯುತ್ ಸರಬರಾಯಿಯಾಗಿದೆ. ಇದನ್ನು ಕೃಷಿ ಹಾಗೂ ಗ್ರಾಮ ಕೈಗಾರಿಕೆಗಳಿಗೆ ಉಪಯೋಗಿಸಬಹುದು. ಜನಹಿತಕಾರ್ಯಗಳಲ್ಲಿ ಉತ್ಸಾಹದಿಂದ ದುಡಿಯುತ್ತಿರುವ ನಿಮ್ಮ ಪ್ರತಿನಿಧಿ ಶ್ರೀ ಟಿ. ಎ. ಪೈ ಮತ್ತು ಅವರ ಧರ್ಮಪತ್ನಿಯರು ಇಲ್ಲಿರುವುದು ನಿಮ್ಮ ಅದೃಷ್ಟ. ಸಮಾಜವಾದಿ ಮಾದರಿಯ ರಾಷ್ಟ್ರ ರಚನೆಯನ್ನು ನಾವು ಅಂಗೀಕರಿಸಿರುವೆವಾದುದರಿಂದ ಯಾವನಾಗಲಿ ಚಿಕ್ಕ ಮಗುವಿಗೆ ಸೌಲಭ್ಯದ ಸಮಾನ ಅವಕಾಶಬೇಕು. ಇಲ್ಲಿ ತೆರೆದಿರುವ ಹೆರಿಗೆ ಕೇಂದ್ರಗಳು ಹಾಗು ಕ್ರೀಡಾರಂಗ ಈ ಉದ್ದೇಶವನ್ನು ಸೂಚಿಸುತ್ತದೆ. ನೀವು ಮೈಸೂರನ್ನು ಸೇರುವಿರಾದರೂ ನಮ್ಮೊಳಗಿನ ಸುಮಧುರ ಬಾಂಧವ್ಯ ಹೋಗುವುದಿಲ್ಲ. ಇನ್ನು ಮುಂದೆ ಎಂದಾದರೂ ಮದ್ರಾಸು ಸರಕಾರದಿಂದ ನಿಮಗೆ ಯಾವುದೇ ಸಹಾಯಬೇಕಿದ್ದರೆ ಸಂಕೋಚವಿಲ್ಲದೆ ನೀವು ಬರಬಹುದು. ಪ್ರಾಂತ ಪುನರ್ಘಟನೆಯು ಆಡಳಿತೆಯ ಅನುಕೂಲತೆಯ ದೃಷ್ಟಿಯಲ್ಲಿ ನೆರವೇರಿಸಲಾಗಿರುವುದರಿಂದ ನಾವೆಲ್ಲ ಒಂದೇ ದೇಶದ ಜನರೆಂಬ ಭಾವನೆಗೆ ವಿರೋಧವಾಗಿರಕೂಡದು." ಎಂದು ತನಗಿತ್ತ ಗೌರವಕ್ಕಾಗಿ ಕೃತಜ್ಞತೆ ಸೂಚಿಸಿದರು.

ಅಧ್ಯಕ್ಷ ಸ್ಥಾನದಿಂದ ಶ್ರೀ ಟಿ. ಎ. ಪೈಗಳು—"ನವಂಬರ ಒಂದರಂದು ನಾವು ಮೈಸೂರಿಗೆ ಹೋಗುವವರಾದುದರಿಂದ ಮದ್ರಾಸು ಮಂತ್ರಿಗಳನ್ನು ಕರೆ ತರುವ ಉದ್ದೇಶವೇನೆಂದು ಕೆಲವರು ಪ್ರಶ್ನಿಸಬಹುದು. ಆದರೆ, ಜಿಲ್ಲೆಯ ಅಭಿವೃದ್ಧಿಗಾಗಿ ನಾವು ಮುಂದಿಟ್ಟ ಯಾವುದೇ ಬೇಡಿಕೆಯನ್ನು ಕಡೆಗಣಿಸದ ಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಘನತೆಯನ್ನು ಸೂಚಿಸುವುದು. ಇಷ್ಟರ ತನಕ ಜಿಲ್ಲೆಯಲ್ಲಾದ ಅಭಿವೃದ್ಧಿಗೆ ಮಂತ್ರಿಗಳ ಸ್ವಂತ ಸಂದರ್ಶನವೇ ಕಾರಣವಾಗಿರುತ್ತದೆ. ಎಂದು ಹೇಳಿದರು. ಡಾಕ್ಟರ್ ಕೆ. ಜೆ. ಕಿಣಿಯವರು ಧನ್ಯವಾದ ಸಮರ್ಪಿಸಿದರು.

**ಹೆಬ್ರಿಯಲ್ಲಿ** ಮದ್ರಾಸ್ ಶಿಕ್ಷಣ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ತಾ. 14ರಂದು ಬೆಳಿಗ್ಗೆ ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಉದ್ಘಾಟನೆಯನ್ನು ನೆರವೇರಿಸಿದರು. ಸ್ಥಾನಿಕ ಸಂಸ್ಥೆಗಳ ಮಂತ್ರಿ ಶ್ರೀ ಎಸ್. ಎಸ್. ಪಡಯಾಚಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಚ್. ಭುಜಂಗ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಶ್ರೀ ಮಂದರಧರ ಬಲ್ಲಾಳರು ಮಂತ್ರಿಗಳಿಗೆ ಪುಷ್ಪಹಾರವಿತ್ತರು. ಹಾಜರಿದ್ದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮಾತನಾಡುತ್ತ, ಬಳಿಕೆಗೆ ಬಂದ ಈ ಜಿಲ್ಲೆಯ ಶಿಕ್ಷಣಾಭಿವೃದ್ಧಿಯನ್ನು ನವಮೈಸೂರಲ್ಲಿ ಉಳಿಸಿಕೊಂಡು ಬರುವಂತೆ ಪ್ರಯತ್ನಿಸಬೇಕಾಗಿದೆ. ಶಾಲೆಗೆ ಹೋಗುವ ಪ್ರಾಯದ ಎಲ್ಲಾ ಮಕ್ಕಳೂ ಶಿಕ್ಷಿತರಾಗುವಂತೆ ತುಂಬಾ ದುಡಿಯಬೇಕಾಗಿದೆ ಎಂದು ಮುಂತಾಗಿ ಹೇಳಿದರು. ಮಂತ್ರಿಗಳು ತಮ್ಮ ಉತ್ತರದಲ್ಲಿ ಹೆಬ್ರಿಯ ಹ್ಯಾಸ್ಕೂಲು ಈ ಪ್ರದೇಶದ ಶೈಕ್ಷಣಿಕ ಆವಶ್ಯಕತೆಗಳನ್ನು ಪೂರ್ಣಗೊಳಿಸಲಿ ಮತ್ತು ಶೀಘ್ರದಲ್ಲಿ ವಿದ್ಯುತ್ತಿನ ಪೂರೈಕೆಯೂ ಆಗಿ ಅದರ ಸಂಪದಭಿವೃದ್ಧಿಯೂ ಉತ್ತಮರೀತಿಯಿಂದ ನಡೆಯಲಿ ಎಂದು ಆಶಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಮಾತನಾಡುತ್ತಾ ನೂತನವಾಗಿ ಸ್ಥಾಪಿಸಲ್ಪಟ್ಟ ಈ ಹ್ಯಾಸ್ಕೂಲಿನ ಬೆಳವಣಿಗೆಗೆ ಊರವರು ಉದಾರಮನಸ್ಸಿನಿಂದ ಸಹಕರಿಸಿ ಶಾಲೆಯು ಆದರ್ಶವಾಗುವಂತೆ ಯತ್ನಿಸಬೇಕೆಂದರು. ಶ್ರೀ ಎಚ್. ಸಂಜೀವ ನಾಯ್ಕರು ಧನ್ಯವಾದವಿತ್ತರು. ಜಿಲ್ಲಾ ಬೋರ್ಡಿನಿಂದ ಈ ಹ್ಯಾಸ್ಕೂಲಿನ ಹೆಡ್ಮಾಸ್ತರರಾಗಿ ಶ್ರೀ ಎಚ್. ಗೋಪಾಲಕೃಷ್ಣ ಕೆದಿಲಾಯರು ನೇಮಕಹೊಂದಿರುವರು.

---

**ಬೆಳ್ವಾರೆ**—ಸ್ಥಳೀಯ ಗ್ರಾಮಸೇವಾ ಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವವು ತಾ 5 ಮತ್ತು 6ರಲ್ಲು ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಕೈಯೂರ ಕಿಂಞಣ್ಣ ರೈ, ಕೃಷ್ಣಭಟ್, ಬಿ. ಕಿಟ್ಟಣ್ಣ ರೈ, ಕೃಷ್ಣಶಾಸ್ತ್ರಿ ಮೊದಲಾದ ಹಲವಾರು ಪ್ರಮುಖರು ಭಾಗವಹಿಸಿದ್ದರು. ನಾಟಕಾಭಿನಯ ಕಾರ್ಯಕ್ರಮವೂ ಇತ್ತು.

**ಮಣಿಪಾಲ**—ಇಲ್ಲಿಯ ಗೀತಾಮಂದಿರದ ಆಶ್ರಯದಲ್ಲಿ ತಾ 14ರಲ್ಲು ಯೋಗಾಸನಾ ತರಬೇತಿ ವರ್ಗವನ್ನು ಶ್ರೀ ಉಪೇಂದ್ರ ಅನಂತ ಪೈಗಳವರು ಉದ್ಘಾಟಿಸಿದರು. ಶಿಕ್ಷಕರಾದ ಶ್ರೀ ಯು. ಲಕ್ಷ್ಮೀನಾರಾಯಣ ಕಿಣಿಯರು ಕೆಲವೊಂದು ಯೋಗಾಸನಗಳನ್ನು ಮಾಡಿ ತೋರಿಸಿದರು.

**ಪುತ್ತೂರು**-ಸ್ಥಳೀಯ ಪಂಚಾಯತ ಕಚೇರಿಯಲ್ಲಿ ತಾ 25ರಲ್ಲು ಶ್ರೀ ಬಾಳ್ತಬೀಡು ಕೃಷ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಚರಖಾಜಯಂತಿ ಆಚರಿಸಲಾಯಿತು. ಶ್ರೀಗಳಾದ ಎ. ಜೆ. ಆಳ್ವ, ರಾಜಶೇಖರ ಹೆಗ್ಡೆ, ಕೆ. ಶ್ರೀನಿವಾಸ ಪೈ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

**ಪೆರ್ಡೂರು**— ತಾ. 6ರಲ್ಲಿ ಶ್ರೀ ಎ. ಜೆ. ಆಳ್ವರವರ ಅಧ್ಯಕ್ಷತೆಯಲ್ಲಿ ಚರಖಾ ಜಯಂತಿ ಆಚರಿಸಲ್ಪಟ್ಟಿತು. ಶ್ರೀಗಳಾದ ಉಮಾನಾಥ ಹೆಗ್ಡೆ, ಜಿ. ಎನ್. ಮಯ್ಯ, ಕೆ. ಎಸ್. ಪೈ ಮೊದಲಾದರು ಮಾತನಾಡಿದರು. ಶ್ರೀ ಕೆ. ಕೃಷ್ಣ ಸೆಟ್ಟರು ಧನ್ಯವಾದಗಳನ್ನಿತ್ತರು.

**ಅಲೆವೂರು**— ಚರಖಾ ಜಯಂತಿಯು ತಾ. 4ರಲ್ಲಿ ಶ್ರೀ ಎ. ಜೆ. ಆಳ್ವರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಅಜ್ಜಣ್ಣ ಸೆಟ್ಟರು ಸ್ವಾಗತಮಾತುಗಳನ್ನಾಡಿದರು. ಗ್ರಾಮಸೇವಿಕೆ ಶ್ರೀಮತಿ ಲಲಿತಾ ಕಿಣಿ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಶ್ರೀ ಎಫ್. ದಾಂತಿಯವರು ಧನ್ಯವಾದ ಸಮರ್ಪಿಸಿದರು.

**ಕಡೆಕಾರು**— ತಾ. 10ರಲ್ಲಿ ಶ್ರೀ ಶ್ರೀಧರ ಸೆಟ್ಟರ ಅಧ್ಯಕ್ಷತೆಯಲ್ಲಿ ಮಹಾಗಣಪತಿ ಪ್ರಾಥಮಿಕ ಶಾಲೆಯಲ್ಲಿ ಶಾರದಾಪೂಜಾ ಸಮಾರಂಭವು ಜರಗಿತು. ಶ್ರೀಮತಿಗಳಾದ ಪ್ರೇಮಾ ಎ. ಪೈ ಮತ್ತು ಇಂದಿರಾ ರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು. ಈ ಕೇಂದ್ರದ ನಾಲ್ಕು ಗ್ರಾಮಗಳ ಮಹಿಳೆಯರಿಗಾಗಿ ಓರ್ವ ಸೂಲಗಿತ್ತಿಯನ್ನು ಮಹಿಳೆಯರ ಅಭಿವೃದ್ಧಿ ಕೇಂದ್ರದ ಸಹಾಯದಿಂದ ನೇಮಕಮಾಡಿದುದನ್ನು ಪ್ರಸಿದ್ಧಿಸಲಾಯಿತು.

---

## ಬೊಂಬಾಯಿ

ಮುಂಬಯಿ ಕೋಟೆಯೊಳಗಿನ ಕಾಮಾಹಾಲಿನಲ್ಲಿ ಶ್ರೀ ನರಸಿಂಹ ದಶಾವತಾರ ಯಕ್ಷಗಾನ ಮಿತ್ರಮಂಡಳಿಯ ನೇತೃತ್ವದಲ್ಲಿ ಕಳೆದ ತಾ. 30ರಲ್ಲಿ ಜರುಗಿದ ಯಕ್ಷಗಾನ ಬಯಲಾಟ ಪ್ರದರ್ಶನದ ವೇಳೆ, ದಿವಂಗತ ಕವಿಭೂಷಣ ಕೆ. ಪಿ. ವೆಂಕಪ್ಪಸೆಟ್ಟರಿಗೆ ಭಾಷ್ಪಾಂಜಲಿಯನ್ನರ್ಪಿಸಲಾಯಿತು. ಶ್ರೀ ಎಮ್. ಕೆ. ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಮುದ್ರಾಡಿ ಭೋಜರಾಜ ಸೆಟ್ಟರು ದಿವಂಗತರ ಗುಣಗಾನ ಮಾಡಿದರು.

---



# ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—3—0

**ನವಯುಗ ಪ್ರೆಸ್, ಉಡುಪಿ.**





# ದಿ ವಿಜಯ ಬೇಂಕ್ ಲಿಮಿಟೆಡ್, ಉಡುಪಿ.

## ಏಲಂ ನೋಟೀಸು,

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆಕೊಂಡು, ಕ್ಲಪ್ತ ವ್ಯಾವೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಕೊಳ್ಳುವಗೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 27-10-56ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

| ಲೋನು ನಂಬ್ರ | ಹೆಸರು ಮತ್ತು ವಿಳಾಸ | ಮೊಬಲಗು 30-9-56ರ ವರೆಗಿನ ಬಡ್ಡಿ ಸಮೇತ | | |
|---|---|---|---|---|
| 254/55 | ಕಾಮಿಲ್ ಡಿ. ಸೋಜ, ಕಿಲಾಮಂತ್ ಡಿ. ಸೋಜರ ಮಗ, ಹಾವಂಜೆ ಗ್ರಾಮ, ಪೋಸ್ಟು ಕೊಳಲಗಿರಿ. | 29 | 9 | 0 |
| 371/55 | ರಾಜೀವ ಶೆಟ್ಟಿ, ಅಂತಯ್ಯ ಶೆಟ್ರ ಅಳಿಯ, ಚಿತ್ರಬೈಲು ನಿಂಜೂರು ಗ್ರಾಮ, ಪೋಸ್ಟು ನಿಂಜೂರು. | 89 | 14 | 0 |
| 403/55 | ಕೆ. ಕೃಷ್ಣಯ್ಯ ಶೆಟ್ಟಿ, ಟೀಚರ್, ಕರ್ಜಾಲು ಗಣಪತಿ ಎಲಿಮೆಂಟರಿ ಸ್ಕೂಲ್, ಪೋಸ್ಟು ಕುಂಜಾರುಗಿರಿ. | 156 | 5 | 0 |
| 578/55 | ಜಬ್ಲ್ಯು. ಕೊರ್ನೆಲಿಯೊ, ರೆವಿನ್ಯೂ ಇನ್ಸ್ಪೆಕ್ಟರ್, ಉಡುಪಿ ಮುನಿಸಿಪಾಲಿಟಿ, ಉಡುಪಿ. | 60 | 9 | 0 |
| 581/55 | ,, ,, ,, | 66 | 13 | 0 |
| 611/55 | ಕೆ. ಪಾಂಡುರಂಗ ನ್ಯಾಕ್, ಬಾಬು ನ್ಯಾಕರ ಮಗ, ಬಡಗು ಪೇಟೆ, ಪೋಸ್ಟು ಉಡುಪಿ. | 33 | 3 | 0 |
| 621/55 | ನರಸಿಂಹ ಶೆಟ್ಟಿ, ಮಹಾಲಿಂಗ ಶೆಟ್ರ ಅಳಿಯ, ಹಾವಂಜೆ ಕೆಳಮನೆ, ಪೋಸ್ಟು ಕೊಳಲಗಿರಿ. | 140 | 10 | 0 |
| 5/56 | ಅನಂತ ಶೆಟ್ಟಿ, ತಿಮ್ಮಪ್ಪ ಶೆಟ್ರ ಮಗ, ಕೊಡವೂರು ಗ್ರಾಮ, ಪೋಸ್ಟು ಕೊಡವೂರು. | 32 | 15 | 0 |

ಉಡುಪಿ,
16-10-1956.

B. S. S. Hegde,
Agent.

ಕಂದಾಯ ಮಂತ್ರಿ ಎಂ. ಎ. ಮಾಣಿಕ್ಯವೇಲು ನಾಯಕ್ಕರ್

ವಿದ್ಯಾಮಂತ್ರಿ ಸಿ. ಸುಬ್ರಹ್ಮಣ್ಯಂ

# ಮಂಗಳೂರು

**ಸಾಗುವಳಿ ಒಕ್ಕಲುಗಳ ನ್ಯಾಯ ಗೇಣಿ ಕಾನೂನು—** ಮದ್ರಾಸಿನ ಕಂದಾಯ ಮಂತ್ರಿ ಶ್ರೀ ಎಮ್. ಎ. ಮಾಣಿಕ್ಯವೇಲು ನಾಯಕರ್‌ರವರು ತಾ. 11ರಲ್ಲಿ ಸಂಜೆ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಕೇಂದ್ರ ಮೈದಾನಸಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ, ಮೊನ್ನೆತಾನೇ ಮದ್ರಾಸು ಶಾಸನ ಸಭೆಯಲ್ಲಿ ಸಾಗುವಳಿ ಒಕ್ಕಲುಗಳ ಹಿತರಕ್ಷಣಾ ಮಸೂದೆ ಮತ್ತು ಸಾಗುವಳಿ ಒಕ್ಕಲುಗಳ ನ್ಯಾಯಗೇಣಿ ಮಸೂದೆಗಳು ಮಂಜೂರಾಗಿದ್ದು ಅವುಗಳಲ್ಲಿ ಒಂದನೇ ಮಸೂದೆಗೆ ಈಗಾಗಲೇ ರಾಷ್ಟ್ರಾಧ್ಯಕ್ಷರ ಸಮ್ಮತಿ ದೊರೆತಿದೆ. ಎರಡನೆಯದಕ್ಕೆ ಕೆಲವೇ ದಿವಸಗಳಲ್ಲಿ ಸಮ್ಮತಿ ದೊರೆಯಬಹುದು. ಒಕ್ಕಲಿಗೆ ಉತ್ಪತ್ತಿಯ ಸೇಕಡಾ 75 ರಷ್ಟು, ಧನಿಗೆ 25ರಷ್ಟು ಗೇಣಿ ಪ್ರಮಾಣವಿರಬೇಕೆಂದು ಒಕ್ಕಲುಗಳ ಪರವಾದ ಬೇಡಿಕೆಯಿತ್ತು. ಎರಡು ವರ್ಷಗಳ ಹಿಂದೆ ನಾನು ಇಲ್ಲಿಗೆ ಬಂದಾಗ ಇಲ್ಲಿಯ ಭೂಮಾಲಕರು ಒಕ್ಕಲಿಗೆ ಉತ್ಪತ್ತಿಯ ಸೇಕಡಾ 60 ಇರಿಸಿದುದು ಸರಿಯಲ್ಲವೆಂದು ವಾದಿಸಿದ್ದರು. ಆದರೆ ಬೊಂಬಾಯಿಯ ಕಾನೂನಿನಲ್ಲಿ ಧನಿಗೆ ಉತ್ಪತ್ತಿಯಲ್ಲಿ ಕೇವಲ $\frac{1}{6}$ನ್ನು, ಹೈದರಾಬಾದಿನಲ್ಲಿ $\frac{1}{5}$ನ್ನು ಇರಿಸಲಾಗಿದೆ ಎಂಬುದನ್ನು ಗಮನಿಸಬೇಕಾಗಿದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮದ್ರಾಸು ಶಾಸನ ಸಭೆಯು ಈಗ ಮಂಜೂರುಮಾಡಿರುವ ಮೇಲಿನ ಎರಡು ಭೂಸುಧಾರಣಾ ಕಾನೂನುಗಳನ್ನೆ ಪರಿಶೀಲಿಸಿ, ಅವುಗಳಿಗೆ ಬೆಂಬಲಕೊಡಬೇಕು. ಒಕ್ಕಲುಗಳಿಗೆ ಸಹಾಯನೀಡಿ ಭೂಮಾಲಕರಿಗೆ ನಾಶವನ್ನೊದಗಿಸಲಿಕ್ಕಾಗಿ ಈ ಸುಧಾರಣೆಗಳನ್ನು ಕೈಗೊಂಡಿಲ್ಲ. ಸರಕಾರವು ಈ ಸುಧಾರಣೆಗಳು ನ್ಯಾಯವಾದುದೆಂಬುದನ್ನು ಮನಗಂಡಿದೆ. ಇದರಿಂದಾಗಿ ಧನಿಗೆ ಸಂತೋಷ—ಒಕ್ಕಲಿಗೆ ಸಮಾಧಾನವಾಗಬೇಕು. ಇದೇ ಸರಕಾರದ ಧ್ಯೇಯವಾಗಿದೆ ಎಂದರು. ಈ ಜಿಲ್ಲೆಯು ಸದ್ಯವೇ ವಿಶಾಲ ಮೈಸೂರು ರಾಜ್ಯಕ್ಕೆ ಸೇರಲಿದ್ದು, ಹೊಸ ರಾಜ್ಯದಲ್ಲಿ ಧನಿಗೂ ಒಕ್ಕಲಿಗೂ ಹಿತವಾಗುವಂತೆ ಭೂಸುಧಾರಣೆ ಬರಲೆಂದೂ ಹಾರೈಸಿದರು.

ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ, ಅವರು ಸಭಾಧ್ಯಕ್ಷತೆವಹಿಸಿದ್ದರು. ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತ ಮಾತುಗಳನ್ನಾಡಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟಿರು ವಂದನೆಗಳನ್ನರ್ಪಿಸಿದರು.

ಮಾನ್ಯಮಂತ್ರಿಗಳು ಶ್ರದ್ಧಾನಂದ ಸೇವಾಶ್ರಮದ ಅನಾಥಾಶ್ರಮಕ್ಕೆ ಭೇಟಿಕೊಟ್ಟಾಗ ಶ್ರೀ ಯು. ಶ್ರೀನಿವಾಸ ಕಿಣಿಯವರು ಸ್ವಾಗತವಿತ್ತರು. ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ, ಅವರು ಮಾತನಾಡುತ್ತಾ ಈ ಅನಾಥಾಶ್ರಮಕ್ಕೆ ಮಂತ್ರಿಗಳೂ ಇತರರೂ ತುಂಬಾ ಸಹಾಯವಿತ್ತಿರುವರೆಂದು ತಿಳಿಸಿದರು. ಬಳಿಕ ಮಂತ್ರಿಗಳು ಜಪ್ಪು ಸೈಂಟ್ ಅಂತೋನಿಯವರ ಅನಾಥಾಲಯಕ್ಕೆ ತೆರಳಿ ಅನಾಥಾಲಯದ ಚಟುವಟಿಕೆಗಳನ್ನು ಪರಿಶೀಲಿಸಿದರು.

**ಮಂತ್ರಿದ್ವಯರ ಆಗಮನ—** ಮದ್ರಾಸಿನ ಅರ್ಥಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಎನ್. ಎಸ್. ರಾಮಸ್ವಾಮಿ ಪಡಯಾಚಿಯವರು ತಾ. 12ರಂದು ಮಧ್ಯಾಹ್ನ ಮದ್ರಾಸಿನಿಂದ ಕೊಚ್ಚಿಗಾಗಿ ವಿಮಾನಮೂಲಕ ಬಜಪೆಗೆ ಆಗಮಿಸಿದ್ದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆ, ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ ಮಲ್ಯ, ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹ ಮೊದಲಾದವರು ವಿಮಾನ ನಿಲ್ದಾಣದಲ್ಲಿ ಸ್ವಾಗತವಿತ್ತರು.

ಮಂತ್ರಿದ್ವಯರು ಸಂಜೆ ನಗರಸಭಾಭವನಕ್ಕೆ ಆಗಮಿಸಿ ಅಲ್ಲಿಯ ಸತ್ಕಾರಪಡೆದರು. ಶ್ರೀ ಸುಬ್ರಹ್ಮಣ್ಯಂರವರು ಮಾತನಾಡುತ್ತಾ, ದ. ಕ. ಜಿಲ್ಲೆಯಲ್ಲಿ ತಕ್ಷೀರುಗಳು ಕಡಿಮೆ. ವಿದ್ಯಾಕ್ಷೇತ್ರದಲ್ಲಿ ತುಂಬಾ ಪ್ರಗತಿ ಸಾಧಿಸಲಾಗಿದೆ ಎಂದು ಮುಂತಾಗಿ ಹೇಳಿ ಸದ್ಯವೇ ಮೈಸೂರನ್ನು ಸೇರಲಿರುವ ದ. ಕನ್ನಡಿಗರಿಗೆ ಶುಭಾಶಯವನ್ನಿತ್ತು, ನಾವೆಲ್ಲರೂ ಭಾರತೀಯರು ಎಂಬ ಭಾವನೆಯನ್ನಿಟ್ಟುಕೊಂಡಿರಬೇಕೆಂದು ಆಶಿಸಿದರು. ನಗರಸಭಾಪತಿ ಶ್ರೀ ಅಡಿಗರು ಧನ್ಯವಾದಗಳನ್ನಿತ್ತರು.

**ವಾರ್ಷಿಕ ಪಾರಿತೋಷಕ ವಿತರಣಾ ಸಮಾರಂಭ—** ಶ್ರೀ ಸುಬ್ರಹ್ಮಣ್ಯಂರವರು ಸಂಜೆ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ 75ನೇ ವಾರ್ಷಿಕ ಪಾರಿತೋಷಕ ವಿತರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಭಾಷಣಮಾಡುತ್ತಾ, 'ಇಂದಿನ ವಿದ್ಯಾರ್ಥಿಗಳು ಯಾವ ದೆಸೆಯಲ್ಲಿ ಆಲೋಚಿಸುತ್ತಿದ್ದಾರೆ, ಅವರ ಕ್ರಿಯೆಗಳು ಹೇಗಿವೆ, ಅವರ ಮಾನಸಿಕ ಪರಿಸ್ಥಿತಿಯು ಹೇಗೆ ರೂಪುಗೊಳ್ಳುತ್ತಿದೆ ಎಂಬುದರ ಮೇಲೆ ಭಾರತದ ಭವಿಷ್ಯ ಹೊಂದಿಕೊಂಡಿದೆ' ಎಂದರು. ಈ ಕಾಲೇಜು ಈ ತನಕ ಸಾಧಿಸಿದ ಪ್ರಗತಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಕ್ರಿಶ್ಚಿಯನ್ ಮಿಶನರಿಗಳು ಈ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ನಿಸ್ವಾರ್ಥ ಮತ್ತು ಪರಿಶ್ರಮಯುಕ್ತ ಸೇವೆಯನ್ನು ಪ್ರಶಂಸಿಸಿದರು.

ಮಂತ್ರಿಗಳಿಗೆ ಆರಂಭದಲ್ಲಿ ಕಾಲೇಜಿನ ಎನ್. ಸಿ. ಸಿ. ಯವರು ಗೌರವರಕ್ಷೆ ಸಲ್ಲಿಸಿದರು. ಕಾಲೇಜ್ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಪಿ. ಜಿ. ರಾಮಕೃಷ್ಣನವರು ಮಂತ್ರಿಗಳಿಗೆ ಹಾರವಿತ್ತರು. ಕಾಲೇಜ್ ಡೈರೆಕ್ಟರ್ ಮತ್ತು ಪ್ರಿನ್ಸಿಪಾಲ್ ರೆ. ಫಾ. ಎ. ಜೆ. ಸಾಲ್ಡಾನಾರು ಕಾಲೇಜು ವರದಿಯನ್ನೋದಿದರು. ಬಳಿಕ ಬಹುಮಾನ ವಿತರಣೆ, ಜನಮನರಂಜನ ಕಾರ್ಯಕ್ರಮಗಳಾದುವು.

**ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರಿಗೆ ಮಾನಪತ್ರವನ್ನು—** ತಾ. 13ರಲ್ಲಿ ಮಧ್ಯಾಹ್ನ ಗಣಪತಿ ಹೈಸ್ಕೂಲು ಶಾರದಾ ಸದನದಲ್ಲಿ ದ. ಕ. ಜಿಲ್ಲಾ ಸೆಕೆಂಡರಿ ಶಾಲಾ ಮನೇಜರರ ಸಂಘ, ಸೆಕೆಂಡರಿ ಶಾಲಾ ಮುಖ್ಯೋಪಾಧ್ಯಾಯರಸಂಘ, ಮತ್ತು ಜಿಲ್ಲಾ ಶಿಕ್ಷಕ ಸಂಘದ ಪರವಾಗಿ ಅರ್ಪಿಸಲಾಯಿತು. ಮಂತ್ರಿಗಳು ಉತ್ತರಿಸುತ್ತಾ, ಶಿಕ್ಷಣ ಸಮಸ್ಯೆಗಳನ್ನು ಎದುರಿಸುವಾಗ ಪ್ರಥಮವಾಗಿ ಅಧ್ಯಾಪಕರ ಪರಿಸ್ಥಿತಿಯನ್ನು ಸುಧಾರಿಸಬೇಕು. ಇಂದು ಉಪಾಧ್ಯಾಯ ವೃತ್ತಿಗೆ ಸಂಬಳ ಮೊದಲಾದ ಸವಲತ್ತುಗಳು ಹೆಚ್ಚು ಆಕರ್ಷಕವಾಗಿಲ್ಲವಾದುದರಿಂದ ಅತ್ಯುತ್ತಮ ಅಧ್ಯಾಪಕರು ದೊರೆಯುತ್ತಲಿಲ್ಲ. ನಾವು ಯಾವ ರೀತಿಯ ವಿದ್ಯಾ ಯೋಜನೆಯನ್ನು ತಯಾರಿಸಿದರೂ, ಅತ್ಯುತ್ತಮ ಅಧ್ಯಾಪಕವೃಂದವಿಲ್ಲದಿದ್ದಲ್ಲಿ, ಯಾವ ಯೋಜನೆಯೂ ಯಶಸ್ವಿಯಾಗಲಾರದು. ಹೊಸ ಮೈಸೂರು ರಾಜ್ಯದಲ್ಲಿ ದ. ಕ. ಜಿಲ್ಲೆಯು ಒಂದು ಪ್ರಶಸ್ತ ಸ್ಥಾನವನ್ನು ಗಳಿಸಿ, ಆ ರಾಜ್ಯದ ಇತರ ಪ್ರದೇಶಗಳಿಗೆ ಇಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರು ಮಾರ್ಗದರ್ಶಕರಾಗುವಂತಾಗಲಿ ಎಂದು ಹಾರೈಸಿದರು. ರೆ. ಫಾ. ಜೇಮ್ಸ್ ಕೊಯಿಲೋರವರು ಧನ್ಯವಾದಗಳನ್ನಿತ್ತರು.

**ದ. ಕ. ಜಿಲ್ಲೆಯಲ್ಲಿ ಗೇರು ಕೃಷಿಯ ವಿಸ್ತರಣೆ—** ದ. ಕ. ಜಿಲ್ಲೆಯಲ್ಲಿ ಗೇರುಬೀಜ ಉದ್ಯಮಕ್ಕೆ ಬೇಕಾದ ಕಚ್ಚಾ ಗೇರುಬೀಜದ ಪೂರೈಕೆಯಲ್ಲಿ ಸ್ವಯಂಪೂರ್ಣತೆಯನ್ನು ಪಡೆಯುವ ಬಗ್ಗೆ ಜಿಲ್ಲೆಯಲ್ಲಿ ಗೇರು ಕೃಷಿಯನ್ನು ವಿಸ್ತರಿಸುವ ಬಗ್ಗೆ ಸರಕಾರಿ ಖಾಲಿಸ್ಥಳಗಳನ್ನು ವಿತರಣೆಮಾಡುವ ಯೋಜನೆ ಕುರಿತು ಪರಿಶೀಲನೆ ನಡೆಸಲು ಮದ್ರಾಸಿನ ಕಂದಾಯಮಂತ್ರಿ ಶ್ರೀ ಎಮ್. ಎ. ಮಾಣಿಕ್ಯವೇಲುರವರು ತಾ. 11ರಂದು ಸಂಜೆ ಜಿಲ್ಲಾ ಕಲೆಕ್ಟರರ ಕೋರ್ಟು ಹಾಲಿನಲ್ಲಿ ಗೇರುಬೀಜ ಉದ್ಯಮದ ಪ್ರತಿನಿಧಿ ಮೊದಲಾದವರನ್ನು ಕಂಡು ವಿಚಾರವಿನಿಮಯ ನಡೆಸಿದರು. ಶ್ರೀಗಳಾದ ಬಿ. ವಿ. ಬಾಳಿಗ, ಎಮ್. ಎಲ್. ಎ, ಜಿಲ್ಲಾ ಕಲೆಕ್ಟರ್ ಎಚ್. ನರಸಿಂಹ, ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ, ಮಿ. ಪೆಲ್, ಎಚ್. ಆರ್. ಕಾಮತ್, ಎಸ್. ಗೋಪಾಲ ಸಾಳಿನ್ನ ಮೊದಲಾದವರು ವಿಚಾರವಿನಿಮಯದಲ್ಲಿ ಭಾಗವಹಿಸಿದ್ದರು.

**ಹಾಸನ ಮಂಗಳೂರು ರೈಲ್ವೆ—** ಕೇಂದ್ರ ರೈಲ್ವೆ ಮತ್ತು ಸಾರಿಗೆ ಮಂತ್ರಿಗಳೊಡನೆ ಮದ್ರಾಸಿನ ರಾಜ್ಯಪಾಲರು ಪತ್ರಬರೆದು ವಿಚಾರಿಸಿದಾಗ ಹಾಸನ-ಮಂಗಳೂರು ರೈಲ್ವೆಯ ಪರಿಶೀಲನೆಗೆ ಸಾಕಷ್ಟು ಹೆಚ್ಚಿನ ಪ್ರಾಶಸ್ತ್ಯಕೊಡಲಾಗಿದೆ ಎಂದೂ ಈ ರೈಲ್ವೆ ಜೋಡಣೆಯ ಕುರಿತು ಪರಿಶೀಲನೆ ನಡೆದಿದ್ದು ರೈಲ್ವೆ ಬೋರ್ಡಿನವರು ಅದನ್ನು ಪರೀಕ್ಷಿಸುತ್ತಿದ್ದಾರೆ ಎಂದೂ ಉತ್ತರಬಂದುದನ್ನು ರಾಜ್ಯಪಾಲರು ದ. ಕ. ಜಿಲ್ಲಾಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರಿಗೆ ತಿಳಿಸಿರುವರು.

---

(೪ನೇ ಪುಟದಿಂದ)

ವನ್ನು ಮುಟ್ಟಬೇಕು. ಇದರಿಂದಾಗಿ ಜನತೆಯ ನಿಕಟ ಸಂಪರ್ಕಕ್ಕೆ ಅವರು ಬರಬೇಕಾದುದು ತುಂಬ ಅಗತ್ಯ.

ಕಾಂಗ್ರೆಸಿನಲ್ಲಿ ಕೆಲವು ದೋಷಗಳಿವೆ. ಅವುಗಳ ನಿವಾರಣೆಗೆ ಎಲ್ಲ ಕಾಂಗ್ರೆಸಿಗರೂ ಶ್ರದ್ಧೆಯಿಂದ ಪ್ರಯತ್ನಿಸಬೇಕಾಗಿದೆ. ಚುನಾವಣೆಗಳಲ್ಲಿ ಸ್ಪರ್ಧಿಸುವುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಕಾಂಗ್ರೆಸು ಮಾಡಬೇಕಾಗಿದೆ ಈ ದೇಶದ ಏಳಿಗೆಗಾಗಿ ಏನು ಮಾಡಲಾಗಿದೆ, ಏನು ಇನ್ನೂ ಸಾಧನೆಯಾಗಿಲ್ಲ ಎಂಬ ಆತ್ಮನಿರೀಕ್ಷಣ ಭಾವದಿಂದ ಕಾಂಗ್ರೆಸಿಗರು ಕೂಡಿರಬೇಕಾಗಿದೆ.

ಕಳೆದ ಕೆಲವು ಶತಮಾನಗಳಲ್ಲಿ ಭಾರತವು ಏಕೆ ಹಿಂದುಳಿಯಿತು? ಜನರು ವಿಚಾರ ಮಾಡುವುದನ್ನೆ ಬಿಟ್ಟುಕೊಟ್ಟರು ಎಂಬ ಒಂದೇ ಉತ್ತರ ಈ ಪ್ರಶ್ನೆಗೆ ಸಿಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ವಿಚಾರಶೀಲ ಬುದ್ಧಿಯ ದೆಸೆಯಿಂದ ಅದ್ಭುತವಾದ ಪ್ರಗತಿಯನ್ನು ಹೊಂದಿದರು. ಆದರೆ ನಮ್ಮ ಭಾವನೆಗಳು ವೇಗವಾಗಿ ಹರಿಯುತ್ತಿಲ್ಲ—ಅಲ್ಲದೆ ಅವುಗಳ ಸಂಕುಚಿತ ಸ್ವರೂಪವೂ ಬದಲಾಗಿಲ್ಲ.

ಎತ್ತಿನ ಗಾಡಿಯು ನಮ್ಮ ವಾಹನವಾಗಿ ಅಶೋಕನ ಕಾಲದಲ್ಲಿಯೂ ಇತ್ತು—ಇಂದಿಗೂ ಅದು ಹಾಗೆಯೇ ಉಳಿದಿದೆ. ಹೀಗೆ ನಾವು ಭೌತಿಕ ಪ್ರಪಂಚದ ಪ್ರಗತಿಯೊಡನೆ ಹೆಜ್ಜೆ ಇಡದೆ ಹಿಂದುಳಿದಿದ್ದೇವೆ.

ಸಮಾಜವಾದಿ ಯುಗದೊಡನೆ ಅಣುಯುಗವೂ ಕಾಲಿರಿಸಿದೆ—ಆದುದರಿಂದ ಮುಂದಿನ ಕೆಲವು ದಶಕಗಳಲ್ಲಿ ಆಮೂಲಾಗ್ರ ಕ್ರಾಂತಿಕಾರಿ ಪರಿವರ್ತನೆಗಳಾಗಬಹುದು. ನಾವಿದನ್ನು ಮುಂದಾಗಿ ತಿಳಿದುಕೊಂಡು, ಬದಲಾಗುವ ಆ ಕಾಲಕ್ಕೆ ಸ್ವಾಗತ ಕೊಡಲು ಮನಸ್ಸನ್ನು ಸಿದ್ಧಪಡಿಸಿಕೊಂಡಿರಬೇಕು. ಅದೇ ಪ್ರಗತಿಯ ಮಾರ್ಗ.

(ನೆಹರುಗಳ ಭಾಷಣದಿಂದ).

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಸ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.

Tele add "CAWASHABAD"

## ಜನಮತ

ನ್ಯಾಯುವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ಸ.

## ನುಡಿದಂತೆ ನಡೆಯಬೇಕು

ಮದ್ಯದ ಉದ್ಯಮ ಇಂದು ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತದೆ–ಎಂದರೆ ತಪ್ಪಾಗಲಾರದು. ಹಳ್ಳಿ ಹಳ್ಳಿಗಳಲ್ಲಿ–ಪೇಟೆ ಪಟ್ಟಣಗಳಲ್ಲಿ ಇದರ ಹಾವಳಿ ಹೇಳಲಾರದಷ್ಟು! ಪ್ರತಿಯೋರ್ವನೂ, ಭಿಕ್ಷುಕರಿಂದ ಹಿಡಿದು–ಶ್ರೀಮಂತರ ವರೇಗೆ ಪೇದೆಯಿಂದ ಹಿಡಿದು ಪೋಲೀಸರರ ವರೆಗೆ–; ಅನಾಗರಿಕರಿಂದ–ನಾಗರಿಕರ ವರೆಗೆ ತನ್ನ ಪ್ರಭಾವವನ್ನು ಅದು ಬೀರಿಯೇ ಬೀರಿದೆ. ಅದರೊಂದಿಗೆ ಜೂಜು, ಸೂಳೆಗಾರಿಕೆಗಳು ತಡೆಯಿಲ್ಲದೆ ಸಾಗುತ್ತಿವೆ! ತಾರುಣ್ಯದ ಹೊಸ್ತಿಲಲ್ಲಿರುವ ಅದೆಷ್ಟೋ ವಿದ್ಯಾರ್ಥಿಗಳೂ ಇಂದು ಈ ಕೆಟ್ಟ ಚಟಗಳಿಗೆ ಬಲಿಬಿದ್ದು ಅಲ್ಲಿಂದ ಬಿಡುಗಡೆಯಾಗದೆ ತೊಳಲಾಡುತ್ತಿದ್ದಾರೆ!!

ಪತ್ರಿಕೆಗಳಲ್ಲಿ ಆಗಾಗ ನಾವು 'ಶರಾಬು ಪತ್ತೆ' ಎಂದು ಓದುತ್ತಿದ್ದೇವೆ. ಆದರೆ ಪತ್ತೆಯಾಗುವುದು ಹೆಚ್ಚಾಗಿ ಬಡವರಲ್ಲೇ. ಶಿಕ್ಷೆಯಾಗುವುದೂ ಅವರಿಗೇ. ಎಂಬುದನ್ನು ನೋಡುವಾಗ ಬಡವರೇ ಮದ್ಯವನ್ನು ಕುಡಿಯುವುದು ಹೆಚ್ಚು ಎಂದು ನಮಗೆ ಥಕ್ಕನೆ ಹೊಳೆಯುತ್ತದೆ. ಆದರೆ ಸತ್ಯಸ್ಥಿತಿ ಹಾಗಿಲ್ಲ. ಸರಾಯಿಯ ಸೇವನೆ, ವ್ಯಭಿಚಾರದ ಜಾಡ್ಯ ಶ್ರೀಮಂತರಲ್ಲೇ—ನಾಗರಿಕರಲ್ಲೇ ಅಧಿಕ ಎಂದು ನಾನು ಒತ್ತಿಹೇಳುತ್ತೇನೆ.

ಬಡವರು—ಹಿಂದುಳಿದವರು ಪಾಪ–ಹಣದ ಆಸೆಗಾಗಿ, ಹಾಗೂ ಧನಿಯ ಒತ್ತಾಯಕ್ಕೆ ಕಟ್ಟುಬಿದ್ದು ಎಂದರೆ ಸಿರಿವಂತರಿಗೋಸುಗ–ನಾಗರಿಕರಿಗೋಸುಗ ಬ್ರಾಂದಿ ತಯಾರಿಸುತ್ತಾರೆಯೇ ವಿನಾ ಬೇರೆಯಲ್ಲ. ಅವರು ಕುಡಿಯುವುದಿದ್ದರೂ ಅತ್ಯಲ್ಪ. ಉಳಿದ ಹೆಚ್ಚಿನ ಪಾಲು ಮೇಲೆ ಹೇಳಿದವರಿಗೇ ಸಲ್ಲುತ್ತದೆ.

ಮದ್ಯವನ್ನು ಅವರು, ಆಫೀಸಿಗೆ, ಮನೆಗೆ ಎಂದು ಅತ್ತಿತ್ತ ಸಾಗಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಸಿಕ್ಕಿಬೀಳುತ್ತಾರೆ! ಮಾಡುತ್ತಾರೆ. ಪೋಲೀಸರು ಕೇಸು ಹೋಗುತ್ತಾರೆ ಜೈಲಿಗೆ! ಯಾರಿಗೋಸುಗ? ಬ್ರಾಂದಿ ಕುಡಿಯುವ ಇತರರಿಗೋಸುಗ!!

ಎಷ್ಟೋ ಮನೆಗಳಲ್ಲಿ ಹಂಡೆ, ಹಂಡೆ, ಕುಪ್ಪಿ, ಕುಪ್ಪಿ, ಮದ್ಯ ದಾಸ್ತಾನಾಗಿರುತ್ತದೆ. ಆಗಾಗ ಅತ್ತಿತ್ತ ಅಲೆಯುವುದಕ್ಕೋಸುಗ. ಆದರೂ ಅಂತವರು 'ಕೇಸಿ'ಗೆ ಬಲಿಯಾಗುವುದಿಲ್ಲ. ಪೋಲೀಸರಿಗೆ ತಿಳಿಯುವುದಿಲ್ಲವೇ? ತಿಳಿಯುತ್ತದೆ. ನೋಡುತ್ತಾರೆ. ಆದರೆ 'ಅವರು' 'ಇವರ'ನು ಚೆನ್ನಾಗಿ ಸ್ವಾಗತಿಸಿ ಸುಖಭೋಜನವುಣಿಸಿ, 'ಬಾಟಲ್' ಒಡೆಸಿ, ಹೆಣ್ಣಿನ ಬಯಕೆ ಈಡೇರಿಸಿ ಕಳುಹಿಸಿಕೊಡುತ್ತಾರೆ. 'ಅವರು' ಆಗಾಗ ಬಂದು ತಮ್ಮ 'ಕಾಣಿಕೆ' ಸ್ವೀಕರಿಸಿ ಒಂದು ದಿನ 'ಕ್ಲೀಂಪ್' ಹೊಡೆದು ತೆರಳುತ್ತಾರೆ.

ಪೇಟೆ ಪಟ್ಟಣಗಳಲ್ಲಿ ವೇಶ್ಯಾಗೃಹಗಳಿಲ್ಲವೇ? ಇದೆ; ಬೇಕಷ್ಟಿದೆ. ಅದೂ ಹೀಗೆಯೇ. ಪ್ರತಿನಿತ್ಯ ಆತ ಅಲ್ಲಿಗೆ ಸಂದರ್ಶಕನಾಯಿತ್ತು, ತನ್ನ ಕಾಣಿಕೆ ಸ್ವೀಕರಿಸಿ, ಆಶೆ ಈಡೇರಿಸಿ ತೆರಳುತ್ತಾನೆ. ಅಂತೆಯೇ ಎಲ್ಲರೂ ಗುಟ್ಟಾಗಿಯೇ ಬಂದು ಗುಟ್ಟಾಗಿಯೇ ತೆರಳುತ್ತಾರೆ. ವ್ಯಾಪಾರ (!) ಸಾಗುತ್ತದೆ. ಅಲ್ಲಿ 'ಬಾಟಲಿ'ಗಳು ಸಾಕಷ್ಟಿವೆಯೆಂದು ಬೇರೆ ಹೇಳಬೇಕಾಗಿಲ್ಲ!

ಸಮಾಜದಲ್ಲಿ ಸಭ್ಯರೆಂದೆನಿಸಿಕೊಳ್ಳುವ, ಹಳ್ಳಿ ಹಳ್ಳಿಗಳಲ್ಲಿನ, ಪೇಟೆಪಟ್ಟಣಗಳಲ್ಲಿನ ಮುಖಂಡರು, ನಾಗರಿಕರು, ತಿಳಿದವರು, ಎಂದೆನಿಸಿಕೊಳ್ಳುವ ಪತ್ತಾರು ಸಭೆಗಳಲ್ಲಿ 'ಪ್ರೊಹಿಬಿಷನ್'ನ ಕುರಿತು ಗಂಟೆಗಟ್ಟಲೆ ಮಾತನಾಡುವ ಮಂದಿಗಳು ರಾತ್ರಿ ಹೆಂಡದಾ ಸರಿಯಲ್ಲಿ - ಬೆಲೆವೆಣ್ಣಿನ ಮನೆಯಲ್ಲಿ ನಾಯಿಗಳಂತೆ ಬಿದ್ದಿರುತ್ತಾರೆ!

ಹೌದು; ಹೇಳುವುದೊಂದು, ಆಚರಿಸುವುದಿನ್ನೊಂದು. ಅಂದರೆ ಅವರಿಗೇ ಅದು ಬೇಕೆಂದೆನಿಸಿದೆ. ಇಲ್ಲವಾದರೆ ಒಂದು ಹಳ್ಳಿಯಲ್ಲಿ ಒಂದು ಪಟ್ಟಣದಲ್ಲಿ ಅಲ್ಲಿನ ಮುಖಂಡರು ಮನಸ್ಸುಮಾಡಿದರೆ ಕುಡಿತವನ್ನು ನಿಲ್ಲಿಸಲು ಸಾಧ್ಯವಾಗಲಿಕ್ಕಿಲ್ಲವೇ?

ತನ್ನ ಪ್ರದೇಶದಲ್ಲಿ ತನ್ನ ಹೇಳಿಕೆಯಂತೆ ನಡೆಯುವುದಿಲ್ಲವೆಂಬುದಾದಲ್ಲಿ, ಕೆಟ್ಟ ಚಾಳಿಗಳನ್ನು ತನಗೆ ನಿಲ್ಲಿಸಲು ಅಸಾಧ್ಯವೆಂವಾದಲ್ಲಿ ಅಷ್ಟು ಸಂಯಮನ ಶಕ್ತಿ ತನಗಿಲ್ಲವೆಂದಾದಲ್ಲಿ ಮತ್ತವನಿಗೆ ಆ ಮರ್ಯಾದೆತನ, ದೊಡ್ಡತನ, ಮುಖಂಡತ್ವಯೇಕೆ? ಉದ್ದುದ್ದ ಭಾಷಣಗಳು ಬೇಕೆ? ಯಾರನ್ನು ಕಣ್ಣುಕಟ್ಟಿಸಲು ಆ ವಂಚನೆ!

ಸರಕಾರ ಯಾವಾಗ ಒಂದು ಕಾನೂನು ಜ್ಯಾರಿಗೊಳಿಸಿತೋ ಅದನ್ನು ಬಹಿರಂಗದಲ್ಲಿ ಒಪ್ಪಿ ಅಂತರಂಗದಲ್ಲಿ ವಿರೋಧಿಸಲಾಗದು. ಹಾಗೆ ವಿರೋಧಿಸುವುದಿದ್ದರೆ ಬಹಿರಂಗವಾಗಿ ಎದೆಯೊಡ್ಡಿ ವಿರೋಧಿಸಬೇಕು. ಹೊರತು ಇದಾವ ಸಭ್ಯಲಕ್ಷಣ. ಇದೂ ನಾಗರಿಕತನದ ಲಕ್ಷಣವೇ? ಇದೂ ಜವಾಬ್ದಾರಿಯನ್ನು ಪೂರೈಸುವ ಲಕ್ಷಣವೇ?

ಸರಕಾರವೆಂದರೆ ಕಂದೆತಾಯಿಗಳಂತೆ—ದೈವ ದೇವರಂತೆ! ಎಂದ ಮೇಲೆ ಎಷ್ಟೇ ಕಠಿಣವಿರಲಿ, ಯಾವುದೇ ಕಾನೂನಾಗಿರಲಿ, ಆಜ್ಞೆಯನ್ನು ಪಾಲಿಸುವ ಸೈನಿಕರಂತೆ .. ನಾವು ಅದನ್ನು ಪಾಲಿಸುವುದು ನಮ್ಮ ಕರ್ತವ್ಯ—ಸಭ್ಯತನ?

ಶ್ರೀ ಕೀ. ವ. ಕೇಶವ,
ದೇಲಂಪಾಡಿ.

---

## ಸಾಗುವಳಿ ಗೊಬ್ಬರದ ಸಾಲ ಯೋಜನೆ

ಈ ಮೂಲಕ ಎಲ್ಲಾ ರೈತರಿಗೆ ತಿಳಿಸುವುದೇನೆಂದರೆ– 1956ನೇ ಗೊಬ್ಬರ ಸಾಲ ಯೋಜನೆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಗೊಬ್ಬರ ತೆಗೆದುಕೊಳ್ಳುವರೇ ಸಾಲ ಕೊಡುವ ಕೆಲಸವನ್ನು ಕೃಷಿ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ. ರೈತರಿಗೆ ತಮ್ಮ ಸಾಗುವಳಿಯನ್ನು ಜಯಪ್ರದವಾಗಿ ಸಾಗಿಸುವಂತೆ, ಪ್ರತಿಯೊಬ್ಬ ಹೊಲಗಳುಳ್ಳ ರೈತನಿಗೆ ಎಕರೆಗೆ ರೂಪಾ 35ರಂತೆ (ಆದರೆ ಒಬ್ಬನಿಗೆ ರೂ. 500ರಕ್ಕೆ ವಿಕ್ಕದಂತೆ) ಗೊಬ್ಬರ ರೂಪವಾಗಿಯೇ ಸಾಲ ಕೊಡಲಾಗುವುದು. ರೈತರು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರರ ಮುಖಾಂತ್ರ ಯಾ ನೇರವಾಗಿ ತಾಲೂಕು ಯಾ ಸಬ್‌ತಾಲೂಕು ಆಫೀಸುಗಳಲ್ಲಿ ಕೊಡಬಹುದು. ಅರ್ಜಿಯಲ್ಲಿ ಅರ್ಜಿದಾರನ ಹೆಸರು, ಗ್ರಾಮ, ತಾಲೂಕು, ಹೊಲದ ಪಟ್ಟಾನಂಬ್ರ, ಸರ್ವೆ ನಂಬ್ರ, ಕಿಸ್ತಿನಹಣ, ಹೊಲದ ವಿಸ್ತೀರ್ಣ ಹಾಗೂ ಕೇಳುವ ಸಾಲದ ಮೊತ್ತ ಇತ್ಯಾದಿಗಳನ್ನು ಕಾಣಿಸತಕ್ಕದ್ದು. ಹೆಚ್ಚಿನ ಮಾಹಿತಿಗಳಿಗೆ ತಾಲೂಕು ಆಫೀಸಿನಲ್ಲಿ ಯಾ ಸಂಬಂಧಪಟ್ಟ ಮಣೆಗಾರರಲ್ಲಿ ವಿಚಾರಿಸಬಹುದು. ಈ ಯೋಜನೆಯ ಸಂಪೂರ್ಣ ಪ್ರಯೋಜನವನ್ನು ರೈತರು ಪಡೆಯುವರೆಂದು ನಂಬಲಾಗಿದೆ.

ಸಿ. ಯೆಸ್. ಮೇನೋನ್.
ರೆವಿನ್ಯೂ ಡಿವಿಜನಲ್ ಆಫೀಸರ್ ಪುತ್ತೂರು.

## ನಗೆ ಹನಿ

ಮಗ— 'ನಾನು ಇನ್ನು ಇನ್ನೊಂದು ಶಾಲೆಗೆ ಹೋಗುತ್ತೇನೆ ಪಪ್ಪ!'

ತಂದೆ— ಯಾಕೆ ಮಗು? ಏನಾಯಿತು? ಟೀಚರ್ ಹೊಡೆದರೆ?

ಮಗ– 'ಇಲ್ಲ, ಅವರು ಸರಿ ಕಲಿಸುವುದೇ ಇಲ್ಲ. ನಿನ್ನೆ ಐದು ಮತ್ತು ಐದು ಹತ್ತು ಎಂದರು. ಇವತ್ತು ಆರು ಮತ್ತು ನಾಲ್ಕು ಹತ್ತೆನ್ನುತ್ತಾರೆ."

ಂ ಂ ಂ

ಹೆಂಡತಿ — ಸುಟ್ಟ ಕೆಟ್ಟಿನಿಂದ ನೀವು ಯಾವಾಗ ಬರುವಿರೆಂದು ನಾನು ಎಷ್ಟು ಗಂಟೆ ಕಾಲ ಕಾದು ಕುಳಿತಿರುವೆನೆಂದು ಗೊತ್ತೆ?

ಗಂಡ— ನೀನು ನಿದ್ದೆ ಹೋಗಬೇಕೆಂದು ನಾನು ಕ್ಲಬ್ಬಿನಲ್ಲಿ ಎಷ್ಟು ಗಂಟೆ ಕಾಯುತ್ತಿದ್ದೆನೆಂದು ನಿನಗೇನು ಗೊತ್ತು?

ಂ ಂ ಂ

"ಮೇರಿ, ಆ ಸೈನಿಕನ ತೋಳನ್ನಲ್ಲವೇ ನಾನು ನಿನ್ನ ಹೆಗಲ ಮೇಲೆ ಕಂಡದ್ದು?"

"ಅಪ್ಪಾ, ಸೈನಿಕರ ಚಲನವಲನಗಳನ್ನು ಚರ್ಚಿಸಬಾರದೆಂದು ನಿನಗೆ ಚೆನ್ನಾಗಿ ತಿಳಿದಿರುವುದಿಲ್ಲವೆ?"

ಂ ಂ ಂ

"ಈ ವಾರದಲ್ಲಿ ಉತ್ತಮ ರೀತಿಯಲ್ಲಿ ನಡೆದವರಾರು? ನೀನೋ, ಗಿರಿಜಾಳೋ" ಎಂದು ಕೇಳಿದ ತಂದೆ ತನ್ನ ಪ್ರೀತಿಯ ಪುತ್ರ ಮೋಹನನೊಡನೆ.

ಮೋಹನ 'ನಾವಿಬ್ಬರೂ ಅಲ್ಲ, ನೀವು ಪಪ್ಪ! ಅಮ್ಮ ಹೇಳಿದುದನ್ನೆಲ್ಲಾ ನೀವು ಮಾಡಿಬಿಟ್ಟಿರುವಿರಿ" ಎಂದ ಮೋಹನ.

ಂ ಂ ಂ

ಶಿಕ್ಷಕ—ಹಾಲು ಹುಳಿಯಾಗದಂತೆ ನೋಡಿಕೊಳ್ಳಬೇಕಾದರೆ ಏನು ಮಾಡಬೇಕು?

ವಿದ್ಯಾರ್ಥಿನಿ— ಕೂಡಲೆ ಕುಡಿದು ಬಿಡಬೇಕು.

ಂ ಂ ಂ

ಒಬ್ಬ— ನೀನು 'ಘಟಿಂಗ' ಶಬ್ದವನ್ನು ಬಹಳವಾಗಿ ಉಪಯೋಗಿಸುತ್ತಿರುವೆಯೆಂದು ಕೇಳಿದೆ, ನಿಜವೆ?

ಇನ್ನೊಬ್ಬ— ಯಾವ 'ಘಟಿಂಗ' ಹೇಳಿದ್ದು ನಿನಗೆ?

ಂ ಂ ಂ

ಶಿಕ್ಷಕ ಏನೋ, ತಾಯಿಗೆ ಕಾಗದ ಬರೆಯೆಂದರೆ ತಾತನಿಗೇಕೆ ಬರೆದಿರುವೆ, ಮೋಹನ!

ಮೋಹನ— ನನ್ನ ತಾಯಿಗೆ ಇಂಗ್ಲಿಷ್ ಬರುವುದಿಲ್ಲ ಸರ್.

---


# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ. ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

# ಕುಮಾರಿ ಬಿಲ್ಲೆಗಳು

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & CO. (N. J.) CALCUTTA -40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

# ನಿಶ್ಚಿಂತೆಯ ನಿದ್ರೆ

## ದಣಿವಿನ ಪರಿಹಾರಕ್ಕೆ ನಿದ್ರೆ ಅವಶ್ಯವಾಗಿ ಬೇಕಾಗಿದೆ— ಈ ಬಗ್ಗೆ ಕೆಳಗಿನ ಸಲಹೆಗಳನ್ನು ನೆನಪಿಟ್ಟುಕೊಳ್ಳಿರಿ

ಹಗಲಿಡೀ ಮನುಷ್ಯನು ಕಷ್ಟಪಟ್ಟು ದುಡಿಯುತ್ತಾನೆ. ಇದರಿಂದಾಗಿ ಅವನು ಬಹಳ ಬಳಲಿದವನಾಗುತ್ತಾನೆ. ಆತನ ದಣಿವನ್ನು ನಿವಾರಿಸಲು ನಿದ್ರೆಯು, ವಿರಾಮವು, ಅತ್ಯಗತ್ಯ. ನಿತ್ಯ ನಿಯಮಿತ ಹಾಗೂ ಪರಿಮಿತ ನಿದ್ರೆಯಿಂದ ಸುಖವೂ ಪುಷ್ಟಿಯೂ, ಬಲವೂ, ವೀರ್ಯವೂ, ಜ್ಞಾನವೂ, ಹೊಸ ಜೀವಿತವೂ ಪ್ರಾಪ್ತವಾಗುವುವು. ಅನಿಯಮಿತ, ಅಪರಿಮಿತ ನಿದ್ರೆಯಿಂದ ದುಃಖವೂ, ದುರ್ಬಲತ್ವವೂ ನಪುಂಸಕತ್ವವೂ ಅಜ್ಞಾನವೂ, ಮರಣವೂ ಒದಗುವುವೆಂದು ಆಯುರ್ವೇದ ಹೇಳುತ್ತಿದೆ.

ನಿದ್ರೆಯಿಂದ ಸಕಳ ಹೊಂದಿದ ಶರೀರದ ಭಾಗಗಳಿಗೆ ಪೋಷಕ ದ್ರವ್ಯಗಳು ಪ್ರಾಪ್ತವಾಗುವವು. ಶರೀರವು ಚಟುವಟಿಕೆಯುಳ್ಳದ್ದಾಗುವುದು. ಏನೂ ಇಲ್ಲವೆಂಬ ಜ್ಞಾನವನ್ನು ಆಶ್ರಯಿಸಿಕೊಂಡಿರುವ ವೃತ್ತಿಯೇ ನಿದ್ರೆಯೆಂದು "ಅಭಾವ ಪ್ರತ್ಯಯಾಲಂಬನಾ ವೃತ್ತಿರ್ನಿದ್ರಾ" ಎಂಬೀ ಗೀರ್ವಾಣೋಕ್ತಿ ಹೇಳುತ್ತಿದೆ.

ನಿದ್ರೆಯ ಸಂಬಂಧ ಲಕ್ಷ್ಯದಲ್ಲಿಡತಕ್ಕ ನಾಲ್ಕುಗಳಾದರೂ ಏನು? ೧) ರಾತ್ರಿ ಕಾಲದಲ್ಲಿಯೇ ನಿದ್ರೆ ಮಾಡಬೇಕು. ಆರು ಗಂಟೆ ನಿದ್ರೆ ಸರ್ವಸಾಧಾರಣ ಎಲ್ಲರಿಗೂ ಸಾಕು. ರಾತ್ರಿ ಹತ್ತು ಗಂಟೆಗೆ ಮಲಗಬೇಕು. ಬೆಳಗ್ಗೆ ೪ ಗಂಟೆಯಾಗುತ್ತಲೆ ಏಳಬೇಕು. ಈ ಕಾಲವು ಶರೀರದಿಂದ ಮಲಮೂತ್ರಗಳು ಸಂಚರಿಸತಕ್ಕಂಥಾದ್ದಾಗಿದೆ. ಈ ಕಾಲದಲ್ಲಿ ಮಲಗಿದ್ದಾದರೆ ಸ್ವಪ್ನಾದಿ ದೋಷಗಳುಂಟಾಗಿ ಬೇಗ ವೀರ್ಯ ಸ್ಖಲನಕ್ಕೆ ಆಸ್ಪದ ಸಿಗುವುದು. ಈ ಕಾಲದಲ್ಲಿ ಶುದ್ಧ ಹವೆಯಿಂದ ಆರೋಗ್ಯ ಲಾಭ ತಾನಾಗಿಯೇ ಹೆಚ್ಚು ಸಾಧಿಸುವುದು. ಸೂರ್ಯೋದಯಕ್ಕೆ ೪೫ ನಿಮಿಷಗಳಿರುವ ಕಾಲ ಬ್ರಾಹ್ಮೀ ಕಾಲ. ಈ ಕಾಲದ ವ್ಯಾಯಾಮದಿಂದ ಶರೀರ ಶುದ್ಧಿಯುಂಟಾಗುವುದು.

೨) ಎದ್ದ ಮೇಲೆ ತಿರುತಿರುಗಿ ಮಲಗುವ ಚಾಳಿ ತರವಲ್ಲ. ಇದು ಶರೀರ ಮಂದತ್ವದ ಲಕ್ಷಣ. ಇದರಿಂದ ಪ್ರಯೋಜನವಾದರೂ ಏನೂ ಇಲ್ಲ. ಮಿತಿಮೀರಿ ನಿದ್ರೆಯಿಂದ ಆರೋಗ್ಯವು ಕೆಡುವುದು. ಬೇಕಾದುದು ತೊಡಕಿಲ್ಲದ ಅಲ್ಪ ನಿದ್ರೆ ಯಲ್ಲದೆ ತೊಡಕಿನಿಂದ ಕೂಡಿದ ಹನ್ನೆರಡು ಗಂಟೆಗಳ ನಿದ್ರೆಯಿದ್ದರೂ ಅದರಿಂದ ಶರೀರಕ್ಕೆ ಯಾವ ತರದ ಪ್ರಯೋಜನವೂ ಇಲ್ಲ. ಹಾಸಿಗೆಯಲ್ಲಿ ಅತ್ತಿತ್ತ ಹೊರಳಾಡುವುದರಿಂದ ಯಾವ ತರದ ಲಾಭವೂ ಇಲ್ಲ. ಇದು ವೈಗಳ್ಳರ ಲಕ್ಷಣ. ಅತಿಯಾದ ನಿದ್ರೆಯು ಆಯುಷ್ಯವನ್ನೇ ಕಡಿಮೆ ಮಾಡುತ್ತದೆಂದರೂ ಹೆಚ್ಚಾಗಲಾರದು. ತಡವಾಗಿ ನಿದ್ರೆ ಮಾಡುವುದನ್ನು ನಿಲ್ಲಿಸಿ, ಯಾವಾಗಲೂ ನಿಶ್ಚಿತ ಸಮಯಕ್ಕೇನೆ ಹಾಸಿಗೆ ಸೇರಬೇಕು.

೩) ನಿದ್ರೆ ಮಾಡತಕ್ಕ ಸ್ಥಳವು ಬಹಳ ರಮ್ಯವಾಗಿರಬೇಕು. ಶುದ್ಧ ಹವೆ, ಸುಗಂಧ ದ್ರವ್ಯ, ಮೇಲಾದ ವಿಭೂತಿಗಳ ಚಿತ್ರಗಳಿರಬೇಕು. ತಗಣೆ, ಚಿಕ್ಕಾಡುಗಳಂಥ ನಿದ್ರಾಭಂಗ ಕೀಟಗಳಿಗೆ ಆಶ್ರಯ ಅಲ್ಲಿ ಎಂದೂ ಇರಕೂಡದು. ಸೊಳ್ಳೆಯಂಥ ಪ್ರಾಣ ಘಾತಕ ಪ್ರಾಣಿಗಳು ಹಣಿಕಿ ಹಾಕದಂತೆ ಮುಚ್ಚರದಾನಿಯ ವ್ಯವಸ್ಥೆ ಇದ್ದೇ ತೀರಬೇಕು. ಕೆಟ್ಟ ವಾಸನೆಯ ಗಾಳಿ ಆಡುವಲ್ಲಿ ಮಲಗಬಾರದು. ಊಟವಾದ ಕೂಡಲೇ ಮಲಗಬಾರದು. ಇದರಿಂದ ಕಮರಡೆಗದಂಥ ಪಾಪ ಸೂಚಕ ವೃತ್ತಿ ತಲೆ ದೋರುವುದು. ನೀವು ನಿದ್ರೆ ಮಾಡುವ ಕೋಣೆಯ ಕಿಟಿಕಿ ಬಾಗಿಲುಗಳನ್ನು ತೆರೆದಿಟ್ಟು ಗಾಳಿಯು ಸರಿಯಾಗಿ ಸಂಚರಿಸುವಂತೆ ಆಸ್ಪದ ಕೊಡಬೇಕು. ನೀವು ನಿದ್ರೆಯಲ್ಲಿ ಹೆಚ್ಚಾದ ಪ್ರಮಾಣದಲ್ಲಿ ಆಮ್ಲಜನಕವನ್ನು ತೆಗೆದುಕೊಂಡರೆ ಮರುದಿನವಿಡೀ ನೀವು ಬಹಳ ಉತ್ಸಾಹದಿಂದ ಕೂಡಿದವರಾಗುತ್ತೀರಿ. ನಿದ್ರೆ ಬರುವುದಕ್ಕೋಸ್ಕರ ಯಾವ ತರದ ಮದ್ದನ್ನೂ ಸೇವಿಸಬೇಡಿ. ನಿಮಗೆ ನಿದ್ರೆಯು ತನ್ನಷ್ಟಕ್ಕೆ ಬರುವುದಿಲ್ಲವಾದರೆ ಹಾಸಿಗೆ ಸೇರುವುದರ ಮೊದಲು ಹದಿನೈದು ನಿಮಿಷಗಳ ತನಕ ಚೆನ್ನಾದ ಗಾಳಿ ಸಂಚಾರವಿರುವ ಕಡೆ ಅತ್ತಿಂದಿತ್ತ ನಡೆಯಿರಿ. ಹೀಗೆ ಮಾಡಿದಲ್ಲಿ ನಿಮಗೆ ಖಂಡಿತವಾಗಿಯೂ ಸುಖವಾದ ನಿದ್ರೆಯು ಲಭಿಸುವುದು.

೪. ಜೀರ್ಣ ಕಾರ್ಯವು ರಾತ್ರಿ ನಡೆಯುತ್ತದೆ. ಅದೇ ಕಾರಣ ರಾತ್ರಿಯ ಊಟವು ಬಹಳ ಲಘುವಾಗಿರಬೇಕು. ಕಾಫಿಯನ್ನಾಗಲೀ ಚಹವನ್ನಾಗಲಿ ರಾತ್ರಿ ಕುಡಿಯಬಾರದು. ಬಲಭಾಗದಲ್ಲೇ ಮಲಗಬೇಕು. ಈ ರೀತಿಯಲ್ಲಿ ಮಲಗಿದರೆ ಸೂರ್ಯನಾಡಿಯು ಹರಿಯಲು ಅನುಕೂಲವಾಗುತ್ತದೆ. ಯಾವಾಗಲೂ ನಿಶ್ಚಿತ ಸಮಯಕ್ಕೇನೆ ನಿದ್ರೆಯಿಡಬೇಕು. ಹಗುರವಾದ ಬಟ್ಟೆಯನ್ನುಟ್ಟುಕೊಳ್ಳಬೇಕು. ದಪ್ಪವಾದ ವಸ್ತ್ರ, ಕಂಬಳಿಗಳಿಂದ ಶರೀರವನ್ನಿಡೀ ಮುಚ್ಚಿಡಬಾರದು. ಮುಖದ ಮೇಲೆ ಎಂದೂ ವಸ್ತ್ರವನ್ನಾಗಲಿ ಕಂಬಳಿಯನ್ನಾಗಲಿ ಹಾಕಬಾರದು. ಒಂದೂವರೆ ಫೂಟ್ ಎತ್ತರವುಳ್ಳ ಪಲ್ಲಂಗದ ಮೇಲೆ ಮೃದವಾದ ನಾರಪಹಿತ ಸ್ವಚ್ಛ ಹಾಸಿಗೆಯ ಮೇಲೆ ಮಲಗಬೇಕು. ಮಗ್ಗಲ ಹಾಸಿಗೆಯನ್ನೇ ಒಗೆದಾಗಲೀ ಒಣ ಹಾಕಿಯಾಗಲೀ ನಿತ್ಯ ಉಪಯೋಗಿಸಬೇಕು.

೫. ಹಾಸಿಗೆಯಲ್ಲಿ ಒಬ್ಬನೇ ಮಲಗಬೇಕು. ಇನ್ನೊಬ್ಬರೊಡನೆ ಕೂಡಿ ಮಲಗುವುದು ಆರೋಗ್ಯ ಭಂಗಕ್ಕೂ, ನಿದ್ರಾವೃತ್ತಿಗೂ ತಡೆಯಾಗುವುದು. ನಿದ್ರೆ ಮಾಡಹೋಗುವಾಗ ಮನಸ್ಸಿನಲ್ಲಿ ಯಾವ ತರದ ಆಲೋಚನೆಗಳೂ ಇರಬಾರದು. ಆ ವೇಳೆಯಲ್ಲಿ ದೇವರ ಧ್ಯಾನವನ್ನು ಮಾಡುವುದು ಬಹಳ ಉತ್ತಮ. ಇದರಿಂದ ಮನಸ್ಸು ಆ ಕಡೆ ಸೆಳೆಯಲ್ಪಟ್ಟು ನಮ್ಮ ದಿನ ನಿತ್ಯದ ತಾಪತ್ರಯಗಳು ಮರೆಯಲ್ಪಡುತ್ತವೆ. ಆಕಾಶ ಗೋಪುರಗಳನ್ನು ಕಟ್ಟುವುದರಲ್ಲಿ ಮಗ್ನರಾಗುವುದು ಸಲ್ಲದು. ಯಾರ ವಿಷಯದಲ್ಲಾದರೂ ದುರಾಭಿಪ್ರಾಯವಿದ್ದರೆ ಅದನ್ನು ಮರೆತುಬಿಡಬೇಕು. ಸಂತೋಷಕರವಾದ ಸಂಗತಿಗಳೇ ಮನಸ್ಸನ್ನು ಆವರಿಸಿಕೊಂಡಿರಲಿ.

೬. ಮರೆತಾದರೂ ಉತ್ತರದಿಕ್ಕಿನ ಕಡೆಗೆ ತಲೆಮಾಡಿ ಮಲಗಬಾರದು. ಇದರಿಂದ ಬುದ್ಧಿ ಮಾಂದ್ಯ, ಆರೋಗ್ಯ ಹಾನಿಯುಂಟಾಗುವವು. ಇದರಂತೆ ಪಶ್ಚಿಮ ದಿಕ್ಕಿಗೂ ತಲೆಮಾಡಿ ಮಲಗಬಾರದು. ಮಲಗಿದರೆ ಪ್ರಬಲವಾದ ಚಿಂತೆ, ದಾರಿದ್ರ್ಯಗಳುಂಟಾಗುವವೆಂದು ಆರ್ಯೋಕ್ತಿಯಿದೆ.

೭. ಅಂಗಾತ ಇಲ್ಲವೆ ಡಬ್ಬನಾಗಿ ಮಲಗಬಾರದು. ಇದು ವೀರ್ಯ ನಾಶಕ್ಕೆ ಆಶ್ರಯವಾಗುವುದು. ಯಾವಾಗಲೂ ಹೇಳಿದ ಮಗ್ಗುಲಲ್ಲಿಯೇ ಮಲಗಬೇಕು. ಹಗಲಲ್ಲಿ ಯಾರೂ ನಿದ್ರಿಸಬಾರದು.

"ನಿತ್ಯಾನಂದ"

(ಆಧಾರದಿಂದ)

# ಸಂಘಟನೆಗಾಗಿ ಕರೆ

## ಕಾಸರಗೋಡು ಕರ್ನಾಟಕ ಪರಿಷತ್ತು

### 28-10-1956ನೇ ಆದಿತ್ಯವಾರ

ಈ ತಾಲೂಕಿನಲ್ಲಿ ಚಂದ್ರಗಿರಿಯ ಉತ್ತರದ ಪ್ರದೇಶವನ್ನು ಕೇರಳಕ್ಕೆ ಸೇರಿಸಿರುವುದರಿಂದ ಮೊದಲಾಗಿ, ಕನ್ನಡ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಹಾನಿ ಒದಗುವಂತಿದೆ. ಕನ್ನಡ ವಿದ್ಯಾಭ್ಯಾಸಕ್ಕೆ ಆಸ್ಪದ ದೊರಕುವುದೋ ಎಂದು ಸಂದೇಹಪಡಬೇಕಾಗಿದೆ. ಈಗ ಶಾಲೆಗಳಿಗೆ ಹೋಗುತ್ತಿರುವ 20,000 ವಿದ್ಯಾರ್ಥಿಗಳ ಮತ್ತು ಇನ್ನು ಮುಂದೆ ಸೇರಲಿರುವ ಮಕ್ಕಳ ಮುಂದಿನ ಗತಿಯೇನೆಂದು ಯೋಚಿಸುವ ಪರಿಸ್ಥಿತಿ ಬಂದೊದಗಿದೆ. ಏಕೆಂದರೆ ಈಗಿನ ವ್ಯವಸ್ಥೆ ಮೇರೆಗೆ ಬರೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾತ್ರ ಕನ್ನಡದಲ್ಲಿ ಕೊಡಲು ಕೇರಳ ಸರಕಾರದವರು ಬದ್ಧರು. ನಾವು ಕೇರಳದಲ್ಲಿ ಸೇಕಡಾ 1-1½ ಮಾತ್ರ ಇರಬಹುದು. ಇದಕ್ಕಾಗಿ ಇಲ್ಲಿಯ ಎಲ್ಲಾ ಕನ್ನಡ ವಿದ್ಯಾಸಂಸ್ಥೆಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಒಳಪಡಿಸುವರೆ ಸಮ್ಮತಿಸಬೇಕಾಗಿ ಕೇರಳದ ಈಗಿನ ಅಧಿಕಾರಿಗಳನ್ನು ವಿನಂತಿಸಿರುತ್ತೇವೆ. ಸಂಬಂಧಪಟ್ಟ ಇತರರನ್ನೂ ಕೇಳಿಕೊಳ್ಳುವವರಿರುತ್ತೇವೆ.

ಈ ಪ್ರದೇಶವನ್ನು ಮೈಸೂರು ಪ್ರಾಂತ್ಯಕ್ಕೇ ಸೇರಿಸುವ ಬಗ್ಗೆ ಸಮಿತಿಯು ಇನ್ನೂ ಪ್ರಯತ್ನಿಸತಕ್ಕದೆಂದು ನಿರ್ಣಯಿಸಲಾಗಿದೆ. ಗಡಿ ನಿರ್ಣಯದ ಬಗ್ಗೆ ಕಮಿಶನನ್ನು ನೇಮಿಸಬೇಕೆಂದು ಸರಕಾರವನ್ನು ಒತ್ತಾಯಿಸುತ್ತಿದ್ದೇವೆ. ಬರುವ ಚುನಾವಣೆಯಲ್ಲಿ ಈ ಪ್ರಶ್ನೆಯನ್ನು ಜನರ ಮುಂದಿಟ್ಟು ಸ್ಪರ್ಧಿಸಬೇಕಾಗಿ ನಿಶ್ಚಯಿಸಲಾಗಿದೆ. ಈ ಕಾರ್ಯಕ್ರಮವನ್ನು ಜಯಶೀಲವಾಗಿ ನಡೆಸುವರೆ ನಾವು ಸಂಘಟಿತರಾಗಬೇಕು. ಪ್ರತಿ ಗ್ರಾಮದಲ್ಲಿಯೂ ಸಮಿತಿಯ ಶಾಖೆಗಳನ್ನು ಸ್ಥಾಪಿಸಿ ಪ್ರಚಾರ ಮಾಡಬೇಕಿದೆ. ಇದಕ್ಕಾಗಿ ಸಮಿತಿಗೆ ಸದಸ್ಯರನ್ನು ಸೇರಿಸಬೇಕು. ಹಣದ ಅಭಾವದಿಂದ ಸದಸ್ಯರಾಗಿ ಸೇರಲು ಅನಾನುಕೂಲವಾಗದಂತೆ ಒಂದಾಣೆಯ ವಂತಿಗೆ ಕೂಡಾ ಇಡಲಾಗಿದೆ.

ಶ್ರೀ ಪಣಿಕ್ಕರರು ನಮಗೆ ಅಹಿತವನ್ನು ಮಾಡುವಂತಿದೆಯೆಂದು ತಿಳಿದೊಡನೆಯೇ ಇಲ್ಲಿಯ ವಿದ್ಯಾರ್ಥಿಗಳು ಅದನ್ನು ಎದುರಿಸುವರೆ ಉತ್ಸಾಹದಿಂದ ಕಾರ್ಯವೆಸಗಿದರು. ಶಾಲಾ ಬಹಿಷ್ಕಾರ, ಸಭೆ, ಮೆರವಣಿಗೆ ಸತ್ಯಾಗ್ರಹವೇ ಮೊದಲಾದ ಎಲ್ಲಾ ಚಟುವಟಿಕೆಗಳು ನಡೆದುವು. ಇದು ಹೆಚ್ಚಿನ ಮಟ್ಟಿಗೆ ಸ್ವಯಂಪ್ರೇರಣೆಯಿಂದಲೇ ವಿದ್ಯಾರ್ಥಿಗಳ ಸ್ಫೂರ್ತಿಯು ಕೆಲವೆಡೆಗಳಲ್ಲಿ ಹಿರಿಯರನ್ನು ಕೂಡ ಎಚ್ಚರಿಸಿತು. ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಬೇರೆ ರೀತಿಯ ಸೇವೆಗೈಯಬೇಕಿದೆ. ಹಿರೀ ವಿದ್ಯಾರ್ಥಿಗಳು ಸಮಿತಿಯ ಸಂಘಟನಾ ಕಾರ್ಯದಲ್ಲಿ ಹೆಚ್ಚಿನ ಸಹಾಯಕರಾಗಬಹುದು. ಅವರವರ ಗ್ರಾಮಗಳಲ್ಲಿ ಸದಸ್ಯರನ್ನು ಸೇರಿಸುವರೆ ಮುಂದಾಗಬೇಕು. ಅವರಿಂದ ಪ್ರಚಾರವು ಯೋಗ್ಯವಾಗಿ ಆಗಬಲ್ಲದು. ಇದು ರಾಜಕೀಯವಲ್ಲ. ನಮ್ಮ ಬದುಕಿನ ಪ್ರಶ್ನೆ.

ಜಯವು ಸಿಗದುದೆಂಬ ಭರವಸೆ ಆಗಿಂದಾಗ್ಯೆ ದೊರಕಿದರೂ ಕೊನೆಗೆ ಪರಾಜಯವನ್ನು ಹೊಂದಿರುತ್ತೇವೆ. ಆದರೂ ನಿರಾಶರಾಗದೆ, ನಮ್ಮ ಬೇಡಿಕೆಯನ್ನು ಮುಂದೊತ್ತಲೇಬೇಕು. ಈಗಾಗಲೇ ಇಲ್ಲಿಯ ಸಹಕಾರಿ ಸಂಘಗಳು ನಮ್ಮ ಮುಂದಿನ ಪ್ರಗತಿಯ ಕುರಿತು ಗಾಬರಿಪಡತಕ್ಕದಾಗಿರುವುವು. ಒಂದು ಕಚೇರಿಯಲ್ಲಿ ಕನ್ನಡದಲ್ಲಿ ಬರೆದ ಅರ್ಜಿಯನ್ನು ನಿರಾಕರಿಸಿರುವರಾಗಿ ತಿಳಿಯುತ್ತೇವೆ. ಕೇರಳ ರಾಜ್ಯವು ಇನ್ನೂ ಆಗಲಿದೆ ಮಾತ್ರವಾದರೂ ಈಗಲೇ ಅದರಿಂದ ನಮಗಾಗಬಹುದಾದ ದುಷ್ಪರಿಣಾಮಗಳು ತಲೆದೋರಿವೆ.

ರಾಜ್ಯ ಪುನಾರಚನೆಯಿಂದ ಈ ಪ್ರದೇಶಕ್ಕೆ ಉಂಟಾಗುವ ದೋಷಗಳನ್ನು ನಾವು ಯಾವ ರೀತಿ ನಿವಾರಿಸಬಹುದು. ನಮ್ಮ ಮುಂದಿನ ಕರ್ತವ್ಯವೇನು—ಎಂಬುದನ್ನು ತೀರ್ಮಾನಿಸಬೇಕಿದೆ. ತಾ 28-10-'56 ರಲ್ಲಿ ಸೇರುವ ಪರಿಷತ್ತಿನಲ್ಲಿ ಎಲ್ಲಾ ಗ್ರಾಮಗಳ ಪ್ರತಿನಿಧಿಗಳೂ ಭಾಗವಹಿಸುವುದು ಅತ್ಯಗತ್ಯ. ಪರಿಷತ್ತಿನ ನಿರ್ಣಯಗಳು ಜನತೆಯ ಅಭಿಪ್ರಾಯದ ಪ್ರತಿಬಿಂಬವಾಗಿರಬೇಕು. ಆಗಮಾತ್ರವೇ ಮುಂದಿನ ಕಾರ್ಯಕ್ರಮವು ಸುಗಮವಾಗಿ ನಡೆಯಬಲ್ಲದು. ಸಮಿತಿಯ ಎಲ್ಲಾ ಕಾರ್ಯಕರ್ತರೂ ಯೋಗ್ಯ ಪ್ರತಿನಿಧಿಗಳು ಬಂದು ಪರಿಷತ್ತು ಯಶಸ್ವಿಯಾಗುವಂತೆ ಪ್ರಯತ್ನಿಸಬೇಕಾಗಿ ವಿನಂತಿ.

ಕಾಸರಗೋಡು, ತಾ. 8-10-56. } ಸ್ವಾಗತ ಸಮಿತಿ


## ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನಕ್ಲಿ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

*Head Office:* Tenkapet, **Udipi**, S. K. *Phone:* 66

## ಕಾಸರಗೋಡಿನ ಕೇಳಿಕೆ

### ತಿರುವಾಂಕೂರು ಕೊಚ್ಚಿಯು ಆಡಳಿತಾಧಿಕಾರಿ ಶ್ರೀ ಪಿ. ಎಸ್. ರಾಯರಿಗೆ ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯು ವತಿಯಿಂದ ಅರ್ಪಿಸಿದ ಮನವಿ

ಚಂದ್ರಗಿರಿ ಪಯಸ್ವಿನೀ ನದಿಗಳ ಉತ್ತರ ಭಾಗವನ್ನು ಮೈಸೂರು ರಾಜ್ಯದಲ್ಲಿ ಸೇರಿಸಬೇಕಾಗಿ ಒತ್ತಾಯಿಸಿ ನಾವು ಸರಕಾರಕ್ಕೆ ಈ ಮೊದಲು ಮನವಿ ಮಾಡಿಕೊಂಡಿದ್ದೆವು ಒಮ್ಮೆ ಈ ರೀತಿಯ ನಿರ್ಣಯವಾಗಿದ್ದರೂ, ತರುವಾಯ ಅದನ್ನು ವ್ಯತ್ಯಾಸಪಡಿಸಲಾಯಿತು.

ಈ ಭಾಗದ ಜನಸಂಖ್ಯೆ ಸುಮಾರು 2 ಲಕ್ಷ. ಈ ಪೈಕಿ, ಮಲೆಯಾಳಿ ಭಾಷೆಯನ್ನಾಡುವವರಲ್ಲಿಯೂ, ಮಲೆಯಾಳ ಅಕ್ಷರಜ್ಞಾನವಿಲ್ಲದವರೂ, ಕನ್ನಡದಲ್ಲಿಯೇ ವಿದ್ಯಾಭ್ಯಾಸ ನಡೆದವರೂ ಬಹಳ ಮಂದಿ ಇದ್ದಾರೆ. ಮಲೆಯಾಳವನ್ನರಿಯದ ಜನರೂ ಬಹುಸಂಖ್ಯೆಯಲ್ಲಿದ್ದಾರೆ

ಈ ಭಾಗದಲ್ಲಿ 17,500ಕ್ಕೂ ಹೆಚ್ಚು ವಿದ್ಯಾರ್ಥಿಗಳು 198 ಪ್ರಾಥಮಿಕ ಶಾಲೆಯಗಳಲ್ಲಿಯೂ 2500 ವಿದ್ಯಾರ್ಥಿಗಳು 6 ಹೈಸ್ಕೂಲುಗಳಲ್ಲಿಯೂ, ಸಂಸ್ಕೃತ ಕಾಲೇಜಿನಲ್ಲಿಯೂ ಕನ್ನಡದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಈ ಎಲ್ಲಾ ಶಾಲೆಗಳಲ್ಲಿ ಉದ್ಯೋಗದಲ್ಲಿರುವ ಉಪಾಧ್ಯಾಯರ ಸಂಖ್ಯೆ 1000ಕ್ಕೂ ಹೆಚ್ಚಾಗಬಹುದು. ಒಂದು ಹೈಸ್ಕೂಲು ಮತ್ತು ಬರೇ 25 ಪ್ರಾಥಮಿಕ ಶಾಲೆಗಳಲ್ಲಿ ಮಾತ್ರವೇ ಮಲೆಯಾಳ ಮಾಧ್ಯಮವಿರುತ್ತದೆ. ಯೋಗ್ಯ ಸಂದರ್ಭಗಳಲ್ಲಿ ರಾಜ್ಯ ಸರಕಾರದೊಡನೆ ವಿಚಾರಿಸಿಕೊಂಡು ಹೊರ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಒಂದು ರಾಜ್ಯದ ಶಾಲೆಗಳನ್ನು ಸೇರಿಸಬಹುದೆಂದು ಗೃಹಮಂತ್ರಿಯವರಂದಿದ್ದಾರೆ. ಈ ಪ್ರದೇಶದ ಕನ್ನಡ ಶಾಲೆಗಳನ್ನು ಊರ್ಜಿತವಾಗಿರಿಸುವುದಕ್ಕಾಗಿ ಅವುಗಳನ್ನು ಮೈಸೂರು ಇಲ್ಲವೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸುವುದು ಅತ್ಯವಶ್ಯವೆಂದು ವಿನಯಪೂರ್ವಕ ವಿನಂತಿಸುತ್ತೇವೆ.

ಈ ಭಾಗದಲ್ಲಿ ರಿಜಿಸ್ಟ್ರಿ ದಾಖಲೆಗಳೆಲ್ಲ ಕನ್ನಡದಲ್ಲಿಯೇ ಇರುತ್ತವೆ. ಗ್ರಾಮೋದ್ಯೋಗಸ್ಥರ ರಿಕಾರ್ಡುಗಳೂ, ಇತರ ಕಚೇರಿಗಳ ದಾಖಲೆಗಳೂ, ವ್ಯಾಪಾರೀ ಮಹಿವಾಟಿನ ಲೆಕ್ಕಾಚಾರಗಳೂ, ಹೆಚ್ಚಿನ ವ್ಯಾಪಾರಸ್ಥರ ಲೆಕ್ಕಪುಸ್ತಕಗಳೂ, ಸಹಕಾರೀ ಸಂಘಗಳ ಮತ್ತು ಧಾರ್ಮಿಕ ಸಂಸ್ಥೆಗಳ ವ್ಯವಹಾರಗಳೂ ಕನ್ನಡದಲ್ಲಿಯೇ ಇರಿಸಲ್ಪಡುತ್ತಿವೆ. ಈ ಪ್ರದೇಶದ 71 ಗ್ರಾಮಗಳಲ್ಲಿರುವ 144 ಗ್ರಾಮೋದ್ಯೋಗಸ್ಥರ ಪೈಕಿ ಬರಿಯ 8 ಜನರು ಮಾತ್ರ ಮಲೆಯಾಳ ಮಾತನಾಡುವವರಾಗಿರುತ್ತಾರೆ. ಕೋರ್ಟುಗಳಲ್ಲಿ ಹೆಚ್ಚಾಗಿ ಕನ್ನಡವೇ ಬಳಕೆಯಲ್ಲಿದೆ.

ಮೇಲೆ ಭಿನ್ನವಿಸಿದಂತೆ ಈಗಿರುವ ಕ್ರಮದಲ್ಲಿ ಬದಲಾವಣೆಯಾದರೆ ತುಂಬ ಅಸೌಕರ್ಯ ಹಾಗೂ ಅವ್ಯವಸ್ಥೆಗೆ ಕಾರಣವಾಗಿ ತತ್ಪರಿಣಾಮವಾಗಿ ಅಪ್ರಿಯ ಮನೋಭಾವಕ್ಕೆ ಎಡೆಕೊಟ್ಟೀತೆಂದು ವಿನಂತಿಸುತ್ತೇವೆ. ಈ ರೀತಿ ಸುಸ್ಪಷ್ಟವಾದ ಪರಿಸ್ಥಿತಿಗಳನ್ನವಲೋಕಿಸಿ ಈ ಪ್ರದೇಶವನ್ನೊಂದು ಪ್ರತ್ಯೇಕ ತಾಲೂಕಾಗಿ ಮಾಡಿದಲ್ಲಿ ಆಡಳಿತೆಯ ಮಟ್ಟಿಗೆ ವಿಶೇಷ ಸೌಕರ್ಯವುಂಟಾಗಬಹುದು.

ಈ ತಾಲೂಕಿನ ವ್ಯಾಜ್ಯಗಳೇ ಸುಂಗಳೂ ...ರಿನ ಸಬ್ ಕೋರ್ಟುಗಳಲ್ಲಿ ಅಧಿಕವಾಗಿರುವುದನ್ನು ಪರಿಶೀಲಿಸಿದಲ್ಲಿ ಕಾಸರಗೋಡಿನಲ್ಲಿಯೇ ಒಂದು ಸಬ್ ಕೋರ್ಟನ್ನು ಸ್ಥಾಪಿಸುವುದು ಯೋಗ್ಯವೆಂಬುದು ಮನವರಿಕೆಯಾದೀತು. ಇಲ್ಲವಾದರೆ ತಲಚೇರಿಗೆ ಹೋಗಬೇಕಾದ ಪ್ರಸಂಗವೊದಗಿ ಜನರಿಗೆ ಹೆಚ್ಚಿನ ನಷ್ಟ ಹಾಗೂ ಕಷ್ಟವಾದೀತು. ಅಂತೆಯೇ ಒಂದು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟು ಮತ್ತು ಡಿಸ್ಟ್ರಿಕ್ಟ್ ಕಲೆಕ್ಟರರ ಕಚೇರಿ ಕಾಸರಗೋಡಿನಲ್ಲಿ ಸ್ಥಾಪಿಸಬೇಕಾದುದು ಅವಶ್ಯ.

ಈ ಎಲ್ಲಾ ಕಾರಣಗಳಿಗಾಗಿ—

1. (a) ಶಿಕ್ಷಣ ಮಾಧ್ಯಮ, (b) ಕಚೇರಿಗಳ ದಾಖಲೆ, ಗ್ರಾಮೋದ್ಯೋಗಸ್ಥರ ದಾಖಲೆಗಳು, ರಿಜಿಸ್ಟ್ರಿ ದಾಖಲೆ, ಸಹಕಾರಿ ಸಂಘ, ಧಾರ್ಮಿಕ ಸಂಸ್ಥೆಗಳ ದಾಖಲೆಗಳು ಮತ್ತು ವ್ಯಾಪಾರಿಗಳ ಲೆಕ್ಕಪತ್ರಗಳು. (c) ಕೋರ್ಟು ಭಾಷೆ. ಇವಿಷ್ಟನ್ನು ಈಗಿರುವಂತೆಯೇ ಇರಗೊಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

2. ಈ ಪ್ರದೇಶದ ಕನ್ನಡ ಶಾಲೆಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿಸಲು ಅನುಮತಿಸಬೇಕಾಗಿಯೂ, 3. ಈ ಪ್ರದೇಶವನ್ನು ಒಂದು ತಾಲೂಕಾಗಿ ಪರಿವರ್ತಿಸಬೇಕಾಗಿಯೂ, 4. ಕಾಸರಗೋಡಿನಲ್ಲಿ ಒಂದು ಸಬ್ ಕೋರ್ಟು, ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟು ಮತ್ತು ಡಿಸ್ಟ್ರಿಕ್ಟ್ ಕಲೆಕ್ಟರರ ಕಚೇರಿಗಳನ್ನು ಸ್ಥಾಪಿಸಬೇಕಾಗಿಯೂ ಭಿನ್ನವಿಸುತ್ತೇವೆ.

ಇಂತು—ತಮ್ಮ ವಿಶ್ವಾಸಪಾತ್ರ,

**ಉಮೇಶರಾವ್, ಎಂ.**

ಅಧ್ಯಕ್ಷ,

ಕರ್ನಾಟಕ ಪ್ರಾಂತೀಕರಣ ಸಮಿತಿ,

ಕಾಸರಗೋಡು.

## ಗೋವೆಯ ವಿಮೋಚನೆಗಾಗಿ ಜೀವ ತೆತ್ತ ಭಾರತೀಯ ಹುತಾತ್ಮರಿಗೆ

ಸಂದವರುಷದನೆನಪು ಮರುಕೊಳಿಸುವುದು
ಇರುತ
ದಿನದ ಚಿಂತೆಯ ಸ್ವಪ್ನದಲಿಮನವ
ಕೊರೆವಂತೆ!
ಭಾರತೀಯರಿಗೆಂದು ಸುಖ ಶಾಂತಿ
ದೊರೆಯುವುದೊ?
ಭಾರತದ ಪೂರ್ಣ ಬಂಧನವೆಂದು
ಕಳೆವುದೋ?
ತಾಸುಕಾಲವು ದಾಸರಾಗಿ ಜೀವಿಸೆವೆಂದು!
ಆಸೆಬಿಟ್ಟೇ ಜೀವಕೊಟ್ಟು ಮುಕ್ತಿಯ
ದೆಂದು!
ನಿಶ್ಶಸ್ತ್ರ ಸತ್ಯಾಗ್ರಹದ ಕಹಳೆ ಮೊಳಗಿತ್ತು!
ಅಹಿಂಸಾಶಾಂತಿಯ ಘೋಷ ಅಲ್ಲಲ್ಲಿ
ಕೇಳಿತ್ತು!
"ಪೋರ್ಚುಗೀಸರೆ, ತೊಲಗಿ, ಗೋವೆ
ಭಾರತನಾಡು."
ಸತ್ಯಶಾಂತಿಯ ನಿತ್ಯ ಮಂತ್ರವೇ ಈ
ಹಾಡು!
ವಂದ್ಯತಿಲಕರು, ಗಾಂಧಿತಾತ ತೋರಿದ
ಪಥದಿ
ಮುನ್ನಡೆದು ಗೋವೆಯನ್ನೊಳನುಗ್ಗಿ ನರು
ಭರದಿ!
"ತೊಲಗಿ ಭಾರತದಿಂದ" ಎನ್ನುವ ಧೀರೋ
ದ್ಗಾರ!
"ಮಾಡಿಮಡಿಯಿರಿ" ಎಂಬ ಸ್ಫೂರ್ತಿಯಾ
ಜಯಕಾರ!
ನಿಂತ ನೆಲವೇ ಅನ್ಯಾಧೀನದೊಳಗಿರಲು;
ಎಂತುಸಹಿಸುವರು ಮಾತೆಗೆ ಬಂಧ
ತೊಡಕಿರಲು,
ಪ್ರಕೃತಿಯಲಿ ಪಶುಪಕ್ಷಿ ಕೀಟಗಳ
ಸ್ವಾತಂತ್ರ್ಯ,
ಮಾನವತೆ ಮೇಲೆಂದರೂ—ದಾಸ್ಯ
ಪರತಂತ್ರ್ಯ!
ಸೇವೆಯಲಿ ಮುಂದಡಿಯೆ ಸ್ವರ್ಗಸೋಪಾನ
ವಿದೆ!
ಜೀವದಾಸೆಗೆ ಅಳುಕಿ ಹಿಂದಡಿಯೆ
ನಾಕವಿದೆ!
ಕರ್ಮವೇ, ಮಾನವತೆಗಿರುವ ನಿಜಧರ್ಮವು!
ಫಲದಾಸೆಯೇ ತ್ಯಾಜ್ಯ ಅದೆ ಮುಕ್ತಿ
ಮಾರ್ಗವು
ದೇಶಸೇವೆಯೆ ಹಿರಿಯ ಗುರಿಯೆಂದು
ತಿಳಿದವರು—
'ತನತ'ನ ಮಮಕಾರವನೆ ಮರೆತು
ಮಡಿದಿಹರು!
"ಒರಳಲ್ಲಿ ಬಿದ್ದು ಒನಕೆಯ ಪೆಟ್ಟು ತಿಂದಂತೆ,
ಕೈಯೊಳಿಪ ತುತ್ತು ಚಿಹಿದಿರಲು
ಬಾಯ್ಗಿಡವಂತೆ,
ದೇವ ಕೊಡುವಾಗ ಪೂಜಾರಿ ತಡೆ ತಡೆವಂತೆ,
ಎಣ್ಣೆ ಬರುವಾಗ ಗಾಣದ ಕೀಲೆ
ಮುರಿವಂತೆ,
ಊರಿನಹಣತೆಗೆ ಹಾತೆ ಬಂದೆರಗಿ ಮಡಿವಂತೆ,
ಇರುಳು ಕಂಡಿಹಗರ್ತದಲಿ ಹಗಲು
ಬಿದ್ದಂತೆ!"
ಭಾರತೀಯರ ಭಾಗ್ಯ ಇಂತಾಯ್ತೆ! ದಿನನಾಥ!
ಹೇಳಲಾಗದ ಮೂಕ ಶೋಕವಿದೆ
ಮಮನಾಥ!
ಹೆತ್ತಮಾತೆಯ ಮುಕ್ತಿಗಾಗಿ ಮುನ್ನಡೆದವರೇ!
ಹಸಿವಿಗಿಲ್ಲದೆ ಗುಂಡಿನೇಟುಂಡೆ!
ಮಲಗಿದರು!
ಕೆಲವರೋ ಜೈಲಲ್ಲಿ! ಹಲವರೋ ನೆಲದಲ್ಲಿ!
ಕೈಯೇಟು, ಕಾಲ್ತುಳಿತದಿಂ ರಕ್ತಮಯ
ವೆಲ್ಲ!!
'ಅಮ್ಮಾ, ಆಮ್ಮಾ' ಎಂದು ಕರೆದು
ಹೊರಳಿದರೆಲ್ಲ
ಆಹಾ! ಮಾತೆ ಭಾರತಿಯೆ! ನೀನೆಂತು
ಸಹಿಸಿದೆ ದಾತೆ?
ದೇಶ ಸೇವೆಗೆ ಹೆಣಗಿ, ಜೀವತೆತ್ತಾತ್ಮರಿಗೆ—
ಮುಕ್ತಿ ದೊರೆಯಲಿ! ಮಾತೆ! ಓಂ,
ಶಾಂತಿ! ಶಾಂತಿ!!

**ಕಡಂದಲೆ ಜಯರಾಮ ಶೆಟ್ಟಿ**

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**[ENGLISH MADE EASY]**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

**ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ**

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

**ನವಭಾರತ ಪುಸ್ತಕ ಭಂಡಾರ, ಉಡುಪಿ.**

## ಪರಿಚಯ

(೧ನೇ ಪುಟದಿಂದ)

ಪ್ರಮಾಣದಲ್ಲಿ ಏರ್ಪಡಿಸುವ ಉದ್ದೇಶವಿದೆ. ತಾಮ್ರದ ಶಾಸನಗಳು ಮುಂತಾದ ಶಾಸನಗಳನ್ನು ಸಂಗ್ರಹಿಸುವ ಸಂಬಂಧವಾದ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಸಂಗ್ರಹಾಲಯದ ಬಗ್ಗೆ ಆಕರ್ಷಕ ಪರಿಚಯ ಪುಸ್ತಕವೊಂದನ್ನು ಸಿದ್ಧಗೊಳಿಸಲಾಗಿದೆ. ಇದನ್ನು ಸದ್ಯದಲ್ಲಿಯೇ ಮುದ್ರಿಸಿ ಪ್ರಕಟಿಸಲಾಗುವುದು. ಸಂಗ್ರಹಿಸಿದ ಸಾಮಗ್ರಿಗಳ ಸೂಚಿ ಪತ್ರವೊಂದನ್ನು ಸಿದ್ಧಪಡಿಸಲಾಗುತ್ತಿದೆ. ದೇಶದ ನಾನಾ ವಸ್ತು ಸಂಗ್ರಹಾಲಯಗಳಿಗೂ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೂ ಆಸಕ್ತಿಯ ವ್ಯಕ್ತಿಗಳಿಗೂ ಪೂರೈಸುವುದಕ್ಕಾಗಿ ಪ್ರಮುಖ ಶಿಲಾಪ್ರತಿಮೆಗಳ ಪ್ರತಿಕೃತಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಇದೇ ಪ್ರಕಾರ, ಸಂಗ್ರಹಾಲಯದ ಛಾಯಾಚಿತ್ರವಿಭಾಗದವರು ಸಾರ್ವಜನಿಕರಿಗೂ ಹಾಗೂ ಪಂಡಿತರಿಗೂ ಛಾಯಾ ಚಿತ್ರಗಳನ್ನು ಪೂರೈಸುವರು. ಪ್ರದರ್ಶಿಸಿರುವ ವಸ್ತುಗಳಿಗೆ ದ್ವಿಭಾಷಾ ಪಟ್ಟಿಗಳನ್ನು ಒದಗಿಸಲಾಗಿದೆ. ಅಲ್ಲದೆ ಸಂಗ್ರಹಾಲಯವನ್ನು ನೋಡಲು ಬರುವವರಿಗಾಗಿ ಮಾರ್ಗದರ್ಶಕರ ಸೇವೆಯನ್ನು ಒದಗಿಸಲಾಗಿದೆ

### ಹಿನ್ನೆಲೆ

ವಸ್ತು ಸಂಗ್ರಹಾಲಯ ಚಳವಳಿಯ ಅಂಗವಾಗಿ "ಯುನೆಸ್ಕೊ"ದ ಆಶ್ರಯದಲ್ಲಿ ... ವಾರ ಭಾರತದಲ್ಲಿಯೂ ಸಪ್ತಾಹವೊಂದು ಆಚರಿಸಲ್ಪಡುತ್ತದೆ. ಆದಕ್ಕಾಗಿ ಬರೆದು ಬಂದ ಲೇಖನವಿದು.

## ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

THE MOOLKY BANK LTD., MULKI.

## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

**ನವಯುಗ ಪ್ರೆಸ್, ಉಡುಪಿ.**

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

25—10—1956

ಸಂಚಿಕೆ ೮
NO. 8

## ರಾಜಕೀಯ ರಂಗ

# ರಾಷ್ಟ್ರದ ಪ್ರಭೃತಿಗಳು ಪಕ್ಷಾತೀತರೆನಿಸಿಕೊಳ್ಳಲಿ!

### ಇದೇ ನಮ್ಮ ಪ್ರಜಾಪ್ರಭುತ್ವ ಪದ್ಧತಿಗೆ ಪೋಷಕ

ಭಾರತದ ರಾಜಕೀಯ ರಂಗದಲ್ಲಿರು ಶಕ್ತಿಯುತವಾದ ಅಂಶವೆಂದರೆ, ಅಧಿಕಾರದಲ್ಲಿರುವ ಪಕ್ಷವು ಬಹಳ ಸಮರ್ಥವಾದ ಮತ್ತು ಪರಿಣಾಮಕಾರಿಯಾದ ಧುರೀಣತ್ವವನ್ನು ಹೊಂದಿರುವುದೇ ಆಗಿ. ಈ ಧುರೀಣತ್ವವು ಆಂತರಿಕ ಭದ್ರತೆಯನ್ನು ಕಾಪಾಡಿಕೊಳ್ಳುವುದಕ್ಕೆ ಮಾತ್ರವಲ್ಲ ಅಭಿವೃದ್ಧಿಯ ಕಷ್ಟಸಾಧ್ಯವಾದ ಹಾಗೂ ಕ್ಲಿಷ್ಟವಾದ ಕಾರ್ಯಕ್ರಮಗಳನ್ನು ಮುಂದೆತ್ತಿಕೊಂಡು ಹೋಗಲಿಕ್ಕೆ ತುಂಬ ಸಹಾಯಕವಾಗಿದೆ. ಆದರೆ ಭಾರತದಲ್ಲಿ ಈ ಧುರೀಣತ್ವಕ್ಕೆ ಲಭಿಸುವ ಬಲಯುತವಾದ ಸ್ಥಾನದಿಂದಾಗಿ ರಾಷ್ಟ್ರೀಯ ಕ್ಷೇತ್ರದಲ್ಲಿ ಸಹವರ ಧ್ವನಿಯನ್ನು ಸ್ಪಷ್ಟವಾಗಿ ಕೇಳಹುದಾಗಿ ಬಂದಿದೆ.

ಈ ಪರಿಸ್ಥಿತಿಯಲ್ಲಿ ತೀರ ದುರ್ಬಲವಾಗಿ ತೋರುವ ಅಂಶವೂ ಇಲ್ಲದಿಲ್ಲ. ಏಕೆನೆಂದರೆ, ಇಂದು ಆಳುವ ಪಕ್ಷದಲ್ಲಿರುವ ಧುರೀಣತ್ವದ ಅತ್ಯುತ್ತಮ ಯೋಗ್ಯತೆಯ ದೆಸೆಯಿಂದಾಗಿ ನಿಕಟ ಭವಿಷ್ಯದಲ್ಲಿ ಪರಿಣಾಮಕಾರಿಯಾದ ವಿರೋಧವನ್ನು ಸಂಘಟಿಸುವುದಕ್ಕಾಗಲೀ ಅವಶ್ಯವಿದ್ದಾಗ ಪ್ರತಿ ಸರಕಾರವನ್ನು ರಚಿಸುವಷ್ಟು ಶಕ್ತಿಯನ್ನು ಹೊಂದಿರುವುದಕ್ಕಾಗಲೀ ಬೇರೆ ಯಾವುದೇ ಪಕ್ಷಕ್ಕೆ ಅವಕಾಶ ಸಿಗುತ್ತಿಲ್ಲ.

ಇದರಿಂದ ಕೆಲವು ತೊಡಕುಗಳೇಳುವೆ. ಸಾಮಾನ್ಯ ನಾಗರಿಕನಿಗೆ ತನ್ನ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಏನೂ ಬೆಲೆ ಇಲ್ಲವೆಂಬ ಅಸಮಾಧಾನವುಂಟಾಗುತ್ತದೆ. ಧೋರಣೆಯ ವಿಷಯದಲ್ಲಿ ಸರಕಾರಕ್ಕಿಂತ ಭಿನ್ನವಾದ ಅಭಿಪ್ರಾಯಕ್ಕೆ ಅಂಟಿಕೊಂಡಿರುವ ಅವನ ಇಚ್ಛೆಗೆ ಯಾವ ಪೋಷಣೆಯೂ ಸಿಗುವುದಿಲ್ಲ. ಅವನಿಗೆ ಅಧಿಕಾರದಲ್ಲಿರುವ ಪಕ್ಷದ ಮೇಲೆ ಅಸಮಾಧಾನ ಉಂಟಾಗುವ ಬದಲು ಸರಕಾರದ ಮೇಲೆ, ಘಟನೆಯ ಮೇಲೆ ಅಸಮಾಧಾನವಾಗುವುದಕ್ಕೆ ಇದರಿಂದ ಎಡೆಯಾಗುತ್ತದೆ.

ತನ್ನ ಅಭಿಪ್ರಾಯಕ್ಕೆ ಹೊಂದಿಕೊಳ್ಳುವ ಪ್ರತಿಪಕ್ಷವೊಂದು ದೃಗ್ಗೋಚರವಾಗದ ದೆಸೆಯಿಂದ ಇಂದು ಸರಕಾರಿ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿರುವ ಪಕ್ಷವೇ ಸರಕಾರ ಎಂಬ ತಪ್ಪು ನಾಮಾಭಿಧಾನವನ್ನು ಹೊಂದಿ ಮೆರೆಯುತ್ತದೆ; ಮತ್ತು ಸರಕಾರದಿಂದ ಮಾಡಲಾದ ಸಾಧನೆಗಳೇ ಪಕ್ಷದ ಸಾಧನೆಗಳೆಂಬ ತಪ್ಪು ಗ್ರಹಿಕೆಗೆ ಅವಕಾಶ ಉಂಟಾಗಿದೆ ಎನ್ನಬಹುದು.

ನಾವಿದಕ್ಕಾಗಿ ಹೆಚ್ಚು ಚಿಂತಿಸದಿರುವ ಮನೋಭಾವವನ್ನು ಹೊಂದಿರುವಂತೆ ಇಂದು ಕಾಣುತ್ತದೆ. ಹೇಗೆಯೋ ಇರಲಿ, ನಮಗೇನು ಎಂಬಂತಹ ತಂದ್ರಾವಸ್ಥೆ ಯುಕ್ತವಲ್ಲ. ಏಕೆಂದರೆ ಈ ತೆರನಾದ ತೂಕಡಿಕೆಯಲ್ಲಿ ಅಪಾಯವು ನಿಹಿತವಾಗಿದೆ. ಇಂದು ನಾವು ರಾಜಕೀಯ ರಂಗದಲ್ಲಿಯೂ ಆರ್ಥಿಕ ವಿಭಾಗದಲ್ಲಿಯೂ ಚೆನ್ನಾಗಿಯೇ ಕೆಲಸವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದೇವೆ, ನಿಜ. ಆದರೆ ಇದು ಹೆಚ್ಚು ಸಮಯ ನಡೆಯಲಾರದು. ಪರಿಸ್ಥಿತಿಯು ತೀರ ಬದಲ್ಗೊಂಡು, ಸರಕಾರಿ ಭದ್ರತೆಗೆ ತೀರ ಅಪಾಯಕಾರಿಯಾದ ರೀತಿಯಲ್ಲಿ ಸಾರ್ವಜನಿಕಾಭಿಪ್ರಾಯವು ರೂಪುಗೊಳ್ಳುವ ದಿನವು— ಇಂದು ನಮಗೆ ಕಾಣದಿದ್ದರೂ— ಮುಂದೊಂದು ಸಲ ಕಂಡು ಬರಲಾರದೆಂದು ಹೇಳುವಂತಿಲ್ಲ.

ವ್ಯಕ್ತಿಗತ ಪ್ರಭಾವವುಳ್ಳ ಇಂದಿನ ಧುರೀಣರ ತಂಡವೇ ಅನಂತ ಕಾಲದವರೆಗೆ ಭಾರತದಲ್ಲಿ ಸರಕಾರ ಸೂತ್ರವನ್ನು ವಹಿಸಿಕೊಂಡಿರುವುದೆಂದು ಹೇಳುವುದೆಂತು? ಈ ಧುರೀಣರು ಮಾಯವಾದರೆ, ಅವರಿಂದು ಅಂಟಿಕೊಂಡಿರುವ ಪಕ್ಷವು ಸಶಕ್ತವಾಗಿಯೇ ಉಳಿದೀತೆ? ಇದಕ್ಕೆ ಪರೀಕ್ಷೆ ಅವಶ್ಯ.

ಆದದರಿಂದ ನಾವು ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಸಂಭಾವ್ಯವಾದ ವಿರುದ್ಧ ಅಭಿಪ್ರಾಯದ ಸಂಘಟನೆಗೊಂದು ರೂಪವನ್ನು ಕೊಡಲು ಈಗಿನಿಂದಲೇ ಪ್ರಯತ್ನಿಸಬೇಕು. ಇದನ್ನು ಸಾಧಿಸಬಹುದಾದ ಸ್ವಾಭಾವಿಕವಾದ ರೀತಿ ಏನು? ಆಳುವ ಪಕ್ಷದೊಳಗೆಯೇ ಇಂದು ವ್ಯಕ್ತವಾಗುತ್ತಿರುವ ಮಹತ್ವದ ಭಿನ್ನಾಭಿಪ್ರಾಯಗಳು ಹೊಸ ಪಕ್ಷದ ರೂಪದಲ್ಲಿ ಹರಳುಗಟ್ಟುವಂತೆ ಮಾಡುವುದೇ ಅದೆಂದು ತೋರುತ್ತದೆ.

ಆದರೆ ಇದಕ್ಕೆ ಒಂದು ವಿಷಯವು ಅಗತ್ಯವಾಗಿದೆ—ಇಂದು ಆಳುವ ಪಕ್ಷದಲ್ಲಿದ್ದುಕೊಂಡು ಸರಕಾರದ ಕರ್ಣಧಾರತ್ವವನ್ನು ವಹಿಸಿಕೊಂಡಿರುವ ರಾಷ್ಟ್ರೀಯ ಧುರೀಣರ ಚಿಕ್ಕ ಗುಂಪು ಪಾಕ್ಷಿಕ ರಾಜಕೀಯದ ಸಂಕುಚಿತ ಕ್ಷೇತ್ರದಿಂದ ಸ್ವೇಚ್ಛಾಪೂರ್ವಕ ಹೊರ ಬರುವ ಸಾಹಸವನ್ನು ಮಾಡಬೇಕು. ಇವರು ಸರಕಾರದಲ್ಲಿರಬಾರದೆಂದು ಇದರ ಅರ್ಥವಲ್ಲ— ಸರಕಾರದ ಶಿರಸ್ಸಾಗಿ ಇವರು ಇರುವುದೇ ಇವರಿಗೆ ಭೂಷಣ ಪ್ರಾಯವಾದ ಕಾರ್ಯ. ಆದನ್ನಿವರು ಮಾಡಬೇಕು. ಆದರೆ, ಪಕ್ಷದ ಬಿಲ್ಲೆಯನ್ನು ತಮ್ಮ ವ್ಯಕ್ತಿತ್ವಕ್ಕೆ ಅಂಟಿಸಿಕೊಳ್ಳದೆ, ರಾಷ್ಟ್ರೀಯ ಧುರೀಣರೆಂಬ ಗೌರವಾರ್ಹ ನೆಲೆಯಿಂದ ಅವರು ಕಾರ್ಯಪ್ರವೃತ್ತರಾಗಬೇಕು.

ತಮ್ಮ ಜೀವಮಾನದಲ್ಲಿ ರಾಷ್ಟ್ರೀಯ ಧುರೀಣರ ಈ ಚಿಕ್ಕ ಗುಂಪು ಮಾಡಬಹುದಾದ, ಪ್ರಜಾಪ್ರಭುತ್ವಕ್ಕೆ ಭಾರತದಲ್ಲಿ ಸಲ್ಲಿಸಬಹುದಾದ, ಬಹುಮೊತ್ತದಾದ ಮತ್ತು ಪ್ರಾಮುಖ್ಯವಾದ ಸೇವೆ ಇದಾಗಿದೆ.

ಈ ಕರ್ತವ್ಯ ಭಾರವನ್ನು ಇಂದಿನ ರಾಷ್ಟ್ರೀಯ ಧುರೀಣರು ಹಾರಿಸಿಕೊಳ್ಳಬಾರದು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಕಾರ್ಯಕಲಾಪಗಳಿಗೆ ಅತ್ಯಾವಶ್ಯಕವಾದ ಪಕ್ಷ-ಪ್ರತಿಪಕ್ಷಗಳ ಯೋಗ್ಯ ಸಮನ್ವಯ ಸಾಧನೆಗಾಗಿಯೂ ಪ್ರಜಾಪ್ರಭುತ್ವದ ಬೆಳವಣಿಗೆಗಾಗಿಯೂ ರಾಷ್ಟ್ರೀಯ ಧುರೀಣ ಈ ಚಿಕ್ಕ ಗುಂಪು ಪಾಕ್ಷಿಕ ರಾಜಕಾರಣದಿಂದ ಹೊರಬಂದು ದೇಶ ಸೇವೆ ಮಾಡುವ ದೀಕ್ಷೆಯನ್ನು ಇಂದು ತೊಡಬೇಕು. ಅನ್ಯಥಾ ನಮ್ಮ ಪ್ರಜಾಪ್ರಭುತ್ವಕ್ಕಾಗಲೀ ರಾಜ್ಯ ಘಟನೆಗಾಗಲೀ ಭದ್ರತೆ ಉಳಿಯಲಾರದು.

ಕಾಂಗ್ರೆಸು ಸಂಸ್ಥೆಯು ತನ್ನ ದೀರ್ಘ ಕಾಲದ ಇತಿಹಾಸದಲ್ಲಿ ರಾಷ್ಟ್ರೀಯ ಚಳವಳದ ಪ್ರತೀಕವಾಗಿ ನಿಂತಿದೆ. ಅದಕ್ಕೆ ಇಂದು ಆ ಸ್ಥಾನವೇ ಸಲ್ಲಬೇಕಾಗಿದೆ. ಇದರಿಂದ ಇಂದಿನ ಸರಕಾರದ ಬಲವು ತಾತ್ಕಾಲಿಕವಾಗಿ ಕುಂದಬಹುದು. ಇದಕ್ಕಾಗಿ ಭಯಪಡಬೇಕಾಗಿಲ್ಲ. ಏಕೆಂದರೆ ರಾಷ್ಟ್ರೀಯ ಪ್ರಭಾವವುಳ್ಳ ಧುರೀಣರ ಗುಂಪು ದೇಶದ ಭದ್ರತೆಯನ್ನು ಕಾಯ್ದುಕೊಳ್ಳುವಷ್ಟು ಸಮರ್ಥವಾಗಿ ಇಂದು ಉಳಿದಿದೆ. ಆದರೆ ಕಾಂಗ್ರೆಸು ಈಗಿನಂತೆಯೇ ಮುಂದೆಯೂ ಉಳಿದರೆ, ಮತ್ತು ರಾಷ್ಟ್ರೀಯ ಧುರೀಣರ ಕೃಪಾಶ್ರಯದಲ್ಲಿದ್ದುಕೊಂಡು ದೀರ್ಘ ಕಾಲದವರೆಗೆ ಅಧಿಕಾರಸ್ಥಾನದಲ್ಲಿ ಮೆರೆದಾಡಿದರೆ, ಅದು ಸರಕಾರದ ಆಡಳಿತಕ್ಕೆ ಸಹಜವಾದ ಸಾರ್ವಜನಿಕ ಟೀಕೆಗಳಿಗೆ ಮತ್ತು ಅಪ್ರೀತಿಗೆ ಪಾತ್ರವಾಗಬಹುದು; ಮತ್ತು ತಾನಂತೂ ಹೇಳ ಹೆಸರಿಲ್ಲದೆ ಹೋಗುವುದಲ್ಲದೆ, ತನ್ನೊಂದಿಗೆ ಸರಕಾರದ ಭದ್ರತೆಗೂ ಅಪಾಯವನ್ನು ತರಬಹುದು.

ಧುರೀಣತ್ವವನ್ನು ಕ್ರಮಬದ್ಧಗೊಳಿಸಲಾಗುವುದಿಲ್ಲ. ಅದು ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಅದು ಯೋಗ್ಯ ಪರಿಸ್ಥಿತಿ ಮತ್ತು ಪ್ರೋತ್ಸಾಹದಾಯಕ ಜನರ ನಡುವೆ ಬೆಳೆಯುತ್ತದೆ. ಇಂದಿನ ಭಾರತದಲ್ಲಿ ರಾಜಕೀಯ ಧುರೀಣತ್ವ ಎಂದೊಡನೆಯೇ ಕಾಂಗ್ರೆಸು ಪಕ್ಷವನ್ನು ತೋರಿಸಲಾ

(೧೨ನೇ ಪುಟ ನೋಡಿರಿ)

## ಹಬ್ಬಗಳ ಸುಗ್ಗಿ

* * *

ಈ ವರ್ಷ ನಮ್ಮ ಜಿಲ್ಲೆಯ ಎರಡು ಬೇಂಕುಗಳ ಸುವರ್ಣದ ಹಬ್ಬ. ಇನ್ನೆರಡು ಬೇಂಕುಗಳ ಬೆಳ್ಳಿಯ ಹಬ್ಬ.

ಈ ಯಶಸ್ವೀ ಬೆಳವಣಿಗೆಗೆ ಕಾರಣ:- ನಮ್ಮ ಜನರ ಬೇಂಕು ಮನೋಭಾವ ಮತ್ತು ಪ್ರಗತಿಪರ ಧೋರಣೆ.

ಅಂತೆಯೇ ಬೇಂಕಿನವರ ವ್ಯವಹಾರ ಜಾಣ್ಮೆ ಮತ್ತು ಕಾರ್ಯ ನಿಷ್ಠೆ.

ಕಳೆದ ಎರಡೂವರೆ ದಶಮಾನಗಳಿಂದ ಜಯಶೀಲವಾಗಿ ಮುಂದೊತ್ತಿ ಬಂದು ಈ ವರ್ಷವೇ ಆಚರಿಸಲ್ಪಡುವ ನಮ್ಮ ರಜತೋತ್ಸವದ ಶುಭ ಮುಹೂರ್ತದಲ್ಲಿ ನಿಮಗೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

**ದಿ ವಿಜಯ ಬೇಂಕ್ ಲಿಮಿಟೆಡ್**

ಪ್ರಧಾನ ಕಛೇರಿ: ಮಂಗಳೂರು—3.

ಜುಮ್ಲಾ ವಹಿವಾಟು ಮೊಬಲಗು ರೂ. 90,00,000

## ವಿದ್ಯಾರ್ಥಿ ಪ್ರಪಂಚ

### ಶೈಕ್ಷಣಿಕ ಕ್ಷೇತ್ರದಲ್ಲಿ ಚಿಗುರುತ್ತಿರುವ ಬಳ್ಳಿಗಳ ಬುಡಕ್ಕೆ ಬಿಸಿನೀರನ್ನು ಹೊಯ್ಯದಿರುವಷ್ಟು ಸದ್ಬುದ್ಧಿಯನ್ನು ಪರಮಾತ್ಮನು ಪಕ್ಷಗಳ ಪ್ರಭೃತಿಗಳಿಗೆ ಅನುಗ್ರಹಿಸಲಿ!

ಈಚೆಗೆ ಯಾವ ಪತ್ರಿಕೆಯನ್ನು ಬಿಡಿಸಿ ನೋಡಿದರೂ ಅದರಲ್ಲಿ ವಿದ್ಯಾರ್ಥಿಗಳ "ದೂಷಣೆ"ಗಾಗಿ ನಾಲ್ಕಾದರೂ ಮಾತು ಓದಲು ಸಿಗುವುದು. ತೋರಿಕೆಗೆ ಅವು ದೂಷಣೆಯಾದರೂ, ಆ ಮಾತುಗಳನ್ನು ಉಪಯೋಗಿಸುವುದು ವಿದ್ಯಾರ್ಥಿಗಳ ಪೋಷಣೆಗಾಗಿಯೇ ಎಂದು ತುಸು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೆ ತಿಳಿದು ಬರುವುದು. ಅಂತಿರುವಾಗ ಆ ಮಾತುಗಳನ್ನು ತಪ್ಪೆಂದು ಹೇಳುವುದು ಸರಿಯಲ್ಲ. ನಮ್ಮ ವಿದ್ಯಾರ್ಥಿ ಪ್ರಪಂಚವೇಕಿಂತು ಅಶಾಂತಿಮಯವಾಗಿದೆಯೆಂಬುದೇ ವಿದ್ಯಾರ್ಥಿಯಾದ ನನ್ನಲ್ಲಿ ಹುಟ್ಟಿರುವ ಒಂದು ದೊಡ್ಡ ಸಮಸ್ಯೆ. ಹೀಗೆ ಸಮಸ್ಯೆಯು ನನ್ನಂತಹ ವಿದ್ಯಾರ್ಥಿಯ ತಲೆಯಲ್ಲಿಯೇ ಸುತ್ತುತ್ತಿರುವಾಗ, ದೇಶವನ್ನು ಮುನ್ನಡೆಸುವ ಹೊಣೆ ಹೊತ್ತವರ ತಲೆಯಲ್ಲಿ ಕೂಡಾ ಇದು ಹೆಚ್ಚಿನ ಭಾರವಾದ ಸಮಸ್ಯೆಯನ್ನು ತುಂಬಿಸಿರಬಹುದಲ್ಲವೆ! ಅದಕ್ಕೆ ಪರಿಹಾರ ಹುಡುಕುವುದು ಅವಶ್ಯವೆನಿಸಿರಬಹುದಲ್ಲವೆ?

ನಮ್ಮ ವಿದ್ಯಾರ್ಥಿ ಪ್ರಪಂಚದಲ್ಲಿ ಇಂದು ನಡೆಯುತ್ತಿರುವ ಕ್ರಾಂತಿಮಯ ವಿದ್ಯಮಾನಗಳು ನಿಜವಾಗಿ ದುಃಖವನ್ನುಂಟುಮಾಡುತ್ತಿವೆ. ಶಾಂತಿಯ ವಾತಾವರಣವೆಂದೋ ಮಾಯವಾಗಿ ಅಶಾಂತಿಯ ಬಿರುಗಾಳಿಯೇ ಎದ್ದಂತೆ ಭಾಸವಾಗುತ್ತಿದೆ. ಒಂದೆಡೆ ಸತ್ಯಾಗ್ರಹವಂತೆ, ಒಂದೆಡೆ ಬಹಿಷ್ಕಾರವಂತೆ. ಒಂದೆಡೆ ಉಪವಾಸವಂತೆ. ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿ ಅಧ್ಯಾಪಕರೊಳಗೆ ಘರ್ಷಣೆ. ಭಾರತೀಯ ಸಂಸ್ಕೃತಿದರ್ಶಿಸುತ್ತಿದ್ದ ಹಾಲು ನೀರಿನಂತಿದ್ದ ಗುರುಶಿಷ್ಯ ಸಂಬಂಧವಿಂದು ಎಣ್ಣೆ ಸೀಗೆಯಂತಾಗಿದೆಯೆಂದರೆ ಅದೆಷ್ಟು ಶೋಚನೀಯ ಸಂಗತಿ! ಅದೆಷ್ಟು ಆತ್ಮಗ್ಲಾನಿಯನ್ನುಂಟು ಮಾಡಲಾರದು? ವಿದ್ಯಾರ್ಥಿಗಳು ಇಂದು ಮಾಡುತ್ತಿರುವ ಹೆಚ್ಚಿನ ಕುಟಿಲ ಕಾರ್ಯಗಳಿಗೆ ನಿಜವಾದ ಕಾರಣವಾದರೂ ಇದೆಯೆ? ಸಮಂಜಸವಾದ ಧ್ಯೇಯವಾದರೂ ಇದೆಯೇ? ಸಣ್ಣ ಮಾತಿನಲ್ಲಿ ಹೇಳುವುದಾದರೆ ಗಂಡನ ಕೋಪದಿಂದ ಹೆಂಡತಿ ಮಗುವಿಗೆ ಹೊಡೆಯುವ ರೀತಿಗೂ, ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿ ಮತ್ತು ಹೊರಗೆ ಮಾಡುವ ಅಶಾಂತಿಗೂ ಒಂದೇ ಅರ್ಥ. ರಾಜಕೀಯದಲ್ಲಿ ನಡೆಯುವ ಏನಾದರೂ ಕುಂದುಗಳನ್ನು, ಅದರಲ್ಲಿಯೂ ಆ ಕುಂದುಗಳನ್ನು ಸರಿಯಾಗಿ ತಿಳಿದಲ್ಲಿ, ಕೇವಲ ಹಿರಿಯ ಮುಖಂಡರಿಗಳ ಮಾತನ್ನು ಕೇಳಿ ಶಾಲೆಗೆ ಬಹಿಷ್ಕಾರ ಹಾಕುತ್ತಿರುವರಲ್ಲಾ! ಇದರಿಂದ ಆಗುವುದೇನು? ನಮ್ಮ ಪ್ರಗತಿಯ ದಾರಿಯಲ್ಲಿ ನಾವೇ ಮುಳ್ಳು ಹಾಕಿ ಕೊಂಡಂತಾಗಲಿಲ್ಲವೇ?

ಮನುಷ್ಯ ಆಯಾಯ ಕಾಲಕ್ಕೆ ಆಯಾಯ ಕರ್ತವ್ಯವನ್ನು ಸಾಂಗವಾಗಿ ಮಾಡಿದರೆ ಮಾತ್ರ ಮುಂದರಿಯಲು ಸಾಧ್ಯವೆಂಬುದನ್ನು ವಿದ್ಯಾರ್ಥಿಗಳು ತಿಳಿದುಕೊಂಡಂತೆ ಕಾಣುವುದಿಲ್ಲ. ಇಂದಿನ ವಿದ್ಯಾರ್ಥಿಗಳಾದ ನಾವೇ ಮುಂದಿನ ಜನಾಂಗವಾಗಲಿದ್ದೇವೆ ಎಂಬುದನ್ನು ಅರಿಯಬೇಕಾಗಿದೆ. ಆ ಮುಂದಿನ, ಪ್ರಗತಿ ಉಚ್ಚ ಮಟ್ಟಕ್ಕೇರ ಬೇಕಾದರೆ ಮೊದಲ ಮೆಟ್ಟಲು ಸರಿಯಾಗಿ ಭದ್ರವಾಗಿ ನಿಲ್ಲದಿದ್ದರೆ ಸಾಧ್ಯವಿದೆಯೇ? ಪ್ರಗತಿಯ ಉನ್ನತಿಯ ಸೌಧವನ್ನೇರುವ ಮೊದಲ ಮೆಟ್ಟಲೇ ವಿದ್ಯಾರ್ಥಿಗಳ ಪಾಲಿಗೆ ಒಳ್ಳೆಯ ವಿದ್ಯಾವ್ಯಾಸಂಗವಾಗಿಲ್ಲವೇ? ಅದು ಕುಂಟುತ್ತ, ಕೆಡವುತ್ತ, ಕೊಳಕಾಗುತ್ತ, ಸಮತಳದಲ್ಲಿ ನಿಲ್ಲದೆ ಅಂಕುಡೊಂಕಾಗುತ್ತ ಹೋದರೆ ಮುಂದೆ ಯಾವ ಪ್ರಗತಿಯನ್ನು ತಾನೇ ವಿದ್ಯಾರ್ಥಿಗಳು ಸಾಧಿಸಿಯಾರು? ಪ್ರಗತಿಯ ವೇಗವನ್ನು ಕುಂಠಿತಗೊಳಿಸುವ ಅಪವಾದಕ್ಕೆ ವಿದ್ಯಾರ್ಥಿಗಳು ಬಾಧ್ಯರಾಗುವುದು ಸಂತೋಷವೇ! ಅದೊಂದು ಕೊಳಕು ಅಪವಾದಾತ್ಮಕ ಪರದೆಯನ್ನು ಮುಸುಕು ಹಾಕಿಕೊಳ್ಳುವುದಕ್ಕೆ ವಿದ್ಯಾರ್ಥಿಗಳಾದವರಿಗೆ ನಾಚಿಕೆಯಾಗಬೇಡವೆ?!

ಇನ್ನು ವಿದ್ಯಾರ್ಥಿ ಸಮಾಜದಲ್ಲಿ ಇಂದು ಹುಟ್ಟಿದ ಅಶಾಂತಿಗೆ ಕೇವಲ ವಿದ್ಯಾರ್ಥಿಗಳೇ ಕಾರಣವೆಂದು ಸಂಪೂರ್ಣ ತಪ್ಪನ್ನು ಹೊರಿಸುವದು ಕೂಡಾ ಒಂದು ದೊಡ್ಡ ತಪ್ಪಾದೀತು. ವಿದ್ಯಾರ್ಥಿಗಳಲ್ಲಿರುವ ಒಂದು ನಿರ್ಬಲತೆ ಅಂದರೆ ಸ್ವತಃ ಆಲೋಚನಾ ಶಕ್ತಿಯ ಅಭಾವ. ಎಳೆಯ ಹೃದಯಗಳಲ್ಲಿ ಎಷ್ಟು ತಾನೇ ಸ್ವಾವಲಂಬನ ಶಕ್ತಿಯಿದ್ದೀತು ? ಅದು ಬೆಳೆದಂತೆ ಬೆಳೆವುದಲ್ಲದೆ ಎಳೆ ತನದಲ್ಲಿ ಕಡಿಮೆಯಿರುತ್ತದೆಯೆಂಬುದು ಎಲ್ಲರಿಗೂ ಗೊತ್ತು. ಆ ಅಬಲತೆಯೇ ಇಂದು ವಿದ್ಯಾರ್ಥಿ ಪ್ರಪಂಚದಲ್ಲಿ ಅಶಾಂತಿಗೆ ಕಾರಣವೆಂದು ಹೇಳಬಹುದಲ್ಲವೆ!

ಸುತ್ತಣ ಸಮಾಜದ ಆಗುಹೋಗುಗಳ ಸಮಸ್ತ ವ್ಯಾಪಾರ ವಿದ್ಯಾರ್ಥಿಗಳ ಎಳೆ ಹೃದಯದಲ್ಲಿ ಪರಿಣಾಮವನ್ನು ಮಾಡುವುವು ಎಂಬುದು ಸಿದ್ಧವಾದುದು. ತಾಯ ಗರ್ಭದಲ್ಲಿರುವಾಗಲೇ ಆ ಗರ್ಭ ಪಿಂಡವು ತಾಯಿಯ ಮುಖಾಂತರ ಸುತ್ತಣ ಆಗುಹೋಗುಗಳ ಪರಿಣಾಮವನ್ನು ತನ್ನ ರಕ್ತಗತ ಮಾಡಿಕೊಳ್ಳುತ್ತದೆಯೆಂದು ಮನೋ ವಿಜ್ಞಾನಿಗಳು ಹೇಳುತ್ತಿದ್ದಾರೆ. ವಿದ್ಯಾರ್ಥಿ ದಸೆಯಲ್ಲಿರುವಾಗಲಂತೂ ವಿದ್ಯಾರ್ಥಿಗಳ ಮನಸ್ಸು ಉತ್ಕಟ ಜಿಜ್ಞಾಸುವಾಗಿರುತ್ತದೆ. ಎಲ್ಲವನ್ನೂ ತಿಳಿದುಕೊಳ್ಳುವ ಹಂಬಲವಿರುತ್ತದೆ. ಪರಿಣಾಮದ ಕಡೆಗೆ ಮನಸ್ಸು ಹರಿಯದ ಕೇವಲ ಕಾರ್ಯದ ಕಡೆಗೆ ಮಾತ್ರ ತಮ್ಮ ಮನಸ್ಸನ್ನು ಹರಿಸುತ್ತಾರೆ. ವಿದ್ಯಾರ್ಥಿ ಸಮಾಜದ ಮೇಲೆ ಸಮಾಜದ ವ್ಯವಹಾರಗಳ ದೊಡ್ಡ ರೀತಿಯ ಪರಿಣಾಮವನ್ನೆಸಗುತ್ತವೆ ಎನ್ನುವಾಗ ಆ ಸಮಾಜವು ಮುಂದಿನ ಜನಾಂಗವು ಪ್ರಗತಿಗೆ ಬರಬೇಕೆಂಬ ಧ್ಯೇಯವಿಟ್ಟುಕೊಂಡುದು ನಿಜವಾದರೆ ಜಾಗ್ರತೆಯಿಂದ ವರ್ತಿಸಬೇಡವೇ?

ವಿದ್ಯಾರ್ಥಿ ಸಮಾಜದ ಅಶಾಂತಿಗೆ ಒಂದು ಪ್ರಬಲ ಕಾರಣ ದೇಶದ ರಾಜಕೀಯ ಪಕ್ಷಗಳೆಂಬುದನ್ನು ಎಲ್ಲರೂ ಮನಗಾಣಬೇಕಾದ ವಿಷಯ. 'ಅಗ್ನಿ ಶಿಖೆಯನ್ನು ಆಧಾರವೆಂಬರ್ಥದಿಂದ ಮಿಡಿತೆಗಳು ಮುತ್ತಿ ರೆಕ್ಕೆ ಕಳಕೊಳ್ಳುವಂತೆ ಕೆಲ ರಾಜಕೀಯ ಪಕ್ಷಗಳು (ಅವುಗಳ ಮುಖಂಡರುಗಳು) ಎಸಗುವ ಮಾಯಾಜಾಲಗಳಲ್ಲಿ ವಿದ್ಯಾರ್ಥಿಗಳು ಸಿಕ್ಕಿ ಅಶಾಂತಿಗೆ ಕಾರಣರಾಗಿದ್ದಾರೆಯೆಂಬುದು ನಿದರ್ಶನಪೂರ್ವಕ ಸಿದ್ಧವಿದೆ. ಹೆಚ್ಚಿನ ರಾಜಕೀಯ ಪಕ್ಷಗಳು (ಅವರ ಮುಖಂಡರುಗಳು) ದೇಶದ ಪ್ರಗತಿಗಾಗಿ ಹೆಣಗುವವೊ ಎಂಬ ಸಂಶಯಪೂರ್ಣ ಪ್ರಶ್ನೆ ಕೇಳುವುದಕ್ಕಿಂತ, ಒಂದು ಮತ್ತೊಂದು ಪಕ್ಷವನ್ನು ಕೆಳ ಹಾಕಿ ತಾನು ಮೇಲೇರಿ ಕೇಕೇ ಹಾಕಬೇಕೆಂದೇ ಹೆಣಗುತ್ತಿವೆ ಎಂಬ ನಿಶ್ಚಿತ ಉತ್ತರ ಹೇಳುವುದೇ ಉತ್ತಮ. ಅದು ಸತ್ಯ. ತಾನು ಮೇಲೆ ಬರಬೇಕಿದ್ದರೆ ಮೇಲಿದ್ದವ ಕೆಳಗಿಳಿಯಲೇಬೇಕೆಂಬುದು ನಿಶ್ಚಯ. ಅಂತಿರುವಾಗ ಅದಕ್ಕೆ ಬೇಕಾದ ಜಾಲತಂತ್ರಗಳನ್ನು ರಚಿಸಬೇಕಲ್ಲವೆ? ವಿದ್ಯಾರ್ಥಿಗಳು ಅವುಗಳಲ್ಲಿ ಸಿಕ್ಕಿಬೀಳುವುದು ಬಹು ಬೇಗ. ಮುಖಂಡರ ಪ್ರಪಂಚವು ದೇಶದ ಪ್ರಗತಿಯನ್ನು ಆಶಿಸುವುದಾದರೆ ತಮ್ಮ ಆ ಮಾಯಾ ಜಾಲಗಳನ್ನು ಗಂಟುಕಟ್ಟಿ ಹೊರಗಿಟ್ಟು ವಿದ್ಯಾರ್ಥಿ ಸಮಾಜದತ್ತ ತನ್ನದೇನಾದರೂ ಯೋಗ್ಯ ಬೋಧನೆ ಕೊಡಲಿದ್ದರೆ ಬರಬೇಕು. ಇವಲ್ಲದಿದ್ದರೆ....!

ವಿದ್ಯಾರ್ಥಿಗಳನ್ನು ರಾಜಕೀಯಕ್ಕೆ ಕರೆಯುವುದು ತಪ್ಪಲ್ಲ. ಗಾಂಧಿಯವರು ಸತ್ಯಾಗ್ರಹಕ್ಕೆ ಕರೆಯಲಿಲ್ಲವೆ ಎಂದು ಹೇಳುವವರಿದ್ದಾರೆ. ಗಾಂಧಿಯವರು ಕರೆದ ಸಮಯ ಯಾವುದು? ಬ್ರಿಟಿಷರು ಭಾರತೀಯ ವಿದ್ಯಾರ್ಥಿಗಳಿಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ದರ್ಶಿಸುತ್ತ ಆ ಕಡೆ ಮನಸೆಳೆದು ಪರತಂತ್ರ್ಯದ ಗಾಳಿಯನ್ನೆ ಸೇವಿಸುವಂತೆ ಮಾಡುತ್ತಿದ್ದ ಈ ಸಂಕ್ರಾಂತಿ ಕಾಲದಲ್ಲಿ ಸ್ವಾತಂತ್ರ್ಯದ ಗಾಳಿಯನ್ನು ಕಂಡು ಸೇವಿಸಿಕೊಳ್ಳಲಿ ಎಂಬ ಧ್ಯೇಯದಿಂದ ಸತ್ಯಾಗ್ರಹಕ್ಕೆ ಕರೆದು ಭಾರತೀಯ ಸಂಸ್ಕೃತಿಯನ್ನು ದರ್ಶನಗೊಳಿಸಿ ಸ್ವಾತಂತ್ರ್ಯ ಭಾವನೆ ಹುಟ್ಟುವಂತೆ ಮಾಡಿದರು. ಅದನ್ನು ನೆನಸುವಾಗಲಾದರೂ ಅವರ ಧ್ಯೇಯಕ್ಕೂ ತಮ್ಮ ಧ್ಯೇಯಕ್ಕೂ ಯಾವ ಅಂತರವಿದೆಯೆಂದು ತಿಳಿಯಲಿ. ಅದು ಬೆಳಕಾಗಿದ್ದರೆ ಇದು ಕೊಳಕು.

ಮುಖಂಡರ ಪ್ರಪಂಚ ಮಾತ್ರ ಅಶಾಂತಿಗೆ ಕಾರಣವಲ್ಲ, ರಕ್ಷಕ ಪ್ರಪಂಚವೂ ಕಾರಣವಾಗಿದೆ. ಒಂದನೆ ಕಾರಣ ವಿದ್ಯಾರ್ಥಿಗಳಿಗೆ ಅಧ್ಯಾಪಕರಲ್ಲಿ ಅವರ ಗೌರವವಿಲ್ಲದಿರುವುದು. ಇದಕ್ಕೆ ಕಾರಣರು ರಕ್ಷಕರೆಂದು ಹೇಳಿದಾಗ ವಿಚಿತ್ರ ಕಾಣಬಹುದು. ಕಾಣದ ಕೈಯ ಕೈವಾಡ ಬಹಳ. ಮನೆಯಲ್ಲಿ ವಿದ್ಯಾರ್ಥಿಗಳ ಎದುರಿನಲ್ಲಿ ರಕ್ಷಕರು ಅಧ್ಯಾಪಕರ ಮೇಲೆ ಗೌರವ ತೋರಿಸದೆ ನಿರ್ಲಕ್ಷತೆ ತೋರಿ

(೧೨ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು

ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

### ಶಿರ್ವಾ ಪಂಚಾಯತ್ ಬೋರ್ಡು ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 13/56.

ಗಾಬ್ರಿಲ್ ಮಿನೇಜಸ್—ಕೃತಾಸ್ ಮಿನೇಜಸರ ಮಗ ಶಿರ್ವಾ ಗ್ರಾಮದ ಕುತ್ಯ ಮಜಲಿನಲ್ಲಿರುವವ —ವಾದಿ

ಜಗನ್ನಾಥ ಶೆಟ್ಟಿ, ಯೊಯ್ಯ ಶೆಟ್ರ ಅಳಿಯ ಶಿರ್ವಾ ಗ್ರಾಮದ ಭೂತಬೆಟ್ಟಿನಲ್ಲಿರುವವ —ಪ್ರತಿವಾದಿ

ವಾದಿಗೆ ನೀವು ತಾ 24—9—53ರಲ್ಲಿ ರೂಪಾಯಿ 40—0—0ಕ್ಕೆ ಬರಕೊಟ್ಟ ಡಿ. ಪ್ರೋನೋಟಿನ ಅಸಲು ಬಡ್ಡಿ ಪಗೈರೆ ರೂ. 47—1—4ನ್ನು, ಬಡಮಾಡಿಕೊಳ್ಳುವರೆ, ವಾದಿಯು ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುತ್ತಾರೆ. ಅದನ್ನು ತನಿಖೆ ಬಗ್ಗೆ ಇದೇ ಬರುವ ತಾ. 5—11—56ನೇ ದಿನ ಅಪರಾಹ್ನ 3 ಘಂಟೆಗೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿವಸ ಈ ಕೋರ್ಟಿನ ಮುಂದೆ ಸ್ವತಃ ಯಾ ಏಜಂಟರ ಮುಖಾಂತರ ಹಾಜರಾಗಿ ನಿಮ್ಮ ಆಕ್ಷೇಪವಿದ್ದರೆ, ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಎಕ್ಸ್ ಪಾರ್ಟಿ ತನಿಖೆ ನಡಿಸಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಯಪಡಿಸಲಾಗಿಯದೆ.

(Sd) S. Annayya Hegde.
President.
Shirva Panchayat Board Office.
Post Shirva. Dated 17—10—56.

## ಆಟದ ಸಾಮಾನುಗಳು

# ಮಕ್ಕಳಿಗೆ ಗೊಂಬೆಗಳ ಮೂಲಕ ಶಿಕ್ಷಣ

### ರಶ್ಯದಲ್ಲಿ ನಡೆಯುತ್ತಿರುವ ಉಪಯುಕ್ತ ಕಾರ್ಯಕ್ರಮ

ರಶಿಯದಲ್ಲಿ ತಯಾರಾದ ಮಕ್ಕಳ ಆಟದ ಸಾಮಾನುಗಳ ಪರಿಚಯವು ಭಾರತೀಯರಿಗೆ ಈಗಾಗಲೇ ಆಗಿರುತ್ತದೆ. ಉದಾಹರಣೆಗೆ ದೆಹಲಿಯಲ್ಲಿಯೂ ಮತ್ತು ಭಾರತ ದೇಶದ ಇತರ ನಗರಗಳಲ್ಲಿಯೂ ಕಳೆದ ವರ್ಷ ನಡೆದ ಪ್ರದರ್ಶನಗಳಲ್ಲಿ ರಶ್ಯದಲ್ಲಿ ತಯಾರಿಸಲಾದ ಗೊಂಬೆಗಳು ಪ್ರದರ್ಶಿಸಲ್ಪಟ್ಟಿದ್ದು ಅವುಗಳಿಗೆ ಅರ್ಹತೆಯುಳ್ಳ ವಿಜಯವನ್ನು ಗಳಿಸಿದುವು.

ಆ ಪ್ರದರ್ಶಿತ ವಸ್ತುಗಳು— ಸೋವಿಯತ್ ಒಕ್ಕೂಟದ ಜನತೆಗಳ, ಮಾನವ ಕುಲ ಶಾಸ್ತ್ರಕ್ಕನುಸಾರವಾಗಿಯೂ ಮತ್ತು ಐತಿಹಾಸಿಕ ಪೋಷಾಕುಗಳಿಂದಲೂ ಅಲಂಕೃತವಾದ ಗೊಂಬೆಗಳು – ಸೋವಿಯತ್ ಆಟದ ಸಾಮಾನುಗಳ ವಿಸ್ತೃತ ಪ್ರಪಂಚದಲ್ಲಿ ಕೇವಲ ಒಂದಂಶ ಮಾತ್ರವೇ ಆಗಿವೆ. ೧,೫೦೦ಕ್ಕಿಂತಲೂ ಹೆಚ್ಚು ಎಲ್ಲ ಬಗೆಯ ಆಟದ ಸಾಮಾನುಗಳು ಸೋವಿಯತ್ ಒಕ್ಕೂಟದಲ್ಲಿನ ಔದ್ಯೋಗಿಕ ಉದ್ಯಮಗಳಿಂದಲೂ ಮತ್ತು ಉತ್ಪಾದಕರ ಸಹಕಾರೀ ಸಂಘಗಳಿಂದಲೂ ಈ ದಿನ ಮಾರಾಟಕ್ಕೆ ಇಡಲ್ಪಟ್ಟಿವೆ.

ಆದರೂ ಕೂಡ, ಇದು ಬರಿಯ ಮೊತ್ತದ ವಿಷಯ ಮಾತ್ರವಲ್ಲ. ಪ್ರತಿಯೊಂದು ಬಗೆಯ ಆಟದ ವಸ್ತುವೂ ತನ್ನ ಉದ್ದೇಶವನ್ನು ಸಾಧಿಸುವುದರ ಸಲುವಾಗಿ, ಅವಶ್ಯಕತೆಗಳಿಗೆ ಅನುಕೂಲವಾಗಿರಬೇಕಾದುದು ಮಹತ್ವಪೂರ್ಣವಾದ ವಿಷಯವಾಗಿದೆ. ಪ್ರತಿಯೊಬ್ಬರಿಗೂ ಗೊತ್ತಿರುವಂತೆ ಆಟದ ವಸ್ತುವು ಕೇವಲ ಒಂದು ತಮಾಷೆಯ ವಸ್ತುವಲ್ಲ. ರಶಿಯನ್ ಲೇಖಕರಾದ ಮ್ಯಾಕ್ಸಿಂ ಗೋರ್ಕಿಯವರು ಈ ರೀತಿ ಬರೆದಿದ್ದಾರೆ: "ಸೋವಿಯತ್ ಒಕ್ಕೂಟದಲ್ಲಿ ಮಕ್ಕಳ ಬೌದ್ಧಿಕ ಮತ್ತು ರಸಾಭಿಜ್ಞತೆಯ ವಿದ್ಯಾಭ್ಯಾಸವು ಚೆನ್ನಾಗಿಯೂ ಮತ್ತು ಸುಲಭವಾಗಿ ಗ್ರಹಿಸಿಕೊಳ್ಳಬಹುದಾದ ರೂಪಗಳಲ್ಲಿಯೂ — ಮಕ್ಕಳು ವಿಶ್ವಜೀವನದ ಮತ್ತು ತಮ್ಮ ದೇಶದ ಬಗ್ಗೆ ಸಾಧ್ಯವಾದಷ್ಟು ಹೆಚ್ಚು ಜ್ಞಾನವನ್ನು ಸಾಧ್ಯವಿದ್ದಷ್ಟು ಕಡಿಮೆ ತಮ್ಮ ಬುದ್ಧಿ ಶಕ್ತಿಯ ಶ್ರಮದಿಂದ ಪಡೆಯುವಂತೆ — ಸಂಘಟಿಸಲ್ಪಡಬೇಕು. ತಮಾಷೆಯಾಗಿರುವ ಮತ್ತು ಸರಳವಾಗಿ ಬರೆಯಲ್ಪಟ್ಟ ಪುಸ್ತಕದಿಂದ ಇದನ್ನು ಸಂಪೂರ್ಣತಃ ಸಾಧಿಸಬಹುದು, ಮತ್ತು ಸ್ವಾರಸ್ಯಕರವಾದ ಆಟದ ಸಾಮಾನಿನ ಮೂಲಕ ಅದು ಇನ್ನು ಹೆಚ್ಚು ಸುಲಭವಾಗಿ ಸಾಧಿಸಲ್ಪಡಲು ಸಾಧ್ಯವಾಗುತ್ತದೆ."

ಸೋವಿಯತ್ ದೇಶದ ಮಕ್ಕಳು ಕಾರ್ಯತತ್ಪರತೆಯ ಮತ್ತು ರಚನಾತ್ಮಕ ಪ್ರಯತ್ನದ ವಾತಾವರಣದಲ್ಲಿ ಜೀವನವನ್ನು ಸಾಗಿಸುತ್ತಾರೆ. ಬಾಲ್ಯಾರಂಭದೆಶೆಯಿಂದಲೂ ಅವರು ತಮ್ಮ ದೇಶವು ಔನ್ನತ್ಯವನ್ನು ಪಡೆಯುವಂತೆ ನಿರ್ಮಾಣಕಾರ್ಯ ನಡೆಯುತ್ತಿರುವುದನ್ನೂ, ತಮ್ಮ ದೇಶವು ಬಲಯುತವಾಗಿ ಬೆಳೆಯುತ್ತಿರುವುದನ್ನೂ ಮತ್ತು ಉಚ್ಛ್ರಾಯ ಸ್ಥಿತಿಗೇರುತ್ತಿರುವುದನ್ನೂ ಕಾಣುತ್ತಿರುವುದೇ ಅವರಿಗೆ ರೂಢಿಯಾಗಿದೆ. ಸಹಜವಾಗಿಯೇ, ಪುಟ್ಟ ಸೋವಿಯತ್ ನಾಗರಿಕನು ತಾನು ಎಲ್ಲಾ ಮಹತ್ತರ ಪ್ರಯತ್ನ ಕಾರ್ಯಗಳಲ್ಲಿಯೂ ಭಾಗ ವಹಿಸಲು ಮತ್ತು ಸ್ವತಃ ತನ್ನ ಕೈಗಳಿಂದಲೇ – ಊಹಾ ಪ್ರಪಂಚದಲ್ಲಾದರೂ ಕೂಡ ಕೆಲಸದ ಉಪಕರಣಗಳ ಮೇಲೆಯೂ ಮತ್ತು ಹಿರಿಯರು, ಪುರುಳುಗೊಳಿಸುವ ಕಾರ್ಯಾಚರಣೆಗಳಲ್ಲಿ ಕಂಡು ಬರುವ ಅನೇಕ ಕ್ಲಿಷ್ಟಕರವಾದ ವಿಷಯಗಳ ಮೇಲೆಯೂ ತನ್ನ ಶಕ್ತಿಯ ಅನುಭವವನ್ನು ಪಡೆಯಲು ಸಮರ್ಥನಾಗುವ ದಿನದ ಆಗಮನದ ಸಲುವಾಗಿ ಉತ್ಸುಕತೆಯಿಂದ ಎದುರು ನೋಡುತ್ತಿರುತ್ತಾನೆ. ಆದರೂ ಕೂಡ ಈ ಎಳೆಯ ನಾಗರಿಕನು, ತನ್ನ ಸುತ್ತಲೂ ಇರುವ ಜನರು ತೊಡಗಿರುವ ಕೆಲಸ ಕಾರ್ಯಗಳಲ್ಲಿ ನೇರವಾಗಿ ತಾನು ಭಾಗ ವಹಿಸುವುದಕ್ಕೆ ಸಾಕಾಗುವಷ್ಟು ಶಕ್ತಿಯನ್ನೂ, ಬುದ್ಧಿಯನ್ನೂ, ಮತ್ತು ಚಾತುರ್ಯವನ್ನೂ ಕೂಡಿಸಿಕೊಳ್ಳಲು ಇನ್ನೂ ತುಂಬಾ ಸಮಯ ಕಳೆಯಲೇ ಬೇಕಾಗುವುದು.

ಆದುದರಿಂದಲೇ ರಶ್ಯದಲ್ಲಿ ನಿರಂತರವಾಗಿ ಮಕ್ಕಳ ಆಟಗಳನ್ನು ಸಮೃದ್ಧಿಗೊಳಿಸುವ ಮತ್ತು ಅವರಲ್ಲಿ ವಿಚಾರ ಶಕ್ತಿಯನ್ನೂ ಮತ್ತು ಚತುರತೆಯನ್ನೂ ಅಭಿವೃದ್ಧಿಗೊಳಿಸುವ, ಆಟದ ಸಾಮಾನುಗಳ ಉತ್ಪಾದನೆಗೆ ಪ್ರಥಮ ಪ್ರಾಧಾನ್ಯತೆಯನ್ನು ಕೊಡಲಾಗುತ್ತದೆ.

ಜನತೆಯಿಂದ ತಯಾರಿಸಲ್ಪಡಲಾದ ಆಟದ ಸಾಮಾನುಗಳು ರಶ್ಯ ದೇಶದಲ್ಲಿ ಹೆಚ್ಚು ವಿಸ್ತೃತವಾಗಿ ಬಳಸಲ್ಪಡುತ್ತವೆ. ಆ ಆಟದ ಸಾಮಾನುಗಳನ್ನು ಸುಧಾರಿಸುವುದೂ, ಮತ್ತು ಅವುಗಳನ್ನು ಸೋವಿಯತ್ ಒಕ್ಕೂಟದ ಜನತೆಗಳ, ಕ್ರಮಬದ್ಧವಾಗಿ ಅಭಿವೃದ್ಧಿಯಾಗುತ್ತಿರುವ, ಸಮಾಜವಾದೀ ಸಂಸ್ಕೃತಿಯ ಉನ್ನತ ಮಟ್ಟಕ್ಕೆ ತರುವುದೂ ಕರ್ತವ್ಯವೆಂದು ಅಲ್ಲಿ ಭಾವಿಸಲಾಗುತ್ತದೆ.

ವಿಭಿನ್ನ ವಯಸ್ಸುಗಳ ಮಕ್ಕಳಿಗೆ— ಶಿಶು ಪೋಷಣಾಲಯಗಳಲ್ಲಿರುವ ಮಕ್ಕಳು ಮೊದಲುಗೊಂಡು— ಬೇಕಾದ ಆಟದ ಸಾಮಾನುಗಳ ವೈವಿಧ್ಯತೆಯು ತುಂಬಾ ಹೆಚ್ಚಾಗಿದೆ. ಅವು ಅನೇಕ ಗುಂಪುಗಳಾಗಿ ವಿಭಾಗಿಸಲ್ಪಟ್ಟಿವೆ.

ತಮ್ಮ ಕಾರ್ಯಾಚರಣೆಗಳನ್ನು ನಿರ್ದೇಶಿಸಿಕೊಳ್ಳುವುದಕ್ಕಾಗಿ ಮಕ್ಕಳಲ್ಲಿ ಸಾಮರ್ಥ್ಯವನ್ನು ವಿಕಾಸಗೊಳಿಸುವ ಆಟದ ಸಾಮಾನುಗಳು ಮೊದಲನೆಯ ಗುಂಪಿಗೆ ಸೇರಿದವುಗಳಾಗಿವೆ. 'ಪ್ಲಾಸ್ಟಿಕ' ಉಂಗುರಗಳು, "ರೈತರ ಬೊಂಬೆಗಳು, ಮತ್ತು ಬಾಹುಭುಜ-ಕೃತಿಯ (ಪಿರಮಿಡ್) ಆಟದ ಸಾಮಾನುಗಳು—ಇವು ಈ ವರ್ಗಕ್ಕೆ ಸೇರಿವೆ. ಅವುಗಳಲ್ಲಿ ಯಾವುದರಿಂದಲಾದರೂ ಒಂದು ಸಣ್ಣ ಚೂರನ್ನಾದರೂ ಕೂಡ ಕಚ್ಚಿ ಹಾಕಲು ಅಥವಾ ನುಂಗಿಬಿಡಲು ಮಕ್ಕಳಿಗೆ ಸಾಧ್ಯವಾಗದಿರುವಂತೆ ಅವು ತಯಾರಿಸಲ್ಪಟ್ಟಿವೆ.

ಇದರಾಚೆಯ ತಂಡವು ಮಕ್ಕಳ ಶಾರೀರಿಕ ಶಿಕ್ಷಣಕ್ಕೆ ಸಹಾಯವನ್ನು ನೀಡುವಂತಹ ಆಟದ ಸಾಮಾನುಗಳಿಂದ ಕೂಡಿದೆ. ಮುಖ್ಯತಃ ಅವು ಯಾವುವೆಂದರೆ: ತೂಗುವ ಕುರ್ಚಿಗಳು, ಉಯ್ಯಾಲೆ ಕುರ್ಚಿಗಳು, ಮತ್ತು ಗಾಡಿಗಳು. ಗಟ್ಟಿಯಾದ ಮತ್ತು ಮೃದುವಾದ ಚೆಂಡುಗಳೂ ಸಹ ಈ ವರ್ಗಕ್ಕೆ ಸೇರಿವೆ.

ಮೂರನೆಯ ತಂಡವು ಮಕ್ಕಳಿಗೆ ಅವರ ಸುತ್ತಲೂ ಇರುವ ಪ್ರಪಂಚದ ವಿಷಯವಾಗಿ ತಿಳಿಸುವ, ಅವರ ಜ್ಞಾನವನ್ನೂ ಮತ್ತು ಮಾತುಗಾರಿಕೆಯನ್ನೂ ವಿಕಾಸಗೊಳಿಸುವ ಆಟದ ಸಾಮಾನುಗಳನ್ನು ಒಳಗೊಂಡಿದೆ. ಈ ವರ್ಗದಲ್ಲಿ ಮನೆಯಲ್ಲಿ ಪಾಲಿಸಲ್ಪಡುವ ಪ್ರಾಣಿಗಳನ್ನೂ, ಕಾಡು ಮೃಗಗಳನ್ನೂ ಮತ್ತು ಸಸ್ಯ ಜಾತಿಯನ್ನೂ ಪ್ರತಿನಿಧೀಕರಿಸುವ ಆಟದ ಗೊಂಬೆಗಳಿರುತ್ತವೆ. ಶಿಶು ಪೋಷಣಾಲಯದ ವಯಸ್ಸಿನ ಮಕ್ಕಳು "ನಾಯಿಗಳು" "ಬೆಕ್ಕುಗಳು" ಮತ್ತು "ಕರುಗಳು"—ಇವುಗಳ ವಿಷಯವಾಗಿಯೂ, ಮತ್ತು "ಕುರಿಯ ಮಂದೆ ಮತ್ತು ಕುರುಬ", "ಕೋಳಿ ಗೂಡು ಮತ್ತು ಕೋಳಿ ಸಾಕುವ ಮಹಿಳೆ" ಇತ್ಯಾದಿ ಚಿತ್ರಗಳ ವಿಷಯವಾಗಿಯೂ ಕೂಡ ತುಂಬಾ ಆಸಕ್ತಿಯುಳ್ಳವರಾಗಿರುತ್ತಾರೆ. ಸಣ್ಣ ಕುದುರೆಗಳ ವಿಷಯದಲ್ಲಿ ಮಕ್ಕಳಿಗೆ ವಿಶೇಷ ಆಸಕ್ತಿಯಿರುತ್ತದೆ. "ಪುಟ್ಟ ಕುದುರೆ"ಗೆ ಮೇವನ್ನು ತಿನಿಸಲಾಗುತ್ತದೆ, ಅದು "ಕುದುರೆಯ ಲಾಯಕ್ಕೆ ಒಯ್ಯಲ್ಪಟ್ಟು" ಅದಕ್ಕೆ "ಜೀನು ಹಾಕಲ್ಪಡುತ್ತದೆ ಮತ್ತು ಜೀನು ಕಳಚಲ್ಪಡುತ್ತದೆ ಮತ್ತು ಮಕ್ಕಳಿಗೆ ಕುದುರೆ ಸವಾರಿ ಮಾಡಲು ಮತ್ತು "ಸ್ಪರ್ಧೆಯ ಓಟ"ದಲ್ಲಿ (ರೇಸ್) ಭಾಗವನ್ನು ವಹಿಸಲು ಅಭ್ಯಾಸವಿರುತ್ತದೆ.

ನಾಲ್ಕನೆಯ ಗುಂಪಿನ ಆಟದ ಸಾಮಾನುಗಳು ಮಕ್ಕಳಿಗೆ ಕೆಲಸವನ್ನು ಕಲಿಸಿಕೊಡುವುದರಲ್ಲಿ ಸಹಾಯಕವಾಗುತ್ತವೆ. ಆ ಸಾಮಾನುಗಳು ಯಾವುವೆಂದರೆ ಸಣ್ಣ ಗುದ್ದಲಿಗಳು, ಕೊಳಗ ಪಾತ್ರೆಗಳು, ಮರದ ಸಲಿಕೆಗಳು. ಆಟ ಪಾಠಗಳಿಂದ ಪ್ರತ್ಯಕ್ಷ ಕಾರ್ಯಕ್ಕೆ ಮಕ್ಕಳು ಹೋಗಲು, ಬೇಸಾಯದ ಉಪಕರಣಗಳ ಮತ್ತು ಎಲ್ಲ ಬಗೆಯ ರಚನಾ ಕಾರ್ಯದ ಆಟದ ಸಾಮಾನುಗಳ ಕಟ್ಟುಗಳು (ಸೆಟ್ಸ್) "ಸೇತುವೆ"ಯಂತೆ ಇರುತ್ತವೆ.

ರಶ್ಯದಲ್ಲಿ 'ಪುಟ್ಟ ಮನೆಗಳು" ಎಂಬ ನಿರ್ಮಾಣ ಕಾರ್ಯದ ಆಟದ ಸಾಮಾನುಗಳ ಕಟ್ಟೊಂದಿದೆ. ಹತ್ತು ವರ್ಷಗಳ ಅಥವಾ ಇನ್ನೂ ಹೆಚ್ಚು ವಯಸ್ಸಿನ ಪ್ರತಿಯೊಬ್ಬ ಹುಡುಗನೂ ಬಡಗಿ ಕೆಲಸದ ಮತ್ತು ಇತರ ಉಪಕರಣಗಳ ಕಟ್ಟನ್ನೂ, ಕಾಗದ, ಬಟ್ಟೆ ಅಥವಾ ನಾರಿನಿಂದ (ಫೈಬರ್) ವಸ್ತುಗಳನ್ನು ರೂಪುಗೊಳಿಸುವುದನ್ನು ಕಲಿತುಕೊಳ್ಳಲು ಸಹಾಯಕವಾಗುವಂತಹ ಇತರ ಆಟದ ಸಾಮಾನುಗಳ ಕಟ್ಟುಗಳನ್ನೂ ಪಡೆಯುವ ಕನಸು ಕಾಣುತ್ತಾನೆ.

ಐದನೆಯ ಗುಂಪಿನ ಆಟದ ಸಾಮಾನುಗಳು ಮಕ್ಕಳಿಗೆ ವಿವಿಧ ಕಲಾ ಕೌಶಲ್ಯದ ಶಿಕ್ಷಣವನ್ನು ಸುಗಮಗೊಳಿಸುವ, ಹಾಗೆಂದು ಕರೆಯಲಾದ ಯಾಂತ್ರಿಕ (ಟೆಕ್ನಿಕಲ್) ಆಟದ ಸಾಮಾನುಗಳಾಗಿರುತ್ತವೆ. ಮಕ್ಕಳ ದೃಷ್ಟಿಗೆ ಆಟದ ಸಾಮಾನು ಈ ಬಗೆಯ ಒಂದು ಅಸಾಧಾರಣವಾದ ಆಟದ ಸಾಮಾನು "ಯುವ ವಿದ್ಯುತ್-ಕೆಲಸಗಾರರ ಕಟ್ಟು", "ಟೆಲಿಫೋನ್" (ದೂರವಾಣಿ), 'ಯುವ ಬಾನುಲಿ ಚಾಲಕ,' "ಯುವ ನೇತ್ರ ಯಂತ್ರಕಾರ" ಮತ್ತು ಇತರ ಕಟ್ಟು (ಸೆಟ್ಟು)ಗಳೂ ಮಕ್ಕಳಲ್ಲಿ ತುಂಬಾ ಜನಪ್ರಿಯವಾಗಿವೆ. ವಿಮಾನಗಳು, ಹಾರುವ ಕೊಡೆಗಳು (ಪ್ಯಾರಚೂಟ್ಸ್) ಮುಂತಾದ ವಾಯುಯಾನಕ್ಕೆ ಸಂಬಂಧಿಸಿದ ಆಟದ ಸಾಮಾನುಗಳೂ ಕೂಡ ತುಂಬಾ ವಿಸ್ತೃತವಾಗಿ ಬಳಕೆಯಲ್ಲಿವೆ. ವಾಯುಯಾನದ ಬಗ್ಗೆ ತಮಾಷೆಯಾಗಿರುವ ಆಟದ ಸಾಮಾನುಗಳು — ಅವುಗಳನ್ನು ಜೋಡಿಸಬಹುದು, ಬಿಡಿ ಬಿಡಿ ಮಾಡಬಹುದು — ಬಾಬಾಯೇವ್‌ರವರಿಂದ ರಚಿಸಲ್ಪಟ್ಟಿವೆ. ಫಲಕ ವಿಮಾನದ (ಗ್ಲೈಡರ್) ನಮೂನೆ

(೧೦ನೇ ಪುಟ ನೋಡಿರಿ)

ಹೊಸ ಸುದ್ದಿ

"ಭದ್ರತೆಯ ಬೇಂಕಿಂಗ್ ವ್ಯವಹಾರ"
"ಮೆಚ್ಚುಗೆಯ ಜನರ ಸಹಕಾರ"
"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ
ಒದಗಿಸಿಕೊಡುವ ಸರ್ವವಿದಿತ ಸೇವಾಕಾರ್ಯದ ಸಾಧನೆಗಾಗಿ—
ಇನ್ನೂ ಮೂರು ಹೊಸ ಶಾಖೆಗಳು

ಹೈದರಾಬಾದ್ (ದಕ್ಷಿಣ)
ಗುಲ್ಬರ್ಗ (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು
ಉರವಕೊಂಡ (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)
ಶೀಘ್ರದಲ್ಲೇ ತೆರೆಯಲ್ಪಡುವುವು

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.
The Canara Industrial & Banking Syndicate Ltd.
H. O UDIPI (S. I.)

## ವಿದ್ಯಾರ್ಥಿ ಪ್ರಪಂಚ

### ಶೈಕ್ಷಣಿಕ ಕ್ಷೇತ್ರದಲ್ಲಿ ಚಿಗುರುತ್ತಿರುವ ಬಳ್ಳಿಗಳ ಬುಡಕ್ಕೆ ಬಿಸಿನೀರನ್ನು ಹೊಯ್ಯದಿರುವಷ್ಟು ಸದ್ಬುದ್ಧಿಯನ್ನು ಪರಮಾತ್ಮನು ಪಕ್ಷಗಳ ಪ್ರಭೃತಿಗಳಿಗೆ ಅನುಗ್ರಹಿಸಲಿ!

ಈಚೆಗೆ ಯಾವ ಪತ್ರಿಕೆಯನ್ನು ಬಿಡಿಸಿ ನೋಡಿದರೂ ಅದರಲ್ಲಿ ವಿದ್ಯಾರ್ಥಿಗಳ "ದೂಷಣೆ"ಗಾಗಿ ನಾಲ್ಕಾದರೂ ಮಾತು ಓದಲು ಸಿಗುವುದು. ತೋರಿಕೆಗೆ ಅವು ದೂಷಣೆಯಾದರೂ, ಆ ಮಾತುಗಳನ್ನು ಉಪಯೋಗಿಸುವುದು ವಿದ್ಯಾರ್ಥಿಗಳ ಪೋಷಣೆಗಾಗಿಯೇ ಎಂದು ತುಸು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದರೆ ತಿಳಿದು ಬರುವುದು. ಆಂತಿರುವಾಗ ಆ ಮಾತುಗಳನ್ನು ತಪ್ಪೆಂದು ಹೇಳುವುದು ಸರಿಯಲ್ಲ ನಮ್ಮ ವಿದ್ಯಾರ್ಥಿ ಪ್ರಪಂಚವೇಕಿಂತು ಅಶಾಂತಿಮಯವಾಗಿದೆಯೆಂಬುದೇ ವಿದ್ಯಾರ್ಥಿಯಾದ ನನ್ನಲ್ಲಿ ಹುಟ್ಟಿರುವ ಒಂದು ದೊಡ್ಡ ಸಮಸ್ಯೆ. ಹೀಗೆ ಸಮಸ್ಯೆಯು ನನ್ನಂತಹ ವಿದ್ಯಾರ್ಥಿಯ ತಲೆಯಲ್ಲಿಯೇ ಸುತ್ತುತ್ತಿರುವಾಗ, ದೇಶವನ್ನು ಮುನ್ನಡೆಸುವ ಹೊಣೆ ಹೊತ್ತವರ ತಲೆಯಲ್ಲಿ ಕೂಡಾ ಇದು ಹೆಚ್ಚಿನ ಭಾರವಾದ ಸಮಸ್ಯೆಯನ್ನು ತುಂಬಿಸಿರಬಹುದಲ್ಲವೆ! ಅದಕ್ಕೆ ಪರಿಹಾರ ಹುಡುಕುವುದು ಅವಶ್ಯವೆನಿಸಿರಬಹುದಲ್ಲವೆ?

ನಮ್ಮ ವಿದ್ಯಾರ್ಥಿ ಪ್ರಪಂಚದಲ್ಲಿ ಇಂದು ನಡೆಯುತ್ತಿರುವ ಕ್ರಾಂತಿಮಯ ವಿದ್ಯಮಾನಗಳು ನಿಜವಾಗಿ ದುಃಖವನ್ನುಂಟುಮಾಡುತ್ತಿವೆ. ಶಾಂತಿಯ ವಾತಾವರಣವೆಂದೋ ಮಾಯವಾಗಿ ಅಶಾಂತಿಯ ಬಿರುಗಾಳಿಯೇ ಎದ್ದಂತೆ ಭಾಸವಾಗುತ್ತದೆ. ಒಂದೆಡೆ ಸತ್ಯಾಗ್ರಹವಂತೆ, ಒಂದೆಡೆ ಬಹಿಷ್ಕಾರವಂತೆ. ಒಂದೆಡೆ ಉಪವಾಸವಂತೆ. ಎಲ್ಲಿ ನೋಡಿದರಲ್ಲಿ ವಿದ್ಯಾರ್ಥಿ ಅಧ್ಯಾಪಕರೊಳಗೆ ಘರ್ಷಣೆ. ಭಾರತೀಯ ಸಂಸ್ಕೃತಿದರ್ಶಿಸುತ್ತಿದ್ದ ಹಾಲು ನೀರಿನಂತಿದ್ದ ಗುರುಶಿಷ್ಯ ಸಂಬಂಧವಿಂದು ಎಣ್ಣೆ ಸೀಗೆಯಂತಾಗಿದೆಯೆಂದರೆ ಅದೆಷ್ಟು ಶೋಚನೀಯ ಸಂಗತಿ! ಅದೆಷ್ಟು ಆತ್ಮಗ್ಲಾನಿಯನ್ನುಂಟು ಮಾಡಲಾರದು? ವಿದ್ಯಾರ್ಥಿಗಳು ಇಂದು ಮಾಡುತ್ತಿರುವ ಹೆಚ್ಚಿನ ಕುಟಿಲ ಕಾರ್ಯಗಳಿಗೆ ನಿಜವಾದ ಕಾರಣವಾದರೂ ಇದೆಯೆ? ಸಮಂಜಸವಾದ ಧ್ಯೇಯವಾದರೂ ಇದೆಯೇ? ಸಣ್ಣ ಮಾತಿನಲ್ಲಿ ಹೇಳುವುದಾದರೆ ಗಂಡನ ಕೋಪದಿಂದ ಹೆಂಡತಿ ಮಗುವಿಗೆ ಹೊಡೆಯುವ ರೀತಿಗೂ, ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿ ಮತ್ತು ಹೊರಗೆ ಮಾಡುವ ಅಶಾಂತಿಗೂ ಒಂದೇ ಅರ್ಥ. ರಾಜಕೀಯದಲ್ಲಿ ನಡೆಯುವ ಏನಾದರೂ ಕುಂದುಗಳನ್ನು, ಅದರಲ್ಲಿಯೂ ಆ ಕುಂದುಗಳನ್ನು ಸರಿಯಾಗಿ ತಿಳಿದಲ್ಲಿ, ಕೇವಲ ಹಿರಿಯ ಪುಢಾರಿಗಳ ಮಾತನ್ನು ಕೇಳಿ ಶಾಲೆಗೆ ಬಹಿಷ್ಕಾರ ಹಾಕುತ್ತಿರುವರಲ್ಲಾ! ಇದರಿಂದ ಆಗುವುದೇನು? ನಮ್ಮ ಪ್ರಗತಿಯ ದಾರಿಯಲ್ಲಿ ನಾವೇ ಮುಳ್ಳು ಹಾಕಿ ಕೊಂಡಂತಾಗಲಿಲ್ಲವೇ?

ಮನುಷ್ಯ ಆಯಾಯ ಕಾಲಕ್ಕೆ ಆಯಾಯ ಕರ್ತವ್ಯವನ್ನು ಸಾಂಗವಾಗಿ ಮಾಡಿದರೆ ಮಾತ್ರ ಮುಂದರಿಯಲು ಸಾಧ್ಯವೆಂಬುದನ್ನು ವಿದ್ಯಾರ್ಥಿಗಳು ತಿಳಿದುಕೊಂಡಂತೆ ಕಾಣುವುದಿಲ್ಲ. ಇಂದಿನ ವಿದ್ಯಾರ್ಥಿಗಳಾದ ನಾವೇ ಮುಂದಿನ ಜನಾಂಗವಾಗಲಿದ್ದೇವೆ ಎಂಬುದನ್ನು ಅರಿಯಬೇಕಾಗಿದೆ. ಆ ಮುಂದಿನ, ಪ್ರಗತಿ ಉಚ್ಚ ಮೆಟ್ಟಕ್ಕೇರ ಬೇಕಾದರೆ ಮೊದಲ ಮೆಟ್ಟಲು ಸರಿಯಾಗಿ ಭದ್ರವಾಗಿ ನಿಲ್ಲದಿದ್ದರೆ ಸಾಧ್ಯವಿದೆಯೇ? ಪ್ರಗತಿಯ ಉನ್ನತಿಯ ಸೌಧವನ್ನೇರುವ ಮೊದಲ ಮೆಟ್ಟಿಲೇ ವಿದ್ಯಾರ್ಥಿಗಳ ಪಾಲಿಗೆ ಒಳ್ಳೆಯ ವಿದ್ಯಾಭ್ಯಾಸಂಗವಾಗಿಲ್ಲವೇ? ಅದು ಕುಂಟುತ್ತ, ಕಡವುತ್ತ, ಕೊಳಕಾಗುತ್ತ, ಸಮತಳದಲ್ಲಿ ನಿಲ್ಲದೆ ಅಂಕುಡೊಂಕಾಗುತ್ತ ಹೋದರೆ ಮುಂದೆ ಯಾವ ಪ್ರಗತಿಯನ್ನು ತಾನೇ ವಿದ್ಯಾರ್ಥಿಗಳು ಸಾಧಿಸಿಯಾರು? ಪ್ರಗತಿಯ ವೇಗವನ್ನು ಕುಂಠಿತಗೊಳಿಸುವ ಅಪವಾದಕ್ಕೆ ವಿದ್ಯಾರ್ಥಿಗಳು ಬಾಧ್ಯರಾಗುವುದು ಸಂತೋಷವೇ! ಅದೊಂದು ಕೊಳಕು ಅಪವಾದಾತ್ಮಕ ಸರದಿಯನ್ನು ಮುಸುಕು ಹಾಕಿಕೊಳ್ಳುವುದಕ್ಕೆ ವಿದ್ಯಾರ್ಥಿಗಳಾದವರಿಗೆ ನಾಚಿಕೆಯಾಗಬೇಡವೆ?!

ಇನ್ನು ವಿದ್ಯಾರ್ಥಿ ಸಮಾಜದಲ್ಲಿ ಇಂದು ಹುಟ್ಟಿದ ಅಶಾಂತಿಗೆ ಕೇವಲ ವಿದ್ಯಾರ್ಥಿಗಳೇ ಕಾರಣವೆಂದು ಸಂಪೂರ್ಣ ತಪ್ಪನ್ನು ಹೊರಿಸುವುದು ಕೂಡಾ ಒಂದು ದೊಡ್ಡ ತಪ್ಪಾದೀತು. ವಿದ್ಯಾರ್ಥಿಗಳಲ್ಲಿರುವ ಒಂದು ನಿರ್ಬಲತೆ ಅಂದರೆ ಸ್ವತಃ ಆಲೋಚನಾ ಶಕ್ತಿಯ ಅಭಾವ. ಎಳೆಯ ಹೃದಯಗಳಲ್ಲಿ ಎಷ್ಟು ತಾನೇ ಸ್ವಾವಲಂಬನ ಶಕ್ತಿಯಿದ್ದೀತು? ಅದು ಬೆಳೆದಂತೆ ಬೆಳೆವುದಲ್ಲದೆ ಎಳೆ ತನದಲ್ಲಿ ಕಡಿಮೆಯಿರುತ್ತದೆಯೆಂಬುದು ಎಲ್ಲರಿಗೂ ಗೊತ್ತು. ಆ ಅಬಲತೆಯೇ ಇಂದು ವಿದ್ಯಾರ್ಥಿ ಪ್ರಪಂಚದಲ್ಲಿ ಅಶಾಂತಿಗೆ ಕಾರಣವೆಂದು ಹೇಳಬಹುದಲ್ಲವೆ!

ಸುತ್ತಣ ಸಮಾಜದ ಆಗುಹೋಗುಗಳ ಸಮಸ್ತ ವ್ಯಾಪಾರ ವಿದ್ಯಾರ್ಥಿಗಳ ಎಳೆ ಹೃದಯದಲ್ಲಿ ಪರಿಣಾಮವನ್ನು ಮಾಡುವುವು ಎಂಬುದು ಸಿದ್ಧವಾದುದು. ತಾಯ ಗರ್ಭದಲ್ಲಿರುವಾಗಲೇ ಆ ಗರ್ಭ ಪಿಂಡವು ತಾಯಿಯ ಮುಖಾಂತರ ಸುತ್ತಣ ಆಗುಹೋಗುಗಳ ಪರಿಣಾಮವನ್ನು ತನ್ನ ರಕ್ತಗತ ಮಾಡಿಕೊಳ್ಳುತ್ತದೆಯೆಂದು ಮನೋ ವಿಜ್ಞಾನಿಗಳು ಹೇಳುತ್ತಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿರುವಾಗಲಂತೂ ವಿದ್ಯಾರ್ಥಿಗಳ ಮನಸ್ಸು ಉತ್ಕಟ ಜಿಜ್ಞಾಸುವಾಗಿರುತ್ತದೆ. ಎಲ್ಲವನ್ನೂ ತಿಳಿದುಕೊಳ್ಳುವ ಹಂಬಲವಿರುತ್ತದೆ ಪರಿಣಾಮದ ಕಡೆಗೆ ಮನಸ್ಸು ಹರಿಯದ ಕೇವಲ ಕಾರ್ಯದ ಕಡೆಗೆ ಮಾತ್ರ ತಮ್ಮ ಮನಸ್ಸನ್ನು ಹರಿಸುತ್ತಾರೆ. ವಿದ್ಯಾರ್ಥಿ ಸಮಾಜದ ಮೇಲೆ ಸಮಾಜದ ವ್ಯವಹಾರಗಳ ದೊಡ್ಡ ರೀತಿಯ ಪರಿಣಾಮವನ್ನೆಸಗುತ್ತವೆ ಎನ್ನುವಾಗ ಆ ಸಮಾಜವು ಮುಂದಿನ ಜನಾಂಗವು ಪ್ರಗತಿಗೆ ಬರಬೇಕೆಂಬ ಧ್ಯೇಯವಿಟ್ಟುಕೊಂಡುದು ನಿಜವಾದರೆ ಜಾಗ್ರತೆಯಿಂದ ವರ್ತಿಸಬೇಡವೇ?

ವಿದ್ಯಾರ್ಥಿ ಸಮಾಜದ ಅಶಾಂತಿಗೆ ಒಂದು ಪ್ರಬಲ ಕಾರಣ ದೇಶದ ರಾಜಕೀಯ ಪಕ್ಷಗಳೆಂಬುದನ್ನು ಎಲ್ಲರೂ ಮನಗಾಣಬೇಕಾದ ವಿಷಯ. 'ಅಗ್ನಿಶಿಖೆಯನ್ನು ಆಹಾರವೆಂಬರ್ಥದಿಂದ ಮಿಡಿತೆಗಳು ಮುತ್ತಿ ರೆಕ್ಕೆ ಕಳೆಕೊಳ್ಳುವಂತೆ ಕೆಲ ರಾಜಕೀಯ ಪಕ್ಷಗಳು (ಅವುಗಳ ಪುಢಾರಿಗಳು) ಎಸಗುವ ಮಾಯಾ ಜಾಲಗಳಲ್ಲಿ ವಿದ್ಯಾರ್ಥಿಗಳು ಸಿಕ್ಕಿ ಅಶಾಂತಿಗೆ ಕಾರಣರಾಗಿದ್ದಾರೆಯೆಂಬುದು ನಿದರ್ಶನಪೂರ್ವಕ ಸಿದ್ಧವಿದೆ. ಹೆಚ್ಚಿನ ರಾಜಕೀಯ ಪಕ್ಷಗಳು (ಅದರ ಪುಢಾರಿಗಳು) ದೇಶದ ಪ್ರಗತಿಗಾಗಿ ಹೆಣಗುವವು ಎಂಬ ಸಂಶಯಪೂರ್ಣ ಪ್ರಶ್ನೆ ಕೇಳುವುದಕ್ಕಿಂತ, ಒಂದು ಮತ್ತೊಂದು ಪಕ್ಷವನ್ನು ಕೆಳ ಹಾಕಿ ತಾನು ಮೇಲೇರಿ ಕೇಕೇ ಹಾಕಬೇಕೆಂದೇ ಹೆಣಗುತ್ತಿವೆ ಎಂಬ ನಿಶ್ಚಿತ ಉತ್ತರ ಹೇಳುವುದೇ ಉತ್ತಮ. ಅದು ಸತ್ಯ. ತಾನು ಮೇಲೆ ಬರಬೇಕಿದ್ದರೆ ಮೇಲಿದ್ದವ ಕೆಳಗಿಳಿಯಲೇಬೇಕೆಂಬುದು ನಿಶ್ಚಯ. ಅಂತಿರುವಾಗ ಅದಕ್ಕೆ ಬೇಕಾದ ಜಾಲತಂತ್ರಗಳನ್ನು ರಚಿಸಬೇಕಲ್ಲವೆ? ವಿದ್ಯಾರ್ಥಿಗಳು ಅವುಗಳಲ್ಲಿ ಸಿಕ್ಕಿಬೀಳುವುದು ಬಳು ಬೇ[...] ಪುಢಾರಿ ಪ್ರಪಂಚವು ದೇಶದ ಪ್ರಗ[...]ಯನ್ನು ಆಶಿಸುವುದಾದರೆ ತಮ್ಮ [...] ಮಾಯಾ ಜಾಲಗಳನ್ನು ಗಂಟುಕಟ್ಟಿ ಹೊರಗಿಟ್ಟು ವಿದ್ಯಾರ್ಥಿ ಸಮಾಜದತ್ತ ತಮ್ಮದೇನಾದರೂ ಯೋಗ್ಯ ಬೋಧ[...] ಕೊಡಲಿಚ್ಛಿಸಿರಬೇಕು. ಇದ್ದಿದ್ದರೆ....

ವಿದ್ಯಾರ್ಥಿಗಳನ್ನು ರಾಜಕೀಯಕ್ಕೆ [...]ರೆಯುವುದು ತಪ್ಪಲ್ಲ. ಗಾಂಧಿಯವರು ಸತ್ಯಾಗ್ರಹಕ್ಕೆ ಕರೆಯಲಿಲ್ಲವೆ ಎಂದ[...] ಹೇಳುವವರಿದ್ದಾರೆ. ಗಾಂಧಿಯವರು ಕರೆದ ಸಮಯ ಯಾವುದು? ಬ್ರಿಟಿಷರ[...] ಭಾರತೀಯ ವಿದ್ಯಾರ್ಥಿಗಳಿಗೆ ಪಾಶ್ಚಾತ್ಯ ಸಂಸ್ಕೃತಿಯನ್ನು ದರ್ಶಿಸುತ್ತ ಆ ಕಡೆ ಮನಸೆಳೆದು ಪಾರತಂತ್ರ್ಯದ ಗಾಳಿಯನ್ನೆ ಸೇವಿಸುವಂತೆ ಮಾಡುತ್ತಿದ್ದ ಈ ಸಂ[...]ಕ್ರಾಂತಿ ಕಾಲದಲ್ಲಿ ಸ್ವಾತಂತ್ರ್ಯದ ಗಾಳಿ[...]ಯನ್ನು ಕಂಡು, ಸೇವಿಸಿಕೊಳ್ಳಲಿ ಎಂಬ ಧ್ಯೇಯದಿಂದ ಸತ್ಯಾಗ್ರಹಕ್ಕೆ ಕರೆದು ಭಾರ[...]ತೀಯ ಸಂಸ್ಕೃತಿಯನ್ನು ದರ್ಶನಗೊಳಿಸಿ ಸ್ವಾತಂತ್ರ್ಯ ಭಾವನೆ ಹುಟ್ಟುವಂತೆ ಮಾಡಿದರು. ಅದನ್ನು ನೆನೆಸುವಾಗಲಾದರೂ ಅವರ ಧ್ಯೇಯಕ್ಕೂ ತಮ್ಮ ಧ್ಯೇಯಕ್ಕೂ ಯಾವ ಅಂತರವಿದೆಯೆಂದು ತಿಳಿಯಲಿ. ಅದು ಬೆಳಕಾಗಿದ್ದರೆ ಇದು ಕೊಳಕು.

ಪುಢಾರಿ ಪ್ರಪಂಚ ಮಾತ್ರ ಅಶಾಂತಿಗೆ ಕಾರಣವಲ್ಲ, ರಕ್ಷಕ ಪ್ರಪಂಚವೂ ಕಾರಣವಾಗಿದೆ. ಒಂದನೆ ಕಾರಣ ವಿದ್ಯಾರ್ಥಿಗಳಿಗೆ ಅಧ್ಯಾಪಕರಲ್ಲಿ ಆದರ ಗೌರವವಿಲ್ಲದಿರುವುದು. ಇದಕ್ಕೆ ಕಾರಣರು ರಕ್ಷಕರೆಂದು ಹೇಳಿದಾಗ ವಿಚಿತ್ರ ಕಾಣಬಹುದು. ಕಾಣದ ಕೈಯ ಕೈವಾಡ ಬಹಳ. ಮನೆಯಲ್ಲಿ ವಿದ್ಯಾರ್ಥಿಗಳ ಎದುರಿನಲ್ಲಿ ರಕ್ಷಕರು ಅಧ್ಯಾಪಕರ ಮೇಲೆ ಗೌರವ ತೋರಿಸದೆ ನಿರ್ಲಕ್ಷತೆ ತೋರ[...]

(೧೧ನೇ ಪುಟ ನೋಡಿರಿ)


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.


### ಶಿರ್ವಾ ಪಂಚಾಯತ್ ಬೋರ್ಡು ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 12/56

ಗಾಬ್ರಿಯೆಲ್ ಮಿನೇಜಸ್—ಕ್ರೈತಾನ್ ಸು.ನೇ[...] ಜಸರ ಮಗ ಶಿರ್ವಾ ಗ್ರಾಮದ ಕಂತ್ತ ಮು[...] ಲಿನಲ್ಲಿರುವವ —ವಾದಿ

ಜಗನ್ನಾಥ ಶೆಟ್ಟಿ. ಪೊನ್ನಯ್ಯ ಶೆಟ್ರಿ ಅ[...]ಯ ಶಿರ್ವಾ ಗ್ರಾಮದ ಘಂತಪೆಟ್ಟಿನಲ್ಲಿರುವ[...] —ಪ್ರತಿವಾದಿ

ವಾದಿಗೆ ನೀವು ತಾ 24—9—53ರಲ್ಲಿ ರೊಪ್ಪಾ 40-0-0ಕ್ಕೆ ಬರೆಕೊಟ್ಟ ಡಿ. ಪ್ರೊನೋಟಿನ ಅಸಲು ಬಡ್ಡಿ ಪಮೇತು ರೂ. 47—1—4ನ್ನು, ಪಡೆಮಾಡಿಕೊಳ್ಳುವರೆ ವಾದಿಯು ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುತ್ತಾರೆ. ಅದನ್ನು ತನಿಖೆ ಬಗ್ಗೆ ಇದೇ ಬರುವ ತಾ. 5—11 56ನೇ ದಿನ ಅಪರಾಹ್ನ 3 ಘಂಟೆಗೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿನ ಈ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಆಕ್ಷೇಪವಿದ್ದರೆ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದರೆ ಎಕ್ಸ್ ಪಾರ್ಟಿ ತನ್ನ ನಡಿಸಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಯಪಡಿಸಲಾಗಿಯದೆ.

(Sd) S· Annayya Hegde·
President.

Shirva Panchayat Board Office
Post Shirva. Dated 17—10—56.

## ಆಟದ ಸಾಮಾನುಗಳು

# ಮಕ್ಕಳಿಗೆ ಗೊಂಬೆಗಳ ಮೂಲಕ ಶಿಕ್ಷಣ

### ರಶ್ಯದಲ್ಲಿ ನಡೆಯುತ್ತಿರುವ ಉಪಯುಕ್ತ ಕಾರ್ಯಕ್ರಮ

ರಶಿಯದಲ್ಲಿ ತಯಾರಾದ ಮಕ್ಕಳ ಆಟದ ಸಾಮಾನುಗಳ ಪರಿಚಯವು ಭಾರತೀಯರಿಗೆ ಈಗಾಗಲೇ ಆಗಿರುತ್ತದೆ. ಉದಾಹರಣೆಗೆ ದೆಹಲಿಯಲ್ಲಿಯೂ ಮತ್ತು ಭಾರತ ದೇಶದ ಇತರ ನಗರಗಳಲ್ಲಿಯೂ ಕಳೆದ ವರ್ಷ ನಡೆದ ಪ್ರದರ್ಶನಗಳಲ್ಲಿ ರಶ್ಯದಲ್ಲಿ ತಯಾರಿಸಲಾದ ಗೊಂಬೆಗಳು ಪ್ರದರ್ಶಿಸಲ್ಪಟ್ಟಿದ್ದು ಅವುಗಳಿಗೆ ಅರ್ಹತೆಯಿದ್ದ ವಿಜಯವನ್ನು ಗಳಿಸಿದುವು.

ಆ ಪ್ರದರ್ಶಿತ ವಸ್ತುಗಳು— ಸೋವಿಯತ್ ಒಕ್ಕೂಟದ ಜನತೆಗಳ, ಮಾನವ ಕುಲ ಶಾಸ್ತ್ರಕ್ಕನುಸಾರವಾಗಿಯೂ ಮತ್ತು ಐತಿಹಾಸಿಕ ಪೋಷಾಕುಗಳಿಂದಲೂ ಅಲಂಕೃತವಾದ ಗೊಂಬೆಗಳು— ಸೋವಿಯತ್ ಆಟದ ಸಾಮಾನುಗಳ ವಿಸ್ತೃತ ಪ್ರಪಂಚದಲ್ಲಿ ಕೇವಲ ಒಂದಂಶ ಮಾತ್ರವೇ ಆಗಿವೆ. ೧,೫೦೦ಕ್ಕಿಂತಲೂ ಹೆಚ್ಚು ಎಲ್ಲ ಬಗೆಯ ಆಟದ ಸಾಮಾನುಗಳು ಸೋವಿಯತ್ ಒಕ್ಕೂಟದಲ್ಲಿನ ಔದ್ಯೋಗಿಕ ಉದ್ಯಮಗಳಿಂದಲೂ ಮತ್ತು ಉತ್ಪಾದಕರ ಸಹಕಾರೀ ಸಂಘಗಳಿಂದಲೂ ಈ ದಿನ ಮಾರಾಟಕ್ಕೆ ಇಡಲ್ಪಟ್ಟಿವೆ.

ಆದರೂ ಕೂಡ, ಇದು ಬರಿಯ ಮೊತ್ತದ ವಿಷಯ ಮಾತ್ರವಲ್ಲ. ಪ್ರತಿಯೊಂದು ಬಗೆಯ ಆಟದ ವಸ್ತುವೂ ತನ್ನ ಉದ್ದೇಶವನ್ನು ಸಾಧಿಸುವುದರ ಸಲುವಾಗಿ, ಆವಶ್ಯಕತೆಗಳಿಗೆ ಅನುಕೂಲವಾಗಿರಬೇಕಾದುದು ಮಹತ್ವಪೂರ್ಣವಾದ ವಿಷಯವಾಗಿದೆ. ಪ್ರತಿಯೊಬ್ಬರಿಗೂ ಗೊತ್ತಿರುವಂತೆ, ಆಟದ ವಸ್ತುವು ಕೇವಲ ಒಂದು ತಮಾಷೆಯ ವಸ್ತುವಲ್ಲ. ರಶಿಯನ್ ಲೇಖಕರಾದ ಮ್ಯಾಕ್ಸಿಂ ಗೋರ್ಕಿಯವರು ಈ ರೀತಿ ಬರೆದಿದ್ದಾರೆ: “ಸೋವಿಯತ್ ಒಕ್ಕೂಟದಲ್ಲಿ ಮಕ್ಕಳ ಬೌದ್ಧಿಕ ಮತ್ತು ರಸಾಭಿಜ್ಞತೆಯ ವಿದ್ಯಾಭ್ಯಾಸವು ಚೆನ್ನಾಗಿಯೂ ಮತ್ತು ಸುಲಭವಾಗಿ ಗ್ರಹಿಸಿಕೊಳ್ಳಬಹುದಾದ ರೂಪಗಳಲ್ಲಿಯೂ— ಮಕ್ಕಳು ವಿಶ್ವಜೀವನದ ಮತ್ತು ತಮ್ಮ ದೇಶದ ಬಗ್ಗೆ ಸಾಧ್ಯವಾದಷ್ಟು ಹೆಚ್ಚು ಜ್ಞಾನವನ್ನು ಸಾಧ್ಯವಿದ್ದಷ್ಟು ಕಡಿಮೆ ತಮ್ಮ ಬುದ್ಧಿ ಶಕ್ತಿಯ ಶ್ರಮದಿಂದ ಪಡೆಯುವಂತೆ — ಸಂಘಟಿಸಲ್ಪಡಬೇಕು. ತಮಾಷೆಯಾಗಿರುವ ಮತ್ತು ಸರಳವಾಗಿ ಬರೆಯಲ್ಪಟ್ಟ ಪುಸ್ತಕದಿಂದ ಇದನ್ನು ಸಂಪೂರ್ಣತಃ ಸಾಧಿಸಬಹುದು, ಮತ್ತು ಸ್ವಾರಸ್ಯಕರವಾದ ಆಟದ ಸಾಮಾನಿನ ಮೂಲಕ ಅದು ಇನ್ನು ಹೆಚ್ಚು ಸುಲಭವಾಗಿ ಸಾಧಿಸಲ್ಪಡಲು ಸಾಧ್ಯವಾಗುತ್ತದೆ.”

ಸೋವಿಯತ್ ದೇಶದ ಮಕ್ಕಳು ಕಾರ್ಯತತ್ಪರತೆಯ ಮತ್ತು ರಚನಾತ್ಮಕ ಪ್ರಯತ್ನದ ವಾತಾವರಣದಲ್ಲಿ ಜೀವನವನ್ನು ಸಾಗಿಸುತ್ತಾರೆ. ಬಾಲ್ಯಾರಂಭದಿಂದಲೂ ಅವರ ತಮ್ಮ ದೇಶವು ಔನ್ನತ್ಯವನ್ನು ಪಡೆಯುವಂತೆ ನಿರ್ಮಾಣಕಾರ್ಯ ನಡೆಯುತ್ತಿರುವುದನ್ನೂ, ತಮ್ಮ ದೇಶವು ಬಲಯುತವಾಗಿ ಬೆಳೆಯುತ್ತಿರುವುದನ್ನೂ ಮತ್ತು ಉಚ್ಚ್ರಾಯ ಸ್ಥಿತಿಗೇರುತ್ತಿರುವುದನ್ನೂ ಕಾಣುತ್ತಿರುವುದೇ ಅವರಿಗೆ ರೂಢಿಯಾಗಿದೆ. ಸಹಜವಾಗಿಯೇ, ಪುಟ್ಟ ಸೋವಿಯತ್ ನಾಗರಿಕನು ತಾನು ಎಲ್ಲಾ ಮಹತ್ತರ ಪ್ರಯತ್ನ ಕಾರ್ಯಗಳಲ್ಲಿಯೂ ಭಾಗ ವಹಿಸಲು ಮತ್ತು ಸ್ವತಃ ತನ್ನ ಕೈಗಳಿಂದಲೇ - ಊಹಾ ಪ್ರಪಂಚದಲ್ಲಾದರೂ ಕೂಡ ಕೆಲಸದ ಉಪಕರಣಗಳ ಮೇಲೆಯೂ ಮತ್ತು ಹಿರಿಯರ, ಮರುಳುಗೊಳಿಸುವ ಕಾರ್ಯಾಚರಣೆಗಳಲ್ಲಿ ಕಂಡು ಬರುವ ಅನೇಕ ಕ್ಲಿಷ್ಟಕರವಾದ ವಿಷಯಗಳ ಮೇಲೆಯೂ ತನ್ನ ಶಕ್ತಿಯ ಅನುಭವವನ್ನು ಪಡೆಯಲು ಸಮರ್ಥನಾಗುವ ದಿನದ ಆಗಮನದ ಸಲುವಾಗಿ ಉತ್ಸುಕತೆಯಿಂದ ಎದುರು ನೋಡುತ್ತಿರುತ್ತಾನೆ. ಆದರೂ ಕೂಡ ಈ ಎಳೆಯ ನಾಗರಿಕನು, ತನ್ನ ಸುತ್ತಲೂ ಇರುವ ಜನರು ತೊಡಗಿರುವ ಕೆಲಸ ಕಾರ್ಯಗಳಲ್ಲಿ ನೇರವಾಗಿ ತಾನು ಭಾಗ ವಹಿಸುವುದಕ್ಕೆ ಸಾಕಾಗುವಷ್ಟು ಶಕ್ತಿಯನ್ನೂ, ಬುದ್ಧಿಯನ್ನೂ, ಮತ್ತು ಚಾತುರ್ಯವನ್ನೂ ಕೂಡಿಸಿಕೊಳ್ಳಲು ಇನ್ನೂ ತುಂಬಾ ಸಮಯ ಕಳೆಯಲೇ ಬೇಕಾಗುವುದು.

ಆದುದರಿಂದಲೇ ರಶ್ಯದಲ್ಲಿ ನಿರಂತರವಾಗಿ ಮಕ್ಕಳ ಆಟಗಳನ್ನು ಸಮೃದ್ಧಿಗೊಳಿಸುವ ಮತ್ತು ಅವರಲ್ಲಿ ವಿಚಾರ ಶಕ್ತಿಯನ್ನೂ ಮತ್ತು ಚತುರತೆಯನ್ನೂ ಅಭಿವೃದ್ಧಿಗೊಳಿಸುವ, ಆಟದ ಸಾಮಾನುಗಳ ಉತ್ಪಾದನೆಗೆ ಪ್ರಥಮ ಪ್ರಾಧಾನ್ಯತೆಯನ್ನು ಕೊಡಲಾಗುತ್ತದೆ.

ಜನತೆಯಿಂದ ತಯಾರಿಸಲ್ಪಡಲಾದ ಆಟದ ಸಾಮಾನುಗಳು ರಶ್ಯ ದೇಶದಲ್ಲಿ ಹೆಚ್ಚು ವಿಸ್ತೃತವಾಗಿ ಬಳಸಲ್ಪಡುತ್ತವೆ. ಆ ಆಟದ ಸಾಮಾನುಗಳನ್ನು ಸುಧಾರಿಸುವುದೂ, ಮತ್ತು ಅವುಗಳನ್ನು ಸೋವಿಯತ್ ಒಕ್ಕೂಟದ ಜನತೆಗಳ, ಕ್ರಮಬದ್ಧವಾಗಿ ಅಭಿವೃದ್ಧಿಯಾಗುತ್ತಿರುವ, ಸಮಾಜವಾದೀ ಸಂಸ್ಕೃತಿಯ ಉನ್ನತ ಮಟ್ಟಕ್ಕೆ ತರುವುದೂ ಕರ್ತವ್ಯವೆಂದು ಅಲ್ಲಿ ಭಾವಿಸಲಾಗುತ್ತದೆ.

ವಿಭಿನ್ನ ವಯಸ್ಸುಗಳ ಮಕ್ಕಳಿಗೆ— ಶಿಶು ಪೋಷಣಾಲಯಗಳಲ್ಲಿರುವ ಮಕ್ಕಳು ಮೊದಲುಗೊಂಡು— ಬೇಕಾದ ಆಟದ ಸಾಮಾನುಗಳ ವೈವಿಧ್ಯತೆಯು ತುಂಬಾ ಹೆಚ್ಚಾಗಿದೆ. ಅವು ಅನೇಕ ಗುಂಪುಗಳಾಗಿ ವಿಭಾಗಿಸಲ್ಪಟ್ಟಿವೆ.

ತಮ್ಮ ಕಾರ್ಯಾಚರಣೆಗಳನ್ನು ನಿರ್ದೇಶಿಸಿಕೊಳ್ಳುವುದಕ್ಕಾಗಿ ಮಕ್ಕಳಲ್ಲಿ ಸಾಮರ್ಥ್ಯವನ್ನು ವಿಕಾಸಗೊಳಿಸುವ ಆಟದ ಸಾಮಾನುಗಳು ಮೊದಲನೆಯ ಗುಂಪಿಗೆ ಸೇರಿದವುಗಳಾಗಿವೆ. 'ಪ್ಲಾಸ್ಟಿಕ್' ಉಂಗುರಗಳು, “ರೈತರ ಬೊಂಬೆಗಳು, ಮತ್ತು ಬಾಹುಭುಜಾಕೃತಿಯ (ಪಿರಮಿಡ್) ಆಟದ ಸಾಮಾನುಗಳು— ಇವು ಈ ವರ್ಗಕ್ಕೆ ಸೇರಿವೆ. ಅವುಗಳಲ್ಲಿ ಯಾವುದರಿಂದವಾದರೂ ಒಂದು ಸಣ್ಣ ಚೂರನ್ನಾದರೂ ಕೂಡ ಕಚ್ಚಿ ಹೊರಕಲು ಅಥವಾ ನುಂಗಿಬಿಡಲು ಮಕ್ಕಳಿಗೆ ಸಾಧ್ಯವಾಗದಿರುವಂತೆ ಅವು ತಯಾರಿಸಲ್ಪಟ್ಟಿವೆ.

ಎರಡನೆಯ ತಂಡವು ಮಕ್ಕಳ ಶಾರೀರಿಕ ಶಿಕ್ಷಣಕ್ಕೆ ಸಹಾಯವನ್ನು ನೀಡುವಂತಹ ಆಟದ ಸಾಮಾನುಗಳಿಂದ ಕೂಡಿವೆ. ಮುಖ್ಯತಃ ಅವು ಯಾವುವೆಂದರೆ: ತೂಗುವ ಕುರ್ಚಿಗಳು, ಉಯ್ಯಾಲೆ ಕುರ್ಚಿಗಳು, ಮತ್ತು ಗಾಡಿಗಳು. ಗಟ್ಟಿಯಾದ ಮತ್ತು ಮೃದುವಾದ ಚೆಂಡುಗಳೂ ಸಹ ಈ ವರ್ಗಕ್ಕೆ ಸೇರಿವೆ.

ಮೂರನೆಯ ತಂಡವು ಮಕ್ಕಳಿಗೆ ಅವರ ಸುತ್ತಲೂ ಇರುವ ಪ್ರಪಂಚದ ವಿಷಯವಾಗಿ ತಿಳಿಸುವ, ಅವರ ಜ್ಞಾನವನ್ನೂ ಮತ್ತು ಮಾತುಗಾರಿಕೆಯನ್ನೂ ವಿಕಾಸಗೊಳಿಸುವ ಆಟದ ಸಾಮಾನುಗಳನ್ನು ಒಳಗೊಂಡಿವೆ. ಈ ವರ್ಗದಲ್ಲಿ ಮನೆಯಲ್ಲಿ ಸಾಕಿಸಲ್ಪಡುವ ಪ್ರಾಣಿಗಳನ್ನೂ, ಕಾಡು ಮೃಗಗಳನ್ನೂ ಮತ್ತು ಪಕ್ಷಿ ಜಾತಿಗಳನ್ನೂ ಪ್ರತಿನಿಧೀಕರಿಸುವ ಆಟದ ಗೊಂಬೆಗಳಿರುತ್ತವೆ. ಶಿಶು ಪೋಷಣಾಲಯದ ವಯಸ್ಸಿನ ಮಕ್ಕಳು “ನಾಯಿಗಳು” “ಬೆಕ್ಕುಗಳು” ಮತ್ತು “ಕರುಗಳು”— ಇವುಗಳ ವಿಷಯವಾಗಿಯೂ, ಮತ್ತು “ಕುರಿಯ ಮಂದೆ ಮತ್ತು ಕುರುಬ”, “ಕೋಳಿ ಗೂಡು ಮತ್ತು ಕೋಳಿ ಸಾಕುವ ಮಹಿಳೆ” ಇತ್ಯಾದಿ ಚಿತ್ರಗಳ ವಿಷಯವಾಗಿಯೂ ಕೂಡ ತುಂಬಾ ಆಸಕ್ತಿಯುಳ್ಳವರಾಗಿರುತ್ತಾರೆ. ಸಣ್ಣ ಕುದುರೆಗಳ ವಿಷಯದಲ್ಲಿ ಮಕ್ಕಳಿಗೆ ವಿಶೇಷ ಆಸಕ್ತಿಯಿರುತ್ತದೆ. “ಪುಟ್ಟ ಕುದುರೆ”ಗೆ ಮೇವನ್ನು ತಿನಿಸಲಾಗುತ್ತದೆ, ಅದು “ಕುದುರೆಯ ಲಾಯಕ್ಕೆ ಒಯ್ಯಲ್ಪಟ್ಟು” ಅದಕ್ಕೆ “ಜೀನು ಹಾಕಲ್ಪಡುತ್ತದೆ ಮತ್ತು ಜೀನು ಕಳಚಲ್ಪಡುತ್ತದೆ ಮತ್ತು ಮಕ್ಕಳಿಗೆ ಕುದುರೆ ಸವಾರಿ ಮಾಡಲು ಮತ್ತು “ಸ್ಪರ್ಧೆಯ ಓಟ”ದಲ್ಲಿ (ರೇಸ್) ಭಾಗವನ್ನು ವಹಿಸಲು ಅಭ್ಯಾಸವಿರುತ್ತದೆ.

ನಾಲ್ಕನೆಯ ಗುಂಪಿನ ಆಟದ ಸಾಮಾನುಗಳು ಮಕ್ಕಳಿಗೆ ಕೆಲಸವನ್ನು ಕಲಿಸಿಕೊಡುವುದರಲ್ಲಿ ಸಹಾಯಕವಾಗುತ್ತವೆ. ಆ ಸಾಮಾನುಗಳು ಯಾವುವೆಂದರೆ ಸಣ್ಣ ಗುದ್ದಲಿಗಳು, ಕೊಳಗ ಪಾತ್ರೆಗಳು, ಮರದ ಸಲಿಕೆಗಳು. ಆಟ ಪಾಟಗಳಿಂದ ಪ್ರತ್ಯಕ್ಷ ಕಾರ್ಯಕ್ಕೆ ಮಕ್ಕಳು ಹೋಗಲು, ಬೇಸಾಯದ ಉಪಕರಣಗಳ ಮತ್ತು ಎಲ್ಲ ಬಗೆಯ ರಚನಾ ಕಾರ್ಯದ ಆಟದ ಸಾಮಾನುಗಳ ಕಟ್ಟುಗಳು (ಸೆಟ್ಸ್) “ಸೇತುವೆ”ಯಂತೆ ಇರುತ್ತವೆ.

ರಶ್ಯದಲ್ಲಿ ‘ಪುಟ್ಟ ಮನೆಗಳು” ಎಂಬ ನಿರ್ಮಾಣ ಕಾರ್ಯದ ಆಟದ ಸಾಮಾನುಗಳ ಕಟ್ಟೊಂದಿದೆ. ಹತ್ತು ವರ್ಷಗಳ ಅಥವಾ ಇನ್ನೂ ಹೆಚ್ಚು ವಯಸ್ಸಿನ ಪ್ರತಿಯೊಬ್ಬ ಹುಡುಗನೂ ಬಡಗಿ ಕೆಲಸದ ಮತ್ತು ಇತರ ಉಪಕರಣಗಳ ಕಟ್ಟನ್ನೂ, ಕಾಗದ, ಬಟ್ಟೆ ಅಥವಾ ನಾರಿನಿಂದ (ಫೈಬರ್) ವಸ್ತುಗಳನ್ನು ರೂಪುಗೊಳಿಸುವುದನ್ನು ಕಲಿತುಕೊಳ್ಳಲು ಸಹಾಯಕವಾಗುವಂತಹ ಇತರ ಆಟದ ಸಾಮಾನುಗಳ ಕಟ್ಟುಗಳನ್ನೂ ಪಡೆಯುವ ಕನಸು ಕಾಣುತ್ತಾನೆ.

ಐದನೆಯ ಗುಂಪಿನ ಆಟದ ಸಾಮಾನುಗಳು ಮಕ್ಕಳಿಗೆ ವಿವಿಧ ಕಲಾ ಕೌಶಲ್ಯದ ಶಿಕ್ಷಣವನ್ನು ಸುಗಮಗೊಳಿಸುವ, ಹಾಗೆಂದು ಕರೆಯಲಾದ ಯಾಂತ್ರಿಕ (ಟೆಕ್ನಿಕಲ್) ಆಟದ ಸಾಮಾನುಗಳಾಗಿರುತ್ತವೆ. ಮಕ್ಕಳ ಪ್ರೀತಿಯ ಆಟದ ಸಾಮಾನು ಈ ಬಗೆಯ ಒಂದು ಅಸಾಧಾರಣವಾದ ಆಟದ ಸಾಮಾನು “ಯುವ ವಿದ್ಯುತ್-ಕೆಲಸಗಾರರ ಕಟ್ಟು”, “ಟೆಲಿಫೋನ್” (ದೂರವಾಣಿ), ‘ಯುವ ಬಾನುಲಿ ಚಾಲಕ,’ “ಯುವ ನೇತ್ರ ಯಂತ್ರಕಾರ” ಮತ್ತು ಇತರ ಕಟ್ಟು (ಸೆಟ್ಟು)ಗಳೂ ಮಕ್ಕಳಲ್ಲಿ ತುಂಬಾ ಜನಪ್ರಿಯವಾಗಿವೆ. ವಿಮಾನಗಳು, ಹಾರುವ ಕೊಡೆಗಳು (ಪ್ಯಾರಚೂಟ್ಸ್) ಮುಂತಾದ ವಾಯುಯಾನಕ್ಕೆ ಸಂಬಂಧಿಸಿದ ಆಟದ ಸಾಮಾನುಗಳೂ ಕೂಡ ತುಂಬಾ ವಿಸ್ತೃತವಾಗಿ ಬಳಕೆಯಲ್ಲಿವೆ. ವಾಯುಯಾನದ ಬಗ್ಗೆ ತಮಾಷೆಯಾಗಿರುವ ಆಟದ ಸಾಮಾನುಗಳು— ಅವುಗಳನ್ನು ಜೋಡಿಸಬಹುದು, ಬಿಡಿ ಬಿಡಿ ಮಾಡಬಹುದು— ಬಾಬಾಯೇವ್‌ರವರಿಂದ ರಚಿಸಲ್ಪಟ್ಟಿವೆ. ಫಲಕ ವಿಮಾನದ (ಗ್ಲೈಡರ್) ನಮೂನೆ

(೧೦ನೇ ಪುಟ ನೋಡಿರಿ)

## ಹೊಸ ಸುದ್ದಿ

“ಭದ್ರತೆಯ ಬೇಂಕಿಂಗ್ ವ್ಯವಹಾರ”

“ಮೆಚ್ಚುಗೆಯ ಜನರ ಸಹಕಾರ”

“ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ”

**ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ**

ಒದಗಿಸಿಕೊಡುವ ಸರ್ವವಿವಿತ ಸೇವಾಕಾರ್ಯದ ಸಾಧನೆಗಾಗಿ—

ಇನ್ನೂ ಮೂರು ಹೊಸ ಶಾಖೆಗಳು

**ಹೈದರಾಬಾದ್** (ದಕ್ಷಿಣ)

**ಗುಲ್ಬರ್ಗ** (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು

**ಉರುವಕೊಂಡ** (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)

**ಶೀಘ್ರದಲ್ಲೇ ತೆರೆಯಲ್ಪಡುವುವು**

**ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.**

**The Canara Industrial & Banking Syndicate Ltd.**

H. O UDIPI (S. I.)

## ಅಪಾಯಕಾರಿ ಚಪಲ

### "ಯಾರೋ ಅಂದರು...." ಎಂದಾಗ "ಏನಂತೆ, ಏನಂತೆ?" ಎಂದು ಕೇಳುವ ಸಾವಿರ ನಾಲಿಗೆಗಳಿವೆ!

ಈಚೆಗೆ ಇಂಗ್ಲೆಂಡಿನ ಓಲ್ಡ್ಹಾಮದಲ್ಲಿ ಹುಡುಕಾಟದ ಆಟದ ನಡುವೆ ಸ್ವಲ್ಪ ಹಣವನ್ನು ನೆಲದಲ್ಲಿ ಚೆಲ್ಲಲಾಯಿತು. ಆಟದ ಕೊನೆಗೆ ಎಣಿಸಿ ನೋಡುವಾಗ ಎರಡು ಶಿಲ್ಲಿಂಗುಗಳ ನಾಣ್ಯವೊಂದು ಕಾಣೆಯಾಗಿರುವುದಾಗಿ ತಿಳಿದುಬಂತು. ಆಗ ಆಟದಲ್ಲಿ ಭಾಗವಹಿಸಿದವರಲ್ಲಿ ಒಬ್ಬಳಾದ ೬೨ ವರ್ಷ ವಯಸ್ಸಿನ ಮುದುಕಿ ಶ್ರೀಮತಿ ಎಥೆಲ್ ಫ್ಲಿಂಟ್ ಇದನ್ನು ಕದ್ದಿರಬೇಕೆಂದು ಉಳಿದವರೆಲ್ಲ ಆರೋಪಿಸಿದರು!

ಮುಂದೆ ಸ್ವಲ್ಪ ಹೊತ್ತಿನ ಬಳಿಕ ಆ ನಾಣ್ಯವು ಅಲ್ಲೇ ಎಲ್ಲೋ ದೊರೆಯಿತು. ಆದರೆ ಮಾಡುವ ಅನಾಹುತವನ್ನು ಮಾಡಿಯಾಗಿತ್ತು; ಮತ್ತು ಶ್ರೀಮತಿ ಫ್ಲಿಂಟಳ ವಿಷಯದಲ್ಲಿ ಪಿಸುಮಾತಿನ ಮೂಲಕ ಗುಲ್ಲೆಬ್ಬಿಸುವವರು ಅವ್ಯಾಹತ ಅಪಪ್ರಚಾರವನ್ನು ಮುಂದೆ ಸಹ ಮಾಡುತ್ತಲೇ ಹೋದರು. ಪರಿಣಾಮವಾಗಿ, ಮುಂದೆ ಕೆಲವೇ ದಿನಗಳಲ್ಲಿ ಶ್ರೀಮತಿ ಫ್ಲಿಂಟಳನ್ನು ಅವಳ ಅಡಿಗೆಮನೆಯಲ್ಲಿ ಶವರೂಪದಲ್ಲಿ ಕಾಣುವ ಕೆಟ್ಟ ಸಂಗತಿ ಸಂಭವಿಸಿತು!

ಶ್ರೀಮತಿ ಫ್ಲಿಂಟಳಿಗೆ ತನ್ನ ಮೇಲೆ ಮಿಥ್ಯಾರೋಪವನ್ನು ಮಾಡಿ ನಡತೆಯ ವಿಷಯದಲ್ಲಿ ಅಲ್ಲಸಲ್ಲದ ಅಪಪ್ರಚಾರವನ್ನು ಪಿಸುಮಾತಿನ ಹರಟೆಗಾರರು ನಡೆಸಿದ್ದರಿಂದಲೇ ತುಂಬ ಜುಗುಪ್ಸೆಯಾಯಿತೆಂದೂ ಜೀವದ ಮೇಲೆಯೇ ಆಕೆಗೆ ಬೇಸರ ಬಂದು ಹೀಗೆ ಆತ್ಮಹತ್ಯೆ ಮಾಡಿಕೊಂಡಳೆಂದೂ ತಿಳಿದ ಬಳಿಕ ಮಹನೀಯರೊಬ್ಬರು ತುಂಬ ವಿಷಾದದಿಂದ ಹೀಗೆಂದರು—

"ಅಪಪ್ರಚಾರದಿಂದ ಕೂಡಿದ ಪಿಸುಮಾತಿನ ಹರಟೆಯು ಏನು ದುಷ್ಪರಿಣಾಮವನ್ನು ಮಾಡಬಲ್ಲುದೆಂಬುದಕ್ಕೆ ಇದೊಂದು ಯೋಗ್ಯ ನಿದರ್ಶನ. ಸುಳ್ಳು ಸುಳ್ಳು ಆರೋಪಗಳನ್ನು ಸಹಿಸಲಾರದೆ ಅವಳು ಪ್ರಾಣವನ್ನು ಕಳೆದುಕೊಂಡಳು. ಇದಕ್ಕೆ ಜವಾಬ್ದಾರರಾದ ಹರಟೆಮಲ್ಲರು ತಮ್ಮ ದುರ್ನಡತೆಗಾಗಿ ನಿಜಕ್ಕೂ ನಾಚಿಕೊಳ್ಳುವರೆಂದು ನಾನು ನಂಬಿದ್ದೇನೆ."

ಹರಟೆ, ಪಿಸುಮಾತು, ಅಪಪ್ರಚಾರ ಇತ್ಯಾದಿಗಳು ಎಷ್ಟು ಅಪಾಯಕಾರಿ ಆಯುಧಗಳಾಗಿವೆ ಎಂಬುದನ್ನು ಇದರಿಂದ ಮನಗಾಣಬಹುದು. ಎಷ್ಟೋ ವೇಳೆ, ಯಾರಾದರೊಬ್ಬರ ವಿಷಯದಲ್ಲಿ ಉದ್ದೇಶಪೂರ್ವಕವಲ್ಲ, ಮಾತಿಗಾಗಿ ಅಥವಾ ಆಕಸ್ಮಾತ್ತಾಗಿ ಆಡಿದ ಒಂದಾನೊಂದು ಮಾತನ್ನೆ ಹರಟೆಮಲ್ಲರು ಗಟ್ಟಿಯಾಗಿ ಹಿಡಿದುಕೊಂಡು ತಮ್ಮ ನಾಲಿಗೆಯ ಮೇಲೆ ಅದನ್ನೆ ಕುಣಿದಾಡಿಸುತ್ತಾ ಆ ಮಾತನ್ನು ಆಡಿದ ಸಂದರ್ಭ, ಆಡಿದಾತನ ಮನಸ್ಸಿನಲ್ಲಿದ್ದ ಮುಖ್ಯ ವಿಷಯ, ಆತನ ಉದ್ದೇಶ ಎಲ್ಲವನ್ನೂ ಕಡೆಗಣಿಸಿ, ತಮ್ಮದೇ ಉಪ್ಪು, ಹುಳಿ, ಖಾರ ಸಾಮಗ್ರಿಗಳನ್ನು ಬೆರೆಸಿ ಕಟ್ಟುಕತೆಗಳ ಮೂಲಕ ಪ್ರಸಂಗವನ್ನು ಸ್ವಾರಸ್ಯವಾಗಿ ಮಾಡಿ ಹರಟೆ ಕೊಚ್ಚಲು ಈ ಮಾತಿನ ಮಲ್ಲರು ಮುಂದಾಗುತ್ತಾರೆ.

ಹರಟೆ ಮಲ್ಲರು ಇದ್ದುದನ್ನು ಇದ್ದಂತೆ ಹೇಳುವ ಹವ್ಯಾಸವನ್ನು ಹೊಂದಿಯೇ ಇಲ್ಲ; ಇದ್ದುದನ್ನು ಇದ್ದಂತೆ ಹೇಳಿದರೆ ಹರಟೆ ಮಲ್ಲರಾಗುವುದೆಂತು? ಆ ಹರಟೆಯಲ್ಲಿ ಸ್ವಾರಸ್ಯವಿರುವುದಾದರೂ ಏನು? ಅತಿಶಯೋಕ್ತಿ, ಸ್ವಕಪೋಲಕಲ್ಪಿತ ಕಲ್ಪನೆ, ಸತ್ಯಕ್ಕೆ ತೀರ ವಿಪರ್ಯಾಸವಾಗಿದ್ದರೂ ಚಿಂತಿಲ್ಲ, ಕುತೂಹಲವನ್ನು ಕೆರಳಿಸಲು ಶಕ್ತವಾದ ವಾಗ್ಬಾಣಗಳು ಇವೇ ಅವರ ಆಯುಧ. ಇವುಗಳ ಕೈಯಲ್ಲಿ ಸಿಕ್ಕಿದ ಜನರು ಮರ್ಯಾದೆಗಾಗಿ ಬಾಳುವುದೇ ಕಷ್ಟ. ಏಕೆಂದರೆ, ಹರಟೆ ಮಲ್ಲರು ಏನು ಹೇಳುತ್ತಾರೋ ಅವುಗಳನ್ನು ನಂಬಿ ಕುಳಿತಿರುವ ಮಿತ್ರವೃಂದವೂ ನೆರೆಕರೆಯವರೂ ಲೆಕ್ಕವಿಲ್ಲದಷ್ಟು.

ಅಮೇರಿಕದ ನ್ಯೂ ಓರ್ಲಿಯೆನ್ಸಿನಲ್ಲಿ ಈಚೆಗೊಂದು ಘಟನೆ ಸಂಭವಿಸಿತು. ದುಷ್ಟ ಹೇತುವಿನಿಂದ ಕೂಡಿದ ಹರಟೆಗೆ ಇದೊಂದು ನಿದರ್ಶನವಾಗಿದೆ. ಮೂರು ಮಕ್ಕಳಿರುವ ವಿವಾಹಿತ ಮಹಿಳೆಯೊಬ್ಬಳ ವಿಷಯದಲ್ಲಿ ಒಂದು ಸುಳ್ಳು ಸುದ್ದಿ ಹಬ್ಬಿತು. ಆಕೆಗೆ ಅವಿವಾಹಿತ ಪುರುಷನೋರ್ವನೊಡನೆ ಅನೈತಿಕ ಸಂಬಂಧವಿದೆ ಎಂಬುದೇ ಈ ಸುಳ್ಳು ಗುಲ್ಲು!

ಹರಟೆಗಾರರ ಎಡೆಬಿಡದ ವಾಗ್ಬಾಣಗಳ ಪರಿಣಾಮವಾಗಿ ಈ ಸುಳ್ಳು ಸುದ್ದಿಯು ಮಹಿಳೆಯ ಗಂಡನ ಕಿವಿಗೆ ಬಿದ್ದಿತು. ಅಷ್ಟರ ವರೆಗೆ ತನ್ನ ಹೆಂಡತಿಯನ್ನು ವಿಶ್ವಾಸದಿಂದ ಕಾಣುತ್ತಿದ್ದ ಆ ಗಂಡನಿಗೆ ಮುಂದೆ ಅವಳ ನಡತೆಯ ಬಗ್ಗೆ ತೀವ್ರ ಸಂಶಯ ಉಂಟಾಯಿತು. ಕೆಲವು ದಿನಗಳ ವರೆಗೆ ಅವ್ಯಾಹತವಾಗಿ ಅಪಪ್ರಚಾರ ಮುಂದರಿಯುತ್ತಲೇ ಹೋದುದರಿಂದ, ಆ ಗಂಡನು ಕೊನೆಗೊಮ್ಮೆ ಹೆಂಡತಿಗೆ ಪ್ರಶ್ನೆ ಹಾಕಿಯೇ ಬಿಟ್ಟನು. ಹೆಂಡತಿ ನಿರಾಕರಿಸಿದಳು; ಆದರೇನು? ಗಂಡನ ಮನಸ್ಸು ಕೆಟ್ಟು ಹೋಗಿತ್ತಾದ ಕಾರಣ ಆತನು ಈ ನಿರಾಕರಣೆಯನ್ನು ನಂಬಲಿಲ್ಲ. ಇಷ್ಟು ಜನರು ತನ್ನ ಹೆಂಡತಿಯ ನಡತೆಯ ಬಗ್ಗೆ ಆರೋಪಿಸುತ್ತಾರೆಂದ ಮೇಲೆ, ಅವಳ ನಿರಾಕರಣೆಯನ್ನು ನಂಬುವುದೆಂತು? ಎಂಬುದೇ ಅವನ ವಾದ. ಗಾಳಿಯಿಲ್ಲದೆ ಎಲೆ ಅಲುಗೀತೇ?

ಗಂಡನ ಮನೋವೇದನೆಯನ್ನು ಏನೆಂದು ಹೇಳುವುದು! ಆತನ ವಿವೇಕ ಕೊನೆಗೊಮ್ಮೆ ಕೈ ಕೊಟ್ಟಿತು: ಆತನು ತಲೆ ಕೆಟ್ಟವನಾಗಿ, ತನ್ನ ಹೆಂಡತಿಯನ್ನೂ ಮೂರೂ ಮಂದಿ ಮಕ್ಕಳನ್ನೂ ಗುಂಡಿಕ್ಕಿ ಕೊಂದನು!

ಸತ್ಯಕ್ಕೆ ಒಪ್ಪಿಕೊಳ್ಳದ ಟೀಕೆಯು, ಅದು ಸಹ ವ್ಯಕ್ತಿಯೊಬ್ಬನ ನಡತೆಯ ವಿಷಯಕ್ಕೆ ಸಂಬಂಧಿಸಿರುವಾಗ, ಎಷ್ಟು ಮಾತ್ರಕ್ಕೂ ಹಿತವಾದುದಲ್ಲ. ಇಂಗ್ಲೆಂಡಿನ ನೋರ್ಲ ಫೀಲ್ಡ್ ಹಳ್ಳಿಯಲ್ಲಿರುವ ತನ್ನ ತಾರುಣ್ಯ ಭರಿತ, ಆದರೆ ಅವಿವಾಹಿತೆಯಾದ, ಮಗಳೊಂದಿಗೆ ವಾಸಿಸಲು ತಾಯಿಯೊಬ್ಬಳು ಬಂದಳು. ಈ ತಾಯಿಯು ವಿಧವೆಯಾಗಿದ್ದಳು. ಗಂಡನ ಮರಣಕಾಲದಲ್ಲಿ ತಾನು ಗರ್ಭಿಣಿಯಾಗಿದ್ದು ಮುಂದೆ ಹೆತ್ತ ಎಳೆ ಮಗುವನ್ನು ಸಹ ಆ ವಿಧವೆ ತಂದಿದ್ದಳು. ತನ್ನ ಪುಟ್ಟ ತಮ್ಮನನ್ನು ನೋಡಿ ತಾರುಣ್ಯದಲ್ಲಿ ಓಲಾಡುತ್ತಿದ್ದ ಆ ಅವಿವಾಹಿತ ಹುಡುಗಿಗೆ ತುಂಬ ಆನಂದ.

ಆದರೆ ಹರಟೆ ಮಲ್ಲರು ಸುಮ್ಮನಿರಬೇಕಲ್ಲ? ಅವರು ಈ ಸಂತೋಷದ ಕ್ಷೀರ ಸಾಗರದಲ್ಲಿ ಹುಳಿ ಹಿಂಡಲು ಹಿಂಜರಿಯಲಿಲ್ಲ. ಆ ಪುಟ್ಟ ಮಗುವು ತರುಣಿಯೂ ಅವಿವಾಹಿತೆಯೂ ಆದ ಮಗಳಿಗೆ ಹುಟ್ಟಿದ್ದೆಂದೂ ವಿಧವೆ ತಾಯಿಯದಲ್ಲವೆಂದೂ ಅವರು ಸುದ್ದಿ ಹಬ್ಬಿಸಿದರು. ಎರಡು ಹೆಣ ಬಿದ್ದ ತರುವಾಯವೇ ಊರವರಿಗೆ ಸತ್ಯ ವಿಷಯ ಗೊತ್ತಾಯಿತು. ವಿಧವೆಗೆ ಲಂಡನಿನಲ್ಲಿ ಮನೆ ಇತ್ತು, ನಿಜ. ಆದರೆ ಗಂಡನು ಮೋಟಾರು ಅಪಘಾತವೊಂದರಲ್ಲಿ ಮರಣಗೊಂಡುದರಿಂದ ಬೇಸರಗೊಂಡು ತನ್ನ ಮನಸ್ಸಿಗೆ ಶಾಂತಿಯನ್ನರಸಿ ಅವಳು ಮಗಳಿದ್ದಲ್ಲಿಗೆ ಬಂದಿದ್ದಳು. ಆದರೆ, ತನ್ನ ಮಗಳ ಬಗ್ಗೆ ಇಂಥ ಜನಾಪವಾದವನ್ನು ಅವಳು ಕೇಳಬೇಕಾಗಿ ಬಂತು. ಅದಕ್ಕಾಗಿ ಅವಳು ದೊಡ್ಡ ಮಗಳನ್ನೂ ತನ್ನ ಚಿಕ್ಕ ಮಗುವನ್ನೂ ಕೊಂದೇ ಹಾಕಿದಳು.

ಹರಟೆಯ ಬಾಯಿಗೆ ತುತ್ತಾದ ಜನರಿಗೆ ಯಾವುದೇ ರಕ್ಷಣೆ ಸಿಗುತ್ತಿಲ್ಲವೆನ್ನುವುದು ಬಹಳ ಶೋಚನೀಯವಾದ ವಿಷಯ. ಬೇರೆಯವರ ಜೀವನಕ್ಕೂ ಜೀವಕ್ಕೂ ತುಂಬ ಅಪಾಯವನ್ನುಂಟು ಮಾಡುವ ಕೆಟ್ಟ ನಾಲಿಗೆ ಮತ್ತು ಬುದ್ಧಿಯ ಹರಟೆ ಮಲ್ಲರಿಗೆ ಯಾವ ಬಗೆಯ ಶಿಕ್ಷೆಯೂ ವಿಧಿಸಲ್ಪಡುತ್ತಿಲ್ಲ; ಶಿಕ್ಷೆ ವಿಧಿಸಬೇಕೆಂದರೂ ಸುಲಭಸಾಧ್ಯವೆನಿಸುತ್ತಿಲ್ಲ. ಮಕ್ಕಳನ್ನು ಸಹ ಶಾಂತವಾಗಿ ದಿನಗಳೆಯಲು ಈ ಹರಟೆ ಮಲ್ಲರು ಬಿಡುತ್ತಿಲ್ಲವೆನ್ನುವುದಕ್ಕೆ ಇಂಗ್ಲೆಂಡಿನ ಮಿಡ್ ಲ್ಯಾಂಡ್ಸ್ ಪ್ರಕರಣವೊಂದನ್ನು ಸಾಕ್ಷಿಯಾಗಿ ಕೊಡಬಹುದು.

ಶಾಲೆಗೊಬ್ಬ ಚಿಕ್ಕ ಹುಡುಗನು ಕಲಿಯಲೆಂದು ಬಂದನು. ಆಗ ಆತನ ಕಿವಿಗೆ ಹರಟೆಗಾರರೆಲ್ಲ ಒಟ್ಟು ಸೇರಿ ಅವನ ತಂದೆಯು ದೊಡ್ಡ ಕಿಲಾಡಿ ಎಂಬ ಮಾತು ಬೀಳುವಂತೆ ಮಾಡಿದರು. ಇದು ಸುಳ್ಳು ವಿಷಯವಾಗಿರಲಿಲ್ಲ. ಆದರೆ ಆ ಚಿಕ್ಕ ಹುಡುಗನ ತಾಯಿಯು ಮಗನ ಕಿವಿಗೆ ಈ ಘೋರ ಸತ್ಯ ಬೀ... ದಂತೆ ಎಚ್ಚರಿಕೆಯನ್ನು ವಹಿಸಿದ್ದಳು. ಮಗನು ಕಿಲಾಡಿಯಾಗಬಾರದೆಂಬ ಮನೋಭಾವ ಅವಳದು; ಮಗನ ಮನಸ್ಸು ತಂದೆಯ ದುರ್ನಡತೆಯ ಸುದ್ದಿ ಕೇ... ನೋಯಬಾರದೆಂಬ ಮುಂಜಾಗ್ರತೆ ಅ... ಳದು. ಆದರೆ ಹರಟೆ ಮಲ್ಲರು ತಮ... ಕಾರ್ಯವನ್ನು ನಡೆಸಿಯೇ ನಡೆಸಿದರು. ಇದರಿಂದ ಬುದ್ಧಿಗೆಟ್ಟವನಾಗಿ ಆ ಚಿ... ಹುಡುಗನು ಶಾಲೆಯಲ್ಲಿ ಶಿಕ್ಷಣ ಹೊಂದುವ ಬದಲು, ಕಿಲಾಡಿಯಂತೆಯೇ ವರ್ತಿ... ತೊಡಗಿದನು. ಕೊನೆಗೊಮ್ಮೆ ಆತ... ಬಾಲಕರ ಸೆರೆಮನೆಯನ್ನು ಸೇರಬೇಕಾಯಿತು. ಅಲ್ಲಿ ಆತನಿಗೆ ಏನೇ ಶಿಕ್ಷಣ ಮತ್ತು ತರಬೇತಿ ದೊರಕಲಿ, ಮುಂದಿ... ಆತನ ಜೀವನದ ಮೇಲೆ ಹರಟೆಗಾರರು ಪ್ರಯೋಗಿಸಿದ ಅಸ್ತ್ರದ ದುಷ್ಪರಿಣಾಮ ಪ್ರಭಾವವನ್ನು ಬಿಟ್ಟೇ ಬೀರುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಮನೋವಿಜ್ಞಾನಿಗಳು ಈ ... ಹರಟೆಗಳು ಮನುಷ್ಯ ಜೀವನ... ಆವಶ್ಯಕ ಅಂಗವೆಂದು ಹೇಳುತ್ತಾರೆ. ಇದರಲ್ಲಿ ಹೆಂಗಸರಿಗೆ ಮಾತ್ರವಲ್ಲ, ಗಂಡಸರಿಗೂ ತೀವ್ರಾಸಕ್ತಿ ಇದೆ ಎಂಬವರು ತ... ಡುಕೊಂಡಿದ್ದಾರೆ. ತಮ್ಮ ವಿಷಯದ ಜನರು ಮೆಚ್ಚಿಕೆಯನ್ನು ವ್ಯಕ್ತಪಡಿಸಬೇಕು ಎಂಬಾಶೆಯುಳ್ಳ, ಆದರೆ ಯಾವ ... ಳ್ಳೆಯ ಕೆಲಸದಿಂದಲೂ ಜನರ ಮೆಚ್ಚಿಕೆಯನ್ನು ಗಳಿಸಿಕೊಳ್ಳುವ ಯೋಗ್ಯತೆ ಇಲ್ಲದಿರುವ, ಮಂದಿಯೇ ಹರಟೆ ಮಲ್ಲರಾಗಿ ಪರಿಣಮಿಸುತ್ತಾರೆ ಎಂದೂ ಮನೋವಿಜ್ಞಾನಿಗಳ ಅಭಿಮತ. ಹರಟೆಯನ್ನು ಸುಳ್ಳು ಕಲ್ಪನೆಗಳ ಮೂಲಕ ಸ್ವಾರಸ್ಯವಾಗಿ ಮಾಡಿದರೆ, ಕೇಳುವವರ ಕಿವಿಗಳು ನಿಮಿರಿ ನಿಲ್ಲುತ್ತವೆ; ಮತ್ತು ಏನಂತೆ ಏನಂತೆ? ಎನ್ನುವ ಸಾವಿರ ನಾಲಿಗೆಗಳ ಸಭೆಯ ನಡುವೆ ಈ ಹರಟೆ ಮಲ್ಲನು ಮೆರೆದಾಡುತ್ತಾ ರಾಕ್ಷಸ ತೃಪ್ತಿಯನ್ನು ಹೊಂದುತ್ತಾನೆ, ತನಗೂ ಪ್ರಭಾವಿ ವ್ಯಕ್ತಿತ್ವವಿದೆ ಎಂಬ ದುಷ್ಟ ಸಮಾಧಾನದಿಂದ!

ಯಾರಾದರೊಬ್ಬರ ಗಮನವನ್ನು ತಮ್ಮೆಡೆಗೆ ಸೆಳೆಯುವುದಕ್ಕಾಗಿಯೇ ಹರಟೆಯನ್ನು ಆಶ್ರಯಿಸಲಾಗುತ್ತದೆ. ತಮ್ಮನ್ನು ಸದಾಕಾಲ ಎಲ್ಲರೂ ನೋಡುತ್ತಿರಬೇಕೆಂಬುದಕ್ಕಾಗಿಯೇ ಎ... ಬಗೆಯ ಸುಳ್ಳು ಸುದ್ದಿಗಳನ್ನು ಅವರು ಎಬ್ಬಿಸುತ್ತಾರೆ; ಮತ್ತು ಹರಟೆಯ ... ಹಾ ಚಕ್ರವು ಅವಿರತವಾಗಿ ತಿರುಗುತ್ತಿರುವಂತೆ ನೋಡುತ್ತಾರೆ. ಇಂಗ್ಲೆಂಡಿನಲ್ಲೂ ಯೂರೋಪಿನಲ್ಲೂ ಕೆಲವು ಶ... ಮಾನಗಳ ಹಿಂದೆ ಈ ಹರಟೆ ಮಲ್ಲ... ಕಾಯಕವನ್ನು ನಿಲ್ಲಿಸಲು ಒಂದು ಉಪಾಯವನ್ನು ಮಾಡಿದ್ದರು. ತಮ್ಮ ಮುಖ... ಮೇಲೊಂದು ಬಗೆಯ ಹೊದಿಕೆಯನ್ನು ಅವರು ತೊಡಬೇಕಾಗಿತ್ತು— ಈ ಹೊದಿಕೆಯು ನಾಲಿಗೆಯನ್ನಾಡಿಸುವುದೇ ... ಧ್ಯವಿಲ್ಲದಂತೆ ಮಾಡುತ್ತಿತ್ತು! ಆದರೆ ನಾವೀಗ ಹಿಂದಿಗಿಂತ ತುಂಬ ನಾಗರಿಕರಾಗಿದ್ದೇವೆ! ಆದರೆ ನಾಗರಿಕತೆ ಮುಂದರಿದರೂ ವೈಜ್ಞಾನಿಕ ಸಂಶೋಧನೆ ಹೆಚ್ಚಿದರೂ ಕೆಟ್ಟ ಹರಟೆಯನ್ನು ನಿಲ್ಲಿಸಲು ಯಾವ ಉಪಾಯವನ್ನೂ ಕಂಡು ಹಿಡಿದಿಲ್ಲವೆನ್ನುವುದು ದೊಡ್ಡ ವಿಚಿತ್ರ!

—ಹಿಂದುವಿನ ಆಧಾರ.


## TENDER NOTICE.

Sealed tenders are invited by the undersigned from the registered contractors up to 4 P. M. on 27—10—56 for the works shown below. Tenderers can peruse the conditions and estimate in the office of the undersigned.

| Name of work. | Amt. of Estimate. | Earnest money deposit. |
| --- | --- | --- |
| 1) Constructing a market shed | Rs. 1300/- | Rs. 40/- |
| 2) Constructing 2 shop buildings | Rs. 2850/- | Rs. 75/- |

N. B. Wood work not included.

Perdoor
Date 18—10—56.

K. B. Shetty,
Executive Officer,
SRI ANANTHAPADMANABHA TEMPLE, PERDUR.

# ದಕ್ಷಿಣ ಧ್ರುವ

## ಇಷ್ಟರ ವರೆಗೆ ಅಜ್ಞಾತವಾಗಿದ್ದ ಹಿಮರಾಶಿಯ ಮೇಲೆ ಎಲ್ಲರ ಕಣ್ಣು ಈಗ ಬಿದ್ದಿದೆ— ಅದೇಕೆ?

ಭಾರತ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಅಧಿವೇಶನವು ಬರುವ ತಿಂಗಳಲ್ಲಿ ಸೇರುವಾಗ, "ದಕ್ಷಿಣ ಧ್ರುವ ಪ್ರದೇಶವನ್ನು ಸಂಪೂರ್ಣವಾಗಿ ಶಾಂತಿಯುತ ಉದ್ದೇಶಗಳಿಗಾಗಿ ಮತ್ತು ಜಾಗತಿಕ ಕ್ಷೇಮಕ್ಕಾಗಿ" ಬಳಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯನ್ನು ಮಂಡಿಸುವುದಾಗಿ ಮೊನ್ನೆ ೧೬ನೇ ದಿನಾಂಕ ಸ್ಪಷ್ಟಪಡಿಸಿದೆ.

ಈ ಗೊತ್ತುವಳಿಗೆ ಚಿಲಿ ಮತ್ತು ಅರ್ಜೆಂಟೀನಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಿವೆ. ಅವುಗಳಿಗೆ ದಕ್ಷಿಣ ಅಮೇರಿಕದ ಎಲ್ಲ ರಾಷ್ಟ್ರಗಳ ಬೆಂಬಲವಿದೆ ಎನ್ನಲಾಗುತ್ತದೆ. ಅರುವತ್ತು ಲಕ್ಷ ಚದರ ಮೈಲುಗಳಷ್ಟು ವಿಸ್ತಾರವಾಗಿರುವ ಮತ್ತು ಯೂರೋಪನ್ನೂ ಆಸ್ಟ್ರೇಲಿಯವನ್ನೂ ಒಟ್ಟಿಗೆ ಸೇರಿಸಿದರೆ ಆಗುವಷ್ಟು ಭೂಪ್ರದೇಶವನ್ನು ಹೊಂದಿರುವ ದಕ್ಷಿಣ ಧ್ರುವದ ನೆಲದ ಒಡೆತನಕ್ಕಾಗಿ ನಡೆಯುತ್ತಿರುವ ಹೋರಾಟದ ನಗ್ನ ಪ್ರದರ್ಶನವಾಗಿ ಈ ವಿರೋಧವನ್ನು ವರ್ಣಿಸಬಹುದು.

ದಕ್ಷಿಣಧ್ರುವ ಪ್ರದೇಶದ ಬಗ್ಗೆ ಯಾರಿಗೂ ಹೆಚ್ಚಿಗೆ ತಿಳಿದಿಲ್ಲ. ಆದರೆ ಈಚಿಯ ವರ್ಷಗಳಲ್ಲಿ ಈ ಪ್ರದೇಶದ ಪ್ರಾಮುಖ್ಯತೆಯು ಮಾತ್ರ ದಿನೇ ದಿನೇ ಹೆಚ್ಚುತ್ತಿದೆ. ಬೇರೆ ಬೇರೆ ರಾಷ್ಟ್ರಗಳು ತಮ್ಮ ಒಡೆತನವನ್ನು ದಕ್ಷಿಣಧ್ರುವ ಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಪ್ರಸ್ಥಾಪಿಸಲು ಹೆಣಗಾಡುತ್ತಿವೆ. ಆದುದರಿಂದ ಭಾರತವು ಗೊತ್ತುವಳಿಯೊಂದರ ಮೂಲಕ ದಕ್ಷಿಣ ಧ್ರುವ ಪ್ರದೇಶದ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಸಂಘದಲ್ಲಿ ಎತ್ತಲಿದೆ ಎಂದು ತಿಳಿದ ಬಳಿಕ, ಬೇರೆ ಬೇರೆ ರಾಷ್ಟ್ರಗಳು ಕಹಿಗುಳಿಗೆಯನ್ನು ತಿನ್ನಬೇಕಾಗಿ ಬಂದಂತೆ ವ್ಯಗ್ರವಾಗಿವೆ.

ಸದ್ಯಕ್ಕೆ ದಕ್ಷಿಣ ಧ್ರುವ ಪ್ರದೇಶದಲ್ಲಿ ವಿಶೇಷ ಆಸ್ಥೆಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಬ್ರಿಟನ್, ರಶ್ಯ, ನಾರ್ವೆ, ಸ್ವೀಡನ್, ಜಪಾನ್, ದಕ್ಷಿಣ ಆಫ್ರಿಕ ಆಸ್ಟ್ರೇಲಿಯ, ಫ್ರಾನ್ಸ್, ಅಮೇರಿಕ, ಚಿಲಿ ಮತ್ತು ಅರ್ಜೆಂಟೀನಗಳು ಮುಖ್ಯವಾದುದಾಗಿವೆ. ಚಿಲಿ ಮತ್ತು ಅರ್ಜೆಂಟೀನಗಳು ಪಾಶ್ಚಾತ್ಯ ರಾಷ್ಟ್ರಗಳಿಗಿಂತಲೂ ಹೆಚ್ಚಿನ ಆಸಕ್ತಿಯನ್ನು ದಕ್ಷಿಣ ಧ್ರುವ ಪ್ರದೇಶದಲ್ಲಿ ಹೊಂದಿರುತ್ತವೆ. ಉದಾಹರಣೆಗೆ, ದಕ್ಷಿಣ ಧ್ರುವ ಪ್ರದೇಶಕ್ಕೆ ಅನತಿದೂರದಲ್ಲಿರುವ ಫಾಕ್‌ಲ್ಯಾಂಡ್ ದ್ವೀಪ ಸಮುದಾಯದ ಮೇಲೆ ಸಹ ತಮ್ಮ ಅಧಿಕಾರವಿದೆ ಎನ್ನುವ ಚಿಲಿ ಮತ್ತು ಅರ್ಜೆಂಟೀನ ದೇಶಗಳ ವಾದವನ್ನು ಬ್ರಿಟನು ಇದಿರಿಸಬೇಕಾಗಿದೆ!

ಚಿಲಿ ಮತ್ತು ಅರ್ಜೆಂಟೀನಗಳು ತಮ್ಮ ದೇಶದ ದಕ್ಷಿಣಕ್ಕಿರುವ ಎಲ್ಲ ಭೂಪ್ರದೇಶವೂ ತಮ್ಮ ಅಧಿಕಾರಕ್ಕೆ ಸೇರಿದುದಾಗಿದೆ ಎಂಬ ವಾದವನ್ನು ಮುಂದಿಟ್ಟಿವೆ. ಭೌಗೋಳಿಕ ನೆಲೆಯಿಂದ ಮಾತ್ರವೇ ಅಲ್ಲ, ಸ್ಪೈನ್ ಮತ್ತು ಪೋರ್ಚುಗಲ್ ದೇಶಗಳ ಉತ್ತರಾಧಿಕಾರಿಗಳು ತಾವೆಂಬ ನೈತಿಕ ಪ್ರಶ್ನೆಯನ್ನು ಮಂಡಿಸಿ ಸಹ ಅವು ದಕ್ಷಿಣ ಧ್ರುವ ಪ್ರದೇಶದ ಮೇಲೆ ತಮ್ಮ ಅಧಿಕಾರವನ್ನು ಹೇರಲು ನೋಡುತ್ತಿವೆ.

ಬ್ರಿಟನಿಗೆ ದಕ್ಷಿಣ ಧ್ರುವ ಪ್ರದೇಶದ ಪಶ್ಚಿಮ ಭಾಗದಲ್ಲಿ ಶಾಶ್ವತವಾದ ಹತ್ತು ಠಾಣ್ಯಗಳಿವೆ. ಅಲ್ಲಿಗೊಬ್ಬ ನ್ಯಾಯಾಧಿಪತಿ ಇರುವನಲ್ಲದೆ ಕೆಲವು ದಳಗಳೂ ಇವೆ. ಈ ಠಾಣ್ಯಗಳಿಗೆ ಒತ್ತಿನಲ್ಲಿ —ಕೆಲವೇ ನೂರು ಗಜಗಳ ಅಂತರದಲ್ಲಿ—ಚಿಲಿ ಮತ್ತು ಅರ್ಜಂಟೀನಗಳ ಠಾಣ್ಯಗಳಿವೆ. ಇವೆರಡೂ ದೇಶಗಳು ಬ್ರಿಟನಿನ ಹಕ್ಕನ್ನು ಮನ್ನಿಸಲು ಇನ್ನೂ ಸಿದ್ಧವಿಲ್ಲ.

ಅಮೇರಿಕವು ೧೯೪೮ರಲ್ಲಿ ಈ ಪ್ರದೇಶದ ಮೇಲೆ ಎಲ್ಲರ ಸಾಮೂಹಿಕ ಪ್ರಭುತ್ವದ ಸೂಚನೆಯೊಂದನ್ನು ಮುಂದಿಟ್ಟಿತೆಂದೂ ಆದರೆ ಯಾವ ರಾಷ್ಟ್ರವೂ ತನ್ನ ಅಧಿಕಾರವನ್ನು ಚಲಾಯಿಸದೆ ಇರಲು ಒಪ್ಪಲಿಲ್ಲವೆಂದೂ ತಿಳಿದುಬಂದಿದೆ. ಭಾರತವೀಗ ಮಾಡುತ್ತಿರುವ ಪ್ರಯತ್ನದಿಂದ ದಕ್ಷಿಣ ಅಮೇರಿಕದ ಎಲ್ಲ ರಾಷ್ಟ್ರಗಳೂ ಸಾಮಾನ್ಯತಃ—ಮತ್ತು ಚಿಲಿ ಹಾಗು ಅರ್ಜೆಂಟೀನಗಳು ಮುಖ್ಯತಃ—ಕ್ರುದ್ಧವಾಗಿವೆ; ಮತ್ತು ಭಾರತವು ಬ್ರಿಟನಿನ ಪಕ್ಷ ವಹಿಸಿ ಈ ಗೊತ್ತುವಳಿಯನ್ನು ತರುತ್ತಿದೆ ಎಂದು ಆರೋಪಿಸಿವೆ.

ಭಾರತಕ್ಕೆ ದಕ್ಷಿಣ ಧ್ರುವ ಪ್ರದೇಶವು ಬಹಳ ದೂರವಾಗಿದೆ; ಈ ಭೂಮಿಯಲ್ಲಿ ನಮಗೇನೂ ವಿಶೇಷ ಆಸಕ್ತಿ ಇರಲು ಕಾರಣವಿಲ್ಲ ಎಂದು ತೋರಿದರೂ ಜಾಗತಿಕ ದೃಷ್ಟಿಯಿಂದ ವಿಚಾರಿಸುವಾಗ ದಕ್ಷಿಣ ಧ್ರುವ ಪ್ರದೇಶದ ಮಹತ್ವವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಶಾಂತಿ ಕಾಲದಲ್ಲಾಗಲೀ ಯುದ್ಧ ಸಮಯದಲ್ಲಾಗಲೀ ದಕ್ಷಿಣ ಧ್ರುವ ಪ್ರದೇಶವು ಇನ್ನು ಮುಂದೆ ವಿಶೇಷವಾದ ಪಾತ್ರವನ್ನು ಜಾಗತಿಕ ರಾಜಕಾರಣದಲ್ಲಿ ಮತ್ತು ಜನಜೀವನದಲ್ಲಿ ವಹಿಸುವುದೆಂದು ಈಗಾಗಲೇ ಜನಜನಿತವಾಗಿದೆ.

ಬ್ರಿಟನಿನ ವೈಜ್ಞಾನಿಕ ಸಂಘದ ಅಧ್ಯಕ್ಷರಾದ ಸೆರ್ ರೇಮಂಡ್ ಪ್ರೀಸ್ಟ್ಲೀಯವರು ಈಚೆಗೆ ಮಾಡಿದೊಂದು ಭಾಷಣದಲ್ಲಿ ದಕ್ಷಿಣ ಧ್ರುವ ಪ್ರದೇಶದ ಮೇಲೆ ಎಲ್ಲರೂ ಏಕಾಗಿ ಕಣ್ಣಿಡುತ್ತಿದ್ದಾರೆಂದು ಸ್ಪಷ್ಟಪಡಿಸಿದ್ದಾರೆ. ಭಾರತವು ಸಂಯುಕ್ತ ರಾಷ್ಟ್ರ ಸಂಘಕ್ಕೆ ಒಪ್ಪಿಸಿದ ಮನವಿಯಲ್ಲೂ ಈ ಪ್ರದೇಶದ ಮಹತ್ವವನ್ನು ವರ್ಣಿಸಲಾಗಿದೆ. ಇವುಗಳನ್ನು ತಿಳಿದುಕೊಂಡರೆ ಈಗಿನ ಮೇಲಾಟವು ಎಷ್ಟು ಅರ್ಥಪೂರ್ಣವಾಗಿದೆ ಎಂದು ಮನವರಿಕೆಯಾದೀತು.

ನಾಳೆ ಎಲ್ಲಿಯಾದರೂ ಅಣ್ವಸ್ತ್ರಗಳ ಪ್ರಯೋಗ ನಡೆಯುವ ಮಹಾ ಯುದ್ಧವು ಸಿಡಿದರೆ, ಸುಯೇಜ್ ಮತ್ತು ಪನಾಮ ಎಂಬ ಎರಡೂ ಕಾಲುವೆ ಪ್ರದೇಶಗಳು ನಿರ್ನಾಮವಾಗುವುದು ಖಂಡಿತ. ಆದುದರಿಂದ ಅಂತಾರಾಷ್ಟ್ರೀಯ ಸಮುದ್ರ ವ್ಯಾಪಾರವೆಲ್ಲ ಕೇಪ್ ಆಫ್ ಗುಡ್ ಹೋಪ್ ಮತ್ತು ಕೇಪ್ ಹೋರ್ನ್ ಮೂಲಕವೇ ನಡೆಯಬೇಕಾಗುತ್ತದೆ. ಇದನ್ನು ಊಹಿಸಿದರೆ ಸಾಕು—ದಕ್ಷಿಣ ಧ್ರುವ ಪ್ರದೇಶದಲ್ಲಿ ವಾಯು ವಿಮಾನಗಳ ಠಾಣ್ಯವನ್ನು ಮತ್ತು ಜಲಾಂತರ್ಗಾಮಿ ಚಟುವಟಿಕೆಗಳ ಕೇಂದ್ರವನ್ನು ನೆಲೆಗೊಳಿಸಿ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ತಮ್ಮ ಖ್ಯಾತಿಯನ್ನು ಕಾಯ್ದುಕೊಳ್ಳುವ ತವಕಕ್ಕೆ ಮಹಾ ರಾಷ್ಟ್ರಗಳು ಬಲಿಬಿದ್ದಿವೆ ಎನ್ನುವುದು ವೇದ್ಯವಾಗುತ್ತದೆ.

ಅಮೇರಿಕವು ಈಗಾಗಲೇ ದಕ್ಷಿಣ ಧ್ರುವ ಪ್ರದೇಶದಲ್ಲಿ ಯುದ್ಧ ಕಾಲದಷ್ಟು ರಭಸದಿಂದ ನಾನಾ ಬಗೆಯ ಪ್ರಯೋಗಗಳನ್ನು ನಡೆಸಿದೆ. ಇದೇ ೧೬ನೇ ದಿನಾಂಕದಷ್ಟು ಈಚೆಗೆ ಅಮೇರಿಕದ ಸ್ಕೈ ಮಾಸ್ಟರ್ ವಿಮಾನವೊಂದು ೨೨೦೦ ಮೈಲು ದೂರದಲ್ಲಿರುವ ನ್ಯೂಜೀಲೆಂಡಿನ ವೆಲ್ಲಿಂಗ್‌ಟನ್ ನಗರದಿಂದ ಹೊರಟು ಮೆಕ್‌ಮುರ್ಡೋ ಸೌಂಡ್ ಎಂಬ ದಕ್ಷಿಣ ಧ್ರುವ ಪ್ರದೇಶದ ಹಿಮಾವೃತ ಭೂಭಾಗದಲ್ಲಿರುವ ಕಡಿದಾದ ವಿಮಾನ ಮಾರ್ಗದಲ್ಲಿ ಇಳಿಯುವ ಪ್ರಯೋಗದಲ್ಲಿ ನಿರತವಾಯಿತು. ೩೦೦ ಜನರನ್ನು ಅವರಿಗೆ ಬೇಕಾಗುವ ಆಹಾರ ಸಾಮಗ್ರಿ ಮತ್ತಿತರ ಸಲಕರಣೆಗಳನ್ನೂ ಇಳಿಸಲು ಅಮೇರಿಕ ಈಗ ಪ್ರಯತ್ನಶೀಲವಾಗಿದೆ. ಇದು ಯಶಸ್ವಿಯಾದರೆ ೧೯೧೧ನೇ ಇಸವಿಯಲ್ಲಿ ಕೇಪ್ಟನ್ ಸ್ಕಾಟ್ ಈ ಭೂಮಿಯನ್ನು ಬಿಟ್ಟ ಬಳಿಕ ದಕ್ಷಿಣ ಧ್ರುವ ಪ್ರದೇಶದಷ್ಟು ಇಷ್ಟು ದೂರ ಒಳಹೊಕ್ಕು ನೆಲೆನಿಲ್ಲುವ ಜನರಲ್ಲಿ ಇವರೇ ಮೊದಲಿಗರಾಗುತ್ತಾರೆ ಎನ್ನಬಹುದು.

೧೯೫೭-೫೮ ಇಸವಿಯಲ್ಲಿ ಆಚರಿಸಲ್ಪಡುವ ಅಂತಾರಾಷ್ಟ್ರೀಯ ಭೂವಿಜ್ಞಾನ ವರ್ಷದ ಅಂಗವಾಗಿ ಈ ಸಾಹಸ ನಡೆದಿದೆ. ಆದರೆ, ಇದಲ್ಲದೆ, ಹೇಗೆಯೋ ಅಮೇರಿಕದ ಸೈನ್ಯಾಧಿಕಾರಿಗಳು ಸಾವಿರಾರು ಯೋಧರೊಡನೆಯೂ ಭಾರೀ ಹಡಗಗಳೊಡನೆಯೂ ದಕ್ಷಿಣ ಧ್ರುವ ಪ್ರದೇಶದ ಕಡೆಗೆ ಪದೇ ಪದೇ ಪ್ರಯಾಣಿಸುತ್ತಿದ್ದಾರೆ. ಈಗಿನ ಶೀತ ಯುದ್ಧದ ಬದಲು ಬಿಸಿಯಾದ ಯುದ್ಧವೆಲ್ಲಿಯಾದರೂ ಸ್ಫೋಟನಗೊಂಡರೆ ಆಗ ಅಮೇರಿಕದ ಯೋಧರಿಗೆ ಶೀತ ಪ್ರದೇಶದಲ್ಲಿ ಮತ್ತು ಚಳಿಗಾಲದಲ್ಲಿ ಯುದ್ಧ ಮಾಡುವ ಕಲೆಯನ್ನು ಕಲಿಸಲಿಕ್ಕಾಗಿ ಈ ಪ್ರಯಾಣವನ್ನು ಕೈಗೊಳ್ಳಲಾಗುತ್ತಿದೆ ಎಂದು ತಜ್ಞರು ಪ್ರಕಟಪಡಿಸಿದ್ದಾರೆ.

ಕೆರ್‌ಗ್ಯೂಲಿನ್ ಎಂಬ ದಕ್ಷಿಣ ಧ್ರುವ ಖಂಡದ ಭೂಭಾಗವೊಂದರಲ್ಲಿ ಫ್ರೆಂಚರು ಅಚ್ಚುಕಟ್ಟಾದ ವೈಜ್ಞಾನಿಕ ಕೇಂದ್ರವೊಂದನ್ನು ಕಟ್ಟಿದ್ದಾರೆ. ಅಲ್ಲದೆ ೩೦೦೦ ಮೀಟರುಗಳಷ್ಟು ದೀರ್ಘವಾದ ವಿಮಾನವಿಳಿಯುವ ದಾರಿಯನ್ನು ಏರ್ಪಡಿಸಿಕೊಂಡಿದ್ದಾರೆ. ಆದುದರಿಂದ ಅಂತಾರಾಷ್ಟ್ರೀಯ ಹದ್ದಾರಿಯವರೆಗೆ ದಕ್ಷಿಣ ಧ್ರುವ ಪ್ರದೇಶದ ವಿಶಾಲ ಭೂಖಂಡವು ಸ್ಪರ್ಧೆಗಳ ತವರೂರಾಗಿ ಪರಿಣಮಿಸಿದೆ.

ಇದನ್ನು ಬಿಟ್ಟರೆ, ಪ್ರಾಕೃತಿಕ ಸಂಪತ್ತಿನ ದೃಷ್ಟಿಯಿಂದಲೂ ಈ ಪ್ರದೇಶವು ಅಮೂಲ್ಯವಾದುದಾಗಿದೆ. ಅಲ್ಲಿಯ ತಿಮಿಂಗಿಲಗಳ ಮೇಲೆ ಮಾಂಸಾಹಾರವೇ ಪ್ರಧಾನವಾಗಿರುವ ರಾಷ್ಟ್ರಗಳ ಕಣ್ಣು ಬಿದ್ದಿದೆ. ೧೯೫೪—೫೫ರಲ್ಲಿ ಸುಮಾರು ೩೭೬೫೦ ತಿಮಿಂಗಿಲಗಳನ್ನು ದಕ್ಷಿಣ ಧ್ರುವ ಪ್ರದೇಶದ ಆಸುಪಾಸಿನಲ್ಲಿ ಹಿಡಿಯಲಾಯಿತು; ಇದರಿಂದ ೭೭೨೦೦೦ ಟನ್ನುಗಳಷ್ಟು ಎಣ್ಣೆ ತೆಗೆದುದಲ್ಲದೆ ೪೦೦೦೦ ಟನ್ನುಗಳಷ್ಟು ಮಾಂಸವನ್ನು ತಯಾರಿಸಲಾಯಿತು. ತಿಮಿಂಗಿಲದ ಎಣ್ಣೆಯನ್ನು ಸಾಬೂನಿನ ತಯಾರಿಕೆಯಲ್ಲೂ ದೀಪವನ್ನು ಉರಿಸಲಿಕ್ಕೂ ಉಕ್ಕನ್ನು ಹದಗೊಳಿಸಲಿಕ್ಕೂ ಚರ್ಮವನ್ನು ನಯಮಾಡಲಿಕ್ಕೂ ಘರ್ಷಣೆಯನ್ನು ನಿವಾರಿಸುವುದಕ್ಕೂ ಉಪಯೋಗಿಸಲಾಗುತ್ತದೆ. ಮಾಂಸವೋ— ಜಪಾನೊಂದರಲ್ಲಿಯೇ ೩೦೦೦೦ ಟನ್ನು ತಿಮಿಂಗಿಲ ಮಾಂಸವನ್ನು ಗಣಿಗಳ ಕೂಲಿಕಾರರು ಆಹಾರವಾಗಿ ೧೯೫೪ರಲ್ಲಿ ಉಪಯೋಗಿಸಿದರು!

ದಕ್ಷಿಣ ಧ್ರುವ ಪ್ರದೇಶದ ದಟ್ಟವಾದ ಹಿಮರಾಶಿಯ ಅಡಿಯಲ್ಲಿರುವ ನೀರಿನಲ್ಲಿ ತಿಮಿಂಗಿಲಗಳ ಸಂಗ್ರಹವು ವಿಪುಲವಾಗಿದೆ. ಇದನ್ನು ಕೊಳ್ಳೆ ಹೊಡೆದರೆ ಅದೇ ದೊಡ್ಡ ಸಂಪತ್ತು. ಇದಲ್ಲದೆ ಅತ್ಯಮೂಲ್ಯವಾದ ಖನಿಜ ಸಂಪತ್ತು ಸಹ ದಕ್ಷಿಣ ಧ್ರುವ ಪ್ರದೇಶದಲ್ಲಿ ಧಾರಾಳವಾಗಿದೆ. ಸಮುದ್ರ ಮಟ್ಟದಿಂದ ೬೦೦೦ದಿಂದ ೧೦ ಸಾವಿರ ಅಡಿ ಎತ್ತರವಿರುವ ಭೂಭಾಗದಲ್ಲಿ ಖನಿಜ ಸಂಪತ್ತುಗಳ ನಿಧಿಯೇ ಇದೆ ಎಂದು ವಿಜ್ಞಾನಿಗಳ ಖಚಿತ ಅಭಿಪ್ರಾಯ. ದವಸ ಧಾನ್ಯಗಳನ್ನು ಜೋಪಾನವಾಗಿಡುವುದಕ್ಕೂ ದಕ್ಷಿಣ ಧ್ರುವ ಪ್ರದೇಶವನ್ನು ಉಪಯೋಗಿಸಬಹುದೆಂಬ ಕಲ್ಪನೆ ಈಚೆಗೆ ಬಂದಿದೆ. ಶೀತಕಾರಿ ಉಗ್ರಾಣವಾಗಿ ದಕ್ಷಿಣ ಧ್ರುವ ಪ್ರದೇಶದ ಹಿಮಕವಿದ ಭೂಭಾಗವನ್ನು ಉಪಯೋಗಿಸಬಹುದೆಂದೂ ಇದರಿಂದ ಯುದ್ಧ ಕ್ಷಾಮ ಇತ್ಯಾದಿಗಳ ದೆಸೆಯಿಂದ ಆಹಾರ ಧಾನ್ಯಗಳ ಮತ್ತು ಮಾಂಸಾದಿಗಳ ಕೊರತೆಯಾದೀತೆಂಬ ಭಯ ತಪ್ಪಬಹುದೆಂದೂ ಈ ಸಲಹೆಯಿಂದ ತಿಳಿದು ಬರುತ್ತದೆ.

ಅತಿ ಶೀತಲವಾದ ಹವಾಮಾನವು ದಕ್ಷಿಣಧ್ರುವ ಪ್ರದೇಶದಲ್ಲಿರುವುದರಿಂದ ಅಲ್ಲಿ ಮನುಷ್ಯನು ತನ್ನ ಕೈವಾಡವನ್ನು ತೋರಿಸಬಹುದೇ? ಎಂಬ ಸಂಶಯವನ್ನು ವಿಜ್ಞಾನಿಗಳು ನಿವಾರಿಸಿದ್ದಾರೆ. ಈಗ ಅಣುಯುಗವು ಕಾಲಿರಿಸಿದೆಯೆಂದು ವಿಜ್ಞಾನಿಗಳು ಸ್ಮರಣೆಗೆ

(೭ನೇ ಪುಟ ನೋಡಿರಿ)

**Mahatma Gandhi Memorial College,**

UDIPI.

* * *

Wanted immediately a Demonstrator in Physics. Qualifications: B. Sc I or II Class in Physics. Salary: Rs. 85-5-150 and D. A. at government rates. Apply immediately.

PRINCIPAL.

**NAVAYUGA**

Popular Kannada Weekly

*Founder:—*

**A. B. SHETTY,** *M.L.A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೫-೧೦-'೫೬ | ೮ |

## ಶ್ರೀ ನಿಜಲಿಂಗಪ್ಪನವರ ಆಯ್ಕೆ

ಹೊಸ ಮೈಸೂರಿನ ಮುಖ್ಯ ಮಂತ್ರಿ ಸ್ಥಾನಕ್ಕೆ ತೀವ್ರ ಸ್ಪರ್ಧೆ ಇರಬಹುದೆಂದು ಸಾಮಾನ್ಯವಾಗಿ ಜನರೆಲ್ಲರೂ ಅಭಿಪ್ರಾಯವನ್ನು ಹೊಂದಿದ್ದರು. ನಿಜ ಹೇಳುವುದಾದರೆ, ಮುಂದೆ ಏನೇ ಆಗಲಿ, ೨೧ನೇ ದಿನಾಂಕದ ಪ್ರಾತಃಕಾಲದ ವರೆಗೆ ಸ್ಪರ್ಧೆ ಇದೆ ಎನ್ನುವ ವಿಷಯವೇ ತೋರಿ ಬರುತ್ತಿತ್ತಲ್ಲದೆ ಸರ್ವಾನುಮತದ ಆಯ್ಕೆಯ ಸಂಗತಿಯಲ್ಲ. ಆದರೆ, ಈ ಸಲ ಕಾಂಗ್ರೆಸಿನ ವರಿಷ್ಠರು ಸ್ಪರ್ಧೆ ಇರುವಲ್ಲೆಲ್ಲ ಅನುಸರಿಸಬೇಕೆಂದು ರೂಪಿಸಿದ್ದ ಹೊಸ ತಂತ್ರದ ವಿವರಣೆಯನ್ನು ಕೇಳಿಕೊಂಡ ಬಳಿಕವೇ ಇರಬೇಕು— ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟು ಮುಖಕ್ಕೆ ತಾವೇ ಮಸಿ ಬಳಿಸುಕೊಳ್ಳಲು ಹೋಗುವುದಕ್ಕಿಂತ ಮರ್ಯಾದೆಯಾಗಿ ಎಲ್ಲವನ್ನೂ ಮುಂದರಿಸಿಕೊಂಡು ಹೋಗುವುದು ಒಳಿತೆಂಬ ವಿವೇಕ ಮೂಡಿ ಬಂತೆಂದು ಕಾಣುತ್ತದೆ. ನಿಶ್ಚಿತ ಸಮಯವಾದ ೧೧ ಘಂಟೆಗೆ ಸುಮಾರು ಅರ್ಧ ತಾಸಿನಷ್ಟು ಮೊದಲು ಸರ್ವಾನುಮತದ ಆಯ್ಕೆ ನಡೆಯುವುದೆಂಬ ವಿಷಯ ಎಲ್ಲರ ಬಾಯಲ್ಲೂ ಹರಡಿತು. ಯುದ್ಧೋತ್ಸಾಹದಿಂದೆಂಬಂತೆ ಉದ್ರಿಕ್ತವಾಗಿದ್ದ ವಾತಾವರಣದಲ್ಲಿ ಹೀಗೆ ಸ್ವಲ್ಪ ಮಟ್ಟಿನ ಶಾಂತತೆ ಕಂಡುಬಂತು. ಪರಿಣಾಮದಲ್ಲಿ ಮೈಸೂರಿನ ಈಗಿನ ಮುಖ್ಯ ಮಂತ್ರಿಗಳಾದ ಶ್ರೀ ಕಡಿದಾಳ ಮಂಜಪ್ಪನವರೇ ಶ್ರೀ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಹೆಸರನ್ನು ಹೊಸ ರಾಜ್ಯದ ಮುಖ್ಯ ಮಂತ್ರಿ ಸ್ಥಾನಕ್ಕೆ ಸೂಚಿಸಿದರು. ಶ್ರೀ ನಿಜಲಿಂಗಪ್ಪನವರದಲ್ಲದೆ ಬೇರೆ ಹೆಸರು ಸೂಚಿಸಲ್ಪಡದ ದೆಸೆಯಿಂದ "ಸರ್ವಾನುಮತದ" ಆಯ್ಕೆ ಆಯಿತೆಂದು ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ನಾಯರರು ಘೋಷಿಸಿದರು. ಹೊರತೋರಿಕೆಗೆ ಇವೆಲ್ಲವೂ ಚಂದ! ಆದರೆ ಒಳಗಿಂದೊಳಗೆ ಭುಗಿಲ್ಲೆಂದಿರಬಹುದಾದ ಜ್ವಾಲಾಮುಖಿಯು ಕಾಂಗ್ರೆಸು ಸಂಸ್ಥೆಗೆ ಅಪಾಯವನ್ನು ಮಾಡದಿರಬಹುದೆ? ಶ್ರೀ ಮಂಜಪ್ಪನವರು ತನ್ನ ಸ್ವಾಗತ ಭಾಷಣದಲ್ಲಿ "ನಾನು ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ಧಿಸಬೇಕೆಂದು ನನ್ನ ಹಲವು ಸ್ನೇಹಿತರು ಆಸೆಯನ್ನು ವ್ಯಕ್ತಪಡಿಸಿದ್ದಾರೆ; ಆದರೆ ಸರ್ವಾನುಮತದ ಆಯ್ಕೆ ನಡೆಯಬೇಕೆಂಬುದಕ್ಕಾಗಿ ನಾನು ಸ್ಪರ್ಧೆಗೆ ನಿಲ್ಲಬಾರದೆಂದು ನಿರ್ಧರಿಸಿದ್ದೇನೆ. ಇದರಿಂದ ನನ್ನ ಆ ಮಿತ್ರವೃಂದಕ್ಕೆ ಸ್ವಲ್ಪ ಮಟ್ಟಿಗೆ ಅಸಮಾಧಾನವುಂಟಾಗಿದೆ ಎಂಬುದು ನನಗೆ ಗೊತ್ತು" ಎಂದು ಹೇಳಿರುವ ಮಾತನ್ನು ಉಪೇಕ್ಷಿಸಬಾರದು. ಈ ಮಾತಿನ ಅರ್ಥವೇನು? ಸ್ಪರ್ಧೆಯಲ್ಲಿ ಗೆದ್ದು ಬರುವ ಆಶೆ ಇರುತ್ತಿದ್ದರೆ, ಶ್ರೀ ಮಂಜಪ್ಪನವರ ಹುರಿಯಾಳತನಕ್ಕೆಯೇ ಸರ್ವಾನುಮತದ ಬೆಂಬಲ ಸಿಗಬೇಕಾಗಿತ್ತಲ್ಲವೆ? ಹಾಗಾದರೆ, ಶ್ರೀ ನಿಜಲಿಂಗಪ್ಪನವರೇ ಸರ್ವಾನುಮತದ ಬೆಂಬಲದಿಂದ ಆರಿಸಿ ಬಂದರೆಂದು ಸಾರುವುದಕ್ಕಾಗಿ ಶ್ರೀ ಮಂಜಪ್ಪನವರು ಹುರಿಯಾಳ್ತನವನ್ನು ಹಿಂದೆಗೆದು ಕೊಂಡರೆನ್ನುವುದು ಸ್ಪಷ್ಟ. ಇದರ ಸತ್ಯಸ್ವರೂಪವನ್ನು ಹೀಗೆ ವರ್ಣಿಸಬಹುದು: ಏನೆಂದರೆ ಶ್ರೀ ಮಂಜಪ್ಪನವರೂ ಶ್ರೀ ನಿಜಲಿಂಗಪ್ಪನವರೂ ಹೀಗೆಯೇ ಬಿಟ್ಟಿದ್ದರೆ ಸ್ಪರ್ಧೆಯನ್ನು ಕೊಡುತ್ತಿದ್ದರು. ಆಗ ಶ್ರೀ ಮಂಜಪ್ಪನವರು ಸೋಲುತ್ತಿದ್ದರು. ಕಾಂಗ್ರೆಸಿನ ವರಿಷ್ಠರು ಸೂಚಿಸಿದ ಸೂತ್ರದ ಪ್ರಕಾರ ಯಾರು ಸೋತರೋ ಅವರು ಗೆದ್ದವರ ಹೆಸರನ್ನು ಮುಖ್ಯ ಮಂತ್ರಿ ಸ್ಥಾನಕ್ಕೆ ಸೂಚಿಸುವ ಮೂಲಕ ಸರ್ವಾನುಮತದ ಆಯ್ಕೆ ನಡೆಯಿತೆಂಬ ಸಮಾಧಾನಕ್ಕೆ ಎಡೆಕೊಡಬೇಕಾಗಿದೆ. ಮೈಸೂರಿನಲ್ಲಿ ಸೋಲುವ-ಗೆಲ್ಲುವ ಪರೀಕ್ಷೆಯು ಅಂಥ್ರದಲ್ಲಾದಂತೆ ಪರೀಕ್ಷಾರ್ಥ ಮತದಾನದಿಂದ ನಿರ್ಧರಿಸಲ್ಪಡಲಿಲ್ಲ— ಸಾಮಾನ್ಯ ತಿಳುವಳಿಕೆಯ ಮುನ್ನೋಟದಿಂದಲೇ ನಡೆಯಿತು. ಹಾಗೆ ನೋಟವನ್ನು ಬೀರಿದವರಿಗೆ ಮೈಸೂರಿನ ಕಾಂಗ್ರೆಸು ಶಾಸನ ಸಭಾ ಸದಸ್ಯರಲ್ಲಿಯೇ ಶ್ರೀ ಕೆ. ಹನುಮಂತಯ್ಯ ಮತ್ತವರ ಬೆಂಬಲಕ್ಕಿದ್ದ ಹತ್ತಿಪ್ಪತ್ತು ಮಂದಿ ಶ್ರೀ ನಿಜಲಿಂಗಪ್ಪನವರ ಹುರಿಯಾಳ್ತನವನ್ನು ಬೆಂಬಲಿಸುವ ನಿರ್ಧಾರ ಕೈಗೊಂಡಿದ್ದ ವಿಷಯ ವೇದ್ಯವಾಗಿತ್ತೆನ್ನಬಹುದು. ಅಲ್ಲದೆ, ಈಚೆಗೆ ದಕ್ಷಿಣ ಕನ್ನಡ ಮತ್ತು ಕೊಡಗುಗಳ ಸಂಚಾರವನ್ನು ಕೈಗೊಂಡಿದ್ದ ಶ್ರೀ ಚೆನ್ನಯ್ಯನವರಿಗೆ ಶ್ರೀ ನಿಜಲಿಂಗಪ್ಪನವರ ಉಮೇದ್ವಾರಿಕೆಯನ್ನೆ ಈ ಪ್ರದೇಶದವರು ಪುರಸ್ಕರಿಸುವರೆಂಬ ಸಂಗತಿಯು ಹೊಳೆದಿರಲೂ ಸಾಕು. ಆದುದರಿಂದ ಪ್ರತ್ಯಕ್ಷ ಸ್ಪರ್ಧೆಯ ರಂಗಕ್ಕೆ ಕಾಲಿಟ್ಟು ಹೇಸಿಗೆ ಮಾಡಿಕೊಳ್ಳುವುದಕ್ಕಿಂತ ಎಲ್ಲವೂ ಚಂದವಾಗಿ ನಡೆಯಿತೆಂದು ಹೇಳಿಸಿಕೊಳ್ಳುವ ದಾರಿಯಲ್ಲಿ ನಡೆಯುವುದೇ ಕ್ಷೇಮವೆಂದು ಮೈಸೂರಿನ ಪ್ರಭೃತಿಗಳಿಗೆ ತೋರಿತೆಂದು ಭಾವಿಸಿದರೆ ಅದು ಅನುಚಿತವಾಗಲಾರದು. ಅಂತೂ ಈ ಸರ್ವಾನುಮತದ ಆಯ್ಕೆಯ ಫಲಶ್ರುತಿಯನ್ನು ಕೇಳಿ ನಾವು ಸಂತೋಷಪಡಬೇಕಾಗಿದೆ. ಹೊಸ ರಾಜ್ಯದಲ್ಲಿ ಐದು ಭಿನ್ನ ಭಿನ್ನ ಆಡಳಿತೆಯಲ್ಲಿದ್ದ ಪ್ರದೇಶಗಳು ಸಮಾವೇಶಗೊಳ್ಳುವಾಗ, ಆ ಪ್ರದೇಶಗಳ ಜನರ ಸುಖಕಷ್ಟವನ್ನು ಸಮಾನದೃಷ್ಟಿಯನ್ನಿಟ್ಟುಕೊಂಡು ವಿಚಾರಿಸುತ್ತಿರಬಲ್ಲ ದಕ್ಷನ ಆವಶ್ಯಕತೆ ತುಂಬಾ ಇದೆ. ಇದಕ್ಕೆ ಶ್ರೀ ನಿಜಲಿಂಗಪ್ಪನವರೇ ಯೋಗ್ಯರೆಂದು ನಮ್ಮದೂ ಅಭಿಪ್ರಾಯವಾಗಿದೆ. ಅವರು ಮೈಸೂರಿನವರೂ ಹೌದು; ಮೈಸೂರಿನ ಹೊರಗಿರುವ ಕನ್ನಡಿಗರ ಬಾಂಧವನೂ ಹೌದು. ಅವರಷ್ಟು ಕರ್ನಾಟಕ ಏಕೀಕರಣದ ಕೆಲಸಕ್ಕೆ ಕಾಂಗ್ರೆಸಿನ ಧ್ವಜದಡಿಯಲ್ಲಿ ಪರಿಶ್ರಮ ವಹಿಸಿ ದುಡಿದ ವ್ಯಕ್ತಿ ಪ್ರಾಯಶಃ ಬೇರೆ ಸಿಗುವಂತಿಲ್ಲ. "ಏಕೀಕರಣ ಬೇಡ — ಎರಡು ಕರ್ನಾಟಕವಾಗಲಿ" ಎಂದೆಲ್ಲ ಅಪಸ್ವರವನ್ನು ಮೈಸೂರಿನ ಕೆಲವು ಮುಖಂಡರು ಎತ್ತುತ್ತಿದ್ದಾಗ ಮತ್ತು ಶ್ರೀ ಹನುಮಂತಯ್ಯನವರಂತಹ ವ್ಯಕ್ತಿ ಸಹ ಮೈಸೂರಿನ ಒಳಗೊಂದು, ಹೊರಗೊಂದು ನಾಲಿಗೆಯನ್ನು ಉಪಯೋಗಿಸಿ ಮಾತನಾಡುವರೆಂದು ತೋರ ಹತ್ತಿದ್ದಾಗ ಮೈಸೂರಿನ ಮೂರನ್ನು ನಂಬಿ ಏಕೀಕೃತ ಕನ್ನಡ ರಾಜ್ಯವು ಅಭಿವೃದ್ಧಿಯನ್ನು ಹೊಂದೀತು – ಎಂದು ಚಿಂತಿಸಿದವರು ಅನೇಕ. ಆಗ ಎಲ್ಲರ ಕಣ್ಣು ಬಿದ್ದುದು ಶ್ರೀ ನಿಜಲಿಂಗಪ್ಪನವರ ಮೇಲೆಯೆ! ಅವರು ತಮ್ಮ ರಾಜಕೀಯ ಜೀವನದ ಮೊದಲಿನೊಂದು ದಶಕವನ್ನು ಈಗಿನ ಮೈಸೂರು ರಾಜ್ಯದ ಆವರಣದಲ್ಲಿ ಕಳೆದಿದ್ದರೆ, ಮತ್ತಿನ ಒಂದು ದಶಕವನ್ನು, ಅಂದರೆ ಇಂದಿನ ವರೆಗೆ, ಅಖಿಲ ಕರ್ನಾಟಕಕ್ಕಾಗಿ ಧಾರೆ ಎರೆದಿದ್ದಾರೆ. ಅವರ ಮುಖ್ಯ ಮಂತ್ರಿತ್ವವು ಸದ್ಯಕ್ಕೆ ಮುಂದಿನ ಚುನಾವಣೆಯ ವರೆಗಿನದಾಗಿದೆ— ಈ ನಾಲ್ಕಾರು ತಿಂಗಳುಗಳಲ್ಲಿ ಬೇರೆ ಬೇರೆ ಕನ್ನಡ ಪ್ರದೇಶಗಳಲ್ಲಿರುವ ಭಿನ್ನ ಭಿನ್ನ ಸ್ವರೂಪದ ಶಾಸನಗಳು, ಆಡಳಿತ ವಿಧಾನಗಳು, ಸಮಸ್ಯೆಗಳು ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಪಡೆಯುವುದೇ ದೊಡ್ಡ ಕೆಲಸವಾದೀತು. ಆದುದರಿಂದ ಎಲ್ಲ ಕಡೆಯೂ ಯಥಾಸ್ಥಿತಿ ಮುಂದರಿಯುವುದೆಂದೇ ನಾವು ನಿರೀಕ್ಷಿಸಬೇಕಲ್ಲದೆ ಯಾವ ರೀತಿಯಲ್ಲೂ ಕನ್ನಡ ಪ್ರದೇಶಗಳಲ್ಲೆಲ್ಲ ಏಕರೂಪವಾದ ಶಾಸನ, ಆಡಳಿತ ವಿಧಾನಾದಿಗಳು ಜ್ಯಾರಿಗೆ ಬಂದಾವೆಂದು ಭಾವಿಸುವುದು ಸರಿಯಾಗದು. ಇಡೀ ರಾಜ್ಯಕ್ಕೆಲ್ಲ ಒಂದೇ ಬಗೆಯ ಶಾಸನ ಮತ್ತು ಆಡಳಿತ ಕ್ರಮವನ್ನು ಅನ್ವಯಿಸುವ ದೊಡ್ಡ ಜವಾಬ್ದಾರಿಯು ಮುಂದಿನ ಚುನಾವಣೆಯ ಬಳಿಕ ರೂಪುಗೊಳ್ಳುವ ಹೊಸ ಸಚಿವ ಸಂಪುಟದ ಪಾಲಿನದಾಗಿದೆ. ಆ ಸಚಿವ ಸಂಪುಟದ ಕೆಲಸವನ್ನು ತುಸು ಹಗುರಮಾಡಿಕೊಡುವ ಉಳುಮೆ ಕೆಲಸವಷ್ಟೆ ಈಗಿನ ಮಂತ್ರಿಮಂಡಲದಿಂದಾದೀತು—ಶ್ರೀ ನಿಜಲಿಂಗಪ್ಪನವರಂತಹ ತಿಳಿವಳಿಕೆಯುಳ್ಳ ವ್ಯಕ್ತಿ ಮುಖ್ಯಮಂತ್ರಿ ಸ್ಥಾನದಲ್ಲಿರುವುದರಿಂದ ಈ ಉಳುಮೆಯ ಕೆಲಸವು ಛಂದದಿಂದ ನಡೆದೀತೆಂದು ನಾವು ಆಶಿಸುತ್ತೇವೆ. ಧುರೀಣರೆನಿಸಿದವರು ಸಕಲ ಸಹಕಾರವನ್ನಿತ್ತು ಸರಕಾರದಲ್ಲಿರುವ ವ್ಯಕ್ತಿಗಳ ಕರ್ತವ್ಯ ನಿರ್ವಹಣೆಗೆ ಸಹಾಯ ಸಲ್ಲಿಸಬೇಕೆಂದೂ ನಾವು ಸಾಮಾನ್ಯ ಜನತೆಯ ಪರವಾಗಿ ವಿನಂತಿಸುತ್ತೇವೆ. ಇದೇ ಸಂದರ್ಭದಲ್ಲಿ ಶ್ರೀ ನಿಜಲಿಂಗಪ್ಪನವರಿಗೆ ಅಭಿನಂದನೆಗಳನ್ನು ಸಮರ್ಪಿಸುವುದಕ್ಕೂ ನಮಗೆ ಸಂತೋಷವಾಗುತ್ತದೆ!

## ಹೊಸ ಮೈಸೂರಿನ ಮುಖ್ಯಮಂತ್ರಿ ಪದ
## ಶ್ರೀ ನಿಜಲಿಂಗಪ್ಪನವರ ಅವಿರೋಧ ಆಯ್ಕೆ

ಮೊದಲೇ ಗೊತ್ತುಪಡಿಸಿದ್ದಂತೆ ಇದೇ ೨೧ನೇ ದಿನಾಂಕ ಬೆಂಗಳೂರಿನಲ್ಲಿ ಭಾವಿ ಮೈಸೂರಿನ ಶಾಸನಾಂಗದಲ್ಲಿ ಕಾಂಗ್ರೆಸು ಪಕ್ಷದ ಸದಸ್ಯರಾಗಿರುವವರೆಲ್ಲರ ಸಭೆಯೊಂದು ಮುಖ್ಯ ಮಂತ್ರಿಯನ್ನು ಆರಿಸುವುದರ ಸಲುವಾಗಿ ನಡೆಯಿತು. ಮೈಸೂರಿನ ಈಗಿನ ಮುಖ್ಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪ, ಮಾಜಿ ಮುಖ್ಯ ಮಂತ್ರಿ ಶ್ರೀ. ಕೆ. ಹನುಮಂತಯ್ಯ, ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಚೆನ್ನಯ್ಯ, ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಅಂಬಲಿ, ಹೈದರಾಬಾದಿನ ಕನ್ನಡ ಪ್ರದೇಶಗಳ ಕಾಂಗ್ರೆಸು ಸಮಿತಿಯ ಶ್ರೀ ಅಣ್ಣಾರಾಯ ಗುಣಮುಖಿ ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚ, ಮದರಾಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ, ದಕ್ಷಿಣ ಕನ್ನಡದ ಎಂ. ಪಿ ಗಳಾದ ಮತ್ತು ಅಖಿಲ ಭಾರತ ಕಾಂಗ್ರೆಸಿನ ಮಾಜಿ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಮಲ್ಯ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪ, ಮೈಸೂರು ಪ್ರದೇಶ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ವೀರಣ್ಣ ಗೌಡ, ಮೈಸೂರಿನ ಮಾಜಿ ಮಂತ್ರಿಗಳೂ ಈಗ ಪಾರ್ಲಿಮೆಂಟಿನ ಸದಸ್ಯರೂ ಆಗಿರುವ ಶ್ರೀ ದಾಸಪ್ಪ—ಮುಂತಾದ ಪ್ರಮುಖರೂ ಸಭೆಯಲ್ಲಿ ಹಾಜರಿದ್ದರು.

### ಮಂಜಪ್ಪನವರಿಂದ ಸ್ವಾಗತ

ಕಾಂಗ್ರೆಸು ವರಿಷ್ಠ ಮಂಡಳದ ಪ್ರತಿನಿಧಿಯಾಗಿ ಶ್ರೀ ಕೆ. ಮಾಧವನ್ ನಾಯರ್ ಸಭೆಯಲ್ಲಿ ಉಪಸ್ಥಿತರಿದ್ದರು. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಸ್ವಾಗತ ಭಾಷಣವನ್ನು ಮಾಡಿ ತಾನು ಕರ್ನಾಟಕ ಏಕೀಕರಣದ ವಿರೋಧಿಯಾಗಿದ್ದರೂ ಈಗ ಪಾರ್ಲಿಮೆಂಟು ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಏಕೀಕೃತ ಕನ್ನಡ ರಾಜ್ಯದ ಪರವಾಗಿ ನಿರ್ಣಯವನ್ನು ಸ್ವೀಕರಿಸಿಕೊಂಡಿರುವುದರ ವಿರೋಧಿ ಮನೋಭಾವನೆಯನ್ನು ಬಿಟ್ಟುಕೊಟ್ಟಿರುವುದಾಗಿ ಹೇಳಿದರು. ಮುಂದರಿದು ಅವರು ಕೆಲವು ಮಿತ್ರರು ತನ್ನನ್ನು ಮುಖ್ಯ ಮಂತ್ರಿ ಸ್ಥಾನಕ್ಕೆ ಸ್ಪರ್ಧಿಸುವಂತೆ ಕೇಳಿಕೊಂಡಿರುವರೆಂದೂ ಆದರೆ ಸರ್ವಾನುಮತದ ಆಯ್ಕೆಯಾಗುವ ಸಲುವಾಗಿ ತಾನು ಸ್ಪರ್ಧಾರಂಗಕ್ಕೆ ಇಳಿಯಲು ಇಚ್ಛಿಸುವುದಿಲ್ಲವೆಂದೂ ತಿಳಿಸಿದರು. ಸರ್ವಾನುಮತದ ಆಯ್ಕೆಯೇ ಮುಖ್ಯ ಮಂತ್ರಿ ಸ್ಥಾನಕ್ಕಾಗುವಂತೆ ಸದಸ್ಯರೆಲ್ಲ ಸಹಕರಿಸಬೇಕೆಂದು ಅವರು ಕೇಳಿಕೊಂಡರು.

### ನಾಯರರ ಉಪದೇಶ

ಶ್ರೀ ನಾಯರರು ಮುಂದೆ ಮಾತನಾಡಿ "ಭಾವಿ ಮೈಸೂರಿನ ಮುಖ್ಯ ಮಂತ್ರಿ ಸ್ಥಾನಕ್ಕೆ ಸ್ಪರ್ಧೆ ಇರಬಹುದೆಂದು ಕಾಂಗ್ರೆಸಿನ ವರಿಷ್ಠರು ಹೆದರಿದ್ದಾರೆ. ನಾನು ಅವರಿಗೆ ಹಾಗೇನು ಆಗದು, ಸರ್ವಾನುಮತದ ಆಯ್ಕೆಯೇ ನಡೆದು ಕಾಂಗ್ರೆಸಿನ ಒಗ್ಗಟ್ಟು ಸ್ಪಷ್ಟವಾಗುವುದೆಂದು ಮುಂದಾಗಿಯೇ ಭರವಸೆ ಕೊಟ್ಟಿದ್ದೇನೆ. ನಿಮ್ಮೆಲ್ಲರ ಮೇಲಿನ ವಿಶ್ವಾಸದಿಂದ ವಹಿಸಿಕೊಂಡ ಹೊಣೆಗಾರಿಕೆ ಇದಾಗಿದೆ ಕಾಂಗ್ರೆಸಿನ ವರಿಷ್ಠರು ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯ ವಿಷಯದಲ್ಲಿ ತಮ್ಮ ಆದೇಶವನ್ನು ಕೊಡಲು ಬಯಸುತ್ತಿಲ್ಲ—ಆಯಾ ರಾಜ್ಯಗಳಿಗೆಯೇ ಈ ಮಟ್ಟಿಗೆ ಕ್ರಿಯಾಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಆದರೆ ಆದಷ್ಟು ಮಟ್ಟಿಗೆ ಪ್ರಕಟ ಸ್ಪರ್ಧೆಯನ್ನು ತಪ್ಪಿಸಲು ಅವರಿಗೆ ಆತುರವಿದೆ" ಎಂದರು.

## ಶುಭಾಶಯಗಳು!

ಮುಂದೆ ಶ್ರೀ ಮಂಜಪ್ಪನವರು ಶ್ರೀ ನಿಜಲಿಂಗಪ್ಪನವರ ಹೆಸರನ್ನು ಮುಖ್ಯ ಮಂತ್ರಿ ಸ್ಥಾನಕ್ಕೆ ಸೂಚಿಸಿದರು. ಶ್ರೀ ವೀರಣ್ಣ ಗೌಡರು ಅದನ್ನು ಅನುಮೋದಿಸಿದರು. ಬೇರೆ ಯಾವ ಹೆಸರೂ ಬರಲಿಲ್ಲವಾದಕಾರಣ, ಶ್ರೀ ನಾಯರರು ಅವಿರೋಧವಾಗಿ, ಸರ್ವಾನುಮತದಿಂದ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿ ಸ್ಥಾನಕ್ಕೆ ಆರಿಸಿಬಂದರೆಂದು ಸಾರಿದರು. ಇದನ್ನು ಕೇಳಿದ ಸಭಿಕರೆಲ್ಲರೂ ಅತ್ಯುತ್ಸಾಹದಿಂದ ಕರತಾಡನ ಮಾಡಿ ನೂತನ ನಾಯಕನಿಗೆ ಶುಭಾಷಯವನ್ನು ಕೋರಿದರು. ಶ್ರೀ. ನಾಯರರು ಈ ಶುಭ ವಾರ್ತೆಯನ್ನು ಕೂಡಲೇ ಟೆಲಿಫೋನಿನ ಮೂಲಕ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರಿಗೆ ತಿಳಿಸಿ, ಅವರ ಶುಭಾಶಯವನ್ನೂ ಸಭಾಂತ್ಯವಾಗುವುದರೊಳಗೆ ತಲುಪಿಸಿದರು. ಶ್ರೀಗಳಾದ ಮಂಜಪ್ಪ, ಚೆನ್ನಯ್ಯ, ಅಂಬಲಿ, ಹನುಮಂತಯ್ಯ, ಗುಣಮುಖಿ, ಮುಣಚ್ಚ, ಎ. ಬಿ. ಶೆಟ್ಟಿ, ದಾಸಪ್ಪ—ಇವರೆಲ್ಲರೂ ಶ್ರೀ ನಿಜಲಿಂಗಪ್ಪನವರ ವ್ಯಕ್ತಿತ್ವವನ್ನೂ ಅವರು ಕನ್ನಡ ನಾಡಿಗೆ ಸಲ್ಲಿಸಿದ ಸೇವೆಗಳನ್ನೂ ಶ್ಲಾಘಿಸಿ, ಅವರಿಂದ ನಾಡಿಗೆ ಶುಭವಾಗಲೆಂದು ಪ್ರಾರ್ಥಿಸಿದರು.

### ಶ್ರೀ ನಿಜಲಿಂಗಪ್ಪನವರ ಉತ್ತರ

ಶುಭಾಶಯಗಳಿಗೆ ಉತ್ತರವೀಯುತ್ತಾ ಶ್ರೀ ನಿಜಲಿಂಗಪ್ಪನವರು ಎಲ್ಲರ ಉಪಕಾರ ಸ್ಮರಣೆಯನ್ನು ಮಾಡಿದ್ದಲ್ಲದೆ, ಮುಂದಿನ ತನ್ನ ಕಾರ್ಯನಿರ್ವಹಣೆಯಲ್ಲಿ ಸಹಕಾರವನ್ನು ಕೋರಿದರು. ಯಾವದೇ ಪ್ರಭಾವಕ್ಕೆ ಒಳಗಾಗದೆ ನಿಷ್ಪಕ್ಷಪಾತವೂ ದಕ್ಷವೂ ಆದ ರೀತಿಯಲ್ಲಿ ಕನ್ನಡ ರಾಜ್ಯಕ್ಕೆ ಸೇವೆ ಸಲ್ಲಿಸಲು ತಾನು ದೀಕ್ಷೆ ತೊಡುವುದಾಗಿ ಅವರು ಭರವಸೆ ನೀಡಿದರು. ಕಾಂಗ್ರೆಸಿನ ವರಿಷ್ಠರಲ್ಲಿರುವ ಆತ್ಮೀಯತಾ ಭಾವದ ದೆಸೆಯಿಂದಲೂ ಪಾರ್ಲಿಮೆಂಟಿನಲ್ಲಿರುವ ಕನ್ನಡದ ಪ್ರತಿನಿಧಿಗಳ ಸಹಾಯದ ದೆಸೆಯಿಂದಲೂ ಕನ್ನಡ ರಾಜ್ಯದ ಅಭಿವೃದ್ಧಿಗೆ ಧಾರಾಳವಾದ ಆರ್ಥಿಕ ಹಾಗು ಇತರ ಬಗೆಯ ಸಹಾಯ ದೊರೆತೇ ದೊರೆಯುವುದೆಂಬ ತಮ್ಮ ವಿಶ್ವಾಸವನ್ನು ಅವರು ಪ್ರಕಟಪಡಿಸಿದರು. ಕನ್ನಡಿಗರೆಲ್ಲ ಒಂದುಗೂಡುತ್ತಿರುವುದನ್ನು ಐತಿಹಾಸಿಕ ದಾಖಲೆ ಎಂದವರು ವರ್ಣಿಸಿದರಲ್ಲದೆ ಕನ್ನಡ ನಾಡಿನ ಸಾಧನ ಸಂಪತ್ತುಗಳೆಲ್ಲವರ ಸದುಪಯೋಗ ಪಡೆಯುವ ಗುರುತರವಾದ ಭಾರವು ಸರಕಾರದ ಮೇಲಿದೆ ಎಂಬ ತಿಳುವಳಿಕೆಯನ್ನೂ ವ್ಯಕ್ತಪಡಿಸಿದರು.

### ಒಂದೇ ಪ್ರದೇಶ ಕಾಂಗ್ರೆಸು

ಮರುದಿನ ಕರ್ನಾಟಕ ಪ್ರದೇಶ ಹಾಗು ಮೈಸೂರು ಪ್ರದೇಶ ಕಾಂಗ್ರೆಸುಗಳನ್ನು ಒಂದೇಯಾಗಿಸುವ ಸಲುವಾಗಿ ಸಭೆಯೊಂದು ಶ್ರೀ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೊಸ ಏಕೀಕೃತ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿ ಮೈಸೂರು ಶಾಸನಸಭೆಯ ಮಾಜಿ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪ, ಎಂ. ಎಲ್. ಎ. ಸರ್ವಾನುಮತದಿಂದ ಆಯ್ಕೆಹೊಂದಿದರು. ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಅಂಬಲಿಯವರು ಈ ಹೆಸರನ್ನು ಸೂಚಿಸಿದರು. ಹೈದರಾಬಾದಿನ ಶ್ರೀ ಗುಣಮುಖಿಯವರು ಅನುಮೋದಿಸಿದರು. ಶ್ರೀ ವೆಂಕಟಪ್ಪನವರನ್ನು ಅಭಿನಂದಿಸುವ ಅನೇಕ ಭಾಷಣಗಳಾದ ತರುವಾಯ ನೂತನ ಅಧ್ಯಕ್ಷರು ಸಮಯೋಚಿತ ಉತ್ತರವಿತ್ತರು. ಅವರಲ್ಲಿ ತಾನು ಏಕೀಕೃತ ಕನ್ನಡ ರಾಜ್ಯಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದರೂ ಇನ್ನು ಮುಂದೆ ಸಮಗ್ರ ಕನ್ನಡ ಪ್ರದೇಶದ ಹಿತಕ್ಕಾಗಿ ದುಡಿಯುವೆನೆಂದ ಆಶ್ವಾಸನೆಯಿತ್ತರು.

### ಹೊಸ ರಾಜ್ಯಪಾಲರ ನೇಮಕ

ಹೊಸ ರಾಜ್ಯಗಳಿಗೆ ರಾಜ್ಯಪಾಲರ ನೇಮಕದ ಘೋಷಣೆಯು ಕಳೆದ ವಾರ ನಡೆಯಿತು. ಇದರ ಪ್ರಕಾರ ಮೈಸೂರಿನ ರಾಜಪ್ರಮುಖರು ಭಾವಿ ವಿಶಾಲ ಮೈಸೂರಿನ ರಾಜ್ಯಪಾಲರಾಗುತ್ತಾರೆ. ಹೈದರಾಬಾದಿನಲ್ಲಿ ಈಗ ಮುಖ್ಯ ಮಂತ್ರಿಯಾಗಿರುವ ಶ್ರೀ ಬಿ. ರಾಮಕೃಷ್ಣರಾಯರು ಕೇರಳದ ರಾಜ್ಯಪಾಲರಾಗುತ್ತಾರೆ, ಮದ್ರಾಸಿನ ರಾಜ್ಯಪಾಲರಾಗಿರುವ ಶ್ರೀ ಶ್ರೀಪ್ರಕಾಶರು ಮುಂಬಯಿಯ ರಾಜ್ಯಪಾಲರಾಗುತ್ತಾರೆ. ದಿವಂಗತೆ ಸರೋಜಿನಿ ನಾಯ್ಡುರವರ ಪುತ್ರಿ ಶ್ರೀಮತಿ ಪದ್ಮಜಾ ನಾಯ್ಡುರವರು ಪಶ್ಚಿಮ ಬಂಗಾಳದ ರಾಜ್ಯಪಾಲರಾಗುತ್ತಾರೆ. ದೆಹಲಿ ರಾಜ್ಯದ ಈಗಿನ ಮುಖ್ಯ ಮಂತ್ರಿ ಶ್ರೀ ಗುರುಮುಖ್‌ನಿಹಾಲ್ ಸಿಂಘರು ರಾಜಸ್ಥಾನದ ರಾಜ್ಯಪಾಲರಾಗುತ್ತಾರೆ ಡಾ. ಪಟ್ಟಾಭಿ ಸೀತಾರಾಮಯ್ಯನವರು ಈಗ ಮಧ್ಯ ಭಾರತದ ರಾಜ್ಯಪಾಲರಾಗಿದ್ದು, ಮುಂದೆ ಮಧ್ಯ ಪ್ರದೇಶದ ರಾಜ್ಯಪಾಲರಾಗುತ್ತಾರೆ. ಹೊಸ ಆಂಧ್ರದ ರಾಜ್ಯಪಾಲರಾಗಿ ಶ್ರೀ. ಸಿ. ಎಂ. ತ್ರಿವೇದಿಯವರೇ ಉಳಿಯುತ್ತಾರೆ. ನಿಜಾಮರು ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದುತ್ತಾರೆ. ಮದ್ರಾಸಿಗೊಬ್ಬ ರಾಜ್ಯಪಾಲರ ನೇಮಕವಾಗಬೇಕಾಗಿದೆ ಈಗ ಮದ್ರಾಸಿನ ಆರೋಗ್ಯಮಂತ್ರಿಯಾಗಿರುವ ಶ್ರೀ ಎ. ಬಿ. ಶೆಟ್ಟರು ಈ ಸ್ಥಾನಕ್ಕೆ ನೇಮಕವಾಗುವ ಸಂಭವವಿದೆ ಎಂದುಸುದ್ದಿ.

(೨ನೇ ಪುಟದಿಂದ),

ತಂದು ಕೊಡುತ್ತಿದ್ದು ಅಣುಶಕ್ತಿಯ ಬಲದಿಂದ ನಡೆಯುವ ಯಂತ್ರಗಳು ವಾತಾವರಣವನ್ನು ಶಾಖದಿಂದ ಕೂಡಿರುವಂತೆ ಮಾಡಬಹುದು; ಅಲ್ಲದೆ ವಿದ್ಯುಚ್ಛಕ್ತಿ, ಬೆಳಕು ಎಲ್ಲವನ್ನೂ ಒದಗಿಸಿ ಕೊಡಬಹುದು ಎಂದವರ ಹೇಳಿಕೆಯಾಗಿವೆ.

ಭಾರತದ ಮುಖ್ಯವಾದ ಭಯವು ಇನ್ನೊಂದು ವಿಷಯದಲ್ಲಿದೆ— ಅದೆಂದರೆ, ಅಣ್ವಸ್ತ್ರಗಳ ಪ್ರಯೋಗ ಭೂಮಿಯಾಗಿ ದಕ್ಷಿಣ ಧ್ರುವ ಪ್ರದೇಶವನ್ನು ಮಹಾರಾಷ್ಟ್ರಗಳು ಉಪಯೋಗಿಸಿದರೆ, ಆಗೇನು ಗತಿ ಎಂಬುವೇ! ಶಾಂತಿಯುತ ಕಾರ್ಯಗಳಿಗಾಗಿಯೇ ದಕ್ಷಿಣ ಧ್ರುವ ಪ್ರದೇಶದ ಉಪಯೋಗ ನಡೆಯಬೇಕೆಂದು ಅದು ಹೇಳಿರುವುದರ ಒಳಗುಟ್ಟು ಇದೇ. ಪ್ರಸಿದ್ಧ ವಿಜ್ಞಾನಿಗಳಾದ ಪ್ರೀಸ್ಟ್ಲೀಯವರ ಅಭಿಪ್ರಾಯವನ್ನೇ ಪುನರುಚ್ಚರಿಸುವುದಾದರೆ ಜಲಜನಕ ಬಾಂಬಿನ ಪ್ರಯೋಗದಂತಹ ಕೆಲಸಗಳನ್ನು ದಕ್ಷಿಣ ಧ್ರುವ ಪ್ರದೇಶದಲ್ಲಿ ಕೈಕೊಂಡ ಪಕ್ಷದಲ್ಲಿ ಅಲ್ಲಿನ ಹಿಮರಾಶಿಯು ಕರಗಬಹುದು; ಹೀಗೆ ನಿಸರ್ಗದ ಸಮತೋಲವು ವ್ಯತ್ಯಾಸವಾಗಬಹುದು. ಯಾವುದೇ ಕಾರಣದಿಂದ ಹಿಮರಾಶಿಯ ಈಗಿನ ಭಂಡಾರವು ಕರಗಿ ನೀರಾಗಿ ಹರಿಯತೊಡಗಿದರೆ, ಸಮುದ್ರದಲ್ಲಿರುವ ನೀರು ನೂರು ಅಡಿಗಳಷ್ಟು ಮೇಲೇರಿ ಬರಬಹುದು. ಪರಿಣಾಮ ಸ್ಪಷ್ಟವೇ ಆಗಿದೆ—ಜಲಪ್ರಳಯ! ಭೂಮಿಯನ್ನು ಸಮುದ್ರ ನುಂಗತೊಡಗುತ್ತದೆ. ರಾಷ್ಟ್ರಗಳೆಲ್ಲವೂ ಇಂತಹ ಭೀಕರ ಅನಾಹುತಗಳ ದುಷ್ಪರಿಣಾಮವನ್ನು ತಿಳಿದುಕೊಳ್ಳಬೇಕೆಂಬುದೇ ಭಾರತದ ಉದ್ದೇಶ.

## ಆಟ್ಲಿ ದಂಪತಿಗಳ ಪ್ರವಾಸ

ಭಾರತವು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಗ್ರಗಾಮಿಯಾಗಿ ಜಗತ್ತಿನಲ್ಲಿಯೇ ಖ್ಯಾತನಾಮವಾಗಿರುವುದನ್ನು ಕಂಡು ಸಂತೋಷಿಸಿದ ಪಾಶ್ಚಾತ್ಯರಲ್ಲಿ ಲೋರ್ಡ್ ಕ್ಲೆಮೆಂಟ್ ಆಟ್ಲಿಯವರೂ ಒಬ್ಬರು. ೧೯೪೭ನೇ ಆಗೋಸ್ತು ೧೫ರಂದು ಸ್ವತಂತ್ರ ಭಾರತವು ತಲೆಎತ್ತುವಂತೆ ಮಾಡಿದ್ದ ಆ ದಿನದ ಬ್ರಿಟಿಷ್ ಮುಖ್ಯಮಂತ್ರಿ ಆಟ್ಲಿಯವರು ಇಂದು ಭಾರತದಲ್ಲಿ ತಮ್ಮ ರಜೆಯನ್ನು ಪ್ರವಾಸಮೂಲಕ ಕಳೆಯಲು ಬಂದಿದ್ದಾರೆ; ಪ್ರಮುಖ ಸ್ಥಾನಗಳನ್ನೆಲ್ಲ ಸಂದರ್ಶಿಸಿ ಇದೇ ೨೨ನೇ ದಿನಾಂಕ ಹೊಸ ದೆಹಲಿಗೆ ಆಗಮಿಸಿದ್ದಾರೆ.

ಮುಂಬಯಿ, ಮದ್ರಾಸು, ಕಲ್ಕತ್ತ ಲಖ್ನೋ ಮುಂತಾದ ನಮ್ಮ ಮುಖ್ಯ ಪಟ್ಟಣಗಳನ್ನು ಲೋರ್ಡ್ ಆಟ್ಲಿಯವರು ಸಪತ್ನೀಕರಾಗಿ ಸಂದರ್ಶಿಸಿದರು. ಅವರಿಗೆ ಎಲ್ಲೆಡೆಯಲ್ಲೂ ವೈಭವದಸುತ್ತು ಆದರದಿಂದೊಡಗೂಡಿದ ಪ್ರೀತಿಯ ಸ್ವಾಗತವನ್ನು ಕೊಡಲಾಯಿತು. ಇದೇ ಆಟ್ಲಿಯವರು ಹಿಂದೆ ೧೯೨೮ರಲ್ಲಿ ಸೈಮನ್ ಸಮಿತಿಯ ಸದಸ್ಯರಾಗಿ ಬಂದಿದ್ದಾಗ ಆ ಸಮಿತಿಯ ಇತರ ಸದಸ್ಯರೊಂದಿಗೆ ತಾವೂ ಕರಿಪತಾಕೆಯ ಕಪ್ಪು ಸ್ವಾಗತವನ್ನು ಎದುರಿಸಿದ್ದರು. ವೈಪರೀತ್ಯದಂತೆ, ಭಾರತಕ್ಕೆ ಸ್ವಾತಂತ್ರ್ಯ ದಾನಮಾಡುವುದಕ್ಕೇ ಆಟ್ಲಿಯವರು ಯುದ್ಧೋತ್ತರ ಬ್ರಿಟನಿನಲ್ಲಿ ಪ್ರಧಾನಿಯಾದರು ಬ್ರಿಟನಿಗೂ ಭಾರತಕ್ಕೂ ಆತ್ಮೀಯವಾದ ಗೆಳೆತನವಿರುವಂತೆ ಮಾಡಿದರು.

ಆಟ್ಲಿಯವರು ಪ್ರಜಾಪ್ರಭುತ್ವದ ಶ್ರೇಷ್ಠ ಆರಾಧಕ. ಆವರು ಬ್ರಿಟನಿನ ಪಾರ್ಲಿಮೆಂಟಿನಲ್ಲಿ ವಿರೋಧಿ ಪಕ್ಷದ ಧುರೀಣನ ಸ್ಥಾನದಲ್ಲಿದ್ದಷ್ಟು ದೀರ್ಘಾವಧಿ ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ದೊಡ್ಡ ದಾಖಲೆ. ಚರ್ಚಿಲ್ಲರಂತೆಯೇ ಪಾರ್ಲಿಮೆಂಟಿನಲ್ಲಿ ೧೯೩೦ರಷ್ಟು ಹಿಂದಿನ ಕಾಲದಿಂದ ಬೆಳಗಿ ಶೋಭಿಸುವ ವ್ಯಕ್ತಿತ್ವ ಅವರದು. ಲೋರ್ಡ್ ಆಟ್ಲಿ ಮಿತಭಾಷಿ. ಅಂದರೆ ಅವರು ಭಾಷಣಮಾಡುವಾಗ ಅವರಲ್ಲಿ ಭಾರತದ ಬಗ್ಗೆ ತಾನಿಟ್ಟುಕೊಂಡ ಪ್ರೀತಿಯನ್ನು ಧಾರೆಯಾಗಿ ಸುರಿಸುತ್ತಾರೆ. ಭಾರತಕ್ಕೆ ಸ್ವಾತಂತ್ರ್ಯವಿತ್ತು ತಾನು ಅನ್ಯಾಯ ಮಾಡಿಲ್ಲವೆಂಬ ತೃಪ್ತಿ ಅವರಿಗಿದೆ. ಭಾರತವು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಮುನ್ನಡೆಯಲು ಕಂಕಣ ತೊಟ್ಟಿರುವುದೂ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಂಡು ಜನತೆಯ ಏಳಿಗೆಗಾಗಿ ಕಟಿಬದ್ಧನಾಗಿರುವುದೂ ಅವರಿಗೆ ಸಂತೋಷವನ್ನುಂಟುಮಾಡಿದ ಮುಖ್ಯ ವಿಷಯ.

ಭಾರತವಾದರೂ ಆಟ್ಲಿಯವರ ವಿಶ್ವಾಸಕ್ಕೆ ಪ್ರತಿಯಾಗಿ ತಾನೂ ವಿಶ್ವಾಸದಿಂದ ನಡೆದುಕೊಂಡಿದೆ. ಕಾಮನ್‌ವೆಲ್ತ್ ರಾಷ್ಟ್ರಕೂಟಗಳಲ್ಲಿ ತಾನು ಗಣರಾಜ್ಯವಾಗಿದ್ದರೂ ಭಾರತವು ಉಳಿದಿದೆ ಆಟ್ಲಿಯವರು ಈ ಅವಕಾಶವನ್ನು ಒದಗಿಸಿಕೊಟ್ಟರು ಭಾರತವು ಅದನು ಸದುಪಯೋಗಪಡಿಸಿಕೊಂಡಿತು. ಆಟ್ಲಿ ದಂಪತಿಗಳಿಗೆ ಶುಭವಾಗಲಿ!

## ಉಡುಪಿ

**ಅಗ್ನಿ ರಕ್ಷಣಾ ಸಪ್ತಾಹ—** ಸ್ಥಳೀಯ ಅಗ್ನಿ ಶಾಮಕ ದಳದ ವತಿಯಿಂದ ಇದೇ ತಾ. 28ನೇ ಆದಿತ್ಯವಾರ ಉಡುಪಿ ಅಜ್ಜರಕಾಡಿನಲ್ಲಿ ಅಗ್ನಿ ರಕ್ಷಣಾ ಸಪ್ತಾಹವನ್ನು ಡಾ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸಂಜೆ ಘಂಟೆ ನಾಲ್ಕಕ್ಕೆ ಆಚರಿಸಲಾಗುವುದು. ದಳದವರ ಕವಾಯತು, ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಬಂದು ಸಹಕರಿಸಬೇಕಾಗಿ ಸಬ್ ಆಫೀಸರರು ತಿಳಿಸುತ್ತಾರೆ.

**ಸಹಕಾರೀ ಮಹಾಸಭೆ—** ಉಡುಪಿ ಕೋಪರೇಟಿವ್ ಬಿಲ್ಡಿಂಗ್ ಸೊಸೈಟಿಯ ಮಹಾ ಸಭೆಯು ತಾ. 17ರಲ್ಲು ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಪಾಲು ಬಂಡವಳ ರೂಪಾಯಿ 50,000 ವನ್ನು ರೂ. 1,00,000ಕ್ಕೆ ಏರಿಸುವ ಮತ್ತು ಸಂಘದ ಕಾರ್ಯಕ್ಷೇತ್ರವನ್ನು ಉಡುಪಿ ಪಟ್ಟಣದಿಂದ ಐದು ಮೈಲು ದೂರದ ತನಕ ವಿಸ್ತರಿಸಬೇಕೆನ್ನುವ ಕುರಿತು ನಿರ್ಣಯಗಳಾದುವು ಹೊಸ ಡೈರೆಕ್ಟರ ಮಂಡಳಿಗೆ ಡಾ. ಎಸ್. ಆರ್. ಪೈ, ಡಾ ಟಿ ಮಾಧವ ಪೈ; ಶ್ರೀಗಳಾದ ಕೆ. ಕೆ. ಪೈ, ಸಿ ಶ್ರೀಪತಿ ಆಚಾರ್ಯ ಕೆ. ಗರುರಾಜರಾವ್, ಯು. ಮಂಜಳೀಕ ಶೆಣೈ, ಪಿ. ಕೆ. ಶೇಷಗಿರಿರಾವ್, ಎಮ್. ವಾಮನ ಭಟ್ ಮತ್ತು ಎಮ್. ಸಿ. ಮಾಬೆನರು ಆರಿಸಲ್ಪಟ್ಟರು.

**ತಿದ್ದುಪಡಿ—** ಕಳೆದ ಸಂಚಿಕೆಯ 10ನೇ ಪುಟದಲ್ಲಿ ಪ್ರಕಟವಾದ 'ಸಾಗುವಳಿ ಗೊಬ್ಬರದ ಸಾಲಯೋಜನೆ" ಎಂಬ ಪ್ರಕಟನೆಯಲ್ಲಿ ಶ್ರೀ. ಸಿ. ಯನ್. ಮೆನೊಕಿ, ರೆವಿನ್ಯು ಡಿವಿಜನಲ್ ಆಫೀಸರ್ ಪುತ್ತೂರು ಎಂದು ತಿದ್ದಿ ಓದಬೇಕಾಗಿ ವಿನಂತಿ.

(ಸಂ. ನ.)

**ನಿರೀಕ್ಷಿಸಿರಿ:—**

**ಬರುವ ವಾರ 1-11-1956 ನವಯುಗವು ನವರಾಜ್ಯೋದಯ ವಿಶೇಷ ಸಂಚಿಕೆಯಾಗಿ ಪ್ರಕಟವಾಗಲಿದೆ.**

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S C. 663/ 156.

H. ಶ್ರೀನಿವಾಸ ರಾವ್ —ವಾದಿ
ಕೃಷ್ಣಪ್ಪ ಸೆಟ್ಟಿ —ಪ್ರತಿವಾದಿ

ಕುಂದಾಪುರ ತಾಲೂಕು ಉಳ್ತೂರು ಗ್ರಾಮದಲ್ಲಿರುವ ತುಂಗಮ್ಮ ಸೆಡ್ತಿರ ಮಗ ಕೃಷ್ಣಪ್ಪ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಯ ಮೂಲೀಪಕ್ಕಿನ ಬಾಬ್ತು ಕೆಲವು ಸ್ಥಳಗಳನ್ನು ಪ್ರತಿವಾದಿಯು ವಾದಿಯಿಂದ ಚಾಲಗೇಣಿ ಪಡೆದು ಆ ಕುರಿತು ತಾರೀಕು 18-10-41ರಲ್ಲು ಚಾಲಗೇಣಿ ಎದುರ್ಚೀಟಿ ಬರಕೊಟ್ಟು ಅದರ ಆಧಾರದ ಮೇಲೆ ಗೇಣಿಗೆ ಕಾರಣವಾದ ಸ್ಥಳಗಳನ್ನು ಪ್ರತಿವಾದಿಯು ಸ್ವಾಧೀನವಿದ್ದು ಅನುಭವಿಸಿ ಆ ಬಾಬ್ತು ಪ್ರತಿವಾದಿಯು ಬಾಕಿಮಾಡಿಕೊಂಡ ಕಳೆದ ವಿಜಯ, ಜಯ, ಮನ್ಮಥ ಸಂವತ್ಸರಗಳ ಗೇಣಿಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲುಮಾಡಿದ ಮೇಲಿನ ದಾವೆಯು ತಾ. 3—11 56ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ತಮ್ಮ ದಿನ್ನ ಮೇಲಿನ ಕೋರ್ಟುಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತವೆ.

N. S Parameshwariah.
Advocate for Pltf.
Date 21—10—56, Coondapoor.

## ಎಲ್ಲೆಲ್ಲಿ ಏನೇನು

**ಕುಂದಾಪುರ ತಾಲೂಕಿನಲ್ಲಿ ಕಂದಾಯ ಮಂತ್ರಿ ಶ್ರೀ ಮಾಣಿಕ್ಯವೇಲುರವರ ಕಾರ್ಯಕ್ರಮಗಳು** ಇದೇ ತಾ. 13ರಲ್ಲು ಸಂಜೆ ಮದ್ರಾಸು ಸರಕಾರದ ಕಂದಾಯಮಂತ್ರಿ ಶ್ರೀ ಎಮ್. ಎ. ಮಾಣಿಕ್ಯವೇಲು ನಾಯಕರ್ ರವರು ಬೈಂದೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸುತ್ತಾ, ಕಾಂಗ್ರೆಸ್ ಸರಕಾರಗಳು ಈ ತನಕ ಸಾಧಿಸಿದ ಕಾರ್ಯಗಳನ್ನು ವಿವರಿಸಿ ಮುಂಬರುವ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಪುನಃ ಅಧಿಕಾರಕ್ಕೆ ಬರುವಂತೆ ಸರ್ವರೂ ಬೆಂಬಲಕೊಡಬೇಕೆಂದರು. ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ವೈ. ಮಂಜಯ್ಯ ಶೆಟ್ಟಿ ಎಮ್. ಎಲ್. ಎ. ಅವರು ಸ್ವಾಗತಭಾಷಣಮಾಡಿದರು. ಶ್ರೀ ಪಿ. ಸುಬ್ಬಣ್ಣ ಶೆಟ್ಟರು ಗ್ರಾಮಸೇವಾ ಸಂಘದ ಪರವಾಗಿ ಮಂತ್ರಿಗಳಿಗೆ ಮಾನಪತ್ರ ಅರ್ಪಿಸಿದರು. ಜಿಲ್ಲಾ ಮೆಡಿಕಲ್ ಆಫೀಸರ್ ಶ್ರೀ ಎ. ತಿಮ್ಮಪ್ಪಯ್ಯನವರು ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಹಿತಿಯನ್ನಿತ್ತರು. ಶ್ರೀಗಳಾದ ಆರ್. ಕೆ. ಸಂಜೀವರಾವ್ ಮತ್ತು ಎಮ್. ಎಮ್. ಹೆಗ್ಡೆಯವರು ಕಾಲೋಚಿತಮಾತುಗಳನ್ನಾಡಿದರು.

ಮಾನ್ಯ ಮಂತ್ರಿಗಳು ಆ ದಿನ ಬೆಳಿಗ್ಗೆ ಗಂಗೊಳ್ಳಿಯಲ್ಲಿ ಜಿಲ್ಲಾ ಬೋರ್ಡಿನವರು ಆರಂಭಿಸಿರುವ ಲೋಕಲ್ ಫಂಡ್ ಆಸ್ಪತ್ರೆ ಕಟ್ಟಡವನ್ನು ಉದ್ಘಾಟಿಸಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ್ದರು. ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ. ಅವರು ಸ್ವಾಗತಭಾಷಣವಿತ್ತರು. ಶ್ರೀ ಎಸ್. ಎಮ್. ನಾಯ್ಕರು ಮಂತ್ರಿಗಳಿಗೆ ಮಾನಪತ್ರವಿತ್ತರು. ಕಟ್ಟಡ ನಿಧಿಗೆ ಶ್ರೀ ವೈ. ಮಂಜಯ್ಯ ಶೆಟ್ಟರು ರೂ. 51/– ದಾನವಿತ್ತರು. ಅಲ್ಲಿಂದ ಮಂತ್ರಿಗಳು ಮುಂದೆ ಪ್ರಯಾಣ ಬೆಳೆಸಿ ಶಿರೂರಿನ ಮಂಜೇಶ್ವರದಲ್ಲಿ ಗ್ರಾಮಾಸ್ಪತ್ರೆಯನ್ನು ತೆರೆದರು. ಕೊಲ್ಲೂರು ಕ್ಷೇತ್ರಕ್ಕೆ ನಂತರ ಆಗಮಿಸಿ ಅಲ್ಲಿ ಸ್ನಾನಘಟ್ಟದ ಶಂಕುಸ್ಥಾಪನೆಮಾಡಿ ಶ್ರೀ ಮೂಕಾಂಬಿಕಾ ದೇವಿ ದರ್ಶನಮಾಡಿ ಪ್ರಸಾದ ಸ್ವೀಕರಿಸಿದರು. ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ನಾರಾಯಣ ಶೆಟ್ಟರು ಮಂತ್ರಿಗಳನ್ನು ಸ್ವಾಗತಿಸಿದರು. ಬಳಿಕ ಮಂತ್ರಿಗಳು ಪಡುವರಿ ಕೋಟೆಬಾಗಿಲು ಬೋರ್ಡ್ ಪ್ರಾಥಮಿಕ ಶಾಲಾ ಕಟ್ಟಡ, ಸಿದ್ಧಾಪುರದ ಸಮಾಜ ಮಂದಿರಗಳನ್ನು ಉದ್ಘಾಟಿಸಿದರು. ಹಾಲಾಡಿಯಲ್ಲಿ ಹಾ. ಎ. ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಮ್. ಎಲ್. ಎ. ಅವರ ನೇತೃತ್ವದಲ್ಲಿ ನೆರವೇರಿಸಿದರು.

**ಕಾಸರಗೋಡು**—ಶ್ರೀಗಳಾದ ಎಮ್. ಉಮೇಶರಾವ್, ಕೆ. ಪಿ. ಅನಂತರಾವ್, ಕೆ. ಪಿ. ಮಾಧವರಾವ್, ಕೆ. ಮಹಾಬಲ ಭಂಡಾರಿ, ದಾಮೋದರ ಅಗ್ಗಿತ್ತಾಯ ಮತ್ತು ವಿಠಲ ಶೆಟ್ಟಿಯವರು ಮಂಗಳೂರಲ್ಲಿ ಬಿನ್ನವತ್ತಳೆಯೊಂದನ್ನು ಸಾರ್ವಜನಿಕರ ಸಹಿ ಸಮೇತ ಮದ್ರಾಸ್ ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರರಿಗೆ ಅರ್ಪಿಸಿತು. ಯೋಗ್ಯ ಪ್ರತಿನಿಧಿಕರಣವಿಲ್ಲದ ಕಾಸರಗೋಡು ಪಂಚಾಯತನ್ನು ರದ್ದುಗೊಳಿಸಿ ಸ್ಪೆಶಲ್ ಆಫೀಸರರನ್ನು ನೇಮಿಸಿ ಬೋರ್ಡಿನ ಚುನಾವಣೆಯನ್ನು ಬೇಗನೆ ನಡೆಸಬೇಕೆಂದು ಬಿನ್ನವತ್ತಳೆಯಲ್ಲಿ ಹೇಳಲಾಗಿತ್ತು.

**ಮೂಲ್ಕಿ**—ಸ್ಥಳೀಯ ಸರಕಾರಿ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯು ತಾ. 21ರಲ್ಲು ಜರಗಿ ಶ್ರೀಗಳಾದ. ಟಿ. ಎಸ್. ಮೂಲ್ಕಿ (ಅಧ್ಯಕ್ಷ), ಪಿ. ದೇವದಾಸ್ ಕಾಮತ್ (ಉಪಾಧ್ಯಕ್ಷ), ಯು. ಸತ್ಯನಾರಾಯಣ ಶೆಣೈ (ಕಾರ್ಯದರ್ಶಿ), ಬಿ. ಪುಂಡಲೀಕ ಕಾಮತ್ (ಉಪಕಾರ್ಯದರ್ಶಿ) ಗಳಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

**ಕುಕ್ಕೆಹಳ್ಳಿ**—ಇದೇ ತಾ 13ರಲ್ಲು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶಾರದಾಪೂಜಾ ಸಮಾರಂಭವು ಶ್ರೀ ಹಿ. ಕೆ. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್. ಸಂಜೀವ ಹೆಗ್ಡೆ ಮತ್ತು ಕೆ. ಕಾಳಪ್ಪ ಶೆಟ್ಟರು ಈ ಶಾಲೆಯನ್ನು ಹಾ| ಎ| ಶಾಲೆಯನ್ನಾಗಿ ಮಾರ್ಪಡಿಸುವ ಆವಶ್ಯಕತೆ ಕುರಿತು ಮಾತನಾಡಿದರು. ಸಭೆಯಲ್ಲಿ ಹೊಸ ಕಟ್ಟಡಕ್ಕಾಗಿ ರೂಪಾಯಿ 682/–ರ ದಾನಗಾನ ದೊರೆಯಿತು.

**ಪುತ್ತೂರು**— ಪುತ್ತೂರು ಪ್ರಾಂತದ ಜೈನ ಬಂಧುಗಳು ತಾ 16ರಲ್ಲು ಶ್ರೀ ಜಿನ ಮಂದಿರದಲ್ಲಿ ಶ್ರೀ ನೇಮಿಸಾಗರ ವರ್ಣಿಜಿಯವರ ಸ್ಮಾರಕ ಸಭೆಯು ಶ್ರೀ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಯು. ಮಂಗೇಶ ರಾವ್, ಪರಮೇಶ್ವರ ಶಾಸ್ತ್ರಿ, ವರ್ಧಮಾನ ಹೆಗ್ಗಡೆ, ನೇಮಿರಾಜ ಹೆಗ್ಗಡೆ, ಕೆ. ತಿಮ್ಮಯ್ಯ ಅರಿಗ ಮೊದಲಾದವರು ಕರ್ಮಯೋಗಿ ಮಹಾತ್ಮಾ ಸ್ವರ್ಗೀಯ ನೇಮಿಸಾಗರ ಸ್ವಾಮಿಗಳ ಆದರ್ಶ ಜೀವನವನ್ನು ಚಿತ್ರಿಸಿ ಮಾತನಾಡಿದರು.

**ಉಳ್ಳಾಲ**— ನಪಂಕ್ತಿ ಶ್ರೀ ಶಾರದಾ ಉತ್ಸವ ಸಮಿತಿ ನೇತೃತ್ವದಲ್ಲಿ ಬಿ. ಬೋ. ಹುಡುಗಿಯರ ಶಾಲೆಯಲ್ಲಿ ಜರಗಿದ ವಿವಿಧ ಕಾರ್ಯಕ್ರಮದಲ್ಲಿ ತಾ. 18ರಂದು ಮಂಗಳೂರಿನ ಮಾಸ್ಟರ್ ವಿಠಲ್ ಮತ್ತು ಬಳಗದವರ ನೃತ್ಯ ಗೋಷ್ಠಿಯು ಸಾಂಗವಾಗಿ ಜರಗಿತು.

**ದೇಲಂಪಾಡಿ**—ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘವು ತಾ. 13ರಲ್ಲು ಶ್ರೀ. ಕೇಶವರ ಹಾಡುಗಾರಿಕೆಯಿಂದಲೂ, ಸಂಘದ ಸದಸ್ಯರ ಅರ್ಥವಿವರಣೆಯಿಂದಲೂ ಯಕ್ಷಗಾನ ಕೂಟವನ್ನು ಯಶಸ್ವಿಯಾಗಿ ಜರಗಿಸಿತು. ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಭಜನೆ ಹಾಗೂ ಶಾರದಾ ಪೂಜೆಯು ಸಾಂಗವಾಗಿ ನಡೆಯಿತು.

**ಮಣಿಪಾಲ**—ಇದೇ ತಾ 10ರಲ್ಲು ವಿವೇಕಾನಂದ ಪುಸ್ತಕ ಭಂಡಾರ ಮತ್ತು ಧರ್ಮಾರ್ಥ ವಾಚನಾಲಯವನ್ನು ಉದ್ಘಾಟಿಸುತ್ತಾ ಶ್ರೀ ಕಾಶಿ ಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು ಮಾನವನ ಮಾನಸಿಕ ಮತ್ತು ಬೌದ್ಧಿಕ ಉನ್ನತಿಗೆ ಪುಸ್ತಕಗಳು ಎಷ್ಟು ಪ್ರಯೋಜನಕಾರಿ ಎಂದು ಮುಂತಾಗಿ ಬೋಧಿಸಿದರು. ಪುಸ್ತಕ ಭಂಡಾರದ ಅಧ್ಯಕ್ಷ ಶ್ರೀ ಉಪೇಂದ್ರ ಅನಂತ ಪೈಗಳು ಸ್ವಾಮಿಗಳವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಆರ್. ಎಸ್. ಕಿಣಿಯವರು ವರದಿಯನ್ನೋದಿದರು. ಡಾ. ಟಿ. ಮಾಧವ ಪೈ ಮತ್ತು ಶ್ರೀ ಯು. ಲಕ್ಷ್ಮೀನಾರಾಯಣ ಕಿಣಿಯವರು ಮಾತನಾಡಿದರು.

### ಶಾರದಾಪೂಜೆ ಸಮಾರಂಭಗಳು

**ಕೊಡ್ಲಾಡಿಯಲ್ಲಿ**— ತಾ .10ರಲ್ಲು ಅಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಉಪ್ಪೂರು ಸೀತಾರಾಮ ರಾಯರ ನೇತೃತ್ವದಲ್ಲೂ, ಇನ್ನ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ರ್‍ಯಾನುಭಾಗ ಶ್ರೀ ಐ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲೂ, **ದೇವಲ್ಕುಂದ** ವಿಜಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಆರ್. ಆರ್. ಪಾಂಗಾಳ ಕಾರ್ ಅವರ ಅಧ್ಯಕ್ಷತೆಯಲ್ಲೂ, **ಸೂಡ** ಬೋರ್ಡ್ ಶಾಲೆಯಲ್ಲೂ ಶಾರದಾಪೂಜಾ ಸಮಾರಂಭಗಳು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

**ಸುರತ್ಕಲ್**—ಅಗ್ರಹಾರದ ಹಾ. ಎ. ಶಾಲೆಯ ವರ್ಧಂತಿ ಮತ್ತು ನವರಾತ್ರಿ ಮಹೋತ್ಸವವು ಡಾ. ಎಮ್. ಪುರುಷೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಜರಗಿ ಶರದಿಪಾಜನ, ಅನ್ನದಾನ ಸಂತರ್ಪಣೆ, ವಿನೋದಾವಳಿ ಇತ್ಯಾದಿ ಕಾರ್ಯಕ್ರಮಗಳಾದುವು.

**ನಿಂಜೂರು**— ಶ್ರೀ ವಿವೇಕಾನಂದ ಸೇವಾಸಂಘದ ವಿಶೇಷ ಸಭೆಯು ತಾ. 7ರಲ್ಲಿ ಪಟೇಲ್ ಸಂಕಪ್ಪ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಹೊಸ ಕಟ್ಟಡದ ಪ್ರವೇಶೋತ್ಸವವನ್ನು ಜನವರಿ ತಿಂಗಳಲ್ಲಿ ನೆರವೇರಿಸಬೇಕೆಂದಾಯಿತು.

**ಬೆಳ್ಳಾರೆ**—ಸ್ಥಳೀಯ ಹ್ಯಾಸ್ಕೂಲಿನ ಕಲಾ ಮಂದಿರದಲ್ಲಿ ತಾ. 19ರಲ್ಲಿ ಹ್ಯಾಸ್ಕೂಲ್ ಗೇಮ್ಸ್ ಫಂಡಿನ ಸಹಾಯಾರ್ಥವಾಗಿ ಬೆಳ್ಳಾರೆ ಗೆಳೆಯರ ಬಳಗದವರು ದಿ ಹಿರಣ್ಣಯ್ಯನವರಿಂದ ರಚಿತವಾದ ದೇವದಾಸಿ ಎಂಬ ನಾಟಕವನ್ನು ಅಭಿನಯಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ವೆಂಕಪ್ಪ, ತಹಶಿಲ್ದಾರರು ವಹಿಸಿದ್ದರು. ಬಳಗದ ಅಧ್ಯಕ್ಷ ಶ್ರೀ ಎನ್. ವೆಂಕಟ ಸುಬ್ರಾಯರು ಸ್ವಾಗತ ಮಾತುಗಳನ್ನಾಡಿದರು. ಶಾಲಾ ಹೆಡ್ಮಾಸ್ತರ ಶ್ರೀ ಎಮ್. ನಾರಾಯಣರಾಯರು ಧನ್ಯವಾದಗಳನ್ನಿತ್ತರು.

## ಮದ್ರಾಸು

**ಮಾನ್ಯ ಶೆಟ್ಟಿ ದಂಪತಿಗಳಿಗೆ ವಿದಾಯ ಸತ್ಕಾರ**—ರಾಜ್ಯ ಪುನರ್ರಚನಾ ಕಾರ್ಯಕ್ರಮದ ಮೇರೆಗೆ ದ. ಕ. ಜಿಲ್ಲೆಯು ಮೈಸೂರಿಗೆ ಸೇರಿರುವುದರಿಂದ, ದ. ಕ. ಜಿಲ್ಲೆಯಿಂದ ಮದ್ರಾಸು ಶಾಸನ ಸಭೆಗೆ ಆರಿಸಲ್ಪಟ್ಟ ಈಗ ಆರೋಗ್ಯ ಮಂತ್ರಿ-ಯಾಗಿರುವ ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀಮತಿ ಶೆಟ್ಟಿರನ್ನು ಬೀಳ್ಕೊಡುವ ವಿದಾಯ ಸತ್ಕಾರ ಕೂಟವು ತಾ. 19ರಲ್ಲು ಜರಗಿತು. ಮದ್ರಾಸಿನ ರಾಜ್ಯಪಾಲ್ ಶ್ರೀ ಶ್ರೀ ಪ್ರಕಾಶ, ಮುಖ್ಯ ಮಂತ್ರಿ ಶ್ರೀ ನಾಡಾರ್, ಮತ್ತು ಇತರ ಮಂತ್ರಿಗಳು, ಮುಖ್ಯ ನ್ಯಾಯಾಧೀಶರು, ರಾಜಕೀಯ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ವಿಶೇಷತ ಹಾಜರಿದ್ದರು.

**ದಸರಾ ಮಹೋತ್ಸವ**— ಮದ್ರಾಸು ಕರ್ನಾಟಕ ಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವವು ತಾ. 14 ರಲ್ಲಿ ಹೊಟೆಲ್ ದಾಸಪ್ರಕಾಶದ ಪ್ರಕಾಶ ಮಂಟಪದಲ್ಲಿ ಶ್ರೀ ಆರ್. ನಾಗೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಮ್. ಬಿ. ಶೆಟ್ಟಿಯವರು ದಸರಾ ಮಹತ್ವದ ಕುರಿತು ಮಾತನಾಡಿದರು. ಸಂಘದ ಸದಸ್ಯರು ಶ್ರೀ ಪರ್ವತವಾಣಿಯವರ 'ಬಹದೂರ್ ಗಂಡ' ಎಂಬ ನಾಟಕವನ್ನು ಮನೋರಂಜಕವಾಗಿ ಅಭಿನಯಿಸಿದರು. ಕಾರ್ಯದರ್ಶಿ ಶ್ರೀ ಕೆ. ವೈ. ನಾರಾಯಣ ರಾಯರು ಧನ್ಯವಾದಗಳನ್ನಿತ್ತರು.

## ಭದ್ರಾವತಿ

ಭದ್ರಾವತಿ ನ್ಯೂಟೌನ್‌ನಲ್ಲಿರುವ ಶ್ರೀ ಶಂಕರ ಟಾಕೀಸ್ ಕಟ್ಟಡದಲ್ಲಿ ತಾ. 15ರಲ್ಲು ಸಂಜೆ ಮದ್ರಾಸಿನ ಆರ್ಥಿಕ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ರಾಮಸ್ವಾಮಿ ಪಡಯಾಚಿ ಮತ್ತು ಉಡುಪಿಯ ಶ್ರೀ ಟಿ. ಎ. ಪೈ, ಎಮ್. ಎಲ್. ಎ.ರವರು ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಭದ್ರಾವತಿ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಬಿ. ಸಿ. ರಾಜಶೇಖರನವರು ಸ್ವಾಗತ ಭಾಷಣ ಮಾಡಿದರು. ಭದ್ರಾವತಿ ತಮಿಳ್ ಸಂಘದ ಪರವಾಗಿ ಶ್ರೀ ಎಮ್. ವೇಲಾಯುಧನ್ ತಮಿಳು ಕೂಲಿಗಾರರ ಸಂಘದ ಪರವಾಗಿ ಶ್ರೀ ಜೋಸೆಫ್ ನ್ಯೂಟೌನ್ ಬೋರ್ಡ್ ಸದಸ್ಯ ಶ್ರೀ ಎಚ್. ಎಸ್. ಸೀತಾರಾಮಯ್ಯನವರು ಮತ್ತು ಗ್ರಾಮದ ರೈತರ ಪರವಾಗಿ ಮಾನಪತ್ರ, ಪುಷ್ಪಹಾರಗಳನ್ನರ್ಪಿಸಿದರು. ಶ್ರೀ ಕೆ. ಎಲ್. ರಾಮಚಂದ್ರ ಶೆಟ್ಟರು ವಂದನೆಗಳನಿತ್ತರು. ಸಚಿವರುಗಳ ಮತ್ತು ಎಮ್. ಎಲ್. ಎ.ರವರ ಗೌರವಾರ್ಥವಾಗಿ ಸಂಜೆ ಕಬ್ಬಿಣ ಕಾರ್ಖಾನೆ ಅಧ್ಯಕ್ಷರ ಬಂಗ್ಲೆಯಲ್ಲಿ ಶ್ರೀಗಳಾದ ಬಿ. ಮಾಧವಾಚಾರ್ಯ, ಬಿ. ವಿ. ರಾಜಶೇಖರ್, ಕೆ. ಎಸ್. ರಾಮಚಂದ್ರ ಶೆಟ್ಟರು ಸತ್ಕಾರ ಕೂಟ ಏರ್ಪಡಿಸಿದ್ದರು.

**ಸೆಕಂಡರಿ ಶಾಲೆಗಳು**

ತಮ್ಮ ಉಪಯೋಗಾರ್ಥವಾಗಿ '**ನವಯುಗ**' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 456-N /50 ತಾ. 12-1-50ನೇ ಪ್ರೊಸಿಡಿಂಗ್ಸನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

**ಮ್ಯಾನೇಜರ್.**

ದಿ| ಕಿಲ್ಲೆಯವರ ಪುಸ್ತಕಗಳು

**ಪ್ರಾಚೀನ ತುಳುನಾಡು**

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾ ಪತ್ರ ಬೆಲೆ 2-0-0

**ಭಾರತದ ಕರ್ಣ**

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

**ಮುರಲಿ**

ಮೇಲ್ದರಗತಿಯ ಕವಿತೆಗಳ ಸಂಗ್ರಹ.

ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**[ENGLISH MADE EASY]**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

**ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ**

ಬೆಲೆ:– ಸಾಧಾರಣ ಪ್ರತಿ– ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

# ಮಂಗಳೂರು

**ಮಂಗಳೂರಲ್ಲಿ ಮದ್ರಾಸ್ ಮಂತ್ರಿ ಶ್ರೀ ಪರಮೇಶ್ವರನ್**— ಮದ್ರಾಸಿನ ಹರಿಜನಾಭಿವೃದ್ಧಿ ಮತ್ತು ಹಿಂದೂ ರಿಲೀಜಿಯಸ್ ಎಂಡ್ ಚೆರಿಟೆಬಲ್ ಎಂಡೋಮೆಂಟ್ಸ್ ಖಾತೆಗಳ ಮಂತ್ರಿ ಶ್ರೀ ಪರಮೇಶ್ವರನ್‌ರವರು ತಾ. 15ರಲ್ಲಿ ಸಂಜೆ ಮಂಗಳೂರಿಗೆ ಆಗಮಿಸಿದಾಗ ಸರಕಾರಿ ಹಾಗೂ ಸರಕಾರೇತರ ಬಂಧುಗಳು ಸ್ವಾಗತ ನೀಡಿದರು.

ಕರ್ನಾಟಕ ಶಿವ ಸೇವಾ ಸಮಿತಿ, ಪಾಂಡೇಶ್ವರ, ಮಂಗಳೂರು—ಇವರ ಆಶ್ರಯದಲ್ಲಿ ಪಾಂಡೇಶ್ವರ ಮುನಿಸಿಪಲ್ ಶಾಲೆಯಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಂತ್ರಿಗಳು ಮಾತನಾಡುತ್ತಾ 'ಹರಿಜನ ಸಮಸ್ಯಾ ಪರಿಹಾರಕ್ಕೆ ಬ್ರಿಟಿಷರು 200 ವರ್ಷಗಳಿಂದ ಮಾಡಿದ್ದಕ್ಕಿಂತಲೂ ಕಾರ್ಯಕ್ರಮಗಳನ್ನು ಕಾಂಗ್ರೆಸು ಹತ್ತು ವರ್ಷಗಳಲ್ಲಿ ಮಾಡಿರುತ್ತದೆ. ಅಸ್ಪೃಶ್ಯತಾ ನಿವಾರಣೆಯು ಬರೇ ಕಾನೂನುಗಳಿಂದ ಆಗಲಾರದು. ಹರಿಜನ ಸಮಸ್ಯೆಯ ನಿವಾರಣಾ ಕಾರ್ಯದಲ್ಲಿ ಆರ್ಥಿಕ ಪ್ರಶ್ನೆಗೆ ಪ್ರಮುಖ ಸ್ಥಾನವಿದೆ. ಹರಿಜನ ಸಮಾಜದ ಸರ್ವತೋಮುಖ ಪ್ರಗತಿ ಸಾಧಿಸಬೇಕಾದರೆ ಸಮಾಜದ ಆರ್ಥಿಕ ಅಭಿವೃದ್ಧಿ ಅತ್ಯಗತ್ಯವಾಗಿ ಆಗಬೇಕಾಗಿದೆ. ಹರಿಜನ ಮುಖಂಡರು ಒಬ್ಬರೊಡನೊಬ್ಬರು ಜಗಳವಾಡದೆ ಐಕಮತ್ಯದಿಂದಿರಬೇಕು. ಹರಿಜನರ ಏಳಿಗೆಗಾಗಿ ದುಡಿಯುವ ಅಖಿಲಭಾರತ ದಲಿತ ವರ್ಗಗಳ ಲೀಗಿಗೆ ಬೆಂಬಲ ನೀಡಬೇಕು' ಎಂದರು. ಸಭಾರಂಭದಲ್ಲಿ ಶ್ರೀ ಚಿತ್ತರಂಜನ ದಾಸರು ಮಂತ್ರಿಗಳಿಗೆ ಮಾನಪತ್ರ ಒಪ್ಪಿಸಿದರು. ಶ್ರೀ ಗೋಪಾಲ ಸಾಲ್ಯಾನರು ಕಾಲೋಚಿತ ಭಾಷಣವಿತ್ತರು. ಸಭಾಧ್ಯಕ್ಷ ಡಾ. ಮಲ್ಯರು ಹಿತವಚನಗಳನ್ನಾಡಿದರು. ಶ್ರೀ ಎ. ನಾರಾಯಣ ನವರು ಧನ್ಯವಾದವಿತ್ತರು.

**ಮಂತ್ರಿ ಶ್ರೀ ಪರಮೇಶ್ವರನ್ ರವರು**— ತಾ. 16ರಲ್ಲು ಸೂಟರ್ ಪೇಟೆಯ ಹರಿಜನ ವೆಲ್‌ಫೇರ್ ಶಾಲೆಯಲ್ಲಿ ಜರಗಿದ ಹರಿಜನರ ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆಸ್ ಸಂಸ್ಥೆಯೊಂದೇ ಹರಿಜನರ ಹಿತರಕ್ಷಣೆಗಾಗಿ ದುಡಿಯುವ ಸಂಸ್ಥೆಯೆಂದರು. ಮುನಿಸಿಪಲ್ ಚೇರ್‌ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಈಶ್ವರ ಎಮ್. ಎಲ್. ಎ. ಅವರು ಮಂತ್ರಿಗಳಿಗೆ ಮಾನಪತ್ರ ಅರ್ಪಿಸಿದರು. ಶ್ರೀ ವಿಠಲ ನವರು ಧನ್ಯವಾದಗಳನ್ನಿತ್ತರು.

**ಭೋಜನ ಸತ್ಕಾರದಲ್ಲಿ ಭಾಷಣ**— ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನ ಸಭಾಮಂದಿರದಲ್ಲಿ ತಾ. 16ರಲ್ಲು ರಾತ್ರಿ ಅತಿಥೇಯ ಸಮಿತಿಯವರಿತ್ತ ಭೋಜನ ಸತ್ಕಾರ ಕೂಟದಲ್ಲಿ ಮಾನ್ಯಮಂತ್ರಿ ಶ್ರೀ ಪರಮೇಶ್ವರನ್ ರವರು ಮಾತನಾಡುತ್ತಾ, ಪ್ರಾಂತ್ಯ ಪುನರ್ರಚನಾ ಸಮಸ್ಯೆಯಲ್ಲಿ ಉತ್ತರ ಭಾರತದಲ್ಲಿ ತಿಕ್ಕಾಟ ಗೊಂದಲಗಳಾಗಿದ್ದರೂ ದಕ್ಷಿಣ ಭಾರತದಲ್ಲಿ ಅಂತಹ ಗೊಂದಲ ಘರ್ಷಣೆಗಳಾಗಲಿಲ್ಲವೆಂದು ಹೇಳಿದರು. ನಾವು ಯಾವ ಭಾಷೆಯನ್ನು ಆಡುವವರೇ ಆಗಿರಲಿ, ಯಾವ ಪ್ರಾಂತಕ್ಕೆ ಸೇರಿರಲಿ, ತಮ್ಮ ಅಭಿವೃದ್ಧಿ ಸಾಧಿಸುವ ಜೊತೆಗೆ, ಸಮಗ್ರದೇಶದ ಸ್ಥಿರತೆ ಮತ್ತು ಏಕತೆಯ ದೃಷ್ಟಿಕೋಣವನ್ನಿರಿಸಿಕೊಂಡು ಪರಸ್ಪರ ಸೌಹಾರ್ದ ಸಹಕಾರಗಳಿಂದ ಕಾರ್ಯತತ್ಪರರಾಗಬೇಕು ಎಂದು ಹೇಳಿದರು. ಆರಂಭದಲ್ಲಿ ಶ್ರೀ ಎನ್. ಎಸ್. ಸುವರ್ಣ, ಎಮ್. ಎಲ್. ಎ. ಅವರು ಮಂತ್ರಿಗಳಿಗೆ ಸ್ವಾಗತ ಬಯಸಿದರು.

**ಶಾಲಾ ದಿನಾಚರಣೆ**— ಸ್ಥಳೀಯ ಗಣಪತಿ ಹೈಸ್ಕೂಲಿನ ಶಾಲಾ ದಿನಾಚರಣೆಯು ತಾ. 14ನೆ ವಿಜಯದಶಮಿ ದಿನ ಜಿಲ್ಲಾ ನ್ಯಾಯಾಧೀಶ ಶ್ರೀ ಎಮ್. ಆರ್. ಶಿಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸೋಮಶೇಖರ ರಾಯರು ಸ್ವಾಗತಭಾಷಣ ಮಾಡಿದರು. ಶ್ರೀ ಬಿ. ಆ. ಕರುಣಾಕರನವರು ಸ್ವಸ್ತಿವಾಚನ ಮಾಡಿದರು. ಶ್ರೀ ಮಂಗೇಶ ರಾಯರು ಧನ್ಯವಾದಗಳನ್ನಿತ್ತರು.

**ಮಹಮ್ಮದ ಪೈಗಂಬರರ ಜಯಂತಿ**— ದಿ. ಮುಸ್ಲಿಂ ಎಜ್ಯುಕೇಶನಲ್ ಎಸೋಸಿಯೇಶನ್ ಬದ್ರಿಯಾ ಮುಹಲ್ಲಾ ಮಂಗಳೂರು—ಇದರ ನೇತೃತ್ವದಲ್ಲಿ ತಾ. 17ರಲ್ಲು ಸಂಜೆ ಪೈಗಂಬರರ ಜನ್ಮದಿನಾಚರಣೆಯು ಶ್ರೀ ಸೆಯ್ಯದ್ ಮೊಹಿದ್ದಿನ್‌ಷಾ ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಡಾ. ಎಮ್. ಕುಂಞಮ್ಮು ಸಾಹೇಬರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಹಬೀಬುರ್ರಹ್ಮಾನ್ ಸಾಹೇಬ್ ಮತ್ತು ಮೌಲವಿ ಅಬುಬಕರ್ ಸಾಹೇಬರು ಪೈಗಂಬರರ ಆದೇಶಗಳನ್ನೆತ್ತಿ ಮಾತನಾಡಿದರು. ಶ್ರೀ ಎಸ್. ಎಮ್. ಸಾಲಿಹಿಯವರು ಧನ್ಯವಾದವಿತ್ತರು.

**ಕುಮಾರಿ ವಿ. ಕಮಲಾದೇವಿ ಉಚ್ಛ ಶಿಕ್ಷಣಕ್ಕೆ**— ಮಂಗಳೂರು ರಥಬೀದಿಯ ಸರಕಾರಿ ಹುಡುಗಿಯರ ಹೈಸ್ಕೂಲಿನ ಅಧ್ಯಾಪಿಕೆಯಾಗಿದ್ದ ಕುಮಾರಿ ವಿ. ಕಮಲಾದೇವಿಯವರನ್ನು ಇಂಗ್ಲಾಂಡಿನಲ್ಲಿ ವಿಜ್ಞಾನದಲ್ಲಿ ಹೆಚ್ಚಿನ ಅಭ್ಯಾಸ ಪಡೆಯುವ ಬಗ್ಗೆ ಭಾರತ ಸರಕಾರವು ಆರಿಸಿದ್ದು ಅವರು ಇದೇ ತಾ. 17ರಲ್ಲಿ ಮುಂಬಯಿಗಾಗಿ ಇಂಗ್ಲಾಂಡಿಗೆ ತೆರಳಿದರು.

**ಮಂಗಳೂರು ಹಾಸನ ರೈಲ್ವೆ**— ತಾ. 17ರಲ್ಲು ಎರ್ನಾಕುಲಂ—ಕೊಟ್ಟಯಂ ರೈಲ್ವೆಯ ಉದ್ಘಾಟನಾ ಸಮಾರಂಭಕ್ಕೆ ರೈಲ್ವೆ ಸಲಹಾ ಸಮಿತಿಯ ಸದಸ್ಯರಾದ ಮಂಗಳೂರಿನ ವೆಸ್ಟರ್ನ್ ಇಂಡಿಯಾ ಟೈಲ್ ಮ್ಯಾನ್ಯುಫೆಕ್ಚರರ್ಸ್ ಎಸೋಸಿಯೇಶನಿನ ಕಾರ್ಯದರ್ಶಿ ಶ್ರೀ ಪಿ. ವಿ. ವೆಂಕಟರಾಮ ಐಯ್ಯರರು ತೆರಳಿದ್ದು ಉದ್ಘಾಟನಾ ಸಮಾರಂಭದಲ್ಲಿ ಜರುಗಿದ ಸತ್ಕಾರ ಕೂಟದ ಸಮಯ ಶ್ರೀ ಐಯ್ಯರರು ರೈಲ್ವೆ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳೊಡನೆ ಹಾಸನ—ಮಂಗಳೂರು ರೈಲ್ವೆಯ ಕುರಿತಾಗಿ ವಿಚಾರಿಸಿದಾಗ, ಹಾಸನ ಮಂಗಳೂರು ರೈಲ್ವೆಯ ಸರ್ವೆ ವರದಿಯನ್ನು ಸದರ್ನ್ ರೈಲ್ವೇಯವರಿಂದ ರೈಲ್ವೆ ಬೋರ್ಡು ನಿರೀಕ್ಷಿಸುತ್ತಿದೆಯೆಂದೂ, ಇತ್ತೀಚೆಗೆ ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬಂದ ವರದಿಯು ನಿರಾಧಾರವೆಂದೂ, ತಾನು ಮದ್ರಾಸಿಗೆ ತೆರಳಿದಾಗ ಅಲ್ಲಿ ಈ ವಿಚಾರದಲ್ಲಿ ಪತ್ರಿಕಾ ಹೇಳಿಕೆಯೊಂದನ್ನು ಕೇಳುವುದಾಗಿಯೂ ತಿಳಿಸಿರುವರು.

**ದ. ಕ. ಜಿಲ್ಲಾ ಅಭಿವೃದ್ಧಿ ಸಂಘದ**— ಕೃಷಿ ಮತ್ತು ನೀರಾವರಿ ಉಪಸಮಿತಿಗಳ ಸಭೆಯು ಶ್ರೀ ಬಿ. ವಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್. ಜಿ. ಪಂಡೆ ಮತ್ತು ಕೆ. ಉಗ್ಗಪ್ಪ ಸೆಟ್ಟರು ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಕೈಕೊಳ್ಳಲಿರುವ ಕೃಷಿ ಮತ್ತು ನೀರಾವರಿ ಯೋಜನೆಗಳ ಕುರಿತು ಅಭ್ಯಸಿಸಿ ತಮ್ಮ ಸೂಚನೆ ಸಲಹೆಗಳನ್ನು ಕೊಡಬೇಕೆಂದಾಯಿತು. ಜಿಲ್ಲೆಯ ಕೃಷಿ ಉತ್ಪಾದನೆಗೆ ಪ್ರೋತ್ಸಾಹವೀಯುವಂತೆ, ಇಲ್ಲಿಗೊಂದು ಮಣ್ಣಿನ ಪರೀಕ್ಷೆ ನಡೆಸುವ ಪ್ರಯೋಗಶಾಲೆಯನ್ನು ಮಂಜೂರುಮಾಡುವಂತೆ ಸರಕಾರವನ್ನು ವಿನಂತಿಸಲಾಯಿತು.

**ಅಂಚೆ ಸೌಕರ್ಯ**— ಮೂಡಬಿದ್ರೆ, ಕಾರ್ಕಳ ಮತ್ತು ಉಡುಪಿಗೆ ವಿಮಾನದ ಮೂಲಕ ಬರುವ ಟಪ್ಪಾಲಿನ ಬಟವಾಡೆ ಮತ್ತು ಆ ಸ್ಥಳಗಳಲ್ಲಿ ವಿಮಾನದ ಮೂಲಕ ಹೋಗುವ ಟಪ್ಪಾಲುಗಳನ್ನು ಕ್ಷಿಪ್ರದಲ್ಲಿ ಸಾಗಿಸುವ ವ್ಯವಸ್ಥೆಗೋಸ್ಕರ ಇದೇ ತಾ 16ರಿಂದ ಮಂಗಳೂರು ಮತ್ತು ಉಡುಪಿ ನಡುವೆ ಒಂದು ಮೋಟಾರ್ ಮೈಲ್ ಸರ್ವಿಸ್ ಆರಂಭವಾಗಿದೆ.

**ದ. ಕ. ಜಿಲ್ಲಾಬೋರ್ಡಿನ ಸಾಮಾನ್ಯ ಸಭೆಯು** ಇದೇ ತಾ. 27ರಂದು ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ಬೋರ್ಡು ಸಭಾಭವನದಲ್ಲಿ ಜರಗುವುದೆಂದು ಜಿಲ್ಲಾ ಬೋರ್ಡು ಅಧ್ಯಕ್ಷರು ತಿಳಿಸುತ್ತಾರೆ.

**ಕನ್ಯಾಮರಿಯಮ್ಮನವರಿಗೆ ಭಕ್ತಿ ಪ್ರಾರ್ಥನೆ**— ಪ್ರತಿ ಶನಿವಾರ ಸಾಯಂಕಾಲ ಗಂಟೆ 6ರಿಂದ 45 ನಿಮಿಷಗಳ ವರೆಗೆ ವೆಲೆನ್ಸಿಯಾ ಇಗರ್ಜಿಯಲ್ಲಿ "ನಿತ್ಯಪೂ ಸಹಾಯ" ನೀಡುವ ಗೋಸುಗ ಇತ್ತೀಚೆಗಿನಿಂದ ನಡೆಯುತ್ತಿದ್ದು ಅದರ ಫಲರೂಪವಾಗಿ ಅನೇಕ ಸದುಪಯೋಗಗಳನ್ನು ಕ್ರೈಸ್ತರೂ ಇನ್ನಿತರರೂ ಈಗಾಗಲೇ ಪಡೆಯುತ್ತ ಬಂದಿರುವರು. ಪತ್ರ ಮುಖೇನ ಪರಊರಿನಿಂದಲೂ ಆಗಾಗ ಪ್ರಾರ್ಥನೆ ಬೇಡಿಕೆಗಳು ಬರುತ್ತಾ ಇವೆ. ಉದ್ಯೋಗಪ್ರಾಪ್ತಿ, ರೋಗನಿವಾರಣೆ ಹಾಗೂ ಸಂಕಟಗಳ ಪರಿಹಾರ, ಮನಶ್ಶಾಂತಿಗಳು ಈಗಾಗಲೇ ಜಯಗೊಂಡಿರುವುವು. ಮಹಾಜನರು ಈ ಸುಸಂದರ್ಭವನ್ನು ಪಡೆಯಬಹುದಾಗಿದೆ.

**ನೃತ್ಯ ವಿದ್ಯಾನಿಲಯ**— ಮಹಾನವಮಿ ದಿವಸ ನೃತ್ಯದಿಗ್ದರ್ಶಕರಾದ ಶ್ರೀ. ಯು. ಎಸ್. ಕೃಷ್ಣರಾಯರಲ್ಲಿ, ನಗರ ಸಭಾಪತಿಗಳಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು 'ನೃತ್ಯ ವಿದ್ಯಾನಿಲಯ' ಎಂಬ ನೃತ್ಯ ಶಾಲೆಯನ್ನು ಉದ್ಘಾಟಿಸಿದರು.

## ಕಾಂಗ್ರೆಸು ಮತ್ತು ಪ್ರತಿಪಕ್ಷ

### ರಾಜಾಜಿಯ ಹೇಳಿಕೆ

(೧ನೇ ಪುಟದಿಂದ)

ನಾನು ಕಾಂಗ್ರೆಸಿನ "ಒಳಗಡೆ" ಪ್ರತಿಪಕ್ಷವೊಂದರ ರಚನೆಯಾಗಬೇಕೆಂಬ ಸಲಹೆಯನ್ನು ಮುಂದಿಡಿಸಿದೆನೆನ್ನುವ ಅಸಾಧ್ಯ ವಿಚಾರವನ್ನು ಎಲ್ಲಿಂದ ಸಂಗ್ರಹಿಸಲಾಯಿತೋ ನನಗೆ ತಿಳಿಯದು. ನಾನೆಂದೂ ಅಂತಹ ಸಲ್ಲದ ಸೂಚನೆಯನ್ನು ಮಾಡುವಂತಿದ್ದಿಲ್ಲ; ಮಾಡಿಯೂ ಇಲ್ಲ. ನಾನು (ಗಾಂಧೀ ಗ್ರಾಮದಲ್ಲಿ) ಹೇಳಿದುದಾದರೂ ಏನು? ಕಾಂಗ್ರೆಸು ಪಕ್ಷಕ್ಕಿದ್ದ ಯೋಗ್ಯತೆ ಮತ್ತು ಅದು ಇಂದು ಕುಂದುತ್ತಾ ಹೋಗುತ್ತಿರುವ ಸಂಗತಿಯನ್ನು ನಾನು ನನ್ನ ಭಾಷಣದಲ್ಲಿ ಪ್ರಸ್ತಾಪಿಸಿದ್ದೆ. ಕಾಂಗ್ರೆಸು ಪಕ್ಷದ ನೈತಿಕ ಯೋಗ್ಯತೆಯು ಹ್ರಾಸವಾಗುತ್ತಿರುವುದಕ್ಕೆ ಸಬಲ ಪ್ರತಿಪಕ್ಷವೊಂದರ ಅಭಾವವೂ ಒಂದು ಕಾರಣವಾಗಿದೆ ಎಂದಿದ್ದೆ. ಪ್ರತಿಪಕ್ಷವು ಸಬಲವೆನಿಸಿಕೊಳ್ಳಬೇಕಾದರೆ ವಿಸ್ತಾರವಾದ ಬೆಂಬಲವನ್ನು ಪಡೆಯುವುದಕ್ಕೆ ಸಾಧ್ಯವಾಗುವಂತಹ ಕಾರ್ಯಕ್ರಮ ಮತ್ತು ಧೋರಣೆಯು ಬುಡಕಟ್ಟು ಅವಶ್ಯಕವಾಗಿದೆ ಎಂದು ಹೇಳಿದ್ದೆ; ಇದಕ್ಕಾಗಿ ಕಾಂಗ್ರೆಸು ಏನು ಮಾಡುತ್ತಿದೆಯೋ ಅದಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಹೊಂದಿರುವ ನಿಸ್ಪೃಹಸ್ಥರ ಮನೋಭಾವನೆಯು ತಳಹದಿಯು ಇರಬೇಕೆಂದು ನುಡಿದಿದ್ದೆ. ಕಾಂಗ್ರೆಸಿನೊಡನೆ ಹೋರಾಟ ಮಾಡುವ ಸಲುವಾಗಿ ತನ್ನ ಧ್ಯೇಯ ಧೋರಣೆಗಳನ್ನಿಟ್ಟುಕೊಂಡಿರುವ ಕಮ್ಯುನಿಸ್ಟ ಪಕ್ಷದಿಂದಾಗಲೀ ಯಾವುದೇ ಸಮಾಜವಾದಿ ಪಕ್ಷದಿಂದಾಗಲೀ ಒಳ್ಳೆಯ ವಿರೋಧಿ ಪಕ್ಷವನ್ನು ಅಪೇಕ್ಷಿಸುವುದು ವ್ಯರ್ಥವೆಂಬುದೂ ನಾನು ಹೇಳಿದ್ದೆ. ಅಂತಹ ಹೋರಾಟವು ಜನರಲ್ಲಿ ವಿಶ್ವಾಸವನ್ನು ಹುಟ್ಟಿಸಲಾರದು. ಅಂತೂ ಕಾಂಗ್ರೆಸು ಸಂಸ್ಥೆಯು "ಒಳಗಡೆ" ಒಂದು ಪ್ರತಿಪಕ್ಷವನ್ನು ಕಟ್ಟಬಯಸುವ ಎಂಬ ವಿಚಾರವು ಕೇವಲ ಅಸಾಧ್ಯವಾದುದಾಗಿದೆ ಮತ್ತು ನಾನು ಅಂತಹ ಸೂಚನೆಯನ್ನು ಮುಂದಿಟ್ಟೆನೆಂದು ಹೇಳುವುದಾಗಲೀ ಅದನ್ನು ಯೋಗ್ಯವೆಂದು ಭಾವಿಸಿ ಕಾರ್ಯಾನ್ವಿತಗೊಳಿಸಲು ಧಾವಿಸುವುದಾಗಲೀ ಅಸಂಬದ್ಧವೇ ಸೈ!

— ರಾಜಾಜಿಯ ಸ್ಪಷ್ಟೀಕರಣ.

[ಗಾಂಧೀಗ್ರಾಮದಲ್ಲಿ ರಾಜಾಜಿ ಮಾಡಿದ ಭಾಷಣದ ವರದಿಯಲ್ಲಿ ತಪ್ಪು ಇತ್ತೆಂಬುದನ್ನು ಮೇಲಿನ ಸ್ಪಷ್ಟೀಕರಣದಿಂದ ತಿಳಿದುಕೊಳ್ಳಬಹುದು.]

**ಕಾರ್ಕಳ ಡಿ. ಮು. ಕೋರ್ಟಿನಲ್ಲಿ**

O. S. No. 289/1956.

ಮೋನು ಸೆಟ್ಟಿ —ವಾದಿ

ಭೋಜ ಸೆಟ್ಟಿ —ಪ್ರತಿವಾದಿ

ಸದ್ರಿ ದಾವೆಯ ಪ್ರತಿವಾದಿ ಹಿಮಂತೂರು ಮೂಡ್ರಗುತ್ತು ಮೋನು ಸೆಟ್ರ (ಪ ಕೊಸು ಸೆಟ್ಟಿರ ಸಹಾ) ಮಗ ಹಾಲಿ ಬೊಂಬಾಯಿ ಶಹರಿನಲ್ಲಿರುವವಗೆ ಈ ಮೂಲಕ ತಿಳಿಸುವುದೇನೆಂದರೆ:—

ನಿಮ್ಮಿಂದ, ಸಾಲುಪಟ್ಟಿ ಪ್ರಕಾರ ಸಹಾ ವಾದಿಗೆ ಬರಾಬ ರೂಪಾಯಿ 336-4-0ನ್ನು ಬರಮಾಡಿಕೊಳ್ಳುವರೆ ವಾದಿಯು ಮಾಡಿರುವ ಮೇಲ್ಕಾಣುವ ದಾವೆಯು ತಾ. 29—10—56ಕ್ಕೆ ತನಿಖೆಗೆ ಇಟ್ಟಿದೆ. ಸದ್ರಿ ದಿವಸ ನೀವು ಹಾಜರಾಗಿ ಉತ್ತರಿಸದಿದ್ದರೆ ನಿಮ್ಮನ್ನು ಏಕಪಕ್ಷ ಮಾಡಿ ನಂಬ್ರವು ಪಡಿಚಾ ಮಾಡಲ್ಪಡುವುದು. ತಿಳಿದಿರಲಿ.

ಕೋರ್ಟಿನ ಹುಕುಂ ಪ್ರಕಾರ

K. M. Hegde.
Vakil for Plff.

Karkala 20-10-56.

ತಾ. 25-10-56ರಿಂದ ಪ್ರಚಂಡ 3ನೇ ವಾರ

ಓಹಿಲೇಶ್ವರ (ಕನ್ನಡ)

ನಿರಾಕಾರನೂ ಚಿದ್ಘನ ಸ್ವರೂಪನೂ ಆದ ಪರ ಶಿವನಲ್ಲಿ ಭಕ್ತಿ ಇಟ್ಟು ಮುಕ್ತಿ ಪಡೆದ ಓಹಿಲನ ಪವಿತ್ರ ಜೀವನ ಕಥೆ.

ನಿಮ್ಮ ಅಚ್ಚುಮೆಚ್ಚಿನ ತಾರಾಗಣ! ಇಂದೇ ನೋಡಿರಿ!

ಜ್ಯೋತಿ ಟೋಕೀಸ್, ಮಂಗಳೂರು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

*For rates for advertising in colours and special positions, please write to:*

*ADVERTISEMENT MANAGER,*
'NAVAYUGA'
**Post Box No. 22, UDIPI, S. K.**

ಗೋವಿಜಯ
(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತ, ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

# ಆಹಾರ

## ಆರೋಗ್ಯ ರಕ್ಷಣೆಯಲ್ಲಿ ಜೀವಸತ್ವಗಳ ಪಾತ್ರ

### ನಿಮ್ಮ ಆಹಾರಾಭ್ಯಾಸವನ್ನು ಕ್ರಮ ಪಡಿಸಿಕೊಳ್ಳಿರಿ!

"ಎ" ಜೀವ ಸತ್ವ— ಈ ಜೀವಸತ್ವವು ಶಿಶುವಿಗೆ ಅತ್ಯಗತ್ಯ. ಇದರಿಂದ ಮಗುವಿನ ಬೆಳವಣಿಗೆಯು ಸಮರ್ಪಕತೆಯನ್ನು ಹೊಂದುವುದು, ಮಗುವಿನ ದೇಹದಲ್ಲಿಯೂ ದೊಡ್ಡವರಲ್ಲಿಯೂ ವ್ಯಾಧಿನಿರೋಧಕ ಶಕ್ತಿಯನ್ನು ಹೆಚ್ಚಿಸುವುದು.

ಈ ಜೀವ ಸತ್ವದ ಅಭಾವದಿಂದ ಕಣ್ಣಿನ ಬೇನೆಗಳುಂಟಾಗುವುವು, ಬೆಳವಣಿಗೆಯು ನಿಂತು ಹೋಗುವುದು. ಶರೀರದ ತೂಕವು ಕಡಿಮೆಯಾಗುವುದು, ಕಾರ್ಯೋತ್ಸಾಹವು ಕಡಿಮೆಯಾಗುವುದು ವ್ಯಾಧಿಗ್ರಸ್ತರಾಗುವ ಸಂಭವ ಹೆಚ್ಚುವುದು ಮತ್ತು ಶ್ವಾಸ ಸಂಬಂಧವಾದ ರೋಗಗಳು ಸಂಭವಿಸುವುವು.

"ಎ" ಜೀವ ಸತ್ವವು ದೊರೆಯುವ ಆಹಾರ ವಸ್ತುಗಳು— ಕೆನೆ ತೆಗೆಯದಿರುವ ಹಾಲು, ಬೆಣ್ಣೆ, ಕೆನೆ ಮೊಸರು, ಮೀನೆಣ್ಣೆ, ಹೊಸದಾದ ಹಸುರು ಕಾಯಿಪಲ್ಯಗಳು, ಕೆಂಪು ಮೂಲಂಗಿ, ಗೆಣಸು, ಹಸಿಯ ಬಟಾಣಿ, ಮಾವು, ಪರಂಗಿ ಹಣ್ಣು, ಖರ್ಜೂರ, ಹಲಸಿನ ಹಣ್ಣು, ಕಿತ್ತಳೆ ಹಣ್ಣು, ಕಡಲೆ, ಅವರೆ ಮತ್ತು ಕೊತ್ತಂಬರಿ ಬೀಜ.

"ಬಿ" ಜೀವ ಸತ್ವ ಎಲ್ಲಾ ವಯಸ್ಸಿನ ಜನರ ಆರೋಗ್ಯ ರಕ್ಷಣೆಗೂ ಆವಶ್ಯಕ. ಇದರ ಅಭಾವದಿಂದ ಅರುಚಿ, ಕುಂದಿದ ಬೆಳವಣಿಗೆ, ಆಹಾರ ಜೀರ್ಣ ಕಾರ್ಯ ಮತ್ತು ರಕ್ತಗತವಾಗುವ ಕಾರ್ಯದಲ್ಲಿ ಪ್ರಮಾದ ತರವಾದ ತೊಂದರೆಗಳು, ಭೇದಿ, ಕರುಳು ಹುಣ್ಣು, ಮಲಬದ್ಧತೆ, ಬೆರಿಬೆರಿ ಮತ್ತು ವಾತ ಶೂಲೆಗಳು ಸಂಭವಿಸುವುವು.

"ಬಿ" ಜೀವ ಸತ್ವವು ದೊರೆಯುವ ಆಹಾರಗಳು:— ಹಸುರು ಸೊಪ್ಪು, ತರಕಾರಿಗಳು, ತರಕಾರಿ, ಗೆಡ್ಡೆ, ತರಕಾರಿಗಳು, ಕೆಲವು ಹಣ್ಣುಗಳು ಕಡಲೆಕಾಯಿ, ತೌಡು ತೆಗೆಯುವ ಧಾನ್ಯ, ದ್ವಿದಳ ಧಾನ್ಯಗಳು, ಸೋಯ ಅವರೆ, ಮೂಲಂಗಿ, ಬೀಟ್‌ರೂಟ್, ಕಾಲಿಫ್ಲವರ್ ಹಾಲಿನ ಹುಡಿ, ಗೆಣಸು, ಪ್ರಾಣಿಗಳ ಹೊಟ್ಟೆ ಸಾಮಾನು (ಕೋಳಿಗಳಲ್ಲಿ ದೊರೆಯಲಾರದು)

"ಸಿ" ಜೀವ ಸತ್ವ ಈ ಜೀವಸತ್ವದ ಅಭಾವದಿಂದ ವಸಡುಗಳು ಊದಿಕೊಳ್ಳುವುವು, ಹುಳುಕು ಹಲ್ಲುಗಳುಂಟಾಗುವುವು, ಹೊಟ್ಟೆಯಲ್ಲಿ ವ್ರಣವಾಗುವುದು, ಜೀರ್ಣ ಶಕ್ತಿಯು ಹದಗೆಡುವುದು ಶರೀರವು ಕೃಶವಾಗುವುದು, ಮೂಗಿನಿಂದ ರಕ್ತಸ್ರಾವವಾಗುವುದು, ಚರ್ಮವು ಊದಿಕೊಂಡು ಕೆಂಪೇರುವುದು.

"ಸಿ" ಜೀವಸತ್ವ ದೊರೆಯುವ ವಸ್ತುಗಳು:— ನಿಂಬೆಹಣ್ಣು, ಕಿತ್ತಳೆಹಣ್ಣು, ಅನನಾಸ್ ಹಣ್ಣು, ದಾಳಿಂಬೆ, ಸೀಬೆ ಪರಂಗಿ ಹಣ್ಣುಗಳು, ತಕ್ಕಾಳಿಹಣ್ಣು, ಕೊತ್ತಂಬರಿಯ ಬೀಜ, ಕೋಸು ಗೆಡ್ಡೆ ನುಗ್ಗೆಕಾಯಿ, ಲೆಟ್ಯೂಸ್, ಸೀಮೆದಂಟು, ಪಾಸ್ಲಿ, ಸುರಗಿ, ಹೆಸರುಬೇಳೆ, ಹಸಿಯ ಬಟಾಣಿ, ಕಾಲಿಫ್ಲವರ್, ಟರ್ನಿಪ್ಸ್, ಗೆಣಸು, ಮೊಳಕೆ ಬಂದ ಕಾಳುಗಳು ಹಾಗಲಕಾಯಿ, ಹಸಿಯ ಮೆಣಸಿನ ಕಾಯಿ, ಹಸರು ಮತ್ತು ಹಸಿಯ ಆಹಾರ ವಸ್ತುಗಳನ್ನು ಕೊಟ್ಟು ಬೆಳೆಸಿದ ಪ್ರಾಣಿಯ ಹೊಟ್ಟೆ ಸಾಮಾನುಗಳು.

"ಡಿ" ಜೀವಸತ್ವ. ಈ ಜೀವ ಸತ್ವವು ಕುಟಿಲವಾತ ಬಾರದಂತೆ ಕಾಪಾಡುವುದಲ್ಲದೆ ಆ ರೋಗ ಬಂದರೂ ಗುಣಮಾಡುತ್ತದೆ. ಲವಣಾಂಶಗಳ ಅಭಾವದಿಂದ ಸಂಭವಿಸುವ ರೋಗಗಳನ್ನು ತಡೆಗಟ್ಟುವುದಲ್ಲದೆ ನಿವಾರಿಸುತ್ತದೆ.

ಮಗುವಿನ ಆಹಾರದಲ್ಲಿ "ಡಿ" ಜೀವ ಸತ್ವದ ಅಭಾವವುಂಟಾದರೆ ಕುಂದಿದ ಬೆಳವಣಿಗೆ, ಮೂಳೆಗೆ ಸಂಬಂಧಿಸಿದ ವ್ಯಾಧಿಗಳು, ರಕ್ತ ಹೀನತೆ, ಮತ್ತು ದುರ್ಬಲತೆಗಳುಂಟಾಗುವುವು.

ವಯಸ್ಕರಲ್ಲಿ ಈ ವ್ಯಾಧಿಯ ಲಕ್ಷಣಗಳು:— ಅಸ್ಥಿಕ್ಷಯ, ವಾತರೋಗ, ವಾತಶೂಲೆ, ಮೂತ್ರ ರೋಗಗಳು ಪರಿಣಮಿಸುವುವು.

"ಡಿ" ಜೀವಸತ್ವ ದೊರೆಯುವ ವಸ್ತುಗಳು:— ನೀಲಲೋಹಿತಾತೀತ ಸ್ಪೆಕ್ಟ್ರಲ್ ಕಿರಣಗಳಿಂದ ಪಡೆಯಬಹುದು. "ಡಿ" ಜೀವಸತ್ವವನ್ನು ಚರ್ಮವನ್ನು ಬಿಸಿಲಿಗೆ ಒಡ್ಡುವುದರಿಂದ ರಕ್ತವೂ ಅದನ್ನು ಗ್ರಹಿಸಬಲ್ಲದು. ಆಹಾರ ವಸ್ತುಗಳನ್ನು ಬಿಸಿಲಿಗೆ ಇಡುವುದರಿಂದಲೂ, ಆ ವಸ್ತುಗಳು "ಡಿ" ಜೀವಸತ್ವವನ್ನು ಗ್ರಹಿಸುವಂತೆ ಮಾಡಬಹುದು. ಇಷ್ಟೇ ಅಲ್ಲದೆ "ಡಿ" ಜೀವಸತ್ವವು ಕೆಲವು ತೆರನಾದ ಮೀನೆಣ್ಣೆ, ಮೊಟ್ಟೆಯ ಹಳದಿ, ಮತ್ತು ಹಾಲುಗಳಲ್ಲಿಯೂ ದೊರೆಯುವುದು. ಆದರೆ ಖಾತ್ರಿಯಾಗಿ ದೊರೆಯುವುದೆಂದರೆ ಅಲ್ಟ್ರಾ ವಯೋಲೆಟ್ ಕಿರಣಗಳಿಂದ ಮಾತ್ರ.

"ಇ" ಜೀವಸತ್ವ ಈ ಜೀವ ಸತ್ವವು ಬಂಜೆತನವನ್ನು ಸ್ತ್ರೀಪುರುಷರೀರ್ವರಲ್ಲಿಯೂ ನಿವಾರಿಸುವುದಲ್ಲದೆ ಸಂತಾನಕ್ಕೆ ಸಹಕಾರಿಯಾಗಿ ಪರಿಣಮಿಸುವುದು.

ಇದು ದೊರೆಯುವ ವಸ್ತುಗಳು:- ಲೆಟ್ಯೂಸ್, ಮಾಂಸ, ಮೂಸವನ್ನು ತೆಗೆಯುವ ಗೋಧಿ, ರವೆ, ಓಟ್ಸ್, ಸಮೃದ್ಧಿಯಾದ ಹಾಲು, ಒಣಗಿದ ಅಲ್ಪಾಲ್ಪ ಹುಲ್ಲು.

(ಆಧಾರದಿಂದ)

"ಭಾಗ್ಯ ಲಕ್ಷ್ಮಿ"

## ಆಟದ ಸಾಮಾನುಗಳು

(೩ನೇ ಪುಟದಿಂದ)

ಗಳನ್ನೂ ಮತ್ತು ರಬ್ಬರು 'ಎಂಜಿನ್'ಗಳುಳ್ಳ ವಾಯು ವಿಮಾನಗಳ, ಕೆಲಸ ಮಾಡುವ ನಮೂನೆಗಳನ್ನು ಮಕ್ಕಳು ಒಟ್ಟಿಗೆ ಜೋಡಿಸಲು ಸಮರ್ಥರಾಗುವಂತೆ ಅವು ಮಾಡುತ್ತವೆ. ನಿರ್ಮಾಣಕ್ಕೆ ಸಂಬಂಧಿಸಿದ ಕಟ್ಟುಗಳಿಗೆ ತುಂಬಾ ಹೆಚ್ಚು ಬೇಡಿಕೆಯಿದೆ.

ಸಾಮೂಹಿಕವಾಗಿಯೂ, ಸಾಮಾಜಿಕವಾಗಿ ಉಪಯೋಗಕರವಾದ ಶ್ರಮದ ಫಲವಾಗಿಯೂ ಮಕ್ಕಳಲ್ಲಿ ಆಸಕ್ತಿಯನ್ನು ಅಭಿವೃದ್ಧಿಗೊಳಿಸುವ ಆಟಗಳನ್ನೂ, ಮತ್ತು ಆಟದ ಗೊಂಬೆಗಳನ್ನೂ ವಿಶೇಷತಃ ಸೂಚಿಸಬೇಕಾಗಿದೆ. ಇದಕ್ಕೊಂದು ಉದಾಹರಣೆಯಾಗಿ ಹೇಳುವುದಾದರೆ, ಮಾಸ್ಕೋ ಯುವಬಾಲಭಟ (ಪಯೋನೀರ್) ಗೃಹವು, ಮಕ್ಕಳೇ ಬಾಲಭಟ ನಗರ"ವನ್ನು—ಮನೆಗಳು, ಕಾರಖಾನೆಗಳು, ಸಂಪರ್ಕ ಸಾಧನಗಳು, ಇತ್ಯಾದಿಗಳನ್ನೊಳಗೊಂಡ ಒಂದು ನಮೂನೆಯನ್ನು ನಿರ್ಮಿಸಬೇಕೆಂದು ನಿರ್ಣಯವನ್ನು ಮಾಡಿತು ಈ ಕಾರ್ಯಭಾರವು ಮಕ್ಕಳಲ್ಲಿ ವಿಶೇಷ ಆಸಕ್ತಿಯನ್ನು ಹುಟ್ಟಿಸಿತು. ೩೯೦ ಜನ ಬಾಲಭಟರು (ಪಯೋನೀಯರ್) ಈ ನಗರವನ್ನು ಕಟ್ಟುವ ಕೆಲಸದಲ್ಲಿ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಕಾರ್ಯನಿರತರಾಗಿದ್ದರು, ಈ ನಗರದಲ್ಲಿ ವಿದ್ಯುಚ್ಛಕ್ತಿಯೂ ಇದ್ದಿತು. ಈ ನಗರ ನಿರ್ಮಾಣದ ಬಗ್ಗೆ ಕೆಲಸ ಮಾಡುತ್ತಿದ್ದಾಗ, ಮಕ್ಕಳು ಸಾಮೂಹಿಕ ಶ್ರಮದಲ್ಲಿ ಪ್ರಾಯೋಗಿಕ ಶಿಕ್ಷಣವನ್ನು ಪಡೆದರು.

ಉದಯೋನ್ಮುಖವಾಗುತ್ತಿರುವ ತಲೆಮಾರಿನ ಸರ್ವತೋಮುಖವಾದ ತರಬೇತಿನ ಸಲುವಾಗಿ ಎಲ್ಲ ಆವಶ್ಯಕತೆಗಳೂ ಸೋವಿಯತ್ ಒಕ್ಕೂಟದಲ್ಲಿ ನಿರ್ಮಿಸಲ್ಪಟ್ಟಿವೆ. ವಿಸ್ತಾರವಾಗಿ ಅಭಿವೃದ್ಧಿಗೊಂಡಿರುವ ಮಕ್ಕಳ ಆಟದ ಸಾಮಾನುಗಳ ಉತ್ಪಾದನೆಯು ಈ ಉದ್ದೇಶದ ಸಲುವಾಗಿಯೇ ಸೇವೆ ಸಲ್ಲಿಸುತ್ತಿರುವ ವಿಷಯಗಳಲ್ಲೊಂದಾಗಿದೆ. ಸೋವಿಯತ್ ಒಕ್ಕೂಟದಲ್ಲಿ ಮಕ್ಕಳ ಆಟದ ಸಾಮಾನುಗಳನ್ನು ತಯಾರಿಸುವುದರಲ್ಲಿ ತೊಡಗಿರುವ, ೩೦೦ ಕ್ಕಿಂತಲೂ ಹೆಚ್ಚು ಉತ್ಪಾದಕರ ಸಹಕಾರೀ ಸಂಘಗಳಿವೆ. ಅವುಗಳ ವಾರ್ಷಿಕ ಹುಟ್ಟುವಳಿಯು ೧೦೦ ಕೋಟಿ ರೂಬಲ್ಲುಗಳಷ್ಟಾಗುತ್ತದೆ.

ಪ್ರತಿಯೊಂದು ಪ್ರಾಂತೀಯ ಕೇಂದ್ರವೂ ರಷ್ಯ ದೇಶದಲ್ಲಿ ಒಂದು ವಿಶಿಷ್ಟವಾದ ಆಟದ ಸಾಮಾನಿನ ಅಂಗಡಿಯುಳ್ಳದಾಗಿರುತ್ತದೆ. ತಯಾರಿಕೆಯ ವಸ್ತುಗಳನ್ನು ಮಾರುತ್ತಿರುವ, ಪ್ರತಿಯೊಂದು ಜಿಲ್ಲಾ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ, ಅಂಗಡಿಗಳಲ್ಲಿಯೂ, ಸಾಮೂಹಿಕ ಕೃಷಿಕ್ಷೇತ್ರಗಳ ಅಂಗಡಿಗಳಲ್ಲಿಯೂ ಮತ್ತು ಗ್ರಾಮಾಂತರ ಪ್ರದೇಶಗಳ ಪುಸ್ತಕ ಮಾರಾಟದ ಸ್ಥಳಗಳಲ್ಲಿಯೂ ಕೂಡ ಆಟದ ಸಾಮಾನುಗಳನ್ನು ಕೊಳ್ಳಬಹುದು.

---


## ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂಮುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

## ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

## ಹಿರೋಶಿಮಾದಿಂದ ಜಿನೇವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.

## ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.



## ವಿದ್ಯಾರ್ಥಿ ಪ್ರಪಂಚ

(೩ನೇ ಪುಟದಿಂದ)

ಸವುಸೇ ಇದಕ್ಕೆ ಕಾರಣ. ನಿಜವಾದ ಗೌರವ ತೋರಿಸುವುದಕ್ಕೆ ತಮಗೆ ಆಗೌರವವೆಂದು ( ) ತೋರಿದರೂ ನಟನೆಯ ಗೌರವವನ್ನಾದರೂ ವಿದ್ಯಾರ್ಥಿಗಳ ಎದುರಿನಲ್ಲಿ ಅಧ್ಯಾಪಕರ ಮೇಲೆ ತೋರಿಸಿದರೆ ಅವರಿಂದ ಉತ್ತಮ ಏದೆ ನಟನೆ ಒಳ್ಳೆದಲ್ಲ ನಿಜ. ಆದರೆ ಮುಂದಿನ ಸಮಾಜವಾದರೂ ಸುಧಾರಿಸಲಿ ಎಂದು ಈ ಸುಲಭ ಕಾರ್ಯವನ್ನಾದರೂ ಕೈಗೊಳ್ಳಲಿ. ಕೆಲವು ವರ್ಷಗಳ ಹಿಂದೆ ರಕ್ಷಕರು ತಮ್ಮ ಮಕ್ಕಳು ಶಾಲೆಯಿಂದ ಬಂದಾಗ ಅವುಗಳೊಡನೆ "ನಿಮ್ಮ ಗುರುಗಳು ಏನು ಕಲಿಸಿದರು" ಎಂದು ಕೇಳುತ್ತಿದ್ದರು. ಆಗ ಮಗುವಾದರೂ ಸಂತೋಷದಿಂದ ತನ್ನ ಗುರುವನ್ನು ಗೌರವಿಸುತ್ತ ಅವರು ಹೇಳಿಕೊಟ್ಟದ್ದನ್ನೆಲ್ಲ ಹೇಳುತ್ತಿತ್ತು. ಆಗ ತಂದೆ ತಾಯಿಗಳು ಸಂತೋಷದಿಂದ ಗುರುಗಳು ಹೇಳಿದಂತೆ ಕೇಳಿ ಸರಿಯಾಗಿ ಕಲಿ ಎನ್ನುತ್ತಿದ್ದರು. ಈಗ ಹಾಗಲ್ಲ ಮಗು ಮನೆಗೆ ಬಂದಾಗ "ನಿನ್ನ ಮಾಸ್ತರ ಏನು ಕಲಿಸಿದ" ಎಂದು ಕೇಳುತ್ತಾರೆ. ಮಗುವಾದರೂ ಇದಕ್ಕೆ ಕೊಡುವ ಉತ್ತರ ಅಷ್ಟಕ್ಕಷ್ಟೆ. ಅಂದರೆ ಎರಡೂ ಕಡೆ ವಿನಯವಿಲ್ಲ. ಒರಟು ಮಗುವೇನಾದರೂ ವಿವರಿಸಿದರೆ ಕಡೆಗೆ ಹೇಳುವ ಉತ್ತರವೆಂದರೆ ಇಷ್ಟೆ. "ಅವನ ಕರ್ಮ ಸಂಬಳ ತೆಗೆದುಕೊಂಡು ಮಜಾ ಮಾಡುತ್ತಾನೆ" ಅಷ್ಟುಲ್ಲ. ಆ ಹುಡುಗನಿಗೆ ಎಷ್ಟು ತಾನೆ ಗೌರವ ಬೆಳೆದೀತು. ಎಂದಿನ ವರೆಗೆ ಗತಕಾಲದಂತೆ ಅಧ್ಯಾಪಕ ಶಿಷ್ಯರಲ್ಲಿ ನಿಕಟ ವಾತ್ಸಲ್ಯ ಬೆಳೆಸು ಬರುವುದಿಲ್ಲವೋ ಅಂದಿನ ವರೆಗೆ ವಿದ್ಯಾರ್ಥಿ ಸಮಾಜದಲ್ಲಿ ಶಾಂತಿಯಿಲ್ಲವೆಂದು ನೆನಪಿರಲಿ. ಇದಕ್ಕಾಗಿ ರಕ್ಷಕ ಮತ್ತು ಅಧ್ಯಾಪಕ ವರ್ಗ ಸ್ವಲ್ಪ ತಮ್ಮ ರೀತಿಯನ್ನು ಬದಲಾಯಿಸಿಕೊಳ್ಳಲಿ. ಅವಕ್ಕೆ ಸರಕಾರತ್ತ ಸಹಾಯ ಮಾಡಲಿ!

ಅಶಾಂತಿಯ ಬಿರುಗಾಳಿಯನ್ನು ಶಮನಗೊಳಿಸಿ ವಿದ್ಯಾರ್ಥಿ ಸಮಾಜವನ್ನು ವ್ಯವಸ್ಥಿತ ರೀತಿಯಲ್ಲಿ ಮುನ್ನಡೆಸಬೇಕೆಂ ನಮ್ಮ ಸರಕಾರ ಬೇಕಾದ ಸಲಹಾ ಸಮಿತಿಗಳನ್ನು ನಿರ್ಮಿಸುತ್ತಿದೆ. ಆದರೆ ರೋಗ ಹೊಟ್ಟೆಯಲ್ಲೆ ಉಳಿದಿದೆ. ಲೇಪ ತಲೆಗೇನೆ ಹಾಗಿಸಲ್ಪಡುತ್ತದೆ ಹೊಟ್ಟೆಯಲ್ಲಿ ಹೊಟ್ಟೆ ನೋವು ಉಂಟು ಮಾಡುವ ಹೊಟ್ಟೆ ಹುಳಗಳಿಗೆ ಮದ್ದು ಕೊಡುವಂತೆ ವಿದ್ಯಾರ್ಥಿ ಪ್ರಪಂಚದಲ್ಲಿ ಅಶಾಂತಿ ಉಂಟು ಮಾಡಲು ಮುಂದಾದವರನ್ನು ಹುಡುಕಿ ಅವರಿಗೆ ಮದ್ದು ಕೊಟ್ಟರೆ ಆಗಬಹುದು. ಮದ್ದು ಕೊಡುವ ಮೊದಲೇ ಅವರು ತಾವಾಗಿಯೇ ವಿದ್ಯಾರ್ಥಿ ಸಮಾಜ ಕೊಳೆಕಿಲ್ಲದೆ ಮುಂದುವರಿಯುವಂತೆ ಹೆಣಗಿದರೆ ಅವರಿಗೆ ವಿದ್ಯಾರ್ಥಿ ಪ್ರಪಂಚವೇ ಚಿರ ಋಣಿಯಾದೀತು. ಅಷ್ಟೇ ಅಲ್ಲ. ಸಮಸ್ತ ಜನಾಂಗವೂ ಅವರನ್ನು ಆಶೀರ್ವದಿಸಬಹುದು. ಶಾಂತಿಗಾಗಿ ಹೆಣಗಲು ಮನಸ್ಸಿಲ್ಲದಿದ್ದರೂ ಕ್ರಾಂತಿಗಾಗಿ ಪ್ರೋತ್ಸಾಹ ನೀಡದಿರಲಿ. ಚಿಗುರುವ ಲತೆಗಳ ಬುಡಕ್ಕೆ ಬಿಸಿನೀರು ಹೊಯ್ಯಲು ಯಾರಿಗೂ ಮನಸ್ಸು ಬಾರದಿರಲಿ.

—ವಿದ್ಯಾರ್ಥಿ.

### ಶಿರ್ವಾ ಪಂಚಾಯ್ತ್ ಬೋರ್ಡ್ ಕೋರ್ಟಿನಲ್ಲಿ

. ಸಿವಿಲ್ ವ್ಯಾಜ್ಯ ನಂಬ್ರ 17/56.

ಗ್ರಾಬ್ರೆಲ್ ಮಿನೇಜಸ್_ಅಂತೋನಿ ಮಿನೇಜಸರ ಮಗ. ಶಿರ್ವಾ ಗ್ರಾಮದ ಮಂಚಕಲ್ ಪೇಟೆಯಲ್ಲಿರುವವ —ವಾದಿ

ಜೇಸುದಾಸ ಅಂಚನ್ನ. ಸದಾನಂದ ಅಂಚನ್ನರ ಮಗ ಶಿರ್ವಾ ಗ್ರಾಮದ ತುರೇ ಓಣಿನಲ್ಲಿರುವವ —ಪ್ರತಿವಾದಿ

ವಾದಿಗೆ ನೀವು ತಾ. 6—11—58ರಲ್ಲು ರೂಪಾಯಿ 100—0—0ಕ್ಕೆ ಬರೆಕೊಟ್ಟ ಡಿ. ಪ್ರೋ-ನೋಟಿನ ಅಸಲು ರೂಪಾಯಿ100/-ನ್ನು ಬರಮಾಡಿಕೊಳ್ಳುವರೆ, ವಾದಿಯು, ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುತ್ತಾರೆ. ಅದನ್ನು ತನ್ಖಿ ಬಗ್ಗೆ ಇದೇ ಬರುವ ತಾ. 5—11—56ನೇ ದಿನ ಅಪರಾಹ್ನ 3 ಘಂಟೆಗೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿವಸ ಈ ಕೋರ್ಟಿನ ಮುಂದೆ ಸ್ವತಃ ಯಾ ಏಜಂಟರ ಮುಖಾಂತರ ಹಾಜರಾಗಿ ನಿಮ್ಮ ಆಕ್ಷೇಪವಿದ್ದರೆ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದರೆ ಎಕ್ಸಪಾರ್ಟಿ ತನ್ಖಿ ನಡೆಸಿ ವ್ಯಾಜ್ಯವನ್ನು ತೀರ್ಮಾನಿಸಲಾದೀತೆಂದು ಈ ಮೂಲಕ ತಿಳಿಯಪಡಿಸಲಾಗಿಯದೆ.

(Sd) S. Annayya Hegde.
President.
ಶಿರ್ವಾ ಪಂಚಾಯ್ತ್ ಬೋರ್ಡ್ ಆಫೀಸು.
P. O ಶಿರ್ವಾ ದ. ಕ. ತಾ. 17-10 56.



ಬ್ರಿಟನಿನಲ್ಲಿ ಈಚೆಗೆ ವಿಮಾನೋದ್ಯಾನ ಪ್ರದರ್ಶನವು ನಡೆಯಿತು. ಜಗತ್ತಿನ ಅನೇಕ ರಾಷ್ಟ್ರಗಳಿಂದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಚಿತ್ರದಲ್ಲಿ ಯುದ್ಧದಲ್ಲಿ [illegible] ವಿಮಾನವನ್ನು ಕಾಣಬಹುದು. [illegible] ಇದು [illegible] ಅಡಿ ಎತ್ತರಕ್ಕೆ ಹಾರಾಡಿ, ಹೊಸ ದಾಖಲೆಯನ್ನು ನಿರ್ಮಿಸುತ್ತದೆ.

## ಜನಮತ

> ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.
> ಸಂ. ಸ.

### ನಾವು ನಿರೋಗಿಗಳಾಗಿರಬೇಕಿದ್ದರೆ ... ??

[illegible]

ನಾವು ನಮ್ಮ [illegible] ಬುದ್ಧಿವಂತರಾಗಿದ್ದೇವೆ; [illegible] ದಿದ್ದೇವೆ. ನಮ್ಮ [illegible]

[illegible]

ಶ್ರೀ [illegible]

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟಪ್ರಭ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯದ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೩—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 12-12-1950 of the Director of public Instruction Madras.

## ಗೆಳೆಯನಿಗೆ ಓಲೆ—೪

### ಹೊಸ ಲೇಖಕರು ಹೊಸದಾರಿ ತುಳಿಯಲಿ! ಮತ್ತು ನಮ್ಮ ಸಾಹಿತ್ಯದ ವಿಸ್ತಾರವನ್ನು ಹೆಚ್ಚಿಸಲಿ!

ನನ್ನ ಗೆಳೆಯಾ,

ಹಿಂದಿನ ಪತ್ರಗಳಲ್ಲಿ ಇಂದಿನ ಕಾದಂಬರಿಕಾರರ ರೀತಿ-ನೀತಿಗಳು; ವಿಮರ್ಶಕರ ಪಾತ್ರಗಳು; ಪ್ರಕಾಶಕರ ಸಾಮಾಜಿಕ ಕಾರ್ಯ ಪರಂಪರೆಗಳು—ಇವುಗಳ ಕುರಿತು ಬರೆದಿದ್ದೆ. ಇದೀಗ ನಮ್ಮಲ್ಲಿ ಸೃಷ್ಟಿಯಾಗುತ್ತಿರುವ ಬರಹಗಳ ಹೊಸತನದ ಕುರಿತಾಗಿ ಬರೆಯುತ್ತೇನೆ.

ಕನ್ನಡ ಸಾಹಿತ್ಯಕ್ಕೆ ವಿಶಾಲವಾದ ಇತಿಹಾಸವಿದ್ದರೂ ಕನ್ನಡ ಕಾದಂಬರಿಗಳಿಗೆ ಆಳವಾದ ನೆಲೆಗಟ್ಟು ಇಲ್ಲ. ಕಾದಂಬರಿ-ಈ ಶತಮಾನದ ಕೂಸು. ಅದು ಬೆಳೆಯಬೇಕಾದ ಬಗೆಗಳು ಹಲವಾರಿವೆ. ಅದರ ಬೆಳವಣಿಗೆಯ ಪ್ರಥಮ ಹಂತವಲ್ಲಷ್ಟೇ ನಾವಿದ್ದೇವೆ. ಆದರೆ ಇದೇ ಪ್ರಥಮ ಹಂತದಲ್ಲಿ ಅದೆಷ್ಟು ದಿನಗಳ ತನಕ ಇರಲು ಸಾಧ್ಯ? ಹೆಚ್ಚೆಂದರೆ ಒಂದೆರಡು ದಶಕಗಳು ಇರಬಹುದಷ್ಟೇ! ಅವಕ್ಕೂ ಹೆಚ್ಚಾಗಿ ಇರುವುದೆಂದರೆ ಚರ್ವಿತ ಚರ್ವಣವೇ ಸರಿ.

ನಮ್ಮಲ್ಲಿಯ ಕಾದಂಬರಿಗಳು ಹೆಚ್ಚಾಗಿ ವರ್ಣ-ನಿರೂಪಣಾ ಕ್ರಮದಲ್ಲಿವೆ. ಇಲ್ಲಿ ಲೇಖಕ ಮೂರನೆಯ ವ್ಯಕ್ತಿಯಾಗಿದ್ದುಕೊಂಡು, ತಾನು ಸೃಷ್ಟಿಸಿದ ವ್ಯಕ್ತಿಗಳನ್ನು ಕುಣಿದಾಡಿಸುತ್ತಿರುವ ಒಬ್ಬ ಸೂತ್ರಧಾರ. ಲೇಖಕನ ಆಂತರಿಕ ಮನೋಭಾವನೆಗಳ ಚಿತ್ರಣವನ್ನು ಆತ ಸೃಷ್ಟಿಸಿರುವ ಕೆಲವು ವ್ಯಕ್ತಿಗಳಲ್ಲಿ ನಾವು ಕಾಣಬಹುದಾದರೂ, ಆತನ ಮೂಲ ವ್ಯಕ್ತಿತ್ವ ಮರೆಯಾಗಿಯೇ ಇರುತ್ತದೆ. ಇಲ್ಲಿ ಬರಹಗಾರನ ಬರೆಹದ ರೀತಿ ಸರಳ—ಓದುಗನಾದರೂ ಅಷ್ಟೇ ಸರಳವಾಗಿ ಆ ಬರಹವನ್ನು ಓದಬಲ್ಲ. "ಕಲೆ ಮನೋರಂಜನೆಗಾಗಿ" ಎಂಬ ಕಾಲದ ಪರಿಣಾಮ ಈ ಬಗೆಯ ಕಾದಂಬರಿಗಳ ಮೇಲೆ ಸಾಕಷ್ಟು ಪ್ರಭಾವ ಬೀರಿರುತ್ತದೆ. ಹಾಗಾಗಿ ಅಲ್ಲಿ ವಿವೇಚನಾ ನೋಟವನ್ನು ಕಾಣಲಾಗುವುದಿಲ್ಲ.

ಇಂದಿನ ವಿಜ್ಞಾನ ಜನತೆಯ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿರುತ್ತದೆ. ಇಂದಿನ ವ್ಯಕ್ತಿಗಳ ಮನೋಭಾವ ಕೆಲವೊಮ್ಮೆ ಯಾಂತ್ರಿಕವಾಗಿ ಕಾಣಿಸುತ್ತಿದೆಯಾದರೂ, ವ್ಯಕ್ತಿಯ ಕಲ್ಪನಾ ರಾಜ್ಯದ ಇತಿಮಿತಿಗಳು ಹಿಂದಿಗಿಂತಲೂ ಬೆಳೆದಿವೆ. ಕೆಲವೊಮ್ಮೆ ಬೆಳೆದುಬಂದ ಯಾಂತ್ರಿಕತೆ ನಮ್ಮಲ್ಲಿಯ ಮಾನವೀಯ ದೃಷ್ಟಿಗಳನ್ನು ಸಂಪೂರ್ಣ ತೊಡೆದಿಕ್ಕುವಂತಹ ಸಂದರ್ಭಗಳು ಇವೆ. ವಿಜ್ಞಾನದ ಪ್ರಭಾವ ತಮ್ಮ ಮೇಲೆ ಬೀಳದೆ ಇದ್ದ ಹಿಂದಿನ ಕಾಲದ ಜನರ ಕಲಾ ಸೃಷ್ಟಿಯ ಬಗೆ ಬೇರೆಯಾಗಿತ್ತು. ಅವರಿಗೆ ಅಂದು ಸ್ವಯಂಪೂರ್ಣವಾದ ಸರಳ ಜೀವನವಿತ್ತು. ಇಂದಾದರೋ ಹಾಗಲ್ಲ. ವಿಜ್ಞಾನ ಮಾನವನ ಬೇಡಿಕೆಗಳನ್ನು ಮಿಗಿಲಿಸಿದೆ-ಆತನ ಪಾಲಿನ ಸಾಮಾಜಿಕ ಕರ್ತವ್ಯಗಳನ್ನು ವಿಶಾಲಿಸಿದೆ-ಆತನ ಬೇಡಿಕೆಗಳ ಪೂರೈಕೆಯಲ್ಲಿ ನವನವೀನ ಹಾದಿಗಳನ್ನು ಹುಡುಕಿದೆ. ಹೀಗಾಗಿ ಸಮಸ್ಯೆಗಳೂ ಹೆಚ್ಚಾಗಿವೆ.

ಇಂತಹ ಸಮಸ್ಯೆಗಳಿಗೆ ಹೊಸ ವೈಜ್ಞಾನಿಕ ಸಂಶೋಧನೆಗಳು ಒಂದು ರೀತಿಯ ಪರಿಹಾರವನ್ನು ಒದಗಿಸುತ್ತಿವೆಯಾದರೂ, ಅಂತಹ ಪೂರೈಕೆಗಳಲ್ಲಿ ಆಂತರಿಕ ಶಕ್ತಿ ಇರುವುದಿಲ್ಲ. ಹಾಗಾಗಿ ಈ ಬಗೆಯ ಸಮಸ್ಯೆಗಳಿಗೆ ಕಲಾವಿದರು ಉತ್ತರಿಸಬೇಕಾದ ಪ್ರಮೇಯ ಬರುತ್ತದೆ. ಎಂದು ಕಲಾವಿದ ತನ್ನ ಜನರ ಸಮಸ್ಯೆಗಳಿಗೆ ಉತ್ತರ ಅಥವಾ ಹಾದಿಯನ್ನು ತೋರಿಕೊಟ್ಟನೋ, ಅಂದಿನಿಂದ "ಕಲೆ ಕಲೆಗಾಗಿ" ಎಂಬ ಮಾತು ಮಾಯವಾಯಿತು. ಕಾರಣ ಬರಿಯ ಮನೋರಂಜನೆಗಾಗಿ ತನ್ನ ಕೃತಿ ನಿರ್ಮಾಣದಲ್ಲಿ ಕಲಾವಿದನಿಗೆ ಸುಖಮೊರೆಯಲಾರದಂತಹ ಬಿಕ್ಕಟ್ಟಿನ ಪ್ರಸಂಗ ಬಂದೊದಗಿತು. ತನ್ನೆದುರಿನ ಸಮಸ್ಯೆಗಳನ್ನು ತನ್ನದೇ ಎಂಬ ದೃಷ್ಟಿಯಿಂದ ಕಲಾವಿದ ಕೂಲಂಕಷವಾಗಿ ವಿಚಾರಿಸಬೇಕಾಯಿತು. ಹೀಗಾಗಿ ಕಲಾವಿದನ ಹೊಣೆ ಹೆಚ್ಚಿತು.

ಸಮಸ್ಯೆ ಮತ್ತು ಅವುಗಳ ಪರಿಹಾರಗಳ ಸ್ಪಷ್ಟನೆಗಾಗಿ ಕಲಾವಿದರು ಹೊಸ ಹೊಸ ಕಲ್ಪನೆಗಳನ್ನು ಕಲ್ಪಿಸಬೇಕಾಯಿತು. ಹೊಸ ಕಲ್ಪನೆಗಳ ಹೊಸೆಯುವಿಕೆಗೆ ಹಳೆಯ ನಿರೂಪಣಾಕ್ರಮಗಳು ಹಿಡಿಸದೆ ಹೋದುವು. ಸ್ವಾಭಾವಿಕವಾಗಿ ಹೊಸ ಶೈಲಿ—ಹೊಸ ಕ್ರಮ—ಹೊಸ ಭಾವ ಪ್ರಕಾಶಕ ಸಾಧನಗಳು ಬಳಕೆಗೆ ಬಂದವು. ಸಾಹಿತ್ಯಕ್ಷೇತ್ರದಲ್ಲಿಯೂ ಈ ಹೊಸತನದ ಪರಿಣಾಮ ಮಾಡದೆ ಇರಲಿಲ್ಲ.

ಆದರೆ ನಮ್ಮ ಸಾಹಿತ್ಯದಲ್ಲಿ ಈ ಬಗೆಯ ಹೊಸತನ ಎಂದಾದರೂ ಹಣಿಕಿದೆಯೇ—ಎಂಬ ಪ್ರಶ್ನೆಯೊಂದಿದೆ ಬಹುಮಟ್ಟಿಗೆ ಇಲ್ಲವೆಂಬ ಉತ್ತರವೂ ದೊರೆಯುತ್ತದೆ. ಕನ್ನಡ ಬರಹಗಾರರ ಮುಂದೆ ಹೊಸ ಸಮಸ್ಯೆಗಳು ಬರುತ್ತಿಲ್ಲವೆ? ಬರುತ್ತಿವೆ! ಹಾಗಾದರೆ ಅವುಗಳ ಚಿತ್ರಣವನ್ನೇಕೆ ಮಾಡಬಾರದು? ಬರುದು. ಆದರೆ ಅತನಲ್ಲಿರುವ ನಿರೂಪಣಾಕ್ರಮ ಬದಲಾಗಿಲ್ಲ. ಹೊಸವಸ್ತು ವಿವೇಚನೆಗೆ ಹೊಸ ನಿರೂಪಣಾ ಕ್ರಮದ ಅವಶ್ಯಕತೆ ಇದ್ದೇ ಇದೆ.

ಹಿಂದಿನ ಕ್ರಮದ ನಿರೂಪಣೆಯಿಂದ ಇಂದಿನ ಸಮಸ್ಯೆಗಳನ್ನು ನಿರೂಪಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ನನ್ನದಲ್ಲ. ಆದರೆ ಆ ಸಮಸ್ಯೆಗಳು ಮನೋವೇದ್ಯವಾಗಬೇಕಾದರೆ, ಅವುಗಳು ಪ್ರತಿಯೊಬ್ಬನಲ್ಲೂ ಪರಿಣಾಮವನ್ನು ಬೀರಬೇಕಾದರೆ, ಹೇಳುವ ಬಗೆಯಲ್ಲಿ ಹೊಸತನ ಬೇಕಾಗಿದೆ. ಹಳೆಯ ರೀತಿಯ ನಿರೂಪಣಾ ಕ್ರಮದಲ್ಲಿ ಹೊಸ ವಸ್ತುಗಳನ್ನು ತುರುಕಬಹುದಾದರೂ, ಹಳೆತನಕ್ಕಿರುವ ಒನ್ನಪು ಹಳೆಯದಾಗಿರುವುದರಿಂದ, ಹೊಸವಸ್ತು ಹಳೆಯದಾಗಿ ಕಾಣಿಸಬಹುದು.

ಕನ್ನಡ ಸಾಹಿತ್ಯದ ಈಗಿನ ಕಾಲವನು "ಪ್ರಾಯೋಗಿಕ ಕಾಲ" ಎಂದೊಬ್ಬರು ಶ್ರೇಷ್ಠ ಸಾಹಿತಿಗಳು ಹೇಳಿರುತ್ತಾರೆ. ಈ ಮಾತು ಎಷ್ಟು ಸತ್ಯವೋ ಹೇಳಲಾಗದು. ಕಾರಣ ಪ್ರಾಯೋಗಿಕ ಕೃತಿಗಳು ಇನ್ನೂ ಬಂದಿಲ್ಲ. ಕಾದಂಬರಿ ಕ್ಷೇತ್ರಕ್ಕೆ ಅವರ ಸ್ಪರ್ಶವೇ ಆಗಿಲ್ಲ. ಮನೋವಿಶ್ಲೇಷಣಾತ್ಮಕ ಕಾದಂಬರಿಗಳು ಒಂದೆರಡು ಬಂದಿವೆಯಾದರೂ, ಅವುಗಳಲ್ಲಿನ ವಸ್ತು ಹಳೆಯದಾಗಿರುವುದರಿಂದ, ಆ ಬರಹಗಳು ಜನಮನವನ್ನು ಸೆಳೆಯದೆ ಹೋಗಿವೆ.

ಹಳೆಯ ಬರೆಹಗಾರರು ತಮ್ಮ ಹಳೆಯ ಕ್ರಮದಲ್ಲೇ ಮುಂದರಿಯಲಿ. ಆದರೆ ಹೊಸ ಬರಹಗಾರರಾದರೂ ಹೊಸ ಹಾದಿ ಹುಡುಕುವುದು ಅವಶ್ಯಕವಾಗಿದೆ. ಇದರಿಂದ ಸಾಹಿತ್ಯದ ವಿಸ್ತಾರ ಹೆಚ್ಚಬಹುದಲ್ಲದೆ, ಸಾಮಾಜಿಕ ಸಮಸ್ಯೆಗಳಿಗೆ ಹಾರ್ದಿಕ ಪರಿಹಾರಗಳೂ ಸಿಗಬಹುದು.

ನಿನ್ನವ—
"ನಾಗೇಶ"

ಭಾರತ ಸರಕಾರದವರು ನವೀನ ಮಾದರಿಯ ಯುದ್ಧ ವಿಮಾನಗಳಿಗಾಗಿ ಬ್ರಿಟನಿನ ಕಂಪೆನಿ ಒಂದರೊಡನೆ ಈಚೆಗೆ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ೨೫ ಯುದ್ಧ ವಿಮಾನಗಳನ್ನು ಭಾರತವು ಈ ಒಪ್ಪಂದದಂತೆ ಕಂಪೆನಿಯಿಂದ ಕ್ರಯಕ್ಕೆ ಪಡೆದುಕೊಳ್ಳುವುದಲ್ಲದೆ, ಬೆಂಗಳೂರಿನಲ್ಲಿರುವ ವಿಮಾನ ತಯಾರಿ ಕಾರ್ಖಾನೆಯಲ್ಲಿ ಈ ಹೊಸ ವಿಮಾನಗಳನ್ನೂ ಕಟ್ಟಲಿಕ್ಕೂ ಒಡಂಬಡಿಕೆಯಿಂದ ಅವಕಾಶವಾಗಿದೆ. ಹೊಸ ಮಾದರಿಯ ಈ ವಿಮಾನಗಳಿಗೆ ಬೇಕಾದ ಸಾಧನ ಸಲಕರಣೆಗಳು ಬ್ರಿಟನಿನ ಕಂಪೆನಿಯಿಂದ ಬರುತ್ತವೆ. ಭಾರತೀಯ ತಾಂತ್ರಿಕರಿಗೆ ಬ್ರಿಟನಿನಲ್ಲಿ ತರಬೇತಿ ದೊರಕುತ್ತದೆ. ಚಿತ್ರದಲ್ಲಿ ಭಾರತ ಸರಕಾರದ ಪರವಾಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಒಪ್ಪಂದಕ್ಕೆ ಸಹಿ ಹಾಕುತ್ತಿರುವುದನ್ನು ಕಾಣಬಹುದು.

(೧ನೇ ಪುಟದಿಂದ)

ಗುತ್ತದೆ. ಕಾಂಗ್ರೆಸಿನಲ್ಲಿ ಚಾರಿತ್ರಿಕ ಹೋರಾಟವನ್ನಿತ್ತು ರಾಷ್ಟ್ರೀಯ ಧುರೀಣರೆನ್ನಿಸಿಕೊಂಡ ಕೆಲವೇ ವ್ಯಕ್ತಿಗಳ ಆ ಗುಂಪು ಸಮಾವೇಶಗೊಂಡಿರುವ ವರೆಗೆ ಪ್ರಾಯಶಃ ಬೇರೆ ಯಾವ ರಾಜಕೀಯ ಪಕ್ಷವೂ ರಾಜಕೀಯ ರಂಗದಲ್ಲಿ ಹೆಸರು ಗಳಿಸಿಕೊಳ್ಳಲಾರದು.

ಈ ಪರಿಸ್ಥಿತಿ ಮುಂದಾಯುವುದು ದೇಶಕ್ಕೆ ಹಿತವೆ ಎಂಬುದೇ ಆಲೋಚಿಸಬೇಕಾದ ವಿಷಯ.

—ಡಾ. ಮಥಾಯಿಯವರ ಭಾಷಣದ ಆಧಾರ.

## ಕಾಂಗ್ರೆಸು ಮತ್ತು ಪ್ರತಿಪಕ್ಷ

ಗಾಂಧೀ ಗ್ರಾಮದಲ್ಲಿ ಈಚೆಗೆ ಭಾಷಣ ಮಾಡುತ್ತಾ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾಂಗ್ರೆಸಿನ "ಒಳಗಿಂದಲೇ" ಪರಿಣಾಮಕಾರಿಯಾದ ವಿರೋಧಿಪಕ್ಷವು ಮೂಡಿಬರಬೇಕೆಂದು ಸೂಚಿಸಿರುವುದು ಒಡಕನ್ನುಂಟು ಮಾಡುವಂತಹದಷ್ಟೇ ಅಲ್ಲ, ಹಾನಿಕಾರಕವೂ ಆಗಿದೆ. ಕಾಂಗ್ರೆಸು ಸಂಸ್ಥೆಯನ್ನು ಉತ್ತಮವೂ ಉಪಯುಕ್ತವೂ ಆಗಿ ಮಾಡುವುದಕ್ಕಾಗಿ ಕಾಂಗ್ರೆಸಿನೊಳಗಡೆಯೇ ಪ್ರತಿಪಕ್ಷವೊಂದರ ನಿರ್ಮಾಣವಾದರೆ ಲೇಸೆಂಬ ಈ ಸೂಚನೆಯು ಕಾಂಗ್ರೆಸಿನಂತಹ ಮಹಾಸಂಸ್ಥೆಯನ್ನೇ ನಿರ್ನಾಮಗೊಳಿಸುವ ಅಪಾಯದಿಂದ ಕೂಡಿದೆ. ಈ ಸಲಹೆಯನ್ನು ಕಾರ್ಯಗತಗೊಳಿಸಿದ ಪಕ್ಷದಲ್ಲಿ ಕಾಂಗ್ರೆಸು ಸಂಸ್ಥೆಯು ನುಚ್ಚುನೂರಾಗಿ ಒಡೆದು ಬೀಳಬಹುದು.

ಭಾರತದಲ್ಲಿ ಪ್ರತಿಪಕ್ಷಗಳು ಪ್ರಬಲವಾಗದಿರುವುದಕ್ಕೆ ಮತ್ತು ಅವು ಸಾಕಷ್ಟು ಚೆನ್ನಾಗಿ ಬೆಳವಣಿಗೆಯನ್ನು ಹೊಂದದಿರುವುದಕ್ಕೆ ಕಾಂಗ್ರೆಸನ್ನು ದೂರಿ ಪ್ರಯೋಜನವಿಲ್ಲ. ಅಭಿಪ್ರಾಯ ಸ್ವಾತಂತ್ರ್ಯವನ್ನೂ ಸಂಘ ಸ್ವಾತಂತ್ರ್ಯವನ್ನೂ ಕಾಂಗ್ರೆಸಿನ ಬಹುಮತವಿದ್ದ ಘಟನಾಸಮಿತಿಯೇ ದೇಶದ ಜನತೆಗೆ ಉದಾರದಿಂದ ಮೂಲಭೂತ ಹಕ್ಕುಗಳ ರೂಪದಲ್ಲಿ ಕೊಡಮಾಡಿದೆ. ಈ ಹಿನ್ನೆಲೆಯಲ್ಲಿ ಪ್ರತಿಪಕ್ಷವನ್ನು ಸಬಲವಾಗಿ ಮಾಡುವುದು ಅದರಲ್ಲಿ ಆಸಕ್ತಿಯುಳ್ಳವರ ಕೆಲಸ—ಕಾಂಗ್ರೆಸಿನದಲ್ಲ. ಪ್ರಜಾಪ್ರಭುತ್ವದ ಯಶಸ್ಸಿಗೆ ಒಳ್ಳೆಯ ಪ್ರತಿಪಕ್ಷದ ಅವಶ್ಯಕತೆ ಇದೆ ಎಂಬುದು ಎಲ್ಲರೂ ಒಪ್ಪತಕ್ಕ ಮಾತೇ ಆಗಿದೆ. ಆದರೆ ಘಟನಾತ್ಮಕವಾಗಿ ಎಲ್ಲ ಸೌಲಭ್ಯಗಳಿದ್ದರೂ ಪ್ರತಿಪಕ್ಷಗಳು ಬೆಳವಣಿಗೆಯನ್ನು ಹೊಂದಿಲ್ಲದಿರುವುದಕ್ಕೆ ಈ ಪಕ್ಷಗಳಲ್ಲಿರುವ ಸುಪ್ತ ದೋಷಗಳೇ ಕಾರಣ. ಪ್ರತಿಪಕ್ಷಗಳು ಬೇಕೆಂಬುದಕ್ಕಾಗಿ, ಅವುಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕೆಂಬಂತೆ, ಕಾಂಗ್ರೆಸಿನ ಒಳಗಡೆಯೇ ಪ್ರತಿಪಕ್ಷವೊಂದು ರೂಪುಗೊಳ್ಳಲಿ ಎಂಬ ಸೂಚನೆಯು ಮಾತ್ರ ಸಂಸ್ಥೆಗೆ ತೀರ ಘಾತುಕವಾದುದಾಗಿದೆ. ಕಾಂಗ್ರೆಸಿನ ರೀತಿ ನೀತಿಗಳನ್ನು ಒಪ್ಪದವರು, ಎಲ್ಲರೂ ಸಂಸ್ಥೆಯ ಆಶ್ರಯದಲ್ಲಿ ಸೇರಿ, ತಪ್ಪುಗಳನ್ನು ತಿದ್ದಲು ಪ್ರಯತ್ನಿಸಲಿ. ಇದಾಗದಿದ್ದರೆ, ಸಂಸ್ಥೆಯಿಂದ ಹೊರಗೆ ಹೋಗಿ ಜನರಿಗೆ ಕಾಂಗ್ರೆಸು ಮಾಡಿರುವ ತಪ್ಪುಗಳನ್ನು ಎತ್ತಿ ತೋರುತ್ತಾ, ಕಾಂಗ್ರೆಸಿಗೆ ಬೆಂಬಲ ಕೊಡಬೇಡಿರೆಂದು ಹೇಳಲಿ. ಆದರೆ, ಯಾವ ಸಂದರ್ಭದಲ್ಲಿ ಆಗಲಿ ಕಾಂಗ್ರೆಸಿನ ಒಳಗಡೆ ಪ್ರತಿಪಕ್ಷವೊಂದು ರೂಪುಗೊಳ್ಳುವುದಕ್ಕೆ ಬಿಡಲು ಸಾಧ್ಯವಿಲ್ಲವೆಂಬುದು ಮಾತ್ರ ನೆನಪಿರಲಿ!

—ಕಾಮರಾಜರ ಭಾಷಣದಿಂದ.

(ರಾಜಾಜಿಯ ಸ್ಪಷ್ಟೀಕರಣ ೯ನೇ ಪುಟದಲ್ಲಿದೆ)

ಮಹಿಳಾ ಸಾಹಿತ್ಯ! ನವೀನ ಪುಸ್ತಕ!
ಕುಮಾರಿ ಪಿ. ಯಶೋದಾ ಅವರು ಬರೆದ
ಬಾಳಿನ ಬೆಳೆ
ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!
ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

ಬೆಲೆ 3 ಆಣೆ

ನಮ್ಮ ರಾಜ್ಯಪಾಲರು.

# ನವಯುಗ

1—11—1956 NAVAYUGA ನವರಾಜ್ಯೋದಯ ಸಂಚಿಕೆ


ಉದಯವಾಯಿತುಯೆಮ್ಮ ಚೆಲುವ ಕನ್ನಡ ನಾಡು |
ಸದಯ ಕನ್ನಡ ತಾಯಿ ಕಾಯೆ ಈ ಬೀಡು ||

ಕನ್ನಡ ನಾಡಿನ ಶುಭೋದಯದ ಸುಸಂದರ್ಭದಲ್ಲಿ
ಕನ್ನಡ ನಾಡಿನ ಸರ್ವತೋಮುಖವಾದ ಸದಭಿವೃದ್ಧಿಗೆ
ಕನ್ನಡ ನಾಡಿನಲ್ಲಿರುವ ನಮ್ಮ **58** ಶಾಖೆಗಳ ಮೂಲಕ
ಬೇಂಕಿಂಗ್ ಸೇವಾ ಭರವಸೆಯನ್ನೂ
ಕನ್ನಡ ಜನತೆಗೆ ಸಿಂಡಿಕೇಟ್ ಬೇಂಕಿನ ಶುಭಾಶಯಗಳನ್ನೂ
ಸಾದರದಿಂದ ಸಮರ್ಪಿಸುತ್ತಿದ್ದೇವೆ.

"ಕನ್ನಡ ನಾಡು ಚೆನ್ನದ ನಾಡಾಗಲಿ"

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.
ಉಡುಪಿ.

**The Canara Industrial & Banking Syndicate Ltd.**
**UDIPI.**

# ಸುಸ್ವಾಗತಂ

# ಮಹಾ ಮೈಸೂರಿಗೆ

ರಾಜ್ಯ ಪುನರ್ವಿಂಗಡಣೆಯ ಈ ಸಂದರ್ಭದಲ್ಲಿ ನಾವು ಮಹಾ ಮೈಸೂರು ರಾಜ್ಯದ ಸರ್ವ ಜನತೆಗೂ ನಮ್ಮ ಹೃತ್ಪೂರ್ವಕ ಸ್ವಾಗತ ಕೋರಿ, ಶುಭಾಶಯಗಳನ್ನು ಸಲ್ಲಿಸುತ್ತೇವೆ; ಅಲ್ಲದೆ ನಾವು ಅತ್ಯಧಿಕ ಉತ್ಸಾಹದಿಂದ ಮುಂದೆಯೂ ನಿಮ್ಮ ಸೇವೆ ಸಲ್ಲಿಸುವ ಪ್ರತಿಜ್ಞಾಬದ್ಧರಾಗುತ್ತೇವೆ.

ಸ್ಥಳೀಯ ಜನತೆ ಮತ್ತು ಪರಿಸ್ಥಿತಿಗಳ ವಿಶೇಷ ಅನುಭವದಿಂದಲೂ, **50** ವರ್ಷಗಳಿಗೂ ಮಿಕ್ಕಿದ ಪ್ರಗತಿಪರ ಬೇಂಕಿಂಗ್ ಪರಿಜ್ಞಾನದಿಂದಲೂ ಪ್ರಮುಖ ಸ್ಥಳಗಳಲ್ಲಿ ಶಾಖಾ ಕಚೇರಿಗಳ ಜೋಡಣೆಯಿಂದಲೂ ಪ್ರಪಂಚದ ಗಣನೀಯ ಕೇಂದ್ರಗಳಲ್ಲಿ ಬಾತ್ಮೀದಾರರು ಮತ್ತು ಏಜಂಟರುಗಳಿಂದಲೂ ಕೂಡಿರುವ **ಕೆನರಾ ಬ್ಯಾಂಕು** ನಿಮಗೆ **ಸಂಪೂರ್ಣ ಬ್ಯಾಂಕಿಂಗ್ ಸೇವೆ**ಯನ್ನು ಸಲ್ಲಿಸುತ್ತದೆ.

# ಕೆನರಾ ಬ್ಯಾಂಕ್ ಲಿಮಿಟೆಡ್

**1906** — ಸರ್ವ ಜನರಿಗೂ ಬೇಕಾಗುವ ಬ್ಯಾಂಕು — **1956**

## ಒಟ್ಟು ಚಲಾವಣೆ ಭಂಡವಾಳ **17** ಕೋಟಿಗೂ ಮಿಕ್ಕಿದೆ.

## ರಂಗಭೂಮಿಯಲ್ಲಿ ಅಭಿನಯಿಸಲು ನಟನಟಿಯರಿಗೆ ಬೇಕಾಗುವ ಯಾವತ್ತೂ ವೇಷಭೂಷಣಾದಿಗಳ




**ಸಚಿತ್ರ ಕನ್ನಡ ಹೊಸ ಪ್ರಾಯಿಸ್ ಲಿಸ್ಟಿಗಾಗಿ ಕೂಡಲೇ ಬರೆಯಿರಿ.**

ಸ್ತ್ರೀ-ಪುರುಷ ಪಾತ್ರಗಳ ಪೋಷಣ, ನಾಟಕದ ಹತ್ಯಾರ (ಖಡ್ಗ) ಸಾಮಾನುಗಳು, ತರಹವಾರು ಗಡ್ಡ ಮೀಸೆ, ಸ್ತ್ರೀ ಪುರುಷ ಪಾತ್ರದ ಮುಕುಟಗಳು, ಐತಿಹಾಸಿಕ ಪಗಡಿಗಳು, ಜರತಾರಿ ಶೆಲ್ಲೆ, ನಾಟಕದ ಎಲ್ಲಾ ಪ್ರಕಾರದ ಮೇಕಪ್ ಸಾಮಾನುಗಳು, ದೇಶಿ ವಿದೇಶಿ ಕ್ರೇಪ್ ಹೇರ, ಮುತ್ತಿನ ದಾಗೀನಗಳು ಇತ್ಯಾದಿ ಸದಾ ದೊರೆಯುತ್ತವೆ.

# Dharamshi Mulji, Dresswalla,

**132 C, Bhagatwadi, Bhuleshwar Road,**

**BOMBAY-2.**

## ಧರಮ್‌ಶಿ ಮುಳ್‌ಜಿ, ಡ್ರೆಸ್‌ವಾಲಾ,

೧೩೨, ಸಿ. ಭಗತವಾಡಿ, ಭುಲೇಶ್ವರ ರೋಡ್,

ಮುಂಬಯಿ-೨.

Vol. 36 — ಸಂಪುಟ ೩೬
No. 9 — ಸಂಚಿಕೆ ೯
1-11-1956
ನವರಾಜ್ಯೋದಯ ಸಂಚಿಕೆ
# ನವಯುಗ
Estd. 1921 ಸ್ಥಾಪನೆ
ಸಂಚಾಲಕ ಸಂಪಾದಕ: ಕೆ. ಹೊನ್ನಯ್ಯ ಶೆಟ್ಟಿ.

"ನಿಮ್ಮ, ನನ್ನ ಜೀವಮಾನದ ತೀರ್ಪ ನಮ್ಮ ಕನ್ನಡ ತಾಯಿ ಸೇವೆ. ಓ ಕನ್ನಡಿಗರಿರಾ, ನಿಮ್ಮ ಹಿರಿಯರ ಹೂದೋಟವನ್ನು ಹೊಕ್ಕು, ಹೊಸ ನೇಗಿಲಿನಿಂದ ಆಳವಾಗಿ ಉತ್ತು, ಹೊಸ ಹೊಸ ಹೊಂಬೆಳೆಗಳನ್ನು ತೆಗೆಯಿರಿ! ಕನ್ನಡ ನಾಡಿನ ಮಕ್ಕಳು ಕನ್ನಡದಿಂದ ಬೆಳೆಯಲಿ! ಕನ್ನಡ ನಾಡು ಕನ್ನಡದಿಂದ ಕೂಡಲಿ! ಕನ್ನಡ ಬಾಳಲಿ, ಗೆಲ್ಲಲಿ!"

—ಬಿ. ಎಂ. ಶ್ರೀ.

"ಇದು ಕವಿ ಕಂಡ ನಾಡು! ಪಂಪನ ಹೆಮ್ಮೆಯ ಕನ್ನಡ ನಾಡು! ಸಂಸಾರ ಸಾರಸರ್ವಸ್ವ ಫಲದ ಸ್ವರ್ಗದ ಬೀಡು! ಸಾಮ್ರಾಜ್ಯ ವೈಭವಗಳನ್ನು ಮತ್ತೆ ಮತ್ತೆ ಬೆಳೆಸಿ ಕೊಂಡುಂಡ ನಾಡು! ಪಂಪನು ಹಾಡುತ್ತಿದ್ದಾನೆ. ಏಳು, ಎಚ್ಚರವಾಗು, ಉಸಿರು ತುಂಬು, ಈ ಚಿಮ್ಮುಗಾಲದಲ್ಲಿಯೂ ನೀನೇಳದೇ ಹೋದರೆ ಎಂದೆಂದಿಗೂ ಬೀಳು! ಬಿದ್ದಿರು!ಓ ಕನ್ನಡ ಮಗುವೇ!"

—ಬಿ. ಎಂ. ಶ್ರೀ.

* * * * * * * * * * * * * * * * * * * * *

# ಸ್ವತಂತ್ರ ಭಾರತ, ಏಕತಂತ್ರ ಕರ್ನಾಟಕ

ಒಂದೇ ರಾಜ್ಯತಂತ್ರದ ಕಕ್ಷೆಯಲ್ಲಿ ಕರ್ನಾಟಕದ ಪ್ರಜೆಗಳೆಲ್ಲ ಸಮಾವೇಶವಾಗಿರುವುದು ನಿಜಕ್ಕೂ ಹರ್ಷದಾಯಕವಾದ ವಿಚಾರ. ಇನ್ನು ಮುಂದೆ ಹಾರ್ದಿಕವಾದ ಏಕೀಕರಣ ನಡೆಯಬೇಕಾಗಿದೆ. ಅದಕ್ಕಾಗಿ ನಾವು ಮುಂಬಯಿ ಕರ್ನಾಟಕದವರು, ನಾವು ಪಡು ಕರಾವಳಿಯವರು, ನಾವು ಕೊಡಗರು, ನಾವು ಹೈದರಾಬಾದಿನವರು ಎಂಬಂತಹ ಭೇದ ಭಾವ ಅಳಿದು ಹೋಗಲಿ!

ಬರೆದವರು: ಶ್ರೀ ರಂಗನಾಥ ದಿವಾಕರ,
ಬಿಹಾರದ ರಾಜ್ಯಪಾಲರು.

## ಸಿಂಹದ ಸ್ವಭಾವ

ಸಿಂಹದ ಪ್ರತ್ಯಕ್ಷ ಜೀವನ ಹೇಗಿರುವದೊ ನಾನರಿಯೆ. ಅದರೊಡನೆ ಬಾಳ್ವೆ ಮಾಡಿದರೆ ತಾನೆ ಅದು ಗೊತ್ತಾಗಬಲ್ಲದು. ಆ ವನರಾಜನ ವಿಚಾರ—ಭಾವನೆ ಇವುಗಳ ಪರಿಚಯವೂ ನನಗಿಲ್ಲ. ಅದೊಂದು ಮೂಕ ಪ್ರಾಣಿ. ಆದರೆ ಅಡವಿಯನ್ನೆಲ್ಲ ನಡುಗಿಸಿ ಪ್ರಾಣಿ ಮಾತ್ರರ ಹೃದಯಗಳನ್ನು ಕಂಪಿಸಬಲ್ಲ ಅದರ ಗಂಭೀರ ಗರ್ಜನೆಯಷ್ಟೇ ನಮ್ಮೆಲ್ಲರಿಗೂ ಗೊತ್ತು. ಈ ರೀತಿ ವಿಶೇಷ ಪರಿಚಯವಿಲ್ಲದಿದ್ದರೂ ಸಿಂಹಕ್ಕೆ ನಾವು "ಮೃಗರಾಜ" ಎಂಬ ಬಿರುದನ್ನು ಕೊಟ್ಟು ಆ ವೀರ—ಸುಂದರ ಪ್ರಾಣಿಯನ್ನು ಅರಣ್ಯದ ಅರಸನೆಂದು ಪಟ್ಟಗಟ್ಟಿದ್ದೇವೆ. ಕವಿಗಳು, ಕಲಾವಿದರು, ಕತೆಗಾರರು ಸಿಂಹದ ಹಲವೊಂದು ರೀತಿನೀತಿಗಳನ್ನು ಕಲ್ಪನೆಯಿಂದ ರೂಪಿಸಿ 'ಸಿಂಹಾವಲೋಕನ' ಎಂಬುದು ಒಂದು ಅದರ ರೂಢಿ ಎಂದು ಬಣ್ಣಿಸಿದ್ದಾರೆ. ವಿಜಯ ಯಾತ್ರೆಗೆ ಹೊರಟಾಗ ನಡು ನಡುವೆ ನಿಂತು, ತನ್ನ ಕತ್ತನ್ನು ಹಿಂತಿರುಗಿ, ಆಕ್ರಮಿಸಿದ ಮಾರ್ಗವನ್ನು ಧೀರೋದಾತ್ತ ಭಂಗಿಯಿಂದ ನಿರೀಕ್ಷಿಸಿ, ಸಿಂಹರಾಜನು ಮುಂದೆ ಸಾಗುವನು ಎಂದು ಹೇಳುವರು. ಭಾರತೀಯರ ಹಗಲಿಗೆ ಹೆಗಲು ಕಟ್ಟಿ ಹೋರಾಡಿದ ಕರ್ನಾಟಕದ ಉತ್ಸಾಹಭರಿತ ಜನರು ಭಾರತವನ್ನು ಅದ್ವಿತೀಯರೀತಿಯಿಂದ ಸ್ವತಂತ್ರಗೊಳಿಸಿ ನವೋದಿತ ಕರ್ನಾಟಕದಲ್ಲಿ ಮುಂದೆ ಸಾಗುವಾಗ ಸಿಂಹಾವಲೋಕನ ಅವಶ್ಯ. ಆ ಸಿಂಹಾವಲೋಕನದಲ್ಲಿ ನಡೆದು ಬಂದ ದಾರಿಯ ನಿರೀಕ್ಷಣೆ, ನಿಂತ ತಾವಿನ ಪರೀಕ್ಷಣೆ, ಮುಂದಿನ ದಾರಿಯ ದಿವ್ಯ ದರ್ಶನ ಇವು ಮೂರೂ ಒಂದಾಗಿರಬೇಕು. ಅದೇ ನಿಜವಾದ ಸಿಂಹಾವಲೋಕನ.

## ಆಹ್ವಾನ–ಪ್ರತ್ಯುತ್ತರ

೧೯೦೪-೦೫ರಲ್ಲಿ ಬಡಿದೆಬ್ಬಿಸಿದ ಸಿಂಹದಂತೆ ಭಾರತವು ಎಚ್ಚೆತ್ತಿತು. ತನ್ನ ಶಕ್ತಿಯ ಅರಿವುಗೊಂಡು, ಮೈದುಡಾಡಿಸಿ ಮುಂದಡಿಯಿಡಲಾರಂಭಿಸಿತು. ಏಶಿಯದ ಚಿಕ್ಕ ಜಪಾನವು ಯುರೋಪದ ಮಹಾನ್ ರಶಿಯಾ ದೇಶವನ್ನು ೧೯೦೫ ರಲ್ಲಿ ಸೋಲಿಸಿದ್ದರಿಂದ ಇಡೀ ಏಶಿಯಾ ಖಂಡದಲ್ಲಿ ಒಂದು ಹೊಸ ಚೈತನ್ಯದ ಸಂಚಾರವಾಗಿ ಪ್ರತಿ ದೇಶದಲ್ಲಿ ಆತ್ಮವಿಶ್ವಾಸ ತಲೆದೋರಿತು. ೧೯೦೫ ರಲ್ಲಿ ವಂಗಭಂಗ ಚಳವಳಿಯ ಅಂಗವಾಗಿ ಸ್ವದೇಶಿ–ಸ್ವರಾಜ್ಯಗಳ ಆಂದೋಲನ ರೂಪುಗೊಂಡಿತು. ಸ್ವದೇಶ, ಸ್ವಧರ್ಮ, ಸ್ವಭಾಷೆ ಇವುಗಳ ಉದ್ಧಾರ ಮಾಡಬೇಕು ಎಂಬ ದೃಢಸಂಕಲ್ಪ ಮಾಡಿದ ಸಾವಿರಾರು ಭಾರತೀಯರು ತ್ಯಾಗ ಹಾಗು ಸೇವೆಯ ಪ್ರತಿಜ್ಞೆ ಮಾಡಿದರು. ಆಕ್ರಮಣಶೀಲ ಪಾಶ್ಚಾತ್ಯ ವಿಜಿಗೀಷು ವೃತ್ತಿಯ ಜನಾಂಗಗಳ ಆಹ್ವಾನಕ್ಕೆ ಇದು ಜಾಗ್ರತ ಭಾರತವು ಕೊಟ್ಟ ಉತ್ತರವಾಗಿತ್ತು. ನಾವು ಇನ್ನು ಪಾಶ್ಚಾತ್ಯರ ಗುಲಾಮರಾಗಿ ಉಳಿಯಲಾರೆವು; ಬ್ರಿಟಿಷರ ಆರ್ಥಿಕ ದಾಸ್ಯವನ್ನು ಸ್ವಾವಲಂಬನದಿಂದ ನಾವು ಸಡಬಡಿಯುವೆವು; ಭಾರತದ ಶರೀರ ಮನ ಆತ್ಮಗಳು ಪಾಶ್ಚಾತ್ಯ ಭೌತಿಕ ಸಂಸ್ಕೃತಿಗೆ ಮಾರು ಹೋಗದೆ ಸ್ವತಂತ್ರವಾಗಿ ಉಳಿದು ತನ್ನ ಅಂಗಭೂತವಾದ ಆಧ್ಯಾತ್ಮಿಕ ಶಕ್ತಿಯಿಂದ ಜಗತ್ತಿಗೆ ಮಾರ್ಗದರ್ಶನ ಮಾಡಲು ಅಣಿಯಾಗುವೆವು ಎಂದು ಎಚ್ಚೆತ್ತ ಭಾರತವು ಡಂಗುರ ಸಾರಿತು. ಭಾರತದಲ್ಲೆಲ್ಲ ಹೊಸ ಪ್ರಾಣವಾಯು ಸಂಚರಿಸಿತು. ಕರ್ನಾಟಕವು ತನ್ನ ಪಾಲಿನ ಭಾರವನ್ನು ಹೊರಲು ಸಿದ್ಧವಾಯಿತು.

## ಏಕೀಕರಣ ಕಲ್ಪನೆ

ಭಾರತವು ಎಲ್ಲ ರೀತಿಯಿಂದ ಸರ್ವತಂತ್ರ ಸ್ವತಂತ್ರವಾಗಲಿಕ್ಕೆಬೇಕು ಎಂಬ ಭಾವನೆಯೊಡನೆ, ಹರಿದು ಹಂಚಿ ಹತ್ತಿಪ್ಪತ್ತು ಆಡಳಿತಗಳಲ್ಲಿ ಚಲ್ಲಿದ ಚರಗದಂತೆ ಬೇರಲಾದ ಕರ್ನಾಟಕ ಒಂದೇ ಆಡಳಿತಕ್ಕೆ ಒಳಗಾಗಬೇಕೆಂಬ ಆಕಾಂಕ್ಷೆ ನಮ್ಮಲ್ಲಿ ಒಡಮೂಡಿತು. ಈ ಕಲ್ಪನೆ ಮೆಲ್ಲಮೆಲ್ಲನೆ ವಿಕಾಸಗೊಂಡು ಪೂರ್ಣ ಪ್ರೌಢ ಸ್ವರೂಪವನ್ನು ಹೊಂದುವಾಗ ಹಲವು ಅವತಾರಗಳನ್ನು ತಾಳಿತು. ಮೊದಲು ಭಾಷಾವಿಷಯಕ ಏಕರೂಪತೆಯನ್ನು ಹೊಂದಲು ಧಾರವಾಡದಲ್ಲಿ ೧೮೯೦ರಲ್ಲಿ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಗಿ ೧೯೧೫ರಲ್ಲಿ ಬೆಂಗಳೂರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಗಲ್ಲಿಡಲಾಯಿತು. ೧೯೨೦ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ಏಕೀಕರಣ ಪರಿಷತ್ತು, ಬ್ರಿಟಿಷ ಆಡಳಿತಕ್ಕೆ ಸೇರಿದ ಕರ್ನಾಟಕದ ಭಾಗಗಳನ್ನಷ್ಟೇ ಒಂದು ಪ್ರಾಂತವನ್ನಾಗಿಸಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ೧೯೨೮ರಲ್ಲಿ ನೆಹರೂ ಕಮಿಟಿ ಸಹ ಬ್ರಿಟಿಷ ಕರ್ನಾಟಕ ಪ್ರಾಂತೀಕರಣವನ್ನೆ ಸಮರ್ಥಿಸಿತು. ೧೯೨೪ರಲ್ಲಿ ಬೆಳಗಾಂವಿಯಲ್ಲಿ ನಡೆದ ಏಕೀಕರಣ ಪರಿಷತ್ತಿನಲ್ಲಿ ಮಾತ್ರ ಮೊಟ್ಟ ಮೊದಲು, ಬ್ರಿಟಿಷ ಹಾಗೂ ಸಂಸ್ಥಾನೀ ಆಡಳಿತಕ್ಕೆ ಸೇರಿದ ಕರ್ನಾಟಕದ ಎಲ್ಲ ಭಾಗಗಳನ್ನು ಒಟ್ಟುಗೂಡಿಸಿ ಇಡೀ ಕರ್ನಾಟಕವನ್ನು ಏಕತಂತ್ರಕ್ಕೆ ಸೇರಿಸಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು.

ಕರ್ನಾಟಕ ಏಕೀಕರಣ ಕಲ್ಪನೆಯ ಆ ಕೊನೆಯ ಅವತಾರವೆ ಈಗ ಮೂರ್ತಿಸ್ವರೂಪಕ್ಕೆ ಬಂದು 'ಮೈಸೂರು ರಾಜ್ಯ' ಎಂಬ ಹೆಸರಿನಿಂದ ೧—೧೧—೫೬ರಿಂದ ಪ್ರತ್ಯಕ್ಷ ಅಸ್ತಿತ್ವದಲ್ಲಿ ಬಂದಿದೆ.

## ಏಕೀಕರಣ ಪ್ರಯತ್ನಗಳು

೧೯೦೫ ರಿಂದ ೧೯೫೬ರ ವರೆಗೆ ನಡೆದ ಇತಿಹಾಸದಲ್ಲಿ ಕರ್ನಾಟಕ ಏಕೀಕರಣವನ್ನು ಕುರಿತು ಹಲವಾರು ಪ್ರಯತ್ನಗಳು ಮಾಡಲಾದವು, ಅನೇಕ ಸಂಗತಿಗಳು ಸಂಭವಿಸಿದವು. ಅವುಗಳಲ್ಲಿ ಮುಖ್ಯವಾದವುಗಳ ನಾಮನಿರ್ದೇಶ ಇಲ್ಲಿ ಅಪ್ರಸ್ತುತವಾಗಲಾರದು.

ಬ್ರಿಟಿಷ್ ಆಡಳಿತಕ್ಕೆ ಸೇರಿದ ಕರ್ನಾಟಕದ ಭಾಗಗಳನ್ನೆಲ್ಲ ಸೇರಿಸಿ ಒಂದು ಪ್ರಾಂತವನ್ನು ರಚಿಸಲು ಯತ್ನಮಾಡುವದಕ್ಕಾಗಿ ೧೯೧೬ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ಸಭೆ' ಎಂಬ ಸಂಸ್ಥೆ ಸ್ಥಾಪಿಸಲಾಯಿತು. ೧೯೨೦ರಲ್ಲಿ ಪ್ರಥಮ ಕರ್ನಾಟಕ ಏಕೀಕರಣಸಮ್ಮೇಲನ ಧಾರವಾಡದಲ್ಲಿ ಕೂಡಿ ಬ್ರಿಟಿಷ್ ಕರ್ನಾಟಕ ಏಕೀಕರಣದ ಗೊತ್ತುವಳಿಯನ್ನು ಸ್ವೀಕರಿಸಿತು. ಭಾರತೀಯ ಕಾಂಗ್ರೆಸಿನ ನಾಗಪೂರ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತಗಳ ರಚನೆಯಾಗಿ (ಕಾಂಗ್ರೆಸ್ ಘಟನೆ ಹಾಗೂ ಕಾರ್ಯಕಲಾಪ ಇವುಗಳನ್ನು ನಡೆಸಲು) ಬ್ರಿಟಿಷ್, ಹಾಗೂ ಸಂಸ್ಥಾನೀ ಕರ್ನಾಟಕ ಕೂಡಿ ಒಂದು ಕಾಂಗ್ರೆಸ ಪ್ರಾಂತ ಮಾಡಲಾಯಿತು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮುಖ್ಯಸ್ಥಳ ಗದುಗಿನಲ್ಲಿರಬೇಕು ಹಾಗೂ ಭಾಷೆ ಕನ್ನಡವಿರಬೇಕು ಎಂದು ನಿರ್ಧರಿಸಲಾಯಿತು. ೧೯೨೪ರಲ್ಲಿ ಬೆಳಗಾಂವಿನಲ್ಲಿ ಕಾಂಗ್ರೆಸ್ಸಿನ ಮಹಾಧಿವೇಶನವು ಕೂಡಿದಾಗ ಕರ್ನಾಟಕ "ಏಕೀಕರಣ ಸಂಘ" ಎಂಬ ಪ್ರತ್ಯೇಕ ಸಂಸ್ಥೆ ನಿರ್ಮಿಸಲಾಯಿತು. ಅದರಲ್ಲಿ ಕಾಂಗ್ರೆಸ್ಸಿಗರು ಹಾಗೂ ಇತರರು ಎಲ್ಲರೂ ಸೇರಿಕೊಂಡರು. ೧೯೨೫ ರಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಏಕೀಕರಣ ಪ್ರಶ್ನೆಯನ್ನು ಕೈಕೊಂಡು ಕೊನೆಯವರೆಗೆ ಅಂದರೆ ಈ ದಿನದ ವರೆಗೆ ಅವ್ಯಾಹತವಾಗಿ ಪ್ರಯತ್ನ ಮಾಡುತ್ತ ಬಂದು ಸಫಲವಾಗಿ ಸಿದ್ಧಿಯನ್ನು ಪಡೆಯಿತು. ೧೯೨೮ರಲ್ಲಿ ನೆಹರೂ ಕಮಿಟಿಯು (ಸರ್ವಪಕ್ಷೀಯ ಪರಿಷತ್ತಿನ ಘಟನಾ ಸಮಿತಿ) ಬ್ರಿಟಿಷ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗಲು ಅರ್ಹತೆ ಹೊಂದಿದೆ ಎಂದು ತನ್ನ ಅಭಿಪ್ರಾಯವನ್ನು ಸಾರಿತು. ೧೯೩೮ರಲ್ಲಿ ಬ್ರಿಟಿಷ ಹಾಗೂ ಸಂಸ್ಥಾನೀ ಎಂಬ ಭೇದವಿಲ್ಲದೆ ಕರ್ನಾಟಕದ ಎಲ್ಲ ಭಾಗಗಳು ಒಂದು ಮಾಡಲ್ಪಟ್ಟು ಒಂದೇ ಒಂದು ಆಡಳಿತದ ಪ್ರಾಂತ ಮಾಡಲಾಗಬೇಕು ಎಂಬ ಗೊತ್ತುವಳಿ ಏಕೀಕರಣ ಸಂಘದ ಅಧಿವೇಶನದಲ್ಲಿ ಸ್ವೀಕೃತವಾಯಿತು. ೧೯೩೭ರಲ್ಲಿ ಮುಂಬಯಿ, ಮದ್ರಾಸ ವಿಧಾನ ಸಭೆಗಳಲ್ಲಿ ಬ್ರಿಟಿಷ್ ಕರ್ನಾಟಕದ ಏಕೀಕರಣದ ಗೊತ್ತುವಳಿಗಳು ಪಾಸಾದವು. ಅವುಗಳನ್ನು ಕುರಿತು ಕಾಂಗ್ರೆಸ ವರ್ಕಿಂಗ ಕಮಿಟಿಯು ಏಕೀಕರಣದ ಬೇಡಿಕೆಗೆ ಬೆಂಬಲಕೊಟ್ಟು ಸದ್ಯಕ್ಕೆ ಚಳವಳಿಯನ್ನು ಮಾತ್ರ ಹೂಡುವದು ಯುಕ್ತವಲ್ಲ ಯಾಕೆಂದರೆ ಸ್ವಾತಂತ್ರ್ಯದ ಹೋರಾಟವತ್ತ ಲಕ್ಷ್ಯವು ಕಡಿಮೆ

(೬ನೇ ಪುಟ ನೋಡಿರಿ)

# ಜಯ ಕರ್ನಾಟಕ!

ಪರಸ್ಪರ ಸಂದರ್ಶನ ಕಾಲದಲ್ಲಿ ನಮಸ್ಕಾರ, ನಮಸ್ತೇ ಎನ್ನುವುದನ್ನು ಬಿಟ್ಟು "ಜಯ ಕರ್ನಾಟಕ!" ಎನ್ನಲು ನಾವಿನ್ನು ಮರೆಯದಿರೋಣ! ಕನ್ನಡ ಭುವನೇಶ್ವರಿಯ ವೈವಿಧ್ಯಪೂರ್ಣ ವೈಭವಕ್ಕೆ, ನಮ್ಮದಿದು ಕೃತಜ್ಞತೆಯ ಕಾಣಿಕೆಯಾಗಲಿ!

**ಬರೆದವರು: ಶ್ರೀ ಯ. ನಾ. ಉಡುಪ, ವಿದ್ವಾನ್.**

ಸರ್ವರಿಗೂ ಕನ್ನಡ ನಾಡಿನ ಉಜ್ವಲ ಪರಂಪರೆ ಮತ್ತು ಕರ್ತವ್ಯದ ಅರಿವು ಮಾಡಿಕೊಟ್ಟರೆ ನಮ್ಮ ನಾಡು ಒಂದು ಸರ್ವಾಂಗ ಸುಂದರವಾದ ಸರ್ವಶ್ರೇಷ್ಠವಾದ ನಾಡಾಗುವುದರಲ್ಲಿ ಸಂದೇಹವಿಲ್ಲ.

—ಶ್ರೀ|| ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿ.

ಇಂದೂ ದೇಶದಲ್ಲೇ 'ಕನ್ನಡ ನಾಡು ಅಗ್ರಗಣ್ಯವಾದುದು' ಇದು ಆಂಗ್ಲ ಸಾಹಿತಿಗಳೊಬ್ಬರ ಅಭಿಪ್ರಾಯ. ಇದು ಬರೇ ಅಂತೆಸಂತೆಗಳ ಮಾತಲ್ಲ. ಇಲ್ಲಿಯ ಭೂಮ್ಯುತ್ಪತ್ತಿಗಳೇ ಇದಕ್ಕೊಂದು ಉತ್ತಮ ದೃಷ್ಟಾಂತ. ಈ ನಾಡಿನಲ್ಲಿ ಬೆಳೆಯುವ ರಾಗಿ, ಬತ್ತ, ಗೋಧಿ, ಹತ್ತಿ, ಮತ್ತು ಇತರ ಧಾನ್ಯಗಳ ವೈವಿಧ್ಯತೆಯು ಭಾರತದ ಯಾವ ಪ್ರಾಂತಗಳಲ್ಲೂ ಬೆಳೆಯಲಾರದು. ತೆಂಗುಕಪ್ಪುಂಗುಗಳಿಗೆ ನಮ್ಮದು ತವರುಮನೆ. ಪಶ್ಚಿಮದ ಸಮುದ್ರವು ನಮ್ಮ ನಾಡಿಗೆ ಎಷ್ಟು ಉತ್ಪತ್ತಿಯನ್ನು ಧಾರೆಯೆರೆದೀತು ಎಂದು ಊಹಿಸುವುದೂ ಅಸಾಧ್ಯ. ಈ ಪವಿತ್ರ ನೆಲವನ್ನು ಉತ್ತರ ದಕ್ಷಿಣವಾಗಿ ಹಾದುಹೋದ ಮಲೆನಾಡು ಒಂದು ಅನರ್ಘವಾದ ಹೊನ್ನಿನ ಕಣಜ. ಇಲ್ಲಿಯ ಕಾಡುತ್ಪತ್ತಿಗಳನ್ನು ತೆಗೆದಷ್ಟೂ ಇವೆ. ಇವು ಅಮರ ಮತ್ತು ಅನಂತ! ಗೆರಸೊಪ್ಪೆ, ಉಂಛಲಿ, ಲಾಳಗುಳಿ ಮೊದಲಾದ ಜಲಪಾತಗಳಿಂದ ಸಮಗ್ರ ಕರ್ನಾಟಕವು ವಿದ್ಯುದ್ದೀಪಗಳ ಸುರಲೋಕವಾಗಬಲ್ಲುದು. ಈ ಮಹಾ ಶಕ್ತಿಯಿಂದಲೇ ಅದ್ಭುತವಾದ ಯಂತ್ರಸಾಮಾಗ್ರಿಗಳು ಆಟಿಕೆಗಳಂತೆ ಚಲಿಸಿ ನಮ್ಮ ನಾಡವರ ದಾರಿದ್ರ್ಯವು 'ಹಾ ಹಾ' ಅನ್ನುವುದರೊಳಗಾಗಿ ಅದೃಶ್ಯವಾಗಬಲ್ಲದು. ಸದ್ಯದ ವರ್ತಮಾನ ಕಾಲದಲ್ಲೇ ಇಲ್ಲಿನ ಭೂಗರ್ಭದಿಂದ ಸು. ಐದು ಕೋಟಿ ರೂ. ಬೆಲೆಬಾಳುವ ಚಿನ್ನವನ್ನು ತೆಗೆಯುತ್ತಿದ್ದಾರೆ. ಅಲ್ಲದೆ ಶ್ರೀಗಂಧ ಒಂದರಿಂದಲೇ ನಮಗೆ ವರ್ಷ ಒಂದಕ್ಕೆ ಎರಡು ಕೋಟಿ ರೂ. ಉತ್ಪತ್ತಿಯಾಗುತ್ತಿದೆ. ಇವೆಲ್ಲಾ ಪ್ರಕೃತಿ ದತ್ತವಾದ ನಮ್ಮ ತಾಯಿನಾಡಿನ ವೈಭವ ಪರಂಪರೆಯ ದೀವಿಗೆಗಳು. ಜನನಿಯೂ ಜನ್ಮಭೂಮಿಯೂ ಸ್ವರ್ಗಕ್ಕಿಂತ ಹಿರಿದು.

ಕನ್ನಡ ನಾಡವರು ನಿನ್ನೆ ಮೊನ್ನೆಯ ಅಪ್ರಸಿದ್ಧ ಮನೆತನದವರಲ್ಲ. ಇವರ ಹೆಸರು ಕ್ರಿ. ಪೂ. ೫೦೦ರ ಕಾಲದ ಐತರೇಯ ಬ್ರಾಹ್ಮಣ ಮತ್ತು ಸಾಂಖ್ಯಾಯನ ಸೂತ್ರದಲ್ಲಿ ಕಂಡುಬರುತ್ತದೆ. ಕರ್ನಾಟಕದ ನಿವಾಸಿಗಳನ್ನು ಅಶೋಕನ ಶಾಸನದಲ್ಲಿ ಪುಳಿಂದರೆಂದಿದೆ. ಈ ನಾಡಿಗೆ ಪ್ರಾಚೀನ ಕಾಲದಿಂದಲೂ ಕರ್ನಾಟಕವೆಂಬ ಒಂದೇ ಹೆಸರಿದ್ದಿಲ್ಲ. ಬೇರೆ ಬೇರೆ ಶತಮಾನಗಳಲ್ಲಿ ಇದಕ್ಕೆ ಮಹಾರಾಷ್ಟ್ರ, ಕರ್ನಾಟಕ, ರಟ್ಟವಾಡಿಯೆಂಬ ಹೆಸರೂ, ಇದರ ಬೇರೆ ಬೇರೆ ಭಾಗಗಳನ್ನು ಅಶ್ಮಕ (ನರ್ಮದಾ ನದಿಯ ದಕ್ಷಿಣಭಾಗ), ಮುಳಕ (ನರ್ಮದಾ ನದಿಯ ಉತ್ತರ ಭಾಗ, ಇದೇ ಅಂದಿನ ಕರ್ನಾಟಕದ ಉತ್ತರ ಮೇರೆ), ಕುಂತಳ (ಕರ್ನಾಟಕ), ಬನವಸೆ (ಪಶ್ಚಿಮ ಸಮುದ್ರತೀರ), ಸತಿಯ ಪುತ್ರ (ದಕ್ಷಿಣ ಕನ್ನಡ ಜಿಲ್ಲೆ) ಪುನ್ನಟ (ಮೈಸೂರಿನ ದಕ್ಷಿಣ), ಮಹಿಷಮಂಡಲ (ಮೈಸೂರು), ಕರಹಾಟ (ಕೊಲ್ಲಾಪುರ ಸಂಸ್ಥಾನ) ವೆಂದು ಕರೆಯುತ್ತಿದ್ದರು. ರಾಮಾಯಣ ಕಾಲದ ದಂಡಕಾರಣ್ಯವು ಕರ್ನಾಟಕದಲ್ಲೇ ಇದೆ. ಬಳ್ಳಾರಿ ಜಿಲ್ಲೆಯ ಹಂಪೆಯು ಅಂದಿನ ಕಿಷ್ಕಿಂಧೆ. ಶ್ರೀ ರಾಮ ಲಕ್ಷ್ಮಣರು ನಮ್ಮ ನಾಡಿನಲ್ಲೇ ಮಳೆಗಾಲ ಕಳೆದವೆಂಬುದನ್ನು ಯಾರು ಮರೆತಾರು? ಸರೆದಲೆಗವೆನ್ನಿಸಿದ್ದ ರಾಗಿಗೆ ಶ್ರೀರಾಮನೇ ತನ್ನ ರಾಘವನೆಂಬ ಹೆಸರನ್ನಿತ್ತನು. ಶ್ರೀರಾಮನಿಗೆ ವಿರಹ ದುಃಖವನ್ನು ಮರುಕಳಿಸಿದ ಪಂಪಾ ಸರೋವರವೇ ಇಲ್ಲಿದೆ. ಇದೇ ಪ್ರದೇಶವೇ ಆಂಜನೇಯನಿಗೆ ಶರೀರ ಮನಸ್ಸು ಮತ್ತು ಆತ್ಮದ ಶಕ್ತಿಯನ್ನು ಬಳುವಳಿಯಾಗಿ ಕೊಟ್ಟಿತು. ಧಾರವಾಡ ಜಿಲ್ಲೆಯ ಹಾನಗಲ್ಲೇ ಪಾಂಡವರು ಅಜ್ಞಾತವಾಸ ಮಾಡಿದ ವಿರಾಟನಗರ. ಮೈಸೂರಿನ ಸೊರಬ ತಾಲೂಕಿನ ಕೂಬತ್ತೂರು ಗ್ರಾಮವೇ ಚಂದ್ರಹಾಸನ ರಾಜಧಾನಿಯಾದ ಕುಂತಳ ನಗರ. ಅರ್ಜುನ ಸಹದೇವಾದಿಗಳು ಕರ್ನಾಟಕದ ಮಾರ್ಗವಾಗಿಯೇ ತಮ್ಮ ಕ್ಷಾತ್ರ ಸಂಚಾರವನ್ನು ಪೂರೈಸಿದ್ದರು.

ಮಹಾಭಾರತದಲ್ಲಿ ಅಲ್ಲಲ್ಲಿ ಸೂಚಿಸಿದ್ದ ನಾಗರ ಭೂಮಿಯೆಂಬುದು ಕರ್ನಾಟಕದ ಪಶ್ಚಿಮ ಭಾಗವು. ಅರ್ಜುನನು ಉಲೂಪಿಯನ್ನು ಲಗ್ನವಾದ ನಾಗಲೋಕವೂ ನಾಕಲೋಕವೂ ಇದೇ. ನಾಗರ ಪೂಜೆಯು ಇಲ್ಲಿನ ಜನರ ಒಂದು ವೈಶಿಷ್ಟ್ಯವಾಗಿದೆ. ಶಾಸನಗಳಲ್ಲೂ ಕರ್ನಾಟಕದ ಪಶ್ಚಿಮ ಭಾಗಕ್ಕೆ ನಾಗರ ಖಂಡವೆಂಬ ಹೆಸರಿತ್ತೆಂದು ತೋರುತ್ತದೆ. ಪ್ರಸಿದ್ಧ ಆರ್ಯರ್ಷಿಗಳಾದ ಅಗಸ್ತ್ಯ, ಕಣ್ವ, ಭರದ್ವಾಜ ಮುಂತಾದ ದಿವ್ಯವ್ಯಕ್ತಿಗಳ ಆಶ್ರಮಗಳು ನಮ್ಮೀ ಕರ್ನಾಟಕದಲ್ಲೇ ಇದ್ದುವು. ಇವೆಲ್ಲಾ ಕರ್ನಾಟಕದ ಪುರಾಣ ಯುಗದ ಉಜ್ವಲ ಪರಂಪರೆಗಳು.

ಕರ್ನಾಟಕವು ಭಾರತ ಭೂಮಿಯ ಧಾರ್ಮಿಕ ಚಲನೆಗಳ ಹೆಬ್ಬಾಗಿಲು. ದಕ್ಷಿಣಾಪಥಕ್ಕೆ ಆರ್ಯ ಸಂಸ್ಕೃತಿಯು ಬಂದಾಗ ಮೊತ್ತಮೊದಲು ಅದನ್ನು ಸ್ವೀಕರಿಸಿದವರಾರು? ಜೈನ ಬೌದ್ಧ ಮತಗಳಿಗೆ ಈ ಅರ್ಧ ದ್ವೀಪದಲ್ಲಿ ಮೊದಲು ಆಶ್ರಯವಿತ್ತವರಾರು? ಭಕ್ತಿ ಮಾರ್ಗದ ತರಂಗಗಳನ್ನು ಉತ್ತರ ದೇಶಕ್ಕೆ ನೂಕಿ ಹರಡಿದವರಾರು? ಕನ್ನಡಿಗರು; ಸರ್ವಧರ್ಮ ಸಹಿಷ್ಣುತೆಯುಳ್ಳ ಕನ್ನಡಿಗರು.

ಕಡೆಯ ಶ್ರುತಕೇವಲಿಯಾದ ಭದ್ರಬಾಹುವು ಮೌರ್ಯ ಸಾಮ್ರಾಟ ಚಂದ್ರಗುಪ್ತನೊಡನೆ ದಕ್ಷಿಣಹಿಂದೂ ದೇಶಕ್ಕಿಳಿದು ಅಲ್ಲಿಂದ ಮುಂದರಿಸಿ ಶ್ರವಣ ಬೆಳುಗೊಳದಲ್ಲಿ ಕ್ರಿ ಪೂ. ಮೂರನೆಯ ಶತಮಾನದಲ್ಲೇ ತಳಊರಿ, ಇಲ್ಲೇ ಮೊದಲು ಜೈನ ಧರ್ಮಾಂಕುರವನ್ನು ನೆಟ್ಟನು. ಕನ್ನಡಿಗರ ರಾಜನಾದ ಹೊಯ್ಸಳ ಬಿಟ್ಟಿದೇವನು ವಿಷ್ಣುವರ್ಧನನಾಗಿ ವೈಷ್ಣವ ಮತಪ್ರಚಾರಕನಾದರೂ, ಜೈನ ಮತ್ತು ಬ್ರಾಹ್ಮಣ ಧರ್ಮಕ್ಕೆ ಸಮಾನವಾದ ಪ್ರೋತ್ಸಾಹವನ್ನು ಕೊಡುತ್ತಿದ್ದನು. ಕರ್ನಾಟಕದಲ್ಲಿ ಜೈನರು ನೆಮ್ಮದಿಯಿಂದ ಬಾಳುತ್ತಿದ್ದ ಕಾಲದಲ್ಲೇ ಶ್ರವಣ ಬೆಳುಗೊಳ, ಕಾರ್ಕಳ, ವೇಣೂರಿನ ಜಗದದ್ಭುತ ಗೋಮಟ ವಿಗ್ರಹಗಳೂ, ಕಾರ್ಲೆ, ಅಜಂತೆ, ಎಲ್ಲೋರ, ಬಾದಾಮಿ ಗುಹಾಂತರ್ದೇವಾಲಯಗಳೂ, ಕರ್ನಾಟಕ ಸಾಹಿತ್ಯದ ಉದ್ದಾಮ ಕೃತಿಗಳಾದ ವಿಕ್ರಮಾರ್ಜುನ ವಿಜಯ ಮತ್ತು ಸಾಹಸ ಭೀಮವಿಜಯಗಳೂ ನಿರ್ಮಾಣವಾದುವು. ಕನ್ನಡಿಗರ ವಿಶಾಲ ಉದಾತ್ತ ಸಹಿಷ್ಣು ಹೃದಯವೇ ಜೈನರಿಗೆ ಈ ಮಹಾಕಾರ್ಯವನ್ನೆಸಗಲು ಬೆನ್ನು ಚಪ್ಪರಿಸಿತು. ಆರ್ಯ ಸಂಸ್ಕೃತಿಯ ತಿರುಳಾದ ಯಜ್ಞ ಯಾಗಾದಿಗಳಲ್ಲಿದ್ದ ಪಶುವಧೆಯನ್ನು ತಪ್ಪಿಸಿ, ಪಿಷ್ಟಕೃತ ಪಶುಗಳನ್ನು ನಿರ್ಮಿಸಿ ಯಜ್ಞಕಾರ್ಯಗಳಿಗೆ ಪ್ರೋತ್ಸಾಹವಿತ್ತ ಮಧ್ವಾಚಾರ್ಯರು ಶುದ್ಧ ಕನ್ನಡಿಗರು. ಕನ್ನಡಿಗರು ವಜ್ರದಂತೆ ಕಠೋರರಾಗಬಲ್ಲರು; ಕುಸುಮದಂತೆ ಕೋಮಲ ಸ್ವಭಾವದವರೂ ಆಗಬಲ್ಲರು. ಅವರು ತಮ್ಮ ಸ್ವರ್ಗಸುಖಕ್ಕಾಗಿ ಪಶುವಧೆಯನ್ನು ಮಾಡತಕ್ಕಂತಹ ನೀಚ ಸ್ವಾರ್ಥಿಗಳಲ್ಲ.

ಕ್ರಿ. ಶ. ಆರಂಭದಲ್ಲೇ ತಾವು ಪಾಶದಲ್ಲಿ ಸಿಕ್ಕಿ ನರಳುತ್ತಿರುವ ಮೂಕಜಂತುಗಳಂತಿರುವ ಪಶುಗಳೆಂದೂ, ಬಂಧನದಿಂದ ಬಿಡುಗಡೆಮಾಡುವ ಶಿವನು ಪಶುಪತಿಯೆಂದೂ ಭಾವಿಸಿ ಪೂಜಿಸುವ ಭಕ್ತಿ ಮಾರ್ಗವು ಕರ್ನಾಟಕದಲ್ಲಿ ರೂಢಿಯಲ್ಲಿತ್ತು; ಶಾತವಾಹನ ಕಾಲದಲ್ಲೇ ಲಿಂಗ ಪೂಜೆಗಾಗಿ ಶಿವಾಲಯಗಳಿಗೆ ದತ್ತಿಯನ್ನು ಬಿಟ್ಟದ್ದಕ್ಕೆ ಅನೇಕ ಸಾಕ್ಷಿಗಳು ದೊರೆತಿವೆ. ಬ್ರಹ್ಮಚರ್ಯದಿಂದ ಯೋಗಾಭ್ಯಾಸ ಮಾಡಿ, ಭಕ್ತಿಮಾರ್ಗದಿಂದ ಶಿವಾರಾಧನೆ ನಡೆಸಿ, ಪರಮಾತ್ಮನಲ್ಲಿ ಐಕ್ಯಹೊಂದುವ ಧ್ಯೇಯವುಳ್ಳ ಕಾಲಾಮುಖರು ಕ್ರಿ. ಶ. ಒಂಬತ್ತನೆಯ ಶತಮಾನದಿಂದ ಹದಿನ್ನೆರಡನೆಯ ಶತಮಾನದವರೆಗೆ ಕರ್ನಾಟಕದಲ್ಲೇ ಪ್ರಬಲರಾಗಿದ್ದರು, ಇವರು ಧರ್ಮ

(೨೩ನೇ ಪುಟನೋಡಿರಿ)


ಭವ್ಯ ಶುದ್ಧ ಸೌರಭ

ಮೈಸೂರು ಗಂಧದ ಎಣ್ಣೆ ವಿಶ್ವದ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆಯಿರುವ ಶುದ್ಧ ಮೂಲ ಸೀಸೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ

ಮೈಸೂರು ಗಂಧದ ಎಣ್ಣೆ

ಅಚ್ಚಟವಾದ ಗಂಧದ ಎಣ್ಣೆ

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ

ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ

ಮೈಸೂರು

# ಜನತೆಗೆ ಬೇಂಕುಗಳ ಸೇವೆ

ಉಳಿದ ಜಿಲ್ಲೆಗಳು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯನ್ನು ಮತ್ಸರದಿಂದ ಕಾಣುವಷ್ಟು ಇಲ್ಲಿ ಬೇಂಕುಗಳು ಜನತೆಗೆ ಸೇವೆಯನ್ನು ಸಲ್ಲಿಸುತ್ತಿವೆ. ಹಳ್ಳಿ ಹಳ್ಳಿಗಳಲ್ಲೂ ಬೇಂಕುಗಳ ಶಾಖೆ ಹಬ್ಬಿರುವ ನಿದರ್ಶನ ಈ ಜಿಲ್ಲೆಯಲ್ಲಲ್ಲದೆ ಬೇರೆಡೆ ಸಿಗುವುದು ವಿರಳವೆಂದೇ ಹೇಳಬಹುದು.

ಬರೆದವರು: ಶ್ರೀ ಟಿ. ಎ. ಪೈ, ಬಿ. ಕಾಂ(ಆನ), ಎಂ. ಎಲ್. ಎ.

ಠೇವಣಾತಿಯು ಹೆಚ್ಚಳದ ತಳಹದಿಯ ಮೇಲಿಂದ ನಿರ್ಣಯಿಸುವಾಗ ಅಥವಾ ಮೊದಲನೆಯ ಪಂಚವಾರ್ಷಿಕ ಯೋಜನೆಗೆ ಆರ್ಥಿಕ ನೆರವನ್ನು ನೀಡಿದ ದೃಷ್ಟಿಯಿಂದ ನೋಡುವಾಗ ವ ಹೊಸ ಕ್ಷೇತ್ರಗಳಲ್ಲಿ ವ್ಯವಹಾರವನ್ನು ಹಬ್ಬಿಸಿದ ದರ ವಿಚಾರದಿಂದ ವಿಮರ್ಶಿಸುವಾಗ ದಕ್ಷಿಣ ಕನ್ನಡದ ಬೇಂಕುಗಳು ಕಳೆದೈದು ವರುಷಗಳಿಂದ ಸಾಕಷ್ಟು ಪ್ರಗತಿಯನ್ನು ಸಾಧಿಸಿವೆಯೆಂದು ನಿರ್ವಿವಾದವಾಗಿ ಒಪ್ಪಬಹುದು. ಅವುಗಳ ಆರ್ಥಿಕ ಅಭಿವೃದ್ಧಿಯನ್ನೂ ಗ್ರಾಹಕರಿಗೆ ಯೋಗ್ಯ ಮತ್ತು ಉತ್ತಮ ವಿಧಾನದ ಸೇವೆಯನ್ನೂ ಅವು ಸಾಧಿಸಿವೆ. ಅವುಗಳ ರಿಜರ್ವ್ ಫಂಡಿನಲ್ಲಿ ಹೆಚ್ಚಳ ಕಾಣುತ್ತಿದೆ. ಸಾಲಕೊಟ್ಟು, ಸಹಕರಿಸುವುದರಲ್ಲಿ ಅವು ಪ್ರಗತಿಯನ್ನು ಪಡೆದಿವೆ. ಸರಕಾರ ಮತ್ತಿತರ ಸಂಸ್ಥೆಗಳಲ್ಲಿ ಧನ ವಿನಿಯೋಗವನ್ನು ಮಾಡಿವೆ. ಈ ಕಾರ್ಯಕ್ರಮಗಳಿಗಾಗಿ, ಸಿಬಂದಿ ಮತ್ತಿತರ ವೆಚ್ಚಗಳಿಗಾಗಿ ಹೆಚ್ಚು ವೆಚ್ಚಮಾಡಬೇಕಾಗಿ ಬಂದಿದ್ದರೂ ಅವುಗಳು ಸಾಕಷ್ಟು ಪ್ರಮಾಣದಲ್ಲಿ ಲಾಭವನ್ನು ಕೂಡಾ ಗಳಿಸಿವೆ.

ಕೈಗಾರಿಕೆಯ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಪ್ರಗತಿಯಾಗದಿದ್ದರೂ, ಆರ್ಥಿಕ ನೆರವನ್ನು ಒದಗಿಸಿ ಕೊಡುವಲ್ಲಿ ಅಥವಾ ಇನ್ನಿತರ ಬೇಂಕಿಂಗ್ ವ್ಯವಹಾರದಲ್ಲಿ ಅನಾನುಕೂಲತೆಗಳು ಇರಲಿಲ್ಲ. ಈ ಜಿಲ್ಲೆಯಲ್ಲಿ ಪ್ರಧಾನ ಕಚೇರಿಯುಳ್ಳಂತಹ 3 ಶೆಡ್ಯೂಲ್ಡ್ ಬೇಂಕುಗಳೂ 10 ಶೆಡ್ಯೂಲ್ಡೇತರ ಬೇಂಕುಗಳೂ ದಕ್ಷಿಣ ಕನ್ನಡಜಿಲ್ಲೆಯಲ್ಲಿವೆ ಇವುಗಳಲ್ಲಿ ಎಂಟು ಬೇಂಕುಗಳು 30 ವರುಷಗಳಿಗಿಂತಲೂ ಹೆಚ್ಚಿನ ದೀರ್ಘಾಯುಸ್ಸಿನವುಗಳು. ಯುದ್ಧಕಾಲದಲ್ಲಿಯೂ, ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿಯೂ ಇವು ಎದೆಯೊಡ್ಡಿ ನಿಂತು ಕಂಟಕದಿಂದ ಪಾರಾಗಿ ಬಂದಿವೆ. ಹೆಚ್ಚಿನವುಗಳು ಭದ್ರತೆ ಮತ್ತು ಯೋಗ್ಯ ಕಾರ್ಯನಿರ್ವಹಣೆಯಿಂದ ಹೆಸರುಗೊಂಡಿವೆ. ಈ ಕೆಳಗಿನ ಅಂಕೆ ಸಂಖ್ಯೆಗಳು 1950ರಿಂದ 1955ರ ವರೆಗಿನ ಬೇಂಕಿಂಗ್ ಕ್ಷೇತ್ರದ ಅಭಿವೃದ್ಧಿಯನ್ನು ತಿಳಿಸಲು ಸಹಾಯವಾಗುತ್ತವೆ.

| | 1950 | | | 1955 | | |
|---|---|---|---|---|---|---|
| | ಶೆಡ್ಯೂಲ್ಡ್ ಬೇಂಕುಗಳು | ಶೆಡ್ಯೂಲ್ಡೇತರ ಬೇಂಕುಗಳು | ಒಟ್ಟು | ಶೆಡ್ಯೂಲ್ಡ್ ಬೇಂಕುಗಳು | ಶೆಡ್ಯೂಲ್ಡೇತರ ಬೇಂಕುಗಳು | ಒಟ್ಟು |
| ಬೇಂಕುಗಳ ಸಂಖ್ಯೆ | 3 | 14 | 17 | 3 | 10 | 17 |
| ಪಾವತಿ ಮಾಡಿದ ಭಂಡವಾಳ | 72.1 | 50.9 | 123 | 75.7 | 28.9 | 104.6 * |
| ರಿಜರ್ವ್ ಫಂಡು | 30.2 | 11.9 | 42.1 | 56 | 11.5 | 67.5 * |
| ಠೇವಣಾತಿ | 1351 | 317 | 1668 | 2287 | 344 | 2631 * |
| ಮುಂಗಡ | 771 | 245 | 1016 | 1275 | 197 | 1472 * |
| ಧನ ವಿನಿಯೋಗ (ಇನ್‌ವೆಸ್ಟ್‌ಮೆಂಟ್ಸ್) | 477 | 113 | 590 | 896 | 123 | 1019 * |
| ನಿವ್ವಳ ಮುನಾಫೆ | 14.69 | 2.99 | 17.68 | 19.32 | 2.85 | 22.17 * |
| ಶಾಖೆಗಳ ಸಂಖ್ಯೆ | 158 | 102 | 260 | 186 | 65 | 251 |

* ಲಕ್ಷ ರೂಪಾಯಿಗಳಿಗೆ ಸರಿಯಾಗಿ.

ಮೇಲಿನ ಅಂಕೆ ಸಂಖ್ಯೆಗಳಿಂದ ಆ ಅವಧಿಯಲ್ಲಿ ಬೇಂಕುಗಳ ಸಂಖ್ಯೆಯು 17ರಿಂದ 10ಕ್ಕಿಳಿಯಿತು ಎಂಬುದನ್ನು ಕಾಣಬಹುದು. 2 ಬೇಂಕುಗಳು ಲಿಕ್ವಿಡೇಶನ್ ಆದುವು. ಮತ್ತೆರಡು ತಮ್ಮ ವ್ಯವಹಾರಗಳನ್ನು ವಿಗಾರ್ಯಿಸಿಕೊಂಡವು. ಪರಿಣಾಮವಾಗಿ ಪಾವತಿ ಮಾಡಿದ ಭಂಡವಾಳವು 123 ಲಕ್ಷಗಳಿಂದ 104 ಲಕ್ಷಕ್ಕೂ ಉಪಕಾರ್ಯಾಲಯಗಳ ಸಂಖ್ಯೆಯು 260ರಿಂದ 251ಕ್ಕೂ ಇಳಿಯಿತು. ಹೇಗಿದ್ದರೂ ರಿಜರ್ವ್ ಫಂಡಿನಲ್ಲಿ 25 ಲಕ್ಷರೂ.ಗಳಷ್ಟೂ, ಠೇವಣಾತಿಯಲ್ಲಿ 9.63 ಕೋಟಿ ರೂ.ಗಳಷ್ಟೂ, ನಿವ್ವಳ ಮುನಾಫೆಯಲ್ಲಿ 4.29 ಕೋಟಿ ರೂ.ಗಳಷ್ಟೂ ಹೆಚ್ಚಳವಾಯಿತು. ಒಟ್ಟು ಶಾಖೆಗಳಲ್ಲಿ ಶೇಕಡಾ 75ಕ್ಕಿಂತಲೂ ಹೆಚ್ಚಿಗೆ ಸಂಖ್ಯೆಯ ಶಾಖೆಗಳುಳ್ಳ 3 ಶೆಡ್ಯೂಲ್ಡ್ ಬೇಂಕುಗಳು ಒಟ್ಟು ಠೇವಣಾತಿಯು ಶೇಕಡಾ 88ರಷ್ಟು ಠೇವಣಾತಿಗೂ ಶೇಕಡಾ 87ರಷ್ಟು ಮುಂಗಡಕ್ಕೂ ಮತ್ತು ಶೇಕಡಾ 88ರಷ್ಟು ಧನವಿನಿಯೋಗಕ್ಕೂ ಜವಾಬ್ದಾರಿಯಾಗಿವೆ. ಶೆಡ್ಯೂಲ್ಡಲ್ಲದ ಬೇಂಕುಗಳಲ್ಲಿ ಪಾವತಿಮಾಡಿದ ಭಂಡವಾಳ ಮತ್ತು ರಿಜರ್ವ್ ಫಂಡು 5 ಲಕ್ಷಕ್ಕೂ ಮಿಕ್ಕಿರುವ 3 ಬೇಂಕುಗಳೂ, 1 ಲಕ್ಷದಿಂದ 5 ಲಕ್ಷದ ವರೆಗಿನ 5 ಬೇಂಕುಗಳೂ 50,000ದಿಂದ 1 ಲಕ್ಷದ ವರೆಗಿನ 2 ಬೇಂಕುಗಳೂ ಇವೆ. ಕೆಲವು ಬೇಂಕುಗಳು ತಮ್ಮ ಶಾಖೆಗಳನ್ನು ಹಲವು ರಾಜ್ಯಗಳಲ್ಲಿ ಹರಡಿಸಿಕೊಂಡಿರುವುದಾದರೂ ಈ ಜಿಲ್ಲೆಯೊಳಗನೇ ಕಾರ್ಯಕ್ಷೇತ್ರವನ್ನಿಟ್ಟುಕೊಂಡಿರುವ ಕೆಲವು ಬೇಂಕುಗಳೂ ಇವೆ. ಇವುಗಳೆಲ್ಲವೂ ಒಂದೇ ಉದ್ದೇಶದಿಂದ ಮತ್ತು ಉತ್ಸುಕತೆಯಿಂದ ಜನತಾ ಸೇವೆಗಾಗಿ ದುಡಿದಿವೆ.

ಈ ಜಿಲ್ಲೆಯ ಹೆಚ್ಚಿನ ಭಾಗಗಳಿಗೆ ಬೇಂಕಿನ ಸೌಕರ್ಯವಿದೆ. ಉಳಿದ ಜಿಲ್ಲೆಗಳು ನಮ್ಮ ಜಿಲ್ಲೆಯನ್ನು ಬೇಂಕಿಂಗ್ ಅಭಿವೃದ್ಧಿಯ ಮಟ್ಟಿಗೆ ಮತ್ಸರದಿಂದ ಕಾಣುವಷ್ಟು ಇಲ್ಲಿ ಶಾಖೆಗಳು ಹರಡಿವೆ. ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದು ಬೇಂಕು ಒಂದು ಸಾಹಸದ ಉದ್ಯಮವನ್ನು ಕೈಕೊಂಡಿದ್ದು ಹಳ್ಳಿಯ ಮನೆಮನೆಗೂ ಬೇಂಕಿಂಗ್ ಸೌಕರ್ಯವನ್ನೊದಗಿಸಿ ಉಪಕಾರವೆಸಗಿದೆ. ಭಾರತದ ಬೇಂಕಿಂಗ್ ಕ್ಷೇತ್ರದಲ್ಲಿರುವ ಒಂದು ಅಪವಾದನೆಯೆಂದರೆ ಇಲ್ಲಿಯ ಬೇಂಕಿಂಗ್ ಸೌಕರ್ಯಗಳು, ನಗರಗಳಲ್ಲಿ ಕೇಂದ್ರೀಕೃತವಾಗಿದ್ದು ಹಳ್ಳಿಗಳನ್ನು ಅಲಕ್ಷಿಸಿವೆ ಎಂಬುದೇ ಆದರೆ ದ. ಕ. ಜಿಲ್ಲೆಯು ಇದಕ್ಕೆ ಅಪವಾದವಾಗಿದೆ. ಇಲ್ಲಿ ಬೇಂಕಿನ ಶಾಖೆಗಳು ಹಳ್ಳಿಗಳಿಗೂ ಹಬ್ಬಿವೆ.

ಈ ಕೆಳಗಿನ ಅಂಕೆಸಂಖ್ಯೆಗಳು ದಕ್ಷಿಣ ಕನ್ನಡದಲ್ಲಿಯೂ, ಮದ್ರಾಸು ರಾಜ್ಯದಲ್ಲಿಯೂ ಮತ್ತು ಭಾರತದಲ್ಲಿಯೂ ಹರಡಿಕೊಂಡಿರುವ ಶಾಖೆಗಳನ್ನು ತೋರಿಸುತ್ತವೆ.

### ಶಾಖೆಗಳ ಹರಡಿರುವಿಕೆ

| ಜನಸಂಖ್ಯೆ | ದಕ್ಷಿಣ ಕನ್ನಡ | | ಮದ್ರಾಸು ರಾಜ್ಯ | | ಅಖಿಲಭಾರತ | |
|---|---|---|---|---|---|---|
| | ಸ್ಥಳಗಳ ಸಂಖ್ಯೆ | ಶಾಖೆಗಳ ಸಂಖ್ಯೆ | ಸ್ಥಳಗಳ ಸಂಖ್ಯೆ | ಶಾಖೆಗಳ ಸಂಖ್ಯೆ | ಸ್ಥಳಗಳ ಸಂಖ್ಯೆ | ಶಾಖೆಗಳ ಸಂಖ್ಯೆ |
| ಅವರ್ಗೀಯ | 3 | 3 | 30 | 32 | 126 | 134 |
| 5000 ಕ್ಕಿಂತ ಕಡಿಮೆ | 12 | 14 | 22 | 27 | 138 | 181 |
| 5000 ದಿಂದ 10,000 | 18 | 28 | 51 | 76 | 237 | 349 |
| 10,000 ದಿಂದ 25,000 | 12 | 42 | 70 | 171 | 463 | 912 |
| 25,000 ದಿಂದ 50,000 | — | — | 31 | 122 | 195 | 593 |
| 50,000 ದಿಂದ 1 ಲಕ್ಷ | — | — | 11 | 90 | 98 | 517 |
| 1 ಲಕ್ಷಕ್ಕಿಂತ ಹೆಚ್ಚಿಗೆ | 1 | 27 | 9 | 262 | 76 | 1432 |
| ಜುಮ್ಲಾ | 46 | 114 | 224 | 780 | 1334 | 4117 |

5,000ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ 22 ಸ್ಥಳಗಳ ಪೈಕಿ ದಕ್ಷಿಣ ಕನ್ನಡದ 12 ಸ್ಥಳಗಳಲ್ಲಿಯೂ, 5000 ದಿಂದ 10,000ದ ವರೆಗಿನ ಜನಸಂಖ್ಯೆಯ 51ರಲ್ಲಿ 18 ಸ್ಥಳಗಳಲ್ಲಿಯೂ ಶಾಖೆಗಳಿವೆಯೆಂಬುದನ್ನು ಮೇಲಿನ ತಖ್ತೆಯ ಮೂಲಕ ಕಾಣಬಹುದು. ಈ ಜಿಲ್ಲೆಯಲ್ಲಿರುವ 114 ಶಾಖೆಗಳಲ್ಲಿ ಶೆಡ್ಯೂಲ್ಡ್ ಮತ್ತು ಶೆಡ್ಯೂಲ್ಡಲ್ಲದ ಬೇಂಕುಗಳು ಈ ಪ್ರಕಾರವಾಗಿವೆ.

| ಜನಸಂಖ್ಯೆ | ಸ್ಥಳಗಳ ಸಂಖ್ಯೆ | ಶೆಡ್ಯೂಲ್ಡ್ ಬೇಂಕುಗಳ ಶಾಖೆಗಳು | ಶೆಡ್ಯೂಲ್ಡಲ್ಲದ ಬೇಂಕುಗಳ ಶಾಖೆಗಳು | ಜುಮ್ಲಾ |
|---|---|---|---|---|
| ಅವರ್ಗೀಯ | 3 | 1 | 2 | 3 |
| 5000ಕ್ಕಿಂತ ಕಡಿಮೆ | 12 | 10 | 4 | 14 |
| 5000ದಿಂದ 10000 | 18 | 15 | 13 | 28 |
| 10 000ದಿಂದ 25,000 | 12 | 17 | 25 | 42 |
| 1 ಲಕ್ಷಕ್ಕಿಂತ ಹೆಚ್ಚಿಗೆ | 1 | 9 | 18 | 27 |
| ಜುಮ್ಲಾ | 46 | 52 | 62 | 114 |

10,000ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ 26 ಸ್ಥಳಗಳಿಗೆ ಶೆಡ್ಯೂಲ್ಡ್ ಬೇಂಕಿನ ಶಾಖೆಗಳ ಸವಲತ್ತು ದೊರಕಿದೆ. ಬೇಂಕುಗಳು ತಮ್ಮ ಶಾಖೆಗಳನ್ನು ವಿಸ್ತರಿಸಿಕೊಂಡಿರುವುದರ ಮೂಲಕ ಮಾತ್ರವಲ್ಲ ಹಳ್ಳಿಗರನ್ನು ಚಿಕ್ಕ ಪುಟ್ಟ ಉಳಿತಾಯದ ಯೋಜನೆಯ ಕಡೆಗೂ ಆಕರ್ಷಿಸಿವೆ. ಹಾಗೂ ಅವರ ಆವಶ್ಯಕತೆಗೆ ಬೇಕಾದ ಅನುಕೂಲ ಸಾಲಗಳನ್ನೂ ಒದಗಿಸಿವೆ. ಪಿಗ್ಮಿಯಂತಹ ದೈನಂದಿನ ಚಿಕ್ಕ ಉಳಿತಾಯ ಯೋಜನೆಗಳ ಮೂಲಕ ಸೇವಿಂಗ್ಸ್ ಅಭ್ಯಾಸವನ್ನು ವೃದ್ಧಿಗೊಳಿಸಲಿಕ್ಕೂ, ತಿಂಗಳುವಾರು ಆದಾಯವುಳ್ಳವರು ಕ್ಯುಮುಲೇಟಿವ್ ಠೇವಣಾತಿ ಕ್ರಮದಲ್ಲಿ ಕೂಡಿಡುವುದಕ್ಕೂ ಸಹಕರಿಸಿ ಜನತೆಯಲ್ಲಿ ಠೇವಣಾತಿಯ ಅಭ್ಯಾಸವನ್ನು ವೃದ್ಧಿಗೊಳಿಸಲು ಸಹಾಯಕವಾಗಿವೆ. ತಕ್ಕ ಜವಾಬ್ದಾರಿಯಿಲ್ಲದಿದ್ದರೂ ಸಹಾ ಚಿಕ್ಕ ಸಾಲಗಳನ್ನು ಒದಗಿಸಿಕೊಟ್ಟು ಆರ್ಥಿಕ ನೆರವನ್ನು ನೀಡಿವೆ. ಗತ ವರುಷಗಳ ಅನುಭವವು ಬೇಂಕಿಂಗ್ ವ್ಯವಹಾರದಲ್ಲಿ ಎದೆಗುಂದಿಸುವಂತಿಲ್ಲ. ಬೇರೆ ಪ್ರದೇಶಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿಲ್ಲದ, ಕಡಿಮೆ ಜನಸಾಂದ್ರತೆಯ ಸ್ಥಳಗಳಲ್ಲಿ ಶಾಖೆಗಳನ್ನು ಸ್ಥಾಪಿಸುವುದು, ಮತ್ತು ಒಂದು ವಿಶಿಷ್ಟ ರೀತಿಯ ಬೇಂಕಿಂಗ್ ಅನುಕೂಲತೆಯಲ್ಲಿ ಹಳ್ಳಿಗರಿಗೆ ಒದಗಿಸಿಕೊಡುವುದು—ಈ ಕ್ರಮದಿಂದ ದ. ಕ. ಜಿಲ್ಲೆಯ ಬೇಂಕುಗಳು ಸಾಕಷ್ಟು ಸೇವೆಯನ್ನು ಸಲ್ಲಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಗೆ ನಿಜವಾಗಿಯೂ ಉತ್ತಮವಾದ ಬೇಂಕಿಂಗ್ ಅನುಕೂಲತೆಯಿದೆ 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ವಿಸ್ತೃತವಾದ ಕಾರ್ಯಕ್ರಮಗಳನ್ನೂ, ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಶಾಖೆಗಳ ಸ್ಥಾಪನೆಯನ್ನೂ ಸಾಧಿಸಿಕೊಳ್ಳುವ ಅವಕಾಶವಿದೆ. ಮುಂಬರುವ ಕಾಲದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಬೇಸಾಯ, ವ್ಯಾಪಾರ, ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ಸಾಧ್ಯವಿದ್ದಷ್ಟು ಆರ್ಥಿಕ ನೆರವನ್ನು ನೀಡಿ ನಾಡಿನ ಸರ್ವತೋಮುಖವಾದ ಏಳಿಗೆಗಾಗಿ ಬೇಂಕಿಂಗ್ ಸಂಸ್ಥೆಗಳು ದುಡಿಯಬೇಕಾಗಿದೆ.

# ಯೋಜನೆಗಳ ಯೋಜನೆ

ನಾವೆಷ್ಟೇ ಯೋಜನೆಗಳನ್ನು ಕೈಗೊಳ್ಳಲಿ, ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆಯು ಚೆನ್ನಾಗಿ ವ್ಯಕ್ತವಾಗುವುದಕ್ಕೂ ಅದು ಕಲ್ಯಾಣ ಪ್ರದವಾದ ಸಾಧನೆಗಳಲ್ಲಿ ಪ್ರತಿಫಲಿಸುವುದಕ್ಕೂ ಯೋಗ್ಯವೆನಿಸಿದ ವಾತಾವರಣವನ್ನು ಕಲ್ಪಿಸಿಕೊಡದಿದ್ದರೆ ಯೋಜನೆಗಳ ರಚನೆಯೇ ವ್ಯರ್ಥ!

ಬರೆದವರು: ಪ್ರೊ|| ಕೆ. ಎಸ್. ಸವಣೂರ, ಎಂ. ಎಸ್‌ಸಿ.

### ಪ್ರಾಸ್ತಾವಿಕ

ಜಾಗತಿಕ ಎರಡನೆಯ ಯುದ್ಧವು ಮುಕ್ತಾಯವಾದ ಬಳಿಕ ಜಗತ್ತಿನಲ್ಲಿಯ ಅನೇಕ ರಾಷ್ಟ್ರಗಳು ಸ್ವತಂತ್ರವಾಗಿದ್ದು, ಬೇರೆ ಹಲವು ರಾಷ್ಟ್ರಗಳಾದರೂ ಸ್ವಾತಂತ್ರ್ಯದ ಹಾದಿಯಲ್ಲಿಯೇ ಸಾಗತೊಡಗಿವೆ. ಸಾಮಾನ್ಯವಾಗಿ ಇಂದಿನ ಜಾಗತಿಕ ಆಗು-ಹೋಗುಗಳ ಪರಿಶೀಲನೆಯನ್ನು ಮಾಡಿದಲ್ಲಿ-ಅನೇಕ ರಾಷ್ಟ್ರಗಳು ತಮ್ಮಲ್ಲಿಯ 'ಅಜ್ಞಾನ, ದಾರಿದ್ರ್ಯ ಹಾಗು ರೋಗಗಳನ್ನು ಹೊಡೆದೋಡಿಸುವ ಅನೇಕಾನೇಕ ಯೋಜನೆಗಳನ್ನು ಮಾಡಿವೆಯಂತೂ ಮತ್ತು ಅವುಗಳನ್ನು ನಿರ್ದಿಷ್ಟ ಅವಧಿಯಲ್ಲಿ ಸಾಧಿಸಬೇಕೆಂಬ ಧ್ಯೇಯವನ್ನು ಇರಿಸಿವೆ ಎಂದೂ ಕಂಡುಬರುವದು. ಇಂದಿನ ಯುಗವನ್ನು ಅಣುಯುಗವೆಂದು ಕರೆಯುವದಕ್ಕಿಂತಲೂ ಯೋಜನೆಗಳ ಯುಗವೆಂದು ಕರೆಯುವದು ಸೂಕ್ತವೆನಿಸುವದು.

ಈ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ಉದಾಹರಣೆಯನ್ನೇ ವಿವೇಚಿಸಿದಲ್ಲಿ—ನಾವಾದರೂ ಜಗತ್ತಿನಲ್ಲಿಯ ಮುಂದುವರಿದ ರಾಷ್ಟ್ರಗಳು ಸಾಧಿಸಿದ ಪ್ರಗತಿಯನ್ನು ಮುಂಬರುವ ೧೦ ವರುಷಗಳಲ್ಲಿ ಸಾಧಿಸಬೇಕೆಂದಿದ್ದೇವೆ. ಈ ಧ್ಯೇಯವನ್ನು ಸಾಧಿಸಲು ನಮ್ಮ ಭಾರತ ಸರಕಾರವು ತನ್ನ ಸರ್ವ ವಿಧದ ಶಕ್ತಿಯನ್ನು ಕೇಂದ್ರೀಕರಿಸಿ ಕಾರ್ಯೋನ್ಮುಖವಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಈಗಾಗಲೇ ಸಾಧಿಸಿ ಜಗತ್ತಿನ ಲಕ್ಷ್ಯವನ್ನು ತನ್ನೆಡೆಗೆ ಸೆಳೆದಿದೆ. ಇಂತಹ ಯೋಜನೆಗಳನ್ನು ರೂಪಿಸಿ ಸಾಧಿಸುವಲ್ಲಿ ಹಣ ಹಾಗು ಉಳಿದ ಅನುಕೂಲತೆಗಳನ್ನು ಒದಗಿಸಿದಲ್ಲಿ ಸರಕಾರದ ಜವಾಬುದಾರಿಯು ತೀರಿದಂತಾಯಿತು. ಆದರೆ ಈ ಪ್ರಕಾರವಾಗಿ ಯೋಜನೆಗಳನ್ನು ಸಾಧಿಸುವಲ್ಲಿ ಬೇಕಿರುವ ಹಾಗು ಸಾಧಿಸಿದ ಯೋಜನೆಗಳನ್ನು ಮುಂದುವರಿಸುವ ಬುದ್ಧಿ ಸಾಮರ್ಥ್ಯವನ್ನು ನಾವು ನಮ್ಮಲ್ಲಿಯೇ ದೊರಕಿಸಿಕೊಳ್ಳುವಂತಾಗಬೇಕು. ಇದನ್ನು ಹೇಗೆ ಮಾಡಲು ಸಾಧ್ಯವೆಂಬುದನ್ನು ವಿವರಿಸುವುದೇ ಈ ಲೇಖದ ಉದ್ದೇಶವು. ಇದೇ ಯೋಜನೆಗಳ ಯೋಜನೆಯ ತಿರುಳು.

### ಎಡಿಸನ್ ಹಾಗೂ ಅಮೇರಿಕೆಯ ಸಂಪತ್ತು

ಇಂದು ಅಮೇರಿಕೆಯನ್ನು ಕುಬೇರನ ರಾಷ್ಟ್ರವೆಂದು ವರ್ಣಿಸಿದಲ್ಲಿ ಅತಿಶಯೋಕ್ತಿಯೆನಿಸದು. ಈ ಕುಬೇರನ ಭಂಡಾರಕ್ಕೆ ಉಪಯುಕ್ತ ಶೋಧಗಳಲ್ಲಿ ಅಗ್ರಗಣ್ಯರೆನಿಸಿದ ಹಾಗು ಜಗತ್ತಿನ ಜನತೆಯನ್ನೇ ತಮ್ಮ ಶೋಧಗಳಿಂದ ಚಿರಋಣಿಯಾಗಿಸಿದ ಜಗದ್ವಿಖ್ಯಾತ ಥಾಮಸ್ ಎಡಿಸನ್‌ರವರು ಕೊಡಮಾಡಿದ ಹಣದ ವಿಚಾರವನ್ನಷ್ಟೇ ಈಗ ನೋಡುವಾ. ಇವರು 3000 ಹೊಸ ಶೋಧಗಳನ್ನು ಮಾಡಿದರು. ಇವರ ಪ್ರತಿಭೆಯು ಇಂದು ಅಮೇರಿಕೆಯೊಂದರಲ್ಲಿಯೇ ೫ ಅಬ್ಜ ಪೌಂಡುಗಳ ಸೊತ್ತನ್ನು ನಿರ್ಮಿಸಲು ಕಾರಣವಾಗಿದೆ. ೧೦ ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದೆಯಲ್ಲದೆ ಅವರಿಗೆ ವೇತನರೂಪದಲ್ಲಿ ವರುಷಕ್ಕೆ ೨೦ ಕೋಟಿ ಪೌಂಡುಗಳನ್ನು ಕೊಡಲು ಸಮರ್ಥವಿದೆ.

ನಾವು ಇಂದು ಎತ್ತ ನೋಡಿದರೂ ಎಡಿಸನ್‌ರವರ ಕಾರ್ಯವು ನಮ್ಮೆದುರು ನಿಲ್ಲುವದು. ಅವರು ನಿರ್ಮಿಸಿದ ಬೆಳಕಿನ ಸಹಾಯದಿಂದ ನಮ್ಮ ಮನೆಗಳನ್ನು ಬೆಳಗಿಸಲಿರುವೆವು, ಓದಲಿರುವೆವು ಹಾಗು ಉಳಿದ ಕಾರ್ಯಗಳನ್ನಾದರೂ ಮಾಡಲಿರುವೆವು. ಇಂದಿನ ತಾರಾಯಂತ್ರ ಪದ್ಧತಿ ಮತ್ತು ಟೆಲಿಫೋನ ಇವುಗಳಲ್ಲಿಯ ಸುಧಾರಣೆಗಳು ಅವರವೇ. ಫೋನೋಗ್ರಾಫ್, ಮಾತನಾಡುವ ಚಿತ್ರಪಟಗಳು, ರೇಡಿಯೋಕ್ಕೆ ಧ್ವನಿಯನ್ನು ಒದಗಿಸಿದುದು ಇವುಗಳೆಲ್ಲವೂ ಅವರ ಕೃತಿಗಳೇ.

ವಿಜ್ಞಾನದ ನಿಯಮಗಳನ್ನು ಉಪಯುಕ್ತ ವಸ್ತುಗಳಲ್ಲಿ ಮಾರ್ಪಡಿಸುವ ವಿಷಯದಲ್ಲಿ ಎಡಿಸನ್‌ರು ಅಗ್ರಗಣ್ಯರು. ಇಂದು ಜಗತ್ತಿಗೆ ಅಗತ್ಯವಾಗಿ ಬೇಕಾದುದು ಯಾವುದು ಎಂಬುದನ್ನು ತಿಳಿದು ಇಂತಹ ಸೌಕರ್ಯಗಳನ್ನು ನಿರ್ಮಿಸುವಲ್ಲಿ ವಿಜ್ಞಾನದ ನಿಯಮಗಳನ್ನು ಉಪಯೋಗಿಸಿದವರಲ್ಲಿ ಇವರನ್ನು ಮೀರಿಸಿದವರು, ಈ ವರೆಗೂ ಹುಟ್ಟಲೇ ಇಲ್ಲವೆಂದು ವರ್ಣಿಸುವದು—ನಿಜವಾದ ಪರಿಸ್ಥಿತಿಯನ್ನು ವಿವರಿಸಿದಂತೆಯೇ. ಅವರ ಪ್ರತಿಭೆ ಹಾಗು ಕಾರ್ಯಕ್ಷಮತೆ ಇವುಗಳೇ ಅವರ ಯಶಸ್ಸಿನ ಗುಟ್ಟೆಂದು ಅವರ ನಿಕಟವರ್ತಿಗಳು ವರ್ಣಿಸಿದ್ದುಂಟು. ಎಡಿಸನ್‌ರಂತಹ ಪ್ರತಿಭಾಶಾಲಿಗಳನ್ನು **ನಿರ್ಮಿಸುವುದೇ** ಯಾವುದೊಂದು ರಾಷ್ಟ್ರವು ಕೈಕೊಂಡಿರುವ ಯೋಜನೆಗಳನ್ನು ಪೂರೈಸುವ ಹಾಗು ಇಂತಹ ಯೋಜನೆಗಳನ್ನು ಅಭಿವೃದ್ಧಿಗೊಳಿಸುವ **ಯೋಜನೆಯೊಂದು** ನಿರ್ವಿವಾದವಾಗಿ ಹೇಳಬಹುದು. ಎಡಿಸನ್‌ರು ಮೂಲತಃ ಪ್ರತಿಭಾವಂತರಿದ್ದರು ಇದೇನೋ ನಿಜ ಆದರೆ ಇವರ ಪ್ರತಿಭೆಗೆ ಯೋಗ್ಯ ಮಾರ್ಗದರ್ಶನವನ್ನು ಯಾರು ಮಾಡಿದರು ಮತ್ತು ಹೇಗೆ ಮಾಡಿದರು, ಇತ್ಯಾದಿ ವಿವರಗಳನ್ನು ವಿವೇಚಿಸಿ, ನಮ್ಮಲ್ಲಿಯ ಚಿಕ್ಕವರಿಗೆ ಇವರ ಜೀವನವು ಯೋಗ್ಯ ಮಾರ್ಗದರ್ಶನವನ್ನು ಮಾಡಿಯೇ ತೀರುವುದೆಂಬ ಭರವಸೆಯಿಂದ—ಈ ಲೇಖದ ಮೂಲ ವಿಷಯವಾದ ಯೋಜನೆಗಳ ಯೋಜನೆಯನ್ನು ವಿವರಿಸಲಿದ್ದೇನೆ. ಮುಖ್ಯವಾಗಿ ಮನುಷ್ಯನ ಭವಿಷ್ಯವು ಬಾಲ್ಯದಿಂದಲೇ ರೂಪಗೊಳ್ಳುತ್ತಿದೆಯಾದ್ದರಿಂದ, ಇವರ ಬಾಲ್ಯ ಜೀವನವು ಇಷ್ಟು ಪ್ರಫುಲ್ಲಿತವಾಗುವಂತೆ ಹೇಗೆ ವೃದ್ಧಿಯನ್ನು ಹೊಂದಿತು ಮತ್ತು ಇದರಿಂದ ನಾವು ಯಾವ ಪಾಠವನ್ನು ಕಲಿಯುವವರಾಗಬೇಕು ಇವುಗಳನ್ನು ವಿವರಿಸುವದೂ ಸಹ ಈ ಲೇಖದ ಉದ್ದೇಶವು.

### ಥಾಮಸ್ ಎಡಿಸನ್

೮೪ ವರುಷಗಳ ಕಾಲದಷ್ಟು ಬಾಳಿ ಬದುಕಿ ತಮ್ಮ ಜೀವನಕ್ಕೆ ಹಾಗು ತಾವು ಜನ್ಮವೆತ್ತಿದ ರಾಷ್ಟ್ರಕ್ಕೆ ಅಪಾರ ಕೀರ್ತಿಯನ್ನು ತಂದೊದಗಿಸಿದ ಶ್ರೇಯಸ್ಸು ಇವರಿಗೆ ಸಲ್ಲುವದು. ಇವರ ಮರಣದಿಂದಾಗಿ (ಅಕ್ಟೋಬರ ೧೮, ೧೯೩೧) ಅನೇಕರು ತಮ್ಮ ಪ್ರಿಯ ಮಿತ್ರನನ್ನು, ಅವರು ಜನ್ಮವೆತ್ತಿದ ರಾಷ್ಟ್ರವು ಒಬ್ಬ ಗಣ್ಯ ನಾಗರಿಕನನ್ನು ಮತ್ತು ಜಗತ್ತು ಒಬ್ಬ ಕಲ್ಯಾಣ ಜೀವಿಯನ್ನು ಕಳೆದುಕೊಂಡ ದುಃಖವನ್ನು ಅನುಭವಿಸಬೇಕಾಯಿತು. ತಮ್ಮ ಶಿಕ್ಷಣವನ್ನು ತಾವೇ ಒದಗಿಸಿಕೊಂಡ ಬೆಂಜಾಮಿನ್ ಫ್ರ್ಯಾಂಕ್ಲಿನ್ ಹಾಗು ಲಿಂಕನ್ ಇವರ ಮಾಲಿಕೆಯಲ್ಲಿಯೇ ಎಡಿಸನ್‌ರನ್ನು ಗಣಿಸಬೇಕಾಗುವದು. ಇವರು ಚಿಕ್ಕಂದಿನಲ್ಲಿ ತಮ್ಮ ತಾಯಿಯ ಮಾರ್ಗದರ್ಶನದಲ್ಲಿಯೇ ತಮ್ಮ ವಿದ್ಯೆಯ ತಳಹದಿಯನ್ನು ರೂಪಿಸಿಕೊಂಡವರು. ಜಗತ್ತಿನಲ್ಲಿ ನಿಸರ್ಗನಿಯಮಗಳು ಕಾರ್ಯಮಾಡಲಿರುವದರ ಹಿಂದೆ ಒಂದು ಅನಂತ ಶಕ್ತಿಯಿದೆ ಎಂಬ ನಂಬಿಗೆಯುಳ್ಳವರು. ಐನ್‌ಸ್ಟೈನ್‌ರವರಿಂದ 'ಶೋಧಕ ಬುದ್ಧಿಯವ'ರೆಂದೂ, ಫ್ರಾಯಿಡ್‌ರವರಿಂದ 'ಬಹುಫಲಪ್ರದವಾದ ಪ್ರತಿಭೆಯುಳ್ಳವ"ರೆಂದೂ, ಆಲಿವ್ಹರ್ ಲಾಜ್‌ರವರಿಂದ 'ಜಗತ್ತಿನೊಳಗಿನ ಗಣ್ಯ ಪುರುಷ"ನೆಂದೂ, ಜೀನ್ಸ್‌ರವರಿಂದ 'ಕಲ್ಪನಾಶಕ್ತಿಯ ವಿಜ್ಞಾನಿ'ಯೆಂದೂ, ವೆಲ್ಸ್‌ರವರಿಂದ 'ದೈವೀ ನಿರ್ಮಿತಿ'ಯೆಂದೂ ಸಂಬೋಧಿಸಲ್ಪಟ್ಟವರು. ಆದರೆ ಇವರು ಮಾತ್ರ ತಾವು ಪ್ರತಿಭಾವಂತರೆಂಬ ಮಾತನ್ನು ಅಲ್ಲಗಳೆಯುವವರಾಗಿದ್ದರಲ್ಲದೆ, 'ಕರ್ಮಣ್ಯೇವಾಧಿಕಾರಸ್ತೇ' ಎಂಬ ಮಾತನ್ನು ಅರಗಿಸಿಕೊಂಡು ಬಾಳಿಬದುಕಿದ ಯೋಗಿಯಂತಿದ್ದರು. "ನಮ್ಮ ಬಾಳಿನ ಅತ್ಯಲ್ಪ ಕಾಲದಲ್ಲಿ, ನಿಸರ್ಗದ ಶಕ್ತಿಯನ್ನು ಗುರುತಿಸಿ ಅದನ್ನು ಮಾನವ ಜನಾಂಗದ ಹಿತಕ್ಕಾಗಿ ಉಪಯೋಗಿಸುವುದಕ್ಕಿಂತ ಹೆಚ್ಚಿನ ಕಾರ್ಯವೇ ಇಲ್ಲ" ಎಂಬ ಮಾತಿನಲ್ಲಿ ದೃಢವಿಶ್ವಾಸವಿದ್ದವರಿಷ್ಟು, ಇದಕ್ಕನುಗುಣವಾದ ಜೀವನವನ್ನು ಸಾಗಿಸಿದ ಶ್ರೇಯಸ್ಸು ಇವರಿಗೆ ಸಲ್ಲುವದು.

### ಎಡಿಸನ್‌ರ ಜನ್ಮ ಹಾಗು ಬಾಲ್ಯ

ಥಾಮಸ್ ಎಡಿಸನ್‌ರು ೧೮೪೭ನೆಯ ಇಸ್ವಿಯ ಫೆಬ್ರುವರಿ ೧೧ನೆಯ ದಿನಾಂಕ

(೨೧ನೇ ಪುಟ ನೋಡಿರಿ)



# ಪ್ರಗತಿ ಮತ್ತು ಭಾಷಾರಾಜ್ಯ

ಪ್ರಾಂತೀಯ ಭಾಷೆಯು ಜನರೊಡನೆ ಸಂಪರ್ಕವಿಟ್ಟುಕೊಳ್ಳಲು ಉತ್ತಮವಾದ ಸಾಧ್ಯಮ: ಆದರೆ ಭಾಷಾಪ್ರೇಮವು ಕಾಲ್ತೊಡಕಾಗದೆ ಮೈದೊಡಕಾಗುವಂತೆ ಮಾಡಿಕೊಳ್ಳುವ ಜಾಣ್ಮೆ ಇಲ್ಲಿ ಅವಶ್ಯ.

ಬರೆದವರು: ಡಾ. ಕೆ. ಕೃಷ್ಣಮೂರ್ತಿ, ಎಂ. ಎ., ಬಿ. ಟಿ., ಪಿ. ಎಚ್‌ಡಿ.

ಭಾರತದ ರಾಜಕೀಯ ಇತಿಹಾಸದಲ್ಲಿ ಭಾಷಾರಾಜ್ಯಗಳ ಜನ್ಮದಿನವು ಒಂದು ಅಭೂತಪೂರ್ವ ಮಹಾಸಾಧನೆಯ ಮೈಲಿಗಲ್ಲು; ನಾಡಿನ ಉಜ್ವಲ ಭವಿತವ್ಯದ ಕಟ್ಟಡಕ್ಕೆ ನಾಯಕರಿಡುತ್ತಿರುವ ಅಡಿಗಲ್ಲು. ಇದೇ ಎಂದಿನಿಂದಲೂ ಕವಿಗಳು ಕಾಣುತ್ತಿದ್ದ ಕನಸು; ಇದೇ ಸ್ವಾತಂತ್ರ್ಯ ಯೋಧರು ಸಾಧಿಸಲು ಹೋಗಿದ್ದ ಕನಸು; ಇದೇ ಮೂಕ ಜನತೆಯು ಸ್ವಾಗತಿಸಲು ಕಾತರಿಸುತ್ತಿದ್ದ ಬೆಳಸು. ಪರಕೀಯರ ಕುಪ್ರಭಾವದ ಹೊಲಸುಗಳೆಲ್ಲ ತೊಲಗಿ ಸ್ವಾಯತ್ತ ಸುಖಶಾಂತಿಗಳು ನೆಲೆಸುವುದರ ಮಂಗಳ ಮಹಾಪ್ರಭಾತವಿದು. ತಾಯ್ನುಡಿಯ ಸೇವೆಗೆ ಶ್ರಮಿಸುತ್ತಿರುವವರಿಗೆ, ತಾಯ್ನಾಡಿನ ಅಭ್ಯುದಯಕ್ಕಾಗಿ ಹಂಬಲಿಸುತ್ತಿರುವವರಿಗೆ, ಅಖಂಡ ಭಾರತದ ಸತ್ತ್ವಕ್ಕೆ ಕನ್ನಡದ ಕಾಣಿಕೆಯನ್ನರ್ಪಿಸಬೇಕೆಂದು ಪಣ ತೊಟ್ಟವರಿಗೆ, ಇಂದು ಪುಣ್ಯದ ಬಾಗಿಲು ತೆರೆದಂತಾಗಿದೆ. ಈ ಶುಭ ಸಮಯದಲ್ಲಿ ಐತಿಹಾಸಿಕ ದೃಷ್ಟಿಯಿಂದ ಕರ್ನಾಟಕ ನವರಾಜ್ಯೋದಯದ ಹಿನ್ನೆಲೆಯನ್ನು ತಿಳಿಯುವುದು ಕ್ರಮಪ್ರಾಪ್ತವೆಂದು ಬಗೆದು ಅದನ್ನು ಸ್ಥೂಲವಾಗಿ ರೇಖಿಸಲು ಇಲ್ಲಿ ಯತ್ನಿಸಿದೆ

ನಮ್ಮ ಭರತಖಂಡದಲ್ಲಿ ಪೂರ್ವದಿಂದಲೂ ಅಂಗ, ವಂಗ, ಕಳಿಂಗ, ಕರ್ಣಾಟಕ ಮುಂತಾದ ಛಪ್ಪನ್ನ ಭಾಷಾ ರಾಜ್ಯಗಳಿದ್ದುವನ್ನು ಪುರಾಣಗಳೆಲ್ಲವೂ ಪ್ರತಿಪಾದಿಸುತ್ತವೆ. ಹೀಗೆ ಅನೇಕ ಭಾಷೆಗಳಿಗೆ, ಅನೇಕ ಆಚಾರಗಳಿಗೆ, ತವರುಮನೆಯಾಗಿದ್ದರೂ ಭರತಖಂಡದ ಸಾಂಸ್ಕೃತಿಕ ಐಕ್ಯವೆಂದೂ ಕುಂದಿರಲಿಲ್ಲ. ಇದಕ್ಕೆ ಆತ್ಮಭೂತವಾದ ಧರ್ಮಶ್ರದ್ಧೆ ಒಂದು ಕಾರಣವಾದರೆ, ಶಾಸ್ತ್ರ ಸಾಹಿತ್ಯಗಳಿಗೆಲ್ಲ ಕೇಂದ್ರವಾಗಿದ್ದ ಏಕಮೇವ ಸಂಸ್ಕೃತ ಭಾಷೆಯ ಪ್ರಭಾವ ಇನ್ನೊಂದು ಕಾರಣವೆನ್ನಬಹುದು. ಭಾರತದ ವಿವಿಧ ಭಾಷೆಗಳೆಲ್ಲವೂ ಸಂಸ್ಕೃತಜನ್ಯ ಇಲ್ಲವೆ ಸಂಸ್ಕೃತ ಪ್ರಭಾವಿತವಾಗಿರುತ್ತಿದ್ದ ಕಾರಣ ಸಂಸ್ಕೃತದ ಪ್ರಾಬಲ್ಯವು ದೇಶಭಾಷೆಗಳ ಪ್ರಗತಿಗೆ ಅಡ್ಡಿಯಾಗುವುದರ ಬದಲು ಪ್ರೇರಕವೇ ಆಗಿರುತ್ತಿದ್ದಿತು. ಏಕಕಾಲದಲ್ಲಿ ಭರತಖಂಡದ ಒಡೆತನ ನೂರಾರು ರಾಜರ ಕೈಯಲ್ಲಿರುತ್ತಿದ್ದರೂ, ಎಲ್ಲರೂ ಒಂದೇ ರಾಜಧರ್ಮದ ದೀಕ್ಷೆಯನ್ನು ಪಾಲಿಸುತ್ತಿದ್ದುದರಿಂದ ಜನರಿಗೆ ಭೇದಭಾವ ಬೆಳೆಯಲಾಸ್ಪದವಿರುತ್ತಿರಲಿಲ್ಲ. ಜನರ ನಿತ್ಯ ವ್ಯವಹಾರಗಳ ನಿರ್ಣಯ ಕೈಗ್ರಾಮದ ಹತ್ತು ಸಮಸ್ತರೇ ಸಮರ್ಥರಾಗಿರುತ್ತಿದ್ದುದರಿಂದ, ಮೇಲಿನ ಅಧಿಕಾರಿ ವರ್ಗದವರೂ ಪ್ರಾಂತೀಯ ಭಾಷೆಯನ್ನು ಬಲ್ಲವರೇ ಆಗಿರುತ್ತಿದ್ದುದರಿಂದ, ಇಂದು ನಾವು ಕಾಣುವ ಅನೇಕ ಸಮಸ್ಯೆಗಳಿಗೆ ಆಸ್ಪದವೇ ಇರುತ್ತಿರಲಿಲ್ಲ. ರಾಜಾಶ್ರಯವು ಒಂದೇ ಸಮನಾಗಿ ಸಂಸ್ಕೃತಕ್ಕೂ ದೇಶ ಭಾಷೆಗಳಿಗೂ ಲಭ್ಯವಾಗುತ್ತಿದ್ದಿತು. ಇದು ಪೂರ್ವದ ಚರಿತ್ರೆಯು ತೋರಿಸುವ ಮೊದಲನೆಯ ದೃಶ್ಯ. ಈ ಕಾಲದಲ್ಲಿ ಗಂಗ, ಕದಂಬ ಚಾಲುಕ್ಯ, ರಾಷ್ಟ್ರಕೂಟಾದಿ ಅರಸುಮನೆತನಗಳು ಕನ್ನಡ ಭುವನೇಶ್ವರಿಯ ಕೀರ್ತಿ ಪತಾಕೆಯನ್ನು ದಿಗ್ದಿಗಂತಗಳಲ್ಲೂ ಮೆರೆಯಿಸಿದ್ದವು. ಪಂಪ, ರನ್ನ, ಮುಂತಾದ ಮಹಾಕವಿಗಳು ನಾಡಿನ ಐಸಿರಿಯನ್ನು ಬಣ್ಣಿಸಿ ಧನ್ಯರಾಗುತ್ತಿದ್ದರು. ಕಾವೇರಿಯಿಂದ ಗೋದಾವರಿಯ ವರೆಗಿನ ಭೂವಿಸ್ತಾರವೆಲ್ಲವೂ ಕನ್ನಡ ನಾಡೆಂಬ ಕಲ್ಪನೆ ಕುಂತೋದದ ಜನಗಳಲ್ಲಿಯೂ ಕೂಡ ರಕ್ತಗತವಾಗಿರುತ್ತಿದ್ದಿತು.

ಇತಿಹಾಸದ ಎರಡನೆಯ ಚಿತ್ರ ಮುಸಲ್ಮಾನರ ಅಭಿಯೋಗದಿಂದ ನಾಡಿನಲ್ಲಿ ನಡೆದ ಕ್ಷೋಭೆ ಪ್ರಕ್ಷುಬ್ಧ ಪರಿಸ್ಥಿತಿಯು ಬಹಳ ಕಾಲ ಸಾಗಲಿಲ್ಲವೆಂಬುದು ನಾಡಿನ ಸುದೈವ. ಅಲ್ಲಾವುದ್ದೀನನ ಪ್ರಚಂಡ ಸೇನೆಯು ಚಂಡಮಾರುತದಂತೆ ಬಂದಿತ್ತು; ಹೋಯಿತು. ಕನ್ನಡ ಅರಸುಗಳ ಶಕ್ತಿಪರೀಕ್ಷೆ ನಡೆಯಿತು. ಆದರೆ ಮುಸಲ್ಮಾನರೂ ಕೂಡ ಈ ನೆಲದಲ್ಲಿಯೇ ನೆಲಸಿ ಇಲ್ಲಿಯವರೇ ಆಗುವ ಹವಣಿಕೆಯಿಂದ ಇಲ್ಲಿಯ ರಾಜ್ಯಪದ್ಧತಿಗಳನ್ನೇ ಮುಂದುವರಿಸಿದ ಪ್ರಯುಕ್ತ ಜನತೆಗೆ ಹೆಚ್ಚಿನ ಆಘಾತವಾಗಲಿಲ್ಲ. ಕನ್ನಡ ನಾಡು ಒಂದೇ ಎಂಬ ಭಾವನೆ ಕುಗ್ಗಲಿಲ್ಲ. ಅರಬೀ, ಪರ್ಶಿಯನ್ ಭಾಷೆಗಳು ತಮ್ಮ ಪ್ರಭುತ್ವವನ್ನೆಂದೂ ಕನ್ನಡ ನಾಡಿನಲ್ಲಿ ಮೆರೆಯಲಿಲ್ಲ. ಮೇಲಿನ ಅಂತಸ್ತುಗಳು ಬದಲಾದರೂ ಪ್ರಜೆಗಳ ಜೀವನ ಹೆಚ್ಚುಕಡಿಮೆ ಒಂದೇ ದಿಕ್ಕಿನಲ್ಲಿ ಸಾಗುತ್ತಿದ್ದಿತು.

ಆದರೆ ಸಾವಿರಾರು ವರ್ಷಗಳ ಪ್ರಗತಿಯನ್ನೆಲ್ಲ ಮೂಲೆಗೊತ್ತಿ ತಮ್ಮ ಪ್ರಭಾವ ಮುದ್ರೆಯನ್ನು ಅಚ್ಚಳಿಯದಂತೆ ಬಿತ್ತಿದ ವಿಷಬೀಜ ಇಂಗ್ಲಿಷ್ ಪ್ರಭುಗಳದು. ಕೇವಲ ಇನ್ನೂರು ವರ್ಷಗಳ ಅವಧಿಯಲ್ಲಿ ಈ ಬೀಜ, ಚಿಗುರಿ, ಸುಡಿಯಾಗಿ, ಕಾಯಾಗಿ ಎಲ್ಲರನ್ನೂ ಮತ್ತೇರಿಸಿ ಬಿಟ್ಟಿದೆಯೆನ್ನಬಹುದು. ಇದೇ ಇತಿಹಾಸದಲ್ಲಿ ನಾವು ನೋಡುವ ಮೂರನೆಯ ಚಿತ್ರ. ಹಿಂದಿನಿಂದಲೂ ಭಾರತದ ಅಖಂಡ ಸೂತ್ರಕ್ಕೆ ಪೋಷಕಗಳಾಗಿದ್ದ ಧರ್ಮ, ಸಂಸ್ಕೃತ ಭಾಷೆಗಳನ್ನಿವರು ಮೊದಲು ಭಂಗಿಸಲುದ್ಯುಕ್ತರಾದುದಷ್ಟೇ ಅಲ್ಲ; ಅವುಗಳಲ್ಲಿ ತಿರಸ್ಕಾರವುಕ್ಕುವಂತೆ ಪ್ರಚಾರ ಮಾಡಿದುದಷ್ಟೇ ಅಲ್ಲ, ಅವುಗಳ ಸ್ಥಾನದಲ್ಲಿ ತಮ್ಮ ರೀತಿನೀತಿಗಳನ್ನೂ, ಭಾಷೆಯನ್ನೂ ಪ್ರತಿಷ್ಠಾಪಿಸಿ, ಅವುಗಳಿಗೆ ಅತಿ ಮಹತ್ತ್ವವನ್ನಿತ್ತರು; ಇನ್ನೊಂದು ಕಡೆ ಜನರಮನಃಪಟಲಗಳಲ್ಲಿರುತ್ತಿದ್ದ ಭಾಷೈಕ್ಯ ಕೂಡ ನಿಶ್ಶೇಷವಾಗುವಂತೆ ಒಂದು ಭಾಷೆಯ ಭೂಭಾಗವನ್ನು ವಿಭಿನ್ನ ಪ್ರಾಂತಗಳಲ್ಲಿ ಹರಿದು ಹಂಚಿಬಿಟ್ಟರು. ದೇಶದಲ್ಲಿ ಗಲಭೆಯಾಗದಂತೆ ರಕ್ಷಣಾ ದೃಷ್ಟಿಯಿಂದ ಅವರ ಈ ಯೋಜನೆಗಳು ಪರಿಣಾಮಕಾರಿಯಾಗಿದ್ದುದು ನಿಜ; ಆದರೆ ನಾಡಿನ ಅಭ್ಯುದಯದ ದೃಷ್ಟಿಯಿಂದ ಅತ್ಯಂತ ಮಾರಕಗಳಾಗುತ್ತ ಬಂದುವು. ಆಂಗ್ಲಭಾಷಾ ವ್ಯಾಮೋಹವೂ, ವಿಜ್ಞಾನದಲ್ಲಿ ಅತಿಶ್ರದ್ಧೆಯೂ ಹೆಚ್ಚಿದಂತೆಲ್ಲ ಪೂರ್ವದ ಪರಂಪರೆಗಳೆಲ್ಲವೂ ಕುರುಡು ನಂಬಿಕೆಗಳೆಂಬ ತಾತ್ಸಾರ ಭಾರತೀಯರಲ್ಲಿಯೇ ರೂಢಮೂಲವಾಗುತ್ತ ಬಂದಿತು. ಸ್ವಭಾಷಾಭಿಮಾನವೇ ಶೂನ್ಯವಾಗಿ, ಸ್ವಾತಂತ್ರ್ಯಕ್ಕಿಂತ ಇಂಗ್ಲಿಷರ ರಾಜ್ಯಭಾರವೇ ಲೇಸೆಂಬ ವರೆಗೆ ಜನರ ನೈತಿಕ ಮಟ್ಟ ಇಳಿದಿತು.

ಇನ್ನು ನಾಲ್ಕನೆಯ ಚಿತ್ರ ಕಾಂಗ್ರೆಸ್ ಸಂಸ್ಥೆಯು ಜನರ ಕಣ್ಣನ್ನು ತೆರೆಯಲು ಕೈಕೊಂಡ ದುಷ್ಕರ ವ್ರತದ್ದು. ವಂಗಭಂಗದ (೧೯೦೫) ಕಾಲದಲ್ಲಿ ನಡೆದ ಚಳುವಳಿಗಳಿಂದ ಜನರ ಜ್ಞಾನೋದಯವಾಗಲಾರಂಭವಾಯಿತು. ಬ್ರಿಟಿಷರೇ ಕ್ರಮಕ್ರಮವಾಗಿ ಬಂಗಾಳ, (೧೯೧೨) ಸಿಂಧ, ಒರಿಸ್ಸಾ (೧೯೩೬) ಮುಂತಾಗಿ ಭಾಷಾ ರಾಜ್ಯಗಳನ್ನು ಪುನರ್ನಿರ್ಮಾಣ ಮಾಡಲು ಮುಂದಾಗಬೇಕಾಯಿತು. ಕಾಂಗ್ರೆಸ್ ಮಾತ್ರ ೧೯೨೦ರಿಂದ ಹಿಡಿದು ಒಂದೇ ಸಮನಾಗಿ ಕರ್ನಾಟಕ, ಆಂಧ್ರಗಳೂ ಪ್ರತ್ಯೇಕ ಭಾಷಾರಾಜ್ಯಗಳಾಗಬೇಕೆಂದು ಪ್ರತಿಪಾದಿಸುವುದರಲ್ಲಿ ನಿರತವಾಗಿಯೇ ಇತ್ತು. ಏಕೆಂದರೆ ಇಡಿಯ ಭಾರತದಲ್ಲೇ ಕರ್ನಾಟಕದಂತೆ ಛಿದ್ರಛಿದ್ರವಾಗಿ ಛಿನ್ನವಿಚ್ಛಿನ್ನವಾಗಿದ್ದ ಮತ್ತೊಂದು ಪ್ರಾಂತವಿರಲಿಲ್ಲ. ಕಾಲಹರಣಕ್ಕನುಕೂಲಿಸುವಂತೆ ಇಂಗ್ಲಿಷ್ ದೊರೆಗಳು ಸಮಿತಿಗಳನ್ನು ನೇಮಿಸುತ್ತ ಪ್ರಶ್ನೆಯನ್ನು ಮುಂದೂಡುತ್ತ ನಡೆದರು. ಆದರೆ ಸ್ವಾತಂತ್ರ್ಯದ ನಂತರ ಮೊದಲು ಆಂಧ್ರ ರಾಜ್ಯವಾಗಿ, ಅನಂತರ ಕರ್ನಾಟಕ ರಾಜ್ಯವಾಗುತ್ತಿರುವುದಕ್ಕೆ ಇಲ್ಲಿಯ ಜನಾಭಿಪ್ರಾಯದ ಅಲಕ್ಷ್ಯವೇ ಕಾರಣವೆನ್ನಬೇಕಾಗಿದೆ.

ಬ್ರಿಟಿಷರ ರಾಜಕೀಯ ತಂತ್ರಗಳಿಂದ ರೂಪಿತವಾದರೂ ಮೈಸೂರು ಸಂಸ್ಥಾನವು ಎಲ್ಲ ರೀತಿಗಳಿಂದಲೂ ಮುಂದುವರಿದುದು ಮೈಸೂರು ರಾಜರ ಪ್ರಜಾನಿಷ್ಠೆಯಿಂದಲೇ ಎಂಬುದು ಸತ್ಯ; ಇತರ ಸಂಸ್ಥಾನಿಕರಂತೆ ತಮ್ಮ ಭೋಗ ವಿಲಾಸಗಳಲ್ಲಿಯೇ ಅವರು ಮೈಮರೆಯದೆ ಯೋಗ್ಯ ಮಂತ್ರಿಗಳ ಸಲಹೆಯಂತೆ ಪ್ರಜಾಸೇವೆಯಲ್ಲಿ ತತ್ಪರರಾಗಿರುತ್ತಿದ್ದರು. ಜನರಿಗೂ ಕೂಡ ಪೂರ್ವದಿಂದ ಬಂದ ಆದರ್ಶಗಳು ಎಂದೂ ಮರೆಯುವಂತಾಗಿಲ್ಲ; ಮೈಸೂರಿನವರೆಲ್ಲ ಒಂದೇ ಎಂಬ ಭಾವನೆ ಸಂಪೂರ್ಣವಾಗಿ ನೆಲಸಿತು. ಆದರೆ ಆ ಭಾವನೆಯೇ ಕೆಲವು ರಾಜಕಾರಣಿಗಳ ಕೈಯಲ್ಲಿ ದುರುಪಯುಕ್ತವಾಗಿ 'ಮೈಸೂರ ಗಡಿಯಾಚೆಯ ಕನ್ನಡಿಗರೇ ಬೇರೆ; ಅವರು ನಮಗಿಂತ ಕೀಳು' ಎನ್ನುವ ವರೆಗೆ ಹೋದುದು ಆಶ್ಚರ್ಯಕರ. ಈಗ ನಾಡಿನವರ ಪುಣ್ಯದಿಂದ ಸಂಶಯಗಳೆಲ್ಲ ಅಳಿದು ನಾವೆಲ್ಲರೂ ಒಂದೇ ಎಂಬ ಮೂಲಮಂತ್ರ ಮತ್ತೆ ಎಲ್ಲೆಡೆಗಳಲ್ಲೂ ಪ್ರತಿಧ್ವನಿತವಾಗುತ್ತಿದೆ. ಎಲ್ಲರೂ ಕೂಡಿಕೊಂಡು ನಾಡನ್ನು ಕಟ್ಟುವ ಮಹಾಕಾರ್ಯ ಈಗ ಮುಂದಿದೆ.

'ಅತಿ ಸರ್ವತ್ರ ವರ್ಜಯೇತ್'ಎಂಬುದನ್ನು ನಾವು ಮರೆಯಬಾರದು. ಭಾಷಾಪ್ರೇಮದಿಂದ ಯಾವ ಐಕ್ಯಸಿದ್ಧಿಯನ್ನು ಸಾಧಿಸಿದೆವೋ ಅದೇ ಭಾಷಾಪ್ರೇಮವೇ ಭಾರತದ ಐಕ್ಯ ಸೂತ್ರಕ್ಕೆ ಕಂಟಕಪ್ರಾಯವಾಗದಂತೆ ನೋಡಿಕೊಳ್ಳುವ ದೊಡ್ಡ ಹೊಣೆ ಇಂದು ನಮ್ಮ ಮೇಲಿದೆ. ಸಂಸ್ಕೃತ ಕನ್ನಡಗಳೆರಡನ್ನೂ ಸ್ವಭಾಷೆಯೆಂದೇ ಹಿಂದಿನಿಂದಲೂ ಬೆಳೆಸಿರುವ ಕನ್ನಡಿಗರಿಗೆ ಇಂದಿನ ರಾಷ್ಟ್ರಭಾಷೆಯನ್ನೂ ಕನ್ನಡವನ್ನೂ ತಮ್ಮದೆಂದೇ ಪುರಸ್ಕರಿಸುವುದೇನೂ ಕಷ್ಟದ ಕೆಲಸವಲ್ಲ. ಈ ನಡುವೆ ಇಂದಿನ ವಿಜ್ಞಾನದ ಭಾಷೆಯಷ್ಟೇ ಅಲ್ಲ ಅಂತಾರಾಷ್ಟ್ರೀಯ ಭಾಷೆಯೂ ಆಗಿರುವ ಇಂಗ್ಲಿಷಿನ ಸದುಪಯೋಗದ ಪ್ರಶ್ನೆಯೂ ಇದೆ. ಭಾಷೆಗಳು ಕಾಲ್ತೊಡಕುಗಳಾಗದೆ ಮೈದೊಡವುಗಳಾಗುವಂತೆ ಮಾಡಿಕೊಳ್ಳುವ ಜಾಣ್ಮೆ ಕನ್ನಡಿಗರಿಗೆ ಇಲ್ಲದೆ ಇಲ್ಲ. ಆದರೆ ನವೋದಿತ ಕರ್ನಾಟಕದಲ್ಲಿ ಎಲ್ಲ ಅಂಗಗಳಿಗೆ ಸಮಾನ ಪ್ರಾಶಸ್ತ್ಯ ದೊರೆಯದಂತೆ ಸಣ್ಣಪುಟ್ಟ ಭೇದ ಪ್ರವೃತ್ತಿಗಳು ಬೆಳೆದರೆ ನಾಡಿಗೆ ಹಿತವಿಲ್ಲವೆಂದು ಹೇಳವೆ ಬೇಕಿಲ್ಲ. ಹೊಸರಾಜ್ಯದಲ್ಲಿ ಹಿಂದುಳಿದ ಭಾಗಗಳೇ ಇಲ್ಲದಂತೆ ಮಾಡುವುದು ಕನ್ನಡಿಗರೆಲ್ಲರ ಆದ್ಯ ಕರ್ತವ್ಯವೆಂದು ಭಾವಿಸಿ ಪ್ರಯತ್ನಶೀಲರಾಗಬೇಕು; ಉತ್ತರ ಕನ್ನಡವೇ ಮುಂತಾದ ಜಿಲ್ಲೆಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳು ರೂಪುಗೊಳ್ಳಬೇಕು. ನವರಾಜ್ಯದ ಪುನರುಜ್ಜೀವನ ಕಾರ್ಯದಲ್ಲಿ ಅಭೂತಪೂರ್ವವಾದ ಸಹಕಾರ ಎಲ್ಲರಲ್ಲಿಯೂ ಮೂಡಿಬರಬೇಕು; ಕ್ಷುದ್ರ ದ್ವೇಷಾಸೂಯೆಗಳೆಲ್ಲ ರಾಜಕಾರಣದಲ್ಲಿ ಇಲ್ಲವಾಗಬೇಕು. ಕರ್ನಾಟಕ ವಿಷಯದ ನವೋದಯ ಸೌಖ್ಯಕ್ಕೆ ನಿಲಯವಾಗಲಿ! ನೋಟ್ಮೆಯ ವಲಯವಾಗಲಿ! ಕೀರ್ತಿಯ ವಿಲಯವಾಗಲಿ!


೨೦ ವರ್ಷಗಳಿಂದಲೂ ಪ್ರಸಿದ್ಧ ಇದೆ.

ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಸ್ಟೋರ್ಸರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.

Tele add "GAWASHABAD"

# ಯೋಜನೆಯ ಕಾರ್ಯಾಚರಣೆ

**ಹಣವನ್ನು ಕೋಟಿಗಟ್ಟಳೆ ವ್ಯಯಿಸಿದರೂ ಜನರು ಸ್ವತಃ ಭಾಗವಹಿಸದಿದ್ದರೆ ಸಾಧಿಸಿದ ಯಾವ ಕೆಲಸದಲ್ಲೂ ಆತ್ಮೀಯತೆಯ ತೃಪ್ತಿ ಮೈದೋರದು: ಬಡ್ಡ ದರಿದ್ರರ ನಾಡಾದ ಭಾರತದಲ್ಲಿ ಹಣಶಕ್ತಿಗಿಂತಲೂ ಜನಶಕ್ತಿಯ ಮಹತ್ವವೇ ಹೆಚ್ಚು.**

ಬರೆದವರು: ಶ್ರೀ ವಿ. ಚ. ಹಿತ್ತಿಲಮನೆ, ಬಿ. ಎಸ್‌ಸಿ. (ಎಗ್ರಿ) ಆನರ್ಸ್.

ಭಾರತವು ವಿಶಾಲವಾದ ರಾಷ್ಟ್ರವು. ಅಗಣಿತ ಸಂಪತ್ತಿನಿಂದಲೂ, ಫಲವತ್ತಾದ ಭೂಮಿಯಿಂದಲೂ, ನಿಸರ್ಗದತ್ತ ಅರಣ್ಯ ನದಿ, ಬೆಟ್ಟಗಳೇ ಮೊದಲಾದ ಅನೇಕ ಕೊಡುಗೆಗಳಿಂದಲೂ ಕೂಡಿದೆ. ಉತ್ತರದಲ್ಲಿ ಭದ್ರವಾದ ಕೋಟೆಯಂತಿರುವ ಎತ್ತರ ಹಿಮಗಿರಿಯ ಸಾಲುಗಳು. ಪೂರ್ವ ಪಶ್ಚಿಮ ದಕ್ಷಿಣಗಳಲ್ಲಿ ಆಳವಾದ ಅರಬ್ಬೀ ಹಾಗೂ ಬಂಗಾಲ ಉಪಸಾಗರಗಳು. ಗಂಗೆ, ಯಮುನೆ, ಬ್ರಹ್ಮಪುತ್ರಾ, ತಾಪಿ, ನರ್ಮದೆ, ಗೋದಾವರಿ, ಕೃಷ್ಣೆ, ತುಂಗಭದ್ರೆ, ಕಾವೇರಿ ನದಿಗಳ ಜಾಳಿಗೆ. ಹಿಮಾಲಯ, ವಿಂಧ್ಯ ಸಾತಪುಡಾ, ಸಹ್ಯಾದ್ರಿ, ಪರ್ವತಾವಳಿಗಳ ಸಮೂಹ. ಮೂಡಣ ಪಡುವಣಗಳಲ್ಲಿ ಕಿರು ಅಗಲಾದ ಸಾಸಿರ ಮೈಲು ಕರಾವಳಿ ತೀರಗಳು. ಉತ್ತರದಲ್ಲಿ ಬಿತ್ತರವಾದ ನದಿಕೊಳ್ಳದ ವಿಸ್ತಾರವಾದ ಬೈಲು ಪ್ರದೇಶ. ದಕ್ಷಿಣವೆಲ್ಲ ತಪ್ಪಲು ಪ್ರದೇಶ.

ಈ ಪುಣ್ಯ ಭೂಮಿಯಲ್ಲಿ ಪೌರಾಣಿಕ ಕಾಲದಿಂದಲೂ ಅನೇಕರು ಸಾಮ್ರಾಜ್ಯಗಳನ್ನು ಕಟ್ಟಿ ಮೆರೆದರು. ಭಾರತ ವರ್ಷವು ನೆಮ್ಮದಿಯ ನಾಡೆಂದು, ಅತ್ಯುಜ್ವಲ ನಾಗರಿಕತೆಯ ಬೀಡೆಂದು ವೈಭವ ಆಟ್ಟಹಾಸಗಳ ಮಾಡವೆಂದು ವಿಶ್ವದಲ್ಲೆಲ್ಲ ತನ್ನ ಕೀರುತಿ ಬೆಳಗಿಸಿದ ವರುಷಗಳು ಅನೇಕ. ರಾಜ ಮಹಾರಾಜರಿಗೆ ಜನ್ಮವಿತ್ತಂತೆ, ಧರ್ಮ ದುರಂಧರರಿಗೂ ಜನ್ಮ ಕೊಟ್ಟ ಪುಣ್ಯ ಭೂಮಿ!

ಒಂದು ರೀತಿಯಲ್ಲಿ ಕೀರುತಿಯೇ ಅವನತಿಗೆ ಕಾರಣವಾಯಿತು. ಪರಕೀಯರನೇಕರು ದಂಡೆತ್ತಿ ಬಂದರು. ನಾಡನ್ನೆಲ್ಲ ಪಾದಾಕ್ರಾಂತ ಮಾಡಿದರು. ರಾಜ್ಯ ಕಟ್ಟಿ, ನೆಲೆನಿಂತು ಆಳಿದವರು ಅನೇಕರು. ಇನ್ನೂ ಕೆಲವರು ಸುಸಜ್ಜಿತ ಸುಲಿಗೆಯನ್ನೇ ಮಾಡಿದರು. ಕೊನೆಯವರಾದ ಬ್ರಿಟಿಷರು ಇವರಿಬ್ಬರ ಮಧ್ಯದಲ್ಲಿ ನಿಂತವರು ನೆಲೆನಿಂತು ರಾಜ್ಯವನ್ನೂ ನಡೆಯಿಸಿದರು; ಶೋಷಣೆಯನ್ನೂ ನಡೆಯಿಸಿದರು.

ಭಾರತವು ಹಿಂಡಿಹಿಪ್ಪೆಯಾಯಿತು. ಗತವೈಭವದ ಸ್ಮರಣೆಯೇ ನಮ್ಮ ಭಾಗ್ಯವಾಗಿ ಉಳಿಯಿತು. ವಿಶ್ವದ ಒಂದೈದನೆಯ ಅಂಶದಷ್ಟು ಜನತೆಯನ್ನೊಳಗೊಂಡ ವಿಶಾಲ ನಾಡಿನಲ್ಲಿಯ ಮೂವತ್ತೈದು ಕೋಟಿಗಳಲ್ಲಿ ಮುಕ್ಕಾಲು ಪಾಲು ದರಿದ್ರರಾದ ಒಕ್ಕಲಿಗರು. ನೂರಕ್ಕೆ ತೊಂಭತ್ತರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಪರಕೀಯರ ಆಳಿಕೆಯಲ್ಲಿ ಭಾರತವು ವಿಶ್ವದ ಎರಡು ಮಹಾಯುದ್ಧಗಳಲ್ಲಿ ಸಿಕ್ಕು ನುಚ್ಚು ನೂರಾಯಿತು. ಆಳರಸರ ಮನೆಗೆ ಬೆಂಕಿ ಹೊತ್ತಿ ಉರಿಯುತ್ತಿರುವಾಗ ವಸಾಹತುಗಳಿಂದ ನೀರು, ಜನತೆ ಜರಿಸಲಿಕ್ಕೆ ಹೋಗದಿದ್ದರೆ ಹೇಗೆ ನಡೆದೀತು? ಪರಿಣಾಮವಾಗಿ ಹಿಂದೆಂದೂ ಕೇಳಿ ತಿಳಿಯದ, ಚಿಂತಿಸಿ ಅರಿಯದ ಸಮಸ್ಯೆಗಳು ಎದ್ದುವು. ದೇಶ ಬಡವಾಯಿತು. ದೇಶಿಗರು ನಿರ್ಗತಿಕರಾದರು. ಜನತೆಗೆ ಜೀವನ ನಿರ್ವಹಣವೇ ಜಡವೆನಿಸಿತು. ಸಕಲ ವಿಧದಲ್ಲಿಯೂ ಭಾರತ ಹಿಂದೆ ಬಿದ್ದಿತು.

ದುರ್ಗತಿಯಲ್ಲಿಯೇ ಸದ್ಗತಿಯ ಅಂಕುರವಿತ್ತು. ವಿನಾಶದಲ್ಲಿಯೇ ಭಾವೀ ವೈಭವದ ಕಿಡಿ ಹೊತ್ತಿತ್ತು. ಪರಕೀಯರ ಆಡಳಿತೆಯ ಅಸಂತೋಷ ಹೆಚ್ಚಿದಂತೆ ಏಳ್ಗೆಯ ಪ್ರಯತ್ನಗಳು ಬಲವಾಗಿ ನಡೆದವು. ನಾಡನ್ನು ಸ್ವತಂತ್ರ ಮಾಡುವ ಪ್ರಯತ್ನಗಳು ನಡೆದವು. ಲೆಕ್ಕವಿಲ್ಲದಷ್ಟು ಬಾಂಧವರು ಪ್ರಾಣಾರ್ಪಣ ಮಾಡಿದರು. ಪರಕೀಯರನ್ನು ಒಮ್ಮೆ ಹೊರಗೆ ಕಳುಹಿಸಿ ನಮ್ಮವರು ಹತ್ತೊಂಭತ್ತು ನೂರ ನಾಲ್ವತ್ತೇಳನೆಯ ಆಗಸ್ಟ ಮಧ್ಯದಲ್ಲಿ ಸ್ವರಾಜ್ಯದ ಸೂತ್ರ ಕೈಗೆತ್ತಿಕೊಂಡರು.

ಭಾರತದ ಚರಿತ್ರೆಯಲ್ಲಿ ಆ ದಿನ ಮಹಾದಿನ ನಾಡಿನ ಉದ್ದಗಲಗಳಲ್ಲಿ ರಾಷ್ಟ್ರೀಯತ್ವದ ಚೇತನ ಮಿಂಚಿನಂತೆ ಸಂಚರಿಸಿದ ಸುದಿನ. ದಾಸ್ಯದ ಸಂಕೋಲೆಗಳನ್ನು ಕಡಿದೊಗೆದ, ಹೆಗಲಿಗೆ ಹೇರಿದ ನೊಗ ತೂರಿ ಒಗೆದ ಐತಿಹಾಸಿಕ ದಿನ. ಅಂದು ‘ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು’ ಎಂದು ಸಾರಿದ ಲೋಕಮಾನ್ಯರ ಸ್ವರಾಜ್ಯ ‘ಸ್ವರಾಜ್ಯ ನನ್ನ ಆತ್ಮದ ಗೀತೆ’ ಎಂದು ಘೋಷಿಸಿದ ಸುಭಾಷರ ಸ್ವರಾಜ್ಯ, ‘ನನ್ನ ಬಾಳಿನ ಕನಸು ಸ್ವರಾಜ್ಯ’ ಎಂದು ಚಿಂತಿಸಿದ ಮಹಾತ್ಮರ ಸ್ವರಾಜ್ಯ ಮೂವತ್ತು ಮೂರು ಕೋಟಿ ಭಾರತೀಯರ ಭಾಗ್ಯದ ಸ್ವರಾಜ್ಯವಾಗಿ ಮೂಡಿನಿಂತಿತು.

ಆದರೆ?

ಸ್ವರಾಜ್ಯ ಶಿಶು ಬಾಲಗ್ರಹ ದೋಷಪೀಡಿತವಾಗಿ ಜನಿಸಿತೋ ಏನೋ! ಸ್ವರಾಜ್ಯವಾದೀತೆಂದು ಬಯಸಿದ ಸ್ವರಾಜ್ಯವು ಕಣ್ಣೀರಿನ ಕಳವಳದ ಪರಿಣಾಮಗಳನ್ನುಂಟುಮಾಡಿತು. ದೇಶಕ್ಕೆಲ್ಲ ದಾರುಣ, ಭೀಕರ ಪರಿಸ್ಥಿತಿ ಬಂದೊದಗಿತು. ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು. ನಾಡಿನ ಇಬ್ಭಾಗವು ಬಂಧು ಬಾಂಧವರನ್ನು ರಕ್ತದೋಕುಳಿಯಾಡಹತ್ತಿತು. ಊರುಕೇರಿ, ಧನಧಾನ್ಯ, ದೇಶಕೋಶ, ಬಂಧುಬಳಗದವರನ್ನು ತೊರೆದು ಪರದೇಶಿಗರಂತೆ ಗಡಿನಾಡಿಗರು ಗುಳೆಕಿತ್ತಿದ ಭಯಾನಕ ಸ್ಥಿತಿ, ಮಾನವತೆ ಸತ್ತಿದೆಯೆಂದು ಸಾರಿಹೇಳುವಂತಾಯ್ತು. ಯುದ್ಧಕಾಲದ ಮಿತಿಮೀರಿದ ನೋಟುಗಳ ಭದ್ರತೆಯಿಲ್ಲದ ಪ್ರಸಾರವು ಹಣದ ಅತಿ ಪ್ರಸರಣದಲ್ಲಿ ರೂಪಾಂತರ ಹೊಂದಿ ಆರ್ಥಿಕ ಭದ್ರತೆಯ ಅಡಿಗಲ್ಲನ್ನೇ ಅಲುಗಾಡಿಸಿತು. ಜನತೆಗೆ ಜೀವನ ನಿರ್ವಹಣೆ ದುಃಸಾಧ್ಯವೆನಿಸಿತು. ಮೇಲೆ ಜೀವನಾವಶ್ಯಕ ವಸ್ತುಗಳ ಕೊರತೆಯ ತಾಂಡವ ನೃತ್ಯ! ಅನ್ನ, ಅರಿವೆ, ಅಸರೆಗಳು ಕ್ವಚಿತ್ತಾದವು. ಕೋಟಿಗಟ್ಟಲೆ ಹಣದ ಹೊಳೆ ಹರಿಸಿದರೂ ಹಸಿದ ಹೊಟ್ಟೆ ತುಂಬಿಸಲು ಧೈರ್ಯ ಬರಲೊಲ್ಲದು.

ಮೇಲೆ ನಿಸರ್ಗದ ಕ್ಷೋಭೆ! ಒಂದೆಡೆ ಭೀಕರ ಸ್ವರೂಪದ ಬಿರುಗಾಳಿ ಬೀಸಿತು; ಎಲ್ಲ ಗಾಳಿದೇವನಿಗೆ ಆಡವು! ಬರಿಯ ಬಿಸಿಲೇ ರಣಗುಟ್ಟಿತು; ಎಲ್ಲ ಅಗ್ನಿದೇವನಿಗೆ ಸ್ವಾಹಾ!! ಇನ್ನೊಂದೆಡೆ ಹುಚ್ಚು ಮಳೆಸುರಿಯಿತು; ಹೊಳೆಹಳ್ಳಗಳು ಮೇರೆ ಮೀರಿ ನೆರೆಬಂದವು. ಹೊಲ ಮನೆಗಳೆಲ್ಲ ನೀರುಪಾಲು!!! ವಿಶಾಲ ರಾಷ್ಟ್ರದಲ್ಲಿ ಒಂದು ಕಡೆಗೆ ಅನಾವೃಷ್ಟಿ, ಇನ್ನೊಂದು ಕಡೆಗೆ ಅತಿವೃಷ್ಟಿ ದೊಡ್ಡ ರಾಷ್ಟ್ರಕ್ಕೆ ದೇವನಿತ್ತ ಕೊಡುಗೆಗಳಿವು ರಾಷ್ಟ್ರವೆಲ್ಲ ದುಃಖಿಗಳ ದರಿದ್ರರ ಕಣ್ಣೀರ ಕೋಡಿಯಲ್ಲಿ ಮಿಂದುಹೋಯಿತು.

ಸ್ವಾತಂತ್ರ್ಯಾನಂತರ ಕೆಲವೇ ದಿನ. ಅದೆಂಥ ಬದಲಾವಣೆ! ಎಂಥ ಪರಿವರ್ತನೆ!! ಮಾಟಗಾರನ ಮೋಡಿ ನಡೆದಂತಾಯಿತು. ಕಲ್ಪನೆ, ಚಿಂತನೆಗಳನ್ನು ಮೀರಿದ ರೂಪಾಂತರಪಡೆದು ಮೂಡಿತು. ಹಾಹಾಕಾರದ ಮುಖಗಳಲ್ಲಿ ಗೆಲುವಿನ ಚಿನ್ಹೆ ತೋರಿಬಂತು. ದಿಕ್ಕೆಟ್ಟವರಿಗೆ ದಾರಿಯ ಸುಳಿವು ಹತ್ತಿತು.

ಕತ್ತಲೆಯ ದುರ್ದಿನಗಳು ಸರಿದವು. ಬೆಳಕಿನ ಭಾಗ್ಯದ ದಿನಗಳು ಭರದಿಂದ ಸಾಗಿಬಂದವು. ಆಡಳಿತೆಯ ಅಸ್ತಿಭಾರವನ್ನೇ ಅಲುಗಾಡಿಸಿದ ಒಂದೊಂದೇ ಮಹಾ ಸಮಸ್ಯೆಗಳು ಚಮತ್ಕಾರವೆಂಬಂತೆ ಬಗೆಹರಿದವು.

ನಿರ್ವಾಸಿತರು ನೆಲೆನಿಂತರು. ಅತಿಪ್ರಸರಣದ ಅಬ್ಬರ ಅಡಗಿತು. ಅನ್ನರಿವೆಗಳ ಉತ್ಪಾದನೆಯು ನಿರೀಕ್ಷೆಮೀರಿ ಹೆಚ್ಚಿ ಸ್ವಾವಲಂಬನಕ್ಕೆಡೆಗೊಟ್ಟವು. ಅನೀತಿ, ಅಕೃತ್ಯ, ಅಸಮಾಧಾನಗಳನ್ನು ಹೆಚ್ಚಿಸಿದ ಕಳ್ಳಸಂತೆಯ ಮಾತಾಪಿತೃಗಳಾದ ಬೆಲೆ ನಿಯಂತ್ರಣ ಸಾಗಾಟ ನಿಯಂತ್ರಣಗಳು ಸದ್ದಿಲ್ಲದೆ ಅಡಗಿದವು. ಬೇಕಾದಷ್ಟು ಅನ್ನ ಬೇಕಾದೆಡೆಯಲ್ಲಿ ದೊರಕುವದರ ಜೊತೆಗೆ ಬೆಲೆಗಳೂ ಅಗ್ಗವಾದವು. ಜನತೆಯ ಕೊಳ್ಳುವ ಶಕ್ತಿಯೂ ಸುಧಾರಿಸಿತು.

ಕಳವಳ ಹಾಗೂ ಕಾತರತೆಗಳ ಕಾರ್ಗಾಲ ಸಂದು ನೆಮ್ಮದಿಯ ಶಾಂತಿ ಸುದಿನಗಳು ಸುಳಿದವು. ಸುಖದ ದಿನಗಳನ್ನು ಎಂದಾದರೂ ಮುಂದೆ ಕಂಡೇವೇ ಎಂದು ಬಾಯಿ ಬಾಯಿ ಬಿಡುತ್ತಿದ್ದ ಜನತೆ ಸೌಖ್ಯ ಸಾಗರದಂಚಿನಲ್ಲಿ ನಿಂತು ಆನಂದಾತಿಶಯದಿಂದ ಕೇಕೆ ಹಾಕಿತು. ಹಾಯಾದ ಬಾಳನ್ನು ಬಾಳುವ ಭಾಗ್ಯದ ಭರವಸೆ ತಲೆದೋರಿದಾಗ ಎಲ್ಲರ ಮುಖದಲ್ಲಿಯೂ ಸಂತಸದ ಬಿರಿಮುಗುಳು ಅರಳಿತು. ಹೊಟ್ಟೆ ಬಟ್ಟೆಯ ಚಿಂತನೆಯಲ್ಲಿ ತೃಪ್ತಿ ಪಡೆದ ಜನತೆ ವೈಭವ ಬಿಟ್ಟು ಮಾನವತೆಯತ್ತ ಮನಸ್ಸು ತಿರುಗಿಸಿತು. ನಾಗರಿಕ ಬಾಳುವೆಯ ಬಯಕೆ ಮೊಳಕು ಹಾಕಲನುವಾಯಿತು. ಸುತ್ತಲಿನವರಲ್ಲಿ ಪ್ರತಿಷ್ಠೆ ಬೆಳೆಯಿಸಿ ಮೆರೆಯುವಂತಾಯ್ತು.

ದೇಶದ ತುಂಬೆಲ್ಲ ಮಹಾ ಸಿದ್ಧತೆಯು ನಡೆಯಿತು. ಒಂದು ಕುಟುಂಬದ ಮದುವೆಯ ಸಂಭ್ರಮದಂತೆ, ಇಡಿಯ ರಾಷ್ಟ್ರದ ಕಲ್ಯಾಣ ಸಂಭ್ರಮ ಪ್ರಾರಂಭವಾಯಿತು. ಮಹಾ ಮಹಾ ಅಣೆಕಟ್ಟು, ವಿದ್ಯುದಾಗರ, ಭಾರೀ ಕಾರಖಾನೆಗಳು, ಭವ್ಯ ಮಂದಿರಗಳು ತಲೆಯೆತ್ತಿ ನಿಂತವು ಲಕ್ಷಾಂತರ ಎಕರೆಗೆ ನೀರಿನ ಆಶ್ರಯ ದೊರೆಯಿತು. ಕೋಟಿಗಟ್ಟಲೆ ಜನರನ್ನು ಬರಗಾಲದ ಬವಣೆಯಿಂದ ರಕ್ಷಿಸಲಾಯಿತು. ಮನೆ ಮನೆಗಳು ಮಿಂಚು ದೀಪಗಳಿಂದ ಝಗಝಗಿಸಿದವಲ್ಲದೆ, ಅಸಂಖ್ಯಾತ ಉದ್ಯೋಗಗಳು ವಿದ್ಯುತ್ತಶಕ್ತಿಯಾಸರೆಯಿಂದ ಮುಂದುವರೆದವು. ರೈಲ್ವೆ ಎಂಜಿನು ಡಬ್ಬೆ, ವಿಮಾನ, ಟೆಲಿಫೋನುಗಳಂತಹ ಭಾರೀ ಯಂತ್ರ ಸಾಮಾನುಗಳಿಂದ ಮೊದಲು ಮಾಡಿಕೊಂಡು ಕಾಚು ಕಬ್ಬಿಣ, ಸಿಮೆಂಟು, ಔಷಧ, ಗೊಬ್ಬರ, ಕಾಗದ, ವನಸ್ಪತಿ, ಪಾವಡರ, ಸ್ನೋ, ಆಟಿಗೆಗಳೇ ಇತ್ಯಾದಿ ಷೋಕಿನ ಒಡವೆಗಳ ವರೆಗಿನ ಎಲ್ಲ ಬಳಕೆ ವಸ್ತುಗಳ ಉತ್ಪಾದನೆ ನಡೆಯಿತು.

ಉತ್ತಮ ಮಾರ್ಗ ಸೌಕರ್ಯಗಳ ಜಾಳಿಗೆಯೇ ಪಸರಿಸಿತು. ಶ್ರೇಷ್ಠ ಸಾಗಾಟದ ಸೌಲಭ್ಯಗಳು ದೊರೆತವು. ಜನತೆಯು ಆರೋಗ್ಯ ಬೆಳವಣಿಗೆಗಳತ್ತ ಮನಸ್ಸು ಹಾಕಿದುದಲ್ಲದೆ ಶಿಕ್ಷಣದ ಅಧಿಕ ಪ್ರಸಾರವೂ ನಡೆಯಿತು. ಬುದ್ಧಿಭಾವನೆಗಳ ವಿಕಾಸಕ್ಕೆ ಅವಕಾಶವನ್ನು ಏರ್ಪಡಿಸಲಾಯಿತು. ಸಾಂಸ್ಕೃತಿಕ ವಿಕಾಸವನ್ನೂ ಅಲಕ್ಷಿಸಲಿಲ್ಲ. ನೃತ್ಯ, ಸಂಗೀತ, ಸಾಹಿತ್ಯ, ಶಿಲ್ಪಗಳಾದ ಲಲಿತ ಕಲೆಗಳ ಪೋಷಣೆ ಭರದಿಂದ ಸಾಗಿತು. ಅಖಂಡ ಒಂದೂವರೆ ಶತಮಾನದಿಂದ ಪರರಾಳಿಕೆಯಲ್ಲಿ ಲಗ್ಗೆ ಹೊಡೆಯಲ್ಪಟ್ಟು,

(೧೯ನೇ ಪುಟ ನೋಡಿರಿ)


# ಮೈಸೂರು ಟೈಪ್ ಫೌಂಡ್ರಿ,

## ಬೆಂಗಳೂರು-2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ “ಮೈಸೂರು ಟೈಪ್ ಫೌಂಡ್ರಿ”ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—

**THE MYSORE TYPE FOUNDRY**
Subedar Chatram Road, BANGALORE-2.

# ಪ್ರಜಾಪ್ರಭುತ್ವ

ನಿತ್ಯ ವ್ಯವಹಾರದಲ್ಲಿ ಅನುಸರಿಸಲ್ಪಡದ ಪ್ರಜಾಸತ್ತೆಯು ನಿಷ್ಪ್ರಯೋಜಕ–
ಆಚಾರ ರಹಿತವಾದ ಉಪದೇಶವು ಸಾಕೋ ಸಾಕು!

ಬರೆದವರು: ಶ್ರೀ ಬಿ. ಎಚ್. ಶ್ರೀಧರ, ಎಂ. ಎ.

ಪ್ರಜಾಪ್ರಭುತ್ವದಲ್ಲಿ ಭಾರತವು ಬಾಲ್ಯಾವಸ್ಥೆಯಲ್ಲಿರುವುದು ಸ್ಪಷ್ಟ. ಭಾರತದ ಎಲ್ಲ ವಯಸ್ಸಿನ ಹಾಗೂ ವರ್ಗದ ಮನುಷ್ಯ ಜಂತುಗಳೂ ಪ್ರಜಾಪ್ರಭುತ್ವದಂತೆ ಆಳಲು (ಸೇವಿಸಲು) ಮತ್ತು ಆಳಲ್ಪಡಲು (ಸೇವಿಸಲ್ಪಡಲು) ಹೆಚ್ಚು ಕಡಿಮೆ ಮುಗ್ಧರೇ. ಆ ಈ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದ ತತ್ವಕ್ಕೆ ಭಂಗ ಬಂತೆಂದು ಒಂದು ವರ್ಗ ಮತ್ತೊಂದನ್ನು ದೂರುವುದೆಂದರೆ ಕಡಿಮೆ ಮುಗ್ಧರೆಂದು ತಮ್ಮ ಬಗ್ಗೆ ತಾವು ತಿಳಿದುಕೊಂಡ ಕೆಲವರು ಹೆಚ್ಚು ಮುಗ್ಧರೆಂದು ಅನ್ಯರನ್ನು ಉದ್ದೇಶಿಸಿ ಬಯ್ಯುವುದೆಂದರ್ಥ.

ನಮ್ಮ ರಾಜಕೀಯ ಪಕ್ಷಗಳು ಚುನಾವಣೆಯ ಕಾಲದಲ್ಲಿ ದೇಶದ ಅಥವಾ ಪ್ರದೇಶದ ಪ್ರತಿಯೊಂದು ಸಮಸ್ಯೆಯ ಪರಿಹಾರದ ಬಗ್ಗೆ ತಾವು ಇಂಥ ಕ್ರಮವನ್ನು ತೆಗೆದುಕೊಳ್ಳುವವರೆಂಬುದನ್ನು ಮತದಾರರಿಗೆ ಹೇಳುವುದಿಲ್ಲ. ಪಕ್ಷದ ಅತಿಸ್ಥೂಲವಾದ ಧೋರಣೆಯನ್ನು ತಮ್ಮ ಮರಿಗಳ ಮೂಲಕ ಗಟ್ಟಿಯಾಗಿ ಕೂಗಿಸುತ್ತಾರೆ–ಅಷ್ಟೇ. ಅನಂತರ ಗೆದ್ದ ಪಕ್ಷವು ಜನರ ಭವಿಷ್ಯ ನಿರೂಪಣದ ಬಗ್ಗೆ ಜನರು ತನಗೆ ಸರ್ವಾಧಿಕಾರ ಕೊಟ್ಟಿದ್ದಾರೆ ಎಂದು ಗ್ರಹಿಸಿ ಕೆಲಸಮಾಡತೊಡಗುತ್ತವೆ. ಇದನ್ನು ಪ್ರಜಾಪ್ರಭುತ್ವ ನೀತಿ ಎಂದು ಕರೆಯುವುದು ಕಷ್ಟ. ಮತದಾರಿಕೆಯೊಂದರಿಂದ ಪ್ರಜೆ ಪ್ರಭುವಾಗುವುದೂ ಎರಡು ಕಾಲುಗಳಿಂದ ನಡೆದ ಮಾತ್ರಕ್ಕೆ ಮನುಷ್ಯ ಎನಿಸುವುದೂ ಒಂದೇ ರೀತಿಯವು. ರಾಷ್ಟ್ರದ ಹಿತದ ಅಥವಾ ಪ್ರಾಂತದ ಹಿತದ ಹೆಸರಿನಲ್ಲಿ ("ಬಾರಾಖೂನ್ ಮಾಫ್") ಏನು ಮಾಡಲೂ ಬಹುದು ಎಂಬ ಕೆಲ ಪ್ರತಿನಿಧಿಗಳ ತಿಳಿವಳಿಕೆ ಇಂದು ಎಲ್ಲರ ಅನುಭವಕ್ಕೂ ಬಂದಿದೆ. ಜನರಲ್ಲಿಯ ವಿವಿಧ ವರ್ಗದವರ ನೀತಿಯನ್ನು ತಮಗೆ ಬೇಕಾದಂತೆ ಟೀಕಿಸುವ ಸರ್ವಜ್ಞತೆಯನ್ನು ಆ ಪಕ್ಷದವರು ತಮ್ಮ ಪ್ರಾತಿನಿಧ್ಯ ಬದ್ಧ ಹಕ್ಕೆಂದು ತಿಳಿಯುತ್ತಾರೆ:

ಪ್ರತಿನಿಧಿ ಬಹುಸಂಖ್ಯೆಯುಳ್ಳ ಗುಂಪು ಮಾಡುವುದೆಲ್ಲ ಸಂಶಯಾತೀತ ಸಿದ್ಧಾಂತವೆಂದು ಸ್ವೀಕರಿಸುವುದೇ ಪ್ರಜಾಧರ್ಮವೆಂದು ತಿಳಿಯಬೇಕೆಂದು ಮೊನ್ನೆ ನೆಹರುಗಳು ಅಪ್ಪಣೆ ಕೊಡಿಸಿದ್ದಾರೆ. ಆದರೆ ಕೆಲ ಪ್ರತಿನಿಧಿಗಳ ಅಲಕ್ಷ್ಯವೂ ಅನಾದರವೂ ಜನರಿಗೆ ನಿತ್ಯಾನುಭವವಾಗಿರುವುದಲ್ಲದೆ, ಅಧಿಕಾರಿಗಳು ಪ್ರಜೆಗಳ ದೂರನ್ನು ಎಷ್ಟು ಕಷ್ಟಗೊಟ್ಟು ಕೇಳುತ್ತಾರೆ ಹಾಗೂ ಹೇಳಿ ಪರಿಹರಿಸುತ್ತಾರೆ ಎಂಬುದೂ ಜನರಿಗೆ ಚೆನ್ನಾಗಿ ಅರ್ಥವಾಗಿರುವುದರಿಂದ ಅವರು ಅರ್ಜಿ ಹಾಕುವ, ಪತ್ರಿಕೆಗಳಲ್ಲಿ ಪ್ರಕಟಿಸುವ, ಪ್ರತಿನಿಧಿಗಳ ಮೂಲಕ ಹೇಳಿಕಳಿಸುವ, ತಂತಿ ಕೊಡುವ, ಶಿಷ್ಟಮಂಡಲವನ್ನಟ್ಟುವ ಮುಂತಾದ ಘಟನಾತ್ಮಕ ವಿಧಾನಗಳಿಂದ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲಾರದವರಾಗಿದ್ದಾರೆ. ಈ ವಿಧಾನಗಳು ಹತ್ತಕ್ಕೊಮ್ಮೆ ಫಲಕಾರಿಯಾದದ್ದುಂಟು—ಅದೂ ಭಗೀರಥ ಪ್ರಯತ್ನ ನಡೆದ ನಂತರ. ಆಡಳಿತದವರ ಪ್ರತಿಯನ್ನು ಎಳ್ಳಷ್ಟೂ ಏರಿಸದೆ (ಅದನ್ನು ಇಳಿಯಗೊಡುತ್ತ) ಅವರ "ಹಂ ಕರೇ ಸೋ ಕಾಯದಾ"ಗಳಿಗೆ ಬೆಂಬಲವೀಯು ಬರುವ ಪ್ರಭುತ್ವ ಪ್ರಜಾ ಪ್ರಭುತ್ವವೆಂದು ತಿಳಿಯುವುದು ಬಹಳ ಕಷ್ಟವಾಗುತ್ತಿದೆ. ಮೊನ್ನೆಯ ಅಲ್ಲಾಹಾಬಾದ್ ಯೂನಿವರ್ಸಿಟಿ ವಿದ್ಯಾರ್ಥಿಗಳ ಅಶಿಸ್ತಿನ ಬಗ್ಗೆ ನೆಹರುಗಳು ನ್ಯಾಯವಾಗಿ ಆಡಿದ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ. ಪೂಜ್ಯರು ತಮ್ಮ ಪೂಜ್ಯತೆಯನ್ನು ಉಳಿಸಿಕೊಂಬ ಬಗೆಯಲ್ಲಿ ವರ್ತಿಸುವುದನ್ನು ಹಾಗೂ ತರ್ಕಶುದ್ಧವಾಗಿ ಮಾತಾಡುವುದನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ಕಂಠಶೋಷಣೆ ಮಾಡಿ ಮರೆಯುವುದಿಂದು ರೂಢಿಯಾಗುತ್ತ ಬರುತ್ತಿದೆ. ಪ್ರತಿನಿಧಿತ್ವದ ಹಕ್ಕನ್ನು ಎತ್ತಿ ಆಡುವುದಲ್ಲದೆ, ಬಾಧ್ಯತೆಯನ್ನು ಇಂದು ಯಾರೂ ಉಚ್ಚರಿಸುವುದಿಲ್ಲ!

ಎಲ್ಲ ವರ್ಗದ ಜನರಿಗೆ ಸಂಘಟನೆಯ ಹಕ್ಕು ರಾಜ್ಯಘಟನೆಯಲ್ಲಿ ಉಲ್ಲೇಖಿತವಾಗಿದೆ. ಸಂಘಟಿತ ವರ್ಗವೊಂದು ಒಂದು ನಿರ್ಣಯವನ್ನು ತೆಗೆದುಕೊಂಡು, ಒಂದು ಕಾರ್ಯದಲ್ಲಿ ಪ್ರವೃತ್ತವಾಗುವುದು ವ್ಯವಹಾರದ ಶುದ್ಧ ತರ್ಕ. ಉದ್ದೇಶವಿಲ್ಲದೆ ಯಾರೂ ಸಂಘಟಿತರಾಗುವುದಿಲ್ಲ. ಅವರ ಉದ್ದೇಶ ಒಮ್ಮೆ ತಪ್ಪಾದರೆ ಅವರ ಸಂಘಟನೆಯನ್ನು ತಪ್ಪೆನ್ನಲಾಗುವುದಿಲ್ಲ. ಸಂಘಟನೆಯು ಪ್ರಜಾಪ್ರಭುತ್ವದ ಶಿಕ್ಷಣದ ಮೊದಲ ಹೆಜ್ಜೆ. ಪ್ರಜಾಪ್ರಭುತ್ವದಲ್ಲಿ ಅಸಂಘಟಿತ ವ್ಯಕ್ತಿಯ ಅಭಿಪ್ರಾಯಕ್ಕೆ ಬೆಲೆಯಿಲ್ಲವೆಂಬುದನ್ನು ಸಂಘಟಿತ ಬಲಿಷ್ಠ ರಾಜಕೀಯ ಪಕ್ಷಗಳಿಂದು ಜನತೆಗೆ ತೋರಿಸಿಕೊಟ್ಟಿವೆ. ಕಾಸರಗೋಡಿನ ಪ್ರಕರಣದ ಬಗ್ಗೆ ಶ್ರೀ ಶ್ರೀಪ್ರಕಾಶರವರು ಆಡಿದ ಮಾತಿನ ಬಗ್ಗೆ ಶ್ರೀ ಶಾಸ್ತ್ರಿಯವರು ತಮ್ಮ 'ಜೀವನ'ದ ಪ್ರಸ್ತುತ ಸಂಚಿಕೆಯಲ್ಲಿ ಮಾಡಿದ ಟೀಕೆಯನ್ನು ಇಲ್ಲಿ ನೆನೆದುಕೊಳ್ಳಬೇಕು.- ಪ್ರಜಾಪ್ರಭುತ್ವವೆಂದರೆ ಕಾಸರಗೋಡಿನ ಬಗ್ಗೆ ಆ ನಾಡಿನ ಜನ ನಿರ್ಣಯ ತೆಗೆದುಕೊಳ್ಳುವುದಲ್ಲ—ಎಂದು ಅವರ ಮಾತು ರತ್ನದಂಥದು. ಅದೇ ಮೇರೆಗೆ ಒಮ್ಮೆ ಆಂಧ್ರಪ್ರಾಂತರಚನೆಗೊಪ್ಪಿಕೊಂಡ ದಿಲ್ಲಿ ದರ್ಬಾರು ಅನಂತರ ಭಾಷಾವಾರು ಪ್ರಾಂತಗಳ ರಚನೆಯನ್ನು ಒಲ್ಲದ ಮನಸ್ಸಿನಿಂದ ನಡೆಸಿಕೊಡುತ್ತ ಬಂದು ಇದೀಗ ದ್ವಿಭಾಷಾ ಮುಂಬಯಿ ರಾಜ್ಯವನ್ನು ರಚಿಸಿದ್ದು ತರ್ಕಶುದ್ಧವೆಂದು ಯಾರೂ ಹೇಳಲಾರರು. ಬಾಯಲ್ಲಿ ಆಡಳಿತದ ಸೌಕರ್ಯವೇ ಪ್ರಧಾನವೆಂದರೂ ಆಡಳಿತಕ್ಕೆ ಭಾಷಾ ಸೌಕರ್ಯವು ಅಪರಿಹಾರ್ಯ ಪರಿಧಿಯಾಗಿರುವುದರಿಂದ ಅದನ್ನು ಬೈದಂತೆ ಮಾಡಿ ಒಪ್ಪಿಕೊಂಡು, ಹಟ ಸಾಧಿಸಲೋ ಎಂಬಂತೆ ಕಾಸರಗೋಡಿನಂತಹ ಪ್ರಕರಣಗಳನ್ನು ಮಾಡಿ, ದ್ವಿಭಾಷಾ ರಾಜ್ಯದಂತಹ ಅಪೂರ್ವ ಭಾಷಾ ಸಂಧಿಯನ್ನು ರಚಿಸಿ, ಹಾವಿನಷ್ಟು ಸೇರವಾದ ಮಾರ್ಗದಲ್ಲಿ ದಿಲ್ಲಿ ಧೋರಣ ಹರಿಯುತ್ತಿರುವುದು ಪ್ರಜಾಪ್ರಭುತ್ವದ ಸ್ವಾಭಾವಿಕತೆಗೆ ಚಿಹ್ನವಲ್ಲ, ನೇತೃಗಳ ನೇತ್ರ ಹೀನತೆಗೆ ಸಾಕ್ಷಿ. ಧೋರಣೆಯೇ ಸ್ಪಷ್ಟವಿಲ್ಲದ ಬಲಿಷ್ಠ ಪಕ್ಷವೊಂದು ಕಾರ್ಯಪ್ರವೃತ್ತವಾಗುವ ರೂಢಿ ಬಹುಶಃ ಭಾರತದ ಪ್ರಜಾಪ್ರಭುತ್ವದಲ್ಲೇ ಕಾಣಬಹುದೆಂದು ತೋರುತ್ತದೆ. ಹಲವು ಮಹಾರಾಷ್ಟ್ರೀಯರ ಹಾಗೂ ಗುಜರಾಥಿಗಳ ಅಪ್ರಿಯವನ್ನು ಪಂಕ್ತಿ ಭೇದಮಾಡದೆ ಸಾಧಿಸಿದ ನಿಷ್ಪಕ್ಷಪಾತತೆಯನು ಧೀರೋದಾರ ಪರಾಕ್ರಮವೆಂದು ಹೇಳಿಕೊಳ್ಳಬಹುದಾದರೆ ಹೇಳಿಕೊಳ್ಳಬಹುದು—ಅದರಿಂದ ದೇಶದ ಹಿತವೂ ಒಮ್ಮೆ ಆ ಕರ್ತೃಗಳ ದೃಷ್ಟಿಯಿಂದ ಸಾಧಿಸಿರಬಹುದು. ಆದರೆ ಅದು ಪ್ರಜಾಪ್ರಭುತ್ವದ ನೀತಿಯ ಜಯವೆಂದು ಯಾವ ಮಿದುಳೂ ಒಪ್ಪಲಾರದು. ದೊಡ್ಡವರೊಡನೆ ಪ್ರಜಾಪ್ರಭುತ್ವದ ದಿಲ್ಲಿಗೆ ಪಂಚಾಯತಿಮಾಡಿ ಸಮಾಧಾನವುಂಟು ಮಾಡಲಾರದಾಗ ಯೂನಿವರ್ಸಿಟಿಯ ವಿದ್ಯಾರ್ಥಿಗಳನ್ನು ಸಮಾಧಾನಪಡಿಸ ಹೊರಟರೆ ಅದು ಸಾಧ್ಯವಾದೀತೇ? ಇದು ಎಂಥ ವ್ಯವಹಾರ ಜ್ಞಾನ!

ಅನೇಕ ಮಹಾರಾಷ್ಟ್ರೀಯರು ಹಿಂದೆ ನೆಹರುಗಳಿಂದ ಪಶುಗಳೆನ್ನಿಸಿಕೊಂಡರು. ಇಂದು ಅನೇಕ ಗುಜರಾಥಿಗಳು ಹಾಗೇ ಅನ್ನಿಸಿಕೊಂಡರು. ಒಮ್ಮೆ ರಾಜಾಜಿ ಭಾಷಾವಾರು ಪ್ರಾಂತರಚನೆಯು ಕಾಡಾಡಿತನವೆಂದಿದ್ದರು. ಇಂಥ ಬೈಗುಳಗಳಿಂದ ಯಾರ ಮರ್ಯಾದೆ ನಿಜವಾಗಿ ಹೋಗುತ್ತದೆ? ಇಡೀ ದೇಶದ್ದು. ಇಂಥ ಸುದ್ದಿಗಳನ್ನು ಜಗತ್ತಿನಲ್ಲಿಯ ಅಮಿತ್ರ—ಅರ್ಧಮಿತ್ರ ರಾಷ್ಟ್ರಗಳು ಗುಂಬಳಾಕ್ಷರಗಳಿಂದ ಪ್ರಕಟಿಸುವುವು. ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ ಪದ್ಧತಿಯಿಂದ ಅಹವಾಲುಗಳನ್ನು ಮುಂದಿಡಲು ಉಪದೇಶಿಸಿದ ನೆಹರುಗಳು ಯಾವ ಪ್ರಜಾಪ್ರಭುತ್ವ ನೀತಿಯಿಂದ ದೇಶಮುಖರಿಗೆ ಉತ್ತರಕೊಟ್ಟರು? "ಉಚ್ಚೈರುದಾತ್ತಃ, ನೀಚೈರನುದಾತ್ತಃ" ಎಂದ ಹಾಗೆ "ಗಂಟಲು ಗಟ್ಟಿಯಿದ್ದವನದೇ ಸತ್ಯ, ಹಿಂಬಾಲಕರು ಹೆಚ್ಚಾಗಿ ಇರುವ ಸಭೆಯನ್ನು ಯೇನಕೇನ ಕಾರಣೇನ ಸಾಧಿಸಿದ ಮಹಾತ್ಮನು ಹೇಳುವುದೆಲ್ಲಾ ನೀತಿ" ಎಂಬ ಅರ್ಥಹುಟ್ಟುವ ಹಾಗೆ ನಮ್ಮ ಪೂಜ್ಯ ಮುಖಂಡರು ನಡೆದುಕೊಳ್ಳುತ್ತಿರುವುದು ಶೋಚನೀಯ. ಅವರಿಗೆ ನ್ಯಾಯವಾಗಿ ಹತ್ತು ಜನರು ಒಪ್ಪುವಂತೆ ತರ್ಕಶುದ್ಧವಾಗಿ ಮಾತಾಡಲು ಬರುವುದೇ ಇಲ್ಲವೆಂದು ಹೇಳಬೇಕಾಯಿತೆ? ಒಮ್ಮೆ ಅವರ ಹೃದಯದ ಉದ್ದೇಶ ನಿಜವಾಗಿಯೂ ದೇಶ ಹಿತಕರವಾಗಿದ್ದೀತು; ಅದನ್ನು ಕಾರ್ಯಕಾರಣ ವಿವೇಕದಿಂದ ಚೆನ್ನಾಗಿ ಅವರ ಸಹನೇತೃಗಳಿಗೂ ತಿಳಿಸಿ ಹೇಳಲಾರದೆ ದರ್ಪದ ಕಾರ್ಯಧೋರಣವನ್ನು ಅಮಲಿಗೆ ತರುವ ದುರವಸ್ಥೆ ನಮ್ಮ ಮಹಾ ಮುಖಂಡರಿಗೊದಗಿಬಂದ ಸನ್ನಿವೇಶಕ್ಕೆ ಇಡೀ ದೇಶವೇ ಪಶ್ಚಾತ್ತಾಪಪಡಬೇಕಾಗಿದೆ. ದೇಶಕ್ಕಿದು ನೇತೃಗಳು ಹಾಕಿ ಕೊಡುವ ಪ್ರಜಾಪ್ರಭುತ್ವದ ಪಾಠವೆಂದು ತಿಳಿಯಬಹುದೆ? ವಿದ್ಯಾರ್ಥಿಗಳನ್ನು ಉಚ್ಚಸ್ಥಳದಲ್ಲಿ ಫ್ಯಾಸಿಸ್ಟರೆಂದು ಕರೆದ ವಕ್ತಾರರು ಯಾರು? ಕೇವಲ ವ್ಯಕ್ತಿತ್ವದ, ಸ್ಥಾನದ, ಅಧಿಕಾರದ (ಆದರೆ ವಿದ್ಯಾವಂತಿಕೆಯಿಂದ ಬರಬೇಕಾದ ತಾಳ್ಮೆ, ಸಂದರ್ಭಜ್ಞಾನ ಹಾಗೂ ವಾತ್ಸಲ್ಯಜನಕ ಮಾತು ಮತ್ತು ಧ್ವನಿ ಇಲ್ಲದ) ಆಕ್ರೋಶ ಮಾಡುವ ಮನುಷ್ಯನನ್ನು ಏನೆಂದು ಕರೆಯಬೇಕು? ವಿದ್ಯಾರ್ಥಿಗಳ ಅಪ್ಪ ಅಮ್ಮಂದಿರು ಉತ್ಕಟವಾಗಿ ಹೃದಯದಲ್ಲಿ ಅನುಭವಿಸಿದ ನೋವನ್ನು ಕಾಣದೆ ವಿದ್ಯಾರ್ಥಿಗಳು ಅಂಥ ಹಟದ ಅವಿನಯವನ್ನು ಪ್ರದರ್ಶಿಸಲು ಹೋದಾರೇನು? ಅವರಿಗೆ ಕೊಟ್ಟ ಉತ್ತರದಲ್ಲಿ (ಹಟದ ೯೦ ನಿಮಿಷಗಳ ಭಾಷಣದಲ್ಲಿ) ನೆಹರುಗಳು ಅವರಿಗಲ್ಲವಾದರೆ ಅವರ ಅಪ್ಪ ಅಮ್ಮಂದಿರಿಗಾದರೂ ಈ ದ್ವಿಭಾಷಾ ಮುಂಬಯಿಯಿಂದ ಹೇಗೆ ದೇಶಹಿತ ಸಾಧಿಸಲ್ಪಟ್ಟಿತೆಂಬುದನ್ನು ಅರ್ಥವತ್ತಾಗಿ ವಿವರಿಸಿದರೆ? ವಿದ್ಯಾರ್ಥಿಗಳು ಪಶುಗಳಾದವೆ ಅವರ ಅಪ್ಪ–ಅಮ್ಮಂದಿರೂ ಪಶುಗಳೇ! ಅವರನ್ನು ಪಶುಧರ್ಮ ಹಿಡಿಯು

(೧೦ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
೨. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ, ಮದ್ರಾಸ್—3.

ಪ್ರಪಂಚದಲ್ಲಿ ಅದರಲ್ಲಿಯೂ ನವಕರ್ನಾಟಕದಲ್ಲಿ ಇಂದು ಹೆಚ್ಚಾಗಿ ತುಟ್ಟಿಯಾಗಿರುವ ವಸ್ತುವೆಂದರೆ ವಿಚಾರಪೂರ್ವಕವಾದ ಪ್ರಾಮಾಣಿಕವಾದ ವಿಮರ್ಶೆ. ಇಂಥ ವಿಮರ್ಶೆಗೂ ವ್ಯವಹಾರಕ್ಕೂ ಎಣ್ಣೆ ಸೀಗೆ ಸಂಬಂಧ. ವ್ಯವಹಾರವೆಂಬುದು ಲಾಭ ಹಾನಿಯ ಮೇಲೆ ಕಣ್ಣಿಟ್ಟ ತಕ್ಕಡಿ. ತಿಳಿಯುವಂತೆ ಅದರ ಕಾಣಿ ಸರಿಯಾಗಿದ್ದರೆ ಸಾಕು. ಕಾಣದಂತೆ ಇರುವ ಕೈಚಳಕಕ್ಕೆ ಕಾಣೆಯೆನ್ನುವರೇನೋ! ವಿಮರ್ಶೆ ಎಂಬುದು ಲಾಭಹಾನಿಯನ್ನು ಲೆಕ್ಕಕ್ಕೆ ತಾರದ ತೂಗುಕೋಲು. ಅದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು. ಲಾಭವಾಗಬೇಕಾದರೆ ವಿಮರ್ಶೆ ವ್ಯವಹಾರದ ಬೆನ್ನುಹತ್ತಬೇಕು, ಅದರ ಪಾದಕ್ಕೆ ಬೀಳಬೇಕು. ಅಲ್ಲಿ ಹಣೆ ತಿಕ್ಕಬೇಕು, ನಾಲಿಗೆಯಿಂದ ನೆಕ್ಕಬೇಕು. ಇದಾಗದಿದ್ದರೆ ಮಣ್ಣು ಮುಕ್ಕಬೇಕು. ಇಂದಿನ ಎಲ್ಲ ಕಲೆ, ಅದರಲ್ಲಿಯೂ ಸಾಹಿತ್ಯ ಇಂಥ ಸುಳಿಯಲ್ಲಿ ಸಿಲುಕಿಕೊಂಡಿದೆ. ಜೀವನ ವಿಮರ್ಶೆಯಾದ ಕಲೆಯ ಗತಿ ಹೀಗಾದ ಮೇಲೆ ಕಲೆಯ ವಿಮರ್ಶೆ ಎಂಬುದೂ ಅದೇ ಹಾದಿ ಹಿಡಿದರೆ ಅಚ್ಚರಿಯಿಲ್ಲ.

ಈ ಸುಳಿಯಿಂದ ಬಿಡುಗಡೆ ಸಾಧ್ಯವಿದೆ, ಆದರೆ ಅದಕ್ಕೆ ದರ್ಶನ ಬೇಕು, ಸಾಧನೆ ಬೇಕು. ಮುಖ್ಯವಾಗಿ ತಾಳ್ಮೆಬೇಕು. ಇಂದು ಬೀಜನೆಟ್ಟು ನಾಳೆ ಹಣ್ಣು ಪಡೆಯಬೇಕೆಂಬ ಆತುರದಿಂದ ಕಾರ್ಯವಾಗದು. ಜನಜೀವನದ ಉತ್ಕರ್ಷವನ್ನು ಬಯಸುವವರು ನಾಲ್ಕೇ ಜನ ಇದ್ದರೂ ಚಿಂತೆಯಿಲ್ಲ ಒಳ್ಳೆಯ ವಿಮರ್ಶೆಯಲ್ಲಿ ಪರಿಣತರಾಗಬೇಕು, ಯಾರಿಂದ ಅದು ಬಂದರೂ ಅದಕ್ಕೆ ಸ್ವಾಗತ ನೀಡಬೇಕು. ಅದರಿಂದಾಗಬಹುದಾದ ವ್ಯಾವಹಾರಿಕ ಪರಿಣಾಮಗಳಿಂದ ಅವರು ಕದಡಬಾರದು, ಕೆರಳಬಾರದು. ಲಾಭಕ್ಕಾಗಿ ಬಾಯಿತೆರೆಯಬಾರದು, ಹಾಗಾಗಿ ಬಾಯಿ ಮುಚ್ಚಬಾರದು. ವಿಮರ್ಶೆಯ ಈ ದರ್ಶನ ಇಂದು ಬೆಳೆಯಬೇಕಾಗಿದೆ. ಎಲ್ಲ ಜೀವನಕ್ಕೆ, ಅದರಲ್ಲಿ ಒಂದು ಭಾಗವಾದ ಸಾಹಿತ್ಯಕ್ಕೆ ಈಪೊತ್ತು ಬೇಕಾಗಿರುವುದು ಪ್ರತ್ಯಕ್ಷ ವಿಮರ್ಶೆಗಿಂತ ವಿಮರ್ಶೆಯ ಒಂದು ದರ್ಶನ. ಈ ದರ್ಶನದಲ್ಲಿ ಪಳಗಿದಂತೆ ವಿಮರ್ಶೆಯ ಮೂಲವು ನಿಯಾಮವಲ್ಲ,

# ಅ ಭಿ ರು ಚಿ

ಸರಿಯಾದ ಅಭಿಪ್ರಾಯ ಮತ್ತು ವಿಮರ್ಶೆಯ ಕಟ್ಟಡಕ್ಕೆ ಸದಭಿರುಚಿಯೇ ಅಡಿಗಲ್ಲು—ಇದೇ ನಮ್ಮ ನಾಡಿನ ಕಲೆಯ ಭವಿಷ್ಯಕ್ಕೆ ಆಧಾರ.

ಬರೆದವರು: ಡಾ. ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ., ಪಿ. ಎಚ್‌ಡಿ.

ಅಭಿರುಚಿ ಅಥವಾ ಸಹೃದಯತೆ ಎಂದು ತಿಳಿಯುತ್ತದೆ. ಅಭಿರುಚಿ ಸ್ಥಿರವಾದಂತೆ, ಉನ್ನತವಾದಂತೆ ವಿಮರ್ಶೆ ವಿಚಾರಪೂರ್ಣವಾಗುತ್ತದೆ, ಪ್ರಾಮಾಣಿಕವಾಗುತ್ತದೆ. ಅಭಿರುಚಿಯನ್ನು ಬೆಳೆಸಿಕೊಂಡ ಜನಕ್ಕೆ ವಿಮರ್ಶೆಯನ್ನು ಹೇಗೆ ಮಾಡಬೇಕೆಂಬುವನ್ನು ಕಲಿಸುವ ಅಗತ್ಯವಿಲ್ಲ. ಅಭಿರುಚಿ ಎಂದರೇನು? ಸ್ವಲ್ಪದರಲ್ಲಿ, ಬೇಕು ಎಂದೆನಿಸುವುದಕ್ಕೆ ಬೇಕಾದ ಮನೋಭಾವವೇ ಅಭಿರುಚಿ. ಯಾವುದು ಬೇಕು ಎಂಬುವನ್ನು ಎಲ್ಲರ ವಿಷಯದಲ್ಲಿ ನಿರ್ಧಾರವಾಗಿ ಹೇಳಲುಬಾರದು. ಆಹಾರದ ವಿಷಯದಲ್ಲಿ ಸಾಮಾನ್ಯವಾಗಿ ಆರೋಗ್ಯವಂತನ ನಾಲಿಗೆ ಸರಿಯಾದ, ಹಿತವಾದ ಅನ್ನವು ಬೇಕೆಂದು ಬಯಸುತ್ತದೆ. ಹಾಗೇ ಸಾಹಿತ್ಯ ಕಲೆಗಳ ವಿಷಯದಲ್ಲಿಯೂ ಸುಂದರವಾದ, ಕಲಾಯುತವಾದ ಕೃತಿಗಳನ್ನು ಕಾಣಬೇಕು, ಮೆಚ್ಚಬೇಕು ಎಂದು ಸಂಸ್ಕಾರವಂತನ ಅಭಿರುಚಿ ಹಾರೈಸುತ್ತದೆ. ನಾಲಿಗೆಯ ರುಚಿಕೆಟ್ಟರೆ ದೇಹದಲ್ಲಿ ಅನಾರೋಗ್ಯ ಉಂಟಾಗಿದೆ ಎಂದು ತಿಳಿಯುತ್ತೇವೆ. ಅದರಂತೆ ಸೌಂದರ್ಯದ ಅಭಿರುಚಿ ಕೆಟ್ಟರೆ ಮನಸ್ಸಿನ ಅನಾರೋಗ್ಯ ಉಂಟಾಗಿದೆ ಎಂದು ತಿಳಿಯಬೇಕು. ಅಭಿರುಚಿ ನಾಗರಿಕ ಮನುಷ್ಯನ ಆರೋಗ್ಯ ಲಕ್ಷಣ. ಇಪ್ಪತ್ತನೆಯ ಶತಮಾನವು ಅತ್ಯಂತ ಸುಧಾರಣೆಯನ್ನು ಹೊಂದಿದ ಕಾಲವೆಂದು ಹೇಳುತ್ತೇವೆ. ನಾಗರಿಕತೆ ಇಂದು ಮುಂದರಿದಿದೆ ಎಂದೂ ಹೆಮ್ಮೆಯಿಂದ ಸಾರುತ್ತೇವೆ. ಆದರೆ ಅಭಿರುಚಿಯ ವಿಷಯದಲ್ಲಿ ನಾಗರಿಕರೆನ್ನುವವರೂ ಅನಾಗರಿಕರೆಂಬಂತೆ ತೋರುತ್ತಾರೆ ಎಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಇಂದಿನ ನಾಗರಿಕತೆ ತೋರಿಕೆಯದು, ಏಕಾಂಗಿಯಾದದ್ದು. ಆದರೆ ಅದಕ್ಕೆ ಸಂಸ್ಕೃತಿಯ ಸಮಗ್ರತೆ ಬಂದಿಲ್ಲ ಎಂದು ತಿಳಿಯಬಹುದು.

ಅಭಿರುಚಿ ಸಹಜವಾದರೂ ಅದನ್ನು ಬೆಳೆಸಬೇಕಾಗುತ್ತದೆ, ನೆಲೆಗೊಳಿಸಬೇಕಾಗುತ್ತದೆ. ವಿದ್ಯಾಭ್ಯಾಸದ ತೀರ ಮೊದಲಿನಿಂದ ಎಲ್ಲ ಹಂತಗಳಲ್ಲಿ ಅದಕ್ಕೆ ಯೋಗ್ಯ ದಿಸೆಯನ್ನು ತೋರಿಸಿ ಅಯೋಗ್ಯವಾದ ದಾರಿಗಳಲ್ಲಿ ಅದು ಹರಡದಂತೆ ನೋಡಿಕೊಳ್ಳಬೇಕಾಗುತ್ತದೆ. ಸೌಂದರ್ಯ ಮತ್ತು ಅದರಿಂದ ದೊರೆಯುವ ಆನಂದ ಇವುಗಳ ಸವಿ ಹತ್ತುವಂತೆ ಮನಸ್ಸನ್ನು ಬೆಳೆಸುವ ಕಾಲಕ್ಕೆ ಬೆಳೆಸಿದರೆ ಅಭಿರುಚಿಯ ಎಲ್ಲ ಸಮಸ್ಯೆಗಳು ಬಿಡುತ್ತವೆ, ಅಥವಾ ಸಮಸ್ಯೆಗಳೇ ಹುಟ್ಟಲಾರವು. ಕಲಾಕೃತಿಗಳ ವಿಮರ್ಶೆಗೆ ಬೆಳೆದ ಅಭಿರುಚಿ ಆವಶ್ಯ. ವಿಮರ್ಶೆ ಬರೀ ಶುಷ್ಕತಾಸ್ತ್ರವಲ್ಲ, ಅದು ಸಂವೇದನಕ್ಷಮವಾದ ಮನಸ್ಸಿನ ರಸಾನುಭೂತಿ ಮತ್ತು ಅದರ ಅಭಿವ್ಯಕ್ತಿ, ಇವೆರಡಕ್ಕೂ ಅಭಿರುಚಿ ಮೂಲ ಆಧಾರವಾಗಿದೆ.

ಅಭಿರುಚಿ ಬೆಳೆದ ಮೇಲೆಯೂ ಒಂದು ಸಮಸ್ಯೆ ಏಳುತ್ತದೆ. ಯಾವುದೇ ಒಂದು ಸುಂದರವಾದ ವಸ್ತು ಅಥವಾ ಕಲಾಕೃತಿಯ ಬಗ್ಗೆ ತಿಳಿದವರಲ್ಲಿ ಅಭಿಪ್ರಾಯಗಳು ಭಿನ್ನವಾದರೆ ಅದಕ್ಕೆ ಕಾರಣ ಹೇಳುವಾಗ 'ಭಿನ್ನರುಚಿರ್ಹಿ ಲೋಕ:' ಎಂಬ ಸಮಾಧಾನವನ್ನು ಕೆಲವರು ಹೇಳುತ್ತಾರೆ. ಅಭಿಪ್ರಾಯ ಭೇದಕ್ಕೆ ಅಭಿರುಚಿ ಭೇದವು ಕಾರಣವೆಂಬ ಗ್ರಹಿಕೆ ಹಬ್ಬುತ್ತದೆ. ವ್ಯವಹಾರದಲ್ಲಿ ವಾದವನ್ನು ಇತ್ಯರ್ಥಮಾಡಲಾಗದೆ ಅದನ್ನು ಮುಗಿಸಿಬಿಡುವುದಕ್ಕಾಗಿ ಕೈಕೊಳ್ಳುವ ಈ ತರ್ಕವು ಸಭ್ಯವಾಗಿರಬಹುದು. ಆದರೆ ಅದು ಯುಕ್ತವೆಂದು ಹೇಳಲಾಗದು, ಅದರಿಂದ ವಿಚಾರದ ಗೊಂದಲವು ಉಂಟಾಗುವ ಸಂಭವವಿರುತ್ತದೆ. ಅಭಿಪ್ರಾಯಭೇದಕ್ಕೆ ಅನೇಕ ಕ್ಷೇತ್ರಗಳಲ್ಲಿ ಅನೇಕ ಕಾರಣಗಳಿರುತ್ತವೆ. ಕಲೆಯ ಕ್ಷೇತ್ರದಲ್ಲಿ ಅಭಿಪ್ರಾಯ ಭೇದವು ಅಪರಿಪಕ್ವವಾದ ನಿರ್ಣಯ ಶಕ್ತಿಯ ಮೂಲಕ, ಪೂರ್ವ ಗ್ರಹಗಳ ಮೂಲಕ ಆಗಬಹುದು. ಒಮ್ಮೊಮ್ಮೆ ಪರಿಪಕ್ವ ಮತ್ತು ನಿರ್ಮಲವಾದ ಮನಸ್ಸಿನ ವಿಮರ್ಶಕರಲ್ಲಿ ಸಹ ಪ್ರಾಮಾಣಿಕ ಮತ ಭೇದಗಳು ತಲೆದೋರಬಹುದು. ಆದರೆ ಇವರೆಲ್ಲರಲ್ಲಿ ಸುಂದರವಾದ ಕೃತಿ ಸುಂದರವಾದದ್ದೇ ಎಂಬ ವಿಷಯದಲ್ಲಿ ಏಕವಾಕ್ಯತೆ ಇರುತ್ತದೆ, ಇರಬೇಕು. ಯಾಕೆ ಸುಂದರ, ಎಷ್ಟು ಸುಂದರ ಎಂಬ ಬಗ್ಗೆ ಮತ ಭೇದವಿರಬಹುದು. ಸುಂದರವೆಂದು ಒಬ್ಬರು ತಿಳಿದದ್ದನ್ನು ಇನ್ನೊಬ್ಬರು ಸುಂದರವಲ್ಲ ಎಂದು ತಿಳಿದು ಹೇಳತೊಡಗಿದರೆ ಯಾರಾದರೊಬ್ಬರ ಅಭಿಪ್ರಾಯದಲ್ಲಿ ದೋಷವಿರಬೇಕು. ಇಂಥ ಮತ ಭೇದವು ರುಚಿಭೇದದಿಂದ ಆಗಿದೆ ಎಂದು ಹೇಳುವುದರಲ್ಲಿ ವಿಚಾರದ ಗೊಂದಲವು ಕಾಣುತ್ತದೆ. ಸುಂದರವಾದ ವಸ್ತುಗಳಲ್ಲಿ ಯಾವುದು ತನಗೆ ಹೆಚ್ಚು ಸೇರುತ್ತದೆ ಎಂಬುದನ್ನು ಬೇರೆ ಬೇರೆಯವರು ಹೇಳಿದಾಗ ಭಿನ್ನರುಚಿಯ ಕಾರಣಕೊಡಬಹುದು, ಆದರೆ ಸುಂದರವೆಂದು ಒಬ್ಬರು, ಸುಂದರವಲ್ಲವೆಂದು ಇನ್ನೊಬ್ಬರು ವಾದಿಸಿದರೆ ಈ ಅಭಿಪ್ರಾಯ ಭೇದವು ಯಾರಾದರೊಬ್ಬರ ಅಪಕ್ವ ವಿಚಾರ ಶಕ್ತಿಯನ್ನು ಸೂಚಿಸುತ್ತದೆಯೇ ಹೊರತು ಅಭಿರುಚಿ ಭೇದವನ್ನಲ್ಲ. ಅಭಿರುಚಿಯನ್ನು ಸರಿಯಾಗಿ ಅರಿತುಕೊಳ್ಳಬೇಕು, ಬೆಳೆಸಿಕೊಳ್ಳಬೇಕು ಸರಿಯಾದ ಅಭಿಪ್ರಾಯಗಳ ಕಟ್ಟಡಕ್ಕೆ ಅಭಿರುಚಿ ಆಧಾರವಾಗಿರುತ್ತದೆ. ಸರಿಯಾದ ಅಭಿಪ್ರಾಯಗಳ ವೈಯಕ್ತಿಕ ಮತ್ತು ಸಾಮೂಹಿಕ ಸಾಮರ್ಥ್ಯದ ಮೇಳೆ ನಮ್ಮ ನಾಡಿನ ಕಲೆಯ ಭವಿತವ್ಯವು ಅವಲಂಬಿಸಿರುತ್ತದೆ.

---

## ಸ್ವರಾಜ್ಯದ ಒಂದು ಅಂಶ.

ನಮ್ಮ ಮೇಲೆ ಅನ್ಯಾಯವಾಗಬಾರದು, ಇದು ಸ್ವರಾಜ್ಯದ ಒಂದು ಅಂಶ; ನಮ್ಮಿಂದ ಅನ್ಯರ ಮೇಲೆ ಅನ್ಯಾಯ ನಡೆಯಬಾರದು, ಇದು ಸ್ವರಾಜ್ಯದ ಇನ್ನೊಂದು ಅಂಶ.

—ವಿನೋಬಾ.


ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲ ಔಷಧಿ ರೂ. ೪-೧-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

### ನಮ್ಮ ಕರಾವಳಿ

ಹೊಸ ರಾಜ್ಯದ ಶುಭೋದಯದ ದಿನ ನಮ್ಮ ದೃಷ್ಟಿ ವರ್ತಮಾನದಲ್ಲೇ ಮಗ್ನವಾಗಿರುವುದು ಸಹಜವಾದರೂ, ರಾಜ್ಯ ಪುನರ್ವಿಭಜನೆಯ ತತ್ತ್ವ ಮತ್ತು ಉದ್ದೇಶವನ್ನು ಜ್ಞಾಪಿಸಿಕೊಂಡರೆ ನಾವು ನಮ್ಮ ಮುಂದಿನ ಭವಿಷ್ಯದ ಕುರಿತು ಯೋಚನಾಮಗ್ನರಾಗುವುದು ಅಷ್ಟೇ ಸಹಜವೆಂದು ತೋರುತ್ತದೆ. ರಾಜ್ಯಗಳ ಪುನರ್ವಿಭಜನೆಯು ಕೇವಲ ಆಡಳಿತದ ಸೌಕರ್ಯದ ಪ್ರಶ್ನೆ ಮಾತ್ರವಲ್ಲ, ಭಾರತದಲ್ಲಿ ಪ್ರಜಾಪ್ರಭುತ್ವದ ಭದ್ರತೆಯ ಪ್ರಶ್ನೆ ಎಂದು ನಂಬಿದವರಲ್ಲಿ ನಾನೊಬ್ಬ. ಮೈಸೂರು ರಾಜ್ಯದ ಎರಡು ಕೋಟಿ ಜನತೆ ಆಡಳಿತೆಯ ವಿವರಗಳನ್ನು ದೇಶಭಾಷೆಯಲ್ಲೇ ತಿಳಿಯುಕೊಂಡು, ಶಾಸನಸಭೆಯು ಜನಸಮುದಾಯದ ಅಭಿಪ್ರಾಯ ಮಂಡನದ ಪ್ರಮುಖ ಕ್ಷೇತ್ರವಾದಲ್ಲಿ ಭಾರತದ ಒಂದು ಭಾಗದಲ್ಲಿ ಪ್ರಜಾಪ್ರಭುತ್ವವು ಸ್ಥಿರವಾಯಿತೆಂದು ನಾವು ತಿಳಿಯಬೇಕು. ಅದೇ ರೀತಿ ಎರಡು ಕೋಟಿ ಜನತೆಯಲ್ಲಿ ಕೆಲವೊಂದು ಸಾವಿರ ಜನರನ್ನು ಬಿಟ್ಟರೆ ಉಳಿದವರೆಲ್ಲ ದಾರಿದ್ರ್ಯವನ್ನನುಭವಿಸುತ್ತಿರುವಾಗ, ಈ ದಾರಿದ್ರ್ಯನಿವಾರಣೆಯ ಪ್ರಯತ್ನವೂ ಪ್ರಜಾಪ್ರಭುತ್ವವನ್ನು ನಾಡಿನಲ್ಲಿ ಚಿರವಾಗಿ ನೆಲೆನಿಲಿಸುವ ಪ್ರಯತ್ನವೆಂಬುದಾಗಿ ನಾವು ತಿಳಿಯಬೇಕು. ಕನ್ನಡ ಪ್ರಜೆಗಳ ಸಂಪತ್ಸಮೃದ್ಧಿಯ ಪ್ರಯತ್ನಕ್ಕೆ ಮೈಸೂರು ರಾಜ್ಯದ ಕರಾವಳಿಯು ನೀಡಬಹುದಾದ ಕೊಡುಗೆಯ ಕುರಿತು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗುವುದು.

ಟಿಪ್ಪುವಿನ ತರುವಾಯ ಮೈಸೂರು ರಾಜ್ಯಕ್ಕೆ ಕರಾವಳಿ ಇರಲಿಲ್ಲ. ಈಗ ೧೫೦ ವರ್ಷಗಳ ಅನಂತರ ರಾಜ್ಯವು ತನ್ನ ಮೈಯನ್ನು ಅರಬಿಸಮುದ್ರಕ್ಕೆ ಒಡ್ಡಿನಿಲ್ಲುವ ಸುಮುಹೂರ್ತ ಬಂದಿದೆ. ೧೫೦ ಮೈಲುಗಳಷ್ಟು ಉದ್ದದ ಕರಾವಳಿಯು ಸಸ್ಯಸಂಪತ್ತಿನಿಂದ ತುಂಬಿತುಳುಕಾಡುತ್ತಿದೆ. ಗಟ್ಟದ ಸೆರಗಿನಲ್ಲಿ ದಟ್ಟವಾಗಿ ಕವಿದ ಅರಣ್ಯಗಳು, ಅವುಗಳ ನಡುವೆ ಹರಿಯುವ ತೊರೆಗಳು, ಜಲಪಾತಗಳು, ಕರಾವಳಿಯ ತೆಂಗಿನ ತೋಟಗಳು, ಭತ್ತದ ಗದ್ದೆಗಳು, ಕಡಲಿನ ಮತ್ಸ್ಯಸಂಪತ್ತು, ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು, ಈ ನಾಲ್ಕು ಮುಖ್ಯ ರೇವುಗಳು, ಮೈಸೂರು ರಾಜ್ಯಕ್ಕೆ ಸೇರಲಿವೆ. ಇವು ಮೈಸೂರಿನ ಆರ್ಥಿಕ ಭದ್ರತೆಗೂ, ಆರೋಗ್ಯಕ್ಕೂ ಕಳಹದಿಯಾಗಬಲ್ಲವೆಂದು ಸ್ಪಷ್ಟಪಡಿಸುವುದು ಈ ಲೇಖನದ ಉದ್ದೇಶ.

### ಅರಣ್ಯ ಸಂಪತ್ತು

ಹೇರಳವಾದ ಮಳೆಯಿಂದ ಬೆಳೆಯುತ್ತಿರುವ ಹುಲುಸಾದ ಅರಣ್ಯ ಪ್ರದೇಶದಲ್ಲಿ ನಾನಾ ಬಗೆಯ ವೃಕ್ಷಗಳಿವೆ. ಬಿದಿರಿನ ಮೆಳೆಗಳಿಗೆ ಈ ಭಾಗವು ಪ್ರಸಿದ್ಧವಾದುದು. ಗಟ್ಟಿ ಜಾತಿಯ ಮರಗಳಿಂದ ಕಟ್ಟೋಣದ ಕೆಲಸವು ಸುಗಮವಾದರೆ, ಕೆಲವೊಂದು ಮರಗಳನ್ನು ಹದಮಾಡಿ ಅನೇಕ ತರದ ಔದ್ಯಮಿಕ ಪ್ರಯೋಜನಗಳನ್ನು ಪಡೆಯಬಹುದು. ಮಿದುವಾದ ಮರಗಳನ್ನು ಈಗ ಏಮ್ಕೋ ಕಂಪೆನಿಯವರು ಬೆಂಕಿಪೆಟ್ಟಿಗೆ ಮಾಡಲು ಒಯ್ಯುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ

# ಮೈಸೂರಿನ ಕರಾವಳಿಯ ಸಂಪತ್ತು

ನೂರೈವತ್ತು ಮೈಲು ಉದ್ದದ ನಮ್ಮ ಕರಾವಳಿಯ ಸಂಪತ್ತನ್ನು ಅಷ್ಟೇ, ಇಷ್ಟೇ ಎಂದು ವರ್ಣಿಸಿ ಮುಗಿಸುವಂತಿಲ್ಲ. ಆದರೇನು ಫಲ? ಜವಾಬ್ದಾರಿ ಸ್ಥಾನದಲ್ಲಿರುವ ಮುಂದಾಳುಗಳಲ್ಲಿ ವಿವೇಕ ದಾರಿದ್ರ್ಯವಿರುವುದು ನಮ್ಮ ದುರ್ದೈವ!

ಬರೆದವರು: ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ನೂರರಲ್ಲೆಂಭತ್ತರಷ್ಟು ಪ್ರದೇಶವು ಅರಣ್ಯಗಳಿಂದಲೇ ತುಂಬಿದೆ. ಕರಾವಳಿಯಲ್ಲಿ ನಾಲ್ಕು ಕಾಗದದ ಕಾರ್ಖಾನೆಗಳನ್ನು ತೆರೆಯಲು ಅವಕಾಶವುಂಟೆಂಬುದನ್ನು ತಜ್ಞರು ತಿಳಿಸಿದ್ದಾರೆ. ಜೋಗ ಮತ್ತು ಹೊನ್ನೆಮರಡು ಯೋಜನೆಗಳಿಂದ ಕರಾವಳಿಯ ಎಲ್ಲ ಬಗೆಯ ಉದ್ಯಮಗಳಿಗೂ ಬೇಕಾಗುವಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಳ್ಳಬಹುದು. ಬೆತ್ತಗಳಿಂದ ಬುಟ್ಟಿ ಹೆಣೆಯುವ, ಕತ್ತದಿಂದ ಹಗ್ಗ ಮಾಡುವ, ಬೆಂಕಿಪೆಟ್ಟಿಗೆಯ ಕಡ್ಡಿಗಳನ್ನು ಸೀಳುವ ಉದ್ಯಮವನ್ನು ವಿಕೇಂದ್ರಿತವಾಗಿ ನಡೆಸಿದರೆ ಸಾವಿರಾರು ಜನಕ್ಕೆ ಉದ್ಯೋಗವನ್ನು ಒದಗಿಸಲಾಗುತ್ತದೆ.

### ಸಸ್ಯಸಂಪತ್ತು

ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೩ ಲಕ್ಷ ಎಕರೆ ಜಮೀನಿನಲ್ಲಿ ಕೃಷಿ ನಡೆಯುತ್ತಿದೆ. ದಕ್ಷಿಣ ಕನ್ನಡದಲ್ಲಿ ಈ ಸಂಖ್ಯೆ ಸುಮಾರು ೬ ಲಕ್ಷದಷ್ಟಾಗುತ್ತದೆ. ದಕ್ಷಿಣ ಕನ್ನಡದಲ್ಲಿ ಗೇರು ಬೀಜದ ವ್ಯವಸಾಯವು ಪ್ರಮಾಣದಲ್ಲಿ ನಡೆಯುತ್ತಿದ್ದು ಈ ಕೃಷಿಯನ್ನು ಯೋಜನಾತ್ಮಕವಾಗಿ ನಡೆಸಿದರೆ ಇನ್ನಷ್ಟು ಅಭಿವೃದ್ಧಿಯ ನಡೆಯುವುದರಲ್ಲಿ ಸಂದೇಹವಿಲ್ಲ. ಬೆಳೆ ಬಾಳುವ ಒಳ್ಳೆಯ ಮೆಣಸು, ಅಡಿಕೆ, ಕೊಬರಿ ಕೂಡಾ ಕರಾವಳಿಯ ಸಂಪತ್ತಿಗೆ ಕಾರಣವಾಗಿರುವುದನ್ನು ನಾವು ಗಮನಿಸಬೇಕು.

### ಮತ್ಸ್ಯ ಸಂಪತ್ತು

ಮೈಸೂರು ರಾಜ್ಯಕ್ಕೆ ಆಹಾರಾಭಾವ ಬರುವ ಕಾರಣವೇ ಇಲ್ಲ; ಅಂದರೆ ಒಂದು ಶರ್ತದ ಮೇಲಿಂದ. ಅದೇನೆಂದರೆ ಕಡಲಿನ ಸಂಪತ್ತನ್ನು ನಾವು ವೃದ್ಧಿಗೊಳಿಸಬೇಕು. ಜನಕೋಟಿಯಲ್ಲಿ ನೂರಕ್ಕೆ ೯೫ರಷ್ಟು ಮಂದಿ ಮತ್ಸ್ಯಾಹಾರಿಗಳಿರುವುದರಿಂದ ಗಿರಾಕಿಗೆ ಕೊರತೆ ಬೀಳುವ ಕಾರಣವೇ ಇಲ್ಲ. ಆದರೂ ಆಶ್ಚರ್ಯದ ವಿಷಯವೇನೆಂದರೆ ೧೫೦ ಮೈಲು ಕರಾವಳಿಯಲ್ಲಿ ನಾವು ಹಿಡಿಯುವ ಮೀನಿನಲ್ಲಿ ಬಹಳ ಸ್ವಲ್ಪ ಮಾತ್ರ ಘಟ್ಟದ ಮೇಲೆ ಪಯಣ ಬೆಳೆಸುತ್ತದೆ. ಮೀನು ಹಳಸದಂತೆ ರಕ್ಷಿಸುವ ಶೈತ್ಯೋಪಚಾರದ ಮೋಟರುಗಳೂ, ಆ ಮೋಟರುಗಳು ಹೋಗಬಲ್ಲ ಕಣಿವೆ ಹೆದ್ದಾರಿಗಳೂ, ಏರ್ಪಾಟಾದಲ್ಲಿ ಇಡೀ ಮೈಸೂರಿನ ಪೇಟೆ ಕರಾವಳಿಯ ಮೀನಿಗೆ ದೊರೆಯುವ ಸಂಭವವಿದೆ. ಯಾವ ಕಾಲಕ್ಕೂ ಧಾನ್ಯಗಳ ಅಭಾವವನ್ನು ಕಡಲು ತುಂಬಿ ಕೊಡಬಲ್ಲುದೆಂಬುದನ್ನು ನಾವು ಮರೆಯಬಾರದು. ಆದರೆ ನಮ್ಮ ಮೀನುಗಾರಿಕೆಯ ತಂತ್ರದಲ್ಲಿ ಸುಧಾರಣೆ ಜರಗಬೇಕಾಗಿದೆ, ಯಂತ್ರಗಳಿಂದ ನಡೆಯುವ ದೋಣಿಗಳಿಂದ ದೂರದ ಕಡಲಿಗೆ ಹೋಗಿ ಮೀನು ತರುವುದು ಸಾಧ್ಯವಾಗುವುದು. ಅಲ್ಲದೆ ಯುನೈಟೆಡ್ ನೇಶನ್ಸ್ ತಜ್ಞರು ಮಲಬಾರಿನಿಂದ ಮಲ್ಪೆಯ ವರೆಗೆ ಕರಾವಳಿಯಿಂದ ಐದು ಮೈಲು ದೂರದಲ್ಲಿ ಮೀನಿನ ಭಾರೀ ದೊಡ್ಡ ಸಂಗ್ರಹವಿದೆ ಎಂದು ಶೋಧನೆ ಮಾಡಿದ್ದಾರೆ. ಈ ಸಂಗ್ರಹವನ್ನು ನಾವು ಇದು ವರೆಗೆ ಅರಿತದ್ದೇ ಇಲ್ಲ ಎಂದಿಟ್ಟುಕೊಂಡರೆ ಈಗ ದೊರೆತ ಮೀನಿಗಿಂತ ಹತ್ತುಪಾಲು ಮೀನನ್ನು ಹಿಡಿಯಲು ಶಕ್ಯವಿದೆ. ಮತ್ಸ್ಯವ್ಯವಸಾಯದ ಬಗ್ಗೆ ಕೂಡಲೆ ಮೈಸೂರು ಸರಕಾರ ಒಂದು ಯೋಜನೆಯನ್ನು ಸಿದ್ಧಗೊಳಿಸಿ ಈ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲದೊಳಗೇ ಕಾರ್ಯ ಪ್ರವೃತ್ತವಾಗಬೇಕೆಂದು ಸೂಚನೆ.

### ರೇವಿನ ಸಂಪತ್ತು

ಕಾರವಾರ, ಮಂಗಳೂರು, ಭಟ್ಕಳ, ಮಲ್ಪೆ — ಈ ನಾಲ್ಕರಲ್ಲಿ ತಜ್ಞರ ಸಮಿತಿ ಮಲ್ಪೆಯನ್ನು ಆರಿಸಿ ಈಗ ಐದು ವರ್ಷಗಳಾದುವು. ಮರ್ಮಗೋವೆಯಿಂದ ಕೊಚ್ಚಿಯ ನಡುವೆ ಒಂದು ಸರ್ವಋತು ಹಿರಿಬಂದರದ ಆವಶ್ಯಕತೆಯನ್ನು ಇಂಡಿಯಾ ಸರಕಾರದ 'ಪಡುಕರಾವಳಿ ಹಿರಿ ಬಂದರ ಸಮಿತಿ'ಯವರು ಒತ್ತಿ ಹೇಳಿದ್ದಾರೆ. ಎಲ್ಲ ಬಗೆಯ ತಾಂತ್ರಿಕ ಮತ್ತು ಆರ್ಥಿಕ ಅನುಕೂಲ್ಯಗಳು ಮಲ್ಪೆಯನ್ನೇ ಆರಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಪಡಿಸುವ ಭಾರ ನವಮೈಸೂರಿನ ಶಾಸಕರ ಮೇಲಿದೆ. ಈ ವಿಷಯದಲ್ಲಿ ಮಂಗಳೂರು—ಮಲ್ಪೆ ಎಂಬ ಸಂದಿಗ್ಧತೆಯು ಅಳಿದು ಮಲ್ಪೆಯ ಹಿಂದೆ ಮೈಸೂರಿನ ೨೦೦ ಶಾಸಕರೂ, ಅವರ ಹಿಂದೆ ಎರಡು ಕೋಟಿ ಜನತೆಯ ಸದಾಶಯ ಮತ್ತು ಹಿತಗಳೂ ಇರುವುದೆಂಬುದನ್ನು ಕೇಂದ್ರವು ಮನಗಂಡರೆ ಈ ವರೆಗೆ ದಿಲ್ಲಿಯಲ್ಲಿಯೂ ಪೂನೆಯಲ್ಲಿಯೂ ನಡೆಯುತ್ತಿದ್ದ ಸಂಶೋಧನೆಯ ಆಟಗಳು ನಿಂತು ಹೋಗಿ ಮೈಸೂರಿಗೆ ಭಾರತದಲ್ಲೇ ಅತಿ ಸುರಕ್ಷಿತವಾದ ಮಹಾ ಬಂದರವೊಂದು ನಿರ್ಮಾಣಗೊಳ್ಳುವ ಸುದಿನವು ಬಂದೀತೆಂದು ನಾವು ನಂಬಬಹುದು. ಈ ರೇವಿನ ಪ್ರಯೋಜನವು ಮಲ್ಪೆ ಮತ್ತು ಮಂಗಳೂರವರಿಗೆ ಮಾತ್ರವೇ ಅಲ್ಲವೆಂದೂ, ಇದರಿಂದ ಕರ್ನಾಟಕದ ಸಂಪದಭಿವೃದ್ಧಿಯ ಮಹಾದ್ವಾರವೊಂದು ತೆರೆಯಲಿರುವುದೆಂದೂ ಮೈಸೂರಿನ ಶಾಸಕರು ತಿಳಿಯುವ ಅಗತ್ಯವಿದೆ. ರೇವು ಆರ್ಥಿಕ ಮಂಡಲದ ಕೇಂದ್ರದಲ್ಲಿ ನಿಂತು ರೇವಿನ ಸುತ್ತಮುತ್ತಲೂ ಉದ್ಯಮಗಳು ಬೆಳೆದು, ರೇವಿಗೂ ಹಿನ್ನಾಡಿಗೂ ಸಂಪರ್ಕವು ಅತಿಶಯವಾಗಿ, ಲಕ್ಷಾಂತರ ಜನಕ್ಕೆ ಉದ್ಯೋಗ ಕಲ್ಪನೆಯಾಗುವ ದಿನ ಕರ್ನಾಟಕದ ನಿಜವಾದ ಶುಭೋದಯವಾದೀತು.

### ವಿವೇಕದ ದಾರಿದ್ರ್ಯ

ಇಷ್ಟೆಲ್ಲ ನಿಸರ್ಗ ಸಂಪತ್ತಿದ್ದೂ ಆರ್ಥಿಕ ವಿಷಯದ ಜ್ಞಾನ ದಾರಿದ್ರ್ಯವೂ, ಜವಾಬ್ದಾರಿ ಸ್ಥಾನಗಳಲ್ಲಿರುವವರಲ್ಲಿ ವಿವೇಕ ದಾರಿದ್ರ್ಯವೂ ನಿರ್ಮೂಲವಾಗದೆ ಆರ್ಥಿಕ ಪ್ರಗತಿಯು ಸಾಧ್ಯವಿಲ್ಲವೆಂಬುದು ಸ್ವತಃ ಸಿದ್ಧ. ನಮಗಿಂದು ಬೇಕಾಗಿರುವುದು ರಾಜಕೀಯಸ್ಥ ಮುಂದಾಳುಗಳಲ್ಲಿ, ರಾಷ್ಟ್ರೀಕ ಬುದ್ಧಿಯ, ನಿಷ್ಪಕ್ಷಪಾತ ದೃಷ್ಟಿಯ, ವಿಶಾಲ ಮನೋಭಾವನೆಯ ನಾಯಕರು. ಇಂಥ ವಿವೇಕಿಗಳ ಯಾಜಕತ್ವದಲ್ಲಿ ರಾಜ್ಯ ನಡೆದರೆ ಅದು ಮುಂದೆ ನಡೆಯುತ್ತದೆ; ಈ ಗುಣವಿಲ್ಲದ ಕ್ಷುದ್ರ ಮನೋವೃತ್ತಿಯ ಜನರ ಕೈಯಲ್ಲಿ ಸಿಕ್ಕಿದರೆ ಎಲ್ಲ ರಾಜ್ಯಗಳಿಗಿಂತ ಹಿಂದೆಬೀಳುವ ದುರ್ಭಾಗ್ಯ ನಮಗೊದಗುತ್ತದೆ. ಇದ್ದುದನ್ನು ಸರಿಯಾಗಿ ಬಳಸಿಕೊಳ್ಳುವ ಸದಭಿಪ್ರಾಯವನ್ನು (Common Sense) ದೇವರು ನಮಗೆ ದಯಪಾಲಿಸಲೆಂದು ಈ ದಿನ ನಾವು ಪ್ರಾರ್ಥಿಸೋಣ.


IT IS OUR ARDENT PRAYER

THAT THE MERGER OF OUR DISTRICT IN THE ENLARGED MYSORE STATE MAY OPEN UP A NEW ERA OF PROSPERITY AND PROGRESS FOR ONE & ALL.

THE PANGAL NAYAK BANK LTD.,

ESTD : 1920

HEAD OFFICE: UDIPI, S. I.





# ಕನ್ನಡಿಗರಿಗಾದ ಅನ್ಯಾಯ

**ಕಾಸರಗೋಡನ್ನು ಕೇರಳಕ್ಕಿತ್ತ, ಕರ್ನಾಟಕಕ್ಕೆ ಮೈಸೂರೆಂಬ ಹೆಸರುಕೊಟ್ಟ ಸರಕಾರವು ಪ್ರಜೆಗಳ ಇಚ್ಛೆಯಂತೆ ನಡೆದಿಲ್ಲ–ಪ್ರಜಾಸತ್ತೆಯ ಪರಂಪರೆಗೆ ಇದು ದೊಡ್ಡ ಪೆಟ್ಟು.**

**ಬರೆದವರು: ಶ್ರೀ ಸೇವ ನೇಮಿರಾಜ ಮಲ್ಲ, ಎಂ.ಎ.,ಬಿ.ಎಲ್.**

೧೭೯೯ರಲ್ಲಿ ಟಿಪ್ಪುಸುಲ್ತಾನನಿಂದ ನಮ್ಮ ಜಿಲ್ಲೆ ಬ್ರಿಟಿಷರ ಆಡಳಿತಕ್ಕೆ ಬಂದಿತ್ತು. ಈಗ ಪುನಃ ಮೈಸೂರಿನೊಡನೆ ಅದು ಒಂದಾಗಲು ಒಂದೂವರೆ ಶತಮಾನದ ಅವಧಿ ಬೇಕಾಯಿತು. ಈ ಮಧ್ಯೆ ಎಲ್ಲಾ ನದಿಗಳಲ್ಲೂ ಎಷ್ಟೋ ನೀರು ಹರಿದು ಹೋಗಿದೆ. ತಮಿಳುನಾಡಿನ ಪಾಲಾಗಿದ್ದ ತುಳುನಾಡು ಪುನಃ ಅಚ್ಚ ಕನ್ನಡ ನಾಡಿನೊಡನೆ ಕೂಡಿಕೊಳ್ಳುತ್ತದೆ. ಇಷ್ಟು ದೀರ್ಘ ಅವಧಿಯ ಪರಭಾಷಾ ಆಡಳಿತೆಯಿಂದಾಗಿ ಎರಡುಲಕ್ಷ ಕನ್ನಡಿಗರಿರುವ ಒಂದು ತಾಲೂಕೂ ನಮ್ಮ ಜಿಲ್ಲೆಯಿಂದ ಹರಿದು ಹೋಗುತ್ತಿದೆ. ಈ ಪರ್ವ ದಿನದ ಸಂತೋಷಕ್ಕೆ ಇದೊಂದು ಕಲಂಕಪ್ರಾಯವಾಗಿದೆ.

ಪ್ರಜಾಸತ್ತೆಯಲ್ಲಿ ಯಾವ ತೀರ್ಮಾನವೂ ಕೊನೆಯದ್ದಲ್ಲ ಎನ್ನಲಾಗುತ್ತದೆ. ಅಂದರೆ ಪ್ರಜೆಗಳು ಯಾವ ತೀರ್ಮಾನವನ್ನೂ ತಾವು ಇಚ್ಛಿಸಿದಂತೆ ಬದಲಿಸಬಹುದು ಎಂಬ ಅರ್ಥದಲ್ಲಿ ಈ ಮಾತಿಗೆ ಬೆಲೆಯಿದೆ. ಆದರೆ ಪ್ರಜಾಸತ್ತೆಯಲ್ಲಿ ಪ್ರಜೆಗಳಿಗೆ ಸರ್ಕಾರದ ತೀರ್ಮಾನವನ್ನು ಬದಲಿಸುವ ಸ್ವಾತಂತ್ರ್ಯ ಎಷ್ಟಿದೆಯೋ, ಅದಕ್ಕಿಂತಲೂ ಹೆಚ್ಚು ಅದನ್ನು ಬದಲಿಸಲಾಗದ ಅಸ್ವಾತಂತ್ರ್ಯವೂ ಇದೆ ಎಂಬುದು ಕಾಸರಗೋಡಿನ ವಿಷಯದಲ್ಲಾದರೂ ನಮಗೆ ಮನದಟ್ಟಾಗದಿರದು. ಆದರೆ ವಿಷಯದಲ್ಲಿ ಆದ ಅನ್ಯಾಯದ ತೀರ್ಮಾನವನ್ನು ಬದಲಿಸುವ ವ್ಯಾವಹಾರಿಕ ವಿಧಾನವನ್ನು ಈತನಕ ಯಾರೂ ಕಂಡುಹಿಡಿದಿಲ್ಲ. ಮತ್ತೇನೋ ಮಾತಿಗಾಗಿ ಲೋಕಸಭೆಯಲ್ಲಿ ಒಂದು ತಿದ್ದುಪಡಿ ಮಸೂದೆ ಬಂದರೆ ಸಾಕು, ಎಲ್ಲ ಆಗಿಹೋಗುತ್ತದೆಂಬ ಒಣ ತರ್ಕಕ್ಕೆ ಯಾರೂ ಉತ್ತರಿಸುವಂತಿಲ್ಲ.

ಕಾಸರಗೋಡು ಭೌಗೋಲಿಕವಾಗಿ ಇನ್ನೂ ಭಾರತದಲ್ಲಿಯೇ ಭೂಮಿಯ ಭಾಗವಾಗಿ ಉಳಿದಿದೆ ಎಂದು ಸಂತೋಷಪಡುವವರೂ ಇರಬಹುದು. ಆದರೆ ಈಗ ದುಸ್ತರ ಪ್ರಸಂಗಕ್ಕೆ ಬಿದ್ದುದು ಕಾಸರಗೋಡಿನ ಕನ್ನಡ ಭಾಷೆ. ಅಂದರೆ ಕನ್ನಡವನ್ನು ಆದಿಪೂರ್ವದಿಂದ ಆಡುತ್ತಲಿರುವ ಎರಡು ಲಕ್ಷ ನಾಲಿಗೆಗಳು. ಕಾಸರಗೋಡು ಕೇರಳಕ್ಕೆ ಸೇರಬೇಕೆಂದು ಆದ ತೀರ್ಮಾನ ಪ್ರಜಾಸತ್ತಾತ್ಮಕವಾಗಿರಬಹುದಾದರೂ, ಈ ಎರಡು ಲಕ್ಷ ಕನ್ನಡದ ನಾಲಿಗೆಗಳನ್ನು ಮಲೆಯಾಳಕ್ಕೆ ಒಮ್ಮಿಂದೊಮ್ಮೆಲೇ ಬದಲಿಸಬೇಕೆಂಬ ತೀರ್ಮಾನ ಎಂದಿಗೂ ಪ್ರಜಾಸತ್ತಾತ್ಮಕವಾಗಿರಲಾರದು.

ಈ ಒಂದು ವರ್ಷದಲ್ಲಿ, ಕಾಸರಗೋಡಿನ ಭವಿತವ್ಯದ ಊಹಾಪೋಹದ ಸುದ್ದಿ ತಿಳಿದಂದಿನಿಂದ ಕಾಸರಗೋಡಿನ ಕನ್ನಡಿಗರು ಅತ್ಯಂತ ಮಾನಸಿಕ ವ್ಯಥೆಗೊಳಗಾಗಿದ್ದರು. ತಮ್ಮ ನೆಲ ಕನ್ನಡಕ್ಕೆ ಸೇರಿದುದೆಂದು ಮುಕ್ತಕಂಠವಾಗಿ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಿದರು. ಎರಡು ಕನ್ನಡ ಪತ್ರಿಕೆಗಳನ್ನು ಆರಂಭಿಸಿದರು. ಹತ್ತಾರು ಹೊತ್ತಗೆಗಳನ್ನು ಪ್ರಕಟಿಸಿದರು. ಸಿಕ್ಕ ಸಿಕ್ಕ ಅಧಿಕಾರಿಗಳಿಗೆ ತಂತಿ ಕಳಿಸಿದರು, ಮನವಿಗಳನ್ನರ್ಪಿಸಿದರು. ಶಾಸನಭಂಗ ಚಳವಳಿ ಹೂಡಿದರು. ದೆಹಲಿಯ ಕೇಂದ್ರ ಮಂತ್ರಿ ಸಂಪುಟಕ್ಕೆ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಲು ನಾಯಕರ ಶಿಷ್ಟಮಂಡಲಗಳನ್ನು ಕಳಿಸಲು ಸಾವಿರಾರು ರೂಪಾಯಿ ವೆಚ್ಚಮಾಡಿದರು. ಆದರೆ ಇವೆಲ್ಲ ನೀರಿನ ಮೇಲಿಟ್ಟ ಹೋಮದಂತಾಗಿ ಅನಿವಾರ್ಯವು ಅವರನ್ನು ಕರಾಳ ರೂಪದಲ್ಲಿ ಎದುರಿಸಿದೆ. ಈ ಸಮಸ್ಯೆ ಅಷ್ಟು ಗಂಭೀರವಾದುದರಿಂದಲೇ ಅಲ್ಲಿನ ಜನರು ಅಷ್ಟು ಕಷ್ಟ–ನಷ್ಟಗಳನ್ನು ಮಾಡಿಯಾದರೂ ತಾವು ಅಭೂತಪೂರ್ವದಿಂದ ಒಂದಾಗಿದ್ದ ನಾಡಿನೊಡನೆ ಮುಂದಿನ ಸಂಪರ್ಕವನ್ನು ಹೇಗಾದರೂ ಇಟ್ಟುಕೊಳ್ಳಬೇಕೆಂದು ಸೆಣಸಿದರು.

ಹಿಂದೆ ಜಾತೀಯ ಅಲ್ಪಸಂಖ್ಯಾಕರ ಪ್ರಶ್ನೆ ಇತ್ತು. ಪಾಕಿಸ್ತಾನ ನಿರ್ಮಾಣವಾದೊಡನೆ ಆ ಸಮಸ್ಯೆ ಹೇಗೂ ಪರಿಹಾರವಾಯಿತು. ಈಗ ಭಾಷೆಯ ಅಲ್ಪಸಂಖ್ಯಾಕರ ಪ್ರಶ್ನೆಯ ಪರಿಹಾರಕ್ಕೆ ಕೇಂದ್ರ ಸರ್ಕಾರವು ಶಾಸನದಲ್ಲಿ ಅವಕಾಶವನ್ನೇನೋ ಒದಗಿಸಿದೆ. ಆದರೆ ರಾಜ್ಯಗಳು ಈ ಶಾಸನವನ್ನು ತಮಗೆ ಮನಬಂದಂತೆ ಉಪಯೋಗಿಸಿಕೊಂಡು ಭಾಷೆಯ ಸಮತಾವಾದವನ್ನು ಅಲ್ಪಸಂಖ್ಯಾಕರ ಗೊಡವೆಯಿಲ್ಲದೆ ತಮ್ಮ ಆಡಳಿತ ಎಲ್ಲೆಗಳೊಳಗೆ ಹರಡಿಸುವ ಲಕ್ಷಣಗಳು ಈಗಾಗಲೇ ತೋರ ತೊಡಗಿರುವುದು ಖೇದಕರವಾದ ವಿಷಯ.

ಕಾಸರಗೋಡು ತಾಲೂಕಿನ ಉತ್ತರ ಭಾಗವು ಕನ್ನಡ ನಾಡಿಗೆ ಸೇರಿದ್ದೆಂಬುದಕ್ಕೆ ದಾಖಲೆಗಳ ರಿಜಿಸ್ಟ್ರೇಶನ ಅಂಕೆ–ಸಂಖ್ಯೆಯೂ ಒಂದು ಪ್ರಮುಖಾಧಾರವಾಗಿತ್ತು. ವರ್ಷಕ್ಕೆ ಈ ಪ್ರದೇಶದಲ್ಲಿ ಆಗುತ್ತಿರುವ ರಿಜಿಸ್ಟ್ರಿ ದಾಖಲೆಗಳು ಸುಮಾರು ೪೦೦೦ ಅವುಗಳಲ್ಲಿ ಎಂಟೋ ಹತ್ತೋ ದಾಖಲೆಗಳು ಮಲೆಯಾಳ ಭಾಷೆಯಲ್ಲಿ ಆಗುತ್ತಿದ್ದುವು. ಆದರೆ ಮೊನ್ನೆ ಮದ್ರಾಸು ಸರ್ಕಾರ ಅಲ್ಲಿನ ದಾಖಲೆಗಳ ರಿಜಿಸ್ಟ್ರಿಯೆಲ್ಲ ಮಲೆಯಾಳ ಭಾಷೆಯಲ್ಲೇ ಆಗಬೇಕೆನ್ನುವ ವಿಧಿಯನ್ನು ಪ್ರಕಟಿಸಿದೆ!

ರಿಜಿಸ್ಟ್ರಿಯಲ್ಲಿ ಹೀಗೆ ಆರಂಭವಾದ ಈ ಧೋರಣೆ ಎಲ್ಲಿಯತನಕ ಮುಂದುವರಿದೀತೆಂಬುದನ್ನು ಊಹಿಸುವುದಕ್ಕೆ ನಮಗೆ ಕಷ್ಟವಿಲ್ಲ. ಬಹುಶಃ ಇನ್ನು ಎರಡೋ ಮೂರೋ ವರ್ಷಗಳೊಳಗೆ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವ ಭಾಷಾ ಮಾಧ್ಯಮವನ್ನು ಕೇರಳ ಸರ್ಕಾರವು ಕಡ್ಡಾಯವಾಗಿ ಮಲೆಯಾಳವನ್ನಾಗಿ ಮಾಡಬಹುದು.

ಕನ್ನಡದ ಕೈ ಬಿಟ್ಟುಹೋಗಿರುವ ಸೇಲಂ, ಅನಂತಪುರ, ನೀಲಗಿರಿ ಮುಂತಾದ ಭಾಗಗಳಿಗೂ ಇಂಥ ಗಂಡಾಂತರ ಒದಗದಿರಲಿಕ್ಕಿಲ್ಲ. ಆದರೆ ಆ ಪ್ರದೇಶಗಳಲ್ಲಿ ಬಹುತೇಕ ಕನ್ನಡವಲ್ಲದೆ ಸ್ಥಳೀಕ ಭಾಷೆಗಳೂ ಪ್ರಚಾರದಲ್ಲಿವೆ. ಕಾಸರಗೋಡಿನ ಉತ್ತರ ಭಾಗದ ಹೆಚ್ಚಿನವರಿಗೆ ಮಲೆಯಾಳವು ಗ್ರೀಕ್ ಭಾಷೆಯಷ್ಟೇ ಹೊಸದೆಂಬುದು ಗಮನಾರ್ಹ.

ಕೇರಳ ಸರ್ಕಾರವಾದರೂ ತಮಗೆ ನ್ಯಾಯವಾಗಿ ಹಕ್ಕಿಲ್ಲದ ಈ ಪ್ರದೇಶವನ್ನು ಎಲ್ಲ ವಿಧಗಳಿಂದಲೂ ತಮ್ಮ ರಾಜ್ಯದ ಅಂಗವನ್ನಾಗಿ ಅರಗಿಸಿಕೊಳ್ಳಲು ಶತಪ್ರಯತ್ನ ಮಾಡದಿರಲಿಕ್ಕಿಲ್ಲವೆಂಬುದರಲ್ಲಿ ಸಂಶಯವಿಲ್ಲ. ನ್ಯಾಯ-ನೀತಿಗಳ ಪ್ರಶ್ನೆಯ ಮೇಲೆ ಕೇರಳೀಯರಿಗೆ ಅಷ್ಟು ಮಮತೆ ಇರುತ್ತಿದ್ದರೆ ತಾವಾಗಿಯೇ ಕಾಸರಗೋಡಿನ ಉತ್ತರ ಪ್ರದೇಶವನ್ನು ಬಿಟ್ಟುಕೊಡುತಿದ್ದರು. ಆದರೆ ರಾಜ್ಯ ಪುನಾರಚನಾ ಆಯೋಗದಲ್ಲಿ ಅವರೊಬ್ಬ ಮುಖಂಡನೂ ಸದಸ್ಯನಾಗಿ ಬಂದುದರಿಂದ ಆ ಮುಖಂಡನ ಭಾಷಾ ವ್ಯಾಮೋಹದ ದುರ್ಲಾಭವನ್ನು ಅವರು ಪಡೆದಿದ್ದಾರೆ. ಅವರ ರಾಜ್ಯ ಸಂಪತ್ತಿನಲ್ಲಿಯೂ ವಿಸ್ತೀರ್ಣದಲ್ಲಿಯೂ ಅತೀ ಚಿಕ್ಕದಾದುದೆಂಬುದು ನಿಜವಾದರೂ, ಅವರ ಜನಸಾಂದ್ರತೆಯ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಇತರ ಪ್ರದೇಶಗಳನ್ನು ಆಕ್ರಮಿಸಬೇಕಾಗಿ ಬಂದುದು ಅವರ ದುಷ್ಟ ಲಾಲಸೆಯ ಪ್ರತೀಕವಾಗಿದೆ.

ಇಂಥ ಅನ್ಯಾಯ ಪ್ರಜಾಸತ್ತೆಯ ದೌರ್ಬಲ್ಯದ ಸೂಚಕವಾಗಿದೆಯೆಂದೂ ಹೇಳಬಹುದು. ವೈಯಕ್ತಿಕ ವರ್ಚಸ್ಸು, ಸಂಖ್ಯಾಬಲಗಳು ಇಷ್ಟು ಮಹತ್ವದ ಪ್ರಶ್ನೆಗಳನ್ನು ಕೂಡಾ ನ್ಯಾಯಬಾಹಿರವಾಗಿ ಕೆಲವು ಸಂದರ್ಭಗಳಲ್ಲಿ ತೀರ್ಮಾನಿಸುವುವು ಎಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

ಕೇರಳೀಯರಿಗೆ ಕಾಸರಗೋಡು ಕನ್ನಡಿಗರಿಂದ ಕಪ್ಪವಾಗಿ ಹೋದುದಲ್ಲದೆ ಪುರಾಣ ಪ್ರಸಿದ್ಧವಾದ ಕನ್ನಡ ನಾಡು ತನ್ನ ಹೆಸರನ್ನೇ ಈಗ ಕಳೆದು ಕೊಂಡುದೂ ಪ್ರಮಾದದ ವಿಷಯ. ಇಲ್ಲಿ ಕನ್ನಡ ನಾಡು ಮೈಸೂರನ್ನು ಸೇರುವುದೋ ಮೈಸೂರು ಕನ್ನಡ ನಾಡನ್ನು ಸೇರುವುದೋ ಎಂಬ ಕ್ಷುಲ್ಲಕ ವಿವಾದಕ್ಕೆ ಎಡೆಯಿಲ್ಲವಾದರೂ, ನಮ್ಮ ಕರ್ಣಾಟಕ ರಾಜ್ಯಕ್ಕೆ ಮಹಾ ಮೈಸೂರೆಂದು ನಾಮಕರಣ ಮಾಡಲು ಸರ್ಕಾರ ಯಾರ ಒಪ್ಪಿಗೆಯನ್ನು ಪಡೆದಿದೆಯೋ, ಯಾರ ಶಿಫಾರಸನ್ನು ಸ್ವೀಕರಿಸಿದೆಯೋ ತಿಳಿಯದು. ಈ ರೀತಿಯ ಮೇರೆಗೆ ಕೇರಳವು ಮಹಾ ತಿರುವಾಂಕೂರು–ಕೊಚ್ಚಿಯಾಗಬೇಕಿತ್ತು. ಮದರಾಸು ಮಹಾ ಪುದುಕೋಟೆಯಾಗಬಹುದಿತ್ತು. ಆಂಧ್ರವು ಮಹಾ ಹೈದರಾಬಾದು ಆಗಬೇಕಿತ್ತು. ಕರ್ಣಾಟಕಕ್ಕೆ ಮಾತ್ರ ಈ ಮೈಸೂರಿನ ರಾಜ್ಯಶಾಹಿಯ ಕಹಿ ಅಂಕಿತವನ್ನು ಏಕೆ ಸೇರಿಸಬೇಕಿತ್ತೋ ತಿಳಿಯದು. ಈ ಹೊಸ ಹೆಸರನ್ನು ಮೈಸೂರಿನವರೇ ಮೆಚ್ಚುವುದಿಲ್ಲವೆಂದ ಮೇಲೆ ಭಾರತ ಸರ್ಕಾರವು ಈ ನಾಮಕರಣದ ಕೆಲಸಕ್ಕೆ ಕೈ ಹಾಕಿದುದು ಪ್ರಜಾಸತ್ತೆಯ ತತ್ವಕ್ಕೆ ಕಲಂಕಪ್ರಾಯವಾಗಿದೆ.

ಪ್ರಜಾಸತ್ತೆಯಲ್ಲಿ ಹೀಗೆ ಯಾವ ನಿರ್ಧಾರವೂ ಕೊನೆಯದಲ್ಲವೆನ್ನುವ ಮಾತು ಇವೆರಡು ಅಂಶಗಳಿಗೆ ಹೇಗೆ ಅನ್ವಯವಾಗುತ್ತದೆಂಬುದನ್ನು ವ್ಯವಹಾರಿಕ ದೃಷ್ಟಿಯಿಂದ ಹೇಳುವುದು ಅಸಾಧ್ಯ. ಕೇರಳ ಸರ್ಕಾರ ತಾನಾಗಿ ಕಾಸರಗೋಡನ್ನು ಬಿಟ್ಟುಕೊಡಲಾರದು ನಮ್ಮ ಹೊಸ ರಾಜ್ಯ ಸರ್ಕಾರ ಕಾಸರಗೋಡನ್ನು ವಿಮೋಚನೆ ಮಾಡಲು ಶಕ್ಯ ಹವಣಿಸದು. ಅದೂ 'ವಿಶಿಷ್ಟ ಮೈಸೂರು' ತತ್ವದಿಂದ ಪ್ರಭಾವಿತವಾದ ಮೈಸೂರು ಸರ್ಕಾರದ ಆಡಳಿತ ಯಂತ್ರಕ್ಕೆ ನಾವು ಹರಡಿಕೊಳ್ಳುವುದರಿಂದ, ಈ ದಿಶೆಗೆ ಮೈಸೂರು ಸರ್ಕಾರವನ್ನು ಒಲಿಸಬಹುದು, ಅದರ ಗಮನವನ್ನು ಸೆಳೆಯಬಹುದು ಎಂದು ಊಹಿಸಲು ಆಧಾರವಿಲ್ಲ. ಮತ್ತೆ ಒಕ್ಕೂಟ ಸರ್ಕಾರವಾದರೋ ತಾನಾಗಿಯೇ ಕಾಸರಗೋಡು ಕನ್ನಡಿಗರ ಕೊರಗಿಗೆ ಸಹಾನುಭೂತಿ ತೋರಿಸಿ ಅವರನ್ನು ಕರ್ನಾಟಕಕ್ಕೆ ಸ್ಥಳಾಂತರಿಸುವ ಬಿಗು ನಿರ್ಧಾರವನ್ನು ಮಾಡುವ ಸಂಭವವಾದರೂ ತೋರಿಬರದು. ಅಲ್ಲಿ ಕನ್ನಡಿಗರ ವೈಧಾನಿಕ ಒತ್ತಡವಂತೂ ಬೀರುವ ಪ್ರಶ್ನೆಯೇ ಇಲ್ಲ. ಈ ವಾಸ್ತವಿಕ ಅಂಶಗಳನ್ನು ಪರಿಶೀಲಿಸಿದ್ದಲ್ಲಿ ಕಾಸರಗೋಡು ಕನ್ನಡ ನಾಡನ್ನು ಕೈಬಿಡುವುದೂ ಕರ್ಣಾಟಕ ಮಹಾ ಮೈಸೂರಾಗಿ ಪರಿವರ್ತಿತವಾಗುವುದೂ ಕೊನೆಯನಿರ್ಧಾರಗಳೇ ಆಗಿವೆಯೆಂದು ಖಚಿತವಾಗದಿರದು.

ಆದ್ದರಿಂದ ತತ್ಕಾಲಕ್ಕಾದರೂ ನಮ್ಮ ರಾಜ್ಯ ಸರ್ಕಾರ, ನಮ್ಮ ಮುಖಂಡರು ಎಲ್ಲ ನಮ್ಮಿಂದ ಹರಿದು ಹೋದ ಕಾಸರ

೧೬ನೇ ಪುಟ ನೋಡಿರಿ.

# ಕರ್ನಾಟಕದ ಮಹಿಳೆಯರು

ಆರಾಧ್ಯರೆಂದು ಯಾರನ್ನು ಆದರಿಸುವಿರಿ? ರಣಭೈರವಿಯರನ್ನೆ, ವಿದುಷಿಯರನ್ನೆ, ಮಹಾಸತಿಯರನ್ನೆ, ಕಲಾವಿದೆಯರನ್ನೆ, ರಾಜ್ಯ ಶಾಸ್ತ್ರ ಪ್ರವೀಣೆಯರನ್ನೆ, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಸೆರೆಮನೆ ಸೇರಿದ ವೀರ ರಮಣಿಯರನ್ನೆ, ಸಮಾಜ ಸೇವಿಕೆಯರನ್ನೆ—ಯಾರನ್ನೆ ಆಗಲಿ, ಕನ್ನಡ ನಾಡಿನಲ್ಲಿ ಬೇಕಾದಷ್ಟು ಕಾಣಬಹುದು. ಇಲ್ಲಿಯ ಮಹಿಳೆಯರ ಪರಂಪರೆ ಅಷ್ಟು ಭವ್ಯವಾಗಿ ಬೆಳೆದು ಬಂದಿದೆ!

**ಬರೆದವರು: ಪ್ರೊ|| (ಶ್ರೀಮತಿ) ಸರೋಜಿನಿ ಮಹಿಷಿ, ಎಂ.ಎ., ಎಲ್‌ಎಲ್.ಬಿ.**

"ಕಾವೇರಿಯಿಂದಮಾ ಗೋದಾವರಿವರಮಿರ್ಪ' ಕನ್ನಡ ನಾಡಿನಲ್ಲಿ ಯುದ್ಧರಂಗದಲ್ಲಿ, ಅಂತೆ ಜೀವನರಂಗದಲ್ಲಿ ಹೋರಾಡಿ, ಯಶಸ್ಸುಗಳಿಸಿದ ಮಹಿಳೆಯರ ಸಂಖ್ಯೆಗೆ ಕೊರತೆಯಿಲ್ಲ. ವಿದುಷಿಯರೂ ಆಗಿಹೋಗಿದ್ದಾರೆ ಆದರೆ ಒಬ್ಬ ರಣಭೈರವಿ ಅಕ್ಕಾದೇವಿಯನ್ನು, ಒಬ್ಬ ಬೆಳವಡಿ ಮಲ್ಲಮ್ಮನನ್ನು, ಒಬ್ಬ ಒನಕೆಯ ಓಬವ್ವೆಯನ್ನು ಸಮಾಜದ ಮೇಲಿನ ಅಂತಸ್ತಿನಿಂದ ಕೆಳಗಿನವರವರೆಗೂ ಪ್ರತಿನಿಧಿಗಳಂತೆ ನಿರ್ಮಾಣಮಾಡಲು ಹಿನ್ನೆಲೆಯ ರಾಜಕೀಯ, ಸಾಮಾಜಿಕ ವಾತಾವರಣದಲ್ಲಿ ಯಾವ ಬಗೆಯ ಪ್ರಚೋದನೆ ದೊರೆತಿತು ಎಂಬುದು ಪ್ರಾಮುಖ್ಯವಾದ ವಿಷಯ! ವಿದುಷಿಯರ ಹೆಸರೆತ್ತಿ ಹೇಳಬಹುದಾದರೆ ಕಾಳಿದಾಸನ ತರುವಾಯ ವೈದರ್ಭೀ ಶೈಲಿಯಲ್ಲಿ ತನಗೆ ಸರಿಸಮಾನರಿಲ್ಲ ಎಂದು ಹೇಳಿರುವ ವಿಜಯಾಂಕಾ, ಮಧುರಾವಿಜಯವನ್ನು ಪ್ರೌಢವಾದ ಸಂಸ್ಕೃತದಲ್ಲಿ ಬರೆದ ಗಂಗಾಂಬಿಕೆ ಹೊನ್ನಮ್ಮ, ಶೃಂಗಾರಮ್ಮ ಇವರೇ ಮೊದಲಾದವರೆಂದು ಹೇಳಬೇಕು. ಹಾಗೆ ನೋಡಿದರೆ ಜನಪದ ಸಾಹಿತ್ಯದ ಕರ್ತೃಗಳೆಲ್ಲ ಸಾಮಾನ್ಯವಾಗಿ ಸ್ತ್ರೀಯರೇ! ಅಳುವಾಗ, ನಗುವಾಗ, ಕುಟ್ಟುವಾಗ, ಬೀಸುವಾಗ, ತೊಟ್ಟಿಲು ತೂಗುವಾಗ, ರಾಶಿ ಮಾಡುವಾಗ ಉಕ್ಕಿಬಂದ ಅವರ ಭಾವನೆಗಳೇ ಸುಂದರವಾದ ತ್ರಿಪದಿಗಳಲ್ಲಿ ಮೂಡಿಬಂದಿವೆ: ಜೀವನದಲ್ಲಿ ಸಾಮಾನ್ಯವೆಂದು ತಿಳಿದುಕೊಂಡ ವಿಷಯಗಳಿಗೂ ಭಾವನೆಯ ಹಿರಿಯ ಬೆಲೆಯನ್ನು ಕೊಟ್ಟು, ಸುಖವನ್ನು ಹಿಗ್ಗಿಸಿ ದುಃಖವನ್ನು ಕುಗ್ಗಿಸಿ ಹೊರಹೊಮ್ಮಿದ ಹಾಡುಗಳಿವು!

ಆನಾರ್ಂಟೋ ಯದಿ ಗದ್ಯ ಪದ್ಯ
ರಚನೈರ್ಕ್ಷೀತಶ್ಚಮತ್ಕುರ್ವತೇ |
ತೇಷಾಂ ಮೂರ್ಧ್ನಿ ದದಾಮಿ ವಾಮಚರಣಂ
ಕರ್ನಾಟರಾಜಪ್ರಿಯಾ ||

ಎಂದು ಆತ್ಮ ಪ್ರೌಢಿಮೆಯಿಂದ 'ಆಧುನಿಕ ಕವಿಗಳನ್ನೆಲ್ಲ ಕಡೆಗಣಿಸುತ್ತಿದ್ದೇನೆ" ಎಂದು ಹೇಳುವ ಕರ್ನಾಟ ರಾಜಪ್ರಿಯೆಯ ಸಾಹಸ ಜಾನಪದ ಸಾಹಿತ್ಯದ ಕವಿಯಿತ್ರಿಯರಿಗಿಲ್ಲ: ಆದರೆ ಜೀವನದ ಯಾವ ಭಾಗವನ್ನೂ — ತಾಯಿ-ಮಕ್ಕಳ ಮಮತೆಯಿರಲಿ, ಅಣ್ಣ-ತಂಗಿಯರ ಪ್ರೇಮವಿರಲಿ - ಇವರು ವರ್ಣಿಸದೆ ಬಿಟ್ಟಿಲ್ಲ.

ಈ ಕವಿಯಿತ್ರಿಯರಲ್ಲಿ, ವಿದುಷಿಯರಲ್ಲಿ, ಜೀವನದಲ್ಲಿಯ ಭಾವಗಮ್ಯ-ಬುದ್ಧಿಗಮ್ಯ ಸೌಂದರ್ಯಗಳನ್ನು ಎತ್ತಿ ನೋಡುವ ಪ್ರಬಲ ಇಚ್ಛೆ ಕಂಡು ಬಂದರೆ, ಹನ್ನೆರಡನೆಯ ಶತಮಾನದ ಅಪೂರ್ವ ಕಾಣ್ಕೆಯಾದ ಕನ್ನಡನಾಡಿನ ಧಾರ್ಮಿಕ ಸಾಮಾಜಿಕ ಕ್ರಾಂತಿಯಲ್ಲಿ, ಹೆಣ್ಣು ಕೀಳೆಂಬ ಸಾಮಾಜಿಕ ಭ್ರಮೆಯನ್ನು ಕಿತ್ತುಚೆಲ್ಲಿ ಮುಂದುವರಿದ ಅಕ್ಕಮಹಾದೇವಿಯೇ ಮೊದಲಾದವರು ಪಾರಮಾರ್ಥದಲ್ಲಿಯೇ ಪ್ರಪಂಚದ ಭಾವ ಸೌಂದರ್ಯವನ್ನು ಕಂಡಿದ್ದಾರೆ: ಅವರ ಭಕ್ತಿ-ಭಾವ ಶರಣಸತಿ ಲಿಂಗಪತಿಯ ಸಾಮರಸ್ಯ ಸಾರ್ಥಕವಾಗಿ ಮೈವೆತ್ತು ಬಂದಿವೆ ವಚನಗಳಲ್ಲಿ: ಸಾಮಾಜಿಕ ವಿಷಮತೆಯನ್ನು ಹೋಗಲಾಡಿಸಿ ಸಮಾಜದ ಸರ್ವ ವಿಧಾಯಕ ಶಕ್ತಿಯನ್ನೂ ಸತ್ಕಾರ್ಯದಲ್ಲಿ ವಿನಿಯೋಗಿಸಬೇಕೆಂಬುದನ್ನು ಶಿವಶರಣೆಯರು ಜೀವನದಲ್ಲಿ ಆಚರಿಸಿ ತೋರಿಸಿದ್ದಾರೆ: ಅವರು ಕಾವ್ಯ ಬರೆಯಲಿಲ್ಲ; ಅವರ ಜೀವನವೇ ಒಂದು ಕಾವ್ಯವಾಯ್ತು!

ಆಸ್ಥಾನದಲ್ಲಿ ಪಂಪನಿತ್ತ ಸಮಸ್ಯೆಗಳನ್ನು ಪೂರ್ತಿ ಮಾಡಿ, ನಮಗೇ ಒಂದು ಸಮಸ್ಯೆಯಾದ ಕಂತಿ ಇವರೆಲ್ಲರಿಗಿಂತ ಮೊದಲಿಗಳು: 'ದನವಂ ಕಡಿಕಡಿದೊಬ್ಬ ತಿರ್ಪರ್', ಎಂಬ ಪಂಪನ ಸಮಸ್ಯಾ ಪೂರ್ತಿಗೆ ಕೊಟ್ಟ ಪಾದವನ್ನು ಓದಿದಾಗ ಓದುಗರ ಮನದಲ್ಲಿ ಮೂಡುವ ಯಾವುದೋ ಅಸಹ್ಯ ಕಲ್ಪನೆ. ಕಂತಿ ಅದನ್ನು, 'ಚಂದನವಂ ಕಡಿಕಡಿದೊಬ್ಬ ತ್ತಿರ್ಪರ್' ಎಂದು ಪೂರ್ತಿ ಮಾಡಿದೊಡನೆಯೇ ಪರಿಶುದ್ಧವಾಗಿ ಪರಿಣಮಿಸುತ್ತದೆ.

ಆ ತರುವಾಯದಲ್ಲಿ ಹರಿದು ಹಂಚಿಹೋದ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಕವಯಿತ್ರಿಯರು ಉದಯ ಹೊಂದಿದ್ದಾರೆ. ಭಾವನೆ ತುಂಬಿ ತುಂಬಿ ಕಥನ-ಕಾವ್ಯಗಳನ್ನೂ ಹೆಣೆದಿದ್ದಾರೆ: ರುಕ್ಮಿಣೀ ಕಲ್ಯಾಣ, ರತಿಕಲ್ಯಾಣ, ಕೃಷ್ಣನನ್ನು ದಾನವಾಗಿ ಕೊಟ್ಟ ಹಾಡು, ಪಾರಿಜಾತದ ಕಥೆ ಇವೆಲ್ಲವೂ ಅವರ ಭಾವನೆಯ ಸೆಳೆತಕ್ಕೆ, ಕಲ್ಪನಾರಮ್ಯತೆಗೆ ಸಿಕ್ಕು ಹೊಸರೂಪವನ್ನೇ ತಾಳಿವೆ.

ಹನ್ನೆರಡನೆಯ ಶತಮಾನದ ಸಾಮಾಜಿಕ ಧಾರ್ಮಿಕ ಕ್ರಾಂತಿ ಹೆಂಗಳೆಯರನ್ನು ಆಧ್ಯಾತ್ಮವಿಚಾರದ ಕ್ಷೇತ್ರದಲ್ಲಿ ಬೆಳಕಿಗೆ ತಂದರೆ ಹದಿನಾರನೆಯ ಶತಮಾನ, ವಿಜಯನಗರದ ರಾಜರ ಕಾಲದಲ್ಲಿ ರಾಜಾಶ್ರಯದಿಂದ ಪ್ರೇರಣೆಪಡೆದು ಕಲೆಯ ಅಭಿವೃದ್ಧಿಯನ್ನು ಕಂಡಿತು. ಆದರೆ ಈ ಕಲಾಭಿವೃದ್ಧಿಯ ಅವಕಾಶ ಸಾಮಾನ್ಯರವರೆಗೂ ಮುಟ್ಟಿತೇ? ಎಂಬುದು ಇನ್ನೂ ಪ್ರಶ್ನೆಯೇ! ಕಳಚೂರ್ಯರ ಹಾಗೂ ವಿಜಯನಗರದ ರಾಜರ ಕಾಲಕ್ಕೆ ಮಧ್ಯದಲ್ಲಿ ಹೊಯ್ಸಳರ ಕಾಲ ಸರಿದುಹೋಗಿದ್ದರೂ, ಯಾವುದೋ ಅಜ್ಞಾತ ಭೀತಿ, ಕಲಾಭಿವೃದ್ಧಿ ಅಬಾಧಿತವಾಗಿ ಸಾಗಲು ತಡೆಯನ್ನುಂಟುಮಾಡಿತಷ್ಟೇ ಅಲ್ಲ, ಆ ಕಲೆಯ ಬಗ್ಗೆ ವಿಕೃತ ಕಲ್ಪನೆಯನ್ನೂ ಅಲ್ಲಲ್ಲಿ ಹರಡಿತು. ಈ ವಿಕೃತ ಕಲ್ಪನೆ ಅವ್ಯವಸ್ಥಿತವಾಗುತ್ತಿದ್ದ ರಾಜಕೀಯ ಸಾಮಾಜಿಕ ಹಿನ್ನೆಲೆಗಳ ಪರಿಣಾಮವಾಗಿ ಎಂಬುದು, ವಿದಿತವಿದ್ದರೂ ಕಲೆಯ ಪ್ರೌಢಿಮೆ ಬೆಳಗಬೇಕಾದದ್ದು ಇವೆಲ್ಲವುಗಳು ಸುವ್ಯವಸ್ಥಿತವಾದಾಗಲೇ! ಜಕ್ಕಣಾಚಾರ್ಯರ ಭವ್ಯ ದೇಗುಲದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಕರಸತಿಯ ಮೂರ್ತಿ ಕಲೆ, ಸೌಂದರ್ಯ, ಭಕ್ತಿ, ರಸಿಕತೆಗಳ ಕುರುಹು ಒಂದು ಕಾಲಕ್ಕಾಗಿದ್ದರೂ, ಅದೇ ಮೂರ್ತಿಯ ಭಗ್ನರೂಪ, ಹಿನ್ನೆಲೆಯಲ್ಲಿ ನಡೆದ ರಾಜಕೀಯ, ಸಾಮಾಜಿಕ ವಿಪರೀತ ಆಂದೋಲನದ ಪ್ರತೀಕ!

ವಿಶೇಷವಾಗಿ ಹನ್ನೆರಡನೆಯ ಶತಮಾನದ ಧಾರ್ಮಿಕ ಸಾಮಾಜಿಕ ಕ್ರಾಂತಿಯ ಪ್ರತೀಕವೆನ್ನಬಹುದು—ಶಕ್ತಿಯ ಪೂಜೆ ವಿವಿಧ ರೂಪಗಳಲ್ಲಿ ದಕ್ಷಿಣದಲ್ಲಿ—ಕನ್ನಡ ನಾಡಿನಲ್ಲಿ—ನಡೆಯುತ್ತದೆ. ಲಕ್ಷ್ಮೀನಾರಾಯಣ, ಪಾರ್ವತೀ—ಪರಮೇಶ್ವರರು ದೇವಮಂದಿರಗಳಲ್ಲಷ್ಟೇ ಅಲ್ಲ, ಜನಸಾಮಾನ್ಯರಲ್ಲಿಯೂ ಇದ್ದಾರೆ. ಇಲ್ಲದೆ ಬನಶಂಕರಿ, ಗುಡ್ಡವ್ವ, ಜೀವಿಕಿ, ದುರ್ಗಿ-ಇವರುಗಳ ರೂಪದಲ್ಲಿ ಶಕ್ತಿಯ ಪೂಜೆ ನಡೆಯುತ್ತಲೇ ಇದೆ: ಮಾತೃ ಪ್ರಧಾನ ಕುಟುಂಬ ಪದ್ಧತಿಯ ಅವಶೇಷವೂ ಇದಾಗಿರಬಹುದು. ಶಕ್ತಿಯನ್ನು ಪೂಜಿಸಬೇಕೆನ್ನುವದರ ಫಲವಾಗಿಯೋ ಏನೋ, ಸ್ತ್ರೀಯ ಕ್ಷೇತ್ರ ಕಾರ್ಯರಂಗಕ್ಕಿಳಿಯದೆ ಪೂಜೆಗೇ ಸೀಮಿತಗೊಂಡಿತು. ದೈವಭಕ್ತಿ, ಪತಿಭಕ್ತಿ ಎರಡೇ ಅವರ ಪಾಲಿಗೆ ಉಳಿದಂಥವು! ಅವೂ ಸಂಕುಚಿತವಾಗಿ ಪತಿಯಲ್ಲಿಯೇ ದೇವರನ್ನು ಕಾಣುವದು ಹೆಚ್ಚು ಗೌರವದ ವಿಷಯವಾಯ್ತು!—ಮುಂದುವರಿದು ಇದಕ್ಕೆ ವಿರುದ್ಧವಾಗಿ ದೇವರಲ್ಲಿ ಪತಿಯನ್ನು ಕಂಡವರು ಕ್ರಾಂತಿಕಾರಿಗಳಾದರು! ಅಕ್ಕಮಹಾದೇವಿ, ಮೀರಾಬಾಯಿ, ಇನ್ನೂ ಕೆಲ ಶಿವಶರಣೆಯರು ಈ ಮಾಲೆಗೆ ಸೇರಿದವರು! ಇನ್ನುಳಿದ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶವಿರಲಿಲ್ಲವೇ ಹೇಗೆ?—ಎಂಬ ಪ್ರಶ್ನೆಯೂ ಸಹಜವಾಗಿಯೇ ಮೂಡುವದು. ಉಳಿದ ಕ್ಷೇತ್ರಗಳಲ್ಲಿ ಮಿಂಚಿದ ಮಹಿಳೆಯರು ಒಬ್ಬಿಬ್ಬರಿದ್ದಾರೆ—ರಣಭೈರವಿ ಕದಂಬ ಕುಲದ ಅಕ್ಕಾದೇವಿ,

(೧೪ನೇ ಪುಟ ನೋಡಿರಿ)

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ
ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವವು!!
ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು
ಮೈಸೂರು ಉಕ್ಕಿನ ಸಾಮಾನುಗಳು
ಗಾಡಿ ಪಟ್ಟಿ ಅಥವಾ ಹಳಿಗಳು (Flats)
ದುಂಡು ಮತ್ತು ಚದರ ಸಲಾಕಿಗಳು (Rounds & Squares)
ಕೋನ ಕಂಬಿಗಳು (Angles)
ಸಿಮೆಂಟ್ ಕೆಲಸಕ್ಕೆ ಬೇಕಾಗುವ ಸರಳು (Reinforcing Rods)
ಮತ್ತು ಬೇಲು ಪಟ್ಟಿಗಳು (Hoops)
ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವವು
— ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ —
ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

# ನಿಮ್ಮ ನೆರೆಕರೆಯವರು ಕ್ಷಯರೋಗ ಬಾಧೆಯಿಂದ ಕ್ಷೇಮಿಗಳಾಗಿರದಿದ್ದರೆ ನೀವು ಕೂಡಾ ಕ್ಷೇಮಿಗಳಾಗಿರಲಾರಿರಿ!

## ನಿಮ್ಮ ಮಕ್ಕಳ ಕ್ಷೇಮವನ್ನು ನೀವು ಅಪೇಕ್ಷಿಸುವಿರಾದರೆ ರಾಷ್ಟ್ರದ ಜನತೆಯನ್ನು ಕಾಪಾಡಿರಿ!




ಈ ಟಿ. ಬಿ. ಮುದ್ರೆಯನ್ನು ಕೊಂಡುಕೊಳ್ಳಿರಿ. ಅದರ ಬೆಲೆ ಒಂದಾಣೆ ಮಾತ್ರ.

ಮುದ್ರೆಗಳು ದೊರೆಯುವ ಸ್ಥಳ: ಗೌರವ ಕಾರ್ಯದರ್ಶಿ, ದಕ್ಷಿಣ ಕನ್ನಡ ಟಿ. ಬಿ. ಮುದ್ರಾ ಸಮಿತಿ, ಗೋಪಾಲಕೃಷ್ಣ ರಸ್ತೆ, ಮಂಗಳೂರು.

**ಏಳನೆ ಟಿ. ಬಿ. ಮುದ್ರೆ ಮಾರಾಟದ ಚಳುವಳಿ**

ಜಾಹೀರಾತು ಸ್ಥಳ ದಾನ ಮಾಡಿದವರು:

**ಎನ್. ಟಿ. ಪಟೇಲ್ ಮತ್ತು ಕಂಪೆನಿ, ಮದ್ರಾಸು.**

## ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ

ಶ್ರೀ ನಿಜಲಿಂಗಪ್ಪನವರು ಸರ್ವಾನುಮತದಿಂದ ಹೊಸ ಕನ್ನಡ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿ, ರಾಜ್ಯ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡು ಸರ್ವ ಕಾರ್ಯಭಾರವನ್ನೂ ದಕ್ಷತೆಯಿಂದ ನಿರ್ವಹಿಸುವ ಹೊಣೆಯನ್ನು ಸಂತೋಷದಿಂದ ಒಪ್ಪಿಕೊಂಡಿದ್ದಾರೆ.

ಕನ್ನಡ ಪ್ರದೇಶಗಳೆಲ್ಲ ಒಂದೇ ಪ್ರಾಂತ್ಯದ ಆಡಳಿತೆಯಲ್ಲಿ ಸಮಾವೇಶಗೊಳ್ಳಬೇಕೆಂಬ ತತ್ತ್ವದ ಮುಖ್ಯ ಪುರಸ್ಕರ್ತರಲ್ಲಿ ಒಬ್ಬರಾಗಿರುವ ಶ್ರೀ ನಿಜಲಿಂಗಪ್ಪನವರು ಮೈಸೂರು ಮತ್ತು ಮೈಸೂರೇತರ ಕನ್ನಡ ಪ್ರದೇಶ ಇವೆರಡೂ ವಿಭಾಗಗಳ ಜನರ ಮನಸ್ಸನ್ನು ಚೆನ್ನಾಗಿ ತಿಳಿದವರಾಗಿದ್ದಾರೆ; ಮತ್ತು ಕರ್ನಾಟಕ ಏಕೀಕರಣವು ಅತ್ಯಂತ ಸಾಧುವಾದ ಧ್ಯೇಯವೆಂದು ಎರಡೂ ವಿಭಾಗಗಳ ಜನಮನಕ್ಕೆ ತಿಳಿಸಿಕೊಡಲು ಅವರು ಮೊದಲಿನಿಂದಲೂ ಕಟಿಬದ್ಧರಾಗಿ ಕೆಲಸ ಮಾಡಿದವರಾಗಿದ್ದಾರೆ.

ಕಾಂಗ್ರೆಸು ಸಂಸ್ಥೆಯ ಆಶ್ರಯದಲ್ಲಿ ಕರ್ನಾಟಕಕ್ಕೆ ಶ್ರೀ ನಿಜಲಿಂಗಪ್ಪನವರಿಂದ ಸಂದ ಸೇವೆಗಳಲ್ಲಿ ಕನ್ನಡ ಪ್ರದೇಶಗಳೆಲ್ಲ ಒಂದೇ ರಾಜ್ಯಸೂತ್ರದಲ್ಲಿ ಬಂಧಿಸಲ್ಪಟ್ಟ ಸಾಧನೆಯು ಐತಿಹಾಸಿಕ ದಾಖಲೆಯ ರೂಪದಲ್ಲಿ ಉಲ್ಲೇಖಿಸಲ್ಪಡುವುದು ನಿಶ್ಚಯ. ಈ ನಾಯಕನ ಮುಖ್ಯ ಮಂತ್ರಿತ್ವದ ಅವಧಿಯು ಏಕೀಕರಣದ ಪ್ರಥಮ ದಿನಗಳ ಕಷ್ಟಗಳನ್ನು ಪರಿಹರಿಸಿ, ಶಾಶ್ವತ ಸುಖಕ್ಕೆ ಮಾರ್ಗವನ್ನು ಕಲ್ಪಿಸಿಕೊಡಲಿ!


### ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 449/1956

ಕೆ. ಶ್ರೀನಿವಾಸಾಚಾರ್ಯ —ವಾದಿ

ಮತ್ತು

ಮುತ್ತಕ್ಕ ಪೂಜಾರ್ತಿ —ಪ್ರತಿವಾದಿ

ಇವರೊಳಗೆ

ಪ್ರತಿವಾದಿ:— ಮುತ್ತಕ್ಕ ಪೂಜಾರ್ತಿ, ಗಂಟಿ ಪೂಜಾರ್ತಿ ಮಗಳು ವ ತನ್ನ ಕೊಟ್ಟನ್ನನ ಹೆಂಡತಿ, ಉಡ್ಪಿ ತಾಲೂಕು ಮೂಡಕೊಡಂಬೂರು ಗ್ರಾಮದ ಕೊಡಂಕೂರು.

ಯವರಿಗೆ—

ತಾರೀಕು 12-4-1946ರಲ್ಲು ವಾದಿ ಮತ್ತು ನೀವು ಮಾಡಿಕೊಂಡ ರಿಜಿಸ್ಟ್ರು ಸಿರಿಮೂಲಗೇಣಿ ಚೀಟಿನ ಶರತಪ್ರಕಾರ ಕಳೆದ ವರುಷ ಮತ್ತು ಮನ್ಮಥ ಸಂವತ್ಸರಗಳ ಗೇಣಿ ಬಾಕಿಗೂ ಹುಟ್ಟುವಳಿ ಸಮೇತ ಆಸ್ತಿ ಸ್ವಾಧೀನತೆಗೂ ವಾದಿಯು ನಿಮ್ಮ ಮೇಲೆ ಮಾಡಿದ ಮೊಕದ್ದಮೆಯ ದಾವೆಯು ತಾ. 9-11-1956ಕ್ಕೆ ಮುಟ್ಟಿರುತ್ತದೆ. ಉದಾಹರಿಸುವಂಥಾದ್ದರೆ ಆ ದಿವಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜ್ಯಾಬು ಕೊಡುವ ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.

Udipi, Dated 30—10—1956

## ಶ್ರೀ ಟಿ. ಅನಂತ ಪೈ,

ಬಿ. ಕಾಂ.(ಬೊಂ) ಯಂ. ಯಲ್. ಎ.

ಕಳೆದ ಮಹಾ ಚುನಾವಣೆಯಲ್ಲಿ ಮದ್ರಾಸು ಶಾಸನ ಸಭೆಗೆ ಉಡುಪಿ ಮತದಾರ ಕ್ಷೇತ್ರದಿಂದ ಆರಿಸಲ್ಪಟ್ಟ ಶ್ರೀ ಟಿ. ಎ. ಪೈಗಳು ತನ್ನ ಮತದಾರ ಕ್ಷೇತ್ರಕ್ಕೂ, ಹಾಗೆಯೇ ಇತರ ಕ್ಷೇತ್ರಗಳಿಗೂ ಎಷ್ಟು ಸಾಧ್ಯವೋ ಅಷ್ಟು ಸೇವೆ ಸಲ್ಲಿಸಿ ಶಾಸನ ಸಭೆಯ ಉತ್ತಮ ಸದಸ್ಯರಲ್ಲಿ ಒಬ್ಬರು ಎಂಬ ಪ್ರಶಂಸೆಯನ್ನು ಪಡೆದು, ಜನತೆಯ ಪ್ರೀತಿ ವಿಶ್ವಾಸವನ್ನ ಗಳಿಸಿದ್ದಾರೆ. ಇನ್ನೂ 34 ವರುಷ ದಾಟದಿರುವ ಶ್ರೀ ಪೈಗಳವರಿಂದ ಹೆಚ್ಚಿನ ಸೇವೆಯನ್ನು ಜನತೆ ಅಪೇಕ್ಷಿಸುವುದೂ ಬಹುಮುಖವಾದ ಯೋಗ್ಯತೆಯುಳ್ಳ ಅವರು ಜನತೆಗಾಗಿ ದುಡಿಯುವುದೂ ನ್ಯಾಯಸಮಂಜಸವಾಗಿದೆ.

ನವ ಕರ್ನಾಟಕದ ಅಭಿವೃದ್ಧಿಗೆ ಅಗತ್ಯವಾದ ವಿದ್ಯಾಸಂಸ್ಥೆಗಳ ಸುಧಾರಣೆ, ಕರಾವಳಿಯ ಮತ್ಸ್ಯ ಸಂಪತ್ತಿನ ಉಪಯೋಗ, ಮಲೆನಾಡಿನ ಅವ್ಯಕ್ತ ಸಂಪತ್ತಿನ ಸದ್ವಿನಿಯೋಗ, ಭೂ ಸಮಸ್ಯೆಯ ಪರಿಹಾರವೇ ಮೊದಲಾದ ಯೋಜನೆಗಳ ಕುರಿತು ಶ್ರೀ ಪೈಗಳಿಗೆ ಸಾಕಷ್ಟು ಪರಿಶ್ರಮದಿಂದ ಸಂಪಾದಿಸಿಕೊಂಡ ಅಮೂಲ್ಯ ಅನುಭವವಿದೆ. ಇವುಗಳ ಸದುಪಯೋಗಕ್ಕೆ ವಿಶಾಲ ಮೈಸೂರಿನಲ್ಲಿ ಅವಕಾಶ ಸಿಕ್ಕಿ ಕರ್ನಾಟಕದ ಮಾತ್ರವಲ್ಲ ಅಖಿಲಭಾರತದ ಅಭಿವೃದ್ಧಿಗೆ ಶ್ರೀ ಪೈಗಳ ಸೇವೆ ಸಲ್ಲುವಂತಾಗಬೇಕು.

ಶ್ರೀ ಪೈಗಳವರು ಅಖಿಲಭಾರತ ಕಾಂಗ್ರೆಸ್ ಸಮಿತಿಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರು. ಕರ್ನಾಟಕ ಪ್ರದೇಶ ಯುವಕ ಕಾಂಗ್ರೇಸಿನ ಮತ್ತು ದ. ಕನ್ನಡದ ಭಾರತ ಸೇವಕ ಸಮಾಜದ ಕನ್ವೀನರರು. ಉಡುಪಿ ಯುವಕ ಕಾಂಗ್ರೆಸಿನ ಸ್ಥಾಪಕ ಅಧ್ಯಕ್ಷ. ಉಡುಪಿಯ ಮಹಾತ್ಮಾ ಗಾಂಧೀ ಸ್ಮಾರಕ ಕಾಲೇಜು ಮತ್ತು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜುಗಳ ಸ್ಥಾಪನೆಗೆ ಶ್ರಮಿಸಿದವರು. ಜೋಗದ ವಿದ್ಯುಚ್ಛಕ್ತಿಯನ್ನು ದ. ಕ. ಜಿಲ್ಲೆಗೆ ಪೂರೈಸಲು ದುಡಿದವರು. ಮಲ್ಪೆಯನ್ನು ಪ್ರಬುದ್ಧ ಬಂದರನ್ನಾಗಿ ಪರಿವರ್ತಿಸುವ ಸಾಧ್ಯತೆಯನ್ನು ವೆಸ್ಟ್ ಕೋಸ್ಟ್ ಮೇಜರ್ ಡೆವಲಪ್‌ಮೆಂಟ್ ಕಮಿಟಿಯವರು ಒಪ್ಪಿಕೊಳ್ಳುವಂತೆ ಶ್ರಮಿಸಿದವರು. ಶ್ರೀಯುತರು ಉತ್ತಮ ವಾಗ್ಮಿಗಳೂ ಲೇಖಕರೂ ಆಗಿರುವರು. (ಇವರ ಲೇಖನವನ್ನು ಮೂರನೆ ಪುಟದಲ್ಲಿ ನೋಡಬಹುದು.)

## ಶ್ರೀ ಟಿ. ಮಾಧವ ಪೈ, ಯಂ. ಬಿ. ಬಿ. ಎಸ್.

ಮಧ್ವಾಚಾರ್ಯರು ಧಾರ್ಮಿಕ ಕ್ಷೇತ್ರದಲ್ಲಿ ಉಡುಪಿಗೆ ಅಖಿಲಭಾರತ ಪ್ರಸಿದ್ಧಿಯನ್ನು ತಂದು ಕೊಟ್ಟಿದ್ದರೆ ಶ್ರೀ ಮಾಧವ ಪೈಗಳು ಶೈಕ್ಷಣಿಕ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಅದರ ಸ್ಥಾನವನ್ನು ಉನ್ನತಿಗೇರಿಸಿದ್ದಾರೆ. ಅಸಾಧ್ಯವಾದ ವನ್ನು ಸಾಧ್ಯವೆಂದು ಮಾಡಿತೋರಿಸುವುದು ಅವರಂತಹ ಕರ್ಮಯೋಗಿಗಳಿಗೇನೇ ಸಾಧ್ಯ. ಬಡತನ, ಅಜ್ಞಾನ ಅನಾರೋಗ್ಯಗಳ ನಿರ್ಮೂಲನಕ್ಕಾಗಿಯೇ ಹುಟ್ಟಿದ ಮತ್ತು ಸವೆಯುತ್ತಿರುವ ಮಹಾಜೀವ ಅವರದು. ಉಡುಪಿಯ ಮಹಾತ್ಮಾ ಗಾಂಧೀ ಕಾಲೇಜನ್ನು ಸ್ಥಾಪಿಸುವ ಯೋಜನೆಗೆ ಆರಂಭಿಸಿದಾಗ ತನ್ನ ಹಿತಸಾಧಕರಿಂದ ಎಚ್ಚರಿಕೆಯ ಮಾತುಗಳನ್ನೂ ಎಲ್ಲವನ್ನೂ ಟೀಕಿಸುವವರಿಂದ ವ್ಯಂಗ್ಯ ಟೀಕೆಗಳನ್ನೂ ಕೇಳಿ ಅವುಗಳಿಂದ ಇಮ್ಮಡಿ ಹುರುಪುಗೊಂಡು ಆ ಕಾಲೇಜು ಮಾತ್ರವಲ್ಲ ಅದಕ್ಕಿಂತಲೂ ಬೃಹತ್ತರ ಯೋಜನೆಯು ಎಲ್ಲರಿಂದಲೂ ಇದು ಅಸಾಧ್ಯವೆಂದು ಹೇಳಲ್ಪಡುತ್ತಿದ್ದ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿ ಕರ್ನಾಟಕದ ಮಾತ್ರವಲ್ಲ ಅಖಿಲಭಾರತದ ಮುತ್ಸದ್ದಿಗಳು ತನ್ನ ಪ್ರತಿಭೆಗೆ ತಲೆದೂಗುವಂತೆ ಮಾಡಿದ್ದಾರೆ; ದೇವರು ಹಾಗೆ ಅವರಿಂದ ಮಾಡಿಸಿದ್ದಾನೆ; ಸಾರ್ವಜನಿಕ ಹಿತಕ್ಕಾಗಿ ತಾನು ದುಡಿಯುತ್ತಿರುವದು ಮಾತ್ರವಲ್ಲ ತನ್ನಂತೆಯೇ ಯೋಗ್ಯತೆಯುಳ್ಳ ತನ್ನ ಸಹೋದರನ ಮಗ ಶ್ರೀ ಟಿ. ಎ. ಪೈಗಳನ್ನೂ ದುಡಿಸುತ್ತಾ ತನ್ನ ವೃದ್ಧಾಪ್ಯದಲ್ಲಿ ಈ ಸಂಸ್ಥೆಗಳ ಕಾರ್ಯ ನಿರ್ವಹಣಕ್ಕೆ ಯೋಗ್ಯ ಉತ್ತರಾಧಿಕಾರಿಯನ್ನೂ ಸಿದ್ಧಮಾಡಿಟ್ಟಿದ್ದಾರೆ. ಮುಂದೆ ಲಾ ಕಾಲೇಜು, ಕರ್ನಾಟಕದ ಕರಾವಳಿಯ ಕಾಲುವೆ ಮಾರ್ಗ ಇತ್ಯಾದಿ ಅನೇಕ ಯೋಜನೆಗಳು ಶ್ರೀ ಪೈಗಳವರ ಮಹಾಧೀಶಕ್ತಿಯಲ್ಲಿ ಮಥಿಸಲ್ಪಡುತ್ತಾ ಇವೆ. ಪರಮಾತ್ಮನು ಇವರಿಂದ ಇನ್ನೂ ಅನೇಕ ವಿಧವಾದ ಸೇವೆಗಳನ್ನು ಸಲ್ಲಿಸುವಂತೆ ಇವರನ್ನು ಆಶೀರ್ವದಿಸಲಿ ವಿಶಾಲ ಮೈಸೂರು ರಾಜ್ಯದ ಸಾಂಪತ್ತಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಇನ್ನೂ ಅನೇಕ ಸೇವೆಗಳನ್ನು ಇವರು ಸಲ್ಲಿಸುವಂತಾಗಲಿ.

ಕನ್ನಡ ನಾಡಿನ, ಏಕೆ ಅಖಿಲಭಾರತದ ಪ್ರಸಿದ್ಧಿಯನ್ನು ಪಡೆಯಲರ್ಹತೆಯುಳ್ಳ ಅರ್ಥಶಾಸ್ತ್ರಜ್ಞರೆಂದೂ, ಪ್ರಜಾಪ್ರಭುತ್ವವನ್ನು ಚೆನ್ನಾಗಿ ಮನನಮಾಡಿಕೊಂಡಿರುವ ಸಮರ್ಥ ರಾಜಕಾರಣಿಯೆಂದೂ ಶ್ರೀ ಪೈಗಳಿಗೆ ಗೌರವ ಸಲ್ಲುತ್ತಿದೆ. ಯೋಗ್ಯತೆ, ಉತ್ಸಾಹ, ಸಾಮರ್ಥ್ಯ ಪ್ರಭಾವಗಳೆಲ್ಲವನ್ನು ಕೂಡಿಕೊಂಡಿರುವ ಶ್ರೀ ಪೈಗಳಿಗೆ ರಾಜಕೀಯಕ್ಕೆಳೆಯುವ ಮನಸ್ಸನ್ನು ಪರಮಾತ್ಮನು ಕೊಟ್ಟದೇ ದೊಡ್ಡ ವಿಷಯ. ಟೀಕೆ—ದೂಷಣೆಗಳಿಗೆ ಎದೆಗುಂದದೆ ಮುಂದೆ ಇನ್ನೂ ಉತ್ತಮ ದೇಶ ಸೇವೆ ಸಲ್ಲಿಸುವಂತೆ ಪರಮಾತ್ಮನು ಶ್ರೀ ಪೈಗಳಿಗೆ ಸರ್ವವಿಧ ಅನುಕೂಲತೆಗಳನ್ನಿತ್ತು ಅನುಗ್ರಹಿಸಲೆಂಬುದೇ ನಮ್ಮ ಹಾರೈಕೆಯಾಗಿದೆ.


*For all requirements in*

**Paper, Indian or Foreign,**
**Stationery, Printing Inks,**
**School Requisities,**

Typewriters, Carbon Papers etc. etc. etc.

**Srinivas Brothers**

PAPER MERCHANTS & STATIONERS,
CAR STREET, **MANGALORE-1.**

Tel: ACTIVE. Phone: 449

# NAVAYUGA

Popular Kannada Weekly

*Founder:—*

**A. B. SHETTY,** *M .L .A.*
Minister for Public Health,
Govt. of Madras.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧–೧೧–'೫೬ | ೯ |


## ಕನ್ನಡಿಗರ ಸಂಭ್ರಮ

ಈ ಸಲ ದೀಪಾವಳಿಯ ಸಡಗರದೊಂದಿಗೆ ಕನ್ನಡಿಗರ ಪಾಲಿಗೆ ಏಕೀಕೃತ ಕನ್ನಡ ರಾಜ್ಯದ ಉದ್ಘಾಟನೆಯ ಸಂಭ್ರಮವೂ ಸಂತೋಷದಾಯಕವಾಗಿ ಬಂದಿದೆ. ರಾಷ್ಟ್ರಾಧ್ಯಕ್ಷ ಡಾ. ಪ್ರಸಾದರು ನಮ್ಮ ಕನ್ನಡ ರಾಜ್ಯವನ್ನು ಉದ್ಘಾಟಿಸಲಿದ್ದಾರೆ: ಎರಡು ಕೋಟಿಯಷ್ಟಿರುವ ಕನ್ನಡಿಗರು ಮೂರು ದಶಕಗಳಿಂದ ಪ್ರತಿಪಾದಿಸುತ್ತಾ ಬಂದ ತತ್ತ್ವವೊಂದು ವ್ಯಾವಹಾರಿಕ ಮನ್ನಣೆಯನ್ನು ಪಡೆಯುವ ಶುಭದಿನವಿದು. ಆದುದರಿಂದ ಇದನ್ನು ಕಂಡು ನಾವು ಹರ್ಷಚಿತ್ತರಾಗಬೇಕಾಗಿದೆ; ಪ್ರಸನ್ನತೆಯಿಂದ ಹೊಸ ರಾಜ್ಯಕ್ಕೆ ಮಂಗಲವನ್ನು ಕೋರಬೇಕಾಗಿದೆ.

ನಮ್ಮ ಹೊಸ ರಾಜ್ಯವು ಸಮೃದ್ಧಿಯ ಪ್ರದೇಶ; ಜನಕೋಟಿಯು ಕೊಂಡಾಡುವಷ್ಟು ಯೋಗ್ಯತಾಸಂಪನ್ನ ಐತಿಹಾಸಿಕ ದಾಖಲೆಗಳಿರುವ ನಾಡು; ಜನರಾದರೂ ಸುಸಂಸ್ಕೃತರು, ತಿಳುವಳಿಕೆಯುಳ್ಳವರು, ಎಲ್ಲಕ್ಕೂ ಹೆಚ್ಚಾಗಿ ವ್ಯವಹಾರಜ್ಞರು. ಆದುದರಿಂದ ನಮ್ಮ ನಾಡು ಏಳಿಗೆಯನ್ನು ಹೊಂದೀತೆ ಎಂಬುದಾಗಿ ಚಿಂತೆಗೀಡಾಗುವ ಕಾರಣವೇನೂ ಇಲ್ಲ. ಆದರೆ ಹೇಗೆ ಏಳಿಗೆಯನ್ನು ಸಾಧಿಸಬಹುದೆಂದು ಗಂಭೀರವಾಗಿ ವಿಚಾರಿಸಬೇಕು ಮಾತ್ರ.

ನೂತನ ರಾಜ್ಯಕ್ಕೆ ನೂರೈವತ್ತು ಮೈಲುಗಳಷ್ಟು ದೀರ್ಘವಾದ ಮತ್ತು ನಾಲ್ಕು ಪ್ರಸಿದ್ಧ ರೇವುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕರಾವಳಿಯಿದೆ. ಈ ಕರಾವಳಿಯ ಸಮುದ್ರದಲ್ಲಿ ಮೀನಿನ ರಾಶಿಯೇ ಬಿದ್ದಿದೆ; ಕಡಲ ತೀರದಲ್ಲಿ ತೆಂಗಿನ ತೋಟಗಳಿವೆ. ತೆಂಗಿನ ತೋಟಗಳ ಮೂಡಲಿಗೆ ಭತ್ತದ ಗದ್ದೆಗಳು ಕಣ್ಣಿಗೆ ಬೀಳುತ್ತವೆ—ಪಶ್ಚಿಮ ಘಟ್ಟಗಳ ಸೆರಗಿನವರೆಗೂ. ಘಟ್ಟಗಳ ಆಚೆ ಮಲೆನಾಡಿನ ಕಂಗು, ಬಾಳೆಗಳಲ್ಲದೆ ಸೋಪಿನ ಮರಗಳೂ ಬೀಳಲುಗಳೂ ಜೇನು ಹುಟ್ಟುಗಳೂ ಧಾರಾಳವಾಗಿ ಕಂಡುಬರುತ್ತವೆ. ಎಂತಹ ಗುಡಿಕೈಗಾರಿಕೆಗಳಿಗೂ ಆಶ್ರಯ ಸ್ಥಾನವೆನಿಸಬಲ್ಲ ಮಲೆನಾಡು ನಮ್ಮದು.

ಪಶ್ಚಿಮಘಟ್ಟವು ಹಲವು ನದಿಗಳ ಉಗಮಸ್ಥಾನವಾಗಿದೆ. ಈ ನದಿಗಳಿಂದಾಗಿ ಒಳ್ಳೆಯ ಜಲಪಾತಗಳೂ ಉಂಟಾಗಿವೆ. ಇವುಗಳನ್ನು ವಿದ್ಯುದುತ್ಪಾದನೆಯ ಬಗ್ಗೆ ಚಾತುರ್ಯದಿಂದ ಉಪಯೋಗಿಸಿಕೊಂಡರೆ ಕನ್ನಡ ರಾಜ್ಯವು ವಿದ್ಯುಚ್ಛಕ್ತಿಯ ಬಳಕೆಯ ಮಟ್ಟಿಗೆ ಭಾರತದಲ್ಲೆ ಅಗ್ರಗಣ್ಯವೆನಿಸಬಲ್ಲುದು; ಮತ್ತು ಚಾಲಕ ಶಕ್ತಿಯ ಅಭಾವವೆಂಬ ನೆಪವೇ ನಮ್ಮ ನಾಡಿನ ಅಭಿವೃದ್ಧಿಯ ಮಾರ್ಗದಿಂದ ದೂರ ಸರಿದು ನಿಲ್ಲುವುದು ನಿಶ್ಚಯ. ಶ್ರೀ. ಕೃಷ್ಣಕುಮಾರ ಕಲ್ಲೂರರು ಸೂಚಿಸಿರುವಂತಹ ಹೊಸ ತುಂಗಭದ್ರಾ ಯೋಜನೆಯು ಏಕೀಕೃತ ಕನ್ನಡ ರಾಜ್ಯದಲ್ಲಿ ಕಾರ್ಯಾನ್ವಿತಗೊಳ್ಳುವ ದಿನ ಬಹಳ ದೂರ ಉಳಿಯಬಾರದು.

ಇನ್ನು ಘಟ್ಟದ ಮೇಲೆ, ಖನಿಜ ಭಂಡಾರ ತುಂಬಿದೆ. ಆಹಾರ ಧಾನ್ಯಗಳೂ ಸುಸ್ಕಳವಾಗಿ ಬೆಳೆಯುತ್ತವೆ. ಈ ಖನಿಜಗಳು ನಮ್ಮ ಸಂಪತ್ತನ್ನು ಬಹಳಷ್ಟು ಹೆಚ್ಚಿಸಬಲ್ಲವು. ಇವುಗಳಿಗಾಗಿಯೇ ನಾವು ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಬಹುದು. ಇಷ್ಟಲ್ಲದೆ ಶ್ರೀಗಂಧದಂತಹ ವಿರಳ ದ್ರವ್ಯದ ಸದುಪಯೋಗ ಮಾಡಿಕೊಳ್ಳುವ ಕಾರ್ಖಾನೆಗಳನ್ನು ವಿಸ್ತರಿಸಬಹುದು; ನೇಯ್ಗೆಯ ವ್ಯವಸಾಯವನ್ನು ಪುಷ್ಟಿಗೊಳಿಸಬಹುದು. ಹೀಗೆಯೇ ಅನೇಕ ಬಗೆಗಳಿಂದ ನಮ್ಮ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರವನ್ನು ಪರಿಪುಷ್ಟಗೊಳಿಸುವುದೂ ವಿಸ್ತರಿಸುವುದೂ ಸಾಧ್ಯ.

ಇದೆಲ್ಲಕ್ಕೆ ನಮ್ಮ ನಾಡಿನ ಇಂದಿನ ಧುರೀಣರು ಶ್ರಮವಹಿಸಿ ಅಡಿಗಲ್ಲನ್ನು ಹಾಕಬೇಕಾಗಿದೆ. ನಮ್ಮ ಜನರು ಕನ್ನಡ ರಾಜ್ಯವಾಗಲಿ ಎಂದು ಒಕ್ಕೊರಲಿನ ಘೋಷಣೆಯನ್ನು ಮಾಡಲಿಕ್ಕಾದರೂ ಈ ಧುರೀಣರೇ ಕಾರಣ ಭೂತರು. ಈಗ ಆ ಘೋಷಣೆಯ ಫಲವಾಗಿ ನಮ್ಮ ಇಷ್ಟ ಸಿದ್ಧಿಯ ದಿನ ಬಂದಿರುವಾಗ, ಯಾವ ಸೌಕರ್ಯಗಳೂ ಅನುಕೂಲತೆಗಳೂ ಇವೆ ಎಂಬುದಕ್ಕಾಗಿ ಒಂದೇ ಕನ್ನಡ ರಾಜ್ಯದ ಘೋಷಣೆಯನ್ನು ಎಬ್ಬಿಸಲಾಯಿತೋ ಅವುಗಳನ್ನು ನಿತ್ಯವ್ಯವಹಾರದಲ್ಲಿ ಪರಿಣತಗೊಳಿಸಲು ಇದೇ ಧುರೀಣರು ಕಂಕಣ ಬದ್ಧರಾಗಬೇಕಾಗಿದೆ—ಇದು ಅವರ ಆದ್ಯ ಕರ್ತವ್ಯ.

ಕನ್ನಡಿಗರೆಲ್ಲರ ಆರ್ಥಿಕ ಯೋಗಕ್ಷೇಮಾಭಿವೃದ್ಧಿಯ ಮಟ್ಟಿಗಷ್ಟೆ ಏಕೀಕೃತ ಕನ್ನಡ ರಾಜ್ಯದಿಂದ ಪ್ರಯೋಜನ ದೊರೆಯುವುದೆಂದು ಈ ಧುರೀಣರು ಹೇಳಿದ್ದಲ್ಲ—ಸಾಂಸ್ಕೃತಿಕ ಪುನರುಜ್ಜೀವನಕ್ಕೂ ಇದರಿಂದ ಸಹಾಯವಾಗುತ್ತದೆಂದೂ ಧುರೀಣರು ಅಭಿಪ್ರಾಯಪಟ್ಟಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಮಹಾ ಸಂಸ್ಥೆಯು ಕರ್ನಾಟಕ ಏಕೀಕರಣವನ್ನು ಮೊದಲಿಂದಲೂ ಪ್ರತಿಪಾದಿಸುತ್ತಾ ಬಂದಿರುವುದನ್ನು ನಾವು ಗಮನಿಸಬೇಕು.

ಭಾಷೆ, ಸಾಹಿತ್ಯ, ರಂಗಭೂಮಿ, ಚಲಚ್ಚಿತ್ರ, ಇನ್ನಿತರ ಕಲಾಕ್ಷೇತ್ರ—ಇವುಗಳು ಆಡಳಿತ ದೃಷ್ಟಿಯಿಂದ ನೂರೈವತ್ತು ವರ್ಷಗಳ ವರೆಗೆ ಹರಿದು ಹಂಚಿಹಾಕಿದ್ದ ಕನ್ನಡ ರಾಜ್ಯವನ್ನು ಮಾನಸಿಕ ಮಟ್ಟದಲ್ಲಿಯಾದರೂ ಒಂದುಗೂಡಿಸಲು ಕನಿಷ್ಠ ಪಕ್ಷ ಕನ್ನಡಿಗರನ್ನು ಕುಸು ಹತ್ತಿರಕ್ಕೆ ತರಲು—ತುಂಬ ನೆರವಾಗಿವೆ. ಈಗ ಆಡಳಿತ ದೃಷ್ಟಿಯಿಂದಲೂ ಒಂದೇ ರಾಜ್ಯದ ಚೌಕಟ್ಟಿನೊಳಗೆ ನಮ್ಮ ನಾಡು ಬಂದಿರುವಾಗ ಈ ಸಾಂಸ್ಕೃತಿಕ ಮಾಧ್ಯಮವನ್ನು ಯಶಸ್ವಿಯಾಗಿ ಬಳಸಿಕೊಂಡು ಕನ್ನಡಿಗರೆಲ್ಲರೂ ಒಂದೇ ಕುಟುಂಬದವರೆಂಬ ಭಾವನೆಯ ಬೆಸುಗೆಯನ್ನು ದೃಢವಾಗಿ ಹಾಕಲು ಸಾಹಸಪಡಬೇಕಾಗಿದೆ. ಇಲ್ಲದಿದ್ದರೆ ಇಷ್ಟರವರೆಗಿನ ಪ್ರಯತ್ನವೆಲ್ಲವೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತಾದೀತು.

ಕನ್ನಡಿಗರಲ್ಲಿ ಇಷ್ಟರವರೆಗೆ ಆಡಳಿತ ಭೇದದಿಂದೆಂಬಂತೆ ಮಂಗಳೂರವರು, ಬೆಂಗಳೂರವರು, ಧಾರವಾಡದವರು, ಕಾರವಾರದವರು, ರಾಯಚೂರಿನವರು, ಮೈಸೂರಿನವರು ಎಂಬಂತಹ ಭೇದಭಾವವಿತ್ತೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಈಗ ಅಂತಹ ಭಾವನೆಯು ಪ್ರಯೋಜಕವಾದುದಲ್ಲ. ಅದನ್ನು ಮಾರಕವೆಂದೇ ಭಾವಿಸುವುದು ಉತ್ತಮ. ಏಕೆಂದರೆ ನಾವು ಇಂದು ಉಳಿದೆಲ್ಲ ರಂಗಗಳಲ್ಲಿಯಂತೆ ಆಡಳಿತರಂಗದಲ್ಲೂ ಒಂದುಗೂಡಿ ದುಡಿದರೆ ಮಾತ್ರ ಕನ್ನಡಿಗರೆಲ್ಲರ ಅಭ್ಯುದಯಕ್ಕೆ ಕಾರಣವಾದ ಯೋಜನೆಗಳನ್ನು ರೂಪಿಸಿಯೇವು; ಕಾರ್ಯಗತಗೊಳಿಸಿಯೇವು; ಒಂದು ನಾಡವರಾಗಿ ಬಾಳಿಯೇವು. ಇದೇ ಬೇಕಾದ ಮಹತ್ವಪೂರ್ಣ ವಿಷಯ.

ಕರ್ನಾಟಕ ಏಕೀಕರಣಕ್ಕಾಗಿಯೇ ಜೀವನವನ್ನು ಮುಡಿಪಿಟ್ಟ ಹಳೆಯ ಹುಲಿಗಳೂ ವೀರ ಸಿಂಹಗಳೂ ನಮ್ಮ ನಡುವೆ ಇನ್ನೂ ಇರುವುದು ನಿಜಕ್ಕೂ ಸಂತೋಷದ ಸಂಗತಿ—ಆದರೆ ಈ ಸಂತೋಷದ ನಡುವೆ ಎರಡು ವಿಷಯಗಳು ನಮ್ಮನ್ನು ನೊಂದುಕೊಳ್ಳುವಂತೆ ಮಾಡಿವೆ. ಒಂದನೆಯದೇನೆಂದರೆ, ಕನ್ನಡಿಗರಾದ ನಾವು, ನಮ್ಮ ಈ ನಾಡಿಗೆ ಪ್ರಾಚೀನ ಕಾಲದಿಂದಲೂ ಕರ್ನಾಟಕ ಎಂಬ ಹೆಸರೇ ರೂಢವಾಗಿದ್ದರೂ ಮತ್ತು ಏಕೀಕೃತ ಕನ್ನಡ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರೇ ಬಹಳ ಚೆನ್ನಾಗಿ ಒಪ್ಪುತ್ತಿದ್ದರೂ 'ಮೈಸೂರು" ಎಂಬ "ಸಣ್ಣ" ಹೆಸರಿನಿಂದ ನಮ್ಮ ರಾಜ್ಯವನ್ನು ಕರೆದುಕೊಳ್ಳಬೇಕಾಗಿ ಬಂದಿರುವುದು ನಮ್ಮ ದುರ್ದೈವ. ಮೈಸೂರು ಎಂಬ ಹೆಸರನ್ನೆ ಇಟ್ಟುಕೊಳ್ಳಿ ಎಂದು ಬೋಧಿಸಿದ ಮಹನೀಯರು ರಾಜಕೀಯ ಕುಶಲತೆಯನ್ನು ಪ್ರದರ್ಶಿಸಿದ್ದಾರೆ ಎಂದು ಒಪ್ಪಬಹುದು; ಆದರೆ ಕರ್ನಾಟಕ ಎಂಬ ಹೆಸರಿನ ಪರಂಪರೆಯನ್ನು ಮುಂದರಿಸಿಕೊಂಡು ಹೋಗಲು ಹಿಂಜರಿದ ಅವಿವೇಕಿಗಳವರು ಎಂಬುದಂತೂ ನಿರ್ವಿವಾದವಾದ ಮಾತು. ಇದನ್ನು ಇನ್ನು ಮುಂದಾದರೂ ಕನ್ನಡಿಗರು ಸರಿಪಡಿಸತಕ್ಕದ್ದು ಯೋಗ್ಯ. ಮೈಸೂರು ಸಹ ಸಮಾವೇಶಗೊಂಡಿರುವ ನಾಡಿಗೆ ಕರ್ನಾಟಕ ಎಂಬ ದಿವ್ಯ ಭವ್ಯ ಹೆಸರನ್ನಿಡದೆ, ಮೈಸೂರೆಂದೇ ಹೇಳುವುದೆಂದರೆ ದೇಹವನ್ನು ಕಣ್ಣು, ಅಥವಾ ತಲೆ ಎಂದು ಕರೆಯಹೋದಂತೆ ಅಪಹಾಸ್ಯಕರ. ಭಾರತವನ್ನು ದೆಹಲಿ ಎಂದು ಕರೆಯಲಾದೀತೆ?

ದಕ್ಷಿಣ ಕನ್ನಡ ಜಿಲ್ಲೆಯವರಾದ ನಮ್ಮನ್ನು ಬಾಧಿಸಿರುವ ಇನ್ನೊಂದು ನೋವೆಂದರೆ, ಕಾಸರಗೋಡಿನ ಬಾಂಧವರ ಕುರಿತಾದುದಾಗಿದೆ. ಹೆಸರಿಗೇನೊ ನಾವು ಕನ್ನಡಿಗರು; ಆದರೆ ನಿಜವಾಗಿ ನಾವು—ಹೆಚ್ಚಿನವರು—ತುಳುವರು. ಈ ತುಳುನಾಡು ಇಂದು ಅನ್ಯಾಯವಾಗಿ ಇಬ್ಭಾಗವಾಗಿದೆ; ಕಾಸರಗೋಡಿನ ಎರಡು ಲಕ್ಷ ಜನರು ತುಳುವರು ಕೇರಳೀಯರ ಪ್ರಭುತ್ವಕ್ಕೆ ಶಿರಬಾಗಿ ನಡೆಯಬೇಕಾಗಿದೆ. ಇಂತಹ ತೀರ್ಮಾನಕ್ಕೆ ಬಂದ ಕ್ರಮದ ನೀತಿ ಬಾಹಿರತೆಯನ್ನು ನಾವಾದರೂ ಅನೇಕ ಸಲ ಎತ್ತಿ ತೋರಿಸಿದ್ದೇವೆ; ಮತ್ತು ಜನರ ಕಂಠದೊಡನೆ ಧ್ವನಿ ಕೂಡಿಸಿ ಈ ಅನ್ಯಾಯ ತಿದ್ದಲ್ಪಡಬೇಕೆಂದು ಕೇಳಿಕೊಂಡಿದ್ದೇವೆ. ಆದರೆ "ಜೀವನ" ಪತ್ರಿಕೆಯ ಮಾನ್ಯ ಸಂಪಾದಕರೂ ಹಿರಿಯ ಮೇಧಾವಿಗಳೂ ಆಗಿರುವ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಹೇಳಿದಂತೆ ಕಾಶ್ಮೀರದ ಪ್ರಶ್ನೆಯನ್ನು ತಿರುನೆಲ್ವೇಲಿಯ ಜನರೂ ಕೇರಳದ ಪ್ರಶ್ನೆಯನ್ನು ಅಸ್ಸಾಮಿನ ಜನರೂ ತೀ


ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

**1956 ನಮ್ಮ ರಜತಮಹೋತ್ಸವದ ವರ್ಷ**

ಸ್ಥಾಪನೆ: 1931

**ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್**

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು
ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ-ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.



ಗ್ರೇಮ್ಸ್: 'ಕಾನಾರ್ಡ್' ಫೋನ್: 65

**ಇಂಡಿಯನ್ ಒಟೊಮೊಬೈಲ್ಸ್**

ಉಡುಪಿ.

ಒಟೊಮೊಬೈಲ್ ಸ್ಪೇರ್‌ಪಾರ್ಟ್ಸ್, ಉಷಾ ಹೊಲಿಗೆ ಯಂತ್ರಗಳಿಗೂ, ಇಲೆಕ್ಟ್ರಿಕ್ ಫೇನುಗಳಿಗೂ ವಿಚಾರಿಸಿರಿ

ವಿಳಾಸ: **ಕಾನಾರ್ಡ್‌ಕರ್ ಬಿಲ್ಡಿಂಗ್ಸ್**

ಉಡುಪಿ.

ವರ್ಗಾಯಿಸುವಂತಹ ವಿಲಕ್ಷಣ ಪ್ರಜಾಪ್ರಭುತ್ವ ಪದ್ಧತಿಯು ನಮ್ಮಲ್ಲಿ ರೂಢವಿದೆ ಎನ್ನಬೇಕಾಗಿದೆ— ಕಾಸರಗೋಡಿನ ಬಾಂಧವರ ವಿಧಿಯನ್ನು ಕಂಡು! ಪ್ರಜಾಪ್ರಭುತ್ವವೆಂದರೆ ಆಯಾ ಪ್ರದೇಶದ ಜನರ ಹಿತವನ್ನು ರಾಷ್ಟ್ರದ ಸಮಷ್ಟಿ ಹಿತದ ಚೌಕಟ್ಟಿನಲ್ಲಿರಿಸಿನೋಡುವುದೆಂಬ ಸೂತ್ರಕ್ಕೆ ವ್ಯಾಖ್ಯಾನ ಬರೆಯುವಾಗ ಕಾಸರಗೋಡಿಗೆ ಪರಮ ಅನ್ಯಾಯವಾಗಿದೆ. ಇದನ್ನು ಹಾಯಾಗಿ ಒಪ್ಪಿಕೊಳ್ಳಿರಿ—ಎನ್ನುವುದೇನೋ ಸುಲಭ. ಆದರೆ ಅನುಭವಿಸಿದವಳಿಗೆನೇ ಗೊತ್ತಲ್ಲವೆ ಹೆರಿಗೆಯ ಬೇನೆ? ಸೂಲಗಿತ್ತಿಗಲ್ಲ!— ತದ್ರೀತಿ ಕಾಸರಗೋಡಿನ ತುಳುವರಿಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತೌಳವ ಬಾಂಧವರಿಗೆ, ಕನ್ನಡ ಜಿಲ್ಲೆಯ ಹೊರಗಿನ ಕನ್ನಡಿಗರಿಗೆ— ಈ ಅನ್ಯಾಯದ ಬಿಸಿ ಅರಿವಾಗಬಲ್ಲುದು. ಪ್ರಜಾಪ್ರಭುತ್ವದಲ್ಲಿ ಯಾವುದೂ ಸ್ಥಿರವಲ್ಲವೆನ್ನುವ ಬಿಸಿಲುಗುದುರೆಯ ಹಿಂದೆ ಹೋಗುವ ಹವ್ಯಾಸದಿಂದಲೇ ಸಮಾಧಾನಪಟ್ಟುಕೊಳ್ಳುವ ಕಾಲವಂತೂ ಇದಲ್ಲ.

ಇಷ್ಟು ಹೇಳಿ, ನಾವು ಕನ್ನಡ ರಾಜ್ಯಕ್ಕೂ ಈ ರಾಜ್ಯದ ನಿಜವಾದ ಪ್ರಭುಗಳಾಗಿರುವ ಕನ್ನಡ ಜನಕ್ಕೂ ಶುಭವನ್ನೂ ಶ್ರೇಯಸ್ಸನ್ನೂ ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

## ಈ ಸಂಚಿಕೆಯ ಕುರಿತು....

ನಮ್ಮ ಈ ವಿಶೇಷ ಸಂಚಿಕೆಯು ಕನ್ನಡ ರಾಜ್ಯದ ಬಗ್ಗೆ ಕೆಲವಾದರೂ ವಿಷಯಗಳನ್ನು ಜನರ ಮುಂದೆ ಇಡುವುದೆಂದು ನಂಬಿದ್ದೇವೆ. ಇತಿಹಾಸ ವೃತ್ತಾಂತ, ಆರ್ಥಿಕ ಸಮೀಕ್ಷೆ, ಮತ್ತು ನಮ್ಮನ್ನೆದುರಿಸಿರುವ ಕೆಲವು ವಿಶಿಷ್ಟ ಸಮಸ್ಯೆಗಳ ವಿಮರ್ಶೆ, ನಡೆಸುವುದನ್ನು ಈ ಲೇಖನಗಳಿಂದ ಮನಗಾಣಬಹುದು. ಇದನ್ನು ಬರೆದು ಸಹಕರಿಸಿದ ಲೇಖಕರ ಉಪಕಾರವನ್ನು ಸ್ಮರಿಸುತ್ತೇವೆ. ನಾವು ೨೪ ಪುಟಗಳ ವಿಶೇಷ ಸಂಚಿಕೆಯನ್ನು ಹೊರಡಿಸುವುದೆಂದು ಸಂಕಲ್ಪಿಸಿದ್ದರೂ ಕೊನೆಗೆ ೩೨ ಪುಟಗಳ ಸಂಚಿಕೆಯನ್ನೇ ಪ್ರಕಟಿಸಬೇಕಾಯಿತು. ಆದರೂ ವಿಳಂಬವಾಗಿ ಕೈಸೇರಿದ ಕೆಲವು ಲೇಖನಗಳನ್ನು ಬಿಡಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ. ಅಲ್ಲದೆ ಎಂದಿನಂತೆ ನಮಗೆ ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿದ ಮಹನೀಯರಿಗೂ ನಮ್ಮ ದೀಪಾವಳಿಯ ಶುಭಾಶಯಗಳನ್ನು ಸಲ್ಲಿಸಲು ತುಂಬ ಆನಂದವಾಗುತ್ತದೆ. ಓದುಗರಿಗೂ ದೀಪಾವಳಿಯ ಶುಭಾಶಯಗಳನ್ನು ಅರ್ಪಿಸುತ್ತೇವೆ.

ಬಿ. ಮಾಧವಾಚಾರ್, ಎಂ. ಎಲ್. ಎ.

ಭದ್ರಾವತಿಯ ಪೌರ ಸಭೆ, ಮೈಸೂರು ಕಾಗದ ಕಾರ್ಖಾನೆಯ ಕೂಲಿಗಾರ ಸಂಘ ಇವುಗಳ ಅಧ್ಯಕ್ಷರಾಗಿ ಸೇವೆಸಲ್ಲಿಸಿರುತ್ತಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎರಡು ಬಾರಿ ಕಾರಾಗೃಹವಾಸವನ್ನನುಭವಿಸಿರುವರು. ಕರ್ನಾಟಕ ಏಕೀಕರಣದ ಸಮರ್ಥಕರು. ಐ. ಎನ್. ಟಿ. ಯು. ಸಿ. ಯ ಮೈಸೂರು ಪ್ರಾಂತೀಯ ಶಾಖೆಯ ಉಪಾಧ್ಯಕ್ಷರಿರುವರು. ಮೈಸೂರು ಶಾಸನಸಭೆಗೆ ಭದ್ರಾವತಿ ಮತ್ತು ನರಸಿಂಹರಾಜಪುರ ತಾಲೂಕುಗಳಿಂದ ಕಾಂಗ್ರೆಸ್ ಉಮೇದುವಾರರಾಗಿ ಆರಿಸಿಬಂದು ಕೈಲಾದ ಸೇವೆ ಸಲ್ಲಿಸುತ್ತಿದ್ದಾರೆ. ಹುಟ್ಟೂರಾದ ದಕ್ಷಿಣ ಕನ್ನಡವನ್ನೂ ಮರೆಯದೆ ಸಂದರ್ಭದೊರೆತಾಗಲೆಲ್ಲ ಅಲ್ಲಿಯ ಸೇವೆಗೂ ಸಿದ್ಧಹಸ್ತರಾಗಿರುವರು.

ಕೈ ಗಡಿಯಾರ
ಕೇವಲ 6 ರೂ. ಮಾತ್ರ



೫ ವರ್ಷ ಖಾತರಿಯ ೧೫ ಜೂಯೆಲ್ಸನ ಚೈನ್ ಸಿಸ್ಟರ್ನ ಕೈಗಡಿಯಾರ ಕೇವಲ ೬ ರೂ. ಮಾತ್ರ. ಪೋಸ್ಟೇಜ್ ೧.೪.೦ ಪ್ರತ್ಯೇಕ.
ಸಾವಿರಾರುಜನ ಪ್ರಯೋಜನ ಪಡೆದಿದ್ದಾರೆ ಒಪ್ಪಿತವಾಗದಿದ್ದಲ್ಲಿ ಬೆಲೆಯನ್ನು ವಾಪಸ್ಸು ಕೊಡಲಾಗುತ್ತೆ. ರೋಮನ್ ಫೌಂಟನ್ ಪೆನ್ನುಗಳನ್ನು ಜನಪ್ರಿಯತೆಗೊಳಿಸಬೇಕೆಂದು ಈ ಯೋಜನೆಯನ್ನು ಜಾರಿಗೆ ತರಲಾಗಿದೆ.
ROMAN TRADING CO,(N-Y)
Post Box 1817—DELHI.

ಜಾಹೀರಾತು ಮಾಡಲ್ಪಟ್ಟ ಸಮಾನುಗಳನ್ನೇ ಪಡೆಕೊಳ್ಳಿರಿ.

# ನೂತನ ರಾಜ್ಯಗಳು

## ಕ್ಷೇತ್ರ ಹಾಗೂ ಜನಸಂಖ್ಯೆ

1951ರ ಜನಗಣತಿಯ ಆಧಾರದ ಮೇಲೆ, ರಾಜ್ಯಗಳ ಪುನರ್ವ್ಯವಸ್ಥಾ ಕಾನೂನಿನ ಪ್ರಕಾರ ಪುನರ್ವ್ಯವಸ್ಥೆಗೊಂಡ, ನೂತನ ರಾಜ್ಯಗಳ ಕ್ಷೇತ್ರ ಹಾಗೂ ಜನಸಂಖ್ಯೆಯ ಅಂಕೆಗಳು, ಕೆಳಕಂಡಂತಿವೆ:—

| ರಾಜ್ಯ | ಕ್ಷೇತ್ರ (ಚದುರ ಮೈಲಿಗಳು) | ಜನಸಂಖ್ಯೆ (1951ರ ಜನಗಣತಿ ಆಧಾರದ ಮೇಲೆ) |
|---|---|---|
| ಆಂಧ್ರ ಪ್ರದೇಶ | 105,962 | 31,259,815 |
| ಅಸ್ಸಾಂ | 85,012 | 9,043,707 |
| ಬಿಹಾರ್ | 67,300 | 38,827,517 |
| ಮುಂಬೈ | 190 919 | 48,265,120 |
| ಜಮ್ಮು ಮತ್ತು ಕಾಶ್ಮೀರ್ | 62,780 | 4,400,000 |
| ಕೇರಳ | 15,035 | 13,549,118 |
| ಮಧ್ಯಪ್ರದೇಶ್ | 171,201 | 26,095,680 |
| ಮದರಾಸ್ | 50,110 | 29,974,936 |
| ಮೈಸೂರು | 74,347 | 19,401,612 |
| ಒರಿಸ್ಸಾ | 60,136 | 14,645 946 |
| ಪಂಜಾಬ್ | 47,456 | 16,134,890 |
| ರಾಜಾಸ್ಥಾನ್ | 132,078 | 15,946,731 |
| ಉತ್ತರ ಪ್ರದೇಶ್ | 113,409 | 62,215,742 |
| ಪಶ್ಚಿಮ ಬಂಗಾಳ | 33,809 | 26,258,647 |

[ಸೂಚನೆ:— ಬಿಹಾರ್ ಮತ್ತು ಪಶ್ಚಿಮ ಬಂಗಾಳಗಳಿಗೆ ಸಂಬಂಧಿಸಿದ ಅಂಕೆಗಳು ಅಂದಾಜಿನ ಅಂಕೆಗಳಾಗಿವೆ.]

## ಮೈಸೂರಿನಲ್ಲಿ ಹಾಯ್‌ಸ್ಕೂಲುಗಳು

| | | | | |
|---|---|---|---|---|
| 1. | ಸರಕಾರಿ ಹಾಯ್‌ಸ್ಕೂಲುಗಳು (ಹುಡುಗರಿಗೆ) | 68 | ವಿದ್ಯಾರ್ಥಿಗಳು | 14,443 |
| 2. | ,, (ಹುಡುಗಿಯರಿಗೆ) | 13 | ,, | 4,448 |
| 3. | ಜಿಲ್ಲಾ ಬೋರ್ಡು ಮತ್ತು ಮುನಿಸಿಪಲ್ ಹುಡುಗರಿಗೆ | 120 | ,, | 31,361 |
| 4. | ,, (ಹುಡುಗಿಯರಿಗೆ) | 2 | ,, | 562 |
| 5. | ಖಾಸಗಿ (ಹುಡುಗರಿಗೆ) | 58 | ,, | 20,387 |
| 6. | ,, (ಹುಡುಗಿಯರಿಗೆ) | 32 | ,, | 10,615 |
| | ಒಟ್ಟಾರೆ | 293 | | 81,818 |

(1955ನೇ ಜನವರಿಯ ಅಂಕಸಂಖ್ಯೆಗಳನ್ನಾಧರಿಸಿ ಡಿರೆಕ್ಟರರ ಪ್ರಕಟಿಸಿದ ವರದಿಯಿಂದ ಹಾಯ್‌ಸ್ಕೂಲುಗಳಲ್ಲಿ IVರಿಂದ VIನೇ ಫೋರ್ಮಿನ ವರೆಗೆ ಮಾತ್ರವೆಂದು ಗಮನದಲ್ಲಿಡಬೇಕು—S. M. R.)

98 ವರ್ಷಗಳ ಖ್ಯಾತಿಗಳಿಸಿದ ಪಂ॥ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು
ಟ್ರೇಡ್ ಮಾರ್ಕ್

ಪಂ॥ A. R. ಅಯ್ಯರ್
ಸಂತಾನ ಸಿಂಧೂರ (ಸ್ತ್ರೀಯರಿಗೆ: ಪ್ಯಾಕೆಟ್) | ಮದನ ವಿಲಾಸ (ಪುರುಷರಿಗೆ: ಗುಳಿಗೆ)
ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟ್ಯಾಂಪು ಕಳಿಸಿರಿ
ಎ. ರಾಮಸ್ವಾಮಿ ಅಯ್ಯರ್ ಸನ್ಸ್ & ಕಂ., (ನ. ಯು.)
628 ಸಂತಾನ ಸಿಂಧೂರ ಭವನ (ಪೋಸ್ಟ್ ಬೀಟ್ 9, ಮೈಸೂರು S. I.

ಧಾತುಪುಷ್ಟಿ ಲೇಹ
(ಸುವರ್ಣ ಸಾಲಾಮಿಶ್ರಿ, ಕಲ್ಕದ ಮಿಶ್ರ)
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ—ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ ಜೀರ್ಣಶಕ್ತಿನನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ 1ರ ರೂ. 3—8—0

ಕಸ್ತೂರಿ ಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು.
24 ಔನ್ಸ್ ರೂ. 5. 12 ಔ. ರೂ. 2—12—0. 8 ಔ. ರೂ. 1—12—0.

ಯಂ. ಗಣಪಯ್ಯ ಎಂಡ್ ಸನ್ಸ್. ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.
ಔಷಧಿ ಸಿಗುವ ಸ್ಥಳ: 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಬಿಲ್ವರೋಡ್, ಬ್ಯಾಕುಲ್ಲಾ ರೈಲ್ವೆಸ್ಟೇಶನ್ ಎದುರು, ಬ್ಯಾಕುಲ್ಲಾ ಬೊಂಬಾಯಿ. 2) ಜನರಲ್ ಸ್ಟೋರ್ಸ್, ಕೆಮಿಸ್ಟ್ G.I.P. ಮಾಟುಂಗ, ಬೊಂಬಾಯಿ 3) ಎ. ವಿ. ನಾಯಕ್, ಕೆಮಿಸ್ಟ್, G. I. P. ಮಾಟುಂಗ, ಬೊಂಬಾಯಿ. 4) ಪ್ರಭು ಫಾರ್ಮಸಿ, ಕಾರ್ಕಳ.

# ಕನ್ನಡಿಗರ ಕಾವ್ಯಸ್ಫೂರ್ತಿಯ ಪ್ರವಾಹ

ನಮ್ಮ ಪ್ರಾಚೀನ ಕವಿಗಳಿಗೆ ಧರ್ಮ, ನೀತಿ ಮತ್ತು ಪ್ರಭುಭಕ್ತಿಗಳೇ ಕಾವ್ಯ ಸ್ಫೂರ್ತಿಯನ್ನಿತ್ತ ಸಂಜೀವನ ಶಕ್ತಿ ಎಂದೆನ್ನಬಹುದು. ಆದುದರಿಂದ ಕನ್ನಡ ಸಾಹಿತ್ಯದ ವ್ಯಾಸಂಗಕ್ಕೆ ನಮ್ಮಲ್ಲಿ ಧರ್ಮ ಸಮನ್ವಯ ದೃಷ್ಟಿ ಇರುವುದು ಅತ್ಯವಶ್ಯವಾಗಿದೆ. ಈಚೆಗೇನೋ ಕಣ್ಣೆದುರಿನ ಪ್ರಪಂಚದ ವ್ಯವಹಾರಗಳಿಂದ ಕವಿಯು ಸ್ಫೂರ್ತಿ ಪಡೆಯುತ್ತಿದ್ದಾನೆ; ಆತನ ಕಾವ್ಯ ನವ್ಯ ರೂಪವನ್ನು ಧರಿಸತೊಡಗಿದೆ.

**ಬರೆದವರು: ಶ್ರೀ ಜಿ. ವರದರಾಜ ರಾವ್, ಎಂ. ಎ.**

ಕಾವ್ಯ ರಚನೆಗೆ ಮುಖ್ಯವಾದ ಪ್ರೇರಕ ಶಕ್ತಿಯನ್ನು ಸ್ಫೂರ್ತಿ ಎಂದು ಕರೆಯಬಹುದಷ್ಟೆ. ಇದು ಕವಿಗೆ ಉಂಟಾಗುವುದು ಹೇಗೆ? ಬಾಹ್ಯ ಪ್ರಪಂಚದ ಪಾತ್ರವೇನು? ಕವಿಯ ಅಂತರಂಗಿಕ ಚರ್ಯೆಯ ಪಾತ್ರವೇನು? ಈ ಪ್ರಶ್ನೆಗಳನ್ನು ಬಿಡಿಸಿ ಹೇಳುವುದು ಅಷ್ಟೇನೂ ಸುಲಭವಲ್ಲ. ಕವಿಗಳಲ್ಲಿ ಕೆಲವರು ಮಹಾ ಕಾವ್ಯಗಳನ್ನು ಬರೆದಿರುತ್ತಾರೆ. ಕೆಲವರು ಸಣ್ಣ ಸಣ್ಣ ಗೀತಗಳನ್ನೋ ಕವಿತೆಗಳನ್ನೋ ಬರೆದಿರುತ್ತಾರೆ. ಆತ್ಮನಿಷ್ಠ (Subjective)ವಾದ ಕವಿತೆಯಲ್ಲಿ ಕವಿಯ ಸ್ವಂತ ಭಾವಾನುಭವಗಳೇ ಮುಖ್ಯವಾದರೆ, ವಸ್ತುನಿಷ್ಠ (Objective)ವಾದ ಮಹಾಕಾವ್ಯದಲ್ಲಿ ಬೇರೆ ಬೇರೆ ಪಾತ್ರಗಳನ್ನು ಕವಿಯಾದವನು ಕಥೆಗೆ ಅನುಸಾರವಾಗಿ ನಿರೂಪಿಸಬೇಕಾಗುತ್ತದೆ. ಆದ್ದರಿಂದ, ಸ್ಫೂರ್ತಿಯು ನೆಲೆ ವ್ಯಕ್ತಿಯಿಂದ ಮೊದಲ್ಗೊಂಡು, ಅನ್ಯ ಸೃಷ್ಟಿ ಶಕ್ತಿಯ ವರೆಗೆ ವ್ಯಾಪಿಸಿದೆಯೆನ್ನಬಹುದು. ಈ ವಿಚಾರ ಧಾರೆಯು ಕನ್ನಡದ ಕಾವ್ಯಗಳಲ್ಲಿ ಹೇಗೆ ವಿದಿತವಾಗುತ್ತದೆ ಎಂಬುದನ್ನು ಸಂಗ್ರಹವಾಗಿ ಪರಿಶೀಲಿಸೋಣ.

ಕವಿಯಲ್ಲಿ ಪ್ರತಿಭೆಯೆಂಬ ಒಂದು ನಿಸರ್ಗಶಕ್ತಿ ಹುದುಗಿರುತ್ತದೆ. ಇದು ಆತನಲ್ಲಿ ಮೊದಮೊದಲು ಸುಪ್ತವಾಗಿದ್ದು, ಸಕಾಲ ಒದಗಿ ಬಂದ ಕೂಡಲೆ ಮೊಳಕೆಯಂತೆ ತಲೆದೋರಿ, ಕಡೆಕಡೆಗೆ ದಿವ್ಯಶಕ್ತಿಯಾಗಿ ಪರಿಣಮಿಸುತ್ತದೆ. ಈ ಪ್ರತಿಭೆಯು ಸ್ಫೂರ್ತಿಯಿಂದ ಚೇತನಗೊಂಡು ಕಾವ್ಯ ರಚನೆಗೆ ಕಾರಣವಾಗುತ್ತದೆ. ಇದನ್ನೇ ನಾಗವರ್ಮನು ಕವಿತೆಗೆ ಕಾರಣವನ್ನು ಪ್ರಸ್ತಾಪಿಸುವಾಗ "ಪ್ರತಿಭಾನಂ ಕಾವ್ಯ ವಿದ್ಯಾಪ್ರಚಯ ಪರಿಚಯಂ ವೃದ್ಧ ಸೇವಾನುರಾಗಂ ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ" ಎಂಬುದಾಗಿ ಹೇಳುವಲ್ಲಿ ಪ್ರತಿಭೆಗೇ ಅಗ್ರಸ್ಥಾನವನ್ನು ಕೊಟ್ಟಿರುತ್ತಾನೆ. ಪ್ರತಿಭೆಯಿಲ್ಲದೆ ಯಾರೂ ಉತ್ತಮ ಕವಿಗಳಾಗಲಾರರು. ಆದರೆ ಪ್ರತಿಭೆಯಿದ್ದೂ, ಸಕಾಲದಲ್ಲಿ ಸ್ಫೂರ್ತಿಯ ಉದ್ಯೋತಕವಿಲ್ಲದಿದ್ದರೆ ಕವಿಯ ಚೇತನ ಜಾಗೃತಗೊಳ್ಳಲಾರದು. ಕವಿಯ ಜೀವನದಲ್ಲಿ ಇದೊಂದು ದಿವ್ಯಾನುಭವ, ಮಹಾಜ್ಞಾನಿಗಳಿಗೆ ಭಗವಂತನ ಸಾಕ್ಷಾತ್ಕಾರವಾದಾಗ ಯಾವ ಬ್ರಹ್ಮಾನಂದವಾಗಬಹುದೋ, ಅದಕ್ಕೆ ಸರಿಸಮನಾದ ಕಾವ್ಯಾನಂದವಾದಾಗ ಕವಿ ಸಂಪೂರ್ಣವಾಗಿ ರಸವಶನಾಗುತ್ತಾನೆ; ಸ್ಫೂರ್ತಿಪಡೆಯುತ್ತಾನೆ. ಈ ಅನುಭವವಾಗುವುದಕ್ಕೆ ಹಿರಿದು ಕಿರಿದುಗಳ ಭೇದವಿಲ್ಲ. ಆಂಗ್ಲಕವಿಯೊಬ್ಬ ಹೇಳುವಂತೆ ಅದಕ್ಕೆ ಕೇವಲ ಒಂದು ಕನಿಷ್ಠವಾದ ಕುಸುಮವಾಗಬಹುದು (To me the meanest-flower that blows can give Thoughts that do often lie too deep for tears – Words worth). ಇಲ್ಲವೇ ಆದಿ ಕವಿ ವಾಲ್ಮೀಕಿಗಾದಂತೆ ಕ್ರೌಂಚ ಮಿಥುನದ ಶೋಕೋದ್ವೇಗವಾಗಬಹುದು. ಅಂತೂ ಚಕ್ಕಮುಕ್ಕಿಯ ಕಲ್ಲು ತಾಕಿದರೆ ಹೇಗೆ ಅಗ್ನಿಕಣಗಳು ಹುಟ್ಟುತ್ತವೆಯೋ ಹಾಗೆ ಪ್ರತಿಭೆಯೆನ್ನುವುದು ಸನ್ನಿವೇಶದ ಸಂಪರ್ಕದಿಂದ ಸ್ಫೂರ್ತಿಯ ಭುಜಾಸ್ಫಾಲನೆಯನ್ನು ಪಡೆದು ಕವಿಯ ಅನುಭವ ಆಕಾರ ತಾಳಿ ಕಾವ್ಯವಾಗುತ್ತದೆ.

ಮಹಾಕಾವ್ಯಗಳ ಉಗಮಕ್ಕೆ ಆಯಾ ಕಾಲ, ದೇಶಗಳು ಬಹುಮಟ್ಟಿಗೆ ಕಾರಣವೆಂದು ಅನೇಕರು ಹೇಳಿರುತ್ತಾರೆ. ಈ ಮಾತು ಅಕ್ಷರಶಃ ಸತ್ಯ. ನಮ್ಮ ಪ್ರಾಚೀನ ಕವಿಗಳಾದ ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶರನ್ನೇ ಆರಿಸಿಕೊಂಡರೂ ಸಹ ಈ ಸತ್ಯಾಂಶವು ಬಹು ಚೆನ್ನಾಗಿ ವಿದಿತವಾಗುತ್ತದೆ. ಕನ್ನಡ ಸಾಹಿತ್ಯದ ಮುಖ್ಯ ತಳಹದಿ ಧರ್ಮ. ಅದರಲ್ಲಿಯೂ ಜೈನ, ವೀರಶೈವ, ವೈದಿಕ ಧರ್ಮಗಳು ನಮ್ಮ ಪ್ರಾಚೀನ ಕವಿಗಳಿಗೆ ಮುಖ್ಯ ಸಂಜೀವನ ಶಕ್ತಿಗಳಾದವು. ಕನ್ನಡ ಸಾಹಿತ್ಯದ ವ್ಯಾಸಂಗಕ್ಕೆ ಈ ಧರ್ಮ ಸಮನ್ವಯದ ಜ್ಞಾನ ಅತ್ಯಗತ್ಯ; ಅನಿವಾರ್ಯ. ಒಂದು ಕಾಲದಲ್ಲಿ ನಮ್ಮ ಕವಿಗಳಿಗೆ ಸ್ಫೂರ್ತಿ ನೀಡಿದ ದಿವ್ಯ ಶಕ್ತಿಯೆಂದರೆ ಈ ಧರ್ಮವೇ. ಜೈನ ತೀರ್ಥಂಕರರ ಒಂದೊಂದು ಪುರಾಣವೂ ಕನ್ನಡದ ಒಂದೊಂದು ಅಪೂರ್ವ ಗಣಿಗಳು. ಆಧ್ಯಾತ್ಮಿಕ ಜ್ಞಾನಕ್ಕೆ ಈ ಪುರಾಣಗಳು ಹೆಬ್ಬಾಗಿಲುಗಳಂತಿವೆ. ಇಲ್ಲವೇ, ಜೈನ ಧರ್ಮವೆನ್ನುವ ದೀಪಸ್ತಂಭದಲ್ಲಿ ಈ ಒಂದೊಂದು ಪುರಾಣವೂ ನಮಗೆ ಸರ್ವದಾ ಬೆಳಕನ್ನು ಬೀರುವ ರತ್ನದೀಪ್ತಿಗಳಂತಿವೆ. ಅರಿತಷ್ಟೂ ಅಗಾಧವಾಗಿವೆ; ಓದಿದಷ್ಟೂ ಉನ್ನತವಾಗಿವೆ.

ವೀರಶೈವ ಹಾಗೂ ವೈದಿಕ ಧರ್ಮಗಳಂತೂ ಕನ್ನಡ ಸಾಹಿತ್ಯದಲ್ಲಿ ಭಕ್ತಿಯುಗವೊಂದನ್ನು ನಿರ್ಮಿಸಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಹರಿಹರನ ರಗಳೆಗಳು, ಶಿವಶರಣರ ವಚನಗಳು, ಹರಿದಾಸರ ಕೀರ್ತನೆಗಳು, ಕುಮಾರವ್ಯಾಸ ಮತ್ತು ಲಕ್ಷ್ಮೀಶರ ಶ್ರೀ ಕೃಷ್ಣ ಚರಿತಾಮೃತ ಮುಂತಾದುವು ಮನೆಮನೆಗೂ ಧರ್ಮದ ಸಂದೇಶವನ್ನು ಸಾರಿ ಹೇಳುವ ಅನರ್ಘ್ಯ ರಚನೆಗಳಾಗಿವೆ. ಈ ದೈವ ಭಕ್ತಿಯೇ ಈ ಎಲ್ಲ ಕವಿಗಳ ಮುಖ್ಯ ಸ್ಫೂರ್ತಿಯಾಯಿತು. ಈ ಕವಿಗಳು ಕೇವಲ ನೀರಸವಾಗಿ ಧರ್ಮವನ್ನು ಮಾತ್ರವೇ ಹೇಳಿದ್ದರೆ ಅದು ಶಾಸ್ತ್ರವಾಗುತ್ತಿತ್ತು. ಆದರೆ, ಅವರು ಹಾಗೆ ಮಾಡದೆ, ಪಂಪನು ಹೇಳಿದಂತೆ "ಕಾವ್ಯ ಧರ್ಮಮುಂ ಧರ್ಮಮುಮಂ" ಬೆರಸಿ ಹೇಳಿದರು. ಷಡಕ್ಷರಿ ಹೇಳಿದಂತೆ "ರಸೆಯೊಳ್ ರಸವತ್ಕವಿತೆಯು ನುಸಿರಲ್ ಪಡೆದು ಅಸಮನಯನನಂ" ಹೊಗಳಿದರು. ಇಲ್ಲವೇ ಕುಮಾರವ್ಯಾಸನು ಹೇಳುವಂತೆ ಅರಸರಿಂದ ತೊಡಗಿ ಸರ್ವರಿಗೂ ಪ್ರಿಯವಾಗುವಂತೆ ಪದುಮನಾಭನ ಲೀಲೆಯನ್ನು ಸಾರಿ ಹೇಳಬಹುದು. ಒಟ್ಟಿನಲ್ಲಿ ಆಯಾ ಕಾಲದಲ್ಲಿ ಈ ಧಾರ್ಮಿಕ ಪ್ರಭಾವದ ಪ್ರವಾಹವೊಂದು ಕರ್ನಾಟಕದಲ್ಲಿ ಪ್ರವಹಿಸದೆ ಹೋಗಿದ್ದರೆ ನಮಗೆ ಈ ಅಮೂಲ್ಯ ಕೃತಿಗಳು ಲಭಿಸುತ್ತಿದ್ದವೋ ಇಲ್ಲವೋ ಬಲ್ಲವರಾರು? ಈ ಕೃತಿಗಳು ಮತೀಯವೆಂದು ಕೆಲವರು ಟೀಕಿಸಿದರೂ, ಅದು ಎಲ್ಲ ಕನ್ನಡಿಗರೂ ಸ್ವೀಕರಿಸುವೆಂದು ಹೆಮ್ಮೆ ಪಡೆಯದೆ ಇರಲು ಸಾಧ್ಯವಿಲ್ಲ.

ಇದೇ ಸಂದರ್ಭದಲ್ಲಿ, ನಮ್ಮ ಹಿಂದಿನ ಕವಿಗಳಿಗೆ ಸ್ಫೂರ್ತಿ ನೀಡಿದ ಮತ್ತೊಂದು ಶಕ್ತಿಯೆಂದರೆ ಅವರ ಪ್ರಭುಭಕ್ತಿ. ಆದರಲ್ಲಿಯೂ ಪಂಪ, ರನ್ನರಿಗಂತೂ ಈ ಬೆಂಬಲವೇ ಕಾವ್ಯ ರಚನೆಗೆ ಹಂಬಲವನ್ನುಂಟು ಮಾಡಿತು. ಅರಿಕೇಸರಿಯ ಮೇಲಿನ ಅಭಿಮಾನ, ಅನುರಾಗಗಳು "ವಿಕ್ರಮಾರ್ಜುನ ವಿಜಯ"ದ ರಚನೆಗೆ ಪ್ರೇರಿಕೆಯಾಯಿತು. ಸತ್ಯಾಶ್ರಯ ಇಂಥ ಬೆಡಂಗನ ಸಾಹಸ ಕಾರ್ಯಗಳು ರನ್ನನ ಸಾಹಸ ಭೀಮ ವಿಜಯಕ್ಕೆ ತಳಹದಿಯಾಯಿತು. ಈ ಇಬ್ಬರು ಕವಿಗಳೂ ತಮ್ಮ ತಮ್ಮ ಒಡೆಯರನ್ನು ಕಾವ್ಯ ಪ್ರಪಂಚದಲ್ಲಿ ಚಿರಂಜೀವಿಗಳನ್ನಾಗಿ ಮಾಡಿದ್ದಾರೆ. ಈ ಕಾವ್ಯಗಳಿಗೆ ಸ್ಫೂರ್ತಿದಾಯಕರಾಗಿ ಈ ಮಹಾರಾಜರು ಬಹುಮಾನ್ಯದರಾಗಿದ್ದಾರೆ.

ಹರಿಹರನಾದರೋ "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ" ಪದ್ಯವನ್ನು ಬರೆಯುವುದನ್ನು ಖಂಡಿಸಿದ ಮೇಲೆ ಕನ್ನಡದ ಕಾವ್ಯ ಪ್ರವಾಹ, ದೈವ ಭಕ್ತಿಯ ತುಂಬು ಹೊಳೆಯಾಗಿ ಹರಿಯಲಾರಂಭಿಸಿತು. ಸರ್ವಜನ ಪ್ರಿಯವೂ, ಪಂಡಿತ ಪಾಮರ ರಂಜಕವೂ ಆದ ಕನ್ನಡದ ಮುನ್ನಡೆ ಅವ್ಯಾಹತವಾಗಿ ಸಾಗಿತು.

ಕೇವಲ ಧರ್ಮದಿಂದಲೇ ಸ್ಫೂರ್ತಿಪಡೆದ ಕವಿಗಳೂ ಸಹ ಆಗಿಂದಾಗ್ಗೆ ನೀತಿ ಹೇಳುವ ಮೂಲಕ ಮಾನವನ ಬದುಕನ್ನು ಕುರಿತು ಹೇಳಲಾರಂಭಿಸಿದರು. ಶಿವಶರಣರಿಗೆ, ಹರಿದಾಸರಿಗೆ ನಿತ್ಯಜೀವನದ ವಿವಿಧ ಅಂಶಗಳು ಕಾವ್ಯಸ್ಫೂರ್ತಿಯ ವಸ್ತುಗಳಾದವು. ಆದರೆ ಕ್ರಮಕ್ರಮವಾಗಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಹೆಚ್ಚು ಹೆಚ್ಚಾಗಿ ಬಿದ್ದಂತೆಲ್ಲ ಧರ್ಮದ ಚೌಕಟ್ಟನ್ನೇ ಬಿಟ್ಟು ನೇರವಾಗಿ ಮನುಷ್ಯನ ಮನೋಧರ್ಮವೇ ಕಾವ್ಯಕ್ಕೆ ಸ್ಫೂರ್ತಿ ಶಕ್ತಿಯಾಯಿತು. ಆಧುನಿಕ ಕವಿಗಳು ಆತ್ಮಾನುಭವಕ್ಕೆ ಅಗ್ರಸ್ಥಾನವನ್ನು ಕೊಟ್ಟರು. ಆಡುವ ಮಾತು ಹೆಚ್ಚು ಹೆಚ್ಚಾಗಿ ಸ್ವಾನುಭವದ ಸಂಗೀತವಾಯಿತು. ನೋಡುವ ನೋಟವು ನಮ್ಮ ಸುತ್ತುಮುತ್ತಲಿನ ಜೀವನದ ಪ್ರತಿಬಿಂಬವೇ ಆಯಿತು. ಪ್ರತಿಯೊಂದೂ ನಮ್ಮ ಹೃದಯಕ್ಕೇ ನೇರವಾಗಿ ಸಂಬಂಧಪಟ್ಟಂತಾಯಿತು. ಒಂದು ಮಾತಿನಲ್ಲಿ ಹೇಳುವುದಾದರೆ, ಈ ಯುಗದ ಕವಿಗೆ ರಾಜಾಶ್ರಯವಾಗಲಿ, ಮತೀಯ ವಾತಾವರಣವಾಗಲಿ ಸ್ಫೂರ್ತಿಯ ಕೇಂದ್ರಗಳಾಗಲಿಲ್ಲ. ಕಣ್ಣೆದುರಿನ ಪ್ರಪಂಚದ ಒಂದೊಂದು ಚಲನವಲನವೂ ಒಂದೊಂದು ಸ್ಫೂರ್ತಿ ಕಿರಣವಾಯಿತು. ಕವಿ ಕುವೆಂಪು ಅವರು ಹೇಳುವಂತೆ "ಬಡತನಂ, ಕತ್ತಿ, ಗುದ್ದಲಿ, ಹಾರೆ, ಬೆವರು ನೆತ್ತರ್ಗಳಂ" ಗಾನಗೈಯುವುದು ಕವಿಯ ಕರ್ತವ್ಯವಾಯಿತು. ಹಾಗೂ ಪ್ರಾಚೀನ ವಸ್ತುವನ್ನು ಆರಿಸಿಕೊಂಡರೂ ಸಹ ಅದು ನವೀನ ಶಕ್ತಿಗಳ ಪ್ರಭಾವದಿಂದ ನವ್ಯ ರೂಪವನ್ನು ತಾಳಲು ಆರಂಭಿಸಿದೆ.

ಸುಪ್ತವಾದ ಪ್ರತಿಭೆಯನ್ನು ಬಡಿದೆಬ್ಬಿಸುವ ಶಕ್ತಿಯಾದ ಸ್ಫೂರ್ತಿಯು ಹೇಗೆ ಯುಗಯುಗಕ್ಕೂ ಮಾರ್ಪಡುತ್ತದೆ ಎಂಬುದನ್ನು ಇಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ. ಸ್ಫೂರ್ತಿಯಿಂದ ಪ್ರತಿಭೆ ವಿದ್ಯುತ್ತಿನಂತೆ ಮಿಂಚಿದರೆ ಸಾಲದು. ಅದನ್ನು ಲೋಕಕಲ್ಯಾಣಕ್ಕಾಗಿ, ಜನರ ಮನಸ್ಸನ್ನು ಒಲಿಸಿ, ನಲಿಸಿ, ಬೆಳೆಯುವಂತೆ ಮಾಡಬೇಕಾದರೆ ಕವಿಯಾದವನು ನಾಗವರ್ಮನು ಹೇಳಿರುವಂತೆ ಇತರ ಪೋಷಕಶಕ್ತಿಗಳನ್ನು ಗಳಿಸಬೇಕು; ಅವುಗಳನ್ನು ಬಳಸಿಕೊಳ್ಳಬೇಕು. ಕಾವ್ಯದ ಮುಖ್ಯ ಗುರಿ ಯಶಸ್ಸು, ಅರ್ಥಸಂಪಾದನೆ, ವ್ಯವಹಾರಜ್ಞಾನ, ಅಮಂಗಳ ಪರಿಹಾರ, ರಸಾನುಭೂತಿ ಮತ್ತು ಕಾಂತಾಸಮ್ಮಿತವಾದ ನೀತಿಬೋಧೆ. ಈ ಸತ್ಕಾರ್ಯವು ಈ ವರೆಗೆ ಕನ್ನಡದ ಕಾವ್ಯಗಳಿಂದ ಯಥೇಚ್ಛವಾಗಿ ಆಗಿದೆ; ಮುಂದೆಯೂ ಆಗಲಿ, ಆಯಾ ಯುಗದ ಮುಖ್ಯ ಶಕ್ತಿ ತನ್ನ ವೈಶಿಷ್ಟ್ಯವನ್ನು ಚಿರಕಾಲವೂ ಮೆರೆಸುವಂತೆ ನಮ್ಮ ಕವಿಗಳಿಗೆ ಸ್ಫೂರ್ತಿದಾಯಕವಾಗಲಿ.

---

## ಭಾರತ ಮತ್ತು ಜಗತ್ತು

ನನ್ನ ಮತದಂತೆ ಪೂರ್ಣ ಸ್ವರಾಜ್ಯವೆಂದರೆ ಅಲಿಪ್ತ ಸ್ವಾತಂತ್ರ್ಯವಲ್ಲ, ಸುಸಂಘಟಿತವಾದ ಗೌರವ ಪೂರ್ಣ ಸ್ವಾತಂತ್ರ್ಯ. ನನ್ನ ರಾಷ್ಟ್ರೀಯತೆ ಉಗ್ರ ಮಾದರಿಯದಾದರೂ, ಯಾವದೇ ರಾಷ್ಟ್ರ ಇಲ್ಲವೆ ವ್ಯಕ್ತಿಗೆ ಅಹಿತ ಬಗೆಯುವ ಉದ್ದೇಶ ಅದರಲ್ಲಿಲ್ಲ. ಕಾಯದೆ ಕಟ್ಟಳೆಗಳಿಗೆ ನೈತಿಕ ಬಲವೇ ತಳಹದಿ. 'ನಿನ್ನ ಆಸ್ತಿಯನ್ನು ಹೆರವರ ಆಸ್ತಿಗೆ ಕೇಡು ಬಗೆಯದೆ ಬಳಸು' ಎಂಬ ಶಾಶ್ವತ ಸತ್ಯದಲ್ಲಿ ನನಗೆ ನಂಬಿಗೆ ಇದೆ,

ನಮ್ಮ ರಾಷ್ಟ್ರೀಯತೆಯಿಂದ ಇತರ ರಾಷ್ಟ್ರಗಳಿಗೆ ಗಂಡಾಂತರ ಸಂಭವಿಸದು; ಯಾಕೆಂದರೆ ನಾವು ಯಾರನ್ನೂ ಸುಲಿಯಲಿಚ್ಛಿಸುವುದಿಲ್ಲ ಹಾಗು ಯಾರಿಗೂ ನಮ್ಮನ್ನು ಸುಲಿಯಗೊಡುವದಿಲ್ಲ. ಸ್ವರಾಜ್ಯದ ನೆರವಿನಿಂದ ನಾವು ಇಡೀ ಜಗತ್ತಿಗೆ ನೆರವಾಗಬಯಸುತ್ತೇವೆ......

ಭಾರತವು ಸ್ವತಂತ್ರವೂ ಬಲಿಷ್ಠವೂ ಆಗಬೇಕೆಂದು ನನ್ನ ಬಯಕೆ, ಹಾಗಾದಲ್ಲಿ ಅದು ಜಗತ್ತಿನ ಕಲ್ಯಾಣಕ್ಕಾಗಿ ಮನಮುಟ್ಟಿ, ಪವಿತ್ರವಾದ ತ್ಯಾಗವನ್ನು ಮಾಡಬಲ್ಲದು. ವ್ಯಕ್ತಿಯು ಪಾವಿತ್ರ್ಯವುಳ್ಳವನಿದ್ದರೆ ಕುಟುಂಬಕ್ಕಾಗಿ, ಕುಟುಂಬವು ಗ್ರಾಮಕ್ಕಾಗಿ, ಗ್ರಾಮವು ಜಿಲ್ಲೆಗಾಗಿ ಹೀಗೆ ತ್ಯಾಗ ಪರಂಪರೆಯು ಸಾಧಿಸಬಲ್ಲದು........

ಮುಳುಗುವ ಮನುಷ್ಯ ಹೆರವರನ್ನು ಪಾರುಮಾಡಲಾರ. ಇತರರ ಸೇವೆಗೆ ಅರ್ಹರಾಗಲು ನಾವು ಸ್ವಂತದ ಉದ್ಧಾರ ಮೊದಲು ಮಾಡಿಕೊಳ್ಳಬೇಕು. ಭಾರತದ ರಾಷ್ಟ್ರೀಯತೆ ಅಲಿಪ್ತವೂ ಅಲ್ಲ, ಆಕ್ರಮಣಶೀಲವೂ ಅಲ್ಲ, ಹಿಂಸಾತ್ಮಕವೂ ಅಲ್ಲ. ಅದು ಸ್ವಾಸ್ಥ್ಯದಾಯಕ, ಧಾರ್ಮಿಕ, ಅಂತಲೇ ಮಾನವ ಹಿತಕಾರಿಯೂ ಆಹುದು. ಮಾನವ ಕುಟುಂಬಕ್ಕಾಗಿ ದುಡಿಯಲು ಸಿದ್ಧವಾಗುವ ಮೊದಲು ಭಾರತವು ಬಾಳಲು ಕಲಿಯಬೇಕಾಗಿದೆ.

—ಮಹಾತ್ಮಾ ಗಾಂಧೀ.

# ನವೋದಯ

ಕವಿ: ಯೆಸ್. ವೆಂಕಟರಾಜ.

* * *

ನಸುಬೆಳಕು ಬಂದಿಹುದು, ಬಾನಕೊನೆ-
ಯಲಿ ಕೊಳಕು
ಕತ್ತಲೆಯು ಕೈಪಾಡ ಕಳೆಯುತಿಹುದು
ಎಳೆತನದ ಕೆನ್ನೆಯಲಿ ಮಂದಹಾಸದ
ಮಿರುಗು
ಕಂಡಂತೆ ಹೊಂಬಿಸಿಲು ಹರಡುತಿಹುದು.

ಮುಗುಧತನದೋಕುಳಿಯ ಕೆಂಪುಗಲ್ಲದ ಕನ್ನೆ
ಯೆಳ್ಳರೆಯ ನೋಟದಲಿ ನಗುತಿರುವಳು
ಎಳೆತನದ ಚುಕ್ಕಿ ಮೇಲ್ಮುಸುಕನೋಸರಿಸಿ ತಿಳಿ
ತನದ ಮುಗುಲವನುಟ್ಟು ಕಾದಿರುವಳು
ಅರೂಪರೂಪಿನ ದಿವ್ಯತೆಗೆ ಮನಸೋತು
ಕೂಗುತಿವೆ ಜೀವಿಗಳ ಕೊರಲದಾಟಿ
ಆನಂದದನುಭವದ ಸೆಳೆತದಲಿ ಮೈಮರೆದು
ಸಾಗುತಿದೆ ಸಂಸಾರ ಕೋಟಿ ಕೋಟಿ

ಜಡತೆಯಲಿ ಹುದುಗಿರುವ ಚೇತನವು ಕೈಯೆತ್ತಿ
ಕೂಸಿನಂತಳುತಿಹುದು ಬೆಳಕಿಗಾಗಿ
ಸಂತಿಯಲಿ ಬಿಗಿದಿರುವ ಭವ್ಯನಾದ ಸಿರೂಪ
ಕೊರುತಿದೆ ನೆಮ್ಮದಿಯ ಗಾಳಿಗಾಗಿ
ಈ ತನಕ ಮುಗಿದಿರುವ ಮಲರ ತೋಟಿಯ
ತತ್ವ
ತೆರೆತೆರೆದು ಸರ್ವರಿಗು ಹೊಳಲಿಹುದು
ಈ ತನಕ ಬಿಗಿದಿರುವ ಸೊಗಸಿನಾತ್ಮೀ-
ಯತೆಯು
ಕಟ್ಟರೆದು ದೆಸೆದೆಸೆಗೆ ಸೂಸಲಿಹುದು.

ಅಂಥ ಪಾತಾಳದಲಿ ಮಲಗಿರುವ ಜೀವ ತಾ
ನೊಂದು ಸಂಸ್ಕೃತಿಗಾಗಿ ಸಿಡಿದಿರುವುದು
ಬೆಂದ ಬಾಳ್ಮೊಸೆಯಲಿ ಕರಗಿ ಕಾತರಿಸಿ ಪುಟ
ಗೊಂಬ ಹಂಬಲಕಾಗಿ ಹಾಡಿರುವುದು.

ಜಗದ ನಿಜರೂಪದೀ ಸೂಕ್ಷ್ಮ
ಸೌಂದರ್ಯದಲಿ
ಬಿಗಿದಿಹುದ ಸನ್ನುತಿಯ ರಾಗವಿಷಯ
ಅಳಲ ಕೈಗೊಳಲಿನಲಿ ನಗೆಯ
ಗಾಳಿಯನೂದ
ಲಿರುವ ಸಮ್ಮತ ಸರಸ ಸಾಹಚರ್ಯ
ಏರು ಮರೆದಿಂದ ಕೆಳಜಾರಿ ಬಿದ್ದಿವೆ ಬೆಳಕು
ದಾರಿಯಲಿ ಹೊರಳುತಿವೆ ಹಸುಳೆಯಂತೆ
ದೊರೆದಳೆ ನೆಳಲು ಕೈತೂರಿ ಸಂತೈಸಿ ಪರ
ಸಾರುತಿದೆ ಕುಲಗೆಟ್ಟ ತಾಯಿಯಂತೆ!
ಮುಸುಕಿನಾ ಜಾಡ್ಯದಲಿ ಹಸಿವುಹಿಂಗದ
ಹರಣ
ಯೊಸತು ಬಾಯ್ದೆರೆಚಿಗಾಗಿ ಹಾತೊರೆದಿದೆ
ತನ್ನತನವನು ತಾನೆ ಕೊಯ್ದು ಕೈಬಟ್ಟಲಲಿ
ನಕ್ಕುನೀಡುವ ಚಾಗ ಮುಂದೊದಗಿದೆ
ರಾಜರಾಜರ ಸುಖದ ಸೇವೆಯಲಿ ಸಾಯದಿರ್ಪ
ಸಾವಿಗೂ ಬೆಲೆಗೊಡುವ ದಿವಸವಿಂದು
ದುಃಖಿತರ ಸಾಂತ್ವನೆಯೊಳುಗುವ
ಕಂಬನಿಯೊಂದೆ
ಮೂಜಗದ ಮಾಂಗಲ್ಯದಮೃತ ಬಿಂದು!
ಎಲ್ಲರೊಳುಸರಿಸಮತೆಯೆಲ್ಲರೊಳುಪೈಶಿಕತೆ
ಎಲ್ಲರಿಗು ಬಹಗಾಳಿ ನೀರು ಬೆಳಕು
ಬಲ್ಲಿದರ ಬಗಲೊಳಗೆ ಸಿಲುಕುವಾ
ಕಾರ್ಪಣ್ಯ
ದಳ್ಳಿದೆಯು ಕಿರಿತನವನತ್ತ ನೂಕು!
ಅವಕೊ ನೋವ್ ನೆಂಟತನಕೊದಗಿ
ಮೈನೆರೆದಿಹುದು
ಬೆವರದಿರು ಮುನ್ನಡೆದು ಕೈಯ ಕುಲುಕು
ಬದುಕುಬಾವನ್ನ ಸೌಶವಗುಡುವ ಮನ್ನ ಜಗ
ದನುಭವದ ತೀಟದಲಿ ಸವೆಯಬೇಕು!
ಸಾಕಿರುಳ ತಾರೆಕೆಯ ತತ್ತರತೆ ಸೂದೆ-
ಯುಗುವ
ಚಾರು ಚಂದ್ರಿಕೆಯು ಸೌಂದರ್ಯ ಪೂರ
ಆ ಕಡೆಯು ತಂಗಾಳಿ ವಿರಹಿಣಿಯು ರಭಸಾರ
ಕಾದಲರ ಕಂಬನಿಯು ಪೃದ್ವಿಕಾರ!
ಈರೇಳು ಲೋಕವೇನಮಿತ ವಿಶ್ವಾಮಿತ್ರ
ರದ್ಭುತ ಮಹೋನ್ನತಿಯ ನವ್ಯ ಸೃಷ್ಟಿ
ಯೂರಿಗೆಟಕದ ಕಲೆಯ ಭಂಡಾರವಲ್ಲ—ಸಂ
ಸಾರವೇ ಸಾಮರಸದಮೃತ ವೃಷ್ಟಿ!
ಅಳಿಯು ನಲಿದಾಡಿದರೆ ಗಿಳಿಯು
ಮಾತಾಡಿದರೆ
ತೊದಲಿದರೆ ಕೋಗಿಲೆಯು ಮಧುರ ನಾದ
ವೊಳಗದೆ—ನವೋಭವತಿ ಜಾಯಮಾನಃ
ಪುರುಷಃ
ಯೆನುವ ಹಷೋದ್ಗಾರದಮರ ವೇದ!
ಅಚ್ಚರಿಯ ಜಗತಿ ತಾನೆಚ್ಚತ್ತು ನೋಡುತಿದೆ
ಮುಚ್ಚು ಮೆಚ್ಚುಗೆಯ ದಿವ್ಯಾವತಾರ
ನಿದ್ದೆಯಿಂದೆದ್ದು ಕಣ್ದೆರೆದು ನೋಡುತ್ತ ಕಡೆ
ಹೊದ್ದಿದೆ ನವೋದಯದ ಪೀತಾಂಬರ!

---


ನೀವು ಮೈಸೂರು ಬಾರ್ ಸಾಬೂನನ್ನು ಉಪಯೋಗಿಸಿದರೆ ಬಟ್ಟೆಯನ್ನು ಬಲವಾಗಿ ಉಜ್ಜುವ ಅವಶ್ಯಕವೇ ಇಲ್ಲ.

ಅಗಸರು ಬಟ್ಟೆಗಳನ್ನು ಕಲ್ಲಿನ ಮೇಲೆ ಜೋರಾಗಿ ಒಗೆಯುವುದರಿಂದ ಬಟ್ಟೆಗಳು ನಾಶವಾಗುತ್ತವೆ.

●

"ಮೈಸೂರು ಬಾರ್ ಸಾಬೂನಿನ"

ಹೇರಳವಾದ ನೊರೆಯು

ಕೊಳೆಯನ್ನು ಹೋಗಲಾಡಿಸಿ ಬಲವಾಗಿ ಉಜ್ಜುವುದನ್ನು ತಪ್ಪಿಸಿ ಬಟ್ಟೆಯನ್ನು ಚೊಕ್ಕಟ ಮಾಡುತ್ತದೆ.

ಮೈಸೂರು ಬಾರ್ ಸೋಪಿನ ಉಪಯೋಗದಿಂದ ಬಟ್ಟೆಗಳು ಬಹಳ ಶುದ್ಧಿಗೊಂಡು ಪ್ರಕಾಶವಾಗುತ್ತವೆ.

●

ಮೈಸೂರು ಬಾರ್ ಸೋಪನ್ನು

ಈವತ್ತೇ ಉಪಯೋಗಿಸಿ.

●

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

ಮುಂಬರ್: "ಐ. ಎಸ್.. ಟಿ. ಎ. ಎ."



SRI RAMAKRISHNA THEATRE LIMITED,

UDIPI.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು
ಪತ್ರಿಕಾ ಜಾಹೀರಾತಿನ ನಿದರ್ಶನ!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಬೆಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್,

ಉಡುಪಿ--ಇಲ್ಲಿ!



ತಾಜಾ ವಜ್ರಗಳಿಗೆ ಖಾತ್ರಿ ವಜ್ರದಂಗಡಿ

ಎಸ್. ಎಲ್. ಶೇಟ್

ಡಾಯಮಂಡ್ ಹೌಸ್

ಕಾರ್ನಾಡ್ ಸದಾಶಿವರಾವ್ ರೋಡ್, ಮಂಗಳೂರು.

ಚಿನ್ನದ ಯಾವತ್ತೂ ಆಧುನಿಕ ಫೇಶನಿನ ಆಭರಣಗಳಿಗೆ ಹೆಸರಾಂತ ಸುವರ್ಣ ಗೃಹ.

ಬೆಳ್ಳಿ, ಬಂಗಾರದ ತರಹವಾರು ಒಡವೆಗಳು ಯಾವಾಗಲೂ ಇಲ್ಲಿ ದೊರೆಯುತ್ತವೆ.

ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

Phone:- 337A. REST.
337. Off

Tel: GOLDKING.

*Proprietor.* **S. L. SHET.**

# ಕರ್ನಾಟಕದ ಮಹಿಳೆಯರು

(೧೧ನೇ ಪುಟದಿಂದ)

ಬೆಳವಡಿ ಮಲ್ಲಮ್ಮ, ಒನಕೆಯ ಓಬವ್ವೆ; ಅದರೆ ಬೆರಳ ಮೇಲೆಣಿಸುವಷ್ಟು! ಪತಿಭಕ್ತಿಯನ್ನು ಕುರಿತು ಹುಟ್ಟಿದ ಪವಾಡಗಳು, ಕಾರ್ಯದಲ್ಲಾಗಲಿ, ವಿದ್ವತ್ತೆಯಲ್ಲಾಗಲಿ, ಆ ಪ್ರಮಾಣದಲ್ಲಿ ಹುಟ್ಟಲಿಲ್ಲ!

ಕಲೆಯ ನಿರ್ಮಾಣದಲ್ಲಿ ಸ್ವತಃ ಕಾಣ್ಕೆಯನ್ನು ಸಲ್ಲಿಸದಿದ್ದರೂ ಕಲಾಪ್ರೇಮಿಗಳಾದ ಮಹಿಳೆಯರಿಗೆ ಮಾತ್ರ ಕೊರತೆಯಿಲ್ಲ; ಹಾಗೆ ಸಾಹಿತ್ಯದ ವಿಷಯದಲ್ಲೂ ಕೂಡ! ಅತ್ತಿಮಬ್ಬೆ, ಶಾಂತಲೆ ಇವರುಗಳ ಉದಾಹರಣೆಗಳನ್ನೇ ಕಾಣಬಹುದು: ಔದಾರ್ಯ, ತ್ಯಾಗ, ಸೇವೆ ಮಹಿಳೆಯ ಹುಟ್ಟುಗುಣ: ಅದರಲ್ಲಿಯೂ ಕನ್ನಡ ನಾಡಿನ ನೆಲದ ಗುಣ! ವಿಜಯನಗರದ ಕಾಲ, ಮಹಿಳೆಯ ಕಲಾಭಿವ್ಯಕ್ತಿಯ ಸಂಕೇತವಾಗಿರುವ ಕಾಲ ಸರ್ವವಿಧವಾದ ಕಲೆಗಳ ವಿಕಾಸಕ್ಕೂ ಈ ಕಾಲದಲ್ಲಿ ಅವಕಾಶ ದೊರೆಯಿತು. ಅದರ ಪ್ರತೀಕವಾಗಿಯೇ ನಾವಿಂದು ಶಿಲ್ಪದಲ್ಲಿ ಅಮರ ಕಲಾಕುಸುರಿನ ಕೈವಾಡವನ್ನು ಕಾಣುತ್ತಿರುವದು. ಒಕ್ಕಟ್ಟಿನ ಅಭಾವದಿಂದ ರಾಜಕೀಯ ವಿಪ್ಲವ ತಲೆದೋರಿ, ಕಲಾಭಿವ್ಯಕ್ತಿಯ ಶಾಂತಿಗೆ ಅದರಿಂದ ಭಂಗ ಬಂದರೂ, ಮೈಸೂರೊಡೆಯರ ಕಾಲದಲ್ಲಿ ಅದನ್ನು ಪುನಃ ಎತ್ತಿ ಹಿಡಿಯುವ ಪ್ರಯತ್ನ ನಡೆಯಿತು; ಹೊನ್ನಮ್ಮ—ಶೃಂಗಾರಮ್ಮ ಈ ಕಾಲದಲ್ಲಿ ಸಾಹಿತ್ಯ ಸೇವೆ ಸಲ್ಲಿಸಿದರು: ಹೊನ್ನಮ್ಮ ಸರಸಸಾಹಿತ್ಯದ ವರದೇವತೆ! ಅದರೆ ಇಂದಿನ ವಾತಾವರಣದ ಹಿನ್ನೆಲೆಯಲ್ಲಿ ಅವಳ ಕೃತಿಯನ್ನು ನಾವು ಅಳೆಯುವಂತಿಲ್ಲ.

ಆಧುನಿಕ ಯುಗ, ಕರ್ನಾಟಕದ ಮಹಿಳೆಯರಿಗೂ ಕಲೆ-ವ್ಯಕ್ತಿತ್ವಗಳ ವಿಕಾಸಕ್ಕೆ ಸರ್ವವಿಧವಾದ ಅವಕಾಶವನ್ನೂ ಒದಗಿಸಿಕೊಟ್ಟಿದೆ. ಮಹಿಳೆಯರು ಅಬಲೆಯರು ಎನ್ನುವ ಮಾತು, ಗಾಂಧೀಜಿಯವರು ನೈತಿಕ ಬಲವನ್ನು ರಾಷ್ಟ್ರದಲ್ಲಿಯೇ ಎತ್ತಿಹಿಡಿದಾಗ, ದೂರ ಸರಿದು ಹೋಯಿತು. ೧೯೧೭ರಲ್ಲಿ ಕಾಂಗ್ರೆಸ್ಸಿನ ಇತಿಹಾಸದಲ್ಲಿಯೇ ಕಲಕತ್ತೆಯ ಅಧಿವೇಶನದಲ್ಲಿ ಪ್ರಥಮ ಮಹಿಳಾ ಅಧ್ಯಕ್ಷಿಣಿಯಾಗಿ ಅನಿಬೆಸಂಟ್, ಇನ್ನು ಆದ ಮಹಿಳಾ ವರ್ಗಕ್ಕೆ ಒಂದು ಹೆಜ್ಜೆ ಮುಂದುವರಿಯಲು ಹಿನ್ನೆಲೆಯನ್ನು ಸಿದ್ಧಪಡಿಸಿದರು: ಕರನಿರೋಧ ಅಸಹಕಾರ ಚಳುವಳಿಗಳಲ್ಲಿ ಕನ್ನಡನಾಡಿನ ಮಹಿಳೆಯರೂ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಭಾಗವಹಿಸಿದರು. ಭೂಗತರಾಗಿ ಸಂಚರಿಸಿದ ಕನ್ನಡನಾಡಿನ ಸತ್ಯಾಗ್ರಹಿಗಳಿಗೆ ಕಾರವಾರ ಜಿಲ್ಲೆ ಪ್ರಾಮುಖ್ಯತೆಯಿಂದ ಆಶ್ರಯವನ್ನು ಕೊಟ್ಟದ್ದು! ಅಲ್ಲಿಯ ಮಹಿಳೆಯರು ಯಾವ ಭೀತಿಯನ್ನೂ ಲೆಕ್ಕಿಸದೆ, ರಾಷ್ಟ್ರೀಯ ಭಾವನೆಯಿಂದಲೇ ಪ್ರೇರಿತರಾಗಿ, ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಗಳೆರಡರಲ್ಲೂ ಸೇವೆಯನ್ನು ಸಲ್ಲಿಸಿದರು. ೧೯೪೨ರ ಅಸಹಕಾರ ಚಳವಳಿ ಮಹಿಳೆಯರ ಶಕ್ತಿಯನ್ನು ಇನ್ನೂ ಪರೀಕ್ಷಿಸಿತು. ಭಾಗವಹಿಸಿದ ಅನೇಕ ಸ್ತ್ರೀಯರು ಲಾಠೀಪೆಟ್ಟುಗಳನ್ನು ತಿಂದರು, ಸೆರೆಮನೆಯನ್ನು ಸೇರಿದರು, ಅಪಮಾನವನ್ನು ಸಹಿಸಿದರು, ನ್ಯಾಯ ಸ್ಥಾನಗಳನ್ನು ಸಂದರ್ಶಿಸಿದರು, ವ್ಯಕ್ತಿಸುಖವನ್ನು ಬದಿಗಿಟ್ಟು ರಾಷ್ಟ್ರಸೇವೆಯ ಹೊಣೆಯನ್ನು ಯಾರ ಆಗ್ರಹವೂ ಇಲ್ಲದೆ ತಾವೇ ಕೈಕೊಳ್ಳುವಲ್ಲಿ, ಅವರಿಗೊಂದು ಬಗೆಯ ಸಮಾಧಾನ ದೊರೆಯಿತು. ಎಷ್ಟೋ ಸಾಮಾಜಿಕ ಕಾರ್ಯಗಳನ್ನು ಕೈಕೊಂಡು ಪೂರೈಸಬಲ್ಲೆವೆಂಬ ಆತ್ಮವಿಶ್ವಾಸ ಚಿಗುರಿತು. ರಾಷ್ಟ್ರದ ಕಾರ್ಯಕ್ಕಾಗಿ ಚಿತ್ರೀಯ ಭಾವ ತಲೆಯೆತ್ತಿತು. ಸ್ವತಂತ್ರ ಭಾರತದಲ್ಲಿ ಬೆಳಕಿಗೆ ಬರಲಿದ್ದ ಎಷ್ಟೋ ಮಗುಗಳು ಸೆರೆಮನೆಯ ಅಂಧಕಾರದಲ್ಲಿಯೇ ಹುಟ್ಟಿದವು: ಚಳವಳಿಗೆ ತೆರೆಯ ಮರೆಯಿಂದಲೂ, ಹೊರಗಿನಿಂದಲೂ ಸಹಕಾರ ದೊರಿಯಿತು.

ರಾಜಕೀಯ, ಸಾಮಾಜಿಕ ದಾಸ್ಯಗಳೆರಡರಲ್ಲೂ ಬಂಧಿತಳಾಗಿದ್ದ ಮಹಿಳೆ, ಪುರುಷನಂತೆ ತಾನೂ ರಾಜಕೀಯ ದಾಸ್ಯದಿಂದ ಮುಕ್ತಳಾಗಿದ್ದಾಳೆ. ಸಾಮಾಜಿಕ ವಿಷಮತೆ ಇನ್ನೂ ಹಾಗೇ ಇದೆ. ಇದರ ನಿರ್ಮೂಲನಕ್ಕೆ ಬೇಕಾದ ಆರ್ಥಿಕ ಸ್ವಾತಂತ್ರ್ಯ, ಬುದ್ಧಿ ವಿಕಾಸದ ಅವಕಾಶ ಇವುಗಳ ಅಭಾವವೇ ಸಾಮೂಹಿಕವಾಗಿ ಈ ವಿಷಮತೆಗೆ ಕಾರಣವಾದದ್ದು! ಈ ದಾರಿಯಲ್ಲೂ ಕ್ರಮೇಣ ಕ್ರಾಂತಿ ನಡೆಯುತ್ತಿದೆಯೆಂಬುದನ್ನು ಕರ್ನಾಟಕದ ಮಹಿಳೆಯರೂ ತೋರಿಸಿದ್ದಾರೆ. ೧೯೪೮ರಲ್ಲಿಯೇ "ಸ್ತ್ರೀಯರು ರಾಜಕೀಯ, ಸಾಮಾಜಿಕ ರಂಗಗಳಲ್ಲಿ ಹೆಚ್ಚು ಅಧಿಕಾರ ಸಂಪಾದಿಸಿದ ರಾಷ್ಟ್ರಗಳಲ್ಲಿ", ಭಾರತವು ಮೂರನೆಯದು! ವಿವಿಧ ಪ್ರಾಂತಗಳ ಮತ್ತು ಸಂಸ್ಥಾನಗಳ ವಿಧಾನ ಮಂಡಲಗಳು ಭಾರತದಲ್ಲಿ ಒಟ್ಟಿಗೆ ೮೦ಬತ್ತು ಜನ ಸದಸ್ಯೆಯರು! ಸದ್ಯಕ್ಕಂತೂ ಪ್ರಮುಖ ರಾಷ್ಟ್ರಗಳಲ್ಲಿ ರಾಯಭಾರಿಯಾಗಿಯೂ, ರಾಷ್ಟ್ರದಲ್ಲಿ ರಾಜ್ಯಪಾಲರಾಗಿಯೂ, ಮಂತ್ರಿಗಳಾಗಿಯೂ ಮಹತ್ತರವಾದ ಹೊಣೆಯನ್ನು ನಿರ್ವಹಿಸಿದ ಮಹಿಳೆಯರು, ಭಾರತೀಯ ಮಹಿಳಾ ಪ್ರಪಂಚಕ್ಕೆ ಅಭಿಮಾನಾಸ್ಪದರಾಗಿದ್ದಾರೆ.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆದ ಆಂದೋಲನ, ಸಾಮಾಜಿಕ ಕ್ರಾಂತಿ ಕರ್ನಾಟಕದ ಸಾಮಾನ್ಯ ಮಹಿಳೆಯ ವರೆಗೂ ಮುಟ್ಟಿವೆ. ಯಾವ ಕ್ರಾಂತಿಕಾರೀ ವಿಚಾರದ ಸೋಂಕೂ ಇಲ್ಲದೆ ಸಮಾಜದ ಏರಿಳಿತಗಳನ್ನು ಲಕ್ಷ್ಯಕ್ಕೇ ತಾರದೆ ಇದ್ದುಬಿಡುವಂಥ ಸಿರಿವಂತ ವರ್ಗ ಕರ್ನಾಟಕದಲ್ಲಿ ದೊಡ್ಡದಾಗಿಲ್ಲ. ಇಲ್ಲಿಯ ಮಹಿಳೆ ಪ್ರತ್ಯಕ್ಷವಾಗಿ ತಾನೇ ವಿಚಾರರಂಗಕ್ಕಿಳಿಯದಿದ್ದರೂ, ಅವಳನ್ನು ಕುರಿತಾದ ವಿಚಾರ, ಯಾವ ವರ್ಗದಿಂದಲೂ ಹೋಗಲಾರದು. ಧಾರ್ಮಿಕ ಅಂಧಶ್ರದ್ಧೆಯ ಐಶ್ವರ್ಯ, ಮರ್ಯಾದೆಯ ತಪ್ಪು ಕಲ್ಪನೆ ಇವುಗಳಿಗೆ ಎಡೆಗೊಟ್ಟ ಮಹಿಳೆಯರು ಹಲವರು ಅದನ್ನು ಉಳಿಸಿಕೊಳ್ಳಬೇಕೆನ್ನುವವರಿರಬಹುದು! ಆದರೆ ಮಧ್ಯಮವರ್ಗದ ಬಹುಜನ ಮಹಿಳೆಯರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪ್ರಯೋಗಗಳಿಗೆ ತಮ್ಮನ್ನೀಡು ಮಾಡಿಕೊಳ್ಳುತ್ತಿದ್ದಾರೆ. ದೈಹಿಕ ಶ್ರಮದಿಂದಲೇ ದುಡಿದು ಜೀವಿಸುವ ಕೂಲಿಕಾರ ವರ್ಗದ ಮಹಿಳೆ ಮಧ್ಯಮವರ್ಗದ ಈ ಕ್ರಾಂತಿಯನ್ನು ಮೆಚ್ಚುತ್ತಾಳೆ, ತನಗೂ ತನ್ನ ಮಕ್ಕಳಿಗೂ ಅವಕಾಶದೊರೆತರೆ ಅದರ ಲಾಭವನ್ನು ಪಡೆಯಲೂ ಯತ್ನಿಸುತ್ತಾಳೆ.

ಉಚ್ಚ ಶಿಕ್ಷಣ ಪಡೆಯುವದು, ದೈಹಿಕ ಶ್ರಮವನ್ನು ಕಡೆಗಣಿಸುವದು ಹಿರಿಮೆಯ ಲಕ್ಷಣಗಳೆಂದಾಗ ಮಧ್ಯಮವರ್ಗದ ಮಹಿಳೆ ಅದನ್ನು ಕೈಕೊಂಡಳು. ಆದರೆ ಕಷ್ಟದಿಂದ ಕೊಡಲಾದ ಉಚ್ಚ ಶಿಕ್ಷಣ ಪ್ರತ್ಯಕ್ಷವಾದ ಯಾವುದೇ ಲಾಭವನ್ನು ತರುತ್ತಿಲ್ಲವೆನ್ನುವದು ಅಸಹನೀಯವಾಯ್ತು! ಆರ್ಥಿಕ ಒತ್ತಡ ಮಧ್ಯಮವರ್ಗದ ಮಹಿಳೆಯ ತಪ್ಪು ಗೌರವದ ಕಲ್ಪನೆಯನ್ನು ಸ್ವಲ್ಪಮಟ್ಟಿಗೆ ವ್ಯತ್ಯಾಸಗೊಳಿಸಿತು. ಇಂದು ಅದರ ಪರಿಣಾಮವಾಗಿಯೇ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ನಾಡಿನಲ್ಲಿ ಮಹಿಳೆಯರು ಮುಂದುವರಿದು ಸೇವೆಯನ್ನು ಸಲ್ಲಿಸುತ್ತಿದ್ದಾರೆ: ಪರೀಕ್ಷೆ ಕಟ್ಟಿ ಪಾಸಾಗುವದೊಂದೇ ಗುರಿ ಎಂಬುದು ಮಾತ್ರ ಪ್ರತ್ಯಕ್ಷ ತಿಳುವಳಿಕೆಯಿಂದ ಮಾಯವಾಗಬೇಕಾಗಿದೆ: ಬಾಯ್ದೆರೆದು ನಿಂತ ನಿರುದ್ಯೋಗದ ಸಮಸ್ಯೆ ಕೂಡ ರಾಷ್ಟ್ರದ ಹಿತವನ್ನನುಲಕ್ಷಿಸಿ ಇದನ್ನು ಮೆಚ್ಚಲಾರದು.

'ಶ್ರಮರಹಿತ ಸಂರಕ್ಷಣೆಬೇಕು", ಎಂದು ಮೆಚ್ಚುವ ಸುಸಂಸ್ಕೃತ ವರ್ಗಕ್ಕೆ, ಮಹಿಳೆ ಮೊದಲನೆಯ ಉದಾಹರಣೆಯಾಗಿದ್ದಾಳೆ. ದಾಸ್ಯದಲ್ಲಿಯ ದಾಸ್ಯದ ಮೂಲಕ, ಸ್ವತಂತ್ರ ಅಸ್ತಿತ್ವ ತನಗಿದೆಯೆಂಬ ಮಾತನ್ನೂ ಮಹಿಳೆ ಮರೆತಿದ್ದಾಳೇನೋ! ಹಿಂದೂಕೋಡ ಬಿಲ್ಲನ್ನು ತನ್ನ ಇಚ್ಛೆಯ ವಿರುದ್ಧವಾಗಿಯೇ ಅವಳು ವಿರೋಧಿಸಿದಳು; ಯಜಮಾನನ ಆಸ್ತಿಯಾದ ಮನೆ, ಹೊಲ, ಮೋಟರುಕಾರುಗಳೊಡನೆ ತಾನೂ ಒಂದಾಗಿ ಇರಲು ಒಪ್ಪಿದಳು. ಆದರೆ ಇಂದು ಭಾರತೀಯ ಚಳವಳಿ ಮುಂದುವರಿದಿದೆ; ರಾಜ್ಯ ಘಟನೆಯಲ್ಲಿ ಅವಳೂ ಪುರುಷನೊಡನೆ ಸಮಾನಾಧಿಕಾರವನ್ನು ಪಡೆದಿದ್ದಾಳೆ. ಆದರೆ, ಪುರುಷನಿಗೆ ದೇವನಿಂದ ಮುಕ್ತಿ ದೊರೆತರೆ, ಸ್ತ್ರೀಗೆ ಪುರುಷನಿಂದಲೇ ಮುಕ್ತಿ ಎಂದು ಹೇಳುವಂತೆ, ಪುರುಷನೊಡನೆ ಸಮಾನಾಧಿಕಾರವೆಂದರೇ ಸ್ತ್ರೀಯ ಮುಕ್ತಿಯಲ್ಲ! ಹಿಂದೂಕೋಡ ಬಿಲ್ಲು ಪಾಸಾದುದು ಸ್ತ್ರೀಯ ರಾಜಕೀಯ, ಸಾಮಾಜಿಕ, ಆರ್ಥಿಕ ಹೆಕ್ಕು ಬಾಧ್ಯತೆಗಳಿಗೆ ಮೂರ್ತರೂಪ ಕೊಡಲು! ಸಾಮೂಹಿಕವಾಗಿ ರಾಷ್ಟ್ರದಲ್ಲಿ ಬಂದುದು, ಕರ್ನಾಟಕದ ಮಹಿಳೆಗೂ ಅನ್ವಯಿಸುತ್ತಿದೆ. ಅದರ ಲಾಭ ತೆಗೆದುಕೊಳ್ಳುವುದು ಅವಳಿಗೇ ಸೇರಿದ್ದು!

ಮುಂಬೈ ಪ್ರಾಂತದಲ್ಲಿ ದಕ್ಷಿಣದ ತುದಿಗೆಯಿದ್ದ ಕರ್ನಾಟಕ ಶಿಕ್ಷಣದ ಪ್ರಗತಿಯನ್ನು ಕುರಿತು, ಹೊಸ ವಿಚಾರ ಪ್ರಯೋಗಗಳಿಗೆ ಎಡೆಗೊಡುವಂತಹ ಅವಕಾಶವನ್ನು, ಸಾಮಾಜಿಕ ರಂಗದಲ್ಲಿ ಎದೆಗೊಟ್ಟು ಹೋರಾಡಬಲ್ಲ ಧೈರ್ಯವನ್ನು ಪಡೆಯಲಿಲ್ಲವೆಂದು ಹೇಳಬೇಕಾದೀತೇ! ಇಂತಹ ಪ್ರಸಂಗದಲ್ಲಿ ಮಹಿಳೆಯರದಂತೂ ದೂರದ ಮಾತು! ಪರಂಪರೆಗೆ ಕಟ್ಟುಬಿದ್ದ ಸನಾತನಿಗಳ ವಿರೋಧವನ್ನು ಎದುರಿಸುವವರ ಜೊತೆಗೆ, ಪುರುಷರಿಗೂ ಬರಬಹುದಾದ ಸಾಮಾಜಿಕ ಎದರುಗಳನ್ನು ಅವಳು ಎದುರಿಸಬೇಕಾಗುತ್ತದೆ: ಆ ಸ್ಥೈರ್ಯ, ಜೀವನದ ಸಮಸ್ಯೆಗಳನ್ನು, ತೂಕ ತಪ್ಪದೆ ಎದುರಿಸುವ ಶಕ್ತಿ, ಎಷ್ಟು ಜನರಲ್ಲಿ ಮೂಡಬಲ್ಲದು? ಮಹಿಳೆಯ ಸಂಕುಚಿತವಾದಂಥ ಕಾರ್ಯಕ್ಷೇತ್ರ, ವಿಚಾರಕ್ಷೇತ್ರ ವಿಶಾಲವಾದಾಗಲೇ, ಸಂಕುಚಿತವಾದ ಪ್ರತೀಕಾರದ ಭಾವನೆ ಅಡಗಬಲ್ಲದು! ಕರ್ನಾಟಕದಲ್ಲಿ ಸುಶಿಕ್ಷಿತರೆಂದು ಹೇಳಿಸಿಕೊಳ್ಳುವ ಮಹಿಳೆಯರ ಸಂಖ್ಯೆ ಪ್ರಮಾಣದಲ್ಲಿ ಬೆಳೆಯುತಿದ್ದರೂ ಅವರಲ್ಲಿ ಗುಣವೈಶಿಷ್ಟ್ಯ ಕಡಿಮೆ: ಪಡೆದ ಶಿಕ್ಷಣದ ಸರಿಯಾದ ಉಪಯೋಗವನ್ನು ಮಾಡಿಕೊಳ್ಳುವ ಶಕ್ತಿ ಮೂಡಿಬರಬೇಕಾಗಿದೆ: ಮಧ್ಯಮವರ್ಗದ ಹೋರಾಟದ ಜೀವನದಲ್ಲಿ ಬೆಳೆದಿದ್ದರೂ, ಈ ಹೋರಾಟ ಎಂದು ನಿಂತೀತೋ, ಹಾಗೆನಿಲ್ಲಲು ಮಾರ್ಗವೇನು?— ಎಂದು ಯೋಚಿಸುತ್ತಿರುವವರೇ ಹೆಚ್ಚು ಜನ! ಇದೇ ಕಾರಣದಿಂದಲೇ ಬುದ್ಧಿಯ ಉಪಯೋಗ ಸ್ವಲ್ಪ ಕಡಿಮೆಯಾಗಿದ್ದರೂ, ಸಂಪತ್ತು ಅಧಿಕವಾಗಿದ್ದ ವೈವಾಹಿತ ಜೀವನವನ್ನು ಇಂದು ಸುಶಿಕ್ಷಿತ ಮಹಿಳೆಯರು ಸಾಗಿಸಲು ಆಶಿಸುತ್ತಿರುವರು: ನಾಡಿನಲ್ಲಿ ಹುದುಗಿದ-ಬೌದ್ಧಿಕ ದೈಹಿಕ ಬಲಗಳ ಉಪಯೋಗ ಸರಿಯಾಗಿ ಪ್ರಮಾಣದಲ್ಲಿ ಆದಾಗಲೇ ಅಲ್ಲವೇ, ನಾಡು ಅದರ ಮುಂದಿನ ಸಮಸ್ಯೆಯನ್ನು ಎದುರಿಸಲು ಸಮರ್ಥನಾಗುವದು?

ಮಹಿಳೆಯರ ಉಚ್ಚ ಶಿಕ್ಷಣದ ಹೋರಾಟದಲ್ಲಿ, ಶಿಕ್ಷಣ ಪಡೆದು ಅಜ್ಞ ಜನತೆಯಿಂದ ದೂರವಿದ್ದಷ್ಟೂ ನಮ್ಮ ಗೌರವ ಹೆಚ್ಚು ಎಂದು ನಂಬಿದ ವರ್ಗ ಒಂದು! ಶಿಕ್ಷಣ ಇವರಿಂದ ದೂರವಿದ್ದಷ್ಟು ನೆಟ್ಟಗೆ! ಶಿಕ್ಷಣವನ್ನೂ ಪಡೆಯದೆ ವೈವಾಹಿಕ ಜೀವನದ ಬಗ್ಗೆಯೂ ಗಾಳಿಗೋಪುರಗಳನ್ನು ಕಟ್ಟಿ, ಅದನ್ನು ಸಾಗಿಸಲು ಅಸಮರ್ಥರಾಗಿ, ಅತೃಪ್ತಿಯಲ್ಲಿ ಕಾಲವ್ಯಯ ಮಾಡುವದು ಇನ್ನೊಂದು ವರ್ಗ! ಮೂರನೆಯದು ಶಿಕ್ಷಣಪಡೆದು ಉದ್ಯೋಗ ಕೈಕೊಂಡು, ಗಂಡಸರಿಗೆ ನಾವು ಕಡಿಮೆಯಲ್ಲ ಎಂದು ಅಹಂಭಾವವನ್ನು ವ್ಯಕ್ತಮಾಡುವ ವರ್ಗ! ಈ ವರ್ಗಗಳು ಅಳಿಯಬೇಕಾಗಿದೆ ಮೊದಲು! ಸಂಧಿಕಾಲದ ಪ್ರತಿಕ್ರಿಯೆ ಈ ವರ್ಗಗಳಿಗೆ ರೂಪುಕೊಟ್ಟಿದ್ದು!

ಕರ್ನಾಟಕದಲ್ಲಿಯೂ ಹರಡಿದ ರಾಷ್ಟ್ರೀಯ ವಿಸ್ತರಣ, ಸಮಾಜ ಕಲ್ಯಾಣ ಯೋಜನೆಗಳು ಸುಶಿಕ್ಷಿತ ಮಹಿಳೆಯ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುತ್ತಿವೆ. ಅಶಿಕ್ಷಿತಳೆನಿಸಿಕೊಂಡ ಮಹಿಳೆಗೆ ಬೇಕಾದ ಶಿಕ್ಷಣಕೊಟ್ಟು ಅವಳ ಕೈ-ಮನಗಳನ್ನೂ ದುಡಿತಕ್ಕೆ ಹಚ್ಚಿವೆ—ಪ್ರಧಾನವಾಗಿ ಸುಶಿಕ್ಷಿತ—ಅಶಿಕ್ಷಿತರೆನ್ನಿಸಿಕೊಳ್ಳುವವರ ಸಂಪರ್ಕ ಬಲುತ್ತಿದೆ: ವಿಚಾರ ವಿನಿಯೋಗ ನಡೆಯುತ್ತಿದೆ: ಸುಶಿಕ್ಷಿತೆಯರು ಕೆಳಕ್ಕಿಳಿದು ತಮ್ಮ ಗ್ರಾಮೀಣ ಭಗಿನಿಯನ್ನು ಮೇಲಕ್ಕೆಳೆದುಕೊಳ್ಳುವ ಪ್ರಯೋಗ ಮಾಡುತ್ತಿದ್ದಾರೆ.

ಇಂದಿನ ಪ್ರಯೋಗ ಇಂದೇ ಫಲವನ್ನು ಕೊಡಲಾರದು: ಮುಂದಿನ ಪೀಳಿಗೆಯಲ್ಲಾದರೂ ಅದರ ಫಲ ಕಂಡುಬಂದೀತು! ಕನ್ನಡನಾಡು ಒಂದುಗೂಡಿದಾಗ ಸವಿಯಾದ ಫಲದ ಬೆಳೆ ಬರಲು ಅವಕಾಶ ದೊರೆತೀತು!!

---

ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.

# ಭಾರತದ ನೂತನ ಭೂಪಟ

**ಜನಮನವನ್ನನುಸರಿಸಿ ಪ್ರಾಂತ್ಯಗಳ ಪುನಾರಚನೆಯ ಕೆಲಸ ನಡೆದಿಲ್ಲ—**
**ಕಾಸರಗೋಡಿನ ಕನ್ನಡಿಗರ ನ್ಯಾಯಬದ್ಧ ಕೋರಿಕೆಯು**
**ಕೊನೆಗೂ ಅರಣ್ಯರೋದನವಾಯಿತು!**

**ಬರೆದವರು: ಶ್ರೀ ಕೆ. ಕೃಷ್ಣರಾವ್, ಬಿ. ಎ.**

ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಭಾರತದ ರಾಷ್ಟ್ರ ಸಭೆಯ ಮುಂದಾಳುತನವನ್ನು ವಹಿಸಿಕೊಂಡೊಡನೆಯೇ ದೇಶದ ಜನರಿಗೆ ಅವರವರ ಪ್ರಾಂತಗಳ ಭಾಷೆಗಳಲ್ಲಿಯೇ ತಮ್ಮ ಸಂದೇಶವನ್ನು ಕೊಡುವುದಕ್ಕಾರಂಭಿಸಿದರು. ಇದರಿಂದ ಜನ ಜಾಗೃತಿಯು ಬಹುಬೇಗನೆ ಉಂಟಾಯಿತು. ಆಂಗ್ಲ ಭಾಷೆಯನ್ನು ತಿಳಿದವರ ಸಂಖ್ಯೆಯು ಅತಿ ಕಡಿಮೆಯಾಗಿದ್ದುದರಿಂದ ಆ ಭಾಷೆಯ ಮೂಲಕ ಜನ ಜಾಗೃತಿಯನ್ನುಂಟು ಮಾಡಲು ಅವರು ಹೊರಡಲಿಲ್ಲ.

ಮಹಾತ್ಮರ ಈ ಧೋರಣೆಗೆ ಜನತೆಯ ಬೆಂಬಲವು ಲಭಿಸಿತು. ಭಾಷಾವಾರು ಪ್ರಾಂತಗಳಾಗಬೇಕೆಂದು ವಾದಿಸುತ್ತಿದ್ದವರಿಗೆ ಗಾಂಧಿಜಿಯವರ ಹೊಸ ಧೋರಣೆಯಿಂದ ತುಂಬಾ ಪ್ರಯೋಜನವಾಯಿತು. ಎಲ್ಲರೂ ಭಾಷಾವಾರು ಪ್ರಾಂತಗಳ ಸಂಪಾದನೆಗಾಗಿ ಯತ್ನಿಸತೊಡಗಿದರು.

ಗಾಂಧಿಜಿಯವರು ಇನ್ನೊಂದು ಹೆಜ್ಜೆ ಮುಂದಿಟ್ಟು ಕಾಂಗ್ರೆಸ್ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಭಾಷಾವಾರು ಪ್ರಾಂತಗಳನ್ನು ರಚಿಸಿದರು. ಈ ಕಾಂಗ್ರೆಸ್ ಪ್ರಾಂತಗಳಿಗೆ ಆಗಿನ ಸರಕಾರದ ಬೆಂಬಲವಿದ್ದಿಲ್ಲವಾದರೂ ಜನತೆಯ ಬೆಂಬಲವು ಸಂಪೂರ್ಣವಾಗಿದ್ದಿತು. ಪ್ರತಿಯೊಂದು ಪ್ರಾಂತಕ್ಕೂ ಆ ಪ್ರಾಂತದ ಪ್ರಮುಖ ಭಾಷೆಯ ಹೆಸರು ಕೊಡಲಾಯಿತು. ಈಗಿರುವ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಹೆಸರುಗಳನ್ನು ನೋಡಿದರೆ ಇದು ಸ್ಪಷ್ಟವಾಗುವುದು.

ಭಾಷಾವಾರು ಪ್ರಾಂತರಚನೆಯ ಬೇಡಿಕೆಯು ಬಲಗೊಳ್ಳುತ್ತಾ ಬಂದಿತು. ಸ್ವಾತಂತ್ರ್ಯ ಬಂದಮೇಲಂತೂ ಜನರು ಭಾಷಾವಾರು ಪ್ರಾಂತಗಳು ಕೂಡಲೆ ರಚನೆಯಾಗುವುವೆಂದು ಭಾವಿಸಿದರು. ಆದರೆ ಈ ಭಾವನೆಯು ಕೂಡಲೆ ಸಾಧಿಸಲಿಲ್ಲ. ಆದರೂ, ಸ್ವಲ್ಪ ತಡವಾಗಿಯಾದರೂ ಭಾಷಾವಾರು ಪ್ರಾಂತಗಳನ್ನು ರಚಿಸುವ ನಿರ್ಧಾರಕ್ಕೆ ಸರಕಾರವು ಬಂದಿತು. ಯಾವ ಯಾವ ಭಾಗಗಳು ಎಲ್ಲೆಲ್ಲಿಗೆ ಸೇರಬೇಕೆಂಬ ಬಗ್ಗೆ ವಿಚಾರಣೆ ನಡೆಸಿ ವರದಿಯೊಪ್ಪಿಸಲು ಮಿ. ಫಜಲ್ ಅಲಿ, ಡಾ. ಹೃದಯನಾಥ ಕುಂಜ್ರು ಮತ್ತು ಸರದಾರ್ ಕೆ. ಯಂ. ಪಣಿಕ್ಕರರಿಂದ ಕೂಡಿದ ಸಮಿತಿಯನ್ನು ಸರಕಾರವು ನೇಮಿಸಿತು. ಸಮಿತಿಯು ತನ್ನ ಶಿಫಾರಸುಗಳನ್ನೊಳಗೊಂಡ ವರದಿಯನ್ನೂ ಅರ್ಪಿಸಿತು.

ಪ್ರಾಂತ ಪುನರ್ರಚನಾ ಸಮಿತಿಯು ಮಾಡಿದ ಕೆಲವು ಶಿಫಾರಸುಗಳಿಂದ ಪ್ರಾಂತಗಳಲ್ಲಿ ತುಂಬಾ ಅಸಮಾಧಾನಕ್ಕೆ ಕಾರಣವುಂಟಾಯಿತು. ಈ ಸಮಿತಿಯು ಒಂದೇ ಭಾಷೆಯನ್ನಾಡುವ ಜನರನ್ನು ಒಂದುಗೂಡಿಸಿ, ಒಂದೇ ಆಡಳಿತೆಯೊಳಗೆ ತರುವ ಬದಲಾಗಿ, ಆಡಳಿತೆಯ ಸೌಕರ್ಯದ ಹೆಸರಿನಲ್ಲಿ ಒಂದು ಪ್ರಾಂತದ ಭಾಗವನ್ನು ಇನ್ನೊಂದಕ್ಕೆ ಸೇರಿಸುವಂತೆ ಶಿಫಾರಸು ಮಾಡಿತು. ಇನ್ನು ಕೆಲವು ಭಾಗಗಳ ಹೆಸರನ್ನೇ ಎತ್ತಲಿಲ್ಲ!

ಇದಕ್ಕೆ ನಮ್ಮ ಕನ್ನಡ ನಾಡಿನ ಉದಾಹರಣೆಯೊಂದನ್ನು ನೋಡಲಿಚ್ಛಿಸುತ್ತೇನೆ. ಬಹುಕಾಲ (ಒಂದು ಶತಮಾನಕ್ಕಿಂತಲೂ ಅಧಿಕವಾಗಿ) ಕನ್ನಡ ನಾಡಿನಲ್ಲಿ, ಕನ್ನಡ ನಾಡಿನ ಅಂಗವಾಗಿದ್ದು, ಕನ್ನಡ ಭಾಷೆ, ಕನ್ನಡ ಸಂಸ್ಕೃತಿಗಳನ್ನು ಬೆಳೆಸಿಕೊಂಡುಬಂದಿದ್ದ ಭಾಗಗಳನ್ನು ಆಂಧ್ರ, ಕೇರಳ, ತಮಿಳುನಾಡುಗಳಿಗೆ ಕೊಡಲ್ಪಟ್ಟವು!

ಬಳ್ಳಾರಿ ಜಿಲ್ಲೆಗೆ ಸೇರಿದ ಆಲೂರು, ಆದೋನಿ ಮತ್ತು ರಾಯದುರ್ಗಗಳು ಅಚ್ಚ ಕನ್ನಡ ತಾಲೂಕುಗಳಾದರೂ ಅದನ್ನು ಕನ್ನಡ ಪ್ರಾಂತಕ್ಕೆ ಕೊಡುವ ಶಿಫಾರಸು ಸಮಿತಿಯಿಂದ ಬರಲಿಲ್ಲ. ನೀಲಗಿರಿ ಜಿಲ್ಲೆಯು ಕನ್ನಡ ಜಿಲ್ಲೆಯಾದರೂ, ಅದನ್ನು ತಮಿಳುನಾಡಿಗೆ ಕೊಡಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದು, ಒಂದು ಶತಮಾನದಿಂದಲೂ ಅಧಿಕವಾಗಿ ಕನ್ನಡ ದೇಶದ ಆಡಳಿತೆಗೆ ಸೇರಿದ್ದ ಕಾಸರಗೋಡು ತಾಲೂಕನ್ನು ಕರ್ನಾಟಕದಿಂದ ಬೇರ್ಪಡಿಸಿ ಕೇರಳಕ್ಕೆ ಕೊಡಲಾಯಿತು. ಬಳ್ಳಾರಿಯ ಮೂರು ತಾಲೂಕುಗಳು "ಕೇಕ್ಸರ್ ಕೊಡುಗೆ"ಯನ್ನಾಗಿ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧೀನಕ್ಕೆ ಕೊಡಲ್ಪಟ್ಟಿದ್ದುವು. ಅವುಗಳನ್ನು ಕನ್ನಡ ನಾಡಿಗೆ ಸೇರಿಸಬೇಕೆಂದು ಸಮಿತಿಯು ಶಿಫಾರಸು ಮಾಡಲಿಲ್ಲ ಆದರೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧೀನದ ಕಾಸರಗೋಡನ್ನು ಕರ್ನಾಟಕ ಪ್ರಾಂತದಿಂದ ಕಸಿದುಕೊಂಡು ಕೇರಳಕ್ಕೆ ದಾನ ಮಾಡುವುದಕ್ಕೆ ಸಮಿತಿಯು ಮುಂದಾಯಿತು. ನೀಲಗಿರಿಯನ್ನು ತಮಿಳುನಾಡಿಗೆ ಬಿಟ್ಟುಕೊಟ್ಟಿತು!

ಬರೆ ಭಾಷಾದೃಷ್ಟಿಯಿಂದಲೇ ಪ್ರಾಂತಗಳ ಪುನರ್ರಚನೆಯನ್ನು ಮಾಡಿಲ್ಲ; ದೇಶದ ಆಡಳಿತೆ ಸೌಕರ್ಯ, ಆರ್ಥಿಕ ದೃಷ್ಟಿ ಮೊದಲಾದುವನ್ನು ಗಣಿಸಿ ಪ್ರಾಂತಗಳನ್ನು ವಿಭಜಿಸಲಾಗುವುದು ಎಂದು ಸರಕಾರದ ಅಧಿನಾಯಕರು ಹೇಳುತ್ತಿರುವರು. ಆದರೆ ಇದರಲ್ಲಿ ಎಷ್ಟರ ಮಟ್ಟಿನ ಯಥಾರ್ಥತೆಯಿದೆ? ಎಂಬುದಕ್ಕೆ ಕಾಸರಗೋಡಿನ ಉದಾಹರಣೆಯೊಂದೇ ಸಾಕು. ದಕ್ಷಿಣ ಕನ್ನಡದಿಂದ ಕಾಸರಗೋಡನ್ನು ಬೇರ್ಪಡಿಸಿದ್ದರಿಂದ ರಾಜಕೀಯ ಮತ್ತು ಆರ್ಥಿಕ ದೃಷ್ಟಿಯಿಂದ ಈ ಜಿಲ್ಲೆಗೆ ಎಂತಹ ಹಾನಿಯಾಗಿದೆಯೆಂಬ ವಿಷಯವನ್ನು ಸರಕಾರದವರು ವಿಚಾರಿಸಿದಂತೆ ತೋರುವುದಿಲ್ಲ.

ಕಾಸರಗೋಡಿನ ಗಡಿಯು ಉಳ್ಳಾಲದ ಸಮೀಪದ ವರೆಗೆ ಬರುವುದು. ಇದರಿಂದ ದಕ್ಷಿಣ ಕನ್ನಡಕ್ಕೆ ಉಳಿಯುವ ರೈಲು ಮಾರ್ಗವೆಂದರೆ ಬರೆ ಆರೇಳು ಮೈಲುಗಳಷ್ಟು ಮಾತ್ರ. ಇದರಿಂದಾಗಿ ಸಾರಿಗೆಯು ಕುಂಠಿತವಾಗಿ ಮಂಗಳೂರು ಬಂದರದ ಅಭಿವೃದ್ಧಿಯು ಸಂಪೂರ್ಣವಾಗಿ ಕೆಟ್ಟು ಹೋಗುವುದು. ರೈಲ್ವೆಯು ಕೇಂದ್ರಕ್ಕೆ ಸೇರಿದ್ದೆಂಬು ಸಮಾಧಾನ ಹೇಳುವವರು ಇರುವರು. ಆದರೆ ಮಲಬಾರಿನ ಅಧಿಕಾರಿಗಳು ವ್ಯಾಪಾರವನ್ನು ಕಲ್ಲಿಕೋಟೆ, ಕೊಚ್ಚಿಗಳಿಗೆ ಹೋಗುವಂತೆ ಮಾಡಲು ಸಾಧ್ಯವಿದೆ; ಅವರು ಹಾಗೆ ಮಾಡುವುದಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆಗ ದಕ್ಷಿಣ ಕನ್ನಡದ ಆರ್ಥಿಕ ಅಭಿವೃದ್ಧಿಗೆ ಸರಕಾರವು ದೊಡ್ಡ ತಡೆಯನ್ನುಂಟುಮಾಡಿದಂತಾಯಿತು.

ಇನ್ನು ರಾಜಕೀಯವಾಗಿ ನೋಡಿದರೂ ಈ ಜಿಲ್ಲೆಗೆ ಹಾನಿ ಹೆಚ್ಚಾಗಿದೆ. ಕಾಸರಗೋಡಿನಲ್ಲಿ ಮುಸ್ಲಿಂ ಲೀಗು ಪ್ರಬಲವಾಗಿದೆ. ಅದು ಕೇರಳದ ಲೀಗಿನೊಡನೆ ಸೇರಿತೆಂದರೆ ಎಂತಹ ವಿಪತ್ತುಗಳೂ ಬರಬಹುದು. ಅಂತೆಯೇ ಕೇರಳದಲ್ಲಿ ಕಮ್ಯುನಿಸ್ಟರ ಪ್ರಭಾವ ಬಲವಾಗಿದೆ. ಎರಡು ಬಾರಿ ಅಧ್ಯಕ್ಷರ ಆಳಿಕೆಯನ್ನು ಬರುವಂತೆ ಮಾಡಿದ ಕೇರಳದಲ್ಲಿ ಸ್ಥಿರವಾದ ಆಡಳಿತೆ ಇರುವುದೆಂಬ ನಂಬಿಕೆಯಿಲ್ಲ. ಕಾಸರಗೋಡಿನ ಕನ್ನಡ ಜನರನ್ನು ಈ ಕಷ್ಟಕ್ಕೆ ಹಾಗು ಕಮ್ಯುನಿಸ್ಟರ ಅಧಿಕಾರಕ್ಕೆ ಬಿಟ್ಟುಕೊಟ್ಟಂತಾಯಿತು. ಇದರ ಪರಿಣಾಮವನ್ನು ಸದ್ಯವೇ ನಡೆಯಲಿರುವ ಚುನಾವಣೆಯಲ್ಲಿ ಕಾಣಬಹುದು.

ಕಾಸರಗೋಡನ್ನು ಕಳೆದುಕೊಳ್ಳುವುದಕ್ಕೆ ಸ್ವಲ್ಪಮಟ್ಟಿಗೆ ನಮ್ಮ ಜನರೇ ಕಾರಣವೆಂಬುದನ್ನು ಮರೆಯತಕ್ಕದಲ್ಲ. ಚಂದ್ರಗಿರಿ ನದಿಯ ಉತ್ತರಭಾಗವನ್ನು ಮಾತ್ರವೇ ನಮ್ಮವರು ಕೇಳಿದುದು ಮೊದಲನೆಯ ತಪ್ಪು. ಕಾಸರಗೋಡಿನ ವಿಭಜನೆಗೆ ನಾವು ಒಪ್ಪಿಗೆಕೊಟ್ಟಂತಾಯಿತು. ನಮ್ಮ ಜಿಲ್ಲೆಯ ಪ್ರತಿನಿಧಿಗಳು ಮದರಾಸ್ ಎಸೆಂಬ್ಲಿಯಲ್ಲಾಗಲಿ, ಪಾರ್ಲಿಮೆಂಟಿನಲ್ಲಾಗಲಿ ತಕ್ಕಷ್ಟು ಪ್ರಯತ್ನ ಮಾಡಲಿಲ್ಲ. ಶ್ರೀ ಬಿ. ಶಿವರಾಯರು ಮಾಡಬಹುದಾದ ಪ್ರಯತ್ನಗಳೆಲ್ಲವನ್ನೂ ಮಾಡಿ, ಅವೆಲ್ಲ ಅಸಫಲವಾದುವನ್ನು ನೋಡಿ ಕಾಂಗ್ರೆಸನ್ನು ಸಹ ಬಿಡುವ ನಿರ್ಧಾರಕ್ಕೆ ಬಂದರು. ಆದರೆ ಮಿಕ್ಕವರಿಗೆ ತಮ್ಮ ಸ್ಥಾನಗಳು ಜಿಲ್ಲೆಯ ಪ್ರಯೋಜನವುಳ್ಳವುಗಳೆಂದು ತೋರಿತು! ಅವರು ಸರಕಾರದ ಅಭಿಪ್ರಾಯಕ್ಕೆ ಪ್ರತಿಭಟನೆ ಸೂಚಿಸಲಿಲ್ಲ!

ಕಾಸರಗೋಡಿನ ಪರವಾಗಿ ಹೋದ ಶಿಷ್ಟಮಂಡಲವನ್ನು ನೆಹರೂಗಳು ಕಾಣುವುದಕ್ಕೆ ಸಿದ್ಧರಿರಲಿಲ್ಲ!

ಪ್ರಾಂತ ಪುನಾರಚನೆಯ ಮಸೂದೆ ಪಾರ್ಲಿಮೆಂಟಿನ ಮುಂದೆ ಬರುವಾಗ ಕಾಸರಗೋಡಿನ ಪ್ರಶ್ನೆಯನ್ನೆತ್ತಬಹುದು; ದ. ಕನ್ನಡಿಗರ ಕೋರಿಕೆಯು ನ್ಯಾಯವಾದುದು, ಎಂಬ ಸೂಚನೆ ಬಂತು. ಗೃಹ ಮಂತ್ರಿ ಪಂತರು ಸಹ ದ. ಕನ್ನಡದ ಕೋರಿಕೆಯು ನ್ಯಾಯವೆಂದು ಒಪ್ಪಿಕೊಂಡರು. ಆದರೆ ಆ ಕುರಿತು ತಮ್ಮ ತೀರ್ಪನ್ನು ಕೊಡಲು ಹಿಂಜರಿದರು. ಮಲೆಯಾಳದ ಪ್ರತಿನಿಧಿಗಳ ಸಮ್ಮತಿಯನ್ನು ಪಡೆದರೆ ಕಾಸರಗೋಡನ್ನು ಕರ್ನಾಟಕಕ್ಕೆ ಬಿಟ್ಟುಬಿಡಬಹುದು ಎಂದು ಶ್ರೀ ನೆಹರು ಹಾಗೂ ಪಂಡಿತ ಪಂತರೂ ಹೇಳತೊಡಗಿದರು. ಕರ್ನಾಟಕ—ಕೇರಳದ ಪ್ರತಿನಿಧಿಗಳು ತಮ್ಮೊಳಗೆ ತಮ್ಮ ವಿವಾದವನ್ನು ತೀರಿಸಿಕೊಳ್ಳುವ ಸ್ಥಿತಿಯಿರುತ್ತಿದ್ದರೆ ನೆಹರು, ಪಂತರ ಮುಂದಕ್ಕೆ ಹೋಗಿ ನ್ಯಾಯ ಯಾಚನೆ ಮಾಡುವ ಆಗತ್ಯವೆಲ್ಲಿತ್ತು? ದೇಶದ ಪ್ರಸಿದ್ಧ ಮುಂದಾಳುಗಳಾದ ಇವರು ತಮ್ಮ ಜವಾಬ್ದಾರಿಯನ್ನು ಸುಲಭವಾಗಿ ಕೇರಳ—ಕರ್ನಾಟಕದ ಮೇಲೆ ಹೊರಿಸಿ ಬಿಟ್ಟರು!

ಈ ರೀತಿ ವರ್ತಿಸಿದ್ದರಿಂದ ಶ್ರೀ ಜವಹರಲಾಲರೂ, ಪಂಡಿತಪಂತರೂ ಓರ್ವ ನ್ಯಾಯಾಧೀಶರು ನಡೆಯಬೇಕಾದ ರೀತಿಯಲ್ಲಿ—ನಿಷ್ಪಕ್ಷಪಾತ ದೃಷ್ಟಿಯಿಂದ ನಡೆಯಲಿಲ್ಲ; ಅವರು ಪಕ್ಷ ಹಿಡಿದು ಕೆಲಸ ಮಾಡಿದಂತೆ ತೋರುವುದು. ಇದರಿಂದಾಗಿ ಶತಮಾನಗಳಿಂದ ಕನ್ನಡ ನಾಡಾಗಿದ್ದ ಕಾಸರಗೋಡು ನೆಹರು, ಪಂತರ ದೃಷ್ಟಿಯಲ್ಲಿ ಮಲೆಯಾಳವಾಯಿತು! ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಜನರಲ್ಲಿ ರಾಜಿಮಾಡಿಸಲೆತ್ನಿಸುತ್ತಿದ್ದ ಪ್ರಧಾನಿಗಳು ಕನ್ನಡದ ಮಟ್ಟಿಗೆ ಆ ಪ್ರಯತ್ನವನ್ನು ಮಾಡಲಿಲ್ಲ. ಮಲೆಯಾಳಿಗಳು ಇತ್ತೀಚೆಗೆ ಕಾಸರಗೋಡಿ(ದೇಶದ ಇತರ ಭಾಗಗಳಿಗೆ ಹೋಗಿ ನೆಲಸಿದಂತೆ)ನಲ್ಲಿ ಬಂದು ನೆಲೆಸಿದವರೆಂಬ ವಿಚಾರವನ್ನು ಅವರು ಗಮನಿಸಲಿಲ್ಲ. ಕರ್ನಾಟಕ-ಮಲೆಯಾಳಗಳ ಚಾರಿತ್ರಿಕ ಗಡಿಗಳನ್ನು ಲಕ್ಷಿಸಲಿಲ್ಲ!

ಡಾ. ಪಿ. ಸುಬ್ಬರಾಯನ್ ಯಂ. ಪಿ. ಇವರು ತಮಿಳರಾದರೂ ಕಾಸರಗೋಡಿಗಾದ ಅನ್ಯಾಯವನ್ನು ತಿಳಿದು ಅದನ್ನು ಕರ್ನಾಟಕದಲ್ಲಿಯೇ ಉಳಿಸಬೇಕೆಂದು ಪ್ರಾ. ಪು. ಮಸೂದೆಯು ರಾಜ್ಯ ಸಭೆಯ ಮುಂದೆ ಬಂದಾಗ ಕೊನೆಯ ಪ್ರಯತ್ನ ಮಾಡಿದರು. ಆದರೆ ಕರ್ನಾಟಕದವರೇ ಆಗಿದ್ದ ಉಪಗೃಹ ಮಂತ್ರಿಗಳಾದ ಶ್ರೀ. ಬಿ. ಎನ್. ದಾತಾರರು ಡಾ। ಸುಬ್ಬರಾಯನರ ಸೂಚನೆಯನ್ನು ಪುಷ್ಟೀಕರಿಸಿ ಅನುಮೋದಿಸುವ ಬದಲಾಗಿ ವಿರೋಧಿಸಿದರು! ಕರ್ನಾಟಕದ ಅಹಿತಕ್ಕೆ ಕನ್ನಡಿಗರೇ ಕಾರಣವೆಂದು ತಿಳಿಯಬೇಕಾಯಿತು!

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಸಾಹುಕಾರ್ ಚೆನ್ನಯ್ಯನವರು ಮಂಗಳೂರಲ್ಲಿ ಮಾಡಿದ ಭಾಷಣವೊಂದರಲ್ಲಿ— ಕಾಸರಗೋಡನ್ನು ಕರ್ನಾಟಕಕ್ಕೆ ತರುವ ಪ್ರಯತ್ನವನ್ನಿನ್ನೂ ಮಾಡಲಾಗುವುದು, ಎಂದರು! ಎಂತಹ ಔಪಚಾರಿಕ ಮಾತು! ಮೈಸೂರಿನ ಕೆಲವರು ನಾವು ಕರ್ನಾಟಕದವರು ಅಲ್ಲವೆಂಬ ರೀತಿಯಲ್ಲಿ ವರ್ತಿಸಿ, ಎರಡು ಕರ್ನಾಟಕಗಳಿರಬೇಕು ಮೈಸೂರು ಪ್ರತ್ಯೇಕವಾಗಿಯೇ ಉಳಿಯಬೇಕು, ಎಂದು ವಾದಿಸಿ ಚಳವಳವನ್ನು ಹೂಡಿದ್ದರು. ಅಂಥವರ ವರ್ತನೆಯನ್ನು ಶ್ರೀ ಚೆನ್ನಯ್ಯನವರು ಬಹಿರಂಗವಾಗಿ ಖಂಡಿಸಿದ್ದರೋ? ಏಕೀಕೃತ ಕರ್ನಾಟಕ ವಾದಿಗಳಾದ ಶ್ರೀ ಕೆ. ಹನುಮಂತಯ್ಯನವರ ಅಭಿಪ್ರಾಯವನ್ನು ಪ್ರತಿಭಟಿಸಿ ಅವರ ಸಹೋದ್ಯೋಗಿ ಮಂತ್ರಿಗಳು ಮಂತ್ರಿಮಂಡಲದೊಳಗೇನೇ ಇದ್ದುಕೊಂಡು ಶ್ರೀ ಹನುಮಂತಯ್ಯನವರನ್ನು ಮುಖ್ಯಮಂತ್ರಿ

೧೬ನೇ ಪುಟ ನೋಡಿರಿ.

(ಹಿಂದಿನ ಪುಟದಿಂದ)

ಪದವಿಯಿಂದ ಹೊರ ದೂಡಲು ಪ್ರಯತ್ನಿಸುತ್ತಿದ್ದಾಗ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಮತ್ತು ಅದರ ಅಧ್ಯಕ್ಷರಾದ ಶ್ರೀ ಚೆನ್ನಯ್ಯನವರ ಒಲವು ಯಾರ ಕಡೆಗಿತ್ತು? ಹಾಗಿರುತ್ತಾ ಕಾಸರಗೋಡಿನ ಕುರಿತು ಶ್ರೀ. ಚೆನ್ನಯ್ಯನವರಾಡಿದ ಮಾತುಗಳಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸವಿಡಬಹುದು. ಅವರ ಮಾತುಗಳು ಬರೆ ಔಪಚಾರಿಕವಾದುವುಗಳೆಂದಷ್ಟೆ ಹೇಳಬಹುದಲ್ಲದೆ ಅದಕ್ಕಿಂತ ಹೆಚ್ಚು ಏನನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ.

ಕಾಸರಗೋಡು ಕಪ್ಪೆಯನ್ನು ಕೇರಳದ ಕಾಳ ಸರ್ಪವು ನುಂಗುವುದಕ್ಕೆ ಬಾಯಿ ತೆರೆದುಕೊಂಡು ಬರುತ್ತಿದ್ದಾಗ ಕನ್ನಡ ನಾಡಿನ ಪ್ರಭಾವಶಾಲಿಗಳಾದ ಮುಂದಾಳುಗಳು ಕರ್ತವ್ಯ ಭ್ರಷ್ಟರಾಗಿ ಮೌನದಿಂದ ಇದ್ದು, ಸರ್ಪವು ಕಪ್ಪೆಯನ್ನು ನುಂಗಿ ಅದನ್ನು ಜೀರ್ಣಿಸಿಕೊಂಡ ಮೇಲೆ ಆ ಕಪ್ಪೆಯ ರಕ್ಷಣೆ ಮಾಡಲಾಗುವುದೆಂದರೆ ಅದೊಂದು ತಮಾಷೆಯು, ಆಗದ ಹೋಗದ ಮಾತು. ಇದಕ್ಕೆ ಯಾರೂ ಬೆಲೆ ಕೊಡಬೇಕಾಗಿಲ್ಲ. ಆದರೆ ಅನ್ಯಾಯಕ್ಕೊಳಗಾದ ಕಾಸರಗೋಡಿನವರು ಸಾಹಸದಿಂದ ದುಡಿದರೆ ಇನ್ನೂ ಕಾಸರಗೋಡು ಕನ್ನಡಕ್ಕೆ ಸೇರುವಂತೆ ಮಾಡಬಹುದು. ಆದರೆ ಅಲ್ಲಿಯ ಜನರ ಅಭಿಮತವು ಹೇಗಿದೆಯೋ?

ಅಂತೂ, ಈಗಿನ ಪ್ರಾಂತ ಪುನಾರಚನೆಯು ರಾಷ್ಟ್ರಪಿತ ಗಾಂಧಿಜಿಯವರ ಸ್ವಪ್ನದ ಭಾಷಾನುಸಾರ ಪ್ರಾಂತರಚನೆಯಲ್ಲವೆಂದು ಧಾರಾಳವಾಗಿ ಹೇಳಬಹುದು. ಎಂತಹ ಅನ್ಯಾಯವಾಯಿತು! ಈಗ ಮಹಾತ್ಮಾ ಗಾಂಧಿಯವರು ಇರುತ್ತಿದ್ದರೆ ಏನನ್ನುತ್ತಿದ್ದರೋ?

## ಕನ್ನಡಿಗರಿಗಾದ ಅನ್ಯಾಯ

(೧ನೇ ಪುಟದಿಂದ)

ಗೋಡು ಮುಂತಾದ ಭಾಗಗಳ ಕನ್ನಡಿಗರ ಹಿತರಕ್ಷಣೆಯತ್ತ ತಮ್ಮ ಗಮನವನ್ನು ಇನ್ನು ಹರಿಸುವುದು ಅತ್ಯಾವಶ್ಯವಾಗಿದೆ. ಅಲ್ಲಿನ ಕನ್ನಡ ಸಂಸ್ಕೃತಿಗೆ ಧಕ್ಕೆ ಬರದಂತೆ ತಮ್ಮಿಂದಾದ ಯತ್ನವನ್ನು ಮಾಡುವುದು ಉಚಿತವಾಗಿದೆ. ಈ ವಿಷಯದಲ್ಲಿ ಕೇವಲ ಮತದಾನದ ಪ್ರತಿಫಲವನ್ನು ನಿರೀಕ್ಷಿಸಿ ಕೆಲಸಮಾಡ ಬಯಸುವುದು ಸರಿಯಲ್ಲ. ಈ ಅನ್ಯಾಯ ಎಲ್ಲ ರಾಜ್ಯಾಂಗ ತತ್ವಗಳನ್ನೂ ಮೀರಿಹೋಗಿ ಆಗಿದೆಯೆಂಬುದನ್ನು ಮನಗಂಡು ನಮ್ಮ ಬಂಧುಗಳ ಜನ್ಮದ ಸೂರೆಯಾಗದಂತೆ ನೋಡಿಕೊಳ್ಳುವುದು ಒಂದು ದೊಡ್ಡ ಪುಣ್ಯದ ಕೆಲಸವೆಂದು ಮಾತ್ರ ಈಗ ಹೇಳಬಹುದು.

ಹೀಗಾಗಿ ದಕ್ಷಿಣ ಕನ್ನಡಿಗರಿಗೆ ಈ ನೂತನ ರಾಜ್ಯೋದಯ ಕಾಲವು ಹೆಚ್ಚಿನ ಸಂತೋಷವನ್ನುಂಟುಮಾಡಲಾರದು. ಸಂತೋಷವನ್ನು ಇಬ್ಬಾಗಿಸುವುದು ಅಸಾಧ್ಯ. ಪರ್ವತದಂತಹ ಸಂತೋಷಕ್ಕೆ ಒಂದು ಕಣದಷ್ಟು ದುಃಖವು ಹಾನಿಮಾಡಬಲ್ಲುದು. ಕಾಸರಗೋಡು ಹೋದುದರಿಂದ ನಮ್ಮ ಕರಾವಳಿ ಕುಂಠಿತವಾಯಿತ್ತು. ೫೩ ಮೈಲುದ್ದದ ರೈಲುದಾರಿ ಒಪ್ಪೈಲಿಗಿಳಿಯಿತು. ಸುಮಾರು ೭೦೦೦ ಎಕರೆ ಅಡಿಕೆ ವ್ಯವಸಾಯದ ತೋಟ ಹೋಯಿತು ಎಂಬ ವ್ಯಥೆಗಿಂತಲೂ ಎರಡು ಲಕ್ಷ ಕನ್ನಡಿಗರ ನಾಲಿಗೆಗೇ ಹಾನಿಯಾಗಿದೆ ಎಂಬುದು ಎಷ್ಟೋಪಾಲು ಹೆಚ್ಚು ದುಃಖಕರವಾದುದು. ಬೇಸಾಯದ ಪ್ರದೇಶವನ್ನು ನಾವು ನಮ್ಮಲ್ಲಿ ಹಬ್ಬಿರುವ ಅರಣ್ಯಗಳನ್ನೂ, ಬಂಜರು ಭೂಮಿಗಳನ್ನೂ ಸಾಗುವಳಿಮಾಡಿ ಭರ್ತಿ ಮಾಡಬಹುದು. ಇನ್ನೊಂದು ರೈಲುಮಾರ್ಗದ ರಚನೆಯೂ ಆಗಬಹುದು ಆದರೆ ಈ ಎರಡುಲಕ್ಷ ಕನ್ನಡಿಗರು ತಮ್ಮ ಐತಿಹ್ಯವನ್ನೇ ಮರೆತುಬಿಡುವಂತೆ ಮಾಡುವ ಯತ್ನವನ್ನು ನಾವು ಹೇಗೆ ಸಹಿಸಬಹುದೆನ್ನುವ ಮರ್ಮಭೇದಕ ಪ್ರಶ್ನೆ ಅತ್ಯಂತ ಕರಾಳವಾದುದು.

ಇದು ನಮ್ಮ ಪ್ರಜಾಸತ್ತೆಯ ತತ್ವಕ್ಕೂ ದೊಡ್ಡ ಸೋಲನ್ನೊದಗಿಸಿದೆ. ಪ್ರಜೆಗಳ ಇಚ್ಛೆಯು ಸರ್ಕಾರದ ಕಾರ್ಯಾಚರಣೆಯ ಮೇಲೆ ಪ್ರತಿಬಿಂಬಿಸಿಲ್ಲ. ಅದರ ಬದಲಿಗೆ ಸರ್ಕಾರ ಪ್ರಜೆಗಳ ಇಚ್ಛೆಗೆ ಕಡು ವಿರೋಧವಾಗಿ ವರ್ತಿಸಿದೆ. ಪ್ರಜಾಸತ್ತೆಯ ಪರಂಪರೆಯು ಉಜ್ವಲವಾಗಿ ನಮ್ಮ ದೇಶದಲ್ಲಿ ಬೆಳೆಯಬೇಕೆಂದು ಆಶಿಸುತ್ತಿದ್ದವರಿಗೆ, ಅಪೇಕ್ಷಿಸುತ್ತಿದ್ದವರಿಗೆ, ಆಗ್ರಹಪಡುತ್ತಿದ್ದವರಿಗೆ ಎಲ್ಲ ಇದು ಅತ್ಯಂತ ನಿರಾಶೆಯ ನಿದರ್ಶನವಾಗಿ ಪರಿಣಮಿಸಿದುದು ಚಿಂತಾಜನಕವೆನ್ನದೆ ವಿಧಿಯಿಲ್ಲ.

# ರಾಜಕೀಯ ರಂಗ

**ಪಕ್ಷದ ಶಿಸ್ತಿನ ಸಂಕುಚಿತ ಆವರಣದಲ್ಲಿರದೆ, ಸ್ವತಂತ್ರವಾಗಿ ವಿಚಾರ ಮಾಡಿ ನಿರ್ಣಯ ಕೈಗೊಳ್ಳುವ ಮೇಧಾವಿಗಳಿಂದಲೇ ನಿಜವಾದ ಪ್ರಗತಿಯು ಸಾಧ್ಯ— ಅವರ ಸ್ಥಾನವೇ ರಾಜಕೀಯದಲ್ಲಿ ದೊಡ್ಡದು.**

ಬರೆದವರು: ಶ್ರೀ ಮ. ಜಾ.

ರಾಜಕೀಯದಲ್ಲಿ ಪ್ರೇಕ್ಷಕರಿಗೆ ವಿಶಿಷ್ಟ ಸ್ಥಾನವಿದೆ. ರಾಜಕೀಯ ರಂಗದಲ್ಲಿ ನಡೆಯುವ ಆಗು ಹೋಗುಗಳನ್ನು ಇವರು ನೆಟ್ಟ ದೃಷ್ಟಿಯಿಂದ, ವಿವೇಕ ಪೂರ್ವಕವಾಗಿ, ನ್ಯಾಯಾನ್ಯಾಯ ವಿಮರ್ಶಕರಾಗಿ ನೋಡುವರು. ಈ ಪ್ರೇಕ್ಷಕ ವರ್ಗವನ್ನು ಮೂರನೇಯ ಪಕ್ಷವೆಂದರೂ ಸಲ್ಲುತ್ತದೆ.

ಈ ಪ್ರೇಕ್ಷಕ ವರ್ಗಕ್ಕೆ ರಾಜಕೀಯವೆಂದರೆ ಅಷ್ಟು ಮೆಚ್ಚಿನ ವಿಷಯ. ರಾಜಕೀಯ ರಂಗದಲ್ಲಿ ದುಡಿಯುತ್ತಿರುವ ಹಲವಾರು ಪಕ್ಷಗಳ ಗುಣ ದೋಷಗಳನ್ನೆಲ್ಲ ಇವರು ತುಲನಾತ್ಮಕ ದೃಷ್ಟಿಯಿಂದ ಗಂಟೆಗಂಟೆಯಲ್ಲಿ ಈಕ್ಷಿಸುವರು. ಯಾವುದು ತಪ್ಪು, ಯಾರೂ ತಪ್ಪು, ಯಾವುದು ಸರಿ, —ಯಾರು ಸರಿ—ಎಂದು ಇವರು ಲೆಕ್ಕ ಹಾಕುತ್ತಾ ಇರುವರು. ಆದರೆ ಇವರು ಹಾಕುವ ಲೆಕ್ಕವನ್ನು ಇವರು ಇತರರಿಗೆ ತೋರಿಸುವುದೂ ಇಲ್ಲ. ಅದು ತೋರುವುದೂ ಇಲ್ಲ.

ಜಗತ್ತಿನಲ್ಲಿ ಇಂತಹ ಒಂದು ನಿಷ್ಪಕ್ಷಪಾತಿಗಳ ತಂಡ ಯಾವಾಗಲೂ ಇದ್ದೇ ಇದೆ. ಎಲ್ಲಿ ರಾಜಕೀಯವಿದೆಯೋ, ಅಲ್ಲಿ ಇವರ ತಂಡಗಳಿವೆ. ಹಾಗೆಂದು ಇವರು ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳುವುದಿಲ್ಲ—ಯಾವ ಸಂಘದ ಸದಸ್ಯರೂ ಇವರು ಆಗುವುದಿಲ್ಲ. ಇವರನ್ನು ಯಾವ ಸಂಘದವರೂ ಸದಸ್ಯರಾಗಲು ಆಮಂತ್ರಿಸುವುದಿಲ್ಲ! ಆಮಂತ್ರಿಸಿದರೂ ಇವರು ಆ ಸಭೆಗಳಿಗೆ ಹೋಗುವುದಿಲ್ಲ. ಹೋದರೂ ಮಾತನಾಡದೆ ಹಿಂದೆ ಬರುವರು. ಈ ಪಕ್ಷದವರು ಇರುವುದು ಕೇವಲ ವ್ಯಕ್ತಿ ವ್ಯಕ್ತಿಗಳಾಗಿಯೇ!

ರಾಜಕೀಯದಲ್ಲಿ ನೂರಾರು ಪಕ್ಷಗಳು ಅಗತ್ಯವಿಲ್ಲವೆಂದೇ ಇವರ ಭಾವನೆ. ಎಲ್ಲಾ ಪಕ್ಷಗಳು ಒಂದಾಗಿ ದೇಶವನ್ನು ಆಳುವುದು ಹಿತವಲ್ಲವೇ ಎಂಬುದೇ ಇವರ ಪ್ರಶ್ನೆ.

ಇವರು ಯಾವ ರಾಜಕೀಯ ಪಕ್ಷಕ್ಕೂ ಸೇರುವುದಿಲ್ಲ. ಕಾರಣ—ಒಂದು ಪಕ್ಷಕ್ಕೆ ಸೇರಿದೊಡನೆ ಆ ಪಕ್ಷದ ಕ್ರಮ ನಿಬಂಧನೆಗಳಿಗನುಸಾರವಾಗಿ, ಅದರ ಶಿಸ್ತಿನ ಮೇರೆಗೆ, ಅದರ ಧೋರಣೆಯಂತೆ ನಡೆಯಬೇಕು. ಹಾಗೆ ಅವರು ತಮ್ಮ ಪಕ್ಷದ ಧೋರಣೆಯನ್ನು ಸಮರ್ಥಿಸುವಾಗ ಸ್ವಾಭಾವಿಕವಾಗಿ ಎದುರಾಳಿ ಪಕ್ಷದ ಧೋರಣೆಯನ್ನು ಖಂಡಿಸಬೇಕಾಗುತ್ತದೆ; ಪರರು ತಪ್ಪೆಂದು ಹೇಳಿ ತನ್ನ ಪಕ್ಷವನ್ನು ಸಮರ್ಥಿಸಬೇಕಾಗುತ್ತದೆ. ಹೆಚ್ಚಿನ ವೇಳೆ ತನ್ನ ಪಕ್ಷವು ತಪ್ಪುಗೈದರೂ ಅದನ್ನು ಸರಿಯೆಂದು, ಸಂತೋಷವಾಗಿ ಹೇಳುವ ಅಗತ್ಯಬೀಳುತ್ತದೆ. ತನ್ನ ಆತ್ಮಸಾಕ್ಷಿಯಾಗಿಯೂ ಪ್ರತಿಪಕ್ಷಿಯನನ್ನು ಪ್ರತಿಭಟಿಸಲೇಬೇಕಾಗುತ್ತದೆ. ಇಂತಹ ಧರ್ಮಸಂಕಟಕ್ಕೊಳಗಾಗುವುದರಿಂದ ಅವರಿಗೆ ಮಹಾ ಪಾಪ ಮಾಡಿದಂತಾಗುತ್ತದೆ.

ರಾಜಕೀಯ ಪಕ್ಷಗಳಿಗೆ ತಿಳಿದವರು ಸೇರುವುದಿಲ್ಲ. ದೇಶವನ್ನು ಒಂದುಗೂಡಿಸಬೇಕು—ಜನರಲ್ಲಿ ಶಾಂತಿಯನ್ನುಂಟು ಮಾಡಬೇಕೆಂದು ಭಾವಿಸುವ ವಿವೇಕಿಗಳು ಪಕ್ಷಗಳನ್ನುಂಟು ಮಾಡುವ ಸಭೆಗಳಿಗೆ ಸೇರುವುದು ಸರಿಯಲ್ಲ ಎಲ್ಲಾ ಪಕ್ಷಗಳೂ ಸರಿ ಎಲ್ಲಾ ಪಕ್ಷಗಳು ತಪ್ಪು ಎಂದು ನಿರ್ಧರಿಸಿಕೊಂಡು ಎಲ್ಲವುಗಳ ತಪ್ಪೊಪ್ಪುಗಳ ಒಂದು ಮಹಾ ರಾಶಿಯನ್ನು ಮಾಡಿ ಆ ರಾಶಿಯಿಂದ ಒಂದು ಪ್ರತ್ಯೇಕ ರೂಪವನ್ನುಂಟು ಮಾಡುವುದೇ ತಿಳಿದವರ ಕೆಲಸವಾಗಿರಬೇಕು ಇಂತಹವರೇ ಶಾಂತಿಪ್ರವಾದಿಗಳಾಗಲು ಯೋಗ್ಯರು. ಇಂತಹವರೇ ಲೋಕೋದ್ಧಾರಕರಾಗಲು ಭಾಗಿಗಳು.

ನಮ್ಮ ನಾಡಿನಲ್ಲಿ ಶಾಂತಿಪ್ರಿಯರಾದವರ, ಶಾಂತಿ ಸ್ಥಾಪಕರ ಪಕ್ಷಗಳು ಹೆಚ್ಚಾಗಬೇಕು. ಯಾವ ರಾಜಕೀಯ ಪಕ್ಷಕ್ಕೂ ಸೇರದೆ, ಯಾವ ಪಕ್ಷವನ್ನೂ ದ್ವೇಷಿಸದೆ, ಎಲ್ಲ ಪಕ್ಷಗಳೂ ನನ್ನವೇ ಎಂದು ಬಗೆಯುವವರ ತಂಡತಂಡಗಳು ಹೆಚ್ಚಬೇಕು. ಎಂತಹ ಸ್ಥಾನಮಾನಗಳು ದೊರೆತರೂ ಅವರು ಯಾವ ರಾಜಕೀಯ ಪಕ್ಷದ ಟಿಕೇಟಿನಲ್ಲೂ ಮುಂದೆ ನಿಲ್ಲಬಾರದು. ಹಾಗೆಂದು, ರಾಜಕೀಯವನ್ನು ಅರಿಗಳಿಗೆ ಮರೆತು ಕುಳಿತಿರಬಾರದು. ರಾಜಕೀಯವಾದಿಗಳ ಗುಣ ದೋಷಗಳನ್ನು ಮಥನ ಮಾಡಿಕೊಂಡು ಯೋಗ್ಯ ಕಂಠದಲ್ಲಿ ಯೋಗ್ಯ ಸಲಹೆಗಳನ್ನು ರಾಜಕೀಯವಾದಿಗಳಿಗೆ ಕೊಡುತ್ತಿರಬೇಕು. ಯಾವ ಪಕ್ಷವನ್ನೂ ದೂಷಿಸ ಬಾರದು, ಯಾರ ಮನಸ್ಸನ್ನೂ ನೋಯಿಸಬಾರದು. ಎಲ್ಲರೂ ಮಾಡುವುದು ದೇಶಸೇವೆಯೆಂದೇ ಭಾವಿಸಬೇಕು. ಎಲ್ಲರನ್ನೂ ಪ್ರೀತಿಸುವ ಮನಸ್ಸು ಬೆಳೆಯಬೇಕು. ಜಗತ್ತೇ ತನ್ನದೆಂದು ತಿಳಿದಿರಬೇಕು.

ಇಂತಹ ಜನರು ವಿವಿಧ ಯುಗಗಳಲ್ಲಿಯೂ ಭಾರತದಲ್ಲಿ ಹೆಚ್ಚಲಿ!

## ನೋಡು ನಲ್ಲೆ ಈ ದಿನ!

೧

ಕನ್ನಡಿಗರ ಹೊಸ ರಾಜ್ಯವು
ಉದಿಸುತಿಹುದು ಈ ದಿನ - ;
ಇದಕಾಗಿಯೆ ಹಂಬಲಿಸಿತು
ನಮ್ಮ ನಾಡ ಜನ—ಮನ

೨

ಹರಿದು ಹಂಚಿ ಹೋದ ನಾಡು
ಮತ್ತೆ ಒಂದುಗೂಡುತ;
ಮುನ್ನಡೆಯಲಿ ಜಗದಿ ತಾನು
ಸುಖದ ಜನಕೆ ನೀಡುತ

೩

ನಾವು ಮೇಲು ನೀವು ಕೀಳು
ಎಂಬಮಾತು ಏತಕೆ?
ಇಂಥ ಮಾತು ಇಂಥ ನೀತಿ
ನಮ್ಮ ಅಧಃಪಾತಕೆ

೪

ಬೇಡವಿಂಥ ಮಾತು ನಮಗೆ
ನಾವೆಲ್ಲರೂ ಒಂದೇ—;
ಸಣ್ಣತನವ ತೊರೆಯಬೇಕು
ನಾವೆಲ್ಲರು ಇಂದೇ—.

೫

ತಮ್ಮ ತಮ್ಮ ಭೇದಭಾವ
ಮರೆತು ಬಿಡಲಿ ಎಲ್ಲರು;
ಒಂದೆ ಮನದಿ ನಾಡಹಿತಕೆ
ಹೆಣಗುತಿರಲಿ ಎಲ್ಲರು.

೬

ಹಿರಿಯರೆಲ್ಲ ಕಿರಿಯರೆಲ್ಲ
ಮುಂದು ಮುಂದೆ ಸಾಗುತ
ಸೇವೆಗಯ್ಯುತಿರಲಿ ಬಿಡದೆ
ನಾಡತಾಯ್ಗೆ ಬಾಗುತ.

೭

ಧನದ ಬಲವ ದೇಹಬಲವ
ಬುದ್ಧಿಬಲವ ಸರ್ವರು,
ನಾಡಿಗಾಗಿ ಮೀಸಲಿಡುತ
ತಮ್ಮ ಬಾಳ ತೇಯ್ವರು.

೮

ಹೊಸ ರಾಜ್ಯವು ಉದಿಸುತಿಹುದು
ನೋಡುನಲ್ಲೆ ಈ ದಿನ;
ಜನತೆಗಾಗಿ ತರಲಿ ತಾನು
ದಿವ್ಯ ಸುಖದ ಬಾಗಿನ.

—ಎಸ್. ಎಸ್. ಬಸುಪಟ್ಟ
ಗುಳೇದಗುಡ್ಡ.

## ಕಾಸರಗೋಡಿನ ಕರೆ

**ಅಮ್ಮಾ, ಭುವನೇಶ್ವರಿ—**

ಕೇರಳ ನಾಡ ದೈವಕ್ಕೆ ನಿನ್ನ ನಾಡ ಸೌಜನ್ಯಶೀಲ ಮಕ್ಕಳ ಬಲಿಯೇ? ಇದು ಎಲ್ಲಿಯ ನ್ಯಾಯ? ಇದಾವ ನೀತಿಶಾಸ್ತ್ರ? ಯಾವ ವೇದದ ಬೋಧನೆ? ತಾಯೇ! ಅದೆಷ್ಟು ಸಲ ನಿನ್ನ ಕರೆಯಲಮ್ಮ? ಆದೇಕೆ ನೀ ಮಾತಾಡಲೊಲ್ಲೆ? ನಾವೇಕೆ ನಿನಗೆ ಬೇಡದವರಾದೆವೇ? ತುಚ್ಛೀಕರಿಸಿ ನಿನ್ನ ದೂರೀಕರಿಸಿದೆವೇ ನಾವು? ಮತ್ತೇಕೆ ಈ ತರದ ಮೌನ?

ನಾವು ಅದೆಷ್ಟು ಉತ್ಸಾಹದಿಂದ ಇದ್ದೆವು! ಹರಿದು ಹಂಚಾಗಿ ಹೋಗಿದ್ದ ನಿನ್ನ ರಾಜ್ಯದುದಯದ ಕಾಲದಲ್ಲಿ ನಿನ್ನ ನಗುಮೊಗವನ್ನ ಕಣ್ಣಾರೆ ಕಂಡು ಆನಂದಿಸಬೇಕು, ನಿನ್ನಾಶೀರ್ವಾದದಿಂದ ಹಿಗ್ಗಿ ನಲಿದು ಬಾಳಕಡಲಲ್ಲಿ ಈಜಿ ಸಂತೋಷಪಡಬೇಕು, ಯುಗ ಯುಗಾಂತರದಲ್ಲೂ ನಮ್ಮ ಸೀಳಿಗೆ ನಿನ್ನ ಮಡಿಲಲ್ಲಿ ಬೆಳೆದು ಕೀರ್ತಿಶಾಲಿಗಳಾಗಿ ಇರಬೇಕು, ನಿನ್ನ ಚರಣ ಸೇವೆಯಲ್ಲೇ ಬಾಳ ಮುಡಿದು ಸ್ವರ್ಗಸ್ಥರಾಗಬೇಕೆಂಬ ಹೆಬ್ಬಯಕೆಯ ಆಶಾಗೋಪುರದಲ್ಲಿ ನಾವು—ನಿನ್ನ ಸದ್ಬುದ್ಧಿಯ ಮುದ್ದಿನ ಮುದ್ದೆಯ ಕಂದರಾದ ನಾವು ಅದೆಷ್ಟು ಉತ್ಸಾಹ, ಸಡಗರ ಮತ್ತು ಆನಂದದಲ್ಲಿ ಇದ್ದಿದ್ದೆವು ಎಂದು ನೀನು ಅರಿತೂ, ಅರಿತೂ ನಮ್ಮನ್ನು ದುಗುಡದ ಆಕಾಶದಲ್ಲಿ ತ್ರಿಶಂಕುವಿನಂತೆ ಮಾಡಿದೆಯಾ? ಅದೇಕೆ ತ್ರಿಶಂಕುವಿನ ಗತಿ ನಮಗೆ ಮಾಡಿದೆ? ಅವನಂತೆ ನಾವು ಶಾಪಗ್ರಸ್ತರೇ? ಯಾ ನಿನ್ನ ಶಾಪಗ್ರಸ್ತರೇ? ಹೇಳಮ್ಮಾ ಅದೆಂತಹ ಕ್ಷಮಿಸಲಾಗದ ಘೋರ ದುರಿತವನ್ನು ನಾವು ಗೈದಿರುವೆವು? ಬಿರುಗಾಳಿಯ ಸುಳಿಯಲ್ಲಿ ಸಿಕ್ಕಿ ದಡ ಕಾಣದೆ ಪರಿತಪಿಸುವ ನೌಕೆಯಂತೆ ನಮ್ಮನ್ನೇಕೆ ಶೋಕ ಸಾಗರದಲ್ಲಿ ದೂಡಿದೆ?

ಮಾತೆ,

ಅದೆಷ್ಟು ಸಲ ನಿನ್ನ ಕರೆದರೂ ತೃಪ್ತಿ ನಮಗಿಲ್ಲ! ನಿನ್ನ ಪವಿತ್ರ ಉದರದಲ್ಲಿ ಜನಿಸಿ, ನಿನ್ನ ಪೂಜ್ಯಸ್ತನಗಳನ್ನು ಆನಂದದಿಂದ ಮುದ್ದು, ನಿನ್ನ ಗಾಳಿ ಸೇವಿಸಿ, ನಿನ್ನ ಬೆಳೆತಿಂದು ಬಾಳಿಬದುಕಿದ ನಾವು..., ಇಂದು?...ನಿನ್ನ ತ್ಯಜಿಸಬೇಕೇ ಅಮ್ಮಾ?... ನಿನ್ನ ತ್ಯಜಿಸಿ ಬಾಳಬೇಕೆ?....ನಾವು ಹೊರನಾಡ ಕನ್ನಡಿಗರಾಗಿ ಅಳಿಯಬೇಕೆ?.... ತಾಯೇ, ಹೇಳು, ಹೂಂ....ಹೇಳು... ಹೇಳಬಾರದೆ? ಹೇಳಲಾರೆಯಾ? ಹೇಳುವುದಾದರೂ ಎಂತು?...ನೀನು ಹೇಳಲಾರೆ?—

ಅಂದು ಪರದೇಶಿಗಳಾದ ಬಿಳಿಯರು ನಿನ್ನ ಬಂಧಿಸಿದರು. ನಿನ್ನ ಸುವರ್ಣ ನಾಡನ್ನು ಮುಕ್ತಿ ಹೀನ ಭೂಮಿಯನ್ನಾಗಿ ಮಾಡಿದರು. ನಿನ್ನ ಹರಿದು, ತಿಂದು, ರಂಚಿ, ಹಂಚಿ ಬಿಸಾಡಿದರು. ಅಹಂಗೆ ಇದೇ ಸುಖವೆನ್ನುವೆಯಾ?

ಆದರೆ ಇಂದು?—

ಅದೆನ್ನಾದರೂ ಬರೆಯುವುದೆಂತು? ಮನ ಬೆಂದಿದೆ! ಕಂಠ ಗದ್ಗದವಾಗಿದೆ! ನೇತ್ರಗಳು ಅಶ್ರು ಬಿಂದು ತುಂಬಿದೆ! ಕೈಕಾಲುಗಳು ನಡುಗುತ್ತವೆ! ರೋಮರೋಮವೇ ಅಳುತ್ತದೆ! ಆದರೂ ಹೇಳುತ್ತೇನೆ....ನಮ್ಮವರೇ ನಿನ್ನ ಕೊರಳ ಕೊಯ್ದರು! ನಿಜವಾಗಿಯೂ ಕೊರಳು ಕೊಯ್ದರು! ತಿಳಿದೂ ತಿಳಿದೂ ವಂಚಿಸಿದರು! ಕೇಳಿ ಕೇಳಿ ವಿಶ್ವಾಸ ಘಾತಕವಾಡಿದರು! ಕಂಡೂ ಕಂಡೂ ಮೋಸಗೈದರು!—ಇಂದಿಗೆ ಇದೇ ಸುಖವೆನ್ನುವೆಯಾ ಅಮ್ಮಾ? ಪರದೇಶಿಯರಂತೆ, ಆ ಬಿಳಿಯರಂತೆ ನಿನ್ನ ಅಂಗಾಂಗಗಳನ್ನು ಮತ್ತೊಮ್ಮೆ ತುಂಡರಿಸಿದರು ನಮ್ಮವರೇ ಆದ ಕಪ್ಪು ಬೇಶಿಯರು! ಶೂರ ಹನುಮಂತನಂತೆ ವೀರ ಕನ್ನಡಿಗರಾದ ನಾವೂ ಸೇರಿ ಸಂಜೀವಿನಿಯನ್ನೂ ತಂದೆವು! ಹರಿದು ಹಂಚಾಗಿ ಹೋದ ನಿನ್ನ ನಾಡನ್ನು ಒಟ್ಟುಗೂಡಿಸಲು ಅಳಿಲ ಸೇವೆಯನ್ನು ನಾವೂ ಮಾಡಿದೆವು! ಆದರೆ ಜೋಡಿಸುವಾಗ? ಸಮುದ್ರ ಮಥನದ ಮೋಹಿನಿಯಂತೆ ಪಣಿಕ್ಕರರು ಕೆಲ ಕನ್ನಡಿಗರನ್ನು ವಂಚಿಸಿದರು......ಅಮ್ಮಾ.......ವಂಚಿಸಿದರು!.......

"ಕಾಸರಗೋಡು? ಕನ್ನಡ ನಾಡು."—"ಕಾಸರಗೋಡು? ಕರ್ನಾಟಕದಲ್ಲಿ" ಉಳಿಯುವ ತನಕ ವಿರಮಿಸಲಾರೆವು. —"ನಮ್ಮ ಜೀವ? ಕನ್ನಡ." —"ನಮ್ಮ ರಕ್ತ? ಕನ್ನಡ." —"ಏನೇ ಬರಲಿ? ಒಗ್ಗಟ್ಟಿರಲಿ." —"ಅಳಿಯುವುದಿದ್ದರೆ? ಕರ್ನಾಟಕದಲ್ಲಿ." —"ಉಳಿಯುವುದಿದ್ದರೆ? ಕರ್ನಾಟಕದಲ್ಲಿ." ಎನ್ನುತ್ತಾ ಬೊಬ್ಬಿಟ್ಟೆವು. ಪ್ರಜಾಪ್ರಭುತ್ವದ ಮೇಲ್ತರಗತಿಯ ನಾಡಲ್ಲಿ ಪ್ರಜಾಪ್ರಭುತ್ವದ ಹಾದಿಯಲ್ಲಿಯೇ ಹೋದೆವು. ಆದರೇನು ತಾನೆ ಫಲ? ನಮ್ಮದು ಕಾನನದ ರೋದನವಾಯಿತು.

ಭುವನೇಶ್ವರಿ!

ನಮ್ಮ ನಾಡ, ಕಾಸರಗೋಡ, ಉತ್ತರ ಭಾಗವನ್ನು ಮಾತ್ರ ನಾವು ಆಶಿಸಿದುದು, ಕೇಳಿದುದು ತಪ್ಪೇ? ದಕ್ಷಿಣ ಭಾಗ ಸಹಿತ ಕೇಳಬೇಕಿತ್ತೇ- ನೀನೇಕೆ ಹೇಳುವುದಿಲ್ಲ? ನ್ಯಾಯವಾದ ಕೇಳಿಕೆಗೆ, ಅರಿಕೆಗೆ, ಬೇಡಿಕೆಗೆ ಹಾಗೂ ಪ್ರಾರ್ಥನೆಗೆ ಫಲವಿಲ್ಲದಾದ ಮೇಲೆ ಅನ್ಯಾಯವಾಗಿ ಕೇಳಿದರೆ?

ನ್ಯಾಯವಾದುದನ್ನೇ ಕೇಳಿದೆವು! ನ್ಯಾಯವಾದ ಹಾದಿಯಲ್ಲೇ ಹೋದೆವು! ಬಾಪುರವರ ಪಥದಲ್ಲೇ ಮುಂದಡಿ ಇಟ್ಟೆವು! ಆದರೆ, ಪಣಿಕ್ಕರರು ಮಾಡಿದುದೇ ನ್ಯಾಯವಾಯಿತಲ್ಲವೇ? ಕಾಸರಗೋಡಿನಲ್ಲಿ ಹುಟ್ಟಿದ, ಇನ್ನು ಮುಂದೆ ಹುಟ್ಟಲಿರುವ ಕನ್ನಡಿಗರೆಲ್ಲರ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ನೆಲೆ ನಿಲ್ಲುವ ಸನ್ನಿವೇಶವನ್ನು ಪಣಿಕ್ಕರರು ಮಾಡಿದರಲ್ಲವೆ?

ಕನ್ನಡನಾಡಾಗಿದ್ದ ಕಾಸರಗೋಡು—ನಿನ್ನ ಪವಿತ್ರ ಭೂಮಿಯಾದ ಕಾಸರಗೋಡು ಹೇಳ ಹೆಸರಿಲ್ಲದಾಗುವಂತಾಯಿತಲ್ಲವೇ?

ಕಾಸರಗೋಡ ಕನ್ನಡಿಗರು, ನಿನ್ನ ಪವಿತ್ರ ಉದರದಲ್ಲಿ ಹುಟ್ಟಿದ ನಾವು—ನಿನ್ನ ನಾಡಮಕ್ಕಳಾದ ನಾವು ಹತಭಾಗ್ಯರೇ? ಕೈಲಾಗದ ಹೇಡಿಗಳೇ? ನಿಷ್ಕ್ರಿಯರೇ? ನಿರ್ವೀರ್ಯರೇ ಅಮ್ಮಾ? ಸೂರ್ಯ ದೇವನಿಗೆ ಸತ್ಯವಿಲ್ಲವೇ? ಸತ್ಯಕ್ಕೆ ಇಂದೇ ಸಾವೇ? ನ್ಯಾಯಕ್ಕೆ ಸೋಲು ಬಂದೊದಗಿತೇ?

ಮಾತೆ,

ನ್ಯಾಯವಾದ ವಾದಕ್ಕೆ ಪ್ರಜಾಪ್ರಭುತ್ವ ಸರಕಾರ ಚಿಕ್ಕಾಸಿನ ಬೆಲೆ ಕೊಡದಿದ್ದರೆ ಅದರ ಕುರಿತು ನಿನ್ನ ಪ್ರತಿಕ್ರಿಯೆಯೇನು? ಅನ್ಯಾಯಕ್ಕೆ ನಿನ್ನ ಪ್ರತಿಭಟನೆ ಹೇಗಮ್ಮಾ? ಕಾಸರಗೋಡನ್ನು ಕಳಕೊಂಡು ಸರ್ವಥಾ ದರಿದ್ರ ಜಿಲ್ಲೆಯೊಂದನ್ನು ಪಡೆದು ಅದರಿಂದ ರೂಪಗೊಳ್ಳಲಿರುವ ಕರ್ನಾಟಕವಾದರೂ, ನೀನಾದರೂ ಯಾವ ಪ್ರಯೋಜನವನ್ನು ಪಡೆಯುತ್ತೀ? ಅಪಾರವಾದ ಆರ್ಥಿಕ ಸಂಪತ್ತನ್ನೂ ಅಸಾಮಾನ್ಯವಾದ ಸಂಸ್ಕೃತಿ ಸಂಪತ್ತನ್ನೂ, ನಾಡುನುಡಿಗಳ ಸರ್ವಸ್ವವನ್ನೂ ಕಳೆದುಕೊಂಡು, ಕಾಸರಗೋಡು ರಹಿತ ಕನ್ನಡನಾಡೊಂದನ್ನು ಕಟ್ಟಿ ಕನ್ನಡಿಗರು—ನೀನು—ಪಡೆವ ಪ್ರಯೋಜನವಾದರೂ ಏನು? ನಿನ್ನ ಪುಣ್ಯ ಗರ್ಭದಲ್ಲಿ ನಾವು ಹುಟ್ಟಿ ಬಾಳಿಲ್ಲವೆಂದು ನಂಬಬೇಕೆ? ಎಷ್ಟೋ ತಲೆಮಾರುಗಳಿಂದ, ಅನಾದಿ ಕಾಲದಿಂದಲೇ ನಿನ್ನ ಜತೆಯಲ್ಲಿಯೇ ನಾವಿರುತ್ತೇವೆಂದು ಕೈಚಾಚಿ ಬೇಡುತ್ತಿರುವಾಗ ನೀನದರ ಕಡೆಗೆ ಗಮನ ಕೊಡದೆ—ನಮಗೆ ಇದುವರೆಗೆ ಯಾವೊಂದು ಸಾಮಾನ್ಯ ಸಹವಾಸ ಪರಿಚಯವಿರದ, ಪರಿಚಯ ಕೂಡಾ ಅಷ್ಟೊಂದು ಇಲ್ಲದ, ಯಾವುದೋ ಭೂಭಾಗದ ಎಲ್ಲಿಯೋ ಇರುವವರೊಡನೆ ಕೂಡಬೇಕೇ? ನಿನ್ನನ್ನು ಹಾಗೂ ಬಿಗಿದ ಬಾಂಧವ್ಯದ, ಸಾಮೀಪ್ಯ ಸಂಬಂಧದ ಸೋದರರನ್ನು ನಾವು ಬಿಟ್ಟಿರಬೇಕೇ?

ದೇವಿ,

ನಮ್ಮನ್ನೇಕೆ ತೊಲಗಿ ದೂರ ...ದೂರ ....ಬಹುದೂರ ಹೋಗುವಿ? ಕೋಟಿ, ಕೋಟಿ ಕನ್ನಡಿಗರನ್ನು ಸಾಕಿ ಸಲಹಬೇಕಿದ್ದಾಗ ಕೇವಲ ಎರಡು ಲಕ್ಷ ಹಸುಗೂಸುಗಳು ನಿನಗೆ ಭಾರವಾದವೇ? ಅವರ ಸಾಕಣೆ ನಿನಗೆ ತಲೆಶೂಲೆಯಾಯಿತೇ? ಅವರ ಸಲಹುವಿಕೆ, ಕಾಪಾಡುವಿಕೆ ವಿಪರೀತ ಹೊರೆಯಾಯಿತೇ? ಅಮ್ಮಾ... ಒಪ್ಪತ್ತು ಊಟವನ್ನಾದರೂ—ಇರಲಿ—ಕೇವಲ ನಿನ್ನ ಗಾಳಿ—ಉದಕದಿಂದಲಾದರೂ ನಾವು ನಿನ್ನ ಮಡಿಲಲ್ಲೇ ಬಾಳುತ್ತಿದ್ದೆವು! ನಿನ್ನ ಚರಣ ಮಡಿಲಲ್ಲಿ ಇದ್ದು ಈ ನಶ್ವರ ಜೀವನವನ್ನು ಬಿಡುತ್ತಿದ್ದೆವು! ಇರಲಿ,

ನವಂಬರ ಒಂದು ನಿನಗೆ ಆನಂದದ ದಿನ!

ನವಂಬರ ಒಂದು ನಮಗೆ ಕಪ್ಪುದಿನ! ದುಗುಡದ ದಿನ! ವೇದನಾ ದಿನ! ಶೋಕದ ದಿನ! ಅಳುತ್ತಿರುವ ದಿನ! ನಿಜವಾಗಿಯೂ ಅಳುತ್ತೇವೆ! ಖಂಡಿತವಾಗಿಯೂ ಅಳುತ್ತೇವೆ! ಅಮ್ಮಾ.... ಅಳುತ್ತೇವೆ.... ಅ....ಳು....ತ್ತೇ....ವೆ!

ಅಮ್ಮಾ,

ನಮ್ಮ ಬಲಿದಾನ ನಿಮಗೆ ತೃಪ್ತಿಯೆ.? ನಿಮಗೆ ತೃಪ್ತಿಯೋ ಅಮ್ಮಾ?

ನಮ್ಮ ಬಲಿದಾನವು ನಿನ್ನ ನಾಡನ್ನು ಬಲಿಷ್ಟಗೊಳಿಸಲಿ! ನಮ್ಮ ಶೋಕ ನಿನ್ನ ನಾಡನ್ನು ಸಂಪತ್ಸಮೃದ್ಧಿಗೊಳಿಸಲಿ! ನಮ್ಮ ವೇದನೆ ನಿನ್ನ ಗೌರವ, ಸ್ಥಾನ ಮಾನ ಹಾಗೂ ಕೀರ್ತಿಯನ್ನು ದಿಗಂತಕ್ಕೆ ವ್ಯಾಪಿಸುವಂತೆ ಮಾಡಲಿ! ನಮ್ಮ ಕೂಗು—ನಮ್ಮ ವೇದನೆ—ನಮ್ಮ ಶೋಕ-ಚರಿತ್ರೆಯನ್ನು ಪುನರಾವೃತ್ತಿಗೊಳ್ಳದಂತೆ ಮಾಡಲಿ! ನಮ್ಮ ಬೇಡಿಕೆ ಇದುವೆ! ನಮ್ಮ ಅರಿಕೆ ಇಷ್ಟೇ! ನಮ್ಮ ಅನುದಿನದ ಪ್ರಾರ್ಥನೆಯೂ ಇದೇ ತಾನೆ!

ಅಮ್ಮಾ ನಾವು ಹೊರನಾಡ ಕನ್ನಡಿಗರಾದರೂ ನಮ್ಮ—ನಿನ್ನ ಭಾಷೆ, ಸಂಸ್ಕೃತಿ ಅಭಿಮಾನ, ನಾಡನುಡಿ, ಗೌರವ, ಮಾನ ಸ್ಥಾನಗಳನ್ನುಳಿಸುತ್ತಾ, ವೇದನೆ ಪಡುತ್ತಾ, ಸಾಯುತ್ತೇವೆ......

ಕನ್ನಡತಾಯೇ....ವರದೇ....ಭುವನೇಶ್ವರಿ...ಹಾ....ಜಗದಂಬಿಕೆ...ಜನನೀ ... ಎಲ್ಲಿ?...ನೀನೆಲ್ಲಿ?....ನಾವೆಲ್ಲಿ?..ಅಮ್ಮಾ! ...ನಮ್ಮ ಬಲಿದಾನ ನಿನಗೆ ತೃಪ್ತಿಯೋ ಅಮ್ಮಾ.......

# "ನಮ್ಮ ಬಲಿದಾನ ನಿನಗೆ ತೃಪ್ತಿಯೋ ಅಮ್ಮಾ?"

ಪ್ರತಿಯೊಬ್ಬ ಕನ್ನಡಿಗನೂ ಕಾಸರಗೋಡಿನ ದುರದೃಷ್ಟವನ್ನು ನೆನೆದು ಕೇಳುವ ಪ್ರಶ್ನೆ!

**ಬರೆದವರು: ಕೆ. ಸುಭಾಶ್ಚಂದ್ರ ಶೆಣೈ, ಬದಿಯಡ್ಕ.**

---

### ಕಳ್ಳನ ಮನಸ್ಸು

ಇಗರ್ಜಿಯಲ್ಲಿ ಪತ್ತೈವತ್ತು ಮಂದಿ ಸೇರಿದ್ದರು. ಪಾದ್ರಿಯು ಪ್ರವಚನದ ನಡುವೆ ಇಲ್ಲಿ ನೆರೆದಿರುವ ಪುರುಷರಲ್ಲಿ ಇನ್ನೊಬ್ಬರ ಹೆಂಡತಿಯ ಕೂಡೆ ಸರಸ ನಡೆಸುವವರೊಬ್ಬರಿದ್ದಾರೆ. ಅವರು ದಂಡನಾಗಿ ಕಾಣಿಕೆಯ ಪೆಟ್ಟಿಯಲ್ಲಿ ಹತ್ತು ರೂಪಾಯಿ ಹಾಕದಿದ್ದರೆ ಹೆಸರು ಪ್ರಕಟಿಸಬೇಕಾಗಿ ಬರುತ್ತದೆ" ಎಂದನು.

ಸಂಜೆ ಕಾಣಿಕೆ ಪೆಟ್ಟಿಯನ್ನು ತೆರೆದು ನೋಡಿದಾಗ ಸುಮಾರು ಮೂವತ್ತು ಮಂದಿ ಪುರುಷರಿದ್ದ ಆ ಸಭಾಸದರಿಂದ ೨೮ ಹತ್ತು ರೂಪಾಯಿ ನೋಟುಗಳೂ ಜಮೆಯಾಗಿದ್ದದ್ದು ಕಂಡು ಬಂತು. ಮತ್ತೊಂದು ಐದು ರೂಪಾಯಿ ನೋಟಿದ್ದು ಅದರಲ್ಲಿ "ಈಗ ಇರುವುದೇ ಇಷ್ಟು—ಬಾಕಿ ಸಂಜೆ ಹಾಕುತ್ತೇನೆ" ಎಂಬ ಚೀಟಿ ಅಂಟಿಸಿದ್ದರು.


## ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ವಸ್ತುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—8—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

*Head Office:* Tenkapet, **Udipi**, S. K. *Phone:* 66

# ಪ್ರಜಾಪ್ರಭುತ್ವ

(೭ನೇ ಪುಟದಿಂದ)

ವಷ್ಟು, ಹಿಡಿದರೆ ಅದನ್ನು ಈ ಕಲಂಕದ ಮಟ್ಟಕ್ಕೆ ಮುಟ್ಟಿಸುವಷ್ಟು. ಅವಕಾಶವನ್ನು ಕಲ್ಪಿಸಿದ ಸಭಾ ಸಂಘಟಕರೂ ಪಶುತ್ವದ್ದೇ ಒಂದಂಶ ಮಾಡಿರುವುದಿಲ್ಲವೆ? ಅಂಥ ಕೆಸರಿರುವ ಪಕ್ಷದಲ್ಲಿ ಎದ್ದು ಹೋಗದೆ ಮತ್ತೂ ಛಲದಿಂದ ಮಾತಾಡಲು ನಿಂತು ಬಯ್ಯುತ್ತ ಹೋದದ್ದು ಪ್ರತಿಪಶುತ್ವವೆಂದರೆ ತರ್ಕಬಲ್ಲ ಯಾರೂ ತಪ್ಪು ತಿಳಿದುಕೊಳ್ಳಲಾರರು, ವ್ಯವಹಾರ ಬಲ್ಲ ಯಾರೂ ಪಶುತ್ವವೆನ್ನಲಾರರು. ಇನ್ನು ಉಕ್ತ ಎಲ್ಲ ವರ್ಗಗಳೂ ಪಶುಗಳೇ ಆಗಿದ್ದರೆ ಚಿಂತೆಯಿಲ್ಲ. ಅವರಲ್ಲಿ ಮೇಲೇನು? ಕೀಳೇನು? ಮಾನವೇನು? ಅವಮಾನವೇನು? "ಬಹುಶಃ ಅದೇ ನಿಜ. ನಮ್ಮ ದೇಶ ಪಶುಗಳದ್ದು, ಪಶುಗಳ ನಾಯಕರು ಪರ ನಾಯಕರು, ಪಶುಪತಿಗಳು" ಎಂದು ಯಾವನಾದರೂ ಮೂದಲಿಸುವಂತಿದೆ ಇಂದಿನ ಸನ್ನಿವೇಶ. ಆದುದರಿಂದ ಮುಖಂಡರಾದ ನೆಹರುಗಳನ್ನಾಗಲಿ ಅಂಥ ಇನ್ನೊಬ್ಬರನ್ನಾಗಲಿ ಪ್ರಜೆಗಳು ದೂರಬಾರದು. ಏಕೆಂದರೆ ಅವರು ಇಂಥ ಘಟನೆಗಳಿಂದ ಪಾಠ ಕಲಿತು ನಾಳಿನ ಚುನಾವಣೆಯಲ್ಲಿ ಹಿಂದೆ ಹೇಳಿದಂತೆ ಇಂಥಿಂಥ ಕಾರ್ಯಗಳನ್ನು ಹೀಗೆ ಹೀಗೆ ಮಾಡುವೆನೆಂದು ವಚನ ಕೊಟ್ಟ ವಿಶ್ವಾಸಾರ್ಹ ವ್ಯಕ್ತಿಗಳನ್ನೇ ಆರಿಸುವ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಪ್ರಜೆಯೂ ಈಗ ತೆಗೆದುಕೊಳ್ಳತಕ್ಕದ್ದು.

ಭಾರತದಲ್ಲಿಯ ನಮ್ಮ ಇಂದಿನ ಎಲ್ಲ ಮುಖಂಡರೂ ಪೂಜ್ಯರು. ಏಕೆಂದರೆ ನಾವೇ ಅವರಿಗೆ ಮುಖಂಡತ್ವವನ್ನು ವಹಿಸಲು ಬಿಟ್ಟವರು. ಇಷ್ಟೇ—ಮೇಲಿನ ಮಾತಿನಲ್ಲಿ 'ಎಲ್ಲರೂ' ಎಂಬುದು ಮುಖ್ಯ. ಈಗ ಅವರಲ್ಲಿ ಯಾರು ಪ್ರಜಾಪ್ರಭುತ್ವ ಲಕ್ಷಣದ ಪೂಜ್ಯತೆಯನ್ನು ಉಳಿಸಿಕೊಳ್ಳಲಿಲ್ಲವೋ ಅವರನ್ನು ಪುನಃ ಚುನಾಯಿಸದಿರುವುದೊಂದೇ ಪ್ರಾಯಶ್ಚಿತ್ತ. ವಿದ್ಯಾರ್ಥಿಗಳಿಂದ, ಕಾರ್ಮಿಕರಿಂದ, ಇತರರಿಂದ ಪ್ರತ್ಯಕ್ಷ ಪ್ರೇರಣೆಯನ್ನಿಸುವ ಸಂತಾಪಪ್ರದರ್ಶನದ ಮೂಲಕ ಗಲಭೆ ಎಬ್ಬಿಸುವುದು ಲಜ್ಜಾಸ್ಪದ. ಅದನ್ನು ಈಗಿಂದೀಗ ಬಿಡಬೇಕು ಹಾಗೆ ಬಿಡದೆ ಹೋದರೆ ನಮ್ಮ ಪ್ರಜಾತ್ವಕ್ಕೆ ಕಲಂಕ. ನಮ್ಮ ಯಾವ ಅಸಮಾಧಾನವನ್ನಾದರೂ ಮತದಾನದ ಮೂಲಕವೇ ಪರಿಹರಿಸಿಕೊಳ್ಳಬೇಕು ಎಂಬುದು ಅನಿವಾರ್ಯವಾಗಿ ಪ್ರಜೆಗಳು ಕಲಿಯತಕ್ಕ ಪಾಠ. ಅಂದರೆ ಚುನಾವಣೆ ಎಂದರೆ ಎಂಥ ಮಹತ್ವದ "ಯಜ್ಞ" ಎಂಬುದರ ಕಲ್ಪನೆಯಾಗಬಹುದು. ಭೂದಾನ ಮುಂತಾದ ಯಜ್ಞಗಳೆಲ್ಲವನ್ನು ಮೀರಿಸಿದ ಮಹಾ ಯಜ್ಞವದು; ಅದೊಂದು ಪುರುಷಸೂಕ್ತ ಹೇಳಿದ ಪುರುಷಮೇಧ ಪೌರುಷಮೇಧ, ಮೇಧೋಮೇಧ. ಚುನಾವಣೆಯೆಂದರೆ ಇಂದು ಮುಕ್ತಿಗೆ ಬೇಕಾದ ಸಾಧನ ಚತುಷ್ಟಯದಷ್ಟು ಮಹತ್ವದ್ದಾಗಿದೆ. ಅಂಥ ಸಾಧನ ಚತುಷ್ಟಯದ ಶಿಕ್ಷಣವು ಈ ಆಯ್ಕೆಯ ವಿವೇಕಕ್ಕೆ ಆವಶ್ಯಕ. ನಮ್ಮ ಮುಖಂಡರಿಗಾದ ಅವಮಾನ ನಮಗೇ ಆದ ಅವಮಾನ. ಅಂಥ ಆತ್ಮಾವಮಾನದ ಪ್ರಸಂಗಗಳನ್ನು ತಪ್ಪಿಸಿಕೊಳ್ಳಲು ಚುನಾವಣೆಯಲ್ಲಿ ಪೂಜ್ಯ ಪೂಜಾ ವಿವೇಕವನ್ನು ಬಳಸಿಕೊಳ್ಳುವುದೇ ಉಪಾಯವಾಗಿದೆ. ಹಲವು ಮಹಾರಾಷ್ಟ್ರೀಯರೂ ಗುಜರಾಥಿಗಳೂ ಇತರ ಅಸಂತುಷ್ಟರೂ ಇದನ್ನು ಚೆನ್ನಾಗಿ ನೆನಪಿಟ್ಟುಕೊಂಡು ದೇಶದ ಮರ್ಯಾದೆಯನ್ನು ಕಾಪಾಡಬೇಕು. ನಾವೂ ನಮ್ಮ ನೇತೃಗಳೂ ಬಯಸಿಕೊಳ್ಳುವುದನ್ನು ಕಂಡು ಹರಿ-ಹರ-ಹಿರಣ್ಯಗರ್ಭರಂತಹ ಜಗತ್ತಿನ ಪುಂದಾಳುಗಳು ನಕ್ಕಾರು! ಜಗತ್ತಿಗೆ ಶಾಂತಿಪಾಠ ಹೇಳುತ್ತ ಬಂದ ಭಾರತದ ಭಾರತತ್ವ ಉಳಿಯಬೇಕಾದರೆ ನಾವು ಶಾಂತಿಯುತ ಮಾರ್ಗದಿಂದ ಕಾರ್ಯ ಸಾಧಿಸುವ ಮಾತಿನ ಬಲವನ್ನು ಕಟ್ಟಬೇಕು. ನಿತ್ಯವೂ ಪ್ರೈಮರಿ ಶಾಲೆಗಳಲ್ಲಿ ಮಾತ್ರ ಕೇಳಿಬರುವ ಜಾರಿಗೆ ಬಂದಿರುವ "ಸಹನಾವವತು. ಸಹನೌಭುನಕ್ತು" ಎಂಬ ಪ್ರಾರ್ಥನೆಯ ಸಾರವು ವಯಸ್ಕರ ಆಚರಣೆಯಲ್ಲಿ ಇಳಿಯಬೇಕು. ಆಗ ಮಾತ್ರ ರಾಷ್ಟ್ರದ ಧ್ಯೇಯವಾದ ಸಮಾಜವಾದದ ಸಮಾಜ ನಿರ್ಮಾಣ ಸಾಧ್ಯವಾದೀತು, ನಿಜವಾದ ಪ್ರಜಾರಾಜ್ಯ ನಮಗೆ ಸಿದ್ಧಿಸೀತು. ಆಚಾರ ರಹಿತವಾದ ಉಪದೇಶವಿನ್ನು ಸಾಕು. ಪ್ರಜಾಪ್ರಭುತ್ವದ ತತ್ವ ಆಚಾರದಲ್ಲಿಯೇ ಗಮ್ಯ.

---

# ಜನಸಾಮಾನ್ಯರ ಭಾಷೆ

ನಾವು ನಮ್ಮ ಮನೆಮಾತನ್ನು ಮರೆತು ಇಂಗ್ಲಿಷ ಭಾಷೆಗೆ ಮನಸೋತುದರ ಪರಿಣಾಮವಾಗಿ ಸುಶಿಕ್ಷಿತ, ರಾಜಕೀಯ ಒಲವಿನ ಜನತೆಗೂ ಜನಸಾಮಾನ್ಯರಿಗೂ ನಡುವಿನ ಅಂತರವು ಬೆಳೆಯುತ್ತ ನಡೆದಿದೆ. ಇದರಿಂದ ಭಾರತದ ಭಾಷೆಗಳು ಬಡವಾಗುತ್ತ ನಡೆದಿವೆ. ತಾಯಿ ನುಡಿಯಲ್ಲಿ ಗಹನ ವಿಷಯಗಳನ್ನು ನಿರೂಪಿಸಬೇಕಾದರೆ ನಮಗೆ ಸಾಕು ಬೇಕಾಗುತ್ತದೆ. ವೈಜ್ಞಾನಿಕ ಪದಗಳಿಗೆ ಸರಿಯಾದ ಶಬ್ದಗಳು ನಮ್ಮಲ್ಲಿ ದೊರೆಯುವದಿಲ್ಲ. ಇದರ ಪರಿಣಾಮ ಹಾನಿಕಾರಕವಾಗಿದೆ. ಆಧುನಿಕ ವಿಚಾರಗಳ ಗಾಳಿ ಕೂಡ ಜನಸಾಮಾನ್ಯರಿಗೆ ಸೋಕದಾಗಿದೆ. ತನ್ನ ಪ್ರಾಂತ ಭಾಷೆಗಳ ಮರೆವಿನಿಂದ ಭಾರತಕ್ಕಾಗ ಹಾನಿಯನ್ನು ಅಳೆಯುವದು, ನಾವಿನ್ನೂ ಆಧುನಿಕ ಕಾಲದಲ್ಲಿಯೆ ಕಾಲು ಹಾಕುತ್ತಿರುವುದರಿಂದ, ಕಷ್ಟಸಾಧ್ಯವಾಗಿದೆ. ಆದರೆ ಈ ಅನರ್ಥವು ತೊಲಗದ ವಿನಾ ಜನಸಾಮಾನ್ಯರ ಬಗೆಯು ಬಂದಿವಾಸದಲ್ಲಿಯೆ ಕೊಳೆಯಬೇಕಾಗುವದೆಂಬುದು ನಮಗೆ ಗೊತ್ತಾಗದಿರದು. ಸ್ವರಾಜ್ಯ ಕಟ್ಟಡದ ನಿರ್ಮಾಣಕ್ಕೆ ಜನಸಾಮಾನ್ಯರು ಸರಿಯಾಗಿ ಕೈನೀಡುವದು ಮುಖ್ಯವಾಗಿ ಪರಿಣಮಿಸುವದು. ಅಹಿಂಸೆಯ ಅಡಿಗಲ್ಲ ಮೇಲೆ ನಿಂತ ಸ್ವರಾಜ್ಯಕ್ಕಾಗಿ ಪ್ರತಿಯೊಂದು ವ್ಯಕ್ತಿಯ ಸ್ವಾತಂತ್ರ್ಯ ಆಂದೋಲನೆಯಲ್ಲಿ ತನ್ನ ಕಾಣಿಕೆಯನ್ನು ನೇರವಾಗಿ ಸಲ್ಲಿಸುವದು ಕ್ರಮಪ್ರಾಪ್ತವು. ಅದರ ಪ್ರತಿಯೊಂದು ಕ್ರಮದ ಇತ್ಯರ್ಥವನ್ನರಿಯದೆ ಜನಸಾಮಾನ್ಯರು ಇದನ್ನು ಸರಿಯಾಗಿ ಸಾಧಿಸಲಾರರು. ಪ್ರತಿಯೊಂದು ಕ್ರಮವನ್ನು ಅವರ ಮಾತಿನಲ್ಲಿಯೆ ತಿಳಿಸದೆ ಹೋದಲ್ಲ ಇದು ಹೇಗೆ ತಾನೆ ಸಾಧ್ಯವಾದೀತು?

— ಮಹಾತ್ಮಾ ಗಾಂಧೀ.

---

### ಅಯ್ಯೋ, ಪಾಪ!

ರೈಲ್ವೆ ಪ್ರಯಾಣ ಮಾಡುತ್ತಿದ್ದ ಹಳ್ಳಿಗನ ಬಳಿಬಂದು ತಿಕೇಟು ಕಲೆಕ್ಟರರು "ನೋಡೋಣ, ನಿಮ್ಮ ತಿಕೇಟು ತೆಗೆಯಿರಿ" ಎಂದ.

"ಅಯ್ಯೋ, ಇಷ್ಟು ವರ್ಷ ರೈಲ್ವೆಯಲ್ಲಿ ನೌಕರಿ ಮಾಡಿಯೂ ತಿಕೇಟನ್ನು ನೋಡಲೇ ಇಲ್ಲವಪ್ಪಾ, ನೀನು?" ಎಂದು ಹಳ್ಳಿಯ ಪ್ರಯಾಣಿಕ ನೋಡಲಿಕ್ಕೆ ಕೊಡುವಂತೆ ಕೇಳಿದ!

---

## ಕನ್ನಡ ಮಾತೆಯೊಡನೆ

೧

ಜನ್ಮದಾತೆಯು ಕರುಣೆ-ಎದೆಕೆಗಿರದಾಮುವುತೆ!  
ಬೆಳಕಿನಂತರವಳು ನಿರ್ಮಲೆಯುಳಿತೆ!  
ಜಗನ್ನಾಥ ಮಾತೆ! ತ್ಯಾಗದ ಮೂರ್ತಿ ಖ್ಯಾತೆ!  
ಜೀವರಾಶಿಯ ಜೀವಕಳೆದಾತೆ!

೨

ಹೆತ್ತೊಡಲ ಹಸಿವಿಗೆ ನೀಗಿತೆಂಬುದಿನ್ನಿಲ್ಲ!  
ಕೇಳುವೆವು ಕನಿಕರದ ನುಡಿ-ಹಾಡು  
ಕಿರಿಯರೆಲ್ಲರಿಗವರು ಧ್ಯೇಯದರ್ಶಕರಾಗಿ—  
ಎಚ್ಚರಿಸ್ವದೇನೆಂಬೆ?—ತಾಯನಾಡು!

೩

ಸಂಪ್ರದಾಯಕೆ ಶರಣು ಗೊಂಬೆಯರಿಗೇನರಿವು?  
ಶಾಂತಿ; ಯೆಂದೆಂಬುದೇ ಶ್ರುತಿಗಾನವು  
"ತುಂಬುಹೊಟ್ಟೆಯವರೊಬ್ಬ ತೇಕುತ್ತ ಸಂತಸದಿ  
ಹಸಿದವಗೆ, ಶಾಂತಿ' ಎಂಬುದನರ್ಥವು!"

೪

ಕನ್ನಡದ ನಾಡೊಂದ ಕಟ್ಟುವೆವು ನಾವೆಂದು-  
ಹಿಗ್ಗಿ ಹೋರಾಡಿದೆವು—ಒಂದಾಗಲು!  
ಕನ್ನಡದ ಕವಿಕುಲಜರೆಲ್ಲರೆದ್ದಿರಿಸಿ ದಿನವು—  
ಮನಮರುಕದಾ ಗೀತ ಹಾಡುತಿರಲು!

೫

ಕನ್ನಡದ ಬಾವುಟವನೇರಿ,-ಹಾರಿಸ-ಬನ್ನಿ!  
ಮನದ ಬಯಕೆಯೆ ಬೇಡಿ, ಹಾಡಿ-ನಲಿದ!  
ಕನ್ನಡೋದ್ಯಾನದಲ್ಲಿ ಕೃತಿ-ಕಲ್ಪತರುಲತೆಯು  
ಬೆಳೆದು ಫಲಪಾವಂತೆ—ಮದಿಯುತಿರುವ!

೬

ಜಯತು ಜಗದೀಶ್ವರಿ! ಮಾತೆ ರಾಜೇಶ್ವರಿ!  
ಕನ್ನಡಿಗರೆಲ್ಲ ಐಕ್ಯತೆಯೊಳಿರಲಿ!  
ಕನ್ನಡದ ಪುಣ್ಯಧರಣಿಯ ಜೀವ ಜೀವನಗಳು—  
ಬುದ್ಧರಾಗಿಯೆ ಐಕ್ಯತೆಗೆ ಹೆಣಗಲಿ!

ಕಪಂದಲೆ ಜಯರಾಮ ಶೆಟ್ಟಿ.

---

### ಮನೋರಂಜನೆ ತೆರಿಗೆ

ಅವರಿಬ್ಬರಲ್ಲಿ ಯಾವುದೋ ಮಾತಿನ ಕುರಿತು ವಾದವಿವಾದ ನಡೆಯಿತು. ಅದು ಬಹಳ ಸಮಯವಾದರೂ ಮುಗಿಯುವ ಲಕ್ಷಣ ಕಾಣಲಿ; ಕೈಮೈಗಳ ವಾದಘಾತ, ಕೊನೆತಗಲಿದ ಮಾತಿಗೆ ಮಾತು ಸತ್ತಿ ಚರ್ಚೆ ಮುಂದರಿಯುತ್ತಿದ್ದುದನ್ನು ಕಂಡವರೊಬ್ಬರು "ನೀವು ಮನೋರಂಜನ ತೆರಿಗೆಯಿಂದ ಸರಕಾರವನ್ನು ವಂಚಿಸುತ್ತಿರುವುದು ನ್ಯಾಯವೇ?" ಎಂದಂದರು.

ಹೊಸಕೆರೆ

ಚಿದಂಬರಯ್ಯನವರು

ಅನುವಾದಿಸಿದ

ಭಗವದ್ಗೀತೆಯು

ಸಮೂಲ ಭಾಷಾಂತರ

ಪೋಕೆಟ್ ಎಡಿಷನ್.

ಸುಮಾರು 450 ಪುಟಗಳು

ಕ್ರಯ 0—12—0

ನವಯುಗ ಪ್ರೆಸ್, ಉಡುಪಿ.



ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಎಂ. ಎಸ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಾಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟೆ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

# ಯೋಜನೆಯ ಕಾರ್ಯಾಚರಣೆ

(೬ನೇ ಪುಟದಿಂದ)

ತೇಜೋಭಂಗ ಹಾಗೂ ಸತ್ವಭಂಗರಾಗಿ ಸರ್ವ ವಿಷಯದಲ್ಲಿಯೂ ಟೊಳ್ಳಾದ ರಾಷ್ಟ್ರದ ಸರ್ವಾಂಗೀಣ ಉನ್ನತಿಯ ಹೆಜ್ಜೆಗಾಟವು ಅಲ್ಪಾವಧಿಯಲ್ಲಿ ಮೊಳೆತು, ಸುರವಾಗಿ ಬೆಳೆಯುವ ಮಹಾಪ್ರಗತಿಯ ಸುಲಕ್ಷಣವಾಗಿ ಉತ್ತೇಜನಕಾರಿಯಾಯಿತು.

ಈ ಮಹಾ ಮಾರ್ಪಾಡಿನ ಗುಟ್ಟಾವುದು? ಚೇತನದ ಸಂಜೀವಿನಿ ಯಾವುದು? ಯಾವ ಮಹಾಶಕ್ತಿ ಈ ಅದ್ಭುತ ಕತೆ ಸಾಧಿಸಿತು? ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿದ ಪ್ರಗತಿಯ ಉಗಮವೆಲ್ಲಿ?

ನಮ್ಮ ನಾಡು ಅಗಣಿತ ಸಂಪತ್ತು ತುಂಬಿದ ವಿಶಾಲ ನೆಲ, ದಟ್ಟ ಕಾಡು, ಹರಿವ ಅನೇಕ ಹೊಳೆ ಹಳ್ಳ, ಹಿಮಾಲಯ ವಿಂಧ್ಯ ಸಹ್ಯಾದ್ರಿಗಳಂತಹ ಹಿರಿಬೆಟ್ಟ, ಸಾವಿರಾರು ಮೈಲು ಕರಾವಳಿ ಪ್ರದೇಶ ಪಡೆದಿರುವಂತೆ ರಾಷ್ಟ್ರಸೇವೆಗೆ ಹೆಗಲುಕೊಡುವ ಪುತ್ರರನ್ನೂ ಪಡೆದಿದೆ. ಅವರು ದುರ್ದಿನಗಳಲ್ಲಿ ಕಂಗೆಡಲಿಲ್ಲ. ನಿರಾಶರಾಗಲಿಲ್ಲ. ಕೈಕಟ್ಟಿಕೊಂಡು ಕೂಡ್ರಲಿಲ್ಲ. ಅವರ ಜ್ಞಾನದ ಕೊಡುಗೆಯೇ ನಾಡಿನ ಭಾವೀ ಸಮೃದ್ಧಿಗೆ ಭಂಡವಾಳವಾಯಿತು. ಅವರ ಕರ್ತೃತ್ವ ಶಕ್ತಿಯೇ ಸುಭದ್ರ ರಾಷ್ಟ್ರಕ್ಕೆ ಅಡಿಗಲ್ಲಾಯಿತು.

ಅಖಿಲ ನಾಡಿನಲ್ಲಿಯ ಲಭ್ಯ ಸಂಪತ್ತಿನ ಸಮೀಕ್ಷಣೆ ನಡೆಯಿತು. ಯೋಜನೆಯನ್ನು ಸಿದ್ಧಪಡಿಸಲು ಆಯೋಗ ಒಂದನ್ನು ನಿಯಮಿಸಲಾಯಿತು. ಆ ಯೋಜನಾ ಆಯೋಗದವರು ಇರಿಸಿಕೊಂಡ ದೃಷ್ಟಿ ದೇಶದ ಉದ್ದಗಲಗಳಷ್ಟು ವಿಶಾಲವಾಗಿತ್ತು; ಆಳೆತ್ತರಗಳಷ್ಟು ಉಚ್ಚವಾಗಿತ್ತು. ಅಂತೆಯೇ ಸರ್ವತೋಮುಖ ಪ್ರಗತಿಯನ್ನು ಬಯಸಿದ ಸರ್ವರನ್ನೊಳಗೊಂಡ ಯೋಜನೆಯನ್ನು ರಾಷ್ಟ್ರದ ಮುಂದಿರಿಸಿದರು.

ಇದೇ ಪ್ರಥಮ ಪಂಚವಾರ್ಷಿಕ ಯೋಜನೆಯು.

ಇಂಥ ಮಹಾ ಯೋಜನೆಯನ್ನು ದರಿದ್ರ ದೇಶದಲ್ಲಿ ಕಾರ್ಯರೂಪಕ್ಕಿಳಿಸುವದು ಮೂರ್ಖತನದ ಪರಮಾವಧಿಯು! ಇದೊಂದು ಕಾಗದದ ಯೋಜನೆಯು. ಹೆಚ್ಚೇಕೆ? ಇದನ್ನು ಮುದ್ರಿಸಿದ ಕಾಗದವೂ ದಂಡ! ನೂರು ಸಾಸಿರ ರೂಪಾಯಿಗಳ ಯೋಜನೆ ಬಿಸಿಲುಗುದುರೆ!!

—ಹೀಗೆ ಅನೇಕರು ಸಿಕ್ಕಂತೆ ಟೀಕಿಸಿದರು. ಪ್ರಾರಂಭದಲ್ಲಿ ನಿರುತ್ಸಾಹದ ಮಾತುಗಳನ್ನಾಡಿದರು. ಆದರೆ ಅವರೇ ಮೆಚ್ಚುವಂತೆ ಇಂದು ಅದು ಫಲಕೊಟ್ಟು ಯಶಸ್ವಿಯಾಗಿ ಮುಕ್ತಾಯಗೊಂಡು ಮುಂದಿನ ಮೆಟ್ಟಿಲನ್ನೇರಿದೆ.

ಅದೇ ದ್ವಿತೀಯ ಪಂಚವಾರ್ಷಿಕ ಯೋಜನೆಯು.

ಈ ಯೋಜನೆಗಳಿಗೆ ಇರಿಸಿಕೊಂಡ ವೆಚ್ಚ ಬಹಳ. ಪ್ರಥಮ ಪಂಚವಾರ್ಷಿಕ ಯೋಜನೆಗೆ ೨೦೬೯ ಕೋಟಿ ರೂಪಾಯಿಗಳು ಹಾಗೂ ದ್ವಿತೀಯ ಯೋಜನೆಗೆ ೪೮೦೦ ಕೋಟಿ ರೂಪಾಯಿಗಳ ವೆಚ್ಚವೆಂದು ನಿರ್ಧರಿಸಲಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಗೆ ಅದಕ್ಕಿಂತಲೂ ಹೆಚ್ಚಿಗೆ ೨೮೭ ಕೋಟಿ ರೂಪಾಯಿಗಳು ವೆಚ್ಚವಾದ ಅಂದಾಜಿದೆ. ದ್ವಿತೀಯ ಯೋಜನೆಯ ವೆಚ್ಚವು ಇನ್ನು ೧೦—೧೨ ನೂರು ಕೋಟಿಗಳಿಗೆ ಏರಿ ಒಟ್ಟು ೬೦೦೦ ಕೋಟಿಗೂ ಮುಟ್ಟಬಹುದು.

ಮೊದಲನೆಯ ಯೋಜನೆ ೧೯೫೧ ರಿಂದ ಪ್ರಾರಂಭವಾಗಿ ೫೬ಕ್ಕೆ ಮುಕ್ತಾಯವಾಯಿತು. ಎರಡನೆಯದು ೫೬ಕ್ಕೆ ಪ್ರಾರಂಭವಾಗಿ ೧೯೬೧ಕ್ಕೆ ಮುಗಿಯಲಿದೆ.

ಈ ಯೋಜನೆಗಳಲ್ಲಿ ರಾಷ್ಟ್ರೀಯರೆಲ್ಲರ ಪಾಲಿದೆ. ಜನತಾ ಯೋಜನೆಗಳಾದ ಇವುಗಳ ಕಾರ್ಯಾಚರಣೆಯು ಜನತೆಯ ಹೊಣೆಯಾಗಿದೆ. ಯೋಜನೆಯು ನೀಲಿ ಮುದ್ರಣ ಬುದ್ಧಿಶಾಲಿ ಸಿದ್ಧಪಡಿಸುವನು, ಯೋಜನೆಗಳನ್ನು ಕಾರ್ಯರಂಗಕ್ಕಿಳಿಸುವನು ಬಲಶಾಲಿಯು. ದಟ್ಟ ದರಿದ್ರ ದೇಶದಲ್ಲಿ ಬರೀಯ ಹಣವನ್ನೇ ನಂಬಿದ್ದರಾಗುವದಿಲ್ಲ. ಅದರ ಜೊತೆಗೆ ಬಾಹುಬಲವನ್ನೂ ನಂಬಬೇಕಾಗುತ್ತದೆ. ಅಂತೆಯೇ ಈ ಯೋಜನೆಗಳು ಮಾನವ ಶಕ್ತಿಯಲ್ಲಿ ಹೆಚ್ಚಿನ ವಿಶ್ವಾಸವಿಟ್ಟಿವೆ. ಶ್ರಮ ಗೌರವ, ಶ್ರಮದಾನ, ಶ್ರಮ ಯಜ್ಞಗಳ ನಾಮ ಎತ್ತಲಿಂದಲೂ ಕೇಳಿಬರುತ್ತಿರುವದೇ ಇದಕ್ಕೆ ದೃಷ್ಟಾಂತವು. ಈ ಯೋಜನೆಗಳ ಯಶಸ್ಸು ಜನತೆಯ ಪ್ರೇಮ, ಸಹಕಾರ, ಪಾಲುಗಾರಿಕೆಗಳನ್ನೇ ಬಲವಾಗಿ ಅವಲಂಬಿಸಿದೆ. ಈ ಯೋಜನೆಗಳು ಪ್ರಜಾಪ್ರಭುತ್ವ ತಳಹದಿಯ ಮೇಲೆ ಕಟ್ಟಿದ ಜನತಾ ಯೋಜನೆಗಳಾಗಿವೆ. ಅಂತೆಯೇ ಜನತೆ ಇವುಗಳನ್ನು ಒಪ್ಪಿ, ಅಪ್ಪಿಕೊಂಡಿದೆ.

ಈ ಯೋಜನೆಗಳು ಅಂತೆಯೇ ಯಶಸ್ಸುಗಳಿಸಿವೆ. ಈ ಯೋಜನೆಗಳ ಅಸ್ತಿವಾರ ಜನತೆಯ ಬಲವು. ಜನತೆ ದೂರದಲ್ಲುಳಿದು, ಏನೇನೋ ಸಾಧಿತವಾದಲ್ಲಿ ಅದು ಶಾಶ್ವತವಾಗಿ ನಿಲ್ಲಲಾರದು. ಜನತೆಯ ಬೆವರು, ರಕ್ತ ಬೆರೆತ ಕಟ್ಟಡ ಆಚಂದ್ರಾರ್ಕವಾಗಿ ನಿಲ್ಲಬಲ್ಲುದು. ಹಣವು ತಾನು ಬೇರೆ ದುಡಿಯುವದಿಲ್ಲ. ಸಾಧನ ಸಾಮಗ್ರಿಗಳಿಗೆ ಹತ್ತುವ ಹಣ ಅಲ್ಪ. ಅವುಗಳನ್ನೂ ಜನತೆಯೇ ಸಿದ್ಧಪಡಿಸುತ್ತದೆ. ಜನತೆ ಸಿದ್ಧಪಡಿಸಿದ ಸಾಧನಸಂಪತ್ತುಗಳಿಂದ ಉತ್ಸಾಹ ಉಕ್ಕೇರುತ್ತದೆ. ಅನಿವಾರ್ಯವೆಂದಾಗ ಕೆಲವೊಂದು ಹೊರಗಿನಿಂದ ಬರಬೇಕು. ಪ್ರತಿಫಲಕೊಟ್ಟು ದುಡಿಯ ಹಚ್ಚುವ ಜನತೆಗೆ ತಮ್ಮದೇ ಕೆಲಸವೆಂದು ಆತ್ಮೀಯತೆಯೆಂತು ಬಂದೀತು? ಅಂದಮೇಲೆ ಅವರು ಮಾಡಿದ ಕಾರ್ಯ ಭದ್ರವಾದೀತೇ? ಶಾಶ್ವತೆ ಪಡೆದೀತೇ? ಮಂಗಳಮಯವಾದೀತೇ?

ತಾಜಮಹಾಲನ್ನು, ಗೋಳ ಗುಮ್ಮಟವನ್ನು, ಗೋಮಟೇಶ್ವರ ಮೂರುತಿಯನ್ನೂ ನಿರ್ಮಿಸಿದುದು ಅದ್ಭುತ ಸಾಹಸ! ತಾಜಮಹಾಲ ಸುಂದರವಾಗಿದೆ. ಗೋಳ ಗುಮ್ಮಟ ಭವ್ಯವಾಗಿದೆ. ಗೋಮಟೇಶ್ವರ ಮೂರ್ತಿ ಅದ್ಭುತವಾಗಿದೆ. ಅವುಗಳನ್ನು ನಿರ್ಮಿಸಿದ ಶಿಲ್ಪಿಗಳು ಬರೀಯ ಹಣದಾಶೆಯಿಂದ ದುಡಿದಿರಲಾರರು; ದುಡಿದಿಲ್ಲ. ಅವರ ಅಂತಃಕರಣ, ಪ್ರತಿಭೆಗಳು ಬೆರೆತಿರುವದರಿಂದಲೇ ಅವು ಭವ್ಯವೂ ದಿವ್ಯವೂ ಆಗಿವೆ.

ನಾವು ಸಾಧಿಸುವ ಕಾರ್ಯಗಳು ಮುಖ್ಯವಲ್ಲ. ಅವುಗಳಿಗೆ ಜನತೆ ಇತ್ತ ಸ್ವಾಗತ, ಬೆರಸಿದ ಅಂತಃಕರಣಗಳ ಅಂಶಗಳು ಮುಖ್ಯವಾಗಿವೆ.

ಈ ಹಿರಿಗುರಿಗಳನ್ನಿರಿಸಿಕೊಂಡು ನಮ್ಮ ಯೋಜನೆಗಳು ಸಾಗಿವೆ. ನಮ್ಮ ನಾಡಿಗೆ ಭೆಟ್ಟಿಕೊಟ್ಟ ಪರಕೀಯರೆಲ್ಲ ನಾವು ಅಲ್ಪ ಅವಧಿಯಲ್ಲಿ ಸಾಧಿಸಿದ ಪ್ರಗತಿಯನ್ನು ಕಂಡು ಬೆಟ್ಟು ಕಚ್ಚಿದ್ದಾರೆ. ನಾವು ಬಲಶಾಲಿಗಳಾಗಿ ನಡೆದಿರುವೆವೆಂದೇ ನಮಗೊಂದು ವಿಶ್ವದಲ್ಲಿ ಸ್ಥಾನ ದೊರೆತಿದೆ. ವಿಶ್ವದ ರಾಜಕಾರಣದಲ್ಲಿ ನಮ್ಮ ಮಾತಿಗೊಂದು ಬೆಲೆ ಬಂದಿದೆ. ವಿಶ್ವದ ಶಾಂತಿಗಾಗಿ ನಾವು ಮುಂದೆ ಮಾಡಿದ ಪಂಚಶೀಲ ತತ್ವಗಳನ್ನು ಅನೇಕ ರಾಷ್ಟ್ರಗಳು ಒಪ್ಪಿವೆ.

---


## ಘಂಟಿ ಮಾರಾ

ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ

ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ.ಎ.

—ಕೆಲವು ಅಭಿಪ್ರಾಯಗಳು—

"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"
—ಕರ್ಮವೀರ.

"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿ ಇಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು."
—ಇಂಡಿಯನ್ ಎಕ್ಸ್‌ಪ್ರೆಸ್.

200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0

## ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿಯ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ನಿವರಿಸುವ ಏಕಮಾತ್ರ ಗ್ರಂಥ

**ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.**

**ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.**


---

# ಕನ್ನಡವೆಂದರೆ ನನ್ನೆದೆ ನಲಿವುದು!

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ.

೧

ಕನ್ನಡವೆಂದರೆ ನನ್ನೆದೆ ನಲಿವುದು!
ಕನ್ನಡ ನಡೆನುಡಿ ಮನಕೆ ಮೆಚ್ಚಿಹುದು;
ಕನ್ನಡ ಕನ್ನಡ ಕನ್ನಡವೆನುವುದು,
ಎನ್ನದೆ ಕಂತಿಯ ದಿನ ದಿನ ಮಿಡಿವುದು.

೨

ಉನ್ನತ ಪರ್ವತ ಮಾಲೆಯ ಬೆಡಗನು,
ಸನ್ನುತ ಪರಿಮಳ ಗಂಧದ ಸೊಬಗನು,
ಚಿನ್ನದ ಗನಿಯನು ಮೊರೆಯುವ ಕಡಲನು
ಕನ್ನಡನಾಡಿನೊಳಲೆಯುತ ಕಂಡೆನು.

೩

ಕಲ ಕಲ ನಾದದಿ ನದಿ ಹರಿಮಾಡಿರೆ,
ಫಲ ಪುಷ್ಪಗಳಲಿ ತರುಲತೆ ಕೂಡಿರೆ,
ಕಲರವಗೆಯ್ಯುತ ಶುಕಪಿಕ ಹಾಡಿರೆ,
ಚೆಲುವೆಲ್ಲೆಲ್ಲಿಯು ತುಂಬಿದೆ ನೋಡಿರೆ.

೪

ಗಂಗ ಕದಂಬ ಚಲುಕ್ಯರಲೂಪರು,
ಸಂಗರ ಕಲಿಗಳು ರಟ್ಟ ವಿಕ್ರಮರು,
ಹಿಂಗದ ವಿಜಯನಗರದಧಿರಾಜರು,
ಸಂಗಡಕಳ ಚೂರ್ಯರು ಧರೆಯಾಳ್ದರು.

೫

ವಿದ್ಯಾರಣ್ಯರು ಮಾಧ್ವವರೇಣ್ಯರು,
ಸಿದ್ಧಿವಡೆದರೀನಾಡಿನೊಳೆಲ್ಲರು,
ಶುದ್ಧರು ಭಕ್ತಿ ಪ್ರಸಿದ್ಧರು ನಾಡಿನೊ-
ಳಿದ್ದರು ಕನಕಪುರಂದರ ಬಸವರು.

೬

ರನ್ನಪಂಪರಮೊ ವೀರಗಾನದಲಿ,
ಹೊನ್ನಮ್ಮನು ಕಂತಿಯು ಹೆಂಗೊರಳಲಿ,
ಚೆನ್ನಾಯ್ಯನೆ ಚೆಲುಹಾಡ ಹಾಡಿದರು
ಕನ್ನಡ ಸವಿನುಡಿಯೆಂದು ಸಾರಿದರು.

೭

ಶಿಲೆಗಳ ಕೆತ್ತುತ ಜೀವಮೂರ್ತಿಗಳ,
ಕಲೆ ಕೂಡಿಸಿ ತೋರಿರುವ ಶಿಲ್ಪಿಗಳ,
ನೆಲೆಯಿದು! ಕಲೆಗಳ ಕಲಿಗಳ ಬೀಡಿದು!
ಚೆಲುವಿನಗೂಡಿದು!-ಕನ್ನಡ ನಾಡಿದು.

೮

ಇಲ್ಲಿಯ ಹೆಂಗಳ ಮಕ್ಕಳ ಬೆಡಗನು,
ಸಲ್ಲಲಿತದ ಸಂಸಾರದ ಸೊಬಗನು,
ಎಲ್ಲಿಯು ಕಾಂಬೆನೆ? ಸ್ನೇಹದ ಸಿರಿವನೆ!
ಎಲ್ಲಾ ಗುಣಗಳಗಿದುವೆ ತವರ್ಮನೆ.

೯

ದಸರೆಯ ದೀಪಾವಳಿಗಳ ಕಾಲದಿ,
ಎಸೆವುದು ನೆಲವಿದು ಸುಖ ಸಮ್ಮೇಳದಿ,
ಪಸರಿಸುತಿರುವುದು ಕನ್ನಡ ಪ್ರೀತಿಯು
ದೆಸೆದೆಸೆ ತುಂಬಿದೆ ಕನ್ನಡ ಕೀರ್ತಿಯು!

೧೦

ಕನ್ನಡ ನಾಡಿನ ಬಾವುಟ ಹಾರಿಸಿ,
ಕನ್ನಡ ಮಾತೆಯ ಬಿರುದನು ಬಾರಿಸಿ,
ಕನ್ನಡ ಕನ್ನಡ ಜಯ ಜಯ ವೆನ್ನುತ
ಕನ್ನಡಿಗನು ಮುನ್ನಡೆವದು ಸಂತತ!

× × ×

ಕನ್ನಡವೆಂದರೆ ನನ್ನೆದೆ ನಲಿವುದು!
ಕನ್ನಡ ನಡೆನುಡಿ ಮನಕೆ ಮೆಚ್ಚಿಹುದು;
ಕನ್ನಡ ಕನ್ನಡ ಕನ್ನಡವೆನುವುದು
ಎನ್ನೆದೆ ತಂತಿಯು ದಿನ ದಿನಮಿಡಿವುದು.

# ಕನ್ನಡದ ಕಲ್ಯಾಣೋತ್ಸವ

## (ಕನ್ನಡ ದರ್ಶನ)

ರಚನಕಾರ: ಕುಂದಾಡಿ ಸೀತಾರಾಮ ಅಡಿಗ,
'ಕಲಾನಿಲಯ' ಫಲಿನೂರು, ದ. ಕ.

ಕನ್ನಡದ ನಾಡಿನಲಿ ಭಾರಿ ಗದ್ದಲವಂತೆ ।
ಬಾರಣ್ಣ ಹೋಗೋಣ ನೋಡೋಣವಂತೆ ।
ದಿಗ್ದೆಸೆಯು ಉಲಿವಂತೆ ಭೇರಿರವ ಕೇಳಂತೆ ।
ಕೊರಲುಲಿಯು ಜಯನಾದ ವೊಳಗಿತಂತೆ ॥ ೧ ॥ ಪಲ್ಲ

ಮನೆ ಮನೆಯು ಜನ ಜನದ ಸಂಭ್ರಮದಹಾಡಂತೆ।
ತನ್ನಡಾಂಬಿಕೆ ತಾನೆ ನಲಿವಳಂತೆ ॥
ನೀಲಿಮೆಯು ವಿಸ್ತಾರ ಬಾನೆಡೆಗೆ ನೋಡಂತೆ ।
ಕೀರ್ತಿಧ್ವಜವೆತ್ತರಕೆ ಹಾರ್ವುದಂತೆ ॥ ೨ ॥

ಕನ್ನಡದ ಜನವೆಲ್ಲ ಐಕ್ಯಗಾನವ ಹಾಡಿ ।
ಒಕ್ಕೊರಲಿನುದ್ಘೋಷ ಗೈವರಂತೆ ॥
ತಮ್ಮ ನಾಡಿನ ನೆಲಕೆ ನಗೆ ನೀರ ಉಣಿಸಂತೆ ।
"ಭಕ್ತಿ ರಾಷ್ಟ್ರದ ಶಕ್ತಿ" ಎಂಬ ಪಣವಂತೆ ॥ ೩ ॥

ದೇವಗಣ ನೀರದದ ಮೇಲೆ ನಿಂದಿಹರಂತೆ ।
ಐಕ್ಯಗಾನಕೆ ಅವರ 'ಅಸ್ತು'ವಂತೆ ॥
ನಾಡ ನೀರತೆಗವರು ಎಂದೆಂದು ನೆರೆಯಂತೆ ।
ಅಲ್ಲಲ್ಲೆ ಅವರವರ ಹಕ್ಕೆಯಂತೆ ॥ ೪ ॥
(ಮುಂದೆಂದು ಅಲ್ಲವರ ಟಿಕ್ಕೆಯಂತೆ)

ಭೂಸ್ವರ್ಗವು ಅಂತರದ ಮೇಲು ಚಪ್ಪರವಂತೆ ।
ಭದ್ರವತಿಯಿಂದದಕೆ ತೊಲೆಗಂಬವಂತೆ ॥
ಕಣ್ಣೆದಿರು ಕಟ್ಟಿರುವ ಸ್ವರ್ಗವೆಂದೆನುವಂತೆ ।
ಕನ್ನಾಡು ಮೆರೆಯುವುದು ಸಾಜವಂತೆ ॥ ೫ ॥

ಮಲೆನಾಡ ಸಸ್ಯದ್ಯೆಸಿರಿಯೆ ತೋರಣವಂತೆ ।
ಅಲ್ಲಲ್ಲಿ ಪಡುಗಡಲ ತೆಂಗು ಗೊನೆಯಂತೆ ॥
ಕಂಬ ಕಂಬಕೆ ಅಡಕೆ ಕದಳಿಗಳ ಸರವಂತೆ ।
ಜೋಗು ವಿದ್ಯುಚ್ಛಕ್ತಿ ಬೆಳಕ ನೀರುಗಂತೆ ॥ ೬ ॥

ಉತ್ತರದ ದಿಸೆಯಿಂದ ಗಂಧ ದೂಪದ ಕಂಪು ।
ಮತ್ತೆ ವೃಂದಾವನದ ಪುಷ್ಪವಂತೆ ॥
ಮೈಸೂರ ಮಲ್ಲಿಗೆಯು ಮಂಗ್ಳೂರ ಜಾಜಿಗಳು ।
ಮೇಲು ಕಟ್ಟಿಗೆ ತಾನೆ ಹೊದಿಕೆಯಂತೆ ॥ ೭ ॥

ಅದೊ! ಪೂರ್ಣ ವ್ಯೆಗೊಂಡು ನಿಂತಿಹುದು
ಸಿರಿಗುಡಿಯು ।
ಕನ್ನಡಮ್ಮನು ತಾನೆ ನಳ ನಳವಳಂತೆ ॥
ಪೂರ್ವ ಸಿದ್ಧತೆಯೆಲ್ಲ ಕೊನೆಹಂತ ಸೇರಿಹುದು ।
ನೋಡಿದರೆ ಕಣ್ ತಾನೆ ನಂಬದಂತೆ ॥ ೮ ॥

ಸಹ್ಯಾದ್ರಿ ಗಿರಿ ಶೃಂಗಗಳಿಗೆ ಹೊಂಬಾಳೆಯಂತೆ ।
ಮೂಗುವಟ್ಟಿರೆ ಮೂಕ ರಾದರಂತೆ ॥
ಪಡುಗಡಲ ದೊರೆಯೊಬ್ಬ ಎಲ್ಲ ಬಿಚ್ಚಿದನಂತೆ ।
ಅವನೊಬ್ಬ ಬುದ್ಧ ತಾ ನಲಿವನಂತೆ ॥ ೯ ॥

ಬಾಪ್ಪದದ ನಗೆ ಚೆಲ್ಲಿ ಸ್ವಸ್ತಿಗಾನವ ಮಾಡಿ ।
ನಾಡಿಗರ ನಗೆಯೊಳಗೆ ಪಾಲ್ಗೊಂಡನಂತೆ ॥
ಮತ್ತೆ ಕಾಣಿಕೆಯೀಸಿ, ಪಾದ ಸೇವೆಯ ಗೈಯೆ ।
ಕನ್ನಡಮ್ಮನ ಚರಣ ತೊಳೆವನಂತೆ ॥ ೧೦ ॥

ಬೇಲೂರು ಬಾಲೆಯರ ಮುಗ್ಧನರ್ತನವಂತೆ ।
ಕೋಲಾರ ಕಡವರವೆ ಅದಕೆ ಮುಡಿಪಂತೆ ॥
ಕಾವೇರಿ ಗೋದೆಯರ ಮೇಣ್ ತುಂಗಭದ್ರೆಯರ ।
ಪುಣ್ಯ ಪಾವನ ಜಲದಿ ಜಳಕವಂತೆ ॥ ೧೧ ॥

ವೇಣೂರು, ಕಾರ್ಕಳದ, ಮೇಣ್ ಶ್ರವಣ
ಬೆಳಗೊಳದ ।
ಗೋಮಟೇಶ್ವರರಲ್ಲಿಗೈತರುವರಂತೆ ॥
ಬೆಂಗಳೂರಿನ ವಾಯು ಯಾನ ವಾಹನವಂತೆ ।
ಕೊಡಗಿನಾ ಕಿತ್ತಳೆಯೆ ಕೊಡುಗೆಯಂತೆ ॥ ೧೨ ॥

ಅದೋ! ನೋಡು, ಆ ಕಡೆಗೆ ನಿಂತಿಹುದು ಜನ ಸಂತೆ ।
ಮೇಣಂತೆ ಬರುತಿಹರು ಇರುವೆ ಸಾಲಂತೆ ।
ಬಣ್ಣ ಬಣ್ಣದ ಉಡುಗೆ ಬಗೆ ಬಗೆಯ ಬಗೆಯಂತೆ ।
ತುಳುವ, ನಾಡವ, ಕೊಡಗ, ಒಕ್ಕಲಿಗರಂತೆ ॥ ೧೩ ॥

ಶೈವ, ವೈಷ್ಣವ, ಕ್ರೈಸ್ತ, ಜೈನ, ಮುಸಲರು ಅಂತೆ ।
ಅಲ್ಲಿಷ್ಟು ಇಲ್ಲಿಷ್ಟು ತೆಲುಗರಿಹರಂತೆ ॥
ತೊರೆ ಎಲ್ಲ ಮುಖ ಮುಖದಿ ಹರಿಯುತಿರಲೇನಂತೆ ।
ಔದಾರ್ಯದೊಡಲಬ್ಧಿಗೆಲ್ಲ ಸಮನಂತೆ ॥ ೧೪ ॥

ಈ ಕಡೆಯಲಿಗೊ ನೋಡು! ಕುಲಪುರೋಹಿತ ಜೋಡು।
ಅಧ್ವರ್ಯುಗಳಿಗೆಲ್ಲ ಅವರು ಮೇಲಂತೆ॥
ವೇದನಾದದ ಸ್ವಾದ, ಮೋದ ಭಕುತಿಯ ಬೋಧ।
ತಾರಕದಿ ಕೇಳುತಿದೆ ಕವಿವಾಣಿಯಂತೆ ॥೧೫॥

ಉಘೆ! ಉಘೇ! ಉಘೆ ಎಂದು ಉದ್ದಾಮ ಕವಿವೃಂದ।
ಹಾಡುತಿದೆ, ಹೊಗಳುತಿದೆ, ನಲಿಯುತಿದೆಯಂತೆ॥
ಪುಟ್ಟಪ್ಪ, ಬೇಂದ್ರೆಯರು, ಅಡಿಗ, ಕಾರಂತರು।
ಗುಂಡಪ್ಪ, ಪೈಗಳೂ ನೋಂತ ಫಲವಂತೆ ॥೧೬॥

ಸಿದ್ದಪ್ಪ, ಚೆನ್ನಪ್ಪ, ಮತ್ತೆ ನಿಜಲಿಂಗಪ್ಪ।
ವಿಶ್ವೇಶ್ವರಯ್ಯ, ಕಾರಂತರಂತೆ।
ಕನ್ನಾಡ ರೂಪಿಸಿದ ಶಿಲ್ಪಿ ಕುಲದವರಂತೆ।
ಅವರ ಬೆಮರೇ ಶಕ್ತಿಯಾಯಿತಂತೆ ॥೧೭॥

ಬೆಂಗ್ಳೂರು, ಮೈಸೂರು ಮಂಗ್ಳೂರು, ಮಡಿಕೇರಿ।
ಕುಮತೆ, ಕಾರವಾರ ದವರೆಲ್ಲರಂತೆ।
ಬೆಳಗಾಂವಿ, ಧಾರವಾಡ, ಕಲ್ಬುರ್ಗಿ, ಬಿದರೆಗಳ।
ಕನ್ನಡಿಗರೊಂದಾಗಿ ಕಲೆವರಂತೆ ॥೧೮॥

ಮಂಗಳಾಂಗಿಯರೆಲ್ಲ ಮಂಗಳಾರತಿ ಬೆಳಗಿ।
ದೀಪ, ನಂದಾದೀಪ ಹೊತ್ತಿಸಿದರಂತೆ।
ಜನಗಣದ ಮನವೆಲ್ಲ ಭಕ್ತಿ ಭಾವದಿ ಕಲೆತು।
ಯುಗ ಯುಗಕೆ ಕನ್ನಡಕೆ ಶುಭಕೋರ್ವರಂತೆ ॥೧೯॥

ದ್ವೈತ ಮಧ್ವಾಚಾರ್ಯ, ಅದ್ವೈತ ಶಂಕರರ।
ಶ್ರೀಕೃಷ್ಣ ಶಾರದೆಯ ರೊಕ್ಕೂಟವಂತೆ॥
ಕ್ಷೇತ್ರ ಧರ್ಮಸ್ಥಳದ ಮಂಜುನಾಥನು ಕೃಪೆಯ।
ವರದ ಹಸ್ತವನೀಡಿ ಹರಸುತಿಹನಂತೆ ॥೨೦॥

ಯೋಗಿ ವಿದ್ಯಾರಣ್ಯ, ತ್ಯಾಗಿ ಹರಿಹರರಂತೆ।
ಹೊಯಿಸಳೇಶ್ವರ, ವೀರ ಪುಲಿಕೇಶಿಯಂತೆ॥
ಉತ್ತುಂಗ ನೃಪತುಂಗ ನಾಡಕಲಿಗಳ ಹಂತಿ।
ವೀರಸ್ವರ್ಗದಿ ನಿಂತು ನೋಡುತಿಹರಂತೆ ॥೨೧॥

ನವ ಭಕ್ತಿ, ನವ ಶಕ್ತಿ, ನವರಕ್ತ ಬಿಸಿಯೇರಿ।
ಧಮನಿ ಧಮನಿಗಳೆಲ್ಲ ಚೇತರಿಸಿತಂತೆ॥
(ಭವ್ಯತೆಯು ಕೃತಿಗೊಂಡೆ ಮುಡಿಪಾಯಿತಂತೆ)
ಸತ್ವ ದೀಪದ ಶಕ್ತಿ ಮತ್ತೊಮ್ಮೆ ಭುಗಿಲೆದ್ದು।
ವಿಶ್ವ ಚೇತನವಾಗಿ ಬೆಳಗ್ವುದಂತೆ ॥ ೨೨ ॥

ಕನ್ನಡವೆ ನವ ಶಕ್ತಿ, ಕನ್ನಡವೆ ಮಮ ಭಕ್ತಿ।
ಕನ್ನಡಿಗಗೆಲ್ಲದಕೆ ಶಕ್ತರಂತೆ ॥
ಕನ್ನಡವೆ ಮಹಸ್ಫೂರ್ತಿ, ಕನ್ನಡವೆ ಪರಮಮುಕ್ತಿ।
ಕನ್ನಡವೆ ವಿಸ್ಫುರಿತ ಕನ್ನಡಿಯದಂತೆ ॥ ೨೩ ॥

ಬಾರಣ್ಣ, ಹೋಗೋಣ, ಘೇ, ಉಘೇ ಎನ್ನೋಣ।
ಈ ಪರಿಯ ಸಂಭ್ರಮದಿ ಇನ್ನೇಕೆ ಚಿಂತೆ। ॥
ಕನ್ನಡದ ಕೋಟಿಕಂಠಗಳೆಲ್ಲ ಒಂದಾಗಿ।
ಉಲಿವಾಗ ನಾವೇಕೆ ಇರಬೇಕು ಹಿಂತೆ! ॥ ೨೪ ॥

ಕೋಟಿದ್ವಯ ಕಂಠದೊಂದಿಗೆ ಎರಡು ಮಿಗಿಲಾಗಿ।
ಕನ್ನಡದ ಸಿರಿಯಶವ ಹಾಡೋಣವಂತೆ।
ಜಯತು ಜಯ ಜಯವೆಂದು ಕನ್ನಡಕೆ ಜಯವೆಂದು।
ಘೋಷಿಸಲು ಹರಸುವಳು ಕನ್ನಡ ಮಾತೆ ॥೨೫॥

## ಜನಸಾಮಾನ್ಯರು

ಜನತೆಯ ಭಾವನೆಗಳನ್ನು ನಾವು ಕೆರಳಿಸಕೂಡದು. ಕಾರಖಾನೆಗಳಲ್ಲಿಯ ಕಾರ್ಮಿಕರು ಇಲ್ಲವೆ ಒಕ್ಕಲಿಗರನ್ನು ನಾವು ರಾಜಕೀಯ ಉದ್ದೇಶಕ್ಕಾಗಿ ಬಳಸಬಾರದು. ಹಾಗೆ ಮಾಡಲು ನಮಗೆ ಅಧಿಕಾರವಿಲ್ಲವೆಂದಲ್ಲ, ಆದರೆ ನಾವು ಅದಕ್ಕೆ ಇನ್ನೂ ಸಿದ್ಧರಾಗಿಲ್ಲ. ಇಷ್ಟು ದೀರ್ಘಕಾಲ ನಾವು ಅವರ ರಾಜಕೀಯ (ಪುಸ್ತಕೀಯದಿಂದ ಭಿನ್ನವಾದುದು) ಶಿಕ್ಷಣವನ್ನು ದುರ್ಲಕ್ಷಿಸುತ್ತ ಬಂದಿದ್ದೇವೆ. ಈ ನಮ್ಮ ದೇಶಬಾಂಧವರ ಉಪಯೋಗ ಮಾಡಿಕೊಳ್ಳಲು ನಮಗೆ ನೆರವಾಗಬಲ್ಲ ಪ್ರಾಮಾಣಿಕ, ಬುದ್ಧಿವಂತ, ವಿಶ್ವಾಸಾರ್ಹ ಹಾಗು ಶೂರ ಕೆಲಸಗಾರರು ನಮ್ಮಲ್ಲಿ ಸಾಕಷ್ಟಿಲ್ಲ.

—ಮಹಾತ್ಮಾ ಗಾಂಧಿ.

## ಬಡವರು ಏಕೆ ದಾನಮಾಡಬೇಕು?

ಬಡವರು ಮಾಡುವ ದಾನದಿಂದ ಸ್ವಾಮಿತ್ವ ವಿಸರ್ಜನೆ ಆಗುತ್ತದೆ; ತ್ಯಾಗ ಮತ್ತು ಬಂಧುಪ್ರೇಮವು ಬೆಳೆಯುತ್ತದೆ. ಧನಿಕರ ಮೇಲೆ ನೈತಿಕ ಪ್ರಭಾವ ಬೀಳುತ್ತದೆ; ಸತ್ಯಾಗ್ರಹ ಸೇನೆಯು ತಯಾರಾಗುತ್ತದೆ; ಭಿಕ್ಷೆಯ ಭಾವನೆಯು ನಿರ್ಮೂಲವಾಗುತ್ತದೆ.

—ವಿನೋಬಾ.

ಶೇಟ್ ಗೋವಿಂದದಾಸರು ಬರೆದ ಸಾಮಾಜಿಕ ನಾಟಕದ ಅನುವಾದ

ಅನುವಾದಕಿ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ
ಓದಲೇಬೇಕಾದ ರಾಜಕೀಯ ನಾಟಕ
ಬೆಲೆ ರೂ. ೨-೮-೦.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

*For rates for advertising in colours and special positions, please write to:*
*ADVERTISEMENT MANAGER,*
'NAVAYUGA'
Post Box No. 22, UDIPI, S. K.

ಮಹಿಳಾ ಸಾಹಿತ್ಯ! ನವೀನ ಪುಸ್ತಕ!
ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳೆ

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!
ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)
ನವಭಾರತ ಪುಸ್ತಕ ಭಂಡಾರ, ಉಡುಪಿ.

# ಯೋಜನೆಗಳ ಯೋಜನೆ

(೪ನೇ ಪುಟದಿಂದ)

ನ್ಮವೆತ್ತಿದರು. ಇವರ ತಂದೆಯವರು ಸರಕಾರೀ ಸಾಲಪತ್ರದಷ್ಟು ಪ್ರಾಮಾಣಿಕರೆಂಬ ಹೆಸರು ಪಡೆದವರಾಗಿದ್ದರು. ಇವರ ತಾಯಿಯು ಚಿಕ್ಕಂದಿನಲ್ಲಿ ಶಾಲೆಯಲ್ಲಿ ಅಧ್ಯಾಪಿಕೆಯಾಗಿದ್ದಳು.

ಎಡಿಸನ್‌ರವರು ಚಿಕ್ಕಂದಿನಲ್ಲಿ ಅಷ್ಟು ದೃಢಕಾಯರಾಗಿರಲಿಲ್ಲ. ಅವರ ತಲೆಯು ದೇಹದ ಪ್ರಮಾಣದಲ್ಲಿ ಅತಿ ದೊಡ್ಡದಿದ್ದು ಇವರಿಗೆ ಎಲ್ಲಿ ಮಿದುಳಿನ ವಿಕಾರವಾಗಬಹುದೋ ಎಂದು ಡಾಕ್ಟರ ಜನರು ಅಭಿಪ್ರಾಯಪಡುವವರಾಗಿದ್ದರು. ಇವರ ಮಿದುಳಿನ ವಿಕಾರವೇ ಮಾನವ ಜನಾಂಗದ ಪ್ರಗತಿಗೆ ಕಾರಣವಾಗಲಿದೆ ಎಂಬ ಭವಿಷ್ಯವನ್ನು ಅಂದು ಯಾರು ನುಡಿಯಬಹುದಿತ್ತು? ಅನೇಕರಿಗೆ ವಿಧವಿಧವಾದ ಪ್ರಶ್ನೆಗಳನ್ನು ಕೇಳುವುದೂ ಮತ್ತು ಅವುಗಳಿಗೆ ಸರಿಯಾದ ಉತ್ತರಗಳು ಬಾರದಿದ್ದಲ್ಲಿ 'ನಿಮಗೆ ಏಕೆ ಗೊತ್ತಿಲ್ಲ?' ಎಂದು ಪ್ರತಿಯಾಗಿ ಕೇಳುವುದೂ ಇವರಿಗೆ ಚಿಕ್ಕಂದಿನಿಂದಲೂ ಪರಿಪಾಟವಾಗಿತ್ತು. ಇವರ ಕುತೂಹಲವು ಇವರನ್ನು ಅನೇಕಬಾರಿ ಗಂಡಾಂತರದ ಮಡುವಿನಲ್ಲಿ ನೂಕಿತ್ತು. ಸುತ್ತಲಿನ ಎಲ್ಲ ಸಂಗತಿಗಳ ಆಗು-ಹೋಗುಗಳ ವಿಷಯದಲ್ಲಿ ಅತಿಯಾದ ಜಿಜ್ಞಾಸೆಯನ್ನು ತೋರ್ಪಡಿಸುತ್ತಿದ್ದರು. ಒಮ್ಮೆ ಒಂದು ಬಾತುಕೋಳಿಯು ತನ್ನ ತತ್ತಿಗಳ ಮೇಲೆ ಕುಳಿತದ್ದು ಇವರ ದೃಷ್ಟಿಗೆ ಬಿತ್ತು. ಇದನ್ನು ಕಂಡವರೇ ಅನೇಕ ತತ್ತಿಗಳನ್ನು ಬಣಜದ ಬದಿಗೆ ಕೂಡಿಸಿಟ್ಟು ಅವುಗಳ ಮೇಲೆ ಕುಳಿತು ತಮ್ಮ ಪ್ರಯೋಗವನ್ನು ಪ್ರಾರಂಭಿಸಿದರು. ಹೀಗೆ ಕುಳಿತ ಮಗನನ್ನು ತಂದೆಯು ಪ್ರಶ್ನಿಸಿದಾಗ 'ನಾನು ಮರಿಗಳನ್ನು ಮಾಡುತ್ತಿದ್ದೇನೆ' ಎಂದು ಬಾಲಕ ಎಡಿಸನ್‌ನು ಉತ್ತರಿಸಿದನು. ಇದು ಹೇಗೆ ಸಾಧ್ಯವೆಂದು ತಂದೆಯು ಅಂದುದಕ್ಕೆ 'ಯಾವುದು ಬಾತುಕೋಳಿಗೆ ಮಾಡಲು ಸಾಧ್ಯ ಅದು ನನಗೆ ಮಾಡಲು ಸಾಧ್ಯವಿಲ್ಲವೆ?' ಎಂದು ಬಾಲಕನು ಉತ್ತರಿಸಿದನು.

## ಎಡಿಸನ್‌ರ ವಿದ್ಯಾಭ್ಯಾಸ

"ನಾನು ಇಂದು ಏನಾಗಿರುವೆನೋ ಅದರ ಶ್ರೇಯಸ್ಸೆಲ್ಲವೂ ನನ್ನ ತಾಯಿಗೇ ಸಲ್ಲತಕ್ಕದ್ದು" ಎಂದು ಇವರು ದೊಡ್ಡವರಾದ ಮೇಲೆ ಹೇಳಿದ್ದು ಇವರ ವಿದ್ಯಾಭ್ಯಾಸದ ವಿಷಯವನ್ನೇ ವಿವರಿಸುವದು. ಪ್ರೀತಿಯ ತಾಯಿಯು ಮಗನಿಗೆ ಏನನ್ನು ಮಾಡಲು ಸಾಧ್ಯವಿದೆ ಎಂಬುದನ್ನು ಈ ತಾಯಿ—ಮಗನ ಇರುವ ರೀತಿಯು ನಮಗೆ ಎತ್ತಿ ತೋರಿಸುತ್ತದೆ. ಇವರು ಶಾಲೆಗೆ ಹೋದುದು 3 ತಿಂಗಳುಗಳು ಮಾತ್ರ. ಇವರು ಶಾಲೆಯಲ್ಲಿ ಇದ್ದಾಗ 'ಅಸಾಧ್ಯವಾದ' ಪ್ರಶ್ನೆಗಳನ್ನು ಕೇಳುತ್ತಿದ್ದರಾದ್ದರಿಂದ ಎಲ್ಲ ಹುಡುಗರೂ ಇವರನ್ನು 'ದಡ್ಡನೆಂದು' ತಿಳಿದಿದ್ದರಲ್ಲದೆ ಕ್ಲಾಸಿನಲ್ಲಿ ಇವನದೇ ಕೊನೆಯ ನಂಬರು. ಇದೇ ವೇಳೆಯಲ್ಲಿ ಒಮ್ಮೆ ಇನ್ಸ್‌ಪೆಕ್ಟರರು ಶಾಲೆಯನ್ನು ಸಂದರ್ಶಿಸಿದರು. ಇನ್ಸ್‌ಪೆಕ್ಟರರ ಹಾಗು ಅಧ್ಯಾಪಿಕೆಯರ ನಡುವೆ ಬಾಲಕ ಎಡಿಸನ್‌ನ ಸಂಬಂಧದಲ್ಲಿಯೇ ಮಾತುಕತೆಗಳಾದವು. ಎಡಿಸನ್‌ನು ಕಲಸಿದ ತಲೆಯುಳ್ಳವನೆಂದೂ ಹಾಗು ಶಾಲೆಯಲ್ಲಿ ಇಟ್ಟುಕೊಳ್ಳಲು ಅಯೋಗ್ಯನಿರುವನೆಂದೂ ಇತ್ಯಾದಿಯಾಗಿ ಅಧ್ಯಾಪಿಕೆಯು ಅಭಿಪ್ರಾಯಪಟ್ಟುದು ಬಾಲಕ ಎಡಿಸನ್‌ನಿಗೆ ತಿಳಿದು—ಮನೆಗೆ ಹೋದೊಡನೆಯೆ 'ನಾನು ಜೀವವಿಂದಿರುವ ವರೆಗೆ ಶಾಲೆಯ ಕಟ್ಟೆಯನ್ನು ಹತ್ತಲಾರೆ'ನೆಂದು ತನ್ನ ತಾಯಿಗೆ ತಿಳಿಸಿದನು. ಇದನ್ನು ತಿಳಿದ ತಾಯಿಯು ಕೋಪಾವಿಷ್ಟಳಾಗಿ 'ನಾನೂ ಕೂಡ ಒಮ್ಮೆ ಶಾಲೆಯಲ್ಲಿ ಅಧ್ಯಾಪಿಕೆಯಾಗಿದ್ದೆನು. ಇದು ಮಕ್ಕಳನ್ನು ನಡೆಯಿಸಿಕೊಳ್ಳುವ ರೀತಿಯಲ್ಲ' ಎಂದು ಅನ್ನುತ್ತಾ ಮಗನೊಡನೆ ಶಾಲೆಗೆ ಹೋದಳು. ಅಧ್ಯಾಪಿಕೆಯನ್ನು ಕುರಿತು—ನೀನು ಏನು ಮಾತನಾಡುತ್ತೀ ಎಂಬುದು ನಿನಗೇ ತಿಳಿದಿಲ್ಲ. ನನ್ನ ಮಗನ ಮಿದುಳು ನಿನ್ನದರಕ್ಕಿಂತಲೂ ಚುರುಕಾಗಿರುವುದೇ ನಿನ್ನ ಕಳವಳದ ಮುಖ್ಯ ಕಾರಣವು. ಈಗ ಅವನನ್ನು ಮನೆಗೆ ಕರೆದೊಯ್ಯುವೆನಲ್ಲದೆ ಅವನಿಗೆ ನಾನೇ ಕಲಿಸುವೆ ಮತ್ತು ಅವನು ಹೇಗಿರುವನೆಂಬುದನ್ನೂ ತೋರಿಸುವೆ, ಎಂದು ಹೇಳಿ ಮಗನನ್ನು ಕರೆದುಕೊಂಡು ಮನೆಗೇ ತೆರಳಿದಳು. ಇದಾದ ಬಳಿಕ ಎಡಿಸನ್‌ನಿಗೆ ಮನೆಯೇ ಪಾಠಶಾಲೆಯಾಯಿತು ಮತ್ತು ತಾಯಿಯೇ ಅಧ್ಯಾಪಿಕೆಯಾದಳು. ತಮ್ಮ ತಾಯಿಗೆ ತಾವು ಹೇಗೆ ಚಿರಋಣಿಗಳಾಗಿರುವೆವೆಂಬ ವಿಷಯವನ್ನು ಇವರು ತಮ್ಮ ಒಬ್ಬ ಮಿತ್ರರಿಗೆ ಹೀಗೆ ಹೇಳಿದ್ದಾರೆ. "ತಾಯಿಯೆಂದರೆ ಎಂತಹ ಅನುಕೂಲ್ಯವಸ್ತುವೆಂಬುದನ್ನು ನಾನು ನನ್ನ ಜೀವನದ ಪೂರ್ವಭಾಗದಲ್ಲಿಯೇ ಕಂಡುಕೊಂಡೆ. ಶಾಲೆಯಲ್ಲಿ ನಡೆದ ಘಟನೆಯಿಂದಾಗಿ, ನನ್ನ ತಾಯಿಯು ನನ್ನಲ್ಲಿ ಇರಿಸಿದ ವಿಶ್ವಾಸಕ್ಕೆ ಯೋಗ್ಯನಾಗಬೇಕೆಂದು ನಾನು ನಿಶ್ಚಯಿಸಿದೆ. ಇಂತಹ ತಾಯಿಯ ಸಲುವಾಗಿಯೆಂದು ನಾನು ಜೀವಿಸಬೇಕು ಮತ್ತು ಆಕೆಯನ್ನು ನಿರಾಶೆಗೊಳಿಸಬಾರದೆಂದು ನನಗೆ ಎನಿಸಿತು. ಸುಹೃದಯಳಾದ ನನ್ನ ತಾಯಿಯು ನನ್ನನ್ನು ಎಂದೂ ತಪ್ಪು ತಿಳಿಯಲಿಲ್ಲ. ಚಿಕ್ಕಂದಿನಲ್ಲಿಯ ಆಕೆಯ ಮಾರ್ಗದರ್ಶನವನ್ನು ನಾನು ಎಂದಿಗೂ ಮರೆಯಲಾರೆ. ನನ್ನ ಜೀವನದ ಅನುಭವನಲ್ಲಿಯ ಕ್ರಾಂತಿಕಾರಕ ವೇಳೆಯಲ್ಲಿ ಆಕೆಯು ನನ್ನಲ್ಲಿ ಇರಿಸಿದ ವಿಶ್ವಾಸವೇ ನನ್ನನ್ನು ಸಂಶೋಧಕನನ್ನಾಗಿ ಮಾಡಿತು. ಇಂದು ಅಯೋಗ್ಯರೆಂದು ಕಾಣುವ ಅನೇಕ ತರುಣರು ಚಿಕ್ಕಂದಿನಲ್ಲಿ ಯೋಗ್ಯವಾದ ಮಾರ್ಗದರ್ಶನವಿದ್ದರೆ ನಿಜವಾದ ಹಾಗು ಬೆಲೆಯುಳ್ಳ ನಾಗರಿಕರೆನಿಸುತ್ತಿದ್ದರೆಂಬುದಾಗಿ ನನ್ನ ತಾಯಿಯು ಅಭಿಪ್ರಾಯಪಡುತ್ತಿದ್ದಳು. ಅನೇಕ ವರುಷಗಳ ವರೆಗೆ ಅಧ್ಯಾಪಿಕೆಯಾಗಿ ಕೆಲಸ ಮಾಡಿದ ಆಕೆಯ ಅನುಭವವು, ಚಿಕ್ಕವರನ್ನು ತಿಳಿಯುವುದರಲ್ಲಿ ಎಂದೂ ತಪ್ಪುತ್ತಿರಲಿಲ್ಲ. ನಾನು ಚಿಕ್ಕಂದಿನಲ್ಲಿ ನಿಷ್ಕಾಳಜಿ ಹುಡುಗನಾಗಿದ್ದೆ ಮತ್ತು ನನ್ನ ತಾಯಿಯು ಬೇರೆ ಸ್ವಭಾವದವಳಾಗಿದ್ದರೆ ನಾನು ಕೆಟ್ಟವನೂ ಆಗಬಹುದಿತ್ತು. ಆಕೆಯ ನಿರ್ಧಾರದ ಸ್ವಭಾವ, ಅಂತಃಕರಣ ಹಾಗು ಒಳ್ಳೆಯತನ ಇವುಗಳೇ ನನ್ನನ್ನು ಯೋಗ್ಯ ಮಾರ್ಗದಲ್ಲಿ ಹಿಡಿದಿಡುವ ಶಕ್ತಿಗಳಾಗಿದ್ದವು. ಆಕೆಯನ್ನು ಸ್ಮರಿಸುವುದೇ ನನಗೆ ಆಶೀರ್ವಾದವು."

## ಎಡಿಸನ್‌ರ ಜೀವನ ಹಾಗು ಯೋಜನೆಗಳ ಯೋಜನೆ

'ಪ್ರತಿಭೆಯೆಂದರೆ ನೂರರಲ್ಲಿ ಒಂದು ಭಾಗ ದೈವೀಪ್ರೇರಣೆ ಮತ್ತು ತೊಂಬತ್ತೊಂಬತ್ತು ಭಾಗ ಬೆವರು ಸುರಿಸುವುದು ಎಂದರೆ ದುಡಿಯುವದು' ಎಂಬ ಅಭಿಪ್ರಾಯವು ಇವರದು. ಇವರ ಜೀವನೇತಿಹಾಸವನ್ನು ಕೂಲಂಕಷವಾಗಿ ಪರಿಶೀಲಿಸಿದಲ್ಲಿ—ಯಾವನೊಬ್ಬ ಮನುಷ್ಯನ ನಿಜವಾಗಿಯೂ ದೊಡ್ಡವನೆನಿಸುವಂತೆ ಆಗಲು, ಚಿಕ್ಕಂದಿನಲ್ಲಿ ಅವನಿಗೆ ದೊರೆತ ಮಾರ್ಗದರ್ಶನ ಮುಖ್ಯ ಕಾರಣವೆಂದು ಕಂಡುಬರುವದು. ಯೋಗ್ಯ ವಾತಾವರಣ, ತಾಯಿಯ ಮಾರ್ಗದರ್ಶನ ಮತ್ತು ಯೋಗ್ಯ ಗುರುಗಳಿಂದ ಶಿಕ್ಷಣ ಇವುಗಳ ತ್ರಿವೇಣೀ ಸಂಗಮವೇ ಇಂತಹ ಫಲದಲ್ಲಿ ಪರಿಣಮಿಸುವದು. ಇವರ ವಿಷಯದಲ್ಲಿ ಇವರ ತಾಯಿಯು ಇವರಿಗೆ ಗುರುವೂ ಹಾಗು ಮಾರ್ಗದರ್ಶಕಳೂ ಕೂಡಿಯೇ ಆಗಿದ್ದುದು ಒಂದು ವಿಶೇಷ ಸಂದರ್ಭವು ಮಾತ್ರ. ಶಾಲೆಯ ಅಧ್ಯಾಪಿಕೆಯ ವಿಷಯದಲ್ಲಿ ಎಡಿಸನ್‌ರು ದುರ್ದೈವಿಗಳಾದರೂ ಎಲ್ಲ ಅಧ್ಯಾಪಕರು ಹಾಗೆಯೇ ಇರುವರೆಂದು ತಿಳಿಯುವುದು ಪ್ರಮಾದಕ್ಕೆ ಕಾರಣವಾದೀತು. ಎಲ್ಲ ರಾಷ್ಟ್ರಗಳಲ್ಲಿ ಮತ್ತು ಎಲ್ಲ ಕಾಲಗಳಲ್ಲಿ ಉತ್ತಮ ಅಧ್ಯಾಪಕರೆಂಬುವವರು ಇದ್ದೇ ಇರುವರು.

ಇಂದು ನಾವು ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವೆನಿಸಬಹುದಾದ ವಾತಾವರಣದಲ್ಲಿದ್ದೇವೆ. ಅದೇ ಪ್ರಕಾರವಾಗಿ ರೇಡಿಯೋ ಹೇಗೆ ಕಾರ್ಯಮಾಡಲಿದೆ, ಅಣುಶಕ್ತಿಯೆಂದರೇನು, ವಿಮಾನಗಳು ಹೇಗೆ ಹಾರಾಡಲಿವೆ ಇತ್ಯಾದಿಯಾಗಿ ಇನ್ನೂ ಅನೇಕ ವಿಷಯಗಳನ್ನು ಕುರಿತು ಹಿರಿಯರಷ್ಟೇ ಕಿರಿಯರೂ ಸಹ ಕುತೂಹಲಿಗಳಾಗಿರುವದು ಸಹಜವೇ ಆಗಿದೆ ನಮಗೆ ಯಾವುದೊಂದು ವಿಷಯವು ತಿಳಿದಿಲ್ಲವೆಂದು ಮಕ್ಕಳ ಕುತೂಹಲವನ್ನು ನಾವು ಕೊಲ್ಲುವವರಾಗಬಾರದು. ಮುಖ್ಯವಾಗಿ ಇಂದು ನಮಗೆ ಬೇಕಿರುವ ಬೌದ್ಧಿಕ ವಾತಾವರಣವನ್ನು ಅತಿಯಾದ ಪರಿಶ್ರಮದಿಂದ ಸರಕಾರವು ನಿರ್ಮಿಸತೊಡಗಿದೆ. ಎರಡನೆಯದಾಗಿ ಮಕ್ಕಳ ಕುತೂಹಲವನ್ನು ಪೂರ್ತಿಗೊಳಿಸುವಷ್ಟು ಸಾಮಾನ್ಯ ಜ್ಞಾನವನ್ನು ಎಲ್ಲ ತಾಯಂದಿರು ಮತ್ತು ಚಿಕ್ಕವರನ್ನು ತರಬೇತಿಗೊಳಿಸುವ ಅಧ್ಯಾಪಕ—ಅಧ್ಯಾಪಿಕೆಯರು ತಿಳಿದವರಾದರೆ—ಎಡಿಸನ್‌ರಂತಹ ಪ್ರತಿಭಾಶಾಲಿಗಳನ್ನು ನಿರ್ಮಿಸುವ ಸುಯೋಗವನ್ನು ನಾವು ಕಲ್ಪಿಸಿದಂತಾಗುವದು ಯಾವುದೊಂದು ರಾಷ್ಟ್ರವು ಶತಮಾನಕ್ಕೆ ಒಬ್ಬ ಎಡಿಸನ್‌ರಂತಹ ಪ್ರತಿಭಾಶಾಲಿಯನ್ನು ನಿರ್ಮಿಸಲು ಶಕ್ಯವಾದರೆ, ಆ ರಾಷ್ಟ್ರವು ಭೌತಿಕ ಉನ್ನತಿಯ ಶಿಖರಕ್ಕೆ ಏರುವದರಲ್ಲಿ ಸಂದೇಹವಿಲ್ಲ. ಇದನ್ನು ಸಾಧಿಸುವುದೇ ನಾನು ವಿವರಿಸಬೇಕೆಂದಿರುವ ಯೋಜನೆಗಳ ಯೋಜನೆಯು.

## ಕೊನೆಯದಾಗಿ

ಯಾವುದೊಂದು ರಾಷ್ಟ್ರವು ನಿರ್ಮಿಸಿದ ಎಡಿಸನ್‌ರಂತಹ ಪ್ರತಿಭಾಶಾಲಿಯು ಎಡಿಸನ್‌ರ ಇನ್ನೂ ಅನೇಕ ಗುಣಗಳನ್ನು ಅರಗಿಸಿಕೊಂಡವನಾಗಿರುವುದು ಅನಿವಾರ್ಯವಿದೆ. ವಿಶಾಲ ಮನೋವೃತ್ತಿಯ ಇವರು—ವಿಶ್ವಾಸ ಘಾತುಕತನ, ಕಾರಸ್ಥಾನ, ಅನ್ಯಾಯ ಇವುಗಳನ್ನು ಎಂದೂ ಸಹನ ಮಾಡುತ್ತಿರಲಿಲ್ಲ. ಇವರು ತಮ್ಮದೇ ಆದ ನೀತಿಶಾಸ್ತ್ರವನ್ನು ರಚಿಸಿಕೊಂಡಿದ್ದರಲ್ಲದೆ, ಆದರ ಉಚ್ಚತತ್ವಗಳನ್ನು ಅನುಸರಿಸುವಲ್ಲಿ ಎಂದೂ ತಪ್ಪಲಿಲ್ಲ. **ನಿಮ್ಮ ತತ್ವಗಳಲ್ಲಿ ಪ್ರಾಮಾಣಿಕವಾದ ನಂಬಿಕೆಯನ್ನಿರಿಸಿ ಅವರಂತೆಯೇ ನಡೆಯಿರಿ ಎಂಬುದೇ ನಾನು ಎಲ್ಲರಿಗೂ ಹೇಳುವದು. ನನ್ನ ರಾಷ್ಟ್ರವೇ ನನ್ನ ಜಗತ್ತು ಮತ್ತು ಎಲ್ಲರಿಗೂ ಒಳ್ಳೆಯದನ್ನು ಮಾಡುವುದೇ ನನ್ನ ಧರ್ಮ."** ಇಂತಹ ಉಚ್ಚ ತತ್ವಗಳನ್ನು ಅರಗಿಸಿಕೊಂಡು ಅದರಂತೆಯೇ ಬಾಳಿ ಬದುಕಿದ ಎಡಿಸನ್‌ರೇ ಧನ್ಯರು. ಇಂತಹ ಯೋಜನೆಗಳ ಯೋಜನೆಯನ್ನು ಕಾರ್ಯಗೊಳಿಸುವಲ್ಲಿ ನಾವೆಲ್ಲರೂ ಕಂಕಣಬದ್ಧರಾಗಿ ಭಾರತದ ಕೀರ್ತಿಯನ್ನೂ ಹೆಚ್ಚೆಚ್ಚು ಉನ್ನತವಾಗಿಸೋಣ.

---

'Thomas, A. Edison—Benefactor of Mankind'--by Miller, ಎಂಬ ಪುಸ್ತಕವೊಳಗಿನ ಅನೇಕ ವಿಷಯಗಳನ್ನು ಉಪಯೋಗಿಸಿ ಈ ಲೇಖವನ್ನು ಬರೆದಿದ್ದೇನೆ. ಈ ಲೇಖದ ಬಹುಭಾಗದ ಶ್ರೇಯಸ್ಸು ಮಿಲರ್ ಅವರಿಗೇ ಸಲ್ಲತಕ್ಕದ್ದು. ನಮ್ಮಲ್ಲಿಯ ಹಿರಿಯರೂ ಹಾಗು ಕಿರಿಯರೂ ಓದಬೇಕಾದ ಪುಸ್ತಕವಿದು.—ಲೇ.

PHONE: 584

ಎನ್. ಎನ್. ಶೇಟ್

ಜುವೆಲ್ಲರ್ & ಡಯಮಂಡ್ ಮರ್ಚಂಟ್,

ಕಾರ್ ಸ್ಟ್ರೀಟ್, ಮಂಗಳೂರು—1.

ನಮ್ಮಲ್ಲಿ ಉತ್ತಮ ಮತ್ತು ಸೊಗಸಾದ ಆಕರ್ಷಣೀಯ ಆಭರಣಗಳು ಮಾರಾಟಕ್ಕೆ ಸಿದ್ಧವಿವೆ. ಆಭರಣಗಳನ್ನು ನಿಪುಣ ಕೆಲಸಗಾರರಿಂದ ಪ್ರಶಂಸನೀಯವಾಗಿ ಗ್ರಾಹಕರ ಅಪೇಕ್ಷೆಯಂತೆ ತಯಾರಿಸಿ ಕೊಡಲಾಗುವುದು. ಉಡುಗೊರೆ ಬಹುಮಾನಗಳಿಗೆ ಉಪಯುಕ್ತವಾಗುವ **ಬೆಳ್ಳಿ ಬಂಗಾರದ** ವಸ್ತುಗಳಿಗೆ ನಮ್ಮನ್ನು ಸಂದರ್ಶಿಸಿರಿ. ಉತ್ತಮ ತರಗತಿಯ **ವಜ್ರಗಳು** ನಮ್ಮಲ್ಲಿ ಯಾವಾಗಲೂ ಸಿಗುತ್ತವೆ.

"ಸಂತತಿ ನಿಯಮನ"

ಸಾಧನ, ಉಪಕರಣಗಳ ಆವಶ್ಯಕತೆ ಇಲ್ಲ.
ಅನುಭವಿಕ ಖಾತ್ರಿಯ ಉಪಾಯ.
ಪೋಸ್ಟೇಜ ಸಹಿತ ಬರೆಯಿರಿ.

ಆರೋಗ್ಯ ಮಂದಿರ, ಸಾಂಗಲಿ
S. B.

# ಏಕೀಕೃತ ಕನ್ನಡ ರಾಜ್ಯ

ಹರಿದು ಹಂಚಾದ ಕನ್ನಡ ಪ್ರದೇಶಗಳಲ್ಲಿ ಹೆಚ್ಚಿನವು ಒಂದುಗೂಡಿವೆ. ಆದರೆ ನಾವು ಆಡುತ್ತಿರುವ ಭಾಷೆಯೂ ಪರಕೀಯರ ಸಂಸರ್ಗ ಪ್ರಭಾವದಿಂದೆಂಬಂತೆ ಒಬ್ಬರನ್ನೊಬ್ಬರಿಗೆ ಅರ್ಥವಾಗದಷ್ಟು ರೂಪಾಂತರ ಹೊಂದಿದೆಯಲ್ಲವೆ? ಹೊಸ ರಾಜ್ಯದ ಮುಂದಾಳುಗಳು ನಮ್ಮ ಆಡು ಭಾಷೆಯಲ್ಲೂ ಸಾಮ್ಯವಿರುವಂತೆ ಪ್ರಯತ್ನಿಸಲಿ!

**ಬರೆದವರು: ಶ್ರೀ ವಿಘ್ನೇಶ್ವರ ಶರ್ಮಾ, ತದ್ದಲಸೆ.**

ಅನೇಕ ವರ್ಷಗಳ ಬಹುಮುಖವಾದ ಪ್ರಯತ್ನ ಹೋರಾಟಗಳ ಪ್ರತಿಫಲವಾಗಿ ನಾವಿಂದು ನಮ್ಮ ವಿಶಾಲ ಕರ್ನಾಟಕದ ರಾಜ್ಯವನ್ನು ಕಟ್ಟುತ್ತಿದ್ದೇವೆ. ಬೇರೆ ಬೇರೆ ಆಡಳಿತದಲ್ಲಿ ಹರಿದು ಹಂಚಿಹೋದ ನಮ್ಮ ಕನ್ನಡಮ್ಮನ ಸಿರಿ ಸಂಪತ್ತುಗಳನ್ನು ಒಂದುಗೂಡಿಸುತ್ತಿದ್ದೇವೆ, ಏಕೀಕೃತ ಈ ಕರ್ನಾಟಕ ರಾಜ್ಯದ ಈ ಸಮೃದ್ಧ ಸಂಭ್ರಮ ನಮ್ಮ ಜೀವನಕ್ಕೆ ನವ ಚೈತನ್ಯವನ್ನುಂಟುಮಾಡುತ್ತದೆ.

ವಿಜಯನಗರದ ಸಾಮ್ರಾಜ್ಯದ ನಂತರ ವಿಶಾಲ ಕರ್ನಾಟಕವು ಒಂದೇ ಆಡಳಿತಕ್ಕೆ ಒಳಪಟ್ಟುದು ಇದೇ ಮೊದಲು, ಮಧ್ಯದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಸ್ವತಂತ್ರ ರಾಜರೂ-ಪಾಳೆಯಗಾರರೂ ಕನ್ನಡ ಮಾತೆಗೆ ಅಲಂಕಾರಪ್ರಾಯವಾಗಿ ರಾಜ್ಯನಾಳಿದ್ದಾರೆ. ಕೆಲವೇ ವರ್ಷಗಳ ಅವರ ಆಳ್ವಿಕೆ ಕರ್ನಾಟಕದ ಜೀವಶಕ್ತಿಗೆ ತುಂಬಾ ಪೋಷಕವಾದದ್ದಾಗಿದೆ. ಅಲ್ಲಲ್ಲಿ ಕೋಟೆಗಳು ಭಗ್ನವಾದವುಗಳಾದರೂ ನಮ್ಮ ಪರಂಪರೆಯ ಪ್ರಭಾವವನ್ನು ತೋರಿಸಿಕೊಡುತ್ತಲಿವೆ. ದಿವ್ಯ ಭವ್ಯವಾದ ಶಿಲಾ ಮಂದಿರಗಳು-ಶಿಲ್ಪ ಕಲೆಗಳು ಅಲ್ಲಲ್ಲಿ ನಿರ್ಮಾಣವಾಗಿವೆ. ನಮ್ಮದು ನಮ್ಮ ಕನ್ನಡ ನಾಡಿನದು ಎಂದು ಅಭಿಮಾನದಿಂದ ಹೇಳುವ ಅನೇಕ ಸಂಗತಿಗಳು ನಮ್ಮ ಇತಿಹಾಸದಲ್ಲಿ ಬೆಳಕು ಕಂಡಿವೆ. ದೇಶೀಯ ಆಳ್ವಿಕೆಯ ಸತ್ವತೇಜವನ್ನು ಸಾರಿ ಹೇಳುತ್ತಿವೆ.

ನಮ್ಮ ನಾಡು ಬೇರೆ ಬೇರೆ ಪ್ರಾಂತೀಯರ ಶಾಸನಕ್ಕೆ ಒಳಗಾಗಿ—ನಾಡಿನ ಸಂಸ್ಕೃತಿ—ಶಕ್ತಿ, ಸಂಪತ್ತುಗಳು ಎಷ್ಟರಮಟ್ಟಿಗೆ ಬೆಳೆಸಲು ಸಾಧ್ಯವಿತ್ತೋ ಅದು ಸಾಕಷ್ಟು ಪ್ರಮಾಣದಲ್ಲಿ ಸಿದ್ಧಿಯಾಗದೇ ಉಳಿದುದರಿಂದ ಏಕೀಕರಣದ ಸಾಧನೆಯ ಕಡೆಗೆ ನಮ್ಮ ಗಮನ ಹೋಯಿತು. ಭಾಷಾವಾರು ಚಳವಳಿ ಪ್ರಾರಂಭವಾಗಿ ದೇಶದ ಅಭ್ಯುದಯಕ್ಕೆ ಭಾಷಾವಾರು ಪ್ರಾಂತಗಳೇ ಬೇಕೆಂದು ನಿರ್ಣಯವಾಗಿ ನಮ್ಮ ಕರ್ನಾಟಕ ರಾಜ್ಯದ ಕನಸನ್ನು ನನಸಾಗಿಸಿಕೊಳ್ಳುತ್ತಿದ್ದೇವೆ.

ನಾವು ಕಟ್ಟುತ್ತಿರುವ—ಪಡೆಯುತ್ತಿರುವ ರಾಜ್ಯ—ನಮ್ಮ ಸಂಸ್ಕೃತಿ—ಭಾಷೆ—ಸಂಪತ್ತುಗಳ ವಿಕಾಸ—ಅಭಿವೃದ್ಧಿಗಳಿಗಾಗಿದೆ. ಕೆಲವರನ್ನು ಮಂತ್ರಿಗಳನ್ನಾಗಿಯೋ— ಮುಖ್ಯಮಂತ್ರಿಗಳನ್ನಾಗಿಯೋ ಮಾಡುವದು ರಾಜ್ಯ ನಿರ್ಮಾಣಕ್ಕೆ ಬೇಕಾಗಿದ್ದರೂ—ಅವುಗಳಿಗಾಗಿಯೇ ರಾಜ್ಯ ನಿರ್ಮಾಣವನ್ನು ಬಯಸಲಿಲ್ಲ. ಆದರಿಂದ ನಮ್ಮ ಉಜ್ವಲ ಉದ್ದೇಶಗಳನ್ನು ಸಾಧಿಸುವದರಲ್ಲೇ ರಾಜ್ಯ ನಿರ್ಮಾಣದ ಸಾರ್ಥಕತೆ ತುಂಬಿಕೊಂಡಿದೆ.

ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವಂಥ ಉದ್ಯಮ ವ್ಯವಸಾಯಗಳ ಕಡೆಗೆ ನಾವಿಂದು ಹೆಚ್ಚು ಗಮನ ಕೊಡಬೇಕಾಗಿದೆ. ಆಯಾಯ ಪ್ರದೇಶಗಳಲ್ಲಿರುವಂಥ ವಸ್ತು, ವಿಚಾರ, ಸ್ಥಿತಿ, ಗತಿಗಳನ್ನೆಲ್ಲ ಲಕ್ಷಿಸಬೇಕಾಗಿದೆ.

ಕರ್ನಾಟಕದಲ್ಲಿ ಯಾವುದಕ್ಕೂ ಕೊರತೆಯಾದುದಿಲ್ಲ. ಹಾಗಿದ್ದರೂ "ಸಮುದ್ರದ ನೆಂಟಸ್ತನವಿದ್ದರೂ ಉಪ್ಪಿಗೆ ಬಡತನ ಎಂಬಂತಾಗಿದೆ. ಬಂದರ ನಿರ್ಮಾಣ ಮಾಡಲು ಯೋಗ್ಯವಾದ ಸ್ಥಳ ಅನುಕೂಲತೆಗಳಿದ್ದರೂ ಅವು ಹಡಗಗಳ ಮುಖದರ್ಶನಮಾಡದೇ ಹಾಗೆಯೇ ಕುಳಿತಿವೆ. ವಿಪುಲವಾದ ಖನಿಜ ದ್ರವ್ಯಗಳಿವೆ. ಅಪಾರ ಜಲಸಮೃದ್ಧಿ ಇದೆ. ಇಡೀ ಭಾರತದಲ್ಲೇ ವನ ಸಂಪತ್ತಿನಲ್ಲಿ ನಮ್ಮದು ಹೆಚ್ಚಿನದಾಗಿದೆ. ಇವಲ್ಲದೇ ಸಣ್ಣ ಪುಟ್ಟ ವ್ಯವಸಾಯಗಳನ್ನು ನಡೆಸುವಂಥ ಆಯಾ ಪ್ರದೇಶಗಳ ಕಚ್ಚಾ ಸಾಮಗ್ರಿಗಳೂ ಹೇರಳವಾಗಿದೆ. ಹೀಗೆ ನಿಸರ್ಗದತ್ತವಾದ ಈ ರಾಷ್ಟ್ರೀಯ ಸಂಪತ್ತುಗಳ ಸದುಪಯೋಗದಿಂದ ನಮ್ಮ ನಾಡಿನ ಬಲ ಸಂವರ್ಧನೆಯಾಗಬೇಕಾಗಿದೆ.

ಇವುಗಳೊಂದಿಗೆ ನಮ್ಮ ಭಾಷೆಯ ಬೆಳವಣಿಗೆಯನ್ನೂ ಸಾಧಿಸಬೇಕಾದದ್ದು ಮುಖ್ಯವಾಗಿದೆ. ರಾಜ್ಯದ ಭದ್ರವಾದ ತಳಹದಿಯಾದುದು ಭಾಷೆ, ರಾಜ್ಯ ಮತ್ತು ಭಾಷೆಗಳಲ್ಲಿ ನಿಕಟ ಸಂಬಂಧವಿದೆ ರಾಜ್ಯದಿಂದ ಭಾಷೆಯು ಅಭಿವೃದ್ಧಿಯಾಗಬೇಕಾದರೆ, ಭಾಷೆಯಿಂದ ರಾಜ್ಯವು ಸ್ಥಿರಗೊಳ್ಳಬೇಕಾಗಿದೆ. ಹೀಗೆ ಇವು ಒಂದಕ್ಕೊಂದು ಪೋಷಕಗಳಾಗಿವೆ. ಒಂದರ ಪ್ರಭಾವ ಮತ್ತೊಂದರ ಮೇಲೆ ಆಗುತ್ತದೆ.

ಇದೀಗ ನಾವು ರಾಜ್ಯದ ಏಕೀಕರಣವನ್ನು ಸಾಧಿಸಿದಂತೆ ಭಾಷಾ ಏಕೀಕರಣವನ್ನೂ ಸಾಧಿಸಬೇಕಾಗಿದೆ. ಬೇರೆ ಬೇರೆ ಪ್ರದೇಶಗಳ ಪ್ರಭಾವಕ್ಕೆ ಭಾಷೆಯು ಒಳಗಾಗಿ ಅದರ ಮೂಲ ಸ್ವರೂಪದ ಮೇಲೆ ಆಗುತ್ತಿರುವ ಆಘಾತವನ್ನೂ ತಪ್ಪಿಸಬೇಕಾಗಿದೆ. ರಾಜ್ಯದ ಎಲ್ಲ ಜನಕ್ಕೂ ಹಿಡಿಸುವಂತಹ ಒಂದೇ ರೀತಿಯನ್ನು ಲಕ್ಷಿಸಬೇಕಾಗಿದೆ.

ಮೈಸೂರು ಕನ್ನಡ, ಮಂಗಳೂರು ಕನ್ನಡ, ಮುಂಬಯಿ ಕನ್ನಡ, ಹೈದರಾಬಾದು, ಹೀಗೆ ಒಂದೇ ಕನ್ನಡವೇ ಬಹುಮುಖವಾಗಿ ಅದರ ಯಥಾರ್ಥತೆಯು ಮರೆಮೆಯಾಗುತ್ತಿದೆ. ಮುಂಬೈದವರಿಗೆ ಮೈಸೂರ ಕನ್ನಡ ರುಚಿಸುವುದಿಲ್ಲ. ಮೈಸೂರಿನವರಿಗೆ ಮುಂಬೈದವರದು ಹಿಡಿಸುವದಿಲ್ಲ. ಮಂಗಳೂರಿನವರಿಗೆ ಹೈದರಾಬಾದು ಕನ್ನಡ ಅರ್ಥವಾಗುವುದಿಲ್ಲ. ಹೀಗಾಗಿ ಪ್ರದೇಶಗಳಲ್ಲಿಯೇ ಭಾಷೆಯ ರೂಪು ಬದಲಾಗಿ ಅವುಗಳ ಪ್ರೀತಿ, ರುಚಿಗಳಲ್ಲೂ ವೈವಿಧ್ಯವುಂಟಾಗಿದೆ. ಕೆಲವರಂತೂ "ಅವರು ಭಾಷೆಯ ಕೊಲೆಯನ್ನೇ ಮಾಡುತ್ತಿದ್ದಾರಲ್ಲಾ" ಎಂದು ಹೇಳುತ್ತಿದ್ದಾರೆ.

ಎಷ್ಟೋ ಕಡೆಗಳಲ್ಲಿ ಈ ಭಾಷೆಯಂತೆ ಲಿಪಿಗಳಲ್ಲೂ ವ್ಯತ್ಯಾಸವಾಗಿರುತ್ತದೆ. ಕೆಲವು ಶಬ್ದಗಳನ್ನೂ ಒಂದೊಂದು ಪ್ರದೇಶದಲ್ಲಿ ಬರೆಯುವ ರೀತಿಯೇ ಬೇರೆಯಾಗಿರುತ್ತದೆ. ಆಗ ಕೆಲವರಿಗೆ ಮತ್ತೊಬ್ಬರದು ಹೇಯವಾಗಿ ಕಾಣುತ್ತದೆ. ಆಗ "ಕನ್ನಡದ ಸೌಂದರ್ಯವನ್ನು ಎಷ್ಟು ಅಂದಗೆಡಿಸಿ ವಿಕೃತಗೊಳಿಸುತ್ತಿದ್ದಾರಲ್ಲಾ" ಎಂದು ಹೇಳುವಂತಾಗುತ್ತದೆ.

ಕೆಲವರು ಇದು ಹೀಗೆಯೇ ಇರುವದು ಯುಕ್ತವೆಂತಲೂ ಹೇಳುವುದಿದೆ. ಭಾಷೆ, ಲಿಪಿಗಳಿಂದಲೇ ಅವರ ಪರಿಚಯ ತಿಳಿಯಲು ಇದು ಸುಲಭವಾಗುತ್ತದೆಂದು ಅವರ ಮತ.

ಏನೇ ಇದ್ದರೂ ಇಂದು ನಾವು ಕನ್ನಡದ ಒಂದೇ ರಾಜ್ಯದವರಾಗುತ್ತಿದ್ದೇವೆ, ನಮಗೆ ಒಂದೇ ರೀತಿಯ ಭಾಷೆ, ಲಿಪಿ, ಗಳಿರುವುದು ಅವಶ್ಯ, ನಮ್ಮ ರಾಜ್ಯಕ್ಕೆ-ಘಟನೆ ಎಷ್ಟು ಮುಖ್ಯವೋ ಅದರಂತೆ ನಮ್ಮ ಭಾಷೆಗೂ ಒಂದು ಶಬ್ದಕೋಶ ಮುಖ್ಯವಾಗಿದೆ. ಅಲ್ಲಲ್ಲಿಯ ಪಾರಿಭಾಷಿಕ ಶಬ್ದಗಳನ್ನೆಲ್ಲ ಸಂಗ್ರಹಿಸಿ ಭಾಷಾ ಏಕೀಕರಣಕ್ಕೆ ಗಮನಕೊಡಬೇಕಾಗಿದೆ. ರಾಜ್ಯದ ಅಭಿವೃದ್ಧಿಗೆ ಭಾಷಾ ಉನ್ನತಿಗೆ—ಸರಕಾರ—ಸಾಹಿತ್ಯ ಪರಿಷತ್ತುಗಳು ಗಮನವೀಯಬಹುದೆಂದು ನಿರೀಕ್ಷಿಸೋಣ! ಆಶಿಸೋಣ!!

---

## ವಿಚಾರ ಸಾಹಿತ್ಯ

## ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಈ ಗ್ರಂಥವನ್ನು ಬರೆದವರು ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಜೇಮ್ಸ್ ಬಿ. ಕೊನೇಂಟ. ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ ಸರಕಾರ ನೀತಿ, ಧರ್ಮ ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಾಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ, ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೆ ಇಲ್ಲ.

ಇದನ್ನು ಕನ್ನಡಿಸಿದವರು ಉಡುಪಿ ಶ್ರೀ ಲಕ್ಷ್ಮೀನಾರಾಯಣಾಚಾರ್ಯ, ಎಂ. ಎ. ಎಲ್. ಟಿ. ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತ ಶಾಸ್ತ್ರದ ಪ್ರಾಧ್ಯಾಪಕರು.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು

ಅಚ್ಚ ಬಿಳಿ ಕಾಗದದಲ್ಲಿ ಅಚ್ಚಾಗಿರುವ ೧೬೦ ಪುಟಗಳ ಈ ಪುಸ್ತಕದ ಬೆಲೆ: ರೂ. ೧—೮—೦

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ. ಇಲ್ಲಿಯೂ ದೊರೆಯುತ್ತವೆ.

ಹೆಮ್ಮಕ್ಕಳು ವ್ಯಥೆಪಡುವುದೇಕೆ?

**ಕುಮಾರಿ ವಟಿಯನ್ನು**

ಉಪಯೋಗಿಸುವುದರಿಂದ ಹೆಮ್ಮಕ್ಕಳಿಗೆ ಆಗಾಗ್ಗೆ ಭಾದಿಸುವ ಯಾವತ್ತೂ ದೋಷಗಳು ದೂರವಾಗಿ ಆರೋಗ್ಯವನ್ನು ಸಮತೂಕದಲ್ಲಿರಿಸುವುದು.

ಬೆಲೆ ರೂ. 5/- ಕಠಿಣ ಪ್ರಸಂಗದಲ್ಲಿ ರೂ. 8/-

**P. DEVEE & Co. (N. J. S.) CALCUTTA-40.**

ಸ್ಟಾಕಿಸ್ಟರು:—1. ಷಾ ಕಂಪೆನಿ, ಮಂಗಳೂರು-1.
2. ರಾಜಾ ಮೆಡಿಕಲ್ ಹಾಲ್, 31 ಧರ್ಮರಾಜ ರಸ್ತೆ, ಬೆಂಗಳೂರು ಕೆಂಟೋನ್‌ಮೆಂಟ್.
3. ಕುಮಟಾ ಫಾರ್ಮಸಿ, ಕುಮಟಾ (ಉ. ಕನ್ನಡ).
4. ಪಿ. ಕುತ್ತನ್ ಬ್ರದರ್ಸ್, ಕೋಝಿಕೋಡೆ-1.

**ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

# ಜಯ ಕರ್ನಾಟಕ

(೨ನೇ ಪುಟದಿಂದ)

ಪ್ರಚಾರಕರಾಗಿದ್ದಂತೆ ವಿದ್ಯಾಪ್ರಚಾರಕರಾಗಿ ೧೨ನೆಯ ಶತಮಾನದಲ್ಲಿ ಶಿವಮೊಗ್ಗಾ ಜಿಲ್ಲೆಯ ಬೆಳಗಾವಿಯಲ್ಲಿ ಒಂದು ಪ್ರಸಿದ್ಧವಾದ ವಿದ್ಯಾಲಯವನ್ನು ನಡೆಸುತ್ತಿದ್ದರು. ಇವರೇ ಮುಂದೆ ಕರ್ನಾಟಕದಲ್ಲಿ ವೀರಶೈವ ಮತ ಹುಟ್ಟಲು ಕಾರಣರು. ಈ ಮತವೇ ಕರ್ನಾಟಕದಲ್ಲಿ ಜಾತಿಭೇದದ ಸಂಕುಚಿತ ಭಾವನೆಗಳನ್ನು ಬೇರು ಮುಟ್ಟ ನಡುಗಿಸಿತು. ಈ ವೀರಶೈವರೇ ಇಂದಿನ ಹೃದ್ಯವಾದ ಗದ್ಯ ಸಾಹಿತ್ಯಕ್ಕೆ ಜನಕರೋ—ಪೋಷಕರೋ ಆದರು.

ವೇದಾಂತ ಸಿದ್ಧಾಂತ ನಿರ್ಣಯದಲ್ಲಿ ಉಂಟಾದ ವ್ಯತ್ಯಾಸಗಳಿಂದಲೇ ಶಂಕರ, ರಾಮಾನುಜ ಮತ್ತು ಮಧ್ವಮತಗಳು ತಲೆಯೆತ್ತಿದುವು. ಈ ಮೂವರು ಮತಪ್ರವರ್ತಕರಿಗೂ ಮೊತ್ತಮೊದಲು ಕರ್ನಾಟಕವೇ ಆಶ್ರಯಸ್ಥಾನವಾಯಿತು. ಶ್ರೀ ರಾಮಾನುಜಾಚಾರ್ಯರು ತಮ್ಮ ಅಜ್ಞಾತವಾಸಕಾಲದಲ್ಲಿ ಉತ್ತಮ ಆತಿಥ್ಯವನ್ನಿತ್ತ ಒಬ್ಬ ಪಂಚಮನನ್ನು ಮರೆಯದೆ, ಮೈಸೂರು ಸಂಸ್ಥಾನದ ಮೇಲ್ಕೋಟೆಯಲ್ಲಿ ವರ್ಷಕ್ಕೊಂದು ದಿನ ಪಂಚಮರಿಗೆ ದೇವಾಲಯ ಪ್ರವೇಶಕ್ಕೆ ಅಧಿಕಾರವನ್ನಿತ್ತಿದ್ದಾರೆ. ಸಮಗ್ರ ದ್ರಾವಿಡ ಭೂಮಿಯಲ್ಲೇ ಪ್ರಥಮತಃ ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಅನುಕೂಲಮಾಡಿಕೊಟ್ಟವರು ಕನ್ನಡಿಗರು. ಶ್ರೀ ರಾಮಾನುಜಾಚಾರ್ಯರಿಂದಲೇ ಪುನರುಜ್ಜೀವನಗೊಳಿಸಲ್ಪಟ್ಟ ಭಕ್ತಿ ಪಂಥವನ್ನು ಉತ್ತರ ಹಿಂದುಸ್ಥಾನದಲ್ಲೆಲ್ಲಾ ಹಬ್ಬಿಸಿದ ರಾಮಾನಂದ ಮೊದಲಾದ ಭಕ್ತಾಗ್ರೇಸರರು ಆಚಾರ್ಯರನ್ನೇ ತಮ್ಮ ಪೂಜ್ಯ ಗುರುಗಳನ್ನಾಗಿ ಭಾವಿಸಿದ್ದರು. ಶ್ರೀ ಮಧ್ವಾಚಾರ್ಯರು ಈ ಭಕ್ತಿ ಮಾರ್ಗಕ್ಕೆ ತುಂಬಾ ಪ್ರಚೋದಕರಾದರು. ಪ್ರಪಂಚದೊಡೆಯನಲ್ಲಿ ಅಚಲ ಭಕ್ತಿಯನ್ನಿಟ್ಟು ಆತನಿಗೆ ಸಂಪೂರ್ಣ ಆತ್ಮನಿವೇದನೆಯನ್ನು ಮಾಡಬೇಕೆಂಬುದೇ ಶ್ರೀ ಮಧ್ವಾಚಾರ್ಯರ ತತ್ವವು. ಇವರ ತರುವಾಯ ಸು. ನೂರೈವತ್ತು ವರ್ಷಗಳಲ್ಲೇ ಭಕ್ತಿಮಾರ್ಗವು ದೈವಾನುಗ್ರಹದ ರಾಜಮಾರ್ಗವಾಗಿ, ಕೀರ್ತನೆಗಳ ನಿರ್ಮಾಣವಾಗತೊಡಗಿತು. ಇಂತಹ ಕೀರ್ತನಕಾರರಲ್ಲಿ ೧೫ನೆಯ ಶತಮಾನದ ಮುಳಬಾಗಿಲ ಶ್ರೀಪಾದರಾಯರೇ ಮೊದಲಿನವರು. ಹದಿನಾರನೆಯ ಶತಮಾನದಲ್ಲಿದ್ದ ಪುರಂದರ ದಾಸರು ಈ ಮಾರ್ಗದಲ್ಲೇ ಮುನ್ನಡೆದರು. ಈ ಮಹಾತ್ಮರ ಕೀರ್ತನೆಗಳನ್ನು ಈಗಲೂ ಪುರಂದರ ದಾಸೋಪನಿಷತ್ತುಗಳೆನ್ನುತ್ತಾರೆ. ಸ್ವಾಮಿ ವಿವೇಕಾನಂದರಿಗೆ ಅಮೇರಿಕಾ ಖಂಡಕ್ಕೆ ಹೋಗಲು ಉತ್ತೇಜನಕೊಟ್ಟವರು ಮೈಸೂರಿನ ಶ್ರೀ ಚಾಮರಾಜೇಂದ್ರ ಒಡೆಯರೆಂಬುದನ್ನು ನಾವು ನೆನಪಿನಲ್ಲಿಡಬೇಕು. ಭಕ್ತಿಮಾರ್ಗವು ಬಲವಾದ ನೆಲೆಯಾಗುವವರೆಗೆ ಪೋಷಿಸಿದ ಯಶಸ್ಸು ಕನ್ನಡಿಗರಿಗೇ ಸೇರಬೇಕಾಗಿದೆ. ಧರ್ಮದಲ್ಲಿ ಕನ್ನಡಿಗರದೊಂದು ಕ್ರಾಂತಿ ಇದು!

ಕರ್ನಾಟಕದ ಬಾಬಾ ಬುಡನ್ ಬೆಟ್ಟವು ಹಿಂದೂ ಮುಸ್ಲಿಮ್ ಐಕ್ಯವನ್ನು ಪೂರ್ವದಿಂದಲೇ ಸಾರುತ್ತಾ ಬಂದಿದೆ. ಇಲ್ಲಿಯ ಒಂದು ಗವಿಯಲ್ಲಿ ಬಾಬಾ ಬುಡನ್ನನೆಂಬ ಮುಹಮ್ಮದೀಯ ಸಾಧುವಿನ ಗೋರಿ ಇದೆ. ಇಲ್ಲೇ ದತ್ತಾತ್ರೇಯ ಸ್ವಾಮಿಗಳ ಸಾನ್ನಿಧ್ಯವಿದೆಯೆಂದು ಹಿಂದುಗಳು ಈಗಲೂ ನಂಬುತ್ತಾರೆ. ಈಗಲೂ ಇದು ಹಿಂದೂ ಮುಸ್ಲಿಮರ ಯಾತ್ರಾಸ್ಥಳ. ದಿನ ಕಳೆದಂತೆ ಶೈವ ಮತ್ತು ವೈಷ್ಣವ ಮತದಲ್ಲಿ ಪರಸ್ಪರ ದ್ವೇಷ ಭಾವನೆಯು ಕಂಡು ಬರತೊಡಗಿತು. ಆಗಲೇ ಕನ್ನಡ ನಾಡಿನ ಹಿರಿಯರು ಹರಿಹರ ಮತ್ತು ಶಂಕರನಾರಾಯಣ ಮೂರ್ತಿಗಳನ್ನು ಸ್ಥಾಪಿಸಿ "ಏಕಂ ಸದ್ವಿಪ್ರಾ ಬಹುಧಾ ವದಂತಿ" ಎಂಬ ವೇದವಾಕ್ಯವನ್ನು ಸರ್ವರಿಗೂ ಮನದಟ್ಟಾಗುವಂತೆ ಮಾಡಿದರು. ಈ ಹರಿಹರ ಪೂಜೆಯು ಕನ್ನಡಿಗರ ಇನ್ನೊಂದು ವೈಶಿಷ್ಟ್ಯ. ಬಾದಾಮಿಯ ಗುಹಾಂತರ್ದೇವಾಲಯಗಳಲ್ಲಿ ನಾಲ್ಕು ಗುಹಾಲಯಗಳಿವೆ. ಇವುಗಳಲ್ಲಿ ಒಂದು ಶಿವಾಲಯ, ಮತ್ತೊಂದು ವಿಷ್ಣುವಿನಾಲಯ; ಇನ್ನೊಂದು ಜಿನಾಲಯ. ಇದು ಎಂತಹ ಧಾರ್ಮಿಕ ಸಹಿಷ್ಣುತೆ! ಎಂತಹ ಸಹಾನುಭೂತಿ! ಎಂತಹ ಉದಾತ್ತ ಸ್ವಭಾವ! ಇಂದು ಅಲ್ಲಲ್ಲಿ ಕಂಡು ಬರುವ ನೀಚ ಸ್ವಾರ್ಥ, ಕ್ಷುದ್ರ ಮನೋವೃತ್ತಿ ಮೊದಲಾದ ದುರ್ಗುಣಗಳೆಲ್ಲಾ ಕನ್ನಡಿಗರ ಸಹಜ ಸ್ವಭಾವಗಳಲ್ಲ, ಎರವು ತಂದವುಗಳು ಎಂಬುದಕ್ಕೆ ಪ್ರತ್ಯೇಕ ದೃಷ್ಟಾಂತಗಳು ಬೇಕಾಗಿಲ್ಲ.

ಶಿಲ್ಪ ಕಲೆಯು ಕನ್ನಡಿಗರ ಪಂಚಪ್ರಾಣ! ಹೊಯ್ಸಳ ಸಮ್ರಾಟರ ಕಾಲದಲ್ಲಿ ಬಾಳಿದ ಉತ್ತಮ ಶಿಲ್ಪಿಗಳಾದ ಮಲ್ಲಿತಮ್ಮ, ದಾಸೋಜ, ಮಲ್ಲೋಜ, ಚೌಡಯ್ಯ, ಮತ್ತು ಸರಸ್ವತೀದಾಸರು ಶುದ್ಧ ಕನ್ನಡಿಗರು. ಬೇಲೂರು, ಶೃಂಗೇರಿ ಮೊದಲಾದ ಸ್ಥಳಗಳಲ್ಲಿ ಅಪೂರ್ವ ಸೌಧಗಳನ್ನೆಬ್ಬಿಸಿದ ಜಕ್ಕಣ, ಡಂಕಣರು ಕರ್ನಾಟ ಮಾತೆಯ ಸುಪುತ್ರರು, ಶ್ರವಣ ಬೆಳುಗೊಳದ ಚಿಕ್ಕ ಬೆಟ್ಟದ ಮೇಲೆ ನಿಲ್ಲಿಸಿರುವ ೫೭ ಅಡಿ ಎತ್ತರವಾದ ಗೋಮಟೇಶ್ವರ ವಿಗ್ರಹವು ಇಡೀ ಏಷ್ಯಾ ಖಂಡದಲ್ಲೇ ಹಿರಿದಾದುದು. ಪ್ರಾಚೀನ ಕರ್ನಾಟಕ ಸಾಹಿತ್ಯದಲ್ಲಿ ಬೆಳಗಿದ ಜನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ರುದ್ರಭಟ್ಟ, ಷಡಕ್ಷರಿ, ಲಕ್ಷ್ಮೀಶ ಮುದ್ದಣ್ಣ ಮೊದಲಾದ ಕವಿ ಪುಂಗವರೂ, ಪುಲಿಕೇಶಿ, ವಿಕ್ರಮ, ನೃಪತುಂಗ, ಕೃಷ್ಣ, ಗೋವಿಂದ, ಕೃಷ್ಣದೇವರಾಯ ಮೊದಲಾದ ರಾಜವರೇಣ್ಯರೂ ಕನ್ನಡಿಗರ ಉಜ್ವಲ ಪರಂಪರೆಯ ದಿವ್ಯಜ್ಯೋತಿಗಳು. ಇಂದೂ ಆ ಪರಂಪರೆಯು ಮಬ್ಬಾಗದಂತೆ ಶ್ರೀ. ಪುಟ್ಟಪ್ಪ, ಬೇಂದ್ರೆ, ಕಾರಂತ, ವೀ. ಸಿ., ಕೃಷ್ಣ ಶಾಸ್ತ್ರಿ, ಮುಗಳಿ, ಗೋಕಾಕ, ತೀ. ನಂ. ಶ್ರೀ. ಸಿ. ಕೆ. ವೆಂಕಟರಾಮಯ್ಯ ಮೊದಲಾದ ಪ್ರತಿಭಾನ್ವಿತರು ವಿವಿಧ ಮಾರ್ಗಗಳಲ್ಲಿ ನಾಡನ್ನು ಕಟ್ಟುವ ಯತ್ನ ನಡೆಸಿ ಈಗ ಸಿದ್ಧಿ ಹೊಂದಿರುವರು. ಮುಂದೆಯೂ ಇಂತಹ ಪ್ರತಿಭಾಶಾಲಿಗಳೇ ಕನ್ನಡಿಗರ ಹೃದಯವನ್ನು ನಿರ್ಮಲ ಮತ್ತು ಶಕ್ತಿಯುತವಾದುದನ್ನಾಗಿ ಮಾಡಬೇಕಾಗಿದೆ. ಕನ್ನಡಿಗರು ಭರತ ಖಂಡಕ್ಕೆ ಮಾತ್ರವಲ್ಲ ಸಂಪೂರ್ಣ ಜಗತ್ತಿಗೇ ಆದರ್ಶರಾಗುವ ಕಾಲವು ಸಮೀಪಿಸುತ್ತಿದೆ. ಇದೊಂದು ಕನ್ನಡಿಗರ ಪುಣ್ಯಕಾಲ—ಕರ್ನಾಟಕ ಮಾತೆಯು ದೀರ್ಘ ನಿದ್ರೆಯಿಂದ ಕಣ್ದೆರೆಯುವ ಶುಭಮುಹೂರ್ತ. ಕರ್ನಾಟಕದ ಸ್ವಾತಂತ್ರ್ಯ ಕುಕ್ಕುಟವು ಎಕ್ಕೆಕ್ಕೆ ಕೂಗಿ ಏಕೀಕರಣದ ಅರುಣೋದಯವನ್ನು ಸೂಚಿಸುತ್ತಿದೆ. ಇನ್ನು ಮುಂದೆ ಕನ್ನಡಿಗರು ಮಲಗದೆ ಕಣ್ದೆರೆದು ಎಚ್ಚರದಿಂದ ಹೆಜ್ಜೆ ಇಡುತ್ತಾ ಪ್ರಗತಿ ಪಥದಲ್ಲಿ ಸಾಗಿದರಾಯಿತು. ಕರ್ನಾಟಕ ಮಾತೆಗೆ ಜಯವಾಗಲಿ! ಇನ್ನು ಮುಂದೆ 'ಜಯ ಕರ್ನಾಟಕ'ವೆಂಬುದೇ ನಮ್ಮ ಮಹಾಮಂತ್ರ—ಕನ್ನಡಿಗರ ಗಾಯತ್ರಿ! ವ್ಯಕ್ತಿ ವ್ಯಕ್ತಿಗಳಿಗೆ ಪರಸ್ಪರ ಸಂದರ್ಶನವಾದಾಗ ನಮಸ್ತೆ, ನಮಸ್ಕಾರವೆನ್ನುವ ಹಳೆಯ ಪದ್ಧತಿಯನ್ನು ಜಾಡಿಸಿ, ಜಯ ಕರ್ನಾಟಕವೆಂದು ಕೈ ಮುಗಿಯುವ ಹೊಸ ಯುಗದ ಪ್ರಥಮ ದಿನವು ಸನ್ನಿಹಿತವಾಗುತ್ತಿದೆ. ಧಮನಿಯಲ್ಲಿ ಕನ್ನಡಿಗನ ಒಂದು ಬಿಂದು ರಕ್ತವಿದ್ದವನಿಗೂ 'ಜಯ ಕರ್ನಾಟಕ'ವೆನ್ನುವುದಕ್ಕಿಂತ ಆನಂದದ ವಿಚಾರಗಳಾವುವು? ಇನ್ನು ಮುಂದಾದರೂ ಕನ್ನಡ ಕವಿ, ಧಾರ್ಮಿಕ, ಇತಿಹಾಸಜ್ಞರಿಂದ ನಿರ್ಮಾಣವಾದ ಸದ್ಗ್ರಂಥಗಳನ್ನು ಓದುವ ಪರಿಪಾಟವನ್ನು ಕನ್ನಡಿಗರು ಇಟ್ಟುಕೊಳ್ಳಲಿ. ಈ ಕಾರ್ಯವು ಅವರ ಹೃದಯ ಕ್ಷೇತ್ರವನ್ನು ಪಾವನಗೊಳಿಸುವುದರೊಂದಿಗೆ ಕನ್ನಡಿಗರ ಉಜ್ವಲ ಪರಂಪರೆಯು ದೇದೀಪ್ಯಮಾನವಾಗುವಂತೆ ಕಿಡಿಗೆದರಲು ಸಾಧ್ಯವಾಗುವುದು. ಇಂದಿನ ಭಾರತದ ರಾಜ್ಯಾಂಗವು ಅಂಗೀಕರಿಸಿದ ಹದಿನಾಲ್ಕು ರಾಷ್ಟ್ರೀಯ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಈ ಭಾಷೆಗಳಲ್ಲಿ ಪ್ರಾಚೀನತೆಯ ದೃಷ್ಟಿಯಿಂದ ಸಂಸ್ಕೃತ ಮತ್ತು ತಮಿಳು ಪ್ರಥಮ ದ್ವಿತೀಯ ಸ್ಥಾನಗಳನ್ನು ಆಕ್ರಮಿಸಿದರೆ, ಕನ್ನಡಿಗರಿಗೆ ಮೂರನೆಯ ಸ್ಥಾನವು ತೆರವಾಗಿಯೇ ಇದೆ.

ಕರ್ನಾಟಕ ಸಂಗೀತವು ಪ್ರಾಚೀನ ಸಂಗೀತದ ಪಾರಿಶುದ್ಧ್ಯವನ್ನುಳಿಸಿಕೊಂಡಿದೆ. ಉತ್ತರಾದಿ ಸಂಗೀತವು ಇಸ್ಲಾಮೀ ಸಂಸ್ಕೃತಿಯ ಸಂಪರ್ಕದಿಂದ ಒಂದು ಬಗೆಯ ಸಾಂಕರ್ಯವನ್ನು ಹೊಂದಿದೆ. ಉತ್ತರಾದಿ ಸಂಗೀತಕ್ಕೆ ಹನುಮಂತ ಮತವೆಂದೂ, ದಕ್ಷಿಣಾದಿಗೆ ನಾರದ ಮತವೆಂದೂ ಹೇಳುತ್ತಾರೆ. ಇದೊಂದು ವಿಮರ್ಶೆಮಾಡಬೇಕಾದ ವಿಚಾರ. ಇಂದಿನ ಕರ್ನಾಟಕ ಸಂಗೀತ ಶಾಸ್ತ್ರಾಧ್ಯಯನಕ್ಕೆ ಪುರಂದರದಾಸರ ಕೀರ್ತನೆಗಳೇ ಬಲವಾದ ತಳಹದಿ. ಈ ಪುರಂದರದಾಸರು ಕರ್ನಾಟಕ ಸಂಗೀತಕ್ಕೆ ಪ್ರೋತ್ಸಾಹನಿತ್ತ ತ್ಯಾಗರಾಜರ ಗುರುಗಳು. ಹಿಂದುಸ್ಥಾನೀ ಸಂಗೀತಕ್ಕೆ ಮೂಲ ಪುರುಷನಾದ ಗೋಪಾಲ ನಾಯಕನು ಕರ್ನಾಟಕದ ವಾಗ್ಗೇಯಕಾರ. ಸದ್ರಾಗ ಚಂದ್ರೋದಯ, ರಾಗ ಮಂಜರಿ, ಶಿಕ್ಷಾ ಬೋಧಿನೀ ನಾಮಮಾಲಾ, ನರ್ತನ ನಿರ್ಣಯ ಮೊದಲಾದ ಗ್ರಂಥಗಳನ್ನು ಬರೆದ ಪುಂಡರೀಕ ವಿಠಲನು ಶುದ್ಧ ಕನ್ನಡಿಗನು. ಇವನನ್ನು ಮೊಗಲ ಚಕ್ರವರ್ತಿಯಾದ ಅಕಬರನು ಖಾನ ದೇಶದಿಂದ ದೆಹಲಿಯ ತನ್ನ ಆಸ್ಥಾನಕ್ಕೆ ಕರೆಸಿಕೊಂಡನೆಂದು ಇತಿಹಾಸವು ಹೇಳುತ್ತಿದೆ. ತಾನಸೇನನಿಂದಾಗದ ಹೃದಯಾನಂದವು ಅಕಬರನಿಗೆ ಪುಂಡರೀಕ ವಿಠಲನ ಸಂಗೀತದಿಂದಾಗಿರಬಹುದೆ? ಯಾರಿಗೆ ಗೊತ್ತು. ಕನ್ನಡಿಗರು ನಭೂತೋ ನಭವಿಷ್ಯತಿಯ ಒಂದು ದಿವ್ಯ ಜನಾಂಗ!

ವಿಜಯ ನಗರದ ಚಕ್ರಾಧಿಪತ್ಯದ ಮೊದಲು ಕರ್ನಾಟಕ ರಾಷ್ಟ್ರವು ಸರ್ವಾಂಗ ಸಂಪೂರ್ಣವಾಗಿದ್ದು ಮಹೋನ್ನತಿಯನ್ನು ಪಡೆದಿತ್ತು. ರಕ್ಕಸ ತಂಗಡಿಯ ಕಾಳಗದಲ್ಲಿ ಕರ್ನಾಟಕದ ಐಕ್ಯಕ್ಕೆ ಭಂಗಬಂದು ತುಂಗಭದ್ರೆಯಿಂದ ಉತ್ತರಕ್ಕಿದ್ದ ಕರ್ನಾಟಕವು ಬಿಜಾಪುರದ ಸುಲ್ತಾನರಿಗೂ, ಗಟ್ಟದ ಸೀಮೆಯು ಬಿದನೂರು ನಾಯಕರಿಗೂ, ತುಂಗಭದ್ರೆಯ ದಕ್ಷಿಣ ಭಾಗವು ಮೈಸೂರೊಡೆಯರಿಗೂ ಸೇರಿತು. ಮುಂದೆ ಟಿಪ್ಪು ಸುಲ್ತಾನನ ಕಾಲದಲ್ಲಿ ಸ್ವಲ್ಪಕಾಲ ಮಾತ್ರ ಕರ್ನಾಟಕವು ಅಖಂಡವಾದರೂ, ಇಂಗ್ಲೀಷರಾಳಿಕೆಯಲ್ಲಿ ಈ ನಾಡು ಅಕ್ರಮವಾಗಿ, ನಿರ್ದಯವಾಗಿ ಚಿತ್ರಹಿಂಸೆಗೆ ಗುರಿಮಾಡಲ್ಪಟ್ಟು, ಮುಂಬಯಿ, ಮದ್ರಾಸು ಮೈಸೂರು, ಹೈದರಾಬಾದು, ಕೊಡಗು ಕರ್ನಾಟಕವೆಂದು ಕರೆಯಲ್ಪಟ್ಟಿತು. ಅಂದಿನವರೆಗೆ ನರಸಿಂಹರಾಗಿ ಬಾಳಿದ ಕನ್ನಡಿಗರು ಗತಕಾಲದ ವಿಸ್ಮೃತಿಯುಳ್ಳವರಾಗಿ ಕುರಿಗಳಂತೆಯೇ ದಿನ ನೂಕತೊಡಗಿದರು. ಕನ್ನಡಿಗರ ಈ ದೈನ್ಯಾವಸ್ಥೆಯು ಪರಮಾತ್ಮನ ಹೃದಯವನ್ನೂ ಇರಿದು ಕರಗಿಸಿರಬೇಕು. ದೈವದೊಲ್ಮೆಯನ್ನು ಪಡೆದ ಕನ್ನಡಿಗರಿಗೆ ಇದೇ ನವಂಬರ ತಾ. ೧ರಂದು ಹೆಚ್ಚಿನ ಎಲ್ಲಾ ಕನ್ನಡಿಗರಿಗೂ ವಿಶಾಲ ಕರ್ನಾಟಕದ ಪ್ರಜೆಯಾಗುವ ಭಾಗ್ಯವು ಬಳಿಸಾರುತ್ತಿದೆ. ಇಂದು ಒಬ್ಬ ಕನ್ನಡಿಗನು ಇನ್ನೊಬ್ಬ ಕನ್ನಡಿಗನನ್ನು ತುಪ್ಪದ ಸೊಡರ ಬೆಳಕಿನಲ್ಲಿ ಸಮೀಕ್ಷಿಸಬೇಕು. ಇದು ಅಂತಹ ಸುಯೋಗ — ಪರ್ವಕಾಲ! ಇದು ಕೆಲವು ಶತಮಾನಗಳ ಮೇಲೆ ಕನ್ನಡಿಗರು ಮೊದಲು ಅನುಭವಿಸಲಿರುವ ಸ್ವಾತಂತ್ರ್ಯದ ಪ್ರಥಮ ದೀಪಾವಳಿ! ಸಾಂಗಾಂಗ-ಕರ್ನಾಟಕವು ಸಂಕ್ಷಿಪ್ತ ಭರತಖಂಡ ಮಾತ್ರವಲ್ಲ; ಅದರ ಬೆಲೆ ಬಾಳುವ ತಿರುಳು; ಪಂಚಪ್ರಾಣಗಳಲ್ಲಿ ಪ್ರಾಣಸ್ವರೂಪವಾದುದು.

ಕಾಂಗ್ರೆಸಿನ ಅಧ್ಯಕ್ಷ ಪದವಿಯನ್ನು ಸ್ವೀಕರಿಸಲೊಪ್ಪದ ಮಹಾತ್ಮಾ ಗಾಂಧೀಜಿಯವರು ಕ್ರಿ. ಶ. ೧೯೨೪ರಲ್ಲಿ ಬೆಳಗಾವಿಯ ಕಾಂಗ್ರೆಸಿನ ಅಧ್ಯಕ್ಷರಾಗಿ—"ಕನ್ನಡಿಗರಂಥ ಸುಸಂಸ್ಕೃತ ಜನರನ್ನು ನಾನು ಕಂಡಿಲ್ಲ"—ಎಂದು ಘೋಷಿಸಿದುದನ್ನು ಪ್ರತಿಯೊಬ್ಬ ಕನ್ನಡಿಗನೂ ಮನನಮಾಡಬೇಕಾಗಿದೆ. ಕರ್ನಾಟಕ ಏಕೀಕರಣವಾದ ಮೇಲೆ ಪ್ರತಿಯೊಬ್ಬ ಕನ್ನಡಿಗನೂ ಈಗಿನ ಮಾನವತೆಯ ಮಟ್ಟದಿಂದ ದೇವತ್ವಕ್ಕೇರುವ ಧ್ಯೇಯದಲ್ಲಿ ಹೆಜ್ಜೆಯನ್ನಿಡಬೇಕಲ್ಲದೆ, ದಾನವತೆಯ ಸಂಕೋಚ ಹೃದಯಕ್ಕೆ ಅರ್ಧಚಂದ್ರ ಪ್ರಯೋಗವನ್ನು ಮಾಡುವುದೂ ಅತ್ಯಗತ್ಯವಾಗಿದೆ. ಕನ್ನಡಿಗರ ಉಜ್ವಲ ಪರಂಪರೆಯು ಈ ಸಧ್ಯೇಯಕ್ಕೆ ಪ್ರಚೋದಕವಾಗಲಿ!

ಜಯ ಕರ್ನಾಟಕ!!


**ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!**

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

**50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!**

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**THE CANARA BANKING CORPORATION LIMITED**

## ಸ್ವತಂತ್ರ ಭಾರತ, ಏಕತಂತ್ರ ಕರ್ನಾಟಕ

(೧ನೇ ಪುಟದಿಂದ)

ಯಾಗುವದು, ಎಂಬ ತಮ್ಮ ಅಭಿಪ್ರಾಯವನ್ನು ಸಾರಿತು. ೧೯೪೫ರಲ್ಲಿ ಕಾಂಗ್ರೆಸ್ಸು ತನ್ನ ಚುನಾವಣೆ ಘೋಷಣೆಯಲ್ಲಿ ಭಾಷಾನುಗುಣ ಪ್ರಾಂತಗಳ ರಚನೆಯ ಬಗ್ಗೆ ಅನುಕೂಲ ಅಭಿಪ್ರಾಯವನ್ನು ಸಾರಿತು. ಮುಂದೆ ಜೇ. ವ್ಹಿ. ಪೀ. ರಿಪೋರ್ಟು. ದರ ಕಮೀಶನ್ನು ಹಾಗು ರಾಜ್ಯ ಪುನರ್ಘಟನಾ ಆಯೋಗ ಇವುಗಳು ನಡೆದು ಪಾರ್ಲಿಮೆಂಟಿನ ಒಂದು ಕಾನೂನಿನ ದ್ವಾರಾ ಇಡೀ ಕರ್ನಾಟಕ ಭಾಗಗಳನ್ನೊಳಗೊಂಡ ಪ್ರಾಂತ ನಿರ್ಮಿಸಲಾಯಿತು.

### ಧ್ಯೇಯನಿಷ್ಠೆ—ಅಡ್ಡದಾರಿ

ಈ ವರೆಗೆ ನಡೆದ ಎಲ್ಲ ಪ್ರಯತ್ನಗಳ ಮೂಲಕ 'ಸ್ವತಂತ್ರ ಭಾರತ ಏಕತಂತ್ರ ಕರ್ನಾಟಕ' ಎಂಬ ಸಿದ್ಧಫಲಗಳು ನಮಗೆ ಪ್ರಾಪ್ತವಾಗಿವೆ. ಈ ಸಂದರ್ಭದಲ್ಲಿ ಒಂದು ಬಗೆಯ ಧನ್ಯಭಾವ ಎಲ್ಲರಲ್ಲಿಯೂ ತಲೆದೋರುವದು ಸ್ವಾಭಾವಿಕ. ಇದೆಲ್ಲ ನಡೆದು ದೇಶಕ್ಕೆ, ನಾವು ಹೊರಟಿರುವುದು ಎಲ್ಲಿಂದ, ಮುಟ್ಟತಕ್ಕ ಗುರಿಯಾವುದು ಎಂಬುದನ್ನು ಚನ್ನಾಗಿ ನೆನೆಸಿಕೊಂಡು ಮುಂದಡಿ ಇಡಬೇಕಾದ ಸಮಯವಿದು. ಕಾಲಕಾಲಕ್ಕೆ ನಾವು ಈ ರೀತಿ ಆತ್ಮನಿರೀಕ್ಷಣೆ ಮಾಡದೆ ಹೋದರೆ ನಾವು ತಪ್ಪು ಹೆಜ್ಜೆ ಇಡುವೆವೆಂಬುದು ಅನುಭವದ ಮಾತಾಗಿದೆ. ಕರ್ನಾಟಕ ಏಕೀಕರಣದ ವಿಷಯವಾಗಿರಲಿ. ಭಾಷಾನುಗುಣ ಪ್ರಾಂತ ರಚನೆಯ ಸಂದರ್ಭದಲ್ಲಿ ಈಚೆಗೆ ಹಲವಾರು ಪ್ರಾಂತಗಳಲ್ಲಿ ನಡೆದು ಹೋದ ಸಂಗತಿಗಳನ್ನು ನೆನಪಿಗೆ ತಂದರೆ ಧ್ಯೇಯದತ್ತ ನೆಟ್ಟ ದೃಷ್ಟಿ, ಆತ್ಮನಿರೀಕ್ಷಣೆ, ಸಂಯಮ ಇವು ಇಲ್ಲದೆ ಹೋದರೆ ಜನ ಎಷ್ಟುಮಟ್ಟಿಗೆ ಅಡ್ಡದಾರಿ ಹಿಡಿಯಬಹುದೆಂಬುದರ ಸ್ಪಷ್ಟ ಕಲ್ಪನೆ ಆಗದಿರದು. ರಾಷ್ಟ್ರದ ಬಲಸಂವರ್ಧನಕ್ಕಾಗಿಯೆ, ಪ್ರಾಂತಗಳ ಬಲವನ್ನು ಹೆಚ್ಚಿಸಬೇಕು. ಅದು ಭಾಷಾನುಗುಣ ಪ್ರಾಂತಗಳನ್ನು ಮಾಡುವುದರಿಂದ ಆಗಬಲ್ಲದು ಎಂಬ ವಿಚಾರ ಕಣ್ಮರೆಯಾಗಿ ಭಿನ್ನ ಭಾಷೆ ಮಾತಾಡುವವರಲ್ಲಿ ದ್ವೇಷವುಂಟಾಗಿ ರಣಕಂದನ ನಡೆಯಿತು. ರಾಜ್ಯಕಾರಭಾರದ ಅನುಕೂಲತೆಗಾಗಿ ಮಾಡತಕ್ಕ ಕೆಲಸ ಇದು ಎಂಬುದು ಮರೆತು ತಮ್ಮ ಭಾಷಾರಾಜ್ಯದ ವಿಸ್ತಾರದತ್ತ ಜನಸಾಗಿತು. ಇದಕ್ಕಾಗಿ ಹಿಂಸಾವಾದಿಗಳೊಡನೆ ಕೂಡಿಕೊಂಡು ಹಿಂಸಾಚಾರ ನಡೆಸಲು ಸಹ ಜನ ಹಿಂದೆ ಮುಂದೆ ನೋಡಲಿಲ್ಲ. ಭಾಷಾಭಿಮಾನದ ಮುಸುಕಿನಲ್ಲಿ ರಾಜ್ಯತೃಷ್ಣೆ, ಅಧಿಕಾರಲಾಲಸೆ, ದ್ವೇಷಾಸೂಯೆ ಇತ್ಯಾದಿ ಆಸುರೀ ವೃತ್ತಿಗಳು ಸಹ ತಲೆಯೆತ್ತಿದವು. ಹಲವು ಸಂದರ್ಭಗಳಲ್ಲಿ ಬುದ್ಧಿ—ವಿವೇಕ ಇವುಗಳಿಗೆ ಸಕ್ಕಿನ ರಜೆ ಕೊಡಲಾಯಿತು. ರಾಷ್ಟ್ರವೂ ಒಂದತ್ತ ಉಳಿಯಿತು, ಪ್ರಾಂತವೂ ಮತ್ತೊಂದೆಡೆ ಹೋಯಿತು, ಭಾಷಾಪ್ರೇಮವೂ ಮುಖವನ್ನು ತಪ್ಪಿಸಿಕೊಂಡಿತು, ಹಾಗೂ ಹಿಂಸಾಚಾರದ ತಾಂಡವ ನೃತ್ಯ, ಸರಕಾರದ ವಿರೋಧ, ಸಾರ್ವಜನಿಕ ಆಸ್ತಿಯ ವಿಧ್ವಂಸ ಇವು ಮಿತಿಮೀರಿದುವು. ಇವುಗಳಿಂದ ಧ್ಯೇಯ ಸಾಧನೆಯಾಗುವ ಬಗೆ ಯಾವುದು? ಲೋಕ ಸತ್ತೆಗೆ ಆಧಾರಭೂತವಾದ ಶಾಂತಿಯ ವಿಚಾರವಿನಿಮಯಕ್ಕೆ ಎಡೆಯೆಲ್ಲಿ? ಭಾಷಾನುಗುಣ ಪ್ರಾಂತರಚನೆಯ ಪುರಸ್ಕರ್ತರು ಇದನ್ನು ಧ್ಯೇಯವಾಗಿಟ್ಟುಕೊಂಡಿದ್ದರೆ? ಇಂಥ ಬುದ್ಧಿಗೇಡಿತನದಿಂದ ತಮ್ಮ ಧ್ಯೇಯವನ್ನು ಸಾಧಿಸಬೇಕೆಂದಿದ್ದರೆ?

### ಪ್ರಜಾಪ್ರಭುತ್ವ ಹಿಂಸೆ

ಸರ್ವಥಾ ಇಲ್ಲ. ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯ ಅಖಂಡವಾಗಿ ಉಳಿದು, ಬಾಳಿ, ಅದರಿಂದ ನಮ್ಮ ಕೋಟಿ ಕೋಟಿ ಪ್ರಜೆಗಳಿಗೆ ಸರ್ವತೋಮುಖ ಹಿತವಾಗಬೇಕು. ಯಾವದೇ ಪ್ರಶ್ನೆ ನಮ್ಮ ಮುಂದೆ ಬಂದರೂ ಅದನ್ನು ಶಾಂತಿಮಯ ವಾತಾವರಣದಲ್ಲಿ ಒತ್ತಟ್ಟಿಗೆ ಸೇರಿ, ಪ್ರಾತಿನಿಧಿಕವಾದ ಶಾಸನ ಸಭೆ ಮುಂತಾದವುಗಳಲ್ಲಿ ವಿಚಾರವಿನಿಮಯ ಪೂರ್ವಕವಾಗಿ ನಿರ್ಣಯಗಳನ್ನು ಮಾಡಿ, ಅವುಗಳನ್ನು ಅಮಲಿನಲ್ಲಿ ತಂದು ಪ್ರಜಾಪ್ರಭುತ್ವ ಸತತ ನಡೆಯುವಂತೆ ಹೆಣಗಬೇಕು. ಸ್ಥಳೀಯ ಭಾಷೆ ಸಂಸ್ಕೃತಿಗಳ ವಿಕಾಸವಾಗಬೇಕು, ಶಿಕ್ಷಣ ಪ್ರಸಾರಕ್ಕೆ ಆಡಳಿತಕ್ಕೆ ಅನುಕೂಲವಾಗಬೇಕು ಎಂಬ ಭಾವನೆಯ ಮೂಲಕ ಭಾಷಾನುಗುಣ ಪ್ರಾಂತ ರಚನೆ ಇರಬೇಕು. ಈ ಧ್ಯೇಯಗಳನ್ನು ಮರೆತದಿನ ನಮ್ಮ ಸ್ವಾತಂತ್ರ್ಯವು ನಷ್ಟವಾಗಿ ಹೋಗುವದು. ವಿಚಾರ, ಆಚಾರ, ಪ್ರಚಾರ ಉಚ್ಚಾರಾದಿಗಳ ಸ್ವಾತಂತ್ರ್ಯವು ನಷ್ಟವಾಗಲು ಪರಕೀಯರ ರಾಜ್ಯವು ಇಲ್ಲಿ ಸ್ಥಾಪಿತವಾಗುವದು ಅವಶ್ಯವಿಲ್ಲ. ಹಿಂಸೆ, ಭಯ, ಒತ್ತಾಯ, ಬೆದರಿಕೆ, ಹೆದರಿಕೆ ಇವುಗಳ ರಾಜ್ಯ, ಭಂಡರು, ಸೋಟರು, ತುಂಟರು ಇವರ ರಾಜ್ಯ ಆದರೆ ಸ್ವಾತಂತ್ರ್ಯದ ಶ್ರಾದ್ಧ ಮಾಡಲು ಅಡ್ಡಿ ಇಲ್ಲ! ಇನ್ನೂ ನಮ್ಮಲ್ಲಿ ಪರಕೀಯರ ರಾಜ್ಯ ನಡೆದಿದೆ; ಲೋಕಸತ್ತೆ ಸ್ಥಾಪಿತವಾಗಿಲ್ಲ, ಎಂಬ ಗುಂಗಿನಲ್ಲಿಯೆ ಹಲವರು ಇದ್ದಂತೆ ತೋರುತ್ತದೆ! ಇಲ್ಲದೆ ಹೋದರೆ ಅವರು ಈ ರೀತಿ ಹಿಂಸಾಚಾರದ ಮಾರ್ಗವನ್ನು ಹಿಡಿಯುತ್ತಿರಲಿಲ್ಲ.

### ಏಕತಂತ್ರವಾಯಿತು—ಏಕೀಕರಣವಾಗಬೇಕು

೧೯೪೭ರ ಅಗಸ್ಟ ೧೫ನೇ ತಾರೀಖಿನ ದಿನ ಭಾರತವು ರಾಷ್ಟ್ರವಾದಂತೆ ಈ ದಿನ ಕರ್ನಾಟಕವು ಏಕತಂತ್ರ ರಾಜ್ಯವಾಗಿ ಎಲ್ಲ ಕರ್ನಾಟಕಸ್ಥರು ಒಂದೇ ಆಡಳಿತಕ್ಕೆ ಸೇರಿದಂತಾಯಿತು. ಆದರೆ. ಇನ್ನೂ ನಿಜವಾದ ಹಾರ್ದಿಕ ಏಕೀಕರಣವಾಗಬೇಕಾಗಿದೆ. ರಾಜ್ಯ ಪುನರ್ಘಟನಾ ಆಯೋಗದವರು, ಕರ್ನಾಟಕವು ಏಕಪ್ರಾಂತವಾಗಬೇಕೆಂಬ ನಿರ್ಣಯ ಕೊಟ್ಟನಂತರ ಸಹ ಮೈಸೂರು ಪ್ರತ್ಯೇಕವಾಗಿರಬೇಕು ಎಂಬುವವರ ಅಭಿಪ್ರಾಯದ ಮೂಲಕ, ಕರ್ನಾಟಕವು ಏಕತಂತ್ರವಾಗುವದೊ ಇಲ್ಲವೊ ಎಂಬ ಭಯವುಂಟಾಗಿತ್ತು. ಎಷ್ಟೋಸಾರೆ ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲ. ಇಂಥ ಸಂದರ್ಭಗಳು ಉಂಟಾಗಬಾರದು ಎಂದು ಸಕಲರೂ ಪ್ರಯತ್ನ ಮಾಡುವದು ಅವಶ್ಯ. ಪ್ರಯತ್ನ ಮಾಡದೆ ಇದಾಗಬಹುದು ಎಂದು ತಿಳಿಯುವದು ತಪ್ಪು. ಭಾಷೆ ಸಂಸ್ಕೃತಿ ವಿಷಯಗಳಲ್ಲಿಯಷ್ಟೇ ಅಲ್ಲ. ಆರ್ಥಿಕ ರಾಜಕೀಯ ಮುಂತಾದ ಎಲ್ಲ ಮಾತುಗಳಲ್ಲಿಯೂ ನಮ್ಮೆಲ್ಲರ ಹಿತ ಸಂಬಂಧಗಳು ಹಾಸುಹೊಕ್ಕಿನಂತೆ ಹೆಣೆದುಕೊಂಡಿವೆಯೆಂಬ ಭಾವನೆ ನಮ್ಮೆಲ್ಲರಲ್ಲಿ ಸ್ಥಿರವಾಗಿ ಮೂಡಲಿಕ್ಕೆ ಬೇಕು. ಇಲ್ಲಿ ಸೇರಿದ ಬಳಿಕ ಸಹ ನಾವು ಮೈಸೂರವರು, ನಾವು ಉತ್ತರ ಕರ್ನಾಟಕದವರು, ನಾವು ಹೈದರಾಬಾದಿನವರು ಎಂದು ತಮ್ಮ ತಮ್ಮ ಭಾಗದ ಹಿತಕ್ಕಾಗಿಯೆ ಹೆಣಗುತ್ತ ಹೋದರೆ ನಿಜವಾದ ಏಕೀಕರಣವಾಗುವದು ಸಾಧ್ಯವೇ ಇಲ್ಲ. ಯಾವದೇ ಪ್ರತಿನಿಧಿಯು ಆರಿಸಿ ಬರುವ ವರೆಗೆ ಆವನು ಆಯಾ ಮತದಾರ ಸಂಘದವನು: ಒಮ್ಮೆ ಆರಿಸಿ ಬಂದು ಶಾಸನ ಸಭೆಯಲ್ಲಿಯೊ ವಿಧಾನ ಸಭೆಯಲ್ಲಿಯೊ ದೀಕ್ಷಾಬದ್ಧನಾಗಿ ಕುಳಿತನೆಂದರೆ ಅವನು ಇಡೀ ಕರ್ನಾಟಕದ ಪ್ರತಿನಿಧಿಯು. ಕರ್ನಾಟಕದ ಮೂಲೆ ಮೂಲೆಯಲ್ಲಿರುವ ಜನರ ಹಿತವನ್ನು ಹೇಗೆ ಸಾಧಿಸಬೇಕು ಎಂಬುದೊಂದೇ ಹಂಬಲ ಅವನಿಗೆ ಉಂಟಾಗಬೇಕು. ಎರಡು ಕೋಟಿ ಜನರ ಹಿತವನ್ನು ಸಾಧಿಸುವ ಸುಸಂಧಿ ಆಯಾ ಪ್ರತಿನಿಧಿಗೆ ಬಂದಂತಾಗುವುದು. ಇಷ್ಟೊಂದು ವಿಶಾಲ ಕ್ಷೇತ್ರ, ಒಂದೇ ಭಾಷೆ ಪ್ರಾಮುಖ್ಯವಾಗಿದ್ದ ರಾಜ್ಯ ಘನವುಳ್ಳ ಇತಿಹಾಸವಿದ್ದ ಎರಡು ಕೋಟಿ ವೀರ ಜನ, ಭಾರತದ ಇತರ ಯಾವುದೇ ರಾಜ್ಯಕ್ಕಿಂತ ಯಾವ ವಿಷಯದಲ್ಲಿಯೂ ಕಡಿಮೆ ಇಲ್ಲದ ಸಾಧನ ಸಾಮಗ್ರಿ, ಇವೆಲ್ಲವುಗಳ ಸೌಲಭ್ಯಗಳು ಏಕತಂತ್ರ ಕರ್ನಾಟಕಕ್ಕಿವೆ. ಅವುಗಳನ್ನು ಉಳಿಸಿ ಬೆಳಿಸಿ ವೃದ್ಧಿಗೊಳಿಸುವದು ನಮ್ಮೆಲ್ಲರನ್ನು ಸೇರಿದೆ.

### ನಾವು ಒಮ್ಮನಸ್ಸಿಂದ ಸಾಗುವಾ, ದುಡಿಯುವಾ, ಸರ್ವ ಹಿತವನ್ನು ಸಾಧಿಸುವಾ

ಈ ರಾಜ್ಯದಲ್ಲಿಯ ಮುಖ್ಯ ಭಾಷೆ ಕನ್ನಡ ವಾದಾಕ್ಷಣಕ್ಕೆ ಇಲ್ಲಿ ಇತರ ಭಾಷೆಯವರು ಪರಕೀಯರು, ಕಡಿಮೆಯವರು, ಅಲ್ಪರು ಎಂಬ ಭಾವನೆ ಉಂಟಾದ ಪಕ್ಷದಲ್ಲಿ ಅದು ಅತ್ಯಂತ ಘಾತಕವಾದುದು. ಕನ್ನಡ ಮಾತಾಡುವವರು ಮಾತಾಡದಿರುವವರು ಎಲ್ಲರೂ ಸಮನಾಗಿ ಕರ್ನಾಟಕಸ್ಥರು, ಇಡೀ ಕರ್ನಾಟಕದ ನಾಗರಿಕರು. ನಾವು ಕರ್ನಾಟಕಸ್ಥರು ಎಂಬ ಭಾವನೆ ಬೆಳೆಯಬೇಕೇ ಹೊರತು, ನಾವು ಕನ್ನಡಿಗರು, ನಾವು ಮರಾಠಿಗರು, ನಾವು ತೆಲುಗರು, ನಾವು ಹಿಂದುಗಳು, ನಾವು ಮುಸಲ್ಮಾನರು ಎಂಬ ಭಾವನೆ ಬೆಳೆಯಕೂಡದು. ಅದೇ ರೀತಿ ನಾವೆಲ್ಲರೂ ಭಾರತೀಯರು, ಭಾರತ ಬೆಳೆದರೆ ನಾವು ಬೆಳೆಯುವೆವು. ನಮ್ಮ ಭಾಗ್ಯೋದಯ ಭಾರತದ ಭಾಗ್ಯದೊಡನೆ ಸಂಬದ್ಧವಾಗಿದೆ, ಲಕ್ಷಾಂತರ ಜನರಲ್ಲದಿದ್ದರೂ ಸಾವಿರಾರು ಕರ್ನಾಟಕಸ್ಥರು ಇಡೀ ಭಾರತದ, ಅಷ್ಟೇ ಏಕೆ, ಇಡೀ ಜಗತ್ತಿನ ವಿಷಯಗಳನ್ನರಿತವರು, ವಿಶ್ವವ್ಯವಹಾರದಲ್ಲಿ ರುಚಿಗೊಳ್ಳುವವರು ಆಗಬೇಕು. ನಮ್ಮ ಮನೆ, ನಮ್ಮ ಭಾಷೆ, ನಮ್ಮ ದೇಶ ಇವು ನಮ್ಮನ್ನು ಸಂಕುಚಿತ ಭಾವನೆಯುಳ್ಳ ಸೆರೆಯಾಳುಗಳನ್ನಾಗಿ ಮಾಡದೆ ಇತರ ಎಲ್ಲ ಜನರೊಡನೆ ಬಾಂಧವ್ಯ ಬೆಳೆಸುವ ಸಾಧನಗಳಾಗಬೇಕು. ಹೀಗಾಗುವುದರಿಂದಲೆ ನಮ್ಮೆಲ್ಲರ ಉದ್ಧಾರವಾಗಬಹುದು.

---

**1-11-56 ನವ ರಾಜ್ಯೋದಯ ದಿನ!**
ಮಹಾ ಮೈಸೂರು ಉದಯವಾಗುವ ಸುದಿನ!
ಈ ಸಂದರ್ಭದಲ್ಲಿ ಸರ್ವರಿಗೂ ನಮ್ಮ ಶುಭಾಶಯಗಳು.
**ಹಂಚುಗಳನ್ನು ಆರಿಸುವಾಗ ಜಾಗರೂಕರಾಗಿರಿ!**
ತಾಳಿಕೆಯಲ್ಲಿ—ಬಾಳಿಕೆಯಲ್ಲಿ—ನಾಜೂಕಿನಲ್ಲಿ ಸರ್ವೋತ್ಕೃಷ್ಟವೆಂದು ಸರ್ವತ್ರ ಸುಪ್ರಸಿದ್ಧವಾಗಿರುವ ಹಂಚುಗಳೆಂದರೆ ಕೋಮನ್‌ವೆಲ್ತ್ ನವರ
**ಬಾಸೆಲ್ ಮಿಶನ್**
**ಹಂಚು, ದಂಬೆ** ಇತ್ಯಾದಿ
ಬುದ್ಧಿವಂತರು ಇವನ್ನೇ ಆರಿಸಿ ಉಪಯೋಗಿಸುತ್ತಾರೆ.
ಉತ್ತಮ ಹಂಚು, ದಂಬೆ ಯಾವುದು ಬೇಕಾದರೂ ನಮ್ಮೊಡನೆ ವಿಚಾರಿಸಿ ಪಡಕೊಳ್ಳಿರಿ.
**ಕಾನರ್ಾಡು ಪಾಂಡುರಂಗ ರಾವ್,**
ಕಮಿಶನ್ ಏಜಂಟ್, ಉಡುಪಿ. (ಬಸ್‌ಸ್ಟೇಂಡಿನ ಸಮೀಪ)

ಯಾವತ್ತೂ ನಿತ್ಯೋಪಯೋಗಿ ಸಾಹಿತ್ಯಗಳಿಗೆ
ಮತ್ತು
ನಿಪುಣ ಕೆಲಸಗಾರರಿಂದ ನಿರ್ಮಲವಾಗಿಯೂ
ರುಚಿಯಾಗಿಯೂ ತಯಾರಿಸಲ್ಪಡುವ
**ಟೋಸ್ಟ್, ಬ್ರೆಡ್, ಕೇಕ್, ಬಿಸ್ಕಿಟ್**
ಇತ್ಯಾದಿಗಳಿಗೆ ದಯಮಾಡಿ ನಮ್ಮನ್ನು ವಿಚಾರಿಸಿರಿ
**ಗೋವಾ ಸ್ಟೋರ್ಸ್ ಮತ್ತು ಬೇಕರಿ**
ಕೆಥೋಲಿಕ್ ಬ್ಯಾಂಕಿನ ಎದುರು, ಉಡುಪಿ.

ನಮ್ಮ ಚೆಲುವ ಕನ್ನಡನಾಡು ಉದಯವಾಗುತ್ತಿದೆ.
ಧಾರ್ಮಿಕ ಹಿನ್ನೆಲೆಯೊಂದಿಗೆ ಚಾರಿತ್ರಿಕ
ಮಹತ್ವದೊಡನೆ ದೀಪಾವಳಿಯು
ಆನಂದದ ಹಬ್ಬವಾಗಿ ಬರುತ್ತಿದೆ.

ನಮ್ಮ ಎಲ್ಲಾ ಗ್ರಾಹಕರಿಗೂ
ಹಿತಚಿಂತಕರಿಗೂ
ದೀಪಾವಳಿಯ ಶುಭಾಶಯಗಳು.

"ಹೊಸ ವರ್ಷವು
ಸುಖಸಮೃದ್ಧಿದಾಯಕವಾಗಲಿ!"

ಉತ್ತಮ ಆಯುರ್ವೇದ ಶಾಸ್ತ್ರೀಯ ರೀತ್ಯಾ ವ
ಅನುಭವಸಿದ್ಧ ಔಷಧಿಗಳನ್ನು ತಯಾರಿಸಿ
ನಿಮ್ಮ ಸೇವೆಗಾಗಿ ಶ್ರಮಿಸುವ ಸಂಸ್ಥೆ—

ಭುವನೇಂದ್ರ ಪ್ರೊಡಕ್ಟ್ಸ್

ಪ್ರೈವೇಟ್ ಲಿಮಿಟೆಡ್
ಕಟಪಾಡಿ, ದ. ಕನ್ನಡ.

ಡಿಪೊ:- ಉಡುಪಿ, ದ. ಕನ್ನಡ. (2) ಮರಾಠಗಲ್ಲಿ, ಹುಬ್ಬಳ್ಳಿ



*Hearty Greetings to one and all*
*on this auspicious occasion of the*
*dawn of New Mysore State*

**SCHOOL BOOK CO.,**

*Book Sellers—Publishers & Wholesale Paper Dealers*

Distributors:—Mysore Paper Mills Ltd, &
"Ganges' Printing Inks"

*Head Office:*—Car Street. **MANGALORE-1**
*Branch:* Vishwa Bhavan Building, Hampankatta.

ಮಹಾ ಮೈಸೂರು ಉದಯವಾಗುವ
ಈ ಸುಮುಹೂರ್ತದಲ್ಲಿ ಸರ್ವರಿಗೂ
ಹಾರ್ದಿಕ ಶುಭಾಶಯಗಳು

ಸ್ಕೂಲ್ ಬುಕ್ ಕಂಪೆನಿ,

ರಥಬೀದಿ, ಮಂಗಳೂರು-1

ಶಾಖೆ: ವಿಶ್ವಭವನದ ಕಟ್ಟಡ,
ಹಂಪನಕಟ್ಟೆ.



ಕನ್ನಡ ಬಾಂಧವರಿಗೆ ಸುಸ್ವಾಗತ!

ಕನ್ನಡಿಗರ ಕನಸಾದ 'ಕರ್ನಾಟಕ ಏಕೀಕರಣ'ದ ಈ ಶುಭ ಮುಹೂರ್ತದಲ್ಲಿ 'ವಿಶಾಲ ಮೈಸೂರಿ'ನಲ್ಲಿ ಬಂದು ಸೇರಲಿರುವ ಕೊಡಗು, ಬೊಂಬಾಯಿ, ಹೈದರಾಬಾದು ಮತ್ತು ಮದರಾಸ್ ಪ್ರಾಂತ್ಯಗಳ ಕನ್ನಡ ಬಾಂಧವರೆಲ್ಲರಿಗೂ ನಮ್ಮ ಆದರಪೂರ್ವಕವಾದ ಸುಸ್ವಾಗತವನ್ನು ಬಯಸುತ್ತೇವೆ.

ವಿಶ್ವವಿಖ್ಯಾತಿಯನ್ನು ಪಡೆದಿರುವ ಕನ್ನಡ ನಾಡಿನ ಆಚಂದ್ರಾರ್ಕವಾದ ಕೀರ್ತಿಗೆ ಕಾರಣರಾಗಿ, ಸತ್ಯ-ಧರ್ಮಗಳ ಆಧಾರದ ಮೇಲೆ 'ರಾಮರಾಜ್ಯ'ವನ್ನು ಸ್ಥಾಪಿಸಿದ ಶ್ರೀ ಶ್ರೀ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾದ ಯದುಕುಲದರಸರಿಗೆ ಮಾತ್ರ ಸಲ್ಲುವುದು ಈ ಕೀರ್ತಿಕಲಶವನ್ನು ಈ ಸಂದರ್ಭದಲ್ಲಿ ಕಿತ್ತೊಗೆಯುವ ಪ್ರಯತ್ನವು ನಡೆದಿರುವುದಕ್ಕಾಗಿ ನಾವು ಎಷ್ಟು ವಿಷಾದಿಸಿದರೂ ಸಾಲದು. ಕನ್ನಡಿಗರು ಏಕೋದರರಂತೆ ಬಾಳಿ, ಬದುಕಿ, ಭವ್ಯ ಭಾರತದ ನಿರ್ಮಾಣ ಕಾರ್ಯದಲ್ಲಿ ಯಶಸ್ವಿಗಳಾಗಬೇಕಾದರೆ, ಈ ಧರ್ಮಸಾಮ್ರಾಜ್ಯದ ಸೌಭಾಗ್ಯ ಸ್ವರೂಪರಾದ ಯದುಕುಲದರಸರ ಮುಂದಾಳುತ್ವದಲ್ಲಿ ಮಾತ್ರವೇ ಸಾಧ್ಯವೆಂಬುದನ್ನು ನಾವೂ ಮತ್ತು ನಮ್ಮ ನಾಯಕರೂ ಮನಗಾಣಬೇಕಾಗಿದೆ. ಇಂತಹ ಧರ್ಮ ಸಾಮ್ರಾಜ್ಯವು ಅಚ್ಚಳಿಯದೆ ಮುಂದುವರೆಯುವಂತೆ ಮಾಡುವ ಮಹತ್ಕಾರ್ಯದಲ್ಲಿ ನಾವೆಲ್ಲರೂ ಏಕೀಭವಿಸುವ ಸದ್ಬುದ್ಧಿಯನ್ನು ಕರ್ನಾಟಕ ಸಾಮ್ರಾಜ್ಯಾಧಿದೇವತೆಯಾದ ಶ್ರೀ ಚಾಮುಂಡೇಶ್ವರಿಯು ನಮ್ಮೆಲ್ಲರಿಗೂ ಅನುಗ್ರಹಿಸಲೆಂದು ಹಾರೈಸುತ್ತೇವೆ.

ಎಂ. ಆರ್. ಸಿ. ಬಸಪ್ಪ ಅಂಡ್ ಸನ್ಸ್,

ಸುಪ್ರಸಿದ್ಧವಾದ 'ಕಾಂಗ್ರೆಸ್ ಸ್ಪೆಷಲ್,' 'ಜೆ. ಎಸ್. ಸ್ಪೆಷಲ್'
ಮತ್ತು 'ಜೆ. ಎಸ್. ಎಕ್ಸ್‌ಟ್ರಾ ಸ್ಪೆಷಲ್ ಆಫೀಸರ್ಸ್'
ಮಂಗಳೂರು ಬೀಡಿಗಳನ್ನು ತಯಾರಿಸುವವರು ಮತ್ತು

ಮಾಲೀಕರು: ಜ್ಯೂಬಿಲಿ ಸ್ಟೋರ್ಸ್,

ಬಸ್ ಟರ್ಮಿನಸ್ — ಮೈಸೂರು.



ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ
ಔಷಧ

ಸ್ಪೆಶ್ಯಲ್ ನಂ. ೧
[ರಿಜಿಸ್ಟರ್ಡ]

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದಪ್ರಶಂಸೆ ಮಾಡುತ್ತಾರೆ. ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ. ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು (ಎಲ್ಲಾ ಋತುಗಳಲ್ಲಿ ಅನುಕೂಲವಿದೆ) ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. ಇದೇ ಎಣ್ಣೆಯನ್ನೇ ಕೇಳಿರಿ.

ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೩-೮-೦ ಸಣ್ಣ ಬಾಟ್ಲಿ ರೂ. ೨-೦-೦.

ಪೋಸ್ಟು ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫—೧೩—೧, ಸಣ್ಣ ಬಾಟ್ಲಿಗೆ ರೂ. ೩—೧೩—೦ (ಪೇಕಿಂಗ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲರೇಲ್ವೆ) ಮುಂಬಯಿ, ೧೪.

Tl K 62899 ಟೆಲಿಗ್ರಾಮ್: PRANAYAMA.

Regd. No. M. 3618
LICENCE NO. 31
Licensed to Post without Prepayment


# ಶುಭ ದಿನದ ಸಂದೇಶ.

## 1-11-1956

## ಸುಸ್ವಾಗತಂ:

ಇಂದು ಮಹಾ ಸ್ವಪ್ನವು ಉದಯವಾಗುವ ದಿನ!
ಹೊಸ ರಾಜ್ಯದ ಏಳಿಗೆಯನ್ನು ನಾವೆಲ್ಲರೂ ಬಯಸೋಣ!
ಆರ್ಥಿಕ ರಂಗದಲ್ಲಿ ಒಕ್ಕಟ್ಟಾಗಿ ದುಡಿಯೋಣ!
ವಿಶಾಲ ಕರ್ನಾಟಕದ ತಳಹದಿಯನ್ನು ಭದ್ರವಾಗಿ ಕಟ್ಟೋಣ!

ಬ್ಯಾಂಕಿಂಗ್ ಕ್ಷೇತ್ರದಲ್ಲಿ 25 ವರ್ಷಗಳ ಸೇವೆ ಸಲ್ಲಿಸಿ ಜನರ ಪೂರ್ಣ ವಿಶ್ವಾಸವನ್ನು ಗಳಿಸಿರುತ್ತೇವೆ. ನವ ಸ್ವರೂಪದ ಜನತೆಗೆ ಎಲ್ಲಾ ಕ್ಷೇತ್ರದಲ್ಲೂ ಹೊಸ ಬೆಳಕನ್ನು ನೀಡಿ ಸ್ಫೂರ್ತಿದಾಯಕವಾಗಲೆಂದು ಆಶಿಸುತ್ತೇವೆ.

**ಡೈರೆಕ್ಟರರ ಮಂಡಳಿ.**

1. ಕೆ. ಸುಂದರರಾಮ ಸೆಟ್ಟಿ— ಬಿ. ಎ., ಬಿ. ಯಲ್., ವಕೀಲ್, ಮಂಗಳೂರು (ಅಧ್ಯಕ್ಷರು).
2. ಬಿ. ಮಂಜಯ್ಯ ಹೆಗ್ಡೆ— ಬಿ. ಎ., ಬಿ. ಯಲ್., ಎಡ್ವೊಕೇಟ್, ಮಂಗಳೂರು.
3. ರಾವ್ ಬಹದೂರ್ ಕೆ. ಟಿ. ಆಳ್ವ— ಕೃಷಿ ಇಲಾಖೆಯ ಮಾಜಿ ಡೆಪ್ಯೂಟಿ ಡೈರೆಕ್ಟರರು, ಮಂಗಳೂರು
4. ಕೆ. ಮಹಾಬಲ ಹೆಗ್ಡೆ— ಬಿ. ಎ., ಬಿ. ಯಲ್., ವಕೀಲ್, ಕಾರ್ಕಳ.
5. ಯಮ್. ಜಿ. ಗಣೇಶ ನಾರಾಯಣ ರೈ— ಬಿ. ಎ., ಬಿ. ಯಲ್., ಎಡ್ವೊಕೇಟ್, ಕಾಸರಗೋಡು.
6. ಡಾಕ್ಟರ್ ಕೆ. ಬಾಳಪ್ಪ ಶೆಟ್ಟಿ— ಡಿ. ಯಮ್. ಆರ್. ಮಂಗಳೂರು.
7. ಕೆ. ಪಿ. ಭವಾನಿಶಂಕರ ಶೆಟ್ಟಿ— ಬ್ರೇಂಚ್ ಸೆಕ್ರೆಟರಿ, ಬ್ರಿಟಿಷ್ ಇನ್ಶೂರೆನ್ಸ್ ಕಂಪೆನಿ, ಮಂಗಳೂರು.
8. ರಾವ್ ಬಹದೂರ್ ಯಸ್. ಯಮ್. ಅಡ್ಯಂತಾಯ— ಕೈಗಾರಿಕೆ ಇಲಾಖಾ ಮಾಜಿ ಜ್ಯೊಂಟ್ ಡೈರೆಕ್ಟರ್.
9. ಡಾಕ್ಟರ್ ಕೆ. ಸಿ. ಆಳ್ವ— ಕಾಸರಗೋಡು.
10. ಯಸ್. ಸುಂದರರಾಮ ಶೆಟ್ಟಿ— ರೆಸಿಡೆಂಟ್ ಮೆನೇಜರ್, ಬ್ರಿಟಿಷ್ ಇನ್ಶೂರೆನ್ಸ್ ಕಂಪೆನಿ, ಬೆಂಗಳೂರು.

ಸೆಕ್ರೆಟರಿ:
ಬಿ. ಮಹಾಬಲ ಶೆಟ್ಟಿ, ಬಿ. ಎ., ಬಿ. ಯಲ್.

ಸುಪರಿಂಟೆಂಡೆಂಟ್:
ಪಿ. ಜಯರಾಮ ಶೆಟ್ಟಿ, ಯಂ. ಎ., ಬಿ. ಯಲ್, ಸಿ. ಐ. ಐ. ಬಿ.

ಒಟ್ಟು ಚಲಾವಣೆ ಮೊಬಲಗು:- ರೂ. 90,00,000 ಕ್ಕೂ ಮಿಕ್ಕಿದೆ.

# ದಿ ವಿಜಯ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1931]     [ಪ್ರಧಾನ ಕಛೇರಿ: ಮಂಗಳೂರು-3.

# THE VIJAYA BANK LIMITED

**H. O. MANGALORE.**


Edited, Printed and Published by K. H. Shetty at the Navayuga Press, Udipi, S. India.

Licensed to Post without Prepayment.

# ನವಯುಗ

ಸಂಪುಟ ೩೬ VOL. 36

8—11—1956

ಸಂಚಿಕೆ ೧೦ NO. 10

## ನಾಡಿನ ಪರಿಚಯ

# ಇಥಿಯೋಪಿಯಾ

## ಆಫ್ರಿಕದಲ್ಲಿರುವ ಸಾಮ್ರಾಜ್ಯ

ಕತ್ತಲೆಯ ಭೂಮಿ ಎಂದು ಹೆಸರಾಗಿರುವ ಆಫ್ರಿಕದಲ್ಲಿ ಇಥಿಯೋಪಿಯಾ ಎಂಬ ನಾಡು ಕಳೆದ ಎರಡು ಸಾವಿರ ವರ್ಷಗಳಿಂದ ಸ್ವತಂತ್ರ ಸಾರ್ವಭೌಮ ರಾಜ್ಯವಾಗಿ ಮೆರೆದಾಡಿ ಇಂದಿನ ವರೆಗೂ ಉಳಿದುಕೊಂಡು ಬಂದಿದೆ. ಇಲ್ಲಿ ಈಗ ಚಕ್ರವರ್ತಿಗಳಾಗಿರುವ ಹೈಲೆಸೆಲಾಸಿಯಾರವರು ಮೊನ್ನೆ ಅಕ್ಟೋಬರ ೨೫ರಂದು ತಮ್ಮ ಪರಿವಾರದೊಡನೆ ಭಾರತದಲ್ಲಿ ಎರಡು ವಾರಗಳ ಸಂಚಾರಾರ್ಥ ಭಾರತೀಯ ಸರಕಾರದ ಆಮಂತ್ರಣದ ಮೇರೆಗೆ ಬಂದರು. ಭಾರತದ ಮುಖ್ಯ ಪಟ್ಟಣಗಳಿಗೆಲ್ಲ ಸಂದರ್ಶನವೀಯುತ್ತಾ ಅವರು ಇದೇ ೨ನೇ ದಿನಾಂಕ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗೂ ಭೇಟಿ ಇತ್ತರು. ಚಕ್ರವರ್ತಿಯವರು ಹೇಗೆ ಭಾರತವನ್ನು ತಿಳಿದುಕೊಳ್ಳಲು ಆಶಿಸಿದ್ದರೊ ಹಾಗೆಯೇ ನಾವಾದರೂ ಈ ಲೇಖನದ ಮೂಲಕ ಇಥಿಯೋಪಿಯದ ಪರಿಚಯಮಾಡಿಕೊಳ್ಳಲು ಹವಣಿಸೋಣ!

ಪ್ರಾಚೀನ ಇಥಿಯೋಪಿಯಾದ ಇತಿಹಾಸವು, ಕ್ರಿಸ್ತಪೂರ್ವ ೧೦ನೆಯ ಶತಮಾನದಿಂದ ಆರಂಭವಾಗುತ್ತದೆ. ಸಾಲೊಮನ್ ದೊರೆ ಮತ್ತು ಶೀಬಾರಾಣಿಯ ಮಗನಾದ ಒಂದನೆಯ ಮೆನೆಲಿಕ್, ಈ ರಾಜ್ಯದ ಪ್ರಥಮ ರಾಜನಾದ. ಅನಂತರದ ಇಥಿಯೋಪಿಯಾದ ರಾಜರೆಲ್ಲರೂ ಆತನ ಸಂತತಿಯವರೆಂದೇ ಅಭಿಪ್ರಾಯಪಡಲಾಗಿದೆ. ಕ್ರಿ. ಶ. ೯೨೭ ಮತ್ತು ಕ್ರಿ. ಶ. ೧೨೭೦ರ ನಡುವೆ ಸಾಲೊಮನ್ ಸಂತತಿಯಲ್ಲಿ ತಡೆಯುಂಟಾಗಿತ್ತು. ಚಕ್ರವರ್ತಿ ಹೈಲೆಸೆಲಾಸಿಯವರು ಈ ಸಂತತಿಯಲ್ಲಿ ೨೨೫ನೆಯ ದೊರೆ. ೧೯ನೆಯ ಶತಮಾನದಲ್ಲಿ ಪುನರುತ್ಥಾನವಾದ ಮೇಲೆ ೬೬ನೆಯ ಚಕ್ರವರ್ತಿಯಿವರು.

ಕ್ರೈಸ್ತಮತವು ಇಥಿಯೋಪಿಯಾಕ್ಕೆ ಕ್ರಿಸ್ತಶಕದ ಮೊದಲನೆಯ ಶತಮಾನದಲ್ಲಿಯೇ ಬಂದಿತ್ತು. ಕ್ರಿ. ಶ. ೩೩೦ರಲ್ಲಿ ಅದು ಈ ಚಕ್ರಾಧಿಪತ್ಯದ ಮತವಾಯಿತು. ಈ ದೇಶದ ನೀತಿಯ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಕ್ರಿಸ್ತಮತವು ಈಗಲೂ ಪ್ರಾಮುಖ್ಯಸ್ಥಾನವನ್ನಲಂಕರಿಸಿರುವುದು. ೭ನೆಯ ಶತಮಾನದಲ್ಲಿ ಮುಸ್ಲಿಮರು ಅರೇಬಿಯನ್ ಪರ್ಯಾಯ ದ್ವೀಪದ ಹೊರಗಡೆ ರಾಜ್ಯವಿಸ್ತಾರವನ್ನಾರಂಭಿಸಿದ್ದು, ಇಥಿಯೋಪಿಯಾವು ಪ್ರತ್ಯೇಕವಾಗಿ ಉಳಿಯುವಂತಾಯಿತು. ಸುತ್ತಮುತ್ತ ಇಸ್ಲಾಂ ಮತವು ಹರಡಿದ್ದು ಇಥಿಯೋಪಿಯಾವು ಮಾತ್ರ ಕ್ರೈಸ್ತಮತವನ್ನಾಶ್ರಯಿಸಿತ್ತು. ಈ ಶತಮಾನದಲ್ಲಿ ಇಥಿಯೋಪಿಯಾವು ಇಮ್ಮಡಿ ಮೆನೆಲಿಕ್‌ರವರ ನೇತೃತ್ವದಲ್ಲಿ ಹೊರಗಿನ ವಿಶ್ವದೊಂದಿಗೆ ಹೊಸದಾದ, ಹಾಗೂ ನಿಕಟವಾದ ಸಂಪರ್ಕವನ್ನು ಬೆಳೆಸಿಕೊಳ್ಳಲಾರಂಭಿಸಿದಾಗ ಈ ಪ್ರತ್ಯೇಕತೆಯು ಕೊನೆಗೊಂಡಿತು.

ಚಕ್ರವರ್ತಿ ಒಂದನೆಯ ಹೈಲೆ ಸೆಲಾಸಿಯವರು ಈ ಸಂಪರ್ಕವನ್ನು ಇನ್ನೂ ಅಭಿವೃದ್ಧಿಪಡಿಸಿದರು. ಇಂದು ಇಥಿಯೋಪಿಯಾವು ಸಂಯುಕ್ತ ರಾಷ್ಟ್ರದ ಸಂಸ್ಥಾಪಕ ಸದಸ್ಯ ರಾಷ್ಟ್ರಗಳಲ್ಲೊಂದಾಗಿದೆ; ವಿಶ್ವದ ನಾನಾ ರಾಷ್ಟ್ರಗಳೊಂದಿಗೆ ರಾಯಭಾರ ಸಂಪರ್ಕವನ್ನಿಟ್ಟುಕೊಂಡಿದೆ. ಸುಮಾರು ೪೦೦ ಇಥಿಯೋಪಿಯನ ಯುವಕರು ವಿದೇಶಗಳಲ್ಲಿ ತಮ್ಮ ಉಚ್ಚ ಶಿಕ್ಷಣವನ್ನು ಪಡೆಯುತ್ತಿರುವರು. ಇಥಿಯೋಪಿಯಾದ ಶಾಲೆಗಳು ಮತ್ತು ಕಾಲೇಜುಗಳಲ್ಲಿ ೪೮೦ ಮಂದಿ ವಿದೇಶಿಯರು ಶಿಕ್ಷಕರಾಗಿ ಕೆಲಸಮಾಡುತ್ತಿರುವರು. ಅವರಲ್ಲಿ ಭಾರತೀಯರೂ ಸೇರಿಕೊಂಡು ೧೭ ರಾಷ್ಟ್ರೀಯರಿರುವರು.

೧೯೫೫ರ ನವೆಂಬರ್ ೪ರ ಪರಿಷ್ಕೃತ ಸಂವಿಧಾನದ ಪ್ರಕಾರ ಇಥಿಯೋಪಿಯಾವು ಸಾಂಕುಶ ಪ್ರಭುತ್ವವಾಗಿರುವುದು. ಪ್ರಭುತ್ವಕ್ಕೆ ಸಹಾಯಕವಾಗಿ ಮಂತ್ರಿಪರಿಷತ್ತೂ ಎರಡು ಮನೆಗಳ ಪಾರ್ಲಿಮೆಂಟ್ ಸಭೆಯೂ ಇರುವುದು. 'ಜೆಸ್ಟಿನಿಯನ್' ನಿಯಮದ ಪ್ರಕಾರ ನ್ಯಾಯಾಂಗ ವ್ಯವಸ್ಥೆಯಿರುವುದು.

ಇಡೀ ದೇಶವನ್ನು ೧೨ ಪ್ರಾಂತಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ಪ್ರಾಂತದಲ್ಲಿಯೂ ಒಬ್ಬೊಬ್ಬ ರಾಜ್ಯಪಾಲರಿರುವರು. ಎಲ್ಲಾ ಸರ್ಕಾರಿ ಕೆಲಸಗಳೂ ಕೇಂದ್ರ ಸರ್ಕಾರದ ಜವಾಬ್ದಾರಿಗೆ ಸೇರುವುದು. ಆದರೆ, ಏರಿಟ್ರಿಯಾದ ಒಳಾಡಳಿತ ವಿಷಯ ಇದರಲ್ಲಿ ಸೇರುವುದಿಲ್ಲ. [ಏರಿಟಿಯಾವು ೧೮೯೦ ರಿಂದ ಇಟಾಲಿಯನ್ನರ ಅಧೀನದಲ್ಲಿತ್ತು. ೧೯೫೨ರ ಸೆಪ್ಟಂಬರ್ ೧೫ ರಂದು, ೧೯೫೦ರ ಡಿಸೆಂಬರ್‌ನಲ್ಲಿ ಸಂಯುಕ್ತ ರಾಷ್ಟ್ರವು ಅನುಮೋದಿಸಿದ ನಿರ್ಣಯಾನುಸಾರ ಅದು ಇಥಿಯೋಪಿಯಾ ಒಕ್ಕೂಟಕ್ಕೆ ಸೇರಿಕೊಂಡಿತು. ಇದು ಇಥಿಯೋಪಿಯಾಕ್ಕೆ ಅಸ್ಸಾಬ್ ಮತ್ತು ಮಸ್ಸಾವ ಕೆಂಪುಸಮುದ್ರದ ಬಂದರುಗಳನ್ನು ಮರಳಿದೊರಕಿಸಿತು] 'ಛೇಂಬರ್ ಆಫ್ ಡೆಪ್ಯುಟೀಸ್'ನ ಸದಸ್ಯರು, ಮತ್ತು ಪಾರ್ಲಿಮೆಂಟಿನ ಕೆಳಮನೆಯ ಸದಸ್ಯರು ಚುನಾವಣೆಯಲ್ಲಿ ಆರಿಸಿ ಬರುವರು. ಸೆನೆಟ್ ಸದಸ್ಯರು ಪ್ರಾಂತಗಳ ಗವರ್ನರ್, ನ್ಯಾಯಾಧೀಶರು—ಇವರನ್ನು ಚಕ್ರವರ್ತಿಗಳೇ ಮಂತ್ರಿ ಪರಿಷತ್ತಿನ ಸಲಹೆಯನ್ನು ಪಡೆದು ನೇಮಿಸುವರು.

ಇಥಿಯೋಪಿಯಾದ ರಾಷ್ಟ್ರ ಧ್ವಜವು, ಹಸಿರು, ಹಳದಿ ಮತ್ತು ಕೆಂಪು ವರ್ಣಗಳನ್ನು ಹೊಂದಿದ್ದು, ಸಮತಲವಲ್ಲಿರುವುದು. ಅಂಹರಿಕ್ ಮತ್ತು ಇಂಗ್ಲೀಷ್ ಇಲ್ಲಿನ ಅಧಿಕೃತ ಭಾಷೆಯಾಗಿರುವುದು. ಇಥಿಯೋಪಿಯನ್ ಹೊಸ ಡಾಲರಿನಲ್ಲಿ ೧೦೦ ಸೆಂಟ್ಸ್‌ಗಳಿರುವುದು. ಇಥಿಯೋಪಿಯನ್ ೧೦೦ ಸೆಂಟ್ಸಗಳು ಅಮೇರಿಕದ ೪೦ ಸೆಂಟ್ಸ್‌ಗಳಿಗೆ ಸಮವಾಗಿರುವುದು. ೧೯೪೫ರ ಜುಲೈ ೨೫ರಂದು ಈ ನಾಣ್ಯ ಪದ್ಧತಿಯನ್ನು ಆಚರಣೆಗೆ ತರಲಾಯಿತು. ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ ಪದ್ಧತಿಯನ್ನು ಅಧಿಕೃತವಾಗಿ ಆಚರಿಸಲಾಗುತ್ತಿದೆ.

ಇಥಿಯೋಪಿಯಾ ಗಡಿಗಳಲ್ಲಿ ಸೂಡಾನ್, ಕೆನ್ಯಾ, ಸಂಯುಕ್ತ ರಾಷ್ಟ್ರದ ಧರ್ಮದರ್ಶನದಲ್ಲಿರುವ ಸೋಮಾಲಿಯಾ ಪ್ರದೇಶ ಹಾಗೂ ಬ್ರಿಟಿಷ್ ಮತ್ತು ಫ್ರೆಂಚ್ ಸೋಮಾಲಿ ಲ್ಯಾಂಡ್ಸ್‌ಗಳು ಇರುವುವು. ಇದರ ವಿಸ್ತೀರ್ಣ ೩೫೦,೦೦೦ ಚದರ ಮೈಲುಗಳ. ೧೯೫೫ರ ಅಧಿಕೃತ ಅಂದಾಜಿನ ಪ್ರಕಾರ, ಇಥಿಯೋಪಿಯಾದ ಜನಸಂಖ್ಯೆ ೧೫೦ ಲಕ್ಷ. ಇಲ್ಲಿಯ ಪ್ರಮುಖ ಜನಾಂಗ 'ಅಂಹಾರ'. ಅವರ ಸಂಖ್ಯೆ ಸುಮಾರು ೨೦ ಲಕ್ಷ. ಅವರು ಮಧ್ಯ ಇಥಿಯೋಪಿಯನ್ ಪ್ರಸ್ಥ ಭೂಮಿಗಳ ನಿವಾಸಿಗಳು. ಇನ್ನುಳಿದ ಮುಖ್ಯ ಜನಾಂಗಗಳೆಂದರೆ:—ಗಲ್ಲಾ ಜನಾಂಗ. ಅವರ ಸಂಖ್ಯೆ ಒಟ್ಟು ಜನಸಂಖ್ಯೆಯಲ್ಲಿ ಸೇಕಡಾ ಒಂದೂವರೆಯಷ್ಟಕ್ಕಿಂತ ತುಸು ಹೆಚ್ಚಾಗಿರುವುದು.

ಅಡೀಸ್ ಅಬಾಬ ಇಥಿಯೋಪಿಯಾದ ಮುಖ್ಯ ಪಟ್ಟಣ. ಇದರ ಜನಸಂಖ್ಯೆ ಸುಮಾರು ೪,೦೦,೦೦೦. ಇದು ಈ ದೇಶದ ಮುಖ್ಯ ಸಾಂಸ್ಕೃತಿಕ ಕೇಂದ್ರ. ಅಸ್ಮರಾ ಏರಿಟ್ರಿಯಾದ ರಾಜಧಾನಿ. ಇಥಿಯೋಪಿಯಾದಲ್ಲಿ ಎರಡನೆಯ ದೊಡ್ಡ ನಗರವಿದು. ಈ ನಗರದ ಜನಸಂಖ್ಯೆ ೧,೨೦,೦೦೦.

ಇಥಿಯೋಪಿಯಾವು ಪ್ರಾಕೃತಿಕ ಸಂಪತ್ತುಗಳ ವಿಚಾರದಲ್ಲಿ ಸಂಪದ್ಯುಕ್ತವಾಗಿವೆ. ಸಮುದ್ರ ಮಟ್ಟಕ್ಕೆ ೬೦೦೦ ಅಡಿಗಳ ಎತ್ತರದಲ್ಲಿ ಕಾನಾ ಸರೋವರದಲ್ಲಿ ಹುಟ್ಟುವ ಅಬ್ಬೈ ಅಥವಾ ಬ್ಲೂ ನೈಲ್ ನದಿಯು ಸೂಡಾನನ್ನು ಸಮುದ್ರ ಮಟ್ಟಕ್ಕೆ ೫೨೦ ಅಡಿಗಳ ಎತ್ತರದಲ್ಲಿ ಪ್ರವೇಶಿಸುವುದು. ಈ ನದಿಯು ಜಗತ್ತಿನ ಅತ್ಯಂತ ಹೆಚ್ಚಿನ ಪ್ರಾಕೃತಿಕ ವಿದ್ಯುಚ್ಛಕ್ತಿ ಸಂಪತ್ತನ್ನು ಒದಗಿಸುವುದು. ಅಡಿಸ್ ಅಬಾಬಾ ನಗರಕ್ಕೆ ದಕ್ಷಿಣದಲ್ಲಿರುವ ಕೋನಾದಲ್ಲಿ

(೧೨ನೇ ಪುಟ ನೋಡಿರಿ)

**ಹೊಸ ಸುದ್ದಿ**

"ಭದ್ರತೆಯ ಬೇಂಕಿಂಗ್ ವ್ಯವಹಾರ"

"ಮೆಚ್ಚುಗೆಯ ಜನರ ಸಹಕಾರ"

"ರಾಷ್ಟ್ರಾಭ್ಯುದಯಕ್ಕೊಂದು ಉಪಕಾರ"

**ಬೇಂಕಿಂಗ್ ಕ್ರಮದಲ್ಲಿ ಅತ್ಯುತ್ತಮ ಅನುಕೂಲತೆ**

ಒದಗಿಸಿಕೊಡುವ ಸರ್ವವಿದಿತ ಸೇವಾಕಾರ್ಯದ ಸಾಧನೆಗಾಗಿ—

ಇನ್ನೂ ಮೂರು ಹೊಸ ಶಾಖೆಗಳು

**ಹೈದರಾಬಾದ್** (ದಕ್ಷಿಣ)

**ಗುಲ್ಬರ್ಗ** (ನವ ಮೈಸೂರು ರಾಜ್ಯದ ಗುಲ್ಬರ್ಗ ಜಿಲ್ಲೆಯಲ್ಲಿ) ಮತ್ತು

**ಉರುವಕೊಂಡ** (ಆಂಧ್ರ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ)

**ಶೀಘ್ರದಲ್ಲೇ ತೆರೆಯಲ್ಪಡುವುವು**

**ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.**

**The Canara Industrial & Banking Syndicate Ltd.**

H. O. UDIPI (S. I.)

# ರಾಜ್ಯ ವ್ಯವಹಾರದಲ್ಲಿ ಸಚ್ಛೀಲದ ಪಾತ್ರ

ಸರಕಾರವು ಒಳ್ಳೆಯ ಶೀಲದಿಂದ ಕೂಡಿರಬೇಕೆಂಬುದೇ ಪ್ರಜೆಗಳೆಲ್ಲರ ಇಚ್ಛೆಯಾಗಿದೆ. ಈ ಶೀಲವೇ ಜೀವ. ಇಲ್ಲದ ವಿವಿಧ ವಿದ್ವತ್ತಾಗಲೀ ಸಂಪತ್ತಾಗಲೀ ಹೆಣಕ್ಕೆ ತೊಡಿಸಿದ ರತ್ನಾಭರಣಗಳಂತೆ ಅರ್ಥಶೂನ್ಯ ಮತ್ತು ಅಪಹಾಸ್ಯಕರ!

**ಬರೆದವರು: ಜಿ. ಆರ್. ಪಾಂಡೇಶ್ವರ.**

ಕನ್ನಡಿಗರು ಹೊಸ ರಾಜ್ಯದ ಹೊಸ್ತಿಲಲ್ಲಿ ಕಾಲಿಡುತ್ತಿರುವ ಈ ಶುಭೋದಯದಲ್ಲಿ ಮಾನ್ಯ ಸಂಪಾದಕರು ನನ್ನಿಂದೊಂದು ಲೇಖನವನ್ನು ಬಯಸಿದ್ದಾರೆ. ಜನ್ಮಜಿಲ್ಲೆಯನ್ನು ತೊರೆದು, ೨೦ ವರ್ಷಕ್ಕೆ ಮೇಲ್ಪಟ್ಟು, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಹೃದಯ ಸ್ಥಾನದಂತಿರುವ ಹುಬ್ಬಳ್ಳಿ—ಧಾರವಾಡ ಪ್ರದೇಶದಲ್ಲಿ ನೆಲಸಿ, ಮೂರು ನಾಲ್ಕು ದಿನ ಪತ್ರಿಕೆ—ವಾರ ಪತ್ರಿಕೆಗಳ ಸಂಪಾದಕೀಯ ಕಾರ್ಯವನ್ನು ಮಾಡಿ, ಅಲ್ಲಿನ ಎಲ್ಲ ಮುಖಂಡರ ಸಂಪರ್ಕವನ್ನೂ ಪಡೆದವನು; ಹಾಗೆಯೇ ಸಾಹಿತ್ಯದಲ್ಲಿಯೂ ಕಾರ್ಯಗೈದು ಸಾಹಿತಿಗಳೊಡನೆಯೂ ಸ್ನೇಹದಿಂದ ಬೆರೆದವನು; ಇಷ್ಟೇ ಅಲ್ಲದೆ, ಎರಡು ವರ್ಷಕಾಲ ಕರ್ನಾಟಕ ಪ್ರಾಂತಿಕ ಹರಿಜನ ಸೇವಕ ಸಂಘದ ಕಾರ್ಯದರ್ಶಿಯಾಗಿಯೂ, ನೂರಾರು ಊರುಗಳ ನೂರಾರು ಸಾರ್ವಜನಿಕ ಸಭೆಗಳಲ್ಲಿ ಉಪನ್ಯಾಸ ಮಾಡಿಯೂ ಸಾಮಾನ್ಯ ಜನತೆಯ ಗುಣದೋಷಗಳ ತಕ್ಕಮಟ್ಟಿನ ಪರಿಜ್ಞಾನಗಳಿಸಿದವನು. ಈ ಎಲ್ಲ ಕಾರಣಗಳಿಂದಾಗಿ ಹಳೆಯ ಗೆಳೆಯರಾದ ಸಂಪಾದಕರು ನನ್ನ ಲೇಖನಿಯನ್ನು ಅಲುಗಾಡಿಸುವಂತೆ ಪ್ರೇರಿಸಿರಬೇಕು!

ಲೇಖನಿಯ ಮಾತೆತ್ತುತ್ತಲೇ ರಾಮಾಯಣದ ವಸಿಷ್ಠ—ವಿಶ್ವಾಮಿತ್ರರ ತಿಕ್ಕಾಟದ ಕತೆಯೊಂದು ನೆನಪಿಗೆ ಬರುತ್ತದೆ—ರಾಜನಾದ ವಿಶ್ವಾಮಿತ್ರನು ವಸಿಷ್ಠಾಶ್ರಮಕ್ಕೆ ಬರುತ್ತಾನೆ; ಆವನ ಸಕಲ ಪರಿವಾರಕ್ಕೂ ವಸಿಷ್ಠರು ತಮ್ಮಲ್ಲಿಯ ಕಾಮಧೇನುವಿನ ಕೃಪಾಕಟಾಕ್ಷದಿಂದ ಬಗೆಬಗೆಯ ಊಣಿಸು ತಿನಿಸುಗಳನ್ನೊದಗಿಸಿಕೊಡುತ್ತಾರೆ! ಈ ಅದ್ಭುತವನ್ನು ಕಂಡು ವಿಶ್ವಾಮಿತ್ರನು ವಿಸ್ಮಯಗೊಂಡು, "ಯಾವ ಶಕ್ತಿಯ ಪ್ರಭಾವದಿಂದ ಇದನ್ನೆಲ್ಲ ಮಾಡಿದಿರಿ?" ಎಂದು ಕೇಳುತ್ತಾನೆ. ತಮ್ಮ ಪಕ್ಕದಲ್ಲಿ ಮೆಲುಕಾಡುತ್ತ ನಿಂತಿದ್ದ ಕಾಮಧೇನುವನ್ನು ತೋರಿ, "ಇದೋ ಈ ಪುಣ್ಯವಸ್ತು ಸಕಲವನ್ನೂ ನೀಡಿತು!" ಎಂದು ವಸಿಷ್ಠರು ಉತ್ತರಿಸುತ್ತಾರೆ! ಕೂಡಲೇ ವಿಶ್ವಾಮಿತ್ರನ ದೃಷ್ಟಿ ಆದರ ಮೇಲೆ ಬೀಳುತ್ತದೆ. ತನಗೆ ಈ ಧೇನುವನ್ನು ಕೊಟ್ಟರೆ, ತನ್ನ ರಾಜಸ್ಥಾನದಲ್ಲೊಂದು ಅದ್ಭುತ ರತ್ನವು ಮಿನುಗುತ್ತಿರುವಂತಾಗುವುದು, ಅದ್ದರಿಂದ ತನಗದನ್ನು ಕೊಡಬೇಕು—ಎಂದು ಆತನು ಕೇಳುತ್ತಾನೆ. ಹಾಗೂ, ಅದರ ಬದಲಿಗೆ, ಸುವರ್ಣಾಲಂಕೃತವಾದ ಮತ್ತು ಕೊಡಗಟ್ಟಲೆ ಹಾಲು ಹಿಂಡುವ ಕೋಟಿ ಧೇನುಗಳನ್ನು ವಸಿಷ್ಠಾಶ್ರಮಕ್ಕೆ ಹೊಡೆದಟ್ಟುವುದಾಗಿಯೂ, ಅವುಗಳ ಸಾಕಣೆಗೆ ಬೇಕಾಗುವ ಆಳು ಕಾಳುಗಳನ್ನು ಹೇರಳವಾಗಿ ಒದಗಿಸುವುದಾಗಿಯೂ ಹೇಳುತ್ತಾನೆ. ಸಾತ್ವಿಕ ಮೂರ್ತಿಯಾದ ವಸಿಷ್ಠರು ಮುಗುಳ್ನಗೆ ನಗುತ್ತ, "ರಾಜ! ಈ ಧೇನುವಿನ ಮಹತ್ವವನ್ನು ನೀನರಿಯೆ; ಅದರ ಅದ್ಭುತವೂ ಅಗ್ರಾಹ್ಯವೂ ಆದ ಶಕ್ತಿಯನ್ನು ನೀನು ತಿಳಿದಿಲ್ಲ.

"ಏತದೇವ ಹಿ ಮೇ ರತ್ನಂ, ಏತದೇವ ಹಿ ಧನಂ। ಏತದೇವಹಿ ಸರ್ವಸ್ವಂ ಏತದೇವಹಿ ಜೀವಿತಂ ॥ ಅತೋ ಮೂಲಾಃ ಕ್ರಿಯಾಃ ಸರ್ವಾ ಮಮರಾಜಾನ ಸಂಶಯಃ। ಬಹೂನಾಂ ಕಿಂ ಪ್ರಲಾಪೇನ ನದಾಸ್ಯೇ ಕಾಮದೋಹಿನೀಂ ॥ ಇದು ನನ್ನ ರತ್ನ, ನನ್ನ ಧನ, ನನ್ನ ಸರ್ವಸ್ವ, ನನ್ನ ಜೀವಿತ. ನನ್ನ ಸರ್ವ ಕಾರ್ಯಗಳಿಗೂ ಇದೇ ಮೂಲ ಹೆಚ್ಚು ಹೇಳಲೇಕೆ? ಇದನ್ನು ನಾನು ಕೊಡಲಾರೆ." ಎಂದು ಹೇಳಿಬಿಡುತ್ತಾರೆ. ಭೌತಿಕ ಜನ—ಧನ, ಕೀರ್ತಿ—ಪ್ರಚಾರಗಳ ಬೆಂಬಲವುಳ್ಳ ವಿಶ್ವಾಮಿತ್ರ ರಾಜನು ಬಲಾತ್ಕಾರದಿಂದ ಆ ಧೇನುವನ್ನು ವಶಪಡಿಸಲು ಯತ್ನಿಸುತ್ತಾನೆ. ಆದರೆ, ವಸಿಷ್ಠರ ಅನುಮತಿಯಿಂದ ಆ ಧೇನುವು ಹೂಂಕರಿಸುತ್ತಲೇ ಅದರ ರೋಮ ರೋಮಗಳಿಂದ ಅಸಂಖ್ಯಾತ ಯೋಧರೂ ಮಂತ್ರಾಸ್ತ್ರಗಳೂ ಹುಟ್ಟಿ, ವಿಶ್ವಾಮಿತ್ರನ ಸರ್ವ ಭೌತಬಲವನ್ನೂ ಮಣ್ಣು ಮುಕ್ಕಿಸುತ್ತದೆ! ವಿಶ್ವಾಮಿತ್ರನಿಗೆ ಜ್ಞಾನೋದಯವಾಗಿ, ವಸಿಷ್ಠರಿಗೆ ಶರಣಾಗತನಾಗಿ, "ಪೂಜ್ಯರೆ, ಈ ಧೇನುವನ್ನು ತಾವು ಹೇಗೆ ಪಡೆದಿರಿ? ನನಗೂ ಅಂತಹದೊಂದನ್ನು ಪಡೆಯುವ ಇಚ್ಛೆಯಾಗಿದೆ." ಎನ್ನುತ್ತಾನೆ. "ಅಯ್ಯಾ, ದೊರೆಯೇ! ತಪಶ್ಶಕ್ತಿಯಿಂದ ನಾನಿದನ್ನು ಪಡೆದೆನು. ಸಕಲ ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು, ಲೋಕಕಲ್ಯಾಣವೊಂದನ್ನೇ ಬಯಸಿ ನಾನು ತಪಸ್ಸು ಮಾಡಿದ್ದರಿಂದ ಈ ಧೇನುವನ್ನು ದೇವದೇವನು ದಯಪಾಲಿಸಿದನು." ಎಂದು ವಸಿಷ್ಠರು ತಿಳಿಸುತ್ತಾರೆ. ಅಂದಿನಿಂದ ವಿಶ್ವಾಮಿತ್ರ ರಾಜನು, ಭೌತಭಾಗ್ಯದ ಅಲ್ಪತೆಯನ್ನು ಮನಗಂಡು, ದಿವ್ಯ ಶಕ್ತಿಯ ತಪಸ್ಸು ಮಾಡಲು ಸುರು ಮಾಡಿ, ಕೊನೆಗೆ ಮಹಾಋಷಿಯಾಗಿ, ಹೊಸದೊಂದು ಲೋಕವನ್ನೇ ನಿರ್ಮಾಣ ಮಾಡಬಲ್ಲ ಸಾಮರ್ಥ್ಯವನ್ನು ಗಳಿಸುತ್ತಾನೆ.

ಈ ಕತೆ ಹಳತಾದರೂ ಎಂದೆಂದಿಗ[ೂ] ಹಳತಾಗದ ಮಹಾ ಸತ್ಯವೊಂ[ದು] ಅದರ ಸರ್ವಾಂಗವನ್ನೂ ತುಂಬಿ ತುಳು[ಕು]ಅದಕ್ಕೊಂದು ಚಿರ ತಾರುಣ್ಯವನ್ನು ಕೆ[ೊ]ಡುತ್ತಿದೆ. ಸರ್ವ ಜಗತ್ತನ್ನೂ ನಿಮಿ[ಷ]ಮಾತ್ರದಲ್ಲಿಯೇ ನಾಶಮಾಡುವ ಅ[...] ಶಕ್ತಿಯ ಕಾಮಧೇನುವನ್ನು ಇಂದಿನ [...] ಜ್ಞಾನಿಗಳು ತಮ್ಮ ತಪಸ್ಸಿನಿಂದ ಸ್ವ[...]ತಾಡಿಕೊಟ್ಟಿದ್ದಾರೆ. ಆ ಶಕ್ತಿಯ ಸದು[...] ಯೋಗದಿಂದ ಜಗತ್ತಿನ ದುಃಖ ದಾರಿದ್ರ[್ಯ]ಗಳನ್ನೆಲ್ಲ ಹೊಡೆದೋಡಿಸಲೂ ಸಾ[ಧ್ಯ]ವಿದೆ. ಹಾಗೆಯೇ ಸರಕಾರವೆ[ಂಬ] ಕಾಮಧೇನುವನ್ನು ಕಟ್ಟಿ ಸಾಕುವ ವ[್ಯ]ಕ್ತಿಗಳು ವಸಿಷ್ಠನಂತಹ ಲೋಕ ಹಿ[ತೇ]ಚ್ಛುಗಳಾಗಬೇಕು. ಅವರಿಗೆ ತಮ್ಮ ಸ[...]ಳಕ್ಕಿಂತ ಹೆಚ್ಚಿನ ಬೇರಾವ ಸ್ವಾರ್ಥಕ[್ಕೂ] ಅವಕಾಶ ಇರಬಾರದು ಭಾರತದ ಧವ[...] ರಾಯನು ತನ್ನನ್ನು ಹಿಂಬಾಲಿಸಿ ಬಂದಿ[ದ್ದ] ನಾಯಿಗೆ ಪ್ರವೇಶಕೊಟ್ಟ ಹೊರತು [...]ನು ಒಳಗೆ ಬರಲಿಚ್ಛಿಸೆನೆಂದು ಸ್ವರ್ಗಾ[...]ಪತಿಗೆ ತಿಳಿಸಿದನೆಂದು ಭಾರತವು ಹೇ[ಳು]ತ್ತದೆ. ನಮ್ಮ ರಾಷ್ಟ್ರದ ಪ್ರತಿಯೊಂ[ದು] ವ್ಯಕ್ತಿಗೂ ಸ್ವಂತ ಹೊಲ ಮನೆ, ಹಾ[...] ಧೈರ್ಯದಿಂದಲೂ ಸಮಾನತೆಯಿಂದಲೂ [...]ಡೆನುಡಿಯುವ ಸ್ವಾತಂತ್ರ್ಯ—ದೊರೆ[ಯು]ವ ವರೆಗೆ ನಿಜವಾದ ದೇಶಭಕ್ತನಿಗೆ ಶಾ[ಂತಿ] ಇಲ್ಲ; ಅದು ಬರುವ ವರೆಗೆ ನಿಜವಾ[ದ] ಸ್ವರಾಜ್ಯ ಬಂದಂತಾಗದು. ಈ ಧ್ಯೇ[ಯ] ಎಲ್ಲಿಯ ವರೆಗೆ ಸರಕಾರವನ್ನು ನಡೆಸ[ುವ] ಮಂತ್ರಿಗಳಿಗೆ ಉಂಟಾಗುವುದಿಲ್ಲವೋ [ಅ]ಲ್ಲಿಯ ವರೆಗೆ ಜಾತಿ, ಮತ, ಪಕ್ಷ, ಪ[ಂ]ಡಗಳನ್ನು ಒಲಿಸುವ ಸ್ಪರ್ಧಾ ಬುದ್ಧಿ [...] ದೂರಾಗಲಾರದು.

ಪೂಜ್ಯ ಗಾಂಧೀಜಿಯವರು ತ[ಮ್ಮ] "ಹರಿಜನ" ಪತ್ರಿಕೆಯಲ್ಲಿ, ಮಂತ್ರಿ[ಗಳು] ಹೇಗಿರಬೇಕು? ಅವರು ನೇಮಿಸುವ [ಅಧಿ]ಕಾರಿಗಳು ಎಂಥವರಿರಬೇಕು? ಸರಕಾ[ರದ] ಉದ್ದೇಶವೇನು? ಎಂಬ ಬಗ್ಗೆ ಸಾಯ[ುವ] ತನಕವೂ ಲೇಖನ ಬರೆದರು. ಆನೆ[...] ಪ್ರಾಂತ್ಯಗಳಲ್ಲಿಂದು ನಡೆಯುವ [...] ಹೇಗಿದೆ? ಮಂತ್ರಿ ಸ್ಥಾನ, ಮು[ಖ್ಯ]ಮಂತ್ರಿ ಸ್ಥಾನ, ಶಾಸನ ಸಭಾ ಸ[ದಸ್ಯ] ಸ್ಥಾನ— ಇವುಗಳಿಗಾಗಿ ದಿನೇ [ದಿನೇ] ಎಂತೆಂತಹ ಕುಟಿಲ ಕಾರಸ್ಥಾನಗಳು [ನಡೆ]ಯುತ್ತಿವೆಂಬುದನ್ನು "ಪ್ರೆಸ್ ಟ್ರ[ಸ್ಟ್] ಆಫ್ ಇಂಡಿಯಾ"ದಂತಹ ಜವಾಬ[್ದಾರಿಯುತ] ಸುದ್ದಿ ಸಂಸ್ಥೆಗಳೇ ಡಂಗುರ ಸಾರುತ್ತಿ[ವೆ]. ಅಂತಹ ಸ್ಪರ್ಧೆಗೂ ಗಾಂಧೀ [...]ಕ್ಕೂ ಎಣ್ಣೆ—ಸೀಗೆಗಳಿಗಿರುವಷ್ಟು ವೈ[ರ...] ವಿಷ. ಹೀಗೆ ಮಾಡಿ ಅಧಿಕಾರಕ್ಕೆ [...]ವುದು ನಾಚಿಕೆಗೇಡು; ಶೀಲಭ್ರಷ್ಟ[...] ಸೇವಾಕಾಂಕ್ಷೆಯ ಬಡವನು ಚು[...]ವಣೆಗೆ ನಿಲ್ಲುವುದೂ, ನಿಂತು ಆರಿಸಿ [ಬರು]ವುದೂ ದುಸ್ತರವಾಗುತ್ತಿದೆ— ಎ[...] ಮೇಲೆ ಕಳೆದ ೬ ವರ್ಷದ ಸ್ವರಾಜ್ಯದ[ಲ್ಲಿ] ನಾವು ಯಾವ ಬಗೆಯ ಧ್ಯೇಯ ನಿ[...] ಮತ್ತು ನೈತಿಕ ನಾಗರಿಕತೆಯತ್ತ ಸಾ[ಗು]ತ್ತಿದ್ದೇವೆಂದು ಬೇರೆ ಹೇಳಬೇಕೆ?

ಶೀಲವೆಂದರೇನು? ಅಂಗಡಿಯ[ಲ್ಲಿ] ಕೊಂಡುಕೊಳ್ಳುವ ವಸ್ತುವಲ್ಲ; ಉಪನ[್ಯಾ]ಸಗಳಲ್ಲಿ ಬಡವರ ಬಗ್ಗೆ ಅತುಳ ಸವಿ[...]ತಿನ ಸೋಗಿನ ವಸ್ತುವಲ್ಲ. "ಸಾರ್ವಜನಿಕ] ಕ ಸೇವೆಯೇ ನನ್ನ ಸರ್ವಸ್ವ; ಸ[...] ಜನವೂ ನನ್ನ ಅಣ್ಣ ತಮ್ಮಂದಿರು, ಅ[...]

(೧೧ನೇ ಪುಟ ನೋಡಿರಿ)



ಹಳೆಬೀಡು ದೇವಸ್ಥಾನದ ಗೋಡೆಗಳಲ್ಲಿಯ ಅತ್ಯಂತ ಸುಂದರವಾದ ಕೆತ್ತನೆ ಕೆಲಸವನ್ನು ಮೇಲಿನ ಚಿತ್ರದಲ್ಲಿ ನೋಡಬಹುದು

(ಚಿತ್ರವನ್ನು ... ಸರಕಾರದ ... ಕೃಪೆಯಿಂದ)

# ಶಿಲ್ಪ ಸೃಷ್ಟಿ

## ಉಜ್ವಲವಾದ ನಮ್ಮ ಶಿಲ್ಪಕಲೆಯನ್ನು ಇನ್ನು ಮುಂದೆಯೂ ಅಭಿವೃದ್ಧಿ ಪಡಿಸಬೇಕು—ಅದು ನಮ್ಮ ಕರ್ತವ್ಯ

ಕಲೆಯನ್ನು ಬಿಟ್ಟು ಜೀವನವಿಲ್ಲ; ಜೀವನವನ್ನು ಬಿಟ್ಟು ಕಲೆಯಿಲ್ಲ. ಆದರೆತೂ ಅನ್ಯೋನ್ಯಾವಲಂಬನಾಯುತ್ತಗಳು! ಮಾನವ ಜೀವನದಲ್ಲಿ ಕಲೆಯು ಹಾಸು ಹೊಕ್ಕಾಗಿ ಬೆರೆತುಕೊಂಡಿದೆ. ಒಬ್ಬ ವ್ಯಕ್ತಿಯಾಗಲಿ, ಒಂದು ಜನಾಂಗವಾಗಲಿ, ಅಥವಾ ಒಂದು ರಾಷ್ಟ್ರವೇ ಆಗಲಿ, ಪ್ರಖ್ಯಾತಿಯ ಶಿಖರವನ್ನು ಹತ್ತಬೇಕಾದರೆ ಅಲ್ಲಿ ಕಲೆಯು ಕಳಾಮಯವಾಗಿ ಬೆಳಗುತ್ತಿರಬೇಕು. ಇಂದು ಗ್ರೀಕರನ್ನು ನಾವು ಸ್ಮರಿಸುವುದಾದರೆ ಅದು ಅವರ ರಾಜಕೀಯ ವ್ಯವಸ್ಥೆಗಾಗಿ ಅಲ್ಲ; ಪ್ರಾಕ್ಸಿಟೆಲಿಸನಂತಹ ಶಿಲ್ಪಿವರ್ಯರು 'ಸೊಪೋಕ್ಲೀಸ'ನಂತಹ ಸುರಿತ ನಾಟ್ಯಗಾರರು ಅಲ್ಲಿ ಜನಿಸಿ ತಮ್ಮ ಅಮೋಘ ಕಲಾನೈಪುಣ್ಯದಿಂದ ಜಗತ್ತನ್ನೇ ಬೆರಗುಗೊಳಿಸಿದರು ಎಂಬುದಕ್ಕಾಗಿ! ಬ್ರಿಟಿಷರ ಗತವೈಭವವನ್ನು ನಾವು ನೆನೆಯುವುದಿದ್ದರೆ ಆ ಕೀರ್ತಿ 'ಷೇಕ್ಸ್‌ಪಿಯರ್', 'ಷೆಲ್ಲಿ' 'ವರ್ಡ್ಸ್‌ವರ್ತ್', 'ಬೈರನ್', 'ಟರ್ನರ'ರಂತಹ ಕಲಾಪುತ್ರರಿಗೆ ಸಲ್ಲಬೇಕು. ಅಂತೆಯೇ ಅದೊಂದು ಕಾಲದಲ್ಲಿ ನಮ್ಮ ಭಾರತ ದೇಶವು ಕೀರ್ತಿಯ ಮೂರ್ತಿಯೆನಿಸಿ ಸ್ಫೂರ್ತಿಯ ಕಿಡಿಗಳನ್ನು ಪಸರಿಸಿದ್ದರೆ ಆ ಮಹಾ ಯಶಸ್ಸು 'ಕಾಳಿದಾಸ' 'ಅಮರ' 'ವರಾಹಮಿಹಿರ'ರಂತಹ ವಿದ್ವನ್ಮಣಿಗಳಿಗೂ ಅಜಂತ, ಎಲ್ಲೋರ, ಆಗ್ರಾಗಳಂತಹ ಕಲಾಗಾರಗಳಲ್ಲಿ ತಮ್ಮ ಹೃದಯದಲ್ಲಿ ಹುದುಗಿದ್ದ ಭಾವನಾಝರಿಯನ್ನು ಕಲೆಯ ಪೋಷಿನಲ್ಲಿ ಸಮಾಜಕ್ಕೆ ಧಾರೆಯೆರೆದ ಕಲಾಪ್ರೇಮಿಗಳಿಗೂ ದೊರೆಯಬೇಕು!

ಹೀಗೆ ಎಲ್ಲೆಲ್ಲೂ ಕಲೆಯ ಪ್ರಭಾವವೂ ಮಹತ್ವವೂ ಒಡೆದು ಕಾಣುತ್ತದೆ. ಆದುದರಿಂದಲೇ ನಾವು ನಮ್ಮ ದೇಶದ ವಿಶಿಷ್ಟ ಕಲೆಗಳ ಕುರಿತು ಚೆನ್ನಾಗಿ ಪರ್ಯಾಲೋಚಿಸಿ ಅವುಗಳ ಅಭಿವೃದ್ಧಿಗೆ ಆವಶ್ಯವಿರುವ ಅನುಕೂಲತೆಗಳಿಗೆ ಅನುವು ಮಾಡಿಕೊಡುವುದು ಅತೀ ಅಗತ್ಯ. ಪ್ರಕೃತ ನಮ್ಮ ದೇಶದ ಶಿಲ್ಪಕಲೆಯ ಸ್ಥಿತಿಗತಿಗಳ ಕುರಿತು ವಿಚಾರಿಸೋಣ!

ಕ್ರಿ. ಪೂ. ಮೂರು ಸಾವಿರ ವರ್ಷಗಳ ಹಿಂದೆಯೇ ಭಾರತೀಯರು ಶಿಲ್ಪಕಲೆಯಲ್ಲಿ ಪ್ರವೀಣತೆಯನ್ನು ಪಡೆದಿದ್ದರೆಂಬುದಕ್ಕೆ 'ಮೊಹೆಂಜೋದಾರೋ'ವಿನಲ್ಲಿ ಕಂಡುಬಂದಿರುವ ಮನೆಮಂದಿರಗಳ ಅವಶೇಷಗಳೂ ಕೋಟೆಕೊತ್ತಲಗಳೂ ಸಾಕ್ಷಿಗಳಾಗಿವೆ ಆದರೂ ಮುಖ್ಯವಾಗಿ ಮೌರ್ಯ ಶ್ರೇಷ್ಠನಾದ ಅಶೋಕನ ಕಾಲದಿಂದ (ಕ್ರಿ. ಪೂ. 269—232) ಇಂಡಿಯದ ಶಿಲ್ಪಕಲೆಯ ಉದ್ಭವವಾಯಿತು ಎಂದು ಹೇಳಬಹುದು. ಅಶೋಕನು ಬೌದ್ಧ ಮತಾವಲಂಬಿಯಾಗಿದ್ದು ಬುದ್ಧನ ಹಾಗೂ ಅವನ ಶಿಷ್ಯರ ಅವಶೇಷಗಳನ್ನು ಹೂಳಿಟ್ಟು ಅದರ ಮೇಲೆ ಸುಂದರವಾದ ಸ್ತೂಪಗಳನ್ನು ಕಟ್ಟಿಸಿದನು. ಅವನ ಕಾಲದಲ್ಲಿಯೇ ಮನೋಹರವಾದ ಚೈತ್ಯಗಳೂ ವಿಹಾರಗಳೂ ರಚಿಸಲ್ಪಟ್ಟವು. ಅಶೋಕನು ಧರ್ಮಪ್ರಚಾರಕ್ಕಾಗಿ ಬೇರೆ ಬೇರೆ ಕಡೆಗಳಲ್ಲಿ ಶಿಲಾಸ್ತಂಭಗಳನ್ನು ಸ್ಥಾಪಿಸಿ ಅವುಗಳಲ್ಲಿ ತನ್ನ ಶಾಸನಗಳನ್ನು ಕೆತ್ತಿಸಿದನು. ಸ್ತಂಭಗಳ ತುದಿಯಲ್ಲಿ ಧರ್ಮಚಕ್ರ, ಸಿಂಹ, ಗಜ, ವೃಷಭಗಳೂ ಕೊರೆಯಲ್ಪಡುತ್ತಿದ್ದುವು. ಇವುಗಳೆಲ್ಲಾ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟ ಸಾರನಾಥದ ರಚನೆಯನ್ನು ನಮ್ಮ ಸ್ವತಂತ್ರ ಭಾರತದ ಮುದ್ರೆಗಾಗಿ ಈಗ ಉಪಯೋಗಿಸುತ್ತಿದ್ದಾರೆ. ಅಶೋಕನ ಕಾಲದ ಈ ಶಿಲ್ಪಕಲಾ ಕುರುಹುಗಳು ಈಗಲೂ ನೋಡುವವರ ಕಣ್ಮನಗಳನ್ನು ತುಂಬಿಸಿ, ಅಂದಿನ ಆ ಧರ್ಮ ಸಾಮ್ರಾಜ್ಯವನ್ನು ಬಿಂಬಿಸುತ್ತವೆ—ಎಂಬುದು ಪ್ರತಿಯೊಬ್ಬ ಸಂದರ್ಶಕನೂ ತಿಳಿದಿರುವ ವಿಚಾರ.

ಅಶೋಕನ ಅನಂತರ ಶಿಲ್ಪಕಲೆಗೆ ಬಹಳವಾಗಿ ಪ್ರೋತ್ಸಾಹವನ್ನಿತ್ತು ಅದರಲ್ಲಿ ಕೆಲವು ರೀತಿಯ ಸುಧಾರಣೆಗಳನ್ನು ಬಳಸಿಕೊಂಡವನು ಕುಶನರ ಸುಪ್ರಸಿದ್ಧ ರಾಜನಾದ ಕನಿಷ್ಕನು. ಅವನ ಕಾಲದಲ್ಲಿಯೇ ಭಾರತ ಮತ್ತು ಗ್ರೀಕ ವಾಸ್ತುಶಿಲ್ಪ ರಚನಾ ವಿಧಾನಗಳ ಸಂಮಿಲನದಿಂದ ಉಂಟಾದ ಗಾಂಧಾರ ಶಿಲ್ಪಕಲೆ ಪ್ರಚಾರಕ್ಕೆ ಬಂತು. 'ಮಹಾಯಾನಿ' (ಬೌದ್ಧರಲ್ಲಿ ಒಂದು ಹೊಸ ಪಂಗಡ)ಯಾಗಿದ್ದ ಕನಿಷ್ಕನೂ ಬುದ್ಧ ವಿಗ್ರಹಗಳನ್ನೂ ಜೀವನ ದೃಶ್ಯಗಳನ್ನೂ ಕಲ್ಲಿನಲ್ಲಿ ಕೊರೆಯಿಸಿ ದೇವಾಲಯಗಳಲ್ಲಿ ಅವುಗಳನ್ನು ಪ್ರತಿಷ್ಠಿಸಿದನು ಅವನು ತನ್ನ ರಾಜಧಾನಿಯಾದ ಪುಷ್ಪಪುರ (ಪೇಶಾವರ)ದಲ್ಲಿ ನಾನ್ನೂರು ಅಡಿ ಉನ್ನತವಿರುವ ಹದಿಮೂರು ಅಂತಸ್ತುಗಳುಳ್ಳ ಒಂದು ಗೋಪುರವನ್ನು ಕಟ್ಟಿಸಿದನು. ಮಥುರೆಯಲ್ಲೂ ಪುಷ್ಪಪುರದ ಸುತ್ತುಮುತ್ತಲೂ ಸುಂದರವಾದ ಸ್ತೂಪಗಳನ್ನೂ ದೇವಾಲಯಗಳನ್ನೂ ರಚಿಸಿದನು. ಇವು ಅಂದಿನ ಕಲಾವಿದರ ಕೈಚಳಕವನ್ನು ಕಂಡರಿಸಿ ಕಣ್ಣ ಮುಂದೆ ಕಾಣಿಸುತ್ತವೆ.

ಗುಪ್ತರೂ ಪಲ್ಲವರೂ ಶಿಲ್ಪ ಕಲೆಗೆ ಸ್ಮರಣೀಯ ಕೊಡುಗೆಯನ್ನು ಸಲ್ಲಿಸಿದ್ದಾರೆ. ಪಲ್ಲವರ ಕಾಲದಲ್ಲಿ ನಿರ್ಮಿತವಾದ ಮದರಾಸಿನ ಸಮೀಪವಿರುವ ಮಹಾಬಲಿಪುರದ ಸಪ್ತಗುಡಿಗಳ ಸುಂದರ ಸುಮನೋಹರ ರಚನೆಗಳನ್ನು ಕಂಡು ತಲೆದೂಗದವರು ತೀರಾ ವಿರಳ. ಪಲ್ಲವ ಶ್ರೇಷ್ಠರಲ್ಲೊಬ್ಬನಾದ ಮಹೇಂದ್ರ ವರ್ಮನ ಕಾಲದಲ್ಲಿ ಒಂದೇ ಕಲ್ಲಿನಿಂದ ಕೊರೆದು ವಾಸ್ತುಗಳನ್ನು ರಚಿಸುವ ಪದ್ಧತಿಯು ಬಳಕೆಗೆ ಬಂತು. ಅನಂತರ ರಥಾಕೃತಿಯ ಗುಡಿಗಳ ನಿರ್ಮಾಣವಾಯಿತು. ಆ ವೇಳೆ ಅಂದವಾದ ಕೆತ್ತನೆ ಕೆಲಸಗಳಿಂದ ಕೂಡಿದ ಅನೇಕ ಶಿಲೆಗಳಿಂದ ಕಟ್ಟಿದ ದೇವಾಲಯಗಳ ರಚನೆಯಾಯಿತು. ಕಾಂಚಿಯ ಕೈಲಾಸನಾಥ ದೇವಸ್ಥಾನವು ಇದಕ್ಕೆ ಯೋಗ್ಯ ಉದಾಹರಣೆಯಾಗಿದೆ. ನಿಜವಾಗಿಯೂ ಪಲ್ಲವರ ಕಾಲದ ಕಲಾಕೃತಿಗಳು ಇಂಡಿಯದ ಶಿಲ್ಪಕಲೆಯಲ್ಲಿ ಹಳೆಯವೂ ಅತ್ಯಂತ ಮನೋಹರವಾದುವೂ ಆಗಿರ್ಪುವು.

ಆಶ್ಚರ್ಯವನ್ನೂ ಆನಂದವನ್ನೂ ಏಕಕಾಲದಲ್ಲಿ ಉಂಟುಮಾಡಲು ಸಮರ್ಥವಾಗಿರುವ—ಒಂದೇ ಒಂದು ಕಲ್ಲಿನಿಂದ ಕೊರೆದು ಕೆತ್ತಿ ನಿರ್ಮಿತವಾದ ರಚನೆಗಳಿಗೂ ಭಾರತದಲ್ಲಿ ನಿದರ್ಶನಗಳು ದೊರೆಯುತ್ತವೆ. ಇಂತಹ ನಿರ್ಮಾಣಗಳಿಗೆ ವಿಶೇಷ ಶ್ರಮವೂ ಜಾಣ್ಮೆಯೂ ಅಗತ್ಯವಿರುವುದರಿಂದ ಇವು ಜಗತ್ತಿನ ಇತರ ಭಾಗಗಳಲ್ಲಿ ದುರ್ಲಭವೆಂದರೆ ಉತ್ಪ್ರೇಕ್ಷೆಯಾಗಲಾರದು.

ಚಾಲುಕ್ಯರೂ, ರಾಷ್ಟ್ರಕೂಟರೂ, ಚೋಳರೂ, ಶಿಲ್ಪಕಲೆಗೆ ತುಂಬಾ ಬೆಂಬಲವನ್ನಿತ್ತಿದ್ದಾರೆ ಜೈನ ಅರಸರಿಂದ ಕಟ್ಟಲ್ಪಟ್ಟ ಸಾವಿರ ಕಂಬದ ಬಸದಿ, ಚತುರ್ಮುಖ ಬಸದಿ, 40—50 ಅಡಿಗಳಷ್ಟು ಎತ್ತರದ ಗೋಮಟೇಶ್ವರನ ವಿಗ್ರಹ—ಇವೆಲ್ಲಾ ಶಿಲ್ಪಕಲೆಯಲ್ಲಿ ಉಚ್ಚಳಿಯದ ಸ್ಥಾನವನ್ನು ಆಕ್ರಮಿಸಿಕೊಂಡಿವೆ ಎಂಬುದು ಮರೆಯಲಾರದ ಸತ್ಯ.

ಮೊಗಲರ ಭವ್ಯ ವಾಸ್ತುಶಿಲ್ಪ ನಿದರ್ಶನಗಳನ್ನು ಢಿಲ್ಲಿ, ಆಗ್ರಾಗಳಲ್ಲಿ ಕಾಣಬಹುದು ಢಿಲ್ಲಿಯಲ್ಲಿರುವ ಕುತುಬ್‌ಮಿನಾರ್, ಎಂಬ ಉನ್ನತವಾದ ಸ್ತಂಭವೂ ಆಗ್ರಾನಗರದಲ್ಲಿರುವ ತಾಜಮಹಾಲ್ ಎಂಬ ಸುಂದರ ಕಟ್ಟಡವೂ ಜಗತ್ತಿನ ಶ್ರೇಷ್ಠ ಕಲಾಕೃತಿಗಳೆಂದು ಗಣಿಸಲ್ಪಟ್ಟಿವೆ. ದಕ್ಷಿಣದ ಸುಲ್ತಾನರಿಂದ ನಿರ್ಮಿಸಲ್ಪಟ್ಟ ಗುಲ್ಬರ್ಗದಲ್ಲಿರುವ ಗೋಲ್‌ಗುಂಬಜದ ಕಲ್ಲುಮಾಡು ಪ್ರಪಂಚದಲ್ಲೇ ಪ್ರಸಿದ್ಧವಾದ ರಚನೆಯಾಗಿದೆ. ಮುಸಲ್ಮಾನರು ಮಾಡಿಸಿದ ಈ ಮನೋಹರ ಮಂದಿರಗಳಲ್ಲೆಲ್ಲಾ ಮಧ್ಯ ಪೂರ್ವದ ಕಟ್ಟಡಗಳ ಮತ್ತು ಭಾರತದ ವಾಸ್ತು ಶಿಲ್ಪದ ಮಿಶ್ರಪಾಕವನ್ನು ನಾವು ಕಾಣಬಹುದು.

ಈ ರೀತಿ ಇತಿಹಾಸದ ಮುಖ ಮುಖಗಳನ್ನೂ ಪಾಗುಚಿ ಸಖ ಶಿಖಾಂತವಾಗಿ ಪರಿಶೀಲಿಸಿದರೆ ಕಣ್ಣಿಟಕುವಷ್ಟು ದೂರಕ್ಕೂ ಶಿಲ್ಪ ಕಲೆಯ ಮಹತ್ವವೇ ಕಂಡುಬರುತ್ತದೆ. ಇದರಿಂದ ನಮ್ಮ ಹಿರಿಯರು ಈ ಕಲೆಯಲ್ಲಿ ಎಂತಹ ಅಭಿರುಚಿ—ಅಭಿಮಾನವುಳ್ಳವರಾಗಿದ್ದರೆಂಬುದು ವ್ಯಕ್ತವಾಗುತ್ತದೆ. ಎಷ್ಟೋ ರಾಜರು—ಎಷ್ಟೋ ಶಿಲ್ಪಿಗಳು ತಮ್ಮ ಜೀವಮಾನವನ್ನೇ ಈ ಕಲೆಯ ಕಾಂತಿಯನ್ನು ಕಾಣಿಸಿ ಕೊಡುವುದಕ್ಕಾಗಿ ಕಳೆದಿದ್ದಾರೆ. ಅವರೆಲ್ಲಾ ಸಂದು ಹೋಗಿ ಶತಮಾನ ಶತಮಾನಗಳೇ ಸವೆದು ಹೋದುವು. ಆದರೆ ಅವರಿಂದ ರಚಿಸಲ್ಪಟ್ಟ ಆ ಅಮಲ—ಅಮರ ಆಕೃತಿಗಳು ಮಾತ್ರ ಇನ್ನೂ ಜೀವಂತವಾಗಿದ್ದು ಅವರ ಗಗನಚುಂಬಿತ ಕೀರ್ತಿಗೋಪುರಕ್ಕೆ ಕಲಶಪ್ರಾಯವಾಗಿ ಕಳೆಯೇರುತ್ತಿ ನಿಂತಿವೆ.

ಈ ಪುರಾತನ ಕಲಾಗಾರಗಳೆಲ್ಲಾ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಕಣ್ಣ ಮುಂದೆ ಕಂಡರಿಸಿ ಕಾಣಿಸುವ ದಿವ್ಯ ಸಾಧನಗಳಾಗಿವೆ. ಒಂದೊಂದು ವಿಗ್ರಹವೂ ಕಲಾಕೃತಿಯೂ ಕಟ್ಟಡವನ್ನು ಕಟ್ಟಿಸಿದ ಪದ್ಧತಿಯೂ ಅಂದಂದಿನ ಜನಜೀವನದ ಒಂದೊಂದು ಮುಖಗಳನ್ನು ನಮಗೆ ತೋರಿಸಿಕೊಡುತ್ತವೆ. ಶಿಲ್ಪ ಕಲಾಕೃತಿಯೊಂದರಿಂದಲೇ ಅದನ್ನು ಮಾಡಿಸಿದ, ಮಾಡಿದ ವ್ಯಕ್ತಿಗಳ ಮನೋಸ್ಥಿತಿಯನ್ನೂ ಅಂದಿನ ಪರಿಸ್ಥಿತಿಯನ್ನೂ ಮನಗಾಣುವುದಕ್ಕೆ ಸಾಧ್ಯವಿದೆ. ಎಲ್ಲವೂ ಆ ಕಾಲದ ಜನರ ಸಾಮಾಜಿಕ, ಧಾರ್ಮಿಕ ಪ್ರವೃತ್ತಿಗಳನ್ನು ಎತ್ತಿ ತೋರಿಸುತ್ತವೆ. ಪಲ್ಲವರ ಕಾಲದಲ್ಲಿ ಮಾಡಲ್ಪಟ್ಟ ಸಪ್ತ ಗುಡಿಗಳಲ್ಲಿ ಕೆತ್ತಿದ ಪುರಾಣ ಚಿತ್ರಗಳು ಅಂದಿನ ಜನರಿಗೆ ಇತಿಹಾಸ ಕಾವ್ಯಗಳಲ್ಲಿದ್ದ ಭಕ್ತಿ ವಿಶ್ವಾಸಗಳನ್ನು ಒಡಮೂಡಿಸುತ್ತವೆ. ತದ್ರೀತಿಯಲ್ಲಿ ಅಶೋಕ, ಕನಿಷ್ಕರ ಕಾಲದ ಬುದ್ಧ ವಿಗ್ರಹಗಳು ಜನರಿಗೆ ಬೌದ್ಧ ಮತದಲ್ಲಿದ್ದ ಶ್ರದ್ಧೆಯನ್ನೂ ಅವರ ಧರ್ಮಬದ್ಧವಾದ ಸುಪ್ರಸಿದ್ಧ ರಾಜ್ಯಭಾರ ಕ್ರಮವನ್ನೂ, ಗುಪ್ತರಿಂದ ನಿರ್ಮಿಸಲ್ಪಟ್ಟ ಸದವಾತ್ಮ ಪ್ರತಿಮೆಗಳು ಅಂದಿನ ಜನರಿಗೆ ಹಿಂದೂ ಮತದಲ್ಲಿದ್ದ ಪ್ರೇಮವನ್ನು ವ್ಯಕ್ತಗೊಳಿಸುತ್ತವೆ.

([illegible]ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

## ಭಾರತೀಯ ಸಂಗೀತ

# ಉತ್ತರಾದಿ ಸಂಗೀತದ ವಿಕಾಸ ಕ್ರಮ

### ಜನತೆಯೊಡನೆ ಹೊಂದಿಕೊಂಡು ಬೆಳೆದು ಬಂದ ಬಗೆ

ಹಿಂದಿನ ಶತಕಗಳಲ್ಲಿ, ಭಾರತೀಯ ಸಂಗೀತವು, ವಿವಿಧ ರೀತಿಯ ಒಳಗಿನ ಹಾಗೂ ಹೊರಗಿನ ಪ್ರಭಾವಕ್ಕೆ ಸಿಲುಕಿದ ಪರಿಣಾಮವಾಗಿ, ಅದರಲ್ಲಿ ಅನೇಕ ಪರಿವರ್ತನೆಗಳಾಗಿವೆ. ಭರತನ ನಾಟ್ಯಶಾಸ್ತ್ರದಲ್ಲಿ ವರ್ಣಿಸಿರುವ 'ಜತಿ' ಗೀತೆಗಳು, ಕ್ರಮ ಕ್ರಮವಾಗಿ ಕೆಲವು ವ್ಯಾಪಕವಾದ ವಿಶದವಾದ ರಾಗಗಳ ರೂಪವನ್ನು ಗ್ರಹಿಸಿದವು. ೧೦ನೆಯ ಶತಮಾನದ ಸುಮಾರಿನಲ್ಲಿ ಈ ರಾಗಗಳು ಪರಿಪೂರ್ಣತೆಯನ್ನು ತಾಳಿದವು; ಆ ಕಾಲದಲ್ಲಿ ಇಡೀ ದೇಶದ ಸಂಗೀತದ ಮೇಲೆ ಅವು ತಮ್ಮ ಪ್ರಭಾವವನ್ನು ಬೀರಿದ್ದವು. ಸುಮಾರು ೧೩ನೆಯ ಶತಮಾನದ ಕೊನೆಯ ವರೆಗೂ ಇಡೀ ಭಾರತದಲ್ಲಿ ಈ ರೀತಿಯ ಮೂಲ ಸಂಗೀತ ಪದ್ಧತಿಯು ಆಚರಣೆಯಲ್ಲಿತ್ತು ಎನ್ನಬಹುದು.

ಪ್ರಾಚೀನ ಭಾರತದಲ್ಲಿ ಸಂಗೀತವು ಭಗವದ್ಭಕ್ತರು ಮತ್ತು ದೇವಸ್ಥಾನಗಳೊಂದಿಗೆ ನಿಕಟತೆಯನ್ನು ಹೊಂದಿತ್ತು. ಅದರ ಈ ಪ್ರಭಾವದಿಂದ ಸರ್ವಸಾಧಾರಣವಾಗಿ, ಸಂಗೀತದ ಕಡೆಗೆ ಸಾಮಾನ್ಯ ಜನರು ಆಕರ್ಷಿತರಾಗುತ್ತಿದ್ದರು. ಪ್ರಬಂಧಗಳು ಸಂಸ್ಕೃತದಲ್ಲಿರುತ್ತಿದ್ದುದರಿಂದ, ಬಹು ಕಡಿಮೆ ಸಂಖ್ಯೆಯ ಜನರಿಗೆ ಅವು ಅರ್ಥವಾಗುತ್ತಿದ್ದವು. ಆದ್ದರಿಂದ ದೇಶಭಾಷೆಗಳಲ್ಲಿನ ಸಂಗೀತ ಕೃತಿಗಳು ರಚನೆಯಾಗಿ, ಸಂಗೀತವು ಸಾಮಾನ್ಯ ಜನರಲ್ಲಿ ಪ್ರಿಯವಾಯಿತು. ಉತ್ತರ ಭಾರತದಲ್ಲಿ ಈ ಪ್ರಬಂಧವು ಧ್ರುಪದಕ್ಕೆ ದಾರಿ ಕೊಟ್ಟಿತು. ಈ ಧ್ರುಪದವು ಕ್ರಮೇಣವಾಗಿ ಅಭಿವೃದ್ಧಿಗೊಂಡು ಹೆಚ್ಚು ವ್ಯಾಪಕವಾಯಿತು. ಭಾವ ಭಟ್ಟನ "ಗೀರ್ವಾಣ ಮಧ್ಯೆ ದೇಶೀಯ ಭಾಷಾ ಸಾಹಿತ್ಯ ರಾಜಿತಂ"—ಪರಿಭಾಷೆಯಿಂದ, ಧ್ರುಪದವನ್ನು ಆರಂಭದಲ್ಲಿ ಸಂಸ್ಕೃತ ಹಾಗೂ ಪ್ರಾದೇಶಿಕ ಭಾಷೆಗಳೆರಡರಲ್ಲೂ ರಚಿಸಲಾಗುತ್ತಿತ್ತೆಂಬುದು ವ್ಯಕ್ತವಾಗುತ್ತದೆ. ಈ ಸಂಗೀತ ಕೃತಿಗಳಲ್ಲಿ 'ಸಾಹಿತ್ಯ'ಕ್ಕೆ ಹೆಚ್ಚಿನ ಪ್ರಾಧಾನ್ಯವನ್ನೀಯಲಾಗುತ್ತಿತ್ತು. ಉತ್ತರ ಭಾರತದಲ್ಲಿ ಮುಸ್ಲಿಮರು ಅಧಿಕಾರಕ್ಕೆ ಬಂದುದು, ಮತ್ತು ಮುಸಲ್ಮಾನರೊಂದಿನ ನಿರಂತರವಾದ ಸಂಪರ್ಕವಿದ್ದುದು, ಉತ್ತರ ಭಾರತದ ಸಂಗೀತದ ಮೇಲೆ ಪ್ರಭಾವವನ್ನು ಬೀರಿತು. ಆದರಂತೆ, ಸಂಗೀತವು ದೇವಾಲಯಗಳಲ್ಲಿ ಪೂಜಾ ಸಾಧನವಾಗಿದ್ದುದರ ಜೊತೆಗೆ, ರಾಜಾಸ್ಥಾನಗಳ ವಾತಾವರಣಗಳಲ್ಲಿಯೂ ಬೇರು ಬಿಟ್ಟು, ಕಲಾಪ್ರಿಯರಾದ, ಅರಸರ ಅಭಿರುಚಿಯ ಪ್ರಭಾವಕ್ಕೊಳಗಾಯಿತು.

ದೇವಾಲಯಗಳ ಧ್ರುಪದವು 'ದರ್ಬಾರ್" ಅಥವಾ ರಾಜಾಸ್ಥಾನದ ಧ್ರುಪದಕ್ಕೆ ಎಡೆಗೊಟ್ಟಿತು. ಅಕ್ಬರನ ಕಾಲವನ್ನು, ಧ್ರುಪದದ ಸ್ವರ್ಣಯುಗವೆಂದು ಪರಿಗಣಿಸಲಾಗಿದೆ. ಸ್ವಾಮಿ ಹರಿದಾಸ್ ಮತ್ತು ತಾನ್‌ಸೇನ್ ಮುಂತಾದ ಅಮರ ಸಂಗೀತಜ್ಞರು ಧ್ರುಪದವನ್ನೇ ಹಾಡುತ್ತಿದ್ದರು. ಸಾಮಾನ್ಯವಾಗಿ ರಾಜರುಗಳಿಗೆ ಸಂಸ್ಕೃತ ಭಾಷೆ, ಹಿಂದೂ ಧರ್ಮದ ಪರಂಪರೆ, ಸಂಕೇತ ಮತ್ತು ಕಲ್ಪನೆಗಳಲ್ಲಿ ಪರಿಶ್ರಮವಿರಲಿಲ್ಲ. ಆದ್ದರಿಂದ ಕಾಲಕ್ರಮೇಣ ಸಂಗೀತಜ್ಞರೂ ಸಹ ಭಕ್ತಿ ಪಕ್ಷ ಮತ್ತು ಸಾಹಿತ್ಯ ಪಕ್ಷಗಳಿಂದ ವಿಮುಖರಾಗತೊಡಗಿದರು. ಇದರ ಪರಿಣಾಮವಾಗಿ ಧ್ರುಪದದ ಪ್ರಭಾವವು ಕಡಮೆಯಾಗುತ್ತ ಹೋಯಿತು. ವಿಕಾಸವು ಒಂದೇ ದಿಕ್ಕಿನಲ್ಲಾಯಿತು; ಅದರಲ್ಲಿ ಶಬ್ದಕ್ಕೆ ಯಾವ ಮಹತ್ವವೂ ಇರಲಿಲ್ಲ. ಈ ಪ್ರತಿಕ್ರಿಯೆಯ ಪರಿಣಾಮವಾಗಿ ಧ್ರುಪದವು ಖಯಾಲ್‌ಗೆ ಜನ್ಮವಿತ್ತಿತು.

ಖಯಾಲ್ ಅಂದರೆ ಕಲ್ಪನೆಯೆಂದರ್ಥ. ಇದರ ಸ್ವರೂಪವು ಧ್ರುಪದಕ್ಕಿಂತ ಕೊಂಚ ಸೂಕ್ಷ್ಮವಾದುದು; ಸದಾರಂಗ್ ಮತ್ತು ಅದಾರಂಗ್‌ರವರ ಹೆಸರು. ಅಸಂಖ್ಯಾತ ಖಯಾಲ್‌ಗಳ ರಚನೆಯ ಮೂಲಕವಾಗಿ ಅಮರವಾಗಿವೆ. ಅವರು ಬಹುಜನ ಶಿಷ್ಯರಿಗೆ ಸಂಗೀತ ಶಿಕ್ಷಣವಿತ್ತರು. ಧ್ರುಪದದಲ್ಲಿ ರಾಗ ವಿಸ್ತರಣೆ ಅಥವಾ ರಾಗಾಲಾಪಕ್ಕೆ ಹೆಚ್ಚಿನ ಅವಕಾಶವಿರುವುದು; ಖಯಾಲ್‌ನಲ್ಲಿ ಆರಂಭದಲ್ಲಿ ರಾಗ ವಿಸ್ತಾರಕ್ಕೆ ಅವಕಾಶವಿರುವುದಿಲ್ಲ. ಸಂಗೀತ ಕ್ಷೇತ್ರದಲ್ಲಿ ಹಿಂದು ಮತ್ತು ಮುಸ್ಲಿಮ ಸಂಗೀತಜ್ಞರು ಹೊಸ ಹೊಸ ರಚನೆಗಳನ್ನು ಮಾಡಿದರು. ಅವರ ಪರಸ್ಪರ ಪ್ರಭಾವವು ಬಿದ್ದುದರಿಂದ ಭಾರತೀಯ ಸಂಗೀತದಲ್ಲಿ ಹೊಸ ಹೊಸ ವಿಧಾನಗಳು ಹುಟ್ಟಿಕೊಂಡವು.

ಮುಗಲ್ ಸಾಮ್ರಾಜ್ಯದ ಅಂತಿಮ ದಿನಗಳಲ್ಲಿ ವಿಶೇಷವಾಗಿ ಅವರ ಪತನದ ನಂತರ ಅವರ ದರಬಾರಿ ಸಂಗೀತವು ದೇಶೀ ರಾಜ್ಯಗಳ ಆಸ್ಥಾನದಲ್ಲಿ ಸ್ಥಾನಗಳಿಸಿತು. ಅವುಗಳಲ್ಲಿ ಗ್ವಾಲಿಯರ್, ಜಯಪುರ, ಉದಯಪುರ, ರಾಂಪುರ, ಅಲ್ವಾರ್, ಲಖನೊ, ಬಡೋದಾ, ಮತ್ತು ಹೈದರಾಬಾದ್. ಈ ರಾಜ್ಯಗಳನ್ನು ಉಲ್ಲೇಖಿಸಬಹುದು. ಈ ರಾಜರುಗಳ ಧಾರಾಳವಾದ ಪ್ರೋತ್ಸಾಹದಿಂದ ಪ್ರತಿಭಾಶಾಲಿ ಸಂಗೀತ ತಜ್ಞರ ಪ್ರಯತ್ನದಿಂದ ಸಂಗೀತವು ಅಭಿವೃದ್ಧಿಯಾಗುತ್ತಿತ್ತು. ಕಾಲಾನಂತರದಲ್ಲಿ ಸಂಗೀತವು ವಿಭಿನ್ನ ಪಂಥಗಳಲ್ಲಿ ವಿಕಾಸಗೊಂಡು ಒಂದಕ್ಕೊಂದು ಸಂಬಂಧವಿಲ್ಲದಂತಾಯಿತು ಪ್ರತಿಯೊಂದು ಪಂಥದವರೂ ತಮ್ಮ ಶೈಲಿಯನ್ನು ಅತ್ಯಂತ ಸುರಕ್ಷಿತವಾಗಿ ಮತ್ತು ರಹಸ್ಯವಾಗಿಡುವ ಪ್ರಯತ್ನವನ್ನು ಕೈಗೊಂಡರು.

ಲಖ್ನೊ ನವಾಬರಾದ ವಾಜಿದ್ ಆಲಿಷಾ ರವರ ದರ್ಬಾರಿನಲ್ಲಿ ಠುಂಶ್ರಿ ಮತ್ತು ದಾದ್ರಗಳು ಜನ್ಮತಾಳಿದವು. ಈ ರಚನೆಗಳು ಭಾವಪ್ರಧಾನವಾಗಿರುತ್ತವೆ. ಠುಂಶ್ರಿಯಲ್ಲಿ ರಾಗವನ್ನು ಬೇಕಾದಂತೆ ತಿರುಗಿಸಿಕೊಳ್ಳಲು ಬರುವುದು. ಆದ್ದರಿಂದ ಅದರಲ್ಲಿ ಸೂಕ್ಷ್ಮ ಭಾವಗಳ ಅಭಿವ್ಯಕ್ತಿಗೆ ಬಹಳ ಸುಲಭವೆನಿಸುವುದು. ಆದ್ದರಿಂದ ಅದನ್ನು ಶಾಸ್ತ್ರೀಯ ಸಂಗೀತದ ಗೀತೆ ಎಂದು ಕರೆಯುವರು. ಠುಂಶ್ರಿಗಾಗಿ ಲಖ್ನೊ ಮತ್ತು ಬನಾಸರ್ ತುಂಬ ಹೆಸರುವಾಸಿಯಾದ ಸ್ಥಳಗಳಾಗಿದ್ದುವು. ಗುಲಾಂ ನಬಿ ಉರ್ಫ್ ಷೋರೆ ಮಿಯಾರವರು ಟಪ್ಪಗಳಿಗೆ ಜನ್ಮವಿತ್ತರು

### ಸಿದ್ಧಾಂತ ಮತ್ತು ವ್ಯವಹಾರಗಳ ನಡುವಿನ ಅಂತರ

ಸಂಗೀತದಲ್ಲಿ ಈ ಹೊಸಹೊಸ ರೂಪಗಳು ಆವಿರ್ಭವಿಸಿದ ಹಾಗೂ ಪರಸ್ಪರ ಮಿಶ್ರವಾದ ಕಾರಣ, ಸಿದ್ಧಾಂತ ಹಾಗೂ ವ್ಯವಹಾರದ ನಡುವೆ ಇದ್ದ ಅಂತರವು ಹೆಚ್ಚುತ್ತಾ ಹೋಗುತ್ತಿತ್ತು. ಆಧಾರಭೂತವಾದ ಸಂಗೀತ ಮತ್ತು ಆಧಾರಭೂತವಾದ ರೂಪುರೇಷೆಗಳು ಒಂದೇ ಆದರೂ ಸಹ ಅವುಗಳ ನಡುವೆ ಅಂತರವೇರ್ಪಡುತ್ತಾ ಹೋಯಿತು. ಇಂದೂ ಸಹ, ಉತ್ತರ ಹಾಗೂ ದಕ್ಷಿಣ ಭಾರತದಲ್ಲಿ ಕ್ರಮಶಃ ಹಿಂದೂಸ್ಥಾನಿ ಮತ್ತು ಕರ್ನಾಟಕ್ ಸಂಗೀತ ಪದ್ಧತಿಗಳು ಪ್ರಚಲಿತವಾಗಿವೆ. ಅವುಗಳ ಆಧಾರ ಭೂತ ಸಿದ್ಧಾಂತ, ಮೂಲತಃ ಒಂದೇ ಆಗಿದೆ, ಸಂಗೀತಾತ್ಮಕ ಅಭಿವ್ಯಕ್ತದ ಆಧಾರದ ಮೇಲೆ ಹಾಗೂ ಆ ಉದ್ದೇಶದಿಂದ ರಾಗಗಳ ಬೆಳವಣಿಗೆಯಾಗಿದೆ.

ಈ ಎರಡು ಪದ್ಧತಿಗಳೂ ೧೨ ಸ್ವರಗಳನ್ನು ಅಂಗೀಕರಿಸಿವೆ. ಅವುಗಳಲ್ಲಿ ೭ ಶುದ್ಧ ಸ್ವರಗಳು ೫ ವಿಕೃತ ಸ್ವರಗಳು. 'ಸ' ಮತ್ತು 'ಪ' ಸ್ಥಿರ ಸ್ವರವಾಗಿದೆ. ರಾಗಗಳಲ್ಲಿ ಹೆಚ್ಚು ಕಡಮೆ ೫ ಸ್ವರಗಳು ಅವಶ್ಯಕವಾಗಿರಬೇಕು. ರಾಗಗಳನ್ನು ವರ್ಗೀಕರಿಸುವ ವಿಧಾನವು ಎರಡು ಸಂಗೀತ ಪದ್ಧತಿಗಳಲ್ಲಿಯೂ ಒಂದೇ ರೀತಿಯಾಗಿರುವುದು.

ಉತ್ತರಾದಿಯ ಕೆಲವು ರಾಗಗಳೂ ಕೂಡ ದಕ್ಷಿಣದ ಕೆಲವು ರಾಗಗಳಿಗೆ ಹೋಲಿಕೆಯಾಗುತ್ತವೆ. ಉದಾಹರಣೆಗೆ ಭೂಪಾಲಿ, ಮಾಲಕಂಸ, ಝಿಂಝೋಟಿ ಕೋಡಿ ಮತ್ತು ಬಾಗೇಶ್ವರಿ—ಈ ರಾಗಗಳು, ದಕ್ಷಿಣಾದಿಯಲ್ಲಿ ಕ್ರಮಶಃ ಮೋಹನ, ಹಿಂದೋಳ, ಜಿಂಜುರಟಿ ಶುಭ ಪಂತುಲವರಾಳಿ, ಮತ್ತು ನಾಟಕುರಂಜಿ ರಾಗಗಳೊಂದಿಗೆ ಹೋಲಿಕೆಯನ್ನು ಪಡೆದಿವೆ.

ಎರಡು ಪದ್ಧತಿಯ ಗಮಕ, ಸ್ವರ ಸಂಚಾರಾದಿಗಳ ರೂಪ ಭಿನ್ನ ಭಿನ್ನವಾಗಿರುವುದು. ದಕ್ಷಿಣದಲ್ಲಿ ಲಯ ಮತ್ತು ಗಣಿತದ ಪ್ರಭಾವ ಅಧಿಕವಾಗಿರುವುದು ಅವುಗಳಲ್ಲಿ ಶುದ್ಧ ಆಕಾರದ ಪ್ರಯೋಗ ಹೆಚ್ಚಾಗಿರುವುದಿಲ್ಲ ದಕ್ಷಿಣಾದಿ ಸಂಗೀತವು ಭಕ್ತಿಕ್ಷೇತ್ರದಿಂದ ಎಂದೂ ಬೇರೆಯಾಗಿಲ್ಲ; ಹಾಗೂ ಅಲ್ಲಿಯ ಪ್ರಸಿದ್ಧ ಸಂಗೀತಗಾರರೆಲ್ಲರು ಭಕ್ತರೂ, ಸಾಹಿತ್ಯಜ್ಞರೂ ಆಗಿದ್ದರು. ಪುರಂದರದಾಸ, ತ್ಯಾಗರಾಜ, ಶಾಮಾಶಾಸ್ತ್ರಿ, ದೀಕ್ಷಿತರ್ ಮತ್ತು ಸ್ವಾಮಿ ತಿರುಮಲ ಇವರು ಪ್ರಸಿದ್ಧ ಸಂಗೀತಜ್ಞರೂ ಸ್ವರಕಾರರೂ ಆಗಿದ್ದುದರ ಜೊತೆಗೆ ಭಕ್ತಾಗ್ರಣಿಗಳೂ ಆಗಿದ್ದರು.

ಭಾರತದಲ್ಲಿ ಬ್ರಿಟಿಷ್ ಆಡಳಿತವು ಆರಂಭವಾದ ನಂತರ, ದೇಶೀಯ ರಾಜರ ಗಮನ ಬೇರೆ ಮಾರ್ಗದಲ್ಲಿ ಹರಿಯಿತು. ದೊಡ್ಡ ದೊಡ್ಡ ಸಂಗೀತ ವಿದ್ವಾಂಸರಿಗೆ ಗ್ವಾಲಿಯರ್, ರಾಮಪುರ, ಬಡೋದಾ, ಔಂಧ್, ಇತ್ಯಾದಿ ರಾಜ್ಯಗಳಲ್ಲಿ ಸ್ಥಾನ ದೊರೆಯುತ್ತಿತ್ತು. ಅಲ್ಲಿಯ ರಾಜರುಗಳು ಸಂಗೀತ ಪ್ರಿಯರಾಗಿದ್ದರು. ಆದರೆ ಕ್ರಮಕ್ರಮವಾಗಿ ಅಲ್ಲಿ ಸಂಗೀತಜ್ಞರಿಗೆ ಪ್ರೋತ್ಸಾಹ ದೊರೆಯುವುದು ಕಡಮೆಯಾಗಿ, ಅವರು ಜನತೆಯ ಆಶ್ರಯವನ್ನು ಹುಡುಕಬೇಕಾಯಿತು. ಸಂಗೀತ ಮತ್ತು ಸಂಗೀತಜ್ಞರಿಗೆ ಅದು ಅತ್ಯಂತ ಕಠಿಣ ಸಮಯವೆನಿಸಿತ್ತು. ಇಂಥ ಸಮಯದಲ್ಲಿಯೇ ಪಂಡಿತ ಪಲುಸ್ಕರ್ ಮತ್ತು ಭಾತ್‌ಖಂಡೆ—ಎಂಬ ಇಬ್ಬರು ಮಹಾನ್ ಸಂಗೀತಗಾರರು ಇದ್ದರು. ಪಂಡಿತ ಪಲುಸ್ಕರ್‌ರವರು ಸಂಗೀತದ ಬಗೆಗೆ ಜನರಲ್ಲಿದ್ದ ಪೂರ್ವಗ್ರಹ ಮತ್ತು ಭ್ರಾಂತಿಯನ್ನು ಹೋಗಲಾಡಿಸಲೂ ಅವುಗಳ ಸ್ಥಾನದಲ್ಲಿ ಜನತೆಯ ವಿಶ್ವಾಸವನ್ನು ಹುಟ್ಟಿಸಲೂ ಪ್ರಯತ್ನಿಸಿದರು.

ಗಾಂಧೀಜಿಯವರು ಸಂಗೀತದ ಮಹತ್ವವನ್ನು ಅರಿತಿದ್ದರು. ವಿಭಿನ್ನ ವ್ಯಕ್ತಿಗಳ ಹೃದಯವನ್ನು ಒಂದುಗೂಡಿಸುವಲ್ಲಿ ಸಂಗೀತವು ಎಷ್ಟು ಸಹಾಯಕವಾಗಬಲ್ಲುದೆಂಬುದನ್ನು ಬಹಳ ಚೆನ್ನಾಗಿ ಅವರು ತಿಳಿದಿದ್ದರು. ಅವರು, ಆಶ್ರಮ ಜೀವನದಲ್ಲಿ ಸಂಗೀತಕ್ಕೆ ಉಚಿತ ಸ್ಥಾನವನ್ನು ಕೊಟ್ಟರು.

ಅನಂತರ ಪಂಡಿತ ಭಾತಖಂಡೆಯವರು ಸಂಗೀತವನ್ನು ವಿಜ್ಞಾನದ ಆಧಾರದ ಮೇಲೆ ಸ್ಥಾಪನೆಗೊಳಿಸಲು ಮಹತ್ತರವಾದ ಪ್ರಯತ್ನವನ್ನು ನಡೆಸಿದರು.

ಪಂಡಿತ ಪಲುಸ್ಕರ್‌ರವರು ಈ ಹಾದಿಯಲ್ಲಿ ನಿಸ್ವಾರ್ಥ ಭಾವದಿಂದ ಬಹಳ ಕೆಲಸ ಮಾಡಿದರು. ಶಿಷ್ಯರ ಸಹಾಯದಿಂದ ಅವರು ತಮ್ಮ ಸಂಗೀತ ಶಾಲೆಯ ಶಾಖೆಗಳನ್ನು ಅನೇಕ ಸ್ಥಳಗಳಲ್ಲಿ ಸ್ಥಾಪಿಸಿದರು.

ಇದಾದ ಸ್ವಲ್ಪ ಸಮಯದ ನಂತರ ಮಧ್ಯಮ ವರ್ಗದ ಸುಸಂಸ್ಕೃತರು ಮತ್ತು ಐಶ್ವರ್ಯವಂತ ವ್ಯಕ್ತಿಗಳು ಸಂಗೀತದಲ್ಲಿ ಆಸಕ್ತಿ ತಾಳಿದರು. ಸಂಗೀತ ಗೋಷ್ಠಿ, ಸಂಗೀತ ಸಭೆ ಸಂಗೀತ ಪರಿಷತ್ತುಗಳು ಮತ್ತು ಸಂಗೀತೋತ್ಸವಗಳು ವ್ಯವಸ್ಥೆಗೊಂಡವು ಇವು ರಾಜಾಶ್ರಯ ತಪ್ಪಿದ್ದ ಸಂಗೀತ ಕಲಾವಿದರಿಗೆ, ತಮ್ಮ ಕಲಾವಂತಿಕೆಯನ್ನು ತೋರಿಸಲು ಉತ್ತಮ ವೇದಿಕೆಗಳಾಗಿ ಪರಿಣಮಿಸಿದವು.

ಕಾಲಾನಂತರದಲ್ಲಿ ಗ್ರಾಮ ಫೋನ್ ಮತ್ತು ರೇಡಿಯೋಗ್ರಂಥ ೯ ಸಾಧನಗಳ

(೯ನೇ ಪುಟ ನೋಡಿರಿ)

**ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ**

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಸಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

**1956 ನಮ್ಮ ರಜತಮಹೋತ್ಸವದ ವರ್ಷ**

ಸ್ಥಾಪನೆ: 1931

**ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್**

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು

ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ—ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.

# ಪ್ರಕೃತಿ ಮತ್ತು ವಿಜ್ಞಾನ

## ಇಂದಿನ ವಿಜ್ಞಾನಿಯು ಪ್ರಕೃತಿಯ ಶಕ್ತಿಗೆ ಪ್ರತಿಶಕ್ತಿಯಾಗಿ ಪಂಥಾಹ್ವಾನವನ್ನು ಕೊಡುತ್ತಿದ್ದಾನೆ—ಆದರೆ ಇದರಿಂದ ಸುಖವಿದೆಯೆ?

ಜೀವಿಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೆಂದೆನ್ನಿಸಿದ ವರ್ಗ— ಮನುಷ ವರ್ಗ. ಮಾನವನಿಗೆ ಪ್ರಕೃತಿಯು ಹೆಚ್ಚಿನ ಬುದ್ಧಿಶಕ್ತಿಯನ್ನಿತ್ತಿದೆ—ಬುದ್ಧಿಯನ್ನು ಬೆಳೆಸಲು ಅವಕಾಶವಿತ್ತಿದೆ.

ಅಂತೆಯೇ ಮಾನವನಿಂದು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ಹಲವಾರು ಅದ್ಭುತ ಕೆಲಸಗಳನ್ನು— ಸಂಶೋಧನೆಗಳನ್ನು ನಡೆಸಿದ್ದಾನೆ—ನಡೆಸುತ್ತಿದ್ದಾನೆ. ಸಂಶೋಧಕರ, ಸಂಶೋಧನೆಗಳ ಸಂಖ್ಯೆಯೂ ಏರತೊಡಗಿವೆ.

ವೈಜ್ಞಾನಿಕ ರಂಗದಲ್ಲಿ ಈ ರೀತಿ ನಾವು ಮುಂದುವರಿಯುತ್ತಿರುವುದು ನಮಗೊಂದು ಹೆಮ್ಮೆಯ ವಿಷಯ. ನಮ್ಮ ಹಿರಿಯರು ಕಂಡರಿಯದ, ಕನಸಲ್ಲೂ ನೆನೆಸದ ಹಲವಾರು ಸಂಶೋಧನೆಗಳು ನಡೆಸಲ್ಪಟ್ಟು—ನಾವು ಕೃಷಿಯಲ್ಲಿ, ಕೈಗಾರಿಕೆಯಲ್ಲಿ ಹಾಗೂ ಜ್ಞಾನ ವಿಕಾಸದಲ್ಲಿ ತುಂಬಾ ಪ್ರಗತಿಯನ್ನೈದಿದ್ದೇವೆ. ಇದಕ್ಕೆ ಕಾರಣರಾದ ಸಂಶೋಧಕ ಮಹಾಶಯರುಗಳನ್ನು ನಾವು ಎಂದಾದರೂ ಮರೆಯಲು ಸಾಧ್ಯವೇ?

ಪ್ರಕೃತಿಯಲ್ಲಿ ಅದೆಷ್ಟೋ ಅದ್ಭುತ ಶಕ್ತಿಗಳಿವೆ; ವಿಚಿತ್ರಗಳಿವೆ. ಅಂತಹ ಶಕ್ತಿಗಳನ್ನು ಬಳಸಿ ನಾವು ಹಲವಾರು ಕಾರ್ಯಗಳನ್ನು ಕೈಗೊಳ್ಳಬೇಕೆಂದೇ 'ನಿಸರ್ಗ' ವಿಶೇಷ ಶಕ್ತಿಗಳನ್ನು ನವ-ಗಿತ್ತಿದೆ!

ಆದರೆ ಪ್ರಕೃತಿಯಿತ್ತ ಆ ಸವಲತ್ತನ್ನು—ರಿಯಾಯಿತಿಯನ್ನು ಮಾನವನಿಂದು ದುರುಪಯೋಗಪಡಿಸಿದ್ದಾನೆ—ಪಡಿಸುತ್ತಿದ್ದಾನೆ. ಪ್ರಕೃತಿಯ ಸಹಾಯವನ್ನು ಪಡೆದುಕೊಂಡು, ಪ್ರಕೃತಿಯ ಆದರವನ್ನು ಸಂಪಾದಿಸಿಕೊಂಡು ಸಂಶೋಧನೆಗಳನ್ನು ನಡೆಸುವ ಬದಲು—ನಿಸರ್ಗವನ್ನು ನಿರ್ಲಕ್ಷಿಸಿ—ನಿಸರ್ಗದ ಮೇಲೇ ತನ್ನ ಪ್ರಯೋಗ ನಡೆಸಿದ್ದಾನೆ—ನಡೆಸುತ್ತಿದ್ದಾನೆ. ಅಪಾರವಾದ, ಅಗಾಧವಾದ ಶಕ್ತಿಯುಳ್ಳ—ಎಲ್ಲಾ ಜೀವ ಕೋಟಿಗಳ ಹುಟ್ಟಿಗೂ ಕಾರಣಳಾದ, ಪವಿತ್ರಳೂ, ನಿರ್ಮಲಚಿತ್ತಳೂ ಆದ ನಿಸರ್ಗ ದೇವಿಗೆ ಸಹ ಅಲ್ಪನಾದ ಮಾನವನು ಪಂಥಾಹ್ವಾನವಿತ್ತಿದ್ದಾನೆ! ಅವಳೊಡನೆಯೂ ವೈರ ಕಟ್ಟಲು ಹೊರಟಿದ್ದಾನೆ!!

ಅಂತಹ ಹಲವಾರು ಸಂಶೋಧನೆಗಳಲ್ಲಿ ಕೃತಕ ಮಳೆ ಬರಿಸುವ ವಿಧಾನ, ಕೃತಕ ಗರ್ಭವಿಧಾನ, ವೈದ್ಯಕೀಯ ಸಂಶೋಧನೆ, 'ಅಟಂ' ಬಾಂಬುಗಳೇ ಮೊದಲಾದವುಗಳ ನಿರ್ಮಾಣ—ಕೂಡಾ ಸೇರಿಕೊಂಡಿವೆ.

ಪ್ರಕೃತಿಯ ಸ್ಥಿತಿಗತಿಗಳು ಎಲ್ಲೆಡೆಗಳಲ್ಲೂ ಒಂದೇ ತೆರನಾಗಿಲ್ಲ. ಕೆಲವೆಡೆ ಗಗನ ಚುಂಬಿತ ಬೆಟ್ಟಗುಡ್ಡಗಳು, ಮರ ಮಟ್ಟುಗಳಿದ್ದರೆ, ಹಲವೆಡೆ ಹಚ್ಚ ಹಸುರಾಗಿ ಕಂಗೊಳಿಸುವ ಬಯಲು ಗದ್ದೆಗಳು—ವನವಿಹಾರಗಳಿವೆ. ಅಲ್ಲೊಂದೆಡೆ ಕಣ್ಣಿಟ್ಟಕಡೆಯಷ್ಟು ದೂರಕ್ಕೆ ಕಂಗೊಳಿಸುವ ವಿಶಾಲವಾದ ಮೈದಾನ ಪ್ರದೇಶಗಳಿವೆ. ತನ್ನ ಕಲಕಲನಾದದಿಂದ ಜೀವಿಗಳನ್ನು ತನ್ನೆಡೆಗೆ ಸೆಳೆಯುವ—ಜುಳು,ಜುಳೆಂದು ಸದಾ ಹರಿಯುವ ನದಿ ಪ್ರದೇಶಗಳಿವೆ—ಇನ್ನೊಂದೆಡೆ. ಅಂತೆಯೇ! ಯಾವೊಂದೂ ಬೆಳೆ ಬೆಳೆಯದ, ಮಳೆಯೆಂದರೇನೆಂದೇ ತಿಳಿಯದ—ಮರಳುಗಾಡಾದ ಮರುಭೂಮಿಗಳಿವೆ. ಹೀಗಿರುವುದು ಪ್ರಕೃತಿಯ ಒಂದು ವೈಶಿಷ್ಟ್ಯ. ಕಾಲಕಾಲಕ್ಕೆ ಆಯಾಯ ಪ್ರದೇಶಗಳಿಗೆ ಆಗ ಬೇಕಾದ ಸನ್ನಾಹ—ಕಾರ್ಯಗಳನ್ನು ನಿಸರ್ಗ ಪೂರೈಸುತ್ತದೆ. ಮಳೆ ಬರಲು ಸಾಧ್ಯವಿದ್ದಲ್ಲಿ ಮಳೆ ಬರುತ್ತದೆ; ಕೆಲವೆಡೆ ಅಲ್ಪ ಮಳೆ ಕೆಲವು ಮಳೆ ಬೀಳಲು ಯೋಗ್ಯವಾದ ಪ್ರದೇಶ. ಈ ರೀತಿ ಆಯಾಯ ಪ್ರದೇಶಗಳ ವ್ಯತ್ಯಾಸಗಳಿಗನುಗುಣವಾಗಿರುತ್ತದೆ.

ವಿಜ್ಞಾನಿ ಇಂದು ಕೃತಕ ಮಳೆಯನ್ನು ಸುರಿಸಿ, ಮರುಭೂಮಿಯನ್ನು ಫಲಪ್ರದೇಶವನ್ನಾಗಿ ಮಾಡುವ ಉದ್ಯಮದಲ್ಲಿ ತೊಡಗಿದ್ದಾನೆ! ಇದರಿಂದ ಎಲ್ಲಿಬೇಕೋ ಅಲ್ಲಿ ಮಳೆ ಸುರಿಸಿಕೊಳ್ಳಬಹುದು.

ಪ್ರಪಂಚದಲ್ಲಿರುವ ಹೆಚ್ಚಿನ ವಸ್ತುಗಳಿಗೂ ಒಂದು ಮಿತಿಯಿದೆ. ಅವುಗಳು ಹೆಚ್ಚೂ ಆಗಲಾರವು; ಕಡಮೆಯೂ ಆಗಲಾರವು. ನೀರು, ಗಾಳಿಯೆಲ್ಲಾ ಈ ಪಾಲಿಗೆ ಸೇರಿದವುಗಳು. ವಾತಾವರಣದಲ್ಲಿ ಇಂತಿಷ್ಟು ನೀರಿನ ಅಂಶ—ಗಾಳಿಯ ಅಂಶ ಎಂಬ ಮಿತಿಯಿದೆ. ಆ ಮಿತಿಯಿಂದ ಎಂದೂ ಅವು ಹೆಚ್ಚು ಯಾ ಕಡಮೆಯಾಗಲಾರವು. ಯಾವುದೇ ರೂಪದಲ್ಲಾದರೂ ಈ ಪ್ರಪಂಚದೊಳಗೇ ಇರಬೇಕಷ್ಟೆ.

ವಿಜ್ಞಾನಿಯು ಆಕಾಶದಲ್ಲಿರುವ ಮೋಡವನ್ನು ತನ್ನ ಸಾಮರ್ಥ್ಯಗಳಿಂದ ಬೇಕಾದೆಡೆಗೆ ಕೊಂಡೊಯ್ದು ಮಳೆ ಸುರಿಸುವನೆಂದೆಣಿಸುವ. ಹಾಗೆ ಬೇರೊಂದು ಪ್ರದೇಶಕ್ಕೆ ಮಳೆಯನ್ನು ಬರಿಸಿಸಿದುದಾದರೆ—ನಿಜವಾಗಿ ಆ ಮೋಡಗಳು ಎಲ್ಲಿ ಮಳೆ ಸುರಿಯಲೆಂದು ಸಂಗ್ರಹವಾಗಿತ್ತೋ ಅಲ್ಲಿ ಮತ್ತೆ ಮಳೆಯೆಂತು ಬರಬೇಕು? ಹಾಗೆ ಮಳೆ ಕಡಮೆಯಾಗುವುದರಿಂದ ಅಲ್ಲಿಯ ಸ್ಥಿತಿ? ಅಥವಾ ವಿಜ್ಞಾನಿ ತಾನೇ ಮೋಡವನ್ನು ಉಂಟುಮಾಡುವನೆಂದೇ ತಿಳಿಯೋಣ; ಹಾಗಿದ್ದರೂ, ಮೋಡಗಳ ನಿರ್ಮಾಣಕ್ಕೂ ನೀರು ಬೇಕು ತಾನೇ? ಎಂಬಾಗ ಆ ಪಾಲಿನಷ್ಟು ಇತರ ಕಡೆ ನೀರು ಆವಿಯಾಗುವುದು ಕಡಿಮೆಯಾಗಿ ಮಳೆಯೂ ಕಡಿಮೆಯಾಗಬಲ್ಲುದು. ಇಂತಿರುವಾಗ ಕೃತಕ ಮಳೆ ಸುರಿಸುವ ವಿಧಾನದಿಂದ ಅತ್ತ ಮರುಭೂಮಿ, ಫಲಭೂಮಿಯಾದಂತೆ—ಇತ್ತ ಫಲಪ್ರದೇಶವೊಂದು ಮರುಭೂಮಿಯಾದಲ್ಲಿ — ಆಶ್ಚರ್ಯವಿಲ್ಲ.

ಈಗ ತಾನೇ ಅರಳಿ ಕಂಪನ್ನು ಬೀರುವ ಪುಷ್ಪವೊಂದು ನಮ್ಮನ್ನೆಷ್ಟು ಆಕರ್ಷಿಸುವುದಿಲ್ಲ? ಹೂಗಳ ಆಯುಷ್ಯಕಾಲ ಮುಂಜಾವಿಂದ ಸಂಜೆಯ ವರೆಗೆ ಮಾತ್ರ! ಪ್ರಾತಃಕಾಲವೇ ಅರಳಿ ಶೋಭಿಸುತಿದ್ದ ಪುಷ್ಪ, ನೊಸರೇರಿದಂತೆ ಕೆಂಪಾಗಿ, ಸಂಜೆಯಾಗುವಾಗ ಬಾಡಿ ಮುದುಡುವುದು. ಹೀಗಿದ್ದರೂ ಅದೇಕೆ ಆ ಹೂವುಗಳಿಗೆ ವಿಧ ವಿಧದ ಬಣ್ಣ? ಆಕರ್ಷಣೆ? ಅದೇ ಪತಂಗಗಳನ್ನು ಆಕರ್ಷಿಸಲು!

ಮುದ್ದಾದ ಹೂವನ್ನು ನೋಡಿ ಮುದ್ದಿಸಲು— ಮಾಧುರ್ಯವನ್ನು ಸವಿಯಲು ಜೇನು ನೊಣಗಳು, ಪತಂಗಗಳು ಮುಂದಾಗುವುವು. ಹೂವಿಂದ ಹೂವಿಗೆ ಹಾರಿ, ಸಿಹಿರಸಗಳನ್ನು ಹೀರಿ, ಒಲವು ಒಯ್ಯಾರಗಳನ್ನು ತೋರಿ, ಸಂಗೀತವನ್ನು ನುಡಿಸುತ್ತಾ ಹಾರುತ್ತಿರುವ ನೊಣಕ್ಕೆ ಗೊತ್ತಾಗದಂತೆ ಅದರ ಮೂಲಕವೇ ಪರಾಗಸ್ಪರ್ಶವು ನಡೆಯುತ್ತದೆ!

ಹಾಗಿದ್ದರೆ ಹೂವನ್ನು ಆ ರೀತಿ ಮಿರುಗುಗೊಳಿಸಿದ ಉದ್ದೇಶವೇನು? ಈ ಎಲ್ಲಾ ಸುತ್ತುವಿಕೆ, ಬಳಸುವಿಕೆಯ ಅಗತ್ಯವೇನು? ಗುಟ್ಟೇನು?—ಹೆಣ್ಣು ಗಂಡುಗಳ ಮಿಲನ—ತನ್ಮೂಲಕ ಸಂತಾನಾಭಿವೃದ್ಧಿ. ಇದು ಸೃಷ್ಟಿ ನಿಯಮ.

ಆದರೆ ಅಂಧನಾದ ಮಾನವನು ಪ್ರಕೃತಿಯ ಮಹತ್ವವನ್ನೆಣಿಸದೆ, ಅಲ್ಲೂ ತನ್ನ ಮೆದುಳನ್ನು ಉಪಯೋಗಿಸಿದನು—ಕೃತ್ರಿಮವನ್ನು 'ತೂರಿ'ದನು. ಒಂದು ಜಾತಿಯ ಹೂವಿನ ಪರಾಗಕ್ಕೆ ಇನ್ನೊಂದರ ಪರಾಗ ಸಂಪರ್ಕಗೊಳಿಸಿ, ಹೊಸತೊಂದು (1) 'ಜಾತಿ'ಯನ್ನು ನಿರ್ಮಿಸಿದನು. ಒಂದೇ ಗಿಡದಲ್ಲಿ ಹಲವು ಬಣ್ಣಬಣ್ಣದ ಹೂಗಳಾಗುವಂತೆ ಸಗಿದನು. ಅದ್ಭುತ ಹಾಗೂ ರಮ್ಯ! ಹೌದು. ಆದರೆ ಈ ಕೌತುಕದಿಂದೇನು ಪ್ರಯೋಜನ? ನಿಸರ್ಗ ಪ್ರೇರಿತ ಪರಿಮಳವಿಲ್ಲ. ಪತಂಗಗಳತ್ತ ಸುಳಿವುದಿಲ್ಲ. ಹಾಗಿದ್ದರೆ ಅವುಗಳ ಮೂಲಕ ಪರಾಗ ಸ್ಪರ್ಶವಾಗಲು ಸಾಧ್ಯವಿದೆಯೇ? ಮತ್ತೂ ಕೃತ್ರಿಮತೆಯಿಂದಲೇ ಎಸಗಬೇಕು.

ವಿಜ್ಞಾನಿ ಈ ಪ್ರಯೋಗವನ್ನು ಅಲ್ಲಿಗೇ ನಿಲ್ಲಿಸುತ್ತಿದ್ದರಾದರೂ ಆಗುತ್ತಿತ್ತು. ಆದರೆ ಆತ ಮತ್ತೂ ಒಂದು ಹೆಜ್ಜೆ ಮುಂದರಿಸಿದ—ಪ್ರಾಣಿವರ್ಗಗಳಲ್ಲಿ ತನ್ನ ಕೃತ್ರಿಮತೆಯನ್ನು ಪ್ರಯೋಗಿಸಿದ. ಹೋರಿಯ ವೀರ್ಯವನ್ನು ಆಕಳಿಗೆ ಇಂಜೆಕ್ಷನ್ ಮೂಲಕ ಸೇರಿಸಿದ. ಗಂಡಿನ ಸಂಪರ್ಕವೇ ಇಲ್ಲದೆ—ಗಂಡನ್ನು ನೋಡಿಯೇ ಇಲ್ಲದ ದನ ಕರು ಹಾಕಿತು! ಆ ದನ ಎಷ್ಟು ಆಶ್ಚರ್ಯ, ಭಯ, ಪಟ್ಟಿತೋ?

ಇಂದು ಮನುಷ್ಯರಲ್ಲೂ ಈ ಪ್ರಯೋಗವನ್ನು ನಡೆಸಲು ಮುಂದಾಗಿದ್ದಾನೆ ವಿಜ್ಞಾನಿ! ಹೀಗಾದರೆ ಮುಂದೆ ಒಂದೆರಡು ತಲೆಮಾರು ಕಳೆಯುವುದರೊಳಗೆ ಅಂದರೆ ಕೃತಕ ಗರ್ಭದಾನದಿಂದ ಹುಟ್ಟಿದ ಮಕ್ಕಳ ಮಕ್ಕಳ ಕಾಲದಲ್ಲಿಯೇ ಹೆಣ್ಣು ಗಂಡು ಸಂಪರ್ಕವನ್ನೇ ಹೊಂದಲಾರವು. ಹೆಣ್ಣು ಗಂಡುಗಳೆದುರಾದಾಗ, ಸ್ಪರ್ಶಗೊಂಡಾಗ ಯಾವುದೇ ರೀತಿಯ ಕಾಮ ಪ್ರಚೋದನೆಯೂ ಉಂಟಾಗಲಾರದು. ಕಾಮ ಶಕ್ತಿಯು ಕುಂದುವುದು. ಹೆಚ್ಚೇಕೆ—ನೈಜವಾದ ಸಂತಾನಾಭಿವೃದ್ಧಿ ಆಗಲಾರದು.

ಹೀಗಿರುವಲ್ಲಿ 'ಕೃತಕ ಗರ್ಭವಿಧಾನ' ಸಂಶೋಧನೆಯು ಮಾನವನ ಬುದ್ಧಿಯ ಮೇಲ್ಮಟ್ಟವನ್ನು ತೋರಿಸುತ್ತದೋ?—ಕೆಳಮಟ್ಟವನ್ನೋ?

ಕಾಮ, ಕ್ರೋಧ, ಮದ, ಮತ್ಸರ, ಲೋಭ, ಮೋಹ ಎಂಬುವೆಲ್ಲವೂ ಮಾನವನ ಜನನ ಎಂದಾಯಿತೋ ಅಂದೇ ಜನಿಸಿರದೆ ಆ ಮೇಲೆ ಉಂಟಾದುದಾಗಿರಬೇಕು. ಈಗ ಇವುಗಳೆಲ್ಲಾ ಲೋಪವಾದ ಮನುಷ್ಯರಿಲ್ಲವೆಂದರೆ ತಪ್ಪಾಗಲಾರದು. ತಾನೇ ಮೇಲೆಂದೆನ್ನಿಸಬೇಕು, ತನ್ನ ದೇಶವೇ ಎಲ್ಲಾ ದೇಶಗಳಿಗಿಂತಲೂ ಉತ್ತಮವೆನ್ನಿಸಬೇಕು; ವೈರಿಗಳನ್ನು ಸುಲಭದಲ್ಲಿ ಸೋಲಿಸುವ ಶಸ್ತ್ರಾಸ್ತ್ರಗಳಿರಬೇಕು—ಎಂಬಿತ್ಯಾದಿ ಉದ್ದೇಶಗಳಿಂದ ಹಲವಾರು ಆಯುಧಗಳು, ಸಾಮಾಗ್ರಿಗಳು ತಲೆಯೆತ್ತಿದುವು. ಅಣು ಬಾಂಬು ಮೊದಲಾದ ಭಯಂಕರ ಉಪಕರಣಗಳ ಶೋಧನವೂ ಆದುವು. ಈ ಬಾಂಬುಗಳನ್ನು ಇತ್ತೀಚೆಗೆ ಪ್ರಯೋಗಿಸಿ ರಷ್ಯಾ, ಅಮೇರಿಕಾಗಳು ಇದು ತೀವ್ರ ಕೆಲಸಕಾರಿಯೆಂದು ಕಂಡುಕೊಂಡವು.

ಆದರೆ ಈ ರೀತಿಯ ಬಾಂಬುಗಳಿಂದ, ಶಸ್ತ್ರಾಸ್ತ್ರಗಳಿಂದ ದೇಶಕ್ಕೆ ಯಾವೊಂದು ಪ್ರಯೋಜನವೂ ಆಗಲಾರದು. ವೈರಿಗಳನ್ನು ಒಮ್ಮೆಗೆ ಅದು ಸದೆಬಡಿಯಲೂಬಹುದು. ಅದರ ಹಿಂದೆಯೇ ತನ್ನನ್ನೂ,—ತನ್ನ ದೇಶವನ್ನೂ ಅದು ನಾಶಗೊಳಿಸುವುದೆಂಬುದನ್ನು ಮರೆಯಬಾರದು.

ಅವುಗಳನ್ನು ಪ್ರಯೋಗಿಸುವುದರಿಂದ ವಾತಾವರಣದ ಎಲ್ಲೆಡೆಯಲ್ಲೂ ತೀವ್ರ

(೬ನೇ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ಹಿಂದೆ (31—10—1955)
ರೂಪಾಯಿ:- 76,00,000
ಒಟ್ಟು ಚಲಾವಣೆ ಮೊಬಲಗು
ಇಂದು:— (31—10—1956)
ರೂಪಾಯಿ:- 1,00,00,000 ಕ್ಕೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

# NAVAYUGA

Popular Kannada Weekly

*Founder:—*

**A. B. SHETTY,** *M. L .A.*
Former Minister for Public Health,
Govt. of Madras.
At Present Minister for Health
Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೮-೧೧-'೫೬ | ೧೦ |


## "ಈಡನ್ನರ ಯುದ್ಧ!"

ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ಆರು ಅಂಶಗಳಿಂದ ಯುಕ್ತವಾದ ಗೊತ್ತುವಳಿಯೊಂದು ಸ್ವೀಕಾರಗೊಂಡುದನ್ನು ಕಂಡ ನಾವು ಸುಯೇಜಿನ ತಂಟೆಯನ್ನು ಬಗೆಹರಿಸಲು ಆವಶ್ಯವಾದ ಸೂತ್ರಗಳನ್ನಿದು ಒಳಗೊಂಡಿದೆಯೆಂದು ವಿವರಿಸಿ, ಬ್ರಿಟನ್, ಫ್ರಾನ್ಸ್ ಮತ್ತು ಇಜಿಪ್ಟ್ ದೇಶಗಳು ಈ ಸೂತ್ರವನ್ನನುಸರಿಸಿ ಸಮಸ್ಯೆಯನ್ನು ಶೀಘ್ರದಲ್ಲಿ ತೀರ್ಮಾನಗೊಳಿಸುವವೆಂದು ಆಶಿಸಿದ್ದೆವು. ಆದರೆ, ಈಗ ಏಳೆಂಟು ದಿನಗಳಿಂದೀಚೆಗೆ ಸುಯೇಜಿನ ಕಾಲುವೆ ವಲಯದಲ್ಲಿ ಕ್ಷಿಪ್ರಗತಿಯ ಬದಲಾವಣೆಗಳು ನಡೆದಿರುತ್ತವೆ; ಅಲ್ಲಿಯ ಸ್ವರೂಪವೇ ಗುರುತು ಹತ್ತಲಾರದಷ್ಟು ವಿರೂಪಗೊಂಡಿದೆ ಎಂದರೂ ತಪ್ಪಾಗಲಾರದು. ಸುಯೇಜಿನ ಕಾಲುವೆ ಇರುವ ಸಿನಾಯಿ ಮರುಭೂಮಿ ಪ್ರದೇಶವು ಇಂದು ದೊಡ್ಡ ರಣರಂಗವಾಗಿದೆ; ಮತ್ತು ಈ ರಣದ ಬಿಸಿಯು ಇಜಿಪ್ಟಿನ ರಾಜಧಾನಿಯಾದ ಕೈರೋದವರೆಗೂ ವ್ಯಾಪಿಸಿದೆ. ಕಾಲುವೆಯ ಮೇಲೆ ನಿಯಂತ್ರಣವನ್ನು ಇಡಬಲ್ಲ ಆಯಕಟ್ಟಿನ ಸ್ಥಳಗಳನ್ನು ಪ್ರವೇಶಿಸಲು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಸೈನ್ಯಗಳು ಸಾಹಸಪಡುತ್ತಿವೆ.

ಇದೆಲ್ಲ ಘಟನೆಗಳ ಹಿನ್ನೆಲೆಯೇನು? ಕೆಲವು ದಿನಗಳ ಹಿಂದೆ ಇಜಿಪ್ಟಿನೊಡನೆ ಸರಹದ್ದನ್ನು ಪಡೆದಿರುವ ಇಸ್ರಾಯೇಲ್ ದೇಶವು ಒಮ್ಮಿಂದೊಮ್ಮೆ ಇಜಿಪ್ಟ್ ದೇಶದೊಳಗೆ ನುಗ್ಗಿ ಧಾಳಿ ನಡೆಸತೊಡಗಿತು. ಗಾಜಾ ವಲಯದಲ್ಲಿ ಆಗಾಗ್ಗೆ ಇಜಿಪ್ಟಿಗೂ ಇಸ್ರೇಲಿಗೂ ಘರ್ಷಣೆ ನಡೆಯುತ್ತಲೇ ಇದೆ—ಇಲ್ಲಿ ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕ ದಳ ಒಂದಿದ್ದು, ಇಸ್ರೇಲವು ಇಜಿಪ್ಟಿನೊಳಗೆ ನುಗ್ಗಿ ದಾಳಿ ಮಾಡುವುದು ಸರಿಯಲ್ಲವೆಂದು ಈ ದಳ ಬುದ್ಧಿ ಹೇಳಿತು. ಆದರೆ ಇಜಿಪ್ಟಿನ ಪ್ರದೇಶದೊಳಗೆ ನೂರು ಮೈಲುಗಳಷ್ಟು ದೂರ ಒಳ ನುಗ್ಗಿದ ಬಳಿಕವೂ ಇಸ್ರೇಲದ ಸೇನೆಗಳು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರ ಬುದ್ಧಿಯ ಮಾತನ್ನು ಕೇಳಿ ಹಿಂದೆ ತೆರಳಲು ಸಿದ್ಧರಾಗಲಿಲ್ಲ. ಅವರು ಇಜಿಪ್ಟಿನ ಮೇಲೆ ಸೇಡು ತೀರಿಸಿಕೊಳ್ಳಲೆಂಬಂತೆ, ಸುಯೇಜಿನ ಕಾಲುವೆಯತ್ತ ಧಾವಿಸುತ್ತಿದ್ದವು.

ಸುಯೇಜಿನ ಕಾಲುವೆ ಪ್ರದೇಶದಲ್ಲಿ ಬಲಾತ್ಕಾರವಾಗಿ ಕಾಲೂರಲಿಕ್ಕೆಂದು ಬ್ರಿಟನ್ ಮತ್ತು ಫ್ರಾನ್ಸ್‌ಗಳು ಸೈಪ್ರಸ್ ಮತ್ತಿತರ ಭೂಮಧ್ಯ ಸಮುದ್ರ ಪ್ರದೇಶದ ಕೇಂದ್ರಗಳಲ್ಲಿ ಧಾರಾಳವಾಗಿ ಸೈನ್ಯವನ್ನು ಎಂದೋ ತಂದಿಟ್ಟಿದ್ದವು. ಇಸ್ರೇಲವು ಸುಯೇಜಿನೆಡೆಗೆ ನುಗ್ಗುತ್ತಿರುವುದನ್ನು ಕಂಡ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಈ ಯುದ್ಧವು ಹೀಗೆಯೇ ಮುನ್ನಡೆದರೆ ಕಾಲುವೆಯ ಸುರಕ್ಷಿತತೆಗೆ ಆತಂಕ ಬರುವುದೆಂದು ಭಾವಿಸಿ, ಇಸ್ರೇಲಿಗೂ ಇಜಿಪ್ಟಿಗೂ ಹನ್ನೆರಡು ತಾಸುಗಳ ಅವಧಿಯನ್ನು ಕೊಟ್ಟು, ಯುದ್ಧ ನಿಲ್ಲಿಸಬೇಕೆಂದು ಕೇಳಿಕೊಂಡವು. ಆದರೆ ಆಕ್ರಮಣ ಮಾಡಿರುವುದು ಇಸ್ರೇಲವಾದುದರಿಂದ ಇಜಿಪ್ಟವು ಯುದ್ಧವನ್ನು ನಿಲ್ಲಿಸಲು ನಿರಾಕರಿಸಿತು. ಇಸ್ರೇಲವಾದರೂ ಯುದ್ಧ ಸ್ತಂಭನದ ಸೂಚನೆಗೆ ಮನ್ನಣೆ ಕೊಡಲಿಲ್ಲ.

ಆಗ ಬ್ರಿಟನಿನ ಸರಕಾರವು ಇಜಿಪ್ಟಿಗೆ ಸಂದೇಶವೊಂದನ್ನು ಕಳುಹಿಸಿ, ಸುಯೇಜಿನ ಕಾಲುವೆ ಪ್ರದೇಶದಲ್ಲಿ ಹಿಂದೆ ಇದ್ದ ಬ್ರಿಟನಿನ ಸೈನ್ಯಗಳನ್ನು ವಾಪಾಸು ಕರೆದುಕೊಳ್ಳುವ ಕಾಲದಲ್ಲಿ ಮಾಡಿಕೊಂಡ ಒಡಂಬಡಿಕೆಯ ಪ್ರಕಾರ, ಈಗ ಕಾಲುವೆಯ ಸುರಕ್ಷಿತತೆಗೆ ಭಂಗಬಂದಿರುವ ದೆಸೆಯಿಂದ, ಕಾಲುವೆಯ ಭದ್ರತೆ ಮತ್ತು ರಕ್ಷಣೆಗೋಸ್ಕರ ಬ್ರಿಟನಿನ ಸೈನ್ಯಗಳನ್ನು ಆಯಕಟ್ಟಿನ ಪ್ರದೇಶಗಳಲ್ಲಿ ನೆಲೆಗೊಳಿಸಲು ಬಿಡಬೇಕೆಂದು ಕೇಳಿಕೊಂಡಿತು. ಆದರೆ ಇಜಿಪ್ಟ್ ಬ್ರಿಟನಿನ ಈ ಕೇಳಿಕೆಯಲ್ಲಿ ಕಾಲುವೆ ಪ್ರದೇಶದಲ್ಲಿ ಪುನಃ ಕಾಲೂರಲು ಕುಂಟು ನೆಪವೊಂದನ್ನು ಮುಂದಿಡಲಾಗಿದೆ, ಹೊರತು ಇದರಲ್ಲಿ ನ್ಯಾಯವಿಲ್ಲ ಎಂದೆನ್ನುತ್ತಾ ವಿನಂತಿಯನ್ನು ನಿರಾಕರಿಸಿತು.

ಅಲ್ಲಿಂದ ಮುಂದೆ ನಡೆದ ಘಟನೆಗಳು ಜಗತ್ತಿನಾದ್ಯಂತ ಉದ್ವೇಗ ಮತ್ತು ಕಳವಳವನ್ನು ಹುಟ್ಟಿಸಿವೆ. ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಸೈನಿಕರು ಬಲಾತ್ಕಾರದಿಂದಲೇ ಆಗಲಿ, ಸುಯೇಜಿನ ಕಾಲುವೆ ವಲಯದ ಆಯಕಟ್ಟಿನ ಠಾಣ್ಯಗಳಲ್ಲಿ ಕಾಲೂರಲು ಬದ್ಧಕಂಕಣರಾಗಿ ಜೆಟ್ ಮತ್ತು ಬಾಂಬರ್ ವಿಮಾನಗಳ ಬಲವಾದ ರಕ್ಷಣೆಯಲ್ಲಿ ಗಾಳಿಕೊಡೆಗಳ ಮೂಲಕ ಇಜಿಪ್ಟಿನೊಳಕ್ಕೆ ಇಳಿಯುತ್ತಿದ್ದಾರೆ. ಕೈರೊ ಮತ್ತಿತರ ಇಜಿಪ್ಟಿನ ಮುಖ್ಯ ಪಟ್ಟಣಗಳ ಮೇಲೆ ಬಾಂಬುಗಳ ಸುರಿಮಳೆ ನಡೆದಿದೆ. ಇಜಿಪ್ಟಿನ ವಿಮಾನ ಬಲ ಮತ್ತು ಹಡಗು ದಳಗಳ ಟೊಂಕ ಮುರಿಯಲಾಗಿದೆ ಎಂದೆನ್ನುವಂತೆ ಆಂಗ್ಲೊ—ಫ್ರೆಂಚ್ ಸೈನ್ಯಗಳ ಚಟುವಟಿಕೆ ಸಾಗಿದೆ. ಇತ್ತ ಇಸ್ರೇಲಿ ಸೈನ್ಯಗಳೂ ಸಿನಾಯಿ ಪ್ರದೇಶದಲ್ಲಿ ಭರದಿಂದ ಮುಂದೊತ್ತುತ್ತಿದ್ದು ಕಾಲುವೆಗೆ ಅವು ಬಹಳ ಹತ್ತಿರದಲ್ಲಿವೆ. ಇಜಿಪ್ಟ್ ದೇಶವು ಏಕಾಕಿಯಾಗಿ ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲಿ ಬಳಗಳೊಡನೆ ಹೋರಾಟವನ್ನೀಯುತ್ತಿದೆ!

ಅಮೇರಿಕ ಮತ್ತು ರಶ್ಯಗಳನ್ನೊಳಗೊಂಡು ಎಲ್ಲ ಪ್ರಮುಖ ರಾಷ್ಟ್ರಗಳೂ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಕೈಗೊಂಡಿರುವ ಸೈನಿಕ ಕ್ರಮವನ್ನು ನಿಂದಿಸಿವೆ. ಬಲಾತ್ಕಾರವಾಗಿ ಇಜಿಪ್ಟಿನ ಪ್ರದೇಶದಲ್ಲಿ ನುಗ್ಗುವ ಉದ್ದೇಶವನ್ನು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಇಟ್ಟುಕೊಂಡಿವೆ ಎಂದಾದ ಮೇಲೆ, ಜಗತ್ತಿನಲ್ಲಿ ಸಭ್ಯ ನಡವಳಿಕೆಗೆ ಬೆಲೆ ಎಲ್ಲಿ ಉಳಿಯಿತು ಎಂದು ಎಲ್ಲ ರಾಷ್ಟ್ರಗಳೂ ಪ್ರಶ್ನಿಸುತ್ತಿವೆ. ಭಾರತವು ಇಜಿಪ್ಟಿಗೆ ಬಂದೊದಗಿದ ದುರವಸ್ಥೆಯಿಂದ ತುಂಬ ದುಃಖಿತವಾಗಿದೆ. ಪ್ರಧಾನಿ ನೆಹರುಗಳು ಮಾರ್ಮಿಕವಾದ ತಮ್ಮ ಈಚೆಯ ಹಲವು ಭಾಷಣಗಳಲ್ಲಿ ಬ್ರಿಟನಿನಂತಹ ಸುಸಂಸ್ಕೃತ ರಾಷ್ಟ್ರವೊಂದು ಇಷ್ಟು ಹೇಯವಾದ ಮತ್ತು ನಿಶ್ಚಯವಾಗಿಯೂ ಅನ್ಯಾಯದ ಮಾರ್ಗ ಹಿಡಿದುದರ ಬಗ್ಗೆ ತಿರಸ್ಕಾರವನ್ನೂ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ. ಅರಬ ರಾಷ್ಟ್ರಗಳೂ ಪಾಕಿಸ್ತಾನದಂತಹ ಮುಸ್ಲಿಂ ರಾಷ್ಟ್ರಗಳೂ ಕೊಲೊಂಬೋ ದೇಶಗಳೂ—ಎಲ್ಲವೂ ಸಂತಪ್ತವಾಗಿವೆ. ಬ್ರಿಟನಿನೊಳಗಡೆಯೇ ಪ್ರಧಾನಿ ಈಡನರು "ಯುದ್ಧಾಸಕ್ತ" ಎಂಬ ಬಿರುದಿಗೆ ಪಾತ್ರರಾಗಿ, ನಿಂದಾವ್ಯಂಜಕ ಗೊತ್ತುವಳಿ ಮತ್ತು ಭಾಷಣಗಳಿಗೆ ಆಹುತಿ ಬಿದ್ದಿದ್ದಾರೆ. ಅವರ ಮಂತ್ರಿ ಮಂಡಳದಲ್ಲಿದ್ದ ಪ್ರಸಿದ್ಧ ಅಂತಾರಾಷ್ಟ್ರೀಯ ಮುತ್ಸದ್ದಿ ನಟ್ಟಿಂಗ್ ರಾಜೀನಾಮೆಯನ್ನಿತ್ತು ಹೊರ ಬೀಳುವ ವರೆಗೆ ಬ್ರಿಟನಿನೊಳಗೆ ಜನಮತವು ಈಡನ್ನರ ಹುಚ್ಚು ಸಾಹಸಕ್ಕೆ ವ್ಯತಿರಿಕ್ತವಾಗಿದೆ.

ಸಂಯುಕ್ತ ರಾಷ್ಟ್ರ ಸಂಘವು ಪ್ರೇಕ್ಷಕನಂತೆ ಸುಮ್ಮನೆ ಕುಳಿತಿಲ್ಲ — ಎಂಬುದೊಂದೇ ಸಮಾಧಾನದ ವಿಷಯ. ಅಂದು ಕೊರಿಯಾದಲ್ಲಿ ಯುದ್ಧ ಜ್ವಾಲೆ ಹತ್ತಿಕೊಂಡಾಗ ಕೈಗೊಂಡಷ್ಟು ಕ್ಷಿಪ್ರವಾಗಿಯಲ್ಲದಿದ್ದರೂ ಅಮೇರಿಕವು ಸಾಕಷ್ಟು ತ್ವರಿತಗತಿಯಿಂದಲೇ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳನ್ನು ದಾರಿಗೆ ತರಲು ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಪ್ರಯತ್ನ ನಡೆಸಿದೆ. ಭದ್ರತಾ ಮಂಡಳದ ಮೂಲಕ ನಡೆಸುವ ಪ್ರಯತ್ನಗಳು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ "ವೀಟೋ" ಪ್ರಯೋಗದ ಫಲವಾಗಿ ನಿಷ್ಫಲಗೊಳ್ಳುವುದನ್ನು ಕಂಡು ಸಾಮಾನ್ಯ ಸಭೆಯಲ್ಲಿ ಎಲ್ಲ ರಾಷ್ಟ್ರಗಳೂ ಯುದ್ಧವನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಳ್ಳಲಾಯಿತು. ಈ ವಿನಂತಿಗೆ ಅತ್ಯಧಿಕ ಬಹುಮತ ದೊರಕಿದೆ. ಆಕ್ರಮಣಕಾರಿ ಸೇನೆಗಳು ವಾಪಸಾದರೆ ತಾನು ಯುದ್ಧವನ್ನು ಕೂಡಲೆ ನಿಲ್ಲಿಸುವುದಾಗಿ ಇಜಿಪ್ಟ್ ಒಪ್ಪಿಕೊಂಡಿದೆ. ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಸಂಯುಕ್ತ ರಾಷ್ಟ್ರ ಸಂಘದ ಸೇನೆಯೊಂದು ಇಜಿಪ್ಟ್ ಮತ್ತು ಇಸ್ರೇಲಿ ಸೈನ್ಯಗಳು ಘರ್ಷಣೆ ಕೊಡದಂತೆ ಅವುಗಳನ್ನು ಬೇರ್ಪಡಿಸಿ, ಸುಯೇಜಿನ ಕಾಲುವೆ ತಂಟೆಯು ಶಾಂತವಾಗಿ ಬಗೆಹರಿಯುವ ವರೆಗೆ ಆ ಪ್ರದೇಶದಲ್ಲಿ ಕ್ಷೋಭೆಯುಂಟಾಗದಂತೆ ನೋಡಿಕೊಳ್ಳುವ ಹೊಣೆಹೊತ್ತರೆ ತಾವು ತಮ್ಮ ಸೈನಿಕ ಕಾರ್ಯಾಚರಣೆಯನ್ನು ಕೂಡಲೇ ನಿಲ್ಲಿಸಲು ಸಂತೋಷಿಸುವುದಾಗಿ ಶರ್ತವನ್ನು ಹಾಕಿವೆ. ಅಲ್ಲದೆ ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ಸುಯೇಜಿನ ಕಾಲುವೆ ಪ್ರದೇಶದಲ್ಲಿ ನೆಲೆಗೊಂಡರೆ ಇಸ್ರೇಲಿ ಸೈನ್ಯಗಳೂ ವಾಪಸಾಗುವವೆಂದು ತನ್ನ ನಂಬಿಕೆ ಎಂದು ಈಡನ್ನರು ಇಸ್ರೇಲಿಯ ಪರವಾದ ವಕಾಲತನ್ನೂ ಮಾಡಿದ್ದಾರೆ.

ಅಂತೂ ಈಗ ಸಂಯುಕ್ತ ರಾಷ್ಟ್ರ ಸಂಘದ ಸೇನೆಯೊಂದನ್ನು ತಯಾರಿಸಲು ಸಿದ್ಧತೆ ನಡೆದಿದೆ. ಕೆನಡ, ಪಾಕಿಸ್ತಾನ, ನೋರ್ವೆ ಮುಂತಾದ ಏಳು ರಾಷ್ಟ್ರಗಳು ಈಗಾಗಲೇ ಈ ಸೈನ್ಯದಲ್ಲಿ ಭಾಗವಹಿಸಲು ಒಪ್ಪಿವೆ. ಭಾರತವೂ ಸೈನ್ಯ ಕಳುಹಿಸಿ ಸಹಕರಿಸಬೇಕೆಂದು ರಾಷ್ಟ್ರ ಸಂಘದ ಕಾರ್ಯದರ್ಶಿಗಳು ವಿನಂತಿಸಿಕೊಂಡಿದ್ದಾರೆ. ರಶ್ಯವು ಅಮೇರಿಕಕ್ಕೊಂದು ಸೂಚನೆಯನ್ನಿತ್ತು ತಮ್ಮೆರಡೂ ದೇಶಗಳು ಪರಸ್ಪರ ಸಹಕರಿಸಿ ಸುಯೇಜಿನ ಪ್ರದೇಶದಲ್ಲಿ ತಳವೂರಿರುವ ವಿದೇಶಿ ಸೇನೆಗಳನ್ನು ಹೊರದಬ್ಬಬೇಕೆಂದು ವಿನಂತಿಸಿದೆ—ಆದರೆ ಇದಕ್ಕೆ ಅಮೇರಿಕವು ಒಪ್ಪಿಲ್ಲ. ರಶ್ಯವು ಮುಂದೇನು ಮಾಡುವುದು—ಇಜಿಪ್ಟಿಗೆ ಪ್ರತ್ಯಕ್ಷ ಸಹಾಯವನ್ನು ಕೊಡಲು ಹೋಗುವುದೇ ಏನೆಂಬುದು ಸ್ಪಷ್ಟವಾಗಿಲ್ಲ.

ಮೇಲಿನೆಲ್ಲ ಮಾತುಗಳನ್ನು ವಿಮರ್ಶಿಸಿದರೆ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ: ಏನೆಂದರೆ, ಇಸ್ರೇಲಿಗಳು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರ ಎಚ್ಚರಿಕೆಯನ್ನು ಮೀರಿ ಮುಂದೆ ನಡೆಯುವುದಕ್ಕೆ ಅವರಲ್ಲಿದ್ದ ಯುದ್ಧೋತ್ಸಾಹವಷ್ಟೇಯಲ್ಲ, ಆತ್ಮ ವಿಶ್ವಾಸವೂ ಕಾರಣವಾಗಿರಬೇಕು—ಮತ್ತು ಈ ಆತ್ಮ ವಿಶ್ವಾಸವು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ತನಗೆ ಬೆಂಬಲವಾಗಿವೆ ಎಂಬ ಭಾವನೆಯಿಂದಲೇ ಉಂಟಾಗಿರಬೇಕು. ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಯುದ್ಧಾಸಕ್ತ ರಾಷ್ಟ್ರಗಳಾದ ಇಜಿಪ್ಟ್ ಮತ್ತು ಇಸ್ರೇಲ್ ಸೈನ್ಯಗಳನ್ನು ಬೇರ್ಪಡಿಸುವುದು ಮತ್ತು ಸುಯೇಜಿನ ಕಾಲುವೆಗೆ ಅಪಾಯವಾ[ಗ]ದಂತೆ ನೋಡಿಕೊಳ್ಳುವುದು ತಮ್ಮ ಉ[ದ್ದೇಶವೆನ್ನುತ್ತವೆ]: ಆದರೆ ಅವು ಸುಯೇಜಿನ ಕಡೆಗೆ ಮುಂದೊತ್ತುತ್ತಿರುವ ಇಸ್ರೇಲಿ ಸೇನೆಗಳಿಗೆ ಏನೂ ತಡೆಯನ್ನು ಮಾ[ಡದೆ] ಈ ಸೇನೆಗಳನ್ನು ಹಿಂದೋಡಿಸಲು ಹೋರಾಡುತ್ತಿರುವ ಇಜಿಪ್ಟಿನ ದಳಗ[ಳ] ಮೇಲೆಯೇ ಬಾಂಬುಗಳನ್ನು ಹಾಕುತ್ತಿವೆ; ಅಲ್ಲದೆ ಇಜಿಪ್ಟಿನ ನಗರಗ[ಳ] ಮೇಲೂ ಸುಯೇಜಿನ ಕಾಲುವೆ ಪ್ರದೇಶದ ಮುಖ್ಯ ಠಾಣ್ಯಗಳ ಮೇಲ[ೂ] ಧಾಳಿ ನಡೆಸಿವೆ. ಇದನ್ನು ನೋಡಿದರೆ ಇಜಿಪ್ಟನ್ನು ಬಗ್ಗುಬಡೆದು ಏನಕೇನ [ಪ್ರ]ಕಾರೇಣ ಸುಯೇಜಿನ ಪ್ರದೇಶದಲ್ಲಿ ತ[ಳ]ವೂರುವುದೇ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಗುರಿಯಾಗಿದೆ ಎಂದೂ ಇಸ್ರೇಲಿ ದಳಗಳನ್ನು ಆಕ್ರಮಣಕಾರಿ ಕೃತ್ಯಗ[ಳಿ]ಗೆ ಪ್ರೇರಿಸಿದವರು ಈಡನ್ ಮತ್ತು ಮೊಲೇಯವರೇ ಎಂದೂ ನಿಸ್ಸಂದೇಹವಾಗಿ ಸಿದ್ಧವಾಗುತ್ತದೆ.

ಬ್ರಿಟನ್ ಮತ್ತು ಫ್ರಾನ್ಸ್ ದೇಶಗ[ಳು] ಒಳ್ಳೆ ಸಮಯವನ್ನು ನೋಡಿ ಈ ಹೋ[ರಾ]ಟವನ್ನು ಪ್ರಾರಂಭಿಸಿವೆ. ರಶ್ಯವು [ಪೂ]ರ್ವ ಯುರೋಪಿನ ರಾಜ್ಯಗಳಲ್ಲಿ ಕ[ಾಣಿಸಿ]ಕೊಂಡ ಎದ್ದಿರುವ ಕ್ಷೋಭೆಯಲ್ಲಿ ಮುಳುಗಿ[ದೆ]. ಅಮೇರಿಕವು ಇದೇ ಆರನೇ ತಾರೀಕಿ[ನಂ]ದು ನಡೆದ ಚುನಾವಣೆಯ ಗೊಂದಲದ[ಲ್ಲಿ] ನಿರತವಾಗಿದೆ. ಹೀಗಾಗಿ, ಈ ರಾಷ್ಟ್ರ[ಗಳು] ಯುಷ್ಟ ಮುಖೇನ ಪ್ರತ್ಯಕ್ಷ ವಿರೋಧವನ್ನು ತಮ್ಮ ಬಲಾತ್ಕಾರದ ಕೃತ್ಯ[ಗಳಿ]ಗೆ ತೋರ್ಪಡಿಸುವ ಸಂಭವ ಇಲ್ಲವೆಂ[ದು] ಖಚಿತವಾದ ಗಳಿಗೆಯನ್ನು ನೋಡಿ ಧಾಳಿಯನ್ನು ಇಸ್ರೇಲಿ ಶಿಖಂಡಿಯನ್ನು ಮುಂದಿಟ್ಟುಕೊಂಡು ಬ್ರಿಟನ್ ಮ[ತ್ತು] ಫ್ರಾನ್ಸ್ ನಡೆಸಿವೆ. ಅಮೇರಿಕವು ಚುನಾವಣೆಯ ಗೊಂದಲದಲ್ಲಿ ಬಿದ್ದ ಪ್ರಯು[ಕ್ತ] ಬ್ರಿಟನ್ ಮತ್ತು ಫ್ರಾ[ನ್ಸ್] ದೇಶಗಳನ್ನು ಬೆಂಬಲಿಸ[...]

## ಪ್ರಕೃತಿ ಮತ್ತು ವಿಜ್ಞಾನ

(೫ನೇ ಪುಟದಿಂದ)

ವ್ಯತ್ಯಾಸಗಳಾಗುವುವು; ಪ್ರಪಂಚದಲ್ಲಿರುವ ಇತರ ಹಲವಾರು ಉಪಯುಕ್ತ ಕಣಗಳೆಲ್ಲಾ ನಶಿಸಿ, ಜೀವನಕ್ಕೆ ಧಕ್ಕೆ ತರುವುದು. ಇತ್ತೀಚಿಗಿನ ಅಣುಬಾಂಬುಗಳ ಪ್ರಯೋಗದಿಂದ ಅದೆಷ್ಟು ಜಂಬಿಗರು ಯಮಲೋಕ ಸೇರಿಲ್ಲ! ಮಳೆನೀರಲ್ಲಿ, ಗಾಳಿಯಲ್ಲಿ ಅದರ ಅಣುಗಳು ಸೇರಿಕೊಂಡಿವೆಯೆಂದೂ ಹಲವರು ಅಭಿಪ್ರಾಯಪಟ್ಟಿದ್ದಾರೆ. ಹೌದು; ಇಂತಹ—ಲೋಕಕ್ಕೆ ವಿನಾಶಕಾರಿಗಳಾದಂತಹ ಪ್ರಯೋಗಗಳನ್ನು ಮಾಡಕೂಡದು; ಸಂಶೋಧನೆಗಳನ್ನು ನಡೆಸಕೂಡದು.

ವೈದ್ಯಕೀಯದಲ್ಲೂ ಇಂದು "ಭಾರಿ" ಸಂಶೋಧನೆಗಳು ನಡೆದಿದೆ—ನಡೆಯುತ್ತಿವೆ. ಇದರಲ್ಲಿ ಸಂಶೋಧಕ ಪ್ರಾರಂಭದಲ್ಲೇ ಸಂಪೂರ್ಣ ಎಡವಿದ್ದಾನೆ. ರೋಗವುಂಟಾಗಲು ಅವರು ಹೇಳುವ ಕಾರಣವೇ ತಪ್ಪಾಗಿದೆ. ರೋಗವುಂಟಾಗಲು ಕಾರಣ ಮಾನವ ನಿಸರ್ಗವನ್ನು ಅಲ್ಲಗಳೆಯುವುದೇ ಆಗಿದೆ. ರೋಗ ನಿರ್ಮಾಣುಗಳೆಂಬ ತಪ್ಪು ಕಲ್ಪನೆಯಿಂದ ರೋಗ ನಿರ್ಣಾಮಕ್ಕಾಗಿ ಶ್ರಮಿಸುತ್ತಿದ್ದ ಅಣುಜೀವಿಗಳನ್ನು ಕೊಲ್ಲುವುದೇ ಪ್ರಥಮ ಸಂಶೋಧನೆಯಾಯಿತು. ಅಣುಜೀವಿಗಳ ಶಕ್ತಿ ಹೆಚ್ಚಿದಂತೆ ಮದ್ದಿನ ಶಕ್ತಿಯನ್ನೂ ಹೆಚ್ಚಿಸಲು ಅದೆಷ್ಟೋ ಜೀವಜಂತುಗಳ ಪ್ರಾಣ ಹೀರಿ (ಮೊದಲಿನ ವನೌಷಧಿಗಳನ್ನು ಅಲ್ಲಗಳೆದು) ಹೊಸ ಹೊಸ ಮದ್ದುಗಳ ಶೋಧನೆಯಾಗುತ್ತಿದೆ. ಮೂಲವನ್ನೇ ಶೋಧಿಸದೆ, ತಪ್ಪು ದಾರಿಯಿಂದಲೇ ನಿಸರ್ಗವನ್ನು ಕಡೆಗಣಿಸಿ ಮುಂದುವರಿಯುತ್ತಿರುವುದರಿಂದಲೇ ನಮ್ಮಲ್ಲಿ ಹೆಚ್ಚಿನವರೂ ಅನಾರೋಗ್ಯದಿಂದಿರಲು ಕಾರಣ.

ಲೋಕದಲ್ಲಿ ಹಿಂದಿನಂತೆ ಇಂದು ಎಲ್ಲವೂ ನಿಸರ್ಗತ್ರವಾಗಿ ಕಾಲಮಾನಕ್ಕನುಗುಣವಾಗಿ ನಡೆಯುತ್ತಿಲ್ಲ. ಕಾಲಕಾಲಕ್ಕೆ ಮಳೆ ಸುರಿಯುತ್ತಿಲ್ಲ. ಬಂದೆಡೆ ಮಿತಿಮೀರಿ ಬರುತ್ತದೆ. ಆಗಾಗ ನೆರೆ (ಮೊನ್ನೆ ಮೊನ್ನೆ ಡಿಲ್ಲಿಯಲ್ಲಿ ಕೆಂಪ ಕೋಟೆಯವರೆಗೂ ಬಂದಿತ್ತು) ಕ್ಷಾಮಗಳು ತಲೆದೋರಿ ಅದೆಷ್ಟೋ ಜನರು ನೀರುಪಾಲಾಗುತ್ತಾರೆ—ರೋಗ ರುಜಿನಗಳಿಂದ—ಅನ್ನವಿಲ್ಲದೆ, ಕುಡಿಯಲು ನೀರಿಲ್ಲದೆ ಸಾಯುತ್ತಿದ್ದಾರೆ! ಭೂಮಿ ಕಂಪಿಸಿ, ಜ್ವಾಲಾಮುಖಿಗಳೇಳುತ್ತಿವೆ! ಪ್ರಚಂಡ ಬಿರುಗಾಳಿ ಬೀಸಿ ಮನೆ, ಮಠಗಳು ನಾಶವಾಗುತ್ತಿವೆ! ಇಲ್ಲದ ಹೊಸ ಹೊಸ ವೈಚಿತ್ರ್ಯಗಳು ಆಗಾಗ ಕಂಡು—ನಮ್ಮನ್ನು ದಂಗು ಬಡಿಸುತ್ತವೆ! ದಿನದಿನ ನವೀನ ರೋಗಗಳು ಕಾಣಿಸಿಕೊಂಡು ಮನುಷ್ಯರನ್ನು ಬಲಿತೆಗೆದುಕೊಳ್ಳುತ್ತಿವೆ!—ಹೀಗೇಕಾಗುತ್ತಿದೆ?

ಇವುಗಳೆಲ್ಲಾ ನಾವು ಪ್ರಕೃತಿಯನ್ನು ಅಲಕ್ಷಿಸುವುದರಿಂದಲೇ ಉಂಟಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಅಂಥ ಪ್ರಯೋಗಗಳಿಂದ — ಸಂಶೋಧನೆಗಳಿಂದ ಪ್ರಕೃತಿಯ ನಿರ್ಣಯಗಳೇ ಬದಲಿಸಿ ಅಡಿಮೇಲಾಗಿ, ತಿರುವುಮುರುವಾಗುವುದರಿಂದಲೇ ಈ ರೀತಿಯಾಗುತ್ತಿದೆ!

ಇನ್ನೂ ನಾವು ಪ್ರಕೃತಿಯನ್ನು ಮೀರಿಯೇ ಸಂಶೋಧನೆಗಳನ್ನು ಮುಂದುವರಿಸಿದಲ್ಲಿ ನಮ್ಮೆಲ್ಲರ ಅವಸಾನವಾಗಿ ಕಲಿಯುಗ ಅಂತ್ಯವಾಗಲು ಇನ್ನು ಹೆಚ್ಚು ತಲೆಮಾರುಗಳನ್ನು ನಾವು ಕಾಯಬೇಕಾಗಿಲ್ಲ—ಎಂದು ಖಂಡಿತವಾಗಿಯೂ ಹೇಳಬಹುದು.

ನಮಗೆ ನಿಸರ್ಗ ಹೆಚ್ಚಿನ ಬುದ್ಧಿಶಕ್ತಿಯನ್ನಿತ್ತುದು ದುರುಪಯೋಗಪಡಿಸಲಿಕ್ಕಾಗಿಯಲ್ಲ; ಇಂತಹ ಅದ್ಭುತ ಸಮಾಡಗಳನ್ನು ನಿರ್ಮಿಸಿ, ಲೋಕದ ಸ್ಥಿತಿಗಳನ್ನು ಅಡಿಮೇಲು ಮಾಡಲಿಕ್ಕಲ್ಲ. ಜೀವನಕ್ಕೆ ಸಹಕಾರಿಯಾದ ಉತ್ತಮ ವಿಷಯಗಳನ್ನು ಆಲೋಚಿಸಲು— ಸಂಶೋಧಿಸಲು. ನಿಸರ್ಗವನ್ನು ಅಲ್ಲಗಳೆಯದೆ ನಡೆಸುವ ಎಲ್ಲಾ ಕಾರ್ಯಗಳೂ ಉತ್ತಮ ವಿಷಯಗಳೇ.

ಆದ್ದರಿಂದ ನಮ್ಮ ವಿಜ್ಞಾನದ ದೃಷ್ಟಿಯನ್ನು ಅತ್ತ ತಿರುಗಿಸೋಣ. ಪ್ರಕೃತಿಯನ್ನು ಹೊಂದಿಕೊಂಡು, ಪ್ರಕೃತಿಸಿದ್ಧ ಶಕ್ತಿಗಳನ್ನು ದುರುಪಯೋಗಪಡಿಸದೆ, ಜೀವನವನ್ನು ಉತ್ತಮಗೊಳಿಸಲು ಸಾಧ್ಯವಿದ್ದರೆ ನೋಡೋಣ. ಅಂತಹ ಸಂಶೋಧಕರಿಗೆ ಬೆಂಬಲ ಪ್ರೋತ್ಸಾಹ ನೀಡೋಣ. ನಿಸರ್ಗ ದೇವಿಯೂ ಅಂಥವರಿಗೇ ತನ್ನ ಸಂಪೂರ್ಣ ಬೆಂಬಲ ನೀಡುವಳು. ಇದು ಸತ್ಯ. ಇಂತಹ ಸತ್ಯದ—ಕಟು ಸತ್ಯದ ಹಾದಿಯನ್ನೇ ನಾವು ಅವಲಂಬಿಸಿ ನಮ್ಮ ಜೀವನವನ್ನು —ನಮ್ಮ ದೇಶವನ್ನು— ಉತ್ತಮವಾಗಿ ನಿರೂಪಿಸೋಣ.

—ಶ್ರೀ ಕೀ. ವ. ಕೇಶವ.

---

ಹುಚ್ಚು ಕೆಲಸಕ್ಕೆ ಹೋದರೆ ಮತದಾನದಲ್ಲಿ ಸರಕಾರಿ ಪಕ್ಷವು ತೀರ ಅಪ್ರಿಯವಾದೀತೆಂಬುದನ್ನು ತಿಳಿದು ಶಾಂತಿ ಪಾಠವನ್ನು ಹೇಳಿದೆ; ಮತ್ತು ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಗೊತ್ತುವಳಿಗಳನ್ನು ತರುವ ನಾಟಕ ನಡೆಸಿದೆ. ಆದರೆ ಐಕ್ಯವು ತನ್ನೊಡನೆ ಸಹಕರಿಸಿ ಇಜಿಪ್ಟಿನ ಭೂಮಿಯಿಂದ ಆಕ್ರಮಣಕಾರಿ ರಾಷ್ಟ್ರಗಳನ್ನು ಓಡಿಸಬೇಕೆಂದು ಮಾಡಿಕೊಂಡ ವಿನಂತಿಯನ್ನು ಅಮೇರಿಕ ನಿರಾಕರಿಸಿದುದನ್ನು ಕಂಡರೆ ಅದು ಸಹ ಒಳಗಿಂದೊಳಗೆ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಪಕ್ಷಪಾತಿಯಾಗಿರುವುದೇ ನಿಜವೆಂದು ತೋರುತ್ತದೆ.

ಅಂತೂ ಈ ಯುದ್ಧದಲ್ಲಿರುವ ಅವಾಯಕ್ಕಿಂತಲೂ ಅದರ ಹಿಂದೆ ಅಡಗಿರುವ ಕುತಂತ್ರಗಳು ಪ್ರಾಮಾಣಿಕರಲ್ಲಿ ಜುಗುಪ್ಸೆ ಬರಿಸುತ್ತವೆ. ನಮ್ಮ ಶಾಂತಿ ಮಂತ್ರಗಳೆಲ್ಲ ವಾಗಾಡಂಬರವಲ್ಲವೆ— ಎಂಬ ಭಾವನೆಯನ್ನು ಹುಟ್ಟಿಸುತ್ತವೆ! "ಪೋಲೀಸು ಕಾರ್ಯಾಚರಣೆ" ಎಂದು ಯುದ್ಧವನ್ನು ಕರೆದು ವಸಾಹತುವಾದಿ ನೀತಿಯನ್ನು ಪ್ರಜಾಪ್ರಭುತ್ವವಾದಿಗಳೆನ್ನುವ ರಾಷ್ಟ್ರಗಳೂ ಅನುಸರಿಸುತ್ತವೆ ಎಂದ ಬಳಿಕ ನಾವು ಬೇರೆ ಹೇಳಬೇಕಾದದ್ದೂ ಏನು? ರಾಷ್ಟ್ರ ಸಂಘದಂತಹ ಜಾಗತಿಕ ಸಂಘ ಇದ್ದರೇನು—ಹೋದರೇನು? ಎರಡೂ ಒಂದೇ!

---

## ಏಕೀಕೃತ ಕನ್ನಡ ರಾಜ್ಯ ಬೆಂಗಳೂರಲ್ಲಿ ಉದ್ಘಾಟನೆ

ಏಕೀಕೃತ ಕನ್ನಡ ರಾಜ್ಯವಾದ ಮೈಸೂರಿನ ಉದ್ಘಾಟನೆಯನ್ನು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಮಾಡಿದರು. ಈ ಸಂದರ್ಭದಲ್ಲಿ ಅವರು ಕನ್ನಡ ನಾಡಿನ ನೈಸರ್ಗಿಕ ಸಂಪತ್ತನ್ನು ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ಉಪಯೋಗಿಸಿಕೊಳ್ಳುವ ಹೊಣೆಯು ಸರಕಾರದ ಮೇಲಿದೆ ಎಂದು ತಿಳಿಸಿಹೇಳಿದರು. ತಮ್ಮದಾದ ರಾಜ್ಯವನ್ನು ಪಡೆದ ಕನ್ನಡಿಗರಿಗೆ ಅವರು ತಮ್ಮ ಶುಭಾಶಯವನ್ನು ಅರ್ಪಿಸಿದರು.

### ಪ್ರತಿಜ್ಞಾ ವಿಧಿ

ಉದ್ಘಾಟನೆಯ ಸಮಾರಂಭಕ್ಕೆ ಮುಂಚೆ ರಾಜ್ಯಪಾಲರ, ಮುಖ್ಯಮಂತ್ರಿ ಮತ್ತು ಮಂತ್ರಿಮಂಡಳದ ಸದಸ್ಯರ ಹಾಗು ಹೈಕೋರ್ಟಿನ ನ್ಯಾಯಾಧೀಶರ ಪ್ರತಿಜ್ಞಾ ವಿಧಿಗಳು ನಡೆದವು. ಕನ್ನಡ ರಾಜ್ಯದಲ್ಲಿ ಇವೆಲ್ಲ ವಿಧಿಗಳು ಆಂಗ್ಲ ಭಾಷೆಯಲ್ಲಿ ನಡೆದವು ಎಂಬುದು ವಿಲಕ್ಷಣವಾದ ಸುದ್ದಿ! ನಮ್ಮಲ್ಲಿ "ಸಂಕುಚಿತ" ಭಾಷಾಪ್ರೇಮವಿಲ್ಲ—ನಮ್ಮದು ವಿಶಾಲ ಹೃದಯ ಎಂಬುದಕ್ಕೆ ಇದನ್ನೊಂದು ನಿದರ್ಶನವಾಗಿ ಬುದ್ಧಿವಂತರು ಕೊಡಲೂಬಹುದು!

### ಮಂತ್ರಿಮಂಡಳದ ಸದಸ್ಯರು

ಮಂತ್ರಿಮಂಡಳದಲ್ಲಿ ಈಗ ಕೆಳಗಿನ ಹನ್ನೆರಡು ಮಂದಿ ಇದ್ದಾರೆ: ಶ್ರೀಯುತರಾದ ನಿಜಲಿಂಗಪ್ಪ (ಮುಖ್ಯಮಂತ್ರಿ) ಕಡಿದಾಳ ಮಂಜಪ್ಪ (ಶಿಕ್ಷಣ), ಎ. ಬಿ. ಶೆಟ್ಟಿ (ಆರೋಗ್ಯ), ಎಂ. ಪಿ. ಪಾಟೀಲ (ಕಂದಾಯ), ಸಿ. ಎಂ. ಪೂಣಚ್ಚ (ಉದ್ದಿಮೆ ಮತ್ತು ವಾಣಿಜ್ಯ), ಎಚ್. ಎಮ್. ರುದ್ರಪ್ಪ (ಕೃಷಿ ಮೀನುಗಾರಿಕೆ ಅರಣ್ಯ), ಜಗನ್ನಾಥರಾವ್ ಚಂದರಕಿ (ಗ್ರಾಮೋದ್ಯೋಗ, ಅಬಕಾರಿ), ಟಿ. ಮರಿಯಪ್ಪ (ಆರ್ಥಿಕ ವಿಭಾಗ, ಎಂ. ವಿ. ರಾಮರಾವ್ (ಕಾನೂನು, ಪ್ರಚಾರ, ಸಾರಿಗೆ ಸಂಪರ್ಕ ಮತ್ತು ಸುದ್ದಿ), ಚೆನ್ನಿಗರಾಮಯ್ಯ (ಸ್ಥಾನಿಕ ಸಂಸ್ಥೆಗಳು, ಹಿಂದುಳಿದ ವರ್ಗಗಳು), ಎ. ಭೀಮಪ್ಪ ನಾಯಕ (ಸಹಕಾರ ಸಪ್ಲೈ ಮತ್ತು ಎಚ್. ವೀರಣ್ಣಗೌಡ (ಲೋಕೋಪಯೋಗಿ ಖಾತೆ ಮತ್ತು ವಿದ್ಯುಚ್ಛಕ್ತಿ). ಇವರಲ್ಲದೆ ಇನ್ನಿಬ್ಬರು ಮಂತ್ರಿಗಳನ್ನು ಹಿಂದಿನಿಂದ ಸೇರಿಸಿಕೊಳ್ಳಲಾಗುವುದೆಂದು ತಿಳಿದುಬರುತ್ತದೆ.

### ಗೇಣಿ ನಿರ್ಣಯ ಶಾಸನ

ಮುಂಬೈ ಸರಕಾರವು ಶಿಫಾರಸು ಮಾಡಿದ್ದ ನ್ಯಾಯವಾದ ಗೇಣಿನಿರ್ಣಯ ಮಸೂದೆಗೆ ರಾಷ್ಟ್ರಾಧ್ಯಕ್ಷರ ಸಮ್ಮತಿಯು ಅಕ್ಟೋಬರದ ೨೯ನೇ ದಿನಾಂಕವೇ ದೊರೆತಿದ್ದು ಅದು ಸರಕಾರಿ ಗಜೆಟಿನಲ್ಲಿ ಅಕ್ಟೋಬರ ೩೦ನೇ ದಿನಾಂಕವೇ ಪ್ರಕಟವಾಗಿರುವುದರಿಂದ ಈ ಶಾಸನವು ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸುವುದೆಂಬ ವಿಷಯವು ಖಚಿತವಾಗಿರುತ್ತದೆ. ಹೊಸ ಮೈಸೂರಿನಲ್ಲಿ ಸಮಾವೇಶಗೊಂಡಿರುವ ದೆಸೆಯಿಂದ ಈ ಶಾಸನವು ನಮ್ಮ ಜಿಲ್ಲೆಗೆ ಅನ್ವಯಿಸಲಿಕ್ಕಿಲ್ಲವೆಂದಿದ್ದ ಸಂಶಯ ಹೀಗೆ ದೂರವಾಗಿರುತ್ತದೆ.

---

## ಉಡುಪಿ

**ಸ್ಟೇಟ್ ಬೇಂಕಿನ ಶಾಖಾ ಉದ್ಘಾಟನೆ**— ಕಳೆದ ತಾ. ೨೨ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು "ಸ್ಟೇಟ್ ಬೇಂಕ್ ಆಫ್ ಇಂಡಿಯಾ"ದ ಉಡುಪಿ ಶಾಖೆಯನ್ನು ಉದ್ಘಾಟಿಸುತ್ತಾ, ಈ ಶಾಖೆಯು ಜನತೆಗೂ ಸ್ಥಳೀಯ ಬೇಂಕುಗಳಿಗೂ ಪೋಷಕವಾಗಿರಲೆಂದು ಹಾರೈಸಿದರು. ಆರಂಭದಲ್ಲಿ ಬೇಂಕಿನ ಏಜಂಟ್ ಶ್ರೀ ಸುಶೀಲಚಂದರ್‌ನವರು ಸ್ವಾಗತಭಾಷಣ ಮಾಡುತ್ತಾ ಸ್ಟೇಟ್ ಬೇಂಕಿನ ಧ್ಯೇಯ ಧೋರಣೆಗಳನ್ನು ವಿವರಿಸಿ ಅದು ಇತರ ಬೇಂಕಿಂಗ್ ಸಂಸ್ಥೆಗಳ ಎದುರ್ಗಡೆಯಲ್ಲವೆಂದು ಸ್ಪಷ್ಟಪಡಿಸಿದರು. ಡಾ. ಟಿ. ಮಾಧವ ಪೈ, ಡಾ. ಎಸ್. ಆರ್. ಪೈಗಳು ಹೊಸ ಶಾಖೆಯನ್ನು ಸ್ವಾಗತೀಕರಿಸಿ ಅದಕ್ಕೆ ಜಯವನ್ನು ಕೋರಿ ಮಾತನಾಡಿದರು.

**ನವರಾಜ್ಯೋದಯ ದಿನಾಚರಣೆ.**

ನಗರ ಸಭೆಯ ಮತ್ತು ಕಲಾವೃಂದದ ನೇತೃತ್ವದಲ್ಲಿ ತಾ. ೧ರಲ್ಲು ನವರಾಜ್ಯೋದಯ ದಿನಾಚರಣೆಯು ರಥಬೀದಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ನಡೆಯಿತು. ಪರ್ಯಾಯ ಅಥಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು. ವೃಂದದ ಅಧ್ಯಕ್ಷ ಡಾ. ಕೆ. ಎಸ್ ಸುಬ್ರಹ್ಮಣ್ಯ ಉಪಾಧ್ಯಾಯರು ಸ್ವಾಗತಮಾತುಗಳನ್ನಾಡಿದರು. ಶ್ರೀ ಟಿ. ಹರಿದಾಸ ಸಾಮಗರು ಗೀತೆಗಳನ್ನು ಹಾಡಿದರು. ಸುರತ್ಕಲ್ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ವಾಸುದೇವ ರಾಯರು "ನಮ್ಮ ರಾಜ್ಯದ ನಿಸರ್ಗ ಶ್ರೀ" ಕುರಿತು ಭಾಷಣವಿತ್ತರು. ಶ್ರೀ ಎಚ್ ಕೆ ರಾಮಚಂದ್ರ ಮೂರ್ತಿಯವರು ಕಾವ್ಯವಾಚನಮಾಡಿದರು. ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಕಲಾವೃಂದದ "ನವ್ಯ ಸಾಹಿತ್ಯ" ಪತ್ರಿಕೆಯ ವಿಶೇಷಾಂಕವನ್ನು ಉದ್ಘಾಟಿಸಿ ನವಕರ್ನಾಟಕ ಪ್ರಾಂತವು ಮಾದರಿ ಪ್ರಾಂತವಾಗುವಂತೆ ಮಾಡುವ ಹೊಣೆ ಕನ್ನಡಿಗರ ಮೇಲಿದೆ ಎಂದರು. ಶ್ರೀ ಕಡಂಗೋಡ್ಲು ಶಂಕರ ಭಟ್ಟರು "ಸಾಹಿತ್ಯದಲ್ಲಿ ನವಭಿರುಚಿ" ವಿಷಯವನ್ನೆತ್ತಿ ಭಾಷಣವಿತ್ತರು. ಶ್ರೀ ಎ. ಜೆ. ಆಳ್ವರ ಭಾಷಣವಾದ ಮೇಲೆ ಅಧ್ಯಕ್ಷ ಸ್ವಾಮಿಗಳವರು ನೂತನ ಕರ್ನಾಟಕದಲ್ಲಿ ಜನಜೀವನವು ಸುಧಾರಿಸುವಂತಾಗಲೆಂದು ಹರಸಿ, ಅಸಹ್ಯ ಲಂಚಗೂಳಿತನ ಇತ್ಯಾದಿಗಳು ನಿರ್ಮೂಲವಾಗಬೇಕಾಗಿದೆ ಎಂದರು. ಉಪನ್ಯಾಸಕರಿಗೆ ಸ್ವಾಮಿಗಳವರು ಬೆಳ್ಳಿಯ ಪೇಟೆ ಪಾರಿತೋಷಕವಿತ್ತು ಗೌರವಿಸಿದರು.

---

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

R. E. P. 275/56, O. S. No. 362/55

R. E. A 571/56.

ವೆಂಕಮ್ಮ ಹೆಂಗ್ಸು—ವಾದಿ—ಅರ್ಜಿದಾರಳು

ಮತ್ತು

ಚೆನ್ನಮ್ಮ ಹೆಂಗ್ಸು, ತೊಟ್ಲ ದಯ್ಯಕ್ಕ ಹೆಂಗ್ಸಿನ ಮಗಳು ಕುಟುಂಬದ ಯಜಮಾನ್ತಿ ವ ಅದಳ್ತಿದಾರಳು, ಪುತ್ತೂರು ತಾಲ್ಲೂಕು ಆರ್ಯಾಪು ಗ್ರಾಮ—ಪ್ರತಿವಾದಿ - ಎದ್ರಿ.

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ:—

ಮೇಲೆ ಹೇಳಿದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ವಾದಿಳು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾಳೆ. ಆದ್ದರಿಂದ ವಿಕ್ರಯದ ಯಿಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ ತಾ. 14-11-1956ಕ್ಕೆ ಇಟ್ಟಿರುತ್ತದೆ. ಅಲ್ಲದೆ ವಾದಿ ಅರ್ಜಿದಾರಳೀಗೆ ದರ್ಕಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತ ಮಾಡಿದ ಅರ್ಜಿ ಕೂಡಾ ಮೇಲ್ಕಂಡ ತಾರೀಕಿಗನೇ ಯಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಪುತ್ತೂರು ಕೋರ್ಟು ವಗೈರೆ 11 ಗಂಟೆಗೆ ಸರಿಯಾಗಿ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

C. S. Shastry,
Vakil for Petitioner

ಪುತ್ತೂರು, 5—11—56

---

**The Udipi Bank Ltd.** In voluntary Liquidation)

UDIPI

ಮಾರಾಟಕ್ಕಿದೆ.

ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರ ಪಂಚಾಯತ ಬೋರ್ಡಿಗೆ ಸೇರಿದ ತುಳಸಿಕಟ್ಟೆ ರಸ್ತೆ ಬದಿಯಲ್ಲೆ ಇರುವ ಸ. ನಂ. 1-38., 1-39., (ವಿಸ್ತೀರ್ಣ 27 ಮತ್ತು 20 ಸೆಂಟ್ಸು ತೀರ್ವೆ ರೂ. 1-3-0. ರೂ. 0-14-0.) ನೇ ಮೂಲಿ ಹಕ್ಕಿನ ಆಸ್ತಿ ಇವರಲ್ಲಿರುವ ಹಂಚು ಛಾವಣಿ ಉಪ್ಪರಿಗೆ ಮನೆ, ಬಾವಿ, ಮರಮಟ್ಟು ಮಾರುವದಿದೆ.

Offers above Rs. 6,500/- in multiples of Rs. 100/- only are invited; before 15—12—1956:

K. V. Kini,
Liquidator.

## ಎಲ್ಲೆಲ್ಲಿ ಏನೇನು?

**ಬಾಯಾರು**— ದ. ಕ. ಜಿಲ್ಲಾ ಬೋರ್ಡಿನಿಂದ ತೆರೆಯಲ್ಪಟ್ಟಿರುವ ಸ್ಥಳೀಯ ಗ್ರಾಮಾಸ್ಪತ್ರೆಯನ್ನು ಕಳೆದ ತಾ. 26ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಉದ್ಘಾಟಿಸಿದರು. ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ. ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಬೋರ್ಡು ಸದಸ್ಯ ಶ್ರೀ ಟಿ. ನಾರಾಯಣ ಭಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ವಿಠಲದಾಸ ಸೆಟ್ಟಿ, ಎನ್. ಉಪೇಂದ್ರ ನಾಯಕ್, ಕೆ. ಆರ್. ಬಲ್ಲಾಳ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ರಾಮ ಭಟ್ಟರು ಧನ್ಯವಾದಗಳನ್ನಿತ್ತರು.

**ಶಂಕರ ನಾರಾಯಣ**— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಪಾರ್ಲಿಮೆಂಟಿನ ಆಶ್ರಯದಲ್ಲಿ ಕಳೆದ ತಾ. 24ರಲ್ಲಿ ಯುಕ್ತರಾಷ್ಟ್ರ ದಿನಾಚರಣೆ ನಡೆಯಿತು. ಶಾಲಾ ಪಾರ್ಲಿಮೆಂಟ್ ಅಧ್ಯಕ್ಷ ಶ್ರೀ ಗಣಪಯ್ಯ ಸೆಟ್ಟಿಗಾರರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು

**ಕೋಟೆಕಾರು**— ಸ್ಥಳೀಯ ವನಿತಾ ಸಮಾಜದ ಹೊಸ ಕಟ್ಟಡವನ್ನು ಕಳೆದ ತಾ. 27ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹನವರು ಉದ್ಘಾಟಿಸಿದರು. ಮಂಗಳೂರು ವಕೀಲ್ ಶ್ರೀ ಜಿ. ಸೋಮಶೇಖರ ರಾಯರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಶ್ರೀಮತಿ ಕೆ. ಕಲ್ಯಾಣಿ ಸೆಟ್ಟರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಕೃಷ್ಣ ಸೆಟ್ಟಿ, ರಾಮರಾವ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ವನಿತಾ ಸಮಾಜದ ಕಾರ್ಯದರ್ಶಿನಿ ಕುಮಾರಿ ಎಸ್. ಗಿರಿಜನವರು ವಂದನೆಗಳನ್ನರ್ಪಿಸಿದರು.

**ಮುಂಡ್ಕೂರು**— ಮುಂಡ್ಕೂರಿನಲ್ಲಿ ಸಮಾಜವಿಕಾಸ ಯೋಜನೆಯ ನೆರವಿನಿಂದ ರಚಿಸಲಾದ ಸಮಾಜ ಮಂದಿರದ ಉದ್ಘಾಟನೆಯನ್ನು ಕಳೆದ ತಾ. 29ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರೂ, ಶಿಶುವಿಹಾರ ಕೇಂದ್ರವನ್ನು ಜಿಲ್ಲಾ ಸಮಾಜ ಶಿಕ್ಷಣಾಧಿಕಾರಿ ಕುಮಾರಿ ವಿಶಾಲಾಕ್ಷಿ ಯವರೂ ನೆರವೇರಿಸಿದರು. ಮಹಾತ್ಮಾಜೀಯವರ ಭಾವಚಿತ್ರದ ಅನಾವರಣವನ್ನು ತಾಳಿಪಾಡಿಯ ರೆ. ಫಾ. ಬಿ. ವಿ. ಡಿ,ಸೋಜರೂ, ನೆಹರೂರವರ ಚಿತ್ರವನ್ನು ಜಿಲ್ಲಾ ಬೋರ್ಡು ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರೂ, ದೇಶಭಕ್ತ ಕಾರ್ನಾಡು ಸದಾಶಿವ ರಾಯರ ತೈಲಚಿತ್ರವನ್ನು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಶ್ರೀ ಕೆ. ಆರ್. ಆಚಾರ್ಯರೂ ಮತ್ತು ದಿವಂಗತ ಎಮ್. ರಾಮಕೃಷ್ಣ ಪೂಂಜರ ತೈಲಚಿತ್ರವನ್ನು ಶ್ರೀ ವಿ. ಎಸ್. ಕುಡ್ವರೂ ಅನುಕ್ರಮವಾಗಿ ಅನಾವರಣಮಾಡಿದರು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಶಿಂಹ ನವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎಮ್. ವೆಂಕಣ್ಣ ಸೆಟ್ಟರು ಧನ್ಯವಾದಗಳನ್ನಿತ್ತರು. ಸಂಜೆ ಡಾ. ಕೆ. ಕೆ. ಹೆಗ್ಡೆಯವರು ಸ್ಥಳೀಯ ಗ್ರಾಮಾಸ್ಪತ್ರೆಯನ್ನು ಉದ್ಘಾಟಿಸಿದರು.

**ಶಿರ್ವ**— ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ಮಹಾ ಸಭೆಯು ಕಳೆದ ತಾ. 28ರಲ್ಲಿ ಡಾ. ವೈ. ಆರ್. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಮತ್ತು ಕರೆಸ್ಪೊಂಡೆಂಟರಾಗಿದ್ದ ದಿವಂಗತ ಶ್ರೀ ಕೆ. ಜೆ. ಬಲ್ಲಾಳರು ಸಂಘಕ್ಕೆ ಮಾಡಿದ ಸೇವೆಯನ್ನು ಕೃತಜ್ಞತಾ ಪೂರ್ವಕ ರಿಕಾರ್ಡು ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲ್ಪಾಯಿತು. ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರನ್ನು ಸಂಘದ ಅಧ್ಯಕ್ಷ ಮತ್ತು ಹಿಂದೂ ಹ್ಯಾಸ್ಕೂಲ್ ಮತ್ತು ಇತರ ಶಾಲೆಗಳ ಕರೆಸ್ಪೊಂಡೆಂಟರನ್ನಾಗಿ ಆರಿಸಲಾಯಿತು. ಶ್ರೀ ಬಿ. ಜಯರಾಮ ಸೆಟ್ಟರನ್ನು ಕಾರ್ಯದರ್ಶಿಯರನ್ನಾಗಿ ಆರಿಸಲಾಯಿತು.

**ಅಜೆಕಾರು**— ಪೈಲಟ್ ಯೋಜನೆಯು ನ್ವಯ ಅಜೆಕಾರು, ದೊಂಡೆರಂಗಡಿ ಮತ್ತು ಹೆರ್ಮುಂಡೆ ಸಹಕಾರ ಸಂಘಗಳನ್ನು ಮಿಲನ ಮಾಡಿ, 'ಅಜೆಕಾರು ಸಹಕಾರಿ ವ್ಯವಸಾಯಿಕ ಬ್ಯಾಂಕ್' ಆಗಿ ರೂಪಾಂತರ ಹೊಂದಿದುದನ್ನು ಕಾರ್ಕಳ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಕೆ. ವಾಸುದೇವ ಕಾಮತರು ಉದ್ಘಾಟಿಸಿದರು. ಸ್ಪೆಶಲ್ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಕೆ. ಕೃಷ್ಣ ಸೆಟ್ಟಿ ಶ್ರೀಗಳಾದ ಮೊಳಹಳ್ಳಿ ಶಿವರಾವ್ ಮತ್ತು ಡಾ. ಯು. ಕೃಷ್ಣನವರು ಕಾಲೋಚಿತ ಭಾಷಣಮಾಡಿದರು

**ಮೂಡಬಿದ್ರೆ**—ಸ್ಥಳೀಯ ಜೈನ್ ಹ್ಯಾಸ್ಕೂಲಿನ ವಿದ್ಯಾರ್ಥಿಗಳು ತಮ್ಮ ಮುಖ್ಯೋಪಾಧ್ಯಾಯ ಶ್ರೀ. ಎ. ಸೋಮಪ್ಪ ರೈ ಮತ್ತಿತರ ಅಧ್ಯಾಪಕರೊಡನೆ ಕಳೆದ ತಾ. 27ರಿಂದ 31ರ ತನಕ ಮೈಸೂರು ಪ್ರಾಂತಕ್ಕೆ ಪ್ರವಾಸ ಬೆಳೆಸಿ ದಸರಾ ಪ್ರದರ್ಶನ ನೋಡಲಾದುವನ್ನು ನೋಡಿ ಹಿಂತೆರಳಿದರು.

ತಾ. 1ರಲ್ಲಿ ಹ್ಯಾಸ್ಕೂಲಲ್ಲಿ ಕರ್ನಾಟಕ ನವ ರಾಜ್ಯೋದಯ ದಿನವನ್ನು ಶಾಲಾ ಹೆಡ್ಮಾಸ್ಟರ್ ಶ್ರೀ ಎ. ಸೋಮಪ್ಪ ರೈ, ಶ್ರೀ. ಕೆ. ಕೆ. ರೈ ಮೊದಲಾದವರ ಹಿರಿತನದಲ್ಲಿ ಆಚರಿಸಲಾಯಿತು.

**ಚೇರ್ಕಾಡಿ**—ಹಲುವಳ್ಳಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. 1ರಲ್ಲಿ ಶ್ರೀ ಬಿ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ರಚನಾ ಉತ್ಸವವು ಜರಗಿತು.

**ಕೊಳಂಬೆ** - ಕಿರಿಯ ಬುನಾದಿ ಶಾಲೆಯಲ್ಲಿ ತಾ. 1ರಲ್ಲಿ ಶಾಲಾ ಮಾಜಿ ಹೆಡ್ಮಾಸ್ಟರ್ ಶ್ರೀ ಡಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನವಕರ್ನಾಟಕ ಪ್ರಾಂತೋದಯ ದಿನವನ್ನು ಆಚರಿಸಲಾಯಿತು.

**ಪೊಳಲಿ**— ಶ್ರೀ ರಾಜ ರಾಜೇಶ್ವರೀ ಅಮ್ಮನವರ ದೇವಸ್ಥಾನದ ಬಡಗು ದಿಕ್ಕಿನ ಸುಮಾರು 20 ಎಕ್ರೆ ಸ್ಥಳದಲ್ಲಿ ಸರಕಾರದವರು ಜಾನುವಾರುಸಂತೆ ಏರ್ಪಡಿಸುವ ಯೋಜನೆಯಲ್ಲಿದ್ದಾರೆಂದು ತಿಳಿಯಬರುತ್ತದೆ. ಡಿಸೆಂಬರ ತಾ. 6ಕ್ಕೆ ಜಾನುವಾರು ಪ್ರದರ್ಶನ . ನಡೆಯಲೂಬಹುದೆಂದು ಓರ್ವ ಗ್ರಾಮಸ್ಥರು ಬರೆಯುತ್ತಾರೆ.

**ಆಲೂರು**— ಕುಂದಾಪುರ ತಾಲೂಕು ಆಲೂರು ಪಂಚಾಯತ ಕ್ಷೇತ್ರದ ತಾರಿಬೇರು ಮತ್ತು ಕಳಿ ಎಂಬಲ್ಲಿ ಎರಡು ಎಲಿಮೆಂಟರಿ ಶಾಲೆಗಳನ್ನು ಕಳೆದ ತಾ. 31ರಲ್ಲಿ ಕುಂದಾಪುರ ರೇಂಜಿನ ಸೀನಿಯರ್ ಡೆಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಎಲ್. ಬಿ. ಲಕ್ಷ್ಮೀನಾರಾಯಣ ಅವರು ತೆರೆದರು. ಆಲೂರು ಪಂಚಾಯತ ಪ್ರೆಸಿಡೆಂಟ್ ಶ್ರೀ ಎ. ಶ್ರೀನಿವಾಸ ಜೋಯಿಸರು ಮಕ್ಕಳಿಗೆ ತಿಂಡಿಹಂಚಿದ್ದರು.

**ಗುಡ್ಡೆಯಂಗಡಿ**- ಕುಂದಾಪುರ ತಾಲೂಕು ನಾಡ ಗ್ರಾಮದ ಗುಡ್ಡೆಯಂಗಡಿಯಲ್ಲಿ ತಾ 1ರಲ್ಲಿ ನವಕರ್ನಾಟಕ ರಾಜ್ಯೋದಯ ಆಚರಣೆಯ ಸಲುವಾಗಿ ಶ್ರೀ ಕೆ. ವೆಂಕಪ್ಪ ಸೆಟ್ಟರು ಧ್ವಜಾರೋಹಣ ಮಾಡಿದರು. ನಂತರ ಮೆರವಣಿಗೆ, ಸಭೆ, ಭಾಷಣಗಳಾದುವು. ಸಂಜೆ ಡಾ. ಕೆ. ಎಸ್. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಜನತಾ ಸೇವೆ ಮಂಡಳಿಯವರಿಂದ 'ಬಡವನ ಬಾಳು, ಯಕ್ಷಗಾನ ನಾಟಕ ಪ್ರದರ್ಶನವಾಯಿತು.

**ಕೆಮ್ತೂರು**— ಕೆಮ್ತೂರು ಶ್ರೀ ವಿಷ್ಣುಮೂರ್ತಿ ಟೀಮಿನ ವಿದ್ಯಾರ್ಥಿಗಳಿಗೂ ಮಣಿಪುರ ಬಬ್ರುವಾಹನ ಟೀಮಿನ ವಿದ್ಯಾರ್ಥಿಗಳಿಗೂ ತಾ. 4ರಲ್ಲಿ ಕ್ರಿಕೆಟ್ ಪಂದ್ಯಾಟ ಸ್ಪರ್ಧೆ ನಡೆದು ಕೆಮ್ತೂರು ಟೀಮಿನವರು ವಿಜಯಿಗಳಾದರು. ಕೆಮ್ತೂರ್ ಪಟೇಲ್ ಶ್ರೀ ಶ್ಯಾಮರಾಯ ಸೆಟ್ಟರು ವಿಜಯೀ ಟೀಮಿಗೆ ಬೆಳ್ಳಿಯ ಪದಕವಿತ್ತು ಗೌರವಿಸಿದರು.

**ಅಂಬಲಪಾಡಿ**— ಕಳೆದ ತಾ. 31 ಮತ್ತು ಇದೇ ತಾ1 ರಲ್ಲಿ ನವ ಕರ್ನಾಟಕ ರಾಜ್ಯೋದಯದ ಉತ್ಸವದ ಸಲುವಾಗಿ ಸ್ಥಳೀಯ ದೇವಸ್ಥಾನದ ಶ್ರೀ ಜನಾರ್ಧನ ಸ್ವಾಮಿಗೂ, ಮಹಾಕಾಳಿಯಮ್ಮನಿಗೂ ವಿಶೇಷ ಅಲಂಕಾರಗಳನ್ನು ತೊಡಿಸಿ ಹೊಸ ಕನ್ನಡ ನಾಡು ಚಿರಕಾಲ ಬಾಳಿಬರಲೆಂದು ಪ್ರಾರ್ಥನೆ ಆಯಿತು.

ತಾ. 3ರಲ್ಲಿ ಪದ್ಧತಿಯಂತೆ ಅಂಬಲಪಾಡಿ ಶಾಲಾ ಮಕ್ಕಳು ಇಡಂಬೂರು ಬೀಡಿನ ಚಾವಡಿಯಲ್ಲಿ ಪಾಠೋತ್ತರ ಚಟುವಟಿಕೆಗಳನ್ನು, ಮಹಿಷಾಸುರ ಜನನ ಕಥೆ ಬಯಲಾಟವನ್ನು ಬೇಸಿಕ್ ತರಬೇತಿ ಶಾಲಾ ಹೆಡ್ಮಾಸ್ಟರ್ ಶ್ರೀ ಶ್ರೀನಿವಾಸಾಚಾರ್ಯರ ಸಮ್ಮುಖದಲ್ಲಿ ಆಡಿ ತೋರಿಸಿದರು. ಶ್ರೀ ಅಣ್ಣಾಜಿ ಬಲ್ಲಾಳರು ಶಾಲಾ ಮಕ್ಕಳನ್ನು ಹರಸಿ ಅತೀ ವರ್ಣಿಸಿದರಲ್ಲದೆ ಸಿಹಿತಿಂಡಿಯಿತ್ತು ಸತ್ಕರಿಸಿದರು.

**ಕಟಪಾಡಿ**— ಸ್ಥಳೀಯ ಭುವನೇಂದ್ರ ಪ್ರೊಡಕ್ಟ್ಸ್ ಕಡೆಯಿಂದ ಧನ್ವಂತರಿ ಪೂಜೆ ಮತ್ತು ಗುರುಪೂಜೆಯು ಕಳೆದ ತಾ. 31ರಲ್ಲಿ ಕಾಶಿ ಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ಸನ್ನಿಧಿಯಲ್ಲಿ ಜರಗಿತು. ಕರ್ನಾಟಕ ರಾಜ್ಯೋದಯ ದಿನಾಚರಣೆಯೂ ಆ ದಿನವೇ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಸಿ. ಆರ್. ನಾಯಕರು ಸ್ವಾಗತಮಾತುಗಳನ್ನಾಡಿದರು. ವೈದ್ಯಗುರು ಎಮ್. ಆರ್. ಭಟ್ಟರು ಶ್ರೀ ಧನ್ವಂತರಿ ಕುರಿತು ಉಪನ್ಯಾಸವಿತ್ತರು. ಉಡುಪಿ ನಾಟ್ಯಕೂಟದವರಿಂದ ಪ್ರಹಸನ ಪ್ರದರ್ಶನವಾದ ಬಳಿಕ ಯಕ್ಷಗಾನ ಕಾಲಕ್ಷೇಪ ನಡೆಯಿತು.

---

## ಕಾಸರಗೋಡು ಪರಿಷತ್ತು

### ತಾ. 28–10–1956ರಲ್ಲಿ ಕೂಡಿದ ಕಾಸರಗೋಡು ಕರ್ನಾಟಕ ಪರಿಷತ್ತಿನಲ್ಲಿ ಮಂಡಿಸಿದ ಠರಾವುಗಳು.

1. ಚಂದ್ರಗಿರಿಯ ಉತ್ತರದ ಕಾಸರಗೋಡು ತಾಲೂಕಿನ ಪ್ರದೇಶವು ಚಾರಿತ್ರಿಕ, ಸಾಂಸ್ಕೃತಿಕ, ವ್ಯಾವಹಾರಿಕ ಹಾಗೂ ಭಾಷಾದೃಷ್ಟಿಯಿಂದ ಕರ್ನಾಟಕದ ಅಂಗವಾಗಿದೆ. ಈ ಪ್ರಾಂತವನ್ನು ಕರ್ಣಾಟಕ ರಾಜ್ಯದಲ್ಲೇ ಸೇರಿಸುವುದಾಗಿ ಭರವಸೆ ದೊರೆತಿದ್ದರೂ ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಕೇರಳದಲ್ಲೇ ಸೇರಿಸಬೇಕೆಂಬ ಸರಕಾರದ ತೀರ್ಮಾನದಿಂದ ಇಲ್ಲಿಯ ಜನತೆಗೆ ತೀವ್ರ ಅನ್ಯಾಯ ಮತ್ತು ಅಸಮಾಧಾನವಾಗಿದೆ. ಇನ್ನಾದರೂ ಬೇಗನೆ ಗಡಿನಿರ್ಣಯದ ಬಗ್ಗೆ ಕಮಿಷನನ್ನು ನೇಮಿಸಿಯೂ ಇತರ ವಿಧಾನದಿಂದ ಇದನ್ನು ತಿದ್ದುಪಡಿಗೊಳಿಸಬೇಕೆಂದು ಕೇಂದ್ರ ಸರಕಾರವನ್ನು ಈ ಪರಿಷತ್ತು ಒತ್ತಾಯಿಸುತ್ತದೆ.

2. ನ್ಯಾಯವಾಗಿ ಕರ್ಣಾಟಕದ ಅಂಗಗಳಾಗಿದ್ದು ಪ್ರಾಂತ ಪುನಃರಚನೆಯಲ್ಲಿ ಬಿಟ್ಟುಹೋಗಿರುವ ಕಾಸರಗೋಡು ಅಂತೆಯೇ ಇತರ ಪ್ರದೇಶಗಳನ್ನು ಮೈಸೂರು ಪ್ರಾಂತದಲ್ಲೇ ಸೇರಿಸುವಂತೆ ಅಗತ್ಯವುಳ್ಳ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಈ ಪರಿಷತ್ತು ಮೈಸೂರು ಸರಕಾರವನ್ನು ಕೇಳಿಕೊಳ್ಳುತ್ತದೆ. ಈ ಬಗ್ಗೆ ಸಮಿತಿಯಿಂದ ಆರಿಸುವ ಶಿಷ್ಟಮಂಡಳವು ಕೇಂದ್ರಸರಕಾರ ಮೈಸೂರು ಸರಕಾರ ಮತ್ತು ಕೇರಳ ಸರಕಾರಗಳೊಡನೆ ವಿಚಾರ ವಿನಿಮಯ ನಡೆಸತಕ್ಕದ್ದು.

3. ಮೈಸೂರು ಪ್ರಾಂತದಲ್ಲೇ ಸೇರಬೇಕೆಂಬ ಈ ಪ್ರದೇಶದ ಜನರ ಆಕಾಂಕ್ಷೆಯನ್ನು ಸರಕಾರಕ್ಕೆ ಮುಂದಿಟ್ಟು ಪಡಿಸುವರೆ ಮತ್ತು ಈ ಪ್ರದೇಶದ ಜನರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವರೆ ಈ ಪ್ರದೇಶಕ್ಕೆ ಸಂಬಂಧಿಸಿದ ಶಾಸನ ಸಭೆ ಮತ್ತು ಲೋಕ ಸಭೆಗಳ ಚುನಾವಣೆಯಲ್ಲಿ ಕಾಸರಗೋಡು ಪ್ರಶ್ನೆಯನ್ನು ಜನತೆಯ ಮುಂದಿಟ್ಟು ಪಕ್ಷಾತೀತ ಉಮೇದುವಾರರನ್ನು ಕರ್ನಾಟಕ ಪ್ರಾಂತೀಕರಣ ಸಮಿತಿಯ ಪತಿಯಿಂದ ನಿಲ್ಲಿಸಬೇಕಾಗಿ ಈ ಪರಿಷತ್ತು ನಿರ್ಣಯಿಸುತ್ತದೆ. ಎಲ್ಲಾ ರಾಜಕೀಯ ಪಕ್ಷಗಳೂ ಜನತೆಯೂ ಈ ಉದ್ದೇಶವನ್ನು ಪೂರ್ತಿಗೊಳಿಸುವರೆ ಈ ಕಾರ್ಯಕ್ರಮದಲ್ಲಿ ಸಹಕರಿಸಬೇಕಾಗಿ ಈ ಪರಿಷತ್ತು ಕೇಳಿಕೊಳ್ಳುತ್ತದೆ. ಬರುವ ಚುನಾವಣೆಗೆ ಅವಶ್ಯವಿರುವ ಎಲ್ಲಾ ಏರ್ಪಾಡುಗಳನ್ನು ಮಾಡುವರೆ ಈ ಕೆಳಗಿನವರಿಂದ ಕೂಡಿದ ಉಪಸಮಿತಿಗೆ ಅಧಿಕಾರ ಕೊಡಲಾಗಿದೆ.

ಶ್ರೀಯುತರಾದ ಬಿ. ಎಸ್. ಕಕ್ಕಿಲ್ಲಾಯ, ಟಿ. ನಾರಾಯಣ ಭಟ್, ಬಿ. ಜಗನ್ನಾಥ ರೈ, ಎ. ರಾಮಯ್ಯ ನಾಯಕ್, ಎಂ. ವಿಠಲ್ ಭಟ್, ಡಾ. ಪಿ ಎಸ್. ಶಾಸ್ತ್ರಿ, ಯಂ. ಉಮೇಶರಾವ್, ಕೆ ಮಹಾಬಲ ಭಂಡಾರಿ, ಎ. ಎ. ಶರೀಫ್ ಹಾಜಿ. ಈ ಸಮಿತಿಯು ಇತರರನ್ನು ಸೇರಿಸಿಕೊಳ್ಳತಕ್ಕದ್ದು.

4. ಈ ಪ್ರದೇಶದ ಕನ್ನಡ ವಿದ್ಯಾಭ್ಯಾಸವು ಈಗಿರುವಂತೆ ಮುಂದುರಿಸುವರೆ ತಕ್ಕ ವ್ಯವಸ್ಥೆಯನ್ನು ಕೈಗೊಳ್ಳಲು ಕೇರಳ ಸರಕಾರವನ್ನು ಈ ಪರಿಷತ್ತು ಕೇಳಿಕೊಳ್ಳುತ್ತದೆ, ಇದು ಅಸಾಧ್ಯವಾದರೆ ಈ ಪ್ರದೇಶದ ಕನ್ನಡ ಮಾಧ್ಯಮವಿರುವ ವಿದ್ಯಾ ಸಂಸ್ಥೆಗಳನ್ನು ಮೈಸೂರು ಸರಕಾರದ ವಿದ್ಯಾಧಿಕಾರೀ ಸಂಸ್ಥೆಗಳೊಂದಿಗೆ ಸೇರಿಸಲು ಸಮ್ಮತಿಸಬೇಕಾಗಿ ಕೇರಳ ಸರಕಾರ ಮತ್ತು ಮೈಸೂರು ಸರಕಾರಗಳನ್ನು ಈ ಪರಿಷತ್ತು ಕೇಳಿಕೊಳ್ಳುತ್ತದೆ.

5: ಈ ಪ್ರದೇಶದಲ್ಲಿ ಗ್ರಾಮೋದ್ಯೋಗಸ್ಥರ ರಿಕಾರ್ಡುಗಳೂ ಕಚೇರಿಗಳ ದಾಖಲೆಗಳೂ, ವ್ಯಾಪಾರ ವಹಿವಾಟಿನ ಲೆಕ್ಕಾಚಾರಗಳೂ, ಸಹಕಾರೀ ಸಂಘ ಮತ್ತು ಧಾರ್ಮಿಕ ಸಂಸ್ಥೆಗಳ ಲೆಕ್ಕಾಚಾರಗಳೂ ಹೆಚ್ಚಿನ ಮಟ್ಟಿಗೆ ಕನ್ನಡದಲ್ಲೇ ಇರುತ್ತವೆ. ಕೋರ್ಟು ಕಚೇರಿಗಳಲ್ಲೂ ಹೆಚ್ಚಾಗಿ ಕನ್ನಡವೇ ಬಳಕೆಯಲ್ಲಿದೆ. ಈಗಿರುವ ಕ್ರಮದಲ್ಲಿ ಬದಲಾವಣೆ ಮಾಡಬಾರದಾಗಿಯೂ, ಇಲ್ಲಿನ ವಿಶಿಷ್ಟ ಪರಿಸ್ಥಿತಿಯನ್ನವಲೋಕಿಸಿ ಈ ಪ್ರದೇಶವನ್ನು ಪ್ರತ್ಯೇಕ ತಾಲೂಕಾಗಿ ರೂಪಿಸಬೇಕಾಗಿಯೂ ಈ ಪರಿಷತ್ತು ಕೇರಳ ಸರಕಾರವನ್ನು ಒತ್ತಾಯಿಸುತ್ತದೆ.

6: ಈ ಪ್ರದೇಶವನ್ನು ದಕ್ಷಿಣ ಕನ್ನಡದಿಂದ ಬೇರ್ಪಡಿಸಿರುವುದರಿಂದ ಸಿವಿಲ್, ರೆವಿನ್ಯು ಮತ್ತಿತರ ವ್ಯವಹರಣೆಗಳ ಮಟ್ಟಿಗೆ ಜನರಿಗೆ ಹೆಚ್ಚಿನ ಅನಾನುಕೂಲವಾಗಿರುವುದರಿಂದ ಕಾಸರಗೋಡಿನಲ್ಲೇ ಸಬ್ ಕೋರ್ಟು, ರೆವಿನ್ಯು ಡಿವಿಜನಲ್ ಆಫೀಸು ಮತ್ತು ಫಸ್ಟ್ ಕ್ಲಾಸ ಮೆಜಿಸ್ಟ್ರೇಟ್ ಕೋರ್ಟುಗಳನ್ನು ಏರ್ಪಡಿಸುವಂತೆ ಕೇರಳ ಸರಕಾರವನ್ನು ಈ ಪರಿಷತ್ತು ಕೇಳಿಕೊಳ್ಳುತ್ತದೆ.

7: ಎಲ್ಲಾ ವಿಧದ ಘಟನಾತ್ಮಕ ವಿಧಾನಗಳಿಂದಲೂ ನಾವು ಮಾಡುವ ಪ್ರಯತ್ನಗಳಿಂದ ಸರಕಾರವು ಈಗಿನ ತೀರ್ಮಾನವನ್ನು ತಿದ್ದುಪಡಿಗೊಳಿಸುವುದೆಂದು ನಾವು ಆಶಿಸುತ್ತೇವೆ. ಆದನ್ನು ಬೇಗನೆ ನಿವೃತ್ತಿ ದೊರೆಯದಿದ್ದರೆ ನಾವು ಪ್ರತ್ಯಕ್ಷ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗುವುದು, ಈ ವಿಷಯವನ್ನು ಸರಕಾರದ ಗಮನಕ್ಕೆ ತರುವುದಲ್ಲದೆ ಆ ಬಗ್ಗೆ ಇಲ್ಲಿಯ ಜನತೆಯು ಸಂಘಟಿತರಾಗಬೇಕಾಗಿ ಈ ಪರಿಷತ್ತು ಕೇಳಿಕೊಳ್ಳುತ್ತದೆ.

8: ಕಳೆದ ಒಂದು ವರ್ಷದಲ್ಲಿ ಕಾಸರಗೋಡಿನ ಪ್ರಶ್ನೆಯ ಕುರಿತು ದುಡಿದ ಎಲ್ಲಾ ಮುಂದಾಳುಗಳಿಗೂ, ಮಹಿಳೆಯರಿಗೂ, ವಿದ್ಯಾರ್ಥಿಗಳಿಗೂ, ಪತ್ರಿಕೆಗಳಿಗೂ ಈ ಪರಿಷತ್ತು ಧನ್ಯವಾದಗಳನ್ನರ್ಪಿಸುತ್ತದೆ. ಅಲ್ಲದೆ ಇನ್ನು ಮುಂದೆಯೂ ನಮ್ಮ ಉದ್ದೇಶವು ಪೂರೈಸುವ ತನಕ ಸಹಕರಿಸಬೇಕೆಂದು ಕೇಳಿಕೊಳ್ಳುತ್ತದೆ.

9: ಕರ್ನಾಟಕದ ನಾಯಕರಾಗಿ ಒಮ್ಮತದಿಂದ ಆಯ್ಕೆ ಹೊಂದಿದ ಶ್ರೀ ನಿಜಲಿಂಗಪ್ಪನವರನ್ನು ಈ ಪರಿಷತ್ತು ಅಭಿನಂದಿಸುತ್ತದೆ.

ಸ್ವಾಗತ ಸಮಿತಿ, ಕಾಸರಗೋಡು,

---

## NOTICE

**In the Court of the District Munsif of Karkala**

O. P. No. 131/1956.

In the matter of the debts of R. Upendra Shenoi deceased.

Shantha Bai and others

—*Petitioners.*

Ganga Bai and another

—*Respondents.*

To whomsoever it may concern.

Please take notice that the petitioners have filed the above petition praying that a succession certificate may be granted to the 1st Petitioner on behalf of the Petitioners 3 and 4 also in respect of the debt set out in schedule A of the petition and the same stands posted to 19—11—1956 and that you are at liberty to appear before the said Court at 11 a. m. on the said date and file your objections if any failing which the petition will be decided in your absence.

**P. Ramachandra Rao,**
Pleader for petitioners.

**Karkala, 3-11-1956.**

## ಮಂಗಳೂರು

**ಭಾಷಣ—** ಕಳೆದ ತಾ. 20ರಲ್ಲಿ ಸಂಜೆ ಕೇಂದ್ರ ಮೈದಾನಿನಲ್ಲಿ ಕಮ್ಯೂನಿಸ್ಟ್ ಮುಂದಾಳು ಶ್ರೀ ಎ. ಕೆ. ಗೋಪಾಲನ್ ಅವರು ಭಾಷಣಮಾಡುತ್ತಾ, ಸದ್ಯದ ಪರಿಸ್ಥಿತಿಯಲ್ಲಿ ಹೊಸ ಕೇರಳ ಪ್ರಾಂತದಲ್ಲಿ ಎಡ ಪಕ್ಷೀಯ ಸರಕಾರವಾಗುವುದು ಖಂಡಿತವೆಂದರು. ಪ್ರತಿ ಪ್ರಾಂತಗಳಲ್ಲಿರುವ ಭಾಷಾ ಅಲ್ಪ ಸಂಖ್ಯಾಕರಿಗೆ ಸಾಕಷ್ಟು ಭರವಸೆಗಳನ್ನು ನೀಡದಿದ್ದಲ್ಲಿ, ಭಾಷಾವಾರು ಪ್ರಾಂತ ರಚನೆಯು ಯಶಸ್ವಿಯಾಗಲಿಕ್ಕಿಲ್ಲವೆಂದರು. ಸಭಾಧ್ಯಕ್ಷತೆಯನ್ನು ಶ್ರೀ ಎ. ಕೃಷ್ಣ ಸೆಟ್ಟರು ವಹಿಸಿದ್ದರು.

**ಜಿಲ್ಲಾ ಬೋರ್ಡಿನ ಸಭೆಯು-** ಕಳೆದ ತಾ. 27ರಲ್ಲು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಕೆ. ಕೆ. ಶೆಟ್ಟರು ಮೈಸೂರು ವಿಧಾನ ಸಭೆಗೆ ಆರಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ನವಂಬರ ತಾ. 1ರಿಂದ ಕಾಸರಗೋಡು ತಾಲೂಕಿನಲ್ಲಿ ಜಿಲ್ಲಾ ಬೋರ್ಡಿನ ವ್ಯವಹಾರ ಕಾರ್ಯನಿರ್ವಹಣೆ ಮಾಡುವಂತೆ ಒಬ್ಬ ಸ್ಪೆಶಲ್ ಆಫೀಸರರ ನೇಮಕವಾಗಲಿದ್ದುದರಿಂದ ಆ ತಾಲೂಕಿನಿಂದ ಬೋರ್ಡಿಗೆ ಆರಿಸಲ್ಪಟ್ಟಿರುವ ಎಂಟು ಮಂದಿ ಸದಸ್ಯರನ್ನು ಸಭೆಯಲ್ಲಿ ಬೀಳ್ಕೊಳ್ಳಲಾಯಿತು. ಬೋರ್ಡಿನ ಅಂದಾಜು ವೆಚ್ಚ ಪತ್ರಗಳನ್ನು ತಯಾರಿಸುವರೆ 13 ಮಂದಿ ಸದಸ್ಯರಿರುವ ಕಮಿಟಿ ರಚನೆಯಾಯಿತು. ಕುಂಬಳೆಯಲ್ಲಿ ಸ್ಥಳೀಯರು ಕಟ್ಟಡ ಮತ್ತು ಉಪಕರಣಗಳನ್ನು ಒದಗಿಸಿದಲ್ಲಿ ಹೈಸ್ಕೂಲ್ ತೆರೆಯಬಹುದೆಂದು ತೀರ್ಮಾನವಾಯಿತು. ಮಂಗಳೂರು ಶ್ರದ್ಧಾನಂದ ಸೇವಾಶ್ರಮಕ್ಕೆ ಸಹಾಯಧನ ಕೊಡಲಾಗುವುದಿಲ್ಲವೆಂದು ನಿರ್ಧರಿಸಲಾಯಿತು.

**ಅಡಿಕೆ ಸಮಿತಿಯ ಸಭೆ —** ಕೇಂದ್ರ ಅಡಿಕೆ ಸಮಿತಿಯ ಆರ್ಥಿಕ ಉಪಸಮಿತಿಯ ಸಭೆಯು ಕಳೆದ ತಾ. 26ರಲ್ಲು ಸಮಿತಿಯ ಉಪಾಧ್ಯಕ್ಷ ಶ್ರೀ ಎ. ಎಮ್. ಥೋಮಸರ ಅಧ್ಯಕ್ಷತೆಯಲ್ಲಿ ಜರಗಿತು. ಅಡಿಕೆ ಸಮಿತಿಯ 1957-58ರ ಅಂದಾಜು ಬಜೆಟ್ ಮಂಜೂರು ಮಾಡಲಾಯಿತು. ಸಮಿತಿ ಸದಸ್ಯರು ಅದೇ ದಿನ ವಿಟ್ಲದಲ್ಲಿ ಕೇಂದ್ರ ಅಡಿಕೆ ಪರಿಶೋಧನಾ ಕೇಂದ್ರವನ್ನು ಸಂದರ್ಶಿಸಿ ಅಡಿಕೆ ಬೇಸಾಯದ ಕುರಿತು ವಿಚಾರವಿನಿಮಯ ನಡೆಸಿದರು.

**ವಿಮಾ ಏಜಂಟರ ಸಭೆ—** ದ. ಕ. ಜಿಲ್ಲೆಯ ಜೀವ ವಿಮಾ ಏಜಂಟರ ಸಭೆಯು ಕಳೆದ ತಾ. 28ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಜೀವ ವಿಮಾ ವ್ಯವಹಾರದ ರಾಷ್ಟ್ರೀಕರಣವನ್ನು ಸ್ವಾಗತಿಸುವ ಮತ್ತು ಇದರಿಂದಾಗಿ ವಿಮಾ ಏಜಂಟರ ಮೇಲೆ ಹೊರಿಸಲಾದ ಕೆಲವು ನಿಯಮಗಳನ್ನು ಸಡಿಲುಗೊಳಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

**ಪ್ರ. ಸೋ. ಪಕ್ಷದ—** ಕಾರ್ಯಕಾರೀ ಸಮಿತಿಯ ಸಭೆಯು ಈಚೆಗೆ ಜರಗಿ ಶ್ರೀಗಳಾದ ಯು. ಎಸ್. ನಾಯಕ್ (ಅಧ್ಯಕ್ಷ), ವಿ. ಶ್ರೀನಿವಾಸ ಸೆಟ್ಟಿ (ಪ್ರಧಾನ ಕಾರ್ಯದರ್ಶಿ), ಡಿ. ಮೋಹನ ರಾವ್ (ಕೋಶಾಧಿಕಾರಿ), ಎಚ್. ಮಹಾಬಲ ರೈ ಮತ್ತು ಸಿ. ಗೋವಿಂದನ್ (ಜತೆಕಾರ್ಯದರ್ಶಿ), ಇವರನ್ನೊಳಗೊಂಡ ತಾತ್ಕಾಲಿಕ ಕಾರ್ಯನಿರ್ವಾಹಕ ಸಮಿತಿಯೊಂದು ರಚಿಸಲ್ಪಟ್ಟಿತು.

**ಮಂಗಳೂರು ಸೇವಾಸಮಾಜದ ವರ—** ಎರಡು ದಿನಗಳ ವಾರ್ಷಿಕ ಧರ್ಮ ಸಂಗ್ರಹಣೋತ್ಸವ ಮತ್ತು ಪ್ರದರ್ಶನವನ್ನು ತಾ. 2ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ಸ್ಥಳೀಯ ಸರಕಾರಿ ಕಾಲೇಜಿನಲ್ಲಿ ಉದ್ಘಾಟಿಸಿದರು. ಸೇವಾಸಮಾಜದ ಚೆರ್‌ಮೆನ್ ಶ್ರೀಮತಿ ಕಮಲಾ ಆಳ್ವರು ಉದ್ಘಾಟನೆಗೈಯಲು ಕಲೆಕ್ಟರರನ್ನು ವಿನಂತಿಸಿದರು. ಜತೆಕಾರ್ಯದರ್ಶಿ ಶ್ರೀಮತಿ ಹೀರಾ ಶೆಟ್ಟರು ಸ್ವಾಗತಭಾಷಣಮಾಡಿದರು. ಉಪಾಧ್ಯಕ್ಷ ಶ್ರೀಮತಿ ಶಾಂತೇರಿ ಜೆ. ಪ್ರಭುಗಳು ಧನ್ಯವಾದವಿತ್ತರು.

**ಅಂತರಾಷ್ಟ್ರೀಯ ಸಹಕಾರ ದಿನಾಚರಣೆ—** ಅಂಗವಾಗಿ ತಾ. 3ರಲ್ಲು ಸೆಂಟ್ರಲ್ ಬೇಂಕಿನ ಸಭಾ ಸದನದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿತು. ಎಮ್. ಎಸ್. ಪಿತಾಂಬರ ರಾಯರು ಸ್ವಾಗತಿಸಿದರು. ಡಾ. ಎಮ್. ಉಮೇಶ ರಾವ್, ಎಮ್. ಕೃಷ್ಣ ಶೆಟ್ಟಿ, ಡೆಪ್ಯುಟಿ ರಿಜಿಸ್ಟ್ರಾರ್ ಮೊದಲಾದವರು ಮಾತನಾಡಿದರು.

**ಡಾ. ಲೋಹಿಯಾರವರ ಭಾಷಣ** ತಾ. 3ರಲ್ಲಿ ರಾತ್ರಿ ಮಂಗಳೂರು ಕೇಂದ್ರ ಮೈದಾನಿನಲ್ಲಿ ಶ್ರೀ ಮೋಹನ ಬಂಗೇರರ ಅಧ್ಯಕ್ಷತೆಯಲ್ಲಿ ಸ್ಥಳೀಯ ಸೋಶಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಸೋಶಲಿಸ್ಟ್ ನಾಯಕ ಡಾ. ರಾಮಮನೋಹರಲೋಹಿಯಾರವರು ಮಾತನಾಡುತ್ತಾ, ಕಾಂಗ್ರೆಸಿನ ಪ್ರತಿಪಕ್ಷಗಳೆಲ್ಲಾ ತಂತಮ್ಮ ಪಕ್ಷಗಳನ್ನು ವಿಸರ್ಜಿಸಿ ಒಂದೇ ಪಕ್ಷವಾಗಬಹುದಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಐಕ್ಯರಂಗ ರಚಿಸಬೇಕೆಂಬ ಪ್ರತಿಯೊಂದು ಪಕ್ಷಕ್ಕೂ ಪ್ರತ್ಯಪ್ರತ್ಯೇಕ ತತ್ವಪ್ರಣಾಳಿಕೆಯಿದೆ ನೀತಿಯಿದೆ, ಕಾರ್ಯಕ್ರಮವಿದೆ. ಇದರಿಂದಾಗಿಯೇ ನಮ್ಮ ಪಾರ್ಲಿಮೆಂಟಿನಲ್ಲಿ 100ಕ್ಕೂ ಮಿಕ್ಕಿ ಪ್ರತಿಪಕ್ಷದ ಸದಸ್ಯರಿದ್ದರೂ ಅವರೆಲ್ಲ ಜತೆಯಾಗಿ ಕಾಂಗ್ರೆಸ್ ಸರಕಾರಕ್ಕೆ ಸರಿಯಾದ ಪ್ರತಿರೋಧವನ್ನು ಪಾರ್ಲಿಮೆಂಟಿನಲ್ಲಿ ಕೊಡಲು ಸಾಧ್ಯವಾಗಲಿಲ್ಲವೆಂದರು. ಸಭಾರಂಭದಲ್ಲಿ ಶ್ರೀ ಅಮ್ಮೆಂಬಳ ಬಾಳಪ್ಪನವರು ಡಾ. ಲೋಹಿಯಾರನ್ನು ಸ್ವಾಗತಿಸಿದರು.

**ದ. ಕ. ಜಿಲ್ಲಾ ಶಿಕ್ಷಕ ಸಂಘದ ಕೌನ್ಸಿಲು ಸಭೆಯು—** ತಾ. 4ರಲ್ಲು ಬಿ. ಇ. ಎಮ್. ಶಾಲೆಯಲ್ಲಿ ರೆ| ಫಾ| ಜೇಮ್ಸ್ ಕೊಯಿಲೊರವರ ಅಧ್ಯಕ್ಷತೆಯಲ್ಲಿ ಜರಗಿತು. ತಾ 1-11-56ರಿಂದ ದಕ್ಷಿಣ ಭಾರತ ಅಧ್ಯಾಪಕರ ಸಂಘದಿಂದ ಬೇರ್ಪಟ್ಟಿರುವ ಈ ಸಂಸ್ಥೆಯ ಪರವಾಗಿ ಅವರಿಗೆ ಕೃತಜ್ಞತೆಯನ್ನು ಅರ್ಪಿಸುವ, ಕಾಸರಗೋಡು ತಾಲೂಕಿನ ಅಧ್ಯಾಪಕರ ಸಂಸ್ಥೆಯವರು ಈ ದಶಂಬರ ತನಕ ಇದೇ ಸಂಸ್ಥೆಯಲ್ಲಿ ಇರಲು ಮತ್ತು ಜಿಲ್ಲಾ ಶೈಕ್ಷಣಿಕ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಆಮಂತ್ರಿಸುವ, ಜಿಲ್ಲಾ ಟೀಚರ್ಸ್ ಗಿಲ್ಡಿನವರು ಮುಂದಾಳುತನವಹಿಸಿ ನವ ಮೈಸೂರಿನ ಇತರ ಕಡೆಯವರನ್ನು ಕೂಡಿಸಿ ಅಧ್ಯಾಪಕರ ಫೆಡರೇಶನ್ ರಚಿಸುವ ಕೆಲಸ ಕೈಕೊಳ್ಳಬೇಕೆನ್ನುವ, ಜಿಲ್ಲಾ ಸಮ್ಮೇಳನಕ್ಕೆ ಮೈಸೂರಿನ ವಿದ್ಯಾ ಡ್ಯಾರೆಕ್ಟರರನ್ನು ಆಮಂತ್ರಿಸಬೇಕೆನ್ನುವ, ವಿದ್ಯಾ ಮಂತ್ರಿ ವಿದ್ಯಾ ಡ್ಯಾರೆಕ್ಟರರಿಗೆ ಸಂಘದ ಕಡೆಯಿಂದ ಸ್ವಾಗತವೀಯಬೇಕೆನ್ನುವ ಮೊದಲಾದ ನಿರ್ಣಯಗಳಾದುವು.

**ವಾರ್ಷಿಕ ದಿನಾಚರಣೆ—** ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ 36ನೆ ವಾರ್ಷಿಕ ದಿನವನ್ನು ಕಳೆದ ತಾ. 31ರಲ್ಲು ಮಂಗಳೂರಿನ ವಿವಿಧ ಟ್ರೇಡ್ ಯೂನಿಯನ್ನುಗಳ ಮತ್ತು ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಸಂಯುಕ್ತ ಆಶ್ರಯದಲ್ಲಿ ಆಚರಿಸಲಾಯಿತು. ಶ್ರೀ ಎ. ಶಾಂತಾರಾಮ ಪೈಗಳು ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಮೋನಪ್ಪ ಸೆಟ್ಟಿ ಮೊದಲಾದವರು ಭಾಷಣವಿತ್ತರು.

**ಪದ್ಮ ಶ್ರೀ ಡಾ| ಮೋದಿಯವರು** ಭಾರತದ ಸುಪ್ರಸಿದ್ಧ ನೇತ್ರ ಚಿಕಿತ್ಸಕ ಡಾ. ಎಮ್. ಸಿ. ಮೋದಿಯವರು ಕಳೆದ ತಾ 24ರಲ್ಲು ಮಂಗಳೂರಿಗೆ ಆಗಮಿಸಿದರು. ಮರುದಿವಸ ಪೂರ್ವಾಹ್ನ ಗಂಟೆ 8ರಿಂದ ಮಧ್ಯಾಹ್ನ 1ರ ತನಕ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಒಟ್ಟು 1010 ಮಂದಿಯ ನೇತ್ರ ಪರೀಕ್ಷೆ ಮಾಡಿದರು. ಆ ಪೈಕಿ 325 ಮಂದಿಗೆ ಔಷಧ ವಿತ್ತರು. 158 ಮಂದಿಗೆ ಇನ್ನು ನಾಲ್ಕು—ಆರು ತಿಂಗಳುಗಳ ಮೇಲೆ ಶಸ್ತ್ರಕ್ರಿಯೆಯಾಗಬೇಕೆಂದು ವಿವರಿಸಿದರು. ಮತ್ತೆ ಕೆಲವರಿಗೆ ದೃಷ್ಟಿ ಪರೀಕ್ಷೆ ನಡೆಸಿ ಸುಲೋಚನಗಳನ್ನು ಉಪಯೋಗಿಸಲು ಹೇಳಿರುವರು ಡಾ. ಮೋದಿಯವರು ದಶಂಬರ ತಿಂಗಳಲ್ಲಿ ನಮ್ಮ ಜಿಲ್ಲೆಯ ಆರು ಕೇಂದ್ರಗಳಲ್ಲಿ ಒಂದೊಂದು ದಿನದ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರೆಂದೂ ತಿಳಿಯಲಾಗುತ್ತದೆ. ದಾವಣಗೆರೆಯಲ್ಲಿ ಡಾ. ಮೋದಿಯವರು ಸದ್ಯದಲ್ಲೇ ನೇತ್ರ ಚಿಕಿತ್ಸೆ —ಸಂಶೋಧನೆ— ಉಚ್ಚ ಶಿಕ್ಷಣಗಳ ಬಗ್ಗೆ ಒಂದು ಸಂಸ್ಥೆ ತೆರೆಯುವ ಸಂಕಲ್ಪವಿದೆ ಎಂದೂ ತಿಳಿಯಪಡಿಸಿದ್ದಾರೆ.

---

**ಕಾಸರಗೋಡು ಪರಿಷತ್ತು—** ಕಾಸರಗೋಡಿನ ಕನ್ನಡಿಗರ ಪರಿಷತ್ತು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದಲ್ಲಿ ಕಳೆದ ತಾ 28ರಲ್ಲು ಕರ್ನಾಟಕ ಪ್ರಜಾ ಸಮಾಜವಾದೀ ಪಕ್ಷದ ಧುರೀಣ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಕರ್ನಾಟಕ ಪ್ರಾಂತೀಕರಣ ಸಮಿತಿ ಅಧ್ಯಕ್ಷ ಶ್ರೀ ಎಮ್. ಉಮೇಶರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಯು. ಪಿ. ಕುಣಿಕುಳ್ಳಾಯರು ಶ್ರೀಗಳಾದ ಎಸ್. ನಿಜಲಿಂಗಪ್ಪ, ಎಚ್. ಸಿ. ದಾಸಪ್ಪ, ಡಾ. ಯು. ಪಿ. ಮಲ್ಯ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು. ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ. ಯವರು ಪರಿಷತ್ತನ್ನು ಉದ್ಘಾಟಿಸುತ್ತಾ, ಕನ್ನಡಿಗರು ಕಾರ್ಯಪ್ರವೃತ್ತರಾಗಿ ಸಂಘ ಶಕ್ತಿಯಿಂದ ಮುಂದರಿಯಬೇಕೆಂದರು.

ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಕಾಸರಗೋಡಿನ ಕನ್ನಡಿಗರು ಘಟನಾತ್ಮಕವಾಗಿಯೇ ತಮ್ಮ ಚಳವಳಿಯನ್ನು ಶಾಂತ ರೀತಿಯಿಂದಲೇ ಕೇಂದ್ರದ ಪರಿಷ್ಕರ ಅವಗಾಹನೆಗಾಗಿ ಹೂಡಿದ್ದರೂ ಇಲ್ಲಿಯ ಜನರ ಒಕ್ಕೊರಲ ಕೇಳಿಕೆಗಳಿಗೆ ಸರಕಾರ ಮನ್ನಣೆ ಕೊಡದಿದ್ದುದರಿಂದಾಗಿ ಪ್ರಜಾಪ್ರಭುತ್ವ ತತ್ವಗಳಿಗೇ ಅಪಮಾನ ವೆಸಗಿದಂತಾಗಿದೆ. ನಾವು ನಮ್ಮ ಕನ್ನಡತನವನ್ನು ಕಾಯ್ದುಕೊಳ್ಳಬೇಕಾಗಿದೆ ಎಂದರು.

(ಠರಾವುಗಳಿಗೆ ೮ನೇ ಪುಟ ನೋಡಿರಿ)

---

### ಬೊಂಬಾಯಿ

ಈ ದಿನ ಸಂಜೆ 6—20ರಿಂದ 6—50ರ ತನಕ ಆಲ್ ಇಂಡಿಯಾ ಬೊಂಬಾಯಿ ಕೇಂದ್ರದಿಂದ ಶ್ರೀ ಬಿ. ವಿಠಲ ಸೆಟ್ಟಿ ಮತ್ತು ಸಂಗಡಿಗರು 'ದಕ್ಷಯಾಗ' ವೆಂಬ ಕಥಾಭಾಗವನ್ನು ಯಕ್ಷಗಾನ ಮೂಲಕ ಪ್ರಸಾರಮಾಡಲಿರುವರು.

---

**ಶೃಂಗೇರಿ—** ಕಳೆದ ತಾ 28ರಲ್ಲು ಮೈಸೂರು ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಶೃಂಗೇರಿ ಮುನಿಸಿಪಾಲಿಟಿ ಬಸ್‌ಸ್ಟೇಂಡಿನ ಶಂಕುಸ್ಥಾಪನೆ ಮಾಡಿ ಡಾ. ಎಸ್. ಬಿ. ಎಸ್. ಹೆಗ್ಡೆಯರ ಚಹಾ ಸತ್ಕಾರವನ್ನು ಸ್ವೀಕರಿಸಿದರು. ಶ್ರೀ ಕೆ ಎನ್. ವೀರಪ್ಪ ಗೌಡರು ಉಪಸ್ಥಿತರಿದ್ದರು. ತಾ. 1ರಲ್ಲು ನೂತನ ಕರ್ನಾಟಕ ದಿನಾಚರಣೆಯು ಸಾಂಗವಾಯಿತು.

---

(೮ನೇ ಪುಟದಿಂದ)

ಪ್ರಯೋಗವಾಗ ತೊಡಗಿತು. ಇವುಗಳಿಂದ ಸಂಗೀತದ ಪ್ರಸಾರ ಮತ್ತು ಸಂಗೀತಜ್ಞರ ಖ್ಯಾತಿಗೆ ಹೆಚ್ಚಿನ ಅನುಕೂಲವಾಯಿತು. ಕ್ರಮಕ್ರಮವಾಗಿ ಸಂಗೀತಜ್ಞರ ಅಭಿರುಚಿಯೂ ಈ ಹಾದಿಯಲ್ಲಿ ಹರಿಯಿತು. ಇಂದು ದೇಶೀ ರಾಜರ ಯುಗವು ಸಮಾಪ್ತಗೊಂಡಿದೆ. ಮಧ್ಯಮ ವರ್ಗದವರನ್ನು ಬಿಟ್ಟರೆ, ರೇಡಿಯೋ, ಸಂಗೀತಗಾರರಿಗೆ ಪ್ರೋತ್ಸಾಹವನ್ನೀಯುವ ಏಕಮಾತ್ರ ಸಂಘಟನೆಯಾಗಿದೆ.

ಇಂದು ಸ್ವತಂತ್ರ ಭಾರತದಲ್ಲಿ ಸಂಗೀತದ ಪ್ರತಿಷ್ಠೆ ಉತ್ತರೋತ್ತರ ಹೆಚ್ಚುತ್ತಾ ಇದೆ. ಇಂದು ಜನತೆಯಲ್ಲಿ ಅವರ ದೇಶದ ಸಂಗೀತದಲ್ಲಿ ಅಭಿರುಚಿ ಹುಟ್ಟುತ್ತದೆ. ಇಂದು | ಸಂಗೀತ ಅಕಾಡಮಿಯನ್ನು ಸ್ಥಾಪಿಸಲಾಗಿದೆ. ಸಂಗೀತದಲ್ಲಿ ಪ್ರತಿಭಾಶಾಲಿಗಳೆನಿಸಿದವರಿಗೆ ಸರಕಾರವು ಪ್ರೋತ್ಸಾಹವನ್ನೀಯುತ್ತಿದೆ.

ಇದೂ ಅಲ್ಲದೆ, ಪ್ರತಿ ವರ್ಷ ಅನೇಕ ಪ್ರಖ್ಯಾತ ಸಂಗೀತಗಾರರಿಗೆ ಸರಕಾರದ ಮೂಲಕ ಸನ್ಮಾನವು ದೊರೆಯುತ್ತಿದೆ.

ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ ಜನತೆಯ ಸೇವೆಗಾಗಿ ಕಲೆಯನ್ನು ಅಭಿವೃದ್ಧಿಪಡಿಸಬೇಕಾಗುವುದು. ಅಂದರೆ. ಸಂಗೀತಗಾರರು ಜನತೆಯ ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ಶಾಸ್ತ್ರೀಯ ಸಂಗೀತ ಪರಂಪರೆಯನ್ನು ನಿರ್ವಹಿಸಿಕೊಂಡು ಹೋಗಬೇಕಾಗುವುದು. ಶಾಸ್ತ್ರೀಯ ಸಂಗೀತವನ್ನು ಜನಪ್ರಿಯಗೊಳಿಸಬೇಕು ಈ ಕೆಲಸವು ಸುಲಭ ಸಾಧ್ಯವಲ್ಲ, ಅದು ಕತ್ತಿಯ ಅಲುಗಿನ ಮೇಲೆ ನಡೆದಷ್ಟು ಕಠಿಣವಾದುದು. ಇಂದು ಸಂಗೀತಗಾರರ ಮುಂದೆ, ಇದರ ಹೊರತು, ಬೇರೆ ಮಾರ್ಗವಾದರೂ ಏನಿದೆ?

—ಡಾ. ಸುಮತಿ ಮುಟಾಟ್ಕರ್‌ರ ಲೇಖನ.


# ಕೈ ಗಡಿಯಾರ

**ಕೇವಲ 6 ರೂ. ಮಾತ್ರ**



೫ ವರ್ಷ ಖಾತರಿಯ ೧೫ ಜೂಯೆಲ್ಸಿನ ಚೈನ್ ಸಿಸ್ಟಮ್‌ನ ಕೈಗಡಿಯಾರ ಕೇವಲ ೬ ರೂ. ಮಾತ್ರ. ಪೋಸ್ಟೇಜ್ ೧-೪-೦ ಪ್ರತ್ಯೇಕ.

ಸಾವಿರಾರುಜನ ಪ್ರಯೋಜನ ಪಡೆದಿದ್ದಾರೆ ಒಪ್ಪಿತವಾಗದಿದ್ದಲ್ಲಿ ಬೆಲೆಯನ್ನು ವಾಪಸ್ಸು ಕೊಡಲಾಗುತ್ತೆ, ರೋಮನ್ ಫೌಂಟನ್ ಪೆನ್ನುಗಳನ್ನು ಜನಪ್ರಿಯತೆಗೊಳಿಸಲೋಸುಗ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

**ROMAN TRADING CO, (N-V)**
Post Box 1817—DELHI.



98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತವೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

**ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)**
623 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9) ಮೈಸೂರು S. I.


### ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚು ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್,

ನವಯುಗ, ಉಡುಪಿ.

## ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

### ಹಿಂದುಗಳಿಗೆ ಧರ್ಮ ಬೋಧನೆ ಬೇಡವೆ?

ಹಿಂದುಗಳಲ್ಲಿ ಹೆಚ್ಚಿನವರಿಗೆ ತಮ್ಮ ಸ್ವಧರ್ಮದ ಕುರಿತು ಬೋಧನೆಕೊಡುವವರೇ ಇಲ್ಲವೆಂದರೂ ಸಲ್ಲುವುದು. ದೇವರು,—ಆತನ ಮಹತ್ತಿಕೆ, ಆತನಿರುವಿಕೆ, ಆತನನ್ನು ಸದಾ ಪ್ರಾರ್ಥಿಸುವ ಅಗತ್ಯ, ಮೋಕ್ಷ ಸಾಧನೆಯ ಮಾರ್ಗ ಇತ್ಯಾದಿ ವಿಷಯಗಳ ಅನುಭವವನ್ನು ಜನರಿಗೆ ನೀಡುವುದರ ಮೂಲಕ ಜನ್ಮ ಸಾರ್ಥಕ್ಯಗೊಳಿಸುವ ಮಾರ್ಗದರ್ಶನ ಮಾಡುವ ಮಹನೀಯರು, ಹಾಗೂ ಧರ್ಮಾಧಿಕಾರಿಗಳ ಸಂಖ್ಯೆಯೇ ವಿರಳ. ನಿರ್ದಿಷ್ಟ ಗೊತ್ತುಗುರಿಯಿಲ್ಲದ ಅವ್ಯವಸ್ಥಿತ ರೀತಿಯ ಪ್ರಾರ್ಥನಾ ಪದ್ಧತಿಗಳನ್ನು ಜನರು ತಾವಾಗಿಯೇ ತಮ್ಮಿಚ್ಛೆಯಂತೆ ನಡೆಸಿಕೊಂಡುಬರುತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಹಿಂದುಗಳ ಪೈಕಿ ಅರ್ಧಾಂಶದಷ್ಟು ಜನರನ್ನು ಮತಸಂಬಂಧವ ವಿಚಾರದಲ್ಲಿ ಕೇಳುವವರೇ ಇಲ್ಲವೆಂದರೂ ಸಲ್ಲುವುದು. ಅವರೇನು ಮಾಡುತ್ತಿರುವರು? ಸ್ವಧರ್ಮದ ಕುರಿತು ಅವರಲ್ಲಿ ಎಂತಹ ಭಾವನೆ ಇದೆ? ಯಾವರೀತಿಯಲ್ಲಿ ಅವರನ್ನು ಮುನ್ನಡೆಸಬೇಕು? ಎಂತಹ ಮಾರ್ಗದರ್ಶನದ ಅಗತ್ಯವಿದೆ ಎಂಬ ವಿಚಾರಗಳಿಗೆ ಆಸ್ಪದವೇ ಇಲ್ಲ. ತನ್ನ ಧರ್ಮದಲ್ಲಿ ಸಂದೇಹ, ಜುಗುಪ್ಸೆಗೊಂಡ ವ್ಯಕ್ತಿಗೆ ತಕ್ಕ ಪರಿಹಾರ ಮಾರ್ಗದ ಮೂಲಕ ಮಾರ್ಗದರ್ಶನಮಾಡಿ ನಿಶ್ಚಿತಾಭಿಪ್ರಾಯದ ಸಲಹೆ ನೀಡುವವರ್‍ಯಾರೂ ಗೋಚರಿಸುವುದಿಲ್ಲ.

ಈಗಿನ ದಿನಗಳಲ್ಲಿ ಅನ್ಯಮತೀಯ (ಕ್ರೈಸ್ತರು) ತಮ್ಮ ಮತಪ್ರಸಾರಕ್ಕಾಗಿ ದುಡಿಯುತ್ತಿರುವುದರ ಫಲವಾಗಿ ಶುಕ್ಲಪಕ್ಷದ ಚಂದ್ರನಂತೆ ಪ್ರವರ್ಧಮಾನವಾಗಿ ಬೆಳವಣಿಗೆ ಹೊಂದುತ್ತಿದ್ದಾರೆ. ಈ ರೀತಿಯ ಅವರ ಬೆಳವಣಿಗೆಯನ್ನು ನೋಡಲು ನಾವೇನೂ ದೂರ ಹೋಗಬೇಕಾಗಿಲ್ಲ. ನಮ್ಮ ನೆರೆಕೆರೆಯಲ್ಲೇ ನಾವು ಅನುದಿನವೂ ನೋಡುತ್ತಿದ್ದೇವೆ. ಜಾತಿಯಲ್ಲಿ ಹಿಂದುಗಳಾದ ನಾವೇ ಶ್ರೇಷ್ಠರೆಂದು ನಾವೆಂದುಕೊಳ್ಳುತ್ತಿರುವೆವಾದರೂ, ಇತರರು ಕಡಿಮೆ ಜಾತಿಯವರು ಎಂದು ನಮ್ಮಿಂದ ಸಂಭೋದಿಸಲ್ಪಡುವ ಸಂದರ್ಭಗಳಿವೆಯಾದರೂ ಆ ಜಾತಿಯ ಜನರ ಐಕ್ಯಭಾವ, ಮತಾಭಿಮಾನ, ತಮ್ಮ ಮತದ ಏಳಿಗೆ, ಪ್ರಸಾರದ ಕಡೆಗೆ ಅವರಿಗಿರುವ ಆತುರದ ಆಸ್ಥೆ, ಇವೆಲ್ಲವೂ ಹೊಗಳತಕ್ಕವುಗಳು—ಅನುಕರಣೀಯವು. ಅವರ ಧರ್ಮಾಧಿಕಾರಿಗಳು ತಮ್ಮ ಮತದ ಪ್ರತಿಯೊಂದು ಹಳ್ಳಿಯ ಮೇಲೂ ತನ್ನ ದೃಷ್ಟಿ ಹರಿಸಿ, ಅವರ ಸಾಮಾಜಿಕ, ನೈತಿಕ, ಅಧ್ಯಾತ್ಮಿಕ ವಿಚಾರಗಳ ಮೇಲೆಲ್ಲಾ ತನ್ನ ಪ್ರಭಾವವನ್ನೇ ಬೀರಿ, ಅವರೆಲ್ಲರ ಸರ್ವತೋಮುಖ ಅಭಿವೃದ್ಧಿಯೇ ತನ್ನ ಜೀವನದ ಮುಖ್ಯಗುರಿಯಾಗಿಟ್ಟುಕೊಂಡು ದುಡಿಯುತ್ತಿರುವುದನ್ನು ನಾವು ನೋಡುತಿದ್ದೇವೆ. ಅವರ ಈ ವಿಧದ ಪರಿಶ್ರಮದ ಫಲಿತಾಂಶವೆಂಬಂತೆ ದಿನದಿಂದ ದಿನಕ್ಕೆ ನಮ್ಮ ನಾಡಿನಲ್ಲಿ ಅವರು ಅಭಿವೃದ್ಧಿಯ ಹಂತಗಳನ್ನೇರುತಿದ್ದಾರೆಂಬುದರಲ್ಲಿ ಸಂದೇಹವಿಲ್ಲ—

ಹಿಂದುಗಳಿಗೆ, ಅದರಲ್ಲೂ ಕೀಳ್ಜಾತಿಯವರೆನ್ನುವ (ಶೂದ್ರರು) ಜನರಿಗೆ ಇಂಥ ಅನುಕೂಲತೆಗಳಿವೇ ಎಂಬುದು ದೊಡ್ಡ ಸಮಸ್ಯೆ. ಬಡತನದಲ್ಲಿ ನರಳುತ್ತಿರುವ ಇಂತಹ ಕೆಳವರ್ಗದ ಜನರು ಅನ್ಯಮತ ಪ್ರಚಾರಕರ ನಾನಾ ವಿಧದ ಆಸರೆಗೆ ಕೈಯೊಡ್ಡಿ ಆಮಿಷಗಳಿಗೆ ಬಲಿಯಾಗಿ ಯಾವ ವಿಧದಲ್ಲೂ ತನ್ನ ಮತದ ಶ್ರೀನ ಮಾರ್ಗದರ್ಶಕರೆಂಬವರಿಂದ ತನಗೆ ಏನೇನೂ ಆಸರೆ ದೊರಕದೆ ಇರುವುದರಿಂದ ತನ್ನ ಮತಕ್ಕೆ ಬೆನ್ನುಹಾಕಿ ಅನ್ಯಮತವನ್ನೇ ಸೇರಲು ಆಶಿಸುವನಾದರೆ ಆಶ್ಚರ್ಯವೇನಿಲ್ಲ. ಒಂದೆಡೆಯಲ್ಲಿ ಬಡತನದ ಹಾವಳಿ, ಇನ್ನೊಂದೆಡೆ ತಕ್ಕ ಮಾರ್ಗದರ್ಶನ, ಸಹಕಾರವಿಲ್ಲದುದು, 'ಮತ್ತೊಂದೆಡೆ ಕೀಳ್ಜಾತಿಯವನೆಂಬ ತಾತ್ಸಾರ ಭಾವನೆ ಮೊದಲಾದ ಹಲವಾರು ಅಭಿತಾಪಗಳಿಂದ ನರಳುವ ಮನುಷ್ಯನಾದರೂ ಪರಮತೀಯರ ಪ್ರಭಾವಕ್ಕೆ ಒಳಗಾಗಿ ಮತಾಂತರಗೊಂಡಲ್ಲಿ ಸನ್ಮಾನಿಸಲ್ಪಡುವಾಗ, ಮತಾಂತರವಾಗುವುದರಲ್ಲಿ ಆಶ್ಚರ್ಯವೇನಿದೆ?

ಹಿಂದೂ ಧರ್ಮ ಗ್ರಂಥಗಳು ಲೋಕಕ್ಕೇ ಶಾಂತಿಯನ್ನುಣಿಸುವ, ಮಾರ್ಗದರ್ಶನಮಾಡುವ ಯೋಗ್ಯತೆಯುಳ್ಳವುಗಳು. ಆದರೆ ನಿರಕ್ಷರಸ್ಥರಾದ, ನಾನಾ ವಿಧದ ಸಂಕಷ್ಟಗಳಿಂದ ನರಳುವ ಜನರಿಗೆ ಇಂಥ ಮಹಾ ಗ್ರಂಥಗಳಲ್ಲಡಕವಾದ ಸಾರವನ್ನು ಹೀರುವ ಯೋಗ್ಯತೆ ಎಲ್ಲಿಂದ ಬಂದೀತು? ಇದಕ್ಕೆ ತಕ್ಕ ಪ್ರಚಾರ ಕಾರ್ಯಬೇಕು. ಧರ್ಮ ಬೋಧಕರು ಈ ಸಲುವಾಗಿ ದುಡಿಯಬೇಕು. ಜನರಮಟ್ಟಕ್ಕೆ ನುಸರಿಸಿ ತಿಳಿಯಾದ ಭಾಷೆಯಲ್ಲಿ ವಿವರಿಸಿ ಮುಂದಟ್ಟುಮಾಡಬೇಕು. ಈ ಕಾರ್ಯವು ಇತರ ಮತಗಳ ಧರ್ಮಾಧಿಕಾರಿಗಳಂತೆ ಹಿಂದೂ ಮತದ ಧರ್ಮಾಧಿಕಾರಿಗಳಿಂದ ನೆರವೇರುತ್ತಿದೆಯೆ?–

ನಮ್ಮ ಎಲ್ಲಾ ಊರುಗಳಲ್ಲಿಯೂ ಪೂರ್ವಿಕರಿಂದ ರಚಿಸಲ್ಪಟ್ಟ ದೇವಾಲಯಗಳಿವೆ ಎಂಬುದು ನಿಜ. ಆದರೆ ಇವುಗಳು ಧರ್ಮ ಪ್ರಸಾರದ ಕೇಂದ್ರಗಳಲ್ಲ. ದೇವರ ಸಂಬಂಧವಾದ ಯಾವುದೊಂದೂ ತರದ ಅನುಭವಕ್ಕೆ ಇಲ್ಲಿ ಆಸ್ಪದವೇ ಇಲ್ಲವೆಂದರೆ ಅತಿಶಯೋಕ್ತಿಯಾಗದು.

ಉಡುಪಿಯ ಶ್ರೀಕೃಷ್ಣ ಮಠದ ಅಷ್ಟಮಠದ ಯತೀಶ್ವರರೂ ಕಾಶೀಮಠದ ಯತೀಶ್ವರರೂ ಈ ಸಲುವಾಗಿ ಹೆಚ್ಚು ಆಸ್ಥೆವಹಿಸಿ ದುಡಿಯಬಹುದು. ಪ್ರಥಮ ಪ್ರಯತ್ನವಾಗಿ ಒಂದು ಚಿಕ್ಕ ಪ್ರಚಾರಕ ಸಮಿತಿಯನ್ನೇರ್ಪಡಿಸಿ ಮತಸಂಬಂಧದ ತಿಳಿವಳಿಕೆ ಇಲ್ಲದ ಜನರಿಗೆ ಮನೋರ್ಮಕವಾಗಿ ಸುಲಭ ಮಾತುಗಳಿಂದ ಆಕರ್ಷಣೀಯ ವಿಧಾನದಿಂದ ಬೋಧನಾ ಕಾರ್ಯವನ್ನು ನೆರವೇರಿಸಬಹುದು. ಈ ಧರ್ಮಬೋಧಕ ಸಮಿತಿಯು ತಮ್ಮ ಸಂದೇಶವನ್ನು ಪ್ರತಿವಾರಕ್ಕೊಮ್ಮೆ, ಅಥವಾ ಪಕ್ಷಕ್ಕೊಮ್ಮೆ ಪ್ರತಿಯೊಂದು ಹಳ್ಳಿಯ ಕೇಂದ್ರದಲ್ಲಿ (ಶಾಲಾಕಟ್ಟಡ, ಅಥವಾ ದೇವಾಲಯದಲ್ಲಿ) ತಮ್ಮ ಸಂದೇಶವನ್ನು ಬಿತ್ತರಿಸಬಹುದು. ಜನರು ಉತ್ಸಾಹದಿಂದ ನೆರೆಯುವಂತೆ ತಕ್ಕ ಕಾರ್ಯಕ್ರಮಗಳಿರುವುದೂ ಅಗತ್ಯ. ನಿಸ್ವಾರ್ಥ ದೃಷ್ಟಿಯಿಂದ ಈ ಸಲುವಾಗಿ ದುಡಿಯಲು ಕೆಲವು ಉತ್ಸಾಹೀ ತರುಣರಿಗೆ ತಕ್ಕ ತರಬೇತಿಯನ್ನು ಕೊಡುವ ಅಗತ್ಯವೂ ಇದೆ. ಆರಂಭದಲ್ಲಿ ಈ ಕ್ರಮವನ್ನು ಚಿಕ್ಕ ಪ್ರಮಾಣದಲ್ಲಿ ವ್ಯವಸ್ಥೆಮಾಡಿಕೊಂಡು ಮತ್ತೆ ಬೆಳೆದು ಬೆಳಗಲು ಯತ್ನಿಸಬೇಕಾಗಿದೆ. ಇದಕ್ಕಾಗಿ ಅಷ್ಟಮಠಾಧಿಪತಿಗಳಂಥಹ ಧರ್ಮಬೋಧಕ ಯತೀಶ್ವರರು ಎಲ್ಲಾ ವಿಧಾನದಲ್ಲೂ ಧರ್ಮಜಾಗೃತಿಯ ಸಲುವಾಗಿ ದುಡಿಯಬೇಕಾಗುವುದು ಅಗತ್ಯ. ತನ್ಮೂಲಕ ದಿನದಿಂದ ದಿನಕ್ಕೆ ಸ್ವಧರ್ಮದಲ್ಲಿ ಜುಗುಪ್ಸೆಗೊಂಡು ಅನ್ಯ ಮತದ ಆಸರೆಹೊಂದುವ ಜನರು ಸ್ವಧರ್ಮದಲ್ಲಡಕವಾಗಿರುವ ಸುಧಾನಿಧಿಯನ್ನು ಸೇವಿಸಿ ಹಿಂದುಗಳ ಪುನರುತ್ಥಾನವಾಗಲಿ! ಹಿಂದುಗಳ ಶ್ರೇಯೋಭಿವೃದ್ಧಿಯಾಗಲಿ! ಪ್ರಕೃತ ಈ ಸಲುವಾಗಿ ಕನಿಕರಗೊಂಡು ಬಡಜನರ ಉದ್ಧಾರಕ್ಕಾಗಿ ದುಡಿಯುವ ಸಂಘಸಂಸ್ಥೆಗಳು ನಮ್ಮೂರ ಹಳ್ಳಿಗಳಲ್ಲಿ ತೀರಾ ವಿರಳವಾದುದರಿಂದ ಅಜ್ಞಾನಿಗಳಾದ ಬಡಜನರ ಶ್ರೇಯಸ್ಸಿಗಾಗಿ ಮಠದ ಯತಿವರ್ಯರು ತಮ್ಮ ನಿಷ್ಕಾಮ ಕರ್ಮಪೂರಿತ ಸೇವೆಸಲ್ಲಿಸಬೇಕಾಗಿದೆ. ಅಮೇರಿಕದ ಬ್ಯಾಟಲ್ ಸೊಸೈಟಿಯವರು ನಮ್ಮೂರ ಪ್ರತಿ ಹಿಂದುಗಳ ಮನೆಗೆ ಹೋಗಿ ಕ್ರೈಸ್ತಮತದ ಪ್ರಚಾರಮಾಡುತ್ತಾ ಜನರನ್ನು ಮತಾಂತರ ಗೊಳಿಸಲು ಯತ್ನಿಸುತ್ತಿರುವರು. ಇದೇ ರೀತಿ ಕ್ರೈಸ್ತರೂ, (R. C.) ಪ್ರೊಟೆಸ್ಟಾಂಟರೂ, ಮುಸ್ಲಿಮರೂ ಇಷ್ಟರ ತನಕ ನಮ್ಮ ದೇಶದಲ್ಲಿ ಮತಾಂತರಗೊಳಿಸಿದ ಹಿಂದುಗಳ ಸಂಖ್ಯೆ ಎಷ್ಟಾಗಬಹುದು? ಇಲ್ಲಿನ ಹಿಂದುಗಳಲ್ಲದ ಇತರ ಮತೀಯರೆಲ್ಲರೂ ಪೂರ್ವದಲ್ಲಿ ಹಿಂದುಗಳಾಗಿಯೇ ಜನ್ಮವೆತ್ತಿದವರಲ್ಲವೆ? ಜನಜಾಗೃತಿಯ ಈ ಕಾಲದಲ್ಲೂ ನಮ್ಮ ಧರ್ಮಾಧಿಕಾರಿಗಳು ಸುಮ್ಮನಿದ್ದರೆ ಹಿಂದುಗಳ ಸರ್ವನಾಶವಾಗುವುದರಲ್ಲಿ ಸಂದೇಹವಿದೆಯೆ? ಇತರರಿಗೆ ವಿರೋಧವಾಗಿ ಪ್ರಚಾರಮಾಡುವ ಉದ್ದೇಶವಿಟ್ಟುಕೊಳ್ಳದೆ ನಮ್ಮವರು ನಮ್ಮನ್ನು ಅಗಲಿ ಹೋಗದಂತೆ, ನಾವು ಕ್ಷಯಿಸದಂತೆ ಜಾಗ್ರತೆ ವಹಿಸುವುದು ಅಪ್ರಸ್ತುತವೇ?

—ಶ್ರೀ ದಾಮೋದರ.

## ಶಿಲ್ಪ ಸೃಷ್ಟಿ

(೩ನೇ ಪುಟದಿಂದ)

ಹೀಗೆ ಪ್ರಾಚೀನ ಪ್ರತಿಮೆಗಳ ಸರಿಯಾದ ಅರ್ಥಮಾಡಿಕೊಳ್ಳಬೇಕಾದರೆ ಮೂರ್ತಿಲಕ್ಷಣಗಳನ್ನು ವಿವರಿಸುವ ಗ್ರಂಥಗಳನ್ನು ಓದುವುದು ಅವಶ್ಯ. ಆಗ ಮಾತ್ರ ನಮಗೆ ವಿಗ್ರಹಗಳ ಸಂಜ್ಞಾಭಾಷೆ ವ್ಯಕ್ತವಾಗಿ ಶಿಲ್ಪಿಯ ಮನೋಗತ ಸ್ಪಷ್ಟವಾಗಬಹುದು. ಆದರೆ ಸನ್ನೆಗಳ ಗುರುತಿಲ್ಲದೆ ಇವೆಲ್ಲಾ ವಿಕಾರ ಮೂರ್ತಿಗಳೆಂದು ಅಭಿಪ್ರಾಯ ಪಡುವುದು ನಮ್ಮ ಮೂಢತೆಗೆ ದ್ಯೋತಕವಾಗಿದೆ.

ಕಲ್ಲುಗಳಿಂದ ಕಡೆದ ವಿಗ್ರಹಗಳನ್ನು ಕಂಡಾಗ ಜೀವಂತ ವ್ಯಕ್ತಿಗಳನ್ನೇ ನೋಡಿದಷ್ಟು ಆನಂದವಾಗುತ್ತದೆ. ಚಿತ್ರವಾಗಲಿ ಆಧುನಿಕ 'ಫೋಟೋ' ಆಗಲಿ ಕೆಲವು ಸಮಯದಲ್ಲಿ ನಶಿಸಿ ಹೋಗಲು ಸಾಧ್ಯವಿದೆ. ಆದರೆ ಶಿಲಾ ಪ್ರತಿಮೆಗಳು ಹಾಗಲ್ಲ: ಅವು ನಿತ್ಯ ಶಾಶ್ವತವಾದವುಗಳು! ಉದಾಹರಣೆಗಾಗಿ ಗೋಮಟ ಮೂರ್ತಿಯನ್ನಾಗಲಿ, ಅಶೋಕಸ್ತೂಪಗಳನ್ನಾಗಲಿ ನಾವು ಪರಾಂಬರಿಸಬಹುದು.

ಈ ಶಿಲ್ಪಕಲೆಯ ಮಹೋನ್ನತ ಸಾಕ್ಷಿಗಳನ್ನೀಕ್ಷಿಸಿದಾಗ ಅದರ ಪರಿಣಾಮ ಬುದ್ಧಿಗಿಂತಲೂ ಅಧಿಕವಾಗಿ ಹೃದಯದ ಮೇಲೆಯೇ ಆಗುತ್ತದೆ. ವಿವಿಧ ಭಂಗಿಗಳಿಂದ ಕೂಡಿದ ದೈವ–ಮಾನವ ವಿಗ್ರಹಗಳನ್ನು ಕಂಡಾಗ, ಕಣ್ಣೆಡ್ಡವಾಗಿ ರಂಜಿಸುವ ಕಟ್ಟಡಗಳನ್ನು ನೋಡಿದಾಗ ಹೃದಯಕ್ಕೆ ಅವುದೋ ಅನಿರ್ವಚನೀಯವಾದ ಆನಂದವುಂಟಾಗುತ್ತದೆ. ಅವನ್ನು ನೋಡಿದ ವ್ಯಕ್ತಿ ಕ್ಷಣಕಾಲ ಸ್ತಬ್ಧನಾಗುತ್ತಾನೆ! ತನ್ನನ್ನು ತಾನೇ ಮರೆತು ಬಿಡುತ್ತಾನೆ!! ತನ್ನ ಪೂರ್ವಿಕರ ಕಲಾಕೌಶಲ್ಯವನ್ನೂ ಧಾರ್ಮಿಕ, ಸಾಮಾಜಿಕ ರೀತಿನೀತಿಗಳನ್ನೂ ಕಂಡು ಅವನಲ್ಲಿ ನವಸ್ಫೂರ್ತಿಯೊಂದುಉದಯಿಸುತ್ತದೆ. "ಹೋಗು — ಮುಂದೆ ಹೋಗು! ನಿನ್ನ ಹಿರಿಯರಂತೆ ಕೀರ್ತಿಯ ಶಿಖರದತ್ತ ಸಾಗು! ಕಷ್ಟ ಪರಂಪರೆಗಳೆಂಬ ಮೆಟ್ಟಲುಗಳನ್ನೇರಿಯೇ ಸುಖದ ಬೆಟ್ಟದ ತುತ್ತತುದಿಯನ್ನು ಮುಟ್ಟುವುದಕ್ಕೆ ಸಾಧ್ಯ. ಎಂತಹ ಎಡರು ತೊಡರುಗಳು ಅಡಸಿದುವಾದರೂ ಧೃತಿಗೆಡದೆ ಮುಂದೆ ನಡೆ" ಎಂದು ಬಾರಿಬಾರಿಗೂ ಅವನನ್ನು ಅದಾವುದೋ ಶಕ್ತಿ ಪ್ರೇರೇಪಿಸುವಂತೆ ಭಾಸವಾಗುತ್ತದೆ. ಹೌದು! ನಿಜವಾಗಿಯೂ ಅಷ್ಟೊಂದು ಹೃದಯಸ್ಪರ್ಶಿಯಾಗಿದೆ ಶಿಲ್ಪಕಲೆ!

ಕಲ್ಲುಗಳನ್ನು ಕಡಿದು ಮನಸ್ಸನ್ನು ಮರುಳುಗೊಳಿಸುವ ಮನೋಹರವಾದ ಮಂದಿರಗಳನ್ನು ಮಾಡುವುದಾಗಲಿ, ಪ್ರತಿಮೆಗಳನ್ನು ನಿರ್ಮಿಸುವುದಾಗಲಿ ಸುಲಭದ ಕಾರ್ಯವೇನೂ ಅಲ್ಲ. 'ಕಲೆ' ಯನ್ನು ಸಾಧಿಸುವುದೆಂದರೆ ಸಾಮಾನ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಏಕಕೇಂದ್ರೀಯ ಮನಸ್ಸಿನ ದೀರ್ಘ ತಪಸ್ಸಿನ ಅವಶ್ಯಕತೆಯಿದೆ ಅದಕ್ಕೆ. ಆದುದರಿಂದ ನಾವು ಕಲಾಪುತ್ರರನ್ನು ಕಡೆಗಣಿಸಬಾರದು. ಅವರಿಗೆ ಹೃತ್ಪೂರ್ವಕವಾದ ಗೌರವವನ್ನು ನಾವು ಸಲ್ಲಿಸಬೇಕು. ಕಲಾವಿದರೇ ರಾಷ್ಟ್ರದ 'ಜೀವನಾಡಿ' ಎಂಬುದನ್ನು ಮರೆಯಲು ಸಾಧ್ಯವಿಲ್ಲ.

ನಾವು ನಮ್ಮ ಗತವೈಭವದ ಜ್ಞಾಪಕಮಾತ್ರದಿಂದ ಆತ್ಮತೃಪ್ತಿಯ ಪರಾಕಾಷ್ಠೆಯನ್ನು ಹೊಂದಿದರೆ ಮುಂದಿನ ಗತಿಯೇನು? ಮಹಾಸ್ಫೂರ್ತಿ ಖನಿಗಳಾಗಿದ್ದ ನಮ್ಮ ಹಿರಿಯರ ಸಂತತಿಯವರೆನ್ನಿಸಿಕೊಳ್ಳಬೇಕಾದ ನಮ್ಮ ಹೊಣೆಗಾರಿಕೆ ಯೆಷ್ಟೆಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಅವರಿಂದ ಬೆಳಗಿಸಲ್ಪಟ್ಟ ನಮ್ಮ ಭಾರತ ಮಾತೆಯ ಕೀರ್ತಿ ಜ್ಯೋತಿಯು ಇನ್ನು ಮುಂದೆಯೂ ದೇದೀಪ್ಯಮಾನವಾಗಿ ಪ್ರಕಾಶಿಸುವಂತೆ ಪ್ರಯತ್ನಿಸುವ ಭಾರ ನಮ್ಮದಾಗಿದೆ.

ಆದುದರಿಂದ ಶಿಲ್ಪಕಲೆಯ ಉತ್ಕರ್ಷದತ್ತ ಸರಕಾರ ಮಾತ್ರವಲ್ಲ ಜನತೆಯೂ ತನ್ನ ದೃಷ್ಟಿಯನ್ನು ಹರಿಸಬೇಕಾಗಿದೆ. ಕಲೆಯು ನಾಶವಾದರೆ ಅದು ದೇಶಕ್ಕೆ ತುಂಬಲಾರದ ನಷ್ಟವಾಗಬಹುದಾದುದರಿಂದ ಅದು ಎಂಗೆಯೂ ಮಾಳಗೆಯನ್ನೇರುವಂತೆ ಪ್ರಯತ್ನಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇಲ್ಲದಿದ್ದರೆ ನಾವು ಕರ್ತವ್ಯಚ್ಯುತಿಯ ಅಪರಾಧಕ್ಕೆ ಗುರಿಯಾಗುವುದು ನಿಶ್ಚಯ.

—ಶ್ರೀ ರಮಾನಂದ ಬನಾರಿ.

# ಕುಮಾರಿ ಬಿಲ್ಲೆಗಳು

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & CO. (N. J.) CALCUTTA—40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

# ರಾಜ್ಯ ವ್ಯವಹಾರದಲ್ಲಿ ಸಚ್ಛೀಲದ ಪಾತ್ರ

(೧ನೇ ಪುಟದಿಂದ)

—ತಂಗಿಯುವು; ನನಗೆ ಜಾತಿ - ಮತವೆಂಬ ಸಂಕುಚಿತ ಒಳಭಾವನೆ ಇಲ್ಲ; ನಾನು ಯಾವ ಪಕ್ಷದವನಾಗಿಯೂ, ಹಾತೊರೆಯೆನು. ಸರ್ವರ ಸುಖಕ್ಕಾಗಿ ನಾನು ಹಗಲೋ ರಾತ್ರಿ ಚಿಂತಿಸುತ್ತಾ ಕೆಲಸ ಮಾಡುವೆನು. -ಇದೇ ನಿಜವಾದ ಮಂತ್ರಿಗಳ ಮತ್ತು ದೇಶಸೇವಕರ ಶೀಲ. "The Taste of the pudding is in the Eating"-ಎಂಬ ಆಂಗ್ಲ ಗಾದೆಯಂತೆ, ಆಯಾ ಮಂತ್ರಿಗಳ ಮತ್ತು ಶಾಸನಸಭಾ ಸದಸ್ಯರ ಲೌಕಿಕ ಧನಸಂಪತ್ತುಗಳೂ, ಅವುಗಳ ಮೂಲಕ ಅವರು ನಡೆಸುವ ಯುಕ್ತಿ-ಕುಯುಕ್ತಿಗಳೂ ಅವರ ನಿಜವಾದ ಬಣ್ಣವನ್ನು ಹೊರಗೆ ಹಾಕುತ್ತಿವೆ. ಜನತೆಯು ಧೈರ್ಯದಿಂದಲೂ, ನ್ಯಾಯ ಬುದ್ಧಿಯಿಂದಲೂ ನಡೆಯಬೇಕಾದರೆ, ಹಿರಿಯರೆಂಬ ಧುರೀಣರು ಅವರಿಗೆ ತಮ್ಮ ಜೀವನವನ್ನೇ ಮೇಲ್ಪಂಕ್ತಿಯಾಗಿ ತೋರಿಸಬೇಕು.

ಬಹುಕಾಲದಿಂದ ಛಿನ್ನವಿಚ್ಛಿನ್ನವಾಗಿದ್ದ ಕರ್ನಾಟಕವಿಂದು ಒಂದು ಪ್ರತ್ಯೇಕ ಪ್ರಾಂತ್ಯವಾಗುತ್ತಿದೆ. ಇದು ಮಂಗಳೂರು, ಮೈಸೂರು, ಧಾರವಾಡ, ಹೈದರಾಬಾದುಗಳೆಂಬ ನಾಲ್ಕು ಮುಖಗಳ ಚತುರ್ಮುಖ ಬ್ರಹ್ಮನಂತಾಗುತ್ತದೆ. ಒಂದೊಂದು ಮುಖ ಒಂದೊಂದು ರೀತಿಯ ಘೋಷಣೆಯನ್ನು ಹೇಳುವಂತಾಗಬಾರದು. ಕನ್ನಡವೆಲ್ಲವೂ ಒಂದೇ ನಾಡು ಅದರೊಳಗಿನ ಸರ್ವರೂ ನನ್ನವರು—ಎಂಬ ಭಾವನೆ ಅಧಿಕಾರ ಸ್ಥಾನಕ್ಕೆ ಬರುವವರಲ್ಲಿರಬೇಕು. ನಿಸ್ವಾರ್ಥಬುದ್ಧಿ ಎಲ್ಲಿದೆಯೋ ಅಲ್ಲಿ ಆ ಭಾವನೆ ತಾನಾಗಿಯೇ ಇರುವುದು. ಆದ್ದರಿಂದ ಕರ್ನಾಟಕ ಪ್ರಾಂತ್ಯದ ಹೊಸ ಸರಕಾರವು ಅನಿಶ್ಚಿತ ರೀತಿಯಲ್ಲಿ ಆಡಳಿತ ನಡೆಸಿದರೆ, ಅದರ ಮಂತ್ರಿಗಳು ಸಂಕುಚಿತ ಸ್ವಾರ್ಥತೆಯುಳ್ಳವರೆಂಬುದು ಸ್ಪಷ್ಟವಾಗುವುದು. ಭರತ ಖಂಡದ ಎಲ್ಲ ಭಾಗಗಳೂ ವಿಪುಲವಾದ ನೈಸರ್ಗಿಕ ಸಂಪತ್ತನ್ನುಳ್ಳದಾಗಿವೆ; ಕರ್ನಾಟಕವು ಕೂಡಾ ಅದನ್ನು ಪಡೆದಿದೆ: ಅದನ್ನು ಉಪಯೋಗಿಸುವ ಬಗ್ಗೆ 'ತಜ್ಞ'ರೆಂಬವರು ಬಗೆಬಗೆಯ ಯೋಜನೆಗಳನ್ನು ಮಾಡಬಹುದು. ಅದಕ್ಕೆ ಮಹಾವಿದ್ವತ್ತೆಯೆನೂ ಬೇಡ. ಆದರೆ, ಆ ಕಾರ್ಯದಕ್ಷಿ, ಹಾಗೂ ಅದರಿಂದ ದೊರೆಯುವ ಸಂಪತ್ತಿನ ಸರಿಯಾದ ವಿತರಣೆ ಮತ್ತು ಉಪಯೋಗದಲ್ಲಿ ಸರಕಾರವು ಶೀಲಸಂಪನ್ನವಾಗಿರಬೇಕು. ಈ ಶೀಲವೇ ಜೀವ! ಅದಿಲ್ಲದ ವಿವಿಧ ವಿದ್ವತ್ತುಗಳೆಲ್ಲ, ಹೆಣಕ್ಕೆ ತೊಡಿಸಿದ ರತ್ನಾಭರಣಗಳಂತಾಗುವುದು! ಅನ್ಯರ ಕಾರುಗಳು, ಅರಮನೆಗಳು, ಪ್ರಚಾರದಕೀರ್ತಿಗಳು, ಇವುಗಳನ್ನು ಕಾಣುವುದೇ ಬಡಜನರ ಪಾಲಿನ ಪ್ರಗತಿಯೋ? ಸರಕಾರದ ಕೈಯಲ್ಲಿ ದೇಶದ ಸರ್ವ ಸಂಪತ್ತೂ ಇದೆ. ಅದರ ಮಂತ್ರಿಗಳಾಗುವವರು ಬೇಕಾದವರಿಗೆ ಬೇಕಾದ ಸುಖಸಂಪತ್ತಿನ ಸೌಲಭ್ಯಗಳನ್ನೊದಗಿಸಿ ಕೊಡಬಹುದು. ಆಂಗ್ಲರ ಆಳಿಕೆಯಲ್ಲಿ, ಅವರನ್ನು ಮೆಚ್ಚಿಸಿದವರೆಲ್ಲ ದಿನ ಬೆಳಗಾಗುವುದರೊಳಗೇ ಜಹಗೀರಿಗಳನ್ನೂ, ದೊಡ್ಡ ದೊಡ್ಡ ಹುದ್ದೆಗಳನ್ನೂ ಪಡೆದರೆಂಬುದು ಇತಿಹಾಸದ ಸತ್ಯವಾಗಿದೆ. ಸ್ವರಾಜ್ಯ ಸರಕಾರವು ಅಂತಹ ಪರಿಸ್ಥಿತಿಗೆ ಅವಕಾಶವೀಯದಂತೆ ಆಗಬೇಕಾದರೆ, ಅದರ ಮಂತ್ರಿಗಳು ಪರಿಶುದ್ಧವಾದ ಹೃದಯ ಮತ್ತು ಶೀಲ ಉಳ್ಳವರಾಗಬೇಕು. ಕೋಟ್ಯಂತರ ರೂಪಾಯಿ ವೆಚ್ಚದ ಯೋಜನೆಗಳ ಈಗಿನ ವೇಳೆಯಲ್ಲಿ ಮಂತ್ರಿಗಳೂ, ಅವರನ್ನು ಆ ಸ್ಥಾನಗಳಿಗೆ ಚುನಾಯಿಸುವವರೂ ಚೆನ್ನಾಗಿ ವಿಚಾರ ಮಾಡಬೇಕು. ಕರ್ನಾಟಕ ರಾಜ್ಯವು ಅದರ ಮಂತ್ರಿಮಂಡಳವೂ ಇಡೀ ಭರತಖಂಡಕ್ಕೇ ಒಂದು ಮಾದರಿಯಾಗುವಂತೆ ಏರ್ಪಡುವುದೆಂದು ನಿಜವಾದ ಜನಸೇವಕರು ಆಶಿಸುತ್ತಾರೆ.

(ನವಯುಗ ಜ್ಯೋತಿಯ ವಿಶೇಷ ಸಂಚಿಕೆಗೆ ಬಂದುದು.)



ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನ
(ಪಡಿಯಚ್ಚು ಮೈಸೂರು ಸರಕಾರದ ಪ್ರಚಾರ ಶಾಖೆಯ ಕೃಪೆಯಿಂದ)


## ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4⅛% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ಸ್ಥಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

**THE MOOLKY BANK LTD, MULKI.**

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**

**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.


'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 12-12-1950 of the Director of public Instruction Madras.

## ನಾಡಿನ ಪರಿಚಯ

(೧ನೇ ಪುಟದಿಂದ)

ದೊಡ್ಡದೊಂದು ಜಲಜನಿತ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವನ್ನು ನಿರ್ಮಿಸುವ ಬಗ್ಗೆ ಪೂರ್ವಭಾವಿ ಕಾರ್ಯ ನಡೆಯುತ್ತಿದೆ. ಈ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿ ಕಲ್ಲಿದ್ದಲು, ಕಬ್ಬಿಣ, ಪ್ಲಾಟಿನಂ; ಚಿನ್ನ, ಮ್ಯಾಂಗನೀಸ್, ಸತು, ತಾಮ್ರ, ಕಲ್ನಾರು, ಅಭ್ರಕ ಮತ್ತು ಸಿಮೆಂಟ್ ನಿಕ್ಷೇಪಗಳಿರುವುವು. ಹತ್ತಿ, ಕಬ್ಬು, ಕಾಫಿ ಮತ್ತು ರಬ್ಬರ್ ಈ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಕಾಫಿಯನ್ನು ವ್ಯಾಪಕವಾಗಿ ಸಾಗುವಳಿ ಮಾಡಲಾಗುತ್ತಿದೆ. ಎಣ್ಣೆ ಬೀಜಗಳು, ಮೇಣ, ಬಾರ್ಲಿ, ಗೋಧಿಗಳನ್ನು ಕೂಡ ಈ ರಾಜ್ಯದಲ್ಲಿ ಬೆಳೆಯಲಾಗುತ್ತಿದೆ.

ಇಥಿಯೋಪಿಯಾದಿಂದ ಕಾಫಿ, ಚರ್ಮ ಮತ್ತು ತೊಗಲು, ಆಹಾರ ಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ಎಣ್ಣೆ ಬೀಜಗಳನ್ನು ರಫ್ತು ಮಾಡಲಾಗುವುದು. ಈ ದೇಶದಿಂದ ರಫ್ತಾಗುವ ಒಟ್ಟು ಪ್ರಮಾಣದಲ್ಲಿ ಇವೇ ನೂರಕ್ಕೆ ೯೦ರಷ್ಟಿದೆ. ಕಳೆದ ಕೆಲವು ವರ್ಷಗಳಲ್ಲಿ ಕಾಫಿ ಬೆಳೆಯು ಒಂದೇ ಸಮನೆ ಹೆಚ್ಚಾಗುತ್ತಿದೆ. ೧೯೫೫ರಲ್ಲಿ ಕಾಫಿ ಬೆಳೆಯಿಂದಲೇ ದೇಶವು ೩೦೦ ಲಕ್ಷ ಅಮೇರಿಕನ್ ಡಾಲರುಗಳಷ್ಟು ವಿದೇಶೀ ಧನ ವಿನಿಮಯವನ್ನು ಗಳಿಸಿತು. ಉಪ್ಪು, ಕೆಲವು ರೀತಿಯ ಹತ್ತಿ ವಸ್ತ್ರಗಳು, ಹತ್ತಿನೂಲು, ಕಟ್ಟಡ ಸಂಬಂಧವಾದ ಸಾಮಗ್ರಿಗಳು, ಪೆಟ್ರೋಲ್ ಮತ್ತು ಸೀಮೆ ಎಣ್ಣೆ, ಸಕ್ಕರೆ, ಗಾಜು, ಮೋಟಾರು ವಾಹನಗಳು ಮತ್ತು ಸಾಬೂನನ್ನು ಈ ದೇಶವು ಆಮದು ಮಾಡಿಕೊಳ್ಳುವುದು. ಇಥಿಯೋಪಿಯಾಕ್ಕೆ ನೆಯ್ದ ವಸ್ತ್ರಗಳನ್ನು ಪೂರೈಸುವ ರಾಷ್ಟ್ರಗಳಲ್ಲಿ ಭಾರತವು ಇಥಿಯೋಪಿಯಾದ ಒಟ್ಟು ಆಮದಿನಲ್ಲಿ ನೂರಕ್ಕೆ ೧೫.೭೦ರಷ್ಟನ್ನು ಪೂರೈಸಿದೆ. ಇಟಲಿ ಹಾಗು ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ನಂತರ ಭಾರತವು ಮೂರನೆಯ ಸ್ಥಾನವನ್ನು ಆಕ್ರಮಿಸಿದೆ.

ಇಥಿಯೋಪಿಯಾದಲ್ಲಿ ೨,೫೦೦ ಮೈಲಿಗಳಷ್ಟು ಸರ್ವಕಾಲದ ಹೆದ್ದಾರಿಗಳೂ ಮತ್ತು ಬೇಸಿಗೆಯಲ್ಲಿ ಮಾತ್ರ ಉಪಯೋಗಕ್ಕೆ ಬರುವ ೪,೦೦೦ ಮೈಲಿಗಳ ಸಂಚಾರ ಮಾರ್ಗಗಳೂ ಇವೆ. ಈ ದೇಶದಲ್ಲಿ ಎರಡು ರೈಲು ಮಾರ್ಗಗಳಿವೆ. ಒಂದು ರೈಲು ಮಾರ್ಗವು ೪೮೭ ಮೈಲಿಗಳಷ್ಟು ಉದ್ದವಿದ್ದು ಅಡ್ಡಿಸ್ ಅಬಾಬಾವನ್ನು ಜಿಬೂತಿ ರೇವು ಪಟ್ಟಣದೊಂದಿಗೆ ಸಂಬದ್ಧಗೊಳಿಸುತ್ತದೆ.

ಇಥಿಯೋಪಿಯಾದ ವಿಮಾನ ಮಾರ್ಗಗಳು ಆ ರಾಷ್ಟ್ರದ ೨೬ ನಗರಗಳಿಗೆ ಸಂಬಂಧ ಕಲ್ಪಿಸುವುವು. ೪,೦೦೦ ಮೈಲಿಗಳಷ್ಟು ತಂತಿ ಮಾರ್ಗಗಳಿವೆ. ಒಟ್ಟು ೮ ೦೦೦ ಟೆಲಿಫೋನ್ ಚಂದಾದಾರರಿರುವರು. ಕಳೆದ ಕೆಲವು ವರ್ಷಗಳಲ್ಲಿ ಅಂಚೆ ಸೇವಾ ಸೌಲಭ್ಯಗಳನ್ನು ಬಹುಮಟ್ಟಿಗೆ ವಿಸ್ತರಿಸಲಾಗಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ವಿಮಾನ ಸಂಚಾರ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹೈಲೆ ಸೆಲಸ್ಸಿ ಚಕ್ರವರ್ತಿಗಳು ಶಿಕ್ಷಣದತ್ತ ವಿಶೇಷ ಗಮನವಿಟ್ಟಿರುವರು. ೧೯೧೬ರಲ್ಲಿಯೇ (ಅಂದರೆ ಔಡಿಟು ಚಕ್ರವರ್ತಿನಿಗೆ ರೀಜೆಂಟರಾದಾಗಲೇ) ಚಕ್ರವರ್ತಿಗಳು ತಮ್ಮ ಜನರ ಅಭ್ಯುದಯಕ್ಕಾಗಿ ತೀವ್ರತರ ಕಾರ್ಯಕ್ರಮವೊಂದು ಅಗತ್ಯವೆಂಬುದನ್ನು ಮನಗಂಡರು. ಈ ದೃಷ್ಟಿಯಿಂದ ವಿದೇಶಗಳಲ್ಲಿ ದೊರೆಯುವ ಎಲ್ಲ ರೀತಿಯ ಶೈಕ್ಷಣಿಕ ಸೌಲಭ್ಯಗಳನ್ನು ಉಪಯೋಗಿಸಿಕೊಂಡರು, ರಾಷ್ಟ್ರದ ಒಟ್ಟು ಬಜೆಟ್‌ನಲ್ಲಿ ಸುಮಾರು ಮೂರನೆಯ, ಒಂದರಷ್ಟನ್ನು ಶಿಕ್ಷಣಕ್ಕಾಗಿ ವಿನಿಯೋಗಿಸಲಾಗುತ್ತಿದೆ. ಇಥಿಯೋಪಿಯಾದ ಚರ್ಚ್ ೧೦,೦೦೦ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳಲ್ಲಿ ಕಲೆ, ಸಂಗೀತ, ಧರ್ಮ, ಕಾನೂನು ಮತ್ತಿತರ ಸಾಮಾನ್ಯ ವಿಷಯಗಳನ್ನು ಬೋಧಿಸಲಾಗುವುದು.

ಪ್ರಾಥಮಿಕ ಶಾಲೆಗಳಲ್ಲಿ ರಾಷ್ಟ್ರಭಾಷೆಯಾದ ಅಮ್ಹರಿಕ್‌ನಲ್ಲಿ ಬೋಧಿಸಲಾಗುವುದು. ಇಥಿಯೋಪಿಯಾದಲ್ಲಿ ಒಟ್ಟು ೬೫೫ ಸರ್ಕಾರಿ ಪ್ರಾಥಮಿಕ ಶಾಲೆಗಳೂ, ೧೫ ಸೆಕೆಂಡರಿ ಶಾಲೆಗಳೂ ಇರುವುವು. ಸೆಕೆಂಡರಿ ಶಾಲೆಗಳಲ್ಲಿ ವ್ಯವಸಾಯ, ವಾಣಿಜ್ಯ ಮತ್ತು ವೃತ್ತಿ ಸಂಬಂಧವಾದ ವಿಷಯಗಳನ್ನು ಬೋಧಿಸಲಾಗುವುದು. ಉನ್ನತ ಶಿಕ್ಷಣದ ಬಗ್ಗೆ ಕಲಾ ಹಾಗೂ ವಿಜ್ಞಾನ ಸಂಬಂಧವಾದ ಕಾಲೇಜಿರುವುದು. ಇಂಜಿನಿಯರಿಂಗ್ ಹಾಗೂ ಉಪಾಧ್ಯಾಯರ ಶಿಕ್ಷಣ ಕಾಲೇಜುಗಳಿರುವುವು, ಮೊದಲನೆಯ ಹೈಲ್ ಸೆಲಾಸಿ ವಿಶ್ವವಿದ್ಯಾನಿಲಯವೆಂಬ ರಾಷ್ಟ್ರೀಯ ವಿಶ್ವವಿದ್ಯಾನಿಲಯವೊಂದನ್ನು ನಿಯೋಜಿಸಲಾಗುತ್ತಿದೆ.

ಅಡಿಸ್ ಅಬಾಬಾದಲ್ಲಿ ಆರು ವಾರಪತ್ರಿಕೆಗಳು ಪ್ರಕಟವಾಗುತ್ತಿವೆ. ಇವುಗಳಲ್ಲಿ ಮೂರು ಅಮ್ಹರಿಕ್‌ಭಾಷೆಯಲ್ಲಿಯೂ ಒಂದು ಇಂಗ್ಲಿಷ್ ಭಾಷೆಯಲ್ಲಿಯೂ ಎರಡು ಫ್ರೆಂಚ್ ಮತ್ತು ಅಮ್ಹರಿಕ್ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿವೆ. ಇಥಿಯೋಪಿಯಾದ ಏಕೈಕ ದಿನಪತ್ರಿಕೆ "ವಾಯ್ಸ್ ಆಫ್ ಇಥಿಯೋಪಿಯಾ"ವು ಅಮ್ಹರಿಕ್ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಪ್ರಕಟವಾಗುತ್ತದೆ.

## ಲಕ್ಷ್ಮಿಯ ಆಧುನಿಕ ಸ್ವರೂಪ

ದೀಪಾವಳಿಯು ದೀಪಗಳ ಹಬ್ಬ; ಅದರ ಜೊತೆಗೆ ಅದು ಲಕ್ಷ್ಮಿ ಮತ್ತು ಶ್ರೇಯೋಭಿವೃದ್ಧಿಯ ಹಬ್ಬವೂ ಹೌದು. ಮನುಷ್ಯನು ಪರಂಪರೆಯಿಂದ ಧನ, ಆಭರಣ, ಪಶು, ಭೂಮಿ, ಮನೆ ಇತ್ಯಾದಿಗಳನ್ನು ಸಂಪತ್ತೆಂದು ಭಾವಿಸಿಕೊಂಡು ಬಂದಿದ್ದಾನೆ, ಕಾಲಕ್ರಮೇಣ ಈ ವಸ್ತುಗಳನ್ನು ಪೂಜಿಸಲಾರಂಭಿಸಿದನು ನಮ್ಮ ಸಮಾಜದಲ್ಲಿ ಹಬ್ಬದ ದಿನ ಪ್ರಾತಃಕಾಲ ಎದ್ದಾಗ ಎಲ್ಲಕ್ಕಿಂತ ಮೊದಲು ಹಣ ಅಥವಾ ಆಭರಣಗಳನ್ನು ನೋಡುವ ಪದ್ಧತಿಯಿದೆ. ಈ ಸಮಾರಂಭಕ್ಕೆ ಕೂಡಿಟ್ಟ ಹಾಗೂ ಹೂತಿಟ್ಟ ಹಣವನ್ನೂ ಹೊರತರಲಾಗುತ್ತಿತ್ತು. ಇದೇ ರೀತಿ, ಸುಗ್ಗಿಯ ಕಾಲದಲ್ಲಿ ಪಶುಗಳ ಹಬ್ಬವೂ ಇರುವುದು. ಅದೇ ರೀತಿ ಸರಸ್ವತಿ ಪೂಜೆಯ ಸಮಯದಲ್ಲಿ, ನಮ್ಮ ದೇಶದಲ್ಲಿ ವಿದ್ಯಾವ್ಯಸನಿಗಳೆಲ್ಲ ತಮ್ಮ ಪುಸ್ತಕಗಳು ಇತ್ಯಾದಿಗಳನ್ನೂ, ಶ್ರಮಜೀವಿಗಳು ಕಾರ್ಖಾನೆಗಳಲ್ಲಿ ಯಂತ್ರೋಪಕರಣಗಳನ್ನೂ, ಸಂಗೀತಗಾರರು ತಮ್ಮ ವಾದ್ಯೋಪಕರಣಗಳನ್ನೂ ಪೂಜಿಸುವರು. ಈ ಪ್ರಕಾರ, ಪ್ರತಿ ಹಬ್ಬಗಳಲ್ಲಿಯೂ ನಾವು ಸುಖಸಮೃದ್ಧಿಯ ಕಾಮನೆಯನ್ನು ಮಾಡುತ್ತೇವೆ. ವಿಶ್ವದ ಇತಿಹಾಸದಲ್ಲಿ ಮೊದಲಿನಿಂದಲೂ ಧರ್ಮ ಹಾಗೂ ಅರ್ಥಗಳೆರಡೂ ಅತ್ಯಂತ ಶಕ್ತಿಶಾಲಿಗಳಾದ ಪ್ರಭಾವಗಳಾಗಿದ್ದವು.

ಆಧುನಿಕ ಯುಗದಲ್ಲಿ ನಾವು ಅವುಗಳನ್ನು ಸಂಪತ್ತೆಂದು ಭಾವಿಸುವುದಿಲ್ಲ. ಸಂಪತ್ತು ಬೆಳೆಸುವುದಕ್ಕಾಗಿದೆ ಯೆಂಬುದನ್ನೂ ನಾವು ಒಪ್ಪುವುದಿಲ್ಲ. ಹೂತಿಟ್ಟ ಹಣವನ್ನು ಸತ್ತ ಹಣವೆಂದೇ ಭಾವಿಸುತ್ತೇವೆ. ಆದ್ದರಿಂದ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಬೆಲೆ ಬಾಳುವ ಆಭರಣಗಳಿಗಾಗಿ ಉಪಯೋಗಿಸಲು ಹಿಂಜರಿಯುತ್ತೇವೆ. ಉತ್ತಮ ರೀತಿಯಲ್ಲಿ ಉಪಯೋಗಕ್ಕೆ ಬಾರದ ಪಶು ಸಂಪತ್ತಿಗೆ ಬೆಲೆಯಿಲ್ಲ. ಕೃಷಿಯೋಗ್ಯವಲ್ಲದ ಭೂಮಿ ಆಸ್ತಿಯು ಸಂಪತ್ತಿಗಿಂತಲೂ ಹೊರೆಯೆಂದೇ ಪರಿಗಣಿಸಲಾಗುವುದು.

ಮಾನವನ ಅತ್ಯಂತ ಮುಖ್ಯವಾದ ಅಗತ್ಯವೆಂದರೆ; ಉತ್ತಮ ಆಹಾರ, ವಸ್ತ್ರ, ಸುವ್ಯವಸ್ಥಿತ ವಸತಿ, ಆಧುನಿಕ ಸಾಗಾಣಿಕೆ ವ್ಯವಸ್ಥೆ, ಜೀವನವನ್ನು ಸುಗಮವಾಗಿ ನಡೆಸುವುದಕ್ಕೆ ಸಹಾಯಕವಾದ ಉತ್ತಮ ಸೌಕರ್ಯಗಳು, ಇವೆಲ್ಲಕ್ಕಿಂತ ಮಿಗಿಲಾಗಿ ಪೂರ್ಣೋದ್ಯೋಗ, ಈ ಅಗತ್ಯಗಳೆಲ್ಲವನ್ನು ಪೂರೈಸುವುದಕ್ಕೆ ಪ್ರತ್ಯಕ್ಷವಾದ, ಅಥವಾ ಪರೋಕ್ಷವಾದ ಸಾಧನವೆಂದರೆ ಸಂಪತ್ತು. ಆಧುನಿಕ ಬೇಸಾಯ ಯಂತ್ರೋಪಕರಣಗಳು, ದೊಡ್ಡ ದೊಡ್ಡ ಕೃತಕ ಗೊಬ್ಬರದ ಕಾರ್ಖಾನೆಗಳು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ನದಿಕಣಿವೆ ಯೋಜನೆಗಳು, ಬೃಹತ್ ಪ್ರಮಾಣದ ಕೈಗಾರಿಕಾ ಕಾರ್ಖಾನೆಗಳು, ರೈಲ್ವೆಗಳು, ಹಡಗುಗಳು, ವಿಮಾನಗಳು, ಟೆಲಿಫೋನ್, ರೇಡಿಯೋ, ಮುಂತಾದ ಸಾರ್ವಜನಿಕ ಸಂಪರ್ಕ ವ್ಯವಸ್ಥೆಗಳು ಇವೆಲ್ಲವೂ ಸಂಪತ್ತು ಸಾಧಿಸುವ ಅಗಾಧ ಆರ್ಥಿಕ ಸಾಧನೆಗಳಾಗಿವೆ. ಈ ನಾಡಿಯಲ್ಲಿ ದುಡಿಯುವ ಸ್ತ್ರೀ-ಪುರುಷರೂ ಈ ರೀತಿಯ ಸ್ತ್ರೀ-ಪುರುಷರ ಆರೋಗ್ಯಾದಿಗಳನ್ನು ನೋಡಿಕೊಳ್ಳುವ ವೈದ್ಯರೂ ಈ ಆರ್ಥಿಕ ಸಾಧನಗಳಷ್ಟೇ ಮುಖ್ಯ ಪಾತ್ರವನ್ನು ನಿರ್ವಹಿಸುವರು.

ರಾಷ್ಟ್ರೀಯ ವರಮಾನದಲ್ಲಿ ಇವೆಲ್ಲದರ ಪರಿಣಾಮವು ನೋಡಸಿಗುವುದು. ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ವರಮಾನವು ನೂರಕ್ಕೆ 18ರಷ್ಟು ಹೆಚ್ಚಿದೆ. ಆ ಅವಧಿಯಲ್ಲಿ ರಾಷ್ಟ್ರೀಯ ವರಮಾನವನ್ನು ನೂರಕ್ಕೆ 11 ರಷ್ಟು ಹೆಚ್ಚಿಸಬೇಕೆಂಬ ಗುರಿಯನ್ನಿಟ್ಟುಕೊಳ್ಳಲಾಗಿತ್ತು. 1952-53ರಲ್ಲಿದ್ದ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನವು 10,800 ಕೋಟಿ ರೂಪಾಯಿಗಳಿದ್ದುದು, ದ್ವಿತೀಯ ಯೋಜನೆಯಲ್ಲಿ ರಾಷ್ಟ್ರೀಯ ವರಮಾನವನ್ನು 13,400 ಕೋಟಿ ರೂಪಾಯಿಗಳೆಂದು ಅಥವಾ ನೂರಕ್ಕೆ 25ರಷ್ಟು ಹೆಚ್ಚಾಗುವುದೆಂದು ಅಂದಾಜುಮಾಡಲಾಗಿದೆ. 25 ವರ್ಷಗಳ ನಂತರ, ಐದು ಪಂಚವಾರ್ಷಿಕ ಯೋಜನೆಗಳು ನಿರಂತರವಾಗಿ ಮುಕ್ತಾಯಗೊಂಡನಂತರ, ರಾಷ್ಟ್ರೀಯ ವರಮಾನವು ದ್ವಿಗುಣವಾಗುವುದು. ಅಂದರೆ, ಕಷ್ಟದ ದುಡಿಮೆಯಿಂದ ಮತ್ತು ಸಂಪತ್ತನ್ನು ಉಪಯುಕ್ತ ಕೆಲಸಗಳಿಗಾಗಿ ಬಳಸುವುದರಿಂದ, ಭವಿಷ್ಯದಲ್ಲಿ ಹೆಚ್ಚಿನ ಶ್ರೇಯೋಭಿವೃದ್ಧಿಯಾಗುವುದು; ಜೀವನವು ಹೆಚ್ಚು ಸುಖಸಮೃದ್ಧಿಯಿಂದ ಕೂಡಿರುವುದು; ದೊಡ್ಡ ಪ್ರಮಾಣದಲ್ಲಿ ಹಬ್ಬ ಹರಿದಿನಗಳನ್ನು ಆಗ ನಡೆಸಬಹುದು.

## ಹೊಸ ಹುರುಪು ಹೊರ ಹೊಮ್ಮಲಿ!

ಜಡ ನಿದ್ದೆಯಿಂದೆದ್ದು—ದುಶ್ಶಕ್ತಿಗಳನೊದ್ದು |
ಕನ್ನಡದ ಕುವರ ನೆಗೆದಾಡಬೇಕು ||
ಕನ್ನಡಾಂಬೆಯ ಸಿರಿಮುಡಿಗೆ ಕೈಯ ಮುಗಿದಿಂದು |
ಕಲಿತನದ ಕೆಚ್ಚನವ ತೋರಬೇಕು ||

೨

ದೇಶಕೋಸುಗ ದೇಹ ತೃಣವೆಂದು ಬಗೆಯುತ್ತ |
ರಕ್ತದೋಕುಳಿ ಹರಿಸಿ ಸಂದುಹೋದ ||
ಕೀರ್ತಿ ಮೂರ್ತಿಗಳನನುಸರಿಸುತ್ತ ಕಾರ್ಯಕ್ಕೆ |
ಇಳಿಯ ಬೇಕಿಂದೀಗ ತೊರೆದು ಭೇದ ||

೩

ರನ್ನ ಜನ್ನರು ಪಂಪ ಪೊನ್ನರೆಲ್ಲರು ಜನಿಸಿ |
ಕನ್ನಡದ ಚಿನ್ನುಡಿಯ ಹಾಡಿ ಮೆರೆದ ||
ಉನ್ನತೋನ್ನತ ಕೀರ್ತಿ ಶಿಖರವೇರುತ ಸ್ಫೂರ್ತಿ |
ನುಡಿ ಕಿಡಿಗಳನು ಹರಡಿದವರ ಪೊಗೆವ ||

೪

ನಾಡಿನಲಿ ಜನಿಸಿಹೆವು ಕನ್ನಡಿಗರೆನಿಸಿಹೆವು |
ಹಿರಿಯ ಕೀರ್ತಿಯ ಕಾವ ಹೊಣೆಯದಿಹುದು ||
ಕನ್ನಡದ ಕಿರುನುಡಿಯ ಕನ್ನಡದ ಚೆಲುನುಡಿಯ |
ಉನ್ನತಕ್ಕೇರಿಸುವ ಭಾರ ಬಂದಿಹುದೊ ||

೫

ಕನ್ನಡಿಗನೇ ನೀನು ಬಲಹೀನನೋ ಯೇನು? |
ಜಗವ ಗಡಗಡನೆ ನಡುಗಿಸಲು ಬಲ್ಲೆ ||
ಇನ್ನೇಕೆ ಸಾವಕಾಶವು ಸುಮ್ಮನಿರಬೇಡ !
ನಿನ್ನ ಶಕ್ತಿಯನೀಗ ತೋರಿಸಿಲ್ಲೆ ||
ಸಂತಸದ ಸುದ್ದಿ ಮೈಸೂರುಪ್ರಾಂತ್ಯವವಕ್ಕ |
ಕನ್ನಡದ ಯೇಳಿಗೆಗೆ ಸಮಯಬಂತು ||
ಹೊಸಹುರುಪು ಹೊರಹೊಮ್ಮಿ ಧೈರ್ಯ ಸಾಹಸದಿಂದ |
ಅಭಿವೃದ್ಧಿ ಪಥವನ್ನು ಹಿಡಿವುದಿಂತು ||

—ಶ್ರೀ ರಮಾನಂದ ಬನಾರಿ.
ದೇಲಂಪಾಡಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಾಗಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬
VOL. 36

15—11—1956

ಸಂಚಿಕೆ ೧೧
NO. 11

## ನಮ್ಮ ಪ್ರಥಮ ಕರ್ತವ್ಯ

### ಕನ್ನಡವು ಆಡಳಿತದ, ನ್ಯಾಯಸ್ಥಾನದ ಮತ್ತು ಶಿಕ್ಷಣದ ಭಾಷೆಯಾಗಲು ಇನ್ನು ವಿಳಂಬ ಸಲ್ಲದು

ಕನ್ನಡಿಗರದಾದ ರಾಜ್ಯವೊಂದು—ಮೈಸೂರು ಎಂಬ ಹೆಸರಿನಿಂದಲೇ ಆಗಲಿ—ಈಗ ರೂಪುಗೊಂಡಿರುವುದರಿಂದ ನಾವು ಹೆಮ್ಮೆಪಟ್ಟುಕೊಳ್ಳುವುದು ಸಹಜವೇ ಆಗಿದೆ. ಅನೇಕ ಮಹನೀಯರ ಉದಾರವಾದ ಸಹಕಾರ ಮತ್ತು ಜನತೆಯ ನಿರಂತರವಾದ ಹೋರಾಟದ ಫಲವಾಗಿ ಕೈಗೆ ಬಂದಿರುವ ಫಲವಿದು.

ಆದರೆ ಕನ್ನಡ ರಾಜ್ಯದ ನವೋದಯ ಕಾಲದಲ್ಲಿ ಬೆಂಗಳೂರಿನಲ್ಲಿ ನಡೆದು ಹೋಯಿತೆಂಬ "ಅಚಾತುರ್ಯ"ವೊಂದನ್ನು ಕೇಳಿದಾಗ ನಾವು ಕನ್ನಡ ರಾಜ್ಯ ಬೇಕೆಂದು ಬೊಬ್ಬೆ ಹೊಡೆದುದು ಇಷ್ಟಕ್ಕಾಗಿಯೆ? ಎಂಬ ಸಂಶಯವೇಳುತ್ತದೆ. ನವಮೈಸೂರಿನ ರಾಜ್ಯಪಾಲರೂ ಮುಖ್ಯಮಂತ್ರಿ ಹಾಗು ಮಂತ್ರಿ ಮಂಡಳದ ಇತರ ಸದಸ್ಯರೂ ಮುಖ್ಯ ನ್ಯಾಯಾಧೀಶ ಹಾಗು ಇತರ ನ್ಯಾಯಾಧೀಶರೂ ಎಲ್ಲರೂ ಆಂಗ್ಲ ಭಾಷೆಯಲ್ಲೇ ಪ್ರತಿಜ್ಞಾವಚನವನ್ನು ಸ್ವೀಕರಿಸಿದರಂತೆ. ಸಾಲದುದಕ್ಕೆ ಅಂದು ಸಾಯಂಕಾಲ ರಾಷ್ಟ್ರಾಧ್ಯಕ್ಷರು ವಿಧ್ಯುಕ್ತನಾಗಿ ನವರಾಜ್ಯದ "ಉದ್ಘಾಟನೆ"ಯನ್ನು ನೆರವೇರಿಸುವಾಗ ಸಹ ನಮ್ಮ ಮುಖಂಡರ ಕನ್ನಡಾಭಿಮಾನ ಶೂನ್ಯತೆಯು ವ್ಯಕ್ತವಾಯಿತೆಂದು ತಿಳಿದುಬರುತ್ತದೆ.

ಇದೆಂತಹ ಶೋಚನೀಯವಾದ ವಿಷಯ! ಎರಡು ಕೋಟಿ ಕನ್ನಡಿಗರ ಆಶೋತ್ತರಗಳ ಪ್ರತೀಕವಾಗಿ ರೂಪುಗೊಂಡಿರುವ ನಾಡಿನ ಧುರೀಣರು ತಮ್ಮ ಜನರ ಏಳಿಗೆಯ ಶಪಥವನ್ನು ತೊಡುವಾಗ, ತಮ್ಮ ಜನದ ಹಿತಕ್ಕಾಗಿ ದುಡಿಯುವೆನೆಂಬ ಆಶ್ವಾಸನೆಯನ್ನು ನೀಡುವಾಗ, ತಮ್ಮ ಜನರ ಮನೋಗತದಂತೆ ನಡೆದುಕೊಳ್ಳಲು ಬದ್ಧರೆಂದು ಸಾರುವಾಗ—ಜನಕ್ಕೆ ಅರ್ಥವಾಗುವ ಕನ್ನಡ ಭಾಷೆಯನ್ನು ಬಿಟ್ಟು ಅನ್ಯಭಾಷೆಯೊಂದನ್ನು ಆಶ್ರಯಿಸಬೇಕೆ? ಕನ್ನಡದಲ್ಲಿ ಪ್ರತಿಜ್ಞಾ ವಚನದಂತಹ ಕಾರ್ಯವನ್ನು ನೆರವೇರಿಸುವುದಾಗಲೀ ಸ್ವಾಗತ ಭಾಷಣದಿಂದ ತೊಡಗಿ ಕನ್ನಡಿಗರ ಹೋರಾಟದ ಚಿತ್ರವನ್ನು ಅಂಕಿಸುವ ವಿದ್ವತ್ಪೂರ್ಣ ಉಪನ್ಯಾಸವನ್ನು ಬಿಗಿಯುವುದಾಗಲೀ ಸಾಧ್ಯವೇ ಇಲ್ಲವೆ?

ನಾವು ಇಂತಹ ಸುದ್ದಿಗಳಿಗೆ ನಮ್ಮ ಧುರೀಣರಾದವರು ಅವಕಾಶ ಕೊಡುತ್ತಿರುವುದಕ್ಕಾಗಿ ನಾಚಿಕೊಳ್ಳಬೇಕಾಗಿದೆ! ಆದೇ ಕಾಲದಲ್ಲಿ, ನವಮೈಸೂರಿನ ಸರಕಾರವು ಜನಹಿತಕ್ಕಾಗಿ ಮಾಡಬೇಕಾದ ಪ್ರಥಮ ಕರ್ತವ್ಯಗಳಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಸ್ವೀಕರಿಸುವುದು ಅತ್ಯಂತ ಮಹತ್ವದ ವಿಷಯವೆಂದು ಒತ್ತಿ ಹೇಳಬೇಕಾಗಿದೆ. ಈ ಮಟ್ಟಿಗೆ ಉದಾಸೀನತೆಯಾಗಲೀ ವಿಳಂಬ ಧೋರಣೆಯಾಗಲೀ ಎಷ್ಟು ಮಾತ್ರಕ್ಕೂ ಸಲ್ಲದು.

ಜನರು ಪ್ರಜಾಪ್ರಭುತ್ವದ ಬುನಾದಿ. ಅವರಿಗೆ ಸರಕಾರ ಹೇಗೆ ಕೆಲಸ ಮಾಡುತ್ತದೆ ಎಂಬುದರ ತಿಳಿವಳಿಕೆ ಸರಿಯಾಗಿ ಆಗಬೇಕಾಗಿದೆ. ಸರಕಾರವು ತಮಗೇನು ಆಜ್ಞೆಯನ್ನಿತ್ತಿದೆಯೆಂದೂ ತಮ್ಮಿಂದ ಅದು ಏನನ್ನು ಅಪೇಕ್ಷಿಸುತ್ತದೆಂದೂ ಜನರಿಗೆ ಚೆನ್ನಾಗಿ ಮಂದಟ್ಟಾಗಬೇಕಾಗಿದೆ. ಆಂಗ್ಲ ಭಾಷೆಯಲ್ಲಿಯೋ—ಅದರ ಸ್ಥಾನವು ಹಿಂದಿಗೆ ಬರಲಿದೆ ಎಂಬಂತಹ ಅಭಿಪ್ರಾಯದಿಂದ ಹಿಂದಿಯಲ್ಲಿಯೋ—ಸರಕಾರಿ ಕಾರ್ಯಕಲಾಪಗಳನ್ನು ಕನ್ನಡಿಗರ ಪ್ರದೇಶದಲ್ಲಿ ನಡೆಸಿದರೆ ಬ್ರಿಟಿಷರ ಆಡಳಿತ ಸಂಪ್ರದಾಯವನ್ನೆ ಮುಂದರಿಸಿಕೊಂಡು ಹೋದಹಾಗಾಯಿತಲ್ಲದೆ, ಸ್ವಾತಂತ್ರ್ಯವನ್ನು ಪಡೆದ ಉದ್ದೇಶವನ್ನು ನೆರವೇರಿಸಿದಂತಲ್ಲ.

ದಯಮಾಡಿ ನಮ್ಮ ಸರಕಾರಿ ಧುರೀಣರು ಇದನ್ನು ಮೊದಲು ತಿಳಿದುಕೊಳ್ಳಬೇಕೆಂಬುದೇ ನಮ್ಮ ನಮ್ರ ವಿನಂತಿಯಾಗಿದೆ. ಕೆಲವೆಡೆ ತೆಲುಗರೇ ಮೊದಲಾದ ಬೇರೆ ಭಾಷೆಯಾಡುವ ಜನರ ಬಾಹುಳ್ಯವು ನವಿಮ್ಮ ನೂತನ ರಾಜ್ಯದಲ್ಲಿದೆ ಎಂದು ಒಪ್ಪಿಕೊಂಡರೂ ಸಹ ಬಹುಜನ ಹಿತದ ಪ್ರಜಾಸತ್ತಾತ್ಮಕ ಧೋರಣೆಯನ್ನಿಟ್ಟುಕೊಂಡಿರುವ ಸರಕಾರವು ಕನ್ನಡವನ್ನು ಸರಕಾರಿ ಭಾಷೆಯಾಗಿ ಅಂಗೀಕರಿಸಲು ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದವರಿದ್ದಾರೆಂಬ ನೆಪವನ್ನು ಮುಂದೊಡಬಾರದು. ಈ ಅಲ್ಪ ಸಂಖ್ಯಾಕ ವರ್ಗಕ್ಕೆ ಯೋಗ್ಯ ರಕ್ಷಣೆಯು ದೊರೆಯಲಿ—ಅಂದರೆ ಅವರು ಬಾಹುಲ್ಯ ಸಾಧಿಸ್ಸಿರುವ ಕಡೆಗಳಲ್ಲಿ ಕನ್ನಡವಲ್ಲದೆ ಈ ಜನರ ಭಾಷೆಯಲ್ಲೂ ಸರಕಾರಿ ಆಡಳಿತ ನಡೆಯಲಿ! ಇಂತಹ ಏರ್ಪಾಡಿಗಾಗಿ ಹಿಂಜರಿಯಬೇಕಾದುದಿಲ್ಲ. ಆದರೆ ಕನ್ನಡವನ್ನು ಕಡೆಗಣಿಸುವ ಬುದ್ಧಿ ಮಾತ್ರ ದೂರವಾಗಲಿ!

ಸರಕಾರದ ಆಡಳಿತ ಭಾಷೆಯೊಂದೇ ಕನ್ನಡದಲ್ಲಾದರೆ ಸಾಲದು — ನ್ಯಾಯಸ್ಥಾನದ ಭಾಷೆಯೂ ಕನ್ನಡವೇ ಆಗಬೇಕು ಅದೂ ಅಲ್ಲದೆ, ಶಿಕ್ಷಣದ ಮಾಧ್ಯಮವನ್ನಾಗಿಯೂ ಕನ್ನಡವನ್ನೆ ನಾವು ಅಂಗೀಕರಿಸಬೇಕು. ಆಡಳಿತ ವಿಷಯದಲ್ಲಿ ಜನರಿಗೆ ಅರ್ಥವಾಗದ ಪರ ಭಾಷೆಯೊಂದನ್ನು ಬಳಸುವುದರಿಂದ ಏನು ತೊಂದರೆಯಾಗುವುದೋ ನ್ಯಾಯ ಸ್ಥಾನದ ಕಾರ್ಯಕಲಾಪಗಳ ಮಟ್ಟಿಗೂ ಇದೇ ತೊಂದರೆಯು ಉಂಟಾಗುತ್ತದೆ. ನ್ಯಾಯಾಧಿಪತಿಯ ಭಾಷೆಯೊಂದು, ಕಕ್ಷಿಗಾರನ ಭಾಷೆಯೊಂದು, ಕಕ್ಷಿಗಾರನ ವಕೀಲನ ಭಾಷೆಯೊಂದು, ಇವರೆಲ್ಲರನ್ನೂ ಒಂದು ಸೂತ್ರದಲ್ಲಿ ಪೋಣಿಸುವ ಅನುವಾದಕನ ಭಾಷೆಯೊಂದು—ಎಂಬಂತಹ ವಿಷಯ ವರ್ತುಲಕ್ಕೆ ಇನ್ನು ಮುಂದೆ ಎಡೆ ದೊರೆಯಬಾರದು.

ಸೂಕ್ಷ್ಮ ವಿಷಯಗಳನ್ನೆಲ್ಲ ಚರ್ಚಿಸಲು ಕನ್ನಡದ ಭಾಷಾ ಸಂಪತ್ತು ಪ್ರಬುದ್ಧವಾಗಿಲ್ಲ ಎನ್ನುವ ಆಕ್ಷೇಪವು ಮುಂದಿಟ್ಟು, ಆಡಳಿತ ಭಾಷೆಯಾಗಿಯಾಗಲೀ ನ್ಯಾಯಸ್ಥಾನದ ಭಾಷೆಯಾಗಿಯಾಗಲೀ ಶಿಕ್ಷಣ ಮಾಧ್ಯಮದ ಭಾಷೆಯಾಗಿಯಾಗಲೀ ಕನ್ನಡವನ್ನು ನಾವು ಬಳಸುವಂತಿಲ್ಲ ಎನ್ನುವ "ಮಹಾಪಂಡಿತರು" ನಮ್ಮಲ್ಲಿದ್ದಾರೆ. ಇನ್ನು ಕೆಲವರಿಗೆ ವೈಜ್ಞಾನಿಕ ಪ್ರಗತಿಯ ನಾಗಾಲೋಟದಲ್ಲಿ ನಾವೂ ಹೆಜ್ಜೆಯಿಟ್ಟು ಸಾಗುವ ಅವಸರವಿದ್ದು, ಕನ್ನಡ ಭಾಷೆಯಲ್ಲಿ ಕಲಿಯುವುದರಿಂದಾಗಲೀ ಆ ಭಾಷೆಯನ್ನು ಉಪಯೋಗಿಸುವ ಅಭ್ಯಾಸ ಮಾಡುವುದರಿಂದಾಗಲೀ ಪ್ರಗತಿಯ ವೇಗದೊಡನೆ ಹೊಂದಿಕೊಳ್ಳುವುದು ದುಸ್ತರವಾದೀತೆಂಬ ಭಯ! ಇಂಥವರಿಗೆ ಜಪಾನು, ಫ್ರಾನ್ಸು, ಜರ್ಮನಿಯಂಥ ಚಿಕ್ಕ ದೇಶಗಳು ಯಾವ ಭಾಷೆಯ ಮಾಧ್ಯಮದಿಂದ ತಮ್ಮ ಭಾಷೆಯ ಅಭಿವೃದ್ಧಿಯನ್ನು ಸಾಧಿಸಿಕೊಂಡಿವೆ ಎಂಬ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಇವೆಲ್ಲ ರಾಷ್ಟ್ರಗಳೂ ತಂತಮ್ಮ ಭಾಷೆಯನ್ನೆ ಸಕಲ ವ್ಯವಹಾರಗಳಿಗೆ ಬಳಸಿಕೊಳ್ಳುತ್ತವೆ. ಆಂಗ್ಲ ಭಾಷೆಯನ್ನು ಕೃಚಿತ್ತಾಗಿಯಷ್ಟೆ ಅವಲಂಬಿಸಲಾಗುತ್ತದೆ.

ಯುರೋಪಿನ ತುಣುಕು ರಾಷ್ಟ್ರಗಳಿಗೆ—ಅವು ಕರ್ನಾಟಕದ ವಿಸ್ತಾರಕ್ಕಿಂತ ಮತ್ತು ಜನಸಂಖ್ಯೆಗಿಂತ ಹೆಚ್ಚಿನವಾಗಿಲ್ಲ! — ಸಾಧ್ಯವಾದುದು ಪೂರ್ವದ ಜಪಾನಿಗೆ ಸಾಧ್ಯವಾದುದು ನಮ್ಮವರಿಗೆ ಮಾತ್ರ ಅಸಾಧ್ಯವಾದ ದುಸ್ಸಾಹಸವೆಂದು ತೋರುವುದಾದರೆ "ದೇವರೇ ಕಾಪಾಡಲಿ" ಎನ್ನಬೇಕಾಗುತ್ತದೆ. ಆದರೆ ನಾವು ಸಾಹಸಪ್ರಿಯರೂ ಉದ್ಯಮಶೀಲರೂ ಭಾಷೆ ಮತ್ತು ನಾಡಿನ ಅಭಿಮಾನವುಳ್ಳವರೂ ಶ್ರದ್ಧಾವಂತರೂ ಆಗಿರುವ ಪಕ್ಷದಲ್ಲಿ ಕನ್ನಡವನ್ನು ಯಶಸ್ವಿಯಾಗಿ ಎಲ್ಲ ರಂಗದಲ್ಲೂ ಬಳಸಲು ಶಕ್ತರಾಗುವುದರಲ್ಲಿ ಸಂದೇಹವಿಲ್ಲ. ವಿಸ್ತಾರವಾದ ವರ್ಣನೆಗಳಿಂದಲೂ ನವರಸಾಲಂಕಾರಗಳಿಂದಲೂ ರಂಜಿಸುವ ಮಹಾ ಕಾವ್ಯಗಳನ್ನು ಕನ್ನಡದಲ್ಲಿ ನಮ್ಮ ಪೂರ್ವಜನರು ರಚಿಸಲು ಸಮರ್ಥರಾಗಿರುವರೆಂದ ಮೇಲೆ—ನ್ಯಾಯಸ್ಥಾನ, ವೈಜ್ಞಾನಿಕರಂಗ ಆಡಳಿತ ವಿಧಾನ ಹಾಗು ಶೈಕ್ಷಣಿಕ ಕ್ಷೇತ್ರಗಳಲ್ಲಿ ಕನ್ನಡವನ್ನು ಬಳಸಿಕೊಳ್ಳಲಾರೆವೆನ್ನುವುದು ಅರ್ಥಶೂನ್ಯವಾದ ಮಾತು! ಇದು ನಮ್ಮ ನಿಶ್ಚಿತವಾದ ಅಭಿಪ್ರಾಯ.

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ಹಿಂದೆ (31—10—1955)
ರೂಪಾಯಿ:- 76,00,000
ಒಟ್ಟು ಚಲಾವಣೆ ಮೊಬಲಗು
ಇಂದು:- (31—10—1956)
ರೂಪಾಯಿ:- 1,00,00,000 ಕ್ಕೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

## ಕಲಾರಂಗ

# ನಮ್ಮವರ ದಾರ್ಶನಿಕ ದೃಷ್ಟಿ ಮತ್ತು ಪ್ರಕೃತಿಪ್ರೇಮವು ನಮ್ಮ ಕಲಾಪರಂಪರೆಯಲ್ಲಿ ಮೈವೆತ್ತಿದೆ—ಈ ಸಾಧನೆ ಜಗತ್ತಿನಲ್ಲೇ ಅಪೂರ್ವ ಮತ್ತು ಅದ್ಭುತ!

ಭಾರತದ ಕಲೆಯು ಭಾರತೀಯ ನಡವಳಿಕೆ ಮತ್ತು ದಾರ್ಶನಿಕ ದೃಷ್ಟಿಯನ್ನು ಪ್ರತಿಬಿಂಬಿಸುವುದು. ಭಾರತೀಯ ಕಲಾವಿದರು, ಪರ್ವತಗಳು, ನದಿಗಳು, ವನಗಳು, ಮೈದಾನುಗಳು ಪಶುಪಕ್ಷಿಗಳು, ಒಟ್ಟಿನಲ್ಲಿ ಪ್ರಕೃತಿಯ ಪ್ರತಿಯೊಂದು ವಿನ್ಯಾಸದಿಂದಲೂ ಪ್ರೇರಣೆಯನ್ನು ಪಡೆಯುತ್ತಾರೆ ಯಾವ ಕಲ್ಪನಾ ಲೋಕದಲ್ಲಿ ಅವರು ವಿಹಾರವಾಡುತಾರೋ ಅಲ್ಲಿನ ಅಂಶಗಳು ಅವರ ಕಲಾಕೃತಿಗಳಲ್ಲಿ ಕಂಡುಬರುತ್ತವೆ.

ಭಾರತೀಯ ಕಲೆಗಳಲ್ಲಿ ಭಾರತೀಯ ಸ್ವಭಾವ, ದಾರ್ಶನಿಕ ದೃಷ್ಟಿಕೋಣ ಮತ್ತು ಪ್ರಕೃತಿ ಸೌಂದರ್ಯಾನುಭೂತಿಯ ಉಲ್ಲಾಸ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿರುತ್ತವೆ.

ಭಾರತೀಯ ಕಲೆಯಲ್ಲಿ ಅನರಡೇ ಆದ ಒಂದು ವೈಶಿಷ್ಟ್ಯ ಇರುವುದು. ಭಾರತದ ಶಿಲ್ಪಿಗಳು ತಮ್ಮ ಮಾಲೀಕರ ಅಥವಾ ಇತರರ ಆದೇಶಗಳ ಪ್ರಕಾರ ಸುಂದರ ಮೂರ್ತಿಗಳನ್ನು ಚಿತ್ರಿಸಲಿಲ್ಲ; ಆದರೆ, ದೈವಭಕ್ತಿಯಲ್ಲಿ ಅವರು ಲೀನರಾಗಿ ಅದ್ಭುತ ಕಲೆಯ ಚಮತ್ಕಾರವನ್ನು ತೋರಿಸಿರುವರು, ಮೂರ್ತಿಕಾರರು, ಚಿತ್ರಕಾರರು ಅಥವಾ ಶಿಲ್ಪವಿಶಾರದರು. ತಮ್ಮ ಕಲಾಸೇವೆಯನ್ನು ಭಕ್ತಿಭಾವದಲ್ಲಿ ಓತಪ್ರೋತರಾಗಿಯೇ ಮಾಡಿರುವರು. ದೇಶದ ವಿಭಿನ್ನ ಭಾಗಗಳಲ್ಲಿ ಇಂದು ಇವರ ಭವ್ಯವಾದ, ವಿಶಾಲವಾದ ದೇವಸ್ಥಾನಗಳು, ಈ ಧರ್ಮಪರಾಯಣ ಕಲಾವಿದರ ಕೃತಿಗಳೇ ಆಗಿವೆ.

ಭಾರತೀಯ ಕಲೆಯ ಇತಿಹಾಸದ ಆರಂಭವನ್ನು ಪ್ರಾಯಶಃ ಬೌದ್ಧ ಕಾಲದ ಸ್ಮಾರಕಗಳಲ್ಲಿ ಗುರುತಿಸಬಹುದು. ರಾಮಪೂರ್ವಹೋರಿ, ಸಂಕೀಶದ ಆನೆ, ರಾಮಪೂರ್ವ ಮತ್ತು ಸಾರಾನಾಥಿನ ಸಿಂಹ ಇವೆಲ್ಲವೂ ಅಶೋಕ ಸ್ತಂಭಗಳ ಮೇಲೆ ನಿರ್ಮಿಸಲ್ಪಟ್ಟವೆ. ಇದರಿಂದ ಪ್ರಾಚೀನ ಕಲೆಯಲ್ಲಿ ದೇವಸ್ಥಾನಗಳಲ್ಲಿ 'ಧ್ವಜ' ಸ್ತಂಭ ನಿರ್ಮಿಸುವುದು ಪರಂಪರೆಯಾಗಿ ಸ್ತುಂಪು ತಿಳಿದು ಬರುವುದು. ಅಶೋಕನ ಕಾಲದ ಮೂರ್ತಿಕಲೆಯಲ್ಲಿ ಇರಾನಿನ ಪ್ರಭಾವವು ದೃಷ್ಟಿಗೋಚರವಾಗುತ್ತದೆ; ಆದರೂ ಅವುಗಳಲ್ಲಿ ಭಾರತೀಯ ಕಲೆಯ ನಿಖರತೆ ಇರುವುದು ದೀದಾರ್‌ಗಂಜ್‌ನ ಸುಂದರ ಯಕ್ಷಿ ಮತ್ತಿತರ ಮೂರ್ತಿಗಳು ಈ ಕಾಲಕ್ಕೆ ಸಂಬಂಧಪಡುತ್ತವೆ.

ಬರೂತ್ ಮತ್ತು ಸಾಂಚಿಗಳಲ್ಲಿನ ಮೂರ್ತಿಗಳು ಆರಂಭ ಕಾಲದ ಸುಂಗ ಮೂರ್ತಿಕಲೆಯ ಉತ್ಕೃಷ್ಟ ಉದಾಹರಣೆಯೆನ್ನಬಹುದು. ಬರೂತ್‌ನ ಸ್ತೂಪವು ಆಶ್ಚರ್ಯಕರ ರೀತಿಯಲ್ಲಿ ಬುದ್ಧನ ಮತ್ತು ಜಾತಕ ಕಥೆಗಳನ್ನು ತಿಳಿಸುತ್ತದೆ. ಸಾಂಚಿಯ ದಕ್ಷಿಣದ್ವಾರದಲ್ಲಿರುವ ಆನೆಯ ದಂತದ ಕೆಲಸವು ವಿದಿಶಾ ಕಲಾಕಾರರ ಕೆಲಸವನ್ನು ತೋರಿಸುತ್ತದೆ.

ಅಮರಾವತಿಯಲ್ಲಿ ಕೃಷ್ಣಾ ಕಣಿವೆಯಲ್ಲಿರುವ ಸ್ತೂಪವನ್ನು ಸ್ವಯಂ ನಾಗಾರ್ಜುನನೇ ಪುನರುತ್ಥಾನಗೊಳಿಸಿದನೆಂದು ಪುರಾಣಗಳು ತಿಳಿಸುತ್ತವೆ. ಆ ಸ್ತೂಪದ ಮೇಲೆ ನಡೆಸಿರುವ ಚಿತ್ರ ಕೆಲಸವು ಕುಶಾನ ಕಾಲದ ಕಲೆಗೆ ಅತ್ಯುತ್ತಮ ಉದಾಹರಣೆಯೆನಿಸುವುದು. ಮಥುರಾದಲ್ಲಿಯೂ ಆ ಕಾಲದ ಕಲೆಯ ಮಾದರಿಯು ದೊರೆಯುವುದು. ಬೇಗರಾಮರ ಹಸ್ತಿದಂತದ ಮೂರ್ತಿಗಳೂ ಮಥುರಾದ ಕುಶಾನರ ಕಾಲದ ಮೂರ್ತಿಗಳೊಂದಿಗೆ ಹೆಚ್ಚಿನ ಹೋಲಿಕೆಯನ್ನು ಹೊಂದಿವೆ.

ಮಥುರಾ ಮತ್ತು ಅಮರಾವತಿಗಳಂತೆಯೇ ಇಲ್ಲಿಯೂ ತೋರಣಗಳಿಂದ ಕೂಡಿದ ದ್ವಾರ ಮಹಿಳಾ ಶೃಂಗಾರ ಮತ್ತು ಮಿಥುನ ಮುದ್ರೆಯ ಮೂರ್ತಿಗಳಿವೆ. ಶಾತವಾಹನರು ಬ್ರಾಹ್ಮಣ ಧರ್ಮದಲ್ಲಿ ವಿಶ್ವಾಸವನ್ನಿಟ್ಟದ್ದರೂ, ಬೌದ್ಧ ಧರ್ಮಕ್ಕೆ ಪ್ರೋತ್ಸಾಹವನ್ನಿತ್ತಿದ್ದರು. ಪಶ್ಚಿಮ ಭಾರತದಲ್ಲಿ ಭಜ್, ಕಾರ್ಲ, ಕೌಂಡೆನ್, ಬೆದಸಾ, ಜುನ್ನಾರ್ ನಾಸಿಕ್ ಮುಂತಾದ ಸ್ಥಳಗಳಲ್ಲಿ ಗುಹಾಂತರ ದೇವಾಲಯಗಳನ್ನು ನಿರ್ಮಿಸಲಾಗಿವೆ. ಅವು ಬೌದ್ಧಧರ್ಮದ ವಿಸ್ತಾರದ ದ್ಯೋತಕಗಳೆನಿಸಿವೆ.

ಅಜಂತಾದ ೧೦ ಗುಹೆಗಳಲ್ಲಿ ಕ್ರಿಸ್ತಶಕ ೩ನೆಯ ಶತಮಾನಕ್ಕೆ ಮೊದಲಿನ ಚಿತ್ರಗಳು ಕಲಾವಿದರ ದಕ್ಷತೆಯನ್ನು ಸೂಚಿಸುತ್ತವೆ. ಹಾರುತ್ತಿರುವ ವಿದ್ಯಾಧರರು, ಕಿನ್ನರಕಿನ್ನರಿಯರು, ಜಾತಕದ ಕಥೆ ಮತ್ತು ಬುದ್ಧನ ಜೀವನ ಸಂಬಂಧವಾದ ಅನೇಕ ಚಿತ್ರಗಳನ್ನು ಅಲ್ಲಿ ಬಿಡಿಸಲಾಗಿದೆ. ಅವುಗಳೆಲ್ಲ ಆ ಕಾಲದ ಚಿತ್ರಕಲೆಯ ಉತ್ಕೃಷ್ಟ ಉದಾಹರಣೆಗಳಾಗಿವೆ.

ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿ ಶಾತವಾಹನರ ಮೂಲಕ ನಿರ್ಮಿತವಾದ ಒಂದು ಶಿವ ವಿಗ್ರಹವು ಗುಡಿಮಲ್ಲಂನಲ್ಲಿ ದೊರೆತಿದೆ. ದ್ವಿಬಾಹು ಶಿವನು ಒಬ್ಬ ಯಕ್ಷನ ಮೇಲೆ ಕುಳಿತಿರುವನು. ಅವನ ಒಂದು ಕೈಯಲ್ಲಿ ಅಜ್ಯಪಾತ್ರೆ ಮತ್ತು ದಂಡವಿರುವುದು. ಮತ್ತೊಂದು ಕೈಯಲ್ಲಿ ಬಲಿಯಿರುವುದು. ಇದು ಅಗ್ನಿ ರುದ್ರನ ಕಲ್ಪನೆಯನ್ನು ಸೂಚಿಸುವುದು.

ಕೃಷ್ಣ ಘಾಟಿಯಲ್ಲಿ ಶಾತವಾಹನರ ಅಥವಾ ಅವರ ಅನಂತರದ ಕಾಲದ ಕಲೆಯ ಮಾದರಿಗಳು ಬಹಳವಾಗಿ ದೊರೆತಿವೆ.

ಗುಪ್ತರ ಕಾಲದಲ್ಲಿ ಭಾರತೀಯ ಚಿತ್ರಕಲೆ ಮತ್ತು ಮೂರ್ತಿ ಕಲೆಯಲ್ಲಿ ಒಂದು ಹೊಸ ನಿಖರತೆ ಬಂದಿತು ಈಗ ದೊರೆತಿರುವ ಬುದ್ಧನ ಎರಡು ಪ್ರಸಿದ್ಧ ಮೂರ್ತಿಗಳು ಮತ್ತು ಸಾರನಾಥದಲ್ಲಿರುವ ಬುದ್ಧನ ಮೂರ್ತಿ ಇವು ಮೂರೂ ಗುಪ್ತರ ಕಾಲದಲ್ಲಿ ನಿರ್ಮಾಣವಾದುವು. ಗುಪ್ತ ದೊರೆಗಳು ಪರಮ ಭಾಗವತರಾಗಿದ್ದು ಬ್ರಾಹ್ಮಣ ಧರ್ಮದ ಅನುಯಾಯಿಗಳಾಗಿದ್ದರು ಶೇಷಶಾಯಿ ವಿಷ್ಣು, ಗಜೇಂದ್ರ ಮೋಕ್ಷ ಮತ್ತು ನರನಾರಾಯಣ ಈ ಕಲಾಕೃತಿಗಳು ಆ ಕಾಲದ ಕಲೆಯ ಉತ್ಕೃಷ್ಟತೆಯನ್ನು ಎತ್ತಿ ತೋರಿಸುತ್ತವೆ. ಗುಪ್ತರ ಕಾಲದ ಕಲಾವಿದರ ನಂತರ ಪಶ್ಚಿಮ ಚಾಲುಕ್ಯರು, ಗುರ್ಜರ ಪ್ರತಿಹಾರರು, ಮತ್ತು ತಾಳಕರು ಇವರ ಕಾಲದಲ್ಲಿಯೂ ಸಹ ಅಮೃತ ಮಥನ ಕಥೆಯ ಆಧಾರದ ಮೇಲೆ ಚಿತ್ರ ರಚನೆಗಳಾಗಿವೆ. ಗುಪ್ತ ಕಾಲೀನ ಕಲೆಯ ಪ್ರಭಾವ, ಅನಂತರದ ಕಾಲದ ಕಲೆಯ ಮೇಲೂ ಬಿದ್ದಿರುವುದು ಇದರಿಂದ ವ್ಯಕ್ತವಾಗುತ್ತದೆ.

ಮಧ್ಯಕಾಲದಲ್ಲಿ ಮೂರ್ತಿ ಕಲೆಯು ಬಹಳ ವಿಸ್ತಾರಗೊಂಡಿತು. ರಾಜರಾಣಿ ಮತ್ತು ಮುಕ್ತೇಶ್ವರ ದೇವಾಲಯ, ಚಂದೇಲ್ಲರ ಮೂಲಕವಾಗಿ ನಿರ್ಮಿತವಾದ ಖಜುರಾಹೋ ದೇವಾಲಯ ಅವುಗಳ ಜ್ವಲಂತ ಉದಾಹರಣೆಗಳಾಗಿವೆ. ವಿಕ್ರಮಾದಿತ್ಯನ ರಾಣಿ ತ್ರೈಲೋಕ್ಯ ಮಹಾದೇವಿ ಮತ್ತು ರಾಜಸಿಂಹನ ರಾಣಿ ರಂಗಪಟಕ ಇವರು ತುಂಬಾ ಕಲಾಪ್ರೇಮಿಗಳಾಗಿದ್ದರು. ಮಹಾರಾಣಿ ರಂಗಪಟಕರು ಕಾಂಚಿಪುರದಲ್ಲಿ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದಳು. ಆದ ಮಹಾಬಲಿಪುರ ಮತ್ತು ಇತರ ಸ್ಥಳಗಳಲ್ಲಿರುವ ದೇವಸ್ಥಾನಗಳ ಮಾದರಿಯ ಕಲ್ಲುಬಂಡೆಗಳನ್ನು ಕಡಿದು ನಿರ್ಮಿಸಲಾಗಿದೆ.

ಗುಜರಾತಿನ ಮಧೇರಾದಲ್ಲಿರುವ ಸೂರ್ಯ ದೇವಸ್ಥಾನ ಅಂಬರನಾಥದ ದೇವಸ್ಥಾನ ಇವು ಗುಜರಾತಿನ ಶಿಲ್ಪಕಲೆಯ ಅನುಪಮ ಉದಾಹರಣೆಗಳೆನಿಸಿವೆ. ಅಬುಬೆಟ್ಟದಲ್ಲಿರುವ ಜೈನ ದೇವಾಲಯವನ್ನೂ ಸಹ ಈ ಸಮಯದಲ್ಲಿ ಉಲ್ಲೇಖಿಸ ಬಹುದು.

೮ನೆಯ ಶತಮಾನದಲ್ಲಿ ಎಲ್ಲೋರದಲ್ಲಿ ನಿರ್ಮಿಸಲಾಗಿರುವ ದೇವಾಲಯವು ಭಾರತೀಯ ಶಿಲ್ಪಕಲೆಯ ಒಂದು ಅನುಪಮ ಕೃತಿಯೆನಿಸಿದೆ.

ಈ ದೇವಾಲಯಗಳನ್ನು ನಿರ್ಮಿಸಿದವರು ಈ ಭವ್ಯ ನಿರ್ಮಾಣದ ನಕ್ಷೆಯನ್ನು ಹೇಗೆ ತಯಾರಿಸಿದರು, ಅದನ್ನು ಹೇಗೆ ಕಾರ್ಯರೂಪಕ್ಕೆ ತಂದರು ಎಂದು, ಅದನ್ನು ನೋಡಿದವರೆಲ್ಲರೂ ದಂಗು ಬಡಿದವರಂತೆನಿಲ್ಲಬಹುದು. ಧಾರಾದಲ್ಲಿ ದೊರೆತಿರುವ ಸರಸ್ವತಿಯ ಮೂರ್ತಿಯು ಪರಮಾರ ಮೂರ್ತಿ ಕಲೆಯ ವೈಶಿಷ್ಟವನ್ನು ಪ್ರತಿಪಾದಿಸುತ್ತದೆ. ಆ ಮೂರ್ತಿ ಈಗ ಬ್ರಿಟಿಷ್ ಸಂಗ್ರಹಾಲಯದಲ್ಲಿದೆ.

ಪಲ್ಲವರ ನಂತರ ಚೋಳ ರಾಜರು ಆಡಳಿತಕ್ಕೆ ಬಂದರು ಅವರು ದೇವಾಲಯಗಳನ್ನು ನಿರ್ಮಿಸುವುದರಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸಿದ್ದರು. ರಾಜರಾಜ ಮತ್ತು ಅವನ ಮಗ ರಾಜೇಂದ್ರನು ಈ ಕ್ಷೇತ್ರದಲ್ಲಿ ಅತ್ಯಂತ ಮಹತ್ವಪೂರ್ಣ ಪ್ರಯತ್ನಗಳನ್ನು ಕೈಗೊಂಡಿದ್ದಾರೆ. ತಂಜಾವೂರಿನ ವಿಶಾಲ ದೇವಾಲಯಗಳನ್ನು ಕಟ್ಟಿಸಿದವರು ಅವರೇ. ಚೋಳರಾಜರು ಹಳ್ಳಿ ಹಳ್ಳಿಗಳಲ್ಲಿ ಅತ್ಯಂತ ಕಲಾತ್ಮಕವಾದ ಭವ್ಯ ದೇವಾಲಯಗಳನ್ನು ನಿರ್ಮಿಸಿರುವರು. ಅವು ಧಾರ್ಮಿಕ ಮತ್ತು ಸಮಾಜಿಕ ಕೇಂದ್ರಗಳಾಗಿರುತ್ತಿದ್ದುವು ಸಂಗೀತ, ನೃತ್ಯ, ಮೂರ್ತಿಕಲೆ, ಚಿತ್ರ

(೧೧ನೇ ಪುಟ ನೋಡಿರಿ)


## ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

# ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

## ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಬಿ. ಎಂ. ಎ.

## ಕರ್ನಾಟಕದ ರೇವು

# ಮೈಸೂರಿನ ಸರ್ವಋತು ಬಂದರವಾಗಿ ಮಲ್ಪೆ

### ಪ್ರಕೃತಿದತ್ತ ಅರ್ಹತೆಯುಳ್ಳ ಅತ್ಯುತ್ತಮ ಸ್ಥಳ

ಭಾರತದ ಪಡುಕರಾವಳಿ ೧೫೦೦ ಮೈಲು ಉದ್ದವಾಗಿದೆ— ಕಾಥೇವಾಡದಿಂದ ಕನ್ಯಾಕುಮಾರಿಯವರೆಗೆ, ಮುಂಬಯಿ, ಮರ್ಮಗೋವೆ, ಕೊಚ್ಚಿ ಮತ್ತು ಪ್ರಥಮ ಪಂಚವರ್ಷೀಯ ಯೋಜನೆಯಲ್ಲಿ ಬಹುಭಾಗ ಕಟ್ಟಲಾದ ಸೌರಾಷ್ಟ್ರದ ಕಾಂಡ್ಲಾ ಇವು ನಾಲ್ಕೇ ಇಷ್ಟು ಮೈಲುದ್ದದ ಕರಾವಳಿಯಲ್ಲಿರುವ ಸರ್ವಋತು ಬಂದರ (ರೇವು)ಗಳು. ನಾಲ್ಕನ್ನು ಪ್ರದೂ ಸಲ್ಲದು, ಗೋವೆ ನಮ್ಮದಾಗುವ ತನಕ.

#### ಹಿರಿ ಬಂದರಿನ ಅರ್ಹತೆ

ಕರಾವಳಿಯಲ್ಲಿರುವ ಯಾವುದಾದರೂ ಸ್ಥಳವು ಹಿರಿಬಂದರಾಗಲು ಯಾವ ಅರ್ಹತೆ ಪಡೆದಿರಬೇಕೆನ್ನುವುದನ್ನು ಕಾಂಡ್ಲಾ ಸಮಿತಿ ಸೂಚಿಸಿದೆ. ಪ್ರಥಮತಃ ಆ ಸ್ಥಳಕ್ಕೆ ನಿಸರ್ಗದತ್ತವಾದ ಸುರಕ್ಷಿತತೆ ಇರತಕ್ಕದು. ಎರಡನೆಯದಾಗಿ, ಬಂದರಿನ ಕೆಲಸವನ್ನು ತೊಡಗುವ ಸಮಯದಲ್ಲಿ ಕೃತಕವಾದ ಧಕ್ಕೆ (Dock) ಯನ್ನು ಕಟ್ಟುವ ಅಗತ್ಯ ಇರಬಾರದು. ಮೂರನೆಯದಾಗಿ, ಸಮುದ್ರವು ಉಕ್ಕೇರುವ ಪ್ರದೇಶವು ಅತಿ ವಿಸ್ತಾರವಾಗಿರಕೂಡದು. ನಾಲ್ಕನೆಯದಾಗಿ ಕೃತಕ ಧಕ್ಕೆಗಳನ್ನು ಕಟ್ಟುವ ಸಂದರ್ಭದಲ್ಲಿ ಅದಕ್ಕೆ ಬೇಕಾದಷ್ಟು ಖಾಲಿ ಜಾಗ ಬಂದರಿನ ಸಮೀಪದಲ್ಲಿ ದೊರೆಯಬೇಕು. ಇಷ್ಟೇ ಹೊರತು ಹಿರಿ ಬಂದರಿನ ಸ್ಥಳದಲ್ಲಿ ಈಗಲೇ ವಿಪುಲ ವ್ಯಾಪಾರ ವಾಣಿಜ್ಯ ಚಲಾವಣೆ ಇರಬೇಕೆಂಬುದು ನಿಯಮವಲ್ಲ. ಏಕೆಂದರೆ: (೧) ವ್ಯಾಪಾರ ವಹಿವಾಟು ಬಂದರವನ್ನು ಹುಡುಕಿಕೊಂಡು, ಎಂಬ ಹಾಗೆ, ಬಂದರಿನ ಸುಳಿವನ್ನು ಗಮನಿಸಿ ಬರುವುದು ಆಶ್ಚರ್ಯವಲ್ಲ. (೨) ಸದ್ಯಕ್ಕೆ ಬಂದರು ಕಟ್ಟುವ ಸ್ಥಳಕ್ಕೆ ರೈಲು ಹಾದಿ ಇಲ್ಲದಿದ್ದರೂ ರೈಲು ಹಾದಿಯನ್ನು ಸಾಕಷ್ಟು ಕ್ಷಿಪ್ರದಲ್ಲಿ ಬಿಡಿಸುವುದು ಮನಸ್ಸಿದ್ದರೆ ಕಷ್ಟವಲ್ಲ. ಕಾಂಡ್ಲಾದ ಆಯ್ಕೆ ಈ ಎರಡು ಸಂಭಾವ್ಯಗಳನ್ನು ಗಮನದಲ್ಲಿಟ್ಟೇ ನಡೆಬದ್ದೆಂದು ಭಾವಿಸಿದರೆ ಮಲ್ಪೆಯ ಯೋಗ್ಯತೆ ಕಾಂಡ್ಲಾಕ್ಕೆ ಯಾವ ದೃಷ್ಟಿಯಿಂದಲೂ ಕಡಮೆಯಾಗಿಲ್ಲವೆಂದು ನಿಶ್ಚಯದಿಂದ ಹೇಳಬಹುದಾಗುತ್ತದೆ. ರೈಲು ಹಾದಿಯ ಪ್ರಶ್ನೆಯನ್ನೇ ತೆಗೆದುಕೊಂಡರೆ, ಮದ್ರಾಸಿನಿಂದ ಬರುವ ಬ್ರಾಡ್ ಗೇಜ್ ರೈಲು ಮಲ್ಪೆಗೆ ೩೭ ಮೈಲು ದೂರದ ಮಂಗಳೂರಲ್ಲಿ ನಿಂತು ಹೋಗಿರುವುದನ್ನು ನಾವು ತಿಳಿದಿರಬೇಕು. ಇನ್ನು ಹತ್ತಿರದ ರೈಲೆಂದರೆ ತಾಳಗುಪ್ಪದಲ್ಲಿ ನಿಲುಗಡೆ ಹೊಂದುವ ಮೀಟರ್‌ಗೇಜ್ ರೈಲು. ಹಿರಿಬಂದರಾಗಲು ಸ್ಪರ್ಧೆಗೆ ನಿಂತಿರುವ ಮೈಸೂರು ರಾಜ್ಯದ ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು ಈ ನಾಲ್ಕು ಊರುಗಳಿಗೂ ಹಿನ್ನಾಡಿನ ಔದ್ಯಮಿಕ ಕೇಂದ್ರವಾಗಿರುವ ಭದ್ರಾವತಿಗೂ ಇರುವ ರೈಲು ಹಾದಿಯ ದೂರವನ್ನು ಪರಿಶೀಲಿಸೋಣ. 'ಪಡು ಕರಾವಳಿಯ ಹಿರಿ ಬಂದರಿನ ಅಭಿವೃದ್ಧಿ ಸಮಿತಿ"ಯವರು ೧೯೫೦ರಲ್ಲಿ ಭಾರತ ಸರ್ಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಕೊಟ್ಟ ಅಂಕೆ ಸಂಖ್ಯೆಗಳ ಮೇಲಿಂದ ಮಲ್ಪೆಯನ್ನು ಆರಿಸಿದರೆ ಅತಿಕಡಿಮೆ ವೆಚ್ಚದಲ್ಲಿ ರೈಲು ಹಾದಿ ಏರ್ಪಡಲು ಶಕ್ಯವಿದೆ ಎಂದು ತಿಳಿದು ಬರುವುದು:—

| ಹಾದಿ | ಒಟ್ಟು ದೂರ | ನಿರ್ಮಿಸುವ ಹೊಸ ರೈಲು ಹಾದಿಯ ಉದ್ದ | ನಿರ್ಮಾಣ ವೆಚ್ಚ (ಲಕ್ಷ ರೂ.) |
|---|---|---|---|
| ೧. ಕಾರವಾರ-ತಾಳಗುಪ್ಪ-ಭದ್ರಾವತಿ | ೧೫೭ | ೭೦ | ೪೩೧ |
| ೨. ಭಟ್ಕಳ-ತಾಳಗುಪ್ಪ-ಭದ್ರಾವತಿ | ೧೦೪ | ೫೨ | ೨೮೩ |
| ೩. ಮಲ್ಪೆ-ಹುಲಿಕಲ್-ಭದ್ರಾವತಿ | ೧೦೮ | ೧೦೮ | ೫೮೪ |
| ೪. ಮಂಗಳೂರು-ಭದ್ರಾವತಿ | ೧೫೦ | ೫೧೦ | ೭೧೧ |

ಕಾರವಾರ-ಭಟ್ಕಳಗಳನ್ನು ಜೋಡಿಸುವ ಹೊಸ ಹಾದಿಯ ಉದ್ದವು ಕಡಿಮೆ ಎಂದೆನಿಸಿದರೂ ಭದ್ರಾವತಿಗೂ ಇವಕ್ಕೂ ಇರುವ ದೂರವು ಹೆಚ್ಚಾಗಿರುವುದರಿಂದ ಸರಕಿನ ಸಾಗಾಟದ ದೂರ ಅಧಿಕವಾಗಿ ಹೊಸ ರೈಲಿನ ಹಾದಿಯ ಉಳಿತಾಯವು ಸಾಗಾಟಕ್ಕೆ ತೆರಬೇಕಾದ ಮೌಲ್ಯದ ವೆಸಿಯಿಂದ ಅಪ್ರಸ್ತುತವಾಗುವುದು. ಭದ್ರಾವತಿ—ಮಲ್ಪೆಯ ಹಾದಿ ಹೊಸತಾದರೂ ಭದ್ರಾವತಿಯಿಂದ ತೀರ್ಥಹಳ್ಳಿಗೆ ಬಂದು, ಅಲ್ಲಿಂದ ಹುಲಿಕಲ್‌ನಲ್ಲಿ ಘಟ್ಟವನ್ನಿಳಿದು ಹೊಸಂಗಡಿ ಬ್ರಹ್ಮಾವರವಾಗಿ ಮಲ್ಪೆಗೆ ೧೦೮ ಮೈಲು ಮಾತ್ರ ತಗಲುವುದು.

#### ಪ್ರಯೋಜನವಿಲ್ಲ

ಕಾರವಾರ-ಭಟ್ಕಳ-ಮಂಗಳೂರು ಈ ಮೂರನ್ನೂ ಮೇಲ್ಕಾಣಿಸಿದ ಹಿರಿ ಬಂದರಿನ ಅಭಿವೃದ್ಧಿ ಸಮಿತಿಯು ಸಕಾರಣವಾಗಿ ನಿರಾಕರಿಸಿದೆ. ಕಾರವಾರದ ವಿಷಯದಲ್ಲಿ ಸಮಿತಿಯ ತೀರ್ಮಾನ ಏನೆಂದರೆ: (೧) ಕಾರವಾರವು ಅದಕ್ಕೆ ತೆಂಕಲಕ್ಕಿರುವ ಇನ್ನೊಂದು ಸ್ಥಳ (ಮಲ್ಪೆ) ದಷ್ಟು ಉತ್ತಮವಾಗಿಲ್ಲ. (೨) ಈ ಪ್ರದೇಶದ ಹಿನ್ನಾಡಿನ ವೈಚಿತ್ರ್ಯಕ್ಕೆ ಸರಿಯಾದ ಸ್ಥಳದಲ್ಲಿ ಕಾರವಾರ ಇರುವುದಿಲ್ಲ. (೩) ಇದು ಮರ್ಮಗೋವೆಗೆ ಬರಿಯ ನಲ್ವತ್ತು ಮೈಲುಗಳ ದೂರದಲ್ಲಿದೆ (೪) ಕಾಳೀ ನದಿಯು ಕಾರವಾರದ ಸಮೀಪ ತಂದು ರಾಶಿ ಹಾಕುವ ಮರಳು ಮತ್ತು ಕೆಸರನ್ನು ಕಾಲಕಾಲಕ್ಕೆ ಅಗೆದು ತೆಗೆಯುವ ಕೆಲಸ ಸಣ್ಣದೇನೂ ಅಲ್ಲ. (೫) ಮಾಲು ಗಾಡಿಗಳ ಮಲ್ಪೆಗಿಂತ ೪೯ ಮೈಲೂ, ಭಟ್ಕಳಕ್ಕಿಂತ ೩೮ ಮೈಲೂ ಹೆಚ್ಚು ದೂರ ಸಾಗಬೇಕಾಗಿದೆ. (೬) ಇಲ್ಲಿನ ಸದ್ಯದ ವಹಿವಾಟು ೫೦೦೦ ಟನ್ನಿಗೂ ಕಡಮೆ ಇದ್ದು ಹೊಸ ಸಾಗಾಟವನ್ನೇ ಆಗ ಏರಿಸಲು ಪ್ರತಿಕೂಲವಾದ ಸ್ಥಳದಲ್ಲಿದೆ. ಆದುದರಿಂದ ಕಾರವಾರವನ್ನು ಆರಿಸಬಾರದೆಂದು ಸಮಿತಿಯ ತೀರ್ಮಾನ. ಭಟ್ಕಳವು ಮುಸುಮ ಗಾಳಿಗಳ ಹೊಡೆತಕ್ಕೆ ಸಿಲುಕಿರುವ ಒಂದು ಸ್ಥಳ. ಭಟ್ಕಳದಲ್ಲಿ ಹಿರಿ ಬಂದರನ್ನೇ ಕಟ್ಟುವರೆ ಹಲವಾರು ಅನಾನುಕೂಲಗಳಿವೆ ಎಂದು ಸಮಿತಿಯವರು ಹೇಳುತ್ತಾರೆ: (೧) ಅಲ್ಲಿ ನಾವು ಕಟ್ಟುವ 'ಬರ್ತ್' (Berth) ಎಷ್ಟೋ ಅಷ್ಟೇ ಹಡಗುಗಳನ್ನು ನಿಲ್ಲಿಸಬಹುದು. ಸಮಯಾನುಸಾರ ಕಟ್ಟಿನ ಹಡಗುಗಳನ್ನು ನಿಲ್ಲಿಸುವ ಹಾಗಿಲ್ಲ. ಹಡಗುಗಳು ಸಾಲು ಗಟ್ಟಿ (Convoy) ಬರುವುದಕ್ಕೂ ಆಗದು. ಬಂದರಿನ ಸುರಕ್ಷಿತ ಕೇಂದ್ರದ ಹೊರತು ಬೇರೆ ಹೊರ ವಲಯದಲ್ಲಿ ಹಡಗುಗಳು ತಂಗುವ ಹಾಗಿಲ್ಲ. (೨) ನೈಸರ್ಗಿಕ ಸುರಕ್ಷಿತತೆಇಲ್ಲವಾದುದರಿಂದ ಕಡಲ್ದರೆಯಿಂದ ಬಲು ದೂರದ ವರೆಗೆ ಆಳವಾದ ಸಮುದ್ರದಲ್ಲಿ ಅಡ್ಡಗೋಡೆ (Break-waters)ಗಳನ್ನು ಕಟ್ಟಬೇಕು. (೩) ಸಾಲದುದಕ್ಕೆ ಶಿಲಾಮಯವಾದ ಭಟ್ಕಳದ ಕರೆ ಶಿಲೆಗಳನ್ನೊಡೆದು ಧಕ್ಕೆಯ ವರೆಗೆ ನೀರುದಾರಿ (Channel)ಗಳನ್ನೇ ನಿರ್ಮಿಸಬೇಕು. ನೀರಿನ ಆಳ ತೋರಿಸಲು ನೀರು ದಾರಿಯಲ್ಲೆಲ್ಲ ಬಾಯ (Buoy)ಗಳನ್ನು ಇಟ್ಟಿರಬೇಕು. (೪) ಇವಕ್ಕೆಲ್ಲ ಬಹಳ ವೆಚ್ಚ ಹಿಡಿದೀತು. ಮಂಗಳೂರು ಈಗಾಗಲೇ ಸಾಕಷ್ಟು ವ್ಯಾಪಾರ ವಹಿವಾಟಿರುವ, ರೈಲು ಜೋಡಣೆ ಇರುವ ಸ್ಥಳವಾಗಿರುವುದರಿಂದ ಸಮಿತಿಯವರಿಗೆ ಮೊದಲು ಇದೊಂದು ಆದರ್ಶಸ್ಥಾನವೆಂದು ಅನಿಸಿತ್ತು. ಆದರೆ ವಿಚಾರ ಮಾಡಿದಾಗ ಅವರಿಗೆ ಮಂಗಳೂರಿನ ಬಂದರನ್ನು ನೇತ್ರಾವತಿ ಹೊಳೆಯು ತಂದು ರಾಶಿ ಹಾಕುವ ಮಣ್ಣಿನಿಂದ ಸಕಲ ಋತು ಬಂದರಾಗಿ ಮಾಡುವುದು ಕಷ್ಟಸಾಧ್ಯವೆಂದು ಅನಿಸಿತು. ಹಡಗುಗಳು ಬಂದರಿನೊಳಕ್ಕೆ ಪ್ರವೇಶಿಸುವ ನೀರುದಾರಿಯನ್ನೇ ಹೊಸದಾಗಿ ನಿರ್ಮಿಸುವಾಗ ಭೂಮಿಯ ಮಟ್ಟಕ್ಕಿಂತ ೩೫ ಅಡಿಗಳಷ್ಟು ಆಳವಾಗಿ ಮಣ್ಣನ್ನು ತೋಡಬೇಕಾದ್ದೊಂದೇ ಅಲ್ಲದೆ ವರ್ಷ ವರ್ಷವೂ ಹೊಸದಾಗಿ ಸೇರುವ ಮಣ್ಣನ್ನು ತೋಡುವ ಹೆಚ್ಚು ವೆಚ್ಚದ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ. ಅಲ್ಲದೆ, ಮಂಗಳೂರಿನ ಸುತ್ತಮುತ್ತಲೂ ಬಂದರಿನ ಅಭಿವೃದ್ಧಿಗೆ ಬೇಕಾದ ಖಾಲಿಸ್ಥಳ ಇಲ್ಲವೇ ಇಲ್ಲವೆಂದರೂ ಸಲ್ಲುವುದು.

#### ಪ್ರಶಸ್ತ

ತಜ್ಞರ ಸಮಿತಿಯವರೇ ಏಕೆ, ಒಬ್ಬ ಸಾಮಾನ್ಯ ಮನುಷ್ಯನೂ ಮಲ್ಪೆಯ ನೈಸರ್ಗಿಕ ಅನುಕೂಲತೆಗಳನ್ನು ಮೊದಲ ನೋಟದಲ್ಲಿ ಕಂಡುಕೊಳ್ಳಬಹುದಾಗಿದೆ. ಮಲ್ಪೆಯ ಕಡಲ್ದರೆಯಿಂದ ಒಂದು ಮೈಲು ದೂರದಲ್ಲಿರುವ ಶಿಲಾ ದ್ವೀಪ ಸ್ತೋಮವನ್ನು ಒಂದಕ್ಕೊಂದು ಸರಪಣಿಯ ಕೊಂಡಿಯ ಹಾಗೆ ಜೋಡಿಸಿ, ತೆಂಕಲುಬಡಗಲಿನ ಕರಾವಳಿಗೆ ನಡುವಿನ ನೀರಿನಲ್ಲಿ ಅಡ್ಡಗೋಡೆಯನ್ನು ಕಟ್ಟಿದರೆ ಮಲ್ಪೆಯಲ್ಲಿ ಪ್ರಶಸ್ತವಾದ ಸರ್ವಋತು ಹಿರಿಬಂದರನ್ನು ರಚಿಸಲಾಗುವುದು. ದರಿಯಾಬಹದ್ದರಗಡದ ದ್ವೀಪಸ್ತೋಮದಲ್ಲಿ ನಡುವಿನ ಮತ್ತು ಬಡಗಲಿನ ದ್ವೀಪಕ್ಕೆ ನಡುವೆ ೫೫ ಅಡಿ ಆಳದ ನೈಸರ್ಗಿಕ ನೀರುದಾರಿ ಇರುವುದನ್ನು ಸಮಿತಿಯು ಕಂಡುಕೊಂಡಿದೆ.ಅದಿ ಮಣ್ಣಿನ ಸಂಶೋಧನೆಯಲ್ಲಿ ಸಮುದ್ರ ತಟದಲ್ಲಿ ಶಿಲೆಗಳ ತೊಂದರೆ ಇಲ್ಲವೆಂಬುದನ್ನು ಸಮಿತಿ ನಿಶ್ಚಯಿಸಿಕೊಂಡಿದೆ. ಮಲ್ಪೆಯ ಅನುಕೂಲತೆಗಳನ್ನು ಸಮಿತಿ ಈ ರೀತಿ ಪಟ್ಟಿ ಮಾಡಿದೆ:

(೧) ಕಡಲ್ದರೆಯ ಶಿಲಾದ್ವೀಪಸ್ತೋಮಗಳ ದೆಸೆಯಿಂದ ಗೋಡೆ ಕಟ್ಟುವ ಕೆಲಸ ಸುಲಭವಾಗುತ್ತದೆ. (೨) ನೀರಿನಡಿ ಶಿಲೆಗಳಿದ್ದರೂ ಅವನ್ನು ಸಂಧಿಸದೆಯೆ ಮರಳನ್ನು ಅಗೆಯಲು ಸಾಧ್ಯವಿದೆ. (೩) ಅರಬ್ಬಿ ಸಮುದ್ರದಿಂದ ಬಂದರಿನೊಳಗೆ ಪ್ರವೇಶಿಸುವ ಹೆಬ್ಬಾಗಿಲು ಪ್ರಶಸ್ತವಾಗಿದೆ. (೪) ಮಲ್ಪೆಗೆ ಸಮೀಪದಲ್ಲಿರುವ ೪೦೦ ಎಕರೆ ಖಾಲಿ ಸ್ಥಳವು ಬಂದರಿನ ಮುಂದಿನ ಅಭಿವೃದ್ಧಿಗೆ ಅನುಕೂಲವಾಗಿದೆ (೫) ಮಲ್ಪೆಯಲ್ಲಿ ಮಂಗಳೂರಿನಂತೆ ಮರಳನ್ನು ಅಗೆಯಬೇಕಾದ (Dredging) ಸಮಸ್ಯೆ ಇಲ್ಲವೇ ಇಲ್ಲ. ಉದಯಾವರ ಹೊಳೆಯನ್ನು ಬಂದರಿನ ಹಿಂದುಗಡೆಯಿಂದ ಬೇರೆ ದಾರಿಯಾಗಿ ತಿರುಗಿಸಬಹುದು. (೬) ಮಲ್ಪೆಯ ಭೌಗೋಲಿಕ ಸನ್ನಿವೇಶ ಹಿನ್ನಾಡಿಗೆ ಅನುಕೂಲವಾಗಿದೆ. (೭) ಜಲ ವಿದ್ಯುತ್ತಿನ ಕೇಂದ್ರವಾದ ಜೋಗವು ಮಲ್ಪೆಗೆ ಕೇವಲ ೬೦ ಮೈಲು ದೂರದಲ್ಲಿರುತ್ತದೆ.

(೧೦ನೇ ಪುಟ ನೋಡಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ರಾ ಕಂಪೆನಿ, ಮಂಗಳೂರು.
2. ವಿ. ಎ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ, ಮದ್ರಾಸ್—3.

# ಕನ್ನಡಿಗರ ಅಭ್ಯುದಯ

## ಸಾಂಪತ್ತಿಕ ದೃಷ್ಟಿಯಿಂದ ನಮ್ಮಷ್ಟು ಭಾಗ್ಯ ವಿಶೇಷಗಳನ್ನು ಪಡೆದ ಬೇರೊಂದುರಾಜ್ಯವಿಲ್ಲ-ಇದರ ಸದುಪಯೋಗ ಪಡೆಯೋಣ!

ಎರಡು ಕೋಟಿ ಕನ್ನಡಿಗರ ಜೀವನದಲ್ಲಿ ಇದೊಂದು ಮಹಾದಿನ. ಒಂದು ಜನಾಂಗದ ಚರಿತ್ರೆಯಲ್ಲಿ ಅಮೃತವಾದ ಇಂಥ ದಿನ ಒಂದು ಸಲ ಮಾತ್ರವೇ ಬರುತ್ತದೆ. ನಾವು ನಿಜವಾಗಿಯೂ ಧನ್ಯರು. ನಮ್ಮ ದೇಶದ ಸ್ವಾತಂತ್ರ್ಯವನ್ನೂ ನಾಡಿನ ಏಕೀಕರಣವನ್ನೂ ನಾವು ಸಾಧಿಸಿದ್ದೇವೆ.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಆಗಿರುವ ದೊಡ್ಡ ಸಾಧನೆಯೆಂದರೆ ಈ ಹೊಸ ರಾಜ್ಯಗಳ ನಿರ್ಮಾಣವೇ ಎಂದು ಧಾರಾಳವಾಗಿ ಹೇಳಬಹುದು. ರಾಜ್ಯಗಳ ಪುನಾರಚನೆಯು ದೇಶದ ಭದ್ರತೆಗೆ ಸಾಧನವಾಗತಕ್ಕ ಮಾರ್ಗವಾಗಿದೆ. ಈ ಪುನರ್‌ನಿರ್ಮಾಣದ ಬಗೆಗೆ ಅನೇಕರ ಮನಸ್ಸಿನಲ್ಲಿ ಅನುಮಾನಗಳಿರಬಹುದು. ಆದರೆ ಈ ರಾಜ್ಯಗಳ ಬಗೆಗೆ ಯಾವ ತೆರನಾದ ಅನುಮಾನವೂ ಬೇಡವೆಂದು ದೃಢವಾಗಿ ಹೇಳತಕ್ಕವರಲ್ಲಿ ನಾನೊಬ್ಬ. ನಮ್ಮ ಅನುಭವದಿಂದ, ಈಗ ಕೈಗೊಂಡಿರತಕ್ಕ ನೂತನ ವ್ಯವಸ್ಥೆಯಲ್ಲಿಯೂ ಮಾರ್ಪಾಟು ಅಗತ್ಯವೆಂದು ಕಂಡುಬಂದರೆ, ಅಂಥದನ್ನು ಮಾಡಲು ನಾವು ಸಿದ್ಧರಾಗಬೇಕು. ದೇಶದ ಒಟ್ಟಿನ ಹಿತಕ್ಕೆ ಸಂಬಂಧಪಟ್ಟ ಯಾವ ಸಮಸ್ಯೆಯನ್ನೂ ನಾವು ಸಣ್ಣ ದೃಷ್ಟಿಯಿಂದ, ಸ್ವಾರ್ಥದೃಷ್ಟಿಯಿಂದ ನೋಡಬಾರದು.

ಹೊಸ ರಾಜ್ಯಗಳ ವಿಚಾರದಲ್ಲಿ ಹೇಳುವುದಾದರೆ ಒಟ್ಟಿನಲ್ಲಿ ಜನತೆಗೆ ಸಮಾಧಾನವಾಗಿದೆ. ಒಂದೆರಡುಕಡೆಗಳಲ್ಲಿ ಅಸಮಾಧಾನ ವ್ಯಕ್ತಪಟ್ಟಿದ್ದರೂ ಅದು ಮುಖ್ಯವೂ ಅಲ್ಲ— ಗಣನೀಯವೂ ಅಲ್ಲ. ಎಸ್. ಆರ್. ಸಿ. ವರದಿ ಪ್ರಕಟವಾದ ಮೇಲೆ, ಅದನ್ನು ಕಾರ್‍ಯರೂಪಕ್ಕೆ ತರುವುದನ್ನು ಕುರಿತು ದೇಶದಲ್ಲಿ ಚರ್ಚೆ ನಡೆದಾಗ ಅನಂತರ ಕಾನೂನು ಆಗುವ ಸಂದರ್ಭದಲ್ಲಿ ಅಲ್ಲಲ್ಲಿ ವಿರೋಧ ಭಾವನೆ ಕಂಡು ಬಂದಿತಾದರೂ ದೊಡ್ಡ ಸಾಧನೆಯ ದೃಷ್ಟಿಯಿಂದ ನೋಡಿದರೆ ಆ ಪ್ರತಿಭಟನೆ ತೀರಾ ಚಿಕ್ಕದೆಂದು ಹೇಳಬಹುದು.

ಇಲ್ಲಿ ಕರ್ನಾಟಕದ ವಿಷಯ ಪ್ರಸ್ತಾಪಿಸುವುದಾದರೆ ಏಕೀಕರಣದ ಪ್ರಯತ್ನ ಇಂದು ನಿನ್ನೆಯದಲ್ಲ. ಅದರ ಹಿಂದೆ ನಲವತ್ತು ವರ್ಷಗಳ ದೀರ್ಘ ಪರಿಶ್ರಮದ ಕಥೆಯಿದೆ. ಕನ್ನಡಿಗರಂತೆಯೇ ಆಂಧ್ರರೂ, ಇತರರೂ ತಮ್ಮ ರಾಜ್ಯಗಳಿಗಾಗಿ ಪ್ರಯತ್ನ ಮಾಡಿದ್ದಾರೆ. ನಮ್ಮೆಲ್ಲರ ಪ್ರಯತ್ನದ ಫಲವಾಗಿ ಇಂದು ಭಾರತದ ಭೂಪಟದಲ್ಲಿ ಬಹುದೊಡ್ಡ ಬದಲಾವಣೆ ನಡೆದು ಹೋಗಿದೆ. ಈ ಹೊಸ ರಾಜ್ಯಗಳು ಜನಸೇವೆಗಾಗಿ ಕಲ್ಪಿತವಾದ ಒಂದು ವಿನೂತನ ಸಾಧನೆ. ಈ ಹೊಸ ಪ್ರಾಂತಗಳು ಭಿನ್ನ ಭಿನ್ನ ರಾಜ್ಯಗಳಾಗಿರದೆ ಭಾರತ ದೇಶದ ಅವಿಭಾಜ್ಯ ಭಾಗಗಳೆನ್ನುವ ಭಾವನೆ ನಮ್ಮಲ್ಲಿ ಉಳಿಯಬೇಕು; ಬೆಳೆಯಬೇಕು. ನಾವು ಬೇರೆ ಬೇರೆ ಎಂದುಕೊಂಡು ಪ್ರತ್ಯೇಕತೆಯ ದೃಷ್ಟಿಯಿಂದ ಕೆಲಸ ಮಾಡುವುದು ಸೂಕ್ಷ್ಮವೂ ಅಲ್ಲ, ನ್ಯಾಯವೂ ಅಲ್ಲ. ಹಾಗೆ ಆಗುವುದಿಲ್ಲವೆನ್ನುವ ವಿಶ್ವಾಸ ನನ್ನಲ್ಲಿದೆ. ನಮಗೆ ಯಾವಾಗಲೂ ಭಾರತ ದೇಶದ ಸ್ವಾತಂತ್ರ್ಯ, ಸುಖ, ಸಮೃದ್ಧಿ ದೃಢತೆ, ಭವ್ಯತೆ, ಹಾಗೂ ಭದ್ರತೆಗಳು ಮುಖ್ಯವೆನಿಸಬೇಕು.

ಈ ಹೊಸ ರಾಜ್ಯಗಳ ನಿರ್ಮಾಣದಿಂದ ನಮ್ಮ ದೇಶದ ಜನರಿಗೆ ಹೆಚ್ಚಿನ ನೆಮ್ಮದಿ ಉಂಟಾಗುವುದೆನ್ನುವ ದೃಢ ವಿಶ್ವಾಸ ನನ್ನಲ್ಲಿದೆ. ಕನ್ನಡ ಜನರಿಗೆ ಇಂಥ ಮಂಗಳ ದಿನ ಬರಬೇಕೆಂದು ಅಸಂಖ್ಯ ಜನರು ಅನೇಕ ವರ್ಷಗಳಿಂದ ತಪಸ್ಸನ್ನಾಚರಿಸಿದ್ದಾರೆ. ಪುಣ್ಯಶ್ಲೋಕರಾದ ಅನೇಕ ಜನ ಹಿರಿಯರಲ್ಲಿ ಬಿ. ಎಂ. ಶ್ರೀಕಂಠಯ್ಯನವರು, ಕಡಪಾ ರಾಘವೇಂದ್ರರಾಯರು, ಬೆನಗಲ್ ರಾಮರಾಯರು, ಮುದವೀಡು ಕೃಷ್ಣರಾಯರು, ಬಸರೀಗಿಡದ ವೀರಪ್ಪನವರು— ಇವರೇ ಮೊದಲಾದವರನ್ನು ಇಂದು ನಾವು ಗೌರವದಿಂದ ನೆನೆಯಬೇಕು.

ಕನ್ನಡ ನಾಡಿನ ಏಕೀಕರಣದ ಭವ್ಯ ಕನಸನ್ನು ಐವತ್ತು ವರುಷಗಳ ಹಿಂದೆಯೇ ಕಂಡು ಕನ್ನಡಿಗರಲ್ಲಿ ಜಾಗೃತಿಯ ಚೇತನವನ್ನು ತುಂಬಿದ ಆಲೂರು ವೆಂಕಟರಾಯರು, ನಮ್ಮ ಸುದೈವದಿಂದ, ಈಗಲೂ ನಮ್ಮ ಮಧ್ಯದಲ್ಲಿ ಇದ್ದಾರೆ. ನಮ್ಮ ಎಡಬಲಗಳಲ್ಲಿ ನೋಡಿದರೆ ನಾನಾ ಮೂಲೆಗಳಲ್ಲಿ, ಕನ್ನಡ ನಾಡಿನ ಏಕೀಕರಣಕ್ಕಾಗಿ ಬಹು ನಿಷ್ಠೆಯಿಂದ ದುಡಿದವರು ಅನೇಕರಿದ್ದಾರೆ. ಅವರೆಲ್ಲರ ಪರಿಶ್ರಮಕ್ಕೂ ಇಂದು ಫಲಪ್ರಾಪ್ತಿ.

ಕನ್ನಡಿಗರಿಗೆ ಒಂದು ರಾಜ್ಯ ದೊರೆತೊಡನೆಯೇ ಎಲ್ಲವೂ ಮುಗಿಯಲಿಲ್ಲ. ನಮ್ಮ ಕನಸಿನ ಕನ್ನಡ ರಾಜ್ಯ ನಮ್ಮ ಕನಸಿನಂತೆಯೇ ಸುಂದರವಾಗಬೇಕು. ಎಲ್ಲ ಪ್ರದೇಶಗಳ ಕನ್ನಡಿಗರೂ ಒಂದುಗೂಡಿ ಸುಖಮಯ ಸಮೃದ್ಧ ಕರ್ನಾಟಕವನ್ನು ಕಟ್ಟುವ ಸ್ವರ್ಗೀಯ ಚಿತ್ರ ನನ್ನ ಕಣ್ಣಮುಂದೆ ಕಟ್ಟಿದೆ. ನಮ್ಮ ನೆಲದ ಈ ಶ್ರೀಮಂತಿಕೆ ಭಾರತದ ಶ್ರೀಮಂತಿಕೆಯನ್ನು ಹೆಚ್ಚಿಸಬೇಕು. ಬೇಸಾಯದಲ್ಲಿ, ನೀರಾವರಿಯಲ್ಲಿ, ವನಸಂಪತ್ತಿನಲ್ಲಿ, ಹಡಗು ನಿರ್ಮಾಣದಲ್ಲಿ, ಮೀನುಗಾರಿಕೆಯಲ್ಲಿ, ಅರಳೆ–ತಂಬಾಕುಗಳ ಉತ್ಪಾದನೆಯಲ್ಲಿ, ಔದ್ಯಮಿಕ ಅಭಿವೃದ್ಧಿಯಲ್ಲಿ, ಸಾಂಪತ್ತಿಕ ಉನ್ನತಿಯಲ್ಲಿ ನಮ್ಮ ನಾಡು ಭಾರತದ ಯಾವ ರಾಜ್ಯಕ್ಕೂ ಹಿಂದಾಗಬಾರದೆಂದು ನನ್ನ ಆಸೆ.

ಸಾಂಪತ್ತಿಕ ದೃಷ್ಟಿಯಿಂದ ನೋಡಿದರೆ ನಾವು ಪಡೆದಷ್ಟು ಭಾಗ್ಯ ವಿಶೇಷಗಳನ್ನು ಬೇರೆ ಯಾರೂ ಪಡೆದಿಲ್ಲ. ನಮಗಿರುವಷ್ಟು ನೈಸರ್ಗಿಕ ಸಂಪತ್ತಿನ ವೈವಿಧ್ಯವಾಗಲಿ ವಿಪುಲತೆಯಾಗಲಿ ಭಾರತದ ಯಾವ ರಾಜ್ಯಕ್ಕೂ ಇಲ್ಲ. ಈ ದೈವದತ್ತವಾದ ಸಂಪತ್ತು ನಮ್ಮ ದುರ್ದೈವದಿಂದ ಇಲ್ಲಿಯವರೆಗೆ ದೇಶದ ಅಭಿವೃದ್ಧಿಗಾಗಿ ಉಪಯೋಗವಾಗದೇ ಹೋಯಿತು. ಜನತೆಯು ಹಾಗೂ ದೇಶದ ಹಿತಕ್ಕಾಗಿ ಅದನ್ನು ಉಪಯೋಗಿಸಿಕೊಳ್ಳುವುದು ಈಗ ನಮ್ಮ ಕರ್ತವ್ಯ.

ನಮ್ಮ ಹೊಸ ಮೈಸೂರು ರಾಜ್ಯಕ್ಕೆ ೨೦೦ ಮೈಲು ಉದ್ದವಾದ ಕರಾವಳಿ ಪ್ರದೇಶ ಲಭಿಸಿದೆ. ಪಶ್ಚಿಮ ಕರಾವಳಿ ಪ್ರದೇಶದಲ್ಲಿ ದೊಡ್ಡ ಚಿಕ್ಕ ಹಾಗೂ ಮಧ್ಯಮ ವರ್ಗದ ಬಂದರಗಳನ್ನು ನಿರ್ಮಾಣ ಮಾಡುವುದಕ್ಕೆ, ಸಮುದ್ರ ಕೈಗಾರಿಕೆಗಳನ್ನು ಸ್ಥಾಪಿಸುವದಕ್ಕೆ, ಹಡಗು ಕಟ್ಟುವದಕ್ಕೆ, ಮೀನುಗಾರಿಕೆಯ ಉದ್ಯಮವನ್ನು ಅಭಿವೃದ್ಧಿಗೆ ತರುವುದಕ್ಕೆ ಏನು ಅನುಕೂಲತೆಗಳು ಬೇಕೋ ಅವು ಭಾರತದ ಇನ್ನುಳಿದ ರಾಜ್ಯಗಳಿಗಿಂತಲೂ ಇಲ್ಲಿ ಹೆಚ್ಚಾಗಿವೆ; ಚೆನ್ನಾಗಿವೆ.

ಪಶ್ಚಿಮ ಕರಾವಳಿಗೆ ಹೊಂದಿಕೊಂಡು ಹೆಚ್ಚು ಮಳೆಯನ್ನು ಪಡೆಯುತ್ತಿರುವ ಮಲೆನಾಡು ಪ್ರದೇಶವು ಸಂಪತ್ ಸಮೃದ್ಧವಾಗಿದೆ. ಕಾಫಿ, ಚಹ, ರಬ್ಬರ್, ಯಾಲಕ್ಕಿ, ಮೆಣಸು, ಅಡಿಕೆ, ತೆಂಗು ಎಲ್ಲವೂ ಹಣವನ್ನೇ ಕೊಡುವ ಶ್ರೀಮಂತ ಬೆಳೆಗಳು. ಇವೆಲ್ಲಕ್ಕೂ ಮಿಗಿಲಾಗಿ ಸಹ್ಯಾದ್ರಿಯ ಸಾನು ಪ್ರದೇಶದ ಅಗಾಧವಾದ ಅರಣ್ಯ ಸಂಪತ್ತು ನಮ್ಮ ಹೊಸ ರಾಜ್ಯದ ಹೊನ್ನಿನ ಭಾಂಡಾರವಾಗಿದೆ ಅಂಥ ಮಲೆನಾಡು ಪ್ರದೇಶ ಈಗ ಅಭಿವೃದ್ಧಿಗೆ ಬರಬೇಕು.

ಸಹ್ಯಾದ್ರಿಯ ಶ್ರೇಣಿಯಿಂದ ಪಶ್ಚಿಮಕ್ಕೆ ಹರಿಯುತ್ತಿರುವ ನದಿಗಳಿಂದ ನಮ್ಮ ಎಲ್ಲ ಹಳ್ಳಿಗಳನ್ನೂ ಬೆಳಗುವಷ್ಟು, ನಮ್ಮ ಎಲ್ಲ ಗೃಹ ಕೈಗಾರಿಕೆಗಳನ್ನೂ ನಡೆಸುವಷ್ಟು ವಿದ್ಯುತ್ ಶಕ್ತಿಯನ್ನು ಉತ್ಪಾದಿಸಬಹುದು. ಇಂಥ ಅವಕಾಶ ಭಾರತದ ಮಿಕ್ಕುಳಿದ ರಾಜ್ಯಗಳಿಗೆ ಇಲ್ಲ. ಮಲೆನಾಡನ್ನು ದಾಟಿ ಆಚೆಗೆ ಹೋದರೆ ಎರೆಭೂಮಿ ನಮಗೆ ಎದುರಾಗುತ್ತದೆ. ಅಲ್ಲಿ ಆಹಾರ ಧಾನ್ಯ, ಹತ್ತಿ ಹಾಗೂ ಕೈಗಾರಿಕೆಗಳಿಗೆ ಅನುಕೂಲವಾಗುವಂಥ ಅನೇಕ ಬಗೆಯ ಎಣ್ಣೆಯ ಕಾಳುಗಳನ್ನು ಸಮೃದ್ಧವಾಗಿ ಬೆಳೆಯಬಹುದು. ಮಳೆ ಕಡಿಮೆ ಬೀಳುವುದರಿಂದ ಅಲ್ಲಿ ಉತ್ಪತ್ತಿ ಕಡಿಮೆಯಾಗಿದೆ. ಕೃಷ್ಣಾ, ಭೀಮಾ, ಮಲಪ್ರಭಾ, ತುಂಗಭದ್ರಾ, ಘಟಪ್ರಭಾ ಮುಂತಾದ ನದಿಗಳನ್ನು ಉಪಯೋಗಿಸಿಕೊಂಡು ಅಧಿಕ ಉತ್ಪಾದನೆ ಮಾಡಿಕೊಳ್ಳುವುದು ಸಾಧ್ಯವಿದೆ. ತುಂಗಭದ್ರಾ ಅಣೆಕಟ್ಟು ಈಗಾಗಲೇ ಪೂರೈಸಿದೆ; ಭದ್ರಾ ಅಣೆಕಟ್ಟಿನ ಕೆಲಸ ಈಗ ನಡೆದಿದೆ; ಘಟಪ್ರಭಾ ಯೋಜನೆಯ ಕೆಲಸಕ್ಕೆ ಇನ್ನೂ ಹೆಚ್ಚಿನ ವೇಗ ಬರಬೇಕಾಗಿದೆ. ಅಪ್ಪರ್ ಕೃಷ್ಣಾ ನೀರಾವರಿ ಯೋಜನೆಯನ್ನು ಕಾರ್‍ಯರೂಪಕ್ಕೆ ತರುವ ಅವಕಾಶ ನಮ್ಮೆದುರಿನಲ್ಲಿದೆ.

ನಮ್ಮ ವ್ಯವಸಾಯದ ಉತ್ಪತ್ತಿಗೆ ಸಂಬಂಧಪಟ್ಟಂತೆಯೇ ನಮ್ಮ ಕೈಗಾರಿಕೋದ್ಯಮಗಳೂ ಅಭಿವೃದ್ಧಿಗೊಳ್ಳಬೇಕಾಗಿದೆ.

ಹೊನ್ನು, ಇಂಡಿಯಾದಲ್ಲಿ ಎಲ್ಲಿಯಾದರೂ ಸಿಗುತ್ತಿದ್ದರೆ ನಮ್ಮ ನಾಡಿನಲ್ಲಿ ಮಾತ್ರವೇ ಸಿಗುತ್ತದೆ —ಕೋಲಾರ ಜಿಲ್ಲೆಯಲ್ಲಿ ಹಾಗೂ ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ, ನಮ್ಮ ನಾಡಿನ ಇನ್ನೂ ಹಲವು ಕಡೆಗಳಲ್ಲಿ ಬಂಗಾರ ಸಿಗುವಂಥ ಸಂಭವ ಇದೆ

ಈಗ ಒಂದು ಕಬ್ಬಿಣದ ಕಾರಖಾನೆ ಭದ್ರಾವತಿಯಲ್ಲಿದೆ ಇನ್ನೊಂದು ಕಡೆ ಆಗುವುದಕ್ಕೆ ಇನ್ನು ಮೇಲೆ ಸ್ಥಳ ಪರೀಕ್ಷೆ ನಡೆಯಬೇಕು.

ನಮ್ಮ ನಾಡಿನ ಮೂರು ಸ್ಥಳಗಳಲ್ಲಿ, ಅಂದರೆ ಭದ್ರಾವತಿ, ಬಾಗಿಲುಕೋಟೆ ಹಾಗು ಶಹಾಬಾದ್‌ಗಳಲ್ಲಿ ಸಿಮೆಂಟ್ ಕಾರಖಾನೆಗಳಿವೆ. ಶಹಾಬಾದ್ ಕಾರಖಾನೆ ಇಂಡಿಯಾ ದೇಶದಲ್ಲಿಯೇ ದೊಡ್ಡ

(ಆನೇ ಪುಟ ನೋಡಿರಿ)


98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರಕ್ತದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯಂಗಾರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಋತುಸ್ರಾವ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನವಾದಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್‍ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್ & ಕಂ., (ನ. ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9) ಮೈಸೂರು S. I.



ಉದಯವಾಯಿತುಯೆಮ್ಮ ಚೆಲುವಕನ್ನಡನಾಡು|
ಇದುವಣಿಜ ಕೃಷಿಯುದ್ಯಮಗಳಚೆಲು ಬೀಡು ||

**ಪ್ರಾಂತ್ಯ ಪುನರ್ರಚನೆಯ ಪ್ರಾಮುಖ್ಯ ದಿನಗಳಲ್ಲಿ**

**"ಸಿಂಡಿಕೇಟ್ ಬೇಂಕಿ"ನ ಶುಭಾಶಯಗಳು**

ಹೊಸರಾಜ್ಯಗಳ ಪ್ರಕಾರ ನಮ್ಮ ಬೇಂಕಿನ ಶಾಖೆಗಳು

| | | |
|---|---|---|
| ಕರ್ನಾಟಕ | — | ೫೮ |
| ಆಂಧ್ರ | — | ೧೨ |
| ಮದ್ರಾಸು | — | ೨ |
| ಕೇರಳ | — | ೧೩ |
| ಬೊಂಬಾಯಿ | — | ೮ |

ಕರ್ನಾಟಕದ ಜನತೆಗೆ ನಮ್ಮ ಸೇವೆಯ ಭರವಸೆಯನ್ನು ಸಾದರದಿಂದ ಸಮರ್ಪಿಸುತ್ತಿದ್ದೇವೆ.

ಡಾ| ಟಿ.ಎಂ.ಎ. ಪೈ ಎಂ.ಬಿ.,ಬಿ.ಎಸ್, ಮೆನೇಜಿಂಗ್ ಡೈರೆಕ್ಟರ್

ಟಿ ಎ. ಪೈ, ಬಿಕಾಂ(ಆನರ್ಸ್)(ಲಂಡನ್) ಎಂ.ಎಲ್.ಎ. ಜನರಲ್ ಮೆನೇಜರ್

**ದಿ ಕೆನರಾ ಇಂಡಸ್ಟ್ರಿಯಲ್ ಆ್ಯಂಡ ಬೇಂಕಿಂಗ್ ಸಿಂಡಿಕೇಟ್ ಲಿ., ಉಡುಪಿ**

**The Canara Industrial & Banking Syndicate Ltd., Udipi.**

## ಲೋಕದ ಶಾಂತಿತಾರೆ

# ಜನನಾಯಕ ನೆಹರು ಶತಾಯುಷಿಯಾಗಲಿ!

### ನ್ಯಾಯನಿಷ್ಠುರ ವ್ಯಕ್ತಿತ್ವದ ರಮ್ಯ ಚಿತ್ರ

ಶ್ರೀ ನೆಹರೂ ೬೮ ವರುಷಗಳ ಹಳಬನೆಂದರೆ ಯಾರು ತಾನೆ ನಂಬಬಹುದು. ಲೋಕ ಶಾಂತಿ ಚಕ್ರದ ಈ ಚುಕ್ಕಾಣಿ ವೀರ ಹಣ್ಣು ಹಣ್ಣು ಮುದುಕನೆಂದರೆ ಯಾರು ತಾನೆ ಒಪ್ಪಬಹುದು. ಆದರೆ ಅವರು ಇದೇ ೧೪ನೇ ದಿನಾಂಕದಂದು ತಮ್ಮ ಜೀವನದ ೬೭ ವರ್ಷಗಳನ್ನು ಕಳೆದು ೬೮ನೇ ಹುಟ್ಟು ಹಬ್ಬವನ್ನು ಮಕ್ಕಳ ಉತ್ಸವರೂಪದಲ್ಲಿ ಆಚರಿಸಿದರೆಂಬ ಸ್ಪಷ್ಟ ಸತ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ನೆಹರೂ ವ್ಯಕ್ತಿತ್ವಕ್ಕೆ ಎಂದಿಗೂ ಹಳಬತನ ಬಡಿಯಲಾರದು. ಅವರ ಉನ್ನತ ಜೀವನವು ಚಿರಯೌವನದ್ದು; ಚಿರಂತನ ಪ್ರಭೆಯುಳ್ಳದ್ದು. ಅವರ ವಿಶ್ವವಿಶಾಲ ಹೃದಯದಲ್ಲಿ ವೃದ್ಧಾಪ್ಯದ ನೆರಿಗೆ ಬೀಳುವಂತಿಲ್ಲ. ಅವರ ತಲೆಗೂದಲು ಹಣ್ಣು ಹಣ್ಣಾಗಿದ್ದರೂ ಸಹ ಅವರ ಯೌವನವು ಇಂದಿಗೂ ಎಲ್ಲರನ್ನೂ ದಂಗುಬಡಿಸಿದೆ.

ಭಾರತದ ಜನನಾಯಕ ಶ್ರೀ ನೆಹರೂ ತನ್ನ ವ್ಯಕ್ತಿತ್ವವನ್ನು ನಮ್ಮ ದೇಶದ ಮೇರೆಗಷ್ಟೆ ಪರಿಮಿತಿಗೊಳಿಸಿಕೊಂಡಿಲ್ಲ. ಇಡೀ ವಿಶ್ವದ ಮಾನ್ಯತೆ ಪಡೆದ ಈ ಶಾಂತಿ ಪ್ರವಾದಿಯನ್ನು ಜಗತ್ತಿನ ಕೋಟಿಗಟ್ಟಲೆ ಜೀವರಾಶಿಗಳು ಆಸೆಗಣ್ಣುಗಳಿಂದ ನೋಡುತ್ತಿವೆ. ಭಾರತದ ಈ ಹಿರಿಯ ಮುತ್ಸದ್ಧಿ ಲೋಕದ ಶಾಂತಿಪ್ರಿಯ ಜನ ಕೋಟಿಯ ಆರಾಧ್ಯಮಾನವನಾಗಿದ್ದಾರೆ.

ನೆಹರೂ ಲೋಕದ ಒಂದು ಅಜೇಯ ಶಕ್ತಿ. ಅವರ ಶಾಂತಿ ಶಕ್ತಿಯ ಇದಿರು ಲೋಕದ ಪಾಶವೀ ಶಕ್ತಿಗಳ ಆಕ್ರಮಣ ಧೋರಣೆಯು ತಲೆಯನ್ನು ತಗ್ಗಿಸುತ್ತಿರುವ ನಿತ್ಯ ಸತ್ಯವನ್ನು ನಾವಿಂದು ಕಾಣುತ್ತೇವೆ. ಪೂರ್ವ ಪಶ್ಚಿಮಗಳ ಗೊಣಸಿನಂತೆಯೂ, ಪಾಶ್ಚಾತ್ಯ-ಪೌರಸ್ತ್ಯ ವಿರುದ್ಧ ಶಕ್ತಿಗಳೆರಡರ ಸಂಧಿ ಸೂತ್ರವೂ ಆಗಿ ನೆಹರೂ ಮನ್ನಣೆ ಪಡೆಯುತ್ತಾರೆ.

ನೆಹರೂರವರಲ್ಲಿ ನಾವು ಮೂರು ಅತಿಮಾನವ ಗುಣಗಳನ್ನು ಕಾಣಬಹುದು— ಒಂದು ಸತ್ಯಸಂಧತೆ; ಎರಡು ನಿಷ್ಕಪಟತನ; ಮೂರನೆಯದು ನಿರ್ಭೀಯತೆ. ಇದರಿಂದ ಇಂದು ಇವರು ಭಾರತವು ಲೋಕದ ಪ್ರಬಲ ಶಕ್ತಿಸಂಪನ್ನ ರಾಷ್ಟ್ರವಾಗಿರದಿದ್ದರೂ ಪ್ರಭಾವಿ ಸ್ಥಾನ ಪಡೆದಿದ್ದಾರೆ.

ರಾಜಕೀಯ ಸೂತ್ರಧಾರಿಯಲ್ಲಿ ಇರಬೇಕಾದ ಒಂದು ಅವಶ್ಯ ಗುಣ ನೆಹರೂರವರಲ್ಲಿ ಇಲ್ಲವೆಂಬುದು ನಿಜ. ಅದೇ ಸಂದರ್ಭ ಸಾಧಕತೆ. ಇಂದಿನ ಹಾಗೂ ಹಿಂದಿನ ಪ್ರಖ್ಯಾತ ರಾಜಕಾರಣಿಗಳು ಈ ಸಂದರ್ಭ ಸಾಧಕ ಗುಣದಿಂದಲೇ ಲೋಕ ಜಯಿಸಿದರೆಂದು ಹೇಳುತ್ತಾರೆ. ಆದರೆ ನೆಹರೂ ಇದನ್ನೊಪ್ಪುವುದಿಲ್ಲ. ಸಂದರ್ಭ



ಸಾಧಕ ಗುಣವು ರಾಜನೀತಿಜ್ಞನ ಅಧಃಪತನದ ಚಿಹ್ನೆಯೆಂದು ಅವರು ಹೇಳುತ್ತಾರೆ. ಅದಿಲ್ಲದೆ, ತಾನು ಲೋಕದ ಶತಕೋಟಿ ಜನಗಳ ಪ್ರೀತಿ, ವಿಶ್ವಾಸ ಸಂಪಾದಿಸಬಲ್ಲೆನೆಂಬ ಆತ್ಮ ವಿಶ್ವಾಸದಿಂದಿದ್ದಾರೆ. ಅದರಂತೆ ನಡೆದಿದ್ದಾರೆ; ವಿಶ್ವಾಸ ಪಡೆದೂ ಇದ್ದಾರೆ.

ನೆಹರೂರವರ ನಿಷ್ಕಪಟ ಜೀವನವೇ ಒಂದು ಆದರ್ಶ. ಅವರಲ್ಲಿ ಮಹತ್ತರವಾದ ಯಾವುದೇ ಲೋಪದೋಷವನ್ನು ಕಾಣದಿರುವುದೇ ಭಾರತದಲ್ಲಿಂದು ವಿರೋಧಿ ಪಕ್ಷಗಳು ಜನಪ್ರಿಯವಾಗದಿರಲು ಕಾರಣವಾಗಿದೆ. ಕೇವಲ ವಿರೋಧಿಸುವುದಕ್ಕಾಗಿಯೇ ಬದುಕಿಕೊಂಡು ಆದರೂ ನಿರ್ಜೀವದಿಂದ—ಕೆಲವು ದಿನಗಳ ಗೊಂದಲದಲ್ಲಿ ಮುಖಕಾಣುವ ರಾಜಕೀಯ ಪಕ್ಷಗಳು "ನೆಹರೂ ನೀತಿ"ಯ ಇದಿರು ಕನಿಕರವಸ್ಥೆಯ ಸೋಲು ಪಡುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ.

ನೆಹರೂರನ್ನು ಬಂಡವಾಳ ಶಾಹಿಗಳ ಮಿತ್ರನೆನ್ನುವಾಗಲೇ ಅವರ ಸರಕಾರ ರಾಜಾಧಿರಾಜರನ್ನು ಪದಚ್ಯುತಿಗೊಳಿಸಿ ಅವರ ನಾಮಾವಶೇಷ ಮಾಡಿತು; ಪ್ರಮುಖ ಉದ್ದಿಮೆಗಳ ರಾಷ್ಟ್ರೀಕರಣ ಮಾಡಿತು; ಜನೋಪಕಾರಿ ಕಾರ್ಖಾನೆಗಳಲ್ಲಿ ಹಿಡಿತ ಸ್ಥಾಪಿಸಿತು. ನೀರಾವರಿ ಯೋಜನೆಗಳಿಂದ ದೇಶದ ಸಂಪತ್ತಿನಲ್ಲಿ ಅದ್ಭುತವಾದ ಹೆಚ್ಚಳವಾಗುವಂತಾಯಿತು. ನಿರುದ್ಯೋಗ ನಿವಾರಣೆಗಾಗಿ ಹೊಸ ಹೊಸ ಕಾಮಗಾರಿಕೆಗಳ ಯೋಜನೆಗಳನ್ನು ಸ್ಥಳೀಯ ಅಭಿವೃದ್ಧಿ ಯೋಜನೆ, ಸಮಾಜವಿಕಾಸ ಯೋಜನೆಗಳ ಮೂಲಕ ಸ್ಥಾಪಿಸಲಾಯಿತು.

ವಿರೋಧಿ ಗುಂಪುಗಳು ನೆಹರೂರ ಕೈಯಲ್ಲಿ ಭಾರತವು ಪಾಶ್ಚಾತ್ಯರ ಆಟದ ಗೊಂಬೆಯಾಗುತ್ತಿದೆ—ಎನ್ನುತಿದ್ದಾಗಲೇ ಅಮೇರಿಕ, ಬ್ರಿಟನುಗಳ ಆಕ್ರಮಣ ಧೋರಣೆಯನ್ನು ಮುಖಮುರೀ ನೆಹರೂ ಜರೆದರು! ರಶ್ಯಾದ ಕೈಗೊಂಬೆ ಎಂದು ಅವರನ್ನು ಆರೋಪಿಸಿದಾಗಲೇ ಹಂಗೇರಿಯ ರಶ್ಯಾ ನೀತಿಯನ್ನು ಸರ್ವ ಪ್ರಥಮವಾಗಿ ಅವರು ಪ್ರತಿಭಟಿಸಿದರು, ಹೀಗಾಗಿ ಅವರ ಮೇಲಿನ ಆಪಾದನೆಗಳೇ ಸುಳ್ಳಾದವು! ಇದೇ ನೆಹರೂ ರಾಜನೀತಿಯ ವೈಶಿಷ್ಟ್ಯ; ಇದೇ ನ್ಯಾಯ ನಿಷ್ಠುರ ನೆಹರೂ ವಿಜಯದ ಒಳಗುಟ್ಟು.

ಜವಾಹರಲಾಲರದು ನ್ಯಾಯ ನಿಷ್ಠುರ ವ್ಯಕ್ತಿತ್ವ. ಎಂದಿಗೂ ಅವರು ವೈಯಕ್ತಿಕ ಲೋಭತನಕ್ಕೆ ಒಳಗಾದವರಲ್ಲ. ತನ್ನ ಸ್ನೇಹಿತರು, ತನ್ನ ಸಂಗಾತಿಗಳು ಎಂದು ಎಂದಿಗೂ ದಾಕ್ಷಿಣ್ಯತೋರಿದವರಲ್ಲ.

ಜವಾಹರಲಾಲರಲ್ಲಿ ಪಾಶ್ಚಾತ್ಯ ಸಂಸ್ಕೃತಿಯು ಪಾಶ್ಚಾತ್ಯ ರಸಪಾಕವೆಂದಿಗೆ ವೈಗೂಡಿದೆ ಎಂದು ಎಲ್ಲರೂ ಬಲ್ಲರು. ಅವರಲ್ಲಿ ಪಾಶ್ಚಾತ್ಯ ಪ್ರತಿಭೆಯ ಬಹು ಅಂಶಗಳು ಕಂಡುಬರುತ್ತಿವೆ ಅವರ ಜೀವದ ಬೆಳವಣಿಗೆಯೇ ಅಂತಹ ವಾತಾವರಣದಲ್ಲಾಗಿತ್ತು. ಅಷ್ಟರಿಂದಲೇ ಅವರು ಪಾಶ್ಚಾತ್ಯರ ಕಡೆಗೆ ಒಲವುಳ್ಳವರೆಂದು ಯಾರುತಾನೆ ಭಾವಿಸಬಹುದು?

ಅಮೇರಿಕ, ಬ್ರಿಟನು ಫ್ರೆಂಚರ ಸಾಮ್ರಾಜ್ಯಶಾಹಿ ನೀತಿಯನ್ನು ನೆಹರೂರವರಂತೆ ಕಠಿಣ ಶಬ್ದಗಳಲ್ಲಿ ಪ್ರತಿಭಟಿಸಿದವರು ಪ್ರಪಂಚದಲ್ಲಿ ಇನ್ನೊಬ್ಬರಿಲ್ಲ. ಕಾಮನ್‌ವೆಲ್ತ್ ಸಂಬಂಧ ಕೂಟದ ಹಿಂದಿದ್ದ ಕೂಟ ನೀತಿಯ ಹಿಡಿತವನ್ನು ಸಡಿಲಿಸಿ ಕಾಮನ್‌ವೆಲ್ತ್ ಒಂದು ಸ್ನೇಹಕೂಟವಾಗುವಂತೆ ಅದನ್ನು ತಿದ್ದಿ ಭಾರತವು ಪ್ರಜಾಪ್ರಭುತ್ವ ಸ್ವತಂತ್ರ ರಾಷ್ಟ್ರವಾಯಿತು. ಇಂತಹ ಒಂದು ಪ್ರಥಮ ಅಧ್ಯಾಯ ಭಾರತದಿಂದಲೇ ಪ್ರಾರಂಭಿಸಲ್ಪಟ್ಟಿತು.

ಜಪಾನ್ - ಚೀನಾ ಯುದ್ಧದಿಂದ ಚೀನಾದ ಜನತೆ ಅಮಾನುಷ ಚಿತ್ರ ಹಿಂಸೆಗೊಳಗಾದಾಗ ಚಿಯಾಂಗ್ಕೈಶೇಕ್ ಸರಕಾರಕ್ಕೆ ಭಾರತ ಜನತೆ ನೈತಿಕ ಬೆಂಬಲ ಕೊಟ್ಟದ್ದು ಚರಿತ್ರಾರ್ಹವಿದೆ. ಚಿಯಾಂಗ್—ನೆಹರೂರವರ ಪರಮ ಮಿತ್ರ. ಆದರೆ ಯುದ್ಧ ಮುಗಿದು ಚೀನಾದಲ್ಲಿ ಯಾದವಿ ಕಲಹವುಂಟಾದಾಗ ಚಿಯಾಂಗ್ ಫೊರ್ಮೋಸಾಕ್ಕೆ ಓಡಿ ಹೋಗಬೇಕಾಯಿತು. ಜನತಾ ಚೀನಾ ರೂಪುಗೊಂಡಿತು. ಚಿಯಾಂಗರ ಪರಮ ಮಿತ್ರ ನೆಹರೂ ಚಿಯಾಂಗರ ಕಡೆ ವಾಲುವರೆಂದು ಭಾರತ ವಿರೋಧಿಶಕ್ತಿಗಳು ನಂಬುವಾಗಲೇ ಲೋಕದಲ್ಲೇ ಪ್ರಥಮವಾಗಿ ಚಿಯಾಂಗ್ ನೀತಿಯನ್ನು ಪ್ರತಿಭಟಿಸಿ ಜನತಾ ಚೀನಕ್ಕೆ ನೆಹರೂ ಸರಕಾರ ಮನ್ನಣೆ ಕೊಟ್ಟಿತು.

ಕಾಶ್ಮೀರದ ಶೇಕ್ ಅಬ್ದುಲ್ ನೆಹರೂರವರ ಜೀವನ ಸಂಗಾತಿಯಾಗಿದ್ದರು. ನೆಹರೂ ಬಹಳಕಾಲದಿಂದಲೂ ಸಂಬಂಧವಿಟ್ಟುಕೊಂಡವರು ಅಬ್ದುಲ್ಲಾ. ಹಾಗೆಂದು ಭಾರತದ ಕೀರ್ತಿಗೆ ಶೇಕ್ ಅಬ್ದುಲ್ ಒಳಸಂಚು ನಡೆಸುವರೆಂದು ತಿಳಿದಾಗ ತನ್ನ ಸ್ನೇಹ, ಒಲುಮೆ ಎಲ್ಲವನ್ನೂ ಬದಿಗಿಟ್ಟು ಅವರನ್ನು ಪದಚ್ಯುತಿಗೊಳಿಸಿ ಸೆರೆಮನೆಗಟ್ಟಲೂ ನೆಹರು ಹಿಂಜರಿಯಲಿಲ್ಲ

ರಾಷ್ಟ್ರದ ಪ್ರಶ್ನೆ ಬಂದಾಗ, ನ್ಯಾಯ ನೀತಿಗಳ ವಿವೇಚನೆಗೆ ತೊಡಗಿದಾಗ ನೆಹರೂರವರಲ್ಲಿ ಯಾವುದೇ ವೈಯುಕ್ತಿಕ ದುರ್ಬಲತೆ ಕಂಡು ಬರುವುದಿಲ್ಲ. ಇದೇ ನೆಹರೂರವರ ಅತಿಮಾನವತೆಯ ಧೀರ ಲಕ್ಷಣವಾಗಿದೆ.

(೮ನೇ ಪುಟ ನೋಡಿರಿ)



# NAVAYUGA

Popular Kannada Weekly

*Founder:—*

**A. B. SHETTY,** *M. L .A.*
Former Minister for Public Health, Govt. of Madras.
At Present Minister for Health Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೫-೧೧-'೫೬ | ೧೧ |


## ಕಾಂಗ್ರೆಸಿನ ಶಕ್ತಿ

ಕಲ್ಕತ್ತದಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯು ಸಭೆಯು ಕಳೆದ ವಾರ ಸೇರಿ, ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ವಿದ್ಯಮಾನಗಳ ಸಿಂಹಾವಲೋಕನವನ್ನು ಮಾಡಿತು. ಅದರ ಜೊತೆಗೆ, ಕಾಂಗ್ರೆಸಿನ ಚುನಾವಣಾ ಘೋಷಣೆಯ ಬಗ್ಗೆ ತಯಾರಿಸಲಾದ ಕರಡಿನ ಕುರಿತೂ ಚರ್ಚೆಯನ್ನು ನಡೆಸಿತು. ಚುನಾವಣೆಯ ಘೋಷಣೆಯ ಅಂತಿಮ ಸ್ವರೂಪವು ಜನವರಿ ತಿಂಗಳಲ್ಲಿ ಸೇರುವ ಕಾಂಗ್ರೆಸಿನ ಮಹಾಧಿವೇಶನದ ಕಾಲಕ್ಕೆ ಸರಿಯಾಗಿ ನಿರ್ಧರಿಸಲ್ಪಡುವುದಾದರೂ ಸ್ಥೂಲವಾಗಿ ಯಾವ್ಯಾವ ವಿಷಯಗಳನ್ನು ಅದು ಒಳಗೊಳ್ಳುವುದೆಂಬ ಕುರಿತು ಸಾಕಷ್ಟು ಮಾಹಿತಿಯು ದೊರಕಿದೆ. ರಾಜಕೀಯ ಸ್ಥೈರ್ಯವನ್ನು ಭಾರತದಲ್ಲಿ ಈಗ ಬಲವಾಗಿ ನೆಲೆಗೊಳಿಸಿರುವುದರಿಂದ, ಮತ್ತು ರಾಜ್ಯಗಳ ಪುನಾರಚನೆಯಂತಹ ಭಾವನಾಪ್ರಧಾನ ಕಾರ್ಯಕ್ರಮಗಳನ್ನು ಸಹ ಇದೀಗ ನೆರವೇರಿಸಿರುವುದರಿಂದ—ಕಾಂಗ್ರೆಸಿನ ಚುನಾವಣೆಯ ಘೋಷಣೆಯು ಕರಡು ಮುಖ್ಯವಾಗಿ ಆರ್ಥಿಕ ಕಾರ್ಯಕ್ರಮದ ವಿವರಗಳನ್ನೊಳಗೊಂಡಿದೆ. ಉತ್ಪನ್ನದಲ್ಲಿರುವ ವೈಷಮ್ಯವನ್ನು ಆದಷ್ಟು ಮಟ್ಟಿಗೆ ನಿವಾರಿಸಬೇಕೆಂದು ಸಂಕಲ್ಪಿಸಲಾಗಿದೆ. ಭೂಸುಧಾರಣೆಯನ್ನು ಮುಂದೊತ್ತಿಕೊಂಡು ಹೋಗುವ ನಿರ್ಧಾರವನ್ನೂ ಮಾಡಲಾಗಿದೆ. ಉತ್ಪಾದನೆಯನ್ನು ಆದಷ್ಟು ಹೆಚ್ಚಿಸುತ್ತಾ ಹೋಗುವುದಕ್ಕೂ ಬೆಲೆಗಳ ಏರಿಕೆಯನ್ನು ತಡೆಗಟ್ಟುವುದಕ್ಕೂ ಸರ್ವ ಸಾಹಸಗಳನ್ನು ಮಾಡುವ ಭರವಸೆಯನ್ನು ಕೊಡಲಾಗಿದೆ. ಇದಲ್ಲದೆ ಸಾಮಾಜಿಕ ಕಲ್ಯಾಣವನ್ನು ಸಾಧಿಸುವ ಇತರ ಕಾರ್ಯಕ್ರಮಗಳನ್ನು—ಶೈಕ್ಷಣಿಕ ಅನುಕೂಲತೆ ಇತ್ಯಾದಿ—ಅನುಮೋದಿಸಲಾಗಿದೆ. ಒಟ್ಟಿನಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾದ ಸ್ಥೂಲ ತತ್ತ್ವಗಳೇ ಕಾಂಗ್ರೆಸಿನ ಆರ್ಥಿಕ ಕಾರ್ಯಕ್ರಮದಲ್ಲಿ ಸಮಾವೇಶಗೊಂಡಿವೆ ಎಂದು ಹೇಳಿದರೂ ಹೇಳಬಹುದು. ಸರಕಾರವು ಅಡಳಿತದಲ್ಲಿರುವ ಪಕ್ಷದ ಆದೇಶದಂತೆ ಸಾಮಾನ್ಯವಾಗಿ ನಡೆದುಕೊಳ್ಳುತ್ತಿರುವುದರಿಂದ ಇಂಥ ಸಾಮ್ಯವು ವ್ಯಕ್ತವಾಗುತ್ತದೆ—ಮತ್ತಿದು ಸ್ವಾಭಾವಿಕವೂ ಹೌದು. ಇದಕ್ಕಾಗಿ ಕಾಂಗ್ರೆಸಿನ ಚುನಾವಣಾ ಘೋಷಣೆಯನ್ನು ಆಕ್ಷೇಪಿಸುವುದು ಸೂಕ್ತವಾಗಲಾರದು. ಆದರೆ, ಕಾಂಗ್ರೆಸಿನ ವಿಷಯದಲ್ಲಿ ನಮಗಿರುವ ಬೇಸರವೆಂದರೆ ಅದು ಜನರೊಡನೆ ಸ್ವಾತಂತ್ರ್ಯಪೂರ್ವದಲ್ಲಿಟ್ಟುಕೊಂಡಿದ್ದ ನಿಕಟವಾದ ಸಂಪರ್ಕವನ್ನು ಕಳೆದುಕೊಳ್ಳುತ್ತಿದೆ—ಮತ್ತು ಜನರ ಗೌರವಾದರಗಳಾದರೂ ಆ ಮಟ್ಟದಲ್ಲಿ ಕಾಂಗ್ರೆಸಿಗೆ ಉಳಿಯದೆ ಹೋಗಿದೆ ಎಂಬುದು. ಕಾಂಗ್ರೆಸಿನ ವೈಭವಪೂರ್ಣವಾದ ದಿನಗಳ ನೆನಪನ್ನು ಮಾಡಿಕೊಂಡಾಗ, ಅದಿಂದು ರಾಜಕೀಯ ಕ್ಷೇತ್ರದಲ್ಲಿ ಮತ್ತು ಆರ್ಥಿಕ ರಂಗದಲ್ಲಿ ಉತ್ತರವಾದಿ ಸ್ಥಾನದಲ್ಲಿರುವುದು ನೋವನ್ನುಂಟು ಮಾಡುತ್ತದೆ. ಜನತೆಯ ಗೌರವ ಭಾವನೆ ನಶಿಸಿದೆ; ಕಾಂಗ್ರೆಸಿನ ಶಕ್ತಿಯೂ ಅಷ್ಟು ಪ್ರಮಾಣದಲ್ಲಿ ಕುಂದಿದೆ. ಜನರಿಗೂ ಕಾಂಗ್ರೆಸಿಗೂ ನಡುವೆ ಅಂತರವೇರ್ಪಟ್ಟು ಅದು ನಿತ್ಯವೂ ವಿಶಾಲವಾಗುತ್ತಾ ಹೋಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸಿಗರು ಮಾಡಬೇಕಾದುದೇನು—ಎಂಬುದನ್ನು ಧುರೀಣರು ಪದೇ ಪದೇ ಎಚ್ಚರಿಕೆಯ ಮಾತುಗಳಲ್ಲಿ ಹೇಳಿದ್ದಾರೆ. ಅದೇನೆಂದರೆ ಜನತೆಯೊಡನೆ ಬೆರೆತು ದುಡಿಯಿರಿ ಎಂಬುದು. ಇದೇ ಮಾತನ್ನು ನೆಹರು ಪುನಃ ಕಲ್ಕತ್ತದಲ್ಲಿ ಚುನಾವಣೆಯ ಘೋಷಣಾ ಪತ್ರದ ಬಗ್ಗೆ ಮಾತನಾಡುವಾಗ ಸ್ಪಷ್ಟಪಡಿಸಿದರು. ನಾವಾದರೂ ಚುನಾವಣೆಯ ಕಾರ್ಯಕ್ರಮ ಮತ್ತು ಜಯಾಪಜಯಗಳಿಗಿಂತ, ಜನರೊಡನೆ ಬೆರೆತು ಕೆಲಸಮಾಡುವ ವಿಷಯಕ್ಕೆ ಹೆಚ್ಚು ಮಹತ್ವವನ್ನು ಕಾಂಗ್ರೆಸಿಗರು ಕೊಡಬೇಕೆಂದು ಹೇಳುತ್ತೇವೆ. ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂದು ನಮ್ಮ ಆಗ್ರಹವಲ್ಲ—ಆದರೆ, ಚುನಾವಣೆಯ ಕಾಲದಲ್ಲಿ "ಏನಕೇನ ಪ್ರಕಾರೇಣ" ಜನರನ್ನು ಒಲಿಸಿಕೊಳ್ಳುವ ಉತ್ಸುಕತೆ ವ್ಯಕ್ತವಾಗುತ್ತಿದೆ; ಚುನಾವಣೆಯ ಬಳಿಕ, ಮತದಾರರನ್ನು ಕೇಳುವವರೇ ಇಲ್ಲ ಎಂಬುದು ಅನುಭವಸಿದ್ಧವಾದ ವಿಷಯ. ಇದು ಸಂಸ್ಥೆಯ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸ್ವಲ್ಪವೂ ಪೋಷಕವಾದುದಲ್ಲ—ಘಾತುಕವಾದುದೆಂದೇ ಹೇಳಬಹುದು. "ಸಮಾಜವಾದಿ ಮಾದರಿಯ ಸಮಾಜರಚನೆ ಮಾಡುವೆವು" ಎಂಬಂತಹ ಸೊಲ್ಲುಗಳಿಂದಲೂ ಜನರನ್ನು ಮರುಳು ಮಾಡಲಾರೆವೆಂದು ನಮ್ಮ ಅಭಿಮತ. ಪ್ರಧಾನಿಯವರೇ ಸ್ಪಷ್ಟಗೊಳಿಸಿದಂತೆ, ಈ "ಸಮಾಜವಾದಿ ಮಾದರಿ" ಎಂಬುದು ತೀರ ಅಸ್ಪಷ್ಟವಾದ ಕಾರ್ಯಕ್ರಮವಾಗಿಯೇ ಜನರಿಗೆ ತೋರಿದೆ—ಕಾಂಗ್ರೆಸಿಗರಲ್ಲಿಯೇ ಹೆಚ್ಚಿನವರಿಗೆ ಈ ಸಮಾಜವಾದಿ ಮಾದರಿಯ ಬಗ್ಗೆ ತಕ್ಕ ವಿವರಣೆಯನ್ನು ಕೊಡಲು ತಿಳಿದಿಲ್ಲ; ವಿವರಣೆ ಕೊಡುವ ವಿದ್ವಾಂಸರಾದರೂ ಆಚರಣೆಯಲ್ಲಿ ಈ ಮಾದರಿಯನ್ನು ಅನುಸರಿಸರು. ಸರಕಾರದ ಶಾಸನಿಕ ನಿರ್ಬಂಧವೇರ್ಪಟ್ಟ ಬಳಿಕವೇ ನಾವೂ ದಾರಿಗೆ ಬರುವವರು— ಎಂಬಂತಹ ಮನೋಭಾವನೆಯನ್ನಿಟ್ಟುಕೊಂಡಿರುವ ಹಾಗೆ ತೋರುತ್ತದೆ. ನಡೆಯೊಂದು - ನುಡಿಯೊಂದು— ಗುರಿಯೊಂದು— ಆಗಿರುವ ಇಂದಿನ ಅವ್ಯವಸ್ಥೆಯ ನಡುವೆ ಜನರ ವಿಶ್ವಾಸವನ್ನು ಶಾಶ್ವತವಾಗಿ ಸಂಪಾದಿಸಿ ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಸೇವೆಯ ಮನೋಭಾವನೆಯು ಪ್ರತಿಯೊಬ್ಬ ಕಾಂಗ್ರೆಸಿಗನಲ್ಲೂ ಬೆಳೆಯುವುದವಶ್ಯ. ಜನರ ವೀರ ಪೂಜೆಯ ಬುದ್ಧಿಯಿಂದಾಗಿ ಸೆರೆಮನೆಯನ್ನು ಸೇರಿದ ಪ್ರತಿಯೊಬ್ಬನೂ ಶೂರ ದೇಶಭಕ್ತನಾಗಿ ಪರಿಣಮಿಸಿದ ಆ ಕಾಲದ ಮಟ್ಟಕ್ಕೆ ಈ ಕಾಲದಲ್ಲಿ ಏರಬೇಕಾದರೆ, ಜನರ ದಾಸನಾಗಿ ದುಡಿಯುವ ವಿನಯಶೀಲತೆ ಮೈಗೂಡಿ ಬರಬೇಕಾಗಿದೆ; ಉಪದೇಶಿಸುವ ತತ್ವಗಳನ್ನು ಶ್ರದ್ಧೆಯಿಂದಲೂ ನಿಷ್ಠೆಯಿಂದಲೂ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ತಪಸ್ಸಿಗೆ ಒಗ್ಗಬೇಕಾಗಿದೆ. "ಕಾಂಗ್ರೆಸು ಕೇವಲ ರಾಜಕೀಯ ಪಕ್ಷವಲ್ಲ—ಜನತಾ ಸೇವೆಯೇ ಅದರ ಆದರ್ಶ" ಎಂದಿದ್ದಾರೆ ನೆಹರು; ಈ ಆದರ್ಶವು ಚುನಾವಣೆಯ ದೆಸೆಯಿಂದಾಗಿ ಮರೆಯಾಗಕೂಡದು; ಅಥವಾ ಚುನಾವಣೆಯೊಂದೇ ಕಾಂಗ್ರೆಸಿನ ಧ್ಯೇಯವಾಗಬಾರದು ಎಂದೂ ಅವರ ಅಭಿಪ್ರಾಯ. ಶ್ರೀ ನಿಜಲಿಂಗಪ್ಪ ನವರು ಹೇಳಿದಂತೆ, ಚುನಾವಣೆಯಲ್ಲಿ ಸೋತರೂ, ಕಾಂಗ್ರೆಸು ಸಂಸ್ಥೆಯು ನಾಶವಾಗುವುದಿಲ್ಲ; ಅದು ಸರಕಾರ ಪೀಠದಿಂದ ಇಳಿದೀತು — ಆದರೆ, ಏಕೆ ಹೀಗೆ ಸೋಲಬೇಕಾಯಿತೆಂದು; ತಿಳಿದು ಪುನರಪಿ ಸರಕಾರಿ ಪೀಠವನ್ನೇರುವ ವಿಧಾಯಕ ಪ್ರಯತ್ನಗಳನ್ನು ಈ ಸಂಸ್ಥೆ ನಡೆಸಲು ಬದ್ಧವಾಗಿರುತ್ತದೆ. ಈ ಸಂಸ್ಥೆಯೇ ಇಲ್ಲವಾದರೆ, ಅಥವಾ ಶಿಥಿಲವಾದರೆ, ಅಥವಾ ಅಡಂಬರದ ರಂಗವಾಗಿಯೋ "ಸ್ಥಾನ"ಗಳನ್ನು ದೊರಕಿಸಿಕೊಳ್ಳುವ ಸಾಧನವಾಗಿಯೋ ಅದು ಮಾರ್ಪಟ್ಟರೆ— ಅದಕ್ಕಿಂತ ಶೋಚನೀಯವಾದ ವಿಷಯ ಬೇರೆ ಇರಲಾರದು. ಆದುದರಿಂದ ಕಾಂಗ್ರೆಸಿನ ನಿಜವಾದ ಶಕ್ತಿಯು ಜನರಲ್ಲಿದೆ ಎಂದು ಮೊದಲು ತಿಳಿದುಕೊಳ್ಳಬೇಕು— ಹಾಗೆ ತಿಳಿದುಕೊಂಡು ಜನಸೇವೆಯ ದೀಕ್ಷೆಯನ್ನು ಪ್ರತಿಯೊಬ್ಬ ಕಾಂಗ್ರೆಸಿಗನೂ ತೊಡಬೇಕು; ತೊಟ್ಟು ತತ್ಸಂಬಂಧದ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕು—ಎಂದು ಮಗುದೊಮ್ಮೆ ನಾವು ಒತ್ತಿ ಹೇಳಲು ಇಚ್ಛಿಸುತ್ತೇವೆ.

---

## ಇಜಿಪ್ಟಿನಲ್ಲಿ ಯುದ್ಧ ಮುಕ್ತಾಯ

### ಮುಂದಿನ ಕೆಲಸ ನೋಡಲು ಪೋಲೀಸು ಪಡೆಯ ರಚನೆ

ಇಜಿಪ್ಟಿನ ಮೇಲೆ ನಡೆದ ಆಕ್ರಮಣಕಾರಿ ಧಾಳಿಯು ಈಗ ನಿಂತಿದೆ. ಅಂದರೆ ಯುದ್ಧವು ಅಲ್ಲಿ ನಡೆಯುತ್ತಿಲ್ಲ. ಬ್ರಿಟನು ಮತ್ತು ಫ್ರಾನ್ಸುಗಳು ಇಜಿಪ್ಟಿನಲ್ಲಿ ಯುದ್ಧವನ್ನು ಮುಂದುವರಿಸಿದರೆ, ತಾನು ಇಜಿಪ್ಟಿನ ನೆರವಿಗೆ ಹೋಗಿಯೇ ತೀರುವುದಾಗಿ ರಶ್ಯವು ಹೇಳಿದುದೂ—ಅರಬ ರಾಷ್ಟ್ರಗಳಲ್ಲಿ ಒಂದಾದ ಸಿರಿಯಾದಲ್ಲಿ ರಶ್ಯದ ವಿಮಾನಗಳು ಠಾಣ್ಯವೂರಿವೆ ಎಂಬ ವರದಿಯಾದುದೂ—ಬ್ರಿಟನು ಮತ್ತು ಫ್ರಾನ್ಸುಗಳ ಯುದ್ಧೋತ್ಸಾಹವನ್ನು ತಗ್ಗಿಸಿತು—ಎಂದು ಹೇಳಬಹುದು.

ಆದರೆ ಬ್ರಿಟನು ಮತ್ತು ಫ್ರಾನ್ಸುಗಳು ರಶ್ಯಕ್ಕೆ ಹೆದರಿದೆವೆಂದು ಸ್ಪಷ್ಟವಾಗಿ ಹೇಳಲು ಬಯಸುತ್ತಿಲ್ಲ. ಸಂಯುಕ್ತ ರಾಷ್ಟ್ರಸಂಘವು ಅಂತಾರಾಷ್ಟ್ರೀಯ ಪೋಲೀಸು ಪಡೆಯನ್ನು ಸ್ಥಾಪಿಸಿ, ಇಜಿಪ್ಟಿನಲ್ಲಿ ಶಾಂತಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಹೊತ್ತುದರಿಂದ ತಾವು ಯುದ್ಧ ನಿಲ್ಲಿಸಿದೆವೆಂದು ಅವು ಹೇಳುತ್ತವೆ. ಈ ಪೋಲೀಸು ಪಡೆಯು ಇಜಿಪ್ಟಿನಲ್ಲಿ ತಳವೂರಿ, ಸುಯೇಜಿನ ಕಾಲುವೆಗೆ ಅಪಾಯವಿಲ್ಲವೆಂದು ಖಚಿತಪಡಿಸುವ ವರೆಗೆ ಇಜಿಪ್ಟಿನ ಭೂಮಿಯಿಂದ ತಮ್ಮ ಪಡೆಗಳು ಹೊರ ಹೋಗುವುದಿಲ್ಲವೆಂದೂ ಅವು ಸ್ಪಷ್ಟಪಡಿಸಿವೆ.

ಇಸ್ರೇಲವೂ ಯುದ್ಧವನ್ನು ನಿಲ್ಲಿಸಿದೆ. ತಾನು ಆಕ್ರಮಿಸಿರುವ, ಆದರೆ ನಿಜವಾಗಿ ಇಜಿಪ್ತಿನದಾದ ಗಾಜಾ ಮತ್ತು ಸಿನಾಯಿ ಪ್ರದೇಶಗಳನ್ನು ಇಜಿಪ್ಟಿಗೆ ಬಿಟ್ಟು ಕೊಡುವುದಿಲ್ಲ ಎಂದದು ಯುದ್ಧ ನಿಲ್ಲಿಸಲು ಒಪ್ಪಿದ ಬಳಿಕವೂ ಹೇಳಿತು. ಆದರೆ ಈ ಧೋರಣೆಗೆ ಯಾರದೇ ಬೆಂಬಲ ವ್ಯಕ್ತವಾಗದುದರಿಂದ, ಮತ್ತು ಸಂಯುಕ್ತ ರಾಷ್ಟ್ರಸಂಘದ ಉಗ್ರ ಕಟಾಕ್ಷ ಅದರ ಮೇಲೆ ಬಿದ್ದುದರಿಂದ— ಈಗ ಬ್ರಿಟನು ಮತ್ತು ಫ್ರಾನ್ಸುಗಳು ಆಡುವ ಮಾತನ್ನೆ ಅದೂ ಹೇಳುತ್ತಿದೆ.

ಅಂತಾರಾಷ್ಟ್ರೀಯ ಸ್ವರೂಪದ ಪೋಲೀಸು ಪಡೆಯಲ್ಲಿ ಭಾಗವಹಿಸಲು ೨೦ ರಾಷ್ಟ್ರಗಳು ಮುಂದೆ ಬಂದಿದ್ದು, ಅವುಗಳಲ್ಲಿ ಭಾರತವೂ ಒಂದಾಗಿವೆ. ಈ ಪೋಲೀಸು ಪಡೆಯು ಇಜಿಪ್ಟಿನ ಸಮ್ಮತಿಯಿಂದ ಇಷ್ಟರಲ್ಲೇ ಕೈರೋವನ್ನು ಪ್ರವೇಶಿಸಿ, ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳಲಿದೆ. ಮೊದಲನೆಯ ತಂಡದಲ್ಲೇ ಭಾರತದ ಸೈನಿಕರಿದ್ದು ಈ ತಂಡವು ಈಗಾಗಲೇ ಕೈರೋವನ್ನು ಸೇರಿಯಾಗಿದೆ. ಈ ಪೋಲೀಸು ಪಡೆಯ ಮೇಲೆ ಬಿದ್ದಿರುವ ಜವಾಬ್ದಾರಿಯು ಬಹಳ ಗುರುತರವಾದುದಾಗಿದೆ—ಆದುದರಿಂದ ರಾಷ್ಟ್ರಸಂಘದ ಮಹಾ ಕಾರ್ಯದರ್ಶಿ ಹ್ಯಾಮರ ಶಿಲ್ಡರೂ ಕೈರೋದಲ್ಲಿ ಬಂದು ಇಳಿದು ಎಲ್ಲ ಮೇಲ್ವಿಚಾರಣೆಯನ್ನು ಮಾಡುತ್ತಿದ್ದಾರೆ.

ಎಲ್ಲರ ಸಹಾನುಭೂತಿಯೂ ಈಜಿಪ್ಟಿಗಿದೆ. ಅಮೇರಿಕ ಮತ್ತು ರಶ್ಯಗಳು ಒಟ್ಟಾಗಿರುವ ಮತ್ತು ಅಮೇರಿಕವು ಬ್ರಿಟನು ಮತ್ತು ಫ್ರಾನ್ಸುಗಳಿಗಿಂತ ಭಿನ್ನವಾದ ನಿಲುವೆಯನ್ನು ಕೊಂಡಿರುವ ನಾಟಕೀ

---


**ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!**

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

**50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!**

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

**THE CANARA BANKING CORPORATION LIMITED**

ಯ ಪರಿಣಾಮವು ಈಜಿಪ್ಟಿನ ಮೇಲಾದ ಆಕ್ರಮಣ ಕಾಲದಲ್ಲಿ ವ್ಯಕ್ತವಾದುದೊಂದು ಐತಿಹಾಸಿಕ ಸೋಜಿಗ. ಆದರೆ ಅಮೇರಿಕವು ರಶ್ಯದ ಕಾರ್ಯ ವಿಧಾನವನ್ನೇನೂ ಒಪ್ಪುತ್ತಿಲ್ಲ. ಅಮೇರಿಕವೂ ರಶ್ಯವೂ ಕೂಡಿ ಆಕ್ರಮಣವನ್ನು ತಡೆಬಡಿಯಬೇಕೆಂಬ ಹಿಂದಿನ ಸೂಚನೆಯನ್ನು ತಿರಸ್ಕರಿಸಿದ ಅಮೇರಿಕವು, ಇಜಿಪ್ಟಿನಿಂದ ಆಕ್ರಮಣಕಾರಿ ವಿದೇಶಿ ಪಡೆಗಳು ಹಿಂದೆಗೆಯದಿದ್ದರೆ ತಾನು ರಶ್ಯದ ಸ್ವಯಂಸೇವಕರನ್ನು ಇಜಿಪ್ಟಿಗೆ ಹೋಗಗೊಡುವುದಾಗಿ ಮಾಡಿದ ಘೋಷಣೆಯನ್ನೂ ಅಪಾಯಕಾರಿ ಎಂದು ಬಣ್ಣಿಸಿದೆ.

ಚುನಾವಣೆಯ ಕಾಲದಲ್ಲಿದ್ದ ಅಮೇರಿಕವು ಒಳ್ಳೆಯ ಮುತ್ಸದ್ದಿತನದಿಂದಲೇ ವರ್ತಿಸಿತು. ಹೀಗಾಗಿ ಅಧ್ಯಕ್ಷ ಐಕರು ಮರಳಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಹೊಂದುವಂತಾಯಿತು. ಅವರ ವ್ಯಕ್ತಿತ್ವದ ಪ್ರಭಾವಕ್ಕೆ ದೊರೆತ ವಿಜಯವಿದೆಂದು ಎಲ್ಲಿಡೆಯಲ್ಲೂ ಹೇಳಲಾಗುತ್ತದೆ. ಉಪಾಧ್ಯಕ್ಷ ನಿಕ್ಸನ್ನರೂ ಉಪಾಧ್ಯಕ್ಷ ಸ್ಥಾನಕ್ಕೆ ಮರಳಿ ಆರಿಸಿಬಂದಿದ್ದಾರೆ. ಆದರೆ ಐಕರ ರಿಪಬ್ಲಿಕನ್ ಪಕ್ಷವು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಬಹುಮತವನ್ನು ಕಳೆದುಕೊಂಡಿದೆ. ಅಲ್ಲಿ ಡೆಮೋಕ್ರಾಟರೇ ಹೆಚ್ಚಿನ ಸ್ಥಾನವನ್ನು ಗಳಿಸಿದ್ದಾರೆ.

ಬ್ರಿಟನಿನಲ್ಲಿ ಈಡನ್ನರ ಸರಕಾರದ ಮೇಲೆ ಪ್ರತಿ ಪಕ್ಷದವರು ತಂದಿದ್ದ ಅವಿಶ್ವಾಸ ಸೂಚಕ ಗೊತ್ತುವಳಿಯು ಬಿದ್ದು ಹೋಯಿತು. ಆದರೆ ಬ್ರಿಟನಿನ ಜನತೆಯು ಈಡನ್ನರ ಯುದ್ಧೋತ್ಸಾಹದ ಫಲವಾಗಿ ಒಳ್ಳೆಯ ಕಷ್ಟವನ್ನು ಅನುಭವಿಸಬೇಕಾಗಿ ಬಂದಿದೆ. ಕ್ರುದ್ಧವಾದ ಅರಬ ರಾಷ್ಟ್ರಗಳು ಎಣ್ಣೆ ಪೂರೈಕೆಯ ಪಂಪುಗಳನ್ನೆಲ್ಲ ಕಡಿದು ಹಾಕಿವೆ. ಈಗ ಬ್ರಿಟನಿಗೆ ಎಣ್ಣೆಯ ಕೊರತೆ ಕಾಣಿಸಿದೆ. ಅಮೇರಿಕ ಮತ್ತು ವೆನೆಜುವೆಲ (ದಕ್ಷಿಣ ಅಮೇರಿಕ) ಗಳಿಂದ ಎಣ್ಣೆ ತರಿಸುವುದೆಂದರೆ ೧೫ ಕೋಟಿ ಡಾಲರುಗಳಷ್ಟು ಹೆಚ್ಚು ವೆಚ್ಚದ ಕಾರ್ಯ. ಇದನ್ನು ಹೊರ ಬೇಕಾದುದು ಯಾರು? ಜನರೇ!

ಈಗ ಮಾಡಿದ ಯುದ್ಧದಿಂದ ಇಜಿಪ್ಟಿನಲ್ಲಿ ಶೇಖರಿಸಿದ ಎಲ್ಲ ಶಸ್ತ್ರಾಸ್ತ್ರ ಸಂಗ್ರಹವೂ ಧ್ವಂಸನಾಯಿತೆಂದೂ ಆದರ ಬಲ ತೀರ ಕುಗ್ಗಿತೆಂದೂ ಬ್ರಿಟನು, ಫ್ರಾನ್ಸು ಮತ್ತು ಇಸ್ರೇಲಗಳು ತಾಮಸ ಸಮಾಧಾನವನ್ನು ಪಟ್ಟಿವೆ. ಇಜಿಪ್ಟಿನ ಅಹಂಕಾರಕ್ಕೆ ತಕ್ಕ ಮದ್ದನ್ನು ಅರೆದುದಾಯಿತೆಂದು ಅವುಗಳ ಲೆಕ್ಕ. ಇದು ಸುಳ್ಳಲ್ಲ—ಇಜಿಪ್ಟಿನ ಶಕ್ತಿ ನಿಜಕ್ಕೂ ತುಂಬ ಕುಗ್ಗಿತು. ಆದರೆ, ಇದಕ್ಕಾಗಿ ಅನುಸರಿಸಿದ ಕೂಟ ನೀತಿಯನ್ನು ಮೆಚ್ಚಿದವರಿಲ್ಲ!

ಘರ್ಷಣೆಯು ಪೋರ್ಟ್‌ಸುಯೆಡಿಯ ಕಾರ್ಯಾಚರಣೆಯ ದೆಸೆಯಿಂದ ನಿಂತುಹೋದೀತೆಂದು ಲೆಕ್ಕಹಾಕುವುದೂ ತಪ್ಪು. ಸುಯೇಜಿನ ಕಾಲುವೆಯಲ್ಲಿ ಮುಳುಗಿರುವ ಹಡಗುಗಳನ್ನು ಮೇಲಕ್ಕೆತ್ತಿ, ಕಾಲುವೆಯನ್ನು ಸಂಚಾರ ಯೋಗ್ಯವಾಗಿ ಮಾಡಲು ಮೂರು ತಿಂಗಳ ಕಾಲ ಬೇಕಾದೀತು. ಅಲ್ಲಿಯ ವರೆಗೆ ತಮ್ಮ ಪಡೆಗಳನ್ನು ಕೇಳಲಾರಿವೆಂದು ಬ್ರಿಟನು, ಫ್ರಾನ್ಸು ಮತ್ತು ಇಸ್ರೇಲಗಳು ಹೇಳಿದರೆ—ಆಗ ಈ ವಿದೇಶಿ ಪಡೆಗಳು ಹೋಗದೆ ಕಾಲುವೆ ದುರಸ್ತಿ ಮಾಡಿಸುವುದಿಲ್ಲವೆಂದು ನಾಸೇರರು ಘೋಷಿಸಿದ್ದಾರೆ. ಅಂತೂ ಇದೊಂದು ವಿಷಮ ವರ್ತುಲವಾಗಿದೆ ಎನ್ನಬಹುದು.



ಇದೇನೆಂದು ಹೇಳುವಿರಿ? ಬಣ್ಣ ಬಣ್ಣದ ಚಿಟ್ಟೆಯ ರೆಕ್ಕೆಯ ತುಣುಕು ಇದೆಂದು ನಿಮ್ಮ ಊಹೆ ಇರಬಹುದು. ಹಾಗಿದ್ದರೆ ಅದು ಸಂಪೂರ್ಣವಾಗಿ ತಪ್ಪು. ಈ ಚಿತ್ರದಲ್ಲಿ ಎಷ್ಟು ಸೌಂದರ್ಯಯುಕ್ತವಾಗಿ ರೇಖೆಗಳ ಗುರುತು ಮೂಡಿದೆ! ಇದು ಪತಂಗದ ರೆಕ್ಕೆಯ ಚಂದಕ್ಕೆ ಯಾವ ರೀತಿಯಲ್ಲೂ ಕಡಿಮೆ ಇಲ್ಲ. ಈ ಚಿತ್ರವದ್ದು ಬ್ರಿಟನಿನ ರಾಷ್ಟ್ರೀಯ ಭೌತವಿಜ್ಞಾನ ಪ್ರಯೋಗ ಶಾಲೆಗಾಗಿ ಒಂದು ಸೆಕೆಂಡಿನ ಮಿಲಿಯದಲ್ಲಿ ಒಂದಂಶದಷ್ಟು ಅಲ್ಪ ಕಾಲದ ಅವಕಾಶವಿತ್ತು ತೆಗೆಯಲಾಯಿತು; ವಿಮಾನಗಳು ಭರದಿಂದ ಗಾಳಿಯಲ್ಲಿ ಹಾರುತ್ತಿರುವಾಗ ಅಗಿನ ವೇಗ ಹಾಗು ಏಳುವ ಶಬ್ದದ ಅಲೆಗಳು ವಾತಾವರಣದಲ್ಲಿ ಏನು ಪರಿಣಾಮ ಮಾಡುವವೆಂಬುದನ್ನು ಕಂಡುಕೊಳ್ಳಲು ಈ ಚಿತ್ರ ತೆಗೆಯಲ್ಪಟ್ಟಿತ್ತು. ಚಿತ್ರದಲ್ಲಿರುವುದೇ ವಿಮಾನದ ಮುಂದಿನ ವಾತಾವರಣದ ಸ್ವರೂಪ!

## ಉಡುಪಿ

**ನಗರ ಸಭೆಯು** – ತಾ. ೧೦ರಲ್ಲು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ನವ ಮೈಸೂರು ಸರಕಾರದ ಮುಖ್ಯಮಂತ್ರಿಯಾಗಿ ಶ್ರೀ ನಿಜಲಿಂಗಪ್ಪ ನವರು ಆರಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸುವ, ಅವರ ಮಂತ್ರಿಮಂಡಲದಲ್ಲಿ ವಿಶ್ವಾಸವನ್ನು ಪ್ರದರ್ಶಿಸುವ, ಕರ್ನಾಟಕ ರಾಜ್ಯಕ್ಕಾಗಿ ಹೋರಾಡಿದವರನ್ನು ಸ್ಮರಿಸುವ ಕುರಿತು ವಕೀಲ್ ಶ್ರೀ ಪಿ. ಪಿ. ಆಚಾರ್ಯರ ತಂಡ ನಿರ್ಣಯಗಳು ಪಾಸಾದುವು.

**ಕ್ರಾಂತಿ ದಿನಾಚರಣೆ**— ಸ್ಥಳೀಯ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ತಾ ೭ ರಲ್ಲಿ ರಷ್ಯಾ ಕ್ರಾಂತಿ ದಿನಾಚರಣೆಯು ಶ್ರೀ ಅನಂತಕೃಷ್ಣ ಐತಾಳರ ಅಧ್ಯಕ್ಷತೆಯಲ್ಲಿ ತೇರು ಬೀದಿಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಸಾಂಗವಾಯಿತು. ಶ್ರೀ ಡೇವಿಡ್ ಕರ್ಕಡರು ಕಾಲೋಚಿತ ಭಾಷಣವಿತ್ತು ಆ ದಿನದ ಮಹತ್ವವನ್ನು ವಿವರಿಸಿದರು.

**ಮುದ್ದಣ್ಣ ಸ್ಮಾರಕಸಾಹಿತ್ಯೋತ್ಸವ** ವು ಪ್ರತೀ ವರುಷದಂತೆ ಸ್ಥಳೀಯ ಎಂ. ಜಿ ಎಮ್. ಕಾಲೇಜಿನಲ್ಲಿ ಮೂರುದಿನ ಜರಗಿತು.

ಪ್ರಥಮ ದಿನವಾದ ದಿನಾಂಕ ೯ ರಂದು ಶ್ರೀ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸಾಯಂಕಾಲ ಸಾಹಿತ್ಯ ಸಭೆಯು ಜರಗಿತು. ಶ್ರೀ ಬಿ ಎಸ್. ರಾಮಾಚಾರ್ಯರವರ ಕಾವ್ಯವಾಚನ, ಹಾಗೂ ಶ್ರೀ ಎಸ್. ಆರ್. ಎಕ್ಕುಂದಿಯವರಿಂದ ಪು. ತಿ. ನರ ಕೃತಿಗಳ ಕುರಿತು ಭಾಷಣಗಳು ಜರಗಿದುವು. ಮಳೆಯ ಅಬ್ಬರದಿಂದ ಕಾರಂತರ ಭಾಷಣ ಕೇಳುವ ಯೋಗವು ಪ್ರೇಕ್ಷಕರಿಗೆ ದೊರಕಲಿಲ್ಲ; ಆದರೆ ರಾಮಾಚಾರ್ಯರ ಕಾವ್ಯವಾಚನ ಮಳೆಯ ಬರುತ್ತಿದ್ದರೂ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿತ್ತು.

ದ್ವಿತೀಯ ದಿನವಾದ ತಾರೀಕು ೧೦ರಂದು ಬೆಳಿಗ್ಗೆ ಪ್ರೊ। ಎಸ್. ವಿ. ರಂಗಣ್ಣನವರು "Sound- the neglected part of literature ಎಂಬುವರ ಕುರಿತು ಇಂಗ್ಲಿಷಿನಲ್ಲಿ ಉಪನ್ಯಾಸವಿತ್ತರು ಅದೇ ದಿನ ಸಾಯಂಕಾಲದ ಸಾಹಿತ್ಯ ಸಭೆಯು ಪ್ರಿನ್ಸಿಪಾಲ್ ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಡಿಕೇರಿಯ ಶ್ರೀ ಎಲ್. ಎಸ್. ಶೇಷಗಿರಿ ರಾಯರಿಂದ "ಶ್ರೀನಿವಾಸರ ಕೃತಿಗಳ ಕುರಿತೂ" ಪ್ರೊ। ಎಸ್. ವಿ. ರಂಗಣ್ಣನವರಿಂದ "ಕನ್ನಡ ಸಾಹಿತ್ಯದಲ್ಲಿ ಛಂದಸ್ಸಿನ ಪಾತ್ರ" ದ ಕುರಿತೂ ಎರಡು ಉಪನ್ಯಾಸಗಳು ಬಹು ಯಶಸ್ವಿಯಾಗಿ ಜರಗಿತು.

ತೃತೀಯ ದಿನವಾದ ತಾ. ೧೧ರಂದು ಬೆಳಿಗ್ಗೆ ಕವಿ ಸಮ್ಮೇಳನವು ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ವ ಶ್ರೀಗಳಾದ ಅಮ್ಮೆಂಬಳ, ವೆಂಕಟರಾಜ, ಕೆಯ್ಯಾರ, ಅ ಗೌ. ಕಿನ್ನಿಗೋಳಿ, ಅನಂತಪದ್ಮನಾಭ ಉಡುಪ, ಎಕ್ಕುಂದಿ, ರಾಮಚಂದ್ರ ಶರ್ಮ ಹಾಗೂ ಪಿ. ಗೋಪಾಲಕೃಷ್ಣ ಭಟ್ಟರವರು ಇದರಲ್ಲಿ ಭಾಗವಹಿಸಿದ್ದರು. ಯಶಸ್ವಿಯಾಗಿ ಜರಗಿದ ಈ ಸಮ್ಮೇಳನವು ಸಕಲ ಪ್ರೇಕ್ಷಕರ ಮನಸ್ಸನ್ನು ರಂಜಿಸಿತೆಂದರೆ ತಪ್ಪಾಗದು. ಅದೇ ದಿನ ಸಾಯಂಕಾಲದ ಸಾಹಿತ್ಯ ಸಭೆಯು ಪ್ರೊ। ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್. ಕೆ. ರಾಮಚಂದ್ರ ಮೂರ್ತಿಯವರಿಂದ ಕಾವ್ಯವಾಚನ ಮತ್ತು ಬಿ. ಸಿ. ರಾಮಚಂದ್ರ ಶರ್ಮರಿಂದ 'ನವ್ಯ ಕಾವ್ಯದ ಕುರಿತು' ಭಾಷಣವು ಜರಗಿತು. ಅಧ್ಯಕ್ಷರು ಶ್ರೀಯುತರ ಕೃತಿಗಳ ಕುರಿತು ಉಪನ್ಯಾಸವಿತ್ತರು. ಮೂರು ದಿನವೂ ನಾಟಕಗಳೂ ವಿವಿಧ ವಿನೋದಾವಳಿಗಳೂ ಜರಗಿದುವು.

---

**ಬೆಳ್ಳೆ**— ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ತಾ. ೪ರಲ್ಲಿ ಬೆಳ್ಳೆಯ ಸೂಲಗಿತ್ತಿಯ ಕೇಂದ್ರವನ್ನು ಉದ್ಘಾಟಿಸಿದರು. ಡಾ. ಟಿ. ಎಮ್. ಎ. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆರೋಗ್ಯಾಧಿಕಾರಿ, ಜಿಲ್ಲಾ ಪಂಚಾಯತ ಆಫೀಸರ್ ಮೊದಲಾದವರು ಹಾಜರಿದ್ದರು. ಶ್ರೀ ಕೆ. ಗೋಪಾಲಕೃಷ್ಣ ಬಲ್ಲಾಳರು ಸ್ವಾಗತಿಸಿದರು. ಶ್ರೀ ಬಿ. ಡೇಸರು ಸಂದೇಶವಾಚನ ಮಾಡಿದರು. ಡಾ। ಉಪಾಧ್ಯರ ಭಾಷಣಾನಂತರ, ಸಭಾಧ್ಯಕ್ಷರು ಈ ಕ್ಷೇತ್ರದ ಅವಶ್ಯಕತೆಗಳಾದ ಹೈಸ್ಕೂಲು, ಬೇಂಕು, ಗ್ರಾಮಾಸ್ಪತ್ರೆಗಳ ಸ್ಥಾಪನೆ ಕುರಿತು ತನ್ನಿಂದಾದ ಸಹಕಾರವೀಯುವುದಾಗಿ ಆಶ್ವಾಸನೆಯಿತ್ತರು. ಶ್ರೀ ಪಾಂತಿಯವರು ಧನ್ಯವಾದವಿತ್ತರು.

**ಮೂಡಬಿದ್ರೆ**—ಈ ವಲಯದ ಸಹಕಾರ ಸಪ್ತಾಹ ದಿನಾಚರಣೆಯು ತಾ. ೯ರಲ್ಲು ಸಂಜೆ ಸಮಾಜ ಮಂದಿರದಲ್ಲಿ ಶ್ರೀ ಎಮ್. ಸಿ. ಮಾಬೆನ್, ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಸೋಮಪ್ಪ ರೈ, ಜಿ. ವಾಸುದೇವ ಪೈ, ಪಿ. ಕೃಷ್ಣಯ್ಯ, ಪದ್ಮನಾಭ, ಎಚ್. ಡಿ. ಸಾವರ್ಕ್ರಾಸ್ಟ, ಎನ್. ಪಿ. ಮುರಾಯರ್, ಸಿ. ಮಾಧವ ಭಟ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಡಾ ವೈ. ಉಮಾನಾಥ ರಾಯರು ವಂದನೆಗಳನ್ನಿತ್ತರು.

**ಬಂಟ್ವಾಳ**— ಸ್ಥಳೀಯ ಯಶವಂತ ವ್ಯಾಯಾಮ ಶಾಲೆಯಲ್ಲಿ ತಾ. ೭ರಲ್ಲಿ ಸಂಜೆ ಯುವಕ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಉಡುಪಿಯ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಮಾತನಾಡುತ್ತಾ, ಕಾರ್ಮಿಕರ ಪರವಾಗಿ ತ್ಯಾಗ ಮನವಿಯ ಬಗ್ಗೆ ತಕ್ಕ ಕಾರ್ಯಕೈಕೊಳ್ಳುವ ಭರವಸೆಯಿತ್ತರು. ದೇಶ ಕಲ್ಯಾಣಕ್ಕಾಗಿ ಸರ್ವರೂ ಶ್ರಮಿಸಬೇಕೆಂದರು. ಶ್ರೀ ಬಸ್ತಿ ವಾಮನ ಶೆಣೈಯವರು ಸ್ವಾಗತ ಭಾಷಣ ಮಾಡಿದರು. ಬಂಟ್ವಾಳ ಬೀಡಿ ಕಾರ್ಮಿಕರ ಸಂಘದ ಪರವಾಗಿ ಅದರ ಅಧ್ಯಕ್ಷ ಬಿ. ವಿ ನಾರ್ಧನ ಸೆಟ್ಟಿರು ಮನವಿಯೊಂದನ್ನು ಶ್ರೀ ಪೈಗಳಿಗೆ ಒಪ್ಪಿಸಿದರು. ಶ್ರೀಗಳಾದ ವೆಂಕಟೇಶ ಬಾಳಿಗ ಮತ್ತು ನರಸಿಂಹ ಬಾಳಿಗರು ಕಾಲೋಚಿತಮಾತುಗಳನ್ನಾಡಿದರು.

**ಕಾಸರಗೋಡು** ಸಹಕಾರ ಸಪ್ತಾಹ ಆಚರಣೆಯ ಅಂಗವಾಗಿ ತಾ. ೮ರಲ್ಲಿ ಟೌನ್ ಬೇಂಕ್ ಕಟ್ಟಡದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ಪಿ. ಅನಂತ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಕಾಲೋಚಿತ ಭಾಷಣಗಳಾದುವು.

**ಕಟಪಾಡಿ**—ತಾ. ೧೧ರಲ್ಲು ಸಂಜೆ ಶ್ರೀ ಕಾಶಿ ಮಠಾಧೀಶರು ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ ಕಟ್ಟೋಣ ವಿಸ್ತರಣೆಯ ಶಂಕು ಸ್ಥಾಪನೆಯನ್ನು ಮಾಡಿ ಶಾಲೆಗೆ ಯಶಸ್ಸನ್ನು ಕೋರಿ ಆಶೀರ್ವದಿಸಿದರು. ಸ್ವಾಮಿಗಳವರಿಗೆ ಪಾದಪೂಜೆಯಾದ ನಂತರ ಶ್ರೀ ಕೆ. ಎಸ್. ಶೆಣೈಯವರು ಸ್ವಾಗತಮಾತುಗಳನ್ನಾಡಿದರು. ಶ್ರೀ ಕೆ. ಆರ್. ಶೆಣೈಯವರು ಸಂದೇಶವಾಚನಮಾಡಿದರು. ಹೆಡ್ಮಾಸ್ತರ್ ಶ್ರೀ ಪಿ. ರಾಮದಾಸ ನಾಯ್ಕರು ಶಾಲಾ ವರದಿಯನ್ನೋದಿದರು. ಡಾ. ಟಿ. ಮಾಧವ ಪೈ, ಡಾ. ಎಸ್ ಆರ್. ಪೈ ಮತ್ತು ಶ್ರೀ ಎಮ್ ಆರ್. ಭಟ್ಟರು ವಿದ್ಯಾವರ್ಧಕ ಸಂಘದ ಕಾರ್ಯಕಲಾಪಗಳನ್ನು ಶ್ಲಾಘಿಸಿ ಮಾತನಾಡಿದರು. ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರು ಧನ್ಯವಾದಗಳನ್ನರ್ಪಿಸಿದರು. ಪ್ರಸಾದ ವಿತರಣೆ, ಮಂಗಲಗೀತೆ, ಸಿಹಿ ತಿಂಡಿ ಹಂಚೋಣಗಳಾಗಿ ಸಮಾರಂಭ ಕೊನೆಗೊಂಡಿತು.

**ಬೈಲೂರು**— ಜಿಲ್ಲಾ ಬೋರ್ಡಿನ ಕಡೆಯಿಂದ ಬೈಲೂರು ಕೇಂದ್ರದ ರೂರಲ್ ಆಸ್ಪತ್ರೆಯನ್ನು ತಾ. ೩ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ ಕೆ. ಹೆಗ್ಡೆಯವರು ಉದ್ಘಾಟಿಸಿದರು. ಜಿಲ್ಲಾ ವೈದ್ಯಾಧಿಕಾರಿ ಡಾ. ತಿಮ್ಮಯ್ಯನವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಕೆ. ರಘುರಾಮ ಹೆಗ್ಡೆಯವರು ಸ್ವಾಗತಿಸಿದರು. ಶ್ರೀಗಳಾದ ಎಮ್. ಕೃಷ್ಣಯ್ಯ ಸೆಟ್ಟಿ, ಬಿ. ಎನ್. ಆಚಾರ್, ಪಿ. ಡಿ. ಪಿ. ರಾಮಪ್ಪನ್, ಬಿ. ಎಸ್. ಭಾಸ್ಕರ ರೈ, ಅನಂತಯ್ಯ ಸೆಟ್ಟಿ, ಸುಭಾಸಚಂದ್ರ ಹೆಗ್ಡೆ ಮೊದಲಾದವರು ಭಾಷಣವಿತ್ತರು. ಆಸ್ಪತ್ರೆ ಡಾಕ್ಟರ್ ಶ್ರೀ ಕೆ. ಶ್ರೀನಿವಾಸ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

**ದೇಲಂಪಾಡಿ**— ಇಲ್ಲಿಯ ಬಸರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಆಶ್ರಯದಲ್ಲಿ ತಾ ೧೦ರಲ್ಲಿ ಶ್ರೀ ಎಮ್. ಸೀನಪ್ಪ ಗೌಡರ ವ್ಯವಸ್ಥಾಪಕತ್ವದಲ್ಲಿ "ವಾಲಿವಧೆ" ಎಂಬ ಯಕ್ಷಗಾನ ಕೂಟವು ಶ್ರೀಗಳಾದ ಕೀ. ವ. ಕೇಶವನವರ ಹಾಡುಗಾರಿಕೆ ಮತ್ತು ಯು. ಬಿ. ಗೋವಿಂದಯ್ಯ, ರಮಾನಂದ ಬನಾರಿ, ಗುಡ್ಡಪ್ಪ ಗೌಡ, ಅಣ್ಣಯ್ಯ ಭಂಡಾರಿ, ಬಾಬು ರೈ ಮೊದಲಾದ ಅರ್ಥಧಾರಿಗಳ ಕೂಡುವಿಕೆಯಿಂದ ಸಾಂಗವಾಯಿತು. ಮಾಸ್ತರ್ ವಿಷ್ಣು ಭಟ್ಟರು ಯಕ್ಷಗಾನ ಮಹತ್ವದ ಕುರಿತು ಮಾತನಾಡಿದರು.

**ಉಡುಪಿಯಲ್ಲಿ ನೆಹರು ಜಯಂತಿ** ಯ ಅಂಗವಾಗಿ ಅಂತರ ರಾಷ್ಟ್ರೀಯ ಮಕ್ಕಳ ದಿನಾಚರಣೆಯು ತಾ. ೧೪ರಂದು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಬೆಳಿಗ್ಗೆ ಪ್ರಭಾತಫೇರಿಯಾಗಿ ಅಜ್ಜರಕಾಡಿನಲ್ಲಿ ಶ್ರೀ ಕೆ. ಕೆ. ಪೈಗಳಿಂದ ಧ್ವಜಾರೋಹಣ ನೆರವೇರಿ ಅಧಮಾರು ಶ್ರೀಗಳವರ ಕೃಪೆಯಿಂದ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಅನಂತರ ಮಕ್ಕಳ ಸ್ಪರ್ಧೆ ನಡೆಯಿತು. ಮುಂಚಿನ ದಿನ 'ನೆಹರೂರವರ ರಾಜಕೀಯ ವೈರಾಗ್ಯಕ್ಕೆ ಪರಿಹಾರವೇನು?" ಎಂಬುದರ ಕುರಿತು ಭಾಷಣ ಸ್ಪರ್ಧೆ ನಡೆದಿತ್ತು. ತಾ. ೧೪ನೇ ಬೆಳಿಗ್ಗೆ ಸಂಗೀತ ಸ್ಪರ್ಧೆಯಿತ್ತು. ಮಧ್ಯಾಹ್ನ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಅಜ್ಜರಕಾಡಿನಲ್ಲಿ ಸಾರ್ವಜನಿಕ ಸಭೆ ಜರಗಿ ಭಾಷಣ, ಮಕ್ಕಳ ಪೆರೇಡ್, ವಿವಿಧ ವಿನೋದಾವಳಿಗಳಾದುವು.

## ಕನ್ನಡಿಗರ ಅಭ್ಯುದಯ

(೬ನೇ ಪುಟದಿಂದ)

ದು ಸಿಮೆಂಟ್ ಕಾರಖಾನೆ ಇನ್ನೂ ಮೂರು ನಾಲ್ಕು ಕಡೆಗಳಲ್ಲಿ ಆಗಬೇಕಾದ ಆವಶ್ಯಕತೆ ಇದೆ.

ತಾಮ್ರದ ತಂತಿಗೆ ಬದಲಾಗಿ ವಿದ್ಯುತ್ ಶಕ್ತಿಯನ್ನು ಕೊಂಡೊಯ್ಯಲು ಅಲ್ಯೂಮಿನಿಯಮ್ ಉಪಯೋಗಿಸಬಹುದು. ಅದರ ಉತ್ಪಾದನೆಯ ಕಡೆಗೆ ನಾವು ಗಮನ ಕೊಡಬೇಕಾಗಿದೆ.

ಮ್ಯಾಂಗನೀಸ್, ಬಾಕ್ಸಾಯಿಟ್, ಸಲ್ಫರ್ ಇವುಗಳ ಸಂಗ್ರಹ ನಮ್ಮಲ್ಲಿ ಹೇರಳವಾಗಿದೆ. ಇಂಡಿಯಾ ದೇಶದಲ್ಲಿ ಬೆಳೆಯುತ್ತಿರುವ ಒಟ್ಟು ಬಿದಿರಿನಲ್ಲಿ ಅರ್ಧದಷ್ಟು ನಮ್ಮ ಕಾರವಾರ ಜಿಲ್ಲೆಯೊಂದರಲ್ಲಿಯೇ ಬೆಳೆಯುತ್ತಿದೆ.

ಸಣ್ಣ ಕೈಗಾರಿಕೆಗಳ ದೃಷ್ಟಿಯಿಂದ ನೋಡಿದರೆ, ಇಂಡಿಯಾ ದೇಶದ ಒಂದೆರಡು ರಾಜ್ಯಗಳನ್ನು ಬಿಟ್ಟರೆ ನಮ್ಮಲ್ಲಿ ಇರುವಷ್ಟು ಕೈಮಗ್ಗಗಳು ಬೇರೆ ಕಡೆಗಳಲ್ಲಿ ಇಲ್ಲ ನಮ್ಮ ನೇಕಾರರಿಗೆ ಹಾಗೂ ನೂಲುವವರಿಗೆ ಹೆಚ್ಚು ಅನುಕೂಲತೆಗಳನ್ನು ನಾವು ಒದಗಿಸಬೇಕಾಗಿದೆ. ಖಾದಿ ಉತ್ಪಾದನೆಗೆ ನಮ್ಮಲ್ಲಿ ಅನುಕೂಲತೆಗಳೂ ಹೆಚ್ಚು ಅವಕಾಶಗಳೂ ಹೆಚ್ಚು. ನಮ್ಮಲ್ಲಿ ಉತ್ಪತ್ತಿಯಾಗುವ ವಿದ್ಯುತ್ತನ್ನು ಉಪಯೋಗಿಸಿಕೊಂಡು ನಾವು ಗೃಹಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕಾಗಿದೆ.

ಇವೆಲ್ಲ ಉದ್ಯಮಗಳನ್ನು ಬೆಳಸಿಕೊಂಡು ಬಂದರೆ ನಮ್ಮ ಜನರ ಜೀವನಮಟ್ಟ ಉತ್ತಮಗೊಂಡು ದೇಶದಲ್ಲಿ ಶಾಂತಿ ತುಷ್ಟಿಗಳು ನೆಲೆಗೊಳ್ಳುತ್ತವೆ.

ನಮ್ಮ ಕಾರ್ಯಗಳೂ, ಯೋಜನೆಗಳೂ ಫಲಕಾರಿಯಾಗಬೇಕಾದರೆ ಕೇಂದ್ರದ ಸಹಾಯ ಬೇಕೇ ಬೇಕು. ಬರೀ ಕನಸುಗಳಿಂದ ನಾವು ಕಲ್ಯಾಣ ರಾಜ್ಯವನ್ನು ನಿರ್ಮಿಸಲಿಕ್ಕಾಗುವುದಿಲ್ಲ. ನಮ್ಮ ಯೋಜನೆಗಳು ಸಫಲಗೊಳ್ಳುವ ಮೂಲಕ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಲಪಡುತ್ತದೆ ಆದರೀಂದ ಮೈಸೂರು ಎದುರಿಸುತ್ತಿರುವ ಕೊರತೆಯ ಮುಂಗಡಪತ್ರ ಪರಿಸ್ಥಿತಿಯನ್ನು ಹಲವು ವರ್ಷಗಳ ನಂತರ ನಿವಾರಿಸಬಹುದು.

ಈಗ ಐದು ಪ್ರದೇಶ ಸೇರಿ ಒಂದು ರಾಜ್ಯವಾಗಿರುವುದರಿಂದ ಹಲವು ವಿಶಿಷ್ಟ ತೊಂದರೆಗಳು ಸ್ವಾಭಾವಿಕವಾಗಿಯೇ ತಲೆದೋರಿವೆ. ಅವುಗಳನ್ನು ನಾವು ತಾಳ್ಮೆ ಹಾಗೂ ದೂರದೃಷ್ಟಿಯಿಂದ ಬಿಡಿಸಬೇಕಾಗಿದೆ.

ಕೆಳದರ್ಜೆಯ ನೌಕರರ ಸಂಬಳ ಪ್ರಮಾಣಗಳಲ್ಲಿ ಏರುಪೇರುಗಳಿವೆ. ಅವರ ಹಿತದೃಷ್ಟಿಯಿಂದಲೂ ಆ ಸಂಬಳ ಪ್ರಮಾಣಗಳಲ್ಲಿ ಒಂದು ಯೋಗ್ಯ ಕ್ರಮಬದ್ಧತೆ ಉಂಟಾಗಬೇಕಾಗಿದೆ.

ಈ ನಾಡಿನ ಹಲವು ಪ್ರದೇಶಗಳು ವಿಶೇಷವಾಗಿ ಹಿಂದುಳಿದಿವೆ. ಕೊಡಗು, ಮಂಗಳೂರುಗಳಂಥ ಇನ್ನೂ ಹಲವು ಪ್ರದೇಶಗಳು ವಿಶೇಷವಾಗಿ ಮುಂದುವರಿದಿವೆ ಮುಂದುವರಿದ ಪ್ರದೇಶಗಳ ಅಭಿವೃದ್ಧಿಗೆ ಅಡ್ಡಿ ಬಾರದೆ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಗೆ ತರುವ ಜವಾಬ್ದಾರಿ ಇಂದು ನಮ್ಮ ಮೇಲೆ ಇದೆ. ಈ ನಾಡಿನ ಯಾವ ಭಾಗವನ್ನೂ ಉಪೇಕ್ಷಿಸುವದಿಲ್ಲವೆಂದು ಭರವಸೆ ಕೊಡುತ್ತೇನೆ.

ನಮಗೆ ಇಂದು ಮುಖ್ಯವಾಗಿ ಬೇಕಾದುದು ನಮ್ಮ ಜನತೆಯ ಮನಸ್ಸಿನಲ್ಲಿ ತಾವು ಒಂದು ಎನ್ನುವ ಮಾನಸಿಕ ಏಕೀಕರಣ. ಅಂಥ ಭಾವನೆಯೇ ಜನತೆಯನ್ನು ಒಂದುಗೂಡಿಸುವ ಸೂತ್ರವೆಂದು ನಮ್ಮ ಜನನಾಯಕರಾದ ಶ್ರೀ ಜವಾಹರಲಾಲ ನೆಹರೂರವರು ಹೇಳುತ್ತಾರೆ.

ಒಂದು ರೀತಿಯಲ್ಲಿ ಆ ಮಾನಸಿಕ ಏಕೀಕರಣ ನಮ್ಮ ಜನತೆಯಲ್ಲಿ ಬೆಳೆದುಕೊಂಡು ಬಂದಿದೆ. ಕಾಂಗ್ರೆಸ್ ಸಂಸ್ಥೆಯೂ, ಕರ್ನಾಟಕ ಏಕೀಕರಣ ಸಂಘವೂ ಕನ್ನಡ ಸಾಹಿತ್ಯ ಪರಿಷತ್ತೂ ಆ ಭಾವನೆ ಬೆಳೆಯುವುದಕ್ಕೆ ಪ್ರೇರಕಶಕ್ತಿಯಾಗಿನಿಂತಿವೆ, ಅದನ್ನು ಈಗ ಹಾಗೂ ಇನ್ನು ಮುಂದೆ ಇದಕ್ಕೂ ಹೆಚ್ಚು ಬೆಳಸಿಕೊಂಡು ಹೋಗಲು ನಮಗೆ ಕಷ್ಟವಾಗಲಾರದು.

ಮುದ್ದೈವದಿಂದ ಒಂದು ಸತ್ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಭಾಗ್ಯ ನಮಗೆ ಲಭಿಸಿದೆ. ಮೈಸೂರಿನ ರಾಜ್ಯಭಾರ ನಿರ್ವಹಿಸಿದ್ದ ಹಿರಿಯರು ಒಳ್ಳೆಯ ಆಡಳಿತದ ಬುನಾದಿಯನ್ನು ಇಲ್ಲಿ ನಿರ್ಮಿಸಿ ಹೋಗಿದ್ದಾರೆ. ಇದರೊಂದಿಗೆ ಹೇಳುವ ಇನ್ನೊಂದು ಮಾತೆಂದರೆ ಕರ್ನಾಟಕವು ಗಾಂಧಿ ಪ್ರಾಂತವೆಂದು ಹೆಸರಾಗಿದೆ. ಸಾಧನೆ ಹಾಗೂ ಗುರಿ ಪವಿತ್ರವಾಗಿದ್ದರೆ ನಮ್ಮ ಸಿದ್ಧಿಯೂ ಅಷ್ಟೇ ಪವಿತ್ರವಾಗುತ್ತದೆ.

ಈಗ ರಚಿತವಾಗಿರು ಮಂತ್ರಿ ಮಂಡಲಿಯನ್ನು ಸಾಕಷ್ಟು ಆಲೋಚನೆ ಮಾಡಿಯೇ ರಚಿಸಿದುದಾಗಿದೆ. ಈಗಿನ ಸಂದರ್ಭದಲ್ಲಿ ಪ್ರಯುಕ್ತನೆನಿಸಿದ ಪ್ರಾದೇಶಿಕ ಹಾಗೂ ಇನ್ನಿತರ ಎಲ್ಲ ವಿಷಯಗಳನ್ನೂ ಪರಿಶೀಲಿಸಿದನಂತರವೇ ಈ ಮಂತ್ರಿಮಂಡಲಿ ನಿರ್ಮಾಣಗೊಂಡಿದೆ.

ಜನರು, ಮಂತ್ರಿಗಳು ಯಾರಿಂಬುದರ ಕಡೆಗೆ ಹೆಚ್ಚು ಗಮನ ಕೊಡದೆ, ಸರ್ಕಾರ ಏನುಮಾಡುತ್ತಿದೆ, ಏನುಮಾಡಬೇಕು ಎನ್ನುವ ಕಡೆಗೆ ಹೆಚ್ಚು ಗಮನಕೊಡಬೇಕು. ಈ ದೃಷ್ಟಿಯಿಂದ ನಾನು ಸಕಲರ ಸಹಕಾರವನ್ನೂ ಕೋರುತ್ತೇನೆ.

ಒಂದು ರಾಜ್ಯ ಏಳ್ಗೆ ಹೊಂದಬೇಕಾದರೆ ಜನತೆಯಲ್ಲಿ ತ್ಯಾಗ ಬುದ್ಧಿ ಹಾಗೂ ಕಷ್ಟಸಹಿಷ್ಣುತೆ ಬೆಳೆದು ಬರಬೇಕು ಕನ್ನಡ ಜನರ ಚರಿತ್ರೆ ಹಾಗೂ ಸಂಸ್ಕೃತಿಗಳು ದೊಡ್ಡವು.

ಕೊನೆಯದಾಗಿ ಹೇಳುವ ಮಾತೊಂದಿದೆ: ಬಹುಜನ ಕನ್ನಡ ಮಾತನಾಡತಕ್ಕ ಈ ರಾಜ್ಯದಲ್ಲಿ ಮರಾಠಿ, ತೆಲುಗು, ತಮಿಳು ಹಾಗೂ ಮಲೆಯಾಳೀ ಮಾತನಾಡತಕ್ಕ ಜನರೂ ಇದ್ದಾರೆ.

ಕಾಂಗ್ರೆಸ್ ಅನುಸರಿಸತಕ್ಕ ಮಾರ್ಗದಲ್ಲಿ ಅವರಿಗೆ ಕೇಂದ್ರ ಸರಕಾರ ಕೊಟ್ಟರತಕ್ಕ ಎಲ್ಲ ಆಶ್ವಾಸನಗಳನ್ನೂ, ಘಟನೆ ನೀಡಿರುವ ಎಲ್ಲ ಭರವಸೆಗಳನ್ನೂ ಸಂಪೂರ್ಣ ನಡೆಸಿಕೊಡುತ್ತೇವೆ. ಅವರೂ ನಮ್ಮವರೇ ಎನ್ನುವ ದೃಷ್ಟಿಗೆ ಯತ್‌ಕಿಂಚಿತ್ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತೇವೆಂದು ನಾನು ಹೇಳಬಯಸುತ್ತೇನೆ.

ನಮ್ಮ ಕಲೆ, ಸಾಹಿತ್ಯ, ಸಂಸ್ಕೃತಿಗಳು ಪ್ರಪಂಚದಲ್ಲಿ ಶ್ರೇಷ್ಠವೆನಿಸುವ ಸ್ಥಾನಗಳಿಸಿವೆ. ಅವುಗಳನ್ನು ನಾವು ಇನ್ನೂ ಉಜ್ವಲಗೊಳಿಸಬೇಕು. ಜತೆಗೆ ಆವುಗಳ ರಸಾಸ್ವಾದನೆ ಮಾಡುವಂತೆ ನಾವು ನಮ್ಮ ಜನತೆಯ ಜೀವನದ ಸ್ಥಿತಿಯನ್ನು ಉತ್ತಮಪಡಿಸಬೇಕು. ನಾವೆಲ್ಲರೂ ಒಂದುಗೂಡಿ ನಡೆದು ನಮ್ಮ ಅಭಿಮಾನದ ಎತ್ತರಕ್ಕೆ ಈ ಹೊಸ ಮೈಸೂರನ್ನು, ಕರ್ನಾಟಕವನ್ನು, ಎತ್ತಿ ನಿಲ್ಲಿಸೋಣ ಹೊಸ ರಾಜ್ಯ ನಿರ್ಮಾಣವಾದ ಈ ದಿನ ಒಂದೇ ಧ್ಯೇಯ ಸಾಧನೆಗಾಗಿ ದುಡಿಯಲು ನಾವೆಲ್ಲರೂ ನಿರ್ಧರಿಸೋಣ!

(ನವಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಬಾನುಲಿ ಭಾಷಣದಿಂದ)

---

**ಗಂಗೊಳ್ಳಿ**— ಸ್ಥಳೀಯ ಎಸ್. ವಿ. ಹೈಸ್ಕೂಲಿನ ವಿದ್ಯಾರ್ಥಿಗಳ ಹಸ್ತಪತ್ರಿಕೆ 'ಪುಷ್ಪಾಂಜಲಿ'ಯ ಉದ್ಘಾಟನೆಯನ್ನು ತಾ. ೪ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಮ್. ಕುಡುಬಿಯವರು ನೆರವೇರಿಸಿದರು.

**ಕಾರ್ಕಳ**— ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಇಂಗ್ಲಿಷ್ ಪ್ರೊಫೆಸರ್ ಶ್ರೀ ಎಸ್. ವಿ. ರಂಗಣ್ಣನವರು ತಾ. ೪ರಲ್ಲಿ ಬೋರ್ಡ್ ಹೈಸ್ಕೂಲಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಕನ್ನಡಿಗರ ಕರ್ತವ್ಯದ ಕುರಿತು ಭಾಷಣವಿತ್ತರು. ಶ್ರೀ ಎಸ್. ಆರ್. ಆಚಾರ್ಯರು ಧನ್ಯವಾದಗಳನ್ನಿತ್ತರು.

## ಲೋಕದ ಶಾಂತಿತಾರೆ

(೫ನೇ ಪುಟದಿಂದ)

ನೆಹರೂ ನಮ್ಮ ಪಾಲಿಗೊಂದು ವರ. ಅವರನ್ನು ಅರ್ಥಮಾಡಿಕೊಳ್ಳದ ಕೆಲವು ಮಂದಿ ಅವರ ಪ್ರಸ್ತುತ ನೀತಿಯನ್ನು ಯಥಾರ್ಥ ವಿಮರ್ಶೆಯೊಂದಿಗೆ ತುಲನೆ ಮಾಡದೆ ಟೀಕಿಸುವುದಿದೆ. ಆದರೆ ದಿನ[illegible] ಳೆದಂತೆ ನೆಹರೂ ನಿಲುವು ಸತ್ಯವೆನಿ[illegible] ದಾಗ ಅದನ್ನು ಒಪ್ಪಿಕೊಂಡದೂ ಇದೆ.

ಇಂದು ಅಮೇರಿಕದಂಥ ಸೈನ್ಯ[illegible] ಶಕ್ತಿ ರಾಷ್ಟ್ರವಾಗಲೀ, ರಷ್ಯದಂತಹ [illegible] ವಾಧಿಕಾರಿ ಕಠೋರ ನಿಯಮದ ಅಟ[illegible] ಶಕ್ತಿಯ ರಾಷ್ಟ್ರವಾಗಲೀ ಲೋಕ ಶಾಂ[illegible] ತಿಗೆ ಶಾಶ್ವತ ರೂಪಕೊಡಲಾರದು. [illegible] ರ್ಭಯ, ನಿಷ್ಕಪಟ ನೀತಿಯ, ಪರಂ[illegible] ರಾಗತ ಸಂಸ್ಕೃತಿಯ ಅನುಭವ ಪಡೆ[illegible] ರುವ ಭಾರತವೇ ಶಾಂತಿ ಆಕಾಶದ ಶೀ[illegible] ಲ ಚಂದ್ರಮನಾಗಿ ರಾರಾಜಿಸಿ ನಿತ್ಯ ತ[illegible] ಪನ್ನು ಕೊಡಬಲ್ಲುದು. ಅದಕ್ಕಾಗಿಯ[illegible] ದರೂ ಇಂದು ಲೋಕ ನೆಹರೂ ಚಿರ ಜೀವಿಯಾಗಲೆಂದು ಆಶಿಸುತ್ತದೆ.

ಭಾರತದ ೩೬ ಕೋಟಿ ಜನರಂತ[illegible] ನೆಹರೂ ನಮ್ಮ ನಾಯಕನಾಗಿಯೇ ಚಿ[illegible] ಕಾಲ ಉಳಿದು ಈಗಿನಂತೆ ಮುಂದೆಯ[illegible] ಲೋಕದ ಅತಿಮಾನವ ನೆನಿಸಲಿ ಎಂದ[illegible] ಹೃತ್ಪೂರ್ವಕ ಹಾರೈಸುತ್ತದೆ.

—ಶ್ರೀ ಬಿ. ಕೃಷ್ಣ ಭಟ್, ಬಿ. ಎ


ಕೈ ಗಡಿಯಾರ

ಕೇವಲ 6 ರೂ. ಮಾತ್ರ



೫ ವರ್ಷ ಖಾತರಿಯ ೧೫ ಜೂವೆಲ್ಸ ಚೈನ್ ಸಿಸ್ಟಮ್ ಕೈಗಡಿಯಾರ ಕೇವಲ ೬ ರೂ. ಮಾತ್ರ. ಪೋಸ್ಟೇಜ್ ೧-೪-೦ ಪ್ರತ್ಯೇಕ.

ಸಾರ್ವಜನಿಕರು ಪ್ರಯೋಜನ ಪಡೆದಿದ್ದಾರೆ ಒಪ್ಪಿತವಾಗದಿದ್ದಲ್ಲಿ ಬೆಲೆಯನ್ನು ವಾಪಸ್ಸು ಕೊಡಲಾಗುತ್ತೆ. ರೋಮನ್ ಫೌಂಟನ್ ಪೆನ್ನುಗಳನ್ನು ಜನಪ್ರಿಯಗೊಳಿಸಲೋಸುಗ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

ROMAN TRADING CO.(N.V)

Post Box 1817—DELHI.



ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

1956 ನಮ್ಮ ರಜತಮಹೋತ್ಸವದ ವರ್ಷ

ಸ್ಥಾಪನೆ: 1931

ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು

ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ..ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

# ಮಂಗಳೂರು

**ವಯಸ್ಕರ ಶಿಕ್ಷಣ ಕುರಿತು ಭಾಷಣ**— ಕಾರ್ನಾಡ್ ಸದಾಶಿವ ರಾವ್ ಜಿಲ್ಲಾ ಸೆಂಟ್ರಲ್ ಲೈಬ್ರರಿಯ ಆಶ್ರಯದಲ್ಲಿ ಬಾವಟೆ ಗುಡ್ಡೆಯ ವಿಜಯ ಬೇಂಕ್ ಕಟ್ಟಡದಲ್ಲಿರುವ ವಾಚನಾಲಯದಲ್ಲಿ ಫಿಲಡೆಲ್ಫಿಯಾದ ಅಂತರರಾಷ್ಟ್ರೀಯ ಸಂಸ್ಥೆಯ ಸಮಾಜ ಸೇವಾ ಶಾಖೆಯ ಡೈರೆಕ್ಟರ್ ಮಿಸ್. ಎಲ್ಫ್ರೀಡ್ ಫ್ರೀಸ್‌ರವರು ತಾ. 5ರಲ್ಲು "ವಯಸ್ಕರ ಶಿಕ್ಷಣ" ಎಂಬ ವಿಷಯದಲ್ಲಿ ಭಾಷಣವಿತ್ತರು. ಮಂಗಳೂರು ಸರಕಾರಿ ತರಬೇತಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀಯು. ಕಣ್ಣಪ್ಪನವರು ಸ್ವಾಗತವಾತುಗಳನ್ನಾಡಿದರು. ಸ್ವಾವಲಂಬನೆ ಸಾಧನೆಯೇ ವಯಸ್ಕರ ಶಿಕ್ಷಣದ ಗುರಿ ಎಂದು ಮಿಸ್ ಫ್ರೀಸರು ತಮ್ಮ ಭಾಷಣದಲ್ಲಿ ಹೇಳಿ ಮಹಿಳೆಯರು ಕೂಡಾ ವಯಸ್ಕರ ಶಿಕ್ಷಣದಂತಹ ಸಾಮಾಜಿಕ ಕೆಲಸಗಳಲ್ಲಿ ಹೆಚ್ಚೆಚ್ಚು ಭಾಗವಹಿಸಬೇಕೆಂದರು. ಲೈಬ್ರೇರಿಯನ್ ಶ್ರೀ ಕೆ. ಗೋಪಾಲಕೃಷ್ಣ ಶ್ಯಾನುಭಾಗರು ಧನ್ಯವಾದಗಳನ್ನಿತ್ತರು.

**ಅಭಿನಂದನಾ ಸಭೆ**— ಮಂಗಳೂರು ರೊಜಾರಿಯೋ ಹೈಸ್ಕೂಲಿನ ಆಡಳಿತಾಧಿಕಾರಿ ಹಾಗೂ ಪ್ರಧಾನ ಅಧ್ಯಾಪಕರಾದ ವೆರಿ ರೆ| ಮೋನ್ಸಿಞೊರ್ ಎಫ್ ಜೆ. ಎಮ್. ಪಿಂಟೋರವರಿಗೆ ಜಗದ್ಗುರು ಪೋಪರಿಂದ ಪ್ರಿವಿ ಚೆಂಬರ್ಲೆನ್ ಬಿರುದು ದೊರೆತುದರ ಸಲುವಾಗಿ ತಾ. 5 ರಲ್ಲಿ ಬೆಳಿಗ್ಗೆ ಶಾಲಾ ವಿದ್ಯಾರ್ಥಿಗಳೂ ಅಪರಾಹ್ನ ಶಾಲಾ ಅಧ್ಯಾಪಕರ ವೃಂದದವರೂ ಸತ್ಕಾರ ಕೂಟಗಳನ್ನೇರ್ಪಡಿಸಿ ಅಭಿನಂದಿಸಿದರು. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಶ್ರೀಗಳಾದ ವೆಂಕಪ್ಪಯ್ಯ ಮತ್ತು ರಾಮ ಪೊಳಲಿಯಾರರು ಮಾನಪತ್ರಗಳನ್ನೋದಿ ಕಾಣಿಕೆಯಿತ್ತು ಗೌರವಿಸಿದರು. ಸಹಾಯಕ ಮುಖ್ಯೋಪಾಧ್ಯಾಯ ರೆ| ಫಾ| ಸಂತಾನ್ಹೋರವರು ಧನ್ಯವಾದಗಳನ್ನಿತ್ತರು.

**ರಾಷ್ಟ್ರೀಯ ಸ್ಕೌಟ್ ಮತ್ತು ಗೈಡ್ ಸಪ್ತಾಹದ**— ಅಂಗವಾಗಿ ತಾ. 7 ರಲ್ಲು ಸಂಜೆ ಸೈಂಟ್ ಏಗ್ನೆಸ್ ಬಾಲಿಕಾ ಪಾಠಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ಸ್‌ಗಳ ಸಾಮೂಹಿಕ ಚಟುವಟಿಕೆಗಳ ಸಾಮೂಹಿಕ ದಿನವನ್ನು ಆಚರಿಸಲಾಯಿತು. ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಮಿ| ಇ. ಎಲ್. ಸ್ಟ್ರೇಸಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಡಿ. ಫಿಲಿಪ್ಸ್‌ರವರು ಸಪ್ತಾಹದ ವರದಿಯನ್ನೋದಿದರು. ಬಳಿಕ ಶಿಬಿರಾಗ್ನಿ ಉರಿಸಿ ಮನರಂಜನ ಕಾರ್ಯಕ್ರಮಗಳಾದುವು. ಶ್ರೀಮತಿ ವಿಮಲಾ ಪೊಳ್ಯರು ಧನ್ಯವಾದಗಳನ್ನಿತ್ತರು.

**ನವಂಬರ ಕ್ರಾಂತಿ ದಿನಾಚರಣೆ**— ಸೋವಿಯಟ್ ರಷ್ಯದ ನವಂಬರ ಕ್ರಾಂತಿದಿನವನ್ನು ಮಂಗಳೂರು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಶ್ರೀ ಸಿಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಆಚರಿಸಲಾಯಿತು. ಶ್ರೀ ಎಮ್. ಎಚ್. ಕೃಷ್ಣಪ್ಪನವರು ನವಂಬರ ಕ್ರಾಂತಿ ದಿನದ ಕುರಿತು ಭಾಷಣವಿತ್ತರು.

**ಭಾಷಣ**— ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ತಾ. 4 ರಂದಿನ ಸಭೆಯಲ್ಲಿ ಶ್ರೀ ಕಯ್ಯಾರ ಕಿಂಞಣ್ಣ ರೈಗಳು ಭಾಷಣವೀಯುತ್ತಾ, ಕಾಸರಗೋಡು ಕನ್ನಡಿಗರಿಗಾದ ಅನ್ಯಾಯವನ್ನು ಪ್ರತಿಭಟಿಸಲು ಜಿಲ್ಲೆಯ ಪ್ರಮುಖರು ಮುಂದಾಗದಿದ್ದುದಕ್ಕೆ ಸಂತಾಪವನ್ನು ವ್ಯಕ್ತಪಡಿಸಿ, ಇನ್ನು ಮುಂದಾದರೂ ನ್ಯಾಯವನ್ನು ಸಾಧಿಸತಕ್ಕ ಪ್ರತಿನಿಧಿಗಳು ಮುಂದೆ ಬಂದಲ್ಲಿ ಕಾಸರಗೋಡನ್ನು ಉಳಿಸಿಕೊಳ್ಳಲು ಸಾಧ್ಯವಿದೆ ಎಂದರು.

**'ರೈಫಲ್ ಕ್ಲಬ್'ನ ರಚನೆ**— ತಾ. 7ರಲ್ಲಿ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ತಾ. 29-6-56ರ ಎಮ್. ಎಸ್. ನಂಬ್ರ 1372 ಗೃಹ ಖಾತೆಯ ಸರಕಾರಿ ಆಜ್ಞೆಯ ಮೇರೆಗೆ ಸಾರ್ವಜನಿಕರಿಗೆ ಕೋವಿ ಹೊಡೆಯುವುದರಲ್ಲಿ ತರಬೇತಿ ಕೊಡುವ ಬಗ್ಗೆ ಇದೇ ತಾ. 10ರಂದ ಮಂಗಳೂರಲ್ಲಿ ರೈಫಲ್ ಕ್ಲಬ್ಬನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಕ್ಲಬ್ಬಿನ ಕಾರ್ಯಕಾರೀ ಮಂಡಳಿಗೆ ಶ್ರೀ ಎಚ್. ನರಸಿಂಹ (ಅಧ್ಯಕ್ಷ), ಶ್ರೀ ಇ. ಎಲ್. ಸ್ಟೇಸಿ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ (ಉಪಾಧ್ಯಕ್ಷ), ಶ್ರೀ ಬಿ. ಎಮ್. ಬೀರಾನ್ಮೊಯಿದಿನ್, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರ ಪರ್ಸನಲ್ ಆಸಿಸ್ಟಾಂಟ್ ಮತ್ತು ಶ್ರೀ ಎ. ಎಚ್. ಸಾರ್ಜಂಟ್ ಮೇಜರ್ ಮಂಗಳೂರು (ಜತೆಕಾರ್ಯದರ್ಶಿಗಳು ಮತ್ತು ಕೋಶಾಧಿಕಾರಿ) ಇವರನ್ನು ಆರಿಸಲಾಯಿತು. ತಾತ್ಕಾಲಿಕವಾಗಿ ಉರ್ವದಲ್ಲಿರುವ ಪೋಲೀಸ್ ಶೂಟಿಂಗ್ ರೇಂಜನ್ನು ರೈಫಲ್ ಶೂಟಿಂಗ್ ರೇಂಜಾಗಿ ಉಪಯೋಗಿಸಲು ನಿರ್ಧರಿಸಲಾಯಿತು. ಪ್ರಥಮ ತರಬೇತಿ ತಂಡದಲ್ಲಿ ಮಂಗಳೂರಿನ ಕೆಲವು ಪ್ರಮುಖ ನಾಗರಿಕರೂ, ಅಧಿಕಾರಿಗಳೂ ಇರುವರು.

**ನಿಧನ**— ಶ್ರೀ ಪಿ. ಆರ್. ತಿಮ್ಮಪ್ಪ ಪೂಂಜ, ಕಾಫಿ ಪ್ಲೇಂಟರ್, ಗ್ಲೆನ್‌ಮೋರ್ ಮತ್ತು ರಿಪ್ಪನ್ ವ್ಯಾಲೀ ಎಸ್ಟೇಟ್, ಮಡಿಕೇರಿ ಇವರು ತಾ. 2ರಲ್ಲು ಮಡಿಕೇರಿಯಲ್ಲಿ ನಿಧನ ಹೊಂದಿದರು. ಶ್ರೀಯುತರು ನಿವೃತ್ತ ಜಿಲ್ಲಾ ಜಡ್ಜರಾದ ದಿವಂಗತ ರಾ| ಬ| ಆತ್ಮಾವರ ರಾಮಯ್ಯ ಪೂಂಜರ ಪುತ್ರರಿದ್ದು, ಮಡಿಕೇರಿಯಲ್ಲಿ ಪ್ಲಾಂಟರರಾಗಿ ನೆಲೆಸಿ ಕೊಡಗು ನಾಡಿನಲ್ಲಿ ತುಂಬಾ ಜನಪ್ರಿಯತೆಗಳಿಸಿದ್ದರು. ಮೃತರ ಕಳೇಬರದ ಸ್ಮಶಾನ ಯಾತ್ರೆಯಲ್ಲಿ ಅಧಿಕಾರಿಗಳೂ ಪ್ರಮುಖ ಸಾರ್ವಜನಿಕರೂ ಭಾಗವಹಿಸಿದ್ದರು. ದಿವಂಗತರು ಶ್ರೀ ಪಿ. ಆರ್. ರಂಗನಾಥ ಪೂಂಜರ ಅಣ್ಣ. ಇವರಿಗೆ ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳಿದ್ದಾರೆ. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

**ಈಜಿಪ್ತ ದಿನಾಚರಣೆಯು**— ಸ್ಥಳೀಯ ಹಿಂದೀ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ. 9ರಲ್ಲಿ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ. ಮೋನಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ. ಎಮ್. ಎಸ್. ಶಾಸ್ತ್ರಿ, ಶ್ರೀಗಳಾದ ಎ. ಕೆ. ನಾರಾಯಣ ಮತ್ತು ಸಿಂಪ್ಸನ್ ಸೋನ್ಸರು ಸಂದರ್ಭೋಚಿತ ಮಾತುಗಳನ್ನಾಡಿದರು.

**ಪ್ರಶಸ್ತಿ ಪತ್ರ ಅರ್ಪಣೆ**— ದ. ಕ. ಜಿಲ್ಲಾ ಕಾಂಗ್ರೇಸು ಸಮಿತಿಯ ಕಚೇರಿಯಲ್ಲಿ ನವ ಮೈಸೂರು ರಾಜ್ಯೋದಯ ದಿನದಂದು ಮಂಗಳೂರು ತಾಲೂಕು ಕಚೇರಿಯಲ್ಲಿ ಜರಗಿದ ದ. ಕ. ಜಿಲ್ಲಾ ನಾಟ್ಯಕಲೋತ್ಸವ ಸಮಿತಿಯ ಕಡೆಯಿಂದ ಮಂಗಳೂರಿನ ಏಕ್ಯ ಕರ್ನಾಟಕ ನಾಟಕ ಸಭೆಯವರು ಅಭಿನಯಿಸಿದ 'ಗಣಪತಿ ರಾವ್ ಲಿಮಿಟೆಡ್' ಎಂಬ ನಾಟಕಕ್ಕೆ ದ. ಕ. ಜಿಲ್ಲಾ ಕಲೆಕ್ಟರವರು ನೀಡಿದ ಪ್ರಶಸ್ತಿ ಪತ್ರವನ್ನು ಅರ್ಪಿಸುವ ಸಮಾರಂಭವು ತಾ. 10ರಂದು ಡಾ. ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀಗಳಾದ ಎಚ್. ಕೆ. ತಿಂಗಳಾಯರು, ಕೆ. ಕೆ. ಸೆಟ್ಟಿ ಎಂ. ಎಲ್. ಸಿ. ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು.

**ಮೈಸೂರು ಸರಕಾರದ ಎನಿಮಲ್ ಹಸ್ಬೆಂಡ್ರಿ ಇಲಾಖೆಯ ಹೊಸ ಡೈರೆಕ್ಟರ್ ಡಾ| ಕೆ. ಎಸ್. ಸೆಟ್ಟರು.**

ಡಾ| ಕೆ. ಶ್ಯಾಮರಾಯ ಸೆಟ್ಟರು 1932ರಲ್ಲಿ ಮದ್ರಾಸಿನ ವೆಟರ್ನರಿ ಕಾಲೇಜಿನಲ್ಲಿ ಸ್ನಾತಕ ಪದವಿಯನ್ನು ಪಡೆದರು. ನಂತರ ನೈಜಾಮ ಸರಕಾರದಲ್ಲಿ ನೌಕರಿಗೆ ಸೇರಿ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದು 1945ರಲ್ಲಿ ಇಂಗ್ಲಾಂಡಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸರಕಾರದಿಂದಲೇ ಕಳುಹಲ್ಪಟ್ಟು ಎಡಿನ್‌ಬರ್ಗ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಪಿ. ಎಚ್. ಡಿ. ಡಿಗ್ರಿ ಪಡೆದರು. 1949ರಲ್ಲಿ ಹೈದರಾಬಾದಿಗೆ ಹಿಂತಿರುಗಿ 1952ರ ತನಕ ಡೆಪ್ಯುಟಿ ಡೈರೆಕ್ಟರರಾಗಿ ಕೆಲಸಮಾಡಿದರು. ನಂತರ ಅವರನ್ನು ಡೈರೆಕ್ಟರರಾಗಿ ನೇಮಿಸಲಾಯಿತು. ಈ ಹುದ್ದೆಯ ನಾಲ್ಕು ವರ್ಷಗಳ ಅವಧಿಯಲ್ಲಿ ನೈಜಾಮ್ ರಾಜ್ಯದ ವೆಟರ್ನರಿ ಇಲಾಖೆಯನ್ನು ಮೇಲ್ಪಟ್ಟಕ್ಕೇರಿಸಿದರು. ಶ್ರೀ ಸೆಟ್ಟರ ಕಾರ್ಯವನ್ನು ಮೆಚ್ಚಿದ ಸರಕಾರವು ಫಿಶರೀಸ್ ಇಲಾಖೆಯನ್ನೂ ಅವರ ಮೇಲ್ವಿಚಾರಕ್ಕೆ ಬಿಟ್ಟು ಕೊಟ್ಟಿತು. ಈಗ ಅವರು ನವಮೈಸೂರಿನ ಎನಿಮಲ್ ಹಸ್ಬೆಂಡ್ರಿ ಡೈರೆಕ್ಟರರಾಗಿ ನೇಮಕಹೊಂದಿದರು. ಹೈದರಾಬಾದಿಗೆ ನಷ್ಟವೆನಿಸಿದರೂ, ಮೈಸೂರು ಸರಕಾರಕ್ಕೆ ಲಾಭದಾಯಕವೇ ಆಗಿರುವುದು.

---

## ದಿ ಕೆಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವಾ

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು, ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ತ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿ ನಗಗಳನ್ನು ಇದೇ ತಿಂಗಳ ತಾ. 21ರ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ತಾ 24ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ಅನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾದೀತು.

| ಸಾಲದ ನಂಬ್ರ | ಹೆಸರು ಮತ್ತು ವಿಳಾಸ | ಸಾಲದ ಮೊಬಲಗು | | |
|---|---|---|---|---|
| 30/301 | ಜಾನು ಪೂಜಾರಿ N/o ಶಾಂತಪ್ಪ ಪೂಜಾರಿ ಕಲತ್ರೂರು ಗ್ರಾಮ, ಪಾದೂರು P. O. | 15 | 0 | 0 |
| 619 | ಬೆಂಜಮಿನ್ ಅರಾನ್ಹ S/o ಬೊನಾವೆಂಚರ್ ಅರಾನ್ಹ, ಮುಲ್ಲಹಿತ್ಲು, ಮುಂಡ್ಕೂರ್ P. O. | 100 | 0 | 0 |
| 1310 | ಎಮ್. ಎಸ್. ಅದಬಿ, ಕಂಪೋಂಡರ್, ಎಲ್. ಎಫ್. ಡಿಸ್ಪೆನ್ಸರಿ, ಶಿರ್ವಾ P. O. | 110 | 0 | 0 |
| 1532 | do | 78 | 0 | 0 |
| 31/38 | do. | 65 | 0 | 0 |
| 147 | ಫ್ರಾನ್ಸಿಸ್ ಡಿ'ಸೋಜ S/o ಮಾರ್ಸೆಲ್ ಡಿ'ಸೋಜ, ಕಲತ್ತೂರ್ ತೋಟ, ಪಾದೂರು P. O. | 130 | 0 | 0 |
| 566 | ಇತೋರಿ ಅರಾನ್ಹ S/o ಮಮಿಂಗ ಅರಾನ್ಹ, ಪಡ್ಡಿಹಿತ್ಲು, ಶಿರ್ವಾ P. O. | 75 | 0 | 0 |
| 889 | ಸುಲೇಮಾನ್ ಸಾಹೇಬ S/o ಮೈದಿನ್ ಸಾಹೇಬ, ಪಂಜಿಕಲ್ಲು, ಶಿರ್ವಾ P. O. | 8 | 0 | 0 |
| 30/1622 | ಬ್ರಿಜಿತ್ ಬರ್ಬೋಜ W/o ಅಲೆಕ್ಸ್ ಪತ್ರೋದ ಕುತ್ಯಾರ್ P. O. | 10 | 0 | 0 |

Office of the Catholic Bank, Ltd.. Shirva. Dated, 10—11—1956.

(Sd) C. Rodrigues. Ag. Agent.

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 652/56.

ಚಂದಮ್ಮ ಸೆಡ್ತಿ ಸಹಾ — ವಾದಿರು

ನರಸಿಂಹ ಸೆಟ್ಟಿ ಕೂಡಾ — ಪ್ರತಿವಾದಿರು

ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮದ ಚವನ್ನಾಡಿಯಲ್ಲಿರುವ ಬೇಳೂರು ಬೈಲುಮನೆ ರಾಮಯ್ಯ ಸೆಟ್ರ ಮಗ ನರಸಿಂಹ ಸೆಟ್ರಿಗೆ ಈ ಮೂಲ್ಕ ತಿಳಿಯಪಡಿಸುವದೇನಂದರೆ,

ನೀವು ವಗೈರೆ ಪ್ರತಿವಾದಿರಿಂದ ಬರತಕ್ಕ ಗೇಣಿ ಬಾಕಿ ವಗೈರೆ ಬರಮಾಡಿಕೊಳ್ಳಲು ವಾದಿಳು ದಾಖ್ಲು ಮಾಡಿದ ಮೇಲಿನ ದಾವೆಯು ಮೇಲ್ಕಾಣುವ ಕೋರ್ಟಿನಲ್ಲಿ ತಾ. 30.11.56 ನೇ ಬೆಳಿಗ್ಗೆ 11 ಗಂಟೆಗೆ ತನ್ಕಿಗೆ ಇಡೋಣಾಗಿಯದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

B. S. Shetty, B.A., B. L.
Vakil for Plff.
Coondapoor. 10—11—56

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

O. S. 535/56.

ರುದ್ರು ಸೆಡ್ತಿ — ವಾದಿಳು

ಸದಿಯಮ್ಮ ಸೆಡ್ತಿ ಕೂಡಾ 82 ಜನರು — ಪ್ರತಿವಾದಿರು

ಉಡ್ಪಿ ತಾಲೂಕು ಶಿರಿಯಾರ ಗ್ರಾಮದ ಕಲ್ಲ್‌ಬೆಟ್ಟಿನಲ್ಲಿರುವ ತುಂಗಮ್ಮ ಹೆಗ್ಗಡ್ತಿರ ಮಗಳು 70ನೇ ಪ್ರತಿವಾದಿಳು ಬುದ್ರಮ್ಮ ಸೆಡ್ತಿ 1, ಜಲಜಾಕ್ಷಿ ಹೆಗ್ಗಡ್ತಿರ ಮಕ್ಕಳು 71 ನೇ ಪ್ರತಿವಾದಿ ಕೃಷ್ಣಯ್ಯ ಹೆಗ್ಡೆ 1, 72ನೇ ಪ್ರತಿವಾದಿಗಳು ರತ್ನಾವತಿ ಸೆಡ್ತಿ 1 ಕೂಡಾ 3ಜನರಿಗೆ ಸ್ವತಹಾ ಮತ್ತು 70ನೇ ಪ್ರತಿವಾದಿಳು ಬುದ್ರಮ್ಮ ಸೆಡ್ತಿ ಸ್ವತಹಾ ಮತ್ತು ಅವಳ ಮೈನರ್ ಮಕ್ಕಳು 75ನೇ ಪ್ರತಿವಾದಿ ಮೈನರ್ ರವಿರಾಜ 1, 76ನೇ ಪ್ರತಿವಾದಿ ಮೈನರ್ ದಿವಾಕರ1 ಕೂಡಾ 2ಜನರ ಗಾರ್ಡಿಯನ್ನಳಾಗಿಯೂ ಮತ್ತು 72ನೇ ಪ್ರತಿವಾದಿಳು ರತ್ನಾವತಿ ಸೆಡ್ತಿ ಸ್ವತಹಾ ಮತ್ತು ಅವಳು, ಅವಳ ಮೈನರ್ ಮಕ್ಕಳು 77 ನೇ ಪ್ರತಿವಾದಿ ಮೈನರ್ ನಳಿನಿ 1, 78ನೇ ಪ್ರತಿವಾದಿಳು ಮೈನರ್ ಶಶಿಕಲಾ 1, 79ನೇ ಪ್ರತಿವಾದಿಳು ಮೈನರ್ ಜಲಜಾಕ್ಷಿ 1 ಕೂಡಾ 3 ಜನರ ಗಾರ್ಡಿಯನ್ನಳಾಗಿ ಸಹಾ ಇವರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ,

ತನಗೆ ಪಾಲು ಕೊಡಿಸಬೇಕೆಂತ ವಗೈರೆ ಕಾಣ್ಸಿ ಸದ್ರಿ ವಾದಿಳು ದಾಖ್ಲು ಮಾಡಿದ ಮೇಲಿನ ದಾವೆಯು ತಾ. 26—11—56ನೇ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿರುತ್ತಾರೆಂಬ ಸಂಗ್ತಿ ಈ ಮೂಲ್ಕ ನಿಮಗೆ ತಿಳಿಸೋಣಾಗಿಯದೆ.

B. S. Shetty, B. A., B. L.
Vakil for Plff.
Coondapoor 10—11—56.

---

**ಗೀತೆಯ ಕೈಗನ್ನಡಿ**

0 -12—0

ನವಭಾರತ ಪುಸ್ತಕ ಭಂಡಾರ,
ಉಡುಪಿ,

# ಜನಮತ

ನ್ಯಾಯುವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

## ಕಾಸರಗೋಡಿಗೆ ಸಾಪ್ತಾಹಿಕ ಅಗತ್ಯ

2 ಲಕ್ಷ ಕನ್ನಡಿಗರ ಕಳಕಳಿಯ ಕೇಳಿಕೆಯನ್ನು ಕಡೆಗಣಿಸಿ ಕೇರಳೀಯರ ಆಳಿಕೆಗೆ ಕಾಸರಗೋಡಿನಲ್ಲಿ ಭದ್ರವಾದ ಪಂಚಾಂಗವೊಂದನ್ನು ಹೇಗೂ ಹೀಗೂ ಹಾಕಿದುವಾಯಿತು. ಇನ್ನು 'ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ' ಎಂದು ಸುಮ್ಮನೆ ಸಮಯವನ್ನು ಹಾಳುಮಾಡದೆ ನಮ್ಮ ಮುಖಂಡರು ಇದ್ದಲ್ಲಿ ಸೌಖ್ಯವನ್ನು ಪಡೆಯುವುದಕ್ಕೆ ಏನಾದರೂ ಆಲೋಚನೆ ಮಾಡಬೇಕಾದುದು ಅಗತ್ಯವಾಗಿದೆ.

ಪ್ರಕೃತ ಇಲ್ಲಿನ ಕನ್ನಡಿಗರಿಗೆ ಕೇರಳದ ಎಂದರೆ ಮಲಬಾರದತ್ತಣ ಯಾವುದೇ ವರ್ತಮಾನಗಳನ್ನು ತಿಳಿಯುವುದೂ ತೀರಾ ಕಷ್ಟವಾಗಿದೆ. ಇರುವ ಪತ್ರಿಕೆಗಳೆಲ್ಲಾ ಮಲಯಾಳ ಭಾಷೆಯವುಗಳಾಗಿದ್ದು ಅವುಗಳಲ್ಲಿರುವ ವಿಚಾರವೊಂದೂ ಕನ್ನಡಿಗರಿಗೆ ಅರ್ಥವಾಗುವುದಿಲ್ಲ. ಆದುದರಿಂದ ಕನ್ನಡ ಮುಖಂಡರು ಒಂದಾಗಿ ಕನ್ನಡಿಗರ ಹಿತದೃಷ್ಟಿಯನ್ನಿಟ್ಟುಕೊಂಡು ಕಾಸರಗೋಡಿನಿಂದ ಒಂದು ವಾರ ಪತ್ರಿಕೆಯನ್ನು ಹೊರಡಿಸಬೇಕಾದುದು ಅಗತ್ಯ.

ಈ ಭಾಗದಿಂದ (ಕಾಸರಗೋಡಿನಿಂದ) ಹೊರಡುತ್ತಿದ್ದ 'ಕಾಸರಗೋಡು ಸಮಾಚಾರ'ವೆಂಬ ಪತ್ರಿಕೆ ಈಗ ನಿಂತು ಹೋಗಿದೆ. ಬದಿಯಡ್ಕದಿಂದ ಬೆಳಕು ಕಾಣುವ 'ನವಚೇತನ'ವೆಂಬ ಪತ್ರಿಕೆ ಮಾಸಿಕವಾದುದರಿಂದ ಸಂಪೂರ್ಣ ಉದ್ದೇಶ ಸಾಧನೆಯಾಗುವುದಿಲ್ಲ. ಆದುದರಿಂದ ವಾರಪತ್ರಿಕೆಯೊಂದನ್ನು ಪ್ರಾರಂಭಿಸಿದರೆ ಕೇರಳೀಯರ ಅನ್ಯಾಯಗಳನ್ನು ಬಯಲಿಗೆಳೆಯುವುದಕ್ಕೂ, ನಮ್ಮ ನ್ಯಾಯವಾದ ಬೇಡಿಕೆಗಳನ್ನು ಮುಂದೊತ್ತುವುದಕ್ಕೂ ಸುಲಭವಾದೀತು. 2 ಲಕ್ಷ ಕನ್ನಡಿಗರಿರುವ ಈ ಭಾಗದಲ್ಲಿ ಪತ್ರಿಕೆಯ ಬೆಳವಣಿಗೆಗೆ ಏನೇನೂ ಕಷ್ಟವಾಗಲಾರದೆಂದು ಕಾಣುತ್ತದೆ. ಕನ್ನಡ ಮುಖಂಡರು ತೀವ್ರವೇ ಕಾರ್ಯಕ್ಕೆ ಕೈಯಿಕ್ಕಲಿ.

— ಶ್ರೀ ರಮಾನಂದ ಬನಾರಿ.

## ಯಕ್ಷಗಾನಕ್ಕೆ ಪ್ರೋತ್ಸಾಹ

. ಯಾವುದೇ ಸಭೆ ಸಮಾರಂಭ . ಪೂಜೆ ಪುರಸ್ಕಾರ ನಡೆಯಲಿ, ಅಂತೂ ಕಾರ್ಯಕ್ರಮಗಳೊಂದಿಗೆ ಯಕ್ಷಗಾನ ಕಾಲಕ್ಷೇಪವೂ ಇದ್ದೆ ಇದೆ. ಪ್ರತಿ ಪತ್ರಿಕೆಯ, ಜಿಲ್ಲಾ ಸಮಾಚಾರದೆಡೆಗೆ ದೃಷ್ಟಿ ಹಾಯಿಸಿದ್ದಾದರೆ ಈ ಮಾತಿನ ಯಥಾರ್ಥತೆ ಕಂಡುಬರುವುದು. ಆಗಿಂದಾಗ ಮದ್ರಾಸು, ಬೆಂಗಳೂರು ಬೊಂಬಾಯಿಗಳಿಂದ ರೇಡಿಯೋ ಮೂಲಕ ನಾವು ಯಕ್ಷಗಾನ ಕಾರ್ಯಕ್ರಮಗಳನ್ನು ಕೇಳುತ್ತಿದ್ದೇವೆ. ಅಂದರೆ ಈಗೀಗ ಯಕ್ಷಗಾನಕ್ಕೆ ಹೆಚ್ಚಿನ ಪ್ರೋತ್ಸಾಹ, ಜನಬೆಂಬಲವಿದೆ.

ಯಕ್ಷಗಾನ ಕಲೆ ಒಂದು ಉತ್ಕೃಷ್ಟ ಕಲೆ. ಮನುಷ್ಯನ ಮಾನಸಿಕ ಶಕ್ತಿಯನ್ನು ವಿಕಾಸಗೊಳಿಸಿ, ಕಥಾ ಕಂಪನವನ್ನು ಹೊಡೆದೋಡಿಸಿ, ಜ್ಞಾನಮಟ್ಟವನ್ನದು ಹೆಚ್ಚಿಸುತ್ತದೆ. ಮಾತ್ರವಲ್ಲ ಪೂರ್ವಿಕರ ಧೈರ್ಯ ಸಾಹಸಗಳು, ನಡೆನುಡಿಗಳು, ಆಚಾರ ವಿಚಾರಗಳು ತಿಳಿಯುವುದಲ್ಲದೆ, ನೀತಿ ಬೋಧೆಯೂ ಸಾರಲ್ಪಡುತ್ತದೆ; ಮನೋರಂಜನೆಯೊಂದಿಗೆ ತಿಳಿವಿನ ಮಟ್ಟವೂ ಏರುತ್ತದೆ.

ಯಕ್ಷಗಾನ ಹುಟ್ಟಿ ಹಲವಾರು ವರ್ಷಗಳಾಗಿದ್ದರೂ ತಾಳಮದ್ದಳೆ ಹಳ್ಳಿಯ ಮನೋರಂಜನೆಗಾಗಿ ಮಾತ್ರ—ಅವಿದ್ಯಾವಂತರ ಕಲೆ ಎಂಬ ಭಾವನೆಯಿದ್ದ ಕಾಲವೊಂದಿತ್ತು. ಆಂತೆಯೇ ಅದು ಅಂದು ಅಷ್ಟು ಪ್ರಭಾವ ಬೀರಲಿಲ್ಲ. ಆದರೆ ಇಂದು ಸುಶಿಕ್ಷಿತರು, ಧುರೀಣರು–ಏಕೆ ತರುಣ ವಿದ್ಯಾರ್ಥಿಗಳೂ ಈ ರಂಗದಲ್ಲಿಳಿದು ಯಕ್ಷಗಾನವು ಉತ್ತಮ ಮನೋರಂಜನಾ ಸಾಧನವೆಂಬುದನ್ನು ತೋರಿಸಿಕೊಟ್ಟಿದ್ದಾರೆ.ಕೊಡುತ್ತಿದ್ದಾರೆ. ನೀತಿಪರವಾದ ಮನೋರಂಜನೆಯನ್ನೀಯುವುದರಲ್ಲಿ ಆಧುನಿಕ ಸಿನಿಮಾ ನಾಟಕಗಳಿಗಿಂತಲೂ ಅದೆಷ್ಟೋ ಹಿರಿಯ ಸ್ಥಾನವಲ್ಲಿದೆ. ಯಕ್ಷಗಾನ. ಸಿನಿಮಾ ನಾಟಕಗಳು ಇಂದು ಸತ್ಪಥವನ್ನು ಹಿಡಿಯುವುದರ ಬದಲು ಅಧರ್ಮದ ದಾರಿಯಲ್ಲಿ (ಕೆಲವು) ಮುಂದುವರಿದಿರುವಾಗ, ಯಕ್ಷಗಾನವೇ ಅಭಿಜಾತ ಸಂಪ್ರದಾಯವನ್ನುಳಿಸಿಕೊಂಡು ಶುದ್ಧ ಚಾರಿತ್ರ್ಯಯೂ ಆಗಿದೆ.

ಯಕ್ಷಗಾನವನ್ನು ಕೇಳುವುದರಲ್ಲಿ ಹಾಗೂ ಪಾತ್ರಗಳನ್ನು ವಹಿಸುವುದರಲ್ಲಿ ಅಭಿರುಚಿಯಿರುವ ಮಂದಿಗಳು ಇಂದು ಹೆಚ್ಚುತ್ತಿರುವುದು ಪ್ರಶಂಸನೀಯ. ಬೆಳಕಿಗೆ ಬಂದ ಕಲಾವಿದರು ಹಲವರಿದ್ದರೆ, ಹಲವಾರು ಎಡರು ತೊಡರುಗಳಿಂದ ಬೆಳಕನ್ನು ಕಾಣದ ಯೋಗ್ಯ ಕಲಾವಿದರೂ ಕೆಲವರಿದ್ದಾರೆ. ಅದಕ್ಕೆ ಕಾರಣ ಬೇರಿದ್ದರೂ ಸರಿಯಾದ ಸಂದರ್ಭ, ಸದವಕಾಶ ಸಿಗದೇ ಇರುವುದೂ ಆಗಿದೆ. ನವಕರ್ನಾಟಕ ನಿರ್ಮಾಣವಾದ ಈ ಸಂದರ್ಭದಲ್ಲಿ ಯಕ್ಷಗಾನ ಕಲೆಯನ್ನು ಇನ್ನೂ ಊರ್ಜಿತಗೊಳಿಸುವುದು ಕನ್ನಡಿಗರ ಕರ್ತವ್ಯ. (ಯಕ್ಷಗಾನದ ತೆಂಕುತಿಟ್ಟಿಗೆ ಹೆಸರಾದ ಕಾಸರಗೋಡನ್ನು ಇಲ್ಲಿಯ ಜನತೆಯ ನುಡಿಗೆ ವಿರೋಧವಾಗಿ ಸಂಪೂರ್ಣ ಕೇರಳಕ್ಕೆ ಸೇರಿಸಿದುದು ಯಕ್ಷಗಾನ ಕಲೆಗೇ ಬಂದೊದಗಿದಂತಹ ಬಲುದೊಡ್ಡ ಆಘಾತ.

ಅಲ್ಲಲ್ಲಿ ಯಕ್ಷಗಾನಗಳು ಜರಗುವುದಾದರೂ ಅದಕ್ಕೊಂದು ವ್ಯವಸ್ಥೆ ಇರುವುದಿಲ್ಲ. ಏನೋ ಒಂದೆರಡು ಸಂಯುಕ್ತ ಸಂಘಗಳು ಮಾತ್ರ ಇವೆ. ಇತ್ತೀಚೆಗೆ ಕಾಸರಗೋಡು ತಾಲೂಕಿನ ಬದಿಯಡ್ಕದಲ್ಲಿ ಶ್ರೀ ಮುಂಡೂರು ಗೋಪಾಲಕೃಷ್ಣ ಮುಣಂಚಿತ್ತಾಯರ ವ್ಯವಸ್ಥಾಪಕತ್ವದಲ್ಲಿ ನಡೆದ 'ಅಖಿಲ ಕರ್ನಾಟಕ ಯಕ್ಷಗಾನ ಪರಿಷತ್ತಿನ" ಹೊರತಾಗಿ ಬೇರೆ ವಿಶೇಷ ಕಾರ್ಯಕ್ರಮಗಳು ಎಲ್ಲೂ ನಡೆದಂತೆ ಕಾಣುತ್ತಿಲ್ಲ. ಇಂಥ ಪರಿಷತ್ತುಗಳು ಆಗಾಗ ನಡೆಯುವುದು ಆವಶ್ಯಕ. ಪರಸ್ಪರ ದ್ವೇಷಾಸೂಯೆಗಳನ್ನೆಲ್ಲಾ ತೊರೆದು ಯಕ್ಷಗಾನ ಕಲೆಯ ಶ್ರೇಯೋಭಿವೃದ್ಧಿಗಾಗಿ ಕನ್ನಡಿಗರೆಲ್ಲರೂ ದುಡಿಯುವುದಗತ್ಯ.

ವಾರಕ್ಕೆ ಒಂದೆರಡು ಸರ್ತಿ, ಯಾ ತಿಂಗಳಿಗೆ ಒಂದೆರಡು ಸಲವಾದರೂ ರೇಡಿಯೋ ಮೂಲಕ ಬೇರೆ ಬೇರೆ ಕಲಾವಿದರಿಂದ ಯಕ್ಷಗಾನ ಪ್ರಸಾರವಾಗಬೇಕು. ಕಲಾವಿದರಿಗೆಲ್ಲಾ ಈ ಸವಲತ್ತು ದೊರೆಯಬೇಕು. ಅಂದರೆ ಅದಕ್ಕೊಂದು ಮೇಲ್ವಿಚಾರಕ ಸಂಸ್ಥೆಯಿದ್ದು ಅದರ ಮೂಲಕ ಏರ್ಪಾಡುಗಳೆಲ್ಲಾ ನಡೆಯಬೇಕು. ಆಸಕ್ತಿ ವಹಿಸಿ ಹೆಚ್ಚು ಜನ ಕಲಾಸೇವೆಮಾಡುವಂತೆ ಆಗಾಗ ಒಂದೆರಡು ಬಹುಮಾನಗಳನ್ನೀಯಬಹುದು. ಉತ್ತಮವಾದ ಯಕ್ಷಗಾನ ಪ್ರಬಂಧಗಳಿಗೆ (ಪ್ರಸಂಗ ಪುಸ್ತಕಗಳಿಗೆ) ಯೋಗ್ಯ ಪುರಸ್ಕಾರ ನೀಯುವ ಏರ್ಪಾಡೂ ಮಾಡುವುದೊಳ್ಳೇಯದು.

ಶಾಸ್ತ್ರೀಯ ರೀತಿಯ ಹಿಮ್ಮೇಳನ, ಅನುಭವಿಗಳಾದ ಕಲಾವಿದರು, ಕೂಡಿ ನಡೆಯುವ ಯಕ್ಷಗಾನ ಅದು ಯಕ್ಷ-ಗಾನವೇ ಹೌದು!!

ಆದುದರಿಂದ ಯಕ್ಷಗಾನಕ್ಕೆ ಪ್ರೋತ್ಸಾಹವಿತ್ತು–ನಿರಕ್ಷರಸ್ಥರನ್ನೂ ಜ್ಞಾನವಂತರನ್ನಾಗಿ ಮಾಡುವ, ಅಗಾಧ ಚೈತನ್ಯವುಳ್ಳ ಈ ಕಲೆಯನ್ನು ಬೆಳಗಿಸುವುದು ಸರ್ವ ಕನ್ನಡಿಗರ ಕರ್ತವ್ಯವಾಗಿದೆ.

- ಶ್ರೀ ಕೇ. ವ. ಕೇಶವ.

## ಕರ್ನಾಟಕದ ರೇವು

(೩ನೇ ಪುಟದಿಂದ)

ಮಲ್ಪೆಯಿಂದ ಹೊರ ಹೋಗುವ ಮತ್ತು ಒಳಸಾಗುವ ಸರಕುಗಳ ಮೊತ್ತವು ಒಟ್ಟು ಎಂಟು ಲಕ್ಷ ಟನ್ನುಗಳಷ್ಟಾಗಲು ಸಾಧ್ಯವಿರುವುದೆಂದು ಸಮಿತಿಯು ಎಣಿಸಿದೆ. ಅಲ್ಲದೆ ಮಲ್ಪೆಯನ್ನು ನೌಕಾ ನಿರ್ಮಾಣ ಕೇಂದ್ರವಾಗಿ ಮಾಡುವುದಕ್ಕೂ ಸಾಕಷ್ಟು ಅನುಕೂಲ್ಯಗಳಿವೆ ಎಂದು ಸಮಿತಿ ತೀರ್ಮಾನಿಸಿದೆ ಮೈಸೂರಿನ ವಿದ್ಯುತ್ತು, ಔದ್ಯಮಿಕ ಕೇಂದ್ರಗಳು, ದಟ್ಟವಾದ ಅರಣ್ಯಗಳು ಎಲ್ಲವೂ ಸಮೀಪದಲ್ಲೇ ಇರುವಾಗ ಮಲ್ಪೆ ನೌಕಾ ಕೇಂದ್ರಕ್ಕೂ ಪ್ರಶಸ್ತವಾದ ಸ್ಥಳವಾಗಿದೆ.

ಈ ವರೆಗೆ ನಾವು ಸಮಿತಿಯ ಪರಿಶೀಲನೆ ಮತ್ತು ಶಿಫಾರಸುಗಳನ್ನು ನೋಡಿದೆವು. ಸಮಿತಿಯು ೧೯೫೦ರಲ್ಲೇ ವರದಿಯನ್ನೊಪ್ಪಿಸಿದರೂ ಕಾಂಡ್ಲಾದ ಕೆಲಸ ಸಂಪೂರ್ಣವಾಗುತ್ತ ಬಂದರೂ, ಇನ್ನೂ ಮಲ್ಪೆಯ ವಿಷಯದಲ್ಲಿ ರಾಜಕೀಯ ನಿರ್ಣಯ ಆಗದೆ ಉಳಿದಿರುವುದು ಕರ್ನಾಟಕದ ದುರ್ದೈವವೆನ್ನದೆ ಉಪಾಯವಿಲ್ಲ, ಆರ್ಥಿಕ ಕಾರಣಗಳು ರಾಜಕೀಯದ ಚದುರಂಗದಲ್ಲಿ ಸೋಲನ್ನೊಪ್ಪಿಕೊಂಡಿರುವುದಕ್ಕೆ ನಮ್ಮ ರಾಜ್ಯದ ಹರಿಬಂದರಿನ ಪ್ರಶ್ನೆ ಮುಖ್ಯ ಸಂಕೇತ. ಮಲ್ಪೆ ಮತ್ತು ಮಂಗಳೂರಿನೊಳಗೆ ಒಳಗಿಂದೊಳಗೆ ಕುದಿಯುವ ತಿಕ್ಕಾಟದಿಂದಾಗಿ ತೀರ್ಮಾನದ ಮುಹೂರ್ತ ಇನ್ನೂ ಬಾರದಾಗಿದೆ—ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಾಗಿದೆ. ಕೇಂದ್ರ ಸರಕಾರದಲ್ಲಿ ನಮ್ಮ ವರ್ಚಸ್ಸು ಕಡಿಮೆಯಾಗಿರುವುದು ಇದಕ್ಕೊಂದು ಕಾರಣವೆಂದು ನಾವು ಒಪ್ಪಿಕೊಳ್ಳಬೇಕಾದರೂ, ಮಲ್ಪೆಯ ಪ್ರತಿನಿಧಿಗಳಾಗಿ ಪಾರ್ಲಿಮೆಂಟಿನಲ್ಲಿರುವ ದಕ್ಷಿಣ ಕನ್ನಡದ ಉತ್ತರ ಭಾಗದ ಪ್ರತಿನಿಧಿಯ ಮೌನವು ಅಸಹನೀಯ.

ಇದೀಗ ಹೊಸ ರಾಜ್ಯ ಆರಂಭವಾಗಿದೆ. ನಮ್ಮ ಹಿತವೇನೆಂಬುದನ್ನು ನಾವೇ ಚರ್ಚಿಸಿ ತೀರ್ಮಾನಿಸಬೇಕಾದ ಕಾಲ. ಕ್ಷುದ್ರಭಾವನೆಗಳನ್ನು ಮೂಲೆಗೊತ್ತಿ ಸಮೃದ್ಧ ಕರ್ನಾಟಕಕ್ಕೆ ನಾಂದಿಯನ್ನಿಡುವ ಈ ಶುಭ ಮುಹೂರ್ತದಲ್ಲಿ ಹೊಸ ರಾಜ್ಯದ ಶಾಸನ ಸಭಾ ಸದಸ್ಯರೂ, ಸಂಸತ್–ಸದಸ್ಯರೂ ಸೇರಿ ಕೇಂದ್ರದ ಮೇಲೆ ತಮ್ಮ ವರ್ಚಸ್ಸನ್ನು ಬೀರುವ ಅಗತ್ಯವಿದೆ. ಮೈಸೂರಿನ ಔದ್ಯಮಿಕ ಅಭಿವೃದ್ಧಿಗೆ ಮಲ್ಪೆ (ಅಥವಾ ಅದಕ್ಕಿಂತ ಅನುಕೂಲವಾದ ಇನ್ನೊಂದು ಸ್ಥಳವಿದ್ದರೆ ಅದೂ ಆಗಲಿ!) ಯಿಂದ ಬಹಳ ನೆರವಾಗಲು ಸಾಧ್ಯವೆಂಬುದನ್ನು ಗಮನಿಸಿ,—ಗೋವೆ ಭಾರತದ ಕೈಗೆ ಬರುವ ಮೊದಲೇ—ಮೈಸೂರಿನ ಕರಾವಳಿಯಲ್ಲಿ ನಾವು ಒಂದು ಹಿರಿಬಂದರನ್ನೇ ಕಟ್ಟಬೇಕು. ಸಾಧ್ಯವಾದರೆ ಹೊಸ ರಾಜ್ಯದ ಪಂಚವಾರ್ಷಿಕ ಯೋಜನೆಯಲ್ಲಿ ಮಲ್ಪೆಗೆ ಪ್ರಥಮ ಪ್ರಾಶಸ್ತ್ಯ ಸಲ್ಲಬೇಕು, ಎಂದು ನಮಗೆ ಕಾಣುತ್ತದೆ. ರಾಜಕೀಯರಂಗದ ಸ್ಪಷ್ಟ ಮತ್ತು ಅಸ್ಪಷ್ಟ ಗೊಂದಲ, ಮತ್ತು ಕರ್ನಾಟಕದ ಐಕ್ಯದ ಚಿತ್ರವನ್ನು ಅರಿಯಬಲ್ಲ ಭಾರತದ ಸಾಮಾನ್ಯ ಪ್ರಜೆಯೊಬ್ಬನು ಇಂಥ ಪ್ರಶ್ನೆಗಳು ಬಂದಾಗಲೆಲ್ಲ ಗಾಂಧೀಜಿಯವರು ಹೇಳಿದ 'ಸಬ್‌ಕೋ ಸನ್ಮತಿ ದೇ ಭಗವಾನ್' ಎಂಬ ಪ್ರಾರ್ಥನೆಯ ಹೊರತು ಬೇರೇನನ್ನೂ ಮಾಡಲಾರನಷ್ಟೆ?

[ರಾಷ್ಟ್ರೀಯ ಪ್ರಶಸ್ತಿ ಪಡೆದ "ಪ್ರಜಾವಾಣಿ"ಯಿಂದ ಉದ್ಧೃತ]

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ. ಮಂಗಳೂರು—1.

# ನಿರೋಗಿ ಜೀವನ

## ದಿನಾಲೂ ಎಂಟು ಲೋಟ ನೀರು ಕುಡಿಯಿರಿ— ಶರೀರ ಶುದ್ಧಿಯನ್ನು ಬಹಿರಂತರಗಳಲ್ಲಿ ಕಾಯ್ದುಕೊಳ್ಳಿರಿ!

ಸರ್ವರೂ ಶ್ವಾಸೋಚ್ಛ್ವಾಸ ಕ್ರಮವನ್ನು ಅರಿತು ಶುದ್ಧವಾಯು ದೊರೆಯುವ ಕಡೆಗಳಲ್ಲಿ ಸದಾ ವಾಸಿಸುವುದು, ಪ್ರತಿ ದಿನ ತಪ್ಪದೆ ಸ್ನಾನಮಾಡುವುದು, ದಿನವೂ ಎಂಟು ಲೋಟ ನೀರು ಕುಡಿಯುವುದು—ಬೆಳಗ್ಗಿನ ಆಹಾರ ಕಾಲಕ್ಕೆ ಮುಂಚಿತವಾಗಿ ಎರಡು ಲೋಟ, ಪ್ರಾತಃ ಕಾಲದ ಮಧ್ಯೆ ಎರಡು ಲೋಟ, ಮಧ್ಯಾಹ್ನ ವೇಳೆಯಲ್ಲಿ ಎರಡು ಲೋಟ, ರಾತ್ರಿ ಮಲಗುವ ಮುಂಚೆ ಎರಡು ಲೋಟ— ಈ ಅಭ್ಯಾಸಗಳನ್ನುಂಟುಮಾಡಿಕೊಂಡರೆ ನಮಗೆ ವೈದ್ಯರ ಅವಶ್ಯವೇ ಇಲ್ಲದಂತಾಗುವುದು ರೋಗ ಬಂದರೆ ತಾನೇ ವೈದ್ಯರ ಅವಶ್ಯಕತೆ! ರೋಗವಿಲ್ಲದಿದ್ದರೆ ವೈದ್ಯರ ಅಗತ್ಯವಾದರೂ ಏನು? ಈ ಅಭ್ಯಾಸಗಳಿಂದ ಆರೋಗ್ಯವುಂಟಾಗುವುದು ಅದಾಗ್ಯೂ ಇವು ಹೆಚ್ಚು ಖರ್ಚಿಲ್ಲದೆಯೇ ಸುಲಭವಾಗಿ ದೊರೆಯತಕ್ಕವೂ ಆದುದರಿಂದ ನಾವು ಅವುಗಳ ಅದ್ಭುತವಾದ ಗುಣಗಳನ್ನು ತಕ್ಕ ರೀತಿಯಲ್ಲಿ ಪರಿಗಣಿಸುವುದಿಲ್ಲವೆಂದು ತೋರುತ್ತದೆ.

ಒಬ್ಬ ಮನುಷ್ಯನು ಶುದ್ಧ ವಾಯುವನ್ನು ಅತಿಯಾಗಿ ಸೇವಿಸಿದನೆಂಬ ದೂರೇ ಇಲ್ಲವೆಂದು ನಾವೆಲ್ಲರೂ ನೆನಪಿಡಬೇಕು. ಅಂದರೆ ಶ್ವಾಸಕೋಶಗಳಲ್ಲಿನ ಮಲಿನ ವಾಯುವನ್ನು ಸಾಧ್ಯವಾದಷ್ಟು ವೇಳೆ ಹೊರಗೆಡಹಬೇಕು. ನಿರ್ಮಲ ವಾಯು ದೊರೆಯುವ ಬಯಲು ಪ್ರದೇಶದಲ್ಲಿ ಇರುವ ಸಮಯದಲ್ಲಿ ತುಟಿಗಳನ್ನು ಸಂಕುಚಿಸಿ ಸಿಳ್ಳೆಹಾಕುವ ರೀತಿಯಿಂದ ದ್ವಾರವನ್ನೇರ್ಪಡಿಸಿ ನಿಶ್ವಾಸ ವಾಯುವನ್ನು ಹೊರಬಿಡಬೇಕು. ಉಚ್ಛ್ವಾಸ ಕಾರ್ಯವು ತಾನಾಗಿಯೇ ಆಗ ನೆರವೇರುವುದು. ರಬ್ಬರ್ ಚೆಂಡನ್ನು ಬಲವಾಗಿ ಅದುಮಿ ಒಳಗಿನ ವಾಯುವನ್ನು ಹೊರಗೆಡಹಿ ಕೈಬಿಟ್ಟರೆ ಹೊರಗಿನ ವಾಯುವು ತಕ್ಷಣವೇ ಒಳನುಗ್ಗುವುದು. ಇದೇ ಕ್ರಮದಲ್ಲಿ ಶ್ವಾಸಕೋಶದ ವಾಯುವಿನ ನಿರ್ಗಮನದಿಂದ ಹೊರಗಿನ ಶುದ್ಧವಾಯು ಆಗಮಿಸುವುದು.

ಜಾಣತನದ ಉಚ್ಛ್ವಾಸ ಕ್ರಮವನ್ನು ಎಲ್ಲರೂ ಕಲಿಯಬೇಕು. ಎದೆಯನ್ನು ವಿಕಾಸಗೊಳಿಸಿ (ಅಗಲಿಸಿ) ದೀರ್ಘವಾಗಿ ಉಸಿರಾಡುವುದು ಪ್ರಥಮ ನಿಯಮ. ಅವಕಾಶ ದೊರೆತಾಗಲೆಲ್ಲ ಬಯಲು ಪ್ರದೇಶಗಳಲ್ಲೆಲ್ಲಾ ಕಾಲಕಳೆಯುವುದು ಒಂದು ಒಳ್ಳೆಯ ಅಭ್ಯಾಸ. ಏನೇ ಆಗಲಿ ನಾವು ವಾಸಿಸುವ ಮನೆಯಲ್ಲಿರುವ ಎಲ್ಲಾ ಕೋಣೆಗಳಲ್ಲೂ ಕೆಲಸ ಮಾಡುವ ಸ್ಥಳಗಳಲ್ಲೂ ಸದಾ ನಿರ್ಮಲ ವಾಯು ಚಲಿಸುತ್ತಿರುವಂತೆ ಏರ್ಪಡಿಸಿಕೊಳ್ಳಬೇಕು. ಶುದ್ಧ ವಾಯುವನ್ನು ತಡೆಗಟ್ಟಬಾರದು. ರಾತ್ರಿ ವೇಳೆ ಕಿಟಕಿಗಳನ್ನು ಧಾರಾಳವಾಗಿ ತೆಗೆದಿಡಬೇಕು. ಯಾಕೆಂದರೆ ನಮಗೆ ಶುದ್ಧ ವಾಯುವಿನ ಸೇವನೆ ಹೆಚ್ಚಾಯಿತು ಎಂಬ ಪ್ರಶ್ನೆಯೇ ಏಳುವುದಿಲ್ಲ.

ಹವಾಹಿತಕರವಾಗಿರುವವೇಳೆಯಲ್ಲಿ ಇವೆಲ್ಲವೂ ಸಾಧ್ಯ ಮತ್ತು ಪ್ರಯುಕ್ತಾರ್ಹವಾಗಿದೆ ಎಂದು ತೋರಬಹುದು. ಹವೆ ಚೆನ್ನಾಗಿಲ್ಲದಿದ್ದರೆ ಇದೆಲ್ಲ ಸೌಲಭ್ಯ ಸಿಗದೆಂದೇ ಹೆಚ್ಚಿನವರ ತಿಳುವಳಿಕೆ. ನಮ್ಮಲ್ಲಿ ಅನೇಕರಿಗೆ ಮಳೆ ಅಥವಾ ಇತರ ವಿಧವಾದ ದುಸ್ಸಹನೀಯವಾದ ವಾಯು ಗುಣದಿಂದ ಶೀತ ಮತ್ತು ಜ್ವರ ಪರಿಣಾಮವಾಗಿ ಅಪಾಯವು ಸಂಭವಿಸುವದು ಎಂಬ ಭೀತಿ—ಇದೆ. ಇದು ತಪ್ಪು ಭಾವನೆ. ಮಳೆ ಮತ್ತು ಮಂಜು ಬೀಳುವಾಗ ವಾಯುಮಂಡಲವು ಹೆಚ್ಚು ಶುದ್ಧವಾಗಿರುತ್ತದೆಂಬುದನ್ನು ನಾವು ಮರೆತೇ ಬಿಟ್ಟಿದ್ದೇವೆ! ಯಾವ ತೇವಕ್ಕೆ ನಾವು ಹೆದರುತ್ತೇವೋ ಅದು ವಾಯುವಿನ ಧೂಳೆಲ್ಲವನ್ನು ಎಳೆದುಕೊಂಡು ವಾಯುವನ್ನು ಶುದ್ಧಗೊಳಿಸುವುದರ ಮೂಲಕ ನಮಗೆ ಸಹಾಯಕವಾಗಿರುವುದು. ಈ ವಿಷಯದಲ್ಲಿ ಸಂದೇಹವುಂಟಾದರೆ ಒಂದು ಬಟ್ಟಲಿಗೆ ಮಳೆಯ ನೀರನ್ನು ತುಂಬಿ ಕೊಂಚಕಾಲ ಬಿಟ್ಟು ಸೂಕ್ಷ್ಮ ದರ್ಶಕ ಯಂತ್ರದ ಮುಖಾಂತರ ನೋಡಿ ಪರೀಕ್ಷಿಸಿರಿ. ಅಥವಾ ಒಂದು ಬಟ್ಟಲಲ್ಲಿ ಮಂಜಿನ ಗಡ್ಡೆಯೊಂದನ್ನು ಕರಗಿಸಿ ಪರೀಕ್ಷಿಸಿರಿ. ಸತ್ಯಾಂಶವು ವ್ಯಕ್ತವಾಗುತ್ತದೆ. ಬೆಚ್ಚಗೆ ಉಡುಪನ್ನು ಧರಿಸಿ ವಾದ ರಕ್ಷೆಗಳನ್ನು ಮೆಟ್ಟಿ ತೀವ್ರದಲ್ಲಿ ಸಂಚರಿಸಿದರೂ ಯಾವ ವಿಧವಾದ ಕೆಡುಕು ಸಂಭವಿಸುವುದಿಲ್ಲ. ತೊಯ್ದು ಹೋದ ಸಂದರ್ಭಗಳಲ್ಲಿ ಬಟ್ಟೆ, ಕಾಲು ಚೀಲ ಮತ್ತು ಪಾದರಕ್ಷೆಗಳನ್ನು ಬದಲಾಯಿಸುವ ವರೆಗೂ ಸಂಚರಿಸುತ್ತಿರಬೇಕು. ಇದು ನಾವು ಗಮನಿಸಬೇಕಾದ ಎಚ್ಚರಿಕೆ ಇಷ್ಟಾದರೂ ಶುದ್ಧ ವಾಯು ಮತ್ತು ತಣ್ಣೀರು ಅಪಾಯಕರವೆನ್ನುವ ಭ್ರಮೆಯು ಅನೇಕರ ಮನಸ್ಸಿನಿಂದ ದೂರವಾಗಿಲ್ಲ. ನಿಯಮ ಬಿಟ್ಟು ನಡೆದು ನಮ್ಮಲ್ಲನೇಕರು ವ್ಯಾಧಿಗೀಡಾಗುತ್ತಾರೆ. ದೃಢಕಾಯರಿಗೆ ವ್ಯಾಧಿಗಳ ಬಾಧೆಯಿಲ್ಲ

ಮಿತಿಮೀರಿ ಊಟ ಮಾಡುವುದರಿಂದಲೂ ಚರ್ಮದ ಮೇಲಿನ ರಂಧ್ರಗಳು ಮುಚ್ಚಿ ಹೋದರೂ ಮೈ ತೊಳೆಯದೇ ಇರುವುದರಿಂದಲೂ ಮಲ ವಿಸರ್ಜನೆಗೆ ಅಡಚಣೆಯುಂಟಾಗುವುದರಿಂದಲೂ ಶ್ಲೈಷ್ಮ ಸಂಬಂಧವಾದ ವ್ಯಾಧಿಗಳು ಸಂಭವಿಸುವುವು. ಮಿತವಾಗಿ ಊಟಮಾಡುತ್ತಾ ಸಮೃದ್ಧಿಯಾದ ಶುದ್ಧ ಜಲದಿಂದ ಶರೀರದ ಅವಯವಗಳನ್ನು ಬಹಿರಂತರಗಳಲ್ಲಿ ಶುದ್ಧಪಡಿಸುತ್ತಾ ಅನೇಕ ಶೀತ ಸಂಬಂಧವಾದ ವ್ಯಾಧಿಗಳಲ್ಲಿ ಹತ್ತರಲ್ಲೊಂಬತ್ತು ಭಾಗವನ್ನು ತಡೆಗಟ್ಟಬಹುದು. "ಶರೀರವನ್ನು ಒಳಗೂ ಹೊರಗೂ ಶುದ್ಧಗೊಳಿಸಿರಿ" ಎಂಬುದೇ ಬಾಳಿನ ನಿಯಮ. ನಮ್ಮಲ್ಲಿ ಅನೇಕರು ಶರೀರದ ಹೊರಭಾಗವನ್ನು ಸಾಕಷ್ಟು ಶುದ್ಧಿಗೊಳಿಸುವರು. ಆದರೆ ಶರೀರದ ಒಳಭಾಗವನ್ನು ಶುದ್ಧಿಗೊಳಿಸಬೇಕೆಂಬ ಆಲೋಚನೆಯೇ ತೋರುವುದಿಲ್ಲ. ಶರೀರದ ಶುದ್ಧೀಕರಣ ಕಾರ್ಯದಲ್ಲಿ ಶುದ್ಧ ನೀರನ್ನು ಉಪಯೋಗಿಸಬೇಕು. ನಮಗೆ ಸಾಧಾರಣವಾಗಿ ದೊರಕುವ ನೀರು ಸಂದೇಹಾಸ್ಪದವಾಗಿದ್ದಲ್ಲಿ ಶುದ್ಧವಾದ ನೀರನ್ನು ಕ್ರಯಕ್ಕಾದರೂ ಪಡಕೊಳ್ಳುವುದು ಮೇಲು. ಹೀಗೆ ಶರೀರಾರೋಗ್ಯಕ್ಕೆ ಮಾಡಿದ ಹಣದ ವ್ಯಯವು ಬಹಳ ಫಲದಾಯಕವಾದುದು. ಹಾಸಿಗೆಯಿಂದ ಎದ್ದೊಡನೆಯೇ ಎರಡು ದೊಡ್ಡ ಲೋಟದಷ್ಟು ತಣ್ಣನೆಯ ಅಥವಾ ಸುಖೋಷ್ಣವಾದ ನೀರನ್ನು ಕುಡಿಯಿರಿ. ಅಷ್ಟು ಮಾತ್ರ ಸಾಲದು; ಬೆಳಗ್ಗಿನ ಹತ್ತು ಮತ್ತು ಹನ್ನೆರಡು ಗಂಟೆಗಳ ಮಧ್ಯಕಾಲದಲ್ಲಿ (ಮಧ್ಯಾಹ್ನ ಒಂದು ಗಂಟೆಗೆ ಊಟಮಾಡುವ ಪದ್ಧತಿಯಿದ್ದಲ್ಲಿ) ಮತ್ತೆರಡು ಲೋಟ ಶುದ್ಧವಾದ ನೀರನ್ನು ಸೇವಿಸಿ, ಊಟಕ್ಕೆ ಒಂದು ಗಂಟೆ ಮುಂಚಿತವಾಗಿ ಅಥವಾ ಊಟದನಂತರ ಒಂದು ಗಂಟೆ ಮೇಲಾಗಲೀ ನೀರನ್ನು ಸೇವಿಸಬಾರದೆಂಬುದು ಊಹಾತ್ಮಕವಾದದ್ದು. ಊಟದ ವೇಳೆ ಯಾವ ಪಾನೀಯವನ್ನೂ ಸೇವಿಸಲೇಬಾರದು. ಮಧ್ಯಾಹ್ನದ ಎರಡು ಗಂಟೆಯ ಮೇಲ್ಪಟ್ಟು ನಾಲ್ಕು ಗಂಟೆಯೊಳಗಾಗಿ ಮತ್ತೆರಡು ಲೋಟ ಶುದ್ಧವಾದ ನೀರನ್ನು ಸೇವಿಸಬೇಕು. ಮತ್ತು ರಾತ್ರಿ ಮಲಗುವ ಮುಂಚೆ ಎರಡು ಲೋಟ ನೀರನ್ನು ಸೇವಿಸಬೇಕು. ಸ್ತ್ರೀ, ಪುರುಷ, ಮಕ್ಕಳಾದಿ ಎಲ್ಲರೂ ಪ್ರತಿದಿನವೂ ಎಂಟು ಲೋಟದಷ್ಟು ಪ್ರಮಾಣದ ನೀರನ್ನು ಕುಡಿಯಲೇ ಬೇಕು. ಇದರಿಂದ ಶರೀರವು ಶುದ್ಧಿ ಹೊಂದುವುದು.

ಅವಕಾಶ ದೊರೆತಾಗಲೆಲ್ಲಾ ಬಯಲು ಪ್ರದೇಶದ ಶುದ್ಧ ವಾಯುವನ್ನೇ ಸೇವಿಸಿರಿ ಕಾರ್ಯ ನಿರ್ಬಂಧದಿಂದ ಅಂತಹ ಅವಕಾಶವು ದೊರೆಯದೇ ಹೋದರೆ ಸಾಧ್ಯವಾದಷ್ಟು ಬಾರಿ ಕಿಟಕಿಯಿಂದ ಹೊರಗೆ ತಲೆ ಹಾಕಿ ದೀರ್ಘವಾಗಿ ಉಸಿರಾಡಿರಿ. ಇಷ್ಟವಿದ್ದರೂ ಇಲ್ಲದೆ ಇದ್ದರೂ ವಾಹನಾರೂಢರಾಗಿ ಸಂಚರಿಸುವುದರ ಬದಲು ಕಾಲ್ನಡೆಯಿಂದಲೇ ಸಂಚರಿಸಿರಿ. ಎಳೇ ಬಿಸಿಲು ಕಾಯಿಸಲು ಕುಳಿತುಕೊಳ್ಳುವ ಬದಲಾಗಿ ಓಡಾಡಿರಿ, ಅಂಗಸಾಧನೆ ಮಾಡಿರಿ, ಆಟವಾಡಿರಿ, ಶುದ್ಧ ವಾಯು ಸೂರ್ಯ ರಶ್ಮಿಗಳಿಗಿಂತ ಶ್ರೇಷ್ಠ ವಸ್ತುಗಳು ಬೇರೊಂದಿಲ್ಲ! ಸಾಧ್ಯವಾದಾಗಲೆಲ್ಲಾ ಬಯಲು ಪ್ರದೇಶದಲ್ಲಿ ನಿದ್ರಿಸಿರಿ. ಈ ರೀತಿ ಮಾಡುವುದು ಕ್ಷಯ ರೋಗಿಗಳಿಗೆ ಮಾತ್ರವಲ್ಲವೆ ಸರ್ವರಿಗೂ ಒಳ್ಳೆಯದು. ಶುದ್ಧ ವಾಯುವು ಆರೋಗ್ಯ ವೃದ್ಧಿಗಾಗಿಯೇ ದೇವರಿಂದ ಕೊಡಲ್ಪಟ್ಟ ಬಲವರ್ಧಕ ವಸ್ತುಗಳಲ್ಲಿ ಅತ್ಯಂತ ಹೆಚ್ಚಿನ ಅನುಗ್ರಹ. ಮಂಜು, ಮಳೆ, ಶೀತೋಷ್ಣಯುತವಾದ ಯಾವುದೇ ತೆರನಾದುದಾಗಲೀ ಶುದ್ಧ ವಾಯು ಸದಾ ಆರೋಗ್ಯವರ್ಧಕ ಮತ್ತು. ನಮ್ಮ ಶರೀರಕ್ಕೆ ಅವಶ್ಯವಾದ ವಸ್ತುಗಳಲ್ಲಿ ಅತ್ಯುತ್ತಮವಾದುದು. ಈ ಸೂತ್ರಗಳನ್ನು ಅನುಸರಿಸಿ ಓದುಗರೆಲ್ಲರೂ ಆಯುರಾರೋಗ್ಯ ಸಂಪನ್ನರಾಗಿ ಬಾಳಲಿ!

(ಆಧಾರದಿಂದ)

**ಶ್ರೀ ಕೆ. ಸಿ. ವೈದ್ಯರ್, ಕುಂಬಳೆ.**

# ಕಲಾರಂಗ

(೩ನೇ ಪುಟದಿಂದ)

ಕಲೆ, ಇತ್ಯಾದಿ ಕಲಾ ಪ್ರಕಾರಗಳಿಗೂ ಅವು ಕೇಂದ್ರವಾಗಿದ್ದವು. ಅವು ಜನಗಳ ಮನಸ್ಸಿನಲ್ಲಿ ಕಲಾಭಿರುಚಿಯನ್ನು ಹುಟ್ಟಿಸುತ್ತಿದ್ದವು. ಅನಂತರ ಇಷ್ಟೇ ಕಲಾತ್ಮಕವಾಗಿ ಗೋಪುರ ಮತ್ತು ಸ್ತಂಭಗಳಿರುವ ಮಂಟಪಗಳನ್ನು ನಿರ್ಮಿಸಿದವರಲ್ಲಿ ಪಾಂಡ್ಯ ರಾಜರು ಮತ್ತು ವಿಜಯ ನಗರದ ಅರಸರು ಮುಖ್ಯರು. ಕನ್ನಡ ರಾಜ್ಯವಾದ ವಿಜಯನಗರದ ಕೃಷ್ಣ ದೇವರಾಯನು ನೀಡಿದ ಪ್ರೋತ್ಸಾಹವನ್ನು ಇಂದಿನ ಹಾಳು ಹಂಪೆಯಲ್ಲಿರುವ ಅವಶೇಷಗಳ ಮೇಲಿಂದಲೇ ಊಹಿಸಬಹುದು. ಕಣ್ಸೆಳೆಯುವ, ಮನತಣಿಯುವ ಶಿಲ್ಪ ವೈಭವ ಇಲ್ಲಿದೆ!

ವಿಜಯ ನಗರದ ಅರಸರ ಅರಮನೆ, ಚಂದ್ರಗಿರಿ ಮತ್ತಿತರ ಸ್ಥಾನಗಳಲ್ಲಿರುವ ಮಹಲು, ಹಂಪೆಯಲ್ಲಿರುವ ಕಮಲನಾಮ ಮಹಾಂಗಳ, ರಾಣಿಯ ಸ್ನಾನಗೃಹ ಮತ್ತಿತರ ನಿರ್ಮಾಣಗಳು ಹಿಂದು ಮತ್ತು ಮುಸ್ಲಿಂ ಶಿಲ್ಪ ಕಲೆಯ ಸಮನ್ವಯಕ್ಕೆ ಉದಾಹರಣೆಯಾಗಿವೆ.

ರಾಜಪೂತ್ ಮತ್ತು ಮುಗಲ್ ಚಿತ್ರಗಳಲ್ಲಿ ಸಹ ಈ ಅಂಶವನ್ನು ಕಾಣಬಹುದು. ಇದರಲ್ಲಿ ಹೆಚ್ಚಿನ ಕೀರ್ತಿ ಅಕ್ಬರ್ ಬಾದಶಾಹನಿಗೆ ಸಲ್ಲುತ್ತದೆ. ಆತನು ಎರಡು ಸಂಸ್ಕೃತಿಗಳ ಸಮನ್ವಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತಾಳಿದ್ದ. ಅಕ್ಬರ್ ಮತ್ತು ಅವನ ಮಗ ಜಹಾಂಗೀರ್‌ನ ದರಬಾರಿನ ಕೆಲವು ಚಿತ್ರಕಾರರ ಅತ್ಯಂತ ಸುಂದರ ರಚನೆಗಳು ಈಗಲೂ ಆಗಿನ ಕಾಲದ ಉಚ್ಚ ಕಲೆಯ ಪರಿಚಯ ಮಾಡಿಕೊಡುತ್ತವೆ.

ಉತ್ತಮ ಹಾಗೂ ಕಲಾತ್ಮಕ ಭವನಗಳ ನಿರ್ಮಾಣಗಳಲ್ಲಿ ಮುಸಲ್ಮಾನ ಅರಸರು ಬಹಳ ಅಭಿರುಚಿಯನ್ನು ತಾಳುತ್ತಿದ್ದರು. ದೇಶದ ವಿವಿಧ ಭಾಗಗಳಲ್ಲಿನ ಉತ್ತಮ ಭವನಗಳನ್ನು ಅವರು ನಿರ್ಮಿಸಿರುವರು. ದಿಲ್ಲಿಯ ಕುತುಬ್ ಮಿನಾರ್ ಸಹ ಅವರ ಕೊಡುಗೆಯೇ. ಷಹಜಹಾನನು ಕಟ್ಟಿಸಿರುವ ತಾಜಮಹಲ್ ನಮ್ಮ ಅತ್ಯುತ್ತಮ ಶಿಲ್ಪಕಲೆಯ ಪ್ರತೀಕವಾಗಿದೆ ಗುಜರಾತ್, ಬಿಜಾಪುರದಲ್ಲಿಯೂ ಕೆಲವು ಭವನಗಳು, ಆ ಕಾಲದ ಭವನಗಳೊಂದಿಗೆ ಹೋಲಿಕೆಯನ್ನು ಹೊಂದಿವೆ. ಗೋಲಗುಂಬಜ್, ಬಿಜಾಪುರದಲ್ಲಿ ಮೋಹಮದ್ ಆದಿಲ್‌ಷಾನಗೋರಿ ಮತ್ತು ಇತರ ಸ್ಮಾರಕ ಭವನಗಳು ಇಲ್ಲಿ ಉಲ್ಲೇಖಾರ್ಹವಾಗಿವೆ.

ಮೊಗಲ್ ರಾಜರು ಭವನ ನಿರ್ಮಾಣದಲ್ಲಿ ತುಂಬಾ ಆಸಕ್ತಿಯನ್ನು ತಾಳಿದ್ದರು ಅಕ್ಬರನು ಫತೆ ಪುರ ಸಿಕ್ರಿ ನಿರ್ಮಾಣಕಾರ್ಯವನ್ನು ಸ್ವಯಂ ನಿರೀಕ್ಷಿಸುತ್ತಿರುವ ಒಂದು ಚಿತ್ರ ದೊರೆತಿದೆ. ಮೊಗಲ್ ಅರಸರ ಮೂಲಕವಾಗಿ ನಿರ್ಮಾಣವಾಗಿರುವ ಸ್ಮಾರಕಗಳು ಈಗಲೂ ಅವರ ಈ ಅಭಿರುಚಿಯ ಪರಿಚಯವನ್ನು ಸೂಚಿಸುತ್ತವೆ. ಈ ಕ್ಷೇತ್ರದಲ್ಲಿ ಷಹಜಹಾನನ ಹೆಸರು ಅಮರವಾಗಿರುವುದು ಅವನು ಆಗ್ರಾದಲ್ಲಿ ಅಮೃತ ಶಿಲೆಯಲ್ಲಿ ತಾಜ್ ಮಹಲನ್ನು ತನ್ನ ಪ್ರಿಯ ಪತ್ನಿ ಮುಮ್ತಾಜಳ ಸ್ಮರಣಾರ್ಥವಾಗಿ ನಿರ್ಮಿಸಿದನು. ಇದು ಜಗತ್ತಿನಲ್ಲಿಯೇ ಅದ್ವಿತೀಯ ಸ್ಮಾರಕವೂ, ಉತ್ಕೃಷ್ಟ ಶಿಲ್ಪಕಲಾ ಕೃತಿಯೂ ಆಗಿದೆ ಎಂದು ವಿದ್ವಾಂಸರ ಅಭಿಪ್ರಾಯ.

**—ಶ್ರೀ ಸಿ. ಶಿವರಾಮ ಮೂರ್ತಿ.**

## ಗೆಳೆಯನಿಗೆ ಓಲೆ—೫

### ಕನ್ನಡಿಗರ ಕರ್ತವ್ಯ ಮನೋಭಾವನೆಯೂ ಒಂದಾಗಿರಬೇಕು

ಒಲುಮೆಯ ಗೆಳೆಯಾ,

ಬಹಳಷ್ಟು ದಿನಗಳಿಂದ ಕಾಣುತ್ತಿದ್ದ ಕನಸೊಂದು ಈಗ ನನಸಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಗಳಿಸಲು ಒಂದೂವರೆ ಶತಮಾನಗಳ ಕಾಲಾವಕಾಶ ಬೇಕಾಯಿತಾದರೆ, ಕರ್ನಾಟಕ ಪ್ರಾಂತ ನಿರ್ಮಾಣಕ್ಕಾಗಿ ಅನಂತರ ಒಂಭತ್ತು ವರ್ಷಗಳ ಸಿದ್ಧತೆಬೇಕಾಯಿತು. ಕರ್ನಾಟಕ ಬಹುಹಿಂದಿನಿಂದಲೂ ಪ್ರಸಿದ್ಧಿಗೊಂಡ ರಾಜ್ಯ. ಇಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಕಲಾತ್ಮಕ ಜೀವನದ ಪರಿಚಯ ಭಾರತದ ಉಳಿದೆಲ್ಲಾ ಭಾಷಾಪ್ರಾಂತಗಳಿಗಿದೆ. ಇಲ್ಲಿಯ ಜನರ ಧಾರ್ಮಿಕ ಭಾವನೆಯು ಪೆಚ್ಚೆಳ ಸರ್ವವಿದಿತ. ಈ ಬಗೆಯ ನಾಡೊಂದು ಒಗ್ಗೂಡಿದಂತಹ ಮಂಗಲಸಮಯವಿದು. ನಮ್ಮ ನಾಡಿಗಾಗಿಯೇ, ಇಂದು ತನ್ನ ಹೊಸ ರೂಪವನ್ನು ತಾಳುತ್ತಿರುವ ಕರ್ನಾಟಕದ ಭವಿಷ್ಯದ ಸೌಖ್ಯಕ್ಕಾಗಿ ಕೆಲವೊಂದು ಪ್ರಾಮುಖ್ಯ ಕಾರ್ಯಗಳಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಕರ್ತವ್ಯದೃಷ್ಟಿಯಿಂದ ಭಾಗವಹಿಸಬೇಕಾಗಿದೆ. ನಮ್ಮ ಪ್ರಾಂತ ಒಂದಾದೊಡನೆಯೇ, ನಮ್ಮೆಲ್ಲರ ಭಾವನೆ ಒಂದಾಯಿತೆಂದು ಭಾವಿಸಬೇಕಾಗಿಲ್ಲ—ಅಥವಾ ಸಮೃದ್ಧತೆ ಒದಗಬೇಕೆಂದಿಲ್ಲ. ಜನರ ಏಳಿಗೆ, ಜನರನ್ನು ಹೊಂದಿಕೊಂಡಿದೆ ಎಂಬುದು ನಿರ್ವಿವಾದ. ಇನ್ನಾದರೂ ನಮ್ಮ ಜನರು ತೆರೆದ ಮನಸ್ಸಿನವರಾಗಬೇಕು. ನಮ್ಮಲ್ಲಿರುವ ಸಂಕುಚಿತತೆ ತಲೆಮರೆಸಿ ಬಹುದೂರ ಹೋಗಬೇಕು. ಮನೋಭಾವನೆ ವಿಶಾಲವಾಗಬೇಕು. ಇದಕ್ಕಾಗಿ ನನ್ನ ಗೆಳೆಯಾ, ನಾಡಿನ ಯುವಕರ ಮುಂಗಡ ಕೆಲವು ಕಾರ್ಯಕ್ರಮಗಳನ್ನು ಇಡಬಯಸುತ್ತೇನೆ. ಈ ಕಾರ್ಯಕ್ರಮಗಳು ಅದೆಷ್ಟು ಸಮಂಜಸವಾಗಿ ನಾಡಿನ ಯುವಕರಿಗೆ ತೋರಿತೋ ಹೇಳಲಾರೆ. ನಮ್ಮ ಸಾಹಿತ್ಯ, ನಮ್ಮ ಆರ್ಥಿಕ ಮಟ್ಟ, ನಮ್ಮ ಧಾರ್ಮಿಕ ಭಾವನೆ, ಸಾಮಾಜಿಕ ಸ್ಥಿತಿಗಳು ಪುಷ್ಟಗೊಳ್ಳಬೇಕಾದರೆ ಈ ಬಗೆಯ ಕಾರ್ಯಾಚರಣೆಗಳು ಯೋಗ್ಯವೆಂದು ನನ್ನೆಣಿಕೆ.

ಮೊದಲಾಗಿ ನಮ್ಮ ಯುವಕರು ತಮ್ಮ ಮೇಲೇರಿರುವ ಹೊಣೆಯನ್ನು ತಿಳಿಯಬೇಕು. ಹೊಣೆಗಾರಿಕೆಯ ಸಂಪೂರ್ಣ ಪರಿಚಯವಾಗಬೇಕಾದರೆ ಕನ್ನಾಡಿನ ಪೂರ್ಣ ಇತಿಹಾಸದ ಅಧ್ಯಯನ ಅಗತ್ಯ. ನಿನ್ನಿನ ಸ್ಥಿತಿಗಳು ನಾಳೆಗೆ ಬರುವಂತಿಲ್ಲವಾದರೂ, ನಾಳಿನ ಸ್ಥಿತಿಗತಿಗಳ ನಿರ್ಮಾಣಕ್ಕೆ ಮೆಟ್ಟಿಲುಗಳಾಗಬಲ್ಲುವು. ನಮ್ಮ ಪ್ರಾಂತದ ಕುರಿತಾಗಿ ನಾವು ಹೆಮ್ಮೆ ಪಡಬೇಕು—ಆದರೆ ನಮ್ಮ ನಾಡಿನ ಸಂಪೂರ್ಣ ಚರಿತ್ರೆ ತಿಳಿದ ಬಳಿಕವಷ್ಟೇ! ಚರಿತ್ರೆಯನ್ನು ನಿರ್ಜೀವವಾಗಿ ಕಾಣುವಂತಹ ಮನೋವೃತ್ತಿ ನಮ್ಮಿಂದ ತೊಲಗಬೇಕು. ಸಜೀವವಾದುದು—ಅದರ ಪರಿಣಾಮ ಇಂದಿಗೂ ನಮ್ಮ ಮೇಲೆ ಆಗುತ್ತಲೇ ಇದೆ—ಎಂಬ ವಿಶ್ವಾಸದಿಂದ ಚರಿತ್ರೆಯ ಅಧ್ಯಯನ ಮಾಡಿದರೆ ಮಾತ್ರ, ನಮ್ಮ ಬಿಗ್ಗೂಡಿದ ನಾಡಿನ ಸುಹತ್ತಿಕೆಯ ತಿಳುವಳಿಕೆ ನಮಗೆ ಆಗಬಹುದು.

ಇಂದು ಒಗ್ಗೂಡಿದವರು ಕನ್ನಡಿಗರೇನೋ ನಿಜ. ಆದರೆ ಒಂದೆಡೆಯ ಜನರಿಂದ ಇನ್ನೊಂದೆಡೆಯ ಜನರು ಎಷ್ಟು ಭಿನ್ನ ಭಿನ್ನವಾಗಿರುತ್ತಾರೆ? ಎಲ್ಲರೂ ಮಾತನಾಡುವ ಭಾಷೆ ಕನ್ನಡವಾದರೂ, ಒಬ್ಬರಾಡುವ ಕನ್ನಡ ಇನ್ನೊಬ್ಬರಿಗೆ ಅರ್ಥವಾಗುವಂತಿಲ್ಲ. ಮಂಗಳೂರಿನ ಕಡೆಯವರಾದ ನಮಗೆ ಹುಬ್ಬಳ್ಳಿಯ ಕಡೆಯ ಕೆಲವು ವಿಶಿಷ್ಟ ಪದ ಪ್ರಯೋಗಗಳ ತಿಳುವಳಿಕೆ ಬೇಗನೇ ಆಗುವಂತಿಲ್ಲ. ಬಳಕೆಯಿಂದ ಬೆಳೆದು ಬಂದ ಕೆಲವು ಶಬ್ದಗಳಿವೆ. ಇವುಗಳಿಗೆ ವ್ಯಾವಹಾರಿಕ ದೃಷ್ಟಿಯಿಂದ ಮಹತ್ತಿಕೆ ಇವೆಯಾದರೂ, ಗ್ರಂಥಸ್ಥ ದೃಷ್ಟಿಯಿಂದ ಮಹತ್ತಿಕೆ ಇದ್ದಿರಲಾರದು. ಇಂತಹ ಸಂದರ್ಭಗಳು ಬಹಳವಾಗಿ ಬರಬಲ್ಲುವು. ಕನ್ನಡ ನಾಡಿನ ಸಮಗ್ರ ಚರಿತ್ರೆಯ ಪರಿಚಯವು ನಮಗಾಯಿತೆಂದರೆ, ಅಲ್ಲಿನ ಜನರ ಬಳಕೆ ಸ್ವಲ್ಪವಾದರೂ ಆಗಬಹುದೆಂಬ ವಿಶ್ವಾಸ ನನ್ನಲ್ಲಿದೆ. ಕನ್ನಾಡಿನಲ್ಲಿ ಹಲವಾರು ರಾಜ ಮನೆತನಗಳು ಆಳಿದುವು. ಹಲವಾರು ಪರರಾಷ್ಟ್ರಗಳ ಆಕ್ರಮಣಗಳಾಗಿವೆ. ಈ ಆಳ್ವಿಕೆ—ಆಕ್ರಮಣಗಳು ನಮ್ಮ ಸಂಸ್ಕೃತಿಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿರುತ್ತವೆ. ಈ ಪ್ರಭಾವ ಕೆಲವೊಮ್ಮೆ ನಾವು ಬೇರೆ ಬೇರೆ ಜನಾಂಗದವರೇ ಎಂಬ ಭಾವನೆಯನ್ನು ತರಬಹುದು. ಬೇರೆ ಬೇರೆ ಜನಾಂಗದವರೊಡನೆ ಒಗ್ಗೂಡಿ ಬಾಳಲು, ಬೇರೆ ಬೇರೆ ಸಂಸ್ಕೃತಿಯವರೊಡನೆ ಒಡನಾಟ ಬೆಳೆಸಲು—ಸರ್ವರಿಗೂ ಸಾಧ್ಯವಿಲ್ಲ. ಈ ಎಲ್ಲಾ ಬಗೆಯ ಅಡೆತೊಡರುಗಳನ್ನು ಕಿತ್ತೊಗೆಯಬಲ್ಲ ಒಂದೇ ಒಂದು ಸಾಧನೀಯ ಬಗೆ ಎಂದರೆ, ನಮ್ಮ ಸಂಸ್ಕೃತಿಯ ಸೂಕ್ಷ್ಮ ಚಿತ್ರಣವನ್ನಾದರೂ ನಾವು ತಿಳಿದಿರುವುದು.

ಬರಿಯ ಇತಿಹಾಸ ಪಠಣವಷ್ಟೇ ನಮ್ಮೆಲ್ಲರ ಭಿನ್ನತೆಯನ್ನು ಕಿತ್ತೊಗೆಯಬಲ್ಲುದು ಎಂಬ ಅಭಿಪ್ರಾಯ ನನ್ನದಲ್ಲ. ಅಭಿಪ್ರಾಯ ಭೇದಗಳನ್ನು ಮೂಲೆಗೊತ್ತಬೇಕಾದರೆ ಕೆಲವು ರಚನಾತ್ಮಕ ಕಾರ್ಯಗಳನ್ನು ಕೈಕೊಳ್ಳಬೇಕು. ಬೇರೆ ಬೇರೆ ಭೌಗೋಲಿಕ ಪ್ರಾಂತಗಳಲ್ಲಿ ವಾಸಿಸುತ್ತಿರುವವರೊಳಗೆ ಇರುವ ತುಚ್ಛ ಮನೋಭಾವನೆಯನ್ನು ತೊಡೆದಿಕ್ಕಬೇಕು. ಇದಕ್ಕೆ ಪ್ರತಿಯೊಬ್ಬರು ಪ್ರತಿಯೊಬ್ಬರ ರೀತಿನೀತಿಗಳನ್ನು ಗೌರವಿಸುವುದು ಸುಲಭವಾದ ಹಾದಿಯೆಂದು ನನ್ನ ಅಭಿಪ್ರಾಯ, ಬೇರೆಯವರ ಕ್ರಮ ನಿಯಮಗಳು ನಮಗೆ ಒಗ್ಗಲಿ ಅಥವಾ ಬಿಡಲಿ, ಅವುಗಳನ್ನು ತಿಳಿದುಕೊಳ್ಳುವಂತಹ ವಿಶಾಲತೆ ನಮ್ಮಲ್ಲಿ ಉಂಟಾಗಬೇಕು. ನಮ್ಮ ಇಂದಿನ ಯುವಕರಲ್ಲಿ ಇರುವ ಭಿನ್ನ ಮನೋಭಾವನೆ—ಒಂದೊಂದು ಪ್ರಾಂತದವರ ಬಗ್ಗೆ ಇರುವ ಕೀಳು ಮನೋವೃತ್ತಿ—ಇವುಗಳನ್ನು ತೊಡೆದಿಕ್ಕುವ ಮಹಾ ಸಾಹಸಕ್ಕೆ ಪ್ರತಿಯೊಬ್ಬನೂ ಸಿದ್ಧನಾಗಬೇಕು.

ಬೇರೊಂದು ಬಗೆಯ ಸಾಂಸ್ಕೃತಿಕ ಪರಿಣಾಮ ತಾಳಿರುವ ಜನರ ಬಳಿಗೆ ನಾವು ಹೋಗಬೇಕು, ನಮ್ಮೊಳಗಿರುವ ಭಿನ್ನತೆಯನ್ನು ಆದಷ್ಟು ನೀಗಬೇಕು. ಇದಕ್ಕಾಗಿ ವಿದ್ಯಾರ್ಥಿಗಳು, ಯುವಕರು ಪ್ರಾಂತದ ಒಂದೆಡೆಯಿಂದ ಇನ್ನೊಂದೆಡೆಗೆ ಸೌಹಾರ್ದ ದೃಷ್ಟಿಯಿಂದ ಸಂಚರಿಸಬೇಕು. ಆರ್ಥಿಕದೃಷ್ಟಿಯಿಂದ ಇದು ಸುಲಭಸಾಧ್ಯವೆಂದು ತೋರಲಾರದು ನಿಜ. ಆದರೆ ಪ್ರಯತ್ನಿಸಿದರೆ ಸಾಧ್ಯವಾಗಬಲ್ಲಂತಹ ಕೆಲಸ. ಈ ಬಗೆಯ ಸೌಹಾರ್ದ ಸಂಪರ್ಕಗಳಿಂದ ನಮ್ಮಲ್ಲಿರುವ ಭಿನ್ನ ಮನೋವೃತ್ತಿ ಅಳಿಸಿ ಹೋಗಬಹುದು.

ಯುವಕರು ಕನ್ನಾಡಿನ ಬೇರೆ ಬೇರೆ ಭಾಗದ ಯುವಕರೊಡನೆ ಪತ್ರವ್ಯವಹಾರ ಬೆಳೆಸಬೇಕು. ಪತ್ರವ್ಯವಹಾರಕ್ಕೆ ಪರಿಚಯದ ಅಗತ್ಯವಿದೆ. ಪರಿಚಯವನ್ನು ಹೇಗಾದರೂ ದೊರಕಿಸಿಕೊಳ್ಳಬೇಕು. ಇದಕ್ಕಾಗಿ ಯುವಕರು ಬೇರೆ ಬೇರೆ ಊರುಗಳಲ್ಲಿರುವ ಸಂಘಸಂಸ್ಥೆಗಳ ನೆರವುಪಡೆಯುವುದು ಹಿತಕರ. ಬೇರೆ ಬೇರೆ ಊರುಗಳಲ್ಲಿರುವ ಕರ್ನಾಟಕ ಸಂಘಗಳು ಸ್ನೇಹವ್ಯವಹಾರಗಳಿಗೆ ಸಾಕಷ್ಟು ಅನುವು ದೊರಕಿಸಿಕೊಟ್ಟಾವು. ಸಂಘಸಂಸ್ಥೆಗಳ ನೆರವು ಸಿಗದೆ ಹೋದರೆ ಆಯಾಯ ಪ್ರದೇಶಗಳಲ್ಲಿರುವ ಕೋಲೇಜು, ಹೈಸ್ಕೂಲಿನ ವಿದ್ಯಾರ್ಥಿಗಳ ಪರಿಚಯವನ್ನು ಆಯಾಯ ವಿದ್ಯಾಸಂಸ್ಥೆಯ ಮುಖ್ಯ ಅಧಿಕಾರಿಗಳಿಂದ ಮಾಡಿಸಿಕೊಳ್ಳಬಹುದು. ಈ ಬಗೆಯ ಪ್ರಯತ್ನವನ್ನು ನಡೆಸಿದರೆ ನಮ್ಮಲ್ಲಿರುವ ಭಿನ್ನಮನೋಭಾವ ಇನ್ನಷ್ಟು ಅಳಿಸೀತು ಎಂದು ಭಾವಿಸುತ್ತೇನೆ.

ಕನ್ನಾಡಿನ ರಚನೆಯಾದ ಬಳಿಕ ಅದರಲ್ಲಿರುವ ಕಲಾವಿದರ ಹೊಣೆಗಾರಿಕೆಗಳೂ ಬೆಳೆಯಬಹುದು. ಕೆಲವು ಕಲಾವಿದರು ತಮ್ಮ ಜನಕ್ಕಾಗಿ ಮಾತ್ರ ಎಂದು ರಚಿಸುವ ಕೃತಿಗಳು ಇನ್ನು ಮುಂದಕ್ಕೆ "ಕನ್ನಡಿನ ಜನತೆಗಾಗಿ" ರಚಿಸಲ್ಪಡಬೇಕು. ಇಲ್ಲಿರುವ ಕಲಾವಿದರು ಒಬ್ಬರೊಡನೊಬ್ಬರು ಪರಿಚಯ ಬೆಳೆಸಿಕೊಳ್ಳಬೇಕು. ತಮ್ಮ ಮನೋರೀತಿನೀತಿಗಳನ್ನು ಬೇರೆಯವರಲ್ಲೂ ಹಂಚಿಕೊಳ್ಳಬೇಕು.

ಸಾಮಾಜಿಕ ನಡವಳಿಕೆಗಳ ಕುರಿತಾಗಿಯೂ ಕೆಲವು ವಿಚಾರಗಳನ್ನು ನಾವು ಮಾಡಬೇಕಾಗಿದೆ. ಬೇರೆ ಬೇರೆ ಸಂಪ್ರದಾಯಗಳ ಒಳಿತು-ಕೆಡುಕುಗಳನ್ನು ತೂಗಿ ನೋಡಿ, ನಮಗೆ ಅನವಶ್ಯಕವಾದುದು ನಮ್ಮಲ್ಲಿದ್ದರೂ, ಅದನ್ನು ತೊಡೆದಿಕ್ಕಬೇಕು. ಹಿತಕರವಾದ ಸಮಾಜ ರಚನೆಗಾಗಿ ಪ್ರಯತ್ನಿಸಬೇಕು.

ಗೆಳೆಯ, ಕನ್ನಾಡಿನ ಒಕ್ಕೂಟವನ್ನು ನಾವೆಲ್ಲರೂ ಬಯಸಿದುದು ನಿಜ. ಆ ಬಯಕೆ ಈಗ ಕೈಗೂಡಿರುವುದೂ ನಿಜ. ಆದರೆ ನಮ್ಮ ಕರ್ತವ್ಯದ ಭಾರ ಇನ್ನುಮುಂದಕ್ಕೆ ಬೆಳೆಯಲಿದೆ. ಹಿಂದಕ್ಕೆ ನಮ್ಮ ಪ್ರಾಂತದ ಕುರಿತು ನಮಗೆಷ್ಟು ಹೆಮ್ಮೆ ಇದ್ದಿತ್ತೋ—ಅದೇ ಹೆಮ್ಮೆಗೆ ಈಗ ಕಾರ್ಯಾಚರಣೆಯ ರೂಪನ್ನಿತ್ತು—ಸುಸಂಸ್ಕೃತವಾದ, ಸುಭದ್ರ ಸಮಾಜರಚನೆಗೆ ಆರಂಭಿಸಬೇಕು.

ಯುವಜನರು ಮಾತ್ರ ಈತೆರನ ಕೆಲಸಗಳನ್ನು ಕೈಕೊಂಡರೆ ಸಾಲದು. ಕನ್ನಾಡಿನ ಪ್ರತಿಯೊಬ್ಬ ಪ್ರಜೆಯು "ಇದು ನನ್ನ ನಾಡು—ನನ್ನ ನಾಡಿನ ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಮಟ್ಟ ಬೆಳೆಯಬೇಕು; ಇದಕ್ಕಾಗಿ ನನ್ನ ಪ್ರತಿಯೊಂದು ಕಾರ್ಯಗಳಲ್ಲೂ ನಾನು ಉತ್ಸುಕನಾಗಬೇಕು— ವಿಚಾರವಂತನಾಗಬೇಕು," ಎಂದು ಪ್ರತಿಜ್ಞಾಪೂರ್ವಕ ನಿಶ್ಚಯವನ್ನು ತೊಡುವುದು ಈ ಮಂಗಲ ಸಮಯದಲ್ಲಿ ಅತ್ಯಾವಶ್ಯಕವಾಗಿದೆ.

ನಿನ್ನವ—

"ನಾಗೇಶ"





ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

MOOLKY BANK, LIMITED.



ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೩—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬ | ಸಂಚಿಕೆ ೧೨
VOL. 36 | 22—11—1956 | NO. 12

## ಸಮಾಜವಾದಿ ಆದರ್ಶ

### ಸರಕಾರಿ ಅಧಿಕಾರಕ್ಕೂ ಸಮಾಜವಾದಿ ಆಚರಣೆಗೂ ಸಂಬಂಧ ಬೆಳೆಸದೆ ಕಾರ್ಯತಃ ಸಮಾನತೆ, ಸೋದರತೆಯ ಸವಿ ಉಣಗೊಡುವುದೇ ನಿಜವಾದ ಸಮಾಜವಾದಿಯ ಕೆಲಸ

ಸಮಾಜವಾದವೆಂದರೆ ಆರ್ಥಿಕ ಅಭಿವೃದ್ಧಿ ಎಂದು ಮಾತ್ರ ಭಾವಿಸಿ ನಿಜವಾದ ಸಮಾಜವಾದಿ ಮೂಲ್ಯಗಳನ್ನು ಈ ಪ್ರಗತಿಯ ವೇದಿಕೆಯಲ್ಲಿ ಬಲಿ ಕೊಡುವುದು ಅಪಾಯಕಾರಿ ಚಪಲವಾಗಿದೆ. ನಿಜವಾದ ಮೂಲ್ಯಗಳನ್ನು ಹಿನ್ನೆಲೆಗೆ ಸರಿಸಿ, ಪ್ರಗತಿಯ ಬಗ್ಗೆ ಡಂಗುರವನ್ನು ಸಾರುವ ಸಂದರ್ಭ ಬಂದಾಗಲೆಲ್ಲ ನಾವು ಅಂಕೆ-ಸಂಖ್ಯೆಗಳ ಜಾದುವಿನ ಆಶ್ರಯವನ್ನು ಹೊಂದಲು ಹೋಗುತ್ತೇವೆ. ಇದರ ಪರಿಣಾಮ ಗೊತ್ತೇ ಇದೆ—ಶುದ್ಧ ಮೋಸ! ಇದನ್ನು ತಿಳಿಯದಿದ್ದರೆ ಮತ್ತು ಆರ್ಥಿಕ ಪ್ರಗತಿಯೇ ಸಮಾಜವಾದಿ ಆದರ್ಶದ ತಿರುಳಲ್ಲವೆಂಬ ಸತ್ಯವನ್ನು ಮನಗಾಣದಿದ್ದರೆ ನಮಗೂ ಕಮ್ಯೂನಿಸ್ಟರಿಗೂ ಯಾವದೇ ವ್ಯತ್ಯಾಸ ಉಳಿಯದು.

ನಮ್ಮ ಮುಂದೆ ಈಗಲೂ ಸಮಾಜವಾದಿ ಆದರ್ಶವು ಬಹಳ ದೂರದಲ್ಲಿಯೇ ಉಳಿದಿದೆ ನಿಜಕ್ಕೂ ಇಂದು ಹಿಂದಿಗಿಂತ ಹೆಚ್ಚು ಜನರ ತಲೆಯಲ್ಲಿ ಸಮಾಜವಾದವು ಹೊಕ್ಕಿದೆ, ಮತ್ತು ಇಷ್ಟು ಜನರು ಸಮಾಜವಾದದ ಕುರಿತು ವಿಚಾರಿಸಲಿಕ್ಕೆ ಹತ್ತಿದ್ದಾರೆ, ಎಲ್ಲ ಹೌದು. ಆದರೆ ಇದೆಲ್ಲವೂ ಸಮಾಜವಾದಿ ಆದರ್ಶದ ಬಗ್ಗೆ ಹಳೆಯ ಕಾಲದಲ್ಲಿ ಉಪಯೋಗಿಸಿಕೊಂಡ ಚೌಕಟ್ಟಿನಲ್ಲೆ ನಡೆದಿದೆ. ಅಂದರೆ, ಮುಖ್ಯವಾದ ಕಾರ್ಯಕ್ರಮವು ಸರಕಾರಿ ಅಧಿಕಾರವನ್ನು ಪಡೆಯುವುದೇ ಆಗಿದೆ ಎಂಬಂತಹ ಮನೋಭಾವನೆ ಸಮಾಜವಾದಿಗಳಲ್ಲಿ ಈಗಲೂ ಇದೆ. ಅಧಿಕಾರವನ್ನು ಹೊಂದುವುದು, ನಿಯಂತ್ರಣದಲ್ಲಿಡುವುದು ಮತ್ತು ವನ್ನು ಬಳಸುವುದು ಸಮಾಜವಾದಿ ಆದರ್ಶಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ಮುಂದೊತ್ತಲು ಅತ್ಯವಶ್ಯವೆಂಬ ಹಳೆಯ ಮನೋಭಾವನೆ ಈಗಲೂ ನಮ್ಮಲ್ಲಿ ಕಂಡು ಬರುತ್ತದೆ.

ಇಂದು ಸಮಾಜವಾದಿಗಳೆಲ್ಲರೂ ರಾಜಕೀಯ ಪಕ್ಷಗಳ ರೂಪದಲ್ಲಿ ಸಂಘಟನೆಯನ್ನು ಹೊಂದಿದ್ದು ಅಧಿಕಾರವನ್ನು ಮೊದಲು ಸಂಪಾದಿಸಿಕೊಳ್ಳಬೇಕು; ಆನಂತರವೇ ಎಲ್ಲ ವಿಧಾಯಕ ಕಾರ್ಯಕ್ರಮಗಳಲ್ಲೂ ಮಗ್ನರಾಗಲು ಸಾಧ್ಯ ಎಂಬಂತಹ ವಿಚಾರವನ್ನು ಹೊಂದಿದ್ದಾರೆ. ಇದು ಎಷ್ಟು ಮಾತ್ರಕ್ಕೂ ಸರಿಯಾದ ರೀತಿಯಲ್ಲ. ಸಮಾಜವಾದವೆಂದರೇನು? ಅದೊಂದು ಜೀವನ ವಿಧಾನ; ಮನೋಭಾವನೆಯು ಬೆಳೆದು ಬಂದ ಬಗೆ; ನೈತಿಕ ಮೂಲ್ಯಗಳಿಂದ ಕೂಡಿದ ನಡೆವಳಿಕೆ—ಇವಾವುದನ್ನೂ ಮೇಲಿನಿಂದ, ಅಂದರೆ ಸರಕಾರದ ಅಧಿಕಾರ ಬಲದಿಂದ—ಕೆಲವು ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ, ಬಂಡವಳಶಾಹಿತ್ವವನ್ನು ಇಲ್ಲವಾಗಿಸಿ—ರೂಪಿಸಲು ಶಕ್ಯವಿಲ್ಲ. ಸಮಾಜವಾದಿ ರೀತಿಯಲ್ಲಿ ನಮ್ಮನ್ನು ತಿದ್ದಿಕೊಳ್ಳುವುದೆಂದರೆ ನಾವು ತೀರ ಹೊಸಬರಾಗಿ ರೂಪುಗೊಂಡಂತೆಯೇ! ಹೊಸ ಮನುಷ್ಯರನ್ನು ನಿರ್ಮಿಸುವುದೇ ಸಮಾಜವಾದಿ ಆದರ್ಶದ ಬೆನ್ನು ಹತ್ತುವವರ ನಿಜವಾದ ಮೂಲಭೂತವಾದ ಕಾರ್ಯಕ್ರಮವಾಗಬೇಕು—ಇದನ್ನು ಒಪ್ಪಲೇನೊ ಎಲ್ಲರೂ ಒಪ್ಪುತ್ತಾರೆ, ಆದರೆ ಅಷ್ಟೇ ಬೇಗ ಮರೆಯುತ್ತಾರೆ ಎಂಬುದು ಬಹಳ ಶೋಚನೀಯ.

ಮನುಷ್ಯನನ್ನು ತಿದ್ದುವುದು ಅಥವಾ ಪುನಾರಚಿಸುವುದು ನಿಜವಾದ ಸಮಾಜವಾದಿ ಗುರಿಯಾದರೆ, ಮತ್ತು ಇದು ಸರಕಾರದ ಕಕ್ಷೆಯಿಂದ ದೂರವಿರುವುದಾದರೆ—ಸಮಾಜವಾದಿ ಚಳುವಳಿಗಾರರು ಇಂದು ರಾಜಕೀಯ ರಂಗದ ಚಟುವಟಿಕೆಗಳಿಗೆ ಕೊಡುತ್ತಿರುವ ಮಹತ್ವವು ಮೊದಲು ತಗ್ಗಬೇಕು; ಈ ಮಹತ್ವವೂ ಉತ್ಸಾಹವೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಭಿವ್ಯಕ್ತವಾಗಬೇಕು. ಮಾನವನ ಪುನಾರಚನೆಯು ಹೇಗೆ ಸಾಧ್ಯವಾದೀತು ಎಂಬುದು ಎಲ್ಲ ಸಮಾಜವಾದಿಗಳೂ ಗಂಭೀರವಾಗಿ ವಿಚಾರಿಸಬೇಕಾದ ವಿಷಯವಾಗಿದೆ. ಶಿಕ್ಷಣದಿಂದ ಸಾಧ್ಯವೆನ್ನಬಹುದು. ಕೆಲವರು ಶಿಕ್ಷಣವು ನಿಜಕ್ಕೂ ಅಮೂಲ್ಯವಾದ ಪಾತ್ರವನ್ನು ಈ ತಿದ್ದಿಗೆಯಲ್ಲಿ ವಹಿಸೀತು—ಆದರೆ ಇದೊಂದೇ ಪರಿಪೂರ್ಣವಾದ ಉತ್ತರವಾಗಲಾರದು. ನಿಜವಾಗಿ ನಮಗಿಂದು ಬೇಕಾದುದು ಸಮಾಜವಾದಿ ಆದರ್ಶ ಪ್ರೇಮಿಗಳಾದ ಜನರೆಲ್ಲರ ಒಕ್ಕಟ್ಟಿನ ಚಳವಳಿ—ಜನತೆಯ ಆಂದೋಲನ! ಆಂದೋಲನದ ಗುರಿಯೇ ಮಾನವನ ಪುನಾರಚನೆ. ಇದೇ ನಿಜವಾದ ಸಮಾಜವಾದಿ ಚಳವಳಿ. ಇದಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ; ಅಂದರೆ, ಸರಕಾರ ಸೂತ್ರಗ್ರಹಣದ ಅವಕಾಶವನ್ನು ಕಾಯುತ್ತಾ ಕುಳಿತಿರುವುದಕ್ಕೆ ಇಲ್ಲಿ ಎಡೆ ಇಲ್ಲ; ಆ ಗುರಿಯೇ ಇಲ್ಲಿಲ್ಲ. ಏಕೆಂದರೆ, ಮಾನವನ ಪುನಾರಚನೆಯ ಉದ್ದೇಶಕ್ಕೂ ಸರಕಾರಿ ಅಧಿಕಾರಕ್ಕೂ ನಿಕಟ ಸಂಬಂಧವಿದೆ ಎಂದು ನಿಜವಾದ ಸಮಾಜವಾದಿ ಚಳವಳಗಾರರು ತಿಳಿದಿಲ್ಲ.

ನಾವು ಯಾವುದನ್ನು ಸಮಾಜವಾದಿ ಆದರ್ಶದಂತೆ ರೂಪುಗೊಂಡ ಸಮಾಜವೆಂದು ಕರೆಯಬಹುದು? ತನ್ನ ಸ್ವಂತ ಹಿತಾಸಕ್ತಿಯನ್ನು ಸಮಾಜದ ಎಲ್ಲರ ಹಿತಾಸಕ್ತಿಯ ಅಧೀನ ಒಪ್ಪಿಸುವ ವ್ಯಕ್ತಿಗಳಿಂದ ತುಂಬಿದುದೇ ನಿಜವಾದ ಸಮಾಜವಾದಿ ಸಮಾಜ. ಇಂದು ಪ್ರತಿಯೊಬ್ಬನೂ ತನಗೆ ಹೆಚ್ಚು ಹೆಚ್ಚು ಬೇಕಾಗಿದೆ ಎಂದು ಆಶಿಸುತ್ತಿದ್ದಾನೆ; ಮತ್ತು ಏನಕೇನ ಪ್ರಕಾರೇಣ ಈ ಆಶೆಯನ್ನು ಪೂರೈಸಿಕೊಳ್ಳಲು ಹಂಬಲಿಸುತ್ತಿದ್ದಾನೆ. ಮನುಷ್ಯನು ತನ್ನ ಸಮಾಜದಲ್ಲಿಯ ಇತರರ ಯೋಗಕ್ಷೇಮಗಳ ಕಡೆಗೂ ಗಮನವನ್ನಿತ್ತು, ಅವರಿಗೂ ಮಾನವಾಗಿ ಬಾಳಗೊಡಬೇಕೆಂಬ ಬುದ್ಧಿಯನ್ನು ಹೊಂದಿ, ತನ್ನ ಆಶೋತ್ತರಗಳನ್ನು ಸಮಾಜದ ಇತರರಿಗೆ ಬಾಧಕವಾಗದ ರೀತಿಯಲ್ಲಿ ರೂಪಿಸಲು ಮುಂದಾಗದಿದ್ದರೆ ಮತ್ತು ತನ್ನನ್ನು ತಾನು ಸಂಯಮದಲ್ಲೂ ನಿಯಂತ್ರಣದಲ್ಲೂ ತಾನೇ ಇಟ್ಟುಕೊಳ್ಳಲು ಸಿದ್ಧನಾಗದಿದ್ದರೆ ಇಂದು ಸಮಾಜದಲ್ಲಿರುವ ಬೇರೆ ಬೇರೆ ವರ್ಗಗಳಿಗೂ ಗುಂಪುಗಳಿಗೂ ನಡೆದಿರುವ ಘರ್ಷಣೆಯು ನಿವಾರಣೆಯಾಗಲಾರದು.

ನಮ್ಮ ಸುದೈವದಿಂದ ವಿಜ್ಞಾನವು ಅನೇಕ ಸುಖೋಪಭೋಗದ ಸಲಕರಣೆಗಳನ್ನೊದಗಿಸಿದೆ; ನಮ್ಮ ಜೀವನವನ್ನು ಸುಖಮಯವಾಗಿಸಲು ಅದು ನಾನಾ ಬಗೆಯಿಂದ ಸಹಾಯವನ್ನು ಸಲ್ಲಿಸುತ್ತಿದೆ. ಇದರಿಂದ ವಿಶ್ವದಾದ್ಯಂತ ಸುಖಸಮೃದ್ಧಿಯ ದಿನಗಳನ್ನು ಜನರು ಕಾಣುವುದು ಸಾಧ್ಯವೆಂಬ ಆಲೋಚನೆ ಆಗುತ್ತದೆ—ಆದರೆ, ಮನುಷ್ಯನನ್ನು ಹಿಡಿದಿರುವ ಕ್ಷುಲ್ಲಕ ಬುದ್ಧಿಗೇನು ಮಾಡೋಣ? ತನ್ನ ಸ್ವಾರ್ಥ, ತನ್ನ ಲೋಭಗಳ ಪರವಶನಾಗಿ ಮನುಷ್ಯನು ವಿಶ್ವದ ಪ್ರಜೆಗಳಾಗಿರುವ ಇತರರನ್ನು ಮರೆತೇ ಬಿಡುತ್ತಾನೆ. ಈ ಜಗತ್ತು ಪರಸ್ಪರ ಕಲಹದಲ್ಲಿಯೂ ಪ್ರಕಟ ಹಾಗು ಪ್ರಚ್ಛನ್ನ ಯುದ್ಧದಲ್ಲಿಯೂ ಮಗ್ನವಾಗಿರುವುದೇಕೆ? ಇಲ್ಲಿ ಎಲ್ಲರಿಗೂ ಬೇಕಾದಷ್ಟು ಇಲ್ಲವೆಂಬುದು ಇದರ ಕಾರಣವಲ್ಲ. ಪ್ರತಿಯೊಬ್ಬನೂ ತನಗೆ ಎಲ್ಲರಿಗಿಂತ ಹೆಚ್ಚುಬೇಕು ಎಂಬ ಸಿದ್ಧಾಂತಕ್ಕೆ ಅಂಟಿ ಕುಳಿತಿರುವನೆಂಬುದೇ ಎಲ್ಲ ದುಃಖದ ಮೂಲ. ಆದುದರಿಂದ ನಾವಿಂದು ತಾಂತ್ರಿಕ ಹಾಗು ವೈಜ್ಞಾನಿಕ ಕ್ಷೇತ್ರದಲ್ಲಿ ಹೊಂದಿರುವ ಮುನ್ನಡೆಗೆ ನೈತಿಕ ಪ್ರಗತಿಯು ಪೂರಕವಾಗಿ ಒದಗಿಬರಬೇಕಾಗಿದೆ. ನೈತಿಕ ಪ್ರಗತಿಯು ವೇಗವು ಹಿಂದುಳಿದ ಪಕ್ಷದಲ್ಲಿ ನಮ್ಮ ಸಮಾಜವೆಂದಿಗೂ ಸುಧಾರಿಸಲಾರದು.

ಆದುದರಿಂದ ವರ್ಗಕಲಹದ ಆಧಾರವಿರುವ ಸಮಾಜವನ್ನು ಕಟ್ಟಲು ಹೋಗುವುದು ಎಂದಿಗೂ ಸಮಾಜವಾದಿ ಆದರ್ಶವೆನಿಸದು. ನಾವೆಲ್ಲರೂ ಯಾವ ಸಮಾಜವನ್ನು ಸೃಷ್ಟಿಸಲು ಬಯಸುತ್ತೇ

(೧೩ನೇ ಪುಟನೋಡಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ

ಹಿಂದೆ (31—10—1955)
ರೂಪಾಯಿ:- 76,00,000

ಒಟ್ಟು ಚಲಾವಣೆ ಮೊಬಲಗು

ಇಂದು:— (31—10—1956)
ರೂಪಾಯಿ:- 1,00,00,000 ಕ್ಕೂ ಮಿಕ್ಕಿದೆ.

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.

THE VIJAYA BANK LTD.

# ಅಮರ ನಾಟಕಕಾರ

## ಕೈಲಾಸಂ ತನ್ನ ನಾಟಕಕ್ಕೆ ಬಳಸಿದ ಮಿಶ್ರ ಭಾಷೆಗಾಗಿ ವಿದ್ವಾಂಸರು ವ್ಯಸನ ಪಟ್ಟರು- ಆದರೆ ಚುಚ್ಚು ಮಾತಿನಲ್ಲಿ ಸಮಾಜದ ಡೊಂಕು ತಿದ್ದಲಿಕ್ಕೆ ಹೊರಟ ಈ ಪ್ರಹಸನ ಪಿತಾಮಹ ಜಗ್ಗಲಿಲ್ಲ!

ಕನ್ನಡ ರಂಗಸ್ಥಳದಲ್ಲಿ ಕ್ರಾಂತಿಯನ್ನೆಬ್ಬಿಸಿದ ಪ್ರತಿಭಾಶಾಲಿಗಳಾದ ದಿವಂಗತ ಶ್ರೀ ತ್ಯಾಗರಾಜ ಪರಮಶಿವ ಕೈಲಾಸಂರವರ ಹೆಸರನ್ನು ಕೇಳದವರಿಲ್ಲ. ಅವರ ಪ್ರಹಸನಗಳನ್ನೋದಿ, ಆಡಿ, ಕೇಳಿ, ನಕ್ಕು-ನಲಿದು ಆತ್ಮಶೋಧ ಮಾಡಿಕೊಳ್ಳದ ಕನ್ನಡಿಗನಿಲ್ಲ. ಇಂಥ ಅದ್ಭುತ ಕಲೆಗಾರರ ಪರಿಚಯವನ್ನು ಮಾಡಿಕೊಡಲು ಇಲ್ಲಿ ಯತ್ನಿಸಿದ್ದೇನೆ. ಕನ್ನಡದ ಯುಗ ಪ್ರವರ್ತಕ ನಾಟಕಕಾರರಾದ ಇವರು ಇಂದಿಗೆ ಹತ್ತು ವರ್ಷಗಳ ಪೂರ್ವದಲ್ಲಿ ಅಂದರೆ ೨೩—೧೧—೧೯೪೬ರಲ್ಲಿ ಸ್ವರ್ಗಸ್ಥರಾದರು. ಪ್ರತಿ ವರ್ಷ ನವಂಬರ ೨೩ರಂದು ಕನ್ನಡ ಭಾಷಾಭಿಮಾನಿಗಳು ಇವರ ಪುಣ್ಯ ತಿಥಿಯನ್ನು ಆಚರಿಸಿ, ಅವರ ನಾಟಕಗಳನ್ನು ಆಡಿ ತೋರಿಸುವರು. ಕನ್ನಡದ ಎಲ್ಲ ಸಾಹಿತಿಗಳು ಒಂದಾಗಿ ಅವರ ಅಮರ ಆತ್ಮಕ್ಕೆ ತಮ್ಮ ಶ್ರದ್ಧಾಂಜಲಿಯನ್ನರ್ಪಿಸುವರು. ಈಗಲೂ ಕೂಡಾ ಕನ್ನಡ ನಾಟಕ ಸಾಹಿತ್ಯದ ಕಡೆಗೆ ತಮ್ಮ ದೃಷ್ಟಿಕೋನವನ್ನು ಪಸರಿಸುವಾಗ ಅವರ ನೆನಸು ಬಾರದಿರದು.

ಕನ್ನಡ ಪ್ರಹಸನ ಪಿತಾಮಹರಾದ ಟಿ. ಪಿ ಕೈಲಾಸಂರವರು ಸಾಧಾರಣ ೨೫ ನಾಟಕಗಳನ್ನು ಬರೆದಿದ್ದಾರೆ. ಅವರು ಯೋಚಿಸಿದವುಗಳೆಷ್ಟೋ! ಯೋಚಿಸಿ ಮರೆತವುಗಳೆಷ್ಟೋ! ಮಿತ್ರರಿಗೆ ಹೇಳಿದವುಗಳೆಷ್ಟೋ! ಅವರ ಮಿತ್ರರಲ್ಲಿ ಹೆಚ್ಚಿನವರು ನೆನಸಿಗೆ ಬಂದಷ್ಟನ್ನು ಬರೆದಿದ್ದಾರೆ. ಅಷ್ಟಾದರೂ ದೊರೆತುದು ಕನ್ನಡಿಗರ ಭಾಗ್ಯವೆನ್ನಬೇಕು.

ಕನ್ನಡ ನಾಟಕಗಳಲ್ಲಿ ಸಾಮಾಜಿಕ ನಾಟಕದ ಯುಗ ಆರಂಭ ಮಾಡಿದ ಶ್ರೇಯಸ್ಸು ಕೈಲಾಸಂರವರಿಗೆ ಮೀಸಲು. ಅಂತ್ಯದಲ್ಲಿ ಮೈಸೂರು ಚಾಮರಾಜ ಒಡೆಯರ ಪ್ರಯತ್ನದ ಫಲ ಸ್ವರೂಪವಾಗಿ ಇಂಗ್ಲಿಷ್ ಮತ್ತು ಸಂಸ್ಕೃತ ನಾಟಕಗಳ ಭಾಗವನ್ನು ಹೊರಗೆಡವಿದೆ ಭಾಷಾಂತರ ಮಾತ್ರವಾದವು. ಆದನ್ನು ಪೂರ್ತಿಗೊಳಿಸಲೆಂಬಂತೆ ಕೈಲಾಸಂರವರು ೧೯೨೧ರಲ್ಲಿ ನಾಟಕ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದರು.

ಹಾಸ್ಯವನ್ನೇ ಪ್ರಧಾನವಾಗಿಟ್ಟುಕೊಂಡು ಎಂತಹ ಗಹನ ವಿಷಯಗಳನ್ನಾದರೂ ಚರ್ಚಿಸುವ ಯೋಗ್ಯತೆ ಕೈಲಾಸಂರವರಿಗಿತ್ತು. ಕನ್ನಡ ನಾಟಕರಂಗವು ಅಧೋಗತಿಗಿಳಿಯುತ್ತಿರುವಾಗ ಅದನ್ನು ಉದ್ಧರಿಸಿದವರು ಕೈಲಾಸಂ. ಇವರಿಗೆ ಕನ್ನಡ, ಹಿಂದಿ, ತೆಲುಗು, ತಮಿಳು— ಮೊದಲಾದ ಭಾಷೆಗಳಲ್ಲಿ ವಿಶೇಷ ಪಾಂಡಿತ್ಯವಿತ್ತು. ಸಂದರ್ಭವೊದಗಿದಾಗ ತಮ್ಮ ಕೃತಿಗಳಲ್ಲಿ ಇತರ ಭಾಷೆಗಳನ್ನಳವಡಿಸಿಕೊಂಡು ತಮ್ಮ ಕೃತಿಗಳ ಹಿರಿಮೆಯನ್ನು ಹೆಚ್ಚಿಸುತ್ತಿದ್ದರು. ಕೈಲಾಸಂ ನಾಟಕಕಾರರಷ್ಟೇ ಅಲ್ಲ—ನಟರೂ ಹೌದು. ವಿಧವೆ, ಪೋಲಿಕಿಟ್ಟಿ—ಮೊದಲಾದ ಪಾತ್ರಗಳನ್ನು ಬಹಳ ರಮ್ಯವಾಗಿ ಅಭಿನಯಿಸುತ್ತಿದ್ದರು; ಅಲ್ಲದೆ ಹಾಸ್ಯ ಪಟುವೆನಿಸಿದ್ದರು ಪಾತ್ರಗಳ ಜೊತೆಗೆ ತಾನೇ ಬೆರೆತು ಕಂಡ ದೃಶ್ಯಗಳನ್ನು ನೋಟಕರಿಗೂ, ಓದುಗರಿಗೂ ತಿಳುಹುತ್ತಿದ್ದರು. ಇವರ ವ್ಯಂಗಾತ್ಮಕ ನುಡಿಗಳನ್ನು ಕೇಳಿದವರು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರು. ಇವರ ನಾಟಕದ ಮುಖ್ಯ ಪಾತ್ರಗಳು ಸಮಾಜದ ಹಿರಿಯ ವ್ಯಕ್ತಿಗಳಲ್ಲ—ಸಂಸಾರದ ಹಿರಿಯ ಕೂಸುಗಳು. ಸುಖ-ದುಃಖ, ಹಾಸ್ಯ ವಿಚಾರಗಳನ್ನು ನಾಟಕಗಳಲ್ಲಿ ಹಾಸುಹೊಕ್ಕಾಗಿ ಸೇರಿಸಿ, ಅದರಿಂದ ಇತರರ ಮನ ಮಿಡಿಯುವುದರಲ್ಲಿ ಕೈಲಾಸಂರವರನ್ನು ಮೀರಿಸಿದವರಿಲ್ಲ. ಅವರು ೭ ವರ್ಷಗಳ ವರೆಗೆ ಇಂಗ್ಲೆಂಡಿನಲ್ಲಿದ್ದು, ನಾಟಕ ರಚನಾಕೌಶಲ್ಯವನ್ನರಿತು ಬಂದಿದ್ದರು. ಅಲ್ಲದೆ ಕೆಲಸವು ಸರಕಾರೀ ಹುದ್ದೆಯಲ್ಲಿದ್ದು, ಅನಂತರ ಅದನ್ನು ಬಿಟ್ಟು ನಾಟಕ ಕ್ಷೇತ್ರಕ್ಕೆ ಕಾಲಿಟ್ಟರು.

"ಕೈಲಾಸಂ ಇಂಗ್ಲೆಂಡಿಗೆ ಹೋಗಿ ಬಂದ ಅನಂತರವೇ ಕನ್ನಡದಲ್ಲಿ ನಾಟಕ ಬರೆಯಲಾರಂಭಿಸಿದರು. ಅವರ ಮೊದಲನೆ ನಾಟಕ 'ಟೊಳ್ಳುಗಟ್ಟಿ' ರಂಗದ ಮೇಲೆ ಪ್ರದರ್ಶನವಾದಾಗ ನಮ್ಮ ಪಂಡಿತರು, ಪ್ರತಿಷ್ಠಿತ ಜನರು ಕೂಡಾ ಅದನ್ನು ಹಳಿದರು. ಕನ್ನಡ ಭಾಷೆಯನ್ನೇ ಕೈಲಾಸಂ ಹಾಳು ಮಾಡುತ್ತಿದ್ದಾರೆಂದು ಆಕ್ಷೇಪಿಸಿದರು. ಕೈಲಾಸಂ ನಿರಾಶರಾಗಲಿಲ್ಲ. ಜನತೆಯ ವಿರೋಧ ಅವರ ಪ್ರತಿಭೆಗೆ ಪುಟಗೊಟ್ಟಿತು. ನಾಟಕಗಳನ್ನು ಬರೆದು, ಓದಿ ಆಡಿಸಿ, ಅವುಗಳ ಬಗ್ಗೆ ಜನತೆಯಲ್ಲಿ ಅಭಿಮಾನ ಹುಟ್ಟಿಸಿದರು."

ಕೈಲಾಸಂರವರ ಸಂಕೀರ್ಣ ಭಾಷಾ ಪಾಂಡಿತ್ಯಕ್ಕೆ ಅವರ ಕೃತಿಗಳೇ ಸಾಕ್ಷಿ. ಇವರ ಪಾಂಡಿತ್ಯವನ್ನು ಜೀರ್ಣಿಸಿಕೊಂಡವರು ವಿರಳ. ಹಾಸ್ಯಮಯ ವಸ್ತುಗಳ ಆಯ್ಕೆ, ಸಂಭಾಷಣೆಯ ಕೌಶಲ, ವಸ್ತುಗಳನ್ನು ವಿಷದೀಕರಿಸುವ ರೀತಿ, ಭಾಷೆಯ ಮೇಲಣ ಹಿಡಿತ— ಇವುಗಳ ಪರಿಪೂರ್ಣತೆಯನ್ನು ಕೈಲಾಸಂರವರ ಕೃತಿಗಳಲ್ಲಿ, ನಾವು ಕಾಣಬಹುದು.

ಬಾಳಿನ ನೈಜ ಚಿತ್ರಣವನ್ನು ಕೈಲಾಸಂ ಸ್ಫುಟವಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸಬಲ್ಲರು. ಇವರ ಕೃತಿಗಳಲ್ಲಿ ನವಿರಾದ ಹಾಸ್ಯದ ಔತಣವಿದೆ; ಹಾಸ್ಯದ ಹಿಂದೆ ವಿಡಂಬನವಿದೆ; ವಿಡಂಬನದ ಹಿಂದೆ ನೀತಿಯ ಪಾಠವಿದೆ. ಅವರ 'ಹೋಂರೂಲ್', 'ವೈದ್ಯನ ವ್ಯಾಧಿ', 'ಸೀಕರ್ಣೆ ಸಾವಿತ್ರಿ", 'ನಂಬ್ರಾಹ್ಮಣ್ಯ", 'ಪೂಲಿ' – ಮುಂತಾದ ಕೃತಿಗಳು ಈ ದೃಷ್ಟಿಯಿಂದ ಶ್ರೇಷ್ಠವಾಗಿವೆ. 'ಪೂಲಿ"ಯು ಕೈಲಾಸಂರವರ ರುದ್ರ ನಾಟಕ. ಇತ್ತೀಚೆಗೆ ಇವರ ಗೆಳೆಯರು 'ಕೀಚಕ" ನಾಟಕವನ್ನು ಪ್ರಕಟಿಸಿದ್ದಾರೆ. ಅದನ್ನೋದಿದರೆ ಕೈಲಾಸಂ ಕಲ್ಪಿಸಿದ್ದ ಕೀಚಕನ ಪಾತ್ರವನ್ನು ತಿಳಿಯಬಹುದು ಕೈಲಾಸಂರವರ ಕಲ್ಪನೆಯಲ್ಲಿ ಕೀಚಕ ಅಮೋಘ ಪ್ರೇಮಿ! ಈ ತರದ ದೃಷ್ಟಿ ಕೋನವು ಇನ್ನಾರಿಗಿದೆ?

ಕೈಲಾಸಂರವರು ಮನಸ್ಸು ಮಾಡಿದ್ದರೆ ಸುಖಲೋಲುಪ್ತ ಜೀವನವನ್ನು ನಡೆಸಿಕೊಂಡು ಮನಸ್ಸಿನ ಚಪಲಕ್ಕಾಗಿ 'ಸಾಹಿತ್ಯಸೇವೆ" ಮಾಡಿಕೊಂಡು ಆರಾಮವಾಗಿರಬಹುದಿತ್ತು. ಅವರು ಈ ರೀತಿಯ ಸೋಗು ಹಾಕಿಕೊಳ್ಳಲು ಹಾಗೂ ಕಲ್ಪನಾ ಸಾಗರದಲ್ಲಿ ವಿಹಾರಾರ್ಥವಾಗಿ ಈಜಾಡಲು ಬಯಸಡೆ, ಕರ್ಮ ಜೀವಿಯಾಗಿ ಬಾಳ ಬಯಸಿದರು. ಸ್ವತಂತ್ರ ಮನೋಭಾವದ ಇವರು ಯಾರ ಅಧೀನದಲ್ಲೂ ಇರಬಯಸಲಿಲ್ಲ. ಇವರು ಕೀರ್ತಿಯನ್ನು ಕಸಕ್ಕೂ ಕಡೆಯಾಗಿ ಕಂಡವರು. ಆದರೆ ಕೀರ್ತಿ ಇವರನ್ನೇ ಹಿಂಬಾಲಿಸಿ ಬಂತು.

ಇವರು ಆಧುನಿಕ ಕನ್ನಡದ ಸಾಹಿತ್ಯದ ಬೆಳವಣಿಗೆಗೆ ಅಪಾರವಾದ ಸೇವೆಸಲ್ಲಿಸಿದ್ದಾರೆ. ನಮ್ಮ ಆಧುನಿಕ ಕನ್ನಡ ಸಾಹಿತಿಗಳಲ್ಲಿ ಇವರೊಬ್ಬ ಕ್ರಾಂತಿ ಪುರುಷರಾಗಿ ಕೆಲಸ ಮಾಡಿದರು. ಇವರ ಕೃತಿಗಳು ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಅಧ್ಯಾಯವನ್ನು ತೆರೆದುವು. ನಮ್ಮ ಸಮಾಜದ ವ್ಯವಸ್ಥೆಯನ್ನು ಕಂಡು ಇವರು ಹಾಸ್ಯಪೂರ್ಣವಾಗಿ ಒಂದಲ್ಲ ಒಂದು ಟೀಕೆ ಮಾಡುತ್ತಲೇ ಇದ್ದರು. ಪ್ರತಿಯೊಂದು ಟೀಕೆಯ ಹಿಂದೆಯೂ ಕವಿಯ ಮಾನದ ದೃಷ್ಟಿ ಅಡಗಿರುತ್ತಿತ್ತು.

ಕೈಲಾಸಂರವರು ಹಿರಿಯ ಸಾಹಿತಿಗಳಾಗಿದ್ದರೂ, ಅಹಂಕಾರದ ಲವಲೇಶವೂ ಅವರಲ್ಲಿರಲಿಲ್ಲ. ತನ್ನ ಕಲೆಯ ಅಂತಸ್ಸಿಗೆ ಪ್ರಶಸ್ತಿಯನ್ನು ಕೇಳಲಿಲ್ಲ. ಪ್ರಶಸ್ತಿಯೆಂದರೆ ಇವರಿಗಾಗದು. ಯಾವ ಸಭೆಗೂ, ಕೂಟಕ್ಕೂ ಬರುತ್ತಿರಲಿಲ್ಲ. ಹೆಚ್ಚೇಕೆ— ಅವರಿಗೆ ನಿರ್ದಿಷ್ಟವಾದ ನೆಲೆಯೇ ಇರಲಿಲ್ಲ. ಹೆಚ್ಚಿನ ಸಮಯವನ್ನವರು ಸ್ನೇಹಿತರ ಮನೆಯಲ್ಲೇ ಕಳೆಯುತ್ತಿದ್ದರು. ಪರಿವ್ರಾಜಕ ಬಾಳು ಕೈಲಾಸಂರವರದ್ದು.

ಒಂದೆರಡು ನಾಟಕಗಳನ್ನು ಬಿಟ್ಟು, ಅವರ ಎಲ್ಲ ನಾಟಕಗಳೂ ಸಾಮಾಜಿಕ ನಾಟಕಗಳಾಗಿವೆ. ಎಲ್ಲವುಗಳಲ್ಲಿ ಮಧ್ಯಮ ತರಗತಿಯ ಜನವರ್ಗದ ಜೀವನದ ನೈಜ ಚಿತ್ರಗಳು ರೂಪಿಸಲ್ಪಟ್ಟಿವೆ. ಹಾಸ್ಯರಸ ಪ್ರಧಾನವಾದ ಅವರ ನಾಟಕಗಳ ಮುಖ್ಯ ಧ್ಯೇಯ ಹಾಸ್ಯ ಮಾತ್ರವಲ್ಲ—ಸಮಾಜದ ಹೊಲಸು ನೀತಿಗಳನ್ನು ಪ್ರಕಟಗೊಳಿಸಿ, ಸಮಾಜ ಸುಧಾರಣೆಯನ್ನು ಮಾಡುವ ಏಕ ಮಾತ್ರ ಧ್ಯೇಯವಾಗಿದೆ.

ಇವರ ಕಲಾ ಹಿರಿಮೆಯನ್ನು ಕಂಡ ಜನತೆ ಮದರಾಸಿನಲ್ಲಿ ೧೯೪೫ರಲ್ಲಿ ನಡೆದ ೨೯ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೈಲಾಸಂರವರನ್ನು ಅಧ್ಯಕ್ಷರನ್ನಾಗಿ ಆರಿಸಿ ಕನ್ನಡ ಜನರಿಗೆ ಇವರಲ್ಲಿರುವ ಅಪಾರ ಗೌರವವನ್ನು ವ್ಯಕ್ತಪಡಿಸಿತು.

ಕೈಲಾಸಂರವರು 'ಏಕಲವ್ಯ' ಮತ್ತು 'ಕರ್ಣ' ಎಂಬೆರಡು ನಾಟಕಗಳನ್ನು ಇಂಗ್ಲಿಷಿನಲ್ಲಿ ರಚಿಸಿರುವರು. ಅವು ತುಂಬಾ ಜನ ಮೆಚ್ಚುಗೆಯನ್ನು ಪಡೆದಿವೆ. ಅವರ 'ಬಹಿಷ್ಕಾರ' ನಾಟಕದಲ್ಲಿ ವರದಕ್ಷಿಣೆಯ ದುಷ್ಪರಿಣಾಮವನ್ನು ಮಾರ್ಮಿಕವಾಗಿ ಚಿತ್ರಿಸಿರುವರು.

ಇವರ ಟೊಳ್ಳುಗಟ್ಟಿ' ಒಂದು ಕ್ರಾಂತಿಕಾರಿ ನಾಟಕವಾಗಿದೆ ೧೯೨೦ನೇ ಇಸ್ವಿಯಲ್ಲಿ ಕೈಲಾಸಂರವರ, ತಮ್ಮ ಪ್ರಸಿದ್ಧ ನಾಟಕ 'ಟೊಳ್ಳುಗಟ್ಟಿ'ಯನ್ನು ಪ್ರಕಟಪಡಿಸಿದರು. ಅದು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟುಮಾಡಿತು. ಶ್ರೀಯುತ ಆ. ನ. ಕೃಷ್ಣರಾಯರು ಇವರ ಈ ನಾಟಕ ಕೃತಿಯನ್ನು ಕಂಡು, "ಪಾಶ್ಚಾತ್ಯ ಭಾಷೆಯಲ್ಲಿ 'Doll's House' ಎಂಬ ನಾಟಕವು ಯಾವರೀತಿ ಕ್ರಾಂತಿಯನ್ನೆಬ್ಬಿಸಿತೋ, ಅದೇ ರೀತಿಯಲ್ಲಿ 'ಟೊಳ್ಳುಗಟ್ಟಿ' ಕನ್ನಡ ನಾಟಕ ಕ್ಷೇತ್ರದಲ್ಲಿ ಆಮೂಲ ಪರಿವರ್ತನಕ್ಕೆ ಕಾರಣವಾಗಿದೆ.' ಎಂದಿರುವರು. ಇವರು ಸಾಧಾರಣವಾಗಿ ಜನತೆಯೇ ಆಡುವ ಭಾಷೆಯ ಶೈಲಿಯಲ್ಲಿ ತಮ್ಮ ನಾಟಕಗಳನ್ನು ಬರೆಯುತ್ತ, ಕನ್ನಡ ಯುಗದಲ್ಲಿ ಹೊಸ ಸೂತ್ರಪಾತ್ರವನ್ನುಂಟುಮಾಡಿದರು. ಭಾಷಾ ಪಂಡಿತರು ಇತರ ಭಾಷೆಯನ್ನು ಕಡಿಸಿ ಬರೆದ ಕೈಲಾಸಂರವರ ಕೃತಿಗಳನ್ನು ಕಂಡು ಸಿಟ್ಟಿಗೆದ್ದ

(೮ನೇ ಪುಟ ನೋಡಿರಿ)

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
* *
ಮೈಸೂರು
ಸ್ಯಾಂಡಲ್ ಸಾಬೂನು
ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ
* *
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ನಂಬರು: ಐ. ಎಸ್. ಟಿ. ಎ. ಎ.

## ಹೊಸ ತೂಕ—ಅಳತೆ

# ಮೆಟ್ರಿಕ್ ಪದ್ಧತಿಯನ್ನು ಸ್ವೀಕರಿಸಲು ನಾವೆಲ್ಲರೂ ಒಪ್ಪಿದ್ದೇವೆ—ಏತಕ್ಕೆ?

ಈಗ್ಗೆ ಸುಮಾರು ಎಂಭತ್ತು ವರ್ಷಗಳ ಹಿಂದೆ ಭಾರತವು ತೂಕ ಮತ್ತು ಅಳತೆ ಮಾನಗಳನ್ನು ಪ್ರಮಾಣೀಕರಿಸುವ ಸಮಸ್ಯೆಯನ್ನು ಪರಿಹಾರಕ್ಕಾಗಿ ಕೈಗೆತ್ತಿಕೊಂಡಿತು. ರೂಪಾಯಿ ತೂಕವನ್ನವಲಂಬಿಸಿರುವ ತೊಲ—ಸೇರು ಪದ್ಧತಿಯಲ್ಲಿ ನಿಖರತೆ ಇರುವುದಿಲ್ಲವಾದ್ದರಿಂದ ಅದು ಸೂಕ್ತ ಪ್ರಮಾಣವೆನಿಸುವುದಿಲ್ಲ. ಇಂಗ್ಲೆಂಡಿನ ಅಡಿ—ಪೌಂಡು ಪದ್ಧತಿಯು ಭಾರತದ ಜನತೆಗೆ ಅನುಕೂಲವಲ್ಲದ ಬದಲಾವಣೆ ಯಾದ್ದರಿಂದ ಅದನ್ನು ಪರಿತ್ಯಜಿಸಲಾಯಿತು. ಮೆಟ್ರಿಕ್ ಪದ್ಧತಿಯನ್ನು ಆಚರಣೆಗೆ ತರದೆ ಇದ್ದರೂ ಅದು ಬಹಳ ಉಪಯುಕ್ತವಾದ ಪ್ರಮಾಣವೆಂದು ಪರಿಗಣಿಸಲಾಯಿತು.

ಭಾರತದಲ್ಲಿ ಬ್ರಿಟಿಷ್ ಪದ್ಧತಿಯು ತೂಕ ಮಾನದ ಅಸಮರ್ಪಕತೆಯನ್ನು ವಿವರಿಸುತ್ತಾ ಜಾನ್ ಸ್ಟ್ರಾಚಿಯವರು 105 ವರ್ಷಗಳ ಹಿಂದೆ "ಇಂಗ್ಲಿಷ್ ಪದ್ಧತಿಯ ತೂಕ ಮತ್ತು ಅಳತೆ ಪದ್ಧತಿಗಳು ತುಂಬಾ ಕ್ಲಿಷ್ಟವೂ, ತೊಡಕಿನವೂ ಆಗಿವೆ. ಅದು ಇಂಗ್ಲೆಂಡಿನಲ್ಲಿ ಶತಮಾನಗಳ ಕಾಲದಿಂದಲೂ ಬಳಕೆಯಲ್ಲಿದೆ ಎಂಬ ಒಂದೇ ಒಂದು ಕಾರಣದಿಂದ ಅವುಗಳನ್ನು ಈಗಲೂ ಆಚರಣೆಯಲ್ಲಿ ತರಲಾಗಿದೆ. ಈ ಪದ್ಧತಿಯನ್ನು ಭಾರತದಲ್ಲಿ ಆಚರಣೆಗೆ ತರಬೇಕೆಂಬುದನ್ನು ಕುರಿತು ಚರ್ಚೆ ಅಗತ್ಯವಾಗುವುದು" ಎಂದು ಬರೆದಿರುವರು.

ಅಂತಾರಾಷ್ಟ್ರೀಯವಾಗಿ ಜನಪ್ರಿಯವಾಗಿರುವ ಸರಳ ಮೆಟ್ರಿಕ್ ಪದ್ಧತಿಯನ್ನು ಭಾರತವು ಆರಿಸಿಕೊಂಡಿರುವ ಮೆಟ್ರಿಕ್ ಪದ್ಧತಿಯನ್ನು ಆರಿಸಿಕೊಳ್ಳುವುದರಿಂದ ಅನುದಿನದ ಕೆಲಸ ಸುಲಭವಾಗಿ ನಡೆಯುವುದು. ಉದಾಹರಣೆಗೆ ಮೀಟರಿಗೆ ರೂ. 1·30 ಸೆಂಟ್ (ನಯಾ ಪೈಸಾ)ನಂತೆ 3.5 ಮೀಟರ್. ಬಟ್ಟೆಗೆ 3·5×1·30=4·55 ರೂಪಾಯಿಗಳು.

ನೇರವಾದ ಗುಣಾಕಾರದಿಂದ ಇದು ಬರುವುದು. ಇದೇ ಲೆಕ್ಕಾಚಾರವನ್ನು ಈಗಿನ ಪದ್ಧತಿಯಿಂದ ಮಾಡಬೇಕಾದರೆ, ಗಜಕ್ಕೆ ರೂ. 1—6—0ಯಂತೆ 3½ ಗಜ ಬಟ್ಟೆಯ ಬೆಲೆಯು ರೂ. 4—13—0 ಆಗುವುದು. ಮೊದಲು 1—6—0ಯನ್ನು 3ರಿಂದ ಗುಣಿಸಬೇಕು. ಆಣೆಗಳನ್ನು ರೂಪಾಯಿಗೆ ಪರಿವರ್ತಿಸಬೇಕು. 1—6—0 ಯನ್ನು ಎರಡರಿಂದ ಭಾಗಿಸಬೇಕು. ಭಾಗಲಬ್ಧವನ್ನು ಅದಕ್ಕೆ ಸೇರಿಸಬೇಕು. ಇವೆಲ್ಲ ತುಂಬ ಸಮಯ ತಗಲುವ ಕಷ್ಟದ ಕೆಲಸ.

ಭಾರತದಲ್ಲಿ ಇಂದು ಸುಮಾರು ನೂರೈವತ್ತಕ್ಕೂ ಹೆಚ್ಚಿನ ತೂಕ ಮತ್ತು ಅಳತೆಯ ಪದ್ಧತಿಗಳಿವೆ. ಒಂದೇ ಸಮನಾದ ಮೆಟ್ರಿಕ್ ಪದ್ಧತಿಯನ್ನು ತರುವುದರ ಅಗತ್ಯವನ್ನು ಅವು ತೀವ್ರಗೊಳಿಸಿವೆ.

ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ 'ಪೈಲಿ' ಎಂದರೆ 5 ಸೇರು, ಇನ್ನು ಕೆಲವು ಭಾಗಗಳಲ್ಲಿ 4 ಸೇರು. ಉತ್ತರ ಪ್ರದೇಶದಲ್ಲಿ ಒಂದು ಮಣಕ್ಕೆ 60 ಸೇರುಗಳು—ಇದು ಗೋಧಿಯನ್ನು ಕೊಳ್ಳುವಾಗ. ಆದರೆ ನೀವು ಹಿಟ್ಟನ್ನು ಕೊಳ್ಳುವಾಗ ಮಣಕ್ಕೆ 40 ಸೇರಾಗುತ್ತದೆ.

ವಿವಿಧ ರಾಜ್ಯಗಳಲ್ಲಿರುವ ಕೃಷಿ ಮಾರುಕಟ್ಟೆ ಅಧಿಕಾರಿಗಳು ಸಗಟು ವ್ಯಾಪಾರಿಗಳು ಅನುಸರಿಸುವ ಮೋಸ ವ್ಯಾಪಾರಗಳಿಂದ ಬೇಸಾಯಗಾರರಿಗೆ ಅಗಾಧವಾದ ನಷ್ಟವಾಗುವುದೆಂದು ವರದಿ ಮಾಡಿರುವರು. ಬೇಸಾಯಗಾರರಿಂದ ಕೊಳ್ಳುವಾಗ ದೊಡ್ಡ ತೂಕವನ್ನೂ, ತಾವು ಕೊಡುವಾಗ ಚಿಕ್ಕ ತೂಕವನ್ನೂ ಅವರು ಅನುಸರಿಸುವರು. ಇಂತಹ ಪದ್ಧತಿಗಳು, ಬೇಸಾಯಗಾರರು ಮತ್ತು ಸಗಟು ವ್ಯಾಪಾರಿಗಳ ನಡುವೆ ಪರಸ್ಪರ ಅನುಮಾನವನ್ನು ಹುಟ್ಟಿಸುವುದು. ಆದ್ದರಿಂದ ಉತ್ಪಾದಕರು ತೂಕದಲ್ಲಿ ಕಳೆದುಕೊಳ್ಳುವುದನ್ನು ಕಲ್ಲುಮಣ್ಣುಗಳನ್ನು ಬೆರಸುವುದರಿಂದ ಸರಿಪಡಿಸಿಕೊಳ್ಳಲು ಹೋಗುವಂತಾಗುತ್ತದೆ.

ಇಂತಹ ಅಕ್ರಮ ಮತ್ತು ನಷ್ಟವನ್ನು ಪ್ರಮಾಣಬದ್ಧ ಅಳತೆ ಮತ್ತು ತೂಕಮಾನಗಳನ್ನು ಪಡೆಯುವುದರಿಂದ ಮಾತ್ರ ತಡೆಯಬಹುದು. ಮೆಟ್ರಿಕ್ ಪದ್ಧತಿಯನ್ನು ಅನುಸರಿಸುವ ಸಂಬಂಧವಾದ ಮಸೂದೆಯು ಲೋಕ ಸಭೆಯ ಮುಂದಿರುವುದು ಈ ಉದ್ದೇಶದಿಂದಲೇ.

1947ರಲ್ಲಿಯೇ ಶ್ರೀ ರಾಜಾಜಿಯವರು, ಈಗಿನ ತೂಕ ಮತ್ತು ಅಳತೆಯ ಮಾನಗಳು ಸರಿಯಾಗಿಲ್ಲವೆಂದೂ ಅವುಗಳನ್ನು ಪ್ರಮಾಣೀಕರಣಗೊಳಿಸುವುದೂ ದೇಶದಲ್ಲೇ ಒಂದೇ ರೀತಿಯ ಅಳತೆಯನ್ನು ಬಳಕೆಗೆ ತರುವುದೂ ಅಗತ್ಯವೆಂದೂ ಹೇಳಿದರು. ಅನುಸರಿಸಬೇಕಾದ ಪ್ರಮಾಣಬದ್ಧ ನಿಯಮವಾವುದು? ಈಗ ಬಳಕೆಯಲ್ಲಿರುವ ತೂಕ ಮತ್ತು ಅಳತೆಯ ಪದ್ಧತಿಯನ್ನು ಪ್ರಮಾಣೀಕರಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಆ ಪದ್ಧತಿಗಳನ್ನು ವ್ಯಾಪಕವಾಗಿ ಉಪಯೋಗಿಸುತ್ತಲೂ ಇಲ್ಲ; ಅವುಗಳಲ್ಲಿ ಒಂದು ಪ್ರಮಾಣತೆಯೂ ಇಲ್ಲ.

ಉದಾಹರಣೆಗೆ ಭಾರತದ ದಕ್ಷಿಣ ಭಾಗದಲ್ಲಿ ಹಲವುಕಡೆ ಸೇರು ಎಂದರೆ ಏನೋ ಗೊತ್ತೇ ಆಗುವುದಿಲ್ಲ. ಏಕೆಂದರೆ ಸೇರಿನ ತೂಕ ಒಂದೊಂದು ಕಡೆ ಒಂದೊಂದು ರೀತಿ ಇದೆ. ಅದು 8 ತೊಲಗಳಿಂದ 112 ತೊಲಗಳವರೆಗೂ ಇದೆ. ಆದ್ದರಿಂದ ನಾವು ಕಿಲೋಗ್ರಾಮ್‌ಗೆ ಸಮನಾದ ಒಂದು ಪ್ರಮಾಣವನ್ನು ಅನುಸರಿಸಿ ಅದನ್ನು ಸೇರೆಂದು ಕರೆಯಬಹುದು. ಆಗ ಸೇರೆಂಬ ಹೆಸರನ್ನುಳಿದು, ಪ್ರಮಾಣಬದ್ಧ ಸೇರು ಒಂದು ಹೊಸ ಮಾನವಾಗಿಯೇ ಉಳಿಯುವುದು.

ಬ್ರಿಟನ್ನಿನಲ್ಲಿ ಅಡಿ—ರಾತಲು ಪದ್ಧತಿಯನ್ನು ಅನುಸರಿಸುತ್ತಿದ್ದರೂ ಮೆಟ್ರಿಕ್ ಪದ್ಧತಿಯ ಮೌಲ್ಯವನ್ನು ಅಂಗೀಕರಿಸಲಾಗಿದೆ. ಲಾರ್ಡ್ ಕೆಲ್ವಿನ್‌ರವರು, "ಎಂಜಿನಿಯರರು ಮತ್ತು ಸರ್ವೆಯರರುಗಳ ಕಛೇರಿಯಲ್ಲಿರುವ ಗುಮಾಸ್ತರು ಮತ್ತು ನಕ್ಷೆಗಾರರು

(೧೦ನೇ ಪುಟ ನೋಡಿರಿ)

50

ವರ್ಷಗಳ

ಪ್ರಗತಿಪರ ಬ್ಯಾಂಕಿಂಗ್ ಸೇವೆ

50 ವರ್ಷಗಳ ಹಿಂದೆ 1-7-1906 ರಲ್ಲಿ ಕೆನರಾ ಬ್ಯಾಂಕು ಸ್ಥಾಪಿಸಲ್ಪಟ್ಟಿತು.

50 ವರ್ಷಗಳಿಂದ ಕೆನರಾ ಬ್ಯಾಂಕು ರಾಷ್ಟ್ರದ ಪ್ರಗತಿಯಲ್ಲಿ ವ್ಯಾಪಾರ ಉದ್ಯಮ ಕೈಗಾರಿಕೆಗಳ ಬೆಳವಣಿಗೆಗೆ ತನ್ನ ಸಹಾಯವನ್ನೂ ಸಲ್ಲಿಸುತ್ತಿದೆ.

ಸಣ್ಣ ಸಂಸ್ಥೆಯಾಗಿ ಆರಂಭವಾಗಿ, ತನ್ನ ಸೇವೆ, ಸ್ನೇಹ ಸೌಹಾರ್ದತೆ, ಆರ್ಥಿಕ ಭದ್ರತೆ, ಉತ್ತಮ ವ್ಯಾಪಾರ ಧೋರಣೆ ಇವುಗಳ ಮೂಲಕ ಕೆನರಾ ಬ್ಯಾಂಕು ಭಾರತದ ಪ್ರಗತಿಪರ ಪ್ರಮುಖ ಬ್ಯಾಂಕುಗಳಲ್ಲಿ ಒಂದಾಗಿರುತ್ತದೆ.

ನಮ್ಮ ಸುವರ್ಣ ಮಹೋತ್ಸವದ ಈ ಸುಸಂದರ್ಭದಲ್ಲಿ ನಮ್ಮ ಬೆಳವಣಿಗೆಗೆ ಕಾರಣರಾದ ಪೋಷಕರಿಗೆಲ್ಲಾ ನಮ್ಮ ಹಾರ್ದಿಕ ವಂದನೆಗಳು.

ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಇನ್ನೂ ಉತ್ತಮ ತರದ ಸೇವೆ ಸಲ್ಲಿಸುವ ಭರವಸೆ ಕೊಡುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

1906 ಸಮಸ್ತ ಜನತೆಯ ಸಹಾಯಕ ಬ್ಯಾಂಕ್ 1956

ಒಟ್ಟು ಚಲಾವಣೆ ಮೊಬಲಗು ರೂ. 17 ಕೋಟಿಗೂ ಮಿಕ್ಕಿದೆ.

# ಮಿಲಿಟರಿ ತರಬೇತಿ

## ಪ್ರಾದೇಶಿಕ ಸೇನೆಯು ನಮ್ಮ ತರುಣರನ್ನು ಸೈನಿಕ ಶಿಕ್ಷಣಕ್ಕಾಗಿ ಸ್ವಾಗತಿಸುತ್ತದೆ — ಆಧುನಿಕ ಕ್ಷತ್ರಿಯರಾಗಿ ಬಾಳುವ ಈ ಅವಕಾಶವನ್ನು ಎಂದಿಗೂ ಕಳೆದುಕೊಳ್ಳಲಾಗದು

ಆಧುನಿಕ ಯುಗದಲ್ಲಿ ರಕ್ಷಣಾ ಜವಾಬ್ದಾರಿಯು ಕೇವಲ ಕ್ರಮ ಬದ್ಧ ಸೇನಾ ಬಲವನ್ನಷ್ಟೇ ಅವಲಂಬಿಸಿಲ್ಲ. ಈ ಜವಾಬ್ದಾರಿಯು ನಾಗರಿಕರಿಗೂ ಸೇರುತ್ತದೆ. ಆದ್ದರಿಂದ ದೃಢಕಾಯರಾದ ಭಾರತೀಯರೆಲ್ಲರೂ ರಕ್ಷಣಾ ಕಾರ್ಯಗಳಲ್ಲಿ ಪಾಲುಗೊಳ್ಳಬೇಕು, ತಮ್ಮ ಸ್ವದೇಶವನ್ನು ಸಂರಕ್ಷಿಸುವುದಕ್ಕಾಗಿ ಸದಾ ಸಿದ್ಧರಾಗಿರಬೇಕು.

ಭಾರತದ ಪ್ರಾದೇಶಿಕ ಸೇನೆ, ನಾಗರಿಕರ ಸೇನೆ. ಅದು ಮೊನ್ನೆ ನವೆಂಬರ್ ೧೭ರಂದು ತನ್ನ ೭ನೇ ವಾರ್ಷಿಕೋತ್ಸವವನ್ನು ಆಚರಿಸಿತು. ೧೯೪೯ರಲ್ಲಿ ಪ್ರಾದೇಶಿಕ ಸೇನೆಯನ್ನು ಆರಂಭಿಸಲಾಯಿತು. ಏಳನೆಯ ವಾರ್ಷಿಕೋತ್ಸವಕ್ಕೆ ವಿಶೇಷ ಪ್ರಾಮುಖ್ಯತೆಯನ್ನೀಯಲಾಗಿದೆ. ಏಕೆಂದರೆ ಏಳು ವರ್ಷದ ಹಿಂದೆ ಈ ಸೇನೆಗೆ ಸೇರಿದವರೆಲ್ಲರೂ ಈಗ ತರಬೇತಿಯನ್ನು ಮುಗಿಸಿ ಮೀಸಲು ಸೇನೆಯ ಪಟ್ಟಿಗೆ ಸೇರಿರುವರು.

ಆಕ್ರಮಣಕ್ಕೆ ವಿರುದ್ಧವಾಗಿ ಹೋರಾಡುವುದಕ್ಕಾಗಿ ಯಾವ ರಾಷ್ಟ್ರವೂ ಸ್ಥಾಯಿ ಸೇನೆಯನ್ನು ಅಧಿಕ ಪ್ರಮಾಣದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಂದು ಪ್ರಗತಿಪರ ರಾಷ್ಟ್ರವೂ ತರಬೇತಿ ಪಡೆದ ಮತ್ತು ಶಿಸ್ತಿನಿಂದ ಕೂಡಿದ ಮೀಸಲು ಸೇನೆಯನ್ನು ಜರೂರಾತಿ ಸಂದರ್ಭಗಳಿಗಾಗಿ ಕೂಡಿಸಿರಬೇಕು.

ಈ ಗುರಿ ಸಾಧನೆಯ ದಾರಿಯಲ್ಲಿ, ಮೊದಲನೆಯ ಹೆಜ್ಜೆಯಾಗಿ, ಪ್ರಾದೇಶಿಕ ಸೇನೆಯಲ್ಲಿ ಏಳು ವರ್ಷ ತರಬೇತಿ ಪಡೆದವರನ್ನು ಮೀಸಲು ಸೇನೆಯ ಪಟ್ಟಿಗೆ ಸೇರಿಸಲಾಗುತ್ತಿದೆ. ಅಲ್ಲಿ ಅವರಿಗೆ ಅಲ್ಪಕಾಲಾವಧಿ ತರಬೇತಿಯನ್ನು ಕೊಟ್ಟು ಸಜ್ಜುಗೊಳಿಸಲಾಗುತ್ತಿದೆ.

ಕಳೆದ ಏಳು ವರ್ಷಗಳಿಂದ ಪ್ರಾದೇಶಿಕ ಸೇನೆಯು ತೀವ್ರ ವೇಗದಲ್ಲಿ ಪ್ರಗತಿ ಪಡೆಯುತ್ತಿರುವುದೇ ಇದು ಹೆಚ್ಚು ಜನಪ್ರಿಯವಾಗುತ್ತಿರುವುದಕ್ಕೆ ನಿದರ್ಶನವಾಗಿದೆ. ಇಂದು ಈ ಸೇನೆಯು ಸುವ್ಯವಸ್ಥಿತವೆನಿಸಿದೆ. ಆದಾಗ್ಯೂ ದೇಶದ ಜನಸಂಖ್ಯೆ ಹಾಗೂ ಅಗತ್ಯದ ದೃಷ್ಟಿಯಿಂದ ಇದು ಇನ್ನೂ ಸಾಲದಾಗಿದೆ. ಆದಾಗ್ಯೂ ದಕ್ಷತೆ ಹಾಗೂ ಗುಣಾಂಶಗಳಲ್ಲಿ ಪ್ರಾದೇಶಿಕ ಸೇನೆಯನ್ನು ಕ್ರಮಬದ್ಧ ಸೇನೆಯೊಂದಿಗೆ ಹೋಲಿಸಬಹುದು ಎಂಬುದು ತುಂಬ ತೃಪ್ತಿಕರವಾದ ವಿಷಯ.

ಇತ್ತೀಚಿನ ವರ್ಷಗಳಲ್ಲಿ ಪ್ರಾದೇಶಿಕ ಸೇನೆಯು ಸಾಧಿಸಿರುವ ಪ್ರಗತಿಯನ್ನು ಅವಲೋಕಿಸಿದರೆ, ಈ ಸೇನೆಯು ದೇಶದ ರಕ್ಷಣೆಯ ಕಾರ್ಯದಲ್ಲಿ ದ್ವಿತೀಯ ಸ್ಥಾನವನ್ನು ಗಳಿಸುವುದೆಂಬುದು ವೇದ್ಯವಾಗುವುದು.

ಪ್ರಾದೇಶಿಕ ಸೇನೆಯನ್ನು ದೇಶದಾದ್ಯಂತ ವ್ಯಾಪಕವಾಗಿ ಕೈಗೊಳ್ಳಲಾಗಿದೆ. ಪ್ರತಿ ವರ್ಷವೂ ಇದು ವಿಸ್ತಾರಗೊಳ್ಳುತ್ತಿದೆ. ಆದರೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬಿಸಿ ರಕ್ತದ ತರುಣರು ಬೇಕಾಗುತ್ತಾರೆ. ೨೧ ವರ್ಷಗಳಿಂದ ೪೫ ವಯಸ್ಸಿನವರೆಲ್ಲರೂ ಹತ್ತಿರದ ಪ್ರಾದೇಶಿಕ ಸೇನಾ ಕೇಂದ್ರಗಳಿಗೆ ಹೋಗಿ ತಮ್ಮ ಹೆಸರುಗಳನ್ನು ಕೊಡಬಹುದು. ಈಚೆಗೆ ಕಾಸರಗೋಡಿನಲ್ಲಿ ಪ್ರಾದೇಶಿಕ ಸೇನೆಯ ತರಬೇತಿ ಕೇಂದ್ರವೊಂದನ್ನು ತೆರೆದು, ಕೆಲವು ವಾರಗಳ ಸೈನಿಕ ಶಿಕ್ಷಣವನ್ನು ಕೊಡಲಾಯಿತು. ಇಂಥ ಕೇಂದ್ರಗಳನ್ನು ಆಗಾಗ್ಗೆ ಜನರ ಪ್ರಯೋಜನಾರ್ಥವಾಗಿ ಆದಷ್ಟು ಸಮೀಪದಲ್ಲಿ ಏರ್ಪಡಿಸಲು ಸರಕಾರವು ಉದ್ದೇಶಿಸಿದೆ.

ರಾಷ್ಟ್ರೀಯ ಜರೂರಾತಿ ಸಮಯಗಳಲ್ಲಿ ಈ ಸೇನೆಯು ಒಳಾಡಳಿತ ವಿಷಯಗಳಲ್ಲಿ ಕ್ರಮಬದ್ಧ-ಸೇನೆಗೆ ಕೊಂಚ ಅಥವಾ ಪೂರ್ಣ ನೆರವು ಕೊಡಬಲ್ಲುದು. ವಿಮಾನ ನಿಲ್ದಾಣ ಮತ್ತು ತೀರ ಪ್ರದೇಶಗಳ ರಕ್ಷಣೆ, ತಾಂತ್ರಿಕ ಸಿಬ್ಬಂದಿಯ ಪೂರೈಕೆ ಇತ್ಯಾದಿಗಳ ಜವಾಬ್ದಾರಿಯನ್ನು ಪ್ರಾದೇಶಿಕ ಸೇನೆಯು ವಹಿಸಿಕೊಳ್ಳಬಲ್ಲುದು ಎಲ್ಲಕ್ಕೂ ಮಿಗಿಲಾಗಿ ಅದು ಭಾರತೀಯ ಯುವಕರಿಗೆ, ವಿರಾಮ ಕಾಲಾವಧಿಯ ಮಿಲಿಟರಿ ತರಬೇತಿಯನ್ನೊದಗಿಸುವುದಕ್ಕೆ ಅವಕಾಶವನ್ನೀಯುವುದು.

ಪ್ರಾದೇಶಿಕ ಸೇನೆಯ ಎಲ್ಲಾ ದರ್ಜೆಗಳ ಅಧಿಕಾರಿಗಳೂ ಕಾರ್ಯ ಕುಶಲರೂ ದಕ್ಷರೂ ಆಗಿರುವರು. ಅವರಲ್ಲಿ ಅನೇಕರು ಜವಾಬ್ದಾರಿ ಸ್ಥಾನಗಳಲ್ಲಿದ್ದು ತಮ್ಮ ಕರ್ತವ್ಯವನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುತ್ತಿರುವರು.

ಪ್ರಾದೇಶಿಕ ಸೇನಾ ವಿಭಾಗದಲ್ಲಿ ಎಂಜಿನಿಯರಿಂಗ್, ರೈಲ್ವೆ ಸಿಗ್ನಲ್, ಇನ್ಫೆಂಟ್ರಿ, ವೈದ್ಯಕೀಯ ಇತ್ಯಾದಿ ಎಲ್ಲಾ ಸೇವೆಗಳೂ ಇರುವುವು. ಅಂಗಸೌಷ್ಠವ ಮತ್ತು ಅನುಭವವನ್ನು ಉತ್ತಮಪಡಿಸಿಕೊಳ್ಳುವುದರ ಜೊತೆಗೆ ಪ್ರಾದೇಶಿಕ ಸೇನೆಯಲ್ಲಿ ಸೇರಿ ಶಿಸ್ತನ್ನು ಸಹ ಜನರು ಕಲಿಯುವರು

ಪ್ರಾದೇಶಿಕ ಸೇನೆಗೆ ಅನನುಭವಿಗಳಿಂದ ಹಿಡಿದು ಸುಶಿಕ್ಷಿತ ಕೆಲಸಗಾರರವರೆಗೆ ಎಲ್ಲರೂ ಸೇರುವರು. ಕೆಲವು ಸಂಸ್ಥೆಗಳು ಪ್ರಾದೇಶಿಕ ಸೇನೆಗೆ ಸೇರಿದವರಿಗೆ ಕೆಲವು ರಿಯಾಯಿತಿಗಳನ್ನು ನೀಡಿರುತ್ತವೆ. ಕೆಲಸದ ಸಮಯದಲ್ಲಿಯೂ ಅವರಿಗೆ ಪೆರೇಡ್‌ಗೆ ಹೋಗುವುದಕ್ಕೆ ಅವಕಾಶವಿತ್ತಿದೆ. ವಾರ್ಷಿಕ ಶಿಬಿರಗಳಿಗೆ ಹೋಗುವಾಗ ವಿಶೇಷ ರಜೆ ಮತ್ತು ಬೋನಸ್ ಕೊಡುತ್ತಾರೆ.

ಪ್ರಾದೇಶಿಕ ಸೇನೆಯನ್ನು ಎರಡು ವರ್ಗಗಳಲ್ಲಿ ಕೂಡಿಸಲಾಗುತ್ತದೆ. ಪ್ರಾದೇಶಿಕ ಶಿಬಿರಕ್ಕೆ ಗ್ರಾಮಾಂತರ ಪ್ರದೇಶಗಳಿಂದ ಜನರನ್ನು ಸೇರಿಸಿಕೊಂಡು ಎರಡು ಮೂರು ತಿಂಗಳ ಅವಧಿಯ ತರಬೇತಿಯನ್ನು ಪ್ರತಿ ವರ್ಷವೂ ಕೊಡಲಾಗುವುದು ಕಾಸರಗೋಡಿನಲ್ಲಿ ತೆರೆದುದು ಇಂಥದೇ ಶಿಬಿರ. ನಗರ ವಿಭಾಗಕ್ಕೆ ಜನರನ್ನು ದೊಡ್ಡ ನಗರಗಳಲ್ಲಿ ಆರಿಸಲಾಗುವುದು. ಅವರಿಗೆ ಪ್ರತಿವಾರ ಸಾಯಂಕಾಲ ಭಾನುವಾರ ಮತ್ತು ರಜಾದಿನಗಳಲ್ಲಿ 'ಡ್ರಿಲ್' ಪದ್ಧತಿಯಲ್ಲಿ ತರಬೇತಿ ಕೊಡಲಾಗುವುದು ಅವರಿಗೆ ನಾಲ್ಕು ದಿನಗಳಿಗೆ ಕಡಿಮೆಯಿಲ್ಲದ ಶಿಬಿರಗಳನ್ನು ಏರ್ಪಡಿಸಲಾಗುವುದು.

ದೇಹ ದಾರ್ಢ್ಯವುಳ್ಳ ಭಾರತೀಯ ಪೌರರೆಲ್ಲರಿಗೂ ಈ ಸೇನೆಗೆ ಸೇರುವ ಅರ್ಹತೆ ಇರುವುದು. ಅವರ ವಯೋಮಿತಿ ೧೮ ರಿಂದ ೩೫ ವರ್ಷವಿರಬೇಕು. ಮಾಜಿ ಸೈನಿಕರು ಮತ್ತು ತಾಂತ್ರಿಕ ಅರ್ಹತೆಯನ್ನುಳ್ಳ ನಾಗರಿಕರಿಗೆ ಈ ವಯೋಮಿತಿಯು ಅನ್ವಯವಾಗುವುದಿಲ್ಲ.

ಪ್ರತಿಯೊಬ್ಬ ನಾಗರಿಕ ಮಾಲಕರು ಪ್ರಾದೇಶಿಕ ಸೇನೆಯಲ್ಲಿ ಸೇರಿದ್ದ ಸೈನಿಕರು ತನ್ನ ಮಿಲಿಟರಿ ತರಬೇತಿಯನ್ನು ಮುಗಿಸಿಕೊಂಡು ಬಂದ ನಂತರ ಅವನ ಮೊದಲಿನ ಸ್ಥಾನದಲ್ಲಿ ನೇಮಿಸಿಕೊಳ್ಳಬೇಕೆಂಬ ನಿಯಮವಿರುವುದು.

ಪ್ರಾದೇಶಿಕ ಸೇನೆಯ ಸಿಬ್ಬಂದಿಗೆ ಉತ್ತೇಜನವೀಯುವುದಕ್ಕಾಗಿ ಮಿಲಿಟರಿ ಕಾಲೇಜುಗಳಲ್ಲಿ ಒದಗಿಬರುವ ಸ್ಥಾನಗಳಲ್ಲಿ ನೂರಕ್ಕೆ ಎರಡೂವರೆಯಷ್ಟನ್ನೂ ಪ್ರಾದೇಶಿಕ ಸೇನೆಗೆ ಮೀಸಲಾಗಿಡಲಾಗುವುದು. ಅವರು ಆ ತರಬೇತಿಯಲ್ಲಿ ಯಶಸ್ವಿಯಾದರೆ ಅವರಿಗೆ ಸೇನೆಯಲ್ಲಿ ಕ್ರಮಬದ್ಧವಾದ ಕಮಿಷನ್ ಕೊಡಲಾಗುವುದು.

ಪ್ರಾದೇಶಿಕ ಸೇನೆಯ ಯಾವನೇ ಅಧಿಕಾರಿಯು ಅಥವಾ ಸೈನಿಕನು ಕೇಂದ್ರ ಸರಕಾರದವರ ವಿಶೇಷಾಜ್ಞೆ ಹೊರಡಿಸದ ಹೊರತು ಭಾರತದ ಗಡಿಯ ಹೊರಗೆ ಸೇವೆ ಸಲ್ಲಿಸಬೇಕಾಗಿಲ್ಲ.

ಪ್ರಾದೇಶಿಕ ಸೇನೆಯು ನಾಗರಿಕರಿಗೆ ಮಿಲಿಟರಿ ತರಬೇತಿಯನ್ನು ಕೊಡುವುದರಿಂದ ರಕ್ಷಣಾ ಶಾಖೆಯ ವೆಚ್ಚವು ಕಡಿಮೆಯಾಗುವುದು. ಈ ರೀತಿ ಉಳಿದ ಹಣವನ್ನು ಇತರ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬಹುದು. ದೇಶದ ರಕ್ಷಣೆಗಾಗಿ ದೊಡ್ಡದಾದ ಕ್ರಮಬದ್ಧ ಸೈನ್ಯವನ್ನಿಳಿಸಿಕೊಳ್ಳುವುದನ್ನು ಇಂದು ಯಾರೊಬ್ಬರೂ ಹೆಗ್ಗಳಿಕೆ ಎಂದು ತಿಳಿಯುವುದಿಲ್ಲ. ಆದರೆ ಆಪತ್ಕಾಲದಲ್ಲಿ ಸ್ವಾತಂತ್ರ್ಯ ರಕ್ಷಣೆಗೆ ನಾವು ಸರ್ವಸಜ್ಜಿತರಿರಬೇಕಾಗಿದೆ. ಕೇವಲ ಕಾಲಾಳು ಕಾಯಂ ಸೈನ್ಯದಿಂದಲೇ ನಾವು ಗಂಡಾಂತರಗಳನ್ನು ಯಶಸ್ವಿಯಾಗಿ ದೀರ್ಘ ಕಾಲದವರೆಗೆ ಎದುರಿಸಲಾರೆವು. ಇತಿಹಾಸ ಪ್ರಸಿದ್ಧವಾದ ರೋಮಿನ ಪತನವು ಕೇವಲ ಕಾಯಂ ಸೈನ್ಯವನ್ನಷ್ಟೆ ಸರಕಾರವು ನಂಬಿರುವುದರಿಂದಾಯಿತೆಂದು ಪ್ರಾಜ್ಞರು ಹೇಳುತ್ತಾರೆ. ಆದುದರಿಂದ ನಾವು ಸುಲಭ ವೆಚ್ಚದಲ್ಲಿ ಕ್ರಮಬದ್ಧವಾದ ಸೇನೆಯಷ್ಟೆ ಪರಿಣಾಮಕಾರಿಯಾದ ಸೇವೆಯನ್ನು ಸಲ್ಲಿಸಬಲ್ಲ ಪ್ರಾದೇಶಿಕ ಸೈನ್ಯವನ್ನು ಸಂಘಟಿಸುವುದು ಶಾಂತಿ ಕಾಲದ ಮುಖ್ಯ ಕಾರ್ಯಕ್ರಮವೆಂದು ಭಾವಿಸಬೇಕಾಗಿದೆ. ಈ ಸೈನ್ಯದಲ್ಲಿ ಸೇರಿ, ಯೋಗ್ಯ ಸೈನಿಕ ಶಿಕ್ಷಣವನ್ನು ಹೊಂದಿ, ಅಗತ್ಯ ಬಿದ್ದಾಗ, ಪ್ರಾಚೀನ ಕಾಲದ ವೀರ ಕ್ಷತ್ರಿಯರಂತೆ, ಮಧ್ಯಯುಗೀನ ಇತಿಹಾಸದ ಶೂರ ರಜಪೂತ ಯೋಧರಂತೆ. ದೇಶಕ್ಕಾಗಿ ಹೋರಾಡಲು ತಯಾರಿರಬೇಕಾಗಿದೆ

ನಮ್ಮ ನಾಗರಿಕರ ಮೇಲೆ, ತರುಣ ಜವಾನರ ಮೇಲೆ, ಬಿದ್ದಿರುವ ಕರ್ತವ್ಯ ಭಾರವಿದು ದಕ್ಷತೆಯಿಂದ ನಿರ್ವಹಿಸಲ್ಪಡಲಿ!

———


98 ವರ್ಷಗಳ ಖ್ಯಾತಿಗೆ ಸಿದ್ಧ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಟೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)

628 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ ೪) ಮೈಸೂರು S. I.



**The Canara Industrial & Banking Syndicate Ltd.**

Estd: 1925] [H. O. **UDIPI**, S. India.

| | | |
|---|---|---|
| Authorised Capital | = Rs. | 56,00,000 |
| Issued Capital | = Rs. | 32,23,787 |
| Subscribed Capital | = Rs. | 32,11,000 |
| Paid-up Capital | = Rs. | 27,45,000 |
| Reserve Funds | = Rs. | 15,00,000 |

Total Working Funds Exceed **10** Crores (As on 30-9-1956)

*BRANCHES:*

| | |
|---|---|
| Mysore State | 58 |
| Andhra | 13 |
| Kerala | 13 |
| Bombay | 8 |
| Madras | 2 |

**T. A. Pai**, B.Com.(Bom), M.L.A., *General Manager.*

**T. M. A Pai**, M.B.B.S., *Managing Director.*

# ಬಟಾಟೆಯ ಕತೆ

## ನಾವೆಲ್ಲರೂ ಬಟಾಟೆಯನ್ನು ನಿತ್ಯವೂ ತಿನ್ನುತ್ತೇವೆ, ನಿಜ —ಆದರೆ ಅದನ್ನು ಕ್ರಮದಂತೆ ಬೇಯಿಸಿ ತಿನ್ನುವವರು ಮಾತ್ರ ವಿರಳ

ಇಂದು ಬಟಾಟೆಯು ನಮ್ಮಲ್ಲಿ ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತದೆ ಯುರೋಪು ಮತ್ತು ಬೇರೆ ಪಾಶ್ಚಾತ್ಯ ದೇಶಗಳ ಜನರು ಬಟಾಟೆಯನ್ನು ಮೊದಲು ಬೆಳೆಸಿದರು. ಅಲ್ಲಿಂದ ಭಾರತಕ್ಕೆ ಇದರ ಪ್ರಸಾರವಾಯಿತು. ಬಟಾಟೆಯ ಪರಿಚಯ ಚೆನ್ನಾಗಿದ್ದುದರಿಂದಲೇ ಆಂಗ್ಲರು ಗೆಣಸನ್ನು "ಪೊಟಾಟೊ" (ಅಂದರೆ ಬಟಾಟೆ) ಜತೆಗೆ ಸೇರಿಸಿ, "ಸ್ವೀಟ್ ಪೊಟಾಟೊ" (ಅಂದರೆ ಸಿಹಿಯಾದ ಬಟಾಟೆ) ಎಂಬ ಹೆಸರಿನಿಂದ ಕರೆದರು.

ಈಗ ಎಲ್ಲರೂ ತಮ್ಮ ಆಹಾರದಲ್ಲಿ ಬಟಾಟೆ ಎನ್ನು ಬಳಸುವುದು ನಿತ್ಯಸಂಪ್ರದಾಯವಾಗಿದೆ. ಸಾಮಾನ್ಯವಾಗಿ ವರ್ಷವೊಂದರಲ್ಲಿ ಒಬ್ಬ ಮನುಷ್ಯನು ತನ್ನ ದೇಹ ಭಾರದಷ್ಟೇ ತೂಕದ ಬಟಾಟೆಯನ್ನು—ಬಟಾಟೆ ವಿಶೇಷವಾಗಿ ಉಪಯೋಗಿಸಲ್ಪಡುವ ಉತ್ತರ ಭಾರತದಲ್ಲಿ—ತಿನ್ನುವನೆಂದು ಅಂದಾಜು. ಆದರೆ ಇಷ್ಟು ಬಟಾಟೆಯನ್ನು ತಿಂದರೂ ಆ ಬಟಾಟೆಯಲ್ಲಿರುವ ಪೋಷಕಾಂಶಗಳು ಆತನ ದೇಹ ಪೋಷಣೆಗೆ ಸಂಪೂರ್ಣವಾಗಿ ನೆರವಾಗುವಂತೆ ಅಡುಗೆಯ ಕ್ರಮವನ್ನು ಮಾತ್ರ ಜನರು ಸರಿಪಡಿಸಿಲ್ಲ. ಬಟಾಟೆಯ ಉಪಯೋಗದ ಪ್ರಯೋಜನವು ಅದನ್ನು ಯೋಗ್ಯವಾದ ರೀತಿಯಲ್ಲಿ ಅಡುಗೆ ಮಾಡುವುದರಿಂದ ಮಾತ್ರವೇ ದೇಹಕ್ಕೆ ದೊರೆಯಬಲ್ಲುದು.

ಬಟಾಟೆಯು ಶಕ್ತಿದಾಯಿಯಾಗಿದೆ; ಅದನ್ನು ತಿನ್ನುವುದರಿಂದ ಸ್ಫೂರ್ತಿಯೂ ಕೆಲಸದಲ್ಲಿ ತೀವ್ರೇಚ್ಛೆಯೂ ಉಂಟಾಗುತ್ತವೆ. ಅದು ಘನವಾದ ಆಹಾರವಾಗಿದೆ; ಚೆನ್ನಾದ ರೀತಿಯಲ್ಲಿ ಅಡುಗೆ ಮಾಡಿದರೆ ಅದು ತುಂಬ ಸ್ವಾದಿಷ್ಟವೆನಿಸುತ್ತದೆ. ಬಟಾಟೆಯ ಶಕ್ತಿದಾಯಕ ಗುಣವು ಮೊದಲು ಯುರೋಪಿನಲ್ಲಿ ಅನುಭವಕ್ಕೆ ಬಂತು. ಅಲ್ಲಿ ಚಳಿಗಾಲದ ನಾಲ್ಕಾರು ತಿಂಗಳು ಯಾವ ತರದ ಫಲವಾಗಲೀ ತರಕಾರಿಯಾಗಲೀ ಸಿಗುವುದಿಲ್ಲ. ಈ ಅಭಾವದ ಪರಿಣಾಮವಾಗಿ ಜನರು ನಿತ್ರಾಣಿಗಳೂ ನಿಸ್ತೇಜರೂ ಉತ್ಸಾಹಹೀನರೂ ಆಗುತ್ತಿದ್ದರು. ಬಟಾಟೆಯನ್ನು ಉಪಯೋಗಿಸಲು ಕಲಿತ ಬಳಿಕ ಅವರೆಲ್ಲರೂ ಇಂಥ ಬಳಲಿಕೆಯಿಂದ ಸಂಪೂರ್ಣ ದೂರವಾದರು.

ಹಲ್ಲು ಅಲ್ಲಾಡುವ ಮತ್ತು ವಸಡಿನಲ್ಲಿ ರಕ್ತ ಬರುವ ರೋಗಕ್ಕಂತೂ ಬಟಾಟೆಯು ರಾಮಬಾಣದಷ್ಟು ಪರಿಣಾಮಕಾರಿಯಾದ ಔಷಧವೆಂದು ಪರಿಗಣಿಸಲ್ಪಟ್ಟಿದೆ. ಯುರೋಪಿನ ಜನರು ಇದನ್ನು ಮೊದಲಿಂದಲೂ ತಿಳಿದಿದ್ದರು. ಜೀವಸತ್ವಗಳ ನಾನಾ ಪ್ರಕಾರಗಳನ್ನು ಶೋಧಿಸಿದ ಬಳಿಕ, ಈ ತಿಳಿವಳಿಕೆಯು ಯಥಾರ್ಥವಾದುದೆಂದು ಸಿದ್ಧವಾಯಿತು. ಏಕೆಂದರೆ, ಗವಸಡನ್ನು ಟ್ಟಿಮುಟ್ಟಾಗಿಟ್ಟು ರಕ್ತಸೋರದಂತೆ ಮಾಡಬಲ್ಲ "ಸಿ" ಜೀವಾತುವೂ ಶಕ್ತಿ ಮತ್ತು ಉತ್ಸಾಹವನ್ನು ಹುಟ್ಟಿಸಲಿಕ್ಕೋಸ್ಕರ ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸಲು ನೆರವಾಗುವ "ಬಿ" ಜೀವಾತುವೂ ಬಟಾಟೆಯಲ್ಲಿ ಸಾಕಷ್ಟು ಹೆಚ್ಚಾಗಿಯೇ ಇದೆ.

ಈಗ "ಸಿ" ಜೀವಾತುವು ಜನರಿಗೆ ನಿಂಬೆ ಜಾತಿಯ ಫಲವಸ್ತುಗಳ ಮೂಲಕ—ಅಂದರೆ ಟೊಮಾಟೊ, ಮೋಸಂಬಿ, ಕಿತ್ತಳೆ ಇತ್ಯಾದಿಗಳಲ್ಲಿ—ಸಿಗುತ್ತದೆ. ಹಸಿ ತರಕಾರಿಗಳಿಂದಲೂ "ಸಿ" ಜೀವಾತುವು ವಿಪುಲವಾಗಿ ಲಭ್ಯವಾಗುತ್ತದೆ. ಪರಿಣಾಮವಾಗಿ "ಸಿ" ಜೀವಾತನ್ನು ಪಡೆಯಲಿಕ್ಕೋಸ್ಕರ ಬಟಾಟೆ ತಿನ್ನುವುದು ಅವಶ್ಯವೆಂಬ ಭಾವನೆಯು ಜನರಲ್ಲಿ ಹೆಚ್ಚಾಗಿಲ್ಲ ಆದರೊಂದು ಮಾತು ಬಟಾಟೆಯು ಜನರ ಮೆಚ್ಚಿಗೆಯ ಆಹಾರವಾಗಿ ಇಂದೂ ಉಳಿದಿದೆ; ಇನ್ನೂ ದೀರ್ಘ ಕಾಲದ ವರೆಗೆ ಉಳಿಯಬಲ್ಲುದು. ಕಿತ್ತಳೆ, ಟೊಮಾಟೊ, ಮೋಸಂಬಿಗಳನ್ನು ತಿನ್ನುವುದು ಎಲ್ಲರಿಗೂ ಸಾಧ್ಯವಾಗಲಿಕ್ಕಿಲ್ಲ. ಆದರೆ ಬಟಾಟೆಯು ಬಡವರೂ ತಿನ್ನುವ ಆಹಾರ ವಸ್ತು; ಮತ್ತು ಟೊಮಾಟೊ ಇತ್ಯಾದಿಗಳಿಗಿಂತ ಬಟಾಟೆಯೇ ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಲ್ಪಡುತ್ತದೆನ್ನುವುದೂ ಸತ್ಯ.

ಬಟಾಟೆಯಲ್ಲಿ ಶಕ್ತಿದಾಯಕ ಗುಣ ಎಷ್ಟಿದೆ? ಸಾಧಾರಣ ದೊಡ್ಡದಾದ ಒಂದು ಬಟಾಟೆ ಗಡ್ಡೆಯಲ್ಲಿ ಮನುಷ್ಯನಿಗೆ ನಿತ್ಯ ಬೇಕಾಗುವ "ಸಿ" ಜೀವಾತಿನ ನಾಲ್ಕರಲ್ಲಿ ಒಂದಂಶವೂ "ಬಿ" ಜೀವಾತಿನ ಆರನೇ ಒಂದಂಶವೂ ಇದೆ! ಒಂದು ಬಟಾಟೆ ಗಡ್ಡೆಯಿಂದ ಇಷ್ಟು ಶಕ್ತಿ ಸಿಗುವಾಗ, ಬಟಾಟೆಯನ್ನು ಸಾಕಷ್ಟು ಹೆಚ್ಚಾಗಿ ಉಪಯೋಗಿಸಿಕೊಂಡರೆ ಜೀವಾತುಗಳ ಪೂರೈಕೆಗೆ ವ್ಯವಸ್ಥೆ ತನ್ನಿಂದ ತಾನೇ ಆಗುತ್ತದೆ.

ಶಕ್ತಿಸ್ರೋತವಾಗಿರುವ ಬಟಾಟೆಯನ್ನು ಅಡುಗೆ ಮಾಡಲು ಮಾತ್ರ ಎಲ್ಲರಿಗೂ ತಿಳಿದಿಲ್ಲ. ತಪ್ಪು ಕ್ರಮಗಳನ್ನು ಅನುಸರಿಸಿ ಅಡುಗೆ ಮಾಡುವುದರಿಂದ ಅಥವಾ ಸಿಕ್ಕಪಟ್ಟೆಯಾಗಿ ಬೇಯಿಸಿ ತಿನ್ನುವುದರಿಂದ ಬಟಾಟೆಯಲ್ಲಿರುವ ಪೋಷಕಾಂಶಗಳು ನಷ್ಟ ಹೊಂದಿ, ಬಟಾಟೆ ತಿಂದರೂ ಲಾಭವಿಲ್ಲದಾಗುತ್ತದೆ. ಬಟಾಟೆಯಿಂದ ಶಕ್ತಿಯನ್ನು ಪ್ರಾಪ್ತಿಸಿಕೊಳ್ಳುವ ರಹಸ್ಯವೆಲ್ಲವೂ ಅದನ್ನು ಸರಿಯಾದ ಕ್ರಮವನ್ನನುಸರಿಸಿ ಬೇಯಿಸಿ, ತಿನ್ನುವುದರಲ್ಲಿದೆ.

ಸಿಪ್ಪೆಯನ್ನು ತೆಗೆಯದೇನೆ ಬಟಾಟೆಯನ್ನು ಬೇಯಿಸಬೇಕು. ಉಗಿಯಲ್ಲಿ—ನಾವು ಇಡ್ಲಿಯನ್ನು ಬೇಯಿಸುವಂತೆ—ಬೇಯಿಸುವುದು ಬಟಾಟೆಯಿಂದ ಅತಿ ಹೆಚ್ಚಿನ ಲಾಭವನ್ನು ಪಡೆಯುವ ಕ್ರಮವಾಗಿದೆ. ಇದಕ್ಕೆ ಸರಿಯಾದ ಪಾತ್ರೆಗಳಿಲ್ಲದಿದ್ದರೆ, ಒಂದು ತಪ್ಪಲೆಯಲ್ಲಿ ಬಟಾಟೆಯನ್ನು ಚೆನ್ನಾಗಿ ತೊಳೆದು—ಸಿಪ್ಪೆ ತೆಗೆಯದೆ—ಹಾಕಿ, ಸಾಕಷ್ಟು ನೀರನ್ನು ತಪ್ಪಲೆಗೆ ಸುರಿದು ಒಲೆಯ ಮೇಲಿಟ್ಟು, ಭದ್ರವಾಗಿ ತಪ್ಪಲೆಯನ್ನು ಮುಚ್ಚಿಡಬೇಕು. ಬಟಾಟೆಯು ಬೆಂದ ಬಳಿಕ ಅದನ್ನು ಹೊರತೆಗೆದು ಸಿಪ್ಪೆ ತೆಗೆಯಬೇಕೆಂದಿದ್ದರೆ ಅದನ್ನು ಕೂಡಲೇ ತೆಗೆಯಬೇಕು ಆದರೆ ಸಿಪ್ಪೆ ಸಹಿತವಾಗಿಯೇ ಬಟಾಟೆಯನ್ನು ತಿನ್ನುವುದು ತುಂಬ ಶ್ರೇಯಸ್ಕರ. ಏಕೆಂದರೆ ಬಟಾಟೆಯ ಸಿಪ್ಪೆಯು ಮಲಬದ್ಧತೆಯನ್ನು ನಿವಾರಿಸುತ್ತದೆ. ಬಟಾಟೆಯನ್ನು ಬೇಯಿಸುವುದಕ್ಕೆ ಮೊದಲು ತುಂಡು ಮಾಡುವುದಂತೂ ಎಷ್ಟು ಮಾತ್ರಕ್ಕೂ ಸಲ್ಲದು.

ಉಗಿಯಲ್ಲಿ ಬಟಾಟೆಯನ್ನು ಇಡಿಯಾಗಿ ಸಿಪ್ಪೆ ಸಮೇತ ಬೇಯಿಸುವುದರಿಂದ ಅದರಲ್ಲಿರುವ "ಸಿ" ಜೀವಾತು ನಷ್ಟವಾಗದೆ ಉಳಿಯುತ್ತದೆ. ಆದರೆ ಬಟಾಟೆಯನ್ನು ಬೆಂಕಿಯಲ್ಲಿ ಸುಟ್ಟು ತಿನ್ನುವುದರಿಂದ ೨೦%, ಹುರಿದು ತಿನ್ನುವುದರಿಂದ ೩೦%, ಮತ್ತು ಬೇಯಿಸುವುದಕ್ಕೆ ಮೊದಲು ಚೂರಿಯಿಂದ ತುಂಡರಿಸುವುದರಿಂದ ೫೦% "ಸಿ" ಜೀವಾತು ನಷ್ಟಗೊಳ್ಳುತ್ತದೆ. ಆದುದರಿಂದ ಬಟಾಟೆಯನ್ನು ಬೇಕಾದಷ್ಟು ತಿಂದರೂ ಶಕ್ತಿ ಮತ್ತು ಉತ್ಸಾಹದ ಅನುಭವವಾಗುವುದಿಲ್ಲ ಎಂದಾದ ಪಕ್ಷದಲ್ಲಿ, ಅದನ್ನು ಬೇಯಿಸುವ ಮತ್ತು ತಿನ್ನುವ ಕ್ರಮದಲ್ಲಿ ದೋಷವಿದೆ ಎಂದೇ ಲೆಕ್ಕಹಾಕಿಕೊಳ್ಳಬಹುದು. ಈ ದೋಷ ನಿವಾರಣೆಗೆ ಮೊದಲು ಪ್ರಯತ್ನಿಸಬೇಕು. ಬಟಾಟೆಯನ್ನು ಉಗಿಯಲ್ಲಿ ಬೇಯಿಸುವುದು ಸಾಧ್ಯವಾಗದಿದ್ದರೆ ತೊಗರಿಬೇಳೆ, ಅಥವಾ ಬೇರೆ ತರಕಾರಿಗಳೊಂದಿಗೆ ತುಂಡುಮಾಡದೆ ಇಡಿ ಬಟಾಟೆಯನ್ನು ಸೇರಿಸಿ, ಬೇಯಿಸಿ ತಿನ್ನುವುದು ಹಿತಕರ. ಇದರಿಂದ ಬಟಾಟೆಯ ಪೂರ್ಣ ಶಕ್ತಿ ಲಬ್ಧವಾಗುತ್ತದೆ.

ಹೆಚ್ಚಿನವರು ಬಟಾಟೆ ತಿಂದರೆ ಬೊಜ್ಜು ಬೆಳೆಯುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಇದು ಸರಿಯಾದುದಲ್ಲ. ಬೊಜ್ಜನ್ನು ದೂರಮಾಡಲು ಬಟಾಟೆಯು ಸಹಾಯಮಾಡುತ್ತದೆ ಎಂದರೆ ಆಶ್ಚರ್ಯವೇ ಆದೀತು! ಬಟಾಟೆ ಮತ್ತು ಮಜ್ಜಿಗೆಯನ್ನು ಮಾತ್ರ ಭೋಜನದಲ್ಲಿ ಉಪಯೋಗಿಸಿದರೆ, ವಾರ ವಾರವೂ ಹಲವು ರಾತಲು ತೂಕವನ್ನು ಇಳಿಸಬಹುದು. ಒಂದು ರಾತಲು ಗೋದಿಹಿಟ್ಟು ಅಥವಾ ಅಕ್ಕಿ, ಅಥವಾ ಜೋಳದ ಬದಲಿಗೆ ನಾವು ನಾಲ್ಕು ರಾತಲು ಬಟಾಟೆ ತಿನ್ನಬೇಕಾಗುತ್ತದೆ; ಒಂದು ರಾತಲು ತುಪ್ಪದ ಶಕ್ತಿ ಬೇಕಾಗಿದ್ದರೆ ಎಂಟು ರಾತಲು ಬಟಾಟೆ ಅಗತ್ಯ. ಒಂದು ರಾತಲು ಸಕ್ಕರೆಯ ಶಕ್ತಿ ಬರಲು ಆರು ರಾತಲು ಬಟಾಟೆ ತಿನ್ನಬೇಕು. ಮೂರು ರಾತಲು ಹಾಲಿನ ಶಕ್ತಿಯು ಎರಡು ರಾತಲು ಬಟಾಟೆಯಿಂದ ಬರುತ್ತದೆ. ಆದುದರಿಂದ ಆಹಾರದಲ್ಲಿ ಬಟಾಟೆಯ ಅಂಶವನ್ನೆ ಹೆಚ್ಚಿಸಿ, ಉಳಿದ ಮೇಲೆ ಹೇಳಿದ ಪದಾರ್ಥಗಳನ್ನು ಕಡಿಮೆ ಮಾಡಿದರೆ, ಸಹಜವಾಗಿಯೇ ಬೊಜ್ಜು ಇಳಿಯುತ್ತದೆ—ಏಕೆಂದರೆ ನಮ್ಮ ಹೊಟ್ಟೆಯ ಗಾತ್ರವು ಒಂದು ರಾತಲು ಅಕ್ಕಿಯನ್ನು ಮಾತ್ರ ಹೊಂದುವಂತಿರುವಾಗ ಅದರಲ್ಲಿ ಅಷ್ಟೇ ಶಕ್ತಿ ಸಂಪಾದಿಸಲಿಕ್ಕಾಗಿ ನಾಲ್ಕು ರಾತಲು ಬಟಾಟೆ ತುಂಬಿಸಲು ಸಾಧ್ಯವಿಲ್ಲವಲ್ಲ! ಆದರೆ ಎಂದಿಗೇ ಆಗಲಿ, ಬಟಾಟೆಯ ಹಲ್ವ ಮಾಡಿ ತಿಂದರೆ ಅಥವಾ ಬಟಾಟೆಯನ್ನು ಹುರಿದು ತಿಂದರೆ ಇದರ ವಿಪರೀತ ಪರಿಣಾಮವಾಗುತ್ತದೆ.

ಬಟಾಟೆಯು ಸುಲಭದಲ್ಲಿ ಜೀರ್ಣವಾಗುತ್ತದೆ. ಅದರ ಸಿಪ್ಪೆಯನ್ನು ತೆಗೆದ ಪಕ್ಷದಲ್ಲಿ ಆಮಾಶಯದಲ್ಲಿರುವ ಗಾಯಗಳಿಂದ ಬಳಲುವವರಿಗೂ ಇದನ್ನು ತಿನ್ನಗೊಡಬಹುದು. ನಿತ್ರಾಣಿಗಳೂ ಮುದುಕರೂ ಅನ್ನವನ್ನು ಜೀರ್ಣಿಸಲು ಸಾಧ್ಯವಾಗದಾಗ ಅವರಿಗೆ ಬಟಾಟೆಯನ್ನು ತಿನ್ನಗೊಡಬಹುದು. ಯಕೃತ್ತಿನ ರೋಗದಿಂದ ಬಳಲುವವರ ಮಟ್ಟಿಗೂ ಬಟಾಟೆ ತಿನ್ನಗೊಡುವುದರಿಂದ ದೋಷವಿಲ್ಲ—ಸಹಾಯವೇ ಅಧಿಕ.

ಬಟಾಟೆಯನ್ನು ಕೊಂಡುಕೊಳ್ಳುವಾಗ ಕೆಲವು ವಿಷಯಗಳನ್ನು ನೆನಪಿಟ್ಟುಕೊಳ್ಳಬೇಕು— ಗಡ್ಡೆಯು ದೊಡ್ಡದೂ ಗಟ್ಟಿಮುಟ್ಟಾದುದೂ, ರಾಸಾಯನಿಕ ಗೊಬ್ಬರ ಹಾಕಿದ ಗದ್ದೆಯಲ್ಲಿ ಬೆಳೆಯದುದೂ ಆಗಿದ್ದರೆ ಚೆನ್ನ. ಓರೆಕೋರೆಯಾಗಿ ಅದು ಬೆಳೆದಿರಬಾರದು. ಬಣ್ಣಗೆಟ್ಟ ಅಥವಾ ಕಲೆಗಳಿರುವ ಗಡ್ಡೆಯನ್ನು ಕೊಂಡುಕೊಳ್ಳಬಾರದು. ಗಡ್ಡೆಯನ್ನು ಕೈಯಲ್ಲಿ ಹಿಡಿದು ಒತ್ತಿದಾಗ ಶಿಥಿಲವಾಗಿ ಕಂಡರೆ, ಅದು ಕೊಳೆಯ ಹತ್ತಿದೆ ಎಂದೇ ಲೆಕ್ಕ. ಇದನ್ನೆಂದೂ ಉಪಯೋಗಿಸಬಾರದು. ತೆಗೆದುಕೊಂಡ ಬಳಿಕ ಬಟಾಟೆಯನ್ನು ಶೀತಲವಾದ ಕತ್ತಲೆ ಕೋಣೆಯಲ್ಲಿ ಸಂಗ್ರಹಿಸಿಡಬೇಕು. ಕೋಣೆಯು ಸೆಖೆಯಿಂದ ಕೂಡಿದ್ದರೆ ಗಡ್ಡೆಯು ಮೊಳೆಯ ತೊಡಗೀತು!

**—ಡಾ. ಗೋಪಾಲಕೃಷ್ಣ ಸರಾಫ.**

ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ
ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.
ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.
1956 ನಮ್ಮ ರಜತಮಹೋತ್ಸವದ ವರ್ಷ
ಸ್ಥಾಪನೆ: 1931
ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್
ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು
ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ-ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.

೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ.
ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ
ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.
ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ
ಮತ್ತು ಗುಳಿಗೆಗಳು
ಸೋಲ ಮ್ಯಾನುಫ್ಯಾಕ್ಚರರು:
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,
ಬಾಟ್ಲಿವಾಲಾ ಬಿಲ್ಡಿಂಗ್ಸ್ ೧೨ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.
Tele add "CAWASHABAD"

# NAVAYUGA

Popular Kannada Weekly

*Founder:—*

**A. B. SHETTY**, *M. L. A.*

Former Minister for Public Health, Govt. of Madras.

At Present Minister for Health Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
| --- | --- | --- |
| ೩೬ | ೨೨-೧೧-'೫೬ | ೧೨ |


## ಕಡಲ ಕಣಜ

ನವಮೈಸೂರಿನ ಕಂದಾಯ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ಬೆಳಗಾವಿಯಲ್ಲಿ ಮೊನ್ನೆ ಮಾತನಾಡುತ್ತಾ ತಮ್ಮ ಸರಕಾರವು ಮೈಸೂರಿನ ನೈಸರ್ಗಿಕ ಸಂಪತ್ತನ್ನು ಚೆನ್ನಾಗಿ ಬಳಸಿಕೊಳ್ಳಲು ನಿರ್ಧರಿಸಿದೆ ಎಂದರಲ್ಲದೆ ೨೦೦ ಮೈಲುಗಳಷ್ಟು ಉದ್ದದ ಕರಾವಳಿಯಲ್ಲಿ ಮತ್ಸ್ಯ ವ್ಯವಸಾಯವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಪ್ರತ್ಯೇಕ ಮಂತ್ರಿ ಶಾಖೆಯನ್ನೇ ತೆರೆಯುವ ವಿಚಾರವಿದೆ ಎಂದೂ ಹೇಳಿದರು. ಇದು ನಿಜಕ್ಕೂ ಬಹಳ ಸಂತೋಷದಾಯಕವಾದ ಮತ್ತು ಸ್ವಾಗತಾರ್ಹವಾದ ವಿಷಯ. ಇಷ್ಟರ ವರೆಗಿನ ನಮ್ಮ ಪರಿಸ್ಥಿತಿಯು "ಉಣ್ಣೆ ಕೆಚ್ಚಲೊಳಿದ್ದೂ ಉಣ್ಣದದು ನೊರೆಹಾಲು..." ಎಂಬಂತಿತ್ತೆನ್ನಬಹುದು; ನಮಗೆ ಬೇಕಾದಷ್ಟು ನೈಸರ್ಗಿಕ ಸಂಪತ್ತಿನ ಕೊಡುಗೆ ಇದ್ದರೂ ಅದನ್ನು ಸದುಪಯೋಗಪಡಿಸಿಕೊಳ್ಳಲು ಸಹಾಯ ಮಾಡುವಂತಹ ಸರಕಾರವಿರಲಿಲ್ಲ ಎಂದರೂ ತಪ್ಪಿಲ್ಲ. ಜಲಪಾತಗಳಿಗೆ ಹೆಸರಾಗಿರುವ ಪಶ್ಚಿಮ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ಎಷ್ಟೋ ವಿದ್ಯುದಾಗರಗಳು ತಲೆ ಎತ್ತುವುದು ಸಾಧ್ಯ; ಮೈಸೂರು ಗೆರಸೊಪ್ಪೆಯ ಜಲಪಾತವನ್ನು ೧೯೪೮ರಷ್ಟು ಹಿಂದೆಯೇ ಉಪಯೋಗಿಸಿಕೊಂಡಿತು. ನೆರೆಕರೆಯ ದಕ್ಷಿಣ—ಉತ್ತರ ಕನ್ನಡ ಜಿಲ್ಲೆಗಳಿಗೆ, ಮತ್ತು ಧಾರವಾಡದಾಚೆ ವಿದ್ಯುಚ್ಛಕ್ತಿಯು ಪೂರೈಕೆಯಾಗಲು ೧೪ ವರ್ಷಗಳಷ್ಟು ಕಾಲ ಕಾಯಬೇಕಾಯಿತು. ಆಂಧ್ರದ ರಾಯಲಸೀಮೆಗೆ ಜೋಗಿನ ವಿದ್ಯುತ್ತನ್ನು ನಾಲ್ಕು ವರ್ಷಗಳ ಮೊದಲೇ ಹರಿಯಿಸಲು ಏರ್ಪಾಡಾಯಿತು—ಹತ್ತಿರದ ನಮ್ಮ ಜಿಲ್ಲೆಗೆ ಬರಲು ಮತ್ತೂ ಕಾಯುವ ದುರ್ದೈವ ಬಂತು. ಇದು ಮದ್ರಾಸು ಸರಕಾರವು ಉದಾಸೀನ ಮಾಡಿದುದರ ಫಲ; ಹಳೆ ಮೈಸೂರಿನ ಅನಾಸ್ಥೆಯು ಇನ್ನೊಂದು ಕಾರಣ. ಇದೇ ಪ್ರಕಾರವಾಗಿ ಬಂದರದ ಪ್ರಶ್ನೆಯೂ ಮೈಸೂರಿನ ಅನಾಸ್ಥೆಯಿಂದಾಗಿಯೇ ಹಿಂದುಳಿಯಿತು—ಮಂಗಳೂರು, ಮಲ್ಪೆ, ಭಟ್ಕಳ ಮತ್ತು ಕಾರವಾರಗಳೆಂಬ ನಾಲ್ಕು ಬಂದರುಗಳಲ್ಲಿ ಯಾವುದನ್ನಾದರೂ ಒಂದನ್ನು ಹಳೆ ಮೈಸೂರು ಎತ್ತಿ ಹಿಡಿಯುತ್ತಿದ್ದರೆ, ಮತ್ತು ತನಗೆ ಮದ್ರಾಸಿನ ಬಂದರದ ಮೂಲಕ ವ್ಯಾಪಾರ ವ್ಯವಹಾರ ನಡೆಸುವುದು ತುಂಬ ಕಷ್ಟದ ಕೆಲಸವೆಂದು ಆಗ್ರಹದಿಂದ ಹೇಳುತ್ತಿದ್ದರೆ ಇಂದು ಕಾಂಡ್ಲಾದಂತೆ ಪಡುಕರಾವಳಿಯ ಮಲ್ಪೆ—ಅಥವಾ ಮೈಸೂರಿನ ಬೆಂಬಲಪಡೆದ ಬೇರೆ ಯಾವುದಾದರೊಂದು—ಬಂದರು ಅಭಿವೃದ್ಧಿಯನ್ನು ಹೊಂದುತಿತ್ತೆನ್ನಬಹುದು. ಆಂದಿನ ಮೈಸೂರಿಗೆ ತನ್ನದೆನ್ನುವ ಒಂದೇ ಒಂದು ಮೈಲು ಉದ್ದದ ಕರಾವಳಿಯೂ ಇರಲಿಲ್ಲ—ದಕ್ಷಿಣೋತ್ತರ ಕನ್ನಡ ಜಿಲ್ಲೆಯವರೆಲ್ಲ ಬಂದರದ ಪ್ರಶ್ನೆಯನ್ನು ಭಾವಿ ಅಭಿವೃದ್ಧಿಯ ಕೀಲಿಕೈ ಎಂಬಂತೆ ಗಂಭೀರವಾಗಿ ಪರಿಗಣಿಸುತ್ತಿದ್ದಾಗ ಅಭಿಮಾನ ಶೂನ್ಯವಾದ ರೀತಿಯಲ್ಲಿ ಆಂದಿನ ಮೈಸೂರು ನಡೆದುಕೊಂಡಿತು. ಮಲೆನಾಡಿನ ಅಭಿವೃದ್ಧಿಯ ಪಾಡಾದರೂ ಹೀಗೆಯೇ! ಮಲೆನಾಡು ಹಿಂದೆ ನಾಲ್ಕು ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿ ಹೋಗಿದ್ದುದರಿಂದ, ಮೈಸೂರು ತನ್ನಷ್ಟಕ್ಕೆ ಉಳಿಯಿತು—ಮದ್ರಾಸು, ಮುಂಬಯಿ ಸರಕಾರಗಳೂ ತೆಪ್ಪಗಿದ್ದವು! ಮಲೆನಾಡಿನ ಸಂಪತ್ತನ್ನು ಉಪಯೋಗಿಸಿ ದೊಡ್ಡ ಕೈಗಾರಿಕೆಗಳನ್ನು ನಡೆಸುವ ವಿಚಾರಕ್ಕೆ ಎಲ್ಲಿಯೂ ಸಮರ್ಥನೆ ದೊರೆಯಲಿಲ್ಲ—ಸಾಹಸಿಗಳಿಗೆ ಪ್ರೋತ್ಸಾಹವೂ ಸಿಗಲಿಲ್ಲ. ಇನ್ನು ಮತ್ಸ್ಯ ವ್ಯವಸಾಯಾಭಿವೃದ್ಧಿಯನ್ನು ತೆಗೆದುಕೊಂಡರೂ ಇದೇ ಮಾತು ನಿದರ್ಶನಕ್ಕೆ ಬರುತ್ತದೆ—ತಿರು-ಕೊಚ್ಚಿಯ ಕರಾವಳಿಯಲ್ಲಿರುವ ಮತ್ಸ್ಯ ಸಂಗ್ರಹವನ್ನು ಧಾರಾಳವಾಗಿ ಹಿಡಿದು ಬಳಸುವ ಆಧುನಿಕ ತಂತ್ರಗಳನ್ನು ಉಪದೇಶಿಸಲು ಮತ್ತು ಆಳವಾದ ನೀರಿನಲ್ಲಿ ಮೀನು ಹಿಡಿಯುವುದೇ ಮುಂತಾದ ವಿಷಯಗಳಲ್ಲಿ ತಕ್ಕ ತರಬೇತಿಯನ್ನು ಮೀನುಗಾರರಿಗೆ ಕೊಡಲು ನಾರ್ವೆ ದೇಶದಿಂದ ತಜ್ಞರನ್ನು ಬರಮಾಡಿಕೊಳ್ಳಲಾಗಿದೆ. ಆದರೆ ಭಾರತದಲ್ಲಿಯೇ ಅತಿ ದೊಡ್ಡದಾದ, ಮತ್ತು ಜಗತ್ತಿನ ಅತಿ ದೊಡ್ಡ ಮತ್ಸ್ಯ ವ್ಯವಸಾಯ ಕೇಂದ್ರಗಳಲ್ಲಿ ಒಂದೆನಿಸಿದ—ಮಲ್ಪೆಯ ಸಮುದ್ರ ಸಂಪತ್ತನ್ನು ಲೂಟಿ ಮಾಡಲು ಯಾವ ಸರಕಾರವೂ ಆಧುನಿಕ ಯಂತ್ರ ತಂತ್ರಗಳ ಪರಿಜ್ಞಾನವನ್ನೊದಗಿಸಿಕೊಡುವ ತಂಬೇತಿಗೆ ವ್ಯವಸ್ಥೆಗೈಯಲು ಮುಂದಾಗಲಿಲ್ಲ! ತಜ್ಞರ ಅಭಿಪ್ರಾಯದಂತೆ ಮಂಗಳೂರಿನಿಂದ ಕುಂದಾಪುರದ ತುದಿಯ ತನಕದ ಕರಾವಳಿಯೂ ಉತ್ತಮ ಮತ್ಸ್ಯ ಸಂಗ್ರಹಾಲಯವಾಗಿದೆ— ಉತ್ತರ ಕನ್ನಡ ಜಿಲ್ಲೆಯಾದರೂ ಮತ್ಸ್ಯ ವ್ಯವಸಾಯದಲ್ಲಿ ಹಿಂದುಳಿದಿಲ್ಲ: ಭಾರತದ ಮೀನಿನ ಉತ್ಪಾದನೆಯಲ್ಲಿ ಹತರಲ್ಲೊಂದು ಪಾಲು ಉತ್ತರ ಕನ್ನಡದಿಂದ ಬರುತ್ತಿದ್ದು ಇದರ ಬೆಲೆ ೧೫ ಕೋಟಿ ರೂಪಾಯಿ! ಕೇವಲ ಮೀನುಗಾರರ ಒಂಟಿ ಸಾಹಸದ ಫಲವಾಗಿ ಬೆಳೆದು ಬಂದಿರುವ ವ್ಯಾಪಾರವೇ ಇಷ್ಟು ಉತ್ತಮವಾಗಿರುವಾಗ ಸರಕಾರದ ಬೆಂಬಲದೊಡನೆ ಎಲ್ಲ ಸೌಲಭ್ಯಗಳೂ ದೊರೆಯುವಂತಿರುವ ಸುಧಾರಿತ ಪರಿಸ್ಥಿತಿಯು ಏರ್ಪಟ್ಟರೆ, ಆಗ ನಾವು ಈಗಿನದರ ನಾಲ್ಕೈದು ಪಟ್ಟಾದರೂ ಆದಾಯವನ್ನು ಸಂಪಾದಿಸುವುದರಲ್ಲಿ ಸಂದೇಹವಿಲ್ಲ. ಯುರೋಪು ಮತ್ತಿತರ ಬೇರೆ ಯಾವುದಾದರೂ ದೇಶಕ್ಕೆ ಇಂತಹ ಸಂಪದ್ಯುಕ್ತ ಕರಾವಳಿ ಇದ್ದರೆ-ಅದೆಂದಾದರೂ ಹಿಂದುಳಿಯುತಿತ್ತೇ? ಜಪಾನಿನಂತಹ ಪೂರ್ವದ ಸಣ್ಣ ದೇಶವು ಸಹ ತನ್ನ ಬೆಸ್ತರನ್ನು ೪೦೦—೬೦೦ ಮೈಲುಗಳಷ್ಟು ದೂರ ಶಾಂತ ಸಾಗರದಲ್ಲಿ ಕಳುಹಿಸಿ ಮೀನನ್ನು ಹಿಡಿಸಿಕೊಳ್ಳುತ್ತದೆ ಅಲ್ಲಿಯ ಮೀನುಗಾರರು ಅಷ್ಟು ಸಾಹಸಿಗರು—ಮತ್ತವರ ಸಾಹಸಕ್ಕೆ ಸರಕಾರದ ಮನ್ನಣೆಯೂ ಉಂಟು! ಆದರೆ ನಮ್ಮಲ್ಲಿ? ನಾಲ್ಕೈದು ಮೈಲು ದೂರ ಪ್ರಯಾಣಿಸಿ ಮೀನು ಹಿಡಿಯುವವರು ಕ್ವಚಿತ್ತಾಗಿಯೂ ಸಿಗುವುದಿಲ್ಲ. ಮೀನು ಹಿಡಿಯುವ ತಂತ್ರವೂ—ಬಹಳ ಹಳೆಯದು. ನೀರಿನ ಮೇಲ್ಗಡೆ ತೇಲುವ ದಡ್ಡ ಮೀನುಗಳನ್ನಷ್ಟೆ ಹಿಡಿಯುವ ಶಕ್ತಿಯುಳ್ಳದ್ದು— ಬುದ್ಧಿವಂತವಾದ ಮೀನುಗಳು ಆಳ ಸಮುದ್ರದಲ್ಲಿ ಬೀಡು ಬಿಡುತ್ತವೆ! ಹೀಗೆ ಬಹಳ "ಸುಲಭ"ದ ಸಂಪಾದನೆ ನಮ್ಮವರದು! ಈ "ಸುಲಭ" ಸಂಪಾದನೆಯನ್ನಾದರೂ ಚೆನ್ನಾಗಿ ಉಪಯೋಗಿಸಿಕೊಳ್ಳುವುದು ಆಧುನಿಕ ಸೌಕರ್ಯಗಳ ಅಭಾವದಲ್ಲಿ ನಮಗೆ ಸಾಧ್ಯವಾಗುತ್ತಿಲ್ಲ ಎಂದರೆ, ಮಲ್ಪೆಯಲ್ಲಿ ಒಮ್ಮೊಮ್ಮೆ ಹಿಡಿದ ಮೀನನ್ನು ನೀರಿಗೆ ಮರಳಿ ಬಿಡುವುದೆಂದು ವಸ್ತುತಃ ಹೇಳುವಂತಿಲ್ಲದಿದ್ದರೂ ಏನು ಮಾಡುವುದೆಂದು ತಿಳಿಯಲಾರದೆ ಸುಮ್ಮನೆ ಕೊಳೆಯಿಸಿ, ಎಲ್ಲ ಪ್ರಯತ್ನವನ್ನೂ ವ್ಯರ್ಥವಾಗಗೊಡುವ, ನಿಸರ್ಗ ದೇವಿಯ ಕೊಡುಗೆಯ ಉಪಯೋಗ ಮಾಡಿಕೊಳ್ಳದೆ ಬಿಡುವ—ಪ್ರಸಂಗಗಳೂ ಬರುತ್ತವೆ. ಬಲೆಯಲ್ಲಿ ಬಂದ ಮೀನನ್ನು ತಲೆ ಹೊರೆಯ ಬುಟ್ಟಿಗಳಲ್ಲಿ ಹೊತ್ತುಕೊಂಡು ಕರಾವಳಿಯಿಂದ ೧೫-೨೦ ಮೈಲುಗಳ ವರೆಗೂ ಪೂರೈಸುವುದು ನಮ್ಮಲ್ಲಿ ನಡೆದು ಬಂದಿದೆ—ಆದರೆ, ಒಮ್ಮೊಮ್ಮೆ ಮೀನಿನ ರಾಶಿಗೆ ರಾಶಿಯೇ ಬಲೆಯಲ್ಲಿ ಬೀಳುವಾಗ ಅದಕ್ಕೆ ಕೂಡಲೇ ಬೇಕಾದಷ್ಟು ಗಿರಾಕಿಗಳು ಸಿಗದೆ ಹೋಗುತ್ತಾರೆ; ಕೊಯ್ದು, ಒಣಗಿಸಿ, ಉಪ್ಪು ಹಾಕಿ ರಫ್ತು ಮಾಡುವುದಕ್ಕಾದರೂ ವಿಶೇಷವಾದ ಅನುಕೂಲತೆಗಳು ಸಿಗದೆ ಹೋಗುವುದುಂಟು, ಹೀಗಾಗಿ, ಕೈಗೆ ಬಂದ ಮೀನಿನಲ್ಲಿ ಮೂರರಲ್ಲೊಂದಂಶ ವ್ಯರ್ಥ ಕೊಳೆಯಿಸಲ್ಪಟ್ಟು ಹಾಳಾಗುತ್ತದೆ. ಒಳ್ಳೆಯ ಶೀತಕಾರಿ ಯಂತ್ರ ವ್ಯವಸ್ಥೆ ಏರ್ಪಟ್ಟರೆ, ಮಳೆಗಾಲದ ದಿನಗಳಲ್ಲಿ ಒಣ ಮೀನನ್ನೋ ಅಥವಾ ಕಳತೆಯ ಜಲಚರ ಜೀವಿಗಳನ್ನೋ ಚಪಲಕ್ಕಾಗಿ ತಿನ್ನುವ ಈಗಿನ ಕ್ರಮದ ಬದಲು ಹಸಿ ಮೀನನ್ನೇ ಧಾರಾಳವಾಗಿ ಬಳಸಬಹುದು. ಶೈತ್ಯ ವ್ಯವಸ್ಥೆಯಿರುವ ವಾಹನಗಳನ್ನು ಓಡಾಡಿಸಲು ಸಾಹಸಪಟ್ಟರೆ, ತಲೆಹೊರೆಯಿಂದ ಸಾಗಿಸಲಾರದ ಒಳನಾಡಿನ ಮೂಲೆಗಳಿಗೂ ಮೀನನ್ನು ಸುಲಭದಲ್ಲಿ ಸಾಗಿಸಬಹುದು. ಇನ್ನು ಘಟ್ಟದ ಮಾರ್ಗಗಳನ್ನು ಲೋರಿಗಳು ಓಡಾಡಲು ಅನುಕೂಲವಾಗುವಂತೆ ಕಡಿದನ್ನೇ ಆದರೆ, ಮೈಸೂರಿನ ವಿಶಾಲವಾದ ಹಿನ್ನೆಲೆ ಪ್ರದೇಶವು ಮೀನಿನ ಪೇಟೆಯಾಗಿ ದೊರಕುತ್ತದೆ. ಕರಾವಳಿಯ ಈಗಿನ ಉತ್ಪಾದನೆಯ ಹತ್ತು—ಹದಿನೈದು ಪಟ್ಟು ಉತ್ಪಾದನೆಯನ್ನು ನಾವು ತೆಗೆಯುವ ಪ್ರಸಂಗದಲ್ಲೂ ಗಿರಾಕಿ ಇಲ್ಲವೆಂಬ ಚಿಂತೆಗೆ ಮೈಸೂರಿನ ಹಿನ್ನೆಲೆ ಪ್ರದೇಶ ದೊರೆತಾಗ ಅವಕಾಶವಾಗದೆಂದು ಧೈರ್ಯವಾಗಿ ಹೇಳಬಹುದು. ನಮ್ಮ ಸ್ಥಳೀಯ ಮುಖಂಡರು ಸೈನಿಕರ ನಿತ್ಯದ ಆಹಾರಕ್ಕಾಗಿ ಮೀನನ್ನು ಮಲ್ಪೆಯಿಂದ ಕೊಂಡೊಯ್ಯುವ ವ್ಯವಸ್ಥೆ ಮಾಡಿರೆಂದು ಕೇಂದ್ರಸರಕಾರದ ಮಂತ್ರಿಗಳ ಮುಂದೆ ನಿವೇದಿಸಿಕೊಂಡದುಂಟು. ನವ ಮೈಸೂರಿನ ಸರಕಾರವಾದರೂ ಈ ವಿಷಯದಲ್ಲಿ ಆಸಕ್ತಿಯನ್ನು ವಹಿಸಲಿ! ಬೆಂಗಳೂರಿನಲ್ಲೂ ಒಂದು ಸೈನ್ಯ ಕೇಂದ್ರವಿದೆಯಲ್ಲ! ಅಲ್ಲದೆ, ಈಗ ಮೈಸೂರಿನ ಒಳನಾಡಿಗರು ಸಮುದ್ರದ ಚೆಲುವನ್ನು ಕಣ್ಣಾರೆ ಕಂಡವರೆಂತಲ್ಲವೊ ಹಾಗೆಯೇ ಸಮುದ್ರ ಮತ್ಸ್ಯದ ರುಚಿಯನ್ನು ಸವಿದವರೂ ಅವರಲ್ಲ. ಕೆರೆ, ಹೊಳೆಗಳ ಸಣ್ಣ ಮೀನುಗಳಿಂದಲೇ ಮೀನುತಿನ್ನುವ ಆಶೆ ಪೂರೈಸಿಕೊಂಡ ಈ ಜನಕ್ಕೆ ಮಲ್ಪೆಯ ಮೀನಿನ ಆಕರ್ಷಣೆಯನ್ನು ಹುಟ್ಟಿಸುವುದು ವ್ಯಾಪಾರದ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಅವಶ್ಯ; ಮತ್ತು ಸೂಕ್ತ. ನವ ಮೈಸೂರು ಸರಕಾರವು ಮನಸ್ಸು ಮಾಡಿದರೆ ಮಲ್ಪೆಯೊಂದು ಪ್ರವಾಸಿಗಳ ವಿಹಾರ ಕೇಂದ್ರವಾಗಿಯೂ ಶೋಭಿಸಬಲ್ಲುದು; ತೋನ್ಸೆ ಪಾರಿನಂತಹ ನೈಸರ್ಗಿಕ ದ್ವೀಪದ ಸೌಂದರ್ಯವನ್ನು ಶನಿವಾರ ಆದಿತ್ಯವಾರಗಳಲ್ಲಿ ನಿತ್ಯವೂ ನೋಡಿ ನಲಿಯುವ ಭಾಗ್ಯ ನಮ್ಮದಾದೀತು. ಆಗ ಈ ಆಕರ್ಷಣೆಯು ವಿಶೇಷವೆನಿಸಲು ಆಳವಾದ ಸಮುದ್ರದಲ್ಲಿ ಮೀನು ಹಿಡಿಯುವ ವ್ಯವಸ್ಥೆ, ಮತ್ತು ಹಿಡಿದ ಮೀನನ್ನು ಶೇಖರಿಸಿಟ್ಟು ಕ್ರಮಬದ್ಧವಾಗಿ ಒಳನಾಡಿನ ಜನತೆಗೆ ಪೂರೈಸುವ ಶೀತಾಲಯಗಳ ಏರ್ಪಾಡು ಆದರೆ ಮಲ್ಪೆಯಾಗಲೀ—ಇತರ ಕರಾವಳಿಯ ಊರುಗಳಾಗಲೀ ಈಗಿನಂತೆ ಮೀನುಗಾರರ ಚಿಕ್ಕ ಹಳ್ಳಿಗಳಾಗಿ ಉಳಿಯಬೇಕಾಗಿಲ್ಲ. ಪ್ರಬುದ್ಧ ಬಂದರದ ಪ್ರಶ್ನೆಯ ಮೇಲೆ ಒತ್ತಾಯವನ್ನು ಕಚ್ಚಾಗಿ ಹೇರಿದರೆ—ಕೋಳಿವಾಡವು ಮುಂಬಯಿ ಎಂಬ ಅಭಿದಾನದಿಂದ ಇಂದು ಹೇಗೆ ಭಾರತದ ಹೆಬ್ಬಾಗಿಲಾಗಿದೆಯೋ ನಮ್ಮಲ್ಲಿಯ ಚಿಕ್ಕ ಮೀನುಗಾರ ಹಳ್ಳಿಗಳಲ್ಲೂ ಒಂದು ಅದೇ ಭಾಗ್ಯವನ್ನು ಹೊಂದೀತು. ಕೇವಲ ಮಲ್ಪೆಗೆ ಸಂಬಂಧಿಸಿಯಷ್ಟೇ ನಾವೀ ಮಾತನ್ನು ಹೇಳುತ್ತಿಲ್ಲ—೨೦೦ ಮೈಲು ಉದ್ದದ ದೀರ್ಘ ಕರಾವಳಿಯನ್ನು ಹೇಗೆ ಅಭಿವೃದ್ಧಿಪಡಿಸಬಹುದೆಂಬುದಕ್ಕಾಗಿ ಮಲ್ಪೆಯ ನಿದರ್ಶನವನ್ನು ತೆಗೆದುಕೊಂಡುದಾಗಿದೆ. ಅಂತೂ ನವ ಹೊಸ ಮಂತ್ರಿಗಳ ದೃಷ್ಟಿಯು ಕಡಲ ಕಣಜದ ಮೇಲೆ ಬಿದ್ದಿದೆ—ಇದು ಕ್ಷಣಿಕ ದೃಷ್ಟಿಯಾಗಕೂಡದು. ಶಾಶ್ವತವಾದ, ಯೋಜನಾಬದ್ಧವಾದ ಮತ್ತು ಪ್ರಗತಿಪರವಾದ ಕ್ರಮಗಳು ಕೈಗೊಳ್ಳಲ್ಪಟ್ಟು ಕರಾವಳಿಯ ಮೀನುಗಾರಿಕೆಯು ಚೆನ್ನಾಗಿ ಅಭಿವೃದ್ಧಿ ಹೊಂದಬೇಕು. ಹಣಾಭಾವದ ನೆಪವೆಂದಿಗೂ ಇಂತಹ ಸಾಹಸೋದ್ಯಮಗಳನ್ನು ಹಿಂದಕ್ಕೆ ತಳ್ಳುವುದಕ್ಕೆ ಬಿಡಬಾರದು. ಏಕೆಂದರೆ, ಇದು ಸ್ವಲ್ಪ ಬಂಡವಾಳವನ್ನು ಹಾಕಿ, ವಿಪುಲ ಲಾಭವನ್ನು ಸಂಪಾದಿಸುವ ವ್ಯಾಪಾರವಾಗಿದೆ. ಸಣ್ಣ ಮಾಂಸದ ಚೂರನ್ನು ಗಾಳಕ್ಕೆ ಸಿಕ್ಕಿಸಿ, ದೊಡ್ಡ ಮೀನುಗಳನ್ನು ಗಾಳದಲ್ಲಿ ಹಿಡಿಯುವಂತೆ ಈ ಮೀನುಗಾರಿಕೆಯ ಉದ್ಯಮವಿದೆ. ಆದುದರಿಂದ ಕಾಲಹರಣವೇನನ್ನೂ ಮಾಡದೆ, ಹೊಸ ಸರಕಾರವು ಕೂಡಲೇ ಕಾರ್ಯ ಪ್ರವೃತ್ತವಾಗಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ. ಕರಾವಳಿಯ ಅಭಿವೃದ್ಧಿ

# ಇಜಿಪ್ಟಿನಲ್ಲಿ ಇನ್ನೂ ಶಾಂತಿಯಿಲ್ಲ!

## ಪಾಕಿಸ್ತಾನದ ಬಗ್ಗೆ "ಮುಸ್ಲಿಂ" ರಾಷ್ಟ್ರಗಳ ಅವಿಶ್ವಾಸ

ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲ್ ದೇಶಗಳು ಇಜಿಪ್ಟಿನ ಮೇಲೆ ಅಭಿಯೋಗ ಕೂಡಲೇನೋ ಹೂಡಿದವು; ಆದರೆ ಅದರ ಫಲ ಏನೇನೂ ಒಳ್ಳೆಯದಾಗಲಿಲ್ಲ. ಇಜಿಪ್ಟವು ಕಷ್ಟಪಟ್ಟು—ನ್ಯಾಯಶಃ ತನ್ನ ಬೇರೆಲ್ಲ ಆವಶ್ಯಕತೆಗಳಿಗೆ, ಹಣ ವ್ಯಯಿಸುವದನ್ನು ಬಿಟ್ಟುಕೊಟ್ಟು—ಸಂಗ್ರಹಿಸಿದ್ದ ಸೈನಿಕ ಸರಂಜಾಮುಗಳನ್ನು ಸಂಪೂರ್ಣ ನಾಶಮಾಡಿದ ತಾಮಸ ಸಮಾಧಾನ ಈ ರಾಷ್ಟ್ರಗಳಿಗಿದ್ದರೂ ಈಗ ತಮ್ಮ ಆಕ್ರಮದ ಫಲವನ್ನು ಭೋಗಿಸಬೇಕಾದ ಕಾಲ ಬಂದಿದೆ.

ಈಗಾಗಲೇ ಜನಜನಿತವಾಗಿರುವಂತೆ ಇಜಿಪ್ಟಿನ ಮೇಲಿನ ಆಕ್ರಮಣದಿಂದ ಕ್ರುದ್ಧವಾದ ಅರಬ ರಾಷ್ಟ್ರಗಳು ಯುರೋಪಿನತ್ತ ಮುಖಮಾಡಿದ್ದ ಎಲ್ಲ ಎಣ್ಣೆ ಕೊಳವೆಗಳನ್ನೂ ಉಧ್ವಸ್ತಗೊಳಿಸಿವೆ. ಅಮೇರಿಕದ ಕಂಪೆನಿಯೊಂದರ ಎಣ್ಣೆ ಪೂರೈಕೆಗೆ ಮಾತ್ರ ಆತಂಕವಾಗಿಲ್ಲ. ಹೀಗೆ ಒಮ್ಮೆಲೇ ಎಣ್ಣೆ ಪೂರೈಕೆಯು ನಿಂತುದರಿಂದ ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ಮಾತ್ರವೇ ಅಲ್ಲ – ಇಡಿ ಪಶ್ಚಿಮ ಯುರೋಪಿಗೆ ಎಣ್ಣೆಯ ಕೊರತೆ ತೋರಿದೆ.

ತಮ್ಮ ಪರಮ ಮಿತ್ರ ರಾಷ್ಟ್ರವಾದ ಅಮೇರಿಕದಿಂದ ತಕ್ಕ ಸಹಾಯ ಸಿಗುವುದೆಂದು ಬ್ರಿಟನ್ ಮತ್ತು ಫ್ರಾನ್ಸ್ ನಿರೀಕ್ಷಿಸಿದ್ದುವು. ಹೀಗೆ ಅಮೇರಿಕದಿಂದ ಎಣ್ಣೆಕೊಳ್ಳುವುದು ೧೫ಕೋಟಿ ಡಾಲರುಗಳಷ್ಟು ಹೆಚ್ಚು ವೆಚ್ಚದಕಾರ್ಯವಾಗಿದ್ದರೂ ಕಷ್ಟ ಅದನ್ನು ಸಹಿಸಿಕೊಳ್ಳುವ ಹಂಬಲ ಈ ರಾಷ್ಟ್ರಗಳದ್ದು. ಆದರೆ, ಅಮೇರಿಕವು ಇಜಿಪ್ಟಿನ ಮೇಲೆ ನಡೆದ ಈ ಅಭಿಯೋಗವನ್ನು ಮೆಚ್ಚದೆ ಈಚಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ತನ್ನ ಮಿತ್ರರ ವಿರುದ್ಧ ನಿಂತಿದೆ. ಹೀಗಾಗಿ ಅಮೇರಿಕದ ಸಹಾಯ ನಿರೀಕ್ಷಿಸಿದಂತೆ ದೊರೆತಿಲ್ಲ.

ಯುದ್ಧವನ್ನು ನಿಲ್ಲಿಸಿದ್ದರೂ ತಾವು ಆಕ್ರಮಿಸಿದ ನೆಲದಿಂದ ಸೈನ್ಯವನ್ನು ಹಿಂದೆಗೆದುಕೊಳ್ಳುವುದಕ್ಕೆ ಅನೇಕ ಶರ್ತಗಳನ್ನು ಬ್ರಿಟನ್—ಫ್ರಾನ್ಸ್—ಇಸ್ರೇಲ್ ಮುಂದಿಟ್ಟಿವೆಯಷ್ಟೇ! ಇದು ಅಮೇರಿಕದ ಮನಸ್ಸಿಗೆ ಬಂದಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಪೋಲೀಸು ಪಡೆಯು ಈಗ ಕೈರೋದಲ್ಲಿ ತಳವೂರಿದ್ದು ಕ್ಷಿಪ್ರದಲ್ಲಿ ಅದು ಕಾರ್ಯಪ್ರವೃತ್ತವಾಗಲಿದೆ. ಈಗಲೂ ಆಕ್ರಮಣ ನಡೆಸಿದ ರಾಷ್ಟ್ರಗಳು ತಮ್ಮ ಸೈನ್ಯವನ್ನು ಹಿಂದೆಗೆಸಿಕೊಳ್ಳುವ ಸೂಚನೆ ಕಾಣುವುದಿಲ್ಲವೆಂದು ನೆಹರು ಸಹ ಮೊನ್ನೆ ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಹೀಗೆ ಅನ್ಯಾಯವಾಗಿ ಇಜಿಪ್ಟಿನ ನೆಲದಲ್ಲಿ ಧ್ವಜವೂರುವುದೇ ಆಕ್ರಮಣಕಾರಿ ರಾಷ್ಟ್ರಗಳ ನಿಲುವೆ. ಯಾಗಿದ್ದರೆ ಪೋಲೀಸು ಪಡೆಯ ರಚನೆ ಯಾದರೂ ಆದುದೇಕೆ?

ಆದುದರಿಂದ ಅಮೇರಿಕವು ನಿಶ್ಶರ್ತವಾಗಿ ಇಜಿಪ್ಟಿನಿಂದ ನಿಮ್ಮ ನಿಮ್ಮ ಸೈನ್ಯವನ್ನು ಕಟ್ಟಿಕೊಂಡು ಹೊರಗೆ ಹೋಗಿ ಎಂದು ಬ್ರಿಟನ್ ಫ್ರಾನ್ಸ್‌ಗಳಿಗೆ ಉಪದೇಶಿಸಿದೆ. ಅಷ್ಟು ಮಾಡದೆ ನಿಮಗೆ ಎಣ್ಣೆ ಪೂರೈಸುವುದಿಲ್ಲವೆಂದು ಸ್ಪಷ್ಟಗೊಳಿಸಿದೆ. ಇವೆರಡು "ಮಹಾ ರಾಷ್ಟ್ರ"ಗಳು ಇಜಿಪ್ಟಿನಿಂದ ಕಾಲು ಕಿತ್ತರೆ ಇಸ್ರೇಲವೂ ಈ ಮಾದರಿಯನ್ನು ಅನುಸರಿಸಬಹುದೆಂಬ ವಿಶ್ವಾಸ.

ಅರಬ ರಾಷ್ಟ್ರಗಳಲ್ಲಿ ಇಂದು ಕ್ಷೋಭೆಯೇ ನಡೆದಿದೆ. ಅವೆಲ್ಲವೂ ಒಂದಾಗಿ ಇಜಿಪ್ಟಿನ ಬೆಂಬಲಕ್ಕೆ ನಿಂತಿವೆ. ಮುಸ್ಲಿಂ ರಾಷ್ಟ್ರವೆಂಬ ಬಾಂಧವ್ಯವಾಗಲೀ ಸೈನಿಕ ಒಪ್ಪಂದಕ್ಕೆ ಭಾಗಿಯಾದ ಮಿತ್ರನೆಂಬ ಭಾವನೆಯಾಗಲೀ ಇಜಿಪ್ಟಿನ ಮೇಲಾದ ಆಕ್ರಮಣವನ್ನು ಸಹಿಸಿ ಕುಳಿತಿರುವಂತೆ ಅರಬ ರಾಷ್ಟ್ರಗಳನ್ನು ಮಾಡಿಲ್ಲ. ತಾವೆಲ್ಲವೂ ಅರಬ ರಾಷ್ಟ್ರಗಳೆಂಬ ವಿಷಯವೇ ಇಂದು ಮಹತ್ವವನ್ನು ಪಡೆದಿದೆ.

ಪರಿಣಾಮವಾಗಿ ಇರಾಕಿನಂತಹ ಬಗ್ದಾದ್ ಒಪ್ಪಂದದಲ್ಲಿ ಭಾಗಿಯಾದ ದೇಶವು ಬ್ರಿಟನು ಭಾಗವಹಿಸುವ ಸಭೆಗೆ ತಾನು ಹಾಜರಿರುವುದಿಲ್ಲ ಎಂದಿದೆ. ಪಾಕಿಸ್ತಾನದ ವಿದೇಶ ಮಂತ್ರಿಗಳು ಲಂಡನಿನಲ್ಲಿ ಯೆಹೂದ್ಯರ ಇಸ್ರೇಲ್ ಬಾಳಲು ಬಂದಿದೆ—ಅಳಿಯಲಿಕ್ಕಲ್ಲ ಎಂದುದು ಎಲ್ಲ ಅರಬಿ ರಾಷ್ಟ್ರಗಳೂ ಪಾಕಿಸ್ತಾನದ ಮುಸ್ಲಿಂ ಪ್ರಿಯತೆಯನ್ನು ಶಂಕಿಸುವಂತೆ ಮಾಡಿದೆ. ಪಾಕಿಸ್ತಾನದ ಪ್ರಧಾನಿಗಳೂ ಅಧ್ಯಕ್ಷರೂ ಬಗ್ದಾದ್ ರಾಷ್ಟ್ರಗಳ ಪರಿಷತ್ತಿಗೆಂದು ಹೋದಾಗ ಅವರ ವಿರುದ್ಧ ದೊಡ್ಡ ಆಂದೋಲನವೇ ನಡೆಯಿತು.

ಇವೆಲ್ಲಕ್ಕಿಂತ ಹೆಚ್ಚು ಗಂಭೀರವಾದ ವಿಷಯವೂ ಬೇರೊಂದು ನಡೆಯಿತು. ಇಜಿಪ್ಟನ್ನು ಪ್ರವೇಶಿಸುವ ಪೋಲೀಸು ಪಡೆಯಲ್ಲಿ ಪಾಕಿಸ್ತಾನಿ ಸೈನಿಕರು ಇರಬಾರದೆಂದು ನಾಸೇರರು ಶರ್ತ ಹಾಕಿದ್ದಾರೆ—ಇದು ಪಾಕಿಸ್ತಾನದ ಮೇಲೆ ಇನ್ನೊಂದು ಮುಸ್ಲಿಂ ರಾಷ್ಟ್ರವು ತನ್ನ ಆಪತ್ಕಾಲದಲ್ಲೂ ಇಟ್ಟ ನಂಬಿಕೆಯಾಗಿದೆ. ಪಾಕಿಸ್ತಾನದ ಕೆಲವು ಕುಹಕಿಗಳು ಭಾರತದ ಉಪದೇಶದಂತೆ ನಾಸೇರರು ಹೀಗೆ ಪಾಕಿಸ್ತಾನದ ಸಹಾಯವನ್ನು ನಿರಾಕರಿಸಿದ್ದಾರೆ ಎಂದು ಅಪಪ್ರಚಾರ ಮಾಡುತ್ತಾರೆ. ಆದರೆ ಪಾಕಿಸ್ತಾನದ ಎಲ್ಲ ರಾಜಕೀಯ ಪಕ್ಷಗಳೂ ಇದನ್ನು ತಮ್ಮ ಸರಕಾರದ ವಿದೇಶ ಧೋರಣೆಯು ವಿಫಲವಾದುದರ ನಿದರ್ಶನವೆಂದು ತಿಳಿದಿವೆ; ಮತ್ತು ಸರಕಾರದ ಶಕ್ತಿ ಪರೀಕ್ಷೆಯನ್ನು ಅವಿಶ್ವಾಸ ಗೊತ್ತುವಳಿಯ ಮೂಲಕ ನಡೆಸಲು ಹವಣಿಸಿವೆ.

ನಾಸೇರರ ಮೇಲೆ ಸಹಾನುಭೂತಿಯುಳ್ಳ ಕೊಲೊಂಬೋ ರಾಷ್ಟ್ರಗಳ ಸಭೆ ಕಳೆದ ವಾರ ಹೊಸ ಡಿಹಲಿಯಲ್ಲಿ ನಡೆದು, ತೀವ್ರವಾಗಿ ಆಕ್ರಮಣವನ್ನು ಖಂಡಿಸಿರುವದಲ್ಲದೆ ಆಕ್ರಮಿತ ಭೂಮಿಯಲ್ಲಿ ತಳವೂರಿರುವ ವಿದೇಶಿ ಸೇನೆಗಳು ಕೂಡಲೇ ಹೊರಗೆ ಹೋಗಬೇಕೆಂದು ಹೇಳಲಾಯಿತು. ಪಾಕಿಸ್ತಾನವು ಮಾತ್ರ ಇದರಲ್ಲಿ ಭಾಗಿಯಾಗಲಿಲ್ಲ. ನಾನು ಬಂದು ಮಾಡುವುದೇನು ನನಗೆ ಬೇರೆ ಕೆಲಸವೇ ಇಲ್ಲವೆ ಎಂದರು ಪಾಕಿಸ್ತಾನಿ ಪ್ರಧಾನಿ ಸುಹ್ರವರ್ದಿ. ಅಂತೆ ಈ ಪುಣ್ಯಾತ್ಮ ಮೂರು ದಿನಗಳ ಮೊದಲು ಬಗ್ದಾದಿಗೆ ಇಂಥದೇ ಪರಿಷತ್ತಿನಲ್ಲಿ ಭಾಗವಹಿಸಲು ಹೋಗಿದ್ದರು. ಮೂರು ದಿನಗಳ ಬಳಿಕ ಪುನಃ ಇದೇ ಬಗೆಯ ಮತ್ತೊಂದು ಸಮ್ಮೇಳನಕ್ಕಾಗಿ ಪ್ರಯಾಣಿಸಿದರು! ನಡುವೆ ಕೊಲೊಂಬೊ ರಾಷ್ಟ್ರಗಳ ಸಭೆ ನಡೆದ ಮೂರು ದಿನ ಮಾತ್ರ ಅವರಿಗೆ, ಪಾಪ ಭಾರಿ ಕೆಲಸ. ಮನೆಯಲ್ಲಿ! ಹೆಂಡತಿಯನ್ನು ಬಲ್ಲದವನಿಗೆ ಮೊಸರಿನಲ್ಲಿ ಕಲ್ಲು ಕಾಣಿಸುವಂತೆ. ಸುಹ್ರವರ್ದಿ ನಡೆದುಕೊಂಡರು.

ಯ ನಾನಾ ಬಗೆಯದಾಗಿದ್ದು, ಅವೆಲ್ಲವೂ ಒಂದರೊಡನೊಂದು ನಿಕಟವಾಗಿ ಹೊಂದಿಕೊಂಡಿವೆ. ನಾವು ಎಲ್ಲಿಯಾದರೂ ಪ್ರಾರಂಭಿಸಬೇಕು—ಎಲ್ಲಿ ಪ್ರಾರಂಭಿಸೋಣ ಎಂಬ ವಿಚಾರದಲ್ಲಿಯೇ ಸಮಯಕಳೆಯಬಾರದು. ಮತ್ಸ್ಯ ವ್ಯವಸಾಯಾಭಿವೃದ್ಧಿಯ ಕಾರ್ಯಕ್ರಮವಾಪರೆ ಅದು—ಇಲ್ಲಿಂದಲೇ ಮುಂದೆ ನಡೆಯತೊಡಗೋಣ!

---

## ಉಡುಪಿ

**ಜಿಲ್ಲೆಯ ವಿದ್ಯುತ್ ವಿಸ್ತರಣೆ**— ಮೈಸೂರು ಚೀಫ್ ಇಲೆಕ್ಟ್ರಿಕ್ ಎಂಜಿನಿಯರ್ ಶ್ರೀ ಎಸ್. ದೇಸಾರನ್ನು ತಾ. 15ರಲ್ಲಿ ಗೌರವಿಸಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳು ಮುಕುಂದನಿವಾಸದಲ್ಲಿ ಸತ್ಕಾರಕೂಟವೊಂದನ್ನೇರ್ಪಡಿಸಿದರು. ಕಡೆಕಾರು, ಅಲೆವೂರು, ಹೆರ್ಗ ಮತ್ತು ಶಿರ್ವ ಗ್ರಾಮಗಳಿಗೆ ವಿದ್ಯುತ್ ಒದಗಿಸಲು ಬೇಕಾಗುವ ಸಲಕರಣೆ ಹಾಗೂ ಸಿಬ್ಬಂದಿಯನ್ನು ಒದಗಿಸುವುದಾಗಿ ಶ್ರೀ ದೇಸಾರವರು ಆಶ್ವಾಸನೆಯಿತ್ತು ಮೈಸೂರು ವಿದ್ಯುತ್ ಪದ್ಧತಿಯನ್ನು ಈ ಜಿಲ್ಲೆಗೆ ವಿಸ್ತರಿಸುವ ವಿಷಯ ಪರಿಶೀಲನೆಯಲ್ಲಿದೆ ಎಂದು ಮುಂಬಯಿ ಕರ್ನಾಟಕ ಹಲವು ವಿಭಾಗಗಳಲ್ಲಿ ವಿದ್ಯುತ್ ಸರಬರಾಯಿ ಇಲ್ಲದಿರುವುದರಿಂದ ಪರಿಸ್ಥಿತಿ ಬಿಕ್ಕಟ್ಟಿನದಾದರೂ ಮುಂದಿನ ಒಂದು ವರ್ಷದಲ್ಲಿ ತುಂಗಭದ್ರಾ ಭಕ್ಕವಳ್ಳಿ ಯೋಜನೆಗಳಿಂದ ಸಾಕಷ್ಟು ವಿದ್ಯುತ್ ಒದಗಬಹುದೆಂದೂ ಹೇಳಿದರು.

**ಭಾರತ ಸೇವಕ ಸಮಾಜ**— ಶ್ರೀ ಎಸ್. ಸಿ. ಚಿಕ್ಕಣ್ಣ, ಕೇಂದ್ರ ಭಾರತ ಸೇವಕ ಸಮಾಜದ ಶಿಬಿರ ಮತ್ತು ಅಕೌಂಟ್ಸ್ ಇನ್ಸ್‌ಪೆಕ್ಟರರು ತಾ. 10ರಲ್ಲಿ ಸ್ಥಳೀಯ ಯೂತ್ ಕಾಂಗ್ರೆಸಿನ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಭಾರತ ಸೇವಕ ಸಮಾಜದ 320 ಶಿಬಿರಗಳನ್ನು ದೇಶದಲ್ಲಿ ನಡೆಸಲಾಗುವುದೆಂದೂ, ಅವುಗಳಲ್ಲಿ 20 ಶಿಬಿರಗಳನ್ನು ಕರ್ನಾಟಕದಲ್ಲೇ ನಡೆಸಲಾಗುವುದೆಂದೂ ಅವುಗಳಲ್ಲಿ 3 ಶಿಬಿರಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರಿಸ್‌ಮಸ್ ರಜಾ ವೇಳೆಯಲ್ಲಿ ನಡೆಸಲಾಗುವುದೆಂದೂ ಹೇಳಿದರು. 2 ಶಿಬಿರ ಗಂಡಸರಿಗೂ 1 ಶಿಬಿರವು ಹೆಂಗಸರಿಗೂ ನಡೆಸಲಾಗುವುದು. ಶಿಬಿರದ ವ್ಯವಸ್ಥಾಪಕರ ತರಬೇತಿ ಬಗ್ಗೆ ಶ್ರೀಗಳಾದ ಪಿ ಶೀನ ಸೆಟ್ಟಿ ಮತ್ತು ಎಫ್. ದಾಂತಿಯವರು ಧಾರವಾಡ ತರಬೇತಿ ಕೇಂದ್ರಕ್ಕೆ ಹೋಗಿರುತ್ತಾರೆ.

**ಲಾ ಮತ್ತು ಇಂಜಿನಿಯರಿಂಗ್ ಕಾಲೇಜುಗಳು**— ಡಾ. ಟಿ. ಎಮ್. ಎ. ಪೈಗಳ ನೇತೃತ್ವದಲ್ಲಿ ಇಂಜಿನಿಯರಿಂಗ್ ಕಾಲೇಜು ಮಣಿಪಾಲದಲ್ಲೂ, ಲಾ ಕಾಲೇಜು ಉಡುಪಿಯಲ್ಲೂ ಸ್ಥಾಪಿಸಲಾಗುವುದು ಎಂದೂ ಆ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಪರಿಶೀಲನಾ ಸಮಿತಿಯು ಈ ತಿಂಗಳಾಂತ್ಯದಲ್ಲಾಗಲೀ, ಡಿಸಂಬರ ತಿಂಗಳ ಆದಿಯಲ್ಲಾಗಲೀ ಬರಲಿರುವುದೆಂದೂ ತಿಳಿದುಬರುತ್ತದೆ.

**ಕೆನರಾ ಬ್ಯಾಂಕಿನ ಸತ್ಕಾರ**— ಕೆನರಾ ಬ್ಯಾಂಕಿನ ಸುವರ್ಣಮಹೋತ್ಸವದ ಸಲುವಾಗಿ ಸ್ಥಳೀಯ ಶಾಖಾ ಆಫೀಸಿನಲ್ಲಿ ತಾ. 19ರಲ್ಲು ಭಾರೀ ಸತ್ಕಾರಕೂಟವನ್ನೇರ್ಪಡಿಸಲಾಗಿತ್ತು. ಸ್ಥಳೀಯ ಮೆನೇಜರ್ ಶ್ರೀ ಬಿ. ದಯಾನಂದ ಪ್ರಭುಗಳು ಆಮಂತ್ರಿತರನ್ನು ಸ್ವಾಗತಿಸಿ ಉಪಚರಿಸಿದರು.

**ಮುದ್ದಣ ಜಯಂತಿಯು**— ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಲ್ಲಿಯ ಹೆಡ್ಮಾಸ್ಟರ್ ಶ್ರೀ ಎಚ್. ಎನ್. ಮತಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕು. ಶಿ. ಹರಿದಾಸ ಭಟ್ ಮತ್ತು ಎ ಜೆ. ಅಲ್ಸೆ ಯವರು ಸಂದರ್ಭೋಚಿತ ಭಾಷಣವಿತ್ತರು.

**ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ**— ಉದ್ಯಾವರ ಭಾಸ್ಕರ ಮಕ್ಕಳು ನೃತ್ಯ ಪ್ರದರ್ಶನ ನಿತ್ತರು. ಶ್ರೀ ಬಿ. ಎಸ್. ರಾಮಾಚಾರ್ಯರು ಕಾವ್ಯವಾಚನಮಾಡಿದರು. ಪರ್ಯಾಯ ಶ್ರೀ ಅದಮಾರು ಸ್ವಾಮಿಗಳವರು ಉಚಿತ ಉಡುಗೊರೆಯಿತ್ತು ಆಶೀರ್ವದಿಸಿದರು.

**ಪುತ್ತಿಗೆ ಮಠದಲ್ಲಿ** – ಪುತ್ತಿಗೆ ಮಠದ ಕಿರಿಯ ಸ್ವಾಮಿಗಳವರು ಕಾಶಿ ಮಹಾಧೀಶರಿಗೆ ಮಾಲಿಕಾ ಮಂಗಳಾರತಿಯನ್ನು ಮಾಡಿಸಿ ಗೌರವಿಸಿದರು. ಶ್ರೀ ಬಿ. ಶ್ರೀನಿವಾಸ ಭಟ್ ಡಾ. ಎಸ್. ಆರ್. ಪೈ, ಡಾ. ಟಿ. ಮಾಧವ ಪೈಗಳು ಮಾತನಾಡುತ್ತಾ ಇಂತಹ ಸಮಾಗಮಗಳು ಶಿಷ್ಯ ಸಂಘಟನೆಗೆ ಆವಶ್ಯಕವೆಂದರು.

**ಚರ್ಚಾಕೂಟ**— ನಗರದ ಯು. ಎನ್. ಓ. ದ ಚರ್ಚಾಕೂಟವೊಂದು ಕಳೆದ ಶನಿವಾರ ಸ್ಥಳೀಯ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಚರ್ಚಾ ಕೂಟವನ್ನು ಉದ್ಘಾಟಿಸಿದರು. ಸಭೆಯಲ್ಲಿ ಈಜಿಪ್ತದ ಮತ್ತು ಲೋಕಶಾಂತಿಯ ಕುರಿತು ಚರ್ಚೆ ನಡೆಯಿತು.

**ಸಾರ್ವಜನಿಕರಲ್ಲಿ ಮುಖ್ಯ ಸೂಚನೆ**— ಉಡುಪಿ ಮುನಿಸಿಪಾಲಿಟಿಯೊಳಗೆ ಯಾವುದೇ ಸಂದರ್ಭದಲ್ಲಿ ಧ್ವನಿ ವರ್ಧಕ ಯಂತ್ರವನ್ನು ಉಪಯೋಗಿಸಬೇಕಾದರೆ, ಮದ್ರಾಸು ಸಿಟಿ ಪೋಲೀಸು ಏಕ್ಟಿನ್ ಸೆಕ್ಷನ 71ರ ಪ್ರಕಾರ ಸ್ಥಳೀಯ ಡಿಸ್ಟ್ರಿಕ್ಟ ಸುಪರಿಟೆಂಡೆಂಟರಿಂದ ಮುಂಚಿತವಾಗಿ ಲೈಸನ್ಸನ್ನು ಪಡೆಯಕೊಳ್ಳಬೇಕು ಹಾಗೆ ಲೈಸನ್ಸನ್ನು ಪಡೆದು ಕೊಳ್ಳಲು ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಮದರಾಸು ಸಿಟಿ ಪೋಲೀಸ್ ಆಕ್ಟಿನ ಪ್ರಕಾರ ವ್ಯವಹಾರವನ್ನು ತೆಗೆದುಕೊಳ್ಳಲಾಗುವುದು, ಎಂದು ಈ ಮೂಲಕ ತಿಳಿಸಲಾಗಿದೆ.

(Sd) ಕೆ. ಬಾಲಕೃಷ್ಣ, ಪೋಲೀಸ್ ಡಿಸ್ಟ್ರಿಕ್ಟ ಸುಪರಿಂಟೆಂಡೆಂಟ್, ಉಡುಪಿ.

ವಿ. ಸೂ. ಲೈಸನ್ಸ್ ಪಡೆಯಲಿಚ್ಛಿಸುವವರು ಒಂದು ರೂಪಾಯಿಯ ಕೋರ್ಟು ಸ್ಟಾಂಪನ್ನು ಅವರ ಅರ್ಜಿಗಳಿಗೆ ಅಂಟಿಸಿ ಎರಡು ರೂಪಾಯಿಯ ಚಲಾನು ಸಮೇತ (ಲೈಸೆನ್ಸಿನ ಆಫೀಸು)ಸುಮಾರು ಏಳು ದಿನಗಳಿಗೆ ಮುಂಚಿತವಾಗಿ ಉಡುಪಿ ಪೋಲೀಸು ಸ್ಟೇಶನಿನಲ್ಲಿ ಕೊಡತಕ್ಕದ್ದು.

**ಇರ ಶ್ರೀ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಭಾ**— ಇವರು ಉಡುಪಿಯಲ್ಲಿ ಮೊಕ್ಕಾಂ ಮಾಡಿ ತಾ. 18ರಿಂದ ಉತ್ತಮ ಪ್ರದರ್ಶನಗಳನ್ನೀಯುತ್ತಿರುವರು. ಭಸ್ಮಾಸುರ ಮೋಹಿನಿ ಮತ್ತು ಕೃಷ್ಣಾರ್ಜುನ ಎಂಬ ಪ್ರಥಮ ಪ್ರದರ್ಶನವು ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

**ಹಿರಿಯಡ್ಕ**— ತಾ. 14ರಂದು ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಮಕ್ಕಳ ದಿನಾಚರಣೆಯು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನೆರವೇರಿತು.

---

## ಇನ್ನೂ ಚಂದಾಹಣವನ್ನು

ಕಳುಹಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.

## ಮಕ್ಕಳ ದಿನಾಚರಣೆ

**ಬೈಲೂರು**— ಬೋರ್ಡು ಹೈಸ್ಕೂಲಿನಲ್ಲಿ ಹೆಡ್ಮಾಸ್ತರ್ ಶ್ರೀ ಬಿ. ಎನ್. ಆಚಾರ್ಯರು ಧ್ವಜಾರೋಹಣ ಮಾಡಿದ ಬಳಿಕ ಡಾ. ಎ. ಕೆ. ಎಲ್ ರಾಯರು ಪಂದ್ಯಾಟಗಳನ್ನು ಉದ್ಘಾಟಿಸಿದರು. ಸಂಜೆ ಡಾ. ಶ್ರೀನಿವಾಸ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣೆ, ಶ್ರೀ ಗೋವಿಂದ ಪೂಜಾರಿಗಳ ಭಾಷಣವಾದ ಬಳಿಕ ಶ್ರೀ ಬಿ ಆರ್. ನಾಯಕರು ಧನ್ಯವಾದವಿತ್ತರು.

**ಮಂಜೆಸ್ವಾಲ**— ಹೈಸ್ಕೂಲಲ್ಲಿ ವಿದ್ಯಾರ್ಥಿಗಳಾದ ಶ್ರೀ ಕೃಷ್ಣಮೂರ್ತಿ ತಂತ್ರಿಯವರಿಂದ ಧ್ವಜಾರೋಹಣ, ಹಯವದನ ಉಪಾಧ್ಯರಿಂದ ಕಲಾವಸ್ತು ಪ್ರದರ್ಶನದ ಉದ್ಘಾಟನೆ, ಮುಕುಂದ ನಾಯ್ಕರಿಂದ ಬಾಪೂಜಿ ತೈಲ ಚಿತ್ರ ಅನಾವರಣ ದಯಾನಂದ ಶೈಗ ಳಿಂದ ಇಂಜಿನಿಯರಿಂಗ್ ವಿಭಾಗದ ವಸ್ತು ಪ್ರದರ್ಶನ ಉದ್ಘಾಟನೆಗಳಾದುವು. ಶ್ರೀ ಪಿ. ಸೂರಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯಕ್ಷಗಾನಕೂಟ ಜರಗಿತು. ಶ್ರೀಗಳಾದ ಟಿ. ಗಣೇಶ ಪೈ ಮತ್ತು ಉ. ಅ. ಕಿಣಿಯವರು ಜಾದು ದೇಖಾವೆಯಿತ್ತರು. ಡಾ| ಉ. ಬಾಯಿ ಪ್ರೊಫೆಸರ್ ಲಾಪವರ ಭಾಷಣಗಳಾದುವು ವಿವಿಧ ವಿನೋದಾವಳಿಗಳೂ ಇದ್ದುವು.

**ಕಾರ್ಕಳ**— ಜಿಲ್ಲಾ ಕಲೆಕ್ಟರ್ ಶ್ರೀ ಎಚ್ ನರಸಿಂಹನವರ ಅಧ್ಯಕ್ಷತೆಯಲ್ಲಿ 3000ಕ್ಕೂ ಮಿಕ್ಕಿದ ಶಾಲಾ ಮಕ್ಕಳ ಕೂಡುವಿಕೆಯಿಂದ ವಿವಿಧ ಕಾರ್ಯಕ್ರಮಗಳಾದುವು. ಶ್ರೀ ಯು. ಕೃಷ್ಣರಾಯರು ರಾಷ್ಟ್ರ ಧ್ವಜವನ್ನರಳಿಸಿದರು. ಕುಮಾರಿ ಎಮ್. ಎಲ್. ಶಾಮಲಾ, ಕೆ. ಸಖು, ಎ. ಸದಾನಂದ ಹೆಗ್ಡೆ, ನಾರಾಯಣ ಶೆಣೈ, ಲಕ್ಷ್ಮಿ, ಜನಾರ್ಧನ ಭಟ್, ಶ್ರೀಧರ, ಜೋರ್ಜ್ ದಿಸೋಜರು ಸಮಯೋಚಿತ ಮಾತುಗಳನ್ನಾಡಿದರು.

**ದೇಲಂಪಾಡಿ**— ಶ್ರೀ ಬಿ. ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಸಭೆ, ಪಂದ್ಯಾಟ, ವನಸುಮ, ಹಸ್ತಪತ್ರಿಕೆ ಉದ್ಘಾಟನೆ, ಶ್ರೀ ಬಿ. ಟಿ. ರೈಗಳೇ ಮೊದಲಾದವರ ಭಾಷಣ, ಬಹುಮಾನ ವಿತರಣೆ, ಶ್ರೀ ಕೋಚಣ್ಣ ರೈಗಳಿಂದ ಸಿಹಿತಿಂಡಿ ಹಂಚೋಣ, ಮಾಸ್ತರ್ ಶ್ರೀ ಕೆ. ಮಹಾಲಿಂಗನವರಿಂದ ಧನ್ಯವಾದಾರ್ಪಣೆಗಳಾದುವು.

**ತೆಂಕಬೆಳ್ಳೂರು**— ಶಾಲಾ ಮಕ್ಕಳಿಗೆ ಪಂದ್ಯಾಟ, ಶ್ರೀ ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಎ. ನಾಗಣ್ಣ ಬಲ್ಲಾಳರಿಂದ ಧ್ವಜಾರೋಹಣ ಶ್ರೀ ಲಕ್ಷ್ಮಪ್ಪ ರೈ ಶ್ರೀ ಬಿ. ಎಸ್. ನಾಗಪ್ಪ, ಬ್ಲೋಕ್ ಡೆವಲಪ್‌ಮೆಂಟ್ ಅಫೀಸರ್, ಮೊದಲಾದವರ ಭಾಷಣ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು.

**ಕೊಲ್ಲೂರು**— ಶ್ರೀ ದೇವಸ್ಥಾನದ ಮುಖ್ಯಾಧಿಕಾರಿ ಶ್ರೀ ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಆಟ ಸ್ಪರ್ಧೆಗಳು ಮೈಸೂರು ಕಾಲೇಜ್ ನಿವೃತ್ತ ಪ್ರೊಫೆಸರ್ ಶ್ರೀ ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಗುಂಡು ಭಟ್ ಮೊದಲಾದವರ ಸಮಯೋಚಿತ ಭಾಷಣ, ಬಹುಮಾನ ವಿತರಣೆಗಳಾದುವು.

**ಕೊಳಂಬೆ**— ಸ್ಥಳೀಯ ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಎ. ವಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ಕೆ. ಕೃಷ್ಣ ರಾವ್, ಡಿ. ಸುಬ್ಬರಾವ್, ಬಿ. ರತ್ನಾಕರ ಮೊದಲಾದವರಿಂದ ಮಕ್ಕಳಿಗೆ ಹಣ್ಣು ಸಿಹಿತಿಂಡಿ ವಿತರಣೆಗಳಾದುವು.

**ಹಿಲಿಯಾಣ**— ಪ್ರಭಾತಭೇರಿ, ಪಂದ್ಯಾಟ, ಸಭೆ, ಭಾಷಣ, ಸೂತ್ರಯಜ್ಞ, ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಕೆ. ನಾರಾಯಣನವರಿಂದ ಬಹುಮಾನವಿತರಣೆಗಳಾಗಿ ಮಕ್ಕಳಿಗೆ ಸಿಹಿತಿಂಡಿ ಹಂಚಲ್ಪಟ್ಟಿತು.

**ಬಾರಕೂರು**— ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ಯಜ್ಞನಾರಾಯಣ ರಂಗರ ಅಧ್ಯಕ್ಷತೆಯಲ್ಲಿ ಪಂದ್ಯಾಟಗಳು, ಸಭೆ, ಮಕ್ಕಳ ವಿನೋದಾವಳಿಗಳು, ಬಹುಮಾನ ವಿತರಣೆ, ಸಿಹಿತಿಂಡಿ ವಿತರಣೆಗಳಾದುವು.

**ಹೆಕ್ಲಾಡಿ**— ಪ್ರಾಥಮಿಕ ಶಾಲೆಯಲ್ಲಿ ಶ್ರೀ ನಡೂರು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆಹರೂ ಜಯಂತಿ ಹಾಗೂ ಮಕ್ಕಳ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

**ಕಿದಿಯೂರು**— ಶಾ। ಎ। ಶಾಲೆಯ ಹೆಡ್ಮಾಸ್ತರ್ ಶ್ರೀ. ಕೆ. ಪದ್ಮನಾಭ ಭಟ್ಟರು ಬೆಳಿಗ್ಗೆ ಧ್ವಜವನ್ನರಳಿಸಿದರು. ಸಂಜೆ ಸಂಗೀತ, ಭಾಷಣ ಸ್ಪರ್ಧೆಗಳಾದುವು. ಬಹುಮಾನ ವಿತರಣೆ ಮಕ್ಕಳಿಗೆ ಸಿಹಿತಿಂಡಿ ಹಂಚೋಣ ಕಾರ್ಯಕ್ರಮದಿಂದ ಸಮಾರಂಭ ಕೊನೆಗೊಂಡಿತು.

**ಕೊರಂಗ್ರಪಾಡಿ**— ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಸೆಟ್ರರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಸಂಜೆ ಶ್ರೀಗಳಾದ ಕೆ. ತೇಜಪ್ಪ ಸೆಟ್ಟಿ, ರಾಮಕೃಷ್ಣಯ್ಯ, ಎಚ್ ವಿಠಲ ಸೆಟ್ಟರ ಭಾಷಣಗಳಾದುವು. ಮಕ್ಕಳಿಗೆ. ಸಿಹಿತಿಂಡಿ ಹಂಚಲಾದ ಬಳಿಕ ರಾಷ್ಟ್ರಗೀತೆ ಹಾಡಲ್ಪಟ್ಟಿತು.

---

**ಇನ್ನಂಜೆ**— ಇನ್ನಂಜೆ ಗ್ರಾಮದ ಪಟೇಲರೂ, ಮದ್ರಾಸಿನಲ್ಲಿ ಇಂಜಿನಿಯರ್ ಆಗಿದ್ದ ಶ್ರೀ ಎಮ್. ಶಿವರಾಮ ಶೆಟ್ರ ತೀರ್ಥರೂಪರವರೂ ಆದ ಶ್ರೀ ದೇಜಪ್ಪ ಶೆಟ್ಟರು ತನ್ನ 78ನೇ ವಯಸ್ಸಿನಲ್ಲಿ ತಾ. 14—11—56 ನೇ ಬುಧವಾರ ರಾತ್ರಿ ಅನಿರೀಕ್ಷಿತವಾಗಿ ದಿವಂಗತರಾದರೆನ್ನಲು ವಿಷಾದವೆನಿಸುತ್ತದೆ.

ದಿವಂಗತರು ಅನೇಕ ವರ್ಷಗಳಿಂದ ಇನ್ನಂಜೆ ಗ್ರಾಮದ ಬಬ್ಬ ಆಕ್ಟ ಪಟೇಲರಾಗಿದ್ದುಕೊಂಡು ಗ್ರಾಮದ ಜನತೆಯಿಂದಲೂ ಇತರ ಮಹಾ ಜನತೆಯಿಂದಲೂ ಪ್ರಸಿದ್ಧ ಕಾರ್ಯಕರ್ತರಾಗಿ ಬಾಳಿಜನ ಪ್ರೀತಿಗೆ ಪಾತ್ರರಾಗಿದ್ದರು. ಮೃತರಿಗೆ ಇಬ್ಬರು ಗಂಡು ಮಕ್ಕಳೂ ನಾಲ್ಕು ಮಂದಿ ಹೆಣ್ಣುಮಕ್ಕಳೂ, ಇದ್ದಾರೆ.

ಶ್ರೀಯುತರ ನಿಧನದಿಂದ, ಅವರ ಪತ್ನಿ, ಮಕ್ಕಳಿಗೂ ಜನತೆಗೂ ಉಂಟಾದ ದು:ಖದಲ್ಲಿ ಮನಶ್ಶಾಂತಿಯನ್ನು ದಿವಂಗತರ ಆತ್ಮಕ್ಕೆ ನಿತ್ಯಶಾಂತಿಯನ್ನೂ ಪರಮಾತ್ಮನು ಅನುಗ್ರಹಿಸಲಿ.

**ಕುಂಬಳೆ**— ಮಾಯಿಪಾಡಿ ಶಾಲಾ ಪರೀಕ್ಷಾಧಿಕಾರಿ ಶ್ರೀ ವಿ. ತಿಮ್ಮಪ್ಪ ಸೆಟ್ಟರಿಗೆ ತಾ. 17ರಲ್ಲು ಅವರು ಪಗಟೇಕು ಶಾಲೆಗೆ ವರ್ಗವಾಗಿ ಹೋಗುವ ನಿಮಿತ್ತ, ಈ ಕೇಂದ್ರದ ಅಧ್ಯಾಪಕರ ಪರವಾಗಿ ಸತ್ಕಾರಕೂಟವೊಂದು ಶ್ರೀ ಐ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

**ಪೆರ್ಕಳ**— ಅವಲಕ್ಕಿ ತಯಾರಕರ ಸಹಕಾರಿ ಸಂಘವು ರಜಿಸ್ಟ್ರಿಯಾಗಿದ್ದು ಮುಂದಿನ ವಿಚಾರ ವಿನಿಮಯಕ್ಕಾಗಿ ಶ್ರೀ ಟಿ. ರಮೇಶ ಯು. ಪೈಗಳ ಅಧ್ಯಕ್ಷತೆಯಲ್ಲಿ ತಾ. 16ರಲ್ಲು ಉತ್ಪಾದಕರ ಸಭೆಯೊಂದು ಜರಗಿತು. ಶ್ರೀಗಳಾದ ಎ. ಜೆ. ಆಳ್ವ ಮತ್ತು ರಾಜೀವ ಕೋಟಿಯಾನರು ಸಂಘದ ಉದ್ದೇಶಗಳನ್ನು ವಿವರಿಸಿದರು. ಅಖಿಲ ಭಾರತ ಗ್ರಾಮೋದ್ಯೋಗ ಬೋರ್ಡಿನಿಂದ ಈ ಸಂಘಕ್ಕೆ ಸಹಾಯ ಸಿಗಬೇಕಾಗಿದೆ ಎಂದು ಅಧ್ಯಕ್ಷರು ಹೇಳಿದರು.

**ಧರ್ಮಸ್ಥಳ**- ಸ್ಥಳೀಯ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ದೀಪೋತ್ಸವಗಳು ಇದೇ ತಾ 27ರಿಂದ ದಶಂಬರ ತಾ. 2ರ ವರೆಗೆ ಜರಗಲಿರುವುವು. ವಾಡಿಕೆಯಂತೆ ವಿವಿಧ ಧರ್ಮ ಸಮ್ಮೇಳನವು ಇದೇ ತಾ 30ರಲ್ಲೂ ಕವಿ ಗೋಷ್ಠಿಯು ದಶಂಬರ ತಾ 1ರಲ್ಲಿ ನಡೆಯುವುದು. ಶ್ರೀಗಳಾದ ಜಿ. ಪಿ. ರಾಜರತ್ನಂ, ಡಾ. ಪದ್ಮರಾಜ್, ಬಿ. ಎಚ್. ಶ್ರೀಧರ, ಎಸ್. ಕೆ. ರಾಮಚಂದ್ರ ರಾವ್, ಧರಣೇಂದ್ರಯ್ಯ, ಚೆನ್ನವೀರ ಕಣವಿ, ಮ. ತಿ. ನರಸಿಂಹಾಚಾರ್ಯ, ಎಸ್. ವೆಂಕಟರಾಜ್, ಗೋಪಾಲಕೃಷ್ಣ ಅಡಿಗ ಮೊದಲಾದವರು ಭಾಗವಹಿಸಲಿರುವರು.

**ಮೂಡಿಗೆರೆ** - ಸ್ಥಳೀಯ ಟೌನ್ ಮುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟ್ ಡಾ. ಪಿ. ಎ. ಅಡ್ಯಂತಾಯರ ಧರ್ಮ ಪತ್ನಿ ಶ್ರೀಮತಿ ಲಲಿತಾರವರು ಕೆಲವು ಸಮಯದಿಂದ ಬೆಂಗಳೂರಿನಲ್ಲಿ ಚಿಕಿತ್ಸೆ ಹೊಂದುತ್ತಿದ್ದವರು ಇದೇ ತಾ. 14ರಲ್ಲು ದಿವಂಗತರಾದರೆನ್ನಲು ವಿಷಾದವಾಗುತ್ತದೆ. ಶ್ರೀಮತಿಯವರು ದಿವಂಗತ ಕವಿ ಭೂಷಣ ಕೆ. ಪಿ. ವೆಂಕಪ್ಪ ಸೆಟ್ಟರ ಹಿರಿಯ ಪುತ್ರಿ. ಇವರ ನಿಧನದಿಂದ ಅಪಾರ ದು:ಖಕ್ಕೀಡಾಗಿರುವ ಪತಿ, ಮಕ್ಕಳ ಮತ್ತು ಬಂಧುಬಳಗದವರೊಡನೆ ನಾವು ಸಹಾನುಭೂತಿ ಪಡುತ್ತೇವೆ.

**ಅಜ್ಜಿ**— ರಾ. ವಿ. ಯೋಜನೆಯನ್ವಯ ಕಟ್ಟಿಸಲಾದ ಬೋರ್ಡು ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ತಾ 15ರಲ್ಲು ಶ್ರೀ ಬಿ. ರಘುರಾಮ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಬಿ. ಬಾಲಚಂದ್ರ ಸೆಟ್ಟಿ ಮತ್ತು ಶ್ರೀ ಎ. ಬಿ. ಸೆಟ್ಟರು ಸಂದರ್ಭೋಚಿತ ಮಾತುಗಳನ್ನಾಡಿದರು. ಶಾಲಾ ಕಮಿಟಿ ಕಾರ್ಯದರ್ಶಿ ಶ್ರೀ ಎ. ಮುತ್ತಯ್ಯ ಸೆಟ್ಟರು ಧನ್ಯವಾದಗಳನ್ನಿತ್ತರು. ಮಕ್ಕಳಿಗೂ ಸಭಿಕರಿಗೂ ತಿಂಡಿಸಂಚೋಣವಾಗಿ ಸಭಾ ಕಾರ್ಯಕ್ರಮ ಮುಕ್ತಾಯವಾಯಿತು.

**ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ**. ಪೂರ್ವ ಶಿಷ್ಟಸಂಪ್ರದಾಯ ಪ್ರಕಾರ ಇದೇ ತಾ 29ರಿಂದ ಉತ್ಸವವು ಪ್ರಾರಂಭವಾಗಿ ದಶಂಬರ ತಾ 1ರಂದು ಲಕ್ಷದೀಪೋತ್ಸವ ತಾ 7ರಂದು ಪಂಚಮಿ ರಥೋತ್ಸವ, ತಾ 8ರಂದು ಚಂಪಾಷಷ್ಠಿ ಮಹಾರಥೋತ್ಸವ, ತಾ 9ರಂದು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಜರಗುವುವು.

**ಹೆಬ್ರಿ**— ರಾಷ್ಟ್ರೀಯ ವಿಸ್ತರಣಾ ಕೇಂದ್ರದ ಆಫೀಸೊಂದು ಹೆಬ್ರಿಯಲ್ಲಿ ತೆರೆಯಲ್ಪಟ್ಟು ಶ್ರೀ ಎಮ್ ಆರ್. ನಾರಾಯಣ ಶಿವರು ಬ್ಲೋಕ್ ಡೆವಲಪ್‌ಮೆಂಟ್ ಅಫೀಸರರಾಗಿ ತಾ. 18ರಲ್ಲು ಅಧಿಕಾರ ವಹಿಸಿರುವರು. ಪಶು ಸಂಗೋಪನಾ ವಿಸ್ತರಣಾಧಿಕಾರಿಯಾಗಿ ಶ್ರೀ ಕಡಂಬ್ರಿ, ಸಮಾಜ ಶಿಕ್ಷಣ ಸಂಘಟಕರಾಗಿ ಶ್ರೀ ಎಸ್. ಪಿ. ಸೆಟ್ಟಿ, ಸಮಾಜ ಶಿಕ್ಷಣ ಸಂಘಟಿಕೆಯಾಗಿ ಕುಮಾರಿ ಶಾಂತಾ, ಅವರು ನೇಮಕ ಹೊಂದಿರುವರು. ಕುಂದಾಪುರ ತಾಲೂಕಿನ ಒಂಭತ್ತು ಗ್ರಾಮಗಳು ಮತ್ತು ಅಜೆಕಾರು ಫಿರ್ಕಾ ಈ ಕೇಂದ್ರಕ್ಕೆ ಸೇರಿರುವುದು.

---

## ಕೆನರಾ ಬೇಂಕಿನ ಸುವರ್ಣ ಮಹೋತ್ಸವ

ತಾ. 19ರಲ್ಲಿ ಮಂಗಳೂರಲ್ಲಿ ಕೇಂದ್ರ ಸರಕಾರದ ಮಾಜಿ ಹಣಕಾಸಿನ ಸಚಿವರೂ, ಈಗ ಮುಂಬಯಿ ವಿಶ್ವವಿದ್ಯಾ ನಿಲಯದ ಉಪ ಕುಲಪತಿಗಳೂ ಆದ ಡಾ. ಜೋನ್ ಮತಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕಿನ ಡೈರೆಕ್ಟರ್ ಶ್ರೀ ಎ. ನಾರಾಯಣ ಪೈಗಳು ಸ್ವಾಗತಭಾಷಣಮಾಡಿದರು. ಶ್ರೀ ಯು. ಶ್ರೀನಿವಾಸ ಮಲ್ಯ, ಎಮ್. ಪಿ. ಯವರು ಡಾ. ಮತಾಯಿಯವರಿಗೆ ಹಾರವನ್ನರ್ಪಿಸಿದರು.

ಡಾ. ಮತಾಯಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಕೆನರಾ ಬೇಂಕಿನ ಪ್ರಗತಿಗೆ ಮೆಚ್ಚಿಗೆ ವ್ಯಕ್ತಪಡಿಸಿದರು. ಬೇಂಕುಗಳ ಶಾಖೆಗಳ ವಿಸ್ತರಣೆ ಕುರಿತು ಹೇಳುತ್ತಾ, ಈಗ ಸ್ಟೇಟ್ ಬೇಂಕುಗಳಿಗೆ ಮಾತ್ರ ಶಾಖಾ ವಿಸ್ತರಣೆಗೆ ಹೆಚ್ಚಿನ ಸಹಾಯ ಅನುಕೂಲತೆಗಳನ್ನು ರಿಜರ್ವ್ ಬೇಂಕು ಕೊಟ್ಟಿದೆ. ಈ ಅನುಕೂಲತೆಗಳನ್ನು ಶೆಡ್ಯೂಲ್ಡ್ ಬೇಂಕುಗಳಿಗೂ ಒದಗಿಸಿಕೊಟ್ಟು ಅವುಗಳು ಕೂಡಾ ಹೆಚ್ಚು ಶಾಖೆ ತೆರೆಯುವಂತೆ ಸಹಾಯಕೊಡುವ ಒಂದು ವಿಧಾನವನ್ನು ಏಕೆ ಸರಕಾರ ಕೈಕೊಳ್ಳಬಾರದು ಎಂದು ಕೇಳಿದರು. ನಾವಿಂದು ಹಣಕಾಸಿನ ಮುಗ್ಗಟ್ಟಿನ ಕಾಲಾವಧಿಯಲ್ಲಿದ್ದೇವೆಂದು ಹೇಳಲಾಗುತ್ತಿದೆ. ಇಂದು ರಾಷ್ಟ್ರದಲ್ಲಿ ಹಣದ ಬೇಡಿಕೆಯು ತುಂಬಾ ಇದ್ದು, ಬೇಂಕುಗಳಿಂದ ಮುಂಗಡ ಕೇಳುವ ಪ್ರವೃತ್ತಿಯನ್ನು ಹೆಚ್ಚಾಗಿ ಕಾಣಬರುವದಾಗಿದೆ, ಕಳೆದ ಕೆಲವು ತಿಂಗಳುಗಳಿಂದ ಆ ಮುಂಗಡಗಳ ಪ್ರಮಾಣವು ಬಹಳ ಹೆಚ್ಚಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನಾವಧಿಯಲ್ಲಿ ಕೆಲವೊಂದು ಸಾಮಗ್ರಿ ಸಲಕರಣೆಗಾಗಿ ಕೊಟ್ಟಿದ್ದ ಕೇಳಿಕೆಗಳು ಇಂನು ಪೂರೈಕೆಯಾಗುತ್ತಿರುವುದೇ ಈ ರೀತಿ: ಅನುದಿನ ಹೆಚ್ಚಳಕ್ಕೆ ಕಾರಣ ಈ ಅಮುದೇ ಮುಂಗಡಗಳ ಕೇಳಿಕೆಯು ಹೆಚ್ಚಾಗಲು ಕಾರಣವೆಂದು ತೋರುತ್ತದೆ. ಆದರೆ ಇದೊಂದು ಕ್ಷಣಿಕಾವಸ್ಥೆಯೆಂದು ನನ್ನ ಅಭಿಪ್ರಾಯವಾಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸರಕಾರದವರು ಅಮುಬುಗಳನ್ನು ಪರಿಶೀಲಿಸಿಗೊಳಿಸುವ ವಿಚಾರವನ್ನು ಪರ್ಯಾಲೋಚಿಸಲೂ ಬಹುದಾಗಿದೆ ಎಂದು ಹೇಳಿದರು. ಸಭಾಂತ್ಯದಲ್ಲಿ ಜನರಲ್ ಮೆನೇಜರ್ ಶ್ರೀ ಸಿ ಸರ್ವೋತ್ತಮ ನಾಯ್ಕರು ಧನ್ಯವಾದವಿತ್ತರು.

---


ನಿಮ್ಮಷ್ಟಕ್ಕೆ ನೀವೇ 'ಇಂಗ್ಲಿಷ್' ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

**ಸುಲಭದಲ್ಲಿ ಇಂಗ್ಲಿಷ್**

**[ENGLISH MADE EASY]**

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

**ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ**

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ್, ಉಡುಪಿ.



## ಗೋವಿಜಯ
(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅಭಿನಯ, ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

# ಮಂಗಳೂರು

**ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಢೇಬರರು** — ಕರ್ನಾಟಕ ಕಾಂಗ್ರೆಸ್ ಕಮಿಟಿಯ ಅಧಿಕಾರಕ್ಕೊಳಪಟ್ಟ ಅನ್ಯ ಜಿಲ್ಲೆಗಳಲ್ಲಿ ಇದೇ ತಾ 27ರಿಂದ ಸಂಚಾರ ಕೈಕೊಂಡು ದಕ್ಷಿಣ ಕನ್ನಡ ಜಿಲ್ಲೆಗೂ ಭೇಟಿ ಕೊಡಲಿರುವರು ಎಂದು ತಿಳಿದುಬರುತ್ತದೆ.

**ಶ್ರೀ ಧರ್ಮಸ್ಥಳ ದೇವಸ್ಥಾನವು ಶ್ರೀ ಹೆಗ್ಗಡೆಯವರ 'ಖಾಸಗಿ'**— ಶ್ರೀ ಧರ್ಮಸ್ಥಳ ಕ್ಷೇತ್ರದ ಪ್ರಸಿದ್ಧ ಶ್ರೀ ಮಂಜುನಾಥ ದೇವಾಲಯದ ಲೆಕ್ಕ ಪತ್ರಗಳನ್ನು ತಮಗೊಪ್ಪಿಸಬೇಕೆಂದು ಮದ್ರಾಸಿನ ಎಂಡೋವ್ಮೆಂಟ್ ಬೋರ್ಡಿನವರು ಕೆಲಸಮಯದ ಹಿಂದೆ ಕೇಳಿದ್ದು, ಆಗಿನ ದೇವಸ್ಥಾನದ ಧರ್ಮಾಧಿಕಾರಿಗಳಾದ ಕೀರ್ತಿಶೇಷ ಶ್ರೀ ಮಂಜಯ್ಯ ಹೆಗ್ಗಡೆಯವರು ಹೆಗ್ಗಡೆ ಪರಂಪರೆಯ ಖಾಸಗಿ ಸಂಸ್ಥೆಯಾದ ಈ ದೇವಸ್ಥಾನದ ಲೆಕ್ಕಪತ್ರಗಳನ್ನು ಬೋರ್ಡಿಗೆ ಒಪ್ಪಿಸುವ ಅಗತ್ಯವಿಲ್ಲವೆಂದು ನಿರಾಕರಿಸಿದ ಸಂಬಂಧ ನಡೆದ ಕೋರ್ಟು ವ್ಯವಹಾರದಲ್ಲಿ, ಇಲ್ಲಿಯ ಜಿಲ್ಲಾ ಜಡ್ಜ ಶ್ರೀ ಎಮ್. ರಾಧಾಕೃಷ್ಣ ಶೆಣೈಯವರು ಇದೇ ಕಳೆದ ತಾ. 9ರಲ್ಲಿ ತೀರ್ಪು ಕೊಡುತ್ತ ಆ ದೇವಸ್ಥಾನವೂ ಅದಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳೂ ಹೆಗ್ಗಡೆ ಪರಂಪರೆಯವರ 'ಖಾಸಗಿ' ಎಂದು ಉಲ್ಲೇಖಿಸಿರುವರು.

**ಮುಸ್ಲಿಂ ಮಹಿಳಾ ಕೇಂದ್ರ**—ತಾ 11ರಲ್ಲು ಅನ್ಸಾರಿ ರಸ್ತೆಯಲ್ಲಿ ಮುಸ್ಲಿಂ ಮಹಿಳೆಯರ ಅಭ್ಯುದಯ ಕೇಂದ್ರವೊಂದನ್ನು ಸಬ್ ಜಡ್ಜರಾದ ಶ್ರೀ ಅಬ್ದುಲ್ ರಹೀಂ ಮುಹಮ್ಮದರು ಉದ್ಘಾಟಿಸಿದರು.

**ನ್ಯಾಯ ಬೆಲೆ ಅಕ್ಕಿ ಅಂಗಡಿಗಳು**- ಅಕ್ಕಿಯ ಬೆಲೆ ದಿನೇ ದಿನೇ ಏರುತ್ತಿರುವುದರಿಂ ನ್ಯಾಯ ಬೆಲೆಯ ಅಕ್ಕಿ ವಿತರಣಾ ಅಂಗಡಿಗಳನ್ನು ತೆರೆಯಬೇಕೆಂತ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಿಗೆ ಮಂಗಳೂರು ಯುವಕ ಕಾಂಗ್ರೆಸಿನ ಕಡೆಯಿಂದ ತಂತಿ ಕಳುಹಿಸಬೇಕೆಂದಾಗಿದೆ.

**ಝಾನ್ಸಿ ಲಕ್ಷ್ಮೀ ಬಾಯಿ ಜಯಂತಿ**— ಸಮಾರಂಭವನ್ನು ತಾ.16ರಲ್ಲು ಮಂಗ

---

**ಕಾರ್ಕಳ ಡಿ. ಮು. ಕೋರ್ಟಿನಲ್ಲಿ**

**O. P. No. 136/1956.**

1. ಶೇಖಿ ಶೆಟ್ಟಿ, 2. ವಾಳು ಶೆಟ್ಟಿ, 3. ಮಂಗಣ ಶೆಟ್ಟಿ, 4. ರಾಜು ಶೆಟ್ಟಿ, 5. ವೆಂಕಣ್ಣ ಶೆಟ್ಟಿ, 6. ಸುಲೋಚನ ಶೆಟ್ಟಿ

—ಅರ್ಜಿದಾರರು

ಚಂದಯ್ಯ ಶೆಟ್ಟಿ —ಎದ್ರಿ

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನಂದ್ರೆ—

1ನೇ ಅರ್ಜಿದಾರಳ ಮತ್ತು ಎದ್ರಿಯ ಮಗನ, ಮಿಕ್ಕ ಅರ್ಜಿದಾರರ ಸಹೋದರ ತಾರೀಕು 17—5—1955 ರಲ್ಲು ಮೃತಪಟ್ಟ ದೊಂಬ ಶೆಟ್ಟಿಗೆ ಕಾರ್ಕಳ ತಾಲೂಕು ಸಾಣೂರು ಗ್ರಾಮದ ತಾರಿದಡಿ ಎಂಬಲ್ಲಿರುವ ಶಾಂತಪ್ಪ ಪೂಜಾರಿ ಅಳಿಯ ನೀಲಯ್ಯ ಪೂಜಾರಿಯು ತಾ. 28—9—53ರಲ್ಲು ರೂ. 140ಕ್ಕೆ ಬರೆಕೊಟ್ಟ ಡಿ. ಪ್ರೋ. ನೋಟಿನ ಅಸಲು ಬಡ್ಡಿ ವಸೂಲು ಮಾಡುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 27—11—56ಕ್ಕೆ ತನ್ನಗೆಯಿಟ್ಟಿದೆ. ಆಕ್ಷೇಪವಿರುವವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುತ್ತದೆ.

**K. V. Kamath.**
Advocate for Petitioners.
ಕಾರ್ಕಳ, 15—11—56.

---

ಕೂಡ ನಮೋದರರಂತ್ರಿ ಶಾಲೆಯವರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀ ಎಚ್ ಮೋಹನ ಕಾಮತರು ಸ್ವಾಗತಿಸಿದರು. ಶ್ರೀ ಕೆ. ಆರ್. ಆಚಾರ್ ಮೊದಲಾದವರು ಕಾಲೋಚಿತವಾತುಗಳನ್ನಾಡಿದರು. ಶ್ರೀ ಕೆ. ಎಮ್. ಆಳ್ವರು ಧನ್ಯವಾದಗಳನ್ನಿತ್ತರು.

**ಮೈಸೂರು ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್** – ಶ್ರೀ ದೇಸಾರವರಿಗೆ ತಾ 14ರಲ್ಲಿ ರಾತ್ರಿ ದ. ಕ. ಜಿಲ್ಲಾ ಅಭಿವೃದ್ಧಿ ಬೋರ್ಡಿನ ಕಡೆಯಿಂದ ಸತ್ಕಾರಕೂಟವೀಯಲಾಯಿತು. ಶ್ರೀ ವಿ ಎಸ್ ಕುಡ್ವರು ಶ್ರೀ ದೇಸಾರವರನ್ನು ಸ್ವಾಗತಿಸಿದರು. ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ, ಶ್ರೀ ಕೆ. ವಿ ಕಾರಂತ, ಶ್ರೀ ಕೆ. ಸೂರ್ಯನಾರಾಯಣ ಅಡಿಗರು ದ. ಕ. ಜಿಲ್ಲೆಯಲ್ಲಿ ವಿದ್ಯುತ್ ವಿಸ್ತರಣೆಯ ಆವಶ್ಯಕತೆಯನ್ನು ವಿವರಿಸಿ ಭಾಷಣವಿತ್ತರು. ಶ್ರೀ ದೇಸಾರವರು ಉತ್ತರಿಸುತ್ತಾ, ವಿದ್ಯುತ್ ಇಲಾಖೆಯನ್ನು ನಡೆಸಲು ಸ್ವತಂತ್ರ ಇಲೆಕ್ಟ್ರಿಸಿಟಿ ಬೋರ್ಡು ಸ್ಥಾಪಿಸಬೇಕೆಂದೂ ಭಾರತ ಸರಕಾರ ಕಾನೂನು ತಂದಿದ್ದರೂ, ದಕ್ಷಿಣ ಭಾರತದ ಪ್ರಾಂತೀಯ ಸರಕಾರಗಳು ಇದಕ್ಕೆ ವಿರೋಧ ಸೂಚಿಸಿದ್ದು ಈ ತನಕ ಈ ಕಾನೂನನ್ನು ಜ್ಯಾರಿಗೆ ತಂದಿಲ್ಲ. ಮೈಸೂರು ಪ್ರಾಂತೀಯ ಸರಕಾರವು ಈಗ ನಡೆಸುತ್ತಿರುವ ಪ್ರಾಂತೀಯ ವಿದ್ಯುತ್ ಇಲಾಖೆಯನ್ನು ನಡೆಸಲು ಮೇಲಿನ ಕಾನೂನಿನಂತೆ ಒಂದು ಇಲೆಕ್ಟ್ರಿಸಿಟಿ ಬೋರ್ಡನ್ನು ರಚಿಸುವ ಕುರಿತು ಪರಿಶೀಲನೆ ನಡೆಸುತ್ತಿದೆ ಎಂದರು. ಶ್ರೀ ಬಿ.ಬಿ. ಸೆಟ್ಟರು ಧನ್ಯವಾದಗಳನ್ನಿತ್ತರು.

**ನೆಹರು ಜಯಂತಿ**— ಸಾರ್ವಜನಿಕ ಸಭೆಯು ತಾ. 14ರಲ್ಲು ಕೇಂದ್ರ ಮೈದಾನಿನಲ್ಲಿ ಡಾ. ಯು ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಚ್. ಕೆ. ತಿಂಗಳಾಯರು ಸ್ವಾಗತ ಮಾತುಗಳನ್ನಾಡಿದರು ಶ್ರೀ. ಬಿ. ಎಸ್. ರಾಮಾಚಾರ್ಯರು ಕವಿತೆಗಳನ್ನು ಹಾಡಿದರು. ಶ್ರೀಗಳಾದ ಪಿ ಕೆ ನಾರಾಯಣ, ಕೆ. ಆರ್. ಆಚಾರ್, ವಿಠಲದಾಸ ಶೆಟ್ಟಿ, ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರು ಭಾಷಣ ಮಾಡಿದರು ಮಂಗಲ ಗೀತೆಯೊಂದಿಗೆ ಸಭಾಕಾರ್ಯ ಮುಕ್ತಾಯವಾಯಿತು.

**ಜಾಗತಿಕ ಮಕ್ಕಳ ದಿನಾಚರಣೆ** ಯು ತಾ. 14ರಲ್ಲು ಕುಮಾರ ಆರ್. ಎಸ್. ಜತಗರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜಾರೋಹಣವಾದ ಬಳಿಕ ಪಂಡಿತ ನೆಹರೂರವರಿಗೆ ಕಳುಹಿಸಿ ಕೊಡುವ ಸಂದೇಶವನ್ನು ಕುಮಾರಿ ಪ್ರೇಮಲತಾ ಹೆಗ್ಡೆಯವರು ಓದಿದರು ಕುಮಾರ ಕೆ. ಗಿರಿಧರ, ಕುಮಾರಿ ಸುವಾಸಿನಿ ಪಕ್ಕಳ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷ ಭಾಷಣಾ ನಂತರ 67 ಪುಗ್ಗೆಗಳನ್ನು ಹಾರಿಸಲಾಯಿತು. ಸೈಂಟ್ ಎಲೋಶಿಯಸ್ ಕಾಲೇಜಿನ ಬೇಂಡು ಪಂಗಡದವರು ರಾಷ್ಟ್ರಗೀತೆಯನ್ನು ಬಾರಿಸಿದರು. ಈ ಸಮಾರಂಭಕ್ಕೆ ವಿವಾರ ಶಾಲೆಯ ಮಕ್ಕಳೂ ಒಂದೆರಡು ಸಾವಿರ ಹಿರಿಯರೂ ಬಂದಿದ್ದರು.

**ಪ್ರಾಂತಿಕ ರಾಜಕೀಯ ಪರಿಷತ್ತನ್ನು**—ಮುಂದಿನ ಡಿಸೆಂಬರ ತಿಂಗಳ ಮೂರನೇ ವಾರದಲ್ಲಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಮ್ಮತಿಗೊಳಪಟ್ಟು ಜರಗಿಸಬೇಕೆಂಬ ನಿರ್ಣಯವು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಸಮಿತಿಯ ತಾ 11ರ ಸಭೆಯಲ್ಲಿ ಪಾಸಾಯಿತು. ಶ್ರೀ ಕೆ. ಆರ್. ಆಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ತಯಾರಿಸಿದ ಕಾಂಗ್ರೆಸ್ ಚುನಾವಣಾ ಪ್ರಚಾರಕರ ಪಟ್ಟಿಯನ್ನು ಮಂಜೂರುಮಾಡಲಾಯಿತು. ಶ್ರೀಗಳಾದ ಬಿ. ನಾರಾಯಣ ನಾಯ್ಕ, ಪಿ. ವಿ. ವೆಂಕಟ್ರಮಣ ಪಾಯ್ಕರ್ ಮತ್ತು ಬಿ. ದಾಮೋದರ ಬಾಳಿಗರನ್ನು ಜಿಲ್ಲಾ ಪರಿಶೀಲನಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಯು. ಎನ್. ಢೇಬಾರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧೀನದ ಜಿಲ್ಲೆಗಳಲ್ಲಿ ಪ್ರವಾಸಮಾಡುವ ಸಂದರ್ಭದಲ್ಲಿ ತಾ 25ನೆ ದಿನವನ್ನು ಸಂಪೂರ್ಣ ದಕ್ಷಿಣ ಕನ್ನಡ ಜಿಲ್ಲೆಗಾಗಿ ಕೊಡಬೇಕೆಂದು ಕೆ. ಪಿ. ಸಿ. ಸಿ. ಯನ್ನು ಕೇಳಿಕೊಳ್ಳಲಾಯಿತು.

**ಸಾಂಸ್ಕೃತಿಕೋತ್ಸವ** ದ. ಕ. ಜಿಲ್ಲಾ ಅಂಚೆ ಮತ್ತು ತಂತಿ ಇಲಾಖೆಯವರ 4ನೇ ವಾರ್ಷಿಕ ಸಾಂಸ್ಕೃತಿಕೋತ್ಸವವು ತಾ. 17ರಲ್ಲಿ ಸರಕಾರೀ ಕಲಾಶಾಲೆಯಲ್ಲಿ ಕಲಾಶಾಲೆಯ ಪ್ರಿನ್ಸಿಪಾಲ್ ಶ್ರೀ ಪಿ. ವಿ. ಬೋಬೋರವರ ಅಧ್ಯಕ್ಷತೆಯಲ್ಲಿ ಜರಗಿತು. ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎಸ್. ಎ. ಸಲಾಂರವರು ಸ್ವಾಗತಿಸಿದರು. ಅಂಚೆ ಮತ್ತು ತಂತಿ ಇಲಾಖೆಯು ಜನರ ನಿತ್ಯ ಜೀವನದಲ್ಲಿ ಅತೀ ಪ್ರಾಮುಖ್ಯವಾದುದು ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಇಲಾಖೆ ನೌಕರರಿಂದ ನೃತ್ಯ, ಸಂಗೀತ, ನಾಟಕಗಳು ಅಭಿನಯಿಸಲ್ಪಟ್ಟವು. ಶ್ರೀ ಟಿ. ಜಗನ್ನಾಥ ರಾಯರು ಧನ್ಯವಾದಗಳನ್ನಿತ್ತರು.

**ಕೆನರಾ ಬೇಂಕ್ ಡೈರೆಕ್ಟರರಿಗೆ ಸತ್ಕಾರ**— ಮಂಗಳೂರಲ್ಲಿ ಜರಗಲಿರುವ ಕೆನರಾ ಬೇಂಕ್ ಲಿಮಿಟೆಡ್‌ನವರ ಸುವರ್ಣ ಮಹೋತ್ಸವ ಸಮಾರಂಭದ ಪೂರ್ವಭಾವಿಯಾಗಿ ತಾ 18ರಂದು ಮಧ್ಯಾಹ್ನ ಕೆನರಾ ಬೇಂಕಿನ ಡೈರೆಕ್ಟರ ಮಂಡಳಿಯವರು, ಜನರಲ್ ಮೆನೇಜರರ ಗೌರವಾರ್ಥವಾಗಿ, ಕೆನರಾ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷ ಶ್ರೀ ಕುಡ್ಪಿ ಶ್ರೀನಿವಾಸ ಶೆಣೈಯವರು ಭೋಜನ ಸತ್ಕಾರ ಕೂಟವನ್ನು ಸ್ಥಳೀಯ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ಏರ್ಪಡಿಸಿದರು. ಬೇಂಕಿನ ಡೈರೆಕ್ಟರ್ಸ್ ಶ್ರೀಗಳಾದ ಎಚ್. ಲಕ್ಷ್ಮೀನಾರಾಯಣ ಕಾಮತ್, ಯು. ಶ್ರೀನಿವಾಸ ಮಲ್ಯ, ಎಮ್. ಪಿ. ಕೆ. ಭುಜಂಗರಾವ್, ಎಸ್. ಪುಂಡಲೀಕ ನಾಯಕ್, ಸಿ. ಶ್ರೀನಿವಾಸರಾವ್, ಕೆ. ಪಿ. ಜೆ. ಪ್ರಭು, ಎ. ನಾರಾಯಣ ಪೈ ಮತ್ತು ಜನರಲ್ ಮೆನೇಜರ್ ಶ್ರೀ ಟಿ. ಸರ್ವೋತ್ತಮ ನಾಯಕ್ ಹಾಗೂ ನಗರದ ಅನೇಕರು ಉಪಸ್ಥಿತರಿದ್ದರು. ಶ್ರೀ ಕುಡ್ಪಿ ಶ್ರೀನಿವಾಸ ಶೆಣೈಯವರು ಸ್ವಾಗತ ಭಾಷಣ ಮಾಡುತ್ತಾ ಬೇಂಕಿನ ಅಭಿವೃದ್ಧಿಯನ್ನು ಕೊಂಡಾಡಿ ಅದಕ್ಕೆ ಕಾರಣೀಭೂತರಾದ ಶ್ರೀ ಪಿ. ಸರ್ವೋತ್ತಮ ನಾಯ್ಕರ ಕಾರ್ಯದಕ್ಷತೆಯನ್ನು ಪ್ರಶಂಶಿಸಿದರು. ನಂತರ ನಗರ ಸಭಾಪತಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗ, ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ, ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಕೆನರಾ ಚೇಂಬರ್ ಆಫ್ ಕಾಮರ್ಸಿನ ಕಾರ್ಯದರ್ಶಿ ಶ್ರೀ ಪಂಜನುಹಾಲ್ ನರಸಿಂಗರಾಯರು ಧನ್ಯವಾದಗಳನ್ನಿತ್ತ ಬಳಿಕ ಸಮಾರಂಭ ಕೊನೆಗೊಂಡಿತು.

---

## ದಿ. ವಿಜಯಾ ಬೇಂಕ್ ಲಿ., ಪುತ್ತೂರು.

### ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಹೆಸರು ಕಾಣಿಸಿದ ಕುಳವಾರುಗಳು ಈ ಮೇಲಿನ ಬೇಂಕಿನಿಂದ ಚಿನ್ನಾಭರಣ ಅಡವಿನಲ್ಲಿ ಸಾಲಪಡಕೊಂಡು ದೀರ್ಘಕಾಲದಿಂದ ಅಸ್ಲು ಬಡ್ಡಿಯನ್ನು ಬಾಕಿಮಾಡಿಕೊಂಡಿರುವದರಿಂದಲೂ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸುಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ ಸದ್ರಿ ನಗಗಳನ್ನು ತಾ. 1—12—56ನೇ ಶನಿವಾರ ಅಪರಾಹ್ನ ಘಂಟೆ 12ಕ್ಕೆ ಯಾ ಆ ನಂತರ ಬೇಂಕಿಗೆ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂದು ತಿಳಿದಿರಲಿ.

| ಲೋನ್ ನಂಬ್ರ | ಸಾಲಗಾರರ ವಿಳಾಸ | ಅಸಲು ಮೊಬಲಗು ರೂ. | ಆ. | ಪೈ. |
|---|---|---|---|---|
| 246/55 | ಸುಬ್ಬಯ್ಯ ರೈ ತಿಮ್ಮಪ್ಪ ರೈಗಳ ಅಳಿಯ ಮಣ್ಣಪ್ಪಾಡಿ ದೇವಸ್ಯ ಮಣ್ಣಪ್ಪಾಡಿ ಗ್ರಾಮ. ಪೋ. ಸವಣೂರು. | 75 | 0 | 0 |
| 403/55 | ಮುತ್ತಪ್ಪ ರೈ ಸೋಮಪ್ಪ ರೈಗಳ ಅಳಿಯ ವಳಮುಗ್ರ ಗ್ರಾಮದ ಪರ್ಪುಂಜ ಪೋ. ಕುಂಬ್ರ | 48 | 0 | 0 |
| 570/55 | ಮ್ಯಾಲಪ್ಪ ಗೌಡ ಬೈರಪ್ಪ ಗೌಡರ ಮಗ ಪಡ್ನೂರು ಗ್ರಾಮದ ಮುತಾವು. ಪೋ. ಪುತ್ತೂರು. | 25 | 0 | 0 |
| 1169/55 | ಉಮ್ಮರೆ ಬ್ಯಾರಿ ಸೀದಿ ಬ್ಯಾರಿಗಳ ಮಗ ವ್ಯಾಪಾರಸ್ಥ ದರ್ಬೆ ಪುತ್ತೂರು ಪೋ. ಪುತ್ತೂರು. | 22 | 0 | 0 |
| 1172/55 | ಪೂವಣಿ ಗೌಡ ಮುದರ ಗೌಡರ ಮಗ ಇರ್ದೆ ಗ್ರಾಮದ ತಲೆಯಾರಿ ಪೋ. ನಿಡ್ಪಳ್ಳಿ. | 20 | 0 | 0 |
| 1478/55 | ಸೂಫಿ ಬ್ಯಾರಿ ಮೊಯಿದಿನ್ ಕುಟ್ಟಿ ಬ್ಯಾರಿಗಳ ಮಗ ಬೆಟ್ಟಂಪಾಡಿ ಗ್ರಾಮದ ಕುಕ್ಕುಬಳ್ಳಿ ಮನೆ ಪೋ. ನಿಡ್ಪಳ್ಳಿ | 25 | 0 | 0 |
| 1657/55 | ಅಚ್ಯುತ ಆಚಾರಿ, ಸುಬ್ರಾಯ ಆಚಾರಿಗಳ ಮಗ ದರ್ಬೆ ಪುತ್ತೂರು ಪೋ. ಪುತ್ತೂರು. | 10 | 0 | 0 |
| 1347/55 | ಶೇಕ್ ಅಬ್ದುಲ್ ಲಟೀಫ್ ಶೇಕ್ ಇಬ್ರಾಹಿಮ್ ಸಾಹೇಬರ ಮಗ ಪೇದೆ ಡಿಪ್ಯುಟಿ ಕಲೆಕ್ಟರವರ ಆಫೀಸು ಪುತ್ತೂರು. | 25 | 0 | 0 |
| 1844/55 | ಬಡ್ಡ ಕುಂಞಿ ಬ್ಯಾರಿ ಬಾಪಕುಂಞಿ ಬ್ಯಾರಿಗಳ ಮಗ ಕೊಂಬೆಟ್ಟು ಪುತ್ತೂರು ಕಸಬಾ ಪೋ. ಪುತ್ತೂರು. | 30 | 0 | 0 |
| 37/56 | ನಾರಾಯಣ ರೈ ಈಳಂತಜೆ ಪಕೀರಪ್ಪ ರೈಗಳ ಅಳಿಯ ಕೈಯ್ಯೂರು ಗ್ರಾಮ ಪೋ. ಕೆದಂಬಾಡಿ. | 35 | 0 | 0 |
| 175/56 | ಚಿಕ್ಕಪ್ಪ ರೈ ಅಮ್ಮು ರೈಗಳ ಅಳಿಯ ಕೇನ್ಯ ಹೊಸಮನೆ ಕೇನ್ಯಗ್ರಾಮ ಪೋ. ಪಂಜ. | 10 | 0 | 0 |
| 626/56 | ಬಿ. ಗಣಪತಿ ಪಿ. ಸಿ. 726, ಪೋಲೀಸ್ ಸ್ಟೇಶನ್ ಪುತ್ತೂರು. | 330 | 0 | 0 |

Puttur
16-11-56.

**K. Kochanna Rai.**
Agent.

---

### ಲೇಖಕರೊಡನೆ—

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸ ಬೇಕಾಗಿ ವಿನಂತಿ.

— ಸಂ. ನ.

---


## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದ ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ ಪ್ರೆಸ್, ಉಡುಪಿ.

## ಹೊಸ ತೂಕ—ಅಳತೆ

(೩ನೇ ಪುಟದಿಂದ)

ತಮ್ಮ ಕೆಲಸದಲ್ಲಿ ಅರ್ಧದಷ್ಟು ವೇಳೆಯನ್ನು ಈಗಿನ ತೂಕ ಮತ್ತು ಅಳತೆ ಪದ್ಧತಿಯ ತೊಡಕುಗಳನ್ನು ಸರಿಪಡಿಸಿಕೊಳ್ಳುವುದಕ್ಕಾಗಿಯೇ ವಿನಿಯೋಗಿಸುವರೆಂದರೆ ಅತಿಶಯೋಕ್ತಿಯಾಗಲಾರದು. ವಿಶ್ವ ಮೆಟ್ರಿಕ್ ಪದ್ಧತಿಯನ್ನು ಅನುಸರಿಸುವುದರಿಂದ ಎಂಜನಿಯರಿಂಗ್, ವಾಣಿಜ್ಯ ಸಂಸ್ಥೆಗಳಲ್ಲಿ ಮತ್ತು ಚಿಲ್ಲರೆ ಅಂಗಡಿಗಳಲ್ಲಿ ಹೆಚ್ಚಿನ ಸಮಯ ಮತ್ತು ಶ್ರಮದ ಉಳಿತಾಯವಾಗುವುದು” ಎಂದು ಹೇಳಿರುವರು.

ವಿಜ್ಞಾನದ ವಿದ್ಯಾರ್ಥಿಗಳು ಮತ್ತು ಎಂಜನಿಯರುಗಳು ಮೆಟ್ರಿಕ್ ಪದ್ಧತಿಯನ್ನು ಈಗಾಗಲೇ ಅನುಸರಿಸುತ್ತಿರುವರು. ಒಂದಲ್ಲ ಒಂದು ರೀತಿಯಲ್ಲಿ ಮೆಟ್ರಿಕ್ ಪದ್ಧತಿಯು ನಮಗೆ ಪರಿಚಿತವಾಗಿದೆ. ನಾವು ರೇಡಿಯೋವನ್ನು ತಿರುಗಿಸಿ, 356 ಅಥವಾ 61 ಮೀಟರುಗಳು ಎನ್ನುತ್ತೇವೆ. ಭಾವ ಚಿತ್ರಗಳನ್ನು 6 × 6 ಸೆಂಟಿಮೀಟರು ಮತ್ತು 6 × 9 ಸೆಂಟಿಮೀಟರುಗಳಲ್ಲಿ ತೆಗೆಯುತ್ತೇವೆ, ಕ್ರೀಡಾ ಪಂದ್ಯಾಟಗಳು 100 ಮೀಟರ್, 400 ಮೀಟರು, 5 000 ಮೀಟರ್ ಇತ್ಯಾದಿಗಳು ಮೆಟ್ರಿಕ್ ಪದ್ಧತಿಯಲ್ಲಿ ನಡೆಯುತ್ತವೆ.

ಮುಂದಿನ ಹತ್ತು ವರ್ಷಗಳಲ್ಲಿ ಕ್ರಮೇಣ ಈಗಿನ ಹೊಸತನವು ಹೋಗಿ ಮೆಟ್ರಿಕ್ ಪದ್ಧತಿಯ ಜೊತೆಗೆ ಹೊಂದಿಕೊಳ್ಳುವುದು ನಮಗೆ ಸಾಧ್ಯವಾದೀತು. ಉದಾಹರಣೆಗೆ: ರೈಲ್ವೆಯವರು ಮೊದಲು ದರಗಳು ಮತ್ತು ಟ್ಯಾರಿಫ್‌ಗಳನ್ನು ಪರಿಷ್ಕರಿಸಿ ಮೆಟ್ರಿಕ್ ಪದ್ಧತಿಯನ್ನು ಅನುಸರಿಸುವಂತೆ ಸಿಬ್ಬಂದಿಗೆ ಹೇಳುತ್ತದೆ. ಮುಂದಿನ ಘಟ್ಟದಲ್ಲಿ ಈ ‘ಟ್ಯಾರಿಫನ್ನು’ ಬಳಕೆಯಲ್ಲಿ ತರಲಾಗುವುದು. ವೇಳಾಪಟ್ಟಿ ಮತ್ತು ದರಗಳನ್ನು ಎರಡು ಪದ್ಧತಿಗಳಲ್ಲಿಯೂ ತಿಳಿಸಲಾಗುವುದು. ಮೂರನೆಯ ಘಟ್ಟದಲ್ಲಿ, ಈಗಿನ ಪದ್ಧತಿಯ ಬದಲು, ಮೆಟ್ರಿಕ್ ಪದ್ಧತಿಯನ್ನು ಪೂರ್ಣವಾಗಿ ಬಳಸಲಾಗುವುದು.

ಅದರಂತೆ ಅಂಚೆ ಮತ್ತು ತಂತಿ ಇಲಾಖೆಯು, ರಕ್ಷಣಾ ಮಂತ್ರಿ ಶಾಖೆ, ಸುಂಕದ ಇಲಾಖೆ ಇತ್ಯಾದಿಗಳು, ಕ್ರಮೇಣ ಮೆಟ್ರಿಕ್ ಪದ್ಧತಿಯನ್ನು ಜ್ಯಾರಿಗೆ ತರುವ ಯೋಜನೆಗಳನ್ನು ಹೊಂದಿವೆ. ಇದರಿಂದ ಅನುದಿನದ ಕೆಲಸಗಳು, ಸುಲಭವಾಗಿಯೂ, ಸುಲಲಿತವಾಗಿಯೂ ನಡೆಯುವುದು.

ಅಂದರೆ, ಈ ಬದಲಾವಣೆಯು ಹತ್ತು ವರ್ಷಗಳ ಅವಧಿಯಲ್ಲಿ ಆಗುವುದು. 10 ವರ್ಷಗಳ ಕೊನೆಯಲ್ಲಿ ಮೆಟ್ರಿಕ್ ಪದ್ಧತಿಯು ಎಲ್ಲಾ ಕ್ಷೇತ್ರಗಳ ಅನುದಿನದ ವ್ಯವಹಾರಗಳಿಗೆಲ್ಲ ಅನ್ವಯವಾಗುವುದು. ಅದನ್ನೂ ಬಳಸತೊಡಗಿದ ಮೇಲೆ ಅದರ ಉಪಯೋಗ ಜನರಿಗೆ ತಿಳಿಯುವುದು.

ಮೆಟ್ರಿಕ್ ಪದ್ಧತಿಯನ್ನು ಶ್ಲಾಘಿಸುತ್ತ, ಪ್ರಧಾನ ಮಂತ್ರಿಗಳು “ಒಟ್ಟಿನಲ್ಲಿ ನಾವು ಸಂಪ್ರದಾಯ ಬದ್ಧರು. ಹಿಂದಿನಿಂದ ರೂಢಮೂಲವಾಗಿರುವ ಪದ್ಧತಿಗಳನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲ. ಆದರೂ, ಮೆಟ್ರಿಕ್ ಪದ್ಧತಿಯನ್ನು ಬಳಕೆಗೆ ತರಬೇಕೆಂಬ ನಮ್ಮ ನಿರ್ಧಾರವು, ಎಲ್ಲ ದೃಷ್ಟಿಗಳಿಂದಲೂ ಸೂಕ್ತವಾಗಿದೆ. ವಿಜ್ಞಾನಿಗಳು, ತಾಂತ್ರಿಕರು ಅಂಕೆ ಅಂಶಗಳ ಸಂಗ್ರಾಹಕರು ಉಪಯೋಗಿಸುವುದು ಮೆಟ್ರಿಕ್ ಪದ್ಧತಿಯನ್ನೇ. ಆದರೆ ಜನರಿಗೂ ಇದರಿಂದ ಹಲವು ಸೌಕರ್ಯಗಳು ಲಭಿಸುವುವು. ಆರಂಭದಲ್ಲಿ ಕೊಂಚ ತೊಂದರೆಯಾದರೂ, ಮುಂದೆ ಅದು ಸರಿಹೋಗುವುದು” ಎಂದು ಹೇಳಿದ್ದಾರೆ.

## ಕಲಾ ಭಂಡಾರ

# ನಮ್ಮ ಕಲಾವಸ್ತುಗಳ ಭಂಡಾರದ ಇತಿಹಾಸ

ಭಾರತದಲ್ಲಿ ವಸ್ತು ಸಂಗ್ರಹಾಲಯದ ವಿಕಾಸ 1784ರಲ್ಲಿ ಆರಂಭವಾಯಿತೆಂದು ತಿಳಿಯಲಾಗಿದೆ. ಆಗ ಪ್ರಸಿದ್ಧ ವಿದ್ವಾಂಸರಾದ ಸರ್ ವಿಲಿಯಂ ಜೋನ್ಸರವರು ಬಂಗಾಳದ ಏಷಿಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿದರು.

1843ರಲ್ಲಿ ಸೊಸೈಟಿಯು ಈ ವಸ್ತು ಸಂಗ್ರಹಾಲಯವನ್ನು ರೂಪಿಸುವುದಕ್ಕಾಗಿ ಸರಕಾರವನ್ನು ಕೇಳಿತು. ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಲಿಯು ಮದರಾಸಿನಲ್ಲಿ ಕೇಂದ್ರ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಒಪ್ಪಿಕೊಂಡಿತು. 1848ರಲ್ಲಿ ಮುಂಬೈನಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಬೇಕೆಂಬ ಆಲೋಚನೆ ಬಂದಿತು. 1851ರಲ್ಲಿ ಮುಂಬೈಯಲ್ಲಿ ವಸ್ತು ಸಂಗ್ರಹಾಲಯವೊಂದು ಸ್ಥಾಪನೆಯಾಯಿತು. 1863ರಲ್ಲಿ ಲಕ್ನೋ ಮತ್ತು ನಾಗಪುರಗಳಲ್ಲಿ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಲಾಯಿತು. 1865ರಲ್ಲಿ ಬೆಂಗಳೂರಿನ ವಸ್ತು ಸಂಗ್ರಹಾಲಯವು ಸ್ಥಾಪನೆಗೊಂಡಿತು. ಅನಂತರ ಮಥುರಾ (1874), ರಾಯಪುರ (1875), ರಾಜಕೋಟ್ (1888) ಗಳಲ್ಲಿ ವಸ್ತು ಸಂಗ್ರಹಾಲಯಗಳು ಸ್ಥಾಪನೆಗೊಂಡವು. ಅದಾದ ಕೆಲವು ವರ್ಷಗಳ ನಂತರ ಶ್ರೀನಗರದಲ್ಲಿ ವಸ್ತು ಪ್ರದರ್ಶನಾಲಯವನ್ನು ಸ್ಥಾಪಿಸಲಾಯಿತು. ಬರೋಡದ ವಸ್ತು ಸಂಗ್ರಹಾಲಯವು 1887ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಆದರೆ ಲಾರ್ಡ್ ಕರ್ಜನ್‌ರವರ ಕಾಲದಲ್ಲಿ ವಸ್ತು ಸಂಗ್ರಹಾಲಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಪ್ರಾಚ್ಯ ವಸ್ತು ಸಂಶೋಧನಾ ಇಲಾಖೆಯ ಡೈರೆಕ್ಟರರಾದ ಸರ್ ಜಾನ್ ಮಾರ್ಷಲ್‌ರವರ ಆಸಕ್ತಿಯೂ ಭಾರತದಲ್ಲಿ ವಸ್ತು ಸಂಗ್ರಹಾಲಯಗಳ ಬೆಳವಣಿಗೆಗೆ ಮುಖ್ಯ ನೆರವನ್ನಿತ್ತಿತು. ಸಾರಾನಾಥ, ನಲಂದ, ತಕ್ಷಶಿಲೆ, ಮತ್ತು ನವದೆಹಲಿಗಳಲ್ಲಿರುವ ಪ್ರಾಚ್ಯ ವಸ್ತು ಸಂಗ್ರಹಾಲಯಗಳ ಸ್ಥಾಪನೆಗೂ ಅವರೇ ಕಾರಣರೆನ್ನಬಹುದು.

ಮುಂಬೈನಲ್ಲಿ ಪ್ರಿನ್ಸ್ ಆಫ್ ವೇಲ್ಸ್ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವ ವಿಚಾರವು 1904ರಲ್ಲಿ ಬಂದಿತು. ಈ ಕಟ್ಟಡವನ್ನು 1914ರಲ್ಲಿ ಪೂರ್ಣಗೊಳಿಸಲಾಯಿತು. ಹಲವು ರಾಜ್ಯಗಳು ತಮ್ಮ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸಿದವು. ಈ ರೀತಿ ಇಂದೂರ್, ಹೈದರಾಬಾದ್, ಹಿಮ್ಮತ್ ನಗರ, ಜಾಂನಗರ, ಕೊಲ್ಹಾಪುರ, ಪದ್ಮನಾಭಪುರ, ಮತ್ತು ರೇವಾಗಳಲ್ಲಿ ವಸ್ತು ಸಂಗ್ರಹಾಲಯಗಳು ಸ್ಥಾಪನೆಗೊಂಡವು.

ಭಾರತ ಇತಿಹಾಸ ಸಂಶೋಧಕ ಮಂಡಲದ ವಸ್ತು ಸಂಗ್ರಹಾಲಯವು ಪುಣೆಯಲ್ಲಿ ಹಲವು ಉತ್ಸಾಹೀ ವ್ಯಕ್ತಿಗಳ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದಿತು.

ಶ್ರೀ ರಾಯ್ ಕೃಷ್ಣದಾಸರ ಪ್ರಯತ್ನದ ಫಲವಾಗಿ 1919ರಲ್ಲಿ ಕಾಶಿಯಲ್ಲಿ ಒಂದು ಕಲಾ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಯಿತು. ರಾಯ್ ಬಹದ್ದೂರ್ ಬಿ. ಎಂ. ವ್ಯಾಸ್‌ರವರ ನೆರವಿನಿಂದ ಅಲ್ಲಹಾಬಾದ್ ವಸ್ತು ಸಂಗ್ರಹಾಲಯವು ವಿಶಿಷ್ಟ ಸ್ಥಾನಗಳಿಸಿತು. ಡಾ. ಜೆ. ಎಚ್. ಕಸಿನ್ಸ್‌ರವರ ವೈಯಕ್ತಿಕ ಸಂಗ್ರಹದಿಂದಾಗಿ ಮದನಪಳ್ಳಿಯ ವಸ್ತುಸಂಗ್ರಹಾಲಯವು ಅಭಿವೃದ್ಧಿಗೆ ಬಂದಿತು.

ದಕ್ಷಿಣದಲ್ಲಿ ಹಲವು ದೊಡ್ಡ ದೊಡ್ಡ ದೇವಾಲಯಗಳಲ್ಲಿಯೂ ವಸ್ತು ಸಂಗ್ರಹಾಲಯಗಳಿರುವುದನ್ನು ನೋಡಬಹುದು. ತಂಜಾವೂರಿನ ಬೃಹದೀಶ್ವರ ದೇವಸ್ಥಾನದಲ್ಲಿ ರಾಜ ರಾಜ ವಸ್ತು ಸಂಗ್ರಹಾಲಯವನ್ನೂ ಶ್ರೀರಂಗ ದೇವಸ್ಥಾನದಲ್ಲಿರುವ ವಸ್ತು ಸಂಗ್ರಹಾಲಯವನ್ನೂ ಇಲ್ಲಿ ಉಲ್ಲೇಖಿಸಬಹುದು.

1949ರಲ್ಲಿ ದೆಹಲಿಯಲ್ಲಿ ಸ್ಥಾಪಿಸಲಾದ ಭಾರತ ರಾಷ್ಟ್ರೀಯ ವಸ್ತು ಸಂಗ್ರಹಾಲಯವು ಹೊಸ ಅಧ್ಯಾಯವನ್ನೇ ಆರಂಭಿಸಿತು. ನವದೆಹಲಿಯಲ್ಲಿರುವ ಆಧುನಿಕ ರಾಷ್ಟ್ರೀಯ ಕಲಾ ಗ್ಯಾಲರಿಯು ಭಾರತದ ಆಧುನಿಕ ಕಲಾ ವಸ್ತುಗಳ ಸಂಗ್ರಹಕ್ಕೆ ಅವಕಾಶವನ್ನೀಯುತ್ತದೆ. ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಮೊಗಲ್ ಮತ್ತು ರಾಜಾಸ್ಥಾನಿ ಪಂಥದ ವರ್ಣಶಿಲ್ಪಗಳನ್ನು ಸಂಗ್ರಹಿಸಲಾಗಿದೆ. ಈಗ ಪ್ರಾಚೀನ ಕಾಲದಿಂದ ಹಿಡಿದು ಮಧ್ಯಕಾಲದ ವರೆಗಿನ ಭಿತ್ತಿ ಚಿತ್ರಗಳನ್ನು ಅದು ಸಂಗ್ರಹಿಸುತ್ತಿದೆ.


## ಕೈ ಗಡಿಯಾರ

ಕೇವಲ 6 ರೂ. ಮಾತ್ರ



೫ ವರ್ಷ ಖಾತರಿಯ ೧೫ ಜೂವೆಲ್ಸ್‌ನ ಚೈನ್ ಸಿಸ್ಟಮ್‌ನ ಕೈಗಡಿಯಾರ ಕೇವಲ ೬ ರೂ. ಮಾತ್ರ. ಪೋಸ್ಟೇಜ್ ೧-೪-೦ ಪ್ರತ್ಯೇಕ.

ಸಾವಿರಾರು ಜನ ಪ್ರಯೋಜನ ಪಡೆದಿದ್ದಾರೆ ಒಪ್ಪಿತವಾಗದಿದ್ದಲ್ಲಿ ಬೆಲೆಯನ್ನು ವಾಪಸ್ಸು ಕೊಡಲಾಗುತ್ತೆ. ರೋಮನ್ ಫೌಂಟನ್ ಪೆನ್ನುಗಳನ್ನು ಜನಪ್ರಿಯತೆಗೊಳಿಸಲೋಸುಗ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

ROMAN TRADING CO,(N·V)
Post Box 1817—DELHI.

## ಗೀತೆಯ ಕೈಗನ್ನಡಿ

0 –12—0
ನವಭಾರತ ಪುಸ್ತಕ ಭಂಡಾರ, ಉಡುಪಿ.




ಮೊಗಲ್ ಚಕ್ರವರ್ತಿಯು ಸ್ವಹಸ್ತದಲ್ಲಿ ಬರೆದಿರುವ ಹಾಗೂ ಅವನ ಸಹಿಯುಳ್ಳ ಪಿಬ್ಯಾಕಿ ಬಾಬರ್‌ನಾಮ್ ಹಸ್ತಪ್ರತಿಯ ಪುಟವೊಂದರ ಯಥಾವತ್ತಾದ ನಕಲನ್ನು ೧ನೇ ಚಿತ್ರದಲ್ಲಿ ಕಾಣಬಹುದು.

ಚೋಳರ ಕಾಲಕ್ಕೆ ಸೇರಿದ ನಟೇಶನ ಕಂಚಿನ ಪ್ರತಿಮೆಯೇ ೨ನೇ ಚಿತ್ರ

## ದಲಿತ ಸಮಾಜ

### ನಮ್ಮೂರಿನ ಹರಿಜನರು ಯೋಗ್ಯ ವಸತಿ ಇಲ್ಲದೆ, ತಮ್ಮ ಪರಂಪರೆಯ ಕೈಕಸುಬಿಗೆ ಪ್ರೋತ್ಸಾಹವಿಲ್ಲದೆ, ಉತ್ತಮ ಶಿಕ್ಷಣದ ಅವಕಾಶವಿಲ್ಲದೆ ದೀನರಾಗಿ ಬಾಳುತಿದ್ದಾರೆ—

### ಈ ಸ್ಥಿತಿ ಸುಧಾರಣೆ ಹೊಂದಲಿ!

ಹರಿಜನರೆಂದು ಕರೆಯಲ್ಪಡುವ, ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟ ಜನರು ತಲಾಂತರಗಳಿಂದ ಯಾತನಾಮಯ ಜೀವನವನ್ನು ನಡೆಸುತ್ತಿರುವುದು ನಮ್ಮ ನಾಡಿನ ಎಲ್ಲೆಡೆಗಳಲ್ಲೂ ಬೆಳೆದು ಬಂದಿದೆ. ಆದರೆ ವರ್ಣಾಶ್ರಮ ಧರ್ಮದಂತೆ ಆ ಜನರು ಅದೇ ರೀತಿಯ ಕಷ್ಟ ಪರಂಪರೆಗಳಲ್ಲಿ ತೊಳಲಾಡುವುದು ಸ್ವಾಭಾವಿಕವೆಂದೂ, ಇತರರ ಸೇವೆಮಾಡಲೋಸುಗವೇ ಅವರ ಹುಟ್ಟಿನ ಕಾರಣವೆಂದೂ, ಊರಕೇರಿಯ ಹೊರಗಡೆ ಜನ ವಸತಿ ಇಲ್ಲದ ಕಡೆಗಳಲ್ಲೇ ಚಿಕ್ಕ ಗುಡಿಸಲುಗಳಲ್ಲಿವರು ವಾಸಿಸಬೇಕಾದುದೂ ಸೃಷ್ಟಿ ನಿಯಮ, ದೈವಸಂಕಲ್ಪ ಎಂಬ ಅಭಿಪ್ರಾಯದಿಂದ ತುಂಬಿದ ಜನರ ಸಂಖ್ಯೆಗೆ ಇಂದಿಗೂ ಕೊರತೆ ಇಲ್ಲ.

ಈ ಆಧುನಿಕ ದಿನಗಳಲ್ಲಿ ಅಸ್ಪೃಶ್ಯತೆ ಎನ್ನುವುದು ಹೇಯ್ಯವು. ಹೊಲಸನ್ನು ತಿಂದು ಮನಬಂದಂತೆ ಅಲೆದಾಡುವ ನಾಯಿಯು ತನ್ನ ಧನಿಯ ಬಳಿಯಲ್ಲಿ ಮನೆಯೊಳಗಡೆ ಅಲೆಯುವುದು ಮಾಸ್ತವವು. ಆದರೆ ಮನುಷ್ಯನಾಗಿ ಜನ್ಮವೆತ್ತಿ, ಸೇವೆಯೇ ತನ್ನ ಜೀವನದ ಹಿರಿಯ ಗುರಿಯಾಗಿಟ್ಟುಕೊಂಡು, ನೈತಿಕ ವಿಚಾರಗಳಲ್ಲಿ ಎಳ್ಳಷ್ಟು ಹಿಂದುಳಿಯದ ವ್ಯಕ್ತಿಯು ಮೇಲ್ಜಾತಿಯವರೆನ್ನಿಸಿಕೊಳ್ಳುವ ಜನರಂತೆಯೇ ಆತ್ಮವಿದ್ದವನೂ, ನಿಷ್ಕಳಂಕನೂ ಆಗಿದ್ದರೂ ಆತನು ಅಸ್ಪೃಶ್ಯನಾದರೆ ದುರಂತ ಜೀವನವನ್ನು ನಡೆಸಬೇಕಾಗುವುದು ಸ್ಪಷ್ಟವಾಗಿ ಕಾಣುತ್ತಿದೆ. ಇಂಥ ಜೀವನವು ಮನುಷ್ಯನಾದವನಿಗೆ ಯಾತನಾಮಯವು. ರಾಷ್ಟ್ರದ ಸಮಗ್ರ ಅಭ್ಯುದಯಕ್ಕೆ ಇದೊಂದು ಅಭಿಶಾಪವು!

ಹರಿಜನರು ಸಾರ್ವಜನಿಕ ಸ್ಥಳಗಳಲ್ಲೆಲ್ಲಾ ನಿರಾತಂಕವಾಗಿ ಎಲ್ಲರಂತೆಯೇ ಪ್ರವೇಶಿಸಬೇಕೆಂಬ ಶಾಸನವನ್ನು ಸರಕಾರವು ಬೆಳಕಿಗೆ ತಂದಿದೆಯಾದರೂ ಅಂಥ ಸ್ಥಳಗಳಿಗೆ ಪ್ರವೇಶಿಸುವಾಗ ಈಗಲೂ ಅಲ್ಲಲ್ಲಿ ಆಕ್ಷೇಪಗಳು ಸಾಗುತ್ತಲೇ ಇವೆ. ಹೆಚ್ಚಿನ ಮಟ್ಟಿಗೆ ಶಾಸನದ ಬಲದಿಂದಲೇ ಈ ಕಾರ್ಯವು ನಡೆಯುತ್ತಿದೆಯಲ್ಲದೆ ಮೇಲ್ಜಾತಿಯವರ ವಿಶಾಲ ಸಹೃದಯ ಮನೋಭಾವನೆಯಿಂದಲ್ಲ ಎಂಬ ಮಾತಿನಲ್ಲಿ ಸತ್ಯಾಂಶವಿದೆ.

ಹಿಂದುಗಳಲ್ಲಿ ಮೇಲ್ಜಾತಿಯವರು ದಲಿತ ವರ್ಗದವರನ್ನು ನಡೆಸಿಕೊಂಡ ಕ್ರಮವು ಅತೃಪ್ತಿಕರವೆಂಬ ಕಾರಣದಿಂದಲೇ ಭಾರತದ ಶ್ರೇಷ್ಠ ರಾಜಕಾರಣಿಗಳಾದ ಡಾಕ್ಟರ್ ಅಂಬೇಡ್ಕರರು ತಮ್ಮ ಲಕ್ಷಗಟ್ಟಲೆ ಅನುಯಾಯಿಗಳೊಂದಿಗೆ ಹಿಂದೂ ಮತಕ್ಕೆ ಬೆನ್ನು ಹಾಕಿ ಬೌದ್ಧ ಮತಾವಲಂಬಿಗಳಾಗಿ ಮತಾಂತರಹೊಂದಿದರು. ಸನಾತನಿಗಳ ಕಠಿಣ ಮನೋವೃತ್ತಿಯ ದೆಸೆಯಿಂದ ದಲಿತವರ್ಗದವರು ಮತಾಂತರ ಹೊಂದುತ್ತಿರುವುದರಿಂದ ಅನ್ಯಮತಸ್ಥರಿಗೆ ಇದೊಂದು ಸುವರ್ಣ ಸಂದರ್ಭವಾಗಿ ಪರಿಣಮಿಸಿದೆ. ದೀರ್ಘ ಕಾಲದಿಂದಲೂ ಈ ರೀತಿ ಎಷ್ಟು ಲಕ್ಷಗಟ್ಟಲೆ ಜನರು ಮತಾಂತರವಾಗಿರಲಿಲ್ಲ? ಹಿಂದೂ ಮತಕ್ಕೇ ಇದೊಂದು ತುಂಬಿ ಬಾರದ ದೊಡ್ಡ ಅಪಘಾತವು. ಸರಕಾರವು ದಲಿತವರ್ಗದವರ ಸರ್ವತೋಮುಖ ಏಳಿಗೆಗಾಗಿ ತೀವ್ರ ಕಾರ್ಯಕ್ರಮಗಳನ್ನೆ ಕೈಗೊಂಡಿದ್ದರೂ ಕಾರ್ಯರಂಗದಲ್ಲಿ ಮೇಲ್ಜಾತಿಯವರಿಂದ ಸಾಕಷ್ಟು ಸಹಕಾರವು ದೊರಕದಿರುವುದೇ ಇಂಥ ಮತಾಂತರಕ್ಕೆ ನಿದರ್ಶನವಾಗಿದೆ.

ಅಖಿಲ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಸೇಕಡಾ 15ರಷ್ಟು ಮಂದಿ ದಲಿತ ವರ್ಗದವರಿದ್ದಾರೆಂದು ವರದಿ ಇದೆ. ಕರ್ನಾಟಕದಲ್ಲಿ ಗುಡ್ಡಗಾಡು ಜನರು (Scheduled Tribes) ಅಷ್ಟೊಂದು ವಿಶೇಷ ಸಂಖ್ಯೆಯಲ್ಲಿ ಇಲ್ಲವಾದರೂ ಸುಮಾರು 52,226 ಮಂದಿ ಇರುವರು. ಈ ಪೈಕಿ ಸುಮಾರು 15 310 ಮಂದಿ ಮೈಸೂರು ರಾಜ್ಯದಲ್ಲೇ ನೆಲೆಸಿರುವರು. ನಮ್ಮ ದ. ಕ. ಜಿಲ್ಲೆಯಲ್ಲಿ 84666 ಮಂದಿ ದಲಿತವರ್ಗದವರೂ, 10241 ಮಂದಿ ಗುಡ್ಡಗಾಡು ಜನರೂ ಇರುವರೆಂದು ವರದಿ ಇದೆ. ಅಖಿಲ ಕರ್ನಾಟಕದಲ್ಲಿ ಒಟ್ಟಿಗೆ 26,43,905 ಮಂದಿ ದಲಿತ ವರ್ಗದವರೂ 52,226ಮಂದಿ ಗುಡ್ಡಗಾಡು ಜನರೂ ಇರುವುದರಿಂದ ಇವರೆಲ್ಲರ ಸರ್ವತೋಮುಖ ಅಭಿವೃದ್ಧಿಗೆ ಸರಕಾರವು ನೀಡಿದ ಉದಾರ ಪ್ರೋತ್ಸಾಹ ಯೋಜನೆಗಳೊಂದಿಗೆ ಸಾರ್ವಜನಿಕರೆಲ್ಲರೂ ಸಹಕರಿಸಿ ಕನಿಕರ ದೃಷ್ಟಿಯಿಂದ ಈ ಜನರ ಮೇಲ್ಮೆಯನ್ನು ಹಾರೈಸಿ ಮಾರ್ಗದರ್ಶಕರಾದರೆ ನಾಡು ಅಭಿವೃದ್ಧಿಯ ಹಂತಕ್ಕೇರುವುದರಲ್ಲಿ ಸಂಶಯವಿಲ್ಲ.

ಭಾರತದಲ್ಲಿ ಹರಿಜನೋದ್ಧಾರಕ್ಕಾಗಿ ಅವಿಶ್ರಾಂತವಾಗಿ ಪ್ರತ್ಯಕ್ಷ ಕಾರ್ಯರಂಗದಲ್ಲಿ ಸೇವೆಸಲ್ಲಿಸಿ ಮಾರ್ಗದರ್ಶನ ಮಾಡಿದವರು ಅಮರ ಜ್ಯೋತಿ ಗಾಂಧೀಜಿಯವರು. ಭಾರತದ ಸರ್ವತೋಮುಖ ಏಳಿಗೆಯೇ ಗಾಂಧೀಜಿಯವರ ಮುಖ್ಯ ಗುರಿಯಾಗಿದ್ದಂತೆಯೇ ಹರಿಜನರ ಏಳಿಗೆಯಾಗದೆ ಭಾರತದ ಪುನರುತ್ಥಾನವಾಗದು ಎಂದು ಅವರು ಮನಗಂಡಿದ್ದರು. ಹಲವು ವಿಧಾನಗಳಲ್ಲಿ ಹರಿಜನರ ಉದ್ಧಾರಕ್ಕಾಗಿ ತಮ್ಮ ಅಮೂಲ್ಯ ಸೇವೆಸಲ್ಲಿಸಿದರು. "ಹಿಂದೂ ಧರ್ಮದಲ್ಲಿ ಪುನರ್ಜನ್ಮವಿರುವುದಾದರೆ, ತಾನೂ ಪುನಃ ಜನ್ಮವೆತ್ತುವುದಾದರೆ ಹರಿಜನರಲ್ಲೇ ತಾನು ಜನ್ಮವೆತ್ತುವಂತೆ ಅನುಗ್ರಹಿಸು ದೇವಾ" ಎಂದು ಗಾಂಧೀಜಿಯು ಹರಿಜನರ ದುರಂತ ಜೀವನದ ಬಗ್ಗೆ ತಮ್ಮ ಸಹಾನುಭೂತಿಯನ್ನು ಈ ರೀತಿ ಪ್ರಾರ್ಥನೆಯ ಮೂಲಕ ತೋಡಿಕೊಂಡರು.

ದಲಿತ ವರ್ಗದ ಜನರಲ್ಲಿ ಹೆಚ್ಚಿನವರು ತಮ್ಮ ಪೂರ್ವದ ಆಚಾರಗಳನ್ನು ಮರೆಯದೆ ಅವಕ್ಕೇ ಅಂಟಿಕೊಂಡಿದ್ದು ಕನಿಕರಾರ್ಹಸ್ಥಿತಿಯಲ್ಲಿ ಜೀವನ ಸಾಗಿಸುತಿದ್ದಾರೆ. ಈ ಜನಾಂಗದಲ್ಲಿರುವ ಕೆಲವೇ ಮಂದಿ ವಿದ್ಯಾವಂತರಾದರೂ ತಮ್ಮ ಜನರ ಏಳಿಗೆಗಾಗಿ ಕೈಲಾದಷ್ಟು ದುಡಿಯುವುದೂ ಅಗತ್ಯ ವಿಚಾರವು.

ನಮ್ಮೂರಿನ ಕೊರಗರೆಂಬವರು ಇತರರು ಉಂಡು ಹೊರಗೆ ಎಸೆದ ಎಂಜಲು ಎಲೆಗಳಲ್ಲಿ ಉಳಿದ ಆಹಾರಾಂಶವನ್ನು ತಿನ್ನಲು ಹಾತೊರೆಯುವುದೂ, ಸತ್ತ ಪ್ರಾಣಿಗಳ ಶವದ ಮಾಂಸ ಭಕ್ಷಣ ಇತ್ಯಾದಿ ಹೇಯ್ಯ ಪದ್ಧತಿಯಲ್ಲಿ ಮಗ್ನರಾಗಿದ್ದಾರೆ. ಇಂಥ ದುಷ್ಪದ್ಧತಿಗಳನ್ನು ಈ ಜನರು ಮರೆಯುವುದು ಅಸಾಧ್ಯವಾದುದರಿಂದ ಇದನ್ನು ನಿರೋಧಿಸಲು ತಕ್ಕ ಶಾಸನವೂ ಅಗತ್ಯವೆಂಬುದು ಮರೆಯತಕ್ಕುದಲ್ಲ—ಹೆಚ್ಚಿನವರಿಗೆ ಉಳಿದುಕೊಳ್ಳಲು ವಸತಿ ಸೌಕರ್ಯಗಳಿಲ್ಲದೆ ಕಷ್ಟಪಡುತ್ತಿರುವರು; ನಿಶ್ಚಿತ ವೃತ್ತಿಯಿಲ್ಲದೆ, ಕಸಬು ಕೈಗಾರಿಕೆಗಳಿಗೆ ಸಹಕಾರವಿಲ್ಲದೆ ಅಲೆದಾಡುತ್ತಾ ವ್ಯರ್ಥ ಬಾಳು ಸಾಗಿಸುತಿದ್ದಾರೆ. ಇವರ ಪ್ರಾಚೀನ ಕಸಬು ಕೈಗಾರಿಕೆಗಳು ಅಭಿವೃದ್ಧಿ ಹೊಂದುವಂತಾಗಬೇಕು. ಈ ಜನರು ದುಡಿದು ಉತ್ಪಾದನೆ ಹೆಚ್ಚಿಸಿಕೊಳ್ಳುವುದರಿಂದ ಪರಾವಲಂಬನದ ಜೀವನವು ಮುಕ್ತಾಯವಾಗಿ ನಾಡಿನ ಏಳಿಗೆಯ ಕಾರ್ಯದಲ್ಲಿ ಇವರೂ ಸಹಕರಿಸುವಂತಾಗಬೇಕು.

ಹರಿಜನರಿಗಾಗಿ (Adidravida) ನಮ್ಮ ಜಿಲ್ಲೆಯಲ್ಲಿ ಪ್ರತ್ಯೇಕ ಶಾಲೆಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಈ ವ್ಯವಸ್ಥೆ ಅಷ್ಟು ತೃಪ್ತಿಕರವಾದುದಲ್ಲ.

ಹರಿಜನ ವಿದ್ಯಾರ್ಥಿಗಳು ಇತರ ಜಾತಿಯವರಂತೆಯೇ ಎಲ್ಲಾ ಜಾತಿಯವರಿಗಾಗಿ ಏರ್ಪಡಿಸಲ್ಪಟ್ಟ ವಿದ್ಯಾಲಯಗಳಲ್ಲೇ ಕಲಿಯುವಂತಾಗಬೇಕು. ಮುಂದರಿದ ಜಾತಿಯ ಮಕ್ಕಳೊಂದಿಗೆ ಶಾಲಾ ಜೀವನ ಸಾಗಿಸಲು ಅನುಕೂಲತೆ ದೊರೆಯುವುದರಿಂದ ಹರಿಜನ ವಿದ್ಯಾರ್ಥಿಗಳೂ ಅನಾಗರಿಕತೆಯ ಕ್ರಮಗಳಿಂದ ಪಾರಾಗಿ ಬೇಗನೇ ಸುಧಾರಿಸಿಕೊಳ್ಳಲು ಸಹಾಯವಾಗಬಲ್ಲುದು. ಹರಿಜನ ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ಶಾಲೆಗಳೆಂದರೆ ಆ ಜನಾಂಗದ ಮುಂದಿನ ಪೀಳಿಗೆಯೂ ಆದರ್ಶ ರೀತಿಯಲ್ಲಿ ತರಬೇತುಹೊಂದಲು ಒಂದು ತೊಡಕಿದ್ದಂತೆಯೇ.

ಈ ಜನಾಂಗದವರಿಗೆ ಸಾರ್ವತ್ರಿಕ ವಿದ್ಯಾಭ್ಯಾಸವು ದೊರಕಲು ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ: ವಿದ್ಯಾಭ್ಯಾಸ ವೈಯಕ್ತಿಕ ನೈರ್ಮಲ್ಯದ ಅವಶ್ಯಕತೆಯನ್ನು ಅವರು ಮನಗಾಣುವಂತಾದರೆ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಅವರೂ ಇತರರಂತೆ ಸಮಭಾಗಿಗಳಾಗಲು ಹಿಂಜರಿಯಲಾರರು. ಅವರಿಗೆ ಉತ್ತಮ ವಸತಿ ಸೌಕರ್ಯಗಳನ್ನು ಒದಗಿಸಿಕೊಡುವಂತಾಗಬೇಕು. ಅವರ ಪರಂಪರೆಯ ಕೈಕಸಬಾದ ಬೆತ್ತ, ಬೀಳಲುಗಳ ಕೆಲಸವು ಆಧುನಿಕ ರೀತಿಯಲ್ಲಿ ಮುಂದರಿಯುವಂತೆ ಮಾರ್ಗದರ್ಶನದ ಅಗತ್ಯವೂ ಇದೆ. ಸಿಡಿಲಿನ ಹೊಡೆತದಿಂದ ತಪ್ಪಿಸಿಕೊಳ್ಳಲು ಕೊಡೆ ಬಿಡಿಸಿದರೆ ಸಾಧ್ಯವಾಗದು! ಈ ನೆಲುವಾಗಿ ಯುಕ್ತ ಕಾರ್ಯಕ್ರಮಗಳನ್ನು ಕವಡಿಸಿಕೊಳ್ಳುವುದು ಅತ್ಯಗತ್ಯವು. ಮೇಲ್ಜಾತಿಯವರೆಲ್ಲರೂ ಈ ಜನಾಂಗದವರ ಮೇಲೆ ಕನಿಕರ ತೋರಬೇಕು, ಅವರ ಏಳಿಗೆಯನ್ನು ಹಾರೈಸಬೇಕು. ಅವರೂ ನಮ್ಮಂತೆಯೇ ಮಾನವರೆಂದೂ, ಅವರಿಗೆ ನಮ್ಮಂತೆಯೇ ಆಸೆ ಆಕಾಂಕ್ಷೆಗಳಿವೆಯೆಂದು ತಿಳಿದು ಅವರ ಏಳಿಗೆಯ ಹಾದಿಯು ವಿಶಾಲವಾಗುವಂತೆ ಸಹಕರಿಸಬೇಕು. ಈ ಅಸಂಖ್ಯಾತ ಮಂದಿಯ ಸರ್ವಾಂಗೀಣ ಅಭಿವೃದ್ಧಿ ಕಾರ್ಯವು ನಾಡಿನ ಏಳಿಗೆಯ ಮಹತ್ವದ ವಿಚಾರಗಳಲ್ಲಿ ಒಂದು ಪ್ರಾಮುಖ್ಯ ಅಧ್ಯಾಯವೆಂಬುದರಲ್ಲಿ ಸಂದೇಹವಿಲ್ಲ.

—ಶ್ರೀ ಶಿವರಾಮ ಶೆಟ್ಟಿ ಮಟ್ಪಾಡಿ.

### ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No 471/1954.

ಯು. ರಾಮಚಂದ್ರ ಕುಕ್ಕಿಲ್ಲಾಯ —ವಾದಿ.

ಮತ್ತು

ಫ್ರಾನ್ಸಿಸ್ ಎಡ್ವರ್ಡ್ ಸೋಜ ಕೂಪಾ —ಪ್ರತಿವಾದಿರು.

ಇವರೊಳಗೆ—

ಸದ್ರಿ ವ್ಯಾಜ್ಯದ ಸಪ್ಲಿಮೆಂಟು 11ನೇ ಪ್ರತಿವಾದಿಳು:—ರಮಾದೇವಿ, ಡಾಕ್ಟರ್ ಕೆ. ವಾಸುದೇವರಾಯರ ಹೆಂಡತಿ. ಮಂಗಳೂರು ತಾಲ್ಲೂಕು ಬೋಳಾರ ಮಂಗಳಾದೇವಿ ದೇವಸ್ಥಾನದ ಬಳಿ ಇರುವವರು-ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ:—

ವಾದಿಯು ಪ್ಲೇಂಟು A ಶೆಡ್ಯೂಲು ಆಸ್ತಿ ಸ್ವಾಧೀನತೆ ವ, ಒಟ್ಟುವಳಿ ವಗೈರೆ ನಿಮ್ಮಕ್ತಿ ಕೇಳಿ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯ ವು ತಾರೀಕು 4—12—1956ಕ್ಕೆ ನಿಮಗೆ ನೋಟೀಸು ಬಗ್ಗೆ ಇಟ್ಟಿರುವುದರಿಂದ, ನಿಮಗೆ ಸದ್ರಿ ವ್ಯಾಜ್ಯದಲ್ಲಿ ಉಜಾಪರಹೆ ಕೊಟ್ಟು ವ್ಯವಹರಿಸ ಬೇಕಿದ್ದಲ್ಲಿ ಸದ್ರಿ ತಾ 4-12-56 ನೇ ದಿವಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ಸ್ವತಹಾ ವ, ವಕೀಲರ ಮುಖಾಂತರ ಹಾಜರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ಸದ್ರಿ ವ್ಯಾಜ್ಯವು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

P. V. Acharya,
Vakil for Plaintiff.

ಉಡುಪಿ ತಾ. 16-11-1956




ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಶ್ರೇಷ್ಠತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ

60 ವರ್ಷ ಪ್ರಾಯದ

ಪಾಕೆಟ್ ಡಾಕ್ಟರ್

ಅಮೃತಾಂಜನ ಲಿ. ಬೊಂಬಾಯಿ ಮದ್ರಾಸು ಕಲಕತ್ತಾ

## ಅಮರ ನಾಟಕಕಾರ

(೨ನೇ ಪುಟದಿಂದ)

ರು. ಪರಂತು—ಕೈಲಾಸಂರವರು ಒಂದೊಂದಾಗಿ ತಮ್ಮ ಹಲವಾರು ನಾಟಕಗಳನ್ನು ಬರೆದು ಪ್ರಕಟಪಡಿಸುತ್ತ, ತಮ್ಮ ಉತ್ಕೃಷ್ಟ ರಚನೆಗಳಿಂದ ಕನ್ನಡ ಸಾಹಿತ್ಯ ಮಂಟಪವನ್ನು ಅಲಂಕರಿಸಿದರು.

ಕೈಲಾಸಂರವರ ಜೀವನ ಚರಿತ್ರೆಯನ್ನು ಶ್ರೀ ಅ. ನ. ಕೃ. ರವರು ಬರೆದಿದ್ದಾರೆ. ಅದೇ ಪುಸ್ತಕದಲ್ಲಿ ಶ್ರೀಮಾನ್ ಜಿ. ಪಿ. ರಾಜರತ್ನಂರವರು ಕೈಲಾಸಂರವರ ಪ್ರಕಟವಾಗದಿದ್ದ ಕೃತಿಗಳ ಕುರಿತು ಬರೆದಿದ್ದಾರೆ. ಇಂದು ಅವರ ಮಿತ್ರರಿಂದಾಗಿ ಸುಮಾರು (೩೦) ನಾಟಕಗಳು ಮುದ್ರಿತವಾಗಿವೆ.

'ಟೊಳ್ಳುಗಟ್ಟಿ ಕೂಲೀನ', 'ಅಮ್ಮಾವ್ರ ಗಂಡ', 'ಬಂಡ್ವಾಳಿಲ್ಲದ ಬಡಾಯಿ', 'ಸತ್ತವನ ಸಂತಾಪ', 'ಗಂಡಸ್ಕತ್ರಿ ಮತ್ತು ನಮ್ ಕಂಪನಿ', 'ನಮ್ ಕ್ಲಬ್',—ಇವು ಕೈಲಾಸಂರವರ ಇತರ ನಾಟಕಗಳು, ಇವರ ಪ್ರತಿ ನಾಟಕದಲ್ಲಿ ಮಹಿಳಾ ಸಮಾಜಕ್ಕೆ ಶ್ರದ್ಧೆ ಮತ್ತು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ.

ಕೈಲಾಸಂರವರು ತನ್ನ ೬೦ ವರ್ಷದ ಆಯುಷ್ಕಾಲದಲ್ಲಿ ಕನ್ನಡ ಭಾಷಾಭಿಮಾನಿಗಳನ್ನು ನಗಿಸಿ, ಕುಣಿಸಿ ತಾನು ಅಮರಲೋಕದ ದಾರಿ ಹಿಡಿದರು. ೧೯೪೬ನೇ ನವಂಬರದಲ್ಲಿ ಇವರು ಮುಂಬಾಯಿಗೆ ಹೋಗಿದ್ದರು. ಅಲ್ಲಿಂದ ಬೆಂಗಳೂರಿಗೆ ತೆರಳಿದರು. ರಾತ್ರೆ ಅಲ್ಲಿ ಮಲಗಿದವರು ಬೆಳಿಗ್ಗೆ ಏಳಲೇ ಇಲ್ಲ. ಅಂದೇ ಅವರು ಕನ್ನಡ, ಕೇರಳ, ಆಂಧ್ರ ಹಚ್ಚೇಕೆ—ವಿಶಾಲ ಭಾರತದ ಬಂಧುಗಳನ್ನು ಬಿಟ್ಟು ಅಗಲಿದರು. ನವಯುಗ ಪ್ರವರ್ತಕ, ನಾಟ್ಯರಂಗದ ನಟರಾಜ, ಹಾಸ್ಯರಸ ಚಕ್ರವರ್ತಿ ಕಣ್ಮರೆಯಾದರು. ಆದರೆ ವಿದೂಷಕ ಕೈಲಾಸಂ ಅಮರ! ಅವರ ಕೃತಿಗಳು ಅಮರ! ಅವನ್ನು ನಾವು ಎಂದಿಗೂ ಮರೆಯಲಾರೆವು.

ಕನ್ನಡ ರಂಗಭೂಮಿಯ ಮೇಲೆ ಮೊತ್ತಮೊದಲಾಗಿ ಹಾಸ್ಯರಸವನ್ನು ಹರಿಯಿಸಿದವರು ಕೈಲಾಸಂ! ಕನ್ನಡ ರಂಗಭೂಮಿಗಳ ಉದ್ಧಾರಕ್ಕಾಗಿ ಟೊಂಕ ಕಟ್ಟಿದವರು ಕೈಲಾಸಂ! ಇಂದು ನಮ್ಮನ್ನಗಲಿ ತಮ್ಮ ಕೃತಿಗಳಿಂದ ಅಮರರೆನಿಸಿಕೊಂಡವರು ಕೈಲಾಸಂ!

(ಆಧಾರದಿಂದ)

—ಶ್ರೀ ಸಿ. ನಾರಾಯಣ ಬಲ್ಲಾಳ


## ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

**ನಿರಖು ಠೇವಣಾತಿ.**

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

| | |
|---|---|
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

MOOLKY BANK LIMITED.


## ಜನಮತ

**ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.**

**ಸಂ. ನ.**

### ಗಡಿಸಮಿತಿ ಬೇಕು.

ನಮ್ಮ ದೇಲಂಪಾಡಿ ಗ್ರಾಮವು ಕಾಸರಗೋಡು ತಾಲೂಕಿನ ಕಡೆಯ ಗ್ರಾಮವಾಗಿದ್ದು ಗಡಿನಾಡು ಪ್ರದೇಶವಾಗಿದೆ. ಕರ್ನಾಟಕ ಪ್ರದೇಶವಾದ ಪುತ್ತೂರು ತಾಲೂಕು ಈ ಗ್ರಾಮದ ಸುತ್ತಲೂ ಬಳಸಿದ್ದು, ಇದೊಂದು ದ್ವೀಪದಂತೆಯೇ ಇದೆ. ಕೆಲವು ವರ್ಷಗಳಿಗೆ ಮೊದಲು ಇದು ಉಪ್ಪಿನಂಗಡಿ ತಾಲೂಕಿಗೆ ಸೇರಿತ್ತಂತೆ. ಅವರೆ ಪುತ್ತೂರು ತಾಲೂಕೆಂದು ಪ್ರತ್ಯೇಕಿಸಿದಾಗ ಕಾರಣಾಂತರದಿಂದ ಕಾಸರಗೋಡಿಗೆ ಸೇರಿದುವಾಗಿದೆ. ಈಗ ಇದು ನ್ಯಾಯವಾಗಿ ಪುತ್ತೂರು ತಾಲೂಕಿಗೇ ಸೇರಬೇಕಾಗಿದೆ. ಗಡಿ ಪ್ರದೇಶಗಳು—ಗಡಿಗಳು ನೇರವಾಗಿಯೇ ಇದ್ದರೆ ಆಡಳಿತೆಗೆ ಸುಲಭ; ನೋಟಕ್ಕೆ ಅಂದ. ಗಡಿ ಪ್ರದೇಶಗಳಲ್ಲಿ ಇಂಥ ಪ್ರಶ್ನೆ ಎಲ್ಲೆಡೆಯೂ ಹುಟ್ಟಲೆಡೆಯಿದೆ. ಅದುದರಿಂದ ಗಡಿ ಸಮಿತಿಗಳನ್ನು ನಿರ್ಮಿಸಿ ಸಾಧ್ಯವಾದಷ್ಟು ಇಂಥ ಪ್ರಶ್ನೆಗಳು ಹುಟ್ಟದಂತೆ ನೋಡುವುದು ಅಗತ್ಯವಿದೆ. ಆ ಕುರಿತು ತಗದ್ದೆ ವಹಿಸಿದಲ್ಲಿ ಮುಂದೆ ಬರಬಹುದಾದ ಹಲವಾರು ಕಷ್ಟನಷ್ಟಗಳಿಗೆ ನಾವು ಗುರಿಯಾಗಬೇಕಾಗುವುದು.

—ಶ್ರೀ ಕೀ. ವ. ಕೇಶವ, ದೇಲಂಪಾಡಿ

### ಅಧಿಕಾರಿಗಳ ಲಂಚಗುಳಿತನ

ಲಂಚಗುಳಿತನವೆಂಬುದು ನಮ್ಮಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಇದರ ಪ್ರಭಾವ ಬಹಳ ಹೆಚ್ಚಾಗಿದೆ. ಪಾಪದ ಬಡವನೊಬ್ಬ ಕೋರ್ಟಿಗೆ ಹೋದರೆ ಅತನ ಎಲ್ಲಾ ದುಡ್ಡು ಒಳಗೆ ಹಾಕಿ ತಮ್ಮ ಜೇಬನ್ನು ತುಂಬಿಸುವವರೆಷ್ಟು ಮಂದಿ? ಅತನ ಹೆಂಡತಿ ಮಕ್ಕಳು ದಿನಕ್ಕೆ ಎರಡು ಹೊತ್ತು ಕೂಡಾ ಸರಿಯಾಗಿ ಊಟಮಾಡದಿದ್ದರೂ ಚಿಂತಿಲ್ಲ. ತಾನು ಮಾತ್ರ ಶ್ರೀಮಂತನಾಗಬೇಕು. ತನ್ನ ಕಕ್ಷಿಗಾರನ ಸರ್ವಸ್ವವೇ ಹೋದರೂ ಚಿಂತಿಲ್ಲ ವಕೀಲ ಮಹಾಶಯರ ಜೇಬು ತುಂಬಬೇಕು! ಎಷ್ಟು ರುಸುಮು ಜಾಸ್ತಿಯಾಯಿತೋ ಅಷ್ಟರ ಭರವಸೆಯಂತೆ ಕೇಸಿನಲ್ಲಿ ಜಯಹೊಂದಲು. ನೌಕರಿ ಹುಡುಕಿಕೊಂಡು ಹೋಗುವವ ಮೇಲಧಿಕಾರಿಗಳಿಗೆ ಎಷ್ಟು ಹೆಚ್ಚಿಗೆ ಲಂಚ ಕೊಟ್ಟನೋ ಅಷ್ಟರ ಭರವಸೆಯಿಂದ ಅತನಿಗೆ ನೌಕರಿ ದೊರಕಿದಂತೆಯೇ. ಅದು ಕೊಡದಿದ್ದರೆ ನೌಕರಿ ಇಲ್ಲ. ಲಂಚ ಕೊಡಲಿಕ್ಕೆ ದುಡ್ಡುಯಿಲ್ಲದೆ ನೌಕರಿಗೆ ಸಂಚಕಾರ ಪಡಕೊಂಡವರು ಹಲವರಿರಬಹುದು

ನಿರುದ್ಯೋಗ ತಾಂಡವವಾಡುತ್ತಿರುವ ನಮ್ಮ ದೇಶದಲ್ಲಿ ದೊಡ್ಡ ಅಧಿಕಾರಿಗಳಿಂದ ಹಿಡಿದು ಸಣ್ಣ ಅಧಿಕಾರಿಯ ವರೇಗೆ ಲಂಚಕ್ಕೆ ಕೈಯೊಡ್ಡಿದರೆ ನಮ್ಮ ದೇಶ ಒಳ್ಳೆದಾಗುವುದು ಹೇಗೆ? ಶ್ರೀಮಂತರೇ ಮತ್ತೂ ಮತ್ತೂ ತಮ್ಮ ಬೊಕ್ಕಸವನ್ನು ತುಂಬಿಸಿಕೊಂಡರೆ ಬಡವರ ಗತಿ ಏನು? ಪ್ರಜಾಪ್ರಭುತ್ವವಾದ ಸಮಾಜ ರಾಷ್ಟ್ರದಲ್ಲಿ ಬಡವನೊಬ್ಬನಿಗೆ ಬಾಳಲು ಎಡೆಯಿಲ್ಲದಿದ್ದರೆ ನಮ್ಮ ರಾಷ್ಟ್ರದಲ್ಲಿ ಜನತಾ ಸರಕಾರವಿದ್ದು ಏನು ತಾನೆ ಪ್ರಯೋಜನ? ಹೀಗಾದರೆ ಗಾಂಧಿಯು ಕಂಡ ರಾಮರಾಜ್ಯದ ಕನಸು ನನಸಾಗಬಹುದೇ? ಎಷ್ಟು ನಾವು ಮುಂದರಿದಿದ್ದೇವೆ ಎಂದರೂ ಎರಡು ಹೊತ್ತು ಸರಿಯಾಗಿ ಊಟಮಾಡಲಿಕ್ಕಿಲ್ಲದ ಜನರು ನಮ್ಮಲ್ಲಿ ಎಷ್ಟೋ ಮಂದಿ ಇದ್ದಾರೆ. ಇದನ್ನು ಅವರ ಹಣೆಬರಹ ಎಂದು ಹೇಳುವುದೋ ಅಥವಾ ನಮ್ಮ ಶ್ರೀಮಂತರ ಪೈಶಾಚಿಕ ಕೃತ್ಯ ಅಂತ ಹೇಳುವುದೊ?

ಶಾಲಾ ಮೇಲಧಿಕಾರಿ ಇನ್ಸ್‌ಪೆಕ್ಟರ್ ಶಾಲೆಗೆ ಬಂದರೆ ಅವರಿಗೆ ಉಪಾಧ್ಯಾಯರು ಲಂಚ ತಾಗದಿದ್ದರೆ "ಶಾಲೆಯ ಉಪಾಧ್ಯಾಯರು ಸರಿಯಾಗಿ ಕೆಲಸ ಮಾಡುವುದಿಲ್ಲ. ಮಕ್ಕಳ ಸಂಖ್ಯೆ ಸರಿಯಿಲ್ಲ. ಮಕ್ಕಳ ಕಲಿಸುವಿಕೆ ಏನೂ ತೃಪ್ತಿಯಿಲ್ಲ" ಎಂದು ತನ್ನ ಸಂದರ್ಶನದ ಪುಸ್ತಕದಲ್ಲಿ ಬರೆಯುತ್ತಾರೆ. ಅದರ ಮೇಲೆ ಉಪಾಧ್ಯಾಯರಿಗೆ ಬೈಗಳ ಸುರಿಮಳೆ. ಏನು ಅಧಿಕಾರದರ್ಪಣವಾಪ್ಪ, ಬಡ ಉಪಾಧ್ಯಾಯರಿಗೆ ತಮ್ಮ ಸಂಸಾರ ಸಾಗಿಸುವುದೇ ಕಷ್ಟ. ತದನಂತರ ಇವರ ಜೇಬು ತುಂಬಿಸಬೇಕು. ಶಾಲೆಗೆ ಬಂದಷ್ಟು ಇವರಿ ಕಾಫಿ ಊಟ ಕೊಡುವುದೇ ಕಷ್ಟ. ಅನಂತರ ಹಣ. ಏನು ಆಶ್ಚರ್ಯ! ಇದು ಜನತಾ ಸರಕಾರ. ಇತರ ಲಂಚಕೋರರ ಕಾಲವೇ ಇದಾಗಿದೆ. ಎಲ್ಲಿ ಹೋದರೂ ಲಂಚದಪಪಾಡ, ಅದರದೆಸೆಯಿಂದ ಭಾರತಕ್ಕೆ ಉಳಿಗಾಲವಿಲ್ಲ.

— ಶ್ರೀ. ವೈ. ಎಚ್. ಹೆಗ್ಡೆ.

## ಸಮಾಜವಾದಿ ಆದರ್ಶ

(೧ನೇ ಪುಟದಿಂದ)

ವೊ ಆ ಸಮಾಜದ ವೈಶಿಷ್ಟ್ಯಗಳನ್ನು ವ್ಯಕ್ತಿಯ ಜೀವನದಲ್ಲಿ ರೂಢಿಗೊಳಿಸಲು ಹೋಗುವುದೇ ಇಂದಿನ ಚಟುವಟಿಕೆಯಾಗಬೇಕಾಗಿದೆ. ಅಧಿಕಾರಗ್ರಹಣಕ್ಕಾಗಿ ಅನುಸರಿಸಬೇಕಾದ ಕಾರ್ಯಕ್ರಮಗಳಿಗಿಂತಲೂ ಕೊಟ್ಟಿನ ಲಕ್ಷ್ಯವನ್ನು ಸಮಾಜವಾದಿಗಳು ನಿತ್ಯ ವ್ಯವಹಾರದಲ್ಲಿ ತಾವು ಅಧಿಕಾರಕ್ಕೆ ಬಂದ ಬಳಿಕ ರೂಢಿಸುತ್ತೇವೆನ್ನುವ ಆದರ್ಶವಾದಿ ನಡವಳಿಕೆಯನ್ನು ಅನುಷ್ಠಿಸಲಿಕ್ಕಾಗಿ ಪ್ರಯತ್ನಿಸಬೇಕಾಗಿದೆ. ಇಂದಿನಿಂದಲೇ ಸಮಾಜವಾದಿ ಆದರ್ಶದಂತೆ ನಡೆಯುವ ಪ್ರತಿಜ್ಞೆಯು ಪ್ರತಿಯೊಬ್ಬನದಾಗಬೇಕು— ಇಂದಿನಿಂದಲೇ ನಮ್ಮ ಜೀವನದಲ್ಲಿ ಹೊಸ ಬೆಳಕು ಕೆಲಸಮಾಡತೊಡಗಬೇಕು. ಉದಾಹರಣೆಗೆ ನಾವು ಸಮಾನತೆಯಲ್ಲಿ ವಿಶ್ವಾಸವನ್ನು ಇಟ್ಟಿರುವುದು ಹೌದಾದರೆ—ನಾವಿದನ್ನು ಆಚರಿಸಿಯೂ ತೋರಿಸೋಣ. ಶ್ರೀಮಂತನಿಂದ ಹಣವನ್ನು ಕಸಿದುಕೊಂಡ. ಬಡವರಿಗೆ ಹಂಚುವುದಷ್ಟೇ ಸಮಾನತೆಯ ಆಚರಣೆಯಲ್ಲ. ಬಡವರು ಸಹ ತಮ್ಮ ಜೀವನದಲ್ಲಿ ಇದೇ ಬಗೆಯಾಗಿ ಸಮಾನತೆಯನ್ನು ಆಚರಿಸಲು ಬದ್ಧರಾಗಬೇಕಾಗಿದೆ. ಇಲ್ಲದಿದ್ದರೆ ಮತ್ತೆ ಪುನಃ ವರ್ಗ ಕಲಹಕ್ಕೆ ಮತ್ತು ಅಸಮಾನತೆಗೆ ಎಡೆದೊರೆಯುತ್ತದೆ. ಅದುದರಿಂದ ಇದೊಂದು ನಿರಂತರವಾದ ಕಾರ್ಯ—ಮಾನವನ ನಡವಳಿಕೆಯ ಪುನಾರಚನೆಯು ಮುಗಿಯದ ಕೆಲಸವೆಂದರೂ ಸರಿಯೇ!

—ಶ್ರೀ ಜಯಪ್ರಕಾಶನಾರಾಯಣರ ಭಾಷಣದಿಂದ.

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ 1956 ಅಕ್ಟೋಬರ್ 6ರಂದು ನಡೆದ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ, ರಾಷ್ಟ್ರಾಧ್ಯಕ್ಷ, ಡಾ॥ ರಾಜೇಂದ್ರ ಪ್ರಸಾದರು ಪ್ರಶಸ್ತಿ ಪಡೆದವರಿಗೆ "ಪದ್ಮ ವಿಭೂಷಣ", "ಪದ್ಮ ಭೂಷಣ" ಮತ್ತು "ಪದ್ಮ ಶ್ರೀ" ಪ್ರಶಸ್ತಿಗಳನ್ನಿತ್ತರು.

ಭಾರತೀಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಶ್ರೀಮತಿ ರುಕ್ಮಿಣಿ ದೇವಿ ಅರುಂಡೇಲ್‌ರವರು ಕಲೆಯ ಪುನರುಜ್ಜೀವನ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸಿರುವರು. ಸ್ವತಃ ನೃತ್ಯ ಪ್ರವೀಣೆಯಾಗಿದ್ದು ಮದ್ರಾಸಿನಲ್ಲಿ ಕಲಾಕ್ಷೇತ್ರವನ್ನು ಸ್ಥಾಪಿಸಿ ನಡೆಸುತ್ತಿರುವ ಇವರ ಸೇವೆಯನ್ನು ಮೆಚ್ಚಿ ರಾಷ್ಟ್ರಾಧ್ಯಕ್ಷರು ಶ್ರೀಮತಿ ರುಕ್ಮಿಣಿ ದೇವಿ ಅರುಂಡೇಲ್‌ರವರಿಗೆ "ಪದ್ಮ ಭೂಷಣ" ಪ್ರಶಸ್ತಿಯನ್ನು ನೀಡಿದ್ದಾರೆ. ಆಗ ತೆಗೆದ ಚಿತ್ರವಿದು.

REGD. NO. M. 3618

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬ | ಸಂಚಿಕೆ ೧೩

VOL. 36 | 29—11—1956 | NO. 13

## ಸಮಾಜ ನಿರ್ಮಾಣ

### ವ್ಯಕ್ತಿಯನ್ನು ಬಿಟ್ಟು ನಮ್ಮ ಸಮಾಜವಿಲ್ಲ: ವಿದ್ಯಾಭ್ಯಾಸವೇ ವ್ಯಕ್ತಿಯ ಚಾರಿತ್ರ್ಯಕ್ಕೆ ಒಪ್ಪವಿಡುವ ಮಾಧ್ಯಮ

ವ್ಯಕ್ತಿ ಎಂದರೇನೆಂಬ ಸರಿಯಾದ ಅರ್ಥವನ್ನು ನಾವೆಲ್ಲರೂ ಬಲ್ಲವರೆ. ಅಂತೂ ವ್ಯಕ್ತಿಯೆಂದರೆ ಅವನಲ್ಲೊಂದು ಶ್ರೇಷ್ಠವಾದ ಗುಣ, ನಡತೆ, ಅಭ್ಯಾಸಗಳಿರಬೇಕೆಂಬುದು ಒಪ್ಪತಕ್ಕದ್ದೆ. ವ್ಯಕ್ತಿ ಇಲ್ಲದೆ ಸಮಾಜವಿಲ್ಲ. ಹಲವಾರು ವ್ಯಕ್ತಿಗಳ ಒಕ್ಕೂಟವೇ ಚಿಕ್ಕದೊಡ್ಡ ಸಮಾಜಗಳು. ಸಮಾಜವು ವ್ಯವಸ್ಥಿತವಾಗಿ ಸಾಗ ಬೇಕಾದರೆ ಉತ್ತಮ ವ್ಯಕ್ತಿಗಳು ಸಮಾಜದಲ್ಲಿ ಐಕ್ಯತೆಯಿಂದಿರಬೇಕು. ವ್ಯಕ್ತಿಯು ಸ್ಥಾನ, ಮಾನ, ಹಕ್ಕು ಮತ್ತು ಬಾಧ್ಯತೆಗಳನ್ನು ತಿಳಿದಿರಬೇಕು. ಸಹಕಾರ ಭಾವನೆಯು ಅಡಿಗಡಿಗೆ ಮೊಳೆತು; ಕುಡಿವರಿಯುತ್ತಿರಬೇಕು. ಇಲ್ಲಿ ಶಾಂತತೆಯನ್ನೂ ವ್ಯವಸ್ಥೆಯನ್ನೂ ಸುಗಮವಾದ ಜೀವನವನ್ನು ಕಾಣಬಹುದು.

ಸಮಾಜದಲ್ಲಿ ವ್ಯಕ್ತಿಯು ಸುಗಮವಾಗಿ ಜೀವಿಸಬೇಕಾದರೆ ಅವನ ಜೀವನದ ಆವಶ್ಯಕತೆಗಳು ಪೂರೈಸಲ್ಪಡಬೇಕು. ಅತ್ಯವಶ್ಯವಾದ ಅವನ ಆವಶ್ಯಕತೆಗಳ ಪೂರೈಕೆ ಯಾಗದಿದ್ದಲ್ಲಿ ಅವನಿಗೆ ನೆಮ್ಮದಿ ಇರಲಾರದು. ಮನುಷ್ಯನ ಆವಶ್ಯಕತೆಗಳಲ್ಲಿ ಪ್ರಧಾನವಾದುದು ಅನ್ನ, ಬಟ್ಟೆ ಮತ್ತು ಆಶ್ರಯ ಎಂಬುದು ಸರ್ವ ವಿಧಿತ. ಮನುಷ್ಯನ ಈ ಮೂರು ಆವಶ್ಯಕತೆಗಳು ಬಗೆಹರಿದಲ್ಲಿ ಅವನ ಜೀವನದಲ್ಲಿ ಒಂದು ಹುರುಪಿರುವುದು. ಆತನಿಗೆ ಹಿತವಾದ ಸಮಾಧಾನವಾದರೂ ಇರುವುದು. ಇಂತಹ ಆವಶ್ಯಕತೆಗಳನ್ನು ವ್ಯಕ್ತಿಗೆ ಯಾರು, ಹೇಗೆ ಪೂರೈಸ ಬೇಕೆಂಬುದೇ ವಾದ. ಅದನ್ನು ವ್ಯಕ್ತಿಯು ತಾನಾಗಿ, ತನಗೆ ಬೇಕಾದುದನ್ನು ಪೂರೈಸಿಕೊಳ್ಳಲು ಸಮರ್ಥನಾಗುವುದೇ ಉತ್ತಮ ಹಾಗೂ ಬೇಕಾದ ವಿಧಾನ. ಆದರೆ ಯಾರಿಗೂ ಬಾಧಕವಿಲ್ಲ. ಯಾರಿಗೂ ಯಾರಲ್ಲಿಯೂ ಮತ್ಸರವಿಲ್ಲ. ಅವನ, ಧರ್ಮ, ನೀತಿ, ಕಲೆ, ಸಂಸ್ಕೃತಿ, ನ್ಯಾಯ ತತ್ವಗಳೆಲ್ಲವೂ ಇದನ್ನೇ ಹೊಂದಿಕೊಂಡಿದೆ.

ಮಾನವನು ತನ್ನ ಆವಶ್ಯಕತೆಗಳ ಪೂರೈಕೆಗಾಗಿ ಯುಗಾಂತರಗಳಿಂದ ಯಾವ್ಯಾವ ಹೋರಾಟಗಳನ್ನು ನಡೆಸಿರುವನೆಂದು ನಾವು ಮನಗಂಡಿರುವೆವು. ಇದಕ್ಕೆ ಕಾರಣ ಅವನ ಜೀವನದ ಕೊರತೆ, ಅತೃಪ್ತಿಗಳು. ಮನುಷ್ಯನು ಇನ್ನೂ ತೃಪ್ತಿ ಗೊಂಡಿಲ್ಲ. ತನ್ನ ಆವಶ್ಯಕತೆಗಳ ಪೂರೈಕೆಗಾಗಿ ಹೋರಾಡುತ್ತಲೇ ಇರುವನು: ಹಾಗಾದರೆ ಅವನ ಹೋರಾಟಕ್ಕೆ ಅಂತ್ಯವಿಲ್ಲವೇ? ಅವನವನಿಗೆ ಬೇಕಾದುದನ್ನು ಅವನವನೇ ತಯಾರಿಸಿ ಕೊಳ್ಳುವಷ್ಟು ಸಮರ್ಥನಾಗುವ ಸುದಿನವೇ ಆ ಹೋರಾಟದ ಅಂತ್ಯವಾಗಬಹುದು.

ಅಂತೂ ಸಮಾಜವು ವ್ಯವಸ್ಥಿತವಾಗಿ ಸಾಗ ಬೇಕಾದರೆ, ಸಮಾಜದ ವ್ಯಕ್ತಿಗಳ ನಿರ್ಮಾಣವಾಗಬೇಕು. ವ್ಯಕ್ತಿಯ ನಿರ್ಮಾಣವಾಗದೆ, ಸಮಾಜದ ನಿರ್ಮಾಣವಾಗದು. ವ್ಯಕ್ತಿ ನಿರ್ಮಾಣ ಕಾರ್ಯವು ಒಂದೆರಡು ದಿನಗಳ ಪ್ರಯತ್ನದಿಂದ ಸಾಧಿಸುವಷ್ಟು ಸುಲಭಸಾಧ್ಯವಾದುದಲ್ಲ. ವ್ಯಕ್ತಿ ನಿರ್ಮಾಣಕ್ಕೆ ಮಾನವ ಜೀವನದ ಮೊಳಕೆಯಿಂದಲೇ ಅಂದರೆ ವಿದ್ಯಾಭ್ಯಾಸದಿಂದಲೇ ಅದು ಸಾಧಿಸಲ್ಪಡಬೇಕು. ವಿದ್ಯಾಭ್ಯಾಸವೆಂದರೆ ವ್ಯಕ್ತಿಯ ಜೀವನವನ್ನು ಚಿತ್ರಿಸುವುದೆಂಬ ಮೂಲಮಂತ್ರವು ಕಾರ್ಯಗತವಾಗಬೇಕು. ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ನೈತಿಕ ವಿಕಾಸವಾಗಬೇಕು. ಪ್ರಕೃತ ವಿದ್ಯಾಪದ್ಧತಿಗಳಲ್ಲಿ, 'ಬುನಾದಿ' ಪದ್ಧತಿಯೊಂದು ಮಾತ್ರ ಇದನ್ನು ಸಹಜವಾಗಿ ಸಾಧಿಸಿ ಕೊಡುತ್ತದೆ.

ವ್ಯಕ್ತಿ ನಿರ್ಮಾಣವೇ ಈ ಬುನಾದಿ ವಿದ್ಯಾಪದ್ಧತಿಯ ಮೂಲ ಗುರಿಯಾಗಿದೆಯೆನ್ನಬಹುದು. ವ್ಯಕ್ತಿಯ ಸಾರ್ವತ್ರಿಕ ವಿಕಾಸ ಈ ಪದ್ಧತಿಯಿಂದ ಸಾಧಿಸಲ್ಪಡುವುದು. ವ್ಯಕ್ತಿಯ ಆವಶ್ಯಕತೆಗಳ ಪೂರೈಕೆಗೆ ಬೇಕಾದ ಯೋಗ್ಯ ತರಬೇತಿಯು ದೊರೆಯುವುದು. ಸಮಾಜ ಮತ್ತು ವ್ಯಕ್ತಿಯ ನಿಜಬೆಲೆಯ ಅರಿವಾಗುವುದಲ್ಲದೆ, ಪ್ರತ್ಯಕ್ಷ ಜವಾಬ್ದಾರಿಯ ಕೆಲಸಗಳಿಂದ ಮಕ್ಕಳಲ್ಲಿ ಹಕ್ಕು ಬಾಧ್ಯತೆಗಳ ಅರಿವನ್ನುಂಟುಮಾಡುತ್ತದೆ.

ಈ ಪದ್ಧತಿಯು ಮೂಲ ವೃತ್ತಿಯು ಮಗುವಿನ ಜೀವನದ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಒಂದು ಉತ್ತಮ ತರಬೇತಿಯಾಗಿದೆ. ಮಗುವು ದಿನವೂ ಜೀವನಕ್ಕೆ ಬೇಕಾದ ವಿಷಯಗಳ ಮೂಲಕ ಪ್ರತ್ಯಕ್ಷ ಜ್ಞಾನದಿಂದ ಕಲಿಯುತ್ತಾ ವಸ್ತುವಿನ ನೈಜ ಪರಿಜ್ಞಾನವನ್ನುಂಟು ಮಾಡಿಕೊಳ್ಳುತ್ತದೆ. ಜೀವನದ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಕೆಲಸಗಳ ಜೊತೆಗೆ ಕೆಲಸದ ಮುಖಾಂತರ ಮಾನಸಿಕ ಮತ್ತು ನೈತಿಕ ಬೆಳವಣಿಗೆಯನ್ನೂ ಸಾಧಿಸುತ್ತದೆ.

ಈ ಪದ್ಧತಿಯಲ್ಲಿ ಮಗುವಿಗೆ ಸಮಾಜದಲ್ಲಿ ಮುಂದೆ ಬರಲಿರುವ ಜವಾಬ್ದಾರಿತನ ಮತ್ತು ಅಧಿಕಾರಕ್ಕೆ ಒಳಪಟ್ಟು ಕಾರ್ಯ ನೆಸಗುವ ವಿಧಾನ ಎಂಬ ಎರಡು ಮುಖ್ಯ ವಿಷಯಗಳು ಅಡಿಗಡಿಗೆ ಕಲಿಸಲ್ಪಡುತ್ತವೆ. ಇದೇ ಸಮಾಜಜೀವನದ ಮೂಲಮಂತ್ರ. ಪ್ರತಿಯೊಬ್ಬನೂ ತನ್ನ ಹಕ್ಕು ಮತ್ತು ಬಾಧ್ಯತೆಗಳನ್ನು ಚೆನ್ನಾಗಿ ಅರಿತುಕೊಂಡರೇನೇ ಆ ಸಮಾಜವು ವ್ಯವಸ್ಥಿತವಾಗಿ ಸಾಗುವುದು. ಮಗುವು ತಾನು ಕಲಿಯುತ್ತಿರುವ ಸಂಸ್ಥೆಯನ್ನು ಚಿಕ್ಕ ಸಮಾಜವನ್ನಾಗಿ ಪರಿಗಣಿಸಿ ಅಲ್ಲಿ ಅಧಿಕಾರವನ್ನೂ ನಡೆಸುತ್ತದೆ. ಅಧಿಕಾರಿಯು ಹೇಳಿದ ಕೆಲಸಗಳನ್ನು ವಿಧೇಯತೆಯಿಂದ ಮಾಡುತ್ತದೆ. ಒಬ್ಬರಿಗೊಬ್ಬರು ಸಹಕರಿಸಿ ಕೊಂಡು ಮಕ್ಕಳು ಕೆಲಸಗಳನ್ನು ಮಾಡುತ್ತಾರೆ. ಸರ್ವಧರ್ಮಗಳ ಅರಿವನ್ನು ಮಾಡಿಕೊಂಡು ಐಕ್ಯತೆಯನ್ನು ಬೆಳೆಸುತ್ತಾರೆ. ಸಾಮೂಹಿಕವಾದ ಭಜನೆ, ಪ್ರಾರ್ಥನೆ ಮೊದಲಾದುವುಗಳಿಂದಲೂ ಸರ್ವಮತಗಳ ಧಾರ್ಮಿಕ ಹಬ್ಬ ಹುಣ್ಣಿಮೆಗಳ ಆಚರಣೆಗಳಿಂದಲೂ ತನ್ನಧರ್ಮ ಹಾಗೂ ಸರ್ವಧರ್ಮಗಳ ಹುರುಳನ್ನೂ ಅರಿತುಕೊಳ್ಳುತ್ತದೆ. ಹಲವಾರು ರಾಷ್ಟ್ರೀಯ ದಿನಗಳನ್ನೂ, ರಾಷ್ಟ್ರಪುರುಷರ ದಿನಾಚರಣೆಗಳನ್ನೂ ಆಚರಿಸಿ, ಆ ಪುರುಷರ ಸಾಹಸ ಕೃತಿಗಳು, ದೇಶಕ್ಕೆ ಮಾಡಿದ ಉದಾರ ಸೇವೆ, ಮೊದಲಾದವನ್ನು ಮಕ್ಕಳು ತಿಳಿದು ಕೊಂಡು ತಮ್ಮ ಜೀವನದಲ್ಲೂ ಈ ಮಾದರಿಯನ್ನು ತರಲು ಪ್ರಯತ್ನಿಸಲು ಎಡೆಯಾಗುತ್ತದೆ. ಮಗುವು ಸಮಾಜದಲ್ಲಿ ಹಲವೊಮ್ಮೆ ಸಾಮೂಹಿಕವಾದ ಅಡುಗೆ, ತಿಂಡಿತೀರ್ಥಗಳನ್ನು ತಯಾರಿಸಿ, ಎಲ್ಲರಿಗೂ ಹಂಚಿ ಸಾಮೂಹಿಕವಾಗಿ ತಿನ್ನುವುದನ್ನೂ ಗೃಹಕೃತ್ಯದ ಕ್ರಮಗಳನ್ನೂ ಕಲಿಯುತ್ತದೆ. ಇದೊಂದು ಉತ್ತಮ ತರಬೇತಿಯಾಗಿ ಮಗುವಿನ ಜೀವನದಲ್ಲಿ ಫಲಿಸುತ್ತದೆ ಸ್ವಚ್ಛತೆ, ಶುಚಿ ಜೀವನ, ಸರಳಜೀವನ ಮೊದಲಾದುವುಗಳನ್ನು ಮಗುವು ಕಲಿತು ತನ್ನ ವಿದ್ಯಾಭ್ಯಾಸವು ಮುಗಿದೊಡನೆಯೇ ತಾನು ಮುನ್ನುಗ್ಗ ಬೇಕಾದ ವಿಶಾಲ ಸಾಮಾಜದಲ್ಲಿ ವ್ಯವಸ್ಥಿತ ಜೀವನವನ್ನು ಸಾಧಿಸಲು ಮಗುವು ಸರ್ವಸಮರ್ಥವಾಗುತ್ತದೆ. ಜೀವನಕ್ಕೆ ಜೀವನದ ಮೂಲಕ ಯೋಗ್ಯ ತರಬೇತಿಯು ಇಲ್ಲಿ ದೊರೆಯುತ್ತದೆ.

ಈ ರೀತಿ ಮಗುವಿನ ಜೀವನದ ಬಹುಮುಖಗಳ ತರಬೇತಿಯು ಎಲ್ಲ ವಿದ್ಯಾಲಯಗಳಲ್ಲಿ ದೊರೆತರೆ, ಎಲ್ಲ ವಿದ್ಯಾಲಯಗಳೂ ಏಕರೀತಿಮಾದರಿಯಲ್ಲಿ ಮುಂದರಿದರೆ, ನಮ್ಮ ಸಮಾಜದಲ್ಲಿ ಉತ್ತಮ ವ್ಯಕ್ತಿಗಳ ನಿರ್ಮಾಣವಾಗಿ, ರಾಷ್ಟ್ರದ ನಿರ್ಮಾಣಕಾರ್ಯವು ನಿರಾತಂಕವಾಗಿ ಸಾಗುವುದು. ನಮ್ಮ ಸರಕಾರವು ವಿದ್ಯಾಕ್ಷೇತ್ರದಲ್ಲಿ ಈ ಯೋಗ್ಯ ಬದಲಾವಣೆಯನ್ನು ತೀವ್ರಗತಿಯಿಂದ ಮುಂದರಿಸಿದರೇನೆ, ಆ ಮಹಾ ಬಾಪೂಜಿಯವರ 'ರಾಮರಾಜ್ಯ'ದ ಕನಸು ನನಸಾಗಿ, ರಾಷ್ಟ್ರವು ಸಂತಸದ ಸುಗ್ಗಿಯಲ್ಲಿ ನಲಿದಾಡುವುದು.

—ಶ್ರೀ ಬಿ. ಸುಂದರ ಶೆಟ್ಟಿ.

ಅಧಿಕಾಧಿಕವಾಗುತ್ತಿರುವ

ನಿಮ್ಮ ವಿಶ್ವಾಸ

ಹಿಂದೆ (31—10—1955)

ರೂಪಾಯಿ:- 76,00,000

ಒಟ್ಟು ಚಲಾವಣೆ ಮೊಬಲಗು

ಇಂದು:— (31—10—1956)

ರೂಪಾಯಿ:- 1,00,00,000 ಕ್ಕೂ ಮಿಕ್ಕಿದೆ.

ದಿ ವಿಜಯ ಬೇಂಕ್ ಲಿಮಿಟೆಡ್

ಪ್ರಧಾನ ಕಛೇರಿ: ಮಂಗಳೂರು—3.

THE VIJAYA BANK LTD.

## ಕಾಸರಗೋಡು

### ಪ್ರಜಾಸತ್ತೆಯಲ್ಲಿ ಯಾವುದೂ ಕೊನೆಯ ನಿಶ್ಚಯವೆನಿಂಬುದಿಲ್ಲ— ಹಾಗಿದ್ದರೆ ಕಾಸರಗೋಡಿನ ಕನ್ನಡಿಗರ ಬೇಡಿಕೆಯ ಪುನರ್ವಿಮರ್ಶೆ ನಡೆಯಲಿ!

ಪುನರ್ಘಟಿತ ಭಾರತದಲ್ಲಿ ಏಕೀಕೃತವಾಗಿರುವ ಕನ್ನಡನಾಡಿನ ಜನತೆಯ ಆಸೆಯು ಫಲಿಸಿತೆನ್ನಲು ಸಂತೋಷ. ಭಾರತಾಂಬೆಯ ಕುವರಿ ವೀರವನಿತೆಯಾದ ಕನ್ನಡ ಮಹಾ ಮಾತೆಯು ತನ್ನ ಮಕ್ಕಳಾದ ಎರಡು ಕೋಟಿ ಕನ್ನಡಿಗರ ಬೇಡಿಕೆಗೆ ತಕ್ಕವರವನ್ನಿತ್ತು, ಎಲ್ಲರಿಗೂ ತನ್ನ ತೋಳತೆಕ್ಕೆಯಲ್ಲಿ ಆಶ್ರಯವನ್ನಿತ್ತ ಪುಣ್ಯಕಾಲ! ಕನ್ನಡಿನ ಮೂಲೆ ಮೂಲೆಗಳಲ್ಲೂ ಜನತೆ ಸಂತಸದಪರಮಾವಧಿಯಲ್ಲಿ ಕಲ್ಲೂಕೊನರುವಂತೆ ಹರ್ಷೋದ್ಗಾರದಿಂದ ಜಯಘೋಷ ಮಾಡುತ್ತಿರುವರು. ಕನ್ನಡ ಮಾತೆಯನ್ನು ಬಹುಮುಖೇನ ನುತಿಸಿನಲಿಯುತ್ತಿರುವರು ಕನ್ನಡ ಜನತೆಯು ನರನಾಡಿಗಳಲ್ಲಿ ಹೊಸ ಚೈತನ್ಯವು ಮೈಗೂಡಿ ಬಂದಂತಿದೆ ಎಲ್ಲೆಡೆಗಳಲ್ಲೂ ಜನರು ನವಕರ್ನಾಟಕ ಒಕ್ಕೂಟದ ಭವ್ಯ ಭವಿಷ್ಯಕ್ಕಾಗಿ ಸುಪ್ರಭ ಸ್ತೋತ್ರವನ್ನು ಮುಕ್ತ ಕಂಠದಿಂದ ಹಾಡುತ್ತಿರುವರು. ರೂಪುಗೊಂಡ ಅಖಂಡ ಕರ್ನಾಟಕಕ್ಕೆ ಶುಭವಾಗಲೆಂದೇ ನಮ್ಮ ಮಾ ಆಶಯ.

ಕನ್ನಡನಾಡಿನಲ್ಲಿ ಶಕುನಪಕ್ಕಿಯೂ ಶುಭವೆಂದೆ ಉಲಿಯುತ್ತಿದೆ! ಕನ್ನಡ ಕವಿಗಳ ಕನಸು ನೆನಸಾದ ಪರ್ವಕಾಲ! ಆದರೆ ಒಂದೆ ತಾಯ ಮಕ್ಕಳಾಗಿ, ಒಂದೆ ನಡೆ, ನುಡಿಯಲ್ಲಿ, ಒಂದೆ ಕುಲನೆಲವೆಂಬಂತಿದ್ದ ಕಾಸರಗೋಡು ನಮ್ಮ ಕೈಬಿಟ್ಟು ಹೋದುದಕ್ಕಾಗಿ ಯಾವ ಕನ್ನಡಿಗನೂ ಈ ಕಾಲದಲ್ಲಿ ಪರಿತಪಿಸದಿರಲಾರ. ಕಾಸರಗೋಡಿನ ಜನತೆಗಾದ ಅನ್ಯಾಯದಿಂದಾಗಿ ಒಂದುಗೂಡಿದ ಕರ್ನಾಟಕ ರಾಜ್ಯ ಶುಭೋದಯದ ಭಾಗ್ಯ ರವಿಯನ್ನು ರಾಹು ಹಿಡಿದಂತಾಗಿದೆ!

ದಕ್ಷಿಣ ಕನ್ನಡದ ಕಲೆ, ಸಂಸ್ಕೃತಿ, ಸಾಹಿತ್ಯದ ಮೂಲಕ್ಷೇತ್ರವೇ ಕಾಸರಗೋಡು ಎಂದರೂ ಸಲ್ಲುವಂತಿದೆ ಅಲ್ಲಿಯ ಕನ್ನಡದ್ದೆಂಬ ವೈಶಿಷ್ಟ್ಯ ಕವಿಗಳು, ಕಲಾನಿಪುಣರು ಇಲ್ಲಿ ಹುಟ್ಟಿ ಕನ್ನಡ ದೇವಿಯು ಸಾಹಿತ್ಯಸೇವೆಯಲ್ಲೆ ತಮ್ಮ ಜೀವನವನ್ನು ಕೊನೆಗೊಳಿಸಿದರು. ಇಂದೂ ನಮಗೆಲ್ಲ ಹಿರಿಯರೆನಿಸಿ ಸತ್ಯಕಾವ್ಯ, ಕಲೆಯಿಂದ ಕನ್ನಡಿಯ ತನಿರವಿಯನ್ನು ಶ್ರೀ ಮಂಜೇಶ್ವರ ಗೋವಿಂದ ಪೈಯಂಥ ಹಿರಿಯರು ಉಣಿಸುತಿದ್ದಾರೆ!

ಹೀಗಿರುವಾಗ ಕಾಸರಗೋಡಿನ ಅಗಲುವಿಕೆಯು ನಮ್ಮ ದೌರ್ಭಾಗ್ಯವೆನ್ನಬೇಕು. ಹೆತ್ತ ಮಾತೆಯಾದ ಕನ್ನಡಾಂಬೆ

(೧೧ನೇ ಪುಟ ನೋಡಿರಿ)

## ದಕ್ಷಿಣ ಕನ್ನಡ ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ

**(ರಿಜಿಸ್ಟರ್ಡ) ಶಿರ್ವ, ದ. ಕ.**

# ಮಹಾಜನರಲ್ಲಿ ವಿಜ್ಞಾಪನೆ

ಸಮಾಜ ಸೇವೆ, ವಿದ್ಯಾವರ್ಧನೆ ಮೊದಲಾದ ಧ್ಯೇಯಧೋರಣೆಗಳನ್ನು ಇಟ್ಟುಕೊಂಡು ಮೇಲಿನ ಸಂಘವು ತಾ. 16—9—1944ರಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟಿತು. ಪ್ರಥಮವಾಗಿ ಹಿಂದೂ ಎಲಿಮೆಂಟರಿ ಶಾಲೆಯ ಆಡಳಿತೆಯನ್ನು ವಹಿಸಿಕೊಂಡು ಅದನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸಿ ಅದಕ್ಕೆ ಬೇಕಾದ ಕಟ್ಟೋಣ ಮತ್ತು ಉಪಕರಣಗಳನ್ನು ಒದಗಿಸಲಾಯಿತು. ಆ ಸಂದರ್ಭದಲ್ಲಿ ಶಿರ್ವ ಪ್ರದೇಶಕ್ಕೊಂದು ಹೈಸ್ಕೂಲಿನ ಆವಶ್ಯಕತೆ ಕಂಡುಬಂದುದರಿಂದ ವಿಶೇಷ ಶ್ರಮಪಟ್ಟು 1946ನೇ ಇಸವಿಯಲ್ಲಿ ಹಿಂದೂ ಹೈಸ್ಕೂಲನ್ನು ಸ್ಥಾಪಿಸಲಾಯಿತು. ವಿದ್ಯಾಕ್ಷೇತ್ರವನ್ನು ವಿಸ್ತರಿಸುವ ಆಶಯ ಮತ್ತು ಉದ್ದೇಶದಿಂದ ಕೋತಲ ದುರ್ಗಾಂಬಿಕಾ, ಕುತ್ಯಾರು ವಿದ್ಯಾದಾಯಿನಿ ಮತ್ತು ಶಿರ್ವ ಶಾರದಾ ಎಲಿಮೆಂಟರಿ ಶಾಲೆಗಳ ಆಡಳಿತೆಗಳನ್ನು ಕೂಡಾ ವಹಿಸಿಕೊಂಡು ನಡೆಸಿಕೊಂಡು ಬರುತ್ತಿತ್ತು. ಊರ ಪರ ಊರ ಮತ್ತು ಬೊಂಬಾಯಿ ಮೈಸೂರು ಇತ್ಯಾದಿ ಕಡೆಗಳಲ್ಲಿರುವ ಮಹಾಜನರ ಧನ ಸಹಾಯ, ಪ್ರೋತ್ಸಾಹಗಳಿಂದ ಮತ್ತು ಆಡಳಿತೆ ಕಮಿಟಿಯವರ ವಿಶೇಷ ಪರಿಶ್ರಮದಿಂದ ಸಂಘ ಮತ್ತು ಅದರ ವತಿಯಿಂದ ನಡೆಸಲ್ಪಡುವ ಶಾಲೆಗಳೂ ತುಂಬಾ ಅಭಿವೃದ್ಧಿಹೊಂದುವ ಲಕ್ಷಣಗಳು ಪ್ರಥಮದಲ್ಲಿ ಕಂಡುಬಂದುವ ದರೂ ನಿಧಿಯ ಕೊರತೆ ಮತ್ತು ಅನಿರೀಕ್ಷಿತ ವಿದ್ಯಮಾನಗಳ ದೆಸೆಯಿಂದ ಎಣಿಸಿದಷ್ಟು ಪ್ರಗತಿಯನ್ನು ಹೊಂದದೆ ಎಲ್ಲವೂ ಅವ್ಯವಸ್ಥ ಸ್ಥಿತಿಗೆ ಬಂದುವು. ಹಿಂದೂ ಹೈಸ್ಕೂಲಿನ ಕಟ್ಟಡವು, ಅಸ್ತಿಭಾರ ಮತ್ತು ಸ್ವಲ್ಪ ಗೋಡೆ ನಿರ್ಮಿಸುವಲ್ಲೆ ನಿಲ್ಲಿಸುವ ಪ್ರಸಂಗ ಬಂತು. ಪ್ರಕೃತ ಹೈಸ್ಕೂಲು ನಡೆಸುವ ಕಟ್ಟೋಣಕ್ಕೆ ಕೂಡಾ ಕಿಟಕಿ, ಬಾಗಿಲು, ಸಿಮೆಂಟು, ಸಾರಣೆ ಇತ್ಯಾದಿಗಳನ್ನು ಪೂರ್ತಿಗೊಳಿಸಲು ಅಸಾಧ್ಯವಾಗಿ ಅಲ್ಲಿಂದಲ್ಲಿಗೆ ನಿಲ್ಲಿಸುವ ಅವಸ್ಥೆ ಬಂತು. ಈ ಅವ್ಯವಸ್ಥೆಗಳಿಂದ ಹೈಸ್ಕೂಲಿನಲ್ಲಿ ಓದುವ ಮಕ್ಕಳ ಸಂಖ್ಯೆ ಕಡಿಮೆಯಾಗಿ ವರ್ಷವರ್ಷವೂ ತುಂಬಾ ನಷ್ಟ ಸಂಭವಿಸುವಂತಾಯಿತು. ಶಾಲೆಗಳನ್ನು ಮುಚ್ಚುವಷ್ಟರ ವರೆಗಿನ ಪ್ರಸಂಗವೂ ಬಂತು. ಇಂಥ ಸಂದರ್ಭದಲ್ಲಿ ವಕೀಲ್ ಶ್ರೀ ಕೆ.ಜೆ. ಬಲ್ಲಾಳರು ಅಧ್ಯಕ್ಷರಾಗಿ ಹೊಸ ಕಾರ್ಯಕಾರಿ ಸಮಿತಿಯು ಚುನಾಯಿಸಲ್ಪಟ್ಟು, ಕಾರ್ಯಕಾರಿ ಸಮಿತಿಯ ಕೆಲವರು ಹಲವಾರು ಸಾವಿರ ರೂಪಾಯಿಗಳನ್ನು ಸಹಾಯಧನವನ್ನಾಗಿ ಇತ್ತು ಶಾಲೆಗಳನ್ನು ವ್ಯವಸ್ಥಿತ ರೀತಿಗೆ ತರಲು ಮುಂದಾದರು. ಶಾಲೆಗಳ ಪ್ರಗತಿ ಬಗ್ಗೆ ಪರಿಶ್ರಮವಹಿಸಿ ಕಟ್ಟೋಣ ಇತ್ಯಾದಿಗಳ ಬಗ್ಗೆ ಧನಸಂಗ್ರಹದಲ್ಲಿ ನಿರತರಾಗಿರುವಾಗಲೇ ಶ್ರೀ ಕೆ. ಜೆ. ಬಲ್ಲಾಳರು ಅಕಾಲ ನಿಧನ ಹೊಂದಿದರಿಂದ ಸಂಘಕ್ಕೆ ದೊಡ್ಡ ಆಘಾತ ಸಂಭವಿಸಿತು. ಶ್ರೀ ಕೆ. ಜೆ. ಬಲ್ಲಾಳರ ನಿಧನದಿಂದ ಸಂಘಕ್ಕೆ ತುಂಬಿಬಾರದ ನಷ್ಟ ಸಂಭವಿಸಿರುತ್ತದೆ.

ಪ್ರಕೃತ ಹೈಸ್ಕೂಲು ಇತ್ಯಾದಿ ಶಾಲೆಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವುವಾದರೂ ಹೈಸ್ಕೂಲಿನ ಮೂಲ ಕಟ್ಟಡ ಪ್ರಕೃತ ಹೈಸ್ಕೂಲು ನಡೆಯುತ್ತಿರುವ ಕಟ್ಟಡದ ದುರಸ್ತಿ ಮತ್ತು ವಿಸ್ತರಣೆ ಮತ್ತು ಎಲಿಮೆಂಟರಿ ಶಾಲೆಯ ಕಟ್ಟಡಗಳ ಬಗ್ಗೆಯೂ ತುಂಬಾ ನಿಧಿ ಸಂಗ್ರಹಿಸಬೇಕಾಗಿರುತ್ತದೆ. ಶಾಲಾ ಕಟ್ಟೋಣಗಳನ್ನು ಬೇಗನೆ ಪೂರ್ತಿಗೊಳಿಸದಿದ್ದರೆ ಶಾಲಾ ಮಂಜೂರಾತಿಗೂ ಧಕ್ಕೆಯಿದೆ. ಕಡಿಮೆ ಪಕ್ಷ ಐವತ್ತು ಸಾವಿರ (50,000/-)ಕ್ಕೆ ಮೇಲ್ಪಟ್ಟು ಹಣದ ಆವಶ್ಯಕತೆ ಇದೆ, ಮಾತ್ರವಲ್ಲದೆ ಪ್ರತಿ ವರ್ಷವೂ ಹೈಸ್ಕೂಲಿಗೆ ಕೊರತೆ ಬೀಳುವ ಐದಾರು ಸಾವಿರ ರೂಪಾಯಿಗಳ ಪ್ರಶ್ನೆ ಇನ್ನೊಂದೆಡೆ ಇದೆ. ಮೇಲಿನ ಕೊರತೆಗಳನ್ನು ನೀಗಿಸಿ ನಮ್ಮ ಹೈಸ್ಕೂಲು ಮತ್ತು ಇತರ ಶಾಲೆಗಳನ್ನು ಒಂದು ಮಾದರಿ ವಿದ್ಯಾಸಂಸ್ಥೆಗಳನ್ನಾಗಿ ಮಾಡುವ ಜವಾಬ್ದಾರಿಯು ಮಹಾಜನರ ಕೈಯಲ್ಲಿದೆ.

ನಮ್ಮ ಜಿಲ್ಲೆಯಲ್ಲಿ ಬಂಟರ ಯಾನೆ ನಾಡವರಿಂದ ನಡೆಸಲ್ಪಡುವ ಹೈಸ್ಕೂಲು ಇದೊಂದೇ. ವಿದ್ಯಾವಂತರೂ ವಿದ್ಯಾ ಪ್ರೇಮಿಗಳೂ ಧರ್ಮಿಷ್ಟರೂ ನಮ್ಮಲ್ಲಿ ಬೇಕಾದಷ್ಟುಮಂದಿ ಇದ್ದಾರೆ. ಬೊಂಬಾಯಿ ಮೈಸೂರು ಪ್ರಾಂತ್ಯ ಇತ್ಯಾದಿ ಕಡೆಗಳಲ್ಲಿ ವ್ಯಾಪಾರ ಉದ್ಯಮಗಳಲ್ಲಿ ಯಶಸ್ವಿಹೊಂದಿದ ಮಹನೀಯರೂ ಸಹಸ್ರಗಟ್ಟಲೆಯಲ್ಲಿ ನಮ್ಮಲ್ಲಿ ಇದ್ದಾರೆ. ಎಲ್ಲರೂ ನಮ್ಮ ಸಂಘ, ನಮ್ಮ ವಿದ್ಯಾ ಸಂಸ್ಥೆ ಎಂಬ ಭಾವನೆಯಿಂದ ತನುಮನಧನಗಳಿಂದ ಸಹಕರಿಸಿದಲ್ಲಿ ಸಮಾಜಕ್ಕೆ ಇದೊಂದು ಅಲ್ಪ ವಿಷಯವೆಂದೇ ನಮ್ಮ ಭಾವನೆ. ಜಿಲ್ಲೆಯ ಒಳಗೂ ಹೊರಗೂ ಇರುವ ಜಾತಿ ಬಾಂಧವರು ಸಂಘದ ಸದಸ್ಯ ಹಾಗೂ ಆಡಳಿತ ಸಮಿತಿಯಲ್ಲಿದ್ದು ಸೇವೆಸಲ್ಲಿಸಲು ಅನುಕೂಲವಾಗುವಂತೆ ಸಂಘದ ಕ್ರಮ ನಿಬಂಧನೆಗಳಿವೆ. ಶಿರ್ವದಲ್ಲಿ ಹೈಸ್ಕೂಲಿನ ವಿಸ್ತರಣೆ ವಸತಿ ಸೌಕರ್ಯ ಇತ್ಯಾದಿ ಅನುಕೂಲತೆಗಳಿರುವುದರಿಂದ ಪರಊರಿನವರೂ ಕೂಡಾ ತಮ್ಮ ಮಕ್ಕಳಿಗೆ ಇಲ್ಲಿ ವಿದ್ಯಾಭ್ಯಾಸ ಕೊಡಲು ಸಾಧ್ಯತೆ ಇದೆ. ಹೈಸ್ಕೂಲಿಗೆ ಬೇಕಾದ ಉತ್ತಮ ಆಟದ ಬಯಲು ಇತ್ಯಾದಿ ಸೌಕರ್ಯಗಳಿವೆ. ಮೇಲಾಗಿ ಉತ್ತಮ ಹವೆಯ ಅನುಕೂಲತೆ ಇದೆ. ಈಗ ಎಲ್ಲಾ ಶಾಲೆಗಳಲ್ಲಿ ಸುಮಾರು ಒಂದು ಸಾವಿರದ ವರೆಗೆ ಮಕ್ಕಳು ವಿದ್ಯೆ ಪಡೆಯುತಿದ್ದಾರೆ.

ಪ್ರಕೃತ ಹೈಸ್ಕೂಲು ನಡೆಯುತ್ತಿರುವ ಕಟ್ಟೋಣದ ದುರಸ್ತಿ ಮತ್ತು ವಿಸ್ತರಣೆ ಕೆಲಸಕ್ಕೆ ಈಗಾಗಲೇ ಪ್ರಾರಂಭಿಸಿರುತ್ತೇವೆ. ಮಹಾಜನರ ಸಹಾಯ ಸಹಕಾರಗಳಿಂದ ನಮ್ಮ ಸಂಘವು ಮತ್ತು ಶಾಲೆಗಳು ಅಭಿವೃದ್ಧಿ ಹೊಂದುವವೆಂಬ ಭರವಸೆಯಲ್ಲಿ ನಾವು ಈ ಕಾರ್ಯಕ್ಕೆ ಕೈ ಇಕ್ಕಿದ್ದೇವೆ. ಆಡಳಿತೆ ಕಮಿಟಿಯ ಸದಸ್ಯರಲ್ಲೊಬ್ಬರಾದ ಶ್ರೀ ಕೆ. ಗಣಪಯ್ಯ ಶೆಟ್ಟಿ, ಕಾಫಿ ಪ್ಲಾಂಟರ್ ಇವರು ಸುಮಾರು ರೂ. 4000/-ಕ್ಕೆ ಮೇಲ್ಪಟ್ಟ ಖರ್ಚಿನಲ್ಲಿ ಒಂದು ಹೋಲ್ ಕಟ್ಟಿಸಿ ಕೊಡಲು ಒಪ್ಪಿದ್ದು ಅದರ ಕಾರ್ಯಕ್ಕೆ ಈಗಲೇ ಪ್ರಾರಂಭಿಸಿ ಉಳಿದವರಿಗೆ ಮಾದರಿಯಾಗಿದ್ದಾರೆ. ಸಂಘದ ಅಧ್ಯಕ್ಷರು ಇತರ ಕೆಲವು ಸದಸ್ಯರೊಂದಿಗೆ ಸಹಾಯಧನವನ್ನು ಕೇಳಲು ಜಿಲ್ಲೆಯ ಒಳಗೂ ಬೊಂಬಾಯಿ, ಮೈಸೂರು ಪ್ರಾಂತ್ಯ ಇತ್ಯಾದಿ ಕಡೆಗಳಲ್ಲಿ ಸಂಚರಿಸಲಿರುವರು. ಉದಾರಿಗಳೂ ವಿದ್ಯಾಭಿಮಾನಿಗಳೂ ಸಮಾಜಸುಧಾರಕರೂ ನಮಗೆ ತನು, ಮನ, ಧನ ಸಹಾಯಗಳನ್ನಿತ್ತು ಬೇಕಾದ ಸಲಹೆಯನ್ನೂ ಕೂಡಾ ಕೊಟ್ಟು ನಮ್ಮ ಸಂಘ ಮತ್ತು ಅದರ ವತಿಯಿಂದ ನಡೆಸಲ್ಪಡುತ್ತಿರುವ ಹಿಂದೂ ಹೈಸ್ಕೂಲು ಮತ್ತು ಇತರ ಶಾಲೆಗಳ ಉನ್ನತಿಗೆ ನೆರವಾಗಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ. ಸಹಾಯಧನವಿತ್ತವರ ಹೆಸರು ಮತ್ತು ವಿವರಗಳನ್ನು ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸುವುದಲ್ಲದೆ ಲೆಕ್ಕ ಪತ್ರದ ವಿವರಗಳನ್ನು ಕೂಡಾ ಪ್ರಕಟಿಸಲಾಗುವುದು.

ಇತಿ,

ತಮ್ಮ ಸಹಾಯ ಪ್ರೋತ್ಸಾಹಗಳನ್ನು ನಿರೀಕ್ಷಿಸುತ್ತಿರುವ,

| ಬಿ. ಜಯರಾಮ ಶೆಟ್ಟಿ, | ಡಾ. ವೈ. ಆರ್. ಶೆಟ್ಟಿ, | ಯಸ್. ಅಣ್ಣಯ್ಯ ಹೆಗ್ಡೆ, |
|---|---|---|
| ಬಿ. ಎ., ಬಿ. ಟಿ., | ಯಂ. ಬಿ. ಬಿ. ಎಸ್., | ಪ್ರೆಸಿಡೆಂಟ್ ಮತ್ತು |
| ಹೆಡ್‌ಮಾಸ್ಟರ್ ಹಿಂದೂ ಹೈಸ್ಕೂಲ್, ಶಿರ್ವ. ಸೆಕ್ರೆಟರಿ. | ವೈಸ್ ಪ್ರೆಸಿಡೆಂಟ್. | ಶಾಲೆಗಳ ಕರೆಸ್ಪಾಂಡೆಂಟ್. |

ಶಿರ್ವ.
ತಾ. 25—11—56.

ಮತ್ತು ಸಮಿತಿಯ ಸದಸ್ಯರು,

# ಹಿತ ನುಡಿ

## ಮಹಾಪುರುಷರ ಸತ್ಯ ತತ್ವಗಳ ಘೋಷಣೆ ಮಾಡುತ್ತಿದ್ದರೆ ಸಾಲದು- ಆಚರಿಸಿಯೂ ಧನ್ಯರಾಗಬೇಕು

ಯೋಗಿಗಳ ನಾಡಾದ, ತ್ಯಾಗಿಗಳ ಬೀಡಾದ, ಕಡುಗಲಿಗಳ ಜಾಡಾದ, ಈ ಭರತಖಂಡದಲ್ಲಿ ಆಗಾಗ ಮಹಾ ಪುರುಷರ ಜನ್ಮದಿನಾಚರಣೆ ವೈಭವದಿಂದ ನಡೆಯುತ್ತಿರುತ್ತದೆ—ಎಂದರೆ ಅದು ಆಶ್ಚರ್ಯದ ಮಾತಾಗಲಾರದು. ಮಹಾತ್ಮರ ಹುಟ್ಟುಹಬ್ಬದಂದು, ಸಂಘ ಸಂಸ್ಥೆಗಳ ಸದಸ್ಯರು ಸಭೆಗಳನ್ನು ಸೇರಿಸಿ, ಕೂಟಗಳನ್ನು ಕೂಡಿಸಿ, ಅವರ ಕುರಿತು ಉದ್ದುದ್ದ ಭಾಷಣಗಳನ್ನು ಮಾಡಿ, ಸಿಹಿತಿಂಡಿಯನ್ನು ಹಂಚಿ ತೃಪ್ತಿಪಟ್ಟುಕೊಳ್ಳುತ್ತಾರೆ. ಇತರರೂ ಸುಮ್ಮನಿರದೆ ಲೇಖನಗಳನ್ನು ಬರೆದು, ಕವನಗಳನ್ನು ಕಟ್ಟಿ ಬೇಕಾದರೆ ಕಾದಂಬರಿಗಳನ್ನೇ ರಚಿಸಿ, ಮಹಾತ್ಮರ ಗುಣಗಾನವನ್ನು ಮಾಡಲು ಮುಂದಾಗುತ್ತಾರೆ. ಮತ್ತೆ ಕೆಲವರು ಅಲ್ಲಿ ಹಾಗೆ ಮಾಡಿದರು—ಇಲ್ಲಿ ಹೀಗೆ ಮಾಡಿದರು ಎಂದು ಪತ್ರಿಕೆಗಳಿಗೆ ವರದಿಯನ್ನೊಪ್ಪಿಸಿ ತಮ್ಮ ಕಾರ್ಯವನ್ನು ಯಶಸ್ವಿಗೊಳಿಸುತ್ತಾರೆ—ಮುಗಿಯಿತು ಇಲ್ಲಿಗೆ ನಮ್ಮ ಮಹಾತ್ಮರ ಜನ್ಮದಿನಾಚರಣೆ.

ಈ ರೀತಿಯ ಬಾಹ್ಯಾಡಂಬರ ಪ್ರಧಾನವಾದ ಹುಟ್ಟು ಹಬ್ಬದ ಆಚರಣೆಯಿಂದ ನಾವು ಸಾಧಿಸುವುದಾದರೂ ಏನು? ನಮ್ಮ ವರ್ತನೆಯೇ ಸರಿಯಿಲ್ಲದಿರುವಾಗ ಅದನ್ನು ತಿದ್ದಿಕೊಳ್ಳುವುದು ಬಿಟ್ಟು ಬಾಯಿ ಬಡುಕ ಮಾತುಗಳಿಂದ ಆ ದಿನದ ಕಾರ್ಯಕ್ರಮಗಳನ್ನು ನಾವು ಅಂತ್ಯಗೊಳಿಸುವುದಾದರೆ ಆ ಮಹಾಪುರುಷನ ಆತ್ಮಕ್ಕೆ ನೆಮ್ಮದಿ ದೊರೆತೀತೆ?—ಅವನಿಗೆ ಅದರಿಂದ ತೃಪ್ತಿಯಾದೀತೇ?—ಸರ್ವಥಾ ಆಗಲಾರದು. ಮಹಾತ್ಮರ ಜನ್ಮದಿನಾಚರಣೆಯೆಂದರೆ ಅದು ತಾಸುಗಟ್ಟಲೆಯ ಭಾಷಣದಲ್ಲಿ ಅಥವಾ ಪುಟಗಟ್ಟಲೆಯ ಲೇಖನದಲ್ಲಿ ಕೊನೆಗಾಣುವ ವಿಷಯವಲ್ಲ. ಉಪದೇಶವನ್ನು ಕೊಡುವವರು ಆತ್ಮಸಾಕ್ಷಿಯಾಗಿಯೂ ತಮ್ಮ ವರ್ತನೆ ಸರಿಯಾಗಿದೆ—ಎಂಬುದನ್ನು ಮೊದಲು ಖಂಡಿತ ಮಾಡಿಕೊಳ್ಳಬೇಕು. ಮಹಾಪುರುಷರ ಜೀವನದ ಸತ್ಯ ತತ್ವಗಳನ್ನೆತ್ತಿ ಮಾತಾಡುವಾಗ ಅವುಗಳಲ್ಲೊಂದನ್ನಾದರೂ ಆ ವ್ಯಕ್ತಿಯು ತನ್ನ ಜೀವನದಲ್ಲಿ ಆಚರಣೆಯ ಮೂಲಕ ಇಟ್ಟುಕೊಂಡಿರತಕ್ಕದ್ದು. ಕಾರ್ಯತಃ ಒಂದನ್ನು ಮಾಡಿತೋರಿಸಲಾರದವನು ಬಾಯಿಯಲ್ಲಿ ನೂರು ಮಾತನಾಡಿದರೆ ಏನು ತಾನೇ ಫಲ?

ಬೀಡಿ ಸಿಗರೇಟುಗಳನ್ನು ಸೇದುವ, ಮದ್ಯಸೇವನೆಯನ್ನು ಬಿಡಲು ಸಾಧ್ಯವಿಲ್ಲದ, ಸೂಟು ಹ್ಯಾಟುಗಳ ಕಾಟದಿಂದ ದೂರವಿರಲಾರದ— ಸ್ವಾರ್ಥದಿಂದಲೂ ಸಂಕುಚಿತ ಮನೋಭಾವನೆಗಳಿಂದಲೂ ಕೂಡಿದ ವ್ಯಕ್ತಿ "ಮಹಾಪುರುಷರೆಂದರೆ 'Simple living and high thinking' ಎಂಬಂತೆ ಸದಾಕಾಲ ಸರಳ ಜೀವನವನ್ನು ಸಾಗಿಸುತ್ತಾ ಶ್ರೇಷ್ಠ ವಿಚಾರಗಳನ್ನೇ ಮನಸ್ಸಿನಲ್ಲಿ ಚಿಂತಿಸುತಿದ್ದರು......ನಾವೂ ಅವರಂತೆಯೇ ಆಗಬೇಕು........ಆಗ ಮಾತ್ರ ಭಾರತವು ರಾಮರಾಜ್ಯವಾದೀತು......" ಎಂದೆಲ್ಲಾ ವೇದಿಕೆಯ ಮೇಲೆ ನಿಂತು ಬೋಧನೆಯನ್ನು ಕೊಡುತ್ತಾನೆ. ಇದೆಂಥ ಅಪಹಾಸ್ಯಕರ ಸನ್ನಿವೇಶ? ಏನು ಮಾಡೋಣ? ವಿಚಾರವೇನೋ ಮೇಲ್ಮಟ್ಟದ್ದು......ಆಚಾರ ಮಾತ್ರ ಕೀಳ್ಮಟ್ಟದ್ದು!

ಮಹಾತ್ಮಾ ಗಾಂಧೀಜಿಯವರ ಜನ್ಮದಿನಾಚರಣೆ ಪ್ರತಿ ವರ್ಷದ ಒಕ್ಟೋಬರ ಎರಡರಂದು ದೇಶದಾದ್ಯಂತ ವಿಜೃಂಭಣೆ(?)ಯಿಂದ ಜರಗುತ್ತಿದೆ. ಪೂಜ್ಯ ಬಾಪೂಜಿಯವರು ನಿಸರ್ಗ ಚಿಕಿತ್ಸೆಯ ಹಿಂಬಾಲಕರಾಗಿದ್ದರು. ಮಾನವನ ಸರ್ವತೋಮುಖವಾದ ಅಭಿವೃದ್ಧಿಗಾಗಿ ಪ್ರಕೃತಿಗೆ ಶರಣು ಹೋಗುವುದೊಂದೇ ದಾರಿ' ಎಂಬ ದಿವ್ಯ ತತ್ವವನ್ನು ಅವರು ಸಾವಿರ ಬಾರಿ ಸಾರಿದ್ದರು. ಸ್ವತಹ ಜೀವನದಲ್ಲಿ ನಿಸರ್ಗ ತತ್ವಗಳನು ಆಚರಣೆಗೆ ತಂದುಕೊಂಡು, ಅದರ ಪ್ರಯೋಜನಗಳನ್ನು ಜನತೆಗೆ ತೋರಿಸಿಕೊಟ್ಟಿದ್ದರು. ಪ್ರಕೃತಿ ಚಿಕಿತ್ಸಾಲಯಗಳನ್ನು ಸ್ಥಾಪಿಸಿದುದಲ್ಲದೆ ಆ ಕುರಿತು ಪುಸ್ತಕಗಳನ್ನೂ ಗಾಂಧೀಜಿ ಬರೆದಿಟ್ಟಿರುವರು

ಆದರೆ ಸಿಹಿತಿಂಡಿ ಹಂಚಿ ಅವರ ಹುಟ್ಟು ಹಬ್ಬವನ್ನು ಆಚರಿಸುವ ನಮ್ಮಲ್ಲಿ ಎಷ್ಟು ಮಂದಿ ನಿಸರ್ಗತತ್ವ ಪರಿಪಾಲಕರಾಗಿದ್ದಾರೆ?—ಬಹಳ ಅಲ್ಪ ಮಂದಿ—ಅಲ್ಲಿ ಇಲ್ಲಿ ಒಬ್ಬಿಬ್ಬರು ಮಾತ್ರ! ಇದೇ ನನಗೆ ಆಶ್ಚರ್ಯವೆಂದು ಕಂಡು ಬರುವುದು!

ಮಹಾಪುರುಷರ ಸತ್ಯ ತತ್ವಗಳ ಘೋಷಣೆಗೆ ನೆರವಾದಷ್ಟು ನಾವು ಪೋಷಣೆಗೆ ನೆರವಾಗಿಲ್ಲ— ಎಂಬ ಮಾತು ಖಂಡಿತವಾಗಿಯೂ ಸತ್ಯ.

ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಪರಿಪೂರ್ಣ ಪ್ರಯತ್ನದ ಮೂಲಕ— ಮಹಾತ್ಮರ ತತ್ವಗಳನ್ನು ಜೀವನದಲ್ಲಿ ಆಚರಣೆಗೆ ತರುವುದು ನಮ್ಮ ಆದ್ಯ ಕರ್ತವ್ಯ. ಒಂದೇ ಒಂದು ಜನ್ಮದಿನಾಚರಣೆಯ ದಿನ ಅವರ ಒಂದೊಂದೇ ತತ್ವವನ್ನಾದರೂ ಪಾಲಿಸುವುದಕ್ಕೆ ನಾವು ಪ್ರತಿಜ್ಞಾಪೂರ್ವಕ ಸಿದ್ಧರಾಗಬೇಕು! ಅದೇ ಅವರ ನಿಜವಾದ ಜನ್ಮದಿನಾಚರಣೆ! ಅದರಿಂದಲೇ ಅವರ ಆತ್ಮಕ್ಕೆ ಶಾಂತಿ, ನೆಮ್ಮದಿ, ತೃಪ್ತಿ ಎಲ್ಲವೂ ದೊರಕಲು ಸಾಧ್ಯ!

—ಶ್ರೀ ರಮಾನಂದ ಬನಾರಿ.

---

**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಕಮಿಶನ್ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಜಮಾ ಮಾಡಬಹುದು.

ಮೆನೇಜರ್.

ನವಯುಗ, ಉಡುಪಿ.


# ನವೆಂಬರ

**ನವೆಂಬರ** 19, 1852ನೇ ದಿವಸ ಜನ್ಮ ತಾಳಿದ ಅಮ್ಮೆಂಬಳ ಸುಬ್ರಾಯ ಪೈಗಳು 1-7-1906ರಲ್ಲಿ ಕೆನರಾ ಬ್ಯಾಂಕನ್ನು ಸ್ಥಾಪಿಸಿದರು.

**ನವೆಂಬರ** 19, 1956, ಅವರ ಜನ್ಮ ದಿವಸದಲ್ಲು 50 ವರ್ಷಗಳ ಪರಿಪೂರ್ಣ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸಿ, ಕೆನರಾ ಬ್ಯಾಂಕಿನವರು ಮಂಗಳೂರು ಮತ್ತು ಇತರ ಅನೇಕ ಕಡೆಗಳಲ್ಲಿ ತಮ್ಮ ಸುವರ್ಣ ಮಹೋತ್ಸವವನ್ನು ಆಚರಿಸಿದರು.

**ನವೆಂಬರ** 25, 1956ನೇ ದಿವಸ ತಮ್ಮ 25 ವರ್ಷಗಳ ಬ್ಯಾಂಕಿಂಗ್ ಸೇವೆಯ ರಜತ ಮಹೋತ್ಸವವನ್ನು ಆಚರಿಸಿದ ದಿ ಬ್ಯಾಂಕ್ ಆಫ್ ಮಂಗಳೂರು, ಲಿ., ಇವರಿಗೆ ನಮ್ಮ ಶುಭಾಶಯಗಳು.

ನಾಡಿನ ಬ್ಯಾಂಕಿಂಗ್ ಬೆಳವಣಿಗೆಗೆ ಕಾರಣರಾದ ಎಲ್ಲಾ ಮಿತ್ರರಿಗೂ, ಆಶ್ರಯದಾತರಿಗೂ ಅವರ ಆದರ ವಿಶ್ವಾಸಗಳಿಗೆ ನಮ್ಮ ಹಾರ್ದಿಕ ವಂದನೆಗಳು.

# ಕೆನರಾ ಬ್ಯಾಂಕ್ ಲಿಮಿಟೆಡ್

**1906 — ಸಮಸ್ತ ಜನತೆಯ ಸಹಾಯಕ ಬ್ಯಾಂಕ್ — 1956**

ಒಟ್ಟು ಸಾಧನ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ.


## ಕೋರಿಕೆ!

೧

ಯುಗ-ಯುಗಗಳ ಕೊಂಗನಸದು
ನನಸಾಯಿತುಯಿಂದು;
ಸೊಗ ಜೇನ್-ಮಳೆ ಸುರಿವಂತಿದೆ
ನಮ್ಮೆಲ್ಲರ ಮುಂದು!

೨

ದಿಙ್ಮಂಡಲ ನರ್ತಿಸುತಿದೆ
ನವ್ಯೋದಯ ಕಂಡು;
ಎಲ್ಲೆಲ್ಲಿಯು ಹರಿವಂತಿದೆ
ಚೈತನ್ಯದ ಸಿಂಧು!

೩

ತಂಗಾಳಿಯು ತೀಡುತಲಿದೆ
ದಿಗ್ವಿಜಯದ ಸಾರಿ;
ನೆಲ-ಜಲಗಳೆ ಪ್ರಾರ್ಥಿಸುತ್ತಿವೆ
ಶುಭ ಜೀವನ ಕೋರಿ!

೪

ಆಕಾಶವೆ ಹರಸುತಲಿದೆ
ತಾರಾಳಿಯ ತೂರಿ;
ನಗುತಿರುವದೊ ಮಂಗಳಕರ
ಬೆಳುದಿಂಗಳ-ಧಾರಿ!

೫

ಕರುನಾಡಿನೊಳದೊ ಬಂದಳೊ
ಮುತು ರಾಜನ ಕುವರಿ;
ಭವಿತವ್ಯದ ಬಾಳ್-ಬೆಳಗುವ
ಸೌಂದರ್ಯದ ಲಹರಿ!

ಬಿ. ಬಿ. ಹಿಂಗಮಿರೆ,
ರಾಜಾಪೂರ (ಕೃಷ್ಣಾತೀರ)

---


ದಿ| ಕಿಲ್ಲೆಯವರ ಪುಸ್ತಕಗಳು

## ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ.
150 ಪುಟಗಳು, ಬಿಳಿ ಕಾಗದ, ಆಕರ್ಷಕ ರಕ್ಷಾ ಪತ್ರ, ಬೆಲೆ 2-0-0

## ಭಾರತದ ಕರ್ಣ

ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

## ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ: 0-12-0.

ಮೂರೂ ಪುಸ್ತಕಗಳನ್ನು ದಿ| ಕಿಲ್ಲೆಯವರ ಧರ್ಮಪತ್ನಿ ಇಂದಿರಾ ಕಿಲ್ಲೆ, ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ.

# ಸ್ವದೇಶಿ ವ್ರತ

## ನಮ್ಮದಿನ್ನೂ "ಹಸುಳೆ" ಉದ್ಯಮ—ಅದಕ್ಕೆ ಪ್ರಾರಂಭಾವಸ್ಥೆಯಲ್ಲಿ ಸಂರಕ್ಷಣೆ ಅತ್ಯವಶ್ಯ

ಈಚೆಗೆ ಕೇಂದ್ರದಲ್ಲಿ ದೊಡ್ಡ ಕೈಗಾರಿಕೆಗಳ ಮಂತ್ರಿ ಸ್ಥಾನವನ್ನು ಅಲಂಕರಿಸಿರುವ – ಮುಂಬಯಿಯ ಮಾಜಿ ಮುಖ್ಯಮಂತ್ರಿಗಳಾದ–ಶ್ರೀ ಮುರಾರ್ಜಿ ದೇಸಾಯಿಯವರು ದೇಶೀಯ ಬ್ಲೇಡುಗಳ ಬಗ್ಗೆ ತನ್ನ ತಿರಸ್ಕಾರವನ್ನು ಅಥವಾ ಅನುಭವ ಕಥನವನ್ನು ಮಾಡಿ "ದೊಡ್ಡ" ಸುದ್ದಿಯನ್ನು ಎಬ್ಬಿಸಿದ್ದಾರೆ.

ದೇಶದ ಆಯಾತಗಳ ಮೇಲೆ ನಿಯಂತ್ರಣವಿಡಬಲ್ಲ ಸಲಹಾಮಂಡಳದಲ್ಲಿ ವ್ಯಾಪಾರಿ ಪ್ರತಿನಿಧಿಯೊಬ್ಬರು ವಿದೇಶಗಳಿಂದ ನಾವು ರೇಜರ್ ಬ್ಲೇಡ್ ತರಿಸಿಕೊಳ್ಳಬಾರದೆಂದೂ ಅದಕ್ಕೆ ನಿರ್ಬಂಧವನ್ನು ಹೇರುವುದೇ ಸೂಕ್ತವೆಂದು ವಾದಿಸಿದರು. ಆಗ ಮುರಾರ್ಜಿಯವರು "ಅದಾಗದು" ಎನ್ನುತ್ತಾ ತನ್ನ "ಅನುಭವ"ವನ್ನು ವಿವರಿಸಲು ಹೋದರು.

"ನನ್ನ ಮುಖವನ್ನು ನಾನು ನಿತ್ಯವೂ ದೇಶೀಯ ಬ್ಲೇಡುಗಳಿಂದ ಕೊಯ್ದುಕೊಳ್ಳಲಾರೆ; ಅವು ಬಹಳ ಒರಟಾಗಿವೆ. ಒಂದಕ್ಕಿಂತ ಹೆಚ್ಚು ಸಲ ಉಪಯೋಗಕ್ಕೆ ಅವು ಬರುವುದಿಲ್ಲ. ದೇಶೀಯ ಬ್ಲೇಡುಗಳ ರಚನೆಯಲ್ಲಿ ಹೆಚ್ಚಿನ ಸುಧಾರಣೆ ಅವಶ್ಯವಿದೆ. ಹಾಗೆ ಸುಧಾರಣೆಯು ಕೈಗೂಡುವವರೆಗೆ ವಿದೇಶಗಳಿಂದ ಬ್ಲೇಡುಗಳನ್ನು ತರಿಸುವ ಕೆಲಸ ಮುಂದರಿಯಲೇ ಬೇಕಾಗಿದೆ" ಎಂದು ಶ್ರೀ ಮುರಾರ್ಜಿ ದೇಸಾಯಿ ವ್ಯಾಪಾರಿಯ ವಾದಕ್ಕೆ ಉತ್ತರವಿತ್ತರು.

ಶ್ರೀ ದೇಸಾಯಿಯವರ ಹೃದಯದಲ್ಲಿ ಏನಿತ್ತೋ ನಾವು ಯಾರೂ ಹೇಳುವಂತಿಲ್ಲ; ಆದರೆ ಅವರ ಉಪರೋಕ್ತ ಉದ್ಗಾರದ ಮೊದಲನೆಯ ಮತ್ತು ಕೊನೆಯ ವಾಕ್ಯಗಳು ಮಾತ್ರ ಸ್ವತಂತ್ರ ಭಾರತದ ಉದ್ಯೋಗತಿಗೆ ಬಹಳ ಘಾತಕವಾಗಿವೆ ಎನ್ನದೆ ವಿಧಿಯಿಲ್ಲ.

ನಮ್ಮ ದೇಶದಲ್ಲಿ ತಯಾರಾದ ಬ್ಲೇಡುಗಳು ಒರಟಾಗಿರಬಹುದು; ಬಹುಶಃ ಒಂದಕ್ಕಿಂತ ಹೆಚ್ಚು ಸಲ ಉಪಯೋಗಿಸುವಾಗ ಮುಖ ಕೊಯ್ದುಕೊಂಡಂತೆಯೂ ಆಗಬಹುದು. ಅವುಗಳ ರಚನೆಯಲ್ಲಿ ಮತ್ತು ತಾಳಿಕೆ—ಬಾಳಿಕೆಯಲ್ಲಿ ಇನ್ನೂ ಹೆಚ್ಚಿನ ಯೋಗ್ಯತೆಗಳು ವ್ಯಕ್ತವಾಗಬೇಕೆಂಬುದೂ ನಿಶ್ಚಯ. ಆದರೆ ಅಷ್ಟಕ್ಕಾಗಿ ಈ ದೇಶದಲ್ಲಿ ಬ್ಲೇಡನ್ನು ತಯಾರಿಸುವವರಿಗೆ ರಕ್ಷಣೆಯನ್ನು ನಿರಾಕರಿಸುವುದು ವಿಹಿತವಾದೀತೆ?

ದೇಶೀಯ ಬ್ಲೇಡುಗಳಿಗೆ ಈಗಾಗಲೇ ಕೆಲಮಟ್ಟಿಗೆ ರಕ್ಷಣೆಯನ್ನೀಯಲಾಗಿದೆ ಎನ್ನಬಹುದು. ಕೆಲವರು – ಹೊರಗಿನಿಂದ ತರಿಸುವ ಬ್ಲೇಡುಗಳ ಮೇಲೆ ಭಾರವಾದ ಆಯಾತ ಸುಂಕ ಬೀಳುತ್ತದೆ; ದೇಶದೊಳಗೆ ತಯಾರಾದ ಬ್ಲೇಡುಗಳಿಗೆ ಈ ಬಾಧೆ ಇಲ್ಲ. ಇದೇ ರಕ್ಷಣೋಪಾಯ ಎಂದು ವಾದಿಸಬಹುದು. ಆದರೆ ಶ್ರೀ ದೇಸಾಯಿಯವರ ಉತ್ತರದ ಧ್ವನಿಯು ಸ್ವತಂತ್ರವಾದ ದೇಶಕ್ಕೆ ಅಸಹಾಸ್ಯಕರವಾದುದಾಗಿದೆ.

ನಾವು ಪ್ರತಿಯೊಂದೂ ರಂಗದಲ್ಲಿ ಸ್ವಾವಲಂಬಿಗಳಾಗಲು ಪ್ರಯತ್ನಪಡುತ್ತಿದ್ದೇವೆ. ಕ್ಷೌರದ ಬ್ಲೇಡು ಆಧುನಿಕ ಕಾಲದ ಆವಶ್ಯಕತೆಗಳಲ್ಲಿ ಒಂದೆಂಬುದನ್ನು ಒಪ್ಪಿಕೊಳ್ಳಲು ಶ್ರೀ ದೇಸಾಯಿಯವರೂ ಹಿಂಜರಿಯುವುದಿಲ್ಲ. ಹೀಗಿರುವಾಗ ಈ ಬಗ್ಗೆ ಸಹ ನಾವು ಸ್ವಾವಲಂಬಿಗಳಾಗಬೇಡವೆ? ವಿದೇಶಗಳಿಂದ ಆಯಾತವಾಗುವ ಬ್ಲೇಡುಗಳನ್ನು ನಾವೆಂದೆಂದೂ ನಂಬಿ ಕುಳಿತಿರಬಲ್ಲೆವೆ? ಇಲ್ಲವೆನ್ನುವುದು ಸ್ಪಷ್ಟ.

ದೇಶದೊಳಗೆ ತಯಾರಾದ ಬ್ಲೇಡುಗಳು ಒರಟಾಗಿದ್ದು ಹೆಚ್ಚು ಬಾಳುವುದಿಲ್ಲವಾದುದರಿಂದ ಅವುಗಳನ್ನು ಉಪಯೋಗಿಸುವುದು ಲಾಭಕರವಲ್ಲ—ಎಂಬುದನ್ನು ಶ್ರೀ ದೇಸಾಯಿಯವರೂ ಹೇಳತೊಡಗಿದ ಮೇಲೆ ಸಾಮಾನ್ಯ ಜನರೇನು ಮಾಡಬಹುದು? "ಸೆವೆನ್-ಒ-ಕ್ಲೋಕ್" ಬ್ಲೇಡನ್ನೆ ಮಧ್ಯಮ ದರ್ಜೆಯ ನಾಗರಿಕ ಉಪಯೋಗಿಸಿಕೊಂಡು ಹೋದಾನು—ಏಕೆಂದರೆ ಅದನ್ನು ಕಡಿಮೆ ವೆಚ್ಚದಲ್ಲಿ ಅದನ್ನು ಹೆಚ್ಚು ಸಲ ಮುಖಕ್ಷೌರ ಮಾಡಿಕೊಳ್ಳಲು ಅದು ತುಂಬ ಅನುಕೂಲವಾದ ಬ್ಲೇಡೆಂದು ಎಲ್ಲರ ಅನುಭವ.

ಇದರಿಂದ ದೇಶಕ್ಕೇನಾದರೂ ಹಿತವಿದೆಯೆ? ವಿದೇಶಗಳಿಂದ ಬರುವ ಸರಕುಗಳೊಡನೆ ನಮ್ಮ ದೇಶದಲ್ಲಿ ತಯಾರಾದ ಸರಕುಗಳು ಸ್ಪರ್ಧೆಯನ್ನು ಕೊಡಬೇಕಾದ ದಾರುಣವಾದ, ಮನೋವೇಧಕವಾದ ಪರಿಸ್ಥಿತಿಯು ಇಲ್ಲಿ ಏರ್ಪಡುತ್ತದೆ. ಒಂದೆಡೆ ನಯ ನಾಜೂಕಿಗೆ ಹೆಸರಾದ, ತಾಳಿಕೆ ಬಾಳಿಕೆಗೆ ಕೀರ್ತಿಹೊಂದಿದ, ಭಾರವಾದ ಆಯಾತ ಸುಂಕದ ದೆಸೆಯಿಂದಾಗಿ ಎಲ್ಲೊ ಸ್ವಲ್ಪ ಮಾತ್ರ ಬೆಲೆ ಹೆಚ್ಚಿರುವ ವಿದೇಶಿ ಸರಕು; ಇನ್ನೊಂದೆಡೆ ಎಲ್ಲ ರೀತಿಯಲ್ಲೂ ಯೋಗ್ಯತೆಯಲ್ಲಿ ಬಹಳ ಕೆಳಗಿರುವ, ಆದರೆ ಉತ್ಪಾದನೆಯ ವೆಚ್ಚವು ಮಾತ್ರ ಹೆಚ್ಚಿದ್ದು ಯೋಗ್ಯತೆಯ ಮಟ್ಟದಷ್ಟು ಕಡಿಮೆ ಬೆಲೆಯಲ್ಲೇನೂ ಮಾರಾಟವಾಗದೆ ಕೃತಕ ಸಂರಕ್ಷಣೆಯ ದೆಸೆಯಿಂದ ಮಾತ್ರ ವಿದೇಶಿ ಬ್ಲೇಡುಗಳ ಅರೆವಾಸಿ ಕ್ರಯಕ್ಕೆ ಮಾರಾಟವಾಗುವ ಸ್ವದೇಶದ ಸರಕು—ಇವುಗಳೊಳಗಿನ ಸ್ಪರ್ಧೆ ಈಗಿದ್ದ ರೀತಿಯಲ್ಲಿ ಎಂದಾದರೂ ಯಶಸ್ವಿಯಾದೀತೆ!

ಮುರಾರ್ಜಿಯವರು ಇಂಥ ಸ್ಪರ್ಧೆಗೊಂದು ರಂಗವನ್ನು ನಿರ್ಮಿಸುತ್ತಿದ್ದಾರೆ; ಮತ್ತು ಈ ಸ್ಪರ್ಧೆಯನ್ನು ಕೊಡುತ್ತಿದ್ದಂತೆಯೇ ಸ್ವದೇಶದ ಸರಕುಗಳ ಯೋಗ್ಯತೆ ಹೆಚ್ಚಬೇಕು ಎನ್ನುತ್ತಾರೆ! ಬಲಾಢ್ಯನಾದ ತರುಣನೊಡನೆ ಹಸುಳೆಯೊಂದು ಮಲ್ಲಯುದ್ಧವನ್ನು ಕೊಡಬೇಕು; ಹಾಗೆ ಮಲ್ಲಯುದ್ಧದಲ್ಲಿ ನಿರತನಾಗುವುದರಿಂದ ಹಸುಳೆಗೆ ಅನುಭವವೂ ಶಕ್ತಿಯೂ ಬರುತ್ತದೆ ಎನ್ನುವಂತಿದೆ ಅವರ ವಾದ.

ಆದರೆ ಇದೆಂದೂ ವಾಸ್ತವ ವಿಷಯಗಳಿಗೆ ಹೊಂದಿಕೊಳ್ಳಲಾರದು. ಈ ಹಸುಳೆಯನ್ನು ತರಬೇತಿಗೊಳಿಸುವ ಉದ್ದೇಶದಿಂದ ನಡೆಯುವ ಮಲ್ಲಯುದ್ಧವಾಗಿದ್ದರೆ ತೊಂದರೆಯಿಲ್ಲ. ವಿದೇಶಿ ಮತ್ತು ಸ್ವದೇಶಿ ಸರಕುಗಳ ನಡುವಣ ಮಲ್ಲಯುದ್ಧವೆಂದರೆ ವಿರೋಧಿಯನ್ನು ಮಣಿಸುವುದೇ ಧ್ಯೇಯವಾಗಿರುವಂಥಹ ಕಾದಾಟ. ಇದರಲ್ಲಿ ಬಲಾಢ್ಯನಾದವನು ಹಸುಳೆಯನ್ನು ಗುದ್ದುತ್ತಿರುವ ರೀತಿಯಲ್ಲಿ ಹಸುಳೆಯ ತ್ರಾಣ ಹೆಚ್ಚುವುದಿಲ್ಲ—ಅದು ಗತಪ್ರಾಣವಾಗುತ್ತದೆ!

ವಿದೇಶಿ ಸರಕುಗಳೊಡನೆ ಸ್ಪರ್ಧೆ ನಡೆಸುತ್ತಿರುವ ಸ್ವದೇಶದ ಎಷ್ಟೋ ಉದ್ಯಮಗಳಿಗೆ ಇಂದು ತಕ್ಕ ಪ್ರೋತ್ಸಾಹ ವಿಲ್ಲವೆ ಅವು ಶೋಚನೀಯಾವಸ್ಥೆಯನ್ನು ಎದುರಿಸುತ್ತಿವೆ. ನಮ್ಮಲ್ಲಿ ಸ್ವಂತ ಬಂಡವಾಳದಿಂದ ನಿತ್ಯೋಪಯೋಗದ ಸರಕುಗಳನ್ನು ತಯಾರಿಸಲು ಪಚೋದನೆಯನ್ನಿತ್ತ ಪ್ರಸಂಗವನ್ನು ನೆನೆದುದಾದರೆ, ನಾವು ಯಾವ ಪ್ರಕಾರವಾಗಿ ಈ ಬಂಡವಾಳವು ಮುಳುಗದೆ ಲಾಭದಾಯಕವಾಗುವಂತೆ ಪ್ರೋತ್ಸಾಹ ಕೊಡಬೇಕೆಂಬುದು ವೇದ್ಯವಾದೀತು.

ದ್ವಿತೀಯ ಮಹಾಯುದ್ಧ ಕಾಲದಲ್ಲಿ ವಿದೇಶಗಳಿಂದ ಸರಕುಗಳ ಆಯಾತವಾಗುವುದು ಸಂಪೂರ್ಣ ನಿಂತು ಹೋದಾಗಲೇ ನಮ್ಮಲ್ಲಿ ಚಿಕ್ಕ ಸರಕುಗಳನ್ನು ಉತ್ಪಾದಿಸುವ ಪ್ರಯತ್ನ ಪ್ರಾರಂಭವಾಯಿತು. ಲಾಟೀನುಗಳಿಂದ ಹಿಡಿದು ಬ್ಲೇಡುಗಳ ವರೆಗೆ, ಸ್ಕ್ರೂ ಮೊಳೆಯಿಂದ ಹಿಡಿದು ಸೂಜಿಯ ವರೆಗೆ ನಮ್ಮ ದೇಶದಲ್ಲಿ ನಿತ್ಯೋಪಯೋಗದ ಸರಕುಗಳನ್ನು ಸಿದ್ಧಗೊಳಿಸುವ ಕಾರ್ಖಾನೆಗಳು ಆಗ ತಲೆ ಎತ್ತಿದವು. ಅವುಗಳ ಪ್ರಥಮ ತಯಾರಿಕೆಯು ಏನೇನೂ ತೃಪ್ತಿಕರವಾಗಿರಲಿಲ್ಲ. ಆದರೆ ಈಗ ಕೆಲವು ವರ್ಷಗಳ ಅನುಭವದಿಂದ ಒಮ್ಮೆಯಾದರೂ ಮುಖಕ್ಷೌರ ಮಾಡಿಸಿಕೊಳ್ಳಬಹುದಾದ ಬ್ಲೇಡುಗಳು ನಮ್ಮಲ್ಲೆ ದೊರಕುವಂತಾಗಿವೆ.

ವಿದೇಶಗಳಿಂದ ಬೇರೆ ಯಾವುದೇ ಸರಕು ಆಯಾತವಾಗುವ ಸ್ಥಿತಿಯಲ್ಲಿಲ್ಲದಾಗ ಅನಿವಾರ್ಯವೆಂಬಂತೆ, ಅಥವಾ ಕಜ್ಜಾಯ ರೂಪವಾಗಿ, ಎಲ್ಲರೂ ಸ್ವದೇಶದ ಸರಕುಗಳನ್ನೆ ಕೊಂಡುಕೊಳ್ಳಬೇಕಾಯಿತು. ಇದರಿಂದ ಹಾಕಿದ ಬಂಡವಾಳಕ್ಕೆ ತಕ್ಕ ಪ್ರತಿಫಲ ಬರುವ ರೂಪದಲ್ಲಿ ಸಿದ್ಧಪಡಿಸಿದ ಸರಕುಗಳಿಗೆ ಸಾಕಷ್ಟು ವಿಸ್ತೃತವಾದ ಪೇಟೆ ಸಿಕ್ಕಿತು. ಹೀಗೆ ಸರಕಿಗೆ ಗ್ರಾಹಕರಿದ್ದಾರೆಂಬುದು ಖಚಿತವಾದುದರಿಂದಲೇ ತಯಾರಿಕೆಯಲ್ಲಿ ನೈಪುಣ್ಯ ಮತ್ತು ಹೊಸ ವಿಧಾನಗಳ ಸಂಶೋಧನೆಗೆ ಅವಕಾಶ ಕಲ್ಪಿಸಲು—ಅಂದರೆ ಹೆಚ್ಚಿನ ಬಂಡವಾಳವನ್ನು ಉಪಯೋಗಿಸಲು - ಉದ್ಯೋಗಪತಿಗಳಿಗೆ ಸಾಧ್ಯವಾಯಿತು.

ಇಂಥ ಪರಿಸ್ಥಿತಿಯನ್ನು ಮುಂದರಿಯಗೊಡದೆ, ಸ್ವದೇಶಿ ಹಾಗು ವಿದೇಶಿ ಸರಕುಗಳೆಡೆಯಲ್ಲಿ ಮುಕ್ತ ಪೇಟೆಯನ್ನು ಕಲ್ಪಿಸಿರುವ ಇಂದಿನ ವಾತಾವರಣವು ಸ್ವದೇಶಿ ಕೈಗಾರಿಕೆಗಳ ಪಾಲಿಗೆ ಜೀರ್ಣಿಸಲಾಗದ ತುತ್ತಾಗಿದೆ; ಪ್ರಾಣ ಘಾತಕವಾ


# ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

**ಶ್ರೀ ರಾಮತೀರ್ಥ ಯೋಗಾಶ್ರಮ,**
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪



**The Canara Industrial & Banking Syndicate Ltd.**

Estd: 1925] [H. O. **UDIPI**. S. India.

| | | | |
|---|---|---|---|
| Authorised Capital | = | Rs. | 56,00,000 |
| Issued Capital | = | Rs. | 32,23,787 |
| Subscribed Capital | = | Rs. | 32,11,000 |
| Paid-up Capital | = | Rs. | 27,45,000 |
| Reserve Funds | = | Rs. | 15,00,000 |

Total Working Funds Exceed **10** Crores (As on 30-9-1956)

*BRANCHES:*

| | |
|---|---|
| Mysore State | 59 |
| Andhra | 14 |
| Kerala | 13 |
| Bombay | 8 |
| Madras | 2 |

**T. A. Pai**, B.Com.(Bom), M.L.A., *General Manager.*

**T. M. A. Pai**, M.B.B.S., *Managing Director.*

ದ ವಿಷದಿಂದ ಕೂಡಿದೆ. ಅನಿವಾರ್ಯತೆಯಿಂದಾಗಿ ಸ್ವದೇಶಿ ಸರಕುಗಳನ್ನು ಆಶ್ರಯಿಸಿದವರು ವಿದೇಶದ ಸರಕುಗಳ ಆಯಾತವಾದ ಮೊದಲನೇ ದಿನವೇ ಸ್ವದೇಶಿ ಸರಕುಗಳ ಕೈಬಿಟ್ಟಿದ್ದಾರೆ. ಹೀಗೆ ಸ್ವದೇಶಿ ಸರಕುಗಳ ಬೆಂಬಲಿಗರ ಸಂಖ್ಯೆ ನಿತ್ಯವೂ ಕಡಿಮೆಯಾಗುತ್ತಿದೆ.

ಜನರ ಕೈಯಲ್ಲಿಂದು ನಾಲ್ಕು ಕಾಸು ಕುಣಿಯತೊಡಗಿರುವುದರಿಂದ ಮತ್ತದನ್ನು ಉಳಿತಾಯ ಯೋಜನೆಗಳಲ್ಲಿ ನಿಕ್ಷೇಪಿಸುವುದಕ್ಕಿಂತಲೂ ವಿಲಾಸಕ್ಕಾಗಿ ವಿನಿಯೋಗಿಸುವುದರಲ್ಲೇ ನಮ್ಮವರಿಗೆ ಆಸಕ್ತಿ ಇರುವುದರಿಂದ, ಸ್ವದೇಶಿ ಸರಕುಗಳೂ ಹಾಗೂ ಹೀಗೂ ಮಾರಾಟಗೊಳ್ಳುವಂತಾಗಿದೆ. ಆದರೆ ವಿದೇಶಗಳಿಂದ ಬಂದ ಸರಕುಗಳಿಲ್ಲದಿದ್ದರೆ ಪರಿಸ್ಥಿತಿ ಬೇರೆಯಾಗುತ್ತಿತ್ತೆಂದು ಕೇಳಬಹುದು.

ಹಣಕ್ಕಾಗಿಯಷ್ಟೇ ಸ್ವದೇಶದ ಉದ್ಯೋಗಪತಿಗಳು ಬಾಯಿ ಬಿಡುತ್ತಾರೆ ಗುಣ ಹೆಚ್ಚಿಸಲು ಗಮನಿಸುವುದಿಲ್ಲ—ಎಂಬ ಆಕ್ಷೇಪ ಕೆಲವೆಡೆಯಿಂದ ಬರಬಹುದು ವ್ಯಾಪಾರದ ಯಶಸ್ಸನ್ನು ಲಾಭದ ಮೊತ್ತದಿಂದಲೇ ಅಳೆಯುವುದು ಅರ್ಥಶಾಸ್ತ್ರಗಳು ಒಪ್ಪಿಕೊಂಡಂತಹ ಸೂತ್ರ. ಆದುದರಿಂದ ವ್ಯಾಪಾರಕ್ಕೆ ಲಾಭವೇ ತಳಗಟ್ಟು. ಅನಂತರವೇ ಗುಣಾಂಶದ ಮಾತು ಬರುತ್ತದೆ.

ಆದುದರಿಂದ ನಾವು ಉತ್ಪಾದಿಸಿದ ಸರಕು ಮಾರುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು — ಹೀಗೆ ಉದ್ಯಮವು ಲಾಭದಾಯಕವೆನಿಸಬೇಕು. ಆಗ ಹಿಂದಿನಿಂದ ಗುಣಾಂಶ ಸಂವರ್ಧನೆಗಾಗಿ ಸಂಶೋಧನೆ ನಡೆಸಲು ಆಧಾರ ಒದಗುತ್ತದೆ. ವ್ಯಾಪಾರವು ಲಾಭಪ್ರದವಾಗಿವೆ ಎಂದು ಮನವರಿಕೆಯಾಗುವಷ್ಟು ಕಾಲ ಗುಣಾಂಶಗಳ ಕಡೆಗೆ ಹೆಚ್ಚು ಗಮನಕೊಡಲು ಹೋಗುವುದು ವ್ಯಾಪಾರಿ ಸೂತ್ರವಲ್ಲ.

ನಮ್ಮದಿನ್ನೂ "ಹಸುಳೆ" ಜಾತಿಗೆ ಸೇರಿದ ಉದ್ಯಮ. ನಮಗೆ ತುಂಬ ಅನುಭವ ಬರಬೇಕಾಗಿದೆ. ಅನುಭವದ ಬಲದಿಂದ ನಾವು ಸುಧಾರಿಸಿಕೊಳ್ಳಬೇಕಾಗಿದೆ. ಶ್ರೀ ದೇಸಾಯಿಯಂಥವರ ಮುಖದ ಮೇಲೆಯೂ ಪ್ರಯೋಗಿಸಿ ಬ್ಲೇಡುಗಳ ಯೋಗ್ಯತೆಯನ್ನು ಅಳೆದು ನೋಡಿ, ಕೊರತೆಯ ನಿವಾರಣೆಗೆ ಮುಂದಾಗಬೇಕಾಗಿದೆ. ಶ್ರೀ ದೇಸಾಯಿಯವರು ಅಂಥ ಅವಕಾಶ ಕೊಡಲಾರೆನೆಂದರೆ ಅದೆಂದೂ ದೇಶಸೇವೆಯಾಗಲಾರದು!

ನಮ್ಮ ಆದರ್ಶಕ್ಕೂ ವ್ಯವಹಾರಕ್ಕೂ ಏಳುವ ತಿಕ್ಕಾಟಕ್ಕೆ ಇದೊಂದು ಮಾದರಿಯಾಗಿದೆ ಎನ್ನಬಹುದು— ಶ್ರೀ ದೇಸಾಯಿಯವರು ಸ್ವದೇಶದ ಬ್ಲೇಡುಗಳನ್ನು ಒರಟೆಂದಂತೆ ಬಿನ್ನಿ ಕಂಪೆನಿಯ ಬಟ್ಟೆಗಳ ಭಕ್ತರು ಖಾದಿಯನ್ನು ಒರಟೆಂದು ದೂರುತ್ತಾರೆ! ಮಸ್ಲಿನ್ ಪಂಚೆಗಳನ್ನು ಉಪಯೋಗಿಸುವವರು ಖದ್ದರ್ ಮುಂಡುಗಳ ಭಾರವನ್ನು ಹೊರಲಾರೆನೆನ್ನುತ್ತಾರೆ! ಖಟಾವು ವ್ಯಾಯಿಲ್ ಪ್ರಿಯೆಯು ಕೈಮಗ್ಗದ ಸೀರೆಯನ್ನು ಕಂಡೇ ಹೆದರುತ್ತಾಳೆ!

ಶ್ರೀ ದೇಸಾಯಿಯವರದೇ ಬುದ್ಧಿ ಇವರೆಲ್ಲರದೂ; ಆದರೆ ಶ್ರೀ ದೇಸಾಯಿಯವರನ್ನೇ ಕೇಳಿದರೆ ಅವರು ಖದ್ದರನ್ನು ಪ್ರೋತ್ಸಾಹಿಸಬೇಕು; ಅದರ ಒರಟುತನವನ್ನೂ ಅಪಾರ ಭಾರವನ್ನೂ ನೇಕಾರರ ಕುಟುಂಬವನ್ನು ನೆನೆದು, ದೇಶದಲ್ಲಿ ತಾಂಡವವಾಡುವ ನಿರುದ್ಯೋಗವನ್ನು ಕಂಡು, ಸಹಿಸಬೇಕು ಎನ್ನುತ್ತಾರೆ. ಆದರೆ ಅವರು ಬ್ಲೇಡುಗಳ ವಿಷಯದಲ್ಲಿ ಮಾಡುತ್ತಿರುವುದೇನು? ಜನಸಾಮಾನ್ಯರದೇ ಮಾದರಿಯ ಅಪಲಾಪ!

ಮಾನ್ಯ ಮಂತ್ರಿಗಳು ಮುಂಬಯಿಯನ್ನು "ಒಣ" ರಾಜ್ಯವಾಗಿ ಮಾಡಿದ ಮುಖಂಡರು. ಸಂಪೂರ್ಣ ಪಾನ ನಿಷೇಧವನ್ನು ಜ್ಯಾರಿಗೆ ತಂದವರು. ಅವರೇಕೆ - ಹಾಗೆ ಮಾಡಬೇಕಿತ್ತೊ? ಬ್ಲೇಡುಗಳ ಕುರಿತು ಅವರೆತ್ತಿದ ಉದ್ಗಾರವನ್ನು ವಿಶ್ಲೇಷಿಸಿದರೆ, ಜನರ ಬುದ್ಧಿ ಸುಧಾರಿಸಿ ಜನರೇ ಮದ್ಯಪಾನದಿಂದ ಪರಾವೃತ್ತರಾಗಲಿ; ನಾನೇನೂ ಸರಕಾರಕ್ಕಾಗುವ ಆದಾಯ ಕಳೆದುಕೊಳ್ಳಲಾರೆ ಎಂದು ನುಡಿಯಬೇಕಿತ್ತೆಂದು ತೋರುತ್ತದೆ!

ಹಾಗೆ ಅವರು ಮಾಡಿಲ್ಲ— ಮದ್ಯಪಾನಕ್ಕೆ ಮುಕ್ತ ಅವಕಾಶವೂ ಜನರ ನಡತೆಯ ಸುಧಾರಣೆಯೂ ಜೊತೆಯಾಗಿ ಸಾಗಲಾರವೆಂದು ಆಗ ಅವರಿಗೆ ವಿವೇಕವಿತ್ತು. ಈಗ ಅದು ಮಾಯವಾಗಿದೆಯೆ? ಅಂದು ಅವರು ಬಯಸದಿದ್ದ ಸ್ಪರ್ಧೆಯನ್ನು ಇಂದು ಬಯಸುತ್ತಾರೆಯೆ?

ಮದ್ಯಪಾನ ಪ್ರತಿಬಂಧವು ಅಗತ್ಯವೆಂದು ಕಂಡವರು ಮದ್ಯಪಾನವನ್ನು ಶಾಸನ ಮೂಲಕ ನಿಷೇಧಿಸದೆ, ಜನರಿಗೆ ವಿದ್ಯಾಭ್ಯಾಸವನ್ನು ಕೊಟ್ಟು ಈ ಚಟಕ್ಕೆ ಬಲಿಬೀಳದಂತೆ ನೋಡಿರಿ ಎನ್ನುವ ಬುದ್ಧಿವಂತಿಕೆಯ ಮಾತನ್ನಾಡುತ್ತಾರೆ. ಆದರೆ ಒಂದೆಡೆ ಜನತೆ ಕುಡಿಯಗೊಟ್ಟು, ಹಾಗೆ ಕುಡಿದು ಅಮಲೇರಿದವರಿಗೆ 'ಕುಡಿಯುವುದು ಒಳ್ಳೆಯದಲ್ಲ' ಎಂದು ಹೇಳಹೊರಟರೆ ಎಂದಿಗೂ ನಮ್ಮ ಧ್ಯೇಯ ನೆರವೇರಲಾರದೆಂಬ ವಿವೇಕ ಮುರಾರ್ಜಿಯವರಿಗಿತ್ತು. ಇದೇ ವಿವೇಕ ದೇಶೀಯ ಸರಕುಗಳಿಗೆ ರಕ್ಷಣೆ ಕೊಡುವ ವಿಷಯದಲ್ಲಿ ಸಂಕುಚಿತವಾಗಿರುವುದು, ಅಥವಾ ಮಾಯಗೊಂಡಿರುವುದು ಏಕೆ?

ಬ್ರಿಟನನ್ನು ತೆಗೆದುಕೊಳ್ಳಿರಿ — ಅಲ್ಲಿ ತಮ್ಮಲ್ಲಿ ತಯಾರಾಗದ ಸರಕುಗಳು ಮಾತ್ರ ಆಮದಾಗುತ್ತವೆ; ತಮ್ಮ ತಯಾರಿಕೆಯೊಡನೆ ಬೇರೆ ದೇಶದ ಸರಕುಗಳು ಸ್ಪರ್ಧಿಸುವುದಕ್ಕೆ ಅವಕಾಶ ಕೊಡದಾಗ, ಎಷ್ಟು ಭಾರವಾದ ಆಯಾತ ಸುಂಕವನ್ನು ಹೇರಬಹುದೋ ಅಷ್ಟು ಹೇರಿ, ತಮ್ಮ ಸರಕುಗಳೇ ಅಗ್ಗವೂ ಜನಪ್ರಿಯವೂ ಆಗುವಂತೆ ಮಾಡುತ್ತಾರೆ.

ಎಲ್ಲ ಸ್ವತಂತ್ರ ರಾಷ್ಟ್ರಗಳೂ ತಮ್ಮ ಉದ್ದಿಮೆಗಳ ವಿಕಾಸವನ್ನು ಬಯಸುತ್ತವೆ. ಜಪಾನಿನ ಪೆನ್ಸಿಲು ಇಲ್ಲಿ ಒಂದಾಣೆಗೆ ಸಿಗುತ್ತದೆ—ಜಪಾನಿನಲ್ಲಿ ಆ ಪೆನ್ಸಿಲಿಗೆ ಹತ್ತಾಣೆ ಬೆಲೆ. ಆದರೂ ಜಪಾನಿನ ಎಲ್ಲ ಮಕ್ಕಳೂ ಹತ್ತಾಣೆಯ ಪೆನ್ಸಿಲನ್ನ ತಮ್ಮಲ್ಲಿ ತಯಾರಾದುದೆಂದು ತೆಗೆದುಕೊಳ್ಳುತ್ತಾರೆ. ಜರ್ಮನಿಯ ಪೆನ್ಸಿಲು ಅಲ್ಲೂ ಸಿಗುತ್ತದೆ, ಮೂರಾಣೆಗೆ! ಆದರೆ ಅದನ್ನು ಮೂಸಿನೋಡುವ ಜಪಾನಿಗರಿಲ್ಲ.

ನಾವೆಲ್ಲರೂ ಜಪಾನಿಗಳಷ್ಟು ದೇಶಭಕ್ತರಾಗಬೇಕು; ಬ್ರಿಟನಿನಂತೆ ಉದ್ದಿಮೆ ತಜ್ಞರೂ ಆಗಬೇಕು. ನಮ್ಮ ಕೈಗಾರಿಕೆಗಳು ಬೆಳೆಯಲು ಎಷ್ಟೆಲ್ಲ ಬಗೆಯ ಸಂರಕ್ಷಣೆ ಅಗತ್ಯವೋ ಅಷ್ಟನ್ನೂ ಒದಗಿಸಿ ಕೊಡಬೇಕು. ನಮ್ಮ ಸ್ವದೇಶಿ ಕೈಗಾರಿಕೆಗಳು ಇನ್ನೂ ಸಸಿರೂಪದಲ್ಲಿವೆ; ಅವು ಬೆಳೆದು ಮರವಾಗುವವರೆಗೆ ರಕ್ಷಣೆ ಅಗತ್ಯ. ಸುತ್ತ ಗೋಡೆ ಎಬ್ಬಿಸಿ ವಿದೇಶದ ಸರಕುಗಳ ಆಯಾತ ಪ್ರವಾಹದಲ್ಲಿ ಇವು ಕೊಚ್ಚಿಹೋಗದಂತೆಯೂ ಬಿಸಿಲಿಗೆ ಮರೆ ಕಲ್ಪಿಸಿ ವಿದೇಶಿ ಸರಕುಗಳ ಸ್ಪರ್ಧೆಯ ಝಳದಲ್ಲಿ ನಮ್ಮ ಸರಕುಗಳು ಸೊರಗಿ ಬಾಳದಂತೆಯೂ ಎಚ್ಚರಿಕೆಯನ್ನು ವಹಿಸಬೇಕಾಗಿದೆ. ಈ ವಿವೇಕವು ನಮಗೂ ನಮ್ಮ ಮಂತ್ರಿಗಳಿಗೂ ಎಂದು ಬಂದೀತು? ನಾವೆಂದು ಸಂಪೂರ್ಣ ಸ್ವಾವಲಂಬಿಗಳಾದೇವು?

# ಸೋವಿಯೆಟಿನ ಬೇಸಾಯ

## ರಶ್ಯದಲ್ಲಿ ಸಾಮೂಹಿಕ ಕೃಷಿಪದ್ಧತಿಯೇ ಜನಪ್ರಿಯವಾಗಿದೆ— ಸ್ವತಂತ್ರ ಸಾಗುವಳಿಗಿಂತ ಈ ಸಹಕಾರಿ ಪ್ರಯತ್ನಕ್ಕೆ ಪ್ರತಿಫಲ ಹೆಚ್ಚು

ಸಾಮೂಹಿಕ ಕೃಷಿ ಕ್ಷೇತ್ರಗಳು ಅಥವ 'ಕೊಲ್ಖೋಜ್'ಗಳು (ರಶಿಯನ್ ಭಾಷೆಯ 'ಕೊಲೆಕ್ಟೀವ್‌ನಿಯೇ ಖೋಜಿಯಾಯಿಸ್ತ್ವ' ಎಂಬುದರ ಸಂಕ್ಷಿಪ್ತ ರೂಪ) ದೊಡ್ಡ ಸಹಕಾರೀ ವ್ಯವಸಾಯ ಕ್ಷೇತ್ರೋದ್ಯಮಗಳಾಗಿವೆ. ಸಮಷ್ಟಿ ಕ್ಷೇತ್ರಗಳ ಮೇಲೆ ಬೇಸಾಯವನ್ನು ನಡೆಸಲು ಸೋವಿಯಟ್ ರೈತರು ತಮ್ಮ ಸ್ವೀಯ ಸ್ವತಂತ್ರ ಇಚ್ಛೆಯಿಂದಲೇ ಈ ಸಹಕಾರೀ ವ್ಯವಸಾಯ ಕ್ಷೇತ್ರೋದ್ಯಮಗಳಲ್ಲಿ ಒಂದುಗೂಡಿರುತ್ತಾರೆ. ಸಾಧಾರಣವಾಗಿ ಸರಾಸರಿಯ ಸಾಮೂಹಿಕ ಕೃಷಿ ಕ್ಷೇತ್ರವು ೩,೦೦೦ರಿಂದ ೭,೫೦೦ ಎಕರೆಗಳ ವರೆಗೆ ಬೇಸಾಯವನ್ನು ನಡೆಸುತ್ತದೆ. ಆದರೆ ಕಾಳು ಬೆಳೆಯುವ ಜಿಲ್ಲೆಗಳಲ್ಲಿರುವ ಹಲವು ಕ್ಷೇತ್ರಗಳು ೨೫,೦೦೦ ಎಕರೆಗಳು ಅಥವ ಅದಕ್ಕಿಂತಲೂ ಹೆಚ್ಚು ವಿಸ್ತೀರ್ಣದ ವ್ಯವಸಾಯವನು ನಡೆಸುತ್ತವೆ.

ಸೋವಿಯಟ್ ಒಕ್ಕೂಟದಲ್ಲಿ ಸುಮಾರು ಎಲ್ಲ ರೈತರೂ ಸಾಮೂಹಿಕ ಕೃಷಿ ಕ್ಷೇತ್ರಗಳ ಸದಸ್ಯರಾಗಿರುತ್ತಾರೆ. ಸ್ವತಂತ್ರವಾಗಿ ಇನ್ನೂ ತಾವೇ ಬೇಸಾಯವನ್ನು ಮಾಡಿಕೊಳ್ಳುತ್ತಿರುವ ರೈತರು ತೀರಾ ಅತ್ಯಲ್ಪ ಸಂಖ್ಯಾತರಾಗಿದ್ದಾರೆ.

ಸರ್ವಸ್ವಾಮ್ಯವುಳ್ಳ ವ್ಯವಸಾಯವನ್ನು ನಡೆಸಲು ಅವಶ್ಯಕವಾದ ಕ್ಷೇತ್ರೋಪಕರಣಗಳು (ಸಣ್ಣವುಗಳ ಹೊರತು) ಎಳೆತದ ಪ್ರಾಣಿಗಳು ಎತ್ತು ಕುದುರೆ ವಗೈರೆ, ಉತ್ಪಾದಕ ಪಶುಧನ (ದನಗಳು, ಕುದುರೆ, ಇತ್ಯಾದಿ) ಮತ್ತು ಕ್ಷೇತ್ರದ ಕಟ್ಟಡಗಳು, ಇವೆಲ್ಲವೂ ಸರ್ವಸ್ವಾಮ್ಯದ ಒಡೆತನಕ್ಕೆ ಸೇರಿವೆ. ಉತ್ಪಾದನೆಯ ಎಲ್ಲಾ ಸಮಷ್ಟಿ ಸಾಧನಗಳೂ ಮತ್ತು ಸಾಮೂಹಿಕ ಕೃಷಿ ಕ್ಷೇತ್ರದ ಇಡೀ ಹುಟ್ಟುವಳಿಯೂ, ಆ ವಿಶಿಷ್ಟ ಸಾಮೂಹಿಕ ಕೃಷಿ ಕ್ಷೇತ್ರದ ರೈತರ ಸರ್ವಸ್ವಾಮ್ಯದ ಸಹಕಾರೀ ಆಸ್ತಿಯಾಗಿರುತ್ತವೆ. ಸಾಮೂಹಿಕ ಕೃಷಿ ಕ್ಷೇತ್ರವು ನೆಲೆಗೊಂಡಿರುವ ಭೂಮಿಯು ರಾಜ್ಯದ ಆಸ್ತಿಯಾಗಿರುತ್ತದೆ—ಎಂದರೆ, ಅದು ಇಡೀ ಜನತೆಗೆ ಸೇರಿದುದಾಗಿರುತ್ತದೆ. ಆದರೆ ಅದು ರಾಜ್ಯದಿಂದ ಸಾಮೂಹಿಕ ಕೃಷಿ ಕ್ಷೇತ್ರಕ್ಕೆ ಶಾಶ್ವತ ಕಾಲದ ವರೆಗೆ ಪುಕ್ಕಟೆಯಾಗಿ ಬಳಸಿಕೊಳ್ಳುವುದರ ಸಲುವಾಗಿ, ದಸ್ತಾವೇಜುಗಳ ಮುಖಾಂತರ ಬರೆದು ಕೊಡಲ್ಪಟ್ಟಿರುತ್ತದೆ.

ಸಾಮೂಹಿಕ ಕೃಷಿ ಕ್ಷೇತ್ರಗಳು ವ್ಯವಸಾಯದ ಸಹಕಾರೀ ಸಂಘಗಳ ನಿಯಮಗಳಿಗನುಸಾರವಾಗಿ ಚಲಾವಣೆಯಾಗುತ್ತವೆ. ೧೯೩೫ರ ಫೆಬ್ರುವರಿ ತಿಂಗಳಲ್ಲಿ ನಡೆದ ಅಖಿಲ ಒಕ್ಕೂಟದ ಸಾಮೂಹಿಕ ಕೃಷಿ ಕ್ಷೇತ್ರಗಳ ಅಗ್ರಗಾಮಿ ಕಾರ್ಯಕರ್ತರ ಎರಡನೆಯ ಮಹಾಸಭೆಯಲ್ಲಿ ಅಂಗೀ

(೬ನೇ ಪುಟ ನೋಡಿರಿ)

**NAVAYUGA**
Popular Kannada Weekly
*Founder:—*
**A. B. SHETTY**, *M. L. A.*
Former Minister for Public Health,
Govt. of Madras.
At Present Minister for Health
Govt. of Mysore.

# ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೯-೧೧-'೫೬ | ೧೪ |


## ಜಿಲ್ಲೆಯಲ್ಲಿ ವ್ಯವಸಾಯಾಭಿವೃದ್ಧಿ

ಹೊಸ ಮೈಸೂರು ರಾಜ್ಯದ ಪ್ರಾರಂಭ ಕಾಲದಲ್ಲಿ ಸಾರ್ವಾಂಗಿಕ ಅಭಿವೃದ್ಧಿಯ ಅಭಿಲಾಷೆಯನ್ನು ಜನರಂತೆ ಸರಕಾರಿ ಮುಂದಾಳುಗಳು ಸಹ ವ್ಯಕ್ತಪಡಿಸುತ್ತಿರುವುದನ್ನು ಶುಭ ಸೂಚಕವೆಂದು ಹೇಳಬಹುದು. ಸರಕಾರಿ ಮುಂದಾಳುಗಳು ಸಾಮಾನ್ಯವಾಗಿ ಜನರ ಆಶೋತ್ತರಗಳಿಗೊಂದು ಬೆಲೆ ಇದೆ ಎಂದು ಪರಿಗಣಿಸುವುದೇ ಇಲ್ಲ; ತಮ್ಮ ಸಲಹೆಗಾರರಾಗಿರುವ "ತಜ್ಞ"ರ ಸೂಚನೆಗಳನ್ನು ಪಡೆಯದೆ ಏನು ಹೇಳಲೂ ಅವರು ಹೋಗುವವರಲ್ಲ. ಇಂಥ ಸಂದರ್ಭವನ್ನು ಇಷ್ಟರ ವರೆಗೆ ಕಂಡಂಥ ನಾವು ಈಗ ಸರಕಾರಿ ಮುಂದಾಳುಗಳು ಜನರ ಅಭಿಪ್ರಾಯವನ್ನೇ ನೇರಾಗಿ ಸ್ಪರ್ಶಿಸುವ ಮಾತುಗಳನ್ನಾಡುವಾಗ ನಿಜಕ್ಕೂ ಪುಳಕಿತಗೊಳ್ಳುವಂತಾಗಿದೆ. ಮೊನ್ನೆ ಮಂಗಳೂರಿಗೆ ಚಿತ್ತೈಸಿದ ಮೈಸೂರು ವಿಭಾಗದ ಕಮಿಶನರರಾದ ಶ್ರೀ ಜಿ.ಎನ್. ನಾಗರಾಜರಾಯರು ದಕ್ಷಿಣ ಕನ್ನಡವು ಅಭಿವೃದ್ಧಿ ಹೊಂದಬಹುದಾದ ರೀತಿಯನ್ನು ವಿವರಿಸಿದ್ದಾರೆ ಮತ್ತು ಜನರು ಆತ್ಮಾಸಕ್ತಿಯನ್ನು ತೋರಿಸಿ ಈ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಹಕಾರ ನೀಡಬೇಕೆಂದು ವಿನಂತಿಸಿದ್ದಾರೆ. ಅವರೆನ್ನುವಂತೆ ನೂತನ ಸರಕಾರವು ಮೈಸೂರು ರಾಜ್ಯದ ಪಡುಕರಾವಳಿಯಲ್ಲಿರುವ ಹನ್ನೆರಡು ಬಂದರುಗಳ ಅಭಿವೃದ್ಧಿಯನ್ನೂ ತನ್ನ ಧ್ಯೇಯವಾಗಿ ಮಾಡಿಕೊಂಡಿದೆ. ಮತ್ಸ್ಯ ವ್ಯವಸಾಯಾಭಿವೃದ್ಧಿಯೂ ಅದರ ಗುರಿಯಾಗಿದೆ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಕಳೆದ ವಾರವೇ ಬರೆದಿದ್ದೇವೆ. ನಮಗೆ ಶ್ರೀ ನಾಗರಾಜರಾಯರ ಹೇಳಿಕೆಯಲ್ಲಿ ತೋರಿದ ಕುತೂಹಲದಾಯಕವಾದ ವಿಷಯವೆಂದರೆ, ಇಲ್ಲಿ ರಬ್ಬರಿನ ವ್ಯವಸಾಯವನ್ನೂ ಚೆನ್ನಾಗಿ ಮಾಡಬಹುದು ಎಂಬುದಾಗಿದೆ. ಪ್ರಾಯಶಃ ಇದೇ ಮೊದಲನೇ ಬಾರಿ ಅಧಿಕಾರಿಯೊಬ್ಬನು ಇಂತಹ ಸೂಚನೆಗಳನ್ನು ಮಾಡುವುದಾಗಿದೆ—ಅಂತೂ ಜನರ ಗಮನಕ್ಕೆ ರಬ್ಬರು ವ್ಯವಸಾಯವೂ ನಮ್ಮ ಜಿಲ್ಲೆಯಲ್ಲಿ ಸಾಧ್ಯವೆಂಬ ವಿಷಯವು ಇಷ್ಟು ಸ್ಪಷ್ಟವಾದ ರೀತಿಯಲ್ಲಿ ಹಿಂದೆಂದೂ ಬಂದುದಿಲ್ಲವೆನ್ನುವುದು ಸತ್ಯ. ರಬ್ಬರು ಬೆಳೆಗೆ ನಮ್ಮಲ್ಲಿಯ ಸಾಹಸಿಗರಾದ ರೈತರು ಮುಂದಾಗಬೇಕೆಂದೂ ಸರಕಾರವು ರಬ್ಬರಿನ ಬೆಳೆಯಾಗುವ ಪ್ರತಿ ಎಕ್ರೆಗೆ ೩೦೦ ರೂಪಾಯಿಗಳ ಸಹಾಯ ಧನವನ್ನು ನೀಡುವುದೆಂದೂ ಶ್ರೀ ನಾಗರಾಜರಾಯರು ಹೇಳಿದ್ದಾರೆ. ರಬ್ಬರಿನ ವ್ಯವಸಾಯದಲ್ಲಿ ನಿರತರಾಗುವವರಿಗೆ ಈ ಸಹಾಯ ಧನವು ಒಳ್ಳೆಯ ಪ್ರೋತ್ಸಾಹದಾಯಕವಾದ ಆಕರ್ಷಣೆಯಾಗಿದೆ. ರಬ್ಬರಿನ ಉಪಯೋಗವು ಆಧುನಿಕ ಕಾಲದಲ್ಲಿ ಹೇಳಿ ತೀರದಷ್ಟಿದೆ. ಸಾಹಸಿಗರಾದ ಬ್ರಿಟಿಷರು ಮಲಯದಂತಹ ತೀರ ಹಿಂದುಳಿದ ಪ್ರದೇಶದಲ್ಲಿ ಅಲ್ಲಿಯ ಜನರನ್ನೇ ಆಳುಗಳಾಗಿ ಉಪಯೋಗಿಸಿಕೊಂಡು ಇಂದು ಕೋಟ್ಯಾಂತರ ರೂಪಾಯಿ ಪ್ರತಿಫಲಕೊಡುವ ರಬ್ಬರು ತೋಟಗಳನ್ನು ಬೆಳೆಸಿದ್ದಾರೆ. ನಮ್ಮ ದೇಶದಲ್ಲಿ ಸಹ ತಿರುವಾಂಕೂರಿನಲ್ಲಿ ರಬ್ಬರು ತೋಟಗಳು ತಲೆಎತ್ತಿವೆ—ನೆರೆಯ ಸಿಂಹಳ ದ್ವೀಪದಲ್ಲಿ ರಬ್ಬರಿನ ಬೆಳೆಯು ಬಹಳ ಪುಷ್ಕಳವಾಗಿ ಕೈಗೆ ಬರುವುದನ್ನು ಕಂಡು ನಡೆಸಿದ ಸಾಹಸ ತಿರುವಾಂಕೂರಿನದು. ನಾವಾದರೂ ಈ ಬಗೆಯ ಸಾಹಸೋದ್ಯಮಗಳಿಗೆ ಹಿಂಜರಿಯಬಾರದು. ನಮ್ಮಲ್ಲಿ ಅನೇಕರು ಕಾಫಿ ತೋಟಗಳ ಮಾಲಿಕರಾಗಿ ಮುಂದೆ ಬಂದಿದ್ದಾರೆ; ತಮ್ಮ ಸ್ವಂತ ಸಾಹಸ, ಪರಿಶ್ರಮಗಳ ಫಲವಾಗಿ ನೂರಾರು ಎಕ್ರೆ ವಿಸ್ತೀರ್ಣದ ಕಾಫಿ ತೋಟಗಳ ಒಡೆತನವನ್ನು ಅವರು ಸಂಪಾದಿಸಿಕೊಂಡರು. ಇದೇ ಬಗೆಯ ಉದ್ಯಮಶೀಲತೆಯನ್ನು ವ್ಯಕ್ತಪಡಿಸಿದರೆ ಅನೇಕರಿಗೆ ರಬ್ಬರುತೋಟಗಳ ಒಡೆಯರಾಗಲು ಸಾಧ್ಯವಿದೆ. ರಬ್ಬರಿಗೆ ಬೇಡಿಕೆಯು ಹೆಚ್ಚುತ್ತಲೇ ಹೋಗುತ್ತಿದೆ—ಮತ್ತು ಭಾರತವು ಸ್ವಾವಲಂಬಿಯಾಗುವ ಹಂಬಲವನ್ನು ಬಹಳವಾಗಿ ಇಟ್ಟುಕೊಂಡಿದೆ. ಆದುದರಿಂದ ರಬ್ಬರಿಗೆ ಗ್ರಾಹಕರಿಲ್ಲದೆ ಹೋಗಬಹುದೆಂಬ ಭಯಕ್ಕೆ ತಿಲಾಂಶ ಅವಕಾಶವೂ ಇರಲಾರದು. ಕಾಫಿಯಷ್ಟು ಶೀಘ್ರದಲ್ಲಿ ರಬ್ಬರಿನ ಬೆಳೆಯು ಪ್ರತಿಫಲವನ್ನು ಕೊಡಲಾರದು—ನಿಜ. ಆದರೆ, ಒಮ್ಮೆ ಪ್ರತಿಫಲವನ್ನು ಕೊಡಹತ್ತಿದರೆ, ಅದು ಕಾಫಿಗಿಂತ ಹೆಚ್ಚು ಪ್ರಮಾಣದಲ್ಲಿ ರುವುದಂತೂ ನಿಶ್ಚಯ; ಹೆಚ್ಚು ದೀರ್ಘ ಕಾಲ ರಬ್ಬರಿನ ತೋಟಗಳು ಬಾಳುತ್ತವೆ ಎಂಬುದರಿಂದ ಈ ಲಾಭವು ಹೆಚ್ಚು ಆಕರ್ಷಣೀಯವೂ ಆಗುತ್ತದೆ. ಆದುದರಿಂದ ನಮ್ಮ ರೈತರು—ಮುಖ್ಯವಾಗಿ ಕೈಯಲ್ಲಿ ನಾಲ್ಕು ಕಾಸಿರುವ ವರ್ಗದಾರರು—ರಬ್ಬರಿನ ಕೃಷಿಗೆ ಮನಸ್ಸು ಮಾಡಬೇಕೆಂದು ನಾವು ಆಗ್ರಹಪೂರ್ವಕ ಕೇಳಿಕೊಳ್ಳುತ್ತೇವೆ. ನವತರುಣರಿಗೆ ಹೇಳಿಸಿದ ಇಂಥ ಸಾಹಸೋದ್ಯಮಗಳು ಬೇರೆಯೂ ಕೆಲವು ಇವೆ— ಶ್ರೀ ನಾಗರಾಜರಾಯರ ಕೆಲವು ಸೂಚನೆಗಳನ್ನು ಅನುಸರಿಸಿ ಹೇಳುವುದಾದರೆ, ಈ ಜಿಲ್ಲೆಯಲ್ಲಿ ಗೇರು ಬೀಜ, ಏಲಕ್ಕಿ ಮತ್ತು ಕಾಳು ಮೆಣಸಿನ ಕೃಷಿಯನ್ನು ತುಂಬ ವಿಸ್ತರಿಸುವ ಆವಶ್ಯಕತೆ ಇದೆ. ಇವೆಲ್ಲವೂ ರೊಕ್ಕದ ಪೈರುಗಳು— ನಮ್ಮ ಗೇರು ಬೀಜದ ಕಾರ್ಖಾನೆಗಳು ಈಗ ಆಫ್ರಿಕದಿಂದ ಗೇರುಬೀಜವನ್ನು ಆಮದು ಮಾಡಿಕೊಳ್ಳುವ ಮತ್ತು ಮಳೆಗಾಲದ ಕೆಲವು ತಿಂಗಳುಗಳಲ್ಲಿ ಕೆಲಸವನ್ನೇ ನಿಲ್ಲಿಸಿಬಿಡುವ ಸ್ಥಿತಿಯಲ್ಲಿವೆ. ಇದು ತಪ್ಪಿ ನಮ್ಮ ಗೇರು ಬೀಜದ ಉತ್ಪಾದನೆಯಿಂದಲೇ ಈ ಕಾರ್ಖಾನೆಗಳನ್ನು ನಡೆಸುವುದು ಸಾಧ್ಯವಾಗಬೇಕು. ಹಳ್ಳಿಗಳಲ್ಲಿ ಗೇರು ಬೀಜವೆಂದರೆ ಬಹಳ ಅಮೂಲ್ಯವಾದ ಸೊತ್ತು—ಆದರೆ ಅದನ್ನು ಕ್ರಮಪ್ರಕಾರ ಕೃಷಿ ಮಾಡಲು ಹೋದವರು ಮಾತ್ರ ವಿರಳ. ಒಳ್ಳೆಯ ಆಸಕ್ತಿಯನ್ನು ವಹಿಸಿ, ವಿಶಾಲವಾದ ತೋಟಗಳನ್ನು ರಚಿಸಿಕೊಂಡು, ಗೇರು ಬೀಜದ ಕೃಷಿಯನ್ನು ನಡೆಸಿದುದಾದರೆ, ಅತ್ಯಲ್ಪ ಖರ್ಚಿನಲ್ಲಿ ಅತಿ ಹೆಚ್ಚು ಲಾಭವನ್ನು ಪಡೆಯಬಹುದಾಗಿದೆ. ಗೇರು ಬೀಜದ ಗಿಡವು ಬಲಿತ ಬಳಿಕ ಅದಕ್ಕೆ ಯಾವ ಆದರೋಪಚಾರದ ಆಗತ್ಯವೂ ಬೀಳುವುದಿಲ್ಲ—ಇದರಿಂದ ತೋಟವನ್ನು ನಿರಾತಂಕವಾಗಿಯೂ ನಿಶ್ಚಿಂತೆಯಿಂದಲೂ ವಿಸ್ತರಿಸುತ್ತಾ ಹೋಗಲು ಬಹಳ ಸಹಾಯವಾಗುತ್ತದೆ. ಇದೇ ಪ್ರಕಾರ ಏಲಕ್ಕಿ ಮತ್ತು ಕಾಳು ಮೆಣಸಿನ ಕೃಷಿಯು ಸಹ ಬೆಲೆ ಬಾಳುವ ವ್ಯವಸಾಯವಾಗಿದೆ. ನಾವು ಎಂದು ಇಂಥ ಉಪಯುಕ್ತ ಕೃಷಿಗಳಿಗೆ ಧಾರಾಳ ಮನಸ್ಸು ಕೊಟ್ಟೇವು? ಕೊಡಬೇಕು—ಎನ್ನುವುದು ನಮ್ಮೆಲ್ಲರ ತೀವ್ರಾಪೇಕ್ಷೆ. ಆದರೆ ಕೊಟ್ಟವರು ಮಾತ್ರ ಬಹಳ ವಿರಳ. ನಮಗೆಲ್ಲರಿಗೂ ಅನ್ನವನ್ನೊದಗಿಸುವ ಭತ್ತದ ವ್ಯವಸಾಯವನ್ನೇ ತೆಗೆದುಕೊಂಡರೂ ಜಪಾನಿ ಮಾದರಿಯ ಕೃಷಿ ಕ್ರಮವನ್ನಾಗಲೀ ವಿದ್ಯುಚ್ಛಕ್ತಿಯ ಪಂಪುಗಳನ್ನು ನಡೆಸಿ ನೀರಾವರಿಗೆ ಭತ್ತದ ಗದ್ದೆಗಳನ್ನು ಬಳಪಡಿಸುವ ಸಾಹಸವನ್ನಾಗಲೀ ಮಾಡಿದವರು ಹೆಚ್ಚಾಗಿ ಕಂಡುಬರುತ್ತಿಲ್ಲ. ಶ್ರೀ ನಾಗರಾಜರಾಯರು ವಿದ್ಯುಚ್ಛಕ್ತಿಯ ಪಂಪುಗಳಿಂದ ಭತ್ತದ ಬೆಳೆಯನ್ನು ಸುಲಭದಲ್ಲಿ ಇಮ್ಮಡಿಮಾಡುವ ಆಶೆಯನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯ ಪೂರೈಕೆಯಾಗಬೇಕೆಂದು ಸರಕಾರವನ್ನು ಒತ್ತಾಯಿಸುವಾಗ ನಮ್ಮ ಮುಂದಾಳುಗಳೂ ಇಂಥ ಸಾಧ್ಯತೆಯನ್ನು ಎತ್ತಿ ತೋರಿಸಿದ್ದರು. ಆದರೆ ದುರ್ದೈವದಿಂದ ಜನರ ಉತ್ಸಾಹವೇ ಕಡಿಮೆಯಾಗಿದೆ—ವಿದ್ಯುಚ್ಛಕ್ತಿಯ ವೆಚ್ಚ ಮತ್ತದನ್ನು ಬಳಸಬಹುದಾದ ಸಲಕರಣೆಯನ್ನು ಕೊಂಡುಕೊಳ್ಳಲು ಬೇಕಾದ ಬಂಡವಾಳವಿಲ್ಲದ ದೆಸೆಯಿಂದ ನಮ್ಮ ರೈತರಲ್ಲಿ ಹೆಚ್ಚಿನವರು ಕ್ರಿಯಾಶೂನ್ಯರಾಗಿರಲೂ ಸಾಕು. ನಮ್ಮ ಸರಕಾರವು ಅಂಥವರಿಗೆಲ್ಲ ಸರ್ವ ವಿಧದ ಸಹಾಯವನ್ನು ಸಲ್ಲಿಸಬೇಕು. ಸಾವಿರ ರೂಪಾಯಿ ಬೆಲೆಯ ವಿದ್ಯುತ್ತಿನ ಪಂಪು ಸೆಟ್ಟನ್ನು ಒದಗಿಸುವುದು ಸಾಧ್ಯವಿಲ್ಲದಿದ್ದರೆ, ಕೇವಲ ಐವತ್ತು ರೂಪಾಯಿಯೊಳಗೆ ನಿರ್ಮಿಸಬಹುದಾದ ಶ್ರೀ ಮರಕ್ಕಿಣಿ ಭಟ್ಟರ ಪಂಪು ಸೆಟ್ಟನ್ನೇ ಉಪಯೋಗಿಸುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕು. ಹೀಗೆ ಜನರ ಸಾಹಸ ಪ್ರವೃತ್ತಿಯೊಡನೆ ಸರಕಾರಿ ಸೌಲಭ್ಯಗಳೂ ಸಹಕಾರವಿತ್ತರೆ ಮಾತ್ರ ನಾವು ನಾಡಿನ ಅಭಿವೃದ್ಧಿಗೆ ವೇಗವನ್ನು ಹೆಚ್ಚಿಸಬಹುದು. ಇದನ್ನು ಸರಕಾರದ ಧುರೀಣರು ಸಹ ತಿಳಿದುಕೊಂಡು ವ್ಯವಸಾಯಾಭಿವೃದ್ಧಿಗೆ ಎಲ್ಲ ರೀತಿಯಿಂದಲೂ ತಮ್ಮ ನೆರವಿನ ಹಸ್ತವನ್ನು ಮುನ್ನೀಡುತ್ತಿರಬೇಕೆಂದೂ ಜನರು ಇಂಥ ಹಸ್ತಾಂದೋಲನದ ಯಾವುದೇ ಅವಕಾಶವನ್ನು ವ್ಯರ್ಥ ಹೋಗಗೊಡಬಾರದೆಂದೂ ಸೂಚಿಸಲು ಇಚ್ಛಿಸುತ್ತೇವೆ.

## ಅರಿಯಲೂರಿನ ದುರಂತ
## ರೈಲ್ವೆ ಮಂತ್ರಿಗಳ ರಾಜಿಪತ್ರ

ಮೊನ್ನೆ ೨೩ನೇ ದಿನಾಂಕ ತಮಿಳು ನಾಡಿನ ಅರಿಯಲೂರು ಬಳಿಯಲ್ಲಿ ಸೇತುವೆಯೊಂದರ ಕುಸಿತದಿಂದಾಗಿ ತೂತುಕುಡಿ ಎಕ್ಸ್‌ಪ್ರೆಸ್ ರೈಲಿನ ಇಂಜಿನು ಹಾಗು ಏಳು ಬಂಡಿಗಳು ಅಪಘಾತಕ್ಕೆ ಗುರಿಯಾದವು. ಇದರಿಂದ ಮರಣಹೊಂದವರ ಸಂಖ್ಯೆಯು ೧೫೦ರ ಹತ್ತಿರವಿದೆ. ನೂರಾರು ಮಂದಿಗೆ ತೀವ್ರ ಜಖಮಾಗಿದೆ.

### ಭೀಕರ ದುರಂತ

ಹೈದರಾಬಾದಿನಲ್ಲಿ ಈಚೆಗೆ ನಡೆದ ಮೆಹಬೂಬ್ ನಗರದ ದುರಂತದ ಬಳಿಕ ಈ ಅಪಘಾತ ಸಂಭವಿಸಿದೆ; ಮತ್ತು ಇದು ಬಹಳ ಹೆಚ್ಚಿನ ಪ್ರಾಣಹಾನಿಯಲ್ಲಿ ಪರಿಣಮಿಸಿದೆ. ಸೇತುವೆಯ ಅಡಿಯಲ್ಲಿ ಪ್ರವಹಿಸುತ್ತಿದ್ದ ಹೊಳೆಯಲ್ಲಿ ನೆರೆ ಬಂದಿತ್ತೆಂದೂ ಸೇತುವೆಯು ಪ್ರಾರಂಭವಾಗುವ ದಂಡೆಯನ್ನು ಅದು ಕೊರೆದು ನಾಶಪಡಿಸಿತ್ತೆಂದೂ ವಾಸ್ತವವಾಗಿ ರೈಲು ಕಂಬಿಗಳಲ್ಲದೆ ಅಡಿಯಲ್ಲಿ ಬೇರೆ ಯಾವುದೇ ಆಧಾರವು ಕೆಲವು ಅಡಿಗಳ ವರೆಗೆ ಇಲ್ಲದುದರಿಂದಲೇ ರೈಲು ಅಪಘಾತಕ್ಕೆ ಗುರಿಯಾಯಿತೆಂದೂ ಹೇಳಲಾಗಿದೆ.

### ಶಾಸ್ತ್ರಿಗಳ ರಾಜಿಪತ್ರ

ಎಲ್ಲ ರೀತಿಯ ಸಹಾಯವನ್ನೂ ಸಂತ್ರಸ್ತರಿಗೆ ಕೊಡಲು ವ್ಯವಸ್ಥೆ ನಡೆದಿದೆ. ಎಲ್ಲರೂ ಶೋಕಾಶ್ರುಗಳನ್ನು ಸುರಿಸಿದ್ದಾರೆ ಪಾರ್ಲಿಮೆಂಟಿನಲ್ಲಿ ತೀವ್ರ ಸಂತಾಪವು ವ್ಯಕ್ತಗೊಳಿಸಲ್ಪಟ್ಟಿದೆ ರೈಲ್ವೆ ಮಂತ್ರಿಗಳಾದ ಶ್ರೀ ಲಾಲಬಹದೂರ ಶಾಸ್ತ್ರಿಯವರು ತನ್ನ ಮನಸ್ಸಾಕ್ಷಿಯು ಇನ್ನೂ ರೈಲ್ವೆ ಮಂತ್ರಿಯಾಗಿರುವುದಕ್ಕೆ ಒಪ್ಪದೆಂದು ಹೇಳಿ, ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಪ್ರಧಾನಿ ನೆಹರುಗಳು ಅದನ್ನು ಸ್ವೀಕರಿಸುವಂತೆ ರಾಷ್ಟ್ರಾಧ್ಯಕ್ಷರಿಗೆ ತಾನು ಶಿಫಾರಸು ಮಾಡುವೆನೆಂದು ತಿಳಿಸಿದ್ದಾರೆ.

### ಆಕ್ರಮಣಕಾರರ ನಿಷ್ಕ್ರಮಣ

ಸುಯೇಜಿನ ಕಾಲುವೆ ಕ್ಷೇತ್ರದಿಂದ ವಿದೇಶಿ ಸೈನ್ಯಗಳು ಹೊರಡಬೇಕೆಂಬ ಸಂಯುಕ್ತ ರಾಷ್ಟ್ರ ಸಂಘದ ಆದೇಶಕ್ಕೆ ಬೆಲೆ ಬಂದಂತಿಲ್ಲ. ಎಲ್ಲೋ ಒಂದೆರಡು ದಳಗಳು ಮಾತ್ರ ಕಾಲ್ತೆಗೆದಿವೆ. ಇದು ಸಂಯುಕ್ತ ರಾಷ್ಟ್ರ ಸಂಘದ ಮೇಲೆ ತಮಗಿರುವ ಗೌರವದ ದ್ಯೋತಕವೆಂದು ಬ್ರಿಟನ್ ಮತ್ತು ಫ್ರಾನ್ಸ್ ಹೇಳುತ್ತವೆ. ಸೇನೆಯ ಈ ತುಣುಕುಗಳಾದರೂ ಹೋದುದು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಗಳ ಗದರಿಕೆಯ ಪತ್ರ ಬಂದ ಬಳಿಕ.



## ಬೆಂಗಳೂರು

**ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು—** ಮೈಸೂರಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳಿಗೆ ಇನ್ನೂ ವಸತಿ ಸೌಕರ್ಯವನ್ನು ಚಿಕಿತ್ಸಾ ಶಿಕ್ಷಣಕ್ಕಾಗಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗುವುದೆಂದು ತಾ. 24ರಲ್ಲು ಪತ್ರಿಕಾ ಪ್ರತಿನಿಧಿಗಳಿಗಿತ್ತ ಸಂದರ್ಶನದಲ್ಲಿ ಹೇಳಿದರು. ಪ್ರಸ್ತುತ ಈ ಕಾಲೇಜಿನಲ್ಲಿರುವ 240 ಮಂದಿ ವಿದ್ಯಾರ್ಥಿಗಳಿಗೆ ಚಿಕಿತ್ಸಾ ತರಬೇತಿಯನ್ನು ಕೊಡುವರೆ ಇರುವ ಆಸ್ಪತ್ರೆಯಲ್ಲಿರುವ 36 ಹಾಸಿಗೆಗಳನ್ನು 100ಕ್ಕೆ ಏರಿಸಲಾಗುವುದು ಮಾತ್ರವಲ್ಲದೆ ಈ ವಿದ್ಯಾರ್ಥಿಗಳಿಗೆ ಮಂಡ್ಯದ ಆಸ್ಪತ್ರೆಯಲ್ಲಿಯೂ ಚಿಕಿತ್ಸಾ ತರಬೇತಿಯ ವ್ಯವಸ್ಥೆ ಮಾಡಲಾಗುವುದು. ಅದರನಂತರ ಸೇರಿ ಕೆಲವು ಕಟ್ಟಡಗಳನ್ನು ವಿದ್ಯಾರ್ಥಿಗಳ ವಸತಿಗಾಗಿ ಉಪಯೋಗಿಸಲಾಗುವುದೆಂದೂ ತಿಳಿಸಿದರು. ಮೈಸೂರಿನಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬೆಂಗಳೂರಿಗೆ ಸ್ಥಳಾಂತರಿಸುವ ಆಲೋಚನೆಗೆ ಸರಕಾರಕ್ಕೆ ಸಮ್ಮತ ಇಲ್ಲವೆಂದೂ ಶ್ರೀ ಶೆಟ್ಟರು ಸ್ಪಷ್ಟಪಡಿಸಿದರು.

**ಬೆಂಗಳೂರಲ್ಲಿ ಡಾ| ಟಿ. ಎಮ್. ಎ. ಪೈಗಳಿಗೆ ಸತ್ಕಾರ** ಬೆಂಗಳೂರಿನ ...ಲ್ ಬಾಗಿನ ಗಾಜಿನ ಮನೆಯಲ್ಲಿ ತಾ. 24ರ ಸಂಜೆ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಅಧ್ಯಕ್ಷ ಡಾ. ಟಿ. ಎಮ್. ಎ. ಪೈಗಳಿಗೆ ಸತ್ಕಾರ ಸಮಾರಂಭವೊಂದು ನಡೆಯಿತು. ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿ, ಶ್ರೀ ಬಿ. ಡಿ. ಪಾಟೀಲ್ ಶ್ರೀ ಜಗನ್ನಾಥರಾವ್ ಚಂಡ್ರಿಕಿ ಮತ್ತು ಶ್ರೀ ಎಚ್. ಎಂ. ರುದ್ರಪ್ಪ ಹಾಗೂ ನಗರದ ಅಧಿಕಾರಿ ಮತ್ತು ಅನಧಿಕಾರಿ ಪ್ರಮುಖರನೇಕರು ಉಪಸ್ಥಿತರಿದ್ದರು. ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸಭಾಧ್ಯಕ್ಷತೆವಹಿಸಿದ್ದರು ಆರಂಭದಲ್ಲಿ ಶ್ರೀ ಬಿಳಿಗಿರಿ ರಾಮಚಂದ್ರ ರಾಯರು ಸ್ವಾಗತಭಾಷಣಮಾಡಿದರು. ಬೇಂಕಿಂಗ್, ಕೈಗಾರಿಕೆ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಮಹತ್ಕಾರ್ಯಗಳನ್ನು ಸಾಧಿಸಿದ ಡಾ ಪೈಯಂತಹ ಸಾಹಸಿಗಳು ನ. ಕ. ಜಿಲ್ಲೆಯಲ್ಲಿರುವರು. ಇವರೆಲ್ಲರ ಸಹಾಯದಿಂದ ಈ ರಾಜ್ಯವನ್ನು ಆದರ್ಶವಾಗಿ ಮಾಡಲು ಸಾಧ್ಯವಿದೆಯೆಂದು ಅಧ್ಯಕ್ಷರು ಹೇಳಿದರು.

ಪೈಗಳು, ತಮ್ಮ ಬೇಂಕು ಸರಕಾರದೊಂದಿಗೆ ಪೂರ್ಣ ಸಹಕರಿಸುವುದಾಗಿ ಆಶ್ವಾಸನೆಯಿತ್ತರು. ಡಾ. ಪೈಗಳಿಗೆ ಇನ್ನೂ ಹಲವು ಸತ್ಕಾರಕೂಟಗಳಾದುವು.

**ಬಿಜಾಪುರ—** ಕರ್ನಾಟಕ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ. ಟಿ. ಎಮ್. ಪೈಗಳಿಗೆ ಬಿಜಾಪುರ ನಗರಸಭೆಯವರು ಮಾನಪತ್ರವಿತ್ತು ಗೌರವಿಸಿದರು ಮಾನಪತ್ರದಲ್ಲಿ ಡಾ. ಪೈಗಳ ಬಹುಮುಖ ಸೇವಾ ಮನೋವೃತ್ತಿಯನ್ನು ಸೂಚಿಸಲಾಗಿತ್ತು.

---

### ಒತ್ತಾಯದ ಗೊತ್ತುವಳಿ

ಆದುದರಿಂದ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಆಫ್ರೋ ಏಷ್ಯಾ ರಾಷ್ಟ್ರಗಳು ಗೊತ್ತುವಳಿಯೊಂದನ್ನು ಮಂಡಿಸಿ, ಪುನಃ ವಿದೇಶಿ ಸೈನ್ಯಗಳ ಹಿಂತೆಗೆತಕ್ಕಾಗಿ ಒತ್ತಾಯವನ್ನು ಹೇರಿವೆ. ಅಮೇರಿಕವು ಸಹ ಈ ಗೊತ್ತುವಳಿಯನ್ನು ಬೆಂಬಲಿಸಿದೆ. ಇದಕ್ಕಾದರೂ ಬ್ರಿಟನ್—ಫ್ರಾನ್ಸ್—ಇಸ್ರೇಲ್ ದೇಶಗಳು ಗೌರವ ಕೊಡುವವೇ? ಕೊಡದಿದ್ದರೆ ಸಂಯುಕ್ತ ರಾಷ್ಟ್ರ ಸಂಘದ ಪೋಲೀಸ್ ಪಡೆಯು ಯಾವ ಕಾರ್ಯಾಚರಣೆ ನಡೆಸಬಹುದು?—ಎಂಬಿತ್ಯಾದಿ ವಿಚಾರಗಳು ಶಾಂತಿ ಕಾರ್ಯದರ್ಶಿಯವರ ಎಲ್ಲ ಸಮಯವನ್ನೂ ನುಂಗಿರುತ್ತವೆ.

---

## ಉಡುಪಿ

**ಮುನಿಸಿಪಲ್ ಕೌನ್ಸಿಲಿನ ಸಭೆಯು—** ತಾ. 24ರಲ್ಲಿ ಸಂಜೆ ಚೇರ್‌ಮೆನ್ ಶ್ರೀ. ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮಕರ ಸಂಕ್ರಾಂತಿ ಜಾತ್ರೆಯ ವೇಳೆ ಆರೋಗ್ಯ ಸಂರಕ್ಷಣ ಸಿದ್ಧತೆಗಾಗಿ ರೂಪಾಯಿ 1200/- ಮಂಜೂರುಮಾಡಲಾಯಿತು. ನಗರದಲ್ಲಿ ಮಕ್ಕಳ ಮರಣ ಸಂಖ್ಯೆಯನ್ನು ಕಡಿಮೆಮಾಡಲು ತಕ್ಕ ಕಾರ್ಯಕ್ರಮ ಕೈಕೊಂಡು ಆ ಕುರಿತು ಮೂರು ತಿಂಗಳಿಗೊಮ್ಮೆ ಕೌನ್ಸಿಲಿಗೆ ವರದಿಮಾಡುವಂತೆ ಮುನಿಸಿಪಲ್ ಹೆಲ್ತ್ ಆಫೀಸರರನ್ನು ಕೇಳಿಕೊಳ್ಳಬೇಕೆನ್ನುವ ನಿರ್ಣಯ ಮಂಜೂರಾದುವು. ಮುನಿಸಿಪಲ್ ಶಾಲೆಗಳಲ್ಲಿ ವಿಶೇಷವಾಗಿ ಮಕ್ಕಳನ್ನು ಸೇರಿಸಿಕೊಂಡು ಆ ಬಗ್ಗೆ ಹೆಚ್ಚಿನ ಉಪಾಧ್ಯಾಯರನ್ನು ಅಪೇಕ್ಷಿಸುವುದರ ಬದಲಾಗಿ, ಜಾಸ್ತಿ ಮಕ್ಕಳನ್ನು ಸೇರಿಸಿಕೊಳ್ಳುವ ಮೊದಲೇ ಕೌನ್ಸಿಲಿನ ಅಪ್ಪಣೆ ಪಡಕೊಳ್ಳಬೇಕೆಂದು ಎಲ್ಲಾ ಮುನಿಸಿಪಲ್ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ತಿಳಿಸಬೇಕೆನ್ನುವ ಡಾ. ಪಿ. ಜಿ. ಆಚಾರ್ಯರ ಠರಾವು ಪಾಸಾಯಿತು.

**ಪರೀಕ್ಷಾ ಫಲಿತಾಂಶ—** ಸೂರತ್ತಿನ ಅ. ಭಾ. ಸಂಸ್ಕೃತ ಭಾಷಾ ಪ್ರಚಾರ ಸಮಿತಿಯ ಪ್ರಾರಂಭಿಕ ಪ್ರವೇಶಿಕಾ ಮತ್ತು ಪರಿಚಯ ಪರೀಕ್ಷೆಗೆ ಅಂಬಲಪಾಡಿ ಗೀತಾ ಭವನದಿಂದ ಕುಳಿತ19ಮಂದಿವಿದ್ಯಾರ್ಥಿಗಳುಎಲ್ಲರೂ ಪಾಸಾಗಿರುತ್ತಾರೆ. ಇವರಲ್ಲಿ 10 ಮಂದಿ ಪ್ರಥಮ ಶ್ರೇಣಿಯಲ್ಲೂ ಇಬ್ಬರು ವಿಶೇಷ ಯೋಗ್ಯತಾ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಮುಂದಿನ ಫೆಬ್ರವರಿ ತಿಂಗಳಲ್ಲಿ ನಡೆಯುವ ಪರೀಕ್ಷೆಗೆ ಕುಳಿತುಕೊಳ್ಳಲಪೇಕ್ಷಿಸುವ ಪರೀಕ್ಷಾರ್ಥಿಗಳು ಗೀತಾಭವನದಿಂದ ಹೆಚ್ಚಿನ ಮಾಹಿತಿ ಪಡೆಯಬಹುದು.

**ಬೋರ್ಡ್ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಸಭೆಯು-** ತಾ. 17ರಲ್ಲಿ ಶ್ರೀ ಎಮ್. ಎಮ್. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಈ ಜಿಲ್ಲೆಯ ಬೋರ್ಡ್ ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಸಂಬಳ ಮತ್ತು ತುಟ್ಟಿ ಭತ್ತೆಯನ್ನು ಹೆಚ್ಚಿಸಬೇಕೆಂದು ಮೈಸೂರು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು ಏಕರೂಪದ ಸಂಬಳ ಮತ್ತು ತುಟ್ಟಿ ಭತ್ತೆ ದರ ನಿರ್ಣಯವಾಗುವ ತನಕ ಈ ಜಿಲ್ಲೆಯ ಬೋರ್ಡ್ ಶಾಲಾಧ್ಯಾಪಕರಿಗೆ ತಾತ್ಕಾಲಿಕ ಪರಿಹಾರ ಧನ ಸಿಕ್ಕಬೇಕು ಎಂದು ಕೂಡಾ ಕೇಳಿಕೊಳ್ಳುವ ನಿರ್ಣಯವಾಯಿತು.

**ಎರಡು ನಾಟಕಗಳು—** ಉಡುಪಿಯ ಎಮ್ ಜಿ. ಎಮ್. ಕಾಲೇಜಿನ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ತಮ್ಮ ಕಾಲೇಜಿನ ಸಮಾಜಸೇವಾ ಸಂಘದ ಸೇವಾಕ್ಷೇತ್ರವನ್ನು ವಿಸ್ತರಿಸುವ ಸಲುವಾಗಿ ಸ್ಥಳೀಯ ಪುರಭವನ ಕಲಾಮಂದಿರದಲ್ಲಿ ದಿನಾಂಕ ೨೪ರಂದು ರಾತ್ರಿ ೯-೩೦ಕ್ಕೆ ಸರಿಯಾಗಿ ಎರಡು ಸಹಾಯಾರ್ಥ ನಾಟಕಗಳನ್ನು ಪ್ರದರ್ಶಿಸಿದರು.

ಆಂಗ್ಲರ ಉತ್ತಮವಾದ ನಾಟಕಗಳಲ್ಲಿ ಒಂದಾದ Capek and Carel ರವರು ಬರೆದ "Adam, the creator"—ನ ಆಧಾರದ ಮೇಲೆ ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ ಹಾಗೂ ಎಚ್. ಕೆ. ರಾಮಚಂದ್ರಮೂರ್ತಿಗಳು ಬರೆದ "ವಿಶ್ವಾಮಿತ್ರ ಸೃಷ್ಟಿ"ಯೇ ಎರಡು ನಾಟಕಗಳಲ್ಲಿ ಒಂದಾಗಿತ್ತು. ಕನ್ನಡದಲ್ಲಿ ಇದೊಂದು ಹೊಸ, ಅಭೂತಪೂರ್ವ ಪೌರಾಣಿಕ ನಾಟಕ ಇದರಲ್ಲಿ ವಿಶ್ವಾಮಿತ್ರನಾಗಿ ಶ್ರೀ ಕು. ಶಿ. ಹರಿದಾಸ್ ಭಟ್ಟ ಹಾಗೂ ಲಲಿತಾಂಗಿಯಾಗಿ ಶ್ರೀ ಎಲ್. ಸಿ. ಸೋನ್ಸ ಉತ್ತಮ ಅಭಿನಯವನ್ನಿತ್ತಿದ್ದರು. ಉಳಿದವರಾದ ಅತ್ಮಸಾಕ್ಷಿ (ಶೇಷಗಿರಿ ಪ್ರಭು), ರೂಪಸಿ (ರಾಮಚಂದ್ರ ಮೂರ್ತಿ), ಗಾಮಸೇನ (ರಾಮ ಭಟ್ಟ) ಹಾಗೂ ತೇಜಸ್ವಿನಿ (ರಾಮದಾಸ್) ಯವರು ತಮ್ಮ ಪಾತ್ರಗಳನ್ನು ಯೋಗ್ಯ ರೀತಿಯಿಂದಲೇ ನಿರ್ವಹಿಸಿದ್ದರು.

ಎರಡನೇ ನಾಟಕವೇ ಕೈಲಾಸ; ಪುರುಷೋತ್ತಮ ಮತ್ತು ಜಯಸಿಂಹ (ಕೈ. ಪು. ಸಿದ್ಧ)

---

## ಭಾರತದ ಟೀಕಾಕಾರ

ಬ್ರಿಟನಿನ ಪ್ರಧಾನಿ ಈಡನ್ನರಿಗೆ ಅಸೌಖ್ಯವಾಗಿದೆ. ತನ್ನ ಆರೋಗ್ಯ ಸುಧಾರಿಸಿಕೊಳ್ಳಲಿಕ್ಕಾಗಿ ಅವರು ಜಮೈಕದ ಬಿಸಿಲು ಪ್ರದೇಶಕ್ಕೆ ಪ್ರಯಾಣವನ್ನು ಬೆಳೆಸಿದ್ದಾರೆ.

ಸುಯೇಜಿನ ಸಮಸ್ಯೆಯನ್ನು ಇದಿರಿಸುತ್ತಿರುವ ಬ್ರಿಟಿಷ್ ಸರಕಾರವು ಶ್ರೀ ಆರ್. ಎ. ಬಟ್ಲರ್‌ರ ಹೆಗಲಮೇಲೆ ಈಗ ಭಾರವನ್ನು

ಹಾಕಿದೆ. ಶ್ರೀಯುತರು ಈಡನ್ನರಅಸ್ವಾಸ್ಥ್ಯದ ಅವಧಿಯಲ್ಲಿ ಸರಕಾರದ ಸೂತ್ರಚಾಲನೆಯನ್ನು ಮಾಡುತ್ತಾರೆ.

ತನ್ನ ಸರಕಾರವು ಸುಯೇಜಿನಲ್ಲಿ ಮಾಡಿದುದಕ್ಕೆಂದೂ ನಾಚಿಕೊಳ್ಳಲಾರದು; ಅಥವಾ ಕ್ಷಮೆ ಕೇಳಲಾರದೆಂದು ಖಂಡಿತವಾಗಿ ಈಡನ್ನರು ಹೇಳುವಂತೆ ಪ್ರೇರೇಪಿಸಿದ ವ್ಯಕ್ತಿಯೇ ಬಟ್ಲರ್. ಬ್ರಿಟಿಷ್ ಸೇನೆಗಳು ಪೋರ್ಟ್ ಸೈದ್ ಪ್ರದೇಶದಲ್ಲಿ ಉಳಿಯುವುದರ ಕಾರಣವು ಸಂಯುಕ್ತ ರಾಷ್ಟ್ರಸಂಘದ ಸೇನೆಗಳು ಅಪೇಕ್ಷಿತ ಯೋಗ್ಯತೆಯಿಂದ ಕೂಡಿಲ್ಲವೆಂಬುದೊಂದೇ ಎಂದೀಗ ಬಟ್ಲರ್ ಸುದಿ ಗುಂಡನ್ನು ಹಾರಿಸಿದ್ದಾರೆ.

"ಸಂಯುಕ್ತ ರಾಷ್ಟ್ರಸಂಘದ ಪರಿಣಾಮಕಾರಿ ಬಲ"ವೆಂದು ಬ್ರಿಟನು ಹೇಳುತ್ತಿದ್ದುದರೆ, "ನೈತಿಕವಾಗಿ ಇಚ್ಛಿತ ಫಲ"ವನ್ನು ಪಡೆಯುವಷ್ಟು ಶಕ್ತಿಸಂಪನ್ನವಾದ ಬಲವೆಂದೇ ಅಭಿಪ್ರಾಯ. ಈಗಿನ ಸಂಯುಕ್ತ ರಾಷ್ಟ್ರಸಂಘದ ಪೋಲೀಸು ಪಡೆಯು ಅಷ್ಟು "ನೈತಿಕ" ಶಕ್ತಿಯನ್ನು ಪಡೆದಿಲ್ಲ ಎಂದು ಬಟ್ಲರ್ ಹೇಳ ತೊಡಗಿದ್ದಾರೆ.

ಇಜಿಪ್ಟಿನ ಮೇಲೆ ತೀರ ಅನೈತಿಕವಾದ ರೀತಿಯಲ್ಲಿ, ಸ್ವೇಚ್ಛೆಯೂ ಸ್ವಾತಂತ್ರ್ಯವೂ ಪ್ರಜಾಸತ್ತೆಯ ಹಾಗೂ ರಾಷ್ಟ್ರೀಯತೆಯ ಉಚ್ಚ ಸಂಪ್ರದಾಯಕ್ಕೆ ಕಳಂಕಪ್ರಾಯವೂ ಆದ ರೀತಿಯಲ್ಲಿ ಆಕ್ರಮಣ ಮಾಡಿದ ಬ್ರಿಟನ್ ಈಗ 'ನೀತಿ'ಯ ಕುರಿತು ಹೇಗೆ ನಾಲಿಗೆ ತಿರುಗಿಸುತ್ತದೆ, ನೋಡಿರಿ!

ಈ ಸಡಿಲ ನಾಲಿಗೆಯು ಭಾರತವನ್ನು ನಿಂದಿಸುವ ವರೆಗೂ ಮುಂದೆ ಚಾಚಿರುವುದು ಗಮನಿಸತಕ್ಕ ವಿಷಯ ಬ್ರಿಟನಿಗೂ ಭಾರತಕ್ಕೂ ಇರುವ ವ್ಯತ್ಯಾಸ ಮನೋಭಾವನೆಗಾಗಿ ನಾನು ದುಃಖಿಸುತ್ತೇನೆ. ಆದರೆ ಭಾರತ ಸರಕಾರವು ಆಧುನಿಕ ಜಗತ್ತಿನ ವಾಸ್ತವಿಕತೆಯ ವಿಷಯದಲ್ಲಿ ತುಸು ಹೆಚ್ಚು ವಾಸ್ತವ ಜ್ಞಾನವನ್ನು ಸಂಪಾದಿಸಿದರೆ ಒಳ್ಳೆಯದು ಎನ್ನುತ್ತೇನೆ' ಎನ್ನುವಂತಹ ಬಟ್ಲರ್ ನಿಜಕ್ಕೂ ಎದೆಗಾರ!

ವಾಸ್ತವಿಕತೆಯ ಪರಿಶೋಧನೆ ಬ್ರಿಟನವು ಪ್ರಜಾಪ್ರಭುತ್ವವಾದಿಗಳಲ್ಲ-ಸಾಮ್ರಾಜ್ಯಶಾಹಿಗಳು; ಶಾಂತಿ ಪ್ರಿಯರಲ್ಲ ಶಾಂತಿ ಭಂಜಕರು ಎನ್ನುತ್ತದೆ. ಬಟ್ಲರ್ ಮಾತ್ರ ಅದುವಾಸ್ತವವಲ್ಲ ಎನ್ನುತ್ತಾರೆ! ಆದರೆ ಲೋಕಕ್ಕೆ ಗೊತ್ತಿದೆ —ಮೂಢರು ಯಾರು ಎಂದು.

---

ಈ ಮೂರು ತಲೆಗಳು ಒಟ್ಟು ಸೇರಿ ರಚಿಸಿದ ಸಾಮಾಜಿಕ ನಾಟಕವಾದ "ರತ್ನ ಹುಟ್ಟಿದ್ದಂದು" ಇಂದಿನ ಕಾಲಕ್ಕೆ ಒಪ್ಪುವ, ಸರಳವಾದ ಶೈಲಿಯಲ್ಲಿ ಬರೆಯಲ್ಪಟ್ಟಿ ಈ ನಾಟಕವು ಪ್ರೇಕ್ಷಕರಿಗೆ ನಿಜವಾದ ಮನರಂಜನೆಯನ್ನು ಒದಗಿಸಿತ್ತು. ಹಾಸ್ಯಪೂರ್ಣವಾದ ಈ ನಾಟಕದಲ್ಲಿ ಅಜ್ಜ (ಗಂಗಾಧರ ಶೇರ), ಚಕ್ರಪಾಣಿ (ನಾಗೇಶ ಶೆಣೈ), ಜಾನಕಮ್ಮ (ಲಕ್ಷ್ಮೀನಾರಾಯಣಾಚಾರ್ಯ) ನವರು ಜನರ ಮೆಚ್ಚುಗೆಗಳಿಸಿದರು. ಉಳಿದವರಾದ ರತ್ನ (ಕಮಲಾಕ್ಷ ಸಾಮಂತ), ರಾಜ (ಮೋಹನ ರಾವ್), ನಾರಾಯಣ ರಾಯ (ಕೃಷ್ಣಭಟ್) ಹಾಗೂ ಗೋಪಿ (ರಮೇಶ್) ಇವರು ಪೋಷಕರಾಗಿ ತಮ್ಮ ಪಾತ್ರಗಳನ್ನು ಉತ್ತಮವಾಗಿಯೇ ಸಾಗಿಸಿದ್ದರು.

ಟಿಕೇಟುಗಳ ಮಾರಾಟದಿಂದ ಸುಮಾರ್ ರೂ. ೧೫೦೦/- ದಷ್ಟು ಹಣ ಸಂಗ್ರಹವಾಗಿದೆಯೆಂದ ಮೇಲೆ ಉಡುಪಿಯ ಜನತೆ ತನ್ನಿಂದಾದ ಸಹಾಯವನ್ನು ನೀಡಿದೆಯೆಂದು ಹೇಳಬಹುದು.

---

**ಲೇಖಕರೊಡನೆ—**

**"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸ ಬೇಕಾಗಿ ವಿನಂತಿ.**

—ಸಂ. ನ.

---


# ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

**ನವಯುಗ ಪ್ರೆಸ್, ಉಡುಪಿ.**



**ಕೆಲವು ಉತ್ತಮ ಪುಸ್ತಕಗಳು.**

| | | | |
|---|---|---|---|
| ಬದುಕುಬಂಗಾರ | (ಕುಮಾರಸ್ವಾಮಿ) | 1 | 8 |
| ಯುಗವಾಣಿ | (ಕು. ಶಿ. ಹರಿದಾಸಭಟ್) | 0 | 8 |
| ಘಂಟಮಾಲಾ | ( ,, ) | 2 | 0 |
| ಏಶಿಯದ ಸಂಪತ್ತು | ( ,, ) | 2 | 0 |
| ಅಂತರಂಗದ ಕತೆಗಳು | (ಸಂಕಲನ) | 1 | 4 |
| ಸ್ವಪ್ನಲೋಕ | (ಕಾರ್ತಿಕೇಯ) | 0 | 8 |
| ನೀತಿವಿನೋದ ಕತೆಗಳು | | 0 | 12 |
| ಸೇವಾಪಥ | (ಸೇಟ್ ಗೋವಿಂದದಾಸ್) | 0 | 8 |
| ಸರಸ್ವತಿ | (ಡಾ| ಎಂ. ಮಾಧವಾಚಾರ್ಯ) | 0 | 12 |
| ಗೀತೆಯ ಕೈಗನ್ನಡಿ | (ಚಿದಂಬರಯ್ಯ) | 0 | 12 |
| ಭಾರತದ ಕರ್ಣ | ಎಸ್. ಎಸ್. ಶಿಲ್ಲೆ | 0 | 6 |
| ಪ್ರಾಚೀನ ತುಳುನಾಡು | ( ,, ) | 2 | 0 |
| ಮುರಲಿ | ( ,, ) | 0 | 13 |
| ಮಧುವನ | (ಸಂಕಲನ) | 3 | 0 |
| ಕಾವ್ಯಸಾಮ್ರಾಜ್ಯ | ( ,, ) | 1 | 8 |
| ವನಗಳ ಸಾಗಾಟ | (ಕಲ್ಕ ಹೇಟಿ) | 0 | 12 |
| ಕವಿತಾಕಾಮಿನಿ | (ಎಸ್. ವೆಂಕಟರಾಜ) | 2 | 8 |
| ಆಕಾಶಗಂಗೆ | | 1 | 10 |
| ಜೀವನ ಸಂಗ್ರಾಮ | (ಪಿ. ಶೀನ ಶೆಟ್ಟಿ) | 1 | 0 |
| ದೇಶಭಕ್ತ | (ಕೆ. ಕೆ. ಶೆಟ್ಟಿ) | 1 | 0 |
| ಪ್ರೇಮವಿಜಯ | ,, ) | 1 | 4 |

ಏಜಂಟರು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಇತರ ಕತೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

## ಸೋವಿಯೆಟಿನ ಬೇಸಾಯ

(೫ನೇ ಪುಟದಿಂದ)

ಕೃತವಾದ ವ್ಯವಸಾಯ ಸರಕಾರೀ ಸಂಘಗಳ ಆದರ್ಶ ನಿಯಮಗಳ ತಳಹದಿಯ ಮೇಲೆ ಇಂತಹ ಪ್ರತಿಯೊಂದು ವ್ಯವಸಾಯ ಕ್ಷೇತ್ರವೂ ತನ್ನ ನಿಯಮಗಳನ್ನು ರೂಪಿಸಿಕೊಳ್ಳುತ್ತದೆ. ಸಾಮೂಹಿಕ ಕೃಷಿ ಕ್ಷೇತ್ರ ಚಟ ವಟಿಕೆಯ ಇಡೀ ವ್ಯವಸ್ಥೆಯನ್ನು ವಿವರಿಸುವ ಈ ನಿಯಮಗಳು ಸಾಮೂಹಿಕ ಕೃಷಿ ಕ್ಷೇತ್ರದ ರೈತರ ವೈಯಕ್ತಿಕ ಸ್ವಂತ ಬೇಸಾಯದ ಅಳತೆಯ ಮಿತಿಯನ್ನು ಕೂಡ ನಿಗದಿಗೊಳಿಸುತ್ತವೆ.

ಕೃಷಿ ಕ್ಷೇತ್ರದ ವ್ಯವಹಾರಗಳು ಸಾಮೂಹಿಕ ಕೃಷಿ ಕ್ಷೇತ್ರದ ರೈತರ ಸಾಧಾರಣ ಸಭೆಯಿಂದ ನಿರ್ದೇಶಿಸಲ್ಪಡುತ್ತವೆ. ಈ ಸಭೆಗಳ ನಡುವಣ ಮಧ್ಯಂತರ ಕಾಲದಲ್ಲಿ ಅವು, ಕ್ಷೇತ್ರಾಧ್ಯಕ್ಷರ ನೇತೃತ್ವದಲ್ಲಿರುವ ಆಡಳಿತ ನಿರ್ವಾಹಕ ಮಂಡಲಿಯಿಂದ ನಿರ್ದೇಶಿಸಲ್ಪಡುತ್ತವೆ.

ಆಡಳಿತ ನಿರ್ವಾಹಕ ಮಂಡಲಿಯ ವಾರ್ಷಿಕ ವರದಿಯನ್ನೂ, ವರ್ಷದ ಉತ್ಪಾದನೆಯ ಯೋಜನೆಯನ್ನೂ ಮತ್ತು ಪ್ರತಿಯೊಂದು ಕಾರ್ಯಾಚರಣೆಯ ಪ್ರಮಾಣಗಳನ್ನೂ, ಕೆಲಸದ ದಿನದ ಪೂರ್ಣಾಂಕಗಳಲ್ಲಿ ಅದರ ಸಮಾನ ಮೌಲ್ಯವನ್ನೂ ಸಾಧಾರಣ ಸಭೆಯು ಅಂಗೀಕರಿಸುತ್ತದೆ. ಕ್ಷೇತ್ರದಲ್ಲಿ ಪುನಃ ಇನ್ನೂ ತೊಡಗಿಸುವುದರ ಸಲುವಾಗಿ ಎಷ್ಟು ಹಣವನ್ನು ವಿನಿಯೋಗಿಸಬೇಕೆಂಬುದನ್ನೂ, ಪ್ರತಿಯೊಂದು ಕೆಲಸದ ದಿನದ ಪೂರ್ಣಾಂಕಕ್ಕೆ—ನಗದಾಗಿಯೂ ಮತ್ತು ವಸ್ತುರೂಪದಲ್ಲಿಯೂ-ಕೊಡಬೇಕಾದ ಮೊತ್ತವನ್ನೂ ಕೂಡ ಅದು ನಿರ್ಣಯಿಸುತ್ತದೆ. ಕೃಷಿ ಕ್ಷೇತ್ರವು ತನ್ನ ನಗದು ವರಮಾನದಿಂದಲೇ ರಾಜ್ಯದ ತೆರಿಗೆಗಳನ್ನೂ ಮತ್ತು ವಿಮೆಯ ಕಂತುಗಳನ್ನೂ ಸಲ್ಲಿಸುತ್ತದೆ. ಅತ್ಯಾವಶ್ಯಕವಾದ ಪ್ರಚಲಿತ ಉತ್ಪಾದನಾವಶ್ಯಕತೆಗಳ ಸಲುವಾಗಿ ಅದು ಹಣ ಸಂದಾಯವನ್ನು ಮಾಡುತ್ತದೆ. ಮೇಲಿನ ವಿಶೇಷ ಖರ್ಚುಗಳನ್ನೂ (ಓವರ್ ಹೆಡ್ ಚಾರ್ಜೆಸ್) ಅದು ಸಲ್ಲಿಸುತ್ತದೆ. ಸಾಂಸ್ಕೃತಿಕ ಉದ್ದೇಶಗಳ ಸಲುವಾಗಿ ಹಣವನ್ನು ಪ್ರತ್ಯೇಕಿಸಿಡುತ್ತದೆ ಮತ್ತು ಕ್ಷೇತ್ರದ ಉಪಕರಣಗಳನ್ನೂ, ಪಶುಧನವನ್ನೂ ಕೊಳ್ಳುವುದಕ್ಕಾಗಿ, ನೂತನ ನಿರ್ಮಾಣ ಕಾರ್ಯಕ್ಕೆ ಹಣವನ್ನು ಒದಗಿಸುವುದರ ಸಲುವಾಗಿ ನಿಧಿಯನ್ನು ಶೇಖರಿಸಲು ಹಣವನ್ನು ಪ್ರತ್ಯೇಕಿಸಿಡುತ್ತದೆ. ಪಶು ಪೋಷಣೆಯಿಂದಲೂ, ಸುಗ್ಗಿಯಿಂದಲೂ ದೊರೆತ ಉತ್ಪಾದಿತ ವಸ್ತುಗಳಿಂದ ಸಾಮೂಹಿಕ ಕೃಷಿ ಕ್ಷೇತ್ರವು ರಾಜ್ಯಕ್ಕೆ ಕೊಡಬೇಕಾದುದೆಲ್ಲವನ್ನೂ ಸಲ್ಲಿಸುತ್ತದೆ, ಯಂತ್ರ ಮತ್ತು ಉಳುಮೆ ಯಂತ್ರ ನಿಲ್ದಾಣವು ಮಾಡಿದ ಕೆಲಸಕ್ಕಾಗಿ ಸಲ್ಲಿಸಬೇಕಾದುದನ್ನು ಸಂದಾಯ ಮಾಡುತ್ತದೆ, ಮತ್ತು ಸಾರ್ವಜನಿಕ ಸ್ವಾಮ್ಯದ ಆರ್ಥಿಕ ವ್ಯವಸ್ಥೆಯ ಇತೋಧಿಕ ಅಭಿವೃದ್ಧಿಯ ಸಲುವಾಗಿ ಅವಶ್ಯಕವಾದ ನಿಧಿಗಳನ್ನು (ಬೀಜದ ಕಾಳುಗಳು, ಮೇವು, ವಗೈರೆ) ಕೂಡಿಸಿಡುತ್ತದೆ.

ಸಾಮೂಹಿಕ ಕೃಷಿ ಕ್ಷೇತ್ರಗಳು ಉನ್ನತವಾದ ಕಾರ್ಯದಕ್ಷತೆಯುಳ್ಳವುಗಳೂ, ಸಮಗ್ರವಾಗಿ ಅಭಿವೃದ್ಧಿ ಹೊಂದಿದ, ವಿಭಿನ್ನ ರೂಪದ ಕ್ಷೇತ್ರವ್ಯವಸಾಯದ ಉದ್ಯಮಗಳೂ ಆಗಿವೆ. ಅವು ಮುಂದುವರಿದ ಕೃಷಿ ವಿಜ್ಞಾನ ಶಾಸ್ತ್ರದ ಅತ್ಯಾಧುನಿಕ ಮಹತ್ಸಾಧನೆಗಳನ್ನು ವಿಸ್ತೃತವಾಗಿ ಅನುವರ್ತಿಸುತ್ತವೆ, ಮತ್ತು ಒಂದು ಯೋಜನೆಗನುಗುಣವಾಗಿ ಕೆಲಸ ಮಾಡುತ್ತವೆ. ಎಲ್ಲಾ ಶ್ರಮಪೂರ್ಣವಾದ ಕೆಲಸ ಕಾರ್ಯಗಳೂ ಯಂತ್ರೀಕರಿಸಲ್ಪಟ್ಟಿವೆ. ರಾಜ್ಯದ ಯಂತ್ರ, ಉಳುಮೆ ಯಂತ್ರ ನಿಲ್ದಾಣಗಳು ಕಡಮೆಯ ದರಗಳಲ್ಲಿ ಬೆಳೆಗಳ ಸುಗ್ಗಿಯನ್ನು ಮಾಡಿಕೊಡುತ್ತವೆ.

ಸಾಮೂಹಿಕ ಕೃಷಿ ಕ್ಷೇತ್ರಗಳು ವ್ಯವಸಾಯದ ಉತ್ಪಾದನೆಯಲ್ಲಿ ಮಹತ್ತರವಾದ ಪ್ರಗತಿಯನ್ನು ಉಂಟುಮಾಡಿವೆ. ಮತ್ತು ರೈತರ ಜೀವನ ಪ್ರಮಾಣದಲ್ಲಿ ಆಮೂಲಾಗ್ರವಾದ ಸುಧಾರಣೆಗಳನ್ನುಂಟುಮಾಡಿವೆ.

ಯುದ್ಧೋತ್ತರ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯುಂಟಾಗಿದೆ. ೧೯೫೦ರಲ್ಲಿ ಪ್ರತಿಯೊಬ್ಬ ಕಾರ್ಯನಿರತ ರೈತನ ವಾಸ್ತವಿಕ ವರಮಾನವು ೧೯೪೦ರಲ್ಲಿ ಇದ್ದುದಕ್ಕಿಂತಲೂ ಶೇಕಡ ೬೦ರಷ್ಟು ಹೆಚ್ಚಾಗಿದ್ದಿತು; ೧೯೫೪ರಲ್ಲಿ ಇನ್ನೂ ಶೇಕಡ ೮೦ರಷ್ಟು, ೧೯೫೫ರಲ್ಲಿ ಮತ್ತೆ ಶೇಕಡ ೧೩ರಷ್ಟು, ಮತ್ತು ೧೯೫೬ರಲ್ಲಿ ಶೇಕಡ ೧೧ರಷ್ಟು ಇನ್ನೂ ಹೆಚ್ಚಾಗಿ ಬೆಳೆಯಿತು.

ಪಾಠ ಶಾಲೆಗಳ, ಕ್ರೀಡಾಮಂದಿರಗಳ ಮತ್ತು ಶಿಶು ಪೋಷಣಾಲಯಗಳ ಒಂದು ವಿಸ್ತೃತ ಜಾಲಬಂಧವು ಸಾಮೂಹಿಕ ಕೃಷಿ ಕ್ಷೇತ್ರಗಳಲ್ಲಿ ನಿರ್ಮಿಸಲ್ಪಟ್ಟಿವೆ. ಸಾಂಸ್ಕೃತಿಕ ಮತ್ತು ಸೇವಾ ಸಂಸ್ಥೆಗಳ, ಸುಖ ವಸತಿಯ ವೈಯಕ್ತಿಕ ವಸತಿಗೃಹಗಳ ನಿರ್ಮಾಣ ಕಾರ್ಯವು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈಗ ಪ್ರಾರಂಭಿಸಲ್ಪಟ್ಟಿವೆ.

ಸಾಮೂಹಿಕ ಕೃಷಿ ಕ್ಷೇತ್ರ ಪಥವನ್ನು ಕೈಗೊಂಡು ಸೋವಿಯಟ್ ರೈತರು ಅಲ್ಪ ಕಾಲಾವಧಿಯಲ್ಲಿಯೇ ಗ್ರಾಮಾಂತರ ಪ್ರದೇಶದ, ಯುಗಾಂತರ ಕಾಲದ ಹಳೆಯ ಅವನತಿಯನ್ನು ತೊಡೆದು ಹಾಕಿದ್ದಾರೆ, ಮತ್ತು ಸುಖಮಯವಾದ, ಉಚ್ಛ್ರಾಯತೆಯ, ಸಾಂಸ್ಕೃತಿಕ ಜೀವನವನ್ನು ಸಾಧಿಸಿಕೊಳ್ಳುತ್ತಿದ್ದಾರೆ.

---

## ಎಲ್ಲೆಲ್ಲಿ ಏನೇನು?

**ಹೆಬ್ರಿ**— ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ಕುಷ್ಠರೋಗ ದಿನಾಚರಣೆಯು ತಾ. 17ರಲ್ಲು ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಏರ್ಪಡಿಸಲಾದ ಪ್ರದರ್ಶನವನ್ನು ಡಾ. ಯು. ಶೇಷಗಿರಿ ರಾಯರು ಉದ್ಘಾಟಿಸಿದರು. ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಬಿ. ಎನ್. ಕರ್ಕೇರ ಮತ್ತು ಶ್ರೀ ಎಚ್. ಸೀತಾರಾಮ ಸೆಟ್ಟಿಯವರು ಪ್ರದರ್ಶನದ ಕುರಿತು ಭಾಷಣವಿತ್ತರು. ಸಂಜೆ ಚಲಚಿತ್ರ ಪ್ರದರ್ಶನ ನಡೆಯಿತು.

**ಮೂಲ್ಕಿ**— ಇಲ್ಲಿಯ ಸಹಕಾರಿ ಕಟ್ಟಡ ಸಂಘದ ಸಭೆಯು ತಾ. 20ರಲ್ಲಿ ಡಾ. ಎಮ್. ಆರ್. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಾ. ಕೆ. ಶ್ಯಾಮ ಸೆಟ್ಟಿ ಡಾ. ಎಮ್. ಆರ್. ಸೆಟ್ಟಿ, ಸೀತಾರಾಮ ಡಿ. ಕಾಮತ್, ಎಮ್. ನಾರಾಯಣ ಡಿ. ಶೆಣೈ ಮತ್ತು ಎಮ್. ಆರ್. ಎಚ್. ಪೂಂಜರು ಡೈರೆಕ್ಟರರಾಗಿ ಆರಿಸಲ್ಪಟ್ಟರು. ಈ ಸಂಘದಿಂದ ಗೃಹನಿರ್ಮಾಣಕ್ಕೆ ರೂಪಾಯಿ 15,000 ತನಕ 20 ವರ್ಷದಲ್ಲಿ ಮರುಪಾವತಿಮಾಡುವ ಶರ್ತದ ಕಂತಿನಲ್ಲಿ ಕಡಿಮೆ ಬಡ್ಡಿಯಲ್ಲಿ ಸಾಲ ಮೂಲ್ಕಿ ಪಂಚಾಯತ ಕ್ಷೇತ್ರದೊಳಗಿನ ಸದಸ್ಯರಿಗೆ ದೊರೆಯುವುದು.

**ಪಟ್ಲ**— ಸ್ಥಳೀಯ ಲೋಕಮಾನ್ಯ ತಿಲಕ ಹಾ. ಎ. ಶಾಲೆಯಲ್ಲಿ ತಾ. 18 ರಂದು ತಿಲಕ ಶತಾಬ್ದಿ ದಿನಾಚರಣೆಯು, ಉಡುಪಿ ಉಪಾಧ್ಯಾಯರ ಸರಕಾರಿ ತರಬೇತಿ ಶಾಲಾಧ್ಯಾಪಕ ಶ್ರೀ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಎಮ್. ವಾಸುದೇವ ಭಟ್ಟರು ಸ್ವಾಗತಮಾತುಗಳನ್ನಾಡಿದರು. ಡಾ. ಯು. ಗಿರಿಧರ ರಾಯರು ಶಾಲಾಮಕ್ಕಳ ಹಸ್ತಪತ್ರಿಕೆ "ಬಾಲವಾಣಿ"ಯನ್ನು ಉದ್ಘಾಟಿಸಿದರು. ಶ್ರೀ ಎಚ್. ಸದಾಶಿವ ಹೆಗ್ಡೆಯವರು ಸಂದೇಶಗಳನ್ನೋದಿದರು. ಶ್ರೀಗಳಾದ ಎ. ಜೆ. ಆಳ್ವೆ, ಕೆ. ಬಿ. ರಾಮಕೃಷ್ಣರಾವ್, ಎಮ್. ಗೋವಿಂದ ಸೆಟ್ಟಿ, ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ನಂತರ ಸಂಗೀತ ಮೊದಲಾದ ಮನರಂಜನ ಕಾರ್ಯಕ್ರಮಗಳಾದುವು.

**ಅಲೆವೂರು**— ಭಂಡಾರ ಸೇವಕ ಸಮಾಜದ ವತಿಯಲ್ಲಿ ಶ್ರೀ ಕಲ್ಮಂಜೆ ಶ್ರೀನಿವಾಸ ಆಚಾರ್ಯರ ಮುಂದಾಳು ತನದಲ್ಲಿ ಆಲೆವೂರಿನಲ್ಲಿ ಕಟ್ಟಲ್ಪಟ್ಟಿರುವ ಬಸ್ ಸ್ಟಾಂಡಿನ ಉದ್ಘಾಟನೆಯನ್ನು ತಾ. 19ರಲ್ಲಿ ಶ್ರೀ ಪಿ. ಶ್ರೀಪತಿ ಆಚಾರ್ಯರು ನೆರವೇರಿಸಿದರು. ಡಾ| ಸುಂದರರಾಮ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ. ಎ. ಪೈ ಎಮ್. ಎಲ್. ಎ. ಗಳು. ಅತಿಥಿಗಳನ್ನು ಸ್ವಾಗತಿಸಿದರು. ಶ್ರೀಗಳಾದ ಕೆ. ರಂಗಣ್ಣ ಭಟ್ ಮತ್ತು ಅಲೆವೂರು ಸರ್ವೋತ್ತಮ ಕಿಣಿಯವರು ಕಾಲೋಚಿತಮಾತುಗಳನ್ನಾಡಿದರು. ಶ್ರೀ ಕೆ. ಶ್ರೀನಿವಾಸ ಆಚಾರ್ಯರಿಂದ ಉಪಹಾರ ಸತ್ಕಾರವಾಗಿ ಸಭೆ ಕೊನೆಗೊಂಡಿತು.

**ಶಿರ್ವ**— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ತಾ. 13ರಲ್ಲಿ ಶ್ರೀ ಎಸ್. ಎ. ಹೆಗ್ಡೆರ ಅಧ್ಯಕ್ಷತೆಯಲ್ಲಿ ಸೇರಿ, ಮೂಡೆಬೆಟ್ಟು ತೋಡಿಗೆ ಒಂದು ಕಾಲುಸಂಕ ನಿರ್ಮಿಸಬೇಕೆನ್ನುವ ಪಂಚಾಯತ ಬೋರ್ಡಿನಿಂದ ನಡೆಸಲ್ಪಡುವ ವಾಲಿಬಾಲ್ ಕೋರ್ಟಿಗೆ ಉಪಕರಣಗಳನ್ನು ಒದಗಿಸಿಕೊಡುವ, ರೇಡಿಯೋ ಕೇಳಲು ಜನತೆಗೆ ಸೀಟುಗಳ ವ್ಯವಸ್ಥೆ ಮಾಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಕಥೋಲಿಕ್ ಹಾ. ಎ. ಶಾಲಾ ಕಟ್ಟಡ ವಿಸ್ತರಣದ ಶಂಕುಸ್ಥಾಪನೆಯನ್ನು ತಾ. 25ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ನೆರವೇರಿಸಿದರು. ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಎಲ್. ಮೆಂಡೋನ್ಸರು ಸ್ವಾಗತಿಸಿದರು. ಶ್ರೀಗಳಾದ ಎಸ್. ಅಣ್ಣಯ್ಯ ಹೆಗ್ಡೆ ಮತ್ತು ವಕೀಲ್ ಪಿ. ವಿ. ಆಚಾರ್ಯರು ಭಾಷಣವಿತ್ತರು.

**ಪಡುಬಿದ್ರೆ**— ನಡ್ಸಾಲು ಬೀಡಿನ ಕೆರೆ ಶ್ರೀ ಮಹಾಲಿಂಗೇಶ್ವರ ಶಾಲೆಯಲ್ಲಿ ತಾ. 24ರಲ್ಲಿ ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಕೃ. ಗೋಪಾಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸದ್ಯದಲ್ಲಿಯೆ ನಿವೃತ್ತರಾಗಲಿರುವ ಉಡುಪಿ ಸೌತ್ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರಿಗೆ ವಿದಾಯ ಸತ್ಕಾರವೀಯಲಾಯಿತು. ಶಾಲಾ ಮೆನೇಜರ್ ಶ್ರೀ ಪಿ. ಸದಾನಂದ ಸೆಟ್ಟರು ಸ್ವಾಗತಿಸಿದ ಬಳಿಕ ಶ್ರೀಗಳಾದ ಪಿ. ಎಲ್. ರಾಘವೇಂದ್ರ ರಾವ್, ಪಿ. ಶಿವಣ್ಣ ಹೆಗ್ಡೆ, ಎಚ್. ವೀರಯ ನ್ಯಾಕ್ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು.

**ಕೋಟೇಶ್ವರ**— ತಾ 18 ರಂದು ಮಹಾ ರಥೋತ್ಸವ ದಿನ ಕೋಟೇಶ್ವರದ ಶ್ರೀ ಕೋಟಿ ಲಿಂಗೇಶ್ವರ ದೇವಸ್ಥಾನಕ್ಕೆ ಡಿಪ್ಯುಟಿ ಹರಿಜನಸೇವಕ ಶ್ರೀ ಡಿ. ಬಿ. ಅಂತಯ್ಯ ಸೆಟ್ಟರ ನೇತೃತ್ವದಲ್ಲಿ ಹರಿಜನ ಪ್ರವೇಶವಾಯಿತು. ಅರ್ಚಕರು ಹರಿಜನರಿಗೆ ಗಂಧಪ್ರಸಾದ ವಿತ್ತರು.

**ಬೆಳ್ಳೆ ಎಕ್ಸ್ಟೇರು**—ಎಲಿಮೆಂಟರಿ ಶಾಲೆಗಾಗಿ ಕಟ್ಟಿಸಲಿರುವ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಸೂರ್ಯನಾರಾಯಣ ರಾವ್, ಆರ್. ಡಿ. ಒ. ಕುಂದಾಪುರ, ಅವರು ವಹಿಸಿದ್ದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಗೋಪಾಲಕೃಷ್ಣ ಬಲ್ಲಾಳರು ಸ್ವಾಗತಿಸಿದರು. ಶಾಲಾಮೆನೇಜರ್ ಶ್ರೀ ಮಹಾಬಲ ಸೆಟ್ಟರು ಧನ್ಯವಾದಗಳನ್ನಿತ್ತರು.

**ಶಿರ್ಲಾಡಿ**—ಸರಕಾರದಿಂದ ಮಂಜೂರಾದ ಸರಕಾರಿ ಆಸ್ಪತ್ರೆಯ ಉದ್ಘಾಟನೆಯನ್ನು ತಾ 16ರಲ್ಲು ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ನೆರವೇರಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು. ರೆ| ಫಾ| ಆರ್. ಫೆರ್ನಾಂಡೀಸರು ಸ್ವಾಗತಭಾಷಣ ಮಾಡಿದರು. ಜಿಲ್ಲಾ ವೈದ್ಯಾಧಿಕಾರಿ ಶ್ರೀ ಎ. ತಿಮ್ಮಪ್ಪಯ್ಯ, ಶ್ರೀ ಕೆ. ಕೆ. ಪೈ, ಡಾ. ಶೆಣೈ ಮತ್ತು ಮುಕುಂದ ಪ್ರಭುಗಳು ಕಾಲೋಚಿತ ಭಾಷಣವಿತ್ತರು. ಶ್ರೀ ಎಸ್. ಬಿ. ಸಾಮ್ರಾಜ್ಯರು ವಂದನೆಗಳನ್ನರ್ಪಿಸುತ್ತಾ, ಮಲೆನಾಡಿನ ಅಭಿವೃದ್ಧಿಗೆ ಕಾರಣರಾದ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರನ್ನು ಪ್ರಶಂಸಿಸಿದರು.

---

## ಇನ್ನೂ ಚಂದಾಹಣವನ್ನು

ಕಳುಹಿಸದವರು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಪಾವತಿಯಾಗದಿದ್ದರೆ ನಾವು ಅನಿವಾರ್ಯವಾಗಿ ತಳುಹಿಸುವ ವಿ. ಪಿ. ಪಿ. ಯನ್ನಾದರೂ ಪಡೆಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

ಮೆನೇಜರ್, ನವಯುಗ.




**ಕುಮಾರಿ ಬಿಲ್ಲೆಗಳು**

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಶ್ರುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA—40.**

ಸ್ಟಾಕಿಸ್ಟರು: **ಪಾ. ಕಂಪೆನಿ, ಮಂಗಳೂರು—1.**

**ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!**

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

**50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!**

**ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.**

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

**THE CANARA BANKING CORPORATION LIMITED**

# ಮಂಗಳೂರು

**ಮಂಗಳೂರು ಬೇಂಕಿನ ರಜತೋತ್ಸವವು** ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ತಾ. 25ರಂದು ಸಂಜೆ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀಮತಿ ಲೀಲಾ ಬಾಯಿ ಬಾಳಿಗರು ಪ್ರಾರ್ಥನೆ ಮಾಡಿದರು. ಬಳಿಕ ಬೇಂಕ್ ಆಫ್ ಮಂಗಳೂರಿನ ಚೇರ್ಮನ್ ಆದ ಡಾ| ಎಮ್. ಉಪೇಂದ್ರ ಪೈಗಳು ಸ್ವಾಗತ ಭಾಷಣ ಮಾಡುತ್ತಾ ಹಳ್ಳಿಗಳಿಗೂ, ಬಡ ಮತ್ತು ಮಧ್ಯಮ ವರ್ಗದವರಿಗೂ ಬೇಂಕಿಂಗ್ ಸೌಕರ್ಯವನ್ನು ಒದಗಿಸುವುದೇ ತಮ್ಮ ಸಂಸ್ಥೆಯ ಉದ್ದೇಶವೆಂದು ಹೇಳಿದರು. ಬೇಂಕಿನ ಡೈರೆಕ್ಟರ್ ಶ್ರೀ ಡಿ. ಪುಟ್ಟಸ್ವಾಮಿಯವರು ಬೇಂಕಿನ ಸಂಕ್ಷಿಪ್ತ ಇತಿಹಾಸ ಮತ್ತು ಪ್ರಗತಿಯನ್ನು ವಿವರಿಸಿದರು. ಶ್ರೀಗಳಾದ ಜಿ. ಸೋಮಶೇಖರ ರಾವ್, ಕೆ. ವೇಣುಗೋಪಾಲ ನಾಯಕ್ ಮೊದಲಾದವರು ಶುಭಾಸಂಶನ ಭಾಷಣ ಮಾಡುತ್ತಾ, ಬೇಂಕ್ ಆಫ್ ಮಂಗಳೂರು ಉತ್ತಮ ಸೇವೆ ಸಲ್ಲಿಸುತ್ತಿರುವುದಾಗಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀ ಹನುಮಂತಯ್ಯನವರು ಭಾಷಣ ಮಾಡುತ್ತಾ "ಭಾರತವು ಹಳ್ಳಿಗಳಲ್ಲಿದೆ, ಪಟ್ಟಣಗಳಲ್ಲಿಲ್ಲ. ಆದ್ದರಿಂದಲೇ ಹಳ್ಳಿಗಳಿಗೆ ಬೇಂಕಿಂಗ್ ಸೌಕರ್ಯ ಅತ್ಯಾವಶ್ಯಕವಾದುದು. ದೊಡ್ಡ ಪಟ್ಟಣಗಳಲ್ಲಿ ದೊಡ್ಡ ಬೇಂಕುಗಳು ದೊಡ್ಡ ಉದ್ದಿಮೆಗಳಿಗೆ ಸೌಕರ್ಯ ಒದಗಿಸುವಾಗ, ಹಳ್ಳಿಗಳಲ್ಲಿ ಸಣ್ಣ ಬೇಂಕುಗಳು ಈ ಹಳ್ಳಿಗಳ ಕೈಗಾರಿಕೆಗಳಿಗೆ ಸವಲತ್ತು ಒದಗಿಸಬೇಕು. ಎಲ್ಲಾ ಹಳ್ಳಿಗಳಲ್ಲೂ ಬೇಂಕಿಂಗ್ ಸವಲತ್ತು ವಿಸ್ತರಿಸಲು ಬೇಕಾದಷ್ಟು ಸಾಧನ ಸಂಪತ್ತಿಲ್ಲ. ಅದಕ್ಕಾಗಿ ಸದ್ಯಕ್ಕೆ 10ರಿಂದ 20 ಹಳ್ಳಿಗಳಿಗೆ ಒಂದು ಬೇಂಕ್ ಖಾತೆ ತೆರೆದು ಗ್ರಾಮಸ್ಥರಿಗೆ ಸವಲತ್ತು ಒದಗಿಸಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕಿಂಗ್ ಸವಲತ್ತು ಒದಗಿಸುವಲ್ಲಿ ಪ್ರತಿ ಜಿಲ್ಲೆಗಳಲ್ಲಿರುವ ಮಂಗಳೂರು ಬೇಂಕಿನಂತಹ ಸಣ್ಣ ಸಣ್ಣ ಬೇಂಕಿಂಗ್ ಸಂಸ್ಥೆಗಳು ಹೆಚ್ಚು ಉಪಯುಕ್ತವಾಗುವುವು. ಬೇಂಕ್ ಆಫ್ ಮಂಗಳೂರು ಹಳ್ಳಿಹಳ್ಳಿಗಳಲ್ಲಿ ಬೇಂಕಿಂಗ್ ಸೌಕರ್ಯವೀಯುವ ಬಗ್ಗೆ ಗಮನ ಕೊಡುತ್ತಿರುವುದು ಪ್ರಶಂಸನೀಯವೆಂದರು. ಬೇಂಕಿನ ಡೈರೆಕ್ಟರ್ ಶ್ರೀ ಯು. ಮಾಡ್ಲಗಿರಿ ಕಿಣಿಯವರು ಧನ್ಯವಾದಗಳನ್ನಿತ್ತರು.

**ಮಂಗಳೂರು ಯುವಕ ಕಾಂಗ್ರೆಸಿನ ಸದಸ್ಯರನ್ನುದ್ದೇಶಿಸಿ**— ಶ್ರೀ ಹನುಮಂತಯ್ಯನವರು ತಾ|25ರಂದು ಪೂರ್ವಾಹ್ನ ಮಾತನಾಡುತ್ತಾ, 'ಯುವಕರು ಹೆಚ್ಚು ಹೆಚ್ಚಾಗಿ, ಕಾಂಗ್ರೆಸನ್ನು ಸೇರಿ, ಈ ಸಂಸ್ಥೆಯನ್ನು ಬಲಪಡಿಸಬೇಕು. ಯುವಕರ ಗಮನವನ್ನು ಕಾಂಗ್ರೆಸಿನತ್ತ ಎಳೆಯಲು ಪ್ರಯತ್ನಿಸಬೇಕು. ಇದಕ್ಕಾಗಿ ಯುವಕರೇ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಕಾರ್ಯಗತಗೊಳಿಸುವುದು ಹಿತಕರ' ಎಂದು ಮುಂತಾಗಿ ಹೇಳಿದರು. ಸಭಾಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು, ವ್ಯಕ್ತಿ ಶ್ರೇಷ್ಠತೆಗೆ ಪ್ರಾಧಾನ್ಯತೆಯನ್ನು ಕೊಡದೆ, ಸಂಸ್ಥೆಗೆ ಪ್ರಾಧಾನ್ಯತೆ ಕೊಡಬೇಕೆಂದು ಹೇಳಿದರು. ಆರಂಭದಲ್ಲಿ ಶ್ರೀ ಎಮ್. ಎಲ್. ಶೆಟ್ಟರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಎಚ್. ಕೆ. ಶೆಣೈಯವರು ಧನ್ಯವಾದಗಳನ್ನಿತ್ತರು.

**ಲಾಲಾ ಲಜಪತ್ ರಾಯ**— ಯವರ ಪುಣ್ಯತಿಥಿಯು ತಾ. 17ರಲ್ಲು ಶ್ರೀ ಕೆ. ಕೆ. ಶೆಟ್ಟಿ ಎಮ್. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಮತ್ತು ಶ್ರೀಗಳಾದ ಕೆ. ಆರ್. ಆಚಾರ್, ಡಾ. ಯು. ಪಿ. ಮಲ್ಯ ಮತ್ತು ಎ. ಶಂಕರ ಆಳ್ವರು ಲಾಲಾ ಲಜಪತ್ ರಾಯರ ಕುರಿತು ಭಾಷಣವಿತ್ತರು. ಶ್ರೀ ಎಚ್. ಕೆ. ತಿಂಗಳಾಯರು ಧನ್ಯವಾದಗಳನ್ನಿತ್ತರು.

ಯುವಕ ಕಾಂಗ್ರೆಸಿನ ಸಾಪ್ತಾಹಿಕ ಕಾರ್ಯಕ್ರಮವು ತಾ. 18ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಡಾ. ಕೆ. ಬಾಳಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೇಳಗವೆ ಅಪ್ಪಯ್ಯ, ವಿದ್ವಾನ್ ರವರು ಭಾರತದ ಆದರ್ಶ ಯುವಕರ ವಿಚಾರವಾಗಿ ಭಾಷಣವಿತ್ತರು.

**ಮೆನೇಜ್‌ಮೆಂಟ್ ಎಸೋಸಿಯೇಶನಿನ ಸಭೆಯು** —ತಾ|24ರಲ್ಲಿ ಶ್ರೀ ಕೆ. ಪಿ. ಜನಾರ್ಧನ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎಮ್. ಉಪೇಂದ್ರ ಪೈಗಳು 'ಭಾರತದಲ್ಲಿ ರಾಸಾಯನಿಕ ಕೈಗಾರಿಕೆಗ' ಎಂಬ ವಿಷಯವನ್ನೆತ್ತಿ ಭಾಷಣಮಾಡುತ್ತಾ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇಲೆಕ್ಟ್ರೋಕೆಮಿಕಲ್ ಕೈಗಾರಿಕೆಗೆ ತುಂಬಾ ಅವಕಾಶವಿದೆ ಎಂದರು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದಾರ್ಪಣೆ ಮಾಡಿದರು.

**ಮಂಗಳೂರಲ್ಲಿ ಡಿವಿಜನಲ್ ಕಮಿಶನರ್ ಶ್ರೀ ನಾಗರಾಜ ರಾಯರು**— ತಾ. 21ರಲ್ಲಿ ಮಂಗಳೂರಿಗೆ ಆಗಮಿಸಿ ಮಂಗಳೂರಿನ ಹಾಗೂ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಪರಿಚಯ ಮಾಡಿಕೊಂಡ ಹಾಗೂ ಈ ಜಿಲ್ಲೆಯಲ್ಲಿನ ಕಚೇರಿಗಳ ಕಾರ್ಯಕಲಾಪ ಇತ್ಯಾದಿಗಳ ಪರಿಶೀಲನೆ ಗೈದ ಮೈಸೂರು ಡಿವಿಜನಲ್ ಕಮೀಶನರ್ ಶ್ರೀ ಜಿ. ಎನ್. ನಾಗರಾಜ ರಾಯರ ತಮ್ಮ ಅಭಿಪ್ರಾಯಗಳನ್ನು ತಾ. 22ರಲ್ಲು ಸಂಜೆ ಸ್ಥಳೀಯ ಪತ್ರಿಕಾ ಪ್ರತಿನಿಧಿಗಳಿಗೆ ಕದ್ರಿ ಬಂಗ್ಲೆಯಲ್ಲಿ ಜರಗಿದ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸುತ್ತಾ 'ಈ ಜಿಲ್ಲೆಯ ಪೂರ್ವಪ್ರದೇಶಗಳಲ್ಲಿ ರಬ್ಬರು ವ್ಯವಸಾಯವನ್ನು ಕೈಗೊಂಡು ರಬ್ಬರು ತೋಟಗಳನ್ನು ನಿರ್ಮಿಸಬಹುದಾಗಿದೆ. ಈ ಜಿಲ್ಲೆಯ ನೆರೆಪ್ರದೇಶವಾದ ಕೊಡಗು ಜಿಲ್ಲೆಯಲ್ಲಿ ರಬ್ಬರು ತೋಟಗಳಿರುತ್ತವೆ. ಅದೇ ರೀತಿಯ ಹವಾಮಾನಾದಿ ಗುಣಗಳುಳ್ಳ ಈ ಜಿಲ್ಲೆಯ ಪೂರ್ವ ಪ್ರದೇಶದಲ್ಲೂ ರಬ್ಬರು ಬೆಳೆಸಬಹುದಾಗಿದೆ. ರಬ್ಬರು ವ್ಯವಸಾಯಕ್ಕೆ ಕೇಂದ್ರ ಸರಕಾರ ತುಂಬಾ ಪ್ರೋತ್ಸಾಹ ನೀಡುತ್ತಿದ್ದು ಎಕ್ರೆಗೆ ರೂಪಾಯಿ 350ರಂತೆ ಸಹಾಯ ಧನ ಕೊಡುತ್ತದೆ. ಇದಲ್ಲದೆ ಇನ್ನು ಕೆಲವು ಸೌಲಭ್ಯಗಳನ್ನು ಒದಗಿಸುವ ಕುರಿತು ಸರಕಾರ ಆಲೋಚಿಸಬಹುದಾಗಿದೆ. ಆದುದರಿಂದ ಈ ಜಿಲ್ಲೆಯ ಜನ ಮುಂದೆ ಬಂದು ರಬ್ಬರು ವ್ಯವಸಾಯವನ್ನು ಕೈಕೊಂಡು ಜಿಲ್ಲೆಯ ಹಾಗೂ ದೇಶದ ಅಭ್ಯುದಯಕ್ಕೆ ಕಾರಣರಾಗಬೇಕು" ಎಂದು ಹೇಳಿದರು.

ಮಂಗಳೂರು ಬಂದರ ಹಾಗೂ ನಮ್ಮ ಕರಾವಳಿಯ ಹಲವು ಬಂದರುಗಳನ್ನು ಸರ್ವಕಾಲೀನ ಬಂದರುಗಳಾಗಿ ಅಭಿವೃದ್ಧಿಗೊಳಿಸುವ ಕುರಿತು ಸರಕಾರ ಪರ್ಯಾಲೋಚಿಸುತ್ತಿದೆ. ಇಲ್ಲಿನ ಮತ್ಸ್ಯ ವ್ಯವಸಾಯ, ಗೇರು ವ್ಯವಸಾಯ, ಮೊದಲಾದುವನ್ನು ಅಭಿವೃದ್ಧಿಗೊಳಿಸಬೇಕು. ಈ ಜಿಲ್ಲೆಯಲ್ಲಿ ಕಿತ್ತಳೆ, ಮಾವು, ನಿಂಬೆ ಮತ್ತು ನಿಂಬೆ ಜಾತಿಯ ಇತರ ಹಣ್ಣು ಹಂಪಲುಗಳ ತೋಟವನ್ನು ಗೃಹೋದ್ಯಮವಾಗಿ ಕೈಕೊಳ್ಳಲುಸಾಧ್ಯವಿದೆ ಎಂದುಹೇಳಿದರು.

**ನಗರ ಸಭಾಧಿಕಾರಿಗಳೊಡನೆ ನಗರ ಅಭಿವೃದ್ಧಿಯ ವಿಚಾರ ವಿನಿಮಯ** ಮೈಸೂರು ಡಿವಿಜನಲ್ ಕಮಿಶನರ್ ಶ್ರೀ ನಾಗರಾಜ ರಾಯರು ತಾ|22ರಲ್ಲಿ ಪೂರ್ವಾಹ್ನ ಮಂಗಳೂರು ನಗರಸಭಾ ಕಛೇರಿಗೆ ಭೇಟಿಯಿತ್ತು ನಗರಸಭಾಸದಸ್ಯರನ್ನು ಮತ್ತು ನಗರಸಭಾಧಿಕಾರಿಗಳೊಡನೆ ನಗರದ ಅಭಿವೃದ್ಧಿಯ ಕುರಿತು ವಿಚಾರವಿನಿಮಯ ನಡೆಸಿದರು.

ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಶ್ರೀ ನಾಗರಾಜ ರಾಯರನ್ನು ಸ್ವಾಗತಿಸಿ ಹಾರವನ್ನರ್ಪಿಸಿದರು. ನಗರಸಭೆಗೊಂದು ಸ್ವಂತ ಕಟ್ಟಡ ಹಾಗೂ ಪುರಭವನದ ಆವಶ್ಯಕತೆ, ಆನೆಕಾಲು ನಿರೋಧ ಯೋಜನೆಯನ್ನು ಮುಂದುವರಿಸುವಿಕೆ, ಭೂಗತ ಚರಂಡಿ ವ್ಯವಸ್ಥೆ, ಕುದ್ರೋಳಿಯಲ್ಲಿ ಮುಸಮ ಸಂಕ ಕಟ್ಟುವಿಕೆ, ಕಡಿಮೆ ವೇತನದವರಿಗೆ ಮನೆಕಟ್ಟುವ ಯೋಜನೆ, ಜಾಡಮಾಲಿ ಮೊದಲಾದ ನಗರ ನಿರ್ಮಲೀಕರಣ ಖಾತೆಯ ಸಿಬ್ಬಂದಿಗೆ ವಸತಿಗೃಹರಚನೆ, ಮಂಗಳೂರು ಬಂದರವನ್ನು ಸರ್ವಕಾಲೀನ ಬಂದರೆ ಮಾಡುವಿಕೆ, ಹಾಸನ— ಮಂಗಳೂರು ರೈಲ್ವೆ ಸಂಕ್ರಮಣಿಕೆ ಇತ್ಯಾದಿ ಆವಶ್ಯಕತೆಗಳನ್ನು ಶ್ರೀ ನಾಗರಾಜರ ಮುಂದಿರಿಸಲಾಯಿತು. ಈಗ ಜಿಲ್ಲಾ ಕಲೆಕ್ಟರರು ಉಪಯೋಗಿಸುತ್ತಿರುವ ಬಂಗ್ಲೆ ಮತ್ತು ಆವಾರವನ್ನು ಸರಕಾರವು ನಗರಸಭೆಗೆ ಬಿಟ್ಟು ಕೊಟ್ಟಲ್ಲಿ, ಅಲ್ಲಿ ನಗರಸಭಾ ಕಚೇರಿ, ಪುರಭವನ ಉದ್ಯಾನ ಮೊದಲಾದುವನ್ನು ರಚಿಸಲು ಸಾಧ್ಯವಿದೆಯೆಂದೂ ತಿಳಿಸಲಾಯಿತು. ಅಕ್ಕಿಗೆ ಬೆಲೆ ಏರುತ್ತಿರುವುದರಿಂದ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಬೇಕೆಂದು ಶ್ರೀ ಎ. ಶಾಂತಾರಾಮ ಪೈಗಳು ಸೂಚಿಸಿದರು. ಶ್ರೀ ನಾಗರಾಜ ರಾಯರು ಉತ್ತರಿಸುತ್ತಾ ಈ ನಗರಸಭೆಯು ಇತರರಿಗೆ ಮಾದರಿಯಾಗಿದೆ. ಈ ನಗರದ ಅಭಿವೃದ್ಧಿಗಾಗಿ ಒಂದು ಪಂಚವಾರ್ಷಿಕ ಯೋಜನೆ ತಯಾರಿಸಬೇಕು. ಅದಕ್ಕೆ ಬೇಕಾದ ಹಣಹೊಂದಿಸಿಕೊಂಡು ಸರಿಯಾದ ಕಾರ್ಯಕ್ರಮ ತಯಾರಿಸಿ ಕಳುಹಿಸಿ ಕೊಟ್ಟಲ್ಲಿ ನನ್ನಿಂದ ಆದಷ್ಟು ಪ್ರಯತ್ನಿಸಿ, ಕೈಗೂಡಿಸಲು ನೋಡುತ್ತೇನೆ ಎಂದರು.

ತಾ. 23ರಲ್ಲು ಬೆಳಿಗ್ಗೆ ಶ್ರೀ ನಾಗರಾಜರು ಜಿಲ್ಲೆಯ ಅಭಿವೃದ್ಧಿಗಾಗಿ ಕೈಕೊಳ್ಳಬಹುದಾದ ಯೋಜನೆಗಳ ಕುರಿತು ವಿಚಾರವಿನಿಮಯಗೈದರು. ಶ್ರೀಗಳಾದ ಬಿ. ವಿ. ಬಾಳಿಗ, ಎಮ್.ಎಲ್.ಎ., ಎಸ್. ನರ್ಸಪ್ಪಯ್ಯ ಎಮ್. ಎಲ್. ಸಿ., ಬಿ. ಎಸ್. ಕುದ್ವ, ಡಾ. ಕೆ. ಕೆ. ಹೆಗ್ಡೆ, ಕೆ. ಸೂರ್ಯನಾರಾಯಣ ಅಡಿಗ, ಟಿ. ಎ. ಪೈ, ಎಮ್. ಎಲ್. ಎ., ಜಿಲ್ಲಾ ಕಲೆಕ್ಟರ್ ಎಚ್. ನರಸಿಂಹ ಮೊದಲಾದವರು ಹಾಜರಿದ್ದರು.

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೆಂಟರ

## ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೊನೆಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ; ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ, ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೆಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ., ಎಲ್. ಟಿ. ಅವರು ಅನುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕೆರೆಲರ 'ಅವ್ಯಕ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆ ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಅಚ್ಚಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0 ಮಾತ್ರ

ಪ್ರತಿಗಳಿಗೆ ಬರೆಯಿರಿ:--

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**

**ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ**

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

**1956 ನಮ್ಮ ರಜತಮಹೋತ್ಸವದ ವರ್ಷ**

ಸ್ಥಾಪನೆ: 1931

**ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್**

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು
ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ—ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನಪ್ರಯೋಗಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನವನ್ನು, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಿರ್ಮೂಲವಾಗಿ ಮಾಡುತ್ತವೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಅಣೆ ಸ್ಟಾಂಪು ಕಳಿಸಿರಿ

**ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ ಯು.)**

628 ಸಂತಾನ ಸಿಂಧೂರ ಭವನ (ಪೋಸ್ಟ್ ಬೇಟ್ 9, ಮೈಸೂರು S. I.

## ಪ್ರತಿಭೆಗೆ ಪ್ರೋತ್ಸಾಹ

# ಅತಿಥಿ ಸತ್ಕಾರದಲ್ಲೂ ಎತ್ತಿದ ಕೈಯಾಗಿರುವ ಮರಕ್ಕಿಣಿಭಟ್ಟರು ತನ್ನ ಪಂಪಿನಿಂದ ಬಡರೈತರಿಗೆ ಪ್ರಯೋಜನವಾಗಲಿ ಎನ್ನುತ್ತಾರೆ—ಸರಕಾರಕ್ಕೆ ಮಾತ್ರ ಇನ್ನೂ ಎಚ್ಚರವಿಲ್ಲ!

ಭಟ್ಟರ ಪಂಪು ಎಂಬ ಲೇಖನವನ್ನು “ನವಯುಗ” ಸಂಚಿಕೆಯಲ್ಲಿ ಓದಿ ನೋಡಿದೆ. ಅದು ನಮ್ಮ ಜಿಲ್ಲೆಯಲ್ಲಿಯೇ ನಮ್ಮವರೇ ತಯಾರಿಸಿದ ಪಂಪಾದುದರಿಂದ ಅದನ್ನು ಸ್ವತಃ ನೋಡಬೇಕೆಂಬ ಇಚ್ಛೆ ಹುಟ್ಟಿತು. ನನ್ನ ಬಂಧು ವೈದ್ಯವಿಶಾರದ ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ರ ಉತ್ತರ ಕ್ರಿಯೆ ಸಮಾರಂಭವು ಪಾಡಾಜೆ ಕೆದಂಬಾಡಿ ಮನೆಯಲ್ಲಿ ಈಚೆಗೆ ನೆರವೇರಿತು. ಅಲ್ಲಿಗೆ ಹೋದವರು ಬರುವಾಗ ಅಡ್ಯನಡ್ಕದಲ್ಲಿ ಮೋಟಾರು ಇಳಿದು ಮರಕ್ಕಿಣಿಯಲ್ಲಿ ಪಂಪ ತಯಾರಿಸಿದ ಭಟ್ಟರ ಮನೆಗೆ ಹೋಗುವ ದಾರಿ ಯಾವುದೆಂದು ವಿಚಾರಿಸಿದೆ— ಆಗ ಅಲ್ಲಿಗೆ ಬಂದಿದ್ದ ಕೋಡಂದೂರು ತಿಮ್ಮಣ್ಣ ಭಟ್ರು ನನ್ನೊಡನೆ ಬನ್ನಿ ಅವರ ಮನೆ ತೋರಿಸುತ್ತೇನೆಂದು ಹೇಳಿ ಕರಕೊಂಡು ಹೋದರು. ರಸ್ತೆಯಿಂದ ತೆಂಕಬದಿ, ಎರಡುಫರ್ಲಾಂಗ್ ಕೆಳಗೆ ಇಳಿಯುವಾಗ ಅಡಿಕೆ ತೋಟದೊಳಗೆ ಇರುವ ಭವ್ಯವಾದ ಮಾಳಿಗೆ ಮನೆಯನ್ನು ತೋರಿಸಿ, ನೀವು ಈ ತೋಡಿನ ಸಂಕ ದಾಟಿ ಹೋಗಿರಿ ಎಂದು ದಾರಿ ತೋರಿಸಿ ಮುಂದೆ ಹೋದರು.

ನಾನು ಸಂಕ ದಾಟಿ ಕೆರೆಕಟ್ಟೆಯಿಂದ ಅಂಗಳಕ್ಕೆ ಹೋಗಿ ಅಡಿಕೆ ರಾಶಿ ಮಧ್ಯದ ದಾರಿಯಿಂದ ಚಾವಡಿಗೆ ಹೋದೆ. ಆಗ ೧೨॥ ಘಂಟೆ ಆಗಿತ್ತು. ಆಗತಾನೇ ಶಾಲೆಯಿಂದ ಬಂದ ಮಕ್ಕಳು ಒಳಗೆ ಹೋಗಿ ಭಟ್ಟರ ಕೂಡೆ ಹೇಳಿರಬೇಕು. ಅವರು ಸ್ನಾನಮಾಡಿ ಜಪ ತೀರಿಸಿ ಊಟಕ್ಕೆ ಕೂತಿದ್ದರು. ಅಲ್ಲಿಂದಲೇ ನಸುನಗುತ್ತಾ ಯಸನ್ನು ಖಿಗಳಾಗಿ ಎರಡು ತಂಬಿಗೆ ನೀರು ಹಿಡಕೊಂಡು ಬಂದು ಕೈಕಾಲು ತೊಳೆಯಿರಿ ಎಂದು ಹೇಳಿ ನಮಸ್ಕರಿಸಿದರು. ನಾನು ಅವರಿಗೆ ವಂದಿಸಿ ನೀರು ತೆಗೆದುಕೊಂಡು ಕೈ ಮೋರೆ ತೊಳೆದೆ.

ಆ ಕೂಡಲೆ ಅಂದವಾದ ಸಿಮೆಂಟಿನ ನೆಲದ ಮೇಲೆ ಬಣ್ಣದ ಚಾಪೆಯನ್ನು ಹಾಸಿ ಒಳಗೆ ಹೋಗಿ ಉಪ್ಪು ಮೆಣಸು ಹಾಕಿದ ಮಜ್ಜಿಗೆಯನ್ನು ತಂದುಕೊಟ್ಟು ಮಜ್ಜಿಗೆಯಿಂದ ಯಾವ ದೋಷವೂ ಇಲ್ಲ ಕುಡಿಯಿರಿ. ಎಂದು ಹೇಳಿ ನಾನು ಬಾಯಾರಿಕೆ ಕುಡಿದಾದ ಕೂಡಲೇ_ಕೆಲಸದ ಹುಡುಗನ ಹತ್ತಿರ ಬೈರಾಸು-ಸಾಬೂನು ಕೊಟ್ಟು ಸ್ನಾನ ಮಾಡಿರಿ ಎಂದು ಹೇಳಿದರು. ನಾನು ಮರು ಮಾತನಾಡದೆ ಹುಡುಗನೊಟ್ಟಿಗೆ ಬಚ್ಚಲುಮಾನೆಗೆ ಹೋದೆ ಅಲ್ಲಿ ದೊಡ್ಡ ತಾಮ್ರದ ಹಂಡೆಯಲ್ಲಿ ನೀರು ಕಾಯುತ್ತಾ ಮತ್ತೊಂದು ಕಡಾಯಿಗೆ ತಣ್ಣೀರು ಬಂದು ಬೀಳುತ್ತಾ ಇತ್ತು. ನಾನು ಸ್ನಾನ ತೀರಿಸಿ ಬರುವಾಗಲೇ ಊಟಕ್ಕೆ ಮಣೆಯಿಟ್ಟು ಎಲೆ ತೊಳೆದು ಇಟ್ಟಿದ್ದರು ನಾನು ಮೌನವಾಗಿ ಕೂತೆನು. ಆಗ ಭಟ್ಟರು ನಮ್ಮ ಊಟ ನಿಮಗೆ ಸರಿಯಾಗಲಿಕ್ಕಿಲ್ಲ. ನಮ್ಮ ತಂದೆಯವರು ಗಾಂಧಿಯವರ ಲೇಖನ ಓದಿ, ಮೆಣಸು ತಿನ್ನುವುದನ್ನು ಬಿಟ್ಟಿರುತ್ತಾರೆ. ನಮಗೆಲ್ಲಾ ಅದೇ ಅಭ್ಯಾಸವಾಗಿಯದೆ. ಆದರೆ ಹೆಂಗಸರಿಗಾಗಿ ಉಪ್ಪಿನಕಾಯಿ ಹಾಕಿರುತ್ತಾರೆ ಎಂದು ಹೇಳಿ ಎರಡು ವಿಧದ ಪಲ್ಯ, ಸಾರು ಹೇ ಮಾದಳದ ಉಪ್ಪಿನಕಾಯಿ ತಂದು ಬಡಿಸಿದರು ಆಗ ಅವರ ತಂದೆಯವರು ನಿಮಗೆ ಮಜ್ಜಿಗೆಯಾದೀತೋ? ಹಾಲು ಬೇಕೋ ಎಂದು ಕೇಳಿದರು. ನನಗೆ ಮಜ್ಜಿಗೆಯೇ ಆದೀತೆಂದು ಹೇಳಿದೆ. ಆಗ ಒಂದು ಪಾತ್ರೆಯಲ್ಲಿ ಮೊಸರು ಮತ್ತು ಉಪ್ಪುಹುಡಿ ತಂದು ಎಲೆಗೆ ಬಡಿಸಿದರು. ಎಲ್ಲಾ ಪಲ್ಯಗಳಿಗೂ ತುಪ್ಪದ ಒಗ್ಗರಣೆ ಹಾಕಿರುವುದರಿಂದ ಮನೋಹರವಾದ ರುಚಿಯಾಗಿತ್ತು. ಈ ಪಲ್ಯಗಳನ್ನು ತಿಂದ ಮೇಲೆ ನಾವು ಕೂಡಾ ಮೆಣಸು ತಿನ್ನುವುದನ್ನು ಬಿಡಬಹುದೆಂದು ನೆನಸಿದೆ.

ಭಟ್ಟರ ತಂದೆಯವರು ನಿಮ್ಮ ಊರು ಯಾವುದು? ನಿಮ್ಮ ಹೆಸರೇನೆಂದು ಕೇಳಿದರು. ನಾನು ಮನಸ್ಸಿನಲ್ಲಿಯೇ ನಸುನಗುತ್ತಾ ನನ್ನ ಊರು ಮಂಗಳೂರಿನಿಂದ ಹತ್ತು ಮೈಲು ಉತ್ತರ ಗುರುಪುರದಿಂದ ಎರಡು ಮೈಲು ಪೂರ್ವ ದಿಕ್ಕಿನಲ್ಲಿರುವ ಪೊಳಲಿ ದೇವಸ್ಥಾನದ ಹತ್ತಿರ ಅಮುಂಜೆಗುತ್ತಿನ ಮನೆ—ನನ್ನ ಹೆಸರು ಶ್ರೀನಿವಾಸ ಹೆಗ್ಡೆ ಎಂದು ಹೇಳಿದೆ. ಅದಕ್ಕೆ ಪೊಳಲಿ ಎನ್. ಎ. ಶೀನಪ್ಪ ಹೆಗ್ಡೆ ಎಂದರೆ ನೀವೆಯೋ? ಎಂದು ಕೇಳಿದರು ನಾನು ಹೌದೆಂದು ಹೇಳಿದೆ—ಓಹೋ ನಿಮ್ಮ ಹೆಸರು ಪತ್ರಿಕೆಗಳಲ್ಲಿ ಮತ್ತು ನೀವು ಬರೆದ ಪುಸ್ತಕಗಳು ಕೂಡಾ ಓದಿರುತ್ತೇನೆ ನೀವು ಕಿಲ್ಲೆಯವರ ಬಂಧುಗಳಲ್ಲವೋ ಎಂದು ಹೇಳಿ, ಕಾಸರಗೋಡು ಸಮಾಚಾರದಲ್ಲಿಯೂ ನಿಮ್ಮ ಲೇಖನ ಓದಿ ಆನಂದವಾಗಿದೆ. ನೀವು ಬಂದದ್ದು ಬಹಳ ಸಂತೋಷವಾಯಿತು ಬರಬೇಕೆಂದರೂ, ನಿಮ್ಮಂಥವರು ನಮ್ಮ ಮನೆಗೆ ಬರುವವರಲ್ಲವೆಂದು ಹೇಳಿದಕ್ಕೆ ಬರುವವರ ಮನೆಗೆ ಬಾರದೆ ಇರು ಇರಲಿಕ್ಕಾಗುತ್ತದೊ' ಎಂದು ಹೇಳಿದೆ ನೀವು ಈಗ ಎಲ್ಲಿಂದಬಂದಿರಿ; ನಾನು ಪಾಡಾಜೆಗೆ ಕೆ. ಪಿ. ವೆಂಕಪ್ಪ ಶೆಟ್ರ ಉತ್ತರ ಕ್ರಿಯೆಗೆ ಹೋಗಿದವನು ಈ ಹೊತ್ತು ಅಲ್ಲಿಂದ ಹೊರಟು ತಮ್ಮ ಮರದ ಪಂಪು ನೋಡುವ ಆಶೆಯಿಂದ ಇಲ್ಲಿಗೆ ಬಂದಿರುತ್ತೇನೆ ಎಂದೆ. ಬಹಳ ಸಂತೋಷವಾಯಿತು. ಕೆ. ಪಿ. ವೆಂಕಪ್ಪ ಶೆಟ್ರು ನಮ್ಮೆಲ್ಲರ ಬಂಧುವಾಗಿದ್ದರು ನಮ್ಮ ತಾಲೂಕಿನಲ್ಲಿಯೇ ಹಿರಿಯ ಯಕ್ಷಗಾನ ಕಲಾಕೋವಿದರಾಗಿದ್ದರು. ಮಾತ್ರವಲ್ಲ ಹಳ್ಳಿಯ ಜನರಿಗೆ ಯಾವ ಕಾಯಿಲೆಯಾದರೂ ಹಟದಿಂದ ವಾಸಿ ಮಾಡುವ ಘನ ವೈದ್ಯರಾಗಿದ್ದರು ಎಂದು ಹೇಳುತ್ತಾ ಊಟ ತೀರಿಸಿ ಚಾವಡಿಗೆ ಬಂದು ವೀಳ್ಯದೆಲೆ ಹರಿವಾಣ ಮುಂದಿಟ್ಟರು ವೀಳ್ಯದೆಲೆ ತಿನ್ನುವುದು ನಮಗೊಂದು ಚಟವಾಗಿಯದೆ. ನೀವೂ ವೀಳ್ಯ ಹಾಕಿರಿ. ನಾನು ಸ್ವಲ್ಪ ವಿಶ್ರಾಂತಿ ತಕ್ಕೊಳುತ್ತೇನೆ ಎಂದು ಹೇಳುವಾಗ ಅವರ ಮಗ ಬಂದು ವೀಳ್ಯದೆಲೆ ಹಾಕಿ —ಕೃಷಿ ವಿಚಾರ ಪತ್ರಿಕೆಗಳ ಮಾತಾಡುತ್ತಾ ಇದ್ದೆವು.

ಪ್ರಿಯ ವಾಚಕರೇ, ಭಟ್ಟರ ಪಂಪು ಎಂಬ ತಲೆ ಬರಹದ ಲೇಖನದಲ್ಲಿ ಭಟ್ರು ಮನೆ ಊಟದ ವಿಚಾರ ಯಾಕೆಂದು ಬೇಸರಿಸಬೇಡಿರಿ. ಭಟ್ಟರು 30 ವರುಷದ ಯುವಕ. ನಾನು 60 ದಾಟಿದ ಮುದುಕ ಅವರಲ್ಲಿಯೂ ನಾನು ಯಾರೆಂದು ಅವಲೋಕವರಿಯದೆ, ಪರಕೀಯ ಒಬ್ಬ ವ್ಯಕ್ತಿಗೆ ಈ ರೀತಿಯ ಸತ್ಕಾರ ಮಾಡುವ ಶ್ರೀಮಂತರು ನಮ್ಮ ಜಿಲ್ಲೆಯಲ್ಲಿ ಇದ್ದಾರೆ ಎಂಬುದು ಭಟ್ಟರ ಮನೆ ಸಂದರ್ಶನದಿಂದಲ್ಲದೆ. ನನ್ನ ಅನುಭವದಲ್ಲಿ ನಾನೆಲ್ಲಿಯೂ ಕಾಣಲಿಲ್ಲ ಆದ ಕಾರಣ ಯಥಾಸ್ಥಿತಿ ಬರೆದಿರುತ್ತೇನೆ.

ನಮ್ಮ ಭಟ್ಟರು ಇಂಗ್ಲೀಷ್ ಕಲಿತವರಲ್ಲವಾದರೂ ನಾನು ತಮ್ಮ ಪಂಪಿನ ವಿಚಾರ ನವಯುಗ ಪತ್ರಿಕೆಯಲ್ಲಿ ಓದಿದ ಮೇಲೆ ತಮ್ಮ ಪಂಪು ಮತ್ತೆ ತಮ್ಮನ್ನು ನೋಡಲಿಕ್ಕಾಗಿ ಬಂದಿರುತ್ತೇನೆ. ಅದೆಲ್ಲಿ ಉಂಟೆಂದು ಕೇಳಿದೆ. ಆಗ ಭಟ್ರು ನಸುನಗುತ್ತಾ ಪಂಪು ಸೆಟ್ಟು ಪಾಡಿ ಒಂದುವರೆ ವರ್ಷದ ಮೊದಲೆ ನಮ್ಮ ಜಿಲ್ಲೆಯ ಎಲ್ಲಾ ಮುಖ್ಯಾಧಿಕಾರಿಗಳಿಗೂ, ಎಮ್. ಎಲ್. ಸಿ., ಎಮ್. ಎಲ್. ಎ.ಗಳಿಗೂ ಮದ್ರಾಸ್ ಮಂತ್ರಿಗಳಿಗೂ ತೋರಿಸಿದ. ಮತ್ತು ಅವರು ಪರಾಂಬರಿಸಿದ ಹಲವಾರು ಫೋಟೋಗಳನ್ನು ತೋರಿಸಿದರು ಎಲ್ಲರೂ ನೋಡಿ ಒಳ್ಳೇ ಕೆಲಸವೆಂದು ಹೊಗಳಿ ಮನವಿಗಳನ್ನು ತಕ್ಕೊಂಡು ಹೋದರೂ; ಯಾವ ಪರಿಣಾಮವೂ ತಿಳಿದು ಬರಲಿಲ್ಲ — ನಮ್ಮ ಆಫೀಸರರುಗಳು ಬೇರೊಬ್ಬನಿಗಾಗಿ ತಮಗೆ ಬೇಡವಾದ ಕೆಲಸಗಳನ್ನು ಮಾಡುವವರಲ್ಲ. ಅನಂತರ ನನ್ನ ತಮ್ಮ ಮದ್ರಾಸಿನಲ್ಲಿ ಕಲಿಯುತ್ತಾನೆ ಅವನು ಮುಖ್ಯ ಮಂತ್ರಿಗಳ ಅವಗಾಹನೆ ಬಗ್ಗೆ ಪತ್ರಗಳನ್ನು ಬರೆದ್ದರಿಂದ ದಿಲ್ಲಿಯ ಹುಕುಂ ಬಂದ ಮೇಲೆ ಮದ್ರಾಸು ಸರಕಾರದ ಕಡೆಯಿಂದ ಕೊಯಂಬತ್ತೂರು ಪರಿಶೋಧನಾಲಯಕ್ಕೆ ಕೊಂಡು ಹೋಗಿರುತ್ತಾರೆ ಈ ಪಂಪು ಸರಕಾರದ ತಿಳುವಳಿಕೆಯಲ್ಲಿ ಪ್ರಚಾರವಾದರೆ ಇಡೀ ಹಿಂದೂಸ್ಥಾನದ ಬಡ ರೈತರಿಗೆ ಬಹಳ ಉಪಕಾರವಾಗುವುದು ಎಂದರು.

ಈಗ ಎಗ್ರಿಕಲ್ಚರ್ ಇಲಾಖೆಯವರು ಇಂಜನ್ ಪಂಪುಗಳನ್ನು ಬಾಡಿಗೆಗೆ ರೈತರಿಗೆ ಕೊಟ್ಟು ಅದಕ್ಕೆ ನಡೆಸಲಿಕ್ಕೆ ಎಣ್ಣೆ ಡ್ರೈವರ ಸಂಬಳ ಕೊಡಲಿಕ್ಕೆ ಬಡ ರೈತರಿಗೆ ಸಾಧ್ಯವಿಲ್ಲ ಆದರೆ ಶ್ರೀಮಂತರು ಇಂಜಿನ್‌ಗಳನ್ನು ಬಾಡಿಗೆ ಪಡೆದು ಬಡ ರೈತರಿಗೆ 80 ಸೆಂಟ್ಸಿನ ಒಂದು ಮುಡಿ ಗದ್ದೆಗೆ ನೀರು ಕೊಡಬೇಕಾದರೆ ಬೆಳೆಗೆ ಐದು ಮುಡಿ ಅಕ್ಕಿಯಂತೆ ವಸೂಲು ಮಾಡುತ್ತಾರೆ ನನ್ನ ಪಂಪಿಗೆ ಎಣ್ಣೆ ಬೇಡ, ಡ್ರೈವರ್ ಬೇಡ-- ಪೆಟ್ರೋಲ್ ಗ್ರೀಸ್ ಯಾವುದೂ ಬೇಡ ಸಣ್ಣ ತೋಡಿನಲ್ಲಿ ರಭಸದಿಂದ ಹರಿಯುವ ನೀರನ್ನು 80 ಫೀಟ್ ಎತ್ತರಕ್ಕಿಂತಲೂ ಮೇಲೆ ಹಾರಿಸಬಹುದು ಆಗೋ ಅಲ್ಲಿ ಅಡಿಕೆ ಮರದ ತುದಿಯಲ್ಲಿ ಕಟ್ಟಿರುವ ಬಿದಿರಿನಲ್ಲಿ ರಬ್ಬರ್ ಟ್ಯೂಬ್ ಕಾಣುತ್ತದೆ. ಅರ್ಧ ಇಂಚಿನ ಪೈಪಿನಲ್ಲಿ ನೀರು ಹಾರುತ್ತದೆ ನಮ್ಮ ತೋಟದಲ್ಲಿರುವ ಎಲ್ಲಾ ಮರಗಳ ತಲೆಗೆ ಅದರಿಂದ ನೀರುಹಾಕಲಿಕ್ಕಾಗುತ್ತದೆ. ಇದೇ ಪಂಪಿನಿಂದ ಕೆರೆ, ಬಾವಿಯ ನೀರು ಮೇಲೆತ್ತಬೇಕಾದರೆ ಪಂಪಿನ ಜಲಚಕ್ರವನ್ನು ತಿರುಗಿಸಲಿಕ್ಕೆ ಒಬ್ಬ 10 ವರ್ಷದ ಮಗುವಾಗಲೀ ಹೆಂಗಸಾಗಲೀ ತಿರುಗಿಸಿದರೆ ನೀರು ಮೇಲಕ್ಕೆ ಬರುತ್ತದೆ ಈಗ ತಯಾರಿಸಿದ ಪಂಪಿನಿಂದಲೇ, ಒಂದು ಇಂಚಿನ ಪೈಪ್ ಜೋಡಿಸಿದರೆ 40 ಫೀಟ್ ಎತ್ತರಕ್ಕೂ 2 ಇಂಚಿನ ಪೈಪಿನಿಂದ 20 ಫೀಟ್ ಎತ್ತರಕ್ಕೂ ನೀರುಬರುತ್ತದೆ. ಈ ಪಂಪುಗಳನ್ನು ಹೆಚ್ಚಿಗೆಯಾಗಿ ತಯಾರಿಸುವಾಗ 4 ಇಂಚಿನ ಪೈಪಿನಿಂದ 80 ಫೀಟ್ ಎತ್ತರಕ್ಕೆ ನೀರು ಬರುವುದಕ್ಕೆ ಸಾಧಾರಣ 80 ರೂಪಾಯಿ ಕರ್ಚು ಬೀಳಬಹುದು. ಇದು ಬಡ ರೈತನ ಒಂದು ಎತ್ತಿನ ಕ್ರಯದಷ್ಟು ಆಗುವುದರಿಂದ ಈ ಪಂಪನ್ನು ಕೃಷಿಮಾಡುವ ಯಾವನಾದರೂ ಪಡೆಕೊಂಡು ತನ್ನ ಉತ್ಪತ್ತಿಯನ್ನು ಹೆಚ್ಚಿಸಬಹುದು — ದೇವರ ದಯೆಯಿಂದ ನಮಗೇನು ಆರ್ಥಿಕ ತೊಂದರೆಗಳೇನೂ ಇಲ್ಲ, ಅದನ್ನು ಮಾರಿ ಹಣ ಸಂಪಾದನೆ ಮಾಡಬೇಕೆಂಬ ಇಚ್ಛೆಯೂ ಇಲ್ಲ ಸರಕಾರವು ಈ ಮಾದರಿಯ ಪಂಪು ತಯಾರಿಸಿ ಬಡ ರೈತರಿಗೆ ಉಚಿತವಾಗಿ ಯಾ ಬೆಲೆಗೆ ಕೊಟ್ಟು ದೇಶದ ಬಡತನವನ್ನು ಕಡಿಮೆ ಮಾಡಲಿ. ಮುಂದಿನ ಶೋಧನೆಯಲ್ಲಿ ಕೆರೆಯ ನೀರು ಕೂಡಾ ಜನರ ಸಹಾಯವಿಲ್ಲದೆ ಗಾಳಿಯಂತ್ರ ತಯಾರಿಸಿ ಅದರಿಂದಲೇ ಪಂಪು ನಡೆಯುವಂತೆ ಮಾಡುವ ಯೋಜನೆ ಇದೆ. ನಮ್ಮ ಜನರ ಪ್ರೋತ್ಸಾಹಕ್ಕಿಂತಲೂ ಉದಾಸೀನವೇ ಜಾಸ್ತಿ. ಇದೆಲ್ಲಾ ನಮ್ಮ ಜನರ ಹುಟ್ಟು ಸ್ಥಿತಿ ಎಂದೂ ಅವರು ಹೇಳಿದರು.

ಪಂಪಿನ ಫೋಟೋ ನೋಡಿ ನಾನು ಅದರ ಭಾಗಗಳ ವಿವರ ಕೇಳಿದೆ. ಈ ಪಂಪು ಸೆಟ್ಟು 3 ಫೀಟ್ ಎತ್ತರ 3 ಫೀಟ್ ಉದ್ದ 2½ ಫೀಟ್ ಅಗಲದ ಮೇಜಿನಂತೆ ಇದೆ. ಮೇಜಿನ ಅಡಿ ಭಾಗದಲ್ಲಿ 'ಹಗ್ಗ ಸುತ್ತುವ ಮರದ ರಾಟೆಯ ಆಕಾರದ ಒಂದು ಚಕ್ರವಿದೆ. ಇದೇ ಜಲಚಕ್ರ ನೀರು ಹರಿಯುವಾಗ ಈ ಚಕ್ರ ತಿರುಗುತ್ತದೆ. ಇದೆಲ್ಲಾ ಸಾಗುವಾನಿ ಮರದಿಂದ ತಯಾರಿಸಿದ್ದಾರೆ. ಮೇಜಿನ ಮೇಲೆ ಬಲಬದಿಯಲ್ಲಿ 1½ ಫೀಟ್ ಚಚ್ಚೌಕದ ಮರದ ಪೆಟ್ಟಿಗೆಯೊಳಗೆ ಜಲಯಂತ್ರವನ್ನಿಟ್ಟಿದ್ದಾರೆ. ಕೆಳಗಡೆ ಇರುವ ಜಲಚಕ್ರಕ್ಕೂ ಮೇಲೆ ಇರುವ ಜಲಯಂತ್ರದ ಮಧ್ಯ ಸಣ್ಣ ಕಬ್ಬಿಣದ ಚಕ್ರಕ್ಕೂ ಚರಕದ ರಾಟೆ ಹಗ್ಗದಂತೆ ಒಂದು ಬೆಲ್ಟ್ ಹಾಕಿರುತ್ತಾರೆ— ಜಲಚಕ್ರವು ಒಂದು ಸುತ್ತು ತಿರುಗುವಾಗ ಜಲ ಯಂತ್ರವು ಸಾಧಾರಣ 2500 ಸುತ್ತು ತಿರುಗುತ್ತದೆ. ಜಲಚಕ್ರವು ಹರಿಯುವ ನೀರಿನ ರಭಸಕ್ಕೆ ಸರಿಯಾಗಿ ತಿರುಗುತ್ತದೆ. ಮೇಲಿನ ಜಲ ಯಂತ್ರದಿಂದ ಹಿಂಬದಿಗೆ ಒಂದು ರಬ್ಬರ್ ಪೈಪನ್ನು ಕೆಳಗಿನ ಹರಿಯುವ ನೀರಲ್ಲಿ ಮುಳುಗಿಸಿ ಇಡುವುದು. ಮುಂಪೈಪು ಎಷ್ಟುಎತ್ತರಕ್ಕೆ ನೀರುಬರಬೇಕೋ ಅಷ್ಟರವರೆಗೆ ಇಡಬಹುದು ನಿದಾನವಾಗಿ ಹರಿಯುವ ನೀರಿಗಾಗಲೀ ಕೆರೆ ಬಾವಿಗಳ ನೀರಿಗಾಗಲೀ ಇಟ್ಟು ಕೆಳಗಡೆ ಜಲಚಕ್ರದ ಕೈಯನ್ನು ಹಿಡಿದು ಸಾವಕಾಶವಾಗಿ ತಿರುಗಿಸಿದರೆ ನೀರುಮೇಲಕ್ಕೆ ಬರುತ್ತದೆ. ಇತ್ಯಾದಿ ವಿವರಗಳನ್ನು ನಾನು ಅನುಭವ ಮಾಡಿರುವುದರಿಂದ ಭಟ್ಟರ ಪಂಪು ಭರತಖಂಡದಲ್ಲಿ ಪ್ರಚಾರವಾಗಿ ಬಡರೈತರ ಏಳಿಗೆಯು ಕಾಣುವಂತೆ ಮಾಡುವುದರಲ್ಲಿ ಅನುಮಾನವಿಲ್ಲ ಇದಕ್ಕೆ ಭಟ್ಟರ ಪಂಪು, ಮರಕಿಣಿ ಪಂಪು ಅಥವಾ ಭಟ್ಟರ ಕಿಸಾನ್ ಪಂಪು ಎಂಬ ಹೆಸರಿಡಬಹುದು,

ಇವರು ಬರೇ 30 ವರ್ಷ! ಯುವಕರಾದ್ದರಿಂದ ದೇವರು ಇವರಿಗೆ ಆರೋಗ್ಯ ದೀರ್ಘಾಯುಷ್ಯವನ್ನು ದಯಪಾಲಿಸಿ ಇನ್ನು ಹೆಚ್ಚಿನ ನವೀನ ಶೋಧನೆಗಳನ್ನು ಮಾಡಿ ಬಡ ರೈತರ ಭಾಗ್ಯ ದೇವತೆಯಾಗಿ ಬಾಳಲಿ! ಈಗಿನ ವಿದ್ಯಾವಂತರಾದ ನಮ್ಮ ತರುಣರು ಅಧಿಕಾರದ ಗುಲಾಮರಾಗದೆ ನಮ್ಮ ಮರಕ್ಕಿಣಿ ಭಟ್ಟರಂತೆ ಶೋಧಕರಾಗಿ ನವೀನ ಶೋಧನೆಗಳಿಂದ ನವೀನ ಯಂತ್ರಗಳನ್ನು ರಚಿಸಿ ಭರತ ಖಂಡದಲ್ಲಿರುವ ಬಡತನವೆಂಬ ಪಿಶಾಚಿಯನ್ನು ಉಚ್ಚಾಟನೆ ಮಾಡಿ ಕರ್ನಾಟಕದ ಕೀರ್ತಿಯನ್ನು ಜಗತ್ತಿಗೆ ತೋರಿಸಲಿ -- ಇತಿ ಶಮ್.

— ಶ್ರೀ. ಎನ್. ಎ. ಶೀನಪ್ಪ ಹೆಗಡೆ.
ಪೊಳಲಿ.




'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc· No· 466 N/50 date 12-12-1950 of the Director of public Instruction Madras·

# ಕಾಸರಗೋಡು

(೩ನೇ ಪುಟದಿಂದ)

ಯೆ ನಮಗೆಲ್ಲ ಮನಿದಂತಾಗಿದೆ! — ಹೌದು! - ಮುನಿಯುವುದೂ ಸಹಜ! - ಎಂದಿನ ವರೆಗೆ ನಾವು ಶುದ್ಧಾತ್ಮರಾಗಿ ತ್ಯಾಗ ಬುದ್ಧಿಯಿಂದ ಲೋಕಹಿತಸಾಧಕರಾಗಿ ಬಾಳಲಾರೆವೋ ಅಂದಿನ ವರೆಗೆ ಕನ್ನಡಿಗರು ಒಂದಲ್ಲ ಒಂದು ತೆರನಾಗಿ ಬನ್ನಪಡಲೇ ಬೇಕು! ಮಾತೃದ್ರೋಹಿಗಳಾಗಿ ಅಧಿಕಾರ ಲಾಲಸೆಯಿಂದ ಕೆಲವು ರಾಜಕೀಯ ಧುರೀಣರು ಕನ್ನಡಕುಲಕ್ಕೆನೇ ದ್ರೋಹ ಬಗೆದಿರುವಾಗ ನಿತ್ಯ ನಿರ್ಮಲೆಯಾದ ಕನ್ನಡ ದೇವಿಯು ನಮಗೆ ಮುನಿಯದಿರುವಳೆ?

ಹಿಂದೆ ವಿಜಯನಗರವು ವೈಭವದಿಂದ ಮೆರೆಯುತ್ತಿರುವ ಕಾಲ, ಕನ್ನಾಡನ್ನಾಳುತ್ತಿದ್ದ ವೀರ ಕ್ಷತ್ರಿಯ ಅರಸರೂ ನಿಸ್ವಾರ್ಥತೆಯಿಂದ ಲೋಕ ಕಲ್ಯಾಣಕ್ಕಾಗಿ, ಕನ್ನಡಿಗರ ಮೇಲ್ಮೆಗಾಗಿ ಅಹೋರಾತ್ರಿ ದುಡಿದರು. ನಾಡಿನ ಏಳ್ಗೆಗಾಗಿ ಪ್ರಾಣವನ್ನೆ ನೀಗಿದರು ಸತ್ಯ, ತ್ಯಾಗದಿಂದ ಧರ್ಮಬಾಹಿರರಾಗದೆ ಧೈರ್ಯ, ಸ್ಥೈರ್ಯ ಸಾಹಸದಿಂದಲೇ ನಾಡನ್ನು ಕಟ್ಟಿದರು. ಅಂತೆಯೇ ಜಗತ್ತಿನಲ್ಲಿ ಕನ್ನಡ ನಾಡಿಗೊಂದು ಹಿರಿಯ ಸ್ಥಾನ, ಮಾನ ದೊರೆಯುವಂತಾಯಿತು.

ಆ ಕಾಲದಲ್ಲಿ ವೀರ ಮಹಿಳೆಯರೆಷ್ಟೊ ಮಂದಿ ನಮ್ಮ ಕನ್ನಡನಾಡು ಅಖಂಡವಾಗಿ ಉಳಿಯುವಂತೆ ಪರಕೀಯರ ಆಕ್ರಮಣವನ್ನು ಪ್ರತಿಭಟಿಸಿ ಜಟ್ಟಿ ಬಿಗಿದು, ಕತ್ತಿ ಹಿಡಿದು ಎದೆಗುಂದದೆ ಜೀವದಾಸೆಯನ್ನೆ ಬಿಟ್ಟು ರಣಭೈರವಿಯರಂತೆ ಹೋರಾಡಿ ಮಡಿದು ವೀರ ಸ್ವರ್ಗವನ್ನು ಪಡೆದಿರುವರು. ಎಂದಾಗ ಆ ಮಹಿಳೆಯರಲ್ಲಿದ್ದ ದೇಶಪ್ರೇಮವೆಷ್ಟು? ಆ ತ್ಯಾಗವೆಷ್ಟು ಅಮರವಾದುದು? ಇಂದು ಗಂಡುಗಲಿಗಳಾದ ನಮ್ಮ ರಾಜಕಾರಣಿಗಳು, ತ್ಯಾಗದ ಸೋಗಿನಿಂದ ರಾಜಕೀಯ ರಂಗಕ್ಕಿಳಿದು ಜನತೆಯ ಹಿತಸಾಧಿಸುವ ಬದಲು ನಮ್ಮ ಕುಲಕಂಟಕರಾಗಿ ವೈಯಕ್ತಿಕ ಸುಖಸಾಧನೆಯ ಚಿಂತನೆಯಲ್ಲಿ ಕಾರ್ಯವೆಸಗುವುದೆಂದರೆ ಇವರು ದೇಶ ಸೇವಕರಲ್ಲ, ದೇಶ ದ್ರೋಹಿಗಳು. ಇಂದು ನಮ್ಮ ಜನತೆಯಲ್ಲಿ ಸ್ವಾರ್ಥಸಾಧನೆಗಾಗಿ ಮನೆ ಮಂದಿಯನ್ನೂ (ಅಂದರೆ ಕನ್ನಡಿಗರಾದ ಕಾಸರಗೋಡಿನ ಬಂಧುಗಳನ್ನು) ಬೇರೆಯವರಿಗೆ ಮಾರುವಷ್ಟು (ಅಂದರೆ ಕೇರಳೀಯರಿಗೆ ಒಪ್ಪಿಸುವಷ್ಟು) ಬುದ್ಧಿ ವಿಪರೀತವಾಗಿದೆ. ಹೀಗೆ ಇವಾಗ ಕಾಸರಗೋಡು ಕೈಬಿಟ್ಟು ಹೋದಾಗ ನಾವು ಗೋಳಾಡಿದರೇನು? ಹಾಗಾಗಬೇಕೆಂದೇ ಕಾರ್ಯ ಕೈಗೊಂಡ ರಾಜಕಾರಣಿಗಳೂ ನಮ್ಮ ಕನ್ನಡನಾಡವರೆ ಎಂದಾಗ ಉಂಡಮನೆಗೆರಡು ಬಗೆದಂತಲ್ಲವೆ? ಹೆತ್ತ ಮಾತೆಗೆ ಬಗೆದ ದ್ರೋಹವಲ್ಲವೇ? ಇದನ್ನು ನೋಡಿ ಕನ್ನಡ ಮಾತೆಯು ಮುನಿಯದಿರಲೆಂತು?

ಕನ್ನಡನಾಡನ್ನಾಳುತಿದ್ದ ರಾಜರೆಲ್ಲರೂ ನಿಷ್ಪಕ್ಷಪಾತ ಬುದ್ಧಿಯಿಂದ ಜನತೆಯ ಹಿತ ಸಾಧಕರಾಗಿದ್ದರು. ಇಂತಹ ಪುಣ್ಯ ಭೂಮಿಯಾದ ಕನ್ನಡನಾಡಿನಲ್ಲಿ ಸ್ವಾರ್ಥಸಾಧನೆಯಿಂದ ಕಾರ್ಯಚತುರರಾಗಿ ರಾಜ್ಯದ ಒಕ್ಕಟ್ಟನ್ನೂ ಶಿಥಿಲಗೊಳಿಸಲು ಯತ್ನಿಸುತ್ತಿರುವ ಮುಖಂಡರಿರುವತನಕ ಕನ್ನಡಿಗರು ನೆಮ್ಮದಿಯಿಂದ ಬಾಳುವಂತಿಲ್ಲ! ಪ್ರಾಂತ್ಯ ಪುನಾರಚನಾ ಸಮಿತಿಯಲ್ಲಿ ನಮ್ಮ ಪ್ರತಿನಿಧಿಗಳು ಕಾಸರಗೋಡು ಕನ್ನಡ ನಾಡಾಗಿಯೇ ಉಳಿಯಬೇಕೆಂಬಂತೆ ಸಾಕಷ್ಟು ಕಾರ್ಯಾಚರಣೆಕೈಗೊಳ್ಳುತ್ತಿದ್ದಲ್ಲಿ ಎಂದೂ ಕಾಸರಗೋಡು ಕೇರಳಕ್ಕೆ ಸೇರುವಂತಿರಲಿಲ್ಲ. ನಾಡಿನ ಹಿತಕ್ಕಾಗಿ ಜನತೆಯ ಬೇಡಿಕೆಗಳ ವರದಿಯನ್ನು ಸರಕಾರದ ಮುಂದಿಟ್ಟು ಅದನ್ನು ಸಾಧ್ಯವಾದಷ್ಟು ಒದಗಿಸಿಕೊಡಬೇಕೆಂಬುದಕ್ಕಾಗಿಯೇ ನಾವು ನಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುತ್ತೇವೆ. ಕಾಸರಗೋಡು ಕನ್ನಡನಾಡೆಂಬುದಕ್ಕೆ ಬೇಕಾದ ಪುರಾವೆಗಳನ್ನಿತ್ತು ಸಮರ್ಥಿಸಿ ನಾಡಿನ ಹಿತವನ್ನು ಸಾಧಿಸುವುದು ಜನತಾ ಪ್ರತಿನಿಧಿಗಳ ಕರ್ತವ್ಯ. ಭಾಷಾವಾರು ಪ್ರಾಂತ್ಯ ವಿಭಜನೆಯಿಂದ ನಮ್ಮ ನಾಡು ವಿಶಾಲ ಕರ್ನಾಟಕವೆಂದು ಕರೆಯಲ್ಪಡಬೇಕಾದರೆ ಕಾಸರಗೋಡು ಕನ್ನಡನಾಡಿನ ಅಂಗವಾಗಿ ಉಳಿಯಬೇಕು.

ರೂಪುಗೊಂಡ ಕರ್ನಾಟಕದಿಂದಾಗಿ ಕನ್ನಡಿಗರು ಪೂರ್ಣ ತೃಪ್ತಿಗೊಳ್ಳುವಂತಿಲ್ಲ! ಸುಸಂಸ್ಕೃತರಾದ ಕಲಾ ನಿಪುಣರೂ, ಹಿರಿಯ ಕವಿ ಪುಂಗವರೂ ಹುಟ್ಟಿ ಬೆಳೆದ ಕನ್ನಡ ತಾಯ್ನಾಡಾದ ಕಾಸರಗೋಡನ್ನೂ ಕಳಕೊಂಡ ಕನ್ನಡಿಗರು ಅಂಗಹೀನರಂತಾಗಿದ್ದಾರೆನ್ನಲು ತುಂಬಾ ಪಶ್ಚಾತ್ತಾಪವೆನಿಸುತ್ತದೆ. ಕೆಚ್ಚೆದೆಯ ಕನ್ನಡನಾಡಿನಲ್ಲಿ ಜನಿಸಿದ ಹಿರಿಯ ಕಿರಿಯರೆಲ್ಲರೂ ಕಾಸರಗೋಡನ್ನು ಮರಳಿ ಪಡೆಯುವ ಆಶಯವನ್ನಿಟ್ಟುಕೊಳ್ಳಬೇಕು. ಅದಕ್ಕಾಗಿ ಪ್ರಾಂತ್ಯ ವಿಭಜನೆಯ ವಿರೋಧದ ಪ್ರತಿಭಟನೆಯನ್ನೂ ನಿರಂತರವೂ ಕಾರ್ಯಾಚರಣೆಯಿಂದ ಸರಕಾರದ ಮುಖಂಡರಿಗೆ ವೇದ್ಯವಾಗುವಂತೆ ಮನವಿ ಮಾಡಿಕೊಳ್ಳಬೇಕು ಕನ್ನಡಿಗರೆಲ್ಲರೂ ಐಕ್ಯ ಮತದಿಂದ ಭೇದಭಾವವನ್ನು ಮರೆತು ನಿಸ್ವಾರ್ಥ ತ್ಯಾಗಬುದ್ಧಿಯಿಂದ ವಿಸ್ತೃತ ಕರ್ನಾಟಕದ ಮೇಲ್ಮೆಗಾಗಿ ಹಗಲಿರುಳು ಶ್ರಮಿಸಬೇಕು.

ಅಧಿಕಾರ ಲಾಲಸೆಯಿಂದ ಕಾರ್ಯ ಪ್ರವೃತ್ತರಾಗಿ ಸ್ವಯಂ ಹಿತವನ್ನೇ ಬಯಸಿ ಬಾಳುವುದು ಹಿತವಲ್ಲ. ಪುನರ್ಘಟಿತ ಭವ್ಯ ಭಾರತದ ಭವಿಷತ್ತಿನಲ್ಲಿ ಕರ್ನಾಟಕವು ಆದರ್ಶವಾದಾಗಿ ಬಾಳಲಿ! ಕಾಸರಗೋಡು ಕರ್ನಾಟಕ ಪ್ರಾಂತ್ಯದ ಅಂಗವಾಗಿಯೇ ಉಳಿಯಲಿ!! ಯುವ ಜನರು ಸೇವಾ ಬುದ್ಧಿಯಿಂದ ಲೋಕ ಕಲ್ಯಾಣಕ್ಕಾಗಿ ದುಡಿಯಲಿ!!!

— ಶ್ರೀ. ಕೆ. ಪಿ. ಜಯರಾಮ ಶೆಟ್ಟಿ.

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

O. S. No. 314/1956.

ಕೋಟ ಮಂಜುನಾಥ ಶ್ಯಾನುಭಾಗ &
ಬ್ರದರ್ಸ್ —ವಾದಿ
ತಂಣೀಲ ಅಹಮ್ಮದ ಕೊಡಾ—ಪ್ರತಿವಾದಿರು

3ನೇ ಪ್ರತಿವಾದಿ. ಯಿಬ್ರಾಹಿಮ್ ಬ್ಯಾರಿ. ಕಲ್ಲಕೋಟೆ ಪದ್ದಬ್ಯಾರಿ ಮಗ ಮಂಗಳೂರು ತಾಲೂಕು ಉಳ್ಳಾಲ.

ಇವರಿಗೆ

ವಾದಿಯು ಪ್ರತಿವಾದಿರ ಮೇಲೆ ರೂಪಾಯಿ 994—7—9ಕ್ಕೆ ನಷ್ಟದ ಬಗ್ಗೆ Contribution ಬಗ್ಗೂ ಸಹಾ ಮೇಲ್ಕಂಡ ದಾವೆ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆ ಇದ್ದಲ್ಲಿ 11—12—56ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಬ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenoy.
Pleader for Plaintiff.
Coondapoor 22—11—1596.

---

## ದಿ ವಿಜಯಾ ಬೇಂಕ್ ಲಿ., ಬೈಂದೂರು. (ದ. ಕ.)

### ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗನಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿಮಾಡುವರೆ ರಿಜಿಸ್ತ್ರ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು—ವ—ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಅಲ್ಲದೆ ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣನಗನನ್ನು ಇದೇ ದಶಂಬರ ತಿಂಗಳ ತಾರೀಕು 8ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು, ತಿಳಿದಿರಲಿ.

| ಸಾಲದ ಜಂಬ್ರಾ ನಂಬರು | ಹೆಸರು ಮತ್ತು ವಿಳಾಸ | ಮೊಬಲಗು ರೂ. | ಆ. | ಪೈ. |
|---|---|---|---|---|
| 210/54 | ಶ್ರೀ. ಯರುಕೋಣೆ ಕುಪ್ಪಯ್ಯ ಸೆಟ್ಟಿ. ದುಗ್ಗಪ್ಪ ಸೆಟ್ಟರ ಅಳಿಯ, ಹೇರೂರು ಗ್ರಾಮ, ನಾವುಂದ. | 205 | 2 | 0 |
| 589/54 | ,, —ಡಿ— | 226 | 18 | 0 |
| 474/54 | ,, ಕೇರಾ ಕಾತಿನ್. ಆದಾಮ್ ಸಾಹೇಬರ ಮಗ, ಹಡವಿನಕೋಣೆ, ಶೀರೂರು. | 43 | 10 | 0 |
| 531/54 | ,, —ಡಿ— | 22 | 6 | 0 |
| 364/54 | ,, ಬಿ. ವೆಂಕಟ್ರಮಣ ನಾಯಕ್. ಮಂಜಪ್ಪ ನಾಯಕರ ಮಗ, ಬಿಜೂರು. | 54 | 2 | 0 |
| 402/55 | ,, ಹೊಸಾಡು ಕೃಷ್ಣ ಭಟ್ಟ. ಶಂಕರ ಭಟ್ಟರ ಮಗ. ಬೈಂದೂರು. | 147 | 3 | 0 |
| 488/55 | ,, ಬೀಯಾರ ನಾಗಯ್ಯ ಸೆಟ್ಟಿ ಕಳವಾಡಿ ವೆಂಕಪ್ಪ ಸೆಟ್ಟರ ಮಗ ಬೈಂದೂರು. | 203 | 0 | 0 |
| 517/55 | ,, ಸೋಕನ ಮಂಜ ಕಾಮಿ. ದುರ್ಗನ ಮಗ, ತಾರಾಪತಿ ಪಡುವರಿ. | 90 | 10 | 0 |
| 278/55 | ,, ಕಾಶ್ಮೀರ್ ಡಾಯಸ್. ಸಿಲ್ವೆಸ್ಟರ್ ಡಾಯಸರ ಮಗ, ಬಸ್ ಏಜಂಟ್. ಬೈಂದೂರು. | 193 | 3 | 0 |
| 904/55 | ,, ಯು. ನಾರಾಯಣ ಸೆಟ್ಟಿ. ಸುಬ್ಬಣ್ಣ ಸೆಟ್ಟರ ಅಳಿಯ, ಮಾದಯ್ಯ ಸೆಟ್ಟರ ಮನೆ ಉಪ್ಪುಂದ | 1045 | 0 | 0 |
| 928/55 | ,, ಬಾಡಾ ನಾರಾಯಣ ಸೆಟ್ಟಿ ಮಂಜಯ್ಯ ಸೆಟ್ಟರ ಅಳಿಯ ಬೈಂದೂರು | 55 | 11 | 0 |
| 1166/55 | ,, ಯು. ನರಸಿಂಹ ಸೆಟ್ಟಿ ಕುಪ್ಪಯ್ಯ ಸೆಟ್ಟರ ಅಳಿಯ, ಉಪಾಧ್ಯಾಯ ಬೋರ್ಡ್ ಎಲಿಮೆಂಟರಿ ಶಾಲೆ, ಬಿಜೂರು ಗ್ರಾಮ. ಬಿಜೂರು. | 114 | 9 | 0 |
| 1234/55 | ,, ಭಗವತಿ ನಾರಾಯಣ ಶ್ಯಾನುಭಾಗ. ಸುಬ್ರಾಯ ಶ್ಯಾನುಭಾಗರ ಮಗ. ಕೆರ್ಗಾಲು ಗ್ರಾಮ ಕೆರ್ಗಾಲು | 260 | 10 | 0 |

ಬೈಂದೂರು, 23—11—56.

ಎಚ್. ರಾಜೀವ ಸೆಟ್ಟಿ.
ಏಜಂಟ್.

---

## ಕೈ ಗಡಿಯಾರ

**ಕೇವಲ 6 ರೂ. ಮಾತ್ರ**

೫ ವರ್ಷ ಖಾತರಿಯ ೧೫ ಜೂವೆಲ್ಸಿನ ಫೈನ್ ಸಿಸ್ಟಮ್‌ನ ಕೈಗಡಿಯಾರ ಕೇವಲ ೬ ರೂ. ಮಾತ್ರ. ಪೋಸ್ಟೇಜ್ ೧-೪-೦ ಪ್ರತ್ಯೇಕ. ಸಾರ್ವಜನಿಕರು ಪ್ರಯೋಜನ ಪಡೆದಿದ್ದಾರೆ ಒಪ್ಪಿತವಾಗದಿದ್ದಲ್ಲಿ ಬೆಲೆಯನ್ನು ವಾಪಸ್ಸು ಕೊಡಲಾಗುತ್ತೆ. ರೋಮನ್ ಫೌಂಟನ್ ಪೆನ್ನುಗಳನ್ನು ಜನಪ್ರಿಯತೆಗೊಳಿಸಲೋಸುಗ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

**ROMAN TRADING CO, (N.V.)**
Post Box 1817—DELHI.

# ನಮ್ಮ ಗುಪ್ತ ಶತ್ರು

## ಚಿಂತೆಯು ಮಹಾರೋಗ

### ಸಂತೋಷದಿಂದಿರಲು ಕೆಲವು ಸಲಹೆಗಳು

ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ, ಅಂಬುಜಕ್ಕೆ ಭಾನುವಿನ ಉದಯದ ಚಿಂತೆ, ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ, ಎನಗೆ ಕೂಡಲ ಸಂಗಮ ದೇವನ ಚಿಂತೆ. ಎಂದು ಬಸವೇಶ್ವರರು ಉದ್ಗಾರವೆತ್ತಿರುವರು. ಅವರೆಂದಂತೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ವಿಧದ ಚಿಂತೆ ಇರುವುದು ಸ್ವಾಭಾವಿಕ. ಬಡವನಿಂದ ಬಲ್ಲಿದನವರೆಗೂ, ಅಜ್ಞಾನಿಯಿಂದ ಸುಜ್ಞಾನಿಯವರೆಗೂ ಇದರ ಕಾರ್ಯಕ್ಷೇತ್ರವು ವಿಸ್ತರಿಸಿದೆ.

ಚಿಂತೆಗಿಲ್ಲ ಆದಿ ಅಂತ!!
ಆದರೆ ಬದುಕು ಚಿರ ಅಶಾಂತ!
ಸಂತಸವೊಂ ಬರಿಯ ಪಂಥ—
ಅದನು ಹಿಡಿಯಬಾರದೆ?

**ಗೋ. ಕೃ. ಅಡಿಗ.**

ಮಾನ್ಯ ಅಡಿಗರ ಅಭಿಪ್ರಾಯದಂತೆ ಈ ಚಿಂತೆಗೆ ಆದಿ, ಅಂತ್ಯ ವೆಂಬುದೇ ಇಲ್ಲ. ನಮಗೆ ಸಂಭವಿಸತಕ್ಕ ಸರ್ವ ವಿಪತ್ತುಗಳಿಗೂ, ನಮಗುಂಟಾದ ತಕ್ಕ ತೊಂದರೆಗಳಿಗೂ, ನಮ್ಮ ಬದುಕು ಅಶಾಂತಿಯಿಂದ ಕೂಡಿರಲಿಕ್ಕೂ ನಮ್ಮಲ್ಲಿ ಅಡಗಿರುವ ಈ ಗುಪ್ತ ಶತ್ರುವೇ ಕಾರಣ.

ಚಿಂತೆಯು ಭಯಂಕರವಾದ ಮಾನಸಿಕ ರೋಗ. ಹಲವು ದೈಹಿಕ ರೋಗಗಳಿಗೂ ಇದೇ ಮೂಲ. ಅದು ನಮ್ಮಲ್ಲಿರುವ ಶಕ್ತಿಯನ್ನು ಹೀರಿ ಅನಾರೋಗ್ಯವನ್ನುಂಟುಮಾಡಿ ದುಃಖದಲ್ಲಿ ಮುಳುಗಿಸುತ್ತದೆ. ಯಾವ ವೈದ್ಯರಿಂದಲೂ ಚಿಕಿತ್ಸೆ ಮಾಡಲಾಗದಂತಹ ಈ ಮಹಾರೋಗವನ್ನು ಕೆಲವು ಸುಲಭವಾದ ಮನಃಶಾಸ್ತ್ರದ ಸೂತ್ರಗಳನ್ನು ಅನುಸರಿಸುವುದರಿಂದ ಮಾತ್ರ ಯಶಸ್ವಿಯಾಗಿ ಗುಣಪಡಿಸಬಹುದು.

ಚಿಂತೆಯುಂಟಾಗಲು ಕಾರಣವೇನು?

ಚಿಂತೆಯು ಸುಪ್ತಾವಸ್ಥೆಯಲ್ಲಿ ಹುದುಗಿಕೊಂಡಿರುವ ಶಕ್ತಿಯ ಚಿಹ್ನೆಯಾಗಿರಬಹುದು. ಮನುಷ್ಯನಿಗೆ ಜೀವನದಲ್ಲಿ ಆಸಕ್ತಿ ಇದೆ. ಮತ್ತು ತನ್ನ ಬಾಳನ್ನು ವ್ಯರ್ಥವಾಗಿ ಕಳೆಯಬಾರದು ಎಂಬುವರೆ ಸಾಧನೆ ಇರಬಹುದು. ಬಯಕೆಗಳ ತೊಳಲಾಟ ಇರಬಹುದು. ಇವುಗಳಲ್ಲಿ ಹೆಚ್ಚಾಗಿ ಮನುಷ್ಯನ ಬಯಕೆಗಳಿಗೆ ಮಿತಿ ಇಲ್ಲದಿರುವುದೇ ಚಿಂತೆಗೆ ಕಾರಣವಾಗಿರುತ್ತದೆ. ಮನುಷ್ಯನ ಆಸೆಗಳಿಗೆ ಅಂತ್ಯವೆಂಬುವೇ ಇಲ್ಲ. ಬಯಕೆಯು ಕೈಗೂಡದೆ, ವಿರುದ್ಧ ಶಕ್ತಿಯು ಪ್ರತಿಭಟಿಸಿದಾಗ ಚಿಂತೆಯು ಹುಟ್ಟುತ್ತದೆ—ಎಂಬುದು ಚಿಂತೆಯ ಉಗಮದಲ್ಲಿರುವ ಸಾಮಾನ್ಯ ಕಾರಣ.

ಯಾವ ಔಷಧಿಗಳಿಗೂ ಬಗ್ಗದ ಈ ವ್ಯಾಧಿಗೆ ನಾವು ಸುಲಭವಾಗಿ ಚಿಕಿತ್ಸೆ ಮಾಡಬಹುದು. ನಮ್ಮ ಊಹನಾ ಶಕ್ತಿ ತಪ್ಪು ದಾರಿಯನ್ನು ಹಿಡಿದಾಗ ಚಿಂತೆಯು ನಮ್ಮನ್ನು ಆವರಿಸುತ್ತದೆ. ನಮ್ಮ ಮೆದುಳಿನಲ್ಲಿ ಸುಳಿಯುವ ಯೋಚನೆಗಳನ್ನು ಒಂದು ಹಿಡಿತದಲ್ಲಿಟ್ಟುಕೊಂಡರೆ ನೋಡದಂತೆ ಕವಿಯುವ ಚಿಂತೆಯನ್ನು ಹೊರಗೆ ದೂಡಿ ಜೀವನವನ್ನು ಸುಖ ಸಂತೋಷಗಳಿಂದ ಕಳೆಯಬಹುದು.

ಚಿಂತೆಯನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಒಳ್ಳೆಯ ಉಪಾಯವೆಂದರೆ ಕೆಲಸ. ಸದಾ ಕಾರ್ಯಮಗ್ನರಾಗಿರುವವರ ಹತ್ತಿರ ಚಿಂತೆ ಸುಳಿಯಲಾರದು. ಆದುದರಿಂದಲೇ ಬಡವರಿಗಿಂತ ಶ್ರೀಮಂತರಿಗೆನೇ ಚಿಂತೆಯು ಜಾಸ್ತಿ.

"ಕಾರ್ಯವು ಜನರ ಕೊಲೆಮಾಡುವುದಿಲ್ಲ ಚಿಂತೆಯು ಆ ಕಾರ್ಯವನ್ನು ನೆರವೇರಿಸುತ್ತದೆ. ಕೆಲಸ ಮಾಡುವುದು ಆರೋಗ್ಯಕರ. ಮನುಷ್ಯ ಸಾಧ್ಯವಾದಷ್ಟನ್ನಾದರೂ ಮಾಡಬಲ್ಲನು. ಚಿಂತೆಯು ಜೀವನದ ಮೊಳಪಿಗೆ ತುಕ್ಕು ಹಿಡಿಸುತ್ತದೆ" ಎಂದು ಹೆನ್ನಿವಾರ್ಡ ಬೀಚರ್ ಬರೆದಿದ್ದಾನೆ.

"ಪ್ರತಿದಿನವೂ ಕಾರ್ಯಮಗ್ನನಾಗು. ನಿನ್ನೆ ಕೆಲಸವನ್ನು ಮಾಡಲು ಹಿಂಜರಿಯಬೇಡ. ನಾಳೆಯ ವಿಷಯ ಚಿಂತಿಸಬೇಡ. ಹಳೆಯದ್ದನ್ನು ನೆನಪಿಗೆ ತರಬೇಡ. ಮುಂದಿನದ್ದು ಊಹಿಸಬೇಡ" ಎಂದು ಪೂಜ್ಯ ಗಾಂಧೀಜಿಯವರು ಹೇಳಿದ್ದರು. ಈ ಸೂತ್ರಗಳನ್ನು ಅನುಸರಿಸಿದ ಪಕ್ಷದಲ್ಲಿ ಚಿಂತೆಯಿಂದ ದೂರವಾಗಬಹುದು.

ಪ್ರತಿಯೊಬ್ಬನನ್ನೂ ಸುಲಭದಲ್ಲಿ ಆವರಿಸುವ ಚಿಂತೆಯೆಂದರೆ ಹಣಕಾಸಿನ ವಿಷಯ. ಯಾವ ರೀತಿ ಸಂಪಾದಿಸುವುದೆಂದು ಕೆಲವರ ಚಿಂತೆ. ಸಂಪಾದಿಸಿದ ಹಣವನ್ನು ಯಾವ ರೀತಿ ವೆಚ್ಚ ಮಾಡುವುದು ಎಂದು ಇನ್ನು ಕೆಲವರ ಚಿಂತೆ. ನಾವು ನ್ಯಾಯ ಮಾರ್ಗದಲ್ಲಿ ಹಣವನ್ನು ಸಂಪಾದಿಸಿ, ನ್ಯಾಯ ಮಾರ್ಗದಲ್ಲಿ ವಿನಿಯೋಗಿಸಿ ಈ ಚಿಂತೆಯನ್ನು ಪರಿಹರಿಸಬಹುದು. "ತಲ್ಲಣಿಸದಿರು ಕಂಡ್ಯ ತಾಳು ಮನವೇ ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ" ಎಂದು ಕನಕದಾಸರು ಹಾಡಿರುವರು. ಅದರಂತೆ ಬಡವರು ಸದಾ, ಕಾರ್ಯದಲ್ಲಿ ಮಗ್ನರಾಗಿ (ಕಾರ್ಯವೇ, ಕರ್ತವ್ಯವೇ ದೇವರು) ಚಿಂತೆಯಿಂದ ದೂರವಾಗಿರುವರು.

"ಜೀವನ ಪರ್ಯಂತ ಸುಖವಾಗಿರಬೇಕಾದರೆ ಅತಿ ಆಸೆಗಳನ್ನು ತೃಪ್ತಿಪಡಿಸಲಾರೆನಲ್ಲಾ ಎಂಬ ಚಿಂತೆಯನ್ನು ದೂರವಿಡಬೇಕು!!" ಎಂದು ಪ್ಲೇಟೋ ಮತ್ತು ಸಾಕ್ರೆಟಿಸ್ ಇವರ ಅಭಿಪ್ರಾಯವಾಗಿದೆ. ಚಿಂತೆಗೆ ಮೂಲ ಸ್ವಾರ್ಥಪರತೆ. ಆದರೆ ವಾಸ್ತವದಲ್ಲಿ ನಾವು ನಮ್ಮ ಬಗ್ಗೆ ಇಷ್ಟು ಹೆಚ್ಚು ಕನಿಕರಪಡಬೇಕಾದುದಾಗಲೀ ಯೋಚಿಸಬೇಕಾದುದಾಗಲೀ ಇಲ್ಲ. ಮನಸುಗಟ್ಟಿ ಮನಸ್ಸು ಮಾಡಿದರೆ ನಾವು ನಮ್ಮ ತೊಂದರೆಗಳನ್ನು ಬಗೆಹರಿಸಿಕೊಳ್ಳಬಲ್ಲೆವು. ಹಾಗೆಯೇ ಮನಸ್ಸು ತುಸು ಹೊರಗೆ ತಿರುಗಿಸಿದರೆ, ಚಿಂತೆಯಿಂದಲೂ ದೂರವಾಗಿರಬಲ್ಲೆವು. "ಆಂಡ್ರೆಜೀಡ್" ಎಂಬಾತನು ತನ್ನ ಚಿಂತೆಗಳನ್ನು ಮರೆಯಲು ಪಿಯಾನೋವನ್ನು ಬಾರಿಸುತ್ತಿದ್ದನು. ಸಂಗೀತದ ಮುಂದೆ ಚಿಂತೆ ಕ್ಷುಲ್ಲಕ ವಸ್ತು. ಸೂರ್ಯನು ಮುಳುಗುವಾಗ ಕಾಣಬರುವ ಸೌಂದರ್ಯವನ್ನು ನೋಡಿ ಟಾಲ್ಸ್‌ಟಾಯ್ ಪ್ರಪಂಚದ ಈ ಸೌಂದರ್ಯದ ಮುಂದೆ ತನ್ನನ್ನು ಪೀಡಿಸುವ ಈ ಚಿಂತೆ ಎಷ್ಟು ಅಲ್ಪವೆಂದು ಬಗೆದು ನಾಚಿಕೆ ಪಟ್ಟಿದ್ದನು.

ಸೋಮಾರಿಯಾಗಿ ಕಾಲ ಕಳೆದರೆ, ಲಾಭವಿಲ್ಲದೆ ಇರುವ ಕೆಲಸಕ್ಕೆ ಶಕ್ತಿಯನ್ನು ವ್ಯರ್ಥ ಮಾಡಿದರೆ ಚಿಂತೆಯು ನಮ್ಮನ್ನು ಆವರಿಸುವುದು. ಈ ಸಂದರ್ಭ ಒದಗದಂತೆ ನಮ್ಮ ವರ್ತನೆಯನ್ನು ನಿಯಂತ್ರಿಸುವುದು ಅಪೇಕ್ಷಣೀಯ.

**ಶ್ರೀ ಪಿ. ಎನ್. ರಾಮಚಂದ್ರರಾವ್.**



ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ—ವಿದ್ಯಾರ್ಥಿನಿಯರಲ್ಲಿ ಅಖಿಲಭಾರತ ಸ್ವರೂಪದ ವಿಚಾರ ವಿನಿಮಯಗಳು ನಡೆದು ಅವರು ತಮ್ಮ ಪ್ರತಿಭೆಯನ್ನು ವಿಸ್ತರಿಸಿಕೊಳ್ಳಬೇಕೆಂಬುದಕ್ಕಾಗಿ ಭಾರತ ಸರಕಾರದ ಶಿಕ್ಷಣಖಾತೆಯು ಹೊಸ ದೆಹಲಿಯಲ್ಲಿ ವಿಶ್ವವಿದ್ಯಾನಿಲಯಗಳ ಸಾಮೂಹಿಕ ಚಟುವಟಿಕೆಯ ಕಾರ್ಯಕ್ರಮವನ್ನು ಈಗ ಮೂರು ವರ್ಷಗಳಿಂದ ನೆರವೇರಿಸುತ್ತಾ ಬಂದಿದೆ.

೧೯೫೪ರಲ್ಲಿ ೭೦೦ ಮಂದಿ, ಮತ್ತು ೧೯೫೫ರಲ್ಲಿ ೧೧೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ಈವರ್ಷ ೩೧ ವಿಶ್ವವಿದ್ಯಾನಿಲಯದ ೧೬೦೦ ಮಂದಿ ಭಾಗವಹಿಸಿದರು. ನೊನ್ನೆ ಅಕ್ಟೋಬರದ ಕೊನೆಯ ವಾರದಲ್ಲಿ ಸಮ್ಮೇಳನವು ಜರಗಿತು.

ವಿದ್ಯಾರ್ಥಿಗಳ ಬೌದ್ಧಿಕ ಪ್ರಗತಿಯೊಂದಿಗೆ ಸಾಂಸ್ಕೃತಿಕ ಪ್ರತಿಭೆಯ ಪ್ರಕಾಶನಕ್ಕೂ ಈ ಸಮ್ಮೇಳನವು ಅವಕಾಶಮಾಡಿಕೊಟ್ಟಿದೆ. ಚಿತ್ರದಲ್ಲಿ ಮೊದಲನೆಯದು: ಬೇರೆ ಬೇರೆ ವಿಶ್ವವಿದ್ಯಾನಿಲಯಗಳ ಧ್ವಜವನ್ನು ಸಾಲಾಗಿ ಊರಿದ್ದ ಸ್ವಾಗತಮಾರ್ಗದ ದೃಶ್ಯವನ್ನು ತೋರಿಸುತ್ತದೆ— ಉಳಿದವೆಲ್ಲವೂ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನೃತ್ಯ, ಸಂಗೀತ ಮತ್ತು ನಾಟಕ ವಿನ್ಯಾಸಗಳನ್ನು ವ್ಯಕ್ತಪಡಿಸುತ್ತವೆ. ಒಟ್ಟಿನಲ್ಲಿ ಇದೊಂದು ಸಂತೋಷ ಜನಕ ಕೂಟ; ಉತ್ಸಾಹದಾಯಕ ಕಾರ್ಯಕ್ರಮ.

**ಮೂಲ್ಕಿ ಬೇಂಕ್ ಲಿಮಿಟೆಡ್,**
**ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, MULKI LTD.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**
**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. NO. M. 3818

LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬ | ಸಂಚಿಕೆ ೧೪

VOL. 36 | 6—12—1956 | NO. 14

## ಸರ್ವೋದಯ ಸಂದೇಶ

### ಸಮಾಜವಾದದ ಸಾಧನೆಗೆ ಸರ್ವೋದಯ ಸಂದೇಶದಿಂದ ಬಹಳ ಸಹಾಯವಿದೆ—ಏಕೆಂದರೆ ಜೀವನ ವಿಧಾನಕ್ಕೆ ಅದು ಮಹತ್ವವನ್ನು ಕೊಡುತ್ತದೆ

ನಮ್ಮಲ್ಲೀ ಕೆಲವರು "ಸಮಾಜವಾದದಿಂದ ಸರ್ವೋದಯದೆಡೆಗೆ ಎಂಬಂತಹ ಪ್ರವಾಸವು ತೀರ ಅಪಹಾಸ್ಯಕರವಾದುದೆಂದು ಭಾವಿಸಬಹುದೆಂದು ಕಾಣುತ್ತದೆ. ಆದರೆ, ವಾಸ್ತವದಲ್ಲಿ ಹಾಗಿಲ್ಲ. ಇದು ಬಹಳ ಮಹತ್ವಪೂರ್ಣವಾದ ಪ್ರವಾಸವೆಂದೇ ಚರಿತ್ರೆಯಲ್ಲಿ ಕೊಂಡಾಡಲ್ಪಡುವುದು ನಿಶ್ಚಯ.

ಇಂದಿನ ಎಲ್ಲ ಸಮಾಜವಾದಿ ಚಳವಳಗಾರರ ಮುಂದೆಯೂ ಕಮ್ಯೂನಿಸ್ಟರು ಸಹ ಇದಕ್ಕೆ ಅಪವಾದವಲ್ಲ—ಇರುವ ಮುಖ್ಯ ಪ್ರಶ್ನೆ ಒಂದೇ: ಏನೆಂದರೆ ತಮ್ಮ ಮುಂದೆ ತಾವೇ ಹಾಕಿಕೊಂಡಿರುವ ಆದರ್ಶಗಳನ್ನು ಸಾಧಿಸುವುದು ಹೇಗೆ? ಬ್ರಿಟನಿನಲ್ಲಿ ಕೆಲವರು ಸಮಾಜವಾದಿಗಳು ಈಚೆಗೆ ಒಂದು ಅಧ್ಯಯನವನ್ನು ಈ ಸಂಬಂಧದಲ್ಲಿ ನಡೆಸಿದರು. ಪರಿಣಾಮವಾಗಿ ಸಮಾಜವಾದಿಗಳಲ್ಲಿ ಹೆಚ್ಚಿನವರು ತಮ್ಮ ಮುಂದಿರುವ ಆದರ್ಶ ಮತ್ತು ಗುರಿಯು ಸಾಧನೆಯಾಗಬೇಕೆಂಬುದೆಲ್ಲವನ್ನೂ ಮರೆತುಬಿಟ್ಟು ಕಾದಾಟದಲ್ಲಿಯೇ ಸಮಾಜವಾದವನ್ನು ಪರಿಸಮಾಪ್ತಿಗೊಳಿಸುವರೆಂಬ ನಿರ್ಣಯಕ್ಕೆ ಅವರು ಬಂದರು.

ಅವರದೇ ವಿವರಣೆಯನ್ನೊಪ್ಪಿಕೊಳ್ಳುವುದಾದರೆ, ರಾಜಕೀಯ ಹಾಗು ಆರ್ಥಿಕ ರಂಗಕ್ಕೆ ಸಂಬಂಧಿಸಿದ ತತ್ತ್ವಗಳ ಒಣ ಚರ್ಚೆ ಮತ್ತು ಸಿದ್ಧಾಂತಗಳ ಭಾಷ್ಯವಷ್ಟೆ ಸಮಾಜವಾದವನ್ನು ನೆಲೆಗೊಳಿಸುವವರಲ್ಲಿ ವ್ಯಕ್ತವಾಗುವ ಉತ್ಸಾಹವಾಗಿದೆ. ಇದನ್ನು ಬಿಟ್ಟರೆ ಅದರ ಹೊರಗೆ ಸಮಾಜವಾದದ ತಿರುಳು ಇದ್ದೀತೆಂದು ನಂಬುವುದೇ ನಮ್ಮಲ್ಲಿ ಅನೇಕರಿಗೆ ಅಸಾಧ್ಯವೆಂದು ತೋರುತ್ತದೆ.

ಒಣ ಚರ್ಚೆ ಅಥವಾ ತಾತ್ತ್ವಿಕ ಸಮಾಧಾನದಿಂದ ದೇಶಕ್ಕಾಗಲೀ ಜನಕ್ಕಾಗಲೀ ಯಾವುದೇ ಪ್ರಯೋಜನವಾಗುವುದಿಲ್ಲ. ಸಮಾಜವಾದವೆಂಬುದು ಜೀವನ ವಿಧಾನವಾಗಿ ರೂಪುಗೊಳ್ಳದೆ ಕೆಲವು ಸಿದ್ಧಾಂತಗಳನ್ನು ಅಸ್ತವ್ಯಸ್ತವಾಗಿ ಕಾರ್ಯರೂಪಕ್ಕೆ ಪರಿವರ್ತಿಸುವ ಅವಸರದ ಕ್ರಮಗಳಲ್ಲಷ್ಟೆ ಪರಿಣಮಿಸಿದರೆ ಅದರಿಂದ ನಾವು ಯಾವದೇ ಒಳ್ಳೆಯ ಫಲವನ್ನು ಪಡೆಯಲಾರೆವು.

ಉದಾಹರಣೆಗಾಗಿ ಎಲ್ಲ ಸಮಾಜವಾದಿಗಳೂ ಕೈಗಾರಿಕೆಗಳ ರಾಷ್ಟ್ರೀಕರಣವು ಸಮಾಜವಾದಕ್ಕೆ ಹೇಳಿಸಿದ ಪ್ರಗತಿಪರ ಕ್ರಮವೆಂದು ಸಂತೋಷದಿಂದ ಹೇಳಿಕೊಳ್ಳುತ್ತಾರೆ; ಮತ್ತು ಒಪ್ಪಿಯೂ ಒಪ್ಪುತ್ತಾರೆ. ಆದರೆ ಇಲ್ಲಿ ಕೊರತೆಯೊಂದಿದೆ- ಅದೇನೆಂದರೆ, ರಾಷ್ಟ್ರೀಕರಣವನ್ನು ಸಮಾಜವಾದವನ್ನು ನೆಲೆಗೊಳಿಸಲು ಸಹಾಯಕವಾದ ಒಂದು ಆರ್ಥಿಕ ಸಾಧನ ಎಂಬ ಭಾವನೆಯು ನಮ್ಮಲ್ಲಿ ಮಾಯವಾಗಿದೆ! ರಾಷ್ಟ್ರೀಕರಣವೇ ಸಮಾಜವಾದದ ತಿರುಳು ಎಂಬಂತಹ ತಪ್ಪು ಕಲ್ಪನೆಯು ಮರೆಮಾಡಿಕೊಂಡಿದೆ.

ರಾಷ್ಟ್ರೀಕರಣಕ್ಕೂ ಸಮಾಜವಾದಕ್ಕೂ ನಿಕಟವಾದ ಸಂಬಂಧವಿರುವುದೇನೂ ಇಲ್ಲ. ಆದರೆ ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಮಾಡಿದ್ದೇವೆಂಬ ತಾತ್ತ್ವಿಕ ಸಮಾಧಾನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾತ್ರಕ್ಕೆ ದೇಶದಲ್ಲಿ ಸಮಾಜವಾದಿ ಆದರ್ಶವನ್ನು ಸ್ಥಾಪಿಸಿದ ಹಾಗಾಗುವುದಿಲ್ಲ. ರಾಷ್ಟ್ರೀಕೃತ ಕೈಗಾರಿಕೆಯನ್ನು ಸಮಾಜವಾದಿ ಆದರ್ಶ ಸಾಧನೆಗೆ ಸಹಾಯಕವಾದ ರೀತಿಯಲ್ಲಿ ಬಳಸಲೂ ನಾವು ಕಲಿಯಬೇಕು. ಇಂದು ಹಾಗೆ ಯಾರೂ ಕಷ್ಟಪಡಲು ಹೋಗಿಲ್ಲ.

ಕೈಗಾರಿಕೆಗಳನ್ನೆಲ್ಲ ರಾಷ್ಟ್ರೀಕರಿಸಿಬಿಟ್ಟ ಮಾತ್ರಕ್ಕೆ ಸಮಾಜವಾದಿ ಗುರಿಯನ್ನು ಸೇರಿದಂತಾಯಿತೆಂಬುದು ಕೇವಲ ಭ್ರಮೆ—ಅನುಭವವೆಂದಿಗೂ ಈ ಭ್ರಮೆಯನ್ನಿರಿಸಿಕೊಳ್ಳುವುದು ಯೋಗ್ಯವೆಂದು ಹೇಳದು. ರಶ್ಯದಲ್ಲಿ ರಾಷ್ಟ್ರೀಕರಣದ "ಭೀಕರ" ಕ್ರಮಗಳನ್ನು ಕೈಗೊಳ್ಳಲಾಯಿತು—ಸಮಾಜವಾದವನ್ನು ಸ್ಥಾಪಿಸಲಿಕ್ಕಾಗಿಯೇ ಹೀಗೆ ಮಾಡಿದರು. ಆದರೆ ನಿಜವಾಗಿ ಆದುದೇನು? ಸಮಾಜವಾದ ನೆಲೆಗೊಳ್ಳುವ ಬದಲು ಸರಕಾರಿ ಬಂಡವಾಳ ಶಾಹಿತ್ವಕ್ಕೆ ಈ ಕ್ರಮಗಳಿಂದ ಇಂಬು ಸಿಕ್ಕಿತು.

ನಮ್ಮ ದೇಶದಲ್ಲಿಯೇ ಏನಾಗಿದೆ, ಏನಾಗುತ್ತಿದೆ ಎಂದು ನೋಡೋಣ! ನಮ್ಮಲ್ಲಿ ಇನ್ಶ್ಯೂರೆನ್ಸ್, ಬ್ಯಾಂಕಿಂಗ್ ಮತ್ತು ಯಾಂತ್ರಿಕ ಸಾಧನ—ಸಲಕರಣೆಗಳ ಕ್ಷೇತ್ರದಲ್ಲಿ ರಾಷ್ಟ್ರೀಕರಣವನ್ನು ಕೆಲಮಟ್ಟಿಗೆ ಕೈಗೊಳ್ಳಲಾಗಿದೆ. ಆದರೆ ಇವುಗಳಲ್ಲಿ ಯಾವುದರಲ್ಲೆ ಆಗಲೀ, "ಆರ್ಥಿಕ ಪ್ರಜಾಪ್ರಭುತ್ವ" ಎಂಬಂತಹ ಅಂಶವಿದೆಯೆ" ಗ್ರಾಹಕರಿಗಾಗಲೀ ಸ್ವತಃ ಉತ್ಪಾದಕ ಕಾರ್ಯದಲ್ಲಿ ನಿರತರಾದ ಕೆಲಸಗಾರರಿಗಾಗಲೀ ಈ ರಾಷ್ಟ್ರೀಕೃತ ಉದ್ಯಮಗಳಲ್ಲಿ ಏನಾದರೂ ಧ್ವನಿ ಇದೆಯೆ?— ಇಲ್ಲ! ರಾಷ್ಟ್ರೀಕೃತ ಕೈಗಾರಿಕೆಗಳೆಲ್ಲವೂ ಕೆಲವೇ ಮಂದಿ ಸರಕಾರದಿಂದ ನಿಯುಕ್ತರಾದ ಮಹಾನುಭಾವರಿಂದ ನಡೆಸಲ್ಪಡುತ್ತವೆ. ಇದೆಂದೂ ಸಮಾಜವಾದಕ್ಕೆ ಪೋಷಕವಾದ ರಾಷ್ಟ್ರೀಕರಣವಲ್ಲ.

ಯುರೋಪಿನಲ್ಲಿ, ರಶ್ಯದ ಪ್ರಭಾವಲಯದಿಂದ ಹೊರಬಿದ್ದ ಬಳಿಕ, ಯುಗೊಸ್ಲಾವಿಯವು ಕಳೆದ ಮೂರು—ನಾಲ್ಕು ವರ್ಷಗಳಿಂದ ಕೈಗಾರಿಕೆಗಳಲ್ಲಿ "ಕೆಲಸಗಾರರ ಆಡಳಿತೆ"ಯನ್ನು ಪ್ರಯೋಗಾತ್ಮಕವಾಗಿ ಕೈಗೊಂಡಿದೆ. ಇದು ಬಹಳ ಜಯಪ್ರದವಾದ ಪರಿಣಾಮಗಳನ್ನು ನೀಡಿದೆ. ನಮ್ಮ ದೇಶದಲ್ಲಿ ಸಹ ರಾಷ್ಟ್ರೀಕೃತ ಕೈಗಾರಿಕೆಗಳಲ್ಲಿ ಹಾಗೆಯೇ ಇತರ ಸ್ವತಂತ್ರ ಕೈಗಾರಿಕೆಗಳಲ್ಲಿ ಸಹ ಇಂತಹ ಪ್ರಯೋಗ ನ್ನೇಕೆ ನಡೆಸಬಾರದು? ಪ್ರಾರಂಭದ ಸಣ್ಣ ಕೈಗಾರಿಕೆಯೊಂದನ್ನು ಈ ಪ್ರಯೋಗಕ್ಕೆ ಗುರಿಪಡಿಸಿ ನೋಡಬಹುದು. ಅಲ್ಲದೆ ಇಂತಹ ಸಾಹಸಕ್ಕೆ ಇದು ಪಕ್ವವಾದ ಕಾಲ; ಮತ್ತಿದು ಸಮಾಜವಾದಿ ಆದರ್ಶಕ್ಕೆ ತುಂಬಿ ಹೊಂದಿಕೊಂಡಿರುವ ವಿಷಯವೂ ಹೌದು.

ಸಮಾಜವಾದವನ್ನು ತಾತ್ತ್ವಿಕ ಕ್ಷೇತ್ರದಲ್ಲಿ ನಿತ್ಯ ವ್ಯವಹಾರದ ರಂಗಕ್ಕೆ ಒಯ್ಯುವ ನಮ್ಮ ಪ್ರಯತ್ನದಲ್ಲಿ ಬೇರೆ ಕೆಲವು ಅಡೆತಡೆಗಳೂ ಬರುವುದುಂಟು. ಉದಾಹರಣೆಗೆ, ಸಮಾಜವಾದವನ್ನು ಒತ್ತಾಯವಿಲ್ಲದೆ, ಹೀಗೆಯೇ ಮನವೊಲಿಸುವಿಕೆಯಂತಹ ತೀರ ಶಾಂತವಾದ ಮತ್ತು ಅಪಾಯರಹಿತವಾದ ರೀತಿಯಿಂದ ಸ್ಥಾಪಿಸಬಲ್ಲೆವೆ? ಒತ್ತಾಯವು ಅಗತ್ಯವೇ ಹೌದಾದರೆ ಅದೆಷ್ಟು ತೀವ್ರವೂ ಗಾಢವೂ ಆಗಿರಬೇಕು?

ರಶ್ಯದಲ್ಲಿ ಸಮಾಜವಾದವನ್ನು ಸ್ಥಾಪಿಸುವ ಉತ್ಸಾಹ ಭರದಲ್ಲಿ ಒತ್ತಾಯದ ಸಾಧನವನ್ನು ಬಹಳವಾಗಿ ಬಳಸಿಕೊಳ್ಳಲಾಗಿದೆ. ಎಲ್ಲಿಯವರೆಗೆ ಈ ಒತ್ತಾಯವು ವ್ಯಾಪಿಸಿತ್ತೆಂದರೆ, ಈ ಅತಿರೇಕ ಉತ್ಸಾಹವನ್ನು ಪ್ರತಿಭಟಿಸಿದವರೆಲ್ಲರೂ ವೈರಿಗಳೆಂದೆನಿಸಿಕೊಳ್ಳುತ್ತಿದ್ದರು; ಮತ್ತು ಬೇಹಾಂತ ದಂಡನೆಗೆ ಗುರಿಯಾಗಿ ಕೊಲ್ಲಲ್ಪಡುತ್ತಿದ್ದರು. ಇಂದಾದರೂ ಇದೇ ಪರಿಸ್ಥಿತಿಯು ಅಲ್ಲಿ ಮುಂದುವರಿದಿದೆ. ಸರಕಾರಿ ಸೂತ್ರಚಾಲಕರ ಸಮಾಜವಾದಿ ಆದರ್ಶದ ಕಲ್ಪನೆಗೆ ಸ್ವಲ್ಪ ಮಾತ್ರ ಭಿನ್ನಾಭಿಪ್ರಾಯವಿರುವ ವ್ಯಕ್ತಿಯು, ಸಾಮಾನ್ಯ ಪ್ರಜೆಯಾಗಿಯೇ ಇರಬೇಕೆಂದಿಲ್ಲ, ಎಷ್ಟೇ ಪ್ರತಿಷ್ಠಿತನು ಆತನು ಗುಂಡಿ-ಕೊಲ್ಲಲ್ಪಡುತ್ತಾನೆ, ಅಥವಾ ನಾನಾ ಬಗೆಯ ಮುಖಭಂಗಕ್ಕೆ ಗುರಿಯಾಗುತ್ತಾನೆ! ನಿತ್ಯವೂ ಚಿತ್ರಹಿಂಸೆಯನ್ನು ಅನುಭವಿಸುವ ದುರ್ದೈವ ಆತನದಾಗುತ್ತದೆ.

ಆದರೆ ಇಲ್ಲಿ ಒತ್ತಾಯವನ್ನು ಹೇರುವುದೇತಕ್ಕೆ? ಸಮಾಜವಾದ ಸ್ಥಾಪನೆಯು ಒತ್ತಾಯವಿಲ್ಲದಿದ್ದರೆ ಸಾಧ್ಯವೇ ಇಲ್ಲವೆ? ರಶ್ಯದಲ್ಲಿರುವಂತಹ ಭೀಕರವಾದ ಒತ್ತಾಯವು ಒಳ್ಳೆಯದಲ್ಲ —ಆದರೆ ಒತ್ತಾಯವಿಲ್ಲದೆನೇ ಸಾಮಾನ್ಯ ಸರಕಾರವೊಂದು

(೧೨ನೇ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31—10—1955)
ರೂಪಾಯಿ:- 76 ಲಕ್ಷ
ಒಟ್ಟು ಚಲಾವಣೆ ಮೊಬಲಗು
ಇಂದು:— (31—10—1956)
ರೂಪಾಯಿ:- ಒಂದು ಕೋಟಿಗೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

ವಾರ್ಷಿಕ ಚಂದಾ:
NAVAYUGA WEEKLY UDIPI
ಬಿಡಿಸಂಚಿಕೆ

## ವಿಚಾರದ ಕಿಡಿ

# ಪ್ರತಿಭೆಯನ್ನು ಬೆಳಗಿಸಲಿಕ್ಕೆ ಪ್ರಚೋದಕ ಶಕ್ತಿಯಾಗಿ ಆತ್ಮ ಸಂಕಲ್ಪ ವಿರಲಿ!

ಮಾನವ ಜೀವಿಗೆ ಅನೇಕ ಮೂಲಗಳಿಂದ ಪೂರ್ವಾಪರ ವಿಷಯಗಳನ್ನು; ವಿಮರ್ಶಾತ್ಮಕರೀತಿಯಲ್ಲಿ ಜಗತ್ತಿನ ಆಗುಹೋಗುಗಳ ಕೆಲವು ಘಟನೆಗಳ ನಿದರ್ಶನದಿಂದ ತಾರ್ಕಿಕವಾಗಿ ತಿಳಿದುಕೊಳ್ಳುವ ಬುದ್ಧಿಶಕ್ತಿಯಿದೆ. ಅರಿವಿದೆ. ಕೇಳಿ ತಿಳಿಯುವ, ನೋಡಿಕಲಿಯುವ, ಓದಿ ಅನುಭವಪಡೆವ ಜ್ಞಾನಶಕ್ತಿಯಿದೆ. ಆದರೆ ಈ ಶಕ್ತಿ ಆತನಲ್ಲಿ ಸುಪ್ತಾವಸ್ಥೆಯಲ್ಲಿದ್ದು ಅದಕ್ಕೆ ಬೇಕಾದ ಪ್ರಚೋದಕ ಶಕ್ತಿಯ ಅನುಕೂಲವಿರದೆ ಅಥವಾ ಆವರ ಮನೋವಿಕಾಸಕ್ಕೆ ಬೇಕಾದ ಸಹಾಯ, ಸಲಕರಣೆಗಳಿಲ್ಲದೆ, ವಿದ್ಯೆಯಿಲ್ಲದೆ ಆ ಬುದ್ಧಿಶಕ್ತಿಯು ಬೂದಿಮುಚ್ಚಿದ ಕೆಂಡದಂತೆ ಒಳಗೊಳಗೆ ಉರಿದು ಕೊನೆಗೆ ನಂದಿಹೋಗುವ ತೆರದಿ ನಿಷ್ಪ್ರಯೋಜಕವಾಗುತ್ತದೆ. ಹೇಗೆ ಗಂಧದ ಕೊರಡು ಪರಿಮಳಯುಕ್ತವಾಗಿದೆ ಯಾದರೂ ಅದನ್ನು ಕಲ್ಲಿಗೆ ತಿಕ್ಕಿ ಅರೆಯದೆ ಅದರ ಪರಿಮಳ ಹೊರಸೂಸದೋ ಅಂತೆಯೇ ನಮ್ಮ ಬುದ್ಧಿಶಕ್ತಿ! ಹಳ್ಳಿಯ ಬಡಜೀವಿಗಳಲ್ಲಿರುವ ಎಂತಹ ಅಮೂಲ್ಯವಾದ ಬುದ್ಧಿಶಕ್ತಿ, ಜ್ಞಾನಶಕ್ತಿ ಯಾವರೂಪ ಯಾವುದೊಂದೂ ಬಗೆಯ ಪ್ರತಿರೂಪವಾಗಿ ಪರರಿಗೆ ಪ್ರಯೋಜನವಾಗದೆ,— ಹೆಚ್ಚೇಕೆ? ಸ್ವಯಂ ಜೀವನಕ್ಕೆ ನ್ಯಾಯವಾದ ರೀತಿಯಲ್ಲಿ ಸಹಕಾರಿಯಾಗದೆ ನಿಷ್ಫಲವಾಗಿ ಉಳಿಯುತ್ತದೆ. ವಿದ್ಯೆಯ ಗಾಳಿಸೋಂಕದನೇ ತಮ್ಮ ಬಾಳ್ವೆಯನ್ನು ಕೊನೆಗೊಳಿಸುವ ಒಡಜೀವಿಗಳಲ್ಲಿ ಪೂರ್ವಾರ್ಜಿತ ಫಲವಾಗಿ ಸಿದ್ಧಿಯಾದ ಒಂದೊಂದು ಬಗೆಯ ಹುಟ್ಟು ಕಲೆಗಳು, ಶಿಕ್ಷಣ ಅಸಾಧ್ಯತೆಯಿಂದಲೂ, ಅಭ್ಯಾಸದಿಂದ ವೃದ್ಧಿಪಡಿಸಿಕೊಳ್ಳುವ ಅನುಕೂಲತೆ ಇರದೆಯೂ, ಪ್ರೋತ್ಸಾಹ ಪುರಸ್ಕಾರಗಳ ಸಹಕಾರವಿರದೆಯೂ ಬೆಳಕಿಗೆ ಬಾರದೆ ಮಣ್ಣಡಿಯಲ್ಲಿರುವ ನಿಧಿಯಂತೆಯೇ ನಾಶಹೊಂದುತ್ತವೆ.

ಇಂತಹ ಹುಟ್ಟುಕಲೆಗಳನ್ನು ವೃದ್ಧಿಪಡಿಸಲು ಅಭ್ಯಾಸಬಲದಿಂದಲೂ, ಸಾಧನೆ ಹಟದಿಂದಲೂ ಸಾಧ್ಯವಿದೆ. ಎಂಬುದನ್ನು ಮನದಟ್ಟು ಮಾಡಲು ಹೆಚ್ಚಿನ ವಿವರಣೆ ಅಗತ್ಯವಿಲ್ಲ. ಕವಿಶ್ರೇಷ್ಠನಾದ ಕಾಳಿದಾಸನ ಜೀವನವೇ ನಮಗೊಂದು ನಿದರ್ಶನವಾಗಿದೆ. ಜ್ಞಾನಿಯಾಗಲು, ವಿದ್ವಾಂಸನಾಗಲು ನಾವು ಉತ್ತಮ ಕುಲದಲ್ಲೇ ಜನ್ಮವೆತ್ತಬೇಕಾಗಿಲ್ಲ. ಸಾಧನೆ ಅನುಕರಣೆಯಿಂದ ಜೀವನಸಾರ್ಥಕತೆಯ ಚಿಂತನೆಯಿಂದ ಗುರಿಮುಟ್ಟಬೇಕೆಂಬ ಹಟವಿರಲು; ಧನ ವ್ಯಯದಿಂದಲೇ ಸಂಪಾದಿಸುವ ವಿದ್ಯೆ ಪಡೆಯಲು ಅಸಾಧ್ಯವೆನಿಸಿದಾಗಲೂ, ಉತ್ತಮರ ಮಹಾತ್ಮರ ವಿದ್ವಾಂಸರ ಮಾದರಿಗಳನ್ನನುಸರಿಸಿ ಅವರಂತೆಯೇ ನಾವೂ ತಲೆಯೆತ್ತಿ ನಡೆಯಬೇಕೆಂಬ ಹಟದಿಂದ ಜೀವನವನ್ನು ಪರಿವರ್ತನೆಗೊಳಿಸಿ ಕೊಂಡಲ್ಲಿ ನಾವೂ ಪ್ರಗತಿ ಪಥದಲ್ಲಿ ಮುನ್ನಡೆದು ಕೀರ್ತಿಭಾಜನರಾಗಲು ಸಾಧ್ಯವಿದೆ. ಆದರ್ಶಜೀವಿಯಾಗಿ ಬಾಳಲು ಬೇಕಾದ ದಾರಿಯೂ ಇದೆ. ಮೂಢ ಕುರುಬನೊಬ್ಬ ಸಾಧನೆ ಭಕ್ತಿಯಿಂದ ಜೀವನವನ್ನೇ ಪರಿವರ್ತನೆಗೊಳಿಸಿ ಮಹಾ ಕವಿಯಾಗಿ ಬಾಳಿ ಅಮರನಾಗಿಲ್ಲವೇ? ಇಂತಹ ಉದಾತ್ತ ಭಾವನೆ, ಆಶಯಗಳನ್ನು ನಾವು ಮನಸ್ಸಿನಲ್ಲಿ ನಿಶ್ಚಲವಾಗಿರಿಸಿಕೊಂಡು ನಾವೂ ಆದರ್ಶರಾಗಿ ಬಾಳೋಣ; ಪರಹಿತಸಾಧಕರಾಗಿ ಮಹಾ ಪುರುಷರ ಅಮೃತವಾಣಿಯನ್ನು ಆಸ್ವಾದಿಸಿ ಅಂತೆಯೇ ಜೀವನ ಪರಿವರ್ತಿಸಿ ಕೊಳ್ಳೋಣ! ನಮ್ಮ ಹುಟ್ಟು ಕಲೆಗಳನ್ನು ಬೆಳಗಿಸಬೇಕಾದರೆ ಹಟವಾದಿಗಳಾಗಿ ನಮ್ಮ ಮನಸ್ಸನ್ನು ನಾವೇ ಪ್ರಚೋದಿಸಿಕೊಳ್ಳುವ ಭಾವನೆಯಿಂದ ಜೀವನವನ್ನು ಪರಿವರ್ತಿಸಿಕೊಳ್ಳಬೇಕು. ಬರೇ ಹಣ ವ್ಯಯದಿಂದ ವಿದ್ಯಾರ್ಥಿಯಾಗಿ ಸಫಲೀಭೂತನಾದವನೇ ಪ್ರಾಜ್ಞನೆನಿಸಲಾರ. ಉತ್ತಮನೆನಿಸಲಾರ, ಆದರ್ಶಜೀವಿಯಾಗಲಾರ ವಿದ್ಯಾವಂತರೇ ಪ್ರಾಜ್ಞರು, ಅವಿದ್ಯಾವಂತರು ಅಜ್ಞರು ಎಂಬ ಭಾವ ನಮ್ಮ ಜನತೆಯಲ್ಲಿದೆ. ಇದು ಒಪ್ಪಲಾರದ ವಿಷಯ. ಅಲ್ಪ ವಿದ್ಯೆಯುಳ್ಳವನೂ ಅಭ್ಯಾಸಬಲದಿಂದ, ಸಾಧನೆಯಿಂದ ಅನುಕರಣೆಯಿಂದ, ಕುತೂಹಲದಿಂದ ತನ್ನ ಜೀವನವನ್ನು ಪರಿವರ್ತಿಸಿಕೊಂಡು ಒಬ್ಬ ಮಹಾ ವಿದ್ವಾಂಸನಾಗಲು ಜ್ಞಾನಿಯಾಗಲೂ ಸಾಮಾನ್ಯನಿಗೂ ಸಾಧ್ಯವಿದೆ. ಎಂಬುದನ್ನು ಕವಿ ಕಾಳಿದಾಸರಂತಹ ಅನೇಕ ಆದರ್ಶಜೀವಿಗಳಿಂದ ತಿಳಿದುಕೊಳ್ಳಬಹುದು. ಇಂತಹ ಆದರ್ಶಜೀವಿಗಳನ್ನು ಅನುಸರಿಸಿ ನಾವೂ ಅಂತಾಗಬೇಕೆಂಬ ಸಾಧಕರಾಗಿ ವಿಚಾರ ಪ್ರಚೋದನೆಗಳಿಗೆ ಮನಸ್ಸನ್ನು ಹರಿಯಗೊಟ್ಟು ನೈತಿಕ ಬೆಳವಣಿಗೆಗಾಗಿ ಧಾರ್ಮಿಕ ಬೋಧನೆಗಳನ್ನು ಅರಿತುಕೊಳ್ಳಬೇಕು. ಬಲ್ಲಿದರೊಡನೆ ತಾರ್ಕಿಕವಾಗಿ ವಿಚಾರ ವಿಮರ್ಶೆಗಳನ್ನು ಮಾಡಿ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ತಿಳಿಯದುದನ್ನು ಕೇಳಿ ತಿಳಿದುಕೊಳ್ಳಬೇಕು.

ಅಭ್ಯಾಸಬಲದಿಂದಲೇ ಓದನ್ನು ವೃದ್ಧಿಗೊಳಿಸಿ ಕೈಗೆಸಿಕ್ಕಿದ ಪುಸ್ತಕಗಳನ್ನು ಓದಿ ಉತ್ತಮ ವಿಷಯಗಳನ್ನು ಮನಸ್ಸಿನಲ್ಲಿ ಸಂಗ್ರಾಹ್ಯವಾಗಿಟ್ಟುಕೊಳ್ಳಬೇಕು. ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಮುಗಿಸಿ ಬಿಡುವಿನ ಸಮಯವನ್ನು ಓದಿಗಾಗಿ ಮೀಸಲಿಡಬೇಕು. ಪುಸ್ತಕ, ಪತ್ರಿಕೆಗಳನ್ನು ಓದಿ ವಿದ್ವತ್ತನ್ನು ಹೆಚ್ಚಿಸಿಕೊಳ್ಳಬೇಕು.

ಬುದ್ಧಿಜೀವಿಯಾದ ಮಾನವನು ಬರೀ ಐಹಿಕ ಸುಖವನ್ನೇ ಅಪೇಕ್ಷಿಸಿ ಬದುಕುವ ದಾರಿಯೊಂದನ್ನೇ ತನ್ನ ಜೀವನದಲ್ಲಿ ಕಂಡುಕೊಳ್ಳುವನೇ ಹೊರತು, ಪೂರ್ವಾರ್ಜಿತ ಸುಕೃತದಿಂದ ಮಾನವ ಜೀವಿಯಾಗಿ ಹುಟ್ಟಿದಾತನು ತನ್ನ ಕೀರ್ತಿಕಾರ್ಯವನ್ನು ಈ ಜಗತ್ತಿನಲ್ಲಿ ಬಿಟ್ಟು ಹೇಗೆ ಮುಕ್ತಿಯನ್ನು ಪಡೆಯಬೇಕು? ಎಂಬುದನ್ನು ಅರಿಯಲಾರ. ಜೀವನದಲ್ಲಿ ಸ್ವಯಂ ಸುಖವನ್ನೇ ಸಾಧಿಸದೆ ಪರಹಿತ ಸಾಧಕನಾಗಿ ಧರ್ಮಸಹಿತವಾದ ಕರ್ಮವನ್ನು ಮಾಡುವ ಬಗೆಯನ್ನು ತಿಳಿಯಲಾರ ಜಗತ್ತಿನ ಕಾರ್ಯರಂಗದಲ್ಲಿ ನಾವು ವಿದ್ಯಾವಂತರಾಗಿಯೇ ಜನಸೇವೆ, ದೇಶಸೇವೆ ಮಾಡಬೇಕಾಗಿಲ್ಲ. ಪದವೀಧರರಾದವರೇ ಧರ್ಮಾತ್ಮರಾಗಿ, ವಿದ್ವಾಂಸರಾಗಿ ಜ್ಞಾನಿಗಳಾಗಿಯೇ ಜಗತ್ತಿನಲ್ಲಿ ಬೆಳಕಿಗೆ ಬರಲು ಸಾಧ್ಯವೆಂಬ ನಿಯಮವೂ ಇಲ್ಲ. ಅವಿದ್ಯಾವಂತರು ಅದಕ್ಕಾಗಿ ಅಳುಕಿ ಹಿಂಜರಿಯುವುದು ಸರಿಯಲ್ಲ. ಧರ್ಮದ ಸೂಕ್ಷ್ಮವನ್ನರಿತು ಅನ್ಯರಿಗೆ ಉಪದ್ರಕಾರಕರಾಗದೆ ಪರಹಿತ ಸಾಧಕರಾಗಿ ಬಾಳುವುದೂ ಅದೊಂದು ಮಹಾ ಸೇವೆಯೆನಿಸುವುದು. ಜಗತ್ತಿನ ಏಳಿಗೆಗಾಗಿ ಜನ್ಮವೆತ್ತಿದ ಮಹಾತ್ಮರ, ಧರ್ಮಾತ್ಮರ ಜೀವನವನ್ನು ತಿಳಿದು ಅವರು ಸಾರಿದ ಬುದ್ಧಿ ಬೋಧನೆ, ತತ್ವಗಳನ್ನು ಅರಿತು ಅಂತೆ ನಡೆಯಲು ನಮ್ಮ ಜೀವನವನ್ನು ಪರಿವರ್ತಿಸಿಕೊಳ್ಳುವುದೂ ಜೀವನದ ಗುರಿಮುಟ್ಟಲು ಒಂದು ಯೋಗ್ಯ ಸಾಧನ. ಇದಕ್ಕೆ ಮಾದರಿಯಾಗಿ ಭಗವದ್ಭಕ್ತರಾದ ಪುರಂದರದಾಸ, ಕನಕದಾಸರೇ ಮೊದಲಾದವರು ನಮಗೆ ಹಿರಿಯ ಗುರುಗಳಾಗಿದ್ದಾರೆ, ಎಂದಾಗ ಹೆಚ್ಚಿನ ಹರಟೆಯೇಕೆ? ತಿಳಿದುಕೊಳ್ಳುವುದಾದರೆ,— "ಕೋಲೆಗಡುಕನಾದ ವಾಲ್ಮೀಕಿ ಮಹಾಕವಿ ಋಷಿಯ" ಜೀವನ ಪರಿವರ್ತನೆಯೇ ಸಾಲದೆ ನಮಗೆ? ಇಂತಹ ಆದರ್ಶಜೀವಿಗಳ ಮಾರ್ಗದರ್ಶನದಿಂದಲೇ ನಾವು ಪ್ರಗತಿಪಥದಲ್ಲಿ ಮುನ್ನಡೆದು ಉತ್ತಮರಾಗಿ, ವಿದ್ವಾಂಸರಾಗಿ ಬಾಳಬಹುದು. ನಮ್ಮ ಹುಟ್ಟು ಅಭಿರುಚಿಗನುವಾದ ಬುದ್ಧಿಶಕ್ತಿಯನ್ನು ವೃದ್ಧಿಪಡಿಸಿಕೊಂಡು ನಮಗೆ ಯುಕ್ತವಾದಂತೆ, ಸಾಧ್ಯವಿದ್ದಂತೆ ಸಮಾಜಸೇವೆಯನ್ನು ಮಾಡಬಹುದು. ಬಡವ ಸಿರಿವಂತರೆನ್ನದೆ ಇಂದು ಹೆಚ್ಚಾಗಿ ಜನತೆ ಕ್ಷಣಿಕ ಸುಖವನ್ನರಸಿಕೊಂಡು ಧನ ಸಂಗ್ರಹದ ದಾರಿಯನ್ನೇ ಹುಡುಕುತ್ತಿರುವರಲ್ಲದೆ, ಸತ್ಯಶೋಧನೆ, ಧರ್ಮಾಚರಣೆ, ಜೀವನ ಸಫಲತೆ ಇವು ಹೇಗೆ ಸಾಧ್ಯ? ತಮ್ಮಲ್ಲಿರುವ ಜ್ಞಾನದ ತಿರುಳನ್ನು, ಜನತೆಯ ಹಿತಕ್ಕಾಗಿ ಹೇಗೆ ಯಾವ ರೂಪದಲ್ಲಿ ನೀಡಬೇಕೆಂಬುದನ್ನು ಅರಿತು ನಡೆವವರೇ ವಿರಳ. ವಿದ್ಯಾವಂತರೂ ಈ ತೆರನಾದ ಆದರ್ಶಜೀವನವನ್ನು ಒಪ್ಪಲಾರರು! ಸುಧಾರಣೆಯ ನೆಪದಲ್ಲಿ ಬಡ ಜನತೆಯನ್ನು ಪೀಡಿಸುವುದೇ ಅವರಿಗೊಂದು ಹಿರಿಮೆ. ಇಂದಿನ ವಿದ್ಯಾವಂತ ಯುವಕರು, 'ಫೇಶನ್ ಆಡಂಬರ, ಡೌಲು, ಡಂಬ, ಅತಿವ್ಯಯಮಾಡಿ ಮೆರೆಯುವುದು, ಅವಿದ್ಯಾವಂತರನ್ನು ತಿರಸ್ಕಾರ ಭಾವದಿಂದ ಕಾಣುವುದು' ಇವೇ ಸುಧಾರಣೆಯ ಮೂಲವೆಂದು ತಿಳಿದುಕೊಂಡಿದ್ದಾರೆ. "ಶಿಕ್ಷಣವೆಂದರೆ ಬರೇ ಓದಲ್ಲ!— ಅದು ಮಾನವತೆಯಲ್ಲಿ ವಿಕಾಸವನ್ನುಂಟುಮಾಡುವ ಸಾಧನ"ವೆಂದು ಸ್ವಾಮಿ ವಿವೇಕಾನಂದರು ಹೇಳಿರುವರು. ಮಾನವತೆಯ ವಿಕಾಸವೇ ಜೀವನದ ಪರಿವರ್ತನೆ. ಧರ್ಮ, ಸತ್ಯ, ತ್ಯಾಗ, ಶೀಲ ಮೊದಲಾದ ಉತ್ತಮ ಗುಣಗಳಿಂದ ಕೂಡಿದ ಬಾಳು ಕಷ್ಟಮಯವಾಗಿ ಕೊನೆಗೊಂಡರೂ ಅಮರವಾದ ಪರ ಸುಖವನ್ನು ಇದರಿಂದ ಪಡೆಯಬಹುದು. ಎಂಬ ಬುದ್ಧಿಯನ್ನು ತಿಳಿದುಕೊಂಡಲ್ಲಿ ನಾವು ಪಡೆದ ಶಿಕ್ಷಣವು ಸಾರ್ಥಕವಾದಂತೆ, "ಅಂತರಾತ್ಮನ ಪ್ರೇರಣೆಯೇ ಮಾನವ ಜೀವನದಲ್ಲಿ ಅನೇಕ ಪರಿವರ್ತನೆಯನ್ನುಂಟುಮಾಡುತ್ತದೆ." ಎಂಬುದು ಬಲ್ಲವರ ಮಾತು. ಉದಾಹರಣೆಗಾಗಿ ಧನಸಂಗ್ರಹಮಾಡಿ ತಾನು ಐಶ್ವರ್ಯವಂತನಾಗಬೇಕೆಂಬ ಅತಿಕಾಂಕ್ಷೆ ಮನಸ್ಸಿನಲ್ಲಿ ಮೂಡಿದಾಗ ಅಂದರೆ ಆತ್ಮಪ್ರೇರಣೆಯಾದಾಗ ಮಾನವನು ಕಳ್ಳತನ ಮಾಡಲು, ಅನ್ಯರನ್ನು ವಂಚಿಸಲು, ಮಳ್ಳ ಮೋಸದಿಂದ ಸುಲಿಯಲು ತನ್ನ ಮನಸ್ಸನ್ನು ಹೇಗೆ ಪರಿವರ್ತಿಸಿಕೊಂಡು

(೧೧ನೇ ಪುಟ ನೋಡಿರಿ)


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.



ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧಿ

ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಪಾಕೆಟ್ ಡಾಕ್ಟರ್

ಅಮೃತಾಂಜನ ಲಿ ಬೊಂಬಾಯಿ, ಮದರಾಸು, ಕಲ್ಕತ್ತಾ

# ಗುರು ಶಿಷ್ಯ ಸಂಬಂಧ

## ವಿದ್ಯಾರ್ಥಿಯಲ್ಲಿ ಶಿಕ್ಷಕನ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ ವ್ಯಾಸಂಗವೇ ನಿಷ್ಪ್ರಯೋಜಕ

### ಉತ್ತಮ ಶಿಕ್ಷಣವೇ ಬಾಳ್ವೆಯ ತಳಗಟ್ಟು

"ನಾನು ಹುಟ್ಟಿದ್ದೇನೆ ಏಕೆ?" 'ಸಾಯಲಿಕ್ಕೆ!'

ಬಹಳ ಸುಲಭದ ಉತ್ತರ. ನನ್ನ ಒಳದನಿಗೆ ನಾನು ಈ ಪ್ರಶ್ನೆ ಹಾಕಿದೆ. ಆಗ ಅದು "ನೀನು ಸಾಯಲಿಕ್ಕಲ್ಲ; ಬದುಕಲಿಕ್ಕೆ: ಬಾಳಿ ಬಾಳು ಸಾಗಿಸಲಿಕ್ಕೆ ಹುಟ್ಟಿ ಬಂದಿರುವೆ" ಎಂದ. ದೃಢವಾಗಿ ಉತ್ತರ ಕೊಟ್ಟಿತು. ರೈತನೊಡನೆ ಉಳುವುದೇಕೆಂದು ಕೇಳಿದರೆ ಉಣ್ಣಲಿಕ್ಕೆಂದು ಹೇಳುತ್ತಾನೆ. ಉತ್ತರೆ ಉಣ್ಣಲಿಕ್ಕಾಗುತ್ತದೋ! ಉತ್ತು ಬತ್ತ ಬಿತ್ತಿ ಅದು ನೀರಿಕೆ ಎತ್ತಿ ಎತ್ತರಕ್ಕೆ ಬೆಳೆದು ತೆನೆಬಿಟ್ಟುಕೊಟ್ಟ ಬತ್ತವನ್ನು ಅಕ್ಕಿ ಮಾಡಿ ಬೇಯಿಸಿ ಅನ್ನ ಮಾಡಬೇಕು ಉಣ್ಣಲು ರೈತನ ಉತ್ತರ ಈ ಮಧ್ಯದ ವಿದ್ಯಮಾನ ಬಿಟ್ಟು ಕಟ್ಟ ಕಡೆಗೆ ಸಿಗುವ ಊಟದ ಕಡೆಗೆನೇ ಹೋಗಿದೆ ಅರ್ಥಾತ್ ಉತ್ತುದಕ್ಕೆ ಸಿಗುವ ಫಲವೇ ಊಟ. ಅಂತೆಯೇ ಹುಟ್ಟಿದ್ದು ಕೂಡಾ ಹುಟ್ಟಿನ ಫಲ ಪಡೆಯಲು ಹುಟ್ಟಿನ ಫಲ ಸಾವೇ? ಅಲ್ಲ. ಹುಟ್ಟಿನ ಫಲ ಬಾಳು. ಉತ್ತು ಬಿತ್ತಿದುದಕ್ಕಾಗಿ ರೈತನಿಗೆ ಬತ್ತ ಊಟಕೊಡುವಂತೆ "ಹುಟ್ಟು" ಕೊಟ್ಟುದುದಕ್ಕಾಗಿ ಸೃಷ್ಟಿಗೆ ನಾವು ದೇಣಿಗೆ ಕೊಡಬೇಕಾಗಿದೆ. ಅದು ಸಮ್ಯಕ್ ಬಾಳು. ಬಾಳೆಲ್ಲವೂ ಸೃಷ್ಟಿಗೆ ಕೊಡುವ ದೇಣಿಗೆಯಾದೀತೇ? ಅದು ಅಸಾಧ್ಯ.

ಉಂಡ ಊಟದಲ್ಲಿ ಕೆಲವು ಸೂಕ್ಷ್ಮ ಸಾರ ಮನಸ್ಸಾಗಿಯೂ, ಕೆಲಭಾಗ ಅಸ್ಥಿ, ರಕ್ತ, ಮಾಂಸಗಳಾಗಿಯೂ ಕೆಲವು ಕೆಟ್ಟ ಸಾರ ದೇಹಕ್ಕೆ ಬಾಧಕವಾಗಿಯೂ ಇನ್ನು ಸಾರ ರಹಿತ ಭಾಗವು ಯಾವುದಕ್ಕೂ ಪ್ರಯೋಜನಕ್ಕೆ ಬಾರದೆ ಮಲಮೂತ್ರಗಳಾಗಿಯೂ ಹೋಗುತ್ತದೆ. ಅಂತೆಯೇ ಬಾಳಿನಂಶಗಳು ಉತ್ತಮ, ಮಧ್ಯಮ, ಅಧಮ, ನಿಸ್ಸಾರಗಳಾಗಿ ವಿಭಾಗಿಸಲ್ಪಡುತ್ತವೆ. ಸೃಷ್ಟಿಗೆ ನಾವು ಕೊಡುವ ದೇಣಿಗೆ ಉತ್ತಮ ಮಧ್ಯಮ ಗುಣಾಂಶಯುಕ್ತವಾಗಿರಬೇಕಲ್ಲದೆ ಅಧಮ, ನಿಸ್ಸಾರಗಳಲ್ಲ. ಅಂತಿರುವಾಗ ಬಾಳು ಉತ್ತಮವಾಗಿ ಸಾರವತ್ತಾದಷ್ಟು ನಾವು ಸೃಷ್ಟಿಗೆ ಕೊಡುವ ದೇಣಿಗೆ ಹೆಚ್ಚಾಗುತ್ತದೆಯಲ್ಲವೇ. ಹುಟ್ಟಿ ಬೆಳೆದು ತಿಳಿದು ಬೆಳಗಿ ಬಾಳಿ ಕಡೆಗೆ ತೊಲಗುವುದು ನಿಜವಾದರೂ ನಾವು ಕೊಟ್ಟ ದೇಣಿಗೆ ಸ್ಥಿರಸ್ಥಾಯಿಯಾಗಿ ಸೃಷ್ಟಿಯಲ್ಲಿ ಕೂಡಿಕೊಳ್ಳುತ್ತದೆ.

ಬಾಳು ಹಂತ ಹಂತಗಳಾಗಿ ಮೇಲೇರುತ್ತದೆ. ಮೊದಲಿನ ಹಂತ ತಪ್ಪಿದರೆ ಮುಂದಿನ ಹಂತ ತಪ್ಪಿಬೀಳುತ್ತದೆ. ತಿಳಿದು ಬಾಳುವ ಬಾಳಿನ ಮೊದಲಿನ ಹಂತ ವಿದ್ಯಾರ್ಥಿ ಜೀವನ. ಅದೇ ಬಾಳಿನ ತಳಗಟ್ಟು. ಮುಗುಳು ಮಗುರುವ ರೀತಿಯಲ್ಲಿ ಅರಳಿನ ಇರವನ್ನು ತಿಳಿಯಬಹುದು

**ವಿದ್ಯಾರ್ಥಿ:** ವಿದ್ಯೆಯ ಅರ್ಥ ಇಟ್ಟು ವಿದ್ಯೆ ಕಲಿಯುವವನೇ ವಿದ್ಯಾರ್ಥಿ. ಅವನು ಮೊದಲಾಗಿ ತಾನು ವಿದ್ಯೆಯನ್ನು ಏಕೆ ಕಲಿಯಬೇಕು; ವಿದ್ಯೆ ತನ್ನ ಬಾಳ ಗುರಿಯೇ ಎಂಬುದನ್ನು ಸ್ಪಷ್ಟವಾಗಿ ಅರಿಯದಿದ್ದರೂ; ವಿದ್ಯೆ ಕಲಿಯಬೇಕು; ವಿದ್ಯೆಯು ತನಗೆ ಅಗತ್ಯವಿದೆ; ವಿದ್ಯೆಯಿಂದ ಯಾವುದೋ ಒಂದು ಕಾರ್ಯವಾಗಲಿದೆ ಎಂಬುದನ್ನು ಅಸ್ಪಷ್ಟವಾಗಿಯಾದರೂ ತಿಳಿದು ವಿದ್ಯಾ ಮಂದಿರವನ್ನು ಪ್ರವೇಶಿಸುತ್ತಾನೆ. ದಿನ ಹೋದಂತೆ ವಿದ್ಯೆಯು ತನ್ನ ಜೀವನದ ಮುಖ್ಯ ಗುರಿ, ವಿದ್ಯೆಯೇ ತನ್ನ ಬಾಳಸಾಗರದ ದೋಣಿಯನ್ನು ಸುಸಾಂಗವಾಗಿ ನಡೆಸುವ ವೇದ (ಬುದ್ಧಿ) ಎಂಬ ಹುಟ್ಟನ್ನು (ಜಲ್ಲವನ್ನು) ನಿರ್ಮಿಸಿಕೊಳ್ಳುವ ಶಕ್ತಿಯನ್ನು ಕೊಡುತ್ತದೆ ಎಂಬುದನ್ನು ತಿಳಿಯುತ್ತಾನೆ. ತಿಳಿದಾಗ ಅವನೊಬ್ಬ ನಿಜವಾದ ವಿದ್ಯಾರ್ಥಿಯಾಗುತ್ತಾನೆ ನಿಜವಾದ ವಿದ್ಯೆ ಪಡೆಯಲು ಹೆಣಗುತ್ತಾನೆ. ಜೀವನದ ತಳಗಟ್ಟನ್ನು ಭದ್ರಗೊಳಿಸಲು ಮುಂದಾಗುತ್ತಾನೆ. ಆಗ ಅವನ ಹೃದಯ ವಿದ್ಯೆಗೆ ಶುದ್ಧ ಕ್ಷೇತ್ರವಾಗುತ್ತದೆ. ಇಂದು ಅಂತಹ ಕ್ಷೇತ್ರಗಳು ತಯಾರಾಗುತ್ತವೆಯೇ?

**ವಿದ್ಯೆ:** ವಿವೇಕಾನಂದರ ವಾಣಿಯ ಪ್ರಕಾರ; 'ವಿದ್ಯೆ ಎಂದರೆ ಮನುಷ್ಯನಲ್ಲಿ ಅಡಕವಾಗಿರುವ ದಿವ್ಯ ಜ್ಞಾನದ ಸುಪ್ತ ಚೇತನವು ಎಚ್ಚತ್ತು ಪ್ರಕಾಶಗೊಳ್ಳುವುದು" ಪ್ರತಿಯೊಬ್ಬ ಮಾನವನಲ್ಲಿ ಒಂದು ಚೇತನ ಅಡಕವಾಗಿದೆ. ಆ ಚೇತನವು ದಿವ್ಯವಾಗಿ ಪ್ರಕಾಶಗೊಳ್ಳಬೇಕಾದರೆ ಅದಕ್ಕೆ ದಿವ್ಯ ಸಾಧನೆಬೇಕು, ಸಾಧನೆಯ ಅಸಫಲತೆಯಿಂದ ಚೇತನವು ನಷ್ಟವಾಗುತ್ತದೆ, ಸಾಧನೆಯ ದುರ್ಬಲತೆಯಿಂದ ಚೇತನವು ದುರ್ಬಲವಾಗುತ್ತವೆ. ಸಾಧನೆಯ ಅಧಮತೆಯಿಂದ ಚೇತನವು ಅತ್ಯಾಚಾರದ ದಾರಿ ಹಿಡಿಯುತ್ತವೆ.

ಒಂದೇ ಬಿದಿರಿನ ಒಂದು ತುಂಡು ಅತ್ಯಾಚಾರಿಯ ಕೈಯ ಅತ್ಯಾಚಾರದ ಸಾಧನವಾಗಿ ಹಲವರಿಗೆ ಹೊಡೆಯಲು ಉಪಯೋಗಿಸಲ್ಪಡುತ್ತದೆ. ಒಂದು ತುಂಡು ನಾಡಿನ ಗಳಕ್ಕೆ ಉಪಯೋಗಿಸಲ್ಪಟ್ಟು ಸ್ವಲ್ಪ ಸಮಯ ಉಪಕಾರ ಸಲ್ಲಿಸಿ ಕಡೆಗೆ ಹಾಳಾಗಿ ಹೋಗುತ್ತದೆ. ಒಂದು ತುಂಡು ಮುದುಕನ ಊರುಗೋಲಾಗಿ ಅವನಿಗೆ ಮರಣ ಪರ್ಯಂತ ಆಧಾರವಾಗುತ್ತದೆ. ಒಂದು ತುಂಡು ಉರಿಸಲು ಹೋಗುತ್ತದೆ. ಒಂದು ತುಂಡು ಸತ್ತವರ ಚಟ್ಟ ಕಟ್ಟಲು ಹೋಗುತ್ತದೆ. ಒಂದು ತುಂಡು ಮರದಿಂದ ಹಣ್ಣು ಕೊಯ್ಯಲು ದೋಟಿಯಾಗಬಹುದು. ಮತ್ತೊಂದು ತುಂಡು ಉತ್ತಮ ಕೊಳಲಾಗಿ ಜನರ ಮನಸ್ಸನ್ನು ಪ್ರಸನ್ನಗೊಳಿಸಿ ಕೃಷ್ಣನ ಮುರಲೀ ಗಾನದ ನೆನಪನ್ನು ತರಬಹುದು. ಅದೇ ರೀತಿ ಚೇತನ ಅಂದರೆ ವಿದ್ಯೆ ಸಾಧಕನ ಸಾಧನೆಯ ಭೇದಕ್ಕೆ ಸರಿಯಾಗಿ ಆಯಾ ತೆರದಲ್ಲಿ ಪ್ರಕಾಶವಾಗುತ್ತದೆ. ಹೊನ್ನಿನಲ್ಲಿ ಕೊತರೆ ವಜ್ರವಾಗಬಹುದು. ಕಸದಲ್ಲಿ ಕೂತರೆ ಕಣ್ಣಡಿಯ ಚೂರೆನಿಸಿ ತಿರಸ್ಕಾರಕ್ಕೆ ಪಾತ್ರವಾಗಬಹುದು. ಈ ವಿದ್ಯೆಯನ್ನು ಪಡೆಯುವುದಲ್ಲಿ? ಗುರುಮಠದಲ್ಲಿಯೇ ವಿದ್ಯಾವ್ಯಾಸಂಗ ನಡೆಯುವುದು ಕ್ರಮ

**ಗುರುಮಠ:** ಗುರುಮಠ ಅಂದರೆ ಈಗಿನ ಶಾಲೆ ಪುರಾತನ ಕಾಲದಲ್ಲಿ ಈಗಿನಂತೆ ಸುಲಭ ಸೌಲಭ್ಯಗಳಿಲ್ಲ. ವಿದ್ಯಾರ್ಥಿಯು ಗುರು ಮಠವನ್ನು ಸೇರಿ ಅಲ್ಲಿ ಗುರು ಹೇಳಿದ ಕರ್ಮವನ್ನು ಮಾಡಿ ಗುರುಸೇವಾ ನಿರತನಾಗಿದ್ದು ಅವನ ಸಂಸರ್ಗದಿಂದಲೇ ವಿದ್ಯಾವಂತನಾಗುತಿದ್ದ. ಗುರುಮಠವಾದರೂ ಎಲ್ಲೆಂದರಲ್ಲಿ ಇರುತ್ತಿದ್ದುದು ಹೆಚ್ಚು ಅಲ್ಲಿ ಹಲವಾರು ಶಿಷ್ಯರು ಒಬ್ಬ ಗುರುವಿನ ಸೇವೆಮಾಡಿ ಅವನಿಂದ ಜ್ಞಾನಪಡೆಯುತ್ತಿದ್ದರು. ಆಗ ಇಂದು ಶಾಲೆಗಳಲ್ಲಿರುವಂತೆ ಸುಖ ಸೌಲಭ್ಯಗಳಿಂದಿಲ್ಲ. ಗುರುಮಠದಲ್ಲಿ ಎಷ್ಟು ಕಷ್ಟವಿದ್ದರೂ ಲೆಕ್ಕಿಸದೆ ವಿದ್ಯಾ ಜಿಜ್ಞಾಸುಗಳಾಗಿ ಗುರುಮಠವನ್ನು ವಿದ್ಯಾರ್ಥಿಗಳು ಸೇರುತ್ತಿದ್ದರು. ಆಗ ಜ್ಞಾನ ಸಂಪಾದಿಸುವುದೊಂದೇ ಅವರ ಧ್ಯೇಯ.

ಇಂದು ಗುರುಮಠ ಅಂದರೆ ಶಾಲೆ ಹಿಂದಿನಂತಿಲ್ಲ. ಮುಂದುವರಿದಿದೆ! ಹಿಂದಿನ ರೀತಿಯನ್ನು ಹೊಂದಿಕೊಂಡು ಮುಂದುವರಿದಿವೆಯೋ? ಇಲ್ಲವೆಂದು ಹೇಳಬಹುದು. ಸಾವಿರಾರು ಮಕ್ಕಳು ಒಂದೆಡೆ ಸೇರಿ ದಿನದಲ್ಲಿ ನಾಲ್ಕಾರು ಗಂಟೆ ಗುರುಗಳ (ಒಬ್ಬ ಗುರುವಿಗಲ್ಲ) ಅಂಕಿತದಲ್ಲಿದ್ದು ಮತ್ತೆ ಬಿಡುವರು. ಮತ್ತೆ ಮರು ದಿವಸದ ವರೆಗೆ ಅವರನ್ನು ಗುರುಗಳು ಕೇಳಲಾರರು. ಇಂದು ಗುರುಮಠವೆಂಬುದು ಒಂದು ಸುಖ ಸೌಲಭ್ಯದ ಬೀಡಾಗಿದೆ. ವಿನಾ ಜ್ಞಾನಿಗಳ ಗುಡಿಯಾಗಿಲ್ಲ. ಅಲ್ಲಿ ಕೂಡುವ ವಿದ್ಯಾರ್ಥಿಗಳ ಜಿಜ್ಞಾಸೆಯೂ ಪ್ರಾಜ್ಞಶೂನ್ಯವಾದುದು ಜ್ಞಾನ "ಅರಿಯುವ" ಮನವಿಲ್ಲ. ಜ್ಞಾನ "ಕಲಿಯು"ವುದ ಮಾತ್ರ. ನಾಳೆ ಹೊಟ್ಟೆ ಬರೊಟ್ಟೆಗಾಗಿ ಒಂದು ಕೆಲಸ ಪಡೆಯಲು ಉತ್ತೀರ್ಣ ಪತ್ರ ಪಡೆಯುವ ಒಂದೇ ಧ್ಯೇಯವಿಟ್ಟುಕೊಂಡು ಇಂದು ಗುರುಮಠಗಳನ್ನು ಸೇರುತ್ತಿರುವುದು ಶಾಲೆಯಿಂದ ಹೊರಬರುವಾಗ ಸಂಪಾದಿಸಿಕೊಂಡು ಬರುವುದೂ ಹೆಚ್ಚಾಗಿ ಅಷ್ಟೇ. ತನ್ನ ಶಾಲೆಯೊಳಗಿನ ವಿದ್ಯುಳಿಗಂತಲೂ ತಾನು ಪಡೆದ ಉತ್ತೀರ್ಣ ಪತ್ರದ ಕಾಗದದ ತುಂಡು ಬಲುದೊಡ್ಡ ಮೌಲ್ಯದ ವಸ್ತು ಎಂಬುದನ್ನಷ್ಟೇ ಕಲಿತು ಹೊರಬರುತ್ತಾನೆ.

**ಗುರುಶಿಷ್ಯ ಸಂಬಂಧ**

ವಿದ್ಯಾರ್ಥಿಗೆ ಗುರುವೇ ದೇವರು. ಗುರುವಿನಾಜ್ಞೋಲ್ಲಂಘನೆಯನ್ನು ಶಿಷ್ಯ ಎಂದೂ ಮಾಡಲಾರ. ಗುರುವು ಶಿಷ್ಯನ

(೧೦ನೇ ಪುಟನೋಡಿರಿ)


# ಹೊಸ 501 ಸ್ಪೆಷಲ್




ನಮ್ಮ ತಯಾರಿಕೆಗಳಲ್ಲಿ ನಿಮಗೆ ಚಿರಪರಿಚಿತವಾದವುಗಳಲ್ಲಿ ಕೂಡ ಹೊಸ ಸುಧಾರಣೆಗಳನ್ನು ಮಾಡಲು ನಾವು ಯಾವಾಗಲೂ ಪ್ರಯತ್ನಿಸುತ್ತೇವೆ. ಈಗ ನಾವು ಒಂದು ಒಳ್ಳೆಯ ಸಾಬೂನನ್ನು ಇನ್ನೂ ಸುಧಾರಿಸಿ ಹೆಚ್ಚು ಉತ್ಕೃಷ್ಟ, ಆದಾಯಕರ ಮತ್ತು ಉಪಯೋಗಕರವಾಗಿ ಮಾಡುತ್ತೇವೆ.

ಹೆಚ್ಚು ಉತ್ಕೃಷ್ಟ — ಒಗೆಯುವುದು ಸುಲಭ ಮತ್ತು ಜಾಗ್ರತೆ

ಹೆಚ್ಚು ಆದಾಯಕರ — ಪ್ರತಿತುಂಡೂ ತುಂಬ ದಿವಸ ಬಾಳಿಕೆ ಬರುತ್ತದೆ

ಹೆಚ್ಚು ಉಪಯೋಗಕರ — ನಾಜೂಕಾದ ಬಟ್ಟೆಯನ್ನು ಹಾಳಾಗದಂತೆ ಕಾಪಾಡುವುದು

501 ಸ್ಪೆಷಲ್ ಎಲ್ಲ ಮನೆಯ ಒಗೆಯುವ ಕೆಲಸಕ್ಕೂ ಉಪಯೋಗಕರವಾದ ಸಾಬೂನು

ಟಾಟಾ ತಯಾರಿಕೆ

ಉತ್ಕೃಷ್ಟತೆ, ಮಿತವ್ಯಯ ಮತ್ತು ಉಪಯೋಗದ ಗುರುತು

ಟಾಟಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್

ಇಂಡಿಯದ ಬಂಡವಾಳದಿಂದ, ಇಂಡಿಯದ ಸಂಚಾಲಕತ್ವದಲ್ಲಿ, ಇಂಡಿಯಾದಲ್ಲಿಯೇ ತಯಾರಿಸಿದುದು

# ಆದರ್ಶ ಜೀವನ

## ರಾಷ್ಟ್ರಾಧ್ಯಕ್ಷ ಪ್ರಸಾದ

### ಜನಸೇವೆಯ ಅವಕಾಶ ಬಂತೆಂದು ಗಾಂಧೀಜಿಯ ಅನುಯಾಯಿಯಾದ ಮಹಾನುಭಾವ

ಅಪ್ರತಿಮ ಮೇಧಾಶಕ್ತಿ, ಜನಸೇವೆಯಲ್ಲಿ ಅಪಾರವಾದ ಆಸಕ್ತಿ ಹಾಗೂ ಅಹಿಂಸೆಯಲ್ಲಿ ಅಚಲ ಶ್ರದ್ಧೆಯುಳ್ಳ ಮಹಾ ವ್ಯಕ್ತಿ ಭಾರತದ ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು. ಜನಸೇವೆಯ ಹುಚ್ಚು ಹಾಗೂ ಅಹಿಂಸಾತ್ಮಕ ಯುದ್ಧದಲ್ಲಿ ಅವರಿಗಿರುವ ದೃಢ ವಿಶ್ವಾಸ— ಇವು ಅವರಂತಹ ವೀರಯೋಧರನ್ನು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವಂತೆ ಪ್ರೇರಿಸಿದ ಶಕ್ತಿಗಳಾದುವೆಂದರೆ ತಪ್ಪಿಲ್ಲ. ಅವರ ಜೀವನೇತಿಹಾಸದ ವಿವರಣೆಯೇ ಅವರ ೭೨ನೇ ಜನ್ಮ ದಿನೋತ್ಸವದ ಸಂದರ್ಭಕ್ಕಾಗಿ ಬರೆದ ಈ ಚಿಕ್ಕ ಬರಹದ ಮುಖ್ಯೋದ್ದೇಶ.

ರಾಜೇಂದ್ರ ಪ್ರಸಾದರು ೧೮೮೪ರ ದಶಂಬರ ೩ರಂದು ಸಾರಣ ಜಿಲ್ಲೆಯ ಜೀರದಾಯಿ ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಮುನ್ಶಿ ಮಹದೇವ್ ಸಹಾಯ್ ಕುಲೀನ ಮನೆತನವೊಂದರ ಸದ್ಗೃಹಸ್ಥರು. ಅವರಿಗಿಬ್ಬರು ಗಂಡು ಮಕ್ಕಳು. ಹಿರಿಯವರು ಶ್ರೀ ಮಹೇಂದ್ರ ಪ್ರಸಾದರು. ಕಿರಿಯವರೇ ಡಾ| ರಾಜೇಂದ್ರ ಪ್ರಸಾದರು. ರಾಜೇಂದ್ರರು ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉರ್ದು ಮತ್ತು ಪಾರ್ಸಿ ಭಾಷೆಗಳಲ್ಲಿ ಮನೆಯಲ್ಲಿಯೇ ಮುಗಿಸಿ ೧೮೯೩ರಲ್ಲಿ ಛಪರಾ ಹೈಸ್ಕೂಲನ್ನು ಸೇರಿದರು. ೧೯೦೨ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಆ ಮೇಲೆ ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜನ್ನು ಪ್ರವೇಶಿಸಿ, ೧೯೦೭ರಲ್ಲಿ ಎಂ. ಎ. ತೇರ್ಗಡೆ ಹೊಂದಿದರು. ಮೊದಲ ದರ್ಜೆಯಲ್ಲೇ ಅವರು ಈ ಬಾರಿಯೂ ಉತ್ತೀರ್ಣರಾದರು. ಭಾರತದ ಸುಪ್ರಸಿದ್ಧ ವಿಜ್ಞಾನಿಗಳಾಗಿದ್ದ ಸರ್ ಜಗದೀಶ್ ಚಂದ್ರ ಬೋಸ್ ಹಾಗೂ ಆಚಾರ್ಯ ಪ್ರಫುಲ್ಲ ಚಂದ್ರ ರಾಯ್—ಇವರು ಕಾಲೇಜಿನಲ್ಲಿ ಪ್ರಸಾದರಿಗೆ ಪ್ರಾಧ್ಯಾಪಕರಾಗಿದ್ದರು. ಎಂ. ಎ ಮುಗಿಸಿದ ನಂತರ ಕಲ್ಕತ್ತದಲ್ಲೇ ಕೆಲಕಾಲ ಪ್ರಾಧ್ಯಾಪಕ ವೃತ್ತಿಯನ್ನು ಕೈಗೊಂಡರು. ೧೯೧೫ರಲ್ಲಿ ಎಂ. ಎಲ್. ಪರೀಕ್ಷೆಯಲ್ಲಿ ಒಂದನೇ ಸ್ಥಾನದಲ್ಲೆ ತೇರ್ಗಡೆಯಾಗಿ, ಕಲ್ಕತ್ತ ಹೈಕೋರ್ಟಿನಲ್ಲಿ ವಕೀಲಿಯನ್ನಾರಂಭಿಸಿ, ಕೆಲಕಾಲದಲ್ಲೇ ಪ್ರತಿಭಾವಂತ ವಕೀಲರೆಂದು ಹೆಸರುವಾಸಿಯಾದರು. ಧನಪ್ರ ಹೊಳೆಯ ರೂಪದಲ್ಲೇ ಹರಿದು ಬಂದಿತು—ಅವರ ಮನೆಗೆ. ಒಮ್ಮೆ ಅವರು ಒಂದು ಖಟ್ಲೆಯನ್ನು ೩೨ ಸಾವಿರ ರೂಪಾಯಿಗಳಿಗೆ ಹಿಡಿದಿದ್ದರು. ಆಗ ಗಾಂಧೀಜಿಯವರ ಸವಾರಿ ಬಿಹಾರಕ್ಕೆ ಚಿತ್ತೈಸಿತು. ದೀನ, ದರಿದ್ರ, ಪೀಡಿತ ಭರತ ಖಂಡದ ಸೇವೆಗಾಗಿ ಹೊರಡಿರೆಂದು ಮಹಾತ್ಮರು ಜನತೆಗೆ ಕರೆಯುತ್ತಿದ್ದರು. ಕೂಡಲೇ ಸಂಪತ್ತನ್ನು ತ್ಯಜಿಸಿ, ಗಾಂಧೀಜಿಯವರ ಅನುಯಾಯಿಯಾಗಿ ದೇಶ ಸೇವೆಯ ಪವಿತ್ರ ದೀಕ್ಷೆಯನ್ನು ಪಡೆದು, ಬಡತನದ ಭಾಗ್ಯವನ್ನು ಸಂತಸದಿಂದ ಸ್ವೀಕರಿಸಿದರು—ಪ್ರಸಾದರು.

ರಾಜೇಂದ್ರರಲ್ಲಿ ಅದ್ಭುತ ಕರ್ತೃತ್ವ ಶಕ್ತಿ ಹಾಗೂ ಅಸಾಧರಣ ಪ್ರತಿಭೆ, ಜನಸೇವೆಯಲ್ಲಿರುವ ಆಸಕ್ತಿ— ಇವುಗಳನ್ನು ಕಂಡು ಮರುಳುಗೊಂಡ ಡಾ ಗೋಪಾಲ ಕೃಷ್ಣ ಗೋಖಲೆಯವರು ಭಾರತ ಸೇವಕ ಸಮಾಜವನ್ನು ಸೇರುವಂತೆ ಅವರಿಗೆ ಒತ್ತಾಯ ಮಾಡಿದರು. ಆದರೆ ಇದಕ್ಕೆ ತಾಯಿಯ ಹಾಗೂ ಸಹೋದರನ ಅನುಮತಿ ದೊರೆಯಲಿಲ್ಲ. ಆ ವೇಳೆ ಅವರು ತನ್ನಣ್ಣನಿಗೆ ಬರೆದ ಪತ್ರವು ಹೃದಯ ಸ್ಪರ್ಶಿಯಾಗಿದೆ.

ಪ್ರಸಾದರು ವಿದ್ಯಾಭಿಮಾನಿಗಳು, ಸಾಹಿತ್ಯ ಪ್ರೇಮಿಗಳು. ೧೯೨೦ರ ತನಕ ಪಾಟ್ನಾ ವಿಶ್ವವಿದ್ಯಾಲಯದ ಸಿನೇಟ್ ಹಾಗೂ ಸಿಂಡಿಕೇಟ್‌ಗಳ ಸದಸ್ಯರಾಗಿದ್ದ ವೇಳೆ ಸರಕಾರವು ಮಂಜೂರು ಮಾಡಿದ ಹಲವು ಪ್ರತಿಗಾಮಿ ಧೋರಣೆಗಳನ್ನು ವಿರೋಧಿಸಿ ಆಂದೋಲನ ಹೂಡಿದರು. ಮ್ಯಾಟ್ರಿಕ್ ತನಕ ಹಿಂದಿಯಲ್ಲೇ ವಿದ್ಯಾದಾನವಾಗಬೇಕೆಂದು ಗೊತ್ತುವಳಿಯನ್ನು ಪಾಸು ಮಾಡಿಸಿದರು. ಹೀಗೆ ವಿದ್ಯಾ ವಿಷಯಕವಾದ ಅನೇಕ ಸುಧಾರಣೆಗಳನ್ನು ಮಾಡಿದರು. ಅಲ್ಲದೇ 'ದೇಶ'ವೆಂಬ ಹಿಂದೀ ಸಾಪ್ತಾಹಿಕದ ಸಂಪಾದಕರಾಗಿದ್ದರು. ೧೯೨೬ರ ದಕ್ಷಿಣ ಭಾರತ ಹಿಂದೀ ಸಮ್ಮೇಲನದ ಅಧ್ಯಕ್ಷರೂ ಅವರೇ. ಮಹಾತ್ಮರು ೧೯೨೦ರಲ್ಲಿ ಅಸಹಕಾರದ ಕಹಳೆಯನ್ನೂದಿದರು. ಅವರ ಕರೆಗೆ ಓಗೊಟ್ಟು ಅಸಹಕಾರ ರಂಗದಲ್ಲಿ ಧುಮುಕಿದ ಹಲವರು ದೇಶಪ್ರೇಮಿಗಳಲ್ಲಿ ಪ್ರಸಾದರೂ ಒಬ್ಬರು. ೧೯೨೦ರ ರಾಷ್ಟ್ರಸಭಾಧಿವೇಶನಗಳಲ್ಲಿ ಅಸಹಕಾರದ ಗೊತ್ತುವಳಿಯನ್ನು ಸಮರ್ಥಿಸಿ, ಶಾಸನ ಸಭಾ ಬಹಿಷ್ಕಾರವನ್ನು ಪುಷ್ಟೀಕರಿಸಿದವರೂ ರಾಜೇಂದ್ರರೇ. ಅಸಹಕಾರದ ಬೇಗೆ ರಾಷ್ಟ್ರವ್ಯಾಪಿಯಾಗುವ ವೇಳೆ, ಅಸಹಕಾರ ತತ್ವಗಳಲ್ಲೊಂದಾದ ಶಾಲೆ ಕಾಲೇಜುಗಳ ಬಹಿಷ್ಕಾರವನ್ನು ವಿದ್ಯಾರ್ಥಿಗಳು ಘೋಷಿಸುತ್ತಿದ್ದಾಗ ರಾಷ್ಟ್ರೀಯ ವಿದ್ಯಾಲಯಗಳನ್ನು ಅವರು ಸ್ಥಾಪಿಸಿದರು. ಅಲ್ಲದೇ ೧೯೨೧ರಿಂದ ೧೯೩೪ರ ತನಕ ಖಾದೀ ಪ್ರಚಾರ, ಗ್ರಾಮೋದ್ಯೋಗ ಮತ್ತು ರಾಷ್ಟ್ರೀಯ ಶಿಕ್ಷಣ ಮೊದಲಾದ ರಾಷ್ಟ್ರ ನಿರ್ಮಾಣಕ ಕಾರ್ಯಕ್ರಮಗಳನ್ನು ಕೈಗೊಂಡು ತುಂಬಾ ದುಡಿದರು.

ಗಾಂಧೀಜಿಯವರು ಚಂಪಾರಣ್ಯ ತೋಟಗಳ ಶ್ರಮಿಕರ ಆರ್ಥಿಕ ಮತ್ತು ಸಾಮಾಜಿಕ ದುಸ್ಥಿತಿಗಳ ನಿವಾರಣಾರ್ಥ ಆಂಗ್ಲ ಭಂಡವಾಳ ಶಾಹಿಗಳ ವಿರುದ್ಧ ನಡೆಸಿದ ಹೋರಾಟದಲ್ಲಿ ಅವರಿಗೆ ತುಂಬಾ ಸಹಕಾರವಿತ್ತು ಹೋರಾಡಿದ ವ್ಯಕ್ತಿಗಳಲ್ಲಿ ಡಾ. ಪ್ರಸಾದರು ಅಗ್ರಗಣ್ಯರು. ಹೋರಾಟದ ಫಲರೂಪವಾಗಿ 'ಚಂಪಾರಣ್ಯ ಒಕ್ಕಲ ಹಿತಮಸೂದೆ' ಬಿಹಾರ್ ಕೌನ್ಸಿಲಿನಲ್ಲಿ ಮಂಜೂರಾಯಿತು.

೧೯೩೪ರ ಜನವರಿಯಲ್ಲಿ ಬಿಹಾರ ಪ್ರಾಂತ್ಯವು ಭಯಂಕರ ಭೂಕಂಪಕ್ಕೀಡಾದಾಗ ರಾಜೇಂದ್ರ ಪ್ರಸಾದರು ಸೆರೆಮನೆಯಲ್ಲಿ ಉಬ್ಬಸದಿಂದ ಪೀಡಿತರಾಗಿದ್ದರು. ಉಪಾಯಾಂತರವಿಲ್ಲದೇ ಅವರನ್ನು ಬಿಡುಗಡೆಗೊಳಿಸಿತು ಸರಕಾರ. ವಿಶ್ರಾಂತಿ ಪಡೆಯುವ ಬದಲು ಅವರು ಸಂಕಟಗ್ರಸ್ತರೆಡೆಗೆ ಧಾವಿಸಿ ಅವರ ಸೇವೆಗಾರಂಭಿಸಿದರು. ಭೂಕಂಪ ಪೀಡಿತರಿಗೆ ಸಹಾಯಧನಕ್ಕಾಗಿ ನಿಧಿ ಸಂಗ್ರಹಕ್ಕೆ ಪ್ರಾರಂಭವಾಯಿತು. ೩೮ ಲಕ್ಷ ರೂಪಾಯಿಯ ನಿಧಿ ಸಂಗ್ರಹವಾಗಿ, ಧಾರಾಳ ಸಾಮಗ್ರಿಯೂ ಜಮೆಯಾಯಿತು. ಪ್ರಸಾದರು ಕೇಂದ್ರ ಸಮಿತಿಯ ರಚನೆಗೈದು ಪೀಡಿತರಿಗೆ ಸೇವೆ ಸಲ್ಲಿಸಿದರು.

೧೯೦೬ರ ಕಲ್ಕತ್ತದ ರಾಷ್ಟ್ರಸಭಾಧಿವೇಶನದಲ್ಲಿ ಪ್ರಸಾದರು ಸಹಭಾಗಿಯಾಗಿದ್ದರು. ೧೯೨೨ರ ಗಯಾ ರಾಷ್ಟ್ರಸಭಾಧಿವೇಶನದಲ್ಲಿ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದರು. ೧೯೩೦, ೩೨, ೩೩ರ ರಾಷ್ಟ್ರೀಯ ಚಳವಳಿಗಳಲ್ಲಿ ಭಾಗವಹಿಸಿದರೆಂಬುದರಿಂದಾಗಿ ಅವರು ಮೂರು ಬಾರಿ ಸೆರೆಯನ್ನನುಭವಿಸಿದರು. ಅವರ ಸೇವಾಸಕ್ತಿಗೆ ಮೆಚ್ಚಿದ ರಾಷ್ಟ್ರವು ಅವರಿಗೆ ೧೯೩೪ರ ರಾಷ್ಟ್ರಸಭಾಧಿವೇಶನದ ಅಧ್ಯಕ್ಷ ಪದವಿಯ ಮಾಲೆಯನ್ನು ಸಮರ್ಪಿಸಿ, ಅವರನ್ನು ಮನ್ನಿಸಿತು.

೧೯೪೨ರ 'ಚಲೇಜಾವ್' ಚಳವಳಿಯಲ್ಲಿ ಭಾಗಿಯಾದುದರಿಂದ ಇನ್ನೊಮ್ಮೆ ಅವರ ಬಂಧನವಾಯಿತು. ೧೯೪೫ರಲ್ಲಿ ಬಿಡುಗಡೆಯಾಗಿ, ೧೯೪೬ರ ರಾಷ್ಟ್ರೀಯ ಸರಕಾರದಲ್ಲಿ ಆಹಾರ ಮಂತ್ರಿ ಪದವಿಗೆ ಅವರು ಚುನಾಯಿತರಾದರು. ಆಗ ಬಹು ಬಿಕ್ಕಟ್ಟಿನಲ್ಲಿದ್ದ ಆಹಾರ ಸಮಸ್ಯೆಯನ್ನು ಬಹುಮಟ್ಟಿಗೆ ನೀಗಿಸಿದ ಶ್ರೇಯಸ್ಸು ಪ್ರಸಾದರಿಗೆ ಸಲ್ಲತಕ್ಕದ್ದು. ಆ ಮೇಲೆ ರಚಿತವಾದ ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರಾಗಿ ಅವರು ಸರ್ವಾನುಮತದಿಂದ ಆಯ್ಕೆ ಹೊಂದಿದರು. ೧೯೫೦ರ ಜನವರಿ ೨೬ರಂದು ಭಾರತವು ಸರ್ವತಂತ್ರ ಸ್ವತಂತ್ರ ಗಣರಾಜ್ಯವೆಂದು ಘೋಷಿತವಾಯಿತು. ಡಾ| ಪ್ರಸಾದರು ಸ್ವಯಂ ಪ್ರತಿಭೆ, ಕಾರ್ಯನಿರ್ವಾಹಕ ಚಾತುರ್ಯ, ಸಹನೆ ಮುಂತಾದ ಅಸಾಮಾನ್ಯ ಯೋಗ್ಯತೆಗಳಿಂದ-ಗೌರವಯುಕ್ತ ಹಾಗೂ ಜವಾಬ್ದಾರಿಯ ಪದವಿಯಾದ ರಾಷ್ಟ್ರಪತಿತ್ವಕ್ಕೆ ಅರ್ಹವ್ಯಕ್ತಿಯೆನಿಸಿಕೊಂಡರು.

ಎತ್ತರದ ದೇಹ, ಅಗಲವಾದ ಹಣೆ, ತೇಜೋಮಯ ನೇತ್ರಗಳು, ನೀಳವಾದ ಮೂಗು, ಪ್ರಶಾಂತವಾದ ಮುಖಮುದ್ರೆ ದಪ್ಪವಾದ ಒರಟು ಮೀಸೆ-ಇವುಗಳಿಂದ ಕೂಡಿದ ತಲೆಯಲ್ಲಿ ಗಾಂಧಿ ಟೋಪಿ, ಹಾಗೂ ಸೌಮ್ಯ ರೀತಿಯ ಉಡುಗೆಗಳನ್ನು ಧರಿಸುವ ಮೋಹ ವರ್ಣದ ನಿಗರ್ವಿ ಮನುಷ್ಯ, ರಾಜೇಂದ್ರರು.

ಹಿಂದೆಯೇ ಹಲವು ಬಾರಿ ಹೇಳಿದುವಂತೆ ಜನಸೇವೆಗಾಗಿ ಮುಡಿಪಾಗಿಟ್ಟ ಬಾಳು ಅವರದು. ಬಿಹಾರದ ಭೂಕಂಪ ಪೀಡಿತರಿಗೆ ಅವರು ಸಲ್ಲಿಸಿದ ನಿಸ್ವಾರ್ಥ ಸೇವೆಯೇ ಇದಕ್ಕೆ ತಕ್ಕ ನಿದರ್ಶನ. ಅಹಂಕಾರದ ಗಾಳಿಯೇ ಅವರೆಡೆಗೆ ಸೋಂಕಲಿಲ್ಲವೇನೋ ಎಂಬಂತಿರುವ ನಿಗರ್ವಗುಣ ಅವರಲ್ಲಿ ಮೂರ್ತೀಭವಿಸಿದೆ. ಅಹಿಂಸೆಯಲ್ಲಿ ಅವರಿಗೆ ಅಚಲವಾದ ನಂಬುಗೆಯಿದೆ. ಇಲ್ಲದಿದ್ದರೆ ಮಹಾತ್ಮರ ಕರೆಗೆ ಓಗೊಟ್ಟು ಸಂಪತ್ತನ್ನು ತ್ಯಜಿಸಿ, ಅ

(೯ನೇ ಪುಟನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ರಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

## ತತ್ವ ಪ್ರಚಾರ

# ಜನರು ತಾವಾಗಿ ತಮ್ಮನ್ನು ತಿದ್ದಿಕೊಳ್ಳುವಂತೆ ಮಾಡುವುದಕ್ಕೆ ಪ್ರಭಾವಶಾಲಿ ಪ್ರಚಾರ ಅವಶ್ಯ— ಶ್ರೇಷ್ಠರು ಕನಿಷ್ಠರಿಗೆ ಮಾದರಿಯಾಗಿ ಬಾಳುವುದೇ ಸಮಸ್ಯೆಗೆ ಸೂಕ್ತ ಪರಿಹಾರ

ನಮ್ಮ ದೇಶದಲ್ಲಿ ಇತ್ತೀಚೆಗೆ ನಡೆದ, ನಡೆಯುತ್ತಿರುವ ದೊಡ್ಡ ದೊಡ್ಡ ಅಭಿವೃದ್ಧಿ ಕಾರ್ಯಗಳು, ಸೂತ್ರಧಾರರು ಅನುಸರಿಸುವ ಆದರ್ಶ ತತ್ವಗಳು ಇವನ್ನೆಲ್ಲ ಕುರಿತು ಆಲೋಚಿಸಿದರೆ, ನಾವು ಶೀಘ್ರವಾಗಿಯೇ ದೇಶವನ್ನು ಸಂಪತ್ಸಮೃದ್ಧವಾಗಿಸಿ ಸುಖಶಾಂತಿಯಿಂದ ಬಾಳುವ ಗುರಿಯನ್ನು ಸೇರಲಿದ್ದೇವೆಂದು ಹರ್ಷಪಡಲೇ ಬೇಕು. ಆದರೆ ನಮ್ಮ ಹೆಚ್ಚಿನ ಜನತೆಯ ಅಭಿರುಚಿಯ ಬಗೆಯನ್ನು ಅವಲೋಕಿಸಿದರೆ ವಿಷಾದವೂ ಆಗದಿರುವುದಿಲ್ಲ. ಪ್ರಗತಿಯು ಯಾರಿಗೂ ಬೇಕಾಗದೆ ಇಲ್ಲವಾದರೂ ಅದಕ್ಕಾಗಿ ಪ್ರಯಾಸವನ್ನನುಭವಿಸಲು ಮುಂದಾಗುವವರು ಮತ್ತು ಹೊಲಸು ವಿಲಾಸದ ಬಯಕೆಯನ್ನು ಬಿಟ್ಟುಕೊಟ್ಟು ಕರ್ತವ್ಯ ಪಾಲನೆಯ ದೀಕ್ಷೆಯನ್ನು ತೊಟ್ಟು ಮಾರ್ಗದರ್ಶನ ಮಾಡುವವರು ಬಹಳ ವಿರಳ.

ನಮ್ಮ ಬಹುಮಂದಿ ಜನತೆಯ ಅಭಿರುಚಿ ಪರೀಕ್ಷೆಯನ್ನು, ನಮ್ಮ ಮೇಲ್ಮೆಗಾಗಿ ನಾವು ಮೊದಲಿಟ್ಟ ಹೆಜ್ಜೆಯಾದ 'ಪ್ರೊಹಿಬಿಶನ್' ಕಾನೂನು ಏನನ್ನು ಸಾಧಿಸಿತೆಂಬ ಒಂದೇ ವಿಚಾರದಿಂದ ತಿಳಿದುಕೊಳ್ಳಬಹುದು. ಕಾಯಿದೆಯು ಎಷ್ಟೇ ಉತ್ತಮ ತತ್ವ ಆದರ್ಶಗಳಿಂದ ಕೂಡಿರಲಿ ಜನತೆಯ ಅಭಿರುಚಿ ಉತ್ತಮವಾಗಿಲ್ಲದಿದ್ದರೆ ಕಾಯಿದೆಯು ತನ್ನ ಸದುದ್ದೇಶವನ್ನು ಸಾಧಿಸಲಾರದೆಂಬುದು ಇದೊಂದೇ ವಿಷಯದಿಂದ ಸ್ಪಷ್ಟವಾಗುತ್ತದೆ. ಕುಡಿತವು 'ಪ್ರೊಹಿಬಿಶನ್' ಕಾಯಿದೆ ಬರುವ ಪೂರ್ವದಲ್ಲಿ ಇದ್ದಷ್ಟು ವ್ಯಾಪಕವಾಗಿ ಈಗಿಲ್ಲವೆನ್ನುವುದು ಕಷ್ಟ. ಇನ್ನೂ ಈ ರೋಗವು ಹಬ್ಬುತ್ತಲೇ ಇದೆ; ಏನಾ ಮಾಯವಾಗುವ ಲಕ್ಷಣಗಳು ಕೂಡ ಕಾಣುತ್ತಿಲ್ಲ. ಪರಿಸ್ಥಿತಿ ಹೀಗಿದ್ದರೂ ವಾಸ್ತವಿಕತೆ ತಿಳಿದೋ ತಿಳಿಯದೆಯೋ ಈ ವಿಷಯದಲ್ಲಿ ಯಶಸ್ವಿಗಳಾಗಿದ್ದೇವೆ—ಸುಧಾರಿಸುತ್ತಲಿದ್ದೇವೆಂದೇ ಹೇಳುವವರೂ ಇದ್ದಾರೆ. ದೂರದ ನೋಟಕ್ಕೆ ಅದು ಸತ್ಯವಿರಬಹುದೆಂದೆನಿಸುತ್ತಲೂ ಇದೆ. ಹೀಗೆ ಕೊಳಕನ್ನು ಮುಚ್ಚಿಟ್ಟುಕೊಂಡು ಕೊಳಕೇ ನಮ್ಮಲ್ಲಿಲ್ಲವೆಂದು ಹೇಳಿ, ಟೊಳ್ಳು ಕೀರ್ತಿ ಪಡೆಯುವ ಈ ಬಗೆಯನ್ನು ನೋಡಿದರೆ, ನಾಳೆ ನಮ್ಮ ಕಲ್ಯಾಣ ರಾಷ್ಟ್ರದ ಗುರಿಯೂ ಇದೇ ರೀತಿಯಾದರೆ? ಎಂಬ ಸಂಶಯವೇಳುವುದು.

ದೇಶದಲ್ಲಿ - ಸಮಾಜದಲ್ಲಿ ಯಾವುದೇ ರೀತಿಯ ಕೆಡುಕುಗಳಿದ್ದರೆ ಅದಕ್ಕೆಲ್ಲ ಸರಕಾರವೇ ಕಾರಣವೆಂದು ಹೇಳುವವರೇ ಹೆಚ್ಚು. ಸಮಾಜದ ಮನೋಭಾವವೇ ಎಲ್ಲ ಕೆಡುಕುಗಳಿಗೂ ಕಾರಣವೆಂಬ ಸತ್ಯವನ್ನು ಎತ್ತಿ ಹೇಳುವವರು ವಿರಳ. ಒಳ್ಳೆಯದು, ಕೆಟ್ಟದು ವಿಚಾರವೇನೇ ಇರಲಿ, ಸಮಾಜದ ಇಚ್ಛೆಗೆ ವಿರುದ್ಧವಾದ ಕಾಯಿದೆಯು ಯಶಸ್ವಿಯಾಗಲಾರದು. ಸಮಾಜವೇ ಸನ್ಮಾರ್ಗವನ್ನನುಸರಿಸಿ ದೇಶದ ಕಲ್ಯಾಣವಾಗಬೇಕು ವಿನಾ ಬರೆ ಸರಕಾರದ ಮೂಲಕವಲ್ಲ.

ಕುಡಿತವು ನಮ್ಮ ಕೆಡುಕುಗಳಲ್ಲೊಂದಾದರೂ ದುಷ್ಪರಿಣಾಮದಲ್ಲಿ ಅದಕ್ಕೆ ಕಡಿಮೆಯಲ್ಲದ ವ್ಯಾಧಿಗಳು ಸಭ್ಯತೆಯ ಸೆರಗಿನಲ್ಲೇ ಹಬ್ಬುತ್ತಿವೆ. ಆಲಸಿ ಮತ್ತು ವಿಲಾಸಿಯಾಗಿ ಕರ್ತವ್ಯದ ಗೊಡವೆಯೇ ಇಲ್ಲದೆ ಕಾಲ ಕಳೆಯುವ ಚಪಲವು ಕುಡಿತಕ್ಕಿಂತ ಕಡಿಮೆಯಾದ ಕೆಡುಕು ಅಭ್ಯಾಸವಲ್ಲವೆಂದರೂ ತಪ್ಪಲ್ಲ. ಬಡವರಲ್ಲದವರು ಹಾಕುವ ಈ ಆದರ್ಶವು ಬಡವರಿಗೂ ಪ್ರಿಯವೆನಿಸುತ್ತದೆ. ಉಪಾಸಗಾಣದೆ ದುಡಿದು ಗಳಿಸಿದ ಹಣವನ್ನು ಅನಿವಾರ್ಯ ಖರ್ಚಿಗಿಂತಲೂ ಅನಾವಶ್ಯಕವಾದ ಖರ್ಚಿಗೇ ಹೆಚ್ಚು ಬಳಸುತ್ತಾರೆ. ಮನೆಯಲ್ಲಿ ಊಟಕ್ಕೆ ಅಕ್ಕಿ, ದೀಪಕ್ಕೆ ಎಣ್ಣೆ ಇಲ್ಲದಿದ್ದರೂ, ಸಿನೇಮಾ ನೋಡಿ, ಸಿಗರೇಟು ಸೇದಿ ಮಜಾ ಮಾಡುವಂಥ ಮನೋಭಾವವುಳ್ಳವರೇನೂ ಬಹಳ ಕಡಿಮೆ ಮಂದಿಯಿಲ್ಲ. ಮನೆಯಲ್ಲಿ ಇದ್ದ ಶಾಂತಿಯನ್ನೂ ಓಡಿಸುವಂಥ ನಡತೆಯ ವ್ಯಾಧಿಯು ಹಬ್ಬಿದರೆ ನಾವು ಶಾಂತಿಯನ್ನು ಸಾಧಿಸುವುದೆಂತು? ಹೋಟೇಲುಗಳ ಹೆಚ್ಚಳ, ಚಿತ್ರ ವ್ಯವಸಾಯದ ವಿಸ್ತರಣೆ—ಇವೆ ಪ್ರಗತಿಯ ಚಿಹ್ನೆಗಳಾಗಲಾರವು, ಅವುಗಳಿಂದ ಒಳ್ಳೆಯದಕ್ಕಿಂತ ಕೆಟ್ಟದೇ ಹೆಚ್ಚು. ಸಾಂಪತ್ತಿಕ—ಆರ್ಥಿಕ ಸುಧಾರಣೆಯಾದರೆ ನಮ್ಮೆಲ್ಲ ಸಂಕಷ್ಟಗಳು ದೂರವಾಗುವುದೆಂದು ಹೇಳುವುದು ವಿಚಾರಪೂರ್ಣವಾದ ಮಾತಲ್ಲ. ಯಾಕೆಂದರೆ ಸಂಪತ್ತಿನ ಸಮಾನ ವಿತರಣೆಯಾದರೆ ಒಬ್ಬ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಎಷ್ಟು ಬರಬಹುದೋ, ಅದರ ಎರಡರಷ್ಟು ಸಿಕ್ಕಿದರೂ ತೃಪ್ತಿಯಾಗದಷ್ಟು ದುರ್ವ್ಯಯಕ್ಕೆ ಅಂಟಿಕೊಂಡಿದ್ದಾರೆ. ಆ ಸುಧಾರಣೆಯಿಂದ ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲವೆಂಬುದು ಸ್ಪಷ್ಟ. ಎನ್ನುವಾಗ ಸಮಾಜದಲ್ಲಿ ಪರಿಶುದ್ಧವಾದ ನಡತೆ— ವಿವೇಕಪೂರ್ಣ ವರ್ತನೆಯೇ ದೊಡ್ಡ ಸಂಪತ್ತು. ಸರಳ ಜೀವನ, ಕರ್ತವ್ಯ ಪರಿಪಾಲನೆ, ಕಷ್ಟ ಸಹಿಷ್ಣುತೆ—ಇವೇ ನಮ್ಮ ಪ್ರಗತಿಗಾಗಿ ಪ್ರತಿಯೊಬ್ಬ ಪ್ರಜೆಗೂ ಅಗತ್ಯವುಳ್ಳ ಸೊತ್ತು. ಒಡೆತನದ—ಸಿರಿತನದ ಬಯಕೆ, ವಿಲಾಸದ ಹಂಬಲ ತಿಪ್ಪೆಗೇಡಿತನ ಇವುಗಳಿಂದಲೇ ನಮಗಿಂದು ವಿಪತ್ತು.

ನಾವು ಉದ್ದೇಶವಾಗಿಟ್ಟುಕೊಂಡಿರುವ ಕಲ್ಯಾಣ ರಾಷ್ಟ್ರದಲ್ಲಿ ಇಂದಿನಂತೆ ಕೆಲವರು ಶಕ್ತಿ ಮೀರಿ ದುಡಿದೂ ಅರೆಗಂಜಿ ಕುಡಿದು ದಿನ ತೆಗೆಯುವ ಕೆಲವರು ಸೋಮಾರಿಗಳಾಗಿಯೂ ಸುಖವನ್ನೇ ಭೋಗಿಸುತ್ತಿರುವ ಪರಿಸ್ಥಿತಿಯಿರುವುದು ಸಾಧ್ಯವಿಲ್ಲೆಂಬುದು ತಿಳಿಯದವರು ಯಾರೂ ಇರಲಾರರು. ಎರಡೂ ಕಡೆಯವರು ತಮ್ಮೊಳಗಿನ ಸುಖ ಕಷ್ಟ, ಒಳ್ಳೆಯದು ಕೆಟ್ಟದನ್ನು ಹಂಚಿಕೊಳ್ಳಲೇಬೇಕಾಗುವುದು. ಆದರೆ ಕಲ್ಯಾಣ ರಾಷ್ಟ್ರವನ್ನು ಕಟ್ಟುವ ದೀಕ್ಷೆಯನ್ನು ಕೈಗೊಂಡಿದ್ದೂ ಉದ್ದೇಶ ಸಾಧನೆಗೆ ವಿರೋಧವನ್ನೇ ತೋರಿಸುವವರಿಗೇನೆನ್ನಬೇಕು? ಉಳ್ಳವರಲ್ಲಿ ಹೆಚ್ಚಿನವರ ವಿರೋಧವಾದರೆ ಇಲ್ಲದವರಲ್ಲಿ ಹೆಚ್ಚಿನವರ ಒತ್ತಾಯ. ಅಂದರೆ ಹೋರಾಟ! ಯಾವುದಕ್ಕಾಗಿ? ಕಲ್ಯಾಣಕ್ಕಾಗಿ ಕಾದಾಟ! ಎಲ್ಲರ ಕಲ್ಯಾಣವೇ ಎಲ್ಲರಿಗೆ ಬೇಕಂತೆ. ಅಂದರೆ ಎಲ್ಲರವೂ ಗುರಿ - ಪಕ್ಷ ಒಂದೇ ಆದರೆ ಆ ಸಾಧನೆಗೆ ಹೆಸರು ಹೋರಾಟ ಎಂದೇ!

ಇವೆಲ್ಲ ಕೆಡುಕುಗಳಿಗೂ ಕಾರಣವೆಂದರೆ ಸಮಾಜದ ಎಲ್ಲ ವ್ಯಕ್ತಿಗಳೂ ಉತ್ತಮ ತತ್ವವನ್ನರಿತು ಅದಕ್ಕೆ ಕಟ್ಟುಬೀಳದಿರುವುದೇ ಆಗಿದೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ, ಸಮಾಜದಲ್ಲಿ ತೀವ್ರವಾದ ವಿಚಾರಕ್ರಾಂತಿ—ಮಾನಸಿಕ ಪರಿವರ್ತನೆಯಾಗದೆ ನಮ್ಮ ಪ್ರಗತಿಯಾಗದು—ಎಂದು ತೋರುತ್ತದೆ. ನಮ್ಮ ಪ್ರಗತಿಗೆ ಪ್ರತಿಕೂಲ ಶಕ್ತಿಗಳಾದ ದುರಭ್ಯಾಸ ಹಾಗೂ ಸ್ವಾರ್ಥ ಮೂಲ ಪ್ರವೃತ್ತಿಗಳನ್ನು ಉಚ್ಚಾಟನೆಗೊಳಿಸಿ ಸರಳ ಹಾಗೂ ಶ್ರಮಜೀವನದ ಸವಿ, ಶ್ರೇಷ್ಠತೆಯನ್ನು ಕಂಡುಕೊಳ್ಳುವಂತೆ ಉತ್ತಮ ತತ್ವಪ್ರಚಾರವು ನಡೆಯಬೇಕು. ಈ ವಿಷಯದಲ್ಲಿ ದೇಶದ ಕೆಲವೇ ಮಹಾಪುರುಷರು ಭಾಷಣಮಾಡುವುದರಿಂದ, ಪತ್ರಿಕೆಗಳಲ್ಲಿ ಪರಿಣಾಮಕಾರೀ ಲೇಖನಗಳು ಪ್ರಕಟವಾಗುವುದರಿಂದಲೇ ನಮ್ಮ ಕಾರ್ಯಸಾಧನೆಯಾದೀತೆಂದು ನಂಬಿದರೆ ಸಾಲದು. ಉತ್ತಮ ಸಮಾಜರಚನಾ ಕಾರ್ಯಕ್ಕೆ ಗ್ರಾಮವನ್ನೇ ಕೇಂದ್ರವಾಗಿಟ್ಟುಕೊಂಡು ನಮ್ಮ ಏಳಿಗೆಗಾಗಿ ಹೆಣಗಬೇಕು. ಕೆಟ್ಟ ಪ್ರವೃತ್ತಿಗಳ ವಿರುದ್ಧ ಹೋರಾಟ ನಡೆಸಬೇಕು—ಚಳವಳಿ ಹೂಡಬೇಕು. ನಮ್ಮ ಹಳ್ಳಿಯ ಪ್ರಗತಿಗಾಗಿ ದಿಲ್ಲಿಯತ್ತಲೇ ನೋಡುತ್ತಿರಬಾರದು. ಆದರ್ಶವನ್ನು ಹೇಳುವವರು ಮಾತ್ರ ತಾವು ಮೊದಲು ಅದನ್ನು ಆಚರಿಸಿಕೊಂಡಿರಬೇಕು—ಹಾಗಿದ್ದರೇ ಅದು ಪ್ರಯೋಜನಕಾರಿಯಾದೀತೆಂಬುದನ್ನು ತಿಳಿದಿರಬೇಕು. ಗ್ರಾಮದ ಸಂಘ ಸಂಸ್ಥೆಗಳ ಮೂಲಕ ಇಂಥ ಚಳವಳಿ ನಡೆದು ಆದರ್ಶವನ್ನನುಸರಿಸುವವರ ಸಂಖ್ಯೆ ಹೆಚ್ಚಿತೆಂದರೆ, ವೃತ್ತಿ ದುಷ್ಟಶಕ್ತಿಗಳು ಬಲಹೀನವಾಗುವುವು. ಒಮ್ಮೆ ಮುಖ್ಯ ಮಂತ್ರಿಗಳೊಬ್ಬರು ಪಿಕ್ಪಾಕೆಟು ಹಿಡಿದು ಮಣ್ಣನ್ನಗೆಯತೊಡಗಿದೊಡನೆಯೇ ಆವಂ ಒಟ್ಟಿಗಿದ್ದ, ಪಿಕಾಸನ್ನು ಮುಟ್ಟುವುದೂ ತಮ್ಮ ಘನತೆಗೆ ಕಡಿಮೆಯೆನ್ನುವಂತಿದ್ದ ಅಧಿಕಾರಿಗಳೆಲ್ಲಾ ಹಿಂದುಮುಂದು ನೋಡದೆ ಅಗೆಯತೊಡಗಿದ್ದರಂತೆ! ಒಬ್ಬರ ಪರಿವರ್ತನೆ ಎಷ್ಟು ಜನರನ್ನು ಪರಿವರ್ತಿಸಿತು! ಹೀಗೆ ವಿಚಾರಕ್ರಾಂತಿಯೇ ಕಲ್ಯಾಣ ರಾಷ್ಟ್ರಕ್ಕೆ ತಳಹದಿಯಾಗಲಿ.

—ಶ್ರೀ ವಿ. ಬಿ. ಅವಸ್ಥಾಡಿ.


ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಜೀವರಕ್ಷಾಮೃತಂ ಎಂಬ ಆನಂದಕುಸುಮಾಕರ ಲೇಹ್ಯ




ಕ್ಯಾಟಲಾಗ್ ಇನಾಂ

MALAYALA MAUNTHREEKA VAIDYASALA



**The Canara Industrial & Banking Syndicate Ltd.**

Estd: 1925] [H. O. **UDIPI**, S. India.

| | | |
|---|---|---|
| Authorised Capital | = | Rs. 56,00,000 |
| Issued Capital | = | Rs. 32,23,787 |
| Subscribed Capital | = | Rs. 32,11,000 |
| Paid-up Capital | = | Rs. 27,45,000 |
| Reserve Funds | = | Rs. 15,00,000 |

Total Working Funds Exceed **10** Crores (As on 30-9-1956)

*BRANCHES:*

| | |
|---|---|
| Mysore State | 59 |
| Andhra | 14 |
| Kerala | 13 |
| Bombay | 8 |
| Madras | 2 |

**T. A. Pai,** B.Com.(Bom), M.L.A., *General Manager.*

**T. M. A. Pai,** M.B.B.S., *Managing Director.*



೭೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಸ್ಟೋರರಲ್ಲಿ ದೊರೆಯುತ್ತವೆ.

**ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ**

**ಮತ್ತು ಗುಳಿಗೆಗಳು**

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೩ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.

Tele add "CAWASHABAD"

# NAVAYUGA

Popular Kannada Weekly

*Founder:—*

**A. B. SHETTY**, *M. L. A.*

Former Minister for Public Health, Govt. of Madras.

At Present Minister for Health Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೬-೧೨-'೫೬ | ೧೪ |


## ಆಕ್ರಮಣಗಾರರ ನಿಷ್ಕ್ರಮಣ

ಸುಯೇಜಿನ ಕಾಲುವೆಯ ನೆಪದಲ್ಲಿ ನಡೆಸಲಾದ ಆಂಗ್ಲೋ-ಫ್ರೆಂಚ್-ಇಸ್ರೇಲ್ ಆಕ್ರಮಣದ ಪರಿಣಾಮವು ಪಶ್ಚಿಮ ಯುರೋಪಿನ ಎಲ್ಲ ದೇಶಗಳಲ್ಲೂ ಈಗ ಕಂಡು ಬರತೊಡಗಿದೆ: ಎಣ್ಣೆಯ ಅಭಾವದ ರೂಪದಲ್ಲಿ ಈ ಪರಿಣಾಮವು ವ್ಯಕ್ತವಾಗುತ್ತಿದೆ. ಇಜಿಪ್ತನ್ನು ಮಣಿಸುವ ದುರುದ್ದೇಶದಿಂದ ಆಕ್ರಮಣಗೈದು ಅಂಬ ರಾಷ್ಟ್ರಗಳೆಲ್ಲದರ ಕೋಪವನ್ನು ಭುಗಿಲೆನಿಸಿದ ಪಾಪಿ ಐರೋಪ್ಯ ರಾಷ್ಟ್ರಗಳು ಬ್ರಿಟನ್ ಮತ್ತು ಫ್ರಾನ್ಸ್ ಮಾತ್ರವಾಗಿದ್ದರೂ ಈಗ ಪಶ್ಚಿಮ ಯುರೋಪಿಗೆನೇ ಎಣ್ಣೆಯ ರಫ್ತು ನಿಂತು ಹೋಗಿದೆ. ಅರಬರು ಎಣ್ಣೆಯನ್ನು ಭೂಮಧ್ಯ ಸಮುದ್ರ ಬಂದರುಗಳಿಗೆ ಒಯ್ಯುತ್ತಿದ್ದ ಪ್ಯಾಪುಗಳನ್ನು ಧ್ವಂಸಗೊಳಿಸಿದ್ದೇ ಇದರ ಮೂಲ ಕಾರಣ. ಸುಯೇಜಿನ ಕಾಲುವೆಯು ನೌಕಾ ಸಂಚಾರಕ್ಕೆ ಅಯೋಗ್ಯವಾಗಿ ಮಾರ್ಪಟ್ಟುದು ಇನ್ನೊಂದು ಕಾರಣ. ಭಾರತದಂತಹ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಸಹ ಸುಯೇಜಿನ ಕಾಲುವೆಯ ಅನುಪಯೋಗಿ ಸ್ಥಿತಿಯಿಂದ ಬಹಳಮಟ್ಟಿಗೆ ದುಷ್ಪರಿಣಾಮವಾದೀತೆಂದು ಕಂಡು ಬಂದಿರುವಾಗ ಎಣ್ಣೆಯ ಆಮದಿನ ಮೇಲೆಯೇ — ಅಥವಾ ಆ ಎಣ್ಣೆಯನ್ನು ಇಂಧನವಾಗಿ ಉಪಯೋಗಿಸಿಕೊಂಡು ನಡೆಸಲ್ಪಡುವ ಕಾರ್ಖಾನೆಗಳ ಮೇಲೆಯೇ — ಭವಿಷ್ಯವು ಅವಲಂಬಿಸಿರುವ ಪಶ್ಚಿಮ ಯುರೋಪಿನ ರಾಷ್ಟ್ರಗಳು ಆರ್ಥಿಕ ಕುಸಿತದಿಂದ ತತ್ತರಿಸತೊಡಗಿರುವುದು ತೀರ ಸಹಜ. ಪೂರ್ವ ಯುರೋಪಿನ ದೇಶಗಳಿಗಾದರೆ ರಶ್ಯದಿಂದ ಎಣ್ಣೆಯು ಪೂರೈಸಲ್ಪಡುತ್ತದೆ. ಆದರೆ ಪಶ್ಚಿಮ ಯುರೋಪಿಗೆ ಎಣ್ಣೆಯನ್ನು ರಶ್ಯವು ಪೂರೈಸಲು ಮುಂದೆ ಬಂದಿಲ್ಲ. ಒಂದನೆಯದಾಗಿ ಅದರೊಡನೆ ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಹಂಚುವಷ್ಟು ಎಣ್ಣೆಯ ಸಂಗ್ರಹವಿರಲಿಕ್ಕಿಲ್ಲ. ಎರಡನೆಯದಾಗಿ, ಅದು ಇಜಿಪ್ತದ ಪಕ್ಷಪಾತಿಯಂತೆ ಕಂಡಿರುವುದರಿಂದ ಮತ್ತು ಸುಯೆಜ್ ವಲಯದಿಂದ ಆಂಗ್ಲೋ—ಫ್ರೆಂಚ್ ಸೇನೆಗಳ ವಾಪಸಾತಿಯನ್ನೇ ಒತ್ತಾಯಿಸುತ್ತಿರುವುದರಿಂದ ಎಣ್ಣೆಯನ್ನು ಪೂರೈಸಿ ಬ್ರಿಟನ್ ಮತ್ತು ಫ್ರಾನ್ಸ್ ಸುಖವಾಗಿ ಸುಯೆಜ್ ಪ್ರದೇಶದಲ್ಲಿ ತಳವೂರುವಂತೆ ಮಾಡಲು ಅದು ಸಿದ್ಧವಿರಲಿಕ್ಕಿಲ್ಲ; ಮೂರನೆಯದಾಗಿ ಅತಃ ಪಶ್ಚಿಮ ಯುರೋಪಿನ ರಾಷ್ಟ್ರಗಳು ಕಮ್ಯುನಿಸ್ಟ್ ರಶ್ಯದಿಂದ ಎಣ್ಣೆಯನ್ನು ತರಿಸಿಕೊಳ್ಳುವುದಕ್ಕೆ ಇಷ್ಟಪಡಲಿಕ್ಕಿಲ್ಲ. ಅಂತೂ ರಶ್ಯದೊಡನೆ ಎಣ್ಣೆ ಪೂರೈಕೆಯ ಬಗ್ಗೆ ಪರಿಷ್ಕೃತ ಒಪ್ಪಂದವೊಂದಾಗುತ್ತದೆ ಎಂದೊಂದು ಸುದ್ದಿ ಎದ್ದ ಬೆನ್ನಿಗೆಯೇ ನಿರಾಕರಣೆಯೂ ನಡೆದಿದೆ-ರಶ್ಯದ ಸುದ್ದಿ ಸಂಸ್ಥೆಯು ಫ್ರಾನ್ಸಿನ ರಾಜಕಾರಣಿಯೊಬ್ಬನು ಹುಟ್ಟಿಸಿದ ನೆಪ್ಪಲಾದ ಈ ಸುದ್ದಿಗೆ ಆಧಾರವಿಲ್ಲವೆಂದು ಘೋಷಿಸಿದೆ. ಅಂತೂ ಇಂಧನದ ಕೊರತೆಯು ಎಲ್ಲ ಪಶ್ಚಿಮ ಯುರೋಪಿನ ರಾಷ್ಟ್ರಗಳ ಜನತೆಯೂ ಇಸ್ರೇಲ್ ದೇಶವನ್ನೂ ಅದನ್ನು ಬೆಂಬಲಿಸಿ ಅನಾವಶ್ಯಕವಾಗಿ ಪೈಶಾಚಿಕ ಆಕ್ರಮಣವನ್ನು ಸುಯೇಜಿನ ಮೇಲೆ ನಡೆಸಿದ ಬ್ರಿಟಿಷ್ ಹಾಗು ಫ್ರೆಂಚ್ ಸರಕಾರಗಳನ್ನೂ ಪ್ರತಿನಿತ್ಯ ದೂಷಿಸುವಂತಾಗಿದೆ. ಬ್ರಿಟಿಷ್ ಪ್ರಧಾನಿ ಈಡನ್ ಈ ದೂಷಣೆಗಳಿಂದ ಈಗ ದೂರವಿದ್ದರೆ—ಅಸ್ವಾಸ್ಥ್ಯದ ದೆಸೆಯಿಂದಾಗಿ ಅವರು ಅಟ್ಲಾಂಟಿಕ್ ಸಾಗರ ಮಧ್ಯದ ದ್ವೀಪವೊಂದರಲ್ಲಿ ವಿಶ್ರಾಂತಿಯನ್ನೂ ಶುಶ್ರೂಷೆಯನ್ನೂ ಪಡೆಯುತ್ತಿದ್ದಾರೆ. ಕನ್‌ಸರ್‌ವೇಟಿವ್ ಮುಖಂಡನಾಗಿ ಶ್ರೀ ಬಟ್ಲರ್ ಎಲ್ಲ ಟೀಕೆಗಳನ್ನೂ ಪ್ರಧಾನಿಯ ಪರವಾಗಿ ಎದಿರಿಸುತ್ತಿದ್ದಾರೆ. ಅಮೇರಿಕವು ತಮಗೆ ಈ ಕಷ್ಟ ಕಾಲದಲ್ಲಿ ಸಹಾಯ ಮಾಡಬಹುದೆಂಬ ನಂಬಿಕೆಯು ಈ ಮಿತ್ರರಿಗಿತ್ತೆಂದು ತೋರುತ್ತದೆ. ಅಮೇರಿಕದೊಡನೆ ಎಣ್ಣೆಯ ವಿಪುಲ ಸಂಗ್ರಹವಿದೆ. ಆದರೆ ಅಮೇರಿಕದಿಂದ ಎಣ್ಣೆಯನ್ನು ಬ್ರಿಟನಿಗೆ ತರಿಸುವುದರಿಂದ ೧೫ ಕೋಟಿ ಡಾಲರುಗಳಷ್ಟು ಹೆಚ್ಚು ವೆಚ್ಚವು ಪ್ರತಿ ವರ್ಷ ಬೀಳುತ್ತದೆ. ಇಷ್ಟು ತುಟ್ಟಿಯಾದರೂ ಚಿಂತಿಲ್ಲ — ಮುಖ ಉಳಿಸಿಕೊಂಡು ಎಣ್ಣೆಯನ್ನು ಕೊಂಡುಕೊಳ್ಳುವ ಸಮಾಧಾನ ಉಂಟಲ್ಲ—ಎಂದು ಆಂಗ್ಲೋ ಫ್ರೆಂಚ್ ಮಿತ್ರರು ಭಾವಿಸಿದ್ದರು. ಆದರೆ ಅವರು ದುರ್ದೈವದಿಂದಲೋ ಇಜಿಪ್ಟಿನ ಸುದೈವದಿಂದಲೋ ಅಮೇರಿಕವು ಆಂಗ್ಲೋ—ಫ್ರೆಂಚ್ ವರ್ತನೆಯನ್ನು ಎತ್ತಿ ಕಟ್ಟಿಲ್ಲ;|ಬದಲಿಗೆ ಬಲವಾಗಿ ಖಂಡಿಸಿದೆ, ಅದಕ್ಕೆ ಆಂಗ್ಲೋ ಫ್ರೆಂಚ್ ಸೇನೆಗಳು ಕಾಲುವೆ ಪ್ರದೇಶದಲ್ಲಿ ತಳವೂರುವ, ಕನಿಷ್ಠ ಪಕ್ಷ ಕಾಲುವೆ ಪ್ರದೇಶದಿಂದ ಸೇನೆಗಳ ನಿರ್ಗಮನವನ್ನು ತಡಗೊಳಿಸುವ ತಂತ್ರವೂ ಮನಸ್ಸಿಗೆ ಬಂದಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಗೊತ್ತುವಳಿಯ ಸ್ಫೂರ್ತಿಯಲ್ಲಿ ಆಂಗ್ಲೋ-ಫ್ರೆಂಚ್ ಸೇನೆಗಳು ಕೂಡಲೇ ಕಾಲುವೆ ಪ್ರದೇಶದಿಂದ ಹೊರಡಬೇಕೆಂದು ಅಮೇರಿಕವು ಒತ್ತಾಯಿಸುತ್ತದೆ. ಯಾವ ಕಾರಣಕ್ಕಾಗಿಯೇ ಇರಲಿ, ವಿಳಂಬ ಧೋರಣೆಯನ್ನು ಅಥವಾ ಉದಾಸೀನತೆಯನ್ನು ಇಲ್ಲಿ ವಹಿಸಿದರೆ ಲೋಕದ ಸಹಾನುಭೂತಿಯನ್ನು ಸಂಯುಕ್ತರಾಷ್ಟ್ರ ಸಂಘವೂ ಅದರ ನಿರ್ಣಯವನ್ನು ಬೆಂಬಲಿಸಿದ ಅಮೇರಿಕದಂತಹ ಮಹಾರಾಷ್ಟ್ರವೂ ಕಳೆದುಕೊಳ್ಳಬೇಕಾದೀತೆಂಬ ಮನೋಭಾವ ಅಮೇರಿಕದ್ದೆಂದು ಕಾಣುತ್ತದೆ. ಆದುದರಿಂದ ತನ್ನ ಮಿತ್ರ ರಾಷ್ಟ್ರಗಳ ಮೇಲಾಗುತ್ತಿರುವ ಆರ್ಥಿಕ ದುಷ್ಪರಿಣಾಮವನ್ನು ಕಂಡು ಸಹ ಅಮೇರಿಕವು ಬಿಗಿಯಾದ ಧೋರಣೆಯನ್ನು ಅನುಸರಿಸಿದೆ. ಆಂಗ್ಲೋ—ಫ್ರೆಂಚ್ ಮಿತ್ರರಿಗಿರಲಿ—ಪಶ್ಚಿಮ ಯುರೋಪಿನ ಇತರ ದೇಶಗಳಿಗೆ ಸಹ ಎಣ್ಣೆಯ ತುಟ್ಟಿಯು ಝಳಪತ್ತಿದ್ದನ್ನು ಕಂಡು ಸಹ ಅದು ಸುಮ್ಮನುಳಿದಿದೆ. ಈ ರಾಷ್ಟ್ರಗಳು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಮೇಲೆ ಒತ್ತಾಯವನ್ನು ಹೇರಿ ಅಮೇರಿಕದ ಅಭಿಮತದಂತೆ ಸುಯೆಜ್ ಪ್ರದೇಶದಿಂದ ಹಿಂದೆಗೆಯುವಂತೆ ಮಾಡಲಿ ಎಂಬುದು ಅಮೇರಿಕದ ಈ ಉಗ್ರ ನಿಶ್ಚಯದ ಹಿನ್ನೆಲೆಯಾಗಿರಬಹುದು; ಅಥವಾ ನಾಸೇರರ ಮೇಲೆ ನಡೆದ ಗಂಭೀರ ಆಕ್ರಮಣಕ್ಕೆ ಈ ಬಗೆಯ ಕಠೋರ ಪ್ರಾಯಶ್ಚಿತ್ತ ವಿಧಿಯನ್ನು ಹೇರುವುದೇ ಸೂಕ್ತವೆಂದು ಅಮೇರಿಕದ ಭಾವನೆಯಾಗಿರಲೂ ಸಾಕು. ಅಂತೂ ಈಗ ಬಂದಿರುವ ವಾರ್ತೆಗಳಿಗನುಸಾರವಾಗಿ ಅಮೇರಿಕದ ಬಿಗಿ ಧೋರಣೆಯು ಈಗ ಫಲವಿತ್ತಿದೆ ಎನ್ನಬಹುದು. ಆಂಗ್ಲೋ-ಫ್ರೆಂಚ್ ಮಿತ್ರರು ತಾವು ಸುಯೆಜ್ ಪ್ರದೇಶವನ್ನು ಖಾಲಿಮಾಡಿ ಹಿಂದೆಹೋಗುವ ಸಂಪೂರ್ಣ ಭರವಸೆಯನ್ನು ಕೊಟ್ಟಿರುವರೆಂದು ತಿಳಿದುಬರುತ್ತದೆ. ಸಂಯುಕ್ತ ರಾಷ್ಟ್ರ ಸಂಘವು ಪ್ರಭಾವಶಾಲಿ ನಿಯಂತ್ರಣವನ್ನು ಕಾಲುವೆ ವಲಯದಲ್ಲಿಡಲು ಮತ್ತು ಕಾಲುವೆಯಲ್ಲಿ ನೌಕಾ ಸಂಚಾರ ಸ್ವಾತಂತ್ರ್ಯವು ಅಬಾಧಿತವಾಗಿಸಲು ಶಕ್ತವಾಗುವ ವರೆಗೆ ತಾವು ಪೋರ್ಟ್ ಸೈದ್ ಠಾಣ್ಯದಿಂದ ಸಂಪೂರ್ಣ ತೊಲಗಲಾರೆವೆಂದೇ ಹೇಳುತ್ತಿದ್ದ ಬ್ರಿಟನಿನ ಬಟ್ಲರ ಮಹಾಶಯರು ಫ್ರಾನ್ಸಿನ ಪಿನೊರೊಡನೆ ಎಂಟು ತಾಸುಗಳ ದೀರ್ಘ ಸಮಾಲೋಚನೆಯ ಬಳಿಕ 'ಹೂಂ, ಹೊರಗೆ ಹೋಗುತ್ತೇವೆ" ಎಂದೆನ್ನುವ ನಿರ್ಣಯಕ್ಕೆ ಬಂದರೆಂದು ಖಚಿತವಾಗಿದೆ. ಅಮೇರಿಕಕ್ಕೆ ಇದನ್ನು ಸಾಕಷ್ಟು ಮೊದಲೇ ತಿಳಿಸಿದ್ದರಿಂದೂ ಹೇಳಲಾಗುತ್ತದೆ. ಪರಿಣಾಮವಾಗಿ ಅಮೇರಿಕವು ಎಣ್ಣೆಯನ್ನು ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಪೂರೈಸಲು ಹದಿನೈದು ಕಂಪೆನಿಗಳಿಗೆ ಅಧಿಕಾರವನ್ನಿತ್ತಿದೆ. ಆಂಗ್ಲೋ—ಫ್ರೆಂಚ್ ಸೇನೆಗಳು ಇದೇ ಕ್ರಿಸ್ಮಸ್ ಸಮಯದ ಹೊತ್ತಿಗೆ ಪೋರ್ಟ್ ಸೈದ್ ಠಾಣ್ಯದಿಂದ ಕಾಲ್ತೆಗೆಯಬಹುವೆಂದ ವದಂತಿ. ಅಮೇರಿಕದ ಎಣ್ಣೆಯಾದರೂ ಅದಕ್ಕೆ ಮುಂಚೆ ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಸಿಗಲಿಕ್ಕಿಲ್ಲ. ಏಕೆಂದರೆ ಅಮೇರಿಕದೊಡನೆ ಎಣ್ಣೆ ಎಷ್ಟೇ ಧಾರಾಳವಾಗಿದ್ದರೂ ಎಣ್ಣೆ ಸಾಗಿಸಲು ಬೇಕಾದ ಟ್ಯಾಂಕರ್ ಹಡಗುಗಳನ್ನು ಕೂಡಲೇ ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಳ್ಳಲು ಸಾಧ್ಯವಿಲ್ಲವೆನ್ನಲಾಗಿದೆ. ಅಂತೂ ಮಧ್ಯ ಏಶ್ಯದಲ್ಲಿ ಮಾನವತೆಯು ಅಪಮಾನವಾಗುತ್ತಿರುವ ಕಾಲದಲ್ಲಿ ಅಮೇರಿಕವು ಕಠೋರವಾದ ಸಂಯಮವನ್ನು ವ್ಯಕ್ತಪಡಿಸಿದ ದೆಸೆಯಿಂದ ಸಂಯುಕ್ತ ರಾಷ್ಟ್ರ ಸಂಘಕ್ಕೆ ತಲೆಬಾಗದ ಚಂಡಪ್ರಚಂಡರು ಶರಣು ಬರುವಂತಾಗಿದೆ. ರಶ್ಯವು ಇಜಿಪ್ಟಿನ ಸಹಾಯಕ್ಕೆ ಹೋಗುವೆನೆಂದು ಬೆದರಿಸಿದುದರಿಂದ ಸುಯೇಜಿನ ಮೇಲೆ ಆಕ್ರಮಣ ನಡೆಸಿದ ಆಂಗ್ಲೋ-ಫ್ರೆಂಚರು ಯುದ್ಧ ನಿಲ್ಲಿಸಲು ಮುಂದಾದರು. ಈಗ ಅಮೇರಿಕವು ಎಣ್ಣೆ ಕೊಡಲಾರೆನೆಂದು ಆಗ್ರಹದಿಂದ ಹೇಳುತ್ತಿದ್ದುದರಿಂದ, ಅವರ ಸಮಾಧಾನಕ್ಕಾಗಿ ಮತ್ತು ತಮ್ಮ ಉಳಿವಿಗಾಗಿ ಆಂಗ್ಲೋ-ಫ್ರೆಂಚ್ ಸೇನೆಗಳು ಪೋರ್ಟ್ ಸೈದ್ ಪ್ರದೇಶದಿಂದ ವಾಪಸಾಗಲು ಸಿದ್ಧಗೊಂಡಿವೆ. ಇವರ ಮೇಲಿಂದಲೇ ಜಗತ್ತಿನಲ್ಲಿಂದು ಗೊತ್ತುವಳಿಗಳಿಗೆ ಶಕ್ತಿ ಹೆಚ್ಚೋ ಅಥವಾ ಸೈನ್ಯ ಸಂಪತ್ತುಗಳಿಗೋ — ಎಂಬುದನ್ನು ತೂಗಿ ನೋಡಬಹುದು.

# ಚೈನದ ಪ್ರಧಾನಿಗಳ ಪ್ರವಾಸ

## ಐಕರೊಡನೆ—ನೆಹರು ಭೇಟಿ

ಚೀನದ ಪ್ರಧಾನಿ ಚೌ-ಎನ್-ಲ್ಯಾಯವರ ಎರಡೂವರೆ ವರ್ಷಗಳ ಹಿಂದೊಮ್ಮೆ ಭಾರತಕ್ಕೆ ಬಂದಿದ್ದರು. ಆಗಿನದು ಕೇವಲ ಎರಡು ದಿನಗಳ ಭೇಟಿಯಾಗಿತ್ತು. ಈಗ ಸುಮಾರು ಎರಡು ವಾರಗಳಷ್ಟು ದೀರ್ಘವಾದ ಪ್ರವಾಸವನ್ನವರು ಭಾರತದಲ್ಲಿ ಕೈಗೊಂಡಿದ್ದಾರೆ. ಅವರಿಗೆ ಎಲ್ಲೆಡೆಯಲ್ಲೂ ವೈಭವಪೂರ್ಣವಾದ ಸ್ವಾಗತವನ್ನೀಯಲಾಗಿದೆ.

ನೆಹರೂರೊಡನೆ ನಡೆಸಿದ ಸಮಾಲೋಚನೆಗಳ ಪರಿಣಾಮವಾಗಿ, ಹಂಗೇರಿಯ ಬಗ್ಗೆ ಭಾರತ ಮತ್ತು ಚೀನದ ಪ್ರಧಾನಿಗಳಲ್ಲಿ ಮತಭೇದವಿರುವಂತೆ ವ್ಯಕ್ತವಾಗಿದೆ ಆದಾಗ್ಯೂ ಇದರಿಂದ ಚೀನಕ್ಕೂ ಭಾರತಕ್ಕೂ ನಡುವಿರುವ ಗಾಢ ಸಂಬಂಧದಲ್ಲಿ ಯಾವುದೇ ತರದ ವ್ಯತ್ಯಯ ಉಂಟಾಗಲಾರದೆಂಬುದು ಸಾಕಷ್ಟು ಖಚಿತವಾಗಿದೆ.

ತಮ್ಮೆರಡು ರಾಷ್ಟ್ರಗಳು ಪಂಚಶೀಲದ ಅನುಷ್ಠಾನಕ್ಕಾಗಿ ಇವೆ ಎಂದು ಉಭಯ ಪ್ರಧಾನಿಗಳೂ ಪದೇಪದೆ ಘೋಷಿಸಿದ್ದಾರೆ. ತಾವು ಯುದ್ಧಕ್ಕೂ ಅಶಾಂತಿ ಪ್ರಚೋದಕವಾದ ಇತರ ಉಪಕ್ರಮಗಳಿಗೂ ವಿರೋಧಿಗಳೆಂದು ಅವರು ಪುನರುಚ್ಚರಿಸಿದ್ದಾರೆ. ತಮ್ಮೆರಡು ದೇಶಗಳ ನಡುವಣ ಸ್ನೇಹದ ಬೆಸುಗೆ ಹಿಂದಿಗಿಂತಲೂ ಇಂದು ದೃಢವಾಗಿದೆ ಎಂದಿದ್ದಾರೆ.

ಸೀಲುಹಾಕಿ ಮುಚ್ಚಳವನ್ನು ಭದ್ರಗೊಳಿಸಿದ ಬಳಿಕವೂ ಒಳಗಿನ ವಸ್ತು ಹೇಗಿದೆ ಎಂಬುದನ್ನು ತಿಳಿಯಲು ಇಂದು ಐಸೋಟೋಪುಗಳನ್ನು ಬಳಸಲಾಗುತ್ತವೆ. ಇದರಿಂದ ಮಾರಾಟಕ್ಕೆ ಕಳಿಸುವ ವಸ್ತುಗಳ ಯೋಗ್ಯತೆಯನ್ನು ಕ್ಷಿಪ್ರದಲ್ಲಿ ತೀರ್ಮಾನಿಸಲು ಸಾಧ್ಯ.

ಚೀನದ ಪ್ರಧಾನಿಗಳು ಸದ್ಯವೇ ಪಾಕಿಸ್ತಾನಕ್ಕೆ ಭೇಟಿ ಕೊಡಲಿದ್ದಾರೆ. ಇದನ್ನು ಸ್ಮರಿಸಿಕೊಂಡು ನಮ್ಮ ಪ್ರಧಾನಿ ನೆಹರು ಚೀನೀ ಪ್ರಧಾನರಿಗೊಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ— ಭಾರತವು ಸ್ನೇಹಾಕಾಂಕ್ಷಿಯಾದ ಮಿತ್ರರಾಷ್ಟ್ರವೆಂದು ಪಾಕಿಸ್ತಾನಿ ಧುರೀಣರಿಗೆ ಮನವರಿಕೆ ಮಾಡಿರಿ ಎಂಬುದೇ ನೆಹರೂರ ವಿನಂತಿಯ ಸಾರ.

ಪಾಕಿಸ್ತಾನದಿಂದ ಅಫಘಾನಿಸ್ತಾನಕ್ಕೆ ಸಹ ಚೀನದ ಪ್ರಧಾನಿಗಳು ಸೌಹಾರ್ದ ಪ್ರವಾಸ ಕೈಗೊಳ್ಳಲಿದ್ದಾರೆ. ಅಂತೂ ದಶಂಬರ ೩೧ನೇ ತಾರೀಕಿಗೆ ಅವರು ಸ್ವದೇಶಾಭಿಮುಖ ಮಾರ್ಗವಾಗಿ ಹೊಸ ದೆಹಲಿಗೆ ಪುನಃ ಬರಲಿದ್ದಾರೆ; ಮತ್ತು ಹೊಸ ವರ್ಷದ ಪ್ರಥಮ ದಿನದಂದು (ಜನವರಿ ೧) ಹೊಸ ದೆಹಲಿಯಲ್ಲೇ ಉಳಿಯಲಿರುವರೆಂದೂ ತಿಳಿದಿದೆ.

ಈ ನಡುವೆ ನೆಹರೂರವರ ಅಮೇರಿಕದ ಅಧ್ಯಕ್ಷರಿಂದ ಐಕ್ ಕರೆಯಂತೆ ಅಮೇರಿಕಕ್ಕೆ ಸೌಹಾರ್ದ ಸಂದರ್ಶನವನ್ನು ಎರಡನೇ ಬಾರಿ ಕೊಡಲಿದ್ದಾರೆ. ನೆಹರು ಲಂಡನ್ ಮಾರ್ಗವಾಗಿ ಅಮೇರಿಕಕ್ಕೆ ೧೬ನೇ ದಶಂಬರದಂದು ತಲಪುವರು. ಅಲ್ಲಿ ಅವರಿಗೆ ವೈಭವಯುಕ್ತ ಸ್ವಾಗತ ಕಾದಿದೆ. ನೆಹರುರವರು ಐಕರೊಡನೆ ಅವರ ಹಳ್ಳಿಯ ಮನೆಯಲ್ಲಿ ಗೋಪ್ಯ ಸಮಾಲೋಚನೆಗಳನ್ನು ಒಂದು ದಿನವಿಡೀ ಅನೌಪಚಾರಿಕ ರೀತಿಯಲ್ಲಿ ನಡೆಸುತ್ತಾರೆ. ಈ ಕಾಲಕ್ಕೆ ಬೇರೆ ಯಾವನೇ ಅಧಿಕಾರಿ ಉಪಸ್ಥಿತನಿರುವುದಿಲ್ಲವೆಂದು ತಿಳಿದಿದೆ. ಮಾರುದಿನ ಅಧಿಕೃತರೀತಿಯಲ್ಲಿ ಸರಕಾರಿ ಮಟ್ಟದ ಸಮಾಲೋಚನೆಗಳು ನಡೆಯುತ್ತವೆ.

ಗೋಪ್ಯ ಸಮಾಲೋಚನೆಯು ಅಮೇರಿಕದ ಅಧ್ಯಕ್ಷರಿಗೆ ಭಾರತದ ನಿಲುವನ್ನೂ ನೆಹರುಗಳಿಗೆ ಅಮೇರಿಕದ ಅಭಿಪ್ರಾಯವನ್ನೂ ಬಹಳ ಚೆನ್ನಾಗಿ ತಿಳಿದುಕೊಳ್ಳಲು ತುಂಬ ಸಹಾಯಕವಾದೀತೆಂದು ನಿರೀಕ್ಷಕರ ಅಭಿಪ್ರಾಯ. ನೆಹರೂರವರು ಚೀನದ ಪ್ರಧಾನಿಗಳೊಡನೆ ಈಗತಾನೆ ಸಮಾಲೋಚಿಸಿದ್ದಾರೆ, ರಶ್ಯದ ನಾಯಕರೊಡನೆ ಸಹ ಕಳೆದ ವರ್ಷ ಉಚ್ಚ ಮಟ್ಟದ ಮಾತುಕತೆ ನಡೆಸಿದ್ದಾರೆ; ನಾಸೇರರೊಡನೆ ಸಹ ಅಭಿಪ್ರಾಯವಿನಿಮಯ ಮಾಡಿಕೊಂಡಿದ್ದಾರೆ. ಐಕರ ಪಾಲಿಗೆ ಇವೆಲ್ಲ ಸೌಲಭ್ಯಗಳು ಪ್ರಾಪ್ತವಾಗಿಲ್ಲ. ಆದುದರಿಂದ ಐಕರು ಜಗತ್ತಿನ ವಿದ್ಯಮಾನಗಳ ಬಗ್ಗೆ ನೆಹರು ಏನು ಹೇಳಲಿರುವರೆಂಬುದನ್ನು ಆಸಕ್ತಿಯಿಂದ ಕೇಳಿಕೊಂಡಾರೆಂಬುದಕ್ಕೆ ಹೆಚ್ಚಿನ ಆಧಾರವಿದೆ.

**ನೋಟೀಸು.**

**ಮಂಗಳೂರು ಡಿ. ಮು. ಕೋರ್ಟಿನಲ್ಲಿ**

ಕ್ರಮ ನಂಬ್ರ 403/1956.

ಮಂಜಾರ ಜನಾರ್ಧನ ಪೈ. —ವಾದಿ

ಮತ್ತು

1. ಶೇಶಮ್ಮ-ಕೊರಗ ಸೆಟ್ರ ಹೆಂಡತಿ
2. ಶಿವರಾಮ ಯಾನೆ ನಾರಾಯಣ ಶೆಟ್ಟಿ ಕೊರಗ ಶೆಟ್ರ ಮಗ. ಮಂಗಳೂರು ತಾಲೂಕು ಪಾವೂರು ಗ್ರಾಮ. —ಪ್ರತಿವಾದಿರು

ವಾದಿರು ಕೊಪ್ಪರಿಗೆ ಆಸ್ತಿಯ ಮೂಲಗೇಣಿ ವಸೂಲಿ ಬಗ್ಗೆ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ವ್ಯಾಜ್ಯವನ್ನು 3–1–1957ಕ್ಕೆ ತನ್ನಿಗೆ ಇಟ್ಟಿರುತ್ತದೆ. ಸದರಿ ದಿವಸ ಹಗಲು ಘಂಟೆ 11ಕ್ಕೆ ಪ್ರತಿವಾದಿರು ಖುದ್ದು ಯಾ ವಕೀಲರ ದ್ವಾರಾ ಹಾಜರಾಗುವರೆ ತಪ್ಪಿದರೆ ಸಂಬ್ರವನ್ನು ಏಕಪಕ್ಷವಾಗಿ ತೀರ್ಮಾನಿಸುವರು.

ಮಂಗಳೂರು 3–12–56. ಎಮ್. ಕೇಶವ ಪೈ, ವಾದಿರ ಎಡ್ವೊಕೇಟ್.

ಈಜಿಪ್ಟ್‌ನ ಸುಯೇಜಿನ ತಂಟೆಯು ಅಮೇರಿಕವನ್ನು ಅದರ ಮಿತ್ರರಾಷ್ಟ್ರಗಳಿಂದ ದೂರವಿಲ್ಲುವಂತೆ ಕೆಲವುಮಟ್ಟಿಗೆ ಮಾಡಿದೆ. ರಶ್ಯ ಮತ್ತು ಅಮೇರಿಕಗಳು ಸಹ ಮತ ಗೊಂಡಂತಹ ಅದ್ಭುತ ವಿಸ್ಮಯಕಾರಿ ಘಟನೆಯಾಗಿ ಸುಯೇಜ್ ಸಮಸ್ಯೆ ರೂಪಾಂತರಗೊಂಡಿದೆ. ಹೀಗಾಗಿ ನೆಹರೂರವರ ಅಭಿಪ್ರಾಯವು ಐಕರಿಗೆ ತುಂಬ ಮಹತ್ವದ್ದೆನಿಸುವುದು ನಿಶ್ಚಯ

ನೆಹರೂರವರು ಸ್ವದೇಶಕ್ಕೆ ಮರಳುವ ದಾರಿಯಲ್ಲಿ ಕೆನಡದ ಪ್ರಧಾನಿಗಳ ಆಮಂತ್ರಣದ ಮೇರೆಗೆ ಒಟ್ಟಾವಾ ನಗರಕ್ಕೂ ಎರಡು ದಿನಗಳ ಭೇಟಿ ಕೊಡಲಿದ್ದಾರೆ. ಕೆನಡದ ಪ್ರಧಾನಿಗಳು ಕಳೆದ ವರ್ಷ ಭಾರತಕ್ಕೆ ಬಂದಿದ್ದರು.— ಮತ್ತು ನ್ಯಾಟೊ ಒಪ್ಪಂದವು ಗೋವೆಯ ರಕ್ಷಣೆಯ ಬಗ್ಗೆ ಪೋರ್ಚುಗಾಲಿಗೆ ಸಹಾಯಕವಾಗದೇ ಇದ್ದರು. ಅವರು ನೆಹರೂರ ಖಾಸಗಿ ಮಿತ್ರರಾಗಿದ್ದಾರೆ ಎಂಬುದನ್ನು ಮರೆಯಬಾರದು.

# ಉಡುಪಿ

## ಅಡಳ್ತೆ ಮೊಕ್ತೇಸರರ ಚುನಾವಣೆ

ಸ್ಥಳೀಯ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದ ಅಡಳಿತೆ ಮೊಕ್ತೇಸರರ ಚುನಾವಣೆಯು ಎಚ್. ಆರ್. ಇ. ಬೋರ್ಡಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿ, ಡಾ. ಎಸ್. ಆರ್. ಪೈಗಳ ಸೂಚನೆ, ಶ್ರೀ ಕೆ. ಕೆ. ಪೈಗಳ ಅನುಮೋದನೆ ಮೇರೆಗೆ ಡಾ. ಪಿ. ರಾಘವೇಂದ್ರ ನಾಯ್ಕರು ಸರ್ವಾನುಮತದಿಂದ ಆಡಳ್ತೆ ಮೊಕ್ತೇಸರರಾಗಿ ಚುನಾಯಿಸಲ್ಪಟ್ಟರು. ಶ್ರೀ ಕಾಶೀ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರು ಡಾ. ನಾಯ್ಕರಿಗೆ ಫಲಮಂತ್ರಾಕ್ಷತೆಕೊಟ್ಟು ಆಶೀರ್ವದಿಸಿದರು.

## ಮಹಿಳಾಸಮಾಜದ ಆಶ್ರಯದಲ್ಲಿ

—ಕಳೆದ ತಾ.28ರಲ್ಲಿ ಮುಕುಂದನಿವಾಸದಲ್ಲಿ ಗುಡಿಬಂಡೆಯ ಗಮಕವಾದ್ಯ ನಿಪುಣ ಶ್ರೀ ಬಿ. ಎಸ್. ರಾಮಾಚಾರ್ಯರು ಕಾವ್ಯವಾಚನಮಾಡಿದರು. ಶ್ರೀ ಬನ್ನಂಜೆ ರಾಮಾಚಾರ್ಯರು ಗಮಕಿಗಳ ಪರಿಚಯಮಾಡಿದರು.

## ದಿ ವಿಜಯಾ ಬೇಂಕು ಲಿ., ಉಡುಪಿ.

ಏಲಂ ನೋಟೀಸು.

ಈ ಕೆಳಗೆ ಹೆಸರು ನಮೂದಿಸಿದವರು ಸದ್ರಿ ಬೇಂಕಿನಲ್ಲಿ ನಗನ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ಸಮಯದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವದ್ರಿಂದಲೂ, ಸದ್ರಿ ಸಾಲವನ್ನು ಜಮಾಮಾಡಿಕೊಳ್ಳುವರೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿ ಯವರುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 15 12-56ನೇ ಶನಿವಾರ ಮಧ್ಯಾಹ್ನ ಘಂಟೆ ಮೂರಕ್ಕೆ ಸರಿಯಾಗಿ, ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಮುಂದೆ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

| ಲೋನು ನಂಬ್ರ. | ಹೆಸರು ಮತ್ತು ವಿಳಾಸ. | ಮೊಬಲಗು 30-9-56 ವರೆಗಿನ ಬಡ್ಡಿ ಸಮೇತ. | | |
|---|---|---|---|---|
| 483/56 | ಸುಬ್ರಮ್ಮನ್ ಕಾಮತ್ C/o ಕಮ್ಮರ್ಶಿಯಲ್ ಟೇಕ್ಸ್ ಆಫೀಸು ಉಡುಪಿ. | 47 | 2 | 0 |
| 618/55 | ವಿ. ಸೂರಣ್ಣ ಸೆಟ್ಟಿ ಬೊಮ್ಮಯ್ಯ ಸೆಟ್ರ ಅಳಿಯ ಕಡೆಕಾರು ಗ್ರಾಮ ಪೋಸ್ಟು ಕಿನ್ನಿಮೂಲ್ಕಿ. | 82 | 0 | 0 |
| 620/55 | ಕಾಳಪ್ಪ ಅಮೀನ್ ಸೋಮಯ್ಯ ಸುವರ್ಣರ ಮಗ ಕಿದಿಯೂರು ಗ್ರಾಮ, ಪೋಸ್ಟ್ ಕಿದಿಯೂರು | 147 | 6 | 0 |
| 25/56 | ಡಬ್ಲ್ಯು. ಕೊರ್ನೆಲಿಯೊ C/o ಉಡುಪಿ, ಮುನಿಸಿಪಲ್ ಆಫೀಸು, ಉಡುಪಿ | 117 | 7 | 0 |
| 41/56 | ಬಿ. ಶೀನ ಸೆಟ್ಟಿ, ಸೋಮು ಸೆಟ್ರ ಮಗ, ಕೋರ್ಟ್ ರೋಡು ಉಡುಪಿ. | 69 | 12 | 0 |
| 46/56 | ಪಿ. ಗಿರಿಯಪ್ಪ ಸುವರ್ಣ, ಕೂಕ್ರ ಪೂಜಾರಿಯರ ಮಗ, ಕುದಿಗ್ರಾಮ, ಪೋಸ್ಟ್ ಕುದಿ. | 132 | 15 | 0 |
| 110/56 | ಡಬ್ಲ್ಯು. ಕೊರ್ನೇಲಿಯೊ, C/o, ಉಡುಪಿ ಮುನಿಸಿಪಲ್ ಆಫೀಸು, ಉಡುಪಿ. | 100 | 7 | 0 |

ಉಡುಪಿ, 31–11–1956. B. S. S. Hegde, Agent, Vijaya Bank, Ltd., Udipi, S. K.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

# ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಕ್ಕಳ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಡಾ। ಟಿ. ಎಮ್. ಎ ಪೈಗಳು ಗಮಕಿಗಳಿಗೆ ಪಾರಿತೋಷಕವಿತ್ತರು. ಶ್ರೀ ಎ. ಜಿ. ಅಳ್ವೆಯವರು ಧನ್ಯವಾದಗಳನ್ನಿತ್ತರು.

**ವಾರ್ಷಿಕೋತ್ಸವ**—ಸ್ಥಳೀಯ ರಾಷ್ಟ್ರಭಾಷಾಶಿಕ್ಷಣ ಶಿಬಿರದ ವಾರ್ಷಿಕೋತ್ಸವವು ಶ್ರೀ ಟಿ. ಎ ಪೈ, ಎಮ್. ಎಲ್. ಎ, ರವರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಶ್ರೀಗಳಾದ ಎ. ಜಿ. ಅಳ್ವೆ. ಮತ್ತು ಶ್ರೀಪತಿಆಚಾರ್ಯರು ಶಿಬಿರದ ಯಶವನ್ನು ಬಯಸಿಮಾತನಾಡಿದರು.

**ಅ. ಭಾ. ಅಂಚೆ ಕೆಲಸಗಾರರ**—ಉಡುಪಿ ಶಾಖೆಯ ಮಹಾ ಸಭೆಯು ಕಳೆದ ತಾ. 22ರಲ್ಲಿ ಶ್ರೀ ಕೆ. ದತ್ತ ಭಟ್, ಪೋಸ್ಟುಮಾಸ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಂಟು ಕರ್ತಗಳ ಬೇಡಿಕೆಗಳನ್ನು ಕೂಡಲೇ ಕಾರ್ಯಗತಗೊಳಿಸಬೇಕೆಂದು ಭಾರತ ಸರಕಾರವನ್ನು ವಿನಂತಿಸುವ ನಿರ್ಣಯ ಸ್ವೀಕರಿಸಲ್ಪಟ್ಟಿತು. ನೇಶನಲ್ ಫೆಡರೇಶನ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಸದಸ್ಯರನ್ನು ಕೇಳಿಕೊಳ್ಳುವ ಇನ್ನೊಂದ ಠರಾವು ಪಾಸಾಯಿತು. ಶ್ರೀಗಳಾದ ಕೆ ಪಿ. ಅಚಾರ್ ಮತ್ತು ಪಿ ಶಿವಾನಂದರು ಮಾತನಾಡಿದರು.

**ಕವಿರಾಜ ದವಾಖಾನೆಯಲ್ಲಿ**—ಕವಿರಾಜ ಎಮ್ ಜಿ. ಶೆಣೈಯವರು ತಮ್ಮ ದವಾಖಾನೆಯಲ್ಲಿ ತಾ30ರಲ್ಲು ರಾತ್ರಿ, ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರ ಸನ್ನಿಧಿಯಲ್ಲಿ ಧನ್ವಂತರೀಪೂಜಾ ಮತ್ತು ಗುರುಪೂಜಾ ಸಮಾರಂಭಗಳನ್ನು ಜರಗಿಸಿದರು. ಭಜನೆ, ಪೂಜೆ, ಇತ್ಯಾದಿ ಕಾರ್ಯಕ್ರಮಗಳಾದ ಬಳಿಕ ಡಾ॥ ಟಿ. ಎಮ್. ಎ. ಪೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಶ್ರೀ ಸ್ವಾಮಿಗಳವರ ಆಶೀರ್ವಚನವಾದ ಬಳಿಕ ಪ್ರಸಾದ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

**ಕುಂದಾಪುರ**— ಸ್ಥಳೀಯ ಕುಂದಾಪುರ ಸಹಕಾರಿ ಯೂನಿಯನಿನ ಮಹಾ ಸಭೆಯು ಇದೇ ತಾ. 1—12—56ರಲ್ಲಿ. ಯೂನಿಯನಿನ ಅಧ್ಯಕ್ಷ ಶ್ರೀ ಜಿ. ಸಂಜೀವ ರಾವ್ ವಕೀಲ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದ್ರಿ ಯೂನಿಯನಿನ ಪರವಾಗಿ, ದ. ಕ. ಸೆಂಟ್ರಲ್ ಕೋಆಪರೇಟ್ಟಿವ್ ಬೇಂಕಿನ ಪ್ರತಿನಿಧಿಯಾಗಿ ಮುಂದಿನ 3 ವರುಷಗಳ ಬಗ್ಗೆ, ಕಾಳಾವರ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಆಜು ಸಂಜೀವ ಸೆಟ್ರನ್ನು ತಿರುಗಿ ಸರ್ವಾನುಮತದಿಂದ ಆರಿಸಲಾಯ್ತು. ಶ್ರೀ ಸಂಜೀವ ಸೆಟ್ರು ತನ್ನನ್ನು ತಿರುಗಿ ಪ್ರತಿನಿಧಿಯಾಗಿ ಆರಿಸಿದ ಬಗ್ಗೆ ತನ್ನ ಆಭಾರವನ್ನು ಸೂಚಿಸಿದರು.

**ಸುರತ್ಕಲ್**— ಸುರತ್ಕಲ್ ಮುಕ್ಕದಲ್ಲಿ ಸಮಾಜವಿಕಾಸ ಯೋಜನೆ ಮತ್ತು ಮಿತ್ರಪಟ್ಣ ಗಂಗಯ ಸ್ಮಾರಕ ಫಂಡಿನ ವತಿಯಿಂದ ಕಟ್ಟಲ್ಪಟ್ಟ ಬಾಲವಿಹಾರ ಕೇಂದ್ರವನ್ನು ಕಳೆದ ತಾ. 30ರಲ್ಲಿ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಬಿ. ರಾಮರಾಯರು ಉದ್ಘಾಟಿಸಿದರು. ಪ್ರೊಜೆಕ್ಟ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಟಿ. ಕೃಷ್ಣನವರು ಸಭಾಧ್ಯಕ್ಷತೆ ವಹಿಸಿದ್ದರು ಆರಂಭದಲ್ಲಿ ಭಜನೆ, ವರದಿವಾಚನ, ಸಭಿಕರ ಭಾಷಣಗಳಾದುವು. ಕೊನೆಯಲ್ಲಿ ಮೈಸೂರಿನ ಸಂಗೀತ ವಿದ್ವಾನ್ ಶ್ರೀ ಎಚ್. ಸುರೇಂದ್ರ ಆಚಾರ್ಯರಿಂದ 'ವೀರ ಅಭಿಮನ್ಯು' ಹರಿಕಥಾ ಕಾಲಕ್ಷೇಪ ನಡೆಯಿತು.

# ಗೋವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು, ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

ನವಯುಗ ಪ್ರೆಸ್ ಉಡುಪಿ

## ಮಂಗಳೂರು

**ಭಾರತೀಯ ನೃತ್ಯ ಪ್ರದರ್ಶನ—** ನೃತ್ಯ ಪ್ರವೀಣ ಶ್ರೀ ಯು. ಎಸ್. ಕೃಷ್ಣ ರಾಯರು ಈಚೆಗೆ ಕದಿರೆಯಲ್ಲಿ ತೆರೆದ 'ನೃತ್ಯ ವಿದ್ಯಾಲಯ'ದ ಸಹಾಯಾರ್ಥವಾಗಿ ಕಳೆದ ತಾ. 18ರಲ್ಲಿ ನೃತ್ಯ ಪ್ರದರ್ಶನವೀಯಲಾಯಿತು. ಶ್ರೀ ಧರ್ಮಸ್ಥಳದ ರತ್ನವರ್ಮ ಹೆಗ್ಗಡೆಯವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಮಂಗಳೂರು ನಗರಸಭಾಧ್ಯಕ್ಷರಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಶ್ರೀ ಕೃಷ್ಣರಾಯರ ಕಲಾ ಪ್ರತಿಭೆಯನ್ನು ಪ್ರಶಂಸಿಸಿ ಭಾಷಣವಿತ್ತರು.

**ಸಂಗೀತ ನಾಟಕ ಸ್ಪರ್ಧೆ—** ದ. ಕ. ನಾಟ್ಯಕಲೋತ್ಸವ ಸಮಿತಿ ಸಭೆಯು ತಾ. 29ರಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಗೀತ ನಾಟಕ ಸ್ಪರ್ಧೆಯ ಕಾರ್ಯಕ್ರಮಗಳನ್ನು ನಡೆಸಲು ಶ್ರೀಗಳಾದ ಕೆ. ಆರ್. ಆಚಾರ್, ಎಚ್. ಕೆ. ತಿಂಗಳಾಯ ಮತ್ತು ಬಿ. ಎಮ್. ಇದಿನಬ್ಬನವರನ್ನೊಳಗೊಂಡ ಸಮಿತಿಯೊಂದು ರಚಿಸಲ್ಪಟ್ಟಿತು. ಇಚ್ಛಿಸಿದ ಮಾಹಿತಿಯನ್ನಪೇಕ್ಷಿಸುವವರು, ಕಾರ್ಯದರ್ಶಿ, ನಾಟ್ಯಕಲೋತ್ಸವ ಸಮಿತಿ, ಜಿಲ್ಲಾ ಕಾಂಗ್ರೆಸ್ ಕಚೇರಿ, ಮಂಗಳೂರು, ಅವರಿಂದ ಪಡೆಯಬಹುದು.

**ಅಂಚೆ ತಂತಿ ಸೌಕರ್ಯ—** ಕೋಟೇಶ್ವರ, ಉಪ್ಪಳ, ಕೋಟೆಕಾರ್, ಬಜ್ಪೆ ಮತ್ತು ಬಜಪೆಗಳಲ್ಲಿ ತಂತೀ ಕಚೇರಿಗಳನ್ನು ತೆರೆಯಲು ಮಂಜೂರಾತಿ ದೊರೆತಿದ್ದು ಈ ಕಚೇರಿಗಳನ್ನು ಬೇಗನೆ ತೆರೆಯುವ ಬಗ್ಗೆ ಇಂಜಿನಿಯರಿಂಗ್ ವಿಭಾಗದವರು ಕಾರ್ಯನಿರತರಾಗಿರುವರೆನ್ನಲಾಗಿದೆ. ವೇಣೂರು ಮತ್ತು ಸುಳ್ಯ ಇಲ್ಲಿಯೂ ತಂತೀ ಕಚೇರಿಗಳನ್ನು ತೆರೆಯುವ ಕುರಿತು ಪರಿಶೀಲನೆ ನಡೆಯುತ್ತಿದೆ.

ಕುತ್ತಿಕೋಲು ಮುಟ್ಟು, ಸುಂಕದಕಟ್ಟೆ (ಪುತ್ತೂರು ತಾಲೂಕು) ಬಾಳಿಲ ಮೊದಲಾದ ಸ್ಥಳಗಳಲ್ಲಿ ಬ್ರಾಂಚ್ ಪೋಸ್ಟಾಫೀಸುಗಳನ್ನು ತೆರೆಯಲು ಮಂಜೂರಾತಿ ದೊರೆತಿರುವುದು.

ಸೂತಕರೋಗ
ವಿಧ್ವಂಸಿನಿ
ಸ್ತ್ರೀಯರ ಗರ್ಭರೋಗಕ್ಕೆ
ಅಮೃತದಂತಿರುವ
ಮದ್ದು
ಕ್ಯಾಟಲಾಗ್ ಇನಾಮ
MALAYALA MANTHREEKA VAIDYASALA
P. B. NO. 00... 

**ಜಿಲ್ಲಾ ಕಲೆಕ್ಟರರ ಪ್ರಕಟಣೆ**

ಇಂಡಿಯಾ ಪಾಕಿಸ್ತಾನ ಪಾಸ್ ಪೋರ್ಟುಗಳ, ಬಗೆ ಇಂಡಿಯಾ ಪಾಕಿಸ್ತಾನ ಪಾಸ್ ಪೋರ್ಟುಗಳನ್ನು ಊರ್ಜಿತಗೊಳಿಸುವಿಕೆಯ ಬಗ್ಗೆ ಕೊಡತಕ್ಕ ಫೀಸನ್ನು ಮನಿಯಾರ್ಡರ್ ಮೂಲಕವಾಗಿ ಯಾಗಲೀ, ಕ್ರಾಸ್ ಮಾಡಿದ ಪೋಸ್ಟಲ್ ಆರ್ಡರ್ ಮೂಲಕವಾಗಿ ಯಾಗಲೀ, ಬೆಂಗಳೂರಲ್ಲಿರುವ ಮೈಸೂರು ಸರಕಾರದ ಚೀಫ್ ಸೆಕ್ರೆಟರಿಯವರ ಹೆಸರಿಗೆ ಕಳುಹಿಸತಕ್ಕದ್ದು. ಪಾಸ್ ಪೋರ್ಟು ಅವಧಿಗಿಂತ ಜಾಸ್ತಿ ಕಾಲ ಹಿಂದೂಸ್ಥಾನದಲ್ಲಿ ತಂಗುವ ಪಾಕಿಸ್ತಾನಿಗಳು ಆ ಬಗ್ಗೆ ಕೊಡುವ ಫೀಸನ್ನು ಅಂತೆಯೇ ಪಾಸ್‌ಪೋರ್ಟುಗಳಿಗೆ ಸಂಬಂಧಿಸುವ ಫಾರ್ಮುಗಳ ಮಾರಾಟ ಹಣವನ್ನು ನಗದಾಗಿ ರಿಜರ್ವ್ ಬ್ಯಾಂಕಿಗೆ XLVI misc. Naturalisation - Passport and copy right fees (Central) ಲೆಕ್ಕಕ್ಕೆ ಪಾವತಿ ಮಾಡಬೇಕಾಗಿ ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಟಿದೆ.

**ಅಖಿಲಕರ್ನಾಟಕ ಮುಸ್ಲಿಂ ಪರಿಷತ್ತನ್ನು**- ಆದಷ್ಟು ಬೇಗನೆ ಕರೆಯಬೇಕೆಂದು ಕಳೆದ ತಾ 28ರಲ್ಲಿ ಡಾ. ಎಫ್. ಎಚ್. ಒಡೆಯರ್‌ರವರ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ ನಿರ್ಧರಿಸಲಾಯಿತು. ಆ ಬಗ್ಗೆ ಅಖಿಲ ಕರ್ನಾಟಕ ಮುಸ್ಲಿಂ ಸಂಘ ಸಂಸ್ಥೆಗಳ ಮತ್ತು ಮುಸ್ಲಿಂ ಮುಖಂಡರ ಸಲಹೆಗಳನ್ನು ಪಡೆಯಬೇಕೆಂದು ತೀರ್ಮಾನವಾಯಿತು.

**ದ. ಕ. ಜಿಲ್ಲೆಗೆ ಟೆಲಿಫೋನ್ ಸೌಕರ್ಯ—** ಬಂಟ್ವಾಳ ಮತ್ತು ರಾಜೆ ಮಂಗಳೂರುಗಳ ಜನತೆಯ ಸೌಕರ್ಯಕ್ಕಾಗಿ ಒಂದು ಟೆಲಿಫೋನ್ ಎಕ್ಸ್‌ಚೇಂಜನ್ನು ಸ್ಥಾಪಿಸುವ ಕುರಿತು ಮದ್ರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ವಿಶೇಷ ಪರಿಶೀಲನೆ ನಡೆಸುತ್ತಿರುವರೆಂದು ತಿಳಿದು ಬರುತ್ತದೆ. ಸಾರ್ವಜನಿಕರ ಉಪಯೋಗಾರ್ಥವಾಗಿ ಕುಂಬಳೆಯಲ್ಲಿ ಟೆಲಿಫೋನ್ ಕಚೇರಿಯನ್ನು ತೆರೆಯಬೇಕೆಂಬ ಸೂಚನೆಯನ್ನು ಮಂಜೂರು ಮಾಡಲಾಗಿದೆ. ಮಾತೆಗೆ ನಷ್ಟಬಾರದಂತೆ ಮನವರಿಕೆಯಾದಲ್ಲಿ ಇಂತಹ ಒಂದು ಕಚೇರಿಯನ್ನು ಬೆಳ್ತಂಗಡಿಯಲ್ಲಿಯೂ ತೆರೆಯಲಾಗುವುದು ಎಂದೂ ತಿಳಿದು ಬರುತ್ತದೆ.

**ಧರ್ಮಸ್ಥಳ—** ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ತಾ 30ರಲ್ಲು ಸಂಜೆ ಸರ್ವಧರ್ಮಸಮ್ಮೇಳನವು ಮಂಗಳೂರಿನ ಶ್ರೀರಾಮಕೃಷ್ಣ ಮಠದ ಸ್ವಾಮಿ ಆದಿದೇವಾನಂದರವರ ಅಧ್ಯಕ್ಷತೆಯಲ್ಲಿ ಜರಗಿತು. ಧರ್ಮನುಡಿಯಂತೆ ನಡೆದ ಮಹಾನುಭಾವರು ಎಂಬ ವಿಷಯದಲ್ಲಿ ಶ್ರೀಗಳಾದ ಜಿ. ಪಿ. ರಾಜರತ್ನಂ, ಡಾ. ಪದ್ಮರಾಜ್, ಬಿ. ಎಚ್. ಶ್ರೀಧರ, ಚೆನ್ನವೀರ ಕಣವಿ ಮತ್ತು ಎಸ್. ಕೆ. ರಾಮಚಂದ್ರ ರಾಯರು ಕ್ರಮವಾಗಿ ಇಸ್ಲಾಂ ಧರ್ಮದಲ್ಲಿ, ಜೈನ ಧರ್ಮದಲ್ಲಿ, ಸನಾತನ ಧರ್ಮದಲ್ಲಿ, ವೀರಶೈವ ಧರ್ಮದಲ್ಲಿ ಮತ್ತು ಬುದ್ಧ ಧರ್ಮದಲ್ಲಿ ಹೇಳಿದಂತೆ ವರ್ತಿಸಿದ ಮಹಾನುಭಾವರ ಕುರಿತು ಮಾತನಾಡಿದರು.

ಆರಂಭದಲ್ಲಿ ಅಧ್ಯಕ್ಷ ಹಾಗೂ ಭಾಷಣಗಾರರ ಮೆರವಣಿಗೆಯಾಯಿತು. ವಸಂತಮಹಲಿನಲ್ಲಿ ಮುಖ್ಯ ಅತಿಥಿಗಳನ್ನು ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀ ಮರಿಯಪ್ಪ ವರ್ಧಮಾನ ಹೆಗ್ಗಡೆಯವರು ಪ್ರಾರ್ಥನೆ ಮಾಡಿದರು. ಶ್ರೀ ಬಿ. ಪುಟ್ಟಸ್ವಾಮಿಯವರು ಸಮ್ಮೇಳನಾಧ್ಯಕ್ಷರಿಗೆ ಶ್ರೀಕ್ಷೇತ್ರ ನಿವಾಸಿಗಳ ಪರವಾಗಿ ಬಿನ್ನವತ್ತಳೆಯನ್ನರ್ಪಿಸಿದರು.

ಶ್ರೀ. ಶಿವರಾಮ ಕಾರಂತರು ಭಾಷಣಗಾರರ ಪರಿಚಯ ಮಾಡಿಕೊಟ್ಟರು. ಶ್ರೀ ಬೆಳ್ಳೆ ರಾಮಚಂದ್ರರಾಯರು ಧನ್ಯವಾದಗಳನ್ನಿತ್ತರು.

ಮರುದಿವಸದ ಕವಿಗೋಷ್ಠಿಯು ಶ್ರೀ. ಜಿ. ಪಿ. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಮು. ತಿ. ನರಸಿಂಹಾಚಾರ್ಯ, ಬಿ. ಎಚ್. ಶ್ರೀಧರ, ಅ. ಗೌ. ಕಿನ್ನಿಗೋಳಿ, ಎಸ್. ವೆಂಕಟರಾಜ, ಚೆನ್ನವೀರ ಕಣವಿ ಮತ್ತು ಗೋಪಾಲಕೃಷ್ಣ ಅಡಿಗರು ಭಾಗವಹಿಸಿದ್ದರು. ಸಂಜೆ ಶ್ರೀ ಶೇಷಗಿರಿ ಭಾಗವತರ ನೇತೃತ್ವದಲ್ಲಿ ಬಡಗಣ ಯಕ್ಷಗಾನ ತಾಳಮದ್ದಳೆ ಕೂಟ ಯಶಸ್ವಿಯಾಗಿ ಜರಗಿತು.

**ಕಲ್ಯಾಣಪುರ—** ಸ್ಥಳೀಯ ಸರ್ವೋದಯ ಕಾರ್ಯಕರ್ತರುಗಳಾದ ಶ್ರೀ ರಮೇಶ ರಾವ್ ಮತ್ತು ಶ್ರೀಮತಿ ಮೀರಾ ಬಾಯಿಯವರ ನೇತೃತ್ವದಲ್ಲಿ ನಡೆಯುವ ಗ್ರಾಮ ಸಮಾಜದಲ್ಲಿ ವಯಸ್ಕರ ಶಿಕ್ಷಣ ಕೇಂದ್ರದ ಕಟ್ಟಡವನ್ನು ಕಳೆದ ತಾ. 29ರಲ್ಲು ಶ್ರೀಮತಿ ಪ್ರೇಮಾ ಎ. ಪೈಗಳು ನೆರವೇರಿಸಿದರು. ಶ್ರೀ ನಾರಾಯಣ ರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಮೀರಾ ಬಾಯಿಯವರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ, ಎ. ಜೆ. ಆಳ್ವ, ಕೆ. ಶ್ರೀನಿವಾಸ ಪೈ, ರಾಮಚಂದ್ರರಾವ್, ಸುಂದರ ಶೆಟ್ಟಿ, ನಾಗಯ್ಯ ಶೆಟ್ಟಿ, ಶೀನಪ್ಪ ಮತ್ತು ಶ್ರೀಮತಿ ಇಂದಿರಾ ರಾಯರು ಕಾಲೋಚಿತಮಾತುಗಳನ್ನಾಡಿದರು. ಶ್ರೀ ರಮೇಶ ರಾಯರು ಧನ್ಯವಾದಗಳನ್ನಿತ್ತರು.

**ಸೀತಾನದಿ ಜಾನುವಾರುಸಂತೆ—** ಕಾರ್ಕಳ ತಾಲೂಕು, ಸೀತಾ ನದಿಯಲ್ಲಿ ವರ್ಷಂಪ್ರತಿ ಜರಗುವ ಜಾನುವಾರುಸಂತೆಯು ತಾ. 14-12-56ರಿಂದ 25-12-56 ತನಕ ಜರಗುವುದೆಂದೂ ಜಾತ್ರೆಗೆ ಬರುವವರ ಬಗ್ಗೆ ಯೋಗ್ಯ ಅನುಕೂಲತೆಗಳನ್ನು ಒದಗಿಸಲಾಗುವುದೆಂದೂ ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಕೆ. ಎಲ್ ಸೂರ್ಯನಾರಾಯಣರಾಯರು ತಿಳಿಸುತ್ತಾರೆ.

**ಕಾರ್ಕಳ—** ಸ್ಥಳೀಯ ಬೋರ್ಡು ಹೈಸ್ಕೂಲಿನ ಸಲಹಾ ಸಮಿತಿಯ ಸದಸ್ಯರ ಸಭೆಯು ಡಾ. ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಹೈಸ್ಕೂಲಿಗೊಂದು ಸಭಾ ಭವನವನ್ನು ಕಟ್ಟಿಸಬೇಕೆಂದು ನಿರ್ಣಯವಾಯಿತು.

**ಬ್ರಹ್ಮಾವರ—** ಬ್ರಹ್ಮಾವರ ಕೊಪರೇಟಿವ್ ಸ್ಟೋರ್ಸಿನ ಕಡೆಯಿಂದ ಸದ್ರಿ ಸ್ಟೋರ್ಸಿನ ಕೇಶರ್ ಕ್ಲಾರ್ಕ ಬಿ. ಶ್ರೀನಿವಾಸರಾಯರ ಮತ್ತು ಪರ್ಚೇಸರ್ ಕ್ಲಾರ್ಕ ಬಿ. ಬಡಿಯನ್ನಾರಿಯರ ಮೇಲೆ ಹೂಡಲಾಗಿದ್ದ ಹಣ ದುರುಪಯೋಗ ಮೊಕದ್ದಮೆಯಲ್ಲಿ ಉಡುಪಿ ಸ್ಪೆಶಲ್ I ಕ್ಲಾಸ್ ಮೆಜಿಸ್ಟ್ರೇಟರು ಜುಲೈ ತಾ. 31ರಲ್ಲು ಪ್ರತಿಯೊಬ್ಬರಿಗೂ ಕೋರ್ಟು ಮುಗಿಯುವವರೆಗೆ ಶಿಕ್ಷೆ ಮತ್ತು ರೂ 100 ದಂಡನೆ ವಿಧಿಸಿದ್ದರು. ಸದ್ರಿ ತೀರ್ಪಿನ ಮೇಲೆ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಅಪೀಲುಮಾಡಲಾಗಿ ತಾ 26—9—56ರಲ್ಲು ಜಿಲ್ಲಾ ಜಡ್ಜರು ಕೇಶರ್ ಕ್ಲಾರ್ಕ ಬಿ. ಬಡಿಯನ್ನಾರಿಯರು ನಿರಪರಾಧಿಯೆಂದು ವಿಧಿಸಿದ ರೂ 100 ಜುಲ್ಮಾನೆಯನ್ನು ಸದ್ರಿ ನ್ಯಾರಿಯರಿಗೆ ವಾಪಾಸು ಕೊಡಬೇಕೆಂದೂ ತೀರ್ಮಾನಿಸಿರುತ್ತಾರೆ. ಶ್ರೀ ಬಿ. ಸೋಮಶೇಖರರಾಯರು ಅಪೀಲುದಾರರ ಕಡೆಯಿಂದ ವಾದಿಸಿದ್ದರು.

**ದ. ಕ. ಜಿಲ್ಲಾ ಕಿಸಾನ ಸಮ್ಮೇಳನವು** ತಾ. 12ರಲ್ಲು ಹಿಂದ್ ಕಿಸಾನ್ ಪಂಚಾಯತ ಜಿಲ್ಲಾ ಅಧ್ಯಕ್ಷ ಶ್ರೀ ವಿ. ಶ್ರೀನಿವಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ಕಲ್ಯಾಣಪುರದಲ್ಲಿ ಜರಗಿತು. ಪ್ರ. ಸೋ. ರಾಷ್ಟ್ರೀಯ ಕಾರ್ಯಕಾರೀ ಸಮಿತಿ ಜತೆಕಾರ್ಯದರ್ಶಿಗಳಾದ ಶ್ರೀ ಪ್ರೇಮ ಭಸಿನ್, ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಅವರು ಸ್ವಾಗತಭಾಷಣಮಾಡಿದರು. ಶ್ರೀಗಳಾದ ಕೆ. ಆರ್. ಕಾರಂತ, ಯು. ಎಸ್. ನಾಯಕ್, ಫರೀದ್ ಅಸ್ಸಾಡಿ ಮೊದಲಾದವರು ಕಿಸಾನ್ ಹಾಗೂ ರೈತರ ಸಮಸ್ಯೆಗಳ ಕುರಿತು ಮಾತನಾಡಿ ಜನಜಾಗೃತಿಯನ್ನುಂಟು ಮಾಡಿದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ರೈತಹಿತಕಾನೂನುಗಳು ಪ್ರಕೃತದ ಸ್ಥಿತಿಯಲ್ಲಿ ರೈತನಿಗೆ ಏನೆಂದೂ ಉಪಯೋಗಕ್ಕೆ ಬೀಳುವಂತಹುಗಳಲ್ಲವೆಂದು...

ನವಮೈಸೂರು ಪ್ರಾಂತಕ್ಕೆ ಬೊಂಬಾಯಿ ಕರ್ನಾಟಕದಲ್ಲಿ ಈಗ ಊರ್ಜಿತದಲ್ಲಿರುವ ... ಕ್ಕಲು ಕಾನೂನಿನನುಸಾರವಾಗಿ ಯೋಗ್ಯ ಕಾನೂನುಗಳಾಗಬೇಕೆನ್ನುವ ಮದ್ರಾಸು ... ಕಾರವು ನಿರ್ಧರಿಸಿದ ಗೇಣಿ ಅಂಶವನ್ನು 1/... ಕ್ಕೆ ಇಳಿಸಬೇಕೆನ್ನುವ, ದ. ಕ. ಜಿಲ್ಲೆಯ ಕೃಷಿ ಮಜೂರರಿಗೆ ಅವರ ಜೀವನಕ್ಕೆ ಸಾಕಾಗುವ ಕನಿಷ್ಠ ವೇತನವನ್ನು ಕಾಯಿದೆ ಪ್ರಕಾರ ... ರ್ಣಯಿಸಬೇಕೆನ್ನುವ, ಕೃಷಿ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆನ್ನುವ, ಒಕ್ಕಲು ರಕ್ಷಣಾ ಕಾನೂನುಗಳು ಒಕ್ಕಲುಗಳಿಗೂ ಅನ್ವಯಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾಯಿತು.

**ಉಡುಪಿ ಡಿ. ಮು. ಕೋರ್ಟಿನಲ್ಲಿ**

**O. S. No. 524/1956**

ವೆಂಕಟಕೃಷ್ಣ ಭಟ್ಟ —ವಾದಿ

ಮತ್ತು

1 ನಾರಾಯಣ ಶೆಟ್ಟಿ, 2. ಭಾಗವತ ವೆಂಕಟೇಶ ಮತ್ತು ಪೈ - ಪ್ರತಿವಾದಿಗಳು

ಇವರೊಳಗೆ

ಈಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿ- ಕೆ. ನಾರಾಯಣ ಶೆಟ್ಟಿ, ವೇಣಪ್ಪ ಶೆಟ್ಟಿಯವರ ಮಗ ಉಡುಪಿ ಕಸಬಾ ಶಿವಳ್ಳಿ ಗ್ರಾಮದ ಕಲ್ಸಂಕ ಬಳಿಯಲ್ಲಿರುವವ, ಇವನಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ವಾದಿಯು ಪ್ರತಿವಾದಿರ ಮೇಲೆ ರೂಪಾಯಿ 1200/-ಕ್ಕೆ ದಾಕಲ್ಮಾಡಿರುವಮೇಲ್ಕಂಡ ವ್ಯಾಜ್ಯವು ಮತ್ತು ಸದ್ರಿ ವ್ಯಾಜ್ಯದಲ್ಲಿ ಜಂಗ್ಮೆಂಟಿಗೆ ಮುಂಚೆ ಜಪ್ತಿ ಕೇಳಿ ವಾದಿಕೊಂಡ R. D. A. No. 1154/56ನೇ ಅರ್ಜಿ ಈ ಬರುವ 21—12—56ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿದೆ. ಸದ್ರಿ ವ್ಯಾಜ್ಯದ ಅರ್ಜಿಯಲ್ಲಿ ಉಪಾಹರಣೆಕೊಟ್ಟು ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ 21—12—56ನೇ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ವ್ಯವಹರಿಸಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷವಾಗಿ ಸದ್ರಿ ವ್ಯಾಜ್ಯ ಮತ್ತು ಅರ್ಜಿಗಳ ತೀರ್ಮಾನ ಮಾಡಲ್ಪಡುವುದು.

P. V. Acharya
Vakil for Pltf.

ಮೊಕ್ಕಾಂ ಉಡುಪಿ, ತಾ. 8—11—56.

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ,
ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್
ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

## ಎಲ್ಲೆಲ್ಲಿ ಏನೇನು?

**ಪಳ್ಳಿ**— ಕಾರ್ಕಳ ತಾಲೂಕು ಪಳ್ಳಿಯಲ್ಲಿ ತಾ. ೨೫ರಲ್ಲಿ ಮಹಿಳೆಯರ ಸಭೆಯೊಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಸಮಾಜ ಶಿಕ್ಷಣ ಸಂಘಟಿಕೆ ಕುಮಾರಿ ನಾರಾಯಣಿ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಹಿಳೆಯರ ಉನ್ನತಿಯನ್ನು ಸಾಧಿಸುವರೆ ಮಹಿಳಾ ಸಮಾಜವೊಂದು ಸ್ಥಾಪಿಸಲ್ಪಟ್ಟಿತು. ಶ್ರೀಮತಿ ಕುಮಾರಿ ಹೆಗ್ಗಡ್ತಿ ಅಧ್ಯಕ್ಷೆ, ಶ್ರೀಮತಿ ವಾರಿಜಾಕ್ಷಿ ಎನ್. ಹೆಗ್ಗಡ್ತಿ ಉಪಾಧ್ಯಕ್ಷೆ ಮತ್ತು ಶ್ರೀಮತಿ ಪಿ. ರಾಧಾ ಪಿ. ನಾಯಕ್ ಹಾಗೂ ಶ್ರೀಮತಿ ಲಕ್ಷ್ಮಮ್ಮನವರು ಕಾರ್ಯದರ್ಶಿಯರಾಗಿರುವ 26 ಮಂದಿ ಸದಸ್ಯೆಯರ ಕಾರ್ಯಕಾರಿ ಸಮಿತಿ ರಚಿಸಲಾಯಿತು.

**ಎರ್ಮಾಳು**— ಮಾಮೂಲು ಮೇರೆ ನಡೆಯುವ ಕೋಳಿಯ ಕಂಬಳವು ತಾ. —12—56ಕ್ಕೆ ಜರಗುವುದೆಂದೂ ಓಟದ ಕೋಣಗಳಿರುವ ಮಹನೀಯರು ತಮ್ಮ ಓಟದ ಕೋಣಗಳನ್ನು ಕಳುಹಿಸಿ ಸಹಕರಿಸಿ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಶ್ರೀ ವೈ. ಎಸ್. ಎಮ್. ಹೆಗ್ಡೆಯವರು ವಿನಂತಿಸಿದ್ದಾರೆ.

**ಕುಂದಾಪುರ**— ಸ್ಥಳೀಯ ರೂಪರಂಗದ ವಾರ್ಷಿಕೋತ್ಸವವು ತಾ. ೨೫ರಲ್ಲಿ ಜರಗಿತು. ಬೆಳಿಗ್ಗೆ ಕುಂದಾಪುರ ಪಂಚಾಯತ ಬೋರ್ಡಿನ ಅಧ್ಯಕ್ಷ ಶ್ರೀ ಕೆ. ವೆಂಕಪ್ಪ ಶೆಟ್ಟರು ಗಾಂಧಿ ಉದ್ಯಾನದಲ್ಲಿ ರೂಪರಂಗದವರಿಂದ ರಚಿಸಲ್ಪಟ್ಟ ಗಾಂಧಿ ಮಂಟಪದ ಸ್ಮಾರಕ ಶಿಲಾ ಸ್ಥಾಪನೆ ಮಾಡಿದರು. ಬಳಿಕ ಬೋರ್ಡು ಹೈಸ್ಕೂಲು ಪಟಾರದಲ್ಲಿ ಲಲಿತಕಲಾ ಸ್ಪರ್ಧೆಗಳಾದುವು. ಸಂಜೆ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಎಮ್. ಎಮ್. ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ರಾಮಚಂದ್ರ ಕೊತ್ವಾಲರು ವರದಿ ವಾಚನ ಮಾಡಿದರು. ಏಕಾಂಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಸೌಭಾಗ್ಯ ರತ್ನವೆಂಬ ಪುಸ್ತಕದ ಉದ್ಘಾಟನೆಯನ್ನು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ನೆರವೇರಿಸಿದರು. ಶ್ರೀಗಳಾದ ರಾಮಚಂದ್ರ ಉಡುಪ, ಎನ್. ಎಸ್. ಪರಮೇಶ್ವರಯ್ಯ ಮೊದಲಾದವರ ಭಾಷಣಗಳಾದುವು. ಶ್ರೀ ನಾರಾಯಣ ಸೆಟ್ಟಿ ಕೊಳ್ಕೆಬೈಲ್, ಅವರು ಕವಿತಾವಾಚನ ಮಾಡಿದರು.

**ಕೊಡವೂರು**— ಕಳೆದ ತಾ. ೨೨ರಲ್ಲಿ ಇಲ್ಲಿಯ ಬೋರ್ಡು ಹಾ! ಎ! ಶಾಲೆಯ ಸುಮಾರು ೪೦೦ ಮಕ್ಕಳಿಗೆ ಶ್ರೀ ಕೃ. ಹಂದಾಸಾಚಾರ್ಯರು ಅತ್ಯಂತ ಸಂತೋಷದಿಂದ ಲಾಡು ಹಂಚಿರುವುದು ಅಭಿನಂದನೀಯವಿದೆ ಎಂದು ಮಕ್ಕಳ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

**ಪಡುಬಿದ್ರೆ**— ಸ್ಥಳೀಯ ಬೋರ್ಡು ಹಾ! ಎ! ಶಾಲೆಯಲ್ಲಿ ಹೆತ್ತವರ ಸಭೆಯು ತಾ. ೨೬ರಲ್ಲಿ ಮೈಸೂರಿನ ಶ್ರೀ ಡಿ. ಆಣ್ಣಾಜಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಭೋಜರಾವ್, ಎಮ್. ಎಮ್. ಪ್ರಭುಗಳಿಂದ ಪ್ರಾರ್ಥನೆ, ಸ್ವಾಗತ ಮಾತುಗಳಾದ ಬಳಿಕ ಅಧ್ಯಕ್ಷರು ನ.ಹಾ ಮೈಸೂರಿನ ಪ್ರಗತಿ, ಮಹಿಳೆಯರ ಕರ್ತವ್ಯ ಮೊದಲಾದ ವಿಷಯಗಳನ್ನೆತ್ತಿ ಭಾಷಣವಿತ್ತರು. ಹೆಡ್ಮಾಸ್ಟರ್ ಶ್ರೀ ಎಮ್. ಎಮ್. ಪ್ರಭುಗಳು ಧನ್ಯವಾದಗಳನ್ನಿತ್ತರು. ಶ್ರೀ ಪಿ. ಕೆ. ದೂಜ ಪೂಜಾರಿಯವರು ಉಪಹಾರವಿತ್ತರು.

**ಕಿನ್ನಿಗೋಳಿ**— ತಾಳಿಪಾಡಿ ಪೊಂಪೈ ಹೈಸ್ಕೂಲಿನ ಕಟ್ಟಡ ವಿಸ್ತರಣೆಯ ಶಂಕು ಸ್ಥಾಪನಾ ಸಮಾರಂಭವು ತಾ. ೨೩ರಲ್ಲಿ ವಿಕಾರ್ ಜನರಲ್ ರೆ! ಫಾ! ಎ. ಪಿ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ಕಟ್ಟಡಕ್ಕೆ ಅಡಿಗಲ್ಲನ್ನಿರಿಸಿದರು. ಡಾ. ಎಸ್. ಚಂಪರಿಂದ ಸ್ವಾಗತಭಾಷಣ, ರೆ! ಫಾ! ಬಿ. ಎ. ಡಿ ಸೋಜರಿಂದ ಪ್ರಾಸ್ತಾವಿಕ ವರದಿವಾಚನಗಳಾದ ಬಳಿಕ ಡಾ. ನಾಗಪ್ಪ ಆಳ್ವ, ಡಾ. ಯು. ಪಿ. ಮಲ್ಯ ಮತ್ತು ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ ಅವರು ಸಮಯೋಚಿತ ಭಾಷಣ ಮಾಡಿದರು. ಶ್ರೀ ಎಮ್. ಪಿ. ದೇವರಾಯರು ಧನ್ಯವಾದಗಳನ್ನಿತ್ತರು.

**ಪುತ್ತೂರು**— ಮೈಸೂರಿನ ಮಾಜಿ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಾ. ೨೬ರಲ್ಲಿ ಪುತ್ತೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಶ್ರೀ ಕೆ. ಆರ್. ಆಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಶ್ರೀ ಪಿ. ರಾಮಣ್ಣ ಮತ್ತು ಭಾರತ ಸೇವಕ ಸಮಾಜದ ಕಾರ್ಯವಾಹಕರಾದ ಶ್ರೀ ಚೆನ್ನ ಬಸಪ್ಪನವರು ಸಭೆಯಲ್ಲಿ ಭಾಗವಹಿಸಿದ್ದರು.

**ಸುಬ್ರಹ್ಮಣ್ಯ**— ಷಷ್ಠಿ ಜಾತ್ರೆಯು ಇದೇ ತಾ. ೮ರಲ್ಲಿ ಜರಗಲಿರುವುದು. ಬಸ್ ಸರ್ವಿಸು ಪ್ರಾರಂಭವಾಗಿದೆ.

**ಬೆಳ್ತಂಗಡಿ**— ಸರ್ವೋದಯ ಕ್ಲಬ್ಬಿನಲ್ಲಿ ತಾ ೨೫ರಲ್ಲಿ ಶ್ರೀ ವೆಂಕಟ್ರಮಣ ಗೌಡ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಧರ್ಮಸ್ಥಳದ ಶ್ರೀ ರತ್ನವರ್ಮರಾಜ ಹೆಗ್ಗಡೆಯವರನ್ನೊಳಗೊಂಡ ತಾಲೂಕು ಕಾಂಗ್ರೆಸ್ ಸಮಿತಿ ರಚಿಸಲಾಯಿತೆಂದು ತಿಳಿದುಬರುತ್ತದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯ, ಉಪಾಧ್ಯಕ್ಷ ಡಾ. ಶ್ರೀ ಕೆ. ಆರ್. ಆಚಾರ್, ಪ್ರಧಾನಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ, ಡಾ. ನಾಗಪ್ಪಾಳ್ವ ಮೊದಲಾದವರು ಸಭೆಗೆ ಹಾಜರಿದ್ದು ಹಿತವಚನಗಳನ್ನಾಡಿದರು. ಮುಂಬರುವ ಚುನಾವಣೆಯಲ್ಲಿ ಶ್ರೀ ರತ್ನವರ್ಮರಾಜ ಹೆಗ್ಗಡೆಯವರನ್ನು ಉಮೇದ್ವಾರರನ್ನಾಗಿ ಈ ಕ್ಷೇತ್ರದಿಂದ ನಿಲ್ಲಿಸುವ ಸಂಭವವಿದೆಯೆನ್ನಲಾಗಿದೆ.

**ಮೂಡಬಿದ್ರೆ**— ಸ್ಥಳೀಯ ಜೈನ ಪ್ರೌಢಶಾಲೆಯ ವರ್ಧಂತ್ಯುತ್ಸವವು ಇದೇ ತಾ 22ರಲ್ಲು ಜರಗಲಿರುವುದಾಗಿ ಶಾಲಾ ಸಂಚಾಲಕ ಶ್ರೀ ಯಂಜಗಪ್ಪಲರು ತಿಳಿಸುತ್ತಾರೆ.

**ಬೊಂಬಾಯಿ**— ಕಳೆದ ತಾ 24ರಲ್ಲು ಮದರ್ ಇಂಡಿಯಾ ಧರ್ಮಾರ್ಥ ರಾತ್ರಿಶಾಲೆಯ 'ವಿದ್ಯಾರ್ಥಿ ದಿನಾಚರಣೆ'ಯು ಮಾನ್ಯ ಕವಿ ದಿನಕರ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ನಾರಾಯಣನವರಿಂದ ಪ್ರಾರ್ಥನೆಯಾದ ನಂತರ ವಿದ್ಯಾರ್ಥಿ ಸಂಘದ ಅಧ್ಯಕ್ಷರ ಸ್ವಾಗತ ಭಾಷಣವಾಯಿತು. ವಿದ್ಯಾರ್ಥಿಗಳಿಂದ ಬರೆಯಲ್ಪಟ್ಟ ಹಸ್ತಲಿಖಿತ ಪತ್ರಿಕೆಗಳನ್ನು ಅಧ್ಯಕ್ಷರು ಉದ್ಘಾಟಿಸುತ್ತಾ, ಕನ್ನಡ ಸಾಹಿತ್ಯಕ್ಕೆ ಇನ್ನು ಮುಂದೆ ಉಜ್ವಲ ಭವಿಷ್ಯವಿದೆಯೆಂದೂ, ಈ ಮಾಜೀವಿಗಳ ಸಾಹಿತ್ಯ ವೃದ್ಧಿಯಾಗಬೇಕೆಂದೂ ಹೇಳಿದರು. ಶಾಲೆಯ ಪುಸ್ತಕಭಂಡಾರಕ್ಕೆ ರೂ. 50/- ನ್ನು ಹಸ್ತಲಿಖಿತ ಪತ್ರಿಕೆಗಳಲ್ಲಿ ಉತ್ತಮವಾದ ಎರಡು ಲೇಖನಗಳಿಗೆ ಹತ್ತು ಹತ್ತು ರೂಪಾಯಿಗಳಂತೆ ಪಾರಿತೋಷ ಕೊಡುವುದಾಗಿಯೂ ಅಧ್ಯಕ್ಷರು ಜಾಹೀರುಮಾಡಿದರು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟ ನಂತರ, ವಂದನಾರ್ಪಣೆ, ಮಂಗಲ ಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

### ಕನ್ನಡ ಸಾಹಿತ್ಯ ಪರಿಷತ್ತು
### ಚಾಮರಾಜ ಪೇಟೆ ಬೆಂಗಳೂರು

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳ ಮತ್ತು ಪರಿಷತ್ತಿನ ಅಧ್ಯಕ್ಷರುಗಳ ಸನ್ಮಾನ ಸಮಾರಂಭಮಹೋತ್ಸವ ಮತ್ತು ವಿಶೇಷ ಸಾಹಿತ್ಯೋತ್ಸವ ೧೯೫೬ನೆಯ ಡಿಸೆಂಬರ್ ೧೦, ೧೧, ಮತ್ತು ೧೨ರಲ್ಲಿ ಪರಿಷತ್ತಿನಲ್ಲಿ ನಡೆಯುತ್ತವೆ.

ಕವಿಗೋಷ್ಠಿ ಮತ್ತು ಲೇಖಕ ಗೋಷ್ಠಿಗಳಲ್ಲಿ ಕವನಗಳನ್ನು ಮತ್ತು ಲೇಖನಗಳನ್ನು ಓದ ಬಯಸುವವರು ಅವುಗಳ ಒಂದೊಂದು ಪ್ರತಿಯನ್ನು ಪರಿಷತ್ತಿನ ವಿಳಾಸಕ್ಕೆ ಡಿಸೆಂಬರ್ ೫ನೆಯ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ. ಕವನಗಳು ಒಂದೊಂದು ಸುಮಾರು ೬೦ ಸಾಲಿನೊಳಗೆ ಇರತಕ್ಕದ್ದು. ಲೇಖನಗಳು ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಸಂಶೋಧನಾತ್ಮಕ ಮತ್ತು ವಿಚಾರಪೂರ್ಣವಾಗಿದ್ದು ೧೦ ನಿಮಿಷಗಳಲ್ಲಿ ಓದಿ ಮುಗಿಸುವಂತಿರಬೇಕು.

ಕನ್ನಡ ನಾಡಿನ ಸಾಹಿತಿಗಳೆಲ್ಲರೂ ಈ ಸಮಾರಂಭಗಳನ್ನು ಯಶಸ್ವಿಗೊಳಿಸಲು ಪರಿಷತ್ತಿನೊಂದಿಗೆ ಸಹಕರಿಸಬೇಕಾಗಿ ಪ್ರಾರ್ಥನೆ.

ಕೆ. ನರಸಿಂಹಮೂರ್ತಿ, ಕವಿಗೋಷ್ಠಿಯ ವ್ಯವಸ್ಥಾಪಕರು.

ಡಿ. ಆರ್. ರಾಮಯ್ಯ, ಕೆ. ಗೋಪಾಲಕೃಷ್ಣರಾಯ, ಗೌ|| ಕಾರ್ಯದರ್ಶಿಗಳು.

ಎಂ. ವಾಸುದೇವ ಮೂರ್ತಿ,
ಲೇಖಕ ಗೋಷ್ಠಿಯ ವ್ಯವಸ್ಥಾಪಕರು.

**ನಿಂಜೂರು**— ಶ್ರೀ ವಿವೇಕಾನಂದ ಸೇವಾಸಂಘದ ನೂತನ ಭವನದ ಅಸ್ತಿವಾರಕ್ಕಿನ ಅರ್ಧ ಎಕ್ರೆ ಸ್ಥಳವನ್ನು ಪಟೇಲ್ ಎನ್. ಸಂಜೀವ ಸೆಟ್ರು ಮತ್ತು ಶಾಲಾ ಮೆನೇಜರ್ ಎನ್. ಸಂಜೀವ ಸೆಟ್ರು ನಿಂಜೂರು ಗ್ರಾಮಸ್ಥರನ್ನೆಲ್ಲಾ ಸೇರಿಸಿ, ತಾ. 26—11—56ರವರೆಗೆ ಶ್ರಮದಾನದಿಂದಲೇ ಸಮತಟ್ಟು ಮಾಡಿಸಿರುವುದು ಸ್ತುತ್ಯ.

## ಆದರ್ಶ ಜೀವನ

(೮ನೇ ಪುಟದಿಂದ)

ಹಿಂಸಾತ್ಮಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಬೇಕಾಗಿದ್ದರೆ ಅಹಿಂಸೆಯಲ್ಲಿ ಅವರಿಗಿದ್ದ ದೃಢ ವಿಶ್ವಾಸವೇ ಕಾರಣವಲ್ಲದೇ ಬೇರೇನೂ ಅಲ್ಲ. ಆಡಂಬರಕ್ಕೆ ಒಗ್ಗದ ಸರಳವಾದ ಜೀವನ ನಡೆಯಿಸುವ ವ್ಯಕ್ತಿ ಪ್ರಸಾದರು. ಅತುಲವಾದ ಆತ್ಮವಿಶ್ವಾಸ ಅವರಲ್ಲಿದೆ. ತನ್ನ ಅಂತಃಕರಣಕ್ಕೆ ಸರಿ ತೋಚಿದ ವಿಷಯಗಳನ್ನು ನಿರ್ಭೀತಿಯಿಂದ ಆಚರಿಸುವ ಉಚ್ಚ ಸ್ವಭಾವ ಅವರದು.

ಇತರ ಸುಪ್ರಸಿದ್ಧ ರಾಜಕಾರಣಿಗಳಷ್ಟು ರಾಜನೀತಿ ವಿಶಾರದರಲ್ಲ—ರಾಜೇಂದ್ರರು ಸಾರ್ವಜನಿಕ ಸೇವೆಯ ಹುಚ್ಚೇ ಅವರನ್ನು ರಾಜಕೀಯ ರಂಗಕ್ಕೆಳೆಯಿತೆಂದರೆ ತಪ್ಪಾಗದು. ಕರ್ತವ್ಯಪಾಲನೆ ಅವರ ಬಾಳಿನ ಇನ್ನೊಂದು ಮುಖ್ಯ ಗುಣ. ಎಂತಹ ಕಠಿನ ಕಾರ್ಯವೇ ಆಗಲಿ, ನಿರ್ವಹಿಸಿಕೊಂಡ ಮೇಲೆ ದಕ್ಷತೆಯಿಂದ ಅದನ್ನು ಸಾಧಿಸಿ ಕೊನೆಮುಟ್ಟಿಸುವ ಧೀರೋದಾತ್ತ ಪ್ರಕೃತಿ ಅವರದು. ಪ್ರಸಾದರು ಸಾಹಿತ್ಯ ಪ್ರೇಮಿ ಸಾಹಿತ್ಯಾರಾಧಕರು; ಅಲ್ಲದೇ ಘನ ವಿದ್ವಾಂಸರು. ಹಿಂದುಸ್ತಾನಿ ಮತ್ತು ಆಂಗ್ಲ ಭಾಷೆಗಳಲ್ಲಿ ಸರಳವಾದ ಶೈಲಿಯಲ್ಲಿ ಮಾತಾಡಬಲ್ಲರು. ಅವರ ಭಾಷಾ ಶೈಲಿಯಲ್ಲಿ ಅಸಂಬದ್ಧ ಪ್ರಲಾಪಗಳಿಗೆಡೆಯೇ ಇಲ್ಲ. ಜನರನ್ನು ಉದ್ರೇಕಿಸಿ "ಸೈ! ಸೈ" ಎನಿಸಿಕೊಳ್ಳುವ ಚಾಕಚಕ್ಯ ಅವರಲ್ಲಿಲ್ಲ. ಅವರು ವ್ಯಕ್ತಿ ... ವಾಗಿ ಹೇಳಿದ ಈ ಮಾತುಗಳೆಲ್ಲ ಒಂದು ಅತಿಶಯೋಕ್ತಿಗಳಾಗಿರದೇ, ನಿಜ ಸಂಗತಿಗಳೇ ಆಗಿವೆ. ಭಗವಂತನು ಅವರಿಗೆ ಆಯುರಾರೋಗ್ಯಾದಿ ಭಾಗ್ಯಗಳನ್ನು ದಯಪಾಲಿಸಿ, ಭಾರತಾಂಬೆಗೆ ಅವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ಮಾಡಲಿ!

ಶ್ರೀ ಎಮ್. ರಘುನಂದನ ರಾವ್,
ತಲ್ಲೂರು.

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರಕ್ಷದ್ರವ್ಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಋತುಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ರಸಾಯನವಾಗಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ
**ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)**
633 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ ೬) ಮೈಸೂರು S. I.

## ಗುರು ಶಿಷ್ಯ ಸಂಬಂಧ

(೩ನೇ ಪುಟದಿಂದ)

ನ್ನು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುತಿದ್ದ. ಆದರೆ ಅದನ್ನು ತೋರಗೊಡದೆ ಶಿಷ್ಯನನ್ನು ಪರೀಕ್ಷಾ ಬೆಂಕಿಯಲ್ಲಿ ದಿನ ದಿನ ಇಟ್ಟು ಪರೀಕ್ಷಿಸಿ ಶುದ್ಧ ಅಪರಂಜಿಯನ್ನಾಗಿ ಮಾಡಿ ಗುರುವು ತನ್ನಿಂದ ಕಳುಹಿಸುತಿದ್ದನು. ಶಿಷ್ಯ ಕೊಡುವ ಶುಲ್ಕಕ್ಕಾಗಿ ತಾನು ಅವನಿಗೆ ವಿದ್ಯಾದಾನ ಮಾಡುತಿದ್ದೇನೆ ಎಂಬ ತತ್ವವಾಗಿರಲಿ, ತಾನು ಕಲಿತುದನ್ನು ಮಗದೊಬ್ಬನಿಗೆ ಕಲಿಸಿ ಸ್ಥಿರಸ್ಥಾಯಿಯಾಗಿ ಆ ವಿದ್ಯೆಯನ್ನು ಉಳಿಸುವುದೇ ಗುರುವಿನ ಧ್ಯೇಯವಾಗಿತ್ತು. ಅದೇ ತನ್ನ ಕರ್ತವ್ಯವೆಂದು ತಿಳಿದು ಕರ್ತವ್ಯದ ಪಂರಾಕಾಷ್ಠತೆಯನ್ನು ಮುಟ್ಟಲು ತನ್ನ ಜೀವವನ್ನು ಅರ್ಪಿಸುತಿದ್ದನು.

ಇಂದು ಗುರು-ಶಿಷ್ಯರ ಸಂಬಂಧ ಹೇಗಿದೆ? ಅಂದಿನಂತಿದೆಯೇ? ಅದಕ್ಕೆ ಸರಿ ವಿರುದ್ಧವಿದೆ. ಗುರು-ಶಿಷ್ಯರೊಳಗೆ ನಿಕಟ ಸಂಬಂಧವಿಲ್ಲ. ಗುರುವು ತಾನು ತೆಗೆದುಕೊಂಡ ಶುಲ್ಕಕ್ಕಾಗಿ ಋಣಭಾರವನ್ನು ಇಳಿಸುತ್ತಾನೆ (?) ತಾನು ಇಳಿಸಿದೆನೆಂದು ಎಣಿಸುತ್ತಾನೆ. ಪ್ರಜ್ಞಾಶೂನ್ಯ ಜಿಜ್ಞಾಸೆಯಿಂದ ಕೂಡಿದ ವಿದ್ಯಾರ್ಥಿಯಾದರೂ ಗುರು ಕಲಿಸಿದ ಎಳ್ಳಿನೇಳು ಭಾಗದಷ್ಟು ಗ್ರಹಿಸಿದರೆ ಬಹಳ ಹೆಚ್ಚು. ಗುರುವಿನ ಉತ್ಸಾಹವೂ ಇಲ್ಲ. ಶಿಷ್ಯನ ಜಿಜ್ಞಾಸೆಯೂ ಇಲ್ಲ. ಗುರು-ಶಿಷ್ಯರೊಳಗಿರುವ ಪೂಜ್ಯತೆ—ವಾತ್ಸಲ್ಯಗಳೆಲ್ಲಂತೂ ಇಂದು ಶೂನ್ಯ. ಇದಕ್ಕೆ ಇಂದಿನ ರೀತಿ ತಡೆಯಾಗಿದೆಯೇ? ಗುರು ಕಲಿಸುತ್ತಾನೆ. ಶಿಷ್ಯ ಕಲಿಯುತ್ತಾನೆ. ಗುರುವು 'ಅರಿವು' ಕೊಡಲಾರ. ಶಿಷ್ಯ 'ಅರಿವು' ಪಡೆಯಲಾರ. ಕಲಿಯುವುದೇ ಧ್ಯೇಯ.

ವಿವೇಚಿಸಿದರೆ, ಇಂದಿನ ಗುರು-ಶಿಷ್ಯರೊಳಗಿನ ಸಂಬಂಧ ಬಹಳ ಕೆಳಮಟ್ಟಕ್ಕಿಳಿದಿದೆ. ಪ್ರತಿಯೊಬ್ಬರು ಬೇರೊಬ್ಬರಲ್ಲಿ ವ್ಯವಹರಿಸುವಾಗ ಅವರವರ ಸ್ಥಾನಮಾನಗಳನ್ನು ನೋಡಿ ವ್ಯವಹರಿಸಬೇಕು. ಮಕ್ಕಳಲ್ಲಿ ವಾತ್ಸಲ್ಯ, ಸಮಾನರಲ್ಲಿ ಮಿತ್ರತ್ವ, ಸ್ನೇಹ, ಹಿರಿಯರಲ್ಲಿ ಭಕ್ತಿ, ಶ್ರೇಷ್ಠರಲ್ಲಿ ಗೌರವ ಇವೆಲ್ಲವುಗಳ ಧ್ಯೇಯ ಒಂದೇ ಇರಬಹುದು. ಅರ್ಥ ವ್ಯತ್ಯಾಸ ಮಾತ್ರ ಇದೆ. ನಾವು ಗುರುಗಳಿಗೆ ಯಾವಾಗಲೂ ಭಕ್ತಿ ಮತ್ತು ಗೌರವ ಇವೆರಡನ್ನು ಸಮ ಪ್ರಮಾಣದಲ್ಲಿ ಸಲ್ಲಿಸಬೇಕು. ಸಮಾನರಂತೆ ಮಿತ್ರರಂತೆ ವರ್ತಿಸಲೇ ಬಾರದು. ಅವರು ಕಲಿಸುವ ಪ್ರತಿಯೊಂದು ಶಬ್ದವೂ ನಮ್ಮ ಮನಸ್ಸಿಗೆ ಮನದಟ್ಟಾಗಬೇಕಾದರೆ ಈ ಭಕ್ತಿ ಮತ್ತು ಗೌರವ ಮೊದಲಾಗಿ ನಮ್ಮ ಹೃದಯ ಮಂದಿರದಲ್ಲಿ ಜಾಗ್ರತವಾಗಿರಬೇಕು. ಇದು ಮಾತಿನ ಕಂತೆಯಲ್ಲ. ಅನುಭವಿಸಿದ ಅನುಭವ ಗುರುಗಳು ಹೇಳಿದ್ದನ್ನೆಲ್ಲ ಸರಿ ಎಂದು ನಂಬಿ ನಿಶ್ಚಿಂತೆಯಿಂದ ಅದನ್ನು ಅನುಸರಿಸುವುದೆಂದು ಇದರ ಅರ್ಥವಲ್ಲ. ಅವರ ಪ್ರತಿಯೊಂದು ವಾಕ್ಯವನ್ನು ತುಲನೆಮಾಡಿ ಗ್ರಹಿಸಬೇಕು. ಮನಃಪೂರ್ವಕ ನ್ನು ಪುನಃ ಪುನಃ ವಿಚಾರಿಸಬೇಕು. ಅದಕ್ಕೆ ಅವರು ಸಮಾಧಾನಕೊಡದಿದ್ದರೆ ತನ್ನ ಕುದುರೆಗೆ ಮೂರೇ ಕಾಲು ಎಂದರೆ ಅದು ಅವರ ಅಪೂರ್ಣತೆಯ ಕುರುಹು. ಅಪೂರ್ಣತೆಯನ್ನು ವಿದ್ಯಾರ್ಥಿ ಕಂಡು ಹಿಡಿದು ಬಿಟ್ಟರೆ ಮತ್ತೆ ವಿದ್ಯಾರ್ಥಿಗೆ ಆ ಗುರುವಿನ ಪಾಠ ರುಚಿಸದಿರುವ ಸಂದರ್ಭವಿದೆ. ಅದಕ್ಕಾಗಿ ಗುರು ತನ್ನ ಅಪೂರ್ಣತೆಯನ್ನು ಪರಿಪೂರ್ಣಮಾಡಿಕೊಳ್ಳುವ ತಾಳ್ಮೆ ವಹಿಸಬೇಕು. ಶಿಷ್ಯ ಗುರುವಿನ ಅಪೂರ್ಣತೆಯನ್ನು ಮರೆತು ಅವರ ಮೇಲೆ ತನ್ನ ಗೌರವಸ್ಥಿರ ನಿಲ್ಲುವಂತೆ ಮಾಡಬೇಕು. ಇದು ಶ್ರೇಯಸ್ಕರ.

ಬಾಳು ಬಲು ಅಮೂಲ್ಯವಾದುದು. ಉತ್ತಮ ಬಾಳನ್ನು ಬಾಳಬೇಕಾದರೆ ಅನುದಿನದ ಸಾಧನೆ ಅಗತ್ಯ. ಸಾಧ್ಯವೆಡೆ ಸಾಗಲು ಸಾಧನೆ ಮಾಡುವಾಗ ಸಾಧಕನಿಗೆ ಕಷ್ಟ ತೋರಬಹುದು. ಕಷ್ಟವು ಸುಖದ ಆಗಮನಕ್ಕೆ ಕುರುಹು. ಮನುಷ್ಯನು ಕಷ್ಟಪಟ್ಟು ತನ್ನ ಬಾಳಿನ ತಳಗಟ್ಟನ್ನು ಬಾಲ್ಯದಲ್ಲಿಯೇ ನಿರ್ಮಿಸುತ್ತಾನೆ. ಅದು ವಿದ್ಯಾರಂಗದಲ್ಲಿ; ವಿದ್ಯಾರ್ಥಿಯಾಗಿ; ವಿದ್ಯೆಯಿಂದ ಬಾಳಿನ ಮೊದಲ ತಳಗಟ್ಟು ಬಲವಾಗದಿದ್ದರೆ ಮುಂದಿನ ಜೀವನವು ಕೊಳಕಾಗಬಹುದು, ಭಾರವಾಗಬಹುದು, ದೇಶಕ್ಕೆ ನಾಶಕವಾಗಬಹುದು. ಸೃಷ್ಟಿಗೆ ಕೊಡುವ ದೇಣಿಗೆ ಬಾಧಕ ರೂಪದ್ದಾಗಬಹುದು. ಹಾಗಾಗದಿರಬೇಕಾದರೆ; ಸೃಷ್ಟಿಗೆ ಕೊಡುವ ದೇಣಿಗೆ ಉತ್ತಮವಾಗಬೇಕಾದರೆ ವಿದ್ಯಾರ್ಥಿ ಜೀವನ ಸುಂದರವಾಗಬೇಕು. ವಿದ್ಯಾರ್ಥಿರಂಗ ಸುಂದರವಾಗಬೇಕು. ಜೀವನವು ಸುಂದರವಾಗಬೇಕು "ಸತ್ಯಂ ಶಿವಂ ಸುಂದರಂ" ಎನಿಸಬೇಕು.

—ಶ್ರೀ ರಾಘವ.

---

**ಲೇಖಕರೊಡನೆ—**

**"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.**

**—ಸಂ. ನ.**

---

**ಕೆಲವು ಉತ್ತಮ ಪುಸ್ತಕಗಳು.**

| | | |
|---|---|---|
| ಬದುಕು ಬಂಗಾರ (ಕುಮಾರಸ್ವಾಮಿ) | 1 | 8 |
| ಯುಗವಾಣಿ (ಕು. ಶಿ. ಹರಿದಾಸಭಟ್ಟ) | 0 | 5 |
| ಘಂಟಮಾರಿ ( ,, ) | 2 | 0 |
| ಏತಿಯದ ಸಂಪತ್ತು ( ,, ) | 2 | 0 |
| ಅಂತರಂಗದ ಕತೆಗಳು (ಸಂಕಲನ) | 1 | 4 |
| ಸ್ವಪ್ನಲೋಕ (ಕಾರ್ತಿಕೇಯ) | 0 | 8 |
| ನೀತಿವಿನೋದ ಕತೆಗಳು | 0 | 12 |
| ಸೇವಾಪಥ (ಸೇಟ್ ಗೋವಿಂದದಾಸ್ | 0 | 8 |
| ಸರಸ್ವತಿ (ಡಾ| ಎಂ. ಮಾಧವಾಚಾರ್ಯ | 0 | 12 |
| ಗೀತೆಯ ಕೈಗನ್ನಡಿ (ಚಿದಂಬರಯ್ಯ) | 0 | 12 |
| ಭಾರತದ ಕರ್ಣ ಎನ್. ಎಸ್. ಶೆಟ್ಟಿ) | 0 | 6 |
| ಪ್ರಾಚೀನ ತುಳುನಾಡು ( ,, ) | 2 | 0 |
| ಮುರಲಿ ( ,, ) | 0 | 12 |
| ಮಧುವನ (ಸಂಕಲನ) | 3 | 0 |
| ಕಾವ್ಯಸಾಮ್ರಾಜ್ಯ ( ,, ) | 1 | 8 |
| ರವಗಳ ಸಾಗಾಟ (ಕಳ್ಳ ಪೇಟೆ) | 0 | 12 |
| ಕವಿತಾಕಾಮಿನಿ (ಎಸ್. ವೆಂಕಟರಾಜ) | 2 | 8 |
| ಆಕಾಶಗಂಗೆ | 1 | 10 |
| ಜೀವನ ಸಂಗ್ರಾಮ (ಪಿ. ಶೀನ ಶೆಟ್ಟಿ) | 1 | 0 |
| ದೇಶಭಕ್ತ (ಕೆ. ಕೆ. ಶೆಟ್ಟಿ) | 1 | 0 |
| ಪ್ರೇಮವಿಜಯ ,, ) | 1 | 4 |

ಏಜಂಟರು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಇತರ ಕಥೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

---

## ದಿ. ವಿಜಯಾ ಬೇಂಕ್ ಲಿಮಿಟೆಡ್ ಕಾಪು

### ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲುಪ್ತ ವ್ಯಾದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 15—12—1956ನೇ ಶನಿವಾರ ಪೂರ್ವಾಹ್ನ ಘಂಟೆ 11ಕ್ಕೆ ಸರಿಯಾಗಿ ಅಥವಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

| ಲೋನ್ ನಂಬ್ರ | ಹೆಸರು ಮತ್ತು ವಿಳಾಸ. | ಮೊಬಲಗು 30—9 56ವರೆಗಿನ ಬಡ್ಡಿ ಸಮೇತ | | |
|---|---|---|---|---|
| 446/54 | ರಾಗು ಆರ್. ಶೆಟ್ಟಿ. ಗೋವಿಂದ ಶೆಟ್ರ ಅಳಿಯ, ಹೇರೂರು ಹೊಸಮನೆ ಪೋಸ್ಟ್ ಇನ್ನಂಜೆ. | 42 | 10 | 0 |
| 749/54 | ಸಂಕಯ್ಯ ಶೆಟ್ಟಿ. ಕುಡುಪ್ಪ ಶೆಟ್ರ ಅಳಿಯ, ಪೂಜನಿಗುತ್ತು ಉಳಿಯಾರಗೋಳಿ ಗ್ರಾಮ. ಪೋಸ್ಟು ಉಳಿಯಾರಗೋಳಿ | 38 | 9 | 0 |
| 648/54 | ತಿಮ್ಮ ಪೂಜಾರಿ. ಕೊರಗ್ರ ಪೂಜಾರಿಯ ಮಗ, ಪೊಸವಕ್ಕಲು, ಪೋಸ್ಟು ಕಾಪು. | 39 | 0 | 0 |
| 163/55 | ಅಬ್ದುಲ್ ಅಲ್ಲಿ. ಉಸ್ಮಾನ್ ಸಾಹೇಬ, ಉಸ್ಮಾನ್ ಸಾಹೇಬರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು | 45 | 0 | 0 |
| 57/55 | ಲೋಕು ಪೂಜಾರಿ. ನಕ್ರು ಪೂಜಾರಿಯ ಮಗ, ತುಂಗೆರಬೈಲು ಪಾಂಗಾಳ ಗ್ರಾಮ, ಪೋಸ್ಟು ಪಾಂಗಾಳ. | 16 | 0 | 0 |
| 394/55 | ರಾಮ ಕರ್ಕೇರ ಗುರುವ ಮರಕಾಲನ ಅಳಿಯ, ಕೃಷ್ಣ ಕರ್ಕೇರ ಮನೆ, ಕೈಪುಂಜಾಲು ಗ್ರಾಮ, ಪೋಸ್ಟು ಉಳಿಯಾರಗೋಳಿ. | 10 | 9 | 0 |
| 689/55 | ಸಿ. ಗೋಪಾಲ ಶೆಟ್ಟಿ. ಸಿ. ರಾಮ ಸೆಟ್ರ ಅಳಿಯ, ಜಿಸಕ್ಕಾಡಿ ಯೇಣಗುತ್ತು, ಪೋಸ್ಟು ಕಟಪಾಡಿ. | 105 | 14 | 0 |

Kaup
*Date 28—11—56.*

K. Sitarama Shetty,
Agent.

---

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೋನೇಂಟರ

# ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ. ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನು ಡಾ. ಕೋನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ, ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೋನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ., ಎಲ್. ಟಿ. ಅವರು ಅನುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕೆರೆಲರ 'ಅವ್ಯಕ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಅಚ್ಚಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0 ಮಾತ್ರ

ಪ್ರತಿಗಳಿಗೆ ಬರೆಯಿರಿ:—

**ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.**

# ಕಾಸರಗೋಡು ಪ್ರಶ್ನೆ

## ಶಿವರಾಯರ ಸೂಚನೆಯನ್ನು ಕಾರ್ಯರೂಪಕ್ಕೆ ತರಲು ಒತ್ತಾಯ ಹಾಕಬೇಕು.

ಕಾಸರಗೋಡಿನ ಕತೆ ಹಳೆಯದಾಗುತ್ತಾ ಬಂತು. ಕಾಸರಗೋಡಿನ ಎರಡು ಲಕ್ಷ ನಿರಪರಾಧಿ ಕನ್ನಡಿಗರು ಅನ್ಯಾಯವಾಗಿ ಕೇರಳಕ್ಕೆ ತಳ್ಳಲ್ಪಟ್ಟು ಒಂದು ತಿಂಗಳು ಈಗಾಗಲೇ ತುಂಬಲಿದೆ. ಕಾಸರಗೋಡಿನ ಜನ ನಿರಾಸೆಯ ಮುಟ್ಟು ಕವಿದು ಗೋಳಿಡುತ್ತಿದ್ದಾರೆ. ಹತ್ತು ವರ್ಷದ ಮೇಲಾದರೂ ಕಾಸರಗೋಡನ್ನು ಮೈಸೂರಿಗೆ ಸೇರಿಸುವೆವೆಂಬುದು ಪೌರುಷದ ಮಾತಲ್ಲ. ಕಾಸರಗೋಡಿಗಾದ ಅನ್ಯಾಯವನ್ನು ತೊಡೆದುಹಾಕಿ ಅವರಿಗೆ ನ್ಯಾಯದೊರಕಿಸಬೇಕೆಂಬ ಪ್ರಾಮಾಣಿಕ ಉದ್ದೇಶವಿದ್ದರೆ ಅದಕ್ಕಾಗಿ ಈಗಲೇ ಕಾರ್ಯಪ್ರವೃತ್ತರಾಗಬೇಕು! ಇನ್ನೊಂದು ಸರಕಾರದ ಕಪಿಮುಷ್ಟಿಯೊಳಗೆ ಸೇರಿ ಶಾಲೆ ಕಾಲೇಜುಗಳಲ್ಲಿ—ಸರಕಾರಿ ಕಚೇರಿಗಳಲ್ಲಿ ಕನ್ನಡವು ಮಾಯವಾಗಿ ಕನ್ನಡಿಗ ಮಕ್ಕಳು ಬಲವಂತವಾಗಿ ಮಲೆಯಾಳ ಕಲಿಯುವಂತಾಗಿ ಕನ್ನಡ ವಾತಾವರಣವೇ ಸಂಪೂರ್ಣ ನಾಶವಾದ ಮೇಲೆ ಇಲ್ಲಿನ ಕನ್ನಡಿಗರಿಗೆ ಸದ್ಗತಿ ದೊರಕಿಸುವುದೇ?

ಮದ್ರಾಸು—ಆಂಧ್ರ ಗಡಿ ವಿವಾದಗಳ ಮಟ್ಟಿಗೆ ನಡಿಸಿದಂತೆ ಅಧಿಕಾರ ಮಧ್ಯಸ್ಥಿಕೆಗಾರರನ್ನು ನೇಮಿಸುವ ಆಶ್ವಾಸನೆ ದೊರೆತಿದೆ ಎಂದು ವರದಿಯಾಗಿದೆ. ಪಾರ್ಲಿಮೆಂಟು ಸದಸ್ಯರಾದ ಶ್ರೀ ಟಿ. ಶಿವರಾಯರು ಇದೇ ಸಂದರ್ಭದಲ್ಲಿ ಕಾಸರಗೋಡಿನ ಸಂಬಂಧದಲ್ಲಿಯೂ ಯೋಗ್ಯ ಮಧ್ಯಸ್ಥಿಕೆಗಾರರನ್ನು ನೇಮಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಗೃಹಮಂತ್ರಿ ಪಂಡಿತ ಪಂತರಿಗೆ ಇತ್ತೀಚೆಗೆ ಪತ್ರ ಬರೆದಿರುತ್ತಾರೆ. ಶ್ರೀ ಶಿವರಾಯರ ಈ ಸೂಚನೆ ಅತ್ಯಂತ ಸಮಂಜಸವಾಗಿದೆ.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಮಹಾ ಮೈಸೂರಿನ ವಿವಿಧ ಭಾಗಗಳ ನಮ್ಮ ಎಲ್ಲಾ ಧುರೀಣರು ಶಿವರಾಯರ ಸೂಚನೆಯನ್ನು ಸ್ವೀಕರಿಸಿ ಯಾರಾದರೂ ಯೋಗ್ಯ ಮಧ್ಯಸ್ಥಿಕೆಗಾರರನ್ನು (ಸರ್ದಾರ್ ಪಣಿಕ್ಕರರನ್ನು ಹೊರತು) ನೇಮಿಸಿ ಕಾಸರಗೋಡಿಗೆ ನ್ಯಾಯದಾನವನ್ನು ಮಾಡಬೇಕೆಂದು ಸಾವಿರ ಕಂಠಗಳಿಂದ ಒತ್ತಾಯ ಹೇರಬೇಕು. ಮಹಾ ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಿಂದ ತೊಡಗಿ ಲೋಕಸಭಾ, ರಾಜ್ಯಸಭಾ, ಶಾಸನ ಸಭೆ ಮತ್ತು ಕೌನ್ಸಿಲುಗಳ ಸದಸ್ಯರುಗಳು ಈ ಒತ್ತಾಯದ ಕೂಗೆಬ್ಬಿಸಿದರೆ ಫಲಪ್ರಾಪ್ತಿಯಾಗಬಹುದು. ಇದರ ಬದಲಾಗಿ ಹೊಸ ವಾತಾವರಣ, ಹೊಸ ಜವಾಬ್ದಾರಿಗಳಲ್ಲೇ ಮುಳುಗಿ ಈ ಕಡೆ ಅಲಕ್ಷಿಸಿದರೆ ತಮ್ಮ ಬಂಧುಗಳು ಅನ್ಯಾಯವಾಗಿ ರೌರವ ನರಕವನ್ನನುಭವಿಸುವುದನ್ನು ನೋಡಿ ಎದುರಿಸಲಾರದೆ ಅನ್ಯಾಯವನ್ನು ನೋಡಿ ಅದನ್ನೊಪ್ಪಿಕೊಂಡ ಶಾಶ್ವತವಾದ ಪಾತಕವೊಂದು ಅನಿವಾರ್ಯವಾಗಿ ನಮ್ಮ ನಾಡಿನಲ್ಲಿ ತಲೆತಲಾಂತರಗಳ ತನಕ ಅಚ್ಚಳಿಯದೆ ಉಳಿದು ಹೋದೀತು.

ಸಿರಿಗನ್ನಡಂ ಗೆಲ್ಗೆ.

—ಶ್ರೀ ಕಳ್ಳಿಗೆ ಮಹಾಬಲ ಭಂಡಾರಿ,
ಎಂ. ಎ., ಎಲ್. ಎಲ್. ಬಿ.



ಪರ್ವತಾರೋಹಣದ ಇತಿಹಾಸದಲ್ಲಿ ಹೊಸದಾಖಲೆಯನ್ನು ಸ್ಥಾಪಿಸಿದ ಎವರೆಸ್ಟ್ ಆರೋಹಣದ ವಿಧಾನವನ್ನು ಪ್ರಥಮವಾಗಿ ಎವರೆಸ್ಟಿನ ಶಿಖರವೇರಿದ ಸಾರ್ ಜಾನ್ ಹಂಟ್ ತಂಡವು ಈಚೆಗೆ ಬ್ರಿಟನಿನಲ್ಲಿ ಪ್ರದರ್ಶಿಸಿತು. ಆಗ ತೆಗೆದ ಚಿತ್ರವಿದು.

# ಒಕ್ಕೊರಲ ಹಾಡು

೧

ಒಮ್ಮತದ ಗುಣಗಾನ
ಒಮ್ಮತದ ನವಜನ್ಮ
ಒಕ್ಕೊರಲ ಹಾಡನ್ನು ಹಾಡುವರೆಲ್ಲ!
ಬಡವ, ಬಲ್ಲಿದ, ಹಿರಿಯ,
ಕಿರಿಯ ಮಂದಿಯರೆಲ್ಲ
ಒಡಹುಟ್ಟು ಭಾರತದಿ ಎನಲು ನಿರ್ಭೀತಿ!

೨

ಭಾರತದ ಇತಿಹಾಸ
ಸಿಂಹಾವಲೋಕನದ
ಗಮನವೆಚ್ಚರಗೊಳಲಿ ಮನದಳದತೊಮ್ಮೆ!
ಕಷ್ಟ ಕಾರ್ಪಣ್ಯಗಳ
ಮುಸಲ ಧಾರೆಯ ಹೊಡೆತ
ತಿಂದುಂಡ ಯೋಧರೇ ಬಂದೀಯುವವರು!

೩

ಅತ್ಯಂತರಾತ್ಮಗಳ
ಶೋಷಣಾ ಭೀಮ ಬಲ
ಸಿಡಿದೇಳಬೇಕೊಮ್ಮೆ ಕ್ರಾಂತಿಪಟಲವರಳಿ!
ಜನುಮ ಭೂಮಿಗೆ ಮುಕ್ತಿ
ಹಾರ ತೊಡಿಸಿದ ಶಕ್ತಿ
ಸತ್ಯೇವ—ಸರ್ವಸ್ವ ಎಮ್ಮ ಬಾಳಿನದು!

೪

ನಮ್ಮವರು ನಮಗೆಂಬ
ಕೆಚ್ಚಿಂದ, ಮೆಚ್ಚಿಂದ,
ಎದೆಯುಬ್ಬಿ ಉಬ್ಬರಿಸಲಿದಿರು ಬರುವರು?!
ಮಾನವೀಯತೆಯುಳಿವ
ಮಾನವರ ಗುಣಬಂಧ
ಪ್ರಲಯ ತಾಂಡವವಾಡುತಿರುವೆ
ಬಲವೇರೆದು?!

೫

ಬುದ್ಧಸಹಿತ ನವೆ ಬಯಸು
ದಳ್ಳುರಿ ಸಬೇಕದನು
ಭಾರತದ ಜನಕೋಟಿ ಹಿಂಜರಿಯದಿಂದು!
ನಾವೆಲ್ಲರೊಂದಾಗಿ
ನಮ್ಮ ನೆಲೆಯೊಂದಾಗಿ
ನಮ್ಮ ಸುಖಸಾಮ್ರಾಜ್ಯ ಝಗಝಗಿಸ
ಬೇಕು!

೬

ಭರತ ಖಂಡದ ಹೊನ್ನ
ಮುಂಬಯದ ಶೃಂಗಾರ
ಭಾಗ್ಯ ಸಂಪದ ಕುಸುಮವರಳುತಿದೆನೋಡು!
ಇಂದಿನೀ ಸುದಿನದಲ್ಲಿ
ಸಮ್ಮಿಲಿತ ಗಾನದಲಿ
ರಾಷ್ಟ್ರವೇ ಕೇಳಾದಿ ಚಿರಸುಖಿಸಲಿ!

"ನಂದಕಿಶೋರ್"
ತಾರಾನಾಥ ಆಯುರ್ವೇದ ಕಾಲೇಜ್ ಬಳ್ಳಾರಿ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 date 12-12-1950 of the Director of public Instruction Madras.

## ವಿಚಾರದ ಕಿಡಿ

(೨ನೇ ಪುಟದಿಂದ)

ನಡೆವನೋ? ಅಂತೆಯೇ ತಾನು ಉತ್ತಮನಾಗಿ, ಜನಸೇವಕನಾಗಿ, ಧರ್ಮಕಾರ್ಯಕ್ಕಾಗಿ, ಪರಹಿತಕ್ಕಾಗಿ ಸಹಾಯ ಸಹಕಾರವನ್ನು ನೀಡಬೇಕು. ಅಧರ್ಮದ ದಾರಿಯನ್ನು ತುಳಿಯಬಾರದು ಅಸ್ತಿಕವಾದದಿಂದ ಮುಕ್ತಿಯನ್ನೈದಬೇಕೆಂಬ ಮನಸ್ಸಿನ ಆಶೆಯಿರಲು; ಅತ್ತ ಜೀವನವೇ ಆದರ್ಶಜೀವನವಾಗಿ ಪರಿವರ್ತನೆಯಾಗುವಂತೆ ಆತ್ಮಸ್ಥೈರ್ಯ ಬೆಳಗುವುದು. ಇದು ಕಟುಸತ್ಯ. ಇಂತಹ ಧ್ಯೇಯಾದರ್ಶಗಳನ್ನು ಮುಂದಿಟ್ಟುಕೊಂಡೇ ಮಹಾತ್ಮಾಗಾಂಧೀಜಿಯವರು ಭಾರತೀಯರು ಸುಖವಾಗಿ ಬಾಳುವಂತೆ ಹೋರಾಡಿ ತಮ್ಮ ಐಹಿಕ ಸುಖೋಪಭೋಗಗಳೆಲ್ಲವನ್ನೂ ತ್ಯಜಿಸಿ, ಸತ್ಯ, ಅಹಿಂಸೆ ತ್ಯಾಗದಿಂದ ಸ್ವಾತಂತ್ರ್ಯವನ್ನು ಪಡೆದು ಧರ್ಮದ ಮರ್ಮವನ್ನು ಸೂಕ್ಷ್ಮ ಸ್ಥೂಲರೂಪದಲ್ಲಿ ಜನತೆಗೆ ಬೋಧಿಸಿ ಅಂತೆಯೇ ಸಾಧಿಸಿ ಮಹಾತ್ಮರಾಗಿ ಅಮರ ಕೀರ್ತಿಯನ್ನೂ, ಪರಮ ಮುಕ್ತಿಯನ್ನೂ ಪಡೆದಿರುವರೆಂದರೆ ಇದರಲ್ಲಿ ಸಂಶಯಪಡುವವರಾರೂ ಇರಲಿಕ್ಕಿಲ್ಲತಾನೆ? ಸಂಶಯವಿಲ್ಲದೆ ಒಪ್ಪುವಾದರೆ ಹೆಚ್ಚಾಗಿ ಉದಾಹರಣೆಯ ವಿವರಬೇಕಿಲ್ಲ. "ಸಂವರ್ತನೆಯೇ ಪ್ರಗತಿಯ ಸಾಧನವೆಂಬುದು" ಮಹಾತ್ಮರೆಲ್ಲರು ತೋರಿಕೊಟ್ಟ ಜೀವನಕ್ರಮ! ಅಂತೆಯೇ ನಮ್ಮ ನವಕರ್ನಾಟಕದ ಜನತೆಯು ಉತ್ತಮ ಧ್ಯೇಯಾದರ್ಶಗಳನ್ನು ಮುಂದಿಟ್ಟುಕೊಂಡು ಧರ್ಮರಕ್ಷಕರಾಗಿ, ಬಡವ ಬಲ್ಲಿದರೆನ್ನುವ ಭೇದಬುದ್ಧಿಯು ಬಿಟ್ಟು ದೇಶದ ಹಿತಸಾಧಕರಾಗಿ ಬಾಳಲಿ! ಪ್ರಗತಿಪಥದಲ್ಲಿ ಮುನ್ನಡೆಯಲಿ! ಕನ್ನಡ ಒಬ್ಬಾಡಿ ಉನ್ನತಿಗೇರಲಿ!!

—ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ


## ಮೂಲ್ಕಿ ಬ್ಯಾಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4¼% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬ್ಯಾಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

THE MOOLKY BANK. LTD-MULKI



## ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಉತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



## ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

**1956 ನಮ್ಮ ರಜತಮಹೋತ್ಸವದ ವರ್ಷ**

ಸ್ಥಾಪನೆ: 1931

ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು
ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ—ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.

## ಸರ್ವೋದಯ ಸಂದೇಶ

(೧ನೇ ಪುಟದಿಂದ)

ಸಮಾಜವಾದವನ್ನು ಸ್ಥಾಪಿಸಲು ಶಕ್ತವಾದೀತೆಂದು ಭಾವಿಸುವುದು ಮೂರ್ಖತನ. ಕೆಲವೇ ಮಂದಿಯ ಸುಖೋಪಭೋಗ ಸಾಧನವಾಗಿದ್ದ ಸಂಪನ್ಮೂಲಗಳನ್ನು ಸಮಾಜದ ಸ್ವಾಮಿತ್ವಕ್ಕೆ ಒಪ್ಪಿಸಿಕೊಡುವ ಹೆಜ್ಜೆಗಳನ್ನಿಡುವಾಗ ಅವು ದೃಢವೂ ಪರಿಣಾಮಕಾರಿಯೂ ಆಗಿರುವಂತೆ ಮಾಡಲು, ಅಷ್ಟರವರೆಗಿನ ಸೌಭಾಗ್ಯಗಳಿಂದ ವಂಚಿತರಾಗುವ ಅಲ್ಪಸಂಖ್ಯಾಕವರ್ಗದವರ "ಭಿಡೆ"ಗೆ ಒಪ್ಪದಿರುವ ಮತ್ತು ಅವರ ಮೇಲೆ ಬಹುಮತದ ನಿರ್ಣಯವನ್ನೇ ಹೇರುವ ಸಂಕಲ್ಪವಿರುವ ಸಾಹಸಪ್ರವೃತ್ತಿ ಅವಶ್ಯ. ರುದ್ರ ಭೀಕರತೆಗೆ ಮಾತ್ರ ಅವಕಾಶ ಕೊಡದಿದ್ದರೆ ಸಾಕು. ಒತ್ತಾಯಕ್ಕೊಳಗಾದವರೂ ಪರಿಸ್ಥಿತಿಗೆ ಹೊಂದಿಕೊಂಡು ಬಾಳಲು ಕಲಿತ ಬಳಿಕ, ಅಲ್ಲಿ ಒತ್ತಾಯವೆಂಬುದೇ ಉಳಿಯದು. ಅವರೂ ಸಮಾಜವಾದಿಗಳೇ ಆಗುತ್ತಾರೆ—ಸಮಾಜವಾದವು ಹೀಗೆ ನೆಲೆಗೊಳ್ಳುತ್ತದೆ.

ಉದಾರವಾದ ಸಮಾಜವಾದವನ್ನು ಅಪೇಕ್ಷಿಸುವಾಗ, ಒತ್ತಾಯವು ಆದಷ್ಟು ಕಡಿಮೆಯಾಗಿರಬೇಕೆಂಬ ಸಲಹೆಯನ್ನು ಸ್ವೀಕರಿಸಬೇಕು. ಜನರು ಸಮಾಜವಾದಿ ಮೌಲ್ಯಗಳನ್ನು ಏನೇನೂ ಮನವರಿಕೆ ಮಾಡಿಕೊಳ್ಳುತ್ತಿಲ್ಲವಾದರೆ ಮತ್ತು ಅಂತಹ ಮೂರ್ಖರೂ ಸಮಾಜವಾದಿ ಗುಳಿಗೆಗಳನ್ನು ನುಂಗಬೇಕೆಂದು ಗಂಟಲಿಗೆ ಕೋಲು ಹಾಕಿ ದೂಡುವಂತಹ ಬಲಾತ್ಕಾರ ನಮ್ಮದಾದರೆ— ಹಾಗೆ ಮಾಡಿ ನಾವೆಂದೂ ಸಮಾಜವಾದವನ್ನು ನೆಲೆಗೊಳಿಸಲಾರೆವು; ಹಿಂಸಾವಾದವಾದೀತು! ಜನರು ಸಮಾಜವಾದಿ ಆದರ್ಶವೇ ಶ್ರೇಯಸ್ಕರವಾದುದೆಂದು ನಂಬಿ, ತಮ್ಮ ಆಚರಣೆಯನ್ನು ಅದರಂತೆ ಇಟ್ಟುಕೊಳ್ಳಬೇಕು. ಎಷ್ಟರ ವರೆಗೆ ನಾವು ಒತ್ತಾಯವನ್ನು ಹೇರುತ್ತಾ ಈ ಮನೋಭಾವನೆಯನ್ನು ಊರ್ಜಿತದಲ್ಲಿಡಬಹುದು? ಡೊಂಕು ಬಾಲವನ್ನು "ಅಂಡೆ"ಯಲ್ಲಿಟ್ಟಿದುವುದು ಯಾವಾಗಲೂ ಸಾಧ್ಯವೆ? ಕೃತಕ ಸಮಾಧಾನದ ಬದಲು ನಮಗೆ ಶಾಶ್ವತ ಸಮಾಧಾನವು ಬೇಕಾಗಿದೆ. ಜನರು ಉದ್ವೇಗವಶರಾಗಿಯಲ್ಲ, ಬಲಾತ್ಕಾರಕೊಳ್ಳಪಟ್ಟೂ ಅಲ್ಲ—ತಮಗೆ ಹಿತವೆಂದು ಭಾವಿಸಿ ಶಾಂತನಾಗಿ ಸಮಾಜವಾದಿ ಆದರ್ಶವನ್ನು ಅಂಗೀಕರಿಸಿದಾಗಲೇ ಸಮಾಜವಾದದ ಕಾರ್ಯಾಚರಣೆಗೆ ಮಾರ್ಗವು ಸುಗಮವಾಗುತ್ತದೆ.

ಸರ್ವೋದಯದ ಪ್ರವೇಶವಾಗುವುದು ಇಲ್ಲಿಯೇ—ಜನರೇ ಒಪ್ಪಿ ಸಮಾಜವಾದವನ್ನು ಅಂಗೀಕರಿಸಬೇಕು—ಒತ್ತಾಯ ಅಥವಾ ಬಲಾತ್ಕಾರದ ಪಾತ್ರ ಇಲ್ಲಿ ಆದಷ್ಟು ಅಲ್ಪವಾಗಿರಬೇಕು. ಇದೆಲ್ಲಕ್ಕೆ ಪೋಷಕವಾದುದು ಸರ್ವೋದಯವಲ್ಲದೆ ಬೇರೇನು? ಸರ್ವೋದಯವು ಜನರೇ ಕೆಲವು ಆದರ್ಶಗಳನ್ನು ಜೀವನ ವಿಧಾನವನ್ನು ಸ್ವಸಂತೋಷದಿಂದ ಒಪ್ಪಿಕೊಳ್ಳುವ ಮನೋಭಾವವನ್ನು ಉಂಟು ಮಾಡುತ್ತದೆ —ಅದು ಮನವೊಲಿಸುವಿಕೆಯ ಉದಾರ ಮಾರ್ಗವನ್ನು ಹಿಡಿದು ಸಾಗುತ್ತದೆ. ಸಮಾಜದ ರಚನೆಯ ವಿಧಾನವನ್ನೇ—ಉನ್ನತವಾದ ನೈತಿಕ ತತ್ತ್ವಗಳ ಪ್ರಭಾವಕ್ಕೊಳಪಡಿಸಿ ಪರಿಷ್ಕರಿಸುತ್ತದೆ. ಸರ್ವೋದಯವು ವ್ಯಕ್ತಿಯನ್ನು ಸ್ವೇಚ್ಛೆಯಿಂದ ಸಮಾಜದ ದಾಸನನ್ನಾಗಿ ಮಾಡುತ್ತದೆ; ಆತನು ತನ್ನ ಹಿತಾಸಕ್ತಿಗಳನ್ನು ಸಮಾಜದ ಒಟ್ಟು ಹಿತಕ್ಕೆ ಅಧೀನಪಡಿಸಿ ಬಾಳಬೇಕೆಂಬ ಒಳ್ಳೆಯ ಬುದ್ಧಿಯನ್ನು ಹೊಂದಿರುವಂತೆಯೂ ಸರ್ವೋದಯ ಮಾಡುತ್ತದೆ. ಇದಕ್ಕಿಂತ ಹೆಚ್ಚಿನ ಉಪಕಾರವು ಬೇರೇನಿದೆ?

ಸರ್ವೋದಯ ಭಾರತೀಯ ವಾತಾವರಣಕ್ಕೆ ತುಂಬ ಒಪ್ಪಿಕೊಳ್ಳುವಂತಹ ವಿಧಾನ-ಜಗತ್ತಿನಲ್ಲಿಂದು ಹೊಸ ಹೊಸ ಬಗೆಯ ಆದರ್ಶಗಳೂ ಸಿದ್ಧಾಂತಗಳೂ ತಲೆ ಎತ್ತಿವೆ; ಇವುಗಳಲ್ಲಿ ಹೆಚ್ಚಿನವಕ್ಕೆ ಹಿಂದಿನ ಸಂಸ್ಕೃತಿ ಮತ್ತು ಚರಿತ್ರೆಯ ತಳಗಟ್ಟು ಎಂಬುದಿಲ್ಲ. ಬೇರೆ ದೇಶಗಳಿಂದ ನಾವೇನೂ ಕಲಿಯುವಂತಹದಿಲ್ಲವೆಂದಾಗಲೀ ನಾವು ಅವರದೇನನ್ನೂ ಅನುಸರಿಸಬಾರದೆಂದಾಗಲೀ ಇದರ ಅರ್ಥವಲ್ಲ—ಆದರೆ ನಾವೇನೇ ಮಾಡಲಿ, ಕಲಿಯಲಿ, ನಮ್ಮ ದೇಶದ ಚರಿತ್ರೆ ಮತ್ತು ಸಾಂಸ್ಕೃತಿಯ ಹಿನ್ನಲೆಯಲ್ಲಿ ನಮ್ಮ ಕಲಿಕೆಯನ್ನೂ ಕಾರ್ಯವನ್ನೂ ಪರಿಷ್ಕರಿಸಿಕೊಳ್ಳುವುದು. ಮಾತ್ರ ಅತ್ಯವಶ್ಯ. ಆದುದರಿಂದ ನಮ್ಮ ರೈತರನ್ನು, ನಮ್ಮ ಕೂಲಿಕಾರರನ್ನು, ನಮ್ಮ ಬುದ್ಧಿಜೀವಿಗಳನ್ನು ನಮ್ಮ ಪ್ರಜಾವರ್ಗವನ್ನು ಅಪೇಕ್ಷಿತವಾದ ಸಮಾಜವಾದಿ ಆದರ್ಶವನ್ನು ಸ್ವೀಕರಿಸಿ ತಮ್ಮ ಜೀವನ. ವಿಧಾನವನ್ನು ರೂಪಿಸಿಕೊಳ್ಳಿ ಎನ್ನುವುದಕ್ಕೆ—ಭಾರತೀಯ ಪರಂಪರೆಗನುಗುಣವಾದ ಪ್ರೀತಿ, ಮನವೊಲಿಸುವಿಕೆ, ತಿಳಿಸಿ ಹೇಳುವಿಕೆ, ಹಿರಿಯರೂ ಶ್ರೇಷ್ಠರೂ ಆದವರ ಆದರ್ಶ ನಡವಳಿಕೆ ಮತ್ತು ನಿತ್ಯ ಶಿಕ್ಷಣಗಳನ್ನು ಬಿಟ್ಟರೆ, ಅದಕ್ಕಿಂತ ಉತ್ತಮವಾದ ಬೇರೆ ಉಪಾಯವು ಸಿಗಲಾರದು. ಸಿಕ್ಕಿದರೂ ಅದರಿಂದ ಫಲ ದೊರೆಯದು.

ಭಾರತದ ಪ್ರತಿಯೊಂದು ಮನೆಗೂ ಸರ್ವೋದಯದ ಸಂದೇಶ ಮುಟ್ಟಲಿ - ಸರ್ವೋದಯವು ಸಮಾಜವಾದವನ್ನು ನಿಜವಾದ ಅರ್ಥದಲ್ಲಿ ಯಶಸ್ವಿಗೊಳಿಸಲು ನೆರವೀಯುತ್ತಿದೆ. ಯಾವುದಾದರೊಂದು ರಾಜಕೀಯ ಪಕ್ಷವು ಸರಕಾರಿ ಶಾಸನದ ಮೂಲಕ ಒತ್ತಾಯವನ್ನು ಹೇರುವವರೆಗೆ ಕಾಯುತ್ತಾ ಕುಳಿತಿರದೆ, ಈಗಿನಿಂದಲೇ ಸಮಾಜವಾದಿ ಆದರ್ಶಕ್ಕೆ ಅನುಗುಣವಾದ ಜೀವನ ವಿಧಾನವನ್ನು ಅಂಗೀಕರಿಸಿ, ಬಾಳಿರಿ ಎಂದು ಸರ್ವೋದಯವು ಜನರನ್ನು ಹುರಿದುಂಬಿಸುತ್ತದೆ. ನೀವು ಏನಾಗಬೇಕೆಂದು ಹೇಳುವಿರೋ ಹಾಗೆಯೇ ನಿಜವಾಗಿ ಬಾಳಿರೆಂದು ತಿಳಿಸಿ ಹೇಳಿ ನೆರವಾಗುವುದೇ ಸರ್ವೋದಯವು ಮಾಡುವ ಬಹಳ ದೊಡ್ಡ ಉಪಕಾರ. ನಿಮ್ಮ ಆದರ್ಶಗಳಿಗೆ ನಿಷ್ಠರಾಗಿ ಬಾಳಿರೆನ್ನುವುದೇ ಸರ್ವೋದಯ. ರಾಜಕೀಯ ಕ್ರಿಯಾದಕ್ಷತೆ ಅವಕಾಶವೇ ಇರಬಾರದೆಂದಿದರ ಅರ್ಥವಲ್ಲ—ಆದರೆ ಅದೆಲ್ಲಕ್ಕೂ ಸಲ್ಲುವುದು ಗೌಣ ಸ್ಥಾನ ಮಾತ್ರ.

—ಶ್ರೀ ಜಯಪ್ರಕಾಶನಾರಾಯಣರ ಭಾಷಣದ ಆಧಾರದಿಂದ.



ಪ್ರಧಾನಿ ಈಡನ್ನರು ಈಗ ಅಸ್ವಾಸ್ಥ್ಯದ ನಿಮಿತ್ತ ಜಮೈಕಾದಲ್ಲಿ ಆರೋಗ್ಯ ಸಂಪಾದನೆಗಾಗಿ ಬೀಡುಬಿಟ್ಟಿದ್ದಾರೆ. ಸುಯೇಜಿನ ತಂಟೆಯು ಉಲ್ಬಣಾವಸ್ಥೆಗೇರಿದಾಗ ಅವರ ರೋಗೋಪದ್ರವವೂ ತೀವ್ರವಾಯಿತು. ಸುಯೇಜಿನ ಮೇಲೆ ಆಕ್ರಮಣ ನಡೆಸಲು ಅವರಿಗೆ ಸಹಕಾರವಿತ್ತ ನಿಜವಾದ ಮಿತ್ರರಾಷ್ಟ್ರವೆಂದರೆ ಫ್ರಾನ್ಸು. ಚಿತ್ರದಲ್ಲಿ ಶಾಲುಮೆ ಬಳಕೆಗಾರರ ಸಂಘದ ಸ್ಥಾಪನೆಗಾಗಿ ನಡೆದಸಭೆಗೆ ಬ್ರಿಟನಿನ ಪ್ರಧಾನಿ ಈಡನ್ನರೂ ಫ್ರಾನ್ಸಿನ ಪ್ರಧಾನಿ ಮೋಲೆಯವರೂ ಬ್ರಿಟನಿನ ವಿದೇಶಾಂಗದಸಚಿವ ಲ್ಯಾಯ್ಡರೂ ಆಗಮಿಸುತ್ತಿರುವುದನ್ನು ಕಾಣಬಹುದು.

## -:ಕವಿ ಮತ್ತು ಕಲೆ:-

### ವಿಕ್ಟರ್ ಹ್ಯೂಗೋವಿನ ರಸದೃಷ್ಟಿಯಲ್ಲಿ

ಮಹತ್ತೆನಿಸುವ 'ಕಲೆ' ಎಂದರೆ ನುತ್ತೇನೂ ಅಲ್ಲ-ಸಮತೆಯ ಪರಾಕಾಷ್ಠೆ-ತುತ್ತತುದಿ!

ನಿಸರ್ಗವು ಹೇಗೊ ಹಾಗೆಯೇ ಕಲೆ. ಇವೆರಡೂ ಅವ್ಯಕ್ತವಾದರೂ ಅನುಭವವೇದ್ಯವಾದ ಸತ್ಯಪ್ರತೀಕಗಳು. ವಿಶ್ವಾತ್ಮದಲ್ಲಿ ದೇವರನ್ನು ನಾವು ಕಾಣುತ್ತೇವೆ. ಹಾಗೆಯೆ ಮಾನವನ ಭಾವನೆಯಲ್ಲಿ ದೇವಸ್ವರೂಪಿಯಾದ ವಿಶ್ವಾತ್ಮವನ್ನು ಕಾಣುತ್ತೇವೆ. ನಿಸರ್ಗವೆಂದರೆ ಅದೇ-ವಿಶ್ವಾತ್ಮ, ಕಲೆಯೆಂದರೆ ಮಾನವಕಲ್ಪನೆ, ಭಾವನೆಗಳ ಸೃಷ್ಟಿ. ಇವೆರಡೂ ಸತ್ಯಸತ್ಯ. ಕವಿಯು ಇವೆರಡರ ಪೂಜಾರಿ.

ಪ್ರಕೃತಿಯು ಕೊಂಬೆಯೇ ಕಲೆ.
ಪ್ರಕೃತಿಯಷ್ಟೇ ಪ್ರಾಕೃತಿಕವಾಗಿದೆ ಕಲೆ
ನೇವರೆಂದರೆ ಸಜೀವ ಅನಂತತೆ!

ದೃಷ್ಟಿಗೋಚರವಾದ ಅನಂತತೆಯಲ್ಲಿ ದೇವರ ತಾದಾತ್ಮ್ಯವನ್ನು ಒಳಗಣ್ಣಿನಿಂದ ಕಾಣಬಹುದು. ದೃಷ್ಟ್ಯಾತೀತವಾದುದು ವ್ಯಕ್ತವಾಗಿದ್ದರೆ ಅದು ದೇವರು.

ಇಡಿ ಜಗತ್ತಿನ ಸಾರಸರ್ವಸ್ವ ದೇವರು. ದೇವರ ವಿಶಾಲ ವ್ಯಕ್ತಿತ್ವ ಜಗತ್ತು.

ಕಲೆಯ ಉದ್ಬೋಧಕ ಪರಮಾತ್ಮ. ಮಾನವನು ಬರಿಯ ಸಾಮಗ್ರಿ ದೇವರು ಕವಿ ಮಾನವನು ಕುಂಚ. ಕಲೆಯು ಅವರ ಸೃಷ್ಟಿ.

ಮೋಹನ, ಕೆಮ್ಮಣ್ಣು

ಮೋಹಿನಿ ಕೇಶರಂಜನ ತೈಲ

ಕೂದಲಿಗೆ ತಂಪು ಕೂದಲು ಉದ್ದವಾಗಿಯೂ ಬರುತ್ತದೆ

ಕ್ಯಾಟಲಾಗ್ ಇನಾಮ್

MALAYALA MAUNTHREEKA VAIDYASALA

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಲ್ಲ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ.


Edited Printed & Published by K. H. Sh...

REGD. NO. M. 3618
LICENCE NO. 31
Licensed to Post without Prepayment.

# ನವಯುಗ

ಸಂಪುಟ ೩೬ VOL. 36
13—12—1956
ಸಂಚಿಕೆ ೧೫ NO. 15

## ಐಕರ ಅಮೇರಿಕ

### ನೆಹರು ನೋಡಲಿರುವ ಜನರು ಹೇಗೆ?—ಅವರನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ

ನಮ್ಮ ಈ ಸಂಚಿಕೆಯು ಓದುಗರ ಕೈಸೇರುವಷ್ಟರಲ್ಲಿ ಭಾರತದ ಪ್ರಧಾನಿ ಶ್ರೀ. ಜವಾಹರಲಾಲ ನೆಹರೂರವರು ಅಮೇರಿಕದ ಅಧ್ಯಕ್ಷರಾದ ಶ್ರೀ ಐಸೆನ್ ಹೋವರ್ ನೀಡಿರುವ ಆಮಂತ್ರಣದಂತೆ ಅಮೇರಿಕಕ್ಕೆ ಸೌಹಾರ್ದ ಸಂದರ್ಶನವನ್ನು ನೀಡಲು ಹೊರಟಾಗಿರುತ್ತದೆ; ನೆಹರೂರವರನ್ನು ಕರೆದು-ಕೊಂಡು ಹೋಗಲು ಹಿಂದೆ ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಶ್ರೀ. ಶೆರ್ಮನ್ ಕೂಪರ್ ಈಗಾಗಲೇ ಹೊಸದೆಹಲಿಗೆ ಐಕರ ಖಾಸಗಿ ಪ್ರತಿನಿಧಿಯಾಗಿ ಆಗಮಿಸಿದ್ದಾರೆ. ಲಂಡನಿನ ವರೆಗೆ ಭಾರತೀಯ ವಿಮಾನದಲ್ಲಿ ಪ್ರಯಾಣಿಸುವ ನೆಹರುಗಳು, ಅಲ್ಲಿಂದ ಮುಂದೆ ಐಕರ ಖಾಸಗಿ ವಿಮಾನವಾದ "ಕೊಲಂಬೈನ್" (ಈ ಲ್ಯಾಟಿನ್ ಶಬ್ದದ ಅರ್ಥ "ಪಾರಿವಾಳ" ಎಂದು; ಮತ್ತು ಪಾರಿವಾಳವು ಶಾಂತಿಯ ಸಂಕೇತ) ನೆಹರುಗಳನ್ನು ಅಮೇರಿಕಕ್ಕೆ ಒಯ್ದು ಮುಟ್ಟಿಸುತ್ತದೆ.

ನೆಹರೂರವರು ಅಮೇರಿಕಕ್ಕೆ ಹೋಗುವುದು ಇದೇ ಮೊದಲನೇ ಸಲವಲ್ಲ. ೧೯೪೯ರಲ್ಲಿ ಅವರೊಮ್ಮೆ ಅಮೇರಿಕಕ್ಕೆ ಹೋಗಿದ್ದರು ಆಗ ಅಮೇರಿಕದಲ್ಲಿ ರೂಜ್‌ವೆಲ್ಟ್ ಪ್ರಭಾವ ಇನ್ನೂ ಗಾಢವಾಗಿದ್ದಿತು; ಅಧ್ಯಕ್ಷ ಟ್ರೂಮನ್ ಡೆಮೋಕ್ರಾಟರ ಪ್ರತಿನಿಧಿಯಾಗಿ ಆ ದೇಶವನ್ನು ಆಳುತ್ತಿದ್ದರು. ಅವರ ಕಾಲದಲ್ಲಿ ಭಾರತದೊಡನೆ ಅಮೇರಿಕದ ಸಂಬಂಧವು ಮಧುರವೇ ಆಗಿತ್ತೆನ್ನಬಹುದು. ಆದರೆ ೧೯೫೨ರಲ್ಲಿ ಅಮೇರಿಕದ ಚುನಾವಣೆಯು ಡೆಮೋಕ್ರಾಟರಿಗೆ ಸೋಲನ್ನು ತಂದು ರಿಪಬ್ಲಿಕನ್ನರನ್ನು ಅಧಿಕಾರಕ್ಕೆ ಏರಿಸಿತು. ಪರಿಣಾಮವಾಗಿ ಐಸೆನ್ ಹೋವರ್ ಅಧ್ಯಕ್ಷರಾದರು, ಅವರ ಹಿಂದೆಯೇ ಡಲ್ಲೆಸ್ ಅಮೇರಿಕದ ವಿದೇಶ ಧೋರಣೆಯ ಸೂತ್ರಚಾಲಕರಾದರು.

ಡಲ್ಲೇಸರ ಸೂತ್ರಚಾಲನೆಯು ಭಾರತೀಯರಿಗೆ ಅಮೇರಿಕದ ಕುರಿತಿದ್ದ ಭಾವನೆಯು ಕೆಡುವಂತೆ ಮಾಡಿತು. ಪೋರ್ಚುಗಾಲದ ವಿದೇಶ ಮಂತ್ರಿಯೊಡಗೂಡಿ ಅವರಾಡಿದ "ತುಟಿ ಮೀರಿದ ಮಾತು' ಭಾರತಕ್ಕೆ ತೀರ ಅಸಹ್ಯವಾಯಿತು. "ನ್ಯಾಟೋ", "ಸೀಟೋ" ಎಂದು ಮುಂತಾಗಿ ಭಾರತದ ಸುತ್ತಲೂ ಬೇಲಿಯನ್ನು ನಿರ್ಮಿಸುವ ಅವರ ಆತುರವು ಮಾನಸಿಕ ಗ್ಲಾನಿಗೆ ಎಡೆಕೊಟ್ಟಿತು. ಪಾಕಿಸ್ತಾನಕ್ಕೆ ಸೈನ್ಯ ಸಹಾಯವನ್ನಿತ್ತು ಡಲ್ಲೆಸರು ಭಾರತವನ್ನು ಮತ್ತಷ್ಟು ಚಿಂತೆಗೀಡು ಮಾಡಿದರು. ಕಮ್ಯುನಿಸ್ಟರನ್ನು ದ್ವೇಷಿಸುವ ಭರದಲ್ಲಿ ಡಲ್ಲೇಸರು ಅಮೇರಿಕದ ಅಭಿಮಾನಿ ರಾಷ್ಟ್ರಗಳಾಗಿದ್ದ ಭಾರತದಂಥ ದೇಶವೂ ನೊಂದುಕೊಳ್ಳುವಂತಹ ಅನೇಕ ಕೆಲಸಗಳಿಗೆ ಕೈಹಾಕಿದರು.

ಈ ಸಲ, ಕಳೆದ ತಿಂಗಳಲ್ಲಿ ಪುನಃ ಚುನಾವಣೆಯು ನಡೆದಿದೆ. ಅಧ್ಯಕ್ಷ ಐಕರೇ ಪುನಃ ರಾಷ್ಟ್ರದ ಉಚ್ಚಸ್ಥಾನಕ್ಕೆ ಆಯ್ಕೆಗೊಂಡಿದ್ದಾರೆ, ನಿಜ. ಆದರೆ, ಡೆಮೋಕ್ರಾಟರು ಪ್ರತಿನಿಧಿ ಸಭೆಯಲ್ಲಿ ಬಾಹುಳ್ಯವನ್ನು ಸಂಪಾದಿಸಿದ್ದಾರೆ. ಐಕರಾದರೂ ರಿಪಬ್ಲಿಕನ್ನರಿಂದ ಬಹುದರಿಂದಾಗಿ ಗೆದ್ದು ಬಂದಿರದೆ, ಅವರ ಖಾಸಗಿ ವ್ಯಕ್ತಿತ್ವದ ಪ್ರಭಾವದಿಂದಲೂ ಸುಯೆಜ್ ಕಾಲುವೆಯ ಸಮಸ್ಯೆಯು ಉಲ್ಬಣಾವಸ್ಥೆಗೇರಿರುವ ಸಮಯದಲ್ಲಿ ತೀರ ಸಂಯಮದಿಂದ ವರ್ತಿಸಿದುದರಿಂದಲೂ ಜನಪ್ರಿಯರಾದರು. ಅದೇ ಹೊತ್ತಿಗೆ ಡಲ್ಲೆಸರು ರೋಗಬಾಧೆಗಾಗಿ ಆಸ್ಪತ್ರೆ ಸೇರಿದರು. ಇನ್ನು ಮುಂದೆ ಅವರು ಅಮೇರಿಕ ವಿದೇಶ ಮಂತ್ರಿಯಾಗಿ ಕೆಲಸಮಾಡಲಿಕ್ಕಿಲ್ಲವೆಂದು ಸಾಕಷ್ಟು ಖಚಿತವಾಗಿಯೇ ಹೇಳಲಾಗುತ್ತದೆ. ಅವರ ಧೋರಣೆಯಿಂದ ಅಮೇರಿಕಕ್ಕೆ ಆಗಿರುವ ನಷ್ಟವನ್ನು ತುಂಬಿಸಿಕೊಳ್ಳಲು ಐಕರು ಆತುರರಾಗಿದ್ದಾರೆಂದೂ ತಿಳಿದು ಬರುತ್ತದೆ. ಈಗ ಐಕರೇ ವಿದೇಶ ಧೋರಣೆ ರೂಪಿಸುವ ಹೊಣೆ ಹೊರಲು ಸಮರ್ಥರಾಗಿರುವರೆಂದೂ ಕೆಲವು ವರದಿಗಳು ಹೇಳುತ್ತವೆ. ಇದಕ್ಕೆ ಸರಿಯಾಗಿ ಐಕರು ನೆಹರೂರೊಡನೆ ಒಂದು ದಿನವಿಡೀ ತಾನೊಬ್ಬನೇ ಸಮಾಲೋಚಿಸಲಿದ್ದಾರೆಂದು ಕಾರ್ಯಕ್ರಮ ಪಟ್ಟಿಯಲ್ಲಿರುವ ಉಲ್ಲೇಖವು, ಐಕರು ತಮ್ಮ ದೇಶದ ಅಂತಾರಾಷ್ಟ್ರೀಯ ದೃಷ್ಟಿಕೋನವನ್ನು ಸೂಕ್ತವಾಗಿ ತಿದ್ದಲು ಮತ್ತು ಭಾರತದ ಪ್ರೀತ್ಯಭಿಮಾನಗಳನ್ನು ಸಂಪಾದಿಸಲು ಆತುರರಾಗಿರುವುದನ್ನು ಸಿದ್ಧಪಡಿಸುತ್ತದೆ.

ಹೀಗಾಗಿ ನೆಹರೂರವರು ಈ ಸಲ ಕೈಗೊಳ್ಳುವ ಪ್ರಯಾಣವು 'ಹೊಸ ಅಮೇರಿಕದ ಶೋಧ'ವಾಗಿ ಪರಿಣಮಿಸುವ ಸಂಭವವೇ ಹೆಚ್ಚು. ನಿಜವಾಗಿ ಹೇಳುವುದಾದರೆ ಅಮೇರಿಕದ ಶೋಧವು ಕೊಲಂಬಸನು ಸಾಹಸಪೂರ್ವಕ ಮಾಡಿದ್ದಷ್ಟು ಅಷ್ಟಕ್ಕೆಯೇ ಸೀಮಿತವಾಗಿಲ್ಲ. ಅಮೇರಿಕವು ಸುಮಾರು ೧೬ ಕೋಟಿ ಜನರಿರುವ ಸಂಪತ್ಸಮೃದ್ಧ ರಾಷ್ಟ್ರ. ಆ ರಾಷ್ಟ್ರದಲ್ಲಿನ ಪುಸ್ತಕ ಪ್ರಕಾಶಕರ ಚಟುವಟಿಕೆಯನ್ನು ವೀಕ್ಷಿಸಿದ ಪಕ್ಷದಲ್ಲಿ ಪ್ರತಿವಾರವೂ ಒಂದಲ್ಲದಿದ್ದರೊಂದು ಪ್ರವಾಸಾನುಭವ ಪುಸ್ತಕವನ್ನವರು ಪ್ರಕಟಿಸುತ್ತಿರುವುದನ್ನೂ ಈ ಅನುಭವಗಳು ಹಿಂದಿನವುಗಳಿಗಿಂತ ತೀರ ಭಿನ್ನವಾಗಿದ್ದು, ಅಮೇರಿಕದ ಹೊಸ ಮುಖವೊಂದರ ದರ್ಶನ ಮಾಡಿಸುತ್ತಿರುವುದನ್ನೂ ಮನಗಾಣಬಹುದು. ಇವಲ್ಲದೆ ಸಾವಿರಗಟ್ಟಳೆಯಲ್ಲಿರುವ ಪತ್ರಿಕೆಗಳು ಪ್ರತಿದಿನ ಅಥವಾ ಪ್ರತಿ ವಾರವೂ ಪ್ರಕಟಿಸುವ ನೂರಾರು ಲೇಖನಗಳು "ಅಮೇರಿಕವೆಂದರೆ ಏನು?" ಎಂಬ ಸಾಮಾನ್ಯ ಪ್ರಶ್ನೆಗೆ ತೃಪ್ತಿಕರವಾದ ಉತ್ತರವನ್ನು ಕೊಡಲು ಹೆಣಗುತ್ತವೆ; ಆದರೆ ಸಫಲವಾದ ಉತ್ತರ ಮಾತ್ರ ಮೂಡಿಬರುವುದಿಲ್ಲ; ಪ್ರತಿಯೊಬ್ಬರ ಉತ್ತರವೂ ವಿಚಿತ್ರ, ಮತ್ತು ಅದ್ಭುತವಾಗಿರುತ್ತದೆ!

ಕಾರ್ನೆಗೀ ಕಾರ್ಪೊರೇಶನ್ ೧೯೫೪ರಲ್ಲಿ 'ಅಮೇರಿಕವನ್ನು ತಿಳಿದವರು ಯಾರು?" ಎಂದು ಕೇಳಿ, ಯಾರಿಗೂ ಅಮೇರಿಕವೆಂದರೇನೆಂದು ಗೊತ್ತಿಲ್ಲವೆಂದು ಧ್ವನಿಸಿತು. ರಾಜಕಾರಿಗಳಿಗಾಗಲೀ, ಪತ್ರಿಕೋದ್ಯಮಿಗಳಿಗಾಗಲೀ, ವಕೀಲರಿಗಾಗಲೀ, ನ್ಯಾಯಾಧೀಶರಿಗಾಗಲೀ, ಪ್ರೊಫೆಸರರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ ಇತಿಹಾಸಗಾರರಿಗಾಗಲೀ ರಾಜಕೀಯ ಪಕ್ಷಗಳಿಗಾಗಲೀ ಉದ್ಯೋಗಪತಿಗಳಿಗಾಗಲೀ ಕಾರ್ಮಿಕರಿಗಾಗಲೀ ವೈದ್ಯರಿಗಾಗಲೀ ಸೈನಿಕರಿಗಾಗಲೀ ಅಮೇರಿಕದ ನಿಜವಾದ ಪರಿಚಯ ಪರಿಪೂರ್ಣವಾಗಿ ಇಲ್ಲವೇ ಇಲ್ಲವೆಂದದು ಸಾರಿತು. ಇದು ಸತ್ಯವಿಲ್ಲ — ಅಮೇರಿಕದ ಜನತೆ ಹೇಗೆ? ಎಂದೊಂದು ಸರಳ ಪ್ರಶ್ನೆ ಹಾಕಿದರೆ, ಉತ್ತರಗಳಲ್ಲಿ ಉತ್ತರ-ದಕ್ಷಿಣ ಧ್ರುವದಲ್ಲಿನಷ್ಟು ಅಂತರ ಕಂಡುಬರುತ್ತದೆ: ಆ ಜನರು ಜಗತ್ತಿನಲ್ಲಿಯೇ ಅತಿ ಹೆಚ್ಚಿನ ಭೌತಿಕವಾದಿಗಳು,—ಅವರಷ್ಟು ಆದರ್ಶವಾದಿ ಜನಾಂಗ ಬೇರೆ ಇರಲಾರದು; ಅವರು ಮಹಾಕ್ರಾಂತಿಕಾರಿಗಳು, ಅವರು ದೊಡ್ಡ ಸಂಪ್ರದಾಯ ಪ್ರಿಯರು; ಅವರು ಕೇವಲ ವ್ಯಕ್ತಿಗತ ಚಿಂತೆಯುಳ್ಳವರು ಅವರು ಸಮಾಜ ಜೀವಿಗಳಲ್ಲೆ ಶ್ರೇಷ್ಠರು; ಅವರು ಹಿರಿಯರಿಗೆ ಅವಿಧೇಯರು ಅವರನ್ನು ಪೂಜ್ಯಭಾವದಿಂದ ಕಾಣುವ ಜನರೇ ವಿರಳ—ಹೀಗೆಲ್ಲ ವರ್ಣನೆ ಸಾಗುತ್ತದೆ. ಯಾವುದು ಸರಿ, ಯಾವುದು ತಪ್ಪು? "ದಿ ಅಮೇರಿಕನ್ ಸೀನ್" ಎಂಬ ಪುಸ್ತಕ ಬರೆದ ಹೆನ್ರಿ ಜೇಮ್ಸ್ "ಮಾನವನ ಅನುಕೂಲತೆಗೆ ಹೊಂದಿಕೊಳ್ಳುವುದಕ್ಕಿಂತಲೂ ದೊಡ್ಡದಾದ ರಾಷ್ಟ್ರ ಅಮೇರಿಕವಾಗಿರುವುದರಿಂದ ಅಲ್ಲಿಯ ಭೌಗೋಲಿಕ ಸ್ವರೂಪದಲ್ಲಿ ವ್ಯಕ್ತವಾದಷ್ಟೆ ವೈವಿಧ್ಯವು ಜನರನೆತ್ತರಿನಲ್ಲೂ ಕಂಡು ಬರುತ್ತದೆ; ಹೀಗಾಗಿ ಅಮೇರಿಕದಲ್ಲಿ ನಾವು ವೈವಿಧ್ಯ ಪ್ರಪಂಚವನ್ನೇ ಕಾಣುತ್ತೇವೆ" ಎನ್ನುತ್ತಾರೆ.

ತತ್ತ್ವಜ್ಞಾನಿ ಸಾಂತಾಯನರು ಅಮೇರಿಕದ ಮನಸ್ಸನ್ನು ಇಬ್ಭಾಗಿಸಿ, ಆ

(೧೦ನೇ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31—10—1955)
ರೂಪಾಯಿ:- 76 ಲಕ್ಷ
ಒಟ್ಟು ಚಲಾವಣೆ ಮೊಬಲಗು
ಇಂದು:— (31—10—1956)
ರೂಪಾಯಿ:- ಒಂದು ಕೋಟಿಗೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು—3.
THE VIJAYA BANK LTD.

## ಸಾಹಿತಿಯ ಜೀವನ

# ಹೃದಯಕ್ಕೆ ಕಣ್ಣಿತ್ತು ದೃಷ್ಟಿಯನ್ನು ವಿರುದ್ಧಗೊಳಿಸಿದ ಪುಣ್ಯ ಪ್ರವಾಹವೇ ಶರಚ್ಚಂದ್ರರ ಸಾಹಿತ್ಯ

ಬಂಗಾಳದಲ್ಲಿ ವಿವಿಧ ಕಲೆಗಳಲ್ಲಿ ಅಗ್ರಗಣ್ಯರೆನಿಸಿದ ಮಹಾತ್ಮರು ಜನ್ಮವೆತ್ತಿದ್ದಾರೆ. ಶ್ರೇಷ್ಠ ತರಗತಿಯ ರಾಜಕಾರಣಿಗಳು, ವಿಜ್ಞಾನಿಗಳು ಕಲಾಭಿಮಾನಿಗಳು ಜನ್ಮವೆತ್ತಿರುವ ಈ ಭಾಗದಲ್ಲಿ ಮೊದಲನೇ ದರ್ಜೆಯ ಸಾಹಿತಿಗಳೂ ಜನಿಸಿದ್ದಾರೆ. ವಿಶ್ವಖ್ಯಾತಿವೆತ್ತ ಠಾಕೂರ್, ಬಂಕಿಮ್ ಚಂದ್ರ ಶರಚ್ಚಂದ್ರರಂತಹ ಅಸಾಮಾನ್ಯ ಸಾಹಿತಿಗಳು ಭಾರತರತ್ನರೆನಿಸಿ ವಿಶ್ವದಲ್ಲೇ ಜನಪ್ರಿಯ ಸಾಹಿತಿಗಳಾಗಿರುವರು.

ಶರಚ್ಚಂದ್ರರ ಜನ್ಮವು ಇಂದಿಗೆ ಸರಿಯಾಗಿ ಎಂಭತ್ತು ವರ್ಷದ ಹಿಂದೆ, ಅಂದರೆ ೧೮ನೆಯ ಡಿಸೆಂಬರ್ ೧೮೭೬ರಲ್ಲಿ ದೇವಾನಂದಪುರದಲ್ಲಿ ಆಯಿತು. ಇವರ ತಂದೆ ಮೋತಿಲಾಲ್ ಕೂಡಾ ಒಬ್ಬ ಉತ್ತಮ ಕವಿಯಾಗಿದ್ದರು. ಶರತ್‌ರವರ ವಿದ್ಯಾಭ್ಯಾಸ ಅದೇ ಚಿಕ್ಕ ಗ್ರಾಮದಲ್ಲಾಯಿತು. ಬಾಲ್ಯದಲ್ಲಿ ಇವರು ಬಲು ತುಂಟರಾಗಿದ್ದರು. ಪಾಠಶಾಲೆಗೆ ಹೋಗುವ ನೆಪದಿಂದ ಹೊರಟು ಸ್ನೇಹಿತರೊಡಗೂಡಿ ಹೊಲಗಳಲ್ಲಿ ಆಟವಾಡುತ್ತ ಕಾಲಕಳೆಯುತ್ತಿದ್ದರು. ಹಲವು ತುಂಟರೊಡಗೂಡಿ ತುಂಟತನ ಮಾಡುವುದೂ, ಒಮ್ಮೊಮ್ಮೆ ಸಮುದ್ರ ತೀರದಲ್ಲಿಯೋ ಬಯಲಲ್ಲಿಯೋ ಏಕಾಂಗಿಯಾಗಿ ನಿಸರ್ಗ ಸೌಂದರ್ಯವನ್ನೀಕ್ಷಿಸುತ್ತಾ ತಲ್ಲೀನರಾಗುವುದೂ ಇವರ ದಿನನಿತ್ಯದ ಕೆಲಸ. ಮನೆಗೆ ಹಿಂತಿರುಗಿ ಬಂದರೆ, ತಂದೆಯವರು ಬರೆದ ಕವನಗಳನ್ನೂ ಇತರರ ಕಥೆ ಕಾದಂಬರಿಗಳನ್ನೂ ಕದ್ದು ಮುಚ್ಚಿ ಓದುವ ಹವ್ಯಾಸವಿತ್ತು. ಪಾಠಶಾಲೆಯ ಪುಸ್ತಕಗಳನ್ನು ಅವರು ಒಂದು ದಿನವೂ ಓದಿದವರಲ್ಲ. ಆದರೆ ಎಷ್ಟು ಚತುರರಾಗಿದ್ದರೆಂಬುವುದಕ್ಕೆ ಪ್ರತಿಯೊಂದು ತರಗತಿಯಲ್ಲೂ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಉತ್ತೀರ್ಣರಾಗುತ್ತಿದ್ದುದೇ ಸಾಕ್ಷಿಯಾಗಿತ್ತು. ಅವರು ಇಂಟರ್ ಪಾಸಾದಾಗ ತಾಯಿಯನ್ನು ಕಳೆದುಕೊಳ್ಳಬೇಕಾಯಿತು. ಅನಂತರ ತಂದೆಯೊಡನೆ ಜಗಳವಾಡಿ ಮುಜಫರ್‌ಪೂರ್‌ಗೆ ಹೊರಟು ಹೋದರು. ಅಲ್ಲಿ ಸಂಗೀತಗಾರರಾಗಿ ಸಾಕಷ್ಟು ಪ್ರಸಿದ್ಧಿಹೊಂದಿದರು. ಅಲ್ಲಿಯೇ ಅವರ ಸಾಹಿತ್ಯ ಜೀವನ ಆರಂಭವಾಯಿತು. ಅಲ್ಲಿ ಶ್ರೀಕಾಂತ ಕಾದಂಬರಿಯನ್ನು ಅವರು ಬರೆದರು.

ಇದಾದ ಕೆಲವು ಸಮಯಲ್ಲಿ ತಂದೆಯೂ ತೀರಿಹೋದರು. ಅವರ ಹೆಗಲ ಮೇಲೆ ಸಂಸಾರದ ನೊಗ ಹೊರಿಸಲ್ಪಟ್ಟಿತು. ಅಲ್ಲಿಂದ ಇವರು ಕಲ್ಕತ್ತಕ್ಕೆ ಹೋಗಿ ಕಛೇರಿ ಒಂದರಲ್ಲಿ ತಜೀಮೆಗಾರನ ಹುದ್ದೆಯನ್ನು ಪಡೆದರು. ನಂತರ ಕೆಲವು ದಿನಗಳಲ್ಲಿ 'ಬರ್ಮದಲ್ಲಿ ಹಣ ಸಂಪಾದಿಸುವುದು ಸುಲಭವೆಂದೂ ಅಲ್ಲಿ ಹೆಚ್ಚು ಭಾರತೀಯರು ಸಿರಿವಂತರಾಗಿದ್ದಾರೆಂದೂ ಸುದ್ದಿ ಕೇಳಿ ಬರ್ಮಕ್ಕೆ ಹೊರಟರು.

ಬರ್ಮದಲ್ಲಿ ಒಬ್ಬ ಗುಮಾಸ್ತನ ಕೆಲಸ ದೊರೆಯಿತು. ಇವರು ಇಲ್ಲಿಯೂ ಹಲವು ಕಾದಂಬರಿಗಳನ್ನೂ ಕಥಾ ಸಂಗ್ರಹಗಳನ್ನೂ ಬರೆದದ್ದು. ಆದರೆ ಅವುಗಳನ್ನು ಪ್ರಕಟಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಕೊನೆಗೆ ಅವರ ಮಿತ್ರರೊಬ್ಬರು ಅವರ ಕಾದಂಬರಿಯೊಂದನ್ನು "ಬಡಿದೀದಿ" "ಅಕ್ಕಾಜಿ" ಎಂಬ ಹೆಸರಿನಿಂದ ಪ್ರಕಟಿಸಿದರು. ಅದು ಪ್ರಕಟವಾದುದೇ ತಡ ಇವರ ಹೆಸರು ಸಾಹಿತ್ಯ ಪ್ರಪಂಚದಲ್ಲಿ ಪ್ರಕಾಶಿಸ ತೊಡಗಿತು. ಈ ಅವಧಿಯಲ್ಲಿ ಅವರಿಗೂ ಅವರ ಒಡೆಯನಿಗೂ ಮನಸ್ತಾಪವುಂಟಾಗಿ ಶರತ್‌ರವರು ಕೆಲಸಕ್ಕೆ ರಾಜೀನಾಮೆಯನ್ನಿತ್ತರು. ಪುನಃ ಕಲ್ಕತ್ತೆಗೆ ಹೋಗಿ ಮೊದಲನೆಯ ಸಲ ಚಿತ್ತರಂಜನದಾಸರನ್ನು ಕಂಡರು, ಅನಂತರ ಸುಭಾಸ್‌ಚಂದ್ರ ಬೋಸ್‌ರವರೊಡನೆ ಭೇಟಿಯಾಯಿತು. ಇದರಿಂದ ಶರತ್‌ರವರೂ ರಾಜಕೀಯದಲ್ಲಿ ಕಾಲಿಟ್ಟರು. ತನ್ನ ಲೇಖನಿಯ ಶಕ್ತಿಯಿಂದ ದೊಡ್ಡ ಸಂಗ್ರಾಮವನ್ನೇ ಮಾಡಿದರು. ಅವರ ಕೃತಿಗಳು ಜನರ ಮೆಚ್ಚುಗೆಗೆ ಪಾತ್ರವಾದುವು. ಅವರ ಕತೆಗಳನ್ನು ಎಷ್ಟೋ ನಿರ್ಮಾಪಕರು ಚಿತ್ರರೂಪಕ್ಕಿಳಿಸಿದ್ದಾರೆ. ಅವುಗಳಲ್ಲಿ "ದೇವದಾಸ", "ಕಾಶೀನಾಥ", "ಛೋಟಿಭಾಯಿ" "ಪರಿಣೀತಾ", "ಬಿರಾಜ್‌ಬಹು" ಇತ್ಯಾದಿ ಹೆಸರಾದವುಗಳು.

ಒಮ್ಮೆ ಶರತ್‌ರವರ ಬಗ್ಗೆ ಡಾ. ರವೀಂದ್ರನಾಥ ಠಾಕೂರ್ ಹೀಗೆ ಹೇಳಿದ್ದರು:— "ಶರತ್‌ರನ್ನು ಒಂದು ಕಾರಣದಿಂದ ನಾನು ಟೀಕಿಸುತ್ತೇನೆ. ಅದೇನೆಂದರೆ ಅವರು ನನ್ನನ್ನು ಅಳುವಂತೆ ಮಾಡುತ್ತಾರೆ" ಶರತ್‌ರವರ ಕಥೆಗಳ ವೈಶಿಷ್ಟ್ಯವೇ ಇದಾಗಿದೆ. ಶರತ್‌ರವರ ಯಾವುದೇ ಕಾದಂಬರಿಯನ್ನು ತೆಗೆದುಕೊಳ್ಳೋಣ, ಅದನ್ನು ಓದುತ್ತ ಹೋದಂತೆ ನಮ್ಮನ್ನೇ ನಾವು ಮರೆತು ಬಿಡುತ್ತೇವೆ. ಕತೆಯ ಜೊತೆಗೆ ನಾವೇ ಅಳುತ್ತಲೂ ಪಾತ್ರಗಳಲ್ಲಿ ಅನುಕಂಪವುಳ್ಳವರಾಗುತ್ತಲೂ ಮುಂದುವರಿಯುತ್ತೇವೆ. ಈ ಕಾರಣದಿಂದ ಶರತ್ ಜನರ ಹೃದಯಗಳನ್ನು ಗೆಲ್ಲುತ್ತಾರೆ. ಅವರ ಕೃತಿಗಳಲ್ಲಿ ಸಮಾಜದ ಹುಳುಕು ಮತ್ತು ನರಳುತ್ತಿರುವ ಮಾನವರ ಬಿಸಿಯುಸುರು ಹಾಸುಹೊಕ್ಕಾಗಿ ಬೆರೆತುಕೊಂಡಿದೆ.

೧೬ನೆಯ ಜನವರಿ ೧೯೩೮ರಲ್ಲಿ ಈ ಸಾಹಿತ್ಯ ರತ್ನವು ಇಹ ಲೋಕದಿಂದ ಮರೆಯಾದರೂ ಅವರ ಸಾಹಿತ್ಯ ಅಮರವಾಗಿದೆ. ಅವರ ಸಾಹಿತ್ಯ ಜನರ ಸೊತ್ತು. ಅದಕ್ಕೆ ಸೋಲೂ ಇಲ್ಲ, ಸಾವೂ ಇಲ್ಲ. ಅದಕ್ಕೆ ತಕ್ಕಂತೆ ಸಾಹಿತಿಯೂ ಅಮರನು.

"ದೇವದಾಸ", "ವಿಪ್ರದಾಸ", "ಚರಿತ್ರಹೀನ" ಮುಂತಾದ ಕೃತಿರತ್ನಗಳು ವಿಶ್ವ ಸಾಹಿತ್ಯಾಕಾಶದಲ್ಲಿ ತಾರೆಗಳಾಗಿ ಮಿನುಗುತ್ತಿರುವವರೆಗಂತೂ ಶರಚ್ಚಂದ್ರರು ಅಮರರಾಗಿ ಉಳಿಯುವುದು ನಿಶ್ಚಯ.

—ಶ್ರೀ. ಪಿ. ಎನ್. ರಾಮಚಂದ್ರ ರಾವ್.

---

# ಮಣ್ಣನ್ನು ಮೆತ್ತಿಕೊಂಡು ನಿಮ್ಮ ಮೆದುಳನ್ನು ತಂಪಾಗಿರಿಸಿಕೊಳ್ಳಿ!

### ಮಹಾತ್ಮ ಗಾಂಧೀಜಿ ಸಹ ಈ ನಿಸರ್ಗ ಚಿಕಿತ್ಸೆಯನ್ನು ಅನುಸರಿಸುತ್ತಿದ್ದರು!

ಶಾಲಾ ಪರೀಕ್ಷೆ ಸಮಿಪಿಸಿತು....

ಹೌದು: ಪರೀಕ್ಷೆ ಹತ್ತಿರ ಬಂದುದೇ ತಡ, ವಿದ್ಯಾರ್ಥಿಗಳಿಗೆ ಓದುವ ಗಡಿಬಿಡಿ. ಕೆಲವರಂತೂ ಆಗ ಹಗಲು ರಾತ್ರಿಯೆಂದಿಲ್ಲದೆ 'ಪುಸ್ತಕ ಕೀಟ'ವೇ ಆಗಿ ಬಿಡುತ್ತಾರೆ. ಈ ರೀತಿ ನಿದ್ದೆಗೆಟ್ಟು ಓದುವುದರಿಂದ ದೇಹಕ್ಕೆ ತುಂಬಾ ತೊಂದರೆಯಿದೆ. ಪರೀಕ್ಷೆಯಲ್ಲಿ ಪಾಸಾಗುವ 'ಗುರಿ'ಯನ್ನೇ ಹಿಡಿದು ಅಭ್ಯಾಸಿಸುವಾಗ ಆ ಆಯಾಸ ಗಣನೆಯಾಗುವುದಿಲ್ಲವಾದರೂ ಪರೀಕ್ಷೆ ಕಳೆದ ಮೇಲೆ ತಿಳಿಯುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ—ಹಗಲು ಇರುಳೆನ್ನದೆ ಓದಿ ಪರೀಕ್ಷೆಗಾಗುವಾಗ 'ಹೋಲ್'ಗೆ ಹೋಗುವುದೇ ಅಸಾಧ್ಯವಾಗುವುದುಂಟು. 'ತಲೆ ಬಿಸಿ'ಯಂತೂ ಪರೀಕ್ಷೆ ಸಮಯದಲ್ಲಿ ಎಲ್ಲವರಿಗೂ ಇದ್ದೇ ಇದೆ.

ಹಾಗೆಂದು ಪರೀಕ್ಷೆಗೆ ಓದಬಾರದೆಂದಲ್ಲ. ಹೆಚ್ಚು ನಿದ್ದೆಗೆಡುವುದು ಒಳ್ಳೆಯದಲ್ಲವೆಂತ. ಇನ್ನು ಪರೀಕ್ಷೆಗೆ ಓದುವಾಗ—ತಲೆ ಬಿಸಿಯೇರುವಾಗ ಈ ಕೆಳಗಿನ ಸೂತ್ರ ಕೈಗೊಂಡರೆ ಎಷ್ಟೋ ಹಿತವೆನಿಸುವುದು; ಓದಲು, ಕೆಲಸಮಾಡಲು ಉಲ್ಲಾಸವಾಗುವುದು. ಭೂಮಿಯ, ಎರಡು, ಮೂರು ಫೀಟ್ ಅಡಿಯಿಂದ ತೆಗೆದ ಒಳ್ಳೆಯ ಮಣ್ಣನ್ನು (ಜೇಡಿಯಾದರೆ ಉತ್ತಮ), ಸ್ವಲ್ಪ ಒಂದು ಪಾತ್ರೆಯಲ್ಲಿ ಹಾಕಿರಿ. ಅದಕ್ಕೆ ಸಾಕಷ್ಟು ತಣ್ಣೀರು ಹೊಯ್ದು (ರೊಟ್ಟಿಯ ಹಿಟ್ಟಿನಷ್ಟು) ಕಲಸಿರಿ. ಸಿಕ್ಕಿದ ಕಲ್ಲನ್ನು ತೆಗೆದುಕೊಳ್ಳಬೇಕು. ಬಾಳೆ ಎಲೆಯ ತುಂಡೊಂದನ್ನು ತೆಗೆದು ಅಂಗೈದಪ್ಪಕ್ಕೆ (ರೊಟ್ಟಿಯಂತೆ) ಹಸಿಯಿರಿ. ಬಳಿಕ ಇದನ್ನು ತಲೆಗಿಟ್ಟು ಬಟ್ಟೆಯೊಂದನ್ನು ಮೇಲಿಂದ ಕಟ್ಟಿರಿ. ಗಂಟೆಗೊಮ್ಮೆ ಬದಲಾಯಿಸುತ್ತಿರಿ. ನಿಮಗೆ ಓದಲು ಅದೆಷ್ಟು ಉತ್ಸಾಹ ಬರುವುದು ಬಲ್ಲಿರಾ! ಇದು ನಿಮಗೆ ಕಷ್ಟವೆಂದು ಕಂಡುಬಂದರೆ, ಅನಾನುಕೂಲವಾದರೆ 'ಬ್ಯಾಂಡೇಜ್'ನ್ನು ಒದ್ದೆಮಾಡಿ (ತಣ್ಣೀರಲ್ಲಿ) ತಲೆಗೆ ಕಟ್ಟಿಕೊಳ್ಳಿ; ಉಪಕಾರಿಯಾಗುತ್ತೆ.

ಇದನ್ನು ವಿದ್ಯಾರ್ಥಿಗಳೇ ಎಂದಲ್ಲ-- 'ತಲೆ ಬಿಸಿ ಯೇರುವ ಪ್ರಸಂಗಗಳಲ್ಲಿ, ನಿದ್ದೆಗೆಡುವ ಸಂದರ್ಭದಲ್ಲಿ, ತಲೆನೋವಾಗುವುದಿದ್ದರೆ ಎಲ್ಲರೂ ಯಾರೂ ಮಾಡಬಹುದು. ಅಂತಹ ಸಂದರ್ಭಗಳಲ್ಲಿ ಇದು ತುಂಬಾ ಪರಿಣಾಮಕಾರಿಯಾಗುತ್ತದೆ. ಮಹಾತ್ಮಾ ಗಾಂಧೀಜಿಯವರು ಭಾಷಣ ಮಾಡಲು ತೆರಳುವಾಗ ಕೂಡಾ ತಲೆಗೆ ಮಣ್ಣು ಕಟ್ಟುತ್ತಿದ್ದರು!

ಮಣ್ಣನ್ನು ಹೊಟ್ಟೆಗೆ ಕಟ್ಟಿಕೊಳ್ಳುವುದರಿಂದ ಅಜೀರ್ಣ, ಹುಳತುಂಬುವುದು ಮೊದಲಾದವು ಹತ್ತಿರ ಬರುವುದೇ ಇಲ್ಲ. ಮಣ್ಣಿನ ಚಿಕಿತ್ಸೆ 'ನಿಸರ್ಗ ಚಿಕಿತ್ಸೆ'ಯ ಒಂದು ಪ್ರಾಮುಖ್ಯ ಅಂಗವಾಗಿದೆ. 'ಮಣ್ಣು' ಎಂದು ನಾವು ತಾತ್ಸಾರದಿಂದ ಕಂಡರೂ ಮಣ್ಣು ನಮ್ಮ ಮಾತೆಯಲ್ಲವೇ?

—ಶ್ರೀ ಕೇ. ವ. ಕೇಶವ.

---


**ಸೂಚನೆ**

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗ ವಾರಪತ್ರಿಕೆಯ ಖಾತೆಗೆ) ಜಮಾ ಮಾಡಬಹುದು.

ಮೆನೇಜರ್,
ನವಯುಗ, ಉಡುಪಿ.



## ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೦೬] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

| | | |
|---|---|---|
| ಅಧಿಕೃತ ಬಂಡವಾಳ | ... | ರೂ. 56,00,000 |
| ಚಲಾವಣೆ ಬಂಡವಾಳ | ... | ರೂ. 32,23,787 |
| ವರ್ಗಣೆ (ಪಾಲು) ಬಂಡವಾಳ | ... | ರೂ. 32,11,000 |
| ತೆತ್ತ ಬಂಡವಾಳ | ... | ರೂ. 27,45,000 |
| ಕ್ಷೇಮನಿಧಿ | ... | ರೂ. 15,00,000 |

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

| | |
|---|---|
| (ವಿಶಾಲ) ನವಮೈಸೂರು | 59 |
| ಆಂಧ್ರ ಪ್ರದೇಶ | 14 |
| ಕೇರಳ | 13 |
| ಬೊಂಬಾಯಿ | 8 |
| ಮದ್ರಾಸು | 2. |

ಟಿ. ಎ. ಪೈ, ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್.

ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್. ಮೆನೇಜಿಂಗ್ ಡೈರೆಕ್ಟರ್.

**The Canara Industrial & Banking Syndicate Ltd.**





## ಆಡಳಿತದ ಭಾಷೆ

# ಕನ್ನಡ ಪ್ರಾಂತದಲ್ಲಿ ಕನ್ನಡವನ್ನೆ ಆಡಳಿತಕ್ಕೆ ಬಳಸಿಕೊಳ್ಳೋಣ!

### ವರ್ಷಾಂತರದ ವಿಳಂಬ ಬೇಡವೇ ಬೇಡ

ಸುಮಾರು ನಲ್ವತ್ತೈದು ವರ್ಷಗಳ ಹಿಂದೆ ನಾನು ಕನ್ನಡ ಸಾಹಿತ್ಯಾರಾಧನೆಯನ್ನು ತೊಡಗಿದಾಗ ಕನ್ನಡದ ಬಗ್ಗೆ ನಮ್ಮ ಜನರಲ್ಲಿ ಔದಾಸೀನ್ಯವಿದ್ದುದು ಆಶ್ಚರ್ಯವಲ್ಲ. ಈಚೆಗೆ ಈ ಪರಿಸ್ಥಿತಿ ಸ್ವಲ್ಪ ಮಾರ್ಪಟ್ಟಿದೆ. ಜನರು ಹಿಂದಿಗಿಂತ ಹೆಚ್ಚಾಗಿ ಈಗ ಕನ್ನಡಾಭಿಮಾನಿಗಳಾಗಿ ಕಾಣುತ್ತಾರೆ. ಆದರೆ ಈಗಿನ ಮಟ್ಟದ ಯೇ ಪ್ರೋತ್ಸಾಹ ಉಳಿದರೆ ಸಾಕು ಎನ್ನೋಣವೇ? ಎಷ್ಟುಕ್ಕೂ ಸಾಧ್ಯವಿಲ್ಲ. ಇಂಗ್ಲಿಷರ ಜನಜೀವನದಲ್ಲಿ ಇಂಗ್ಲಿಷಿಗೇನು ಸ್ಥಾನವಿದೆಯೋ ಫ್ರೆಂಚರ ನಿತ್ಯ ವ್ಯವಹಾರದಲ್ಲಿ ಫ್ರೆಂಚಿಗೇನು ಮಾನವಿದೆಯೋ ಕನ್ನಡಿಗರ ಜೀವನದಲ್ಲಿ ಕನ್ನಡಕ್ಕೂ ಇದೇ ಬಗೆಯ ಸ್ಥಾನಮಾನ ದೊರೆಯದೆ ನಾವು ವಿರಮಿಸಬಾರದು.

ಒಂದು ಪಾಂಗವಾಗಿ ಕೂಡಿರುವ ಕನ್ನಡ ಜನರು ದೇಶದ ಜೀವನೋದ್ಯಮದಲ್ಲಿ ತಕ್ಕ ರೀತಿಯಲ್ಲಿ ಭಾಗವಹಿಸಬೇಕಾದರೆ ನಮ್ಮ ದೇಶ ಮತ್ತು ನಮ್ಮ ಭಾಷೆಗಳ ವಿಷಯದಲ್ಲಿ ಕ್ಷೇಮ ಸಾಧಕವಾದ ಸೂತ್ರವನ್ನು ತಡಮಾಡದೆ ಗ್ರಹಿಸಬೇಕು. ಕನ್ನಡ ಭಾಷೆಗೆ ಕನ್ನಡ ನಾಡಿನಲ್ಲಿ ಪ್ರೋತ್ಸಾಹವು ಅತ್ಯಧಿಕವಾಗಿ ದೊರೆತು ನಾಡಿನ ಎಲ್ಲ ವ್ಯವಹಾರಗಳಲ್ಲಿಯೂ ಕನ್ನಡವನ್ನೆ ಬಳಸುವ ದಿನಗಳನ್ನು ಕಳೆಯುವಂತಾಗಬೇಕು.

ಸ್ವತಂತ್ರ ಭಾರತವು ಪ್ರಜಾಪ್ರಭುತ್ವದ ಗಣರಾಷ್ಟ್ರವಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ನಾವು ಪ್ರಬುದ್ಧ ದೇಶವಾಸಿಗಳಿಗೆಲ್ಲ ಮತದಾನದ ಅಧಿಕಾರವನ್ನು ನೀಡಿ ಕೊಂಡಿದ್ದೇವೆ. ಪ್ರಜಾಪ್ರಭುತ್ವದ ಸ್ವಾತಂತ್ರ್ಯದಲ್ಲಿ ಆಯ್ಕೆ ಪಡೆದ ಮಂದಿ ನಮ್ಮವರು; ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವಿರುವಲ್ಲಿ ಆಳುವ ಕರ್ತೃ ಸಮಸ್ತರು ಆಳಿಸಿಕೊಳ್ಳುವ ತೊಂಭತ್ತು ಸಾಮಾನ್ಯರ ಸೇವಕರಾಗುತ್ತಾರೆ. ಈ ಪರಿಸ್ಥಿತಿ ನಮಗೆ ಹೊಸತು. ಇದರಲ್ಲಿ ಸಿದ್ಧಿಯನ್ನು ಪಡೆಯುವುದು ನಮ್ಮ ಮೇಲೆ ಬಿದ್ದಿರುವ ಗುರುತರವಾದ ಹೊಣೆಯಾಗಿದೆ. ಈ ಸಿದ್ಧಿಯನ್ನು ಸಾಧಿಸುವುದಕ್ಕೆ ಜನರು ಆಡುವ ಭಾಷೆಯಿಂದ ಜನರಿಗೆ ತಿಳಿಸಿ ಹೇಳಿದರೆ ಮಾತ್ರ ಸಾಧ್ಯ.

ತಾತ್ವಿಕವಾಗಿ ಈ ಮಾತನ್ನು ನಾವೆಲ್ಲ ಒಪ್ಪಿದ್ದೇವೆ. ತತ್ವದಲ್ಲಿ ಒಪ್ಪಿರುವ ಸೂತ್ರವನ್ನು ವ್ಯವಹಾರದಲ್ಲಿ ತರುವುದು ಮಾತ್ರ ಉಳಿದಿದೆ. ನಡೆಯುವ ಎಲ್ಲ ಕೆಲಸ, ಆಡುವ ಎಲ್ಲ ಮಾತು, ಮಾಡುವ ಎಲ್ಲ ಉದ್ದೇಶ ಪ್ರಾಂತ ಭಾಷೆಯಲ್ಲಿ ನಡೆದಾಗ ಜನತೆಯ ಮನಸ್ಸು ಪ್ರಾಂತದ ಜೀವನದಲ್ಲಿ ಸರಿಯಾದ ಪ್ರಭಾವವನ್ನು ಬೀರುವುದಕ್ಕೆ ಅವಕಾಶವಾಗುತ್ತದೆ. ಜೊತೆಗೆ ಕೇಂದ್ರದ ಉದ್ದೇಶ, ವ್ಯವಹಾರಾದಿಗಳು ಜನಕ್ಕೆ ತಿಳಿದು ಜನರು ಅಲ್ಲಿ ಪ್ರಭಾವಶಾಲಿಗಳಾಗಬೇಕಾದರೆ ಕೇಂದ್ರವು ತನ್ನ ಅಭಿಪ್ರಾಯ, ಉದ್ದೇಶಗಳನ್ನು ಆಯಾ ಭಾಷೆಯಲ್ಲಿ ತಿಳಿಸುತ್ತಿರಬೇಕು.

ಹೊಸ ಮೈಸೂರು ಪ್ರಾಂತವು ತನ್ನ ಕೋರ್ಟು, ಕಚೇರಿ, ಶಾಲೆ, ಕಾಲೇಜು, ಸಭೆ ಸಮ್ಮೇಳನ ಮುಂತಾಗಿ ಎಲ್ಲೆಡೆಯಲ್ಲೂ ಕನ್ನಡವಲ್ಲಿಯೇ ಎಲ್ಲ ವ್ಯವಹಾರವನ್ನೂ ಒಂದು ವರ್ಷ ನಡೆಸಲಿ! ವ್ಯವಹಾರವನ್ನು ಇಂಗ್ಲಿಷಿನಲ್ಲಿ ನಡೆಸುತ್ತ ಪ್ರಚಾರವನ್ನು ಮಾತ್ರ ಕನ್ನಡದಲ್ಲಿ ನಡೆಸುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಹತ್ತು ವರ್ಷಗಳು ಕಳೆದರೂ ಕೈಗೂಡದ ಪ್ರಗತಿ ಮತ್ತು ಅಭಿವೃದ್ಧಿಯು ಆ ಒಂದು ವರ್ಷದಲ್ಲಿ ಸಿದ್ಧಿಸುತ್ತದೆ. ಇದರಲ್ಲಿ ಅನುಮಾನ ಬೇಡ.

ಹೀಗಾಗುವುದರ ಕಾರಣವೇನು? ಶಾಲೆ ಕಾಲೇಜುಗಳಲ್ಲಿ ಹೇಳುವ ಪಾಠವನ್ನು ಕನ್ನಡದಲ್ಲಿ ಹೇಳಿದರೆ ಆಗ ಆ ಪಾಠವು ಅಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಹೇಳಿದ ಪಾಠವಾಗಿ ಉಳಿಯುವುದಿಲ್ಲ; ಹೊರಗಡೆಗೂ ಅದು ಹರಿಯುತ್ತದೆ; ಜನತೆಯನ್ನು ಮುಟ್ಟುತ್ತದೆ. ಕೋರ್ಟು ಕಚೇರಿಗಳಲ್ಲಿ ನಡೆಯುವ ವಾದ—ವಿವರಣೆ ಅಲ್ಲಿಗೇ ಬತ್ತುವುದಿಲ್ಲ. ಹೊರಕ್ಕೆ ಪ್ರವಹಿಸಿ ಜನರ ಜ್ಞಾನಕಣವನ್ನು ಹೆಚ್ಚಿಸುತ್ತದೆ. ಸಭೆ ಸಮ್ಮೇಳನದ ಪ್ರೌಢ ಪ್ರವಚನವು ಅಲ್ಲಿ ನೆರೆಯುವ ನೂರು ಮಂದಿಯನ್ನು ಮುಟ್ಟಿ ಮುಗಿಯುವುದಿಲ್ಲ—ನಾಡಿನ ಜನರೆಲ್ಲರ ಮನಸ್ಸನ್ನು ಸ್ಪರ್ಶಿಸಿ, ಸಂಸ್ಕರಿಸಿ, ಜೀವನವನ್ನೆ ಸಂಪನ್ನಗೊಳಿಸುತ್ತದೆ.

ಪರಿಸ್ಥಿತಿಯು ಹೀಗಾದಾಗ ಆಡಳಿತವರ್ಗವು ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಕ್ಕೆ ಜನರು ಕಾವಾಗಿ ಮುಂಬಂದು ನೀಡುವ ಉತ್ತಾಸೆಯು ಎಂಥದಾಗಬಹುದೆಂದು ನಾವು ಊಹಿಸಲೂ ಶಕ್ಯವಿಲ್ಲ. ಅಷ್ಟು ಪ್ರಮಾಣದಲ್ಲಿ ಈ ಉತ್ತಾಸೆ ಹೆಚ್ಚುವುದು ಖಂಡಿತ. ಶಾಸನ ಸಭೆಯಲ್ಲಿ ನಡೆಯ ಬೇಕಾದ ಕೆಲಸವನ್ನು ಜನರು ನಿಜವಾದ ಅರಿವಿನಿಂದ ತಿದ್ದಿಬಾರು, ಪೋಷಿಸಿಯಾರು. ತಾವು ಮಾಡುತ್ತಿರುವ ಕೆಲಸವನ್ನು ಜನತೆಯು ತಿಳಿಯುತ್ತಿದೆ, ಮೆಚ್ಚುತ್ತಿದೆ ಎನ್ನುವುದು ಮನ ಮುಟ್ಟಿತಾದರೆ ಶಾಲೆ ಕಾಲೇಜುಗಳೂ, ಕೋರ್ಟು ಕಚೇರಿಗಳೂ, ಸಭೆ ಸಮ್ಮೇಳನಗಳೂ ತಮ್ಮ ದುಡಿಮೆಯಲ್ಲಿ ಹೊಸ ಚೈತನ್ಯವನ್ನು ಪಡೆದಾವು!

ಆದುದರಿಂದ ಇನ್ನು ನಾವು ನಮ್ಮ ಪ್ರಾಂತದ ಎಲ್ಲ ವ್ಯವಹಾರಕ್ಕೂ ಕನ್ನಡವನ್ನು ಬಳಸುವುದರಲ್ಲಿ ಸ್ವಲ್ಪವೂ ತಡಮಾಡಬಾರದು. ಎಲ್ಲರೂ ಒಪ್ಪಿರುವ ಸಂಗತಿ ಇದು; ಇದಕ್ಕೆ ಏಕೆ ಇಷ್ಟು ಮಾತು? ಎನ್ನುವುದು ಈ ಪ್ರಾರ್ಥನೆಗೆ ಕಳ್ಳುದಾದ ಉತ್ತರವಾಗಲಾರದು. ಒಪ್ಪಿದ ಮೇಲೆ ಕಾಲ ಕಳೆಯುವುದು ಬೇಡ ಎನ್ನುವುದೇ ಇಲ್ಲಿ ಮುಖ್ಯ.

ಇಂಥದೊಂದು ಮಾರ್ಪಾಟು ಕ್ರಮಕ್ರಮವಾಗಿ ಆಗಬೇಕು ಎಂದು ಕೆಲವು ವೇಳೆ ಉತ್ತರವು ಕೇಳಿಬರುತ್ತದೆ. ಈ ಕ್ರಮ—ಕ್ರಮ ಎಂಬುದರ ಅರ್ಥವೇನು? ಅವಶ್ಯಕತೆಯಾದರೂ ಏನು? ಮೊದಲನೇ ಲೋಕ ಸಂಗ್ರಾಮವು ಮುಗಿದು ಜೆಕ್ ಜನರಿಗೆ ಹೊಸ ರಾಷ್ಟ್ರವು ದೊರೆತಾಗ ಅದುವರೆಗೆ ಒತ್ತಾಯದ ಕಾರಣದಿಂದ ಜರ್ಮನ್ ಭಾಷೆಯಲ್ಲಿ ವಿದ್ಯಾಭ್ಯಾಸ ಮತ್ತು ನಿತ್ಯ ವ್ಯವಹಾರಗಳನ್ನು ನಡೆಸುತ್ತಿದ್ದ ಈ ಜನರು ಒಂದೇ ಒಂದು ದಿನದಲ್ಲಿ ಜರ್ಮನ್ ಭಾಷೆಯನ್ನು ಬಿಟ್ಟು ತಮ್ಮದೇ ಆದ ಜೆಕ್ ಭಾಷೆಯನ್ನು ಬಳಕೆಗೆ ತಂದರು. ನಮ್ಮ ಕನ್ನಡ ಭಾಷೆಯನ್ನು ಬಳಸಲು ಇರುವ ಆತಂಕಗಳು ವರ್ಷಾಂತರದ ಸಾವಕಾಶಕ್ಕೆ ಕಾರಣವಾಗ ಬಂಧವೆಂದು ನಂಬಬೇಕೆ?

ನಮ್ಮ ಸರಕಾರಿ ಅಧಿಕಾರಿಗಳಲ್ಲಿ ಹಲವರು ಕನ್ನಡದಲ್ಲಿ ವ್ಯವಹಾರವನ್ನು ಸಾಗಿಸಲಾರದ ಸ್ಥಿತಿಯಲ್ಲಿದ್ದಾರೆಂದು ಹೇಳುವುದನ್ನು ಕೇಳಿದ್ದೇನೆ. ಜನತೆಯ ಪುರೋಭಿವೃದ್ಧಿಗೆ ತೀರ ಅವಶ್ಯಕ ಎಂಬ ಮಾರ್ಪಾಟನ್ನು ಇಂಥ ಕ್ಷುಲ್ಲಕ ಕಾರಣಕ್ಕಾಗಿ ಮುಂದರಿಸಬಾರದೆಂದು ನನಗೆ ತೋರುತ್ತದೆ. ವ್ಯವಹಾರದಲ್ಲಿ ಕನ್ನಡವನ್ನು ಬಳಸಲಾರದ ಅಧಿಕಾರಿಗಳ ಸಂಖ್ಯೆ ಬಹಳವಿರಲಾರದು. ಅಂಥ ಅಧಿಕಾರಿಗಳನ್ನು ಅವರಿಗೆ ತಿಳಿದಿರುವ ಕನ್ನಡವೇ ಬೇಕಾದ ಸ್ಥಾನಗಳಿಗೆ ನೇಮಿಸುವುದು ಸಾಧ್ಯ.

ಇನ್ನು ಕನ್ನಡ ಟೈಪ್‌ರೈಟರ್ ಯಂತ್ರದ ವಿಷಯ— ಈ ಯಂತ್ರವೇನು, ಮಾದರಿಗಳೆಲ್ಲ ಸಿದ್ಧವಾಗಿವೆ. ಸೂಕ್ತವಾದೊಂದನ್ನು ಆಯ್ದುಕೊಂಡರೆ, ಕೆಲವೇ ತಿಂಗಳುಗಳಲ್ಲಿ ಟೈಪ್‌ರೈಟರ್ ಯಂತ್ರಗಳನ್ನು ಸಿದ್ಧಪಡಿಸುವುದಕ್ಕೆ ಆತಂಕವೇನಿದೆ? ಕೆಲಸ ಹೊಸತು ಎಂಬ ಕಾರಣದಿಂದ ವೆಚ್ಚವು ಸ್ವಲ್ಪ ಹೆಚ್ಚಾಗುತ್ತದೆ. ಆದರೆ ನಮ್ಮ ಉದ್ದೇಶ ಸಾಧನೆಗೆ ಇದೊಂದು ಲೆಕ್ಕವಲ್ಲ. ಆದುದರಿಂದ ಮೊದಲು ನಾವು ಟೈಪ್‌ರೈಟರ್ ಯಂತ್ರಕ್ಕೆ ಸರಿಯಾದ ಒಂದು ಕೀಬೋರ್ಡನ್ನು ಅಂಗೀಕರಿಸಿ ಟೈಪ್‌ರೈಟರ್ ಯಂತ್ರಗಳನ್ನು ಸಿದ್ಧಮಾಡಿಸೋಣ! ಕೀ ಬೋರ್ಡಿನಂಥ ಒಂದು ಯಂತ್ರ ಭಾಗವು ಕಾಲಕ್ರಮದ ಪರಿಷ್ಕಾರಕ್ಕೆ ಒಳಗಾಗಿ, ಮುಂದೆ ಚೆನ್ನಾಗುತ್ತದೆ; ಹೊರತು ಮೊದಲನೇ ಸಲವೇ, ಇನ್ನೂ ಉತ್ಪಾದನೆಯು ಮಟ್ಟವನ್ನು ಮುಟ್ಟದೆ ಪ್ರಯೋಗಾವಸ್ಥೆಯಲ್ಲಿ ಮೊದಲಿಗೇ ನಿರ್ದುಷ್ಟವಾಗಿ ಸಿಕ್ಕುವುದಿಲ್ಲ.

ಇನ್ನು ಕೇಂದ್ರ ಸರಕಾರವಾದರೂ ಕನ್ನಡ ಜನಕ್ಕೆ ಕನ್ನಡದಲ್ಲಿಯೇ ತಿಳಿಸಿ ಹೇಳಬೇಕು. ಹಿಂದಿಯು ಏಕ ಮಾತ್ರವಾದ ರಾಷ್ಟ್ರಭಾಷೆಯಾಗಿಲ್ಲ. ಅದೂ ಒಂದು ರಾಷ್ಟ್ರಭಾಷೆ; ಅಂದರೆ, ಭಾರತದ ಪ್ರಮುಖ ಹನ್ನೆರಡು ಭಾಷೆಗಳಲ್ಲಿ ಅದೂ ಒಂದು. ಆದನ್ನ ಕೇಂದ್ರವು ಕಚೇರಿಗಳಲ್ಲಿ ಈಗ ಇಂಗ್ಲಿಷನ್ನು ಬಳಸುತ್ತಿರುವ ಸಂದರ್ಭಗಳಲ್ಲಿ ಬಳಸಲಿ. ಕೇಂದ್ರ ಮತ್ತು ಪ್ರಾಂತ ಸರಕಾರಗಳ ಮಧ್ಯೆ ನಡೆಯುವ ಪತ್ರವ್ಯವಹಾರಕ್ಕೂ ಅದನ್ನೆ ಬಳಸಲಿ. ಆದರೆ ಕೇಂದ್ರವು ಹಿಂದಿಯ ಬಳಕೆಯನ್ನು ತನ್ನ ಕಚೇರಿಗಳಲ್ಲಿ ಮತ್ತು ಪ್ರಾಂತಗಳ ಸರಕಾರದೊಡನೆ ನಡೆಸುವ ಪತ್ರವ್ಯವಹಾರಗಳಲ್ಲಿ ಎಷ್ಟು ಅಷ್ಟಕ್ಕೆ ಮಿತವಾಗಿಡಲಿ. ಜನತೆಯೊಂದಿಗೆ ನಡೆದುಕೊಳ್ಳುವ ಪ್ರಸಂಗಬಂದಾಗಲೆಲ್ಲ ಕೇಂದ್ರವಾದರೂ ಸರಿಯೇ, ನಮ್ಮ ಹನ್ನೆರಡು ಪ್ರಮುಖ ಭಾಷೆಗಳನ್ನು ಉಪಯೋಗಿಸಿ, ಆಯಾ ಜನಕ್ಕೆ ಅವರವರ ಭಾಷೆಯಲ್ಲಿಯೇ ತಿಳಿಸಿ ಹೇಳಬೇಕು ಹೊರತು, ಹಿಂದಿ, ಅಥವಾ ಇಂಗ್ಲಿಷಿನಲ್ಲಲ್ಲ.

[ಕನ್ನಡ ಸಾಹಿತ್ಯ ರಾಧಕರಲ್ಲಿ ಹಿರಿಯರಾದ ಮತ್ತು ಮುಖ್ಯ ಆಡಳಿತಗಾರರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗೆ (ಕಾವ್ಯನಾಮ: ಶ್ರೀನಿವಾಸ) ಕರ್ನಾಟಕ ವಿಶ್ವವಿದ್ಯಾನಿಲಯವು ತನ್ನ ಅಧಿಕಾರವಲ್ಲಿರುವ ಅತ್ಯುಚ್ಚ ಪ್ರಶಸ್ತಿಯಾದ "ಡಾಕ್ಟರ್ ಆಫ್ ಲಿಟರೇಚರ್" (D. Litt) ಪದವಿಯನ್ನಿತ್ತು ಇದೇ ತಿಂಗಳ ದಿನಾಂಕ ಸನ್ಮಾನಿಸಿತು ಅದಲ್ಲದೆ, ಶ್ರೀ ಮಾಸ್ತಿಯವರಿಂದಲೇ ಪದವೀದಾನ ಭಾಷಣವನ್ನೂ ಮಾಡಿಸಿತು. ಈ ಭಾಷಣದಲ್ಲಿ ಮಾಸ್ತಿಯವರು ಅನೇಕ ಪ್ರಮುಖ ಸಮಸ್ಯೆಗಳನ್ನು ವಿಶ್ಲೇಷಿಸಿ, ಸೂಕ್ತ ಸಮಾಧಾನವಿತ್ತರು. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಸಲ್ಲಬೇಕಾದ ಸ್ಥಾನಮಾನದ ಕುರಿತು ಅವರಾಡಿದ ಮಾತನ್ನು ಮೇಲೆ ಸಂಗ್ರಹಿಸಿ ಕೊಟ್ಟಿದ್ದೇವೆ. — ಸಂ. ನ.)


## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

**ನವಯುಗ ಪ್ರೆಸ್, ಉಡುಪಿ.**

**ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ**

ಈಗಲ್ಲಿಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ಪರಿಸರಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣವಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

**1956 ನಮ್ಮ ರಜತಮಹೋತ್ಸವದ ವರ್ಷ**

ಸ್ಥಾಪನೆ: 1931

**ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್**

ಪ್ರಧಾನ ಕಚೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು

ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ, ಬದಿಯಡ್ಕ—ಪೆರ್ಡಾಲ, ವಿಟ್ಲ, ಉಪ್ಪಿನಂಗಡಿ.

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಲೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು



ಪಂ|| A. R. ಅಯ್ಯಂಗಾರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿವಾರಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ತಮ ಶಕ್ತಿವರ್ಧಕ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ಪುಂಸಕತೆಯನ್ನು ನಿವಾರಿಸುತ್ತದೆ.

ದಂಪತಿಗಳಾಗಿ 16—18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.

ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

**ಎ. ರಾಮಸ್ವಾಮಿ ಅಯ್ಯಂಗಾರ್ ಸನ್ಸ್ & ಕಂ., (ನ. ಯು.)**

628 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9, ಮೈಸೂರು S. I.

## ಎಲ್ಲರಿಗೂ ಉದ್ಯೋಗ

### ಔದ್ಯೋಗಿಕ ವಿಜ್ಞಾನವು ಗ್ರಾಮಾಂತರವಾಸಿಗಳಿಗೂ ಕೈತುಂಬ ಕೆಲಸವನ್ನು ಒದಗಿಸಿಕೊಟ್ಟರೆ, ನಾವು ನೆಮ್ಮದಿಯಿಂದ ಬಾಳಿಯೇವು!

ಭಾರತದ ನಾಗರಿಕತೆಯು ಐದು ಸಹಸ್ರ ವರ್ಷಗಳಗೂ ಹಿಂದಿನದು. ಈ ಅವಧಿಯಲ್ಲಿ ಹಾಗೂ ಕ್ರಿ. ಶ. ಹದಿನೆಂಟನೆಯ ಶತಮಾನದ ವರೆವಿಗೂ ಭಾರತವು ಜಗತ್ತಿನಲ್ಲಿ ಉನ್ನತಸ್ಥಾನ ಗಳಿಸಿದ್ದಿತು. ಶತಮಾನಗಳಿಂದಲೂ ಗಾಳಿ ಮಳೆಗಳ ಹೊಡೆತಕ್ಕೆ ಸಿಕ್ಕಿ ಹಾಗೆಯೇ ಉಳಿದುಕೊಂಡಿರುವ ದೆಹಲಿಯಲ್ಲಿರುವ ೨೩ ಅಡಿಗಳ ಎತ್ತರದ ಹಾಗೂ ಏಳು ಟನ್ನುಗಳ ತೂಕದ ಅಶೋಕನ ಕಬ್ಬಿಣದ ಸ್ತಂಭವು ಇಂದಿಗೂ ಆಧುನಿಕ ಉಕ್ಕಿನ ತಯಾರಕರಿಗೆ ವಿಸ್ಮಯವನ್ನುಂಟುಮಾಡುತ್ತಿದೆ. ಈ ಪ್ರಖ್ಯಾತ ಕಬ್ಬಿಣದ ಸ್ತಂಭವನ್ನು ಪುರಾತನ ಕಾಲದಲ್ಲಿಯೇ ನಿರ್ಮಿಸಲಾಯಿತು. ಕ್ರಿ. ಪೂ. ಮೂರು ಸಹಸ್ರ ವರ್ಷಗಳ ಹಿಂದೆ ಈಜಿಪ್ಟಿನ ಮಮ್ಮಿಗಳಿಗೆ ಭಾರತೀಯರು ಹತ್ತಿಯಿಂದ ತಯಾರಿಸಿದ ಮುಸ್ಲಿನ್ ವಸ್ತ್ರಗಳನ್ನು ಸುತ್ತುತ್ತಿದ್ದುದು ಬೆಳಕಿಗೆ ಬಂದಿದೆ.

ಹಿಂದಿನ ಕಲ್ಪನಾತ್ಮಕ ಚೇತನೆ ಹಾಗೂ ಕೌಶಲ್ಯವನ್ನು ಇಂದಿಗೂ ಭಾರತೀಯರಲ್ಲಿ ಕಾಣಬಹುದಾಗಿದೆ. ಈ ಪರಂಪರೆಯು ಕಾರಣವಾಗಿ ಭಾರತವು ಆಧುನಿಕ ವಿಧಾನಗಳಲ್ಲಿ ತೀವ್ರಗತಿಯಲ್ಲಿ ಔದ್ಯೋಗಿಕ ವಿಜ್ಞಾನದ ಪ್ರಗತಿಗಳಿಸಿರುವುದು ಸ್ವಾಭಾವಿಕವಾಗಿದೆ.

ಇಂದಿನ ಯುಗದಲ್ಲಿ ಮಾನವನ ಸ್ಥಾನದಲ್ಲಿ ಯಂತ್ರಗಳು ಬಂದಿವೆ. ಈ ಸ್ಥಿತಿಯಲ್ಲಿ ವಸ್ತುಗಳ ನಿರ್ಮಾಣ, ಸಾಗಾಣಿಕೆ ಹಾಗೂ ವಿತರಣ ಕ್ಷೇತ್ರದಲ್ಲಿ ಕ್ರಾಂತಿಯುಂಟಾಗಿದೆ. ಒಂದು ಯಂತ್ರವು ನೂರಾರು ಮಾನವರ ಕಾರ್ಯವನ್ನು ಮಾಡಬಲ್ಲದು. ಕುಶಲರಾದ ಕೆಲಸಗಾರರ ನೇತೃತ್ವದಲ್ಲಿ ಈ ಗುಲಾಮ ಯಂತ್ರಗಳು ಕಚ್ಚಾ ಪದಾರ್ಥಗಳನ್ನು ತಯಾರಿಸಬಲ್ಲವು, ಭೂಮಿಯನ್ನು ಉಳಬಲ್ಲವು, ಬೀಜಗಳನ್ನು ಬಿತ್ತಬಲ್ಲವು, ಫಸಲನ್ನು ಕಟಾವು ಮಾಡಬಲ್ಲವು, ಖನಿಜಗಳಿಗಾಗಿ ಗಣಿಗಳನ್ನು ತೋಡಬಲ್ಲವು ಮತ್ತು ಮಾನವರನ್ನೂ ಸರಕುಗಳನ್ನೂ ಭೂ, ಜಲ, ವಾಯು ಮಾರ್ಗಗಳಲ್ಲಿ ಸಾಗಿಸಬಲ್ಲವು. ಕ್ಷಣ ಮಾತ್ರದಲ್ಲಿ ವಿಶ್ವದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸಂದೇಶಗಳನ್ನೂ ಚಿತ್ರಗಳನ್ನೂ ಸಾಗಿಸಬಲ್ಲವು.

ಅಧಿಕ ಪ್ರಮಾಣದಲ್ಲಿ ಉತ್ಪಾದಿಸುವ ತಂತ್ರ ವಿಧಾನಗಳು ಪ್ರತಿ-ಮಾನವ-ದಿನದ ಉತ್ಪಾದನಾ ಸಾಮರ್ಥ್ಯವನ್ನು ಆಶ್ಚರ್ಯಚಕಿತಗೊಳಿಸುವ ಮಟ್ಟದಲ್ಲಿ ಹೆಚ್ಚಿಸುತ್ತಿವೆ. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಆಧುನಿಕ ಪ್ರಾದ್ಯೋಗಿಕ ವಿಜ್ಞಾನವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿದೆ. ಅಲ್ಲಿ ವ್ಯಕ್ತಿಯೊಬ್ಬನು ವಾರಕ್ಕೆ ೪೦ ಗಂಟೆಗಳ ಕಾಲ ಕೆಲಸಮಾಡಿದಾಗೂ, ಅವನೂ ಮತ್ತು ಅವನ ಕುಟುಂಬವು ಉತ್ತಮರೀತಿಯಲ್ಲಿ ಜೀವನ ನಡೆಸಲು ಸಾಧ್ಯವಾಗುತ್ತದೆ. ಅವನ ಮನೆಯಲ್ಲಿ ಅನಿಲ, ವಿದ್ಯುಚ್ಛಕ್ತಿ, ಟೆಲಿಫೋನ್ ರೇಡಿಯೋ ಮತ್ತು ಟೆಲಿವಿಜನ್‌ಗಳಂತಹ ಆಧುನಿಕ ಸೌಲಭ್ಯಗಳಿರುವುವು. ಅವನು ತನ್ನ ಸ್ವಂತ ಮೋಟಾರುಕಾರಿನಲ್ಲಿ ಕುಟುಂಬದೊಡನೆ ಸಂಚರಿಸುತ್ತಾನೆ. ತನ್ನ ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಒದಗಿಸಲು ಅವನಿಗೇನೂ ತೊಂದರೆಯುಂಟಾಗುವುದಿಲ್ಲ. ರೋಗರುಜಿನಾದಿಗಳು ಬಾರದಂತೆ ಮತ್ತು ವೃದ್ಧಾಪ್ಯವು ಸುಖಮಯವಾಗುವಂತೆ ಅವನು ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡಬಲ್ಲವನಾಗಿದ್ದಾನೆ.

ಈಗ ಅಣುಶಕ್ತಿಯನ್ನು ಮಾನವನ ಉಪಯೋಗಕ್ಕಾಗಿ ಪಡೆಯುವ ಪ್ರಯತ್ನ ನಡೆಯುತ್ತಿದೆ ಮನುಷ್ಯನ ನೆರವಿಲ್ಲದೆ ಯಂತ್ರಗಳ ಸಹಾಯದಿಂದ ಲೆಕ್ಕ ಪತ್ರಗಳನ್ನು ಇಡಬಹುದಾಗಿದೆ. ಕೆಲಸ ಮಾಡುವ ಅವಧಿಯನ್ನು ವಾರಕ್ಕೆ ೪೦ ಗಂಟೆಗಳಿಂದ ೩೫ ಗಂಟೆಗಳಿಗೆ ಇಳಿಸುವ ವಿಷಯವನ್ನು ಅಮೇರಿಕಾದ ವಿಶ್ವವಿದ್ಯಾನಿಲಯಗಳು ಗಂಭೀರತಾಪೂರ್ವಕವಾಗಿ ಪರಿಶೀಲಿಸುತ್ತಿವೆ. ಹೀಗೆ ಕೆಲಸದ ಅವಧಿಯನ್ನು ಕಡಿಮೆ ಮಾಡುವುದರಿಂದ ದೊರೆಯುವ ವಿರಾಮಕಾಲವನ್ನು ಉಪಯುಕ್ತ ರೀತಿಯಲ್ಲಿ ಉಪಯೋಗಿಸುವ ಕ್ರಮದಲ್ಲಿ ತರಬೇತಿಯೀಯುವ ವಿಷಯವನ್ನು ಈ ವಿಶ್ವವಿದ್ಯಾನಿಲಯಗಳು ಪರ್ಯಾಲೋಚಿಸುತ್ತಿವೆ.

ಪಶ್ಚಿಮ ದೇಶಗಳಲ್ಲಿನ ಈ ಆಶ್ಚರ್ಯಜನಕ ಪ್ರಗತಿಯನ್ನು ನಮ್ಮ ದೇಶದ ಮುನ್ನಡೆಗೆ ಹೋಲಿಸಿದರೆ ನಾವು ಇನ್ನೂ ಔದ್ಯೋಗೀಕರಣದ ಹೊಸ್ತಿಲಿನಲ್ಲಿದ್ದೇವೆ ಎನಿಸುತ್ತದೆ, ನಮ್ಮ ದೇಶದಲ್ಲಿ ಕಲ್ಲಿದ್ದಲಿನ ಉತ್ಪಾದನೆಯು ವರ್ಷಕ್ಕೆ ೩೬೦ ಲಕ್ಷ ಟನ್ನುಗಳಷ್ಟು. ಉಕ್ಕಿನ ಉತ್ಪಾದನೆಯು ವರ್ಷಕ್ಕೆ ೭೨ ಲಕ್ಷ ಟನ್ನುಗಳಷ್ಟು ಇರುವುದು. ನಮ್ಮಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನಾ ಶಕ್ತಿಯು ೨೮ ಲಕ್ಷ ಕಿಲೋವಾಟುಗಳಷ್ಟಿದೆ. ನಮ್ಮ ವಸ್ತ್ರದ ಗಿರಣಿಗಳು ಪ್ರತಿ ವ್ಯಕ್ತಿಯ ಬಳಕೆಗೆ ೧೬ ಗಜಗಳಷ್ಟು ವಸ್ತ್ರವನ್ನು ನೀಡಬಲ್ಲವು. ಸುವ್ಯವಸ್ಥಿತ ಉದ್ಯಮಗಳಲ್ಲಿ ಕೇವಲ ೩೫ ಲಕ್ಷ ಮಂದಿಗೆ ಉದ್ಯೋಗ ಪ್ರಾಪ್ತವಾಗಿದೆ. ಸುವ್ಯವಸ್ಥಿತ ಸಾರಿಗೆ ವ್ಯವಸ್ಥೆಯಲ್ಲಿ ಕೇವಲ ೧೫ ಲಕ್ಷ ಮಂದಿಗೆ ಉದ್ಯೋಗ ಲಭಿಸಿದೆ.

ಭಾರತದಲ್ಲಿ ಒಟ್ಟು ೩೬ ಕೋಟಿ ಜನರಿರುವರು. ಇವರಲ್ಲಿ ನೂರಕ್ಕೆ ೭೦ರಷ್ಟು ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿ ಪುರಾತನ ಕಾಲದ ಬೇಸಾಯ ಪದ್ಧತಿಯನ್ನವಲಂಬಿಸಿ ಜೀವನ ನಡೆಸುತ್ತಿರುವರು. ಜನಸಂಖ್ಯೆಯು ದಿನೇದಿನೇ ಹೆಚ್ಚುತ್ತಿರುವುದರಿಂದ ಜನಜೀವನ ಮಟ್ಟವು. ಮೌರ್ಯ ಚಕ್ರವರ್ತಿಯ ಆಸ್ಥಾನದಲ್ಲಿದ್ದ ಯವನ ರಾಯಭಾರಿ, ಮೆಗಾಸ್ತನೀಸನು ಸುಮಾರು ೨೩೦೦ ವರ್ಷಗಳ ಹಿಂದೆ ವರ್ಣಿಸಿದ್ದಕ್ಕಿಂತಲೂ ಕೀಳಾಗಿದೆ. ಅಂತಹ ಗ್ರಾಮ್ಯ ಜೀವನವು ಏನೇನೂ ಪ್ರಯೋಜನದಿಂದ ಕೂಡಿಲ್ಲವೆಂದು ಹೇಳುವುದು ಕಷ್ಟ. ಏಕೆಂದರೆ ಭಾರತದ ಗ್ರಾಮಾಂತರ ಜಗತ್ತಿನಲ್ಲಿ ಕುಟುಂಬವೇ ಕೇಂದ್ರವಾಗಿರುವುದು ಅನೇಕ ಸಂದರ್ಭಗಳಲ್ಲಿ ಸಣ್ಣ ಗ್ರಾಮವು ದೊಡ್ಡ ಕುಟುಂಬದಂತೆ ವರ್ತಿಸುವುದು. ಗ್ರಾಮಸ್ಥರ ಜೀವನದಲ್ಲಿ ಸಹನಶೀಲತೆ, ಸಂಯಮ, ದಯೆ, ನಮ್ರತೆ ಹಾಗೂ ವಿಶಾಲ ಹೃದಯ ಸ್ವಭಾವ ಇವು ಹಾಸುಹೊಕ್ಕಾಗಿವೆ. ಭಾರತೀಯ ಗ್ರಾಮವಾಸಿಗಳಿಗೆ ದೇವರಲ್ಲಿ ಅಚಲ ವಿಶ್ವಾಸವಿದೆ. ಅವರಿಗೆ ಭೌತಿಕ ವಾದದ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ.

ಧಾರ್ಮಿಕ ಹಾಗೂ ಸಾಮಾಜಿಕ ಸಮಾರಂಭಗಳಲ್ಲಿ, ಪೂಜೆಗಳಲ್ಲಿ, ಭಜನೆಗಳಲ್ಲಿ, ಜಾನಪದ ಗೀತೆಗಳಲ್ಲಿ ಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವರು. ಅವರಿಗೆ ಇವು ಮನೋರಂಜನೆಯ ಮುಖ್ಯ ಸಾಧನವಾಗಿರುವುವು. ತಾಯಿತಂದೆ, ಸಹೋದರ ಸಹೋದರಿಯರು— ಇಷ್ಟೇ ಏಕೆ ಇಡೀ ಗ್ರಾಮಸ್ಥರೇ ತಮ್ಮ ಒಲವಿನ ದರಾಗಿರುವಾಗ ಗ್ರಾಮಾಂತರ ವಾತಾವರಣವನ್ನು ತ್ಯಜಿಸಿ ನಗರ ಕ್ಷೇತ್ರಗಳಿಗೆ ತೆರಳಲು ಸಹಜವಾಗಿಯೇ ಜನರು ಒಪ್ಪುವುದಿಲ್ಲ

ಆದಾಗ್ಯೂ ಗ್ರಾಮಗಳಲ್ಲಿನ ಬಡತನ ಹಾಗೂ ಕ್ಷುದ್ಬಾಧೆಗಳನ್ನು ಅರಿತುಕೊಂಡು ಕೆಲವು ಸಾಹಸಿಗರು ಗ್ರಾಮಗಳನ್ನು ತ್ಯಜಿಸಿ ನಗರ ಪ್ರದೇಶಗಳಿಗೆ ಬಂದುದುಂಟು. ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕನು ವರ್ಷ ಕಾಲವೆಲ್ಲಾ ನಿತ್ಯವೂ ಮೂರು ರೂಪಾಯಿಗಳ ಸರಾಸರಿ ವೇತನ ಸಂಪಾದಿಸುವನು ವರ್ಷಕ್ಕೆ ಕೇವಲ ೨೦೦ ದಿನಗಳ ಕೂಲಿ ಕೆಲಸ ಮಾಡುವ ಬೇಸಾಯಗಾರನು ನಿತ್ಯವೂ ಸರಾಸರಿ ಒಂದೂವರೆ ರೂಪಾಯಿಗಳ ವೇತನವನ್ನು ಸಂಪಾದಿಸುವನು ಇದನ್ನು ಕಂಡುಕೊಂಡ ಬಳಿಕ ಕೈತುಂಬ ವೇತನ ದೊರೆಯುವ ಪೂರ್ಣಕಾಲದ ಉದ್ಯೋಗದ ಅಪೇಕ್ಷೆಯಿಂದ ಗ್ರಾಮಸ್ಥರು ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ತೆರಳ ತೊಡಗಿದ್ದಾರೆ. ೧೯೩೧-೪೧ರ ಅವಧಿಯಲ್ಲಿ ಭಾರತದ ನಗರ ಪ್ರದೇಶಗಳಲ್ಲಿನ ಜನ ಸಂಖ್ಯೆಯು ನೂರಕ್ಕೆ ೩೧ರಷ್ಟು ಹೆಚ್ಚಿದೆ. ೧೯೪೧—೫೧ರ ಅವಧಿಯಲ್ಲಿ ನೂರಕ್ಕೆ ೪೦ರಷ್ಟು ಹೆಚ್ಚಿದೆ. ಪ್ರಥಮ ಯೋಜನೆಯು ನಿಸ್ಸಂಶಯವಾಗಿಯೂ ಯಶಸ್ವಿಗಳಿಸಿದ್ದಾಗ್ಯೂ ೧೯೫೬ರ ಮಾರ್ಚಿ ತಿಂಗಳ ವೇಳೆಗೆ ನಗರಗಳಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗವನ್ನಪೇಕ್ಷಿಸಿ ಹೆಸರುಗಳನ್ನು ದಾಖಲು ಮಾಡಿಸಿಕೊಂಡಿರುವವರ ಸಂಖ್ಯೆಯು ಏಳು ಲಕ್ಷಕ್ಕೆ ಏರಿತು. ನಗರ ಪ್ರದೇಶಗಳಲ್ಲಿ ದೇಶದ ಒಟ್ಟು ಜನ ಸಂಖ್ಯೆಯಲ್ಲಿ ನೂರಕ್ಕೆ ೧೭ರಷ್ಟು ಜನರು ವಾಸಿಸುವರು. ೧೯೫೧—೬೧ರ ಅವಧಿಯಲ್ಲಿ ಗ್ರಾಮಗಳಿಂದ ನಗರಗಳಿಗೆ ಹೋಗುವವರ ಸಂಖ್ಯೆ ಕಡಿಮೆಯಾಗುವ ಸಂಭವವಿದ್ದೆ-ಆದರೆ ಸಮಸ್ಯೆ ಪೂರ್ಣ ಪರಿಹಾರವಾಗಲಾರದು.

ಭಾರತದ ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಮುಖ್ಯ ಗುರಿಯು ನಿರುದ್ಯೋಗ ಹಾಗೂ ಅಪೂರ್ಣ ಉದ್ಯೋಗದಿಂದ ಸಂಭವಿಸುವ ತೊಂದರೆಯನ್ನು ನಿವಾರಿಸುವುದಾಗಿದೆ. ಸರ್ಕಾರಿ ಕಾರ್ಯಕ್ಷೇತ್ರದಲ್ಲಿ ೪೮೦೦ ಕೋಟಿ ರೂಪಾಯಿಗಳನ್ನು ತೊಡಗಿಸಲಾಗಿದೆ. ಈ ಹಣದಲ್ಲಿ ೩೮೦೦ ರೂಪಾಯಿಗಳು ಬಂಡವಾಳ. ಜೊತೆಗೆ ಖಾಸಗಿ ಕಾರ್ಯ ಕ್ಷೇತ್ರದಲ್ಲಿ ೨೪೦೦ ಕೋಟಿ ರೂಪಾಯಿಗಳ ಹಣವನ್ನು ತೊಡಗಿಸುವ ನಿರೀಕ್ಷೆಯಿದೆ. ಅಂತಹ ಬಂಡವಾಳದಿಂದ ವ್ಯವಸಾಯೇತರ ಕ್ಷೇತ್ರಗಳಲ್ಲಿ ೮೦ ಲಕ್ಷ ಮಂದಿಗೂ ಹಾಗೂ ಗ್ರಾಮಾಂತರ ಉದ್ಯೋಗ ಕ್ಷೇತ್ರಗಳಲ್ಲಿ ೧೬ ಲಕ್ಷ ಮಂದಿಗೂ ಉದ್ಯೋಗ ಪ್ರಾಪ್ತಿಯಾಗುವುದೆಂದು ತಜ್ಞರ ಅಭಿಪ್ರಾಯ.

ಸಮತೂಕದ ಆರ್ಥಿಕ ವ್ಯವಸ್ಥೆಯ ಆಧಾರದ ಮೇಲೆ ಭಾರತದ ಕೃಗಾರಿಕೆ ಮತ್ತು ವ್ಯವಸಾಯಗಳೆರಡನ್ನೂ ಸಮ್ಮಿಳನಗೊಳಿಸಿ ತತ್ಪರಿಣಾಮವಾಗಿ ರಾಷ್ಟ್ರದ ವರಮಾನವನ್ನು ಹೆಚ್ಚಿಸುವ ವಿಷಯಕ್ಕೆ ಪೂರ್ಣ ಗಮನವಿತ್ತಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ಸುಖ ಸಮೃದ್ಧಿ ಲಭಿಸುವುದು. ದ್ವಿತೀಯ ಯೋಜನೆಯಲ್ಲಿ ಸಾಮುದಾಯಿಕ ಯೋಜನೆ ಹಾಗೂ ರಾಷ್ಟ್ರೀಯ ವಿಸ್ತರಣ ಸೇವೆಗಳ ಮೂಲಕ ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವ ವಿಚಾರದ ಬಗ್ಗೆ ಹೆಚ್ಚು ಮಹತ್ವವೀಯಲಾಗಿದೆ. ಇದೇ ರೀತಿ ಗ್ರಾಮಾಂತರ ಪ್ರದೇಶಗಳಿಗೆ ಗೃಹ ಹಾಗೂ ಅಲ್ಪ ಪ್ರಮಾಣದ ಉದ್ಯಮಗಳನ್ನು ಒಯ್ಯುವ ಪ್ರಯತ್ನಗಳ ಬಗ್ಗೆ ಹೆಚ್ಚು ಮಹತ್ವವೀಯಲಾಗಿದೆ.

ಭಾರತದಲ್ಲಿ ತ್ವರಿತವಾಗಿ ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರೀಯ ವಿಸ್ತರಣ ಸೇವೆ ಹಾಗೂ ಸಮಾಜ ಸೇವಾ ಸಂಸ್ಥೆ


**ಹೊಸ ಪುಸ್ತಕ**

**ನಮ್ಮ ದೇಶ, ಭಾರತ**

(ಭಾರತದ ಹೊಸ ಭೂವಿವರಣೆ)

**ಲೇಖಕ: ಯಂ. ವಾಸುದೇವ ರಾವ್, ಸುರತ್ಕಲ್, ದ. ಕ.**

ಕನ್ನಡದಲ್ಲಿ ಈ ಕುರಿತಾದ ಅತ್ಯಾಧುನಿಕ ಪುಸ್ತಕ ಇದೊಂದೆ.
ಡೆ. ೮ರ ಪುಟಗಳು 322. ಅನೇಕ ಭೂಪಟಗಳು ಮತ್ತು ಚಿತ್ರಗಳು
ಬೆಲೆ ರೂ. 3—12—0. (ಅಂಚೆವೆಚ್ಚ ಬೇರೆ.)

**ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಪ್ರೈವೇಟ್ ಲಿಮಿಟೆಡ್**
**ಮಂಗಳೂರು-1.**



**ಮೂಲ್ಕಿ ಬೇಂಕ್ ಲಿಮಿಟೆಡ್,**
**ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK, LTD. MULKI

ಗ್ರಾಮವಾಸಿಗಳಲ್ಲಿ ಉನ್ನತ ಹಾಗೂ ವೈಜ್ಞಾನಿಕ ರೀತಿಯಲ್ಲಿ ಕೆಲಸ ಮಾಡುವ ವಿಧಾನವನ್ನು ತೋರಿಸಿ ಕೊಟ್ಟಿದೆಯಲ್ಲದೆ ಅವರ ದೃಷ್ಟಿಕೋಣಗಳನ್ನು ಪರಿವರ್ತನಗೊಳಿಸಿದೆ.

ನಗರಗಳಲ್ಲಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಸಾಮಾನ್ಯವಾಗಿ ಕೊಳಕು ಪ್ರದೇಶಗಳಲ್ಲಿ, ಜನನಿಬಿಡ ಪ್ರದೇಶಗಳಲ್ಲಿ ವಾಸಿಸುವರು. ತತ್ಪರಿಣಾಮವಾಗಿ ಅಂತಹ ವಾತಾವರಣದಲ್ಲಿ ವಾಸಿಸುವ ಕುಟುಂಬಗಳ ಸುಖಸಂತೋಷ ನೆಮ್ಮದಿ ಯಾವ ರೀತಿಯಲ್ಲಿರುತ್ತದೆಂಬುದನ್ನು ಊಹಿಸುವುದೇ ಕಷ್ಟವಾಗುವುದು. ಕಾರ್ಮಿಕರು ತಮ್ಮ ತಮ್ಮ ಪತ್ನಿಯರನ್ನು ಗ್ರಾಮಗಳಲ್ಲಿಯೇ ಬಿಟ್ಟು ಬಂದು ಆಗಿಂದಾಗ್ಗೆ ತಮ್ಮ ಕುಟುಂಬಗಳನ್ನು ಸಂಧಿಸುವರು. ಗ್ರಾಮದ ಸಾಮುದಾಯಿಕ ಜೀವನದ ಸ್ಥಾನದಲ್ಲಿ ನಗರದ ಸ್ವಾರ್ಥ ಮನೋಭಾವವು ಕಂಡುಬರುವುದು. ಯಾಂತ್ರಿಕ ರೀತಿಯ ಮನೋರಂಜನೆಯು ಕಾರ್ಮಿಕರಿಗೆ ನಿಜವಾಗಿಯೂ ಮನೋರಂಜನೆಯನ್ನೀಡುವುದೇ ಎಂಬುದು ಅನುಮಾನಾಸ್ಪದವಾಗಿದೆ.

ಭವಿಷ್ಯದ ಕೈಗಾರಿಕಾಭಿವೃದ್ಧಿಯು, ಉತ್ಪಾದನೆಯಲ್ಲಿನ ತೀವ್ರ ಏರಿಕೆಗೆ ಮಾತ್ರವೇ ಸಂಬಂಧಿಸುವುದಲ್ಲದೆ ಕಾರ್ಮಿಕರ ಆರೋಗ್ಯ ಹಾಗೂ ನೆಮ್ಮದಿ ಸುಖ ಸಂತೋಷಕ್ಕೂ ಸಂಬಂಧಿಸಬೇಕು ಎಂಬುದಾಗಿ ಭಾರತ ಸರ್ಕಾರದವರು ನಿಶ್ಚಯಿಸಿರುತ್ತಾರೆ. ಕೇವಲ ಕೆಲವರೇ ಪ್ರಯೋಜನ ಪಡೆಯದೆ ಸರ್ವರೂ ಅಭ್ಯುದಯ ಪಡೆಯುವುದು ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಗುರಿಯಾಗಿರುವುದು. ಮಹತ್ವಪೂರ್ಣ ಕಾರ್ಯಕ್ಷೇತ್ರಗಳನ್ನು ಸರ್ಕಾರಿ ಕಾರ್ಯಕ್ಷೇತ್ರವು ಹೆಚ್ಚುಹೆಚ್ಚಾಗಿ ಹತೋಟಿಗೆ ತೆಗೆದುಕೊಳ್ಳುವುದರ ಮೂಲಕ ಇದನ್ನು ಸಾಧಿಸಬಹುದಾಗಿದೆ. ಖಾಸಗಿ ಉದ್ಯಮವು ಬಳಕೆ ವಸ್ತುಗಳ ಉತ್ಪಾದನೆ ಹಾಗೂ ವಿತರಣೆಯ ಉಳಿದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶವೀಯಬೇಕು. ಖಾಸಗಿ ಹಾಗೂ ಸರ್ಕಾರಿ ಕಾರ್ಯಕ್ಷೇತ್ರಗಳಲ್ಲಿರುವ ಕಾರ್ಮಿಕರು ಕೈಗಾರಿಕಾ ವಿವಾದ ಕಾನೂನಿನ ಪ್ರಕಾರ ರಕ್ಷಣೆ ಪಡೆದಿರುವರು ಎಂಬುದೊಂದು ಸಂತೋಷದ ವಿಚಾರ.

ಇತ್ತೀಚೆಗೆ ಮಾಡಿದ ಭಾಷಣವೊಂದರಲ್ಲಿ ನಮ್ಮ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂರವರು "ನಾವು ರಾಜಕೀಯ ಸ್ವಾತಂತ್ರ್ಯವನ್ನೇನೋ ಪಡೆದಿದ್ದೇವೆ ಆದರೆ ನಾವು ಇನ್ನೂ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಬೇಕು. ಔದ್ಯೋಗಿಕರಣದ ಮೂಲಕ ನಮ್ಮ ಸಾಧನ ಸಂಪತ್ತುಗಳನ್ನು ತ್ವರಿತವಾಗಿ ಅಭಿವೃದ್ಧಿಪಡಿಸಿಕೊಂಡ ನಂತರವೇ ನಾವು ಅಂತಹ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯವಾಗುವುದು. ಯುಗಯುಗಗಳಿಂದ ಜಡತ್ವದಲ್ಲಿದ್ದ ನಾವು ಈಗ ಕೈಗಾರಿಕಾ ಕ್ರಾಂತಿಯ ಹೊಸ್ತಿಲಿನಲ್ಲಿದ್ದೇವೆ. ಈ ನವಚೇತನದ ಪೂರ್ಣ ಪ್ರಯೋಜನವನ್ನು ನಾವು ಪಡೆಯಬೇಕು" ಎಂದು ಹೇಳಿರುವರು. ಶ್ರೀ ನೆಹರೂರವರ ಈ ಸಂದೇಶವು ಭಾರತೀಯರಿಗೆ ಹೊಸದೇನಲ್ಲ. ಕೀಳು ಜಾತಿಯ ಮಹಿಳೆಯೊಬ್ಬಳ

## ವೈದ್ಯಕೀಯಕ್ಕೆ ಪ್ರೋತ್ಸಾಹ

### ಆಯುರ್ವೇದವು ಭಾರತೀಯರಿಗೆ ಅನುಕೂಲವಾದ ರೋಗ ಪರಿಹಾರ ವಿಧಾನ——ಕೆಲವು ಸುಧಾರಣೆಗಳು ನಡೆದರೆ ಅದು ದೋಷ ದೂರವಾದೀತು!!!

ಆಯುರ್ವೇದ ವಿಜ್ಞಾನವು ದೈವದತ್ತವಾಗಿ ನಮ್ಮ ನಾಡಿಗೆ ದೊರಕಿದ ಒಂದು ಅಮೂಲ್ಯ ವರ ಎಂಬುದು ನಿರ್ವಿವಾದವು. ತಲಾಂತರಗಳಿಂದ ಆಯುರ್ವೇದ ಪದ್ಧತಿಯು ನಮ್ಮ ನಾಡಿನ ಮಂದಿಯ ಬಗೆಬಗೆಯ ಪೀಡೆಗಳ ಉಪಶಮನಕ್ಕೆ ಪ್ರಯೋಜನಕಾರಿಯಾಗಿದ್ದು ಅತ್ಯಂತ ತೃಪ್ತಿಕರವಾಗಿ ಸೇವೆ ಸಲ್ಲಿಸುತ್ತಿದೆ ಎನ್ನುವುದನ್ನು ನಾವೂ ಅನುದಿನವೂ ನೋಡುತಿದ್ದೇವೆ. ನಿರಪಾಯಕಾರೀ (ಅಮೂಲ್ಯ ಗಿಡಮೂಲಿಕೆಗಳಿಂದ ಶಾಸ್ತ್ರೀಯ ರೀತಿಯ ಪಾಕದಿಂದ ತಯಾರಿಸಲ್ಪಟ್ಟ ಔಷಧಿಗಳು, ತಜ್ಞ ವೈದ್ಯನಿಂದ ರೋಗವು ಪರೀಕ್ಷಿಸಲ್ಪಟ್ಟು ಔಷಧಿ ಪ್ರಯೋಗಿಸಲ್ಪಟ್ಟರೆ ಉತ್ತಮ ಫಲಿತಾಂಶವನ್ನು ನೀಡುತ್ತಿವೆ ಎಂಬುದು ಗಮನಾರ್ಹ ವಿಚಾರ

ಪುತ್ರನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಮಹರ್ಷಿಯೊಬ್ಬನು (ಆತನೇ ಜಾಬಾಲಿ) ಶತಮಾನಗಳ ಹಿಂದೆ "ಐತರೇಯ ಬ್ರಾಹ್ಮಣ"ವೆಂಬ ಗ್ರಂಥವನ್ನು ರಚಿಸಿರುವನು. ಜನರು ಜಡತ್ವಭಾವವನ್ನು ತೊರೆದುಪ್ರಗತಿಪಥದಲ್ಲಿ ಮುಂದುವರಿಯಬೇಕೆಂದು ಆ ಗ್ರಂಥದಲ್ಲಿ ಸೂಚಿಸಲಾಗಿದೆ. ಆ ಸಂದೇಶವು ಇಂದಿಗಾದರೂ ನಮಗೆ ತಾರಕ ಮಂತ್ರ ಸ್ವರೂಪಿಯಾಗಿರುವುದು ಕೇವಲ ಸತ್ಯ.

—ಡಾ. ಜೆ. ಸಿ. ಘೋಷರ ಲೇಖನ.

ವು ಅಪಾಯಕಾರೀ ವಿಷಯುಕ್ತ ಔಷಧ ದ್ರವ್ಯಗಳು ಆಯುರ್ವೇದ ರೀತಿಯಲ್ಲಿ ವಿರಳವಾದುದರಿಂದ (ರಸೌಷಧಿಗಳ ವಿನಹ) ಔಷಧಿಯ ಸೇವನೆಯಿಂದ ದುಷ್ಪರಿಣಾಮಗಳು ತೀರಾ ವಿರಳ. ಸರ್ವಸಾಮಾನ್ಯವಾಗಿ, ಹೋಮ್ಯೋಪತಿ ಔಷಧಿಗಳು ಹಾಲಿನ ಸಕ್ಕರೆಯಲ್ಲಿ ತಯಾರಿಸಲ್ಪಡುವುದರಿಂದ ಸೇವನಾ ಪ್ರಮಾಣದಲ್ಲಿ ವ್ಯತ್ಯಾಸವಾದುದರಿಂದ ಅಥವಾ ರೋಗ ನಿಧಾನ ಕ್ರಮವು ತಪ್ಪಾದರೂ ಔಷಧಿ ಸೇವನೆಯಿಂದ (ಸೂಚಿಸಲ್ಪಟ್ಟ ಔಷಧಿಯಿಂದ) ಯಾವತರದ ದುಷ್ಪರಿಣಾಮವಾಗಲಾರದು. ಆಯುರ್ವೇದದ ಆಸವಾರಿಷ್ಟಗಳೂ ಕೆಲವು ಮಟ್ಟಿಗೆ ಈ ರೀತಿಯಲ್ಲಿ ದುಷ್ಪರಿಣಾಮಕಾರಿಯಾಗಲಾರವು ಆದರೆ ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯಂತೆ ತಯಾರಿಸಿದ ಔಷಧಿಗಳ ಸೇವನಾಕ್ರಮದಲ್ಲಿ ಬಹಳ ಮುಂಜಾಗ್ರತೆ ವಹಿಸಲೇಬೇಕಾಗುವುದು. ರೋಗ ನಿಧಾನ ಕ್ರಮವು ವ್ಯತಿರಿಕ್ತವಾಗಿ ರೋಗಕ್ಕೆ ತಕ್ಕ ಔಷಧಿ ಪ್ರಯೋಗವಾಗದಿದ್ದರೆ ಅದರಿಂದ ದೇಹಕ್ಕೆ ತುಂಬಾ ಅಪಾಯವಿರುವುದು ಸ್ವಾಭಾವಿಕವು. ಕೇವಲ ಔಷಧಿ ಸೇವನಾ ಪ್ರಮಾಣದಲ್ಲೇ ವ್ಯತ್ಯಾಸವಾಗುವುದರಿಂದ ಎಷ್ಟೋ ಗಂಡಾಂತರಗಳು ಒದಗಬಹುದು. ಅಂಥ ಸಂದರ್ಭಗಳಲ್ಲಿ ರೋಗಿಯ ದೇಹ ದಾರ್ಢ್ಯತೆಯು ನಿರ್ಬಲವಾಗಿದ್ದರೆ ಪ್ರಾಣಾಪಾಯದ ಸಂದರ್ಭಗಳಿಗೂ ಕೊರತೆ ಇಲ್ಲ. ಆದರೆ ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ದುಡಿಯುವವರಿಗೆ ಸಾಕಷ್ಟು ವಿಶಾಲ ತರಬೇತಿ, ರೋಗಪರೀಕ್ಷಾ ಕ್ರಮಗಳಿಗೆ ನವೀನ ಸಂಶೋಧನೀಯ ಉಪಕರಣಗಳ ಅನುಕೂಲತೆಗಳ ವ್ಯವಸ್ಥೆ ಇರುವುದರಿಂದ ಇಂಥ ದುರ್ಘಟನೆಗಳಿಗೆ ಆಸ್ಪದವು ದುರ್ಲಭ ಎಂಬುದೂ ಗಮನಿಸತಕ್ಕ ವಿಚಾರವು. ಅದೇನೇ ಇರಲಿ ಆಯುರ್ವೇದವು ನಮ್ಮ ರಾಷ್ಟ್ರೀಯ ಸಂಪತ್ತು. ಬಡವರಿಂದ ತುಂಬಿದ ನಮ್ಮ ನಾಡಿನ ಮಂದಿಗೆ ಅಲ್ಪ ವೆಚ್ಚದಲ್ಲಿ ವೈದ್ಯಕೀಯ ಸಹಾಯವನ್ನು ನೀಡುವುದರಲ್ಲಿ ಆಯುರ್ವೇದವು ಸಂಪೂರ್ಣ ಸಹಕಾರಿಯು. ಆಯುರ್ವೇದವು ತನ್ನದೇ ಆದ ವಿಶಿಷ್ಟ ಮಾರ್ಗದಲ್ಲಿ ಪರಿಪೂರ್ಣ ಸೇವೆ ಸಲ್ಲಿಸಲು ಯೋಗ್ಯತೆಯುಳ್ಳ ವೈದ್ಯಕೀಯ ಪದ್ಧತಿಯು—ಎಂಬುದರಲ್ಲಿ ಸಂದೇಹವಿಲ್ಲ.

ಆಧುನಿಕ ವಿಜ್ಞಾನಿಗಳ ಅವಿಶ್ರಾಂತ ಸಂಶೋಧನೆಯಿಂದಾಗಿ ಎಲೋಪತಿ ವೈದ್ಯಕೀಯವು ಪ್ರಗತಿ ಪಥದಲ್ಲಿ ಮುಂದೆ ಸಾಗುತ್ತಿದೆ; ಲೋಕಕ್ಕೆ ತನ್ನ ಅಮೂಲ್ಯ ಸೇವೆಯನ್ನು ನೀಡುತ್ತಿದೆ ಎನ್ನುವುದು ಉಲ್ಲೇಖನೀಯವು. ಸನ್ನಿಪಾತ, ಕ್ಷಯ, ಅರ್ಬುದ, ಅಲ್ಲದೆ ಶಸ್ತ್ರ ಚಿಕಿತ್ಸೆ, ರಕ್ತದಾನ ಪದ್ಧತಿ, ಮೊದಲಾದವುಗಳಲ್ಲೆಲ್ಲಾ ನವೀನ ಶೋಧನೆಗಳಿಂದ ಆಶ್ಚರ್ಯಕರ ಪರಿಣಾಮಕಾರೀ ಪ್ರಯೋಗಗಳನ್ನು ಕಂಡುಹಿಡಿದು ಮಾನವ ಪೀಳಿಗೆಯ ಕಠಿಣ ಶತ್ರುಗಳಂತಿರುವ ರೋಗಗಳ ಪಸರಿಸುವಿಕೆಯನ್ನು ತಡೆಹಿಡಿಯಲು ಯತ್ನಿಸಿ ಸಫಲರಾಗುತಿದ್ದಾರೆ. ಆಯುರ್ವೇದ ಪದ್ಧತಿಯಂತೆ ಇಂಥ ನವೀನ ಸಂಶೋಧನೆಗಳಿಗೆ ಆಸ್ಪದವಿಲ್ಲವಾದರೂ ಮೂಲದಲ್ಲಿದ್ದುದನ್ನಾದರೂ ಯೋಗ್ಯ ಕ್ರಮದಲ್ಲಿ, ಶಾಸ್ತ್ರೀಯವಾಗಿ ನಡೆಸಿಕೊಂಡು ಮುಂದೆ ಸಾಗಬೇಕೆಂಬ ಹಂಬಲವಿದ್ದವರ ಸಂಖ್ಯೆಯೂ ವಿರಳವೆನ್ನಬಹುದು. ಕೆಲವು ಮಹನೀಯರೂ ಸಂಸ್ಥೆಗಳೂ ಈ ಬಗ್ಗೆ ದುಡಿಯುತ್ತಿರುವುದು ದೊರಕಬಹುದಾದರೂ ಉಳಿದವರು ವ್ಯಾಪಾರೀ ಮನೋವೃತ್ತಿಯಿಂದ ಆಯುರ್ವೇದದಲ್ಲಿ ದುಡಿಯುತಿದ್ದಾರೆ. ಆಸವ, ಅರಿಷ್ಟಗಳ ತಯಾರಿಕೆಗೆ ಒಂದು ನಿಶ್ಚಿತ ಕ್ರಮವಿದೆಯಾದರೂ ಬೇರೆ ಬೇರೆ ವೈದ್ಯರಿಂದ ತಯಾರಿಸಲ್ಪಟ್ಟ ಒಂದೇ ಆಸವ ಅಥವಾ ಅರಿಷ್ಟವು ಬೇರೆ ಬೇರೆ ರುಚಿ, ಗುಣ ಧರ್ಮದಿಂದ ಕೂಡಿರುವುದನ್ನು ನಾವು ಇಂದಿನ ಮಾರುಕಟ್ಟೆಗಳಲ್ಲಿ ಕಾಣಬಹುದು. ಇದು ಆಯುರ್ವೇದಕ್ಕೆ ಇಂದಿನ ಕೆಲವು ವೈದ್ಯರಿಂದ ಅಥವಾ ತಯಾರಕರಿಂದ ದೊರಕಿದ ದೊಡ್ಡ ಅಪವಾದವೆನ್ನಬಹುದು. ಇಂಥ ವ್ಯಾಪಾರೀ ಮನೋವೃತ್ತಿಯು ಅಳಿದು ನಮ್ಮ ಪೂರ್ವಿಕರ ಸಾಹಸದಿಂದ ನಮಗೆ ದೊರಕಿದ ವಿಶಿಷ್ಟ ಸಂಪತ್ತು ಕಂದದಂತೆ ರಕ್ಷಿಸಿ ಅದರ ಗೌರವಕ್ಕೆ ಹಾನಿಯೊದಗದಂತೆ ಮುಂಜಾಗ್ರತೆ ವಹಿಸುವುದು ಅತ್ಯಗತ್ಯವು—ಮೇಲಾಗಿ ಆಯುರ್ವೇದ ಔಷಧಿ ತಯಾರಿಯಲ್ಲಿ ಒಂದೇ ವಿಧದ ಉತ್ಪಾದಕ ಮಟ್ಟವಿರಬೇಕಾದುದು ತೀರಾ ಅಗತ್ಯ.

ಆಯುರ್ವೇದ ವೈದ್ಯರು ಔಷಧಿ ತಯಾರಿಕ್ರಮ, ಗಿಡ ಮೂಲಿಕೆಗಳ ಪರೀಕ್ಷೆ ಮೊದಲಾದವುಗಳಲ್ಲಿ ಮಾತ್ರ ಆಸಕ್ತಿ ವಹಿಸಿ ದುಡಿದು ನಿಪುಣರಾದರೆ ಸಾಲದು. ರೋಗ ವಿಧಾನ ಕ್ರಮದಲ್ಲಿ ಅವರಿಗೆ ಸಾಕಷ್ಟು ವಿಶಾಲ ಜ್ಞಾನವಿರಬೇಕು. ಮುಖ್ಯವಾಗಿ ಮನುಷ್ಯ ದೇಹ ಶಾಸ್ತ್ರದ ಆಳವಾದ ಆಮೂಲಾಗ್ರ ಅಭ್ಯಾಸವು ಇರಲೇಬೇಕು. ಮನುಷ್ಯ ದೇಹದ ನಿರ್ಮಾಣ, ದೇಹದ ಮುಖ್ಯ ಮತ್ತು ಎಲ್ಲಾ ಅಂಗ ಭಾಗಗಳು, ಅವುಗಳ ರಚನಾಕ್ರಮ, ಅವುಗಳ ಕಾರ್ಯ, ಅಂಗ ಭಾಗಗಳ ದೌರ್ಬಲ್ಯ ಮತ್ತು ಅಕ್ರಮಗಳಿಗೆ ಕಾರಣ

(ಆನೇ ಪುಟ ನೋಡಿರಿ)




**NAVAYUGA**

Popular Kannada Weekly

*Founder:—*

**A. B. SHETTY,** *M. L. A.*

Former Minister for Public Health,
Govt. of Madras.
At Present Minister for Health
Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೧೩-೧೨-'೫೬ | ೧೫ |

## ವ್ಯವಸಾಯೋತ್ಪನ್ನ

ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯು ಮೊನ್ನೆ ಹೊಸದೆಹಲಿಯಲ್ಲಿ ಜರಗಿದಾಗ ಪ್ರಧಾನಿ ನೆಹರೂರವರು ಮಾತನಾಡುತ್ತಾ ಎರಡನೇ ಯೋಜನೆಯ ಯಶಸ್ಸು ಕೈಗಾರಿಕೆಗಳ ಅಭಿವೃದ್ಧಿಯಲ್ಲಿದೆ ಎಂದು ನಾವು ತಿಳಿದುಕೊಳ್ಳುವುದು ತಪ್ಪು; ಮೂಲತಃ ವ್ಯವಸಾಯೋತ್ಪನ್ನಗಳ ಹೆಚ್ಚಳವನ್ನೆ ಅದು ಅಧರಿಸಿದೆ ಎಂದು ಅಭಿಪ್ರಾಯಪಟ್ಟರು. "ನಾವು ನಮ್ಮ ಬೆವರನ್ನಿಳಿಸಿ ಮತ್ತು ನೆತ್ತರನ್ನು ಸುರಿಸಿ ವ್ಯವಸಾಯೋತ್ಪನ್ನವನ್ನು ಹೆಚ್ಚಿಸಲು ಪರಿಶ್ರಮಪಡಬೇಕಾಗಿದೆ. ಹೀಗೆ ಮಾಡದಿದ್ದರೆ ನಾವು ಎರಡನೇ ಯೋಜನೆಯನ್ನು ಮುಂದೊತ್ತಲಾರದವರಾಗುತ್ತೇವೆ" ಎಂದು ಪ್ರಧಾನಿಗಳು ಸಾರಿದರು. ಯಾವ ರಾಷ್ಟ್ರಕ್ಕೆಯೇ ಆಗಲಿ— ವ್ಯವಸಾಯೋತ್ಪನ್ನದಲ್ಲಿ ಕೊರತೆ ಇಲ್ಲದಿರುವ ಪರಿಸ್ಥಿತಿಯು ಅಭಿವೃದ್ಧಿಯ ದ್ಯೋತಕವೆನಿಸುತ್ತದೆ; ಭಾರತದ ಪಾಲಿಗಂತೂ ಇದು ಸಾವಿರ ಪಾಲು ಸತ್ಯ ಎಂದೂ ನೆಹರೂರವರು ಹೇಳಿದರು. ಭಾರತದ ಆರ್ಥಿಕ ರಂಗದ ಬೀಗದ ಕೈಯಾಗಿ ನಮ್ಮ ವ್ಯವಸಾಯ ಕ್ಷೇತ್ರವಿದೆ ಎಂಬ ಪ್ರಧಾನಿಯವರ ಮಾತನ್ನು ಯಾರಾದರೂ ಒಪ್ಪಲೇಬೇಕು. ಏಕೆಂದರೆ ನಮ್ಮಲ್ಲಿ ನೂರಕ್ಕೆ ಎಪ್ಪತ್ತಕ್ಕಿಂತಲೂ ಹೆಚ್ಚಿನವರು ಗ್ರಾಮಾಂತರವಾಸಿಗಳಾಗಿದ್ದು, ಬೇಸಾಯವನ್ನೆ ಜೀವನದ ಮುಖ್ಯ ಆಧಾರವಾಗಿ ಇಟ್ಟುಕೊಂಡವರಾಗಿದ್ದಾರೆ. ನಾವು ಕೈಗಾರಿಕೆಗಳನ್ನು ಭರದಿಂದ ಬೆಳೆಸುವ ಉತ್ಸಾಹವನ್ನು ತೋರಿಸಿ, ವ್ಯವಸಾಯವನ್ನು ಕಡೆಗಣಿಸಿದರೆ ಅಥವಾ ಅವರಷ್ಟಕ್ಕೆ ಬಿಟ್ಟರೆ ಆಹಾರ ವಸ್ತುಗಳ ಕೊರತೆಯುಂಟಾಗಿ, ನಮ್ಮ ಜೀವನ ಮಟ್ಟವೇ ಕುಸಿದು ಬೀಳಬಹುದು. ಮತ್ತು ಅನ್ನಕ್ಕಾಗಿ ಹಾಹಾಕಾರವೇ ಏಳಬಹುದು. ಆದುದರಿಂದ ನಾವು ಕೈಗಾರಿಕೆಗಳ ಅಭಿವೃದ್ಧಿಯನ್ನು ವ್ಯವಸಾಯೋತ್ಪನ್ನಗಳ ಹೆಚ್ಚಳದೊಡನೆ ಸಮನ್ವಯಿಸಿಕೊಂಡೇ ಹೋಗಬೇಕಲ್ಲದೆ, ವ್ಯವಸಾಯದ ಕ್ಷೇತ್ರವನ್ನು ಉದಾಸೀನತೆಯಿಂದ ಕಂಡು ಕೈಗಾರಿಕೆಗಳನ್ನು ಸ್ವತಂತ್ರವಾಗಿ ಬೆಳೆಸಿಕೊಂಡರೆ ಕೆಲಸವಾಗಲಾರದು. ಮೊದಲನೇ ಯೋಜನೆಯು ಕೃಷಿಗೆ ಪ್ರೋತ್ಸಾಹವನ್ನು ಕೊಟ್ಟಿತು; ಎರಡನೇ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ— ಎಂಬಂತಹ ಅಪಬುದ್ಧಿ ಪ್ರಚಾರ ಮಾತುಗಳನ್ನು ಕೇಳಿರುವ ಜನ ಸಾಧಾರಣರು ನಾವು ಕೃಷಿ ಕ್ಷೇತ್ರದಲ್ಲಿ ಸಂಪೂರ್ಣ ಸ್ವಾವಲಂಬಿಗಳೂ ಆಪತ್ಕಾಲವನ್ನೂ ಯಶಸ್ವಿಯಾಗಿ ಎದುರಿಸುವಷ್ಟು ಆಹಾರ ವಸ್ತುಗಳ ಸಂಗ್ರಹವುಳ್ಳವರೂ ಆಗಿ ಬಿಟ್ಟೆವೆಂದು ತಿಳಿದುಕೊಂಡುದುಂಟು. ಇದು ಕೇವಲ ತಪ್ಪು ಕಲ್ಪನೆ ಎಂಬುದನ್ನು ಪ್ರಧಾನಿಯವರ ವಾಕ್ಯವು ಎತ್ತಿ ಹೇಳುತ್ತದೆ. ನಮಗೆ ಕೈಗಾರಿಕೆಗಳ ವ್ಯಾಮೋಹವಿರುವುದೇ ತಪ್ಪಲ್ಲವಾದರೂ ವ್ಯವಸಾಯೋತ್ಪನ್ನಗಳನ್ನು ಉಪೇಕ್ಷಿಸಿ ನಡೆದರೆ ಗಂಡಾಂತರ ಕಟ್ಟಿಟ್ಟದ್ದೆಂಬುದನ್ನು ಅವರು ಪೂರ್ವ ಯುರೋಪಿನ ರಾಷ್ಟ್ರಗಳಾದ ಹಂಗರಿ ಮತ್ತಿತರಡೆ ಈಗ ನಡೆದಿರುವ ಕೋಲಾಹಲದ ಮೂಲ ಕಾರಣವನ್ನು ವಿವರಿಸುತ್ತಾ, ಒಳ್ಳೆಯ ನಿದರ್ಶನವನ್ನಿತ್ತರು. ಆ ದೇಶಗಳು ಬಿಟ್ಟೂ ಬಿಡದೆ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಮನಸ್ಸು ಹಾಕಿದುದರಿಂದ ಆಹಾರ ವಸ್ತುಗಳ ಅಭಾವ ಉಂಟಾಯಿತೆಂದೂ ಇದೇ ಅಲ್ಲಿಯ ಎಲ್ಲ ಗಡಿಬಿಡಿ ಮತ್ತು ತೊಂದರೆಗಳಿಗೂ ನೆಪವೆಂದೂ ನೆಹರೂರವರು ಹೇಳಿದ ಮಾತು ನಮ್ಮನ್ನು ಎಚ್ಚರಿಸಬೇಕಾಗಿದೆ. ಕೈಗಾರಿಕೆಗಳ ಅಭಿವೃದ್ಧಿ ಎಷ್ಟೇ ಅವಶ್ಯವಾಗಲಿ, ಅದನ್ನು ಸಾಗುವಳಿ ಕ್ಷೇತ್ರದ ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದು ಮಾತ್ರ ಸಲ್ಲದು: ಇದನ್ನು ಚೆನ್ನಾಗಿ ನೆನಪಿಟ್ಟುಕೊಂಡು ನಾವು ವ್ಯವಸಾಯವನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ಇದೆಂತು ಸಾಧ್ಯ? ವ್ಯವಸಾಯ ಮಾಡುವವನಲ್ಲಿ ಮಮಕಾರ ಹುಟ್ಟಲು "ಉಳುವವನೇ ಹೊಲದೊಡೆಯ" ಎಂಬುದನ್ನು ಮನ್ನಿಸುವ ಸುಧಾರಣೆಗಳು ಅವಶ್ಯವಾಗಿ ಮತ್ತು ಅತ್ಯಂತ ಶೀಘ್ರವಾಗಿ ಜ್ಯಾರಿಗೆ ಬರಬೇಕು. ಹೊಸ ಮೈಸೂರು ಸರಕಾರವು ಭೂಸುಧಾರಣೆಯ ಪ್ರಶ್ನೆಯನ್ನು ಪುನರಾಲೋಚಿಸುತ್ತಿದೆಯೆಂದೂ ಹೊಸ ರಾಜ್ಯಕ್ಕೆ ಏಕಪ್ರಕಾರವಾಗಿ ಅನ್ವಯವಾಗುವ ಸಾಮಾನ್ಯ ಶಾಸನವೊಂದನ್ನು ತಯಾರಿಸಲಿದೆಯೆಂದೂ ಉತ್ತರ ಕರ್ನಾಟಕದಲ್ಲಿ ಸಂಚಾರ ಕೈಗೊಂಡಿರುವ ಕಂದಾಯ ಮಂತ್ರಿ ಶ್ರೀ ಪಾಟೀಲರ ಮಾತುಗಳಿಂದ ವ್ಯಕ್ತವಾಗುತ್ತದೆ. ಆದರೆ ಮಹಾ ಚುನಾವಣೆಯು ತೀರ ಸಮೀಪಿಸಿರುವುದರಿಂದ ನಾವು ಇಂಥ ಸುಧಾರಣೆಯು ಇನ್ನೊಂದು ವರ್ಷದ ಒಳಗೆ ಬಂದೀತೆಂದು ಆಶಿಸುವಂತಿಲ್ಲವೆಂಬುದು ಸ್ಪಷ್ಟ. ಹೀಗೆ ಸರಕಾರಗಳೆಲ್ಲ ಪ್ರಶ್ನೆಯನ್ನೂ ಬಗೆಬಗೆಯ ಕಾರಣಗಳಿಗಾಗಿ ಮುಂದೂಡುತ್ತಾ ಹೋದರೆ—ಕಾಲರಾಯನೇನು ನಿಂತಲ್ಲೆ ನಿಂತಿರುವುದಿಲ್ಲವಲ್ಲ! —ವ್ಯರ್ಥವಾಗಿ ಸಮಯ ಕಳೆದು ಹೋಗುತ್ತದೆ. ಈಗ ಎರಡನೇ ಯೋಜನೆಯನ್ನೆ ತೆಗೆದುಕೊಂಡರೆ ನಮ್ಮ ಸರಕಾರಗಳು ಎಷ್ಟೇ ಶೀಘ್ರವಾಗಿಯಾದರೂ ಭೂ ಸುಧಾರಣೆಯ ಶಾಸನವನ್ನು ತೃಪ್ತಿಕರವಾಗಿ ಜ್ಯಾರಿಗೆ ತಂದು, ರೈತನನ್ನು ಉತ್ಸಾಹಿತಗೊಳಿಸಿ, ಆತನಿಂದ ಒಳ್ಳೆಯ ರೀತಿಯಲ್ಲಿ ಕೃಷಿ ಮಾಡಿಸುವ ಹೊತ್ತಿಗೆ, ಎರಡನೇ ಯೋಜನೆಯ ಅವಧಿಯು ಪೂರ್ಣವಾಗಿ ಬಿಡುತ್ತವೆ: ಆಗ ನಡೆದಿರುವ ಪ್ರಗತಿಯನ್ನು ಎಷ್ಟೆಂದು ಹೇಳಬಹುದು? ಶೂನ್ಯವೆಂಬುದು ಸ್ಪಷ್ಟ. ನಾವು ಒಂದು ಹೆಜ್ಜೆಯನ್ನೂ ಮುಂದಿಟ್ಟಿರುವುದಿಲ—ನಾಲ್ಕೈದು ಹೆಜ್ಜೆ ಮುಂದಿಟ್ಟರಬಹುದಾದರೂ ನಡೆಯುತ್ತಿರುವ ನಾಲ್ಕಾರು ಮೈಲು ದೂರದ ಮುಂದೆ ಇದನ್ನು ಹೋಲಿಸುವಂತೆಯೇ ಇಲ್ಲ! ಇದೇ ಸಮಸ್ಯೆಯ ಇನ್ನೊಂದು ಮುಖವೆಂದರೆ ನಮ್ಮ ಸರಕಾರದ ಕೃಷಿ ಇಲಾಖೆಯ ಆಲಸ್ಯ: ಉತ್ತರ ಕರ್ನಾಟಕದಲ್ಲಿ ಸಂಚರಿಸುತ್ತಿದ್ದ ನವಮೈಸೂರಿನ ಕೃಷಿ ಮಂತ್ರಿ ಶ್ರೀ ರುದ್ರಪ್ಪನವರು ಧಾರವಾಡದ ಕೃಷಿ ಕಾಲೇಜಿನಲ್ಲಿ ಮಾತನಾಡುತ್ತಾ ಹನ್ನೆರಡು ಮೈಲು ದೂರದಲ್ಲಿರುವ ಹುಬ್ಬಳ್ಳಿಯ ರೈತರು ತಮ್ಮ ಗೋಧಿಯ ಬೆಳೆಗೆ ಒಂದು ಬಗೆಯ ರೋಗ ತಗಲಿದೆ ಎಂದೂ ಅದರ ನಿವಾರಣೋಪಾಯ ತಮಗೆ ತಿಳಿದಿಲ್ಲವಾಗಿ, ಪೇಚಾಡಪಡುತ್ತಿದ್ದೇವೆಂದೂ ದೂರಿಕೊಂಡ ಸಂಗತಿಯನ್ನು ವ್ಯಕ್ತಪಡಿಸಿದರು. ಧಾರವಾಡದಲ್ಲಿ ಕೃಷಿ ಸಂಶೋಧನೆಗಳಾಗುತ್ತಿವೆ; ಕಾರಣ, ಅಲ್ಲಿಯ ಸಂಶೋಧಕರನ್ನು ವಿಚಾರಿಸಿದಾಗ ಮಂತ್ರಿಗಳಿಗೆ ಹುಬ್ಬಳ್ಳಿಯ ರೈತರ ಕಷ್ಟವನ್ನು ಪರಿಹರಿಸುವ ರಾಮಬಾಣಸದೃಶ ಉಪಾಯವು ಕಂಡು ಹಿಡಿಯಲ್ಪಟ್ಟಿದೆ ಎಂಬ ಸಂತೋಷದ ವಾರ್ತೆ ತಿಳಿದು ಬಂತು. ಆದರೇನು ಮಾಡೋಣ? ಈ ಸಂಶೋಧನೆಯ ಸುದ್ದಿಯು ಹನ್ನೆರಡು ಮೈಲು ದೂರದಲ್ಲಿರುವ ಹುಬ್ಬಳ್ಳಿಯ ರೈತರನ್ನು ಮಾತ್ರ ಮುಟ್ಟಿಲ್ಲ! ಅದು ವಾಸ್ತವದಲ್ಲಿ ಕಾಲೇಜಿನ ನಾಲ್ಕು ಗೋಡೆಗಳ ಹೊರಗೆ ಪ್ರಚಾರವಾದದ್ದೇ ಇಲ್ಲ! ಇಂಥ ದುರವಸ್ಥೆಯು ಭಾರತದಲ್ಲಿಯಲ್ಲದೆ, ಬೇರೆ ಯಾವ ದೇಶದಲ್ಲಿಯೂ ವಿದ್ಯಮಾನದಲ್ಲಿಲ್ಲ! ಚೀನವ ಪ್ರಧಾನಿಗಳು ಭಾರತವು ಸಂಶೋಧನಾ ಕ್ಷೇತ್ರದಲ್ಲಿ ಚೀನಕ್ಕಿಂತಲೂ ಬಹಳ ಮುಂದರಿದಿದೆ ಎಂದುಹೊಗಳಲೇನೊ ಹೊಗಳಿದ್ದಾರೆ — ಆದರೆ ಈ ಸಂಶೋಧನೆಗಳ ಪ್ರಯೋಜನೆ ಜನಸಾಮಾನ್ಯರಿಗೆಷ್ಟು ಮಟ್ಟಿಗೆ ಸಿಕ್ಕಿದೆ ಎಂಬುದಕ್ಕೆ ಹುಬ್ಬಳ್ಳಿಯ ರೈತರ ಕಷ್ಟದ ಪ್ರಸಂಗವೊಂದೇ ಯೋಗ್ಯ ನಿದರ್ಶನವಾದೀತು. ನಮ್ಮ ಮುಂದೆ ನಾಲ್ಕು ರೂಪಾಯಿ ಸಂಪಾದಿಸುವ ರೈತನು ನಲ್ವತ್ತು ರೂಪಾಯಿ ಸಂಪಾದಿಸಲು ಸಮರ್ಥನಾಗಬೇಕೆಂಬ ಧ್ಯೇಯವಿರುವಾಗಲೂ ನಮ್ಮ ಸರಕಾರಿ ಅಧಿಕಾರಿಗಳು, ಕೃಷಿ ಇಲಾಖೆಯ ಮುಖ್ಯಸ್ಥರು, ಇಂಥ ಆಲಸ್ಯವನ್ನು ವ್ಯಕ್ತಪಡಿಸುತ್ತಿದ್ದಾರೆ. ರೈತರಿಗೆ ನೀರೆತ್ತುವುದಕ್ಕಾಗಿ ಪಂಪುಗಳು ಎಲ್ಲಿವೆ? ಸರಕಾರದವರು ಸಾಲ ಕೊಡುವರಂತೆ; ವಿದ್ಯುಚ್ಛಕ್ತಿಯಿಂದ ನಡೆಸುವ ಪಂಪುಗಳವು: ಅವುಗಳನ್ನು ಉಪಯೋಗಿಸುವ ಕ್ರಮದ ಬಗ್ಗೆ ತರಬೇತಿ ಕೊಡುವ ವ್ಯವಸ್ಥೆ ಇಲ್ಲ; ಮೇಲಾಗಿ ಈ ಪಂಪುಗಳಿಗೆ ಸಾವಿರಾರು ರೂಪಾಯಿ ಬೆಲೆ ಬೀಳುತ್ತದೆ. ಅಗ್ಗದಲ್ಲಿ ಐವತ್ತು ರೂಪಾಯಿ ಬೆಲೆಗೆ ಶ್ರೀ ಮರಕ್ಕಿಣಿ ಭಟ್ಟರು ಮರದ ಪಂಪು ತಯಾರಿಸಿದ್ದಾರೆ— ಆದರೆ ಅದರ ಸಾಮೂಹಿಕಉತ್ಪಾದನೆಗೆ ಸರಕಾರದಿಂದ ಪ್ರೋತ್ಸಾಹವಿಲ್ಲ. ಈ ಶೋಚನೀಯವಾದ ಪರಿಸ್ಥಿತಿಯಲ್ಲಿ ;; ನೆಹರೂಗಳೊಬ್ಬರು ಎಚ್ಚರದ ಮಾತನ್ನು ಹೇಳುತ್ತಿದ್ದರೆ ಎಷ್ಟು ಪ್ರಯೋಜನವಾದೀತು, ಫಲ ಬಂದೀತು, —ನಮಗಂತೂ ತಿಳಿಯದು. ಸರಕಾರದ ಮಂತ್ರಿಗಳು ಯೋಗ್ಯ ಶಾಸನಗಳನ್ನು ತಂದು, ಸರಕಾರದ ಅಧಿಕಾರಿಗಳು ತಮ್ಮ ಕಾರ್ಯಾಲಯದ ಹೊರಗೂ ಕಾಲಿರಿಸಿ ಕಳೆಯ ರೀತಿ ಮನೆಬಾಗಿಲಿಗೆ ಬಂದು. ಸ್ವತಃ ರೈತರು ಹೊಸ ಪರಿಸ್ಥಿತಿಗೆ ಹೊಂದಿಕೊಂಡು—ಎಲ್ಲರೂ ಪರಸ್ಪರ ಭುಜಕ್ಕೆ ಭುಜಕೊಟ್ಟು ನಡೆದರೆ ಮಾತ್ರ ನಾವು ಅಲ್ಪ ಸ್ವಲ್ಪ ಪ್ರಗತಿಯನ್ನು ಈ ಜಡಭರತ ಭಾರತದಲ್ಲಿ ನಿರೀಕ್ಷಿಸಬಹುದು. ಇನ್ನಾದರೂ ನಾವು ಜಾಗೃತರಾದೇವೆ? ಸರಕಾರವೂ ಸರಕಾರಿ ನೌಕರರೂ ಎಚ್ಚರಗೊಂಡಾರೆ?—ಅಗತ್ಯದ ವಿಷಯಗಳನ್ನೂ ಅದಷ್ಟು ತಡವಾಗಿಯೇ ಗಮನಿಸುವ ನಮ್ಮ ಆಲಸಿ ಸಂಪ್ರದಾಯಕ್ಕೊಂದುಕೊನೆ ಬಂದೀತೇ?-ಬರಲಿ ಎಂಬುದೇ ನಮ್ಮ ಹಾರ್ದಿಕ ಆಶಯ

## ಕಾಶ್ಮೀರಕ್ಕೆ ಅಂತಾರಾಷ್ಟ್ರೀಯ ಸೈನ್ಯ

### ಪಾಕಿಸ್ಥಾನಿ ವಿದೇಶಮಂತ್ರಿಗಳ ವಿಚಿತ್ರ ಅಭಿಪ್ರಾಯ

ಪಾಕಿಸ್ತಾನದ ವಿದೇಶ ಮಂತ್ರಿ ಶ್ರೀ ನೂನರು ಕಾಶ್ಮೀರ ಸಮಸ್ಯೆಯು ತೃಪ್ತಿಕರವಾಗಿ ಬಿಡಿಸಲ್ಪಡುವ ವರೆಗೆ ಸಂಯುಕ್ತ ರಾಷ್ಟ್ರ ಸಂಘದ ನಿಯಂತ್ರಣದಲ್ಲಿ ಅಂತಾರಾಷ್ಟ್ರೀಯ ಪೋಲೀಸು ಪಡೆಯನ್ನು ಕಾಶ್ಮೀರ ಪ್ರದೇಶದಲ್ಲಿಡಬೇಕು ಎಂಬ ವಿಚಿತ್ರ ಸೂಚನೆಯನ್ನು ಮಾಡಿದ್ದಾರೆ. ಇದಕ್ಕೆ ಸಂಯುಕ್ತ ರಾಷ್ಟ್ರ ಸಂಘವೂ ಭಾರತವೂ ಒಪ್ಪಿದ್ದಾದರೆ, ಪಾಕಿಸ್ತಾನವು ತನ್ನವಶದಲ್ಲಿರುವಕಾಶ್ಮೀರ ಪ್ರದೇಶದಿಂದ ಸೈನ್ಯವನ್ನು ಅಂತಸ್ತುಗಳಲ್ಲಿ ಹಿಂದೆಗೆದುಕೊಳ್ಳಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ.

ನೂನರ ಈ ಘೋಷಣೆಯು ಕಾಶ್ಮೀರ ಸಮಸ್ಯೆಯ ಪೂರ್ವಾಪರಗಳನ್ನು ತಿಳಿದುಕೊಂಡವರಿಗೆ ವಿಸ್ಮಯವನ್ನುಂಟು ಮಾಡಿದೆ. . ಕಾಶ್ಮೀರದ ಪ್ರಶ್ನೆಯ ಮಟ್ಟಿಗೆ ಪಾಕಿಸ್ತಾನವು ಆಕ್ರಮಣಕಾರಿ ರಾಷ್ಟ್ರವೆಂದು ಸಂಯುಕ್ತ ರಾಷ್ಟ್ರ ಸಂಘವು ಎಂದೋ ಬರೆ ಎಳೆದಿದೆ. ಆದುದರಿಂದ ನ್ಯಾಯವಾಗಿ ಪಾಕಿಸ್ತಾನಕ್ಕೆ ಈಗ ತನ್ನ ವಶದಲ್ಲಿ ಅಕ್ರಮವಾಗಿ ಇಟ್ಟುಕೊಂಡಿರುವ ಭೂಭಾಗದಲ್ಲಿ ಸಹ. ಸೈನ್ಯವಿಡಲು ಅಧಿಕಾರವಿಲ್ಲ. ಅದು ತನ್ನ ಸೈನ್ಯವನ್ನು ಹಿಂದೆಗೆದುಕೊಳ್ಳದೆ ಅನ್ಯಾಯವನ್ನೆ ಮಾಡಿದೆ. ಹೀಗೆ ತಾನು ಅನ್ಯಾಯ ಮಾಡಿದ್ದೇನೆಂಬುದನ್ನೂ ಮರೆತು ಅಂತಸ್ತುಗಳಲ್ಲಿ ಸೈನ್ಯವನ್ನು ಹಿಂದೆಗೆದುಕೊಳ್ಳುವ ದೊಡ್ಡಸ್ತಿಕೆಗಾಗಿ ಹೊಸ ಶರ್ತಗಳನ್ನೂ ಸೂಚನೆಗಳನ್ನೂ ಮುಂದಿಡುವ ಪಾಕಿಸ್ತಾನಿ ವಿದೇಶ ಮಂತ್ರಿಗಳ ಎದೆಗಾರಿಕೆಯು ದಿಗಿಲು ಹುಟ್ಟಿಸುವಂತಿದೆ.

ಪಾಕಿಸ್ತಾನ ಮತ್ತು ಭಾರತಗಳ ನಡುವೆ ಅತ್ಯಂತ ಮಧುರವಾದ ಸಂಬಂಧ ಏರ್ಪಡಬೇಕಿತ್ತಾದರೂ ಅದು ಕನಸಿನ ಮಾತಾಗಿ ಉಳಿದಿದೆ ಪಾಕಿಸ್ತಾನದ ಅಧಿಕಾರ ಪೀಠಕ್ಕೆ ಯಾರೇ ಏರಲಿ, ಅವರು ಭಾರತವನ್ನು ಏಕಪ್ರಕಾರವಾಗಿ ಬೈದು ಭಂಗಿಸುವ ಮತ್ತು ನಾನಾ ಪ್ರಕಾರದ ದುರುದ್ದೇಶಗಳ ಆಪಾದನೆಯನ್ನು ಭಾರತದ ಮೇಲೆ ಹೊರಿಸಿ ತಮ್ಮ ಅಸಮರ್ಥತೆಯನ್ನು ಮುಚ್ಚಿಡುವ ಹವ್ಯಾಸವುಳ್ಳವರಾಗುತ್ತಾರೆ. ಪಾಕಿಸ್ತಾನಿ ಪ್ರಧಾನಿ ಸುಹ್ರವರ್ದಿಯವರು ಸೈನಿಕ ಒಪ್ಪಂದಗಳ ಖಂಡನೆಯನ್ನು ಮಾಡುತ್ತಾ ನೆಹರುಗಳಾಡಿದ ಮಾತನ್ನು ತುಚ್ಛೀ

...ರದಿಂದ ಕಂಡರು. ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಿಯೇ ...ರುವುದೆಂಬ ನಂಬಿಕೆಯನ್ನವರು ವ್ಯಕ್ತಪಡಿಸಿದರು. ಆದರೆ ನೆಹರೂರವರು ಸಂಸತ್ತಿನಲ್ಲಿ ಹೇಳಿಕೆಯನ್ನು ಕೊಡುತ್ತಾ ಯುದ್ಧನಿಷೇಧ ಘೋಷಣೆಯ ಬಗ್ಗೆ ತಾವಿತ್ತಿದ್ದ ಆಮಂತ್ರಣವು ಈಗಲೂ ಊರ್ಜಿತದಲ್ಲಿದೆಯೆಂದೂ, ಸ್ವರಕ್ಷಣೆಗಾಗಿಯಲ್ಲದೆ ಭಾರತವೆಂದಿಗೂ ಪಾಕಿಸ್ತಾನದೊಂದಿಗೆ ಯುದ್ಧ ಮಾಡುವುದಿಲ್ಲವೆಂದೂ ಕಂಠೋಕ್ತವಾಗಿ ಸಾರಿದ್ದಾರೆ. ಆದರೂ ಪಾಕಿಸ್ತಾನಿ ಪ್ರಧಾನಿಗಳಿಗೆ ತೃಪ್ತಿಇಲ್ಲ.

ಸುಯೇಜಿನ ಕಾಲುವೆ ಪ್ರದೇಶದಿಂದ ...ಗ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳ ನಿರ್ಗಮನವು ಪ್ರಾರಂಭವಾಗಿದೆ. ...ವಾರು ಅರೆವಾಸಿಯಷ್ಟು ಸೈನ್ಯವು ...ಗ ಮರಳಿದೆ ಎಂದು ತಿಳಿದು ಬರುತ್ತದೆ. ಇದರ ಹೊರತು, ಸುಯೇಜಿನ ತಂಟೆಯ ಪರಿಹಾರ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯು ವ್ಯಕ್ತವಾಗಿಲ್ಲ.

ಪ್ರಧಾನಿ ನೆಹರೂರವರು ಇಷ್ಟರಲ್ಲೇ ಅಮೇರಿಕಕ್ಕೆ ಹೋಗಲಿದ್ದಾರೆ ದಾರಿಯಲ್ಲಿ ...ವರು ಲಂಡನಿನಲ್ಲಿ ತುಸು ಹೊತ್ತು ತಂಗುವರು. ಆದರೆ ನಾಳೆ ಶುಕ್ರವಾರವೇ ಲಂಡನಿಗೆ ವಾಪಸಾಗುವ ಈಡನ್ನರೊಡನೆ ...ನಿವಾರ ಲಂಡನಿಗೆ ತಲಪುವ ನೆಹರು ...ಸಮಾಲೋಚಿಸುವರೇ ಎನೆಂದು ತಿಳಿದು ಬಂದಿಲ್ಲ. ಈಡನ್ನರು ವಿನಂತಿಸಿ ಕೊಂಡರೆ ಮಾತ್ರ ಇಂಥ ಸಮಾಲೋಚನೆ ನಡೆದೀತೆಂದು ಪರಿಚಿತ ವರ್ಗಗಳು ಹೇಳುತ್ತವೆ.

ಅಮೇರಿಕಕ್ಕೆ ತೆರಳುವ ಮುನ್ನ ನೆಹರುಗಳು ತಮ್ಮ ಮಂತ್ರಿ ಮಂಡಳವನ್ನು ಪುನರ್ಘಟಿಸಿದ್ದಾರೆ. ಶ್ರೀ ಲಾಲಬಹದೂರ ಶಾಸ್ತ್ರಿಗಳ ರಾಜೀನಾಮೆಯಿಂದ ತೆರವಾಗಿರುವ ರೈಲ್ವೆ ಮಂತ್ರಿಸ್ಥಾನಕ್ಕೆ ಇಷ್ಟರವರೆಗೆ ಸಂಪರ್ಕ ಮಂತ್ರಿಗಳಾಗಿದ್ದ

ಶ್ರೀ ಜಗಜ್ಜೀವನ ರಾಮರನ್ನು ನೇಮಿಸಲಾಗಿದೆ. ಸಂಪರ್ಕ ಖಾತೆಯ ಉಪಮಂತ್ರಿ ಶ್ರೀ ರಾಜ ಬಹಾದೂರರು ಆ ಖಾತೆಯ ಮಂತ್ರಿಗಳಾಗಿ ಕೆಲಸಮಾಡುತ್ತಾರೆ.

ಚೀನದ ಪ್ರಧಾನಿಯವರು ಭಾರತದ ತಾಂತ್ರಿಕ ಪ್ರಗತಿಯನ್ನು ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಚೀನಕ್ಕಿಂತಲೂ ಭಾರತವು ಔದ್ಯಮಿಕ ಹಾಗೂ ಸಂಶೋಧನಾತ್ಮಕ ವಿಜ್ಞಾನದಲ್ಲಿ ತುಂಬ ಹೆಚ್ಚು ಅಭಿವೃದ್ಧಿಯನ್ನು ಹೊಂದಿದೆ ಎಂದೂ ಚೀನದ ಜನರನ್ನು ಭಾರತಕ್ಕೆ ಕಳಿಸಿ ಈ ಕ್ಷೇತ್ರದಲ್ಲಿ ತಿಳಿವಳಿಕೆ ಸಂಪಾದಿಸುವ ಹಂಬಲ ತಮ್ಮದೆಂದೂ ಅವರು ಹೇಳಿದ್ದಾರೆ.

ಭಾರತವು ಕಾಮನ್‌ವೆಲ್ತ್ ಕೂಟದಿಂದ ಹೊರಗೆ ಬರಬೇಕೆಂದು ಬಿರುಸಾದ ಚರ್ಚೆಯು ಕಳೆದ ವಾರ ಸಂಸತ್ತಿನಲ್ಲಿ ನಡೆಯಿತು. ಪ್ರಧಾನಿಯವರು ಕಮ್ಯುನಿಸ್ಟ್ ಸದಸ್ಯರ ಈ ಸೂಚನೆಯನ್ನು ಒಪ್ಪದೆ ಕಾಮನ್‌ವೆಲ್ತ್ ಸಂಬಂಧವನ್ನು ಕಡಿಮುಕೊಳ್ಳುವುದರಿಂದ ಭಾರತಕ್ಕೆ ವಾಸ್ತವದಲ್ಲಿ ಯಾವುದೇ ಪ್ರಯೋಜನವಾಗದೆಂದು ಸ್ಪಷ್ಟಪಡಿಸಿದರು.

ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಕೆಲವೊಮ್ಮೆ ಭಿನ್ನಾಭಿಪ್ರಾಯಗಳೇಳುವುದಿದೆ; ಮುಖ್ಯವಾಗಿ ಏಶ್ಯದ ರಾಷ್ಟ್ರಗಳ ಅಭಿಮತಕ್ಕೂ ಯುರೋಪ್ಯ ರಾಷ್ಟ್ರಗಳ ನಿಲುವಿಗೂ ಘರ್ಷಣೆ ಉಂಟಾಗುವುದುಂಟು. ಆದರೆ ಇಷ್ಟಕ್ಕಾಗಿ ಈ ಕೂಟದಿಂದ ಹೊರಬರುವುದು ಅನಾವಶ್ಯಕ ಎಂದು ನೆಹರೂರ ಅಭಿಪ್ರಾಯ.

ಚಿತ್ರದಲ್ಲಿ ಮೂಲತಃ ಯುರೋಪ್ಯ ರಾಷ್ಟ್ರಗಳಾದ ನ್ಯೂಜಿಲೆಂಡ್, ಆಸ್ಟ್ರೇಲಿಯ ಮತ್ತು ಕೆನಡಗಳು ಬ್ರಿಟನಿನೊಡನೆ ರೇಡಿಯೊ ಟೆಲಿಫೋನಿನ ಸಂಪರ್ಕ ವ್ಯವಸ್ಥೆ ಏರ್ಪಡಿಸಿಕೊಂಡು, ಲಂಡನಿನಿಂದ ಆಯಾ ರಾಷ್ಟ್ರಗಳ ಪ್ರತಿನಿಧಿಗಳು ತಮ್ಮ ದೇಶದ ಅಧಿಕಾರಿಗಳೊಡನೆ ಮಾತನಾಡುತ್ತಿರುವುದನ್ನು ಕಾಣಬಹುದು.

## ಉಡುಪಿ

**ನಗರಸಭೆಯು—** ತಾ. 8ರಲ್ಲಿ ಸಂಜೆ ಅಧ್ಯಕ್ಷ, ಉಪಾಧ್ಯಕ್ಷರ ಗೈರ ಹಾಜರಿಯಲ್ಲಿ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಿನ್ನಿಮೂಲ್ಕಿ ಮುನಿಸಿಪಲ್ ಶಾಲಾ ಕಟ್ಟಡವನ್ನು ಇನ್ನೆರಡು ವರ್ಷಗಳಿಗೆ ಬಾಡಿಗೆಗೆ ಮಾಡಿಕೊಳ್ಳಬೇಕೆಂದು ನಿರ್ಣಯವಾಗಿ ಶಾಲಾ ವಠಾರದಲ್ಲಿ ಮಾತ್ರ ದೊಡ್ಡಿಯನ್ನು ಕಟ್ಟಿಸಿಕೊಡುವಂತೆ ಸ್ಥಳದೊಡೆಯರನ್ನು ವಿನಂತಿಸಬೇಕೆಂದಾಯಿತು. ಅಲ್ಪ ಆದಾಯವಿರುವ ಮುನಿಸಿಪಲ್ ನೌಕರರಿಗೆ ವಸತಿಗೃಹಗಳನ್ನು ಕಟ್ಟಿಸಿಕೊಡುವ ಯೋಜನೆಯ ಕುರಿತು ಸ್ಥಳಗಳನ್ನು ಆಯ್ದು ಪಡಿಸಿದ ಬಿಲ್ಡಿಂಗ್ ಇನ್ಸ್‌ಪೆಕ್ಟರರ ವರದಿಯನ್ನು ವಿಮರ್ಶಿಸುವರೆ ಶ್ರೀಗಳಾದ ಕೆ. ದಾಸ ಸೇರಿಗಾರ, ಬಿ. ವಾಸುದೇವ ರಾವ್, ಓ. ಪೈಕಾರವರಿರುವ ಉಪಸಮಿತಿ ನೇಮಕವಾಯಿತು.

**ಕರ್ನಾಟಕ ಯೂನಿವರ್ಸಿಟಿ ಕಮಿಶನ್—** ಮುಂಬಯಿ ಶ್ರೀಗಳಾದ ಮೆನೋನ್, ನಾಯಕ್ ಮತ್ತು ಡಾ. ಆಡ್ಕೆಯವರು ತಾ. 6ರಂದು ಉಡುಪಿಗೆ ಆಗಮಿಸಿ, ಇಂಜಿನಿಯರಿಂಗ್ ಕೊಲೇಜು ತೆರೆವ ಕುರಿತು ಪರಿಶೀಲನೆ ನಡೆಸಿದರು. ರಾತ್ರಿ ಮುಕುಂದ ನಿವಾಸದಲ್ಲಿ ಅವರ ಗೌರವಾರ್ಥ ಭೋಜನಸಮಾರಂಭ ಜರಗಿತು. ಪ್ರತಿಷ್ಠಿತರನೇಕರು ಈ ಸಮಾರಂಭಕ್ಕೆ ಬಂದಿದ್ದರು. ಏಕೆಡಮಿ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಸ್ವಾಗತ ಭಾಷಣಮಾಡುತ್ತಾ ಏಕೆಡಮಿಯು ಈ ತನಕ ಸಾಧಿಸಿದ ಮತ್ತು ಮುಂದೆ ಸಾಧಿಸುವ ಕಾರ್ಯಗಳನ್ನು ವಿವರಿಸಿ, ಮಣಿಪಾಲದಲ್ಲಿ ತೆರೆಯಬೇಕೆಂದಿರುವ ಇಂಜಿನಿಯರಿಂಗ್ ಕಾಲೇಜಿಗೆ ಸರ್ಕಾರದ ಸಹಕಾರವನ್ನು ಅಪೇಕ್ಷಿಸಿದರು. ಈ ಕುರಿತು ತಮ್ಮ ಕೈಲಾದ ಸಹಕಾರನೀಡುವುದಾಗಿ ಶ್ರೀ ಮೆನೋನ್‌ರವರು ಉತ್ತರವಿತ್ತರು.

**ನಿಧನ —** ಉಡುಪಿ ವಕೀಲ್ ಶ್ರೀ ಬಿ. ಓರಿಯಣ್ಣ ಹೆಗ್ಡೆಯವರ ತಂದೆ ಬಡಗಬೆಟ್ಟು ಶ್ರೀ ಕೃಷ್ಣಯ್ಯ ಹೆಗ್ಡೆರು ತಾ. 5ರಲ್ಲಿ ತಮ್ಮ ಪರ್ಕಳದ ಗೃಹದಲ್ಲಿ 91ನೇ ವಯಸ್ಸಿನಲ್ಲಿ ಪರಲೋಕವಾಸಿಗಳಾದರು. ದಿವಂಗತರು ಬಂಟ ಸಮಾಜದ ಅಗ್ರ ಮಾನ್ಯರೂ ಬುದ್ಧಿಚಾತುರ್ಯವುಳ್ಳವರೂ ಸಾರ್ವಜನಿಕ ಸೇವಾನಿರತರೂ ಆಗಿದ್ದರು.

**ಉಡುಪಿ ಬಾರಿನ ಹೊಸ ಅಧ್ಯಕ್ಷ**

ಶ್ರೀ ಕೆ. ಜೆ ಬಲ್ಲಾಳರು ನಿಧನಹೊಂದಿದುದರಿಂದ, ಬಾರಿನ ಅಧ್ಯಕ್ಷ ಪದವು ತೆರವಾಗಿದ್ದು ಆ ಸ್ಥಳದಲ್ಲಿ ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ಸರ್ವಾನುಮತದಿಂದ ಬಾರ್ ಎಸೋಸಿಯೇಶನಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಪಿ. ಪದ್ಮನಾಭ ರಾಯರು ಹೊಸ ಅಧ್ಯಕ್ಷ ಚುನಾವಣಾ ಸಭೆಯ ಅಧ್ಯಕ್ಷತೆವಹಿಸಿದ್ದರು.

**ವಿವಾಹ ಸಮಾರಂಭಗಳು—** ಅಂಬಲಪಾಡಿ ಶ್ರೀ ತಿಂಗಳ ಶೆಟ್ಟರ ಪುತ್ರ ಶ್ರೀ ವಿಠಲ ಸೆಟ್ಟರು ಕಡೆಕಾರು ಶ್ರೀ ರಾಮಚಂದ್ರ ಸೆಟ್ಟರ ಪುತ್ರಿ ಕುಮಾರಿ ಗುಲಾಬಿಯನ್ನು ತಾ. 6ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

ಮೂಳೂರು ಬಿಕ್ರಿಗುತ್ತು ಶ್ರೀ ಬೆಮರ್ಯ್ಯ ಶೆಟ್ಟರ ಪ್ರಥಮ ಪುತ್ರಿ ಶ್ರೀಮತಿ ವಿಜಯ ಲಕ್ಷ್ಮಿಯನ್ನು ಮತ್ತು ಐಕಳಬಾವ ಶ್ರೀ ಕೃಷ್ಣ ಸೆಟ್ಟರ ಅಳಿಯ (ದಿ. ಕಡಂದಾರು ಪಟೇಲರ ಪುತ್ರ) ಶ್ರೀ ಕೆ. ಬಾಲಕೃಷ್ಣ ಹೆಗ್ಡೆ, ಬಿ. ಎ. (ಆನರ್ಸ್), ಎಮ್ ಎಲ್. ಬಿ. ಅವರ ವಿವಾಹವು ತಾ. 6ರಲ್ಲಿ ಕಟೀಲ್ ಶ್ರೀ ದುರ್ಗಾಪರಮೇಶ್ವರಿ ಹಾಲ್ ಶಾಲೆಯಲ್ಲಿ ಜರಗಿತು.

ದಿ। ರಾಯಪ್ಪ ನಾಟ್ಯರ ಪುತ್ರಿ ಕುಮಾರಿ ಜಯಂತಿಯನ್ನು ಶ್ರೀ ಎಮ್. ವಾಸಪ್ಪ ಶೆಣೈಯವರ ಪುತ್ರ ಶ್ರೀ ಮೋಹನ ಶೆಣೈಯವರು ತಾ. 12ನೇ ಮಧ್ಯಾಹ್ನ ವಧುವಿನ ಶಾಂತಿ ಸದನದಲ್ಲಿ ವಿವಾಹವಾದರು.
ನೂತನ ವಧೂವರರಿಗೆಲ್ಲಾ ಶುಭಾಶಯಗಳು.

**ಅ. ಭಾ. ಅಂಚೆ ಕೆಲಸಗಾರರ ಉಡುಪಿ ಸಂಘಾನ ಸಭೆಯು —** ತಾ. 4ರಲ್ಲಿ ಕೊಚ್ಚಿಕಾಡ್ ಪದಪರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ತುಟ್ಟಿಭತ್ತೆ, ಸೌಲಭ್ಯ ಮತ್ತು ಉಡುಪಿಯ ಅಂಚೆ ಆಫೀಸಿಗೊಂದು ಕಟ್ಟಡ ಕೊಡಬೇಕೆನ್ನುವ ಕೇಳಿಕೆಗಳಾದುವು. ಜಿಲ್ಲಾ ಅಂಚೆ ಖಾತೆಯ ಸುಪರಿಂಟೆಂಡೆಂಟ್ ಶ್ರೀ ಎಸ್. ಎ. ಸಲಾಮ್, ಅವರು ತಮ್ಮಿಂದ ಸಾಧ್ಯವಿದ್ದಷ್ಟು ಕೇಳಿಕೆಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುವುದಾಗಿ ಆಶ್ವಾಸನೆಯಿತ್ತರು. ಶ್ರೀ ಶಿವಾನಂದ ಹೊಳ್ಳರು ಧನ್ಯವಾದಗಳನ್ನಿತ್ತರು.

**ಕುಷ್ಠರೋಗ ದಿನಾಚರಣೆಯು—** ಉಡುಪಿಯ ಸರಕಾರಿ ಆಸ್ಪತ್ರೆಯಲ್ಲಿ ಕಳೆದ ತಾ. 3ರಲ್ಲಿ ಜರಗಿತು. ಡಾ. ಬಿ. ಆರ್. ಆನಾರ್ಡರು ಪ್ರದರ್ಶನಗಳನ್ನು ಉದ್ಘಾಟಿಸಿದರು. ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಬಿ. ಎನ್. ಕರ್ಕೇರರು ಪ್ರದರ್ಶನದ ಕುರಿತು ವಿವರಣೆಯಿತ್ತರು. ಹಿಂದ್ ಕುಷ್ಠ ನಿವಾರಣಾ ಸಂಘದ ಕಾರ್ಯದರ್ಶಿ ಡಾ. ಎ. ಎಫ್. ಕ್ಯಾಲೋರವರು ಕುಷ್ಠರೋಗ ಚಿಕಿತ್ಸಾ ಕ್ರಮವನ್ನು ವಿವರಿಸಿದರು. ಸಂಜೆ ಚಲಚಿತ್ರ ಪ್ರದರ್ಶನವಿತ್ತು.

**ಶ್ರೀ ಸಿರ್ಸಪ್ಪ ಇಜಾರಿಯವರು.** ಶ್ರೀಗಳಾದ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ, ಶಂಕರ ಆಳ್ವ, ರಾಮರಾಯ ಕಿಣಿಯರೊಂದಿಗೆ ತಾ. 11ನೇ ಸಾಯಂಕಾಲ ಇಲ್ಲಿಗೆ, ಆಗಮಿಸಿ ಮುಂಬರುವ ಸಾರ್ವತ್ರಿಕ ಚುನಾವಣೆಯ ಉಮೇದ್ವಾರರ ಕುರಿತು ಕಾಂಗ್ರೆಸಿಗರ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಂಡು ಮರುದಿನ ಬ್ರಹ್ಮಾವರಕ್ಕೆ ತೆರಳಿದರು.

**ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ—** ದ. ಕ. ಜಿಲ್ಲಾ ಶಾಖೆಯ ರಜತಮಹೋತ್ಸವ ಮತ್ತು ವಾರ್ಷಿಕ ದಿನಾಚರಣೆಯು ತಾ. 9ರಲ್ಲಿ ಮೈಸೂರು ರಾಜ್ಯದ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಡಾ. ಬಿ. ವೆಂಕಟಸುಬ್ಬರಾಯರ ಅಧ್ಯಕ್ಷತೆಯಲ್ಲಿ ಮಂಗಳೂರು ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಭವನದಲ್ಲಿ ಜರಗಿತು. ಡಾ. ಎಮ್. ಉಮೇಶರಾಯರು ಸ್ವಾಗತಭಾಷಣ ಮಾಡಿದರು. ಕಾರ್ಯದರ್ಶಿ ಡಾ. ವಿ. ಆರ್. ಭಟ್ಟರು ಮೈಸೂರು ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ, ಡಾ. ಯು. ಕೃಷ್ಣರಾವ್, ಮದ್ರಾಸ್ ಮೊದಲಾದವರಿಂದ ಬಂದ ಸಂದೇಶಗಳನ್ನೋದಿದರು. ಜತೆಕಾರ್ಯದರ್ಶಿ ಡಾ. ಬಿ. ಆರ್. ಹೆಗ್ಡೆಯವರು ಎಸೋಸಿಯೇಶನಿನ ಸಂಕ್ಷಿಪ್ತ ವರದಿವಾಚನಮಾಡಿದರು. ಪೂರ್ವಾಹ್ನ ನಡೆದ ವಾರ್ಷಿಕ ಮಹಾಸಭೆಯಲ್ಲಿ ಹೊಸ ವರ್ಷದ ಡೈರೆಕ್ಟರರ ಚುನಾವಣೆಯಾಯಿತು. ರಾತ್ರಿ ಭೋಜನಕೂಟವಿತ್ತು.

## ನೋಟೀಸು

1, ಪೆರ್ಡೂರು ಮುಜರಾಯಿ ದಾರ್ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಬತ್ತ ಮುಡಿ ಸುಮಾರು 300ಕ್ಕೂ ಮೇಲ್ಪಟ್ಟು ಖರೀದಿಗೆ ಕೊಡುವುದಿದೆ.

2, ಭಂಡಾರದ ಬಾಬ್ತು ಬಾಸ್ಲುಗದ್ದೆ ಮೂಡಲು ಹೋಗುವ ರಸ್ತೆ ಬದಿ ಕೊಪ್ಲ ತೋಟಕ್ಕೆ ತಾಗಿ ಇರುವ, ಈ ಹಿಂದೆ ಬಳೆಗಾರ ರಂಗಪ್ಪನು ವಾಸವಾಗಿದ್ದ ಮನೆ ಕಟ್ಲೋಣ.

ಈ ಎರಡರ ಬಗ್ಗೆ ಇದೇ ತಾರೀಕು 23-12-1956ನೇ ಆದಿತ್ಯವಾರ ಅಪರಾಹ್ನ ಗಂಟೆ 4ಕ್ಕೆ ಭಂಡಾರದ ಪರ್ಕಕ್ಕೆ ಒಳಪಟ್ಟ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಆ ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

ವಿ. ಸೂ:— 1, ಬತ್ತವನ್ನು ವಹಿಸಿಕೊಂಡವರು ಏಲಂ ಆದ ತಾರೀಕಿನಿಂದ 3 ದಿನದ ಒಳಗೆ ಡೆಲಿವರಿ ಪಡಕೊಳ್ಳತಕ್ಕದ್ದು.

2, ಕಟ್ಲೋಣವನ್ನು ವಹಿಸಿಕೊಂಡವರು 1 ವರ್ಷದ ಬಾಡಿಗೆಯನ್ನು ಠೇವಣಾತಿಯಾಗಿ ಇಡತಕ್ಕದ್ದು.

ಪೆರ್ಡೂರು, ತಾ. 10-12-56. } K. B. Shetty. Executive Officer.


# ಗೋವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

# ಮಕ್ಕಳ ಮಗ್ಗಿಪುಸ್ತಕ

**ನವಯುಗ ಪ್ರೆಸ್, ಉಡುಪಿ.**

## ವೈದ್ಯಕೀಯ ಪ್ರೋತ್ಸಾಹ

(೫ನೇ ಪುಟದಿಂದ)

ಇತ್ಯಾದಿಗಳು ಕೂಲಂಕುಷ ಅನುಭವಗಳು ಇರಬೇಕಾದುದು ಅತ್ಯಗತ್ಯವು. ದೇಹ ಶಾಸ್ತ್ರದ ವಿಚಾರವೇ ಚೆನ್ನಾಗಿ ತಿಳಿಯದೆ ಹೋದರೆ ರೋಗ ಪರೀಕ್ಷಾಕ್ರಮವು ಹೇಗೆ ಸಾಧ್ಯ ಎಂಬುದು ಗಮನಾರ್ಹ ವಿಚಾರವು. ವೈದ್ಯಕೀಯ ವೃತ್ತಿಯಲ್ಲಿ ರೋಗ ಪರೀಕ್ಷಾಕ್ರಮವು ಅತೀ ಮಹತ್ವದ್ದು. ಇಂಥ ಜವಾಬ್ದಾರೀ ಕೆಲಸವು ಸುಸೂತ್ರವಾಗಿ ಸಾಗಬೇಕಾದರೆ ದೇಹ ಶಾಸ್ತ್ರದ ಸಂಪೂರ್ಣ ಅನುಭವವಿಲ್ಲದೆ ಸಾಧ್ಯವಿಲ್ಲ. ನಾಡಿ ಬಡಿತದ ಪರೀಕ್ಷೆಯಿಂದಲೇ ದೇಹದ ವಿವಿಧ ಅಂಗಗಳ ನ್ಯೂನತೆಗಳಿಂದೊಡಗೂಡಿದ ಕಾಹಿಲೆಯ ಪರೀಕ್ಷೆಯಾಗುವುದೆಂದು (ವಾತ, ಪಿತ್ತ, ಕಫ) ಅಭಿಪ್ರಾಯವಿದೆಯಾದರೂ ಆಧುನಿಕ ವಿಜ್ಞಾನಿಗಳು ನಾಡಿ ಎಂದರೆ ಹೃದಯ ಕವಾಟದ ಹೃತ್ಕುಕ್ಷಿಯಿಂದ ರಕ್ತವು ಅಯೋರ್ಟಾಕ್ಕೆ ಧುಮುಕುವಾಗ ಅಯೋರ್ಟಾದಲ್ಲಿ ಆಗ ಉಂಟಾಗುವ ರಕ್ತದ ಅಲೆಗಳ ಪ್ರತಿಕ್ರಿಯೆಯೇ ನಾಡಿಬಡಿತವು ಎಂದು ಶೋಧಿಸಿರುವರು. ಈ ಬಡಿತವು ಪ್ರಾಯಸ್ಥರಲ್ಲಿ ಮಿನಿಟಿಗೆ 72; ಮಕ್ಕಳಲ್ಲಿ ಸ್ವಲ್ಪ ಹೆಚ್ಚು; ಮುದುಕರಲ್ಲಿ ಸ್ವಲ್ಪ ಕಡಿಮೆ ಹೀಗೆಲ್ಲಾ ವ್ಯತ್ಯಾಸವಿದೆ. ಈ ಬಡಿತದಿಂದ ಹೃದಯದ ಸಾಮಾನ್ಯ ಸ್ಥಿತಿಯನ್ನು ತಿಳಿಯಬಹುದೆಂದು ಆಧುನಿಕ ವಿಜ್ಞಾನಿಗಳ ಅಭಿಮತ.

ಆಯುರ್ವೇದ ವೈದ್ಯರಿಗೂ ಮನುಷ್ಯ ದೇಹ ಶಾಸ್ತ್ರದಲ್ಲಿ ಹೆಚ್ಚಿನ ಅನುಭವ ದೊರಕುವಂತಾಗಬೇಕು. ಸಾಮಾನ್ಯ ವಿದ್ಯಾಭ್ಯಾಸ ಸಂಬಂಧವಾದ ಯೋಗ್ಯತೆ ಸಾಕಷ್ಟು ಇಲ್ಲದವರಿಗೆಲ್ಲಾ ಒಂದು ತರಬೇತಿಯ ಪಾಠಶಾಲೆ (Refresher course) ತೆರೆದು ಅದರಲ್ಲಿ ಅಂಥವರೆಲ್ಲಾ ಭಾಗವಹಿಸುವಂತಾಗಬೇಕು. ಜಿಲ್ಲೆಯ ಮುಖ್ಯ ಆಸ್ಪತ್ರೆಗಳಲ್ಲಿ ಇಂಥ ತರಬೇತಿ ಕೇಂದ್ರವನ್ನು ತೆರೆದು ಮನುಷ್ಯ ದೇಹದ (ಹೆಣಗಳ) ವಿವಿಧ ಅಂಗ ಭಾಗಗಳನ್ನೆ ವೈದ್ಯರು ಸ್ವತಃ ನೋಡಿ ತಿಳಿಯುವಂತಾಗಬೇಕು. ಆ ಅಂಗಭಾಗಗಳ ಕಾರ್ಯ, ಅವುಗಳ ಕೆಡುವಿಕೆಗೆ ಕಾರಣ ಮೊದಲಾದುವುಗಳು ಪ್ರತ್ಯಕ್ಷ ಪರಿಶೀಲಿಸುವಂತಾಗಬೇಕು. ಮೇಲೆ ಸೂಚಿಸಿದಂತೆ ವೈದ್ಯರೆಲ್ಲರೂ ಉತ್ಸಾಹದಿಂದ ಇಂತಹ ಕೇಂದ್ರಗಳಲ್ಲಿ ಭಾಗವಹಿಸುವಂತಾದರೆ ರೋಗ ಪರೀಕ್ಷಾಕ್ರಮವು ಇನ್ನಷ್ಟು ಯಶಸ್ವಿಯಾಗಿ ಸಾಗುವುದರಲ್ಲಿ ಸಂದೇಹವಿಲ್ಲ. ಸರಕಾರವು ಇಂಥ ಕೇಂದ್ರಗಳನ್ನು ಶೀಘ್ರವಾಗಿ ತೆರೆಯಲು ಮುಂದಾಗಬೇಕು.

ಅಲ್ಲದೆ ಸರಕಾರವು ಶುದ್ಧ ಆಯುರ್ವೇದ ಕಾಲೇಜುಗಳನ್ನು ತೆರೆದು ಅದರಿಂದ ಯೋಗ್ಯ ವೈದ್ಯರು ತಯಾರಾಗುವಂತೆ ಸಹಕರಿಸಬೇಕು—ನಮ್ಮ ನಾಡಿನ ಪ್ರಾಚೀನ ವಿಜ್ಞಾನವಾದ ಆಯುರ್ವೇದ ವೈದ್ಯಕೀಯ ಪದ್ಧತಿಯು ಸರ್ವಾಂಗೀಣ ಅಭಿವೃದ್ಧಿಯಾಗುವಂತೆ ಸರಕಾರವು ತಕ್ಕ ಯೋಜನೆಗಳನ್ನು ಕೈಗೊಳ್ಳಬೇಕು.

—ಶ್ರೀ ಶಿವರಾಮ ಶೆಟ್ಟಿ, ಮುಟ್ಪಾಡಿ.

### ಪ್ರಕಟಣೆ

ಉಡುಪಿ ತಾಲೂಕು ಪಾಂಗಾಳ ಗ್ರಾಮದಲ್ಲಿರುವ ಶಿದ್ದಲಿಂಗಯ್ಯನವರ ಮಗಳು ನೀಲಮ್ಮನು ಸರ್ವ ಜನರಿಗೂ ಈ ಮೂಲಕ ತಿಳಿಸುವುದೇನೆಂದ್ರೆ- ನನ್ನ ಪೂರ್ವಾಧಿಕಾರಿ ಶಿದ್ದಲಿಂಗಯ್ಯ ಕೂಡಾ 3 ಜನರಿಗೆ ಉಡುಪಿ ತಾಲೂಕು ಪಾಂಗಾಳ ಗ್ರಾಮದಲ್ಲಿರುವ ತೋಮ ಸೇರಿಗಾರನು ತಾ. 3-3-1869ರಲ್ಲು ಬರಕೊಟ್ಟ ಮೂಲಗೇಣಿ ಎದುರ್ಮಡಿಗೆ ಕಾರಣವಾದ ಆಸ್ತಿಯನ್ನು ಸದ್ರಿ ತೋಮ ಸೇರಿಗಾರನ ವಾರಿಸ್ದಾರರಾದ ತುಂಗು ಹೆಂಗ್ಸು, ಮೊತ್ತ್ಯ ಸೇರಿಗಾರ, ಪದ್ದು ಹೆಂಗ್ಸು, ಕೆಂಚ ಸೇರಿಗಾರ, ನರ್ಸು ಹೆಂಗ್ಸು, ಸೇಸಿ ಹೆಂಗ್ಸು, ಸೀನ ಸೇರಿಗಾರ, ಚಂದು ಸೇರಿಗಾರ, ಕಮಲು ಹೆಂಗ್ಸು, ಬೊಮ್ಮಿ ಹೆಂಗ್ಸು ವಗೈರೆ ಸಹ ಸ್ವಾಧೀನಗಾರರಾಗಿ ಅನುಭವಿಸಿಕೊಂಡು ಬರುತ್ತಾರೆ. ಸದ್ರಿ ಮೂಲಗೇಣಿ ಆಸ್ತಿಯನ್ನು ಈಡು ಅಡವು ಕ್ರಯ ವಗೈರೆ ಪರಾಧೀನ ಮಾಡಬಾರದಾಗಿ ಸದ್ರಿ ಮೂಲಗೇಣಿ ಚೀಟಿನಲ್ಲಿ ಕಂಡೀಕ್ತ ಶರ್ತ ಇರುತ್ತದೆ.

ಮೇಲೆ ಹೆಸರು ಕಾಣಿಸಿದ ತುಂಗು ಹೆಂಗ್ಸು ವಗೈರೆ ಸದ್ರಿ ಮೂಲಗೇಣಿ ಹಕ್ಕನ್ನು ಪರಾಧೀನವಾಡುತ್ತಾರಾಗಿ ತಿಳಿದು ಬರುವುದ್ರಿಂದ ಸದ್ರಿ ಮೂಲಗೇಣಿ ಹಕ್ಕನ್ನು ಯಾರೂ ಈಡು-ಅಡವು-ಕ್ರಯ, ವಗೈರೆ ಯಾವ ವಿಧದಿಂದ್ಲೂ ಪರಾಧೀನಮಾಡಿಕೊಳ್ಳಬಾರದಾಗಿಯೂ ಹಾಗೆ ಮಾಡಿಕೊಂಡ್ರೆ ಸದ್ರಿ ಮೂಲಗೇಣಿ ಹಕ್ಕು ರದ್ದತಿಗೂ, ಆಸ್ತಿ ಸ್ವಾಧೀನತೆಗೂ ದಾವಾಮಾಡುವುದಾಗಿಯೂ ಈ ಮೂಲಕ ಸರ್ವ ಜನರಿಗೂ ತಿಳಿಸಿರುತ್ತೇನೆ.

||| ಈ ಮೂರು ಗೆರೆ ಮತ್ತು ಈ ಎಡ ಹೆಬ್ಬೆಟ್ಟಿನ ಗುರ್ತು ನೀಲಮ್ಮನ ರುಜು.

Pangala 10—12—1956.

## ಎಲ್ಲೆಲ್ಲಿ ಏನೇನು?

**ಕಾಪು**— ಸ್ಥಳೀಯ ಬೋರ್ಡು ಹಾ. ಪ್ರಾ. ಶಾಲೆಯಲ್ಲಿ ತಾ 1ರಲ್ಲು ಕುಷ್ಠರೋಗ ದಿನ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ವ್ಯವಸ್ಥೆಗೊಳಿಸಲಾದ ಪ್ರದರ್ಶನವನ್ನು ಡಾ. ವಿಠಲ ಶೆಟ್ಟರು ಉದ್ಘಾಟಿಸಿದರು. ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಬಿ. ಎನ್. ಕರ್ಕೇರರು ಪ್ರದರ್ಶಿಕೆಗಳನ್ನು ವಿವರಿಸಿದರು.

**ಮೂಲ್ಕಿ**— ಸ್ಥಳೀಯ ಪಂಚಾಯತ ಕ್ಷೇತ್ರದ ರಸ್ತೆಗಳಿಗೆ ವಿದ್ಯುದ್ದೀಪಗಳನ್ನು ಬೆಳಗಿಸುವ ಸಮಾರಂಭವು ತಾ. 4ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಅಧ್ಯಕ್ಷ ಶ್ರೀ ಬಿ. ಭೋಜರಾಯರು ಸ್ವಾಗತ ಮಾತುಗಳನ್ನಾಡಿದರು. ಡಾ. ರಾಯಪ್ಪ ಕಾಮತರು ಸಂದೇಶಗಳನ್ನೋದಿದರು ಸಭಾಧ್ಯಕ್ಷರು ಜಿಲ್ಲೆಯಲ್ಲಿ ಆದ ವಿದ್ಯುತ್ ಪ್ರಸಾರದ ಕುರಿತು ಮಾತನಾಡಿದರು

**ಕುಂದಾಪುರ**-- ಸ್ಥಳೀಯ ಬೋರ್ಡು ಹೈಸ್ಕೂಲಿನ ಎನ್. ಸಿ. ಸಿ. ದಳದ ವಾರ್ಷಿಕೋತ್ಸವವು ತಾ. 2ರಲ್ಲಿ ಡಿ. ಮುನ್ಸಿಫ್ ಶ್ರೀ ಎಚ್. ಎಸ್. ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ವಿಟ್ಟಪ್ಪನವರು ಸ್ವಾಗತಭಾಷಣಮಾಡಿದರು. ದಳಾಧಿಕಾರಿ ಶ್ರೀ ರಾಮಕೃಷ್ಣ ಹೆಬ್ಬಾರರು ವರದಿ ವಾಚನಮಾಡಿದರು. ಅಂದು ಬೆಳಿಗ್ಗೆ ನಡೆದ ವಿವಿಧ ಪಂದ್ಯಗಳಲ್ಲಿ ಗೆದ್ದ ಸೈನಿಕ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಬಹುಮಾನವಿತರಣೆಮಾಡಿದರು.

**ಹೆಬ್ರಿ**— ಇಲ್ಲಿಯ ಹೈಸ್ಕೂಲ್ ಸಹಾಯಾರ್ಥವಾಗಿ ತಾ. 4ರಲ್ಲಿ ಶ್ರೀ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಭಾ ಮಂಗಳೂರು, ಅವರು ಭಸ್ಮಾಸುರಮೋಹಿನಿ ಮತ್ತು ಕೃಷ್ಣಾರ್ಜುನ ಎಂಬ ಪೌರಾಣಿಕ ಭಾಗವನ್ನು ಪ್ರದರ್ಶಿಸಿದರು. ಉಡುಪಿಯ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಕೆ ಕೃಷ್ಣಯ್ಯನವರು ಅಧ್ಯಕ್ಷತೆವಹಿಸಿದ್ದರು. ಶ್ರೀಗಳಾದ ಎಚ್. ಭುಜಂಗ ಬಲ್ಲಾಳ್ ಮತ್ತು ಗೋಪಾಲಕೃಷ್ಣ ಕೆದಿಲಾಯರು ಕಾಲೋಚಿತಮಾತುಗಳನ್ನಾಡಿದರು

**ಪುತ್ತೂರು**— ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 2ರಲ್ಲು ಶ್ರೀ ಚೆಟ್ಟಿಯಾರರ ಗೀತಾ ಮಂದಿರದಲ್ಲಿ ಕುಮಟೆಯ ಶ್ರೀ ಬಿ. ಎಚ್. ಶ್ರೀಧರನವರು ತರ್ಕದ ವಿಚಾರವನ್ನೆತ್ತಿ ಒಂದೂವರೆ ಗಂಟೆ ತನಕ ಚಲೋ ಉಪನ್ಯಾಸವಿತ್ತರು. ಶ್ರೀ ಎ. ಪಿ. ಸುಬ್ಬಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಶಿವರಾಮ ಕಾರಂತರು ಮುಖ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು.

**ಕಾರ್ಕಳ**— ನವ ಮೈಸೂರು ರಾಜ್ಯದಲ್ಲಿ ಭಾಷಾ ಪಂಡಿತರ ಸ್ಥಾನಮಾನ, ವೇತನ ಕ್ರಮ ಮುಂತಾದ ಸಮಸ್ಯೆಗಳನ್ನು ಚರ್ಚಿಸುವರೆ ಭಾಷಾ ಪಂಡಿತರ ಜಿಲ್ಲಾ ಪರಿಷತ್ತು ಇದೇ ತಿಂಗಳಲ್ಲಿ ಜರಗಲಿರುವುದು.

**ಧರ್ಮಸ್ಥಳ**—ತಾ. 2ರಲ್ಲು ಧರ್ಮಸ್ಥಳದ ವಸಂತ ಮಹಲಿನಲ್ಲಿ ಶ್ರೀ. ಡಿ. ಪುಟ್ಟ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ರತ್ನವರ್ಮ ಹೆಗ್ಗಡೆಯವರ ಸಮ್ಮುಖದಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀ. ಎ. ರಾಮಣ್ಣ ಸೆಟ್ಟರು ಸ್ವಾಗತಿಸಿದರು. ಕಳೆದ ಮಳೆಗಾಲದಲ್ಲಿ ಶ್ರೀ ಧರ್ಮಸ್ಥಳದ ಬಳಿಯ ಸೇತುವೆಯನ್ನು ಕಾರಿನಲ್ಲಿ ಕುಳಿತು ಕೆಲವರು ದಾಟುತ್ತಿದ್ದಾಗ, ಆ ನೇತ್ರಾವತಿ ನದಿಯ ಮಹಾ ಪ್ರವಾಹದ ಹೊಡೆತಕ್ಕೆ ಸಿಕ್ಕಿ ಕಾರೂ ಅದರಲ್ಲಿದ್ದ ಯಾತ್ರಿಕರೂ ನೀರಿನಲ್ಲಿ ಕೊಚ್ಚಿಕೊಂಡು ಹೋದ ಸಂದರ್ಭದಲ್ಲಿ, ಜೀವದಾಸೆ ಬಿಟ್ಟು ಓರ್ವ ಬಾಲಿಕೆಯ ಜೊತೆಗಾದ ನಾಲ್ವರನ್ನು ರಕ್ಷಿಸಿದ ಶ್ರೀಗಳಾದ ಮಂಜಪ್ಪ ರೈ, ಅಮ್ಮು ಪೂಜಾರಿ ಕಾರಿನ ಡ್ರೈವರ್, ಕೆ. ವಿ. ಜಾಲನ್‌ರವರಿಗೆ ಸರಕಾರದ ಬಹುಮಾನ ಪದಕಗಳನ್ನು ವಿತರಣೆ ಮಾಡಲಾಯಿತು. ಬೆಳ್ತಂಗಡಿ ತಹಶಿಲ್ದಾರ್ ಶ್ರೀ ರಮೇಶರಾಯರು ವಂದಿಸಿದರು.

**ನಿಡ್ಲೋಡಿ**- ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ಕಳೆದ ತಾ. 24ರಲ್ಲಿ ಶ್ರೀ ಬಿ. ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅವರು ತಮ್ಮ ಭಾಷಣದಲ್ಲಿ ನವೋದಿತ ಕರ್ನಾಟಕ ರಾಜ್ಯದ ಕುರಿತು ಪ್ರಸ್ತಾಪಿಸಿ ಕರ್ನಾಟಕವು ಯಕ್ಷಗಾನ ಕಲೆಯ ತವರೂರಾದ ಕಾಸರಗೋಡನ್ನು ಕಳೆದುಕೊಂಡುದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದರು. ಸಭಾಂತ್ಯದಲ್ಲಿ ಪ್ರಸಿದ್ಧ ಯಕ್ಷಗಾನ ಸಾಹಿತಿಗಳ ಕೂಡುವಿಕೆಯಿಂದ 'ಅತಿಕಾಯ-ಇಂದ್ರಜಿತು ಕಾಳಗ' ಎಂಬ ಕಥಾಭಾಗದ ಅರ್ಥವಿವರಣೆಯಾಯಿತು.

**ಹಿರಿಯಡಕ**-- ಕಾಶಿ ಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು ತಾ 2ರಲ್ಲು ಹಿರಿಯಡಕಕ್ಕೆ ಆಗಮಿಸಿದಾಗ ಶ್ರೀ ಟಿ. ರಮಾನಾಥ ಪೈ ಮೊದಲಾದ ಸ್ವಜಾತಿ ಬಾಂಧವರು ಸ್ವಾಗತವಿತ್ತರು. ಶ್ರೀ ಪೈಗಳು ತಮ್ಮ ಮಿಲ್ಲಿನ ವಠಾರದಲ್ಲಿ ಸ್ವಾಮಿಗಳವರಿಗೆ ಪಾದಪೂಜಾದಿಗಳನ್ನು ಸಲ್ಲಿಸಿ, ಫಲ ಮಂತ್ರಾಕ್ಷತೆ ಮುಖೇನ ಸ್ವಾಮಿಗಳವರ ಆಶೀರ್ವಾದಗಳನ್ನು ಪಡೆದರು. ಡಾ. ಟಿ. ಮಾಧವ ಪೈ ಮತ್ತು ಡಾ. ಸುಂದರರಾಮ ಪೈಗಳು ಸಮಾಜದ ಅಭ್ಯುದಯದ ಕುರಿತು ಮಾತನಾಡಿದರು. ಸತ್ಯ, ಧರ್ಮ ಮಾರ್ಗದಲ್ಲಿ ನಡೆದು ಕರ್ತವ್ಯ ಪಾಲನೆ ಮಾಡಬೇಕೆಂದು ಸ್ವಾಮಿಗಳವರು ಉಪದೇಶವಿತ್ತರು.

**ಬೆಳ್ತಂಗಡಿ**—ಬೆಳ್ತಂಗಡಿ ತಾಲೂಕಿನ ಲೋಕಲ್ ಡಿ. ತಹಶಿಲ್ದಾರರಾಗಿದ್ದ ಶ್ರೀ ಸಿ. ಎಚ್. ದೇರಣ್ಣ ರೈಗಳು ತಾ. 6ರಲ್ಲು ಮಂಗಳೂರು ಸರಕಾರಿ ಆಸ್ಪತ್ರೆಯಲ್ಲಿ ನಿಧನಹೊಂದಿದರೆನ್ನಲು ವಿಷಾದವೆನಿಸುತ್ತದೆ. ಇವರ ವಯಸ್ಸು ಸಾಧಾರಣ 50 ಆಗಿತ್ತು.

**ಕಟಪಾಡಿ**—ಭುವನೇಂದ್ರ ಪ್ರೊ. ಡಕ್ಟ್ ಪ್ರೈವೇಟ್, ಲಿಮಿಟೆಡ್—ಇವರ ರಜತೋತ್ಸವವು ಇದೇ ತಾ. 19ರಂದು ಆರಂಭವಾಗಲಿರುವುದು. ತತ್ಸಂಬಂಧ ಕಾಶಿ ಮಠದ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರೂ, ಗೋಕರ್ಣ ಪರ್ತಗಾಳಿ ಮಠದ ಶ್ರೀ ದ್ವಾರಕನಾಥ ಸ್ವಾಮಿಗಳವರೂ ಸಕಾಲದಲ್ಲಿ ಕಟಪಾಡಿಗೆ ಚಿತ್ತೈಸಲಿರುವರೆಂದೂ ತಿಳಿದು ಬರುತ್ತದೆ.

**ಮಣಿಪಾಲ**— ಸ್ಥಳೀಯ ಹೈಸ್ಕೂಲಿನಲ್ಲಿ "ಸಾಮಾಜಿಕ ಶಿಕ್ಷಣ ದಿನಾಚರಣೆಯು" ಶಾಲಾ ಹೆಡ್ಮಾಸ್ತರ್ ಶ್ರೀ ಜಿ. ಶ್ಯಾಮರಾಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾಧ್ಯಕ್ಷರು ಪ್ರಥಮತ 'ಅನುಭವ' ಎಂಬ ಹಸ್ತಪತ್ರಿಕೆಯನ್ನು ಉದ್ಘಾಟಿಸಿದರು.

**ಎರ್ಮಾಳು** — ಉಡುಪಿಯ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್ ಸಂಜೀವರಾಯರು ಸದ್ಯವೇ ಕೆಲಸದಿಂದ ನಿವೃತ್ತರಾಗಲಿರುವ ಕಾರಣ ಅವರಿಗೆ ಎರ್ಮಾಳು ಉಪಾಧ್ಯಾಯರು ವಿದಾಯ ಸತ್ಕಾರವಿತ್ತು ಗೌರವಿಸಿದರು. ಶ್ರೀ ಟಿ. ಎ. ಪೈ. ಎಮ್. ಎಲ್. ಎ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

**ಬೆಳ್ಮಣ್ಣು** — ಸ್ಥಳೀಯ ಯುವಕರ ಸಂಘದ ವಾರ್ಷಿಕೋತ್ಸವವು ತಾ. 2ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಬೆಳ್ಮಣ್ಣು ಸಮಾಜ ಮಂದಿರದಲ್ಲಿ ಜರಗಿತು. ಸಂಘದ ಅಧ್ಯಕ್ಷ ಡಾ. ಕೊರಡ್ಕಲ್ ವೆಂಕಟ್ರಾಯರು ಸ್ವಾಗತಭಾಷಣ ಮಾಡಿದರು. ಶ್ರೀ ಬಿ. ಎಸ್. ಜನಾರ್ಧನ ಕಾಮತರು ವರದಿವಾಚನಮಾಡಿದರು. ಶ್ರೀ ಎಸ್. ಆರ್. ಆಚಾರ್ಯ, ವಿ. ರಮುಖಾನ್, ಎಸ್. ಕೃಷ್ಣ ಸೆಟ್ಟಿ, ಮತ್ತು ಶ್ರೀಮತಿ ಪ್ರೇಮಾ ಎ. ಪೈಗಳು ಕಾಲೋಚಿತಮಾತುಗಳನ್ನಾಡಿದರು.

**ಮಂತ್ರಿ ಶ್ರೀ ಮರಿಯಪ್ಪನವರು**- ಮೈಸೂರಿನ ಆರ್ಥಿಕ ಮತ್ತು ಹಿಂದುಳಿದ ವರ್ಗಗಳ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ತಾ 10ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿ, ದ. ಕ. ಹಿಂದುಳಿದ ವರ್ಗಗಳ ಮುಖಪತ್ರವಾಗಿ ಪ್ರಕಟಿಸಲಾದ ಬಹುಮತ ಮಾಸಪತ್ರಿಕೆಯ ಉದ್ಘಾಟನೆಯನ್ನು ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ವೆಂಕಟ್ರಮಣ ಗೌಡ; ಎಮ್. ಎಲ್. ಎ ಅವರು ವಹಿಸಿದ್ದರು. ಸಮಾರಂಭವು ಕುದ್ರೋಳಿಯ ಶ್ರೀ ಗೋಕರ್ಣನಾಥ ದೇವಸ್ಥಾನದ ಅಂಗಣದಲ್ಲಿ ನಡೆಯಿತು. ಶ್ರೀ ಎನ್. ಎಸ್. ಸುವರ್ಣ, ಎಮ್. ಎಲ್. ಎ, ಅವರು ಸ್ವಾಗತ ಭಾಷಣ ಮಾಡಿದರು ಬಹುಮತ ಪತ್ರಿಕಾ ಸಂಪಾದಕ ಶ್ರೀ ಎಮ್. ರಮಾನಾಥರು ಸಂದೇಶಗಳನ್ನೋದಿದರು. ಮಂತ್ರಿ ಶ್ರೀ ಮರಿಯಪ್ಪನವರು ತಮ್ಮ ಭಾಷಣದಲ್ಲಿ ಹಿಂದುಳಿದ ವರ್ಗಗಳ ಉದ್ಧಾರವು ಕಾಂಗ್ರೆಸ್ ಸಂಸ್ಥೆಯಿಂದಲೇ ಆಗುವುದೆಂದರು. ಮುಂದುವರಿದ ಸಮಾಜದವರು ಹಿಂದುಳಿದ ವರ್ಗಗಳ ಉದ್ಧಾರಕ್ಕಾಗಿ ಶ್ರಮಿಸಬೇಕು ಎಂದು ಮುಂತಾಗಿ ನುಡಿದರು.

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ
ಹಿರೋಶಿಮಾದಿಂದ ಜಿನೀವ
ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.
ಉತ್ತಮ ಕಾಗದ. ಬೆಲೆ: ರೂ. ೧-೮-೦.
ನವಯುಗ ಪ್ರೆಸ್, ಉಡುಪಿ.

# ಮಂಗಳೂರು

**ಯುವಕ ಕಾಂಗ್ರೆಸ್ ಸಾಪ್ತಾಹಿಕ ಸಭೆಯು—** ತಾ. ೭ರಲ್ಲಿ ಶ್ರೀ ಟಿ. ಕೆ. ಸುಜೀವ ಮನೋಹರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಶ್ರೀ ಕೆ. ಆರ್. ಆಚಾರ್ಯರು ಮಾತನಾಡುತ್ತಾ, ಭಾರತ ಸರಕಾರ ಪಂಗೇರಿ ವಿಷಯದಲ್ಲಿ ತಳೆದ ಧೋರಣೆಯನ್ನು ವಿವರಿಸಿದರು. ...ಯಲೂರಿನಲ್ಲಿ ಸಂಭವಿಸಿದ ರೈಲು ಅಪಘಾತದಲ್ಲಿ ಮರಣ ಹೊಂದಿದವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

**ದ. ಕ. ಜಿಲ್ಲಾ ಅಭಿವೃದ್ಧಿ ಮತ್ತು ...ತಚಿಂತನಾ ಬೋರ್ಡಿನ** ಆಶ್ರಯದಲ್ಲಿ ತಾ. ೧ರಲ್ಲು ಶ್ರೀ ಕೆ. ವಿ. ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಶ್ರೀ ಬಿ. ...ಕುಂಠ ಬಾಳಿಗ, ಎಮ್. ಎಲ್. ಎ, ಅವರು 'ನಮ್ಮ ಬ್ಯಾಂಕು ವ್ಯವಹಾರಗಳು ಮತ್ತು ಅವರ ಅವಶ್ಯಕತೆಗಳು' ಎಂಬೀ ವಿಷಯದಲ್ಲಿ ಉದಾತ್ತ ಭಾಷಣವಿತ್ತರು. ಶ್ರೀ ಬಿ. ... ಶೆಟ್ಟಿಯು ವಂದನೆಗಳನ್ನರ್ಪಿಸಿದರು.

**ನಗರಸಭೆಯ ವಿನಂತಿ—** ಮಂಗಳೂರು ನಗರ ಸಭೆಯು ತಾ. ೩ರಲ್ಲು ಶ್ರೀ ಕೆ. ...ರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಲ್ಲಿ ಜನತೆಗೆ ...ದಿನ ಬೆಲೆಯಲ್ಲಿ ಅಕ್ಕಿ ಒದಗಿಸುವಂತೆ ...ಡ.೯ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆನು ಮೈಸೂರು ಸರಕಾರವನ್ನು ವಿನಂತಿಸಬೇಕೆನುವ ಶ್ರೀ ಎ. ಶಾಂತಾರಾಮ ಪೈಗಳ ...ರ್ಣಯ ಪಾಸಾಯಿತು. ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಮಂಗಳೂರನ್ನು ಸಂದರ್ಶಿಸುವಾಗ ಅವರಿಗೆ ಸ್ವಾಗತ ...ಡಬೇಕೆಂದು ನಿರ್ಧಾರವಾಯಿತು.

**ವೀಣಾವಾದನ—** ಮದ್ರಾಸಿನ ಪ್ರಖ್ಯಾತ ವೀಣಾವಾದನ ವಿಶಾರದ ಶ್ರೀ ಎಸ್. ...ಲಚಂದರರ ಕಚೇರಿಯು ತಾ. ೩ರಲ್ಲಿ ...ನ್‌ಬೋಸ್ಕೊ ಮಂದಿರದಲ್ಲಿ, ಲಲಿತಕಲಾ ಮಂಡಳಿಯ ಆಶ್ರಯದಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ...ಯಮುತ್ತೂರು ದಕ್ಷಿಣಾಮೂರ್ತಿಯವರ ಪಿಟೀಲು ಮತ್ತು ಗುರುವಾಯೂರಿನ ...ರೈಯವರ ಮೃದಂಗ ವಾದನವೂ ಇತ್ತು.

**ನಿಧನ—** ಕೊಯಮುತ್ತೂರಿನ ಪಂಕಜ ...ಲ್ಸಿನಲ್ಲಿ ಇಲೆಕ್ಟ್ರಿಕಲ್ ಎಂಜಿನಿಯರರಾಗಿದ್ದ ಶ್ರೀ ಸುಬ್ಬಯ್ಯ ಸೆಟ್ಟರು ಕಳೆದ ತಾ. ೨೫ರಲ್ಲಿ ಕೊಯಮುತ್ತೂರಲ್ಲಿ ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ. ದಿವಂಗತರು ಮಂಗಳೂರಿನ ಡಾ. ಕೆ. ಬಾಳಪ್ಪ ಸೆಟ್ಟರ ಹಿರಿಯ ಸಹೋದರರಾಗಿರುವರು.

**ಭಾಷಣ—** ತಾ. ೩ರಲ್ಲಿ ಸಂಜೆ ಕೇಂದ್ರ ...ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಅ. ಭಾ. ಪ್ರ. ಸೋ. ಪಕ್ಷದ ಜತೆಕಾರ್ಯದರ್ಶಿ ಶ್ರೀ ಪ್ರೇಮ್ ಭಾಸಿನ್ ಅವರು ಭಾಷಣವೀಯುತ್ತಾ, ಭಾರತದ ವಿದೇಶೀ ಧೋರಣೆ ಉತ್ತಮವಾಗಿದ್ದರೂ ಆಂತರಿಕ ಧೋರಣೆ ಬಲಹೀನವಾಗಿದೆ. ಸರಕಾರ ಸಮಾಜವಾದೀ ಸಮಾಜ ಸ್ಥಾಪನೆಯ ಕುರಿತು ಹೇಳುತ್ತಿದ್ದರೂ, ಇತರ ಸಮಾಜವಾದಿ ರಾಷ್ಟ್ರಗಳೊಂದಿಗೆ ಇದನ್ನು ಹೋಲಿಸಿದಲ್ಲಿ ಆ ಘೋಷಣೆಗೂ, ಧೋರಣೆಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಮನಗಾಣಬಹುದೆಂದು ಹೇಳಿದರು. ಪ್ರ. ಸೋ. ಪಕ್ಷದ ಜತೆಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಫರೀದ್ ಅನ್ಸಾರಿಯವರು ಭಾಷಣವೀಯುತ್ತಾ, ಭಾರತ ಸರಕಾರದ ಧೋರಣೆಯನ್ನು ಟೀಕಿಸಿದರು. ಪ್ರಾರಂಭದಲ್ಲಿ ಶ್ರೀ ಡಿ. ಮೋಹನರಾಯರು ಸ್ವಾಗತಮಾತುಗಳನ್ನಾಡಿದರು.

**ಪ್ರದರ್ಶನ—** ಜಾಗತಿಕ ಆಹಾರ ಸಂಸ್ಥೆಯ ಮತ್ಸ್ಯ ವ್ಯವಸಾಯ ತಜ್ಞರಾದ ಮಿ| ...ಲ್ಲುಗಾಸನ್‌ರವರು ತಾ. ೪ರಲ್ಲು ಬೆಳಿಗ್ಗೆ ಮಂಗಳೂರು ಕರಾವಳಿ ಸಮುದ್ರದಲ್ಲಿ ಯಂತ್ರಸಜ್ಜಿತ ದೋಣಿಗಳ ಮೂಲಕ ಮೀನು ಹಿಡಿಯುವ ಕ್ರಮವನ್ನು ಪ್ರದರ್ಶಿಸಿದರು.

**ಸ್ವಾಮಿ ಹರಿದಾಸ ಸಂಗೀತ ಸಭೆಯನ್ನು—** ತಾ. ೬ರಲ್ಲು ಎಸ್. ಸಿ. ಸಿ. ಸಿ. ಬ್ಯಾಂಕಿನ ಸಭಾಸದನದಲ್ಲಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಮ್. ರಾಧಾಕೃಷ್ಣ ಶೆಣೈಯವರು ಉದ್ಘಾಟಿಸುತ್ತಾ ಶಾಸ್ತ್ರೀಯ ಸಂಗೀತ ಪ್ರಸಾರಕ್ಕೆ ಹೆಚ್ಚು ಪ್ರೋತ್ಸಾಹ ನೀಡಬೇಕೆಂದರು. ಆರಂಭದಲ್ಲಿ ಸಭೆಯ ಅಧ್ಯಕ್ಷ ಶ್ರೀ ಎನ್. ಎಮ್. ಅತ್ಯಂತಾಯರು ಸ್ವಾಗತಭಾಷಣಮಾಡಿದರು. ಶ್ರೀ ಎಚ್. ಸುಂದರರಾಯರು ಧನ್ಯವಾದವಿತ್ತರು.

**ಕೈಗಾರಿಕಾ ಡ್ಯಾರೆಕ್ಟರ್ ಶ್ರೀ ಕೆ. ನಾರಾಯಣ ಸ್ವಾಮಿ—** ಮೈಸೂರು ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ವಿಭಾಗದ ಡ್ಯರೆಕ್ಟರ್ ಶ್ರೀ ಕೆ. ನಾರಾಯಣ ಸ್ವಾಮಿಯವರು ತಾ. ೫ರಲ್ಲು ಸಂಜೆ ಕೆನರಾ ಚೇಂಬರ್ ಆಫ್ ಕಾಮರ್ಸಿಗೆ ಭೇಟಿಯಿತ್ತು, ದ. ಕ. ಜಿಲ್ಲೆಯ ಕೈಗಾರಿಕೋದ್ಯಮಗಳ ಮತ್ತು ಕೃಷಿ ಕೈಗಾರಿಕೆಗಳ ಅಭಿವೃದ್ಧಿ ಕುರಿತು ವಿಚಾರವಿನಿಮಯ ನಡೆಸಿದರು. ಶ್ರೀ ಕುಡ್ಪಿ ವಾಸುದೇವ ಶೆಣೈಯವರು ಸಭಾಧ್ಯಕ್ಷತೆವಹಿಸಿದ್ದರು. ಈ ಜಿಲ್ಲೆಯ ನೈಸರ್ಗಿಕ ಸಂಪತ್ತಿನ ಸದುಪಯೋಗ ಪಡೆದು ಈ ಜಿಲ್ಲೆಯ ಹಾಗೂ ಪ್ರಾಂತದ ಜನಜೀವನ ಮಟ್ಟವನ್ನು ಉತ್ತಮಗೊಳಿಸಲು ನನ್ನ ಖಾತೆಯು ಸಾಧ್ಯವಿದ್ದಷ್ಟು ಪ್ರಯತ್ನಿಸುವುದು. ಹಲವಾರು ಅಭ್ಯುದಯ ಕಾರ್ಯಗಳಿಗಾಗಿ ಕೇಂದ್ರದ ನೆರವು ಸರಕಾರಕ್ಕೆ ಅಗತ್ಯವಿದೆ ಇದಕ್ಕಾಗಿ ನಿಮ್ಮೆಲ್ಲರ ನೆರವು ಸಹಕಾರ ಬೇಕು ಎಂದು ಶ್ರೀ ನಾರಾಯಣ ಸ್ವಾಮಿಯವರು ಹೇಳಿದರು. ಶ್ರೀ ಎಮ್. ಶ್ರೀನಿವಾಸನಾಯ್ಕರು ಧನ್ಯವಾದಗಳನ್ನಿತ್ತರು.

**ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು—** ತಾ. ೧೭ರಲ್ಲು ಅಪರಾಹ್ನ ೨-೧೫ಕ್ಕೆ ಜಿಲ್ಲಾ ಬೋರ್ಡ್ ಸಭಾ ಭವನದಲ್ಲಿ ಜರಗುವುದು. ಅದೇ ದಿವಸ ಅಪರಾಹ್ನ ೨ ಗಂಟೆಗೆ ಬೋರ್ಡಿನ ಸ್ಪೆಶಲ್ ಸಭೆಯು ಜರಗಿ ವಿದ್ಯಾಸಮಿತಿಗೆ ಇಬ್ಬರು ಸದಸ್ಯರ ಚುನಾವಣೆ ನಡೆಯುವುದು. ಬಳಿಕ ಇನ್ನೊಂದು ಸ್ಪೆಶಲ್ ಸಭೆಯು ಅಪರಾಹ್ನ ೨-೧೦ಕ್ಕೆ ಜರಗಿ ಪಬ್ಲಿಕ್ ಹೆಲ್ತ್ ಕಮಿಟಿಗೆ ಓರ್ವ ಸದಸ್ಯರನ್ನು ಆರಿಸಲಾಗುವುದು ಎಂದು ಜಿಲ್ಲಾ ಬೋರ್ಡ್ ಅಧ್ಯಕ್ಷರು ತಿಳಿಸುತ್ತಾರೆ.

**ಭಗಿನೀ ಸಮಾಜದ ಸಭೆಯು—** ತಾ. ೧ರಲ್ಲು ಶ್ರೀಮತಿ ಮುಕ್ತಾ ಜಿ. ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಚಂದ್ರಗಿರಿಯ ಉತ್ತರದ ಕಾಸರಗೋಡು ತಾಲೂಕನ್ನು ಮಹಾ ಮೈಸೂರು ರಾಜ್ಯದಲ್ಲಿ ಸೇರಿಸುವಂತಾಗಬೇಕು, ಮತ್ತು ಅ. ಭಾ. ಮಹಿಳಾ ಸಂಘದ ಕರ್ನಾಟಕ ಶಾಖೆಯನ್ನು ಮಹಾ ಮೈಸೂರಿನ ಶಾಖೆಯಲ್ಲಿ ವಿಲೀನಗೊಳಿಸಬೇಕು ಎಂಬ ನಿರ್ಣಯಗಳನ್ನು ಬೆಳಗಾಮಿಯಲ್ಲಿ ಜರಗುವ ಕರ್ನಾಟಕ ಪ್ರಾಂತೀಯ ಸಮ್ಮೇಳನದಲ್ಲಿ ಮಂಡಿಸುವಂತೆ ಶ್ರೀಮತಿ ಲೀಲಾಬಾಯಿ ಪಿ. ಕಾಂಬದರಾಯರಿಗೆ ಅಧಿಕಾರವೀಯಲಾಯಿತು.

**ಆಕಾಶವಾಣಿಯಿಂದ ಯಕ್ಷಗಾನ ಪ್ರಸಾರ—** ಇದೇ ತಾ. ೧೦ರಲ್ಲು ಬೆಳಿಗ್ಗೆ ೮-೪೫ ರಿಂದ ೯-೧೫ರ ತನಕ ಮದ್ರಾಸು ಆಕಾಶವಾಣಿಯಿಂದ 'ಶಲ್ಯ ಸಾರಥ್ಯ'ವೆಂಬ ಯಕ್ಷಗಾನವು ಪ್ರಸಾರವಾಗಲಿದ್ದು ಅದರಲ್ಲಿ ಪ್ರೊ. ಎಮ್. ಆರ್. ಶಾಸ್ತ್ರಿ ಮತ್ತು ಅವರ ಗೆಳೆಯರು ಭಾಗವಹಿಸಲಿರುವರು.

**ಸರಕಾರಿ ಕಚೇರಿಗಳ ಸಮಯ—** ಮೈಸೂರು ಸರಕಾರದ ಎಲ್ಲಾ ಕಚೇರಿಗಳು ಮತ್ತು ಸ್ಥಳೀಯ ಸಂಸ್ಥೆಗಳು ಇನ್ನು ಮುಂದೆ ಸೋಮವಾರದಿಂದ ಶುಕ್ರವಾರದ ತನಕ ಬೆಳಿಗ್ಗೆ ೧೦-೩೦ರಿಂದ ಸಂಜೆ ೫-೩೦ರ ವರೆಗೆ ಮತ್ತು ಶನಿವಾರ ದಿನ ಬೆಳಿಗ್ಗೆ ೮ರಿಂದ ೧೨ರ ವರೆಗೆ ಕಾರ್ಯ ನಿರ್ವಹಿಸತಕ್ಕದೆಂದು ರಾಜ್ಯಸರಕಾರವು ಆಜ್ಞೆಯಿತ್ತಿರುವುದೆಂದು ತಿಳಿದುಬರುತ್ತದೆ.

**ಸಂತಾಪಸೂಚಕ ಸಭೆ—** ಕೊಡಿಯಾಲಬೈಲಿನಲ್ಲಿರುವ ಡಿ. ಸಿ. ಮಿಷನ್ ಹಾಲಿನಲ್ಲಿ ತಾ. ೭ರಲ್ಲಿ ಶ್ರೀ. ಯು. ಲಕ್ಷ್ಮಣನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಡಾ| ಬಿ. ಆರ್. ಅಂಬೇಡ್ಕರರ ನಿಧನದ ಬಗ್ಗೆ ಸಂತಾಪಸೂಚಿಸಲಾಯಿತು. ಶ್ರೀಗಳಾದ ಎಸ್. ಬಿ. ಸಾಲೆನ್ಸ, ಅಮ್ಮೆಂಬಳ ಬಾಳಪ್ಪ ಮೊದಲಾದವರು ಸಮಯೋಚಿತಮಾತುಗಳನ್ನಾಡಿದರು. ತಾ. ೧೯ರಂದು ಡಾ. ಅಂಬೇಡ್ಕರರ ಶ್ರಾದ್ಧ ದಿನವನ್ನು ಆಚರಿಸಬೇಕೆಂದು ನಿರ್ಧಾರವಾಯಿತು. ಸರಕಾರಿ ಕನಕದಾಸ್ ಬಾಲಕರ ವಿದ್ಯಾರ್ಥಿ ಭವನದಲ್ಲೂ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ದುಃಖಸೂಚಕ ನಿರ್ಣಯವಾಯಿತು.

**ಗೋವಾ ವಿಮುಕ್ತಿತ್ವರ್ಯವಾಗಬೇಕು—** ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ವಠಾರದಲ್ಲಿ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲೊಂದು ಸಭೆಯು ಈಚೆಗೆ ಜರಗಿತು. ಗೋವೆಯು ಭಾರತದ ಒಂದು ಅವಿಭಾಜ್ಯ ಅಂಗವಾಗಿದ್ದು, ಅದು ಇನ್ನೂ ಪೋರ್ಚುಗೀಸರ ಆಡಳಿತಕ್ಕೊಳಪಟ್ಟು ಇರುವುದು ಸರಿಯಲ್ಲ. ಆದುದರಿಂದ ಪೋರ್ಚುಗೀಸ ಸರಕಾರವು ಈ ಕುರಿತು ಭಾರತ ಸರಕಾರದೊಡನೆ ಬೇಗನೇ ಒಂದು ಒಪ್ಪಂದ ಮಾಡಿಕೊಳ್ಳತಕ್ಕದ್ದು, ಇಲ್ಲದಿದ್ದರೆ ಗೋವೆಯನ್ನು ವಿಮೋಚನೆಗೊಳಿಸಿ ಭಾರತದೊಡನೆ ವಿಲೀನಗೊಳಿಸಲು ಭಾರತ ಸರಕಾರವು ಬೇಗನೆ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು ಎಂಬ ನಿರ್ಣಯ ಪಾಸಾಯಿತು. ಶ್ರೀಪತರ್ಗಾಳಿ ಗೋಕರ್ಣ ಮಠದಲ್ಲಾದ ಕೊಲೆಯ ವಿಚಾರಣೆಯನ್ನು ನ್ಯಾಯಾಂಗದ ಅಧಿಕಾರಿಗಳು ಮಾಡುವಂತೆ ಗೋವೆಯ ಗವರ್ನರ್ ಜನರಲ್ಲರನ್ನು ಒತ್ತಾಯಿಸುವ ಇನ್ನೊಂದು ನಿರ್ಣಯವಾಯಿತು. ಗೋವೆಯಲ್ಲಿ ದಬ್ಬಾಳಿಕೆಗೆ ಗುರಿಯಾದವರಿಗೆ ಸಹಾಯ ನೀಡಲು ಸ್ವಯಂ ಸೇವಕ ದಳವನ್ನು ನಿರ್ಮಿಸಬೇಕೆಂದು ನಿರ್ಣಯಿಸಲಾಯಿತು. ಮೇಲಿನ ನಿರ್ಣಯಗಳನ್ನು ಭಾರತದ ಪ್ರಧಾನಿಗೂ ಮೈಸೂರಿನ ಮುಖ್ಯ ಮಂತ್ರಿ, ಗೋವೆಯ ಗವರ್ನರ್ ಜನರಲ್ ಮೊದಲಾದವರಿಗೆ ಕಳುಹಿಸಬೇಕೆಂದಾಯಿತು.

**ಜಿಲ್ಲಾ ಕೃಷಿಕ ಸಂಘದ ಮಹಾಸಭೆಯು—** ತಾ. ೯ರಲ್ಲು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಮುಂದಿನ ವರ್ಷದ ಅಧ್ಯಕ್ಷರಾಗಿ ಶ್ರೀ ಸೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರನ್ನೂ, ಉಪಾಧ್ಯಕ್ಷರುಗಳಾಗಿ ಶ್ರೀ ಬಿ. ಆರ್. ಕರ್ಕೇರ, ಮತ್ತು ಎಸ್. ಎಚ್. ಒಡೆಯರವರನ್ನೂ, ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀ ಬಿ. ಎಸ್. ಭಾಸ್ಕರ ರೈ ಮತ್ತು ಶ್ರೀ ವಿಠಲದಾಸ ಸೆಟ್ಟರನ್ನೂ, ನಂತರ ಜತೆಕಾರ್ಯದರ್ಶಿಗಳಾಗಿ ಶ್ರೀ ಶ್ರೀನಿವಾಸ ಶೆಟ್ಟಿ, ಮುಂಡಪ್ಪ ಶೆಟ್ಟಿ ಮತ್ತು ನೇಜಪ್ಪ ಭಂಡಾರಿಯವರನ್ನೂ, ಕೋಶಾಧಿಕಾರಿಯಾಗಿ ಶ್ರೀ ಕೆ. ಆರ್. ಆಚಾರ್ಯರವರನ್ನೂ ಆರಿಸಲಾಯಿತು. ಶ್ರೀಗಳಾದ ರುಕ್ಮಯ್ಯ ಪೂಜಾರಿ, ಮುದ್ರಾಡಿ ಕೃಷ್ಣ ಶೆಟ್ಟಿ, ಎನ್. ಉಪೇಂದ್ರ ನಾಯಕ್ ಮೊದಲಾದವರನ್ನೊಳಗೊಂಡ ಕಾರ್ಯಕಾರೀ ಸಮಿತಿಯನ್ನು ರಚಿಸಲಾಯಿತು. ಶ್ರೀ ಕೆ. ಕೆ. ಶೆಟ್ಟರು ಸ್ವಾಗತಿಸಿ, ಈ ಸಂಘದ ಧ್ಯೇಯ ಧೋರಣೆಗಳ ಕುರಿತು ಭಾಷಣಮಾಡಿದರು. ಈ ಸಂಘದ ಆವಶ್ಯಕತೆಯ ಕುರಿತು ಚರ್ಚೆಯಾದನಂತರ ಈ ಕೃಷಿಕ ಸಂಘವನ್ನೇ ಪುನರುಜ್ಜೀವನಗೊಳಿಸಬೇಕೆಂದೂ, ಪ್ರಮುಖ ಅಧಿಕಾರಿಗಳನ್ನು ಬೇಗಬೇಗನೆ ನಿಗಾಯಿಸಬೇಕೆಂದೂ ನಿರ್ಣಯಿಸಲಾಯಿತು.

---


## ದಿ ವಿಜಯಾ ಬೇಂಕ್ ಲಿ., ಬೈಂದೂರು ದ. ಕ.

### ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ವ್ಯಕ್ತಿಯವರು ನಮ್ಮ ಶಾಖೆಯಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಅಲ್ಲದೆ ಕೆಲವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣಗಳನ್ನು ಇದೇ ದಶಂಬರ ತಿಂಗಳ ತಾರೀಕು ೧೮ನೇ ಮಂಗಳವಾರ ಅಪರಾಹ್ನ ಗಂಟೆ ೩-೦ಕ್ಕೆ—ಯಾ—ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು. ತಿಳಿದಿರಲಿ.

| ಸಾಲದ ಜಂಜಾ | ಹೆಸರು ಮತ್ತು ವಿಳಾಸ | ಮೊಬಲಗು | | |
|---|---|---|---|---|
| 732/54 | ಶ್ರೀ ನಾಕಟ್ಟೆ ಶೀನ ಶೆಟ್ಟಿ, ಮಾರಪ್ಪ ಶೆಟ್ರ ಅಳಿಯ, ಬೈಂದೂರು. | 33 | 11 | 0 |
| 773/54 | ,, ರಾಮನ ಗೋವಿಂದ ಕಾಮ್ತಿ, ರಾಮನ ನಾಗನ ಮಗ, ತಾರಾಪತಿ ಪಡುವರಿ. | 12 | 7 | 0 |
| 1224/54 | ,, ಹೊನ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ ಪಡುವರಿ. | 9 | 12 | 0 |
| 231/55 | ,, ಬಿ ಗೋವಿಂದ ಸೇರುಗಾರ, ತಿಮ್ಮಪ್ಪ ಸೇರುಗಾರರ ಮಗ, ಬಿಜೂರುಗ್ರಾಮ, ಬಿಜೂರು. | 23 | 8 | 0 |
| 491/55 | ,, ಚಂದ್ರಸರ್ಲು ಕೃಷ್ಣಪ್ಪ ಶೆಟ್ಟಿ, ಸುಬ್ಬಯ್ಯ ಶೆಟ್ಟರ ಅಳಿಯ, ಉಪ್ಪುಂದ. | 38 | 2 | 0 |
| 711/55 | ,, ಮಹಾಬಲ ಶೆಟ್ಟಿ ಮಂಜಯ್ಯ ಶೆಟ್ಟರ ಅಳಿಯ, ಮೈಕಳ ತಗ್ಗರ್ಸೆಗ್ರಾಮ, ಮಯ್ಯಾಡಿ. | 12 | 11 | 0 |
| 765/55 | ,, ಪಟ್ಟಾವದ ಕುಪ್ಪಯ್ಯ ಸೇರುಗಾರ, ವೆಂಕಟ್ರಮಣ ಸೇರುಗಾರರ ಮಗ, ಪಡುವರಿ. | 33 | 0 | 0 |
| 807/55 | ,, ನಾಗೂರು ಶಂಕರ ಪೈ, ನಾಗಪ್ಪ ಪೈಯವರ ಮಗ ಕಿರಿಮಂಜೇಶ್ವರ. | 392 | 11 | 6 |
| 916/55 | ,, ಸುಬ್ಬಣ್ಣ ಶೆಟ್ಟಿ, ಚಿಕನಮಕ್ಕಿ ಮಾದೈ ಶೆಟ್ಟರ ಅಳಿಯ ಯರುಕೋಣೆ, ಹೇರೂರುಗ್ರಾಮ ನಾವುಂದ. | 184 | 3 | 0 |
| 921/55 | ,, ಬಿ ನಾರಾಯಣ ಶ್ಯಾನುಭಾಗ, ಸುಬ್ರಾಯ ಶ್ಯಾನುಭಾಗರ ಮಗ, ಕೆರ್ಗಾಲು. | 439 | 4 | 0 |
| 994/55 | ,, ಪಟ್ಟಾವದ ಶೇಷಯ್ಯ ಸೇರುಗಾರ, ಮಂಜಯ್ಯ ಸೇರುಗಾರರ ಮಗ, ಪಡುವರಿ. | 27 | 13 | 0 |

ಬೈಂದೂರು, 7-12-1956

**ಎಚ್. ರಾಜೀವ ಶೆಟ್ಟಿ.**
ಏಜಂಟ್.

# ವಾರ್ತಾಲಾಪ

## ದಯಮಾಡಿ ನೀವು ಯಾರೂ ಚಾಡಿ ಹೇಳಲು ಹೋಗಬೇಡಿ

### ಸುಳ್ಳು ಸುದ್ದಿಯನ್ನು ಹಬ್ಬಿಸುವುದಕ್ಕಿಂತ ಕೆಟ್ಟದಾದ ಹವ್ಯಾಸ ಬೇರಿಲ್ಲವೆಂದು ನೆನಪಿಟ್ಟುಕೊಳ್ಳಿ

ಸುಮ್ಮಸುಮ್ಮನೆ ಆರೋಪ ಹೊರಿಸಬೇಡಿ. ಯಾವ ಮಾತನ್ನೂ ಚೆನ್ನಾಗಿ ಪರೀಕ್ಷಿಸದೆ ಹೇಳಬೇಡಿ.

ಇಷ್ಟು ಸಾಧಾರಣ ವಿಚಾರದ ಕುರಿತು ಒಂದು ಲೇಖನ ಬರೆಯುವ ಅಗತ್ಯವಾದರೂ ಏನಿದೆ ಎಂದು ನೀವು ಕೇಳಬಹುದು. ಆದರೆ ಆಧುನಿಕ ಯುಗದಲ್ಲಿ ಇದರ ಬಗ್ಗೆ ಪ್ಲೇಗು, ಕಾಲೆರಾದಷ್ಟೇ ಮುಂಜಾಗ್ರತೆ ವಹಿಸಿ ಕೆಲಸ ಮಾಡಬೇಕಾಗಿದೆ. ಇಲ್ಲದಿದ್ದರೆ ಗಂಡಾಂತರ ಉಂಟಾಗುವ ಸಂಭವವಿದೆ.

ಏಕೆಂದರೆ ಚಾಡಿಯು ಪ್ಲೇಗು, ಕಾಲೆರಾಗಿಂತಲೂ ಹೆಚ್ಚು ಮಾರಕವಾದುದು. ಇದು ಮನುಷ್ಯ ಜೀವನವನ್ನೇ ಹಾಳುಮಾಡಬಲ್ಲುದು. ರಾಷ್ಟ್ರ ರಾಷ್ಟ್ರಗಳೊಳಗೆ ವೈಮನಸ್ಯದ ವಿಷಬೀಜವನ್ನು ಬಿತ್ತಿ, ಅವೆರಡನ್ನೂ ಅಳಿಸಬಲ್ಲುದು. ಚಾಡಿಯಲ್ಲಿ ಅಂತಹ ಶಕ್ತಿ ಅಡಗಿದೆಯೆಂದು ಖಚಿತವಾಗಿದೆ. ಆದ್ದರಿಂದ ಅದರಿಂದಾಗುವ ಗಂಡಾಂತರಗಳನ್ನು ಉದಾಹರಣೆ ಸಹಿತ ನಿಮ್ಮ ಮುಂದಿಡಲು ಬಯಸುತ್ತೇನೆ.

ಎರಡನೇ ಜಾಗತಿಕ ಯುದ್ಧದ ವೇಳೆ ನಗರದ ಗೋಡೆಗೋಡೆಗಳಲ್ಲಿ ದೊಡ್ಡ ದೊಡ್ಡ ನೋಟೀಸುಗಳನ್ನು ಸರಕಾರದ ಕಡೆಯಿಂದ ಅಂಟಿಸಲಾಗಿತ್ತು. 'ವದಂತಿಗಳನ್ನು ಹಬ್ಬಿಸಬೇಡಿ' ಎಂದು ಅವುಗಳ ಮೇಲೆ ದಪ್ಪ ಅಕ್ಷರಗಳಲ್ಲಿ ಬರೆಯಲಾಗಿತ್ತು. ವದಂತಿಗಳ ಹಬ್ಬುಗೆಯನ್ನು ತಡೆಯುವುದಕ್ಕಾಗಿ ಆ ಕಾಲದಲ್ಲಿ ಗುಪ್ತಚಾರರನ್ನೂ ನೇಮಿಸುತ್ತಿದ್ದರು. ಇದೆಲ್ಲ ಏಕೆ? ಇದೇನು ಹುರುಳಿಲ್ಲದ್ದ ಕೆಲಸವಾಗಿತ್ತೆ? ಅಲ್ಲ, ಸರಕಾರವು ಈ ಮೂಲಕ ಒಂದು ಭಯಂಕರ ಆಪತ್ತನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಏಕೆಂದರೆ ಯುದ್ಧದ ಸೋಲು ಗೆಲವುಗಳು ವದಂತಿಯನ್ನೇ ಅವಲಂಬಿಸಿದ್ದುವು. ವದಂತಿಗಳಿಂದಾಗಿ ಎಷ್ಟೋ ಬ್ಯಾಂಕುಗಳು ದಿವಾಳಿಯಾಗಿವೆ. ಎಷ್ಟೋ ಆತ್ಮಹತ್ಯೆಗಳು ನಡೆದಿವೆ. ದಂಗೆಗಳೂ ಎದ್ದುಬಿಟ್ಟಿವೆ. ಆದ್ದರಿಂದಲೇ ವದಂತಿಗಳನ್ನು ತಪ್ಪಿಸುವುದಕ್ಕಾಗಿ ಸರಕಾರವು ತುಂಬ ಪ್ರಯತ್ನಪಟ್ಟಿತು.

ಶಾಲೆಗಳಲ್ಲಿ ನಮಗೆ ಎಲ್ಲ ವಿಧದ ಶಿಕ್ಷಣಗಳನ್ನೂ ಕಲಿಸಲಾಗುತ್ತಿವೆ. ಆದರೆ ವದಂತಿ ಹಬ್ಬಿಸಬಾರದೆಂಬ ಶಿಕ್ಷಣವನ್ನು ಎಲ್ಲಿಯೂ ಕಲಿಸುವುದಿಲ್ಲ. ವಿಚಾರಮಾಡಿ ನೋಡಿದರೆ ಇದನ್ನೇ ನಾಗರಿಕ ಶಿಕ್ಷಣದ ಪ್ರಥಮ ಪಾಠವಾಗಿ ಕಲಿಸಿಕೊಡಬೇಕು.

ವದಂತಿಯೆಂದರೇನು? ವದಂತಿಗೂ ಸುದ್ದಿಗೂ ಏನು ಭೇದ?-ಎಂದು ಮೊತ್ತಮೊದಲು ಅರಿತುಕೊಳ್ಳಬೇಕು. ಸತ್ಯವಲ್ಲದ ಸುದ್ದಿಯೇ ವದಂತಿ; ಯಾವ ಸುದ್ದಿಯಾದರೂ ಸತ್ಯ ಹೌದೋ ಅಲ್ಲವೋ ಎಂದು ಅದೆಂತು ತಿಳಿಯುವಿರಿ? ನಂಬಿಕೆಗೆ ಅರ್ಹನಾದವನು ಹೇಳಿದ ಸಂಗತಿಯಾಗಲೀ ಕಣ್ಣಾರೆ ಕಂಡ ಸಂಗತಿಯಾಗಲೀ ಸತ್ಯವೆಂದು ನಂಬಬಹುದು. ಇವೆರಡಕ್ಕೂ ಹೊರತಾದ ಸಮಾಚಾರವನ್ನು ನಾವು ಕೇಳಿ ಮತ್ತೊಬ್ಬರಿಗೆ ತಿಳಿಸಿದಾಗಲೇ ಅದು "ವದಂತಿ"ಯ ರೂಪ ತಳೆಯುವುದು. ಚಾಡಿಯೂ ಇದರ ಇನ್ನೊಂದು ಮುಖ; ಇನ್ನೊಬ್ಬರ ಮೇಲಿನ ದುರ್ಭಾವನೆಯಿಂದಲೇ ಕೆಟ್ಟ ವಿಚಾರವನ್ನೇ ಒಂದು ಕಿವಿಯಿಂದ ಮತ್ತೊಂದು ಕಿವಿಗೆ ತಲುಪಿಸುವುದು 'ಚಾಡಿ'. ಇದು ವದಂತಿಗಿಂತಲೂ ಬಹಳ ಘಾತಕವಾದುದು; ಇಂತಹ ಸುದ್ದಿಗಳನ್ನು ನಾವು ಪ್ರಚಾರಮಾಡಲು ಸರ್ವಥಾ [illegible]ಬಾರದು.

'ಕೇಳಿದ್ದೀರಾ- ಇಂದು ಮಾರ್ಕೆಟ್ ಸ್ಟ್ರೀಟಿನಲ್ಲಿ ಕೆಲವು ಮುಸಲ್ಮಾನರು ಹಿಂದೂ ಅಂಗಡಿಯೊಂದನ್ನು ಸುಲಿಗೆಮಾಡಿದರಂತೆ!' 'ನಿಮಗೆಂತು ತಿಳಿಯಿತು?' 'ಜನ ಹೇಳಿದ್ದಾರೆ.'

ಹೀಗೆ ಜನರ ಮಾತನ್ನು ಕೇಳಿ ನೀವು ಮತ್ತೊಬ್ಬರಿಗೆ ಅದನ್ನು ತಿಳಿಸಿದಾಗಲೇ ಅದು ವದಂತಿಯಾಯಿತು ನೀವು ಸ್ವತಃ ಕಾಣದಿದ್ದರೂ ಸತ್ಯ ಸಂಗತಿಯೆಂಬಂತೆ ಇತರರ ಕಿವಿಯ ಮೇಲೆ ಅದನ್ನು ಹಾಕಿಬಿಟ್ಟಿರಿ. ಇದೇ ನಿಮ್ಮಿಂದಾದ ದೊಡ್ಡ ತಪ್ಪು. ನಿಮಗೆ ಇದನ್ನು ತಿಳಿಸಿದವನು ಸತ್ಯಹೇಳಿದ್ದಾನೆಯೋ ಸುಳ್ಳುಹೇಳಿದ್ದಾನೆಯೋ?-ಎಂಬುದು ನಿಮಗೇನು ಗೊತ್ತು?

ವದಂತಿಗಳು ತಮ್ಮ ಸ್ವರೂಪವನ್ನು ಬಹು ಚೆನ್ನಾಗಿ ಬದಲಿಸಬಲ್ಲವು. ಒಬ್ಬರ ಬಾಯಿಯಿಂದ ಹೊರಟು ಮತ್ತೊಬ್ಬರ ಕಿವಿಗೆ ತಲುಪಿ, ಆ ಮತ್ತೊಬ್ಬರ ಬಾಯಿಯಿಂದ ಹೊರಡುವಾಗ ಬೇರೆಯೇ ರೂಪವನ್ನು ತಳೆಯುತ್ತವೆ. ಹೀಗೆ ಒಬ್ಬರಿಂದೊಬ್ಬರಿಗೆ ಹೋಗುವಾಗ ಸ್ವಲ್ಪ ಸ್ವಲ್ಪ ಬದಲಾಗುತ್ತ ಇರುತ್ತದೆ. ವದಂತಿಯ ಸ್ವಭಾವವೇ ಅಂತಹದು. ಬೇಕೆಂದೇ ಹೀಗೆ ಮಾಡುವದಲ್ಲ ಸ್ವಾಭಾವಿಕವಾಗಿಯೇ ಹೀಗಾಗುತ್ತದೆ. ಹೀಗಾಗಲು ವ್ಯಕ್ತಿಯ ಸ್ವಭಾವ, ಅವನ ವಿಚಾರ ಹಾಗೂ ಅವನ ಪಕ್ಷವಿಪಕ್ಷ ಭಾವನೆ ಅವನಿಗರಿಯದಂತೆಯೇ ಕೆಲಸಮಾಡುತ್ತವೆ. ಬೆಟ್ಟದಿಂದ ಕಿರುದೊರೆಯಾಗಿ ಹರಿದ ನದಿಯು ಸಮುದ್ರ ಸಂಗಮದ ವೇಳೆ ಬೃಹದಾಕಾರ ತಾಳುವಂತೆಯೇ ಇದು ವಿಶಾಲರೂಪ ತಾಳುತ್ತದೆ.

ವದಂತಿಯ ಪ್ರಕೃತಿಯನ್ನು ಕುರಿತು ಒಂದೆರಡು ಉದಾಹರಣೆ ನೋಡಿರಿ:—

• ಒಂದೂರಿನಲ್ಲಿ ಸೀತೆಯೆಂಬ ನವಯುವತಿಯೊಬ್ಬಳು ತನ್ನ ತಂದೆತಾಯಿಂದಿರೊಂದಿಗೆ ವಾಸಿಸುತ್ತಿದ್ದಳು. ಒಂದು ದಿನ ನಸುಕಿನಲ್ಲಿ ಅವಳು ಯಾವನೋ ನವಯುವಕನೊಡನೆ ಮನೆಗೆ ಹಿಂದಿರುಗಿದುದನ್ನು ನೆರೆಮನೆಯವಳು ನೋಡಿದಳು; ಸರಿ! ಸುದ್ದಿ ಹಬ್ಬಿಹೋಯಿತು.

'ನಿನ್ನೆ ಸೀತೆ ರಾತ್ರಿ ಇಡೀ ಮನೆಯಲ್ಲಿದ್ದಿಲ್ಲವಂತೆ!' "ಹೇಗೆ ಗೊತ್ತಾಯಿತು?" 'ಹೇಗೇನು? ನಾನೇ ನೋಡಿದೆ. ಇಂದು ಬೆಳಿಗ್ಗೆ ಒಬ್ಬ ಯುವಕನು ಅವಳನ್ನು ಮೋಟಾರಿನಲ್ಲಿ ಮನೆಗೆ ತಂದು ಬಿಟ್ಟುಹೋದ.' "ಹಾಂ? ಸ್ವಲ್ಪ ಬಿಡಿಸಿ ಹೇಳು".

"ನೋಡು, ನಾನು ಬೆಳಿಗ್ಗೆ ಎದ್ದು ದನಕ್ಕೆ ಹುಲ್ಲು ಹಾಕಲು ಕೊಟ್ಟಿಗೆಗೆ ಹೋಗಿದ್ದೆ. ಆಗಲೇ ಒಂದು ಮೋಟಾರು ಭರ್ರನೆ ಬಂತು. ಅದರಲ್ಲಿ ಒಬ್ಬ ವಿಲಾಸಿ ತರುಣ ಕುಳಿತಿದ್ದ. ಮೋಟಾರು ಸೀತೆಯ ಮನೆಯ ಹಿಂಬದಿಯಲ್ಲಿ ನಿಂತಿತು ಮತ್ತು ಇಬ್ಬರು ಯುವಕರು ಸೀತೆಯನ್ನೆತ್ತಿ ಕೆಳಗಿಳಿಸಿ ಪರಾರಿಯಾದರು."

"ಅವಳಾಗ ಹೇಗಿದ್ದಳು?" "ಹೇಗೇನು? ಬಟ್ಟೆಗಳು ಅಸ್ತವ್ಯಸ್ತವಾಗಿದ್ದುವು. ಕೂದಲುಗಳೆಲ್ಲ ಹಾರಾಡುತ್ತಿದ್ದುವು; ಕಳ್ಳು ಕುಡಿದವಳಂತೆ ಓಲಾಡುತ್ತಿದ್ದಳು." "ಹೀಗೊ? ಕಲಿಕಾಲದ ಮಹಿಮೆಯಪ್ಪ!"

ಇದೇ ರೀತಿಯ ವಾರ್ತಾಲಾಪದಿಂದ ಸೀತೆಯ ಚಿತ್ರ ಹೀಗೆಲ್ಲ ಆಯಿತು! ಒಂದು ದಿನ ಈ ಇಡೀ ಕಥೆಯೇ ಊರವರ ನಾಲಗೆಯಲ್ಲಿ ನಲಿದಾಡತೊಡಗಿತು. ಪರಿಣಾಮವನ್ನೂ ಅವಮಾನವನ್ನೂ ಸಹಿಸಲಾರದೆ ಸೀತೆ ವಿಷ ನುಂಗಿ ಅಸುನೀಗಿದಳು. ಅವಳು ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದಳು............ 'ಜೀವದ ಮೇಲೆಯೇ ಬೇಸರವುಂಟಾಗಿದೆ. ಆ ರಾತ್ರಿಯ ಅಷ್ಟು ಸಣ್ಣ ಘಟನೆ ಇಷ್ಟು ದೊಡ್ಡದಾದೀತೆಂದು ನನಗೆ ತಿಳಿದೇ ಇದ್ದಿಲ್ಲ. ನಾನು ಯಾವ ಮುಖ ಹಿಡಿದು ಮುಂದೆ ಜೀವನ ನಡೆಸಲಿ?'

ಆ ರಾತ್ರಿ ಅವಳ ಕಾಲೇಜಿನಲ್ಲಿ ಮಹಿಳಾ ನಾಟ್ಯ ಸಮಿತಿಯ ನೇತೃತ್ವದಲ್ಲಿ ಒಂದು ನಾಟ್ಯಕೂಟ ಜರಗಿತ್ತೆಂದೂ ಅದರಲ್ಲಿ ಸೀತೆಯು ಭಾಗವಹಿಸಿದ್ದಳೆಂದೂ ಹಿಂದಿನಿಂದ ವಿಚಾರಿಸಿದಾಗ ಗೊತ್ತಾಯಿತು. ನಾಟ್ಯಮುಗಿದವೇಳೆ ಅವಳು ಇತರ ಗೆಳತಿಯರೊಂದಿಗೆ ಕಾಲೇಜಿನಲ್ಲೇ ಮಲಗಿದ್ದಳು. ಬೆಳಗ್ಗೆ ಕಾಲೇಜಿನವರು ಬಾಡಿಗೆಗೆ ಹಿಡಿದ ಮೋಟಾರು ಎಲ್ಲ ಅಭಿನೇತ್ರಿಯರನ್ನೂ ಅವರವರ ಮನೆಗೆ ತಂದು ಬಿಟ್ಟಿತು. ಎಲ್ಲರ ಮನೆಯೂ ಬೇರೆ ಬೇರೆಯಿದ್ದುದರಿಂದ ಮೋಟಾರು ಒಬ್ಬೊಬ್ಬರನ್ನೇ ಕೆಳಗಿಳಿಸಿ ಬೇಗಬೇಗನೆ ಸಾಗುತ್ತಿತ್ತು. ಕಟ್ಟಕಡೆಗೆ ವಸ್ತುಸ್ಥಿತಿ ಎಲ್ಲರಿಗೂ ತಿಳಿಯಿತು; ಜನ 'ವದಂತಿ'ಯ ಬಗ್ಗೆ ತುಂಬ ಪಶ್ಚಾತ್ತಾಪಪಟ್ಟರು. ಆದರೆ ಈಗೇನು ಲಾಭ? ಸೀತೆ ಸತ್ತುಹೋಗಿದ್ದಳು.

ಪ್ರತಿ ವರ್ಷವೂ ಇಂಥ ಸಾವಿರಾರು ದುರ್ಘಟನೆಗಳು ವದಂತಿಯಿಂದಾಗಿ ಜರಗುತ್ತವೆ. ಇವುಗಳ ಮೂಲಕ ಸಮಾಜವು ವಿಪತ್ತಿಗೆ ಗುರಿಯಾಗುತ್ತದೆ. ಪ್ರತಿಯೊಬ್ಬರೂ ಒಂದಲ್ಲದೊಂದುಬಾರಿ ಗುರಿಯಾಗಿಯೇ ಆಗುತ್ತಾರೆ. ಹೀಗಿದ್ದರೂ ವದಂತಿ ಹಬ್ಬಿಸಲು ನಾವು ಅಳುಕುವುದಿಲ್ಲ; ನಾವು ಸುಶಿಕ್ಷಿತರೂ ಸುಸಂಸ್ಕೃತರೂ ಆಗಿದ್ದು ಸಭ್ಯತೆಯಿಂದ ವರ್ತಿಸುತ್ತಿದ್ದರೂ ವದಂತಿ ಹಬ್ಬಿಸುವ ದುಶ್ಚಟ ನಮಗೂ ಅಂಟಿಕೊಂಡಿರುತ್ತದೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ಅಧ್ಯಾಪಕರಲ್ಲೊಬ್ಬರಾದ ಡಾ॥ ಗೋರ್ಡನ್ ಆಲಪೋರ್ಟರ್ ಒಂದು ಪ್ರಯೋಗ ನಡೆಯಿಸಿ ವದಂತಿಗಳ ಪ್ರಕೃತಿ ಹೀಗಿರುತ್ತದೆಂದು ರುಜುವಾತುಪಡಿಸಿದ್ದಾರೆ; ನಾವೂ ಅತ್ತಕಡೆ ತುಸು ಲಕ್ಷ್ಯ ವೀಯುವುದು ಒಳ್ಳೇದು!

ಅವರು ಒಬ್ಬ ಹುಡುಗನಿಗೆ ಸಿನೇಮಾ ಚಿತ್ರವೊಂದನ್ನು ತೋರಿಸಿದರು. ಅದೊಂದು ಮೋಟಾರ್ ದುರ್ಘಟನೆಗೆ ಸಂಬಂಧಿಸಿತ್ತು. ಆ ಬಳಿಕ ಅವರು, ಚಿತ್ರ ನೋಡಿದ ಹುಡುಗನನ್ನು ಕ್ಲಾಸಿನೆದುರಿಗೆ ಕರೆದು ಇನ್ನೊಬ್ಬರೆದುರಿಗೆ ಆ ಘಟನೆಯನ್ನು ಹೇಳುವಂತೆ ಮಾಡಿದರು. ಒಬ್ಬರಿಂದ ಮತ್ತೊಬ್ಬರಿಗೆ ತಲುಪುತ್ತಾ ತಲುಪುತ್ತಾ ೧೦—೧೫ ಮಂದಿಗಳಿಗೆ ಆ ಘಟನೆ ತಿಳಿಯಿತು. ಕಟ್ಟಕಡೆಯ ಹುಡುಗನನ್ನು ಒಂದು ಪರದೆಯ ಹಿಂದೆ ನಿಲ್ಲಿಸಿ ಆ ಘಟನೆಯನ್ನು ವಿವರಿಸ ಹೇಳಿದರು; ಅವನು ವಿವರಿಸುತ್ತಿದ್ದಂತೆ ಅವರ ಚಿತ್ರ ಬರೆಯುತ್ತ ಹೋದರು. ೧೨ ಜನರ ಬಾಯೊಳಗೆ ಹೊಕ್ಕು ಹೊರಟ ಆ ಕಥೆ ಬೇರೆಯೇ ರೂಪತಳೆದಿತ್ತು. ಬಿಳಿಯನೊಬ್ಬನು ತನ್ನ ಕೈಯಲ್ಲಿ ಚೂರಿ ಹಿಡಿದು, ನೀಗ್ರೋವನ್ನು ಬೆದರಿಸುವ ಘಟನೆಯೊಂದನ್ನು ಡಾಕ್ಟರರು ವಿವರಿಸಿದ್ದರು. ಅದೇ ಘಟನೆಯೇ ಹತ್ತಾರು ಮುಖಗಳನ್ನು ಸ್ಪರ್ಶಿಸಿದ ಬಳಿಕ ವಿರುದ್ಧ ರೂಪ ತಳೆಯಿತು. ಅಂದರೆ ನೀಗ್ರೋವಿನ ಕೈಯಲ್ಲಿ ಚೂರಿಯಿದ್ದು ಅವನು ಬಿಳಿಯನನ್ನು ಗದರಿಸುವಂತೆ ಮಾರ್ಪಟ್ಟಿತು.

ಮನುಷ್ಯರೆಷ್ಟೇ ಸುಶಿಕ್ಷಿತರಾಗಿದ್ದರೂ ಒಬ್ಬರ ವರ್ಣನೆಗೂ ಮತ್ತೊಬ್ಬರ ವರ್ಣನೆಗೂ ಅಲ್ಪಸ್ವಲ್ಪವಾದರೂ ವ್ಯತ್ಯಾಸ ಇದ್ದೇ ಇರುತ್ತದೆಂದೂ, ಎಂದಿಗೂ ಇಬ್ಬರ ವರ್ಣನೆಯು ಪೂರ್ಣವಾಗಿ ಹೋಲುವುದಿಲ್ಲವೆಂದೂ ಡಾ॥ ಆಲಪೋರ್ಟರ್ ಹಾಗೂ ಇತರ ಎಷ್ಟೋ ಮನೋವೈಜ್ಞಾನಿಕ ವಿದ್ವಾಂಸರು ಪರೀಕ್ಷೆ ಮಾಡಿ ನಿರ್ಧರಿಸಿದ್ದಾರೆ. ವರ್ಣನೆಕಾರನ ಮನಃಸ್ಥಿತಿಯ ವೈವಿಧ್ಯದಿಂದಾಗಿ ಘಟನಾಚಕ್ರವು ಹೀಗೆ ರೂಪಾಂತರ ಹೊಂದುತ್ತ ತಿರಸ್ಕಾರ, ಭಯ, ಮತ್ಸರ ಮೊದಲಾ ಭಾವನೆಗಳಿಗೆ ಕಟ್ಟು ಬಿದ್ದು ಜನರು ಹೀ ಮಾಡುತ್ತಿದ್ದಾರೆ. ಯಾರ ಕಾಮದ ಹಸಿ ಪರಿಸ್ಥಿತಿಗಳ ಜಟಿಲತೆಯಿಂದಾಗಿ ತಕ್ಕ ಸ ಯಕ್ಕೆ ತೃಪ್ತವಾಗಿಲ್ಲವೋ ಅಂತಹವರು ಕಾ ದುರ್ಘಟನೆಗಳನ್ನು ಬಹು ಅಭಿರುಚಿಯಿಂ ವರ್ಣಿಸುತ್ತಾರೆ. ಮತ್ತು ಸಾಕಷ್ಟು ಅತಿ ಶೋಕ್ತಿಯನ್ನು ಉಪಯೋಗಿಸುತ್ತಾರೆ. ಸೀ ಯ ಉದಾಹರಣೆಯನ್ನೇ ನೋಡಿರಿ: ಅವ ಸೌಂದರ್ಯ, ಅಚ್ಚುಕಟ್ಟಿನ ಜೀವನ, ಜ ರೊಡನೆ ಹೆಚ್ಚಾಗಿ ಬೆರೆಯದೆ ತಾನೇತಾನಾ ಸ್ವಾವಲಂಬನದಿಂದ ಬದುಕುತ್ತಿರುವುದು, ಇವೆಲ್ಲವೂ ಜನರಲ್ಲಿ ಮಾತ್ಸರ್ಯವನ್ನುಂಟು ಮಾಡಿದ್ದುವು. ಹೀಗಾಗಿ ಅವಳು ನಿಷ್ಕಾರ ನಿಂದೆಗೆ ಬೀಳಬೇಕಾಯಿತು.

ವದಂತಿಗಳು ಅದೆಂತು ಅಜ್ಞಾತರೊ ದಿಂದ ವಿಧ್ವಂಸಕಾರಿಗಳಾಗುತ್ತವೆಯೆಂಬು ಕ್ಕೆ ನಾನೊಂದು ಸತ್ಯಘಟನೆಯನ್ನು ಉದಾ ಹರಿಸುತ್ತೇನೆ. ಇಷ್ಟೇ ಅಲ್ಲ; ಒಮ್ಮೆ ಹಬ್ಬಿ ವದಂತಿ ಮತ್ತೆಂದೂ ಬಿಟ್ಟುಹೋಗದಂ ಗಟ್ಟಿಯಾಗಿ ಅಂಟಿಕೊಳ್ಳುತ್ತದೆ.

ನನ್ನ ಗೆಳೆಯರೊಬ್ಬರು ಒಂದು ದಿನ ನ ಕ್ಷನೆ ಬಂದು ತಾವು ಆತ್ಮಹತ್ಯೆ ಮಾಡಿಕೊಳ ತ್ತಾರೆಂದು, ಹೆಂಡತಿಗೂ ಅವರಿಗೂ ಸ ಹೋಗುವುದಿಲ್ಲವೆಂದು ಬಹು ಹೊತ್ತಿನ ಮೇ ನನಗೆ ತಿಳಿಯಿತು; ಎಲ್ಲವನ್ನೂ ಶೋಧಿಸಿ ಬಳಿಕ ಮನಸ್ತಾಪದ ಕಾರಣವೂ ತಿಳಿಯಿತು ಇಬ್ಬರೂ ಸಮಾಜಸರ್ಪದ ವಿಷಕ್ಕೆ ತುತ್ತಾ ದವರು. ನನ್ನ ಗೆಳೆಯರೂ ಆ ಮಹಿಳೆಯೊಡ ಪ್ರೇಮವಿವಾಹ ಮಾಡಿಕೊಂಡಿದ್ದರು. ಇಬ ರಿನ್ನೂ ಕಾಲೇಜಿನಲ್ಲಿರುವಾಗಲೇ ಪ್ರೇಮವು ಟಾಗಿತ್ತು. ಕಾಲೇಜು ಬಿಡುತ್ತಲೇ ಅವ ವಿವಾಹಸೂತ್ರದಲ್ಲಿ ಬದ್ಧರಾಗಿದ್ದರು. ಪ್ರೇಮ ವಿವಾಹದ ಈ ಜೊತೆಯು ಆದರ್ಶಪ್ರಾಯ ವಾಗುವುದೆಂದು ನಾನೆಲ್ಲ ಯೋಜಿಸಿದ್ದರು ಹೀಗೇಕೆ ತಿರುವುಮುರುವಾಯಿತು?

ಈ ವಿವಾಹದ ಸುದ್ದಿ ಹಬ್ಬುತ್ತಲೇ ವಿಧ್ವಂ ಸಕಕಾರ್ಯವೂ ಆರಂಭವಾಗಿತ್ತು. ಅಸಲ ಸಂ ಹಮೆಯನ್ನು ಮದುವೆಯಾಗುತ್ತಾನಂತೆ ಇಷ್ಟು ಬೇಗ...ಏಕಂತೆ? ಯಾರು ಬಲ್ಲರು ಅಲ್ಲ; ಮೊದಲು ಸ್ವಲ್ಪವೂ ತಿಳಿಯದ ಸುದ್ದಿ ಆಕಸ್ಮಾತ್ ಹೇಗೆ ಹೊರಬಿತ್ತು ಹೌದು; ಎಲ್ಲವನ್ನು ಒಂದೇ ದಿನದಲ್ಲಿ ನಿಧ ರಿಸಲಾಯಿತು! ನಮ್ಮೊಡನೆ ಕೇಳಲೂ ಇಲ್ಲ ಕೇಳುವುದೇನು? ಸಂಗತಿ ತುಂಬ ಸೀರಿಯಸ್ ಆಗಿತ್ತಂತೆ. ಹೇಗೆ ಅಯ್ಯೋ ಪಾಪ! ಇಷ್ಟೂ ತಿಳಿಯದೆ? ತಾಳು; ಇನ್ನೆರಡು ತಿಂಗಳೊಳ ...ಹಾಗೋ ಸಮಾಚಾರ?

ಇವರು ನನ್ನನ್ನು ನಿರುಪಾಯವಾಗಿ ಮ ದುವೆಯಾಗಬೇಕಾಯಿತೆಂದು ಇಲ್ಲಿಗೆ ಬಂ ಎರಡು ವಾರದೊಳಗೇ ನನ್ನ ಕಿವಿಗೆ ಬಿತ್ತು ಇದರಿಂದಲೇ ನನ್ನ ಮನಸ್ಸು ಉದಾಸೀ ನಾಯಿತು–ಎಂದಳು ಗೆಳೆಯರ ಪತ್ನಿ.

ಇದೇ ವದಂತಿಯ ಮಾರಕತೆಯಾಗಿರೆ ಒಮ್ಮೆ ಮನಸ್ಸಿನಲ್ಲಿ ನಟ್ಟು ಹೋಯಿತೆಂದ ಅದು ತಪ್ಪುವುದೇ ಇಲ್ಲ. ಈ ರೀತಿ ಸುದ್ದಿ ಹರಡಿಸುವವರ ಕುತ್ತಿಗೆಗೊಂದು ಬೋರ್ಡು ತೂಗಾಡಿಸಿ ಅದರಲ್ಲಿ....ಜಾಗ್ರತೆ! ಈ ಮಹಾ ಶಯರು ಸಮಾಜಕ್ಕೆ ತುಂಬ ಘಾತಕರ ಎಂಬ ಎಚ್ಚರಿಕೆಯನ್ನು ಬರೆಯುವಂತೆ ಸ ಕಾರ ವ್ಯವಸ್ಥೆ ಮಾಡಿಸಬೇಕು.

ಜಗನ್ನಾಥ ನ್ಯುಮೋನಿಯಾದಿಂದ ಹಾ ಗೆ ಹಿಡಿದಿದ್ದ. ಪಕ್ಕದ ಮನೆಯವರೊಡನೆ.. ಡಾಕ್ಟರ್ ಗುಪ್ತಾ ಹೇಗೆ? ಎಂದು ಸಲಾ ಕೇಳಿದೆ. ಏನೂ ಗೊತ್ತಿಲ್ಲ ಅದಕ್ಕೆ! ವ್ಯರ್ಥ ಆಡಂಬರ-ಎಂದವರು ತಿರಸ್ಕಾರದಿಂದ. ಅದ ರಿಂದ ಆ ಡಾಕ್ಟರರನ್ನು ಕರೆಯಿಸುವ ವಿಚಾ ವನ್ನೇ ಬಿಟ್ಟುಬಿಟ್ಟೆ. ದೂರದ ಡಾಕ್ಟರರೊಬ್ಬ ರಿಗೆ ತೋರಿಸಿದೆ. ಆದರೆ ಒಂದು ದಿನ ೧ ಗಂಟೆ ರಾತ್ರಿಗೆ ಹುಡುಗನ ದೇಹಸ್ಥಿತಿ ವಿಕೋ ಪಕ್ಕೇರಿದಾಗ ಆ ದೂರದ ಡಾಕ್ಟರರಲ್ಲಿ ಹೋಗಿ ನಿರಾಶನಾಗಿ ಮರಳುವುದಕ್ಕೂ ಮೂ ರು ಗಂಟೆ ಹಿಡಿಯಿತು. ಅಷ್ಟರೊಳಗೆ ಹೆಂಡತಿ ಯು ಹೆದರಿ ಪಕ್ಕದ ಡಾಕ್ಟರ್ ಗುಪ್ತಾರನ್ನೇ ಕರೆ ಕಳುಹಿಸಿದಳು. ಅವರು ಬಂದು ಇರ ಳಿದ ಹುಡುಗನ ಬಳಿ ಕುಳಿತು ಆವರ ಸೇ ಮಾಡಿದರು ಅವರ ಪ್ರಯತ್ನದಿಂದಲೇ ಅ




ಕುಮಾರಿ ಜಿಲ್ಲೆಗಳು
(Govt. Regd.)
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!
P. DEVEE & Co. (N. J.) CALCUTTA-40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

## ವಾರ್ತಾಲಾಪ

...ತ್ರಿಯ ಕಂಟಕ ತಪ್ಪಿತು. ಹುಡುಗ ಸ್ವಸ್ಥ...ನಾ ಆದ; ಅಲ್ಲದೆ ಆ ಡಾಕ್ಟರ್ ತುಂಬ ...ಣನೆಂದೂ ತಿಳಿಯಿತು. ಆದರೆ ನೆರೆಮನೆ...ವರು ಮಾತ್ರ ಅವರ ಕುರಿತು ಸುಳ್ಳು ...ದ್ದಿ ಹುಟ್ಟಿಸಿ ನನ್ನನ್ನು ಹೀಗೆ ವ್ಯರ್ಥವಾಗಿ ...ಂದನಕ್ಕೆ ಗುರಿಮಾಡಿದ್ದರು.

ಮಗುವಿನ ಹೊಟ್ಟೆಯಲ್ಲಿ ಗಾಯ ಬೆಳೆ...ತ್ತಿದೆಯೆಂದು ತಿಳಿದು ಅದಕ್ಕೆ ...ಗ್ರತೆಯಾಗಿ ಆಪರೇಶನ್ ಮಾಡಿಸಬೇಕೆಂ...ಡಾಕ್ಟರರೊಬ್ಬರು ಹೇಳಿದ್ದರು. ಆಪರೇಷ...ನ ದಿನವೂ ನಿಶ್ಚಿತವಾಗಿತ್ತು. ಆದರೆ ಅಂದು ...ತ್ರಿಯು ಪತಿಯೊಡನೆ...ನಾನು ಆ ಡಾಕ್ಟರ...ದ ಮಗುವಿನ ಹೊಟ್ಟೆ ಸೀಳಿಸಲಾರೆ, ಎಂ...ಳು. ಏಕೆ ಅವರೇ ನಮಗೆ ಚಿಕಿತ್ಸೆ ಮಾಡು...ದ್ದಾರಲ್ಲ!

ಈ ಡಾಕ್ಟರರು ಯಾವಾಗಲೂ ಕೆಲಸದ ...ಳೆ ಹುಚ್ಚರಂತಿರುತ್ತಾರೆಂದು ಶೋಭಾಳ ...ಮ ಹೇಳುತ್ತಿದ್ದಾಳೆ. ಸಾಧಾರಣ ಔಷಧ ...ವರೆ ಚಿಂತಿಲ್ಲ. ಮಗುವಿನ ಪ್ರಾಣಕ್ಕೇ ಸಂ...ಕಾರ ಬರುವ ಈ ಆಪರೇಶನ್ ಖಂಡಿತ ...ಾಡಿಸಲಾರೆ!

ಆಪರೇಷನ್ ಆ ದಿನ ನಡೆಯಲೇ ಇಲ್ಲ. ...ಲ್ಕಾರು ದಿನಗಳ ಬಳಿಕ ಮಗುವಿನ ಪರಿ...ತಿ ತುಂಬ ಕೆಟ್ಟುಹೋದ ಮೇಲೆ ಡಾಕ್ಟರ...ನ್ನು ಕರೆಯಿಸಲಾಯಿತು. ಆದರೆಷ್ಟು ಪ್ರಯ...ಪಟ್ಟರೂ ಮಗು ಬದುಕಲೇ ಇಲ್ಲ. ಕೆಲವು ...ನಗಳ ಮೇಲೆ ಆ ದಂಪತಿಗಳು ಶೋಭಾಳ...ನ್ನು ಭೇಟಿಯಾದರು.

ಅಹಾ, ನಿಮ್ಮ ಮಗು ಸತ್ತುಹೋಯಿತೆ? ...ಥ ಮುದ್ದುಮಗು ಅದು!—ಎಂದಳು ...ಶೋಭಾ. ಅದರ ಗಾಯ ತುಂಬ ದೊಡ್ಡದಾ...ಗ ಆಪರೇಷನ್ ಮಾಡಿಸಿದೆವು. ಏಕೆ? ...ಡಾಕ್ಟರರು ಕೆಲವೊಮ್ಮೆ ಹುಚ್ಚಾಗುತ್ತಾ...ರೆಮ ನಿನ್ನ ತಾಯಿ ಹೇಳುವ ಮಾತನ್ನು ...ನೇ ನನಗೆ ತಿಳಿಸಿದ್ದೆಯಲ್ಲ—ಎಂದಳು ...ಸ್ಕಾರ ಪತ್ನಿ. ನನ್ನಮ್ಮನ ಅಭಿಪ್ರಾಯವೆ? ...ಹೀಗೆಯೇ ಹೇಳಿಬಿಡುತ್ತಾಳೆ. ಆದರೆ ಈ ...ಗೆಯೇ—ಮಗುವಿನ ಪ್ರಾಣವನ್ನೊಯ್ದಿತ್ತು.

ಗಂಡನ ದುರ್ನಡತೆಯ ಕುರಿತು ಸುಳ್ಳು ...ದ್ದಿ ಕೇಳಿದ ಸಾಧ್ವಿಯೊಬ್ಬಳು ವಿಷನುಂಗಿ ...ಸು ನೀಗಿದ್ದಳು.

ತಾಯಿಯೊಬ್ಬಳು ತನ್ನ ಅವಿವಾಹಿತ ಮ...ಳ ಕುರಿತು ಅಪವಾದ ಕೇಳಿ ಟ್ರಾಮಿನಡಿ...ದ್ದು ಆತ್ಮಹತ್ಯೆಮಾಡಿಕೊಂಡಳು.

ಈ ಘಟನೆಗಳೇನೂ ಸುಳ್ಳುಸುದ್ದಿಯಲ್ಲ; ...ತೆಗಳ ಕಂತೆಗಳಲ್ಲ. ಪ್ರತ್ಯಕ್ಷ ಕಂಡ ಸಂಗ...ಗಳು. ಹೀಗಿದೆ ವದಂತಿಗಳ ಮಹಿಮೆ!

ವದಂತಿಗೆ ಮೂರು ರೂಪಗಳಿವೆ. ಅದು ...ಯಿಯಿಂದ ಬಾಯಿಗೆ ಹೋಗುವಾಗ ಈ ...ಮೂರು ರೂಪವನ್ನು ತಾಳುತ್ತದೆ. (೧) ನಿಮೀ...ರಣ, (೨) ತೀಕ್ಷ್ಣೀಕರಣ, (೩) ಸಮನ್ವ...ಯೀಕರಣ—ಇವೇ ಅವರ ಮೂರು ರೂಪ...ಳು ಮೊದಲ ಸ್ಥಿತಿಯಲ್ಲ ಅದು ಕಥೆಯ ...ತ್ಸಾಹಕ್ಕಾಗಿ ಹುಡುಕಾಡುತ್ತದೆ. ದ್ವೇಷ, ಅಜ್ಞಾ...ನ, ತಿರಸ್ಕಾರ, ಅತಿ ವಿಶ್ವಾಸ, ಅಥವಾ ಮ...ನೋರಂಜನೆಯ ಉದ್ದೇಶದಿಂದ ಅದು ಆರಂ...ಭವಾಗುತ್ತದೆ ಅದು ತನ್ನ ಹೇಳಿಕೆಗೆ ಅನಗ...ತ್ಯವಾದ ಎಲ್ಲ ಘಟನೆಗಳನ್ನೂ ಬದಿಗೊತ್ತಿ...ಬೇಕಾದಷ್ಟನ್ನೇ ಆರಿಸುತ್ತದೆ. ಸೀತೆಯ ಘಟ...ನೆಯಲ್ಲಿ ಅವಳು ಕಾಲೇಜಿನ ನೃತ್ಯದಲ್ಲಿ ಭಾಗ...ವಹಿಸಿದುದು, ಮೋಟಾರಿನಲ್ಲಿ ಇತರ ಹುಡು...ಗಿಯರೊಡನೆ ಬಂದುದು ಇದಾವುದನ್ನೂ ...ಗಣಿಸಿಕೊಳ್ಳಲಿಲ್ಲ. ಏಕೆಂದರೆ ಇದರಿಂದ ಘಟ...ನೆಯ ತೀವ್ರತೆ ಶಿಥಿಲವಾಗುವ ಸಂಭವವಿದೆ.

ಎರಡನೇ ಸ್ಥಿತಿಯಲ್ಲಿ ಅದರ ವಾಸ್ತವಿಕ...ಗೆ ಅಪಾರ್ಥ ಕಲ್ಪಿಸಿ ಅದನ್ನು ಇನ್ನೂ ತೀವ್ರ...ವಾಗಿ ಮಾಡಲೆತ್ನಿಸಲಾಗುತ್ತದೆ. ಏಕೆಂದರೆ ...ಜನರಲ್ಲಿ ಒಂದು ತರದ ತೀವ್ರ ಭಾವನೆ ಕೆರ...ಳಬೇಕಾದರೆ ಇದು ಅನಿವಾರ್ಯ. ಹೀಗೆ ...ಜನರಲ್ಲಿ ಉದ್ರೇಕಮಾಡುವ ಎಷ್ಟೋ ಭಾವ...ನೆಗಳನ್ನು ಸೇರಿಸಿ ಅದಕ್ಕೊಂದು ಹೊಸ ...ರೂಪ ಕೊಡಲಾಗುತ್ತದೆ.

ಮೂರನೇ ಸ್ಥಿತಿಯಲ್ಲಿ ಆ ಎಲ್ಲ ಅಸ್ಪಷ್ಟ ...ಭಾವನೆಗಳನ್ನು ಹೊಂದಿಸಿ ಕಥೆಯ ರೂಪ ...ಕೊಡಲಾಗುತ್ತದೆ. ಹೊಂದದ ಭಾವಗಳಿದ್ದರೆ ಅದನ್ನು ಬಿಟ್ಟು ಬೇಕಾಗುವುದಷ್ಟನ್ನೇ ಆರಿಸಲಾಗುತ್ತದೆ. ಕಥೆಕಾರನ ಕಲ್ಪನೆಯೇ ಇಲ್ಲಿ ಕೆಲಸಮಾಡುತ್ತದೆ. ಇದೇ ಸಮನ್ವಯೀಕರಣ.

ಆದರೆ ಈ ಮೂರು ಅವಸ್ಥೆಗಳೂ ಬಹು ಬೇಗನೆ ಬಂದುಬಿಡುತ್ತವೆ.

ಘಟನೆಯ ತೀವ್ರತೆಯನ್ನು ಗೊತ್ತುಹಚ್ಚುವುದಕ್ಕಾಗಿ ಮನೋವೈಜ್ಞಾನಿಕರೊಬ್ಬರು ಕಾಲೇಜಿನ ಆರು ಜನ ವಿದ್ಯಾರ್ಥಿಗಳನ್ನು ಬೇರೆಬೇರೆಯಾಗಿ ಕರೆದು ಅವರ ಕಾಲೇಜಿಗೆ ಇಂಥ ತಾರೀಕಿಗೆ ವಿಂಡ್ಸರ್ ಡ್ಯೂಕ್ ಅಥವಾ ತ್ ಆನೇ ಎಡ್ವರ್ಡರು ಸಪತ್ನಿಕರಾಗಿ ಬರುತ್ತಾರೆಂಬ ಸುಳ್ಳು ಸುದ್ದಿಯನ್ನು ಅವರು ನಂಬುವಂತೆ ತಿಳಿಸಿದರು. ಈ ಸುದ್ದಿಯನ್ನು ಪ್ರಕೃತ ಗುಟ್ಟಾಗಿಡಬೇಕೆಂದೂ ಅವರಿಗೆ ಸ್ಪಷ್ಟವಾಗಿ ತಿಳಿಸಿತು. ಆದರೆ ಅದು ಗುಟ್ಟಾಗಿ ಉಳಿಯಬಲ್ಲುದೇ? ಒಂದು ವಾರದೊಳಗೆ ಕಾಲೇಜಿನ ೨೦೦೦ ವಿದ್ಯಾರ್ಥಿಗಳಿಗೆ ಈ ಸುದ್ದಿ ತಿಳಿದುಹೋಯಿತು. ಆ ಬಳಿಕ ಅದು ಮುನ್ಸಿಪಾಲಿಟಿಯ ಅಧ್ಯಕ್ಷರ ಕಿವಿಗೂ ತಲುಪಿತು; ಮತ್ತು ಅವರು, ಡ್ಯೂಕರು ಬರುವ ತಾರೀಕನ್ನು ತಿಳಿಸಿದರೆ ಸ್ವಾಗತಕ್ಕೆ ತಕ್ಕ ಏರ್ಪಾಡು ಮಾಡಲಾಗುವುದೆಂದೂ ಹೇಳಿದರು. ಅನೇಕ ಪತ್ರಿಕೆಗಳಲ್ಲೂ ಈ ಕುರಿತು ಸುದ್ದಿ ಪ್ರಕಟವಾಯಿತು.

ಇದೊಂದು ಸುಸಮಾಚಾರವಾದ್ದರಿಂದ ಇಷ್ಟಾದರೂ ಸಮಯ ತಗಲಿತು ಕೆಟ್ಟ ಸುದ್ದಿಯಾಗಿದ್ದರೆ ಇನ್ನೂ ತೀವ್ರವಾಗಿ ಹಬ್ಬುತ್ತಿತ್ತೆಂದು ಆ ಮನೋವೈಜ್ಞಾನಿಕರು ಹೇಳುತ್ತಾರೆ.

ಒಮ್ಮೆ ಕಾಲೇಜು ವಿದ್ಯಾರ್ಥಿಯೊಬ್ಬನು ಒಂದು ವಾರದ ವರೆಗೆ ಕಾಲೇಜಿಗೆ ಬರಲಿಲ್ಲ. ಅವನು ಪರಸ್ಥಳದವನಾಗಿದ್ದುದರಿಂದ ಅವನ ಕುರಿತು ಯಾವ ವರ್ತಮಾನವೂ ಸಿಗಲಿಲ್ಲ. ಅಕಸ್ಮಾತ್ ಅವನು ಹೃದಯಸ್ತಂಭನದಿಂದ ಮೃತಿಹೊಂದಿದನೆಂದು ಯಾರೋ ಕಿಲಾಡಿಗಳು ಸುಳ್ಳು ಸುದ್ದಿ ಹಬ್ಬಿಸಿದರು; ಮಿಂಚಿನ ವೇಗದಿಂದ ಹರಡಿದ ಆ ಸುದ್ದಿ ಕಾಲೇಜಿನಲ್ಲೆಲ್ಲ ತುಂಬಿಹೋಯಿತು ಸಂತಾಪಸೂಚಕ ಸಭೆಯೊಂದನ್ನು ಕರೆದು ಮೃತನ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು ಆ ಬಗ್ಗೆ ಕಾಲೇಜಿಗೆ ಒಂದು ದಿನದ ರಜೆಯನ್ನೂ ಕೊಟ್ಟರು. ಪತ್ರಿಕೆಗಳೂ ಸಂತಾಪಸೂಚಕ ಸಭೆಯ ಸುದ್ದಿಯನ್ನು ಪ್ರಕಟಿಸಿದುವು. ಮತ್ತೆ ಎಷ್ಟೋ ದಿನಗಳ ಮೇಲೆ ಆ ವಿದ್ಯಾರ್ಥಿ ಕಾಲೇಜಿಗೆ ಬಂದಾಗ ಈ ವದಂತಿಯ ಪರಿಣಾಮವನ್ನು ನೋಡಿ ಜನರೆಲ್ಲ ಎಷ್ಟು ಬೆರಗಾಗಿರಬಹುದು!

ಮಂಥರೆಯ ವಿಷಘಟಿತ ಮಾತುಗಳು ಎಂತಹ ಗೊಂದಲವನ್ನು ಹಬ್ಬಿಸಿದುವು! ಮಡಿವಾಳನ ಸಾಧಾರಣ ಮಾತು ಸೀತೆಯನ್ನು ಎಂಥ ಕಷ್ಟಕ್ಕೆ ಗುರಿಮಾಡಿತು! ಇವೆಲ್ಲ ನಿಮಗೆ ತಿಳಿದೇ ಇದೆ.

ಆದ್ದರಿಂದ ಚಾಡಿಹೇಳುವುದನ್ನಾಗಲಿ ವದಂತಿ ಹಬ್ಬಿಸುವುದನ್ನಾಗಲೀ ನಿಲ್ಲಿಸುವುದೇ ಇಂದಿನ ನಮ್ಮ ಪ್ರಪ್ರಥಮ ಸಾಮಾಜಿಕ ಕರ್ತವ್ಯ. ನಮ್ಮ ನಾಲಗೆಯ ಮೇಲೆ ನಿಯಂತ್ರಣವಿರಬೇಕು. ಆಂಗ್ಲನೊಬ್ಬನು ಚಾಡಿಕೋರರಿಗೆ ಶಿಕ್ಷೆ ಕೊಡುವ ಹೊಸ ಉಪಾಯವೊಂದನ್ನು ಕಂಡುಹಿಡಿದಿದ್ದ. ಯಾರಾದರೂ ಅವನ ಕಿವಿಗೆ ಒಂದು ಸುದ್ದಿ ಮುಟ್ಟಿಸುವ ಮೊದಲು ಇವನ್ನು ರುಜುವಾತು ಪಡಿಸುವುದು ಸಾಧ್ಯವೋ ಅಸಾಧ್ಯವೋ ಎಂದು ಮೊದಲು ನೋಡಿಕೊಳ್ಳಬೇಕಿತ್ತು. ಏಕೆಂದರೆ ಯಾರಾದರೂ ಅವನೊಡನೆ ಏನಾದರೂ ಹೇಳಿದರೆಂದರೆ ಅವನು ಕೂಡಲೇ ಆವರೊಡನೆ . . . ಆಗಲಿ ಈ ಸುದ್ದಿಯನ್ನು ಪರೀಕ್ಷಿಸೋಣ, ಬಾ; —ಎಂದ ಬಿಡುತ್ತಿದ್ದ.

ಇಂಥ ವ್ಯಕ್ತಿಯನ್ನು ಸಮಾಧಾನಪಡಿಸುವುದು ಅಷ್ಟೇನೂ ಸುಲಭವಲ್ಲ. ಆದರೆ ಈ ಕ್ರಮ ಆಶ್ಚರ್ಯಕರವಾಗಿ ಪರಿಣಾಮಬೀರಿತು ಇವನು ಸೇರಿದ ಕ್ಲಬ್ಬಿನ ಸದಸ್ಯರೂ ಇವನಿರುವ ಕೇರಿಯ ಜನರೂ ಸುಳ್ಳು ಸುಳ್ಳೇ ಚಾಡಿ ಹೇಳುವುದನ್ನು ನಿಲ್ಲಿಸಿಬಿಟ್ಟರು. ಈ ರೀತಿ ಸುಳ್ಳುಗಾರರಿಗೂ ಚಾಡಿಕೋರರಿಗೂ ನಾವು ಬುದ್ಧಿಕಲಿಸಬಹುದು ಮತ್ತು ಅವರ ಅಭ್ಯಾಸ ನಿಲ್ಲಿಸಬಹುದು.

ಚಾಡಿ ಹೇಳುವ ಹಾಗೂ ವದಂತಿ ಹಬ್ಬಿಸುವ ಅಭ್ಯಾಸದ ನಡುವೆ ಅಡಗಿರುವ ರಹಸ್ಯವನ್ನು ಸಾಮಾನ್ಯವಾಗಿ ಜನರು ಅರಿತಿಲ್ಲ. ವದಂತಿಯ ರೂಪದಲ್ಲಿ ಅಂತೆ,ಅಂತೆ ಎಂದು ಆರಂಭವಾಗಿ ಮುಂದೆ ಬೆಳೆದುಕೊಳ್ಳುವ ಸಮಾಚಾರವು ಆ ಮನುಷ್ಯನ ನಡತೆಗೂ ಸಂಬಂಧಿಸಿಕೊಂಡಿರುತ್ತದೆ. ಒಬ್ಬ ದುಶ್ಚರಿತ್ರನೊಮ್ಮೆ ನನ್ನೊಡನೆ . . . ನೋಡಿ, ಇಂದಿನ ಜನರು ಅದೆಷ್ಟು ನೀತಿಬಾಹಿರರಾಗಿದ್ದಾರೆ ಎಂದು ತಿಳಿಸಿದ. ಶತ್ರುರೂ ಇಂಥ ಅಪ್ರಾಮಾಣಿಕ ವ್ಯವಹಾರ ಮಾಡಲಾರೆನೆಂದು ಒಮ್ಮೆ ಒಬ್ಬ ವಂಚಕನೇ ತಿಳಿಸಿದ್ದ. ಇಬ್ಬರೂ ಆ ದುರಭ್ಯಾಸಗಳನ್ನು ತಿರಸ್ಕರಿಸಿ ತಮ್ಮ ಸ್ವಂತ ನಡತೆಯನ್ನು ತೋರಿಸಿಕೊಳ್ಳುತ್ತಿದ್ದಾರೆಂಬುದು ಸ್ಪಷ್ಟವಾಗಿದೆ. ಹೊಗಳು ಭಟ್ಟರ ಸ್ಥಿತಿ ನೋಡಿರಿ! ನೀವಿರಲಿ; ಎಂಥ ಮಹಾರಾಜರನ್ನೂ ನಾವು ಹೊಗಳುವುದಿಲ್ಲ ಎಂದು ಅವನೆನ್ನುತ್ತಾನೆ ಸರಿ; ಸಂದರ್ಭ ಬಂದರೆ ನಿಮ್ಮ ಕಾಲು ನೆಕ್ಕುವುದಕ್ಕೂ ಇವನು ಸಿದ್ಧನೇ ಎಂದು ನೀವರಿತುಕೊಳ್ಳಬಹುದು.

ಮನೋವಿಜ್ಞಾನದ ವಿದ್ಯಾರ್ಥಿಗಳು ಪ್ರವೃತ್ತಿಯ ಈ ಕ್ರಮವನ್ನು ಪ್ರೊಜೆಕ್ಷನ್ ಎಂದು ಕರೆಯುತ್ತಾರೆ. ಈ ಭಾವನೆ ಪ್ರತಿಯೊಬ್ಬರಲ್ಲೂ ತುಂಬಿರುತ್ತದೆ. ಅಜನಿಗರಿಯದಂತೆಯೇ, ಸಂದರ್ಭ ಬಂದಾಗ ಹೊರಹೊಮ್ಮುತ್ತದೆ. ಒಬ್ಬ ಲೋಭಿಯು ಮತ್ತೊಬ್ಬನ ಮಿತವ್ಯಯವನ್ನು ಕೃಪಣತೆಯೆಂದು ಕರೆಯುತ್ತಾನೆ. ವಂಚಕನು ಮತ್ತೊಬ್ಬನನ್ನು ವಂಚಕನೆಂದು ಹೆಸರಿಸುವನು. ನೀಚ್ಯಯು ಸಾಧ್ವಿಯನ್ನು ವೇಶ್ಯೆಯೆಂದೇ ನಿಂದಿಸುವಳು ಆಲಸಿಯು ಪರಿಶ್ರಮಿಯನ್ನು ಆಲಸಿಯೆಂದೇ ದೂರುವನು.

ಇಂದು ಕಾಂಗ್ರೆಸಿಗರನ್ನು ಜನರು ಮನಬಂದಂತೆ ನಿಂದಿಸುತ್ತಿದ್ದಾರೆ. ಈ ನಿಂದಕರೂ ಲೋಭ, ಪಕ್ಷಪಾತ ಹಾಗೂ ಮೋಸಗಾರಿಕೆಯ ಸೋಂಕಿನಿಂದ ದೂರವಾಗಿಲ್ಲ. ಸರಕಾರೀ ಪಕ್ಷದವರಂತೆಯೇ ಇವರೂ ದುರ್ಗುಣಗಳಿಗೆ ದಾಸರಾಗಿದ್ದಾರೆ. ಆ ವಿರೋಧಿಗಳ ಕೈಗೆ ಅಧಿಕಾರಸೂತ್ರ ಸಿಕ್ಕಿದರೆ ಇಂದಿಗಿಂತಲೂ ಹೆಚ್ಚಾಗಿ ಲೋಕದಲ್ಲಿ ಭ್ರಷ್ಟಾಚಾರ ನೆಲಸಲಾರದೆಂದು ಹೇಳಲಸಾಧ್ಯ.

ಕೆಲವೊಮ್ಮೆ ಮನುಷ್ಯನು ಯಾವ ದುರುದ್ದೇಶಕ್ಕೂ ಒಳಗಾಗದೆ ಹೀಗೆಯೇ ವದಂತಿಗಳ ಚರ್ಚೆಗಾರಂಭಿಸುತ್ತಾನೆ. ಒಂದು ದಿನ ನನ್ನ ಪರಿಚಿತನೊಬ್ಬನು ಇಂತಹುದೇ ಮಾತಿಗಾರಂಭಿಸಿದ: ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ೧೦ ಲಕ್ಷ ರೂಪಾಯಿ ಲಂಚ ತೆಗೆದುಕೊಂಡಿದ್ದಾರಂತೆ ಅವನೆಂದ. ಸುಮ್ಮನಿರು; ವ್ಯರ್ಥವಾಗಿ ಅದೇಕೆ ಒದರುತ್ತೀ—ನನ್ನ ಮಿತ್ರನೊಬ್ಬನು ಅವನನ್ನು ಗದರಿಸಿದ. ಇಲ್ಲಪ್ಪ! ಎಷ್ಟೋ ಜನ ಹಾಗೆನ್ನುತ್ತಿದ್ದಾರೆ!.

ಹಾಗಿದ್ದರೆ ಮುಖ್ಯ ಮಂತ್ರಿಗಳ ಮೇಲೆ ಲಂಚ ಸ್ವೀಕಾರದ ಆರೋಪ ಹೊರಿಸಿ ಮೊಕದ್ದಮೆ ಹೂಡುವಂತೆ ಅವರಿಗೆ ತಿಳಿಸು. ನೋಡೋಣ"—ಗೆಳೆಯನೆಂದ.

"ನನ್ನ ಮೇಲೇಕೆ ಸುಮ್ಮನೆ ಸಿಟ್ಟಾಗುತ್ತೀ? ಜನ ಹೇಳುವುದನ್ನೆ ನಾನೂ ಹೇಳಿದೆ! ಅಷ್ಟೇ!" "ನೀನು ಹಾಗೆನ್ನಬಾರದಿತ್ತು." ಈ ರೀತಿಯ ಮಾತು ಕಿವಿಗೆ ಬಿದ್ದರೆ ನೀನಾದರೂ ಏನು ಮಾಡುತ್ತಿದ್ದಿ? "ನಾನು ಬಾಯಿಮುಚ್ಚಿಕೊಳ್ಳುತ್ತೇನೆ." ಎಂದ ಗೆಳೆಯ

ಈ ಉಪದೇಶವನ್ನೆ ಓದುಗರೆಲ್ಲ ತಿಳಿಯಬೇಕೆಂದು ನನ್ನಿಷ್ಟ. ಇಂದು ಸಡಿಲು ನಾಲಗೆಯಿಂದಾಗಿ ನಮ್ಮ ಸಮಾಜದಲ್ಲಿ ಉಂಟಾಗುವ ಅನರ್ಥ ನಿಲ್ಲಬೇಕಾದರೆ ವದಂತಿ ಹಬ್ಬಿಸುವ ಬಾಯನ್ನು ಮುಚ್ಚಲು ಪ್ರಯತ್ನಿಸಬೇಕು. "ಕಂಣ್ಣಾರೆ ಕಂಡದ್ದೇ ನಿಜ; ಕಿವಿಯಿಂದ ಕೇಳಿದುದು ಸುಳ್ಳು" ಎಂಬ ಮಾತನ್ನೆ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

**-ಶ್ರೀ ಬಳ್ಕೂರು ಸುಬ್ರಾಯ ಅಡಿಗ.**

("ಪುಸ್ತಕ ಪ್ರಪಂಚ")

---


**ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ**

**ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?**

**ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?**

# ಮನೆ-ಮದ್ದು

**HOME REMEDIES**

ಬರೆದವರು: ಡಾಕ್ಟರ್ ಕೊಡ್ಕಣಿ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

**ನವಭಾರತ ಪುಸ್ತಕ ಭಂಡಾರ, ಉಡುಪಿ.**


---

### ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 346/1956.

ಕಲ್ಯಾಣಪುರ ಶ್ರೀ ವೆಂಕಟ್ರಮಣ ದೇವರ ದೇವಸ್ಥಾನ —ವಾದಿರು.

ಕಡೆಯಿಂದ ಟ್ರಸ್ಟಿಗಳು ಕೆ. ಜಯರಾಮ ಪಡಿಯಾರ ಕೂಡಾ—

ಮತ್ತು

ಕೆ. ಚಂದಪ್ಪ ಮರಕಾಲ ಕೂಡಾ

—ಪ್ರತಿವಾದಿರು

ಇವರೊಳಗೆ

3ನೇ ಪ್ರತಿವಾದಿ—ಸುಂದರ ಯಾನೆ ಶೀನ ಮರಕಾಲ ಹೊನ್ನು ಮರಕಾಲ್ತಿರ ಮಗ, ಉಡುಪಿ ತಾಲೂಕು ವಡಬಾಂಡೇಶ್ವರ ಗ್ರಾಮದ ಕಲ್ಯಾಣಪುರ ಇವರಿಗೆ,

ವಾದಿರ ಪೂರ್ವಾಧಿಕಾರಿಗಳಿಗೆ ಪ್ರತಿವಾದಿರ ಪೂರ್ವಾಧಿಕಾರಿಗಳು ರಿ. ನಂ. ತಾ. 13—10—1899ರಲ್ಲಿ ಬರಕೊಟ್ಟ ಮೂಲಗೇಣಿ ಎಮನ್ರ್ಗಿಗೆ ಕಾರಣವಾದ ಅಸ್ತಿಯ ಬಾಬ್ತು ಪ್ರತಿವಾದಿರಿಂದ ವಾದಿರ ದೇವರ ಭಂಡಾರಕ್ಕೆ ಬರ ಕಳದ ಜಯಮತ್ತು ಮನ್ನಾ ಸಲ್ಗಳ ಗೇಣಿ ವ ಬಡ್ಡಿ ಕೂಡಾ ರೂಪಾಯಿ 43—14—11ಕ್ಕೆ ವಾದಿರ ಕಡೆಯಿಂದ ಪ್ರತಿವಾದಿರ ಮೇಲೆ ಹೂಡಿದ ಸದರಿ ದಾವೆಯು ತಾರೀಕು 22—12—1956ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಆ ದಿನ್ನ ಸದರಿ 3ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆಯಿದ್ರೆ ಆತನ ಗೈರ್ ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ 3ನೇ ಪ್ರವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damodar Kamath.
Advocate for Plff.

ಉಡುಪಿ ದ. ಕ. ತಾ. 6—12—1956.

---


**'NAVAYUGA' WEEKLY**

is in the list of periodicals and Newspapers approved for use in Secondary Schools as per proceedings. Roc. No. 466 N/50 date 12-12-1950 of the Director of public Instruction Madras.

## ಐಕರ ಅಮೇರಿಕ

(೧ನೇ ಪುಟದಿಂದ)

ಮೇರಿಕನರ 'ಇಚ್ಛೆಯು ಗಗನಚುಂಬಿಗಳನ್ನು ನೋಡುತ್ತದೆ; ಆದರೆ ಬುದ್ಧಿಯು ವಹಾಹೆತುವಾದಿ ಪರಂಪರೆಯ ಅಡಿಯಾಳ್ತನವನ್ನು ಅಪ್ಪಿಕೊಂಡಿದೆ' ಎಂದಿದ್ದಾರೆ ಮಾರ್ಕ್‌ಟ್ವೈನ್ ಎಂಬ ಪತ್ರೊಬ್ಬ ಮೇಧಾವಿಯು, ಇದನ್ನೆ ವಿದೂಷಕನಂತೆ ಆಮೇರಿಕದ ಗೃಹಸ್ಥನ ಮನೆಯ ಮುಂಭಾಗ ರಾಣಿ ಆ್ಯನಳ ನೆನಪು ಕೊಡುತ್ತವೆ; ಆದರೆ ಹಿಂಭಾಗ ಮೇರಿ ಆ್ಯನಳ ಸ್ಮರಣೆಯನ್ನುಂಟುಮಾಡುತ್ತದೆ" ಎಂದು ವರ್ಣಿಸಿದರು.

ಅಮೇರಿಕವನ್ನು ಹೀಗೆಯೇ ನೋಡ ಹೋದವರಿಗೆ ಅಲ್ಲಿ ವಿಲಾಸೋಪಭೋಗಕ್ಕೆ ಪ್ರಾಶಸ್ತ್ಯವಿರುವಂತೆ ಕಾಣುವುದು ನಿಶ್ಚಯ. ಅಲ್ಲಿಯ ರಾತ್ರಿಕೂಟಗಳು, ಅಲ್ಲಿಯ ನೃತ್ಯ ಮತ್ತು ಸಂಗೀತ ಸಮಾರಂಭಗಳು ಮುಗ್ಧಗೊಳಿಸುತ್ತವೆ, ಅಲ್ಲಿಯ ಸಾಹಿತ್ಯ ಕ್ಷೇತ್ರವಾದರೂ ಬಹಳ ಫಲವತ್ತಾಗಿದೆ. ಮನೋರಂಜನೆಯನ್ನು ಬಿಟ್ಟು ಗಂಭೀರವಾಗಿ ಮಾತನಾಡಲೂ ಅಲ್ಲಿಯ ಜನರಿಗೆ ಬರುತ್ತದೆ. ಅಲ್ಲಿಯ ವಿಜ್ಞಾನಿಗಳು ಹಳೆಯ ಸಿದ್ಧಾಂತಗಳ ಸ್ಥಾನದಲ್ಲಿ ಹೊಸತನಕ್ಕೆ ಇಂಬುಕೊಡುತ್ತಿದ್ದಾರೆ; ಅರ್ಥಶಾಸ್ತ್ರಿಗಳು ಹಳೆಯ ನಂಬಿಕೆಗಳಿಗೆ ಈಗ ಬೆಲೆ ಬಾರದೆಂದು ಎಚ್ಚರಿಸುತ್ತಿದ್ದಾರೆ. ಉತ್ಪಾದಕ ವಸ್ತುಗಳಿಗಿಂತ ಉತ್ಪಾದನೆಗೆ, ಯಂತ್ರಗಳ ಉಪಯುಕ್ತತೆಗಿಂತ ಸಾಮೂಹಿಕ ಉತ್ಪಾದನೆಗೆ — ಇಂದು ಮಹತ್ವವನ್ನು ಕೊಡುವ ದೇಶವೆಂದರೆ ಅಮೇರಿಕೆ. ಕೂಲಿಕಾರರನ್ನು ಯಂತ್ರದ ದಾಸನಾಗಿ ಮಾಡಿ, ಆತನ ಬುದ್ಧಿವಂತಿಕೆಯ ಪ್ರದರ್ಶನಕ್ಕೆ ಅವಕಾಶವೇ ಇಲ್ಲದಂತೆ ಮಾಡುತ್ತೀರಿ ಎಂಬ ಗುಲ್ಲು ಏಳುವುದೇನೊ, ಇದೆ-ಆದರೆ, ಬುದ್ಧಿವಂತನಾದವನು ಯಂತ್ರದ ಹತ್ತಿರ ಹೋಗದೆನೇ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗಬಲ್ಲನೆಂದು . ಅಮೇರಿಕ ಹೇಳುತ್ತದೆ. ಅಂಥ ಬುದ್ಧಿವಂತನು ಯಂತ್ರ ಶಿಲ್ಪಿಯಾಗಬಹುದು, ಹೊಸ ಸಲಕರಣೆಗಳನ್ನು ತಯಾರಿಸಿಕೊಡಬಹುದು, ಬಹಳ ತೊಡಕಿನ ಯಂತ್ರಗಳನ್ನೆ ನಡೆಸಬಹುದು., ಉತ್ಪಾದನೆ ಹೆಚ್ಚುವಂತೆ ಬುದ್ಧಿವಂತಿಕೆಯನ್ನು ಉಪಯೋಗಿಸಿ ಇಡಿ ಕಾರ್ಖಾನೆಯ ಕಾರ್ಯಕ್ರಮವನ್ನೆ ಹೊಂದಿಸಿಕೊಳ್ಳುವ ಮೆನೇಜರನಾಗಲೂಬಹುದು.

೧೭೮೫ರಲ್ಲಿ ಓಲಿವರ್ ಇವಾನ್ಸ್ ಮೊದಲನೇ ಸ್ವಯಂಚಾಲಿತ ಯಂತ್ರಗಳುಳ್ಳ ಕಾರ್ಖಾನೆಯನ್ನು ಪ್ರಾರಂಭಿಸಿದಂದಿನಿಂದ ಅಮೇರಿಕದ ಔದ್ಯೋಗಿಕ ಪ್ರಗತಿ ಮೇಲಿನಂತೆ ಸಾಗಿದೆ. ಇಂದು ಅಣು ವಿಜ್ಞಾನದ ಹೊಸ್ತಿಲನ್ನು ದಾಟಿ ಈ ಅಭಿವೃದ್ಧಿ ಮುಂದರಿದಿದೆ. ಬೇರೆಯೇ ಸಾಮಾಜಿಕ ಹಾಗು ಆರ್ಥಿಕ ವಾತಾವರಣದಲ್ಲಿ ಉಸಿರಾಡಿಸುತ್ತಿದ್ದು, ತಮ್ಮ ದೇಶದ ಪರಿಸ್ಥಿತಿಗೆ ಒಗ್ಗಿ ಹೋಗಿರುವ ವಿದೇಶೀಯರಿಗೆ ಅಮೇರಿಕದ ಜನತೆಯ ನಡವಳಿಕೆ ಮತ್ತು ಅಭ್ಯಾಸಗಳು ಮೊದಲನೇ ನೋಟದಲ್ಲಿ ವಿಸ್ಮಯಕಾರಿಗಳೆನಿಸುತ್ತವೆ; ಮತ್ತು ಹಿಂದಿನಿಂದ ಜುಗುಪ್ಸೆಯನ್ನು ತೋರಿಸಲೂಬಹುದು. ಆದರೆ, ಅಮೇರಿಕದವರನ್ನೆ ಕೇಳಿದರೆ, "ಇದೇ ನಮ್ಮ ನಡವಳಿಕೆಯಲ್ಲ, ಇದೇ ಶಾಶ್ವತವಾಗಿ

## ಯುಗಧರ್ಮ

**ನಮ್ಮ ಮಕ್ಕಳ ಭವಿಷ್ಯಕ್ಕೆ ಬಾಳ್ವೆಯನ್ನು ಹೊಂದಿಸಿಕೊಳ್ಳುವಂತೆ ದೊಡ್ಡವರು ಈ ಕ್ಷಣದಿಂದಲೇ ನೋಡಿಕೊಳ್ಳಲಿ! ಪ್ರಗತಿಯ ಹೆಜ್ಜೆಯನ್ನು ಹಿಂದಿಕ್ಕದೆ ಸನ್ಮಾರ್ಗದಲ್ಲಿ ಮುನ್ನಡೆಸಲಿ!**

ಯಾವಾತನು ಭೂಮಿಯ ಮೇಲೆ ಯಾವುದೇ ತರದ ವಸ್ತುಗಳನ್ನು ಉಪಯೋಗಿಸಿ ಜೀವಿಸುತ್ತಾನೋ, ಇತರರಿಂದ ಸೇವೆ ಮಾಡಿಸಿಕೊಂಡು ಬದುಕುತ್ತಾನೋ, ಆತನು ಅದೇ ಪ್ರಮಾಣದಲ್ಲಿಯಾದರೂ ವಸ್ತುಗಳನ್ನು ಉತ್ಪಾದಿಸುವುದಿಲ್ಲವಾದರೆ, ಬೇರೆ ಯಾವ ಸೇವೆ ಮಾಡುವುದಿಲ್ಲವಾದರೆ, ಅವನಿಂದ ದೇಶಕ್ಕೆ ಒಬ್ಬ ಕಳ್ಳನಿಂದಾದಷ್ಟೇ ಹಾನಿಯಾಗುತ್ತದೆ. ಯಾವಾತನು ತನ್ನ ಶಕ್ತಿಯನ್ನು ದುಡಿಮೆಗಾಗಿ ಉಪಯೋಗಿಸಿ, ನೆರೆತುದರಲ್ಲಿ ತೃಪ್ತಿಪಟ್ಟು ಕಷ್ಟ ಸುಖಗಳನ್ನು ಸಮಾನವಾಗಿ ನುಂಗಿ ಜೀವನ ನಡೆಸುತ್ತಾನೋ, ಅವನಿಂದ ದೇಶಕ್ಕಾದಷ್ಟು ಉಪಕಾರ ಸಾಮಾನ್ಯರಿಂದ ಆಗುವುದಿಲ್ಲ. ಸಮಾಜ ಶೋಷಕ ಸಾಧನಗಳನ್ನು ಹೊಂದಿ— ತನ್ನ ಸುಖವನ್ನು ಹೆಚ್ಚಿಸಿಕೊಳ್ಳುವಲ್ಲಿ ಅನ್ಯರ ಕಷ್ಟವನ್ನು ಮನಸ್ಸಿಗೆ ತಂದುಕೊಳ್ಳದೆ -ಅನ್ಯರ ಕಷ್ಟವನ್ನು ತನ್ನದಾಗಿ ತಿಳಿದುಕೊಳ್ಳುವಷ್ಟು ಸಹಾನುಭೂತಿ ತೋರಿಸದ ಮನುಷ್ಯನು ದಿನಕ್ಕೆ ಸಾವಿರ ಬಾರಿ ದೇವರ ನಾಮವನ್ನುಚ್ಚರಿಸಿದರೂ ಅವನು ದೇವರ ನಿಜವಾದ ಭಕ್ತನಾಗಲಾರ; ಪುಣ್ಯವನ್ನು ಗಳಿಸಲಾರ; ಅವನ ಬೆನ್ನು ಹತ್ತುವುದು ಪಾಪದ ಮೂಟೆಯೇ! ಅನ್ಯರು ಕಷ್ಟದಲ್ಲಿರುವಾಗ ತಾನು ಸುಖಭೋಗಿಯಾಗಿರುವುದು ಯಾವಾತನ ಮನಸ್ಸಿಗೆ ಹಿಡಿಸುವುದಿಲ್ಲವೋ, ಅವರ ಕಷ್ಟ ನಿವಾರಣೆಗಾಗಿ ದುಡಿದಲ್ಲದೆ ಮನಸ್ಸು ನಿಲ್ಲದೋ ಯಾವಾತನು ತನ್ನ ಸುಖಕ್ಕಾಗಿ ಅನ್ಯರ ಶ್ರಮದ ಫಲವನ್ನು ಬಯಸುದಿಲ್ಲವೋ, ಕನಿಕರ, ನಿಷ್ಠೆ, ಸಾಹಸಗಳಿಂದ ಕೂಡಿದ ಜೀವನ ನಡೆಸುವನೋ ಅವನು ದೇವರ ಹೆಸರನ್ನೇ ಎತ್ತದಿದ್ದರೂ ಕೂಡ ಅವನು ದೇವರ ಸದ್ಭಕ್ತನು! ಅವನನ್ನು ಹಿಂಬಾಲಿಸುವುದು ಪುಣ್ಯವೇ. ನಾವು ಕಲ್ಯಾಣ ರಾಷ್ಟ್ರವನ್ನು ಕಟ್ಟಬೇಕಿದ್ದರೆ ಇಂಥ ಉತ್ತಮ ಆದರ್ಶಗಳಿಗೆ ಪ್ರತಿಯೊಬ್ಬ ಪ್ರ

ಉಳಿಯಲಾರದು—ಯಾವುದೂ ಸ್ಥಿರವಾಗಬೇಕೆಂದು ನಮ್ಮ ಇಚ್ಛೆಯಲ್ಲ; ಅಭಿವೃದ್ಧಿಗೊಳ್ಳಬೇಕೆಂಬುದೇ ನಮ್ಮ ಧ್ಯೇಯ' ಎಂಬ ಉತ್ತರ ಬಂದೀತು. ಹಳೆಯದರ ನಿರಾಕರಣೆ ನಡೆದಿದೆ ಎಂದಿದರ ಅರ್ಥವಲ್ಲ-ವೈವಿಧ್ಯ ಮತ್ತು ಪ್ರಗತಿಯಲ್ಲಿ ಅಮೇರಿಕದ ಜನರಿಗಿರುವ ಅತ್ಯಧಿಕ ಆಸ್ಥೆಯ ದ್ಯೋತಕವೆಂದೇ ಇದನ್ನು ಪರಿಗಣಿಸಬಹುದು. ಆದುದರಿಂದ ಆಳವಾಗಿ ವಿಚಾರಿಸಿದರೆ, ಅಮೇರಿಕವೊಂದು ದೇಶವಲ್ಲ-ಅಲ್ಲಿ ಕೆಲಸ ಮಾಡುವ ೬೨ ಕೋಟಿ ನಾಗರಿಕರು; ಅವರ ಹೃದಯ ಗೆದ್ದುಕೊಂಡರೆ, ಅವರೊಡನೆ ಹಸ್ತಾಂದೋಲನ ಮಾಡಿದವಾದರೆ, ಆ ದೇಶ ಸಹಜವಾಗಿಯೇ ನಮ್ಮ ನೆರೆನಾಡಾಗುತ್ತದೆ — ೧೧,೦೦೦ ಮೈಲು ದೂರವಿದ್ದರೂ ಸಹ!

ಜೆಯೂ ಆಕರ್ಷಿತನಾಗಬೇಕಾಗುವುದು. ವ್ಯಕ್ತಿಯ ವಿಚಾರವು ಇದಕ್ಕೆ ವ್ಯತಿರಿಕ್ತವಾಗಿದ್ದರೆ ಅಂಥ ವ್ಯಕ್ತಿಗಳಿಂದ ಕೂಡಿದ ಸಮಾಜದಲ್ಲಿ ಕೆಲವೇ ಮಂದಿ ಮುಂದಾಳುಗಳು ಎಷ್ಟೇ ಪ್ರಯತ್ನಪಟ್ಟರೂ ಸಂಪೂರ್ಣ ಸಫಲರಾಗುವುದು ಸಾಧ್ಯವಾಗದು ಆದ್ದರಿಂದ ನಮ್ಮ ಗುರಿಯ ಹಾದಿಯನ್ನು ಪ್ರತಿಯೋರ್ವನೂ ಹಿಡಿಯುವಂತೆ—ನಮ್ಮ ಧ್ಯೇಯ ಸಾಧನೆಗಾಗಿ ಪತಿಯೋರ್ವನೂ ಸೊಂಟಕಟ್ಟುವಂತೆ ಮಾಡುವುದೇ ಇಂದು ಆಗತ್ಯವಾಗಿ ಮೊದಲು ನಡೆಯಬೇಕಾದ ಕೆಲಸವಾಗಿದೆ—ಎಂಬ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗುವುದು.

ಸರಕಾರದಿಂದ—ಶಾಸನದ ಮೂಲಕ ಸಾಧಿಸಲಾಗದ ಈ ಕಾರ್ಯದ ಕಡೆಗೆ ಗಮನವಿತ್ತವರು ಬಹು ಕಡಿಮೆ. ಅಂತಹ ವಿಚಾರಗಳು ಇಂದಿನ ಕಿರಿಯರಲ್ಲಿ-ಮುಂದಿನ ಪ್ರಜೆಗಳಲ್ಲಿ ಮೂಡುವಂತೆ ಮಾಡಿ, ಮುಂದೆ ಉತ್ತಮ ಸಮಾಜವು ನಿರ್ಮಾಣಗೊಳ್ಳುವಂತೆ ಮಾಡಬಹುದೆಂದು ನಾವಿಂದು ನಂಬುತ್ತೇವೆ. ಆದರೆ ಇದು ಸಂದೇಹಾಸ್ಪದವಾಗಿ ಕಾಣುವುದು. ಯಾಕೆಂದರೆ 'ತಾಯಂತೆ ಕರು, ನಾಯಿಯಂತೆ ಬಾಲ' ಎನ್ನುವ ಮಾತು ಪೂರ್ಣ ಸುಳ್ಳಲ್ಲವೆಂಬುದಕ್ಕೆ ನಮಗೆ ದೃಷ್ಟಾಂತಗಳು ಸಿಗುತ್ತವೆ. ಮೇಲು ಮತ್ತು ಕೀಳು ಜಾತಿಯ ಮಕ್ಕಳು ಶಾಲೆಯಲ್ಲಿ ಒಟ್ಟಿಗೆ ಕುಳಿತು ಕಲಿಯುತ್ತಿದ್ದರೂ,ಹಿರಿಯರು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದರೆ,ಮಕ್ಕಳು ತಮ್ಮ ಮುಂದಿನ ಜೀವನದಲ್ಲಿ ಹಿರಿಯರನ್ನೇ ಅನುಸರಿಸಬೇಕಾಗುವುದು ವಿನಾ ಶಾಲೆಯಲ್ಲಿ ನಡೆದುಕೊಂಡಂತೆ ನಡೆಯುವುದಿಲ್ಲವೆಂದೇ ಹೇಳಬಹುದು. ಹೀಗೆಯೇ ಸಮಾಜದ ಐಕ್ಯತೆಗೆ--ಧ್ಯೇಯ ಸಾಧನೆಗೆ ವಿರೋಧವಾದ ವಿವಿಧ ಭೇದ, ಸ್ವಾರ್ಥ, ಸಂಕುಚಿತ ಭಾವನೆಗೆ ಹಿರಿಯರು ಅಂಟಿಕೊಂಡಿದ್ದರೆ, ಕಿರಿಯರೂ ಅವರಂತೆಯೇ ಆಗುವ ಸಂಭವ ಹೆಚ್ಚು ವಿನಾ ಎಳೆವಯಸ್ಸಿನಲ್ಲಿ ಓದಿದ ಪಾಠಕ್ಕನುಗುಣವಾಗಿ ನಡೆದುಕೊಂಡಾರೆಂದು ಹೇಳಬರುವಂತಿಲ್ಲ. ಎನ್ನುವಾಗ ನಮ್ಮ ಕಾರ್ಯ ಸಾಧನೆಯು ಸುಲಭವಾಗಬೇಕಾದರೆ ಇಂದಿನ ಹಿರಿಯರೇ ನಮ್ಮ ಆದರ್ಶಕ್ಕೆ ಆಕರ್ಷಿತರಾಗಬೇಕು— ಪೂರ್ಣ ಪರಿವರ್ತನೆಗೊಳ್ಳುವುದಸಾಧ್ಯವಾದರೂ ಸಾಕಷ್ಟು ಪ್ರಮಾಣದಲ್ಲಿ ಆದರ್ಶದ ಪ್ರಭಾವವು ಅವರ ಮೇಲೆ ಬಿದ್ದರೆ ನಮ್ಮ ಹಾದಿಯು ಸುಗಮವಾಗಬಹುದು. ಜಟಿಲವಾದ ಹಲವು ಆರ್ಥಿಕ, ಸಾಮಾಜಿಕ ಬಿಕ್ಕಟ್ಟಿಗೆ ಸಂಬಂಧಿಸಿದ ಸಮಸ್ಯೆಗಳು ಸಡಿಲವಾಗಬಹುದು ಎಂದಾಯಿತು.

ಆದುದರಿಂದ ಯುಗ ಧರ್ಮದ ಆದರ್ಶದ ಕೂಗು ಪ್ರತಿಯೊಬ್ಬನ ಹೃದಯವನ್ನೂ ಮುಟ್ಟಬೇಕು. ಪ್ರತಿಯೊಬ್ಬನೂ ಭವಿಷ್ಯದ ಸಮಾಜದಲ್ಲಿ ಅವಶ್ಯವಾಗಿ ನೆಲೆಗೊಳ್ಳಬೇಕಾದರೆ ರೀತಿ ನೀತಿಗಳಿಗನುಗುಣವಾಗಿ ತಮ್ಮ ಮಕ್ಕಳನ್ನು ತಿದ್ದಬೇಕು; ಶುದ್ಧ ಜೀವನಕ್ಕೆ ಹಚ್ಚಬೇಕು. ಹಿಂದಿನ ಹಿರಿಯರ ಪದ್ಧತಿಯಂತೆ, ಮಕ್ಕಳು ದುಡಿಯದಿದ್ದರೂ ಸುಖವಾಗಿ ಜೀವಿಸುವಷ್ಟು ಸಂಪತ್ತು ಗಳಿಸಿಟ್ಟರೂ, ಭವಿಷ್ಯದಲ್ಲಿ ಸಂಪತ್ತನ್ನುತ್ಪಾದಿಸುವವನಿಗಲ್ಲದೆ ಬರಿಯ ಒಡೆತನಕ್ಕೆ ಬೆಲೆಯಿಲ್ಲವೆ, ದುಡಿಯಲಾರದವ-ಸಮಾಜೋಪಯೋಗೀ ಕಾರ್ಯ ಮಾಡಲರಿಯದವನು ಸೋಮಾರಿ—ಭೂಭಾರಕನೆನಿಸಿಕೊಳ್ಳಬೇಕಾಗುವುದರಿಂದ, ಭವಿಷ್ಯದಲ್ಲಿ ಬೆಲೆಯುಳ್ಳ ಯೋಗ್ಯತೆಯನ್ನು ಮಕ್ಕಳಲ್ಲಿ ಉಂಟುಮಾಡದಿದ್ದರೆ ಅವರನ್ನು ತೊಡಕಿನಲ್ಲಿ ಹಾಕಿದಂತಾಗುವುದೆಂಬುದನ್ನು ಮರೆಯಬಾರದು. ಇಂದಿನ ಸಮಾಜದಲ್ಲಿರುವ ವಿವಿಧ ವೈಷಮ್ಯಗಳನ್ನುಳಿಸಿಕೊಳ್ಳಬೇಕೆಂದು ಯಾರಾದರೂ ಯತ್ನಿಸುವುದಿದ್ದರೆ, ಅವರು ಸರ್ವಥಾ ಯಶಸ್ವಿಯಾಗಲಾರರು ಮಾತ್ರವಲ್ಲ, ಕೊನೆಗೆ ಅವರೇ ಕಡೆಗಣಿಸಲ್ಪಡುವುದು ಖಂಡಿತವೆಂಬ ಸಿದ್ಧಾಂತವು ಮನವಮುಟ್ಟಿದ ಮನೆ ಮಾತಾದರೆ, ಅನೇಕರ ಹಳೇ ಭಾವನೆಗಳು ನಶಿಸಿ ಹೊಸ ಮಾರ್ಗವನ್ನನುಸರಿಸುವ ಅವಶ್ಯಕತೆಯ ಅರಿವು ಅವರಿಗಾಗಬಹುದು.

ಇನ್ನು ಹಿರಿಯರ ಹಳೆಯ ಸಂಪ್ರದಾಯದ ನಿಯಂತ್ರಣವನ್ನು ಮೀರಿ ವರ್ತಿಸುವ ಕಿರಿಯರಾದರೂ ನಮ್ಮ ಆಧುನಿಕ ಆದರ್ಶಕ್ಕನುಗುಣವಾಗಿ ಪರಿವರ್ತನೆ ಹೊಂದದೆ ಬೇರೆಯೇ ವಿಚಾರಗಳಲ್ಲಿ ತೇಲಿ ಹೋಗುವುದು ಶೋಚನೀಯ ವಿಚಾರ. ಹೊಸ ಹೊಸ ತರದ ಉಡುಪು ತೊಟ್ಟು ಅಂದವಾಗಿ ಕಾಣಿಸಿಕೊಳ್ಳುವುದೇ ನಮಗೆ ಭೂಷಣ-ಗೌರವವೆಂದು ತಿಳಿದರೆ, ನಮ್ಮ ಅಮೂಲ್ಯವಾದ ಸಮಯದ ಹಲವಂಶವನ್ನು (ಹೊಲಸು) ಶೃಂಗಾರಕ್ಕಾಗಿಯೇ ಕಳೆಯುವೆವಾದರೆ, ನಾವೆಷ್ಟರ ವಿವೇಕಿಗಳಾದೇವು? ರಾಷ್ಟ್ರದ ಪ್ರಜೆಗಳೆಲ್ಲರೂ ನಮ್ಮಂತೆ ಸೊಗಸುಗಾರರೇ ಆದರೆ ರಾಷ್ಟ್ರದ ಹಾಗೂ ನಮ್ಮ ಗತಿಯೇನಾಗಬಹುದೆಂಬುದನ್ನಾದರೂ ತಿಳಿದು ನಾವು ನಾಚಿಕೆಪಡಬೇಡವೆ? ಆಡಂಬರದ ಉಡುಪಿನೊಳಗೆ, ಮಾನವತೆಯ ಶತ್ರುಗಳಾದ ಅಹಂಕಾರ, ಆಲಸ್ಯಾದಿ ಕೆಟ್ಟ ಪ್ರವೃತ್ತಿಗಳು ಅಡಗಿರುತ್ತವೆ, ಮಾನವತೆಯ ಪರಮ ಮಿತ್ರರಾದ ವಿನಯ ಸಂಪನ್ನತೆ, ಕನಿಕರಭಾವನೆ, ಸೇವಾಪರಾಯಣತೆಯೇ ಮೊದಲಾದ ಶ್ರೇಷ್ಠ ಗುಣಗಳು ಅಲ್ಲಿ ಅಪರವೆಂಬುದನ್ನು ತಿಳಿದಾದರೂ ನಮ್ಮನ್ನು ನಾವು ತಿದ್ದಿಕೊಳ್ಳಬೇಡವೆ?

ಹೌದು! ತಿದ್ದಿಕೊಳ್ಳಬೇಕು; ಶುದ್ಧ ಜೀವನ ಕೈಗೊಳ್ಳಬೇಕು; ಭಾರತವನ್ನು ಬೆಳಗಿಸಬೇಕು. ಪೂಜ್ಯ ವಿನೋಬಾಜೀಯವರು ಹೇಳುವಂತೆ ಇಂದಿನ ಪರಿಸ್ಥಿತಿಯೆಂದರೆ ಕೆಲಸಮಾಡುವವನಿಗೆ ವಿದ್ಯೆಯಿಲ್ಲದೆ ಅವನ ಕೆಲಸವೇ ಪ್ರಯೋಜನವಿಲ್ಲದಾಗಿದೆ. ವಿದ್ಯೆ ಕಲಿತವನು ಕೆಲಸ ಮಾಡುವುದಿಲ್ಲವಾದ್ದರಿಂದ ಅವನ ವಿದ್ಯೆಯೇ ಪ್ರಯೋಜನವಿಲ್ಲದಾಗಿದೆ. ಹೀಗೆಯೇ ಇನ್ನೆಷ್ಟೋ ವಿಷಯಗಳು. ಇಂತಹ ವಿಷಯಗಳಲ್ಲಿ ನಾವು ಮಾಡುವ ಸುಧಾರಣೆಯೇ ನಮ್ಮ ನಿಜವಾದ ಪ್ರಗತಿಯ ಸ್ಥಿರವಾದ ಹೆಜ್ಜೆ. ಪರಮಾತ್ಮನು ನಮ್ಮ ಹಿರಿಕಿರಿಯರೆಲ್ಲರನ್ನೂ ಇದೇ ಆಧುನಿಕ ಆದರ್ಶದ ಬೆಳಕಿನಲ್ಲೇ ನಡೆಸಲಿ!

—ಶ್ರೀ ಪಿ. ಬಿ. ಅಮ್ಲಾಡಿ

**ಲೇಖಕರೊಡನೆ—**

**"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇನ್ನು ಚಿಕ್ಕದಿರ ಬೇಕಲ್ಲದೆ. ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.**

—ಸಂ. ನ.

Licensed to Post without Prepayment.

# ನವಯುಗ

ಸಂಪುಟ ೩೬ VOL. 36

20—12—1956

ಸಂಚಿಕೆ ೧೬ NO. 16

## ಕನ್ನಡ ಸಾಹಿತ್ಯ

### ವ್ಯಾಪಕವಾದ ಕ್ಷೇತ್ರದಲ್ಲಿ ವೈವಿಧ್ಯಪೂರ್ಣ ಕೃಷಿಯನ್ನು ಕನ್ನಡ ಸಾಹಿತ್ಯಾರಾಧಕರು ಕೈಗೊಳ್ಳಲಿ!

ಕನ್ನಡ ಸಾಹಿತ್ಯ ಎಂಬ ಶಬ್ದ ಸಮುಚ್ಚಯಕ್ಕೆ ಹೊಸ ಅರ್ಥವನ್ನು ಕಲ್ಪಿಸಿಕೊಡಬೇಕಾಗಿದೆ, ಅವರ ಇಂದಿನ ಅರ್ಥದಲ್ಲೂ ರೂಪದಲ್ಲೂ ಬದಲಾವಣೆ ನಡೆಯಬೇಕಾಗಿದೆ. ಸಾಹಿತ್ಯಾರಾಧನೆಯು ಕೇವಲ ಕತೆ, ಕಾದಂಬರಿ, ನಾಟಕ ಮತ್ತು ಕವಿತೆಗಳ ರಚನೆಯ ಮಟ್ಟಿಗೆ ಸೀಮಿತವಾಗಿರಬಾರದು. ಸಾಹಿತ್ಯದ ಸೇವೆಗಾಗಿ ನಾವಿಡುವ ಹೊಸ ಹೊಸ ಹೆಜ್ಜೆಗಳಲ್ಲೂ ಕೈಗೊಳ್ಳುವ ಹೊಸ ಹೊಸ ಸಾಹಸಗಳಲ್ಲೂ ವಿಜ್ಞಾನ, ರಾಜಕಾರಣ, ಅರ್ಥಶಾಸ್ತ್ರ ಮತ್ತು ಸಮಾಜನೀತಿಯ ರಂಗದಲ್ಲಿ ಪ್ರವಹಿಸುತ್ತಿರುವ ಆಧುನಿಕ ವಿಚಾರಗಳ ಅಭಿವ್ಯಕ್ತಿಗೆ ಅವಕಾಶ ಸಿಗಬೇಕು. ಆಂಗ್ಲ ಮತ್ತಿತರ ಭಾಷೆಯಿಂದ ಉತ್ತಮವಾದ ಕೃತಿಗಳನ್ನೆಲ್ಲ ಕನ್ನಡಕ್ಕೆ ಅನುವಾದ ಮಾಡಿ, ಮಾಡಿಸಿ ನಮ್ಮವರಿಗೆ ಸಾಹಿತ್ಯ ಕ್ಷೇತ್ರವು ಎಷ್ಟು ವ್ಯಾಪಕವಾಗಿ ಬೆಳೆಯಬಲ್ಲುದೆಂದು ತಿಳಿಸುವುದೂ ನಮ್ಮ ಕರ್ತವ್ಯ

....ಮೇಲಿನದು ಮೊನ್ನೆ ೧೬ನೇ ದಿನಾಂಕ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರುಗಳ ಗೌರವಾರ್ಥ ಏರ್ಪಡಿಸಿದ ಸಮಾರಂಭದಲ್ಲಿ ಭಾಷಣ ಮಾಡುತ್ತ ನೀಡಿದ ಉಪದೇಶದ ಸಾರ. ಅದು ವಿದ್ವಾಂಸರು ನೆರೆದಿದ್ದ ಸಭೆ. ಕನ್ನಡ ಸಾಹಿತ್ಯಾರಾಧನೆಯ ನಾನಾ ಪ್ರಕಾರಗಳಲ್ಲಿ ಪಳಗಿದವರು ನೆರೆದಿದ್ದ ಕೂಟ. ಅಲ್ಲಿ ಹೇಳಬೇಕಾದ ಮಾತನ್ನೇ ರಾಜ್ಯಪಾಲರು ಹೇಳಿದ್ದಾರೆ—ಅದರ ಮಹತ್ವವು ಈ ಸಭೆಗೆ ಮಾತ್ರವೇ ಪರಿಮಿತವಾಗಿರದೆ ಕನ್ನಡದ ಮತ್ತು ಕನ್ನಡಿಗರ ಪುರೋಗತಿಯನ್ನು ಬಯಸುವ ಎಲ್ಲರೂ ಗಮನಿಸಬೇಕಾದ ವಿಷಯವನ್ನದು ಸ್ಪರ್ಶಿಸುತ್ತದೆ ಎನ್ನುವುದೇ ದೊಡ್ಡ ವಿಶೇಷ

ಸಾಹಿತ್ಯದಲ್ಲಿ ಕನ್ನಡಿಗರಿಗೆ ಇಂದು ಹೆಚ್ಚಿನ ಅಭಿರುಚಿ ಇದೆ, ಆಸಕ್ತಿ ಇದೆ. ಜನರು ಪತ್ರಿಕೆಗಳನ್ನು ನಿತ್ಯವೂ (ಕೊಂಡು) ಓದುತ್ತಾರೆ. ಪುಸ್ತಕಗಳನ್ನು ಬಿಡದೆ ಓದಿ ಹಾಕುತ್ತಾರೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ಹೀಗಿರಲಿಲ್ಲ, ಆದುದರಿಂದ ಪರಿಸ್ಥಿತಿಯು ತುಂಬ ಸುಧಾರಿಸಿದೆ ಎಂದು ಸಮಾಧಾನಪಟ್ಟುಕೊಳ್ಳುವವರಿಗೆ ಇಂದು ಕೊರತೆ ಇಲ್ಲ. ಆದರೆ ನಮ್ಮ ಓದುವ ಅಭಿರುಚಿ, ಸಾಹಿತ್ಯದ ಸವಿಯನ್ನು ಉಣ್ಣುವ ಬಯಕೆ ತೃಪ್ತಿಕರವಾದ ಮಾರ್ಗವನ್ನು ಹಿಡಿದು ಸಾಗಿದೆಯೆ? ಇಲ್ಲವೆನ್ನುವುದು ಸ್ಪಷ್ಟ

ಹೌದು, ಜನರು ಪತ್ರಿಕೆಗಳನ್ನು ನಿತ್ಯವೂ ಓದುತ್ತಾರೆ ಏಕಾಗಿ? ಜ್ಞಾನಾರ್ಜನೆಗಾಗಿ ಎಂಬ ಮಾತು ಉತ್ತರವಾಗಿ ಸಿಗುವುದಿಲ್ಲ, ಪ್ರಾಮಾಣಿಕ ವಿಮರ್ಶಕರಿಗೆ! ಹೂಳಿಯ ಕೆಸರುಗಳ ಸುರಿಮಳೆ ಹೇಗಾಗಿದೆ— ಎಂಬುದರ ಮೇಲೆಯೇ ಓದುಗರಿಗೆ ಕಣ್ಣು! ನಿಂದೆ, ದೂಷಣೆ, ಸಣ್ಣದೊಂದು ಲೋಪವನ್ನು ದೊಡ್ಡದಾಗಿ ಬಣ್ಣಿಸಿ 'ಮಹಾಪರಾಧ ಇದು" ಎಂದು ಸಾರಿದ ಬಗೆ. ಇವುಗಳೆಲ್ಲದರಿಂದ 'ಆತ ಹೇಗೆ ಬರೆದಿದ್ದಾನೆ, ಎಂಥ ಕೆಚ್ಚಿದ ಈತನು!" ಎಂದು ಹಿಗ್ಗಿಕೊಳ್ಳಲಿಕ್ಕಾಗಿ ಅಥವಾ ಮಿಥ್ಯಾ ಪ್ರಶಂಸೆಗಾಗಿ ಪತ್ರಿಕೆಯನ್ನೋದುವುದು ರಾಜಕಾರಣದಲ್ಲಿ ಆಸಕ್ತಿಯಿದೆ ಎನ್ನುತ್ತಿರುವವರ ಉದ್ದೇಶ. ಸಾಧಾರಣ ಜನರಿಗೆ ಪತ್ರಿಕೆಯಲ್ಲಿ ಬರುವ ವಾರದ ಭವಿಷ್ಯ, ಚಲಚ್ಚಿತ್ರ ವಿಭಾಗ ಮತ್ತು ಸಣ್ಣ ಕತೆಗಳ ಮೇಲೆ ಮೋಹ!

ಪುಸ್ತಕ ಪ್ರಪಂಚದಲ್ಲೂ ಇದೇ ಹಾಡು—ವಿಮರ್ಶಕರನ್ನು ಕೇಳಿ ನೋಡಿ, ಅಥವಾ ಕಳೆದ ಹತ್ತು ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ವಿಷಯ ವೈವಿಧ್ಯಾನುಸಾರವಾಗಿ ನೀವೇ ತುಲನೆ ಮಾಡಿ ನೋಡಿ — ಆಗ ತಿಳಿಯುವುದೇನು? ಹತ್ತು ವರ್ಷದ ಹಿಂದೆ, ಕವಿತೆ, ಕತೆ, ನಾಟಕಗಳು ಕಾದಂಬರಿಗಳಷ್ಟೇ ಎಂದಲ್ಲದಿದ್ದರೂ ಹೆಚ್ಚು ಕಡಿಮೆ ಅಷ್ಟೇ ಜನಪ್ರಿಯವಾಗಿದ್ದವು, ಓದುವ ಅಭಿರುಚಿ ಬೆಳೆದಿರುವ ಈ ಕಾಲದಲ್ಲಿ ಕಾದಂಬರಿಗಳ ಬೆಳೆ ಮಾತ್ರ ಹೇರಳವಾಗಿದೆ! ಕತೆಗಳ ಸಂಕಲನಕ್ಕೂ ಬರಗಾಲ ಬಂದಿದೆ, ಎಂದ ಮೇಲೆ ಕವಿತೆ ಓದಿ ಹಾಡುವವರೂ ನಾಟಕ ಬರೆದು ಆಡುವವರೂ ತುಂಬ ಕಡಿಮೆಯಾಗಿದ್ದಾರೆ ಎಂದು ಪ್ರತ್ಯೇಕ ಹೇಳುವುದು ಬೇಡ. ಇದರ ಅರ್ಥವೇನೆಂದರೆ, ಓದುವವರ ಸಂಖ್ಯೆ ಹೆಚ್ಚಾದುದೇಕೆ? ಕೇವಲ ಕಾದಂಬರಿಯ ಸಲುವಾಗಿ! ಸಾಹಿತ್ಯದ ಇತರ ಸಾಮಾನ್ಯ ಸ್ವರೂಪವಾದ ಕತೆ ಕವಿತೆ, ನಾಟಕಗಳೂ ಜನರ ಮನಸ್ಸಿಗೆ ಬಂದಿಲ್ಲ

ಬಹಳ ಶೋಚನೀಯವಾದ ಪರಿಸ್ಥಿತಿ ಇದು: ಅಷ್ಟೇ ಅಲ್ಲದೆ ತೀರ ಕಳಮಟ್ಟದ ಅಭಿರುಚಿಯೂ ಹೌದು. ಇಷ್ಟಾದರೂ ಅಭಿರುಚಿ ಉಂಟಲ್ಲ— ಎಂದು ಒಣನಗೆಯನ್ನು ತುಟಿಗಳ ಮೇಲೆ ತಂದುಕೊಳ್ಳಬಹುದೋ ಏನೋ! ಆದರೆ ಎಷ್ಟಾದರೂ ಅದು ಒಣನಗೆ! ತುಂಬು ತೃಪ್ತಿಯ ನಗುವಲ್ಲ, ಕನ್ನಡವನ್ನೇ ಗೊತ್ತಿರುವ ಜನರ ಪಾಲಿಗೆ, ಕನ್ನಡದಲ್ಲಿ ಎಷ್ಟು ಪುಸ್ತಕಗಳಿವೆ, ಎಂಥೆಂಥ ಪುಸ್ತಕಗಳಿವೆ ಎಂಬ ಅಸ್ಪಷ್ಟತರವಾದ ವಿಚಾರ ಹೊಳೆದು ರೋಮಾಂಚನವಾದೀತು

ಆದರೆ ಕೂಪಮಂಡೂಕ ಮನೋಭಾವನೆ ಇಲ್ಲದೆ, ಬೇರೆ ಭಾಷೆಗಳ ಸಾಹಿತ್ಯದ ವ್ಯಾಪಕತ್ವವನ್ನು ತಿಳಿದುಕೊಂಡಿರುವವರ ಪಾಲಿಗೆ ನಮ್ಮದನ್ನು ಕಂಡು ಎಷ್ಟಕ್ಕೂ ತೃಪ್ತಿ ಉಂಟಾಗಲಾರದು, ಕಂಡಷ್ಟೂ ಅತೃಪ್ತಿ ಹೆಚ್ಚುತ್ತದೆ.

ಹುಲುಸಾಗಿ ಬೆಳೆದಿರುವ ಕಾದಂಬರಿಗಳಲ್ಲೆ ಆಗಲಿ ಅನುವಾದಿಸಿದರೆ ಲೋಕದ ಜನರೆಲ್ಲ ಮೆಚ್ಚುವ ಕಾದಂಬರಿ ಒಂದಾದರೂ ಇದೆಯೆ, ನಮ್ಮಲ್ಲಿ? ಈ ಕಾದಂಬರಿಗಳಾದರೂ ಕಾಮ-ಪ್ರೇಮ ದಾರಿದ್ರ್ಯ ದುಃಖಗಳ ವಿಷಮ ವರ್ತುಲದ ಹೊರಗೆಂದಾದರೂ ಹಣಿಕಿ ನೋಡಿದುದುಂಟೆ? ಇದನ್ನೆಲ್ಲ ವಿಚಾರಿಸುವಾಗ ಬೇಸರವೇ ಬೇಸರವಾಗುತ್ತದೆ. ಶ್ರೀ ಶಿವರಾಮ ಕಾರಂತರಂಥವರು ಇಂಥ ಬೇಸರವನ್ನು ಕಂಡೇ ಸಾಹಿತ್ಯಕ್ಕೆ ಹತ್ತು ಮುಖಗಳನ್ನು ಕೊಡಲು ಹೆಣಗಾಡಿದರು. ಓದುವ ಜನರು ಕಡಿಮೆ ಇರುವ ಆ ಕಾಲದಲ್ಲಿ "ಬಾಲ ಪ್ರಪಂಚ"ದಂಥ ಪುಟ್ಟ ವಿಶ್ವಕೋಶವನ್ನು ತಾನೊಬ್ಬನೇ ಬರೆದರು, ಕೇವಲ ತನ್ನ ಹೊಣೆಯ ಮೇಲೆ ಕನ್ನಡಿಗರ ನಿತ್ಯೋಪಯೋಗಕ್ಕಾಗಿ ಇರಲಿ ಎಂದು ಸಣ್ಣ (ಆದರೂ ೩೫ ಸಾವಿರ ಶಬ್ದಗಳಿವೆ!) ನಿಘಂಟನ್ನು ಪ್ರಕಟಿಸಿದರು. ಆದರೆ, ಇಂದಿಗೇ ಆಗಲಿ, ಬಾಲ ಪ್ರಪಂಚವನ್ನು ಓದಿದವರು ಎಷ್ಟು ಮಂದಿ? ಅದರ ಮೂವತ್ತು ಸಂಪುಟಗಳ ಪುಟಗಳನ್ನು ಹೀಗೆಯೇ, ಅದರಲ್ಲಿರುವ ಚಿತ್ರಗಳನ್ನಾದರೂ ನೋಡಲೆಂದ, ತಿರುವಿ ಹಾಕಲು ಹೋದವರೆಷ್ಟು ಮಂದಿ? ಎಷ್ಟು ಶಾಲೆ— ಅಥವಾ ಕಾಲೇಜುಗಳಲ್ಲಿ ಬಾಲ ಪ್ರಪಂಚದ ಸಂಪುಟಗಳ ಕಟ್ಟು ಕಾಣಬರುತ್ತದೆ?

ನಮ್ಮ ಸಾಹಿತ್ಯ ಪ್ರಿಯತೆಯಾಗಲೀ ಸೇವೆಯಾಗಲೀ ಎಷ್ಟು ಕ್ಷೀಣವಾಗಿದೆ ಮತ್ತು ಬಡವಾಗಿದೆ ಎಂಬುದಕ್ಕೆ ಮೇಲಿನ ಮಾತುಗಳೇ ಸಾಕು. ಅದರಲ್ಲಿ ವೈವಿಧ್ಯವಿಲ್ಲ; ಜ್ಞಾನತೃಷೆಯನ್ನದು ಹಿಂಗಿಸುವುದಿಲ್ಲ. ನಮ್ಮ ದೇಶದಲ್ಲಿ ಚಲಚ್ಚಿತ್ರ ಪ್ರಪಂಚವೊಂದಿದೆ—ಇಷ್ಟೇ. ಜಡವಾದದ್ದು. ಕೇಳಿದರೆ ಚಿತ್ರದ ಹೆಸರು "ಜಾಲ್" ('ಬಲೆ" ಎಂದು). ಮೀನುಗಾರರ ಜೀವನದ ಮೇಲೆ ಬೆಳಕು ಬೀರುವ ಅದ್ಭುತ ಚಿತ್ರ ಎನ್ನುತ್ತದೆ ಜಾಹೀರಾತು. ನೋಡಿದಾಗ ಮೀನುಗಾರರ ಜೀವನವೇನು ಕಣ್ಣಿಗೆ ಕಟ್ಟುತ್ತದೆ, ಮಣ್ಣು! ಒಬ್ಬ ಹುಡುಗಿಯ ಅಂಗ ವಿನ್ಯಾಸಕ್ಕೆಯೇ ಅಲ್ಲಿ ಮಹತ್ವ: ಜೀವನ ದರ್ಶನವೆಂದರೆ, ಅವರ ರೂಪದರ್ಶನ

(೧೦ನೇ ಪುಟ ನೋಡಿರಿ)

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31—10—1955)
ರೂಪಾಯಿ:- 76 ಲಕ್ಷ
ಒಟ್ಟು ಚಲಾವಣೆ ಮೊಬಲಗು
ಇಂದು — (31—10—1956)
ರೂಪಾಯಿ:- ಒಂದು ಕೋಟಿಗೂ ಮಿಕ್ಕಿದೆ
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮಂಗಳೂರು—3
THE VIJAYA BANK LTD.

# ಬೆಳೆದು ಬಂದ ಪರಂಪರೆ

## ಭಾರತೀಯ ಸಂಸ್ಕೃತಿಗೆ ಮುಪ್ಪೆಂಬುದಿಲ್ಲ

### ನವನವೋನ್ಮೇಷ ಶಾಲಿನಿತ್ವವೇ ಅದರ ಮುಖ್ಯ ವಿಶೇಷ

ನಮ್ಮ ನಿಮ್ಮ ಸೌಭಾಗ್ಯದಿಂದ ಭಾರತಕ್ಕೆ ಒಂದು ದಿವ್ಯಭವ್ಯ ಸಂಸ್ಕೃತಿಯು ಸೊತ್ತಿದೆ, ಒಂದು ಉಜ್ವಲ ಇತಿಹಾಸವಿದೆ, ಒಂದು ಜೀವಂತ ಪರಂಪರೆಯ ಪ್ರವಾಹದ ಲಾಭ ದೊರೆತಿದೆ ಇದರ ಅರ್ಥ ನಮ್ಮ ಪರಂಪರೆಯಲ್ಲಿ ದೋಷಗಳಿಲ್ಲ ಎಂದಲ್ಲ ಅಥವಾ ಹಳೆಯದೆಲ್ಲ ಒಳ್ಳೆಯದು ಎಂದೂ ಅರ್ಥವಲ್ಲ 'ಪುರಾಣಮಿತ್ಯೇವ ನಸಾಧು ಸರ್ವಂ, ಎಂಬುದು ನಿಜ; ಆದರೆ ಅದೇ ಕಾಲಕ್ಕೆ ನವೀನ ಮಿತ್ಯೇವ ಅಥವಾ ಪಾಶ್ಚಾತ್ಯಮಿತ್ಯೇವ ನಗ್ರಾಹ್ಯಂ, ಸರ್ವಂ, ಎಂಬುದನ್ನು ಲಕ್ಷ್ಯದಲ್ಲಿಡುವುದು ಅವಶ್ಯ. ಹಳೆಯದು, ಎಂಬ ಒಂದೇ ಗುಣವು ನಮ್ಮ ಸಂಸ್ಕೃತಿ ಪರಂಪರೆಗಳಲ್ಲಿ ಇದ್ದುದಾದರೆ ಅದಕ್ಕೆ ಯಾವ ಮಹತ್ವವೂ ಇರಲರಿಯದು. ಬರೀ ಜೀವಂತವಿರುವದು ತೇಜಸ್ವೀ ಜೀವನದ ಲಕ್ಷಣವಲ್ಲ. 'ಕಾಕೋಽಪಿ ಜೀವತಿ ಶತಂ ಚ ಬಲಿಂ ಚ ಭುಂಕ್ತೇ'? ಮುದಿ ಹದ್ದು ಕೂಡ ಬಹು ಕಾಲ ಬಾಳುವದುಂಟು. ನಮ್ಮ ಸಂಸ್ಕೃತಿಯ ಮುಖ್ಯ ವಿಶೇಷವೇನಂದರೆ ಅದು ಕಾಲದಿಂದ ಮುಪ್ಪಾದರೂ ಶಕ್ತಿಯಲ್ಲಿ ಮುಪ್ಪಾಗಿಲ್ಲ; ಅದರ ಹರೆಯತನ ಕುಗ್ಗಿಲ್ಲ ಹೊಸತನ್ನು ಹುಟ್ಟಿಸುವ ನವನಿರ್ಮಾಣ ಶಕ್ತಿ ಅದರಲ್ಲಿನ್ನೂ ಇದೆ. ಲಕ್ಷಣಗಾರರು ಪ್ರತಿಭೆಯ ವ್ಯಾಖ್ಯೆಯನ್ನು ಹೇಳುವಾಗ, "ನವನವೋನ್ಮೇಷಶಾಲಿನೀ" ಎಂದು ಸಾರಿದ್ದಾರೆ ಜೀವಂತ, ತೇಜಸ್ವೀ ಹಾಗೂ ವೀರ್ಯವತ್ತರವಾದ ಸಂಸ್ಕೃತಿಯ ಲಕ್ಷಣವನ್ನಾದರೂ ಇವೇ ಶಬ್ದಗಳಿಂದ ವರ್ಣಿಸಬಹುದು. ಭಾರತದ ಭೂತಕಾಲ ಹಾಗೂ ಪೂರ್ವ ಪುರಾತನ ಸಂಸ್ಕೃತಿ ಇವು ಅತ್ಯಂತ ತೇಜಸ್ವಿಯಾಗಿರುವವೆಂಬಲ್ಲಿ ಸಂಶಯವೇ ಇಲ್ಲ.ಆದರೆ ಭಾರತೀಯ ಸಂಸ್ಕೃತಿ ಈಗ್ಯೂ ಜೀವಂತ ಹಾಗೂ ಜ್ವಲಂತ ಸ್ಥಿತಿಯಲ್ಲಿದೆ ಎಂಬುದಕ್ಕೆ ಆ ಭೂತಕಾಲದ, ಸಾಕ್ಷಿ ಏನು ಉಪಯೋಗ? ಈಗ್ಯೂ ಅದು ಹಲವಾರು ಮಾನವೀಯ ಕಾರ್ಯಕ್ಷೇತ್ರಗಳಲ್ಲಿ ಹೊಸ ಹೊಸವಾತುಗಳನ್ನು ಹೊಸ ಹೊಸ ರೀತಿಯಲ್ಲಿ ಜಗತ್ತನ್ನೇ ಆಶ್ಚರ್ಯಬಡಿಸುವಂತೆ ನುಡಿಯುತಿದೆ, ಮಾಡುತಿದೆ ಫ್ರಯಿಲ್ ಡ್ಯೂರಾಂ ಇವರು "ಅವರ್ ಓರಿಯಂಟಲ್ ಹೆರಿಟೇಜ್" ಎಂಬ ಉದ್ಗ್ರಂಥದ ಪೀಠಿಕೆಯಲ್ಲಿ ಈ ಬಗ್ಗೆ ಹೀಗೆ ಹೇಳಿರುವರು:-

"ಆಧುನಿಕ ವಿದ್ಯಾರ್ಥಿಗೆ ಭಾರತದ ಬಗೆಗಿನ ಅಜ್ಞಾನವೆ ಲಜ್ಜೆಯ ಮಾತಾಗಿದೆ.........ಅಲ್ಲಿ ಕ್ರಿಸ್ತ ಪೂರ್ವ ೩೯೦೦ ವರ್ಷಗಳಿಂದ ಅಥವಾ ಅದಕ್ಕಿಂತ ಮುಂಚಿನ ಮೊಹೆಂಜೊದಾರೋದಿಂದ ಇಂದಿನ ಗಾಂಧೀಜಿ, ರಮಣ ಮತ್ತು ಟಾಗೋರರ ವರೆಗೆ ಭಾರತದ ಸಂಸ್ಕೃತಿ ಅವಿಚ್ಛಿನ್ನವಾಗಿ ಬೆಳೆದು ಬಂದಿರುತ್ತದೆ; ಮೂರುಸಾವಿರ ವರ್ಷಗಳಹಿಂದೆ ವಿಜ್ಞಾನಿಗಳು ಖಗೋಲ ಶಾಸ್ತ್ರವನ್ನು ವಿವರಿಸಿದ್ದರೆ, ಇಂದಿನವರು 'ನೊಬೆಲ್' ಪಾರಿತೋಷಕಗಳನ್ನು ಪಡೆದಿರುವರು; ಅತಿ ಪ್ರಾಚೀನ ಕಾಲದಲ್ಲಿ ಹಳ್ಳಿಗಳಲ್ಲಿ ಬೇರೂರಿದ ಪ್ರಜಾಪ್ರಭುತ್ವವಿದೆ; ಅಶೋಕ ಅಕಬರರಂಥ ಪ್ರಜಾ ಹಿತಚಿಂತಕರು ಆಳಿಹೋಗಿರುವರು; ಹೋಮರನ ಕಾಲದಷ್ಟು ಹಿಂದೆ ಮಹಾ ಪುರಾಣಗಳನ್ನು ಹಾಡುವ ಗಮಕಿಗಳಿದ್ದರೆ, ಇಂದು ಜಗತ್ತಿನ ಪ್ರೇಕ್ಷಕರನ್ನೇ ಮುಗ್ಧಗೊಳಿಸುವ ಕವಿಗಳಿದ್ದಾರೆ ......................ಸಾಮಧಾನವಾಗಿ ಓದಿ ತಿಳಿದು ಕೊಳ್ಳಬಯಸುವ ಮತ್ತು ಸಂಸ್ಕೃತಿಯ ಮೂಲ ಕೇವಲ ಪಶ್ಚಿಮ ರಾಷ್ಟ್ರಗಳಲ್ಲಿ ಎಂದ ನಿನ್ನೆ ಮೊನ್ನೆಯ ವರೆಗೆ ನಂಬಿರುವ ಪಾಶ್ಚಿಮಾತ್ಯರಿಗೆ ಪರಿಚಿತವಾಗುವ ಭಾರತ ವಿದು; ಬುದ್ಧಿ ಪ್ರಧಾನ ಭೂಖಂಡವಿದು.'

ಗ್ರಂಥಕರ್ತನು ಉಪಸಂಹಾರದಲ್ಲಿ ಮತ್ತೆ ಹೀಗೆ ಹೇಳಿದ್ದಾನೆ:—

"ಇಜಿಪ್ತ ಬೆಬಿಲೋನಿಯಾ ಹಾಗೂ ಅಸ್ಸೀರಿಯಾ ಇತಿಹಾಸಗಳ ಬಗ್ಗೆ ಕೊನೆಯ ಅಭಿಪ್ರಾಯ ವ್ಯಕ್ತ ಮಾಡದಂತೆ ಭಾರತದ ಬಗ್ಗೆ ಆಗದು ಭಾರತದ ಇತಿಹಾಸ ಇನ್ನೂ ರೂಪುಗೊಳ್ಳುತ್ತಲಿದೆ, ಸಂಸ್ಕೃತಿ ಬೆಳೆಯುತ್ತಲಿದೆ. ಈ ಶತಮಾನದ ಕೊನೆಯೊಳಗೆ ಭಾರತವು ನಿಃಸಂಶಯವಾಗಿಯೂ ಪ್ರಪಂಚದ ಪ್ರಬಲ ರಾಷ್ಟ್ರಗಳಲ್ಲೊಂದಾಗುವದು. ಇಜಿಪ್ತ ಹಾಗು ಅನತಿಪೂರ್ವದ ಸಂಸ್ಕೃತಿಗಳು ನಮ್ಮ ಮೇಲೆ ಪ್ರಭಾವ ಬೀರಿದವು. ಭಾರತದ ಸಂಸ್ಕೃತಿ ಬೀರಿದೆಯೆಂದು ಕೇಳಲಿಕ್ಕಾಗುವುದಿಲ್ಲ. ......ಆದರೆ ಭಾರತವು ವ್ಯಾಕರಣ ಹಾಗು ತರ್ಕಶಾಸ್ತ್ರ, ತತ್ವಜ್ಞಾನ ಮತ್ತು, ಹಿತೋಪದೇಶಗಳು, ಮಾಟಗಾರಿಕೆ ಹಾಗು ಚದುರಂಗ ಮತ್ತು ಇವುಗಳಗಿಂತ ಹೆಚ್ಚಾಗಿ ಅಂಕಿಗಳನ್ನೂ ದಶಾಂಶ ಪದ್ಧತಿಯನ್ನೂ ಹಿಮಾಲಯ ಪರ್ವತ ದಾಟಿಸಿ ಕಳಿಸಿರುತ್ತದೆ. ಆದರೆ ಇವು ಆ ಮಹಾರಾಷ್ಟ್ರದ ಧ್ಯೇಯದ ತಿರುಳಲ್ಲ. ನಾವು ಮುಂದೆ ಅವರಿಂದ ಕಲಿಯಬಹುದಾದ ಘನವಿಷಯಗಳ ಮುಂದೆ ಇವು ಕ್ಷುಲ್ಲಕವಾದವುಗಳು.... ಬಹುತರವಾಗಿ ನಮ್ಮ ವಿಜಯ, ಉದ್ಧಟತನ ಹಾಗು ಸುಲಿಗೆಗೆ ಪ್ರತಿಯಾಗಿ ಭಾರತವು ನಮಗೆ ತನ್ನ ಪಕ್ವ ಬುದ್ಧಿಯ ಸಹನೆ ಸೌಮ್ಯತನ, ಆತ್ಮಜ್ಞಾನ, ಪರಸ್ಪರ ತಿಳಿವಳಿಕೆಯ ಶಾಂತಗುಣ ಹಾಗು ಸಕಲ ಪ್ರಾಣಿಗಳಲ್ಲಿ ಇಡಬೇಕಾದ ಪ್ರೇಮವನ್ನು ಕಲಿಸುವದೆಂದು ನನಗನಿಸುತ್ತದೆ."

ಈಚೆಗಿನ ಹಲವೊಂದು ಉದಾಹರಣೆಗಳನ್ನು ಕೊಡಬೇಕಾದರೆ, ಶ್ರೀ ರಾಮಕೃಷ್ಣ ಪರಮಹಂಸರ ಆಧ್ಯಾತ್ಮಿಕ ಸಾಧನೆ ಸಿದ್ಧಿ ಹಾಗೂ ಉಪದೇಶ, ಶ್ರೀ ಅರವಿಂದರ ಸಾಧನೆ ಹಾಗೂ ಪೂರ್ಣ ಯೋಗದತತ್ವಜ್ಞಾನ ಮತ್ತು ವಿಚಾರ ವೈಭವ, ಮಹಾತ್ಮಾ ಗಾಂಧೀಜಿಯವರ ಸತ್ಯಾಗ್ರಹ ದರ್ಶನ, ವಿನೋಭಾಜಿಯವರ ಭೂದಾನ ತತ್ವಜ್ಞಾನ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಪಂಚಶೀಲಗಳ ಪ್ರವೇಶ ಇವುಗಳನ್ನು ಪರಿಶೀಲಿಸಿದರೆ ಸಾಕು. ಇವುಗಳಲ್ಲಿಯ ಪ್ರತಿಯೊಂದು ಉದಾಹರಣೆಯು ನವನವೋನ್ಮೇಷ ಶಾಲಿನೀ ಭಾರತೀಯ ಸಂಸ್ಕೃತಿ ಎಂಬ ಲಕ್ಷಣದಿಂದ ಲಕ್ಷಿತವಾಗಿದೆ ಎಂಬ ಮಾತಿಗೆ ಸಾಕ್ಷಿಯಾಗಿ ನಿಲ್ಲುವಂತಿದೆ ಭಾರತದ ಸಂಸ್ಕೃತಿ ಗಂಗೆಯಲ್ಲಿ ಯಾವ ಪಾವನ ಶಕ್ತಿ ವಾಸಮಾಡುತಿದೆ, ಭಾರತಮಾತೆ ಈಗಿನ ಕಾಲದಲ್ಲಿಯೂ ಯಾವ ರೀತಿ "ವೀರಪ್ರಸೂ" ಇರುವಳು ಎಂಬುದಕ್ಕೆ ಈ ವರೆಗೆ ಹೇಳಿದ್ದು ಸಾಕು.

ನಾವು ಕರ್ನಾಟಕಸ್ಥರು ಹಲವೊಂದು ಮತ ಮತಾಂತರಗಳಲ್ಲಿ, ಆಚಾರ ವಿಚಾರಗಳಲ್ಲಿ ಕೆಲವು ವೈಶಿಷ್ಟ್ಯಗಳನ್ನು ಬೆಳೆಸುತ್ತ ಬಂದಿರುವೆವೆಂಬ ಮಾತು ನಿಜ, ಆ ದೃಷ್ಟಿಯಿಂದ ಕರ್ನಾಟಕಕ್ಕೂ ಒಂದು ಇತಿಹಾಸವಿದೆ. ಹಾಗೆ ನೋಡಿದರೆ ಪ್ರತಿ ಪಟ್ಟಣಕ್ಕೆ ಊರಿಗೆ, ಪ್ರಾಂತ್ಯಕ್ಕೆ, ಕುಟುಂಬಕ್ಕೆ ಕೊನೆಗೆ ಪ್ರತಿ ವ್ಯಕ್ತಿಗೂ ಒಂದು ವೈಶಿಷ್ಟ್ಯ ಒಂದು ಇತಿಹಾಸ, ಒಂದು ವ್ಯಕ್ತಿತ್ವ ಎಂಬುದುಂಟು ಆದರೆ ನಾವೆಲ್ಲರೂ ಭಾರತೀಯರು ರಾಷ್ಟ್ರ ಎಂಬ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ ಈಗಿರುವ ೩೬೦ ಕೋಟಿ ಮಾನವ ಕುಲದ ಒಂದು ವಿಶಿಷ್ಟ ಭಾಗ ಎಂಬ ದೃಷ್ಟಿಯಿಂದ ಕರ್ನಾಟಕದವರು ಭಾರತ ಮಾತೆಯ ಹೊಟ್ಟೆಯಲ್ಲಿಯ ಬರುತ್ತೇವೆ ಕನ್ನಡ ಸಂಸ್ಕೃತಿ ಎಂದು ನಾವು ಹೇಳುವಾಗ ಕನ್ನಡ ಭಾಷೆಯಲ್ಲಿ ಒಡಮೂಡಿದ ಭಾರತೀಯ ಸಂಸ್ಕೃತಿ ಎಂಬುದೇ ಅರ್ಥ. ಕರ್ನಾಟಕ ಸಂಸ್ಕೃತಿ ಎಂದು ನಾವು ಅನ್ನುವಾಗ ಕರ್ನಾಟಕವೆಂಬ ಭೂಭಾಗದಲ್ಲಿ ವ್ಯಕ್ತವಾದ ಭಾರತೀಯ ಸಂಸ್ಕೃತಿ ಎಂಬುದೇ ಅರ್ಥ. ಭಾರತೀಯ ಸಂಸ್ಕೃತಿ ಬಿಟ್ಟು, ಅದನ್ನು ಹೊರತುಪಡಿಸಿ, ಪ್ರತ್ಯೇಕವಾಗಿರುವ ಕನ್ನಡ ಇಲ್ಲವೆ ಕರ್ನಾಟಕ ಸಂಸ್ಕೃತಿ ಎಂಬುದಿಲ್ಲ ಅದೇ ರೀತಿ ಭಾರತೀಯ ಸಂಸ್ಕೃತಿ ಅಥವಾ ಇತಿಹಾಸ ಎಂಬುದು ಕೂಡ ಕನ್ನಡ, ಆಂಧ್ರ, ತಮಿಳ, ಮರಾಠಿ, ಗುಜರಾತಿ ಇತ್ಯಾದಿ ಪ್ರಾಂತೀಯ ಸಂಸ್ಕೃತಿಗಳನ್ನು ಬಿಟ್ಟು ಒಂದು ಪ್ರತ್ಯೇಕ ಸಂಸ್ಕೃತಿ ಇಲ್ಲವೆ ಇತಿಹಾಸ ಇಲ್ಲವೇ ಇಲ್ಲ. ಇವೆಲ್ಲ ಒಂದೇ. ವಿರಾಟ ಪುರುಷನ, ಭಾರತ ರಾಷ್ಟ್ರಪುರುಷನ ಅಂಗಾಂಗಗಳು ಇವುಗಳಲ್ಲಿ ಯಾವುದಕ್ಕೂ ಪ್ರತ್ಯೇಕ ಇಲ್ಲವೆ ಸ್ವತಂತ್ರ ಅಸ್ತಿತ್ವವೆಂಬುದಿಲ್ಲ ಐತಿಹಾಸಿಕ ದೃಷ್ಟಿಯಿಂದಾಗಲಿ, ತಾತ್ವಿಕ ದೃಷ್ಟಿಯಿಂದಾಗಲಿ ಪರಕೀಯರ ಅಥವಾ ಇತರ ರಾಷ್ಟ್ರಗಳ ದೃಷ್ಟಿಯಿಂದಾಗಲಿ ಭಾರತ ರಾಷ್ಟ್ರವೆಂಬುದು ಒಂದು ರಾಷ್ಟ್ರ, ಭಾರತ ಸಂಸ್ಕೃತಿಯೆಂಬುದು ಒಂದು ಸಂಸ್ಕೃತಿ; ಎಲ್ಲ ಪ್ರಾಂತಿಕ ಇಲ್ಲವೆ ಭಾಷಿಕ ಇಲ್ಲವೆ ಸ್ಥಾನಿಕ ಸಂಸ್ಕೃತಿಯ ರೂಪವಿಶೇಷಗಳು ಭಾರತೀಯ ಸಂಸ್ಕೃತಿ ಎಂಬ ಒಂದೇ ವರ್ಗಕ್ಕೆ ಸೇರಿದವುಗಳು. ವ್ಯವಹಾರದಲ್ಲಿ ವೈಶಿಷ್ಟ್ಯಗಳನ್ನು ಕುರಿತು ಮಾತಾಡುವಾಗ ಆ ಸಂಸ್ಕೃತಿ, ಈ ಸಂಸ್ಕೃತಿ ಎಂದ. ಹೇಳಿದರೂ ಇವೆಲ್ಲ ಭಾರತದ ಪಟದ ಮೇಲೆಯೇ ಬರೆದ ಚಿತ್ರ ವಿಶೇಷಗಳು.

ಸಾವಿರಾರು ವರುಷಗಳಿಂದ ವಿಧವಿಧದ ಭೂಪ್ರದೇಶಗಳೊಳಗಿಂದ ಸತತವಾಗಿ ಹರಿಯುತ್ತ ಬಂದಿರುವ ಭಾರತೀಯ ಸಂಸ್ಕೃತಿ ಗಂಗೆ ಒಂದೇ ಒಂದು ಎಂದು ಭಾವಿಸಿದರೆ ಭಾರತದಲ್ಲಿ ಬೆಳೆದು ಬಂದ ವಿವಿಧ, ಭಾಷಿಕ, ಪ್ರಾಂತಿಕ, ಸಾಂಸ್ಕೃತಿಕ ಪ್ರವಾಹಗಳೆಲ್ಲ ಆ ಗಂಗೆಗೆ ಕೂಡಿಕೊಂಡ ಹೊಳೆ ಹೊಸಲುಗಳು, ವಿವಿಧ ಪ್ರವಾಹಗಳು. ಈ ಹೊತ್ತು ಗಂಗಾ ಪ್ರವಾಹವೆಂಬುದೊಂದೇ. ಒಂದು ಅದರಲ್ಲಿಯ ಈ ನೀರು ಇಂತಹ ಹೊಳೆಯದು, ಆ ನೀರು ಅಂತಹ ಹೊಳೆಯದು ಎಂದು ಹೇಳುವದು ಅಶಕ್ಯ ಪ್ರಾಯವು ಯಾಕಂದರೆ ಅಷ್ಟೊಂದು ಅದಾನ ಪ್ರದಾನಗಳು ನಡೆದು ಪರಸ್ಪರ ಸಂಬಂಧ ಸಂಪರ್ಕಗಳು ಹೆಚ್ಚಾಗಿ ಮುಖ್ಯಾಂಶಗಳಲ್ಲಿ ಏಕರೂಪತೆ ಉಂಟಾಗಿ ಬಿಟ್ಟಿದೆ ಮೇಲಾಗಿ ನಮ್ಮೆಲ್ಲರ ಐತಿಹಾಸಿಕ ರಾಜಕೀಯ, ಆರ್ಥಿಕ, ಸಾಮಾಜಿಕ ಹಿತ ಸಂಬಂಧಗಳೆಲ್ಲ ಒಂದೇ ಆದಾಗಿವೆ. ಈಗ ಆರ್ಯ, ಅನಾರ್ಯ, ದ್ರಾವಿಡ, ನಾಗ. ಸಿಂಧು ಕೊಳ್ಳ ಈ ಮುಂತಾದ ಸಂಸ್ಕೃತಿಗಳ ಪ್ರತ್ಯೇಕ ಅಭಿಮಾನ ತಳೆದು ಅವುಗಳ ಉತ್ಪತ್ತಿ ವಿವರಿಸಲು ಹೋಗಿ ವಾದಗಳನ್ನು ಹೂಡಿ ಸಂಘರ್ಷವನ್ನುತ್ಪನ್ನ ಮಾಡುವುದೆಂದರೆ ತನ್ನ ಹಾದಿಯಿಂದ ಹೋಗ..

(೧೧ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

# ಸುಯೇಜಿನ ಕಾಲುವೆ

## ಜಗತ್ತನ್ನೊಮ್ಮೆ ಮಹಾಯುದ್ಧದ ಬಾಗಿಲಿಗೊಯ್ದ ಭೂಪ್ರದೇಶದ ಕತೆ ಇಲ್ಲಿದೆ

**ಸುಯೇಜ್—ಎಲ್ಲಿ?** ಮೆಡಿಟರೇನಿಯನ್ (ಭೂಮಧ್ಯ) ಸಮುದ್ರವನ್ನೂ ...ಮು ಸಮುದ್ರವನ್ನೂ ಜೋಡಿಸುವ ಸಂಚಿನಲ್ಲೇ ಅತೀ ದೊಡ್ಡದಾದ ವಿ...ರವಾದ ನೀರು ದಾರಿಯಾಗಿದೆ—ಈ ಯೋಜ.

ಈ ಕಾಲುವೆಯ ಉದ್ದವು ಸಾಧಾರಣ ೫ ಮೈಲುಗಳು. ಕ್ರಿ. ಶ. ೧೮೬೯ರಲ್ಲಿ ...ರ ಆಳವು ೨೬ ಅಡಿಗಳಾಗಿಯೂ, ...ಳದ ಅಗಲವು ೧೪೪ ಅಡಿಗಳಾಗಿ ...ೂ ಇದ್ದಿತ್ತು. ಆದರೆ ಪ್ರತಿ ವರ್ಷ ಸಾ...ಕೆಯ ಹೆಚ್ಚಳದಿಂದಾಗಿ ದುರಸ್ತಿ ಕೆಲಸ ...ು ಜರಗುತ್ತಲಿವೆ. ೧೯೫೪ರಲ್ಲಿ ಸಾಧಾ... ೬ ಮಿಲಿಯ ಘನ ಮೀಟರಿನಷ್ಟು ...ಣ್ಣನ್ನು ಅಗೆದು ತೆಗೆದುದರಿಂದಾಗಿ ...ಗ ಅದರ ಆಳವು ೪೬ ಅಡಿಗಳಾಗಿಯೂ ...ದಲ್ಲಿ ಅಗಲವು ೧೯೭ ಅಡಿಗಳಾಗಿಯೂ ...ಲೆ ೫೧೦ ಅಡಿಗಳಾಗಿಯೂ ಇದೆ. ...ರ್ ಸಾಮಾನ್ಯವಾಗಿ ಹೆಚ್ಚಿನ ಹಡಗು...ಗೆ ಸಾಗಿ ಹೋಗಲು ಬೇಕಾಗುವ ...ರಿನ ಅತಿ ಹೆಚ್ಚು ಆಳವು ೩೫ ಅಡಿ...ಗತ್ತ.

**ಕ್ರಿಸ್ತ ಪೂರ್ವದಲ್ಲಿ:—**ಈ ಕಾಲು...ಯ ಉಪಯೋಗವು ಹಲವು ಶತಮಾನ...ಂದಲೂ ಜನರಿಗೆ ಗೊತ್ತಿತ್ತು. ಕ್ರಿ. ...ಶ. ೧೩ನೆಯ ಶತಮಾನಕ್ಕಿಂತ ಮೊದ..., ಸರಕುಗಳು ಈಗಿನ ಸುಯೇಜ್ ಕಾ...ವೆಯ ಮೂಲಕ ಸಾಗುತ್ತಿದ್ದಿಲ್ಲ. ...ಶ. ೬ನೆಯ ಶತಮಾನದ ಅಂತ್ಯದ...ಗೆ ನೈಲ್ ನದಿಯ ಮೂಲಕ ಕೆಂಪು ...ಮುದ್ರವನ್ನು ಕೂಡುವ ನೀರು ದಾರಿ ...ಪ್ರಾಮುಖ್ಯವಾಗಿತ್ತು.

ಆದರೆ ೧೬ನೇ ಶತಮಾನದ ನಂತರ ...ವಲ್ಲ ಒಂದು ಐರೋಪ್ಯ ಜನಾಂಗ ...ು ಮೊದಲಿನ ಕಾಲುವೆಯ ವಿಸ್ತಾರ...ಿ ತೊಡಗ ಬೇಕೇ, ಯಾ ಹೊಸ ...ಂದು ನೀರು ದಾರಿಯನ್ನು ಭೂಮ... ಸಮುದ್ರದಿಂದ ಕಡಿಯಬೇಕೇ ಎಂದು ...ಲೋಚಿಸ ತೊಡಗಿದುವು. ಆದರೆ ಇ...ಂದು ಯೋಜನೆಯೂ ವಸ್ತುಸ್ಥಿತಿಗೆ ...ರಲಿಲ್ಲ.

**ಲೆಸ್ಸೆಪ್ಸ್ ಯೋಜನೆ:—** ೧೮೫೦ರ ...ಮಾರಿಗೆ ಅಲೆಕ್ಸಾಂಡ್ರಿಯದಲ್ಲಿ ಫ್ರೆಂಚ್ ...ಯಭಾರಿಯಾಗಿದ್ದ ಫರ್ಡಿನಾಂಡ್—ಲೆಸ್ಸೆಪ್ಸನು ಈ ಯೋಜನೆಯ ಕಲ...ಪನೆಯನ್ನು ಮೊತ್ತ ಮೊದಲಾಗಿ ...ುಡಿಸಿದನು. ೧೮೫೪ರಲ್ಲಿ ಐಗುಪ್ತದ ...ಸರಾಯ್ ಆಗಿದ್ದ ಸಯದ್ ಪಾಶಾ...ಂದಿಗೆ ತರ್ಕ ವಿತರ್ಕಗಳಾದ ನಂತರ, ...ಸರಾಯನು ಕಾಲುವೆಯ ನಿರ್ಮ...ಣಕ್ಕೋಸ್ಕರ ಅಂತರಾಷ್ಟ್ರೀಯ ಕಂ...ಪೆನಿಯೊಂದನ್ನು ಸ್ಥಾಪಿಸಲು ಒಪ್ಪಿಗೆಯಿ...ತನು. ಅಲ್ಲದೆ ಕಾಲುವೆಯ ಉದ್ಘಾಟನೆ ...ರ್ ೯೯ ವರ್ಷಗಳ ತನಕ ಕಾಲು...ವೆಯನ್ನು ನಡೆಸಲು ರಿಯಾಯಿತಿ ಕೊಟ್ಟನು. ಈ ರೀತಿ ಮಾಡಿಕೊಂಡ ರಿಯಾಯಿತಿ ಒಪ್ಪಂದವನ್ನು ತುರ್ಕಿಯ ಸುಲ್ತಾನನು ತಿದ್ದುಪಡಿಗೊಳಿಸಿ, ೧೮೬೬ರಿಂದ ೧೮೬೮—೧೮೮೮ರ ವರೆಗೆ ತಮ್ಮ ಅಧಿಕಾರದೊಳಗಿರುವರೆ ಅನುಮತಿಯಿತ್ತನು. ಕ್ರಿ. ಶ. ೧೮೫೮ರ ಸುಮಾರಿಗೆ ಲೆಸ್ಸೆಪ್ಸನು ಒಂದು ಅಂತಾರಾಷ್ಟ್ರೀಯ ಸಂಯುಕ್ತ ಕಂಪೆನಿಯನ್ನು ಸ್ಥಾಪಿಸಿ, ಅದಕ್ಕೆ ಸುಯೇಜ್ ಕಾಲುವೆ ಕಂಪೆನಿಯೆಂದು ಹೆಸರಿಟ್ಟನು. ಬೇಕಾಗುವ ೮೦,೦೦,೦೦೦ ಪೌಂಡುಗಳನ್ನು ಅಲಕ್ಷ ಪಾಲುಗಳಾಗಿ ಮಾಡಲಾಯಿತು. ಇದರ ಅರ್ಧಾಂಶವನ್ನು ಫ್ರಾನ್ಸೂ, ೪೪ ಸಾವಿರವನ್ನು ಐಗುಪ್ತವೂ ವಹಿಸಿಕೊಂಡುವು.

ಬಂದೊದಗಿದ ಅಸಂಖ್ಯಾತ ಕಷ್ಟಗಳಿಂದ ಕಾಲುವೆಯ ಕೆಲಸವು ಹತ್ತು ವರ್ಷಗಳಲ್ಲಿ ಪೂರ್ತಿಯಾಯಿತು. ಉದ್ಘಾಟನೆ ೧೭—೧೧—೧೮೬೯ರಲ್ಲಾಯಿತು. ಈ ಸಂದರ್ಭದಲ್ಲಿ ವಿಕ್ಟೋರಿಯಾ ಮಹಾರಾಜ್ಞಿಯು ಲೆಸ್ಸೆಪ್ಸನಿಗೆ 'ಗ್ರೇಂಡ್ ಕ್ರೋಸ್' ಎಂಬ ಬಿರುದನ್ನಿತ್ತು ಮನ್ನಿಸಿ ದುದಲ್ಲದೇ ಅವನನ್ನು ಲಂಡನಿನ ಒಬ್ಬ ಸ್ವತಂತ್ರ ಪ್ರಜೆಯೆಂದು ಗಣಿಸುವಂತೆ ಮಾಡಿದಳು.

**ಆಂಗ್ಲರ ಕೈವಾಡ-** ಕ್ರಿ. ಶ. ೧೮೭೫ರಲ್ಲಿ ಐಗುಪ್ತವು ಹಣದ ಅಡಚಣೆಯಲ್ಲಿದ್ದಾಗ ಐಗುಪ್ತದ ರಾಜ ಖೇದಿವ್ ಇಸ್ಮಾಯಿಲ್ ಎಂಬವನು ಸುಯೇಜ್ ಕಂಪೆನಿಯಲ್ಲಿದ್ದ ತನ್ನ ಹಿತವನ್ನು ಬಿಟ್ಟುಕೊಡುವುದಾಗಿ ನಿಶ್ಚಯಿಸಿದನು. ಅಂದಿನ ಆಂಗ್ಲ ಪ್ರಧಾನಿ ಬೆಂಜಮಿನ್ ಡಿಸ್ರೇಲಿಯು ರೋಥ್ಸ್ ಚೈಲ್ಡ್‌ರಿಂದ ೪೦ ಮಿಲಿಯ ಡಾಲರ್ ಸಾಲ ಎತ್ತಿ ಐಗುಪ್ತದ ಎಲ್ಲಾ ಪಾಲುಗಳನ್ನು ಆಂಗ್ಲ ಸರಕಾರಕ್ಕೊಪ್ಪಿಸಿದನು. ಇದರಿಂದ ಇಂಗ್ಲೇಡು ಹಡಗುಗಳು ತಮ್ಮ ಸಂಪೂರ್ಣಾಧಿಕಾರವನ್ನು ಚಲಾಯಿಸಲೂ ಆಂಗ್ಲ ಸರಕಾರವು ಸುಯೇಜ್ ಕಾಲುವೆ ಕಂಪೆನಿಯೊಂದಿಗೆ ೮೦% ಬದ್ಧಿ ಪಡೆಯಲೂ ಅನುಕೂಲವಾಯಿತು.

**ಫ್ರೆಂಚರಿಗೇನು?** ಫ್ರೆಂಚ್ ಸರಕಾರವು ಒಂದು ಪಾಲನ್ನೂ ಇದರಲ್ಲಿಡದಿದ್ದರೂ, ಫ್ರೆಂಚ್ ಮುಖಂಡರು ಹಾಕಿದ ಪಾಲಿನ ಮೇಲೆ ಬರುತ್ತಿರುವ ಲಾಭದ ಮೇಲೆ ತೆರಿಗೆ ಹಾಕಿ ಸಾಕಷ್ಟು ಲಾಭ ಸಂಪಾದಿಸಿತು. ಕಂಪೆನಿಯ ಪ್ರಧಾನ ಕಚೇರಿ ಪೇರಿಸ್‌ನಲ್ಲಿದೆ. ಈಗ ಶಾಸಕ ಸಮಿತಿ (Governing Board) ಯಲ್ಲಿ ಫ್ರಾನ್ಸಿಗೆ ಬಹುಮತವಿದೆ. ಫ್ರೆಂಚರು ೧೬, ಆಂಗ್ಲರು ೯, ಐಗುಪ್ತದವರು ೫, ಒಬ್ಬ ಅಮೇರಿಕನ್ ಮತ್ತು ನೆದರ್ಲೇಂಡ್ಸಿನವನೊಬ್ಬ – ಹೀಗೆ ಆಯಾ ದೇಶಗಳ ಪ್ರತಿನಿಧಿಗಳಿದ್ದಾರೆ.

**ಅಂತರಾಷ್ಟ್ರೀಯ ಭದ್ರತಾ ಒಪ್ಪಂದ ೧೮೮೮:—** ಕ್ರಿ. ಶ. ೧೮೮೨ರಲ್ಲಿ ನಡೆದ ಐಗುಪ್ತದ ದಂಗೆಯಿಂದಾಗಿ ಹೆದರಿದ ಖೇದಿವ್‌ನು ಆಂಗ್ಲರ ಸಹಾಯ ಕೇಳಿದ ಕಾರಣ ಆಂಗ್ಲರು ಕಾಲುವೆಯ ರಕ್ಷಣೆಯ 'ಆಶ್ವಾಸನೆಕೊಟ್ಟು' ಕಾದುಕೊಂಡು ಬಂದಿದ್ದಾರೆ. ಬ್ರಿಟನ್ನು ಸುಯೇಜ್ ಕಾಲುವೆಯಲ್ಲಿ ತನ್ನ ಅಧಿಕಾರವನ್ನು ಬಲಪಡಿಸಿಕೊಳ್ಳುವರೆ ಹಾಗೂ ಎಲ್ಲಾ ದೇಶಗಳ ಹಡಗುಗಳಿಗೆ ಚಲಾವಣೆಯ ಸ್ವಾತಂತ್ರ್ಯವಿರುವರೆ ಪ್ರಪಂಚದ ಮಹಾ ಶಕ್ತಿಗಳೊಡನೆ ೧೮೮೮ರ ಅಕ್ಟೋಬರಿನಲ್ಲಿ ಒಂದು ಅಂತರಾಷ್ಟ್ರೀಯ ಒಪ್ಪಂದವನ್ನು ಕಾನ್‌ಸ್ಟೆಂಟಿನೋಪಲ್‌ನಲ್ಲಿ ಮಾಡಿಕೊಂಡಿತು. ಈ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು:— ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ, ನೆದರ್ಲೇಂಡ್ಸ್, ರಶ್ಯ, ತುರ್ಕಿ, ಆಸ್ಟ್ರಿಯಾ ಹಂಗೇರಿ, ಸ್ಪೈನ್. ಕಳೆದೆರಡು ಮಹಾಯುದ್ಧಗಳಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು ಸಕಲರಾಷ್ಟ್ರಗಳ ಹಡಗುಗಳ ಸ್ವತಂತ್ರ ಚಲಾವಣೆಗೆ ತಮ್ಮ ಸಹಕಾರ ನೀಡಿವೆ.

**ಯುದ್ಧವೇಕೆ?** ೧೯೫೬ ಆಗಸ್ಟ್‌ನಲ್ಲಿ ಐಗುಪ್ತಾಧ್ಯಕ್ಷ ಕರ್ನಲ್ ಗಮಾಲ್ ಅಬ್ದೆಲ್ ನಾಸ್ಸೇರರು ಈ ಕಾಲುವೆಯನ್ನು—ಕರಾರಿನಂತೆ ೧೨ ವರ್ಷಗಳ ನಂತರ ಐಗುಪ್ತಕ್ಕೆ ಸೇರತಕ್ಕದು—ರಾಷ್ಟ್ರೀಕರಣಗೊಳಿಸಿ ತಮ್ಮ ಅಂಕಿತದಲ್ಲಿಟ್ಟುಕೊಂಡರು.

೧೮೮೮ರ ಕೊನ್‌ಸ್ಟೆಂಟಿನೋಪಲ್ ಸಮಿತಿಯ ನಿರ್ಣಯಕ್ಕೆ ವಿರುದ್ಧವಾಗಿ ಈ ಕೆಳಗಿನ ಕಾರ್ಯಾಚರಣೆಗಳಾದುದೇ ಮುಂದೆ ಬರಬಹುದಾದ ಜಾಗತಿಕ ಯುದ್ಧಕ್ಕೆ ತಳಹದಿಯಾಗಿದೆ. –

(೧) ಎರಡನೆ ಜಾಗತಿಕ ಯುದ್ಧದಲ್ಲಿ ಬ್ರಿಟನು ತನ್ನ ಸಂಪೂರ್ಣ ಸ್ವಾಯತ್ತೆಯನ್ನಿದರಲ್ಲಿ ಚಲಾಯಿಸಿತು.

(೨) ಐಗುಪ್ತ — ಇಸ್ರೇಲ್‌ಗಳೊಳಗೆ ಯುದ್ಧವಾಗುವ ಸಂಭವವಿದೆಯೆನ್ನುವ ಅನುಮಾನದ ಮೇಲೆ—೧೯೫೦ರಿಂದ ಇಸ್ರೇಲಿ ಹಡಗುಗಳಿಗೆ — ಯಾ — ಇಸ್ರೇಲಿನ ಬಂದರಿನಲ್ಲಿ ತಂಗುವ ಹಡಗುಗಳಿಗೆ ಪಾಸು ಪ್ರದ ಬಹಿಷ್ಕಾರ—ಇವು ತೃತೀಯ ಮಹಾಸಮರಕ್ಕೆಡೆ ಮಾಡಿ ಕೊಡುತ್ತಿವೆ.

'ಸರಾಯ್', ಬಸ್ರೂರು.

---


**ಗವರ್ನಮೆಂಟ್ ಆಫ್ ಮೈಸೂರು**

**ಇಲೆಕ್ಟ್ರಿಕಲ್ ಶಾಖೆ**

**ಪ್ರಕಟಣೆ**

ದ. ಕ. ಜಿಲ್ಲೆ ಮತ್ತು ಕೊಳ್ಳೆಗಾಲು ಪ್ರದೇಶಗಳಲ್ಲಿ ಇಲೆಕ್ಟ್ರಿಸಿಟಿಯನ್ನು ಉಪಯೋಗಿಸುವ ಜನತೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಇಲೆಕ್ಟ್ರಿಸಿಟಿ ಉಪಯೋಗದ ಬಗ್ಗೆ ವಯರಿಂಗ್ ಇತ್ಯಾದಿ ಕಾರ್ಯವನ್ನು ಲ್ಯಾಸೆನ್ಸು ಪಡೆದ ಇಲೆಕ್ಟ್ರಿಕಲ್ ಕಂಟ್ರಾಕ್ಟರರಿಂದಲೇ ಮಾಡಿಸತಕ್ಕದ್ದು. ಇಲ್ಲವಾದರೆ ಇಲೆಕ್ಟ್ರಿಕಲ್ ಇಲಾಖೆಯ ನೆರವು ದೊರೆಯಲಾರದು. ಲ್ಯಾಸೆನ್ಸು ಪಡೆಯಲು ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಮತ್ತು ವಯರ್‌ಮೆನರು ಮೈಸೂರು ರಾಜ್ಯದಲ್ಲಿರುವ ಕ್ರಮ ನಿಯಮಗಳಿಗನುಸಾರವಾಗಿ ಕೂಡಲೇ ಲ್ಯಾಸೆನ್ಸು ಪಡಕೊಳ್ಳತಕ್ಕದ್ದು. ಇಲೆಕ್ಟ್ರಿಕಲ್ ಸುಪರ್‌ವ್ಯಾಜರು ಲ್ಯಾಸೆನ್ಸು ಬಗ್ಗೆ ವಯರ್‌ಮೆನರು ಪರ್ಮಿಟು ಬಗ್ಗೆ ಬೇಕಾಗುವ ಮಾಹಿತಿಯನ್ನು ಸಾಕಷ್ಟು ಅಂಚೆ ಚೀಟನ್ನು 'ಆಫೀಸ್ ಒಫ್ ದಿ ಸೆಕ್ರೆಟರಿ ಲ್ಯಾಸೆನ್ಸ್ ಇಶ್ಯೂಯಿಂಗ್ ಕಮಿಟಿ, ಬೆಂಗಳೂರು, ಇವರಿಗೆ ಕಳುಹಿಸಿ ಪಡೆಯಬಹುದು. ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಲ್ಯಾಸೆನ್ಸು ಬಗ್ಗೆ ಮಾಡುವ ಅರ್ಜಿ ದ್ವಿಪ್ರತಿಯಲ್ಲಿ ಒಂದನ್ನು ಸೆಕ್ರೆಟರಿ, ಲ್ಯಾಸೆನ್ಸು ಇಶ್ಯೂಯಿಂಗ್ ಕಮಿಟಿ, ಇಲೆಕ್ಟ್ರಿಕ್ ಲೆಬೋರೆಟರಿ, ಬೆಂಗಳೂರು ಅವರಿಗೂ ಇನ್ನೊಂದನು ಸೆಕ್ರೆಟರಿ, ಲ್ಯಾಸೆನ್ಸ್‌ಡ್ ಇಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಎಸೋಸಿಯೇಶನ್, ಎವೆನ್ಯೂ ರೋಡ್, ಬೆಂಗಳೂರು-2, ಅವರಿಗೂ ಕಳುಹಿಸತಕ್ಕದು.

ಪಿ. ಸಿ. ರೆಡ್ಡಿ.

ಅಧ್ಯಕ್ಷರ ಪರವಾಗಿ,

ಲೈಸೆನ್ಸು ಇಶ್ಯೂಯಿಂಗ್ ಕಮಿಟಿ



# ಝಂಡುರವರ 'ಕೇಸರಿ ಜೀವನ'

**(KESARI JEEVANA)**

ಇದನ್ನೇ ಉಪಯೋಗಿಸಿರಿ.

**ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.**

ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.



# ಗೋವಿಜಯ

**(ಗೋವಿನ ಕಥೆ)**

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರಿಗೂ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪಕ್ಕೆ ಶಾಮೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—8—0**

— ನವಯುಗ ಪ್ರೆಸ್, ಉಡುಪಿ. —

## ನಿಮಗಿದು ತಿಳಿದಿರಲಿ

## "ಅಯ್ಯೋ!" ಎಂದರೆ ಸ್ವರ್ಗ— "ಎಲವೋ!" ಎಂದರೆ ನರಕ

### ಕಾರಣ, ನಡತೆಯು ಬಹಳ ವಿನಯಶೀಲವಾಗಿರಲಿ!

ಸಮಾಜದ ಸರ್ವತೋಮುಖ ಏಳಿಗೆಯಾಗಬೇಕಾದರೆ ಪರಸ್ಪರ ಪ್ರೇಮ, ಸೌಹಾರ್ದ, ಐಕ್ಯತೆಯಿಂದ ವರ್ತಿಸಬೇಕೆಂಬುದು ಬಲ್ಲವರ ಸಲಹೆ. ನಮ್ಮ ಆದರ್ಶ ಮುಖಂಡರಿಂದ ನಮಗೀ ಮಾತುಗಳು ಆಗಾಗ ಕೇಳಿಬರುತ್ತವೆ ಆದರೆ ನಾವು ಆ ಭಾವನೆಯನ್ನು ಬೆಳೆಸಿಕೊಳ್ಳುವುದು ಹೇಗೆ? ಕೃತಕವಾಗಿ ವರ್ತಿಸಿದರೆ ಫಲವಿಲ್ಲ. ದುಡಿದು ಗಳಿಸುವ ಸೊತ್ತು ಅದಲ್ಲ. ಶಾಲಾ ಕಾಲೇಜುಗಳಲ್ಲಿ ಪಡೆಯುವ ಶಿಕ್ಷಣದಿಂದಲೇ ಬರುವಂಥಾದ್ದೂ ಅಲ್ಲ. ಅದು ನಮ್ಮ ಹೃದಯದಲ್ಲೇ ಅಡಗಿದೆ. ನಮ್ಮ ಯಾವ ವರ್ತನೆಯಿಂದ ಅದು ಎಚ್ಚತ್ತು ಪ್ರಕಾಶಗೊಳ್ಳುತ್ತದೆ ನೋಡೋಣ!

ನಮ್ಮ ಮಟ್ಟಿಗೆ ನಾವು ಎಷ್ಟೇ ಶ್ರೇಷ್ಠರಾಗಿದ್ದೇವೆಂಬ ವಿಶ್ವಾಸ ನಮಗಿದ್ದರೂ, ಬೇಕಾದರೆ ಅದು ಸತ್ಯವೇ ಆಗಿದ್ದರೂ, ಸ್ವಲ್ಪ ಮಟ್ಟಿಗಾದರೂ ನಿಜವಾದ ಶ್ರೇಷ್ಠತೆಗೆ ಸಲ್ಲದ ವಿಚಾರಗಳು ನಮಗರಿಯದಂತೆಯೇ ನಮ್ಮಲ್ಲಿ ಅಸ್ತಿತ್ವವನ್ನು ಪಡೆದಿರುತ್ತವೆಂಬ ಮಾತನ್ನು ಒಮ್ಮೆಯೇ ಅಲ್ಲಗಳೆಯದೆ, ಅದರ ಸತ್ಯತೆಯನ್ನು ತಿಳಿದು ತಿದ್ದಿಕೊಳ್ಳುವ ಸಲಹೆಯನ್ನು ಸ್ವೀಕರಿಸುವುದರಿಂದೇನೂ ಕೆಡುಕಿಲ್ಲ. ನಿರಾಕರಿಸಿಯೇ ಬಿಡುತ್ತೇವಾದರೆ, ನಾವು ಪೂರ್ಣ ಒಳ್ಳೆಯವರೆಂದು ಹೇಳಿಕೊಳ್ಳುವ ಜಂಭವಾದರೂ ಶ್ರೇಷ್ಠತೆಗೆ ಸಲ್ಲದ ವಿಚಾರವೇ ಆಗಿರುತ್ತದೆ. ಏನೇ ಇರಲಿ, ದೇಶದಲ್ಲಿ ದೊಡ್ಡದೊಡ್ಡರೀತಿಯ ಸುಧಾರಣೆಗಳಾಗಬೇಕೆಂದು ಸಾಧಿಸುವ ನಮ್ಮ ಹೃದಯ— ಮನಸ್ಸಿನಲ್ಲಿ ಸುಧಾರಣೆಯಾಗಬೇಕಾದ ವಿಷಯಗಳಿಗೆ ಬರಗಾಲವಿಲ್ಲ.

ಸ್ವಾತಂತ್ರ್ಯ, ಸಮಾನತೆ, ಸೋದರತೆಯ ತತ್ವಗಳನ್ನು ಸಮಾಜ ಜೀವನದಲ್ಲಿ ಬಳಸಿಕೊಳ್ಳಬೇಕೆಂಬುವರ ಕುರಿತು ಹೆಚ್ಚಿನವರ ವಿರೋಧವಿಲ್ಲ. ಹೀಗಿರುವಾಗ ಒಬ್ಬರನ್ನೊಬ್ಬರು ತಿರಸ್ಕಾರ ದೃಷ್ಟಿಯಿಂದ ನೋಡುವುದು ಅನ್ಯಾಯವೆಂದಾಗುವುದು ಆದರೆ ನಮ್ಮಿಂದ ಕಡೆಯವರನ್ನು ಕಡೆಗಣಿಸದೆ ಎಲ್ಲರನ್ನೂ ಗೌರವಿಸುವ ವಿಶಾಲ ಮನೋಭಾವವುಳ್ಳ ವಿನಯ ಸಂಪನ್ನರು ತೀರ ವಿರಳವಲ್ಲವೆ?

ಒಮ್ಮೊಮ್ಮೆ ನಾವು ನಮ್ಮ ಘನತೆ(!)ಯನ್ನು ಕಾಪಾಡಿಕೊಳ್ಳಲಿಕ್ಕೆಂದು ವಿಚಿತ್ರ ದ್ವಂದ್ವದಲ್ಲಿ ಸಿಕ್ಕಿ ಬೀಳುವುದಿದೆ. ಸಾಮಾನ್ಯವಾಗಿ ಅಪರಿಚಿತ ವ್ಯಕ್ತಿಯೊಡನೆ ಮಾತನಾಡುವಾಗ ಅವರನ್ನು ಸಂಬೋಧಿಸಲು ಏಕವಚನವನ್ನುಪಯೋಗಿಸಬೇಕೇ ಯಾ ಬಹುವಚನವನ್ನೇ? ಎನ್ನುವ ಪ್ರಶ್ನೆಯೇ ಆ ದ್ವಂದ್ವ. ಎದುರಿನ ವ್ಯಕ್ತಿ ನಮ್ಮಿಂದ ಕಡಿಮೆಯವನಾದರೆ ಏಕವಚನವನ್ನೂ, ನಮ್ಮಂತೆ ಯಾ ಹೆಚ್ಚಿನವನಾದರೆ ಬಹುವಚನವನ್ನೂ ಉಪಯೋಗಿಸಬೇಕೆಂದು ನಮ್ಮ ಮತವಾದರೂ, ಆ ಹೆಚ್ಚುಕಡಿಮೆಯನ್ನು ಗೊತ್ತುಹಚ್ಚಲು ನಾವು ಉಪಯೋಗಿಸುವ ಸಾಧನವೆಂದರೆ, ನಿಜವಾದ ಶ್ರೇಷ್ಠತೆಯ ದೃಷ್ಟಿಯಿಂದ ಏನೂ ಬೆಲೆಯಿಲ್ಲದ ಪೋಷಾಕು, ರೂಪ, ಕೆಲವುಟ್ಟಿಗೆ ಜಾತಿ - ಇವೇ ನಮಗೆ ಅಳತೆಗೋಲು! ಇವುಗಳಿಂದಲೂ ಆ ಹೆಚ್ಚುಕಡಿಮೆಯನ್ನು ಗೊತ್ತುಹಚ್ಚಲಾಗದಿದ್ದಲ್ಲಿ, ದ್ವಂದ್ವವು ವಿಷಮಕ್ಕೇರಿ ನಾವು ಗೊಂದಲದಲ್ಲಿ ಬೀಳುವುದುಂಟು. 'ಎಂದು ಬಂದಿರಿ? ಯಾವಾಗ ಹೊರಡುತ್ತೀರಿ?" ಎಂದು ಕೇಳುವ ಬದಲು 'ಎಂದು ಬಂದದ್ದು? ಯಾವಾಗ ಹೊರಡುವುದು?' ಎಂದೆಲ್ಲ ಮಾತನಾಡಿ ವಚನದ ಕಾಟವನ್ನೇ ತಪ್ಪಿಸಿಕೊಳ್ಳಲು ನೋಡುತ್ತೇವೆ. ಅಂತೂ ಆ ವ್ಯಕ್ತಿ ನಮ್ಮಿಂದ ಕಡಿಮೆಯವನಾಗಿದ್ದರೆ ಅವನನ್ನು ಬಹು ವಚನದಿಂದ ಸಂಬೋಧಿಸುವುದರಿಂದ ನಮ್ಮ ಘನತೆಗೆ ಕುಂದಾಗುವುದೆಂದೇ ನಮ್ಮ ಭಾವನೆಯಿರುತ್ತದೆ.

ನಮ್ಮಿಂದ ಕಡಿಮೆಯವರನ್ನು ಗೌರವಿಸಿದ್ದರಿಂದ ನಮ್ಮ ನಿಜವಾದ ಘನತೆಗೆ ಕುಂದು ಬರುವುದಾದರೂ ನಿಜವೆ? ಛೆ! ಸರ್ವಥಾ ಬರಲಾರದು. ಬದಲಾಗಿ ನಮ್ಮ ಘನತೆ ಹೆಚ್ಚುತ್ತದೆಂದರೆ ಹಲವರಿಗೆ ಆಶ್ಚರ್ಯವಾಗಬಹುದು ಪರೀಕ್ಷೆಗಾಗಿ, ನಮ್ಮ ಹಿಂದಿನ ನೀತಿಯಂತೆ 'ನೀನು' ಎನ್ನಬೇಕಾದ ಮನುಷ್ಯನನ್ನು 'ನೀವು' ಎಂದು ಸಂಬೋಧಿಸಿದಾಗ ಅವನ ಮನಸ್ಸಿನ ಮೇಲಾಗುವ ಪರಿಣಾಮವೇನು? ಅವನ ಹೃದಯದಲ್ಲಿ ನಮ್ಮ ಬಗ್ಗೆ ಗೌರವಾದರದ ಭಾವನೆಯು ಉಕ್ಕಿದಂತೆ ಭಾಸವಾಗಬಹುದು. ದಾಕ್ಷಿಣ್ಯಪಟ್ಟುಕೊಂಡು 'ನನಗೆ ನೀವು ಎನ್ನಬೇಡಿ" ಎಂದೂ ಆತ ಹೇಳಬಹುದು. ಒಂದೊಮ್ಮೆ ಅಂಥ ಜನರನ್ನು ನಾವು ಬಹುವಚನದಿಂದ ಸಂಬೋಧಿಸಿದಾಗ, ನಮ್ಮನ್ನವರು ಏಕವಚನದಿಂದ ಸಂಬೋಧಿಸಿದರಾದರೆ ತಾಳ್ಮೆಯಿಟ್ಟುಕೊಳ್ಳುವುದವಶ್ಯ. ಸಿಟ್ಟಿಗೇಳುವ ಬದಲು ನಗುವನ್ನೇ ತಂದುಕೊಳ್ಳುವುದೊಳಿತು. ಆಗ ಒಟ್ಟಿನಲ್ಲಿ ನಮ್ಮಲ್ಲುಂಟಾಗುವ ಒಳಿತೇನೂ ಕಡಿಮೆಯದಲ್ಲ ದರ್ಪ ಜಂಭ, ದಿಮ್ಮಾನವನ್ನು ವಿನಯಶೀಲತೆಯುಪಡೆಯಿತಾದರೆ ಕಡಿಮೆಯೇನು?

ಅಂತೂ ಮೇಲು ಕೀಳುಗಳೆನ್ನದೆ ಒಬ್ಬರನ್ನೊಬ್ಬರು ಗೌರವಿಸುವುದರಿಂದ ಪರಸ್ಪರ ಪ್ರೇಮ, ಸ್ನೇಹ–ಸೌಹಾರ್ದ ಭಾವನೆಯು ವಿಕಾಸಗೊಳ್ಳುವುದಂತೂ ಖಂಡಿತವೆಂದೇ ಹೇಳಬಹುದು. ಇತರ ಯಾವ ವಿಧಾನದಿಂದಲೂ ದುರ್ಲಭವಾದ ಸೊತ್ತನ್ನು ನಾವು ಇಷ್ಟು ಸುಲಭವಾಗಿ ಗಳಿಸಬಹುದು. ಒಂದೊಮ್ಮೆ ಈ ಮಾರ್ಗವನ್ನನುಸರಿಸುವುದೇ ನಮ್ಮ ಗೌರವಕ್ಕೆ ಕಡಿಮೆಯೆಂದು ನಾವು ಭಾವಿಸುವೆವಾದರೆ ನಮ್ಮದು ಪೊಳ್ಳು ಘನತೆಯೆಂದು ಯಾರಾದರೂ ಅಂದರೂ ತಪ್ಪಾಗದು ದಿ. ಮುಳಿಯ ತಿಮ್ಮಪ್ಪಯ್ಯನವರಂಥ ಆದರ್ಶ ಅಧ್ಯಾಪಕರು ತಮ್ಮ ಶಿಷ್ಯರನ್ನು ಏಕವಚನದಿಂದ ಸಂಬೋಧಿಸುತ್ತಿದ್ದಿಲ್ಲವಂತೆ! ಅವರ ಶಿಷ್ಯರಿಗೆ ಗುರುವಿನಲ್ಲಿದ್ದ ಅಪಾರ ಭಕ್ತಿಗೆ ಗುರುವಿನ ಈ ಗುಣವೂ ಒಂದು ಕಾರಣವಿದ್ದಿರಬಹುದೆಂದು ಭಾವಿಸಿದರೆ ತಪ್ಪಾಗದಷ್ಟೆ!

ನಮ್ಮ ಏಳಿಗೆಗೆ ಅತೀ ಅಗತ್ಯವಾದ ಸೌಹಾರ್ದವನ್ನು ಸಂಪಾದಿಸುವ, ಹಾಳು ಒಣ ಜಂಭವನ್ನು ಬದಿಗೊತ್ತಿ, ಯಾರ ಒತ್ತಾಯವೂ ಇಲ್ಲದ, ನಮ್ಮ ವ್ಯಕ್ತಿತ್ವಕ್ಕೆ ಕಳೆಕೊಡುವ ಈ ವಚನದ ಸುಧಾರಣೆಯನ್ನು ಸ್ವೀಕರಿಸುವುದರಿಂದ ಇತರ ಸಾಂಪತ್ತಿಕ ಸುಧಾರಣೆಗಳಂತೆ ಯಾವತರದ ಕಷ್ಟನಷ್ಟಗಳೂ ಇಲ್ಲವಲ್ಲ! ಇದನ್ನು ನಾವು ಆಚರಿಸಿದರೆ ಇನ್ನುಳಿದ ಸುಧಾರಣೆಗಳಿಗೂ ಇದರಿಂದ ನೆರವು ದೊರೆಯಬಹುದೆಂಬುದರಲ್ಲಿ ಅನುಮಾನವಿಲ್ಲ.

ಇನ್ನು ಸಾಮಾನ್ಯವಾಗಿ ಮನೆಯ ಮಕ್ಕಳಿಂದ ಹಿಡಿದು ರಾಷ್ಟ್ರ ರಾಷ್ಟ್ರಗಳ ತನಕವೂ ಇರುವ ಅಪಾಯಕಾರಿ ಮನೋಭಾವವಾದ "ಪ್ರತೀಕಾರ" ಭಾವನೆಯ ಕುರಿತು ನಾವು ಒಂದಿಷ್ಟು ಜಾಗ್ರತೆ ವಹಿಸುವುದರಿಂದ ಎಷ್ಟೋ ಒಳ್ಳೆಯದಿದೆ. ಮಹಾತ್ಮರು ಹೇಳುವಂತೆ ಅಪಕಾರ ಮಾಡಿದವನಿಗೆ ಉಪಕಾರವನ್ನೇ ಮಾಡಿದರೆ ಒಳ್ಳೆಯ ಫಲವಿದೆಯೆಂಬ ಮಾತನ್ನು ಅನುಸರಿಸುವುದು ನಮಗೆ ಅಸಾಧ್ಯವಾಗಿ ತೋರಿದರೂ ವೈರವನ್ನು ಬೆಳೆಸುವ ಪ್ರತೀಕಾರವನ್ನು ಮಾಡದೆ ಸೈರಣೆಯನ್ನು ತಂದುಕೊಳ್ಳುವುದರಿಂದ ನಮಗೆ ತುಂಬ ಲಾಭವಿದೆ. ಅಂತೂ ಎಲ್ಲ ವಿಷಯಗಳಲ್ಲಿಯೂ ವಿನಯವನ್ನು ಅನುಸರಿಸುವುದರಿಂದ ಸಮಾಜದಲ್ಲಿ ಸೌಹಾರ್ದತೆ ಬೆಳೆಯಬಹುದಾಗಿದೆ. ಜನಸೇವೆಗೇ ಹೆಚ್ಚಿನ ಬೆಲೆಯಿಂದಾದಮೇಲೆ ವಿನಯಶೀಲರಾಗಲು ನಾವೇಕೆ ಹಿಂಜರಿಯಬೇಕು? ಅದರಿಂದ ಗೌರವ ಕುಂದೀತೆಂದೇಕೆ ಭಯ?

—ಶ್ರೀ ವಿ. ಬಿ. ಅಮ್ಲಾಡಿ

## ಜೀವನ

## ರಾಷ್ಟ್ರಾಭಿವೃದ್ಧಿಯಲ್ಲಿ ಅಧ್ಯಾಪಕರ ಪಾತ್ರ

### ಅವರ ಗೌರವ ಬೆಳೆದರೆ ನಾಡಿಗೆನೇ ಗೌರವ

ಭಾವೀ ಜನಾಂಗವನ್ನು ರೂಪುಗೊಳಿಸುವ ಹೊಣೆಗಾರಿಕೆಯಲ್ಲಿ ಅಧ್ಯಾಪಕರ ಮಾರ್ಗದರ್ಶಕತೆಯು ಅತ್ಯಮೂಲ್ಯವಾದುದು. ಉಚ್ಚ ಭಾವನೆಗಳಿಂದ ಕೂಡಿದ ಅಧ್ಯಾಪಕನು, ತನ್ನ ಕೈವಾಡದಲ್ಲಿ ಬೆಳೆಯುವ ವಿದ್ಯಾರ್ಥಿಗಳಿಗೆ ಶ್ರೇಷ್ಠವೂ ಕಾಲೋಚಿತವೂ ಆದ ತರಬೇತಿಯನ್ನಿತ್ತು ಅವರನ್ನು ಆದರ್ಶ ಜನಾಂಗದ ನಾಗರಿಕರಾಗಿ ಮಾಡಲು ಶಕ್ತನಾಗುವನು. ಅಂತೆಯೇ ತದ್ವಿರುದ್ಧ ಭಾವನಾಪ್ರೇರಿತ ಅಧ್ಯಾಪಕನಾದರೆ, ನಾಡಿನಲ್ಲಿ ನಾಸ್ತಿಕರನ್ನೋ, ಅಥವಾ ಕಮ್ಯುನಿಸ್ಟರನ್ನೋ ಸಿದ್ಧಗೊಳಿಸಲು ಸಾಧ್ಯವಾಗುವುದರಲ್ಲಿ ಸಂದೇಹವಿಲ್ಲ. ಆದುದರಿಂದಲೇ 'ಗುರುವಿನಂತೆ ಶಿಷ್ಯ" ಎಂಬ ಮಾತು ಸಂದರ್ಭೋಚಿತವು.

ಅಧ್ಯಾಪಕನು ತನ್ನ ಸ್ಥಾನಮಾನಗಳನ್ನು ವರ್ಧಿಸಿಕೊಳ್ಳಲು ಮುಂಜಾಗ್ರತೆ ವಹಿಸಬೇಕಾಗಿದೆ. ತನ್ನ ವ್ಯವಹಾರ ಕ್ರಮಗಳಿಂದ ಸಾರ್ವಜನಿಕರ ಮುಂದೆ ತನ್ನ ವರ್ಚಸ್ಸು ಕುಂದದಂತೆ ಜಾಗರೂಕತೆ ವಹಿಸುವುದು ಅತ್ಯಗತ್ಯವು. ತನ್ನ ಸ್ಥಾನಮಾನ, ಹೊಣೆಗಾರಿಕೆಯನ್ನು ಮರೆತು ಅಶ್ಲೀಲ ವ್ಯವಹಾರಗಳಲ್ಲಿ ತೊಡಗುವುದು ಅಧ್ಯಾಪಕರ ವರ್ಗಕ್ಕೆ ದೊಡ್ಡ ಕಲಂಕವು. ಈಗಿನ ದಿನಗಳಲ್ಲಿ ಕಾಲೋಚಿತವಾದ ಖರ್ಚು ವೆಚ್ಚಕ್ಕೆ ಸಾಕಷ್ಟು ವೇತನವು ಅಧ್ಯಾಪಕನಿಗೆ ದೊರಕುವುದಿಲ್ಲವೆಂಬುದು ಸ್ಪಷ್ಟವಾದರೂ, ಸಾರ್ವಜನಿಕರೊಂದಿಗೆ ತನ್ನ ದರಿದ್ರ ಜೀವನ, ತನ್ನ ಸಂಬಳದ ಮಟ್ಟ, ತನ್ನ ಕಷ್ಟ ಕಾರ್ಪಣ್ಯಗಳ ಚಿತ್ರವನ್ನು ವರ್ಣಿಸುವುದು ಅನಗತ್ಯವು. ನಮ್ಮ ಸುತ್ತುಮುತ್ತಲಿನವರೊಡನೆ ನಮ್ಮ ಕಷ್ಟಗಳನ್ನು ತೋಡಿಕೊಂಡರೆ ನಮ್ಮ ಐಶ್ವರ್ಯದ ನಿಧಿಯು ತುಂಬಿ ಬರಲಾರದು!

ಅಧ್ಯಾಪಕರು ತಮ್ಮ ಸ್ಥಾನಮಾನಗಳಿಗೆ ಯೋಗ್ಯವಾದ ಉಡಿಗೆ ತೊಡಿಗೆಗ…

(೯ನೇ ಪುಟ ನೋಡಿರಿ)

ನಿಮ್ಮ ಹಿಂದಿನ ಸಹಕಾರವೇ ನಮ್ಮ ಇಂದಿನ ಪ್ರಗತಿಗೆ ಕಾರಣವಾಗಿದೆ

ಜಿಲ್ಲೆಯಲ್ಲಿ ರಜತಮಹೋತ್ಸವಗಳನ್ನು ಕಂಡ ಹಲವು ಸಂಸ್ಥೆಗಳಲ್ಲಿ ನಮ್ಮದೂ ಒಂದಾಗಿದೆ. ಸ್ಥಾಪನೆಯಾದಂದಿನಿಂದಲೂ ಹಲವು ಆರ್ಥಿಕ ಬಿಕ್ಕಟ್ಟಿನ ವರುಷಗಳನ್ನು ಎದುರಿಸಿ ನಾವು ಪ್ರಗತಿಪಥದಲ್ಲಿ ಮುಂದರಿಯುತ್ತಿದ್ದೇವೆ.

ನಮ್ಮ ಪ್ರಗತಿಗೆ ಕಾರಣರಾದ ನಿಮ್ಮನ್ನು ನಾವು ಸದಾ ಸ್ಮರಿಸುತ್ತೇವೆ.

1956 ನಮ್ಮ ರಜತಮಹೋತ್ಸವದ ವರ್ಷ

ಸ್ಥಾಪನೆ: 1931

ದಿ ಬೇಂಕ್ ಒಫ್ ಮಂಗಳೂರು, ಲಿಮಿಟೆಡ್

ಪ್ರಧಾನ ಕಛೇರಿ: 'ಲಕ್ಷ್ಮೀನಾರಾಯಣ ಬಿಲ್ಡಿಂಗ್ಸ್' ರಥಬೀದಿ—ಮಂಗಳೂರು

ಶಾಖೆಗಳು: ರಥಬೀದಿ—ಮಂಗಳೂರು, ಮೂಡಬಿದ್ರಿ, ಪಡುಬಿದ್ರಿ,

ರಾಮತೀರ್ಥ ಬ್ರಾಹ್ಮೀ ತೈಲ

ಪೇಟೆಂಟ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

# ಲಾಮಾರ ಭಾರತ ಸಂದರ್ಶನ

## ತಮ್ಮವರಿಂದ ಅವತಾರಿ ಪುರುಷರೆಂದು ಭಾವಿಸಲ್ಪಟ್ಟಿರುವ ಲಾಮಾದ್ವಯರು ಬೌದ್ಧ ಜಗತ್ತಿನ ಶಿರಸ್ಸುಗಿದ್ದಾರೆಂದರೆ ತಪ್ಪಲ್ಲ

ಪುಣೆಯ ಭಂಡಾರ್‌ಕರ್ ಅಧ್ಯಯನ ಮಂಡಳದಲ್ಲಿ ಈಚೆಗೊಂದು ಸಮಾರಂಭ ನಡೆಯಿತು. ಟಿಬೇಟಿನಿಂದ ಮಾನ್ಯ ಅತಿಥಿಗಳಿಬ್ಬರು ಆ ಮಂಡಳದ ಕಾರ್ಯಕಲಾಪವನ್ನು ವೀಕ್ಷಿಸಲು ಬಂದಿದ್ದರು. ಅವರಿಗೆ ಭಾರತೀಯ ಸಂಪ್ರದಾಯಕ್ಕೆ ತಕ್ಕ ಸ್ವಾಗತವನ್ನು ಕೊಡಲಾಯಿತು. ಕೊನೆಯಲ್ಲಿ ಮಾನ್ಯ ಅತಿಥಿಗಳಿಗೆ ಕೆಲವು ಪುಸ್ತಕಗಳೊಂದಿಗೆ ಒಂದೊಂದು ತೆಂಗಿನ ಕಾಯಿಯನ್ನೂ ಗೌರವದಿಂದ ನೀಡಲಾಯಿತು.

ಅತಿಥಿಗಳೀರ್ವರೂ ಈ ದುಂಡಗಾದ ಕಾಯಿಯನ್ನು ಕಂಡು ಕುತೂಹಲಗೊಂಡರು; ಅದನ್ನು ತಿರುಗಿಸಿ ತಿರುಗಿಸಿ ನೋಡಿದರು; ಆದರೆ ಏನೆಂದು ಅವರಿಗೆ ತಿಳಿಯಲಿಲ್ಲ. ತಮ್ಮ ಸಂಗಾತಿಗಳೊಡನೆ ...ಕ ಸಂಭಾಷಣೆ ನಡೆಸಿ ಸಂಕೇತ...ವಲೇ—ಇದೇನೆಂದು ವಿಚಾರಿಸಿದರು. ಅವರಿಗೂ ಈ ಕಾಯಿಯ ಗುರುತು ಹತ್ತಲಿಲ್ಲ. ಆಗ ಅನುವಾದಕರೇ ಸಹಾಯಕ್ಕೆ ಬಂದು ಭಾರತೀಯರ ಕಲ್ಪವೃಕ್ಷದ ಪ್ರಸಾದವದೆಂದು ವಿವರಿಸಿ ಹೇಳಬೇಕಾಯಿತು.

ಆಶ್ಚರ್ಯಚಕಿತರಾದ ಅತಿಥಿದ್ವಯರು ಬೇರೆ ಯಾರೂ ಅಲ್ಲ—ಈಗ ಕೆಲವು ವಾರಗಳಿಂದ ಭಾರತದ ನಾನಾ ಮುಖ್ಯ ಪಟ್ಟಣಗಳಲ್ಲಿ ಸೌಹಾರ್ದ ಸಂಚಾರವನ್ನು ಕೈಗೊಂಡಿರುವ ದಲ್ಯಾ ಲಾಮಾ ಮತ್ತು ಪಂಚೆನ್ ಲಾಮಾರೇ ಇವರು!

ಜಗತ್ತಿನ ಮಾಳಿಗೆ ಎಂದು ಕರೆಯಲ್ಪಡುವ ಟಿಬೇಟಿನಿಂದ ಈ ಮಹಾನುಭಾವರು ಭಾರತಕ್ಕೆ ಇಳಿದುಬಂದರು—ಬುದ್ಧ ಭಗವಾನನ ೨೫೦೦ನೇ ಪರಿನಿರ್ವಾಣ ಸಮಾರಂಭದಲ್ಲಿ ಭಾಗವಹಿಸುವ ಉತ್ಕಟೇಚ್ಛೆಯಿಂದಲೂ ಭಾರತದ ಪರಿಚಯ ಮಾಡಿಕೊಳ್ಳುವ ಹಂಬಲದಿಂದಲೂ ಕೈಗೊಂಡ ಪ್ರಯಾಸಕರವಾದ ಪ್ರವಾಸ ಅವರದು.

ಲ್ಹಾಸಾದಿಂದ ಹೊಸದೆಹಲಿಗೆ ಬರುವ ಮಾರ್ಗವೇ ಅಷ್ಟು ತ್ರಾಸದಾಯಕವಾದದ್ದು: ಕಾಲ್ನಡೆಯಿಂದ ತೊಡಗಿ, ಹೇಸರಕತ್ತೆಗಳನ್ನೇರಿ. ಪಲ್ಲಕ್ಕಿಯಲ್ಲಿ ಕುಳಿತು, ವಿಮಾನದಲ್ಲಿ ಹಾರಿ— ಹೀಗೆ ನಾನಾ ಪ್ರಕಾರದ ಪ್ರವಾಸಾನುಭವಗಳಿಂದ ಸಮೃದ್ಧರಾಗಿ ಅವರು ಭಾರತ ಭೂಮಿಗೆ ಆಗಮಿಸಿದರು. ಟಿಬೇಟಿನ ಜನರ ಕಣ್ಮಣಿಯಂತಿರುವ ಈ ಲಾಮಾರ ಹಿರಿಯರು ಯಾರೂ ಭಾರತಕ್ಕೆ ಬಂದ ದಾಖಲೆ ಇಲ್ಲ.

ದಲ್ಯಾಲಾಮಾರು ಎಂದರೆ ಟಿಬೇಟಿನ ಶಿರಸ್ಸು: ಆತನೇ ಶ್ರೇಷ್ಠನಾದ ಧರ್ಮಗುರು; ಮತ್ತು ರಾಜ. ಪಂಚೆನ್ ಲಾಮಾನೆಂದರೆ ಧಾರ್ಮಿಕ ಕ್ಷೇತ್ರದಲ್ಲಿ ದಲ್ಯಾ ಲಾಮಾರ ಬಳಿಕದ ಸ್ಥಾನದಲ್ಲಿ ನಿಲ್ಲುವ ಧರ್ಮ ಗುರು; ಆತನಿಗೆ ರಾಜಕೀಯ ಕ್ಷೇತ್ರದಲ್ಲಿ ಅಧಿಕಾರವಿಲ್ಲ.

ಟಿಬೇಟಿನಲ್ಲಿ ಲಾಮಾರ ಆಡಳಿತಕ್ಕೆ ಪ್ರಾರಂಭವಾದದ್ದು ೧೩ನೇ ಶತಮಾನದಲ್ಲಿ: ಮಂಗೋಲಿಯದ ಅರಸನಾದ ಕುಬ್ಲೈಖಾನನು ಲಾಮಾರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಬೌದ್ಧ ಧರ್ಮವನ್ನು ಸ್ವೀಕರಿಸಿದನು; ಮತ್ತು ಇದಕ್ಕೆ ಪ್ರತಿ ಕಾಣಿಕೆಯಾಗಿ ಟಿಬೇಟಿನ ಮೇಲೆ ಸಾರ್ವಭೌಮಾಧಿಕಾರವನ್ನು ಲಾಮಾರಿಗೆ ಆತನು ನೀಡಿದನು.

ಟಿಬೇಟನ್ನು ಆಳುವ ದಲ್ಯಾಲಾಮಾರಲ್ಲಿ ಈಗಿನವರು ಹದಿನಾಲ್ಕನೇ ಯವರಾಗಿದ್ದಾರೆ. ದಲ್ಯಾಲಾಮಾರ ಆಯ್ಕೆಯು ಪುನರವತಾರದ ತತ್ವದಲ್ಲಿ ವಿಶ್ವಾಸವಿಟ್ಟು ನಡೆಯುತ್ತದೆ. ಈಗಿನ ದಲ್ಯಾಲಾಮಾರನ್ನು ಪಟ್ಟಕ್ಕೇರಿಸಿದ ಕತೆಯು ತುಂಬ ವಿಸ್ಮಯಕರವಾಗಿದೆ; ಮತ್ತು ಸಾಮಾನ್ಯವಾಗಿ ಪ್ರತಿಯೊಬ್ಬ ದಲ್ಯಾಲಾಮಾನ ಆಯ್ಕೆಯ ಹಿಂದೆಯೂ ಇಷ್ಟೇ ಸೋಜಿಗವಾದ ಘಟನೆಗಳು ಇರುತ್ತವೆ.

ಹದಿಮೂರನೇ ಶಲೆಯ ಮಹಾಗುರು ದಲ್ಯಾಲಾಮಾರು ತಮ್ಮ ೫೭ನೇ ವಯಸ್ಸಿನಲ್ಲಿ ೧೯೩೩ರಲ್ಲಿ ನಿರ್ವಾಣವನ್ನು ಹೊಂದಿದರು ಅವರೇ ಪುನರವತಾರ ಹೊಂದುವರೆಂದೂ, ಆತನೇ ಮುಂದಿನ ದಲ್ಯಾಲಾಮಾನಾಗುವನೆಂದೂ ಜನರಲ್ಲಿ ನಡೆದು ಬಂದಿರುವ ವಿಶ್ವಾಸ ಆದರೆ ಎಲ್ಲಿ ಪುನರವತಾರವಾಗುತ್ತದೆ, ಯಾವ ಮಗುವೇ ಈ ಪುನರವತಾರ ಎಂದು ತಿಳಿದವರಿಲ್ಲ.

ಆದಾಗ್ಯೂ ಟಿಬೇಟಿನ ಜನರಿಗೆ ಇಂಥಲ್ಲಿ ಪುನರವತಾರ ನಡೆದಿದೆ ಎಂಬ ಬಗ್ಗೆ ಸಂಕೇತಗಳು ಸಿಕ್ಕುವಂತೆ: ಉದಾಹರಣೆಗೆ ೧೩ನೇ ದಲ್ಯಾಲಾಮಾರ ಮೃತ ಶರೀರದ ಅಂತ್ಯ ಸಂಸ್ಕಾರ ಮಾಡುವಾಗ ಶವದ ತಲೆಯನ್ನು ದಕ್ಷಿಣಾಭಿಮುಖವಾಗಿಟ್ಟಿದ್ದರು; ಆದರೆ ಶವ ಪೆಟ್ಟಿಗೆಯನ್ನು ತೆರೆದಾಗ ತಲೆಯು ಈಶಾನ್ಯ ದಿಕ್ಕಿಗೆ ತಿರುಗಿದ್ದಿತು! ಅದಲ್ಲದೆ ಮಳೆ ಕೊಡುವ ಮೋಡಗಳು ಹಿಂಡ ಹಿಂಡಾಗಿ ಈಶಾನ್ಯ ದಿಕ್ಕಿಗೆನೆ, ಚಲಿಸುತ್ತಿದ್ದವು— ಇವೆಲ್ಲವುಗಳಿಂದ ಈಶಾನ್ಯ ಟಿಬೇಟಿನಲ್ಲಿ ಈ ಪುನರವತಾರ ನಡೆದಿದೆ ಎಂಬ ನಂಬಿಕೆ ಜನರಿಗೆ ಉಂಟಾಯಿತು.

ಮುಂದೆ ಹುಡುಕಾಟಕ್ಕೆ ಪ್ರಾರಂಭವಾಯಿತು ಮುಖ್ಯ ಪಾತ್ರಿಯೊಬ್ಬನಿಗೆ ಮುಂದಿನ ದಲ್ಯಾ ಲಾಮಾ ಎಲ್ಲಿರುವನೆಂದು ಭವಿಷ್ಯ ಹೇಳಲು ವಿನಂತಿಸಲಾಯಿತು. ಆತನು ಹೇಳಿದ ಮಾತುಗಳ ಆಧಾರದ ಮೇಲೆಯೇ ಸಂಶೋಧನೆ ನಡೆಯುವುದು ಕ್ರಮ. ದಲ್ಯಾ ಲಾಮಾನಾಗುವ ಮಗುವಿನಲ್ಲಿ ಪುನರವತಾರಿಯ ಅನೇಕ ಗುರುತುಗಳಿರಬೇಕೆಂದೂ ನಿಯಮವುಂಟು: ಉದಾಹರಣೆಗೆ ಕಾಲಿನಲ್ಲಿ ಹುಲಿ ಚರ್ಮದ ಸಂಕೇತ, ದೀರ್ಘವಾಗಿಯೂ ಕೊನೆಗಳಲ್ಲಿ ಮೇಲೆ ಬಗ್ಗಿದವೂ ಆದ ಕಣ್ಣುಗಳು, ಅಂಗೈಯಲ್ಲಿ ಶಂಖದ ಮುದ್ರೆ ಇತ್ಯಾದಿಗಳಿರುವುದು ಲಾಮಾ ಪಟ್ಟಕ್ಕೆ ಅರ್ಹತೆಯನ್ನು ಸೂಚಿಸುವ ಗುರುತು.

ಮಗುವು ನಿಜವಾಗಿ ಮಾಜಿ ದಲ್ಯಾಲಾಮಾನ ಪುನರವತಾರವಾಗಿದ್ದಲ್ಲಿ ಆತನು ಉಪಯೋಗಿಸುತ್ತಿದ್ದ ವಸ್ತುಗಳನ್ನು ಕೂಡಲೇ ಗುರುತಿಸುವುದೆಂದೂ ಒಂದು ನಂಬಿಕೆ. ಆದುದರಿಂದ ಪುನರವತಾರಿ ಮಗುವಾಗಿರಬೇಕೆಂಬ ಸಂಶಯ ಬಂದ ಮಗುವಿನ ಮುಂದೆ ಇತರ ಸಾಮಾನುಗಳೊಂದಿಗೆ ಮಾಜಿ ಲಾಮಾನ ಸಾಮಾನುಗಳನ್ನೂ ಇಡುತ್ತಾರೆ. ಮಗುವು ಮಾಜಿ ಲಾಮಾನ ಸಾಮಾನುಗಳ ಮೇಲೆಯೇ ಮೊದಲು ಕೈ ಹಾಕಿ ಅವನ್ನು ಉಪಯೋಗಿಸಲು ನೋಡಿದರೆ ಸಂಶೋಧನೆಯು ಸಾರ್ಥಕವಾಯಿತೆಂದು ಭಾವಿಸಲ್ಪಡುತ್ತದೆ.

ಇಂಥ ಪರೀಕ್ಷೆಗಳಲ್ಲಿ ಗೆದ್ದು ಬಂದ ಮಗುವೇ ಈಗಿನ ದಲ್ಯಾ ಲಾಮಾ. ಇವರು ಕೊಕೊ ನೋರ ಪ್ರಾಂತದ ಹಳ್ಳಿಯೊಂದರಲ್ಲಿ ೧೯೩೭ನೇ ಇಸವಿಯ ಅಕ್ಟೋಬರದಲ್ಲಿ ಸಂಶೋಧಕರಿಗೆ ದೊರೆತರು. ಆಗ ಎರಡು ವರ್ಷದ ಮಗುವಾದ ಇವರು ಸಂಶೋಧಕರನ್ನು ಕಂಡೊಡನೆಯೇ "ಲಾಮಾ, ಲಾಮಾ" ಎಂದು ಕರೆದರಂತೆ! ಇವರನ್ನು ಪಟ್ಟಕ್ಕೇರಿಸಲು ಟಿಬೇಟಿನ ಜನರು ಉತ್ಸುಕರಾಗಿದ್ದರು. ಆದರೆ ಚೀನದ ಕೊಮಿಂಟಾಂಗ ಗವರ್ನರನು ಏನೇನೊ ಶರ್ತ ಹಾಕಿದನು. ಧರ್ಮಭೀರುಗಳಾದ ಟಿಬೇಟನ್ನರು ಎಲ್ಲ ಶರ್ತವನ್ನೂ ಪೂರೈಸಿ ೧೯೪೦ರಲ್ಲಿ ದಲ್ಯಾ ಲಾಮಾನೆಂದು ಈ ಮಗುವನ್ನು ಸಾರಿದರು.

ದಲ್ಯಾ ಲಾಮಾ ಸ್ಥಾನಕ್ಕೇರಿದ ಮಗುವು ಲ್ಹಾಸಾದಲ್ಲಿ ಅನೇಕ ಬಗೆಯ ಧಾರ್ಮಿಕ ತರಬೇತಿಯನ್ನು ಹೊಂದಬೇಕಾಗುತ್ತದೆ. ಸಂಪೂರ್ಣ ಬ್ರಹ್ಮಚರ್ಯ ಜೀವನವನ್ನು ಪಾಲಿಸಬೇಕಾಗುತ್ತದೆ. ತಂದೆತಾಯಿಗಳನ್ನೂ ಸಹೋದರ ಸಹೋದರಿಯರನ್ನೂ ಲ್ಹಾಸಾಕ್ಕೇನೇ ತರಿಸಿಕೊಂಡು, ದಲ್ಯಾ ಲಾಮಾನ ಬಂಧುಗಳೆಂಬ ಗೌರವದಿಂದ ಅತ್ಯುಚ್ಚ ಯೋಗ್ಯತೆಯ ಜೀವನವನ್ನು ನಿರ್ವಹಿಸಲು ಈ ಪರಿವಾರಕ್ಕೆ ಅವಕಾಶ ಕೊಡಲಾಗುತ್ತದೆ. ದಲ್ಯಾ ಲಾಮಾನ ತಂದೆಗೆ ಟಿಬೇಟಿನ ಜನ ಸಾಧಾರಣರಿಗೆ ಕೊಡಬಹುದಾದ ಅತ್ಯುನ್ನತ ಸ್ಥಾನಮಾನವು ದಲ್ಯಾ ಲಾಮಾನ ತಂದೆ ಎಂಬ ಒಂದೇ ಕಾರಣದಿಂದ ಬೇರಾವುದೇ ಯೋಗ್ಯತೆ ಇಲ್ಲದಿದ್ದರೂ ಸಿಗುತ್ತದೆ

ಇನ್ನೂ ಬಾಲ್ಯದಲ್ಲಿರುವ ದಲ್ಯಾ ಲಾಮಾನು ತನ್ನ ಸಹೋದರರೊಡನೆ ಬೆರೆಯಬಲ್ಲನು: ಆದರೆ ಹೆಂಗಸರ ಸಂಸರ್ಗದಿಂದ ಮಾತ್ರ ದೂರವಿದ್ದೇ ತೀರಬೇಕು; ತನ್ನ ಸಹೋದರಿಯರನ್ನು ಮಾತ್ರ ಮಠಕ್ಕೆ ಬರಮಾಡಿಕೊಳ್ಳಲಾರನು. ಮದ್ಯಪಾನಾದಿಗಳು ಆತನಿಗೆ ವರ್ಜ್ಯ. ಏಕಾಂತವಾಸವೇ ಆತನ ವ್ರತ. ಧ್ಯಾನ, ತಪಸ್ಸು, ಇತ್ಯಾದಿಗಳಲ್ಲೇ ಆತನ ಬಾಲ್ಯ ಸಂದು ಹೋಗುತ್ತದೆ. ಆತನು ಪ್ರಾಯ ಪ್ರಬುದ್ಧನಾಗುವ ವರೆಗೆ ರೀಜಂಟನೊಬ್ಬನ ಆಡಳಿತವು ನಡೆಯುತ್ತದೆ.

ದಲ್ಯಾಲಾಮಾರಂತೆ ಪಂಚೆನ್ ಲಾಮಾರನ್ನು ಸಹ ಪುನರವತಾರದ ಸೂತ್ರದಿಂದಲೇ ಆರಿಸಲಾಗುತ್ತದೆ. ಇವರು ಲ್ಹಾಸಾದಿಂದ ೨೦೦ ಮೈಲು ದೂರದಲ್ಲಿರುವ ಟಾಶಿ ಲುಂಪೊದಲ್ಲಿ ಕಟ್ಟಿದ ಮಠದಲ್ಲಿ ವಾಸಿಸುತ್ತಾರೆ. ಟಿಬೇಟು ಬೌದ್ಧ ಭಿಕ್ಷುಗಳಾದ ಲಾಮಾಗಳ ಬೀಡು: ಮತ್ತು ಬೌದ್ಧ ಮತದ ಮೇಲಿನ ಶ್ರದ್ಧಾಳುಗಳ ಬೀಡು ಆದುದರಿಂದ ಬುದ್ಧ ಭಗವಾನನ ಮುಖ್ಯ ಕಾರ್ಯಕ್ಷೇತ್ರವಾಗಿದ್ದ ಭಾರತಕ್ಕೆ ಬಂದು, ಬುದ್ಧನ ೨೫೦೦ನೇ ಪರಿನಿರ್ವಾಣ ಸಮಾರಂಭದಲ್ಲಿ ಭಾಗವಹಿಸಿ ಧನ್ಯರಾಗುವ ಯಾತ್ರಾರ್ಥಿಗಳಾಗಿ ದಲ್ಯಾಲಾಮಾ ಮತ್ತು ಪಂಚೆನ್ ಲಾಮಾ ಬಂದುದು ವಿಶೇಷವಲ್ಲ: ಆದರೆ ಅವರು ಸ್ನೇಹಾಕಾಂಕ್ಷೆಯನ್ನು ಪ್ರದರ್ಶಿಸಿರುವುದೂ ಭಾರತೀಯರ ಬಗ್ಗೆ ಗೌರವಾದರಗಳನ್ನು ನುಡಿದಿರುವುದೂ ದೊಡ್ಡ ವಿಶೇಷ ಅಂತಹ ಮಾತುಗಳನ್ನು ಧಾರ್ಮಿಕ ಜಗತ್ತಿನ ಅತ್ಯುಚ್ಚ ಪುರುಷರಿಬ್ಬರಿಂದ ಕೇಳುವಂತಾದುದು ನಮ್ಮ ದೊಡ್ಡ ಪುಣ್ಯ.


ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

[ಸ್ಥಾಪನೆ: ೧೯೦೬] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

| | |
|---|---|
| ಅಧಿಕೃತ ಬಂಡವಾಳ ... | ರೂ. 56,00,000 |
| ಚಲಾವಣೆ ಬಂಡವಾಳ ... | ರೂ. 32,23,787 |
| ವರ್ಗಣಿ (ಪಾಲು) ಬಂಡವಾಳ ... | ರೂ. 32,11,000 |
| ತೆತ್ತ ಬಂಡವಾಳ ... | ರೂ. 27,45,000 |
| ಕ್ಷೇಮನಿಧಿ ... | ರೂ. 15,00,000 |

30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

| | |
|---|---|
| (ವಿಶಾಲ) ನವಮೈಸೂರು | 59 |
| ಆಂಧ್ರ ಪ್ರದೇಶ | 14 |
| ಕೇರಳ | 13 |
| ಬೊಂಬಾಯಿ | 8 |
| ಮದ್ರಾಸು | 2 |

ಎ. ಪೈ. ಬಿ ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್. ಟಿ. ಎಂ. ಎ. ಪೈ, ಎಂ. ಬಿ., ಬಿ ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.



೩೦ ವರ್ಷಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಸ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೭ ಬಿ, ಪೋರ್ತುಗೀಜ ಚರ್ಚಸ್ಟ್ರೀಟ್, ದಾದರ, ಮುಂಬಯಿ ೨೮.

Tele add "CAWASHABAD"

# NAVAYUGA

Popular Kannada Weekly

*Founder:—*

**A. B. SHETTY,** *M. L. A.*
Former Minister for Public Health, Govt. of Madras.
At Present Minister for Health Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೦-೧೨-'೫೬ | ೧೬ |


## ರಾಷ್ಟ್ರೀಕೃತ ವಿಮೋದ್ಯಮ

ಲೋಕ ಸಭೆಯು ಸದಸ್ಯರ ಆಗ್ರಹದ ಮೇರೆಗೆ ಜೀವವಿಮಾ ಕಾರ್ಪೊರೇಶನಿನ ಕಾರ್ಯಕಲಾಪಗಳ ಬಗ್ಗೆ ಎರಡೂವರೆ ತಾಸಿನಷ್ಟು ಸಮಯ ಚರ್ಚೆಯನ್ನು ಇದೇ ಸೋಮವಾರ ದಿನ ನಡೆಸಿತು. ಈ ಚರ್ಚೆಯ ಮುಖ್ಯೋದ್ದೇಶವು ಜೀವವಿಮಾ ಕೆಲಸಗಾರರ ತೊಂದರೆಗಳ ಕಡೆಗೆ ಗಮನ ಹರಿಸುವುದಾಗಿದ್ದರೂ ಆನುಷಂಗಿಕವಾಗಿ ಕಾರ್ಪೊರೇಶನಿನ ಸಾಮಾನ್ಯ ಕೆಲಸದ ಪರಿಸ್ಥಿತಿಯ ಮೇಲೂ ಕೆಲವು ಮಾತುಗಳು ಕೇಳಿಬಂದವು. ಜೀವವಿಮೋದ್ಯಮವನ್ನು ರಾಷ್ಟ್ರೀಕರಿಸಿದಾಗ ಈ ಉದ್ಯಮದಲ್ಲಿದ್ದ ನೌಕರರು ಸರ್ವಪ್ರಥಮವಾಗಿ ಸರಕಾರವನ್ನು ಅಭಿನಂದಿಸಿದ್ದಾರೆ—ಎಂದು ಅಂದಿನ ಅರ್ಥಸಚಿವ ಶ್ರೀ ಸಿ. ಡಿ. ದೇಶಮುಖರು ಹೇಳಿದ್ದರು. ಆದರೆ ಇದೇ ನೌಕರವರ್ಗವನ್ನು ಈಗಿನ ಅರ್ಥಸಚಿವರಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಶಿಸ್ತನ್ನು ಮರೆತ, ಕರ್ತವ್ಯ ಪಾಲನೆಗೆ ತಪ್ಪುವ ಜನರ ಗುಂಪೆಂದು ಲೋಕಸಭೆಯ ಮುಂದೆ ಪ್ರಶ್ನೋತ್ತರ ಕಾಲದಲ್ಲಿ ಹೇಳುವಂತಾದುದು ತುಂಬ ವಿಷಾದಕರ: ಪರಿಸ್ಥಿತಿಯು ಇಷ್ಟು ಮಾರ್ಪಟ್ಟುದು ಹೇಗೆ? ನೌಕರರ ಬೇಡಿಕೆಗಳ ಪಟ್ಟಿಯು ಸರಕಾರದ ಮುಂದೆ ಬಂದುದೇ ಸರಕಾರಿ ದೃಷ್ಟಿಕೋಣದಲ್ಲಿ ಪರಿವರ್ತನೆಯನ್ನು ಮಾಡಿತೇ? ಇರಲೂ ಬಹುದು: ಏಕೆಂದರೆ ಜೀವವಿಮೋದ್ಯಮದ ರಾಷ್ಟ್ರೀಕರಣವನ್ನು ಮುಕ್ತ ಹೃದಯದಿಂದ ಸ್ವಾಗತಿಸಿದ ನೌಕರ ಸಂಘಗಳಿಂದು, ರಾಷ್ಟ್ರೀಕೃತ ಜೀವವಿಮೋದ್ಯಮವನ್ನು ಯಶಸ್ವಿಗೊಳಿಸಲು ಸಂಪೂರ್ಣ ಸಹಕಾರವನ್ನು ನೀಡುವ ಬದಲಿಗೆ ಸಾಂಕೇತಿಕ ಸಂಪು ಮತ್ತು ಮತ ಪ್ರದರ್ಶನಗಳ ಮೂಲಕ ನೌಕರರನ್ನು ಕಾರ್ಯಾಲಯದಿಂದ ಹೊರಗೆ, ಬೀದಿಗೆ, ಎಳೆಯಲು ನೋಡಿರುತ್ತವೆ. ಸರಕಾರದ ಆಶ್ವಾಸನೆಗಳನ್ನು ಧಿಕ್ಕರಿಸಿ, ತಮ್ಮ ಬೇಡಿಕೆಯ ಪಟ್ಟಿಯಂತೆ ಅನೂಚಾನವಾಗಿ ನಡೆದುಕೊಳ್ಳಬೇಕೆಂದು ಇವು ದುರಾಗ್ರಹವನ್ನು ಹೊಂದಿವೆ. ಸದ್ಯಕ್ಕೆ ಅವ್ಯವಹಾರ್ಯವಾದ ಎಷ್ಟೋ ವಿಷಯಗಳು ಈ ಬೇಡಿಕೆಯಲ್ಲಿವೆ. ಒಂದೇ ಉದಾಹರಣೆಯನ್ನು ಕೊಡುವುದಾದರೆ, ಜೀವವಿಮಾ ಕಾರ್ಪೊರೇಶನಿನ ಆಡಳಿತ ಮಂಡಳಿಯಲ್ಲಿ ನೌಕರರ ಪ್ರತಿನಿಧಿಗಳಿಗೂ ಸಾಕಷ್ಟು (ಅಂದರೆ ಅರೆ [illegible]!) ಸ್ಥಾನಗಳು ಸಿಗಬೇಕಂತೆ! ನೌ

ಆಡಳಿತದಲ್ಲಿ ಅವರೇ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಉದ್ಯಮವನ್ನು ಯಶಸ್ವಿಗೊಳಿಸಲು ನೌಕರರನ್ನು ಆಡಳಿತಗಾರರ ಗೌರವದಿಂದ ನೋಡುವುದು ಹಿತಕರವೆಂಬ ಸೂತ್ರವು ನಮಗೂ ಸಮ್ಮತವೇ. ಆದರೆ ಇದನ್ನು ಸಾರ್ವತ್ರಿಕವಾಗಿ ವ್ಯವಹಾರದಲ್ಲಿ ಇಳಿಸುವುದಕ್ಕೆ ಇದು ಪ್ರಶಸ್ತವಾದ ಸಮಯವಲ್ಲ. ಪ್ರಾಯೋಗಿಕವಾಗಿ ಸಣ್ಣ ಉದ್ಯಮಗಳಲ್ಲಿ ಇದನ್ನು ಈಗ ಕಾರ್ಯಗತಗೊಳಿಸಬಹುದು—ಆದರೆ ರಾಷ್ಟ್ರೀಕೃತ ಜೀವವಿಮೋದ್ಯಮವೆಂದಿಗೂ ಇದಕ್ಕೆ ಯೋಗ್ಯವಾದ ಪ್ರಯೋಗ ಕ್ಷೇತ್ರವಾಗಲಾರದು. ಸರಕಾರವು ಜಗತ್ತಿನಲ್ಲಿಯೇ ಮೊದಲನೆಯ ಸಾಹಸವೆಂಬಂತೆ ಜೀವವಿಮೋದ್ಯಮವನ್ನು ರಾಷ್ಟ್ರೀಕರಿಸಿದೆ—ಇದರ ಯಶಸ್ಸನ್ನು ನೌಕರರ ಕರುಣೆಗೆ ಬಿಡುವುದು ಈಗಿನ ಪರಿಸ್ಥಿತಿಯಲ್ಲಿ ಸಾಧುವಾದುದಲ್ಲ. ನಮ್ಮ ನೌಕರರಲ್ಲಿ ಹೆಚ್ಚಿನವರು, ಸಂಪು—ಮುಷ್ಕರ ಎಂದು ಮುಂತಾದ ಅನುತ್ಪಾದಕವೂ ಅಸಹಕಾರಪೂರ್ಣವೂ ಸಾರ್ವಜನಿಕರಿಗೆ ಉಪದ್ರವಕಾರಿಯೂ ಆದ ವರ್ತನೆಗಳಲ್ಲೇ ಅಧಿಕ ಉತ್ಸಾಹವನ್ನು ಪ್ರದರ್ಶಿಸುತ್ತಾ ಕರ್ತವ್ಯ ಪ್ರಜ್ಞೆಯನ್ನು ಮರೆತು ಬಿಟ್ಟಿರುವ ಮತ್ತು ಕೆಲಸದ ನಿರ್ವಹಣೆಯಲ್ಲಿ ಉದಾಸೀನತೆಯನ್ನೇ ತೋರಿಸುತ್ತಿರುವ ಇಂದಿನ ವಾತಾವರಣವು ಅವರನ್ನು ಆಡಳಿತಗಾರರ ಮಟ್ಟಕ್ಕೆ ಏರಿಸಲು ಅನುಕೂಲವಾದುದಲ್ಲ. ಇದೇ ರೀತಿ ಅವರ ಸಂಬಳ ಮತ್ತಿತರ ಸೌಲಭ್ಯಗಳ ವಿಚಾರವೂ ಹೌದು—ನೂರೈವತ್ತಕ್ಕಿಂತಲೂ ಹೆಚ್ಚಿನ ಕಂಪೆನಿಗಳನ್ನು ರಾಷ್ಟ್ರೀಕರಿಸಿ ಒಂದೇ ಕಾರ್ಪೊರೇಶನಿನಲ್ಲಿ ಅವನ್ನು ಎರಕ ಹೊಯ್ದಿರುವುದರಿಂದ, ಏಕರೂಪತೆಯನ್ನು ಸಂಬಳ ಮತ್ತಿತರ ಅನುಕೂಲತೆಗಳಲ್ಲಿ ಸಾಧಿಸುವುದು ಸರಕಾರದ ಪಾಲಿಗೆ ಅತ್ಯವಶ್ಯವಾಗಿರುತ್ತದೆ. ನೌಕರರು ತಮಗೆ ಹಿಂದಿನ ಸೌಲಭ್ಯಗಳೇ ಬೇಕು, ಸಂಬಳವೇ ಬೇಕು, ಪದವಿಯೇ ಬೇಕು....... ಎನ್ನುತ್ತಾ ಹೋದರೆ ಸರಕಾರವು ಕಾರ್ಪೊರೇಶನಿನ ಕೆಲಸವನ್ನು ಸಾಂಗವಾಗಿ ಮುಂದುವರಿಸಿಕೊಂಡು ಹೋಗಲಾರದು. ನೌಕರರ ಬೇಡಿಕೆಗಳನ್ನು ಪಾಲಿಸುತ್ತಾ ಹೋಗುವುದೆಂದರೆ, ಹಿಂದಿನ ಕಂಪೆನಿಗಳನ್ನೂ ಅವುಗಳ ಪದ್ಧತಿಗಳನ್ನೂ ಮುಂದರಿಸಿಕೊಂಡು ಹೋಗುವುದೆಂದೇ ಲೆಕ್ಕ! ರಾಷ್ಟ್ರೀಕರಣದ ಬಳಿಕ ಹಿಂದಿನ ಕಂಪೆನಿಗಳ ನಿಯಮಗಳೇ ಮುಂದರಿಯುವುದೆಂದರೆ ಅದು ಎಷ್ಟಕ್ಕೂ ಭೂಷಣವಾದುದಲ್ಲ. ಯೋಗ್ಯವಾದುದೂ ಅಲ್ಲ. ನೌಕರರಿಗೆ ಕೆಲಸದ ಭರವಸೆ ದೊರೆತಿದೆ; ಪ್ರಾವಿಡೆಂಟ್ ಫಂಡಿನಂಥ ಸೌಲಭ್ಯದಲ್ಲಿ ಕಡಿತ ಮಾಡುವುದಿಲ್ಲವೆಂದು ಬರಹ ಮೂಲಕ ಆಶ್ವಾಸನೆಕೊಡಲಾಗಿದೆ; ಈಚೆಗೆ "ಧರ್ಮಾರ್ಥ" ವಿಮಾ ಪತ್ರಗಳನ್ನು ಕೊಡುವ ಯೋಜನೆಯೂ ಸಾರಲ್ಪಟ್ಟಿದೆ; ಇನ್ನು ಇಂತಹ ಕೆಲವು ಸೌಲಭ್ಯಗಳನ್ನು ಕಾಲಾನುಕ್ರಮದಲ್ಲಿ ಕಾರ್ಪೊರೇಶನಿನ ಆಡಳಿತ ಮಂಡಳದವರು ನೀಡುತ್ತಾ ಹೋಗಬಹುದು. ಆದರೆ ಎಲ್ಲವನ್ನೂ ಈಗಲೇ ಕಸಿದುಕೊಳ್ಳುವುದಕ್ಕೆ ಪ್ರಯತ್ನಿಸುವುದಾಗಲೀ ರಾಷ್ಟ್ರೀಕರಣದ ಮರ್ಮಭವನು ಪಡೆಯುವದಕೆ-

ಗೆ ಅತಿರೇಕ ವರ್ತನೆಯಾಗುತ್ತದೆ. ಸರಕಾರವಾದರೂ ಶ್ರೀ ಟಿ. ಟಿ. ಕೆ. ಹೇಳಿರುವಂತೆ ಈ ರಾಷ್ಟ್ರೀಕೃತ ಉದ್ಯಮದ ನೌಕರರ ಮೇಲೆ ಇತರ ರಾಷ್ಟ್ರೀಕೃತ ಉದ್ಯಮದಲ್ಲಿರುವ ಕೆಲಸಗಾರರಿಗಿಂತ ಹೆಚ್ಚಿನ ಪಕ್ಷಪಾತವನ್ನು ತೋರಿಸಲಾರದು; ತೋರಿಸಿದರೆ, ಅದು ನೈತಿಕವಾದ ಪರಿಣಾಮಗಳನ್ನು ಸರಕಾರಿ ಆಡಳಿತದ ಮೇಲೆ ಮಾಡಬಹುದು. ಆದುದರಿಂದ ಸರಕಾರವು ತುಸು ಬಿಗಿಯಿಂದ ವರ್ತಿಸುವುದು ಅವಶ್ಯವಾಗಿದೆ. ಈಗಾಗಲೇ ಮೂರೂವರೆ ತಿಂಗಳುಗಳು ಕಳೆದು ಹೋಗಿವೆ—ನೌಕರರ ಅಸಹಕಾರದ ಪರಿಣಾಮವೆಂದು ಹೇಳುವುದಕ್ಕಿಂತಲೂ ಪರಿಷ್ಕಾರ ನಿರ್ಣಯಗಳು ಪದೇ ಪದೇ ಬದಲಾವಣೆ ಹೊಂದುತ್ತಾ ನಡೆದುದರಿಂದ ಕಾರ್ಪೊರೇಶನಿನ ಅನೇಕ ಕೆಲಸಗಳು ಕುಂಟುತ್ತಾ ಸಾಗಿವೆ; ಇನ್ನೂ ದೈನಂದಿನ ಕಾರ್ಯಕಲಾಪದಲ್ಲಿ ಬೇರೂರಲು ಕಾರ್ಪೊರೇಶನ್ನಿಗೆ ಸಾಧ್ಯವಾಗದಿರುವುದು ಆಡಳಿತ ಶೈಥಿಲ್ಯವನ್ನು ವ್ಯಕ್ತಪಡಿಸುತ್ತದೆ. ನೌಕರರನ್ನು ಅವರವರ ಯೋಗ್ಯತೆಗೆ ತಕ್ಕುದಾದ ಸ್ಥಾನದಲ್ಲಿ ಕುಳ್ಳಿರಿಸಿ, ಮಾಡಿದ ನಿರ್ಣಯಗಳನ್ನು ಮರುದಿನವೇ ಬದಲಿಸದೆ ಕೆಲವು ವರ್ಷಗಳ ವರೆಗಾದರೂ ಅವುಗಳು ಊರ್ಜಿತದಲ್ಲಿರುವಂತೆ ಮುಂದಾಗಿ ಆಲೋಚಿಸಿ—ಜೀವವಿಮೋದ್ಯಮವು ತ್ವರಿತಗತಿಯಿಂದ ಪ್ರಗತಿ ಹೊಂದುವಂತೆ ಮಾಡುವುದು ಸರಕಾರದ ಮತ್ತು ಅದರ ಪ್ರತಿನಿಧಿಗಳಾಗಿರುವ ಆಡಳಿತ ಮಂಡಳದವರ ಆದ್ಯ ಕರ್ತವ್ಯ. ಈಗ ಸಾರ್ವಜನಿಕರಿಗೆ (ಅಂದರೆ ವಿಮಾದಾರರಿಗೆ, ಏಜಂಟರಿಗೆ ಇತ್ಯಾದಿ) ಕ್ಲಪ್ತ ಕಾಲಕ್ಕೆ ಸರಿಯಾದ "ಸೇವೆ" ದೊರೆಯುತ್ತಿಲ್ಲ; ಅವರು ಎಲ್ಲಿ, ಯಾರೊಡನೆ ವ್ಯವಹರಿಸಬೇಕೆಂಬ ಬಗ್ಗೆ ಸಹ ಸೂಚನೆ ಕೊಟ್ಟಂತಿಲ್ಲ! ಹೀಗಾಗಿ ಎಲ್ಲವೂ ಗೊಂದಲಮಯವಾಗಿರುತ್ತದೆ. ಇಂತಹ ಗೊಂದಲಮಯ ವಾತಾವರಣದಲ್ಲಿ ಅರ್ಥಸಚಿವರಂಥವರು ಕೂಡ ಪ್ರತಿಪಕ್ಷೀಯರ ವಾಗ್ಬಾಣಗಳನ್ನೆದುರಿಸಲು "ಕಳೆದ ಇಪ್ಪತ್ತು ವರ್ಷಗಳಿಂದಲೂ ಇದ್ದ ದುರ್ವ್ಯವಹಾರಗಳು ಇನ್ನೂ ಒಂದು ವರ್ಷ ಬೇಕಾದರೆ ಮುಂದರಿಯಲಿ—ನಾವದನ್ನು ಸಹಿಸುತ್ತೇವೆ!" ಎಂಬಂತಹ ಬೇಜವಾಬ್ದಾರಿ ಉದ್ಗಾರವನ್ನು ತೆಗೆಯುವುದು ಜಾಣತನವಾದುದಲ್ಲ. ಜನರ ವಿಶ್ವಾಸವೇ ಹಾರಿಹೋಗುವಂತಾದ ಮಾತಿದು. ಸರಕಾರವೇ ದುರ್ವ್ಯವಹಾರಗಳನ್ನು ಪ್ರೋತ್ಸಾಹಿಸುತ್ತದೆ—ಸಹಿಸುತ್ತದೆ ಎಂಬಾತಹ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಈ ಮಾತು ಮಾನ್ಯ ಮಂತ್ರಿಗಳ ಬಾಯಿಯಿಂದ ಬಂದುದು ಬಹಳ ಶೋಚನೀಯ. ಜೀವವಿಮೋದ್ಯಮದಲ್ಲಿದ್ದವರಿಗೆ ಗೊತ್ತು—ಚಟುವಟಿಕೆಗಳು ಆಶಾದಾಯಕವಾದ ರೀತಿಯಲ್ಲಿ ನಡೆದಿಲ್ಲ ಎಂಬುದು! ಇಂತಿರುವಾಗ, ಇದ್ದ ಬಿದ್ದ ಆಶೆಗೂ ತಣ್ಣೀರನ್ನೆರಚುವಂತೆ ಮಂತ್ರಿಗಳು ಒಂದು ವರ್ಷದ ವರೆಗೆ ವಿರಾಮವಾಗಿ, ಚಿಂತಿಲ್ಲ ಎಂದು ಹೇಳಲು ಹೊರಟಿದ್ದಾರೆ! ಇದು ತೀರ ಆಕ್ಷೇಪಕಾರಕವೂ ಸಂಬಂಧಪಟ್ಟ ಎಲ್ಲರ ಮೇಲೂ ದುಷ್ಪರಿಣಾಮವನ್ನು ಗಾಢವಾಗಿ ಮಾಡುವಂಥದೂ ಆಗಿದೆ. ನೌಕರರು ಶಿಸ್ತುಭಂಗೇಡಿಗಳಂತೆ ನಡೆಯುತ್ತಿದ್ದಾರೆ ಎಂದು ಹೇಳಿದ ಮಂತ್ರಿಗಳೇ ಸರಕಾರವೂ ದಾರಿ ತಪ್ಪಿ ನಡೆಯಲು ಹಿಂಜರಿಯುವುದಿಲ್ಲ ಎಂಬಂತೆ ಪೌರುಷೋಕ್ತಿಗಳನ್ನಾಡಿದರೆ ಉದ್ಯಮಕ್ಕೆಂದೂ ಅದು ಪೋಷಕವೆನಿಸಲಾರದು—ಇದು ಖಂಡಿತ.

---

**ಕುಂದಾಪುರ ಡಿ.ಮು. ಕೋರ್ಟಿನಲ್ಲಿ**

S. E. P. 891/56 S. C. 418/56

ಅಮಲ್ಜಾರಿ ಅರ್ಜಿದಾರ —ಅನಂತ ಹೊಳ್ಳ

ಮತ್ತು

1. ಜನಾರ್ದನ ಐತಾಳ, 2. ವಾಸುದೇವ ಹೊಳ್ಳ, —ಎದ್ರಿರು

ಇವರೊಳಗೆ

ಕುಂದಾಪುರ ತಾಲೂಕು ತಗ್ಗರ್ಸೆ ಗ್ರಾಮದಲ್ಲಿರುವ ಸೀತಾರಾಮ ಐತಾಳರ ಮಗ 1ನೇ ಎದ್ರಿ ಜನಾರ್ದನ ಐತಾಳರಿಗೆ ತಿಳಿಸಿದ್ದು.

ಅರ್ಜಿದಾರನ ಪೂರ್ವಾಧಿಕಾರಿಯಾದ 2ನೇ ಎದ್ರಿಯು ನಿಮ್ಮ ಮೇಲೆ ಪಡೆದ ಕುಂದಾಪುರ ಡಿ. ಮು. ಕೋರ್ಟು S. C. 418/56ನೇ ಡಿಕ್ರಿಯನ್ನು ಅರ್ಜಿದಾರನು ನ್ಯಾಯವಾದ ಪ್ರತಿಫಲಕ್ಕೆ ಟ್ರಾನ್ಸ್‌ಫರ್ ಪಡೆದು ಸದ್ರಿ ಟ್ರಾನ್ಸ್‌ಫರು ಮಂಜೂರು ಮಾಡುವ ಬಗ್ಗೆಯೂ ನಿಮ್ಮ ಮೇಲೆ ವಾರಂಟು ಮಾಡುವ ಬಗ್ಗೆಯೂ ಮೇಲ್ಕಂಡ ಅಮಲ್ಜಾರಿ ಮಾಡಿರುತ್ತಾರೆ. ಅದನ್ನು ತನಿಖೆ ಬಗ್ಗೆ ತಾ. 4-1-57ಕ್ಕೆ ಇಡಲಾಗಿಯದೆ. ಆಕ್ಷೇಪವಿದ್ದರೆ ಅದಿನ 11 A.M.ಗೆ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

**A. V. N. Hebbar.**
Vakil for Petitioner.

---

**ಪುತ್ತೂರು ಡಿ. ಮು. ಕೋರ್ಟಿನಲ್ಲಿ**

R. E. P. 539/195[illegible]
in O. S. No. 424/194[illegible]
ಮತ್ತು
R. E. P. 541/195[illegible]
in S. C. 271/194[illegible]

ಸಂಕು ಶೆಟ್ಟಿ —ಅರ್ಜಿದಾರ. D. H[illegible]

ಮತ್ತು

1. ಸೋಮಕ್ಕೆ ಹೆಂಗ್ಸು, 2. ಬಾಬು ಭಂಡಾರಿ —ಎದ್ರಿರು. J. D[illegible]

2ನೇ ಎದ್ರಿ—ಬಾಬು ಭಂಡಾರಿ, ಸೋಮಕ್ಕ ಹೆಂಗ್ಸು ಮಗ ಪುತ್ತೂರು ತಾಲೂಕು ಇಡ್ಕಿದು ಗ್ರಾಮದ ಮುರ್ಯ ಎಂಬಲ್ಲಿ —ಇವರಿ[illegible]

ಮೇಲ್ಕಂಡ ಎರಡು ಡಿಕ್ರಿ ಅಮಲ್ಜಾರಿಯಲ್ಲಿ ಡಿಕ್ರಿಹೊಂದಿದವನಾದ ವಾದಿ ಅರ್ಜಿದಾರನು ನಿಂಮ ಬಾಬ್ತು ಸ್ಥಿರಾಸ್ತಿಯನ್ನು [illegible] ಹರಾಜು ಮಾಡಿಸುವ [illegible] ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸ[illegible] ಮೇಲ್ಕಂಡ ಅಮಲ್ಜಾರಿಗಳ ವ್ಯಾದೆಯು 24-12-1956ಕ್ಕೆ ಇರುವುದರಿಂದ, [illegible]ಗೇನಾದರೂ ಆಕ್ಷೇಪಗಳಿದ್ದಲ್ಲಿ ಆ [illegible] ಮೇಲ್ಕಂಡ ಕೋರ್ಟಿನ ಮುಂದೆ ಬೆಳಿಗ್ಗೆ [illegible] ಗಂಟೆಗೆ ಹಾಜರಾಗಿ ಉಜರು ಪಡಿಸಿಕೊಳ್ಳ[illegible]ದ್ದೆಂತಲೂ, ತಪ್ಪಿದರೆ ಏಕಪಕ್ಷವಾಗಿ ನಿರ್ಣಯಿಸಿ ಅಮಲ್ಜಾರಿ ಮುಂದರಿಸಲಾ[illegible]ದೆಂತಲೂ ಕೋರ್ಟಿನ ಹುಕುಂಪ್ರಕಾರ [illegible]ಗೆ ಈ ಮೂಲಕ ತಿಳಿಸೋಣಾಗ್ಯದೆ.

Sd/ P. Krishna Bh[illegible]
Vakil for Petr.

Puttur, Dt. 4—12—1956

---


## ಇನ್ನೂ ಚಂದಾಹಣವನ[illegible]

ಕಳುಹಿಸದವರು ದಯಮಾಡಿ ಕೂಡಲೇ [illegible]ಹಿಸಿಕೊಡುವಂತೆ ಇನ್ನೊಮ್ಮೆ ಕೇಳಿಕೊ[illegible]ತ್ತೇವೆ. ಅಂತಹ ಸಕಾಲದಲ್ಲಿ ಚಂದಾ [illegible]ಯಾಗದಿದ್ದರೆ ನಾವು ಅನಿವಾರ್ಯ[illegible] ತಿಳುಹಿಸುವ ವಿ. ಪಿ. ಪಿ. ಯನ್ನಾದರೂ [illegible] ಕೊಳ್ಳುವಂತೆ ವಿಜ್ಞಾಪಿಸುತ್ತೇವೆ.

# ಎರಡನೇ ಮಹಾಚುನಾವಣೆ

## ಮುಂದಿನ ಫೆಬ್ರವರಿ ೨೫ರಿಂದ ಮಾರ್ಚ್ ೧೪ರ ವರೆಗೆ ನಡೆಯಲಿದೆ

ಚುನಾವಣಾ ಕಮೀಶನರರಾದ ಶ್ರೀ ಸುಕುಮಾರ ಸೇನರು ಎರಡನೇ ಮಹಾ ಚುನಾವಣೆಯು ೧೯೫೭ನೇ ವರ್ಷದ ಫೆಬ್ರವರಿ ೨೫ರಿಂದ ಮಾರ್ಚ್ ೧೪ರ ವರೆಗೆ ನಡೆಯಲಿದೆ ಎಂದಿದ್ದಾರೆ. ಚುನಾವಣೆಯ ಫಲಿತಾಂಶಗಳನ್ನು ಮಾರ್ಚ್ ೩೧ನೇ ತಾರೀಕಿನೊಳಗೆ ಅಧಿಕೃತವಾಗಿ ಗಜೆಟ್ಟಿನಲ್ಲಿ ಪ್ರಕಟಿಸಲು ಸಾಧ್ಯವಾದೀತೆಂದೂ ಅವರು ತಿಳಿಸಿದ್ದಾರೆ.

ಮುಂದಿನ ಜನವರಿಯ ೩ನೇ ವಾರದಲ್ಲಿ ಚುನಾವಣೆಗಳನ್ನು ನಡೆಸುವ ಸಂಬಂಧದ ಆಜ್ಞೆಗಳು ಹೊರಡಿಸಲ್ಪಡುವವೆಂದೂ ಅವರು ವ್ಯಕ್ತಪಡಿಸಿದ್ದಾರೆ. ಇಂಥ ಆಜ್ಞೆ ಹೊರಟ ಹತ್ತು ದಿನಗಳಲ್ಲಿ ಉಮೇದ್ವಾರರ ನಾಮಪತ್ರಗಳು ಸಲ್ಲಿಸಲ್ಪಡಬೇಕಾಗಿವೆ.

ಕಾಶ್ಮೀರಕ್ಕೆ ಅವರದೇ ಸ್ವತಂತ್ರವಾದ ಚುನಾವಣಾ ಕ್ರಮವಿರುವುದರಿಂದ ಅಲ್ಲಿ ಚುನಾವಣೆಯು ನಡೆಯುವುದಿಲ್ಲ. ಆದರೆ ಅಲ್ಲಿಂದ ಲೋಕಸಭೆಗೆಂದು ಆರಿಸಲಾದ ಆರು ಪ್ರತಿನಿಧಿಗಳ ನಾಮನಿರ್ದೇಶವನ್ನು ಹಿಂದಿನಂತೆ ರಾಷ್ಟ್ರಾಧ್ಯಕ್ಷರು ಮಾಡುತ್ತಾರೆ ಎಂದೂ ತಿಳಿದು ಬರುತ್ತದೆ.

ಚುನಾವಣೆಯು ಸಂಪೂರ್ಣ ರೀತಿಯಲ್ಲಿ ಜರಗದ ಇನ್ನೊಂದ ಭಾಗವೆಂದರೆ ನೂತನ ಆಂಧ್ರ ಪ್ರದೇಶ. ಇಲ್ಲಿ ತೆಲಂಗಾಣ ಪ್ರದೇಶದಲ್ಲಿ ಮಾತ್ರವೇ ಪಾರ್ಲಿಮೆಂಟಿಗೂ ಪ್ರಾಂತೀಯ ಶಾಸನಾಂಗಕ್ಕೂ ಚುನಾವಣೆ ನಡೆಯುತ್ತದೆ. ಹಿಂದಿನ ಆಂಧ್ರ ರಾಜ್ಯದ ಪ್ರದೇಶದಲ್ಲಿ ಕೇವಲ ಪಾರ್ಲಿಮೆಂಟಿಗೆ ಮಾತ್ರ ಚುನಾವಣೆ ನಡೆಯುತ್ತದೆ. ಅಲ್ಲಿ ಶಾಸನಾಂಗಕ್ಕೆ ೧೯೫೫ರಲ್ಲಿ ಚುನಾವಣೆ ನಡೆದಿದ್ದು, ಅದರಲ್ಲಿ ಆರಿಸಿ ಬಂದಿರುವ ಸದಸ್ಯರ ಅಧಿಕಾರಾವಧಿಯನ್ನು ೧೯೬೨ನೇ ವರ್ಷದ ವರೆಗೆ ಬೆಳೆಸಲಾಗಿದೆ.

ಉತ್ತರ ಪ್ರದೇಶ ಮತ್ತು ಹಿಮಾಚಲ ಪ್ರದೇಶದ ಹಿಮಾವೃತ ಪ್ರದೇಶಗಳಲ್ಲಿ ಮಾತ್ರ ಚುನಾವಣೆಯನ್ನು ಎಪ್ರಿಲಿನ ಕೊನೆಗೆ ಅಥವಾ ಮೇ ತಿಂಗಳ ಪ್ರಾರಂಭದಲ್ಲಿ ನಡೆಸಬೇಕಾಗುತ್ತದೆ. ಆದರೆ ಉಳಿದೆಲ್ಲ ಕಡೆ ಹೋಳಿ ಹಬ್ಬದ ಮುಂಚೆಯೇ ಚುನಾವಣೆಗಳು ಮುಗಿಯುತ್ತವೆ. ಹೋಳಿ ಹಬ್ಬ ಅಥವಾ ಚುನಾವಣೆಗಳಲ್ಲಿ ನಿಮಗೆ ಯಾವುದು ಬೇಕೆಂದು ಜನರನ್ನು ಕೇಳಿದರೆ, ರಾಜಕೀಯಕ್ಕೆ ತಿಲಾಂಜಲಿಯನ್ನಿತ್ತು ಉತ್ಸವದಲ್ಲಿ ಜನರು ಸಹಭಾಗಿಗಳಾಗುವುದು ನಿಶ್ಚಯವೆಂದು ಉತ್ತರ ಪ್ರದೇಶ ಬಿಹಾರ ಮುಂತಾದ ಸರಕಾರಗಳು ಎಚ್ಚರಿಕೆಯನ್ನಿತ್ತುದರಿಂದ ಈಗಿನ ತಾರೀಕುಗಳನ್ನು ನಿಗದಿಗೊಳಿಸಲಾಯಿತು.

ಕಳೆದ ಚುನಾವಣೆಯಲ್ಲಿ ೧೭೩೦ ಲಕ್ಷ ಮತದಾರರಿದ್ದರು; ಈ ಸಲ ೧೯೦೦ ಲಕ್ಷ ಮತದಾರರಿದ್ದಾರೆ. ೧೯೬೦೦೦ ಮತದಾರ ಕ್ಷೇತ್ರಗಳು ಕಳೆದ ಸಲವಿದ್ದುವು, ಈ ಸಲ ಎರಡು ಲಕ್ಷಕ್ಕಿಂತಲೂ ಈ ಸಂಖ್ಯೆ ಹೆಚ್ಚಬಹುದು. ಸುಮಾರು ೯ ಲಕ್ಷ ಅಧಿಕಾರಿಗಳು ಕಳೆದ ಚುನಾವಣೆಯನ್ನು ಸಾಂಗವಾಗಿ ನೆರವೇರಿಸಲು ದುಡಿದಿದ್ದರು. ಈ ಸಲ ಹತ್ತು ಲಕ್ಷ ಅಧಿಕಾರಿಗಳ ಆವಶ್ಯಕತೆ ಬೀಳಬಹುದೆಂದು ಅಂದಾಜು.

ಕಾಂಗ್ರೆಸು ತನ್ನ ಚುನಾವಣಾ ಘೋಷಣೆಯನ್ನು ಕೊನೆಯ ರೂಪದಲ್ಲಿ ಸಿದ್ಧಗೊಳಿಸುತ್ತಿದೆ. ಆರ್ಥಿಕ ರಂಗದಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಯ ಕಾರ್ಯಕಲಾಪಗಳನ್ನು ಅದು ಜನರ ಮುಂದಿಟ್ಟಿದೆ. ವಿದೇಶ ಧೋರಣೆಯಲ್ಲಿ ಪಂಚಶೀಲ ತತ್ತ್ವಗಳ ಆಚರಣೆಗೆ ಮಹತ್ವವನ್ನಿತ್ತಿದೆ. ಸಾಮಾಜಿಕ ರಂಗದಲ್ಲಿ ಹಿಂದೂ ಸಮಾಜದ ಸುಧಾರಣೆಗಾಗಿ ನಡೆಸಲಾದ ಪ್ರಯತ್ನಗಳ ಉಲ್ಲೇಖವನ್ನದು ಮಾಡಿದೆ—ಎಂದು ಸುದ್ದಿ.

ಜನವರಿ ತಿಂಗಳಲ್ಲಿ ನಡೆಯುವ ಇಂದೋರಿನ ಕಾಂಗ್ರೆಸು ಅಧಿವೇಶನದಲ್ಲಿ ಚುನಾವಣಾ ಘೋಷಣೆಯನ್ನು ಬಹಿರಂಗಗೊಳಿಸಲಾಗುವುದು; ಮುಂದೆ ಎರಡು ತಿಂಗಳುಗಳಲ್ಲಿ ಇದು ಮತದಾರರ ಹೃದಯದಲ್ಲಿ ಎಷ್ಟು ಪರಿಣಾಮವನ್ನು ಮಾಡಿರುವುದೆಂಬ ವಿಷಯ ಸ್ಪಷ್ಟವಾಗುತ್ತದೆ. ಹಿಂದಿನ ಸಲ ಅಖಿಲ ಭಾರತ ಸ್ವರೂಪದ ೧೪ ಪಕ್ಷಗಳಿದ್ದವು; ಈ ಸಲ ಕೇವಲ ೪ ಪಕ್ಷಗಳು ಮಾತ್ರ. ಇವು ಇವಾವುವೆಂದರೆ, ಕಾಂಗ್ರೆಸ್, ಪ್ರಜಾಸೋಶಲಿಸ್ಟ್, ಕಮ್ಯುನಿಸ್ಟ್ ಮತ್ತು ಜನಸಂಘ. ಕಳೆದೆರಡು ಚುನಾವಣೆಯಲ್ಲಿ ಒಟ್ಟು ಎಷ್ಟು ಮತದಾನವಾಯಿತೋ ಅದರ ೩% ಮತವಾದರೂ ಸಿಕ್ಕಿದ ಪಕ್ಷಕ್ಕೆ ಅಖಿಲ ಭಾರತ ಪಕ್ಷವೆಂಬ ಮನ್ನಣೆಯನ್ನು ಕೊಡಲಾಗಿದೆ. ಆದುದರಿಂದಲೇ ಜನಸಂಘದಂಥ ಪಕ್ಷವೂ "ಅಖಿಲ ಭಾರತ" ಸ್ವರೂಪವನ್ನು ಹೊಂದುವಂತಾಯಿತು!

ರಾಜ್ಯಗಳಲ್ಲಿ ಸಹ ಹಿಂದಿನಷ್ಟು ಪಕ್ಷಗಳಿಲ್ಲ. ಪಕ್ಷಗಳ ಸಂಖ್ಯೆಯು ಈ ಸಲ ಬಹಳ ಕಡಿಮೆಯಾಗಿದೆ—ಅಂದರೆ ಕೇವಲ ೧೧. ಆದರೆ ಸ್ಪರ್ಧೆಯು ಹಿಂದಿಗಿಂತ ತೀವ್ರವಾಗಿರುವುದು ಸಂಭವನೀಯ.

---

**ಕುಂದಾಪುರ ಡಿ. ಮು. ಕೋರ್ಟಿನಲ್ಲಿ**

S. C. 481/1956.

ಎಚ್. ಲಕ್ಷ್ಮೀನಾರಾಯಣ ಕಾಮತ್ — ವಾದಿ

ಚೆನ್ನಯ್ಯ ಸೆಟ್ಟಿ ಕೂಡಾ — ಪ್ರತಿವಾದಿರು

6ನೇ ಪ್ರತಿವಾದಿ ಶ್ರೀಗಾರಿ ಹೆಗ್ಗಡ್ತಿ, ಆತ್ರಾಡಿ ಸುಬ್ಬಕ್ಕ ಶೆಡ್ತಿರ ಮಗಳು ಉಡುಪಿ ತಾಲ್ಲೂಕ ಹೆಗ್ಗುಂಜೆ ಗ್ರಾಮ.

P. O. Brahmawar.

ವಾದಿಗೆ ತಾರೀಖು 16–8–1883ರ ಮೂಲಗೇಣಿ ಎಡುಸ್ಟಡಿ ಪ್ರಕಾರ ಸರ್ವಧಾರಿ, ವಿರೋಧಿ, ವಿಕೃತಿ, ಖರ, ನಂದನ, ವಿಜಯ, ಜಯ ಮನ್ಮಥ ಸಾಲಿನ ಬಾಬ್ತು ಬರತಕ್ಕ ಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವಾ ಹೂಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾ. 3–1–1957ನೇ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಿ ಆಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunatha Shenai,
Pleader for Pltf.
Coondapoor, 12—12—56.

---

# ಉಡುಪಿ

## ಭಾರತ ಸೇವಕ ಸಮಾಜದ ಶಿಬಿರ

ಭಾರತ ಸೇವಕ ಸಮಾಜದ ಆಶ್ರಯದಲ್ಲಿ ದಕ್ಷಿಣ ಕನ್ನಡದಲ್ಲಿ ಇದೇ ಕ್ರಿಸ್‌ಮಸ್ ರಜಾ ಕಾಲದಲ್ಲಿ 3 ವಿದ್ಯಾರ್ಥಿ ಶಿಬಿರಗಳು ಜರಗಲಿವೆ. ಪಡುಬಿದ್ರೆಯಲ್ಲಿ ಮತ್ತು ಪೊಳಲಿಯಲ್ಲಿ ಹುಡುಗರ ಶಿಬಿರಗಳೂ ಕೋಟೆಕಾರಿನಲ್ಲಿ ಹುಡುಗಿಯರ ಶಿಬಿರವೂ ನಡೆಯುವುದು.

ಪಡುಬಿದ್ರೆಯ ವಿದ್ಯಾರ್ಥಿ ಶಿಬಿರವು ತಾ. 23ರಂದು ಆರಂಭವಾಗಿ ಜನವರಿ 5ರಂದು ಕೊನೆಗೊಳ್ಳುವುದು. ಮಹಾತ್ಮಾಗಾಂಧೀ ಕಾಲೇಜಿನ ಮತ್ತು ಆಸುಪಾಸಿನ ಆರು ಹೈಸ್ಕೂಲುಗಳ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸುವರು. ಶಿಬಿರ ಕಾಲದ ಊಟದ ಸಲುವಾಗಿ ವೆಚ್ಚವನ್ನು ಶಿಬಿರವಾಸಿಗಳು ತೆರಬೇಕಾಗಿಲ್ಲ. 16ರಿಂದ 25 ವರುಷಗಳ ಒಳಗಿನ 14 ಮಂದಿ ವಿದ್ಯಾರ್ಥ್ಯೇತರ ಯುವಕರೂ ಭಾಗವಹಿಸಬಹುದಾದುದರಿಂದ ಸಮಾಜ ಸೇವೆಯಲ್ಲಿ ಆಸಕ್ತಿಯಿರುವ ತರುಣರು ಶಿಬಿರಕ್ಕೆ ಸೇರಲು ಅಪೇಕ್ಷಿಸಿ ಅರ್ಜಿ ಸಲ್ಲಿಸಬಹುದು.

ಶಿಬಿರದಲ್ಲಿ ಶ್ರಮದಾನ ಮತ್ತು ತಜ್ಞರ ಉಪನ್ಯಾಸ ಮೊದಲಾದ ಕಾರ್ಯಕ್ರಮಗಳಿವೆ. ಶಿಬಿರವಾಸಿಗಳು ಶಿಬಿರದಲ್ಲಿಯೇ ನಿಲ್ಲಬೇಕಲ್ಲದೆ ಶಿಸ್ತು ನಿಯಮಗಳನ್ನು ಪಾಲಿಸಲು ಬದ್ಧರಾಗಿರಬೇಕು. ಶಿಬಿರವನ್ನು ಉದ್ಘಾಟಿಸಲು ಆರ್. ಡಿ. ಒ. ಸೂರ್ಯನಾರಾಯಣರವರನ್ನು ಅಧ್ಯಕ್ಷತೆವಹಿಸಲು ಕಾರ್ಕಳದ ಮುಕುಂದ ಪ್ರಭುಗಳನ್ನೂ ಕೇಳಿಕೊಳ್ಳಲಾಗಿದೆ. ರಚನಾತ್ಮಕ ಕಾರ್ಯಕ್ರಮ ಮೊದಲಾದ ಉಚ್ಚ ಧ್ಯೇಯಗಳನ್ನಿಟ್ಟುಕೊಂಡಿರುವ ಭಾರತ ಸೇವಕ ಸಮಾಜದ ಈ ವಿದ್ಯಾರ್ಥಿ ಶಿಬಿರಗಳಿಗೆ ಸಾರ್ವಜನಿಕರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಶ್ರೀ ಟಿ. ಎ. ಪೈ, ಯಂ. ಎಲ್. ಎ; ಉಪಾಧ್ಯಕ್ಷ ಕರ್ನಾಟಕ ಪ್ರದೇಶ ಭಾರತ ಸೇವಕ ಸಮಾಜದ ಶಿಬಿರ ಸಮಿತಿ ಇವರು ತಿಳಿಸುತ್ತಾರೆ.

**ಕ್ರಿಮಿನಲ್ ಕೋರ್ಟಿನ ವಕೀಲರ ಸಂಘ** ಸ್ಥಳೀಯ ಡಿ। ಮುನ್ಸಿಫ್ ಶ್ರೀ ಪಿ. ಎಫ್. ರೇಗೋರವರ ಅಧ್ಯಕ್ಷತೆಯಲ್ಲಿ, ಡಿ. ಮೆಜಿಸ್ಟ್ರೇಟ್ ಶ್ರೀ ಬಿ. ನೊರೊನ್ಹಾರವರು ಉಡುಪಿ ಕ್ರಿಮಿನಲ್ ಕೋರ್ಟಿನ ಬಾರ್ ಎಸೋಸಿಯೇಶನಿನ ಉದ್ಘಾಟನೆಯನ್ನು ನೆರವೇರಿಸಿದರು. ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಬಿ. ಶೀನಪ್ಪ ಹೆಗ್ಡೆಯರು ಸ್ವಾಗತ ಭಾಷಣ ಮಾಡುತ್ತಾ ಸರಕಾರದ ಹೊಸ ಸೌಕರ್ಯ ಲಭಿಸಿದುದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಶ್ರೀ ನೊರೊನ್ಹಾರವರು ಮಾತನಾಡುತ್ತಾ ಶ್ರೀ ಕೆ. ಜಿ. ಬಲ್ಲಾಳರ ಆಕಸ್ಮಿಕ ನಿಧನಕ್ಕೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು. ಕ್ರಿಮಿನಲ್ ಕೋರ್ಟುಗಳ ಕಾರ್ಯಕ್ಷೇತ್ರದ ಕುರಿತು ಉಡುಪಿಯಿಂದ ಮನವಿ ಬಂದಿತ್ತು ಅವರ ಅಪೇಕ್ಷೆಯಂತೆ ಪ್ರಕೃತ ಬದಲಾವಣೆ ಸಾಧ್ಯವಿಲ್ಲ. ಮುಂದೆ ಹೆಚ್ಚು ಸುಧಾರಣೆಯಾಗುವುದು ಮಾತ್ರವಲ್ಲದೆ ಸಬ್ ಕೋರ್ಟು ಉಡುಪಿಗೆ ಬರಬಹುದೆಂದರು. ವಕೀಲ ಸಂಘದ ಕಾರ್ಯದರ್ಶಿ ಶ್ರೀ ಬಿ. ಹಿರಿಯಣ್ಣ ಹೆಗ್ಡೆಯರು ಧನ್ಯವಾದಗಳನ್ನಿತ್ತರು. ಉಡುಪಿ ಜುಡೀಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಎಮ್. ರಾಮಚಂದ್ರರಾಯರು ಈ ಸಮಾರಂಭದ ವ್ಯವಸ್ಥೆ ಮಾಡಿದರು.

# ಐಸೆನೋವರರೊಡನೆ ನೆಹರೂರ ಮಾತುಕತೆ

ಪ್ರಧಾನಿ ನೆಹರು ಅಮೇರಿಕದ ಅಧ್ಯಕ್ಷರೊಡನೆ ಮಾತುಕತೆಗಾಗಿ ತೆರಳಿದ್ದಾರೆ; ದಾರಿಯಲ್ಲಿ ಅವರು ಲಂಡನಿನಲ್ಲಿಳಿದು, ಬ್ರಿಟಿಷ್ ಪ್ರಧಾನಿ ಈತನರೊಡನೆ ಒಂದು ತಾಸು ಮಾತುಕತೆ ನಡೆಸಿದರು.

ವಾಶಿಂಗಟನ್ನಿನಲ್ಲಿ ನೆಹರೂರಿಗೆ ಸಂಭ್ರಮದ ಸ್ವಾಗತ ದೊರಕಿತು. ಹೋದ ದಿನ ಅವರು ಅಧ್ಯಕ್ಷರ ಮನೆಯಲ್ಲಿ ಭೋಜನ ತೀರಿಸಿದರು. ಉಳಕೊಳ್ಳಲು ಸರಕಾರಿ ಅತಿಥಿಗೃಹವಾದ ಬ್ಲೇರ್ ಭವನದಲ್ಲಿ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದರು.

ಮರುದಿನವೇ ನೆಹರೂರವರು ಖಾಸಗಿ ಮಾತುಕತೆಗಾಗಿ ಅಧ್ಯಕ್ಷರ ಗ್ರಾಮ ನಿವಾಸವಾದ ಗೆಟ್ಟಿಸ್ ಬರ್ಗಿಗೆ ಐಕರೊಡನೆ ತೆರಳಿದರು. ಇದು ಇಬ್ಬರೇ ಗೋಪ್ಯವಾಗಿ ನಡೆಸುವ ಮಾತುಕತೆಯಾಗಿದೆ—ಮತ್ತು ಮುಂದಿನ ಅಧಿಕೃತ ಮಾತುಕತೆಗಳ ಪೀಠಿಕೆಯ ರೂಪದಲ್ಲಿದೆ—ಎನ್ನಬಹುದು.

---

**ಬೀಡಿ ಮಜೂರರ ಸಭೆ**— ಕುಂಜಿಬೆಟ್ಟು ಮತ್ತು ಕಡಿಯಾಳಿ ಬೀಡಿ ಮಜೂರರ ಸಭೆಯು ತಾ. 16ರಲ್ಲು ಶ್ರೀ ಕೆ. ರಾಘವನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ದಾಮೋದರನವರು ಸಭೆ ಕರೆದ ಉದ್ದೇಶಗಳನ್ನು ವಿವರಿಸಿ, ಮಜೂರ ಸಂಘಟನೆಯನ್ನು ಬಲಗೊಳಿಸಬೇಕೆಂದು ಹೇಳಿದರು.

**ಬಾಳೆ ಮುಹೂರ್ತ**—ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವದ ಪೂರ್ವಸಿದ್ಧತೆಯ ಮೊದಲ ಅಂಗವಾದ 'ಬಾಳೆ ಮುಹೂರ್ತ' ಸಮಾರಂಭವು ತಾ. 13ರಲ್ಲು ಬೆಳಿಗ್ಗೆ ಯಶಸ್ವಿಯಾಗಿ ಜರಗಿತು.

**ದುಃಖಸೂಚಕ ಸಭೆ**— ಶ್ರೀ ಟಿ. ಉಪೇಂದ್ರ ಪೈ ಗಳ ಅನಿರೀಕ್ಷಿತ ಹಾಗೂ ಅಕಾಲ ಮರಣಕ್ಕಾಗಿ ಸಂತಾಪಸೂಚಕ ಸಾರ್ವಜನಿಕ ಸಭೆಯು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ರಥಬೀದಿಯಲ್ಲಿ ಶ್ರೀ ಅರುವ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ತಾ. 14ನೇ ಸಂಜೆ ಜರಗಿತು. ಡಾ. ಕೆ. ಎಲ್. ಐತಾಳ್, ಶ್ರೀಗಳಾದ ಪಿ. ಶೀ. ಶೆಟ್ಟಿ, ಯು. ಎಲ್. ಕಿಣಿ ಮುಂತಾದವರು ದಿವಂಗತ ಪೈಗಳ ಸಫಲ ಜೀವನದ ಕುರಿತು ಮಾತನಾಡಿ ಶ್ರದ್ಧಾಂಜಲಿಯನ್ನರ್ಪಿಸಿದರು. ಬಳಿಕ ದುಃಖಸೂಚಕ ನಿರ್ಣಯವಾಯಿತು. ಶ್ರೀ ಯು. ಕೃಷ್ಣ ಭಟ್ಟರು ಧನ್ಯವಾದವಿತ್ತರು.

**ಡಾ। ಕೆ. ಎಸ್. ಶೆಟ್ಟರ ಆಗಮನ** ಮೈಸೂರು ಸರಕಾರದ ಪ್ರಭು ಸಂಗೋಪನಾ ಶಾಖಾ ಡೈರೆಕ್ಟರರಾದ ಡಾ. ಕೆ. ಎಸ್. ಶೆಟ್ಟರು ತಾ. 15ರಂದು ಉಡುಪಿಗೆ ಆಗಮಿಸಿ ಮಲ್ಪೆಗೆ ಸಂದರ್ಶನವಿತ್ತು ಮತ್ಸ್ಯ ವ್ಯಾಪಾರದ ಕುರಿತು ಪರಿಶೀಲನೆ ನಡೆಸಿದರು. ಮರುದಿನ ಉಡುಪಿಯಲ್ಲಿ ವೆಟನರಿ ಮತ್ತು ಫಿಶ್ಯರೀಸ್ ಆಫೀಸುಗಳಿಗೆ ಬೇಟಿಯಿತ್ತು ಅಲ್ಲಿಯ ಕಾರ್ಯಭಾಗವನ್ನು ಅವಲೋಕಿಸಿ ಲೆಕ್ಕಪತ್ರ ಶೀಟಾನದಿಗಳನ್ನು ಸಂದರ್ಶಿಸಿ ಶಿವಮೊಗ್ಗಕ್ಕೆ ತೆರಳಿದರು.

**ಮಕ್ಕಳ ಮಗ್ಗಿಪುಸ್ತ**

ನವಯುಗಪ್ರೆಸ್, ಉಡುಪಿ.

ನಿಮ್ಮ ಆರ್ಥಿಕ ಸಮಸ್ಯೆಗಳಿಗೆ ಸಲಹೆಗಳು ಬೇಕೆಂದಿದ್ದಾಗ, ಅವುಗಳನ್ನು ಕೊಡಲು ಸದಾ ಸಿದ್ಧರಿದ್ದೇವೆ!

ಮೈಸೂರು, ಮದರಾಸು, ಆಂಧ್ರ ಪ್ರದೇಶ, ಕೇರಳ ಮತ್ತು ಮುಂಬಯಿ ಸಂಸ್ಥಾನಗಳಲ್ಲಿ ಒಟ್ಟು 46 ಶಾಖೆಗಳಿವೆ. ಸಕಲ ವಿಧದ ಬೇಂಕಿಂಗ್ ವಹಿವಾಟುಗಳನ್ನು ಕೈಗೊಳ್ಳುತ್ತೇವೆ. ಗಿರಾಕಿಗಳ ತೃಪ್ತಿಯೇ ನಮ್ಮ ಧ್ಯೇಯ!

50 ವರುಷಗಳಲ್ಲಿ ನಾವು ಗಳಿಸಿದ ನಮ್ಮ ಅತ್ಯಮೂಲ್ಯ ಬೇಂಕಿಂಗ್ ಅನುಭವದ ಪ್ರಯೋಜನವನ್ನು ಇಂದಿನಿಂದಲೇ ಪಡೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

THE CANARA BANKING CORPORATION LIMITED

## ಎಲ್ಲೆಲ್ಲಿ ಏನೇನು?

**ಕಟಪಾಡಿ**— ಸ್ಥಳೀಯ ಎಸ್. ವಿ. ಎಸ್. ಹ್ಯಾಸ್ಕೂಲಿನ ಶ್ರೀ ಮಾರ್ಶಲ್ ಆಳ್ವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಬಗ್ಗೆ ಅವರಿಗೆ ಆ ಶಾಲೆಯ ಅಧ್ಯಾಪಕ ವೃಂದವು ತಾ. 7ರಲ್ಲಿ ವಿದಾಯಸತ್ಕಾರವನ್ನಿತ್ತು ಗೌರವಿಸಿತು ಶಾಲಾ ಹೆಡ್ಮಾಸ್ಟರ್ ಶ್ರೀ ವಿ ಶ್ರೀನಿವಾಸ ನಾಯ್ಕರು ಸಭಾಧ್ಯಕ್ಷತೆವಹಿಸಿದ್ದರು ಶ್ರೀಗಳಾದ ಕೆ. ಆರ್. ಶೆಣೈ, ಪಿ. ಬಾಲಕೃಷ್ಣ ನಾಯಕ್, ಕೆ. ರಾಮಚಂದ್ರ ಭಟ್ ಮೊದಲಾದವರು ಶಾಲೋಚಿತಮಾತು ಗಳನ್ನಾಡಿದರು. ಅಧ್ಯಾಪಕ ವೃಂದದ ಪರವಾಗಿ ಅಧ್ಯಕ್ಷರು ಶ್ರೀ ಆಳ್ವರಿಗೆ ಉಡುಗೊರೆಗಳನ್ನಿತ್ತರು ಶ್ರೀ ಕೆ. ಪಿ. ಶೆಣೈಯವರು ಧನ್ಯವಾದಗಳನ್ನಿತ್ತರು.

**ಕೊರಂಬಡ್ಕ**— ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ಕೊರಂಬಡ್ಕ ಕೋರಿಕ್ಕಾಡಿನ ಬಳಿಯ ಕಾಡಿನಿಂದ ಶ್ರೀ ಅಣಿಲೆ ಸುಬ್ಬಯ್ಯ ರೈಗಳು ತಾ. 4ರಲ್ಲು 1¼ ಅಡಿ ಸುತ್ತಳತೆಯ 13 ಅಡಿ ಉದ್ದದ ಅನೆಕಂದಡಿಹಾವನ್ನು ಮರುದಿವಸ ಅದೇ ಕಾಡಿನಿಂದ 10 ಅಡಿ ಉದ್ದದ ಹೆಬ್ಬಾವನ್ನು ಗುಂಡಿಕ್ಕಿ ಕೊಂದರು.

**ಗುರುವಾಯನಕೆರೆ**—ಸ್ಥಳೀಯ ಶ್ರೀ ಪಾಂಡುರಂಗ ಭಜನಾ ಮಂದಿರದಲ್ಲಿ ತಾ. 25-12-56ರಿಂದ 12-2-1957ನೇ ಕುಜವಾರದ ತನಕ 49 ದಿವಸಗಳ ಅಹೋರಾತ್ರಿ ಭಜನಾ ಯಜ್ಞ ಸಮಾರಂಭ ನಡೆಯಲಿರುವುದಾಗಿ ಭಜನಾಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

**ಮಲಬಾರ್ ಮಾರ್ಕೆಟ್ ಕಮಿಟಿ ಪ್ರಕಟಣೆ**—ಕಾಸರಗೋಡು ತಾಲೂಕಿನಿಂದ ತೆಂಗಿನಕಾಯಿ ಕೊಬರಿ ಮತ್ತು ಅಡಿಕೆಯನ್ನು ಮಲಬಾರ್ ಜಿಲ್ಲೆಯ ಹೊರಗೆ ರೈಲ್ ರಸ್ತೆ ಅಥವಾ ಹೊಳೆಯ ಮೂಲಕ ಸಾಗಿಸುವ ಸಂದರ್ಭದಲ್ಲಿ ಪರ್ಮಿಟುಗಳನ್ನು ಪಡಕೊಳ್ಳಬೇಕು. ಕಾಸರಗೋಡಿನ ಉತ್ಪಾದಕರ ಮತ್ತು ವ್ಯಾಪಾರಿಗಾರರ ಸೌಕರ್ಯಕ್ಕಾಗಿ ಮಾರ್ಕೆಟಿಂಗ್ ಕಮಿಟಿಯ ಕಡೆಯಿಂದ ಪರ್ಮಿಟುಗಳನ್ನು ಕೊಡಲು ಕನ್ನಂಗಾಡ್‌ನಲ್ಲಿ ಓವರ್ ಸುಪರ್‌ವ್ಯೈಜರರ ಕಚೇರಿ ತೆರೆಯಲಾಗಿದೆ. ಪರ್ಮಿಟು ಬಯಸುವವರು ಸಾಕಷ್ಟು ಮುಂಚಿತವಾಗಿ ಸುಪರ್‌ವ್ಯೈಜರರಿಗೆ ಅರ್ಜಿ ಮಾಡಿಕೊಳ್ಳತಕ್ಕದ್ದು. ಫೀಸು ಕೊಡಬೇಕಾದ ಅಗತ್ಯವಿಲ್ಲ.

**ಹೆಬ್ರಿ**— ಸ್ಥಳೀಯ ವನಿತಾ ಸಮಾಜದ ವಾರ್ಷಿಕೋತ್ಸವವು ತಾ. 9ರಲ್ಲಿ ಸಮಾಜ ಮಂದಿರದಲ್ಲಿ ಶ್ರೀಮತಿ ಪ್ರೇಮಾ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಉತ್ಸವದ ಅಂಗವಾಗಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಅಧ್ಯಕ್ಷೆಯರ ಹಸ್ತದಿಂದ ಬಹುಮಾನವಿತರಣೆ ಮಾಡಿಸಲಾಯಿತು. ಬಳಿಕ ವಿವಿಧ ವಿನೋದಾವಳಿಗಳಾದುವು

**ಹೊಸದುರ್ಗ**— ಕಾಶೀಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರು ತಾ. 12ರಲ್ಲಿ ಸಂಜೆ ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಚಿತ್ತೈಸಿ, ಶಿಷ್ಯವೃಂದವರ ಪಾದಪೂಜಾದಿ ಸತ್ಕಾರಗಳನ್ನು ಸ್ವೀಕರಿಸಿದರು. ಡಾ. ಟಿ. ಎಮ್. ಎ. ಪೈಗಳವರು ತಮ್ಮ ಭಾಷಣದಲ್ಲಿ, ಹೊಸತಾಗಿ ರಚಿಸಲಿರುವ ಅಖಿಲ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಹಿತಚಿಂತನೆ ಹಾಗೂ ಅಭಿವೃದ್ಧಿಯ ಯೋಜನೆಯ ಕುರಿತು ವಿವರಣೆಯಿತ್ತರು. ಯೋಜನೆಯ ಸಫಲತೆಗಾಗಿ ಕಾರ್ಯನಿರ್ವಾಹಕ ಸಮಿತಿ ರಚಿಸಲ್ಪಟ್ಟಿತು.




**ಕಾಪು**— ಕಾಪು ಕೇಂದ್ರದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆ ಮೇರೆಗೆ ಕಟ್ಟಲಾದ ಹೆರಿಗೆ ಕೇಂದ್ರವನ್ನು ತಾ. 14ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಚ್. ನರಸಿಂಹನವರು ಉದ್ಘಾಟಿಸಿದರು. ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆವಹಿಸಿದ್ದು, ಹೆರಿಗೆ ಆಸ್ಪತ್ರೆಯಿಂದ ಮಹಿಳೆಯರಿಗಾಗುವ ಪ್ರಯೋಜನಗಳನ್ನು ಪ್ರಶಂಸಿಸಿದರು.

ಆರಂಭದಲ್ಲಿ ಕಾಪು ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ಕೆ. ಮುಕುಂದಪ್ರಭು ಶೆಣೈಯವರು ಸ್ವಾಗತಮಾತುಗಳನ್ನಾಡಿದರು. ಮೂಳೂರು ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ಕೆ. ಭೋಜ ಹೆಗ್ಡೆಯವರು ಸಂದೇಶಗಳನ್ನೋದಿದರು. ಬಳಿಕ ಡಾ. ಎಸ್ ಆರ್. ಪೈ, ಡಾ. ಕೆ. ಜಿ. ಶಿಣೈ, ಶ್ರೀಗಳಾದ ಎ. ಜೆ. ಆಳ್ವ, ಕೆ. ಕೃಷ್ಣಾಚಾರ್ಯ, ಮಂಜುನಾಥ ಶೆಣೈ ಮತ್ತು ಶ್ರೀಮತಿ ಇಂದಿರಾಬಾಯಿಯರು ಕೇಂದ್ರದ ಅವಶ್ಯಕತೆಯ ಕುರಿತು ಮಾತನಾಡಿದರು. ಶ್ರೀ ರಾಮ ಡಿ. ಮೆಂಡನರು ವಂದನೆಗಳನ್ನಿತ್ತರು.

**ಕಾರ್ಕಳ**—ಶ್ರೀ ಟಿ. ಉಪೇಂದ್ರ ಅನಂತ ಪೈಗಳ ಅನಿರೀಕ್ಷಿತ ನಿಧನದ ಬಗ್ಗೆ ಕಾರ್ಕಳ ಬಿ. ಎಮ್. ಹಾ| ಎ| ಶಾಲೆಯಲ್ಲಿ ತಾ. 14ರಲ್ಲು ಸಂಜೆ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಸಾರ್ವಜನಿಕ ಸಭೆಯೊಂದು ಶ್ರೀ ಪಿ. ಮಂಜುನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಗುರುರಾಜ ಜ್ಯೋತಿಶರ್, ಎಮ್. ನಾಗಪ್ಪ ಶ್ಯಾನುಭಾಗ, ರಾಜೀವ ಕೋಟ್ಯಾನ್. ಕೆ. ಆನಂದ ಸೆಟ್ಟಿ, ನಾರಾಯಣ ಸೆಟ್ಟಿಗಾರ ಮತ್ತು ಎಮ್. ಆರ್. ಶ್ಯಾನುಭಾಗರು ಸಂದರ್ಭೋಚಿತ ಮಾತುಗಳನ್ನಾಡಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

**ಪೆರ್ಡೂರು**- ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಸದಸ್ಯ ಶ್ರೀ ಎ. ಬಚ್ಚ ಸೆಟ್ಟರು ತಾ 13ರಲ್ಲು ಉಡುಪಿ ಮಿಶನ್ ಆಸ್ಪತ್ರೆಯಲ್ಲಿ ಅಕಸ್ಮಾತ್ ದೈವಾಧೀನರಾದರೆನ್ನಲು ವಿಷಾದವಾಗುತ್ತದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

## ಬೊಂಬಾಯಿ

**ಪ್ರಕಾಶ್ ಮೆಮೋರಿಯಲ್ ಫಸ್ಟ್ ಎೃಡ್ ಸರ್ವಿಸ್**— ಮುಂಬಯಿ ದೇವಾಡಿಗ ಸುಧಾರಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಪ್ರಕಾಶ್ ಮೆಮೋರಿಯಲ್ ಫಸ್ಟ್ಎೃಡ್ ಸರ್ವಿಸಿನ ಪ್ರಥಮ ವಾರ್ಷಿಕೋತ್ಸವವು ಇದೇ ತಾ. 23ರಲ್ಲಿ ಸಂಜೆ 4 ಗಂಟೆಗೆ ಕಾಮಾ ಹೋಲಿನಲ್ಲಿ ಜರಗಲಿರುವುದಾಗಿ ಕಾರ್ಯದರ್ಶಿ ಶ್ರೀ ಪಿ. ಟಿ. ರಾಯರು ತಿಳಿಸುತ್ತಾರೆ.

## ವಿಯೋಗ

### ಪುಣ್ಯಜೀವಿ ಶ್ರೀ ಉಪೇಂದ್ರ ಪೈಗಳ ಸುಖಮರಣ

ಈಗೆರಡು ದಶಕಗಳಿಂದ ಉಡುಪಿಯ ಜನಜೀವನದಲ್ಲಿ ಅಗ್ರಸ್ಥಾನವನ್ನು ಪಡೆದ ಪೈಬಂಧುಗಳ ಪರಿವಾರದ ದೊಡ್ಡ ಆಧಾರಸ್ತಂಭವಾಗಿದ್ದ ಶ್ರೀ ಟಿ. ಉಪೇಂದ್ರ ಅನಂತ ಪೈಯವರು ಮೊನ್ನೆ ದಿನಾಂಕ ೧೪ ರಂದು ಹೃದಯಸ್ತಂಭನದಿಂದ ನಿಧನರಾದ ವಾರ್ತೆಯನ್ನು ತಿಳಿಸಲು ವಿಷಾದವೆನಿಸುತ್ತದೆ. ಅಂದಿನೇ ೭೦ ತುಂಬಿದ ಶ್ರೀ ಉಪೇಂದ್ರ ಪೈ ಅವರ ಆಕಸ್ಮಿಕ ಮರಣದಿಂದ ವ್ಯಥಿತರಾದ ಅವರ ಕುಟುಂಬದ ಜನರ ದುಃಖದಲ್ಲಿ 'ನವಯುಗ' ವೂ ಸಹಭಾಗಿಯಾಗಿದೆ.

ಪೈ ಬಂಧುಗಳಲ್ಲಿ ಎರಡನೆಯವರಾದ ಶ್ರೀ ಉಪೇಂದ್ರ ಅನಂತ ಪೈಯವರು ಎಳೆಯ ವಯಸ್ಸಿನಿಂದಲೂ ಸಾಹಸಿಗಳು, ಅಚ್ಚ ರಾಷ್ಟ್ರೀಯ ಮನೋವೃತ್ತಿಯವರು. ಅವರ ಶಿಕ್ಷಣವನ್ನು ಅವರೇ ಸಂಪಾದಿಸಿದ ಬಗೆ ವಿಚಿತ್ರವಾಗಿತ್ತು; ಹೈಸ್ಕೂಲ್ ಶಿಕ್ಷಣವೇ ಅದರೂ ಅವರು ಅದನು ಒಂದೇ ಕಡೆ ಮಾಡಿದವರಲ್ಲ. ಉಡುಪಿ, ಮಂಗಳೂರು, ಕುಮಟಾ, ಕಾರವಾರ, ಮುಂಬಯಿ, ಬರೋಡಾ—ಹೀಗೆ ನಾನಾ ಕಡೆಗಳಲ್ಲಿ ಸ್ವತಂತ್ರವಾಗಿ ಪಡೆದಿದ್ದರು. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸು ರಾಷ್ಟ್ರಸೇವೆಗೆ ಅಣಿಯಾದಾಗ ಶ್ರೀ ಪೈ ಅವರು ಆ ಸಂಸ್ಥೆಗೆ ಸೇರಿ ಶಿಸ್ತಿನಿಂದ ಒಬ್ಬ ಸೈನಿಕನಂತೆ ಕೀರ್ತಿಕಾಮನೆಯಿಲ್ಲದೆ, ನಿಸ್ಪೃಹರಾಗಿ, ಕೇವಲ ಕರ್ತವ್ಯಕಾಂಕ್ಷೆಯಿಂದ ದುಡಿದರು. ಉಡುಪಿಯಲ್ಲಿ ನ್ಯಾಶನಲ ಹೈಸ್ಕೂಲನ್ನು ಸ್ಥಾಪಿಸಿ ಗಾಂಧೀಜಿಯ ಸ್ವಾವಲಂಬನದ ಸಂದೇಶವನ್ನು ಮೈಗೂಡಿಸಿಕೊಂಡರು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ, ತದನಂತರಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಪೈಯವರು ಸ್ಥಾಪಿಸಿದ ಹಲವಾರು ಜನೋಪಯೋಗಿ ಸಂಸ್ಥೆಗಳ ಆತ್ಮವು ಸ್ವಾವಲಂಬನೆಯ ತಾರಕ ಮಂತ್ರವೆಂಬುದನ್ನು ನಾವು ಸುಲಭದಲ್ಲಿ ಗುರುತಿಸಬಹುದಾಗುತ್ತದೆ. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ನಡೆಸಲು ಅನುಕೂಲವಾದ ಒಂದು ಸ್ಥಳವನ್ನು ಶ್ರೀ ಪೈಯವರು ಹುಡುಕಿತೆಗೆದರು. ಅದೇ ಇಂದು ಭಾರತದಲ್ಲಿ ಪ್ರಖ್ಯಾತವಾಗಿರುವ ಮಣಿಪಾಲ. ಮಣಿಪಾಲದಲ್ಲಿ ನಡೆಯುವ ಯಾವ ಯೋಜನೆಗೂ ಮೂಲದಲ್ಲಿ ಸ್ವಾವಲಂಬನೆಯ ಸೂತ್ರವಿದೆ, ಜನ ಸೇವೆಯ ಅಭಿಲಾಷೆ ಇದೆ. ಹೀಗಾಗಲು ಉಪೇಂದ್ರ ಅನಂತ ಪೈ ಅವರ ಮಾರ್ಗದರ್ಶನ, ಸ್ಫೂರ್ತಿ ಕಾರಣವೆನ್ನಬೇಕು. ನೇಯ್ಗೆ, ಹಂಚು, ಗುಡಿಕೈಗಾರಿಕೆ ಮನೆ ಕಟ್ಟೋಣ, ಮುಂತಾದ ಉದ್ಯಮಗಳನ್ನು ಮಣಿಪಾಲದಲ್ಲಿ ಸ್ಥಾಪಿಸಿ ನೂರಾರು ಮಂದಿಗೆ ಉದ್ಯೋಗವನ್ನು ಕಲ್ಪಿಸುವುದರಲ್ಲಿ ಪೈ ಅವರು ಪರಮ ಉತ್ಸಾಹಿಗಳಾಗಿದ್ದರು. ಊರಲ್ಲೆಲ್ಲ ಕೆಲಸವಿಲ್ಲವಾಗ ಮಣಿಪಾಲದಲ್ಲಿ ಕೆಲಸ ಸಿಗುತ್ತದೆಂಬ ಪ್ರತೀತಿ ಊರ ಕೆಲಸಗಾರರಲ್ಲಿ ಹರಡಲು ಉಪೇಂದ್ರ ಪೈ ಅವರ ಔದಾರ್ಯವೇ ಕಾರಣ; ಕೆಲಸಮಾಡಲು ತಿಳಿದವನು ಬೇಕೆಂದಾಗ ಕೆಲಸ ಕೊಡಲು ಪೈ ಅವರು ಯಾವಾಗಲೂ ಸಿದ್ಧರು.

ಶ್ರೀ ಪೈ ಅವರು ತೊಡಗಿದ ಅಥವಾ ಪ್ರಚೋದಿಸಿದ ಸಂಸ್ಥೆಗಳಲ್ಲಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ಸ್, ಹೇಂಡ್ ಲೂಮ್ ಟೈಕ್ಸ್‌ಟೈಲ್ಸ್ ಮಾರ್ಕೆಟಿಂಗ್ ಎಸೋಸಿಯೇಶನ್, ಜಿ. ಆರ್. ಸಿ. ಸಿ, ಹಿಂದೂಸ್ಥಾನ್ ಪೇಪರ್ ಮಾರ್ಟ್, ರಾಮಕೃಷ್ಣ ಥಿಯೇಟರ್ ಮೊದಲಾದ ಸಂಸ್ಥೆಗಳು ಇಂದು ವ್ಯಾಪಾರ ವಹಿವಾಟಿನಲ್ಲಿಯೂ ಜನಪ್ರಿಯತೆಯಲ್ಲಿಯೂ ಕರ್ನಾಟಕದಲ್ಲಿ ಪ್ರಮುಖಸ್ಥಾನವನ್ನು ಗಳಿಸಿಕೊಂಡರೆ ಅದು ಶ್ರೀ ಪೈಯವರ ದೂರದರ್ಶಿತ್ವಕ್ಕೂ ಮತ್ತು ವಿಶ್ವಾಸಾರ್ಹರಾದ ನಾಯಕರೆನ್ನೂ ಸಾಹಕರರನ್ನೂ ನೇಮಿಸುವ ಚಾಕಚಕ್ಯತೆಗೂ ಸಾಕ್ಷಿಯಾಗಿವೆ. ಭಾರತದ ಮುಖ್ಯ ಸಮಸ್ಯೆಯಾದ ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲು ಸರಕಾರ ಸಂಕಲ್ಪಿಸಿದ ಮಾರ್ಗ ನೋಡಿದರಾಗದೆಂದು ಪರಿಭಾವಿಸಿ ಗ್ರಾಮಾಂತರದಲ್ಲಿ ಉದ್ಯೋಗ ಹೆಚ್ಚಿಸಿ ಜನಜೀವನದ ಮಟ್ಟವನ್ನೆತ್ತರಿಸಲು ಪೈಯವರು 'ಗ್ರಾಮ ಸೇವಾ ಪ್ರತಿಷ್ಠಾನ' ಎಂಬ ವಿವಿಧೋದ್ದೇಶದ (ಗೋಸೇವೆ + ಖಾದಿ + ಆಯುರ್ವೇದ ಚಿಕಿತ್ಸೆ + ಗೀತಾ ಪಾಠ ಇತ್ಯಾದಿ) ಒಂದು ಯೋಜನೆಯನ್ನು ಸಿದ್ಧಗೊಳಿಸಿ ತಮ್ಮ ಸಂಪಾದನೆಯ ಸುಮಾರು ರೂ 50,000ದಷ್ಟು ಆಸ್ತಿಯನ್ನು ಈ ಸಂಸ್ಥೆಗೆ ದಾನ ಮಾಡಿರುವುದು ಅವರ ರಾಷ್ಟ್ರೀಯ ಮನೋವೃತ್ತಿಯ ಜ್ವಲಂತ ಸಂಕೇತವಾಗಿದೆ. ಹೊಣೆಗಾರನಾದಭಾರತೀಯ ಪ್ರಜೆ ನಡೆಯಬೇಕಾದ ಸ್ವಾವಲಂಬನದ ದಾರಿ ಎಂದರೆ ಇದು ಎಂದು ಪೈಯವರು ತಮ್ಮ ಸ್ವಂತ ಸಾಧನೆಗಳಿಂದ, ಸಂಸ್ಥೆಗಳಿಂದ ಬೊಟ್ಟಿಟ್ಟು ತೋರಿಸುವಂತಿದೆ.

ರಾಜಕೀಯದಲ್ಲಿ, ವ್ಯವಹಾರದಲ್ಲಿ, ಶಿಕ್ಷಣಕ್ಷೇತ್ರದಲ್ಲಿ, ಸಾರ್ವಜನಿಕ ಜೀವನದ ಹಲವು ಹಂತಗಳಲ್ಲಿ ಸದಾ ಕಾರ್ಯತತ್ಪರರಾಗಿರುವ ತಮ್ಮ ತಮ್ಮಂದಿರಾದ ಡಾ| ಮಾಧವ ಪೈ ಮತ್ತು ಪುತ್ರರಾದ ಟಿ. ಅನಂತ ಪೈ ಅವರ ಅವಿರತ ಶ್ರಮದಲ್ಲಿ ತಾನೂ ಮೌನ ಪಾಲುಗಾರನಾಗಿ, ತನ್ನ ಪಾಲಿನ, ತನ್ನ ಇಷ್ಟದ, ಸಮಾಜ ಕಲ್ಯಾಣದ ಸೇವೆಯನ್ನು ತನ್ನಷ್ಟಕ್ಕೆ ಮಾಡುತ್ತಾ, ಎಲೆಮರೆಯ ಕಾಯಿಯಂತೆ ಸರಳ ನಿರಾಡಂಬರ ಜೀವನವನ್ನು ನಡೆಸಿ, ಎಲ್ಲ ಮಾರ್ಗಕ್ಕಿಂತ ಗೀತಾ ಮಾರ್ಗವೇ ಶ್ರೇಯಸ್ಕರವೆಂದು ಸದಾ ಆರ್ಯ ಧರ್ಮವನ್ನು ಜ್ಞಾಪಿಸಿಕೊಂಡು, ಶ್ರೀ ಪೈಯವರು ಎಷ್ಟು ನಿಶ್ಚಿಂತೆಯಿಂದ, ನಿಸ್ಪೃಹತೆಯಿಂದ ಬಾಳಿಕೊಂಡು ಬಂದಿದ್ದರೋ ಅಷ್ಟೇ ನಿರೀಹರಾಗಿ ಭಗವಂತನ ಪಾದಾರವಿಂದವನ್ನು ಸೇರಿದುದು ಅವರ ಜಾಯಮಾನಕ್ಕೆ ಸಹಜವಾದ ವಿಶ್ರಾಂತಿ ಎನ್ನಬೇಕು.

ಅವರ ಸಫಲ ಜೀವನದ ಆದರ್ಶ, ಅವರಿಟ್ಟ ಹೆಜ್ಜೆ ಎಲ್ಲರಿಗೂ ಸ್ಫೂರ್ತಿಯಾಗಲಿ ಎಂದು ಆಶಿಸುವುದು ನಮ್ಮ ಕರ್ತವ್ಯವಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

## ಲೇಖಕರೊಡನೆ—

**"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ.**

**—ಸಂ. ನ.**

# ಮಂಗಳೂರು

**ಮೈಸೂರು ರಾಜ್ಯದ ಪಶು ಸಂಗೋಪನಾ ಶಾಖೆಯ ಡೈರೆಕ್ಟರ್ ಡಾ. ಕೆ. ಎಸ್. ಸೆಟ್ಟರು–** ಮೈಸೂರು ರಾಜ್ಯದ ಪಶು ಸಂಗೋಪನೆ ಮತ್ತು ಮತ್ಸ್ಯ ವ್ಯವಸಾಯ ಖಾತೆಯ ಡೈರೆಕ್ಟರ್ ಡಾ. ಕೆ. ಎಸ್. ಸೆಟ್ಟರು ತಾ. 14ರಲ್ಲಿ ಮಾತನಾಡುತ್ತಾ ನಮ್ಮ ದೇಶದ ಹಳ್ಳಿಗಳ ಅಭಿವೃದ್ಧಿಯಾಗಬೇಕಾದರೆ ಜನರ ಜೀವನ ಮಟ್ಟವು ಏರಬೇಕಾದರೆ, ದನ ಎಮ್ಮೆ ಮೊದಲಾದ ಜಾನುವಾರುಗಳ ಸಾಕಣೆಗೆ ಹೆಚ್ಚಿನ ಗಮನವೀಯಬೇಕು. ಹಳ್ಳಿಗಳಲ್ಲಿನ ಸಂಪತ್ತು ಹೆಚ್ಚಲು ಜಾನುವಾರುಗಳ ಸಂಗೋಪನೆಯು ಅತ್ಯಂತ ಸಹಾಯಕಾರಿ ಉಪ್ಯಮವಾಗಿದೆ. ಪಶು ಸಂಗೋಪನೆಯನ್ನು ಒಂದು ಕೈಗಾರಿಕೆಯಾಗಿ ಬೆಳೆಸಬೇಕು. ಇದರ ಜತೆಗೆ ಕೋಳಿ ಸಾಕಣೆ ಇತ್ಯಾದಿಯನ್ನು ಉಪಕೈಗಾರಿಕೆಯಾಗಿ ಬೆಳೆಸಬೇಕು. ಮೈಸೂರು ರಾಜ್ಯದಲ್ಲಿ ಕುರಿ ಆಡುಗಳ ಸಾಕಣೆಗೆ ಹೆಚ್ಚು ಗಮನವೀಯಬಹುದು. ಕುರಿ ಸಾಕಣೆಯನ್ನು ಸರಿಯಾಗಿ ಬೆಳೆಸಿದರೆ ನಮ್ಮಲ್ಲಿ ಉಣ್ಣೆಯ ಕೈಗಾರಿಕೆಯನ್ನು ವೃದ್ಧಿಗೊಳಿಸಬಹುದು' ಎಂದು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ವಿಜಯಾ ಬೇಂಕಿನ ಪ್ರಧಾನ ಕಛೇರಿಯಲ್ಲಿ ಜರಗಿದ ಸಭೆಯಲ್ಲಿ ಹೇಳಿದರು. ಮೈಸೂರು ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಗೊಂಡ ಶ್ರೀ ಕೆ. ಕೆ. ಸೆಟ್ಟಿಯವರನ್ನು ಗೌರವಿಸುವ ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ವಹಿಸಿದ್ದರು. ಆರಂಭದಲ್ಲಿ ಸಂಘದ ಜತೆಕಾರ್ಯದರ್ಶಿ ಶ್ರೀ ಪಿ. ಜಯರಾಮ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಡಾ. ಕೆ. ಬಿ. ಸೆಟ್ಟಿ, ಕೆ. ಜಿ. ಎಸ್. ಭಂಡಾರಿ, ಬಿ. ಬಿ. ಸೆಟ್ಟಿ, ಡಾ. ಕೆ. ನಾಗಪ್ಪ ಆಳ್ವ, ಡಾ. ಕೆ. ಕೆ. ಹೆಗ್ಡೆ, ಕೆ. ಉಗ್ಗಪ್ಪ ಸೆಟ್ಟಿ, ಪಿ. ಎಸ್. ತಿಮ್ಮಪ್ಪ ಸೆಟ್ಟಿ, ಮೊದಲಾದವರು ಮಾತನಾಡುತ್ತಾ ಶ್ರೀ ಕೆ. ಕೆ. ಸೆಟ್ಟರ ಆಯ್ಕೆ ಬಗ್ಗೆ ಅವರನ್ನು ಅಭಿನಂದಿಸಿದರು. ನವ ಮೈಸೂರಿನ ಪಶು ಸಂಗೋಪನಾ ಖಾತೆಯ ಡೈರೆಕ್ಟರರಾಗಿ ಡಾ. ಕೆ. ಎಸ್. ಸೆಟ್ಟರು ನೇಮಕ ಹೊಂದಿದ ಬಗ್ಗೆ ಸಂತೋಷ ಪ್ರದರ್ಶಿಸಲಾಯಿತು.

**ವಿವಾಹ ಸಮಾರಂಭ–** ಮಂಗಳೂರಿನ ವಕೀಲ್ ಶ್ರೀ ಉಳ್ಳಾಲ ರಮಾನಾಥ ಶೆಣೈಯವರ ಸಹೋದರಿ ಸೌ| ವಿಜಯಾ ಮತ್ತು ಜಮಖಂಡಿಯ ಅಸಿಸ್ಟಾಂಟ್ ಕಲೆಕ್ಟರ್ ಶ್ರೀ ಪಾಂಗಾಳ ರಘುನಾಥ ನಾಯಕ್, ಐ. ಎ. ಎಸ್, ಅವರ ವಿವಾಹವು ತಾ.16ರಲ್ಲು ಕೆನರಾ ಹೈಸ್ಕೂಲಿನ ಭ.ವನೇಂದ್ರ ಸಭಾಸದನದಲ್ಲಿ ನಡೆಯಿತು. ವಿವಾಹ ಸಮಾರಂಭಕ್ಕೂ ಸಂಜೆಜರಗಿದ ಸತ್ಕಾರಕೂಟಕ್ಕೂ ಊರ ಪರವೂರ ಪ್ರಮುಖರನೇಕರು ಆಗಮಿಸಿದ್ದರು.

**ಜಿಲ್ಲಾಬೋರ್ಡಿಗೆ ಮೈಸೂರು ಸರಕಾರದ ಸಹಾಯ–** ದ. ಕ. ಜಿಲ್ಲಾ ಬೋರ್ಡಿಗೆ ಮೈಸೂರು ಸರಕಾರವು 2½ಲಕ್ಷ ರೂಪಾಯಿಯನ್ನು ಸಹಾಯವಾಗಿ ಸಾಲ ಕೊಟ್ಟಿರುವುದಾಗಿ ತಿಳಿದುಬರುತ್ತದೆ. ಈ ಹಣದಲ್ಲಿ ಪ್ರಾಥಮಿಕ ವಿದ್ಯಾಖಾತೆಯನಿಧಿಗೆ ರೂಪಾಯಿ 1½ಲಕ್ಷವನ್ನೂ ಸಾಮಾನ್ಯ ನಿಧಿಗೆ ಒಂದು ಲಕ್ಷ ರೂಪಾಯಿಯನ್ನೂ ವಿಂಗಡಿಸಲಾಗಿದೆ. ಈ ಸಹಾಯದಿಂದಾಗಿ ಬೋರ್ಡಿನ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಬೇಗನೆ ಸಂಬಳ ಬಟ್ವಾಡೆಯಾಗಲು ಅನುಕೂಲವಾಯಿತು.

**ಮಂಗಳೂರು ಶಾಂತಿ ಸಮಿತಿಯ ಆಶ್ರಯದಲ್ಲಿ–** ತಾ. 11ರಲ್ಲಿ ಸಂಜೆ ಎಸ್. ಸಿ. ಸಿ. ಬೇಂಕಿನ ಸಭಾ ಭವನದಲ್ಲಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಜಾಗತಿಕ ಶಮಿತಿ ಸದಸ್ಯೆ ಮತ್ತು ಬ್ರಿಟಿಷ್ ಮಹಿಳೆಯರ ರಾಷ್ಟ್ರೀಯ ಸಮಿತಿಯ ಅಧ್ಯಕ್ಷೆ ಡಾ. ಮೊನಿಕಾ ಫೆಲ್ಟನ್ನರು ಭಾಷಣಮಾಡುತ್ತಾ ಇಂದು ಜಗತ್ತಿನ ಹಲವೆಡೆಗಳಲ್ಲಿ ನಡೆಯುತ್ತಿರುವ ಘರ್ಷಣೆ ಕೆಲಸಗಳ ಮೂಲವು ಕೊರಿಯಾ, ಜರ್ಮನಿ, ವಿಯಟ್ ನಾಮ್‌ಗಳ ವಿಭಜನೆ; ಹಲವಾರು ಸೇನಾ ಒಪ್ಪಂದಗಳು ಮತ್ತು ಸೇನಾನೆಲೆಗಳ ರಚನೆ ಅಣು ಶಸ್ತ್ರಗಳ ನಿರ್ಮಾಣ ಮತ್ತು ನಿಶ್ಶಸ್ತ್ರೀಕರಣವನ್ನು ಸಾಧಿಸುವ ಸಾಧ್ಯಾಸಾಧ್ಯತೆ ಇವುಗಳಲ್ಲಿ ಅಡಗಿದೆ. ಕೊರಿಯಾ, ಜರ್ಮನಿ, ವಿಯಟ್ ನಾಮ್‌ಗಳ ಏಕೀಕರಣ, ಸಾಧನೆ, ಸೇನಾ ಒಪ್ಪಂದಗಳನ್ನು ರದ್ದುಪಡಿಸುವಿಕೆ, ಅಣುಶಸ್ತ್ರಗಳ ತಯಾರಿಕೆ ನಿಷೇಧ ಮತ್ತು ಈಗಿರುವ ಅಣು ಶಸ್ತ್ರಗಳ ದಾಸ್ತಾನಿನ ನಿರ್ಮೂಲನ ಹಾಗೂ ನಿಶ್ಶಸ್ತ್ರೀಕರಣ ಯೋಜನೆಗಳನ್ನು ಜ್ಯಾರಿಗೆತರುವ ಕಾರ್ಯವನ್ನು ಮಹಾರಾಷ್ಟ್ರಗಳು ಕೈಕೊಳ್ಳಬೇಕೆಂಬುದೇ ಜಾಗತಿಕ ಶಾಂತಿಸಮಿತಿಯ ಕರೆಯಾಗಿದೆ! ಎಂದುಮುಂತಾಗಿ ಹೇಳಿದರು.

**ಮೈಸೂರು ಲಿಫ್ಟ್ ಇರಿಗೇಶನ್ ಯೋಜನೆಯು–** ಜನರಲ್ ಸುಪರಿಂಟೆಂಡೆಂಟ್ ಶ್ರೀ ಜಿ. ಸಾಂಬ ಶಿವಯ್ಯನವರು ತಾ10 ಮತ್ತು 11ರಲ್ಲು ಮಂಗಳೂರಲ್ಲಿದ್ದ ಜಿಲ್ಲಾ ಕಲೆಕ್ಟರರ ಕಛೇರಿಯಲ್ಲಿ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿನಿಂದ ನಡೆಸುವ ನೀರೆತ್ತುವ ಪಂಪುಗಳನ್ನು ಉಪಯೋಗಿಸಿ, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಮೈಸೂರು ಸರಕಾರದವರು ಕೈಗೊಂಡಿರುವ ಯೋಜನೆಗಳನ್ನು ವಿವರಿಸಿದರು. ಕೃಷಿಕರ ಉಪಯೋಗಕ್ಕಾಗಿ ವಿದ್ಯುಚ್ಛಕ್ತಿಯಿಂದ ನಡೆಸುವ ಪಂಪುಗಳಿಗೆ ಪೂರೈಕೆ ವಿದ್ಯುಚ್ಛಕ್ತಿ ಮತ್ತು ವ್ಯವಸಾಯ ಪಂಪುಗಳನ್ನು ಕಂತಿನಮೇಲೆ ಕೊಡಿಸುವ ಯೋಜನೆಯನ್ನು ವಿವರಿಸಿದರು. ದ. ಕ. ಜಿಲ್ಲೆಯ ನದೀತೀರಗಳಲ್ಲಿರುವ ಹೊಲಗಳಲ್ಲಿ ಎರಡನೇ ಮತ್ತು ಮೂರನೇ ಬೆಳೆಗಳನ್ನು ಬೆಳೆಸುವ ಸಾಧ್ಯತೆಯನ್ನು ಸಂಶೋಧಿಸಲು ಶ್ರೀ ಬಿ. ವೈಕುಂಟ ಬಾಳಿಗ, ಎಮ್. ಎಲ್. ಎ. ಅವರು ಮೈಸೂರು ಸರಕಾರವನ್ನು ಕೇಳಿಕೊಂಡ ಮೇರೆಗೆ ಲಿಫ್ಟ್ ಇರಿಗೇಶನ್ ಇಂಜಿನಿಯರರ ಬರಲು ಕಾರಣವಾಯಿತು.

**ಕೇಳಿಕೆಗಳ ದಿನ–** ಮಂಗಳೂರು ಮುನಿಸಿಪಲ್ ಮಜೂರರ ಸಂಘದ ಆಶ್ರಯದಲ್ಲಿ ತಾ. 18ರಲ್ಲಿ ಸಂಜೆ ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಕೇಳಿಕೆಗಳ ದಿನವು ಆಚರಿಸಲ್ಪಟ್ಟಿತು. ಶ್ರೀ ಯು. ಅಮ್ಮುನವರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಕೆ. ಪೋನಪ್ಪ ಸೆಟ್ಟಿ ಮೊದಲಾದವರು ಭಾಷಣಮಾಡುತ್ತಾ ಮುನಿಸಿಪಲ್ ಮಜೂರರ ಬೇಡಿಕೆಗಳು ಬೇಗನೆ ಪೂರೈಸಬೇಕೆಂದರು.

**ಮತ್ಸ್ಯ ಹಿಡಿಯುವ ಪರೀಕ್ಷಾರ್ಥ ಪ್ರಯೋಗ–** ಕಳೆದ ಎಪ್ರಿಲ್ ತಿಂಗಳಲ್ಲಿ ಮಂಗಳೂರಿನ ಬಳಿ ನಡೆಸಿದ ಪ್ರಯೋಗಗಳಿಂದಾಗಿ ಟ್ರಿಲರ್ (ಬಲೆದೋಣಿ) ಗಳ ಮೂಲಕ ಮತ್ಸ್ಯಹಿಡಿಯುವ ಉತ್ತಮ ಪರಿಣಾಮವನ್ನು ಪಡೆಯಬಹುದೆಂದು ಲೋಕಸಭೆಯಲ್ಲಿ ಶ್ರೀ ಬಿ. ಶಿವರಾಯರು ಕೇಳಿದ ಪ್ರಶ್ನೆಗೆ ಕೇಂದ್ರ ವ್ಯವಸಾಯ ಮಂತ್ರಿ ಡಾ. ಪಂಜಾಬರಾವ್ ದೇಶಮುಖರು ಉತ್ತರಗೊಟ್ಟಿದ್ದಾರೆ.

# ಜೀವನ

(೯ನೇ ಪುಟದಿಂದ)

ನ್ನು ಧರಿಸುವುದು ಅತೀ ಅಗತ್ಯವು. ಅಧ್ಯಾಪಕರಿಗೆ ಸಿನೆಮಾ ನಟನಟಿಯರ ಮಾದರಿಯ ಉಡಿಗೆತೊಡಿಗೆಗಳು ವರ್ಜ್ಯವು. ದೊರಕುವ ವೇತನಕ್ಕೆ ಸರಿಯಾಗಿ ಹೊಂದಿಸಿಕೊಂಡು, ಕಡಿಮೆ ಬೆಲೆಯ ಬಟ್ಟೆಬರೆಗಳಾದರೂ ನಿರ್ಮಲತೆಗೆ ಮಾದರಿಯಾಗಿರಬೇಕು. ಆಯಾಯ ಸ್ಥಾನಮಾನಗಳಿಗೆ ತಕ್ಕುದಾದ ಉಡಿಗೆ ತೊಡಿಗೆಗಳ ನಿಯಮದ ಕುರಿತು ಈಗ ಶಿಥಿಲತೆ ಕಂಡುಬರುತ್ತಿದೆಯಾದರೂ ಅಧ್ಯಾಪಕನು ಎಂದೂ ತನ್ನ ಗೌರವಕ್ಕೆ ಕಡಿಮೆಯಾದ ಉಡುಪನ್ನು ಧರಿಸುವುದು ಆಕ್ಷೇಪಕರವು. ತನ್ನ ತರಗತಿಯಲ್ಲಿ ವಿದ್ಯಾರ್ಥಿಗಳ ಶಿಸ್ತನ್ನು ಕಾಪಾಡಲು, ವಿದ್ಯಾರ್ಥಿಗಳಿಗೆ ಅಧ್ಯಾಪಕರಲ್ಲಿ ಅಭಿಮಾನವುಂಟಾಗಲು, ಶುಚಿಯಾದ ವ್ಯವಸ್ಥಿತ ರೀತಿಯ ಉಡುಪು ಸಹಕಾರಿಯಾಗಿದೆ.

ಅಧ್ಯಾಪಕರು ತಮ್ಮ ಪಾಲಿನ ಜವಾಬ್ದಾರಿಕೆಯ ಕೆಲಸವನ್ನು ತುಂಬಿದ ಮನಸ್ಸಿನಿಂದ ಮಾಡಿ ಮುಗಿಸಲು ಯತ್ನಿಸಬೇಕು. ನಾಡನ್ನು ರೂಪಿಸುವ, ನಾಡಿನ ಅಮೂಲ್ಯ ನಿಧಿಗಳಂತಿರುವ ಮುಂದಿನ-ಜನಾಂಗವಾದ ಮಕ್ಕಳು ತನ್ನ ಮಾರ್ಗದರ್ಶನದಿಂದ ತರಬೇತಿ ಹೊಂದುತ್ತಿರುವರೆಂದೂ, ಅವರ ಶಾರೀರಿಕ, ಮಾನಸಿಕ ಉನ್ನತಿಗಾಗಿ ತಾನು ಯಥೋಚಿತವಾಗಿ ದುಡಿಯಬೇಕೆಂದೂ ಅಧ್ಯಾಪಕರು ಕರ್ತವ್ಯನಿಷ್ಠರಾಗಬೇಕು. ತನ್ನ ಆದರ್ಶ ವರ್ತನೆಯು ಮಕ್ಕಳ ಮೇಲೆ ಪರಿಣಮಿಸಲ್ಪಟ್ಟು, ತನ್ಮೂಲಕ ನಾಡಿನ ಭವಿಷ್ಯದ ಸಂಪತ್ತುಗಳೆನ್ನಿಸಲ್ಪಡುವ ಮಕ್ಕಳು ಎಲ್ಲಾ ವಿಧದಲ್ಲೂ ಸಚೇತನರಾಗಿ ಬೆಳೆದು, ನಾಡಿನ ಆದರ್ಶ ಪ್ರಜೆಗಳಾಗಿ ಬಾಳಲು ಮಾರ್ಗದರ್ಶನ ಮಾಡುವ ಹೊಣೆಗಾರಿಕೆಯು ಅಧ್ಯಾಪಕರಿಗೇ ಮೀಸಲಾಗಿರಿಸಿದುದು!

ಇಷ್ಟೆಲ್ಲಾ ಹೊಣೆಗಾರಿಕೆಯನ್ನು ಹೊತ್ತ ಅಧ್ಯಾಪಕನು ತನ್ನ ನಿತ್ಯದ ಜೀವನಕ್ಕಾಗಿ ಆರ್ಥಿಕ ಮುಗ್ಗಟ್ಟಿನಿಂದ ಪೇಚಾಟಪಡುವಂತಿರಬಾರದು. ಪ್ರತಿಯೊಬ್ಬರಿಗೂ ಗೌರವ ಪೂರ್ಣವಾದ ಜೀವನವನ್ನು ಸಾಗಿಸಬೇಕಾದರೆ ಸಾಕಷ್ಟು ಆರ್ಥಿಕ ಅನುಕೂಲತೆ ಬೇಕು. ಅಧ್ಯಾಪಕರ ವೇತನದ ಮಟ್ಟವು ಈಗಿನ ಹೀನಸ್ಥಿತಿಯಲ್ಲೇ ಇದ್ದರೆ ಅವರು ತಮ್ಮ ಸ್ಥಾನವನ್ನು ಹೇಗೆ ಸುಲಭದಲ್ಲಿ ಉಳಿಸಿಕೊಳ್ಳಬಲ್ಲರು? ನಿತ್ಯದ ಜೀವನದ ಖರ್ಚು ವೆಚ್ಚಗಳ ಬೇದನೆಯ ಸಮಸ್ಯೆಯು ಮಾನಸಿಕ ಕ್ಲೇಶಕ್ಕೆ ಕಾರಣವಾಗಿ ಪರಿಣಮಿಸುವಂತಾದರೆ, ತನ್ನ ಪಾಲಿನ ಕರ್ತವ್ಯದ ಹೊಣೆಗಾರಿಕೆಯ ಪೂರ್ಣತೆಯು ಹೇಗೆ ಸುಲಭದಲ್ಲಿ ಸಾಧ್ಯವಾಗುವುದು?

ಇಂಥ ತೊಡಕುಗಳು ಅಧ್ಯಾಪಕರ ಜೀವನದಲ್ಲಿ ಸುಳಿಯುವುದು ನಾಡಿನ ಅಭಿವೃದ್ಧಿಗೆ ಒಳಿತಲ್ಲ. ಅಧ್ಯಾಪಕರಿಗೆ ತಮ್ಮ ಪಾಲಿನ ಸಂಬಳವಲ್ಲದೆ ಲಂಚುಗುಳಿತನಕ್ಕೆ ಅವಕಾಶವಿಲ್ಲವೆಂಬುದು ಸರ್ವವಿಧಿತವು. ದೊರಕುವ ವೇತನವೇ ಅಲ್ಪ ಮಟ್ಟದ್ದಾದರೆ ಜೀವನದ ಸಮಸ್ಯೆಯ ಪರಿಹಾರ ಮಾರ್ಗವು ಹೇಗೆ ಸಾಧ್ಯವು? ನಾಡಿನ ಏಳಿಗೆಯ ಕಾರ್ಯದಲ್ಲಿ ಅಧ್ಯಾಪಕರ ಹೊಣೆಗಾರಿಕೆಯು ಅತೀ ಮಹತ್ವದ್ದು. ಪಾರತಂತ್ರ್ಯವೆಂಬ ನೊಗಕ್ಕೆ ಹೆಗಲೊಡ್ಡಿ ಶತಮಾನಗಳಿಂದ ಪರದಾಸ್ಯದಲ್ಲಿ ಬೇಸತ್ತ ಮುಂದಿಯು ಎಚ್ಚರಗೊಂಡುದು ವಿದ್ಯಾಪ್ರಸಾರದ ಮೂಲಕ ಗಳಿಸಿದ ಬುದ್ಧಿಯ ಬಲದಿಂದಲೇ ಆಗಿದೆ. ಮುಂದೆ ಕೂಡಾ ಸರಕಾರವು ನಾಡಿನ ಏಳಿಗೆಗಾಗಿ ಭಾರೀ ಯೋಜನೆಗಳನ್ನು ಬೆಳಕಿಗೆ ತರುವುದಾದರೂ ಜನರ ವಿದ್ಯಾಭ್ಯಾಸದ ಮಟ್ಟವು ಏರಿ ಮಾನಸಿಕ ಅಭಿವೃದ್ಧಿಯಾಗದೆ ಯಾವುದೂ ಶೀಘ್ರ ಫಲಕಾರಿಯಾಗದು. ಎಂದರೆ ಸಾಕ್ಷರತೆಯ ಪ್ರಚಾರವಾಗಿ ಎಲ್ಲೆಡೆಗಳಲ್ಲೂ ವಿದ್ಯಾವಂತರು ಹೆಚ್ಚಿ ಜನರ ಸಹಕಾರವು ಶೀಘ್ರವಾಗಿ ದೊರಕುವಂತಾಗಬೇಕು. ವಿದ್ಯಾಭ್ಯಾಸದ ಪ್ರಸಾರ ಕಾರ್ಯದ ಹೊಣೆಹೊತ್ತ ಅಧ್ಯಾಪಕರ ಆರ್ಥಿಕ ಸ್ಥಿತಿಯು (ವೇತನ ಮಟ್ಟವು) ಅಭಿವೃದ್ಧಿಯಾಗುವುದೆಂದರೆ ಅದು ನಾಡಿನ ಹಿತಸಾಧನೆಯ ಒಂದು ಕಾರ್ಯವೆನ್ನುವುದರಲ್ಲಿ ಸಂದೇಹವಿಲ್ಲ.

–ಶ್ರೀ ಶಿವರಾಮ ಸೆಟ್ಟಿ, ಮಟ್ಟುಡಿ

# ದಿ ಮೂಲ್ಕಿಬೇಂಕ್ ಲಿಮಿಟೆಡ್, ಮುಲ್ಕಿ

**ನೋಟೀಸು.**

ಈ ಮೂಲಕ ತಿಳಿಯಪಡಿಸುವುದೇನಂದ್ರೆ, ಈ ಕೆಳಗೆ ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಆಡವಿನಲ್ಲಿ ಸಾಲಪಡಕೊಂಡು ದೀರ್ಘಕಾಲದಿಂದ ಅಸಲು ಬಡ್ಡಿಯನ್ನು ಬಾಕಿಮಾಡಿರುವುದರಿಂದ, ರಜಿಸ್ಟ್ರ ನೋಟೀಸು ಕೊಟ್ಟರೂ, ಆಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ ಸದ್ರಿಯವರ ನಗಗಳನ್ನು ತಾ. 27-12-1953 ನೇ ಗುರುವಾರ ಮಧ್ಯಾಹ್ನ ಗಂಟೆ 12ಕ್ಕೆ ಯಾ ತದನಂತರ ಯುಕ್ತಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರಲಿ.

| ಲೋನು ನಂಬ್ರ | ಹೆಸರು ಮತ್ತು ವಿಳಾಸ | ಅಸಲು ಮೊಬಲಗು |
|---|---|---|
| 466/51 | ಶೀನ ಡಿ ಸಿರಿಯಾನ್ S/o ದೋಗು ಸಾಲಿಯಾನ್ ಕೀತ್ತೊರ್ಟಿ ಮನೆ, ಸಸಿಹಿತ್ಲು, ಹಳೆಯಂಗಡಿ | 80/- |
| 169/52 | ಕೆ ರಘುನಾಥ ಶೆಟ್ಟಿ, ಕೊಲ್ನಾಡು ನಾಂದೆ ಹೌಸ್, ಬೆಳ್ಳೈರು ಹಳೆಯಂಗಡಿ. | 150/- |
| 451/52 | ತುಂಗು ಪೊಂಗ್ಯ, W/o ಕಾಂತರ ಶೇರಿಗಾರ, ಪಡು ಪಣಂಬೂರು ಹಳೆಯಂಗಡಿ. | 35/- |
| 559/52 | ಯಂ. ಆರ್. ಭಟ್, ಪ್ರೊಪ್ರೈಟರ್, ಶ್ರೀ ದುರ್ಗಾ ಭವನ ಮೂಲ್ಕಿ. | 1,100/- |
| 455/53 | ಅಂತು ಶೆಟ್ಟಿ. ಪುತ್ತೂರು ಬಾವ, ಅತಿಕಾರಿಬೆಟ್ಟು, ಮುಲ್ಕಿ. | 150/- |
| 562/54 | ಯಸ್ ನಾರಾಯಣ ಪ್ರಭು, S/o ವಿಶ್ವನಾಥ ಪ್ರಭು, ಗವರ್ನಮೆಂಟ್ ಬೇಸಿಕ್ ಟ್ರೈನಿಂಗ ಸ್ಕೂಲ್ ಮಂಗಳೂರು-3 | 15/- |
| 569/54 | ಯಚ್. ನೇಮು ಸ್ರೀಯಾನ್, S/o ಐತ, ಪೂಜಾರಿ ಮನೆ, ಗುಂಡಿ, ಪೆಜ್ಮಾಡಿ. | 200/- |
| 581/54 | ಅಲಿಯಬ್ಬ, S/o ಮೈದಿನಬ್ಬ. ದೊಡ್ಡಮನೆ. ಮೂಲ್ಕಿ. | 10/- |
| 475/54 | ಹುಮ್ಮಬ್ಬ ಬ್ಯಾರಿ. S/o ಅಬ್ಬು ಬ್ಯಾರಿ. ಕನ್ನಂಗಾರ್ ಪೆಜ್ಮಾಡಿ. | 20/- |
| 474/54 | ಶೈ. ಮಹಮೂದ್ ಗೌಸ್. S/o ಮಹಮ್ಮದ್ ಹಸನ್ ಸಾಹೇಬ ತಂಕ-ಎರ್ಮಾಳು. | 130/- |
| 763/54 | —do— | 30/- |
| 865/54 | —Do— | 32/- |
| 1191/54 | ಅದನ್ ಸಾಹೇಬ್. S/o ಅಬ್ದುಲ್ ಖಾದರ್ ಸಾಹೇಬ್, ಹಳೆಯಂಗಡಿ. | 8/- |

*Office of the Bank Mulki,*
*Date 15—12—'56.*

ಎಂ. ಆರ್. ಯಚ್. ಪೂಂಜ.
ಮೆನೇಜರ್.

## ಕನ್ನಡ ಸಾಹಿತ್ಯ

(೧ನೇ ಪುಟದಿಂದ)

ಕ್ಕಿಂತ ಭಿನ್ನವಾದುದಲ್ಲ ಎನ್ನುವ ದಿಗ್ದರ್ಶಕನ ಕೈವಾಡ ಈ ಚಿತ್ರ. ಇಂಥವರು, ಎಂದೇ ಆಗಲಿ, "ದಿ ಲಿವ್ವಿಂಗ್ ಡೆಸಾರ್ಟ್" ಮಾದರಿಯ ಚಿತ್ರವನ್ನು ಚಿತ್ರಿಸಿಯಾರೆ? ಆ ಸಹನೆ, ಆ ನಿರೀಕ್ಷೆ—ಮತ್ತು ಎಲ್ಲಕ್ಕೂ ಹೆಚ್ಚಾಗಿ ಆ ಪ್ರತಿಭೆಯನ್ನು ನಾವೆಂದು ನಿರೀಕ್ಷಿಸಬಹುದು?

ತನ್ನ "ಕುಡಿಯರ ಕೂಸು" ಮತ್ತಿತರ ಬೇರೆ ಕೆಲವು ಕಾದಂಬರಿಗಳಲ್ಲಿ ಕಾರಂತರು ಜೀವನ ವಿಧಾನದ ಸಮೀಕ್ಷೆಯನ್ನು ಚೆನ್ನಾಗಿ ಮಾಡಿದ್ದಾರೆ. ಕಾದಂಬರಿಯ ಚೌಕಟ್ಟಿನಲ್ಲಿ ಸಾಮಾಜಿಕ ಜೀವನವನ್ನು ಇಷ್ಟು ಸೂಕ್ಷ್ಮಾವಲೋಕನಗೈದ ಲೇಖಕ ಕನ್ನಡದಲ್ಲಿ ಬೇರೆ ಬಂದಿಲ್ಲ. ಆದರೆ ಅವರೊಬ್ಬರೇ ಎಷ್ಟು ಬರೆದಾರು? ಬರೆದುದನ್ನು ಓದುವ ಜನರಿಲ್ಲವೆಂದ ಮೇಲೂ ಬರೆದು, ಪ್ರಕಟಿಸಿ ಹಣ ನಷ್ಟಕ್ಕೆ ಗುರಿಯಾಗಲು ಅವರೆಂತು ಸಿದ್ಧರಾದಾರು? ಜನರ ಪ್ರೋತ್ಸಾಹದಿಂದಲೇ ಬೆಳೆಯಬೇಕಾದುದು ಸಾಹಿತ್ಯ; ಕಲೆ; ಎಲ್ಲವೂ—ಅಂತಹ ಪ್ರೋತ್ಸಾಹ ಸಿಗಲಿಕ್ಕಾಗಿ ನಮ್ಮವರ ಅಭಿರುಚಿಯ ಮಟ್ಟ ಎತ್ತರಗೊಳ್ಳಬೇಕಾಗಿದೆ; ತುಂಬ ಸುಧಾರಿಸಬೇಕಾಗಿದೆ. ಕನ್ನಡ ಓದುವವರೇ ವಿರಳವಾಗಿದ್ದ ಕಾಲವು ಸಂದು, ಓದುಗರ ಸಂಖ್ಯೆ ಇಂದು ಹೆಚ್ಚಾದಂತೆ, ನಾಳೆ ನಾನಾ ಪ್ರಕಾರದ ಸಾಹಿತ್ಯ ಕೃತಿಗಳನ್ನು ಜನ ಓದಿಯಾರು ಎಂಬ ಭಾವನೆಯೊಂದೇ ನಮ್ಮನ್ನು ನಿರಾಶೆಯಿಂದ ಪಾರುಮಾಡಬಲ್ಲುದೆಂದು ಕಾಣುತ್ತದೆ.

ಸಾಮಾನ್ಯ ಡೊಂಬನೊಬ್ಬನ ಜೀವನವು ಎಷ್ಟು ರೋಮಾಂಚಕಾರಿಯಾಗಿದೆ—ಎಂಬುದನ್ನು "ಕಸ್ತೂರಿ" ಎಂಬ ಕನ್ನಡ ಪತ್ರಿಕೆ ಕಳೆದ ತಿಂಗಳು ಕನ್ನಡಿಗರಿಗೆ ವಿವರಿಸಿತು. ಆಂಗ್ಲ ಭಾಷೆಯಲ್ಲಿ ಇಂಥ ಸುಂದರ ಪುಸ್ತಕಗಳಿವೆ. ನೀರಿನ ಆಳದಲ್ಲಿ ಎಂಥ ಪ್ರಪಂಚವಿದೆ ಎನ್ನುವುದನ್ನು ಕನ್ನಡದಲ್ಲಿ ತಿಳಿಸುವ ಒಂದಾದರೂ ಗ್ರಂಥ ಬಂದಿದೆಯೇ? ಓದಬೇಕೆನ್ನುವವರು ಆಂಗ್ಲ ಭಾಷೆಯಲ್ಲಿ ತಿಳಿದಿದ್ದರೆ, ಅಲ್ಲಿ ಎಷ್ಟು ಪುಸ್ತಕಗಳು ಈ ವಿಷಯದ ಮೇಲೆ ಬೇಕೋ ಅಷ್ಟು ಸಿಗುತ್ತವೆ "ವೇನ್, ದಿ ಅನ್‌ನೋನ್" ಎಂಬಂಥ ಗ್ರಂಥ ವಿಶ್ವ ವಿದ್ಯಾನಿಲಯದ ಕೃಪೆಯಿಂದ ಕನ್ನಡಿಗರಿಗೆ ಇಂದು ತಮ್ಮ ಭಾಷೆಯಲ್ಲಿ ಓದಲು ದೊರೆತಿದೆ; ಅದೊಂದೇ ಪುಸ್ತಕದಲ್ಲಿ ಎಷ್ಟು ಜ್ಞಾನತುಂಬಿದೆ! ಎಷ್ಟು ಅನುಭವ ಅಲ್ಲಿದೆ! ಎಷ್ಟು ವರ್ಷಗಳ ಸಾಧನೆ, ಸಮೀಕ್ಷೆ ಮತ್ತು ತೀರ್ಮಾನಗಳ ಸೂಚು ಅದು! ಅದನ್ನು ಓದಿದರೆ, ಒಂದಲ್ಲ ನಾಲ್ಕು ಬಾರಿ ಓದಿದ ಬಳಿಕವಾದರೂ, ಅರ್ಥಮಾಡಿಕೊಳ್ಳಬಲ್ಲಷ್ಟು ಸಂಸ್ಕಾರವನ್ನು ಕನ್ನಡದ ಓದುಗ ಇಂದು ಪಡೆದಿರುವನೆ? "ಮನೋವಿಶ್ಲೇಷಣಾತ್ಮಕ" ಎಂಬ ತಲೆಪಟ್ಟಿಯನ್ನು ಹೆಚ್ಚಿಕೊಂಡಿರುವ ನೂರು ಕನ್ನಡ ಕಾದಂಬರಿಗಳನ್ನು ನೂರು ಸಾರಿ ಓದಿದವನಿಗಾದರೂ ಇದೊಂದು ಪುಸ್ತಕವನ್ನು ಅನುಸರಿಸುವುದು, ಮತ್ತು ಅರ್ಥಮಾಡಿಕೊಳ್ಳುವುದು ಸಾಧ್ಯವಾದೀತೆ? ನಮಗಂತೂ ತುಂಬ ಸಂಶಯ.

ಇದನ್ನೆ ಜ್ಞಾನ ದಾರಿದ್ರ್ಯ ಎಂದದ್ದು: ಓದದವರು ಇಲ್ಲವೆಂದಾದ ಮೇಲೆ ಬರೆದೇನು ಪ್ರಯೋಜನ? ಎನ್ನುವ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ನಮಗೆ ಅರ್ಥವಾಗದ ಪುಸ್ತಕಗಳ ಗೊಡವೆಗೆ ನಾವೇಕೆ ಹೋದೇವು ಎನ್ನುತ್ತಾರೆ ಜನ. ಆದುದರಿಂದ ಜನ ಸಾಧಾರಣರಿಗೆ ಅರ್ಥವಾಗುವಂತೆ ಬರೆಯಿರಿ ಎನ್ನುತ್ತಾರೆ ಉಪದೇಶಕರು; ಅಥವಾ ವ್ಯವಹಾರಜ್ಞರು. ಭೂಗೋಳವನ್ನು ಕತೆಯಂತೆ ಹೇಳಿರಿ; ಸಾಮಾಜಿಕ ಸಮಸ್ಯೆಯನ್ನು ಕಾದಂಬರಿಯ ರೂಪದಲ್ಲಿ ಚಿತ್ರಿಸಿರಿ ಎಂದೆಲ್ಲ ಪರಿಹಾರ ಮಾರ್ಗಗಳನ್ನು ಸೂಚಿಸುತ್ತಾರೆ. ಕತೆ ಹೇಳುವುದು ವಿಷಯದಲ್ಲಿ ಕುತೂಹಲವನ್ನು ಕೆರಳಿಸುವ, ಆಸಕ್ತಿಯನ್ನು ಹುಟ್ಟಿಸುವ ಸುಲಭ ತಂತ್ರವೆಂದು "ಪಂಚತಂತ್ರ"ವನ್ನು ಬರೆದ ನಮ್ಮ ಮುತ್ತಜ್ಜರಿಗೆ ಗೊತ್ತಿದ್ದಿತು. ಆದರೆ ಅಂದಿನಿಂದ ಇಂದಿಗೆ ಕಾಲ ಬದಲಾಗಿಲ್ಲವೆ? ನಾವು ಅಂದಿನಂತೇ ಕಥನ ಕುತೂಹಲಿಗಳಾಗಿ, ಶ್ರವಣೋತ್ಸಾಹಿಗಳಾಗಿಯೇ ಉಳಿತಿರಬಲ್ಲೆವೆ? ಅಂದು ಪತ್ರಿಕೆಗಳಿರಲಿಲ್ಲ; ಪುಸ್ತಕಗಳಿರಲಿಲ್ಲ; ಹೊರ ಜಗತ್ತಿನ ವಿಪುಲ ಸಂಪರ್ಕವಿರಲಿಲ್ಲ; ಇಂದಿನಷ್ಟು ತಿಳುವಳಿಕೆಯಾದರೂ ಇತ್ತೆಂಬುದಕ್ಕೆ ಆಧಾರ ಸಿಕ್ಕಿಲ್ಲ. ಆದುದರಿಂದ ಅಂದಿನಂತೆ ಇಂದೂ ನಾವು ಕಥಾ ಶ್ರವಣದಿಂದಲೇ ಧನ್ಯಭಾವವನ್ನು ಹೊಂದುವ ಹಾಗಿಲ್ಲ.

ಸಾಹಿತ್ಯ ವೃಕ್ಷದ ತಾಯಿಬೇರೆಂದರೆ ಜನರ ಅಭಿರುಚಿ. ಅದು ನಿರಂತರವಾದ ಪ್ರೋತ್ಸಾಹವನ್ನು ಕೊಡುತ್ತಿದ್ದರೆ, ಲೇಖಕರ ಸಮುದಾಯವು ಹೊಸ ಹೊಸ ವಿಷಯಗಳನ್ನ ಕಲೆಹಾಕಿಕೊಂಡು ವಿದ್ವತ್ಪೂರ್ಣವಾದ ಕೃತಿಗಳನ್ನು ಪ್ರಕಾಶನಕ್ಕೆ ತರಲು ಪ್ರಯತ್ನಪಟ್ಟೀತು. ನಮ್ಮಲ್ಲಿ ಕೇವಲ ಲೇಖನ ವ್ಯವಸಾಯದ ಮೇಲಿಂದಲೇ ಬದುಕುವ ಜನರೆಷ್ಟುಮಂದಿ? ಬೆರಳೆಣಿಕೆಯಷ್ಟು ಸಿಗಲಾರದ ಪುಣ್ಯವಂತರ ಕೂಟವೇ ನಮ್ಮ ಬರಹಗಾರರ ಬಳಗ. ಎಲ್ಲವರೂ ಹೊಟ್ಟೆಗಾಗಿ ಮುಖ್ಯ ಪ್ರವೃತ್ತಿಯೊಂದನ್ನು ಕೈಗೊಂಡು, ಲೇಖನ ವ್ಯವಸಾಯವನ್ನು ಸಾಹಿತ್ಯ ಸೇವಾಕಾಂಕ್ಷೆಯಿಂದಲೇ, ಸಾಹಿತಿ ಎಂಬ ಕೀರ್ತಿಗಾಗಿಯೇ ಬರೆಯುವವರಲ್ಲದೆ, ಬರಹದಿಂದ ಉಪಜೀವನ ನಡೆಸುವವರಿಲ್ಲ. ಆಂಗ್ಲ ಭಾಷೆಯಲ್ಲಿ ಸ್ವತಂತ್ರವೂ ವ್ಯಾಪಕವೂ ಆದ ಉತ್ತಮೋತ್ತಮ ಕೃತಿಗಳು ಹುಟ್ಟುವುದಕ್ಕೆ ಬರಹಗಾರರನ್ನು ಪೂರ್ಣಾವಧಿಯನ್ನು ಲೇಖನ ವ್ಯವಸಾಯಕ್ಕೇನೇ ವಿನಿಯೋಗಿಸಲಾಗಿಟ್ಟಿರಲು ಸಾಧ್ಯವಿರುವುದೇ ಮುಖ್ಯ ಕಾರಣ. ನಮ್ಮಲ್ಲಿ ನನ್ನೀ ಲೇಖನ ಪ್ರಕಟವಾಗಲಿಕ್ಕಾದರೂ ನಾನೇ ಒಂದಾಣೆಯನ್ನು ಟಪ್ಪಾಲಿಗೆ ಎರಡು ತಾಸು ಸಮಯವನ್ನೂ ನಾಲ್ಕು ಹಾಳೆ ಕಾಗದವನ್ನೂ ಬರೆಯಲಿಕ್ಕೆ ಉಪಯೋಗಿಸಿ—ಈ ನಷ್ಟವನ್ನೆ ಓದುವ ಜನರ ಮೇಲೆ ಲೇಖನವು ಮಾಡುವ ಪರಿಣಾಮದ "ಲಾಭ"ದ ಮೊತ್ತದಿಂದ ಭರ್ತಿಮಾಡಿಕೊಳ್ಳಬೇಕಾಗಿದೆ!

ಕನ್ನಡ ಜನರೂ ಸರಕಾರವೂ ವಿದ್ವಾಂಸರೂ ಎಲ್ಲರೂ ತೀವ್ರವಾಗಿ ಪರ್ಯಾಲೋಚಿಸಲೇಬೇಕಾದ ವಿಷಯವಿದೆಂದು ಈಗಲಾದರೂ ಮನವರಿಕೆಯಾದೀತಲ್ಲವೆ?

(ಬರೆದು ಬಂದುದು)

## ಜಾಗೃತಿ

೧

ಹಾಯಾಗಿ ಕುಳಿತುಂಡು, ಮನೆಯಲ್ಲಿ ಮಲಕೊಂಡು
ಪೌರುಷದ ತೋರಲ್ಕೆ ಗರ್ಜಿಸಿದರೇನು?
ಮಾತಾಡುವಂತೆಲ್ಲ ಕೃತಿಗೆಯ್ಯ ತೊಡಗಿದರೆ
ನಮ್ಮೆಲ್ಲ ಬಯಕೆಗಳು ಕೈಗೂಡವೇನು?

೨

ಕನ್ನಡದ ಕೈಬಿಟ್ಟ, ಹಳ್ಳಿಗಳ ಪಡೆಯಲ್ಕೆ
ಎಲ್ಲರೂ ಒಂದಾಗಿ ಧ್ವನಿಗೆಯ್ಯಬೇಕು;
ನೊಂದಿರುವ, ಬೆಂದಿರುವ, ಬಂಧುಗಳ ತಣಿಸಲ್ಕೆ
ಪ್ರಾಣಗಳ ಪಣಕಿಟ್ಟು ಹೋರಾಡಬೇಕು!

೩

ಕನ್ನಡದ ತಾಯ್-ಹಾಲು ಕುಡಿದುಂಡು ಬೆಳೆದವರೆ
ಕೈಬಿಟ್ಟು ಕುಳಿತವರಿಗೇನನ್ನಬೇಕು?
ಬಂಡೊಡಲಿನಿಂ ಬಂದ ಕನ್ನಡಿಗರೊಂದಾಗಿ
ಬಂಧುಗಳ-ಭಗಿನಿಯರ ಕೈ ಹಿಡಿಯಬೇಕು!

೪

ನಮಗೆಲ್ಲ ಸುಖವೇದಿ, ದುಃಖದಲಿ ಸಿಗಿಬಿದ್ದು
ಕಣ್ಣೀರುಗರೆವವರ ಸಂತೈಸಬೇಕು;
ಕನ್ನಡದ ಮನೆಯಲ್ಲೇ ನೆಲೆನಿಂದು ಬಾಳುವೊಲು
ಬಿದ್ದಿರುವ ಭಾಗ್ಯವನು ಮೇಲೆತ್ತಬೇಕು!

೫

ಹಾಯಾಗಿ ಕುಳಿತುಂಡು, ಮನೆಯಲ್ಲಿ ಮಲಕೊಂಡು
ಪೌರುಷದ ತೋರಲ್ಕೆ ಗರ್ಜಿಸಿದರೇನು?
ಮಾತಾಡುವಂತೆಲ್ಲ ಕೃತಿಗೆಯ್ಯ ತೊಡಗಿದರೆ
ನಮ್ಮೆಲ್ಲ ಬಯಕೆಗಳು ಕೈಗೂಡವೇನು?

**ಬಿ. ಬಿ. ಹಿಂಗಮಿರೆ,**
ಬೆಳಗಾವಿ.

## ಕಾವ್ಯಕಾಮಿನಿಗೆ

೧

ಓ ಎನ್ನ ಕಲ್ಪನೆಯ ಕಾವ್ಯಕಾಮಿನಿ ವಿಮಲೆ
ಸ್ವಾಗತಿಪೆ ನಿನ್ನ ಚಿರ ಬಾಳಯುಗದಿ
ಸತ್ಯ ಚಿರ ಸೌಂದರ್ಯ ಮಾರ್ಗದರ್ಶನವೆನಗೆ
ಸಾಗಲಾನಂತ ಪಥವಿದಿದು ಜಗದಿ!

೨

ಮೂರ್ತಿನಾ ಸೌಂದರ್ಯ ಪ್ರಕೃತಿಯ ಪೂಜಾರಿ
ಸೌಂದರ್ಯ ಭಿಕ್ಷೆಬೇಡುವ ಭಿಕಾರಿ!
ಸ್ವಪ್ನಲೋಕದ ಸೀಮೆಯನ್ನಳೆದ ವೀಥಿಯಲಿ
ಕಲ್ಪನೆಯ ಬಂಗಾರ ರಥವಿಹಾರಿ!

೩

ಜಗದ ಜನಸ್ನೇಹಿ ಎನಗಿಲ್ಲಹಗೆ ನಿಜಗುಣವು
ಸಾಗರದ ವಿಸ್ತಾರ ವಿರುವ ಮನವು
ವಸುಧೈವ ಕೌಟುಂಬಿ ಶಾಂತಿಸಂಯಮಶಕ್ತಿ
ಯುತ ಸಾರುತಿಹುದು ಪ್ರತಿ ಜೀವಕಣವು!

೪

ಬಣ್ಣವಾನಂತದ್ಯೋತಕ ನೀಲ ಕಾಣದನು
ಬಿಸುಗದಿದ ಕಾಣುತಿಹುದೆನ್ನ ದೃಷ್ಟಿ!
ರಂಗಳೆಲ್ಲಾ ಕರ್ಷಣೆಯು ಎನ್ನ ಚಿತ್ತದಲಿ
ಹೊಸತನರಳಿಪ ನೂತನ ಕೃತಿಯ ಸೃಷ್ಟಿ!

೫

ಉಷಃಕಾಲ ಸಂಜೆಗತ್ತಲು ಎನ್ನ ಸ್ಫೂರ್ತಿಸುವ
ಕಾಲನಾ ಏಕಾಂತ ಜೀವಿಯೆನು!
ಸಾಹಿತ್ಯಲೋಕದಾ ಬಿಡುಮುಡಿ ಗೇಣಲಿಕೆ
ಜವದಿ ಮೆಟ್ಟಿಲ ತುಳಿದು ನಡೆಯಿತಿಹೆನು!

೬

"ಮೆಟ್ಟಿಲಾ ಕಲ್ಪನೆಯ ಕಾವ್ಯಕಾಮಿನಿ ವಿಮಲೆ
ಎಚ್ಚೆತ್ತು ಕುಸ್ತಡದೆ ಬಾಳಯುಗದಿ!
ನಿನ್ನ ಚಿರನೂತನದ ಮಾರ್ಗದರ್ಶನ ವರದಿ
ಸಾಗಬಾನಂತ ಪಥೀಡಿಸು ಜಗದಿ!

**ಕೋಡು ಭೋಜ ಶೆಟ್ಟಿ.**
(ವಿಮಲನಾಥ)

98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅಜೀರ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

**ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., (ನ. ಯು.)**
628 ಸಂತಾನ ಸಿಂಧೂರ ಸದನ, ಪೋಸ್ಟ್ ಬಾಕ್ಸ್ 9, ಮೈಸೂರು S. I.

## ಬೆಳೆದು ಬಂದ ಪರಂಪರೆ

(೨ನೇ ಪುಟದಿಂದ)

...ನ್ನವನ್ನು ಮನೆಗೆ ಬಾ ಎಂದು ಕರೆದಂ ...ಯೆ ಸೈ. ಈಗಿರುವ ನಮ್ಮ ರಕ್ತದಲ್ಲಿ ...ರ್ಯ, ಅನಾರ್ಯಾದಿ ಆಯಾ ವಂಶದ ಇಲ್ಲ ... ಕುಲದ ರಕ್ತದ ಅಂಶವು ಎಷ್ಟು ...ುವುದು ಎಂಬುದನ್ನು ಹುಡುಕಲು ...ುತ್ನಿಸುವಷ್ಟೇ ಅದು ಹಾಸ್ಯಾಸ್ಪದವಾ...ಿದೆ.

ಪ್ರಾಂತ ಹಾಗೂ ರಾಷ್ಟ್ರ ಇವುಗಳ ...ಂಬಂಧವನ್ನು ಕುರಿತು ಯಾವ ರೀತಿ ನಾವು ವಿಚಾರಿಸುವೆವೊ ಅದೇ ರೀತಿ ವ್ಯಕ್ತಿ ಹಾಗೂ ಸಮಾಜ ಇವುಗಳ ಸಂಬಂಧದ ವಿಚಾರವು ಅವಶ್ಯ ಕರ್ತವ್ಯವು. ವ್ಯಕ್ತಿ ಹಾಗೂ ಸಮಾಜ ಇವುಗಳ ಶಾಂತಿ, ಸಮಾಧಾನ, ಸುಖ ಇವು ಇವರ ನಡುವಿನ ಪರಸ್ಪರ ಸ್ನೇಹ ಸಂಬಂಧವನ್ನೇ ಅವಲಂಬಿಸಿವೆ. ಆದುದರಿಂದ ಇದೊಂದು ಅತ್ಯಂತ ಮಹತ್ವದ ವಿಚಾರ ವಿಷಯವಿರುವದು. ಹೊರಗಿನಿಂದ ಕಾಣಲು ವ್ಯಕ್ತಿ ಎಂಬುದೊಂದು ಬಿಡಿ ವಸ್ತು; ಹುಟ್ಟಿದಂದಿನಿಂದ ತನ್ನ ಸ್ವಂತ ಹಿತವನ್ನು ಸಾಧಿಸುವುದರಲ್ಲಿ ವ್ಯಕ್ತಿಯು ನಿಮಗ್ನವಿದ್ದಂತೆ ತೋರುವುದು. ಆದರೆ ವ್ಯಕ್ತಿಯ ವಿಕಾಸವು, ಹಿತವು, ಸುಖವು ಸರ್ವತೋಪರಿ ಆಪ್ತ ಬಾಂಧವರನ್ನೊಳಗೊಂಡ ಸಮಾಜವನ್ನೇ ಅವಲಂಬಿಸಿದೆ. ತಾಯಿತಂದೆಗಳನ್ನು ಮೊದಲ್ಗೊಂಡು ಸಮಾಜವು ವ್ಯಕ್ತಿಗೆ ಕೊಟ್ಟುದನ್ನೆಲ್ಲ ಆಯಾ ವ್ಯಕ್ತಿಯ ಜೀವನದೊಳಗಿಂದ ವಜಾ ಹಾಕಿದರೆ ಶೂನ್ಯವಲ್ಲದೆ ಮತ್ತೇನು ಉಳಿಯುವದು? ಅದೇ ರೀತಿ ಆಯಾ ಸಮಾಜವನ್ನು ಕಟ್ಟಲು, ಅದರ ಗೌರವವನ್ನು ಹೆಚ್ಚಿಸಲು ವ್ಯಕ್ತಿಗಳು ಮುಡುಪಿಟ್ಟುದನ್ನು ಕಳೆದು ಬಿಟ್ಟರೆ ಅದೇನು ತಾನೆ ಉಳಿಯುವದು? ಈ ರೀತಿ ವ್ಯಕ್ತಿ ಹಾಗೂ ಸಮಾಜ ಇವುಗಳ ಅನ್ಯೋನ್ಯ ಸಂಬಂಧವು ಗಾಢವೂ, ಅಭೇದ್ಯವೂ, ಪೂರ್ಣವೂ ಇರುವದು. ಆದುದರಿಂದ ವ್ಯಕ್ತಿಯು ತನ್ನ ಶಕ್ತಿ ಸರ್ವಸ್ವವನ್ನು ಒಳ್ಳೇ ಸರ್ವಾಂಗ ಸುಂದರ ಸಮಾಜವನ್ನು ರಚಿಸುವುದಕ್ಕಾಗಿ ಉಪಯೋಗಿಸಬೇಕು. ಸಮಾಜವು ವ್ಯಕ್ತಿಯ ಶಕ್ತಿಗಳ ಸರ್ವತೋಪರಿ ವಿಕಾಸಕ್ಕಾಗಿ ಎಡೆಗೊಡಬೇಕು. ಅಂದರೆ ವ್ಯಕ್ತಿ ಹಾಗೂ ಸಮಾಜಗಳ ಪರಸ್ಪರ ಸ್ನೇಹ ಸಮೃದ್ಧಿಯಾಗಿ ಎಲ್ಲರ ಅಭ್ಯುದಯ ಶ್ರೇಯಸ್ಸುಗಳ ಸಿದ್ಧಿಗೆ ಅವಕಾಶವಾಗುವದು. ವ್ಯಕ್ತಿಗಳ ವಿಕಾಸ ಸ್ವಾತಂತ್ರ್ಯವನ್ನು ಅವಗಣಿಸಿ, ಸಾತ್ವಿಕ ಆಕಾಂಕ್ಷೆಗಳನ್ನು ಹತ್ತಿಕ್ಕಿ ಸಮಾಜದ ಹಿತವನ್ನು ಸಾಧಿಸಬೇಕೆನ್ನುವವರೂ ಸಮಾಜವು ಏನೇ ಆಗಲಿ ವ್ಯಕ್ತಿಯ ವಿಕಾಸವಾದರಾಯಿತು ಎನ್ನುವವರೂ ವ್ಯಕ್ತಿ ಹಾಗೂ ಸಮಾಜ ಇವೆರಡನ್ನು ಮಣ್ಣುಗೂಡಿಸಲನುವಾದವರು ಎಂದು ಹೇಳದೆ ಗತಿಯಿಲ್ಲ.

ಇನ್ನು ವ್ಯಕ್ತಿಗಳ ಹಾಗೂ ಸಮಾಜಗಳ ಹಿತ ಅಥವಾ ಕಲ್ಯಾಣವೆಂದರೇನು? ಈ ಬಗ್ಗೆ ಮತಭೇದವಿರುವ ಸಂಭವವಿದೆ. ಹಿತ ಹಾಗೂ ಸುಖ ಇವುಗಳಲ್ಲಿ ವಿರೋಧವಿರುವ ಸಂಭವವೂ ಇದೆ. ಬುದ್ಧನ ಉಪದೇಶವು "ಬಹು ಜನ ಹಿತಾಯ, ಬಹು ಜನ ಸುಖಾಯ" ಎಂದು ಸಾರಿತು. ಕೇವಲ ಹಿತವಲ್ಲ, ಕೇವಲ ಸುಖವಲ್ಲ. ಹಿತ—ಸುಖ ಇವೆರಡರಲ್ಲಿ ವಿರೋಧವುಂಟಾದಾಗ ಹಿತವನ್ನು ಆರಿಸಬೇಕು ಹೊರತು ಸುಖವನ್ನಲ್ಲ. ಯಾಕಂದರೆ ಹಿತಕಾರಕವಾದುದೆ ಸುಖಪರಿಣಾಮಿಯಾಗಬಲ್ಲದು; ಈಗ ಮಾತ್ರ ಸುಖವೆನಿಸಬಲ್ಲದ್ದು ಪರಿಣಾಮದಲ್ಲಿ ದುಃಖದಾಯಕವಾಗಬಹುದು. ಅದೇ ರೀತಿ, ಈ ಹಿತ—ಸುಖಗಳು ಕೇವಲ ದೇಹಕ್ಕಿಲ್ಲವೆ ಪಾರ್ಥಿವ ಜೀವನದ ಮಟ್ಟಿಗೆ ಸೀಮಿತವಾಗಿರದೆ. ದೇಹ, ಪ್ರಾಣ, ಮನ, ಬುದ್ಧಿ, ಭಾವ ಮತ್ತು ಆತ್ಮ ಇವೆಲ್ಲವುಗಳಿಗೆ ಸಂಬಂಧಿಸಿರಬೇಕು. ಈ ಎಲ್ಲ ಭೂಮಿಕೆಗಳಲ್ಲಿ (ಉಪನಿಷತ್ತಿನ ಪರಿಭಾಷೆಯಲ್ಲಿ—ಈ ಎಲ್ಲ ಕೋಶಗಳಲ್ಲಿ) ವಿಕಾಸವಾಗಬೇಕು. ಆ ವಿಕಾಸವು ಪರಸ್ಪರ ವಿರೋಧಿ ಇಲ್ಲದೆ ಮಾರಕವಾಗಿರದೆ ಪೋಷಕವಾಗಿರಬೇಕು. ಆ ವಿಕಾಸದಲ್ಲಿ ಸಮ್ಮೇಳವಿರಬೇಕು, ಸುಖವಿರಬೇಕು, ಉನ್ನತಿ ಇರಬೇಕು ಹೀಗಾದರೆ ಮಾತ್ರ ನಮ್ಮ ಜೀವನವು ಪೂರ್ಣವೆನಿಸಬಲ್ಲದು. ಮನುಷ್ಯನು ಕೇವಲ ದೇಹವೂ ಅಲ್ಲ, ಕೇವಲ ಪ್ರಾಣವೂ ಅಲ್ಲ, ಕೇವಲ ಆತ್ಮವೂ ಅಲ್ಲ. ಇವೆಲ್ಲ ಶಕ್ತಿಗಳು ಸಮ್ಮೇಳದಿಂದ ಕೂಡಿ ನಡೆದು ಸಮತೋಲವನ್ನು ಸಾಧಿಸಿದಾಗಲೆ ಮನುಷ್ಯನೆಂಬ ಒಂದು ವಸ್ತು ಅಸ್ತಿತ್ವದಲ್ಲಿ ಬಂದು ಕಾರ್ಯ ತತ್ಪರವಾಗುವದು. ಈ ಸಮತೋಲ, ಈ ಸಾಮ್ಯ, ಈ ಸಮ್ಮೇಳ ಇರುವ ವರೆಗೆಯೇ ಒಂದು ವ್ಯಕ್ತಿಯ ಜೀವನ ಸಮವಾಗಿ, ಸಂತೋಷದಿಂದ ಸುಖದಿಂದ ಸಾಗುವದ. ಈ ಸಮತೋಲ ತಪ್ಪಿದೊಡನೆ ಜೀವನದ ಹದವು ಕೆಟ್ಟು ಹೋಗುವದು; ಅದು ವಿರಸವಾಗುವದು, ಬೇತಾಲವಾಗುವದು, ಅಸಹ್ಯವಾಗುವದು.

ವ್ಯಕ್ತಿ ಎಂಬುದು ಒಂದು ಚಿತ್ ಶಕ್ತಿಯ ಬಿಂದ ವಿಶೇಷವು; ಜೀವನವೆಂದರೆ ವ್ಯಕ್ತಿಯಲ್ಲಿ ಹುದುಗಿಕೊಂಡಿರುವ ನಿಸರ್ಗದತ್ತ ಹಲವು ಆಕಾಂಕ್ಷೆಗಳ ಕ್ರಮ ವಿಕಾಸವು ಪ್ರತಿ ವ್ಯಕ್ತಿಯು, ಪ್ರತಿ ಜೀವವು ತಮಸ್ಸಿನಿಂದ ಜ್ಯೋತಿಯತ್ತ, ಮೃತ್ಯುವಿನಿಂದ ಅಮೃತತ್ವದತ್ತ, ದುಃಖದಿಂದ ಸುಖದತ್ತ, ಅಪೂರ್ಣತ್ವದಿಂದ ಪೂರ್ಣತ್ವದತ್ತ ಬಂಧನದಿಂದ ಮುಕ್ತಿಯತ್ತ, ಜಡದಿಂದ ಚೇತನದತ್ತ, ಅಲ್ಪ ಸುಖದಿಂದ ಅನಂತಾನಂದದತ್ತ ಸಾಗಲು, ಒಂದೇ ಸಮನೆ ಹೆಣಗುತ್ತಿರುವದು ಈ ನಿತ್ಯನಿರಂತರ ಪ್ರಯತ್ನವೆ ಜೀವನದ ಮುಖ್ಯ ಲಕ್ಷಣವು ಈ ಪ್ರಯತ್ನದಲ್ಲಿ ಮುಂದರಿಯುವುದೆ ವಿಕಾಸವೆನಿಸುವದು. ವ್ಯಕ್ತಿ ಹಾಗೂ ಸಮಾಜ ಇವೆರಡೂ ಈ ವಿಕಾಸವನ್ನೆ ಸಾಧಿಸಲನುವಾಗಬೇಕು ಈ ವಿಕಾಸದ ಸಾಧನೆ ಎಷ್ಟರ ಮಟ್ಟಿಗೆ ಆಗಿದೆ, ಆಗುತ್ತಿದೆ, ಆಗಬಹುದು ಎಂಬುದೆ ನಮ್ಮ ಸಕಲ ಪ್ರಯತ್ನಗಳ ಒರೆಗಲ್ಲು.

ನಾವು ಈಗ ಒಂದು ಸ್ವತಂತ್ರ ರಾಷ್ಟ್ರವಾಗಿ ನಿಂತಿದ್ದೇವೆ, ನಮ್ಮ ಬುದ್ಧಿ ವಿಕಾಸ, ಕಾರ್ಯಕ್ಷಮತೆ ಇತ್ಯಾದಿಗಳಿಗೆ ಅಪಾರವಾದ ಆಸ್ಪದ ದೊರೆತಿದ್ದು ಯಾವ ಪರಕೀಯರ ತಡೆಯೂ ಇಲ್ಲ. ಹೀಗಿದ್ದರೂ ನಾವು ಇನ್ನೂ ನಮ್ಮ ಸ್ವಾತಂತ್ರ್ಯದ ಸಂರಕ್ಷಣೆ ಮಾಡಿಕೊಳ್ಳಲು ಯಾವ ಏಕೀಭಾವ, ರಾಷ್ಟ್ರೀಯ ವೃತ್ತಿ, ಪರಸ್ಪರ ಬಾಂಧವ್ಯ ಇವು ಬೇಕೋ ಅವುಗಳನ್ನು ಸಾಕಷ್ಟು ಬೆಳೆಸಿಲ್ಲ. ಧರ್ಮ, ಜಾತಿ, ಪ್ರಾಂತ, ಲಿಂಗ, ಭಾಷೆ ಇವು ಇನ್ನೂ ನಮ್ಮ ರಾಷ್ಟ್ರೀಯ ಐಕ್ಯಕ್ಕೆ ಬಾಧೆಗಳಾಗಿಯೇ ನಿಂತಿವೆ. ಈಗಿನ ಪೀಳಿಗೆಯು ಹಣೇಬರಹ ಹಾಗಿರಲಿ. ಮುಂದಿನ ತರುಣ ಪೀಳಿಗೆಯಾದರೂ, ನಮ್ಮ ಸೈನಿಕರಲ್ಲಿರುವ, ಅಥವಾ ಶಾಲೆಯುಗಳಲ್ಲಿ ನ್ಯಾಶನಲ್ ಕ್ಯಾಡೆಟ್ ಕೋರ ದವರು ಕೂಡಿದಾಗ ಇರುವ ಶುದ್ಧ ರಾಷ್ಟ್ರೀಯ ಭಾವ, ಬಾಂಧವ್ಯ ಇವುಗಳಿಂದ ಪ್ರೇರಿತರಾಗಲಿ ಎಂದು ನಾವು ಹಾರೈಸಬೇಕಾಗಿದೆ. ದಿನಾಲೂ ಒಂದು ಕ್ಷಣವಾದರೂ, ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗಿನ ನಮ್ಮ ಇಡೀ ಭಾರತದ ಸಕ್ಷಿ ನಮ್ಮೆದುರು ನಿಲ್ಲಲಿ ಆಗ ನಮಗೆ ಉಳಿದ ಯಾವ ಗಡಿ ಗೆರೆಗಳೂ ಕಾಣದಿರಲಿ "ರಾಷ್ಟ್ರದೇವೋ ಭವ" ಎಂಬ ಮಂತ್ರದ ಜಪ ಒಂದು ಕ್ಷಣವಾದರೂ ನಡೆಯಲಿ. ಕೇವಲ ನಮ್ಮ ನಮ್ಮೊಳಗೆ ಜಗಳಾಡುವ ಸ್ವಾತಂತ್ರ್ಯವಾಗಿ ಪರಿಣಮಿಸಬಲ್ಲದು.

ಸ್ವಾತಂತ್ರ್ಯದೊಡನೆ ಪ್ರಜಾಪ್ರಭುತ್ವವೂ ನಮ್ಮಲ್ಲಿ ಪ್ರವೇಶಿಸಿದೆ. ಆದರೆ ಅದರೊಡನೆ ಪ್ರಜಾಪ್ರಭುತ್ವಕ್ಕೆ ಅವಶ್ಯವಿಪ್ಪ ತಮ್ಮತಮ್ಮ ಕರ್ತವ್ಯ ಮಾಡಿದರೆ ಮಾತ್ರ ಪ್ರಭುತ್ವ ಯಶಸ್ವಿಯಾಗಬಲ್ಲುದೆಂಬ ಶ್ರದ್ಧೆ ಸಮಭಾವ, ಮತಭೇದಗಳ ಬಗ್ಗೆ ಆದರ (ಕೇವಲ ಸಹಿಷ್ಣುತೆ ಸಾಕಿಲ್ಲ) ಸಾಮೂಹಿಕವಾಗಿ ಮಾಡಲಾದ ನಿರ್ಣಯಗಳ ಬಗ್ಗೆ ಆಜ್ಞಾನುವರ್ತಿತ್ವ, ತಮ್ಮ ವಿಚಾರ ಆಚಾರ ಆದರ್ಶಾದಿಗಳನ್ನು ಯಾವ ಬಗೆಯ ಹಿಂಸಾಚಾರದ ಅಂಶವೂ ಇಲ್ಲದೆ ಪ್ರೇರಿಸುವ ತಾಳ್ಮೆ ಮತ್ತು ವಿನಯ, ಹಿಂಸೆ ಹಾಗೂ ಪ್ರಜಾಪ್ರಭುತ್ವ ಇವು ಪೂರ್ಣತಯಾ ಪರಸ್ಪರ ವಿರೋಧಿಯಾಗಿದೆ. ಎಂಬ ಮನವರಿಕೆ, ನಿಜವಾದ ಪ್ರಜಾಪ್ರಭುತ್ವದ ವಿಜಯಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಸಮತೆ ಅವಶ್ಯ ಎಂಬ ಬಗ್ಗೆ ನಿರ್ಧಾರ ಇವುಗಳ ಸಾಕಷ್ಟು ಸಮರ್ಥವಾದ ಆವಿರ್ಭಾವವು ಕಂಡು ಬರುವದಿಲ್ಲ ಇವುಗಳನ್ನು ಚೆನ್ನಾಗಿ ಪೋಷಿಸುವ ಹೊಣೆ ನಮ್ಮೆಲ್ಲರ ಮೇಲೂ ಇದೆ. ಹಾಗೆ ಆಗದೆ ಹೋದಲ್ಲಿ ಪ್ರಜಾಪ್ರಭುತ್ವ ನಾಮಮಾತ್ರದಿಂದ ಬಾಳಬಹುದು ಹೊರತು ಅದರ ನಿಜಾಂಶ ಮಾಯವಾಗಿ ಹೋಗುವದು.

ಇನ್ನು ನಮ್ಮ ಪ್ರಾಂತದತ್ತ ಸ್ವಲ್ಪ ನೋಡುವ. ಹಲವಾರು ಶತಮಾನಗಳಿಂದ, ರಾಜಕೀಯ ದೃಷ್ಟಿಯಿಂದ ಹಾಗೂ ಆಡಳಿತದ ದೃಷ್ಟಿಯಿಂದ ಕರ್ನಾಟಕವು ಭಿನ್ನ ಭಿನ್ನವಾಗಿ ಬಿದ್ದುಕೊಂಡಿತ್ತು. ಸುಮಾರು ಐವತ್ತು ವರುಷಗಳಾಚೆ ಕರ್ನಾಟಕದ ಜನತೆಯಲ್ಲಿ ಈ ಬಗ್ಗೆ ಪ್ರಥಮ ಜಾಗೃತಿಯು ಉದಯವಾಯಿತು. ಈ ಜಾಗೃತಿ ಬಲಗೊಳ್ಳುತ್ತ ಹೋಗಿ ಕೊನೆಗೆ ೧-೧೧-೫೬ಕ್ಕೆ ನವಕರ್ನಾಟಕವು 'ಮೈಸೂರು ರಾಜ್ಯ' ಎಂಬ ಹೆಸರಿನಿಂದ ಅವತರಿಸಿತು. ಸ್ವಾಭಾವಿಕವಾಗಿ ಜನರಿಗೆಲ್ಲ ಅಪಾರ ಹರುಷವಾಯಿತು. ಆಂದೋಲನದಿಂದ, ಕಟ್ಟಳೆ ಕಾನೂನುಗಳಿಂದ ಬರತಕ್ಕಷ್ಟು ಭೌಗೋಲಿಕ, ರಾಜಕೀಯ, ಹಾಗೂ ಆಡಳಿತದ ಏಕ ತಂತ್ರ, ಕರ್ನಾಟಕ ಬಂದುಬಿಟ್ಟಿತು. ಆದರೆ ಸ್ವಪ್ರಯತ್ನದಿಂದ ಆಗತಕ್ಕ ಹೃದಯಗಳ ಏಕೀಕರಣ, ತಿಳುವಳಿಕೆಯಿಂದ ಆಗತಕ್ಕ ನಮ್ಮೆಲ್ಲರ ಹಿತಸಂಬಂಧಗಳ ಬಗ್ಗೆ ಏಕೀ ಭಾವನೆ, ಈ ಭೂಭಾಗದಲ್ಲಿರುವವರೆಲ್ಲರೂ—ಅವರ ನುಡಿ, ಧರ್ಮ, ಜಾತಿ ಮುಂತಾದವುಗಳೇನೇ ಇದ್ದರೂ—ಒಂದೇ, ಅವರೆಲ್ಲರೂ ಸಮಾನರು ಎಂಬ ಮನವರಿಕೆ, ಇವೆಲ್ಲವೂ ಇನ್ನೂ ಸಾಕಷ್ಟು ದೃಢವಾಗಬೇಕು ಸಕ್ಷೆಯಲ್ಲಿ ಕಂಡದ್ದು, ಸಂವಿಧಾನದಲ್ಲಿ ಓದಿದ್ದು, ಲೋಕ ಸಭೆಯಲ್ಲಿ ಸಾರಿದ್ದು, ಸತತ ಐವತ್ತು ವರುಷ ಕರ್ನಾಟಕದ ಮುಖಂಡರು ಕೇಸರಿಡುವಂತೆ ಕೂಗಿದ್ದು——ಸ್ವತಂತ್ರ ಭಾರತ ಏಕತಂತ್ರ ಕರ್ನಾಟಕ ಎಂಬುದು —ನಮ್ಮ ಭಾವ ಭೂಮಿಯಲ್ಲಿ ಮೂಡಿ, ನಮ್ಮ ನಾಡಿಗಳಲ್ಲಿ ರಕ್ತದಂತೆ ಹರಿದಾಡಿ, ಕಾರ್ಯೋನ್ಮುಖವಾ ಮನಸಾ ನಡೆಯುವ ನಮ್ಮ ಎಲ್ಲ ವ್ಯಾಪಾರ ವ್ಯವಹಾರಗಳಲ್ಲಿ ಮೈವೆತ್ತು ನಿಂತು, ಕರ್ನಾಟಕದ ಉನ್ನತ ಜೀವನಕ್ಕೆ ಸಾಧನವಾಗಿ, ಭಾರತದ ಗೌರವಕ್ಕೆ ಒಪ್ಪಿಡಬೇಕು. ಆಗ ಮಾತ್ರ ಈ ಮೇಲಿನ ಮಂತ್ರದ ಸಿದ್ಧಿಯಾದಂತೆ, ವ್ಯಕ್ತಿಯ ಜೀವನದ ಸಿದ್ಧಿಯು ಸಮಾಜದ ಜೀವನದ ಸರ್ವತೋಮುಖ ಸಮೃದ್ಧಿಯಿಂದಲೆ ಆಗಬಲ್ಲುದು. ಅದೇ ರೀತಿ, ರಾಷ್ಟ್ರದಲ್ಲಿಯ ಯಾವದೇ ರಾಜ್ಯದ ಜೀವನ ಸಾಫಲ್ಯವು ಭಾರತ ರಾಷ್ಟ್ರದ ಗೌರವ ಸಾಧನೆಯಿಂದಲೆ ಆಗುವದು.

ಇದನ್ನೆಲ್ಲ ಸಾಧಿಸುವ ಹೊಣೆ ನಮ್ಮ ತರುಣ ತರ ಣಿಯರನ್ನೆ ಕೂಡಿದೆ. ಅವರಲ್ಲಿ ಪ್ರತಿಯೊಬ್ಬರ ಅಂತಃಕರಣದಲ್ಲಿಯೂ ನಾನು ಒಂದು ಶಕ್ತಿಯ ಪುಂಜವನ್ನು ಕಾಣುವೆ, ಜ್ಯೋತಿಯ ಒಂದು ಬಿಂದುವನ್ನು ನೋಡುವೆ. ಅದನ್ನು ಪಳಗಿಸಿ, ಬೆಳಗಿಸಿ ವಿಶ್ವಕ್ಕೆ ಬೆಳಕನ್ನು ಬೀರಲನುವಾಗುವದು ಅವರನ್ನೆ ಕೂಡಿದೆ ಒಂದು ದಿವ್ಯ ಭವ್ಯ ದೀಪ ತನ್ನಷ್ಟಕ್ಕೆ ತಾನೆ ಉರಿದು ನೊಂದೂ ಹೋಗಬಹುದು, ಕೋಟಿ ಕೋಟಿ ಜನಕ್ಕೆ ಮಾರ್ಗದರ್ಶಕ ಬೆಳಕನ್ನೂ ಕೊಡಬಹುದು. ನಮ್ಮೆಲ್ಲರ ಅಂತಃಕರಣದಲ್ಲಿರುವ ಮಿಣಿ ಮಿಣಿ ಮಿನುಗುವ ಚಿಕ್ಕಣಾವು, ಒಂದು ಜ್ಯೋತಿಯಾಗಿ ಸಂಭ್ರಮದಿಂದ ಮುಂದರಿದು ನಡೆದ ಮಹಾನವ ಕಾಲದ ಮೆರವಣಿಗೆಯಲ್ಲಿ ಉತ್ಸಾಹದಿಂದ ಭಾಗವಹಿಸಲಿ!

[ಮೈಸೂರು ವಿಶ್ವವಿದ್ಯಾನಿಲಯದ ಸಮಾವರ್ತನ ಸಮಾರಂಭದಲ್ಲಿ ಬಿಹಾರಿನ ರಾಜ್ಯಪಾಲರೂ ಕರ್ನಾಟಕದ ಹಿರಿಯ ಮುಖಂಡರೂ ಆದ ಶ್ರೀ ರಂಗನಾಥ ದಿವಾಕರರು ಸ್ನಾತಕರನ್ನು ಉದ್ದೇಶಿಸಿ ಮಾಡಿದ ಭಾಷಣದ ಸಾರ.] —ಶ್ರೀ ರಂಗನಾಥ ದಿವಾಕರ

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

## ಜನಮತ

ನ್ಯಾಯವಾದ ಜನಾಭಿಪ್ರಾಯಕ್ಕೆ ಸೂಕ್ತ ಪ್ರಸಿದ್ಧಿಯನ್ನು ಕೊಡಲು ಈ ವಿಭಾಗವನ್ನು ಉಪಯೋಗಿಸಲಾಗುತ್ತದೆ. ಸಾರ್ವಜನಿಕರು ಪತ್ರಮುಖೇನ ನಮ್ಮೊಡನೆ ಸಹಕರಿಸಬೇಕಾಗಿ ಬಿನ್ನಹ.

ಸಂ. ನ.

### ಮೋಸದ ಜಾಹೀರಾತುಗಳಿವೆ! ಅವುಗಳ ಬಗ್ಗೆ ಎಚ್ಚರ ನಿಮಗಿರಲಿ

ವಿಶ್ವಾಸವೆಂಬುದು ಇಂದಿನ ಜಗತ್ತಿನಲ್ಲಿ ಮಾಯವಾದ ಒಂದು ಶಬ್ದ ಎಂದರೆ ಹೆಚ್ಚಲ್ಲ. ಎಲ್ಲಿ ನೋಡಿದರೂ, ಕಪಟ, ಮೋಸ, ವಂಚನೆಗಳೇ ಕಂಡುಬರುತ್ತಿವೆ. ಇದರಿಂದಾಗಿ ಸತ್ಯವಂತರಿಗೆ ಬಾಳುವುದು ಕಷ್ಟವಾಗಿದೆ. ಏಕೆಂದರೆ ಅವರ ಮಾತನ್ನೇ ನಂಬುವವರಿಲ್ಲ.

ನಾವು ಪತ್ರಿಕೆಗಳಲ್ಲಿ ಅದೆಷ್ಟು ಜಾಹೀರಾತುಗಳನ್ನು ಕಾಣುವುದಿಲ್ಲ! ಕೆಲವು ವಿಚಿತ್ರವಾದವುಗಳು "ಪುಕ್ಕಟೆ ಮಾತು" "ಮಾಯಾ ಉಂಗುರ" "ಒಂದು ರೂಪಾಯಿಗೆ ಐವತ್ತು ಪುಸ್ತಕಗಳು!" "ಅಡವು ವಗೈರೆ ಯಾವುದೂ ಇಲ್ಲದೆ 1000 ರೂ. ಸಾಲಕೊಡುತ್ತೇವೆ" ಮೊದಲಾದ ಶಿರೋನಾಮೆಯಿರುವ ಜಾಹೀರಾತುಗಳು ಇಂತಹವುಗಳು ಜನತೆಯನ್ನು ತುಂಬಾ ವಂಚಿಸುತ್ತವೆ. ಹಣದ ಸುಲಿಗೆಯೇ ಇಂತಹ ಕಂಪೆನಿಗಳ ಉದ್ದೇಶ. ಮುಂಗಡ ಹಣ ಎಲ್ಲಾ ಕಳುಹಿಸಿಯಾಗುವಾಗ ಕೆಲವು ಕಂಪೆನಿಗಳೇ ಇರುವುದಿಲ್ಲ. ಮಾಯಾ ಉಂಗುರಕ್ಕೆ ನಾವು ಹಣತೆತ್ತುದೇ ಬಂತು! ಹೊರತು ಯಾವ ಮಾಯವೂ ಅದರಲ್ಲಿಲ್ಲ. ಒಂದು ರೂಪಾಯಿಗೆ ಬರುವ ಐವತ್ತು ಪುಸ್ತಕಗಳೆಂದರೆ ಬೆರಳುದ್ದದ ಅಷ್ಟೇ ಅಗಲದ ಎಂಟು ಹತ್ತು ಪುಟದ ಪುಸ್ತಕಗಳು! ಸಾಲಕೊಡುವ ಕಂಪೆನಿಗಳು ಪ್ರಾರಂಭದಲ್ಲಿ ಎಡ್ವಾನ್ಸ್ ಎಂದೆಲ್ಲಾ ಹಣ ಕಸಿದು ಮತ್ತೆ ಉತ್ತರವೇ ಬರೆಯುವುದಿಲ್ಲ. ಇದು ಅನುಭವದಿಂದಲೇ ಪಡೆದ ಜ್ಞಾನ. ಎಷ್ಟೋ ಜನರಿಗೆ ಇದರ ಅನುಭವವಾಗಿರುತ್ತದೆ.

ಮತ್ತೆಂತು ಉಳಿಯಬೇಕು ವಿಶ್ವಾಸ? ಇಂತಹ ಡೋಂಗಿ, ಕಂಪೆನಿಗಳಿಂದ ಯಾವಾಗಲೂ ನಾವು ದೂರವಿರುವುದೇ ಒಳ್ಳೆಯದು. ಅಂತಹವುಗಳಿಗೆ ಪ್ರೋತ್ಸಾಹವೇ ಕೊಡಬಾರದು. ಆಗ ತನ್ನಿಂದ ತಾನಾಗಿಯೇ ನಿಲ್ಲುವುದು ಅವರ ಮೋಸತನ.

ಯಾರೂ ಯಾವಾಗಲೂ ಈ ರೀತಿ ವಂಚಿಸಬಾರದು. ಅದು ದೇವರು ಮೆಚ್ಚುವ ಕೆಲಸವಲ್ಲ. ಅದು ಐಕ್ಯತೆಯನ್ನುಂಟುಮಾಡುವುದಿಲ್ಲ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ ಜನತೆಗೆ ತಿಳಿಯುವುದಿಲ್ಲವೆಂದು ಮೋಸ ಮಾಡಿದರೆ — ಸರ್ವಾಂತರ್ಯಾಮಿಯಾದ ಆ ಶಕ್ತಿಗೆ ಅದು ತಿಳಿಯದಿದ್ದೀತೆ? ನಮ್ಮಲ್ಲಿರುವ ಆ ಕೆಟ್ಟ ಭಾವನೆ ಹೋಗದೆ ನಮ್ಮ ದೇಶ ಖಂಡಿತ ಏಳಿಗೆಯಾಗಲಾರದು.

—ಶ್ರೀ ಕೀ. ವ. ಕೇಶವ.

**ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.**

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |
| ಸೇವಿಂಗ್ಸ್ ಬೇಂಕ್ ಲೆಕ್ಕ | | 2% |
| ಕರೆಂಟ್ ಎಕೌಂಟು | | ½% |

THE MOOLKY BANK, LTD MULKI

## ಕಬ್ಬಿಣ ಮತ್ತು ಉಕ್ಕಿನ ವಿತರಣೆ

### ಗ್ರಾಹಕರು ಅನುಸರಿಸಬೇಕಾದ ಕ್ರಮ

ಮುಂಚಿನ ಮುಂಬಯಿ, ಹೈದರಾಬಾದು, ಮದ್ರಾಸ್ ಮತ್ತು ಕೊಡಗು ರಾಜ್ಯಗಳ ಭಾಗಗಳು ಸೇರಿ ನವೆಂಬರ ೧, ೧೯೫೬ರಿಂದ ಮೈಸೂರು ರಾಜ್ಯವು ಪುನರ್ಘಟಿತವಾಗಿರುವುದರಿಂದ ಈ ರಾಜ್ಯದ ಎಲ್ಲ ಭಾಗಗಳಲ್ಲಿ ಸಾರ್ವಜನಿಕರಿಗೆ ಉಕ್ಕು ಮತ್ತು ಕಬ್ಬಿಣಗಳನ್ನು ಪೂರೈಸುವುದಕ್ಕಾಗಿ ಒಂದೇ ಬಗೆಯ ಕ್ರಮವನ್ನು ಅನುಸರಿಸುವುದು ಅವಶ್ಯವಾಗಿದೆ. ಕಬ್ಬಿಣ, ಉಕ್ಕು ಮತ್ತು ಸಿಮೆಂಟುಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ.

ಭಾರತ ಸರಕಾರದವರು ರಾಜ್ಯದಲ್ಲಿಯ ಈ ಕೆಳಗಿನ ಬೇರೆ ಬೇರೆ ವರ್ಗಗಳ ಗ್ರಾಹಕರಿಗಾಗಿ ವರ್ಷಕ್ಕೆ ಇಂತಿಷ್ಟೆಂದು ಉಕ್ಕಿನ "ಕೋಟಾ" ಮಂಜೂರು ಮಾಡುತ್ತಾರೆ.

೧. ಒಕ್ಕಲುತನೇತರ ಭಾಗ;

೨. ಉಕ್ಕಿನ ಸಂಸ್ಕರಣ ಉದ್ದಿಮೆಗಳು ಮತ್ತು ಗೃಹಕೈಗಾರಿಕೆಗಳ ಭಾಗ.

೩ ಸರಕಾರದ ಅಭಿವೃದ್ಧಿ ಯೋಜನೆಗಳ ಭಾಗ, ಮತ್ತು ೪. ಒಕ್ಕಲುತನ ಉದ್ದೇಶಗಳ ಭಾಗ.

ವ್ಯವಸಾಯೇತರ ಉದ್ದೇಶಗಳಿಗಾಗಿ ಬಂದ ಉಕ್ಕು ಕಬ್ಬಿಣಗಳ ಸಂಗ್ರಹವನ್ನು ರಾಜ್ಯದ ಉಕ್ಕು ಮತ್ತು ಕಬ್ಬಿಣಗಳ ನಿಯಂತ್ರಕರು ಭದ್ರಾವತಿ ಅವರು ರಾಜ್ಯದಲ್ಲಿಯ ನೊಂದಾಯಿಸಲ್ಪಟ್ಟ ಸಂಗ್ರಾಹಕರಿಗೆ ಹಂಚುತ್ತಾರೆ. ಅವರ ಮುಖಾಂತರ ಗ್ರಾಹಕರಿಗೆ ಪರ್ಮಿಟಿನ ಮೇಲೆ ಪೂರೈಸಲಾಗುತ್ತದೆ. ಈ ಸಂಗ್ರಹದಲ್ಲಿಯ ವಸ್ತುಗಳನ್ನು ಪರ್ಮಿಟಿನ ಮೇಲೆ ಕೇವಲ ಮನೆ ಕಟ್ಟುವವರಿಗೆ ಮಾತ್ರ ಒದಗಿಸಲಾಗುತ್ತದೆ.

ಬೇರೆ ಬೇರೆ ಉದ್ದೇಶಗಳಿಗಾಗಿ ಉಕ್ಕನ್ನು ಪಡೆಯಲು ಪರ್ಮಿಟಿಗಾಗಿ ಈ ಕೆಳಗಿನ ಅಧಿಕಾರಿಗಳಿಗೆ ಅರ್ಜಿ ಮಾಡಿಕೊಳ್ಳಬೇಕು.

### ವ್ಯವಸಾಯಗಾರರು

ರಾಷ್ಟ್ರೀಯ ವಿಸ್ತರಣಾ ಕ್ಷೇತ್ರದಲ್ಲಿ ಬರುವ ಹಳ್ಳಿಗಳ ಬೇಸಾಯಗಾರರು ಗ್ರಾಮ ಮಟ್ಟದ ಕಾರ್ಯಕರ್ತರಿಗೂ ಉಳಿದ ಭಾಗಗಳಲ್ಲಿಯ ಬೇಸಾಯಗಾರರು ಸಂಬಂಧಿಸಿದ ರೆವಿನ್ಯೂ ಇನ್ಸ್‌ಪೆಕ್ಟರ, ಅಥವಾ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರ ಇಲ್ಲವೆ ಜಿಲ್ಲೆಯ ಅಸಿಸ್ಟಂಟ ಡೈರೆಕ್ಟರ ಆಫ್ ಅಗ್ರಿಕಲ್ಚರ ಇವರ ಕಡೆಗೆ ಅರ್ಜಿ ಮಾಡಿಕೊಳ್ಳಬೇಕು

### ಕಟ್ಟಡಗಳ ರಚನೆಗಾಗಿ

ಕಟ್ಟಡಗಳ ರಚನೆಗಾಗಿ ಉಕ್ಕು ಬೇಡುವವರು, ತಮ್ಮ ಬೇಡಿಕೆ ಒಂದು ಟನ್ನಿಗಿಂತ ಹೆಚ್ಚಿಗಿದ್ದರೆ, ಮನ್ನಣೆಪಡೆದ ನಕ್ಷೆ ಮತ್ತು ಅಂದಾಜುಗಳೊಂದಿಗೆ ಮೈಸೂರು ರಾಜ್ಯದ ಆಯರ್ನ ಆ್ಯಂಡ ಸ್ಟೀಲ ಕಂಟ್ರೋಲರ, ಭದ್ರಾವತಿ ಇವರ ಕಡೆಗೆ ಅರ್ಜಿ ಕಳುಹಿಸಬೇಕು. ೧೦ ಹಂಡ್ರೆಡ್‌ವೇಟ್‌ಗಳಿಗಿಂತ ಕಡಿಮೆ ಬೇಡಿಕೆಯುಳ್ಳವರ ಅರ್ಜಿಗಳಿಗೆ ಸಂಬಂಧಿಸಿದ ಸ್ಥಾನಿಕ ಅಧಿಕಾರಿಗಳ ಶಿಫಾರಸು ಅವಶ್ಯವಿದೆ.

### ಚಿಕ್ಕ ಹಾಗೂ ಗೃಹ ಕೈಗಾರಿಕೆಗಳಿಗೆ

ಬಳಕೆಯ ವಸ್ತುಗಳ ತಯಾರಿಕೆದಾರರು ಚಿಕ್ಕ ಪ್ರಮಾಣದ ಉದ್ದಿಮೆದಾರರು ಮತ್ತು ಗೃಹಕೈಗಾರಿಕೆಯವರು ಮುಂತಾದವರು ತಮ್ಮ ಅರ್ಜಿಗಳನ್ನು ಮೈಸೂರಿನ ಆಯರ್ನ ಆ್ಯಂಡ ಸ್ಟೀಲ ಕಂಟ್ರೋಲರರು, ಭದ್ರಾವತಿ ಇವರಿಗೆ ಕಳುಹಿಸಬೇಕು. ಇಂಥವರಿಗೆ ಆ್ಯಡಿಶನಲ ಡೈರೆಕ್ಟರ ಆಫ್ ಇಂಡಸ್ಟ್ರೀಜ ಆ್ಯಂಡ್ ಕಾಮರ್ಸ, ಬೆಂಗಳೂರು ಇವರು ನಿರ್ಧರಿಸಿದ ಪ್ರಮಾಣದಲ್ಲಿ ಉಕ್ಕು ಕಬ್ಬಿಣಗಳನ್ನು ಪೂರೈಸಲಾಗುವದು. ನಿಯಮಿತ "ಕೋಟಾ ಹೋಲ್ಡರ್" ಪಟ್ಟಿಯಲ್ಲಿ ಇಲ್ಲದವರು ಆ್ಯಡಿಶನಲ್ ಡೈರೆಕ್ಟರ್ ಆಫ್ ಇಂಡಸ್ಟ್ರೀಜ ಆ್ಯಂಡ ಕಾಮರ್ಸ ಮೈಸೂರು ರಾಜ್ಯ, ಬೆಂಗಳೂರು ಅವರಿಗೆ ಅರ್ಜಿ ಮಾಡಿಕೊಳ್ಳಬೇಕು.

ಒಕ್ಕಲುತನ ಉದ್ದೇಶಗಳಿಗಾಗಿ ಗ್ಯಾಲ್ವನೈಜ್ಡ ಕಾರುಗೇಟೆಡ್ ತಗಡುಗಳು ಬೇಕಾದ ಬೇಸಾಯಗಾರರು ತಮ್ಮ ತಮ್ಮ ಜಿಲ್ಲೆಯ ಅಸಿಸ್ಟಂಟ ಡೈರೆಕ್ಟರ ಆಫ್ ಅಗ್ರಿಕಲ್ಚರ ಅವರ ಕಡೆಗಾಗಲಿ ಜಿಲ್ಲಾ ಕಲೆಕ್ಟರರ ಕಡೆಗಾಗಲಿ ಅರ್ಜಿ ಮಾಡಿಕೊಳ್ಳಬೇಕು.

ಇಂಥ ತಗಡುಗಳು ಬೇಕಾದ ಇತರ ಗ್ರಾಹಕರು ಜಿಲ್ಲೆಯ ಡೆಪ್ಯುಟಿ ಕಮೀಶನರ ಅಥವಾ ಕಲೆಕ್ಟರರ ಕಡೆಗೆ ಅರ್ಜಿ ಮಾಡಬೇಕು. ಈ ಅಧಿಕಾರಿಗಳ ಕಡೆಗೆ ರಾಜ್ಯದಲ್ಲಿಯ ವ್ಯಾಪಾರಸ್ಥರು ಇಡದ ತಗಡುಗಳ ಸಂಗ್ರಹವನ್ನು ರಾಜ್ಯದ ಉಕ್ಕು ಮತ್ತು ಕಬ್ಬಿಣಗಳ ನಿಯಂತ್ರಕರು ಒಪ್ಪಿಸಿರುತ್ತಾರೆ

### ಸಿಮೆಂಟ್

ಸಿಮೆಂಟಿಗಾಗಿ ಅರ್ಜಿಗಳನ್ನು ಕಂಟ್ರೋಲರ್ ಆಫ್ ಸಿವ್ಹಿಲ್ ಸಪ್ಲೈಸ್ ಇನ್ ಮೈಸೂರು, ಬೆಂಗಳೂರು, ಇವರ ಕಡೆಗಾಗಲಿ ಸಂಬಂಧಿಸಿದ ಜಿಲ್ಲೆಯ ಡೆಪ್ಯೂಟಿ ಕಮೀಶನರ್ ಅಥವಾ ಕಲೆಕ್ಟರರ ಕಡೆಗಾಗಲಿ ಅರ್ಜಿ ಹಾಕಬೇಕು.

ದೇಶದಲ್ಲಿ ಕಬ್ಬಿಣ ಮತ್ತು ಉಕ್ಕಿನ ಪೂರೈಕೆ ಪರಿಸ್ಥಿತಿಯು ತೀರ ಮರ್ಯಾದಿತವಿರುವುದರಿಂದಲೂ ಗ್ರಾಹಕರಿಂದ ಬೇಡಿಕೆ ಬಹಳ ಹೆಚ್ಚಿರುವುದರಿಂದಲೂ, ಭಾರತ ಸರಕಾರದವರು ವಿವಿಧ ದೇಶಗಳಿಂದ ಜಾಗತಿಕ ಪೇಟೆಯ ದರದಿಂದ ಅವನ್ನು ಆಮದು ಮಾಡುತ್ತಿದ್ದಾರೆ. ಅವನ್ನು ಜಾಗತಿಕ ಪೇಟೆಯ ದರದಿಂದಲೇ ಮಾರಲಾಗುತ್ತದೆ. ಈ ಸರಕುಗಳನ್ನು ಆಯರ್ನ ಆ್ಯಂಡ್ ಸ್ಟೀಲ ಕಂಟ್ರೋಲರರವರ ಪರ್ಮಿಟ್ ಇಲ್ಲದೆ ಯಾರು ಬೇಕಾದವರು ಪಡೆಯಬಹುದು.

ಆಯರ್ನ ಮತ್ತು ಸ್ಟೀಲ್ ಕಂಟ್ರೋಲರರ ಕಡೆಗೆ ಉಕ್ಕು ಮತ್ತು ತಗಡುಗಳಿಗಾಗಿ ಬರುವ ಬೇಡಿಕೆಗಳನ್ನು ರಾಜ್ಯದ ನಿಯಂತ್ರಿತ ಸಂಗ್ರಾಹಕರಲ್ಲಿ ಲಭ್ಯವಿರುವ ಸಂಗ್ರಹವನ್ನು ನೋಡಿಕೊಂಡು, ಅದಕ್ಕೆ ಅನುಗುಣವಾಗಿ ಪೂರೈಸಲಾಗುತ್ತವೆ. ಅತ್ಯಂತ ಅವಸರದ ಬೇಡಿಕೆಯುಳ್ಳ ಗ್ರಾಹಕರು ದೇಶೀಯ ಸರಕುಗಳ ವಿಭಾಗದಲ್ಲಿ ದೊರೆಯದಿದ್ದ ಸರಕುಗಳನ್ನು ಆಯಾತ ಮಾಡಿಕೊಂಡ ವಿಭಾಗಗಳಿಂದ ಪೇಟೆಯಲ್ಲಿ ಪರ್ಮಿಟ್ ಇಲ್ಲದೆ ಪಡೆಯಬಹುದು.

## ಅಣುಯುಗದ ಸಂಪೂರ್ಣ ಪರಿಚಯ ನಿಮಗೆ ಬೇಕೇ?

### ರಾಘವೇಂದ್ರ ಆಚಾರ್ಯರ ಪುಸ್ತಕ ಕನ್ನಡದ ಅಮೂಲ್ಯ ಆಸ್ತಿ

"ಒಂದು ಗ್ರಾಮ್ (ಒಂದು ಪೌಂಡಿನಲ್ಲಿ ಒಟ್ಟು ೪೫೩ ಗ್ರಾಮ್ ಇವೆ) ತೂಕದ ಯಾವುದೇ ಒಂದು ವಸ್ತುವನ್ನು ಸಂಪೂರ್ಣ ನಾಶಗೊಳಿಸಿದರೆ ಅದರಿಂದ ೯೦೦ ಮಿಲಿಯ ಮಿಲಿಯ ಮಿಲಿಯ (ಮಿಲಿಯ-೧೦ ಲಕ್ಷ) ಶಕ್ತಿ ಉತ್ಪತ್ತಿಯಾಗುತ್ತದೆಂದು ಐನ್‌ಸ್ಟೀನ್ ೧೯೦೫ ರಲ್ಲಿ ಪ್ರಥಮತಃ ತೋರಿಸಿದನು. ಇಷ್ಟು ಶಕ್ತಿಯನ್ನು ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿದರೆ ಅದರಿಂದ ೨೫ ಮಿಲಿಯ ಯುನಿಟ್ ವಿದ್ಯುತ್ತನ್ನು ಪಡೆಯಬಹುದು.

ಯುನಿಟಿಗೆ ೪ ಆಣೆಯಂತೆ ಬೆಲೆ ಹಿಡಿದರೆ ಬರೀ ಕಸದ ಬುಟ್ಟಿಯಿಂದ ತೆಗೆದ ಕಾಗದಚೂರೊಂದನ್ನು ನಾಶಗೊಳಿಸಿ ಆರೂ ಕಾಲು ಮಿಲಿಯ ರೂಪಾಯಿ ಬೆಲೆ ಬಾಳುವ ವಿದ್ಯುಚ್ಛಕ್ತಿಯನ್ನು ತಯಾರಿಸಬಹುದೆಂದಾಯಿತು. ಇಷ್ಟು ಶಕ್ತಿಯನ್ನು ಮಾಮೂಲು ಪ್ರಕಾರ ಇದ್ದಲನ್ನು ಸುಟ್ಟು ತಯಾರಿಸಿಕೊಳ್ಳಬೇಕಾದರೆ ಮೂರು ಮಿಲಿಯ ಪೌಂಡು ಇದ್ದಲು ಬೇಕಾಗುವುದು."

ಅಣುಶಕ್ತಿಯ ಬೃಹದ್ದರ್ಶನ ಮಾಡಿಸಲು ಯು. ರಾಘವೇಂದ್ರಾಚಾರ್ಯರ (ಹಿರೋಶಿಮಾದಿಂದ ಜಿನೇವ) ಪುಸ್ತಕದಿಂದ ಎತ್ತಿಕೊಂಡ ಇದೊಂದು ಚಿಕ್ಕ ಉಲ್ಲೇಖ ಸಾಕಾಗಬಹುದು.

ದಕ್ಷಿಣ ಕನ್ನಡ ಜಿಲ್ಲೆಯವರಾದ ಈ ಪ್ರತಿಭಾವಂತ ವಿಜ್ಞಾನಿ ಈಗ ಭಾರತೀಯ ಸೇನೆಯ ಹವಾಮಾನ ವಿಭಾಗದಲ್ಲಿ ಕಮಿಶನ್ಡ್ ಅಧಿಕಾರಿಯಾಗಿದ್ದಾರೆ.

ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಬತ್ತು ಪುಟಗಳ ಪುಟ್ಟ ಪುಸ್ತಕದಲ್ಲಿ ಬಹು ವಿಶದವಾಗಿ, ಮನೋಜ್ಞವಾಗಿ ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಆಚಾರ್ಯರು ಬಹು ಸಮರ್ಥವಾಗಿ ಆಧಾರಯುತವಾಗಿ ವಿವರಿಸಿದ್ದಾರೆ.

ವಿಜ್ಞಾನದಂಥ ಕ್ಲಿಷ್ಟ ವಿಷಯವನ್ನು ಇಷ್ಟೊಂದು ಸಾರವತ್ತಾಗಿ ಹೇಳಿರುವ ಗ್ರಂಥ ಕನ್ನಡದಲ್ಲಿ ಇದೊಂದೇ ಎಂಬುದರಲ್ಲಿ ಸಂದೇಹವಿಲ್ಲ. ಸ್ವತಃ ಶಿವರಾಮ ಕಾರಂತರು, ಈ ಗ್ರಂಥಕ್ಕೆ ನೀಡಿರುವ ಮುನ್ನುಡಿಯಲ್ಲಿ, "ಇವತ್ತು ಕನ್ನಡ ನಾಡಿನಲ್ಲಿ ವೈಜ್ಞಾನಿಕ ವಿಷಯಗಳನ್ನು ಚೆನ್ನಾಗಿ ತಿಳಿದು ಕನ್ನಡದಲ್ಲಿಯೇ ಹೇಳಬಲ್ಲವರ ಸಂಖ್ಯೆ ಬರಿಯ ಐದಾರಕ್ಕೂ ಮೀರಿಲ್ಲ. ಅವರಲ್ಲಿ ಆಚಾರ್ಯರು ವಿಶೇಷ"ವೆಂದು ಹೇಳಿದ ಮೇಲೆ ಅನ್ಯರ ಪ್ರಶಸ್ತಿ ಪ್ರಶಂಸೆ ಒಂದೂ ಬೇಕಾಗಲಾರವು.

ಇಂಥ ಉಪಯುಕ್ತ ಗ್ರಂಥ ಬರೆದು ತಿಳಿವಳಿಕೆಕೊಟ್ಟು ನಮ್ಮನ್ನು ಅಣುಯುಗದ ಹೊಸ್ತಿಲಲ್ಲಿ ತಂದು ನಿಲ್ಲಿಸಿರುವ ಆಚಾರ್ಯರಿಗೆ ಕನ್ನಡ ಜಿಜ್ಞಾಸುಗಳೆಲ್ಲರೂ ಋಣಿಯಾಗಬೇಕಾಗಿದೆ.

—ಪ್ರಪಂಚ.

**ಹಿರೋಶಿಮಾದಿಂದ ಜಿನೇವ**

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್ ಉಡುಪಿ, ಬೆಲೆ: ರೂ. ೧-೮-೦.

**ಪ್ರತಿಗಳಿಗೆ ಪ್ರಕಾಶಕರಿಗಾಗಲಿ, ನವಭಾರತ ಪುಸ್ತಕ ಭಂಡಾರ, ಉಡುಪಿ, ಇವರಿಗಾಗಲಿ ಬರೆಯಿರಿ.**




Edited, Printed & Published by K. H. Shetty, at the Navayuga press, Udipi S. India

LICENCE NO. 31
Licensed to Post without Prepayment

# ನವಯುಗ

ಸಂಪುಟ ೩೬ VOL. 36

27—12—1956

ಸಂಚಿಕೆ ೧೭ NO. 17

## ಚುನಾವಣೆ ಬಂತು!

### ಈ ಸಲ ಪ್ರಮುಖ ಪಕ್ಷಗಳ ಚುನಾವಣಾ ಘೋಷಣೆಯ ಸಂಕ್ಷಿಪ್ತ ರೂಪವನ್ನು ನಿತ್ಯವೂ ಆಕಾಶವಾಣಿಯಲ್ಲಿ ಕೇಳುವಿರಿ!!!

ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯ ಮಂತ್ರಿಗಳಾದ ಡಾ| ಬಿ. ವಿ. ಕೇಸ್ಕರ್‌ರವರು, ಭಾರತದಲ್ಲಿರುವ ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳು ಆಕಾಶವಾಣಿ ಕೇಂದ್ರಗಳಿಂದ ಪ್ರಸಾರ ಭಾಷಣ ಮಾಡುವ ಸಂಬಂಧವಾಗಿ ಲೋಕಸಭೆಯಲ್ಲಿ ಇದೇ ೧೯ನೇ ದಿನಾಂಕ ಒಂದು ಹೇಳಿಕೆಯನ್ನು ಕೊಟ್ಟರು.

ಇದರ ಪ್ರಕಾರ ವಿವಿಧ ರಾಜಕೀಯ ಪಕ್ಷಗಳಿಗೆ ಸಾರ್ವತ್ರಿಕ ಚುನಾವಣೆಗಳಿಗಾಗಿ ಪ್ರಸಾರ ಭಾಷಣ ಸೌಲಭ್ಯವನ್ನೊದಗಿಸುವ ಪ್ರಶ್ನೆಯು ಸರ್ಕಾರದವರ ಗಮನದಲ್ಲಿದೆ ಕಳೆದ ಸಾರ್ವತ್ರಿಕ ಚುನಾವಣೆಯ ಕಾಲದಲ್ಲಿ ಸರ್ಕಾರದವರು, ತೀವ್ರವಾದ ಪರಿಶೀಲನೆಯನ್ನು ನಡೆಸಿದ ನಂತರ, ಅಂತಹ ಸೌಲಭ್ಯವನ್ನು ಒಂದಲ್ಲ ಒಂದು ರಾಜಕೀಯ ಪಕ್ಷದ, ಸೂಕ್ತವಲ್ಲದ ಹಾಗೂ ನಿಷ್ಪಕ್ಷಪಾತವಲ್ಲದ ಟೀಕೆಗೊಳಗಾದರೆ ಒದಗಿಸುವುದು ಸಾಧ್ಯವಾಗುವುದಿಲ್ಲವೆಂಬುದನ್ನು ಮನಗಂಡರು

ಆದಾಗ್ಯೂ, ಚುನಾವಣೆಗಳಾದ ನಂತರ ಸರ್ಕಾರದವರು, ಈ ವಿಷಯವನ್ನು ತೀವ್ರವಾಗಿ ಪರ್ಯಾಲೋಚಿಸಿದರು. ಇತರ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಅನುಸರಿಸುತ್ತಿರುವ ಪದ್ಧತಿಗಳನ್ನು ಅಭ್ಯಾಸ ಮಾಡಿ, ತುಲನೆ ಮಾಡಲಾಯಿತು. ಈ ಸಂದರ್ಭದಲ್ಲಿ ಉಲ್ಲೇಖಿಸಬಹುದಾದಂತಹ ಅನ್ಯ ರಾಷ್ಟ್ರಗಳ ಉದಾಹರಣೆಗಳು ಒಂದೇ ಸಮನಾಗಿಲ್ಲ. ರಾಷ್ಟ್ರದಿಂದ ರಾಷ್ಟ್ರಕ್ಕೆ, ಹಲವು ಮುಖ್ಯ ವಿಷಯಗಳಲ್ಲಿ ಮೂಲತಃ ಭಿನ್ನತೆ ಇರುವ ಪರಿಸ್ಥಿತಿಯನ್ನು ಅವು ಅವಲಂಬಿಸಿವೆ. ಈ ಪ್ರಶ್ನೆಯು ಪ್ರಯೋಗಾತ್ಮಕ ದೃಷ್ಟಿಯೂ ಸಹ ಅತ್ಯಂತ ಮುಖ್ಯವೆನಿಸುತ್ತದೆ. ಈ ಸಂಬಂಧದ ನಿರ್ಣಯ ಸ್ವೀಕರಿಸುವಾಗ ರಾಷ್ಟ್ರದ ವಿಸ್ತೀರ್ಣ, ಸರ್ಕಾರದ ರಚನೆ-ಫೆಡರಲ್ ಅಥವಾ ಯೂನಿಟರಿ —ತೊಡರುವ ರಾಜಕೀಯ ಪಕ್ಷಗಳ ಸಂಖ್ಯೆ, ಇತ್ಯಾದಿ ಎಲ್ಲಾ ಅಂಶಗಳನ್ನೂ, ಎಲ್ಲಾ ರಾಜ್ಯಗಳೂ ಗಮನದಲ್ಲಿಟ್ಟುಕೊಂಡಿರುತ್ತವೆ ಅಮೇರಿಕದಲ್ಲಿ ಪ್ರಸಾರಣ ಕಾರ್ಯವು ಖಾಸಗಿ ಉದ್ಯಮಿಗಳಿಂದ ನಡೆಸಲ್ಪಡುತ್ತದೆ. ಫೆಡರಲ್ ಕಮ್ಯೂನಿಕೇಷನ್ ಕಮಿಷನ್ನರು ಎಲ್ಲರಿಗೂ ಸಮಾನಾವಕಾಶ ದೊರೆಯಬೇಕೆಂದು ನಿಯಮ ವಿಧಿಸಿದ್ದರೂ, ಎಲ್ಲರೂ ಸಮಯವನ್ನು ಕೊಂಡುಕೊಳ್ಳಬೇಕಾಗುವುದು. ಆದರೂ, ಹೆಚ್ಚಿನ ಗೊಣಗಾಟ ಮತ್ತು ಅಸಂತೃಪ್ತಿ ಯಾವಾಗಲೂ ಇದ್ದೇ ಇರುತ್ತದೆ. ಬ್ರಿಟನ್ನಿನಲ್ಲಿ ಯುದ್ಧಾನಂತರದಿಂದ ಮಾತ್ರ, ಕೆಲವು ಚುನಾವಣಾ ಪ್ರಸಾರ ಭಾಷಣಗಳಿಗೆ ಅವಕಾಶವನ್ನೊದಗಿಸಲಾಗಿದೆ ಈ ಪ್ರಸಾರ ಭಾಷಣಗಳಿಗೆ ಒದಗಿಸುವ ಸಮಯವು ಆಯಾಯ ಪಕ್ಷಗಳ ಒಲಾಬಲ ಮತ್ತು ಇತರ ಪ್ರಾಯೋಗಿಕ ಅಂಶಗಳನ್ನವಲಂಬಿಸಿರುವುದು. ಸ್ವಿಟ್ಜರ್‌ಲೆಂಡ್‌ನಂತಹ ರಾಷ್ಟ್ರಗಳಲ್ಲಿ ಚುನಾವಣಾ ಉದ್ದೇಶಗಳಿಗಾಗಿ ರೇಡಿಯೋವಲ್ಲಿ ಯಾವ ಸಮಯಗಳನ್ನೂ ಒದಗಿಸಲಾಗುವುದಿಲ್ಲ. ಫ್ರಾನ್ಸಿನಲ್ಲಿ ಅದಕ್ಕಾಗಿ ಅತ್ಯಲ್ಪ ಕಾಲವನ್ನೊದಗಿಸಲಾಗುವುದು

ಅನ್ಯ ರಾಷ್ಟ್ರಗಳಲ್ಲಿರುವ ಪದ್ಧತಿಗಳನ್ನು ಸಮೀಕ್ಷೆ ಮಾಡುವುದರಿಂದ, ಪ್ರತಿಯೊಂದು ರಾಷ್ಟ್ರವೂ, ಅಲ್ಲಿನ ಪರಿಸ್ಥಿತಿಗಳನ್ನು, ಅಲ್ಲಿನ ರಾಜಕೀಯ ಪಕ್ಷಗಳ ಸಂಖ್ಯೆಯನ್ನು ಹಾಗೂ ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುವರೆಂದು ವೇದ್ಯವಾಗುವುದು ಇತರ ರಾಷ್ಟ್ರಗಳ ಸಾಮ್ಯವು, ಭಾರತಕ್ಕೆ ಸಂಬಂಧಪಟ್ಟಂತೆ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ ನಮ್ಮ ದೇಶದಲ್ಲಿರುವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರದವರು, ಎಲ್ಲಾ ರಾಜಕೀಯ ಪಕ್ಷಗಳಿಗೂ ಇಂತಹ ಸೌಲಭ್ಯಗಳನ್ನು ಒದಗಿಸುವುದು ತುಂಬಾ ಕಷ್ಟತರ ಅಥವಾ ಅಸಾಧ್ಯವೆಂದು ಭಾವಿಸಿರುವರು. ಮೇಲೆ ಹೇಳಿದ ಅಂಶಗಳಲ್ಲದೆ, ಮತ್ತೊಂದು ಅಂಶವನ್ನೂ ಗಮನಕ್ಕೆ ತಂದುಕೊಳ್ಳಬೇಕು ಇತರ ರಾಷ್ಟ್ರಗಳಲ್ಲಿ, ರಾಷ್ಟ್ರೀಯ ಚುನಾವಣೆಗಳಲ್ಲಿ ಮಾತ್ರ, ರಾಷ್ಟ್ರೀಯ ಪ್ರಸಾರಕ್ಕಾಗಿ ರಾಷ್ಟ್ರೀಯ ಭಾಷೆಯನ್ನು ಉಪಯೋಗಿಸುವರು ಸ್ವಿಟ್ಜರ್‌ಲೆಂಡಿನಲ್ಲಿ ಮಾತ್ರ ಮೂರು ಭಾಷೆಗಳಿರುವುದು. ಚುನಾವಣಾ ಪ್ರಸಾರಗಳಿಗೆ ರೇಡಿಯೋ ಸೌಕರ್ಯವನ್ನು ಒದಗಿಸದಿರಲು ಅನುಮತಿ ಕೊಡದಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಇದೂ ಒಂದು ಭಾರತದಲ್ಲಿ ಇಂಗ್ಲೀಷಿನ ಜೊತೆಗೆ, ೧೪ ಭಾಷೆಗಳಲ್ಲಿ ಸೌಕರ್ಯವನ್ನೊದಗಿಸುವ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ, ಆಕಾಶವಾಣಿಯ ೨೬ ಕೇಂದ್ರಗಳಿಂದ ಸಮಾನ ಸೌಕರ್ಯಗಳನ್ನು ಒದಗಿಸುವ ಕಾರ್ಯ ಕಷ್ಟಕರವಾದದ್ದು. ಅದೂ ಅಲ್ಲದೆ ಈ ಸೌಲಭ್ಯವನ್ನು ಸುಮಾರು ೨೭ ರಾಜಕೀಯ ಪಕ್ಷಗಳಿಗೆ ಒದಗಿಸಬೇಕೆಂಬ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ವಿವಿಧ ರಾಜಕೀಯ ಪಕ್ಷಗಳ ನಡುವೆ, ಆಕಾಶವಾಣಿಯ ವಿವಿಧ ಕೇಂದ್ರಗಳಲ್ಲಿ ಸಮಯಾವಕಾಶಗಳನ್ನು ಹಂಚುವ ಉದ್ದೇಶಕ್ಕಾಗಿ ಅನುಸರಿಸುವ ತತ್ವವನ್ನು ನಿರ್ಧರಿಸುವಾಗಲೇ ಹೆಚ್ಚಿನ ಭಿನ್ನಾಭಿಪ್ರಾಯಗಳಿಗೆ ದಾರಿಯಾಗಬಹುದು ಆಕಾಶವಾಣಿಯ ಭಾಷಾ ಕೇಂದ್ರಗಳು, ಪ್ರಾದೇಶಿಕ ಕೇಂದ್ರಗಳು ಅಧಿಕ ಸಂಖ್ಯೆಯ ರಾಜಕೀಯ ಪಕ್ಷಗಳಿಗೂ ಅವಕಾಶ ಒದಗಿಸಿ ಕೊನೆಯ ಪಕ್ಷ ಎರಡು ಅಥವಾ ಮೂರು ಭಾಷೆಗಳಲ್ಲಿ, ಒಂದೊಂದು ವೇಳೆ ಇನ್ನೂ ಹೆಚ್ಚು ಭಾಷೆಗಳಲ್ಲಿ ಪ್ರಸಾರಕ್ಕಾಗಿ ಸಮಯಾವಕಾಶ ಒದಗಿಸಬೇಕಾಗುವುದು.

ಸಮಯಾವಕಾಶದ ಹಂಚಿಕೆಯನ್ನು ವಿದೇಶೀ ರಾಷ್ಟ್ರಗಳಲ್ಲಿ ವಿವಿಧ ರೀತಿಯಲ್ಲಿ ಮಾಡಲಾಗಿದೆ. ಕೆಲವು ರಾಷ್ಟ್ರಗಳು ಮತದಾನದ ಸಂಖ್ಯೆಯ ಮೇಲೆ ನಿರ್ಧರಿಸಿದರೆ, ಮತ್ತೆ ಕೆಲವು ರಾಷ್ಟ್ರಗಳು ರಾಜಕೀಯ ಪಕ್ಷಗಳು ನಿಲ್ಲಿಸುವ ಉಮೇದುವಾರರ ಸಂಖ್ಯೆಯ ಮೇಲೆ ನಿರ್ಧರಿಸುತ್ತದೆ ಇಂತಹ ಯಾವುದೇ ಸಮಯಾವಕಾಶದ ಹಂಚಿಕೆ ವಿಧಾನವು ಪ್ರತಾರೋಪಗಳಲ್ಲಿ ಪರಿಣಮಿಸಿ, ಸರ್ಕಾರವನ್ನು ಟೀಕೆಗೊಳಪಡಿಸುವುದು ಅದರ ಜೊತೆಗೆ, ಎಲ್ಲಾ ಪಕ್ಷಗಳಿಗೂ ಸಮಾನವಾಗಿ ಸಮಯವನ್ನು ಒದಗಿಸಬೇಕಾದರೆ, ಆಕಾಶವಾಣಿ ಕೇಂದ್ರವು ಚುನಾವಣಾ ಕಾಲದಲ್ಲಿ ಅನುದಿನದ ಕಾರ್ಯಗಳನ್ನು ತೀವ್ರವಾಗಿ ಕಡಿಮೆ ಮಾಡಬೇಕಾಗುತ್ತದೆ ಆದ್ದರಿಂದ ಸೂಕ್ತವಾದ ರೀತಿಯಲ್ಲಿ ಪ್ರಸಾರ ಸಮಯಾವಕಾಶಗಳನ್ನು ಒದಗಿಸುವುದು ಕ್ಲಿಷ್ಟವಾಗುವುದು.

ಎಲ್ಲಾ ಪ್ರಾಯೋಗಿಕ ಅಂಶಗಳ ದೃಷ್ಟಿಯಿಂದ, ಚುನಾವಣಾ ಉದ್ದೇಶಗಳಿಗಾಗಿ ರೇಡಿಯೋ ಸೌಲಭ್ಯಗಳನ್ನು ಸಾಮಾನ್ಯವಾಗಿ ಎಲ್ಲಾ ರಾಜಕೀಯ ಪಕ್ಷಗಳಿಗೂ ಒದಗಿಸುವುದು ಸಾಧ್ಯವಲ್ಲವೆಂಬ ತೀರ್ಮಾನಕ್ಕೆ ಸರ್ಕಾರವು ಬರಬೇಕಾಗುವುದು.

ಆದರೆ, ಇಂತಹ ಅವಕಾಶವನ್ನು ನಿರ್ದಿಷ್ಟಗೊಳಿಸಲಾದ ಪ್ರಮಾಣದಲ್ಲಿ ಪ್ರಯೋಗಾರ್ಥವಾಗಿ ಒದಗಿಸಬಹುದೆಂದು ಸರ್ಕಾರದವರು ಭಾವಿಸಿರುವರು. ನಿರ್ದಿಷ್ಟ ಚುನಾವಣಾ ಉದ್ದೇಶಗಳಿಗಾಗಿ, ರೇಡಿಯೋದ ಹೆಚ್ಚಿನ ಸಮಯಗಳನ್ನು ತೆಗೆದುಕೊಳ್ಳದಂತೆ, ಪ್ರತ್ಯಾರೋಪ ಹಾಗೂ ಪಕ್ಷಪಾತಗಳಿಗೆಡೆ ಕೊಡದಂತೆ, ಒದಗಿಸಲು ಸಾಧ್ಯವೇ ಎಂಬುದನ್ನು ನೋಡುವುದಕ್ಕೋಸ್ಕರ ಚುನಾವಣಾ ಕಮಿಷನ್ನಿನವರು ಅಂಗೀಕರಿಸುವ ನಾಲ್ಕು ಅಖಿಲ ಭಾರತ ರಾಜಕೀಯ ಪಕ್ಷಗಳು ತಯಾ

೧೨ನೇ ಪುಟ ನೋಡಿರಿ.

ಅಧಿಕಾಧಿಕವಾಗುತ್ತಿರುವ
ನಿಮ್ಮ ವಿಶ್ವಾಸ
ನಮ್ಮ ರಜತ ಮಹೋತ್ಸವದ ವರ್ಷ
ಹಿಂದೆ (31-10-1955)
ರೂಪಾಯಿ:- 76 ಲಕ್ಷ
ಒಟ್ಟು ಚಲಾವಣೆ ಮೊಬಲಗು
ಇಂದು — (31-10-1956)
ರೂಪಾಯಿ:- ಒಂದು ಕೋಟಿಗೂ ಮಿಕ್ಕಿದೆ.
ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ ಮಂಗಳೂರು—3.
THE VIJAYA BANK LTD.

ವಾರ್ಷಿಕ ಚಂದಾ.

NAVAYUGA WEEKLY, UDIPI.

ಬಿಡಿಸಂಚಿಕೆ

## ಉಪಕುಲಪತಿ 'ಕುವೆಂಪು'

### ಕನ್ನಡ ಸರಸ್ವತಿಯ ಈ ಅಮೃತ ಪುತ್ರ "ವಿದ್ಯಾರ್ಥಿಗಳಿಗೆ ತಾಯ್ನುಡಿಯಲ್ಲಿಯೇ ಶಿಕ್ಷಣ ಕೊಟ್ಟರೆ ಪ್ರಯೋಜನ"—ಎನ್ನುತ್ತಾರೆ.

ಯಾವುದಾದರೊಂದು ದೇಶದ ಉನ್ನತಿಗೆ ಆಯಾ ದೇಶದ ವಿಜ್ಞಾನ, ರಾಜಕೀಯಗಳು ಕಾರಣವಾಗಿರುವಂತೆ—ಆಯಾ ದೇಶದ ಸಾಹಿತ್ಯವೂ ಕಾರಣವಾಗಿದೆ. ಇಂತಹ ಸಾಹಿತ್ಯದಲ್ಲಿ ಮೊದಲಿನಿಂದಲೂ ಅಂದರೆ—ಪ್ರಥಮ ಸಾಹಿತ್ಯದಿಂದಲೂ ಕೂಡಾ ಕಾವ್ಯಕ್ಕೆ ಗದ್ಯಕ್ಕಿಂತ ಮೊದಲ ಸ್ಥಾನವನ್ನು ಕೊಟ್ಟಿರುತ್ತಾರೆ. ಗದ್ಯದಿಂದಲೂ ಪದ್ಯದಿಂದಲೂ ತಮ್ಮ ಆಧುನಿಕ ಸಾಹಿತ್ಯವನ್ನು ಹೊರಗೆತವಿ ಏಕಮೇವಾದ್ವಿತೀಯತಾ ಆಗಿರುವ ಮಹಾಛಂದಸ್ಸಿನ ಮಹಾ ಕಾವ್ಯವನ್ನು ಜನತೆಯ ಮುಂದಿರಿಸಿದ ಕೀರ್ತಿಯು "ಕುವೆಂಪು" ಎಂಬ ಕಾವ್ಯ ನಾಮದಿಂದಿರುವ ಕಾವ್ಯರ್ಷಿ ಕುಪ್ಪಳ್ಳಿ ಶ್ರೀ ಪುಟ್ಟಪ್ಪನವರಿಗೆ ಸೇರಬೇಕಾಗಿದೆ.

ಶ್ರೀ ಕೆ. ವಿ. ಪುಟ್ಟಪ್ಪ ಇವರು ಮೈಸೂರು ಹಾಗೂ ಕರ್ನಾಟಕದ ಪ್ರಖ್ಯಾತಿ ಹೊಂದಿದ ಕವಿ, ಲೇಖಕರಾಗಿದ್ದಾರೆ, ಕುವೆಂಪುರವರು ಕನ್ನಡ ಸಾಹಿತ್ಯಕ್ಕೆ ಮಾಡಿದ ಸೇವೆಯೂ ಅತ್ಯುಚ್ಚಮಟ್ಟದಲ್ಲಿದ್ದು, ತೃಪ್ತಿಪಡುವಷ್ಟಿದೆ. ಮೈಸೂರು ಪ್ರಾಂತದ ಮಲೆನಾಡು ಪ್ರದೇಶದಲ್ಲಿ ಹುಟ್ಟಿ ಬೆಳೆದ ಕುವೆಂಪುರವರಿಗೆ ಬರೆಯುವ ಶಕ್ತಿ ರಕ್ತಗತವಾಗಿ ಬಂದಂಥಾ ದೊಡ್ಡವರ. ಇವರ ಲೇಖನಿಯಿಂದ ಪ್ರತಿಫಲಿತವಾದದ್ದೆಲ್ಲಾ ಸತ್ವಶಾಲಿಗಳಾಗಿರುವ ಬರಹಗಳಾಗಿವೆ.

ಇವರು ಮಲೆನಾಡಿನ ಕುಪ್ಪಳ್ಳಿ ಎಂಬ ಹಳ್ಳಿಯಲ್ಲಿ ೨೯ನೇ ಜನವರಿ, ೧೯೦೪ರಂದು ವೆಂಕಟಪ್ಪ ಮತ್ತು ಸೀತಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸವು ಮನೆಯಲ್ಲೇ ನಡೆಯಿತು. ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಬಳಿಕ ಮಾಧ್ಯಮಿಕ ವಿದ್ಯಾಭ್ಯಾಸವನ್ನು ತೀರ್ಥಹಳ್ಳಿಯಲ್ಲಿ ಮುಗಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮುಂದೆ ಮೈಸೂರಿಗೆ ಬಂದರು.

ಶ್ರೀ ಟಿ. ಎಸ್. ವೆಂಕಣ್ಣಯ್ಯ ಮತ್ತು ದಿ| ಶ್ರೀ ಬಿ. ಎಂ. ಶ್ರೀಕಂಠಯ್ಯ—ಇವರಿಬ್ಬರು ಕುವೆಂಪುರವರು ಕಾಲೇಜಿನಲ್ಲಿ ಕಲಿಯುತ್ತಿರುವಾಗ ಅವರಿಗೆ ದೊರೆತ ನೆಚ್ಚಿನ ಗುರುವರ್ಯರು. ಇವರು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತುಕೊಳ್ಳುವಾಗಲೇ ನೂರಾರು ಆಂಗ್ಲ ಗೀತೆಗಳನ್ನು ಬರೆದಿದ್ದರು. ಕಾಲೇಜ್ ಸೇರಿದ ನಂತರ ಷೇಕ್ಸ್‌ಪಿಯರನ ೧೬ ನಾಟಕಗಳನ್ನು ಓದಿ ತಮ್ಮ ಜ್ಞಾನವನ್ನು ವೃದ್ಧಿಪಡಿಸಿಕೊಂಡರು. ಇವರು ಇಂಟರ್ ಕ್ಲಾಸಿನಲ್ಲಿ ಸಾಯನ್ಸ್ ಕಲಿತು, ಬಿ. ಎ. ತರಗತಿಯಲ್ಲಿ ವೇದಾಂತ ಕಲಿತರು. ೧೯೨೯ರಲ್ಲಿ ಕನ್ನಡದಲ್ಲಿ ಎರಡನೇ ವರ್ಗದಲ್ಲಿ ಎಂ. ಎ. ಪಾಸಾದರು. ಒಮ್ಮೆ ಇವರು ಬರೆದ "ಅನುಲನ ಕಥೆ" ಎಂಬ ದೀರ್ಘ ಕವನಕ್ಕೆ ದಿ| ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಕವಿತಾ ಸ್ಪರ್ಧೆಯಲ್ಲಿ ಸ್ವರ್ಣ ಪದಕವೊಂದು ಬಹುಮಾನ ರೂಪದಲ್ಲಿ ದೊರಕಿತು.

ಇವರು ಇಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾರೆ. ಇವರು ಕನ್ನಡ ನಾಡಿನ ವರ ಕವಿಗಳು. ಇವರ ಕವನಗಳನ್ನು ಹಾಡಿ, ನಲಿಯದ ಆಬಾಲ ವೃದ್ಧರಿಲ್ಲ. ಇವರ ಹೆಸರು ಇಂದು ಕನ್ನಡನಾಡಿಗರ ಮನೆಮಾತು. "ಅಡು ಮುಟ್ಟದ ಗಿಡವಿಲ್ಲ, ಕುವೆಂಪುರವರು ಬರೆಯದ ಸಾಹಿತ್ಯವಿಲ್ಲ." ಕವನ ಕಾವ್ಯ, ಕಾದಂಬರಿ, ಸಣ್ಣಕತೆ ಪ್ರಬಂಧ ದರ್ಶನ, ಕಾವ್ಯವಿಮರ್ಶೆ, ಮಕ್ಕಳಸಾಹಿತ್ಯ, ಗದ್ಯ ಸಾಹಿತ್ಯ— ಮೊದಲಾದ ಸಾಹಿತ್ಯದ ವಿವಿಧ ಶಾಖೆಗಳಲ್ಲಿ ದುಡಿದು, ಕನ್ನಡ ಸಾಹಿತ್ಯ ದೇವಿಯನ್ನು ಹಲವಾರು ಚಿರಂತನ ಕೃತಿ ರತ್ನಗಳಿಂದ ಅಲಂಕರಿಸಿದ್ದಾರೆ. ಇವರು ಲಘು ಗೀತೆಗಳಿಂದ ಹಿಡಿದು ಮಹಾ ಕಾವ್ಯದ ವರೆಗೆ ಬರೆದಿದ್ದಾರೆ.

ಕುವೆಂಪುರವರ "ರಾಮಾಯಣ ದರ್ಶನಂ" ಗ್ರಂಥಕ್ಕೆ ಭಾರತಸರಕಾರದ ಪರವಾಗಿ ಪ್ರೋತ್ಸಾಹಕ ರೂಪವಾದ ರೂ. ೫,೦೦೦/-ದ ಮೊಬಲಗನ್ನು ಬಹುಮಾನವಾಗಿ ರಾಷ್ಟ್ರಪತಿಗಳು ಕೊಟ್ಟರು. 'ಭಾರತ ರಾಷ್ಟ್ರದ ಹಿರಿಮೆ ಕುವೆಂಪುರವರ "ರಾಮಾಯಣ ದರ್ಶನಂ" ನಲ್ಲಿ ಅಡಗಿದೆ' ಎಂದು ಡಾ. ಬಾಬುರಾಜೇಂದ್ರ ಪ್ರಸಾದರು, ಹೆಮ್ಮೆ ಪಟ್ಟರು. "ರಾಮಾಯಣ ದರ್ಶನಂ" ಕಾಲದಿಂದ ಕನ್ನಡ ಸಾಹಿತ್ಯದಲ್ಲೊಂದು ಹೊಸ ಶಕ ಪ್ರಾರಂಭವಾಯಿತೆನ್ನಬಹುದು.

ಕುವೆಂಪುರವರ ಕೀರ್ತಿ ದಿಗಂತದಲ್ಲಿ ಮಿನುಗುತ್ತಿರುವುದು ಇದೇನು ಪ್ರಥಮ ಬಾರಿಯಲ್ಲ. 20 ವರ್ಷಗಳ ಮೊದಲು ವಿದ್ಯಾರ್ಥಿ—ಕವಿಗಳ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ, ತಮ್ಮ "ಕಿಂದರಿಜೋಗಿ" ಯಿಂದ ಸಭಿಕರ ಹೃದಯವನ್ನು ಝಲ್ಲೆನ್ನುವಂತೆ ಮಾಡಿದ್ದರು. ತಮ್ಮ ಶಕ್ತಿಯುತವಾದ ಅಪ್ರತಿಮ ಪ್ರತಿಭೆಯಿಂದ ಕೂಡಿದ ಕೃತಿಗಳಿಂದ ಇಂದು ಭಾರತದಲ್ಲೇ ಹೆಸರಾದ ಕವಿಯಾಗಿದ್ದಾರೆ.

ಇವರು ಮಲೆನಾಡಿನ 'ಕೋಕಿಲವಾಣಿ'ಯೆಂದೂ ಹೆಸರು ಪಡೆದಿದ್ದಾರೆ. ಕೋಗಿಲೆಯು ವಸಂತದಲ್ಲಿ ದೂರದ ದ್ವೀಪದಲ್ಲಿ ವಸಂತದ ಶಾಂತತೆಯನ್ನು ಭೇದಿಸುತ್ತಾ ಹಾಡುತ್ತಿದ್ದರೆ-ಪುಟ್ಟಪ್ಪನವರು ಮೈಸೂರಿನಲ್ಲಿದ್ದುಕೊಂಡು ಸರಸ್ವತಿ ದೇವಿಯ ಮಾತುಗಳಿಂದ ಕನ್ನಡ ಸಾಹಿತ್ಯವನ್ನು ಭೇದಿಸುತ್ತಾರೆ.

ಪುಟ್ಟಪ್ಪನವರು ಅದ್ಭುತವಾದ ಆಧ್ಯಾತ್ಮಿಕ ಸಂಬಂಧವನ್ನು ಪಡೆದಿದ್ದಾರೆ. ಭಾರತೀಯರಿಗೆ ಷೇಕ್ಸ್‌ಪಿಯರ್‌ನಿಗಿಂತಲೂ ವರ್ಡ್ಸ್‌ವರ್ತ್ ಕವಿಯ ಕವಿತೆಗಳು ಹಿತವಾಗಿವೆ. ವಿವಿಧಾರ್ಥ ಕಲ್ಪಿಸಿಕೊಂಡು ರಚಿಸುವ ಕವಿತೆಯನ್ನು ಓದಿ, ಅರ್ಥ ಮಾಡಿಕೊಳ್ಳುವುದೆಂದರೆ ಯಾತ್ರಿಯು ಗುಂಪಿನಲ್ಲಿ ಸಿಕ್ಕಿಬಿದ್ದಂತೆಯೇ. ವರ್ಡ್ಸ್‌ವರ್ತ್ ಕವಿಯ ಕವಿತೆಯಲ್ಲಿ ಇಂಥಾ ತೊಂದರೆಯನ್ನು ಕಾಣದೆ ಭಾವನಾ ಪ್ರಪಂಚದಲ್ಲಿ ವಿಹರಿಸುವಂತೆ ಭಾಸವಾಗುತ್ತದೆ.

ಪುಟ್ಟಪ್ಪನವರ ಅಪೂರ್ವ ಗುಣ ಬುದ್ಧಿವಂತಿಕೆಯಂತೆ, ಅವರ ಕವಿತೆಯೂ, ಅವರ ಕವಿತೆಯ ಶಕ್ತಿಯು ಗುಣ, ಅರ್ಥಗಳಂತೆ ಇವರೂ ಇದ್ದಾರೆ. ಪುಟ್ಟಪ್ಪನವರು ಬರೇ ಕವಿತೆ ಬರೆಯುವ ಕವಿಯಷ್ಟೇ ಅಲ್ಲದೆ–ಜನಪ್ರಿಯ ಪದ್ಯ ನಾಟಕಗಳ ಕರ್ತೃವಾಗಿ, ಗ್ರಂಥ ರಚಕರಾಗಿ, ಪ್ರಖ್ಯಾತ ಸಣ್ಣ ಕತೆಗಳ, ವಿಮರ್ಶಕರಾಗಿ, ಪ್ರಖ್ಯಾತಕ ಪ್ರಬಂಧಕಾರರಾಗಿದ್ದಾರೆ. ಇವರ ಸ್ವಂತ ನಾಟಕದಲ್ಲಿ ಇವರೇ ಸ್ವತಹ ಪಾತ್ರವಹಿಸಿದ್ದರು. (ಬಿಜಾಪುರ ಸಾಹಿತ್ಯ ಸಮ್ಮೇಳನದಲ್ಲಿ ತಾವೇ ಬರೆದ "ಯಮನ ಸೋಲು" ನಾಟಕದ ಪಾತ್ರವನ್ನು ವಹಿಸಿ, ಪ್ರೇಕ್ಷಕರನ್ನು ಚಕಿತರನ್ನಾಗಿ ಮಾಡಿದ್ದರು.) ಆದರೆ ಈಗ ತಾನು ನಾಟಕಕ್ಕೆ ಯೋಗ್ಯವಾಗಲಿಕ್ಕಿಲ್ಲವೆಂದು ಇವರು ಅದರ ಗೊಡವೆಗೇ ಹೋಗುವುದಿಲ್ಲವಂತೆ.

ಇವರ ಮಹಾ ಗ್ರಂಥವು ಭಾಷಾಂತರವಾದರೆ ಕುವೆಂಪುರವರಿಗೆ ರತ್ನ ಕಿರೀಟವಿಟ್ಟಹಾಗೆ ಯಾದರೂ ಆಶ್ಚರ್ಯವೇನಿಲ್ಲ. ಯೋಗ್ಯ ಪಾತ್ರ, ಛಂದಸ್ಸು, ಅಲಂಕಾರದೊಂದಿಗೆ ಕೂಡಿದ ಈ ಮಹಾಕಾವ್ಯ ನಿಜವಾಗಿಯೂ ಕುವೆಂಪುರವರ ಕೃತಿಗಳಲ್ಲಿ ಅತ್ಯಂತ ಶ್ರೇಷ್ಠ ತರಗತಿಯದ್ದಾಗಿದೆ. ಮಾತ್ರವಲ್ಲದೆ ಎಲ್ಲಾ ಭಾಷೆಗಳಲ್ಲಿ ಅನುವಾದಿಸಲು ಯೋಗ್ಯವಾಗಿದೆ.

ಹೊಸ—ನೂತನ ವಿಚಾರಗಳನ್ನು ತಿಳಿಸಲು ಮನಸ್ಸು ಸಹಜವಾದ ಉತ್ಸಾಹವನ್ನು ತಾಳುತ್ತದೆ. ಪುಟ್ಟಪ್ಪನವರ ಕಾವ್ಯಗಳು, ಗ್ರಂಥಗಳು ಒಬ್ಬ ಯೋಗ್ಯ ಭಾಷಾಂತರಕಾರನ ನೇತೃತ್ವದಲ್ಲಿ ಜಾಗರೂಕತೆಯಿಂದ ಭಾಷಾಂತರಗೊಂಡರೆ, ಖಂಡಿತವಾಗಿಯೂ ಅದಕ್ಕೆ ಜಗತ್ಪ್ರಸಿದ್ಧವಾದ "ನೊಬೆಲ್" ಪಾರಿತೋಷಕ ದೊರೆಯದಿರದು.

ಇವರ ಗುರು ಶ್ರೀ. ಟಿ. ಎಸ್. ವೆಂಕಣ್ಣಯ್ಯನವರು ಆಗಾಗ್ಗೆ ಹೀಗೆ ಹೇಳುತ್ತಿದ್ದರು: "ನನಗೆ ಪುಟ್ಟಪ್ಪನವರ ಮನೆಗೆ ಹೋಗಿ ಅವರ ಕವನಗಳನ್ನು ಕೇಳಿ ಅಭ್ಯಾಸ ಮಾಡುವುದೆಂದರೆ ಒಂದು ತೀರ್ಥಯಾತ್ರೆ ಮಾಡಿದಂತೆ."

ಆಚಾರ್ಯ ದಿ| ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಒಮ್ಮೆ ಶ್ರೀರಂಗ ಪಟ್ಟಣದಲ್ಲಿ ಕಾವ್ಯ ವಾಚನ ಜರಗಿತು. ಆ ಕಾವ್ಯ ವಾಚನವನ್ನು ಕೇಳಿದ ೭೦ ವರ್ಷ ಪ್ರಾಯದ ಮುದುಕನೊಬ್ಬನು ಸಭೆ ಮುಗಿದ ಬಳಿಕ ಕುವೆಂಪುರವರನ್ನು ಕಂಡು ನಮಸ್ಕರಿಸಿ, "ಅಯ್ಯಾ! ನೀನೊಬ್ಬ ಮಹಾಪುರುಷ. ಕನ್ನಡ ನುಡಿಯನ್ನು ಬೆಳಗಿಸಲು ಬಂದಿರುವಿ" ಎಂದರಂತೆ.

ಜಗತ್ತಿನಲ್ಲಿ 'ಒಳ್ಳೆಯದು' ಎಂದು ಎಣಿಸಿದ್ದನ್ನು ಹಾಗೂ 'ಉತ್ತಮ' ಎಂದು ಹೇಳಲ್ಪಟ್ಟ ಎಲ್ಲಾ ವಿಚಾರಗಳನ್ನು ಪುಟ್ಟಪ್ಪನವರು ತಮ್ಮ ಗ್ರಂಥದಲ್ಲಿ ಸೇರಿಸಿದ್ದಾರೆ. ವಿಶ್ವವಿದ್ಯಾನಿಲಯದವರು ಇಂದು ಕೊಡುತ್ತಿರುವ ಉತ್ತಮ ಮಟ್ಟದ ವಿದ್ಯಾಭ್ಯಾಸಕ್ಕಿಂತ—ಭಾರತದ ಸಾಂಸ್ಕೃತಿಕ ಸಂಪ್ರದಾಯದಲ್ಲಿ ಪುಟ್ಟಪ್ಪನವರು ಉತ್ತಮ ವಿದ್ಯೆಯನ್ನು ಕೊಟ್ಟಿದ್ದಾರೆ. ಕುವೆಂಪುರವರು ಬರೆದ ಕವಿತೆಗಳಲ್ಲಿ-ಸ್ವಾಮಿ ವಿವೇಕಾನಂದ, ಟಾಗೋರರ ಜೀವನ ಚರಿತ್ರೆಯಲ್ಲಿ ಅವರ ಪ್ರತಿಭೆಯನ್ನು ನಾವು ಕಾಣಬಹುದು.

ರವೀಂದ್ರನಾಥ ಟಾಗೋರರು ಸ್ವರ್ಗಸ್ಥರಾದಾಗ 'ವಿಶ್ವಭಾರತಿ' ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ ಶ್ರೀ ಆರ್. ವಿ. ಜಾಗೀರದಾರರು ಹೀಗೆ ಹೇಳಿದರು: "ಟಾಗೋರರು ಬಿಟ್ಟುಹೋದ ಕಿರೀಟ ಭಾರತದಲ್ಲಿ ಯಾರಿಗಾದರೂ ಒಪ್ಪುತ್ತಿದ್ದರೆ, ಅದು ಕೆ. ವಿ. ಪುಟ್ಟಪ್ಪನವರ ತಲೆಗೆ ಒಪ್ಪುತ್ತದೆ."

'ಕುವೆಂಪು ಆನಂದ ನೀಡುವ ಕಾವ್ಯ ಸೃಜಿಸಿದ್ದಾರೆ ಅವರ ಶಿವನೂತನ ಕಾರ್ಯಸೃಷ್ಟಿ ಈ ತಲೆಮಾರಿಗೆ ಸ್ಫೂರ್ತಿ ನೀಡಿವೆ. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ದೇಶ ಭಾಷೆಯಿಂದ ಮಾತ್ರ ಆ-ಆ ನಾಡಿನ ಜನರೆಲ್ಲಾ ಒಂದಾಗಿ ಬಾಳಬೇಕೆಂಬುದೂ ರಾಜಕೀಯ ಕಾರಣಗಳಿಂದ ಬೇರೆ ಬೇರೆ ಯಾಗಿದ್ದರೂ ಭಾಷಾ ಸಾಹಿತ್ಯ, ಸಂಸ್ಕೃತಿಗಳ ದೃಷ್ಟಿಯಿಂದ ಅದು ಅವಿಭಾಜ್ಯವೆಂಬುದೂ ಕುವೆಂಪುರವರ ಭಾವನೆ."

ಕುವೆಂಪುರವರ ಕವಿತಾ ಕಾಮಿನಿ ಅರ್ಚನೆಯು ಅವ್ಯಾಹತವಾಗಿ ಸಾಗಿ, ಸಿದ್ಧಿಯನ್ನು ತರಲಿ! ಕನ್ನಡದ ಆಧುನಿಕ ಕವಿಗಳಲ್ಲಿ ಬೃಹತ್ತು—ಮಹತ್ತುಗಳೆರಡರಲ್ಲಿಯೂ ಕುವೆಂಪುರವರಿಗೆ ಅಗ್ರಸ್ಥಾನ ಮೀಸಲು. ಸರಸ್ವತಿಯ ಅಮೃತ ಪುತ್ರರಾದ ಕುವೆಂಪುರವರನ್ನು ಪಡೆದ ಕನ್ನಡ ನಾಡು ಧನ್ಯ! (ಆಧಾರ)

—ಶ್ರೀ ಪಿ. ನಾರಾಯಣ ಬಲ್ಲಾಳ.


ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

| | | |
|---|---|---|
| ಅಧಿಕೃತ ಬಂಡವಾಳ | ... | ರೂ. 56,00,000 |
| ಚಲಾವಣೆ ಬಂಡವಾಳ | ... | ರೂ. 32,23,787 |
| ವರ್ಗಣಿ (ಪಾಲು) ಬಂಡವಾಳ | ... | ರೂ. 32,11,000 |
| ತೆತ್ತ ಬಂಡವಾಳ | ... | ರೂ. 27,45,000 |
| ಕ್ಷೇಮನಿಧಿ | ... | ರೂ. 15,00,000 |

ತಾ. 30-9-1956ರಲ್ಲಿ ನಮ್ಮ ಚಲಾವಣೆ ನಿಧಿ 10 ಕೋಟಿಗೂ ಮಿಕ್ಕಿದೆ

(ನವೋದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು

| | |
|---|---|
| (ವಿಶಾಲ) ನವಮೈಸೂರು | 59 |
| ಆಂಧ್ರ ಪ್ರದೇಶ | 14 |
| ಕೇರಳ | 13 |
| ಬೊಂಬಾಯಿ | 8 |
| ಮದ್ರಾಸು | 2 |

ಟಿ. ಎ. ಪೈ, ಬಿ. ಕಾಂ. (ಬೊಂಬಾಯಿ) ಎಂ. ಎಲ್. ಎ., ಜನರಲ್ ಮೆನೇಜರ್. ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್., ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.

# ಅಂತಾರಾಷ್ಟ್ರೀಯ ವಿದ್ಯಾಲಯ

## ಬೌದ್ಧ ಚರಿತ್ರೆಯ ಪ್ರಸಿದ್ಧ ಶಿಕ್ಷಣಕೇಂದ್ರಗಳು ವಿಶ್ವ ಬಂಧುತ್ವದ ಪ್ರತಿಪಾದನೆಯನ್ನು ಜಗತ್ತಿನಲ್ಲಿ ಚೆನ್ನಾಗಿ ಮಾಡಿರುತ್ತವೆ.

ಬುದ್ಧ ಭಗವಾನನ ಪರಿನಿರ್ವಾಣವಾ ...೫೦೦ನೇ ವರ್ಷದ ಉತ್ಸವವನ್ನು ಆ ...ರಿಸಲು ದೇಶ-ವಿದೇಶಗಳಿಂದ ಭಾರತ ... ಬಂದಿದ್ದ ಮಹನೀಯರು ಬೌದ್ಧ ...ದ್ಯಾ ಪೀಠಗಳಾಗಿ ಪ್ರಾಚೀನ ಕಾಲದಲ್ಲಿ ...ರೆದಿದ್ದ ನಲಂದ ಮತ್ತು ವಿಕ್ರಮಶಿಲ ...ಳಲ್ಲಿ ಕಂಡುಬರುತ್ತಿರುವ ಅವಶೇಷಗ ...ಂದ ಸ್ಫೂರ್ತಿ ಪಡೆಯಲು ಮರೆಯಲಿಲ್ಲ. ...ನೆರಡೂ ಮಹಾ ವಿಶ್ವವಿದ್ಯಾನಿಲಯಗ ...ದ್ದ ಪ್ರದೇಶವು ಬಿಹಾರದ ಅಧಿಪತ್ಯಕ್ಕೆ ...ಳಪಟ್ಟಿದೆ.

ಇವೆರಡು ವಿಶ್ವವಿದ್ಯಾನಿಲಯಗಳಲ್ಲಿ ...ಲಂದದ ಕೀರ್ತಿ ಅಸಾಧಾರಣವಾದು ...ಾಗಿತ್ತೆಂದರೆ ಅತಿಶಯೋಕ್ತಿಯಾಗಲಾ ...ದು. ಇಂದು ಅಂತಾರಾಷ್ಟ್ರೀಯ ಭಾವ ...ನೆಗೆ ವಿಶೇಷ ಪ್ರಾಮುಖ್ಯತೆಯನ್ನು ಕೊ ...ಡಲಾಗುತ್ತದೆ. ಆದರೆ, ಬಹಳ ಹಿಂದೆಯೇ ಭಾರತದ ಈ ವಿಶ್ವವಿದ್ಯಾಲಯಗಳು ಸಾಂಸ್ಕೃತಿಕ ಹಾಗು ಶೈಕ್ಷಣಿಕ ರಂಗಗಳಲ್ಲಿ ಅಂತಾರಾಷ್ಟ್ರೀಯ ಭಾವನೆಯನ್ನು ಬೆಳೆ ...ಸಿದ್ದವು. ಭಾರತದ ಬೌದ್ಧ ಇತಿಹಾಸದ ಶ್ರೇಷ್ಠ ಕಾಣಿಕೆಯಾಗಿ ಈ ಭಾವನೆಯ ಪೋಷಣೆಯನ್ನು ಭಾವಿಸಿದರೂ ತಪ್ಪಾಗಲಾರದು.

ಪೂರ್ವ ಭಾರತದಲ್ಲಿ ಸ್ಥಳೀಯವಾಗಿ ಆರಂಭವಾದ ಅಂತಾರಾಷ್ಟ್ರೀಯ ಭಾವನೆಯು ಕೇವಲ ಮೂರು ನೂರು ವರ್ಷಗಳ ಅವಧಿಯಲ್ಲಿ ಇಡೀ ಭಾರತದಲ್ಲೇ ಅಲ್ಲದೆ, ವಿದೇಶಗಳಲ್ಲಿಯೂ ಪ್ರಸರಿಸಿತ್ತು. ಕ್ರಿಸ್ತಶಕದ ಆರಂಭದಲ್ಲಿ ಮೆಡಿಟರೇನಿಯನ್‌ನಿಂದ ಚೀನಾ ಸಮುದ್ರದ ವರೆಗಿನ ಇಡೀ ಏಷಿಯಾದಲ್ಲೆಲ್ಲಾ ಅದು ಸಾಂಸ್ಕೃತಿಕ ಜೀವನವನ್ನು ರೂಪುಗೊಳಿಸುವಲ್ಲಿ ಒಂದು ಪ್ರಾಮುಖ್ಯವಾದ ಅಂಗವಾಯಿತು.

ಬೌದ್ಧ ಮತದೊಂದಿಗೆ, ಭಾರತೀಯ ಸಂಸ್ಕೃತಿಯ ವಿವಿಧ ಅಂಶಗಳು ಮಧ್ಯ ಮತ್ತು ಪೂರ್ವ ಏಷ್ಯಾದ ಜನತೆಯ ಮೇಲೆ ಪ್ರಬಲವಾದ ಪ್ರಭಾವಗಳನ್ನು ಬೀರಿದವು. ಇರಾನ್, ಅಫ್ಘಾನಿಸ್ತಾನ್, ಟರ್ಕಿಸ್ತಾನ್, ಚೀನಾ ಕೊರಿಯಾ, ಜಪಾನ್, ಇಂಡೋ-ಚೀನಾ, ಮತ್ತು ಈಸ್ಟ್ ಇಂಡಿಯಾ ದ್ವೀಪಗಳಲ್ಲಿ ವಿಶಿಷ್ಟರೀತಿಯ ಸಂಸ್ಕೃತಿಯ ಸ್ವಭಾವವನ್ನುಂಟುಮಾಡಿದವು. ಈ ಸಂಸ್ಕೃತಿಯ ಮೂಲ ಸ್ಥಾನವಾದ ಭಾರತವು ಸ್ವಭಾವತಃ, ಈ ಹೊಸ ಸಾಂಸ್ಕೃತಿಕ ಸಂಘದ ಕೇಂದ್ರವಾಗಿ ಪರಿಣಮಿಸಿತು.

ಅಂತಾರಾಷ್ಟ್ರೀಯತೆಯನ್ನು ಎತ್ತಿಹಿಡಿದ ವಿಶ್ವವಿದ್ಯಾಲಯಗಳಲ್ಲೆಲ್ಲ ನಾಲಂದಾವು ಪ್ರಾಚೀನವಾದುದು; ಭಾರತದಾದ್ಯಂತ ಅದರ ಖ್ಯಾತಿ ಹರಡಿತ್ತು. ಚಿಕ್ಕ ಸಂಸ್ಥೆಯಾಗಿ ಆರಂಭವಾದ ಅದು ದೊಡ್ಡದಾಗಿ ಇಡೀ ಏಷಿಯಾವನ್ನೇ ವ್ಯಾಪಿಸಿತ್ತು. ಬೌದ್ಧ ಪ್ರಪಂಚದ ಅನೇಕ ವಿದ್ವಾಂಸರು, ಮತ್ತಿತರ ಜ್ಞಾನಾರ್ಥಿಗಳು ಈ ವಿಶ್ವವಿದ್ಯಾನಿಲಯಕ್ಕೆ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದರು. ವಿಭಿನ್ನ ಜನಾಂಗಗಳು, ಭಾಷೆ, ಸಾಹಿತ್ಯ, ಆಲೋಚನೆ, ನಂಬಿಕೆ ಮತ್ತು ಭಾರತೀಯ ಕಲೆಯ ಆಧಾರವನ್ನು ಪಡೆದ ಸರ್ವಮಾನ್ಯ ಸಂಸ್ಕೃತಿಯನ್ನು ಅಲ್ಲಿ ಗ್ರಹಿಸಿದರು.

ಈಚೆಗೆ ದೊರೆತಿರುವ ಎರಡು ಐತಿಹಾಸಿಕ ದಾಖಲೆಗಳು ನಾಲಂದಾ ವಿಶ್ವವಿದ್ಯಾನಿಲಯಗಳ ಅಂತಾರಾಷ್ಟ್ರೀಯ ಸ್ವಭಾವವನ್ನು ಬಹಳ ಸ್ಪಷ್ಟವಾಗಿ ಸೂಚಿಸುತ್ತವೆ. ಈ ದಾಖಲೆಗಳೆರಡೂ ಬಂಗಾಳ ಮತ್ತು ಬಿಹಾರದ ಸಾಮ್ರಾಟನಾದ ದೇವಪಾಲನ ಆಳ್ವಿಕೆಯ ಕಾಲಕ್ಕೆ ಸಂಬಂಧಪಡುತ್ತವೆ. ಕ್ರಿ. ಶ. ೯ನೆಯ ಶತಮಾನದ ಪ್ರಥಮಾರ್ಧದಲ್ಲಿ ಉತ್ತರ ಭಾರತದ ಬಹು ಭಾಗವು ಆತನ ಆಳ್ವಿಕೆಗೆ ಒಳಪಟ್ಟಿತ್ತು.

ಒಂದು ದಾಖಲೆಯು, ಶೈಲೇಂದ್ರ ವಂಶದ ಬಲಪುತ್ರದೇವನು ನಾಲಂದಾದಲ್ಲಿ ಸನ್ಯಾಸಿ ಮಠವೊಂದನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಮಲಯ ಪರ್‍ಯಾಯ ದ್ವೀಪ, ಸುಮಾತ್ರ ಜಾವಾ ಮತ್ತಿತರ ಈಸ್ಟ್ ಇಂಡಿಯಾ ದ್ವೀಪಗಳು ಬಲಪುತ್ರದೇವನ ಆಳ್ವಿಕೆಗೆ ಒಳಪಟ್ಟಿದ್ದುವು. ಇಂತಹ ವ್ಯಾಪಕವಾದ ಆಧಿಪತ್ಯವುಳ್ಳ ದೊರೆ ನಾಲಂದಾದಲ್ಲಿ ಸನ್ಯಾಸಿ ಮಠವನ್ನು ಸ್ಥಾಪಿಸಿದ್ದು ಆ ಕೇಂದ್ರದ ಪ್ರಾಮುಖ್ಯವನ್ನು ಸೂಚಿಸುತ್ತದೆ.

ಮತ್ತೊಂದು ದಾಖಲೆಯು ವೀರದೇವನನ್ನು ಕುರಿತು ಸಂಕ್ಷಿಪ್ತ ಕತೆಯನ್ನು ನಿರೂಪಿಸುತ್ತದೆ. ವೀರ ದೇವನು ನಾಗರ ಹಾರ (ಈಗ ಅಫ್ಘಾನಿಸ್ತಾನದಲ್ಲಿರುವ ಜೆಲಾಲಾಬಾದ್)ದ ನಿವಾಸಿ. ಆತನು ಬ್ರಾಹ್ಮಣ ಮನೆತನದಲ್ಲಿ ಜನ್ಮವೆತ್ತಿದವನು; ವೇದಶಾಸ್ತ್ರ ಪಾರಂಗತನು. ಬೌದ್ಧ ಮತವನ್ನವಲಂಬಿಸಿ ಆತನು ಇಡೀ ಉತ್ತರ ಹಿಂದೂಸ್ಥಾನವನ್ನೆಲ್ಲಾ ಸಂಚಾರವಮಾಡಿ ಕೊನೆಯದಾಗಿ ನಾಲಂದಾಕ್ಕೆ ಬಂದನು. ಅವನ ಪಾಂಡಿತ್ಯವನ್ನು ದೇವಪಾಲನು ಯಥೋಚಿತವಾಗಿ ಪುರಸ್ಕರಿಸಿ ಅವನನ್ನು ನಾಲಂದಾ ವಿಶ್ವವಿದ್ಯಾಪೀಠದ ಮುಖ್ಯಸ್ಥನನ್ನಾಗಿ ನೇಮಿಸಿದನು. ಈ ಘಟನೆಯು ನಾಲಂದಾದ ಅಂತರರಾಷ್ಟ್ರೀಯ ಸ್ವಭಾವವನ್ನು ಪ್ರತಿಪಾದಿಸುವುದು.

ಐ-ತ್ಸಿಂಗನು ತನ್ನ ಪ್ರವಾಸಕ್ಕೆ ಹಿಂದಿನ ಕಾಲು ಶತಮಾನದಲ್ಲಿ ನಾಲಂದಾಕ್ಕೆ ಭೇಟಿಕೊಟ್ಟ ಹತ್ತು ಮಂದಿ ವಿದ್ವಾಂಸರ ಹೆಸರುಗಳನ್ನು ಸೂಚಿಸಿರುವನು. ಅವರಲ್ಲಿ ಇಬ್ಬರು ಕೊರಿಯನ್ನರು; ಒಬ್ಬರು ತುಖರ ದೇಶದವರು.

ನಾಲಂದಾ ಉಚ್ಛ್ರಾಯಸ್ಥಿತಿಯಲ್ಲಿದ್ದಾಗ, ಅಲ್ಲಿನ ಭವನಗಳು ನಾಲ್ಕು ಅಥವಾ ಐದು ಅಂತಸ್ತಿನವುಗಳಾಗಿದ್ದು, ಅವುಗಳ ಶಿಖರಗಳು ಗಗನಚುಂಬಿಗಳಾಗಿದ್ದವು.






ಕ್ರಿ. ಶ. ೫ನೆಯ ಶತಮಾನದ ನಂತರದ ದೊರೆಗಳು, ಒಬ್ಬರಾದ ಮೇಲೊಬ್ಬರಂತೆ, ನಾಲಂದಾದಲ್ಲಿ ಸ್ಥೂಪಗಳನ್ನು, ದೇವಾಲಯಗಳನ್ನೂ, ಮಠಗಳನ್ನೂ, ಅತ್ಯುತ್ತಮ ಶಿಲ್ಪಿಗಳ ನೆರವನ್ನು ಪಡೆದು ನಿರ್ಮಿಸಿದರು ಈ ವಿಶ್ವವಿದ್ಯಾನಿಲಯದ ಇಡೀ ಕ್ಷೇತ್ರದ ಸುತ್ತ ಎತ್ತರವಾದ ಗೋಡೆಯಿದ್ದು, ಒಂದು ಮಹಾ ದ್ವಾರವೂ ಇತ್ತು.

ಈ ಮಹಾದ್ವಾರವು ಅಕ್ಷರಶಃ ಪ್ರವೇಶ ದ್ವಾರವಾಗಿಯೂ ಇತ್ತು. ವಿದ್ವಾಂಸರು ಈ ಮಹಾ ದ್ವಾರದಲ್ಲಿದ್ದು ಈ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಬಯಸಿ ಬಂದವರೊಂದಿಗೆ ವಾದ ಹೂಡುತ್ತಿದ್ದರು. ಈ ವಾದದಲ್ಲಿ ಜಯಗಳಿಸಿದವರಿಗೆ ಮಾತ್ರ ಪ್ರವೇಶ ದೊರೆಯುತ್ತಿತ್ತು.

ನಾಲಂದಾದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆ ಸುಮಾರು ೧೦,೦೦೦ ವೆಂದು ಒಂದು ಪಕ್ಷವೂ, ೩೦,೦೦೦ಕ್ಕೂ ಹೆಚ್ಚೆಂದು ಮತ್ತೊಂದು ಪಕ್ಷವೂ ತಿಳಿಸುತ್ತದೆ. ಬಹುಶಃ, ಅಲ್ಲಿ ಸರಾಸರಿ ಸಂಖ್ಯೆ ೫,೦೦೦ ಇತ್ತೆಂದು ತಿಳಿಯಬಹುದು.

ನಾಲಂದಾದಲ್ಲಿ ಬೌದ್ಧ ಮತ ತತ್ವ ಮತ್ತು ಸಾಹಿತ್ಯದ ಎಲ್ಲಾ ವಿಷಯಗಳನ್ನೂ ಬೋಧಿಸಲಾಗುತ್ತಿತ್ತು. ವೇದ ಮತ್ತು ವೈದಿಕ ಮತ ತತ್ವಗಳೂ ಉಪಯುಕ್ತ ವಿಷಯಗಳಾದ ತರ್ಕ, ವ್ಯಾಕರಣ, ವೈದ್ಯ ಮತ್ತು ಯಕ್ಷಿಣಿ ಇತ್ಯಾದಿ ವಿಷಯಗಳೂ ಈ ವಿಶ್ವವಿದ್ಯಾನಿಲಯದ ಪಠ್ಯಕ್ರಮದಲ್ಲಿ ಸೇರಿದ್ದವು. ಒಟ್ಟಿನಲ್ಲಿ ನಾಲಂದಾವು ಜ್ಞಾನದ ಎಲ್ಲಾ ಶಾಖೆಗಳನ್ನೂ, ಮತೀಯ ಹಾಗೂ ಜಾತ್ಯಾತೀತ ವಿಷಯಗಳನ್ನೂ ಬೋಧಿಸುವ ಕೇಂದ್ರವಾಗಿತ್ತು; ಕಲೆ ಮತ್ತು ವಿಜ್ಞಾನಗಳನ್ನೂ ಇಲ್ಲಿ ಬೋಧಿಸಲಾಗುತ್ತಿತ್ತು.

ನಾಲಂದಾ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅನೇಕ ಮಹಾನ್ ವಿದ್ವಾಂಸರ ಹೆಸರುಗಳನ್ನು ಪರಂಪರೆಯಾಗಿ ಪಾಲಿಸಿಕೊಂಡು ಬರಲಾಗಿದೆ. ಅವರಲ್ಲಿ ದಿನ್ನಗ ಚಂದ್ರಕೀರ್ತಿ, ಗುಣಮತಿ, ಸ್ಥಿರಮತಿ, ಧರ್ಮಪಾಲ, ಶೀಲಭದ್ರ ಧರ್ಮ ಕೀರ್ತಿ, ಶಾಂತಿದೇವ, ಶಾಂತ ರಕ್ಷಿತ, ಪದ್ಮ ಸಂಭವ ಕಮಲ ಶೀಲ ಮತ್ತು ಚಂದ್ರಗೌಮಿನ ಮುಂತಾದವರನ್ನು ಇಲ್ಲಿ ಉಲ್ಲೇಖಿಸಬಹುದು.

ನಾಲಂದಾದ ನಂತರ ಮುಖ್ಯವಾದ ವಿಶ್ವವಿದ್ಯಾನಿಲಯವೆಂದರೆ, ವಿಕ್ರಮಶಿಲ. ಅದನ್ನು ಧರ್ಮಪಾಲನು ಸ್ಥಾಪಿಸಿದನು. ಅವನಿಗೆ ಧರ್ಮ ಶೀಲನೆಂದೂ ಹೆಸರಿತ್ತು ಈ ಸನ್ಯಾಸಿ ಮಠವನ್ನು ಗಂಗಾನದಿಯ ದಡದ ದಿಬ್ಬದ ಮೇಲೆ ನಿರ್ಮಿಸಲಾಗಿದೆ. ಈ ವಿದ್ಯಾಪೀಠದಲ್ಲಿ ಮಹಾನ್ ವಿದ್ವಾಂಸನಾದ ದೀಪಂಕರ ಶ್ರೀಜ್ಞಾನ, ಕ್ರಿ. ಶ. ೧೧ನೆಯ ಶತಮಾನದ ಮಧ್ಯಭಾಗದಲ್ಲಿ (ಆತನಿಗೆ ಅತಿಶನೆಂದೂ ಹೆಸರು) ವಿಕ್ರಮ ಶಿಲೆಯ ಶ್ರೇಷ್ಠ ಸ್ವಾಮಿಯಾಗಿದ್ದ. ಆ ಕಾಲದಲ್ಲಿ ವಿಕ್ರಮ ಶಿಲೆಯು ತನ್ನ ಕೀರ್ತಿ ಪ್ರತಿಷ್ಠೆಯಲ್ಲಿ ನಾಲಂದಾವನ್ನು ಮೀರಿಸಿತ್ತು.

ಟಿಬೆಟ್ಟಿನ ಕಥೆಗಳಲ್ಲಿ ಈ ಅತಿಶನನ್ನು ಬೌದ್ಧ ಮತ ಸುಧಾರಣೆಗಾಗಿ ಟಿಬೆಟ್ಟಿಗೆ ಕರೆದುಕೊಂಡು ಹೋಗಲಾಯಿತೆಂದು ತಿಳಿಸುತ್ತವೆ—ಅಲ್ಲಿ ಅತಿಶನಿಗೆ ರಾಜಪುರಸ್ಕಾರ ದೊರೆಯಿತು.

೧೨ನೇ ಪುಟ ನೋಡಿರಿ.

# ಕಾಂಗ್ರೆಸಿನ ಚರಿತ್ರೆ

## ತಾಯ್ನೆಲವನ್ನು ದಾಸ್ಯ ಮುಕ್ತಗೊಳಿಸಿದ ದೇಶ ಭಕ್ತರ ರಂಗಸ್ಥಳ

ಹಲವು ಶತಮಾನಗಳ ಕಾಲ ಭರತ ಖಂಡವು ಪರದಾಸ್ಯ ಶೃಂಖಲೆಯಲ್ಲಿ ಬಿಗಿಯಲ್ಪಟ್ಟು, ತನ್ನ ಉಜ್ವಲವಾದ ಹಿಂದಿನ ಸಂಸ್ಕೃತಿಯನ್ನು ಮರೆತು, ಪಾಶ್ಚಾತ್ಯ ಪದ್ಧತಿಗಳಿಗೆ ಮಾರು ಹೋಗಿತ್ತು. ಅಲ್ಲದೆ ಪ್ರಭುತ್ವ ನಡೆಸುತ್ತಿದ್ದ ಆಂಗ್ಲ ಸರಕಾರವು 'ಪ್ರೆಸ್ ಆಕ್ಟ್' ಮತ್ತು 'ಆರ್ಮ್ಸ್ ಆಕ್ಟ್'ಗಳನ್ನು ಜಾರಿಗೊಳಿಸಿ, ಜನತೆಯ ಸ್ವಾತಂತ್ರ್ಯಾಪಹರಣ ಮಾಡಿತ್ತು. ಸಿವಿಲ್ ಸರ್ವೀಸಿನಲ್ಲಿ ಹಿಂದೀಯರಿಗೆ ಪ್ರವೇಶವಿರಲಿಲ್ಲ. ಈ ಎಲ್ಲಾ ಕುತಂತ್ರಗಳಿಂದ ಭಾರತೀಯರ ಸ್ವಾತಂತ್ರ್ಯಾಪಹರಣ ಮಾಡಿದ ಸರಕಾರದೊಡನೆ ಸ್ವಾತಂತ್ರ್ಯಕ್ಕಾಗಿ ಹೋರಾಡಲು ರಾಜಕೀಯ ಸಂಸ್ಥೆಯೊಂದರ ಸ್ಥಾಪನೆ ಗೈಯಬೇಕೆಂದು ಭಾರತದ ಮೇಧಾವಿ ಪ್ರಮುಖರನೇಕರು ನಿರ್ಧರಿಸಿದರು.

ಅಂತೆಯೇ ೧೮೮೫ರ ಡಿಸೆಂಬರ ೨೮ ರಂದು ಸಿವಿಲ್ ಸರ್ವೀಸಿನ ನಿವೃತ್ತ ಅಧಿಕಾರಿ ಮಿ| ಎಲ್ಲನ್ ಒಕ್ಟೇವಿಯಸ್ ಹ್ಯೂಮ್ ಎಂಬ ಆಂಗ್ಲ ಮಹನೀಯರೋರ್ವರ ಉತ್ತೇಜನದಿಂದ ಹಿಂದೀ ರಾಷ್ಟ್ರಸಭೆ (Indian National Congress) ಯ ಸ್ಥಾಪನೆಯಾಯಿತು. ಮುಂಬಯಿಯಲ್ಲಿ ಶ್ರೀ ಉಮೇಶಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಅದರ ಪ್ರಥಮಾಧಿವೇಶನ ಸೇರಿತು. ೧೮೮೫ರಿಂದ ೧೯೦೫ರ ತನಕ ಸೌಮ್ಯವಾದಿಗಳ ಕರ್ಣಧಾರತ್ವದಲ್ಲಿ ಈ ಸಂಸ್ಥೆಯು ಮುನ್ನಡೆಯಿತು. ಇವರ ಮುಖಂಡರಾಗಿದ್ದ ಶ್ರೀ ಗೋಪಾಲಕೃಷ್ಣ ಗೋಖಲೆ ಮತ್ತು ಸರ್ ಫಿರೋಜ್ ಷಾ ಮೇಥಾ—ಇವರು ಸರಕಾರದೊಡನೆ ಸಹಕರಿಸಿ, ಆಗ ಜಾರಿಯಲ್ಲಿದ್ದ ಕೆಲವು ಶಾಸನಗಳ ತಿದ್ದುಪಡಿ ಮಾಡಿಸಿದರು.

೧೯೦೫ರಲ್ಲಿ ರಾಜ ಪ್ರತಿನಿಧಿ (Viceroy) ಕರ್ಝನನು ರಾಷ್ಟ್ರಸಭೆಯ ವರ್ಚಸ್ಸನ್ನು ಮುರಿಯಲೋಸುಗ ವಂಗ ಪ್ರಾಂತದ ವಿಭಜನೆ ಮಾಡಿದನು. ಆದರೆ ಲೋಕಮಾನ್ಯ ಬಲ್ವಂತ್ ಗಂಗಾಧರ ತಿಲಕ್ ಮತ್ತು ಸ್ವಾಮಿ ವಿವೇಕಾನಂದರ ಉಜ್ವಲ ಲೇಖನ ಹಾಗೂ, ಭಾಷಣಗಳಿಂದ ಜಾಗೃತವಾಗಿದ್ದ ಜನತೆ ಸರಕಾರದ ಕುರುಡು ನೀತಿಯನ್ನು ವಿರೋಧಿಸಿ ಚಳವಳಿ ಹೂಡಲಾರಂಭಿಸಿತು. ಮಹರ್ಷಿ ಅರವಿಂದ್ ಘೋಷ್ ಮತ್ತು ಬಿಪಿನ್ ಚಂದ್ರಪಾಲರು ಸ್ವದೇಶೀ ವಸ್ತುಗಳ ತಯಾರಿ, ವಿದೇಶೀ ಮಾಲುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ, ಸ್ವರಾಜ್ಯಗಳ ವಿಷಯದಲ್ಲಿ ತಮ್ಮ ಭಾಷಣ ಹಾಗೂ ಲೇಖನಗಳಿಂದ ಜನಜಾಗೃತಿಯನ್ನುಂಟುಮಾಡಿದರು. ೧೯೦೬ರ ಕಲ್ಕತ್ತದ ರಾಷ್ಟ್ರಸಭಾಧಿವೇಶನದ ಅಧ್ಯಕ್ಷಪೀಠದಿಂದ "ಭಾರತದ ಪಿತಾಮಹ" ದಾದಾಭಾಯಿ ನವರೋಜಿಯವರು 'ಪೂರ್ಣ ಸ್ವರಾಜ್ಯವೇ ರಾಷ್ಟ್ರಸಭೆಯ ಗುರಿ'ಯೆಂದು ಗುಡುಗಿದರು. ಸ್ವದೇಶೀ ಚಳವಳಿ ಭರದಿಂದ ಸಾಗಿದುದರ ಪರಿಣಾಮವಾಗಿ ವಿಭಕ್ತ ವಂಗವು ೧೯೧೧ರಲ್ಲಿ ಪುನಃ ಒಂದಾಯಿತು.

ಸೌಮ್ಯವಾದಿಗಳ ಮಂದ ಧೋರಣೆಯನ್ನು ಮೆಚ್ಚದ ಲೋಕಮಾನ್ಯ ತಿಲಕರ ಮುಂದಾಳ್ತನದಲ್ಲಿ ಉಗ್ರವಾದಿಗಳ ಗುಂಪು ರಚನೆಯಾಯಿತು. 'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ನಾನದನ್ನು ಸಾಧಿಸುವೆನು' ಎಂಬ ಗರ್ಜನೆಯೊಂದಿಗೆ ಲೋಕಮಾನ್ಯರು ರಾಜಕೀಯ ರಂಗಕ್ಕಿಳಿದರು. "ಕೇಸರಿ" ಮತ್ತು "ಮರಾಠ" ಪತ್ರಿಕೆಗಳಲ್ಲಿ ತಮ್ಮ ಗರ್ಜನೆಯಿಂದ ನಿದ್ರೆಯಲ್ಲಿದ್ದ ಜನತೆಯನ್ನು ಹೊಡೆದೆಬ್ಬಿಸಿದರು. ೧೯೦೭ರ ಸೂರತ್ ಅಧಿವೇಶನದಲ್ಲಿ ಮಂದ ಹಾಗೂ ತೀವ್ರ ಪಕ್ಷಗಳೊಳಗೆ ತಿಕ್ಕಾಟ ನಡೆದು, ರಾಷ್ಟ್ರ ಸಭೆಯಲ್ಲಿ ಇಬ್ಬಣಗಳುಂಟಾದುವು ೧೯೦೭ರಿಂದ ೧೯೧೬ ವರೆಗೆ ಉಗ್ರಗಾಮಿಗಳು ರಾಷ್ಟ್ರ ಸಭೆಯ ನೇತಾರರಾದರು.

೧೯೧೫ರಿಂದ ೧೯೧೮ರ ತನಕ ಡಾ| ಎನ್ನಿ ಬಿಸೆಂಟರ ಮುಂದಾಳ್ತನದಲ್ಲಿ "ಹೋಮ್ ರೂಲ್" ಚಳವಳಿ ರಾಷ್ಟ್ರದಾದ್ಯಂತ ನಡೆಯಿತು. ೧೯೧೪ರಲ್ಲಿ ಪ್ರಾರಂಭವಾದ ಪ್ರಥಮ ಜಾಗತಿಕ ಯುದ್ಧದಲ್ಲಿ ಭಾರತವು ಇಂಗ್ಲೆಂಡಿಗೆ ಸಹಾಯ ನೀಡಿದಲ್ಲಿ, ಭಾರತಕ್ಕೆ ಸ್ವರಾಜ್ಯವನ್ನೀಯುವುದಾಗಿ ಸರಕಾರ ಸಾರಿದಾಗ, ಭಾರತವು ಇಂಗ್ಲೆಂಡಿಗೆ ಸಹಾಯ ಮಾಡಿತು ೧೯೧೮ರಲ್ಲಿ ಮಹಾ ಯುದ್ಧ ಮುಗಿದು ಒಪ್ಪಂದವಾದರೂ ಸ್ವಾತಂತ್ರ್ಯ ದೊರಿಯಲಿಲ್ಲ. ಬದಲಾಗಿ ಘೋರ "ರಾಲೆಟ್ ಮಸೂದೆ"ಯನ್ನು ಜಾರಿಗೆ ತಂದು ದಬ್ಬಾಳಿಕೆ ನಡೆಸಿತು ಸರಕಾರ. ಅಲ್ಲದೇ ೧೯೧೯ರಲ್ಲಿ "ಜಲಿಯನ್ ವಾಲಾ ಬಾಗಿನ ಹತ್ಯಾಕಾಂಡ" ನಡೆಯಿತು. ಆಗ ದಕ್ಷಿಣ ಆಫ್ರಿಕದಲ್ಲಿ ವಿಜಯಿಯಾಗಿ ಬಂದಿದ್ದ ಮೋಹನ್‌ದಾಸ ಕರಮಚಂದ ಗಾಂಧಿಯವರು ರಾಷ್ಟ್ರ ಸಭೆಯ ನೇತೃವಾಗಿ, ರಾಷ್ಟ್ರದಾದ್ಯಂತ ಸರಕಾರದ ದಬ್ಬಾಳಿಕೆಯನ್ನು ವಿರೋಧಿಸಿ ಹರತಾಳವನ್ನಾಚರಿಸಲು ಜನತೆಯನ್ನು ಕೇಳಿ ಕೊಂಡರು.

೧೯೨೦ರ ಎರಡು ರಾಷ್ಟ್ರ ಸಭಾಧಿವೇಶನಗಳಲ್ಲಿ ಗಾಂಧೀಜಿಯವರು ಅಸಹಕಾರ ಚಳವಳದ ಗೊತ್ತುವಳಿಯನ್ನು ಮಂಡಿಸಿದಾಗ ದೇಶಬಂಧು ಚಿತ್ತರಂಜನ ದಾಸ ಮತ್ತು ಪಂಡಿತ ಮೋತಿಲಾಲ ನೆಹರುರವರು ಅದನ್ನು ವಿರೋಧಿಸಿ ಸೋತು ಮಹಾತ್ಮರ ಎಡ ಬಲಗೈಗಳಾಗಿ ಅಸಹಕಾರ ರಣಾಂಗಣದಲ್ಲಿ ಧುಮುಕಿದರು. ರಾಷ್ಟ್ರದಾದ್ಯಂತ ವಿದೇಶೀ ಮಾಲುಗಳ ಬಹಿಷ್ಕಾರ. ಸ್ವದೇಶಿ ವಸ್ತ್ರಗಳ ತಯಾರಿ, ಹರಿಜನೋದ್ಧಾರ, ಖಾದಿ ಪ್ರಚಾರ, ರಾಷ್ಟ್ರೀಯ ಶಿಕ್ಷಣ, ಸುರಾಪಾನ ನಿಷೇಧ--ಇವುಗಳ ಬಗ್ಗೆ ನಡೆದ ಚಳವಳಗಳು ಒಳ್ಳೆಯ ಪರಿಣಾಮಕಾರಿಯಾದುವು. ಅಲ್ಲದೆ ವಕೀಲರು ವಕೀಲಿಯನ್ನು ತೊರೆದು, ಸರಕಾರಿ ನೌಕರರು ಮ್ಮ ಕೆಲಸಕ್ಕೆ ಶರಣು ಹೊಡೆದು, ಪದವೀಧರರು ತಮ್ಮ ಪದವಿಗಳಿಗೆ ತ್ಯಾಗಪತ್ರವಿತ್ತು, ಚಳವಳದ ಬೇಗೆಯನ್ನು ಇನ್ನೂ ಹೆಚ್ಚಿಸಿದರು. ರಾಜದ್ರೋಹದ ಆಪಾದನೆಯ ಮೇರೆಗೆ ಗಾಂಧೀಜಿಯವರ ಬಂಧನವಾದಾಗ ರಾಷ್ಟ್ರ ಸಭೆಯಲ್ಲಿ—ಶಾಸನ ಸಭಾ ಪ್ರವೇಶ ಸಮರ್ಥಕ ಹಾಗೂ ವಿರೋಧಕ ಪಕ್ಷಗಳೆರಡು ಉಂಟಾದುವು. ಇವುಗಳಲ್ಲಿ ಎರಡನೇ ಪಕ್ಷದ್ವೇಮೆಲ್ಗೈಯಾಗಿ, ಸೋತವರು (ಮೋತಿಲಾಲ ನೆಹರು, ಚಿತ್ತರಂಜನ ದಾಸರು, ಅನುಯಾಯಿಗಳು) 'ಸ್ವರಾಜ್ಯ ಪಕ್ಷ'ದ ನಿರ್ಮಾಣ ಮಾಡಿದರು.

ಭಾರತಕ್ಕೆ ಹೊಸ ಸುಧಾರಣೆಗಳನ್ನು ಕೊಡಲು ೧೯೨೭ರಲ್ಲಿ ಬರಲಿದ್ದ ಸೈಮನ್ ಸಮಿತಿಯನ್ನು ಬಹಿಷ್ಕರಿಸಬೇಕೆಂದು ರಾಷ್ಟ್ರ ಸಭೆಯು ೧೯೨೭ರಲ್ಲಿ ರಾಷ್ಟ್ರವನ್ನು ಕೇಳಿ ಕೊಂಡಿತು. ಸಮಿತಿಯು ಬಂದಾಗ ಅದನ್ನು ಭಾರತವಿಡೀ ಬಹಿಷ್ಕರಿಸಿತು. ಆ ಸಮಯದಲ್ಲಿ "ಪಂಜಾಬದ ಕೇಸರಿ" ಲಾಲಾಲಜಪತ ರಾಯ್‌ರವರು ಆತ್ಮ ಬಲಿದಾನ ಗೈದು ಅಮರರಾದರು. ಅದೇ ವರ್ಷ ಸರ್ದಾರ್ ವಲ್ಲಭ ಭಾಯಿ ಪಟೇಲರ ನೇತೃತ್ವದಲ್ಲಿ ಬಾರ್ಡೋಲಿಯಲ್ಲಿ ಸತ್ಯಾಗ್ರಹವು ನಡೆದು, ಯಶಸ್ವೀ ಮುಕ್ತಾಯವಾಯಿತು. ೧೯೨೯ರ ಲಾಹೋರಿನ ರಾಷ್ಟ್ರ ಸಭಾಧಿವೇಶನದಲ್ಲಿ ಪೂರ್ಣ ಸ್ವರಾಜ್ಯ ಹಾಗೂ ಸವಿನಯ ಶಾಸನ ಭಂಗದ ನಿರ್ಣಯ ಮಂಜೂರಾಯಿತು. ಉಪ್ಪಿನ ಕರನಿರಾಕರಣೆ ಶಾಸನ ಭಂಗದ ಮುಖ್ಯೋದ್ದೇಶವಾಗಿತ್ತು. ಗಾಂಧೀಜಿ ದಂಡಿಯಾತ್ರೆ ಕೈಕೊಂಡು, ಉಪ್ಪಿನ ತಯಾರಿಮಾಡಿ, ಶಾಸನ ಭಂಗಗೊಳಿಸಿದರು. ರಾಷ್ಟ್ರವು ನವ ಚೈತನ್ಯ ಭರಿತವಾಯಿತು. ಚಳವಳಿ ಭರದಿಂದ ಸಾಗಿ ಗಾಂಧೀಜಿಯವರೊಡಗೂಡಿ ೬೦,೦೦೦ ಮಂದಿಯ ಬಂಧನವಾಯಿತು. ಹಲವೆಡೆಗಳಲ್ಲಿ ಗೋಳಿಬಾರು ಸಹ ನಡೆಯಿತು. ದ್ವಿತೀಯ ಚಕ್ರಗೋಷ್ಠಿ (Round Table Conference) ಯಲ್ಲಿ ಭಾಗಿಯಾಗಲು ರಾಷ್ಟ್ರಸಭೆಗೆ ಕರೆ ಬಂದ ಮೇರೆಗೆ ಅದರ ಏಕಮಾತ್ರ ಪ್ರತಿನಿಧಿಯಾಗಿ ಲಂಡನಿಗೆ ತೆರಳಿದ ಗಾಂಧೀಜಿಯವರು ವಿಫಲ ಮನೋರಥರಾಗಿ ಸ್ವದೇಶಕ್ಕೆ ಮರಳಿದರು.

೧೯೩೭ರ ಚುನಾವಣೆಯಲ್ಲಿ ರಾಷ್ಟ್ರಸಭೆಯು ವಿಜಯಿಯಾಗಿ ೮ ಪ್ರಾಂತಗಳಲ್ಲಿ ಸರಕಾರಗಳನ್ನು ಸ್ಥಾಪಿಸಿತು. ಆದರೆ ೧೯೩೯ರ ದ್ವಿತೀಯ ಜಾಗತಿಕ ಯುದ್ಧದಲ್ಲಿ ಭಾರತದೊಂದಿಗೆ ವಿಚಾರ ವಿನಿಮಯ ನಡೆಸದೇ, ಯುದ್ಧದಲ್ಲಿ ಅದನ್ನು ಸೆಳೆದುಕೊಂಡ ಇಂಗ್ಲೆಂಡಿನ ವರ್ತನೆಯನ್ನು ಖಂಡಿಸಿ ಈ ಸರಕಾರಗಳು ರಾಜಿನಾಮೆಯಿತ್ತುವು. ೧೯೪೨ರಲ್ಲಿ ಸರ್ ಸ್ಟೆಫೊರ್ಡ್ ಕ್ರಿಪ್ಸ್‌ರು ಭಾರತದ ರಾಜಕೀಯ ಸಮಸ್ಯೆಗಳ ಪರಿಹಾರಾರ್ಥ ಈ ದೇಶಕ್ಕೆ ಕಳುಹಿಸಲ್ಪಟ್ಟರು. ಅವರ ಯೋಜನೆಯನ್ನು ರಾಷ್ಟ್ರಸಭೆ ಹಾಗೂ ಮುಸ್ಲಿಂ ಲೀಗುಗಳು ವಿರೋಧಿಸಿದುವು. ತನ್ಮಧ್ಯೆ ಗಾಂಧಿ ಹಾಗೂ ನೇತಾಜಿ ಸುಭಾಷಚಂದ್ರ ಭೋಸರ ಪಕ್ಷಗಳೊಳಗೆ ನಡೆದ ಘರ್ಷಣೆಯಿಂದಾಗಿ ಸುಭಾಷರು ರಾಷ್ಟ್ರ ಪತಿತ್ವವನ್ನು ತ್ಯಜಿಸಿ "ಫಾರ್ವರ್ಡ ಬ್ಲಾಕ" (Forward Block) ನ್ನು ಸ್ಥಾಪಿಸಿ ಸ್ವಾತಂತ್ರ್ಯರಣಾಂಗಣದಲ್ಲಿ ವೀರಯೋಧರಾಗಿ ಕಾದಾಡಿದರು.

೧೯೪೨ರ ಆಗಸ್ಟ್ ೮ರಂದು ರಾಷ್ಟ್ರ ಸಭೆಯ ಕಾರ್ಯಕಾರಿ ಸಮಿತಿಯು ಮುಂಬಯಿಯಲ್ಲಿ ಸೇರಿ "ಚಲೇಜಾವ್" (Quit India) ಚಳವಳಿಯ ಕಾರ್ಯಕ್ರಮವನ್ನಂಗೀಕರಿಸಿತು. ಮರುದಿನವೇ ಅಸಂಖ್ಯಾತ ಸತ್ಯಾಗ್ರಹಿಗಳೊಂದಿಗೆ ಗಾಂಧೀಜೀಯೇ ಮೊದಲಾಗಿ ಇನ್ನಿತರ ಧುರೀಣರ ಬಂಧನವಾಯಿತು. ಯೋಗ್ಯ ಮಾರ್ಗದರ್ಶನವೀಯಲು ಧುರೀಣರಿಲ್ಲದ ಜನರು ರೈಲು ಕಂಬಿಗಳನ್ನು ಕೀಳುವ, ತಂತಿ ಕಂಬಗಳನ್ನು ಕತ್ತರಿಸುವ ಅಂಚೆ ಕಟ್ಟೆಗಳನ್ನು ಸುಡುವ ಮೊದಲಾದ ವಿಧ್ವಂಸಕ ಕಾರ್ಯಕ್ರಮಗಳನ್ನು ರಾಷ್ಟ್ರದಾದ್ಯಂತ ಆಚರಿಸಿ, ಕಾಂಗ್ರೆಸಿನ ಹೆಸರಿಗೆ ಕಳಂಕ ತಂದರು, ಎಂದಿನಂತೆ ದಂಡನೀತಿಗೆ ಶರಣು ಹೊಕ್ಕ ಸರಕಾರ ಅತ್ಯಾಚಾರಗಳನ್ನೆಸಗಿತು. ೧೯೪೫ರಲ್ಲಿ ಇಂಗ್ಲಂಡಿನ ಚುನಾವಣೆಗಳಲ್ಲಿ ಮಜೂರರ ಪಕ್ಷವು ವಿಜಯಿಯಾಗಿ ಕ್ಲೆಮೆಂಟ್ ರಿಚರ್ಡ್ ಎಟ್ಲೆಯವರು ಇಂಗ್ಲೆಂಡಿನ ಪ್ರಧಾನಿಯಾದರು. ಅದೇ ವರ್ಷ ಧುರೀಣರ ಬಿಡುಗಡೆಯಾಗಿ, ಸ್ವಾತಂತ್ರ್ಯವನ್ನೀ

(೯ನೇ ಪುಟ ನೋಡಿರಿ)


ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

**

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

**

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮುಂಬರು: ಐ. ಎಸ್. ಟಿ. ಎಂ. ಎ.

## ಅಮೇರಿಕನನೊಡನೆ ಭೇಟಿ

# ಪ್ರತಿ ಮೂವರಲ್ಲಿ ಒಬ್ಬನಿಗೆ ರಶ್ಯವನ್ನು ನೋಡುವ ಮನಸ್ಸಿದೆ— ಅಮೇರಿಕದಲ್ಲಿ!

ಭಾರತದ ಪ್ರಧಾನಿ ನೆಹರು ಕಳೆದವಾರ ಅಮೇರಿಕವನ್ನು ಸಂದರ್ಶಿಸಿದರು. ಎಂಟು ವರ್ಷಗಳ ಹಿಂದೆ ತಾನು ಅಮೇರಿಕದ ಬಗ್ಗೆ ಮಾಡಿಕೊಂಡ ಪರಿಚಯವನ್ನು ಈ ಸಲ ಕೆಲಮಟ್ಟಿಗೆ ಊರ್ಜಿತಗೊಳಿಸಿದರು. ಅಮೇರಿಕದ ಹೃದಯದಲ್ಲಿರುವ ಭಾವನೆಗಳನ್ನು ತಿಳಿಸಲು ಅದು ಸಹಾಯಕವಾಯಿತೆಂಬುದು ನಿಶ್ಚಯ.

ಆದರೆ, ನೆಹರುರವರು ನೋಡಿರುವುದು ಯಾರನ್ನು? ಅವರು ರಾಜಕೀಯ ಧುರೀಣರನ್ನೆ ಹೆಚ್ಚಾಗಿ ಕಂಡರು; ಅವರೊಡನೆಯೇ ಹೆಚ್ಚಿನ ಮಾತುಕತೆಯಾಡಿದರು. ಅವರದು ಅಲ್ಪಾವಧಿಯ ಪ್ರವಾಸವಾಗಿದ್ದುದರಿಂದ ಸಾಮಾನ್ಯ ಅಮೇರಿಕನ್ನನ ಜೀವನವನ್ನು ಸಮೀಪದಿಂದ ಸಮೀಕ್ಷಿಸಲು ಅವರಿಗೆ ಅವಕಾಶ ಸಿಗಲಿಲ್ಲ.

ಅಮೇರಿಕದ ಸಾಮಾನ್ಯ ಪ್ರಜೆಯು ಹೇಗಿದ್ದಾನೆ? ಅವನು ಏನನ್ನು ಉಣ್ಣುತ್ತಾನೆ? ಏನನ್ನು ಮಾಡುತ್ತಾನೆ? ಆತನ ಆಲೋಚನೆಗಳೇನು? ಚಟುವಟಿಕೆಗಳೇನು? ಅಧ್ಯಕ್ಷ ಐಕರನ್ನು ಕಂಡವರು, ಅಥವಾ ವಿದೇಶಾಂಗ ಸಚಿವ ಡಲ್ಲೆಸರನ್ನು ನೋಡಿದವರು ಅಮೇರಿಕದ ಜನಸಾಧಾರಣರ ದರ್ಶನ ಮಾಡಿದೆನೆಂಬ ಧನ್ಯಭಾವ ಪಡೆದಾನೆ?

ಪೇಜೆಂಟೆಂಬ ಪತ್ರಿಕೆಯು ಅಮೇರಿಕದ ಸಾಮಾನ್ಯ ಪ್ರಜೆಯನ್ನು ಚೆನ್ನಾಗಿ ಪರಿಚಯ ಮಾಡಿಕೊಡುತ್ತದೆ. ನಾವು ಭಾರತೀಯರು ರಾಜಕೀಯ ಸುದ್ದಿಗಳಿಗೆನೇ ಹೆಚ್ಚಾಗಿ ಮಹತ್ವ ಕೊಡುತ್ತಿದ್ದೇವೆ. ಆದರೆ ಸಾಮಾನ್ಯ ಅಮೇರಿಕನ್ನನಲ್ಲಿ ಬಹುಮುಖವಾದ ಅಭಿರುಚಿಗಳಿವೆ—ಅವುಗಳಲ್ಲಿ ರಾಜಕೀಯವೂ ಒಂದು. ಆದರೆ ರಾಜಕೀಯ ಚರ್ಚೆಯೇ ನಿತ್ಯ ಜೀವನದ ಜೀವಾಳವಲ್ಲ.

ಅಮೇರಿಕದ ಸಾಮಾನ್ಯ ಮನುಷ್ಯನ ಎತ್ತರ ಬೂಟು ಸಮೇತ ಐದು ಅಡಿ, ಒಂಭತ್ತು ಅಂಗುಲ. ಕಂದುಗೂದಲು, ತಲೆಯ ಮೇಲೊಂದು ಹ್ಯಾಟು ಮತ್ತು ಕಣ್ಣಿಗೆ ಕನ್ನಡಕಗಳನ್ನು ಧರಿಸಿರುತ್ತಾನೆ. ಕಪ್ಪು ಬೂದಿ ಬಣ್ಣದ ಸೂಟು ಮತ್ತು ಗಡಿಯಾರ ಸಹ ಅವನ ಪೋಷಾಕಿನಲ್ಲಿ ಸೇರಿದೆ. ತೂಕವು ೧೫೮ ರಾತಲು!

ಈ ಸಾಮಾನ್ಯ ಮನುಷ್ಯನನ್ನು ನಾವು ಮಿಸ್ಟರ್ ಅಮೇರಿಕಾ ಎಂದು ಕರೆಯಬಹುದು. ಆತನು ಬಿಡುವಿನ ದಿನಗಳನ್ನು ಬಿಟ್ಟರೆ ಬೇರೆಲ್ಲ ದಿನ ನಿತ್ಯವೂ ಬೆಳಗ್ಗೆ ಏಳು ಗಂಟೆಗೆ ಮೊದಲೇ ಏಳುತ್ತಾನೆ. ಆದಿತ್ಯವಾರ ಮಾತ್ರ ಆತನು ಒಂದು ಗಂಟೆ ಹೆಚ್ಚು ನಿದ್ರಿಸುತ್ತಾನೆ.

ಕೆಲಸಕ್ಕೆ ಹೊರಡುವ ಸಿದ್ಧತೆ ಮಾಡಿಕೊಳ್ಳಲು ಅವನಿಗೆ ೧೮ ನಿಮಿಷ ಸಾಕು. ಅಮೇರಿಕದ ಪ್ರತಿ ಮೂರು ಜನರಲ್ಲಿ ಇಬ್ಬರು ತಮ್ಮ ತಮ್ಮ ಕೆಲಸಗಳಿಗೆ ತಮ್ಮ ಸ್ವಂತ ಅಥವಾ ಮಿತ್ರನೊಬ್ಬನ ಕಾರಿನಲ್ಲಿಯೆ ಹೋಗುತ್ತಾರೆ. ಸರಾಸರಿ ಎಂಟು ಜನರಲ್ಲಿ ಒಬ್ಬನು ಮಾತ್ರ ನಡೆದು ಹೋದಾನು.

ಮಿ. ಅಮೇರಿಕಾ ದಿನಕ್ಕೆ ಎಂಟು ತಾಸು ಕೆಲಸ ಮಾಡುತ್ತಾನೆ. ಇದರಲ್ಲಿಯೇ ಮಧ್ಯಾಹ್ನದ ಕಾಫಿ ಸಮಯ ಸಹ ಸೇರಿರುತ್ತದೆ. ಕೆಲಸ ಮುಗಿದೊಡನೆಯೇ ಆತನಿಗೆ ಮನೆಗೆ ಒಂದು ಸೇರಲು ಅರೆ ತಾಸು ಹಿಡಿಯುತ್ತದೆ. ಏಕೆಂದರೆ ಕೆಲಸಕ್ಕೆ ಹೋಗುವಾಗ ಇರುವ ಆತುರ ಮನೆಗೆ ಬರುವಾಗ ಇರುವುದಿಲ್ಲ.

ಆತನು ಹೆಚ್ಚಾಗಿ ಪ್ರೀತಿಸುವ ಊಟ ಯಾವುದು? ಹಣ್ಣು, ತರಕಾರಿ, ಮಾಂಸ, ಬಟಾಟೆ, ಬ್ರೆಡ್ ಮತ್ತು ಬೆಣ್ಣೆ, ಕಾಫಿ, ಸೇಬಿನ ಹಣ್ಣಿನ ಕಡಬು ಮತ್ತು ಐಸ್ ಕ್ರೀಮ್—ಸಾಮಾನ್ಯ ಅಮೇರಿಕನ್ನನೊಬ್ಬನು ಪ್ರತಿ ವರ್ಷ ಸರಾಸರಿ ೧೫೦ ರಾತಲು ಮಾಂಸ, ೧೧ ರಾತಲು ಮೀನು, ೩೭ ರಾತಲು ಕೋಳಿ ಮಾಂಸ ಮತ್ತು ಕೋಳಿ ಮೊಟ್ಟೆ, ೩೭ ರಾತಲು ಹಾಲು ಮತ್ತು ಹಾಲಿನ ಪದಾರ್ಥ, ೧೦೬ ರಾತಲು ಹಣ್ಣು ಮತ್ತು ೧೭ ರಾತಲು ಕಾಫಿಯನ್ನು ಉಪಯೋಗಿಸುತ್ತಾನೆ—ಆಹಾರವಾಗಿ!

ಇದಲ್ಲದೆ ಅಮೇರಿಕದಲ್ಲಿ ನೂರಕ್ಕೆ ೭೪ ಜನರು (ಗಂಡಸರಲ್ಲಿ ೭೦% ಮತ್ತು ಹೆಂಗಸರಲ್ಲಿ ೫೬%) ಮದ್ಯವನ್ನು ಸೇವಿಸುತ್ತಾರೆ. ದೊಡ್ಡ ಸಂಬಳದವರಲ್ಲಿ ನೂರಕ್ಕೆ ೭೯. ಕೆಲಸಗಾರರಲ್ಲಿ ನೂರಕ್ಕೆ ೭೪. ಒಕ್ಕಲಿಗರಲ್ಲಿ ನೂರಕ್ಕೆ ೫೫ ಮಂದಿ ಮದ್ಯಪಾನ ಮಾಡುತ್ತಾರೆ.

ಹೊಗೆಬತ್ತಿಯನ್ನು ಅಮೇರಿಕದ ೭೦% ಗಂಡಸರೂ ೩೦% ಹೆಂಗಸರೂ ಸೇದುತ್ತಾರೆ. ಪ್ರತಿ ಇಬ್ಬರು ಅಮೇರಿಕನ್ನರಲ್ಲಿ ಒಬ್ಬನು ದಿನಕ್ಕೆ ಒಂದು ಪ್ಯಾಕಿನಂತೆ ಸಿಗರೇಟನ್ನು ಸೇದುತ್ತಾನೆ.

ಕಾಫಿಯನ್ನು ೯೦% ಅಮೇರಿಕನ್ನರು ತಮ್ಮ ಪಾನೀಯವಾಗಿ ಮಾಡಿಕೊಂಡಿದ್ದಾರೆ.

ಅಮೇರಿಕದ ಪ್ರತಿ ಐದು ಮನೆಗಳಲ್ಲಿ ಮೂರು ಮನೆಗಳು ಟೆಲಿವಿಜನ್ ಸೆಟ್ ಪಡೆದಿವೆ. ಇದರಲ್ಲಿ ಹೋಟೆಲ್, ವೈನ್ ಬಾರ್, ಶಾಲೆ, ಕಾಲೇಜು ಹಾಗೂ ಸಂಘ ಸಂಸ್ಥೆಗಳಿಗೆ ಸಂಬಂಧಿಸಿದ ಟೆಲಿಜನ್ ಸೆಟ್ ಸೇರಿಲ್ಲ: ಈ ಟೆಲಿವಿಜನ್ ಸೆಟ್ ಸಾಮಾನ್ಯ ಅಮೇರಿಕನ್ನನು ಸಾಯಂಕಾಲ ಹೊತ್ತನ್ನು ವಿರಾಮವಾಗಿ ಕಳೆಯಲು ಉಪಯೋಗವಾಗುತ್ತದೆ.

ವೃತ್ತ ಪತ್ರಿಕೆಗಳನ್ನು ಓದುವುದು ಕೂಡ ಸಾಮಾನ್ಯ ಅಮೇರಿಕನ್ನನ ಅಭ್ಯಾಸಗಳಲ್ಲಿ ಒಂದು. ೮೫% ಅಮೇರಿಕನ್ನರು ವೃತ್ತಪತ್ರಿಕೆಯ ಆರಾಧಕರು. ವಯಸ್ಸಾದವರಲ್ಲಿ ಐವರಿಗೆ ಒಬ್ಬನಂತೆ ಮಾತ್ರ ಓದುವ ಜನರನ್ನು ಕಾಣಬಹುದು; ಇಂಗ್ಲೆಂಡಿನಲ್ಲಿ ಪ್ರತಿ ಇಬ್ಬರಲ್ಲಿ ಒಬ್ಬನಂತೆ ಓದುವ ಮುದ್ರಕರು ಕಾಣ ಸಿಗುತ್ತಾರೆ.

ಪ್ರತಿದಿನ ರಾತ್ರಿ ಏನಿಲ್ಲವೆಂದರೂ ೧೫೦ ಲಕ್ಷ ಜನರು ಅಮೇರಿಕದಲ್ಲಿ ಸಿನೆಮಾವನ್ನು ನೋಡುತ್ತಾರೆ. ಸಾಮಾನ್ಯವಾಗಿ ಅಮೇರಿಕನ್ನರು ರಾತ್ರಿ ಹತ್ತು ಗಂಟೆಗೆ ಮುಂಚೆ ತಮ್ಮ ಮನೆಯನ್ನು ಸೇರುತ್ತಾರೆ.

ಮದುವೆ ಮುಂತಾದ ಪ್ರಶ್ನೆಗಳಲ್ಲಿ ಆರ್ಥಿಕ ಸ್ವಾವಲಂಬನಕ್ಕೆ ವಿಶೇಷ ಮಹತ್ವವನ್ನು ಅಮೇರಿಕದಲ್ಲಿ ಕೊಡಲಾಗುತ್ತದೆ. ಮದುವೆಯಾಗ ಬಯಸುವ ಹುಡುಗನಿಗೆ ಈ ಕಾಲದಲ್ಲಿ ಏನು ಬೇಕೆಂದು ಕೇಳಿದಾಗ, ಬ್ಯಾಂಕಿನಲ್ಲಿ ಒಂದು ಸಾವಿರ ಡಾಲರು, ಜೀವ ವಿಮಾ ಪಾಲಿಸಿ ಮತ್ತು ಏನಿಲ್ಲವೆಂದರೂ ವಾರಕ್ಕೆ ೫೦-೬೦ ಡಾಲರು ಸಂಬಳ ತರುವ ಕೆಲಸಬೇಕೆಂದು ಉತ್ತರ ಬಂತು. ನೂರಕ್ಕೆ ೯೧% ಜನರ ಅಭಿಪ್ರಾಯ ಹೀಗಿದೆ! ಉಳಿದ ೯% ಜನರು ಮದುವೆ ಯಾಗುವ ಮನಸ್ಸು ಮತ್ತು ಯೋಗ್ಯ ಹುಡುಗಿ ಇದ್ದರೆ ಸಾಕೆಂದು ಹೇಳುತ್ತಾರೆ! ಹೀಗೆನ್ನುವ ಇವರು ಶ್ರೀಮಂತ ವರ್ಗದವರೆಂಬ ದು ತೀರ ಸ್ಪಷ್ಟ.

ಸಾಮಾಜಿಕ ಪ್ರಶ್ನೆ ಅಮೇರಿಕದಲ್ಲಿ ತೀರ ಜಾಗ್ರತವಾಗಿದೆ. ಅಮೇರಿಕದ ಹೆಂಡಂದಿರ ದೋಷಗಳೇನು? ಎಂಬುದಕ್ಕೆ ಅನುಕ್ರಮವಾಗಿ ಈ ಕೆಳಗಿನಂತೆ ಉತ್ತರ ದೊರಕುತ್ತದೆ.—

೧. ಅವರು ಜಂಭದ ಸ್ವಭಾವದವರು; ಯಜಮಾನಿಕೆಯನ್ನೆ ನಡೆಸಲು ಮುಂದಾಗುವ ಮನೋವೃತ್ತಿ ಅವರದು.

೨. ಮುಂದಿನವರಲ್ಲಿ ಅವರನ್ನು ಹಿಂದೆಹಾಕುವವರಿಲ್ಲ

೩. ಮನೆಯ ಹೊರಗೆಯೇ ತಿರುಗಾಡಿ ಗೃಹಸ್ಥಿಕೆಯನ್ನು ಮರೆಯುವ ಮನೆವಾರ್ತೆಯರು.

೪. ಮನೆಯ ಅಲಂಕಾರಕ್ಕಾಗಿ ಇದ್ದುದೆಲ್ಲವನ್ನೂ ವೆಚ್ಚಮಾಡುವ ಸೌಂದರ್ಯ ಪ್ರಿಯರು.

ನೂರಕ್ಕೆ ೭೦ ಮಂದಿ ಗಂಡಂದಿರ ಅಭಿಪ್ರಾಯವು ಮೇಲಿನಂತಿದೆ. ನೂರಕ್ಕೆ ೧೦ ಮಂದಿ ಗಂಡಂದಿರು ತಮ್ಮ ಹೆಂಡಂದಿರಲ್ಲಿ ಯಾವ ದೋಷವನ್ನೂ ಕಾಣದ ಸಾಹಸಿಗಳು; ಅಥವಾ ಸಂಭಾವಿತರು!

ವಿವಾಹ ಮಾಡಿಕೊಳ್ಳುವುದು ಬಹಳ ಕಠಿಣವಾದ್ದುದರಿಂದ ದಾಂಪತ್ಯ ವಿಚ್ಛೇದನವು ಸುಲಭಸಾಧ್ಯವಾಗಬೇಕೆಂದು ಸಾಮಾನ್ಯ ಅಮೇರಿಕನ್ನರು ಬಯಸುವುದಿಲ್ಲ. ವಿಚ್ಛೇದನವನ್ನು ಪಡೆಯುವುದು ಕಠಿಣವಾಗಬೇಕೆಂದೂ ವಿಚ್ಛೇದನೆಯನ್ನು ದೊರಕಿಸಬಹುದಾದ ಕಾರಣಗಳಲ್ಲಿ ವ್ಯಭಿಚಾರ, ಕ್ರೌರ್ಯ, ಕುಡಿತ, ಶಿಶು ಪೋಷಣೆಯ ನಿರಾಕರಣೆ, ಓಡುಹೋಗುವಿಕೆ, ಮದುವೆಗೆ ಮುಂಚೆ ಸಂಪಾದಿಸಿದ ಗುಹ್ಯರೋಗಗಳು, ದೊಡ್ಡ ಅಪರಾಧಕ್ಕಾಗಿ ಶಿಕ್ಷೆ, ಸಂಭೋಗಮಾಡುವ ಅಸಾಮರ್ಥ್ಯ, ಮದುವೆಗೆ ಮೊದಲೇ ಹೆಂಡತಿಯಾದವಳ ಕೌಮಾರ್ಯಭಂಗ, ಮದುವೆಗೆ ಪೂರ್ವದಲ್ಲಿ ಗಂಡನಾದವನು ಪರಸ್ತ್ರೀ ಸಂಗ—ಇವನ್ನು ಸೇರಿಸಬೇಕೆಂದು ಅಮೇರಿಕದ ಸಾಮಾನ್ಯ ಜನಾಭಿಪ್ರಾಯ.

ಸಾಮಾನ್ಯ ಅಮೇರಿಕನ್ನನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪ್ರಶ್ನೋತ್ತರವೇ ಒದಗಿಸಿ ಕೊಡುತ್ತದೆ—

ಜೀವನದಲ್ಲಿ ನಿಮಗಿರುವ ದೊಡ್ಡ ಸಮಸ್ಯೆ ಏನು—

ಹಣ!

ಗಂಡ ಹೆಂಡಂದಿರಲ್ಲಿ ವಿವಾದವನ್ನು ಉಂಟು ಮಾಡುವ ದೊಡ್ಡ ಕಾರಣ ಯಾವುದು?

—ಹಣ!

ಸುಖಕ್ಕೆ ಸುಲಭದ ದಾರಿ ಇದೆಯೇ? ಇದ್ದರೆ ಅದು ಯಾವುದು?

—ಖಂಡಿತವಾಗಿಯೂ ಇದೆ; ಹಣವೇ ಆ ಮಾರ್ಗ!

ನಿಮ್ಮ ಕುಟುಂಬವನ್ನು ನಡೆಸಲು ವಾರಕ್ಕೆ ಎಷ್ಟು ಹಣ ಬೇಕೇ ಬೇಕು?

—೬೦ ಡಾಲರು (ಒಂದು ಡಾಲರಿಗೆ ೪ ರೂಪಾಯಿ ೧೨ ಆಣೆ).

ನಿಮ್ಮ ಜೀವನದಲ್ಲಿ ಹಣ ಸಂಪಾದನೆಯನ್ನು ಬಿಟ್ಟರೆ ಎದುರಾಗುವ ದೊಡ್ಡ ಸಮಸ್ಯೆ ಯಾವುದು?

—ಮಕ್ಕಳನ್ನು ಜೋಪಾನವಾಗಿ ಬೆಳೆಸುವುದು!

ಆದರ್ಶ ಕುಟುಂಬದಲ್ಲಿ ಮಕ್ಕಳೆಷ್ಟಿರಬೇಕು?

—ಮೂರು! (ಹತ್ತು ವರ್ಷಗಳ ಹಿಂದೆ ಅಮೇರಿಕನ್ನರು "ನಾಲ್ಕು" ಎಂದು ಉತ್ತರ ಹೇಳುತ್ತಿದ್ದರು: ಈ ಹತ್ತು ವರ್ಷಗಳಲ್ಲಿ ಒಂದು ಮಗು ಕಡಿಮೆ ಇದ್ದರೆ ಒಳ್ಳೇಯದೆಂದು ಕಂಡಿದೆ!

ಮಕ್ಕಳ ಜೋಪಾನದ ಪ್ರಶ್ನೆಯು ನಿಮಗೆ ಅಷ್ಟೊಂದು ಕಷ್ಟಕರವಾಗಿ ಏಕೆ ಕಾಣಿಸಬೇಕು?

—ಏಕೆಂದರೆ ಅವರ ಊಟ, ಅವರ ಶಿಕ್ಷಣ, ಅವರಿಗೆ ಕರ್ಚಿಗೆ ಕೊಡಬೇಕಾದ

೭ನೇ ಪುಟ ನೋಡಿರಿ.

ಆರ್ಥಿಕ ಸಮಸ್ಯೆಗಳು

ನಿಮ್ಮ ಎಲ್ಲಾ ಆರ್ಥಿಕ ಸಮಸ್ಯೆಗಳಿಗೆ,
ದೇಶ ವಿದೇಶ ವ್ಯಾಪಾರ ಅನುಕೂಲತೆಗಳಿಗೆ,
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳಿಗೆ,
ಉಳಿತಾಯದ ಹಲವು ಯೋಜನೆಗಳಿಗೆ, ನಮ್ಮ
ಯಾವದೇ ಶಾಖೆಯಲ್ಲಿ ವಿಚಾರಿಸಿರಿ.

ನಿಮ್ಮ ಸೇವೆಯೇ ನಮ್ಮ ಗುರಿ.

ಕೆನರಾ ಬ್ಯಾಂಕ್ ಲಿಮಿಟೆಡ್
CANARA BANK LIMITED
ESTD: 1906
ಒಟ್ಟು ಸಾಧನ ಸಂಪತ್ತು ರೂ. 17 ಕೋಟಿಗೂ ಮಿಕ್ಕಿದೆ

**NAVAYUGA**
Popular Kannada Weekly
*Founder:—*
**A. B. SHETTY**, *M. L. A.*
Former Minister for Public Health,
Govt. of Madras.
At Present Minister for Health
Govt. of Mysore.

# ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

| ಸಂಪುಟ | ಉಡುಪಿ | ಸಂಚಿಕೆ |
|---|---|---|
| ೩೬ | ೨೭-೧೨-'೫೬ | ೧೭ |

## ನೆಹರು—ಐಕರ ಸಮಾಲೋಚನೆ

ಭಾರತದ ಪ್ರಧಾನಿ ಶ್ರೀ ಜವಾಹರಲಾಲ ನೆಹರೂರವರು ಈಗ ಸ್ವದೇಶಕ್ಕೆ ಮರಳುವ ಮಾರ್ಗದಲ್ಲಿದ್ದಾರೆ. ಅವರು ಅಮೇರಿಕವನ್ನೂ ಮತ್ತೆ ಹಿಂದಿನಿಂದ ಕೆನಡವನ್ನೂ ಸಂದರ್ಶಿಸಿದರು; ಲಂಡನಿನಲ್ಲೂ ಆಂಗ್ಲ ಸರಕಾರದ ಧುರೀಣರನ್ನು ಕಂಡರು. ಆದರೆ, ಅವರ ಈ ಪ್ರವಾಸದ ಮುಖ್ಯೋದ್ದೇಶವು ಅಮೇರಿಕದ ಅಧ್ಯಕ್ಷರನ್ನು ಕಂಡು ಸಮಾಲೋಚಿಸುವುದೇ ಆಗಿತ್ತಾದ ಕಾರಣ, ಐಕರೊಡನೆ ನಡೆಸಿದ ಮಾತುಕತೆಯ ಮೇಲೆಯೇ ಎಲ್ಲರ ಲಕ್ಷ್ಯವೂ ಬಿದ್ದಿರುವುದು ಸಹಜ. ನಾಲ್ಕು ದಿನಗಳವರೆಗೆ ನೆಹರು ಐಕರ ನಡುವೆ ಶಾಂತ ರೀತಿಯಲ್ಲಿ ಸೌಹಾರ್ದಪೂರ್ಣವಾದ ಮಾತುಕತೆಗಳು ನಡೆದಿವೆ. ಇವುಗಳಲ್ಲಿ ಒಂದು ದಿನವಂತೂ ತೀರ ಅನೌಪಚಾರಿಕವಾದ ರೀತಿಯಲ್ಲಿ ಅಧ್ಯಕ್ಷರ ಹಳ್ಳಿಯ ಮನೆಯಲ್ಲಿ ಮಾತುಕತೆ ನಡೆಸಿದುದಾಗಿದೆ. ಈ ಮಾತುಕತೆಗಳ ಕೊನೆಗೆ ಹೊರಟ ಸಂಯುಕ್ತ ಪ್ರಕಟಣೆಯು ಪ್ರಾಯಶಃ ಚರಿತ್ರೆಯಲ್ಲೇ ತೀರ ಕಿರಿದಾದುದು! ಅಂತೂ ಅಧ್ಯಕ್ಷ ಐಕರ ಹಾಗು ಪ್ರಧಾನಿ ನೆಹರುಗಳ ವ್ಯಕ್ತಿತ್ವದ ಉನ್ನತ ಮಟ್ಟದ ಹಿನ್ನೆಲೆಯಿಂದ ಕಂಡರಂತೂ ಕೇವಲ ಮೂರು ಪರಿಚ್ಛೇದಗಳುಳ್ಳ, ಅರ್ಧ ತಾವು ಕಾಗದದ ಒಂದು ಪುಟವನ್ನೂ ಪೂರ್ಣ ತುಂಬದ, ಈ ಜತೆ ಹೇಳಿಕೆಯು ನಿರೀಕ್ಷೆಗಿಂತ ಎಷ್ಟೋ ಸಣ್ಣದಾಗಿದೆ. ಆದರೆ ನೆಹರೂರವರೇ ಹಿಂದಿನಿಂದ ನ್ಯೂಯಾರ್ಕಿನಲ್ಲಿ ಹೇಳಿದ್ದಂತೆ, "ಶಬ್ದಗಳಿಗೆ ಮಹತ್ವವಿದೆ-ಆದಾಗ್ಯೂ ಶಬ್ದಗಳಿಗಿಂತಲೂ ಅವುಗಳ ಹಿಂದಿರುವ ಭಾವನೆಗಳಿಗೆ ಹೆಚ್ಚಿನ ಮಹತ್ವ ಸಲ್ಲುತ್ತದೆ." ಆದುದರಿಂದ ಜತೆ ಹೇಳಿಕೆಯಲ್ಲಿ ಶಬ್ದಗಳು ಹೆಚ್ಚಿಲ್ಲವೆಂಬ ಕಾರಣಕ್ಕಾಗಿ ನಾವು ನಿರಾಶರಾಗಬೇಕಾದ ಆವಶ್ಯಕತೆ ಇಲ್ಲ—ಈ ಶಬ್ದಗಳ ಹಿಂದೆ ಅಡಗಿರುವ ಭಾವನೆ, ಅದು ಭಾರತ ಮತ್ತು ಅಮೇರಿಕಗಳಿಗೆ ಮುಖ್ಯವಾಗಿಯೂ ಸಮಗ್ರ ಜಗತ್ತಿಗೆ ಸಾಮಾನ್ಯವಾಗಿಯೂ ನೀಡುವ ಸಂದೇಶ, ಇದರಿಂದ ಲೋಕ ವ್ಯವಹಾರದ ಮೇಲಾಗಬಹುದಾದ ಸತ್ಪರಿಣಾಮ—ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡರೆ ಜತೆ ಹೇಳಿಕೆಯ ಮೂರು ಪರಿಚ್ಛೇದಗಳು ವಾಮನ ಮೂರ್ತಿಯ ಮೂರು ಹೆಜ್ಜೆಗಳು ಜಗತ್ತನ್ನಲ್ಲದೆ ದುಷ್ಟ ದೈತ್ಯನಾದ ಬಲಿಯನ್ನೂ ಮಟ್ಟಹಾಕಿದಂತೆ, ಎಲ್ಲ ಕುಶಂಕೆ ಮತ್ತು ದುಷ್ಟ ಹೇತುಗಳನ್ನೂ ನಿರ್ಮೂಲಿಸಲು ಶಕ್ತವಾಗಿವೆ ಎಂದು ನಂಬಬಹುದು. "ಉಭಯ ರಾಷ್ಟ್ರಗಳಿಗೂ ಆಸಕ್ತಿ ಇರುವ ನಾನಾ ಬಗೆಯ ಸಮಸ್ಯೆಗಳ ಮೇಲೆ ಪೂರ್ಣವೂ ಹಾರ್ದಿಕವೂ ಆದ ವಿಚಾರ ವಿನಿಮಯ ನಡೆಯಿತು. ಇವುಗಳಿಂದ ಉಭಯ ರಾಷ್ಟ್ರಗಳ ನಡುವೆ ಸಮಾನವಾದ ಧ್ಯೇಯಾದರ್ಶಗಳಿಂದಲೂ ಸ್ವತಂತ್ರ ಪ್ರಜಾಪ್ರಭುತ್ವದಲ್ಲಿರುವ ಶ್ರದ್ಧೆಯಿಂದಲೂ ಉದ್ಭೂತವಾದ ಗೆಳೆತನದ ಬೆಸುಗೆಯಲ್ಲದೆ ಸಾಮಾನ್ಯ ಏಕಾಭಿಪ್ರಾಯವಿದೆ ಎಂಬುದು ಸಹ ದೃಢವಾಯಿತು. ಪರಸ್ಪರರನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಈ ಮಾತುಕತೆಗಳಿಂದ ಸಹಾಯವಾಯಿತಲ್ಲದೆ ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಬೇರೆ ಬೇರೆ ರಾಷ್ಟ್ರಗಳೊಡನೆ ಶಾಂತಿ ಸಾಧನೆಗಾಗಿಯೂ ಸ್ನೇಹಪೂರ್ಣ ನಡವಳಿಕೆಗಾಗಿಯೂ ಪ್ರಯತ್ನಿಸುವುದೇ ವಿಹಿತವೆಂಬುದು ಇಬ್ಬರಿಗೂ ಸ್ಪಷ್ಟವಾಯಿತು". ಹೀಗೆ ಮೂರೇ ವಾಕ್ಯಗಳಲ್ಲಿ ಸಂಗ್ರಹಿಸಬಹುದಾದ ಜತೆ ಹೇಳಿಕೆಯ ಸಾರಾಂಶವನ್ನು ನಿರ್ವಿಕಾರ ಚಿತ್ತದಿಂದ ವಿಮರ್ಶಿಸಿದರೆ, ಇದು ಭಾರತವು ಏನನ್ನು ಬಯಸಿತೋ ಅದನ್ನು ಪಡೆಯಿತೆಂಬುದನ್ನೆ ತೋರಿಸಿಕೊಡುತ್ತದೆ. ಭಾರತವು ಜಾಗತಿಕ ರಂಗದಲ್ಲಿ ವಹಿಸುತ್ತಿರುವ ಪಾತ್ರದ ಬಗ್ಗೆ ಅಮೇರಿಕನ್ನರಿಗಿದ್ದಷ್ಟು ಸಂಶಯವು ಪ್ರಾಯಶಃ ಬೇರೆ ಯಾರಿಗೂ ಇರಲಿಲ್ಲ. ಪ್ರಜಾಪ್ರಭುತ್ವದಲ್ಲಿ ಅಚಲ ಶ್ರದ್ಧೆ ಇದೆ ಎನ್ನುವ ನೆಹರೂರವರು ಕಮ್ಯುನಿಸ್ಟರೊಡನೆ ಹೇಗೆ ಮೈತ್ರಿಯಿಂದಿರುತ್ತಾರೆ? ಎಂಬುದು ಅಮೇರಿಕದ ಜನಸಾಧಾರಣರಿಗೆ ಬಿಡಿಸಲಾರದ ಒಗಟಾಗಿದೆ. ನೆಹರೂರವರು ತಮ್ಮ ಪ್ರಾಮಾಣಿಕತೆಯ ಪ್ರದರ್ಶನದಿಂದಲೂ ಭಾವಜೀವಿಗೆ ಸಹಜವಾದ ವಾಗ್ವೈಖರಿಯುಕ್ತ ಉದ್ಗಾರಗಳಿಂದಲೂ ಅಮೇರಿಕದ ಜನರಿಗೆ ತಾವು ಪ್ರಜಾಪ್ರಭುತ್ವದ ಪುರಸ್ಕರ್ತರೆಂಬುದನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. ಸ್ವತಂತ್ರ ಜಗತ್ತಿನ ಕಲ್ಪನೆಯ ಬಗ್ಗೆ ತಮಗೆ ತುಂಬ ಅಭಿಮಾನವಿದೆಯೆಂದೂ ಈ ಸ್ವಾತಂತ್ರ್ಯ ರಕ್ಷಣೆಯು ಚಿಕ್ಕ ರಾಷ್ಟ್ರಗಳಿಗೂ ಸಾಧ್ಯವಾಗಬೇಕಾದರೆ ಸೈನಿಕ ಒಪ್ಪಂದ ಮತ್ತಿತರ ಕೂಟ ನೀತಿಗಳನ್ನು ಬಿಟ್ಟುಕೊಡುವುದು ಅವಶ್ಯವೆಂದೂ ನೆಹರೂರವರು ಒತ್ತಿ ಹೇಳಿ ಅಮೇರಿಕದ ಜನರ ಮನಸ್ಸಿನ ಮೇಲೆ ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಒತ್ತಿದ್ದಾರೆ. ರೇಡಿಯೋ, ಟೆಲಿವಿಜನುಗಳ ಮುಂದೆ ಮಾತನಾಡುವಾಗಲೂ ಪತ್ರಿಕಾ ಗೋಷ್ಠಿಯಲ್ಲಿ ಪ್ರಶ್ನೆಗಳನ್ನು ಉತ್ತರಿಸುವಾಗಲೂ ಭಾಷಣ ವೇದಿಕೆಯ ಮೇಲಿಂದ ಶ್ರೋತೃಗಳನ್ನು ಸಂಬೋಧಿಸುವಾಗಲೂ ನೆಹರೂರವರು ಭಾರತದ ನಿಲುಮೆಯನ್ನು ಬಹಳ ಸ್ಪಷ್ಟವಾದ ಮಾತುಗಳಲ್ಲಿ ವಿವರಿಸಿದ್ದಾರೆ. ಕಮ್ಯುನಿಸ್ಟರ ಕಡೆಗೆ ನೆಹರೂರವರ ಕೈಯಲ್ಲಿರುವ ಭಾರತವು ವಾಲಿದೆ ಎಂಬ ಆಪಾದನೆ ಅಥವಾ ತಪ್ಪು ಕಲ್ಪನೆಯು ಆಧಾರರಹಿತವಾದುದೆಂದು ನೆಹರೂ ಅಮೇರಿಕಕ್ಕೆ ತಿಳಿಸಿ ಹೇಳಿರುವರಲ್ಲದೆ, ಪ್ರಜಾಸತ್ತಾತ್ಮಕ ವಿಧಾನದಲ್ಲಿಯೇ ರಾಷ್ಟ್ರವನ್ನು ಸಮೃದ್ಧವಾಗಿ ಕಟ್ಟುವುದು ತನ್ನ ಉದ್ದೇಶವೆಂದು ಸಾರಿದ್ದಾರೆ. ಅಮೇರಿಕದ ಸರಕಾರವು ಇದನ್ನು ಮೆಚ್ಚಿಕೊಂಡಿದೆಯೆಂದೂ ಎರಡನೇ ಯೋಜನೆಯ ಕಾರ್ಯಾಚರಣೆಯಲ್ಲಿ ಅಮೇರಿಕದಿಂದ ನಿರೀಕ್ಷೆಗೂ ಮಿಕ್ಕಿದ ಸಹಾಯ ಸಿಗುವ ಭರವಸೆ ಇದೆಯೆಂದೂ ಅಧ್ಯಕ್ಷ ಐಕರು ಭಾರತದ ವಿದೇಶ ಧೋರಣೆಯ ಕುರಿತು ತೋರಿಸಿದಷ್ಟೇ ವಿಶೇಷವಾದ ಆಸಕ್ತಿಯನ್ನು ಭಾರತದ ಪುನಾರಚನೆಯ ವಿಧಾನದ ಚರ್ಚೆಯ ಮಟ್ಟಿಗೂ ವ್ಯಕ್ತಪಡಿಸಿದರೆಂದೂ ವರದಿಗಳು ಹೇಳುತ್ತವೆ. ಯಾವುದೇ ಮುಖ್ಯ ಸಮಸ್ಯೆಯ ವಿಷಯದಲ್ಲಿ "ಒಪ್ಪಂದ" ನಡೆದ ದಾಖಲೆಯು ಜತೆ ಹೇಳಿಕೆಯಲ್ಲಿಲ್ಲದಿದ್ದರೂ ಎಲ್ಲ ವಿಷಯಗಳ ಕುರಿತಾಗಿಯೂ ಪರಸ್ಪರರ ನಿಲುಮೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತೆಂಬುದು ದೊಡ್ಡ ಸಾಧನೆಯೇ ನಿಜ. ಸಂಶಯ ಪೀಡಿತವಾದ ವಾತಾವರಣವು ಈಗ ನಿವಾರಣೆಗೊಂಡಿದೆ; ಉಭಯ ರಾಷ್ಟ್ರಗಳ ಧೋರಣೆಯ ಹಿಂದಿರುವ ತಾತ್ವಿಕ ಹಿನ್ನೆಲೆಯ ಮೇಲೆ ಸ್ಪಷ್ಟ ಪ್ರಕಾಶವೂ ಬಿದ್ದಿದೆ. ಇದೆಲ್ಲವೂ ಶುಭಸೂಚಕ ಸಂಕೇತಗಳಾಗಿವೆ. ಅಮೇರಿಕದ ಹಾಗೂ ಭಾರತದ ಭಾವಿಧೋರಣೆಗಳ ಮೇಲೆ ಈ ಮಾತುಕತೆಯು ಉಂಟುಮಾಡಿದ ಭಾವನೆಗಳ ಪರಿಣಾಮವು ಬಹಳ ಗಾಢವಾಗುವುದೆಂಬ ಭರವಸೆ ಮೊಳೆತಿದೆ. ಉದಾಹರಣೆಗೆ ನೆಹರೂರವರು ಸೈನಿಕ ಒಪ್ಪಂದಗಳ ತತ್ವವನ್ನು ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಗೆ ಅಪಾಯಕಾರಿಯಾದ ವ್ಯವಹಾರ ಎಂಬ ಕಾರಣ ಕೊಟ್ಟು ಖಂಡಿಸಿದ್ದಾರೆ. ಸ್ವಾತಂತ್ರ್ಯದಲ್ಲಿ ತೀವ್ರ ಆಸಕ್ತಿ ಇರುವ ಅಮೇರಿಕವು ತನ್ನ ಸೈನ್ಯಗಳು ಬೀಡು ಬಿಟ್ಟ ಪ್ರದೇಶಗಳು ಕ್ರಮೇಣ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬಹುದೆಂಬ ಸತ್ಯವನ್ನು ಕಂಡುಕೊಂಡರೆ ಇನ್ನು ಮುಂದೆ ಅದು ಸೈನಿಕ ಒಪ್ಪಂದಗಳಲ್ಲಿ ನಿರತವಾಗಲಾರದು. ಹಾಗೆಯೇ ಕಮ್ಯೂನಿಸ್ಟರು ದುಷ್ಟರೆಂಬ ದ್ವೇಷಪೂರಿತ ಮನೋವೃತ್ತಿಗೆ ಅಂಟಿಕೊಳ್ಳದೆ ಅವರಷ್ಟಕ್ಕೆ ಅವರನ್ನು ಇರಗೊಟ್ಟು, ಅವರ ಪ್ರಭಾವಕ್ಕೆ ಮಾತ್ರ ನಾವು ಗುರಿಯಾಗದಿದ್ದರೆ ಸಾಕು—ಎಂಬ ಮಧ್ಯವರ್ತಿ ನಿಲುಮೆಗೆ ಅಮೇರಿಕವು ಬಂದರೆ ಅದರಷ್ಟು ದೊಡ್ಡ ಸಾಧನೆಯೇ ಇನ್ನೊಂದಿರಲಾರದು. ನೆಹರೂರವರು ಐಕರೊಡನೆ ನಡೆಸಿದ ಮಾತುಕತೆಗಳಿಂದ ಈ ಅದ್ಭುತವು ಆಗುತ್ತದೆ ಎಂದು ನಾವು ಈ ಮಾತುಗಳನ್ನು ಹೇಳುತ್ತಿಲ್ಲ- ಆದರೆ, ಒಬ್ಬರು ಇನ್ನೊಬ್ಬರ ಮನಸ್ಸನ್ನು ತಿಳಿದುಕೊಂಡಿರುವುದರಿಂದ ಉಭಯತರ ಮೇಲೂ ತಂತಮ್ಮ ಪ್ರಾಮಾಣಿಕತೆಯ ಪ್ರಭಾವವು ತಕ್ಕ ನಿಯಂತ್ರಣವನ್ನು ಹಾಕುತ್ತದೆ; ಹೀಗಾಗಿ ಒಂದು ಕೆಲಸವನ್ನು ಮಾಡುವ ಮೊದಲು, ಹೆಜ್ಜೆಯೊಂದನ್ನು ಮುಂದಿಡುವುದಕ್ಕೆ ಮೊದಲು—ಹತ್ತು ಸಲ ಆಲೋಚಿಸಿ ಸಾಗುವ ಬುದ್ಧಿ ಬರುತ್ತದೆ: ಇಷ್ಟು ಮಟ್ಟಿಗೆ ಮಾತುಕತೆಗಳು ಫಲದಾಯಕವಾಗಿವೆ; ಜಯಪ್ರದವಾಗಿವೆ-ಎನ್ನಬಹುದು.. ಇದನ್ನೆ ಭಾರತವೂ ಜಗತ್ತೂ ಆಶಿಸಿದ್ದಲ್ಲದೆ, ಯಾವುದಾದರೂ ಒಂದು ಮುಖ್ಯ ಸಮಸ್ಯೆಯ ಮೇಲೆ ನಿರ್ಣಯಕ್ಕೆ ಬರುವುದು ಈ ಮಾತುಕತೆಯ ಉದ್ದೇಶವಾಗಿರಲೇ ಇಲ್ಲ. ತಿಳವಳಿಕೆಯ ಆಸೆ ಕೈಗೂಡಿತು: ಅದೇ ಲೋಕಕ್ಕೆ ಈ ಸಲದ ಕ್ರಿಸ್ಮಸ್ ಕಾಣಿಕೆಯಾಯಿತು!

---

## ಉಡುಪಿ

**ತೈಲಚಿತ್ರ ಅನಾವರಣ** - ಸ್ಥಳೀಯ ಲೋಕಲ್ ಕೋಪರೇಟಿವ್ ಯೂನಿಯನ್ ಅಧ್ಯಕ್ಷರಾಗಿದ್ದ ದಿವಂಗತ ಕೆ. ಜೆ. ಬಲ್ಲಾಳರ ತೈಲ ಚಿತ್ರವನ್ನು ತಾ. 18ರಲ್ಲಿ ಒನರರಿ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಕೆ. ಕೃಷ್ಣಯ್ಯನವರು ಅನಾವರಣ ಮಾಡಿದರು. ಸಭಾಧ್ಯಕ್ಷತೆಯನ್ನು ವಕೀಲ್ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ವಹಿಸಿದ್ದರು. ಯೂನಿಯನ್ ಅಧ್ಯಕ್ಷ ವಕೀಲ್ ಶ್ರೀ ಪಿ. ವಿ. ಆಚಾರ್ಯರು ಸ್ವಾಗತ ಮಾತುಗಳನ್ನಾಡಿ ಸಮಾರಂಭಕ್ಕೆ ಬಂದ ಸಂದೇಶಗಳನ್ನೋದಿದರು. ಯೂನಿಯನ್ ಡೈರೆಕ್ಟರ್ ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟರು ದಿವಂಗತ ಬಲ್ಲಾಳರ ವಿವಿಧ ಕಾರ್ಯಕಲಾಪಗಳನ್ನು ವಿವರಿಸಿ ಭಾಷಣವಿತ್ತರು. ಯೂನಿಯನ್ ಕಾರ್ಯದರ್ಶಿ ಶ್ರೀ ಪಿ. ವಿಠಲ ಸೆಟ್ಟರು ಧನ್ಯವಾದಗಳನ್ನಿತ್ತರು. ಲಘೂಪಹಾರದೊಂದಿಗೆ ಸಮಾರಂಭ ಕೊನೆಗೊಂಡಿತು.

**ಉಡುಪಿ ಎನ್. ಜಿ. ಒಗಳ ಕ್ಲಬ್ ಉದ್ಘಾಟನೆಯನ್ನು**— ಇದೇ ತಾ. 17ರಲ್ಲಿ ಎಡಿಶನಲ್ ಡಿ| ಮುನ್ಸಿಫ್ ಶ್ರೀ ಕೆ. ಗೋಪಾಲಕೃಷ್ಣನವರು ನೆರವೇರಿಸಿದರು. ತಹಶಿಲ್ದಾರ್ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು ಸಭಾಧ್ಯಕ್ಷತೆ ವಹಿಸಿದ್ದರು. ರೆವಿನ್ಯೂ ಇಲಾಖೆಯ ಶ್ರೀ ಕೆ. ಬಿ. ವೆಂಕಟಕೃಷ್ಣ ಮೊದಲಾದವರು ಕೂಡಿ ದಾನವಿತ್ತ ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಎನ್. ಜಿ. ಒ ಗಳ ಕುಟುಂಬದ ಸಹಾಯಾರ್ಥವಾಗಿ 'ಕಾಮನ್ ಗುಡ್ ಫಂಡ್'ನ್ನು ಕೂಡಿಸಬೇಕೆಂದೂ ಆ ಮೂಲಕ ಎನ್. ಜಿ. ಒ ಗಳು ಆಕಸ್ಮಿಕ ನಿಧನಹೊಂದಿದಲ್ಲಿ ಅವರ ದಹನಕ್ರಿಯೆಗೆ ರೂ 50/- ಮತ್ತು ಅವರ ಕುಟುಂಬಕ್ಕೆ ತಾತ್ಕಾಲಿಕ ಸಹಾಯವಾಗಿ ಮೂರು ನಾಲ್ಕು ತಿಂಗಳುಗಳ ಸಂಬಳದಷ್ಟು ಧನ ಸಹಾಯವನ್ನು ಈ ನಿಧಿಯಿಂದ ಕೊಡುವುದೇ ಈ ಯೋಜನೆಯ ಉದ್ದೇಶವಾಗಿದೆ. ಸಂಘದ ಕಾರ್ಯದರ್ಶಿ ಶ್ರೀ ಆರ್. ಎಮ್. ಲೋಬೋರವರು ಧನ್ಯವಾದಗಳನ್ನರ್ಪಿಸಿದರು.

**ಶ್ರೀ ಉಪೇಂದ್ರ ಅನಂತಪೈಗಳ ನಿಧನಕ್ಕಾಗಿ ದುಃಖಸೂಚಕ ಸಭೆಗಳು** ತಾ. 14ರಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಡಾ| ಆರ್. ಪಿ. ಕೊಪ್ಪಿಕರ್, ಅವರ ಅಧ್ಯಕ್ಷತೆಯಲ್ಲಿ ಮಣಿಪಾಲದಲ್ಲಿ ಸಭೆ ಸೇರಿ ಶ್ರೀ ಉಪೇಂದ್ರ ಅನಂತ ಪೈಗಳ ನಿಧನದ ಬಗ್ಗೆ ಸಂತಾಪಸೂಚಿಸಿದರು. ವಿದ್ಯಾರ್ಥಿ ನಾಯಕ ಶ್ರೀ ಜೆರಿಯೋನ್ ಮೊದಲಾದವರು ದಿವಂಗತರ ಗುಣಗಾನ ಮಾಡಿದರು. ಮಣಿಪಾಲದ ಸಾರ್ವಜನಿಕ ಸಭೆಯು ಶ್ರೀ ಬಿ. ವ್ಯಾಸರಾಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಉಪೇಂದ್ರ ಅನಂತ ಪೈಗಳ ನಿಧನದ ಬಗ್ಗೆ ದುಃಖಸೂಚಕ ನಿರ್ಣಯವನ್ನು ಮಾಡಿತು. ಶ್ರೀಗಳಾದ ಎ. ಜಿ. ಆಳ್ವ, ಪದ್ಮನಾಭ ಶೆಟ್ಟಿ, ಪಿ. ಶೀನ ಸೆಟ್ಟಿ, ಪ್ರಸಾದ ಜೆ. ಪತ್ತಾರ, ಆರ್. ಎಚ್. ಕಿಣಿ, ಪಾಪುಲ್ ಕರ್ಕಡ, ಎ. ಎಲ್. ಕಿಣಿ, ಎನ್. ಎಚ್. ಭಟ್, ಜಗನ್ನಾಥ ನಾಯರ್ ಮೊದಲಾದವರು ದಿವಂಗತ ಪೈಗಳ ಕುರಿತು ಭಾಷಣ ಮಾಡಿದರು.

ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ನಿನ ಡೈರೆಕ್ಟರರ ಸಭೆಯು ತಾ. 15ರಲ್ಲಿ ಅಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಉಪೇಂದ್ರ ಅನಂತ ಪೈಗಳ ಆಕಸ್ಮಿಕ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು.

---

**ಬಂಟರ ಯಾನೆ ನಾಡವರ ಸಂಘ, ದಕ್ಷಿಣ ಕನ್ನಡ, ಮಂಗಳೂರು.**

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ತಾ. 6-1-1957ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ತಾವು ಸಭೆಗೆ ದಯಮಾಡಿ ಬರಬೇಕಾಗಿ ಸಂಘದ ಆಡಳಿತ ಕಮಿಟಿಯ ಪರವಾಗಿ ವಿನಂತಿಸಿಕೊಳ್ಳುತ್ತೇನೆ.

**ಕೆ. ಸುಂದರರಾಮ ಶೆಟ್ಟಿ,**
ಕಾರ್ಯದರ್ಶಿ.

ಮಂಗಳೂರು, 19-12-1956.

## ಅಮೇರಿಕನನೊಡನೆ ಭೇಟಿ

(೫ನೇ ಪುಟದಿಂದ)

ಷಣ, ಅಲ್ಲದೆ ಅವರ ಭವಿಷ್ಯ ಕಾಯುತ್ತಿದೆ ಯಲ್ಲ!

"ನೀವು ಎಂದಾದರೂ..." ಎಂಬ ವಾಕ್ಯಾಂಶದಿಂದ ಪ್ರಾರಂಭವಾಗುವ ಪ್ರಶ್ನೆಗಳಿಗೆ ದೊರೆತ ಉತ್ತರವೂ ಇಷ್ಟೇ ಹೃದಯಸ್ಪರ್ಶಿಯಾಗಿದೆ ಮತ್ತು ಅಮೇರಿಕದ ಜನಜೀವನದ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ.

ನೀವು ಎಂದಾದರೂ–

ಪ್ಯಾರಿಸಿಗೆ ಹೋಗಿದ್ದೀರಾ?

–ಒಟ್ಟು ಜನಸಂಖ್ಯೆಯಲ್ಲಿ ೭೫ಲಕ್ಷ ಜನರು ಹೋಗಿದ್ದಾರೆ: ಇದು ೧೩% ಆಗುತ್ತದೆ! ಅಮೇರಿಕ ಎಲ್ಲಿ? ಪ್ಯಾರಿಸೆಲ್ಲಿ?

ಲಂಡನ್ನಿಗೆ ಹೋಗಿದ್ದೀರಾ?

—ಪ್ರತಿ ಹತ್ತರಲ್ಲಿ ಒಬ್ಬನು ಮಾತ್ರ ಹೌದೆನ್ನುತ್ತಾನೆ! ಪ್ಯಾರಿಸಿನಲ್ಲಿರುವ ಆಕರ್ಷಣೆ ಲಂಡನಿನಲ್ಲಿಲ್ಲ!

ವಿಮಾನದಲ್ಲಿ ಹಾರಾಡಿದ್ದೀರಾ?

—ಅರ್ಧಕ್ಕಿಂತ ಹೆಚ್ಚು ಜನರು ಹೌದೆಂದು ತಲೆ ಅಲ್ಲಾಡಿಸುತ್ತಾರೆ!

ರೈಲ್ವೆಯಲ್ಲಿ ಪ್ರವಾಸ ಮಾಡಿದ್ದೀರಾ?

—ನೂರಕ್ಕೆ ೯೭ ಮಂದಿ ಮಾಡಿದ್ದಾರೆ!

ಸಮುದ್ರ ಪ್ರಯಾಣ ಗೈದುದುಂಟೆ?

—ಏಕಿಲ್ಲ? ೪೦% ಮಂದಿಯಿಂದ ಹೌದೆಂಬ ಉತ್ತರ ಬರುತ್ತದೆ

ಹೆಂಡತಿಯನ್ನು ಎಂದಾದರೂ ಹೊಡೆದಿದ್ದೀರಾ?

—೧೭% ಗಂಡಂದಿರು ಹೆಂಡತಿಯನ್ನು ತಮ್ಮ ಜೀವಮಾನದಲ್ಲಿ ಒಂದೇ ಒಂದು ಸಲ ಹೊಡೆದಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೆ!

ಗಂಡನನ್ನು ಹೊಡಿದಿದ್ದೀರಾ?

—೧೪% ಹೆಂಡಂದಿರು ಹೌದೆಂದು ತಲೆ ಅಲ್ಲಾಡಿಸುತ್ತಾರೆ! (ಯಾರು ಹೆಚ್ಚು?–ಸ್ತ್ರೀಯರದೇ ಮೇಲ್ಗೈ!)

ಕುದುರೆ ಜೂಜನ್ನು ಆಡಿದ್ದೀರಾ?

—೩೪% ಮಂದಿಯಿಂದ ಹೌದೆಂಬ ಸೂಚನೆ ಬರುತ್ತದೆ.

ಸಾಯುವುದೇ ಒಳ್ಳೆಯದೆಂಬ ಭಾವನೆ ನಿಮ್ಮ ತಲೆಯಲ್ಲಿ ಮನೆಮಾಡಿಕೊಂಡಿದೆಯೆ:

—ನೂರಕ್ಕೆ ೪ ಜನ ಪುರುಷರೂ ೩೫ ಮಂದಿ ಸ್ತ್ರೀಯರೂ ಇಂಥ ಭಾವನೆ ಮಾಡಿಕೊಂಡಿರುವರೆಂದು ಗೊತ್ತಾಗುತ್ತದೆ: ಆದರೆ, ಅಮೇರಿಕದಲ್ಲಿ ಗಂಡಸರು ೬೭½ ವರ್ಷವೂ ಹೆಂಗಸರು ೭೩½ ವರ್ಷವೂ ಬದುಕುತ್ತಾರೆಂದರೆ ಆಶ್ಚರ್ಯವಾಗಲಾರದೆ?

ಬೈಬಲನನ್ನು ಪೂರ್ತಿ ಓದಿದ್ದೀರಾ?

—೧೫% ಮಂದಿ ಓದಿದ್ದಾರೆ!

ಅಧ್ಯಕ್ಷ ಐಕರನ್ನು ಪ್ರತ್ಯಕ್ಷ ನೋಡಿದ್ದೀರಾ?

—೨೦% ಮಂದಿ ನೋಡಿದ್ದಾರೆ.

ನೀವು ಆಸ್ಪತ್ರೆಗೆ ಸೇರಿದ್ದೀರಾ?

—ನೂರಕ್ಕೆ ೭೫ಮಂದಿ ಸೇರಿದ್ದಾರೆ!

ನ್ಯೂಯೋರ್ಕ್ ನಗರವನ್ನು ನೋಡಿದ್ದೀರಾ?

—ಅರೆವಾಸಿ ಜನರು ಹೌದೆನ್ನುತ್ತಾರೆ.

ಪರ್ವತಾರೋಹಣ ಮಾಡಿದ್ದೀರಾ?

—೧೫% ಮಾಡಿದವರು ಸಿಗುತ್ತಾರೆ.

ನಿಮ್ಮ ದಿನಚರಿಯನ್ನು ಬರೆದಿದ್ದೀರಾ?

—ಹತ್ತರಲ್ಲಿ ಒಬ್ಬ ಮಾತ್ರ ಬರೆದಿರುತ್ತಾನೆ. ಉಳಿದವರಿಗೆ ತಮ್ಮ ಹಿಂದಿನ ಜೀವನವನ್ನು ಪ್ರಕಟಪಡಿಸುವ ಇಚ್ಛೆಯಾಗಲೀ ದಿನಚರಿ ಬರೆಯುವ ಉತ್ಸಾಹವಾಗಲೀ ಇಲ್ಲ.

ಪತ್ರಿಕೆಗಳ ಸಂಪಾದಕರಿಗೆ ಮುಖ್ಯ ಸಮಸ್ಯೆಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸಿ ಪತ್ರವನ್ನು ಬರೆದಿದ್ದೀರಾ?

—೧೫% ಜನರು ಬರೆದಿದ್ದಾರೆ.

ಶಾಸನಾಂಗದಲ್ಲಿ ನಿಮ್ಮ ಪ್ರತಿನಿಧಿಯಾಗಿರುವವನಿಗೂ ಬರೆದಿದ್ದೀರಾ?

—೨೨% ಮಂದಿ ಬರೆದವರು ಸಿಗುತ್ತಾರೆ

ಹಸ್ತ ಸಾಮುದ್ರಿಕದವನ ಮುಂದೆ ಕೈಯೊಡ್ಡಿದ್ದೀರಾ?

—ನೂರಕ್ಕೆ ೧೭ ಜನ ಪುರುಷರೂ ೨೭ ಜನ ಸ್ತ್ರೀಯರೂ ನಾಚಿಕೆಯಿಂದಲೇ ಹೌದೆನ್ನುತ್ತಾರೆ.

ರಷ್ಯಾ ದೇಶವನ್ನು ನೋಡಲು ಮನಸ್ಸಿದೆಯೆ?

ಪ್ರತಿ ನೂರರಲ್ಲಿ ಒಬ್ಬನಿಗೆ ಆ ಆತುರವಿದೆ!

**ಶ್ರೀ ಪುತ್ತಿಗೆ ಮಠದ, ಹಿರೇ ಶ್ರೀ ಪಾದಂಗಳವರ ಶತಮಾನೋತ್ಸವ ಸಮಿತಿಯು**—ಈ ಕಟಣೆಯೊಂದನ್ನು ಹೊರಡಿಸಿ ಸ್ವಾಮಿಗಳವರ ಶತಮಾನೋತ್ಸವದ ಸ್ಮಾರಕವಾಗಿ ರಚಿಸುತ್ತಲಿರುವ ಬೆಳ್ಳಿ ರಥದ ಕಾರ್ಯವು ಭಕ್ತಾದಿಗಳ ನೆರವಿನಿಂದ ಅರ್ಧಾಂಶದಷ್ಟು ಮುಗಿದಿದೆ. ಶ್ರೀ ಕೃಷ್ಣದೇವರಿಗೆ ಹಾಗೂ ಶ್ರೀ ಶ್ರೀ ಗಳವರಿಗೆ ಅಭಿಷೇಕವಾದ 1080 ಕನಕ ನಾಣ್ಯಗಳು ಭಕ್ತರಿಗೆ ಅಪೇಕ್ಷಾ ಹದಿನಾರೂವರೆಯಂತೆ ವಿತರಣೆ ಮಾಡಿ ಹಣವನ್ನು ರಥದ ಕಾರ್ಯಕ್ಕೆ (ನಾಣ್ಯದ ಬೆಲೆ ರೂಪಾ 6-8-0+ಬೆಳ್ಳಿ ರಥದ ಸಹಾಯಾರ್ಥ ರೂ 10/-)ಉಪಯೋಗಿಸಲಾಗುವುದು. ಈ ನಾಣ್ಯಗಳನ್ನು ಕಳುಹಿಸಿಕೊಡುವ ಅವಧಿಯನ್ನು ಭಕ್ತರ ಅಪೇಕ್ಷೆಯಂತೆ ಇನ್ನೆರಡು ತಿಂಗಳು ಮುಂದುವರಿಸಲಾಗಿದೆ. ಆದುದರಿಂದ ನಾಣ್ಯಗಳನ್ನು ಅಪೇಕ್ಷಿಸುವವರು (ಕಾರ್ಯದರ್ಶಿ, ಶತಮಾನೋತ್ಸವ ಸಮಿತಿ C/o ಪಲಿಮಾರು ಮಠ, ಉಡುಪಿ, ಅವರಿಗೆ ಹಣ ಕಳುಹಿಸಿ ಪಡೆದು ಶ್ರೀ ಕೃಷ್ಣ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿದೆ ಎಂದು ವಿನಂತಿಸಿಯದೆ.

**ಸಂಸ್ಕೃತ ಕಾಲೇಜಿನ ಆಡಳಿತ ಮಂಡಳಿಯ ಸಭೆಯು**—ಈಚೆಗೆ ಜರಗಿ ಮಂಡಳಿಯ ಅಧ್ಯಕ್ಷರಾಗಿ ವಕೀಲ್ ಶ್ರೀ ಪಿ. ರಿ. ಆಚಾರ್ಯರು ಆರಿಸಲ್ಪಟ್ಟರು.

# ಶಾಸನಾಂಗದ ಜಂಟಿ ಅಧಿವೇಶನ

### ಗವರ್ನರರ ಭಾಷಣ

ನವಮೈಸೂರಿನ ಶಾಸನಾಂಗದ ಅಧಿವೇಶನವು ಇದೇ ೧೯ನೇ ತಾರೀಕಿನಂದು ಪ್ರಾರಂಭವಾಗಿದೆ. ಮೊದಲನೇ ದಿನ ಸದಸ್ಯರ ಪ್ರಮಾಣ ವಚನ ಸ್ವೀಕಾರದ ಬಳಿಕ, ವಿಧಾನಸಭೆಯ ಅಧ್ಯಕ್ಷರಾಗಿ ಶ್ರೀ ಎಸ್. ಆರ್. ಕಂಠಿಯವರೂ ವಿಧಾನ ಮಂಡಳದ ಸಭಾಪತಿಗಳಾಗಿ ಶ್ರೀ ಟಿ. ಸುಬ್ರಹ್ಮಣ್ಯಮರೂ ಸರ್ವಾನುಮತದಿಂದ ಆರಿಸಲ್ಪಟ್ಟರು. ಮುಂದೆ ರಾಜ್ಯಪಾಲರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಶಾಸನಾಂಗದ ಸಂಯುಕ್ತ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದರು.

ಸುಮಾರು ಅರ್ಧತಾಸಿನವರೆಗೆ ಮಾಡಿದ ಭಾಷಣದಲ್ಲಿ ಕನ್ನಡ ಪ್ರದೇಶಗಳೆಲ್ಲವೂ ಒಂದುಗೂಡಿರುವುದಕ್ಕೆ ರಾಜ್ಯಪಾಲರು ಸಂತೋಷವನ್ನು ವ್ಯಕ್ತಪಡಿಸಿದರಲ್ಲದೆ ಕಾಸರಗೋಡು, ಅಕ್ಕಲಕೋಟೆ, ಮಡಕಶಿರ ಮುಂತಾದ ಕನ್ನಡ ಪ್ರದೇಶಗಳು ಈಗ ಕೈಬಿಟ್ಟು ಹೋಗಿದ್ದರೂ ಅವನ್ನು ಮರಳಿ ಪಡೆಯುವುದಕ್ಕೆ ತನ್ನ ಸರಕಾರವು ಪ್ರಯತ್ನಿಸುವುದೆಂಬ ಭರವಸೆಯನ್ನಿತ್ತರು. ರಾಜ್ಯದ ಎಲ್ಲ ಪ್ರದೇಶಗಳಿಗೂ ಸಮಾನವಾದ ಕಾನೂನು ವ್ಯವಸ್ಥೆಯನ್ನು ತರಲು ಸಿದ್ಧತೆಗಳು ನಡೆದಿವೆ ಎಂದೂ ರಾಜ್ಯಪಾಲರು ಹೇಳಿದರು.

ತತ್ಪರಿಣಾಮವಾಗಿ ವಿದ್ಯಾಭ್ಯಾಸ ಮತ್ತು ಒಕ್ಕಲು ಹಿತರಕ್ಷಣೆ, ತೆರಿಗೆ ಮುಂತಾದ ವಿಷಯಗಳಲ್ಲಿ ಹೊಸ ಶಾಸನಗಳು ಬರಲಿವೆ ಎಂಬುದನ್ನು ರಾಜ್ಯಪಾಲರು ಸೂಚಿಸಿದರು. ರಾಜ್ಯದ ಅಭಿವೃದ್ಧಿ ಯೋಜನೆಯ ಕಡೆಗೆ ತಿರುಗಿ, ರಾಜ್ಯಪಾಲರು ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರಿನ ರಚನೆ ಮತ್ತು ಮೀನುಗಾರಿಕೆಯ ಅಭಿವೃದ್ಧಿಯತ್ತ ವಿಶೇಷವಾದ ಗಮನಕೊಡಲಾಗುವುದೆಂದರು. ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲು ಹೊಸ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗುವುದೆಂದೂ ರಾಜ್ಯಪಾಲರು ಹೇಳಿದರು.

ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸೂಚಿಸುವ ಗೊತ್ತುವಳಿಯನ್ನು ಶ್ರೀ. ಬಿ. ವೈಕುಂಠ ಬಾಳಿಗರು ವಿಧಾನ ಸಭೆಯಲ್ಲಿ ಮಂಡಿಸಿದರು. ಅನೇಕ ಸದಸ್ಯರು ಮಾತನಾಡಿ ಹೊಸ ಸರಕಾರದ ಕುರಿತಾಗಿಯೂ ಅದರ ಮುಂದಿರುವ ಕೆಲಸದ ಬಗ್ಗೆಯೂ ಬಹಳ ಸೂಚನೆಗಳನ್ನಿತ್ತರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಅದಕ್ಕೆಲ್ಲ ಸೂಕ್ತ ಉತ್ತರವನ್ನಿತ್ತು, ರಾಜ್ಯದಲ್ಲಿರುವ ಭಾಷಾ ಅಲ್ಪಸಂಖ್ಯಾಕರ ಹಿತವನ್ನು ರಕ್ಷಿಸಲಾಗುವುದೆಂದೂ ಕೈಬಿಟ್ಟಿರುವ ಕನ್ನಡ ಪ್ರದೇಶಗಳನ್ನು ಮರಳಿ ಪಡೆಯುವುದಕ್ಕೆ ಸಂಬಂಧಿಸಿದವರೊಡನೆ ಪತ್ರವ್ಯವಹಾರ ನಡೆದಿದೆ ಎಂದೂ ತಿಳಿಸಿದರು.

ಮೈಸೂರಿನ ಅರ್ಥ ಸಚಿವರಾದ ಶ್ರೀ. ಟಿ. ಮರಿಯಪ್ಪನವರು ಮುಂದಿನ ಐದು ತಿಂಗಳ ಅಂದಾಜು ಆಯ ವ್ಯಯಪಟ್ಟಿಯನ್ನು ಸದಸ್ಯರ ಅವಗಾಹನೆಗೆ ಮಂಡಿಸಿದರು. ಇದು ೫½ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸುತ್ತದೆ. ಇದನ್ನು ತುಂಬಿಸಲು ಹೊಸ ತೆರಿಗೆಯ ಸೂಚನೆಗಳೇನೂ ಮಂಡಿಸಲ್ಪಟ್ಟಿಲ್ಲ. ಮಂತ್ರಿಗಳು ಹೀಗೆ ಮುಂದಿನ ಚುನಾವಣೆಯಲ್ಲಿ ಮತದಾರರನ್ನು ಒಲಿಸುವ ತಂತ್ರವನ್ನು ಹೂಡಿದ್ದಾರೆಂಬ ಟೀಕೆ ಮಾತ್ರ ಕೆಲಸೆಡೆಗಳಿಂದ ಕೇಳಿಸಿರುತ್ತದೆ.

ಮೇಲಿನಂತಿರುವ ಜನಸಮಾನ್ಯರ ನಾಡಿನೊಡನೆ ನಮ್ಮದನ್ನು ತುಲನೆಮಾಡಿದಾಗ ಏನು ಕಂಡೀತು? —ಕಾಣಲಿಕ್ಕಿಲ್ಲ!

—ಸಂಗಮದ ಆಧಾರ,

### ಪಾರ್ಲಿಮೆಂಟು ಮುಂದರಿಯಿತು

ಭಾರತದ ಪಾರ್ಲಿಮೆಂಟಿನ ಎರಡೂ ಮನೆಗಳ ಅಧಿವೇಶನವು ಅನಿಶ್ಚಿತಾವಧಿಯವರೆಗೆ ಮುಂದರಿದಿದೆ. ಬಹುಶಃ ಅದಿನ್ನು ಸೇರಲಾರದು; ಏಕೆಂದರೆ ಫೆಬ್ರುವರಿಯಲ್ಲಿ ಚುನಾವಣೆಯು ಪ್ರಾರಂಭವಾಗುವುದರಿಂದ ಅದಕ್ಕೆ ಮುಂಚೆ ಪಾರ್ಲಿಮೆಂಟು ವಿಸರ್ಜಿಸಲ್ಪಡಬಹುದು. ಮತ್ತು ಅಂಥ ವಿಸರ್ಜನೆಗೆ ಮೊದಲು ಅಧಿವೇಶನ ಸೇರಬೇಕಾದ ಯಾವ ಅಗತ್ಯವೂ ಬೀಳಲಿಕ್ಕಿಲ್ಲ.

## ಈಡನರೊಡನೆ ನೆಹರು

ಕೆನಡದ ರಾಜಧಾನಿಯಾದ ಒಟ್ಟವಕ್ಕೆ ನ್ಯೂಯಾರ್ಕಿನಿಂದ ಹಾರಿ ಸಂದರ್ಶನವಿತ್ತು ನೆಹರುರವರು ಲಂಡನಿಗೆ ೨೪ನೇ ದಿನಾಂಕ ಬಂದಿದ್ದಾರೆ: ಅಲ್ಲಿ ಅವರು ಈಡನರೊಡನೆ ಮಾತುಕತೆ ನಡೆಸಿದರು. ಕ್ರಿಸ್ಮಸ್ ಸಂದೇಶದ ಕುರಿತು ಹೇಳುತ್ತಾ ಸಮಸ್ಯೆಗಳ ಶಾಂತ ತೀರ್ಮಾನವೇ ನನ್ನ ಸಂದೇಶ ಎಂದರು. ದಶಂಬರ ೨೮ರಂದು ಪ್ರಧಾನಿಯವರು ಭಾರತಕ್ಕೆ ಮರಳುವರೆಂದು ತಿಳಿದು ಬರುತ್ತದೆ.

**ಮೈಸೂರು ಮುಖ್ಯಮಂತ್ರಿ**- ಶ್ರೀ ಎಸ್. ನಿಜಲಿಂಗಪ್ಪನವರು ಜನವರಿ ತಾ 13 ರಿಂದ ನಾಲ್ಕು ದಿನಗಳ ವರೆಗೆ ಜಿಲ್ಲೆಯ ಸಂಚಾರ ಕೈಗೊಳ್ಳುವರೆಂ ತಿಳಿದುಬರುತ್ತದೆ.

**ಡಾಕ್ಟರ್ ಎಚ್. ವೆಂಕಪ್ಪ ಅವರ ಸ್ಮಾರಕನಿಧಿಗೆ**— ಈ ತನಕ ರೂಪಾಯಿ 3067/- ಜಮೆಯಾಗಿದೆ ಎಂದೂ, ಸಹಾಯಮಾಡುವವರು ತಾ. 6-1-57ರೊಳಗೆ ಹಣ ರವಾನಿಸಬೇಕೆಂದೂ ಶ್ರೀ ಗಳಾದ ಕೆ. ಬಿ. ಆಳ್ವ ಮತ್ತು ಕೆ. ಸುಂದರರಾವು ಶೆಟ್ಟರು ತಿಳಿಸುತ್ತಾರೆ.

ಹಂಗೇರಿಯಲ್ಲಿ ರಕ್ಷಣೆ ಕೈಗೊಂಡ ಸೈನಿಕ ಕಾರ್ಯಾಚರಣೆಯಿಂದ ಬೇಸತ್ತು ಎಷ್ಟೋ ಮಂದಿ ಹಂಗೇರಿಯನ್ನರು ಇತರ ರಾಷ್ಟ್ರಗಳ ಆಶ್ರಯವನ್ನು ಕೋರಿದ್ದಾರೆ. ಬ್ರಿಟನಿಗೆ ಈಗಾಗಲೇ ೨೫೦೦ ಮಂದಿ ಆಶ್ರಯ ಕೋರಿ ಬಂದಿದ್ದಾರೆ. ಚಿತ್ರದಲ್ಲಿ ಅಂಥವರೊಬ್ಬನನ್ನು ಲಂಡನಿನ ಕ್ವೆಕರ್ ಕೆಲಸಗಾರರು ಸ್ವಾಗತಿಸುವುದನ್ನು ಕಾಣಬಹುದು.

## ಎಲ್ಲೆಲ್ಲಿ ಏನೇನು?

**ಹಂಗಾರ ಕಟ್ಟೆ ಬಾಳಿಕುದುರು ಶ್ರೀ ಮಠದಲ್ಲಿ—** ವರ್ಷಂಪ್ರತಿ ಜರಗುವ ಶ್ರೀ ಶಂಕರ ಜಯಂತಿ ಸಭಾಂಗವಾದ ಪರೀಕ್ಷೆಗಳು ಜಯಂತಿ ವೇಳೆಯಲ್ಲಿ ಜರಗುವುದು. ವಿವಿಧ ವಿಷಯಗಳಲ್ಲಿ ಪರೀಕ್ಷೆ ನಡೆದು ಸಂಭಾವನೆ ಕೊಡಲಾಗುವುದು. ಹೇಮಲಂಬಿ ಸಂವತ್ಸರದ ಚೈತ್ರ ಶುದ್ಧ ೧೫ರೊಳಗೆ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳು ಅರ್ಜಿಯ ಪತ್ರಿಕೆಯನ್ನು ಸಭಾ ಕಾರ್ಯದರ್ಶಿಗಳಿಗೆ ಮುಟ್ಟಿಸಬೇಕಾದುದರಿಂದ ಪಠ್ಯದ ಪಟ್ಟಿಯನ್ನು ಶ್ರೀ ಶಂಕರ ಜಯಂತೀ ಸಭಾ, ಬಾಳಿಕುದುರು ಹಂಗಾರಕಟ್ಟೆ ಪೋಸ್ಟ್ (ದ. ಕನ್ನಡ) ಇವರಿಂದ ಕೂಡಲೇ ಪಡೆಯಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

**ಪಾಣೆಮಂಗಳೂರು—** ಸ್ಥಳೀಯ ಸರ್ಕಲ್ ರಾಷ್ಟ್ರೀಯ ಬೀಡಿ ಮಜದೂರ್ ಯೂನಿಯನಿನ ಆಶ್ರಯದಲ್ಲಿ ಮಜೂರರ ಮತ್ತು ರೈತರ ಮಹಾಸಭೆಯು ತಾ. 14ರಲ್ಲು ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಅಗರಿ ಲಕ್ಷ್ಮಪ್ಪ ರೈ, ಬಿ. ವಿ ಬಾಳಿಗ, ಕೆ. ಆರ್. ಆಚಾರ್, ಎಮ್. ರಮಾನಾಥ್, ಬಿ. ಜನಾರ್ಧನ ಶೆಟ್ಟಿ ಮೊದಲಾದವರು ಮಜೂರರ ಹಾಗೂ ರೈತರ ವಿಚಾರವಾಗಿ ಭಾಷಣವಿತ್ತರು. ಯೂನಿಯನಿನ ಕಾರ್ಯದರ್ಶಿ ಶ್ರೀ ಯು. ಎನ್. ಅಬ್ದುಲ್ ಖಾದರರು ಕಮ್ಯೂನಿಸ್ಟರ ನೀತಿ ಧೋರಣೆಯನ್ನು ಟೀಕಿಸಿ, ಅಂತ್ಯದಲ್ಲಿ ಧನ್ಯವಾದವಿತ್ತರು.

**ಯಡಾಡಿ ಮತ್ಯಾಡಿ—** ಸ್ಥಳೀಯ ಶಾಲಾ ವರ್ಧಂತಿ ಉತ್ಸವವು ತಾ. 14ರಲ್ಲಿ ಶ್ರೀ ಎಸ್. ಎಸ್. ಕೊಳ್ಕೆಬೈಲು, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರರು ಶಾಲಾ ವರದಿಯನ್ನೋದಿದರು. ಶ್ರೀಗಳಾದ ಎನ್. ಎಸ್. ಪರಮೇಶ್ವರಯ್ಯ ಮತ್ತು ಎಮ್. ಎಮ್. ಹೆಗ್ಡೆಯವರು ಕಾಲೋಚಿತ ಮಾತುಗಳನ್ನಾಡಿದರು. ಬಳಿಕ ಶಾಲಾ ಮಕ್ಕಳಿಂದ ವಿವಿಧ ಮನರಂಜನ ಕಾರ್ಯಕ್ರಮಗಳಾದುವು.

**ಮಣಿಪಾಲ—** ಗೀತಾ ಮಂದಿರದಲ್ಲಿ ತಾ. 15ರಲ್ಲು ದೈನಂದಿನ ಪೂಜೆ, ಭಜನೆಗಳಾದ ಬಳಿಕ ಶ್ರೀಮಾತೆ ಶಾರದಾ ದೇವಿಯವರ ಜನ್ಮದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿಯೇ ಗೀತಾ ಮಂದಿರದ ಸಂಸ್ಥಾಪಕ ಅಧ್ಯಕ್ಷ ದಿವಂಗತ ಶ್ರೀ ಉಪೇಂದ್ರ ಅನಂತ ಪೈಗಳ ಭಾವಚಿತ್ರ ಅನಾವರಣವನ್ನು ಮೆಡಿಕಲ್ ಕಾಲೇಜ್ ಪ್ರೊಫೆಸರ್ ಡಾ. ಆರ್. ಪಿ. ಕೊಪ್ಪಿಕರ್‌ರವರು ನೆರವೇರಿಸಿದರು. ಶ್ರೀಗಳಾದ ಆರ್. ಎಸ್. ಶಿಣೈ, ಯು. ಲ. ಶಿಣೈ, ಬಿ. ಶ್ಯಾಮರಾಯ ಶೆಟ್ಟಿ, ಡಿ. ಜೆ. ಗಡಿಯಾರ, ಜಿ. ಎ. ಪೈಯವರು ದಿವಂಗತ ಪೈಗಳ ಗುಣಗಾನಮಾಡಿದರು. ಸಭಾಧ್ಯಕ್ಷತೆ ವಹಿಸಿದ ಡಾ. ಗುಹಾರವರು ಮತ್ತು ಅವರ ಪತ್ನಿ ಶ್ರೀಮತಿಯವರ ಮಹಾತ್ಮೆಯನ್ನು ವಿವರಿಸಿದರು. ಮೆಡಿಕಲ್ ಕಾಲೇಜ್ ಮಣಿಪಾಲ ವಿಭಾಗದಿಂದ ಮಂಗಳೂರಿನ ಕ್ಲಿನಿಕಲ್ ವಿಭಾಗಕ್ಕೆ ತೆರಳಲಿರುವ ಡಾ. ಗುಹಾ ದಂಪತಿಗಳಿಗೆ ಗೀತಾಮಂದಿರದ ನೆನಪಿಗಾಗಿ ಗೀತೆಯ ಪುಸ್ತಕಗಳನ್ನು ಕೊಡಲಾಯಿತು. ಕಾರ್ಯದರ್ಶಿ ಶ್ರೀ ರಾಮದಾಸ ಶಿಣೈಯರು ವಂದನಾರ್ಪಣೆಮಾಡಿದರು.

---

## In the Court of the District Munsiff of Mangalore.

O. P. No. 212/53

In the matter of debts due to K. Raghunath Mallya (Deceased)

Mrs. K. Sanjivi Bai, Mallya, Widow of K. Raghunath Mallya ... Petitioner.

To

All whosoever it may concern:

Notice is hereby given that on the 10th day of December 1956, the abovenamed Petitioner has applied to this court for the grant of a Succession Certificate in her favour for collecting the debt due to K. Raghunath Mallya (decesed) who died intestate on 15—5—1950 and the said application will come up for hearing on the 24th day of January 1957 before the said court. Any person interested may appear before the said court on the said day at 11 O'clock A. M and oppose the grant thereof

/ By order of court /

*Sd.* M. Venkatraya Kamath

Advacate for Petitioner.

Mangalore 22—12—1956



ಅಣುವಿಜ್ಞಾನದ ಪ್ರಗತಿಗೆ "ಭಾರಜಲ" ಎಂಬುದು ಅತ್ಯವಶ್ಯ. ಭಾರತವು ಈಚೆಗೆ ಅಮೇರಿಕದಿಂದ ಇದನ್ನು ತರಿಸಿಕೊಂಡಿತು. ಆದರೆ ಬ್ರಿಟನಿನಲ್ಲಿ ಇದನ್ನು ಸ್ವತಃ ಉತ್ಪಾದಿಸಲಾಗುತ್ತದೆ. ಅಲ್ಲಿ ಹಾರ್ವೆಲಿನಲ್ಲಿ ಕಟ್ಟಲಾಗಿರುವ ಅಣುಶಕ್ತಿ ಮಂದಿರದಲ್ಲಿ ಈ ಚಿತ್ರದಲ್ಲಿ ತೋರುವ "ಡಿಡೊ" ಯಂತ್ರವನ್ನು ಸ್ಥಾಪಿಸಿದ್ದಾರೆ. ಭಾರಜಲವನ್ನು ತಯಾರಿಸುವ ಸೂತ್ರಕ್ಕೆ "ಡಿ ೨೦" ಎಂಬ ಸಂಕೇತವಿದೆ. ಆದುದರಿಂದ ಯಂತ್ರಕ್ಕೆ "ಡಿಡೋ" ಎಂಬ ಹೆಸರಾಯಿತು. ಇದನ್ನು ನಡೆಸಲು ಯುರೇನಿಯಂ ಅವಶ್ಯ. ಈ ಯಂತ್ರವು ಹತ್ತು ಮೆಗಾವಾಟುಗಳಷ್ಟು ಉಷ್ಣತೆಯನ್ನು ಕೊಡಬಲ್ಲುದು; ಅಲ್ಲದೆ ಪ್ರತಿ ಕ್ಷಣಕ್ಕೆ ಪ್ರತಿ ಚದರ ಸೆಂಟಿಮೀಟರಿನಲ್ಲಿ ೧೦ರ ೧೪ನೇ ಘಾತದಷ್ಟು ನ್ಯೂಟ್ರಾನುಗಳನ್ನು ನಿಯಂತ್ರಿಸಬಲ್ಲುದು.

**ಕಟಪಾಡಿ—** ಸ್ಥಳೀಯ ಎಸ್. ವಿ. ಎಸ್. ಹೈಸ್ಕೂಲಿನ ದ್ವಿತೀಯ ಮಂದಿರದ ಶಂಕುಸ್ಥಾಪನೆಯನ್ನು ತಾ. 19ರಲ್ಲು ಬೆಳಿಗ್ಗೆ ಶ್ರೀ ಗೋಕರ್ಣ ಪರ್ತಗಾಳಿ ಮಠಾಧೀಶ ಶ್ರೀ ದ್ವಾರಕನಾಥ ಶ್ರೀಪಾದಂಗಳವರು ನೆರವೇರಿಸಿದರು. ಕಾಶೀಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕೆ. ಎಸ್. ಶೆಣೈಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಕೆ. ಆರ್. ಶೆಣೈಯವರು ಸಂದೇಶಗಳನ್ನೋದಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ರಾಮದಾಸ ನಾಯಕರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಶ್ರೀಗಳಾದ ಕೆ. ಪಿ. ಪುರಾಣಿಕ, ಅನಂತ ಭಟ್ಟರು ಶುಭಕರ ಪರವಾಗಿ ಮಾತನಾಡಿದರು. ಉಭಯ ಶ್ರೀಗಳವರೂ ವಿದ್ಯಾದಾನವು ಎಂತಹ ರೀತಿಯಲ್ಲಿರಬೇಕೆಂದು ವಿವರಿಸಿದರು. ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಯು. ಯುಸ್. ನಾಯ್ಕರು ವಂದನೆಗಳನ್ನಿತ್ತರು.

**ಮೂಳೂರು—** ಹೊಸಮನೆ ಶ್ರೀ ಕೊಪ್ಪ ಪೂಜಾರಿಯವರು ಇದೇ ತಾ. 4ರಲ್ಲಿ ನಿಧನಹೊಂದಿದ್ದು, ತಾ. 17ರಲ್ಲು ಜರಗಿದ ಅವರ ಉತ್ತರಕ್ರಿಯೆ ದಿನ ಬಹು ಜನರಿಗೆ ಅನ್ನದಾನ ನಡೆಯಿತು. ಅಂದು ಸಂಜೆ ಬಿಲ್ಲವ ಸಮಾಜದ ಸಭೆ ಸೇರಿ ದಿವಂಗತರ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥನೆಯಾಯಿತು.

**ಪಡುಬಿದ್ರೆ—** ಭಾರತ ಸೇವಕ ಸಮಾಜದ ವಿದ್ಯಾರ್ಥಿಗಳ ಸೇವಾ ಶಿಬಿರದ ಉದ್ಘಾಟನೆಯನ್ನು ತಾ. 23ರಲ್ಲು ಪಡುಬಿದ್ರೆ ಬೋರ್ಡ್ ಹಾ. ಎ. ಶಾಲೆಯಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಕೆ. ಸೂರ್ಯನಾರಾಯಣ ರಾಯರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪಿ. ಶ್ರೀಪತಿ ಆಚಾರ್ಯರು ವಹಿಸಿದ್ದರು. ಶ್ರೀ ಮಂಜುನಾಥ ಪ್ರಭುಗಳು ಸ್ವಾಗತಿಸಿದರು. ಕ್ಯಾಂಪ್ ಚೀಫ್ ಆಫೀಸರ ಶ್ರೀ ಎಫ್. ದಾಂತಿಯವರು ಭಾರತ ಸೇವಕ ಸಮಾಜದ ಉದ್ದೇಶಗಳನ್ನು ವಿವರಿಸಿದರು. ಡಿಸ್ಟ್ರಿಕ್ಟ್ ಕ್ಯಾಂಪ್ ಕಮಿಟಿಯ ಉಪಾಧ್ಯಕ್ಷ ಶ್ರೀ ಎ. ಜೆ. ಆಳ್ವ, ಶ್ರೀಗಳಾದ ಎಚ್. ಸಂಜೀವ ರಾವ್, ಅಣ್ಣಾಜಿರಾವ್, ಶಿವಣ್ಣ ಶೆಟ್ಟಿ, ಪಿ. ಎಸ್. ಶೆಟ್ಟಿ ಮೊದಲಾದವರು ಕಾಲೋಚಿತ ಭಾಷಣವಿತ್ತರು. ಪಡುಬಿದ್ರೆ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಗೋಪಾಲ ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

**ದೇಲಂಪಾಡಿ—** ಇಲ್ಲಿಂದ ಹೊರಡಿಸಲ್ಪಡುತ್ತಿರುವ 'ವನಕುಸುಮ' ಹಸ್ತಲಿಖಿತ ಮಾಸಪತ್ರಿಕೆಯ ವಿಶೇಷಾಂಕವೊಂದು ಜನವರಿ ೨೬ರಂದು ಪ್ರಕಟವಾಗಲಿದೆ. ಕನ್ನಡ ನಾಡಿನ ಎಲ್ಲಾ ಲೇಖಕ ಲೇಖಕಿಯರೂ ತಮ್ಮ ಲೇಖನಗಳನ್ನಿತ್ತು ಸಹಕರಿಸಬೇಕಾಗಿ ಕೇಳಿಕೆ. ಜನವರಿ ೧೬ರ ಒಳಗೆ ಲೇಖನಗಳು ಕೆಳಗಿನ ವಿಳಾಸಕ್ಕೆ ತಲಪಬೇಕು.

ಸಂಪಾದಕ ಮಂಡಳಿ; "ವನಕುಸುಮ" ಹಸ್ತಲಿಖಿತ ಮಾಸಪತ್ರಿಕೆ: ದೇಲಂಪಾಡಿ ಕಾಸರಗೋಡು ತಾಲೂಕು.

**ಅಚ್ಲಾಡಿ—** ಇದೇ ತಾ. ೩೪ರಲ್ಲು ಬೆಳಿಗ್ಗೆ ಅಚ್ಲಾಡಿ ಭಂಡಾರ್ ಅಣ್ಣಯ್ಯ ಸೆಟ್ಟರು ತನ್ನ ೭೬ನೆ ವರ್ಷಪ್ರಾಯದಲ್ಲಿ ತನ್ನ ಸ್ವಂತ ಮನೆಯಲ್ಲಿ ನಿಧನ ಹೊಂದಿದರು. ದಿವಂಗತರು ಉಡುಪಿ ಹರಿಜನ ಡಿಸ್ಟ್ರಿಕ್ಟ ಸೇವಕ ಶ್ರೀ ಡಿ. ಬಿ. ಅಂಕಯ್ಯ ಸೆಟ್ಟರ ತಂದೆಯವರು.

**ತಲ್ಲೂರು—** ಸ್ಥಳೀಯ ಕೇಂದ್ರದ ಅಧ್ಯಾಪಕ ಸಂಘದ ವಾರ್ಷಿಕೋತ್ಸವವು ತಾ. 21ರಲ್ಲಿ ಕೋಟೇಶ್ವರ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ಸುಬ್ರಾಯ ಉಪಾಳರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಸಂಘದ ಕಾರ್ಯದರ್ಶಿ ಶ್ರೀ ವೆ. ಸಖಾರಾಮ ರಾಯರು ವರದಿಯನ್ನೋದಿದರು. ಕುಂದಾಪುರ ಶ್ರೇಣಿಯ ಕಿರಿಯ ಪರೀಕ್ಷಾಧಿಕಾರಿ ಶ್ರೀ ಪಿ. ಕೃಷ್ಣರಾಯರು ಅಧ್ಯಕ್ಷರ ಪರಿಚಯಭಾಷಣಮಾಡಿದರು. ಹಿರಿಯ ಪರೀಕ್ಷಾಧಿಕಾರಿ ಶ್ರೀ ಎಲ್. ಬಿ. ವೆಂಕಟ್ರಮಣ ರಾವರು ಹಿತೋಕ್ತಿಗಳನ್ನಾಡಿದರು. ಮಕ್ಕಳ ಪಿಸೋಪಾವಳಿ, ಅಧ್ಯಾಪಕರಿಂದ "ಧನಪಿಶಾಚಿ" ನಾಟಕಾಭಿನಯ ಇತ್ಯಾದಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

**ಮಂಗಳೂರಲ್ಲಿ ಚಿತ್ರಕಲಾ ಪ್ರದರ್ಶನ—** ಮದ್ರಾಸಿನ ಸರಕಾರಿ ಚಿತ್ರಕಲಾ ಮತ್ತು ಕುಶಲಕಲೆಗಳ ಶಾಲೆಯ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳಿಂದ ಬರೆಯಲ್ಪಟ್ಟ ನೂರಾರು ಚಿತ್ರಗಳ ಪ್ರದರ್ಶನವನ್ನು ತಾ. 23ರಲ್ಲು ಶ್ರೀ ಕೆ. ಶಿವರಾಮ ಕಾರಂತರು ಉದ್ಘಾಟಿಸಿದರು. ಭಾರತ ರಷ್ಯಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ. ಎಮ್. ಉಪೇಂದ್ರ ರಾಯರು ಸ್ವಾಗತ ಮಾತುಗಳನ್ನಾಡಿದರು. ಜತೆಕಾರ್ಯದರ್ಶಿ ಡಾ. ಎಸ್. ಸತ್ಯಶಂಕರ ನವರು ಕಲಾವಿದರಾದ ಶ್ರೀ ಟಿ. ಕೃಷ್ಣರಾವ್ ಮತ್ತು ಶ್ರೀ ಎಚ್. ಲೋಹಿತಾಕ್ಷ ರಾಯರ ಪರಿಚಯ ಮಾಡಿಕೊಟ್ಟರು.

ಶ್ರೀ ಕಾರಂತರು ತಮ್ಮ ಉದ್ಘಾಟನಾ ಭಾಷಣದಲ್ಲಿ ಓರ್ವ ಕವಿಯ, ಸಾಹಿತಿಯ, ಕಲಾಗಾರನ ಮನೋಭಾವದ ವಿಸ್ತರಣೆಯೇ ಸಂಗೀತ, ಕತೆ, ಚಿತ್ರಗಳ ರೂಪದಲ್ಲಿ ಸೃಷ್ಟಿಸಲ್ಪಡುತ್ತದೆಂದೂ ಚಿತ್ರಕಾರನೊಬ್ಬನಿಗೆ ಒಂದು ವಸ್ತುವನ್ನಾ, ಒಂದು ದೃಶ್ಯವನ್ನೂ ನೋಡುವಾಗ ಯಾವ ಭಾವನೆ ಹುಟ್ಟುತ್ತದೋ ಅದನ್ನು ಆತ ಚಿತ್ರದಲ್ಲಿ ಬಿಡಿಸುತ್ತಾನೆಂದೂ ಒಂದು ಚಿತ್ರದಲ್ಲಿ, ಸಾಹಿತ್ಯದಲ್ಲಿ ಅವನ್ನು ಸೃಷ್ಟಿಸಿದವನ ಮನೋಭಾವವನ್ನು ಅರಿಯಲು ತಾವು ಪ್ರಯತ್ನಿಸಬೇಕೆಂದೂ ಹಾಗಾದಲ್ಲಿ ಮಾತ್ರ ನಮ್ಮ ಕಲೆಯ ಅಭಿವೃದ್ಧಿಯಾದೀತೆಂದೂ ಮುಖ್ಯವಾಗಿ ಹೇಳಿದರು. ಜತೆಕಾರ್ಯದರ್ಶಿ ಡಾ. ಎಚ್. ಎನ್. ಶಾಸ್ತ್ರಿಗಳು ಧನ್ಯವಾದವಿತ್ತರು. ಪ್ರದರ್ಶನವು ಮೂರು ದಿವಸ ತನಕ ಉಚಿತ ಪ್ರವೇಶದೊಡನೆ ನಡೆಯಿತು.

# ಮಂಗಳೂರು

**ಔದ್ಯೋಗಿಕ ವ್ಯಾಸಂಗ ಗೋಷ್ಠಿ** ಮಂಗಳೂರು ಮೆನೇಜ್‌ಮೆಂಟ್ ಎಸೋಸಿಯೇಶನಿನ ಆಶ್ರಯದಲ್ಲಿ ತಾ. 17 ಮತ್ತು 19ರಲ್ಲಿ ಶ್ರೀ ಕೆ. ಪಿ. ಜೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಔದ್ಯೋಗಿಕ ವ್ಯಾಸಂಗ ಗೋಷ್ಠಿ ನಡೆಯಿತು. ಅಮೇರಿಕಾದಲ್ಲಿ ಕೈಗಾರಿಕಾ ಉತ್ಪನ್ನಗಳ ಮಾರಾಟವಾದ ಹಣದಲ್ಲಿ ನೇಕಡಾ 5ರಷ್ಟನ್ನು ಸಂಶೋಧನೆಗಾಗಿಯೇ ವಿನಿಯೋಗಿಸಲಾಗುತ್ತದೆ. ಆದರೆ ಭಾರತದಲ್ಲಿ ನೇಕಡಾ 1ರಷ್ಟು ಕೂಡಾ ಸಂಶೋಧನೆಗಾಗಿ ವಿನಿಯೋಗಿಸಲಾಗುವುದಿಲ್ಲ. ಹಿಂದು ಕೈಗಾರಿಕೆಯು ಅಭಿವೃದ್ಧಿಯಾಗಬೇಕಾದರೆ ಸಂಶೋಧನೆಯ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಅಮೇರಿಕದ ತಾಂತ್ರಿಕ ಸಹಕಾರ ಸಂಸ್ಥೆಯ ಸಲಹೆಗಾರರಾದ ಮಿ| ಇ. ಓಸ್ಟ್ರಾನ್ ರವರು ತಮ್ಮ ಭಾಷಣದಲ್ಲಿ ಹೇಳಿದರು. ವ್ಯಾಸಂಗ ಗೋಷ್ಠಿಯನ್ನೇರ್ಪಡಿಸಿದ್ದ ಪ್ರಾದೇಶಿಕ ಸಲಹೆಗಾರರಾದ ಮಿ| ವಿಲ್ಲಿಯಂ ವಾಕ್‌ರವರು ಆದರೀತಾ ಸಂಬಂಧದ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಮೆನೇಜ್‌ಮೆಂಟ್ ಎಸೋಸಿಯೇಶನಿಗೆ ಕೊಟ್ಟರು.

**ಕನ್ನಡ ಕಾದಂಬರಿಗಳ ವೈವಿಧ್ಯ-** ಕಾರ್ನಾಡ ಸದಾಶಿವರಾವ್ ಸೆಂಟ್ರಲ್ ಲ್ಯಾಬ್ರರಿಯಲ್ಲಿ ತಾ. 17ರಲ್ಲಿ ಶ್ರೀ ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿತು. ಕನ್ನಡ ಕಾದಂಬರಿ ವೈವಿಧ್ಯಗಳ ಕುರಿತು ಶ್ರೀ ಸೇವ ನಮಿರಾಜ ಮಲ್ಲರು ಮಾತನಾಡುತ್ತಾ, ಈಗ ಕಾದಂಬರಿಗಳೂ ಕಾದಂಬರಿಕಾರರೂ ಹಲವರು ಇರುವುದಾದರೂ ಕನ್ನಡ ಕಾದಂಬರಿಕಾರರು ವಿವಿಧ ವಿಷಯಗಳ ಮೇಲೆ ಕಾದಂಬರಿ ಬರೆಯುವುದರಲ್ಲಿ ಪ್ರಗತಿಹೊಂದಿಲ್ಲ ಎಂದು ಮುಂತಾಗಿ ಹೇಳಿದರು. ಆರಂಭದಲ್ಲಿ ಲೈಬ್ರೇರಿಯನ್ ಶ್ರೀ ಕೆ ಜಿ. ಲಕ್ಷ್ಮೀನಾರಾಯಣರು ಸ್ವಾಗತ ಮಾತುಗಳನ್ನಾಡಿದರು. ಸಭಾಧ್ಯಕ್ಷರು ಮಾತನಾಡುತ್ತಾ, ಕಾದಂಬರಿಕಾರರು ತಮಗೆ ಹೆಚ್ಚಿನ ಅನುಭವವಿರುವ ಕ್ಷೇತ್ರವನ್ನೇ ಪ್ರಧಾನ ಮೂಲವಾಗಿಟ್ಟುಕೊಂಡು ತಮ್ಮ ಕೃತಿಯನ್ನು ರಚಿಸಬೇಕೆಂದು ಸೂಚಿಸಿದರು.

**ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿನ ಮಹಾಸಭೆಯು** ತಾ. 16ರಲ್ಲಿ ಶ್ರೀ. ಎ. ಎಮ್. ಮೊಂತೇರೋರವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಟೋರುಗಳ ಕಡೆಯಿಂದ ಶ್ರೀಗಳಾದ ಬಿ. ಉಂಡಯ್ಯ ಹೆಗ್ಡೆ ಮತ್ತು ಕೆ. ವೆಂಕಪ್ಪ ಹೆಗ್ಡೆರೂ ಮಾರ್ಕೆಟಿಂಗ್ ಸೊಸೈಟಿಗಳ ಪರವಾಗಿ ಶ್ರೀ ರಾಮಕೃಷ್ಣನವರೂ, ಸಂಘಕ್ಕೆ ಸೇರಿದ ಸೊಸೈಟಿಗಳ ಪರವಾಗಿ ಶ್ರೀ ಕಾಂತಪ್ಪನವರೂ, ಡಿಪೋಜಿಟರ್‌ರ ಪರವಾಗಿ ಶ್ರೀ ಗಳಾದ ಎ. ಎಮ್. ಮೊಂತೇರೊ ಮತ್ತು ಎಮ್. ಎನ್. ಚೌಟರ ಪಾಲು ಬಂಡವಾಳಗಾರರ ಪ್ರತಿನಿಧಿಗಳಾಗಿ ಶ್ರೀಯುತ ಗೊನ್ಸಾಲ್ವಿಸ್, ಬಿ. ಬಿ. ಸೆಟ್ಟಿ ಮತ್ತು ಎಫ್. ಎ. ಮೂರ್‌ರವರು ಡೈರೆಕ್ಟರರಾಗಿ ಬಹುಮತದಿಂದ ಆರಿಸಲ್ಪಟ್ಟರು.

**ಜಿಲ್ಲೆಯಲ್ಲಿ ಮತದಾನ ಕ್ಷೇತ್ರಗಳು ಮತ್ತು ಸ್ಥಾನಗಳು-** ಮೈಸೂರು ಎಸೆಂಬ್ಲಿಗೆ ಪುತ್ತೂರಿಗೆ 2 ಸ್ಥಾನ; ಬೆಳ್ತಂಗಡಿಗೆ 1 ಸ್ಥಾನ; ಪಾಣೆಮಂಗಳೂರು ಮತ್ತು ಸುಳ್ಯ ಫಿರ್ಕಗಳಿಗೆ 1 ಸ್ಥಾನ; ಮಂಗಳೂರು ಫಿರ್ಕಕ್ಕೆ 1 ಸ್ಥಾನ ಮತ್ತು ಮುನಿಸಿಪಾಲಿಟಿಯ ಕೆಲವು ವಾರ್ಡುಗಳಿಗೆ 1 ಸ್ಥಾನ—ಹೀಗೆ ಒಟ್ಟು 6 ಸ್ಥಾನ ಈ ಜಿಲ್ಲೆಯ ದಕ್ಷಿಣಭಾಗಕ್ಕೆ-ಅಲ್ಲದೆ ಇದೇ ದಕ್ಷಿಣ ಭಾಗಕ್ಕಿರುವ ಲೋಕಸಭಾ ಮತದಾರ ಕ್ಷೇತ್ರವೆಂದರೆ ಪುತ್ತೂರು, ಬೆಳ್ತಂಗಡಿ ತಾಲೂಕು ಮತ್ತು ಕೊಡಗು.

**ಮದ್ರಾಸ್ ಆದಾಯತೆರಿಗೆ ಕಮಿಶನರ್**—ಶ್ರೀ ಪ್ಯಾರೇಲಾಲ್ ಅಗರವಾಲರು ತಾ. 19ರಂದು ಸಂಜೆ ಸ್ಥಳೀಯ ವಾಣಿಜ್ಯ ಸಂಘದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ನಾವು ಸರಕಾರಕ್ಕೆ ತೆರುವ ತೆರಿಗೆಯು ಎಲ್ಲಿಗೂ ಹೋಗದೆ ಅದು ನಮ್ಮ ಪ್ರಯೋಜನಕ್ಕಾಗಿಯೇ ವಿನಿಯೋಗಿಸಲಾಗುತ್ತಿದೆ. ಆದುದರಿಂದ ಜನರು ತೆರಿಗೆಗಳನ್ನು ನಡ್ಡಾಯಕ್ಕೊಳಗಾಗಿ ತೆರದೆ ತಮ್ಮ ಸ್ವಂತ ಇಚ್ಛೆಯಿಂದ ತೆರಬೇಕು. ಯಾರು ತೆರಿಗೆಗಳನ್ನು ಸರಿಯಾಗಿ ತೆರುವುದಿಲ್ಲವೋ, ಅವರು ಸಮಾಜ ಘಾತುಕರಾಗಿದ್ದಾರೆ. ಅಂತಹ ಸಮಾಜ ದ್ರೋಹಿಗಳನ್ನು ಹಿಡಿದುಕೊಡುವುದರಲ್ಲಿ ನಾಗರಿಕರು ಸಂಪೂರ್ಣ ಸಹಕಾರವಿತ್ತರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಮ್ಮ ಕಾರ್ಯವನ್ನು ನಿರ್ವಹಿಸಲು ಅನುಕೂಲವಾಗುವುದೆಂದು ಹೇಳಿದರು ಶ್ರೀ ಕೆ ಶ್ರೀನಿವಾಸ ಶಿಣೈಯವರು ಸಭಾಧ್ಯಕ್ಷತೆ ವಹಿಸಿದ್ದರು.

ಶ್ರೀ ವಿ. ಎಸ್. ಕುಡ್ವರು ಸ್ವಾಗತ ಭಾಷಣ ಮಾಡುತ್ತಾ, ಆಯವ್ಯಯದ ರಿಟರ್ನ್ಸ್‌ಗಳನ್ನು ಪರಿಶೀಲಿಸಿ ಸರಿಯಾದ ರೀತಿಯಲ್ಲಿ ತೆರಿಗೆ ವಿಧಿಸುವ ಕಡೆಗೆ ಅಧಿಕಾರಿಗಳು ಗಮನವಹಿಸುವುದು ಅಗತ್ಯವಿದೆ ಎಂದು ಹೇಳಿದರು. ಬಳಿಕ ಕೆಲವು ಸದಸ್ಯರು ಆದಾಯ ತೆರಿಗೆಯ ಕೆಲವು ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದುದಕ್ಕೆ ಕಮಿಶನರು ಸದುತ್ತರವಿತ್ತರು. ಶ್ರೀ ಎಮ್. ರಾಘವೇಂದ್ರ ಪೈಗಳು ಧನ್ಯವಾದಗಳನ್ನಿತ್ತರು. ಸಭೆಯಲ್ಲಿ ಕೊಯಮುತ್ತೂರಿನ ಇನ್ಸ್‌ಪೆಕ್ಟಿಂಗ್ ಅಸಿಸ್ಟೆಂಟ್ ಕಮಿಶನರ್ ಕೆ. ಎಮ್. ಎಸ್. ಸೆಟ್ಟಿಯವರೂ ಸ್ಥಳೀಯ ಆದಾಯ ತೆರಿಗೆಯ ಅಧಿಕಾರಿಗಳೂ ಹಾಜರಿದ್ದರು.

**ದ. ಕ. ಜಿಲ್ಲಾ ಬೋರ್ಡಿನ ವಿಶೇಷಸಭೆಯು** ತಾ. 17ರಲ್ಲಿ ಅಧ್ಯಕ್ಷರಾದ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡಿನ ಸಾರ್ವಜನಿಕ ಆರೋಗ್ಯ ಸ್ಥಾಯೀ ಸಮಿತಿಯ ಸ್ಥಾನಕ್ಕೆ ಶ್ರೀ ಆರ್. ಕೆ. ಸಂಜೀವ ರಾಯರನ್ನೂ, ಶಿಕ್ಷಣ ಸ್ಥಾಯೀ ಸಮಿತಿಯ ಎರಡು ಸ್ಥಾನಗಳಿಗೆ ಶ್ರೀಗಳಾದ ಬಿ. ಎಸ್. ಭಾಸ್ಕರ ಪೈ ಮತ್ತು ಎ. ಲಕ್ಷ್ಮೀನಾರಾಯಣ ಆಳ್ವರನ್ನೂ ಸದಸ್ಯರಾಗಿ ಆರಿಸಲಾಯಿತು. ನಂತರ ಜರಗಿದ ಸಾಮಾನ್ಯಸಭೆಯಲ್ಲಿ ಶ್ರೀಮತಿ ಕಮಲಾ ಬಾಯಿಯವರ ಮುಂಜಸಿಕೆಯನ್ನು ಊರ್ಜಿತಗೊಳಿಸಲಾಯಿತು. ಜಿಲ್ಲೆಯಲ್ಲಿ ಸರಕಾರವು ನಡೆಸುತ್ತಿರುವ ಮಲೇರಿಯಾ ನಿರೋಧಕಾರ್ಯಕ್ಕೆ ಮದಕೇಂದ್ರಸ್ಥಾನವಾದಮುಸ್ಲೊರು ಟೌನಿಗೂ ಯೋಜನೆಯನ್ನು ವಿಸ್ತರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯ ಪಾಸಾಯಿತು. ಕಲ್ಯಾಣಪುರ-ಕೆಮ್ಮಣ್ಣು ರಸ್ತೆಯ ಸ್ಪೆಶಲ್ ರಿಪೇರಿಬಗ್ಗೆ ರೂ. 9,900/-; ಮುಲ್ಕೀರಿಯಾ ಆರ್ಗಪದವು ರಸ್ತೆಯ ಪುತ್ತೂರಿನ ವಿಭಾಗದ ರಚನೆಗೆ ರೂ. 19,500/-, ಪಾಣೆಮಂಗಳೂರು ಪಾತೂರುರಸ್ತೆ ಸುಧಾರಣೆಗೆ ರೂ 5000/-, ಮಂಗಳೂರು ಕಿನ್ನಿಗೋಳಿ ರಸ್ತೆಯ ಕೆಲವಂಶಗಳ ಸ್ಪೆಶಲ್ ರಿಪೇರಿ ಬಗೆ ಒಟ್ಟು ರೂ. 11490/-, ಕೋಟೇಶ್ವರದ ಬೋರ್ಡು ಹ್ಯಾಸ್ಕೂಲಿಗೆ ಮೇಜು ಕುರ್ಚಿ ಮೊದಲಾದ ಸಲಕರಣೆಗಳ ಸರಬರಾಯಿಗಾಗಿ ರೂ. 917/-, ಹಿರಿಯಡ್ಕ ಬೋರ್ಡು ಹೈಸ್ಕೂಲಿನ ಪುಸ್ತಕಾಲಯಕ್ಕೆ ಪುಸ್ತಕಗಳನ್ನೊದಗಿಸಲು ರೂ. 725-4-0, ಬೋರ್ಡಿನ ಕೆಲ ನೌಕರರಿಗೆ ಸಮವಸ್ತ್ರ ಒದಗಿಸಲೂ ರೂ. 8600/-, ಕಾರ್ಕಳ ಬೋರ್ಡು ಹೈಸ್ಕೂಲಿನ ಸೆಕ್ರೆಟೇರಿಯಲ್ ಕೋರ್ಸನ್ನು ವಿಭಜಿತ ಪಕ್ಷವಾಗಿ ನಡೆಸಲು ರೂ. 6950/-, ಉಪಕರಣಗಳ ಬಗ್ಗೆ ಸೆಂಕ್ಷನ್ ಮಾಡಲಾಯಿತು. ಹೆಮ್ಮಾಡಿ ಶಾಲೆಗೆ 15 ಸೆಂಟ್ಸ್ ಸ್ಥಳ ದಾನವಿತ್ತ ಶ್ರೀಮತಿ ರುಕ್ಮಿಣಿ ಅಮ್ಮನವರಿಗೆ ಕೃತಜ್ಞತೆ ಸಲ್ಲಿಸಲಾಯಿತು. 1957ನೆ ಜನವರಿಯಲ್ಲಿ ದ. ಕ. ಜಿಲ್ಲೆಯ ಆರು ಕೇಂದ್ರಗಳಲ್ಲಿ ಧರ್ಮಾರ್ಥ ನೇತ್ರ ಚಿಕಿತ್ಸಾ ವ್ಯವಸ್ಥೆಯನ್ನು ಮಾಡ್ಡ ಶ್ರೀ ಡಾ. ಎಮ್. ಸಿ. ಮೋದಿಯವರು ಕೈಕೊಳ್ಳಲಿದ್ದು ಆ ಬಗ್ಗೆ ಜಿಲ್ಲಾ ಬೋರ್ಡು ರೂ. 1000 ಸಹಾಯಧನ ಕೊಡಲು ನಿರ್ಧರಿಸಿತು.

**ಮೈಸೂರು ರಾಜ್ಯದ ಸಹಕಾರಿ ರಿಜಿಸ್ಟ್ರಾರ್ ಶ್ರೀ ಬಿ. ಎ. ಪಟೇಲ್**ರವರು ತಾ. 15ರಲ್ಲಿ ಮಂಗಳೂರಿಗೆ ಆಗಮಿಸಿ, ಸಹಕಾರಿ ಇಲಾಖೆಯ ಅಧಿಕಾರಿಗಳನ್ನೂ, ಸಹಕಾರಿ ಬೇಂಕು, ಕೇಂದ್ರ ಸರಬರಾಯಿ ಮತ್ತು ಮಾರಾಟ ಸಂಘ, ಕೃಷಿಕರ ಮಾರಾಟ ಸಂಘ, ಬೆಳುವಾಯಿಯ ಸಹಕಾರಿ ರೂರಲ್ ಬೇಂಕು ಮುಂತಾದ ಸಂಸ್ಥೆಗಳಿಗೆ ಭೇಟಿಯಿತ್ತರು.

**ಮುಂಬರುವ ಮಹಾ ಚುನಾವಣೆಗೆ ದ. ಕ. ಜಿಲ್ಲೆಯು—** ಈ ಕೆಳಗಿನವರನ್ನು ನಿಲ್ಲಿಸಲು ಕೆ. ಪಿ. ಸಿ. ಸಿ. ಪಾರ್ಲಿಮೆಂಟರಿ ಬೋರ್ಡು ನಿರ್ಧರಿಸಿಯದೆ ಎಂದು ತಿಳಿದುಬರುತ್ತದೆ:- **ಎಸೆಂಬ್ಲಿ ಸ್ಥಾನಗಳಿಗೆ ಬೈಂದೂರು:** ಶ್ರೀ ವೈ. ಮಂಜಯ್ಯ ಸೆಟ್ಟಿ. **ಕುಂದಾಪುರ** ಶ್ರೀ ಕೆ. ಎಸ್. ಎನ್. ಅಡಿಗ **ಬ್ರಹ್ಮಾವರ:** ಶ್ರೀ ಜಗಜ್ಜೀವನ ದಾಸ ಸೆಟ್ಟಿ. **ಉಡುಪಿ:** ಶ್ರೀಮತಿ ಆಸುಸಿಯಾ ಸೆಟ್ಟಿ. **ಕಾಪು:** ಶ್ರೀ ಎಫ್. ಎಕ್ಸ್. ಡಿ. ಪಿಂಟೋ. **ಮೂಲ್ಕಿ:** ಶ್ರೀ ಬಿ. ಆರ್. ಕರ್ಕೇರ. **ಕಾರ್ಕಳ:** ಶ್ರೀ ಕೆ. ಕೆ. ಹೆಗ್ಡೆ. **ಮಂಗಳೂರು:** (ಉತ್ತರ): ಶ್ರೀ ಬಿ. ವೈಕುಂಠ ಬಾಳಿಗ. **ಪಾಣೆಮಂಗಳೂರು:** ಡಾ. ಕೆ. ಎಸ್. ಆಳ್ವ **ಬೆಳ್ತಂಗಡಿ:** ಶ್ರೀ ರತ್ನವರ್ಮ ಹೆಗ್ಗಡೆ **ಪುತ್ತೂರು:** ಶ್ರೀ ಬಿ. ವೆಂಕಟರಮಣ ಗೌಡ. **ಲೋಕಸಭಾಸ್ಥಾನಗಳಿಗೆ:** ದ. ಕ. ಜಿಲ್ಲೆಯ **ಉತ್ತರ ವಿಭಾಗಕ್ಕೆ** ಶ್ರೀ ಯು ಎಸ್ ಮಲ್ಯ. **ದಕ್ಷಿಣವಿಭಾಗಕ್ಕೆ:** ಶ್ರೀ ಕೆ. ಆರ್. ಆಚಾರ್. ಹಿರಿಯ ಶ್ರೀ ಎ. ಬಿ. ಸೆಟ್ಟರೂ ಕಿರಿಯ ಶ್ರೀ ಟಿ. ಎ. ಪೈಗಳೂ ಮಹಾ ಚುನಾವಣೆಗೆ ನಿಲ್ಲುವುದಿಲ್ಲ ವೆಂಬ ವಾರ್ತೆಯು ಜನಸಾಮಾನ್ಯರಲ್ಲೂ ಸಿಪೇ ದಾಶ್ಚರ್ಯವನ್ನುಂಟುಮಾಡಿದೆ.

---

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ, ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

---

## ಕಾಂಗ್ರೇಸಿನ ಚರಿತ್ರೆ

(೪ನೇ ಪುಟದಿಂದ)

ಯುವ ವಿಧಾನದ ಪರಿಶೀಲನೆಗಾಗಿ ಆಂಗ್ಲ ಮಂತ್ರಿ ತ್ರಯರ ನಿಯೋಗವೊಂದು ಭಾರತಕ್ಕೆ ಬಂದು, ನವ ಶಾಸನವನ್ನು ತಯಾರಿಸಿತು. ೩೮೯ ಸದಸ್ಯರಿದ್ದ ಘಟನಾ ಸಮಿತಿಯೊಂದರ ಸ್ಥಾಪನೆಯಾಗಿ, ಪಂಡಿತ ಜವಾಹರಲಾಲ ನೆಹರೂರವರ ಪ್ರಧಾನಿತ್ವದಲ್ಲಿ ರಾಷ್ಟ್ರೀಯ ಸರಕಾರದ ನಿರ್ಮಾಣವಾಯಿತು. ಲಾರ್ಡ್ ಮೌಂಟ ಬೇಟನರು ಭಾರತಕ್ಕೆ ರಾಜ ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟರು. ಜಿನ್ನಾರವರ ಜಾತೀಯತಾ ಧೋರಣೆಯಿಂದ ಭಾರತದ ವಿಭಜನೆ ಸೂಚಿತವಾಯಿತು. ಉಪಾಯಾಂತರವಿಲ್ಲದೆ ರಾಷ್ಟ್ರಸಭೆಯು ಈ ಯೋಜನೆಗೆ ಒಪ್ಪಲೇಬೇಕಾಯಿತು. ಅಂತೂ ೧೯೪೭ರ ಅಗಸ್ಟ್ ೧೫ ರಂದು ಭರತಖಂಡವು ಸ್ವತಂತ್ರವಾಯಿತು. ಭಾರತದ ಪಿತಾಮಹರು ಅಂದು (೧೯೫೦) ಗುಡುಗಿದ ರಾಷ್ಟ್ರ ಸಭೆಯ ಉದ್ದೇಶ ನೆರವೇರಿತು. ಆ ಮೇಲೆ ೧೯೫೦ರ ಜನವರಿ ೨೬ರಂದು ಭಾರತವು ಪ್ರಜಾರಾಜ್ಯವಾಯಿತು. ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರಪತಿಯಾದರು.

ಸ್ಥಾಪಿತವಾದಂದಿನಿಂದಲೂ ದೇಶಸೇವೆಯೇ ತನ್ನ ಮುಖ್ಯೋದ್ದೇಶವೆಂದು ಸಾರುತ್ತ ಬಂದ ರಾಷ್ಟ್ರ ಸಭೆಯು ಈಗ ದೇಶದಲ್ಲಿ ತನ್ನ ಸರಕಾರವನ್ನು ಸ್ಥಾಪಿಸಿ ರಾಷ್ಟ್ರಕ್ಕೆ ತನ್ನ ಶಕ್ತಿಮೀರಿ ಸೇವೆ ಸಲ್ಲಿಸುತ್ತಲಿದೆ. ಮುಂಬರುವ ಚುನಾವಣೆಯಲ್ಲೂ ರಾಷ್ಟ್ರಸಭೆ (ನೇಶನಲ್ ಕೊಂಗ್ರೆಸ್)ಯೇ ವಿಜಯಿಯಾದಲ್ಲಿ, ಈ ಸಂಸ್ಥೆಯಿಂದ ನಾವಿನ್ನೂ ಹೆಚ್ಚಿನ ಜನಸೇವೆಯನ್ನು ನಿರೀಕ್ಷಿಸಬಹುದು. ರಾಷ್ಟ್ರಸಭೆಯು ಸ್ಥಾಪನೆಯ ದಿನವಾದ ದಶಂಬರ್ ೨೮ರಂದು, ಅದರ ಇತಿಹಾಸವನ್ನು ಈ ಬರಹವು ವಿವರಿಸುತ್ತದೆ.

—ಎಮ್. ರಘುನಂದನ ರಾವ್, ತಲ್ಲೂರು.


98 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು




ಪಂ| A. R. ಅಯ್ಯಂಗಾರ್

**ಸಂತಾನ ಸಿಂಧೂರ** (ಸ್ತ್ರೀಯರಿಗೆ; ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ; ಗುಳಿಗೆ)

ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸುತ್ತದೆ.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ವೀರ್ಯಾಣುಗಳನ್ನು ವೃದ್ಧಿಸಿ, ನಪುಂಸಕತೆಯನ್ನು ನಾಮಾವಶೇಷ ಮಾಡುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ ತಾಯ್ತಂದೆಗಳಾಗಿದ್ದಾರೆ.
ಹೊಸ ಕ್ಯಾಟಲಾಗು, ಔಷಧದ ಬೆಲೆ ಇತ್ಯಾದಿಗಳಿಗೆ 3 ಆಣೆ ಸ್ಟಾಂಪು ಕಳಿಸಿರಿ

**ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., (ನ ಯು.)**
618 ಸಂತಾನ ಸಿಂಧೂರ ಸದನ (ಪೋಸ್ಟ್ ಬಾಕ್ಸ್ 9, ಮೈಸೂರು S. I.


## ಗವರ್ನಮೆಂಟ್ ಆಫ್ ಮೈಸೂರು
## ಇಲೆಕ್ಟ್ರಿಕಲ್ ಶಾಖೆ
### ಪ್ರಕಟಣೆ

ದ. ಕ. ಜಿಲ್ಲೆ ಮತ್ತು ಕೊಳ್ಳೆಗಾಲು ಪ್ರದೇಶಗಳಲ್ಲಿ ಇಲೆಕ್ಟ್ರಿಸಿಟಿಯನ್ನು ಉಪಯೋಗಿಸುವ ಜನತೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಇಲೆಕ್ಟ್ರಿಸಿಟಿ ಉಪಯೋಗದ ಬಗ್ಗೆ ವಯರಿಂಗ್ ಇತ್ಯಾದಿ ಕಾರ್ಯವನ್ನು ಲೈಸೆನ್ಸು ಪಡೆದ ಇಲೆಕ್ಟ್ರಿಕಲ್ ಕಂಟ್ರಾಕ್ಟರರಿಂದಲೇ ಮಾಡಿಸತಕ್ಕದ್ದು. ಇಲ್ಲವಾದರೆ ಇಲೆಕ್ಟ್ರಿಕಲ್ ಇಲಾಖೆಯ ನೆರವು ದೊರೆಯಲಾರದು. ಲೈಸೆನ್ಸು ಪಡೆಯಲು ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಮತ್ತು ವಯರ್‌ಮೆನರು ಮೈಸೂರು ರಾಜ್ಯದಲ್ಲಿರುವ ಕ್ರಮ ನಿಯಮಗಳಿಗನುಸಾರವಾಗಿ ಕೂಡಲೇ ಲೈಸೆನ್ಸು ಪಡೆಕೊಳ್ಳತಕ್ಕದ್ದು. ಇಲೆಕ್ಟ್ರಿಕಲ್ ಸುಪರ್‌ವೈಜರರು ಲೈಸೆನ್ಸು ಬಗ್ಗೆ ವಯರ್‌ಮೆನರು ಪರ್ಮಿಟು ಬಗ್ಗೆ ಬೇಕಾಗುವ ಮಾಹಿತಿಯನ್ನು ಸಾಕಷ್ಟು ಅಂಚೆ ಚೀಟನ್ನು 'ಆಫೀಸ್ ಒಫ್ ದಿ ಸೆಕ್ರಿಟರಿ' ಲೈಸೆನ್ಸ್ ಇಶ್ಯೂಯಿಂಗ್ ಕಮಿಟಿ, ಬೆಂಗಳೂರು, ಇವರಿಗೆ ಕಳುಹಿಸಿ ಪಡೆಯಬಹುದು. ಇಲೆಕ್ಟ್ರಿಕಲ್ ಕಂಟ್ರಾಕ್ಟರರು ಲೈಸೆನ್ಸು ಬಗ್ಗೆ ಮಾಡುವ ಅರ್ಜಿ ದ್ವಿಪ್ರತಿಯಲ್ಲಿ ಒಂದನ್ನು ಸೆಕ್ರಿಟರಿ, ಲೈಸೆನ್ಸು ಇಶ್ಯೂಯಿಂಗ್ ಕಮಿಟಿ, ಇಲೆಕ್ಟ್ರಿಕ್ ಲೆಬೋರೇಟರಿ, ಬೆಂಗಳೂರು ಅವರಿಗೂ ಇನ್ನೊಂದನ್ನು ಸೆಕ್ರಿಟರಿ, ಲೈಸೆನ್ಸ್‌ಡ್ ಇಲೆಕ್ಟ್ರಿಕಲ್ ಕಂಟ್ರಾಕ್ಟರ್ಸ್ ಎಸೋಸಿಯೇಶನ್, ಎವೆನ್ಯೂ ರೋಡ್, ಬೆಂಗಳೂರು-2, ಅವರಿಗೂ ಕಳುಹಿಸತಕ್ಕದು.

ಪಿ. ಸಿ. ರೆಡ್ಡಿ.
ಅಧ್ಯಕ್ಷರ ಪರವಾಗಿ,
ಲೈಸೆನ್ಸು ಇಶ್ಯೂಯಿಂಗ್ ಕಮಿಟಿ

## ಕಲಿತು ಮುಗಿಯದು

### ವಿದ್ಯಾರ್ಥಿಗಳ ಮುಂದೆ ಎಷ್ಟು ಕಲಿತರೂ ಮತ್ತೂ ಕಲಿಯಲಿಕ್ಕಿರುವ ಪ್ರಪಂಚವಿದೆ—ನಮ್ಮ ಬಿಂದಿಗೆಯಷ್ಟೇ ಇಲ್ಲಿ ನೀರು ಸಿಕ್ಕೀತು!!!

ಯಾವುದೊಂದು ವಸ್ತುವಿನ ಗುಣಗಳನ್ನು ಚೆನ್ನಾಗಿ ತಿಳಿಯುವುದೇ ವಿದ್ಯೆಯ ಅರ್ಥ. ಯಾವ ಹುಡುಗನು ವಿದ್ಯೆಯನ್ನು ಕಲಿಯುತ್ತಾನೋ ಅವನು 'ವಿದ್ಯಾರ್ಥಿ' ಎಂದು ಹೇಳಲ್ಪಡುತ್ತಾನೆ.

ವಿದ್ಯಾರ್ಥಿಯು ಓದುವುದರಲ್ಲಿ-ಬರೆಯುವುದರಲ್ಲಿ ನಿಷ್ಠಾವಂತನಾಗಿರಬೇಕು; ಅವನಲ್ಲಿ ದೊಡ್ಡವರ ಹಾಗೆ ಸನ್ಮಾನತೆಯ ಭಾವನೆಯು ಇರಬೇಕು.

ವಿದ್ಯಾರ್ಥಿಯು ಸರಳತೆ ಮತ್ತು ನಿಷ್ಠಾಪಟ್ಟದ ಮೇಲೆ ಅಧಿಕ ಜ್ಞಾನವನ್ನು ಪಡೆಯಬೇಕು. ಸ್ವಚ್ಛತೆ, ಪವಿತ್ರತೆ ಅವನ ಜೀವನದಲ್ಲಿ ತುಂಬಿರಬೇಕು ಅವನು ಸ್ವಾವಲಂಬಿಯಾಗಿರಬೇಕು.

ವಿದ್ಯಾರ್ಥಿಯು ಕೇವಲ ಮಾನಸಿಕ ಕೆಲಸಗಳನ್ನಲ್ಲದೆ, ಶಾರೀರಿಕ ಕೆಲಸಗಳನ್ನು ಕೂಡಾ ಮಾಡಬೇಕು. ಸ್ವತಃ ಅಡಿಗೆ ಮಾಡುವುದು, ತನ್ನ ಬಟ್ಟೆಗಳನ್ನು ತಾನೇ ಒಗೆದುಕೊಳ್ಳುವುದು, ವ್ಯಾಯಾಮ ಮಾಡುವುದು ಉತ್ತಮ ಮತ್ತು ದಿನದ ತನ್ನ ಪಾಠಗಳನ್ನು ಓದುವುದು,-ಇವು ವಿದ್ಯಾರ್ಥಿಯ ಕರ್ತವ್ಯಗಳಾಗಿವೆ. ವಿದ್ಯಾರ್ಥಿಯು ಬೆಳಗ್ಗೆ ೪½ ಗಂಟೆಗೆ ಏಳಬೇಕು. ತನ್ನ ಬಟ್ಟೆಯನ್ನು ಫೇಶನಿನ ದೃಷ್ಟಿಯಿಂದ ಧರಿಸದೆ ಆರೋಗ್ಯದ ದೃಷ್ಟಿಯಿಂದ ಧರಿಸಿಕೊಳ್ಳಬೇಕು.

ಯಾವ ವಿದ್ಯಾರ್ಥಿಯು ತನ್ನ ಕರ್ತವ್ಯಗಳನ್ನು ಪಾಲನೆಮಾಡುವ ಪ್ರಯತ್ನ ಮಾಡುತ್ತಾನೋ ಅವನು ತನಗೆ-ತನ್ನ ಸಮಾಜಕ್ಕೆ ಮತ್ತು ತನ್ನ ದೇಶಕ್ಕೆ ಉಪಕಾರಮಾಡುತ್ತಾನೆ. ಲೋಕದಲ್ಲಿ ಎಷ್ಟೋ ಮಹಾ ಪುರುಷರು ಹುಟ್ಟಿದರು. ಅವರು ವಿದ್ಯಾರ್ಥಿ ಜೀವನದಲ್ಲಿ ಒಳ್ಳೆ ನಿಯಮಿತ ಹಾಗೂ ಸಂಯಮಿತ ರೂಪದಿಂದ ಇರುತ್ತಿದ್ದರು. ಆದರಿಂದ ಅವರಿಗೆ ಒಳ್ಳೆಯ ಪ್ರೇರಣೆ ಹಾಗೂ ಶಕ್ತಿ ಸಿಕ್ಕಿದವು. ಆದರಿಂದಲೇ ಅವರು ಮುಂದುವರಿದರು. ಮಹಾತ್ಮಾ ಗಾಂಧೀಜೀ, ರವೀಂದ್ರನಾಥ ಟಾಗೋರ್, ಕಾರ್ಲ್‌ಮಾರ್ಕ್ಸ್, ಮಿಲ್ಟನ್ ಮತ್ತು ನ್ಯೂಟನ್-ಮೊದಲಾದವರ ವಿದ್ಯಾರ್ಥಿ ಜೀವನವನ್ನು ಅವಲೋಕಿಸಿದರೆ ಅವರನ್ನು ಮಹಾತ್ಮರನ್ನಾಗಿ ಮಾಡಿದ್ದು ಅವರ ವಿದ್ಯಾರ್ಥಿ ಜೀವನವೇ ಎಂದು ತಿಳಿಯುತ್ತದೆ.

ಚುರಿತ ವಿದ್ಯಾರ್ಥಿಗಳಿಗೆ ಸಮಯದ ಬೆಲೆ ಗೊತ್ತಿದೆ. ಅವರು ಅದರ ಸದುಪಯೋಗ ಮಾಡಿಕೊಂಡು ಲಾಭ ಪಡೆಯುತ್ತಾರೆ.

ವಿದ್ಯಾರ್ಥಿಯು ಕೇವಲ ಬುದ್ಧಿಜೀವಿಯಾಗಿ ಪ್ರಯೋಜನವಿಲ್ಲ. ಅದರೊಡನೆ ಶ್ರಮಜೀವಿ ಕೂಡಾ ಆಗಬೇಕು. ಇಲ್ಲದಿದ್ದರೆ ವಿದ್ಯಾರ್ಥಿಯ ಅಧ್ಯಯನವು ಅಪೂರ್ಣ ಹಾಗೂ ಅರ್ಧಮರ್ಧ ಆಗಬಹುದು. ಆತ ಯಾವ ಕೆಲಸವಿರಲಿ, ಅದು ಸಣ್ಣದಾಗಿರಲಿ ಇಲ್ಲವೇ ದೊಡ್ಡದಾಗಿರಲಿ ಅಸಡ್ಡೆ ಮಾಡಬಾರದು. ತನ್ನ ಕೆಲಸದಲ್ಲಿ ಗಡಿಬಿಡಿಯಾಗಲೀ ಅಥವಾ ಹಿಂಜರಿಯುವಿಕೆಯಾಗಲೀ ಇರಕೂಡದು.

ವಿದ್ಯಾರ್ಥಿಯು ನಂಬಿಗಸ್ತ ಮತ್ತು ಸತ್ಯವಂತನಾಗದಿದ್ದರೆ ದೇಶದ ಪ್ರಗತಿ ಅಸಂಭವ.

ಪ್ರಾಚೀನ ಕಾಲದಲ್ಲಿ ಏಕಲವ್ಯನೆಂಬ ಒಬ್ಬ ಆಜ್ಞಾಧಾರಿ ಹಾಗೂ ಸುಶೀಲನಾದ ವಿದ್ಯಾರ್ಥಿ ಇದ್ದನು. ಆತ ಗುರುಭಕ್ತಿಯ ಪ್ರತೀಕವಾಗಿ ತನ್ನ ಕೈ ಹೆಬ್ಬೆರಳನ್ನೇ ತುಂಡುಮಾಡಿ ಕೊಟ್ಟನಂತೆ! ಅಂತಹ ವಿಶ್ವಾಸ, ಗೌರವಗಳನ್ನು ವಿದ್ಯಾರ್ಥಿ ತನ್ನ ಗುರುವಿನಲ್ಲಿ ಇಟ್ಟುಕೊಳ್ಳಬೇಕು.

ಈ ಭಕ್ತಿ, ಪ್ರೇಮ, ಶೀಲ ಮತ್ತು ಕರುಣೆ ಹೇಗೆ ಉತ್ಪನ್ನವಾಗಬಲ್ಲುವು? ಸುಶೀಲ ಸಂಗಡಿಗರ ಒಡನಾಟ, ಮೃದುಸ್ವಭಾವ ಒಳ್ಳೆಯದನ್ನು ಅನುಕರಿಸುವುದರಲ್ಲಿ ಆಸ್ಥೆ ಹಾಗೂ ಪವಿತ್ರ ಆಚರಣೆ ಅವನ್ನು ಒಡಮೂಡಿಸಬಲ್ಲವು.

ಸಂಸ್ಕರಣೆಯ ಪರಿಷ್ಕಾರ, ಅಭ್ಯಾಸ ಮತ್ತು ಉತ್ತಮ ವಾತಾವರಣದಿಂದ ಇದು ಆಗುತ್ತದೆ.

ವಿದ್ಯಾರ್ಥಿಯು ಜೀವನದಲ್ಲಿ ಎದುರಾಗುವ ಸಂಕಟಗಳಿಂದ ಎದೆಗುಂದಬಾರದು. ಬದಲು ಸಂಕಟಗಳ ಕಾರಣವನ್ನು ಹುಡುಕಿ, ಅವನ್ನು ದೂರ ಮಾಡಲು ಪ್ರಯತ್ನಿಸಬೇಕು.

ವಿದ್ಯಾರ್ಥಿಗಳ ಹೃದಯದಲ್ಲಿ ಹೊಸ-ಹೊಸ ಕಾರ್ಯಗಳನ್ನು ಮಾಡುವ ಆಕಾಂಕ್ಷೆ ಇರಬೇಕು.

ವಿದ್ಯಾರ್ಥಿಯು ತನ್ನ ಜೀವನದ ವಾಸ್ತವಿಕ ಸ್ಥಿತಿಗಳನ್ನು ತಿಳಿಯದಿದ್ದರೆ ಹಾಗೂ ಅವನಿಗೆ ಲೋಕದ ಬೇರೆ—ಬೇರೆ ವಿಷಯಗಳ ಅರಿವಿಲ್ಲದಿದ್ದರೆ ಅಥವಾ ಹಗಲು—ರಾತ್ರಿ ಪುಸ್ತಕಗಳಲ್ಲೇ ಮುಳುಗಿದ್ದರೆ, ಅದರಿಂದ ಅವನಿಗೂ—ರಾಷ್ಟ್ರಕ್ಕೂ ಏನೂ ಪ್ರಯೋಜನವಿಲ್ಲ. ಆತ ಪುಸ್ತಕ ಜ್ಞಾನದೊಂದಿಗೆ ಲೋಕವ್ಯವಹಾರದ ಅನುಭವವನ್ನೂ ಪಡೆದಿರಬೇಕು.

ವಿದ್ಯಾರ್ಥಿಯ ಆದರ್ಶವು ಆಕಾಶದಂತೆ ಉನ್ನತವಾಗಿರಬೇಕು; ಅವನ ಸಿದ್ಧಾಂತ ಸಂಕಲ್ಪನಗಳು ಹಿಮಾಲಯದಂತೆ ಸ್ಥಿರವಾಗಿರಬೇಕು; ಹೃದಯದ ಭಾವನೆ ಸಮುದ್ರದ ಹಾಗೆ ಅನಂತ ಹಾಗೂ ಗಂಭೀರವಾಗಿರಬೇಕು ಹಿರಿಯರಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆ ಇರಬೇಕು. ಆತ ಭೇದ-ಭಾವಗಳನ್ನು ಮರೆತು, ತನ್ನ ಕರ್ತವ್ಯದಲ್ಲಿ ನಿರತನಾಗಿರಬೇಕು. ದುಷ್ಟರ ಬಲೆಗೆ ಬೀಳದೆ ಸತ್ಯವಂತ, ಆಜ್ಞಾಧಾರಿ ಹಾಗೂ ಸದಾಚಾರ ಸಂಪನ್ನನಾಗಿರಬೇಕು.

* * *

ವಿದ್ಯಾರ್ಥಿ ಜೀವನವು ಎಲ್ಲದಕ್ಕಿಂತ ಮಧುರ ಹಾಗೂ ಚಿರಸ್ಮರಣೀಯವಾದ ಸಮಯವಾಗಿದೆ. ಓದುವಿಕೆ ಮುಗಿದ ನಂತರ ಕೂಡಾ ನಮಗೆ ಆ ಹಿಂದಿನ ಮಾತುಗಳು ನೆನಪಿಗೆ ಬಂದು ನಾವು ಮುಗುಳುನಗುತ್ತೇವೆ. ಮತ್ತು ನಮ್ಮ ಹಳೆಯ ಮಿತ್ರರೊಡನೆ ಆ ಹಿಂದಿನ ಘಟನೆಗಳ ಕುರಿತು ಚರ್ಚೆಮಾಡುತ್ತೇವೆ. ಪ್ರಸಿದ್ಧ ವ್ಯಕ್ತಿಗಳ ಜೀವನವು ವಿದ್ಯೆಯ ಅಧ್ಯಯನ ಸಮಯದಲ್ಲಿಯೇ ಬೇರೆಯವರ ಮಹತ್ವ, ಆದರ್ಶಗಳಿಂದ ಸುಧಾರಿತರಾಗಿ ಅವರು ಪ್ರಸಿದ್ಧ ವ್ಯಕ್ತಿಗಳಾದರು. ನಾವು ಕೂಡಾ ಪ್ರಸಿದ್ಧ ವ್ಯಕ್ತಿಯಾಗುವಂತೆ ಪ್ರಯತ್ನಮಾಡಬೇಕು. ಆಹಾಗದಿದ್ದರೆ ಕನಿಷ್ಠಪಕ್ಷ ನಮ್ಮ ಆಚರಣೆಯಲ್ಲಾದರೂ ನಾಕಷ್ಟು ಸುಧಾರಣೆಗಳನ್ನು ಮಾಡಿಕೊಳ್ಳಬೇಕು.

ಮನೆಯಲ್ಲಿ ತಂದೆ-ತಾಯಿ ಮತ್ತು ಸಹೋದರ-ಸಹೋದರಿಯರ ಬಗ್ಗೆ ವಿದ್ಯಾರ್ಥಿಗಳಿಗೆ ಅವರಲ್ಲಿ ಅನುರಾಗವಿರುತ್ತದೆ. ಹಾಗೆಯೇ ಪಾಠಶಾಲೆಯಲ್ಲಿ ಕೂಡಾ ಗುರುಜನರೊಡನೆ ಮತ್ತು ಅವರ ಮಿತ್ರರೊಡನೆ ವಿದ್ಯಾರ್ಥಿಗಳಿಗೆ ಕೆಲವು ಕರ್ತವ್ಯಗಳಿವೆ.

ವಿದ್ಯಾರ್ಥಿಗಳು ಎಲ್ಲರೊಡನೆ ನಮ್ರತೆಯಿಂದ ವ್ಯವಹಾರವನ್ನು ನಡೆಸಬೇಕು. ನಮ್ರತೆಯಿಂದ ಯಾರಿಗೂ ಏನೂ ನಷ್ಟವಾಗುವುದಿಲ್ಲ. ಮಾಸ್ತರರ ಹೆದರಿಕೆ ಹಾಗೂ ಹೊರತ ವಿದ್ಯಾರ್ಥಿಗಳ ಕ್ಲಾಸಿನಲ್ಲಿಯ ನಡತೆ ಹಾಗೂ ಕಲಿಯುವಿಕೆಯ ಮೇಲೆ ಹೊಂದಿಕೊಂಡಿರುತ್ತದೆ. ಇವರು ತಮಗೆ ಗುರುಗಳು ಸಿಕ್ಕಿದಲ್ಲಿ ಅವರಿಗೆ ನಮಸ್ಕಾರ ಮಾಡುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಇದರಿಂದ ಉಪಾಧ್ಯಾಯರು ನಮ್ಮ ವಿದ್ಯಾರ್ಥಿಗಳು ಬಹಳ ಸಭ್ಯ ಹಾಗೂ ಸುಶೀಲರಾಗಿದ್ದಾರೆ ಎಂದು ಎಣಿಸಿಕೊಳ್ಳಬಹುದು.

ತಮ್ಮೊಳಗೆ ಬೈಯುವುದು, ಹೊಡೆದುಕೊಳ್ಳುವುದು ಇದು ಕೆಟ್ಟ ಅಭ್ಯಾಸ. ಎಷ್ಟೋ ವಿದ್ಯಾರ್ಥಿಗಳು ಕೆಟ್ಟ ವಿಷಯಗಳಿಂದ ಹಾಳಾಗಿ ಹೋಗುತ್ತಾರೆ. ಮತ್ತು ಅವರು ಮುಂದೆ ಇದಕ್ಕಾಗಿ ಪಶ್ಚಾತ್ತಾಪ ಪಡುತ್ತಾರೆ. ಕೆಟ್ಟ ವಿಷಯಗಳಿಗೆ ಬಲಿಬಿದ್ದ ವಿದ್ಯಾರ್ಥಿಗಳು ಬೀಡಿ, ಸಿಗರೇಟುಗಳನ್ನು ಸೇದುತ್ತಾರೆ. ಸಿಗರೇಟನ್ನು ಎಳೆಯುವುದರಿಂದ ನಮ್ಮ ಜೀವನದ ಅಮೂಲ್ಯವಾದ ಮೂರು ವಿಟಮಿನುಗಳು ನಷ್ಟವಾಗುತ್ತದೆ ಎಂದು ವೈಜ್ಞಾನಿಕರು ಸಂಶೋಧನೆ ಮಾಡಿ ಹೇಳಿದ್ದಾರೆ. ಕ್ಷಯ-ಇತ್ಯಾದಿ ರೋಗಗಳ ಮೂಲವು ಧೂಮಪಾನವಾಗಿದೆ.

ಈ ಕೆಟ್ಟ ಅಭ್ಯಾಸಗಳಿರುವ ವಿದ್ಯಾರ್ಥಿಗಳ ಸ್ನೇಹವನ್ನು ನಾವು ಮಾಡಬಾರದು. ಇಂದು ಚಾ-ಕಾಫಿ ಕುಡಿಯದವರಿಲ್ಲ. ಅದರಲ್ಲೂ ವಿದ್ಯಾರ್ಥಿಗಳಿಗೆ ಚಾ-ಕಾಫಿಯೆಂದರೆ ಬಹಳ ಇಷ್ಟ. ಇದು ಆರೋಗ್ಯಕ್ಕೆ ಹಿತಕರವಾದ ಅಭ್ಯಾಸ ಮಾತ್ರ ಅಲ್ಲ.

ಓದುವಿಕೆಯು ಸಾಧನೆಯ ಸಮಯವಾಗಿದೆ. ಹಾಗೂ ಯೋಗ್ಯ ಸಾಧಕನು ತನ್ನ ಸಮಯದ ಸದುಪಯೋಗಮಾಡಿ, ತನ್ನ ಇಚ್ಛೆಗಳ ಮೇಲೆ ವಿಜಯವನ್ನು ಹೊಂದಿ, ಆದರ್ಶದ ಸಾಧನೆಯನ್ನು ಮಾಡುತ್ತಾನೆ.

ಚಾ-ಕಾಫಿಯ ಬದಲು ಹಾಲು ಕುಡಿಯುವುದು ಆರೋಗ್ಯಕ್ಕೆ ಒಳ್ಳೇಯದು ಆದರೆ ನಾವು ಹಾಲಿಗೆ ಹೆಚ್ಚು ಕ್ರಯ ಎಂದು ಬೇರೆಯವರು ಹೇಳಿದ್ದನ್ನು ಕೇಳುತ್ತೇವೆ. ಒಳ್ಳೆ ಹಾಲು ಸಿಗದಿದ್ದರೆ ಅಥವಾ ಕಾರಣಾಂತರಗಳಿಂದ ಹಾಲು ತೆಗೆದುಕೊಳ್ಳಲಿಕ್ಕಾಗದಿದ್ದರೆ, ಬೆಳಿಗ್ಗೆ ಮತ್ತು ಸಂಜೆ ನೆನೆಸಿದ ಕಡಲೆಯ ಗಂಜಿ ಮಾಡಿ ತಿನ್ನಬೇಕು. ಕಡಲೆಯಲ್ಲಿ ಕೂಡಾ ಹಾಲಿನಷ್ಟೇ ಶಕ್ತಿಯಿದೆ.

ಇನ್ನೂ ಒಂದು ಅವಶ್ಯವಾದ ಮಾತಿದೆ. ಅದು ಸಿನಿಮಾ ನೋಡುವುದು ವಿದ್ಯಾರ್ಥಿಗಳು ಬಹಳವಾಗಿ ಸಿನೆಮಾಕ್ಕೆ ಹೋಗುತ್ತಾರೆ. ಹಾಗೂ ಅಲ್ಲಿ ಬಹಳ ಉತ್ಸಾಹದಿಂದ ಗಲಾಟೆ, ತಮಾಷೆಮಾಡುತ್ತಾ ಬೊಬ್ಬೆಹಾಕುತ್ತಿರುತ್ತಾರೆ. ಇದರಿಂದ ನಾವು ತಿಳಿಯಬಹುದೇನೆಂದರೆ ವಿದ್ಯಾರ್ಥಿಗಳು ಸಿನಿಮಾ ನೋಡಲು ಬಂದದ್ದಲ್ಲ; ಬದಲಾಗಿ ತಮ್ಮ ಮೂರ್ಖತನದ ತಮಾಷೆ ತೋರಿಸಲು ಬಂದಿದ್ದಾರೆ ಎಂದು. ಕೆಟ್ಟ ಸಿನಿಮಾಗಳನ್ನು ವಿದ್ಯಾರ್ಥಿಗಳು ಎಂದೂ ನೋಡಬಾರದು. ವಿದ್ಯಾರ್ಥಿಗಳು ಯಾವಾಗಲೂ ಉತ್ತಮವಾದ—ಸಾಮಾಜಿಕ ಐತಿಹಾಸಿಕ ಹಾಗೂ ರಾಜಕೀಯ ಚಿತ್ರಗಳನ್ನು ನೋಡಬೇಕು. ಇವರು ತಮ್ಮ ಸಮಯದ ಅಮೂಲ್ಯವಾದ ಮೂರು ಗಂಟೆಗಳನ್ನು ವ್ಯರ್ಥಮಾಡಿ, ಸಿನಿಮಾದಿಂದ ಏನೂಪ್ರಯೋಜನ ಪಡೆಯದಿದ್ದರೆ, ಅವರಿಗೆ ಸಮಯದ ಬೆಲೆಯೇ ಗೊತ್ತಿಲ್ಲವೆಂದು ತಿಳಿಯಬೇಕು. ಸಮಯದ ಮಹತ್ವ ಹಾಗೂ ಅದರ ಉಪಯೋಗವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಅರಿತುಕೊಂಡಿರಬೇಕು. 'ಸಮಯ ಮತ್ತು ಪ್ರವಾಹಗಳು ಯಾರ ನಿರೀಕ್ಷೆಯನ್ನೂ ಮಾಡುವುದಿಲ್ಲ.' ನಿನ್ನೆ ಇನ್ನು ಎಂದಿಗೂ ಬರುವುದಿಲ್ಲ.—ಈ ಎರಡು ಗಾದೆಗಳು ಬಹಳ ಪ್ರಸಿದ್ಧವಾಗಿವೆ. ಆದುದರಿಂದ ವಿದ್ಯಾರ್ಥಿಗಳು ತಮ್ಮ ಸಮಯದ ಅಮೂಲ್ಯತೆಯನ್ನು ಅರಿತಿರಬೇಕು.

ಇಂದಿನ ವಿದ್ಯಾರ್ಥಿಗಳಲ್ಲಿ ಕೆಲವರು ರಾಜಕೀಯ ರಂಗದಲ್ಲಿ ಧುಮುಕಲು ಯತ್ನಿಸುತ್ತಿದ್ದಾರೆ. ಸಮಾಜವಾದ, ಗಾಂಧಿವಾದ, ಸಾಮ್ಯವಾದ — ಮೊದಲಾದುವುಗಳ ಸರಿಯಾದ ಅರ್ಥ ತಿಳಿಯದೆ ವಿದ್ಯಾರ್ಥಿಗಳು ಏಕೆ ರಾಜಕೀಯ ರಂಗದಲ್ಲಿ ಧುಮುಕಬೇಕು? ಅವರು ತಮ್ಮ ಬುದ್ಧಿಯನ್ನು ತತ್ವಾಭ್ಯಾಸಕ್ಕೆ ಉಪಯೋಗಿಸಿಕೊಳ್ಳಲಿ!

ಇವರ ವಿದ್ಯಾಭ್ಯಾಸದ ನಂತರ, ಇವರು ಸಭ್ಯ ನಾಗರಿಕರಾದಾಗ ತಮ್ಮ ದೇಶದ-ಸರಕಾರದ ಒಳ್ಳೆ-ಕೆಟ್ಟ ವಿಷಯಗಳ ಕುರಿತು ಯೋಗ್ಯ ಸಲಹೆಗಳನ್ನು ಕೊಟ್ಟು, ರಾಜಕೀಯ ಸಮಸ್ಯೆಗಳ ವಿಚಾರನ್ನು ಮಾಡುವುದು ಯೋಗ್ಯವೆನಿಸುವುದು. ಕೇವಲ ರಾಜಕೀಯ ಮುಖಂಡರ ಫೋಟೋಗಳನ್ನು ಸಂಗ್ರಹಿಸಿದರೆ ಅಥವಾ ಒಬ್ಬ ಒಳ್ಳೆಯವನಂತೆ ಉತ್ತಮವಾದ ಪೋಷಾಕುಗಳನ್ನು ಧರಿಸಿಕೊಂಡರೆ ಅವನೊಬ್ಬ ರಾಜಕೀಯ ಮುಖಂಡನಾಗಲಾರ. ವಿದ್ಯಾರ್ಥಿಗಳು ಒಬ್ಬ ಯೋಗ್ಯ ಮುಖಂಡನಾಗಬೇಕಾದರೆ ಇತರ ಯೋಗ್ಯ ಮುಖಂಡರ ಜೀವನವನ್ನು ತಿಳಿದು, ಅದರಂತೆ ನಡೆಯಬೇಕು.

* *

ವಿದ್ಯಾರ್ಥಿಗಳು ಸಮಾಜದ ಒಂದು ಅಂಗ; ಸಮಾಜವು ದೇಶದ ಒಂದು ಅವಯವ. ಹಾಗಿರುವಾಗ 'ವಿದ್ಯಾರ್ಥಿಗಳು ದೇಶಸೇವೆ ಹೇಗೆ ಮಾಡಬೇಕು? ಎಂದು ಕೇಳುವುದು ಪ್ರಕೃತಿಯು ಮಕ್ಕಳಾದ ಅವರು ಊಟ ಏಕೆ ಮಾಡಬೇಕು? ಎಂದು ಕೇಳುವಂತಿದೆ. ಆದರೆ ವಿದ್ಯಾರ್ಥಿಗಳನ್ನು ಪ್ರತ್ಯೇಕತಾ ದೃಷ್ಟಿಯಿಂದ ನೋಡುತ್ತಾ, ಅವರಿಗೆ ದೇಶಸೇವೆ ಮಾಡುವ ಪ್ರಾಪ್ತ ವಯಸ್ಸು ಬಂದಿಲ್ಲವೆನ್ನುವ-ಮನೋಭಾವದ ಜನ ನಮ್ಮಲ್ಲಿಲ್ಲದಿಲ್ಲ. ಆದರೆ ಎಲ್ಲರನ್ನು ಮೆಚ್ಚಿಸುವ ಹುಚ್ಚುತನಕ್ಕೆ ವಿದ್ಯಾರ್ಥಿಗಳು ಹಿಂದೆಯೂ ಬಿದ್ದಿಲ್ಲ; ಇಂದೂ ಬಿದ್ದಿಲ್ಲ; ಮುಂದೆಯೂ ಬೀಳುವಂತಿಲ್ಲ.

ಜಗತ್ತಿನ ಇತ್ತೀಚೆಗಿನ ಇತಿಹಾಸವನ್ನು ತೆಗೆದು ನೋಡಿದರೆ ದೇಶದ ಸ್ವಾತಂತ್ರ್ಯಕ್ಕಾಗಿ, ಆಂತರಿಕ ಸ್ಥಿಮಿತಕ್ಕಾಗಿ ಹೋರಾಡಿದವರು, ರಕ್ತದ ಕಾಲುವೆ ಹರಿಯಿಸಿದವರು, ತ್ಯಾಗಿಗಳಾದವರು ಸ್ಫೂರ್ತಿಯುತ ವಿದ್ಯಾರ್ಥಿಗಳೇ. ಯಾವುದೇ ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ವಿದ್ಯಾರ್ಥಿಗಳ ನೆತ್ತರಿಗೆ ವಿಶೇಷ ಬೆಲೆಯಿದೆ. ಅವರ ಅಮಿತ ತ್ಯಾಗವಲ್ಲವಾದರೆ ಸ್ವಾತಂತ್ರ್ಯ ಕನಸಿನ ಮಾತಾಗುತ್ತಿತ್ತು. ಭಾರತ, ಬರ್ಮಾ, ಇಂಡೋನೇಷ್ಯಾ, ಚೈನಾ—ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳು ವಹಿಸಿದ ಪಾತ್ರ ಬಹು ಮಹತ್ವದ್ದಾಗಿದೆ. ವಿದ್ಯಾರ್ಥಿಗಳಲ್ಲಿರುವ ಸಹಜ ಸ್ಫೂರ್ತಿ, ಹೊಸ ಆವೇಶ, ತೀಕ್ಷ್ಣ ಕ್ರಿಯಾಶಕ್ತಿ ಹಿರಿಯರಿಗೊಂದು




# ಕುಮಾರಿ ಬಿಲ್ಲೆಗಳು

**(Govt. Regd.)**

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

**P. DEVEE & Co. (N. J.) CALCUTTA-40.**

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1...

## ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ, ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4¼% ಬಡ್ಡಿ ಗಳಿಸುತ್ತವೆ.

**ನಮ್ಮ ಬಡ್ಡಿ ದರಗಳು.**

ನಿರಖು ಠೇವಣಾತಿ.

| | | |
|---|---|---|
| 24 | ತಿಂಗಳಿಗೆ | 4% |
| 12 | ,, | 3¾% |
| 6 | ,, | 3½% |
| 3 | ,, | 3% |

| | |
|---|---|
| ಸೇವಿಂಗ್ಸ್ ಬೇಂಕ್ ಲೆಕ್ಕ | 2% |
| ಕರೆಂಟ್ ಎಕೌಂಟು | ½% |

THE MOOLKY BANK, LTD-MULKI

## ಕಲಿತು ಮುಗಿಯದು

ದರ್ಶವಾಗಿತ್ತು; ಹಾಡುಕೆರ ಬೆನ್ನು ನೆಟ್ಟಗೆ ಸಾಗುತಿತ್ತು. ಎಂತಲೇ ದೇಶಸೇವೆ ವಿದ್ಯಾರ್ಥಿಗಳ ಮೂಲಕ ತ್ವರಿತಗೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಅವರೆ ವಿದ್ಯಾರ್ಥಿಗಳ ಹೊಣೆಗಾರಿಕೆ ಏನೆಂದು ನಾವು ಅರಿತುಕೊಳ್ಳುವುದಾದರೆ— ಅವರ ಶೈಕ್ಷಣಿಕ ಜೀವನವೇ ಒಂದು ದೇಶಸೇವೆಯೆನ್ನಬಹುದು. ಉತ್ತಮ ವ್ಯಾಸಂಗದಿಂದ ಉತ್ತೀರ್ಣನಾಗಿ, ವಿಶ್ವವಿದ್ಯಾಲಯದ ಪದವೀಧರನಾದ ವಿದ್ಯಾರ್ಥಿಯು ದೇಶದ ಒಂದು ಅನರ್ಘ್ಯ ಸಂಪತ್ತು.

ಇಂದು ನಮ್ಮ ದೇಶ ಅಥವಾ ಹಿಂದುಳಿದ ಯಾವುದೇ ದೇಶವಾದರೂ ಕೇವಲ ಕೊರತೆಯ ಕಲಕುಗಳಿಗಷ್ಟೇ ಪರದೇಶೀ ಮುಖವನ್ನು ನೋಡುತ್ತಿರದೆ, ತಜ್ಞ ತಾಂತ್ರಿಕರಿಗಾಗಿ-ಪ್ರೌಢ ವಿದ್ವಾಂಸರಿಗಾಗಿ ಕೂಡಾ ಪರಾವಲಂಬನೆಯನ್ನು ಹೊಂದಿಕೊಂಡಿರಬೇಕಾದ ದುರ್ಭರ ಪ್ರಸಂಗ ಬಂದಿರುವುದನ್ನು ನೋಡುತ್ತಿದ್ದೇವೆ. ಇದರಿಂದಾಗಿ ದೇಶದ ಅಪಾರ ಸಿರಿ ಅಪಪೋಲಾಗುತ್ತಿರುವುದು ಒಂದು ವಿಧದ ಪಾರತಂತ್ರ್ಯದ ಕಹಿ ಅನುಭವಿಸುತ್ತಿರುವುದು ಸಹ್ಯದ ಅನುಭವವಾಗಿದೆ. ಈ ನಿವಾರಣೆಗಾಗಿ ನಮ್ಮಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಯೂ ದೀಕ್ಷೆ ತೊಡುವನಾದರೆ ಅದಕ್ಕಿಂತ ಉತ್ತಮವಾದ ದೇಶಸೇವೆ ಸುಂದಿತ ಬೇರೆ ಇರಲಾರದು.

ದೇಶಕ್ಕೆ ಸ್ವಾತಂತ್ರ್ಯ ಬಂದಿದೆ, ಸ್ವಾತಂತ್ರ್ಯ ರಥವನ್ನು ಸುವ್ಯವಸ್ಥಿತವಾಗಿ ಸೂತ್ರಚಾಲನೆ ಮಾಡುವ ನಮ್ಮ ಹಿರಿಯರು ಅಧಿಕಾರದಲ್ಲಿದ್ದಾರೆ. ಅವರ ಮಾರ್ಗ ನೇರವಾಗಿರಲಿ— ಅಂಕು-ಡೊಂಕಾಗಿರಲಿ ಅದಗಲ್ಲಿ ವಿದ್ಯಾರ್ಥಿಗಳಿಗೆ ಆಸ್ಥೆ ಇಲ್ಲ. ವಿದ್ಯಾರ್ಥಿಗಳ ದೇಶಸೇವೆ ಸಾಮಾಜಿಕ ನ್ಯಾಯ ಸಮತೆಯಿಂದ ಹುಟ್ಟಿ ಬೆಳೆಯಬೇಕೇ ಹೊರತು ರಾಜಕೀಯ ಡೊಂಬರಾಟದ ಮೂಲಭೂಮಿಯಿಂದ ಹುಟ್ಟಬೇಕಾಗಿ ಬಾರದು.

ದೇಶದ ಸೇವೆಯು ಕೇವಲ ರಾಜಕೀಯ ಸೂತ್ರಚಾಲಕರ ಗುತ್ತಿಗಾರಿಕೆಯದಲ್ಲ. ಅದಕ್ಕೆ ಎಲ್ಲರಿಗೂ ಸಮ ಪಾಲಿದೆ. ಅಧಿಕಾರ ಸ್ಥಾನದಲ್ಲಿರುವವನು ದೇಶಸೇವೆ ಮಾಡುವ ರೀತಿ ಒಂದು ತರವಾದರೆ-ಯಾವುದೇ ಅಧಿಕಾರ, ರಾಜಕೀಯ ಆಟೋಪದಿಂದ ನಿರ್ಲಿಪ್ತನಾದ ಪ್ರಜೆಯು ಅಂತಹ ರಾಜಕಾರಣಿಗಿಂತ ಉತ್ತಮವಾದ ಸೇವೆಯನ್ನು ಸಲ್ಲಿಸಬಹುದು.

“ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಯೂ ಕಡಮೆಯದಲ್ಲ. ಸ್ವಾತಂತ್ರ್ಯ ಸಂಗ್ರಾಮದ ವೇಳೆ ವಿದ್ಯಾರ್ಥಿಗಳು ತೋರಿದ ಅತುಲ ಸಾಹಸ, ಧೈರ್ಯ, ಸಹನೆ ಹಾಗೂ ಉತ್ಸಾಹ ಚರಿತ್ರಾರ್ಹವಾಗಿದೆ. ಅದಕ್ಕಾಗಿ ಪ್ರಾಣ ಅರ್ಪಿಸಿದ ವಿದ್ಯಾರ್ಥಿಗಳ ಸಂಖ್ಯೆಯೂ ಬಹು ದೊಡ್ಡದು. ಸ್ವಾತಂತ್ರ್ಯದ ಬೆನ್ನಲ್ಲೇ ವಿದ್ಯಾರ್ಥಿಗಳು ಕೂಡಾ ತಮ್ಮ ಕರ್ತವ್ಯ ಮುಗಿಯಿತೆಂದು ಆಲಸಿಗರಾಗಲಿಲ್ಲ. ಸ್ವತಂತ್ರ ಭಾರತದ ಪುನರ್ರಚನೆಗಾಗಿ ಶಕ್ತಿ ಮೀರಿ ದುಡಿಯುತ್ತಿರುವುದನ್ನು ಕಾಣುತ್ತಿದ್ದೇವೆ. ವಿದ್ಯಾರ್ಥಿಗಳ ಸೇವೆಯಲ್ಲಿ ಸ್ವಾರ್ಥಕ್ಕೆ ಸ್ಥಾನವಿಲ್ಲ. ಅಧಿಕಾರ ಲಾಲಸೆಗೂ ಎಡೆ ಇಲ್ಲ. ಅವರ ಕರ್ತವ್ಯದಲ್ಲಿ ಪುರುಷಿಗೇ ಪ್ರಾಧಾನ್ಯ. ಭಾವನಾ ಜೀವಿಗಳಾದ ಅವರು ಯಾವುದೇ ಕಾರ್ಯವನ್ನು ನಿಶ್ಚಲವಾದ ಉತ್ಸಾಹದಿಂದ ಪೂರೈಸಿ ಬಿಡುತ್ತಾರೆ. ಅಂತೆಯೇ ವಿದ್ಯಾರ್ಥಿಗಳ ಸೇವೆಗೆ ನಾಡಿನಾದ್ಯಂತ ಬೆಂಬಲ ದೊರಕುತ್ತಿದೆ. ಹಾಗೆಂದು ವಿದ್ಯಾರ್ಥಿಗಳ ಪವಿತ್ರ ಮೈಮೆಗೂ ಕಳಂಕ ತಾಗಿಸುವ ಪ್ರವೃತ್ತಿ ಅಲ್ಲಗಳೆಯುವಂತಿಲ್ಲ. ವಿವಿಧ ರಾಜಕೀಯ ಪ್ರಣಾಲಿಗಳೊಳಗೆ ತಳವನ್ನು ತುರುಕಿಸುವ ಪ್ರವೃತ್ತಿ ಕೆಲವೊಂದು ಕಡೆ ತೋರಿ ಬರುತ್ತಿದೆಯಾದರೂ ನೀರಿದ್ದಲ್ಲಿ ಕೆಸರು ಸ್ವಾಭಾವಿಕ ಎಂದು ನೆನೆಸಿ, ಅದನ್ನು ಬಿಟ್ಟುಬಿಡಬಹುದು.

ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿದ್ದು ತಮ್ಮ ದೇಶಸೇವೆ ಅಥವಾ ಸಾರ್ವಜನಿಕ ಸೇವೆ ಸಲ್ಲಿಸಬಹುದು. ಸಂಸ್ಕೃತಿಯ ಆಳವಾದ ಅಭ್ಯಾಸ, ಪರಂಪರಾಗತ ಭಾರತ ಇತಿಹಾಸದ ವಿಮರ್ಶೆ.. ಇವು ಅವರ ಆದರ್ಶವಾಗಿರಬೇಕು. ಭಾರತದ ಕಲೆಗೆ ವಿಶ್ವವಿಖ್ಯಾತವಾದ ನೆಲೆಯಿಡೆ ಅದರ ಆಳವಾದ ಅಭ್ಯಾಸ, ಅದು ಬೆಳೆದು ಬಂದ ಬಗೆಯನ್ನು ತಿಳಿದು. ಅದನ್ನು ವಿಕಾಸಗೊಳಿಸುವ ಪ್ರಯತ್ನ ನಮ್ಮ ವಿದ್ಯಾರ್ಥಿಗಳು ಮಾಡಬಹುದು. ನಮ್ಮ ಭಾರತೀಯ ವಿದ್ಯಾರ್ಥಿಗಳ ಸ್ವಸ್ಥ ವಿವೇಚನಾ ಶಕ್ತಿ, ಕಾರ್ಯಕ್ಷಮತೆ, ಕಲಾಪ್ರಿಯತೆ ಮತ್ತು ಸಾಹಿತ್ಯ ರಸಿಕತೆ—ಇವನ್ನು ಉಳಿಸಿ, ಬೆಳೆಸಲು ನಮ್ಮ ವಿದ್ಯಾರ್ಥಿಗಳು ಯಾವುದೇ ಕಾರ್ಯ ಕೈಗೊಳ್ಳಬಹುದು. ಹಿರಿಯರ ಬೆಂಬಲದೊಂದಿಗೆ—ಸಹಕಾರದೊಂದಿಗೆ ಈ ಕರ್ತವ್ಯವನ್ನು ಈಡೇರಿಸಲು ಯತ್ನಿಸಿದರೆ ಶ್ರಮ ಸಾರ್ಥಕವಾಗುವುದು. ಈ ಕಾರ್ಯದಲ್ಲಿ ಪ್ರಚಾರ ಮುಖ್ಯವಲ್ಲ—ಅಭಿಮಾನ ಮುಖ್ಯ.”

ವಿದ್ಯಾರ್ಥಿಗಳು ಸೈನಿಕರಾಗಿರಬೇಕೇ ಹೊರತು ಸೇನಾನಿಗಳಾಗಿರಬಾರದು. ಕಾರಣ-ಪದವಿಯಾಸೆ ಎಂತಹ ಮನುಷ್ಯನನ್ನೂ ಹಾಳುಗೆಡಹುತ್ತದೆ. ಆದುದರಿಂದ ನಾಳಿನ ಜನಾಂಗದ ನಿರ್ಮಾಪಕರಾದ ವಿದ್ಯಾರ್ಥಿಗಳು ಯಾವುದೇ ಆಸೆ, ಅಹಂಕಾರ, ಪದವಿಗಳಿಗೆ ಬಲಿಬೀಳದೆ ನಿಸ್ವಾರ್ಥರಾಗಿ ದೇಶಸೇವೆ ಮಾಡಿದಲ್ಲಿ ನಮ್ಮ ಭಾರತದಲ್ಲಿರುವ ಬಡತನವು ಸುಲಭದಲ್ಲಿ ನಿವಾರಣೆಯಾಗಿ ನಮ್ಮ ದೇಶವು ಇತರ ದೇಶಗಳಂತೆಯೇ ದೃಢವಾಗಿ ನಿಲ್ಲಬಹುದ.

ಶ್ರೀ ಸಿ. ನಾರಾಯಣ ಬಲ್ಲಾಳ.

**'NAVAYUGA' WEEKLY** is in the list of periodicals and Newspapers approved for use in Secondary Schools as per proceedings Roc. No 466 N/50 date 12-12-1950 of the Director of public Instruction Madras.

## ಕತ್ತಲೆಯ ಜ್ಯೋತಿ-ಕ್ರಿಸ್ತ

ಕನ್ಯೆ ಮೇರಿಯು ಇಂದು 'ಪವಿತ್ರದೇವತೆಯಿತ್ತ
ಪುಣ್ಯವರಕನುಸರಿಸಿ ಗರ್ಭವತಿಯಾಗಿಹಳು'
ಜೋಸೆಫ, ನೀ ಧನ್ಯ, ಶಪದ ಕೂಸನು ಮುಂದೆ
ಕ್ರಿಸ್ತನೆಂ ಕರೆಯೆಂದು ದಿವ್ಯ ಕಿಂಕರನೊಬ್ಬ
ಬೆಸಸಲಂದಿನ ದಿಸವು ದಿವ್ಯವಾಯ್ತು.
ನಿತ್ಯನಿ

ರ್ಮಲೆಯಾಗಿ ಸತ್ಯಸದ ಮೂರ್ತಿಯಾಗಿ ದಿವ್ಯಭಾ
ಗ್ಯಯಾಗಿ ಪ್ರೇಮಸೌಂದರ್ಯದಾ ನೆಲೆಯಾಗಿ
ಫಲಿಸಿಕೊಳ್ಳಲು ಬಾಳ-ಆ ಮೇರಿ, ಸ್ನೇಹಶೀಲೆ,
ಕ್ರಿಸ್ತವತಾರದಾ ಎಳೆಬಸಿರು ಮಾಗಿ ಬಂತು.
ಮೇರಿ ಗೈದಿಹ ಪುಣ್ಯ ನಿಕಷವೆಂದೆನಿತ್ತೊ
ಜಗವ ಹೊಲ್ಲಮೆಯಳಿಸ ಅವತರಣವೆನಿಸಿತ್ತೊ
ಪ್ರೀತಿನಿಯತಿಗಳನ್ನು ಜಗಕೆ ಕಲಿಸಲದಿತ್ತೊ
ಅಂತಾಯ್ತು ಪಸುವಿನ ಸಿರಿಜನನ ಗೋದಲಿ
ಯಲಿ.

ಕುರಿಗಳಲ್ಲಿತ್ತ ಮೆಂದಾಡುತ್ತಿರಲಿಲ್ಲ,
ಕ್ರಿಸ್ತ ಹುಟ್ಟಿತಲಾಗ, ಪೂರ್ವಪ್ರಾಂತದ
ಕೆಲಗೆ

ಬಾನಿನಲಿ ತೋರಿತ್ತು ಬಿಚ್ಚಳದಿ ತಾರೆಯೊಂದು,
ಹಿರೋದನರಸನವಂ ಕೇಳೆ ಆ ಕೆಲರ
ನಟ್ಟಿದನು

ಅಸವಸದಿ ದಿವ್ಯ ಶಿಶುವನು ಅರಸೆ-ಬೆತ್ಲಹೆಮಿಗೆ
ಅಜ್ಞಾನಿಗಳ್ಬಂದೆ ಅರಸಲೆಂದಲೆಯುತಿರೆ
ಆ ತಾರೆ ಸರಿದುದಾ ಗಗನ ನೀಲಿಮೆ ನಡುವೆ
ದಿವ್ಯಸಂದೇಶವನು ಜಗಕುಸುರಿ; ಇದನರಿತು
ಹೆಜ್ಜೆ ಮಾಡದ ನೀರಿನಲಿ ನಾವೆ ಬಿಕ್ಕಗಾ
ಣದೆ ಗುಕಿಂಪಿ ಬಾಂದಳದ ಕಿರುಚಿಕ್ಕೆ ದಾರಿತೋ
ರುವ ತೆರದಿ ಜ್ಞಾನಿಗಳೆಲ್ಲ ಬೆಂಬಿಡದಂ
ತಾರೆತೋರಿದದಾರಿ ಕ್ರಿಸ್ತ ಹುಟ್ಟಿದ ಕೊಟ್ಟಿ
ಗೆಯ ಮೇಲೆ ನಿಂತಿತದು ಕ್ರಿಸ್ತನಲ್ಲಿರುವನೆಂದು;
ಇರಿವರಾನ್ವೇಷಕರು ದಿವ್ಯತ್ವದರ್ಶನಕೆ;
ಮಲಗಿತ್ತು ತನುರುಚಿಯ ಎಳಹಸುಳೆ
ಹಸುಗಳೊಡನೆ

ಸ್ವರ್ಗೀಯದ್ಯೋತಕನೆ, ಶಾಂತಿಸಮೃದ್ಧ
ಗಳಿತೆ

ಮಧುರತರ ಮಾಧುರ್ಯ ಮುಖದಲಾರೆ
ಕುಣಿಯುತಿದೆ,

ಪ್ರೇಮಕರುಣೆಗಳೊಸಲ ಕಣಿಬೆಳಕು ಬಿಸರಿಬರೆ
ಲವಕಂಡು ತಾವ್ ತಂದ ಕಾಣಿಕೆಯ ನಿತ್ತರಾ
ಜ್ಞಾನಿಗಳ್ ಹರುಷಪುಳಕೋತ್ಕರ್ಷದೊಳು
ಮೆಯಿಂ

ತಮ್ಮ ಕಳುಹಿದ ಹಿರೋದನಿಗರುಹದೆಯೆ
ಮರಳೆ

ದರವರು ಕನಸಿನೊಳಾಣತಿಯಾದ ತೆರದಿಂದೆ
ಎಲ್ಲ ತೆರಳಿದ ಬಳಿಕ ದೇವ ಕಿಂಕರನೊಬ್ಬ
ಕನಸಿನಲಿ ಜೋಸೆಫನಿಗೆಂದನೀ ನುಡಿಯ;
“ಏಳೇಳು, ಶಿಶುಮೇರಿಯರೊಡನೆ ಐಗುಪ್ತ
ಕೋಡು

ನಾಟೆಸು ನನಕೆನೀನಲ್ಲಿಯಿರು ಹಿತ್ಸರದಿ
ಕೊಲ್ಲತೆಳಸಿಹ ಹಿರೋದನೆನ್ನ ಶಿಸುವ”
ಕಟ್ಟಿರುಳ ಕತ್ತಲು ಜಗವ ಕವಿದಿರುತಿರೆ
ಬೆತ್ಲೆಹೆಮುನಗರಿವರು ಶಿಸುವನ್ನೊಡಗೂಡಿ
ದಂಪತಿಗಳೈಗುಪ್ತ ದೇಶಕಭಿಮುಖವಾಗಿ.
ಬೆತ್ಲಹೆಮು ನಗರದೊಳ್ ಇದ್ದ ಶಿಶುಗಳನೆಲ್ಲ
ಕೊಲ್ಲಿಸಿದನಸಕ್ರೂರಿ ನಿಷ್ಕರುಣ ಹಿರೋದ.
ನವನಮರಣದ ಬಳಿಕ ಮರಳಿಬಂದರು
ಮುಂದೆ

ಶಿಸುವಂ ಕರೆ"ನಜರೇನನೆಂದೆ ನಜರೇತಿನ
ಅಂದಿನಿಂ ಶಿಸುವನ ನಜರೇನ ನೆನಿಸಿದನು.

— ಮೋಹನ.

## ಜನ್ಮ ಭೂಮಾತೆಯ ಗೋಳು

ಎನ್ನ ನೆಲದಿ ಜನಿಸಿ, ಬೆಳೆದು,
ಎನ್ನ ಹೆಸರ ಪೇಳಿ ಕಲಿತು,
ಎನ್ನನೀಗ ಮರೆತು, ತೊರೆದು, ಪೋದುದು
ಚಿತವೆ?

ಚಿನ್ನ ಬೊಂಬೆಯಂಥ ಮಕ್ಕ-
ಳನ್ನು ಹೊರೆದೆ, ವಿದ್ಯೆಯಿತ್ತೆ,
ಎನ್ನ ತೊರೆದು, ದೂರಕುಳಿತು, ಸುಖಿಸುವು
ಚಿತವೆ!

ದುಡಿತಕಾಗಿ ಪೋದರೇನು?
ಕೊಡುವೆ ವರವ ಸುಖಿಸಿರೆಂದು.
ಪಡೆದ ನಾಡಿನಲ್ಲಿ ಕೂಡಿರೊಮ್ಮೆ ಹರುಷದಿ.

ಪಡೆದ ನಾಡ ಚಂದಗೊಳಿಪ
ಗೊಡವೆ ಬೇಡವೇನೆ ನಿಮಗೆ?
ಬಿಡದಿರೆನ್ನ-ಕಂದರಿರಾ! ಕೀರ್ತಿವಿಸಿಮಗದು.

ಎನಗೆ ನೂರು ಮಕ್ಕಳಿಹರು
ಘನತೆ-ಕೀರ್ತಿ-ಪೊಂದಿದವರು
ಜನುಮನಿತ್ತ ನಾನು ಅಯ್ಯೊ, ಬೇಡವಾದೆನೆ!

ಎನಿತು ಕಾಯ್ವೆ ಕಿರಿಯರೆನ್ನು
ಕನಸಿಗಾಯ್ತು ಎನ್ನ ಆಸೆ
ನೆನಸಿ ಬಂದು, ನಲಿಸಿ, ನಾಡ ಬೆಳಗಿರಪ್ಪ
ನೀವ್,

—ಶ್ರೀ ಕೆ. ಎ. ದೇವದಾಸ್.

ಅಮೇರಿಕದ ಪ್ರಸಿದ್ಧ ವಿಜ್ಞಾನಿ, ಹಾರ್ವರ್ಡ ವಿಶ್ವವಿದ್ಯಾಲಯದ ಕುಲಪತಿ
ಡಾ. ಜೇಮ್ಸ್ ಬಿ. ಕೊನೇಂಟರ

**ಹಿಂದಿನ ವಿಜ್ಞಾನ—ಇಂದಿನ ಮಾನವ**

ಆಧುನಿಕ ವಿಜ್ಞಾನವು ಮನುಷ್ಯ ಜೀವನದ ಮೇಲೆ ಉಂಟುಮಾಡಿರುವ ಕ್ರಾಂತಿಕಾರಕ ಪರಿಣಾಮಗಳನ್ನು ಪರಿಶೀಲಿಸಿ ವಾಣಿಜ್ಯ, ಸರಕಾರ, ನೀತಿ, ಧರ್ಮ, ಮುಂತಾದ ಬದುಕಿನ ವಿವಿಧ ರಂಗಗಳಲ್ಲಿ ವಿಜ್ಞಾನವು ಬೀರಿರುವ ಪ್ರಭಾವವನ್ನ, ಡಾ. ಕೊನೇಂಟ ಇಲ್ಲಿ ತಮ್ಮ ಸರಳ ಮತ್ತು ಓಜಸ್ವಿ ಶೈಲಿಯಲ್ಲಿ ಬಣ್ಣಿಸಿದ್ದಾರೆ. ಇಂದಿನ ವಿಜ್ಞಾನಿಯು ಕೇವಲ ಒಬ್ಬ ಕಲ್ಪನಾವಿಹಾರಿ ತಾತ್ತ್ವಿಕನಲ್ಲ, ವಿಶ್ವದ ಗೌಪ್ಯವನ್ನು ತೆರೆದು ತೋರಿಸಬಲ್ಲ ಮಂತ್ರವಾದಿಯೂ ಅಲ್ಲ. ಆತನು ಇತರ ವ್ಯಾವಹಾರಿಕ ಕ್ಷೇತ್ರಗಳಲ್ಲಿ ದುಡಿಯುವ ಜನರಷ್ಟೇ ಪ್ರಾಮಾಣಿಕನಾಗಿಯೂ ಕಷ್ಟಸಹಿಷ್ಣುವಾಗಿಯೂ ದುಡಿಯಬೇಕಾದ ವ್ಯವಹಾರಜ್ಞ. ತತ್ತ್ವಶಾಸ್ತ್ರ ಮತ್ತು ಮತವಿಚಾರಗಳಲ್ಲಿರುವ ಶಂಕೆ, ಮತ್ತು ನ್ಯೂನತೆ ಇಂದಿನ ವಿಜ್ಞಾನವನ್ನೂ ಆವರಿಸಿವೆ. ಇಂದಿನ ಪ್ರಪಂಚದಲ್ಲಿ ವಿಜ್ಞಾನದ ಪಾತ್ರವೇನೆಂದು ವಿಮರ್ಶಿಸುವ ಗ್ರಂಥಗಳಲ್ಲಿ ಡಾ. ಕೊನೇಂಟರ ಈ ಗ್ರಂಥದಷ್ಟು ವಿಚಾರ ಪ್ರಚೋದಕವಾದುದು ಬೇರೊಂದಿಲ್ಲ.

ಇದನ್ನು ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾದ ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಎಂ. ಎ., ಎಲ್. ಟಿ. ಅವರು ಅನುವಾದಿಸಿದ್ದಾರೆ. ಅವರು ಕನ್ನಡದಲ್ಲಿ ಹಲವು ವೈಜ್ಞಾನಿಕ ವಿಷಯದ ಲೇಖನಗಳನ್ನು ಬರೆದಿದ್ದಾರೆ. ಅವರು ಅನುವಾದಿಸಿದ (ಶ್ರೀ ಕು. ಶಿ. ಹರಿದಾಸ ಭಟ್ಟರೊಡನೆ) ಡಾ. ಕರೆಲರ "ಅವ್ಯಕ್ತ ಮಾನವ' (Man, the Unknown) ಕನ್ನಡದಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ.

ಪ್ರಸ್ತುತ ಅನುವಾದದಲ್ಲಿ ಶ್ರೀಯುತರ ಗಂಭೀರ ಆದರೂ ಸರಳ ಮತ್ತು ವೈಜ್ಞಾನಿಕ ಶೈಲಿಯ ಪರಿಚಯವನ್ನು ಮಾಡಿಕೊಳ್ಳಬಹುದು.

ಉತ್ತಮ ಕಾಗದದಲ್ಲಿ ಅಚ್ಚಾಗಿರುವ ಈ ಪುಸ್ತಕದ ಬೆಲೆ ಬರೇ ರೂ.1-8-0ಮಾತ್ರ

ಪ್ರತಿಗಳಿಗೆ ಬರೆಯಿರಿ:—

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

## ಗೋವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

**60 ಪುಟಗಳು: ಬೆಲೆ 0—3—0**

— ನವಯುಗ ಪ್ರೆಸ್, ಉಡುಪಿ.

## ಮಕ್ಕಳ ಮೆಗಿಪುಸ್ತಕ

ನವಯುಗಪ್ರೆಸ್, ಉಡುಪಿ.

## ಅಂತಾರಾಷ್ಟ್ರೀಯ ವಿದ್ಯಾಲಯ

(೩ನೇ ಪುಟದಿಂದ)

ದೀಪಂಕರನು ೧೩ ವರ್ಷಕಾಲ ಟಿಬೆಟನಲ್ಲಿದ್ದು ಅಲ್ಲಿಯೇ ಮೃತನಾದ, ಅವನು ಟಿಬೆಟ್ಟನಲ್ಲಿ ಬೌದ್ಧ ಮತವನ್ನು ಸುಧಾರಿಸಿ, ಈಗಿನ ಲಾಮ ವರ್ಗಕ್ಕೆ ತಳಹದಿಯನ್ನು ಹಾಕಿದನು – ಅಲ್ಲಿಂದ ಮುಂದೆ ಟಿಬೆಟ ವಿಕ್ರಮ ಶಿಲೆಯಿಂದ ಮಾತೀಯ ಸ್ಫೂರ್ತಿಯನ್ನು ಪಡೆಯುತ್ತ ಹೋಯಿತು; ಅದರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿತ್ತು. ವಿಕ್ರಮ ಶಿಲೆಯಲ್ಲಿ ಉನ್ನತ ಸ್ಥಾನವನ್ನಲಂಕರಿಸಿದ್ದ ಬೌದ್ಧ ವಿದ್ವಾಂಸರ ಪಟ್ಟಿಯನ್ನೇ ನಾವು ನೋಡಬಹುದು.

ಪೂರ್ವ ಭಾರತದಲ್ಲಿ ಮಿರಾಗಳ ಆಳ್ವಿಕೆ ಇರುವ ವರೆಗೂ ಈ ಎರಡು ವಿಶ್ವವಿದ್ಯಾನಿಲಯಗಳು ಜೀವಂತವಾಗಿದ್ದು ಬೌದ್ಧ ಪರಂಪರೆಯನ್ನು ಪಸರಿಸುತ್ತಿತ್ತು. ಅವು ಪ್ರಾಮುಖ್ಯ ಕೇಂದ್ರವಾಗಿದ್ದು ಅಲ್ಲಿಂದ ಬೌದ್ಧ ಜಗತ್ತಿಗೆ ವಿವಿಧ ಜೀವನದಿಗಳು ಹರಿದವು. ಬೌದ್ಧ ಮತದ ಈ ಮಹಾನ್ ಪೀಠಗಳು ಭದ್ರವಾಗಿರುವವಷ್ಟು ಕಾಲ ಬೌದ್ಧ ಮತವು ತನ್ನ ಸಾರವನ್ನು ಅವುಗಳಿಂದ ಪಡೆದು ಚಿರಂತನವಾಗಿರಬಲ್ಲುದಾಗಿತ್ತು.

ಈ ಎರಡು ವಿಶ್ವವಿದ್ಯಾನಿಲಯಗಳ ಪತನದೊಂದಿಗೆ, ಬೌದ್ಧ ಮತವು ಕ್ರಮೇಣ ತನ್ನ ಪ್ರಧಾನ ಸ್ಥಾನ ಮತ್ತು ಶಕ್ತಿಯನ್ನು ಕಳೆದುಕೊಂಡಿತು. ವಿದೇಶೀಯರ ಆಗಮನವೂ ಕಡಿಮೆಯಾಗುತ್ತಾ ಹೋಯಿತು. ಆದರ ಪರಿಣಾಮವಾಗಿ ಬೌದ್ಧ ಮತವು ಭಾರತದಿಂದ ಮತ್ತು ಏಷ್ಯಾದಿಂದ ಅದೃಶ್ಯವಾಯಿತು. ಅತ್ಯುನ್ನತ ಮಟ್ಟದಲ್ಲಿ ತನ್ನ ಚಟುವಟಿಕೆಗಳನ್ನು ಪರಿಪಾಲಿಸಿಕೊಂಡು ಬಂದಿದ್ದ ಅಂತರಾಷ್ಟ್ರೀಯ ಸಂಸ್ಥೆಯು ಅವನತಿಯನ್ನು ಹೊಂದಿತು. ಏಷಿಯದ ಇತಿಹಾಸದಲ್ಲಿ ಈ ರುದ್ರ ದುರಂತದ ಕಡೆಗೆ ಇತಿಹಾಸಜ್ಞರು ತಮ್ಮ ಸೂಕ್ತವಾದ ಗಮನವನ್ನು ಇದುವರೆಗೂ ಸಲ್ಲಿಸಿಲ್ಲ.

ಕಾಲಾನಂತರದಲ್ಲಿ ನಾಲಂದಾ ನಾಶವಾಯಿತು. ಅಲ್ಲಿನ ಭವನಗಳೂ ಕುಸಿದು ನೆಲಸಮವಾದವು. ಭವ್ಯವಾದ ವಿಶ್ವ ವಿದ್ಯಾನಿಲಯ ವಿದ್ವಭಾಗದಲ್ಲಿ ಕನಿಂಗ್ ಹಾಂನ ಪ್ರಾಚ್ಯವಸ್ತು ಶೋಧನೆಯಿಂದ ಹಲವು ಪ್ರಾಮುಖ್ಯ ಅಂಶಗಳು ತಿಳಿದುಬರುತ್ತದೆ.

ವಿಕ್ರಮ ಶಿಲದ ಭಾಗವನ್ನು ಪಥರ್ ಘಟ್ಟದ ಬಳಿ ಗುರುತಿಸಲಾಗಿದೆ. ಆದರೆ, ದುರಾದೃಷ್ಟವಶಾತ್, ಯಾವ ಭೂ ಸಂಶೋಧನೆಯನ್ನೂ ಅಲ್ಲಿ ನಡೆಸಲಾಗಿಲ್ಲ. ಅಲ್ಲಿ ಭೂಗತವಾಗಿರುವ ಭವ್ಯ ಅವಶೇಷಗಳನ್ನು ಹೊರತೆಗೆಯಲಾಗಿಲ್ಲ.

—ಡಾ. ಆರ್. ಸಿ. ಮುಜುಮುದಾರರ ಲೇಖನ.

## ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—೨—0

ನವಯುಗ ಪ್ರೆಸ್, ಉಡುಪಿ.

ಪ್ರವಾಹಗಳ ದೆಸೆಯಿಂದ ಈಚೆಗಿನ ವರ್ಷಗಳಲ್ಲಿ ೨೩೭ ಕೋಟಿ ರೂಪಾಯಿಯಷ್ಟು ನಷ್ಟ ಸಂಭವಿಸಿದೆ. ಕಳೆದ ವರ್ಷ ಒಂದರಲ್ಲೇ ೧೨೭ ಕೋಟಿ ರೂಪಾಯಿ ನಷ್ಟವಾಯಿತು. ಸರಕಾರದವರು ಪ್ರವಾಹ ನಿಯಂತ್ರಣಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ಕೊಟ್ಟಿದ್ದು ಅಮೇರಿಕದ ತಜ್ಞರೊಬ್ಬರು ಭಾರತಕ್ಕೆ ಈಗ ಬಂದಿದ್ದಾರೆ. ಚಿತ್ರದಲ್ಲಿ ಪ್ರವಾಹ ಪೀಡಿತ ಹಳ್ಳಿಯೊಂದರ ದಾರುಣ ಚಿತ್ರವನ್ನು ಕಾಣಬಹುದು.

## ಭಾಗ್ಯಲಕ್ಷ್ಮಿ!

೧

ನಾಡ ಮನೆ-ಮನೆಗಳಿಗೆ ಬಂದಳೊ
ಇಂದು ಭಾಗ್ಯದ ಲಕ್ಷ್ಮಿಯು;
ಅಂಧಃಕಾರವನಲ್ಲ ಕಳೆದಳೊ
ದೀಪ ಮಂಗಳ ದೇವಿಯು!

೨

ಉದಯಕಾಲದೊಳುಷೆಯು ಬಂದಳೊ
ಹೇಮರಂಗನ ಚಿಮುಕಿಸಿ;
ನಾಡ ಹೃದಯದ ಬೆಳಗಲಿರುವಳೊ
ಮಂಗಳಾರತಿಗೂಡಿಸಿ!

೩

ನಾಡದೇವಿಯ ಪೂಜೆಗೇನೋ
ನವ್ಯ ಯೊವುಗಳರಳಿವೆ;
ಬಾನಮೇಲಕೆ ಪ್ರಣತಿ ಬೆಳಗಿವೆ
ನಾಡಕೀರ್ತಿಯ ಸಾರಿವೆ!

೪

ಮುಯ್ಯ ನರ-ನರಗಳಲಿ ಹರಿದಿದೆ
ಹೊಚ್ಚ ಹೊಸ ಬಿಸಿ ರಕ್ತವು;
ಹೃದಯ ಗರ್ಭಗಳಲ್ಲಿ ತುಂಬಿದೆ
ಕೆಚ್ಚು-ನೆಚ್ಚಿನ ಶಕ್ತಿಯು!

೫

ವಿಜಯದುಂದುಭಿ ಮೊಳಗುತಿರುವುದೆ
ಕನ್ನಡಮ್ಮನ ಮನೆಯಲಿ:
ನಾಡಕೋಗಿಲೆ ಹಾಡುತಿರುವುದೊ
ಭವ್ಯ ಪಂಚಮ ಸ್ವರದಲಿ!

ಬಿ. ಬಿ. ಹಿಂಗಮಿರೆ.

## ಹರಿಯಲಿ ನವಪ್ರಭೆ ನಾಡಿನಲಿ ಮೂಡಲಿ ಶುಭರವಿ ಬಾಳಿನಲಿ

೧

ನಾಡಿನ ಗಗನದಿ ಶಾಂತಿಯ ದೀಪಂ,
ಬೆಳಗಿ ಬೆಳಗಿ ಕಳೆಯೇರೆ ಪ್ರದೀಪಂ;
ದಿಕ್ತಟ ದಂಚಿನ ಮುಗಿಲಿನ ಚಾಪಂ,
ಹಾರಿ ಬರಲಾ ವೇಗದಲಿ,
ನಿರಭ್ರ ನಭದಲಿ ಶಾಂತಿಯ ನೆಲದಲಿ,
ವಿಕೃತ ಮಾಯೆಯ ರೂಪಿನಲಿ.

೨

ಕಾಲನ ಬರದೆಡೆ ಚಿಂತೆಯ ನಿಕರ,
ತೇಲಿಸಿ ಬರೆ ಮನದಾಳ ನಿಟ್ಟುಸಿರ,
ಹರಸಿತು ಬಾಳಿನ ನಿಮಿಷದ ಮಧುರ,
ಚಿಂತೆಯ ಗುಪ್ತ ತರಂಗದಲಿ.
ಸಂತಸ ಗಡಲಿನ ಅಲೆಗಳ ಹೊಸಪರಿ,
ದುಃಖದ ಶೂನ್ಯ ದಿಗಂತದಲಿ.

೩

ನಿರ್ಮಲ ಕೊಳದೆಡೆ ತಿಳಿ ಜಲದಾಳದಿ,
ಜೀವಿತ ಚಕ್ರದ ವೃತ್ತತರಂಗದಿ,
ಸ್ವರ್ಗ ನಂದನವನ ಸೌಖ್ಯ ಸಾಮ್ರಾಜ್ಯದಿ,
ಶಿಶುಗುಂಡಿನ ತೆರವ್ರೋಳಿಯಲಿ,
ಸಂತಸ ಗಡಲಿನ ಅಲೆಗಳ ಮಲಿಯಲಿ,
ಹಾಳು, ಗೋಳು ಮಹಾಪೂರದಲಿ.

೪

ದೂರದಿಗಂತದಿ ಮುಗಿಲಿನ ಸುಟ್ಟೆಲು,
ಕತ್ತಲು ಕವಿದಿದೆ ಎತ್ತಲು ಸುತ್ತಲು,
ಮಾರ್ಗವು ಮುಚ್ಚಿದೆ ಶೂನ್ಯವು ಎತ್ತಲು,
ಬಾಳಿನ ದಿವ್ಯ ದಿಗಂತದಲಿ;
ಗೊಂಡಾರಣ್ಯದ ಚಿಗುರಿಯ ತೆರದಲಿ,
ಬಳಲಲು ಬಾಳಿನ ರಂಗದಲಿ.

೫

ಬಾಳಿನ ನೌಕೆಯು ಸಾಗಲು ಸಾಗರ,
ಸಿಡಿದಲೆಯೆದ್ದಿತು ಬಾನಿನ ಎತ್ತರ;
ಬೀಸಲು ಬಿರುಗಾಳಿಯು, ಶುಭ ನೇಸರ,
ಮುಳುಗಿದ ಪಡುವಣ ಬಾನಿನಲಿ
ಶೋಕದ ಭೀಕರ ಕತ್ತಲೆ ನೆಲಸಿತು,
ಜೀವನ ವಿಸ್ತೃತ ರಂಗದಲಿ

೬

ಮೂಡಣ ಗಿರಿಯೆಡೆ ಭಾಸ್ಕರ ಬಿಂಬಂ,
ಕಂಡು ಕಾಣದ ತೆರ ತೇಜದಲಿ ಶುಭಂ,
ಬಯಕೆಯ ಚಿಗುರಿಸಿ ಮನದೊಳಗಿಂಬಂ,
ತುಂಬಿಸುವಂತಿರಲಾಗಸದಿ
ಪಸರಲಿ ನವಪ್ರಭೆ, ಬೆಳಗಲಿ ಇಳೆ ಇಳೆ,
ಶೂನ್ಯರಹಿತ ಶುಭದಾಗಸದಿ

ಶ್ರೀ ಕೆ. ತಿಮ್ಮಪ್ಪ ಗಟ್ಟಿ

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements: — As. 8/- per line (minimum 8 lines).

*For rates for advertising in colours and special positions, please write to:*

*ADVERTISEMENT MANAGER,*
'NAVAYUGA'
Post Box No. 22, UDIPI, S. K.

## ಚುನಾವಣೆ ಬಂತು

(೧ನೇ ಪುಟದಿಂದ)

ರಿಸಿದ ಚುನಾವಣಾ ಘೋಷಣೆಗಳ ಸಂಕ್ಷಿಪ್ತ ರೂಪವನ್ನು ನಿಯಮಗಳ ನುಸಾರವಾಗಿ ಪ್ರಸಾರಮಾಡಲಾಗುವುದು. ಇಂತಹ ಸಂಕ್ಷಿಪ್ತ ರೂಪಗಳು ೧೦ ನಿಮಿಷಗಳಿಗೆ ಮೀರಿರಬಾರದು. ಅವುಗಳನ್ನು ಇಂಗ್ಲಿಷ್ ಹಾಗೂ ಇತ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿಯೂ ಪ್ರಸಾರಮಾಡಲಾಗುವುದು. ಸಾಧ್ಯವಾದರೆ ಎಲ್ಲಾ ಪಕ್ಷಗಳ ಚುನಾವಣಾ ಘೋಷಣೆಗಳನ್ನು ಒಂದೇ ದಿನ ಇಂಗ್ಲಿಷ ಮತ್ತು ಹಿಂದಿ ಭಾಷೆಯಲ್ಲಿ ದೆಹಲಿಯಿಂ ದಲೂ, ಉಳಿದ ಪ್ರಾದೇಶಿಕ ಕೇಂದ್ರ ಳಿಂದ ಆಯಾಯ ಪ್ರಾದೇಶಿಕ ಭಾಷೆಗ ಲ್ಲಿಯೂ ಪ್ರಸಾರಮಾಡಲು ಪ್ರಯತ್ನ ಲಾಗುವುದು. ಈ ಪ್ರಚಾರಗಳಿಗೆ ಸಂಬ ಧಪಟ್ಟ ವ್ಯವಸ್ಥೆಯನ್ನು ಸಂಬಂಧಪಟ್ಟ ರಾಜಕೀಯ ಪಕ್ಷಗಳೊಂದಿಗೆ ಸಮಾ ಲೋಚನೆ ನಡೆಸಿದ ನಂತರ, ಆಕಾಶವಾ ಣಿ ಕೇಂದ್ರಗಳು ಕೈಗೊಳ್ಳುತ್ತವೆ.

ಈ ಚುನಾವಣಾ ಅವಧಿಯಲ್ಲಿ ದೊ ಕಿಸಿಕೊಂಡ ಅನುಭವದ ದೃಷ್ಟಿಯಿಂ ಭವಿಷ್ಯದಲ್ಲಿ ಕಾರ್ಯಕ್ರಮಗಳ ಸಂಬಂ ದಲ್ಲಿ ಪರಿಸ್ಥಿತಿಯನ್ನು ಸರ್ಕಾರದವ ಪುನರಾವಲೋಕನ ಮಾಡುವುದು. ಅದ ದರಿಂದ ಇದನ್ನು ಕೇವಲ ಪ್ರಯೋಗವೆ ದು ಕರೆಯುವುದೇ ಸೂಕ್ತ.

Edited, Printed & Published by K. H. Shetty, at the Navayuga press, Udipi S. India